ಕೆಲವು ದಿನಗಳಲ್ಲಿ ಅಚ್ಯುತನಿಗೆ ಬೇರೊಂದು ನೆಂಟಸ್ತಿಕೆಯಾಯಿತು. ಲಗ್ನವು ಸಹ ಭಾರೀ ಸಂಭ್ರಮದಿಂದ ನೆರವೇರಿತು. ದಿಬ್ಬಣಿಗರು ತಿರುಗಿ ಎಂದು ಮನೆಗೆ ಹಿಂದಿರುಗುವುದೆಂದು ನಿಶ್ಚಯವಾಗಿದ್ದಿರಲಿಲ್ಲ. ನಾಗಮ್ಮನು ಬೇಸರದಿಂದ ಮನೆಯನ್ನು ಬಿಟ್ಟೇ ಇರಲಿಲ್ಲ. ಆದರೂ ನಿತ್ಯವೂ "ಎಂದು ಬರುವರು" ಎಂಬ ಹಾರೈಕೆಯಲ್ಲಿದ್ದರು. ಅವಳಿಗೆ ಬೇಸರವಾಯಿತೆಂದರೆ, ಮನೆಯ ಮುಂದಿನ ಹಿತ್ತಿಲಿನಲ್ಲಿನ ಒಂದು ಕಲ್ಲು ಕುಂಡದ ಮೇಲೆ ಕುಳಿತು ಏನೇನೋ ಹಾಡನ್ನು ಹೇಳುತ್ತಿರುವುದು ಅವಳ ರೂಢಿ. ಈ ಸಮಯ ಅವಳು ಹಾಗೆಯೇ ಹಾಡನ್ನು ಹೇಳುತ್ತಿದ್ದಳು. ಅದೇ ಸಮಯಕ್ಕೆ ಸರಿಯಾಗಿ ದಿಬ್ಬಣಿಗರು ಕಾಣಿಸಿಕೊಂಡರು. ಆತುರದಿಂದೆದ್ದು ಮುಂದೆ ಬಂದಳು. ಅವರಿಗೆ ಬೇರೆಯವರು ಎದುರಾಗುವ ಮೊದಲು ನಾಗಮ್ಮನ ದರುಶನವಾಯಿತು—ಅಂದರೆ ಮುಂಡೆಯ ದರುಶನವಾಯಿತು. ಮನೆಗೆ ಕಾಲಿರಿಸಿದ ಒಡನೆಯೇ ರಾಮಕೃಷ್ಣನು ನಾಗಮ್ಮನ ಬಳಿಗೆ ಬಂದು "ನಿನ್ನ ಅಮಂಗಳದ ಮೋರೆಯನ್ನು ಕಂಡ ಕಂಡಲ್ಲಿ ತೋರಿಸುವ ನಿಶ್ಚಯ ಮಾಡಿದ್ದೀಯಾ?"—ಎಂದುಬಿಟ್ಟನು. ಸರಿ—ಅವಳಿಗೂ ಏಕೆ ಮಾತು ಹೊರಟಿತೆಂದು ಸ್ಪಷ್ಟವಾಯಿತು. ತಿರುಗಿ ಆ ರಾತ್ರಿಯೆಲ್ಲ ಅಳುತ್ತ ಕುಳಿತಳು. ಮರುದಿನ ನೆಂಟರಿಷ್ಟರನ್ನು ಕರೆದು ನವದಂಪತಿಗಳಿಗೆ ಆರತಿ ಅಕ್ಷತೆಗಳೆಂದು ನಿಶ್ಚಯಿಸಿದ್ದರು. ನಾಗಮ್ಮ ಹೊರಕ್ಕೆ ಮುಖವನ್ನು ತೋರಿಸುವುದು ಸಹ ಇಲ್ಲವೆಂದು ನಿಶ್ಚಯಿಸಿದಳು. ಆ ದಿನ ಅವಳು ಹಟ ಹಿಡಿದು ತನ್ನ ಕೋಣೆಯಿಂದ ಹೊರಗೆ ಬರಲಿಲ್ಲ. ಆದರೆ ಹೊರಗಾಗುವ ಸದ್ದು ಇವಳ ಕಿವಿಗಳಿಗೆ ಕೇಳಿಸುತ್ತಿತ್ತು. ಆ ಶುಭ ದಿನ ಬರಲು ಮುತ್ತೈದೆಯರೆಲ್ಲರೂ ಸೇರಿ ಹಸೆಗೆ ಕರೆಯುವ ಹಾಡನ್ನು ಹಾಡಿದರು. ತನ್ನ ಕೋಣೆಯಲ್ಲಿ ಕುಳಿತ ನಾಗಮ್ಮನು, ಮೈಮರೆತು ಅದೇ ಹಾಡನ್ನು ಗಟ್ಟಿಯಾಗಿ ಹಾಡುತ್ತಿದ್ದಳು. ನಾಗಮ್ಮನ ಸ್ವರವು ತೀರ ಮೃದುವಾಗಿತ್ತು. ಹೊರಗಿನಿಂದ ಕೇಳುವವರಿಗೆ ಹಕ್ಕಿಯ ಗಾನದಂತೆ ಕೇಳಿಸಿತು. ಆ ಸ್ವರವು ಮನೆಯ ಚಿಕ್ಕ ಯಜಮಾನನನ್ನು ಆಕರ್ಷಿಸಿತು. ಅವನು ಬಂದು ಆಲಿಸುತ್ತಾನೆ ಯಾರ ಸ್ವರ? ವಿಧವೆಯ ಕಂಠಸ್ವರ! ಉಕ್ಕಿ ಬಂದಿತು ಕೋಪ! ನೇರಾಗಿ ಅವಳಿರುವ ಕೋಣೆಗೆ ಸಾಗಿದನು! ಆಗಲೂ ನಾಗಮ್ಮನು ಹಾಡುತ್ತಿದ್ದಳು. ಅವಳ ಹಾಡು ಒಮ್ಮೆಗೆ ನಿಂತಿತು. 'ಸಾಕು ಮಾಡೆ' ಶುಭ ದಿನದಲ್ಲಾದರೂ ನಿನ್ನ ಗಂಟಲಿಗೆ ಕೀಲಿ ಬೀಳವಾರದೇ? ನಮ್ಮ ಮನೆಯನ್ನು ಹಾಳುಕೆಡೆಯಬೇಕೆಂದು ನಿಶ್ಚಯಿಸಿದ್ದೀಯಾ?" ಎಂದನು. ಆಗ ನಾಗಮ್ಮನೇನು ಮಾಡಬಹುದೆಂದು ನೀವೇ ಊಹಿಸಬಲ್ಲಿರಿ.

ಸರಿ ಇದಾದ ಒಂದೆರಡು ತಿಂಗಳಲ್ಲಿ ನಾಗಮ್ಮನ ಮಾವಂದಿರು ಇಹಯಾತ್ರೆಯನ್ನು ಮುಗಿಸಿದರು. ಇದು ಅವಳ ಹಾಡಿನ ಮಹಾತ್ಮ್ಯೆಯೆಂದು ರಾಮಕೃಷ್ಣನು ಕೆರಳಿ ಹೇಳಿದನು. ಅವನಿಗೆ ಒಮ್ಮೆ ಈ ಅವಸ್ಥೆಯನ್ನು ಮನೆಯಿಂದ ಹೊರಗೆ ಅಟ್ಟಿದರೆ ಸಾಕೆಂದು ತೋರಿತು. ತಮ್ಮನನ್ನು ಕರೆದು ಯೋಚಿಸಿದನು. ಈಗಂತೂ ತಂದೆಯವರಿಲ್ಲ. ತಾವು ಮಾಡಿದ್ದು ನಡೆಯುತ್ತದೆ ಎಂದು ಅವರಿಗೆ ತಿಳಿದೇ ಇದೆ. ಆದರೆ ತಮ್ಮನ ಸೂಕ್ಷ್ಮ ಬುದ್ಧಿಗೆ ಅದು ಒಪ್ಪಲಿಲ್ಲ. "ಹೊರಗೆ ಹಾಕುವುದು ಚಿಲ್ಲರೆ ಕೆಲಸ. ಆದರೆ ಅವಳ ತಂದೆ ನಾಳೆಗೇ ಅಶನಾರ್ಥಕ್ಕೆ ವ್ಯಾಜ್ಯ ಮಾಡಿದರೆ ಎಷ್ಟು ಕೊಡಬೇಕು ಬಲ್ಲೆಯಾ? ಅದರ ಬದಲು ಇಲ್ಲೇ ಬಿದ್ದು ತಿಂದಿರಲಿ" ಎಂದನು. ಅಣ್ಣನಿಗೆ ಒಪ್ಪಿಗೆಯಾಯಿತು. ಅಂದಿನಿಂದ ನಾಗಮ್ಮನು ಅಲ್ಲೇ ಬಿದ್ದು ತಿನ್ನತೊಡಗಿದಳು. ಮೊದಲಿನ ಆದರ ಗೌರವಗಳು ಮಾವಂದಿರ ಹಿಂದೆಯೇ ಹೋದುವು. ಈಗ ಆ ಮನೆಯಲ್ಲಿ ಕತ್ತೆಯಂತೆ ಕೆಲಸ ಮಾಡುವವಳು ಅವಳಾದಳು. ಬಣ್ಣದ ಬೀಸಣಿಗೆಯಂತೆ ಅವಳ ನಾದಿನಿಯರು ಇರುತ್ತಿದ್ದರು. ಒಮ್ಮೊಮ್ಮೆ ಆಗಾಗ ಹೊಸ ಯಜಮಾನರ ಹೆಂಡತಿಯೊಡನೆ ನಾಗಮ್ಮನು ತನ್ನ ಜೀವನದ ಸುಖ ದುಃಖವನ್ನು ಹೇಳಿಕೊಳ್ಳುತ್ತಿದ್ದಳು. ಅವಳೊಬ್ಬಳಿಗೆ ಅವಳಲ್ಲಿನ ಪ್ರೇಮವು ನಾಶವಾಗಲಿಲ್ಲ. ಆದರೂ ಹೋಗುವ ಗಳಿಗೆಯು ಬಂದಿರಬೇಕು. ಒಂದು ದಿನ ಅವಳು "ಯಜಮಾನರನ್ನುತ್ತಾರೆ, ನಿನ್ನ ಮೇಲಿರುವ ಚಿನ್ನದ ನೈಲ್ಲಾ ಕೊಡಬೇಕಂತೆ. ಇನ್ನು ನಿನಗೆ ಬೇಡವಷ್ಟೆ" ಎಂದಳು. ಅವಳಿಗೆ ಅದರ ಮೇಲೆ ಕಣ್ಣಿಟ್ಟು ಕಡಿಮೆ ಕಡಿಮೆ ೩೦೦೦ ರೂಪಾಯಿಗಳ ಆಭರಣಗಳಿದ್ದುವು. ನಾಗಮ್ಮನಿಗೆ ಅದನ್ನು ಕೊಡಲು ಮನಸ್ಸಿರಲಿಲ್ಲ. ಪತಿಯ ಪ್ರೇಮದ ಕಾಣಿಕೆ ಎಂದೊಂದು ಕಾರಣ, ಆಪತ್ತಿನಲ್ಲಿ ಉಪಯೋಗಕ್ಕೆ ಬಂದೀತೆಂದು ಇನ್ನೊಂದು ಆಸೆ. ಆದುದರಿಂದ 'ಅದು ಹಿರಿಯ ಯಜಮಾನರ ಹೇಳಿಕೆಯಂತೆ ನನಗೆ ಮಾಡಿಸಿ ಹಾಕಿದುದು.

ನಾನು ಸತ್ತ ಬಳಿಕ ಯಾರೇ ಒಯ್ಯಲಿ. ಬದುಕಿರುವ ವರೆಗೆ ನನ್ನದೇ ಅದು"—ಎಂದಳು. ಅಂದಿನಿಂದ ಅವಳಿಗೂ ನಾಗಮ್ಮನಿಗೂ ದ್ವೇಷವಾಯಿತು. ಅಷ್ಟಾದ ಮೇಲೆ ನಾಗಮ್ಮನ ಕೂಳಿಗೆ ವಿಘ್ನ ಬರತೊಡಗಿತು. ಅವರಿಗೆಲ್ಲ ಬೇಕು ಬೇಕಾದ ತಿಂಡಿ ತಿಂದರೆ ನಾಗಮ್ಮನಿಗೆ ತೋರಿಸುವವರೂ ಇಲ್ಲ. ತನ್ನ ಪ್ರಾರಬ್ಧವೆಂದು ಅವಳು ತಿಳಿದಳು. ಆ ಮನೆಯಲ್ಲಿ ದಿವಸಗಳನ್ನು ಕಳೆಯುವುದೇ ಕಷ್ಟವೆಂದು ತೋರಿತು.

(ಮುಂದಿನ ಸಂಚಿಕೆಯಲ್ಲಿ ಕೊನೆಗೊಳ್ಳುವುದು.)

ಕನ್ನಡ-ಹಿಂದೀ ಕಲಹ.

('ಸಮದರ್ಶಿ'ಯಿಂದ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವಿಜೇತರು ಹೊಸ ದೇಶಗಳನ್ನು ಜಯಿಸಿ ವಿಜಿತ ಜನರ ಮೇಲೆ ತಮ್ಮ ಶಾಸನ, ಸಭ್ಯತೆ, ಭಾಷೆ ಇವುಗಳನ್ನು ಹೊರಿಸುವುದು ಅನುಭವದ ಮಾತಾಗಿದೆ. ಅಂತಹ ಸಮಯದಲ್ಲಿ ವಿಜಿತರ ಭಾಷೆಯೂ ಅವನತಿ ಹೊಂದಬಹುದು ಆದರೆ ಹಿಂದೀಯು ಆ ವರ್ಗಕ್ಕೆ ಸೇರಿಲ್ಲ. ಇಲ್ಲಿ ವಿಜೇತ ವಿಜಿತರ ಪ್ರಶ್ನೆಯಿಲ್ಲ. ನಮ್ಮ ದೇಶದ್ದೇ ಆದ ಹಿಂದೀಯು ರಾಷ್ಟ್ರಭಾಷೆಯಾಗ ಬೇಕೆನ್ನುವುದರ ಉದ್ದೇಶ್ಯವೇನು? ಅದರ ಮುಂದೆ ಇತರ ಪ್ರಾಂತೀಯ ಭಾಷೆಗಳಿಗೆ ಯಾವಸ್ಥಾನ ವಿದೆಯೆಂದು ನಾವು ಸ್ವಲ್ಪ ಪರ್ಯಾಲೋಚಿಸುವುದಾದರೆ ಅದರ ಧ್ಯೇಯವು ಸ್ಪಷ್ಟವಾಗುವುದು

ಸಮಗ್ರಭಾರತದ ರಾಷ್ಟ್ರಕಾರ್ಯದ ನಿರ್ವಾಹಕ್ಕೆ ಕೇಂದ್ರ ಸರಕಾರದ ವ್ಯವಹಾರ ಕ್ಕೋಸ್ಕರ ಭಾರತದ ಸಮಸ್ತ ಪ್ರಾಂತ್ಯದ ಪ್ರಜೆಗಳಿಗೆ ತಿಳಿಯತಕ್ಕ ಸುಲಭವಾದ ಒಂದೇ ಭಾಷೆಯು ಅತ್ಯಾವಶ್ಯಕವಿದೆ ಇದರಿಂದ ಕೇಂದ್ರ ಸರಕಾರಕ್ಕೆ ಹೊರತು ಇತರ ಪ್ರಾಂತಗಳಲ್ಲಿ ಆಯಾ ಪ್ರಾಂತೀಯ ಭಾಷೆಯೇ ಲೌಕಿಕ ವಿಷಯದಲ್ಲಿ ಪ್ರಚಲಿತವಾಗಿರುವುದು. ಪ್ರಾಂತದ ಶಾಸನ ವ್ಯವಸ್ಥೆಯು ಆಯಾ ಭಾಷೆಯಲ್ಲಿಯೇ ಜರಗಿ, ಕೇವಲ ಕೇಂದ್ರದೊಡನೆ ವ್ಯವಹಾರಕ್ಕೆ ಹಿಂದೀಯು ಬೇಕಾಗುವುದು. ಅಂತೆಯೇ ಕೇಂದ್ರದ ಕಾರ್ಯಭಾರವನ್ನು ತಿಳಿಯಬೇಕಾದರೆ ಆಯಾ ಪ್ರಾಂತದವರು ಹಿಂದೀ ಜ್ಞಾನ ವಿರುವುದು ಅನಿವಾರ್ಯವಾಗುವುದು. - ಹೀಗೆ ಇವುಗಳ ಸ್ಥಾನವೂ ಕರ್ತವ್ಯವೂ ಬೇರೆಯಾಗಿರುತ್ತ ಹಿಂದೀಯು ಇತರ ಭಾಷೆಗಳನ್ನು ಮುಳುಗಿಸುತ್ತುವುದೆಂಬ ಅಥವಾ ಕನ್ನಡದ ಅಸ್ತಿತ್ವವೇ ಹಾಳಾಗಬಹುದೆಂಬ ಆ ಶಂಕೆಯು ನಿರ್ಮೂಲವಾಗಿದೆ

ರಾಷ್ಟ್ರಭಾಷೆಯ ಇನ್ನೊಂದು ಉದ್ದೇಶವು ಜನಾಂಗದ ಐಕ್ಯಸಾಧನೆ. ಯಾವ ಜನಾಂಗಕ್ಕಾದರೂ ಸ್ವತಂತ್ರಭಾಷೆ ಸಾಹಿತ್ಯವಿಲ್ಲದೆ ಅದ ಅಪೂರ್ಣವೂ ಸ್ವಾತಂತ್ರ್ಯವನ್ನು ಪಡೆಯಲಿಕ್ಕೆ ಅಯೋಗ್ಯವೂ ಆಗಿರುವುದು. ಇಂಗ್ಲೆಂಡಿಗೆ ಇಂಗ್ಲಿಷ್, ಫ್ರಾನ್ಸ್ ದೇಶಕ್ಕೆ ಫ್ರೆಂಚ್, ಜರ್ಮನಿಗೆ ಜರ್ಮನ್, ತುರ್ಕಿಗೆ ತುರ್ಕೀ, ಭಾಷೆಗಳು ರಾಷ್ಟ್ರಭಾಷೆಗಳಾಗಿರುವಾಗ ಹಿಂದೂಸ್ಥಾನಕ್ಕೆ ಹಿಂದೀಯು ಏಕಾಗಬಾರದು? ಹಿಂದೀ ಭಾಷೆಯು ಉತ್ತರ ದಕ್ಷಿಣ ಹಿಂದೂಸ್ಥಾನಗಳ ನಡುವೆ ಇರುವ ಪ್ರೇಮಶೃಂಖಲೆ. ಉತ್ತರದಕ್ಷಿಣದವರು ಪರಸ್ಪರರ ಭಾಷೆಗಳನ್ನು ತಿಳಿದುಕೊಳ್ಳದೆ ಎಷ್ಟು ಕಷ್ಟಪಡುತ್ತಿರುವರು. ಅನೇಕಸಲ ಭಾಷೆ ತಿಳಿಯದೆ ಕಲಹಗಳೂ ಹೊಯ್‌ಕೈ ಕೂಡಾ ಆಗುವುದುಂಟು ಕಾರಣವೇನು? ಒಬ್ಬನ ಭಾಷೆಯು ಇನ್ನೊಬ್ಬನಿಗೆ ತಿಳಿಯದುದೇ. ಆದರೆ ಭಾಷಾಭಿನ್ನತೆಯಿರುವ ಕಡೆಯಲ್ಲಿ ಇಬ್ಬರಿಗೂ ಒಂದೇ ರೀತಿಯಿಂದ ಅರ್ಥವಾಗತಕ್ಕ ಮಾಧ್ಯಮವೊಂದಿದ್ದರೆ ಅಂತಹ ಕಲಹವೂ ತಪ್ಪುತಿಳುವಳಿಕೆಯೂ ಬರಲಾರವು. ಒಬ್ಬ ಕನ್ನಡಿಗನು ತಮಿಳುದೇಶಕ್ಕೆ ಹೋದಾಗ ಅವನಿಗೆ ತಮಿಳು ತಿಳಿಯದೆ, ತಮುಳನಿಗೆ ಕನ್ನಡ ತಿಳಿಯದೆ ಇರುವ ಪ್ರಯುಕ್ತ ಅನರ್ಥಗಳಾಗುವುದುಂಟು. ಆದರೆ ಆ ಸಮಯ ಅವರಿಬ್ಬರೂ ತಮ್ಮ ಭಾವಗಳನ್ನು ಒಂದೇ ಹಿಂದೀ ಭಾಷೆಯ ಮೂಲಕ ವ್ಯಕ್ತಪಡಿಸಿದರೆ ಇಬ್ಬರಿಗೂ ಸಂತೋಷವಾಗುವುದರಲ್ಲಿ ಸಂದೇಹವಿಲ್ಲ. ಯಾವ ಊರಿನ ಭಾಷೆ ತಿಳಿಯದೋ ಆ ಊರಿನಲ್ಲಿ ಒಬ್ಬನಾದರೂ ನಮ್ಮ ಅಭಿಪ್ರಾಯ ತಿಳಿಯತಕ್ಕವನಿದ್ದರೆ ಮಹದಾನಂದವಾಗುವುದು ಸಹಜವೇ. ಈಗ ಶಿಕ್ಷಿತ ಸಮಾಜದಲ್ಲಿ ಇಂಗ್ಲಿಷ್ ಭಾಷೆಯು ಆ ಕೆಲಸವನ್ನು ಮಾಡುತ್ತಿದೆ. ಆದರೆ ಇನ್ನು ಮುಂದೆ ಹಿಂದೀಯು ಅದೇ ಕೆಲಸವನ್ನು ಮಾಡಲು ಸಮರ್ಥವಾಗುವುದು. ಏಕೆಂದರೆ ಜನಸಾಮಾನ್ಯರಿಗೆ ಇಂಗ್ಲಿಷು ಕಲಿಸುವುದು ಎಷ್ಟೊಂದು ಕಷ್ಟಸಾಧ್ಯವೆಂದು ಎಲ್ಲರೂ ಬಲ್ಲರು, ಅಲ್ಲದೆ ಅದು ವಿದೇಶೀ ಭಾಷೆ. ನಾವು ಅದರ ವಿಸ್ತೃತ ಜಾಲದಲ್ಲಿ ಬಿದ್ದು ಸ್ವಾತಂತ್ರ್ಯವನ್ನು ಕಳೆದುಕೊಂಡು ವಿವಶರಾಗಿದ್ದೇವೆ. ನಮ್ಮ ಭಾಷೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಬೇಕಾಗಿದ್ದರೂ ನಾವು ಅದರ ಆಶ್ರಯವನ್ನೇ ಮಾಡಬೇಕಾಗುವುದು. ಕಾರಣ ನಾವು ಪರದನ್ನು ಅರ್ಥ ಕಲಿತಿರುವೆವು —ಜನಸಾಮಾನ್ಯಕ್ಕೆ ಹಿಂದೀಯು ಕಲಿಯಲಿಕ್ಕೆ ಸುಲಭವಾಗಿದ್ದು ಪ್ರಾಂತ್ಯಗಳ ಜನರ ಪರಸ್ಪರ ಭಾವ ವಿನಿಮಯಕ್ಕೆ ಯೋಗ್ಯ ಮಾಧ್ಯಮವಾಗಬಲ್ಲದು

ಇನ್ನೊಂದು ಮಾತು. ಹಿಂದೀಯನ್ನು ಯಾವ ಪ್ರಾಂತದವರು ಕಲಿಯಬೇಕಾದರೂ ಆ ಊರಿನ ಭಾಷೆಯ ಮಾಧ್ಯಮವೇ ಬೇಕು. ಆಗ ಪ್ರಾಂತೀಯ ಭಾಷೆಯು ರೂಪಗೆಡುವುದಾದರೂ ಹೇಗೆ? ಭಾಷೆಯು ವ್ಯಾಪಕಶಕ್ತಿಯುಳ್ಳದು. ಯಾವ ಭಾಷೆಯಾದರೂ ತನ್ನ ನೆರೆಕರೆಯ ಭಾಷೆಯ ಸಾಹಿತ್ಯದಿಂದ ಸಾರದ ಕೆಲವಂಶವನ್ನಾದರೂ ಹೀರಿಕೊಳ್ಳದೆ ಇರುವುದಿಲ್ಲ. ಇಂಗ್ಲಿಷಿನ ಮೂಲಕ ಪಾಶ್ಚಾತ್ಯ ಜನಾಂಗಗಳ ಕುರಿತಾದ ಎಷ್ಟೊಂದು ವಿಷಯಗಳು ನಮ್ಮ ದೇಶಭಾಷೆಗಳಲ್ಲಿ ಸೇರಿಕೊಂಡಿಲ್ಲ? ಈ ದೇಶದವೇ ಆದ ಬಂಗಾಳಿ, ಗುಜರಾಥಿ, ಮರಾಠಿ, ದಕ್ಷಿಣದ ತುಳು ತೆಲುಗು ಕನ್ನಡ ಇತ್ಯಾದಿ ಭಾಷೆಗಳಲ್ಲಿ ಪರಸ್ಪರ ಭಾವಗಳ ವಿನಿಮಯವಾಗುವುದಿಲ್ಲವೇ? ಹಾಗಾದರೆ ಕೂಪ ಮಂಡೂಕ ನ್ಯಾಯದಂತೆ ಇದ್ದರೆ ಯಾವ ಭಾಷೆಯೂ ವೃದ್ಧಿಹೊಂದಲಾರದು. ಕನ್ನಡ ಪ್ರೇಮಿಗಳು ಕನ್ನಡದ ಪುರೋಭಿವೃದ್ಧಿಯನ್ನು ಕೋರಲಿ. ಅವರನ್ನು ಯಾರೂ ತಡೆಯಲಾರರು. ಅಂತೆಯೇ ಹಿಂದೀ ಕಲಿತವರು ಕನ್ನಡವನ್ನು ಬಿಟ್ಟುಬಿಡಬೇಕೆಂದು ಉಪದೇಶಿಸುವುದಿಲ್ಲ. ಹಿಂದೀ ಕಲಿತು ಅವರವರ ಮಾತೃಭಾಷೆಯನ್ನು ಬಿಡಬೇಕೆಂಬು ಯಾವ ಪ್ರಚಾರಕನಿಗೂ ಹೇಳುವ ಅಧಿಕಾರವಿಲ್ಲ. ಹಾಗೆ ಹೇಳಿದರೆ ಅವನ ಸಂಕೀರ್ಣತೆಯನ್ನು ವ್ಯಕ್ತಪಡಿಸಿದಂತಾಗುವುದೇ ಹೊರತು ದೇಶಾಭಿಮಾನವು ಅವನಲ್ಲಿ ಇಲ್ಲವೆನ್ನಬಹುದು. ಆ ಪ್ರಾಂತದವನೇ ಆಗಿರುವ ಆ ಪ್ರಚಾರಕನು ತನ್ನ ಭಾಷೆಯನ್ನು ಅಲ್ಲಗಳೆಯುವುದು ಹೇಗೆ? ಆದಕಾರಣ ಕನ್ನಡಕ್ಕಂತಿರಲಿ, ಯಾವ ಪ್ರಾಂತೀಯ ಭಾಷೆಗಾದರೂ ಹಿಂದೀಯಿಂದ ಹೆದರಬೇಕಾದದ್ದೇನೂ ಇಲ್ಲ. ಹಿಂದೀಯಲ್ಲಿ ಅಭಿರುಚಿಯುಳ್ಳ ಕನ್ನಡಿಗರು ಅದರಲ್ಲಿ ಹೆಚ್ಚಿನ ವ್ಯವಸಾಯ ಮಾಡಿದರೆ ಹಾನಿಯೇನು? ಇನ್ನೊಂದು ಕಡೆ ಕನ್ನಡದ ಕೀರ್ತಿಯನ್ನು ಬೆಳಗಿಸತಕ್ಕ ಅನೇಕ ಉತ್ಸಾಹಿಗಳು ಹುಟ್ಟುವರು. ಹೀಗಿರಲು ಈಗಿನ ಭಾಷಾಕಲಹಕ್ಕೆ ಅವಕಾಶವೇ ಇರುವುದಿಲ್ಲ

ಇನ್ನು ರಾಷ್ಟ್ರಭಾಷೆಯಾಗಿ ಆರಿಸಲ್ಪಟ್ಟಿರುವ ಹಿಂದೀಯ ಕುರಿತು ಪರಿಶೀಲಿಸೋಣ. ಹಿಂದೀಯೇ ಏಕೆ ರಾಷ್ಟ್ರಭಾಷೆಯಾಗಬೇಕು? ಬಂಗಾಲಿ, ಗುಜರಾಥಿ, ಮರಾಠಿ, ಇವುಗಳ ಪೈಕಿ ಒಂದು ಆಗಲಾರದೆ? ಎಂಬ ಪ್ರಶ್ನೆಯು ಮೊದಲೇ ಹುಟ್ಟಿದ್ದಿತು. ಆದರೆ ನಮ್ಮ ಮುಖಂಡರು ಈ ಪ್ರಶ್ನೆಯನ್ನು ಕೂಲಂಕಷವಾಗಿ, ಪರಿಶೀಲಿಸಿ, ಉತ್ತರ ಹಿಂದೂಸ್ಥಾನದಲ್ಲಿಲ್ಲ ಎಂದರೆ ಭಾರತದ ಸುಮಾರು ಅರ್ಧ ಜನಸಂಖ್ಯೆಯು ಯಾವ ಭಾಷೆಯನ್ನು ಆಡುತ್ತಲೂ ತಿಳಿಯುತ್ತಲೂ ಇರುವುದೋ ಅದೇ ಆ ಹಿಂದೀ ಭಾಷೆಯೇ ಇಂತಹ ಪದವಿಗೆ ಯೋಗ್ಯವೆಂದು ಏಕಕಂಠದಿಂದ ನಿರ್ಣಯಿಸಿದರು. ಬಂಗಾಳ, ಗುಜರಾಥ, ಮರಾಠ ದೇಶದವರು ಹಿಂದಿಯನ್ನು ತಿಳಿಯಬಲ್ಲರು. ಭಾರತದ ಅರ್ಧ ಜನರು ಹಿಂದೀ ಬಲ್ಲವರಾಗಿರುತ್ತ ಅದನ್ನೇ ಉಳಿದ ಅರ್ಧದಲ್ಲಿ ಪ್ರಚಾರಮಾಡುವುದು ಒಳ್ಳಿತೋ ಯಾ ಹೊಸದಾದ ಒಂದು ಭಾಷೆಯನ್ನು ಇಡೀ ಹಿಂದೂದೇಶದಲ್ಲಿ ಜಾರಿಗೆ ತರುವುದು ಸುಲಭವೋ ಪರ್ಯಾಲೋಚಿಸಿರಿ. ಬಂಗಾಲಿ, ಗುಜರಾಥಿ ಮರಾಠಿ, ಭಾಷೆಗಳು ಯೋಗ್ಯತೆಯಲ್ಲಿ ಕಡಮೆಯಿಲ್ಲ. ಹಿಂದೀ ಸಾಹಿತ್ಯವು ಅವುಗಳ ಸಮಾನತ್ವವನ್ನು ಇನ್ನೂ ಪಡೆದಿಲ್ಲ. ಆದರೆ ಪ್ರಚಾರದ ಅನುಕೂಲ ದೃಷ್ಟಿಯಿಂದ ಹಿಂದೀಯೇ ಯೋಗ್ಯವಾಗಿದೆ. ಅದನ್ನು ವೃದ್ಧಿಗೆ ತರಲು ಎಲ್ಲಾ ಕಡೆಗಳಿಂದಲೂ

ಹಿಂದೀ-ಕನ್ನಡ ವಾದ.

(ಶ್ರೀಯುತ ದ ಕೃ ಭಾರದ್ವಾಜರಿಗೆ ಶರಣಾರ್ಥಿ)—

ಇನ್ನೊಂದು ಉತ್ತರ.

ಶ್ರೀಯುತರು 'ಹಿಂದಿ—ಕನ್ನಡವಲ್ಲ ಹಿಂದಿ—ಇಂಗ್ಲೀಷು ವಾದವಿದು ಎಂಬ' ಶಿರೋನಾಮೆಯಿಂದ ನನಗೆ ಕೊಟ್ಟಿರುವ ಅಭಿನಂದನೆಗಳಿಗೆ ನಾನು ಕೆಲವು ಶರಣಾರ್ಥಿಗಳನ್ನು ಅವರಿಗೆ ಈ ಮೂಲಕ ಸಮರ್ಪಿಸುತ್ತೇನೆ. ಪತ್ರಿಕೆಗಳಲ್ಲಿ ಇದುವರೆವಿಗೂ ಬಂದ ಹಿಂದೀ ಮಂಡನ ಪರಿಷತ್ ಖಂಡನಗಳನ್ನೂ 'ಹಿಂದಿ—ಕನ್ನಡ ವಾದ' ಎಂಬ ದಪ್ಪ ದಪ್ಪ ಅಕ್ಷರಗಳಲ್ಲಿನ ಶಿರೋನಾಮೆಗಳನ್ನೂ ಶ್ರೀಯುತರು ನೋಡಿದ್ದಾರೆಂದು ತಿಳಿದಿದ್ದೇನೆ. ಮೊದಲೇ ತಮ್ಮ ತಿದ್ದುಪಡಿಯನ್ನು ಪತ್ರಿಕೆಗಳಿಗೆ ಕಳುಹಿಸದೆ ಈಗ ಜ್ಞಾನೋದಯವಾಗಿರುವುದು ನೋಡಿದರೆ ಇದು ಅರ್ಧೋದಯ ಕಾಲ ಸಮೀಪವಾಗುತ್ತಿರುವುದರ ಪ್ರಭಾವವೆಂದೇ ಹೇಳಬೇಕು. ಈಗ ಪತ್ರಿಕೆಗಳಲ್ಲಿ ನಾನು ನೋಡಿದ ಮಟ್ಟಿಗೆ ಇದು ಹಿಂದಿ—ಕನ್ನಡದ ವಾದವಾಗಿಯೇ ಇದೆ. ಪರಿಷತ್ತಿನ ದೂಷಣೆಯೇ ಆಗಿದೆ

ಶ್ರೀಯುತರು ನನ್ನ ಔಚಿತ್ಯ ಸಾಹಸಗಳ ವಿಚಾರ ಪ್ರಸ್ತಾಪಮಾಡಿದ್ದಾರೆ. ಪತ್ರಿಕೆಗಳಿಗೆ ಬರೆದು ಪ್ರತಿಷ್ಠೆ ಸಂಪಾದಿಕೊಳ್ಳಬೇಕೆಂಬ ಆಸೆಯಲ್ಲಿ ಔಚಿತ್ಯಾನೌಚಿತ್ಯಗಳ ವಿಮರ್ಶೆಗೆ ಎಡೆಯಿರುವುದಿಲ್ಲ. ಇದನ್ನು ಶ್ರೀಯುತರು ತಿಳಿದಿರುವುದು ಸಂತೋಷಕರವಾದ ಸಂಗತಿ. ನಾನು 'ಸಾಹಸ'ವನ್ನು ತೋರಿಸಿದ್ದೇನೆಂದು ಅವರು ಅಪ್ಪಣೆ ಕೊಡಿಸಿದ್ದಾರೆ. ಶ್ರೀಯುತರಿಗೆ ಉತ್ತರ ಕೊಡುವುದು ಒಂದು 'ಸಾಹಸ'ದ ಕೆಲಸವೇ? ಹಿಂದೀ ಭಾಷಾ ಸಂಪ್ರದಾಯದಲ್ಲಿ ಇದು ಒಂದು 'ಸಾಹಸ'ವಾಗಿರಬಹುದು. ಮನೆಯ ಜಗಳ 'ಬಹಿರಂಗಕ್ಕೆ ಬಂದ ಮೇಲೆ ನೋಡಿದವರೆಲ್ಲ ಆಡುತ್ತಾರೆ. ಇದಕ್ಕೇನು ಶ್ರೀಯುತರ ತಡೆ?

ಭಾರತಭಾಗ್ಯವಿಧಾತನ ಮಾತನ್ನು ಶ್ರೀಯುತರು ಹೇಳಿದ್ದಾರೆ. ಅಯ್ಯೋ ವಿಧಾತನೇ 'ಕರ್ನಾಟಕ' ಎಂಬ ನಾಡಿನ ಅರಿವೇ ಇಲ್ಲದೆ ಗುಜರಾಥ ಮರಾಠಾ ಎಂದು ಮುಂತಾಗಿ ಮಾತ್ರ ಹಾಡಿದ ಆ ಕಣ್ಣಿಲ್ಲದ ಭಾರತಭಾಗ್ಯ ವಿಧಾತನ ವರ್ತನೆ ವಿಚಿತ್ರವೇ ಸರಿ. ಕಂಡಕಂಡ ಕಡೆಯಲ್ಲೆಲ್ಲಾ ಆ ಭಾರತಭಾಗ್ಯ ವಿಧಾತನನ್ನು ಹಾಡುತ್ತಿರುವ ಸರಳ ಹೃದಯರಾದ ಕನ್ನಡಿಗರ ವರ್ತನೆಯೂ ವಿಚಿತ್ರವೇ ಸರಿ. ಆ ವಿಧಾತನ ಸ್ಮರಣೆ ನವಗೇಕೆ?

ಇಂಗ್ಲಿಷರ ಒಂದು ಪಿಳ್ಳೆಯೂ ಈಗ ಭರತಭೂಮಿಯಲ್ಲಿಲ್ಲ. ಇಂಗ್ಲಿಷ ಇಂಗ್ಲೆಂಡಿಗೆ ಎಂದೋ ಓಡಿಹೋಯಿತು. ಈಗ ಎಲ್ಲರೂ ಹಿಂದಿಯನ್ನೇ ಮನೆಗಳಲ್ಲಿ, ಬೀದಿಯಲ್ಲಿ ಕೋರ್ಟುಕಚೇರಿಗಳಲ್ಲಿ ಆಡುತ್ತಿದ್ದಾರೆ. ಬೋರೇಗೌಡನ ಸೊಸೆಯರು, ಹೆಣ್ಣು ಮಕ್ಕಳು ಎಲ್ಲಾ ತಮ್ಮ ತಮ್ಮ ಗಂಡಂದಿರಿಗೆ ಹಿಂದಿಯಲ್ಲಿ ಪ್ರಣಯಪತ್ರಗಳನ್ನು ಬರೆಯುತ್ತಿದ್ದಾರೆ. ಸ್ವರಾಜ್ಯ ಬಂದು ಎಷ್ಟೋ ವರ್ಷಗಳಾದವು ಎಂದು ಜಯಘೋಷ ಮಾಡುತ್ತಾ ಶ್ರೀಯುತರು ಮೆರೆವಣಿಗೆ ಹೊರಟಿಲ್ಲವೇಕೆ? ಈಗಲಾದರೂ ಭೂತರಾಜ್ಯದ ಭಾರದ್ವಾಜ ಪ್ರಭು ಯುಕ್ತಿಸುತ್ತಿದ್ದಾರೆ. ಇನ್ನು ಕೆಲವು ವರ್ಷಗಳಲ್ಲಿಯೇ ಒಂದೇ ಭಾಷೆ ಮಾಡುವ ಮಹಾ ಕುಟುಂಬವು ಸಂಘಟಿತವಾಗುವುದರಲ್ಲಿ ಸಂದೇಹವಿಲ್ಲ. ಕಾಂಗ್ರೆಸ್ಸಿನ ಕಾರ್ಯಕ್ರಮವು ಹಿಂದೀಯಲ್ಲೀ ನಡೆಯುವುದು. ಉತ್ತರಭಾರತದಲ್ಲಿ ಅನೇಕ ದೈನಿಕ, ಸಪ್ತಾಹಿಕ, ಮಾಸಿಕ ಪತ್ರಗಳು ಅಲ್ಲಿನ ಜನತೆಯಲ್ಲಿ ಜ್ಞಾನಪ್ರಸಾರ ಮಾಡುತ್ತಿವೆ. ಅವುಗಳ ರುಚಿಯು ದಕ್ಷಿಣದಲ್ಲಿಯೂ ವ್ಯಾಪಿಸತೊಡಗಿದೆ. ಇದರಿಂದಲೇ ಉತ್ತರದಕ್ಷಿಣಗಳೊಂದಾಗಿ ಭಾರತದ ಐಕ್ಯವು ಹಸ್ತಗತವಾಗುವುದು. ಭಾರತೀಯರ ಕರ್ತವ್ಯವು ಅಂತಹ ತಮ್ಮ ರಾಷ್ಟ್ರಭಾಷೆಯನ್ನು ವೃದ್ಧಿಗೊಳಿಸುವುದೇ ಆಗಿದೆ. ಈ ವಿಷಯದಲ್ಲಿ ಎಷ್ಟು ಉದಾರದೃಷ್ಟಿಯಿಂದ ನೋಡಿದರೂ ಅಷ್ಟೂ ಅದರ ಮಹತ್ವವು ತಿಳಿಯುವುದು. ಭಾರತೀಯರಲ್ಲಿ ಭ್ರಾತೃಭಾವವನ್ನು ದೃಢಪಡಿಸಲು ಹಿಂದೀಯೇ ಸಹಾಯಕವಾಗುವುದು

[ಸಶೇಷ]

ಗಳು ದಯಮಾಡಿ ಹೊರಡಬಾರದೇ? ಆಗ 'ರಾಜ್ಯದ' ಭಾರತಭಾಗ್ಯ -ವಿಧಾತನು ಸ್ವರಾಜ್ಯ ನಾರಾಯಣನ ನಾಭೀಕಮಲದಲ್ಲಿಯೂ ಕಾಲಜ್ಞಾನಿಯಾದ ಶಿವಶರಣನೊಬ್ಬನ ಇಷ್ಟಲಿಂಗದಲ್ಲಿಯೂ ಅಡಗಿಕೊಂಡು ಬಿಡುತ್ತಾರೆ'

ಸಂಪಾದಕೀಯ ಲೇಖನವನ್ನು ಶ್ರೀಯುತರು ಬಹು ಚೆನ್ನಾಗಿ ಸಂಗ್ರಹಿಸಿದ್ದಾರೆ. ತಮ್ಮ ಮೊದಲನೇ ಲೇಖನದಲ್ಲಿ ಆ ಅಂಶಗಳಿಗೆ ಉತ್ತರವನ್ನು ಕೊಟ್ಟಿರುವುದಾಗಿ ಶ್ರೀಯುತರು ತಿಳಿದಿದ್ದರೆ ಅದು ಭ್ರಾಂತಿ. ಈಗ 'ತಾಯಿನಾಡು' ಜನವರಿ ೩೧ನೆಯ ಸಂಚಿಕೆಯ ಪುಟ ೬ 'ಕನ್ನಡಕ್ಕೆ ಬಂದಿರುವ ತೊಂದರೆ' ಎಂಬ ಲೇಖನ 'ರಾಷ್ಟ್ರಬಂಧು' ಜನವರಿ ೨೫ನೆಯ ಸಂಚಿಕೆ 'ಕನ್ನಡಿಗ' ಎಂಬ ಸಭ್ಯರ ಪತ್ರ, ಇವುಗಳನ್ನು ಶ್ರೀಯುತರು ಇದುವರೆವಿಗೂ ನೋಡದಿದ್ದರೆ ಈಗಲಾದರೂ ನೋಡಲಿ, ಸಂಪಾದಕೀಯ ಟಿಪ್ಪಣಿ ವಿಚಾರವೇ ಅಲ್ಲಿ ಹೆಚ್ಚು ಸ್ಪಷ್ಟವಾಗಿ ಬಂದಿರುವಂತಿದೆ. ಗಾಂಧಿ ಬಟ್ಟೆಗಳನ್ನು ಧರಿಸುತ್ತಿರುವ ಶ್ರೀಯುತರು ಸತ್ಯಶೋಧನ ದೃಷ್ಟಿಯಿಂದ ಆ ಹಿಂದಿ ಶತ್ರುತ್ವದ ಒಂದು ವಿಚಾರಕ್ಕೆ ಉತ್ತರವನ್ನು ಕೊಟ್ಟರುವರೇ ಎಂಬುದನ್ನು ಹೇಳಲಿ. ಆ ಪತ್ರಿಕೆಗಳಲ್ಲಿ ಹೇಳಿರುವಂತೆ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಕೆಲವು ಹುಡುಗರು ಕನ್ನಡವನ್ನು ಬಿಟ್ಟು ಹಿಂದೀ ಭಾಷೆಯನ್ನು ತೆಗೆದುಕೊಂಡಿದ್ದರೇ ಇಲ್ಲವೇ? ಈಗ ಜನವರಿ ೨೦ನೆಯ ಮೈಸೂರು ಗೆಜೆಟ್ಟಿನಲ್ಲಿ ಹಿಂದೀ ದ್ವಿತೀಯ ಭಾಷೆ ಮತ್ತು ಐಚ್ಛಿಕ ಭಾಷೆಯೆನ್ನುವುದರ ಕೆಳಗೆ ಪುಸ್ತಕಗಳು ಪಟ್ಟಿ ಇರುವುದೇ ಇಲ್ಲವೇ? ಶ್ರೀಯುತರು ದಯಮಾಡಿ ತಿಳಿಸಿದರೆ ಹಿಂದೀ ಭಾಷಾ ಸೇವಕರ ವಿಚಾರದಲ್ಲಿ ಬಂದಿರುವ 'ಅನ್ಯಾಯ'ವಾದ ದೋಷಾರೋಪಣೆಯನ್ನು ವಿಮರ್ಶಿಸಬಹುದು.

ಈ ಹಿಂದೀ ಶತ್ರುತ್ವದ ವಿಚಾರಕ್ಕೆ ಶ್ರೀಯುತರು ಉತ್ತರಕೊಟ್ಟ ಮೇಲೆ ಹಿಂದೀ—ಇಂಗ್ಲಿಷುಗಳ ಪವಿತ್ರಾಪವಿತ್ರತೆಗಳ ವಿಚಾರವನ್ನು ನಾನು ಮಾಡುತ್ತೇನೆ. ನನಗೆ ಶ್ರೀಯುತರಿಗಿರುವಂತೆ ಇಂಗ್ಲೀಷಿನ ಮೇಲ್ಗೆ ದ್ವೇಷವಿಲ್ಲ. ನನಗೆ ಇಂಗ್ಲೀಷು ಬೇಕು, ಹಿಂದೀ ಭಾಷೆಯೂ ಬೇಕು. ನಾನು ಉತ್ತರ ಹಿಂದೂಸ್ಥಾನದಲ್ಲಿ ತಕ್ಕಷ್ಟು ಪ್ರವಾಸ ಮಾಡಿದ್ದೇನೆ. ಈ ಭಾಷೆಗಳ ಅವಶ್ಯಕತೆಯನ್ನು ತಕ್ಕ ಮಟ್ಟಿಗೆ ತಿಳಿದಿದ್ದೇನೆ. ಆದರೆ ಕಾಂಗ್ರೆಸಿನ ಮತ್ತು ಮಹಾತ್ಮ ಗಾಂಧಿಯವರ ಹೆಸರುಗಳನ್ನು ಹೇಳಿಕೊಂಡು ಅವರು ಒಪ್ಪದೆ ಇರುವಂಥ ರೀತಿಯಲ್ಲಿ ಹಿಂದೀ ಪ್ರಚಾರದ ಆವೇಶದಿಂದ ಮೈಮರೆತು ಶ್ರೀಯುತರಂಥವರು ನನ್ನ ಮಾತೃಭಾಷೆಗೆ ತರುತ್ತಿರುವ ವಿಪತ್ತುಗಳನ್ನು ನಾನು ನಿವಾರಿಸದೆ ಇರಲಾರೆ.

ಶ್ರೀಯುತ ನಿಟ್ಟೂರು ಶ್ರೀನಿವಾಸ ರಾಯರ ವಿಚಾರ ಮತ್ತು ಅವರಂತೆಯೇ ಕನ್ನಡ ಗ್ರಂಥಗಳ ಪ್ರಕಟನೆಗೆ ಕೈಹಾಕಿರುವ ಮಹನೀಯರ ವಿಚಾರ ಶೋಚನೀಯವಾದುದೇ ಸರಿ. ಅದುದರಿಂದಲೇ ಕನ್ನಡಕ್ಕೆ ಪ್ರೋತ್ಸಾಹವನ್ನು ಕೊಡಬೇಕು, ಹಿಂದೀಗೆ ಅಲ್ಲ—ಎಂದು ಅವರಿಗೂ ಪ್ರತಿಯೊಬ್ಬರಿಗೂ ನಾನು ಹೇಳುವುದು, ಹಿಂದೀ ಭಾಷಾವ್ಯಾಮೋಹದಿಂದ ಕನ್ನಡಿಗರನ್ನು ದ್ವೇಷಮಾಡಿಕೊಳ್ಳಬಾರದೆಂದೂ ನಾನು ಹೇಳುವುದು. ಶ್ರೀಯುತ ಶ್ರೀನಿವಾಸ ರಾಯರು ನನಗೆ ಕಾಗದ ಬರೆಯಬಹುದೆಂದು ಶ್ರೀಯುತ ಭಾರದ್ವಾಜರು ಸೂಚನೆ ಕೊಟ್ಟಿದ್ದಾರೆ. ಅಗತ್ಯವಾಗಿ ಬರೆಯಲಿ, ನಾನು ಉತ್ತರಕೊಡುತ್ತೇನೆ

ಇನ್ನೊಂದು ವಿಚಾರವನ್ನು ಹೇಳಿ ಈ ಕಾಗದವನ್ನು ಮುಗಿಸುತ್ತೇನೆ. ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಉತ್ಸಾಹಶಾಲಿಗಳು ಕೆಲಸ ಮಾಡುವುದಕ್ಕೆ ಅವಕಾಶಕೊಟ್ಟಿಲ್ಲವೆಂದು ಶ್ರೀಯುತರು ಹೇಳಿದ್ದಾರೆ. ಈ ವಿಚಾರ ನನಗೆ ತಿಳಿಯದೆ ಇರುವುದರಿಂದ ಪರಿಷತ್ತಿನ ಉಪಾಧ್ಯಕ್ಷರಿಗೆ ಕಾಗದವನ್ನು ಬರೆದಿದ್ದೇನೆ. ಶ್ರೀಯುತರಂಥ ಉತ್ಸಾಹಶಾಲಿಗಳಿಗೆ ಏತಕ್ಕಾಗಿ ಅವಕಾಶಕೊಟ್ಟಿಲ್ಲವೆಂಬ ಬಗ್ಗೆ ಉತ್ತರ ಬಂದ ಮೇಲೆ ಈ ವಿಷಯವನ್ನು ಮಹಾಜನರ ತಿಳಿವಳಿಕೆಗೆ ತರುತ್ತೇನೆ

ಡಿ. ಚೆನ್ನಬಸಪ್ಪ.

> 'ಅಪಯಶಸ್ಸು ಬರುವುದರಿಂದ ಹೋಲಾಡಿ ಫಲವೇನು?' ಎಂದು ಕೇಳುವುದು ಹೇಡಿತನದ ಲಕ್ಷಣವು. ಅಪಜಯವು ಹೇಡಿತನವಲ್ಲ. ನಿರುತ್ಸಾಹವು ಹೇಡಿತನವು.'
>
> ಜಾರ್ಜ್ ಬರ್ನಾರ್ಡ್ ಷಾ

ಸ್ಫುಟವಿಚಾರಗಳು

ಸಯಾಂ ಮತ್ತು ಇಂಡೋ ಚೈನಾಗಳಿಂದ—

ಭಾರತಕ್ಕೆ ಅಕ್ಕಿಯು ಆಮದಾಗುತ್ತಿರುವುದನ್ನು ತಡೆಯಬೇಕೆಂದು ಶ್ರೀ ಸತ್ಯನಾರಾಯಣ ಸಿಂಹರವರು ಡಿಲ್ಲಿಯ ಶಾಸನಸಭೆಯಲ್ಲಿ ಒಂದು ಮಸೂದೆಯನ್ನು ತರಲಿರುವರಾಗಿ ತಿಳಿದುಬಂದಿದೆ. ಈ ಮಸೂದೆಯ ಸಂಬಂಧವಾದ ಠರಾವು ಎಸೆಂಬ್ಲಿಯ ಸದಸ್ಯರೆಲ್ಲರಿಂದ ಅನುಮೋದಿತವಾಗಿದೆ. ಸರಕಾರದ ಪರವಾಗಿ ಮಾತನಾಡಿದ ಶ್ರೀ ಬಜ್ಪೈರವರು ಇಂಡೋ—ಚೈನಾ ಮತ್ತು ಸಯಾಂಗಳಿಂದ ಆಯಾತವಾದ ಅಕ್ಕಿಯಿಂದ ಭಾರತದ ಕೃಷೀವಲರಿಗೆ ಬಾಧಕವಾಗಿರುವುದಿಲ್ಲವೆಂದು ಹೇಳಿದರು. ಅಕ್ಕಿಯ ಬೆಲೆ ಇಳಿದುದಕ್ಕೂ ಈ ಆಮದಿಗೂ ಸಂಬಂಧವಿಲ್ಲವೆಂದೂ ಅವರ ಅಭಿಪ್ರಾಯ. ಇದರರ್ಥವೇನೋ ತಿಳಿಯದು. ಬರ್ಮ ಮೊದಲಾದ ಕಡೆಗಳಿಂದ ಅಕ್ಕಿಯು ಬಂದು ದಕ್ಷಿಣದೇಶದಲ್ಲಿ ತುಂಬಿ, ದಕ್ಷಿಣ ದೇಶದ ಕೃಷೀವಲರ ಅಕ್ಕಿಗೆ ಬೆಲೆ ಇಳಿದಿರುವುದು ಸರ್ವವಿದಿತ ವಿಷಯವೆಂದಿರುವಾಗ ಬಾಧಕವಿಲ್ಲವೆಂಬ ಮಾತಿಗೆ ಹೆಚ್ಚಿನ ಬೆಲೆಯಿರಲಾರದು. ಸರಕಾರವು ಶೀಘ್ರವಾಗಿ ಈ ಆಮದನ್ನು ತಡೆಯುವುದು ಲೇಸು.

'ಭೂಕಂದಾಯವನ್ನಿಳಿಸಲಾಗುವುದಿಲ್ಲ'

ಎಂದು ಮದ್ರಾಸು ಸರಕಾರವು ತಾರೀಖು ೩೧-೧-೩೫ರಲ್ಲಿ ಪ್ರಕಟಣೆಯೊಂದನ್ನು ಹೊರಡಿಸಿ ಖಚಿತಪೂರ್ವಕವಾಗಿ ಹೇಳಿತು. 'ಚಾಲು ಫಸಲಿಯ ಭೂಕಂದಾಯದಲ್ಲಿ ಶೇಕಡಾ 33⅓ರನ್ನು ಇಳಿಸಿಬಿಡಬೇಕು' ಎಂದ ೩೦ನೇ ತಾರೀಕಿನ ದಿನ ಮದ್ರಾಸು ನ್ಯಾಯವಿಧಾಯಕ ಸಭೆಯು ಶಿಫಾರಸು ಮಾಡಿರುವುದು ಹೌದು. ಆದರೆ ಈ ಸಲಹೆಯನ್ನು ಸರಕಾರವು ಸ್ವೀಕರಿಸಿದರೆ ಈ ಫಸಲಿಯ ಸರಕಾರದ ಆಯದಲ್ಲಿ ೩,೭೧,೩೬,೬೦೯ ರೂಪಾಯಿ ನಷ್ಟವಾಗುತ್ತದೆ. ಅಲ್ಲದೆ ಸಂಸ್ಥಾನದ ಎಷ್ಟು ಅಗತ್ಯವಿಷಯಗಳಿಗೂ ಯಾವ ಹಣವನ್ನೂ ವೆಚ್ಚಮಾಡಲಾಗದೆ ಈ ಸಾಲದ ಬಜೆಟಿನಲ್ಲಿ ೩೭ ಲಕ್ಷ ರೂಪಾಯಿಗಳ ವ್ಯತ್ಯಾಸವು ತಲೆದೋರುವುದು. ಆದುದರಿಂದ ಈ ಠರಾವನ್ನು—ಆಡಳಿತಕ್ಕೆ ಭಂಗತರದ ವಿನಹಾ—ಯಾವ ಸರಕಾರವೂ ಸ್ವೀಕರಿಸದು' ಎಂದು ಮದ್ರಾಸು ಸರಕಾರವು ತೀರ್ಮಾನಿಸಿದೆ. ಸರಕಾರವು ತನ್ನ ಕಷ್ಟವನ್ನೇ ತಾನು ಹೇಳಿಕೊಂಡಿದೆಯಲ್ಲದೆ ಅದರ ಹುಟ್ಟುವಳಿಗೆ ಕಾರಣವಾದ ರೈತರ ಹಿತದ ಯಾವ ನುಡಿಯನ್ನೂ ಹೇಳಲಿಲ್ಲವೆಂಬುದಿದು ಅತ್ಯಂತ ಶೋಚನೀಯ. ದವಸಧಾನ್ಯಗಳ ಬೆಲೆಯು ಬಿದ್ದು ಹೋಗಿ ಗೇಣ ತೆರಲಾಗದೆ, ಅತಿವೃಷ್ಟಿ ಅನಾವೃಷ್ಟಿಗಳ ಉಪಟಳದಿಂದ ಬಳಲಿ ಬೆಂಡಾಗಿ ಹೋಗಿದ ರೈತರು 'ಈ ವರ್ಷದ ಫಸಲಿಯಲ್ಲಿ ಶೇಕಡಾ 33⅓ರ ನಷ್ಟದ ಮಾಫಿ ಕೊಡಿ' ಎಂದು ಬೇಡುವಾಗ ಸರಕಾರವು ಮಾತ್ರ ಈ ಮಾಫಿಯನ್ನು ಯುಗ ಯುಗಾಂತರಗಳಿಗಾಗಿ ಬೇಡಲಾಗುತ್ತಿದೆಯೆಂದು ಭಾವಿಸಿ 'ಯಾವುದೂ ಸಾಧ್ಯವಿಲ್ಲ' ಎಂದು ನಿಶ್ಚಿತವಾಗಿ ಉತ್ತರವಿತ್ತಿದೆ. ಸರಕಾರದ ಕಂದಾಯದಲ್ಲಿ ನಷ್ಟವು ಸಂಭವಿಸಬಹುದು; ನಿಜ, ಎಂದಾಗ ಇಲ್ಲದ ದುಃಖವನ್ನು ಉಂಟುಮಾಡಿ ಬಡರೈತರು ಮಾತ್ರ ಪೂರ್ಣ ಕಂದಾಯವನ್ನು ಯಾವತ್ಕಾಲವೂ ಕೊಟ್ಟು ಬಳಲಬೇಕೆ?

ಹಿಂದೂ-ಮಠಗಳ ಸುಧಾರಣೆಗಾಗಿ—

ಶ್ರೀಯುತ ಸಿ. ಸುಬ್ರಹ್ಮಣ್ಯ ಭಟ್ಟರು (Bill No 24 of 1934) ಮಸೂದೆಯೊಂದನ್ನು ಶಾಸನ ಸಭೆಗೆ ತರಲಿರುವರು. ಸಂಸ್ಥಾನದ ಹಲಕೆಲವು ಮಠಾಧಿಪತಿಗಳ ದುರಾಡಳಿತೆಯನ್ನು ತಡೆಯುವುದಕ್ಕಾಗಿಯೇ ಈ ಮಸೂದೆಯು ರಚಿತವಾಗಿದೆಯೆಂದು ಭಾಸವಾಗುತ್ತದೆ. ಮಠದ ಆಯವ್ಯಯ ಮೊದಲಾದುವುಗಳಿಗೆ ಮಠಾಧಿಪತಿಗಳೇ ಪೂರ್ಣ ಜವಾಬ್ದಾರರಾಗುವುದನ್ನೂ, ಅದರಿಂದಾಗುವ ಅನಾಹುತಗಳನ್ನೂ ತಪ್ಪಿಸಿ, ಹೋಗಲಾಡಿಸುವುದಕ್ಕಾಗಿ ಬೋರ್ಡು ಒಂದನ್ನು ಸ್ಥಾಪಿಸಿ ಮಠಗಳನ್ನು ಹಿಂದೂ ಮತದ ಶ್ರೇಯಸ್ಸಿಗಲ್ಲದೆ ಉನ್ನತಿಗೆ ಸಾಧಕವಾಗ ಮಾರ್ಪಡಿಸುವುದೇ ಈ ಮಸೂದೆಯ ಉದ್ದೇಶ. ಮದ್ರಾಸು ನ್ಯಾಯವಿಧಾಯಕ ಸಭೆಯು ಈ ಮಸೂದೆಯನ್ನು ಪೂರ್ಣವಾಗಿ ಅಂಗೀಕರಿಸಿ ಆ ಮೂಲಕ ಹಿಂದೂ ಮತದ ರಕ್ಷಣೆಯನ್ನು ಮತ್ತಷ್ಟು ಹೃತ್ಪೂರ್ವಕವಾಗಿ ಮಾಡಲೆಂದು ಹಾರೈಸುತ್ತೇವೆ. ಈ ಸಂದರ್ಭದಲ್ಲಿ ಶ್ರೀ ಭಟ್ಟರ ಈ ಯತ್ನವು ಫಲಕಾರಿಯಾಗಿ—ಪರಿಣಾಮಕಾರಿಯಾಗಲೆಂದು—ಕೋರುವೆವು.

ನಮ್ಮವರೂ ಆಲೋಚಿಸಬೇಕಾಗಿದೆ.

ಮದ್ರಾಸ ಕಲ್ಕತ್ತಗಳಲ್ಲಿ 'ಭಿಕ್ಷುಕರ ಸಮಸ್ಯೆ'ಗಳನ್ನು ಬಿಡಿಸುವುದಕ್ಕಾಗಿ ಹಲಕೆಲವು ಪರಿಷತ್ತುಗಳು ಜರಗಿ ಭಿಕ್ಷುಕರ ಸಂಖ್ಯೆಯು ಇನ್ನು ಹೆಚ್ಚದಂತೆ ಹೆಚ್ಚಿರುವ ಸಂಖ್ಯೆಯನ್ನು ತಡೆವ, ಬದಿಗೆ ಸರಿಸುವ ಏರ್ಪಾಡುಗಳಾಗಲಿವೆ. ಬೇಡುವವರ ಸಂಖ್ಯೆಯು ಹೆಚ್ಚುತ್ತಿರುವುದು ಒಂದೆಂದು [illegible] ಪ್ರತಿಯೊಂದು ಪಟ್ಟಣವೂ ಭಿಕ್ಷುಕರಿಂದ ತುಂಬುತ್ತಿದೆ. [illegible] ಒಂದು [illegible] ದ ಇನ್ನೊಂದಕ್ಕೆ ಭಿಕ್ಷುಕರ ಸೈನ್ಯಗಳೇ ತೆರಳಿ ಸಿಕ್ಕಸಿಕ್ಕಲ್ಲಿ ನಿಲ್ಲುತ್ತಿವೆ. ಮೊದಲೇ ದುಡ್ಡಿನ ಕಟ್ಟು. ಅದರೊಡನೆ ಈ ಭಿಕ್ಷುಕರನ್ನು ಸಾಕುವ ಭಾರವು ಪಟ್ಟಣಿಗರ ಮೇಲ್ಬಿದ್ದಿದೆ. ಪಟ್ಟಣವಾಸಿಗಳ ತಲೆಗೊಂದು ವ್ಯಾಧಿ. ಭಿಕ್ಷುಕರಿಗಿತ್ತಾದರೂ ಅವರ ಹೊಟ್ಟೆಪಾಡು ಮಾಡಿದಂತೆ [illegible] ಇತ್ತಿಕೊಡಬಹುದು. ಆದರೆ ನಾನಾ ರೋಗಗಳಿಂದ ಪೀಡಿತರಾಗಿರುವ ಭಿಕ್ಷುಕರು ಪಟ್ಟಣದಲ್ಲೆಲ್ಲಾ ರೋಗವನ್ನು ಹರಡುವರೆಂಬ ವಿಷಯವು ಅತ್ಯಂತ ಗಾಬರಿಯ ವಿಷಯ. ಮಂಗಳೂರು ಪಟ್ಟಣದಲ್ಲಿ ಭಿಕ್ಷುಕರ ಸಂಖ್ಯೆಯು ಹೆಚ್ಚುತ್ತಿರುವುದು ಸರ್ವವಿದಿತ ವಿಷಯ. ಇನ್ನು ಕೆಲವು ವರ್ಷಗಳು ಕಳೆದರೆ ಬೀದಿಗೆ ಇಪ್ಪತ್ತು ಮಂದಿ ಬೇಡುವವರಿರುವುದನ್ನು ನಾವು ಕಾಣುವುದು ಖಂಡಿತ. ಈಗ ಭಿಕ್ಷುಕರೆಂದೆನಿಸಿಕೊಂಡಿರುವವರಲ್ಲಿ ಹಲವರು ಭಿಕ್ಷುಕರಲ್ಲದೆ ಸೋಮಾರಿಗಳಾಗಿರುವರು. ಅಂತಹ ವ್ಯಕ್ತಿಗಳನ್ನು ಕಂಡುಹಿಡಿದು ನಮ್ಮವರು ಉದ್ಯೋಗದ ಬೆಲೆಯನ್ನು ಅವರಿಗೆ ತಿಳಿಸಬೇಕಾಗಿದೆ. ಈ ವಿಷಯವಾಗಿ ನಮ್ಮ ನಗರಸಭೆಯೂ, ಜಿಲ್ಲಾ ಬೋರ್ಡೂ, ಇತರ ಸಂಸ್ಥೆಗಳೂ ಆಲೋಚಿಸುವುವಾಗಿ ನಿರೀಕ್ಷೆಯಿದೆ.

ದಕ್ಷಿಣಾಫ್ರಿಕದ ಭಾರತೀಯರ—

ಸಂಕಷ್ಟಗಳು ಪರಿಹಾರವಾಗುತ್ತಿವೆಯೆಂದು ಏಜಂಟ್—ಜನರಲರಾಗಿದ್ದು ಮೊನ್ನೆ ನಿವೃತ್ತಿಹೊಂದಿ ಹಿಂದೆ ಬಂದ ಕನ್ವರ್ ಸರ್ ಮಹಾರಾಜ್ ಸಿಂಗರವರು ತಿಳಿಸಿರುವರು. ಜೋಹನಿಸ್‌ಬರ್ಗದ ಯುರೋಪಿಯನರಿಗೂ 'ಭಾರತೀಯರಿಗೂ ಸ್ನೇಹಭಾವವಿದೆ, ವರ್ಣದ್ವೇಷವು ಕಡಿಮೆಯಾಗುತ್ತಿದೆ. ಭಾರತೀಯರ ಸುಖಸೌಕರ್ಯಗಳಿಗಾಗಿ ಸರಕಾರವು ಶಾಸನಗಳನ್ನು ಮಾಡುತ್ತಲಿದೆ' ಎಂದು ಶ್ರೀಯುತರು ಹೇಳಿರುವರು. ಎಲ್ಲವೂ ವಾಸ್ತವವೇ ಆದರೆ ಚಿಂತೆಗೆಡೆಯಿಲ್ಲ. ಆದರೆ ಹಲಕೆಲವು ಕಡೆಗಳಿಂದ ಬರುವ ವಾರ್ತೆಗಳು ದಕ್ಷಿಣಾಫ್ರಿಕದಲ್ಲಿ ವರ್ಣದ್ವೇಷವು ಬಲವಾಗಿದೆಯೆಂದೂ, ಮಹಾತ್ಮಾ ಗಾಂಧಿಯವರು ಅಲ್ಲಿದ್ದಾಗ ಇದ್ದಂತಹ ಭೇದಬುದ್ಧಿಯು ಯುರೋಪಿಯನರಲ್ಲಿ ಇನ್ನೂ ಇದೆಯೆಂದೂ ತಿಳಿದುಬರುತ್ತದೆ. ದೀನಬಂಧು ಸಿ. ಎಫ್. ಎಂಡ್ರೂಸರೂ ಹಾಗೆಯೇ ಹೇಳುತ್ತಿರುವರು. ಮುಂದಿನ ವಾರ್ತೆಗಳನ್ನು ನಿರೀಕ್ಷಿಸೋಣ.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪ್ರಕಟಿತವಾದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳವುಗಳೂ ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಕದ್ರಿ, ಮಂಗಳೂರು ತಾ ೮—೨—೩೫

ಸ್ವದೇಶಾಭಿಮಾನಿಯ ಸಂಪಾದಕರಿಗೆ

ಆರ್ಯ,

ನಿಮ್ಮ ಕಳೆದ ಜನವರಿ ತಾರೀಕು ೨೫ನೇ ಶುಕ್ರವಾರದ ಸಂಚಿಕೆಯಲ್ಲಿ "ತೆರೆಯ ಮರೆಯಲ್ಲಿ ಅಥವಾ ಅಂತರಂಗ" ೩ "ಅಪ್ಪಾ, ಏಲು"ಎಂಬ ಲೇಖನವನ್ನು ನೋಡಿ ಅತಿ ಆಶ್ಚರ್ಯವಾಯಿತು. ಸದ್ರಿ ಲೇಖನವು ಶ್ರೀ ಶಿವರಾಮ ಕಾರಂತರ ಹಸ್ತದಿಂದ ಪ್ರಕಟವಾಯಿತೆಂದು ವಿದಿತವಾಗುತ್ತದೆ. ಆ ಲೇಖನದಲ್ಲಿ ಬರದ ಪ್ರಕಾರ ಯಾವ ಸಂಗತಿಗಳು ಸಾರಸ್ವತರ ಸಮಾಜದಲ್ಲಿ ನಡೆದದ್ದು ನಮ್ಮ ಗೋಚರಕ್ಕೆ ಇಲ್ಲ. ಅದುದರಿಂದ ಈ ಸಂಗತಿಗಳು ಶ್ರೀ ಶಿವರಾಮ ಕಾರಂತರ ಆರೋಪಣೆಯೆಂದು ಕಂಡುಬರುತ್ತದೆ. ಇದರಲ್ಲಿ ನಮೂದಿಸಿದ ಸಮಾಜದ ಕುಂದು ಕೊರತೆಗಳು ಎಲ್ಲಾ ಸಮಾಜಗಳಲ್ಲಿಯೂ ಇರಬಹುದು. ಆದರೆ ಸಾರಸ್ವತ ಸಮಾಜಕ್ಕೆ ಈ ಕೊರತೆಗಳನ್ನು ಆರೋಪಿಸಿ ಬರೆದದ್ದು ಮೂರ್ಖತನವೇ. ನನ್ನ ತಿಳುವಳಿಕೆ ಮಟ್ಟಿಗೆ ಈ ಕಾರಂತರು ಸಾರಸ್ವತ ಸಮಾಜದ ಕೆಲವು ಗೃಹಸ್ಥರಿಂದ ಪ್ರೋತ್ಸಾಹಿಸಲ್ಪಟ್ಟು, ಅದರಿಂದ ಅನೇಕ ತರದ ಉತ್ತೇಜನಗಳನ್ನು ಹೊಂದಿದ್ದರೆಂದು ತಿಳಿದಿರುತ್ತದೆ. ಅಂಥಾ ಸಂಗತಿಯಲ್ಲಿ ಅವರು ಈ ಸಮಾಜದವರಿಗೆ ತನ್ನ ಆಭಾರವನ್ನು ತೋರಿಸುವ ಬದಲಿಗೆ ಸಮಾಜದವರನ್ನು ಹೀಯಾಳಿಸಿ ಬರೆದದ್ದು ಆಶ್ಚರ್ಯಕರ (ಶೋಚನೀಯ)ವಾಗಿ ತೋರುತ್ತದೆ. ಇಂಥಾ ಲೇಖನಗಳಿಂದ ಏನೂ ಉಪಯೋಗಗಳು ತೋರ ಬರಲಿಲ್ಲ. ಅದರ ಬದಲಿಗೆ ಸಮಾಜಗಳಲ್ಲಿ ವೈಮನಸ್ಸು (Inter communal hatred) ಉಂಟಾಗುವ ಸಂದರ್ಭವಾಗುತ್ತದೆ. ಆದುದರಿಂದ ಇಂಥಾ ಲೇಖನಗಳನ್ನು ನಿಮ್ಮ ಸಂಚಿಕೆಗಳಲ್ಲಿ ಪ್ರಕಟಿಸುವದು ಯೋಗ್ಯವಲ್ಲ.

ಸಾರಸ್ವತ.

ಆಕ್ಷೇಪಣೆಗೆ ಉತ್ತರ

ಈ ಕಥಾವಳಿಯಲ್ಲಿ ಎತ್ತಿ ತೆಗೆದು ತೋರಿಸಿದ ಕೊರತೆಗಳ 'ಎಲ್ಲಾ ಸಮಾಜದಲ್ಲೂ ಇರಬಹುದು'—ಎಂಬ ಎಣ್ಣಿಕೆಯ ಆರೋಪವು ಮಾನ್ಯವೇ ಸರಿ. ಆದರೆ ಕಥೆಯನ್ನು ಬರೆಯುವವನು, ಜಾತಿಭರಿತವಾದ ಸಮಾಜದಲ್ಲಿ, ತನ್ನ ಪಾತ್ರಗಳಿಗೊಂದು 'ಜಾತಿ'ಯನ್ನು ಕೊಡಬೇಕಾಗುತ್ತದೆ. ಒಬ್ಬ ಜನನು ಶಿವಳ್ಳಿಯಾಗಬಹುದು ಇನ್ನೊಬ್ಬ ಕೊಂಕಣಿಗನೋ, ಸಾರಸ್ವತನೋ, ಕ್ರಿಸ್ತೀಯನೋ ಆಗಬಹುದು. ಇಲ್ಲಿ ಜಾತಿಗಳ ಆರೋಪವಿರುವುದಲ್ಲ. ಸಮಾಜ ದೋಷಗಳ ಮೇಲಿನ ಆರೋಪಣ, ಸಾಹಿತ್ಯ ರೀತಿಯನ್ನು ತಿಳಿದವರು, ಆ ದೃಷ್ಟಿಯಿಂದ ಕಥೆಗಳನ್ನು ತಿಳಿಯಬೇಕು ವಿನಹ 'ಜಾತಿ-ವ್ಯಕ್ತಿಯ ಹೆಸರು'-ಇವುಗಳು ಯಾರ ತಲೆಗೆ ಹೊಕ್ಕುವ ಟೊಪ್ಪಿಗಳೆಂದು ಹುಡುಕಿ ಸಿಟ್ಟಾಗುವುದು ತರವಲ್ಲ. ಹಾಗಾಗದಿರಲೆಂಬುದೇ ನನ್ನ ಬೇಡಿಕೆ.

ಈ ಕಥಾವಳಿಯನ್ನು ಬರೆಯುವುದು, ಸ್ವದೇಶಾಭಿಮಾನಿಯ ಓದುಗರ ವಿನೋದಕ್ಕಲ್ಲ, ಇವು ನಮ್ಮಲ್ಲಿನ (ಸಾರಸ್ವತರ-ಅಲ್ಲ) ಕೊರತೆಗಳ ಕಡೆಗೆ ಉದ್ವೇಗವನ್ನು ಕೆರಳಿಸಲು.

ಇತಿ ತಮ್ಮ

ಶಿವರಾಮ ಕಾರಂತ.

ಅಹಮ್ಮದಾಬಾದ್, ತಾ ೧೩—೨—೩೫

ಖಾನ್ ಅಬ್ದುಲ್ ಘಫರ್ ಖಾನರ ಅಳಿಯನೂ ಮಿಸ್ ಸೋಫಿಯಾ ಸೋಮ್ಜಿಯವರೂ ಅಬ್ದುಲ್ ಘಫರ್ ಖಾನರನ್ನು ಸೆರೆಯಲ್ಲಿ ಸಂದರ್ಶಿಸಿದರು. ಖಾನರು ೧೮ ಪೌಂಡುಗಳಷ್ಟು ತೂಕವನ್ನು ಕಳೆದುಕೊಂಡಿರುವರು. 'ಎ' ಕ್ಲಾಸ್ ಕೈದಿಯ ಸೌಕರ್ಯಗಳೆಲ್ಲವೂ ಇರುವುವಾದರೂ ಅಲ್ಲಿಯ ಹವೆಯು ಅವರಿಗೆ ಸರಿಬೀಳುವುದಿಲ್ಲ.

"ಶಿವಿಲ್ ಕೋರ್ಟುಗಳಲ್ಲಿನ ಎಜರ್ನಮೆಂಟುಗಳು"

(ಬರೆದು ಬಂದುದು)

ಅದಾವುದೋ ದೇಶದ ಜನರಲ್ಲಿ "ನಿನ್ನ ಮನೆಗೆ ಶಿವಿಲ್ ನ್ಯಾಯವು ಪ್ರಾಪ್ತಿಯಾಗಲಿ" ಎಂಬ ಮಾತು ಬಹು ದೊಡ್ಡ ಶಾಪವಂತೆ! ಹಾಗಾಗಿದು ಆಶ್ಚರ್ಯವಾಗ ಬಹುದು. ವಿಚಾರಿಸಿದರೆ ಪರಿಸ್ಥಿತಿ ಹಾಗೆಯೇ ಇದೆ ಎಂದರೆ ಹೆಚ್ಚಲ್ಲ. ಪ್ರಾಪಂಚಿಕ ವ್ಯವಹಾರದಲ್ಲಿರುವ ಯಾವನಾದರೂ, ಕಾಲಾಂತರ ಕಾರಣಾಂತರಗಳಿಂದ ಒಂದು ಶಿವಿಲ್ ಕೋರ್ಟನ್ನೇರದಿರಲು ಸಾಧ್ಯವಿಲ್ಲ. ಆಸ್ತಿಪಾಸ್ತಿಗಳ ವ ಲೇವಾದೇವಿಗಳ ವ್ಯವಹಾರವುಳ್ಳವನು ಈಗಿನ ಕಾಲದಲ್ಲಂತೂ ಕೋರ್ಟಿನ ಪೂರ್ಣ ಪರಿಚಯವನ್ನು ಮಾಡಿಕೊಂಡೇ ತೀರಬೇಕು. ಕೋರ್ಟಿನ ಬೆಂಬಲವಿಲ್ಲದೆ ತಮ್ಮ ಉತ್ಪನ್ನವನ್ನು ಗಳಿಸಿಕೊಂಡಿರಲು, ಕೇವಲ ಸರಕಾರಿ ನೌಕರರಾಗಲ್ಲದೆ ಇತರ ಯಾವ ವ್ಯಾಪಾರಿಗಳಿಗಾಗಲಿ ವರ್ತಕರಿಗಾಗಲಿ ಅಸಾಧ್ಯವೆಂದೂ ಇದಕ್ಕಾಗಿಯೇ ಕಾಲಾಂತರ ಸ್ಥಳಾಂತರ, [illegible]ಗಳಿಂದ ಕೋರ್ಟುಗಳು ಹುಟ್ಟಿ ಬರುತ್ತಾ ಬಂದಿವೆ ಎಂಬುದೂ ಸರಿಯಾದ [illegible]. ಆದರೆ ಜನರಿಗೆ ಈ ಕೋರ್ಟುಗಳ ವ್ಯವಹಾರಗಳು ಎಷ್ಟು ತೀವ್ರ ಕೊಡುತ್ತಿವೆ ಎಂಬುದು ಬಲ್ಲವರೇ ಬಲ್ಲರು. ಅಲ್ಲಿನ ಅನೇಕ ಪೀಡೆಗಳ ಮಹಾಪೀಡೆ ಎಂದರೆ "ಎಜರ್ನ್‌ಮೆಂಟ್" ಮುಂದೂಡಿಕೆ ಎಂಬುದೊಂದು. ಗೆದ್ದವರೂ ಬಿದ್ದವರೂ ಈ ಮಹಾಪೀಡೆಗೆ ಬಲಿಯಾಗಿಯೇ ತೀರಬೇಕು. ಕೋರ್ಟಿನಲ್ಲಿ ಪ್ರತಿ ವಿಷಯಕ್ಕೂ [illegible] ಇದೆ. ಇದೊಂದು ಮಾತ್ರ 'ಟಿಟ್ ಲಾ' ಕೇಸ್ [illegible]ಗಳಿ ಕ್ರಮವಾಗಲಿ ವ ಕೇವಲ ಒಂದು ಅರ್ಜಿಯೇ ಆಗಿರಲಿ, ಈ ಅಕ್ರಮಕ್ಕೆ ಕೇಸೇ ಇಲ್ಲ. ಈ ಎಜರ್ನಮೆಂಟುಗಳಿಗೆ ಸಾಮಾನ್ಯವಾಗಿ ಕಾರಣಗಳು, ೧. ಮುಕ್ತ ಹೀಗೆ—ವಾದಿ ತಯಾರಿಲ್ಲ (೨) ಪ್ರತಿವಾದಿಗೆ ಮನಸ್ಸಿಲ್ಲ. (೩) ಕೋರ್ಟಿಗೆ ಬಿಡೀ ಇಲ್ಲ (ಎಂದರೆ ಪುರುಸೊತ್ತು ಇಲ್ಲವೆಂಬರ್ಥ) ಇದರ ಮೇಲಿನ ಕಾರಣ ೩ಕ್ಕೆ ೩ ಎಜರ್ನಮೆಂಟುಗಳೋ ವ ೩ ತಿಂಗಳ ಕಾಲದ ೧೦ ಎಜರ್ನಮೆಂಟೋ ಸಾಲದೋ? ಇದ್ದುಕೊಳ್ಳಲಿ, ೩ ವರ್ಷದಾ ಮೇಲೂ ಸರಿ ದೊಡ್ಡದೊಂದು ಮಹಾ ಎಜರ್ನಮೆಂಟ್ ಸಾಕಲ್ಲವೇ? ಅಂದಾದರೂ ವಿಧಿಯುಕ್ತವಾಗಿಯೇ ತೀರಲಿ, ಅದಲ್ಲದಿದ್ದರೆ ಸ್ಥಳಿಗಿಸ್ಟ್ ಕ್ರಮಕ್ಕಿಷ್ಟು ಅರ್ಜಿಗಳಿಗಿಷ್ಟು ಎಂದ ಒಂದು 'ಲಾ' ಆದರೂ ಇರುವುದೇ ಇಲ್ಲ. [illegible] ವಾದಿಗಾಗಿ ಇನ್ನೊಮ್ಮೆ ಪ್ರತಿವಾದಿಗಾಗಿ ಮತ್ತೊಮ್ಮೆ ಕೋರ್ಟಿಗಾಗಿ ಮತ್ತೆ ಇವರ ಪುನರಾವರ್ತನೆಗಂತೂ ಅಂತ್ಯವೇ ಇಲ್ಲ. ದಶಾವರ್ತನೆಯಲ್ಲ, ಶತಾವರ್ತನೆಯಲ್ಲೂ ಕೊನೆಗಾಣದಾಗುವುದು. ಇದಕ್ಕೆ ಯಾವ ಕಡೆಯಿಂದಲೂ ಕಟ್ಟುಪಾಡು ಇಲ್ಲ. [illegible] ಇಲ್ಲ ಕಕ್ಷಿಗಾರರಿಗೆ [illegible] ಮಾತ್ರ ಮುಂದಿನ ಕಾರಣವೇನು? ಇದರಿಂದ ಕೋರ್ಟಿಗೂ ಲಾಯರುಗಳಿಗೂ ಕಷ್ಟನಷ್ಟಗಳಿಲ್ಲ. ಆದೆಲ್ಲ ಕೋರುವವರಿಗೆ ಈ ಎಜರ್ನಮೆಂಟುಗಳಿಗೆ ಸಂಬಂಧಪಟ್ಟವರ ಕಾರಣದ ಅಂಬೋಣ ಹೀಗಂತೆ—(೧) ಕೋರ್ಟಿಗೆ ಸಮಯ ಸಾಲದೆ (೨) ಸಾಕ್ಷಿದಾರನ ಒಲ್ಲೆ, (೩) ವಾದಿ ಪ್ರತಿವಾದಿಯ ಅನುಕೂಲಕ್ಕೆ ಒಗ್ಗೆ (ನಂಬ್ರ ೧ಕ್ಕೆ) ಸಮಯ ಸಾಕಾಗದಿದ್ದರೆ ಆ ದಿವಸಕ್ಕೆ ಮುಂದರಿಸುವುದೇಕೆ? ಒಂದು ದಿನದ ಕೋರ್ಟಿನ ಸಮಯದಲ್ಲಿ ಪತ್ತಿಪ್ಪತ್ತು ಕೇಸ್‌ಗಳನ್ನು ತನಿಖೆ ಮಾಡಲು ಅಸಾಧ್ಯವಿರುವಾಗ ನೂರಾರು ಕೇಸುಗಳನ್ನು ಒಂದು ದಿನಕ್ಕೆ ಇಡುವುದೇಕೆ? ಇದು ಯಾರ ತಪ್ಪು? ಇದರಿಂದಾಗಿ ಶಿಕ್ಷೆ ಹೊಂದುವವರಾರು? (ನಂಬ್ರ ೨ಕ್ಕೆ) ಇದಕ್ಕೆ ಒಂದು ಕೋರ್ಟಿದೆ ಮತ್ತು ಸಾಕ್ಷಿ ಕೊಡುತ್ತವೆ (ನಂಬ್ರ ೩ಕ್ಕೆ) ವಾದಿ ಅನುಕೂಲತೆ ಸರಿಯಿಲ್ಲದೆ ವಿಷ್ಯ ತಪ್ಪುವುದೇ ಇಲ್ಲ. ಪ್ರತಿವಾದಿಗೆ ಅನುಕೂಲತೆ ಸರಿಯಿರುತ್ತಿದ್ದರೆ ಅವನಿಗೆ ಹೀಗೆ ಉಂಟುಮಾಡುವುದೇ ಇಲ್ಲ. ಅದಿರಲಿ ೧೧ ಗಂಟೆಗೆ ಸರಿಯಾಗಿ ಕೋರ್ಟಿಗೆ ಬರೋಣ, ಸ್ವಲ್ಪದ ಕಟ್ಟು ಬಿಟ್ಟೋಣ, ಕಕ್ಷಿಗಾರರನ್ನು ಕರೆಯೋಣ, ಆಲೋಚಿಸೋಣ, ಒಂದಿಷ್ಟು [illegible] ಹಿಡಿದೇ ಮಾತೂ ಖರ್ಚು ಮಾಡಿಕೊಳ್ಳೋಣ. ಒಂದೊಂದನ್ನೇ ಮೆಲ್ಲಗೆ ಮುಂದೂಡಿಬಿಡೋಣ. ಇಷ್ಟರಲ್ಲೇ ಕೋರ್ಟಿನ ಸಮಯ ಸಾಮಾನ್ಯ ಸರಿಹೋಗುವಾಗ ಮತ್ತೆಲ್ಲಿ ಸಮಯ? ಒಬ್ಬ ವಾದಿಗೆ ಸಮಯವಿದ್ದರೆ ಪ್ರತಿವಾದಿಗಿಲ್ಲ. ಇನ್ನೊಮ್ಮೆ ಇವರ ಉಪರಾಟೆ ಇಬ್ಬರಿಗೂ ಇದ್ದಂತೆ. ಕೋರ್ಟಿಗಿಲ್ಲ. ಕೋರ್ಟಿಗೂ ಒಮ್ಮೆ ಸಮಯವಿಲ್ಲ—ಅಂತಾ [illegible] ವಿಗೂ ಇಲ್ಲ. ಅಂತೂ ಇಂತೂ ಶಾಂತಿಮಯಕ್ಕಾಗಿ ಜನವಾಸ ಎಂದಂತೆ ಆಗಬೇಕೇನು? ಎಂದೆಂದೂ ಎಜರ್ನಮೆಂಟೇ. ೧೧ ಘಂಟೆಗೆ ಕೋರ್ಟು ತುಂಬಾ ಜನರು ಸೇರುವರು. ೫ ಘಂಟೆ ವರೆಗೆ ಮುಗಿಯುವಾಯ ಮುಚ್ಚ

(ಇನ್ನೂ ಇದೆ)

ಅನುಕ್ರಮಣಿಕೆ.

ಚಿತ್ರ ೨
ಪತ್ರಿಕಾ ಪ್ರಸಂಗ ೩
ವಿಧವಾ ವಿವಾಹವು ಶಾಸ್ತ್ರವಿರುದ್ಧವೇ? ೫
ಸ್ಫುಟವಿಚಾರಗಳು ೬
ಮುಂಡೇ ಕೋಳಿಗೆ ಮುನ್ನೂರು ವಿಘ್ನ. ೭
ಕನ್ನಡ ಹಿಂದೀ ಕಲಹ ೮
ಅಗ್ರಲೇಖ
ಫ್ರಾನ್ಸೂ ಯುರೋಪಿನ ಶಾಂತಿಯೂ. ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ವಿವಿಧ ಸಮಾಚಾರಗಳು, ೧೩
ವಿಜಯ ೧೪
ಜಂಜಿಬಾರ್ ಮತ್ತು ಪೂರ್ವ ಆಫ್ರಿಕ. ೧೪
ಮೊಸ್ಕೋವಿನಲ್ಲಿ ರೈಲು ಢಿಕ್ಕಿಹೊಡೆಯಿತು ೧೫

ಸ್ವದೇಶಾಭಿಮಾನಿ.

ತಾ ೧೫ನೇ ಶುಕ್ರವಾರ ಫೆಬ್ರವರಿ '೩೫

ಫ್ರಾನ್ಸೂ, ಯುರೋಪಿನ ಶಾಂತಿಯೂ

ಕಳೆದ ಮಹಾ ಯುದ್ಧದ ತರುವಾಯ ೪-೫ ವರುಷಗಳ ಅವಧಿಯು ಎಲ್ಲೆಲ್ಲೂ ನಿಜವಾದ ಶಾಂತಿಯಲ್ಲಿ ನೆಲಸಿತ್ತು ಎಲ್ಲರೂ ನೋತು ಸುಖವಾಗಿ ಬಿದ್ದಿರಲು, ಇನ್ನೊಂದು ಸಮರದ ಯೋಚನೆಯು ಯಾರಿಗೂ ಇರಲಿಲ್ಲ ಈಗ ಆ ಸಾವಿನ ಸೂತಕವು ಕಳೆದಿದೆ ಪ್ರತಿಯೊಂದು ಜನಾಂಗವೂ ತಿರುಗಿ ಯುದ್ಧೋಪಕರಣಗಳನ್ನು ಬೆಳೆಸುತ್ತಿದೆ ನಿಶ್ಚಯಕ್ಕೂ ಈ ದಿನದಲ್ಲಿ, ಯುರೋಪಿನ ಯಾವ ರಾಷ್ಟ್ರಕ್ಕೂ ಯುದ್ಧ ಮಾಡುವ ಆತುರವಿರುವಂತೆ ಕಾಣುವುದಿಲ್ಲ ಕಳೆದ ಯುದ್ಧಕ್ಕಿಂತ ಭೀಕರವಾಗುವಂಥ ಮುಂದಿನ ಯುದ್ಧವನ್ನು ಆಮಂತ್ರಿಸಲು ಯಾವ ಜನಾಂಗವೂ ಸಿದ್ಧವಿಲ್ಲ ಆದರೆ ಇಷ್ಟೊಂದು ಸಿದ್ಧತೆಯೇಕೆ-ಎಂದು ಕೇಳಿದರೆ, ನಾಳಿನ ಅಂಜಿಕೆಯಿಂದ ಇವರ ಅಂಜಿಕೆಯಿಂದಲೇ ಇಂದು ಇನ್ನೊಂದು ಭೀಕರ ಯುದ್ಧದ ತಯಾರಿಯು ನಡೆದಿದೆ

ಅತ್ತ ಬೆಳೆಯುತ್ತಿರುವ ಜಪಾನಿನ ಭೀತಿಯು ಸಂಯುಕ್ತ ಅಮೇರಿಕಕ್ಕೆ ಸಹ ಹಿಡಿದಿರಲು-ಅಷ್ಟು ಸಮೀಪದಲ್ಲಿ ಸಂಸಾರ ಮಾಡಿಕೊಂಡಿರುವ ಫ್ರಾನ್ಸು, ಇಂಗ್ಲೆಂಡ್, ಜರ್ಮನಿ ಇಟಲಿ, ರಷ್ಯಾಗಳ ಗತಿಯೇನು? ಪ್ರತಿಯೊಬ್ಬನೂ ಒಳಸಂಚಿನ ಸಂಧಾನದ ಪಿತೂರಿಯಲ್ಲೇ ಇರುವರು ಈಗಿನ ಮುಖ್ಯ ತೊಡಕುಗಳಲ್ಲಿ-ಎರಡು ಬಲವತ್ತರವಾದುವು ಇವೆ ಮೊದಲನೆಯದು, ಯುದ್ಧ ಸನ್ನದ್ಧತೆಯನ್ನು ತಗ್ಗಿಸುವ ಮನಸ್ಸಿಲ್ಲದಿರುವುದು, ಇನ್ನೊಂದು ಫ್ರಾನ್ಸಿಗೆ ಜರ್ಮನಿಯ ಮೇಲೆ ಇರುವ ಅಪನಂಬುಗೆ

ಮೇಲಿಂದ ಮೇಲೆ ನಡೆಯುತ್ತಿರುವ 'ಡಿಸಾರ್ಮಮೆಂಟ್' ಪರಿಷತ್ತುಗಳ ಬಂಜೆತನವು ಎಲ್ಲರಿಗೂ ವಿಸ್ಮಯ ಮಾಡೀತು

ಜನಾಂಗ ಸಭೆ ಯ ಸದಸ್ಯರು ಸಹ ಈ ಪರಿಷತ್ತಿನ ಸೋಲಿಗೆ ಕಾರಣವಾಗಿದ್ದಾರೆಂದರೆ ತಪ್ಪಾಗಲಾರದು. ಈ ಅಪಜಯಕ್ಕೆ ಪ್ರತಿಯೊಂದು ದೇಶಗಳ ರಾಷ್ಟ್ರ ಮುಖಂಡರು ಕಾರಣರು ಎನ್ನಲು ಬರುವುದಿಲ್ಲ. ಅವರನ್ನು ಸಹ ಬೇಕಾದಂತೆ ಕುಣಿಸಬಲ್ಲ ವ್ಯಾಪಾರಿಗಳು ಕೆಲವರು ಇದ್ದಾರೆ. ಇಂಗ್ಲೆಂಡಿನ ವಿಕರ್ಸ್ ಆರ್ಮಸ್ಟ್ರಾಂಗರಾಗಲಿ, ಎಸೆನಿನ ಕ್ರುಪ್ಪರಾಗಲಿ ಫ್ರಾನ್ಸು, ಸಂಯುಕ್ತ ಅಮೇರಿಕಗಳ ಇತರ ಮದ್ದು ಗುಂಡಿನ ವ್ಯಾಪಾರಿಗಳಾಗಲಿ ಈ ಕಲಾಪಗಳ ಮೇಲೆ ತಮ್ಮ ವರ್ಚಸ್ಸನ್ನು ಕೆಡಿಸುತ್ತಿದ್ದಾರೆ ಜನಾಂಗಗಳು ಯುದ್ಧೋಪಕರಣ ಸಿದ್ಧತೆಯನ್ನು ನಿಲ್ಲಿಸಿದರೆ ಅವರಿಗೆ ಲಾಭವೆಲ್ಲಿಂದ?

ಈಗ ನಾವು ಎರಡನೆ ತೊಡಕನ್ನು ವಿಚಾರಿಸುವ. ಇದು ಫ್ರಾನ್ಸಿನ ಸಂಕೋಚ ಬುದ್ಧಿ ಫ್ರಾನ್ಸು ಜರ್ಮನ್ ಹಗೆತನಗಳು ಪ್ರಾಚೀನ ಕಾಲದ್ದು ಕಳೆದ ಯುದ್ಧದ ನಂತರ ಇದು ನೂರುಮಡಿ ಬೆಳೆದಿದೆಯೇ ಹೊರತು ಕಡಮೆಯಾಗಿಲ್ಲ ವರ್ಸೆಲಿಸ್ ಒಪ್ಪಂದದಲ್ಲಿ-ಜರ್ಮನಿಯನ್ನು ನುಚ್ಚುನೂರಿಮಾಡುವುದರಲ್ಲಿ ಫ್ರಾನ್ಸಿನ ಕ್ಲೆಮೆನ್ಸೊರವರು ಮಾಡಿದಷ್ಟು ಸಾಹಸ ಇನ್ಯಾರೂ ಮಾಡಿಲ್ಲ. ಜರ್ಮನಿಯ ಮೇಲೆ ಯುದ್ಧದ ಅಪರಾಧವು ಹೊರಿಸಲ್ಪಟ್ಟು, ಅದನ್ನು ಶಸ್ತ್ರಹೀನವಾಗಿ ಮಾಡಿದರು ಅದಕ್ಕೆ-ವಾಯು ನಾವೆಗಳ ಅಧಿಕಾರವಿಲ್ಲೆಂದು ನಿರ್ಣಯಿಸಿದರು ಈಗ ಯುದ್ಧದ ಅಪರಾಧವು ಜರ್ಮನಿಯ ತಲೆಯಿಂದ ಇಳಿಸಲ್ಪಟ್ಟಿದೆ. ಆದರೆ, ಉಳಿದ ಶರ್ತಗಳಿಗೆ ಜರ್ಮನಿಯು ಬಗ್ಗಿರಬೇಕೆಂದರೆ ಅವರೂ ಒಪ್ಪಲಾರರು ಫ್ರಾನ್ಸಿನ ಪ್ರತಿಷ್ಠೆಗೆ ಕಡಮೆಯಾದುದು ಜರ್ಮನಿಯ ಪ್ರತಿಷ್ಠೆಯಲ್ಲ

ಜರ್ಮನಿಯ ಶಸ್ತ್ರಧಾರಣೆಯು ಫ್ರಾನ್ಸು ಇಲ್ಲಿಯತನಕ ತಡೆದುದರಿಂದಲೇ, ಎಷ್ಟೋ ಒಪ್ಪಂದಗಳು ವ್ಯರ್ಥವಾದುವು ಜರ್ಮನಿಯು ತಿರುಗಿ ಯುದ್ಧೋಪಕರಣ ಹಿಡಿಯಬಾರದು ತಮ್ಮ ಸಿದ್ಧತೆಗೆ ಮಿತಿಯಿಲ್ಲವೆಂದು ಹಟಹಿಡಿದ ಫ್ರಾನ್ಸು-ನಿನ್ನೆ ನಿನ್ನೆ ಕೆಳಗೆ ಇಳಿದಿದೆ ಇಂಗ್ಲೆಂಡಿನೊಡನೆ ಅದು ನಡೆಯಿಸಿದ ಮಾತುಕಥೆಗಳಲ್ಲಿ, ಆಕಾಶಗಾಮಿ ಸೈನ್ಯದ ವಿಚಾರ ತರ್ಕಿಸಲು ಈಗ ಜರ್ಮನಿಗೂ ಆಮಂತ್ರಣ ಹೋಗಿದೆ ಇದರಿಂದ ಜರ್ಮನಿಗೆ ವಾಯು ವಿಮಾನಗಳ ಮೇಲೆ ಇರುವ ಹಕ್ಕನ್ನು ಒಪ್ಪಿದಂತಾಯಿತು ಇತ್ತ ಸಾರ್ ಪ್ರಾಂತವು, ಫ್ರಾನ್ಸಿನ ಇಷ್ಟಕ್ಕೆ ವಿರುದ್ಧವಾಗಿ ಜರ್ಮನಿಗೆ ಸೇರಿತು ಫ್ರಾನ್ಸೂ ಇತರ ದೇಶಗಳೂ-ಜರ್ಮನಿಯ ಆರ್ಥಿಕ ಸ್ವಾತಂತ್ರ್ಯದ ವಿಷಯದಲ್ಲಿ ಔದಾರ್ಯ ತೋರಿ, ಅದರೊಡನೆ ವ್ಯಾಪಾರ ಮಾಡಲು ಅನಾವಶ್ಯಕವ, ಟೆರಿಫ್ ನಿರ್ಬಂಧಗಳನ್ನು ತೆಗೆದು ಹಾಕಿದರೆ ಇನ್ನೂ ಒಂದು ಹೆಜ್ಜೆ ಮುಂದರಿದ ಹಾಗಾದೀತು

ಇಂಥ ಎಲ್ಲ ಕೆಲಸಗಳಲ್ಲಿ, ಯಾರೂ ಬಗ್ಗಿದರೂ ಫ್ರಾನ್ಸಿನ ಅಪನಂಬುಗೆ ಹೋಗಿಲ್ಲ ಅದು ಇನ್ನೂ ಕಳಕ್ಕಿಳಿಯದೆ ಯುರೋಪಿಗೆ ಶಾಂತಿಯಿಲ್ಲ

ಎರಡು ಹೆಂಡಂದಿರಿಂದ ಪ್ರಯೋಜನವೇನು?

ಎಂಬ ಪ್ರಶ್ನೆಗೆ ಉತ್ತರವಿಲ್ಲದೆ ದಾವಣಗೆರೆಯ ಒಕ್ಕಲಿಗರ ಕೇರಿಯಲ್ಲಿ ವಾಸವಾಗಿರುವ ಕೊಲ್ಲಾಡು ಗೌಡಪ್ಪನೆಂಬವರೂ ಅವರ ಮಗನೂ ರಾತ್ರಿ ಊಟ ಮಾಡಿ ನಿದ್ರಿಸ ಹೋದರು ಅಷ್ಟರಲ್ಲಿ ಇಬ್ಬರಿಗೂ ಓಕರಿಕೆಯಾಯಿತು ಹಲಕೆಲವರು ಕೂಡಿ ಉಪಚಾರಮಾಡಿ ಕೋತರು ಆಸ್ಪತ್ರೆಗೊಯ್ದರು ಆದರೆ ಚಿಕಿತ್ಸೆಯಿಂದ ಫಲವಾಗಲಿಲ್ಲ ತನಿಖೆಯಾದಲ್ಲಿ ಗೌಡಪ್ಪನವರ ಎರಡನೇ ಹೆಂಡತಿಯು ಅವರಿಗೆ ವಿಷಕೊಟ್ಟಿದೆಂದು ತಿಳಿದುಬಂತು.

ಕರ್ನಾಟಕ ಪ್ರಾಂತ್ಯನಿರ್ಮಾಣ

ಕರ್ನಾಟಕದ ಪ್ರಖ್ಯಾತ ಪುರುಷರಾದ ಶ್ರೀ ಕೌಜಲಗಿ ಶ್ರೀನಿವಾಸರಾಯರು ಕಳೆದವಾರ ಮುಂಬಾಯಿಯಲ್ಲಿ "ಕರ್ನಾಟಕದ ಭವಿಷ್ಯ" ಕುರಿತು ಭಾಷಣ ಮಾಡಿದರು "ಸ್ವರಾಜ್ಯ ಸಿಗಲಿ, ಮೊದಲು ಅದನ್ನು ಗಳಿಸೋಣ ಅನಂತರ ಕರ್ನಾಟಕ ಪ್ರಾಂತ್ಯವು ಬಹಳ ಸುಲಭವಾಗಿ ಲಭ್ಯವಾಗುತ್ತದ." ಎನ್ನುವವರಿಗೆ ಶ್ರೀಯುತರು ಸಮರ್ಪಕ ಉತ್ತರವಿತ್ತರು

ದಾನದಲ್ಲಿ ಹಲವು ಬಗೆಯುಂಟು-

ಈಗ ತಿಳಿಯಿತಂ, ಹಲವು ಸಲ ಸೆರೆಯವಾಸವಾಗಿ ಹೊರಗೆ ಬಂದಿರುವ ಆಂಡೇ ಸುಬ್ಬರಾಯರು ಎಂಬವರು ಒಂದು ಹೊಸ ರೀತಿಯ ದಾನಕ್ಕೆ ಪ್ರಾರಂಭಿಸಿದ್ದಾರೆ ಲೆಜಿಸ್ಲೆಟಿವ್ ಎಸೆಂಬ್ಲಿಯ ಅಧ್ಯಕ್ಷರ ಉಪಯೋಗಾರ್ಥ ಶುದ್ಧ ಖಾದಿಯ ಒಂದು ಕೋಟನ್ನೂ ಒಂದು ಗಾಂಧಿ ಟೋಪಿಯನ್ನೂ ಆಂಧ್ರದ ಕೇರಲಾ ಎಂಬ ತನ್ನ ಮನೆಯಲ್ಲಿ ಅವರು ತಯಾರಿಸಿ, ಅವುಗಳನ್ನು ಶ್ರೀ ರಂಗಾದವರಿಗೆ ಕಳುಹಿಸಿದ್ದಾರೆ. ಶ್ರೀ ಸುಬ್ಬರಾಯರವರು ಇನ್ನೆರಡು ಕೋಟುಗಳನ್ನು ತಯಾರಿಸುತ್ತಿದ್ದಾರೆ, ಒಂದು ರಂಗರವರಿಗೆ, ಇನ್ನೊಂದು ಶ್ರೀ ಕೆ ನಾಗೇಶ್ವರರಾವ್ ಪಂತಲುರವರಿಗೆ

ಇದರಲ್ಲೂ ಸೋಲಬೇಕೆ? - -

ಶಾಸನಸಭೆಯಲ್ಲಿ ಗಡಿನಾಡಿನ ಖುದಾಯಿಖಿದ್ಮತ್ಗಾರ್ ಸಂಘ (ಗಡಿನಾಡಿನ ಕೆಂಪಂಗಿ)ಯವರ ಮೇಲಿರುವ ಇಂಡಿಯಾ ಸರಕಾರದ ಬಹಿಷ್ಕಾರವನ್ನು ತೆಗೆಯಬೇಕೆಂಬ ಕುರಿತು ಚರ್ಚೆಯಾಗಿ ೬೩ ಮಂದಿ ವಿರುದ್ಧ ೭೬ ಮಂದಿ ಮಂಡಿಸಿ ಅದು ಸ್ವೀಕೃತವಾಯಿತು ಸರಕಾರವು ಮಾತ್ರ ಏನುಮಾಡುವುದೋ!

ಮದ್ದಿನಿಂದ ಮರಣ

ಲಂಡನಿನಲ್ಲಿ ಲೀಸ್ಟರ್ ಎಂಬಲ್ಲಿನ ದಟಿನಳು ನಿದ್ದೆ ಬರಲೆಂದು ನಿದ್ದೆಯ ಮದ್ದನ್ನು ಸೇವಿಸಿದಳು. ಆದರೆ ಅದು ಬೇಕಾದುದಕ್ಕಿಂತ ಹೆಚ್ಚಾಗಿ, ಆಕಳು ಬೆಳಗ್ಗೆ ಏಳಲೇ ಇಲ್ಲ

ಅಮೇರಿಕವು ಸುಮ್ಮನಿಲ್ಲ.

ಅಮೇರಿಕದ ನೇವಿ ಕಮಿಟಿಯವರಿಂದ ತಿಳಿದುಬರುವಂತೆ ಅಲ್ಲಿನ ಸರಕಾರವು ೩೦ ಮಿಲಿಯನ್ ಡೊಲ್ಲರುಗಳನ್ನು ಖರ್ಚುಮಾಡಿ ನಾವಿಕ ಸೈನ್ಯವನ್ನು ವ್ಯವಸ್ಥಾರೂಪವಾಗಿ ರಚಿಸಲಿದೆ ಹವಾಯಿಯ ಪರ್ಲಹಾರ್ಬರ್‌ನಲ್ಲಿ ಯುದ್ಧ ನಾವೆಗಳು ನಿಲ್ಲುವುದಕ್ಕಾಗಿ ೧೫ ಮಿಲಿಯನ್ ಡೋಲರ್ ವೆಚ್ಚಮಾಡಿ ನಿಲ್ದಾಣವನ್ನು ರಚಿಸಲಿರುವರು

ಭೂಕಂಪ!

ಪೇಶಾವರದಲ್ಲಿ ತಾರೀಕು ೧೨ನೇ ದಿನ ಬೆಳಗ್ಗೆ ಘಂಟೆ ೬-೨೦ಕ್ಕೆ ಭೂಕಂಪವಾಯಿತು. ೫೦ ಸೆಕುಂಡಗಳ ತನಕ ಭೂಮಿಯು ನಡುಗಿತು ಜನರು ಭಯಭ್ರಾಂತರಾದರು ಅಪಘಾತಗಳೇನೂ ಸಂಭವಿಸಲಿಲ್ಲ

ಮೊಹರಂ ದಿನ ಲಂಡನಿನಲ್ಲಿ ಮುಸ್ಲಿಮರು ಪ್ರಾರ್ಥನೆಮಾಡುತ್ತಿರುವುದು

ಅದೃಷ್ಟವೆಂದರೆ ಏನೆಂದು ತಿಳಿಯದವರು

ಈ ವಾರ್ತೆಯನ್ನು ಓದಿರಿ! ಹೈದರಾಬಾದ್ ಸೆಂಟ್ರಲ್ ಜೈಲಿನಲ್ಲಿದ್ದ ಚಿತ್ರಕುಲ್ಲರಾವ್ ಎಂಬಿಬ್ಬರು ಮತ್ತೊಬ್ಬನೊಡಗೂಡಿ ಜೈಲಿನ ನೆಲದಡಿಯಿಂದ ಸುರಂಗವೊಂದನ್ನು ತೋಡಿ, ಅದರ ಮೂಲಕ ಬೀದಿಗೆ ಬರುವಾಗ, ಸುರಂಗದ ಒಂದು ಭಾಗವು ಕುಸಿದುಬಿತ್ತು ಮೊದಲು ನಡೆದವನು ಬೀದಿಗಿಳಿದು ಓಡಿದನು, ಎರಡನೆಯವನು ಸಿಕ್ಕಿಬಿದ್ದು ಘಾಯಗೊಂಡನು ಬಿಡಲ್ಪಟ್ಟ-ಒಡನೆ ಕೆಲವರು ಓಡಿಬಂದರು ಇಬ್ಬರು ಸುರಂಗದೊಳಗಿದ್ದಾರೆ ಹೊರಗೆ ತೆಗೆದು ವಿಚಾರಿಸಲಾಗಿ ಒಬ್ಬನು ಕಾಲಿಗೆ ಬುದ್ಧಿ ಹೇಳಿ ಬದು ಹೋತ್ತಾಯಿತೆಂದು ತಿಳಿದುಬಂತು ಓಡಿದವನನ್ನು ಹುಡುಕುತ್ತಿದ್ದಾರೆ

ಆ ವಿಷಯ ನಿಮಗೆ ಬೇಡಾ!

ಶ್ರೀ ಸತ್ಯಮೂರ್ತಿಯವರು ಶಾಸನಸಭೆಯ ಮುಂದೆ ಸತ್ಯಾಗ್ರಹ ಸಮಯದಲ್ಲಿ ಸರಕಾರದವರು ಮುಟ್ಟುಗೋಲು ಹಾಕಿಕೊಂಡ ವಸ್ತು, ವಾಹನ ಭೂಮಿ, ಕಾಣಿಕೆಗಳನ್ನು ಹಿಂದಕ್ಕೆ ಕೊಡಬೇಕೆಂದು ಸೂಚಿಸುವ ನಿರ್ಣಯವೊಂದನ್ನು ತಂದರು ಶಾಸನಸಭೆಯ ಅಧ್ಯಕ್ಷರು ಅದನ್ನು ವೈಸರಾಯರಿಗೆ ಕಳುಹಿಸಿದರು ವೈಸರಾಯರು "ಶಾಸನಸಭೆಯಲ್ಲಿ ಆ ವಿಷಯ ತರಲಾಗದು" ಎಂದರು.

ಡಕಾಯಿತರೂ ಅಕ್ಕಸಾಲಿಗರೂ.

ಅಕ್ಕಸಾಲಿಗರ ಮನೆಯಲ್ಲಿ ಭಂಗಾರವು ಹೆಚ್ಚಾಗಿ ಸಿಗಬಹುದೆಂದು, ಕರಾಚಿಯ ಹತ್ತಿರದ ಜಿಲ್ಲೆಯಲ್ಲಿ ಹದಿನೈದು ಮಂದಿ ಮುಸ್ಲಿಮ್ ಡಕಾಯಿತರು ಕತ್ತಿಕೈದುಗಳನ್ನು ಧರಿಸಿಕೊಂಡು ಅಲ್ಲಿಯ ಅಕ್ಕಸಾಲಿಗರ ಒಂದು ಮನೆಗೆ ಹೊಕ್ಕರು. ಮಾರಾಮಾರಿಯಾಗಿ ಒಬ್ಬ ಹಿಂದುವು ಮೃತನಾದನು ೧೦,೦೦೦ ರೂಪಾಯಿ ಬೆಲೆಬಾಳುವ ವಸ್ತುಒಡವೆಗಳು ಲೂಟಿಗಾಹುತಿಯಾದುವು

ಮಲೇರಿಯದ ಸಾಹಸವು-

ಕೊಲೊಂಬೊ ದಲ್ಲಿ ಎರ್ಗಕವಾಗಿ ನಡೆಯುತ್ತಾ ಇದೆ ದಿನದಿನ ನೂರಾರು ಜನರು ಮೃತ್ಯುವಶರಾಗುತ್ತಿದ್ದಾರೆ ಸಿಲೋನ್ ಸರಕಾರದ ಸಹಾಯ ಧನವು ಕಳುಹಿಸಲ್ಪಟ್ಟಿದೆ ಬಡವರಿಗಾಗಿ ಪರದೇಶಗಳಿಂದ ಅನ್ನ ಬಟ್ಟೆ ಮತ್ತು ಹಾಲನ್ನು ಒದಗಿಸಲಾಗುತ್ತಿದೆ.

ಇಟಲಿ ಮತ್ತು ಎಬಿಸಿನೀಯಾ ದೇಶಗಳು-

ಯುದ್ಧಕ್ಕೆ ಎದೆಷಿ ಸಿನಿಯರ್ ಮುಸೋಲಿನಿಯವರು ಯುದ್ಧವನ್ನು ಮುಂದೊತ್ತುದ ಕುರಿತು ಮಂತ್ರಿ ಮಂಡಲದೊಡನೆ ತರ್ಕಿಸುತ್ತಿರುವರು ಎಬಿಸೀನಿಯಾ ಸಮರಾಧಿಪತಿಗಳು "ಇಟಲಿಯು ಮೇಲ್ಬಿದ್ದರೆ ನಾವು ಸಂರಕ್ಷಣೆಗಾಗಿ ಸದಾ ಸಿದ್ಧ ೫೦೦ ೦೦೦ ಜನರ ಸೈನ್ಯವಿದೆ ಬೇಕಾದರೆ ಒಂದು ಮಿಲಿಯವನ್ನು ಸಿದ್ಧಿಸಿಕೊಂಡೇವು ಆದು ವಿನಾ ಸಮರೋಪಕರಣಗಳಿಲ್ಲವಾದರೂ ಯುದ್ಧಮಾಡುವೆವು" ಎಂದಿರುತ್ತಾರೆ

ವಿಯೆನ್ನಾದಲ್ಲಿ ಸೋಶಿಯಲಿಸ್ಟರು.

ಅಧಿಕಾರಿಗಳನ್ನು ಪ್ರತಿಭಟಿಸಿ ನಿಂತಿರುವರು, ಸೈನಿಕರು ಪ್ರತಿಮಾರ್ಗದಲ್ಲಿ ನಿಂತಿರುವರು ಕೆಲವು ಭಾಂಬುಗಳನ್ನು ಸಿಡಿಸಿದಿದ್ದಾರೆ

ಮುಂಬಾಯಿಯಲ್ಲಿ ತಂದೆಯು ಮಕ್ಕಳನ್ನು ಕೊಂದನು

ಮುಂಬಾಯಿಯಲ್ಲಿ ಗುಸ್ತವ್ ಗ್ರೀಡ್ ಎಂಬ ಎಂಗ್ಲೋ ಇಂಡಿಯನನೊಬ್ಬನು ದುಡ್ಡಿನ ಅಡಚಣೆಗೆ ಸಿಕ್ಕಿ ಸಹಿಸಲಾರದೆ ತನ್ನ ಇಬ್ಬರು ಮಕ್ಕಳಿಗೆ ವಿಷಪಾನ ಮಾಡಿಸಿ ಕೊಂದನು ಅವನು ಬರೆದಿಟ್ಟ ಪತ್ರದಲ್ಲಿ "ಮಕ್ಕಳೇ, ನನ್ನೊಡನೆ ಬರುವರಾದರೆ ಮೇಜಿನ ಮೇಲಿರುವ ವಿಷವನ್ನು ತಿನ್ನಿರಿ. ಬದುಕಬೇಕಾದರೆ ತಿನ್ನದಿರಿ" ಎಂದು ಬರೆದಿಟ್ಟಿರುವನು.

ಸ್ವಾರ್ಥತ್ಯಾಗ!

ಗ್ರಾಮಸಂಘಟನ ಕೆಲಸದಲ್ಲಿಯೇ ಪೂರ್ಣವಾಗಿ ನಿರತನಾಗಿರುವುದಕ್ಕಾಗಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರಾದ ಶ್ರೀ ಬಾಗಾಲ್ ಕಿಶೋರರವರು ಮಥುರೆಯ ಪ್ರೇಮಮಹಾ ವಿದ್ಯಾಲಯದಲ್ಲಿ ತನಗಿದ್ದ ಪ್ರಿನ್ಸಿಪಾಲ್ ಪದವಿಯನ್ನು ತೊರೆದಿರುವರು.

ಸರಕಾರದ ಪ್ರೋತ್ಸಾಹ.

ಬೆಂಗಾಳ ಸರಕಾರದ ಕೈಗಾರಿಕಾ ಖಾತೆಯು ಕೊಡೆಗಳನ್ನು ತಯಾರಿಸುವ ಒಂದು ಶಾಲೆಯನ್ನು ಟುಲ್ಲ್ಸ್ ಕೆಮಿಕಲ್ ಶಾಲೆಯಲ್ಲಿ ತೆರೆದಿರುವರು

'ಹಿಂದು' ಪತ್ರಿಕೆಯ ಸಂಪಾದಕರ ಸ್ಮರಣಾರ್ಥವಾಗಿ

ಒಂದು ಸ್ಮಾರಕವನ್ನು ಸ್ಥಾಪಿಸಬೇಕೆಂದು ಟಿಟಿಕೊರಿನ್, ಗುಂಟೂರು, ಮಚಲೀಪಟ್ಟಣ ಮೊದಲಾದ ಕಡೆಗಳಲ್ಲಿ ಜರಗಿದ ಶ್ರೀ ರಂಗಸ್ವಾಮಿ ಅಯ್ಯಂಗಾರ ಪ್ರಥಮ ವಾರ್ಷಿಕ ದಿನ ಸಭೆಗಳಲ್ಲಿ ನಿರ್ಣಯಿಸಲಾಗಿದೆ. ಪತ್ರಿಕಾ ವ್ಯವಸಾಯದಲ್ಲಿ ಅವರಿಗಿದ್ದ ನೈಪುಣ್ಯವನ್ನು ಪ್ರಶಂಸಿಸಲಾಯಿತು



ಡಾ। ಭಗವಾನ್‌ದಾಸ್

ಡಾ। ಭಗವಾನದಾಸರು [illegible] ದೇಶಭಕ್ತರಾದರೂ ಅವರಿಗೆ ಸವಿಸ್ತಾರ [illegible] ಕೊಟ್ಟಿಲ್ಲವೆಂದು ಅನೇಕರ ಅಭಿಪ್ರಾಯ [illegible] ಭಗವಾನ್‌ದಾಸರು ಕೆಲಕಾಲ [illegible] ಎಸೆಂಬ್ಲಿಗೆ ಬರುವ ಇಚ್ಛೆಯುಳ್ಳವರಾದರೆ ತಮ್ಮ ಸ್ಥಾನವನ್ನು ಕೊಡುವೆನು ಎಂದು ಹೇಳಿದ್ದರು

ಶಿವಮೊಗ್ಗಕ್ಕೆ ಕಾರ್ಖಾನೆಯು ಬೇಕು

ಶಿವಮೊಗ್ಗದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿ ಸರಕಾರವು ಕೃಷಿ ಕೈಗಾರಿಕೆಗೆ ಸಹಾಯಮಾಡಬೇಕೆಂದು ಕೇಳಿಕೊಳ್ಳುವುದಕ್ಕಾಗಿ ಒಂದು ಪ್ರತಿನಿಧಿ ಮಂಡಲವು ಮೈಸೂರಿನ ದಿವಾನರ ಬಳಿಗೆ ಹೋಗಿದೆ

ಒಂದು ಹೆಸರು ಕಾಣೆಯಾದುದಕ್ಕಾಗಿ—

ಸಾವಿರಾರು ಹೆಸರುಗಳ ವೋಟರ ಹಳೆಯ ಪಟ್ಟಿಯನ್ನೇ ತಿದ್ದಿ ಸರಿಮಾಡಬೇಕೆಂದು ಸಂಯುಕ್ತ ಪ್ರಾಂತದ ಸರಕಾರವು ತೀರ್ಮಾನಿಸಿದೆ. ಹೊಸ ಎಸೆಂಬ್ಲಿ ವೋಟಿಗೆ ನಿಲ್ಲಬೇಕೆಂದು ಪಂಡಿತ ಮಾಳವೀಯರು ವೋಟರರ ಪಟ್ಟಿಯನ್ನು ನೋಡುವಾಗ ಅವರ ಹೆಸರೇ ಅಲ್ಲಿರಲಿಲ್ಲ. ಸರಕಾರಕ್ಕೆ ಬರೆದಾಗ ಅದು ಮೇಲಿನಂತೆ ತೀರ್ಮಾನ ಕೊಟ್ಟಿತು

ಮುಂಬಾಯಿ ಕಲ್ಕತ್ತಾಗಳಿಗೆ ವಿಮಾನ.

ಮುಂಬಾಯಿ ಮತ್ತು ಕಲ್ಕತ್ತಾಗಳನ್ನು 'ಏರ್‌ಮೈಲ್'ನಿಂದ ಸಂಯೋಜಿಸಬೇಕೆಂಬ ಆಯೋಜನೆಯಾಗಿ ತಾತಾ ಕಂಪೆನಿಯವರು ಈ ಬಗ್ಗೆ ಇಂಡಿಯಾ ಸರಕಾರದೊಡನೆ ಪತ್ರವ್ಯವಹಾರ ನಡೆಸಿದರು. ಫೆಬ್ರುವರಿ ಅಂತ್ಯದಲ್ಲಿ ಮುಂಬಾಯಿಯಿಂದ ಕಲ್ಕತ್ತೆಗೂ, ಕಲ್ಕತ್ತೆಯಿಂದ ಮುಂಬಾಯಿಗೂ ವಿಮಾನಗಳ ಹಾರಿ ಪ್ರದರ್ಶನವಾಗಲಿರುವುದು. ಈ ವಿಮಾನ ಆಯೋಜನೆಯಿಂದಾಗಿ ಕಾಗದಪತ್ರಗಳು ಬಹು ಶೀಘ್ರವಾಗಿ ತಲಪುವವೆಂದು ಕಂಡುಹಿಡಿದಿದ್ದಾರೆ.

ಕಾಶ್ಮೀರ ಮಹಾರಾಜರು—

ಸಾರ್ವಭೌಮರ ರಜತಮಹೋತ್ಸವದ ಫಂಡಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಸಭಾ ದರ್ಬಾರರು ೩೫೦೦೦ ರೂಪಾಯಿಗಳನ್ನು ಕೊಟ್ಟಿರುವುದು.

ತಪ್ಪುಮಾಡಿದುದಕ್ಕಾಗಿ ಶಿಕ್ಷೆ!

ತಪ್ಪುಮಾಡಿದವರಿಗೆ ಶಿಕ್ಷೆಯು ಸಹಜ. ತಪ್ಪು ಮಾಡಿಸಿದವರಿಗೂ ಶಿಕ್ಷೆಯಿದೆ. ಮದ್ರಾಸಿನ ಶಾಸಿಕನ ಬಾಲಕನೊಬ್ಬನು ವೇಶ್ಯಾಗೃಹವನ್ನು ಸ್ಥಾಪಿಸಿ ಮಾನವನ್ನು ಕಳೆಯುವಳ ಸಹಾಯದಿಂದ ಜೀವಿಸುತ್ತಿದ್ದನು. ಪುರುಷನಿಗೆ ಶಿಕ್ಷೆ ದೊರಕಿತು. ಸ್ತ್ರೀಗೂ ಸಿಕ್ಕಿರುತ್ತದೆ.

ಕಲ್ಲಾಗುತ್ತಿದ್ದಾರೆ.

ಮನುಷ್ಯರು ಕಲ್ಲಾಗುತ್ತಿದ್ದಾರೆ ಎಂಬುದನ್ನು ಕೇಳಿದರೆ ಆಶ್ಚರ್ಯವಾಗಬಹುದು. ಇಂಡಿಯಾನಾ [illegible] ಎಂಬಲ್ಲಿ ೧೬ ಮತ್ತು ೯ ವರ್ಷ ಪ್ರಾಯದ ಸಹೋದರರಿಬ್ಬರು ಮೆಲ್ಲಮೆಲ್ಲನೆ ಕಲ್ಲಾಗುತ್ತಿರುವರು. ಹಿರಿಯವನ ದೇಹವು ಕಲ್ಲಿನಂತಾಗಿದೆ. ಅವನಿಗೆ ಚಲಿಸಲಾಗುವುದಿಲ್ಲ. ಅವನ ಸೊಂಟದ ವರೆಗೆ ಚೇತನವೇ ಇಲ್ಲ. ಕಿರಿಯವನು ಕಾಲನ್ನೆತ್ತಿ ಸ್ವಲ್ಪ ಚಲಿಸಬಲ್ಲನು. ಅವನ ದೇಹವು ಕಲ್ಲಾಗುತ್ತಿದೆ. ಔಷಧ ನಡೆಯುತ್ತಿದೆಯಾದರೂ ಅವರ ಅರಿವು ಉಳಿಯುವುದಿಲ್ಲ

ಕಥಾಕುಂಜದ ವಿಶೇಷ ಸಂಚಿಕೆಯು ಫೆಬ್ರವರಿ ೫ನೇ ತಾರೀಕಿಗೆ ಪ್ರಕಟವಾಗುವುದೆಂದು ಈ ಮೊದಲು ಪ್ರಸಿದ್ಧವಾಗಿತ್ತಷ್ಟೆ. ಆದರೆ, ಕಾಗದ ಹಾಗೂ ಬ್ಲಾಕುಗಳು ಯೋಗ್ಯವೇಳೆಗೆ ಒದಗದ್ದರಿಂದಲೂ ಮುದ್ರಣಾಲಯದಲ್ಲಿ ಕೆಲಸವು ಒಮ್ಮೆಲೇ ವಿಪರೀತ ಹೆಚ್ಚಿದ್ದರಿಂದಲೂ ಪ್ರಕಟಿಸಿದ ಅವಧಿಯಲ್ಲಿ ಹೊರಡಿಸುವದಾಗದಾಗಲಿಲ್ಲ. ವಾಚಕರು ಕ್ಷಮಿಸಬೇಕು

ಫೆಬ್ರವರಿ ೧೫ನೇ ತಾರೀಕಿಗೆ ಕಥಾಕುಂಜದ ವಿಶೇಷ ಸಂಚಿಕೆಯು ನಿಶ್ಚಯವಾಗಿ ಹೊರಡುವುದು. ಹೊಸ ವರ್ಷದ ಚಂದಾದಾರರಿಗೆ ಮಾತ್ರ ವಿಶೇಷ ಸಂಚಿಕೆಯು ಉಚಿತ ಎಂದು ಬೆಳಗಾವಿಯ ಕಥಾಕುಂಜದ ಕಾರ್ಯದರ್ಶಿಯವರು ತಿಳಿಸುತ್ತಾರೆ

ಇಬ್ಬರು ಒಟ್ಟು ನಡೆಯಬಾರದು

ಎಂದು ಆಸ್ಟ್ರಿಯಾದಲ್ಲಿ ಪ್ರಧಾನಮಂತ್ರಿಯಾದ ಮಿ. ಡಾಲ್‌ಫಸ್‌ರವರು ಮಾರ್ಷಲ್ ಲಾ ಪ್ರಚಾರ ಮಾಡಿರುವರು. ತಮ್ಮನ್ನು ಕೊಲ್ಲುವುದಕ್ಕಾಗಿ ಪಿತೂರಿಯೊಂದು ನಡೆದುದೇ ಇದಕ್ಕೆ ಕಾರಣ

ಕಣ್ಣು ಕಾಣಲಿಲ್ಲ

ಆಗಸದಿಂದ ವಿಮಾನವನ್ನು ಇಳಿಸಲು ಯತ್ನಿಸಿದ ಅಷ್ಟರಲ್ಲಿ ವಿಮಾನವು ಅಡಿಮೇಲಾಗಿ ಬಿದ್ದು ಒಡೆದು ಹೋಯಿತು. ವಿಮಾನದಲ್ಲಿದ್ದ ೧೧ ಮಂದಿ ಪ್ರಯಾಣಿಕರು ಬರ್ಲಿನ್‌ನ ಹಾದಿಯಲ್ಲಿ ಬಿದ್ದು ಸತ್ತರಾದರು. ಮೂವರು ಜರ್ಮನ್ ವಿಮಾನಿಕರೂ ಆಲಾದೀನ ರಿದರು

ಸಿನೆಮಾ ಕಂಪೆನಿಗಳಿಗೆ ಕಾಲಬಂತೇ?

ಮೂಕ ಚಿತ್ರಗಳಿಗಾಗಿ ಆಗಿನ ಜನರು ಆಶ್ಚರ್ಯಗೊಂಡರು. ಅದರ ಮೇಲೆ ಮಾತನಾಡುವ ಚಲಚ್ಚಿತ್ರಗಳು ಬಂದುವು. ಜನರು ಈಗಲೂ ಆಶ್ಚರ್ಯಪಡುತ್ತಿದ್ದಾರೆ. ಈಗ ಇನ್ನೊಂದು ವೈಚಿತ್ರ್ಯವು ತಲೆದೋರಿತು. ಜಗತ್ತಿನಲ್ಲಿ ಒಂದು ಮೂಲೆಯಲ್ಲಿ ಪ್ರದರ್ಶಿಸಲ್ಪಡುವ ಚಲಚ್ಚಿತ್ರವು ಲೋಕದ ಇನ್ನೊಂದು ಮೂಲೆಯಲ್ಲಿ ಯಂತ್ರವಿಲ್ಲದೇನೆ ಕಾಣಸಿಗುವುದು.

ಬ್ರಿಟಿಷರೇ ವಿರೋಧ.

ಲಂಡನಿನಲ್ಲಿ ಇಂಡಿಯಾ ಲೀಗಿನಲ್ಲಿ ಪೆಥಿಕ್ ಲಾರೆನ್ಸರವರು ಭಾಷಣಮಾಡುತ್ತಾ ಲೇಬರ್ ಪಾರ್ಟಿಯವರು ಇಂಡಿಯಾ ಬಿಲ್ಲನ್ನು ನಿರಾಕರಿಸಬೇಕೆಂದು ಅಂಗೀಕರಿಸಿದರು. ಅತ್ಯಂತ ಅಧಿಕಾರಿಗಳಾದವರು ಇಂಗ್ಲಿಷರು ಮತ್ತು ಬಲಾಢ್ಯರಾಗುವರು. ಹಿಂದೂದೇಶವು ಅಧಿಕಾರ ಹೊಂದುವುದೆಂದು ಅವರು ಹೇಳಿದರು

ಸಾರ್‌ನಲ್ಲಿಯ ಫ್ರೆಂಚರು

ಈಗ ಅಲ್ಲಿಂದ ತೆರಳಿ ಫ್ರಾನ್ಸಿಗೆ ನಡೆಯುತ್ತಿರುವರು. ಸಾರ್‌ದೇಶವು ಜರ್ಮನಿಯೊಡನೆ ಸೇರಿಕೊಂಡಂದಿನಿಂದ ೪ ಸಾವಿರ ಫ್ರೆಂಚರು ಸಾರ್‌ದೇಶವನ್ನು ಬಿಟ್ಟರು. ಸಾವಿರಗಟ್ಟಲೆ ಫ್ರೆಂಚರು ಫ್ರಾನ್ಸಿಗೆ ಓಡಿದುದರಿಂದ ಫ್ರಾನ್ಸಿನಲ್ಲಿ ಅವರಿಗೆ ಉದ್ಯೋಗಗಳನ್ನು ಒದಗಿಸಿಕೊಡುವುದಕ್ಕಾಗಿ ಒಂದು ಸೈನ್ಯವನ್ನೇ ಸ್ಥಾಪಿಸುವರು

ಪೂರ್ಣ ಸ್ವಾತಂತ್ರ್ಯವನ್ನೇ ಕೊಡಿರಿ—

ಎಂದು ದೀನಬಂಧು ಸಿ. ಎಫ್. ಎಂಡ್ರ್ಯೂಸರು ಇಂಗ್ಲೆಂಡ ಪರವಾಗಿ ಮಾತನಾಡುತ್ತ ಬ್ರೊಟ್ ಕಾಲೇಜಿನಲ್ಲಿ ಹೇಳಿದರು. "ನಿಮ್ಮ ದೊಡ್ಡಸ್ತಿಕೆಯನ್ನು ಬಿಟ್ಟು ಹಿಂದೂದೇಶದ ಬಡತನದ ವಾಸ್ತವಿಕತೆಯೊಡನೆ ಬೆರೆತು ನಡೆಯಿರಿ. ನಿಮ್ಮ ಸಾಮ್ರಾಜ್ಯವನ್ನು ಸ್ವೀಕರಿಸಿ [illegible] ಹಿಂದೂದೇಶದಲ್ಲಿಲ್ಲ. ಅವರಿಗೆ ಪೂರ್ಣ ಸ್ವಾತಂತ್ರ್ಯವು ಕೊಡಲ್ಪಟ್ಟದ ವಿನಹ ನಿರ್ವಾಹವಿಲ್ಲ" ಎಂದು ಅವರು ಹೇಳಿದರು

ಮಿ। ಜೋರ್ಜ್ ಲೆನ್ಸ್‌ಬುರಿಯವರು

ಆಗ ಒಂದು ತೆರ—ಈಗ ಒಂದು ತೆರ

ಮೊನ್ನೆ ಮಿ। ಜೋರ್ಜ್ ಲೆನ್ಸ್‌ಬರಿಯವರು ಲಂಡನ್ನಿನಲ್ಲಿ ಭಾಷಣಮಾಡಿ ಹಿಂದೂಸ್ಥಾನಕ್ಕೆ ಏನು ಬೇಕೆಂದು ಹಿಂದೀಯರು ಸ್ಪಷ್ಟವಾಗಿ ಹೇಳಲಿ ಎಂದರು. ಈ ವಾರ ಅವರು ಭಾಷಣಮಾಡುತ್ತಾ ಹಿಂದೀಯರಿಗೆ ಸ್ವಾತಂತ್ರ್ಯವನ್ನು ಕೊಡುವುದು ರಾಜನೀತಿಜ್ಞತೆಯೆಂದು ವಾದಿಸಿದರು. ನಮಸ್ಕಾರ [illegible] ಅವರು ಟೀಕಿಸಿದರು

೨,೪೨೫,೦೦೦

ನಿರುದ್ಯೋಗಿಗಳು ಈಗ ಬ್ರಿಟನಿನಲ್ಲಿರುವರೆಂದು ಲೆಕ್ಕ ಹಾಕಿದ್ದಾರೆ. ದಿನದಿನಕ್ಕೂ ಈ ನಿರುದ್ಯೋಗದ ಪ್ರವರ್ಧನೆಗೆ ಕಾರಣವಾಗಿದೆಯಂತೆ

ಸ್ವದೇಶೀಯ ಶ್ರೀ ಕೃಷ್ಣ ಸಿನೆಮದಲ್ಲಿ ಬೇಗನೇ ಪ್ರದರ್ಶಿಸಲ್ಪಡಲಿರುವ "ಶಾಂತಿಕುಟೀರಾಸ್" ಎಂಬ ಮಾತನಾಡುವ ಚಿತ್ರದೊಳಗಿನ ಒಂದು ದೃಶ್ಯ.

ನಿಮ್ಮದು ನಿಮಗೆ.

ಗಡಿನಾಡಿನ ಅಫ್ರಿದಿಗಳ ಮೇಲೆ ದಾಳಿಮಾಡಿ ಬಿಟಿಷರು ಗುಂಡು ಹಾರಿಸಿದರು. ಸಾವಿರಾರು ಗುಂಡುಗಳು ಅಫ್ರಿದಿಗಳಿಗೆ ದೊರಕಿದವು. ಅವುಗಳೆಲ್ಲವನ್ನು ಹೆಕ್ಕಿ ಅವುಗಳಿಂದ ಅವರೊಂದು ಕೋಟೆಯನ್ನು ತಯಾರಿಸಿದರು. ಅದನ್ನೀಗ ಬ್ರಿಟಿಷರಿಗೆ ಕೊಟ್ಟಿರುವರು

ರೇಡಿಯೊದಲ್ಲಿ ವೇಗವನ್ನು

ಮತ್ತೂ ಹೆಚ್ಚಿಸಿದ್ದಾರೆ. ಬೋಸ್ಟನ್ ರೇಡಿಯೋ ಸ್ಟೇಶನಿನಲ್ಲಿ ಥಿಯೊಡೋರ್ ರೂಜ್‌ವೆಲ್ಟ್ ಎಂಬವನು ರೇಡಿಯೊ ಯಂತ್ರವನ್ನು ನೂತನವಾಗಿ ಸೃಷ್ಟಿಸಿ ಒಂದು ನಿಮಿಷಕ್ಕೆ ೫೦೦ ಶಬ್ದಗಳು ದಿಗಂತವ್ಯಾಪ್ತವಾಗುವ ವಿಧವಾಗಿ ಮಾಡಿದ್ದಾನೆ. ಪ್ರಪಂಚದಲ್ಲಿ ಇದು ಪ್ರಥಮ ದಾಖಲೆ

ಪೋಲೀಸನ ಮಾನಕ್ಕೆ ಹಾನಿಯಾಯಿತು—

ಅದುದರಿಂದ ಮೊಕದ್ದಮೆ ನಡೆಯಿತು. ಕರಾಚಿಯ 'ಸಂಸಾರ್ ಸಮಾಚಾರ' ಪತ್ರಿಕೆಯ ಸಂಪಾದಕರಾದ ಶ್ರೀ ದೇಶಮುಖ್ [illegible] ಎಂಬವರಿಗೆ ೩ ತಿಂಗಳ ಸಾದಾ ಸಜೆ, ಮತ್ತು ೧೦೦೦ ರೂಪಾಯಿ ದಂಡ

ಒಂದೇ ಮನೆಯಿರುವ ಒಂದು ದ್ವೀಪವು.

ಇಂಗ್ಲೆಂಡಿನ ಪೋರ್ಟ್ಸ್‌ಮತ್‌ನಲ್ಲಿ ಮ್ಯೂನಿಸಿಪಲ್ ವಿಯರ್ ಪೋರ್ಟಿನಲ್ಲಿರುವುದು. ಇದು ಸ್ವಾನ್ ಕಾಟೇಜ್ ಎಂದು ಇದಕ್ಕೆ ನಾಮಕರಣ ಮಾಡಿದ್ದಾರೆ. ಮತ್ತು ಸುತ್ತಲೂ ಸಮುದ್ರ. ಸಮುದ್ರದಲ್ಲಿ ಒಂದು ಸಣ್ಣ ಕಡಲು [illegible] ಮನೆಗೆ ದಿವ್ಯವಾದ [illegible] ಆನಂದಮಯವಾಗಿದೆ.

ಬಾಳೆಹಣ್ಣುಗಳಿಗೂ ಕಾಲ ಬಂತು!

[illegible]

ಕರುಣೆಯುಳ್ಳ—

[illegible]

ಸ್ವೀಕಾರ

ರಾಜವಲ್ಲಭ—ಲೇಖಕರು ಶ್ರೀ [illegible] ಜೋಶಿ ಬಿ. ಎ. [illegible]

[illegible]

ಹೀಗೇಕೆ?—[illegible]

[illegible]

ಬಿ. ವಿ.

ಮಂಗಳೂರು.

ಅಖಿಲ ಭಾರತ ಹರಿಜನ ಸೇವಕ ಸಂಘದ ಜನರಲ್ ಸೆಕ್ರೆಟರಿಯವರಾದ ಶ್ರೀ ಅಮೃತಲಾಲ್ ವಿ. ಠಕ್ಕರ್‌ರವರು ದಕ್ಷಿಣ ಹಿಂದೂಸ್ಥಾನದ ಸಂಚಾರವನ್ನು ಕೈಕೊಂಡಿದ್ದು ಬರುವ ತಿಂಗಳ ಪ್ರಥಮ ವಾರದಲ್ಲಿ ನಮ್ಮ ಜಿಲ್ಲೆಗೆ ಭರುವರಾಗಿ ತಿಳಿದುಬಂದಿದೆ. ನಾಲ್ಕು ದಿನಗಳ ವರೆಗೆ ಈ ಜಿಲ್ಲೆಯಲ್ಲಿ ಸಂಚರಿಸಿ ಮಲಬಾರಿಗೆ ಹೋಗ ಲಿರುವರು. ಅವರು ಮೈಸೂರಿನಿಂದ ಮೈಸೂರಿಗೆ ಬಂದು ಹಾಸನಕ್ಕಾಗಿ ಬರಲಿರುವುದರಿಂದ ಉಪ್ಪಿನಂಗಡಿ ಅಥವಾ ಬೆಳ್ತಂಗಡಿಗಾಗಿ ಬಂಟವಾಳಕ್ಕೆ ಬಂದ ಮಂಗಳೂರಿಗೂ, ಅಲ್ಲಿಂದ ಮೂಡುಬಿದ್ರೆಗಾಗಿ, ಕಾರ್ಕಳಕ್ಕೂ, ಕಾರ್ಕಳ ದಿಂದ ಕೈಲೂರು ಹಿರಿಯಡ್ಕಗಳಿಗಾಗಿ ಉಡುಪಿಗೆ ಹೋಗಿ, ಪುನಃ ಕಟಪಾಡಿ, ಶಿರ್ವ, ಮುಂಡ್ಕೂರು, [illegible] ಮೊದಲಾದ ಸ್ಥಳಗಳನ್ನು ಸಂದರ್ಶಿಸುತ್ತಾ, ಮಂಗಳೂರಿಗೆ ಬಂದು, ಕಾಸರಗೋಡನ್ನು ನೋಡಿಕೊಂಡು ಮಲಬಾರಿಗೆ ಹೋಗುವಂತೆ ಏರ್ಪಾಡು ಮಾಡುತ್ತಾ ಇರುವೆವು. ಅದೇ ವಿಷಯ ಆಲೋಚನೆ ಮಾಡುವುದಕ್ಕಾಗಿ ತಾ. ೧೬-೨-೩೩ನೇ ಸೋಮವಾರ ಸಂಜೆ ಘಂಟೆ ೫ ೩೦ಕ್ಕೆ ಇಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದ ಸಭೆಯು ಜೇಡಿ ಗುಡ್ಡೆಯಲ್ಲಿರುವ ಡಿ ಸಿ ಮಿಶನ್ ಹೋಲಿನಲ್ಲಿ ಕೂಡಿ ಬರುವುದಾಗಿ ನಿಶ್ಚೈಸಿರುತ್ತದೆ" ಎಂದು ಶ್ರೀ ಯಸ್. ಯಸ್. ಶೆಟ್ಟಿ, ಕಾರ್ಯದರ್ಶಿ ಜಿಲ್ಲಾ ಹರಿಜನ ಸೇವಕ ಸಂಘದ ಇವರು ಬರೆಯುತ್ತಾರೆ.

ಇದೇ ಕಳೆದ ತಾ ೩ನೇ ಆಪರಾಹ್ನ ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲಾ ಅಧ್ಯಾಪಕ ವಿದ್ಯಾರ್ಥಿ ಸಂಘದಲ್ಲಿ ಹೆಡ್ಮಾಸ್ಟರ್ ಮ. ರಾ. ಕೆ. ಗೋಪಾಲರಾವ್ ಬಿ. ಎ. ಎಲ್ ಟಿ ಇವರ ನೇತೃತ್ವದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರು ಟೀಚ ಸೇವೆ ಎಂಬ ವಿಷಯವಾಗಿ ಸೊಗಸಾದ ಭಾಷಣ ಮಾಡಿದರು

ಜಿಲ್ಲಾ ಕೊಂಗ್ರೆಸ್ ಕಮಿಟಿಯ ಒಂದು ಸಭೆಯು ಗಣಪತಿ ದೇವಸ್ಥಾನದ ಬಳಿಯ ಅದರ ಹೊಸ ಆಫೀಸಿ ನಲ್ಲಿ ಇದೇ ಶನಿವಾರ ರಾತ್ರಿ ೮ ಘಂಟೆಗೆ ಜರಗಿ, ರಿಸೆಟ್ಲ್ ಮೆಂಟ್ ವಿಷಯವನ್ನೂ, ಜಿಲ್ಲಾ ಕೊಂಗ್ರೆಸ್ ಕಮಿಟಿಯ ಬಾವೀ ಕಾರ್ಯ ಕಲಾಪಗಳನ್ನೂ ಚರ್ಚಿಸಿಕೊಳ್ಳಲಿದೆ

ದಿ ಕೆಂಟ್ರಾಲ್ ಬುಕ್ಕಿಂಗ್ ಏಜನ್ಸಿ, ಮಂಗಳೂರು ಇವರ ಬಸ್ಸುಗಳು ಮಂಗಳೂರು [illegible] ಕ್ಷೇತ್ರವ ಗಳೂರು, ಶಿವಮೊಗ್ಗ, ಮೂಡಿಗೆರೆ, ಸಕಲೇಶಪುರ, ಮೊದ ಲಾದ ಈ ಸ್ಥಳಗಳಿಂದ ಫೆಬ್ರವರಿ ೩ ರಿಂದ ಮಾರ್ಚಿ ತಾ [illegible] ವರೆಗೆ ಧರ್ಮಸ್ಥಳ ಯಾತ್ರಿಕರಿಗೆ ಮಾತ್ರ ಅರ್ಧ ದರದಲ್ಲಿ ರಿಟರ್ನ್ ಟಿಕೇಟುಗಳನ್ನು ಕೊಡುವುದೆಂದು ತಿಳಿದುಬರುತ್ತದೆ

ಜಿಲ್ಲಾ ಎಗ್ರಿಕಲ್ಚರಲ್ ಎಸೋಸಿಯೇಶನ್‌ನ ವರ್ಷಾವಧಿಯ ಸಾಮಾನ್ಯ ಸಭೆಯು ಜಿಲ್ಲಾ ಕಲೆಕ್ಟರ ಆಫೀಸಿನಲ್ಲಿ, ತಾ ೨೧ನೇ ದಿನ ಗುರುವಾರ ಸಂಜೆ ಘಂಟೆ ೫-೩೦ಕ್ಕೆ ಜರಗುವುದು.

ಸ್ಥಳೀಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಇದೇ ತಾ ೨೩ನೇ ಶನಿವಾರ ರಾತ್ರಿ 'ಶಾರದಮದ್ದಳೆ'ಯು ಜರಗಿ, ಮರುದಿನ ಕ್ಲಬ್ಬಿನ ವಾರ್ಷಿಕೋತ್ಸವವು ಅತೀ ವಿಜೃಂಭಣೆ ಯಿಂದ ಜರಗಲಿದೆ. ಸಂಗೀತಮೇಳ, ವಿನೋದ ಪ್ರದರ್ಶನಗಳೂ ಇವೆ

ಇಲ್ಲಿಯ ಮಿಶನ್ ಹೈಸ್ಕೂಲಿನ ಸಹಾಯಾರ್ಥವಾಗಿ ಇದೇ ತಾ ೨೩ನೇ ದಿನ ವಿವಿಧ ವಿನೋದಗಳೊಡನೆ ಒಂದು ನಾಟಕವು ಜರಗಲಿರುವುದು

ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾದ ಖಾನ್ ಅಮಿ ರುದ್ದೀನ್ ಸಾಹೇಬರು ಒಂದು ತಿಂಗಳ ರಜೆ ಪಡೆದಿರು ವರು. ಅವರ ಸ್ಥಾನಕ್ಕೆ ಸಬ್ ಜಡ್ಜರಾದ ಶ್ರೀ ಟಿ ಸಿ. ತ್ಯಾಗರಾಜ ಅಯ್ಯರ್‌ರು ನೇಮಕಗೊಂಡಿರುವರು

ಸ್ವಾಮಿ ವಿವೇಕಾನಂದರ ಜನ್ಮೋತ್ಸವವು ೧೧ನೇ ತಾರೀಕಿನ ದಿನ ಬೆಸೆಂಟ್ ಗರ್ಲ್ಸ್ ಸ್ಕೂಲಿನ ಮೈದಾನದಲ್ಲಿ ಶ್ರೀ ಎ ಬಿ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತರ ಗುಣಕಥನವು ಸಭಿಕರಿಂದಲೂ ಅಧ್ಯಕ್ಷರಿಂದಲೂ ನಡೆಯಿತು.

ಶ್ರೀ ವೆಂಕಟರಮಣ ದೇವಳದ ವರ್ಷಾವಧಿ ಮಹೋ ತ್ಸವವು ಈ ವರ್ಷ ಬಹು ವಿಜೃಂಭಣೆಯಿಂದ ಜರಗಿತು ಕುಡುಟಿಯ ಪ್ರಸಿದ್ಧ ವಾದ್ಯಗಾರರಾದ ಶ್ರೀ ಓಬು ಶೇರಿ ಗಾರ, ಶ್ರೀ ಅನಂತು ಶೇರಿಗಾರರ ಕೊಳಲೂದುವಿಕೆಯು ಉತ್ಸವಕ್ಕೆ ಕಳೆಕೊಟ್ಟಿತ್ತು. ಅವಘಡಗಳೇನೂ ಇಲ್ಲದೆ ಉತ್ಸವವು ಸಾಂಗವಾಗಿ ನೆರವೇರಿತು.

ಇಲ್ಲಿಯ ಗೋಕರ್ಣನಾಥ ದೇವಸ್ಥಾನದಲ್ಲಿ ಶ್ರೀ ಶಿವ ರಾತ್ರಿ ಉತ್ಸವವು ಇದೇ ತಾ. [illegible] ರಂದು ಜರಗುವುದು.

ತಾ. ೭ನೇ ದಿನ ಇಲ್ಲಿಯ [illegible] ಹೊಸ ಕೊಂಗ್ರೆಸ್ ಆಫೀಸನ್ನು ಶ್ರೀ ಕಮಲಾದೇವಿ ಯವರು ತೆರೆದರು. ಮರವಣಿಗೆಯೂ, ಮೈದಾನಿ ನಲ್ಲಿ ಶ್ರೀ ರಂಗರಾವ್ ಕಲ್ಕೇರಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ನವಸುಧಾರಣೆಗಳನ್ನು ನಿಷೇಧಿಸಿ ಠರಾವು ಗಳಾದುವು.

ಮಂಗಳೂರು ನಿರೇಶ್ವಾಲ್ಯ ಗ್ರಾಮದ ಸತ್ಯಶೋಧಕ [illegible] ಯುವಕ ಸಂಘದ ಕೆಲ ತರುಣರ ಸಾಧನೆಯಿಂದಲೂ ಹತ್ತು ಜನರ ಸಹಾಯದಿಂದಲೂ ಇದ್ದೇ ತಾ. ೭ರಲ್ಲಿ ದಿವಂಗತ ಎ ರಾಮರಾಯರ ಮನೆಯಂಗಳದಲ್ಲಿ, ಶ್ರೀ ಲಕ್ಷ್ಮೀದೇವ ವಿದ್ಯಾರ್ಥಿಯವರಿಂದ "ಶ್ರೀ ರಾಮ ಪಾದುಕಾ ಪಟ್ಟಾಭಿಷೇಕ"ವೆಂಬ ಹರಿಕಥಾ ಪ್ರಸಂಗವು ನಡೆಯಿತು.

ಇದೇ ತಾ. ೧೭ನೇ ಆದಿತ್ಯವಾರ ಬೆಳಗ್ಗೆ ಕಾಂಡೇಶ್ವರ ದಲ್ಲಿರುವ ಸಿಟಿ ಆರ್ಯ ಸಮಾಜ ಮಂದಿರದಲ್ಲಿ ಶ್ರೀಯುತ ಬಿ ವೆಂಕಟರಮಣ ತಿಂಗಳಾಯರು "ಸಂಧ್ಯಾವಂದನೆಯ ರಹಸ್ಯ" ಎಂಬ ಕುರಿತು ಕನ್ನಡದಲ್ಲಿ ಭಾಷಣವೀಯು ವರು. ಸರ್ವರಿಗೂ ಸ್ವಾಗತವಿದೆ

ಕಳೆದ ಆದಿತ್ಯವಾರ ದಿನ ಬೆಳಗ್ಗೆ ೮-೩೦ಕ್ಕೆ ಕುದ್ರೋ ಳಿಯ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ "ರಾಷ್ಟ್ರಬಂಧು" ಸಂಪಾದಕರಾದ ವಿದ್ವಾನ್ ಶ್ರೀ ಕೆ ಶಂಕರಭಟ್ಟರು "ಲೋಕದ ಸಮಸ್ಯೆಗಳು" ಎಂಬ ವಿಷಯದ ಮೇಲೆ ಭಾಷಣ ಕೊಟ್ಟರು. ದೈವಿಕ ಸಮಸ್ಯೆ, ಆರ್ಥಿಕ ಸಮಸ್ಯೆ, ಜೀವನ ಸಮಸ್ಯೆ ಮೊದಲಾದ ಹಲವು ಬಗೆಯ ಸಮಸ್ಯೆ ಗಳಲ್ಲಿ ಸಿಲುಕಿ ತೊಳಲಾಡುತ್ತಿರುವ ಮಾನವನ ಸಂಕಷ್ಟ ಗಳೇನೆಂದು ಶ್ರೀಯುತರು ಹೃದಯಂಗಮವಾಗಿ ವಿವರಿಸಿ ದರು. ಭಾಷಣಕರ್ತರ ವಾಗ್ವೈಖರಿಯನ್ನೂ ಭಾವಪೂರ್ಣವಾದ ವಿಚಾರಪರಂಪರೆಗಳನ್ನೂ ಪ್ರಶಂಸಿಸಿ ಸರ್ಜನ್ ಮೆಂಬ ರಾದ ಶ್ರೀ ಬಿ ನರ್ಸಪ್ಪನವರು ಮಾತನಾಡಿ ಭಾಷಣ ಕರ್ತರನ್ನು ಅಭಿನಂದಿಸಿದ ನಂತರ ಸಭಾಂತ್ಯವಾಯಿತು

ಇಲ್ಲಿಯ ಕೊಂಗ್ರೆಸ್ಸಿನವರು ಈ ಕೆಲವು ಕಾರ್ಯ ಗಳನ್ನು ನೆರವೇರಿಸಲುದ್ಯುಕ್ತರಾಗಿರುವರು. ಕೃಷೀವಲರ ಸಂಘಗಳನ್ನೇರ್ಪಡಿಸಿ ಅವರು ತಮ್ಮ ಸಂಕಷ್ಟಗಳನ್ನು ಪರಿಹಾರಮಾರ್ಗವಾಗಿ ಪ್ರತಿಭಟಿಸುವಂತೆ ಮಾಡುವುದು. ಹಳ್ಳಿಹಳ್ಳಿಗಳಲ್ಲಿ ಈ ಬಗ್ಗೆ ಪ್ರಚಾರ ನಡೆಸುವುದು ನಿಷೇಧ ಸಭೆಗಳನ್ನು ಜರಗಿಸುವುದು ಭೂಕಂದಾಯ ವನ್ನು ಹೆಚ್ಚಿಸಿ ದ ಪರ ನಿಷೇಧಾರ್ಥ ಚಳವಳವನ್ನು ಹೂಡಿ ಒಂದು ಸಪ್ತಾಹವನ್ನು ನಡೆಸುವುದು ಆ ಸಪ್ತಾಹವನ್ನು ಜಿಲ್ಲೆ ಯಲ್ಲೆಲ್ಲಾ ಆಚರಿಸುವಂತೆ ಮಾಡುವುದು ರಿಸೆಟ್ಲ್ ಮೆಂಟನ್ನು ನಿಷೇಧಿಸಿ ಎಲ್ಲೆಲ್ಲಿಯೂ ಸಭೆಗಳನ್ನು ಜರಗಿಸು ವಂತೇರ್ಪಡಿಸುವುದು (೨) ಕೃಷಿಕರಿಗೆ ಕೃಷಿ ಸಂಬಂಧ ವಾದ ಸಂಕಷ್ಟಗಳನ್ನು ಹೋಗಲಾಡಿಸುವುದಕ್ಕಾಗಿ ಸ್ಥಳಗಳನ್ನೀಯುವುದು ಅದರಲ್ಲಿನ ನಿರುದ್ಯೋಗತೆ ಯನ್ನು ನಿವಾರಿಸುವುದಕ್ಕಾಗಿ ಸಾಧಿಸುವುದು.

ಕಳೆದ ತಾ ೧೧ನೇ ಸೋಮವಾರ, ೪ ೩೦ಕ್ಕೆ ಸಂ ಜೆಗೆ ಮಂಗಳೂರು ಸಿದ್ಧ ವಿದ್ಯಾ ಸಂಘದ ಮಹಾ ಸಭೆ ಯೊಂದು ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಜರಗಿತು ಸ್ವಾಮಿ ಶಿವಾನಂದ ಪರಮ ಹಂಸರ ಶಿಷ್ಯ ರಾದ ಬ್ರಹ್ಮ ಶ್ರೀ ಶಂಕರಯ್ಯನವರು, ಮಹಾಜನರಿಗೆ ಸಿದ್ಧವಿದ್ಯೆಯ ಬೋಧೆಯನ್ನು 'ಇಂಗ್ಲೀಷ್' ಭಾಷೆಯಿಂದ ಅರುಹಿದರು, ಕೆನರಾ ಹೈಸ್ಕೂಲಿನ ಹೆಡ್ ಮಾಸ್ಟರರಾದ ಮಾನ್ಯ ಅಚ್ಯುತ ಬಾಳಿಗರ ಆ ಭಾಷಣವನ್ನು ಹೃದ ಯಂಗಮವಾಗಿ ಕನ್ನಡದಿಂದ ಭಾಷಾಂತರಿಸಿದರು. ಉಚ್ಛ್ವಾಸ ನಿಶ್ವಾಸಗಳನ್ನು ಕೃಡಿಸಿ ಸೋಹಂಭಾವನೆ ಯಿಂದ ಈಶ್ವರನೇ ತಾನೆಂದು ಪೇಕಸೇವೆಯನ್ನೂ ಗೈಯು ವುದೇ ಸಿದ್ಧವಿದ್ಯೆಯ ಮೂಲತತ್ವವೆಂದು ತಿಳಿಸಲಾಯಿತು. ಬಳಿಕ ಮಾನ್ಯ ಅಚ್ಯುತ ಬಾಳಿಗರ ಸೂಚನೆಯ ಮೇರೆಗೆ ಕೆಲವು ಸಭಿಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರು

ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲೀಕರ ಸಂಘದ ದ್ವಿತೀಯ ಪರಿಷತ್ತು ಇದೇ ಫೆಬ್ರವರಿ ತಾ ೧೬ನೇ ದಿನ ಸಂಜೆ ಘಂಟೆ ೪ಕ್ಕೆ ಮಂಗಳೂರು ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಜರಗುವುದೆಂದೂ, ಸರಕಾರದವರು ಈಗಲೇ ಜಾರಿಗೆ ತಂದಿರುವ ರಿಸೆಟ್ಲ್ ಮೆಂಟು ಜಿಲ್ಲೆಯ ಕೆಲವು ರಿಸರ್ವ್ ಕಾಡುಗಳಲ್ಲಿ ಕೈತರೆಗಿದ್ದ ಹಕ್ಕುಗಳನ್ನು ರದ್ದು ಮಾಡಿದ್ದರ ಕುರಿತು ಜಿಲ್ಲಾ ಭೂಮಾಲೀಕ ಸಂಘದ ಪರ [illegible] ಮಾಡಿದ ವಿಜ್ಞಾಪನೆಗೆ ಸರಕಾರದವರು ಕೊಟ್ಟ [illegible] ದ ಉತ್ತರ ಮೊದಲಾದ ವಿಷಯಗಳು ಪರಿಷತ್ತಿನ [illegible] ಚರ್ಚೆಗೆ ಬರುವುವೆಂದೂ, ಜಿಲ್ಲೆಯ ಎಲ್ಲಾ ಕಡೆ ಗಳಿಂದ ಭೂಮಾಲೀಕರು ಸಭೆಗೆ ಆಗಮಿಸಬೇಕಾಗಿ ವಿನಂತಿಯೆಂದೂ ಕಾರ್ಯದರ್ಶಿಯವರು ಕೇಳಿಕೊಂಡಿರ ತ್ತಾರೆ.

ಶ್ರೀ ಶಿವಭಕ್ತಿಯೋಗ ಸಂಘದ ನಾಟಕಮಂಡಳಿ ಯವರು ಇದೇ ತಾ. ೧೩ನೇ ಶನಿವಾರ (ನಾಳೆ) ೬ ಘಂಟೆಗೆ ಕುದ್ರೋಳಿಯ ಗೋಕರ್ಣನಾಥ ದೇವಸ್ಥಾನದ ವಠಾರ ದಲ್ಲಿ ಶ್ರೀ ಕೆ ಕೆ. ಶೆಟ್ಟರಿಂದ ಬರೆಯಲ್ಪಟ್ಟ 'ಸಂತಯ [illegible]' ವೆಂಬ ಸಾಮಾಜಿಕ ನಾಟಕವನ್ನು ಆಡಲಿರುವರು.

ತಾಲೂಕುಗಳಿಂದ.

ಸಂಪಾಜೆ:–ಇಲ್ಲಿ ಈ ಮೊದಲು, ಅಂದರೆ ೧೯೩೦ ಮತ್ತು ೧೯೩೧ರಲ್ಲಿ ಒಂದು ಲೋಕಲ್ ಡಿಸ್ಪೆನ್ಸರಿ ಇತ್ತು ಅದರ ಖಾಸ ಸರಕಾರದವರು ಅದನ್ನು ಮನ್ನಾ ಮಾಡಿದರು. ಗಂಡಸರು ಕೂಡ ಗರ್ಭಿಣಿಯರೋ ಎಂಬಂತೆ ಸದಾ ಜ್ವರದ ಗಡ್ಡೆಯನ್ನು ಹೊತ್ತಿರುವ ಜ್ವರದ ತವರುಮನೆ ಯಾದ ಸಂಪಾಜೆ ಸಿಮೆಗೆ ಆ ಔಷಧಾಲಯ ಸ್ಥಿತಿಯನ್ನು ಅಂತು ಹೇಳಬೇಕೇ? ಪಾಪಿಷ್ಠವಾದ ಸಂಧಿಗ್ಧ ಸಮಯ ವಾದ ಈಗಿನ ದಿನಗಳಲ್ಲಿ ಚೆನ್ನಾಗಿ ಮೈಸುರಿತು ಕೆಲಸ ಮಾಡಿ ಕಾಲಕ್ಷೇಪ ಮಾಡಬಹುದೆಂದರೆ, ಜ್ವರದ ಕಾಟವು ತಪ್ಪುವುದೇ ಇಲ್ಲ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡ ಬಹುದೆಂದರೆ ೧೪ ಮೈಲು ದೂರವಿರುವ ಸುಳ್ಯಕ್ಕೆ ಹೋಗಬೇಕು. ಇಲ್ಲವೆ ಹದಿನೆಂಟು ಮೈಲು ದೂರ ವಿರುವ ಮಡಿಕೇರಿಗೆ ಹೋಗಬೇಕು ಬಡವರಾದ ಸಂಪಾಜೆ ನಿವಾಸಿಗಳಿಗಂತೂ ಇದು ಸಾಧ್ಯವೇ ಇಲ್ಲ. ಕಾಯಿಲೆಸ್ಥನಾಗಿ ಬಿದ್ದ ಪಕ್ಷಿಯು ಧರೆಗೆ ಗೋಚಿಕೊಡುವ ಹಾಗಿಲ್ಲ. ಓಗಿರಲು, ಧರ್ಮಯು ಖಾಸ ಸರಕಾರಕ್ಕೆ ಕಂದಾಯ ವನ್ನಾದರೂ ಹೇಗೆ ಕೊಡಲು ಸಧ್ಯ? ಆದು ದರಿಂದ ಖಾಸ ಸರಕಾರದವರು ಕನಿಕರಿಸಿ ಸಂಪಾಜೆ ಯಲ್ಲಿ ಒಂದು ಲೋಕಲ್ ಡಿಸ್ಪೆನ್ಸರಿಯನ್ನಾದರೂ ಇರಿಸಿ ದರೆ ಸಂಪಾಜೆ ನಿವಾಸಿಗಳು ಬದುಕಿಕೊಳ್ಳುವಂತಾಗಬಹು ದೆಂದು ಬೇಡಿಕೊಳ್ಳಲಾಗುತ್ತದೆ. ಒಂದು [illegible]

ಇದೇ ತಾ ೮ರಲ್ಲಿ ಇಲ್ಲಿಯ ಲೋವರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಮಹಾಸಭೆಯು ಶ್ರೀ ಕೋಟಿ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು ಸುಳ್ಯ ಬೋರ್ಡಿನ ಪ್ರೆಸಿಡೆಂಟ್ ಬಿ. ಇ. ಪ್ರೆಸಿಡೆಂಟರಾದ ಶ್ರೀ ಐತಪ್ಪ ರೈ [illegible] ರಾಮ ಚಂದ್ರಯ್ಯ, ಸಂಪಾಜೆ ಮಂಡಪ್ಪ ಶೈ ಪಟೇಲ್ ಎಸ ಸಣ್ಣಯ್ಯ ಒಂಟಿಹಿತ್ತು ಲಿಂಗಪ್ಪ ಗೌಡ, ಉಬರಡ್ಕ ನ [illegible] ಯಣ ಭಟ್ಟ, ಕಾವೇರಿ ತಿಮ್ಮಪ್ಪ ಭಟ್ಟ ಬೀಸ್ರಂ ದೇವಯ್ಯ ಮೊದಲಾದ ಗಣ್ಯರೂ ಸುಮಾರು ೩೦೦ ಜನರ ಹಾಜರಿದ್ದರು ಶ್ರೀ ಕುಕ್ಕ [illegible] ಸ್ವಾಗತ ಸ್ವಾಗತ ಭಾಷಣವನ್ನು ಮಾಡಿದ ಬಳಿಕ ಮೇಲೆ ಬಿ. [illegible] ಅಧ್ಯಕ್ಷರಾದ ಸಂಪಾಜೆ ಮಂಡಪ್ಪ ರೈ ಅವರು ಕಮಿಟಿಯ ಚುಟುವಟಿಕೆಯ ಬಗ್ಗೆ ಮಾತನಾಡಿ ತಮ್ಮ ಕ್ಲಪ್ತ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಏರುತ್ತಾ ಬರುವುದ ರಿಂದ ಈಗ ಇರುವ ಒಪ್ಪ ಮನೆ ಯಿಂದ ಎಲ್ಲಾ ಮಕ್ಕ ಳಿಗೂ ಪಾಠ ಹೇಳಿಕೊಡುವುದು ಕಠಿಣ ಅಸಾಧ್ಯವಾದ ಕಾರಣ, ಇನ್ನೊಬ್ಬ ಮಾಸ್ತರರ ಬೇಕಾಗಿರುವ ಅವಶ್ಯಕತೆ ಯನ್ನು ವಿವರಿಸಿ ಹೇಳಿದರು ಸಭೆಯಲ್ಲಿ ಕೆಲವರ ಭಾಷಣ ವಾದ ನಂತರ, ಸಭಾಧ್ಯಕ್ಷರ ತಮ್ಮ ಭಾಷಣದಲ್ಲಿ ವಿದ್ಯೆಯ ಅವಶ್ಯಕತೆಯನ್ನೂ ಬೇರೆ ಬೇರೆ ದೇಶಗಳ ವಿದ್ಯೆಯ ಪ್ರಸರಣೆಯನ್ನು ಯಾವ ರೀತಿಯಲ್ಲಿ ಮಾಡಿದರು. ಈಗ ಮಾಡ ಪರ, ಅಲ್ಲದೆ ಹಳೆಯ ಸಂಪ್ರದಾಯದ ಹಳೆ ರೀತಿಗಳು ಮಾಯವಾಗುತ್ತಿರುವ ನವಸುಧಾರಣೆ ಯನ್ನು ನಾವು ಹೇಗೆ ಪ್ರಚಾರಕ್ಕೆ ತರಬೇಕು ಎಂಬ ಕುರಿತು ಸಭಿಕರಲ್ಲಿ ಮನದಟ್ಟಾಗುವಂತೆ ವಿವರಿಸಿ ಹೇಳಿದರು, ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಲಾಗಿ ಸಭೆಯು ಬರ್ಖಾಸ್ತಾಯಿತು

ಮೊಗ್ಗೆರ್ಲ್‌–ಸ್ಥಳೀಕ ಸಂಘಟನ ಉಪಾಧ್ಯಾಯರ ಸಂಘದ ಅದೊಂದು ಸಭೆಯು ಕಳೆದ ತಾ. ೨೬ನೇ ಶನಿ ವಾರ ಕೊಕ್ಕುಡ ಬೋರ್ಡು ಶಾಲೆಯಲ್ಲಿ ತಿಮ್ಮಕಂಚಿ ಬೋರ್ಡ್ ಹಾ. ಎ. ಶಾಲೆಯ ಮುಖ್ಯ ಅಧ್ಯಾಪಕ ಶ್ರೀ ಬಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ಸದ್ರಿ ಶಾಲಾ ವರ್ಷ ವರ್ಧಂತಿಯೂ ಇದಕ್ಕೆ ಜತೆಯಾಗಿ ಆಚರಿಸಲ್ಪ ಟ್ಟಿತು ಶಾಲೆಯ ಮುಖ್ಯ ಉಪಾಧ್ಯಾಯರೆ ಶ್ರೀ ಎಸ್. ವೆಂಕಟ್ರಾಯರು "ಹಳ್ಳಿಗ ಉಪಾಧ್ಯಾಯರ ಶಾಲೆಯ ಅಪೇಕ್ಷಿತ ಸ್ಥಿತಿ" ಎಂಬ ಅರ್ಥ ಬರುವ ತಮ್ಮ ಅನುಭವದ ಒಂದು ಉಪನ್ಯಾಸವನ್ನು ಕೊಟ್ಟರು. ಇನ್ನು ಳಿದ ಕಾರ್ಯಕ್ರಮಗಳು ಜರಗಿ ಸಭಾಧ್ಯಕ್ಷರ ಅಮೂಲ್ಯ ಭಾಷಣ, ಉಪಕಾರ ಸ್ಮರಣೆ ಇತ್ಯಾದಿಗಳಿಂದ ಸಭೆಯು ವಿಸರ್ಜನೆ ಹೊಂದಿತು. ಮುಂದಿನ ಸಭೆಯು ಬರುವ ತಾ ೨೩-೩-೩೩ನೇ ಶನಿವಾರ ಕಿಲ್ಲಾಡಿ (ಜನರಲ್) ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕೂಡಲಿರುವುದು.

ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯು ಸರಿಯಾಗಿ ಏರ್ಪಡಿಸೋದ ಸೋಲ್ತಿಯನ್ನು ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸಿ ಇದೆಯಾಗ ವುದಿಲ್ಲವೆಂದೂ [illegible] ಪಡಿಸಿದಂತೆ ಸ್ಥಳೀಕ ಮಹಾ ಜನಸ್ಥಳೀಯ ಕೇಳುವೆಂದು. ಮಹನೀಯರ ಸಮಕ್ಷಮ ಇದೇ ತಾ. ೩-೩-೩೩ನೇ [illegible] ದಲ್ಲಿ ತೆಗೆಯಲ್ಪಡುವುದೆಂದೂ, ಟಿಕೇಟು ಪ್ರತಿಕ [illegible]

ಗಳಿರುವ ಮಹಾಶಯರು ಸದ್ರಿ ಪುಸ್ತಕಗಳನ್ನು ಕೂಡಲೇ ಅವುಗಳ ಮೌಲ್ಯವನ್ನೂ ದ್ವಿಪ್ರತಿಗಳನ್ನೂ ಕಾಪಾಡಲು ತಾ ೨೫-೨-೩೩ನೇದಕ್ಕೆ ಮುಟ್ಟುವಂತೆ ದಯವಿಟ್ಟು ಕಳುಹಿಸಿಕೊಟ್ಟು ಶಾಲೆಗೆ ನೆರವಾಗಬೇಕಾಗಿ ವಿನಂತಿ ಇದೆಯೆಂದು ಸದ್ರಿ ಸೋಲ್ತಿ ಕಮಿಟಿಯ ಕಾರ್ಯದರ್ಶಿ ತಿಳಿಸುತ್ತಾರೆ.

ಇಲ್ಲಿಯ ಬೋರ್ಡ್ ಹೈಸ್ಕೂಲಿನ ಪ್ರಥಮ "ವಿಹಾರ ಕೂಟವು" ಬರುವ ಮಾರ್ಚ ತಾ ೧೬ರಲ್ಲಿ ರಾವ್ ಬಹ ದ್ದೂರ್ ಶ್ರೀ ಬಿ. ವೆಂಕಟರಾಯರ ಅಧ್ಯಕ್ಷತೆಯ ಜರಗ ಸಲ್ಪಡುವುದಾಗಿ ತಿಳಿದುಬರುತ್ತದೆ.

ಇಲ್ಲಿಯ ಮೆಡಿಕಲ್ ಆಫೀಸರ್ ಶ್ರೀ ಡಾ. ಉಮೇಶ ರಾಯರು ೧೦ ದಿನ ರಜೆ ಮೇಲೆ ಹೋಗಿದ್ದು, ಶ್ರೀ ಡಾ. ಕೆ ಶಾನುಭಟ್ಟರು ಚಾರ್ಜಿನಲ್ಲಿರುವರು.

ಕಳವಾರು:–ಈ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ಇಲ್ಲಿಯ ಹೈ ಎ ಶಾಲೆಯಲ್ಲಿ ಕಳಂಜಾರು ಬೋರ್ಡ್ ಶಾಲಾ ಮುಖ್ಯ ಉಪಾಧ್ಯಾಯರಾದ ಶ್ರೀ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದ ಮೇರೆಗೆ ಎಲ್ಲ ಕೆಲಸಗಳು ಮುಗಿದ ನಂತರ, ಅಧ್ಯಕ್ಷರು ಏಳಿಗೆಯ ವಿಷಯದಲ್ಲಿ ತನ್ನ ಹಿತಸೂಚನೆಗಳನ್ನು ಸಭಿಕರಿಗೆ ಹೇಳಿದ ಮೇಲೆ, ಮುಂದಿನ ಸಭೆಯು ತಾ. ೯-೩-೩೩ರಲ್ಲಿ ಸದ್ರಿ ಶಾಲೆ ಯಲ್ಲಿಯೇ ಜರಗಿಸುವುದೆಂದು ನಿರ್ಣಯಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಉಡುಪಿ:–ದಿ ಕೆನರಾ ಬೇಂಕಿಂಗ ಕೋಪರೇಶನ್ ಉಡುಪಿ ಲಿಮಿಟೆಡ್, ಉಡುಪಿ, ಇದರ ಅಧ್ಯಕ್ಷರಾಗಿದ್ದ ದಿವಂಗತ ಎಚ್ ಕೇಶವ ಪೈ ಬಿ. ಎ., ಬಿ ಎಲ್. ರವರ ಫೊಟೋಚಿತ್ರವನ್ನು, ಶ್ರೀ ಎ ಲಕ್ಷ್ಮೀನಾರಾಯಣರಾವ್, ಬಿ ಎ. ಬಿ ಎಲ್ ಇವರು ತಾ ೧೬ನೇ ದಿನ, ಬೇಂಕಿನ ಆಫೀಸಿನಲ್ಲಿ ಅನಾವರಣ ಮಾಡಲಿರುವರು ಆ ದಿನದ ಸಭೆಗೆ ಮಿ. ಸಿ ಎಲ್. ಕೊಲಾಸೋ, ಬಿ. ಎ., ಎಂ ಎಲ್. (ಉಡುಪಿಯ ಡಿಸ್ಟ್ರಿಕ್ಟ್ ಮುನ್ಸೀಫರು) ಅಧ್ಯಕ್ಷರೆಂದು ತಿಳಿಯುತ್ತೇವೆ.

ಕುಕ್ಕುಂದೂರು.–ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ ಸೋಲ್ತಿಯು ಈ ಮೊದಲು ಪ್ರಕಟಿಸಿದಂತೆ ಇದೇ ತಿಂಗಳ ತಾ. ೧೬ನೇ ಶನಿವಾರ ಘಂಟೆ ೩ಕ್ಕೆ ಸದ್ರಿ ಶಾಲಾ ಕಟ್ಟೋಣದಲ್ಲಿ ಜರಗುವ ಸಾರ್ವಜನಿಕ ಸಭೆ ಯಲ್ಲಿ ಆರಿಸಲ್ಪಡ ಅಧ್ಯಕ್ಷರ ಸಮಕ್ಷಮದಲ್ಲಿ ಬಹಿರಂಗ ವಾಗಿ ತೆಗೆಯಲ್ಪಡುವುದು ಸಂಬಂಧಪಟ್ಟವರು ಟಿಕೇಟು ಗಳ ಹಣ ಮಗ್ಗೆರೆಗಳನ್ನು ಮುಂಚಿನ ದಿವಸದೊಳಗೆ ಕಳುಹಿಸಬೇಕಾಗಿಯೂ ಸೋಲ್ತಿ ತೆಗೆಯುವ ದಿವಸ ಬಂದು ಸಹಕರಿಸಬೇಕಾಗಿಯೂ ಸೋಲ್ತಿ ಕಮಿಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಕೆಲ್ಲಡ್ಕ–ಇಲ್ಲಿಯ ಬೋರ್ಡ್ ಹಾ. ಎ ಶಾಲೆಯ ವಾರ್ಷಿಕೋತ್ಸವವು ಇದೇ ಫೆಬ್ರವರಿ ತಾ ೨೬ನೇ ರವಿವಾರ ಘಂಟೆ ೫ಕ್ಕೆ ಮಾನ್ಯ ಡಿ ಬೋರ್ಡ್ ಮೆಂಬರ ನೋಳಳ್ಳಿ ಶಿವ ರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ಶಿರ್ವ:–ಶ್ರೀ ದತ್ತಾತ್ರೇಯ ಗ್ರಂಥ ಭಂಡಾರಾಯದ ಲ್ಲಿ ತಾ ೭ನೇ ದಿನ ಕೂಡಿದ ಗ್ರಾಮಸಂಘಟನಾ ಸಭೆಗೆ ಜಮೀನ್ದಾರ ಶ್ರೀ ಕೋಡಿಹೊಸಮನೆ ರಾಮಣ್ಣ ಶೆಟ್ರು ಅಧ್ಯಕ್ಷರಾಗಿದ್ದರು ಗತಸಭಾವರದಿಯೋದೋಣ, ಸಭಾ ವಿಷಯವಾದ 'ಸ್ವದೇಶಿ'ಯ ಕುರಿತು ಯುವಕ ವೃಂದದ ಭಾಷಣಗಳು ಮುಗಿಯಲು ಅರು ಮಂದಿ ತರು ಣರು ಮುಂದೆ ಬಂದು ರಾಷ್ಟ್ರೀಯಧ್ವಜ ಸಾಕ್ಷಿಯಾಗಿ ಅಂದಿನಿಂದ ಮುಂದಕ್ಕೆ ಎಂದೆಂದಿಗೂ ಕೈನೂಲು ನುಗ್ಗದ ಖಾದಿಯನ್ನೇ, ಸ್ವದೇಶೀ ಸಾಮಾನುಗಳನ್ನೇ ಕೊಂಡು ಕೊಂಡುಕೊಳ್ಳುವೆವೆಂದು ಪ್ರತಿಜ್ಞೆ ಮಾಡಿದರು. ಅಲ್ಲದೆ, ಮತ್ತು ಮೋದಲನೆ ತಿಂಗಳೊಂದರ ಎರಡೆರಡು ಮಂದಿ ಯನ್ನಾದರೂ ಸ್ವದೇಶೀವ್ರತಧಾರಿಗಳನ್ನಾಗಿ ಮಾಡುವೆ ವೆಂದು ನಿರ್ಧರಿಸಿದರು ಮಾನ್ಯ ಅಧ್ಯಕ್ಷರು ಸಕುಟುಂಬ ಸಮೇತರಾಗಿ ಸ್ವದೇಶೀ ದೀಕ್ಷೆಯನ್ನು ಕೈಕೊಂಡರು. ದ ಸ್ವಸಭೆಯಧಿಪತಿ ಶ್ರೀ ಬಾಬುರಾಜೇಂದ್ರ ಪ್ರಸಾದರ ಅಜ್ಞೆಯನ್ನು ಮನ್ನಿಸಿ, ಜೋಯಿಂಟ್ ಕಮಿಟಿ ವರದಿಯ ಸಂಪೂರ್ಣ ನಿಷೇಧದ ಸೂಚನೆಯು ಶ್ರೀ ಕ ಅಪ್ಪರೇಯ ರಿಂದ ಮಂಡಿಸಲ್ಪಟ್ಟು ಸರ್ವಾನುಮತದಿಂದ ಮಂಜೂ ರಾಯಿತು. ಬರುವ ಸಭಾ ವಿಷಯವು 'ಅಸ್ಪೃಶ್ಯತಾ ನಿವಾರಣೆ' ಎಂದು ನಿಶ್ಚಯಿಸಲ್ಪಡಲು, ಅಧ್ಯಕ್ಷರ ಭಾಷಣ, ಧನ್ಯವಾದ ಗಳ ಬಳಿಕ, ಶ್ರೀಕೃಷ್ಣ ಪೂಜೆಯೊಡನೆ ಸಭೆಯು ಕೊನೆಗೊಂಡಿತು.

ನೋಟೀಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 6/1935.

1. ರಾಮ 2. ಕೃಷ್ಣ. 3. ಶ್ಯಾಮ 4. ಶ್ರೀನಿವಾಸ. 5. ನರಸಿಂಹ.—ಪ್ರಾಪ್ತ ರರು, ಕ್ಷೇಮಚಿಂತಕಳು ತಾಯಿ ಗೌರಮ್ಮ—ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯ ಪಡಿಸುವುದೇನೆಂದರೆ-ಉಡಿಪಿ ತಾಲೂಕು ಉದಿಯಾವರ ಗ್ರಾಮದಲ್ಲಿದ್ದು ಈಗ್ಗೆ ಮೃತ ಪಟ್ಟ ಲಕ್ಷ್ಮೀನಾರಾಯಣ ಕಾರಂತರು, ಉಡ್ಪಿ ತಾಲೂಕು ಕುತ್ಪಾಡಿ ವ ಪಡುಅಲೆವೂರು ಗ್ರಾಮಗಳಲ್ಲಿರತಕ್ಕ ಬೋರ್ಡ್ ಶಾಲೆಯ ಮೆನೇಜರರಾಗಿದ್ದು ಅವರಿಗೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರಿಂದ ಬರ ತಕ್ಕ 1934-35ನೇ ವರುಷಾವಧಿ ಗ್ರೇಂಟಿನ ಬಾಬ್ತು ಒಟ್ಟು ರೂ 640-2-0ವನ್ನು ಪಡೆಯ ಲಿಕ್ಕೂ, ವ ಇನ್ನು ಸದ್ರಿ ಶಾಲೆಗಳ ಮೆನೇಜ ಮೆಂಟು ನಡಿಸಲಿಕ್ಕೂ ತಾವು ಹಕ್ಕುದಾರ ರೆಂತಲೂ ಆ ಕುರಿತು ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತಲೂ ವಗೈರೆ ಕಾಣಿಸಿ ಸದ್ರಿ ಮೃತನ ಮಕ್ಕಳಾದ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 22-2-35 ಕ್ಕೆ ತನಿಖೆಗೆ ಇಡಲ್ಪಟ್ಟಿರುತ್ತದೆ. ಆದುದರಿಂದ ಆ ಕುರಿತು ಆಕ್ಷೇಪ ಇದ್ದವರು ಸದ್ರಿ ದಿವಸ ಹಗಲು ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು.

Camp, Udipi, 11-2-35 — **B. Vasudeva Rao,** *Counsel for Petrs.*

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 11/35

ನೇಮಿರಾಜ ಕೂಡಾ—ಅರ್ಜಿದಾರರು

ಶಾಂತು ಪೂಜಾರಿ ಕೂಡಾ ೪ ಜನರ ಮೇಲೆ ಹಾಲಿ ಮೃತಪಟ್ಟ ಸಂಡ್ಲಿಗುತ್ತು ಸಾಂತಿ ಬಲವರು ಪಡದ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟು ಕ್ರಮ ನಂಬ್ರ 606/34ನೇ ಡಿಕ್ರಿಯ ಹಣ ವಸೂಲಿ ಬಗ್ಗೆ ಮೃತರ ಗಂಡುಮಕ್ಕಳಾದ ನೇಮಿರಾಜ ಹೆಗ್ಡೆ, ಧರ್ಮರಾಜ ಮತ್ತು ಶಾಂತು ಕೂಡಾ 3 ಜನರ ಬಗ್ಗೆ 1ನೆಯವರ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅವರು ಮಾಡಿದ ಅರ್ಜಿಯು ತನ್ನಿಗೆ ತಾರೀಕು 11-3-35ಕ್ಕೆ ಇಟ್ಟಿರುವುದರಿಂದ ಆ ವಿಷಯ ದಲ್ಲಿ ಆಕ್ಷೇಪಿಸುವ ಮೃತನ ಸಂಬಂಧಿಕರ್ದ್ಯಾರು ಇದ್ದರೆ ತಾ. 11-3-35ನೇ ದಿನ ಬೆಳಿಗ್ಗೆ ಘಂಟೆ 11ಕ್ಕೆ ಕೋರ್ಟು ಮುಂದೆ ಹಾಜ್ರಾಗಿ ಆಕ್ಷೇಪಿಸಬಹುದು

ಕಾರ್ಕಳ, 7-2-35. — **P. Ramachandra Rao,** ಅರ್ಜಿದಾರರ ಕಡೆ ವಕೀಲ

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 797/34

ರಾಮಣ್ಣ ಸೆಟ್ಟಿ—ವಾದಿ

ಗಾಣದ ರಾಮ—ಪ್ರತಿವಾದಿ

ಪ್ರತಿವಾದಿ ರಾಮ ನಿಲಾವರ ದುರ್ಗನ ಮಗ ಈಗ ಹಾಲಾಪಡು ಮುನ್ನೂರು ಗ್ರಾಮ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ಸದ್ರಿ ವಾದಿಯು ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ ವಾದಿಗೆ ಪ್ರತಿ ವಾದಿಯು ಬರೆಸಿಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವ ಬಗ್ಗೆ ಸ್ಮಾಲ ನಂಬ್ರ 797/34ನೆಗೆ ದಾಖಲು ಮಾಡಿದ ದಾವೆಯು ತಾ 18-2-35ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಅದೇ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸತಕ್ಕದ್ದು ತಪ್ಪಿದ್ರೆ ಕೋರ್ಟಿನವರು ನಿಮ್ಮನ್ನು ಗೈರ್ಹಾಜರು ಮಾಡಿ ಏಕಪಕ್ಷವಾಗಿ ತೀರ್ಮಾನ ಮಾಡುವರು ಎಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ ಕೋರ್ಟು ಹುಕುಂ ಪ್ರಕಾರ ನೋಟೀಸು ಕೊಟ್ಟದ್ದಾಗಿರುತ್ತದೆ

ಕುಂದಾಪುರ 6-2-35 — **K. S. Shetty,** *Advocate for Plff*

ಬಿಹಾರ್ ರಸಾಯನಿಕ ವೈದ್ಯ ಶಾಲೆಯಲ್ಲಿ ತಯಾರಾದ ಆಯುರ್ವೇದಿಯ ಔಷಧಗಳು.

ಪ್ರಸೂತಿ ಕಲ್ಯಾಣ—ಬಾಣಂತಿಯರ ಗರ್ಭಕೋಶದ ಎಲ್ಲಾ ತರದ ನಂಜನ್ನು ಶುದ್ಧೀಕರಿಸುವುದು
ಕಾಮಕಲ್ಪ ರಸಾಯನ—ಧಾತುವೃದ್ಧಿ—ಬಲಹೀನತೆ
ಅನಂತಮೂಲಸರಸ—ರಕ್ತಶುದ್ಧಿ ಶರೀರದಲ್ಲಿ ಬೊಕ್ಕೆ ಬೀಳುವುದು
ದಸವಂತ್ರಿ ಮಲಾಮು—ಮೇಹ ಸಮ್ಬಂಧದ ಹುಣ್ಣು ಬಾತು ಸಂದು ಬಾತು ಕೊಳ್ಳುವುದು
ಬ್ರಾಹ್ಮಿ ರಸಾಯನ—ಮೆದುಳಿನ ವಿಕಾರ ನೆನಪಿಲ್ಲದಿರುವಿಕೆ
ಪುನರ್ನವಾಸವ—ಮೈಬಾತುಕೊಳ್ಳುವುದು ಅರಸಿನಮುಂಡಿಗೆ ರಕ್ತಹೀನತೆಯಮೇಲೆ
ಕಾಲ್ಪಮೇಗ—ಇದು ಮಕ್ಕಳ ಕಲೀಜೆ ಮತ್ತು ಪ್ಲೀಹದ ಮೇಲೆ
ಸಿದ್ಧ ಮಕರಧ್ವಜ ಮಂಚಾಧಿ ತೈಲ—ಸುಂದರ ತೈಲ—ಲಕ್ಷ್ಮೀಮಣಿ ಗ್ರಾಸ್ ಮಿತಸಂತತಿಯ ಉಪಕರಣಗಳು ಅನೇಕ ತರದ ಶಾಸ್ತ್ರೀಯ ಔಷಧಿಗಳ ಕೆಟಲಾಗು ಕೇಳಿ.

The Behar Chemical Works, Bhagalpur

ಏಜಂಟ್ಸ್—ಷಾ. ಕಂಪೆನಿ, ಗವರ್ನಮೆಂಟ್ ಕಾಲೇಜಿನ ಎದುರು ಮಂಗಳೂರು, ದ ಕ

CHEMICALS

Chemicals for manufacturing Sugar, Soap, Toilets Matches, Glass, Potteries, Leather, Carpet ink, Drybatteries Photography & for Dyeing & Bleaching Cotton, Wool and Silk Write to

Rasiklal & Co.,

Post Box No 2228 Bombay 2

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter –

Modern Hindu Hotel,
Calicut, 17—6 - 1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್
ಕೋರ್ಟಿನಲ್ಲಿ.

I. P. No. 10/'35

ನಾಗದೇವಿ ಅಮ್ಮ-ಅರ್ಜಿದಾರಳು.

ಮತ್ತು

1. ಅನಂತ ಭಟ್ಟ, 2. ಪದ್ಮನಾಭ ಭಟ್ಟ-ಎದ್ರಿರು.

ಇವರೊಳಗೆ—

ಮೇಲ್ಕಂಡ ವ್ಯವಹರಣೆಯ ಅರ್ಜಿದಾರಳ ಗಂಡ 1ನೇ ಎದ್ರಿ ತಮ್ಮ 2ನೇ ಎದ್ರಿ ಅಣ್ಣ ಹಾಲಿ ಮೃತಪಟ್ಟ ಕೆ ನಾರಾಯಣಾಚಾರ್ಯನು ಬೆಂಗಳೂರು ಹೆಡ್ ಆಫೀಸಿಗೆ ಒಳಪಟ್ಟ ಗೋರಿಬಿದ್ನೂರು ಪೋಸ್ಟು ಆಫೀಸಿನ ಲೆಜರ ಪೋಲಿಯೋ ನಂಬ್ರ 214/208ನೇ ಎಕೌಂಟ ನಂಬ್ರ 137598ನೇ ಪೋಸ್ಟ್ ಆಫೀಸಿನ ಸೇವಿಂಗ್ಸ ಬೇಂಕಿನಲ್ಲಿ ಡಿಪೋಜಿಟು ಇಟ್ಟ ಈಗ ಮಂಗಳೂರು ಹೆಡ್ ಆಫೀಸಿಗೆ ಒಳಪಟ್ಟ ಉಡುಪಿ ಪೋಸ್ಟು ಆಫೀಸಿಗೆ ಟ್ರೆನ್ಸ್‌ಫರ್ ಆಗಿರುವ ಸದ್ರಿ ಐವಜು ವಸೂಲು ಪಡಿಯುವರೆ ಸದ್ರಿ ನಾರಾಯಣಾಚಾರ್ಯನು ಮೃತನಾಗಿ ಅವನ ಅರ್ಜಿದಾರಳು ಮುಖ್ಯ ವಾರ್ಸುದಾರಳು ಹೆಂಡ್ತಿಯಾಗಿ ಆ ಬಾಬ್ತು ಅಸಲು ಬಡ್ಡಿ ಕೂಡಾ ರೂಪಾಯಿ 2619—3—11ನ್ನು ವಸೂಲು ಪಡಿಯುವರೆ ತಾನು ಹಕ್ಕುದಾರಳಾಗಿ ಆ ಕುರಿತು ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತ ಕೊಟ್ಟ ಮೇಲ್ಕಂಡ ಅರ್ಜಿಯು ತಾ 2-3-35ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆಕ್ಷೇಪ ಹೇಳತಕ್ಕವರು ಆ ದಿವಸ ಹಗಲು 10 ಘಂಟೆಗೆ ಕೋರ್ಟಿಗೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ

Udipi, 10—2—35 } P. Padmanabha Rao, Vakil for Petitioner

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್
ಕೋರ್ಟಿನಲ್ಲಿ.

ಕ್ರಮ ನಂಬ್ರ 721/1934

ಶೇಷಗಿರಿ ಕಾಮ್ತ-ವಾದಿ

ಮತ್ತು

ಜೋಗಪ್ಪ ಹೆಗ್ಡೆ-ಪ್ರತಿವಾದಿ

ಇವರೊಳಗೆ—

ಕಾರ್ಕಳ ತಾಲ್ಲೂಕು ಸಿದ್ಧೆ ಗ್ರಾಮದ ಅತ್ತೂರು ಮುದಲ್ಕೆಯೆಂಬಲ್ಲಿರುವ ಕುಂಟಾಡಿ ಮಾಬಿಗುತ್ತು ಬೆಮರ್ಯ್ಯ ಹೆಗ್ಡೆರ ಮಗ ಸದ್ರಿ ಪ್ರತಿವಾದಿ ಜೋಗಪ್ಪ ಹೆಗ್ಡೆರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ನಿಮ್ಮ ಭಾಗದ ಗರ್ಜಿನ ಬಗ್ಗೆ ವಾದಿಯಿಂದ ನಗದಾಗಿ ಪಡದ ರೂ 250 ಕ್ಕೆ ತಾ 27-11-31ರಲ್ಲಿ ಬರಕೊಟ್ಟ ದಿಮಾಂಡ ಪ್ರೊಮಿಸರಿ ನೋಟಿನ ಶರ್ತಪ್ರಕಾರ ಅಸಲು ಬಡ್ಡಿ ಬರಮಾಡಿಕೊಳ್ಳುವರೆ ತಾ 22-11-34 ರಲ್ಲಿ ನಿಮ್ಮ ಮೇಲೆ ಈ ಕೋರ್ಟಿನಲ್ಲಿ ಸದ್ರಿ ವಾದಿಯು ದಾವಾದಾಕ್ಲು ಮಾಡಿರುತ್ತಾನೆ ವ ಸದ್ರಿ ವ್ಯಾಜ್ಯದ ಆಖೈರು ಪಡಿಚಾ ಬಗ್ಗೆ ತಾ 20—2 35ಕ್ಕೆ ಇಟ್ಟಿರುತ್ತದೆ ಮತ್ತು ಸದ್ರಿ ತಾರೀಕಿನಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಖುದ್ದುಸಿದಾಗಲೀ ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ಡಿಫೆನ್ಸಿನ ರುಜುವಾತಿನ ಬಗ್ಗೆ ಸಾಕ್ಷ ವ ದಸ್ತಾವೇಜುಗಳ ಸಹಿತ ಉದಹರಿಸಬಹುದು ಮೇಲೆ ನಮೂದಿಸೋಣಾದ ದಿವಸ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ಸದರಿ ವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ಪೈಸಲು ಮಾಡೋಣಾದೀತೆಂತ ಈ ಮೂಲಕ ತಿಳಿದಿರತಕ್ಕದ್ದು.

ಕಾರ್ಕಳ, 12—2—35. K. Sadasiva Bhat, Advocate, Counsel for Plaintiff.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್
ಕೋರ್ಟಿನಲ್ಲಿ.

R. E. P. No. 948/1934.
O. S. No. 129/1931.

ಚಂದಪ್ಪ ಶೆಟ್ಟಿ . . . . ಅರ್ಜಿದಾರ

ಮತ್ತು

ಸುಲೋಚನೆ ಹೆಂಗಸು ಕೂಡಾ ಎದ್ರಿರು

ಇವರೊಳಗೆ

ಕಾರ್ಕಳ ತಾಲೂಕು ಐದೂರು ಮಾಗಣೆ ರಂಜಾಳ ಗ್ರಾಮದ ಪಾಂಡಿಬೆಟ್ಟುಯೆಂಬಲ್ಲಿರುವ ಅನಂತಮತಿ ಹೆಂಗಸಿನ ಮಕ್ಕಳು ಸುಲೋಚನೆ ಹೆಂಗಸು, ಚಂದ್ರಾವತಿ ಹೆಂಗಸು, ಅಮೃತಮತಿ ಹೆಂಗಸು ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನು ವಾದಿಯಾಗಿ ನಿಮ್ಮ ಮೇಲೆ ಪಡೆದ ಈ ಕೋರ್ಟಿನ O S No 129/1931ನೇ ಡಿಕ್ರಿ ಸಮಾಧಾನದ ಬಗ್ಗೆ ನಡಿಸಿದ ಮೇಲ್ಕಂಡ ಅಮಲ್‌ಜಾರಿಯಲ್ಲಿ ಕಾರ್ಕಳ ತಾಲೂಕು ನೆಲ್ಲಿಕಾರು ಗ್ರಾಮದ ಪಟ್ಟಾ ನಂಬ್ರ 7ಕ್ಕೆ ಒಪ್ಪಿದ ಬಾಬ್ತು ಮತ್ತು ನಲ್ಲೂರು ಗ್ರಾಮದ ಪಟ್ಟಾ ನಂಬ್ರ 41ನೇಗೆ ಒಪ್ಪಿದ ಬಾಬ್ತು ಕೂಡ ಈ ಎರಡು ಆಸ್ತಿಗಳಲ್ಲಿ ನಿಮ್ಮ ಭಾಗಕ್ಕೆ ಇರುವ ಭೋಗ್ಯಾದಿ ಹಕ್ಕನ್ನು ಅರ್ಜಿದಾರನು ಏಲಮಿಗೆ ತಂದಿರುತ್ತಾನಾಗಿಯೂ ಸದ್ರಿ ಹಕ್ಕನ್ನು ಈ ಕೋರ್ಟಿನ ಬಹಿರಂಗವಾದ ಹರಾಜಿನಲ್ಲಿ ತಾರೀಕು 25—3—1935ರಲ್ಲು ಏಲಂ ಮಾಡಲ್ಪಡುವದಾಗಿಯೂ ಈ ಮೂಲಕ ತಿಳಿಸೋಣಾಗಿಯದೆ

ಮೊಕ್ಕಾಂ ಕಾರ್ಕಳ, ತಾ 12—2—35 } K. Sadashiva Bhat, Advocate, Counsel for Petr

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್
ಕೋರ್ಟಿನಲ್ಲಿ.

ಕ್ರಮ ನಂಬ್ರ 726/1934

ಜನ್ನಪ್ಪ ಕಡಂಬ-ವಾದಿ

ಮತ್ತು

ಲಕ್ಷ್ಮಣ ಕಡಂಬ—ಪ್ರತಿವಾದಿ

ಇವರೊಳಗೆ—

ಕಾರ್ಕಳ ತಾಲ್ಲೂಕು ನಲ್ಲೂರು ಗ್ರಾಮದ ದೊಡ್ಡ ಬೆಳ್ಳಿಬೆಟ್ಟುಯೆಂಬಲ್ಲಿರುವ ಶಂಕರ ಕಡಂಬರ ಅಳಿಯ ಲಕ್ಷ್ಮಣ ಕಡಂಬರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಯ ಕ್ರಮಾಗತದ ಹಕ್ಕಿನ ಆಸ್ತಿಗಳ ಪೈಕಿ ಕಾರ್ಕಳ ತಾಲ್ಲೂಕು ನಲ್ಲೂರು ಗ್ರಾಮದ ಪಟ್ಟಾ ನಂಬ್ರ 12ಕ್ಕೆ ಒಪ್ಪಿದ ಬಾಬ್ತು ನೀವು ಅಕ್ರಮ ಸ್ವಾಧೀನತೆ ಮಾಡಿಕೊಂಡ ಆಸ್ತಿಯ ಸ್ವಾಧೀನತೆ ವ ಮುಂದಿನ ಹುಟ್ಟುವಳಿ ಬಗ್ಗೆ ನಿಮ್ಮ ಮೇಲೆ ಸದ್ರಿ ವಾದಿಯು ದಾವಾದಾಕ್ಲು ಮಾಡಿರುತ್ತಾನೆ ಮತ್ತು ಸದ್ರಿ ದಾವೆಯು ಆಖೈರು ಪಡಿಚಾ ಬಗ್ಗೆ ತಾ. 28-2-'35ಕ್ಕೆ ಇಟ್ಟಿರುವುದರಿಂದ ಸದ್ರಿ ವ್ಯಾಜ್ಯದ ವಿಷಯ ನಿಮ್ಮದೇನಾದರೂ ಆಕ್ಷೇಪಗಳಿದ್ದರೆ ನೀವು ಸದ್ರಿ ಕೋರ್ಟಿನ ಮುಂದೆ ಸದ್ರಿ ತಾರೀಕಿನಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ಸರಿಯಾಗಿ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಉದಹರಿಸಿಕೊಳ್ಳಬಹುದು ನೀವು ಸದ್ರಿ ತಾರೀಕಿನಲ್ಲಿ ಹಾಜರಾಗುವರೆ ತಪ್ಪಿದರೆ ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರ ಹಾಜರಿಯಲ್ಲಿ ಕೇಳಿ ಪೈಸಲು ಮಾಡೋಣಾದೀತು

ಮೊಕ್ಕಾಂ ಕಾರ್ಕಳ, 12—2—35 K. Sadasiva Bhat, Advocate, Counsel for Plaintiff

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್
ಕೋರ್ಟಿನಲ್ಲಿ

I. P No 4/'34
R I A. No 116 & 117/1935.

ಅರ್ಜಿದಾರ-ಅಣ್ಣಯ್ಯ ಶೇರೆಗಾರ

ಎದ್ರಿರು—ಅಕ್ಕುಂಜೆ ರಾಮಯ್ಯ ಭಂಡಾರಿ ಕೂಡಾ

ಅರ್ಜಿದಾರನು ಕೊಟ್ಟ ಮೇಲ್ಕಂಡ ದಿವಾಳಿ ಅರ್ಜಿಯಲ್ಲಿ ಡಿಸ್‌ಚಾರ್ಜು ಬಗ್ಗೆ ಕೊಟ್ಟ ಮ್ಯಾದೆಯನ್ನು ವೃದ್ಧಿಪಡಿಸಿಕೊಂಡು ಅರ್ಜಿದಾರನನ್ನು ಡಿಸ್‌ಚಾರ್ಜು ಮಾಡಬೇಕಾಗಿ ವಗೈರೆ ಅರ್ಜಿದಾರನು ಕೊಟ್ಟ ಮೇಲ್ಕಂಡ ಅರ್ಜಿಗಳು ತಾರೀಕು 18—2—1935ಕ್ಕೆ ತನಿಕೆಗೆ ಇಟ್ಟದೆ ಆ ಕುರಿತು ಆಕ್ಷೇಪ ಇದ್ದರೆ ಆ ತಾರೀಕಿಗೆ ಜಾಹೀರು ಮಾಡತಕ್ಕದ್ದು

ಮೊಕ್ಕಾಂ ಕುಂದಾಪುರ, ತಾ 12-2 35 K. Raghunath Shenai, ಅರ್ಜಿದಾರನ ಕಡೆ ವಕೀಲ

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ
ಕೋರ್ಟಿನಲ್ಲಿ

S C No 1213 1934

ಎಮ್ ಎಮ್ ಶ್ಯಾನಭೋಗ ಎಂಡ್ ಸನ್— ವಾದಿ

ಮತ್ತು

ಎ ಜಿ ಪಾಲ್ ಜಪ್ಪಿನಮೊಗರು ಸ್ಕೆಂಟ್ ಫಿಶ್ ಟೆಕ್ಸಟ್ಯಾಲ್ ಪ್ರಿಂಟಿಂಗ್ ಮತ್ತು ಡ್ಯಾಯಿಂಗ್ ವರ್ಕಿನ ಪ್ರೊಪ್ರೈಟರು—ಪ್ರತಿವಾದಿ

ವಾದಿ ವಕೀಲ ಕೆ ಪಿ ಗೋಪಾಲಕೃಷ್ಣರಾಯನು ಈ ಮೂಲಕ ತಿಳಿಯಪಡಿಸುವುದೇನಂದರೆ —

ಮೇಲ್ಕಂಡ ವಾದಿಯ ಶೋಫಿನಲ್ಲಿ ಪ್ರತಿವಾದಿಯು ನಡೆಸಿದ ಲೇವಾದೇವಿಯಲ್ಲಿ ಸದರಿ ಪ್ರತಿವಾದಿಯಿಂದ ಬರತಕ್ಕ ಅಸಲು ಬಡ್ಡಿ ವ ರಿಜಿಸ್ಟ್ರಿ ನೋಟೀಸು ಖರ್ಚು ಕೂಡಿ ರೂಪಾಯಿ 51—15—9 ಬರಮಾಡಿಕೊಳ್ಳುವರೆ ಸದ್ರಿ ವಾದಿಯು ಸದ್ರಿ ಪ್ರತಿವಾದಿ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ವ್ಯಾಜ್ಯವನ್ನು ದಾಕಲುಮಾಡಿರುತ್ತಾನೆ. ಮತ್ತು ಆ ವ್ಯಾಜ್ಯವು ಇದೇ 1935ನೇ ಇಸವಿ ಫೆಬ್ರವರಿ ತಾ 25ನೇ ಸೋಮವಾರ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ತನಿಕೆಗೆ ಇಟ್ಟದೆ ಮೇಲ್ಕಂಡ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಯು ತಾನು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ತನ್ನ ಉದಾಹರಣೆ ದಾಕಲು ಮಾಡತಕ್ಕದ್ದು ತಪ್ಪಿದರೆ ಆತನನ್ನು ಶಿಕ್ಷೆ ಮಾಡಿ ಸದ್ರಿ ವ್ಯಾಜ್ಯವನ್ನು ತೀರ್ಮಾನ ಮಾಡಲಾದೀತು ತಿಳಿದಿರುವುದು

ಮಂಗಳೂರು, 14—2—35 Sd K P Gopalkrishna Rao, Vakil for Plaintiff

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್
ಕೋರ್ಟಿನಲ್ಲಿ

R E P No 867/1984.

ವೆಂಕಟರಾಯ ಅರ್ಜಿದಾರ

ವೆಂಕಟಾಚಲ ಹೆಬ್ಬಾರ, ಕೃಷ್ಣ ಹೆಬ್ಬಾರರ ಮಗ, ನಾವುಂದ ಗ್ರಾಮ ಎದ್ರಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ಮೇಲ್ಕಂಡ ಅಮಲ್‌ಜ್ಯಾರಿಯಲ್ಲಿ ಇಸ್ತಿಹಾರಿನ ಶರತ ನಿರ್ಣಯಮಾಡುವರೆ ತಾರೀಕು 19—2—1935ನೇ ದಿವಸ ಹಗಲು 11 ಘಂಟೆಗೆ ಈ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುತ್ತದೆ ಆಕ್ಷೇಪಣೆಯಿದ್ದರೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬಹುದ ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿಯದೆ

Kundapur, 11—2—35 | Sd/ A. V N Hebbar, Pleader for Decree holder

ಸೂಚನೆ.

ನಮ್ಮ ವಾಚಕರು ತಂತಮ್ಮ ಊರುಗಳ ದಿನ ವಿಶ್ವಸನೀಯ ವಾರ್ತೆಗಳನ್ನು ನಮಗೆ ಬುಕ್ ಪೋಸ್ಟ್ ಮೂಲಕ ಕಳುಹಿಸಿಕೊಟ್ಟರೆ, ಅನುಕೂಲತಾನುಸಾರ ಅವುಗಳನ್ನು ಪ್ರತಿವಾರದಲ್ಲಿ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಲಾಗುತ್ತದ

ಸಂಪಾದಕ,
ಸ್ವದೇಶಾಭಿಮಾನಿ, ಮಂಗಳೂರು

ಈ ದಿನ ಅತ್ಯುತ್ತಮವಾದ ದಂತ ಮಂಜನವೊಂದನ್ನು ಯತ್ನಿಸಿರಿ!

ಬಾಬೂಲಿನ ಸತ್ವವನ್ನೊಳಗೊಂಡಿದೆ



ಮನೆಗೆ ತೆರಳುವಾಗ ದಾರಿಯಲ್ಲಿ ಮೊದಲಾಗಿ ಕಾಣುವ ಯಾವ ಕೆಮಿಸ್ಟ್ ಶಾಪಿಗಾದರೂ ತೆರಳಿ "ಕೊಪ್ರನ್" ದಂತಮಂಜನ (ಟೂತ್‌ಪೇಸ್ಟ)ವನ್ನು ಕೇಳಿರಿ. ಅಂದೇ ಸಾಯಂಕಾಲ ಅದನ್ನುಪಯೋಗಿಸಲಾರಂಭಿಸಿರಿ, ಅಂದರೆ ನೀವು ದಂತ ಆರೋಗ್ಯಲಾಭದ ಪಥದಲ್ಲಿ ಪದಾರ್ಪಣ ಮಾಡಿದಂತೆ!

"ಕೊಪ್ರನ್" ದಂತಮಂಜನವು, ಕ್ರಿಮಿನಾಶಕವಾದ, ಶೌಚಪಡಿಸುವ, ಒಸಡುಗಳನ್ನು ಬಲಪಡಿಸುವ, ದವಡೆಗಳನ್ನು ದೃಢಗೊಳಿಸುವ ಮತ್ತು ಹಲ್ಲುಗಳನ್ನು ಚೆನ್ನಾಗಿ ಶಕ್ತಿ ಕೊಳೆದು ಹೊಳೆಯಿಸುವ ಔಷಧ ಜೀನಸುಗಳನ್ನೊಳಗೊಂಡಿದೆ. ಅದರಿಂದ ನಿಮ್ಮ ಹಲ್ಲುಗಳನ್ನು ತೊಳೆದಾದನಂತರ ಉಂಟಾದ ಶೌಚದ ಉಲ್ಲಾಸದ ಅನುಭವದಿಂದ ನೀವು ಅದನ್ನು ಮನಗಾಣುವಿರಿ.

ಅಮೇರಿಕ ಮತ್ತು ಇತರ ವಿದೇಶ ಪ್ರಾಂತ್ಯಗಳಲ್ಲಿ ವಿಕ್ರಯವಾಗುತ್ತಿರುವ ಹಿಂದೀ ದಂತಮಂಜನವೆಂದರೆ "ಕೊಪ್ರನ್" ಒಂದೇ. ಡಾ॥ ಕೊಕಟ್ನೂರ್, ಎಮ್ ಎಸ್ ಸಿ, ಪಿ. ಎಚ್ ಡಿ ಮತ್ತು ಡಾ॥ ದೇಸಾಯಿ, ಡಿ ಡಿ. ಎಸ್, ಇವರು ಅತಿ ಪರಿಣಾಮಕಾರಿಯಾದ ದಂತಮಂಜನವೊಂದನ್ನು ತಯಾರಿಸುವಲ್ಲಿ ಯಶಸ್ವಿಯಾಗಿರುವರೆಂಬುದಕ್ಕೆ ದೇಶ-ವಿದೇಶಗಳಲ್ಲಿನ ಈ ದಂತಮಂಜನದ ಯಶಸ್ಸೇ ಧಾರಾಳವಾದ ಸಾಕ್ಷಿಕವಾದ ರುಜುವಾತು.

ಹಲ್ಲುಗಳನ್ನು ಶುಚಿಪಡಿಸುವ ಆನಂದವನ್ನು ಇದನ್ನುಪಯೋಗಿಸಿಯೇ ಅನುಭವಿಸಿರಿ

ಕೊಪ್ರನ್ ದಂತ ಮಂಜನ (ಪೇಸ್ಟ್)

ದೊಡ್ಡ ಮತ್ತು ಸಾಮಾನ್ಯ (ಲಾರ್ಜ್—ಮಿಡಿಯಮ್) ಈ ಎರಡು ಸೈಜುಗಳಲ್ಲಿ ಎಲ್ಲೆಲ್ಲಿಯೂ ದೊರೆಯುತ್ತದೆ.

WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassan and Kadur districts
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter.

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba, Benares City

[illegible Kannada text]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬ, ಬನಾರಸ್ (ಸಿಟಿ)

The East & West Insurance Co., Ltd.
Established 1913

Head Office—East & West Buildings Apollo Street, Fort, BOMBAY

New business for the year 1933 shows an increase of 50% over that of 1932

First-class Service to Policy Holders up to date contracts, Close co-operation between Head Office and field force efficient and economic management are few of the factors responsible for the constant and steady growth of the Company

It will pay you to take out a Policy to day
Agency terms liberal—Treatment sympathetic

Please apply for agency and for local ...

Padubidri Bros — M N V K math & Sons
Chief Agents — Golkatta Bazar,
Padubidri : Bombay No. 8 — Mangalore, S K

Dalal & Co., Secretaries

ಡಾಕ್ಟರ ವಾಮನ ಗೋಪಾಳರವರ



[illegible Kannada text]

ಡಾ॥ ಗೋಪಾಲ ರಾವ್ ಕೇಶವರವರ
ಫೋಸ್ಪರಸ್ ಗುಳಿಗೆಗಳು.

[illegible Kannada text]

ಗುಣಬಾರದಿದ್ದರೆ — ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್)

[illegible Kannada text]

ವಿಳಾಸ—ಸಂಜೀವಿನೀ ಔಷಧಾಲಯ ... S M C.

Established] [1900

ಅತ್ಯುತ್ತಮವಾದ ... ಸೀರೆಗಳು.

[illegible Kannada text]

Tel Honesty — **D K. Dhakappa Bros,**
Cloth Merchants, P O Sirsi Dist, N. Kanara

The Popular Insurance Company, Ltd.
Head Office:—MANGALORE, S India
The Pioneer Life Office of the West Coast.
Wanted influential District agents in Unrepresented areas.

A few Press opinions

'INSURANCE HERALD' CALCUTTA This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds

'THE ARTISAN,' TRIVANDRUM We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground It is directed by influential people of Mangalore and managed by Mr. B. Vittal Rao, who has developed in him a great deal of life insurance sense

ವಿವಿಧ ವಿಷಯ.

ಇಬ್ಬರನ್ನೂ ಕೊಂದರು!

ಮಧುರೆಯ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ರಿಟಾಯರ್ಡ್ ಅಸಿಸ್ಟೆಂಟ್ ಎಂಜಿನಿಯರರಾದ ಶ್ರೀ ವೆಂಕಟರಾಮ ಐಯ್ಯರರು ಹಳ್ಳಿಯಲ್ಲಿನ ತನ್ನ ಆಸ್ತಿಯನ್ನು ಕಂಡುಕೊಂಡು ಅವರ ಗಾಡಿಯಲ್ಲಿ ಕುಳಿತುಕೊಂಡು ಮಧುರೆಗೆ ಹಿಂತಿರುಗುತ್ತಿದ್ದಾಗ ಯಾರೋ ಅವರ ಮೇಲೆ ಬಿದ್ದು ಅವರನ್ನು ಗಾಡಿಯಿಂದ ಕೆಳಗೆ ಎಳೆದುಹಾಕಿ ಕೊಂದು ಹಾಕಿರುವರು ಅವರ ಗಾಡಿಯವನಿಗೂ ಇದೇ ಗತಿಯು ಲಭಿಸಿತು ಗಾಡಿಯನ್ನು ಕೋಡಿಗೆ ದೂಡಿದರು. ಎರಡು ಶವಗಳೂ ಮರುದಿನ ನೆತ್ತರಿನಲ್ಲಿ ಮುಳುಗಿದ್ದು, ಕಾಣಸಿಕ್ಕಿರುತ್ತವೆ

ರಿಜರ್ವ್ ಬೇಂಕಿನ ಸಾಲುಗಳು—

ಸಾರ್ವಜನಿಕರಿಗೆ ಮಾರ್ಚ್ ತಿಂಗಳಲ್ಲಿ ದೊರೆಯುವವು ಎನಿಂದ್ದು ಮುಂದಿರದಲ್ಲಿ ಈ ಬಗ್ಗೆ ಆಲೋಚನೆಗಳಾಗಲಿವೆ

ಬಾಬುರಾಜೇಂದ್ರ ಪ್ರಸಾದರು—

ಅಲ್ಲಹಬಾದಿಗೆ ಹೋದಾಗ ಮುನಿಸಿಪಾಲಿಟಿಯವರು ಅವರನ್ನು ಸ್ವಾಗತೀಕರಿಸಿದರು ಬಾಬು ರಾಜೇಂದ್ರ ಪ್ರಸಾದರು ಭೂಕಂಪದಿಂದ ಸಂಕಷ್ಟಕ್ಕೊಳಗಾದವರ ಪರವಾಗಿ ಮಾಡಿದ ಸಾಹಸವು ಮಾನಪಿಯಲ್ಲಿ ಉಲ್ಲೇಖಿಸಲ್ಪಟ್ಟಿತ್ತು. ಪ್ರಸಾದರು ಉತ್ತರವೀಯುವಾಗ ಮೋತಿಲಾಲರ ಊರಾದ ಅಲ್ಲಹಾಬಾದು ಯಾವ ಮಟ್ಟಿಗೂ ಹಿಂದಾಗಬಾರದೆಂದರು

ಕೊಂದು ಬೇರ್ಪಡಿಸಿದರು.

ಕಳೆದ ಮಂಗಳವಾರ ಹಗಲು ವೀರಣ್ಣ ದೇವನ್ ಎಂಬವನು ಕೆಲವರನ್ನು ಕೂಡಿಕೊಂಡು ಮಲಯಂಡಿ ದೇವನ್ ಎಂಬ ಅಪರಿಚಿತನೊಬ್ಬನನ್ನು ಸೆರೆ ಹಿಡಿಯುವುದಕ್ಕಾಗಿ ಅವನ ಮನೆಯ ಸುತ್ತುಗಟ್ಟಿ ನಿಂತಾಗ ನೋಡಿ ನೋಡಿ ದಂತಿ ವೀರಣ್ಣನು ಗುಂಡೇಟಿನಿಂದ ಬಿದ್ದನು ಅವನು ಬಿದ್ದೊಡನೆ ಅವನ ಸಂಗಾತಿಗಳು ಕಾಲಿಗೆ ಬುದ್ಧಿ ಹೇಳಿದರು. ಬಿದ್ದವನ ರುಂಡವನ್ನು ತೆಗೆದು ಕಾಳಿಯ ದೇವಸ್ಥಾನದಲ್ಲಿ ಇಟ್ಟಿರುವರು.

ಯಾರಾದರೇನು?

ಯಮರಾಜನಿಗೂ ಮೋಟರ್ ಲಾರಿಗೂ ಒಂದೇ ರೀತಿ! ಅಲ್ಲಹಾಬಾದಿನಲ್ಲಿ ವಸಂತ ಪಂಚಮಿ ಮೇಳಕ್ಕಾಗಿ ಹೋಗುತ್ತಿದ್ದ ನಾಲ್ವರು ಯಾತ್ರಾರ್ಥಿಗಳ ಮೇಲಿಂದ ಒಂದು ಮೋಟರ್ ಲಾರಿಯು ಓಡಿತು. ನಾಲ್ವರೂ ಅಳಲಿಲ್ಲ ಮೋಟರು ಚಿಕ್ಕ ಅದರಲ್ಲಿದ್ದ ಪ್ರಯಾಣಿಕರು ಆಸ್ಪತ್ರೆಗೆ ಹೋಗಲೆದ್ದರು ಲಾರಿಯು ಏನೆಲ್ಲ ಎಂಬುದು ಸಂತೋಷಕರ ಪೈಗ್ವಾ ಪ್ರಾಣ ಹೊರಟಿರುವವರನ್ನು ಕೊಂದುದಕ್ಕಾಗಿ ಲಾರಿಯು ತನಿಖೆಯಾಗುತ್ತಲಿದೆ

ಪೊಂಡಿಚೆರಿಯ ಮೇಯರರಾಗಿ—

ಪ್ರಥಮ ಸಲಕ್ಕಾಗಿ ಮೊನ್ ಜೋಸೆಫ್ ಡೇವಿಡ್ ಎಂಬವರು ಚುನಾಯಿತರಾಗಿದ್ದಾರೆ ಹಿಂದೀಯನು ಈ ಸ್ಥಾನಕ್ಕೆ ಅಲ್ಲಿ ಬಂದುದು ಇದೇ ಮೊದಲು

ಇವನಿಗೆ ಕಲಿಸಿದವರಾರು?

ಎಂಬುದೇ ಕೋರ್ಟಿನಲ್ಲಿ ಕೇಳಲ್ಪಟ್ಟ ಪ್ರಶ್ನೆ ರಾಜಮಾಣಿಕಂ ಎಂಬ ಹತ್ತು ವರ್ಷ ಪ್ರಾಯದ ಹುಡುಗನೊಬ್ಬನು ಕೊಂಭಕೋಣದಲ್ಲಿ ಸುಗ್ಗಿ ಅಂಗಡಿಯಲ್ಲಿ ಮಾಡಿದ ಕಳವಿಲ್ಲ ಮೊನ್ನೆ ಈ ಘೋರ ನನ್ನು ಹಿಡಿದು ವಿಚಾರಿಸಲಾಗಿ ಇಪ್ಪತ್ತೈದಕ್ಕೂ ಹೆಚ್ಚು ಕಳ್ಳತನಗಳನ್ನು ಮಾಡಿದನೆಂದು ತಿಳಿದು ಬಂತು ಅವನಿಗೆ ರಾಣಿಪೇಟೆಯ ಶಾಲೆಯಲ್ಲಿ ೫ ವರ್ಷಗಳ ಪರಿಯಂತ ಶಿಕ್ಷೆ ಹೊಂದಬೇಕು ಎಂದಾಯಿತು. ಶಿಕ್ಷೆಯನ್ನು ಕಲಿಯುವನೇನೊ'

ಪಟ್ಟಾಭಿಷೇಕದ ರಜತೋತ್ಸವವು—

ಮೇ ಕೊಂದ ಹದಿನಾಲ್ಕು ದಿವಸ ತನಕ ಇಂಗ್ಲೆಂಡಿನಲ್ಲಿ ಜರಗಲಿರುವುದು. ಇಂಗ್ಲೆಂಡಿನ ಎಲ್ಲಾ ಮೋಟರುಗಳಿಗಳ ಒಂದು ಮಹತ್ತಾದ ವಾಹನ ಪ್ರದರ್ಶನವು ಜರಗುವುದು ಈ ಪ್ರದರ್ಶನದಲ್ಲಿ ಎಲ್ಲಾ ಮೋಟರುಗಳು ಭಾಗವಹಿಸುವವೆಂದು ತಿಳಿದು ಬಂದಿಲ್ಲ ಅಂತೂ ಲಕ್ಷಗಟ್ಟಲೆ ಮೋಟಾರುಗಳು ಪ್ರದರ್ಶಿತವಾಗಿ ಬಹು ಮಹಾಸಬಲ್ಪವೆದಿವೆ

ಪ್ರಚಲಿತ ಸಮಾಚಾರ.

"ಮದುವೆಯೂ ಮರಣವೂ ಒಂದೇ"—

ಎಂದು ಸಂಗಾತಿಗಳಲ್ಲಿ ಕೆಲವರು ಹೇಳುವುದು ಕೇಳುತ್ತೇವೆ ಇದು ಸುಳ್ಳಲ್ಲವೆಂದು ಈಗ ತಿಳಿದೀತು, ತನ್ನ ವಲ್ಲಿಯ ಹಲ್ಲಕರಸ್ ಕೊಯಮ್ಮಲ್ ತಾಲೂಕಿನ ದೇವರ್ ಕುಲಂ ಎಂಬಲ್ಲಿ ಒಬ್ಬ ನಾಯ್ಕನ ಮನೆಯಲ್ಲಿ ವಿವಾಹವು ಜರಗಿ ಭೋಜನಕ್ಕಾರಂಭವಾಯಿತು. ೩೦೦ ಜನ ಅತಿಥಿಗಳು 'ದಯಮಾಡಿ ಚಿತ್ತೈಸಿದ್ದರು ಊಟವಾಯಿತು ಊಟ ತೀರಿತೆಂದು ಯಾರೂ ಮನೆಗೆ ಹೋಗಲಿಲ್ಲ. ಅಲ್ಲಲ್ಲೇ ಮಲಗಿದರು ಹಲವರು ಕಾರಿದರು. ಮೂವರು ಅಲ್ಲೇ ಕೈಲಾಸವಾಸಿಗಳಾದರು ಮಕ್ಕಳೆಲ್ಲರೂ ಜ್ವರ ಪೀಡಿತರಾದರು ಆರೋಗ್ಯ ಖಾತೆಯಿಂದ ಅಧಿಕಾರಿಗಳು ಓಡಿ ಬಂದು ಪರೀಕ್ಷಿಸಿದರು ಅನ್ನದಲ್ಲಿ ವಿಷವು ಬಿದ್ದಿದೆಯೆಂದು ಅಂದಾಜು ಆಗಿದೆ

"೪ ಕೋಟಿ ರೂಪಾಯಿಗಳು ಇನ್ನೂ ಬೇಕು"—

ಎಂದು ಪಂಡಿತ ಮಾಲವೀಯರು ಬನಾರಿಸ್‌ನಲ್ಲಿ ೩೨ ಖನೇ ದಿನ ಹಿಂದೂ ಯುನಿವರ್ಸಿಟಿಯ ಸಂಸ್ಥಾಪನಾದಿನಾಚರಣೆಯ ಸಮಯದಲ್ಲಿ ಅರಿಕೆಮಾಡಿದರು ೧೯೧೬ನೇ ಇಸವಿ ಫೆಬ್ರವರಿ ೪ರಲ್ಲಿ ಈ ವಿಶ್ವವಿದ್ಯಾನಿಲಯಕ್ಕೆ ಲೋರ್ಡ್ ಹಾರ್ಡಿಂಜರು ಶಂಕುಸ್ಥಾಪನೆ ಮಾಡಿದರು ವಿದ್ಯಾಲಯಕ್ಕೆ ೧ ಕೋಟಿ ರೂಪಾಯಿ ಬೇಕು ಎಂದು ಪಂಡಿತರು ಕೇಳಿದ. ಎಲ್ಲರಿಗೂ ಆಶ್ಚರ್ಯವಾಯಿತು ಆದರೂ ಕೆಲವು ವರ್ಷಗಳಲ್ಲೇ ಅವರು ೧ ಕೋಟಿ ೩೫೦೦೦ ರೂಪಾಯಿಗಳನ್ನು ಸಂಗ್ರಹಿಸಿದರು. ಇನ್ನೂ ೪ ಕೋಟಿ ರೂಪಾಯಿಗಳು ಬೇಕಂತೆ!

೧೪,೦೦೦ ಹುಡುಗಿಯರನ್ನು ವಿಕ್ರಯಿಸಿದರು!

ಜಪಾನು ಎಷ್ಟು ಪ್ರಗತಿ ಹೊಂದಿದಾತ್ತದೋ ಅಷ್ಟು ಅವ್ಯಾಗತಿಕವಾಗಿಯೂ ಇದೆಯೆಂದು ಆ ದೇಶದಲ್ಲಾದ ದಾರಿದ್ರ್ಯದ ವ್ಯಾಪಕತೆಯಿಂದ ವ್ಯಕ್ತ. ಕೊಕೊ ಜಿಲ್ಲೆಯ ರೈತರು ಭಯಂಕರ ಕಷ್ಟಕ್ಕೊಳಗಾದುದರು ತಮ್ಮ ಅನ್ನವನ್ನು ತಾವು ಸಂಪಾದಿಸುವುದಕ್ಕಾಗಿ ಅವರು ೧೪೦೦೦ ಹುಡುಗಿಯರನ್ನು ವೇಶ್ಯೆಯರಿಗೂ ಕಾರ್ಖಾನೆಗಳಿಗೂ ವಿಕ್ರಯಿಸಿದರು ಸರಕಾರದ ಸಹಾಯವು ಒದಗದಿದ್ದರೆ ಜನರೆಲ್ಲರೂ ಉಪವಾಸದಿಂದ ಸಾಯುವುದು ಎಂದೆಂದೂ. ಜಪಾನ್ ಕ್ರಾನಿಕಲ್ ಹೇಳಿದೆ ಕೃಷಿ ಖಾತೆಯ ಸಚಿವರಾದ ಮಿ. ಯಾವ ಕಾಶಿಯವರು ಆ ಜಿಲ್ಲೆಗೆ ಹೋದೊಡನೆ ಜನರು ಗುಂಪುಗುಂಪಾಗಿ ಒಂದು ಅರ್ಜಿಗಳನ್ನರ್ಪಿಸಿದರು

ವಿದ್ಯಾರ್ಥಿಗಳು ಚಳವಳದಲ್ಲಿ ಭಾಗವಹಿಸಬಾರದು—

ಎಂದು ಹಿಂದೂದೇಶದಲ್ಲಿ ವಿದ್ಯಾಧಿಕಾರಿಗಳು ಆಜ್ಞಾಪಿಸುವಂತೆ ಮೊನ್ನೆ ಲಂಡನಿನ ಒಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲೂ ಆಜ್ಞೆ ಹೊರಟಿದೆ ಯುನಿವರ್ಸಿಟಿ ಸೋಶಿಯಲಿಸ್ಟ್ ಒಕ್ಸ್ಫರ್ಡ್ ಕ್ಲಬ್ ಮೊದಲಾದ ಸಂಸ್ಥೆಗಳ ಸದಸ್ಯರುಗಳು ಬಸ್ ಮುಷ್ಕರ ಮತ್ತು ಗಿರಣಿ ಮುಷ್ಕರ ಮೊದಲಾದವುಗಳಲ್ಲಿ ಭಾಗವಹಿಸುವುದನ್ನು ಮುಂದಕ್ಕೆ ನಿಲ್ಲದಿದ್ದರೆ ಅಂತಹ ವಿದ್ಯಾರ್ಥಿಗಳನ್ನು ಶಾಲೆಯಿಂದಲೇ ಹೊರಗೆ ಕಳುಹಿಸಲಾದೀತೆಂದು ನೋಟೀಸು ಹೋಗಿದೆ

ಮುಷ್ಕರಗಾರರು ಸೆರೆಗಹಕರೇ?—

ಎಂಬ ಪ್ರಶ್ನೆಗೆ ಭಾರತ ದೇಶದಲ್ಲಿ ಹೌದು ಎಂದು ಉತ್ತರವು ಸಿಗುವುದು ಅಸ್ವಾಭಾವಿಕವಲ್ಲ ಆದರೆ ಮೊನ್ನೆ ಟೊರೊಂಟೋದಲ್ಲಿ ಕೆನೆಡಿಯನ್ ಲೇಬರ್ ಡಿಫೆನ್ಸ್ ಲೀಗಿನವರು ಎಂಟು ಮಂದಿ ಮುಷ್ಕರಗಾರರ ಪರವಾಗಿ ಕೋರ್ಟಿನಲ್ಲಿ ಸಾಹಸಪೂರ್ವಕವಾಗಿ ವಾದಿಸಿ, ಅವರು ತಪ್ಪಿತಸ್ಥರಲ್ಲವೆಂದು ಜಟಿಸಿದು ಜಯಶೀಲರಾದರು ಮುಷ್ಕರವು ಬೇಕಾದರೂದೇಶೀಯ ಕಾನೂನಲ್ಲವೆಂದೇ ನಿರ್ಧಾರವಾಯಿತು

ಎರಡು ಸಾವಿರ ಕುಟುಂಬಗಳು ಉಪವಾಸ ಇವೆ

ಎಂಬ ವಾರ್ತೆಯು ಆಗ್ರಾ ಜಿಲ್ಲಾ ಕೊಂಗ್ರೆಸ್ ಕಮಿಟಿಯು ಕಳುಹಿಸಿದ ವರದಿಯಿಂದ ವ್ಯಕ್ತವಾಗುತ್ತದೆ. ಪೈರುಪಚ್ಚೆಗಳು ಗಾಳಿ ಮಳೆಗೆ ಸಿಕ್ಕಿ ಹಾಳಾದುದರಿಂದಾಗಿ ಅಲ್ಲಿಯ ರೈತರು ದುರಂತ ದುಃಖಕ್ಕೀಡಾಗಿರುವರು. ೨೦೦೦ ಕುಟುಂಬಗಳಿಗೆ ಅನ್ನವಿಲ್ಲ.

ಬೇಲಿಯು ಹೊಲವನ್ನೇ ಮೇಯುತ್ತದೆ—

ಎಂಬ ಗಾದೆಯು ಸೋಮೇಶ್ವರ ಶತಕದಿಂದ ಬಂದಿತೆಂದು ಈ ಘಟನೆಯೊಂದರಿಂದ ಸ್ಮರಣೆಗೆ ಬರುವಂತಾಗಿದೆ. ಲಾಹೋರಿನಲ್ಲಿ ಒಬ್ಬ ಪೋಲೀಸ, ಅಂಗಡಿಗಾರನೊಬ್ಬನಿಗೆ ದಿನಾಲೂ ಅಫೀಮು ಮಾರುತ್ತಿದ್ದ. ಒಂದು ದಿನ ಅಂಗಡಿಗಾರನ ಮನಸ್ಸು ತಿರುಗಿತು ಎಕ್ಸೈಜ್ ಖಾತೆಯವರಿಗೆ ಗುಟ್ಟಾಗಿ ಸೂಚನೆಕೊಟ್ಟ ಪೋಲೀಸ ನೊಡನೆ ವ್ಯಾಪಾರ ನಡೆಸಿದ ಹಣವನ್ನು ಪಡೆದುಕೊಂಡು ಪೋಲೀಸನು ಮನೆಗೆ ತೆರಳುತ್ತಿದ್ದಾಗ ಎಕ್ಸೈಜ್ ಅಧಿಕಾರಿಗಳು ಕಾಣಸಿಕ್ಕಿದರು ಪೋಲೀಸನು ಸಹೋದರ ಭಾವದಿಂದ ಮಾತನಾಡಿದ. ಹೃದಯವನ್ನೇ ಅರಗಿಸಲೆತ್ನಿಸಿದ ಅಧಿಕಾರಿಯೊಬ್ಬರು ಅವನನ್ನು ತಪಾಸೆಗೆಂದು ಜಪ್ತಿಮಾಡಿದರು ಅಂಗಡಿಗಾರನು ಗುರುತುಮಾಡಿಕೊಟ್ಟ ಹಣವೂ ೯೫ ತೊಲೆ ಅಫೀಮೂ ಅವನ ಜೇಬಿನಿಂದ ದೊರೆಯಿತು.

ಮುಖ್ಯಮಂತ್ರಿಗಳ ಔದಾರ್ಯವು—

ಎಷ್ಟೆಂದು ತಿಳಿದವರಿಗೆ ತಿಳಿದಿದೆ ತಿಳಿಯದವರಿಗೆ ತಿಳಿದಿಲ್ಲ ಅದು ಅವರವರ ತಪ್ಪು ಲಂಡನಿನ ಲುಟೀನ್ ಎಂಬಲ್ಲಿ ಪ್ರಧಾನ ಸಚಿವರಾದ ಮಿ। ಮೆಕ್ಡೊನಾಲ್ಡರು ಒಂದು ಭಾಷಣವಿತ್ತರು "ನಿಮಗೆ ಭಾರತವು ಬೇಕೋ! ಹಾಗಾದರೆ ಅದನ್ನು ಸಹಾನುಭೂತಿಯಿಂದ ಕಾಣಿರಿ ಭಾರತೀಯರನ್ನು ಬುದ್ಧಿವಂತರನ್ನಾಗಿ ಮಾಡಿದ ನಾವು ಅವರಿಗೆ ಕೊಟ್ಟ ವಾಗ್ದಾನಗಳನ್ನು ಸಲ್ಲಿಸುವ ವೇಳೆಯು ಸನ್ನಿಹಿತವಾದೊಡನೆ ಬೆನ್ನುಹಾಕಬಾರದು ಬಲಾತ್ಕಾರದಿಂದ ಅವರನ್ನು ಆಳಬಾರದು ಅದು ಸಾಧ್ಯವಿಲ್ಲ ಬಲಾತ್ಕಾರಕ್ಕಿಂತ ಅವರಿಗೆ ಹೆಚ್ಚೆಚ್ಚು ಸ್ವಾತಂತ್ರ್ಯದಾನವೇ ಪ್ರಿಯಕರ ಉಪಾಯರಚಿತ" ಎಂದರವರು

ಸುಳ್ಳುವಾರ್ತೆಯ ಪ್ರಕಟಣೆಯಿಂದ—

ಇಂಗ್ಲಾಂಡಿನಲ್ಲಿ ಪ್ರಚಾರವಾದುದೊಂದು ಕಥೆ. ಇದು ಲಂಡನಿನ ಒಂದು ಹೆಸರುವಾಸಿ ದೈನಿಕಪತ್ರಿಕೆಯು ಸುಭಾಷ್ಚಂದ್ರ ಬೋಸರ ಬಗೆಗೆ ಪ್ರಕಟಣೆಯನ್ನು ಮಾಡಿಕೊಳ್ಳುತ್ತಾ "ಬೋಸರು ಮಹಾ ಘೋರ ಸ್ವಭಾವದ ಬಂಗಾಳಿ ಚಳವಳಿಗಾರ ಮಂಗೆಯ ಬೆಳೆದುದಕ್ಕಾಗಿ ಅನೇಕ ಸಲ ಜೈಲಿಗೆ ಕಳುಹಿಸಲ್ಪಟ್ಟಿದ್ದಾರೆ" ಎಂದು ಬರೆದ ಪರಿಣಾಮವಾಗಿ ಬೋಸರ ವಕೀಲರು ಆ ಪತ್ರಿಕೆಯ ಮೇಲೆ ದಾವಾ ಹೂಡಲಿರುವರು ಶ್ರೀ ಬೋಸರು ಐರ್ಲೆಂಡಿಗೆ ಹೋಗಿ ಡಿ' ವೆಲರಾರವರನ್ನು ನೋಡಲಿರುವರು

ಇದು ಸತ್ಯವಲ್ಲವೆಂದು ಹೇಳಬಹುದೆ?

ಪಾಟ್ನಾದ ಬಿಹಾರ ಕೊಂಗ್ರೆಸ್ ಕಮಿಟಿಗೆ ಕಳಿಸಿದ ವಾರ್ತೆಗಳಿಂದ ತಿಳಿದುಬರುವಂತೆ ಅಲ್ಲಿ ಕಳೆದ ಕಾಯಿದೆ ಭಂಗ ಚಳವಳದಲ್ಲಿ ಭಾಗವಹಿಸಿ ತಮ್ಮ ಶಿಕ್ಷಾವಧಿಯನ್ನು ಜುಲ್ಮಾನೆ ಕೊಡದಿದ್ದುದಕ್ಕೆ ವಿಧಿಸಲ್ಪಟ್ಟ ಹೆಚ್ಚಿನ ಶಿಕ್ಷೆಯನ್ನು ಅನುಭವಿಸಿದ ಕೊಂಗ್ರೆಸ್ ಕೆಲಸಗಾರರ ಆಸ್ತಿಗಳನ್ನು ಜಪ್ತಿಗೆ ಬಲಿಗೊಟ್ಟು ಜುಲ್ಮಾನೆಯನ್ನು ಪಡೆಯುತ್ತಿದ್ದಾರೆ

ರಷ್ಯದ ಚಲಚ್ಚಿತ್ರಗಳು ಅಮೇರಿಕದಲ್ಲಿ—

ಪ್ರದರ್ಶಿಸಲ್ಪಡಲಾರಂಭವಾಗಿವೆ ಕೆನಡಾದ ಬ್ರಿಟಿಷ್ ಮಹಾಪಟ್ಟಣಗಳಲ್ಲಿ ಅವುಗಳನ್ನು ತೋರಿಸುತ್ತಿದ್ದಾರೆ ರಷ್ಯದಲ್ಲಿ ಮಾಡಿದ ವಿಷಯಗಳನ್ನು ಭಾವವತ್ತಾಗಿ ಚಿತ್ರಿಸಿದ ಚಲಚ್ಚಿತ್ರವಾದ "ಗೋಲ್ಡನ್ ಮೌಂಟ್", ಎಂಬ ಚಿತ್ರವನ್ನು ಪಿಲಿಯಾವಧಿ ಅಮೇರಿಕಾನರು ಕಂಡು ಆಶ್ಚರ್ಯಚಕಿತರಾದರು. ರಷ್ಯದವರು ಚಲಚ್ಚಿತ್ರ ಸಾಹಸದಲ್ಲಿ ಇಷ್ಟು ಮುಂದುವರಿದಿರುವರೆಂದು ಅಮೇರಿಕನರಿಗೆ ಸಾಕ್ಷಾತ್ಪೂರ್ವಕವಾಗಿ ತಿಳಿದುದು ಇದೇ ಮೊದಲು

ಗೆಡ್ಡೆ ಗೆಣಸುಗಳನ್ನೇ ಭುಂಜಿಸುತ್ತಿರುವರು.

"ಚೈನಾ ವೀಕ್ಲಿ ರಿವ್ಯೂ" ಹೇಳುವಂತೆ ಟೋಕಿಯೋದಲ್ಲಿ ಭೀಕರ ಕ್ಷಾಮವು ತಲೆದೋರಿದೆ ಕಾಡುಗಳಲ್ಲಿನ ಗಡ್ಡೆಗೆಣಸು ಮೊದಲಾದವುಗಳನ್ನು ತಿಂದೇ ರೈತರು ದಿನ ಹರಣ ಮಾಡುತ್ತಿರುವರು "ಅನ್ನವಿಲ್ಲದವರಿಗೆ ಅನ್ನ ಕೊಡಿರಿ" ಎಂಬ ಅರಿಕೆಯು ದಿಗ್ದೆಸೆಗಳಲ್ಲಿ ಹರಡಿದೆ

ಬಂಗಲೆಗಳು ಕಾಣಸಿಗಲಿಲ್ಲವೇನೋ!

ಅಖಿಲ ಭಾರತ ಕೊಂಗ್ರೆಸ್ ಕಮಿಟಿಯ ಕೇಂದ್ರ ಕಚೇರಿಯಾದ ಪಾಟ್ನಾದ ಸದಾಕತ್ ಆಶ್ರಮಕ್ಕೆ ಯಾರೋ ಕಳ್ಳರು ನುಗ್ಗಿ ಕೆಲವು ಸಾಮಾನುಗಳನ್ನು ಲೂಟಿಮಾಡಿದರೆಂದು ವಾರ್ತೆ ಆಶ್ರಮವಾಸಿಯೊಬ್ಬನ ಸಾಮಯಿಕ ಜಾಗ್ರತೆಯಿಂದ ಕಳ್ಳರು ಓಡಿದರು.

ತುಂಡು ಸುದ್ದಿ.

ಶ್ರೀ ಎಂ ಎನ್ ರೋಯ್‌ರವರ ಸುದ್ದಿಯೂ ಪ್ರಕಟವಾಗದಿರುವುದಕ್ಕೆ ಅವರು ಅಲ್ಮೋರಾ ಜೈಲಿನಲ್ಲಿ ಬಂಧಿತರಾಗಿರುವುದೇ ಕಾರಣ. ಅವರೀಗ ಈಗ ರಸಾಯನ ಶಾಸ್ತ್ರವನ್ನು ಕಲಿಯುತ್ತಿರುವರು ಅವರಿಗೆ ಬರೆಯುವುದಕ್ಕೆ ಲೇಖನಿಯನ್ನು ಕೊಡಲಾಗುವುದಿಲ್ಲ. ಒಂದು ವೇಳೆ ಕೊಟ್ಟರೂ ಅದನ್ನು ಕೂಡಲೇ ಹಿಂದೆ ಪಡೆಯುತ್ತಾರೆ.

ಜಪಾನರ ಕಷ್ಟವು ಹೆಚ್ಚಿತು ೧೯೩೪ರ ಎಂಟು ತಿಂಗಳುಗಳಲ್ಲಿ ೧,೪೦,೦೦೦ ಹುಡುಗಿಯರನ್ನು ವೇಶ್ಯೆಯರಿಗೂ ಕಾರ್ಖಾನೆಗಳಿಗೂ ಮಾರಿದರು ಜಿಲ್ಲರೆ ಹಣಗಳನ್ನು ಪಡೆದು ಹುಡುಗರನ್ನೂ ಮಾರಿದರು. ೧೦ ೬೦೩ ಹಳ್ಳಿಗರು ದಿವಾಳಿಯಾದರು ಕೇಳಿದಾ ೮೦ ರಷ್ಟು ಸಂಸಾರಿಗಳಿಗೆ ಅನ್ನವಿಲ್ಲದಾಯಿತು ಪ್ರಾಥಮಿಕ ಶಾಲೆಗಳಲ್ಲಿ ೬೦೦೦೦ ಯನ್ನೆಷ್ಟು ಸಂಬಳ ಬಾಕಿ ೧೬,೦೦೦ ಶಾಲಾವಿದ್ಯಾರ್ಥಿಗಳಲ್ಲಿ ೧೪,೦೦೦ ಮಕ್ಕಳಿಗೆ ಸರಿಯಾದ ಆಹಾರಗಳಿಲ್ಲ

ಟೀಕ್ಸ್ವತ್ಯ್ರವರಿಗೆ ಸಂಬಳವೆಷ್ಟು? ಎಂದು ಹಿಂದೂಸ್ಥಾನದಲ್ಲಿ ನಿರ್ಣಯವಾಗ್ದವಾದರೂ ಪ್ಯಾರಿಸ್‌ನಲ್ಲಿ ಇದು ತೀರ್ಮಾನಿಸಲ್ಪಟ್ಟಿದೆ ೨೦೦೦ ಟೀಕ್ಸಿಡೆ ವರರು ಒಂದಾಗಿ ಅಲ್ಲಿ ಕೈಕಟ್ಟಿ ಕುಳಿತರು ಪಟ್ಟಣಗಳ ನಷ್ಟಕ್ಕೆ ಈಡಿಮೊದಲಿಲ್ಲದಾಯಿತು. ಮಿನಿಸ್ಟರ್ ಓಫ್ ಲೇಬರ್ ಇವರು ಬಂದು ಒಂದು ಸಭೆಗೂಡಿಸಿ ಟೀಕ್ಸಿವ್ಯ್ರವರಿಗೆ ಇಂತಿಷ್ಟೇ ಸಂಬಳವನ್ನು ಕೊಡಬೇಕೆಂದು ಅಪ್ಪಣೆ ಕೊಟ್ಟರು

ಇಟೆಲಿಯ ಸ್ತ್ರೀಯೊಬ್ಬಳು ನಿದ್ರಿಸಿದೊಡನೆ ಅವಳ ದೇಹದಿಂದ ಹೊರಡ ತ್ತಿದ್ದ ಪ್ರಕಾಶದಂತಹ ಪ್ರಕಾಶವನ್ನು ನಾಡಿಗಳ ವೇದಗಳಿಂದ ಡಾ। ಪ್ರೊಟ ಎಂಬ ವೆನಿಸ್‌ನ ವೈದ್ಯರು ತಿಳಿಸುತ್ತಾರೆ

೧೯೩೩ರಲ್ಲಿ ಜರ್ಮನಿಯಿಂದ ಹೊರಗೆ ಹೊರಟ ಪ್ರೊಫೆಸರ್ ಇನ್‌ಸ್ಟೀನ್ ರವರ ಕೃತ್ರಿಯೊಬ್ಬರ ಅಸ್ತಿಗಳನ್ನು ಜರ್ಮನ್ ಸರಕಾರವು ವಶೀಕರಿಸಿಕೊಂಡಿತು

ಎಷ್ಟು ದಪ್ಪ ಹಿಮವು ಬಿದ್ದರೂ ಕಣ್ಣಿಗೆ ಅಡ್ಡವಾಗದೆ ಬೆಳಕು ಸರಿಯಾಗಿ ತೋರುವಂತೆ ಮಾಡುವ ಯಂತ್ರವನ್ನು ... ಎಂಬವರು ಕಂಡುಹಿಡಿದಿರುವರು

ಸೆರೆ ವಿನ ಪಬ್ಲಿಕ್ ಸ್ಕೂಲ ಮಾಸ್ತರ ಪರಿಷತ್ತಿನಲ್ಲಿ ಪ್ರೊ ಜೇಶ್ ಎಂಬವರ ಭಾಷಣಮಾಡುತ್ತಾ "ಈಗಿನ ದಿನಗಳಲ್ಲಿ ಕೇವಲ ೯೫ ಮಂದಿಗೆ ದೇಹದಂಡನವಾದ ಶಿಕ್ಷಣವೇ ಇಲ್ಲವೆಂದು ಸಾರ್ವಜನಿಕ ಸಭೆಗಳಲ್ಲಿ ಅವರು ... ತಿಳಿಯುತ್ತಿಹೊಂದರು.

ಅಲ್ಲಹಾಬಾದಿನ ಲೀಡರ್ ಪತ್ರಿಕೆಯ ಸಂಪಾದಕರಿಂದ ಸಿ ವೈ ಚಿಂತಾಮಣಿಯವರು ಕೋರ್ಟನ್ನು ಅವಮಾನ ತೀರ್ಪಿನ ಪ್ರಕಟಿಸಿದರೆಂಬ ಅಪವಾದನೆಗೊಳಗಾಗಿ ಶಿಕ್ಷೆಗೊಳಗಾಗಿ ಅಪೀಲಿಗಾಗಿ ಬೇಡಿ ಅಪಯಶಸ್ವಿಗಳಾದರು

ರಷ್ಯದ ಆಲ್ ಯೂನಿಯನ್ ಸೋವಿಯಟ್ ನೆರೆದುಬಂದ ರಷ್ಯದಲ್ಲಿ ಒಂದಕ್ಕೆ ನೂತನ ರಾಜ್ಯಭಾರ ಕ್ರಮಗಳನ್ನು ಪ್ರಚಾರಕ್ಕೆ ತರಬೇಕೆಂದು ತೀರ್ಮಾನಿಸಿದರು.

ಮುಂಬಯಿಯ ಸ್ವೀಸ್ ಕಂಪೆನಿ ಲಿಮಿಟೆಡ್, ಇದನ್ನು ಮುಚ್ಚಿಬಿಡಲಾಗಿದೆ ೨೫ ಲಕ್ಷ ರೂಪಾಯಿ ಸಾಲಮಾಡಿ ದಿವಾಳಿಯಾಗಿದೆ

ಪ್ರಿಯಾದ ಹೊಸ ಚೆನ್ಸಲರರಾದ ಡಾ। ಕರ್ಟ್ ವೊನ್ ಶುಶ್‌ನಿಗ್ಗರು ವಿಯೆನ್ನಾದಿಂದ ಲಂಡನಿಗೆ ಹೋಗಲಿರುವರು

ಅಖಿಲ ಹಿಂದುಸ್ಥಾನದಲ್ಲಿ ಜೊಯಿಂಟ್ ಸಿಲೆಕ್ಟ್ ಕಮಿಟಿಯ ಶಿಫಾರಸುಗಳನ್ನು ನಿಷೇಧಿಸಲಾಯಿತು

೩೧ ತಿಂಗಳುಗಳ ಹಿಂದೆ ಸೈಕಲ್ ಸವಾರಿ ಮಾಡಿ ಮುಂಬಾಯಿಂದ ಲಂಡನಿಗೆ ತೆರಳಿದ ಮೂವರು ಪಾರ್ಸಿ ಯುವಕರನ್ನು ಪ್ರಧಾನ ಸಚಿವರೇ ಮೊದಲಾದವರು ಕಂಡು ಅಭಿನಂದಿಸಿದರು. ಅವರು ಒಟ್ಟು ೧೯,೦೦೦ ಮೈಲು ಸವಾರಿ ಮಾಡಿದರು.

ತನ್ನ ಮಗನು ಸನ್ನಿಪಾತಜ್ವರದಿಂದ ಕಾಲಾಧೀನನಾದುದರ ಸ್ಮರಣಾರ್ಥವಾಗಿ ಕಲ್ಕತ್ತದ ರಾಯ್ ಕೈಲಾಸ ಚಂದ್ರಬಾಸು ಬಹದ್ದೂರರು ಕಾರ್ಮೈಕೆಲ್ ಮೆಡಿಕಲ್ ಕೊಲೇಜ್ ಆಸ್ಪತ್ರೆಯಲ್ಲಿ ಸನ್ನಿಪಾತಜ್ವರ ಪೀಡಿತರಿಗಾಗಿ ಒಂದು ವಾರ್ಡ್ ಕಟ್ಟಿಸುವುದಕ್ಕಾಗಿ ೪೦,೦೦೦ ರೂಪಾಯಿಗಳನ್ನು ಕೊಟ್ಟಿರುವರು

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ – (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ – (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

The Vegetable Soap Works,
Props:—
SAIT N. P. & Co.
CALICUT

Distributors for South Kanara:—
Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯು ವಿನಯನ್ನೇರಿ, ಲೋಕ ದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಡಬ್ಬಿಯೊಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ವಾಸಲು ವಿನಹ ಕಳುಹಿಸಲ್ಪಡುವ ಸಹ್ಯ.
ಕಾಮಶಾಸ್ತ್ರವನ್ನೋದಿರಿ.
Agents—Shah Company, Mangalore,
" Pearl & Sons, Mangalore.
Atank Nigrah Pharmac
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಹೊಂದು, ದೇಶಸೇವೆಯನ್ನು ಮಾಡಬಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶಿಯ ಜೊಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ತೆತ್ತ ಮೂಲಧನ: ರೂ. 3,31,035 ಕ್ಷೇಮನಿಧಿಗಳು: ರೂ. 4,50,000 ಠೇವಣಾತಿಗಳು: ರೂ. 58,62,486

ಆಫೀಸುಗಳು:—ಮಂಗಳೂರು, ಮುಂಬಾಯಿ, (ಪೋರ್ಟ್ ಮತ್ತು ಮಾಂಡ್ವಿ) ಅಲಪ್ಪೆ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ, ಬಂಟವಾಳ, ಹುಬ್ಬಳ್ಳಿ, ಮತ್ತು ಧಾವಣಗೆರೆ.

ಎಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

BUY ADVERTISED GOODS

ಜಂಜಿಬಾರ್ ಮತ್ತು ಪೂರ್ವ ಆಫ್ರಿಕ.

ಆಫ್ರಿಕದಲ್ಲಿರುವ ಭಾರತೀಯನು ಅನಾದಿ ಕಾಲದಿಂದಲೂ ಅಲ್ಲಿ ವ್ಯಾಪಾರ ನಡೆಸುತ್ತಿದ್ದವನು. ತನ್ನ ವ್ಯಾಪಾರದಭಿವೃದ್ಧಿಯ ದೃಷ್ಟಿಯಿಂದ ಅವನು ಎಲ್ಲೆಲ್ಲೂ ತನ್ನ ಅಂಗಡಿಗಳನ್ನು ಸ್ಥಾಪಿಸಿಕೊಂಡಿರುವನು. ಎಲ್ಲೆಲ್ಲಿ ವ್ಯಾಪಾರವು ಸರಾಗವಾಗಿ ನಡೆಯುತ್ತದೋ ಅಲ್ಲಲ್ಲಿ ಅವನಿರುವನು. ತನ್ನಲ್ಲಿರುವ ಆಫ್ರಿಕನ್ ಸಾಮಗ್ರಿಗಳನ್ನು ಪರದೇಶಿಗಳಿಗೆ ಕೊಟ್ಟು ಅವುಗಳ ಬದಲಾಗಿ ಅವರಿಂದ ಹತ್ತಿ ಮೊದಲಾದ ಇತರ ವಸ್ತುಗಳನ್ನು ಪಡೆಯುತ್ತಿದ್ದನು ಹೀಗೆ ವ್ಯಾಪಾರ ನಡೆಸುವಾಗ ಅವನು ಅಸಹನೀಯ ಕಷ್ಟ ನಷ್ಟಗಳನ್ನು ಹೊಂದಿರುವುದೂ ಇದೆ ಆದರೆ ಅವನು ಅವುಗಳೆಲ್ಲವನ್ನು ಅಲಕ್ಷಿಸಿ ಮುಂದರಿದುದು ನನಗಾಶ್ಚರ್ಯಕರವೆಂದು ಕಂಡು ಬರುತ್ತದೆ

ತನ್ನ ವ್ಯಾಪಾರಕ್ಕಾಗಿ ಅವನು ಕಾಡುಗಳ ಬದಿಗಳಲ್ಲಿ ಮಲೇರಿಯಾ ಹಾವಳಿಯು ವಿಪರೀತರಾಗಿರುವ ಪ್ರದೇಶಗಳಲ್ಲಿ—ವಾಸಿಸುತ್ತಿರುವನು ತನ್ನ ಸಾಮಾನುಗಳನ್ನು ಇತರರಿಗೆ ಕೊಟ್ಟು ಇತರರಿಂದ ತನಗೆ ಬೇಕಾಗುವವುಗಳನ್ನು ಪಡೆಯುವ ಸೌಕರ್ಯಕ್ಕಾಗಿ ಮಾತ್ರ ಅವನು ಇಂತಹ ಪ್ರದೇಶಗಳಲ್ಲಿ ವಾಸಿಸುತ್ತಿರುವನು ಎಷ್ಟೋ ಹಿಂದೀಯರು ಜ್ವರ ಪೀಡಿತರಾಗಿ ಸಾಯುತ್ತಾರೆ ಅನೇಕ ಸಲ ಕಾಡು ಮೃಗಗಳು ಅವರಿಗೆ ಹಾನಿಯನ್ನುಂಟುಮಾಡುವುದೂ ಇದೆ ಮೇಲಾಗಿ ದುಷ್ಟರ ಬಾಧೆಯೂ ಕಡಮೆಯಾಗಿಲ್ಲ ಪೋಲೀಸರ ಭದ್ರತೆಯು ತೀರಾ ಕಡಮೆ

ಇಂತಹ ಕಷ್ಟಮಯ ಜೀವನವನ್ನು ನಡೆಸುವುದಾದರೂ ಏಕೆ? ಬರಿಯ ಹೊಟ್ಟೆ ಮತ್ತು ಬಟ್ಟೆಗಾಗಿ ಭಾರತೀಯ ವರ್ತಕರ ಜೀವನಕ್ಷೆನುವೆಂದರೆ ದುರಂತ ಕಷ್ಟಮಯ ಅಂತಹ ದುಃಖವನ್ನು ಬೇರಾವ ಜನಾಂಗಿಕರೂ ಸಹಿಸಲಾರರು ಯಾವ ಯುರೋಪಿಯಾನನೂ ಅದನ್ನು ಎದುರಾಯಿಸಲಾರನು

ಇಷ್ಟಾಗಿ ಮೇಲಾಟಕ್ಕೇನೂ ಕಡಮೆಯಿಲ್ಲ ಭಾರತೀಯ ವರ್ತಕರೊಳಗೆ ಸ್ಪರ್ಧೆಯಿದೆ ಒಬ್ಬೊಬ್ಬನು ಒಂದೊಂದು ರೀತಿಯಿಂದ ತನ್ನ ವ್ಯಾಪಾರವನ್ನು ಉನ್ನತಿಗೊಳಿಸುತ್ತಿರುವನು ವ್ಯಾಪಾರದ ಗುಟ್ಟೆಲ್ಲಾ ಅವರಲ್ಲಿದೆ ತನ್ನ ಸರಕುಗಳಿಗೆ ಹೆಚ್ಚು ಬೆಲೆಯು ದೊರೆತು ತನಗೆ ಎಲ್ಲಿ ಹೆಚ್ಚು ಹತ್ತಿಯು ದೊರೆಯುವುದೆಂದು ಹಿಂದೀಯ ವರ್ತಕನು ಕೂಡಲೇ ತಿಳಿದುಕೊಳ್ಳುವಷ್ಟು ಚತುರನೂ ಸಾಹಸಿಗನೂ ಆಗಿರುತ್ತಾನೆ

ಈ ರೀತಿಯಿಂದ, ಸ್ವತಂತ್ರವಾಗಿ, ಬೇರೆಯವರ ಗೋಜಿಗೆ ಹೋಗದೆ, ತನ್ನ ವ್ಯಾಪಾರ ವಹಿವಾಟುಗಳನ್ನು ವೃದ್ಧಿಸಿಕೊಳ್ಳುವ ಆಶೆಯೊಂದೇ ಅವನನ್ನು ಅಂತಹ ವನಪ್ರದೇಶಗಳಲ್ಲಿ ಜೀವಿಸಿಕೊಂಡಿರಲು ಪ್ರೇರಕವಾಗಿದೆ ಲಾಭಸಂಚಯವು ಅವನ ಉದ್ದೇಶ ಅಂತಹ ಉದ್ದೇಶದ ಸಾಫಲ್ಯವು ಇಲ್ಲಿ ಆಗುವುದರಿಂದಾಗಿ ಅವನು ಇಂತಹ ಭೂಮಿಯಲ್ಲಿ ನೆಲೆಯೂರಿದ್ದಾನೆ

ನನ್ನ ಸಂಚಾರ ವೇಳೆಯಲ್ಲಿ ನಾನು ಈ ಅಂಗಡಿಗಾರರನ್ನೆಲ್ಲ ಕಂಡಿರುವೆನು ಅವರನ್ನು ದುಕಾವಾಲರೆಂದು ಕರೆಯುತ್ತಾರೆ ಪೂರ್ವಾಫ್ರಿಕದಲ್ಲಲ್ಲದೆ ರೋಡೇಸೀಯಾ, ಟ್ರಾನ್ಸ್‌ವಾಲ್, ನ್ಯಾಸಲೇಂಡ್, ಫಿಜಿ ಮೊದಲಾದ ಪ್ರಪಂಚದ ಇತರ ದೇಶಗಳಲ್ಲೂ ಇವರನ್ನು ನಾನು ಕಂಡಿರುವೆನು ಎಲ್ಲರೂ ಒಂದೇ ತರನಾಗಿದ್ದಾರೆ ಈ ವರ್ಗದವರಲ್ಲಿ ಹಲವು ಗುಣಾತಿಶಯಗಳಿವೆ ಅವುಗಳಲ್ಲಿ ವಿಶಿಷ್ಟವೆಂದರೆ—ಅತಿಥಿಸತ್ಕಾರ ಸತ್ಕಾರ ಮಾಡುವುದೆಂದರೆ ಅವರಿಗೆ ಕೊಟ್ಟಷ್ಟು ಸಾಲದು ನಾನು ಅವರ ಅಂಗಡಿಗಳಲ್ಲಿ ಕುಳಿತು ಆಯಾಸವನ್ನು ಪರಿಹರಿಸುತ್ತಿದ್ದಾಗ, ನಡೆಯುತ್ತಿದ್ದ ವ್ಯಾಪಾರ ಸಾಮಾರವನ್ನು ಕಂಡಿರುವೆನು. ಅವರು ಮಾಡುವ ವ್ಯಾಪಾರ ಕ್ರಮವನ್ನೂ ನೋಡಿರುವೆನು

ಅಲ್ಲಿ ನಾನು ಕಂಡು ಹಿಡಿದ ವಿಷಯಗಳಲ್ಲಿ ಒಂದೇನೆಂದರೆ—ಭಾರತೀಯರಿಗೂ ಆಫ್ರಿಕನರಿಗೂ ಇರುವ ಪರಸ್ಪರ ಮೈತ್ರಿ ಹಿಂದೀಯನ ಅಂಗಡಿಯಲ್ಲಿ ಆಫ್ರಿಕನನು ವ್ಯಾಪಾರ ಮಾಡುತ್ತ, ಮಾತನಾಡುತ್ತ ಹಿಂದೀಯನೊಡನೆ ಪ್ರೇಮಪೂರ್ವಕವಾಗಿ ನುಡಿಯುತ್ತಿರುವುದನ್ನು ನೋಡಬಹುದು ಅಂಗಡಿಯಲ್ಲಿ ಕುಳಿತು ಆಫ್ರಿಕನರು ಹಿಂದೀಯರೊಡನೆ ಮಿತ್ರರಂತೆ ಮಾತುಕತೆ ನಡೆಸುವುದೂ, ಬಹು ಹೊತ್ತಾದ ಮೇಲೆ ಸಣ್ಣ ಸಣ್ಣ ವ್ಯಾಪಾರಗಳನ್ನು ಮಾಡುವುದೂ ಎಲ್ಲೆಲ್ಲಿಯೂ ಕಂಡು ಬರುವುದು ಯಾವಾಗಲಾದರೂ ಈ ಅಂಗಡಿಗಾರರೊಡನೆ ಯಾವ ಆಫ್ರಿಕನರೂ ಒಮ್ಮೆಯಾದರೂ ಜಗಳವಾಡಿದುದನ್ನು ನಾನು ಕಂಡಿಲ್ಲ

ಜಂಜಿಬಾರ್ ಮತ್ತು ಆಫ್ರಿಕಗಳಲ್ಲಿರುವ ಹಿಂದೀಯರು. ಅಲ್ಲಿಯ ಯುರೋಪಿಯನ್ ಸರಕಾರಗಳ ಕುಟಿಲರೀತಿಯ ಸಂಕಷ್ಟಕ್ಕೀಡಾದುದರ ಸಂಗತಾರುವಾಗಿ ಭಾರತೀಯರು ಚಳವಳಿಸಿದರು. ಇದರಿಂದಾಗಿ ೧೯೨೪ರ ಆಗೋಸ್ತು ಆರಲ್ಲಿ ಶ್ರೀ ಕೆ. ಪಿ. ಎಸ್. ಮೆನನ್ ಐ. ಸಿ. ಎಸ್. ಇವರನ್ನು ಇಂಡಿಯಾ ಸರಕಾರವು ವಿಚಾರಣೆಗಾಗಿ ಜಂಜಿಬಾರಿಗೆ ಕಳುಹಿಸಿತು ಶ್ರೀಯುತರು ಅಲ್ಲಿಗೆ ತೆರಳಿ, ಅಲ್ಲಿಯ ಹಿಂದೀಯರು ಅಲ್ಲಿಯ ಸರಕಾರಗಳಿಂದ ಬಾಧಿಸಲ್ಪಡುತ್ತಿದ್ದುದನ್ನು ಕಂಡು ವರದಿಯನ್ನು ಬರೆದುಕೊಂಡು ಹಿಂದೆ ಬಂದರು. ಇದೇ ... ರಲ್ಲಿ ಪ್ರಕಟವಾದ ಅವರ ವರದಿಯಲ್ಲಿ ಅವರು 'I feel constrained to remark that the cumulative effect of the recent Zanzibar legislation is the squeezing out of the native of India from regions in which he has established himself under every security of public health' ಎಂದುವಾಸ್ತವ ಸ್ಥಿತಿಯನ್ನು ನಿದರ್ಶಿಸ್ಸಿರುವರು. ಜಂಜಿಬಾರ್ ಮತ್ತು ಪೂರ್ವ ಆಫ್ರಿಕಗಳಲ್ಲಿರುವ ಹಿಂದೀಯರ ಸಕಲ ಸುಖದುಃಖಗಳನ್ನರಿತಿರುವ ದೀನಬಂಧು ಸಿ. ಎಫ್. ಎಂಡ್ರೂಸರು 'ಮೋಡರ್ನ್ ರಿವ್ಯೂ'ನಲ್ಲಿ ಹೀಗೆ ಬರೆದಿರುವರು ಸಂ. ಸ್ವ.

ಜಂಜಿಬಾರ್—ಪರಿಚಯ.

ಜಂಜಿಬಾರ್ ಬ್ರಿಟಿಷ್ ರಕ್ಷಣೆಗೆ ಒಳಪಟ್ಟ ದ್ವೀಪ ಸಮುದಾಯ ಜಂಜಿಬಾರ್ ಎಂಬುದೊಂದು ದೊಡ್ಡ ದ್ವೀಪ ಪೆಂಬ ಎಂಬುದು ಮತ್ತೊಂದು ದ್ವೀಪ ಜಂಜಿಬಾರ್ ದ್ವೀಪವು ೬೪೦ ಚದರ ಮೈಲುಗಳ ವಿಸ್ತೀರ್ಣವುಳ್ಳದ್ದಾಗಿದೆ. ಪೆಂಬ ದ್ವೀಪವು ೩೮೦ ಚದರ ಮೈಲುಗಳ ವಿಸ್ತಾರವುಳ್ಳುದು ೧೯೩೧ನೆಯ ಜನಗಣತಿಯಂತೆ ಅಲ್ಲಿ ಒಟ್ಟು ೨೩೫೪೨೮ ಪ್ರಜೆಗಳಿದ್ದಾರೆ ಅವರಲ್ಲಿ ೧೮೬೪೬೭ ಮಂದಿ ಆಫ್ರಿಕನರು ೩೩೪೦೧ ಮಂದಿ ಅರಬೀಯರು ೧೫೨೪೭ ಮಂದಿ ಭಾರತೀಯರು ಈ ಹಿಂದೀಯರಲ್ಲಿ ಬಹುಮಂದಿ ಅಲ್ಲೇ ವಾಸಿಸುತ್ತಿರುವರು ಜಂಜಿಬಾರ್‌ನಲ್ಲಿ ಒಬ್ಬ ಸುಲ್ತಾನರಿದ್ದಾರೆ ಬ್ರಿಟಿಷ್ ರೆಸಿಡೆಂಟರೊಬ್ಬರಿದ್ದಾರೆ ಸುಲ್ತಾನರ ಸಹಾಯಕ್ಕಾಗಿ ಮಂತ್ರಿಮಂಡಲವೊಂದಿದೆ ೬ ಮಂದಿ ಇತರ ಅಧಿಕಾರಿಗಳಿದ್ದಾರೆ ಶಾಸನಸಭೆಯೂ ಉಂಟು ೧೫ ಮಂದಿ ಸದಸ್ಯರಲ್ಲಿ ಇಬ್ಬರು ಭಾರತೀಯರು ತಾ ೧೬—೬—೩೪ನೆಯ ದಿನ ಅಲ್ಲಿನ ಸರಕಾರವು ಜಂಜಿಬಾರಿನ ಹಿಂದೀಯರ ಪತನಕ್ಕೋ ಎಂಬಂತೆ ೬ ಶಾಸನಗಳನ್ನು ಹೂಡಿತು ಇವುಗಳಿಂದಾಗಿ ಅಲ್ಲಿಯ ಭಾರತೀಯರು ಬಹಳ ಕಷ್ಟಕ್ಕೊಳಗಾದರು

ಇದನ್ನು ನಾನು ಕಂಡಿರುವೆನು ಇದು ಸತ್ಯವೆಂದು ನನಗೆ ಕಂಡುಬಂದಿದೆ

ಎಷ್ಟೋ ಬಾರಿ ಯುರೋಪಿಯಾನನ ಅಂಗಡಿಯಲ್ಲಿ ಈ ರೀತಿ ಮಾತುಕತೆಗಳನ್ನು ಆಫ್ರಿಕನನು ಹೇಳಿ ಕಡೆಗೆ ಅತ್ಯಲ್ಪವಾದ ವ್ಯಾಪಾರವನ್ನು ಮಾಡಿದರೆ ಅವನು ಆಗ ಕ್ರೋಧಪರವಶನಾಗಿ ಬಿಡುವನು ಭಾರತೀಯನು ಮಾತ್ರ ಈ ರೀತಿಯ ಅಲ್ಪಸ್ವಲ್ಪವಾದ ವ್ಯಾಪಾರಗಳನ್ನೂ, ವ್ಯಾಪಾರಕ್ಕೆ ಬಂದವರ ಪರಿಹಾಸ್ಯಗಳನ್ನೂ ಸಂತೋಷಚಿತ್ತದಿಂದಲೇ—ಸೈರಣೆಯಿಂದಲೇ—ಸ್ವೀಕರಿಸುತ್ತಾನೆ ಭಾರತೀಯನಿಗೆ ಆಫ್ರಿಕನರ ಭಾಷೆಯ ಪರಿಚಯವೂ ಅಲ್ಪಸ್ವಲ್ಪವಿದೆ ತನ್ನ ಕ್ರಮಕ್ಕನುಸಾರವಾಗಿ, ಅವನು ಆ ಭಾಷೆಯನ್ನುಪಯೋಗಿಸಿ ಅಲ್ಲಿಯವರೊಡನೆ ಮಾತನಾಡುತ್ತಾನೆ ಹೀಗಿದ್ದರೂ ಅಲ್ಲಿ ಪರಸ್ಪರ ವೈಷಮ್ಯವಿರುವುದಿಲ್ಲ ಭಾರತೀಯನೂ ಆಫ್ರಿಕನನೂ ಅಷ್ಟೊಂದು ಮೈತ್ರಿಯಿಂದಿರುತ್ತಾರೆ ಆದರೆ ಯುರೋಪಿಯಾನನ ಭಯವು ಎಲ್ಲೆಲ್ಲೂ ಇದೆ ಹಲಕೆಲವು ಮಿಶನರಿಗಳೊಡನೆ ಭಾರತೀಯನು ಪ್ರೀತಿಯಿಂದ ನುಡಿಯಲು ಸಾಧ್ಯವಲ್ಲದೆ ಸಾಮಾನ್ಯ ಯುರೋಪಿಯಾನನೊಡನೆ ಹಿಂದೀಯನು ಮಾತನಾಡುವುದೆಂದರೆ ವಿಚಿತ್ರ ವಿಷಯವಾಗಿದೆ

ಈ ವಿಷಯವು ಅತ್ಯಂತ ಗಹನವಾಗಿದೆ ಪೂರ್ವಾಫ್ರಿಕದಲ್ಲಿ ಎಲ್ಲಾ ಭೇದಭಾವಗಳ ಮೂಲವು ಇದರಲ್ಲಡಗಿಕೊಂಡಿದೆ ಭಾರತೀಯನಲ್ಲಿ ಹಲವು ಕುಂದು ಕೊರತೆಗಳಿರಬಹುದು ಅವನಲ್ಲಿ ದ್ರವ್ಯಾಶೆಯು ಹೆಚ್ಚಾಗಿರಬಹುದು ಅವನು ಆಫ್ರಿಕನನ ಅಜ್ಞಾನದ ಸತ್ಪ್ರಯೋಜನವನ್ನು ಮಾಡಿಕೊಂಡಿರಬಹುದು. ಆದರೆ ದ್ವೇಷದ ರೂಢಿಯು ಆಫ್ರಿಕನರಲ್ಲಿರುವುದಿಲ್ಲ ಯುರೋಪಿಯಾನನೊಡನಾದರೆ ಆ ಮಾತೇ ತಿರುಗು ಮುರುಗು ಆಫ್ರಿಕನನೊಡನೆ ಹಿಂದೀಯನು ಪೂರ್ಣ ಪ್ರೇಮಪುರಸ್ಸರ ಭಾವದಿಂದಲೇ ಆಚರಿಸುತ್ತಾನೆ. ಅನೇಕ ದೇಶಗಳಲ್ಲಿ

ಒಂದು ಸಣ್ಣ ಉದಾಹರಣೆಯನ್ನು ಕೊಡುವೆ ರೊಡೇಸಿಯಾದ ಎರಿಕ್ಸ್‌ಡರ್ನ್ ಎಂಬಲ್ಲಿ ನನ್ನ ಸಂಚಾರವೇಳೆಯಲ್ಲಿ ನಾನು ಅಲ್ಲಿಯ ಶ್ರೀ ದೇಸಾಯಿಯವರ ಅಂಗಡಿಗೆ ಹೋಗಿದ್ದೆ ಅಲ್ಲಿ ಇತರ ಐದು ಮಂದಿ ಹಿಂದೀಯರ ಅಂಗಡಿಗಳೂ ಇದ್ದುವು ನಾವು ಒಂದು ಸಣ್ಣ ಸಭೆಗೂಡಿಸಬೇಕೆಂದು ನಿರ್ಧರಿಸಿದೆವು ಅದರಲ್ಲಿ ಹಿಂದೂದೇಶದಲ್ಲಿನ ಭೂಕಂಪ ವಿಚಾರ, ಮಹಾತ್ಮಾಜೀಯವರ ತಳವಳದ ವಿಚಾರ ಹೇಳುವುದೆಂದು ನಿಶ್ಚೈಸಿದೆನು. ದೇಸಾಯಿಯವರ ಅಂಗಡಿಯೊಳಗೆ ತುಂಬಾ ಜನರಿದ್ದರು ಸಭೆಗೆ ತೆರಳಿದ್ದ ದೇಸಾಯಿಯವರು ಅಂಗಡಿಯನ್ನು ಮುಚ್ಚಲಿದ್ದಾಗ ಒಳಗಿದ್ದವರನ್ನು ಹೊರಗೆ ಹೋಗಬೇಕೆಂದು ಕೇಳಿಕೊಂಡರು ಒಡನೆ ಯಾವ ಅಡ್ಡಿಯೂ ಇಲ್ಲದೆ ಎಲ್ಲರೂ ಅಂಗಡಿಯ ಹೊರಗಾದರು ದೇಸಾಯಿಯವರು ಬಾಗಿಲು ಮುಚ್ಚಿದರು ಸಭೆಯು ಮುಕ್ತಾಯವಾಯಿತು ದೇಸಾಯಿಯವರು ಪುನಃ ಅಂಗಡಿಯ ಬಾಗಿಲು ತೆರೆದರು ಕೂಡಲೇ ಮೊದಲು ಹೊರಗಿದ್ದ ಜನರೆಲ್ಲ ಪುನಃ ಅವರ ಅಂಗಡಿಯನ್ನು ಹೊಕ್ಕು ನಗುತ್ತಾ, ನುಡಿಯುತ್ತಾ ಸಿಕ್ಕಿ ಸಿಕ್ಕಿದುದರ ಬೆಲೆಯನ್ನು ಕೇಳಲಾರಂಭಿಸಿದರು ದೇಸಾಯಿಯವರು ಬಾಗಿಲ ಮುಚ್ಚುವಾಗ ಅಲ್ಲಿದ್ದವರೆಲ್ಲರೂ ಅವರು ಬಾಗಿಲು ತೆರೆಯುವಾಗಲೂ ಅಲ್ಲಿದ್ದರು

ಈ ರೀತಿ ನಿರ್ಭಯವಾಗಿ, ನಿರ್ವಂಚಕರಾಗಿ ಪರಸ್ಪರ ಪ್ರೇಮದಿಂದ ನಡೆಯುವುದೇ ಮಾನವನ ಅಮೂಲ್ಯ ಭಂಡಾರ ದೇಸಾಯಿಯವರೊಡನೆ ನಾನು ವಿಚಾರಿಸಿದ್ದಲ್ಲಿ ಅಲ್ಲಿ ವ್ಯಾಪಾರವು ಇದೇ ರೀತಿ—ಜನರ ಇಚ್ಛಾನುಸಾರ ದಿನಾಲೂ ನಡೆಯುತ್ತದೆಂದೂ, ಹೆಚ್ಚಿನವರು ವಸ್ತುಗಳನ್ನು ಕಂಡು ಕೇಳಿಯೇ ಹೋಗುವುದು ಅಲ್ಲಿಯ ಪದ್ಧತಿಯೆಂದೂ ತಿಳಿಸಿದರು ಕತ್ತಲಾಗುವ ವರೆಗೂ ಹೀಗೆಯೇ ನಡೆಯುವುದಿದೆಯಂತೆ ಆದರೆ ತನಗೇನೂ ಬಾಧಕವಾಗುವುದಿಲ್ಲವೆಂದು ಅವರು ನನಗೆ ತಿಳಿಸಿದರು ಅಲ್ಲಿಯ ಕ್ರಮವೇ ಅದಾಗಿ ಬಿಟ್ಟಿದೆ ಆದರೆ ಯುರೋಪಿಯಾನನು ಈ ರೀತಿಯ ವ್ಯಾಪಾರ ನಡೆಸುವಷ್ಟು ತಾಳ್ಮೆಯನ್ನು ಹೊಂದಿರುವನೇ?

ಆಫ್ರಿಕದ ನನ್ನ ಮೊನ್ನಿನ ಸಂಚಾರದಲ್ಲಿ ನನಗೆ ಸ್ವಲ್ಪ ಖೇದಕರವಾಗಿ ಕಂಡು ಬಂದುದೆಂದರೆ—ಮೇಲೆ ಹೇಳಿದ ಪ್ರತಿಯೊಂದು ವ್ಯಾಪಾರವೂ ಅಧೋಮುಖವಾಗಿ ನಡೆಯುತ್ತದೆ

ಜಂಜಿಬಾರ್

ವಿಶ್ವವ್ಯಾಪಿಯಾದ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಜಂಜೀಬಾರಿನ ಲವಂಗದ ಕ್ರಯವು ಬಿದ್ದುಹೋಗಿದೆ ಭಾರತೀಯ ಮಧ್ಯಸ್ಥನು ಲವಂಗ ಕೃಷೀವಲರಿಗೆ ಸಹಾಯರೂಪದಿಂದ ಹೇರಳ ದ್ರವ್ಯವನ್ನು ಮುಂಗಡವಿತ್ತಿರುವನು ಹೀಗೆ ಅವನು ಹಣವನ್ನು ಕೊಡುತ್ತ ಬಂದುದರಿಂದ ಅವನೀಗ ದಿವಾಳಿಖೋರನಂತಾಗಿದ್ದಾನೆ ಈ ವೇಳೆ ಸರಕಾರವು ಬುದ್ಧಿ ಪೆಚ್ಚ ಮಾಡಿ ಎರಡು ಕಮಿಶನ್‌ಗಳನ್ನು ಸ್ಥಾಪಿಸಿತು.

ಒಮ್ಮೆ ಹಿಂದೀಯ ಸಿವಿಲ್ ಸರ್ವಿಸಿನಲ್ಲಿದ್ದ ಮಿ। ಸಿ. ಎಫ್. ಸ್ಟ್ರಿಕ್‌ಲೇಂಡ್ ಎಂಬವರನ್ನು ಕರೆದು ಜಂಜಿಬಾರ್ ಸರಕಾರವು ಅವರ ಸಲಹೆಗಳನ್ನು ಕೇಳಿತು ಅವರು ಎಲ್ಲವನ್ನೂ ವಿಚಾರಿಸಿ ಸರಕಾರದ ಗುತ್ತಿಗೆಗಳಿಂದಾಗುವ ಹಾನಿಯನ್ನು ತಿಳಿಸಿ ಎಚ್ಚರವಿತ್ತರು. ಅವರು ಸಹಕಾರ ಸಂಘಗಳ ಮೂಲಕ ವ್ಯಾಪಾರವನ್ನು ನಡೆಸುವ ಯೋಜನೆಯನ್ನು ಕಲ್ಪಿಸಿಕೊಟ್ಟರು ಈ ಕ್ರಮವನ್ನು ಹಿಂದೀಯ ವ್ಯಾಪಾರಿಯು ಸ್ವೀಕರಿಸಿದನು

ಪುನಃ ಎರಡನೆಯ ಕಮಿಶನ್ ಬಂತು ಅದರ ಪ್ರತಿನಿಧಿಗಳಾದ ಮಿ। ಬಾರ್ಲೆಟ್ ಮತ್ತು ಮಿ। ಲಾಸ್ ಎಂಬವರು ಸ್ಟ್ರಿಕ್‌ಲೇಂಡರ ಸಲಹೆಗಳನ್ನು ರದ್ದುಗೊಳಿಸಿ ಜಂಜಿಬಾರ್ ಸರಕಾರವನ್ನು ಪುನಃ ಮೊದಲಿನ ದಾರಿ ಹಿಡಿಸಿದರು

ಈಗ ಅಲ್ಲಿನ ಸಾಮಾನ್ಯ ಹಕ್ಕುಗಳು ಕೈಯಿಂದ ಜಾರಿ ಹೋಗುವಂತಾಗಿವೆ ಹಿಂದೀಯರಿಗೆ ಲವಂಗ ಕೃಷಿಗಾಗಿ ಭೂಮಿಯು ಕೊಡಲ್ಪಡುವುದಿಲ್ಲ ನೂರು ವರ್ಷಗಳಿಂದಿದ್ದ ಅವರ ಹಕ್ಕು ಹೋಗುವಂತಾಗಿದೆ ರೆಸಿಡೆಂಟರ ಅಪ್ಪಣೆ ವಿನಹ ಭೂಮಿ ಪಡೆಯಲಾಗದು ಮತಬದ್ಧವಾದ ಈ ಶಾಸನದಿಂದ ಪೂರ್ಣ ಹಕ್ಕೇ ಹೋಗಿರುತ್ತದೆ ಮಾರ್ಕೆಟುಗಳನ್ನೆಲ್ಲ ಯುರೋಪಿಯಾನರೆ ಪಡೆಯುತ್ತಿರುವರು, ಎಲ್ಲವೂ ಆಫ್ರಿಕನರ ಹಿತಕ್ಕಾಗಿಯಂತೆ ಈ ರೀತಿ ಮುಂದರಿದರೆ ಹಿಂದೀಯನು ಅಲ್ಲಿಂದ ಹೊರಡಲೇ ಬೇಕು

ಈ ಶಾಸನವು ಜ್ಯಾರಿಗೆ ಬಂದಂದಿನಿಂದ ಅದರ ದುಷ್ಪರಿಣಾಮಕ್ಕೆ ಪ್ರಾರಂಭವಾಗಿದೆ ಹಿಂದೂದೇಶಕ್ಕೆ ಹೋಗುವ ಸ್ಟೀಮರುಗಳ ಹೊರಭಾಗದಲ್ಲೂ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿದೆ ಕಳೆದ ಆರು ವರ್ಷಗಳಿಂದ ಕೆನ್ಯಾದಲ್ಲಿ ೬೦೦೦ ಜನರು ಕಡಮೆಯಾದರು ಭಾರತೀಯರ ಸಂಖ್ಯೆಯು ಅಲ್ಲಿ ಹೆಚ್ಚುವ ಬದಲು ೪೦೦೦೦ದಿಂದ ೩೪,೦೦೦ಕ್ಕೆ ಬಂದು ನಿಂತಿದೆ ಇನ್ನೂ ಇಳಿಮುಖವಾಗುತ್ತಾ ಹೋಗುತ್ತಿದೆ ಎಲ್ಲಾ ಪ್ರದೇಶಗಳಲ್ಲೂ ಈ ಗುತ್ತೆಯ ಅಧಿಕಾರವು ಯುರೋಪಿಯಾನರಿಗಾದಂತೆ ಭಾರತೀಯರ ಸಂಖ್ಯೆಯೂ ಕಡಮೆಯಾಗಲಿದೆ

ಉಗಾಂಡಾ, ಜಂಜಿಬಾರ್ ಮತ್ತು ಟೆಂಗನಿಯಾಕಗಳಲ್ಲಿ ಈ ಶಾಸನಗಳು ಪ್ರಚಾರದಲ್ಲಿವೆ ಕೆನ್ಯದಲ್ಲೂ ಬೇಗನೇ ಬರಲಿವೆ.

ಎಲ್ಲಾ ನವನವು ಆಫ್ರಿಕನರ ಹಿತಚಿಂತನೆಯ ಮೇಲೆ ನಿಂತಿದೆ ಯುರೋಪಿಯಾನರು ತಾವು ಮಾಡುವುದೆಲ್ಲ ಆಫ್ರಿಕನರ ಹಿತದೃಷ್ಟಿಯಿಂದೆನ್ನುತ್ತಿರುವರು ಆದರೆ ಆಫ್ರಿಕನನು ನುಡಿಯುತ್ತಿಲ್ಲ ಅವನಿಗೆ ಧ್ವನಿಗೊಡುವ ಅಧಿಕಾರವೇ ಇಲ್ಲ ಆದರೂ ಎಲ್ಲವೂ ಆಫ್ರಿಕನರ ರಕ್ಷಣೆಗಾಗಿ ಎಂದು ಪ್ರತಿವಾದ.

ಭಾರತೀಯರೆಲ್ಲ ಯುರೋಪಿಯಾನರ ವರ್ಣದ್ವೇಷಕ್ಕೆ ಬಲಿಯಾಗಿದ್ದಾರೆ ಆರ್ಥಿಕ ಸಂಕಷ್ಟಕ್ಕೆ ಭಾರತೀಯರೇ ಕಾರಣವೆಂದು ವಾದಿಸುವುದು ಸುಲಭವಾಗಿದೆ ಒಂದು ಕಾಲದಲ್ಲಿ ಬೀಳುತ್ತಾ ಬಂದ ವರ್ಣದ್ವೇಷವು ಈಗ ಪ್ರಬಲವಾಗುತ್ತಲಿದೆ ಆಫ್ರಿಕನರ ಕೂಡಾ ಹಿಂದೀಯರನ್ನು ದ್ವೇಷಿಸುವ ಪಾಠವಾಗುತ್ತಲಿದೆ ಅರ್ಥೀಯನಿಗಂತೂ ಅದೆ ಪಾರವನ್ನು ಕೊಡಲಾಗುತ್ತದೆ

ಮೊಸ್ಕೊವಿನಲ್ಲಿ ರೈಲು ಧಕ್ಕೆ ಹೊಡೆಯಿತು! ೧೮ ಮಂದಿಗಳ ಮರಣ!

ಸೈನ್ಯದ ಗುಟ್ಟನ್ನು ಜರ್ಮನಿಯಲ್ಲಿ ಬಿಟ್ಟುದಕ್ಕಾಗಿ ಫಾಶಿಶಿಕ್ಷೆ!

ಐಸ್‌ಲೇಂಡಿನಲ್ಲಿ ಹಡಗು ಮುಳುಗಿ ಪ್ರಾಣ ನಾಶ!

ಬರ್ಲಿನ್, ಫೆಬ್ರವರಿ ತಾ. ೯

ಸೈನ್ಯ ಸಂಬಂಧವಾದ ರಹಸ್ಯಗಳನ್ನು ರದ್ದುಗೊಳಿಸಿದುದಕ್ಕಾಗಿ ಜರ್ಮನಿಯಲ್ಲಿ ಕರ್ಟ್ ಬೋಹೆನ್ ಮತ್ತು ಎರಿಕ್ ಬರ್ಗ್ ಎಂಬಿಬ್ಬರನ್ನು ಕಳೆದ ವರ್ಷ ಅಲ್ಲಿಯ ಪೀಪಲ್ಸ್ ಕೋರ್ಟು ಮರಣಾಂತ ಶಿಕ್ಷೆಗೆ ಗುರಿಪಡಿಸಿದ್ದಿತು. ಇವರಿಬ್ಬರನ್ನೂ ಈ ದಿನ ಗಲ್ಲಿಗೇರಿಸಲಾಯಿತು. ಅಪರಾಧಿಗಳಿಗೆ ಮಾಫಿ ಕೊಡುವ ಅಧಿಕಾರವು ಹರ್ ಹಿಟ್ಲರರಿಗೆ ಬಂದಿದ್ದರೂ, ಅವರು ಮಾಫಿ ಬಿಡಲಿಲ್ಲ. ಈ ರೀತಿ ಶಿಕ್ಷಿಸಲ್ಪಟ್ಟವರ ಹೆಸರುಗಳನ್ನು ಪ್ರಕಟಿಸಿರುವುದು ಇದೇ ಮೊದಲು.

ರೋಮ್, ಫೆಬ್ರವರಿ ತಾ. ೯

ಕಳೆದ ವಾರ ನಡೆದ ಎಂಗ್ಲೋ-ಫ್ರೆಂಚ್ ವಿಮಾನ ಒಪ್ಪಂದದ ಕುರಿತು ವಿದೇಶೀಯ ಸಚಿವರಾದ ಸರ್ ಜೋನ್ ಸೈಮನರು ಬ್ರಿಟಿಷ್ ಚೇಂಬರ್ ಒಫ್ ಕೊಮರ್ಸ್‌ನಲ್ಲಿ ಭಾಷಣ ಮಾಡುತ್ತಾ "ಇಂಗ್ಲಾಂಡು ಮತ್ತು ಫ್ರಾನ್ಸುಗಳು ಶಾಂತಿಗಾಗಿ ಸಾಧಿಸುತ್ತಿವೆ. ಈ ವಿಷ್ಯ ಯಾರೂ ಸಂದೇಹಗೊಳ್ಳುವುದನವಶ್ಯಕ. ಪ್ರತಿಯೊಂದು ರಾಷ್ಟ್ರವೂ ನಮ್ಮೊಡನೆ ಸಹಕರಿಸಿ ನಡೆದು ನಮ್ಮ ಕಾರ್ಯವನ್ನು ಯಶಸ್ವಿಯನ್ನಾಗಿ ಮಾಡಬೇಕು" ಎಂದು ಹೇಳಿದರು. ಈ ಆಹ್ವಾನವು ಜರ್ಮನಿಗೆಂದು ಅಲ್ಲಿಯ 'ಟೈಮ್ಸ್' ಪತ್ರಿಕೆಯು ಹೇಳಿರುತ್ತದೆ. ಜರ್ಮನಿಯ ಉತ್ತರವು ಬಂದಿರುವುದಿಲ್ಲ.

ವಿಯೆನ್ನಾ, ಫೆಬ್ರವರಿ

ಕೋವಿನ ಮಾಜಿ ಒಸ್ಟ್ರಿಯನ್ ಮಿನಿಸ್ಟರರಾಗಿದ್ದ ಡಾ। ಎಂಟೋನ್ ರಿಂಟೆಲಿನ್ ಎಂಬವರನ್ನು ಕೋರ್ಟಿನಲ್ಲಿ ವಿಚಾರಣೆ ಮಾಡಲಿರುವರು. ಒಸ್ಟ್ರಿಯಾದ ಚೆನ್ಸಲರಾದ ಡಾ। ಡೋಲ್ಫಸರನ್ನು ಕೊಲೆ ಮಾಡಿದೊಡನೆ ನಾಜಿಗಳು ರಿಂಟೆಲಿನ್‌ರವರನ್ನು ಚೆನ್ಸಲರ್ ಪದವಿಗೇರಿಸಲು ಯತ್ನಿಸಿದರು. ಆದುದರಿಂದ ಇವರು ಒಳಸಂಚು ನಡೆಸಿರಬಹುದೆಂಬ ಊಹೆಯಾಗಿ ವಿಚಾರಣೆಯಾಯಿತು. ಸಾಕ್ಷಿಗಳು ದೊರತವು. ರಿಂಟೆಲಿನರನ್ನು ಸೆರೆ ಹಿಡಿದರು. ಇವರ ವಿಚಾರಣೆಯು ಮಾರ್ಚ್ ತಾರೀಕು ೩ಕ್ಕೆಂದು ನಿರ್ಧರಿಸಲ್ಪಟ್ಟಿದೆ.

ರೋಯಿಟರ್ ಜಾವಿಕ್, ಫೆಬ್ರವರಿ ತಾ ೧೦

ಐಸ್‌ಲೇಂಡಿನ ಸಮುದ್ರದಲ್ಲಿ ನಡೆಯುತ್ತಿದ್ದ 'ಲೇಂಗ್‌ನೆಸ್' ಹಡಗದಲ್ಲಿದ್ದ ೧೩ ಜನರು ಅದರೊಡನೆ ಮುಳುಗಿದರು. ಕೆಲವು ದಿನಗಳ ತನಕ ಹಡಗವು ಕಾಣೆಯಾಯಿತು. ಒಡನೆ ಸಂಶೋಧನೆಗಾಗಿ ಪಡೆಗಳು ಹೊರಟು ನಿಷ್ಫಲವಾಯಿತು. ಕಡೆಗೆ, ಮುಳುಗುತ್ತಿದ್ದ ಹಡಗವು ಮತ್ತೊಂದು ಸ್ಟೀಮರಿಗೆ ಕಳುಹಿಸಿದ ಅಂತ್ಯವಾರ್ತೆಯನ್ನು ಕೇಳಿದ ಮೇಲೆ ಆ ಹಡಗವು ಸಮುದ್ರ ಪಾಲಾದುದು ನಿಜವೆಂದು ತಿಳಿಯಲಾಯಿತು.

ಮುಂಬಾಯಿ ಫೆಬ್ರವರಿ ತಾ ೧೦

ಇಲ್ಲಿ ಶ್ರೀ। ಕೆ ಎಫ್ ನರಿಮಾನರು ತನ್ನ ಮೋಟರಿನ ಲೈಸೆನ್ಸನ್ನು ಪುನರುಜ್ಜೀವಿಸದೆ, ಸರಕಾರವು ತನ್ನಿಚ್ಛೆ ಪ್ರಕಾರ ಹೆಚ್ಚಿನ ಫೀಸನ್ನು ಪಡೆಯಲು ಅಧಿಕೃತವಾಗಿಲ್ಲವೆಂದೂ ನ್ಯಾಯವಿಧಾಯಕ ಸಭೆಯ ಒಪ್ಪಣೆ ವಿನಹ ಹೇರಿಸಲಾಗುವ ಕಂದಾಯವು ನಿಷೇಧಿತವಾಗಿದೆಯೆಂದೂ ಒನರರಿ ಮೆಜಿಸ್ಟ್ರೇಟರೊಡನೆ ವಾದಿಸಿದರು. ಸರಕಾರದ ವರ್ತನೆಯನ್ನು ತಾನು ಪ್ರತಿಭಟಿಸುವೆನೆಂದು ಶ್ರೀ। ನರಿಮಾನರು ತಿಳಿಸಿರುವರು.

ಮುಂಬಾಯಿ ಫೆಬ್ರವರಿ ೭

ದಕ್ಷಿಣಾಫ್ರಿಕದಲ್ಲಿ ಇಂಡಿಯಾ ಸರಕಾರದ ಏಜಂಟರಾಗಿದ್ದ ಕನ್ವಾರ್ ಸರ್ ಮಹಾರಾಜ ಸಿಂಗರು 'ಕರಂಜಿಯಾ' ಸ್ಟೀಮರಿನಲ್ಲಿ ಇಲ್ಲಿಗೆ ತಲಪಿದರು. ದಕ್ಷಿಣಾಫ್ರಿಕದಲ್ಲಿ ಈಗೀಗ ಹಿಂದೀಯರೊಳಗೂ ಯುರೋಪಿಯಾನರೊಳಗೂ ಸ್ನೇಹಾಚಾರ ನಡೆಯುತ್ತಿದೆಯೆಂದೂ ಸರಕಾರವು ಕೂಡಾ ಈ ಮಟ್ಟಿಗೆ ಯತ್ನಿಸುತ್ತಿದೆಯೆಂದೂ ತಿಳಿಸಿದರು. ದಕ್ಷಿಣಾಫ್ರಿಕ ಸರಕಾರವು ಹಿಂದೀಯರಿಗೆ ಗ್ರೇಂಟುಗಳನ್ನು ಕೊಟ್ಟಿರುತ್ತದೆಂದೂ ತಿಳಿಸಿದರು.

ನ್ಯೂಡಿಲ್ಲಿ ಫೆಬ್ರವರಿ ತಾ ೧೧

ಶ್ರೀ ಸತ್ಯನಾರಾಯಣ ಸಿಂಹರವರು ಒಂದು ಠರಾವನ್ನು ಎಸೆಂಬ್ಲಿಯ ಮುಂದಿಟ್ಟು "ಸರಕಾರವು ಸಯಾಮ್ ಮತ್ತು ಇಂಡೋಚೈನಾಗಳಿಂದ ಬರುವ ಅಕ್ಕಿಯ ಆಯಾತವನ್ನು ತಡೆಯಬೇಕು" ಎಂದು ಕೇಳಿಕೊಂಡರು. ಈ ಠರಾವು ಸರಕಾರದಿಂದ ಸ್ವೀಕೃತಗೊಂಡಿದೆ. ಈ ವಿಷಯವಾಗಿ ಸರಕಾರವು ಬೇಗನೇ ಒಂದು ಪ್ರಕಟಣೆಯನ್ನು ಹೊರಡಿಸಲಿದೆ.

ಅಲ್ಲಹಾಬಾದ್ ಫೆಬ್ರವರಿ ತಾ ೯

ಡಾ। ರವೀಂದ್ರನಾಥ ಠಾಗೂರರು ಬನಾರಿಸ್‌ನಿಂದ ಅಲ್ಲಹಾಬಾದಿಗೆ ಮೋಟರಿನಲ್ಲಿ ಬಂದಿರುವರು. ಅವರ ಅಸ್ವಸ್ಥರಾಗಿರುವುದರಿಂದ ಯಾವ ಸಾರ್ವಜನಿಕ ಸಭೆಯಲ್ಲೂ ಭಾಗವಹಿಸಬಾರದಾಗಿ ವೈದ್ಯರು ಹೇಳಿರುವರು. ಅಲ್ಲಿಯ ಎನ್ಜಿನೆಂಟ ಕಾಲೇಜು ಪರ್ಣಂತ್ಯಕ್ಷನವೋದರ ಅಧ್ಯಕ್ಷತೆಯನ್ನು ಸ್ವೀಕರಿಸಲಿರುವರು.

ಮೊಸ್ಕೊ, ಫೆಬ್ರವರಿ 10

ಮೊಸ್ಕೊವಿನ ಸರರೊಟೊವ್ ಎಂಬಲ್ಲಿ ರೈಲ್ವೆ ಸ್ಟೇಶನಿನ ಬಳಿ ನಿಂತಿದ್ದ ಸರಕಿನ ಬಂಡಿಗಳಿಗೆ ಪ್ರಯಾಣಿಕರ ರೈಲು ಬಂಡಿಯು ಧಕ್ಕೆ ಬಡಿದು ಬಂಡಿಗಳು ಧ್ವಂಸವಾದುವು. ೧೮ ಮಂದಿ ಒಡನೆ ಮೃತರಾದರು. ೯ ಮಂದಿ ಗಾಯಗೊಂಡಿರುವರು. ಸ್ಟೇಶನ್ ಮಾಸ್ಟರರ ಮೇಲೆ ಕ್ರಿಮಿನಲ್ ದಾವಾ ನಡೆದಿದೆ.

ಬಳ್ಳಾರಿ ಫೆಬ್ರವರಿ ತಾ ೧೦

ಇಲ್ಲಿಯ ಮುನಿಸಿಪಲ್ ಕೌನ್ಸಿಲರಾಗಿದ್ದ ಖಾಲಾಗೌಸ್ ಸಾಹೇಬರ ಕೊಲೆಯ ಸಂಬಂಧವಾಗಿ ಮಲಯಾಳ ಸಂಜೀವಪ್ಪನೆಂಬವನನ್ನು ಅವನ ಸಂಬಂಧಿಕನಾದ ಚಿನ್ನ ಅಂಜನಪ್ಪ ಎಂಬವನನ್ನೂ ಸೆರೆಹಿಡಿಯಲಾಗಿದೆ. ವಿಚಾರಣೆ ನಡೆಯುತ್ತಿದೆ.

ನ್ಯೂಡಿಲ್ಲಿ, ಫೆಬ್ರವರಿ ತಾ ೧೦

ವೈಸರಾಯರ ಅರಮನೆಯ ಗೇರೆಜ್ ಸುಪರಿಂಟೆಂಡೆಂಟರಾದ ಮಿ। ಜಿ. ಡಬ್ಲ್ಯೂ. ನೀಲ್ ಮತ್ತು ಅವರ ಪತ್ನಿಯವರು ಈ ದಿನ ೧ ಘಂಟೆಗೆ ಸಣ್ಣ ದೋಣಿಯಲ್ಲಿ ನದಿಗಿಳಿದರು. ಅವರಿಬ್ಬರೂ ದೋಣಿಯನ್ನು ನಡೆಸುತ್ತಾ ೬೦೦ ಗಜ ದೂರ ಹೋದರು. ಹೊಳೆಯ ತಟದ ಕಡೆಯಿಂದ ಬಂದ ಇಬ್ಬರು "ದೂರದಲ್ಲಿ ದೋಣಿಯೊಂದು ಕವಚಿ ಬಿತ್ತು" ಎಂದು ಹೇಳಿದರು. ಈ ಸುದ್ದಿಯನ್ನು ಕೇಳಿದೊಡನೆ ಗಂಡಹೆಂಡಿರನ್ನು ಹುಡುಕುವುದಕ್ಕಾಗಿ ಮಿಲಿಟರಿಯವರಲ್ಲಿ ಕೆಲವರನ್ನು ಕಳುಹಿಸಲಾಯಿತು. ಇಷ್ಟರ ತನಕ ದಂಪತಿಗಳ ಪತ್ತೆ ಸಿಕ್ಕಿರುವುದಿಲ್ಲ. ನೀಲ್‌ರವರು ೩೩ ವರ್ಷ ಪ್ರಾಯದವರಿದ್ದರು. ಲೋರ್ಡ್ ರೀಡಿಂಗರ ಕಾಲದಿಂದ-೧೯೨೧ರಿಂದ ಅವರು ಈ ಸ್ಥಾನದಲ್ಲಿದ್ದರು.

ಮುಂಬಾಯಿ, ಫೆಬ್ರವರಿ ತಾ ೮

ಮುಂಬಾಯಿಯಿಂದ ಈ ವಾರ ರೂಪಾಯಿ ೧,೦೨,೬೮,೬೪೦ ಬೆಲೆ ಬಾಳುವ ಚಿನ್ನವು ಪರದೇಶಕ್ಕೆ ಹೋಯಿತು. ಬ್ರಿಟನು ಗೋಲ್ಡ್ ಸ್ಟೇಂಡರ್ಡನ್ನು ಬಿಟ್ಟಂದಿನಿಂದ ೨೯,೬೩,೩೬, ೭೧೮ ರೂಪಾಯಿಗಳ ಚಿನ್ನವು ವಿದೇಶಕ್ಕೆ ಹೋಯಿತು.

ಅಹ್ಮದಾಬಾದ, ಫೆಬ್ರವರಿ ತಾ. ೧೦

ಇಲ್ಲಿ ಈ ದಿನ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಗುಜರಾಥ ಕೊಂಗ್ರೆಸ್ ಕಮಿಟಿಯ ಸಭೆಯೊಂದು ಜರಗಿ ರೈತರ ಕಷ್ಟ ಪರಿಹಾರಾರ್ಥವಾಗಿ ಸರಕಾರವು ಭೂಕಂದಾಯದಲ್ಲಿ ರಿಯಾಯಿತಿ ತೋರಿಸಬೇಕೆಂದು ಠರಾವು ಮಂಜೂರಾಯಿತು. [illegible] ಗಳನ್ನೊದಗಿಸಿಕೊಡುವುದಕ್ಕಾಗಿ ಒಂದು ಸಮಿತಿಯು [illegible] ದಿಸಲ್ಪಟ್ಟಿತು. ಲೀಬರ್ ಕಾನೂನನ್ನು ಸ್ಥಗಿತಗೊಳಿಸಬೇಕೆಂದೂ ನಿರ್ಧಾರವಾಯಿತು.

ದಿವಂಗತ ಎಚ್ ಕೇಶವ ಪೈಯವರು.

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್ ಇದರ ಡೈರೆಕ್ಟರೂ, ಉಡುಪಿ ಆಫೀಸಿನಲ್ಲಿ ಏಜಂಟರೂ ಆಗಿದ್ದ ಕೇಶವ ಪೈ ಬಿ. ಎ., ಬಿ. ಎಲ್. ಇವರ ಸೈಟೆಯು ಆನಾವರಣಗೊಳಿಸಿದೆ.

ಟೊರೊಂಟೋ ಫೆಬ್ರವರಿ ತಾ ೯

ಬ್ರಿಟಿಷ್ ಮೋಟರ್ ವ್ಯಾಪಾರದ ಮಾಲೀಕರಾದ ಲೋರ್ಡ್ ನಫೀಲ್ಡರು ಕೊಲೊಂಬೊಗೆ ಬಂದಿದ್ದಾಗ ಬ್ರಿಟನಿನ ಸ್ಥಿತಿಯ ವಿಚಾರವಾಗಿ ಮಾತನಾಡುತ್ತಾ, ಇಂಗ್ಲಾಂಡು ಆರ್ಥಿಕ ಸಂಕಷ್ಟದಿಂದ ಮೇಲೆದ್ದಿದೆ. ವ್ಯಾಪಾರವು ವೃದ್ಧಿಂಗತವಾಗಿದೆ. ಇದರ ಪರಿಣಾಮವು ಬ್ರಿಟನ್ ಸಂಸ್ಥಾನದಲ್ಲೆಲ್ಲ ಕಂಡುಬರಲಿರುವುದು. ಮೋಟರ್ ವ್ಯಾಪಾರವು ಕಳೆದ ವರ್ಷಕ್ಕಿಂತಲೂ ದ್ವಿಗುಣಿತವಾಗಿ ಹೆಚ್ಚಿದೆ. ನನ್ನ ಕಾರ್ಖಾನೆಗಳೆಲ್ಲ ಉತ್ತಮ ಸ್ಥಿತಿಯಲ್ಲೇ ಇವೆ ಎಂದು ತಿಳಿಸಿದರು.

ಮುಂಬಾಯಿ ಫೆಬ್ರವರಿ ೧೧

ಮುಂಬಾಯಿಯ ಪೋರ್ಟ್ ಟ್ರಸ್ಟಿನ ಚೆಯರ್‌ಮೆನರನ್ನಾಗಿ ಒಬ್ಬ ಹಿಂದೀಯನನ್ನೇ ಆರಿಸಬೇಕೆಂದು ಇಂಡಿಯನ್ ಮರ್ಚೆಂಟ್ ಚೇಂಬರ್ ಸರಕಾರದೊಡನೆ ಕೇಳಿದೆ.

ಕರಾಚಿ ಫೆಬ್ರವರಿ ತಾ ೧೧

ಇಲ್ಲಿಯ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ। ನಾರಾಯಣದಾಸ ಬೆಚಾರ್ ಎಂಬವರು ಕೊಂಗ್ರೆಸ್ಸಿನ ನಿಬಂಧನೆಗಳನ್ನುಲ್ಲಂಘಿಸಿ ನಡೆದುದರ ಪರಿಣಾಮವಾಗಿ ಅವರು ಅಧ್ಯಕ್ಷಸ್ಥಾನಕ್ಕೆ ಕೂಡಲೇ ರಾಜಿನಾಮೆ ಕೊಡಬೇಕೆಂದು ಬಾಬು ರಾಜೇಂದ್ರ ಪ್ರಸಾದರು ಅಪ್ಪಣೆಕೊಟ್ಟರು. ಈಗ ಶ್ರೀ। ಬೆಚಾರರು ತಾನು ಮುಂದೆ ಹಾಗೆ ಮಾಡುವದಿಲ್ಲವೆಂದು ಆಶ್ವಾಸನೆಯಿತ್ತುದರಿಂದಾಗಿ ಅವರನ್ನು ಪುನಃ ಆ ಸ್ಥಾನಕ್ಕೆ ನೇಮಿಸಲಾಗಿದೆ.

ಲಂಡನ್, ಫೆಬ್ರವರಿ ತಾ ೯

ಪೈಸ್ಲಿ ಎಂಬಲ್ಲಿನ ಮಿ। ಜೆ ಇ ಹೋವರ್ ಎಂಬವರ ಪ್ರದರ್ಶನ ಮಂದಿರದಲ್ಲಿದ್ದ ಸಾವಿರಾರು ಪವನು ಬೆಲೆಬಾಳುವ ಕಲಾ ಸಾಮಗ್ರಿಗಳೂ, ಪ್ರಾಚೀನ-ವಸ್ತ್ರ ಒಡವೆಗಳೂ, ಚಿತ್ರಪಟಗಳೂ, ಬೆಳ್ಳಿ ಭಂಗಾರಗಳೂ ಕದ್ದೊಯ್ಯಲ್ಪಟ್ಟವೆ. ಹಿಂದೂಸ್ಥಾನವನ್ನು ಬ್ರಿಟಿಷರು ಜೈಸಿದ ಚಿತ್ರವೊಂದು ಗೋಡೆಯಿಂದೆಳೆಯಲ್ಪಟ್ಟು ಚೂರು ಚೂರಾಗಿ ಕೆಳಗೆ ಬಿದ್ದಿತ್ತು. ಸ್ಕೊಟ್‌ಲೆಂಡ್ ಯಾರ್ಡಿನ ಗುಪ್ತ ಪೋಲೀಸರ ಸಹಾಯದಿಂದ ಪುಂಡರನ್ನು ಹಿಡಿಯಲು ಹೊರಟಿರುವರು.

ಅಹಮ್ಮದಾಬಾದ್ ಫೆಬ್ರವರಿ ತಾ. ೯

ಬರೋಡ ಸಂಸ್ಥಾನದ ರೈತರ ಸಮ್ಮೇಳನವೊಂದು ಜರಗಿ, ಶೀತಪ್ರವಾಹದಿಂದ ಮಹಾ ನಷ್ಟಕ್ಕೆ ಗುರಿಯಾದ ತಮಗೆ ಸರಕಾರವು ಭೂಕಂದಾಯದಲ್ಲಿ ರಿಯಾಯಿತಿ ತೋರಿಸಬೇಕೆಂದು ಠರಾವು ಮಾಡಿ ೫೦೦೦ಕ್ಕಿಂತಲೂ ಹೆಚ್ಚು ಮಂದಿ ಬರೋಡಾಕ್ಕೆ ನಿಯೋಗವಾಗಿ ನಡೆಯಬೇಕೆಂದು ನಿಶ್ಚಯಿಸಿರುವರು.

ಮುಂಬಾಯಿ ಫೆಬ್ರವರಿ ತಾ ೧೧

ಬೊಂಬೇ ಯ ಸೈಟಿಡ್ ಪ್ರೆಸ್ ಡೈರೆಕ್ಟರನ ಶ್ರೀ। ಸುಬ್ಬರಾಯರಿಗೆ ಜನವರಿ ೨ನೇ ತಾರೀಕಿನ ಪತ್ರದಿಂದ ತಿಳಿದ ಬಗೆ ಜನವರಿ ೨೬ರಲ್ಲಿ ಶ್ರೀ ಸುಭಾಷ್‌ಚಂದ್ರ ಬೋಸರಿಗೆ ಜನವಾಕ್ಯ ತರದ ಶ್ರೀ ಜಮ್ನಾದಾಸ ಮೇಧಾರವರು ಜನವಾಕ್ಯ ತಲುಪಿದೊಡನೆ ಅಲ್ಲಿಯ ಪೋಲೀಸರು ಅವರ ವಾಸಸ್ಥಾನವನ್ನು ಪರಿಶೋಧನ ಮಾಡಿ ಅವರ ಕಾಗದಗಳನ್ನೆಲ್ಲ ಜಪ್ತಿ ಮಾಡಿದರು. ಪೋಲೀಸರ ಈ ವರ್ತನೆಯ [illegible] ನವರನ್ನು ಮಿರಗಗೊಳಿಸಿರುತ್ತದೆ. [illegible] ಲೀಬರ್ [illegible] ಜನವರಿ ಪೋಲೀಸ್ ಅಧಿಕಾರಿಗೆ ಪತ್ರ ಬರೆದಿರುವರು. ವಿವರವನ್ನು ನಿರೀಕ್ಷಿಸುತ್ತಿದ್ದಾರೆ.

ಫೆಬ್ರವರಿ ತಾ ೯

ಮಹಾತ್ಮಾ ಗಾಂಧಿಯವರು ೧೯೧೭ರಲ್ಲಿ ಶಂಕುಸ್ಥಾಪನೆ ಮಾಡಿದ ಚಂಪಾರಣ್ ಗಾಂಧೀ ಆಶ್ರಮವನ್ನು ಕಟ್ಟುವುದಕ್ಕಾಗಿ ದೇಶಿಗರು ಆರ್ಥಿಕ ಸಹಾಯವನ್ನು ಮಾಡಬೇಕೆಂದು ಬಿಹಾರ ಪ್ರಾಂತಿಕ ಮತ್ತು ಪಾಟ್ನಾ ಜಿಲ್ಲಾ ಕೊಂಗ್ರೆಸ್ ಸಮಿತಿಗಳು ಅಪೀಲ್ ಮಾಡಿಕೊಂಡಿವೆ.

ಫೆಬ್ರವರಿ ೨೩

ಸಂಸ್ಕೃತ ಪರೀಕ್ಷೆಗಾಗಿ ಬನಾರಿಸ್‌ನಿಂದ ಬದ್ವಾನಿಗೆ ತೆರಳಿದ ಒಬ್ಬ ವಿದ್ಯಾರ್ಥಿಯನ್ನು ಪೋಲೀಸರು ಕೈದ ಮಾಡಿ ಕಲ್ಕತ್ತಕ್ಕೆ ಒಯ್ದಿರುವರು.

ರಂಗೂನು ಫೆಬ್ರವರಿ ತಾ ೧೧,

ಕೆಪ್ಟನ ಅರ್ನೆಸ್ಟ್ ಮತ್ತು ಹೈಂಬಿನ್ಸ್ಲರ್ ಎಂಬಿಬ್ಬರು ಒಸ್ಟ್ರಿಯಾ ದೇಶಸ್ಥರು ೧೯೩೪ರ ಒಕ್ಟೋಬರ್ ೧ನೇ ದಿನ ಸಣ್ಣ ದೋಣಿಯೊಂದರಲ್ಲಿ ಭೂಸಂಚಾರಕ್ಕೆ ಹೊರಟು ಕೊನ್‌ಸ್ಟೆಂಟಿನೋಪಲ್ ಮೊದಲಾದ ದೇಶಗಳ ಮಾರ್ಗವಾಗಿ ರಂಗೂನಿಗೆ ಬಂದಿರುವರು. ರಂಗೂನಿನ ಟಿಪ್ಪೊಯಿ ಎಂಬಲ್ಲಿ ಅವರ 'ಸೈತಾನ I'ನೇ ದೋಣಿಯು ಮುಳುಗಿ ಅವರು ಬೆಸ್ತರಿಂದ ರಕ್ಷಿತವಾದರು. 'ಸೈತಾನ II'ನ್ನು ರಚಿಸಿ ಮುಂದರಿದರು. ಅದನ್ನೀಗ ವಿಕ್ಟೋರಿಯಾ 'ಸೈತಾನ III'ರಲ್ಲಿ ಮುಂದರಿಯಲಿರುವರು. ತಮ್ಮ ಸಾಹಸಗಳ ಗ್ರಂಥವೊಂದನ್ನು ರಚಿಸುತ್ತಿರುವರು.

The Canara Banking Corporation Udipi, Ltd.

Head office:—UDIPI, S K. (Incorporated in British India) **ESTD. 1906.**

Branches:—1. Udipi, 2 Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

Authorised & Issued Capital Rs 3,50,000/— Subscribed & Paid up Rs. 2,25,000 Reserve & other Funds—2,60,953—7—0

SHARES.

The 2,500 shares of the face value of 50 each, issued for subscription at a premium of Rs. 40 each have been oversubscribed.

Office of the Corporation, Udipi, Dated, 12-1-1935

M. Shrinivasa Prabhu,
Ag. Manager

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪ್ರೋವಿನ ಹುಳು ಕಡ್ಡಿಯ ಮುಲಾಮು
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯವರ್ ಮತ್ತು ಕಂಪೆನಿಯ ಹುಳು
ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ
ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪ್ರೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಬಿನ್ನೈಸಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ರೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Established 1908

EXCELLENT BONUSES.

1933 Valuation. Results

	WHOLE LIFE	ENDOWMENT	
1925-'30	20	15	Per thousand
1931-'33	23	18	per year

Every 'With Profit' Policy is entitled to "PERMANENT DISABILITY BENEFITS"—No extra premium
PAYS DOUBLE THE ASSURED SUM IN THE EVENT OF DEATH BY ACCIDENT
ON PAYMENT OF MINIMUM EXTRA PREMIUM OF RS 1-8-0 PER RS. 1000 POLICY PER YEAR

Existing Policy holders may avail of this benefit

For particulars apply to —

KOCHIKAR BROTHERS,
Madras Branch Secretaries

Offices at:—
Udipi, Mangalore Bangalore, Calicut, Madras and Bombay

Karnataka Chemical and Pharmaceutical Works, Ltd, Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).



ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ
ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹಾಸ್ಪೋಲ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟು ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಅರೋರಾ ಕ್ರೀಮ್, ಕ್ರಿಮೋರ್ ಲಿಮೊನಿಸ್, ಕರ್ಣಾಟಕ ರೋಸ ಪೊಮೇಡ್.
ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೆನ್ನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಚ್ಚುಪ್ಪ ಬಾಳಿಗ
ಹೆಡ್ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.
ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್ಸ್, 46 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2
ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ ಪಾರ್ಕ್ ಟೌನ್ ಮದರಾಸು.
ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited Printed & Published By A. S. Kamath at the Sharada Press Car Street Mangalore

ವಾರ್ಷಿಕ ಚಂದಾ 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 2-13-0

P
for Quality Snuff
H. Rama Rao and Sons.
HighClassSnuff Manufacturers
Mangalore, S I
ASK FOR
RAMA SNUFF.
The charm of Snuff Users!

ಸ್ವದೇಶಾಭಿಮಾನಿ

SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Madras Branch Secretaries
Kochikar Brothers,

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯. ಮಂಗಳೂರು ತಾ. ೨೨ನೇ ಶುಕ್ರವಾರ ಫೆಬ್ರವರಿ ೧೯೩೫ (22 - 2 - '35) ಸಂಚಿಕೆ ೮



ಡಿಲ್ಲಿಯಲ್ಲಿನ ಹಳೆಯ ಹೆಬ್ಬಾಗಿಲು (Old Gate)

ಡಿಲ್ಲಿಯಲ್ಲಿ ಹಲವು ಇತಿಹಾಸಪ್ರಸಿದ್ಧ ಕೋಟೆಗಳಿವೆ ಈ ಹೆಬ್ಬಾಗಿಲನ್ನು ರಚಿಸಿ ಹಲವು ಶತಮಾನಗಳಾಗಿರುವುದಾದರೂ ಶಿಲಾನಿರ್ಮಿತವಾದ ಇದು ಅಖಂಡವಾಗಿ, ಒಂದಿಷ್ಟು ರೂಪಗೆಡದೆ ನಿಂತಿದೆ ಮೋಟರು ಮೊದಲಾದ ವಾಹನಗಳ ಓಡಾಟದಿಂದ ಭೂಮಿಯು ನಡುಗಿ ಹೆಬ್ಬಾಗಿಲಿನ ಸ್ಥಿರತೆಗೆ ಬಾಧಕವು ತಟ್ಟದಂತೆ ಸರ್ವ ಏರ್ಪಾಡು ಮಾಡುತ್ತಿರುವರು.

ಚಕ್ರ

(All Rights Reserved)

ಒಂದು ಹುಲ್ಲಿಂ ಹೇಟೆಗೆ ಇಳಿದು ಅದು ಮಾಡುತ್ತಿದ್ದ ಹಾವಳಿಯೆಷ್ಟೆಂದು ಇಲ್ಲಿ ಬರೆಯಲಾರೆ (ಬರೆದರೆ ನೀವು ಓದಲಾರಿರಿ) ಆ ಹುಲಿಯನ್ನು ಹಿಡಿಯುವುದಕ್ಕಾಗಿ ಅರ್ಧ ಶತಮಾನದಿಂದಲೂ ಗಾಂಧೀ ಪಾರ್ಟಿಯ ಬೇಟೆಗಾರರಿಂದಲೂ ಶೌಕತಾಲಿ ಪಾರ್ಟಿಯ ಬೇಟೆಗಾರರಿಂದಲೂ ಸಾಧನೆಯಾಗುತ್ತಲಿದೆ

ಒಮ್ಮೆ ಬೋನಿಗೆ ಬಿದ್ದ ಹುಲಿಯು ಪರಾರಿಯಾಗಿದೆ ಒಮ್ಮೆ ಕೈಗೆ ಸಿಕ್ಕಿಯೂ ಅದು ಓಡಿ ಬಿಟ್ಟಿದೆ. ಏನೋ ಯಾರದೋ ಮಂತ್ರಜಾಲದಿಂದಾಗಿ ಅದು ಹಾಗೆ ತಪ್ಪಿಸಿಕೊಳ್ಳುತ್ತಿರಬಹುದೆಂದು ಸಾಯ್ಬನು ಊಹಿಸುವ ಸ್ವಾತಂತ್ರ್ಯವನ್ನು ವಹಿಸಿರುತ್ತಾನೆ

ಹುಲಿಯನ್ನು ಹಿಡಿಯಬೇಕೆಂದು ಒಂದು ಆಡನ್ನು ತಂದು, ಒಂದು ಕಂಭಕ್ಕೆ ಕಟ್ಟಿ ದ್ವಿಪಕ್ಷಗಳವರೂ ಅಡಗಿ ಕೂತರು. ಕಾದರು. ಮರುದಿನ ನೋಡುವುದೇನು? ಆಡಿನ ಒಂದು ಕಾಲನ್ನು ಹಿಂದೂಪೊಬ್ಬನು ಕಟ್ಟಿ ಹಿಡಿದು ತಿನ್ನಲಾರಂಭಿಸಿದ್ದಾನೆ!

ಅವನನ್ನು ಓಡಿಸಲಾಯಿತು. ಆಡಿನ ಕಾಲನ್ನು ಸರಿಗೊಳಿಸಿ ಪುನಃ ಅದನ್ನು ಕಂಭಕ್ಕೆ ಕಟ್ಟಿ ಹುಲಿಯನ್ನು ನಿರೀಕ್ಷಿಸಿದರು ಮರುದಿನ ನೋಡಲೇನು? ಒಬ್ಬ ಮುಸಲ್ಮಾನನು ಆಡಿನ ತಲೆಯನ್ನು ಹಿಡಿದು ಜಗಿಯುತ್ತಿದ್ದಾನೆ ಅವನನ್ನೂ ಓಡಿಸಿ ಆಡನ್ನು ಬದುಕಿಸಿದರು

ಎಂತಹ ಬೇಟೆಗಾರರಯ್ಯಾ! ಹುಲಿಯನ್ನು ಹಿಡಿಯುವುದಕ್ಕಾಗಿ ತಂದ ಆಡನ್ನು ತಾವೇ ಹಸಿಹಸಿಯಾಗಿ ತಿನ್ನುವ ಬೇಡರೂ ಈ ಹಿಂದೂದೇಶದ ಎದೆಯ ಮೇಲಿರುವರೇ?

ಪ್ರಾಣಭಕ್ಷಕರಯ್ಯಾ ಈ ಹಿಂದೂ-ಮುಸ್ಲಿಮ್ ಐಕ್ಯಕ್ಕಾಗಿ ಸಾಧಿಸುತ್ತಿರುವವರು ಇವರಿಂದೇನಾದೀತ? ಆಡನ್ನು ತಿನ್ನುವ ಹಸಿವು ಇವರಲ್ಲೇ ಇರುವುದೆಂದರೆ ಇವರು ಹುಲಿಯನ್ನು ಹಿಡಿಯುವುದಾದರೂ ಹೇಗೆ?

ಅತ್ತಲಿಂದ ಆ ಹಿಂಯಿಸು ದೂರದಲ್ಲಿ ನಿಂತು ಈ ಪಕ್ಷಗಳ ಹೀಕಲಾಟವನ್ನು ನೋಡುತ್ತಿದ್ದಾನೆ ಘರ್ಜಿಸುವ ಬದಲು "ಛೀ" ಎಂದು ನಗುತ್ತಿದ್ದಾನೆ ಆನಂದಗೊಂಡಿದ್ದಾನೆ

ಈಗ ನಿಮ್ಮ ಅಭಿಪ್ರಾಯವೇನು? ಯಾರ ತಪ್ಪು ಯಾರು ಸರಿ? ಹೇಳಬಲ್ಲಿರಾ? ಸಂದೇಹವಿಲ್ಲದಂತೆ ಕೇಳಿ! ಇಬ್ಬರೂ ತಪ್ಪು ಇಬ್ಬರೂ ಸರಿ! ಇಬ್ಬರೂ ಸರಿ ಇಬ್ಬರೂ ತಪ್ಪು!

ಶಾಸನಸಭೆಯಲ್ಲಿ ಜಿನ್ನಾ ಪಾರ್ಟಿಯೊಂದು ಪೂರ್ವ ದಿಕ್ಕಿಗೆ ಮುಖಹಾಕಿರುತ್ತದೆ ಭುಲಾಭಾಯಿಯವರ ಇನ್ನೊಂದು ಪಾರ್ಟಿಯು ಪಶ್ಚಿಮವನ್ನು ನೋಡುತ್ತಿದೆ ಮಾಡುವರೇನು?

ಹಿಂದೂ ಮುಸ್ಲಿಂ ಐಕ್ಯಾಗಬೇಕಂತೆ ಆದರೆ ಅವರವರ ಹಕ್ಕು ಮತ್ತು ಹಟಗಳನ್ನು ಇಬ್ಬರೂ ಬಿಡುವಂತಿಲ್ಲ ಶರ್ತಗಳೂ ಪರಿಪಾಲಿಸಲ್ಪಡಬೇಕು, ಐಕ್ಯವೂ ಬೇಕು ಹೇಗಾದೀತು ಸ್ವಾಮಿ ಈ ಆಶ್ಚರ್ಯ?

ಹಿಂದೂಗಳು ಸ್ವಲ್ಪ ಬಗ್ಗಬೇಕಾಗಿದೆ ಮುಸ್ಲಿಮರೂ ಸ್ವಲ್ಪ ಕೆಳಗಿಳಿಯಬೇಕಾಗಿದೆ ಇಬ್ಬರೂ ಎದೆಯನ್ನಗಲಿಸಿದರೆ ಐಕ್ಯದ ಹುಲಿರಾಯ ಕೈಗೆ ಸಿಕ್ಕಾನೆ?

ಬಿಡಿರಿ ನಿಮ್ಮ ಹಟ
ಬಿಡಿರಿ ನಮ್ಮ ಛಟ!
ಹುಲಿಯನ್ನೆ ಹಿಡಿಯಿರಿ!
ಬಲಿಯನ್ನೆ ಕೊಡಿರಿ!
ದೊಡ್ಡ ಜನರಾಗಿ
ಹೆದ್ದರಾಗಬೇಡಿರಿ!

ಸರಕಾರೀ ಪಕ್ಷೀಯ ಬಲವು ಹೆಚ್ಚುವುದಕ್ಕೆ ಜಿನ್ನಾರವರ ಪಕ್ಷದ ಬೆಂಬಲವೇ ಕಾರಣವೆಂದು ಎಲ್ಲರೂ ದೂರು! ಜನಸ್ವಾತಂತ್ರ್ಯವಾದಿಗಳು ಕಾಂಗ್ರೆಸಿನಿಂದ ಒಂದಾದರೆ ಸಾರ್ಥಕವಾದೀತೆನ್ನಿ!

ಇಬ್ಬರ ನ್ಯಾಯವು ಒಬ್ಬನಿಗೆ ಲಾಭವಾಗುವ ಗಾದೆಯು ಸತ್ಯವಾಗುತ್ತಲಿದೆ ಹಿಂದೂ ಮುಸಲ್ಮಾನರು ಒಂದಾಗಲೇ ಬೇಕಾಗಿದೆ

ಹಿಂದೂ ಪತ್ರಿಕೆಗೆ ಮುಸಲ್ಮಾನ ಸಂಪಾದಕನು ಲೇಖನ ಬರೆಯುತ್ತಿರುವ ಔದಾರ್ಯವನ್ನಾದರೂ ಕಂಡು ಇವರಿಗೆ ಬುದ್ಧಿ ಬಾರದೆ?

'ಸಾಯ್ಬ'.

ಅವನಿಗೆ ನಾನೇ ಮೊಲೆಯುಣ್ಣಿಸುತ್ತೇನೆ

ತನ್ನ ಮಗುವಿಗೆ ತಾನೇ ಮೊಲೆಯುಣ್ಣಿಸುವಂತೆ ಪ್ರತಿಯೊಬ್ಬ ತಾಯಿಯೂ ಸಿದ್ಧಳಿರಬೇಕು ಮಗುವಿನ ಆರೋಗ್ಯಪಾಲನೆಗೂ, ಅದು ಬಾಲರೋಗಗಳಿಗೆ ತುತ್ತಾಗದಂತೆಯೂ ಅದಕ್ಕೆ ಸ್ವಾಭಾವಿಕವಾಗಿ ಮೊಲೆಯುಣ್ಣಿಸಬೇಕು ಎದೆ ಹಾಲು ಎಮ್ಮ ಮಗುವಿಗೆ ಸಂಪೂರ್ಣವಾದ ಆಹಾರವಾಗಿದೆ ಇದು ಮಗುವಿನ ಸೂಕ್ಷ್ಮ ಜೀರ್ಣಶಕ್ತಿಗೆ ತಕ್ಕುದಾದ ಆಹಾರವಾಗಿದೆ ಮಗುವಿನ ಆರೋಗ್ಯಕರ ಬೆಳವಣಿಗೆಗೂ ವೃದ್ಧಿಗೂ ಸಾಧಕವಾದ ಪುಷ್ಟಿ ಸಾರವು ಇದರಲ್ಲಿದೆ

'ಓವಲ್ಟಿನ್' ಪಾನೀಯವನ್ನು ಮಗು ಜನಿಸುವ ಮೊದಲೂ ಹುಟ್ಟಿದ ಬಳಿಯ ತ್ತಿರವಾಗಲೂ ಅನುಕ್ರಮವಾಗಿ ಸೇವಿಸುತ್ತಾ ಇದ್ದರೆ ಎದೆ ಹಾಲು ನಿಶ್ಚಿತವಾಗಿ ವೃದ್ಧಿಹೊಂದುತ್ತದೆ ಅಲ್ಲದೆ ತಾಯಿಯ ಬಲ ಮತ್ತು ಚೈತನ್ಯವು ಕಾಪಾಡಲ್ಪಡುತ್ತದೆ ಓವಲ್ಟಿನ್ ಎಂಬುದ ಪ್ರಕೃತಿಸಿದ್ಧ ಆಹಾರ ಇದನ್ನು ಬೆಳೆದ ಬಾರ್ಲಿ ಬೀಜ ದನದ ಕೆನೆ ಹಾಲು ಮತ್ತು ಕೋಳಿಮೊಟ್ಟೆಗಳಿಂದ ತಯಾರಿಸಲಾಗುತ್ತದೆ ಆರೋಗ್ಯ ಶಕ್ತಿ ಮತ್ತು ಚೈತನ್ಯ ರಕ್ಷಣೆಗೆ ಇದು ಅತ್ಯಮೂಲ್ಯ ಪಾನ ಪಡೆವ ವೇಗ ನಿಜವಾದ ಓವಲ್ಟಿನನ್ನೇ ಪಡೆಯಿರಿ ನಕಲಿಗಳನ್ನು ತ್ಯಜಿಸಿರಿ

ಓವಲ್‌ಟಿನ್

ಟೋನಿಕ್ ಆಹಾರ ಪಾನಕ

OVALTINE

ತಾಯಂದಿರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕೊಟ್ಟು ಸಾಕುವಂತ ಸಹಕರಿಸುತ್ತದೆ

ಕಾರ್ಖಾನೆಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರ್‌ಗಳಲ್ಲಿಯೂ ಬಜಾರುಗಳಲ್ಲಿಯೂ ಸಿಗುತ್ತದೆ

ಏಜಂಟ್ ಜೇಮ್ಸ್ ರೈಟ್ 8 ಎ ರಸೆಲ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಾಯಿ ಮದ್ರಾಸ

ಅಸ್ತಮ ಮತ್ತು ಪ್ರಸ್ರವಣ

ನಿಮಗಿದ ತೊಂದರೆ ಕೊಡುತ್ತದೆಯೇ? ಹಾಗಾದರೆ ನಮ್ಮ ಪ್ರಪಂಚ ವಿಖ್ಯಾತವಾದ ಮದ್ದನ್ನುಪಯೋಗಿಸಿರಿ ಪೂರ್ಣ ಗುಣಲಾಭ ಇಲ್ಲದಿದ್ದರೆ ಹಣ ವಾಪಸು. ಕ್ರಯ ರೂ 2

ಕಮಲಾ ವರ್ಕ್ಸ್, ಪಂಚಪೋಟಿ, ಬಂಗಾಳ.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೋಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ 1–0–0

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ ಕುಟುಂಬ ಪಾರಂಪರ್ಯದ ಪತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2—8—0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

THE

Kanara Enterprise Ltd.

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

Authorised capital ಅಧಿಕೃತ ಮೂಲಧನ	2,00,000—0—0
Subscribed capital ಚಂದಾ ಅರ್ಪಿಸಿದ್ದು	34,930—0—0
Paid-up capital ಕೆತ್ತು ಬಂದದ್ದು	30847—8—0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken
Shares are now available

For further particulars apply to —

Puttur,
Dated 15—2—1935.

G N Laksman rai,
Secretary.

ಪತ್ರಿಕಾ ಪ್ರಪಂಚ:

ರಿಜರ್ವ ಬ್ಯಾಂಕೂ ಗ್ರಾಮ ಪ್ರಾಂತ್ಯಗಳೂ. ಹಳ್ಳಿಗಳಲ್ಲಿರುವ ನಮ್ಮ ಅಕ್ಕತಂಗಿಯರಿಗೆ ಯಂತ್ರಗಳಿಂದ ಬಡತನ. ಹಿಂದೀ ವಿಮಾಕಂಪೆನಿಗಳ ಸಂರಕ್ಷಣೆಯು. ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ ಇತ್ಯಾದಿ.

ರಿಜರ್ವ ಬ್ಯಾಂಕೂ ಗ್ರಾಮ ಪ್ರಾಂತ್ಯಗಳೂ

"ನಮಗೆ ಬೇಕಾಗಿರುವುದು ಸಂಪೂರ್ಣವಾಗಿ ಷೇರುದಾರರುಗಳಿಂದಲೇ ಕೂಡಿದ ರಿಜರ್ವ ಬ್ಯಾಂಕು, ಅದಿಲ್ಲದಿದ್ದರೆ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಅಡಕಕ್ಕೆ ಅಪೂರ್ಣವಾಗಿ ಒಳಪಟ್ಟ ಸರ್ಕಾರೀ ರಿಜರ್ವ ಬೇಂಕು ದರೆ, ನಮಗೆ ಕೊಡಬೇಕೆಂದಿರುವ ರಿಜರ್ವ ಬೇಂಕಿಗೆ ವಿಶದ ಗುಣಗಳೂ ಇಲ್ಲ, ಅದು ಇಬ್ಬಂದಿಯಾಗಿದೆ" ಎಂದು ಭರತಖಂಡದ ಸುಪ್ರಸಿದ್ಧ ಸಹಕಾರಿ ಶ್ರೀಯುತ ರಾಮದಾಸ ಪಂತಲುರವರು ಮದ್ರಾಸಿನ ಲಾಯಲಾ ಕಾಲೇಜಿನಲ್ಲಿ ಉಪನ್ಯಾಸ ಕೊಡುತ್ತಾ ಅಭಿಪ್ರಾಯಪಟ್ಟಿರುತ್ತಾರೆ. ಅವರ ಅಭಿಪ್ರಾಯದಂತೆ ಇಂಡಿಯಾ ರಿಜರ್ವ ಬ್ಯಾಂಕು ಷೇರುದಾರರ ಬ್ಯಾಂಕೆಂದು ಹೆಸರು ಪಡೆದಿದ್ದರೂ, ಅದರಲ್ಲಿ ಸರ್ಕಾರದ ಕೈವಾಡವಿಲ್ಲದೇ ಇಲ್ಲ. ಅದರ ೪ ಮಂದಿ ಮುಖ್ಯ ಅಧಿಕಾರಿಗಳನ್ನು ಜನ ಡೈರೆಕ್ಟರುಗಳನ್ನೂ ನಾಮಕರಣ ಮಾಡುವುದು ಗವರ್ನರ್ ಜನರಲ್ಲರವರ ಮನಸ್ಸೊಪ್ಪಿದಂತೆ. ನಾಣ್ಯ ಲಾವಣೆ ಮತ್ತು ಸಾಲವ್ಯವಸ್ಥೆಗಳನ್ನು ನಿರ್ಧರಿಸುವುದರಲ್ಲಿಯೂ ಗೌರ್ನರ ಜನರಲ್ಲರವರಿಗೇ ಹೆಚ್ಚಿನ ಅಧಿಕಾರವಿರುವುದಾಗಿ ಜಾಯಿಂಟ್ ಸಿಲೆಕ್ಟ್ ಕಮಿಟಿಯು ಸಾರುತ್ತಲೇ ಇದೆ. ಹೀಗಿರುವಾಗ, ಸರ್ಕಾರದಿಂದ ನಾಮಕರಣ ಮಾಡಲ್ಪಟ್ಟ ಡೈರೆಕ್ಟರುಗಳ ಮಂಡಳಿಯು ಇಂಗ್ಲೆಂಡಿನ ಒಡವಾಳಗಾರರ ... ವನ್ನು ತಪ್ಪಿಸಿಕೊಂಡು ಬ್ಯಾಂಕನ್ನು ಹೇಗೆ ಕಾಪಾಡಿಕೊಂಡು ಬರುತ್ತದೋ ಎಂಬುದನ್ನು ನಿರೀಕ್ಷಿಸಿಕೊಂಡಿದ್ದು ತಿಳಿದುಕೊಳ್ಳಬೇಕಾಗಿದೆ. ಉಪನ್ಯಾಸಕರು ತಿಳಿಸಿದಂತೆ ರಿಜರ್ವ ಬೇಂಕಿನಿಂದ ವ್ಯವಸಾಯಕ್ಕೆ ಎಷ್ಟರಮಟ್ಟಿನ ಸಹಾಯವುಂಟಾಗುತ್ತದೆಯೆಂಬ ವಿಷಯದಲ್ಲಿ ಸಂದೇಹವುಂಟಾಗದೇ ಇರದು. ಇದನ್ನು ಕಾನೂನುಗಾರರು ಒಪ್ಪಿಕೊಂಡೇ ಇರುತ್ತಾರೆ. ವ್ಯವಸಾಯೋದ್ದೇಶಗಳಿಗೆ ಕಾಲಕಾಲಕ್ಕೆ ಹಣದಗಿರುವುದು. ಬೆಳೆದ ಬೆಳೆಗಳನ್ನು ಬೇರೆ ಸ್ಥಳದಿಂದ ... ಕ್ಕೆ ಸಾಗಿಸುವ ಮತ್ತು ಬೇಕರಿ ನಡೆಸುವ ಉದ್ದೇಶಗಳಿಗೆ ಪ್ರಧಾನ ಸಹಕಾರ ಬ್ಯಾಂಕುಗಳು ಹುಂಡಿಗಳನ್ನೂ ... ಇವುಗಳನ್ನು ಕೊಳ್ಳುವುದು ಅಥವಾ ವಗಾರ ... ಅಥವಾ ಅಧೀನವಾಗಿಟ್ಟುಕೊಂಡು ಹಣವದಗಿಸುವುದು. ಇಷ್ಟು ಹೊರತು ರಿಜರ್ವ ಬ್ಯಾಂಕಿನಿಂದ ವ್ಯವಸಾಯೋದ್ದೇಶಗಳಿಗಾಗಿ ಹೆಚ್ಚಿನ ಸಹಾಯವನ್ನು ಬಯಸಲು ... ಕಾನೂನಿನಲ್ಲಿ ಅವಕಾಶವೇರ್ಪಟ್ಟಿಲ್ಲ. ಉತ್ತೇಜಕ ... ಸಹಾಯ ಸೌಕರ್ಯಗಳನ್ನು ಒದಗಿಸಲಾಗುತ್ತದೆಯೆಂದು ಹೇಳುವ ... ಮೇಲೆ ಭರವಸೆಯಿಟ್ಟು ... ಬಾಕಿ ಪಕ್ಷಿಗಳಂತೆ ಕಾದಿರಬೇಕಾಗಿದೆ. ವ್ಯವಸಾಯದ ಸುವ್ಯವಸ್ಥೆಗಾಗಿ ರಿಜರ್ವ ಬ್ಯಾಂಕಿನಲ್ಲಿ ಒಂದು ಶಾಖೆಯನ್ನೇ ನಿರ್ಮಾಣ ಮಾಡಬೇಕೆಂದು ಕಾನೂನಿನಲ್ಲಿ ಅವಕಾಶವಿದ್ದರೂ ಅದನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ, ಈ ವಿಷಯವಾಗಿ ನಿರ್ಧರವಾದ ಯಾವ ಭರವಸೆಯೂ ಕಂಡುಬರುವುದಿಲ್ಲ. ವ್ಯವಸಾಯಕ್ಕೆ ಇಂಪೀರಿಯಲ್ ಬೇಂಕುಗಳು ಎಷ್ಟರಮಟ್ಟಿನ ಸಹಾಯ ಮಾಡುತ್ತಿವೆಯೆಂಬುದನ್ನು ಎಲ್ಲರೂ ಬಲ್ಲರು. ಈ ಬ್ಯಾಂಕುಗಳನ್ನೂ ಸೇರಿಸಿಕೊಂಡು ರಿಜರ್ವ ಬ್ಯಾಂಕು ವ್ಯವಸಾಯಕ್ಕೆ ಬೆಂಬಲ ಕೊಟ್ಟೀತೆಂಬ ಭರವಸೆಯೂ ಇಲ್ಲದ ಮೇಲೆ ಮಿಕ್ಕ ಉಪಾಯವೇನಿದೆ? ಆಸ್ಟ್ರೇಲಿಯಾ, ಕಾಮನ್‌ವೆಲ್ತ ಬ್ಯಾಂಕಿನಂತೆಯೋ ಅಥವಾ ನ್ಯೂಜೀಲೆಂಡಿನ ಬ್ಯಾಂಕನ್ನನುಸರಿಸಿಯೋ ರಿಜರ್ವ ಬ್ಯಾಂಕು ಗ್ರಾಮವಾಸಿಗಳಿಗೆ ಸಾಲದ ಸೌಕರ್ಯವನ್ನುಂಟುಮಾಡಿಕೊಡಬೇಕೆಂದು ಕೊಟ್ಟಿದ್ದ ಸೆಂಟ್ರಲ್ ಬ್ಯಾಂಕಿಂಗ್ ಎನ್‌ಕ್ವೈರಿ ಕಮಿಟಿಯ ಸಲಹೆಯನ್ನೂ ಸಹ ಜ್ಞಾಪಿಸಿಕೊಂಡಿಲ್ಲ.

'ಮೈಸೂರು ಸಹಕಾರ ಪತ್ರಿಕೆ'

ಹಳ್ಳಿಗಳಲ್ಲಿರುವ ನಮ್ಮ ಅಕ್ಕತಂಗಿಯರಿಗೆ

ಶ್ರೀ ಎಸ್ ಆರ್ ಕಲ್ಲೂರು ಬಿ ಎ, ಎಲ್ ಟಿ, ಧರ್ಮಾವರಂ ರವರು ಕೆಳಗೆ ಕೊಟ್ಟಿರುವ ಮಾಸಿಕದಲ್ಲಿ ಬರೆದ ಲೇಖನದ ಒಂದಂಶವಿದು. ಓದಿಕೊಂಡವರ ಕರ್ತವ್ಯ (೧) ಹಳ್ಳಿಗಳಲ್ಲಿರುವ ಸೋದರಿಯರ ದುಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸರ್ವರೂ ಪ್ರಯತ್ನಪಡಬೇಕು. ಪಟ್ಟಭದ್ರರಾಗಿ ಮದುವೆ ಆಗದೆ ಮನೆಯಲ್ಲಿರುವ ಅಕ್ಕತಂಗಿಯರೆಲ್ಲರೂ ಈ ಕಾರ್ಯದಲ್ಲಿ ಪಾಲ್ಗೊಂಡು ಹಳ್ಳಿಗಳ ಏಳಿಗೆಗೆ ಪ್ರಯತ್ನ ಮಾಡತಕ್ಕದ್ದು. ಸಂಸಾರದ ಭಾರವು ಹೆಚ್ಚಾಗಿಲ್ಲದವರು ವೃಥಾ ಕಾಲಹರಣ ಮಾಡದೆ ಹಳ್ಳಿಗಳ ಮಹಿಳೆಯರ ಸೇವೆಗಾಗಿ ಸಿದ್ಧರಾಗಬೇಕು. ಮಹಿಳೆಯರ ಸೇವೆಯು ಮಾಧವನ ಸೇವೆಯೆಂದು ಭಾವಿಸಿ ಸಂಘಸೇವೆಗಾಗಿ ಹಗಲಿರುಳೂ ದೇಹವನ್ನು ಸವೆಸಬೇಕು. ಇದಕ್ಕೆ ಪ್ರಾಚೀನದಲ್ಲಿರುವ ಮಹಿಳಾಕಾಲೇಜಿನಂತಹ ಶಾಲೆಗಳು ಹರಡಬೇಕು. ಬೇಕಾದಷ್ಟು ಆತ್ಯಾವಶ್ಯಕ. ಧನಿಕರು ತಮ್ಮ ಧನವನ್ನು ಮಹಿಳಾಶಾಲೆಗಳ ಸ್ಥಾಪನೆಗಾಗಿ ಅರ್ಪಿಸಲು ಈ ಲೇಖಕನು ಬೇಡಿಕೊಳ್ಳುವನು. (೨) ಆರೋಗ್ಯ ಶಾಖೆಯವರು ಹಳ್ಳಿಗಳಿಗೆ ಹೋಗಿ ಬೋಧಿಸಲು ಪಡಬೇಕಾದ ಮಂತ್ರಸಾನಿ, ಡಾಕ್ಟರರು, ಮುಂತಾದವರನ್ನು ಕಳುಹಿಸಿಕೊಡಬೇಕು. ಅವರೆಲ್ಲರೂ ತಿಂಗಳಿಗೊಮ್ಮೆಯಾದರೂ ಹೆಂಗಸರಿಗೆ ಆರೋಗ್ಯದ ವಿಷಯವಾಗಿ ಉಪನ್ಯಾಸಗಳನ್ನು ಕೊಡಬೇಕು. ಶಿಶು ಪೋಷಣೆ ಶಿಶು ಪ್ರದರ್ಶನ ಮುಂತಾದ ವಿಷಯಗಳನ್ನು ಬೋಧನೆ ಮಾಡಬೇಕು. ಹಳ್ಳಿಗಳಲ್ಲಿ ಅರೋಗ್ಯ ಪ್ರಾಬಲ್ಯಕ್ಕಾಗಿ ಕಾರಣಗಳನ್ನು ಕಂಡುಹಿಡಿದು ಅವುಗಳಿಗೆ ತಕ್ಕ ನಿವಾರಣೆಯ ಆಹಾರ ನಿದ್ರೆ, ವ್ಯಾಯಾಮಗಳಲ್ಲಿರವುದಾಗಿ ಹಿತವಚನಗಳನ್ನಾಡಬೇಕು. (೪) ಮದ್ಯಪಾನ, ಸ್ವಾಧಿಕಾರ ಮುಂತಾದವು ನಿಷೇಧವೆಂದೂ ಪ್ರಚಾರಗೊಳಿಸುವ ಸಂಸ್ಕರಣ ಸಂಘಗಳು ಪ್ರತಿಯೊಂದು ಹಳ್ಳಿಯಲ್ಲೂ ಸ್ಥಾಪನೆಯಾಗಬೇಕು. ತಿಳಿಯದವರಿಗೆ ತಿಳಿಸುವುದೇ ತಿಳಿದವಳ ಕರ್ತವ್ಯ. ಇಲ್ಲದಿದ್ದರೆ ಅವಳ ತಿಳುವಳಿಕೆ ಏತಕ್ಕೆ?

"ಸರಸ್ವತಿ"

ಯಂತ್ರಗಳಿಂದ ಬಡತನ

ಯಂತ್ರಗಳಿಗೆ ಆಶ್ರಯಕೊಡಬಾರದೆಂದು ಮಹಾತ್ಮರು ಹೇಳುವ ನಿಷಯವು ಸ್ಪಷ್ಟವಿದೆ. ಯಂತ್ರಗಳಿಂದ ಜನ - ಜೀವನ ... ಯಂತ್ರಗಳಿಂದ ತಯಾರಾಗುವ ಸಾಮಾನುಗಳು ಹಿತಕರವಾದುವುಗಳಲ್ಲವೆಂತಲೂ ಮಹಾತ್ಮಾಜೀಯವರು ಮೇಲಿಂದ ಮೇಲೆ ಹೇಳುತ್ತಾರೆ. ಅಖಿಳ ಭಾರತ ಗ್ರಾಮೋದ್ಯೋಗ ಸಂಘವು ಸ್ಥಾಪನೆಯಾಗಲಿಕ್ಕೆ ಇದೇ ಕಾರಣವಾಗುತ್ತದೆ. ಈ ಧೋರಣಕ್ಕೆ ಅಮೇರಿಕೆಯ ಫೋರ್ಡ್ ಕಂಪೆನಿಯ ಪ್ರಚಾರಕರು ಬೆಂಬಲವನ್ನು ಕೊಟ್ಟಿರುತ್ತಾರೆಂದು ತಿಳಿದು ಕೈ ಸಂತೋಷವಾಗುವುದು ಸಹಜ. ಮದ್ರಾಸ್ ಹರಿಜನ ಪತ್ರಿಕೆಯಲ್ಲಿ ದೀನಬಂಧು ಆಂಡ್ರ್ಯೂಜರು ತಮಗೂ ಮತ್ತು ಫೋರ್ಡ್ ಕಂಪೆನಿಯ ಪ್ರಚಾರಕರಿಗೂ ನಡೆದ ಸಂಭಾಷಣೆಯನ್ನು ಪ್ರಕಟಿಸಿದ್ದಾರೆ. ಇಬ್ಬರಿಗೂ ಕ್ಷೇಮಸಮಾಚಾರದ ಮಾತುಗಳಾದ ಮೇಲೆ, ಉತ್ತರ ಬಂಗಾಳದಲ್ಲಿ ಬರಗಾಲ ಅತಿವೃಷ್ಟಿಯಿಂದ ಕಷ್ಟಪಡುವ ... ಎಕರೆ ಭೂಮಿ ... ಇದ್ದರೆ ಜನರು ... ಆಗ ಕಲ್ಕತ್ತೆಯಿಂದ ಫೋರ್ಡ್ ಟ್ರಾಕ್ಟರುಗಳನ್ನು ತಂದು ಭೂಮಿಯನ್ನು ಸಾಗುವಳಿ ಮಾಡಬಹುದೆಂದು ಹೇಳಿದರು. ಫೋರ್ಡ್ ಕಂಪೆನಿಯ ಏಜಂಟರು—ಆ ಪ್ರದೇಶವನ್ನು ನಾನು ನೋಡಿದ್ದೇನೆ. ಆಂಡ್ರ್ಯೂಜರು — ನೀನು ಹೀಗೆ ಹೇಳಲಾರೆ, ನಿಮ್ಮ ರೆಂಟಿಗಳು ಈ ದೇಶದಲ್ಲಿ ಪ್ರಚಾರವಾದರೆ ಎಷ್ಟೋ ಕುಟುಂಬಗಳು ನಾಶವಾಗಿ ಹೋಗುವುವು. ಏಜಂಟರು—ನನಗೂ ಬುದ್ಧಿ ಇದೆ. ನಾನು ಕೆಲವು ದಿನಗಳ ಹಿಂದೆ ಚೀನಾ ದೇಶಕ್ಕೆ ಹೋಗಿದ್ದೆನು. ಯಾಂಗ ತ್ಸೆಕ್ಯಾಂಗ ನದಿಯ ಪ್ರದೇಶದ ಸುತ್ತಲೂ ವಾಸವಾಗಿದ್ದ ಚೀನಾದೇಶದವರು ಭತ್ತವನ್ನು ಬೆಳೆಸಿ ತಮ್ಮ ಉಪಜೀವನವನ್ನು ಸಾಗಿಸುತ್ತಾರೆ. ಅಲ್ಲಿ ಫೋರ್ಡ್ ರೆಂಟೆಗಳನ್ನುಪಯೋಗಿಸುವುದಕ್ಕೆ ಮನಸ್ಸೊಲಿಸುವುದು ಅಪರಾಧವೆಂದು ನನ್ನ ತಿಳುವಳಿಕೆಯಾಯಿತು. ಆಂಡ್ರ್ಯೂಜರು—ಗಂಗಾನದಿಯ ಪ್ರದೇಶವೂ ಹಾಗೆಯೇ ಇರುತ್ತದೆ. ಅಲ್ಲಿ ನಿಮ್ಮ ರೆಂಟೆಗಳನ್ನುಪಯೋಗಿಸುವಿರೋ? ಏಜಂಟರು —ಆದಕ್ಕಾದರೂ ನನ್ನ ಉತ್ತರವು ಮೇಲಿನಂತಿದೆ. ನಾನು ರಷಿಯಾ ದೇಶದಲ್ಲಿಯೂ ಸ್ವದೇಶಿಯಾದಲ್ಲಿಯೂ ಸಂಚರಿಸಿದ್ದೇನೆ. ಅಲ್ಲಿ ಜನಗಳ ಅಭಾವದಿಂದ ಬಹಳ ಭೂಮಿಯು ಬೀಳುಬೀಳುತ್ತಿದೆ. ಅಲ್ಲಿ ಇಂಥ ರೆಂಟೆಗಳು ಉಪಯೋಗವಾಗುತ್ತದೆ. ಅನೇಕ ಶತಮಾನಗಳಿಂದಲೂ ಹಿಂದೂಸ್ಥಾನದ ಜನರು ತಮ್ಮ ಕೈಯಿಂದ ಈ ಉದ್ಯೋಗವನ್ನು ಮಾಡುತ್ತಾ, ತಮ್ಮ ಉದರನಿರ್ವಾಹವನ್ನು ಸಾಗಿಸಿಕೊಂಡಿರುತ್ತಾರೆ, ಇಂಥಾದ್ದರಲ್ಲಿ ಫೋರ್ಡ್ ರೆಂಟೆಗಳನ್ನು ಉಪಯೋಗಿಸಿ ಜನರನ್ನು ನಿರ್ಗತಿಕರನ್ನಾಗಿ ಮಾಡುವುದು ಅಪರಾಧವೆಂದು ತಿಳಿಯುತ್ತೇನೆ.

ಇದರಮೇಲೆ ತಿಳಿದುಬರುವುದೇನೆಂದರೆ ಜನರ ಬಲವಿಲ್ಲದ ಸ್ಥಾನದಲ್ಲಿ ಯಂತ್ರಗಳಿಗೆ ಆಶ್ರಯಕೊಡಬೇಕು. ಬೇಕಾದಷ್ಟು ಜನ ಶಕ್ತಿಯಿರುವ ಹಿಂದೂಸ್ಥಾನಕ್ಕೆ ಯಂತ್ರಗಳ ಉಪಯೋಗವೇ ಇಲ್ಲವೆಂದು ಸ್ಪಷ್ಟವಾಗುವುದಿಲ್ಲವೆ? ಯಾಕೆಂದರೆ ಜನರು ಕೆಲಸವಿಲ್ಲದೆ ಕುಳಿತಿರುತ್ತಾರೆ. ಅವರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡುವುದು ಮುಖ್ಯ ಕೆಲಸವಾಗಿದೆ. ಆದ್ದರಿಂದ ಯಂತ್ರಗಳಿಗೆ ಆಶ್ರಯಕೊಡದಿರುವುದೂ ಗ್ರಾಮೋದ್ಯೋಗ ಸಂಘಗಳಿಗೆ ಸಹಾಯಮಾಡುವುದೂ ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿರುತ್ತದೆ.

"ಲೋಕಮತ"

ಹಿಂದೂ ಮಹಿಳೆಯ ಆದರ್ಶವಾವುದಿರಬೇಕೆಂದು ವಿವೇಕಾನಂದರ ಸಲಹೆ

೧೯೦೯ರಲ್ಲಿ ಸಿಸ್ಟರ್ ನಿವೇದಿತರವರು ಸ್ವಾಮಿ ವಿವೇಕಾನಂದರ ಅಭಿಪ್ರಾಯಗಳೇನೆಂದು ಈ ರೀತಿ ಬರೆದಿರುವರು. "ಮುಂದಿನ ಸ್ತ್ರೀಯರಿಗೆ ಹಿಂದಿನ ನೈತಿಕಬಲ ಬೇಕೆಂಬುದೇ ವಿವೇಕಾನಂದರ ಅಭಿಪ್ರಾಯ. ಆದರ್ಶ ಸ್ತ್ರೀಯು ಭಕ್ತಿಸರಳರಬೇಕು. ಅವಳು ಈಗಿನ ವಿಜ್ಞಾನವನ್ನು ಕಲಿಯಬಹುದು, ಆದರೆ ಅದರ ಆರ್ಜನೆಯಲ್ಲಿ ಪ್ರಾಚೀನ ನೀತಿ ನಿಯಮಗಳನ್ನು ಮರೆಯಬಾರದು. ಸಮಾಜದ ಸುಧಾರಣೆಗೆ ಸಹಾಯಕವಾದ ಅಲ್ಪ ಶಕ್ತಿಯನ್ನಾದರೂ ಒದಗಿಸಿಕೊಡುವ ವಿದ್ಯೆಯೇ ಆದರ್ಶಪ್ರಾಯವಾದುದು ಎಂದು ಸ್ವಾಮಿಯವರ ಅಭಿಪ್ರಾಯ. ಮಹಿಳೆಯು ತನ್ನ ಪ್ರತಿಯೊಂದು ಚರ್ಯೆಯಲ್ಲಿ ತನ್ನ ಸಹೋದರಿಗಳಾದ ಭಾರತಸ್ತ್ರೀಯರ ಉತ್ಕರ್ಷವನ್ನೇ ಆಶಿಸಬೇಕು. ರಜಪೂತರ ಕಥೆಗಳು ರಾಷ್ಟ್ರಪ್ರೇಮದಿಂದ ತುಂಬಿತುಳುಕಾಡಬಹುದು. ಆದರೆ ಈಗಿನ ಸ್ತ್ರೀಯರು ಅಂತಹ ಆದರ್ಶಗಳನ್ನು ದ್ವಿಗುಣಿತವಾಗಿ ಕಟ್ಟಿಕೊಂಡಿರಬೇಕು. ಸ್ತ್ರೀಯು ದೇಶಬಾಂಧವಳಬೇಕು. ಸ್ತ್ರೀಗೆ ಮನೆಯೊಂದಲ್ಲದೆ ಧರ್ಮವೊಂದಲ್ಲದೆ ಗುರುಪ್ರೇಮವೊಂದಲ್ಲದೆ ದೇಶವಾತ್ಸಲ್ಯವೊಂದಲ್ಲದೆ ಬೇರೆ ಬಂಧನಗಳೇ ಇರಬಾರದು.

Prabuddha Bharath

ಹಿಂದೀ ವಿಮಾ ಕಂಪನಿಗಳ ಸಂರಕ್ಷಣೆಯು

ಇತ್ತೀಚಿಗೆ ಹಿಂದೂಸ್ಥಾನದಲ್ಲಿ ವಿಮಾ ವ್ಯವಸಾಯವು ತನ್ನ ಮುಂಗೈ ಕಸುವಿನಿಂದಲೇ ಉತ್ಕರ್ಷ ಹೊಂದುತ್ತಲಿದೆ. ಆದರೆ ಬಲವಾದ ಸ್ಥೈರ್ಯವನ್ನು ಹೊಂದಿದ ಎಷ್ಟೋ ಪರಕೀಯ ದೇಶದ ವಿಮಾ ಕಂಪೆನಿಗಳು ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಮತ್ತು ಹೊಸದಾಗಿ ಹುಟ್ಟುತ್ತಿರುವ ಹಿಂದೀ ವಿಮಾ ಕಂಪೆನಿಗಳೊಡನೆ ಬಲ್ಲೀ ಜೋರಿನ ಪೋಟಾಪೋಟಿ (Competition) ಯನ್ನು ನಡೆಯಿಸಿ ನಮ್ಮ ಜನರ ಸಾಮಾನ್ಯತ್ರಿಯ ... ಯೋಗಮಾಡಿಕೊಂಡೂ ಏನೋ ಪ್ರತಿ ವರ್ಷ ಹಿಂದೂಸ್ಥಾನದಿಂದ ಕೋಟ್ಯಾವಧಿ ರೂಪಾಯಿಗಳ ವ್ಯವಹಾರ ಮಾಡುತ್ತಿರುವುವು. ಬೇರೆ ದೇಶಗಳಲ್ಲಿ ಪರಕೀಯ ಕಂಪೆನಿಗಳ ಪ್ರವೇಶದ ಮೊದಲು ಆ ಕಂಪೆನಿಗಳಿಂದ ಬಹಳ ದೊಡ್ಡದಾದ ಠೇವು (heavy deposit) ಇಟ್ಟು, ಸರಕಾರದಿಂದ ಕೆಲಸ ಮಾಡುವ ಪರವಾನೆ (license) ಯನ್ನು ಪಡಕೊಳ್ಳಬೇಕಾಗುತ್ತದೆ. ಆ ಬಳಿಕವಾದರೂ ಪ್ರತಿ ವರ್ಷ ಆ ಕಂಪೆನಿಗಳು ಆಯಾ ದೇಶದಲ್ಲಿ ದೊರಕಿಸಿದ ಕಂತಿನ ಹಣದ (Premium) ಗಳ ಪ್ರಮಾಣದ ಮೇಲೆ ಸಾಕಷ್ಟು ಟಿಲ್ಯಾಕ್ಸನ್ನು ಅಲ್ಲಿ ಕೊಡಬೇಕಾಗುತ್ತದೆ. ಅದಲ್ಲದೆ ಪ್ರತಿ ವರ್ಷವೂ ತಮ್ಮ ವ್ಯವಹಾರದ ವರದಿಯನ್ನು ಆಯಾಯ ಪತ್ರಿಕೆಯನ್ನೊಪ್ಪಿಸಿ ಒಪ್ಪಿಗೆ ಪಡೆಯಬೇಕೆಂಬ ನಿರ್ಬಂಧಗಳು ಆ ವಿದೇಶೀ ವಿಮಾ ಕಂಪೆನಿಗಳ ಮೇಲೆ ಇರುತ್ತವೆ. ಇದಲ್ಲದೆ ಆ ಪರದೇಶೀ ಕಂಪೆನಿಗಳು ಸ್ವದೇಶೀ ಕಂಪೆನಿಗಳ ಸ್ಥೈರ್ಯಕ್ಕೆ ಧಕ್ಕೆ ತಗಲುವಂಥ ಅನ್ಯಾಯದ ಪೋಟಾಪೋಟಿಯನ್ನು ನಡೆಸಿದರೆ ಅವುಗಳ ಪರವಾನೆಯು ರದ್ದಾಗುತ್ತದೆ.

Sadananda'

ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ

೧೮೮೧	೯೫೯,೫೧೪
೧೮೯೧	೧೦೫೬,೮೦೨
೧೯೦೧	೧,೧೩೪,೭೧೩
೧೯೧೧	೧,೧೯೫,೩೫೬
೧೯೨೧	೧,೨೪೭,೩೬೮
೧೯೩೧	೧,೩೬೩,೨೧೫

'Madras Presidency 1881-1931

ಅಳು-ಮೋರೆಯವರಿಗಾಗಿ.

೧ ಉಪಾಧ್ಯಾಯ—ಮಗು, ನನ್ನ ಈ ಲೆಕ್ಕ ತಪ್ಪು ಕಾಣೋ. ಇದರ ಉತ್ತರ ಅರು ಎಂದಾಗಬೇಕಿತ್ತು.

ಹುಡುಗ—ಹೌದು ಸಾರ್. ನನಗದು ನೆನಪಲೇ ಇದ್ದಿತ್ತು.

ಉಪಾಧ್ಯಾಯ—ಮತ್ತೇಕೆ ತಪ್ಪು ಮಾಡಿದೆ?

ಹುಡುಗ—ನಿಮಗೆ ಗೊತ್ತಿದೆಯೋ ಎಂದು ನೋಡಲಿಕ್ಕೆ ಸಾರ್.

× × × × × ×

೨ ಮಾಸ್ಟ್ರು—ಸೂರ್ಯನು ಹೆಚ್ಚು ದೂರದಲ್ಲಿದ್ದಾನೋ, ಬೆಂಗಳೂರೋ?

ಹುಡುಗ—ಬೆಂಗಳೂರು ಸಾರ್.

ಉಪಾಧ್ಯಾಯ—ಹೇಗೆ ಅದು?

ಹುಡುಗ—ಸೂರ್ಯನ ನಮ್ಮ ತಲೆಯ ಮೇಲೆಯೇ ಇದ್ದಾನೆ ಸಾರ್. ಬೆಂಗಳೂರು ಎಲ್ಲಿದೆಯೋ!

× × × × × ×

೩ ಉಪಾಧ್ಯಾಯ—ಯಾವುದನ್ನು ಕಲಿಯುವಾಗಲೂ ಬುಡದಿಂದ ತುದಿಯ ವರೆಗೆ ಕಲಿಯಬೇಕು. ವಿದ್ಯಾರ್ಥಿ—ಈಜುವುದನ್ನು?

ಈಗಲೇ ತಯಾರಾಗಿದೆ! ಬೇಗನೆ ಕೊಂಡುಕೊಳ್ಳಿರಿ!! ತ್ವರೆ ಪಡಿರಿ!!!

ಎಮ್ ಗಣಪತಿರಾವ್ ಐಗಳ್, ಇವರಿಂದ ರಚಿತವಾದ

ಸೋಸಿಯೋಲೊಜಿ

ಅಥವಾ

ಸಮಾಜಶಾಸ್ತ್ರ.

ಹಾಯರ್ ಎಲಿಮೆಂಟರಿಗ್ರೇಡಿನ ವಿದ್ಯಾರ್ಥಿಗಳಾದ ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯುಪಯುಕ್ತವಾದ ಪುಸ್ತಕ

ಟ್ರೈನಿಂಗ್ ಶಾಲೆಗಳ ಸಿಲೆಬಸ್ ಪ್ರಕಾರ ಬರೆಯಲ್ಪಟ್ಟಿದು

ಖಾಸಗಿಯಾಗಿ ಹಾಯರ್ ಎಲಿಮೆಂಟರಿ ಗ್ರೇಡ್ ಪರೀಕ್ಷೆಗೆ ಹೋಗುವ ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ,–ಯಾರ ಸಹಾಯವೂ ಇಲ್ಲದೆ ಕಲಿಯಲು ಅತ್ಯುಪಯೋಗಕರವಾದ ಪುಸ್ತಕ. ಶಾಲಾ ಮತ್ತು ಸರಕಾರೀ ಪರೀಕ್ಷೆಯ ಪ್ರಶ್ನೆಗಳನ್ನು ಒಳಗೊಂಡಿದೆ

284 ಪುಟಗಳುಳ್ಳದ್ದು, ಸುಂದರವಾದ ಬ್ಯಾಂಡು, ಮುದ್ದಾದ ಮುದ್ರಣ.

ಕ್ರಯ ಒಂದು ರೂಪಾಯಿ ಮಾತ್ರ.

ಪುಸ್ತಕ ದೊರೆಯುವ ವಿಳಾಸ —

ಶಾರದಾ ಛಾಪಖಾನೆ, ರಥವೀಧಿ ಮಂಗಳೂರು

ಲೋಧ್ರಾ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತ್ರಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜೆಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಕಿರ್ಲೋಸ್ಕರ ಕಿಫಾಯತ್ ಯಂತ್ರ

ವನ್ನು ಉಪಯೋಗಿಸಿ, ನಿಮ್ಮ ಭೂಮಿಯನ್ನು,
ಕ್ರಮಪ್ರಕಾರ ಉಳಿರಿ



ಬಾಳಿಕೆ ಬರುವುದು,

ಹೆಚ್ಚು ಕೆಲಸ ಮಾಡುವುದು;

ನಾಜೂಕಾದ ಕೆಲಸ.

ಕೆಟಲಾಗಿಗೆ ಬರೆಯಿರಿ

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು — ಪೆರ್ರಿ ಮತ್ತು ಕಂಪೆನಿ ಲಿಮಿಟೆಡ್, ಮದ್ರಾಸು.

ಪಂಡಿತ ಡಿ ಗೋಪಾಲಾಚಾರ್ಲುರವರ

ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ನುಂಗಿಸುತ್ತಿದೆ ಅದರ ಫಲವೇ—ಆಯಾಸ ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿ ಬಿಡದಂತೆ ನೀವೀಗಲೇ ತಡೆಹಾಕಬೇಕು, ಉತ್ತಮೋಪಾಯವೇ ಜೀವಾಮೃತಸೇವನೆ— ಈ ಪರಿಣಾಮಕಾರೀ ಪೌಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣಶಕ್ತಿಯುತ ಪುರುಷರನ್ನಾಗಿ ಮಾಡುವುದು ಎಲ್ಲೆಲ್ಲಿಯೂ ದೊರೆವುದು —ದೊಡ್ಡದು ರೂ. 3—4—0 ಸಣ್ಣದು ರೂ 1—12—0

ತಯಾರಿಸುವವರು —ಆಯುರ್ವೇದಾಶ್ರಮ, ಪೋಸ್ಟು ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುದರ್ಶನ ಗ್ರಂಥಮಾಲೆಗಳು.

ಗ್ರಾಮೋಫೋನ್ ಸಂಗೀತಂ—ಶ್ರೀಮತಿ ತ್ರಿಪುರಾಂಬ, ಲಲಿತಾಂಬ, ಅಶ್ವತ್ಥಮ್ಮ ದುರ್ಗಾಬಾಯಿ ಶೋಟ್ಕ, ಹೀರಾಬಾಯಿ ಕಾಂತಿಮಣಿ, ರಂಗರತ್ನಂ ಇವರ ಕೋಕಿಲ ಸ್ವರದ ಹಾಡುಗಳು ಮತ್ತು ಶ್ರೀಯುತ ರಾಜಯ್ಯಂಗಾರ. ಚೆಂಬೈ ವೈದ್ಯನಾಥಂ, ಸುಬ್ಬಯ್ಯ ಭಾಗವತರು ಸುಬ್ರಮಣ್ಯಂ, ಪಟ್ಟವರ್ಧನ್ ಜೋಶಿ, ಮುಂತಾದವರ ರಸಭರಿತ ಕೃತಿ, ಕೀರ್ತನೆಗಳು ತ್ರಿಪುರಾಂಬ ಕಾಂತಾಮಣಿಯರ ಫೋಟೋದೊಂದಿಗೆ ಇರುವುದು, ಇದರ ಬೆಲೆ ಆಣೆ ೧,

ಭಕ್ತಾನಂದ ಭಜನೆ—ತ್ಯಾಗರಾಜರ ತೆಲುಗು ಕೃತಿಗಳು ತುಕಾರಾಮ, ಕೇಶವದಾಸರ ಮರಾಠಿ ಪದಗಳು, ಪುರಂದರದಾಸ್, ಕನಕದಾಸರ ಕನ್ನಡ ಕೀರ್ತನೆಗಳು ಮತ್ತು ವೇದಾಂತ ತತ್ವಬೋಧದ ಪದಗಳು ಸಹ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ ಇದರ ಬೆಲೆ ಆಣೆ ೧

ಶ್ರೀ ಪಾಂಡುರಂಗ ವಿಲಾಸ ಬುಕ್ ಡಿಪೋ, ಬೆಂಗಳೂರು ಸಿಟಿ

ಪ್ರತಿಗಳು ಸಿಕ್ಕುವ ವಿಳಾಸಗಳು:—ಮೆಸರ್ಸ್ ಶೆಟ್ಟಿ ಬ್ರದರ್ಸ್ ರಥಬೀದಿ ಮಂಗಳೂರು ದಿ ಲಲಿತ ಕಲಾ ಸ್ಟೋರ್ಸ್ ಮೂಡಬಿದ್ರಿ ಆರ್. ಎಟ್ಟಪ್ಪ ಶೆಟ್ಟಿ ಕಾರ್ಕಳ, ಮೆಸರ್ಸ್ ಬಾವಂಜೆ ಗುರುರಾಯರು, ಉಡುಪಿ ದಿ ಸಚ್ಚಿದಾನಂದ ಸ್ಟೋರ್ಸ್ ಕುಂದಾಪುರ ದಿ ಸತ್ಯನಾರಾಯಣ ಸ್ಟೋರ್ಸ್, ಪುತ್ತೂರು

An Advertisement in

'Swadeshabhimani'

Means a sure fortune to you

Ask for Contract Rates

The Swadeshabhimani office,

Car Street, Mangalore.

ಕ್ಷಯ ಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ.)

ಸಮಸ್ತ ವಾತರೋಗಗಳಿಗೆ
ಮಹಾ ನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

ಚಿತ್ರಾಯುತ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ ಎ, ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

ಸೈಂಟಿಫಿಕ್
ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ
ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ

The Scientific Gold Bangles Co., Ltd.,
Head Office—43, Biragimutam Street,
Post Box No 203, Madras.

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ, ಧೋತಿ, ಸೀರೆ, ಬೈರವಾಸು, ಚೆಕ್ಕು, ಚೀಟಿ ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Kanara and Malabar,
For— **A. & F. Harvey,**
Managers,—Madura Mills Co., Ltd.,

"ಶಾಂತಿನಿಕೇತನ"ದ ಕರ್ತರಾದ ಡಾ| ರವೀಂದ್ರನಾಥ ಠಾಗೂರರು.

[ಮಹಾಕವಿ ರವೀಂದ್ರರ ಹೆಸರನ್ನು ಕೇಳದ ಭಾರತೀಯನಿಲ್ಲ. "ಶಾಂತಿನಿಕೇತನ"ವೆಂಬ ಅವರ ಆದರ್ಶಪ್ರಾಯವಾದ ಶಿಕ್ಷಣ ಸಂಸ್ಥೆಯ ಹೆಸರನ್ನೂ ಕೇಳದವರಿಲ್ಲ. 'ವಿದ್ಯೆ'ಯ ಕುರಿತು ರವೀಂದ್ರರ ಅಭಿಮತವೇನು?—ಅವರ ಕೆಲವು ಕಾರ್ಯಕಲಾಪಗಳಾವುವು—ಎಂದು ನಮ್ಮ ವಾಚಕರಿಗೆ ತಿಳಿಸುವುದಕ್ಕಾಗಿ ಈ ಲೇಖನವನ್ನಿಲ್ಲಿ ಕೊಡಲಾಗಿದೆ]

(All Rights Reserved)

ವಿಚಾರಕ್ರಾಂತಿ, ೧.

ಕಲ್ಕತ್ತದಲ್ಲಿ ಅದೊಂದು ದೊಡ್ಡ ಕುಟುಂಬ. ಪ್ರತಿಯೊಬ್ಬರೂ ಪ್ರವೀಣರೇ. ಬುದ್ಧಿಯಲ್ಲಿ ಚುರುಕನ್ನು ಕಂಡವರಾದರೂ ಬುದ್ಧಿಯಲ್ಲಿ ಜಗತ್ತಿಗೇ ಆದರ್ಶಪ್ರಾಯರು. ಹಿರಿಯರು ಪಂಡಿತರಾದರೆ ಕಿರಿಯರು ಆದರ್ಶವಾದಿಗಳು. ಆಗಲಿಕ್ಕೆ ಬ್ರಹ್ಮ ಸಮಾಜದವರು, ಆದರೆ ಒಂದು ಸಮಾಜದ ಆವರಣದೊಳಗಿರಲು ಸಮ್ಮತಿಸುವವರಲ್ಲ. ಎಲ್ಲರೂ ವಿಶ್ವಪ್ರೇಮಿಗಳು, ಪೂರ್ಣ ಭಾವುಕರು,—ಭಕ್ತರು.

ದೇವೇಂದ್ರನಾಥ ಠಾಗೂರರೆಂಬವರು ಆ ಮನೆಯಲ್ಲಿ ಹಿರಿಯರು. ಅವರ ವಾಸವೆಂದರೆ ಕುಟುಂಬಕ್ಕೆ, ಸಮಾಜಕ್ಕೆ ಅಲ್ಲದೆ ದೇಶಕ್ಕೇ ಒಂದು ಮಹಾ ಸಂಪತ್ತಿನ ವಿಚಾರ. ಸಾಧುಗಳಲ್ಲಿ ಪರಮ ಸಾಧುಗಳು, ಪ್ರೇಮದಲ್ಲಿ ಪ್ರೇಮಸಾಗರರು, ಋಷಿಗಳಲ್ಲಿ ಮಹರ್ಷಿಗಳು. ಆದುದರಿಂದಲೇ ಮಹರ್ಷಿ ದೇವೇಂದ್ರನಾಥ ಠಾಗೂರರೆಂದೇ ಅವರಿಗೆ ಚಿರಸ್ಥಾಯಿ ಹೆಸರಾಯಿತು.

ತಾಯಿಯಿಲ್ಲದ ಶಾಂತಸ್ವಭಾವದ, ಸಂತಸ್ವಭಾವದ ಹಸುಗೂಸನ್ನು ಪವಿತ್ರ ವಿಧಿನಿಯಮಗಳ ಶಕ್ತಿಯಿಂದ ಪಾಲಿಸಿದರು. ನಿರ್ಮಲವೂ ಶಾಸ್ತ್ರೋಕ್ತವೂ ಆದ ಆಹಾರವನ್ನು ಮಗನ ದೇಹಕ್ಕಾಗಿ ಕೊಟ್ಟರು, ಉಜ್ವಲವೂ ವಿಶ್ವವ್ಯಾಪಕವೂ ಆದ ಮಹದಾದರ್ಶಗಳ ಆಹಾರವನ್ನು ಅವನ ಬುದ್ಧಿಗಿತ್ತರು. ಜ್ಞಾನರೂಪದಿಂದಿದ್ದ ದೈಹಿಕ ಹಾಗೂ ಮಾನಸಿಕ ಆಹಾರವನ್ನುಂಡ ರವೀಂದ್ರನು ಭಾವುಕ ಜಗತ್ತನ್ನು ಮೆಟ್ಟಿ ಮುಂದುವರಿಯಹತ್ತಿದನು.

ಅವನ ಬುದ್ಧಿಯು [illegible] ದೇಹವನ್ನು ಮೀರಿತು. ಮುಂದುವರಿದು [illegible] ಅದನ್ನು ಹತೋಟಿಯಲ್ಲಿಡುವ ನಿಸರ್ಗಸಿದ್ಧ [illegible]ಯದ ಪರಿಣಾಮವಾಗಿ ಕಾಣುವ ಲೇಖಗಳ ಆಶ್ರಯವನ್ನು ಸೇರಿ ನಾನಾ ಕವಿತೆಗಳನ್ನು ಬರೆದುಹಾಕಿದನು.

ಎಲ್ಲವೂ ಕವಿತಾಮಯ, ಭಾವನಾಮಯ, ಭಕ್ತಿಪರ [illegible] ಎಳೆಯ ಕೃತಿಗಳಾದರೂ ಅನುಭವಪೂರಿತನ್ನೇ ತೋರಿಸುವ ಭಾವಪೂರಿತತತ್ವಗಳು. ಜೀವನ ಪರಮ ರಹಸ್ಯವನ್ನು ಬಿಡಿಸುವ ಸಂಗತಿಗಳೊಡನೆ ಆಧ್ಯಾತ್ಮಿಕ ತತ್ವವಿವರಣೆಯ ಸಾಹಸವು ಅವನ ಪ್ರತಿಯೊಂದು ಕವಿಯುಲ್ಲಿತ(?) ಪೂರ್ವ ಪಶ್ಚಿಮ ಸಂಸ್ಕೃತಿಗಳ ಸಂಘರ್ಷಣೆಯ [illegible] ಮಾನಸಿಕವಾಗಿ ಮಾಡಿದ ಮಹರ್ಷಿಯವರು ಮಗನ ಚಿತ್ತದ ರೂಪಕತೆಯಲ್ಲಿ, ಪಶ್ಚಿಮ ಭಾವನೆಗಳಲ್ಲಿ ಪವಿತ್ರವಾದುವುಗಳನ್ನು ತುಂಬಿದ್ದರು. ಆದುದರಿಂದ ರವೀಂದ್ರನ ನಡೆನುಡಿಗಳಲ್ಲಿಲ್ಲಿ ಪಾಶ್ಚಿಮಾತ್ಯ ಸವಿಗನಸುಗಳೆ ಸೂರೆಯಾಗಿತ್ತು.

ಶಾಲಾ ಶಿಕ್ಷಣದಲ್ಲಿ ಕಾಲಹರಣ ಮಾಡದ ರವೀಂದ್ರನು ಯುವಕನಾದನು. ಸರಸ್ವತಿಗೆ ಲಕ್ಷ್ಮಿಯೊಡನೆ ಹಗೆಯೆಂದು ಬಾಲ್ಯದಿಂದಲೇ ತಿಳಿದಿದ್ದ ರವೀಂದ್ರನು ಬಡತನದ ಸುಳಿಮಳೆಯನ್ನು ಪಾರಮಾರ್ಥಿಕ ಪುಣ್ಯಸಲಿಲದ ಆಶ್ರಯದಿಂದ ತಪ್ಪಿಸಿಕೊಂಡು ಮುಂದೆ ನಡೆದ. ಅದರೇನು? ಹೃದಯಮಂದಿರದಲ್ಲಿರುವ ಮಹದುದ್ದೇಶದ ಅಸಹನೀಯ, ಅನಿರ್ವಚನೀಯ ಶಕ್ತಿಯ ಪ್ರಭಾವವು ಅವನಿಗೆ ಮಾನಸಿಕ ಶಾಂತಿಯನ್ನು ಕೊಡಲಿಲ್ಲ. ಪರಿಪೂರ್ಣವಾಗುವುದೆಂದು ಮಾಡಲುದ್ಯುಕ್ತನಾದ ವಿಷಯಗಳಲ್ಲಿ ಅಪೂರ್ಣತೆಯು ಕಾರ್ಮುಗಿಲು ಅವನಿಗೆ ಕಂಡುಬಂತು.

ಆನಂದದ ಚಿಂತೆಯೆಂದರೆ ರವೀಂದ್ರನೊಬ್ಬನಲ್ಲೀ ಸತ್ಯದ ಹುಡುಕಾಟದಲ್ಲಿ ಅವನಿಗೆ ಹೇಗೋ, ಏಕೋ ಪರಮ ಪ್ರೇಮ. ಅದಕ್ಕಾಗಿ ಹಳ್ಳಿಗಾಡುಗಳಲ್ಲಿ ಅವನ ನಿತ್ಯಸಂಚಾರ. ಬೆನ್ನನ್ನು ಚುಂಬಿಸುವ ತಲೆಕೂದಲನ್ನು ಹಾಗೇ ಬಿಟ್ಟು, ಶುಭ್ರ ವಸ್ತ್ರವನ್ನುಟ್ಟು, ವನ ವನಾಂತರಗಳಿಗೆ, ಗಿರಿ ಗಂಹ್ವರಗಳಿಗೆ ಅವನ ಯಾತ್ರೆ. ಜನ ಬೇಡ, ಧನ ಬೇಡ, ಅವನಿಗೆ ಬೇಕಾದುದು ಸತ್ಯಾನ್ವೇಷಣ,—ಶಾಂತಿನಿಕೇತನ.

ಹಿಂದಿಯ ದಿನಗಳು ಮುಗಿದು ಕೆಲವು ವರುಷಗಳಾದುವು. ಅವರ ಸ್ಮಾರಕಕ್ಕೋಸ್ಕರ ಎಂಬಂತೆ ಅವರ ಪ್ರೇಮಭೂಮಿಯಾದ ಬೋಲ್ಪುರದಲ್ಲಿ ೧೯೦೧ರಲ್ಲಿ 'ಶಾಂತಿನಿಕೇತನ'ವೆಂಬ ಆಶ್ರಮವನ್ನು ರವೀಂದ್ರರು ಸ್ಥಾಪಿಸಿ ಹತ್ತು ಮಂದಿ ಆದರ್ಶವಾದಿಗಳೊಡನೆ ಜೀವನ ನಡೆಸಲು ಪಕ್ರಮಿಸಿದರು.

ಅಡ್ಡ ನೀಟವಾಗಿರುವ ಗುಡ್ಡಗಳ ಮಧ್ಯೆ ಮನೋಹರ ಪ್ರದೇಶ. [illegible] ಗಾಳಿಯು ಲೋಕಕ್ಕೆ ಕೈಯೆತ್ತಿ ನಿಂತಿರುವ ಮರಗಿಡಗಳ ಮಧ್ಯೆ ಮೋಹಕ ಮಂದಿರ. ಶಾಂತಿಯು ನೆಲೆವೀಡಾದ ಅಂತಹ ಸೊಬಗಿನ ಹಳ್ಳಿಯಲ್ಲಿ ಸತ್ಯಾನ್ವೇಷಕರ ಸಾಹಸ. ಹಣದ ಸಹಾಯವಿಲ್ಲದಿದ್ದರೂ ಮನದ ಇಂಗಿತದ ಆಧಾರವಿದೆ. ನೂತನ ಸೃಷ್ಟಿನಿರ್ಮಾಣ ಶಕ್ತಿಯು ದಂಡವಿದೆ.

ವೃಂದಾವನದ ಎಣಿಕೆಯವು ಶ್ರೀಕೃಷ್ಣನೆಂಬ ರವೀಂದ್ರರಿಂದಾಯಿತು. ಅನುಯಾಯಿಗಳ ಸಲಹೆಗಳೊಡನೆ ತನ್ನ ಜಿಜ್ಞಾಸೆಯನ್ನು ಕೂಡಿಸಿ ಉನ್ನತಶಿಖರ ಸಮಾನ ಆದರ್ಶಗಳನ್ನು ನಿರೂಪಿಸಿದರು. ಪರಿಣಾಮವಾಗಿ ಶಾಂತಿನಿಕೇತನವು ಭಕ್ತಾಮಿ ವಿಶ್ವಾಸದ ಸತತ, ಶಾಂತಿಯ ತವರೂರಾ[illegible]ತು.



ಡಾ|| ಕವೀಂದ್ರ ರವೀಂದ್ರರು.

ಆಶ್ರಮವಾಸಿಗಳು ಪ್ರಾತಃಕಾಲ ೫ ಘಂಟೆಯೊಳಗೆ ಪ್ರಾರ್ಥನೆಗೆ ತೊಡಗುವರು. ಬೆಳಿಗ್ಗೆ ಪ್ರಾರ್ಥನೆಯಲ್ಲದೆ ಪ್ರೇಮದ ಪ್ರಿಯಕರ ಗಾನವದು. ನಾದಿಸ್ವನ ಮೆಚ್ಚು[illegible]ಯಲ್ಲ, ಮಾಡುವ ಪಕ್ಷೀ ಹೆಚ್ಚು. 'ಅವನು' 'ಇವನು' 'ತಾನು' ತನ್ನದು ಎಂಬ ದ್ವಂದ್ವಗಳು ಆಶ್ರಮದ ಬೇಲಿಯ ಹೊರಗೆ. ವೃಂದಾವನವಾಸಿಗಳ ಪರಿಸ್ಥಿತಿ ಎಷ್ಟು(?) ದೈನಂದಿನ ಮೌನವೆಂದರೆ ಅದಕ್ಕಿಂತ ದೊಡ್ಡ ಹೃದಯಸಂತಾಪದ ಹುಡುಕಾಟವು ಬೇರೆಯಿಲ್ಲ. ಆ ಮೂಕತನದಲ್ಲಿನ ಪಾವಿತ್ರ್ಯ ಪ್ರಭಾವದಿಂದ ನಿಗ್ರಹದ ಜನನವಾಗಿ ಸತ್ಯದ ಬೆನ್ನು ಹತ್ತುವ ಆಗ್ರಹವು ತಲೆದೋರುವುದು. ಅಂತಹ ಮೌನವು ತೀರ ವಿಚಿತ್ರವೆಂಬ ವಿಧಿಯಿದೆಯಾದರೂ ನಿಯಮೋಲ್ಲಂಘನೆಯ ಮಾತು ಅಲ್ಲಿಲ್ಲ. ಎಂತಹ ದೌಷ್ಟ್ಯವನ್ನೂ ಮಾಯಗೊಳಿಸುವ ಅದೊಂದು ಅಪ್ರತಿಮ ಶಕ್ತಿಯು ರವೀಂದ್ರರ ಮೌನಪ್ರಭೆಯಲ್ಲಿರುವುದೇ ಇದಕ್ಕೆ ಕಾರಣ.

ಆಟಪಾಟಗಳಲ್ಲಿ ಬಯಲು ಪ್ರದೇಶದಲ್ಲಿ ಪುಸ್ತಕಗಳ ಆಶ್ರಯವು ತೀರ ಸ್ವಲ್ಪ. ಎಲ್ಲ ಕಾರ್ಯಕಲಾಪ ಅಲ್ಲಿಯವರು. ವಿದ್ಯಾರ್ಥಿಗಳೂ ಹೌದು, ಬೇಸಾಯಗಾರರೂ ಹೌದು, ವೈದ್ಯರೂ ಹೌದು, ಅಂಚೆ ಪೇದೆಗಳೂ ಹೌದು. ಶಾಂತಿನಿಕೇತನವೆಂದರೆ ಸಣ್ಣ, ಸೊಬಗಿನ ಜಗತ್ತು. ಎಲ್ಲರೂ ಎಲ್ಲವುಗಳಿಗೆ ಅರ್ಪಿತರು. ಕೈಗಾರಿಕೆ, ಶಿಲ್ಪಕಲೆ, ಚಿತ್ರಕಲೆ, ನೇಯ್ಗೆ ಎಲ್ಲವುಗಳನ್ನೂ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ. ನರ್ತನ, ಗಾಯನಗಳ ಪ್ರತ್ಯೇಕ ಮಂದಿರಗಳಲ್ಲಿ ಶಿಕ್ಷಣ ಸಿಗುತ್ತದೆ. ಅಲ್ಲಿಯ ಲೋಕಕ್ಕನುಸಾರವಾದ ನ್ಯಾಯ ವಿಚಾರಣಾ ಮಂಡಲವೂ ಇದೆ. ನಾಟಕ ಸಭೆ, ತರ್ಕಸಭೆ, ಸಂಚಾರ ಸಭೆಗಳು ಇವೆ. ನಂದಾಲಾಲ ಬೋಸ್, ಅಸಿತ್ ಹಲ್ದಾರ, ಅವನೀಂದ್ರನಾಥ, ರಾಗೀಟರ್(?), ಸತೀಶಚಂದ್ರರೋಯ್, ಸಿ. ಎಫ್. ಎಂಡ್ರೂಸ್ ಮೊದಲಾದವರು ಶಾಂತಿನಿಕೇತನದ ಮುಂದಾಳುಗಳಾಗಿದ್ದವರು.

ಹೊರಳುವ ದಿನಗಳೆಡೆಯಲ್ಲಿ ರವೀಂದ್ರರ ಗೀತಾಂಜಲಿಯ ಉದಯವಾಯಿತು. ತಿಳಿಯದವರು ತಿಳಿದಂತೆ ಚರ್ಚಿಸಿ ಅದರ ಮೇಲೆ ತಿಳಿಯದಂತೆ ಗೋರಿಕಟ್ಟಲುದ್ಯುಕ್ತರಾದರೂ, ತಿಳಿದವರ ಬುದ್ಧಿಯು ಗೀತಾಂಜಲಿಗೆ ಚೇತನವಿತ್ತಿತು. ೧೯೧೨ರಲ್ಲಿ ದೇಹರಕ್ಷಣೆಗೆಂದು ಇಂಗ್ಲಾಂಡಿಗೆ ಹೋದಾಗ ರವೀಂದ್ರರಿಗೆ ಗೀತಾಂಜಲಿಯ ಅಪ್ರತಿಮೆಯ ಪ್ರವಾಹಶಕ್ತಿಯು ಅರಿವುಂಟಾಯಿತು. ಮಹಾ ಕವಿಗಳು ಅವರ ಶರಣಾರ್ಥಿಗಳಾದರು. ಮಹಾ ತಾತ್ವಿಕ ಪುರುಷರು ಅವರನ್ನು ಸಂದರ್ಶಿಸಿ ಭಕ್ತಿಯ ಮುಡಿಪನ್ನರ್ಪಿಸಿ ಭಾರತದಲ್ಲಿ ಮುಕ್ಕಾಲುವಾಸಿ ಕವಿಗಳು' ಎಂಬುದು ಸಹಜವೆಂದರು. ಮಿ|| ಸ್ಟಾಪ್ ಫೋರ್ಡ್ ಬ್ರೂಕ್, ಮತ್ತು ಐರ್ಲೆಂಡಿನ ಈಟ್ಸ್ ಕವಿಗಳು ಗೀತಾಂಜಲಿಯನ್ನು ಹೊಗಳಿ ಹೊಗಳಿ ದಣಿಯದಾದರು. ಎಲ್ಲೆಲ್ಲೂ ಗೀತಾಂಜಲಿಯ ಅನುವಾದ, ಪ್ರಶಂಸೆ, ರವೀಂದ್ರರ ಕೀರ್ತಿಗಾನ.

ಯುರೋಪು ಅಮೆರಿಕಾಗಳು ಬೆರಗುಗೊಂಡುವು. ರವೀಂದ್ರರ ಅದರಿಂದುಬ್ಬಲಿಲ್ಲ. ಎಲ್ಲವೂ '[illegible]ಸ್ವದೆಂದಿರುವಾಗ ನನ್ನದೆಂಬುದು ಯಾವುದು ತಿಳಿಸುವೆಯಾ? ಪ್ರಿಯಾ?' ಎಂದು ಕೇಳುತ್ತ ದೇಶಕ್ಕೆ ಹಿಂದಿರುಗಿದರು.

೧೯೧೩ರ ನವಂಬರ ತಿಂಗಳು. ಶಾಂತಿನಿಕೇತನದ ಹಾದಿಯಲ್ಲಿ ತಂತಿಪೇದೆಗಳ ಸೈಕಲ್‌ಗಳ ಓಟ. ಎಲ್ಲಿ ನೋಡಿದರೂ ಆನಂದದ ಸುದ್ದಿ. ನೋಬೆಲ ಬಹುಮಾನವು 'ಗೀತಾಂಜಲಿಗೆ' ಅರ್ಪಣೆಗೊಂಡಿದೆಯೆಂಬ ಸುವಾರ್ತೆಯು ದಿಗ್ದಿಶೆಗಳಲ್ಲಿ ಹರಡಿತು. 'ನನಗಲ್ಲ ಎನಗೆ ಸಿಸಗಿದ್ದರೆ ನನಗಿದ್ದಂತೆ' ಎಂದು ರವೀಂದ್ರರು ಅದನ್ನು ಪಡೆದರು. ಆನಂದಸಂದೇಶಗಳೊಡನೆ ಹಲವು ಸಣ್ಣ ಸಣ್ಣ ಕವಿಗಳು 'ನೋಬೆಲ್ ಪ್ರೈಜ್ ಪಡೆಯುವುದು ಹೇಗೆ?' ಎಂದು ರವೀಂದ್ರರೊಡನೆ ಕೇಳಿದರು. ಒಂದು ತಂತಿಯು ಅವರಿಗೆ ತಲುಪಿ 'ಇನಾಮಿನ ಹಣದಿಂದ ೫೦೦೦ ರೂಪಾಯಿಗಳನ್ನು ಸಾಲವಾಗಿ ಕೊಡಿರಿ' ಎಂದು ಕೇಳಿತು.

ಶಾಂತಿನಿಕೇತನವೆಂದರೆ ಸ್ವಾತಂತ್ರ್ಯದ ಆಗರ. ಶಿಸ್ತಿಗೂ, ಸೌಜನ್ಯಕ್ಕೂ ಮತ್ತು ಧರ್ಮಕ್ಕೂ ವಿರೋಧವಾಗದ ಯಾವ ಸ್ವಾತಂತ್ರ್ಯದ ಅಧಿಕಾರವನ್ನು ಹೊಂದಿದರೂ ಪ್ರತ್ಯಾರ್ಥಕ(?) ಚತ್ಮಯು ತೋರದು. ಒಮ್ಮೆ ಪ್ರಸಿದ್ಧ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ಶಾಂತಿನಿಕೇತನದ ವಿದ್ಯಾರ್ಥಿಗಳನ್ನು ಕಾಣಲು ಬಂದರು. ಅವರು ಮೊದಲು ನೋಡಿದುದು,—ಬಳಿಯ ದೊಡ್ಡ ಮರದ ಕೊಂಬೆಗಳೆಡೆಯಲ್ಲಿ ಕುಳಿತು ಅನಂದಾತಿಶಯದಿಂದ ಪಠಿಸುತ್ತಿದ್ದ ವಿದ್ಯಾರ್ಥಿಯೊಬ್ಬನನ್ನು. ರವೀಂದ್ರರೊಡನೆ ವಿಚಾರಿಸಲು 'ಮರಹತ್ತುವ ಕಾಲವು ಬಂದೇ: ಅದು ಬಾಲ್ಯ. ಈ ಕಾಲವನ್ನು ಶಾಲಾಮಂದಿರದಲ್ಲಿ ಕಳೆಯುವ ಹೊರೆಯು ಬಾಲಕರಿಗೆ ಅಸಹನೀಯ' ಎಂದರು. ಶಾಂತಿನಿಕೇತನವು ಶಾಲೆಯೂ ಅಲ್ಲ, ಆಶ್ರಮವೂ ಅಲ್ಲ, ಕೈಗಾರಿಕಾ ಮಂದಿರವೂ ಅಲ್ಲ. ಅದು ದೊಡ್ಡ ಸಾಮಾಜಿಕ ಕೂಟ. ಸಮಾಜ ಪ್ರಪಂಚದಲ್ಲಿ ದೇವನ ಸಂದರ್ಶನವಾಗಬೇಕೆಂಬುದೇ ಅದರ ಮಹದುದ್ದೇಶ.

ಸಂಸಾರಕ್ಕೆ ಯೋಗ್ಯರಾದ, ಸಮರ್ಥ ಜೀವಿಗಳನ್ನು ಜಗತ್ತಿಗೆ ಒದಗಿಸಿಕೊಡುವ ಸಾಹಸದಲ್ಲಿ ಶಾಂತಿನಿಕೇತನವು ಜಗತ್ತಿನಲ್ಲೇ ಖ್ಯಾತಿಗಳಿಸಿದೆ. ಅಲ್ಲಿಂದ ಹೊರಗಾಗುವ ಯುವಕ ಯುವತಿಯರಿಗೆ ದನಮೇಯಿಸುವ, ಸೌದೆ ಹೆಕ್ಕುವ, ಹಣ್ಣು ಹುಡುಕುವ, ಪ್ರಾಣಿಗಳನ್ನು ಸಲಹುವ, ಅದರಲ್ಲಿ ಸಂಸಾರಭಾರವನ್ನು ಹೊರುವ ಅಭ್ಯಾಸವು ಪೂರ್ಣವಾಗಿರುತ್ತದೆ. ವಿಶೇಷತಃ ಅಲ್ಲಿಯವರೆಲ್ಲರೂ ಜನಸೇವೆಯಲ್ಲಿ ಜನಾರ್ಧನನ ಆರಾಧನೆ ಮಾಡುವವರು.

ಶಿಕ್ಷಣವೆಂಬುದು ಒಂದು ಉದ್ಯೋಗವೆಂದು ತಿಳಿದುಕೊಳ್ಳುವ ಅಧ್ಯಾಪಕನು ತಪ್ಪುದಾರಿ ಹಿಡಿದವನು. ಶಿಕ್ಷಣವು ತನ್ನ ಜೀವನಧರ್ಮವೆಂದು ತಿಳಿದು, ಅದರ ಫಲವನ್ನುಣ್ಣುವ ಆಶೆಯ ಬದಲಿಗೆ ಅದರ ಮಹತ್ವವನ್ನರಿತು ಆಚರಿಸುವವನೆ ನಿಜವಾದ ಗುರುವಾಗಿದ್ದಾನೆ. ಶಿಕ್ಷಣ ಸಮಸ್ಯೆಯ ವೇದಿಕೆಯಲ್ಲಿ ಉಪಾಧ್ಯಾಯನು ನಿಸ್ವಾರ್ಥ ಬಲಿಗೆ ಸಿದ್ಧನಿರಬೇಕು. ಆ ಬಲಿದಾನದ ಮಹಾ ಸಂದೇಶವನ್ನು ಜಗತ್ತಿಗೆ ಸಾರಬೇಕು. ಉಪಾಧ್ಯಾಯನು ವಿದ್ಯಾರ್ಥಿಗಳ ಜೀವನದ ಹೆದ್ದಾರಿಯನ್ನು ತೋರಿಸಿ ಅವರು ಅದರಲ್ಲಿ ಸುಗಮವಾಗಿ ಮುಂದರಿಯುವಂತೆ ಸಾಮಾಜಿಕ, ಧಾರ್ಮಿಕ, ನೈತಿಕ ಸೌಕರ್ಯಗಳನ್ನೇರ್ಪಡಿಸಿಕೊಡಬೇಕು—ಇವೆಲ್ಲ ರವೀಂದ್ರರ ಮತ.

ಮಹಾಯುದ್ಧದ ಅವಸಾನವಾಯಿತು. ಭ್ರಾಂತಿ ಮತ್ತು ಇಂಗ್ಲೆಂಡುಗಳೊಳಗಣ ಗೌರವಪೂರ್ವಕ ಮೈತ್ರಿಯು ಪ್ರಶ್ನಾವಳಿಯು ತಲೆಯೆತ್ತಿತು. ರಾಜಕೀಯದ ಒರೆಗಲ್ಲಿನಲ್ಲಿ ಹಲವನ್ನು ಪರಿಶೀಲಿಸಲಾಯಿತು. ಭಾರತೀಯ ಗೌರವದ ಮುಸುಕು ಒಡೆಯಿತು. ಕರಾಳ(?), ಕೊಲೆ, ಬಂಧನ, ಸತ್ಯಾಗ್ರಹ, ಅಸಹಕಾರ, ನಿಶಸ್ತ್ರೀಕರಣ(?) ಕಲಹಗಳೇ ಮೊದಲಾದ ಬಾಡುವಾದ ದ್ವಂದ್ವಗಳ ಜನನವಾಯಿತು. ಸತ್ಯಲೋಕದಲ್ಲಿ ಸ ದೇಶದ ಮಿಥ್ಯ ಚಳವಳಿವು ತಲೆಯೆತ್ತಿತು. ಹಿಂದೀಯನೆಂಬವನು ಹಿಂದಿರಬಾರದೆಂಬ ತುತೂರಿಯು ಕರೆಯಾಯಿತು. ರವೀಂದ್ರರೇನು ಮಾಡುವರು? 'ಭಾರತೀಯರಂಗದಲ್ಲಿ ಸ್ವಯುಕ್ತಿ ಇಲ್ಲದ ಅಧಿಕಾರವು ಕಾಣಿರುವುದು ದುರ್ಭರವೆಂದು ತಿಳಿದು ಸರಕಾರಕ್ಕೆ ತನ್ನ ನಿಷೇಧ ಸೂಚನೆ ಮಾಡಬೇಕೆಂದು ಬಯಸಿ, ಸರಕಾರವು ತನಗೆ ದಾನ ಮಾಡಿದ್ದ 'ಸರ್' ಬಿರುದನ್ನು ಧಿಕ್ಕರಿಸಿದರು. ಬದಲಿಗೆ, ತನ್ನ ದೇಶಬಾಂಧವರು ತಮ್ಮ ವಿಶ್ವವಿದ್ಯಾನಿಲಯಗಳಲ್ಲಿತ್ತ "ಡೊಕ್ಟರ್" ಬಿರುದನ್ನು ಇಟ್ಟುಕೊಂಡರು.

ಪೋಲೀಸರನ್ನಲ್ಲದೆ ರಾಷ್ಟ್ರಪ್ರೇಮವನ್ನು ತೋರಿಸುವ ಬಲವು ರವೀಂದ್ರರಲ್ಲಿತ್ತಾದರೂ, ಕಾರ್ಯಕ್ಕೆ ಬಾರದ ರಾಷ್ಟ್ರಪ್ರೇಮದ ಬರಿಯ ಕನಸಿನ ಗಂಟು ಬಿಕ್ಕಿತಕ್ಕಂತಲೂ ಕಟ್ಟುದನ್ನೇ ಉಂಟುಮಾಡೀತೆಂದ ಅವರ ಭಾವನೆಯಾಗಿತ್ತು. ಕಟ್ಟಿನ ನಿಟ್ಟಿನಲ್ಲಿನ ನಿಜದ ರಾಷ್ಟ್ರವಾತ್ಸಲ್ಯವು ಜಾತ್ರೆಯಲ್ಲಿನ ದೇವಪೂಜೆಯಂತೆ, ದೋಣಿಯಿಲ್ಲದೆ ಸಮುದ್ರವನ್ನು ದಾಟುವ ಹುಚ್ಚು ಸಾಹಸದಂತೆ—ಎಂದು ಅವರ ಹೇಳಿಕೆಯಿತ್ತು. ಅದಕ್ಕಾಗಿ ಅವರು ತನ್ನ ಕರ್ತವ್ಯದಲ್ಲಿ ಕಣ್ಣಿಟ್ಟು ಅನಗತ್ಯವೆಂಬುದನ್ನು ಮರೆತರು. ತನ್ನ ಹಳ್ಳಿಯು ಇಲ್ಲವು ಲೋಕದ ಐಕ್ಯದಲ್ಲಿ ಪರಿಣಮಿತವಾಗಲೆಂದು ಪ್ರಾರ್ಥಿಸುತ್ತಿದ್ದರು. ತ್ಯಾಗದ ಮುಡಿಪನ್ನು ಭೂಮಿಗರ್ಪಿಸುತ್ತಿದ್ದರು.

೧೯೨೦ ಮತ್ತು ೧೯೩೦ರಲ್ಲಿ ಕವಿರವೀಂದ್ರರು ಯುರೋಪು ಅಮೆರಿಕಾಗಳಿಗೆ ಪ್ರಯಾಣ ಬೆಳೆಸಿದರು. ಯಾವ ದೇಶಕ್ಕೆ ಹೋದರೂ 'ಗೀತಾಂಜಲಿ'ಯ ಕರ್ತೃವನ್ನು ಕಾಣಲು ಸಾವಿರಾರು ತಜ್ಞರು ನೆರೆದರು. ಜರ್ಮನಿ, ಫ್ರಾನ್ಸ, ಡೆನ್ಮಾರ್ಕ ಮತ್ತು ಸ್ವೀಡನ್‌ಗಳ ಸರಕಾರಗಳು ಅವರ ಪಾದಸಂಚಾರಕ್ಕಾಗಿ ಬಟ್ಟೆ ಹಾಸಿದುವು. ಕನಸಿನಲ್ಲಿ ನೆನೆಸದಷ್ಟು ಉದಾರ ಪುರಸ್ಕಾರವು ಶಾಂತಿನಿಕೇತನದ ಪ್ರಭಾವಕ್ಕೆ ದೊರೆಯಿತು.

K SHARP! LOOK AHEAD!

Murdeshwar's
nking Institute.

eer Institute on the West Coast Opens out Careers for Business Graduates, Under-graduates, S. S. L. C's and also for those have not passed any University amination.

)aches students for the Special Banking Courses (C. A. I. B. & . I. B.) and also for Account-, Secretarial, and Insurance rses (L. A. A., A. C. R A, F C. ., F I S A., A. C. I I, etc) lasses for the Cambridge School ificate (Senior Cambridge) Examation for 1935 and for the Bombay Advocates Examination also held

Ladies are also admitted.

arol yourself NOW Classes are all swing Expert tuition (Oral Postal) by well-qualified and rienced Lecturers

FEES VERY MODERATE

further particulars apply to

D R Murdeshwar,
Dip Econ, F R Econ, S. (Lond.)
Principal
anapathy High School Street,
Mangalore

‘ಸರಸ್ವತಿ’
೧೯೩೫ನೇಯ ವರ್ಷಾರಂಭ.

ಶ್ರೀಮತಿ–ಜಯಲಕ್ಷ್ಮೀದೇವಿ ಬಳ್ಳಾರಿ–ಶ್ರೀಮತಿ ಸರಸ್ವತಮ್ಮ–ಮೈಸೂರು–ಶ್ರೀಮತಿ–ಇಂದಿರಾಬಾಯಿ–ಮೈಸೂರು–ಶ್ರೀಮತಿ–ಜಯಲಕ್ಷ್ಮಮ್ಮ–ಬೆಂಗಳೂರು–ಶ್ರೀಮತಿ–ಜಯಮ್ಮ–ಬೆಂಗಳೂರು–ಶ್ರೀಮತಿ–ಸುಮತೀಬಾಯಿ–ಶ ಂಗಭದ್ರ–ಮೊದಲಾದ ಸುಪ್ರಸಿದ್ಧ ಮಹಿಳೆಯರ ಶ್ರೀ ಎಸ್. ಬಿ ಕರೂರು–ಧರ್ಮಾದರಂ–ಶ್ರೀ ಅ. ನ. ಕೃಷ್ಣರಾಯರ–ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ಬೆಂಗಳೂರು–ಶ್ರೀ ಕಡೂರು ಶ್ರೀಪಾದರಾಯರು–ಶ್ರೀ ಮಾನ್ವಿ ರಾಯಚೂರು–ಶ್ರೀ ಸ್ವಾಮಿ ಹೈದರಾಬಾದು ಶ್ರೀ ಕಲಾಕುಮಾರ ತುಂಗ ಭದ್ರ–ಪಂಡಿತ ತಾರಾನಾಥರು ಮೊದಲಾದ ಮಹನೀಯರ ಲೇಖನ–ಕತೆ–ಕವಿತೆಗಳಿಂದಲೂ ಸುಪ್ರಸಿದ್ಧ ಕುಶಲ ಮಣಿಯರ ಭಾವಚಿತ್ರಗಳಿಂದಲೂ ಕೂಡಿ ಪ್ರಕಟವಾಗಿರುವುದು. ೧೯೩೫ನೆಯ ವರ್ಷದ ಚಂದಾದಾರರಿಗೆ ಉಚಿತ, ಬೆಲೆ ೦–೩–೦.

ವಿಳಾಸ – ಸರಸ್ವತೀ ಕಾರ್ಯಾಲಯ,
ಚಾಮರಾಜಪೇಟೆ–ಬೆಂಗಳೂರು ಸಿಟಿ

Standard Furniture Co. Ltd
KALLAI, MALABAR
The BEST HOUSE for FURNITURE.

BRANCHES —
Madras —34—35, General Patters Road, Mount Road
Trichinopoly —11, Promenade Road, Cantt

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ಹೊಸ ರಾಶಿ ಅಕ್ಕಿ	3—6	3—12
ಹೊಸ ಮುಸ್ಕತಿ	3—12	4 — 0
ಹೊಸ ಗುಡ್ಡು	3—10	4— 0
ಊರ ಅವ್ವಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ. ಗಿಕ್ಕೆ	5—12	6— 4
ಎಲ್ಲೂರು ಬೆ ಮು ಗಿಕ್ಕೆ	4— 2	4— 4
ಗೋದಿ ಗೋಣಿ ಗಿಕ್ಕೆ	10— 0	12— 8
ತೊಗರಿ ಗೋಣಿ ಗಿಕ್ಕೆ	9— 6	10— 0
ಹುರುಳಿ ಗೋಣಿ ಗಿಕ್ಕೆ	6 — 8	7—10
ಕಡಲೆ ಗೋಣಿ ಗಿಕ್ಕೆ	8 — 4	10— 8
ತೊಗರಿಬೇಳೆ ಗೋಣಿ ಗಿಕ್ಕೆ	10— 0	17 — 0
ಉದ್ದು ಗೋಣಿ ಗಿಕ್ಕೆ	7— 0	9— 8
ಹೆಸರು ಗೋಣಿ ಗಿಕ್ಕೆ	8— 8	9— 6
ಜೀರುಬೆಲ್ಲ ಒಂದು ಗಿಕ್ಕೆ	32— 8	35— 0
ಉದ್ದು ಗೋಣಿ ಗಿಕ್ಕೆ	4— 8	5— 0
ಕೊಬ್ರಿ ಒಂದಿ ಗಿಕ್ಕೆ	48— 0	55— 0
ಕೊಬ್ರಿ ಹಿಂಡಿ ಒಂದಿ ಗಿಕ್ಕೆ	26— 8	28— 0
ಎಳ್ಳೆಂಡಿ ಒಂದಿ ಗಿಕ್ಕೆ	40— 0	—
ಕೊಬ್ರಿ ಎಣ್ಣೆ ಮುಡಿ ಗಿಕ್ಕೆ	8—11	4 — 1
ಎಳ್ಳೆಣ್ಣೆ ಮುಡಿ ಗಿಕ್ಕೆ	5— 2	5—10
ಚಿಮಣಿಎಣ್ಣೆ ಪೆಟ್ಟಿಗೆ ಗಿಕ್ಕೆ	5—7	5—7
ಮೋರಿಸ ಸಕ್ಕರೆ ಮು. ಗಿಕ್ಕೆ	3— 6	3— 8
ಮೆಣಸು	5— 4	6— 4
ಸಾಸಿವೆ ಮುಡಿ ಗಿಕ್ಕೆ	4—12	5— 4
ಕಾಳುಮೆಣಸು ಖ ಗಿಕ್ಕೆ	130— 0	135 0
ಯೇಲಕ್ಕಿ ಮಣ ಗಿಕ್ಕೆ	24— 0	35— 0
ಗೇರುಬೀಜ ಮು. ಗಿಕ್ಕೆ	3— 8	3—12
ಕಲ್ಲಿಜ ಒಂದಿ ಗಿಕ್ಕೆ	42— 0	44— 0
ತಾಂಬ್ರತಗಡು ಮ ಗಿಕ್ಕೆ	9 — 0	9— 4
ತಾಂಬ್ರಪಾತ್ರಗಳು ಮ ಗಿಕ್ಕೆ	12— 8	14— 0
ಬೀಜಬೆಳ್ಳಿ ಸೇರು ಗಿಕ್ಕೆ	14—12	15— 0
ಹಿತ್ತಾಳೆ ತಗಡು ಮ. ಗಿಕ್ಕೆ	9— 2	9 — 4
ಪವನು ಗಿಕ್ಕೆ	21— 8	21 — 8
ಹುಣಸೆ ಹುಳಿ ಒಂದಿ ಗಿಕ್ಕೆ	27— 8	40— 0
ನೇಟಿವ್ ಕಾಫಿ ಒಂದಿ ಗಿಕ್ಕೆ	185— 0	190— 0
ಫಿದೇರಿ ಕಾಫಿ ಒಂದಿ ಗಿಕ್ಕೆ	275— 0	285— 0
ಹಳೆ ಅಡಿಕೆ	100— 0	120— 0
ಹೊಸ ಅಡಿಕೆ	75— 0	85 — 0

NEW ARRIVALS.
Medicines.

Dr Schuessler's Twelve Tissue Remedies 5 gr. bot As 4/-
Homoeopathy Medicines 5 gr bot As. 5/-
Sugar of Milk Dr Schwabe's original bot 1 lb Rs 2/-
Hairloom Oil-a world renowned remedy As 8/-per phial
Dr Haele's New Curative Earth—Radium Cure Rs 4/-per lb
Dr Schwabe's other special remedies are always in stock
Please call us for your requirements

Kanarese Book a Family Guide to Biochemistry Re 1/-
„ Domestic Homoeopathy Rs 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6 Delightful in aroma, charming in appearance Please try

Kirloskar Pumps

We are the Representatives for Kirloskar Brothers for their reliable Shallow well and Deep well Pumps, Spring Cots, Spring Couches etc, and steel —

Pipes and pipe fittings at cheap prices Coir Mats and Mattings Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up to-date Machine in Standard and portable sizes

For Further particulars please apply to—

Basel Mission Book & Tract Depository,
Mangalore, S K or Hubli S M

ಕಣ್ಣಿನ ಹನಿ

...ಸನ್" ಎಂಬ ನೇತ್ರಔಷಧಿಯ ಈ ಔಷಧವು ...ರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಹೋಗಿ ...ಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ...ಕ್ರಿಯೆಯೂ ಅವಶ್ಯವಿಲ್ಲ ಖಾತರಿ ಗುಣವಾಗು ...ವಾಗದಿದ್ದರೆ ಹಣ ವಾಪಸ್ ಕ್ರಯ ರೂ 2

ಕನ್ನಡ ಇಂಗ್ಲೀಷಿನಲ್ಲಿ ... —

...ary ... Pinchpo'k Bengal

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ
ನಸ್ಪಗಿನ ಅಂಟಿಕ್ ಕಾಗದದಲ್ಲಿ ಮುದ್ರಣ
ಕ್ರೌನ್ ½ ಆಕಾರದ 188 ಪುಟಗಳು
ಉತ್ತಮ ತರಗತಿಯ ಹಾಸ್ಯ
ಬೆಲೆ ರೂ. 1—4—0.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಇಲ್ಲಿಂದ ಪಡಕೊಳ್ಳಬಹುದು

ರೇಷ್ಮೆಯಂತೆ, ನುಣುಪಾದ ಮತ್ತು
ಹೊಳಪಾದ ಕೇಶಧಾವ.

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ
ಕೂದಲುಗಳ ಬುಡವನ್ನು ಜಾಗರೂ
ಕತೆಯಿಂದ ತಿಕ್ಕಿರಿ.
(ಮನ ಉಗ್ರಕರವಾದ ಸುಗಂಧವನ್ನುಳ್ಳದು.)
ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.
ತಯಾರಿಸು ವರು— ಬೆಲೆ ಸೀಸೆ ಒಂದಕ್ಕೆ ರೂ 0—12—0.
ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.
ಏಜಂಟರು —
ಕುಂತಳ ಕೌಮುದಿ ತೈಲ,
ವೆನ್ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಶಾಲಿವಾಹನ ಬ। ಶಕ ೧೮೫೬ನೆಯ ಭಾವ ಸಂವತ್ಸರದ ಮಾಘ ಬ। ೫ ಶನಿವಾರದಿಂದ ಮಾಘ ಬ। ೧೧ ಶುಕ್ರವಾರದ ವರೆಗಿನ ಪಂಚಾಂಗ (೯೩೬ನೇಯ ಸಿಂಹಸೋಣ)

[illegible]	[illegible]	[illegible]	[illegible]	[illegible]	[illegible]	[illegible]	[illegible]
23	ಶನಿ	೫	೪೪	ಚಿತ್ರಾ		೧೧	
24	ರವಿ	೬	೪೫	ಸ್ವಾತಿ	೨೪	೧೨	
25	ಸೋಮ	೭	೪೩	ವಿಶಾಖಾ	೨೫	೧೩	
26	ಕುಜ	೮	೪೧	ಅನುರಾಧಾ	೪೫	೧೪	
27	ಬುಧ	೯	೩೮	ಜೇಷ್ಠಾ	೬	೧೫	
28	ಗುರು	೧೦	೩೪	ಮೂಲಾ	೨೧	೧೬	
1	ಶುಕ್ರ	೧೧	೨೯	ಪೂ. ಷಾಢಾ	೧೪	೧೭	

ಮೆನೇಜರರ ನೋಟೀಸು

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ—ಅಗತ್ಯವಾಗಿ ತಿಳಿಸಬೇಕು.

ಕೆರೆಯ ಮುರೆಯಲ್ಲಿ.

ಅಥವಾ

ಅಂತರಂಗ.

ಲೇಖಕ ಶ್ರೀ ಶಿವರಾಮ ಕಾರಂತ.

೬. 'ಮುಂಡೇಕೂಳಿಗೆ ಮುನ್ನೂರು ವಿಘ್ನ'

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಒಂದು ದಿನ ಅವಳ ತಂದೆಯು ಪರಂಧಾಮವನ್ನು ಸೇರಲು ಆ ನೆಪದಿಂದ ಅವಳು ತವರುಮನೆಯನ್ನು ಸೇರಿದಳು. ಹೊರಡುವ ಗಳಿಗೆಯಲ್ಲಿ ತನ್ನ ಆಭರಣಗಳನ್ನು ಒಯ್ಯುವ ನಿಶ್ಚಯಮಾಡಿ ಅದಿರಿಸಿದ ಪೆಟ್ಟಿಗೆಯನ್ನು ತೆರೆದಳು. ಆದರೆ ಅದರೊಳಗೆ ಮಣ್ಣು ಸಹ ಇದ್ದಿರಲಿಲ್ಲ. ಇವಳಿಗೆ ಮೊದಲೇ ಅವರು ಜಾರಿಸಿದ್ದರು ನಾಗಮ್ಮಗೆ ಕಣ್ಣೀರು ಬಂತು. ಇದರ ಸೇಡನ್ನು ತೀರಿಸುವ ಹವಣಿಕೆಯಾಯಿತು. ತಿರುಗಿ ಮಂಜೇಶ್ವರಕ್ಕೆ ಹೊರಡುವ ಮನಸ್ಸು ಆಗಲಿಲ್ಲ ಕೊನೆಯವರೆಗೆ ಹೋಗಲೂ ಇಲ್ಲ ಅವಳ ಅಣ್ಣಂದಿರಿಬ್ಬರು—ಕೇಶವರಾಯನೊಬ್ಬ, ನಾಗೇಶರಾಯನೊಬ್ಬ ಇಬ್ಬರಿಗೂ ತಂಗಿಯ ಮೇಲೆ ತುಂಬಾ ಆಕ್ಕರೆ ಅವರೂ ಇವಳನ್ನು ಆಗ್ರಹಪಡಿಸಿದರು ಅಂತೂ ಅವಳು ತನ್ನ ಭಾವೀ ಜೀವಮಾನವನ್ನು ಅಣ್ಣಂದಿರ ಮನೆಯಲ್ಲೇ ಕಳೆವುದೆಂದಾಯಿತು. ಅವರ ಹೇಳಿಕೆಯಂತೆ ನಾಗಮ್ಮನ ಪರವಾಗಿ ಅಶನಾರ್ಥಕ್ಕೆ ಕೋರ್ಟಿನಲ್ಲಿ ದಾವೆಯು ದಾಖಲಾಯಿತು ವರುಷಕ್ಕೆ ೧೦,೦೦೦ವನ್ನು ಕೇಶವರಾಯನು ಕೇಳಿಸಿದನು. ಎರಡು ನೂರು ವರುಷಗಳ ರಣಾಗ್ರವಾಗಿ ೩೦೦೦ವನ್ನು ಕೊಡುವುದೆಂದು ರಾಜಿಯಲ್ಲಿ ದಾವೆಯು ತೀರಿತು ಅಣ್ಣಂದಿರಿಬ್ಬರು ಹಿಗ್ಗಿದರು ಅವರ ಒಟ್ಟು ಹುಟ್ಟುವಳಿ ವರುಷಕ್ಕೆ ೧೨೦೦ವಿರಲಿಲ್ಲ. ತಂಗಿಯ ದೆಸೆಯಿಂದ ೧೫೦೦-೪೦೦೦ ಸಾಗಲಿ!

ಆದರೆ ನಾಗಮ್ಮನ ಗೋಳೇ ಗೋಳು ಒಂದು ವರುಷವಾದರೂ ಅವಳ ಕೂಳು ನಿರಾತಂಕವಾಗಿ ಸಿಕ್ಕಿದ್ದಿಲ್ಲ ಪ್ರತಿವರ್ಷವೂ ಕೋರ್ಟಿನಲ್ಲಿ ಜಗಳಾಡಿಯೇ ಪಡೆಯಬೇಕಿತ್ತು ಆದರೂ ದೊರೆಯುತ್ತಿತ್ತು ಇತ್ತ ನಾಗಮ್ಮನು ತವರುಮನೆಗೆ ಬಂದಾಗ ಅವಳ ತಂಗಿಯೂ ಒಂದೆರಡು ಬಾರಿ ಬಂದಿದ್ದಳು ತಂಗಿಗೆ ಎರಡು ಮಂದಿ ಹೆಣ್ಣು ಮಕ್ಕಳು ನಾಗಮ್ಮನು ಬೇಸರವಾಗಿ ಒಂದು ಹೆಣ್ಣುಕೂಸನ್ನು ತನ್ನ ಬಳಿಯಲ್ಲಿರಿಸತೊಡಗಿದಳು ಅವಳ ಮಮತೆಯು ಆ ಚಿಕ್ಕ ಕೂಸಿನ ಮೇಲೆ ಉಕ್ಕಿ ಹರಿಯುತ್ತಿತ್ತು. ಈಗ ಅವಳ ಮುದ್ದಿನ ರತ್ನಮ್ಮನಿಗೆ ೧೦ ವರುಷವಾಯಿತು ರತ್ನಮ್ಮನ ತಂದೆಯು ತೀರ ಬಡವ ಆ ಬಡತನದಲ್ಲಿ ಅವನಿಗೆ ಯೋಗ್ಯ ವರನನ್ನು ಹುಡುಕಿ ಲಗ್ನ ಮಾಡುವುದು ಕಷ್ಟಕ್ಕೆ ಬಂದಿತು ಅಂತೂ ಇಂತೂ ಒಬ್ಬ ಬಡ ಹುಡುಗನನ್ನು ನಿಶ್ಚಯಿಸಿದನು ಆದರೂ ಆ ಹುಡುಗನ ತಂದೆ ೧೦೦೦ ದಕ್ಷಿಣೆಯಾದರೂ ಇಲ್ಲದೆ ಹುಡುಗನನ್ನು ಒಯ್ಯಲಾಗದು ಎನ್ನತೊಡಗಿದನು ನಾಗಮ್ಮನ ತಂಗಿ ಅಕ್ಕನಲ್ಲಿ ಕಣ್ಣೀರು ಸುರಿಸಿದಳು ಅದಕ್ಕೆ ನಾಗಮ್ಮನು—'ಅದಕ್ಕೇಕೆ ಇಷ್ಟು ಚಿಂತೆ' ರತ್ನಮ್ಮನು ನನ್ನ ಮಗು ನನಗೇ ಅವಳ ಲಗ್ನ ಕಾಲದಲ್ಲಿ ೩೦೦೦ವಾದರೂ ಕೊಡಬೇಕೆಂದು ಮನಸ್ಸಿತ್ತು ನೀನು ದಾರಿದ್ರ್ಯವನ್ನು ಉಂಡದ್ದು ಸಾಕಾದರೂ—ನನ್ನ ರತ್ನಮ್ಮನ ಊಟಕ್ಕೆ ಚಿಂತೆ ಮಾಡಬಾರದು' ಎಂದಳು ಸರಿ ನಾಗಮ್ಮನು ಅಣ್ಣನಲ್ಲಿ ತನ್ನ ಹಣ ಕೇಳಿದಳು ಕೇಶವರಾಯರಿಗೆ ಭಯಂಕರ ಕೋಪವಾಯಿತು "ನೀನು ಮನೆಯಿಂದ ಹೊರಡು" ಎನ್ನುವವರೆಗೂ ಸರಿ ಆದರೆ, ನಾಗೇಶನು ರಾಜಿ ಮಾಡಲು ಬಂದನು 'ಅಣ್ಣಾ ಅವಳನ್ನು ಓಡಿಸಿದರೆ ವರುಷಕ್ಕೆಷ್ಟು ನಷ್ಟ ಬಲ್ಲೆಯಾ?' ಎಂದನು ಅಂತೂ ಮನಸಿಲ್ಲದೆ ೩೦೦೦ ಕೇಳಿದಾಗ ನಾಗೇಶನ—ಬಂದದ್ದೆಲ್ಲ ಖರ್ಚಾಯಿತು ನಿನಗಾಗಿ ೧೫೦೦ ಸಾಲ ಮಾಡಿ ಕೊಡುತ್ತೇನೆ ಎಂದು ನಾಗಮ್ಮನನ್ನು ಹತ್ತೆಂಟು ಬಾರಿ ಗೋಳಾಡಿಸಿ ರತ್ನಮ್ಮನ ಲಗ್ನಕ್ಕೆ ನೆರವಾದನು

ಅಂದಿನಿಂದ ಅವನಿಗೆ ಇಬ್ಬರು ತಂಗಿಯರ ಮೇಲಣ ಪ್ರೇಮವು ತಗ್ಗಿತು. ಆದರೆ ಅಶನಾರ್ಥದ ಹಣದ ಮೇಲೆ ಮಮತೆ ತಪ್ಪಲಿಲ್ಲ.

ಎಷ್ಟೋ ವರುಷಗಳು ಸಂದುವು 'ಈಗ ನಾಗಮ್ಮಗೆ ೪೦ ವರ್ಷ ಪ್ರಾಯ ಅವಳಿಗೀಗ ಸಂಸಾರದಲ್ಲಿ ವಿರಕ್ತಿ ಹುಟ್ಟಿದೆ ತಾನು ಸಾಯುವುದರೊಳಗೆ ಅದಷ್ಟು ದಾನಧರ್ಮವಾಡಿ ತನ್ನ ಶೇಷಾಯುಷ್ಯವನ್ನು ಕಾಶಿಯಲ್ಲಿ ಕಳೆಯಬೇಕೆಂದು ನಿಶ್ಚಯಿಸಿದಳು ಅದಕ್ಕೆ ಸಮ್ಮತಿಯು ದೊರೆಯಲು ಎರಡು ವರುಷಗಳ ಕಣ್ಣೀರು ಸುರಿಸಿತು ಹೊರಡುವುದರೊಳಗೆ ಊರಿನ ಶ್ರೀ ಶಂಕರ ದೇವಾಲಯವನ್ನು ಜೀರ್ಣೋದ್ಧಾರಮಾಡುವ ಆಸೆ ಅವಳಿಗಿತ್ತು. ತನ್ನ ಅಶನಾರ್ಥದ ಹಣ ಅದಕ್ಕೆ ಖರ್ಚಾಗಲಿ ಎಂದು ಬಯಸಿದ್ದಳು ಆದರೆ ಅಣ್ಣಂದಿರು ಅವಳ ಆಸೆಯನ್ನು ಪೂರ್ತಿಮಾಡಲು ಬಿಡಲಿಲ್ಲ ಕೊನೆಗೊಂದು ದಿನ ಊರಿನ ಚಿಂತೆ ಬಿಟ್ಟು ಅವಳು ಕಾಶಿಗೆ ನಡೆದಳು ಕಿರಿಯಣ್ಣನು ಅವಳನ್ನು ಅಲ್ಲಿಯವರೆಗೂ ಮುಟ್ಟಿಸಿ

ದುವು ಈ ರೋಗದ ಚಿಹ್ನೆಗಳಾಗಿವೆ ಸಾಧಾರಣವಾಗಿ ಮೈಯಲ್ಲಿ ಇಲ್ಲವೆ ಹೊಟ್ಟೆಯು ಸ್ವಲ್ಪ ನೋಯುವುದುಂಟು. ಪ್ರಾರಂಭದಲ್ಲಿ ಕೆಲವರಿಗೆ ಛಳಿಯೂ ಬರುತ್ತದೆ. ಪ್ರಾತಃಕಾಲದಲ್ಲಿ ಜ್ವರದ ವೇಗವು ೧೦೧ ಡಿಗ್ರಿಗಳೂ ಸಾಯಂಕಾಲದಲ್ಲಿ ೧೦೩-೧೦೪ ಡಿಗ್ರಿಗಳೂ ಇರುತ್ತದೆ. ನಾಡಿಯು ನಿಮಿಷಕ್ಕೆ ೮೦ರಿಂದ ೯೦ ಸಾರಿ ಹೊಡೆದುಕೊಳ್ಳುವುದು ರೋಗಿಗೆ ಅರುಚಿ, ವಾಂತಿ, ಹೊಟ್ಟೆಯುಬ್ಬರ, ಮಲಬದ್ಧತೆ ಇಲ್ಲವೇ ಅತಿಸಾರ ಉಂಟಾಗುವುವು

ಎರಡನೆ ವಾರದಲ್ಲಿ ಜ್ವರದ ವೇಗವು ಹೆಚ್ಚುತ್ತದೆ ಎದೆ ಹೊಟ್ಟೆಗಳ ಮೇಲೆ ಕೆಂಪಾದ ದದ್ದುಗಳು ಕಾಣಿಸಿಕೊಳ್ಳುತ್ತವೆ ತುಟಿ ಮತ್ತು ನಾಲಗೆಯ ಮೇಲೆ ಕಪ್ಪಾದ ಕಂದುಬಣ್ಣದ ಚಿಹ್ನೆ ಇರುತ್ತವೆ ಶೇಕಡ ೧೦ ಮಂದಿ ರೋಗಿಗಳಲ್ಲಿ ರಕ್ತಸ್ರಾವವಾಗುತ್ತದೆ ರಕ್ತವು ಹೇರಳವಾಗಿ ಹೋದರೆ, ಪ್ರಜ್ಞೆ ತಪ್ಪುವುದು ಮತ್ತು ಕೆಲವು ವೇಳೆ ಪ್ರಾಣಾಪಾಯವಾಗುವುದೂ ಉಂಟು

ಮಲಗಿಸಿರಬೇಕು. ರೋಗಿಯ ಕರುಳುಗಳು ಬಹು ದುರ್ಬಲವಾಗಿರುವುದರಿಂದಲೂ ಹುಣ್ಣಾಗಿರುವುದರಿಂದಲೂ, ಆಹಾರವನ್ನು ಅವು ಜೀರ್ಣಿಸಲಾರವು. ಗಟ್ಟಿ ಆಹಾರವು ರಕ್ತಸ್ರಾವವನ್ನು ಹೆಚ್ಚಿಸುವುದು ಆದುದರಿಂದ ಮರಳುವ ಹಾಲಿಗೆ ನಿಂಬೇರಸವನ್ನು ಹಿಂಡಿ ಒಡೆಯಿಸಿದ ಮೇಲೆ, ಶುದ್ಧವಾದ ಬಟ್ಟೆಯಲಿ ಅದನ್ನು ಶೋಧಿಸಿಕೊಂಡು ನೀರಿನಂತಹ ಹಾಲನ್ನು ರೋಗಿಗಳಿಗೆ ಧಾರಾಳವಾಗಿ ಕುಡಿಯಲು ಕೊಡಬೇಕು. ಇದು ಸುಲಭವಾಗಿ ಜೀರ್ಣಿಸುವುದಲ್ಲದೆ, ಕರುಳುಗಳ ಹುಣ್ಣುಗಳನ್ನು ರೇಗಿಸುವುದಿಲ್ಲ ಕುದಿಸಿ ಆರಿಸಿದ ಶುಚಿಯಾದ ನೀರನ್ನು ರೋಗಿಗೆ ಧಾರಾಳವಾಗಿ ಕೊಡಬಹುದು ಬಾಯಿ ಹಲ್ಲು ನಾಲಗೆಗಳನ್ನು ಬ್ರಷ್‌ನಿಂದ ತೊಳೆಯುತ್ತಿರಬೇಕು. ಹೊಟ್ಟೆಯು ನೋವಿದ್ದರೆ ಹೊಟ್ಟೆಯ ಮೇಲೆ ಬಿಸಿನೀರಿನ ಶಾಖವನ್ನು ಕೊಡಬೇಕು. ರಕ್ತಸ್ರಾವವಾಗುತ್ತಿದ್ದರೆ, ಮಂಜುಗಡ್ಡೆಯ ಚೀಲವನ್ನು ಹೊಟ್ಟೆಯ ಮೇಲೆ ಇಡುತ್ತಿರಬೇಕು.

ರೋಗಿಯ ಜ್ವರವನ್ನು ಇಳಿಸಲು ತಣ್ಣೀರಿನಲ್ಲಿ ತೋಯಿಸಿದ ಸ್ಪಂಜಿನಿಂದ ೧೫-೨೦ ನಿಮಿಷಗಳ ಕಾಲ ತೊಳೆಯುವರು ಅನಂತರ ಬಟ್ಟೆಯಿಂದ ಉಜ್ಜಿ ತೇವವನ್ನು ಹೋಗಲಾಡಿಸುವುದಕ್ಕೆ ಬದಲಾಗಿ ಗಾಳಿಯನ್ನು ಬೀಸಿ ತೇವವನ್ನು ಒಣಗಿಸುವರು ಇದರಿಂದ ರೋಗಿಗೆ ಶೀತವಾಗುವುದಿಲ್ಲ ನೀರಿನಲ್ಲಿ ನೆನೆಸಿದ ಉದ್ದವಾದ ಬಟ್ಟೆಯನ್ನು ಹಿಂಡಿ ಮಡಿಕೆ ಮಾಡಿ, ರೋಗಿಯ ಮೈಮೇಲೆ ಸುತ್ತಿ, ಮೇಲೆ ಕಂಬಳಿ ಹೊದಿಸುವರು. ಅರ್ಧ ಗಂಟೆಯ ನಂತರ ಆ ಬಟ್ಟೆಯನ್ನು ತೆಗೆದು ಹಾಕಿದಾಗ, ಜ್ವರದ ವೇಗವು ಕಡಿಮೆಯಾಗಿರುವುದು.

ವಿಷಮಶೀತ ಜ್ವರವು ಅಂಟುರೋಗ ರೋಗಿಗಳನ್ನು ಮನೆಯಲ್ಲಿಟ್ಟು ಉಪಚರಿಸುವುದೂ ಸಂಸಾರಿಗಳಿಗೆ ಬಹು ಕಷ್ಟ ಆದುದರಿಂದ ಆಸ್ಪತ್ರೆಗಳಿಗೆ ಅವರನ್ನು ಸಾಗಿಸುವುದು ಉತ್ತಮ ರೋಗಿಯ ಮಲಮೂತ್ರ ಶ್ಲೇಷ್ಮ ಮುಂತಾದವುಗಳೂ ಉಚ್ಛಿಷ್ಟ ಪದಾರ್ಥಗಳೂ, ಉಪಯೋಗಿಸಿದ ಪಾತ್ರೆಗಳೂ, ಬಟ್ಟೆಬರೆಗಳೂ ಇವೆಲ್ಲಾ ರೋಗವನ್ನು ಹರಡುವುವು ಇವುಗಳಿಗೆಲ್ಲ ವಿಷಕ್ರಿಮಿನಾಶಕ ಗುಣವುಳ್ಳ ಲೈಸೋಲ್ ಮೊದಲಾದ ದ್ರಾವಕವನ್ನು ಹಾಕಬೇಕು ರೋಗವಿರುವ ವರೆಗೂ ಗುಣವಾದ ಕೆಲವು ದಿನಗಳ ವರೆಗೂ ರೋಗದ ವಿಷಕ್ರಿಮಿಗಳು ನಾಶವಾಗುವಂತೆ ೧೦ ಗ್ರೇನ್ ಯೂರೋಟ್ರೋಪೀನ್‌ನನ್ನು ಪ್ರತಿನಿತ್ಯವೂ ರೋಗಿಗೆ ಕೊಡಬೇಕು.

ಉಡುಪಿಯಲ್ಲಿ ಇತ್ತೀಚೆಗೆ ಜರಗಿದ ಫಿಸಿಕಲ್ ಕಲ್ಚರ್ ಕೊಂಪಿಟೇಶನ್ (ಅಂಗಸಾಧನೆ ಸ್ಪರ್ಧೆ)ನಲ್ಲಿ ಭಾಗವಹಿಸಿದವರ ಭಾವಚಿತ್ರ ಈ ಸ್ಪರ್ಧೆಯಲ್ಲಿ ಜಿಲ್ಲೆಯ ನಾಲ್ಕು ಜಿಮ್ನೇಶಿಯಂಗಳು ಭಾಗವಹಿಸಿದ್ದುವು

ಬಂದನು. ಅಲ್ಲಿಂದ ಬರುವಾಗ ಅವಳ ಕೈ ಮೇಲೆ ೧೦೦ ರೂಪಾಯಿ ಇರಿಸಿಬಂದಿದ್ದನು ಅದೂ ಅತಿ ಸಂಕಷ್ಟದಿಂದ ಆದರೂ ಈ ವಯಸ್ಸಿನಲ್ಲಿ ಅವಳಿಗೆ ಧಾರಾಳಬುದ್ಧಿಯೇಕೆ ಬೇಕಿತ್ತೋ ತಿಳಿಯದು-ದಾನಧರ್ಮ ಮಾಡಿ ತಿರುಗಿ ಎರಡೇ ತಿಂಗಳಿನಲ್ಲಿ ಕಾಗದ ಬರೆದಳು. ಕೇಶವನು ಚೆನ್ನಾಗಿ ಗದರಿಸಿ ಒಂದು ಕಾಗದವನ್ನು ಬರೆದನು 'ನಿನ್ನ ದಾನಧರ್ಮದಿಂದ ನಮ್ಮ ಸಂಸಾರವು ಮಣ್ಣುಪಾಲಾಯಿತು' ಎಂಬುದೇ ಒಕ್ಕಣೆ ಅಂದಿನಿಂದ ಅವಳಿಗೆ ತಿಂಗಳೊಂದರ ೧೫ ರೂಪಾಯಿಗಳನ್ನು ಮಣಿಯಾರ್ಡರು ಮಾಡುತ್ತಿರುವನು ಅವಳು ಕಣ್ಮುಚ್ಚಿದರೆ ಅದನ್ನೂ ಮಜಾ ಮಾಡಬಹುದೋ ಎಂಬ ಆಸೆಯೂ ಅವನಿಗಿದೆ ಆದರೆ ಹಾಗಾದರೆ ತನಗೆ ದೊರಯುವ ಅಶನಾರ್ಥ ಕರಗೀತೆಂದು ಆ ಸೂಕ್ಷ್ಮ ಬುದ್ಧಿಗೆ ಹೊಳೆದಿಲ್ಲವೋ ಏನೋ

ಅಂತೂ ಅವಳು ಬದುಕಿರುವಷ್ಟು ದಿನ ಅವಳ ಮಾವನ ಮನೆಯವರು ದೈವವನ್ನು ಅನಂತವಾಗಿ ಪ್ರಾರ್ಥಿಸುತ್ತಿರುವರು ಏನೆಂದು? ನೀವೇ ಯೋಚಿಸಿರಿ

ಪ್ರಾಯಶಃ ನಾಗಮ್ಮನ ಕಥೆ ಕೇಳಿಯೇ ಊರವರು 'ಮುಂಡೆ ಕೂಳಿಗೆ ಮುನ್ನೂರು ವಿಘ್ನ'ವೆಂದು ಗಾದೆ ಮಾಡಿರಬೇಕು

ಟೈಫಾಯ್ಡ್ ಅಥವಾ ವಿಷಮ ಶೀತ ಜ್ವರ.

ಚಿಕಿತ್ಸೆ ಹೇಗೆ?

ಈ ಜ್ವರವು ಸಾಮಾನ್ಯವಾಗಿ ೩-೪ ವಾರಗಳು ಬಿಡುವಿಲ್ಲದೆ ಬರುತ್ತದೆ ಕೆಲವರಿಗೆ ೭ರಿಂದ ೧೦ ದಿನಗಳು ಮಾತ್ರ ಬಾಧಿಸುತ್ತದೆ ದಣಿವು, ತಲೆನೋವು, ಬೇಸರಿಕೆ ಮೊದಲಾ

ಮೂರನೆ ವಾರದಲ್ಲಿ ಜ್ವರ ಕಡಿಮೆಯಾಗುತ್ತಾ ಬಂದು ೨೮ನೆ ದಿನ ಜ್ವರವು ಸಂಪೂರ್ಣವಾಗಿ ಬಿಟ್ಟುಹೋಗುತ್ತದೆ ಈ ವಾರದಲ್ಲಿ ರಕ್ತಸ್ರಾವವು ಅಧಿಕವಾಗುವುದು.

ಈ ರೋಗದ ಚಿಕಿತ್ಸೆಯಲ್ಲಿ ಔಷಧಕ್ಕಿಂತಲೂ ರೋಗಿಯ ಶುಶ್ರೂಷೆ ಪ್ರಾಮುಖ್ಯವಾದುದು, ಗಾಳಿ ಬೆಳಕುಗಳು ಧಾರಾಳವಾಗಿ ಬರುವ ಕೊಠಡಿಯಲ್ಲಿ ರೋಗಿಯನ್ನು

ಸದ್ಯದಲ್ಲಿ ಇಲ್ಲಿಯ ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ ಪ್ರದರ್ಶಿಸಲ್ಪಡಲಿರುವ "ಫೆಂಟಮ್ ಒಫ್ ದಿ ಹಿಲ್ಸ್" ಎಂಬ ಚಲಚ್ಚಿತ್ರದೊಳಗಿನ ಒಂದು ದೃಶ್ಯ.

ಕನ್ನಡ-ಹಿಂದೀ ಕಲಹ.

('ಸಮದರ್ಶಿ'ಯಿಂದ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಹಿಂದೀಯ ಮೂಲವನ್ನು ವಿಚಾರಿಸಿದರೆ ಅದು ವಿದೇಶೀ ಅಥವಾ ಹೊಸ ಭಾಷೆಯಲ್ಲ ವೆಂದೂ, ನಮ್ಮ ಭಾರತದಲ್ಲಿಯೇ ಹುಟ್ಟಿದ ಭಾಷೆಯಾಗಿದೆಯೆಂದೂ ಖಚಿತವಾಗುವುದು. ಭಾರತದ ಪುರಾತನ ಸಂಸ್ಕೃತಿಯ ಭಾಷೆಯು ಸಂಸ್ಕೃತವಷ್ಟೆ! ಅದರ ಅಪಭ್ರಂಶಗಳಾದ ಹಲವು ತರದ ಪ್ರಾಕೃತ ಭಾಷೆಗಳಲ್ಲಿ ಶೌರ ಸೇನಿಯೆಂಬುದು ಕಾಶಿ, ಅಲ್ಲಹಾಬಾದ್, ಇತ್ಯಾದಿ ಪಟ್ಟಣಗಳಿರುವ ಸಂಯುಕ್ತ ಪ್ರಾಂತ್ಯ ದಲ್ಲಿ ಪ್ರಚಲಿತವಾಗಿದ್ದಿತು ಈ ಶೌರಸೇನಿಯೇ ಹಿಂದೀಯ ಮೂಲವಾಗಿಯೂ, 'ಹಿಂದೀ' ಎಂಬ ಹೆಸರು ಆ ಮೇಲೆ ಅದಕ್ಕೆ ಬಂದುದಾ ಗಿಯೂ ಅದರ ಸಾಹಿತ್ಯ ಚರಿತ್ರೆಯಲ್ಲಿ ಹೇಳಿದೆ ಆಗ ಅದು 'ವ್ರಜಭಾಷೆ'ಯೆಂದೂ, 'ಭಾಷೆ' ಯೆಂದೂ ಕರೆಯಲ್ಪಟ್ಟು ಸೂರದಾಸ್, ತುಲಸೀ ದಾಸ್ ಇತ್ಯಾದಿ ಮಹಾತ್ಮರ ಉದ್ಗ್ರಂಥಗಳ ಭಾಷೆಯಾಗಿದ್ದಿತು ಅನಂತರ ಮುಸಲ್ಮಾನ ರಾಜರು ಭಾರತಕ್ಕೆ ಬಂದಾಗ ಅಲ್ಲಿನ ಜನರು ಆಡುತ್ತಿದ್ದ ಈ ದೇಶೀಭಾಷೆಗೆ 'ಹಿಂದೀ' ('ಹಿಂದೂದೇಶದ ಭಾಷೆ') ಎಂಬ ಹೆಸರನ್ನು ಕೊಟ್ಟರು ಹಿಂದೀಯಲ್ಲಿ ಸಂಸ್ಕೃತದ ತತ್ಸಮ ಶಬ್ದಗಳೂ, ಅಪಭ್ರಂಶಗಳೂ, ದೇಶಜ ಶಬ್ದ ಗಳೂ ಸೇರಿವೆ ಬಾದಶಹ ಶಾಹಜಹಾನನ ಕಾಲದಲ್ಲಿ ಈ ಹಿಂದೀ ಭಾಷೆಗೆ ಇನ್ನೊಂದು ಹೆಸರಾಯಿತು- ಉರ್ದು' 'ಉರ್ದು' ಎಂದರೆ ಸೈನ್ಯದ ಸಂತೆಪೇಟೆ ಅಲ್ಲಿ ಪ್ರೊಚಲಿತ ವಾತ ನಾಡಲ್ಪಟ್ಟುದರಿಂದ ಅದಕ್ಕೆ ಉರ್ದು ಎಂಬ ಹೆಸರು ಬಂದಿತು ಅದರಲ್ಲಿ ಫಾರಸೀ, ಅರಬೀ ತುರ್ಕೀ ಭಾಷೆಯ ಶಬ್ದಗಳ ಆಧಿಕ್ಯವಿದೆ ಇಷ್ಟೇ ಹೊರತು ಅದರ ವ್ಯಾಕರಣಕ್ಕೂ, ಶೈಲಿಗೂ, ಹಿಂದಿಯ ವ್ಯಾಕರಣ ಶೈಲಿಗಳಿಗೂ ಅಧಿಕ ಅಂತರವಿಲ್ಲ ಮೊಗಲರ ಕಾಲದಲ್ಲಿ ರಾಜಭಾಷೆಯು ಫಾರಸಿಯಾಗಿದ್ದಿತು. ಅವರ ಗೌರವವೂ, ಸಂಸ್ಕೃತಿಕ ಐತಿಹಾಸಿಕ ಮಹ ತ್ವವೂ ಅದರಿಂದಲೇ ವ್ಯಕ್ತವಾಗುತ್ತವೆ ಆ ಫಾರಸಿಯ ಪ್ರಭಾವವು ಭಾರತದ ಎಲ್ಲಾ ಕಡೆ ಗಳಲ್ಲಿಯೂ ಅಲ್ಲಲ್ಲಿ ಈಗಲೂ ಕಾಣಬರು ತ್ತದೆ ರಾಜಕೀಯ ವಿಷಯಗಳ ಭಾಷೆಯು ಫಾರಸಿಯಾಗಿಯೂ ಸಾಮಾನ್ಯ ಜನರ ಭಾಷೆಯು ಹಿಂದೀಯಾಗಿಯೂ ಇದ್ದಿತು. ಈಗ ಹಿಂದುಸ್ಥಾನಿಯೆಂದು ಕರೆಯಲ್ಪಡುವ ಗ್ರಾಮ್ಯ ವ್ಯಾಕರಣ ವಿರಹಿತವಾದ ಭಾಷೆಯು ಕರ್ನಾ ಟಕದ ಎಲ್ಲಾ ಕಡೆಗಳಲ್ಲಿಯೂ ಆಡಲ್ಪಡುತ್ತದೆ ಇದೂ ಹಿಂದೀಯ ಇನ್ನೊಂದು ರೂಪಾಂತ ರವೇ ಹೊರತು ಬೇರೆಯಲ್ಲ ಹಿಂದೀ ಹಿಂದು ಸ್ಥಾನಿ, ಉರ್ದು ಹೇಗೆ ಬೇಕಾದರೂ ಕರೆ ಯಿರಿ ಆದರೆ ಅದು ಒಂದೇ ಭಾಷೆಯ ಕಡೆಗೆ ಒಯ್ಯುವುದು

ಇನ್ನು ಕನ್ನಡಭಾಷೆಯಲ್ಲಿ ಈ ಪ್ರಚಲಿತ ವಾಗಿರುವ ನೂರಾರು ಹಿಂದೀ ಶಬ್ದಗಳಿಂದ ಕನ್ನಡಕ್ಕೂ ಹಿಂದೀಗೂ ಇರುವ ನಿಕಟ ಸಂಬಂ ಧವು ವ್ಯಕ್ತವಾಗುವುದಗತ್ಯ ಇದು ಮುಸಲ್ಮಾನ ರಾಜತ್ವದ ಪ್ರಭಾವವಿರಬೇಕು ಸರಕಾರಿ ವಿಷಯದ ವ್ಯವಹಾರದಲ್ಲಿಯೂ, ವ್ಯಾಪಾರ ಪೇಟೆಯ ಮತ್ತು ಸಾಮಾನ್ಯಜನರ ವ್ಯವಹಾರದಲ್ಲಿಯೂ ಈ ಕೆಳಗೆ ತೋರಿಸಿರುವ ಅನೇಕ ಶಬ್ದಗಳು ಈಗಲೂ ರೂಢಿಯಲ್ಲಿವೆ ಇವುಗಳ ಮೂಲವು ಹಿಂದೀ ಎಂದು ನಮ್ಮ ಜನರಿಗೆ ಗೊತ್ತಿಲ್ಲ ಇಂತಹ ಅಜ್ಞಾತಾ ವಸ್ಥೆಯಲ್ಲಿಯೇ ನಾವು ಅನೇಕ ಶಬ್ದಗಳನ್ನು ದಿನನಿತ್ಯವೂ ಉಪಯೋಗಿಸುತ್ತೇವೆ ಆದ ಕಾರಣ ಹಿಂದೀಯನ್ನು ಕಲಿಯುವುದು ಕನ್ನಡಿ ಗರಿಗೆ ಸರ್ವಥಾ ಕಷ್ಟವಿಲ್ಲವಾಗಿದೆ ಏನೇನೂ ಸಂಬಂಧವಿಲ್ಲದ ತಮಿಳರು, ತೆಲುಗರು, ಕೇರಳ ದವರು ಉತ್ಸಾಹದಿಂದ ಅಭ್ಯಾಸ ಮಾಡುತ್ತಿರು ವಾಗ ಎಲ್ಲ ಅನುಕೂಲತೆಗಳಿರುವ ಕನ್ನಡಿಗರು ಏಕೆ ಇದರ ಲಾಭವನ್ನು ಪಡೆಯಲಾರರು?

ಈ ಶಬ್ದಗಳ ಪಟ್ಟಿಯನ್ನು ನೋಡಿದರೆ ನಮಗೇ ಆಶ್ಚರ್ಯವಾಗುವುದು ಇವುಗಳಲ್ಲಿ ಸಂಸ್ಕೃತ ವೂ ಅದರಿಂದ ಹುಟ್ಟಿದ ಶಬ್ದಗಳನ್ನು ಸೇರಿ ಸಿಲ್ಲ. ಕೇವಲ ಹಿಂದೀ, ಉರ್ದು ಭಾಷೆ ಗಳಿಂದ ಬಂದ ಶಬ್ದಗಳನ್ನು ಮಾತ್ರ ಹೇಳಿದೆ. ವಾಚಕರು ದಯವಿಟ್ಟು ಸಾವಧಾನಚಿತ್ತದಿಂದ ಒಂದೊಂದು ಶಬ್ದವನ್ನಾಗಿ ಪರಿಶೀಲಿಸೋಣಾ ಗಲಿ. ಇವುಗಳಲ್ಲಿ ಕೆಲವು ಮೂಲ ರೂಪ ದಲ್ಲಿದ್ದು ಇನ್ನು ಕೆಲವು ಬಾಯಾಡಿಕೆಯಲ್ಲಿ ಶಿಥಿಲವಾಗಿ ಅಲ್ಪ ಸ್ವಲ್ಪ ಮಾರ್ಪಾಟನ್ನು ಹೊಂದಿವೆ. ಅನೇಕ ಶಬ್ದಗಳು ಗ್ರಂಥಭಾಷೆ ಯಲ್ಲಿಯೂ ಸೇರಿಕೊಂಡಿವೆ

೧. ಸರಕಾರಿ ವ್ಯವಹಾರದ ಶಬ್ದಗಳು:—

ಸರಕಾರ, ಕಚೇರಿ, ಖಜಾನೆ, ದಫ್ತರ್, ಮುನ್ಸಿಫ್, ತಹಶೀಲ್ದಾರ್, ಅಮಲ್ದಾರ್, ಶಿರ ಸ್ತೇದಾರ್, ಶೇಕ್‌ದಾರ್, ದಫೇದಾರ್ ಜಲಾ ಯಿತ, ಪೇದೆ, ನಾಜಿರ್, ಅಮೀನ್, ಮೊಕ ದ್ದಮೆ, ತಕ್ಸೀರ ಕೈಫಿಯತ್ತು, ದಾವೆ, ಫೈನಲ್, ಅಮಲ್‌ಜಾರಿ, ಕಾನೂನು, ಕಾಯಿದೆ, ಬೇಅ ದಬ್, ಮಾಮೂಲಿ, ರಿಸಾಲ್, ರವಾನೆ, ತಾಲೂಕು, ಇಲಾಖೆ, ಜಹಗೀರ್, ಇನಾಂ, ರಾಜಿ, ರಾಜಿನಾಮೆ ಬೇವಾರಿಸ್, ವಾರಿಸ್ ದಾರ್, ಹಕ್ಕು, ಹಾಜರಿ, ಗೈರ್‌ಹಾಜರಿ, ಹವಾಲೆ, ಸುಪರ್ದು, ಶಿವಾಯಿ, ಹುಜೂರು, ಮೊಖ್ತಿಯಾರು, ದರಬಾರು, ದಸ್ತಾವೇಜ್, ಮುದ್ದತು, ಮುಕೋಫ್, ಮುಫತ್ತು, ಕರಾರು, ಹುಕುಂ, ಮುನಾಸಿಬ್, ರಜಾ, ಸಜಾ, ಹಜೂರು, ಠರಾವು, ಸವಾಲು, ಜವಾಬು, ಅರ್ಜಿ, ಕಾಯಂ, ಮುಕ್ಯಾಂ ಮಾಫಿ, ರೂಬು ರೂಬು, ಖಾಲಿ, ತಗಾದೆ, ಪಹರಿ, (×ದಾರ್) ರಖವಾಲಿ, ಆಖೈರ್, ನಕಲು ಅಸಲು, ಬಟ ವಾಡೆ ನಮೂನೆ ಹಲ್‌ಹವಾಲೆ, ದಕಾಯಿತಿ, ಕಿಲ್ಲೆ, ಕೋಟೆ, ತನಖಿ, ತಲಾಶಿ, ಖಾಸ, ದಾಖಲ್, ಒರಖಾಸ್ತು, ದರಖಾಸ್ತು, ಖಾತೆ, ಬೇಗಾರಿ, ಪತ್ತೆ, ನೊಕಾವಿಲೆ, ರದ್ದು, ಅಜ ಮಾಯಿಷಿ, ಅಂದಾಜು, ದುವಾರಿ, ಆಮದು, ರಫ್ತು, ಸುಂಕ ಎಕಾಷೆ ನಿಕಾಸೆ, ಪುರುಸೊತ್ತು, ದಯಾಪ್ತಿ ಕೈದ, ದಸ್ತಗಿರಿ, ಕೈದಾಖಾನೆ, ಬಂದೀ, (+ಖಾನೆ) ಬಾಬತ, ದುರಸ್ತು, ಮರ ಮತ್ತು, ಆಮೀಂದಾ, ಇನ್ಕಾರ, ಬಂದೋಬಸ್ತು, ಗಡಸ್ತಾ ಬಾಕಿ, ದಿವಾನ ಸಾಹೇಬ, ಖಾನ್ ಸಾಹೇಬ, ಖಾನ್ ಬಹಾದುರ್ ದಿವಾನ್, ದಿವಾನ್ ಬಹದ್ದೂರ್ ಸುಲ್ತಾನ್ ನವಾಬ್, ಕಿಸಂ, ಬಾಗಾಯಿತು, ಇಸವಿ, ತಾರೀಕು, ತನಖಾ, ತಲಬು ವಸೂಲ್, ಫಸಲಿ, ಅಮಾ ನತ್ತು, ದಂಗೆ, ಇಸ್ತಿಹಾರು, ಜಪ್ತು ಸಬಬು, ಮುಚಲಿಕೆ, ಬಂದೂಕು, ತೋಪು, ಗೋಲಿ, ಥೈಲಿ, ರಿಯಾಯತಿ, ಮೊಹರು, ಅಶರಫಿ, ಬಾದಶಹ, ತಬ್ದೀಲು, ಕರ್ಜು, ಸವಾರ, (ಸವಾರೀ) ಫೌಜ್‌ದಾರ್, ರಿಸಾಲ್‌ದಾರ್, ಹವಾಲ್‌ದಾರ್, ಫೌಜ್, ಸಿಪಾಹಿ, ಸುಬೇ ದಾರ್, ಜಮೇದಾರ್, ತಾಕೀದು, ಸಾಲ್ಯಾನ, ದಸ್ಕತು, ಮಸೂದೆ, ಜುರುಮಾನೆ, ಗುಮಾನಿ, ಗುಡ್ಡೆಗಾರ, ಗುಮಾಸ್ತ, ಚುನಾವಣೆ, ಶಿಫಾ ರಸು

೨. ಸಾಮಾನ್ಯ ವ್ಯವಹಾರದ ಶಬ್ದಗಳು —

ಶಹರು, ಬಾಜಾರು, ಜಂಗಲ್, ಜರೂರ, ಹದ್ದು, ಫಕೀರ್, ಮೆಹನತ್, ಹಿಮ್ಮತ್, ಹಿಕ ಮತ್, ಖಲಾಸಿ, ಶಿಕಾರಿ, ಭೇಟಿ, ಲೂಟಿ, ವಿಲಾಯಿತಿ, ಶರಾಬು, ಜಾನವಾರು, ರಸ್ತೆ, ಗಲ್ಲಿ, ದೇಖಾವೆ, ದೇರಿ, ಗಾಬರಿ, ಬಕ್ಷೀಸು, ನಾಖುಶಿ, ವಾಪಾಸು, ಕಾಗದ, ಕಲಂ, ದೌತಿ, ಶಾಯಿ, ಫೇರಿ, ಮಹಲ್, ಜವಾನ, ಜನಾನೆ, ಫರದೆ, ತಬಲಾ, ಬುಲ್ ಬುಲ್, ಸಿತಾರ್, ಸಾರಂಗಿ, ಕಂಬಳಿ, ಜೋರು, ಅವಾಜು ತುರತ ತಾರೀಫ್, ರೇಶ್ಮೆ, ಚಾವಿ, ಚೂರು, ತುಕಡಾ ಅಕಲ್, ಬೇಕೂಫ್ ಮೆಹರ್‌ಬಾನಿ, ಸಲಾಂ, ಫಕೀರ ಛುಟ್ಟೀ, ಸಾಹುಕಾರ, ಕಂದೀಲು, ತಸಬೀರು, ನಾಚ್, ಟೋಪಿ, ಕಚ್ಚಾ, ಪಕ್ಕಾ, ಪೈಸಾ, ಜಮೀನ್, ಮುಸಾಫರ್‌ಖಾನ್, ತರಹ, ತರಫ್, ಪತ್ತಲ, ನರಮ್, ಲಗಾವ್, ಉತಾರ್, ಚತಾವ್, ರಕಂ, ನಗದು, ಬೇಶಕ್, ಜಾಗ, ದುಕಾನ್, ಚಾಯ್, ಬದಲ್, ದರ್ಜಿ, ದರ್ಜೆ, ಝುಟ್‌ಪಟ್, ಚೀಟೀ ದವಾಜು, ಖಾಮೋಷಿ, ತಾಕತ್ತು, ಹವೆ, ಕಲಾಯಿ, ಮಜಾ, ಮೌಜ್, ಮುಸುಖರಿ, ಮುಕ್ಕಾಲ್, ಡೋಂಗಿ, ದಗಾ- (×ಬಾಜಿ), ಬದಮಾಷ್ ಆಲೂ (ಗಡ್ಡೆ) ಜವಾಹಿರ್, ಜರಿ (ಜರತಾರಿ) ಮೇಜು, ಗೋಸಾಯಿ, ಕುರ್ಚಿ, ಪಲ್ಲಂಗ್ ದಬ್ಬಿ ಬಿಲ್ ಕುಲ್ ಲಕ್ಷಾನು ಫಾಯದೆ ಮುನಾಫೆ ಸೇಕಡಾ, ತಾರ್ ಘಾಟಿ, ಝಗಡಿಸ ಪುಕಾರ್ ಬುಲಾವಣೆ ಗಾಡೀ, ಚೆ ಟ್ರೀ, ಬನಾವಟಿ, ಬಂದ್ ಮಾಡು, ಖುಲ್ಲಾ, ಹತ್ಯಾರು ಭಿಕಾರಿ, ನಜಲ್ ಮ ಭವಾ ಧೋಬಿ, ಸವ ತ್ಯಾಜಿ ಸು, ಚುಕಾಯಿಸು, ಚಮಕಾಯಿಸು ದೌಲತ, ಫರಕು ಸುಸ್ತಿ, ಲಾತು ಜಲ್ದೀ ಕವಿ ಕೆವರದಿ ಕಿಟಿಕಿ, ಮಜೂರಿ, ಕೂಲಿ ಖುದ್, ಬಹಾದುರ್, ಬರಾಬರಿ, ಜಗಳ ಭರವಸೆ, ತಲವಾರು, ಜಖಂ ಬಚಾವ್, ಸಸ್ತ ಮಿರಾಯಿ ಗವಾಯಿ, ಠಾಕೂರ್, ನೌಕರ (ನೌಕರಿ), ಚಾಕರ (ಚಾಕರಿ) ನಮೂನಾ, ತಯಾರು, ಶಕ್ಕ, ಐನ್, ಚೇಬು, ಖರ್ಚು, ಜನಾ ರೊಟ್ಟಿ ಲಡ್ಡು, ಜಿಲೇಬಿ, ಸಫೇದು, ಗಲೀಜ್, ಮೈಲಿ, ಬಂದರು, ಜಹಜು ಪಸಂದ, ಲಾಯಖ್, ಡೋಲಿ, ನೌಬತ್ತು, ಶೀಶಿ, ಗಾಜು, ಗಾರಿ, ಮುಖಮಲ್, ಕಲಾಬತ್ತು, ಧಂಧೆ, ಗುಲಾಲಿ, ಚರಖಾ, ತಾವೀಜ್, ವಿದಾಯ, ಚಾಕರಿ, ಕಿಮ್ಮತ್ತು, ನಶೆ, ನಶಾಖೋರ, ಖೋಟಿ, ಭೂಲ್‌ಚೂಕ್, ಲೇವಾದೇವಿ, ಲೇಣದೇಣ, ಚೀನಿ, ನಾಶ್ತಾ, ಬೀಡಿ, ಬೀಡಾ, ಲಾರಿ, ಲೀಜಮ್, ಚೂರಿ, ದಿಮಾಕು, ಲೌಂಡಿ, ಗುಲಾಮು, ಮಾಲಿಕ, ಮಾಲು, ಛಪ್ಪನ್ನ, ಥಕಲ್ಪಟ್ಟಿ, ಬತ್ತೀಸ್, ತುಫಾನ್, ಛಾತಿ, ಜಿದ್ದು, ಪೆಶಾಮೋಶಿ, ಅತ್ತರು, ಕವಾಯಿ, ವಗೈರೆ, ಅಲಾಹಿದಾ, ಚಾಲಕಿ, ಜಬರದಸ್ತು, ಸೀದಾ, ಉಲಟೀ, ಡೌಲು, ಲಾಚಾರು, ಬಂದೋಬಸ್ತು, ಚ್ಯಾಸ್ತಿ, ಚಾರಿ, ಖಾಯುಷಿ, ಹುದ್ದೆ, ಕಮಾನು, ಸೈತಾನ್, ಜೋಡಿಸು, ಜೀನು, ಲಗಾಂ ಜುಲ್ಫ್ ಧಫೆ, ಏಕ್‌ದಮ್, ಸಾಮಾನು, ನಸೀಬು, ಹಾಸಲು, ಮಾಮೂಲ್, ಇಸಂ, ಇಗಾ, ಇಗವಾನಿ, ಥೀಲಾ, ಪೂರಾ, ಶುರು, ಕಬೂಲು, ಪೈಲ್‌ವಾನ್, ಚಬುಕು, ಪರವಾ, ಎಕ್ಕಿ ಇಶಾರೆ, ಬೇಜಾರು, ಗುಜರ್, ಶೋಕ, ಶರ್ತ, ಶರಾರತ್ತು, ಪೈದಕು, ನಕ್ಷೆ, ಮರ್ಜಿ, ಚೌಕಶಿ, ಖೂಂಚಾ ಅವ್ವಲ್, ದ್ಯುಯಮ್

ಈ ಲೇಖನದ ಆಶಯವೇನೆಂದರೆ—ಕನ್ನಡ ದಲ್ಲಿ ಇಷ್ಟು ಹಿಂದೀ ಶಬ್ದಗಳು ವ್ಯವಹಾರ ದಲ್ಲಿರುವಾಗ ಅದನ್ನು ಕಲಿಯಲು ಎಷ್ಟು ಸುಲಭವಿದೆ ಕನ್ನಡಿಗರು ಅದರಲ್ಲಿ ವ್ಯವ ಸಾಯಮಾಡಿ ಉಭಯಭಾಷೆಗಳಿಗೂ ಲಾಭ ವನ್ನುಂಟುಮಾಡಲು ದಾರಿಯಿದೆ ಮಾತ್ರ ವಲ್ಲ ಈಗ ನಡೆಯುತ್ತಿರುವ ಕನ್ನಡ ಹಿಂದೀ ಯೊಳಗಿನ ಕ್ಷುದ್ರ ಕಲಹವು ಅಲ್ಲಿಗೇ ಶಾಂತ ವಾಗಿ, ಅದರಿಂದ ಹುಟ್ಟಿರಬಹುದಾದ ವೈಮ ನಸ್ಯ ದೂರವಾಗಿ, ಕನ್ನಡಬಂಧುಗಳಲ್ಲಿ ಪರ ಸ್ಪರ ಪ್ರೇಮ ಸಾಹಾರ್ದ್ಯಗಳ ಅಭಿವೃದ್ಧಿ ಯಾಗಬೇಕು ಅದರಿಂದ ಅಖಿಲಭಾರತದಲ್ಲಿ ಹಿಂದೀ ರಾಷ್ಟ್ರಭಾಷೆಯ ಬಂಧನದಿಂದ ಬಿಗಿ ಯಲ್ಪಡುವ ಒಂದು ಮಹಾ ಕುಟುಂಬವುಂಟಾಗಿ ಅದರ ಮೂಲಕ ಸ್ವಾತಂತ್ರ್ಯವು ಸಿದ್ಧಿಸುವುದು ಪ್ರತಿಯೊಬ್ಬ ಭಾರತೀಯನೂ ತನ್ನ ಕರ್ತವ್ಯ ವನ್ನು ತಿಳಿದುಕೊಳ್ಳದಿರಲಾರನು

— —

Swadeshabhimani

enjoys circulation in India and abroad

APPLY FOR RATES!

ಕೂಪ್ರನ್ ದಂತಮಂಜನದ ನಳಿಗೆ(tube)ಗಳ

ಸ್ಕ್ರೂ ಕೇಪ್ ಮತ್ತು ಕ್ಲಿಪ್ ಕೇಪ್‌ಗಳನ್ನು ಸಂಗ್ರಹಿಸಿರಿ —

ಸುಂದರವಾದ ಉಚಿತ ಉಡುಗೊರೆಗಳನ್ನು ಪಡೆಯಿರಿ

ಈ ಕೆಳಗೆ ಕೆಲವನ್ನು ಕೊಟ್ಟಿರುತ್ತದೆ —

ಕನ್ನಡಿ ಸಹಿತವಿರುವ ಸೇಫ್ಟಿರೇಜರ್ ಪೆಟ್ಟಿಗೆಯೊಂದು. ಒಂದು ಪೆಟ್ಟಿಗೆ ಬ್ಲೇಡ್‌ಗಳು. ಮೊರೊಕೊ ಚರ್ಮದ ಚೀಲ (ಇದರಲ್ಲಿ ವಿಭಾಗಗಳಿವೆ.) ಫೌಂಟನ್ ಪೆನ್; 14 ಕ್ಯಾರೆಟ್ ಭಂಗಾರದ ನಿಬ್; ಇರಿಡಿಯಮ್ ಇರುವಂಥದ್ದು ಸೆಲ್ಫ್ ಫಿಲ್ಲಿಂಗ್ ರೋಲ್ಡ್ ಗೋಲ್ಡ್ ಪಟ್ಟಿ ಮತ್ತು ಕ್ಲಿಪ್ ಇದೆ. ಪ್ರಸಿದ್ಧ ಪಟ್ಟಿ ನಮೂನೆದ್ದು ಸ್ತ್ರೀಯರ ಸುಂದರ ಕೈಪೆಟ್ಟಿಗೆ, ಕನ್ನಡಿಯಿದೆ, ಅದರೊಡನೆ ಜೇಬಿನ ಪಕೆಟ್ ಇದೆ.



ಮನೋಹರವಾದ ಮೇಜಿನ ಗಡಿಯಾರ.

ಸ್ವಿಸ್ ತಯಾರಿಯ ಲಿವರ್ ರಿಸ್ಟ್‌ವಾಚ್ (ಜಂಪಿಂಗ್ ಫಿಗರ್ಸ್)

ವಿವರಕ್ಕೆ ಗಿರಾಕಿಗಳನ್ನು ಕಾಣಿರಿ ಅಥವಾ

ಕೂಪ್ರನ್ ಕೆಮಿಕಲ್ ಕೊ., ಲಿಮಿಟೆಡ್, 83—85 ತಾರದೇವ್ ರೋಡ್, ಮುಂಬಾಯಿ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ನಿನ್ನ ಮನಸ್ಸಿನ, ದೇಹದ, ಸಂಪತ್ತಿನ, ಹೊರ ಅಥವಾ ಒಳಗಿನ, ತಿಳಿದು, ಅಥವಾ ತಿಳಿಯದೆ, ಮಿತ್ರರಿಂದ ಅಥವಾ ವೈರಿಗಳಿಂದಾಗಿ ಕಷ್ಟವು ಬಂದರೆ,-ದೈವಭಯವುಳ್ಳ ಪ್ರಿಯ ಪುತ್ರನೇ, ನೀನು ಭಯಗೊಳ್ಳದಿರು

ಕಾರ್ಡಿನಲ್ ನ್ಯೂಮೇನ್

ಸ್ಫುಟವಿಚಾರಗಳು

ಇಟೆಲಿ-ಅಬಿಸೀನಿಯಾಗಳವರು

(ಯುದ್ಧ ಸನ್ನದ್ಧರಾಗಿ ನಿಂತಿರುವರು ಅಬಿಸೀನಿಯಾದಲ್ಲಿನ ಗಡಿನಾಡಿನ ತಮ್ಮ ನಿವಾಸಗಳಲ್ಲಿ ಅಬಿಸಿನಿಯಾ ಸೈನಿಕರ ಅತ್ಯಾಚಾರಗಳು ನಡೆದುವೆಂಬುದೇ "ಇಟಲಿಯ ಕ್ರೋಧಕ್ಕೆ ಕಾರಣ ಮಾಡಿದ ತಪ್ಪಿಗಾಗಿ ಅಬಿಸೀನಿಯಾವು ಕ್ಷಮಾಯಾಚನೆ ಮಾಡಬೇಕು, ಇಟಲಿಯ ಧ್ವಜಕ್ಕೆ ಬಗ್ಗಿ ತಲೆಯನ್ನು ಬಾಗಿಸಿ ಮಾನಿಸಿ 'ನರ್ವ ತಪ್ಪಾಯಿತು' ಎಂದು ಹೇಳಬೇಕು"-ಎಂದು ಇಟಲಿಯ ಕರ್ತರುಗಳು ಹೇಳಿದರೆ ಅಬಿಸಿನಿಯಾವು ಈ ಅವಮಾನಕರ ಪ್ರಸ್ತಾವಕ್ಕೆ ಸಿದ್ಧವಿಲ್ಲ. "ಇಟಲಿಯ ಉದ್ಧಟತನಕ್ಕೆ ತಲೆವಾಗಿಸಬೇಕೆಂದರೆ ಅಬಿಸಿನಿಯಾದ ಹೆಣದ ಕೈ ಮುಂದಿರಬೇಕು, ಆತ್ಮಗೌರವವು ಅವಲೇಶವಿಲ್ಲದಾಗಬೇಕು" ಎಂದು ಅಬಿಸಿನಿಯಾವು ಹೇಳಿ ಕಳುಹಿಸಿರುತ್ತದೆ. ಇದನ್ನು ಕೇಳಿ ಇಟಲಿಯಲ್ಲಿ ಸೈನ್ಯವನ್ನು ಒಟ್ಟುಗೂಡಿಸಲಾಗಿದೆ. ದೇಶದ ಪ್ರಾಂತ ಯುವಕರಿಗೆಲ್ಲ ಎಂದೆಂದೂ ಪತ್ರ ಹೋಗಿ 'ನೀನು ಯುದ್ಧಕ್ಕೆ ಸನ್ನದ್ಧನಾಗಬೇಕೆಂದು ಅಧಿಪತಿಗಳು ಹೇಳಿದ್ದಾರೆ, ಕೂಡಲೇ ಸೈನ್ಯವನ್ನು ಸೇರು' ಎಂದು ಕೇಳಿಕೊಂಡಿದೆ. ರಣೋತ್ಸಾಹಿಗಳಾದ ಇಟಲಿಯ ಯುವಕರು ರಜಾಕಾಲದಲ್ಲಿ ಮಕ್ಕಳೂ ಮನೆಗಳಿಗೋಡುವ ಅತ್ಯುತ್ಸಾಹದಿಂದ ಸೈನ್ಯರಂಗಕ್ಕೆ ಧಾವಿಸಿದ್ದಾರೆ. ಯಾವ ಕೈಗಳಿಗೆ ಇಟಲಿಯ ಯುವಕರು ಸಮರ ಭೂಮಿಗೆ ತೆರಳುತ್ತಿರುವುದು ಕಂಡುಬಂದಿದೆ. ಈ ಘರ್ಷಣೆಯು ಯುದ್ಧಕ್ಕೆ ಮೂಲವಾಗುವುದೇ?

ರೈಲ್ವೇ ಬಜೆಟ್

ಮೊನ್ನೆ ಕೇಂದ್ರ ಶಾಸನಸಭೆಯಲ್ಲೂ ಕೌನ್ಸಿಲ್ ಆಫ್ ಸ್ಟೇಟಿನಲ್ಲೂ ಮುಂದಿಸಲ್ಪಟ್ಟು ಪರಿಶೀಲನೆಗೊಳಗಾಗಿ ಹಿಳ್ಳಿನ ಆಶಾದಾಯಕವಾಗಿಯೇ ಇದೆಯೆಂಬ ಸಮಾಧಾನವನ್ನಿತ್ತಿರುತ್ತದೆ. ೧೯೩೪-೩೫ರಲ್ಲಿ ರೈಲ್ವೆ ಖಾತೆಯಲ್ಲಿ ತಲೆದೋರಬಹುದೆಂದಿದ್ದ ವ್ಯತ್ಯಾಸವು ("ಡಿಫಿಸಿಟ್") ಮೊದಲು ಊಹಿಸಿದ್ದುದಕ್ಕಿಂತಲೂ ೧ ಕೋಟಿ ಕಡಮೆಯಾಗಿ ನಿಂತಿದೆಯೆಂದು ತಿಳಿಸಲಾಗಿದೆ. ಸರಕುಗಳ ಬಂಡಿಗಳು ಹೆಚ್ಚು ಹೆಚ್ಚಾಗಿ ಓಡಾಡಿ ಈ ವ್ಯತ್ಯಾಸವು ಇನ್ನೂ ಉತ್ತಮ ಪರಿಸ್ಥಿತಿಯಲ್ಲಿ ನಿಲ್ಲಲು ಸಾಧ್ಯವಿದೆ. ೧೯೩೫-೩೬ರಲ್ಲಿ ಈ ಡಿಫಿಸಿಟ್ ೨ ಕೋಟಿಯಲ್ಲಿ ನಿಲ್ಲುವುದರಲ್ಲಿ ಸಂದೇಹವಿಲ್ಲವೆಂಬ ಭರವಸೆಯು ಇದೆ. ಒಟ್ಟಿನ ಮೂಲಕ ಒಟ್ಟು ೯೩॥ ಕೋಟಿ ರೂಪಾಯಿಗಳ ಆದಾಯವಾಗಿದೆ. ವಾಣಿಜ್ಯ ಖಾತೆಯಿಂದ ಒ ಲಕ್ಷ ರೂಪಾಯಿಗಳ ಆದಾಯವಾಗಿವೆ ವೆಂದು ಲೆಕ್ಕವಿಡಲಾಗಿದೆ. ಅಂತೂ, ರೈಲ್ವೆ ಖಾತೆಯು ಪುನರುಜ್ಜೀವ ಹೊಂದಿ ಅವರಿಂದ ಮುಂದಕ್ಕೆ ವ್ಯಾಪಾರ ವಾಣಿಜ್ಯವು ಚೇತರಿಸಿಕೊಳ್ಳಬಹುದೆಂದ ನಿರೀಕ್ಷೆಯಿದೆ. ಖಾತೆಯವರಿಗೆ ಸಂತೋಷದ ವಿಷಯವೆಂದರೆ, ಅವರ ಸಂಬಳದ ಮೇಲಿದ್ದ ಕಡಿತವು ಹೋದುದು. ಈ ಕಡಿತವನ್ನು ತೆಗೆದು ಹಾಕಲು ಕಾರಣವನ್ನು ಕೊಡುತ್ತ ಸರ್ ಜೋಸೆಫ್ ಭೋರರು ವಾಣಿಜ್ಯ ಖಾತೆಯಲ್ಲಿ ಸನ್ಮಕೂಡಿದ ಬಚೆಟು ಉಂಟಾಗಿದೆ. ಅಲ್ಲದೆ ಖಾತೆಯ ಕೆಲಸಗಾರರು ಆರ್ಥಿಕ ದುಃಖಿತರುಗಳಾಗಿ ಕರ್ತವ್ಯ ನಿರ್ವಹಣದಲ್ಲಿ ವಿಮುಖರಾಗುವುದೂ ಸಂಭವನೀಯ. ಅವರು ತೃಪ್ತಿಹೊಂದಿಕೊಂಡಿರಲಿ' ಸರ್ ಜೋಸೆಫ್ ಭೋರರ ಕಾಲದಲ್ಲಿ ಈ ವೃದ್ಧಿಯುಂಟಾಯಿತಲ್ಲ, ಅದೇ ಸಂತೋಷಕರ.

ಕೊಮನ್ಸ್ ಸಭೆಯಲ್ಲಿ

ಇಂಡಿಯಾ ಮಸೂದೆಯು ದೀರ್ಘ ಚರ್ಚೆಗೆ ಬಂತು. ಇನ್‌ಸ್ಕಿಪ್, ಚರ್ಚಿಲ್, ಯೂಸ್ಟೇಸ್ ಪರ್ಸಿ, ವೆಜ್‌ವುಡ್ ಬೆನ್, ಎಡ್ವರ್ಡ್ ಗ್ರಿಗ್, ಡಚೆಸ್ ಆಫ್ ಅಥೋಲ್, ಬಾಲ್ಡ್‌ವಿನ್ ಮೊದಲಾದವರೆಲ್ಲ ಭಾರತ ವಿರೋಧಿಗಳಾಗಿ ನುಡಿದರೆಂದು ಬೇರೆ ಹೇಳಬೇಕಾಗಿಲ್ಲ. ಒಬ್ಬೊಬ್ಬನ ನುಡಿ ಒಂದೊಂದು, ಒಬ್ಬೊಬ್ಬನ ಮತ ಒಂದೊಂದು. ಎಲ್ಲರ ಧೋರಣೆಯೂ ಒಂದೇ ಆದರೂ ನುಡಿಗಳಲ್ಲಿ ಮಾತ್ರ ನಾವೀನ್ಯ. ಲೇಬರ್ ಸಂಘದ ಜೆ. ಇ. ಫರ್ ಲಾನ್ಸ್‌ಬರಿಯವರು ಮಾತ್ರ ಆದಷ್ಟು ಹೃದಯಪೂರ್ವಕವಾಗಿ ನುಡಿದು ಆರಣ್ಯರೋದನವನ್ನು ಸಭಿಕರ ಸ್ಮರಣೆಗೆ ತಂದರು. "ಬಲಾತ್ಕಾರ ಮತ್ತು ದಬ್ಬಾಳಿಕೆಯು ಸಾಮ್ರಾಜ್ಯವು ನಿಲ್ಲಲಾರದು. ಹಿಂದೂದೇಶದ ಆಶಯಗಳನ್ನು ಈಡೇರಿಸಲು ಸಾಧಕವಾಗುವ ರಾಜ್ಯಾಂಗ ದಾನ ಮಾಡಿರಿ" ಎಂಬ ಅವರ ಮಾತಿನಲ್ಲಿ ಅಪೇಕ್ಷೆಯೂ ಸ್ಪಷ್ಟವೂ ಇಲ್ಲವೆನ್ನಬಹುದು. ಆದರೆ ಮಾರ್ಗದರ್ಶಿ? ಭೀಷ್ಮನ ಉಪದೇಶಕ್ಕೆ ಕಿವಿಗೊಡುವನೇ? ಕೆಲವು ಸಚಿವರು ಅಂತಹ ಸ್ಫೂರ್ತಿ ಅವಿವೇಕಗಳಿಗೆಲ್ಲ ತಲೆವಾಗಿ ನಿಂತು ಸ್ವರಾಜ್ಯದ ಹಕ್ಕನ್ನು ಬಿಟ್ಟುಕೊಡುವರೇ? ಧೈರ್ಯದಿಂದ ನಿಲ್ಲುವುದು ಸರಿಯಾಗಿ, ಲೇಬರ್ ಪಕ್ಷದವರ ಅದೃಷ್ಟವಿದ್ದು ಪೈಪೋಟಿಗೆ ಹಾಕಲ್ಪಟ್ಟಿತು. ಎಡ್ವರ್ಡ್ ಹ್ಯಾಲಿಫ್ಯಾಕ್ಸ್ ಮಸೂದೆಯ ಎರಡನೆಯ ವಾಚನದ ಸಮರ್ಥನ ಹೇಳಿತು.

ಮಂಗಳೂರಿನ ಕಾಂಗ್ರೆಸ್ ಕೆಲಸಗಾರರು

ಶ್ರೀಯುತ ಕಮಲಾದೇವಿ ಚಟ್ಟೋಪಾಧ್ಯಾಯರ ಬಂಗಲೆಯಿಂದ ಗ್ರಾಮ ಸಂಘಟನಾ ಕೆಲಸವನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ನಿಷೇಧಿಸಿದ್ದಾರೆ. ಸರ್ಕಾರದ ವಿರುದ್ಧವಾಗಿ ಜನರಲ್ಲಿ ಅಸಮಾಧಾನವನ್ನು ಹುಟ್ಟಿಸುವ ಕೆಲಸಕ್ಕೆ ಆ ಬಂಗಲೆಯು ಉಪಯೋಗವಾಗುತ್ತಿದೆ ಎಂಬುದು ಕಾರಣ. ಆ ಬಂಗಲೆಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಆದರೆ ಅದರಿಂದ ಕಾಂಗ್ರೆಸ್ ಕಾರ್ಯಕರ್ತರಿಗೆ ತಡೆಯಾಗಿಲ್ಲ. ಹೊಡೆಬೇಕೆಂದು ನಿಶ್ಚಯಿಸಿದ್ದಾರೆ. ಬಂಗಲೆಯನ್ನು ಬಿಡದೆ, ಪ್ರಚಂಡ ಜನರನ್ನು ಹೊಡೆಯುವ ಯೋಚನೆಯಿದೆಯೆಂದು ಕೇಳಿಬಂದಿದೆ. ಯೋಚನೆಗಳಲ್ಲಿ ಸ್ವೀಕಾರಾರ್ಹವೇ. ಆದರೆ ಇಂತಹ ಚಳವಳಿಕ್ಕೆ ಕೈಹಿಕ್ಕಿ ಪರ ಸಹಕಾರವು ಅತ್ಯಗತ್ಯ. ಭೂಮ್ಯಾಲೀಕರ ಸಹಾನುಭೂತಿಯು ಅವಶ್ಯ. ಚಳವಳಿಯನ್ನು ಹೂಡುವ ಮೊದಲು ಈ ಸಂಗತಿಗಳನ್ನೆಲ್ಲ ಬೋಧನೆ ಮೂಲಕ ಒಪ್ಪಿಸಿಕೊಳ್ಳಬೇಕಾಗಿದೆ. ತದನಂತರ ಅವರೆಲ್ಲರ ಕೂಡುವಿಕೆಯಿಂದ ತಳಹದಿ ವೀರ್ಯಕ್ಕೆ ಸಾಗಬೇಕಾಗಿದೆ. ಸಾಹಸವು ಪರಿಣಾಮಕಾರಿಯಾಗಬೇಕು. ಸರ್ಕಾರಕ್ಕೆ ಜನರ ಮೊರೆಯು ಕೇಳಬೇಕು. ಇದು ಲಕ್ಷ್ಯಕ್ಕೊಡುವಂತಾಗಬೇಕು. ಅಂತಹ ನಿಷಿದ್ಧ ಬಂಗಲೆಯ ಸುದ್ದಿಯಾಗಬೇಕು. ಕಾಂಗ್ರೆಸ್ಸಿನವರು ಈ ಶಾಂತತೆಯ ತಳಹದಿಗೆ ಸ್ಥಿರ ಬೆಂಬಲವು ಸಿಗಲೆಂದು ಹಾರೈಸುತ್ತೇವೆ.

ತುಂಡು ವಾರ್ತೆಗಳು.

ಸಂಯುಕ್ತ ಪ್ರಾಂತ್ಯದ ಸರಕಾರಿ ಉದ್ಯೋಗಿಗಳ ಕಟ್ಟುಪಾಡು ಅಧ್ಯಕ್ಷರಾದ ಸರ್ ತೇಜಬಹದ್ದೂರ್ ಸಪ್ರೂರವರು ಪತ್ರಿಕಾ ಸಂಪಾದಕರಿಗೆಲ್ಲ ಕಾಗದ ಬರೆದು ಪತ್ರಿಕಾ ವ್ಯವಸಾಯದಲ್ಲಿ ನಿರುದ್ಯೋಗಿಗಳಿರುವಂಬ [illegible] ಕೇಳಿದರು.

ಟೊರೊಂಟೋವಿನ ಎಡ್ವರ್ಡ್ ವಾರ್ಡ್ ಎಂಬವನು ಶಬ್ದರಹಿತ ವಿಮಾನವೊಂದನ್ನು ರಚಿಸಿದ್ದು ವಿಜ್ಞಾನ ಪ್ರಪಂಚವನ್ನು ಬೆರಗುಗೊಳಿಸಿರುವನು.

೧೯೩೪-೩೫ರಲ್ಲಿ ಬ್ರಿಟನು ತನ್ನ ಅಂಚೆ ವ್ಯವಹಾರಕ್ಕಾಗಿ ಬೇಕಾಗುವ ಟೆಲಿಫೋನುಗಳಿಗೆ ೯,೪೬೭,೦೦೦ ಪವನುಗಳನ್ನೂ, ತಂತಿಯಾತ್ರೆಗಾಗಿ ೧,೦೫೩೦೦೦ ಪವನುಗಳನ್ನೂ ವೆಚ್ಚ ಮಾಡಲಿರುವುದು.

ಫ್ರೀ ಪ್ರೆಸ್ ಮುದ್ರಣಾಲಯದ ಮೇಲೆ ಸೇಠ್ [illegible] ದಾವಾ [illegible] ಮುದ್ರಣಾಲಯದ [illegible] ಕೇಳಿದರು.

ದಿಲ್ಲಿಯಲ್ಲಿ ಬಾಬು ರಾಜೇಂದ್ರರು [illegible] ಸಭೆಯಲ್ಲಿ ಮಾತುಕತೆ ನಡೆಸಿದರು.

ಅಬ್ದುಲ್ ಗಫಾರ್‌ಖಾನರು ಸೆರೆಯಲ್ಲಿ [illegible] ಪೌಂಡ್ ತೂಕವನ್ನು ಕಳೆದುಕೊಂಡರು.

[illegible] ಲೇಬರ್ ಚಳವಳಿಗಾರರ [illegible] ಲೇಬರ್ ಪಕ್ಷದವರ ಮಧ್ಯಸ್ಥಿಕೆಯಿಂದಾಗಿ [illegible]

ಹಾಂಕಾಂಗಿನ [illegible] ಕೈಸ್ತ [illegible] ಅರು ಮಂದಿ [illegible]

ಶ್ರೀ ರಾಮಕೃಷ್ಣ ಪರಮಹಂಸರ [illegible] ಜಯಂತಿ [illegible]

[illegible] ಇಟೆಲಿ [illegible]

ತಿರುವಾಂಕೂರಿನ [illegible] ಕಾಲೇಜಿನ [illegible]

[illegible]

ಭೋಪಾಳದ ಹಾಮಿದುಲ್ಲಾ [illegible] ಪ್ರದೇಶಗಳನ್ನು [illegible]

ಅಖಿಲ ಭಾರತ ಕಾಂಗ್ರೆಸ್ [illegible] ಅಧ್ಯಕ್ಷರು [illegible]

[illegible] ಸ್ಥಾಪಿಸಿದರು.

ಈಚೆಗೆ [illegible] ಶ್ರೀ ಪಾಡಂಗ್‌ಕಾರು ಇಂಗ್ಲೆಂಡಿನಿಂದ ಹಿಂತಿರುಗಿದ ಕೆಪ್ಟನ್ ಜಿ. ರಾಮಚಂದ್ರ ರಾವ್, ಎ. ಎಂ., ಡಿ. ಎಸ್. ಸಿ. [illegible] ಮಾಡಿ ಭಾವಚಿತ್ರವನ್ನು ಪ್ರದರ್ಶಿಸಿದರು.

೪೫ ೦೦೦ ಜನರು

[illegible] ನಿಂದ ಸ್ಥಳಾಂತರಿಸಿರುವ ದಕ್ಷಿಣ [illegible] ಬೆನಾರಸ್‌ನಲ್ಲಿ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಕೂಡಿ [illegible] "ಎಲ್ಲರೂ ಸಹಾಯ [illegible] ಬೇಡಿಕೆಯೂ ಆಯಿತು.

ಅಧಿಕಾರವು ಅಧಿಕಾರವೆ

[illegible] ಕೌನ್ಸಿಲಿನ [illegible] ಅಧ್ಯಕ್ಷರಾದ ಶ್ರೀ [illegible] ಕೋರ್ಟಿನ [illegible] ೨೧ [illegible] ಶಿಕ್ಷೆಗೆ ಗುರಿಯಾದರು.

ಆಡಿಗೆಕೋಣೆಯ ಮಹತ್ವವು

[illegible] ಜೀವನವು ಸಾಗಲಿ [illegible] ಆದರೆ [illegible]

[illegible] (ಬ್ರಿಟಿಷ್ [illegible] ಪತ್ನಿಯರಿಗೆ) [illegible]

ತನ್ನ ನೇತ್ರದಿಂದ ಸಹಿಯಿಟ್ಟಿ

[illegible]

ಸತ್ತರೆಂದು ತಿಳಿದರೆ ಬದುಕಿದರು

[illegible]

ಸಿಲೋನಿನಲ್ಲಿ ಮಲೇರಿಯಾವು

[illegible] ೬೦೦೦೦ [illegible]

ವಿದ್ಯುತ್ ಕಂಪೆನಿಯನ್ನು ಹತ್ತಿ

[illegible]

ಮುಂದಿನ ಸಂಚಿಕೆಯ

ಪ್ರಥಮ ಪುಟವು ದ್ವಿವರ್ಣದಿಂದ ಕಂಗೊಳಿಸುವುದು.

೧ ಬಿಜಾಪುರ. ೨. ಡಿಲ್ಲಿ ಮೊದಲಾದ ಸ್ಥಳಗಳ ಸುಂದರ ಚಿತ್ರಗಳನ್ನು ನಿಮಗೆ ಉಚಿತವಾಗಿ ಕೊಡಲಾಗುವುದು.

ಅನುಕ್ರಮಣಿಕೆ

ಕಥೆ ... ೩
ಪತ್ರಿಕಾ ಪ್ರಪಂಚ ... ೩
ಮುಂದೇ ಹೋಗಿ ಮುನ್ನೂರು ಕಟ್ಟು ... ೬
ಶಾಂತಿ ನಿಕೇತನದ ಕರ್ತರಾದ ಡಾ। ರವೀಂದ್ರನಾಥ ಠಾಕೂರರು ... ೫
ಕನ್ನಡ ಹಿಂದೀ ಕಲಹ ... ೮
ಅಗ್ರಲೇಖ
ಸ್ಫುಟವಿಚಾರಗಳು ... ೯
ಮಲೇರಿಯದ ಸುಗ್ಗಿ ... ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ... ೧೨
ವಿವಿಧ ಸಮಾಚಾರಗಳು ... ೧೬
ಹಿಂದಿಯು ದೇಶಭಾಷಾ ವೈರಿಯಲ್ಲ ... ೧೮
ಗಾಂಧೀಜಿಯವರಾರು ... ೧೯

ಸ್ವದೇಶಾಭಿಮಾನಿ

ತಾ ೨೨ನೇ ಶುಕ್ರವಾರ ಫೆಬ್ರವರಿ '೩೩

ಮಲೇರಿಯದ ಸುಗ್ಗಿ.

ಫೆಬ್ರವರಿ ತಿಂಗಳು ಬಂದಾಯಿತು ನಮ್ಮ ಪೂರ್ವದ ಕಾಡುಗುಡ್ಡಗಳು ಈಗಾಗಲೇ, ನೀರುಗಳಿಂದ ತುಂಬಿ ಕೊಳೆಯತೊಡಗಿವೆ ಸೊಳ್ಳೆಗಳ ಉಪದ್ರವವು ತೊಡಗಿ ಮಲೇರಿಯದ ಹಾವಳಿಯು ಇನ್ನು ಜೂನು ತಿಂಗಳ ತನಕ ಅತ್ಯಧಿಕವಾಗಿದೆ ನಮ್ಮ ಜಿಲ್ಲೆಯು ಜ್ವರದ ಹಾವಳಿಗೇನೆ ಪ್ರತಿ ವರುಷ ೧೦,೦೦೦ ಜನರನ್ನು ಬಲಿಗೊಡುತ್ತಲಿದೆ ಈಗ ಈ ಸಂಖ್ಯೆಯು ೮೦೦೦ಕ್ಕೆ ಇಳಿದಿರಬೇಕು. ಇವರಲ್ಲಿ ಹೆಚ್ಚಿನವರು ಮಲೇರಿಯಕ್ಕೇನೆ ತುತ್ತಾಗುವವರು ನಮ್ಮ ಪೂರ್ವಪ್ರಾಂತ್ಯಗಳು ಹಾಳುಬಿದ್ದು, ಅಲ್ಲಿನ ಕೃಷಿಯು ಅವನತಿಗೆ ಬಂದಿರುವುದಾದರೂ ಮುಖ್ಯವಾಗಿ ಮಲೇರಿಯದ ದೆಸೆಯಿಂದಲೇ ಸರಿ ಇದರ ಹಾವಳಿಯನ್ನು ತಪ್ಪಿಸಲು ಸರಕಾರವು ಸಾಕಷ್ಟು ಯತ್ನ ಮಾಡುತ್ತಿದೆಯೋ ಎಂಬುದು ದೊಡ್ಡ ಪ್ರಶ್ನೆ ಇತ್ತೀಚೆಗೆ ಅದು ಧರ್ಮಾರ್ಥ ಕ್ವಿನಿನು ಹಂಚತೊಡಗಿದುದರಿಂದ ಹಾನಿಯು ಕಡಿಮೆಯಾಗಿದೆ ಆದರೆ, ಇನ್ನೂ ಈ ಒಂದು ಜಿಲ್ಲೆಯಲ್ಲಿ ಕಡಿಮೆ ಕಡಿಮೆ ವರುಷಕ್ಕೆ ೫–೬ ಸಾವಿರ ಮಂದಿ ಮಲೇರಿಯಕ್ಕೇನೆ ಬಲಿಯಾಗುತ್ತಿದ್ದಾರೆ ಅದರಿಂದ ಕೆಲಸ ಮಾಡಲು ಅಶಕ್ತರಾಗಿ, ಉಂಟಾಗುತ್ತಿರುವ ಆರ್ಥಿಕ ನಷ್ಟವು ನಮ್ಮ ಜಿಲ್ಲೆಗೆ ಕಡಿಮೆಯಲ್ಲ ಸಾಯುವವರ ಸಂಖ್ಯೆಯು ಹತ್ತು ಪಾಲಾದರೂ ಜ್ವರದಿಂದ ನರಳುವವರು ಇದ್ದೇ ಇದ್ದಾರೆ ಇನ್ನೂ ನಾಲ್ಕಾರು ತಿಂಗಳ ಕಾಲ ಅವರು ಆಗಾಗ ಕಾಯಿಲೆಯಿಂದ ಮಲಗಿದರೆಂದರೆ ನಮಗಿಷ್ಟು ಹಾನಿಯಿಲ್ಲ

ಇದನ್ನು ನಿವಾರಿಸಲು ಉಪಾಯವಿಲ್ಲವೇನು? ಮೂಡು ಕರಾವಳಿಯ ಜನಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಿದೆ ಕೊಲ್ಲೂರು, ಶೀದಿಮನೆ ದುರ್ಗ, ಚಾರ್ಮಾಡಿ, ಸುಬ್ರಹ್ಮಣ್ಯ, ಸಂಪಾಜೆಗಳಲ್ಲಿ ಎಷ್ಟು ಹಾಳು ಬಿದ್ದ ಮನೆಗಳು ಕಾಣಸಿಗುವುದಿಲ್ಲ' ಇದನ್ನು ನಿವಾರಿಸಲು ನಮ್ಮ ಜಿಲ್ಲೆಯ ಆರೋಗ್ಯ ಖಾತೆಯು ಇನ್ನೂ ಹೆಚ್ಚಿನ ಶ್ರಮವಹಿಸಬೇಕೆಂಬುದು ಸ್ಪಷ್ಟವಾದ ಮಾತು ಕ್ವಿನಿನು ಹಂಚುವುದು ರೋಗಿಗಳನ್ನು ಉಳಿಸುವ ಸಲುವಾಗಿ ರೋಗವೇ ಬಾರದಂತೆ ಮಾಡಿ, ಜನರಿಗೆ ಹುಲುಸಾದ ಈ ಪ್ರಾಂತ್ಯಗಳಲ್ಲಿ ವಾಸಮಾಡಲು ಅನುಕೂಲಿಸಿ ಕೊಡುವುದು ಯಾರ ಕರ್ತವ್ಯ?

ನಮ್ಮ ಅಪೇಕ್ಷೆ ಇಷ್ಟೆ. ಆರೋಗ್ಯ ಇಲಾಖೆಯವರು ಮಾದರಿಗಾಗಿ, ಮೂಡು ಪ್ರಾಂತ್ಯದ ಯಾವುದಾದರೂ ಒಂದು ಹಳ್ಳಿಯನ್ನು ಆರಿಸಬೇಕು. ಇಂಥ ಪ್ರಾಂತ್ಯವು ಪಂಚಾಯತವು ಇರುವಂಥ ಹಳ್ಳಿಯಾದರೆ, ಮುಂದೆ ಇವರು ಹಾಕಿಕೊಟ್ಟ ಹಾದಿಯನ್ನು ಅನುಸರಿಸಲು ಒಂದು ವ್ಯವಸ್ಥೆಯನ್ನು ಕಲ್ಪಿಸಿದಂತಾಯಿತು ಹೀಗೆ ಪ್ರಾಂತ್ಯವನ್ನು ಆರಿಸಿದ ಬಳಿಕ ಸುತ್ತಲಿನ ಕಾಡನ್ನು ಸವರುವುದು, ಜವುಗು ಭೂಮಿಯಲ್ಲಿ ಚರಂಡಿ ಹೊಡೆಯುವುದು, ಮತ್ತು ನೀರು ನಿಲ್ಲುವಲ್ಲಿ ಪೆರಿಸ್ ಗ್ರೀನ್‌ನ್ನು ಚೆಲ್ಲುವುದು ಇಷ್ಟು ವ್ಯವಸ್ಥೆ ಮಾಡಿ, ಅನಂತರ ಈಗಿರುವ ರೋಗಿಗಳಿಗೆ ಕ್ವಿನಿನು ಹಂಚುವ ಕೆಲಸವನ್ನು ಮಾಡಬೇಕು ಹೀಗೆ ಎರಡು ಮೂರು ವರುಷವಾದರೂ ಕೆಲಸ ನಡೆಸಿ ನಮ್ಮಲ್ಲಿನ ಜಡಜಗತ್ತಿಗೆ ಈ ಉಪಾಯಗಳಲ್ಲಿ ನಂಬಿಕೆಯನ್ನು ಹುಟ್ಟಿಸಿದ ಬಳಿಕ, ಇನ್ನೊಂದು ಪ್ರಾಂತ್ಯವನ್ನು ಆರಿಸಬೇಕು.

ಅವರು ತೋರ್ಪಿಸಿಕೊಟ್ಟ ಈ ಹಾದಿಯಲ್ಲಿ ವಿಶ್ವಾಸವು ಜನರಿಗೆ ಬಂದು, ಅವರು ತಾವಾಗಿ ಅದನ್ನು ಕೊಳ್ಳಬೇಕಾದರೆ, ಅದರ ಉಪಯುಕ್ತತೆಯನ್ನು ಅವರ ಮುಂದೆ ದೃಢಪಡಿಸುವವರು ಬೇಕು ಅನಂತರ, ಈ ಕೆಲಸವನ್ನು ಸಾಗಿಸುವ ಪಂಚಾಯತುಗಳಿಗೆ— ಆರೋಗ್ಯ ಖಾತೆಯು ಕ್ವಿನಿನ ಪೆರಿಸ್‌ಗ್ರೀನಗಳನ್ನು ಒದಗಿಸಿಕೊಡುವುದು. ಸುಲಭದ ಕೆಲಸ ಅವನ್ನು ಹಂಚುವ ಮತ್ತಿತರ ಕೆಲಸಗಳಿಗಾಗಿ, ಸರಕಾರವು ಈ ಪಂಚಾಯತಗಳಿಗೆ ಒಂದು ಲಘು ಗ್ರಾಂಟನ್ನು ಕೊಡಿಸಬೇಕು

ಇಂಥ ಉದ್ಯಮದಲ್ಲಿ, ನಮ್ಮ ಆರೋಗ್ಯ ಖಾತೆಯವರ ತೊಡಗಲ ದರೇನು? ಈಗಿನ ನಮ್ಮ ಜಿಲ್ಲೆಯ ಮುಖ್ಯಾಧಿಕಾರಿಗಳು ನಿಜವಾದ ಉತ್ಸಾಹಿಗಳಾಗಿರುವುದರಿಂದ, ನಮ್ಮ ಸೂಚನೆಯು, ಅದಷ್ಟು ಪಚಾರಕ್ಕೆ ಬಂದೀತೆಂದೇ ನಮ್ಮ ನಂಬಿಕೆ

ಋಷಿವರ್ಯರಾದ ಸಾರ್ವಭೌಮರು ಇರುವರು

ಬುಡಾಪೆಸ್ಟಿನಲ್ಲಿ ಸಾರ್ವಭೌಮ ಫ್ರಾನ್ಸಿಸ್ ಜೋಸೆಫ್‌ರ ಧ್ವನಿಯನ್ನು ಗ್ರಾಮಫೋನಿನಲ್ಲಿ ತಂದಿರುವರು ಈ ಸಾರ್ವಭೌಮರು ಆಧುನಿಕ ಯಂತ್ರಗಳಿಗೆ ವಿರೋಧಿಗಳು ವಿಲಾಸಪ್ರಿಯರಲ್ಲ ಆಡಂಬರ ಋಷಿಯಂತೆ ಮಹಾಯುದ್ಧ ತೊಡಲು ಅವರು ಮೋಟಾರ್ ಟೆಲಿಫೋನ್ ಇಂತಿಗಳನ್ನು ಮುಟ್ಟುತ್ತಿದ್ದಿಲ್ಲ ಟೈಪ್ ಮಾಡಲ್ಪಟ್ಟ ಯಾವ ಕಾಗದಪತ್ರಗಳನ್ನೂ ತನ್ನ ಮೇಜಿನ ಮೇಲೆ ಬರಲು ಬಿಡುತ್ತಿದ್ದಿಲ್ಲ ಆದರೆ ೧೯೧೫ನೇ ಡಿಸೆಂಬರ ೧೨ರಲ್ಲಿ ಅವರು ಗ್ರಾಮಫೋನಿಗೆ ತನ್ನ ಧ್ವನಿಯನ್ನು ಕೊಟ್ಟರು ವಿಷಯ ಒಂದು ಕರ್ತವ್ಯ ಆ ರಿಕಾರ್ಡುಗಳಿಂದ ಆಗುವ ಆಯವನ್ನು ಯುದ್ಧದಲ್ಲಿ ಮಡಿದ ವೀರರ ವಿಧವೆಯರಿಗೂ ಅನಾಥ ಮಕ್ಕಳಿಗೂ ಕೊಡಬೇಕು

ರೋಗವೆಂದರೇನು?

ಅದು ನಮ್ಮ ಅಜಾಗ್ರತೆಯ ಅಪ್ರಿಯ ಪರಿಣಾಮ ಜಾಗ್ರತೆಯಿಂದಿದ್ದರೆ ರೋಗವೇ ಬರಲಾರದೆಂದು ಮೊನ್ನೆ ಹಂಗೇರಿಯಾದಲ್ಲಿ ತನ್ನ ೧೦೪ನೇ ವಯಸ್ಸಿನಲ್ಲಿ ಮೃತರಾದ ಮಿಸೆಸ್ ಲಿಯೊನಾರ್ಡ್ ಹುಕ್ಕಿ ಎಂಬವರು ಹೇಳಿರುವರು ಅಷ್ಟು ವರ್ಷ ಪ್ರಾಯದಲ್ಲಿ ಅವರು ಒಂದು ದಿನದ ರೋಗವನ್ನಾದರೂ ಅನುಭವಿಸಲಿಲ್ಲವಂತೆ ಹಾಗಾದರೆ ಅವರು ಸತ್ತರು ಹೇಗೆ? ಎಂಬ ನಿಮ್ಮ ಪ್ರಶ್ನೆ ಯೋಚನೆ ನಮ್ಮದೂ ಇದೆ.

ಆಕಾಶಬಾಣವನ್ನು ನೋಡದವರು

ಕಡವೆ. ಮದುವೆ ಮುಂಜಿಗಳ ದಿನ ಮದ್ದುಗಳನ್ನು ಸುಡುವಾಗ ಆಕಾಶವನ್ನೇರುವ ಬಾಣಗಳೇ ಆಕಾಶಬಾಣಗಳು. ಈ ಬಾಣಗಳು ನೀಟವಾಗಿ ಹೋಗಲಿಟ್ಟಸದೆ ಅಡ್ಡವಾಗಿ ಹೋದರೇನಾಗುತ್ತದೆಂದು ರಂಗೂನಿನ ಥೂಂಗಿನ್ ಎಂಬಲ್ಲಿ ತಿಳಿದುಬಂತು. ಶವದಹನ ಮಾಡುತ್ತಿದ್ದಾಗ ಆಕಾಶಬಾಣ ಬಿಟ್ಟು ಪದ್ಧತಿಯನ್ನನುಸರಿಸುತ್ತಿರುವಾಗ ಒಂದು ಬಾಣವು ಅಡ್ಡವಾಗಿ ಸರಿದು ಒಬ್ಬನನ್ನು ಕೊಂದು ಒಬ್ಬನನ್ನು ಗಾಯಗೊಳಿಸಿತು

ಯುದ್ಧಮಾಡಿದುದಕ್ಕಾಗಿ—

"ಶತ್ರುಕ್ತಿದೇಶಕರನ್ನಾಗಿ ೧೦,೫೬,೦೦೦ ಬ್ರಿಟಿಷರು ಒಟ್ಟು ೪೫,೦೦೦,೦೦೦ ಪವನುಗಳನ್ನು ಪಡೆಯುತ್ತಾರೆ ಮಹಾಯುದ್ಧದಲ್ಲಿ ಭಾಗವಹಿಸಿ ಬದುಕಿದವರೇ ಭಾಗ್ಯ!

ಸರಕಾರದ ಸಹಾಯ.

ಕೇಂದ್ರ ಪ್ರಾಂತ್ಯಗಳ ಸರಕಾರವು ೧೬,೦೦೦ ರೂಪಾಯಿಗಳನ್ನು ಮಂಜೂರು ಮಾಡಿ, ನೇಕಾರರು ತಮ್ಮ ಕೋಓಪರೇಟಿವ್ ಸೊಸ್ಯಾಟಿಯನ್ನು ಸ್ಥಾಪಿಸಿ ತಮ್ಮ ವೃತ್ತಿಯನ್ನು ವ್ಯವಸ್ಥೆಗೊಳಿಸಬಹುದೆಂದು ಸೂಚಿಸಿರುತ್ತದೆ.

ಹರಿಜನರಲ್ಲೊಬ್ಬರು—

ಸಂಯುಕ್ತ ಪ್ರಾಂತ್ಯದ ಕೋಟ್ ಮೆಂಬರರಾಗಿ ಚುನಾಯಿಸಲ್ಪಡಬೇಕೆಂದು ಅಖಿಲ ಭಾರತ ಆದಿ ಹಿಂದೂ ಮಹಾಸಭೆಯವರು ಡಿಲ್ಲಿಯಲ್ಲಿ ಠರಾವು ಮಾಡಿ ಅದರ ನಕಲನ್ನು ವೈಸರಾಯರಿಗೂ ಗವರ್ನರರಿಗೂ ಕಳುಹಿಸಿರುತ್ತಾರೆ. ಸಂಯುಕ್ತಪ್ರಾಂತ್ಯದ ಶಾಸನಸಭೆಯಲ್ಲಿ ಬಹುಜನ ಅಸ್ಪೃಶ್ಯರಿರುವುದೇ ಈ ಠರಾವಿಗೆ ಮುಖ್ಯ ಆಧಾರವಾಗಿ ನಿಂತಿದೆ



ಲೋರ್ಡ್ ಹೆಲಿಫಾಕ್ಸ್

ಇಂಡಿಯದ ಮೊದಲಿನ ವೈಸರಾಯರಾದ ಲೋರ್ಡ್ ಇರ್ವಿನರು ದಿವಂಗತ ಮಿ। ಟಿ ಆರ್ ಪ್ರಕಾಶರ ಗುಣಕಥನವನ್ನು ಲಂಡನಿನಲ್ಲಿ ಮಾಡಿದರು. ಲಂಡನ ಮೇಲೆ ಸ್ಥಾಪಿಸಲ್ಪಟ್ಟ ರೋಯಲ್ ಕೌನ್ಸಿಲಿನಲ್ಲಿ ದಿವಂಗತರು ಮಾಡಿದ ಸೇವೆಯನ್ನು ಪ್ರಶಂಸಿಸಿದರು

ಮದ್ರಾಸು ಸಂಸ್ಥಾನದಲ್ಲಿನ ಕೃಷೀವಲರು

೧೮೮೧	೨೭,೪೮೩,೧೨೨
೧೯೧೧	೨೯,೫೮೬,೭೩೭
೧೯೨೧	೩೦,೭೬೦,೬೬೪
೧೯೩೧	೧೪,೦೦೪,೨೧೫

Madras Presidency 1881–1931

ಬೇಡುವವರೆನ್ನುವವರಲ್ಲಿ—

ಹಲವರಿಗೆ ಈ ಹೆಸರು ಅನ್ವರ್ಥವೇ ಅಲ್ಲ ಅವರನ್ನು ಕಾಡುವವರೆಂದರೆ ಸರಿಯಾಗುವುದು ಮುಂಬಯಿಯಲ್ಲೊಬ್ಬ ಭಿಕ್ಷುಕ ಹಣ ಬೇಡುತ್ತಾ ಬೇಡುತ್ತಾ ಮಾರ್ಗದ ಬದಿಯಲ್ಲೇ ನಿದ್ರಿಸಿಬಿಟ್ಟ ಇವನಿಗೆ ಯಾವಾಗ ನಿದ್ದೆ ಬೀಳುವುದೋ ಎಂದು ಒಬ್ಬ ದೂರದಿಂದ ನೋಡುತ್ತಿದ್ದ ಮುದುಕನಿಗೆ ನಿದ್ದೆ ಹತ್ತಿದ್ದನ್ನು ಕಂಡು, ಕೂಡಲೇ ಬೇಡುವವನ ಬಳಿಗೆ ಬಂದು ಅವನ ಸೊಂಟದಲ್ಲಿದ್ದ ಥೈಲಿಯೊಂದನ್ನು ತೆರೆಸಿದ ಮೇಲ್ಕೆಯು ತ್ತಿದ್ದಾಗ ಆ ಥೈಲಿಗೆ ಕಟ್ಟಲ್ಪಟ್ಟಿದ್ದ ನೂಲಿನ ತುದಿಯು ಅಲ್ಲಾಡಿ ಮುದುಕನು ಎದ್ದು ಬಿಟ್ಟ. ಇನ್ಸ್‌ಪೆಕ್ಟರ ಕಳ್ಳನು ಹಿಡಿಯಲ್ಪಟ್ಟ ಥೈಲಿಯಲ್ಲಿ ೩೦ ರೂಪಾಯಿಗಳಿದ್ದವು

ಶಾಸನಸಭೆಯವರಿಗೊಂದು ಸಲಹೆಯು

ಡಿ। ವೆಲರ ಧಿ ಐರಿಷ್ ಪ್ರೆಸ್ ಎಂಬ ಪತ್ರಿಕೆಯು ಕೊಟ್ಟಿದೆ. "ಶಾಸನಸಭೆಯ ಮೆಂಬರನೊಬ್ಬನು ಹಾಜರಿಲ್ಲದೆ ನಡೆಯುವ ಶಾಸನಸಭೆಯ ಠರಾವುಗಳೆಲ್ಲ ಅನ್ಯಾಯವಾದುವುಗಳು ಎಲ್ಲಾ ಸದಸ್ಯರೂ ಇಲ್ಲದೆ ರೂಪಿಸಲ್ಪಡುವ ಶಾಸನಗಳಿಗೆ ಬೆಲೆಯಿಲ್ಲ"ವೆಂದೇ ನಿಮ್ಮ ಎಂ ಎಲ್ ಸಿಗಳು ಶಾಸನಸಭೆಯಲ್ಲಿ ಠರಾವು ತರಬೇಕಿತ್ತು ಎಂದು ಶ್ರೀ। ಪತ್ರಿಕೆಯು ಸೂಚಿಸುತ್ತದೆ

ಚಲಾವಣೆ

೧೯೩೩ನೇ ಜನವರಿ ೩೧ನೇ ತಾರೀಕಿನ ದಿನ ಹಿಂದೂದೇಶದಲ್ಲಿ ಒಟ್ಟು ರೂ ೧೩೮ ೫೮ ೪೫,೦೦೦ರ ನೋಟುಗಳು, ರೂ ೫೦ ೦೩,೯೩,೦೦೦ರ ಬೆಳ್ಳಿ ನಾಣ್ಯಗಳು, ರೂ ೪೧ ೫೫ ೩೩,೦೦೦ರ ಭಂಗಾರದ ಗಟ್ಟಿಗಳು; ರೂ. ೧೩,೫೨,೪೩,೦೦೦ರ ಬೆಳ್ಳಿಯ ಗಟ್ಟಿಗಳು ಚಲಾವಣೆಯಲ್ಲಿದ್ದುವು

ಮೆಕ್ಡೊನಾಲ್ಡರ ಉತ್ಕರ್ಷಕಾಲ

ಮುಗಿದಂತೆ ಭಾಸವಾಗುತ್ತದೆ— ಮೊನ್ನೆ ನ್ಯೂ ಕಾಸ್ಲ್–ಓನ್ ಟೈನ್ ಎಂಬಲ್ಲಿನ ವೈ. ಎಂ. ಸಿ. ಎ ಯಲ್ಲಿ ಭಾಷಣ ಕೊಡಲು ಹೋದಾಗ ಅವರನ್ನು ಆಸೆ ಸಂದಣಿಯು ಎದುರಾಯಿತು "ವಿಶ್ವಾಸ ಘಾತಕೀ, ಜಾತಕಿ" ಎಂದು ಸಂಬೋಧಿಸಿ ಬೈಗಳ ಸುರಿದುಕೆಗರೆಯಿತು.' "ನನ್ನ ದಿನಗಳು ಮುಗಿದುವು, ನನ್ನ ಜೀವನದಲ್ಲಿ ಸಂಜೆಯಾದಿಸಿದೆ" ಎಂದು ಅವರು ಹೇಳಿದೊಡನೆ ಒಬ್ಬನು 'ಕತ್ತಲಾಗಲಿ' ಎಂದನು

ಭಾವಚಿತ್ರಗಳು—

ತಮ್ಮನ್ನು ಸೆರೆಗೊಯ್ಯುವುವೆಂದು ಯಾರೂ ತಿಳಿಯಲಾರರು ನೊವಖಾಲಿಯಲ್ಲಿ ಶಾಂತಿಲತಾ ಘೋಷ್, ಸುನೀತಿ ಚೌಧುರಿ ಎಂಬಿಬ್ಬರು ಕ್ರಾಂತಿಕಾರ್ಯಕರ್ತೆಯರ ಭಾವಚಿತ್ರಗಳನ್ನು ಪಡೆದಿರಿಸಿಕೊಂಡಿರ ಫಲಕ್ಕಾಗಿ ಇಬ್ಬರು ಸಹೋದರರನ್ನು ಸೆರೆಹಿಡಿದು ಪ್ರಾದಿಕಾನಿನ ಮೇಲೆ ಬಿಟ್ಟಿರುವರು

'ಮನೆಬಿಡಬಾರದು'—

ಎಂಬ ಕಟ್ಟಪ್ಪಣೆಯನ್ನುಲ್ಲಂಘಿಸಿ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕಾಗಿ ಪೋಲೀಸರು ದೇವಾನಂದ ಮುಖರ್ಜಿ ಎಂಬವರನ್ನು ಸೆರೆಹಿಡಿದ್ದಾರೆ ಇವರು ಡಾ। ಶರಚ್ಚಂದ್ರ ಮುಖರ್ಜಿ (ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ) ಎಂಬರ ಪುತ್ರರು

ಬ್ರಿಟನಿನ ಪ್ರಧಾನ ಮಂತ್ರಿಗಳಾಗಿದ್ದ ಮಿ। ಲ್ಲೊಯ್ಡ್ ಜೋರ್ಜರು ಇಂಗ್ಲಂಡಿನ ಆರ್ಥಿಕ ಸಮಸ್ಯೆಯ ಕುರಿತು ಭಾಷಣವೀಯುತ್ತಿರುವರು

ಒಡವೆಗಳ ಅಪಹಾರಕ್ಕಾಗಿ

ಸಣ್ಣ ಮಕ್ಕಳನ್ನು ಪುಸಲಾಯಿಸಿ ಕರೆದುಕೊಂಡು ಹೋಗಿ ಅವರ ಮೈಮೇಲಿದ್ದ ಒಡವೆಗಳನ್ನು ಅಪಹರಿಸಿಕೊಳ್ಳುತ್ತಿದ್ದನೆಂಬ ಆಪಾದನೆಯ ಮೇಲೆ ಮೈಸೂರು ೨೧ ಗುಂಡಿಲ್ಲ ಪೇಟೆಯ ಮಲ್ಲಯ್ಯ ಶೆಟ್ಟಿ ಎಂಬ ಬಳೆಗಾರ ಲಿಂಗಾಯತ ಜಾತಿಯವನನ್ನು ದಸ್ತಗಿರಿ ಮಾಡಿದ್ದಾರೆ

ಬೆಂಕಿಯ ಅನಾಹುತ

ಬರ್ಕ್ಲಿಯ ಶಂಕರ್ ಫ್ಲೋರ್ ಮಿಲ್ಲಿಗೆ ಬೆಂಕಿ ಬಿದ್ದು ಯಂತ್ರಗಳೂ ಕಟ್ಟಡಗಳೂ ಸಂಪೂರ್ಣ ನಾಶವಾದುವು ಈ ಬೆಂಕಿಯನ್ನು ಆರಿಸುವುದಕ್ಕಾಗಿ ೧೦೦ ಮಂದಿ ಪೋಲೀಸರೂ ಫೈಯರ್‌ಬ್ರಿಗೇಡಿನವರೂ ಸಹಾಯ ಮಾಡಿದರು ೩ ಲಕ್ಷ ರೂಪಾಯಿಗಳು ನಷ್ಟವಾದುವು

ಎಸೆಂಬ್ಲಿಯಲ್ಲಿ—

ಕೊಂಗ್ರೆಸ್ಸಿನ ಮೇಲಿರುವ ಕಟ್ಟಾಜ್ಞೆಗಳ ವಿಚಾರದಲ್ಲಿ ಪ್ರಶ್ನೆಗಳ ಮಳೆಯನ್ನೇ ಸದಸ್ಯರು ಸುರಿದುಬಿಟ್ಟರು. ಹೋಂ ಮೆಂಬರರು ಚಕಿತರಾದರು. ಸರ್ ಹೆನ್ರಿಯವರು "ಹಿಂದೂಸ್ಥಾನ ಸೇವಾದಳವು ಬದ್ಧವಾಗಿ ಕೊಂಗ್ರೆಸ್ಸಿಗೆ ಸೇರಿಲ್ಲ ಅದು ಶಾಂತಿಯುತವಾದ ಸಂಸ್ಥೆ. ಆದಕಾರಣ ಅದರ ಮೇಲಿರುವ ಕಟ್ಟಾಜ್ಞೆಯನ್ನು ತೋಲಿಕ್ಕಲಿಲ್ಲ" ಎಂದರು ಆದಕ್ಕೆ ಶ್ರೀ। ವಲ್ಲಭಪಂತರು ಆ ಸಂಸ್ಥೆಯು ಹಿಂಸಾಮಯವರ್ತನೆಯದ್ದು ಎಂದು ಅರ್ಥವೇ" ಎಂದು ಕೇಳಿದರು. "ಹೌದು" ಎಂದರು ಸರ್ ಹೆನ್ರಿ ಕ್ರೈಕರು ಆಗ ಶ್ರೀ। ಸತ್ಯಮೂರ್ತಿಯವರೆದ್ದು "ನಿಮಗೆ ಅದನ್ನು ಯಾರು ತಿಳಿಸಿದರು?" ಎಂದು ಪ್ರಶ್ನೆಯಿಟ್ಟರು ಸರ್ ಹೆನ್ರಿಯವರು "ಸ್ಥಳೀಯ ಸರಕಾರಗಳಿಂದ ಸುದ್ದಿ ಬಂದಿದೆ" ಸತ್ಯಮೂರ್ತಿ—"ಸೇವಾದಳವು ಅಖಿಲ ಭಾರತ ಸಂಸ್ಥೆ ಹೀಗಿದ್ದರೂ ಎಲ್ಲ ಸ್ಥಳೀಯ ಸರಕಾರಗಳೂ ಅದನ್ನು ಕ್ರಾಂತಿಯುತ ಸಂಸ್ಥೆಯೆಂದು ಹೇಳಿದರೆ ಒಪ್ಪುವವರಾರು?" ಎಂದು ಓಜಾರಿಸಿದರು.

ನಮ್ಮ ಸಂಪತ್ತು ನೋಡಿ!

ಜಗತ್ತಿನಲ್ಲಿ ಮನುಷ್ಯರು ತಲಾ ಒಂದಕ್ಕೆ ಹೀಗೆ ಆರ್ಜನೆಮಾಡುತ್ತಾರೆ. ಅಮೇರಿಕಾದಲ್ಲಿ ರೂ. ೯-೩-೦; ಬ್ರಿಟನ್ ೪-೧೧-೦; ಫ್ರಾನ್ಸ್ ರೂ. ೩-೯-೦; ಜಪಾನ್ ೩-೨-೦; ಇಟಲಿ ೧-೯-೦. ಇಂಡಿಯಾ ಆ ೦-೧-೩.

ರಾಷ್ಟ್ರ ಪಕ್ಷೀಯರಿಗೆ ಅಧ್ಯಕ್ಷ ರೂಜವೆಲ್ಟರ ಸಂದೇಶ—

ಜೀವನದಲ್ಲಿ ಸ್ಥಿರತೆಯನ್ನು ಹೊಂದಲು ಹಾದಿಗಳಿಗಾಗಿ ಕೈಗಾರಿಕೆಗೂ ಸಾಗುವಳಿಗೂ ಇವರು ಪ್ರಜ್ಞೆ, ಉತ್ಕ್ರಷ್ಟ ಜನನನ್ನು ಕೈಕೊಳ್ಳಬೇಕು. ಹಣವಂತರು ಉಳಿದವಸ್ತು ಮನ್ನು ಬಿಟ್ಟು ಕೆಲವು ಸಂಸ್ಥೆಗಳು ಸ್ವಾರ್ಥಜನಕ ಉಪಯೋಗಾರ್ಥವಾಗಿ ಹಣವು ಉಳಿದಲ್ಲಿ ಕೃಷಿ ಗೊಂಡು, ಹಲವು ಮಜೂರರಿಗೆ ಕೆಲಸ ಒದಗುವಂತೆ ಮಾಡಿದರೆ, ದೇಶದ ಪರಿಸ್ಥಿತಿಯು ಹೋಗುವುದೆಂದು ಇವರ ಮತ. ಆದರೆ ಅದು ನಿಶ್ಚಯ ಟ್ಟಿಗೆ ಸಾಧ್ಯವಾಗುವದೋ ನೋಡಬೇಕು. ಮುಂದಿನ ರಾಜಕೀಯಗಳು ಪರಸ್ಪರ ಪ್ರೇಮಭಾವದಿಂದಲೇ ನಡೆಯಬೇಕು ಅಂತ ಯನ್ನು ಇವರು ತೋರಿಸಿರುವರು. ಯುನೈಟೆಡ್ ಸ್ಟೇಟ್ಸಿನ ವ್ಯಾಪಾರ ಅಭಿವೃದ್ಧಿಗಾಗಿ ತಕ್ಕದಾದ ಏರ್ಪಾಡುಗಳನ್ನು ಮಾಡಬೇಕೆಂದು ಇವರ ಹೇಳಿಕೆ. ಆದರೆ, ವ್ಯಾಪಾರ ಸ್ಪರ್ಧೆಯಿಂದ ಉಂಟಾದ ಕೆಲವು ಸಂಕಷ್ಟಗಳನ್ನು ಇವರು ಹೇಗೆ ಪರಿಹರಿಸುತ್ತಾರೆ ಎಂಬ ಪ್ರಶ್ನೆಯೂ ಜಗತ್ತಿನ ಎಲ್ಲಾ ಕಡೆಗಳಲ್ಲಿಯೂ ಇದೆ. ಸಾಮಾನ್ಯ ಜನರಿಗೆ ಯಾವ ಭಾಗದಲ್ಲಿ ತೃಪ್ತಿಕರವಾಗಿ ಕಂಡುಬರುತ್ತಿದೆಯೆಂಬುದು. ಇವರ ಹೇಳಿಕೆ, "ಆರ್ಥಿಕ ಸ್ಥಿತಿಯಲ್ಲಿ ಅಲ್ಲದೆ ಆಧ್ಯಾತ್ಮಿಕ ಸ್ಥಿತಿಯಲ್ಲಿ ಕೂಡ ಅಮೇರಿಕಾವು ಹೆಚ್ಚಾಗಿ ಸುಧಾರಿಸಿದೆ" ಎಂಬ ವಾಕ್ಯವು ಸಂತೋಷಕರವೇ ಸರಿ.

ದೀನಪ್ರೇಮ—

ಎಷ್ಟೆಂದೆಯೆಂದು ನೋಡಿ. ಕೌಂಟಿ ಅಮೇರಿಕದ ಕೆಲ್ಸಿನೀನ್ ಎಂಬಲ್ಲಿನ ಬಡಕೃಷಕರ ಕಂದಾಯವನ್ನು ವಸೂಲು ಮಾಡುವುದಕ್ಕಾಗಿ ಅವರಲ್ಲಿದ್ದ ೮೫ ದನಕರುಗಳನ್ನು ಅಲ್ಲಿಯ ಅಧಿಕಾರಿಗಳು ಕೊಂಡೊಯ್ದರು. ಅವರ್ಗೆ ಅಲ್ಲಿಯ ಜನರಿಗೆ ಬಡವರ ಸ್ಥಿತಿಯು ತಿಳಿದು ತುಂಬಾ ಇದೆ. ಅಧಿಕಾರಿಗಳು ಆ ದನಕರುಗಳನ್ನು ಹರಾಜ ಮಾಡಲಾಗಿ, ಅವುಗಳಿಗೆ ಒಟ್ಟು ೧ ಶಿಲ್ಲಿಂಗು ಬೆಲೆಯು ಕಟ್ಟಲ್ಪಟ್ಟಿತು. ಏಲವಾಗಿ ಏಂತವರೇ ಇಲ್ಲ, ಇಲ್ಲಿಯಾದರೆ?

ನಿಷೇಧ ಸೂಚನೆ—

ಮಾಡುವ ರೀತಿ ಹಲವಿವೆ. ಉಪವಾಸವಿದ್ದು, ಸಭೆ ಜರಗಿಸಿ, ಕರಾವು ಮಾಡಿ—ಹೀಗೆ ನಾನಾ ವಿಧಗಳಿಂದ ನಿಷೇಧ ಸೂಚನೆ ಮಾಡಬಹುದು. ಕೃಷ್ಣಾ ಡಿಸ್ಟ್ರಿಕ್ಟ್ ಬೋರ್ಡಿನವರು ಜೆ. ಪಿ. ಸಿ. ಸುಧಾರಣೆಗಳನ್ನು ನಿಷೇಧಿಸಿದ ರೀತಿಯೇ ಬೇರೆ. ಎಲ್ಲಾ ಸಂಸ್ಥೆಗಳು, ಸಂಸ್ಥೆಗಳು, ಶಾಲೆಗಳು, ಆಸ್ಪತ್ರೆಗಳು; ಫೆಬ್ರವರಿ ೬ನೇ ೧೫ನೇ ದಿನ ೧೦ ನಿಮಿಷಗಳ ಕಾಲ ಮುಚ್ಚಲ್ಪಡಬೇಕೆಂದು ಅವರ ಆಜ್ಞೆಯಾಗಿತ್ತು. ಈ ಆಜ್ಞೆಯು ಪೂರ್ಣವಾಗಿ ಪರಿಪಾಲಿಸಲ್ಪಟ್ಟಿದೆ.

ಪ್ರೋತ್ಸಾಹ

ನಮ್ಮ ಸ್ವೀಕರಿಂದಿರ ಸಿಂಹಗಳು, ದಾರಿಯಲ್ಲಿ ಸಿಗುವ ಮೃಗಗಳನ್ನು ಸಂಹರಿಸುವ ಶಕ್ತಿಯು ಆ ಸಿಂಹಗಳಿಗಿದೆ. ಅಂತಹ ಶಕ್ತಿಯು ನಿಮಗಿದೆ ಎಂದು ಇಟಲಿಯ ಸೈನ್ಯಾಧಿಪತಿಗಳು ಅಬಿಸೀನಿಯಾದ ತಮ್ಮ ಸೈನಿಕರಿಗೆ ಪ್ರೋತ್ಸಾಹವನ್ನಿತ್ತಿದ್ದಾರೆ. ಲೀಗ್ ಆಫ್ ನೇಶನ್ಸ್ ಈ ಮಾತುಗಳನ್ನು ಪ್ರಚುರಪಡಿಸುತ್ತದೆ.

೩೪ ತಾಸುಗಳೊಳಗೆ ಊರು ಬಿಡಬೇಕು!

ಎಂದು ದಿಲ್ಲಿಯ ಶ್ರೀ ಮಹಮ್ಮದ್ ಯಾಸೀನರವರಿಗೆ ಸರಕಾರವು ಆಜ್ಞೆಯಿತ್ತಿದೆ. ಧಿಲ್ಲಿ ಪಿತೂರಿಯು ಮೊಕದ್ದಮೆಯಲ್ಲಿ ಇವರೂ ಒಬ್ಬರಂತೆ.

ಹೊಸ ನಕ್ಷತ್ರ.

ವಾಯುವ್ಯದಿಕ್ಕಿನಲ್ಲಿ ಒಂದು ಹೊಸ ನಕ್ಷತ್ರವು ಕಾಣಬರುತ್ತಿರುವುದಾಗಿ ಅಮೇರಿಕದ ಹಾರ್ವಾರ್ಡ್ ಯೂನಿವರ್ಸಿಟಿಯವರು ಪ್ರಕಟಿಸಿರುವರು. ಇದು ಒಂದು ತಿಂಗಳ ಹಿಂದೆ ಬಹು ಸೂಕ್ಷ್ಮವಾಗಿ ಕಾಣ ತೊಡಗಿ, ಇಷ್ಟು ಶೀಘ್ರಕಾಲದಲ್ಲಿ ನೋಡಲಿನ ಒಂದು ಲಕ್ಷ ಪ್ರಮಾಣದಷ್ಟು ಪ್ರಕಾಶವಾಗಿ ಕಾಣುತ್ತಿರುವುದೆಂದೂ, ಆ ಪ್ರಕಾಶವು ಇನ್ನೂ ವೃದ್ಧಿಯಾಗುತ್ತಿರುವುದೆಂದೂ ತಿಳಿಸಲಾಗಿದೆ. ಈ ರೀತಿಯಲ್ಲಿ ನಮ್ಮ ಚಂದ್ರನಿಂದ ಅವು ಪ್ರಕಾಶಿಸತೊಡಗಿದರೆ, ಅದು ಮಧ್ಯಾಹ್ನದ ಸೂರ್ಯನನ್ನು ಹೋಲಬಹುದಂತೆ. ಸೂರ್ಯನು ಇದರಂತೆಯೇ ವೃದ್ಧಿಯಾಗುವುದಾದರೆ ನಮ್ಮ ಭೂಗೋಳದ ಧೃವಪ್ರಾಂತಗಳ ಮಂಜುಗಡ್ಡೆಯು ಕರಗಿ ನೀರಾಗುವುದಲ್ಲದೆ, ಸಾಗರಗಳು ಆವಿಯಾಗಿ ಹೋಗುವುವೆಂದು ಭೂಗೋಳಶಾಸ್ತ್ರ ಶಾಸ್ತ್ರಜ್ಞರಂತೆ ಸ್ಪಷ್ಟಪಡಿಸುವರು.

ಒಂದು ಘಂಟೆಗೆ ಇನ್ನೂರು ಮೈಲು—

ಓಡುವ ವಿಮಾನವು ಒಂದು ಲಂಡನ್ನಿನಿಂದ ಎಲ್ಲಾ ಕಡೆಗಳಿಗೂ (೩೬೦ ಪ್ರಯಾಣಿಕರನ್ನು) ಒಂದೇ ತಾಸಿನಲ್ಲಿ ವಿಮಾನಗಳಿಂದ ಹಾರಿ ದಾಖಲೆ ಮುರಿದಿವೆ.

ಚಕ್ರವರ್ತಿಗಳ ರಜತೋತ್ಸವದ ದಿನ—

ಯುನೈಟೆಡ್ ಕಿಂಗ್ಡಮ್ಮಿನ ಥಿಯೇಟರ್‌ಗಳಲ್ಲಿ ೧೦,೦೦೦ ಜನರ ಪ್ರವೇಶಕ್ಕೆ ಬೇಕಾದ ಟಿಕೇಟುಗಳು ಪೇಟಾದ ಗಳನ್ನು ಧರ್ಮಾರ್ಥ ಹೆಚ್ಚಿನ ಏರ್ಪಾಡು ಆಗಿದೆ.



ಭಾರತಕ್ಕೆ ಹೊಸ ಸುಧಾರಣೆಗಳನ್ನು ಬ್ರಿಟಿಷ ಸರಕಾರವು ಕೊಡುವುದಕ್ಕೆ ಕಾರಣಭೂತರಾದ ಲೋರ್ಡ್ ವಿಲ್ಲಿಂಗ್ಡನ್ನರು.

ಕೆನಡಾದಲ್ಲಿ ನವಸುಧಾರಣೆಗಳು.

ಆಗಲಿವೆ, ಮತ್ತು ಅವುಗಳನ್ನು ಅತಿ ಬೇಗನೇ ನಿರ್ಮಾಣಗೊಳ್ಳುವಂತೆ ಮಾಡುವೆನು ಎಂದು ಈಗ ಚುನಾವಣೆಗೆ ನಿಂತಿದ್ದ ಅಧ್ಯಕ್ಷ ಆರ್. ಬಿ. ಬೆನೆಟರು ವೋಟರರಿಗೆ ವ್ಯಾಖ್ಯಾನ ಮಾಡಿರುವರು. ಸುಧಾರಣೆಗಳು ಯಾವುವೆಂದರೆ: ೧. ನಿರುದ್ಯೋಗಿಗಳಿಗೆ ವಿಮೆ. ೨. ಆರೋಗ್ಯ, ಅನಾರೋಗ್ಯ, ಅಪಘಾತದ ವಿಮೆ. ೩. ತಿದ್ದುಪಡಿ ಮಾಡಿದ ಇನ್‌ಕಮ್‌ಟ್ಯಾಕ್ಸ್ ಕ್ರಮಗಳು. ೪. ಮಜೂರರಿಗೆ ಕನಿಷ್ಠ ಕೂಲಿ ಮತ್ತು ಕೆಲಸದ ಸಮಯದ ವಿಷಯವಾಗಿ ಸುಧಾರಣೆಗಳು. ೫. ವ್ಯಾಪಾರ ಸುಧಾರಣೆಗಾಗಿ ಕೆಲವು ಹೊಸ ಕ್ರಮಗಳು. ಕೆನಡಾ ದೇಶದ ವ್ಯಾಪಾರಸ್ಥಿತಿಯು ಬಹಳ ಹೀನಸ್ಥಿತಿಯಲ್ಲಿದೆ. ಇದನ್ನು ಸರಿಪಡಿಸಲು ಮಾಡಿದ ಕೆಲವು ಯೋಜನೆಗಳು ವಿಫಲಕಾರಿಯಾಗಿಲ್ಲ.

ಸ್ತ್ರೀಪುರುಷ ಬೇಧವು—

ಗಡಿನಾಡಿನ ಕೌನ್ಸಿಲಿನ ಸದಸ್ಯರ ಮೇಲಿರಬಾರದು ಎಂಬ ಬಗ್ಗೆ ಮಿ ಅಬ್ದುಲ್ ಗಫಾರ್ ಖಾನ್, ಎಂ ಎಲ್. ಸಿ ಯವರು ಅಲ್ಲಿನ ಶಾಸನಸಭೆಯಲ್ಲಿ ಮಸೂದೆ ತರಲಿರುವರು. ಗಡಿನಾಡಿನಲ್ಲಿ ಪರದೆಯಿರುವ ಹೆಂಗಸರನ್ನು ಮುಂದಕ್ಕೆ ಹಾಕುವುದು ಮಾಡುತ್ತಿರುವ ಈ ವೇಳೆಯಲ್ಲಿ ಈ ಕರಾರು ಸಾಮಯೋಚಿತವಾಗಿರುವುದಂತೆ.

ಹೊಸ ರೋಗವು ತಲೆದೋರಿದೆ.

ಇಬ್ಬಲಪುರದಲ್ಲಿ ನಾಯಿಗಳ ಮೈಯಿಂದ ಕ್ರಿಮಿಗಳು ಉತ್ಪನ್ನವಾಗಿ, ಅವುಗಳು ಜನರನ್ನು ಅಂಟುರೋಗಗಳಿಗೆ ಬಲಿಯೊಡ್ಡುತ್ತಿವೆ. ಅಧಿಕಾರಿಗಳು ಎಚ್ಚರಿಕೆ ಕೊಟ್ಟಿರುವರು.

ಮದುವೆ ಮಾಡಿದುದಕ್ಕಾಗಿ—

ನೆಲ್ಲೂರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ೨ ವರ್ಷ ಪ್ರಾಯದ ವಧುವಿನ ತಂದೆಗೆ ರೂಪಾಯಿ ೧೦೦ ದಂಡ ವಿಧಿಸಿದರು. ಇವರು ಬಡವನೂ ಅಜ್ಞಾನಾಂಧಕಾರದಲ್ಲಿ ರುವವನೂ ಆದುದರಿಂದ ಈ ರಿಯಾಯಿತಿ.

ಬರ್ಮಾದಲ್ಲಿರುವ ಹಿಂದೀಯರ ಸಂಕಷ್ಟಗಳನ್ನು ಬ್ರಿಟಿಷ ಸರಕಾರಕ್ಕೆ ತಿಳಿಸುವುದಕ್ಕಾಗಿ ಭಾರತದ ಪ್ರತಿನಿಧಿಗಳಾಗಿ ಲಂಡನ್ನಿಗೆ ಪ್ರಯಾಣ ಬೆಳೆಸಿದ ರಾಜಾ ಸರ್ ಅಣ್ಣಾಮಲೈ ಚೆಟ್ಟಿಯಾರರು.

ರಜೆ ಬೇಡವಾದ ಮನುಷ್ಯ!

ರಜೆ ಎಂದರೆ, ಕೆಲಸಗಾರರಿಗೆ ಪ್ರಾಣ. ಆದರೆ ೪೭ ವರ್ಷಗಳ ಸೇವಾ ದಿನಗಳಲ್ಲಿ ಒಂದು ದಿನವಾದರೂ ರಜೆ ತಗೆಯದಿರುವ ಮಿಸೆಸ್ ಪಿನ್ ಎಂಬವರು ಮ್ಯಾಂಚೆಸ್ಟರಿನ ಒಂದು ಲೈಫ್ ಇನ್ಶೂರೆನ್ಸ್ ಕಂಪೆನಿಯಲ್ಲಿರುವರು. ಇವರು ಅಲ್ಲಿಯ ಚೀಫ್ ಎಕೌಂಟೆಂಟರು. ೬೫ ವರ್ಷ ಪ್ರಾಯವಾದ ೪೭ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಸೇವೆಮಾಡಿರುವರು. ಇಷ್ಟು ದೀರ್ಘ ಕಾಲದಲ್ಲಿ ಅವರು ಒಂದು ದಿನವಾದರೂ ರಜೆ ಪಡೆದಿರುವುದಿಲ್ಲ. ಅನಾರೋಗ್ಯವೆಂದರೆ ಆಫೀಸಿಗೆ ಹೋಗಿ ಸ್ವಲ್ಪ ಕೆಲಸ ಮಾಡಿ, ತನ್ನ ಕೆಲಸಕ್ಕಾಗಿ ಹೊರಗೆ ಹೋಗುತ್ತಾರೆ. ಮಿತಾಹಾರ ಮತ್ತು ಸದಾ ಪ್ರಾರ್ಥನೆಯ ನಿಯಮಗಳನ್ನು ಪಾಲಿಸುವುದೇ ತನ್ನ ಆರೋಗ್ಯಾಭಿವೃದ್ಧಿ ಮತ್ತು ಶಿಸ್ತುಗಳಿಗೆ ಕಾರಣಗಳಂತೆ.

ಗಾಂಧಿಜೀಯವರ ಉಪದ್ರವವು—

ಈಗ ಅಲ್ಲಲ್ಲಿ ಕಾಣುತ್ತಿದೆ. ಲಾಹೋರಿನ ಜುಬಿಲಿ ಟೆಕ್ನಿಕಲ್ ಶಾಲೆಯಲ್ಲಿನ ಪರೀಕ್ಷಾ ಫಲಿತಾಂಶವು ನಮ್ಮ ಗಿಂತ ಬೇಗ; ಒಳ್ಳೆಯ ಉಪಾಧ್ಯಾಯರು ಬೇಕು ಎಂದು ಅಲ್ಲಿಯ ವಿದ್ಯಾರ್ಥಿಗಳು ಮುಷ್ಕರ ಹಿಡಿದಿರುವರು. ಒಬ್ಬ ವಿದ್ಯಾರ್ಥಿಯು ಜಗಲಿಯ ಮೇಲೆ ಬಿದ್ದುಕೊಂಡು ಉಪವಾಸ ಮಾಡುತ್ತಿದ್ದಾನೆ.

ಒಬ್ಬನನ್ನು ಎತ್ತಿದುದಕ್ಕಾಗಿ—

ಪೇಶಾವರದಲ್ಲಿ ಪಠಾಣನು ಸರಾಣರಿಗೆ ೧೦ ವರ್ಷಗಳ ಕಠಿಣ ಸಜೆ. ಅವನು ತನ್ನ ಆಸ್ತಿ-ಗಾಡಿಯನ್ನು ನಿಲ್ಲಿಸಿ, ಕೆಡವಿ, ಅದರೊಳಗಿದ್ದ ಯುವಕನೊಬ್ಬನನ್ನು ಒಯ್ದುದು.

30 ಸಾವಿರ ಜನರ ಮರಣವು—

ಸಿಲೋನಿನಲ್ಲಿ ಕಳೆದ ಮೂರು ತಿಂಗಳಲ್ಲಿ ಮಲೇರಿಯಾ ಜ್ವರವು ಒಟ್ಟು ೩೦,೦೦೦ ಮಕ್ಕಳನ್ನು ಕೊಂದಿತಂತೆ. ೧೦,೦೦೦ ಸ್ತ್ರೀಪುರುಷರು, ಸರಕಾರವು ಔಷಧಿ ತೆರೆಯುತ್ತಿದ್ದರೂ, ರೋಗಬಾಧೆಯು ಮುಂದುವರಿಯುತ್ತಿದೆ.

ಬಿರುದುಬಾವಲಿಗಳು—

ನಮ್ಮ ಹೆಚ್ಚುವ ಚಕ್ರಾಧಿಪತಿಗಳ ಜುಬಿಲಿ ಉತ್ಸವದ ಸಂಬಂಧವಾಗಿ ಕೆಲವು ಜನರನ್ನು ಬಿರುದುಗಳನ್ನು ವೈಸರಾಯರು ಹೆಚ್ಚಿಸಲಿರುವರೆಂದು ಗೊತ್ತಾಗಿದೆ. ಈ ಬಗ್ಗೆ ವೈಸರಾಯರು ಪ್ರಕಟನೆ ಕೊಟ್ಟಿದ್ದಾರೆ.

ಮುಖ್ಯೋಪಾಧ್ಯಾಯರು

ಶಾಲೆಯ ಪರೀಕ್ಷೆಗೆ ಬರಬಾರದು, ಮತ್ತು ವಿದ್ಯಾರ್ಥಿಗಳೊಡನೆ ಸೇರಬಾರದು ಎಂದು ಸೋಹಾರಶಾಲೆಯ ಹೈಸ್ಕೂಲಿನಲ್ಲಿ ಆಜ್ಞೆ, ಅಧ್ಯಾಪಕರ ಹೆಸರು ಶ್ರೀ ನಳಿನಿ ರಾಜನ್ ಮಿತ್ರಾ.

ಮೈಸೂರು ಮಹಾರಾಜರು—

ಸಾರ್ವಭೌಮರ ಪಟ್ಟಾಭಿಷೇಕೋತ್ಸವದ ರಜತೋತ್ಸವದ ಸಮಾರಂಭಕ್ಕಾಗಿ ಇಂಗ್ಲೆಂಡಿಗೆ ಹೋಗಲಿರುವರು, ಅಲ್ಲಿಂದ ಯುರೋಪು ಅಮೇರಿಕಾಗಳನ್ನು ನೋಡಿಕೊಂಡು ಬರಲಿರುವರು. ಇಲ್ಲಿಂದ ತೆರಳುವಾಗ ಸನಾತನ ಧರ್ಮಾನುಸಾರವಾಗಿ ಗಂಗೋದಕವನ್ನು ತೆಗೆದುಕೊಂಡೊಯ್ಯುವರು. ಇವರು ಪ್ರತ್ಯೇಕ ಉಗಿಹಡಗಿನಲ್ಲಿ ತೆರಳುವರು. ಇವರೊಡನೆ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ತೆರಳುವರೋ ತಿಳಿದುಬಂದಿಲ್ಲ.

ಕೇಂದ್ರ ಶಾಸನಸಭೆಯ ಡಿಪ್ಯುಟಿ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟ ಬಂಗಾಳ ಧುರೀಣರಾದ ಶ್ರೀ ಅಖಿಲಚಂದ್ರ ದತ್ತರವರು.

ಸ್ವೀಕಾರ

ಲಕ್ಷ್ಮೀ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಇದರ ಸಾಹಿತ್ಯವು ನಮಗೆ ತಲುಪಿದೆ. ಪರಿಶೀಲಿಸಿದರೆ ಇದರ ಪ್ರಗತಿಯು ಅತ್ಯಂತ ಆಶ್ಚರ್ಯಕರವೆಂದು ತೋರುವುದು. ಈ ಕಂಪೆನಿಯು ದೇಶಭಕ್ತರಾದ ದಿವಂಗತ ಲಾಲಾ ಲಜಪತ್‌ರಾಯ ಮುಂತಾದ ಮಹನೀಯರು ಸ್ಥಾಪಿಸಿದ ಪರಿಣಾಮವಾಗಿ ೧೯೨೪ರಲ್ಲಿ ಜನಿಸಿತು. ಪ್ರಥಮ ವರ್ಷದಲ್ಲಿ ಇದರ ಲೈಫ್ ಇನ್ಶೂರೆನ್ಸ್ ಫಂಡು ೫೭೬ ಸಾವಿರ ರೂಪಾಯಿಯಾಗಿತ್ತು. ಒಂಭತ್ತು ವರ್ಷಗಳಲ್ಲಿ ಈ ಮೊತ್ತವು ೩೩ ಲಕ್ಷದಷ್ಟಕ್ಕೆ ಏರಿದೆಯೆಂಬುದನ್ನು ತಿಳಿದ ಕಂಪೆನಿಯು ಜನಮನದಲ್ಲಿ ಸ್ಥಾಪಿಸಿದ ವಿಶ್ವಾಸದ ಅರಿವಾಗುವುದು. ಈ ಕಂಪೆನಿಯು ಇನ್ನಷ್ಟು ವೃದ್ಧಿ ಹೊಂದಲೆಂದು ಆಶಿಸುವೆವು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ ಇದು ಕಳೆದ ಒಂಭತ್ತು ವರ್ಷಗಳ ಅಲ್ಪಾವಧಿಯಲ್ಲಿ ಜಿಲ್ಲೆಗಳಲ್ಲಿ ೧೭ ಶಾಖೆಗಳನ್ನು ಸ್ಥಾಪಿಸಿಕೊಂಡು ಶೀಘ್ರವಾಗಿ ಪ್ರಗತಿ ಹೊಂದಿ, ಜನಾದರಕ್ಕೆ ಪಾತ್ರವಾಗಿರುವ ವಿಷಯವು ಸಂತೋಷಪ್ರದವಾಗಿರುವದಲ್ಲದೆ, ಇತ್ತೀಚೆಗೆ ಅದು ತನ್ನ ಆಶ್ರಯದಲ್ಲಿ ಏಜನ್ಸಿ ಟ್ರಸ್ಟ್ ಮತ್ತು ಎಕ್ಸಿಕ್ಯುಟರ್ ಶಾಖೆಯನ್ನು ಸ್ಥಾಪಿಸಿಕೊಂಡಿದೆಯೆಂದು ತಿಳಿದುಬಂದು ಮತ್ತೂ ಆನಂದಗೊಳ್ಳಬೇಕಾಗುತ್ತದೆ. ಕಳೆದ ನಾಲ್ಕು ವರ್ಷಗಳಿಂದಲೂ ಸಿಂಡಿಕೇಟು ಮೇಲಿನ ರೀತಿಯ ಶಾಖೆಗಳನ್ನು ನಡೆಸುತ್ತಿರುವುದು ತಿಳಿದುಬಂದಿದೆ. ಅದಕ್ಕೆ ದೊರೆತ ಪ್ರೋತ್ಸಾಹವು ಅದನ್ನು ಉತ್ತೇಜಿತವನ್ನಾಗಿ ಮಾಡಿರುತ್ತದೆ. ಆಸ್ತಿ ಪಾಸ್ತಿಗಳ ಮತ್ತು ವಿಶ್ವಸ್ಥಿಯ ವ್ಯವಹಾರಗಳನ್ನು ಕಂಪೆನಿಗೆ ಬಿಟ್ಟು ಕೊಟ್ಟ ವರ್ಗದವರು ತಮ್ಮ ಆಸ್ತಿಗಳ ಆಡಳಿತ ನೋಡುವಾಗ ಮತ್ತು ಸುಧಾರಣೆಗಳನ್ನು ಪಡೆದುದರಲ್ಲಿ ಕಂಪೆನಿಯ ಈ ವಹಿವಾಟು ಕ್ರಮವು ಬಹುಮಟ್ಟಿಗೆ ಸಾರ್ಥಕವಾಗುತ್ತದೆ, ಎಂಬುದರಲ್ಲಿ ಸಂದೇಹವಿಲ್ಲ. ವರ್ಗದಾರರು, ಸ್ವಹಿತದವರು, ಕಂಪೆನಿ ವ್ಯವಹಾರ ಹಿತಕರವಾಗಿ ನಡೆಯುತ್ತಿರುವುದರಿಂದ ಈ ಕಂಪೆನಿಗೆ ಒಳ್ಳೆ ಜವಾಬ್ದಾರಿಯನ್ನು ಈ ಕಂಪೆನಿಗೆ ಬಿಟ್ಟು ಒಳ್ಳೇ ಫಲವನ್ನು ಹೊಂದಲೆಂದು ಹಾರೈಸುತ್ತೇವೆ.

ಮಂಗಳೂರು.

"ಮನಸ್ತೋಷರಂಜನ" ಸಂಘದ ಪಾಕ್ಷಿಕ ಸಭೆಯು ಹಿಂದಿನ ನಿರ್ಣಯದಂತೆ ತಾರೀಖು ೧೩-೨-೫೪ರಲ್ಲಿ ಶ್ರೀಯುತ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿ 'ವಿದ್ಯಾರ್ಥಿಗಳೂ ಸ್ವರಾಜ್ಯವೂ' ಎಂಬ ವಿಷಯವನ್ನು ಇಂಗ್ಲಿಷಿನಲ್ಲಿ ಚರ್ಚಿಸಲಾಯಿತು. ಮುಂದಿನ ತರ್ಕಕ್ಕೆ "ಸ್ತ್ರೀ ಸ್ವಾತಂತ್ರ್ಯ" ಎಂಬ ವಿಷಯವನ್ನು ನಿಶ್ಚಯಿಸಲಾಯಿತು.

ಕಳೆದ ರವಿವಾರ ಸಂಜೆ ಗಂಟೆ ೪-೩೦ಕ್ಕೆ ಬೋಳಾರ ಶ್ರೀ ಕೆ ರಾಮನ್ ವೈದ್ಯರ ಮಾಳಿಗೆಯಲ್ಲಿ ದೇಶೀಯ ವೈದ್ಯರುಗಳ ಸಭೆಯು ಶ್ರೀ ಆಯುರ್ವೇದರತ್ನ ಪಿ. ಆನಂದ ಪಂಡಿತ್ ಎಂ. ಡಿ ಎಂ. ಎಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ ವಿ ಕೃಷ್ಣಪಂಡಿತರ ಪ್ರಾರ್ಥನೆ, ಶ್ರೀ ಪಂಡಿತ ವಿ ಕೆ. ಕಣಾರಿ ವೈದ್ಯರ ಸಭೆಯ ಉದ್ದೇಶ ನಿರೂಪಣೆಯು ಆದ ಮೇಲೆ ಅಧ್ಯಕ್ಷರ ಸೂಚನೆ ಮೇರೆಗೆ ಈ ಸಂಘಕ್ಕೆ "ಆಯುರ್ವೇದ ವೈದ್ಯ ಸಂಘ, ಬೋಳಾರ" ಎಂಬ ಅಭಿಧಾನವನ್ನಿತ್ತು ಶ್ರೀ ಪಿ ಆನಂದ ಪಂಡಿತ ಎಂ. ಡಿ ಎಂ ಎಸ್ ರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಬಾಲಕೃಷ್ಣ ಚೆಟ್ಟಿಯವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ವಿ ಕಣಾರಿ ವೈದ್ಯರನ್ನು ಕಾರ್ಯದರ್ಶಿಯವರನ್ನಾಗಿಯೂ, ಶ್ರೀ ಕೆ ರಾಮ ವೈದ್ಯರನ್ನು ಕೋಶಾಧ್ಯಕ್ಷರನ್ನಾಗಿಯೂ ಆರಿಸಲಾಗಿ ಛಾಯಾಚಿತ್ರ ತೆಗೆಯಲಾಯಿತು. ಈ ಸಭೆ ಜರಗುವುದಕ್ಕೆ ಪರಿಶ್ರಮ ವಹಿಸಿದ ಶ್ರೀ ಬಾಲಕೃಷ್ಣ ಚೆಟ್ಟಿಯಾರ್, ಶ್ರೀ ಕಂಟ್ರಾಕ್ಟರ್ ಬಿ ಜೂಮಪ್ಪ ರೈಟರ್ ಶ್ರೀ ಏತಪ್ಪನವರಿಗೂ ಧನ್ಯವಾದಗಳನ್ನರ್ಪಿಸಿ ಸಭಾಂತ್ಯವಾಯಿತು.

ಇದೇ ೨೫ನೇ ರವಿವಾರ ಸಂಜೆ ೪-೩೦ಕ್ಕೆ ಬೋಳಾರದ ಆಯುರ್ವೇದ ವೈದ್ಯಸಂಘದಲ್ಲಿ ಶ್ರೀ ವಿ. ಕೆ ವೈದ್ಯರು ಸಿಡುಬು ರೋಗದ ಕುರಿತು ಭಾಷಣಮಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಕಳೆದ ಶನಿವಾರ ದಿನ ಸಂಜೆ ಶ್ರೀ ಶಿವಭಕ್ತಿಯೋಗ ಸಂಘದ ನಾಟಕ ಸಭೆಯವರು ಶ್ರೀ ಗೋಕರ್ಣನಾಥ ದೇವಸ್ಥಾನದ ವಠಾರದಲ್ಲಿ ಶ್ರೀ ಕೆ ಕೆ ಶೆಟ್ಟಿ ವಿರಚಿತ "ಸಂಶಯ ಪಿಶಾಚಿ" ನಾಟಕವನ್ನು ಅತ್ಯಂತ ಯಶಸ್ವಿಯಾಗಿ ಅಭಿನಯಿಸಿದರು.

ಮಂಗಳೂರಿನ ಮಿತ್ರಮಂಡಲಿಯ ೧೦ನೇ ವಾರ್ಷಿಕೋತ್ಸವವು ಕಳೆದ ರವಿವಾರ ಕೆನರಾ ಹೈಸ್ಕೂಲಿನ ಘನ್ಷ್ಯಾಮ್ ಸಭಾಭವನದಲ್ಲಿ ಶ್ರೀ ಎಂ ನರಸಿಂಗರಾವ ಬಿ ಎ ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಾಲಕೃಷ್ಣರಾವ್ ಎಡ್ವೊಕೇಟರು ಶ್ರೀಯ ಪ್ರಾರ್ಥನೆ ಮಾಡಿದರು. ಗದ್ಯ, ಪದ್ಯ, ಗಾನ್ಯಗಳು ಓದಲ್ಪಟ್ಟು ಫಲಾಹಾರದೊಂದಿಗೆ ಸಭಾಂತ್ಯವಾಯಿತು.

ಮಂಗಳೂರಿನ ಶಾಲೆಗಳೊಳಗೆ ಜರಗಿದ ಸೀನಿಯರ್ ಬಾಸ್ಕೆಟ್ ಬೋಲ್ ಪಂದ್ಯಾಟದಲ್ಲಿ ಈ ವರ್ಷ ಸೈಂಟ್ ಎಲೋಶಿಯಸ್ ಕಾಲೇಜು ಗವರ್ನಮೆಂಟ್ ಕೊಲೇಜು ಗಣಪತಿ ಹೈಸ್ಕೂಲ್ ಕೆನರಾ ಹೈಸ್ಕೂಲುಗಳು ಭಾಗವಹಿಸಿದ್ದುವು. ಕೆನರಾ ಹೈಸ್ಕೂಲಿನ ಆಟಗಾರರು ಅಧಿಕ ಸಂಖ್ಯೆಯಲ್ಲಿ ಸ್ಕೋರು ಪಡೆದು ಈ ವರ್ಷ ಗೆದ್ದು ಪಾರಿತೋಷಕವನ್ನು ಪಡೆದರು.

ಇದೇ ತಿಂಗಳ ೨೮ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೮-೩೦ಕ್ಕೆ ಮಂಗಳೂರಿನಲ್ಲಿರುವ ಓಟ ಆರ್ಯ ಸಮಾಜದ ಮಂದಿರದಲ್ಲಿ ಶ್ರೀ ಬಿ ಮೋಹನಪ್ಪ ತಿಂಗಳಾಯರು "ಸಂಧ್ಯಾವಂದನೆಯ ಮಹತ್ವ"ದ ಕುರಿತು ಕನ್ನಡದಲ್ಲಿ ಭಾಷಣಮಾಡಲಿರುವರು. ಸರ್ವರಿಗೂ ಸ್ವಾಗತವಿದೆ.

ಮಾರ್ಕೆಟು ರಸ್ತೆಯಲ್ಲಿರುವ ದಿ ಕರ್ನಾಟಕ ಗ್ರಂಥಾಲಯದಲ್ಲಿನ ವಾಚಕರನೇಕರು ಹಲವು ಗ್ರಂಥಗಳನ್ನು ಓದಲು ಪಡಕೊಂಡಿದ್ದು ಅವುಗಳನ್ನು ಹಿಂದೆ ಕೊಡಲಿಕ್ಕೆ ಇರುವುದರಿಂದ ಹೊಸ ವರ್ಷದ ಲೆಕ್ಕಕ್ಕೆ ತೊಂದರೆಯಾಗಿದೆಯೆಂದೂ, ವಾಚಕರು ತಮ್ಮಲ್ಲಿರುವ ಗ್ರಂಥಗಳನ್ನು ಒಂದೆ ತಂದುಕೊಟ್ಟು ತಮ್ಮ ಕಾರ್ಯದಲ್ಲಿ ನೆರವಾಗಬೇಕೆಂದೂ ಅಧಿಕಾರಿಗಳು ತಿಳಿಸುತ್ತಾರೆ.

ಗೋಖಲೆ ದಿನಾಚರಣೆಯು ಇಲ್ಲಿಯ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನಲ್ಲಿ ಇದೇ ತಾ. ೧೯ರಲ್ಲಿ ಶ್ರೀ ಎಂ ನರಸಿಂಗರಾವ್ ಬಿ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ತಾ. ೧೫-೨-೫೪ರಲ್ಲಿ ಗವರ್ನಮೆಂಟ್ ಜ್ಯೂನಿಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಕಥೋಲಿಕ್ ಹೋಸ್ಟೆಲಿನ ಬೋರ್ಡಿಂಗಿನ ದಿನಾಚರಣೆಯು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರಗಿಸಲ್ಪಟ್ಟಿತು.

ತಾಲೂಕುಗಳಿಂದ

ಕುಕ್ಕುಂದೂರು—ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ ಸೋಡ್ತಿಯು ತಾ ೧೯-೨-೧೯೫೪ನೇ ಶನಿವಾರ ಸದರಿ ಶಾಲೆಯಲ್ಲಿ ರಾ। ರಾವ್‌ಸಾಹೇಬ್ ಕೆ ಮಂಜುನಾಥಭಟ್ ಇವರ ಅಧ್ಯಕ್ಷತೆಯಲ್ಲಿ ತೆಗೆಯಲ್ಪಟ್ಟು ಪ್ರಥಮ ಬಹುಮಾನ ರೂ ೧೦೦, ಹಿರ್ಗಾನ ಕೊರಗಶೆಟ್ರಿಗೂ, ಎರಡನೇ ಬಹುಮಾನ ರೂ. ೫೦ ಜೆರ್ವಾಜೆ ಚಿಕ್ಕಶೆಟ್ರಿಗೂ ಮೂರನೇ ಬಹುಮಾನ ರೂ. ೧೬-೮-೦ ಕುಕ್ಕುಂದೂರು ಪಿಚನಾಚಾರಿ ಯವರಿಗೂ ಸಿಕ್ಕಿಯದೆ ಎಂದು ಸೋಡ್ತಿ ಕಮಿಟಿಯ ಗೌರವ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಉಳ್ಳಾಲ— "ಹಜ್ರತ್ ಶರೀಫ್ ಸೈಯ್ಯದ್ ಮುಹಮ್ಮದ್ ಮದನಿ" ಇವರ ಪಂಚವಾರ್ಷಿಕೋತ್ಸವವು ಇವೇ ಹಿಜರಿ ೧೩೫೩ನೇ ಜಿಲ್ಹಜ್ಜ ತಿಂಗಳ ೧೪ನೇ ಬುಧವಾರ (ತಾ. ೨೦-೩-೫೪)ರಲ್ಲಿ ನೆರವೇರುವುದು.

ವಿಟ್ಲ— ಇಲ್ಲಿ ೮ ವರುಷಗಳಿಂದಲೂ ಸಬ್ ರಿಜಿಸ್ಟ್ರಾರಾಗಿದ್ದ ಜನಪ್ರಿಯ ರಾ। ಬಿ ಪುರುಷೋತ್ತಮರಾಯರು ಬಿ ಎ ಇಲ್ಲಿಂದ ಕಾರ್ಕಳಕ್ಕೆ ವರ್ಗವಾಗಿದೆ. ಅವರ ಬದಲಿಗೆ ಹೊಸದುರ್ಗದಿಂದ ಮಿ। ಒ ಮಹಾಯಿಕೆನ್‌ರವರು ಬಂದಿರುವರು.

ಮೂಡಬಿದ್ರೆ— ಈ ಸೆಂಟರ ಉಪಾಧ್ಯಾಯರ ಸಂಘದ ಹದಿನಾಲ್ಕನೆಯ ಸಭೆಯು ಇದೇ ಫೆಬ್ರುವರಿ ತಾ ೧೭ನೇ ಶನಿವಾರ ೩ ಘಂಟೆಗೆ ಬೋರ್ಡು ಮಿಡ್ಲ್ ಸ್ಕೂಲಿನಲ್ಲಿ ಕಾರ್ಕಳ ರೇಂಜ್ ಡಿಪ್ಯುಟಿ ಇನ್ಸ್‌ಪೆಕ್ಟರ ಮಾ। ರಾ। ಕೆ ಲಕ್ಷ್ಮಣ ಭಟ್ಟರ ಅವರ್ಗಳ್ ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ೨೫ ಶಾಲೆಗಳ ೪೭ ಮಂದಿ ಅಧ್ಯಾಪಕರು ಹಾಜರಿದ್ದರು. ಬರುವ ಸಭೆಯು ಮಾರ್ಚ ತಾ ೧೬ಕ್ಕೆ ಬೋರ್ಡ್ ಎಲಿಮೆಂಟರಿ ಹ ದುಗರ ಶಾಲೆಯಲ್ಲಿ ಜರಗಿಸಲ್ಪಡುವುದೆಂದು ತಿಳಿಸೋಣವಾಗಿದೆ.

ಹೆಜಮಾಡಿ.—ತಾ ೨೫-೨-೫೪ನೇ ಸೋಮವಾರ ರಾತ್ರಿ ೯ ಗಂಟೆಗೆ ಹೆಜಮಾಡಿ ಬೋರ್ಡ್ ಹಿಂದೂ ಶಾಲಾ ಕಟ್ಟೋಣದಲ್ಲಿ ಶ್ರೀ ಗಿರಿಯಣ್ಣ ಶೆಟ್ಟರಿಂದ ರಚಿಸಲ್ಪಟ್ಟ "ಅಂಗದ ಸಂಧಾನ" ಎಂಬ ಸಂಧಿಯು ವಾಚಿಸಲ್ಪಡುವುದು. ಸರ್ವರಿಗೂ ಸ್ವಾಗತವಿದೆ.

ಹಾರಿಗಾಳ—ಇಲ್ಲಿಯ ಜಿಣ ಸೆಟ್ಟಿ ಎಂಬಾತನು ೩ ದನಗಳನ್ನು ಕಳವುಮಾಡಿದ ಸಂಗತಿಯಲ್ಲಿ ಉಡುಪಿ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತಕ್ಷೀರಿಗೆ ಒಳಗಾಗಿದ್ದನೆಂಬ ಸಂಗತಿ ಈ ಮೊದಲು ತಿಳಿಸಿದಯಷ್ಟೆ. ಸದರಿ ಮೊಕದ್ದಮೆಯ ತೀರ್ಮಾನವಾಗಿ ತಾ. ೧೫-೨-೫೪ರಲ್ಲಿ ಸದರಿ ಕೋರ್ಟಿನಲ್ಲಿ ಮೇಜಿಸ್ಟ್ರೇಟರು ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದ್ದರಾಗಿ ತಿಳಿದುಬರುತ್ತದೆ.

ಇಲ್ಲಿಯ ಗವರ್ನಮೆಂಟು ಜ್ಯೂನಿಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಗೆ ತರಬೇತಿನ ಬಗ್ಗೆ ಇದೇ ಕಳೆದ ಜುಲಾಯಿ ತಿಂಗಳಲ್ಲಿ ಬಂದು ಸೇರಿದ ಪುತ್ತೂರು ತಾಲೂಕಿನ ಬೆಳ್ತಂಗಡಿ ಗ್ರಾಮದ ಜೈನ ಸಮಾಜಕ್ಕೆ ಸೇರಿದ ಜಿನರಾಜ ಅಂಗನೆಂಬ ವಿದ್ಯಾರ್ಥಿಯು ಇದೇ ತಿಂಗಳ ತಾರೀಖು ೧೯ರಲ್ಲಿ ನಿಮೋನಿಯಾ ಜ್ವರದಿಂದ ಇಲ್ಲಿಯ ವೆನ್‌ಲೊಕ್ ಆಸ್ಪತ್ರೆಯಲ್ಲಿ ಅಕಾಲ ಮೃತ್ಯುವಿಗೆ ತುತ್ತಾದುದು ವಿಷಾದಕರವಾದ ವೃತನನ್ನು ಅವನ ಅಧ್ಯಾಪಕ ವೃಂದ ಮತ್ತು ಸಹಪಾಠಿಗಳು ಕೂಡಿ ಭಜನೆ ಮಾಡುತ್ತಾ ಮೆರವಣಿಗೆಯಿಂದ ಕೊಂಡುಹೋಗಿ ದಹನಮಾಡಿದರು.

ಶ್ರೀ ಕೃಷ್ಣಾ ರೆಸ್ಟೋರೆಂಟ್, ಕೊಡಿಯಾಲಬೈಲ್ ಇದರ ವಾರ್ಷಿಕ ವರ್ಧಂತಿಯು ಇದೇ ಕಳೆದ ೧೭ನೇ ತಾರೀಕಿನ ದಿನ ರಾ। ಎಸ್ ರಾಮಕೃಷ್ಣಾಚಾರ್ ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಬಹು ಉತ್ಸವಯಾಗಿ ಜರಗಿತು. ಈ ಭವನದಲ್ಲಿ ಪ್ರತ್ಯೇಕವಾಗಿ ವಿದ್ಯಾರ್ಥಿಗಳು ಊಟಮಾಡುತ್ತಿರುವರು. ಹೀಗಿದ್ದು ಇದೊಂದು ಹೊಸ್ಟೆಲಿನಂತೆಯೇ ಇದೆಯೆಂದು ಹೇಳಬಹುದು. ಇಲ್ಲಿನ ವಿದ್ಯಾರ್ಥಿಗಳೊಳಗೆ ಬೇಡ್ಮಿಂಟನ್ ಸ್ಪರ್ಧೆ ನಡೆದು ಗೆದ್ದವರಿಗೆ ಬೆಳ್ಳಿ ಪದಕ ಇತ್ಯಾದಿಗಳನ್ನು ಕೊಡಲಾಯಿತು. ರೆಸ್ಟೋರೆಂಟಿನ ಹಿತಚಿಂತಕರೂ ನಿವಾಸಿಗರೂ ಸಭೆಗೆ ಬಂದು ಸಭೆಯಲ್ಲಿ ಈ ಸಂಸ್ಥೆಯ ಮಾಲೀಕರನ್ನು ಹೊಗಳಿ ಭಾಷಣವನ್ನಿತ್ತರು.

ಮಿ। ಕೆ ವೈ ಎಂ ಸಂಪಾದಕತ್ವದಲ್ಲಿ ಈ ಬರುವ ವಾರದಿಂದ ಜ್ಯೋತಿ ಎಂಬ ವಾರಪತ್ರಿಕೆಯು ಹೊರಡಲಿದೆ.

ಕಾರ್ಕಳ—ವಿಕ್ಟೋರಿಯಾಸ್ಟ್ರೀಟ್‌ನಲ್ಲಿರುವ ಸ್ವಸಮಾಜದ ಏಳಿಗೆಗಾಗಿ ಕಳೆದ ಎರಡು ವತ್ಸರಗಳಿಂದಲೂ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ಶ್ರೀ ಪದ್ಮನಾಭ ಶೆಟ್ಟಿಗಾರ ವೈಶ್ಯಸಮಾಜ ಸೇವಾ ಯುವಕಸಂಘದ ಪುಸ್ತಕ ಭಂಡಾರಕ್ಕೆ ಸ್ಥಳೀಯ ಆರ್ಯಧರ್ಮ ಮತ್ತು ಹಿಂದೀ ಪ್ರಚಾರ ಸಮಿತಿಗಳ ಕಾರ್ಯದರ್ಶಿಯವರಾದ ಶ್ರೀಯುತ ಕೇಶವ ರಾಮಚಂದ್ರ ಶೆಣೈಯವರು ಹಲವು ಉಪಯುಕ್ತ ಪುಸ್ತಕಗಳನ್ನು ಕೊಟ್ಟು ಪ್ರೋತ್ಸಾಹಿಸಿರುವರು. ಸದರಿಯವರ ಔದಾರ್ಯತತ್ಪರತೆಗಾಗಿ, ಸದರಿ ಪುಸ್ತಕಗಳನ್ನು ಆತ್ಮಾದರಗಳಿಂದ ಸ್ವೀಕರಿಸಿದ ಸೇವಾಸಂಘದ ಪರವಾಗಿ ಸಂಘದ ಕಾರ್ಯದರ್ಶಿಯವರು ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತಾರೆ.

ಸುರತ್ಕಲ್—ಫೆಬ್ರುವರಿ ತಾ ೧೯ನೆಯ ದಿನ ಹೊಸಬೆಟ್ಟುನಲ್ಲಿ ಜರಗಿದ "ಓಟದ ಕೋಣಗಳ ಸ್ಪರ್ಧೆ"ಯಲ್ಲಿ ಪಾವಂಜೆ ದಾಸು (ವೆಂಕಪ್ಪ) ಪೊಳಲಿಯವರ, ಮುಂಜನಾಡಿಯ ಮತ್ತು ಅಡಿಮಾರು ಬ್ರೂಪಯ ಸೆಟ್ಟರ ಕೋಣಗಳು ಜಯ ಪ್ರದಗೊಂಡು ಪ್ರೇಕ್ಷಕರ ಶ್ಲಾಘನೆಗೆ ಪಾತ್ರವಾಗಿವೆ.

ಸುರತ್ಕಲ್ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ತಾ ೨೧ನೆಯ ದಿನ ಕೃಷ್ಣಾಪುರ ಶ್ರೀ ಕೃಷ್ಣ ಎಲಿಮೆಂಟರಿ ಶಾಲೆಯಲ್ಲಿ ಜರಗಿತು.

ಸುರತ್ಕಲ್ "ಯಕ್ಷಗಾನ ಹಿತೈಷೀ ಸಭಾ" ಎಂಬೀ ಸಂಸ್ಥೆಯು ಕಳೆದ ೧೯೫೪ನೆಯ ಜನವರಿಯಿಂದ ಇದುವರೆಗೆ ನಿಷ್ಕ್ರಿಯವಸ್ಥೆಯಲ್ಲಿದ್ದು ಇದೇ ಕಳೆದ ತಾ. ೯ನೆಯ ದಿನ ಘಂಟೆ ೫ಕ್ಕೆ ಕಾರ್ಯದರ್ಶಿಯವರಾದ ಶ್ರೀ ಸುಬ್ಬಯ ಸೆಟ್ಟರ ಅಂಗಡಿಯ ಮಹಡಿಯಲ್ಲಿ ಸಂಘದ ಸದಸ್ಯರ ಮಹಾಸಭೆಯು ನೆರವೇರಿತು. ಇದುವರೆಗಣ ಆದಾಯ ವೆಚ್ಚಗಳ ವರದಿ ಮಂಜೂರಾತಿ ಇನ್ನು ಮುಂದೆ ಸಂಘದ ಕಾರ್ಯಕ್ರಮಗಳು ಸುಸೂತ್ರವಾಗಿ ಸಾಗುವಂತೆ ಕೆಲ ನಿರ್ಣಯಗಳ ತೀರ್ಮಾನ ಹೊಸ ಕಾರ್ಯಕಾರೀ ಮಂಡಳದ ಸದಸ್ಯರಾಗಿ ಶ್ರೀ ಗಳಾದ ೧ ನೈ ಎ ಕಿಣಿ (ಅಧ್ಯಕ್ಷ) ೨ ಎಸ್ ಆರ್ ಪೆಜತ್ತಾಯ (ಕಾರ್ಯದರ್ಶಿ) ೩ ನಾರಾಯಣಾಚಾರಿ (ಸದಸ್ಯ) ಯವರುಗಳ ಚುನಾವಣೆಗಳೇ ಮೊದಲಾದವುಗಳು ನಡೆದುವು.

ಇಲ್ಲಿಯ ಪಂಚಾಯತಿ ಬೋರ್ಡಿನ ಸಂದರ್ಶನಾರ್ಥ ಜಿಲ್ಲಾ ಪಂಚಾಯತ ಡೆಪ್ಯುಟಿ ಪ್ರೆಸಿಡೆಂಟ್ ರಾ। ರಾ। ಶ್ರೀ ಪೊಳಲಿ ಶೀನಪ್ಪಯ್ಯರ ತಾ ೬ನೆಯ ಬುಧವಾರ ಚಿತ್ತೈಸಿ, ಅಂದೇ ಮಂಗಳೂರಿಗೆ ತೆರಳಿರುತ್ತಾರೆ.

ಉಡುಪಿ—ಇಲ್ಲಿಯ ಬೋರ್ಡು ಹೈಸ್ಕೂಲಿನ ವರ್ಧಂತ್ಯುತ್ಸವವು ಬರುವ ಮಾರ್ಚಿ ತಿಂಗಳ ೩ರಿಂದ ೫ರವರೆಗೆ ಮಿ। ಎಮ್ ಎಸ್ ಶ್ರೀನಿ... ಬಿ ಎ ಬಿ ಸಿ ಎಸ್ ಎಮ ಎಲ್ ಸಿ ಇವರುಗಳ ಅಧ್ಯಕ್ಷತೆಯಲ್ಲಿ ಜರಗುವುದು. ಶಾಲೆಯ ಹಳೆಯ ವಿದ್ಯಾರ್ಥಿಗಳೂ ಹಾಗೂ ಇತರ ಶುಭಾಭಿಮಾನಿಗಳೂ ಈ ವಿವರವು ತಿಳಿಯದ ಪ್ರಯುಕ್ತ ಅವರಿಗೆಲ್ಲ ಪ್ರತ್ಯೇಕ ಆಮಂತ್ರಣ ಪತ್ರಿಕೆಯನ್ನು ಕಳುಹಿಸಲಾಗದಿದ್ದರೂ ಈ ಪತ್ರಿಕೆಯ ಮೂಲಕ ಆಮಂತ್ರಿಸಲಾಗಿದೆಯೆಂದೂ ಅವರೆಲ್ಲರೂ ತಮ್ಮ ತಮ್ಮ ಶಕ್ತ್ಯಾನುಸಾರ ಪ್ರತ್ಯೇಕವಾಯಿ ಪುಸ್ತಕಾದಿಗಳ ಮೂಲಕ ಸಹಾಯವನ್ನು ಕಳುಹಿಸಿಕೊಟ್ಟು ವರ್ಧಂತ್ಯುತ್ಸವಕ್ಕೆ ದಯಮಾಡಿ, ಅದನ್ನು ಯಶಸ್ವಿಯಾಗುವಂತೆ ನಡೆಸಿಕೊಡಬೇಕಾಗಿ ಶಾಲಾ ಮುಖ್ಯೋಪಾಧ್ಯಾಯರಾದ ಮಿ। ಜೋಸೆಫ್ ಫೆರ್ನಾಂಡೀಸ್ ಬಿ ಎ, ಎಲ್ ಟಿ ಇವರ ವಿನಂತಿ ಇದೆ.

ತಾ ೧೭ನೇ ರಾತ್ರಿ ೯ ಗಂಟೆಗೆ ಶ್ರೀ ಅನಂತೇಶ್ವರ ದೇವಸ್ಥಾನದಲ್ಲಿ ಶ್ರೀ ಬಿ ವಾಸುದೇವರಾವ್ ಬಿ ಎ ಬಿ ಎಲ್ ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ಹಿಂದೂ ಮಠಗಳ ಸಂಬಂಧವಾದ ಬಿಲ್ಲಿನ ನಿಷೇಧ ಸಭೆಯು ಜರಗಿತು. ಶ್ರೀ ಕೆ ಎಲ್ ಐತಾಳ ಬಿ ಎ ಬಿ ಎಲ್ ವಕೀಲ್ ಇವರು ಸರಕಾರವು ಸದ್ಯ ತರುವ ಬಿಲ್ಲಿನಿಂದ ಯಾವುದಾದರೊಂದು ಪ್ರಯೋಜನಕ್ಕಿಂತ ಹೆಚ್ಚಿನ ಹಾನಿಯುಂಟೆಂದು ವಿವರಿಸಿ ಹೇಳಿದರು. ಸದರಿ ಬಿಲ್ಲನ್ನು ನಿಷೇಧಿಸಿ ಹಲವು ಠರಾವುಗಳೂ ಸೂಚನೆಗಳೂ ಮಂಜೂರಾದುವು. ಅಷ್ಟಮಠಗಳ ಶಿಷ್ಯವೃಂದವು ಈ ಬಿಲ್ಲಿನ ಬಗ್ಗೆ ನಿಷೇಧ ಚಳವಳವು ಅಲ್ಲಲ್ಲಿ ಆಗಲಿದೆಯೆಂದೂ ತಿಳಿದುಬರುತ್ತದೆ.

ತಾ ೧೬ನೇ ಪ್ರಾತಃಕಾಲ ೯ ಗಂಟೆಗೆ ಇಲ್ಲಿನ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಉಡುಪಿ, ಲಿಮಿಟೆಡ್ ಆಫೀಸಿನಲ್ಲಿ ಮಿ। ಸಿ ಎಲ್ ಕುಲಕರ್ಣಿ ಬಿ ಎ, ಎಮ್ ಎಲ್, ಡಿ ಮುನ್ಸೀಫರ ಅಧ್ಯಕ್ಷತೆಯಲ್ಲಿ ಸದರಿ ಬ್ಯಾಂಕಿನ ಮಾಜಿ ಅಧ್ಯಕ್ಷರಾಗಿದ್ದ ದಿವಂಗತ ಶ್ರೀ ಹಾವಂಜೆ ಕೇಶವಪ್ಪ ಬಿ, ಎ, ಬಿ ಎಲ್ ವಕೀಲ್ ಇವರ ತೈಲಚಿತ್ರ ಅನಾವರಣ ಸಮಾರಂಭವು ಬಹು ವಿಜೃಂಭಣೆಯಿಂದ ಜರಗಿತು. ಸದರಿ ಸಭೆಗೆ ಮಿ। ಕುಲಕರ್ಣಿಯವರು ಅಧ್ಯಕ್ಷರಾಗಿ ಆರಿಸಲಾದ ಮೇಲೆ, ಮಾನ್ಯ ಅಧ್ಯಕ್ಷರು ದಿವಂಗತರ ಗುಣಕಥನವನ್ನು ಯಥೋಚಿತವಾಗಿ ಮಾಡಿದ ಮೇಲೆ, ಸದ್ರಿ ತೈಲಚಿತ್ರವನ್ನು ನಿಯಮಿತವಾಗಿದ್ದಂತೆ ಶ್ರೀ ಅಲೂರು ಲಕ್ಷ್ಮೀನಾರಾಯಣರಾಯರು ಅನಾವರಣಮಾಡಿ ಭಾಷಣವಿತ್ತರು.

ತಾ. ೧೭ನೇ ಸಾಯಂಕಾಲ ೪ ಗಂಟೆಗೆ ಇಲ್ಲಿಯ ಉಡುಪಿ ಬ್ಯಾಂಕ್ ಲಿಮಿಟೆಡ್‌ನಲ್ಲಿಯೂ ಸದ್ರಿ ಬ್ಯಾಂಕಿನ ಡೈರೆಕ್ಟರರು ದಿವಂಗತ ಶ್ರೀ ಹಾವಂಜೆ ಕೇಶವ ಪೈಗಳ ತೈಲಚಿತ್ರ ಅನಾವರಣ ಸಮಾರಂಭವು ಶ್ರೀ ಬಿ ಶ್ರೀನಿವಾಸ ರಾವ್ ಎಡ್ವೊಕೇಟ್, ಇವರ ಅಧ್ಯಕ್ಷತೆಯಲ್ಲಿ ವಕೀಲ ಶ್ರೀ ಬಿ ವೈಕುಂಠಬಾಳಿಗರು ದಿವಂಗತರ ತೈಲಚಿತ್ರವನ್ನು ಅನಾವರಣಮಾಡಿದರು.

ಶ್ರೀ ಪುತ್ತಿಗೆ ಸ್ವಾಮಿಯವರು ಶ್ರೀ ಶಿರೂರು ಸ್ವಾಮಿಯವರು ಪಾದಂಗಳವರು ತಾ. ೭ಕ್ಕೆ ಇಲ್ಲಿನ ಶ್ರೀ ಅನಂತೇಶ್ವರ ದೇವಸ್ಥಾನದಲ್ಲಿ ರಾತ್ರಿಪೂಜೆಯನ್ನು ಜರುಗಿಸಿದರು. ಸಾಯಂಕಾಲ ಜಾಗರ ಸಂತರ್ಪಣೆ, ರಂಗಪೂಜೆ, ರಥೋತ್ಸವಾದಿಗಳಿದ್ದುವು.

ಇದೇ ತಾ ೧೪ನೇ ದಿನ ಸಾಯಂ, ಘಂಟೆ ೫ಕ್ಕೆ ಇಲ್ಲಿಯ "ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್"ನ "ದಿ ಏಜನ್ಸೀ ಟ್ರಸ್ಟಿ ಎಂಡ್ ಎಕ್ಸಿಕ್ಯೂಟರ್ ಶಿಪ್" ಎಂಬಭಿಧಾನದ ಶಾಖೆಯ ಸ್ಥಳೀಯ ಸಾರಸ್ವತ ದೇವಳದ ಓಣಿಯಲ್ಲಿನ ಸದ್ರಿ ಸಿಂಡಿಕೇಟಿನ ಆವರಣದಲ್ಲಿರುವ ದಿ ಕೆನರಾ ಲ್ಯಾಂಡ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ ನ ನವೀನ ಕಟ್ಟೋಣದಲ್ಲಿ ಶ್ರೀ ಎ ಲಕ್ಷ್ಮೀನಾರಾಯಣರಾವ್, ಬಿ ಎ, ಬಿ ಎಲ್ ಎಡ್ವೊಕೇಟ ಇವರಿಂದ ತೆರೆಯಲಾಯಿತು.

ಬಜಪೆ—ಇಲ್ಲಿಯ ಪರೋಕಿಯಲ್ ಹಾಯರ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ಮಾನ ಉಳ್ಳಾಲ ಮಂಗೇಶರಾವ್ ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ತಾ ೯-೩-೫೪ನೇ ಸಾಯಂಕಾಲ ೫ ಘಂಟೆಗೆ ಜರಗಿಸಲ್ಪಟ್ಟಿತು.

ಸಂಪಾಜೆ— "ಮಲೇರಿಯ ನಿವಾರಕ ಸಹಕಾರ ಸಂಘ" ಈ ಸಂಘದ ಚಾಲಕರು ಜನವರಿ ಪ್ರಥಮ ವಾರದಿಂದ ಆರಂಭಿಸಿ ಪ್ರತೀ ಶನಿವಾರ "ಮಲೇರಿಯ ಕ್ರಿಮಿ ನಾಶಕ" ಎಣ್ಣೆಯನ್ನು ನೀರು ಕೊಳಕಾಗಿ ನಿಲ್ಲುವ ಸ್ಥಳಗಳಿಗೆಲ್ಲಾ ಪಂಪಿನಿಂದ ಚೆಲ್ಲುತ್ತಿರುವರು. ಮತ್ತು ಆರೋಗ್ಯದ ವಿಷಯವಾಗಿ ಪ್ರತೀ ಮನೆಗಳಿಗೂ ಹೋಗಿ ಅಸಹಾಯಕರಿಗೆ ಗುಳಿಗೆ ಮನೆ ಸಮೀಪ ಹಾಕಬೇಕೆಂದು ಸೂಚನೆಕೊಡುವುದಲ್ಲದೆ ಕುಡಿಯುವ ನೀರಿನ ನಿರ್ಮಲತೆಯ ಅವಶ್ಯಕತೆಯನ್ನು ಬೋಧಿಸಿ ಈಗಲೇ ಮೂರು ನಾಲ್ಕು ಬಾವಿಗಳಿಗೆ ತಾವು ಔಷಧವನ್ನು ಹಾಕಿ ಕೆಸರು ನೀರು ಕುಡಿಯುವುದನ್ನು ತಪ್ಪಿಸಿ, ಶುದ್ಧವಾದ ನೀರನ್ನು ಕುಡಿಯಲಿಕ್ಕೆ ಅನುಕೂಲತೆ ಒದಗಿಸಿಕೊಟ್ಟಿರುವರು. ಪಕ್ಕದ ಹೊಂದಿದ ಕೊಡಗು ಸರಕಾರದವರು ಒಡ ಗ್ರಾಮವಾಸಿಗಳು ಸದಾ ಮಲೇರಿಯಾ ಪೀಡಿತರಾಗಿ ಯಾತನೆಪಡುವುದನ್ನು ಕಣ್ಣಾರೆ ಕಂಡು ಗ್ರಾಮದ ಮಲೇರಿಯಾ ಕ್ರಿಮಿ ನಾಶಮಾಡಬೇಕೆಂಬ ಉದ್ದೇಶದಿಂದ ಸಂಘದವರಿಗೆ ೧೭೦ ಗೆಲನ್ ಕ್ರಿಮಿನಾಶಕ ಎಣ್ಣೆ ಮತ್ತು ಎಣ್ಣೆ ಚೆಲ್ಲುವ ಪಂಪು ೩ ಫೌಂಡ್ ಕ್ವಿನೈನ್ ಫಿಲ್ಸ್ ಪಗೈರೆ ಧರ್ಮಾರ್ಥ ಒದಗಿಸಿಕೊಟ್ಟಿರುತ್ತಾರೆಂಬುದು ತಿಳಿಸಲು ಸಂತೋಷವೇ ಸರಿ.

ಸಂಪಾಜೆ ಗ್ರಾಮದ ಸುತ್ತುಮುತ್ತಲೂ ವ್ಯಾಪಿಸಿರುವ ರಿಜರ್ವ್ ಕಾಡಿನಲ್ಲಿ ದುಷ್ಟಜಂತುಗಳು ಬೆಳೆಯಾಗಿಕೊಂಡು ರೈತರಿಗೆ ಕೊಡುತ್ತಿರುವ ಉಪದ್ರವನ್ನು ಹೇಳಲಾರದು. ಆನೆಗಳ ಹಾವಳಿಯು ಬೆಳೆಗಳಿಗೆ ಮಾತ್ರವಲ್ಲದೆ, ಇತ್ತೀಚೆಗೆ ಒಂದು ಆನೆಯು ಮನುಷ್ಯರನ್ನು ಹಿಂಬಾಲಿಸುತ್ತಿರುವುದನ್ನು ಸಂಬಂಧಪಟ್ಟ ಇಲಾಖೆಯವರಿಗೆ ಅರ್ಜಿಯಾಗಿ ಕಳುಹಿಸಿ ನಡೆದಿರುವುದಾಗಿ ತಿಳಿಯುತ್ತದೆ. ಇನ್ನಾದರೂ ಅವುಗಳನ್ನು ಕೊಲ್ಲಲಿಕ್ಕೆ ಹುಕುಂ ಆಗಬಹುದಾಗಿ ನಂಬಬಹುದೇ?

ಸಂಪಾಜೆ ಪೋಸ್ಟು ಆಫೀಸಿನಲ್ಲಿ ಆದಾಯ ಕಡಿಮೆಯಾಗಿರುತ್ತದೆಂತಲೂ, ಕಡಿಮೆಯೆಂದರೆ ತಿಂಗಳಿಗೆ ೪ ರೂಪಾಯಿ ಸಂಬಳಕ್ಕೆ ಕೆಲಸ ಮಾಡಬೇಕಾಗಿ ಸಂಬಂಧಪಟ್ಟ ಬ್ರಾಂಚ್ ಪೋಸ್ಟ್ ಮಾಸ್ಟರರನ್ನು ಗ್ರಾಮಸ್ಥರ ಮೂಲಕ ಹೇಳಿಸಿದವರು, ಕೇಳಿದ ವಿಷಯವಾಗಿಯೂ ಅಷ್ಟು ಕಡಿಮೆ ಸಂಬಳಕ್ಕೆ ಜನಸಿಗುವುದು ದುರ್ಲಭವೇ ತಿಳಿದುಬಂದ ನಂತರ, ಸಂಪಾಜೆಯೊಂದರಲ್ಲೇ ಆಫೀಸು ತೆಗೆದು ಕಲ್ಲುಗುಂಡಿ ಎಸ್ಟೇಟಿನಲ್ಲಿ ಬ್ರಾಂಚ್ ಆಫೀಸು ತೆರೆಯಲಾಗಿದೆ.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ— ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು'—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜೆನಸ್ ಡ್ರಗ್ಸ್ ಒಫ್ ಇಂಡಿಯಾ" ಇದರ ಪುಟ 59ನ್ನು ನೋಡಿ)

ವನಸ್ಪತಿ ತೈಲವಲ್ಲ—ಮೀನಿನ ತೈಲ' ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ 'ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟಿ'ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ 'ಸಸ್ಯತೈಲ'ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು. ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನ ತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಸ್ ಎ ಬಾಲ್ಫೋರರವರ "ಮಿಲ್ಲಿಯನ್ಸ್ ಫ್ರಾಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧ ಪುರುಷರೇನು ಹೇಳುವರೋ' ಓದಿರಿ

ಕವಿರವೀಂದ್ರ:— ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನ ಉಪಯೋಗಿಸಲು ನಿರ್ಧರಿಸಿದ್ದೇನೆ

ಕೆಲ ವರ್ಷಗಳ ಹಿಂದೆ ಡಾ| ಅನ್ನಿಬಿಸೆಂಟರು ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ| ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ತಯಾರಾಗುತ್ತಿರುವುದರಿಂದ್ಲೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ — ಇವುಗಳನ್ನು ಉಪಯೋಗಿಸಿರಿ

ಸೋಲ್ ಏಜಂಟರು.

ನಾದಿರ ಷಾ, ಸ್ಪಿಂಟರ್ ಎಂಡ್ ಕೋ, 165, ಬ್ರೋಡ್ವೇ, ಮದರಾಸು

ಹೆಡ ಆಫೀಸು. ಮುಂಬಾಯಿ ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ. ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುವ ಕ್ರಿ ಎಮ್ ಎಂ ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಿಗೂ ಗೊಡ್ರೆಜ ರವರಿಗೆ ಸಂಬಂಧವಿಲ್ಲ

ಸಂತತಿ ಪ್ರತಿಬಂಧಕ

ಸರಕಾರದಿಂದ ರಜಿಸ್ಟರಾಗಿದೆ ಅಗ್ಗವಾದುದು, ಅಪಾಯರಹಿತ ಮಕ್ಕಳನ್ನು ತಡೆಯುವುದಕ್ಕೆ ಡಾ| ಆರ್ ಸೇನ್‌ಗುಪ್ತ ಎಂ ಡಿ (ಅಮೇರಿಕಾ) ಪ್ರಿನ್ಸಿಪಲ್, ಜೋರ್ಜ್ ಮೆಡಿಕಲ್ ಕೊಲೆಜ್ ಒಫ್ ಹೋಮಿಯೋಪತಿಯವರಿಂದ 18 ತಿಂಗಳವರೆಗೆ ಒಂದು ಬುಟ್ಲಿಗೆ Rs. 1/- ಮಾತ್ರ,

ಬಿ ಕೆ ಪಾಲ್, ಏಜಂಟರು

ಫ್ರೆಂಡ್ಸ್ ಹೋಮಿಯೊ ಹೋಮ್.

65/1 ಹ್ಯಾರಿಸನ್ ರೋಡ್, ಕಲ್ಕತ್ತ.

ಪೆಟ್ಟಿಗೆ ಕೆಮರಾ

—ಎಲ್ಲಕ್ಕಿಂತ ಅಗ್ಗವಾಗಿರುವ ಹೊಸ—

ಸಾಮಾನು ಪ್ರಾರಂಭ ಸ್ಥಿತಿಯಲ್ಲಿ ಫೋಟೊಗ್ರಾಫಿ ಕಲಿಯುವವರಿಗಾಗಿ ಒಂದು ಡಜನು ಪ್ರಿಂಟಿಂಗ್ ಕಾಗದ, 4 ಫಿಲ್ಮ್ ಎಕ್ಸ್‌ಪೋಜರ್, ಕನ್ನಡಿ ಮತ್ತು ಇದರ ಸಾಮಾನುಗಳೊಡನೆ



ಕ್ರಯ ರೂ 2-12-0

ಉತ್ತಮ ತರಗತಿಯದ್ದಕ್ಕೆ ರೂ 3-12-0

ಟಪಾಲ್ ಚಾರ್ಜು ಬೇರೆ ಬೇಡವಾದರೆ ಹಣ ಹಿಂದೆ.

ಭಾರತ ಯೂನಿಯನ್ ಟ್ರೇಡಿಂಗ್ ಕಂಪೆನಿ

ಬಿ ಪಿ 2391 (Sec I) Calcutta

ನೋಟೀಸು

ಬಾಲಗ್ರಹದಿಂದ ಮತ್ತು ಗ್ರಹಣಿಯಿಂದ ಮೃತ್ಯುವಿಗ ತುತ್ತಾಗುವ ಮಕ್ಕಳನ್ನು ಕಾಪಾಡಿಕೊಳ್ಳಿರಿ.

ಎಲ್ಲಾ ತರದ ಬಾಲಗ್ರಹ ಪೀಡೆಯಿಂದ ಸ್ಮೃತಿ ತಪ್ಪಿ ಮರ್ಛೆ ಬಿದ್ದು ಹೊಂದಿರುವ ಬಾಲಕರಿಗೆ ಮತ್ತು ನಾನಾ ವಿಧದ ಗ್ರಹಣಿಗಳ ಮತ್ತು ಸಾಮರ್ಥ್ಯದಿಂದಲೂ ನಮ್ಮ ಔಷಧಿ ದಿವ್ಯ ಚಿಕಿತ್ಸೆಮಾಡಿ ಗುಣಪಡಿಸುತ್ತೇವೆ ತೀರಾ ಗರೀಬರಿಗೆ ಪ್ರತಿಫಲವಿಲ್ಲದೇ ಔಷಧಿ ಕೊಡುತ್ತೇವೆ ವಿಳಾಸ—

ದೇವಣ್ಣ ನಾರಾಯಣ ಕಿಣಿ

ಕೋರ್ಟ್ ರಸ್ತೆ, ಕಾಸರಗೋಡು.

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel,
Calicut, 17—6 1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಹಾಸನಕ್ಕೆ-
ಮೂಡಗೆರೆಗೆ, ಸಕಲೇಶಪುರಕ್ಕೆ
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಪೋಳ್ಳಿಗೆ
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ

ನಿರಾಯಾಸದ ಪ್ರಯಾಣ! **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಭಾರತ ಸ್ವಾತಂತ್ರ್ಯ ಸೌಭಾಗ್ಯದ ವಿವರಣೆ.

ಬರಕಲ್ಲ ಸ್ವಾತಂತ್ರ್ಯ ಹೇಗಿದೆ ನೋಡಿ!

(ಪಂಡಿತ ತಾರಾನಾಥರ ಲೇಖನದಿಂದ)

ನಮ್ಮ ದೇಶಕ್ಕೆ ಸ್ವಾತಂತ್ರ್ಯದ ಹಾದಿ ಹಾಕಿಕೊಡುವುದು ಬ್ರಿಟಿಷರು ಮಾಡಿಕೊಂಡ ಭೀಷ್ಮ ಪ್ರತಿಜ್ಞೆ ಎಂದು ನಾವು ಯಾವಾಗಲೂ ಕೇಳುತ್ತಲೇ ಇದ್ದೇವೆ. ಆ ಬರಕಲ್ಲ ಸ್ವಾತಂತ್ರ್ಯವು ಎಷ್ಟೋ ಮೈಲು ಕಲ್ಲುಗಳನ್ನು ದಾಟಿದ್ದಾಯಿತು. ಮೊಂಟೆಗ್ಯೂ ಚೆಮ್ಸ್‌ಫರ್ಡ್ ರಿಪೋರ್ಟಿನಿಂದ ಮೊದಲಾಯಿತದು. ಅದನ್ನಿನ್ನೂ ಸುಧಾರಿಸುವ ಅಭಿಲಾಷೆಯಿಂದ ಮಂತ್ರಾಲೋಚನೆ ಮಾಡಲಿಕ್ಕಾಗಿ ಸೈಮನ್ ಕಮಿಷನ್ ಬಂತು. ಅದರ ರಿಪೋರ್ಟು ಹೊರಟಿತು ಅಲ್ಲಿಂದ ರೌಂಡ್‌ಟೇಬಲ್ ಕೊನ್ಫರೆನ್ಸುಗಳಾದವು ಶ್ವೇತ ಪೇಪರ್ ಹುಟ್ಟಿತು. ಅಲ್ಲಿಂದ ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟ್ ಹೊರಟಿತು ಅದೀಗ ಕೊನೆಯ ಮೈಲುಗಲ್ಲು ಇನ್ನೂ ಮುಂದಕ್ಕೆ ಸ್ವಾತಂತ್ರ್ಯವನ್ನು ನಡೆಸಿದರೆ ದಣುವಾದೀತು ಎಂದು ನಮ್ಮ ಶಾಶ್ವತ ಹಿತೇಚ್ಛುಗಳಾದ ಬ್ರಿಟಿಷರು ವಿರಾಮವನ್ನು ಉಪದೇಶಿಸುತ್ತ, ಪಾರ್ಲಿಮೆಂಟಿನಲ್ಲಿ ಒಂದು ಬಿಲ್ ಕೂಡ ತಂದುಬಿಟ್ಟಿದ್ದಾರೆ ಇದರ ಪರಿಣಾಮವಾಗಿ ನಮಗೆ ಸಿದ್ಧವಾದ ಸ್ವಾತಂತ್ರ್ಯವು ಲಭಿಸುವುದು ಎಂದು ಲೋರ್ಡ್ ವಿಲ್ಲಿಂಗ್ಡನ್ನರ ಅಭಯ ಕೊಡುತ್ತಲೇ ಇದ್ದಾರೆ ಇಷ್ಟು ವರ್ಷಗಳಿಂದ ಈ ತರದ ಸ್ವಾತಂತ್ರ್ಯವು ಇಷ್ಟು ಮೈಲು ನಡೆದರೂ, ಇಂಡಿಯಾದೇಶವೂ ಇದರ ಸುಖಾಭಿವೃದ್ಧಿಗಳೂ ಇನ್ನೂ ಏಕೋ ಮುಂದಕ್ಕೆ ಸಾಗುವುದಿಲ್ಲ! ಇದರಿಂದ ಒಂದು ಸಂದೇಹ ತಾನಾಗಿಯೇ ವಿಚಾರ ಶೀಲರಲ್ಲಿ ಹುಟ್ಟಿದೆ—ತುಂಬಾ ಹಾದಿ ನಡೆದದ್ದೇನೋ ನಿಜ ಆದರೆ ಇಷ್ಟು ನಡೆದದ್ದು ಗಾಣಿಗರ ಎತ್ತು ನಡೆದಂತೆ ಆಗಿರಲಿಕ್ಕಿಲ್ಲವೇ? ಎಷ್ಟು ನಡೆದರೂ ಗಾಣ ಬಿಟ್ಟು ಸರಿಯದ ನಡಿಗೆ ಗಾಣಿಗನಿಗೆ ಅದು ಹಿತಕರವಾಗಿಯೇ ಕಾಣಬಹುದು, ಆದರೆ ಎತ್ತಿನ ಒಯ್ಯಾಳಿಯ ಫಲ? ಎತ್ತಿಗೆ ಬಾಯಿ ಒಂದಿದ್ದರೆ ನೋಡ್ತ.

ಕಾಂಗ್ರೆಸ್ಸಿನ ಹೇಳಿಕೆಯ ಸಾರಾಂಶವು ಅದೇ ಆಳರಸರು ಕೇವಲ ತಮ್ಮ ಇಚ್ಛಾನುಸಾರ ಮಾಡಿದ ಎಲ್ಲ ವ್ಯವಸ್ಥೆಗಳ ಲಾಭವು ಗಾಣಿಗನಿಗೇ ಇದೇ ಅದರ ಹೇಳೋಣ ಅದು ಹಾಗಲ್ಲ ಎಂದು ಗಾಣಿಗರ ವರ್ಗ ಅಭಯ ಕೊಡುತ್ತಾ ಇದೆ. ಈ ವರ್ಗದವರು ಇಂಗ್ಲೆಂಡಿನಲ್ಲಿಯೇ ಅಲ್ಲ, ಇಂಡಿಯದಲ್ಲೂ ಇದ್ದಾರೆ. ಇವರು ಹೇಳುವುದೇನು? ಬ್ರಿಟಿಷರು ಈಗ ಕೊಟ್ಟ ಹಕ್ಕುಗಳನ್ನು ಸ್ವೀಕರಿಸಿಬಿಡಿ, ಮತ್ತು ಅವುಗಳ ಆಧಾರದಿಂದ ಮುಂದಕ್ಕೆ ಸಾಗುತ್ತಾ ಹೋಗಬಿಡಿ—ಎಂಬುದೇ ಅವರೆಲ್ಲರ ಉಪದೇಶ ಗಾಳಿಯ ಗೋಪುರವನ್ನೇರಿಸಿದರೆ ನಕ್ಷತ್ರಗಳನ್ನು ಮುದ್ದಾಡಬಹುದಲ್ಲವೇ?

ಇದು ಅಪಹಾಸ್ಯ ಅಥವಾ ಅತಿಶಯೋಕ್ತಿ ಎಂದು ಯಾರಾದರೂ ಹೇಳಬಹುದು ಹಾಗಾದರೆ ಆ ಆಧಾರವನ್ನೇ ಪರೀಕ್ಷಿಸಿಬಿಡೋಣ ಅದರ ಶುಭನಾಮ ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯ ಸ್ಕೀಮ್ ಜೆ. ಪಿ. ಸಿ. ಸ್ಕೀಮ್ ಎಂದು ಸಂಕ್ಷೇಪಿಸಿ ಹೇಳುವುದು ರೂಢಿ ಈ ಜೆ ಪಿ ಸಿ ಸ್ಕೀಮ್ ಏನೆನ್ನುತ್ತದೆ ನೋಡೋಣ ಅದರೊಂದು ಮಾತು, ಅಧಿಕಾರದ ತಿರುಳು ಎಲ್ಲಿದೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕಲ್ಲವೆ? ಒಂದೇ ಮಾತಿನಲ್ಲಿ ಹೇಳುವುದಾದರೆ ಕರಿಗೆ ತೆರುವವರಿಗೆ ತಮ್ಮ ಹಣದ ವಿನಿಯೋಗವನ್ನು ಮಾಡುವ ರೀತಿನೀತಿಗಳ ಹಕ್ಕು ಇರತಕ್ಕದು ಅಲ್ಲದೆ ಅದನ್ನು ಎತ್ತುವವರಿಗಲ್ಲ. ಈ ದೃಷ್ಟಿಯಿಂದಲ್ಲವೆ ಜೆ. ಪಿ. ಸಿ. ಸ್ಕೀಮ್‌ನಿಂದ ನಮಗೆ ಬರುವ ಅಧಿಕಾರವನ್ನು ಪರೀಕ್ಷಿಸಬೇಕು? ಅದಕ್ಕಾಗಿ (೧) ಅದರಂತೆ ಇನ್ನು ಬರತಕ್ಕ ಗವರ್ನರ ಅಂತಸ್ತನ್ನೂ, ಕರ್ತವ್ಯವನ್ನೂ, ಅಧಿಕಾರಗಳನ್ನೂ ಪರಿಶೀಲಿಸಬೇಕು; (೨) ಪ್ರಾಂತಿಕ ಶಾಸನಸಭೆಗಳ ಹಕ್ಕುಬಾಧ್ಯತೆಗಳನ್ನು ಪರೀಕ್ಷಿಸಬೇಕು; (೩) ಸಾಮಾನ್ಯ ಆಡಳಿತೆಯ ಸ್ಥಿತಿಗತಿ ನೋಡಬೇಕು; ಅಲ್ಲವೇ?

ಹಾಗೆ ನೋಡಿದರೆ ಗವರ್ನರ್‌ನ ಅಧಿಕಾರವು ಪ್ರಜಾಪ್ರಾತಿನಿಧ್ಯವುಳ್ಳ ಯಾವ ಸಂಸ್ಥೆಗೂ ಅಧೀನವಾಗಿಲ್ಲ. ಅದಾತನಿಗೆ ನೇರವಾಗಿ ಮೇಲಿಂದ ಬಂದ ರಾಜಶಾಸನದ ವರಪ್ರಸಾದ, ಅವನು ಬ್ರಿಟನ್‌ನಲ್ಲಿರುವ ರಾಜರಾಜ್ಯಾಂಗದವರಿಗೇ ಜವಾಬ್ದಾರನು, ಅಲ್ಲದೆ ನಮ್ಮ ಪ್ರಜೆಗಳಿಗಲ್ಲ, ಅವರ ಶಾಸನಸಭೆಗಳಿಗಲ್ಲ ಆತನಿಗೆ ಇರುವ ಅಧಿಕಾರಗಳು ಒಂದಲ್ಲ, ಎರಡಲ್ಲ. ಅವುಗಳ ಗುಣ ಸಾರಾಂಶಗಳನ್ನು ಹೇಳುವುದಾದರೆ ಆತನು ಹೊಸ ಹೊಸ ಶಾಸನಗಳನ್ನು ಹುಟ್ಟಿಸಬಹುದು, ಸ್ವೇಚ್ಛಾನುಸಾರ ನಡೆಸಬಹುದು. ಇಷ್ಟೇ ಅಲ್ಲ, ಪ್ರಜೆಗಳ ಶಾಸನಸಭೆಗಳು ಮಾಡಿದ ಯಾವ ಕಾನೂನು ಕಾಯಿದೆಗಳನ್ನೇ ಆಗಲಿ ಸ್ವಚ್ಛಂದವಾಗಿ ರದ್ದುಮಾಡಿಯೂ ಬಿಡಬಹುದು ಇಷ್ಟು ಅಧಿಕಾರದವರ್ಗಗಳನ್ನು ಗವರ್ನರರಿಗೆ ಮೀಸಲಾಗಿಟ್ಟುಕೊಂಡ ಮೇಲೆ ಪ್ರಜೆಗಳಿಗಾಗಿಯೂ ಅವರ ಶಾಸನ ವಿಧಾಯಕ ನಿರ್ವಾಹಕ ಸಭೆಗಳಿಗಾಗಿಯೂ ಉಳಿಯುವ ಆ ಸ್ವಾತಂತ್ರ್ಯವಾದರೂ ಯಾವುದೋ ಬುದ್ಧಿಗೇನೇ ತೋರುವುದಿಲ್ಲ! ಆ ಗವರ್ನರರನ್ನು ನೇಮಿಸುವ ಶಕ್ತಿಯೇ ಆಗಲಿ, ನಡೆಸುವ ಶಕ್ತಿಯೇ ಆಗಲಿ, ದಂಡಿಸುವ ಶಕ್ತಿಯೇ ಆಗಲಿ—ಯಾವದೂ ಪ್ರಜೆಗಳಿಗಿಲ್ಲ! ಇವನ್ನು ಬಿಟ್ಟು ನಮಗೆ ಬರಲಿಕ್ಕಿರುವ ಸ್ವಾತಂತ್ರ್ಯವಾದರೂ ಯಾವುದೋ? ಯಾರು ಬಲ್ಲ!

ಅಲ್ಲಿಂದ ಬರುವ ಕಾನ್ಸ್‌ಟಿಟ್ಯೂಷನಿನ ಆಕ್ಟ್ ಬರೆದಿಟ್ಟ ಆತನ ಹಕ್ಕುಬಾಧ್ಯತೆಗಳೇ ಬದಲಾಯಿಸಲಾಗದ ಬ್ರಹ್ಮಲಿಪಿ ಮಂತ್ರಿಗಳನ್ನು ಚುನಾಯಿಸುವುದೂ, ನೇಮಿಸುವುದೂ ಆತನಿಗೆ ಸೇರಿಸಲಾದ ಕೆಲಸ ಶಾಸನಸಭೆಗಳು ಮಾಡದ ಹೊಸ ಕಾನೂನುಗಳನ್ನೂ ಬರೆದುಕೊಳ್ಳುವ ಶಕ್ತಿಮಾತ್ರವೇ ಅಲ್ಲ ಆತನಿಗಿರುವುದು, ಈಗಿರುವ ಕಾನೂನುಗಳ ಪೈಕಿ ಕೂಡ ಆತನಿಗೆ ಎಂದಾದರೂ ಯಾವದಾದರೂ ಅನವಶ್ಯಕವೆಂದು ಕಂಡುಬಂದರೆ ಅದರ ಬಳಕೆಯನ್ನು ಕೂಡ ಆತನು ತನ್ನ ಅಧಿಕಾರದಿಂದಲೇ ತನಗೆ ಯೋಗ್ಯವೆಂದು ತೋರುವವರೆಗೆ ನಿರೋಧಿಸಬಲ್ಲ ಹೇಗಿದೆ ಗವರ್ನರನ ಮುಂದೆ ಬಡಶಾಸನಗಳ ಪ್ರಭಾವ?

ಜೆ ಪಿ ಸಿ ಸ್ಕೀಮ್‌ನ ತೀರ್ಮಾನ ಆಳ್ವಿಕೆಗಳಿಗೆ ಸೇರದೆ ಇರುವ ಪ್ರಾಂತ್ಯಗಳ ಮೇಲಂತೂ ಸಂಪೂರ್ಣ ಅಧಿಕಾರ ಆತನೊಬ್ಬನದೇ

ಆತನಿಗೆ ಅವಶ್ಯಕವೆಂದು ಕಂಡಪಕ್ಷಕ್ಕೆ ಯಾವೊಂದು ಇಲಾಖೆಯ ಸಂಪೂರ್ಣ ಆಡಳಿತೆಯನ್ನು ಅವನೊಬ್ಬನೇ ವಹಿಸಬಹುದು

ಈಗ ನಮ್ಮ ಸ್ವನಿರ್ಮಿತ ಯಜಮಾನರು ನಮಗೆ ಕೊಡಲಿಕ್ಕಿರುವ ಅಧಿಕಾರಗಳಲ್ಲಿ ಪೋಲೀಸ್ ಇಲಾಖೆಯ ಸ್ಥಳವೆಲ್ಲಿದೆ ನೋಡೋಣ ಪೋಲೀಸ್ ಆಕ್ಟ್, ರೂಲುಗಳನ್ನು ಮಾರ್ಪಡಿಸುವ ಅಧಿಕಾರವು ಗವರ್ನರರಿಗೇ ಹೊರತು ಇನ್ನಾರಿಗೂ ಇಲ್ಲ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸಿನ ಅನುಮತಿಯಿಲ್ಲದೆ ಗುಟ್ಟಾದ ಪೋಲೀಸ್ ರಿಕಾರ್ಡುಗಳನ್ನು ನೋಡುವ ಅಧಿಕಾರವು ಯಾವ ಬೇರೆ ಹುದ್ದೆದಾರನಿಗೂ ಇಲ್ಲ

ಅಂಥವನಾರಾದರೂ ಇರಬೇಕಾದರೆ ಆ ಹಕ್ಕು ತತ್ಕಾಲಕ್ಕಾಗಿ ಆತನಿಗೆ ಗವರ್ನರ ಕಡೆಯಿಂದಲೇ ಬಂದಿರಬೇಕು ಇದರ ಫಲವೇನು? ಒಬ್ಬ ಮಂತ್ರಿಯ ಕಡೆಯಿಂದ ಯಾರ ಮೇಲಾದರೂ 'ಪ್ರಾಸಿಕ್ಯೂಶನ್' ನಡೆಸುವುದಕ್ಕೆ ಆಜ್ಞೆಯನ್ನು ಪಡೆಯಬೇಕಾದಾಗ ಅದನ್ನಾತನು ಯಾರ ವಿರುದ್ಧ ಆಜ್ಞಾಪಿಸುತ್ತಾನೋ ಆ ಬಡಪಾಯಿಯ ಗುಣಾವಗುಣ ವರ್ತನಗಳೊಂದನ್ನೂ ತಾನು ತಿಳಿಯದೆಯೇ, ಆ ಪ್ರಾಣಿ ತನಗೆ ಪೋಲೀಸ್ ಹೇಳಿದ ಹಾಗೆ, ಅವರು ಮುಂದಿಟ್ಟ ಆಜ್ಞೆಗೆ ತಾನೊಂದು ದಸ್ಕತು ಹಾಕಿಯೇ ಬಿಡಬೇಕು. ವ್ಯಾಜ್ಯದ ತಲೆಬಾಲಗಳ ಗುಟ್ಟನ್ನು ತೋರಿಸುವ ಸಿ. ಐ. ಡಿ. ರಿಕಾರ್ಡುಗಳನ್ನು ತರಿಸಿ ನೋಡಿಕೊಳ್ಳುವ ಅಧಿಕಾರವು ಮಂತ್ರಿಗಿಲ್ಲ. ಆದರೆ ಪ್ರಾಸಿಕ್ಯೂಷನಿಗೆ ಆರ್ಡರ್ ಅವನೇ ಬಾಯಿಮುಚ್ಚಿ ಕೊಡಬೇಕು. ಹೇಗಿದೆ ನ್ಯಾಯ?

ಆ ಮಂತ್ರಿಯ ದೊಡ್ಡಸ್ತಿಕೆಯನ್ನು ಇನ್ನೂ ನೋಡಿದರೆ ಅವನಿಗೆ ತನ್ನ ಮನೆಯನ್ನೇ ಭದ್ರವಾಗಿಟ್ಟುಕೊಳ್ಳುವ ಅಧಿಕಾರವಿಲ್ಲ. ರಾಷ್ಟ್ರದಲ್ಲಿ ಅಶಾಂತಿಯು ಉಂಟಾಯಿತೆಂಬ ಕಲ್ಪನೆ ಗವರ್ನರನಿಗೆ ಬಂದಾಗ, ಆ ಒಂದು ಆಧಾರದ ಮೇಲೆ ಆತನಿಗೆ ಬೇಡವಾದ ಮಂತ್ರಿಯನ್ನು ಕಿತ್ತೊಗೆಯುವ ಅಧಿಕಾರವಿದೆ. ಬೇಕಾದವನನ್ನು ಇಟ್ಟುಕೊಳ್ಳುವ ಮತ್ತೆ ಮಂತ್ರಿಯಾಗಿ ಇಟ್ಟುಕೊಳ್ಳುವ ಅಧಿಕಾರವೂ ಇದೆ ಅಷ್ಟೇ ಅಲ್ಲ—ಬೇಕಾದ ಇಲಾಖೆಯನ್ನು ಸ್ವಚ್ಛಂದವಾಗಿ ನಡೆಸುವ ಅಧಿಕಾರವಿದೆ ಅಂಥ ಸಂದರ್ಭಗಳಲ್ಲಿ ಆತನು ಗವರ್ನರ್ ಜನರಲ್ ಒಬ್ಬನಿಗೆ ಜವಾಬ್ದಾರನೇ ಹೊರತು, ಪ್ರಜಾಪ್ರತಿನಿಧಿ ಸಭೆಗಳಿಗೆ ಅವನನ್ನು ಪ್ರಶ್ನಿಸುವ ಅಧಿಕಾರ ಕೂಡ ಇಲ್ಲ ಪ್ರಜೆಗಳ ಮತ್ತು ಅವರ ಪ್ರತಿನಿಧಿ ಸಂಸ್ಥೆಗಳ ಸ್ವಾತಂತ್ರ್ಯ ಹೇಗಿದೆ?



ಶ್ರೀಕೃಷ್ಣ ಸಿನೆಮದಲ್ಲಿ ಶಿವ್ರದಲ್ಲಿಯೇ ಪ್ರದರ್ಶಿಸಲ್ಪಡಲಿರುವ, ಸರಸ್ವತಿ ಸಿನೊಟೋನ್ ಕಂಪೆನಿಯವರ "ಠಕ್ಕ ಸೇನ" ಎಂಬ ಮಾತಾಡುವ ಚಲಚ್ಚಿತ್ರದೊಳಗಿನ ಒಂದು ದೃಶ್ಯ. ಇದರಲ್ಲಿ ಮಾಸ್ಟರ್ ವಿಠ್ಠಲ್ ಇವನು ಮುಖ್ಯ ಅಭಿಯನಗಾರನು

ಈಗ ಗವರ್ನರನ ಖಾಸ ಜವಾಬ್ದಾರಿಗಳಲ್ಲಿ ಕೆಲವನ್ನು ವಿವೇಚಿಸೋಣ ಅವು ೧ ಲಾ ಅಂಡ್ ಆರ್ಡರ್ (ಶಾಸನ ಮತ್ತು ಶಾಂತಿ) ಇವುಗಳನ್ನು ಕಾಪಾಡಿಕೊಳ್ಳುವುದು ೨ ಅಲ್ಪ ಸಂಖ್ಯಾತರ ಹಿತವನ್ನು ಸಂರಕ್ಷಿಸುವುದು ೩ ಪಬ್ಲಿಕ್ ಸರ್ವಿಸಿನಲ್ಲಿರುವವರ ಹಕ್ಕುಗಳನ್ನು ಕಾಪಾಡುವುದು ೪ ವ್ಯಾಪಾರ ವಿಷಯಗಳಲ್ಲಿ ಭೇದಬುದ್ಧಿ ಅನ್ಯಾಯಗಳಾಗದಂತೆ ನೋಡಿಕೊಳ್ಳುವುದು ೫ ಭಾರತೀಯ ರಾಜ್ಯ ಸಂಸ್ಥಾನಗಳ ಹಕ್ಕುಗಳನ್ನು ಕಾದಿಡುವುದು ೬ ಕೊನ್ಸ್‌ಟಿಟ್ಯೂಷನಲ್ ಗವರ್ನಮೆಂಟ್ ತನ್ನ ಸ್ಕೀಮಿನಲ್ಲಿ ಇಟ್ಟುಕೊಳ್ಳುವ ಭಾಗಗಳನ್ನು ಆಳುವುದು ೭ ಗವರ್ನರ್ ಜನರಲ್‌ನ ಹುಕುಮುಗಳನ್ನು ಬಜಾಯಿಸುವುದು ೮ ಪಾಯಿಖ್ಯ ಪ್ರಾಂತ್ಯಗಳಲ್ಲಿ ಮತ್ತು ಇತರ ಪಟ್ಟಣಗಳಿರುವ ಸ್ಥಳಗಳಲ್ಲಿ ಗವರ್ನರ್ ಜನರಲ್‌ನ ಇಚ್ಛಾನುಸಾರ ಅವುಗಳನ್ನು ಆಳುವುದು ಈ ಎಲ್ಲ ಭಾರವೂ ಅವನದೇ ಇವುಗಳಲ್ಲಿ ಒಂದರ ವ್ಯಾಖ್ಯೆಯೂ ನೆಟ್ಟಗಾಗಿ ಸವಿಸ್ತರವಾಗಿ ಇಲ್ಲ. ಆದುದರಿಂದ ಈ ಲೋಪವೇ ಆಗಾಗ್ಗೆ ಗವರ್ನರನ ಸ್ವಚ್ಛಂದ ವ್ಯಾಖ್ಯೆ ಟೀಕೆ ವರ್ತನಗಳಿಗೆ ಅನುಕೂಲ ಅಂದ ಮೇಲೆ ಇವು ಆತನ ನಿರಂಕುಶ ಪ್ರಭುತ್ವದ ಲೀಲಾರಂಗಗಳೇ ಆಗುವುದರಲ್ಲಿ ಸಂದೇಹವೇನು? ಆತನ ಇಂಥಾ ಸ್ವಾತಂತ್ರ್ಯಕ್ಕೆ ನಾವು ನಮ್ಮ ಸ್ವಾತಂತ್ರ್ಯವೆಂದು ಭಾವಿಸುವುದು ಹೇಗೆ?

Notice.

In the Court of the District Judge of South Kanara.

O. P No. 10 of 1935.

In the matter of A. Raghavendra Pai, deceased.

A. Damodar Pai and 2 others — Petitioners

Notice is hereby given that the petitioners have applied for grant of a succession certificate in respect of certain amounts due to the estate of the deceased A Raghavendra Pai. The said application will come on for hearing in the above Court at 11 A. M on 5-3-1935

B. Vaikunta Baliga
Vakil for Petitioners.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. ನಂಬ್ರ 26/1935

1 ದೇವಕಿ ಅಂತರ್ಜನಂ

2 ಸರಸ್ವತಿ, 3 ಸಾವಿತ್ರಿ, 4. ಹೆಸರು ಹಾಕದ ಗಂಡು ಮಗು—1ನೇ ಅರ್ಜಿದಾರಳ ಪ್ರಾಯನರ ಮಕ್ಕಳು ಇವರ ಹಿತಚಿಂತಕ 1ನೇ ಅರ್ಜಿದಾರ ದೇವಕಿ ಅಂತರ್ಜನಂ—

—ಅರ್ಜಿದಾರರು.

ಮತ್ತು

ಸಂಕರನ್ ನಂಬೂದಿರಿ—ರೆಸ್ಪಾಂಡೆಂಟ.

ಇವರೊಳಗೆ

ಸದ್ರಿ 1ನೇ ಅರ್ಜಿದಾರಳ ಗಂಡ ವ 2ರಿಂದ 4ನೇ ಅರ್ಜಿದಾರರ ತಂದೆ ವೃತಪಟ್ಟ ಪುದುಮನೆಯೋತ್ತ ವಿಷ್ಣು ನಂಬೂದಿರಿಗೆ ಕೊಡಕ್ಕಾಟು ಗ್ರಾಮದಲ್ಲಿರುವ ಕೇಶವ ನಂಬೂದಿರಿ ಕೂಡ 3 ಜನರು ಕೊಡತಕ್ಕ ರೂ 340/-ನ್ನು ವಸೂಲು ಪಡೆಯುವರೆ ಸದ್ರಿ ಅರ್ಜಿದಾರರು ಈ ಕೋರ್ಟು O S 482/1934ನೇದಾಕ್ಲು ಮಾಡಿದ ವ್ಯಾಜ್ಯದಲ್ಲಿ ಕೇಳಿದ ಐವಜು ವಸೂಲು ಪಡೆಯುವರೆ ಅರ್ಜಿದಾರರು ತಮಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಅರ್ಜಿ ಕೊಟ್ಟಿರುತ್ತಾರೆ ಸದ್ರಿ ಅರ್ಜಿಯು ತಾ 15-3-1935ಕ್ಕೆ ತನಿಖೆಗೆ ಇಟ್ಟಿರುತ್ತದೆ. ಇದುದರಿಂದ ಈ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು ಹಾಗೆ ಹಾಜರಾಗದಿದ್ದರೆ ತಪ್ಪಿದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

KASARAGOD } G Padmanabha Rao,
20—2 35 } *Vakil for Petitioners.*

ನೋಟೀಸು.

14—3—1935

ಹಾಲಿ ಮಂಗಳೂರಿಗೆ ಬಂದಿರುವ ಬೊಂಬಾಯಿಯಲ್ಲಿರುವ ಕೂಳೂರು ಶೇಷಗಿರಿ ನಾಯ್ಕರ ಮಗ ವೆಂಕಪ್ಪ ನಾಯ್ಕನು ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ನಾನು ನನ್ನ ಉದ್ಯೋಗದ ಸಮ್ಬಂಧ ಕೆಲವು ವರ್ಷಗಳಿಂದ ಬೊಂಬಾಯಿಯಲ್ಲಿ ವಾಸ್ತವಿಸಿಕೊಂಡು ಬರುವುದರಿಂದ ನನ್ನ ಬಾಬ್ತು ಈ ಜಿಲ್ಲೆಯಲ್ಲಿರುವ ಆಸ್ತಿಗಳ ಗೇಣಿ ವಸೂಲು, ಬಗ್ಗೆ ಹಣಗಳು ವಸೂಲು ಬಗ್ಗೆ ಕೋರ್ಟು ವ್ಯವಹಾರಗಳು ನಡಿಸುವ ಬಗ್ಗೆ ವಗೈರೆ ಕಾವೂರು ಶ್ರೀನಿವಾಸ ಪ್ರಭುಗಳ ಮಗ ನಾರಾಯಣ ಪ್ರಭುಗಳಿಗೆ ತಾ. 6-8—1928ರಲ್ಲಿ ರಜಿಸ್ಟ್ರಿ ನಿಶಿಂ ಬರೆಕೊಟ್ಟ ಜನರಲ್ ಒಫ್ ಎಟರ್ನಿಯನ್ನು ರದ್ದುಮಾಡಿ ತಾರೀಕು 14-2-35ರಲ್ಲಿ ಪಾಣೆಮಂಗಳೂರು ಸ್ವೊರ ಶ್ಯಾನುಭಾಗರ ಮಗ ನಾರಾಯಣ ಶ್ಯಾನುಭಾಗರಿಗೆ ರಜಿಸ್ಟ್ರಿ ನಿಶಿಂ ಜನರಲ್ ಒಫ್ ಎಟರ್ನಿ ಬರೆಕೊಟ್ಟಿರುತ್ತೇನೆ. ಸದ್ರಿ ಕಾವೂರು ನಾರಾಯಣ ಪ್ರಭುಗಳಿಗೆ ನನ್ನ ಬಗ್ಗೆ ಯಾರಾದರೂ ಹಣಪಾವತಿ ಮಾಡಕೂಡದು. ಮಾಡಿದರೂ, ಅದು ನನಗೆ ಬಾಧಿಸತಕ್ಕದ್ದಲ್ಲಾ ವ ಅಸಿಂಧು ಆಗತಕ್ಕದ್ದು ತಿಳಿದಿರುವುದು.

ಕೆ. ವೆಂಕಪ್ಪ ಶೇಷಗಿರಿ ನಾಯ್ಕನ ರುಜು.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY.

Shiromani Narayanacharya
Choukhamba, Benares City

ಶಿರೋಮಣಿ ನಾರಾಯಣಾಚಾರ್ಯ

The East & West Insurance Co., Ltd.

Established 1913.

Head Office:—East & West Buildings, Apollo Street, Fort, BOMBAY.

New business for the year 1933 shows an increase of 50% over that of 1932.

First-class Service to Policy Holders, up-to-date contracts, Close co-operation between Head Office and field force, efficient and economic management are few of the factors responsible for the constant and steady growth of the Company.

It will pay you to take out a Policy to-day.
Agency terms liberal—Treatment sympathetic.

Please apply for Agency and particulars to:—

Padubidri Bros., Chief Agents, Padubidri :: Bombay No. 8.

M. N. V. Kamath & Sons, Golikatta Bazar, Mangalore, S. K.

Dalal & Co., Secretaries.

ಡಾಕ್ಟರ್ ವಾಮನ ಗೋಪಾಳರವರ



ಗುಣಬಾರದಿದ್ದರೆ ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

S. M. C.

CHEMICALS

Chemicals for manufacturing Sugar, Soap, Toilets Matches, Glass, Potteries, Leather, Carpet ink, Drybatteries Photography & for Dyeing & Bleaching Cotton, Wool and Silk Write to

Rasiklal & Co.,
Post Box No. 2228 Bombay 2

The Popular Insurance Company, Ltd.

Head Office:—MANGALORE, S. India.

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rao, who has developed in him a great deal of life insurance sense.........

ವಿವಿಧ ವಿಷಯ.

ವಿಳಾಸವಿಲ್ಲದ ಪತ್ರವು—

ವಿಳಾಸದ ಬರಿಗೆ ತಲಪಿದೆಯೆಂದು ನಾವು ಬರೆದರೆ ಸಂಶಯಪಡುವರು ಹೆಚ್ಚೆಂದು ಗೊತ್ತಿರುವುದರಿಂದ ಈ ವಾರ್ತೆಯನ್ನು ಕೊಡಲಾಗಿದೆ ವಿನ್‌ಗಾರ್ಟನ್‌ನಲ್ಲಿ ತರುಣನೊಬ್ಬನು ಫೊಟೋಗ್ರಾಫರನೊಬ್ಬನಲ್ಲಿಗೆ ಹೋಗಿ ತನ್ನ ಭಾವಚಿತ್ರವನ್ನು ತೆಗೆಸಿ, ಎಡ್ವಾನ್ಸ್ ಕೊಟ್ಟು ತನ್ನ ವಿಳಾಸವನ್ನು ಕೊಟ್ಟು, ಅದರ ನಕಲನ್ನು ಟಪ್ಪಾಲಿನ ಮೂಲಕ ಕಳುಹಿಸೆಂದನು. ಒಪ್ಪಿದ ಫೊಟೋಗ್ರಾಫರನು ತಪ್ಪಿ ವಿಳಾಸವನ್ನು ಎಲ್ಲೋ ಹಾಕಿಬಿಟ್ಟನು. ಮಾಡುವ ನೇನು? ಗಾಢವಾಗಿ ಆಲೋಚಿಸಿದ ನಂತರ, ತರುಣನ ಭಾವಚಿತ್ರವನ್ನು ಒಂದು ಪತ್ರದಲ್ಲಿ ಸುತ್ತಿ ಲಕ್ಕೋಟೆ ಮಾಡಿ, ಆ ಲಕ್ಕೋಟೆಯ ಮೇಲೆ ಆ ತರುಣನ ಇನ್ನೊಂದು ಭಾವಚಿತ್ರದ ನಕಲನ್ನು ಅಂಟಿಸಿ 'ಈ ಮನುಷ್ಯನಿಗೆ ತಲಪಿಸಿರಿ' ಎಂದು ಮೇಲೆ ಬರೆದು ಅಂಚೆ ಆಫೀಸಿಗೆ ಕಳುಹಿದ [illegible] — ಆ ಲಕ್ಕೋಟೆ ವಿಳಾಸದಾರನಿಗೆ ಯಥಾವಕಾಶವಾಗಿ ತಲಪಿತು.

38 ಇಂಚು ಎತ್ತರದ—

ಮಿಸೆಸ್ ಸ್ಟೆಲ್ಲಾ ವೆಬ್ಬರ್ ಎಂಬವಳು ४8 ಇಂಚು ಎತ್ತರವಿದ್ದ ತನ್ನ ಗಂಡನನ್ನು ಬಿಟ್ಟಳು ಅವರ ವಿವಾಹ ವಿಚ್ಛೇದವಾಗುವಾಗ ಅಮೇರಿಕಾದ ಕೋರ್ಟಿನಲ್ಲಿ ಸಾವಿರಾರು ಜನರು ನೆರೆದಿದ್ದರು ಈ ದಂಪತಿಗಳು ೧೯೩೨ರ ನವಂಬರದಲ್ಲಿ ಪ್ರಪಂಚ ಪ್ರದರ್ಶನದ ವೇಳೆ ವಿವಾಹೇಚ್ಛುಗಳಾದರು

ಸ್ವಾರ್ಥಿಗಳಾರು?—

'—ಎಂದು ಕೇಳಿದೊಡನೆ "ಸ್ವಅರ್ಥವನ್ನೇ ನೋಡುತ್ತಿರುವವರೆ'ಂದು ಉತ್ತರವು ಸಿಗುವುದು - ಹಾಗೆ ತಮ್ಮನ್ನು ತಾವು ನೋಡಿಕೊಳ್ಳುವವರ ಆಚರಣೆಯು ಈಗೀಗ ಪ್ರೋತ್ಸಾಹಿಸಲ್ಪಡುತ್ತಿದೆ ಬರೋಡಾದಲ್ಲಿ ಬಲವಂತರೈ ನಾಯಕರೆಂಬವರು ಸ್ವದೇಹರಕ್ಷಣೆಯಲ್ಲೇ ನಿರತರಾಗಿರುವವರು ದೇಹವನ್ನು ಚೆನ್ನಾಗಿ ಬೆಳೆಯಿಸಿ ಅದರ ಸೌಂದರ್ಯಕ್ಕಾಗಿ ಕೀರ್ತಿಗೊಂಡವರು ಸೆಂಡೊ ಎಂದು [illegible] ಅವರು ಸ್ವದೇಹ ರಕ್ಷಣೆಯ ಚರಿತ್ರಮವನ್ನು ಪ್ರದರ್ಶಿಸಿಕೊಂಡುದಕ್ಕಾಗಿ ಇಲ್ಲಿ ನ್ಯೂಸ್ ನಲ್ಲಿಯ ಸ್ಪ್ರಿಂಗ್‌ಫೀಲ್ಡ್ ಯ[illegible] ೧೦೦ ಡಾಲರುಗಳನ್ನು ಕೊಟ್ಟು ಪ್ರೋತ್ಸಾಹಿಸಿರುವರು

ಕೆಂಪು ಟೊಪ್ಪಿಯನ್ನು ಹಾರಿಸಿದುದಕ್ಕಾಗಿ

ಹೌರಾದಲ್ಲಿ ಒಗೂ[illegible] ಎಂಬಿಬ್ಬರಿಗೆ ತಲಾ ಆರಾರು ತಿಂಗಳ ಶಿಕ್ಷೆ, ತಪ್ಪಿದರೆ ನೂರು ನೂರು ರೂಪಾಯಿಗಳ ಶಿಕ್ಷೆಯಾಗಿದೆ ಇವರ ಅಪರಾಧ ವಿದು—ಕಾರ್ಯನಿರತರಾಗಿದ್ದ ಪೋಲೀಸರೊಬ್ಬರಿಗೆ ಹೇಗೆ ಬೇಕೋ ಹಾಗೆ ಹೊಡೆದುದು, ಸ್ಟೇಷನಿನಲ್ಲಿ ಹಾಕಿದಾಗ ಅವ್ರ[illegible] ಗೋಡೆ ಹತ್ತಿ ದಾರಿಗೆ ಹಾರಿದುದು

ಊರಿಗೆ ಬರುವುದಿಲ್ಲ.

ಬರೋಡಾದ ಮಹಾರಾಜ ಗಾಯಕವಾಡರವರು ಈಗ ಫ್ರಾಂಡಿಸಿಯಲ್ಲಿರುವರು. ದೇಹದಲ್ಲಿ ಇನ್ನೂ ಸ್ವಸ್ಥರಾಗಿಲ್ಲವಾದುದರಿಂದ ಊರಿಗೆ ಬರುವುದು ಅಸಂಭವ ಸಾರ್ವಭೌಮರ ಪಟ್ಟಾಭಿಷೇಕದ [illegible] ತ್ಸವನಾದ ಮೇಲೆ ಬರುವರೇನೋ!

ಯಜ್ಞಕ್ಕಾಹುತಿಯಾದ ನರ!

ಕೊಲ್ಹಾಪುರದಲ್ಲಿ ಕು[illegible] ಎಂಬ ಹಳ್ಳಿಯಲ್ಲಿ ಒಬ್ಬ ಶ್ರೀಮಂತ ಬ್ರಾಹ್ಮಣ [illegible] ದಿನ ಆವನಿಗೊಂದು ಯಜ್ಞಮಾಡಬೇಕೆಂಬ ಆಶೆಯಾಯಿತು ಆರು ಮಂದಿ ಅಡುಗೆಯವರನ್ನು ಅರಸಿದ — ಯಜ್ಞಕ್ಕಾರಂಭ ಮಾಡಿದನು. ಆರು ಅಡುಗೆಯವರು ಬಂದರು. ಅವುಗಳನ್ನು ಕಡಿಯಲು ಸಿದ್ಧರಾದರು. ಅಷ್ಟರಲ್ಲಿ ಕೆಲವು ಜನರು ಓಡಿಬಂದು "ಅದಾಗದು" ಎಂದರು ಶಕ್ತಿಗಳು ಕೇಳಿದುವು ರಾಣೀ ಸಾಹೇಬರಿಗೂ ವೈಸರಾಯರಿಗೂ ತಂತಿಗಳು ಹೋದುವು ಯಜ್ಞವು ನಿಂತಿತು ಸಭೆಗಳಾದುವು ಪ್ರಾಣವಧೆಯಾಗಬಾರದು ಎಂದರು 'ಅದು ಮಹಾಯಜ್ಞವಾಗಿಲ್ಲ' ಎಂದನು ಶ್ರೀಮಂತನು ಅಷ್ಟರಲ್ಲಿ ಇವನಿಗೊಂದು ನೋಟೀಸು ಬಂದಿತು ೬ ಮಂದಿ ಅಡುಗೆಯವರು ಕೂಡಿಕೊಂಡು ರೂಪಾಯಿ ೨೦೦ಕ್ಕೆ ದಾವಾ ಹೂಡಿದ್ದರು ಪ್ರಾಣವಧೆಯೆ' ಎಂದು ನಮಗೇಕೆ ಮೊದಲೇ ತಿಳಿಸಲಿಲ್ಲ ಎಂದು ಅವರ ಪಕ್ಷ ಈ ಯಜ್ಞದ ಫಲವು ತಿಳಿದುಬಂದಿರುವುದಿಲ್ಲ

ಪ್ರಚಲಿತ ಸಮಾಚಾರ

ಇದನ್ನು ಕೇಳಿದೊಡನೆ—

ಯೇಸುಕ್ರಿಸ್ತರು ನೀರಿನ ಮೇಲೆ ನಡೆದುದು ಹೇಗೆ? ಎಂಬ ಜಿಜ್ಞಾಸೆಗೆ ಆರಂಭವಾಗದಿರದು. ಹರ್ ಅಲ್ಬರ್ಟ್ ಹಮ್ಮಿಂಗರ್ ಎಂಬ ಜರ್ಮನಿಯ ಶಾಸ್ತ್ರಜ್ಞರೊಬ್ಬರು ನೀರಿನ ಮೇಲೆ ನಡೆಯುವುದಕ್ಕಾಗಿ ಕೆಲವು ಸಾಹಿತ್ಯಗಳನ್ನು ಸಿದ್ಧಮಾಡಿರುವರು ಪಾದರಕ್ಷೆಯನ್ನು ಹಾಕಿ ಮಾರ್ಗದ ಮೇಲೆ ನಡೆವಾಗ ಹೇಗೆ ಮುಳ್ಳಿನ ಭಯವಿರಲಾರದೋ, ಹಾಗೆ ಈ ಕಾಲಿನ ಉಪಕರಣಗಳನ್ನು ಉಪಯೋಗಿಸಿ ನೀರಿನ ಮೇಲೆ ನಡೆದರೆ ಯಾರೂ ಮುಳುಗಿ ಹೋಗುವುದೇ ಇಲ್ಲ ಶಾಸ್ತ್ರಜ್ಞರ ವಿಳಾಸವಿಲ್ಲ

"ಎಲ್ಲವೂ ನಮ್ಮ ಒಳ್ಳಿತಕ್ಕೆಯೇ ಆಗುವುವು"—

ಎಂದು ಹೇಳುವವರ ಮಾತು ಖಂಡಿತವಾಗಿಯೂ ಸುಳ್ಳಲ್ಲ ರಷ್ಯದಲ್ಲಿ ಒಬ್ಬ ಬಂದಿವಾನ, ಬಹಳ ಛಟ್ಟಿಗ, ಒಮ್ಮೆ ತಲೆಮರೆಸಿಕೊಂಡು ಓಡಿಹೋದನು. ಆವನನ್ನು ಹುಡುಕಿಕೊಂಡು ಪೋಲೀಸರು ಹೋದರು ಒಂದು ಗುಪ್ತಸ್ಥಳದಲ್ಲಿ ಅವನು ಕಾಣಸಿಕ್ಕಿದನು ಬಂದಿವಾನನು ಕಂಗಾಲಾದ—ಪ್ರಾಣಹತ್ಯೆ ಮಾಡಿಕೊಳ್ಳುವೆನೆಂದು ತನ್ನ ಕೈಯಲ್ಲಿದ್ದ ಪಿಸ್ತೂಲನ್ನೆತ್ತಿ ತನ್ನ ತಲೆಗೆ ಗುಂಡಿಟ್ಟುಕೊಂಡನು! ಗುಂಡು ತಲೆಗೆ ತಾಗಿ ಕಪ್ಪನೆ ಹಿಂದೆ ಹಾರಿ ಹೋಯಿತು ಅವನಿಗಾಶ್ಚರ್ಯವಾಯಿತು ತಾನು ಸತ್ತಿರುವೆನೆಂದು ಅವನು ಭಾವಿಸಿ ಎದೆ ಮುಟ್ಟುತ್ತಾನೆ — ತಾನು ಜೀವವಿರುವುದು ಅವನಿಗೆ ಕಂಡುಬಂತು ಪಡೆಗೆ ಕೈಯಿಡಲು ಪಡೆಯು ನೋವುಗೊಳ್ಳಲೇ ಇಲ್ಲ ಈಗ ಅವನ ಮಿದುಳನ್ನು ಪರೀಕ್ಷೆ ಮಾಡುತ್ತಿದ್ದಾರೆ ಎಷ್ಟು ಗುಂಡು ಹೊಡೆದರೂ ಅವನ ತಲೆಯೊಡೆಯುವುದಿಲ್ಲ!

'ದಾರಿಯಲ್ಲಿ ಬಿದ್ದು ಸಾಯುವುದು'

ಸ್ಥಳಬೇಕಾದರೆ ವಾಹನಸಂಚಾರವು ಹೋಗಬೇಕು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ದಾರಿಯಲ್ಲಿ ಬೀಳುವವರ ಸಂಖ್ಯೆ ಹೆಚ್ಚು ಇಂಡಿಯಾದಲ್ಲೆಷ್ಟೆಂದು ಗೊತ್ತಿಲ್ಲದಿದ್ದರೂ ಬರ್ಲಿನ್‌ನಲ್ಲೆಷ್ಟೆಂದು ಗೊತ್ತಿದೆ ೧೯೩೩ರ ದಶಂಬರ ತಿಂಗಳು ಒಂದರಲ್ಲಿ ೧೯೧೭ ಅಪಘಾತಗಳು ಮಾರ್ಗಗಳಲ್ಲಿ ನಡೆದಿರುತ್ತವೆ ३೦ ದಿನಗಳಿಗೆ ೧೯೧೭ ಎಂದರೆ ದಿನಕ್ಕೆಷ್ಟಾಯಿತೆಂದು ನೀವೇ ಲೆಕ್ಕಹಾಕಿರಿ ನವಂಬರ ತಿಂಗಳಲ್ಲಿ ಇದಕ್ಕಿಂತ [illegible] ಅಪಘಾತಗಳು ಹೆಚ್ಚು ದಾರಿವಾಹಕರ ಸಂಖ್ಯೆ ಎಷ್ಟೋ!

ಭೂಮಿಯ ಪ್ರಾಯವೆಷ್ಟು?

ಎಂದು ಭೂಶಾಸ್ತ್ರಜ್ಞರು ತರ್ಕಿಸುತ್ತಿರುವಂತೆ ಜಗತ್ತಿನ ಇತರರೂ ವಿವಾದ ನಡೆಸುತ್ತಿರುವರು. ಭೂಮಿಗೆ ೫೦ ಲಕ್ಷ ವರ್ಷಗಳ ಪ್ರಾಯವು ಹೇಗಾದರೂ ಆಗಿದೆಯೆಂಬ ಬಗ್ಗೆ ಜರ್ಮನಿಯ ಬಳಿ ಪ್ರಶ್ಯದಲ್ಲಿನ ಒಂದು ಗಣಿಯಲ್ಲಿ ದೊರೆತಿರುವ ಬಗಟದ ಕಳೇಬರವೇ ಸಾಕ್ಷಿ ೫೦ ಲಕ್ಷ ವರ್ಷಗಳ ಹಿಂದೆ ಇದು ಜೀವಿಸಿದ್ದಿತೆಂದು ಲೆಕ್ಕ ಹಾಕಿದ್ದಾರೆ

ಐಸ್ ಮಾಡುವ ಉಪಾಯವು

ಇತ್ತೀಚೆಗೆ ಜನರಿಗೆ ಗೊತ್ತಾಯಿತು ಎಂದು ಐಸನ್ನು ಬಾಜಾರುಗಳಲ್ಲಿಟ್ಟು ಚಿಂತಿಸ ಬಹುದು. ಅಂತಹ ಭಾವನೆಯು ತಪ್ಪು ಹದಿನಾರನೆಯ ಶತಮಾನದಿಂದಲೇ ಇಟಲಿ ದೇಶಸ್ಥರು ಕೃತಕ ಐಸ್ ತಯಾರಿಸುತ್ತಿದ್ದರು ೧೮ನೇ ಶತಮಾನದಲ್ಲಿ ಡಾ। ವಿಲಿಯಂಕುಲ್ಲೆನ್ ಎಂಬವನು ಅದನ್ನು ಕಲಿತು ಪ್ರಕಟಿಸಿದನು

'ತಾನು ಕಳ್ಳನಲ್ಲ, ಪರರನ್ನು ನಂಬುತ್ತಾನೆ'

ರಷ್ಯದಲ್ಲಿನ ಒಂದು ಕ್ರಮ ಅಲ್ಲಿ ಕೈದಿಗಳನ್ನು ಸೆರೆಮನೆಯೊಳಗೆ ಹಾಕಿ ಬೀಗಮುದ್ರೆ ಒತ್ತುವುದಿಲ್ಲ ಬದಲಿಗೆ ಅವನ ಕೋಣೆಯ ಬಾಗಿಲನ್ನು ತೆರೆದಿಡುತ್ತಾರೆ ಕೈದಿಯು ನಿರಾತಂಕವಾಗಿ ಎಲ್ಲಿಗಾದರೂ ಹೋಗಿ ೨೪ ತಾಸುಗಳೊಳಗೆ ಹಿಂದೆ ಮಾತ್ರ ಬರಬೇಕು! ಆ ಸಮಯದೊಳಗೆ ಅವನು ಕೋಣೆಯನ್ನು ಸೇರಬೇಕು ಈ ವಾರ್ತೆಯನ್ನು ಕೇಳಿದೊಡನೆ ಮೇಲಿನ ಗಾದೆಯು ಸ್ಮರಣೆಗೆ ಬರುವುದಿಲ್ಲವೇ?

ಜೈಲಿನಲ್ಲಿ ಕರುಣಾಳುಗಳು—

ಹೆಚ್ಚುತ್ತಿರುವರು ಎಲ್ಲಿ ನೋಡಿದರೂ ಅಪರಾಧಿಗಳು ಜೈಲುಗಳಿಂದ ತಲೆತಪ್ಪಿಸಿಕೊಂಡು ಓಡಿದ ವಿಷಯಗಳು ತಿಳಿದುಬರುತ್ತವೆ ಸೇಂಡೋವಿ ಸೆಂಟ್ರಲ್ ಜೈಲಿನಿಂದ ೫ ಜನರು ಪರಾರಿಯಾದರು ಹುಡುಕುತ್ತಿದ್ದಾರೆ

'ದೇವರು ಕೊಡುತ್ತಾರೆ; ಪೂಜಾರಿ ಬಿಡಾ'

ಎಂಬುದು ದೇವಸ್ಥಾನಗಳೊಳಗಿನ ಗಾದೆಯಲ್ಲ ಈ ಗಾದೆಯು ರಾವಲ್ಪಿಂಡಿ ನಗರಸಭೆಗೂ ಪ್ರವೇಶಿಸಿದೆ ಅಲ್ಲಿಯ ಸೆಕ್ರೆಟರಿಗಳಾಗಿದ್ದ ಶ್ರೀ ಭಕ್ಷಿ ದಾಲ ಮುಕುಂದರೆಂಬವರ "ಪ್ರಶಂಸನೀಯ ಸೇವೆ"ಗಾಗಿ ನಗರ ಸಭೆಯವರೂ ಕಮಿಶನರೂ ಕೂಡಿ ೨೫೦ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟರು ಭಂಗಾರದ ಗಡಿಯಾರವನ್ನು ಅವರಿಗೆ ಬಹುಮಾನಿಸಿದರು ಇದನ್ನು ತಿಳಿದ ಸ್ಥಳೀಕ ಸರಕಾರವು "ಇದು ಯಾರ ದುಡ್ಡು? ಎಲ್ಲಿಂದ ತೆಗೆದಿರಿ? ಹೇಗೆ ತೆಗೆದಿರಿ! ವಿವರಿಸಿರಿ' ಎಂಬ ಆಜ್ಞೆಯನ್ನು ಹೊರಡಿಸಿದೆ

ಲಂಡನಿನಲ್ಲಿ ಆಯುರ್ವೇದ ಶಾಸ್ತ್ರ.

ಲಾಹೋರಿನ ಆಯುರ್ವೇದ ವೈದ್ಯರೊಬ್ಬರು ಲಂಡನಿನಲ್ಲಿದ್ದು, ತನ್ನ ವೈದ್ಯವೃತ್ತಿಯಲ್ಲಿ ಪ್ರೋತ್ಸಾಹಿಸಲ್ಪಟ್ಟು ಈಗ ಲಂಡನಿನಲ್ಲಿ ಆಯುರ್ವೇದೌಷಧಾಲಯವನ್ನು ಸ್ಥಾಪಿಸಲು ಅಪ್ಪಣೆಕೊಡಬೇಕೆಂದು ಭಾರತದ ಹೈಕಮಿಷನರರಿಗೆ ಬರೆದಿರುವರು.

ಯುದ್ಧವೋ ಶಾಂತಿಯೋ!

ಏನೆಂದು ಯಾರಿಗೂ ತಿಳಿಯದು ಅಮೇರಿಕಾ ಸರಕಾರವು ३,००० ಲಕ್ಷ ಡಾಲರುಗಳನ್ನು ಪ್ರತ್ಯೇಕವಾಗಿರಿಸಿ ಪನಾಮಾ ಜಲಸಂಧಿಯಲ್ಲಿ ಸಂಗ್ರಾಮಶಸ್ತ್ರ ಸಂಗ್ರಹಾಲಯವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿರುವರು

ಮೈಸೂರು ಸರಕಾರದವರು—

ಭಾರತ ಮಸೂದೆಯನ್ನು ಅನುಕೂಲಾಗ್ರವಾಗಿ ಪರಿಶೀಲಿಸುತ್ತಿರುವರು ಮಸೂದೆಯಲ್ಲಿ ಮೈಸೂರಿನ ಸ್ಥಾನ ಮಾನ ರಕ್ಷಣೆಗಳನ್ನು ಕುರಿತ ನಿರ್ದಿಷ್ಟ ಅಂಶಗಳನ್ನು ಪ್ರಕಟಿಸಬೇಕೆಂದು ಕೇಳಲಿರುವ ಒಡ[illegible] ಸಾಧಿತ ದೃಷ್ಟೀ ಪೊಗದ ಮಾಂಡ ದ ವಿಚಾರಗಳಲ್ಲಿಯೂ ಮೈಸೂರಿನ ಹಕ್ಕು ಬಾಧ್ಯತೆಗಳನ್ನು ಕುರಿತು ವಿಶೇಷ ರಕ್ಷಣೆಗಳನ್ನು ಕೊಡಬೇಕೆಂದೂ ವಾದವೆದ್ದಿದ

ದೇಶ ಪ್ರೇಮ

ಅಫಗಾನ ಸರಕಾರದವರು ಒಂದ ಆಜ್ಞೆಯನ್ನು ಹೊರಡಿಸಿ ತಮ್ಮ ರಾಜ್ಯಕ್ಕೆ ಹೊರ ದೇಶಗಳಿಂದ ರತ್ನಗಂಬಳಿ ಶಾಲು ಕರವಸ್ತ್ರ ಕುರ್ಚಿ, ಮೇಜು, ಮಣ್ಣಿನ ಸಾಮಾನು ಆಟದ ಸಾಮಾನು ರೇಷ್ಮೆವಸ್ತ್ರಗಳು ಇತ್ಯಾದಿಗಳು ಬರಬಾರದೆಂದೂ ತನ್ನ ದೇಶದ ಈ ಸಾಮಗ್ರಿಗಳು ಹೊರದೇಶಗಳಿಗೆ ಹೋಗಬಾರದೆಂದೂ ಆಜ್ಞಾಪಿಸಲಾಗಿದೆ

ಮುಂದಿನ ವೈಸರಾಯರು—

ಯಾರಾಗುವರೆಂಬ ಕುರಿತು ಇಂಗ್ಲಾಂಡಿನಲ್ಲಿ ಕೆಲವೆದ್ದಿದ ಸಂಡೇ ಏಕ್ಸ್‌ಪ್ರೆಸ್ ಎಂಬ ಲಂಡನಿನ ಪತ್ರಿಕೆಯು ಜವಾಬ್ದಾರೀ ಪಕ್ಷದಿಂದ ತಿಳಿಸುವಂತೆ ಸಾರ್ವಭೌಮರ ಮಕ್ಕಳಲ್ಲಿ ರಾದರೊಬ್ಬನು ವೈಸರಾಯನಾಗಿ ಬರುವುದು ಸಾಧ್ಯವಿದೆಯೆಂದು ತಿಳಿದುಬರುತ್ತದೆ ಮೊನ್ನೆ ವಿವಾಹವಾದ ಡ್ಯೂಕ್ ಆಫ್ ಕೆಂಟರು ರೋಯಲ್ ವೈಸರಾಯರಾಗುವರಂತೆ

ಕಾಶಿ ವಿಶ್ವವಿದ್ಯಾಲಯ

ಇದರ ಕರ್ನಾಟಕ ಸಂಘವು ಕಳೆದ ಶನಿವಾರ ಮತ್ತು ಭಾನುವಾರ ದಿನಗಳಲ್ಲಿ ತನ್ನ ಹನ್ನೆರಡನೇ ವಾರ್ಷಿಕೋತ್ಸವವನ್ನು ಅಲ್ಲಿನ ಬ್ರಹ್ಮಜ್ಞಾನ ಸ್ತ್ರೀಯರ ಪ್ರೌಢ ಶಾಲೆಯ ಪ್ರಿನ್ಸಿಪಾಲರಾದ ಮಿಸೆಸ್ ಪದ್ಮಾಬಾಯಿ ಸಂಜೀವರಾವ್ ಬಿ ಎ ಯವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರುಗಿತು

ಸಾವಿರ ಮುಖಗಳುಳ್ಳ ಮನುಷ್ಯನು

ಈ ದಿನದಲ್ಲಿ ಬದುಕಿಕೊಂಡಿರುತ್ತಾನೆಂದು ತಿಳಿದೊಡನೆ ನಮ್ಮ ಜುಮ್ಮೆನ್ನುತ್ತದೆ ಮೈಸೂರಿನ ರಾಮಕುಮಾರರೆಂಬವರು ಸಹಸ್ರ ಮುಖಗಳುಳ್ಳವರಾಗಿರುವರು. ಅಂದರೆ, ಸಾವಿರ ಮುಖಗಳಿರುವುದಿಲ್ಲ ಒಂದೇ ಮುಖವನ್ನು ಸಾವಿರ ಬಗೆಯಾಗಿ ರೂಪಿಸಿ ತೋರಿಸಲು ಸಮರ್ಥರು ಮದ್ರಾಸಿನ ವಿಕ್ಟೋರಿಯಾ ಜುಬಿಲಿ ಸಭಾಂಗಣದಲ್ಲಿ ಇವರು ದಿವಂಗತ ಸಿ ಆರ್ ದಾಸರ ಮುಖದಂತೆ ತನ್ನದನ್ನು ಮಾಡಿ ತೋರಿಸಿದರು. ಜನರಿಗೆ ಆಶ್ಚರ್ಯವಾಯಿತು. ಮುಖಪರಿವರ್ತನೆಗಾಗಿ ೨೫ ಸೆಟ್ಟು ದಂತಗಳು ಇವರಲ್ಲಿವೆ.

ಕೊಂಚ-ಕೊಂಚ.

ಹೈದರಾಬಾದಿನಲ್ಲಿ ಪೊಸಾನಿ ಎಂಬ ಕುರುಡನು ತನ್ನ ಸೊಸೆಯೊಬ್ಬಳು ತನ್ನನ್ನು "ಕುರುಡ"ನೆಂದು ಹೀಯಾಳಿಸಿದುದಕ್ಕಾಗಿ ಆವಳನ್ನು ಕೊಂದು ಬಿಟ್ಟನು. ಆವನಿಗೆ ಫಾಶಿ ಶಿಕ್ಷೆಯಾಗಿದೆ

ಬೆಂಗಳೂರಿನಲ್ಲಿ ಹರಿಜನ ಸೇವಾಸಂಘದವರು ಹರಿಜನರಿಗಾಗಿ ಹಿಂದಿ ಪಾಠಶಾಲೆಯನ್ನು ರಚಿಸಲಿರುವರು

ಹತ್ತು ಜನರನ್ನು ತಿಂದ ಹುಲಿಯೊಂದನ್ನು ಬ್ರಹ್ಮಪುರದಲ್ಲಿ ಶ್ರೀ ಜಾಮ್ ಪಟ್ನಾಯಕ್ ಎಂಬವರು ಕೊಂದಿರುವರು.

ಮುಂಬಾಯಿಯ ಸೆವ್ರಿ ಸ್ಮಶಾನಭೂಮಿಯಲ್ಲಿನ ಗೋರಿಗಳನ್ನೆಲ್ಲ ಅಗೆದು ಅದರೊಳಗಿರುವ ಅಮೂಲ್ಯ ವಸ್ತುಗಳನ್ನು ಅಪಹರಿಸುತ್ತಿದ್ದನೆಂಬ ಆರೋಪದ ಮೇಲೆ ಯೂಸೂಫ್ ಅಲಿ ಮಹಮ್ಮದ್ ಹುಸೇನ್ ಎಂಬವನನ್ನು ಸೆರೆಹಿಡಿದಿರುವರು

ಬ್ರಹ್ಮಪುರದಲ್ಲಿ ಮೈಲಪಳ್ಳಿ ನಾರಾಯಣ ಎಂಬವನು ತನ್ನ ಪತ್ನಿಯನ್ನು ಕೊಂದು ತಾನು ಬಾವಿಗೆ ಹಾರಿ ಬದುಕಿ ವಿಚಾರಣೆಗೆ ಸಿಕ್ಕಿ ಫಾಶಿಗೆ ಗುರಿಯಾದವನು

ಹೈದರಾಬಾದಿನಲ್ಲಿ ನವಾಬ ಗೌಸುದ್ದೀನ್ ಖಾನ್ ಬಹದ್ದೂರರವರ ಕೆಲವು ನೋಟದ್ದಮೆಗಳನ್ನು ಪಡೆದು, ವಿಶ್ವಾಸಘಾತಕ ಮಾಡಿದರೆಂಬ ಆರೋಪದ ಮೇಲೆ ಮಹಮ್ಮದ್ ನೈಯದ್ ಎಂಬ ವಕೀಲರು, ಗೌಸಾಲೀ ಹಫೀಜ್ ಗುಲಾಮ್ ಎಂಬವರೊಡನೆ ದಸ್ತಗಿರಿ ಮಾಡಲ್ಪಟ್ಟಿರುವರು

ಬೆಂಗಳೂರಿನ ತಿಪ್ಪಸೆಟ್ಟಿ ಮಠದ ಡಿಸ್ಟ್ರಿಕ್ಟದಲ್ಲಿ ನೀರಾವರಿ ಕೆಲಸಗಳಿಗಾಗಿ ಅಲ್ಲಿಯ ನಗರ ಸಭೆಯು ೪೧೭೦೦ ರೂಪಾಯಿಗಳನ್ನು ಮಂಜೂರು ಮಾಡಿರುವರು

ಹೂರ್ಗ[illegible]ನಲ್ಲಿ ಬಸ್ ಒಂದು ಎತ್ತಿನ ಗಾಡಿಗೆ ಢಿಕ್ಕೆ ಬಡೆದು ಗಾಡಿಯು ಹುಡಿಹುಡಿಯಾಗಿ ಗಾಡಿಗಾರನು ಆಸ್ಪತ್ರೆಗೊಯ್ಯಲ್ಪಟ್ಟನು

ಅರ್ಧೋದಯದ ದಿನ ಪುಣ್ಯಕ್ಷೇತ್ರಗಳಿಗೆ ತೆರಳಿದ ಪ್ರಯಾಣಿಕರಿಂದ ರೈಲ್ವೇ ಕಂಪೆನಿಯವರಿಗೆ ೧ ४೦ ೦೦೦ ರೂಪಾಯಿಗಳು ಟಿಕೇಟಿನ ಹಣ [illegible]ವಾಗಿ ದೊರೆತುವು

ಅರ್ಧೋದಯದ ಸಂಬಂಧವಾಗಿ ಫೆಬ್ರುವರಿ ३३ ೧೪ರಿಂದ [illegible] ವರೆಗೆ ಧನುಷ್ಕೋಡಿ ಮತ್ತು ರಾಮೇಶ್ವರಗಳಿಗೆ [illegible] ಜನರು ಹೋದರು ಮಹಾಬಲಿಪುರಕ್ಕೆ [illegible] ಜನರು ಹೋದರು

[illegible]ನಿಂದ ४೦ ೦೦೦ ಹಂದ್ರದ ಪೆಟ್ಟಿಗೆಗಳನ್ನು ತಂದ[illegible] ಕೊಟ್ಟು[illegible]ಗಳನ್ನು [illegible] ಜನವರಿಯಲ್ಲಿ ಪಡೆದ [illegible] ಇವುಗಳ ಬೆಲೆ ರೂ ೬,೮४,೦೦೦

ದಾಖಲೆಯಲ್ಲಿರುವ ವಿದೇಶೀಯ ವೈದ್ಯರು ಹಿಂದೂ ದೇಶದಲ್ಲಿ ವೈದ್ಯವೃತ್ತಿಗಿಳಿವುದರ ಕುರಿತು ಕೇಳಿಕೊಳ್ಳುವುದಕ್ಕಾಗಿ ಮುಂಬಾಯಿ ಮೆಡಿಕಲ್ ಕೌನ್ಸಿಲಿನವರು ಇಂಡಿಯಾ ಸರಕಾರಕ್ಕೆ ಮನವಿಯನ್ನೊಯ್ದಿರುವರು

ಅಹಮ್ಮದಾಬಾದಿನ ಮಿಲ್ ಗಿರಣಿಯ ಹಳೆಯ ಕೆಲಸಗಾರರು ಸಂಬಳಕ್ಕಾಗಿ ಮುಷ್ಕರ ಹೂಡಿ ಹೊರಗೆ ಹೋದರು ಹೊಸಬರನ್ನು ನೇಮಿಸಲಾಯಿತು ಈಗ ಹೊಸಬರೂ ಮುಷ್ಕರ ಹಿಡಿದಿರುವರು

ಅಹಮ್ಮದಾಬಾದಿನ ನಗರ ಸಭೆಯು ಮಲೇರಿಯಾ ನಿವಾರಣಾರ್ಥ ३४,३೦೦ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟಿತು

ಮದ್ರಾಸ್ ರೇಸ್ ಕ್ಲಬ್ಬಿನಲ್ಲಿ ಹಳೆಯ ಟಿಕೇಟುಗಳನ್ನು ಮಾರಿದ ಐವರನ್ನು ಪೋಲೀಸರು ಸೆರೆಹಿಡಿದಿರುವರು

ವೆಂಕಟಗಿರಿ ಮಹಾರಾಜರ ಶಿಕಾರಿ ಭೂಮಿಯಲ್ಲಿನ ಕಸ್ತೂರಿ ಹರಿಣಿಯೊಂದನ್ನು ಕೊಂದ ೧೫ ಮಂದಿ ಬೇಟೆಗಾರರಿಗೆ ಗುಡೂರು ಮೆಜಿಸ್ಟ್ರೇಟರು ವಿವಿಧ ಶಿಕ್ಷೆಯಿತ್ತರು.

ಕುಂಬಕೋಣದ ಜವಾಹೀಯರ ವ್ಯಾಪಾರಕೇಂದ್ರದಲ್ಲಿ ಭಯಂಕರ ಬೆಂಕಿಯೆದ್ದು, ಸಾವಿರಾರು ರೂಪಾಯಿಗಳ ನಷ್ಟವಾಗುವುದರೊಳಗೆ ಅದನ್ನು ನಂದಿಸಿದರು

ಅಲ್ಲಹಾಬಾದ್ ವಿದ್ಯಾಲಯದ ಸಂಘದವರು ಡಾ। ಟಾಗೂರರನ್ನು ಸ್ವಾಗತೀಕರಿಸಿ ಅವರಿಗೊಂದು ಥೈಲಿಯನ್ನರ್ಪಿಸಿದರು.

ಅಹ್ಮದಾಬಾದಿನ ಬಸ್ ಮುಷ್ಕರವು ಬೆಳೆಯುತ್ತಿದೆ ಹೊಸ ಡ್ರೈವರರು ಕೆಲಸಕ್ಕಾರಂಭಿಸಿರುತ್ತಾರೆ, ಹಳಬರು ಮೆರವಣಿಗೆಯೊಡನೆ ಪ್ರಚಾರ ಮಾಡುತ್ತಿದ್ದಾರೆ

ಜಾಫ್ನಾದ ಸ್ತ್ರೀಯರಲ್ಲಿ ಒಬ್ಬರೇ ವಕೀಲರಾದ ಮಿಸ್ ಎಲಿಜಿನ್ ಒಬಿ ಸೆಕ್ಸೆಯವರು ಸಿಲೋನಿನ ಕೋರ್ಟಿನಲ್ಲಿ ಪ್ರಥಮವಾಗಿ ಬಂದಾಗ, ಅವರ ನುಡಿಗಳನ್ನಾಲಿಸುವುದಕ್ಕಾಗಿ ಸಾವಿರಾರು ಜನರು ಕೋರ್ಟಿಗೆ ಬಂದಿದ್ದರು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ — (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ — (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ — (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ — (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ — (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ — (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.



Distributors for South Kanara:—

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಏರುತ್ತಿದೆ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ್ಳ ಡಬ್ಬಿಯೊಂದಕ್ಕೆ ರೂ. 1

ಪೆಟ್ಟಿನ ವಿವರಕ್ಕೆ, ಧನಾರ್ಥ ಹಾಗೂ ಟಿಪ್ಪಾಲು ಖರ್ಚಿನ ವಿವರ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:—Shah Company, Mangalore.
„ Patel & Sons, Mangalore.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ., ಸ್ವ.

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ, ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಹೊಂದಿ ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶಿಯ ಜೊಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ತೆತ್ತ ಮೂಲಧನ: ರೂ. 3,31,035 **ಕ್ಷೇಮನಿಧಿಗಳು:** ರೂ. 4,50,000 **ಠೇವಣಾತಿಗಳು:** ರೂ. 58,62,486.

ಆಫೀಸುಗಳು:—ಮಂಗಳೂರು, ಮುಂಬಾಯಿ, (ಫೋರ್ಟ್ ಮತ್ತು ಮಾಂಡ್ವಿ) ಅಲಪ್ಪೆ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ, ಬಂಟವಾಳ, ಹುಬ್ಬಳ್ಳಿ, ಮತ್ತು ದಾವಣಗೆರೆ.

ಎಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

Writing an Advertisement. Advertisements make both a concious and sub-concious appeal and should be beautiful, sentimental or humourous not blatant or vulgar, crisp in their appeals, whether of wording or design, not too highly coloured metaforically, and with a reason given (where ever possible) that appeals to the practicable mind; a mere statement of the name of the article or place is insufficient.

Get your advertisements written up by:—**The Publicity Department, Swadeshabhimani, Mangalore.**

ಹಿಂದಿಯು ದೇಶಭಾಷಾ ವೈರಿಯಲ್ಲ.

ದೇಶಭಾಷಾ ಪ್ರೇಮಿಗಳಿಂದಲೇ ರಾಷ್ಟ್ರಭಾಷೆಯ ಉದ್ಧಾರ

ಶ್ರೀ ಕಾಕಾ ಕಾಲೇಲಕರರು ರಾಜಧಾನಿಗೆ ಬಂದಿದ್ದಾಗ ವೃತ್ತಪತ್ರಿಕಾ ಸುದ್ದಿಗಾರರು ಅವರನ್ನು ಕಂಡು ಈಗ ಇಲ್ಲಿ ಎದ್ದಿರುವ "ಹಿಂದೀ ಕನ್ನಡ ವಾದ" ಕುರಿತು ಪ್ರಶ್ನೆಮಾಡಿದರು ಕಾಕಾಜಿಯವರು ಉತ್ತರಕೊಟ್ಟರು, "ದಿ ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಯಲ್ಲಿ ಬಂದ ಲೇಖನವನ್ನು ಅನುಸರಿಸಿ ಬರೆದುದು ಈ ಲೇಖನ

ಮಾತೃಭಾಷಾ ಸೇವಕನು ನಾನು.

ನನ್ನ ಜೀವನವೆಲ್ಲ ಪ್ರತಿಪ್ರಾಂತ್ಯದ ಮಾತೃಭಾಷಾ ಸೇವೆಮಾಡುವುದರಲ್ಲೇ ವಿನಿಯೋಗವಾಗುತ್ತಿದೆ ಭರತಖಂಡದ ಪ್ರತಿಯೊಂದು ಪ್ರಾಂತಿಕ ಭಾಷೆಯೂ ಪೂರ್ಣ ವೃದ್ಧಿವಿಕಾಸ ಹೊಂದಬೇಕೆಂಬುದೇ ನನ್ನ ಆಶೆ ನನ್ನ ಶಕ್ತಿ ಸಾಮರ್ಥ್ಯಗಳನ್ನು ಗುಜರಾತಿ ಭಾಷೆಯ ಸೇವೆಗೆ ಶ್ರದ್ಧೆಯಿಂದ ಅರ್ಪಿಸಿರುತ್ತೇನೆ ನಾನು ಹರಿದ್ವಾರದಲ್ಲಿದ್ದಾಗ ಅಲ್ಲಿನ ವಿದ್ಯಾರ್ಥಿಗಳಿಗೆ 'ನಿಮ್ಮ ಮಾತೃಭಾಷಾಧ್ಯಯನದಲ್ಲಿ ನೀವು ಲೀನರಾಗಬೇಕು' ಎಂದು ಬೋಧಿಸುತ್ತ ಬಂದೆ ಶಾಂತಿನಿಕೇತನದಲ್ಲಿದ್ದಾಗ ಅಲ್ಲಿನ ಬಾಲಕರಿಗೆ 'ನಿಮ್ಮ ಪ್ರಾಂತ್ಯದ ವಂಗಭಾಷಾಧ್ಯಯನದಲ್ಲಿ ತನ್ಮಯರಾಗಿರಿ' ಎಂದು ಹೇಳುತ್ತ ಬಂದೆ

ಬೆಳಗಾಂವಿಯಲ್ಲಿ ಕನ್ನಡ ಮರಾಠಿ ವಾದವು ವಕ್ರರೂಪ ತಾಳಿತು ಭಯಂಕರವೆನಿಸಿತು ಇದು ನಮ್ಮ ದುರದೃಷ್ಟ ಈ ಸಂದರ್ಭದಲ್ಲಿ ನಾನು ಕನ್ನಡದ ವಕಾಲತ್ತನ್ನೇ ವಹಿಸುತ್ತ ಬಂದಿದ್ದೇನೆ

ಮದರಾಸಿನ ಕಾಂಗ್ರೆಸಿನ ಕಾಲ ನನ್ನ ಮಿತ್ರರಾದ ಡಾ। ಜೋತಿರಾಂರವರು ಉತ್ಸಾಹೋದ್ರೇಕದಿಂದ ಭಾಂಕೆದ ಪ್ರಾಂತಿಕ ಭಾಷೆಗಳನ್ನೆಲ್ಲ ಮೂಟೆಗಟ್ಟಿ ಬಂಗಾಳಕೊಲ್ಲಿಗೆ ಎಸೆಯಬೇಕು ಹಿಂದಿಯನ್ನೇ ಅಖಿಲಭಾರತ ಭಾಷೆಯನ್ನಾಗಿ ಮಾಡಬೇಕು ಎಂಬದಾಗಿ ವಾದಿಸಿದರು ಆಗ ನಾನು ನನ್ನ ಶಕ್ತಿ ಸಾಹಸಗಳನ್ನೆಲ್ಲ ಪ್ರಯೋಗಿಸಿ ಪ್ರತಿಭಟಿಸಿದೆನು

ರಾಷ್ಟ್ರಜ್ಞಾನವಾಹಿನಿ

ರಾಷ್ಟ್ರ ಸೇವಕರ ದೇಶಸೇವೆ ಮಾಡಬೇಕೆ? ಪಾಮರಜನ ಶಿಕ್ಷಣ ಕಾರ್ಯ ನಡೆಸಬೇಕೆ? ಹಾಗಾದರೆ ಆ ಕೆಲಸವು ಸಾರ್ಥಕವಾಗಿ ನಡೆಯಬೇಕಾದರೆ ಆಯಾ ಪ್ರಾಂತ್ಯಗಳ ದೇಶಭಾಷೆಗಳ ಮೂಲಕವೇ ನಡೆಯಬೇಕು ಆಯಾ ದೇಶಭಾಷೆಗಳೇ ಆಯಾ ಪ್ರಾಂತ್ಯಗಳ ನಿಸರ್ಗಸಿದ್ಧವಾದ ಜ್ಞಾನವಾಹಿನಿಗಳು ಎಂಬದಾಗಿ ಹೇಳಿದೆ

ಮಾತೃಭಾಷೆ ಕಲಿಯದವನು ಪ್ರೇಮಿಸದವನು ಮಾತೃಭಾಷೆಯಲ್ಲಿ [illegible] ದವನು ರಾಷ್ಟ್ರಭಾಷೆಯಾದ ಹಿಂದಿಗೆ ಸಹಾಯ ಮಾಡಬಲ್ಲನೆಂದು ನಾನು ನಂಬುವುದಿಲ್ಲ ಅವನಿಂದ ಹಿಂದಿಗೆ ಲೇಶವೂ ಸೇವೆಯಾಗುವುದಿಲ್ಲ ಹಲವರಿಗೆ ತಮ್ಮ ಮಾತೃಭಾಷೆಯೆಂದರೆ ಬಹಳ ಪ್ರೇಮವಿದೆ ಹಲವರು ಅದರಿಂದ ಗರ್ವಿತರಾಗಿದ್ದಾರೆ ತಮ್ಮ ಮಾತೃಭಾಷಾಭಿಮಾನದ ಅತಿರೇಕದಿಂದ ಅವರು ಹಿಂದಿಭಾಷೆಯ ವಿಚಾರದಲ್ಲಿ ಕೊಂಚ ಅನುಮಾನ ಪಡುತ್ತಿದ್ದಾರೆ ಅದಕ್ಕಾಗಿ ಅವರ ಮೇಲೆ ನನಗೆ ಕೋಪವಿಲ್ಲ ಕೆಲವು ಸಂದರ್ಭಗಳಲ್ಲಿ ತಮ್ಮ ಇಷ್ಟದೇವತಾರಾಧನೆಯ ಭಾವಭರದಲ್ಲಿ ಹಲವರು ಹಿಂದಿಯನ್ನು ಪ್ರತಿಭಟಿಸುವುದೂ ನನಗೆ ಗೊತ್ತಿದೆ ಆದರೆ ಅಂತಹ ಜನರಿಗೆ ಸ್ವಾಮಿ ನೀವೂ ನಿಮ್ಮ ಮಾತೃ ಭಾಷಾಭಿಮಾನಿಗಳು ನಾನೂ ಸಹ ಅಂತೆಯೇ ಮಾತೃಭಾಷಾಭಿಮಾನಿ ನಿಮ್ಮ ಭಾಷಾಭಿಮಾನಕ್ಕಿಂತಲೂ ನನ್ನ ಭಾಷಾಭಿಮಾನವೇನೂ ಕಡಿಮೆಯಾದುದಲ್ಲ' ವೆಂದು ಹೇಳಬಯಸುತ್ತೇನೆ ನನ್ನ ಹೃದಯಸಿಂಹಾಸನದಿಂದಿಳಿಸಿದ ಭಾಷಾರಾಜ್ಞಿಯನ್ನು ಪದಭ್ರಷ್ಟಳನ್ನಾಗಿ ಮಾಡಿ, ಕ್ರಮ ಕ್ರಮವಾಗಿ ಆ ಸ್ಥಾನವನ್ನು ಆಕ್ರಮಿಸಲು ಹೊಂಚು ಹಾಕುತ್ತಿರುವ ಇಂಗ್ಲಭಾಷೆಯನ್ನು ಕಂಡಾಗ ನನಗೂ ಹಾಗೆಯೇ ಕರ್ಕಶ ಹೃದಯವೇದನೆಯಾಗುತ್ತದೆ ಆದರಿಂದ ತಮ್ಮ ಮಾತೃಭಾಷೆಯ ಸಂರಕ್ಷಣಾ ಕಾರ್ಯದಲ್ಲಿ ಇಷ್ಟು ಶ್ರದ್ಧೆಯನ್ನು ತೋರಿಸುವವರಲ್ಲಿ ನನಗೆ ಪೂರ್ಣ ಸಹಾನುಭೂತಿಯಿದೆ ಅಂತಹ ವೀರರು ನಮಗೆ ಬೇಕು ಅಂತಹವರಿಂದ ನಾನು ಮಹತ್ವದ ಕಾರ್ಯಗಳನ್ನು ನಿರೀಕ್ಷಿಸುತ್ತೇನೆ

ಅವರು ಕನ್ನಡ ಭಾಷಾ ಸೇವೆಗಾಗಿ ತಮ್ಮ ಜೀವನವನ್ನೆಲ್ಲ ಶ್ರದ್ಧಾಂಜಲಿಗಳಾಗಿ ಧಾರೆಯೆರೆಯಬೇಕೆಂದು ಬಯಸುತ್ತೇನೆ ಕಳೆದ ಶತಮಾನದ ಮಧ್ಯಕಾಲದಲ್ಲಿ ಇಂತಹ ಕನ್ನಡ ಭಾಷಾಭಿಮಾನಿಗಳು ಕನ್ನಡ ಭಾಷಾ ಸೇವೈಕವೀರರು ಹುಟ್ಟಿದ್ದರೆ ಇಂಗ್ಲ ಭಾಷೆಯು ತನ್ನ ಮನೆಯಲ್ಲೇ ಈ ದುರ್ಗತಿಯನ್ನು ತರುತ್ತಿರಲಿಲ್ಲ ಕನ್ನಡ ಭಾಷೆಗೆ ಈಗೇನಾಯಿತು? ಕಾಲವಿನ್ನೂ ಮಿಂಚಿ ಹೋಗಿಲ್ಲ ನಾವೆಲ್ಲ ಒಂದಾಗೋಣ ನಮ್ಮ ನಮ್ಮ ಭಾಷಾರಾಜ್ಞಿಗಳನ್ನು ಮತ್ತೆ ನಮ್ಮ ನಮ್ಮ ಹೃದಯ ಸಿಂಹಾಸನಗಳಲ್ಲಿ ಪ್ರತಿಷ್ಠಿಸೋಣ ಭಾರತವರ್ಷವೆಲ್ಲ ಒಂದು ರಾಜಕಾರಣ ಸಮಾಜ ಜೀವನ ಸಾಂಸ್ಕೃತಿಕ ಸಂಪತ್ತು ಇವೆಲ್ಲ ವಿಚಾರಗಳಲ್ಲೂ ಭಾರತವರ್ಷವೆಲ್ಲ ಅವಿಭಕ್ತವಾದೊಂದು ರಾಷ್ಟ್ರ ಪ್ರಾಂತ್ಯಗಳೊಂದೊಂದೂ ಭಾರತಮಾತೆಯ ಕಂಠಾಭರಣದ ಬೇರೆ ಬೇರೆ ಮಣಿಗಳು

ಅವಿಭಕ್ತ ಜೀವನ

ಭಾರತವನ್ನು ಬಿಡಿ ಪ್ರತ್ಯೇಕವೆನಿಸಿ ಪ್ರಾಂತ್ಯಗಳು ಜೀವನವನ್ನು ಬಾಪದವಾಗಿ ಕಳೆಯಲಾರವು ಅದುದರಿಂದಲೇ ನಾನಾ ಪ್ರಾಂತಗಳ ಸಾಹಿತ್ಯಗಳು ಸಂಸ್ಕೃತಿಗಳು ಏಕವಾಹಿನಿಯೊಂದರ ಕಡೆ ನೋಡಬೇಕು ಆ ಏಕವಾಹಿನಿ ಹಿಂದಿ ಈ ಹಿಂದಿಯಲ್ಲಿ ಭಾರತದ ನಾನಾ ಸಾಹಿತ್ಯ ಸಂಸ್ಕೃತಿಗಳಲ್ಲಿ ಸೇರಬೇಕು ಪರಸ್ಪರ ವಿಚಾರ ವಿನಿಮಯವಾಗಲಿ ಆತಿಗಳ ಆದರ್ಶಗಳ ಭಯಗಳು ಸಂಕಟಗಳು ಇವೆಲ್ಲ ಇಲ್ಲಿ ಕಲಿತ ಮಿಶ್ರ ರೂಪುಗೊಳ್ಳಲಿವೆ ಹಿಂದಿಯೊಂದು ಮಹಾಸಾಗರದಂತೆ ನಾನಾ ಪ್ರಾಂತ್ಯ ನದಿನದಗಳೆಲ್ಲ ಈ ಸಾಗರವನ್ನು ಸೇರುತ್ತವೆ ಈ ಸಾಗರವು ಮತ್ತೆ ನಾನಾ ನದಿನದಗಳಿಗೆ ನೀರೆರೆಯುತ್ತದೆ

ಸಂಕುಚಿತ ಬುದ್ಧಿ

ಕೆಲವರ ಉದಾಸೀನ ಸ್ವರದಿಂದ ಸ್ವರಾಜ್ಯ ಬರಲಿ ಆ ವೇಳೆ ಹಿಂದಿ ಕಲಿಯೋಣ' ಅನ್ನುತ್ತಾರೆ ಶತಮಾನ ಶತಮಾನಗಳಿಂದ ನಾವೆಷ್ಟು ಎಚ್ಚರಗೇಡಿಗಳಾಗಿ ಕಳೆದಿದ್ದೆವೋ ಹಾಗೆಯೇ ಇವರೂ ಸಹ ಎಚ್ಚರಗೇಡಿಗಳಾಗಿ ವರ್ತಿಸುತ್ತಿದ್ದಾರೆ ಒಟ್ಟಿನಲ್ಲಿ ಅವರ ಹೇಳುವುದಿಷ್ಟು

ಇಂಗ್ಲೀಷನ್ನು ನಮ್ಮ ತಲೆಗೆ ಬಲವಂತವಾಗಿ ಕಟ್ಟಿದರು ಹಾಗೆಯೇ ಹಿಂದಿಯನ್ನು ನಮ್ಮ ತಲೆಗೆ ಬಲವಂತವಾಗಿ ಕಟ್ಟಲಿ ಆಗ ಕಲಿಯುತ್ತೇವೆ

ಇದು ನಿಜವಾಗಿ ಸ್ವರಾಜ್ಯಚಿತ್ತ ವೃತ್ತಿಯಲ್ಲ ಎಚ್ಚರಗೇಡಿಗಳೂ ದುರ್ಬಲರೂ ಸ್ವರಾಜ್ಯ ಸಂಪಾದಿಸಲಾರರು

ಭಾರತವು ಅನೇಕ ಸಾರಿ ಸಂಕುಚಿತ ಮನೋಭಾವ ವ್ಯಾಧಿಪೀಡಿತವಾಗಿದೆ ಸಂಕುಚಿತ ಕೋಮುವಾರು ಬುದ್ಧಿ, ಸಂಕುಚಿತ ಪ್ರಾಂತಿಕ ಬುದ್ಧಿ ಭಾವಬುದ್ಧಿ, ಇವೆರಡೂ ಒಂದೇ ತಾಯಿಮಕ್ಕಳು ಸಾಮಾನ್ಯ ಭಾವ, ಸಾಮಾನ್ಯ ರೂಪಿಸಾಧನೆಯು ಸುಲಭ, ಅನುಕೂಲವೂ ಕಾಣಬಹುದು ಆದರೆ ಅದರಿಂದ ಬಲ ಬರುವುದಿಲ್ಲ. ವೀರ್ಯ ಉಂಟಾಗುವುದಿಲ್ಲ ಮಹತ್ವ ಲೇಶವೂ ಸಾಧಿಸಲಾಗುವುದಿಲ್ಲ.

'ಹಿಂದಿಯ ಹೃದಯವು ಉದಾರ

ಹಿಂದಿಯೊಂದು ಭಾರತದ ಭಾಷೆಯೆನಿಸಿದೆ ಅಧಿಕ ಸಂಖ್ಯಾಯುತರಾಡುವುದರಿಂದ ಮಾತ್ರ ಅದಕ್ಕೆ ಆ ಸ್ಥಾನ ಲಭ್ಯವಾಗಿಲ್ಲ. ಹಿಂದಿಯ ಹೃದಯವು ಉದಾರ ಹೃದಯ ಭಾರತದ ಹೃದಯವೂ ಸಹ ಉದಾರ ಹೃದಯವೇ ಆರ್ಯ ಸಂಸ್ಕೃತಿ ಮತ್ತು ಇಸ್ಲಾಂ ಸಂಸ್ಕೃತಿಗಳ ಸಾರಸರ್ವಸ್ವವನ್ನು ಹಿಂದಿಯು ಹೀರಿ ತನ್ನ ರಕ್ತದಲ್ಲಿ ಸೇರಿಕೆಂಡಿದೆ ಭರತಖಂಡದ ನಾನಾ ದೇಶಭಾಷೆಗಳಿಂದ ಈಗಾಗಲೇ ಶಬ್ದಗಳನ್ನು, ಸಮಾಸಗಳನ್ನು, ಸಮಯ ಸಂಪ್ರದಾಯ್ಸಸಿದ್ಧಿಗಳನ್ನು ಆಕರ್ಷಣಮಾಡಿದೆ ಇನ್ನೂ ಇಂದಿಗೂ ಮಾಡುತ್ತಲಿದೆ ಆದಕಾರಣ ಎಂದೆಂದಿಗೂ ಹಿಂದಿಯು ಪ್ರಾಂತಿಕ ಭಾಷೆಗಳ ವೈರಿಯೆನಿಸಲಾರದು

ನಮ್ಮ ಮಹಾ ಪ್ರಾಂತ್ಯಭಾಷೆಗಳು ನಮ್ಮ ಹಿರಿಯರ ಸಂಪತ್ತು ಪರಂಪರಾಗತವಾದ ಆಸ್ತಿ ಆದರೆ ವೃದ್ಧಿವಿಕಾಸಕ್ಕೆ ಯಾರ, ಎಂತಹ ಅಡ್ಡಿ ಆತಂಕಗಳನ್ನು ತಂದೊಡ್ಡಿದರೂ ನಾನು ಅದನ್ನು ಸಹಿಸಲಾರೆನು ನಾನು ಯಾವೊಂದೂ ಭಾಷೆಯ ವಿಚಾರವಾಗಿಯ ಪಕ್ಷಪಾತಬುದ್ಧಿಯಿಟ್ಟುಕೊಂಡ ಬಂದಿಲ್ಲವೆಂದ ಭರವಸೆ ಕೊಡಬಯಸುತ್ತೇನೆ

ವಿಶ್ವಕರ್ನಾಟಕ

ಕನ್ನಡದಲ್ಲಿ ಹೊಸದಾಗಿ ಪ್ರಕಟವಾಗುವ ಗ್ರಂಥಗಳ ವಿವರಗಳು

ಎಲ್ಲ ಗ್ರಂಥಕರ್ತರಿಗೂ ಪ್ರಕಾಶಕರಿಗೂ ವಿಜ್ಞಾಪನೆ—

ಕನ್ನಡದಲ್ಲಿ ನಡೆಯುತ್ತಿರ [illegible] ಗ ವಾಭಿವೃದ್ಧಿಯ [illegible] ಗಳನ್ನು ಕಾಲ [illegible] ಸಂಗ್ರಹಮಾಡಿ ಲಿಖಿತ ರೂಪದಲ್ಲಿರಿಸುವುದು ಪರಿಷತ್ತಿನ ಒಂದು ಕರ್ತವ್ಯವಾಗಿದೆ ಇದೇ ಉದ್ದೇಶದಿಂದ ಕಳೆದ ವರ್ಷ ಗ್ರಂಥ ಪ್ರದರ್ಶನವನ್ನು ನಡೆಸಿ [illegible] ದರ್ಶನದಲ್ಲಿ ಗ್ರಂಥ ಪ್ರಕಟನಕಾರ್ಯದ [illegible] ವ್ಯಾಪಕಗಳ ವಿವರಗಳನ್ನು ಸಾಧ್ಯವಿದ್ದ ಮಟ್ಟಿಗೂ ಸಂಗ್ರಹಿಸಿದ್ದಾಗಿದೆ ಈ ಪ್ರದರ್ಶನವಾದ ದಿನದಿಂದೀಚೆಗೆ ಎಂದರೆ [illegible] ಇಸವಿ ಜನವರಿ ತಿಂಗಳಿಂದೀಚೆಗೆ ನಡೆದಿರುವ ಗ್ರಂಥಾಭಿವೃದ್ಧಿಯ ವಿವರಗಳನ್ನು ಆದಷ್ಟು ನಿಷ್ಕರ್ಷೆಯಾಗಿ ಸಂಗ್ರಹಿಸಬೇಕಾದ ಕಾರ್ಯ ಉಳಿದಿದೆ ಆದಕಾರಣ ಕನ್ನಡದಲ್ಲಿ ಗ್ರಂಥಬರೆಯುವ ಮತ್ತು ಪ್ರಕಾಶಪಡಿಸುವ ಎಲ್ಲ ವ್ಯಾಪಾರ ಸಂಸ್ಥೆಗಳೂ ಸಾಹಿತ್ಯ ಸಂಘಗಳೂ ವ್ಯಕ್ತಿ ಮಹಾಶಯರೂ ತಮ್ಮ ತಮ್ಮ ಪ್ರಕಟಣೆಗಳನ್ನು [illegible] ಸುದ್ದಿಯನ್ನು ಬರೆದು ಪರಿಷತ್ಪತ್ರಿಕೆಯ ಕಾರ್ಯಾಲಯಕ್ಕೆ ಕಳುಹಿಸಬೇಕೆಂದು ಕೋರುತ್ತೇವೆ ಪರಿಷತ್ಪತ್ರಿಕೆಯಲ್ಲಿ ವಿಮರ್ಶೆಗಾಗಿ ಅನೇಕ ಗ್ರಂಥಗಳು ಬರುತ್ತವೆಯಾದರೂ, ಎಲ್ಲ ಗ್ರಂಥಗಳೂ ನಮ್ಮ ಕೈಸೇರುತ್ತಿವೆಯೆಂದ ನಾವು ಭಾವಿಸುವ ಹಾಗಿಲ್ಲ ಎಷ್ಟೋ ಗ್ರಂಥಗಳು ಪ್ರಕಟವಾಗಿರುವ ಸಂಗತಿಯೇ ನಮಗೆ ಈಗ ತಿಳಿದುಬರುತ್ತ ಅವಕಾಶವಿಲ್ಲ ಪರಿಷತ್ಪತ್ರಿಕೆಯ ಮುಂದಿನ ಸಂಚಿಕೆಯಿಂದ ಪ್ರತಿ ಸಂಚಿಕೆಯಲ್ಲಿಯೂ ಆಯಾ ಸಂಚಿಕೆಗೆ ಸಂಬಂಧಪಟ್ಟ ಮಾಸತ್ರಯದಲ್ಲಿಯೂ ಪ್ರಕಟವಾಗಿರುವ ಗ್ರಂಥಗಳ ಹೆಸರುಗಳನ್ನೂ, ಅವುಗಳ ಗ್ರಂಥಕರ್ತರು, ಪ್ರಕಾಶಕರು, ಗಾತ್ರ ಆಕಾರ ಮೊದಲಾದ ವಿವರಗಳೊಡನೆ ಪಟ್ಟಿಮಾಡಿ ಪ್ರಕಟಗೊಳಿಸಬೇಕೆಂದು ಆಶಿಯಿದೆ ಇದಕ್ಕೆ ಎಲ್ಲ ಗ್ರಂಥಕರ್ತರೂ ಮತ್ತು ಪ್ರಕಾಶಕರೂ ನೆರವಾದ ಹೊರತು ಈ ಉದ್ದೇಶ ನೆರವೇರಲಾರದು. ಗ್ರಂಥ ಪ್ರಕಾಶನದಲ್ಲಿ ಉದ್ಯುಕ್ತರಾಗಿರುವ ಸಮಸ್ತರೂ ಗ್ರಂಥಪ್ರಕಟವಾಗುವ ಸಮಯದಲ್ಲಿಯೇ ಈ ಕೆಳಗಿನ ವಿವರಗಳನ್ನು ಒಂದು ಕಾರ್ಡಿನಲ್ಲಿ ಬರೆದು ಪರಿಷತ್ಕಾರ್ಯಾಲಯಕ್ಕೆ ಕಳುಹಬೇಕೆಂದು ಕೋರುತ್ತೇವೆ—

೧ ಪುಸ್ತಕದ ಹೆಸರು ೨ ಪುಸ್ತಕದ ಅಡ್ಡ ಹೆಸರೇನಾದರೂ ಇದ್ದರೆ ಅದು ೩ ಪುಸ್ತಕದ ವಿಷಯ, ೪ ಪುಸ್ತಕದ ಜಾತಿ, ೫ ಪುಸ್ತಕದ ಲೇಖಕರ ಹೆಸರು, ವಿಳಾಸ, ೬, ಪುಸ್ತಕದ ಪ್ರಕಟನಕರ್ತರ ಹೆಸರು, ವಿಳಾಸ, ೭ ಪುಸ್ತಕದ ಮೊದಲನೆಯ ಪ್ರಕಟಣೆಯ ತಾರೀಕು ೮ ಪುಸ್ತಕದ ಈಗಿನ ಪ್ರಕಟಣೆ ಎಷ್ಟನೆಯ ಆವೃತ್ತಿಯದು, ೯ ಪುಸ್ತಕದ ಬೆಲೆ ಉತ್ತಮ ಪ್ರತಿ, ಸಾಮಾನ್ಯ ಪ್ರತಿ, ೧೦ ಈ ಪುಸ್ತಕ ಇದುವರೆಗೆ ಒಟ್ಟು ಎಷ್ಟು ಪ್ರತಿ ಮುದ್ರಿತವಾಗಿವೆ ೧೧ ವಿಶೇಷಾಂಕಗಳು (ದೊರೆತಿರುವ ಬಹುಮಾನ ಇತ್ಯಾದಿ ವಿವರಗಳೇನಾದರೂ ಇದ್ದರೆ ಅವು)

ಪರಿಷತ್ತಿನ ಕಾರ್ಯವಿವರಗಳ ವರದಿ.

(೧—೪—೧೯೩೩ರಿಂದ ೩೧—೩—೧೯೩೪ರ ವರೆಗೆ)

ಕರ್ಣಾಟಕ ಸಾಹಿತ್ಯ ಪರಿಷತ್ತಿನ ತಾರೀಕು ೧—೪—೧೯೩೩ರಿಂದ ೩೧—೩—೧೯೩೪ರ ವರೆಗಿನ ಕಾರ್ಯವಿವರಗಳ ವರದಿ ಕಳೆದ ದಶಂಬರ [illegible] ರಲ್ಲಿ ಮೈಸೂರಿನಲ್ಲಿ ನಡೆದ ವಾರ್ಷಿಕಾಧಿವೇಶನದಲ್ಲಿ ಸದಸ್ಯರಿಂದ ಅಂಗೀಕೃತವಾಯಿತು ಆ ವರದಿಯ ಪ್ರತಿಗಳನ್ನು ಅಲ್ಲಿಯ ಅಧಿವೇಶನಕ್ಕೆ ಬಂದಿದ್ದ ಸುಮಾರು [illegible] ಸದಸ್ಯರಿಗೆ ವರದಿಗಳ ಪ್ರತಿಯನ್ನು ಅಂಚೆಯ ಮೂಲಕವೂ ಇತರ ಮೂಲಕವೂ ಕಳುಹಿಸಲಾಗಿದೆ ಈಗ ವರದಿಯ ಪ್ರತಿಗಳು ಪರಿಷತ್ತಿನಲ್ಲಿ ಸ್ವಲ್ಪ ಮಾತ್ರ ಮಿಕ್ಕಿವೆ ಮಾರಾಡೆರೂ ಬಯಸಿದಲ್ಲಿ ಕಾರ್ಯದರ್ಶಿಯವರು ಪ್ರತಿಗಳ ಉಳಿದಿದ್ದರೆ ಸಂತೋಷದಿಂದ ಕಳುಹಿಸುವರು

ಸ್ತ್ರೀ ಹತ್ಯೆ

ಗುಂಡಿಟ್ಟು ಓಡಿದನು

ಲಕ್ನೋವಿನ ಚೌಕಿನ ಬಳಿ ಲಕ್ನೋ [illegible] ಡಿವಿಜನಲ್ [illegible] ಹೆಡ್ ಕ್ಲಾರ್ಕರಾದ [illegible] ವಸ್ತಾಂ ಅಲಿ ಖಾನ್ ಎಂಬವರ ಮನೆಯ ಮಾಳದಲ್ಲಿ ಮೊನ್ನೆ ಮಹಾ ಕ್ಷೋಭೆ ಅಲಿಯವರ ಕೆಲಸದವನ ಪತ್ನಿಗೆ ಯಾರೋ ಒಬ್ಬನು ಗುಂಡಿಟ್ಟು ಹೊಡೆದು ಓಡಿದನು ನಾಲ್ಕು ಗುಂಡ ಗಳನ್ನು ಬಿಟ್ಟನೆಂದು ಅವಳ ಮೈಮೇಲಿನ ಗಾಯಗಳಿಂದ ಕಂಡುಬರುತ್ತದೆ ಕೊಲೆಯ ಕಾರಣವು ತಿಳಿದುಬಂದಿಲ್ಲ ಕೊಲೆಗಾರನು ಓಡಿಹೋಗಿರುವನ ಪತ್ತೆ ನಡೆಯುತ್ತಿ

ಫೆಬ್ರುವರಿ ತಾ 20ರಿಂದ — ಮಾರ್ಚಿ ತಾ 15ರ ವರೆಗೆ

ಪುಣ್ಯಕ್ಷೇತ್ರವಾದ ಧರ್ಮಸ್ಥಳಕ್ಕೆ ಯಾತ್ರೆ!

ಅರ್ಧ ಖರ್ಚಿನಲ್ಲಿ ಅತೀ ಮಹತ್ವದ ಯಾತ್ರೆ

ಮಂಗಳೂರು, ಬಂಟವಾಳ, ಚಿಕ್ಕಮಗಳೂರು, ಶಿವಮೊಗ್ಗಾ, ಮೂಡಿಗೆರೆ, ಸಕಲೇಶಪುರ, ಈ ಎಲ್ಲಾ ಸ್ಥಳಗಳಿಂದ ಧರ್ಮಸ್ಥಳಕ್ಕೆ ಅರ್ಧ ಚಾರ್ಜಿನಿಂದ ರಿಟರ್ನ್ ಟಿಕೇಟು ಕೊಡಲಾಗುವುದು.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ದಿ ಕಂಬ್ಲ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.

ಗಾಂಧಿಜೀಯುವರಾರು?

ಭಾರತದ ಪುಣ್ಯಕರ ಸಂಪತ್ತು'

ಡಾ| ಠಾಗೂರರನ್ನುವುದೇನು?

ಲಾಹೋರಿನಲ್ಲಿ ಭಾಷಣ

(ಲಾಹೋರಿನಿಂದ)

ಲಾಹೋರಿನ ಪಂಜಾಬ್ ಸ್ಟುಡೆಂಟ್ಸ್ ಯೂನಿಯನ್ನಿನ್ನು ಕಳೆದ ಶುಕ್ರವಾರ ಡಾ| ರವೀಂದ್ರನಾಥ ಠಾಗೂರರ ಅಧ್ಯಕ್ಷತೆಯಲ್ಲಿ ಬ್ರಿಡಲಾಫ್ ಹೋಲಿನಲ್ಲಿ ಜರಗಿತು ೧೦,೦೦೦ ಜನರು ಉಪಸ್ಥಿತರಾಗಿದ್ದರು

ಡಾ| ಠಾಗೂರರೆಂದರು 'ಅನ್ಯರಿಗೀಯು ಷ್ಟು ಸಮರ್ಥರೂ ಸ್ವತಂತ್ರರೂ ಆಗುವುದರಲ್ಲಿ ಮಾತ್ರ ನಮ್ಮ ಅಭಿಮಾನಕ್ಕಾಸ್ಪದವಿದೆ ದೇಶೀಯ ರೆಕ್ಕೆಗಳು ಫಲಕಾರಿಯಾದರೂ ಪ್ರಾಚ್ಯ ಕಾಲ ಕಾಲದ ಸಂಪತ್ತು, ಕಾಲಕಾಲದ ಜ್ಞಾನಭಂಡಾರ, ನೈತಿಕ ಆಗರಗಳೆ ನಮ್ಮ ಸ್ವಾಧೀನವಿದ್ದು, ಈಗ ದಾರಿದ್ರ್ಯದಿಂದ ಆಲಿಂತರಾಗಿ ವಿದೇಶೀಯ ಗದ್ದೆಗುದ್ದೆಗಳಲ್ಲಾಗುವ ಕೃಷಿಗಾಗಿ ಹಾತೊರೆಯುತ್ತಿರುವ ದೀನಾವಸ್ಥೆಯಲ್ಲಿರುವೆನೆಂದರೆ, ಇದು ನಮಗಲ್ಲ ನಮ್ಮ ಹಿರಿಯರಿಗೆ ಅವಮಾನ ನಾವು ನಮ್ಮ ಭಾಗ್ಯವನ್ನು ಮರೆತು, ಸತ್ಯಕ್ಕೆ ವಿಮುಖರಾಗಿರುವುದರಿಂದ ಹೀಗಾಗಿದೆ' ಎಂದರು

ಗ್ರಾಮ ಜೀವನದ ಕುರಿತಾಗಿ ಠಾಗೂರರೆಂದರು—'ಭಾರತದ ಹೃದಯವು ನಿಶ್ಚಲಿತವಾಗಿದೆ ಭಾರತೀಯರು ಎಚ್ಚರವಾಗಿಲ್ಲ ಮಕ್ಕಳು ತಮ್ಮ ಆತ್ಮದ ಚಿಂತನೆಗೆ ತೊಡಗಿದರೆ ಮಾತ್ರ ಭೂಮಾತೆಯು ಸ್ವತಂತ್ರಳಾಗಲು ಅರ್ಹತೆಹೊಂದುವಳು 'ಯಾವ ದೇಶದಲ್ಲಿನ ಜನಾಂಗಶಕ್ತಿಯ ಅರಿವು ಅದಕ್ಕಾಗದೋ ಆಗ ಆ ದೇಶವು ಸಮುದ್ರ ಮುಟ್ಟಕ್ಕೀರದ ಮಣ್ಣಿನ್ನೆಯಂತೆ ಶಿಕ್ಷಿತ ಅಲ್ಪಸಂಖ್ಯಾತರ ಹದಗೆಟ್ಟ ತೃಪ್ತಿಯಲ್ಲಿದ್ದರು ಈ ತೃಪ್ತಿಯೆಂಬ ದರಿಯ ಮಾಯೆ ಸ್ವಾತಂತ್ರ್ಯವೆಂದರೆ,—ಇವರ ಅರ್ಥದಲ್ಲಿ ಈ ಅಲ್ಪಸಂಖ್ಯಾಕರಿಗೆ ಮಾತ್ರ, ಆದರೆ ನಿಜವಾದ ಸ್ವಾತಂತ್ರ್ಯ ಸಾಮಾನ್ಯನೆಯ ಮಹದ್ವಿಕಾಸ ಜೀವನ್ಮೃತರಾಗಿರುವ ಹಳ್ಳಿಗಳ ಹೃದಯದಲ್ಲಿದೆ ಸ್ವಾತಂತ್ರ್ಯದ ಅರಿವಿಲ್ಲದ, ಅದರ ಆಗತ್ಯವನ್ನು ಕಾಣದ ಸ್ಥಿತಿಯನ್ನು ತಿಳಿಯದವರಿಗೆ ಅದನ್ನು ವಿವರಿಸಿ ಹೇಳುವುದೆಂದರೆ ಮಾನವಗುಣಕ್ಕೆ ವಿಜಾತೀಯ ಬೇಕಾದ ಆದರ್ಶವು ಮಹಾತ್ಮಾಜೀಯವರಲ್ಲಿದೆ ಅವರು ನಮ್ಮ ಪುಣ್ಯ ಸಂಪತ್ತು' ಎಂದರು

ರವೀಂದ್ರರ ಉಪದೇಶ

ಸುಖ—ಶಾಂತಿಯಲ್ಲಿ?

ಬನಾರಿಸ್ ಹಿಂದೂ ಯುನಿವರ್ಸಿಟಿಯಲ್ಲಿ ತಾ ರಲ್ಲಿ ರವೀಂದ್ರರು ಹಿತೋಪದೇಶ ಮಾಡಿದರು ಅವರು ಹೇಳಿದುದೇನೆಂದರೆ—ಭಾರತದಲ್ಲಿ ಇಂದು ಶಿಕ್ಷಣ ಸಿಲಯಗಳು ಸ್ಥಾಪಿತವಾಗಿರುವುದು ಮುಖ್ಯ ಮುಖ್ಯ ನಗರಗಳಲ್ಲಿ ಮಾತ್ರ ಪ್ರಕೃತಿ ಸೌಂದರ್ಯದ ಸಹಾಯದಿಂದ ಮಾನವನಲ್ಲಿ ರೂಪಗೊಳ್ಳುವ ಕೆಲವು ಉತ್ತಮ ಗುಣಗಳಿಗೆ ನಗರಗಳಲ್ಲಿ ಸ್ಥಳವಿಲ್ಲ ಪ್ರಕೃತಿಯನ್ನು ಮರೆತು, ನಿರ್ಜೀವ ಸರ್ವಪುಸ್ತಕಗಳನ್ನು ಹಿಡಿದು ಗೋಳಿಡುತ್ತಿದ್ದೇವೆ ನಗರಗಳು ಶಿಲಾಹೃದಯಿಯಾದ ಮಲತಾಯಿಯಂತೆ' ಮಾನವರ—ಅದರಲ್ಲಿಯೂ ಹುಡುಗರ—ಮನಸ್ಸಿನಲ್ಲಿ ಉತ್ತಮ ಪರಿಣಾಮವನ್ನು ಕೊಡುವ ಶಿಕ್ಷಣ ಬೀಜವನ್ನು ಬಿತ್ತಲು ನಗರಗಳಲ್ಲಿ ಎಲ್ಲರಿಗೂ ಸಾಧ್ಯವಿಲ್ಲ ಪ್ರಕೃತಿಯ ಮಡಿಲೇ ಅದಕ್ಕೆ ತಕ್ಕ ಸ್ಥಾನ ಜಗತ್ತಿನ ಮಾನವವರ್ಗವನ್ನು ಪ್ರೇಮಮಯ ಹೃದಯದಿಂದ ಕಂಡು ಎಲ್ಲರ ಅಭಿವೃದ್ಧಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಕಾರ್ಯಭಾರ ನಡೆಯಿಸುವುದೇ ಉತ್ತಮ ಶಿಕ್ಷಣದ ಪ್ರಥಮ ಲಕ್ಷಣ ವಿಶಾಲ ಜಗತ್ತಿನಲ್ಲಿ ಮಾನವಕೋಟಿಯೆಲ್ಲ ಒಂದೇ ರೀತಿಯಲ್ಲಿಲ್ಲ. ಕೆಲವರ ಬಣ್ಣ ಕಪ್ಪು ಕೆಲವರ ಬಣ್ಣವು ಬಿಳುಪು ಕೆಲವರು ಸುಂದರ ಕಾಯರು, ಕೆಲವರು ಕುರೂಪಿಗಳು ಆದರೂ ಅವರ ಆತ್ಮಜ್ಯೋತಿಯೊಂದೇ ಅವರ

ವಿಮಾನವು ಸುಟ್ಟಿತು!

೮ ಮಂದಿ ಭಸ್ಮವಾದರು!

ಹಳ್ಳಿಗನು ಸುದ್ದಿ ಮುಟ್ಟಿಸಿದನು

ಲಂಡನಿನಲ್ಲಿ ಸಂತಾಪ!

(ಲಂಡನಿನಲ್ಲಿ)

ಪ್ರಖ್ಯಾತ ವೈಮಾನಿಕರಾದ ಫ್ಲೈಟ್ ಲೆಫ್ಟಿನೆಂಟ್ ಹಸ್ಸಿಲ್ಲೋಂಗ್ ಫೀಲ್ಡ್ ಬೀಟ್ಸ್, ಜಾನ್ ಅಲೆಕ್ಸಾಂಡರ್, ಚಾರ್ಲ್ಸ್ ಫೋರ್ಬ್ಸ್ ಮತ್ತಿತರ ಐವರು ವೈಮಾನಿಕರೂ ಒಬ್ಬ ಪ್ರಯಾಣಿಕನ ಮೆಸಿನಾದಲ್ಲಿ ವಿಮಾನದ ಅಪಘಾತಕ್ಕೆ ಸಿಕ್ಕಿ ಭಸ್ಮವಾದರೆಂದು ತಿಳಿದು ಬರುತ್ತದೆ

ಮೆಸ್ಸಿನಾ ಎಂಬಲ್ಲಿನ ನಿರ್ಜನ ಪ್ರದೇಶದಲ್ಲಿ ಗುಡ್ಡಬೆಟ್ಟಗಳ ನಡುವೆ ಹೋಗುತ್ತಿದ್ದ ವಿಮಾನಕ್ಕೆ ಮಂಜು ಎದುರು ಬಂತು ವೈಮಾನಿಕನಿಗೆ ಕಣ್ಣಾಣದೆ ಹೋಯಿತು ಅಷ್ಟರಲ್ಲಿ ಬೆಂಕಿಯೆದ್ದುಬಿಟ್ಟಿತು ವಿಮಾನವು ಸುಟ್ಟು ಒಂದು ಗಟ್ಟದ ಬಳಿ ಬಿದ್ದಿತು ಎಂಟು ಮಂದಿ ಸುಟ್ಟು ಭಸ್ಮೀಭೂತವಾದರು

ಮರುದಿನ ಒಬ್ಬ ಹಳ್ಳಿಗನು ಗಾಡಿಯಲ್ಲಿ ಸವಾರಿ ಮಾಡುತ್ತಾ ಹೋಗುತ್ತಿದ್ದಾಗ, ಬಿದ್ದ ವಿಮಾನವು ಕಂಡುಬಂತು ಆವನು ಲಂಡನಿನ ಏಯರ್ ಮಿನಿಸ್ಟ್ರಿಯವರಿಗೆ ದಾಖಲಾತಿ ಸಮೇತ ತಿಳಿಸಿದನು ರೆಡ್ ಕ್ರಾಸ್ ರಕ್ಷಣಾ ಮಂಡಲವು ಆತ್ತ ತೆರಳಿತು ಮೃತ ಕಳೇಬರಗಳ ಜೋಡಿಸಿದೆ

ಈ ವಾರ್ತೆಯು ಇಂಗ್ಲಾಂಡಿನಲ್ಲಿ ಮಹಾ ಸಂತಾಪಕ್ಕೆಡೆಗೊಟ್ಟಿದೆ ವಿಮಾನದಲ್ಲಿದ್ದವರೆಲ್ಲ ಹೆಸರುವಾಸಿಗಳಾಗಿರುವುದರಿಂದಾಗಿ ಸಂತಾಪವು ಎಲ್ಲೆಲ್ಲೂ ಮನೆಮಾಡಿಕೊಂಡಿದೆ

ಹೃದಯದಲ್ಲಿ ಕಳಿತು ವಿಸ್ತಾರ ತರಂಗವೇಳಿಸಿ—ಪರಮಾತ್ಮನೊಬ್ಬನೇ ಅದನ್ನು ವಿಕಸವಿಸುವುದೇ ಉತ್ತಮ ಶಿಕ್ಷಣದ ಒಂದು ಧ್ಯೇಯ ಜಗತ್ಶಾಂತಿ, ವಿಶಾಲ ಮಾನವಜೀವನದ ಸುಖಸಂಪದಭಿವೃದ್ಧಿ ಇವೇ ಉತ್ತಮ ನಾಗರಿಕತೆಯ ಜೀವಜೀವಾಳ ಶಾಂತಿಯನ್ನು ಸ್ಥಾಪಿಸುವ ಉಪದೇಶಕರಾಗಿಲ್ಲ ಶಾಂತಿಸ್ಥಾಪಕರೂ ನಾವೆ ಶಾಂತಿ ಹಂತಕರೂ ನಾವೇ ಪ್ರಕೃತಿ ಪ್ರತ್ಯಯಗಳ ಸಹಾಯ ಭ್ರಾಂತಿಯಿಂದ ಪರ್ಣಗರೆ ಕಲಹವು ಬಾರದೇ? ಹಾಗೆಯೇ ಮಾನವನು, ತನ್ನ ಸೋದರ ಮಾನವರೊಡನೆ ಸಹಾನುಭೂತಿಯಿಂದ ವರ್ತಿಸಿದರೆ ಶಾಂತಿಯು ಸೃಷ್ಟಿಯಾದಂತೆಯೇ ಬಡವಾಗ್ನಿಯ ಹೃದಯದ ಶಾಂತಿಗೆ ವಿಘ್ನ ಬೀರಿ ಶಾಂತಿಯು ಅಭಿಮಾನ ಮೋಹದಿಂದ ಅದು ನಾಶವಾಯಿತೆಂದು ನಾವು ಭಾವಿಸಿದ್ದೇವೆ ಮೋಹ ವಿಮುಕ್ತರಾಗಿ ಮುಂದೆ ನುಗ್ಗಿದರೆ ಶಾಂತಿಯ ಸುಂದರ ಮೂರ್ತಿಯ ದಿವ್ಯದರ್ಶನವಾಗುತ್ತದೆ

ಆತ್ಮ ಸಂಯಮ, ಸ್ಥಿರಚಿತ್ತ ಇವೇ ಶಾಂತಿ ಸಾಧನ ಮಾರ್ಗಗಳು ಅಂದರೆ ಆಶಾಪಾಶದಿಂದ ಮುಕ್ತನಾಗುವುದೇ ಶಾಂತಿಸಾಧನೆಗೆ ಮುಖ್ಯ ಮಾರ್ಗ ನಾವು ನೋಡುವ ವ್ಯಕ್ತಿಗಳೆಲ್ಲ ಪರಮಾತ್ಮನ ಅಂಶ ಆ ಅಂಶಗಳನ್ನೆಲ್ಲ ಒಂದೂಗೂಡಿಸಿ ಏಕರೂಪದಿಂದ ನೋಡುವುದೇ ಶಾಂತಿಸೃಷ್ಟಿಯ ಗುರಿ ಅಸಂಪೂರ್ಣ ಸೃಷ್ಟಿಯನ್ನು ಸಂಪೂರ್ಣ ಸೃಷ್ಟಿಯಾಗಿ ಪರಿವರ್ತನಗೊಳಿಸುವುದೇ ಶಾಂತಿಯ ಧ್ಯೇಯ ಶಾಂತಿ ಸೃಷ್ಟಿಗೆ ಭಂಗಬರುವುದು ಕಾಲದೇಶಗಳೆಂಬ ವರ್ಣಗೋತ್ರಗಳೆಂಬ ಉಚ್ಚನೀಚವೆಂಬ ಧನಿಕ ಬಡವನೆಂಬ ಭೇದಭಾವವಿದ್ದಾಗಲೇ

ಆತ್ಮವು ಪರಮಾತ್ಮನ ಅಂಶ ಪರಮಾತ್ಮನಲ್ಲಿ ಆ ಅಂಶವನ್ನು ಲೀನವಾಗುವಂತೆ ಮಾಡುವುದೇ ಮಾನವಜನ್ಮದ ಮುಖ್ಯ ಕೆಲಸ ನಮ್ಮ ಶಾಸ್ತ್ರಗಳು ಸಾರುತ್ತಿರುವಂತೆ, ಬ್ರಹ್ಮಚರ್ಯವೇ ಈ ಸಾಧನೆಗೆ ಪ್ರಮುಖ ಅಂಶ ಪರಮಾತ್ಮನಿಗೆ ಹೃದಯದಲ್ಲಿ ಸ್ಥಾನವನ್ನು ಕಲ್ಪಿಸಿ ಸದಾಧ್ಯಾನೈಕತತ್ಪರನಾಗಿ ಪ್ರಕೃತಿ

'ಇಂಡಿಯಾ ಬಿಲ್'

ವೈಸರಾಯರ ಅಧಿಕಾರಗಳು

ಸೂಚನೆಗಳ ಪ್ರಕಟಣೆ

ಪಾರ್ಲಿಮೆಂಟಿನಲ್ಲಿ ಸಲಹೆಗಳು

ಜೊಯಿಂಟ್ ಸಿಲೆಕ್ಟ್ ಕಮಿಟಿಯ ರಿಪೋರ್ಟಿನ ಮೇಲೆ ಬಂದ ಮುಖ್ಯ ಆರೋಪವೆಂದರೆ ಅದು ಗವರ್ನರ್ ಜನರಲರಿಗೆ ವಿಶೇಷಾಧಿಕಾರಗಳನ್ನು ಕೊಟ್ಟು ಭಾರತೀಯರ ಅಧಿಕಾರಗಳನ್ನೆಲ್ಲ ಅವರ ಅಧೀನವಿಟ್ಟಿವಿದೆ ಎಂಬುದು ಈ ಸಂಬಂಧವಾದ ಸಾರ್ವತ್ರಿಕ ಖಂಡನೆಗಳಿಗೆ ಬ್ರಿಟಿಷ ಸರಕಾರವು ಲಕ್ಷ್ಯಗೊಡದೆ ನಿರ್ವಾಹವಿಲ್ಲದಾಯಿತು ಈಗ ಗವರ್ನರ ಜನರಲರ ಅಧಿಕಾರಗಳೇನೆಂದು ಪ್ರಕಟಿಸಿರುತ್ತದೆ

ಅದರಲ್ಲಿ ವಿಶದೀಕರಿಸಿದಂತೆ, ಗವರ್ನರ ಜನರಲರು ನಿರಂಕುಶ ಪ್ರಭುತ್ವದ ಕ್ರಮನಿಯಮಗಳನ್ನು ಮುರಿಯಬಾರದು ಭಾರತೀಯರನ್ನು ನೋಯಿಸುವಂತಹ ನಿರಂಕುಶ ಆಡಳಿತವನ್ನು ಕೈಗೆ ತೆಗೆದುಕೊಳ್ಳಬಾರದ ಬ್ರಿಟನೂ ಭಾರತವೂ ಗೌರವಪೂರ್ವಕವಾದ ಮೈತ್ರಿಯನ್ನು ಬೆಳೆಸಿಕೊಂಡು ಮುಂದರಿಯುವ, ಪ್ರಗತಿಪಥದಲ್ಲಿ ನಡೆಯಲು ಸಾಧಕವಾದ ಆಡಳಿತವನ್ನು ಪ್ರಚಾರಕ್ಕೆ ತರಬೇಕು ಭಾರತವು ದಿನೇ ದಿನೇ ತನ್ನ ಅಂತಿಮೋದ್ದೇಶವನ್ನು ಹೊಂದಲು ಸುಲಭವಾಗುವಂತಹ ಆಡಳಿತ ಕ್ರಮವೇ ಇರಬೇಕು

ಈ ಸಲಹೆಗಳನ್ನು ಗವರ್ನರ್ ಜನರಲರಿಗೆ ಕೊಟ್ಟಂತೆ ಪ್ರಾಂತಿಕ ಗವರ್ನರರಿಗೂ ಕೊಡಲಾಗಿದೆ

ಒಸಾ ಗವರ್ನರ್ ಜನರಲರಿಗೂ ಈ ಸಲಹೆಗಳನ್ನು ನೀಡಲಾಗಿದೆ

ವಾಣಿಜ್ಯ ಗ ಸುಧಾರಣೆಯ, ಶಾಸನವು ಇನ್ನಾವ ರೀತಿಯಿಂದ ತಿದ್ದುಪಡಿಗೊಳಗಾಗುತ್ತದೆಂದು ತಿಳಿದು ಬಿದ್ದಿ

ಗವರ್ನರ ಜನರಲರಿಗೆ ಸೂಚನೆಗಳು—ನ್ಯಾಯವಿಧಾಯಕ ಸಭೆಯಲ್ಲಿ ಬಹುಪಕ್ಷೀಯರ ಬಲವುಳ್ಳ ವ್ಯಕ್ತಿಯ ಸಲಹೆಗಳಿಗನುಗುಣವಾಗಿ ಗವರ್ನರ್ ಜನರಲರ ಶಾಸನಗಳ ರಚನೆಯ ಕೆಲಸಕ್ಕೆ ಕೈಹಾಕಬೇಕು ಬಾರತೀಯರು ತಮ್ಮ ದೇಶ ಸಂರಕ್ಷಣಾ ದೃಷ್ಟಿಯಿಂದ ರಚಿಸುವ ಶಾಸನಾವಳಿಗಳಿಗೆ ಗವರ್ನರ್ ಜನರಲರು ಅನುಮತಿ ಕೊಡಬೇಕು, ಯುನೈಟೆಡ್ ಕಿಂಗ್‌ಡಮ್ ಹಾಗಿರಬೇಕೆಂಬ ದುರುದ್ದೇಶದಿಂದ ಈ ಶಾಸನಗಳನ್ನು ಭಾರತೀಯರು ರಚಿಸಿಕೊಳ್ಳುತ್ತಿದ್ದರೆ ಆಗ ಮಾತ್ರ ಗವರ್ನರ ಜನರಲು ಮಧ್ಯೆ ಕೈಹಾಕಬೇಕು, ಗವರ್ನರ ಜನರಲರು, ಉಪದೇಶಕ ಕೊಡನೆಯೂ ಮಂತ್ರಿಮಂಡಲದೊಡನೆಯೂ ಅಭಿಪ್ರಾಯ ವಿನಿಮಯ ಮಾಡಿಕೊಂಡೇ ಆಚರಿಸುವಂತಾಗಬೇಕು ದೇಶದ ಭದ್ರತೆಯ ಪ್ರಶ್ನೆಯಲ್ಲಿ ಗವರ್ನರ ಜನರಲರು ಭಾರತೀಯರಿಗೆ ಆದಷ್ಟು ಸೌಕರ್ಯಗಳನ್ನೊದಗಿಸಿಕೊಡಬೇಕು, ಹಿಂದೂದೇಶದ ಹೊರಗಣ ದೇಶಗಳಲ್ಲಿ ಹಿಂದೀಯ ಸೈನ್ಯಗಳನ್ನಿಡುವ ವಿಷಯದಲ್ಲಿ ಮಂತ್ರಿಗಳೊಡನೆ ಕೇಳಿಕೊಳ್ಳಬೇಕು

ಅಬ್ದುಲ್ ಘಫರ್ ಖಾನರು

ಭೇಟಿಗಾಗಿ ಸರ್ದಾರ್ ಪಟೇಲರ ತಂತಿ

ಮುಂಬಾಯಿ ಸರಕಾರದ ರಾಜಕೀಯ ಖಾತೆಗೆ ಶ್ರೀ ವಲ್ಲಭಭಾಯಿಯವರು ತಂತಿ ಬಿಟ್ಟು ಸಬರ್ಮತಿ ಜೈಲಲ್ಲಿರುವ ಘಫರ್ ಖಾನರ ಭೇಟಿಗಾಗಿ ತನಗೆ ಅಪ್ಪಣೆ ಕೊಡಬೇಕೆಂದು ಕೇಳಿರುವರು

ಪ್ರತ್ಯಯಗಳಲ್ಲಿಯೂ ಪರಮಾತ್ಮನ ಸ್ವರೂಪವನ್ನು ಕಂಡು ಅನಿರ್ವಚನೀಯ ಆನಂದದಲ್ಲಿ ಭಾಗಹೊಂದಿ ಸಮಾಧಿಸ್ಥನಾಗುವುದೇ ಉತ್ತಮ ಶಿಕ್ಷಣದ ಸಾರಸರ್ವಸ್ವ'

ಎಲ್ಲರೂ ಹುಚ್ಚರಾದರು!

ರೊಟ್ಟಿ ತಿಂದ ಪರಿಣಾಮ

ಸ್ತ್ರೀಯೊಬ್ಬಳ ಕಾಟ!

ಎಲ್ಲರೂ ಆಸ್ಪತ್ರೆಪಾಲಾದರು!

(ಬೆಜವಾಡದಿಂದ)

ಬೆಜವಾಡಾದ ಬಳಿ ಗುಂಡಾಲಾ ಎಂಬ ಹಳ್ಳಿಯಲ್ಲಿ ಡಿ ಪೋತರಾಜು ಎಂಬವರ ಮನೆಗೆ ರಾತ್ರಿಯಲ್ಲೊಬ್ಬಳು ತನ್ನ ಹದಿನಾರು ವರ್ಷ ಪ್ರಾಯದ ಮಗನೊಡನೆ ಬಂದಳು ತಾನು ಪರದೇಶಕ್ಕೆ ಹೊರಟವಳು ನಡುದಾರಿಯಲ್ಲಿ ಕತ್ತಲೆಂದುದರಿಂದ ಮನೆಗೆ ಹೋಗಲಾರೆ ಮಲಗಲು ಸ್ಥಳಕೊಡಿರಿ—ಎಂದು ಕೇಳಿದಳು ಅವರು ಅವಳ ಕೂಲಂಕಷ ವಿಚಾರವನ್ನು ಮಾಡಿ ಅವಳಿಗೂ ಅವಳ ಮಗನಿಗೂ ತಮ್ಮ ಜಗುಲಿಯನ್ನು ಕೊಟ್ಟರು, ರಾತ್ರಿಯಲ್ಲಿ ಎಲ್ಲರೂ ಊಟಮಾಡಿ ಮಲಗಹೋಗುವಾಗ ಆಗಂತುಕ ಸ್ತ್ರೀಯು ತನ್ನ ಗಂಟಿನಿಂದ ರೊಟ್ಟಿಯೊಂದನ್ನು ತೆಗೆದ, ಅದನ್ನು ತಾನು ಒಂದು ಕಡೆಯಲ್ಲಿ ತಯಾರಿಸಿರುವೆನೆಂದೂ ಬಹಳ ರುಚಿಕರವಿದೆಯೆಂದೂ ಹೇಳಿ, ಮನೆಯವರಿಗೆಲ್ಲ ಒಂದೊಂದು ತುಂಡು ಕೊಟ್ಟಳು ಎಲ್ಲರೂ ತಿಂದರು ಸ್ವಲ್ಪ ಹೊತ್ತು ಮಾತುಕತೆ ನಡೆದಾದ ಬಳಿಕ ಎಲ್ಲರೂ ನಿದ್ರಿಸಹೋದರು ಮಧ್ಯರಾತ್ರಿಯಾಗುತ್ತಲೇ ರೊಟ್ಟಿಯನ್ನು ತಿಂದವರಲ್ಲಿ ಒಬ್ಬನು ಬೊಬ್ಬಿಡಲಾರಂಭಿಸಿದ "ತಲೆ ತಿರುಗುತ್ತಿದೆ, ಹೊಟ್ಟೆ ತಳಮಳಿಸುತ್ತಿದೆ" ಎಂದು ಬೊಬ್ಬಿಟ್ಟನು ಅವನು ಸ್ಮೃತಿತಪ್ಪಿ ಹುಚ್ಚನಂತಾಗಿ ಕುಣಿಯಲು ಪ್ರಾರಂಭಿಸಿದ ಅವನ ಆರ್ಭಟವನ್ನು ಕೇಳಿ ನೆರೆಹೊರೆಯವರು ಬಂದು ಬಾಗಿಲು ತೆರೆದ ಒಳಹೊಕ್ಕು ಅವನನ್ನುಪಚರಿಸಿದರು ಅವನ ಶುಶ್ರೂಷೆ ನಡೆಯುತ್ತಿದ್ದಾಗ ಮತ್ತಿಬ್ಬರು ಭ್ರಾಂತರಾದರು ಮತ್ತೆ ಸ್ವಲ್ಪ ಹೊತ್ತು ಕಳೆಯಲು ಮತ್ತೊಬ್ಬನು ಹಾಹಾಕಾರವನ್ನೆಬ್ಬಿಸಿದನು ಹೀಗೆ ಏಳು ಜನರು ಹುಚ್ಚರಾದರು ಇಷ್ಟಾಗುವಾಗ ಆಗಂತುಕ ಸ್ತ್ರೀಯು ತನ್ನ ಹುಡುಗನೊಡನೆ ಎತ್ತಲೋ ಪಾರಿಯಾಗಿದ್ದಳು

ನೆರೆಹೊರೆಯವರು ಈ ಏಳು ಮಂದಿಯನ್ನು ಆಸ್ಪತ್ರೆಗೆ ಕಳುಹಿಸಿದ್ದಾರೆ ಡಿ ಪೋತರಾಜು, ಕೃಷ್ಣಯ್ಯ, ವೈ ನಾರ್ಯಯ್ಯ, ಕೆ ನಬ್ಬಯ್ಯ, ಪಿ ವೆಂಕಯ್ಯ, ರಾಮಮ್ಮ, ಪಿ ಚಂದ್ರಾವತಿ ಎಂಬ ಈ ಏಳು ಮಂದಿಗೂ ಬೆಜವಾಡದ ಅಸಿಸ್ಟಂಟ್ ಸಿವಿಲ್ ಸರ್ಜನರಿಂದ ಚಿಕಿತ್ಸೆ ನಡೆಯುತ್ತಿದೆ

ಪಂಡಿತ ಮಾಲವೀಯರ ಮನವಿ

ಪಂಡಿತ ಮಾಲವೀಯರು ಹೀಗೆ ಬರೆದಿದ್ದಾರೆ—ಜಾತೀಯ ನಿರ್ಣಯವನ್ನೊಳಗೊಂಡ ಇಂಡಿಯಾ ಬಿಲ್ ಬ್ರಿಟಿಷ ಸರಕಾರದೆದುರು ಈಗ ಇಡಲ್ಪಟ್ಟಿದೆ ನ್ಯಾಯವಿಧಾಯಕ ಸಭೆಯು ಅದನ್ನು ಧಿಕ್ಕರಿಸಿ, ಠರಾವು ಮಾಡಲಿದೆ ಕಾಂಗ್ರೆಸ್ಸು ಸುಮ್ಮಗಿದೆ ಇದರಿಂದಾಗಿ ಈ ಎವಾರ್ಡು ಜನರಿಂದ ಸ್ವೀಕೃತವಾದೀತೆಂಬ ಭರವಸೆಗೆ ಪುಟವಿಟ್ಟಂತಾಗಿದೆ

ಈಗ ಅಖಿಲ ಹಿಂದೂಸ್ಥಾನವು ತನ್ನ ಧ್ವನಿಯನ್ನು ಈ ವಿಷಯಕವಾಗಿ ಎತ್ತಿ, ಪರಿಣಾಮಕರವಾಗಿ ಚಳವಳಿಸಬೇಕಾಗಿದೆ ಆದುದರಿಂದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಸದಸ್ಯರೂ, ನಗರ ಸಭೆ ಜಿಲ್ಲಾ ಸಬೋರ್ಡು ಗಳವರೂ, ಇತರ ಸಂಘಗಳವರೂ ಹಿಂದೂ, ಮುಸಲ್ಮಾನ, ಸಿಖ್ಖ, ಪಾರ್ಸಿ, ಇಂಡಿಯನ್, ಕ್ರಿಶ್ಚನ್ ಎಂಬ ಭೇದವಿಲ್ಲದೆ ಎಲ್ಲರೂ ಠರಾವುಗಳನ್ನು ಮಂಜೂರು ಮಾಡಿಕೊಂಡು ಅವುಗಳನ್ನು ತಾ ೨೩ನೇ ದಿನ ಡಿಲ್ಲಿಯಲ್ಲಿ ಜರಗಲಿರುವ ಎಂಟಿ ಎವಾರ್ಡ್ ಕೊನ್ಫರೆನ್ಸಿಗೆ ಕಳುಹಿಸಿಕೊಟ್ಟು ಏಕಕಂಠ ಅಭಿಪ್ರಾಯವನ್ನು ಸರಕಾರಕ್ಕೆ ಕೊಡುವಂತೆ ಸಹಕರಿಸಬೇಕಾಗಿದೆ. ಈ ಪರಿಷತ್ತು ಶ್ರೀ ಸಿ ವೈ. ಚಿಂತಾಮಣಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯವಾದಿಗಳ ನೇತೃತ್ವದಲ್ಲಿ ಜರಗುವುದು

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1. Udipi, 2. Goondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

1934ನೇ ಇಸವಿ ದಶಂಬರ ತಾ. **31**ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಫಶೀಲು:—

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಜಿಸಿದ್ದು	3,50,000– 0– 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774–14– 8
ತೆತ್ತು ಬಂದದ್ದು	2,25,000– 0– 0	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	28,38,227– 7– 8
ಕ್ಷೇಮನಿಧಿಗಳು	2,60,958– 7– 8	ಸರಕಾರಿ ಬದ್ಧತೆಯ ಸ್ವತ್ತುಗಳ ಮೇಲೆ	6,51,559–15– 0
ಠೇವಣಾತಿಗಳು	24,95,829– 2– 8	ಇತರ ಬಾಬುಗಳು	87,411–14–11
ಇತರ ಬಾಬುಗಳು (ಸಂಡ್ರೀಸ್)	1,85,286 9– 9	ನಗದು ಶಿಲ್ಕು	72,480–10– 1
ಚಾಲ್ತಿ ವರ್ಷದ ಮುನಾಫೆ	45,885–10– 8		
	31,62,454–13–11		31,62,454–13–11

ಹಿಂದಿನ ವರ್ಷಗಳಂತೆಯೇ ಹಿಸೆದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ಸ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಕೆನಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Established 1908.

EXCELLENT BONUSES.
1933 Valuation Results.

	WHOLE LIFE	ENDOWMENT	
1925-'30	20	15	Per thousand
1931-'33	23	18	per year.

Every "With Profit" Policy is entitled to "PERMANENT DISABILITY BENEFITS."—No extra premium

PAYS DOUBLE THE ASSURED SUM IN THE EVENT OF DEATH BY ACCIDENT ON PAYMENT OF MINIMUM EXTRA PREMIUM OF RS. 1-8-0 PER RS. 1000 POLICY PER YEAR.

Existing Policy-holders may avail of this benefit.

For particulars apply to:—

KOCHIKAR BROTHERS,
Madras Branch Secretaries.

Offices at:—
Udipi, Mangalore, Bangalore, Calicut, Madras and Bombay.

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ.

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಯಂಟೈನ್, ಆರೋರಾ ಕ್ರೀಮ್, ಕ್ರಿಮೊರ್ ಲಿಮೋನಿಸ್, ಕರ್ಣಾಟಕ ರೋಸ ಪೊಮೇಡ್.
ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೆನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ:—(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್—(2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ: ೨ ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. ೩-13-0

P
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Kochikar Brothers

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯ ಮಂಗಳೂರು ತಾ. ೧ನೇ ಶುಕ್ರವಾರ ಮಾರ್ಚಿ ೧೯೩೫ (1 – 3 '35) ಸಂಚಿಕೆ ೯



ಡಿಲ್ಲಿಯ ನಗರ.

ಡಿಲ್ಲಿ ನಗರದ ಪುನರ್ವ್ಯವಸ್ಥೆಯಾದಂದಿನಿಂದ ಅಲ್ಲಿನ ಮನೆಮಂದಿರಗಳ ರಚನೆಯಲ್ಲಿ ನೂತನ ಉತ್ಸಾಹವು ಕಂಡು ಬರುತ್ತಿದೆ
ಈ ಛಾಯಾಚಿತ್ರವನ್ನು ಡಿಲ್ಲಿ ನಗರದ ಬಳಿಯಿರುವ ಜುಮ್ಮಾ ಮಸೀದಿಯಿಂದ ತೆಗೆಯಲಾಯಿತು
ಸುಂದರ ಕಟ್ಟಡಗಳಿಂದಲೂ ವಿಶಾಲ ಪಥಗಳಿಂದಲೂ ನಗರವು ಸುಶೋಭಿತ
ವಾಗಿರುವುದನ್ನು ಕಾಣಬಹುದು

The Canara Banking Corporation Udipi, Ltd.

Head office:—UDIPI, S K. (Incorporated in British India) ESTD. 1906.

Branches:—1 Udipi, 2 Coondapoor, 3. Car Street, Mangalore, 4. Shimoga, 5. Madras, 6 Bunder Mangalore, 7 Mercara.

1934ನೇ ಇಸವಿ ದಶಂಬರ ತಾ. 31ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು —

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಪಿಸಿದ್ದು	3,50,000- 0- 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774-14- 8
ತೆತ್ತು ಬಂದದ್ದು	2,25,000- 0- 0	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	23,33,227- 7- 3
ಕ್ಷೇಮನಿಧಿಗಳು	2,60,953- 7- 8	ಸರಕಾರಿ ಬದ್ಧತೆಯ ಸ್ವತ್ತುಗಳ ಮೇಲೆ	6,51,559-15- 0
ಠೇವಣಾತಿಗಳು	24,95,329- 2- 3	ಇತರ ಬಾಬುಗಳು	37,411-14-11
ಇತರ ಬಾಬುಗಳು (ಸಂಡ್ರೀಸ್)	1,35,286 9- 9	ನಗದು ಶಿಲ್ಕು	72,480-10- 1
ಚಾಲ್ತಿ ವರ್ಷದ ಮುನಾಫೆ	45,885-10- 3		
	31,62,454-13-11		31,62,454-13-11

ಹಿಂದಿನ ವರ್ಷಗಳಂತೆಯೇ ಓಹಿದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು
ಇಲ್ಲಿಯ ವರೆಗಿನ ನಮ್ಮ ಪಿಲ್ಲಿಯನರ್ ಮತ್ತು ಕಂಪನಿಯ ಹುಳು
ಕಡ್ಡಿಯ ಮುಲಾಮಿನ "ಕೀಗ್ ಎಂಡ್ ಕ್ರೀನ್" ಎಂಬ ವ್ಯಾಪಾರದ
ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು
ಅಪೇಕ್ಷಿಸುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ
ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Established 1908.

EXCELLENT BONUSES.
1933 Valuation Results

	WHOLE LIFE	ENDOWMENT	
1925-'30	20	15	Per thousand
1931-'33	23	18	per year

Every "With Profit" Policy is entitled to "PERMANENT DISABILITY BENEFITS"—No extra premium
PAYS DOUBLE THE ASSURED SUM IN THE EVENT OF DEATH BY ACCIDENT
ON PAYMENT OF MINIMUM EXTRA PREMIUM OF RS 1-8-0 PER RS 1000 POLICY PER YEAR

Existing Policy holders may avail of this benefit. For particulars apply to —

KOCHIKAR BROTHERS,
Madras Branch Secretaries

Offices at:—
Udipi, Mangalore Bangalore, Calicut, Madras and Bombay

Karnataka Chemical and Pharmaceutical Works, Ltd., Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!
ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು,
ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.
ಆದುದರಿಂದ ಈ ಸಾಬೂನನ್ನೇ ಉಪಯೋಗಿಸಿರಿ ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!
ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಆರೋರಾ ಕ್ರೀಮ್, ಕ್ರಿಮೊರ್ ಲಿಮೊನಿಸ್, ಕರ್ಣಾಟಕ ರೋಸ ಪೊಮೇಡ್.
ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.
ಹೆಡ್ ಆಫೀಸು ಮತ್ತು ಕಾರಖಾನೆ –ಉಡುಪಿ, ದಕ್ಷಿಣ ಹಿಂದೂಸ್ಥಾನ.
ವ್ಯಾಪಾರದ ಡಿಪೊ –(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2
ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ ಟೌನ್ ಮದರಾಸು.
ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ: ೩ ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ 2-13-0

P
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the
THE BOMBAY LIFE
Kochikar Brothers,

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ

ಪುಸ್ತಕ ೨೯. ಮಂಗಳೂರು ತಾ. ೧ನೇ ಶುಕ್ರವಾರ ಮಾರ್ಚಿ ೧೯೩೫ (1-3 '35) ಸಂಚಿಕೆ ೯



ಡಿಲ್ಲಿಯ ನಗರ.

ಡಿಲ್ಲಿ ನಗರದ ಪುನರ್ವ್ಯವಸ್ಥೆಯಾದಂದಿನಿಂದ ಅಲ್ಲಿನ ಮನೆಮಂದಿರಗಳ ರಚನೆಯಲ್ಲಿ ನೂತನ ಉತ್ಸಾಹವು ಕಂಡು ಬರುತ್ತಿದೆ ಈ ಛಾಯಾಚಿತ್ರವನ್ನು ಡಿಲ್ಲಿ ನಗರದ ಬಳಿಯಿರುವ ಜುಮ್ಮಾ ಮಸೀದಿಯಿಂದ ತೆಗೆಯಲಾಯಿತು ಸುಂದರ ಕಟ್ಟಡಗಳಿಂದಲೂ ವಿಶಾಲ ಪಥಗಳಿಂದಲೂ ನಗರವು ಸುಶೋಭಿತವಾಗಿರುವುದನ್ನು ಕಾಣಬಹುದು.

ಚಕ್ರ

(All Rights Reserved)

ಟ್ಯೈಲು ಮ್ಯೈಲು ಕ್ರೈಲ ।
ಹೋಯಿತಪ್ಪ ಸುಯ್ಲ ।
ದೇಶಕ್ಕೊಂದು ಸ್ಟೈಲು ।
ಹೋಯಿತಪ್ಪ ಬೈಲು ।
ನಮ್ಮ ಪ್ರಾಣ ಕ್ರೈಲ ।

ಟ್ಯೈಲು ಮ್ಯೈಲು ಕ್ರೈಲು ಓದಿ ದೇಶದ ಸ್ಟೈಲು ಹೆಚ್ಚೆಂದು ಭಾವಿಸಿದಂತೆ ತಮ್ಮ ಬೈಲುಗಳನ್ನು ಕಳಕೊಂಡು ಸುಯ್ಲು ಬಿಟ್ಟು, ಭಾರತದ ಪ್ರಾಣವೇ ಕ್ರೈಲ್ ಆಗಿದೆಯೆಂಬ ಕೂಗು ಮೊನ್ನೆ ಶಾಸನಸಭೆಯಲ್ಲಿ ಕೇಳಿಸಿದೆ.

ಕ್ರೈಲ್ವೆಯ ವೆಚ್ಚದಲ್ಲಿ ಕಡಿತವನ್ನುಂಟುಮಾಡದೇಕೆಂದು ಸಭಿಕರು ಚಂಡಿಹಿಡಿದರು. ಆದರೆ ಸರಕಾರದವರು ಆಡಪಡಿಸಿದರು. ಅಂತೂ ಸಭಿಕರ ಹಟಯೋಗವು ಗೆದ್ದುಬಿಟ್ಟಿತು.

ಹಿಂದೂದೇಶಕ್ಕೆ ಕ್ರೈಲನ್ನು ತಂದು ದೇಶೋದ್ಧಾರವನ್ನು ಮಾಡಿರುವವೆಂದು ಇಷ್ಟು ಕಾಲವೂ ಹೇಳುತ್ತಿದ್ದ ಬ್ರಿಟಿಷರಿಗೆ ಶ್ರೀ ಭುಲಾಭಾಯಿ ದೇಸಾಯಿಯವರು ಬಹು ಕಹಿನುಡಿಗಳ ಉತ್ತರವಿತ್ತರು.

ಕ್ರೈಲ್ವೆಯು ಹಿಂದೂದೇಶದ ಹಿತಕ್ಕೆಂದು ಹೇಳುವುದೆಲ್ಲ ಪೊಳ್ಳು ಮಾತು. ಕ್ರೈಲನ್ನು ಸ್ಥಾಪಿಸಿಕೊಂಡುದರಿಂದ ಭಾರತೀಯರಿಗೆ ಆಗುವುದಕ್ಕಿಂತಲೂ ಹೆಚ್ಚಿನ ಲಾಭ ನಿಮಗಾಗಿದೆ. ನಿಮ್ಮ ರಾಜಕೀಯ ಆಶಯಗಳು ಅವುಗಳ ಸಹಾಯದಿಂದ ಕೈಗೂಡುವುವು. ಸೈನ್ಯಗಳನ್ನು ತಂದು ಹಿಂದೂದೇಶದಲ್ಲಿ ನೆಡುವ ನಿಮ್ಮ ಯೋಗ್ಯತೆಯೂ ಆ ಕ್ರೈಲಿನಿಂದಲೇ ನಿಮಗೆ ಬಂತು. ದೇಶವು ದೊಡ್ಡದಾಯಿತು. ಇಂಗ್ಲೆಂಡಿನಲ್ಲಾದ ವಸ್ತು ಒಡವೆಗಳನ್ನು ಹಿಂದೂದೇಶಕ್ಕೆ ತಂದು ಹಾಕಿರುವ ನಿಮ್ಮ ಆಟಕ್ಕೆ ಕ್ರೈಲು ಬಹು ಸಹಾಯವಿತ್ತಿತು.

೮೦೦ ಕೋಟಿ ರೂಪಾಯಿಗಳನ್ನು ಕ್ರೈಲಿನಲ್ಲಿಟ್ಟಿರುವಿರಿ. ಯಾರಿಗಾಗಿ? ನಿಮಗಾಗಿ! ವರ್ಷಕ್ಕೆ ೨೦೦ ಕೋಟಿ ರೂಪಾಯಿಗಳು ವೆಚ್ಚವಾಗುತ್ತಿವೆ. ಯಾರ ಹಣ?—ಇಲ್ಲಿಯ ಕಂದಾಯ ಕೊಡುವವನ ಹಣ! ಆ ಹಣ ನಿಮ್ಮದಲ್ಲ! ನೀವೇನೋ ಕ್ರೈಲಾಸ್ ಹಿಡಿದುಕೊಂಡು ಊರಿಗೆ ಹೋಗಿ ಬಿಟ್ಟುಬಿಡುವಿರಿ ಎಂದರು.

ದೇಸಾಯಿಯವರ ಮಾತಿನ ಚಕ್ರ ಇನ್ನೂ ಬಲವತ್ತರವಾಗಿ ತಿರುಗಿತು. ನಿಮಗೆ "ನಮ್ಮ ಸಹಿಷ್ಣುತೆ ಬೇಕಂತೆ. ಎಂತಹ ಸಹಕಾರ? ನಿಮ್ಮಗೆ ಸಲಾಂ ಹೊಡೆದು "ನಿಮ್ಮಲ್ಲೇ ಬುದ್ಧಿಯು ಭಂಡಾರವಿದೆ. ತಾವು ಹೇಳಿದಂತೆ ನೀವು ಕೇಳಬೇಕು" ಎಂದು ನಾವು ಹೇಳಬೇಕೇ? ಈಗ ಕ್ರೈಲ್ವೆಯ ಅಧಿಕಾರ ನಮ್ಮ ಶಾಸನ ಸಭೆಗೆ ಕೊಡದಿರೆಂದರೆ ನೀವು ಅದರ ಅಧಿಕಾರವನ್ನೆಲ್ಲ ನಿಮ್ಮ ಮುಷ್ಟಿಯಲ್ಲೇ ಇಟ್ಟುಕೊಳ್ಳಬೇಕೆಂದು ಹವಣಿಸುತ್ತಿರುವಿರಿ" ಎಂದರು.

ಶ್ರೀ ಭುಲಾಭಾಯಿಯವರ ವಾಗ್ವೈಖರಿ—ವಾಗ್ಶಕ್ತಿಗಳನ್ನು ಕಂಡು ಶಾಸನಸಭೆಯವರೆಲ್ಲರೂ ತಲೆದೂಗಿದರು. ಯೂರೋಪಿಯನರೆಲ್ಲ ಅನೇಕರು ತಲೆ ದೂಗಿದರು.

ಸಿಡಿಲು ಬಡಿದಂತಾಯಿತೇನೋ ಈ ಸದಸ್ಯರಿಗೆ! ಒಬ್ಬನಾದರೂ ಮಾತನಾಡಲಿಲ್ಲ ಸ್ವಾಮಿ. ಒಬ್ಬರು ಇನ್ನೊಬ್ಬರ ಮುಖವನ್ನು ನೋಡುತ್ತಿದ್ದರೇ ವಿನಹಾ ಒಬ್ಬರೂ ಪಿಟ್ಟೆಂದು ನುಡಿಯಲಿಲ್ಲ.

ಭುಲಾಭಾಯಿಯವರು ಮಾತನಾಡುವುದನ್ನು ನಿಲ್ಲಿಸಿದೊಡನೆ ನ್ಯಾಯವಿಧಾಯಕ ಸಭೆಯ ಒಳಗೆಲ್ಲ ಮೌನವು ತಲೆದೋರಿತು. ಅಲ್ಲಿಯ ಕಂಭವು ಕೂಡಾ ಉಸಿರೆತ್ತಲಿಲ್ಲ.

ಅಷ್ಟರಲ್ಲಿ ಒಬ್ಬರೆಂದರು—"ಈ ಮಾತು ಅಪ್ರಾಸಂಗಿಕವಲ್ಲವೇ ಸ್ವಾಮಿ. ಹೀಗೂ ಮಾತನಾಡುವುದೇ?"

ಒಡನೆ ಸರ್ ಎನ್. ಎನ್. ಸರ್ಕಾರರವರು ಎದ್ದು "ಇಲ್ಲಿ ಪ್ರೆರಿದಪ್ಪಿದ ನುಡಿಗಳಿಗೆ ಸ್ಥಾನವಿಲ್ಲ. ಆಗಿಕ್ಕ ಎದ್ದುದನ್ನೇ ನುಡಿಯಬೇಕು" ಎಂದು ಕೋಟಿಯನ್ನು ಕಿತ್ತಳೆ ಹಣ್ಣಿನಂತೆ ಮಾಡಿದರು.

ಭುಲಾಭಾಯಿಯವರು ಕುಟಿಲ ನಗೆಯಿಂದೆದ್ದು "ನೀವು ಹೇಳುವುದೆಲ್ಲ ಅರ್ಥವಾಗುತ್ತದೆ ಮಹಾರಾಯರೇ. ಇದು ಅಪ್ರಾಸಂಗಿಕ ವಿಚಾರವಲ್ಲ. ನಿಮಗೆ ಅಪ್ರಾಸಂಗಿಕವೆಂದು ಕಂಡುಬಂದರೂ ನಮಗೆ ಪ್ರಾಣಕ್ಕೆ ಬಂದಿದೆ ಈ ಕ್ರೈಲ್ವೆಯ ನಾಟಕ" ಎಂದರು.

ಅಷ್ಟಾಗುವಾಗ ಮಾನ್ಯ ಅಧ್ಯಕ್ಷರು ಗಡಿಯಾರದ ಮೊಗ ನೋಡಿದರು. ನೋಡ ಪುದೇನು? ಸಣ್ಣ ಮುಳ್ಳು ೧ರಲ್ಲಿ ನಿಂತು ದೊಡ್ಡ ಮುಳ್ಳು ೧೨ರಲ್ಲಿ ನಿಂತಿದ್ದಿತು. ಅವರಿಗೆ ಆಶ್ಚರ್ಯವಾಯಿತು.

"ಇನ್ನು ಊಟಮಾಡ ಹೋಗುವ. ಬಾಕಿಯೆಲ್ಲಾ ಮತ್ತೆ ಮಾತನಾಡುವ" ಎಂದರು. ಎಷ್ಟರವರೂ ಹಸಿವೆಯಲ್ಲವೇ? ಎಲ್ಲರೂ ಎದ್ದರು. ಊಟಮಾಡಿ ಬಂದ ಮೇಲೆ ನಮ್ಮ ಭುಲಾಭಾಯಿಯವರು ಸುಮ್ಮನಾದರೇ? ಹೊಟ್ಟೆ ತುಂಬ ಹೊಡೆದುಕೊಂಡು ಬಂದ ಅವರು ಎದೆಯನ್ನೆತ್ತಿಟ್ಟು ಹೇಳಿದರು. "ಸರ್ ಎನ್. ಎನ್. ಸರ್ಕಾರರವರು ನನ್ನ ಮಾತು ಅಪ್ರಾಸಂಗಿಕವೆಂದು ಹೇಳಿದರಲ್ಲ ಹೇಗೆ? ಏಕೆ? ಕಳೆದ ವರ್ಷ ಇದೇ ಕ್ರೈಲ್ವೆಯ ವೆಚ್ಚ ಮೊದಲಾದ ಕಡಿತದ ಅಂತಹ ಚರ್ಚೆಯಾಗಲಿಲ್ಲವೇ? ಆಗ್ಗೆ ಸರ್ಕಾರವು ಅದಕ್ಕೆ ಒಪ್ಪಲಿಲ್ಲವೇ? ಈ ವರ್ಷ ಮಾತ್ರ ಹೊಸ ಕಾನೂನೇ? ನಿಮ್ಮ ಉತ್ತರವೇನು?" ಎಂದರು. "ಸರಿ ಸರಿ" ಎಂಬ ಸಭಿಕರ ಮಾತಿನೊಡನೆ ಕೈಚಪ್ಪಾಳೆಯಾಯಿತು.

ಮಿ. ಜಿನ್ನಾರವರು ಎದ್ದು "ನಾನು ದೇಸಾಯಿಯವರನ್ನು ಪುಷ್ಟೀಕರಿಸುತ್ತೇನೆ" ಎಂದರು. ಸಾಯ್ಬನು ಸಾಯ್ಬನನ್ನೇ ಪುಷ್ಟೀಕರಿಸುತ್ತಾನೆ.

'ಸಾಯ್ಬ'.

ಆರೋಗ್ಯಕ್ಕೆ ಓವಲ್ಟಿನ್ ಎಂಬುದು ಅತ್ಯಮೋಘ ಪಾನಕವೆಂದು ಸರ್ವ ವೈದ್ಯರೇ ಶಿಫಾರಸು ಮಾಡಿರುತ್ತಾರೆ. ನಿಮ್ಮ ಮನೆಯಲ್ಲಿ ಓವಲ್ಟಿನ್ ನಿತ್ಯದ ಪಾನಕವನ್ನಾಗ ಮಾಡಿರಿ. ನಿಮ್ಮ ಕುಟುಂಬದ ಪ್ರತಿ ಒಂಬರಿಗೆ ಅದರ ಅಸದೃಶವಾದ ದೇಹವರ್ಧಕ ಶಕ್ತಿಯ ಪ್ರಯೋಜನವು ದೊರೆಯಲಿ. ಸರಿಯಾದ ದೇಹಪೋಷಣೆಯಿಂದಲೇ ಆರೋಗ್ಯವು ಹೊಂದಿಕೊಂಡಿದೆಯೆಂಬುದು ತಿಳಿದಿರಲಿ. ದೇಹ, ನರ, ಮೆದುಳುಗಳನ್ನು ಪುಷ್ಟಿಯುಳ್ಳದಬೇಕಾದರೆ 'ಓವಲ್ಟಿನ್' ಎಂಬ ಅನುಪಮ ಪಾನಕವೇ ಅವಶ್ಯ. ಓವಲ್ಟಿನ್ ರುಚಿಕರವಾಗಿದೆ.

ನಿಮ್ಮ ಮನೆಯಲ್ಲಿ "ಓವಲ್ಟಿನ್"ನನ್ನು ಉಪಯೋಗಿಸಿದರೆ ನಿಮ್ಮ ಕುಟುಂಬಕ್ಕೆ ನೀವು ಅತ್ಯುತ್ಕೃಷ್ಟ ಆಹಾರವನ್ನೊದಗಿಸಿಕೊಟ್ಟಂತಾಗುತ್ತದೆ. ಇದನ್ನು ಪ್ರಕೃತಿಜನ್ಯ ದ್ರವ್ಯಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆಹಾಲು, ಮೊಟ್ಟೆ ವಿಶಿಷ್ಟವಾಗಿ ತಯಾರಿಸಿದ ಕೋಕೋಗಳಿಂದ ಇದು ಉತ್ಪನ್ನವಾಗಿರುವುದು. ದೇಹಾರೋಗ್ಯಕ್ಕಾಗಿ ಇದನ್ನು ಸರ್ವದಾ ಕುಡಿಯಿರಿ. ಆರೋಗ್ಯ, ಶಕ್ತಿ, ಮತ್ತು ಚೈತನ್ಯಗಳನ್ನು ವೃದ್ಧಿಸಿಕೊಳ್ಳಿರಿ. ಯಾವಾಗಲೂ ತಾಜಾ "ಓವಲ್ಟಿನ್" ನನ್ನೇ ಪಡೆಯಿರಿ. ನಕಲಿಗಳನ್ನು ಬಹಿಷ್ಕರಿಸಿರಿ. ಅವು ಗುಣದಲ್ಲೂ ಕ್ರಯದಲ್ಲೂ ತಾಜಾ "ಓವಲ್ಟಿನ್"ಗೆ ಸರಿಸಾಟಿಯಾಗವು.

'ಓವಲ್ಟಿನ್' ಟೋನಿಕ್, ಆಹಾರ, ಪಾನಕ.

OVALTINE

ಮಿದುಳು, ನರ, ದೇಹಗಳನ್ನು ರಚಿಸುತ್ತದೆ

ಕಲ್ಯಾಣಿಯಲ್ಲಿ ಹಸ್ತಸ್ಪರ್ಶವಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್:—ಜೇಮ್ಸ್ ರೈಟ್ 85 ಎ ರಿಪನ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮುದ್ರಾಸು

OV/309

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ. ಕುಟುಂಬ ಪಾರಂಪರ್ಯದ ಮತ್ತು ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲ 1ಕ್ಕೆ ರೂ 2—8—0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

THE

Kanara Enterprise Ltd,
PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,
ಪುತ್ತೂರು.

Authorised capital ಅಧಿಕೃತ ಮೂಲಧನ	2,00,000—0—0
Subscribed capital ಚಂದಾ ಆಪೀಸಿದ್ದು	34,930—0—0
Paid-up capital ತೆತ್ತು ಬಂದದ್ದು	30847—8—0

Fixed, Current, Cumulative and Savings Banks deposits are accepted at most favourable rates.

All kinds of Banking business undertaken
Shares are now available.

For further particulars apply to:—

Puttur,
Dated 15—2—1935.

G. N. Lakshman Pai,
Secretary.

ಪತ್ರಿಕಾ ಪ್ರಪಂಚ:

ಆದರ್ಶಗಳ ಮಹತ್ವ. ಲೀಗ್ ಆಫ್ ನೇಶನ್ಸ್‌ನ ವ್ಯಾಪಕತೆ. ವಿನೋದವೆಂದರೇನೆಂದು ಕಲಿಸುವುದಿಲ್ಲ! ಲೇಬರ್ ಮತ್ತು ಕಮ್ಯೂನಿಜಮ್. ಸಂಸ್ಕೃತದ ಆವಶ್ಯಕತೆ. ಹಿಂದೂದೇಶದಲ್ಲಿನ ಸಿನೆಮಾ ಸಮಸ್ಯೆ. ಪೂರ್ವಕ್ಕೆ ಮೊದಲು ಬಂದವರಾರು?

ಆದರ್ಶಗಳ ಮಹತ್ವ

ಡಾ॥ ಎಲ್ವಿನ್ ಮಾರ್ಗನ್ ಎಂಬವರು ಹೀಗೆ ಬರೆಯುತ್ತಾರೆ: "ಮಾನವರು ಕೈಕೊಳ್ಳುವ ಪ್ರತಿಯೊಂದು ಅದ್ಭುತಕಾರ್ಯವೂ ಜಗತ್ತಿನಲ್ಲಿಯ ಯಾರಾದರೊಬ್ಬನ ಆದರ್ಶದ ಪರಿಣಾಮವೇ ಆಗಿರುತ್ತದೆ. ಈ ಭಾವನೆಯು ಅನಾದಿಕಾಲದಿಂದಲೂ ಜನದಲ್ಲಿತ್ತು. ಅದು ಈಗಲೂ ಇದೆ. ಯೋಚನೆ ಅಥವಾ ಅಭಿಪ್ರಾಯಗಳೆಂಬವುಗಳಿಗೆ ಜಡಜಗತ್ತಿನಲ್ಲಿ ಸಮಾಪಕವುದುದು ಯಾವುದೂ ಇಲ್ಲ. ಮನೆಮಂದಿರಗಳು ಬಿದ್ದುಹೋಗುತ್ತವೆ, ರಾಷ್ಟ್ರಗಳು ಬೀಳುತ್ತವೆ, ವಿಭುತ್ವವೈಭವವು ನೀರುಪಾಲಾಗಿ ಹೋಗುತ್ತದೆ. ಒಂದು ಕಾಲದ ಉನ್ನತ ರಾಷ್ಟ್ರವು ಬಂತೆಸ್ಸೆಂದು ಕಾಲದಲ್ಲಿ ಬಿದ್ದು ಹತವಾಗುತ್ತದೆ. ಆದರೆ, ಮಹದಭಿಪ್ರಾಯಗಳು, ಆದರ್ಶಗಳು ಉಳಿಯುತ್ತವೆ. ಅದು ಪರಂಪರಾಗತವಾಗಿ ಬಳ್ಳಿನಿಂದ ಇನ್ನೊಬ್ಬನಿಗೆ ಬೋಧಿಸಾರವಾಗಿ ಹೋಗುತ್ತದೆ. ಅಭಿಪ್ರಾಯಗಳೆಂಬವು ಜೀವನದ ಜೀವಾಳ, ಕ್ರಾಂತಿಯು ಕಲಿಯೋದೆ ಅಥವಾ ಅದು ತಲೆದೋರದಿರದೇ! ಕಾಲಕಾಲದ ಸತ್ಯವಿಷಯಗಳನ್ನಾಧರಿಸಿ ಸಂಸ್ಕೃತಿಯು ರೂಪಿತಯಾಗುತ್ತದೆ. ನಾವು ಅದ್ಭುತ ಹಾದಿಯಲ್ಲಿದಿದರೆ ಬಹುದು ಅನ್ಯಾಯ ಪಥದಲ್ಲಿ, ಅನಪೇಕ್ಷಣೀಯ ಮಾರ್ಗದಲ್ಲಿ ಹೆಜ್ಜೆಯಿಡುತ್ತಿರಬಹುದು. ಆದರೆ ಮುಂದಿನ ರಚನೆಯು ಕಾಲವು ಬರುವಾಗ ನಮ್ಮಲ್ಲಿರುವ ಹಿತದ ಪರಿಣಾಮದಿಂದ ನಮ್ಮ ಆಶಯಗಳು ಈಡೇರುವವು. ಆಧುನಿಕ ಪ್ರಜಾಸತ್ತಾತ್ಮಕವಾದವೂ ಉತ್ತಮ ಸಂಸ್ಕೃತಿಗಳ ನಮ್ಮ ಹಂಬಲವೂ ಮಹದಭಿಪ್ರಾಯಗಳ ಮೇಲೆ ಹೊಂದಿಕೊಂಡಿದೆ. ಅಭಿಪ್ರಾಯದ ಸಾರವನ್ನು ಪಡೆದುಕೊಳ್ಳುವುದು ಸಹಜವಾಗಿಯೂ ಮಹಾ ಶಕ್ತಿಯಾಗಿದೆ.

'Journal of the N. E. A. America'

ಲೀಗ್ ಆಫ್ ನೇಶನ್ಸ್‌ನ ವ್ಯಾಪಕತೆ

ಮಿ॥ ಒಸ್ಕರ್ ನ್ಯೂಫೇಂಗ್ ಎಂಬವರು ಹೀಗೆ ಬರೆಯುತ್ತಾರೆ: ಲೀಗ್ ಆಫ್ ನೇಶನ್ಸ್‌ಗೆ ಕಡ್ಡವು ಸೇರದು ಬರೆಂದ ಈಗ ಜನಾಂಗ ಸಭೆಯ ವಿಶ್ವವ್ಯಾಪಕತೆಯು ಸ್ಪಷ್ಟಗಿನವರಿಗೆ ತಿಳಿದುಬರುವುದು. ಇನ್ನುಳಿದುವು ಮಳು ರಾಷ್ಟ್ರಗಳು ಯುನೈಟೆಡ್ ಸ್ಟೇಟ್ಸ್ ಬ್ರೆಜಿಲ್ ಕೋಸ್ಟರಿಕಾ, ಮೆಕ್ಸಿಕೋ, ಈಜಿಪ್ಟ್, ಜರ್ಮನಿ ಮತ್ತು ಆಫಘಾನಿಸ್ತಾನ ಈ ರಾಷ್ಟ್ರಗಳು ಸಭೆಗೆ ಸೇರಿದಾಗ ಕೊನೆಯ ಎರಡು ರಾಷ್ಟ್ರಗಳು ಸರ್ವಶ್ರೀ ಸಭೆಯಲ್ಲಿವೆ ಎನ್ನಬಹುದು. ೧೯೩೪ರ ಜನವರಿ ೩೧ರ ವರೆಗೆ ಜಪಾನು ಸದಸ್ಯನಾಗಿರುವುದು. ೧೯೩೫ನೇ ಇಸವಿ ಎರಡು ತಿಂಗಳು ಜರ್ಮನಿಯು ಸದಸ್ಯತನದಲ್ಲಿರುವುದು, ಇವುಗಳು ಜನಾಂಗ ಸಭೆಯಿಂದ ತಮ್ಮ ಸಂಬಂಧವನ್ನು ಹಿಂತೆಗೆಯುವ ಅವಧಿಯು ಅಲ್ಲಿ ಮುಗಿಯುವುದು. ಉಳಿದ ಐದು ರಾಷ್ಟ್ರಗಳು ಜನಾಂಗಸಭೆಯ ಪೂರ್ವದ ಸದಸ್ಯರು. ಅಮೇರಿಕಾಕ್ಕೆ ಆಮಂತ್ರಣವು ಹೋಗಿದೆಯಾದರೂ ಅದು ಸಭೆಗೆ ಸೇರುವುದಿಲ್ಲ.

"The World Unity"

ನೀತಿಯ ಪ್ರಸಾರ.

ಆಧುನಿಕ ತರುಣರಲ್ಲಿ ನೀತಿಯ ಕ್ರಾಂತಿಯೊಂದು ತಲೆಯೆತ್ತಿದೆ. ಅದು ಎತ್ತ ತಿರುಗುವುದೆಂದು ಯಾರೂ ಹೇಳಲಾರರು. ಪ್ರೊ॥ ಗಿಲ್ಬರ್ಟ್ ಮರೇ ಎಂಬವರು ಈ ವಿಷಯವಾಗಿ ಲೇಖನವೊಂದನ್ನು ಬರೆದಿರುವರು. ಅವರೆನ್ನುವುದೇನೆಂದರೆ "ಈಗಿನ ತರುಣರು ಹಳೆಯ ರೀತಿ ನೀತಿಗಳ ಮೇಲೆ ಉರಿದೆದ್ದಿರುವರು. ಅದರ ಪರಿಣಾಮವು ಹಾನಿಕಾರಕವಾಗಲಾರದು. ಇದರಲ್ಲಿ ಆಶ್ಚರ್ಯಕರವೇನಾದರೂ ಇಲ್ಲ. ಯಾವ ಕಾಲದಲ್ಲೂ ತರುಣರ ಕ್ರಾಂತಿಯು ಇದ್ದೇ ಇರುವುದು. ಈಗಿನ ಮುದುಕರು ತರುಣರಾಗಿದ್ದಾಗ ಅಂದು ಅವರು ಕ್ರಾಂತಿಯೆಬ್ಬಿಸಿದುದನ್ನು ನೋಡಿ ಅವರ ಹಿರಿಯರು ಭಯಗೊಳ್ಳುತ್ತಿದ್ದರು. ಈಗಿನ ಯುವಕರು ಈಗಿನ ವೃದ್ಧರಿಗೆ ಕ್ರಾಂತಿಕಾರಿಯರಾಗಿ ಕಾಣುವುದು ಸಹಜ. ಆದರೆ, ಈ ಕಾಲದ ಯುವಕರು ಇತಿಹಾಸದಲ್ಲಿರುವ ತರುಣರಿಗಿಂತಲೂ ವಿಪರೀತ ಕ್ರಾಂತಿಕಾರರಾಗಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಈಗಿನ ವಿಜ್ಞಾನಯುಗದಲ್ಲಿ ತರುಣರು ಬೆಳವಣಿಸುವುದು ತಪ್ಪಲ್ಲ. ಮಹಾ ಯುದ್ಧವು ತಲೆದೋರಿದಂದಿನಿಂದ ತರುಣರ ಲೋಕವು ಪರಿವರ್ತಿತವಾಗಿದೆ. ಸಹಶಿಕ್ಷಣ, ಸಂತಾನನಿರೋಧ ಮೊದಲಾದ ಚಳವಳಿಗಳೂ ಈಗ ತಲೆಯೆತ್ತಿವೆ. ಆದರೆ ಕಾಲಕ್ರಮೇಣ ಈ ಬಗೆಯ ಕ್ರಾಂತಿಯು ಕೊನೆಗಾಣುವುದು. ಹಿಂದಿನ ದಿನಗಳು ಪುನಃ ತಿರುಗಿಬರುವುವು.

Indian Review.

ವಿನೋದವೆಂದರೇನೆಂದು ಕಲಿಸುವುದಿಲ್ಲ!

ಸ್ಟೀವನ್ ಲೀಕಾಕ್ ಎಂಬವರು ಹೀಗೆ ಬರೆಯುತ್ತಾರೆ: ವಿನೋದವೆಂಬುದು ಒಂದು ವಿಚಿತ್ರ ವಿಷಯ. ಅದರ ಕಡೆಗಿರುವ ನಮ್ಮ ದುರ್ಭಾವನೆಯು ಮತ್ತೂ ವಿಚಿತ್ರ. ಲೋಕದಲ್ಲಿನ ಎಲ್ಲಾ ವಿಷಯಗಳನ್ನೂ ನಾವು ಗಾಢವಾದ ಸಂಶೋಧನೆಯಿಂದ ತರ್ಕಿಸಿಕೊಳ್ಳುತ್ತೇವೆ. ಪ್ರತಿಯೊಂದು ವಿಷಯದ ಮೇಲೂ ನವನವ ದಿನಗಟ್ಟಲೆ ವರ್ಷಗಟ್ಟಲೆ ಶಿಕ್ಷಣಗಳು ಕೊಡಲ್ಪಡುತ್ತವೆ. ಕಲಿಸಬಹುದಾದ ಸರ್ವ ವಿಷಯಗಳೂ ನಮಗೆ ಕಲಿಸಲ್ಪಡುತ್ತವೆ. ಅಮೇರಿಕಾದ ಒಂದು ಕಾಲೇಜಿನಲ್ಲಿ ವಿವಾಹದ ವಿಷಯವಾಗಿ ೩ ತಿಂಗಳುಗಳ ಪಾಠವನ್ನು ಕಲಿಸಲಾಗುತ್ತದೆ. ಆದರೆ, ಹಾಸ್ಯವೆಂಬುದನ್ನು ನಾವು ಮರೆತೇ ಬಿಡುತ್ತೇವೆ. ವಿನೋದಪ್ರಿಯತೆಯನ್ನು ಕಲಿಸುವ ಒಂದು ಪುಸ್ತಕವೂ ಇಲ್ಲ. ವಿನೋದ ಕಥೆಗಳನ್ನು ಹೇಳುವುದು ಹೇಗೆಂಬುದನ್ನು ತಿಳಿಸುವ ಗ್ರಂಥಗಳೂ ನಮಗಿಲ್ಲ. ಅದೂ ಇದು ಅಗತ್ಯ. ವಿದ್ವಾಂಸರಿನ್ನವರು ಕಷ್ಟಪಟ್ಟು ಕಲಿತು ಗಂಭೀರರಾಗುವರೇ ಹೊರತು, ತಮ್ಮಲ್ಲಿ ವಿನೋದಪ್ರಿಯತೆಯನ್ನು ಹೆಚ್ಚಿಸಿಕೊಳ್ಳುವುದೇ ಇಲ್ಲ.

'The Yale Review'

ಲೇಬರ್ ಮತ್ತು ಕಮ್ಯೂನಿಜಮ್

ಬಿ॥ ಡಬ್ಲ್ಯೂ. ಸಿ. ಕಡ್ರನ್‌ರವರು ಹೀಗೆ ಬರೆಯುತ್ತಾರೆ: "ಭಂಡವಾಳಗಾರರ ಸ್ವಾರ್ಥವೂ ಕ್ರೌರ್ಯವೂ ಇಂಗ್ಲೆಂಡಿನ ಚರಿತ್ರೆಯಲ್ಲಿ ಸಹಜವಾದವನ್ನು ತಂದೊಡ್ಡಿದಂತೆ, ರಾಜಕೀಯ ಸಂಘಗಳು ಪಿಭಕ್ತವಾಗಿ ಲೇಬರ್ ಪಾರ್ಟಿಯೆಂಬುದು ತಲೆಯೆತ್ತಿತು. ಎರಡು ಪಕ್ಷಗಳೂ ತಂತಮ್ಮ ಅಂಧಭಾವನೆಗಳನ್ನು ಹಿಡಿದುಕೊಂಡು ಅವುಗಳನ್ನನುಸರಿಸಿ ನಡೆಯುತ್ತಿವೆ. ಲೇಬರ್ ಪಾರ್ಟಿಯೆಂಬುದು ಆರ್ಥಿಕ ವಿಷಯವನ್ನು ಮಾತ್ರ ಎತ್ತಿ ಹಿಡಿದಿದೆ. ಸಮಾನತೆಯನ್ನು ಹೋಗಲಾಡಿಸಿ ಅಧ್ಯಕ್ಷ ರೂಸ್‌ವೆಲ್ಟರು ಮಾಡಿದಂತೆ ಸಮಾಜದಲ್ಲಿ ಸಮಾನತೆಯನ್ನು ತಂದೊಡ್ಡುವುದೊಂದೇ ಅದರ ಹವ್ಯಾಸವಾಗಿದೆ. ಅದು ಕಮ್ಯೂನಿಸಮ್ ಎಷ್ಟು ಮಟ್ಟಿಗೆ ಸಹಕಾರಿಯಾಗುವುದೆಂದು ಹೇಳಲು ಬರುವುದಿಲ್ಲ. ಆದರೂ ಅದು ಸಹಾಯವು ತೋರಿಬರದಂತಿಲ್ಲ.

'The Month'

ಸಂಸ್ಕೃತದ ಆವಶ್ಯಕತೆ

ನಮ್ಮವರಲ್ಲಿ ಈಗ ಬೌದ್ಧಿಕ ಅಧೋಗತಿಯು ಕಂಡುಬರುತ್ತದೆ. ಹಿಂದೆ ಸಂಸ್ಕೃತಿಗೆ ನಾವು ಮೆಚ್ಚಿದುದರಿಂದಾಗಿ ನಮ್ಮಲ್ಲಿರುವ ವಿಶಿಷ್ಟ ಗುಣಾವಳಿಗಳು ನಾಶವಾಗಿಕೊಂಡು ಬಂದವೆ. ನಮ್ಮ ಸಂಸ್ಕೃತಿಯು ದಾರಿದ್ರ್ಯಕ್ಕೀಡಾಗಿದೆ. ಈಗ ಅಗತ್ಯವಿರುವುದು ರಾಷ್ಟ್ರೀಯ ವಿಚಾರಗಳನ್ನು ವಿಕಾಸಗೊಳಿಸುವ ಸಂಸ್ಥೆಗಳು, ಅವುಗಳನ್ನು ನಾವು ಪ್ರೋತ್ಸಾಹಿಸುತ್ತಿರಬೇಕು. ಪ್ರಾಚೀನ ವಿಷಯದರ್ಶನಗಳನ್ನು ಮಕ್ಕಳಿಗೆ ತಿಳಿಸಬೇಕಾಗಿದೆ. ಅದರಲ್ಲಿರುವ ಪೂರ್ವಾಚಾರಗಳನ್ನು ಪ್ರತಿಧ್ವನಿಸಬೇಕಾಗಿದೆ. ಸಂಸ್ಕೃತದಲ್ಲಿ ಪ್ರಾಚೀನ ಧರ್ಮವು ಅಡಕವಾಗಿರುತ್ತದೆ. ನಮ್ಮ ನಿಜದ ಪೂರ್ಣ ಅರಿವುಂಟಾಗಬೇಕೆಂದಾದರೆ ಸಂಸ್ಕೃತವನ್ನು ಎಲ್ಲರೂ ಕಲಿಯಬೇಕಾಗಿದೆ. ಹಿಂದೂಸ್ಥಾನದ ಹಲವು ಭಾಷೆಗಳು ಸಂಸ್ಕೃತದ ಶಕ್ತಿಯಿಂದಲೇ ಜನಿಸುತ್ತವೆಂಬುದೇ ಸಂಸ್ಕೃತದ ಮಹತ್ತಿಕೆಯನ್ನು ತಿಳಿಸುತ್ತದೆ. ನಮ್ಮ ಪ್ರಾಚೀನ ಪದ್ಧತಿಯು ಉಳಿಯಬೇಕೆಂದಾದರೆ ಪ್ರತಿಯೊಬ್ಬ ಭಾರತೀಯನೂ ಸಂಸ್ಕೃತವನ್ನು ತಿಳಿಯಬೇಕಾಗಿದೆ. ಆದರೆ ಈಗಿನ ಪರಿಸ್ಥಿತಿಯೇನು? ನಮ್ಮ ಯುವಕರು ಪ್ರೌಢವಿದ್ಯಾರ್ಜನೆಗಾಗಿ ಪರದೇಶದ ವಿಶ್ವವಿದ್ಯಾನಿಲಯಗಳ ಆಶ್ರಯಕ್ಕೆ ಹೋಗಬೇಕಾಗಿದೆ. ಈ ಕ್ರಮವು ನಿಲ್ಲಬೇಕು.

"The Aryan Path"

ಹಿಂದೂದೇಶದಲ್ಲಿನ ಸಿನೆಮಾ ಸಮಸ್ಯೆ.

ಶ್ರೀ॥ ಎ. ಕೆ. ಶರ್ಮ ಎಂ. ಎ. ರವರು ಹೀಗೆ ಬರೆದಿದ್ದಾರೆ—ಹಿಂದೂಸ್ಥಾನದಲ್ಲಿ ಬೇಕಾದಷ್ಟು ಚಲಚ್ಚಿತ್ರ ಪ್ರದರ್ಶಕರಿಲ್ಲ. ಗ್ಲೋಬ್ ಮತ್ತು ಮದನ್ ಥಿಯೇಟರಿನವರನ್ನು ಬಿಟ್ಟರೆ ಬೇರೆ ಸರಿಯಾದ ಕಂಪೆನಿಗಳೇ ಇಲ್ಲ. ಬ್ರಿಟಿಷ ಚಿತ್ರಗಳು ಉತ್ತಮವೆನಿಸಿಕೊಂಡರೂ ಅವುಗಳನ್ನು ಪ್ರಚಾರಗೊಳಿಸುವವರಿಲ್ಲ. ಸೆನ್ಸಾರ್ ಮಾಡುವ ಬೋರ್ಡಿನವರು ತಮ್ಮಿಷ್ಟಪ್ರಕಾರ ಚಿತ್ರಗಳನ್ನು ರದ್ದುಗೊಳಿಸಿದರೆ, ಮತ್ತೆ ಕಂಪೆನಿಗಳಲ್ಲಿ ಚಿತ್ರಗಳೇ ಇಲ್ಲದಂತಾಗುವುದು. ಚಿತ್ರಯೋಜನೆಯ ಕೆಲಸವು ಸರಿಯಾಗಿ ನಡೆಯುತ್ತಿಲ್ಲ. ಮುಂಬಾಯಿ, ಮದ್ರಾಸು, ಕಲ್ಕತ್ತಾ, ರಂಗೂನುಗಳಲ್ಲೂ ಸೆನ್ಸರ್ ಬೋರ್ಡುಗಳು ಇವೆಯಾದರೂ ಇವುಗಳೊಳಗೇ ಭೇದವಿರುವುದರಿಂದ ಸೆನ್ಸರ್‌ನ ಕೆಲಸವು ಸಮರ್ಪಕವಾಗುತ್ತಿಲ್ಲ. ಹೆಚ್ಚಿನ ಚಿತ್ರಗಳು ಮುಂಬಾಯಿ, ಕಲ್ಕತ್ತಾಗಳಿಂದ ಬರುವುದರಿಂದ ಅವುಗಳನ್ನು ಉಳಿದ ಪ್ರಾಂತೀಯರು ಸೆನ್ಸರ್ ಮಾಡುವುದಿಲ್ಲ! ಇದಕ್ಕಾಗಿ ಆಲ್ ಇಂಡಿಯಾ ಸೆಂಟ್ರಲ್ ಬೋರ್ಡ್ ಆಫ್ ಸೆನ್ಸರ್ಸ್ ಎಂಬುದು ಅಗತ್ಯವಾಗಿದೆ. ಶಾಸನಪಾಲಕರಾಗಿ ಪ್ರಯತ್ನಿಸಿದ್ದರೆ ಇದೂ ಆಗುವಂತಿಲ್ಲ.

"The National Christian Council of Review"

ಪೂರ್ವಕ್ಕೆ ಮೊದಲು ಬಂದವರಾರು?

ಕೊಲಂಬಸ್‌ನಿಗಿಂತಲೂ ಮೊದಲು ಅನ್ಯದೇಶ ಸಂಚಾರಿಗಳು ಪೂರ್ವ ದೇಶಕ್ಕೆ ಹೋಗಿರುವರು. ಕೊಲಂಬಸ ನಂತರ ಆ ... ಪಶ್ಚಿಮದೇಶದಿಂದ ಏಶಿಯಾ ಖಂಡಕ್ಕೆ ಹೋಗುವ ಪಥಗಳನ್ನು ಹುಡುಕಾಡುತ್ತಿದ್ದರು. ಮಾರ್ಕೋಪೋಲೋ ಎಂಬವನು ಜಗತ್ತಿನಲ್ಲೆಲ್ಲಾ ಸುತ್ತಾಡುತ್ತಿದ್ದ ಹಳೆಯ ಸಂಚಾರಿಯಾಗಿದ್ದನು. ಆದರೆ ಆತನಿಗಿಂತಲೂ ಮೊದಲು ಎಷ್ಟೋ ಜನ ಪ್ರವಾಸಿಗಳು ಪೌರ್ವಾತ್ಯ ದೇಶಕ್ಕೆ ಹೋಗಲೆತ್ನಿಸಿರುವರು. ವೆನಿಶಿಯನ್ ವ್ಯಾಪಾರಿಗಳು ಚೀನಾದೇಶಕ್ಕೆ ಬಂದುಹೋಗುವುದಕ್ಕೆ ಮೊದಲು ಆ ಹಳೆಯ ಪ್ರವಾಸಿಗಳು ಅಲ್ಲಿಗೆ ಬಂದಿದ್ದರೆಂದು ಅವರು ದಾಖಲೆ ಇಟ್ಟಿರುವರು. ಆ ವರ್ಣನೆಗಳು ಇಂಗ್ಲಿಷ ಸ್ಕಾಂಡರಿಗೆ ಮಾತ್ರ ತಿಳಿಯದು. ಆದರೆ ಆ ವಿಷಯವು ಪೌರ್ವಾತ್ಯ ವಿದ್ವಾಂಸರಿಗೆ ಚೆನ್ನಾಗಿ ತಿಳಿದಿತ್ತು. ವಿಶೇಷವೆಂದರೆ ಮಾರ್ಕೋಪೋಲೋನ ಚರಿತ್ರೆಯಂತೆಯೇ ಅವರ ಪರಿಚಯ ವರ್ಣನೆಗಳಿಂದಲೂ ಆತನ ಪ್ರವಾಸಕ್ಕೆ ವಿಶೇಷ ಸಹಾಯವಾಯಿತು. ಅದು ಪರಿಂದ ಪೂರ್ವ ಪಶ್ಚಿಮ ದೇಶಗಳೊಳಗೂ ಒಂದಾಗುವಂತೆ ಮಾಡಿದ ಕೀರ್ತಿಯು ಮಾರ್ಕೋಪೋಲೋನ ಕೆಲ ಅಜ್ಞಾತ ಪೂರ್ವಗಾಮಿ ಇವರಿಗೆ ಸಲ್ಲದೆ ಪೂರ್ಣವಾದ ಪ್ರಾಚೀನ "ಅನಾಮಧೇಯ"ರಿಗೆ ಸಲ್ಲತಕ್ಕದು.

Christian Register

ಮಹಾಭಾರತದ ರತ್ನಗಳು.

ಮಹಾಭಾರತದಿಂದ ಕೆಲವು ವಚನಗಳನ್ನು ಹೆಕ್ಕಿ ಶ್ರೀ॥ ನಾಗೇಂದ್ರನಾಥಗುಪ್ತರು ಪ್ರಕಟಿಸುತ್ತಾರೆ:

ನಾಯಿಗಳು ಎಲುಬಿನ ಚೂರಿಗಾಗಿ ಕಾದಾಡುವಂತೆ ಅರಸರು ಭೂಮಿಗಾಗಿ ಕಾದಾಡುತ್ತಿರುವರು.

ತಪ್ಪು ಮಾಡಿಯೇ ಮರೆಮಾಡದ್ಭುತಿಯು ಅಮರಲೋಕ.

ತನ್ನ ಬಾಯಿಯಿಂದ ಬಾಣದಂತೆ ಹೊರಟು ಪರರ ಹೃದಯವನ್ನು ಕೊರೆಯುವ ನುಡಿಗಳು ತನ್ನ ಬಾಯಿಯಿಂದ ಬಾರದಂತೆ ಜ್ಞಾನಿಗಳು ಎಚ್ಚರದಿಂದಿರುವರು.

ಗುರುವಿಗೆ ಮಣಿಯುವ ಶಿಷ್ಯರು ಕಡಮೆ. ತಾಯಿಗೆ ನಮಸ್ಕರಿಸುವ ವಿವಾಹಿತ ತರುಣರು ಕಡಮೆ. ಜೀವನದಲ್ಲಿ ಜಯಿಸಿದವರು ಜಯಿಸಿದ ಹಾದಿಗೆ ಅಭಾರವನ್ನು ವನ್ನು ಸೂಚಿಸುವುದು ಕಡಮೆ. ನದಿಯನ್ನು ದಾಟಿದುದಕ್ಕಾಗಿ ದೋಣಿಗೆ ವಂದನೆಯನ್ನರ್ಪಿಸುವವರು ಕಡಮೆ. ರೋಗವನ್ನು ಗುಣಪಡಿಸಿದ ವೈದ್ಯನಿಗೆ ಮಣಿಯುವವರು ಕಡಮೆ.

ಹೊಟ್ಟೆಕಿಚ್ಚೆಂಬುದು ಕಿಚ್ಚಿನ ರಕ್ಕೆ, ಮುಖಸ್ತುತಿಯೆಂಬುದು ಶಕ್ತಿಯ ಬಲ, ಕ್ಷಮಾದಾನವೆಂಬುದು ತಿಳಿದವರ ಹಕ್ಕು.

ತನ್ನ ದೌರ್ಬಲ್ಯವನ್ನು ತಿಳಿದವನು ಅದಕ್ಕಾಗಿ ನಾಚಿಕೊಂಡವನು ಎಲ್ಲರ ಪ್ರೀತಿಗೆ ಪಾತ್ರನು.

ಹಸಿವಿಗಾಗಿ ಸಿಕ್ಕಿದುದನ್ನು ಸಂತೋಷದಿಂದ ತಿನ್ನುವ ಬಡವರೇ ಲೇಸು. ಸಿರಿವಂತರಿಗೆ ಅಂತಹ ಆನಂದದ ಊಟ ಭಾಗ್ಯವಿಲ್ಲ.

ದೇಹವು ರಥ, ಆತ್ಮವು ಸಾರಥಿ, ಮನಸ್ಸೆಂಬುದು ಕುದುರೆ. ಬುದ್ಧಿವಂತನು ನಿಷ್ಕಂಟಕ ರಥಿಕನಂತಿರುವನು.

ಸತ್ಯರಹಿತವಾದ ಧರ್ಮವು ಧರ್ಮವಲ್ಲ. ಪರದೆಯೊಳಗಿರುವ ಸತ್ಯವು ಸತ್ಯವಲ್ಲ.

The Young Builder

ಅಂತರರಾಷ್ಟ್ರೀಯ ನಗರ

ಯುದ್ಧನಿವಾರಣೆಗಾಗಿ ದಕ್ಷ ಸನ್ಯಾಸ ... ಮಾಡುತ್ತಿದ್ದ ಪ್ರಯತ್ನಗಳು ಮಾಯವಾಗುತ್ತಿರುವಾಗ ಕೆಲವು ಮಹಾತ್ಮರು ಜಗತ್ತಿನ ಏಕೀಕರಣ ವಿಷಯದಲ್ಲಿ ಪರಿಶೋಧಿಸುವುದು ಕಂಡುಬರುತ್ತದೆ. ಒಬ್ಬ ಶಿಲ್ಪಿಯು ಒಂದು ಅಂತರರಾಷ್ಟ್ರೀಯ ನಗರದ ಯೋಜನೆಯನ್ನು ಪ್ರಕಟಿಸಿದ್ದಾನೆ. ಆ ವಿಷಯವಾಗಿ ಅವನು ಹೀಗೆ ಹೇಳುತ್ತಾನೆ: "ಅಂತರರಾಷ್ಟ್ರೀಯ ನಗರಕ್ಕೆ ಸಂಪೂರ್ಣವನ್ನು ಹಾಕಲು ಇದು ತಕ್ಕ ಸಮಯವಾಗಿದೆ. ಈ ಅಂತರರಾಷ್ಟ್ರೀಯ ನಗರದಲ್ಲಿ ಲೋಕದ ಚಕ್ರ ದೊಡ್ಡ ರಾಷ್ಟ್ರಗಳು ಕಟ್ಟಡವನ್ನು ಕಟ್ಟಬೇಕು. ಆಯಾಯ ದೇಶದ ಶಿಲ್ಪಿಗಳ ರೂಪದಿಂದಲೇ ಆಯಾಯ ಕಟ್ಟಡಗಳನ್ನು ಕಟ್ಟಬೇಕು. ಪ್ರತಿಯೊಂದು ರಾಷ್ಟ್ರವೂ ತಮ್ಮ ಪ್ರತಿನಿಧಿಗಳನ್ನು ಈ ಮಂದಿರದಲ್ಲಿಡಬೇಕು. ಅಂತರರಾಷ್ಟ್ರೀಯ ಅಂಗಡಿಗಳನ್ನು ಸ್ಥಾಪಿಸಬೇಕು. ಈ ಅಂಗಡಿಗಳಲ್ಲಿ ಎಲ್ಲಾ ದೇಶಗಳ ಸಾಮಾನುಗಳನ್ನು ಮಾರಲ್ಪಡಬೇಕು. ಹೀಗೆ ಮಾಡಿದರೆ ಜಗತ್ತಿನ ಎಲ್ಲಾ ಸರಕುಗಳನ್ನು ವಿಕ್ರಯಿಸಲ್ಪಡುವಂತಾಗುವುದು. ಪ್ರತಿಯೊಂದು ರಾಷ್ಟ್ರದಲ್ಲಿನ ಬೆಳೆ, ನಾನಾ ಗೃಹೋದ್ಯಮಗಳ ಸಂಬಂಧದ ವಿವರಗಳುಳ್ಳ ಪುಸ್ತಕಗಳನ್ನು ಈ ನಗರದಲ್ಲಿ ಪ್ರಚಾರಗೊಳಿಸಬೇಕು. ಹೀಗೆ ಮಾಡಿದರೆ ಅಂತರರಾಷ್ಟ್ರೀಯ ಭಾವವು ಬಗ್ಗೆಷ್ಟು ಸ್ಪಷ್ಟವಾಗುವುದು."

The World Unity

ಈಗಲೇ ತಯಾರಾಗಿದೆ! ಬೇಗನೆ ಕೊಂಡುಕೊಳ್ಳಿರಿ!! ತ್ವರೆ ಪಡಿರಿ!!!

ಎಮ್. ಗಣಪತಿರಾವ್ ಐಗಳ್, ಇವರಿಂದ ರಚಿತವಾದ

ಸೋಸಿಯೋಲೋಜಿ

ಅಥವಾ

ಸಮಾಜಶಾಸ್ತ್ರ.

ಹಾಯರ್ ಎಲಿಮೆಂಟರಿ ಶ್ರೇಣಿಯ ವಿದ್ಯಾರ್ಥಿಗಳಾದ ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯುಪಯುಕ್ತವಾದ ಪುಸ್ತಕ

ಟ್ರೈನಿಂಗ್ ಶಾಲೆಗಳ ಸಿಲೆಬಸ್ ಪ್ರಕಾರ ಬರೆಯಲ್ಪಟ್ಟದು

ಖಾಸಗಿಯಾಗಿ ಹಾಯರ್ ಎಲಿಮೆಂಟರಿ ಗ್ರೇಡ್ ಪರೀಕ್ಷೆಗೆ ಹೋಗುವ ಟೀಚರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ—ಯಾರ ಸಹಾಯವೂ ಇಲ್ಲದೆ ಕಲಿಯಲು ಅತ್ಯುಪಯೋಗಕರವಾದ ಪುಸ್ತಕ. ಶಾಲಾ ಮತ್ತು ಸರಕಾರೀ ಪರೀಕ್ಷೆಯ ಪ್ರಶ್ನೆಗಳನ್ನು ಒಳಗೊಂಡಿದೆ

284 ಪುಟಗಳುಳ್ಳದ್ದು, ಸುಂದರವಾದ ಬ್ಯಾಂಡು, ಮುದ್ದಾದ ಮುದ್ರಣ.

ಕ್ರಯ ಒಂದು ರೂಪಾಯಿ ಮಾತ್ರ.

ಪುಸ್ತಕ ದೊರೆಯುವ ವಿಳಾಸ—

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಭರ್ಗಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಕಿರ್ಲೋಸ್ಕರ

ಆದರ್ಶ ಪ್ರಾಯಕ

ಉಕ್ಕಿನ ಸಾಮಾನುಗಳು—

ಆಧುನಿಕ ಮನೆಮಂದಿರಗಳಿಗೆ ಅತ್ಯುತ್ಕೃಷ್ಟವಾಗಿ ರಚಿಸಲ್ಪಟ್ಟಿದೆ.

ಉತ್ತಮ ಬಣ್ಣಗಳು. ಮಡಚಬಹುದು. ದರ ಸುಲಭ!

ಕುರ್ಚಿಗಳು, ಮೇಜುಗಳು, ಮಡಚುವ ಹಾಸಿಗೆಗಳು, ಸೋಫಾಗಳು, ಬೆಂಚುಗಳು, ಶೆಲ್ಫ್‌ಗಳು, ತೊಟ್ಟಿಲುಗಳು, ಇತ್ಯಾದಿ.

ಕೆಟಲಾಗಿಗೂ ದರಗಳ ಮಾಹಿತಿ ಬಗ್ಗೂ ಬರೆದುಕೊಳ್ಳಿರಿ.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:—ಹೆರ್ರಿ ಮತ್ತು ಕಂಪೆನಿ ಲಿಮಿಟೆಡ್, ಮದ್ರಾಸು.

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ಮುಗಿಸುತ್ತಿದೆ. ಅದರ ಫಲವೇ—ಆಯಾಸ ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು. ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿ ಬಿಡದಂತೆ ನೀವೀಗಲೇ ತಡೆಹಾಕಬೇಕು; ಉತ್ತಮೋಪಾಯವೇ ಜೀವಾಮೃತಸೇವನೆ—ಈ ಪರಿಣಾಮಕಾರೀ ಪೌಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು. ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಕ್ರಿಯಾಯುಕ್ತ ಪುರುಷರನ್ನಾಗಿ ಮಾಡುವುದು. ಎಲ್ಲೆಲ್ಲಿಯೂ ದೊರೆವುದು:—ದೊಡ್ಡದು ರೂ. 3—4—0. ಸಣ್ಣದು ರೂ. 1—12—0

ತಯಾರಿಸುವವರು:—ಆಯುರ್ವೇದಾಶ್ರಮ, ಪೋಸ್ಟು ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುದರ್ಶನ ಗ್ರಂಥಮಾಲಗಳು.

ಗ್ರಾಮೋಫೋನ್ ಸಂಗೀತಂ—ಶ್ರೀಮತಿ ತ್ರಿಪುರಾಂಬ, ಲಲಿತಾಂಬ, ಅಚ್ಚಮ್ಮ, ದುರ್ಗಾಬಾಯಿ ಶಿರೋಡ್ಕರ್, ಹೀರಾಬಾಯಿ, ಶಾಂತಾಮಣಿ, ರಾಜರತ್ನಂ, ಇವರ ಕೋಕಿಲ ಸ್ವರದ ಹಾಡುಗಳು ಮತ್ತು ಶ್ರೀಯುತ ರಾಜಯ್ಯಂಗಾರ್, ಚೆಂಬೈ ವೈದ್ಯನಾಥಂ, ಸುಬ್ಬಯ್ಯ ಭಾಗವತರು, ಸುಬ್ರಮಣ್ಯಂ, ಪಟ್ಟವರ್ಧನ್, ಜೋಶಿ, ಮುಂತಾದವರ ರಸಭರಿತ ಕೃತಿ, ಕೀರ್ತನೆಗಳು ತ್ರಿಪುರಾಂಬ ಕಾಂತಾಮಣಿಯರ ಫೋಟೋದೊಂದಿಗೆ ಇರುವುದು. ಇದರ ಬೆಲೆ ಆಣೆ ೧.

ಭಕ್ತಾನಂದ ಭಜನೆ—ತ್ಯಾಗರಾಜರ ತೆಲುಗು ಕೃತಿಗಳು, ತುಕಾರಾಮ, ಕೇಶವದಾಸರ ಮರಾಠಿ ಪದಗಳು, ಪುರಂದರದಾಸ, ಕನಕದಾಸರ ಕನ್ನಡ ಕೀರ್ತನೆಗಳು ಮತ್ತು ವೇದಾಂತ ತತ್ವವಿಚಾರದ ಪದಗಳು ಸಹ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ. ಇದರ ಬೆಲೆ ಆಣೆ ೧.

ಶ್ರೀ ಪಾಂಡುರಂಗ ವಿಲಾಸ ಬುಕ್ ಡಿಪೋ, ಬೆಂಗಳೂರು ಸಿಟಿ.

ಪ್ರತಿಗಳು ಸಿಕ್ಕುವ ವಿಳಾಸಗಳು:—ಮೆಸರ್ಸ್ ಶೆಣೈ ಬ್ರದರ್ಸ್, ರಥಬೀದಿ ಮಂಗಳೂರು. ದಿ ಲಲಿತಕಲಾ ಸ್ಟೋರ್ಸ್ ಮೂಡಬಿದ್ರೆ. ಆರ್. ವಿಟ್ಟಪ್ಪ ಶೆಣೈ ಕಾರ್ಕಳ, ಮೆಸರ್ಸ್ ಪಾವಂಜೆ ಗುರುರಾಯರು, ಉಡುಪಿ. ದಿ ಸಚ್ಚಿದಾನಂದ ಸ್ಟೋರ್ಸ್ ಕುಂದಾಪುರ. ದಿ ಸತ್ಯನಾರಾಯಣ ಸ್ಟೋರ್ಸ್, ಪುತ್ತೂರು.

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,

Car Street, Mangalore.

ಕ್ಷಯ ಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ

(ಕಸ್ತೂರಿ ಮಿಶ್ರಿತ.)

ಸಮಸ್ತ ವಾತರೋಗಗಳಿಗೆ

ಮಹಾ ನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ಸಹಿತ.

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸೈಂಟಿಫಿಕ್ ಸ್ವರ್ಣಾಭರಣಗಳು

(ಚಿನ್ನದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟ್ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:-

TheScientificGold Bangles Co., Ltd.,
Head Office:-48, Byragimatam Street,
Post Box No. 203, Madras.

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ, ಧೋತಿ, ಸೀರೆ, ಬೈರವಾಸು, ಚೆಕ್ಕು, ಚೀಟಿ ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು.

Srinivasa Ranga Pai,
Representatives for South Kanara and Malabar.

For— **A. & F. Harvey,**
Managers:—Madura Mills Co., Ltd.,

ಮದರಾಸಿನಲ್ಲಿ ಭಯಂಕರ ಮೋಟಾರು ಅನಾಹುತ!

ನಾಲ್ಕು ಮಂದಿಯ ಮರಣ.

ತಾ. ೨೪-೨-೧೯೩೮ನೇ ಸಾಯಂಕಾಲ ಮದರಾಸಿನ ಮಹಾಬಲಿಪುರಂ ರಸ್ತೆಯಲ್ಲಿ ಒಂದು ಭಯಂಕರ ಮೋಟಾರ್ ಅನಾಹುತದ ಪ್ರಸಂಗವು ನಡೆಯಿತು. ಇಂತಹ ಹೃದಯ ಭೇದಕ ಘಟನೆಯು ಇತ್ತೀಚೆಗೆ ಮದರಾಸ್ ಪ್ರಾಂತ್ಯದಲ್ಲಿ ನಡೆಯಲೇ ಇಲ್ಲ. ಇಡೀ ಪ್ರಾಂತ್ಯವೇ ಇದರಿಂದ ಕಳವಳಗೊಂಡಿದೆ.

ಮದರಾಸಿನ ಅಮೆರಿಕನ್ ಕಾನ್ಸಲರ್ ರಾದ ಮಿ| ಲಿರಾಯಿ ವೆಬ್ಬರ್ ರವರೂ, ಸ್ಟ್ಯಾಂಡರ್ಡ್ ಎಣ್ಣೆ ಕಂಪೆನಿಯ ಮಿ| ವಿ ಡಬ್ಲ್ಯೂ ಎಸ್ಟೀಯವರೂ ಅವರ ಧರ್ಮಪತ್ನಿ ಮಿಸೆಸ್ ಎಸ್ಟಿಯವರೂ, ಮೋಟರ್ ಡ್ರೈವರನಾದ ಮುಸಲ್ಮಾನನೂ ಮೋಟಾರು ಅನಾಹುತಕ್ಕೊಳಗಾಗಿ ಪ್ರಾಣಬಿಟ್ಟರು.

ಅನಾಹುತ ನಡೆದುದು ಮದರಾಸಿನಿಂದ ೨೪ ಮೈಲುಗಳ ದೂರದಲ್ಲಿರುವ ಗುಡುವನ್ ಚೇರಿ ಗ್ರಾಮದ ಬಳಿಯಲ್ಲಿ

ಘಟನೆಯ ವಿವರ.

ಮಿ| ಲಿರಾಯಿ ವೆಬ್ಬರ್, ಮಿಸೆಸ್ ಎಸ್ಟಿ ಇವರು ತಮ್ಮ ಮೋಟಾರಿನಲ್ಲಿ ವಿಹಾರಕ್ಕೋಸ್ಕರ ಮಹಾಬಲಿಪುರದ ಕಡೆಗೆ ಹೊರಟರು ಮೋಟಾರು ರಸ್ತೆಯಲ್ಲಿ ಓಡುತ್ತಿದ್ದಾಗ ಕ್ರಮವಾಗಿ ರಸ್ತೆಗಳು ಸರಿಯಾಗಿಲ್ಲದಿದ್ದರೆ ಗಾಡಿಯು "ಸ್ಕಿಡ್" ಆಗುವುದುಂಟು ಅಂದರೆ ಸುಸೂತ್ರವಾಗಿ ಓಡದೆ ಸ್ವಲ್ಪ ಕುಣಿದಾಡುವ ಹಾಗಾಗುತ್ತದೆ ಮಿ| ಲಿರಾಯಿ ವೆಬ್ಬರರ ಗಾಡಿಯು ವೇಗದಿಂದ ಹೋಗುತ್ತಿದ್ದಾಗ ರಸ್ತೆಯ ಕ್ರಮ ತಪ್ಪಿ, ಪಕ್ಕದಲ್ಲಿದ್ದ ಬರಡು ಭೂಮಿಗೆ ಬಂದು ಅಲ್ಲಿಂದ ಮುಂದಿದ್ದ ದೊಡ್ಡ ಹುಣಿಸೆ ಮರಕ್ಕೆ ಬಲವಾಗಿ ಢಿಕ್ಕಿ ಹೊಡೆಯಿತು. ಹುಣಿಸೆ ಮರವು ರಸ್ತೆಯಿಂದಾಚೆಗೆ ೧೦ ಗಜದ ದೂರದಲ್ಲಿತ್ತು.

ಈ ಬಲವಾದ ಢಿಕ್ಕಿ ಹೊಡೆತದಿಂದ ಮೋಟರ್ ಡ್ರೈವರನು ತನ್ನ ಸ್ಥಳದಲ್ಲಿಯೇ ನುಚ್ಚುಗುಜ್ಜಾಗಿ ಹೋಗಿಬಿಟ್ಟನು ಮಿಕ್ಕವರು ಆಚೆಗೆ ಎಸೆಯಲ್ಪಟ್ಟು ಮೃತರಾದರು.

ಅನಾಹುವು ನಡೆದ ನಂತರ ಸ್ಥಳಕ್ಕೆ ಹೋಗಿ ಪರೀಕ್ಷಿಸಿದಾಗ ಮೃತ ಕಳೇಬರಗಳು ಮೋಟಾರು ಗಾಡಿಯ ಪಕ್ಕದಲ್ಲಿ ಬಿದ್ದಿರುವುದ ಕಂಡು ಬಂತು ಒಬ್ಬರ ಕೈಯಲ್ಲಿದ್ದ ಕೈಗಡಿಯಾರವಿತ್ತು ಅದು ೪ ೧೫ ಗಂಟೆಗಳಲ್ಲಿ ನಿಂತಿತ್ತು ಇದರಿಂದ ಅನಾಹುತವು ಸಂಧ್ಯಾಕಾಲದಲ್ಲಿ ನಡೆದಿರಬೇಕೆಂಬ ಊಹೆಗೆ ಅವಕಾಶವಾಗಿದೆ

ನವದಂಪತಿಗಳು

ಮಿ| ಲಿರಾಯಿವೆಬ್ಬರರು ಮತ್ತು ಮಿಸೆಸ್ ಎಸ್ಟಿಯವರು ನವ ದಂಪತಿಗಳು ಅಕ್ಟೋಬರ ೧೨ನೆಯ ತಾರೀಕಿನ ದಿನಸ ಇವರಿಬ್ಬರ ವಿವಾಹ ಮಹೋತ್ಸವವು ಅತ್ಯಂತ ವೈಭವದಿಂದ ನಡೆಯಿತು. ವಿವಾಹ ಉಂಗುರದ ಮೇಲೆ ೧೨-೧೦-೧೯೩೭ ಎಂದು ಕೆತ್ತಿದ್ದಿತು

ಅಮೇರಿಕನ್ ಕಾನ್ಸೆಲ್ ರಾದ ಮಿ| ಲಿರಾಯಿವೆಬ್ಬರರು ಮೊನ್ನೆತಾನೇ ಚೀನಾ ದೇಶದ ಚೈಫೂ ನಗರದಿಂದ ಮದರಾಸಿಗೆ ವರ್ಗಾಯಿಸಲ್ಪಟ್ಟು ಬಂದಿದ್ದರು.

ಕಳೇಬರಗಳಗಳನ್ನು ಮದರಾಸಿಗೆ ತರಲಾಯಿತು ಮಾರದಿವಸ ಮುಂಜಾನೆ ಮದರಾಸಿನ ಪೋಲೀಸಿನವರು ಮೃತ ಕಳೇಬರಗಳನ್ನು ಇಲ್ಲಿಗೆ ತಂದರು ಮುಸಲ್ಮಾನ್ ಮೋಟಾರು ಡ್ರೈವರಿನ ದೇಹವನ್ನು ಅವರ ಬಂಧುಗಳ ವಶಕ್ಕೆ ಒಪ್ಪಿಸಿದರು. ಮಿಕ್ಕ ಕಳೇಬರಗಳೆಲ್ಲವನ್ನೂ ರಾಯಪುರಂ ಕಳೇಬರದ ಗೃಹಕ್ಕೆ ಸಾಗಿಸಿದರು.

ಸ್ವಾಚ್ಛ್ಯಚರಿ ರೈಲ್ವೆ ಬೋರ್ಡಿನ ಕುರಿತು ಚರ್ಚೆ ಬೇಡ!

"ವಂದೇ ಮಾತರಂ" ಗೀತೆಯ ಮೇಲೆ ಚರ್ಚೆ.

ಶ್ರೀ| ಭುಲಾಭಾಯಿಯವರ ಸ್ಫುಟವಾಕ್ಯ.

ತಾ. ೨೨ನೇ ದಿನ ಎಸೆಂಬ್ಲಿಯಲ್ಲಿ ರೈಲ್ವೇ ಆಡಳಿತದ ಗ್ರ್ಯಾಂಟುಗಳ ವಿಷಯದಲ್ಲಿ ಚರ್ಚೆಗಳಾದುವು

ಪ್ರಶ್ನೋತ್ತರ ಕಾಲದಲ್ಲಿ ಡಾ| ಜಿಯಾಉದ್ದೀನ್ ಅಹಮ್ಮದರ ಪ್ರಶ್ನೆಗಳಿಗೆ ಫೊರೈನ್ ಸೆಕ್ರೆಟರಿಗಳಾದ ಮಿ| ಮೆಟ್‌ಕೊಫರು ಪ್ರತ್ಯುತ್ತರವನ್ನೀಯುತ್ತಾ "ಡಿಲ್ಲಿ ರಾಜಮನೆತನದ ಪೈಕಿ, ರಾಜಕೀಯ ಪೆನ್‌ಶನ್‌ದಾರರಾಗಿರುವ ೩೮ ಮಂದಿಗಳು ಲಕ್ನೋ ಖಜಾನೆಯಿಂದ ಪೆನ್‌ಶನ್ ಹಣವನ್ನು ತೆಗೆದುಕೊಳ್ಳುತ್ತಿರುವರು" ಎಂದರು

ಈ ರಾಜಮನೆತನದ ಸರಕಾರದವರು ಬ್ರಿಟಿಷರನ್ನು ಹೊರದೇಶಗಳಲ್ಲಿ ಹೊಗಳುತ್ತಿರುವುದು ನಿಜವೇ ಎಂದು ಪ್ರಶ್ನಿಸಲಾಗಿ ಮಿ| ಮೆಟ್‌ಕೊಫರು ಈ ವಿಷಯದಲ್ಲಿ ಸರಕಾರದವರು ಕೆಲವು ಸಂಗತಿಗಳನ್ನು ಕೇಳಿದ್ದಾರೆ ಆದರೆ

ಶ್ರೀ ಭುಲಾಭಾಯಿ ದೇಸಾಯಿಯವರು.

ಆ ಬಗ್ಗೆ ನಿಶ್ಚಿತವಾದ ವರ್ತಮಾನವಿಲ್ಲ ಸರಕಾರದವರು ಯಾರಿಗೂ ಯಾವ ವಿಧವಾದ, ಸಹಾಯವನ್ನೂ ಕೊಟ್ಟು ಬ್ರಿಟಿಷರನ್ನು ಹೊಗಳಬೇಕೆಂಬುದಾಗಿ ಹೇಳಿಲ್ಲ" ಎಂದರು

ನಂತರ ಅಧ್ಯಕ್ಷರು ಒಂದು ನಿರೂಪವನ್ನು ಓದುತ್ತಾ ರೈಲ್ವೆ ಬಜೆಟಿನ ಗ್ರ್ಯಾಂಟುಗಳ ವ್ಯಯದಲ್ಲಿಯೂ ತತ್ಸಂಬಂಧದ ಚರ್ಚೆಗಳ ವಿಷಯದಲ್ಲಿಯೂ ಎಸೆಂಬ್ಲಿಯ ವಿವಿಧ ರಾಜಕೀಯ ಪಂಗಡಗಳಲ್ಲಿ ಒಪ್ಪಂದವುಂಟಾಗಿದೆಯೆಂದು ತಿಳಿಸಿದರು.

ಸರ್ ಜೋಸೆಫ್ ಭೋರೆರು ಪ್ರಥಮತಃ ರೈಲ್ವೇ ಬೋರ್ಡಿನ ಬೇಡಿಕೆಯನ್ನು ಸಭೆಯ ಮುಂದಿಟ್ಟರು ವಿರೋಧ ಪಕ್ಷದ ಮುಖಂಡರಾದ ಶ್ರೀ| ಭುಲಾಭಾಯಿ ದೇಸಾಯಿಯವರು ಬೇಡಿಕೆಯ ಹಣವನ್ನು ಒಂದು ರೂಪಾಯಿಗೆ ಇಳಿಸುವಂತಹ ಒಂದು ಕಟ್‌ಮೋಶನನ್ನು ತಂದರು ತಮ್ಮ ಭಾಷಣದಲ್ಲಿ ರೈಲಿನ ಇತಿಹಾಸವನ್ನು ಹೃದಯಂಗಮವಾಗಿ ವರ್ಣಿಸಿದರು "ಲೋರ್ಡ್ ಡಾಲ್‌ಹೌಸಿಯವರು ಸಮರ ಸೌಲಭ್ಯ ದೃಷ್ಟಿಯಿಂದಲೂ ರಾಜಕೀಯ ಮನೋಭಾವದಿಂದಲೂ ರೈಲುಗಳನ್ನು ಸ್ಥಾಪಿಸಿದರು ಈ ದೇಶದಲ್ಲಿ ರಾಜಕೀಯವೆಂದರೆ ಅದೊಂದು ವಿಚಿತ್ರ ಆಚರಣೆ. ಅಧಿಕಾರವೆಲ್ಲವೂ ಪ್ರಭುತ್ವದ ಕೈಯಲ್ಲಿ. ಅದರ ಬಗ್ಗೆ ಆಕ್ಷೇಪಣೆ ಮಾತ್ರ ಭಾರತೀಯರ ಕೈಯಲ್ಲಿ ಇದೆ ಇದೆಂತಹ ನ್ಯಾಯ? ಈ ರೈಲುಗಳಿಂದ ಮೂರು ಮುಖ್ಯ ಪ್ರಯೋಜನಗಳುಂಟಾಗಿವೆ ಒಂದು ರಾಜಕೀಯ ಎರಡನೆಯದು ರಾಷ್ಟ್ರದಲ್ಲಿ; ಮಿಲಿಟರಿ ಬಡಾವಣೆಯ ಕ್ರಮ ಇವೆಲ್ಲಕ್ಕಿಂತಲೂ ಮುಖ್ಯವಾದುದು ಇಂಗ್ಲೆಂಡಿನ ತಯಾರಿಕೆಗಳ ಪ್ರೋತ್ಸಾಹ ಭಾರತೀಯ ರೈಲ್ವೆ ಮಾರ್ಗಗಳು ಬ್ರಿಟಿಷ ಕೈಗಾರಿಕೆಯ ಕೇಂದ್ರ ಸ್ಥಾನಗಳಿಗೆ ಬಹುಮತದ ಪ್ರೋತ್ಸಾಹವನ್ನು ಕೊಟ್ಟಿವೆ"

"ಸಹಕಾರ ಭಾವದಿಂದ ಎಸೆಂಬ್ಲಿಗೆ ಕಾಲಿಡಿ ಎಂದು ಹೇಳುತ್ತೀರಿ ಸಹಕಾರವೆಂದರೇನು? ಅದರ ಒಳ ಅರ್ಥವೇನು? ನಾಮಮಾತ್ರಕ್ಕೆ ಇಲ್ಲಿಗೆ ಬಂದು ನಿಮ್ಮ ಅಧಿಕಾರವಾಣಿಯನ್ನು ಆಲಿಸಿ ನಮ್ಮ ಬೇಡಿಕೆಗಳನ್ನು ವ್ಯರ್ಥಪಡಿಸಿಕೊಳ್ಳುವ ಆಚರಣೆಗೆ ನಾವು ಬಂದಿದ್ದೇವೇನು? ಈ ಸಭೆಯಲ್ಲಿ ನಾವು ಹೇಳುವುದೆಲ್ಲವೂ ಅರಣ್ಯರೋದನವಾಗಿ ಪರಿಣಮಿಸಿದೆ ಅದಕ್ಕೆ ಕಿವಿಗೊಡುವರೇ? ಇಲ್ಲ! ಇದೆಂತಹ ನ್ಯಾಯ" ಎಂದರು

ಸರ್ ಎನ್ ಎನ್, ಸರ್ಕಾರರು ಒಂದು ಆಕ್ಷೇಪಣೆಯನ್ನು ತಂದು "ಹಿಂದಿನ ರೂಲಿಂಗುಗಳಿಗನುಸಾರವಾಗಿ ವಿಷಯದ ಬಗ್ಗೆ ಮಿತವಾದ ಚರ್ಚೆ ಇರಬೇಕು" ಎಂದರು.

ಶ್ರೀ| ದೇಸಾಯಿಯವರು 'ಸೂಚನೆಯ ಪ್ರತಿಪಾದನೆಯ ನಂತರ ಪಾಯಿಂಟು ಆಫ್ ಆರ್ಡರುಗಳು ಬರುವಂತಿಲ್ಲ. ವಿಷಯ ಸಂಬಂಧವಾದ ಆಕ್ಷೇಪಣೆಗಳು ಮಾತ್ರ ಬರಬಹುದು' ಎಂದರು

ಆಗ ಅಧ್ಯಕ್ಷರು ಸರಕಾರರನ್ನು ಕುರಿತು 'ನಿಮ್ಮ ಆಕ್ಷೇಪಣೆಯನ್ನು ಈಗಿರುವ ವಿಷಯಕ್ಕೆ ಸಂಬಂಧಿಸಿ ಮಾತನಾಡಿ' ಎಂದರು

ಸರ್ ಸರ್ಕಾರರು ಮಾತನಾಡುತ್ತಾ ಶ್ರೀ| ದೇಸಾಯಿಯವರು ಇಂದಿನ ನ್ಯಾಯವಿಧಿಗಳಿಗನುಸಾರವಾಗಿ ಆಡಳಿತ ಕ್ರಮವನ್ನು ಟೀಕಿಸಬಹುದು. ಹೊರ ದೇಶದವರ ಮೇಲ್ವಿಚಾರಣೆ, ಅವರ ರಾಜಕೀಯ, ಮಿಲಿಟರಿ, ಪೋಲೀಸ್ ಇವುಗಳನ್ನು ಪ್ರಸ್ತಾಪಿಸುವುದು ನ್ಯಾಯಬದ್ಧವಾದ ಆಚರಣೆಯಲ್ಲ' ಎಂದರು.

ಅಧ್ಯಕ್ಷರು ಪಾಯಿಂಟ್ ಆಫ್ ಆರ್ಡರುಗಳ ವಿಷಯವಾದ ನೋಟೀಸನ್ನು ನಿರಾಕರಿಸಿದರು. ಆಗ ೧೨-೪೦ ಗಂಟೆಯಾದುದರಿಂದಲೂ ಶುಕ್ರವಾರದ ದಿನ ಎಂದಿಗಿಂತಲೂ ಮೊದಲೇ ವಿರಾಮ ಸಮಯಕ್ಕೋಸ್ಕರ ಏಳುವ ಸಂಪ್ರದಾಯವಿರುವುದರಿಂದಲೂ ೧½ ಗಂಟೆಯ ಕಾಲ ಸಭೆಯನ್ನು ಮುಂದುವರಿಸಲ್ಪಟ್ಟಿತು.

ಫಲಾಹಾರಾನಂತರ ಸಭೆಯು ಸೇರಿದಾಗ ಅಧ್ಯಕ್ಷರು ಸರ್ ಎನ್ ಎನ್ ಸರ್ಕಾರರ ಆಕ್ಷೇಪಣೆಯನ್ನು ಸಮರ್ಥಿಸಿ ರೂಲಿಂಗನ್ನು ಕೊಟ್ಟು ಕಟ್‌ಮೋಶನ್‌ಗಳ ಚರ್ಚೆಗಳಲ್ಲಿ ಮುಂದೆ ಬರುವ ಶಾಸನಗಳನ್ನು ಪ್ರಸ್ತಾಪಿಸಕೂಡದು ಸದಸ್ಯರು ತಮ್ಮ ಭಾಷಣಗಳಲ್ಲಿ ಗ್ರಾಂಟನ್ನು ನಿರಾಕರಿಸುವ ಸಮರ್ಥನವಾದುದರಿಂದ ಮುಂದೆ ಬರುವ ಶಾಸನಗಳ ಬಗ್ಗೆ ಹಲಕೆಲವು ಅಭಿಪ್ರಾಯಗಳನ್ನು ತಿಳಿಸಬಹುದು ಎಂದರು.

ಶ್ರೀ| ಭುಲಾಭಾಯಿಯವರು ತಮ್ಮ ಭಾಷಣವನ್ನು ಮುಂದರಿಸುತ್ತಾ 'ಲಾರ್ಡ್ ಲಿಟ್ಟನ್ನರು ಹಿಂದೆ ಒಂದು ಮಾತನ್ನು ಹೇಳಿದ್ದರು. ಭಾರತೀಯರು ತಮ್ಮ ಸ್ವಾಮರ್ಥ್ಯವನ್ನು ತೋರಿಸುವವರೆಗೂ ರೈಲುಗಳಲ್ಲಿ ಅವರಿಗೆ ಉದ್ಯೋಗ ದೊರೆಯಲಾರದು ಎಂಬುದಾಗಿ ಅವರು ತಿಳಿಸಿದ್ದರು ಭಾರತೀಯರ ಸ್ವಸಾಮರ್ಥ್ಯಕ್ಕೆ ಭಂಗ ತರುವಂತಹ ದುಷ್ಟ ಪದ್ಧತಿಯಿದು' ಎಂದರು.

ಡಾ| ಜಿಯಾಉದ್ದೀನರು ಮಾತನಾಡುತ್ತಾ 'ಡಿವಿಜನ್ ಪದ್ಧತಿಗಳನ್ನು ರೈಲ್ವೆ ಆಡಳಿತದಲ್ಲಿ ತೆಗೆದು ಡಿಸ್ಟ್ರಿಕ್ಟ್ ಪದ್ಧತಿಗಳನ್ನು ಜಾರಿಯಲ್ಲಿಡಬೇಕು. ಎಸ್ ಐ ಮತ್ತು ಬಿ ಬಿ ರೈಲ್ವೆಗಳ ಟಿಕೆಟ್ ಕಲೆಕ್ಟರ್ ಮತ್ತು ಟಿಕೇಟ್ ಎಗ್ಸಾಮಿನರ್ ಇವರುಗಳಿಗೆ ಅನೇಕ ಕೊರತೆಗಳಿವೆ. ಅವನ್ನು ಸರಿಪಡಿಸಬೇಕು' ಎಂದರು.

ಸರ್ ಭೋರರು ಉತ್ತರವೀಯುತ್ತಾ 'ಭಾರತೀಯರನ್ನು ರೈಲ್ವೆ ಕೆಲಸಕ್ಕೆ ತುಂಬಿಸುವ ಪದ್ಧತಿಯು ಸ್ವಲ್ಪ ಸಾವಕಾಶದಿಂದ ಹೊರಗೆ ಬಂತು ಆದರೂ ಅಭಿವೃದ್ಧಿಯು ಆಶಾದಾಯಕವಾಗಿದೆ ಕೈಗಾರಿಕೆಗಳಿಗೆ ಬೆಂಬಲಕೊಟ್ಟರೆ ಅದು ಪ್ರತ್ಯಕ್ಷವಾಗಿರಬೇಕು' ಎಂದರು

ಶ್ರೀ| ಭುಲಾಭಾಯಿಯವರ ಸೂಚನೆಯು ವೋಟಿಗೆ ಹಾಕಲ್ಪಟ್ಟು ೭೫ ಜನರು ಅಂಗೀಕರಿಸಿ ೪೭ ವೋಟುಗಳು ಸಿಗದೆ ಅದು ಸ್ವೀಕೃತವಾಯಿತು.

ವಂದೇ ಮಾತರಂ ಗೀತೆಯ ಮೇಲೆ ಮುಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ ಹೋಮ್ ಮೆಂಬರರ ಪ್ರತಿಪಾದನೆ

ಮುಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ ಹೋಮ್ ಮೆಂಬರರಾದ ಮಿ| ಆರ್ ಬಿ ಎಲ್‌ರವರು ರಾಯಬಹದ್ದೂರ್ ಚಿತಲೆಯವರ ಅಭಿಪ್ರಾಯಗಳಿಗೆ ಉತ್ತರವೀಯುತ್ತಾ 'ವಂದೇ ಮಾತರಂ' ವಿಷಯವಾಗಿ ಸರಕಾರದ ಅಭಿಪ್ರಾಯವೇನೆಂದು ವಿವರಿಸಿದರು ಹೋಮ್ ಮೆಂಬರ ಅಭಿಪ್ರಾಯಗಳು ಈ ರೀತಿಯಾದುವು 'ಸರಕಾರದವರು ಈ ವಿಷಯದಲ್ಲಿ ಒಂದು ಗೋಪ್ಯ ಪ್ರಕಟಣೆಯನ್ನು ಹೊರಡಿಸಿರುವುದು ನಿಜ 'ವಂದೇ ಮಾತರಂ' ಎಂಬ ಜಯಕಾರದ ಗೀತವನ್ನು ಹೇಳುವ ಸಭೆಗಳಲ್ಲಾಗಲಿ ಅಥವಾ ಕಾಂಗ್ರೆಸ್ ಧ್ವಜಾರೋಹಣವನ್ನು ಮಾಡುವ ಸ್ಥಳಗಳಲ್ಲಾಗಲೀ ಸರಕಾರೀ ಉದ್ಯೋಗಿಗಳು ಯಾವ ರೀತಿಯಿಂದ ವರ್ತಿಸಬೇಕೆಂಬ ವಿಷಯವು ಆ ಸರ್ಕ್ಯುಲಾರಿನಲ್ಲಿ ಅಡಕವಾಗಿದೆ 'ವಂದೇ ಮಾತರಂ' ಎಂಬ ಜಯಕಾರದ ಬಗ್ಗೆ ನೈತಿಕ ಅಥವಾ ರಾಜಕೀಯ ದೃಷ್ಟಿಯಿಂದ ಯಾವ ಆಕ್ಷೇಪಣೆಯೂ ಇಲ್ಲ ಹಿಂದೆ ಪ್ರಭುತ್ವದ ಉದ್ಯೋಗವನ್ನಲಂಕರಿಸಿದ್ದ ಶ್ರೀ| ಬಂಕಿಮಚಂದ್ರರು ತಮ್ಮ ಕಥೆಗಳೊಂದರಲ್ಲಿ ಈ 'ವಂದೇ ಮಾತರಂ' ಹಾಡನ್ನು ರಚಿಸಿದ್ದಾರೆ ಈಗ ೩೦ ವರ್ಷಗಳ ಹಿಂದೆ ದೇಶದ ಕ್ರಾಂತಿಕಾರರೂ ಉಗ್ರಗಾಮಿಗಳೂ ಹಿಂದಿನ ಅನೇಕ ಭಾವನೆಗಳನ್ನು ತೆಗೆದುಕೊಂಡಾಗ ಬಂಕಿಮ ಚಂದ್ರರ ಕಥೆಯಿಂದ ವಂದೇ ಮಾತರಂ ಪದವನ್ನು ತೆಗೆದುಕೊಂಡರು. ಆಗಿನಿಂದ ಇದಕ್ಕೆ ರಾಜಕೀಯ ಪ್ರಾಮುಖ್ಯತೆಯು ಬಂದುಬಿಟ್ಟಿದೆ. ಈ "ವಂದೇ ಮಾತರಂ ಎಂಬ ಹಾಡನ್ನು ಹಾಡುವಾಗ ಎದ್ದುನಿಲ್ಲಬೇಕಾಗಿದೆ ಕಡೆಯಲ್ಲಿ ಎಲ್ಲರೂ ಎದ್ದು ನಿಂತಾಗ ಇವರೆದ್ದು ನಿಂತುಕೊಳ್ಳಬೇಕಾಗುತ್ತದೆ ಇದರಿಂದ ಅನೇಕ ಕಡೆಗಳಲ್ಲಿ ಸರಕಾರಿ ಉದ್ಯೋಗಿಗಳಿಗೆ ತೊಂದರೆಗಳಾಗಿವೆ. ಈ ಹಾಡಿನಲ್ಲಿ ವಿಶೇಷವೇನೂ ಇಲ್ಲವೆಂದು ನನಗೆ ತೋರುತ್ತಿದೆ. "ನ್ಯಾಷನಲ್ ಆಂತೆಮ್" ಅಥವಾ ರಾಷ್ಟ್ರೀಯ ಹಾಡನ್ನು ಹಾಡುವಾಗ ಎಲ್ಲರೂ ಮರ್ಯಾದಾರ್ಥವಾಗಿ ಎದ್ದು ನಿಂತುಕೊಳ್ಳುವ ವಾಡಿಕೆ ಇದೆ".

ಮದರಾಸಿನಲ್ಲಿ ಅಮೆರಿಕನ್ ವೈಸ್ ಕೌನ್ಸಲರರಾಗಿರುವ ಅಧಿಕಾರಿಗಳು ಈ ಸಮಾಚಾರವು ತಿಳಿದೊಡನೆಯೇ ಅಪಘಾತದ ಪ್ರದೇಶಕ್ಕೆ ತ್ವರಿತವಾಗಿ ಮೋಟಾರಿನಲ್ಲಿ ಹೋದರು ಅವರು ಬಹಳ ಕಳವಳಗೊಂಡಿದ್ದಾರೆ.

ಗುಡುವನಚೇರಿ ಪೋಲೀಸಿನವರು ಪರಿಶೋಧಿಸಿ ಕ್ರಮ ಜರುಗಿಸಿ ಮರಣಗಳು ಮೋಟಾರ್ ಅನಾಹುತದಿಂದುಂಟಾದುವೆಂದು ತೀರ್ಮಾನಿಸಿದರು.

LOOK SHARP! LOOK AHEAD!

Murdeshwar's Banking Institute.

Pioneer Institute on the WestCoast Opens out Careers for Business men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates. Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,
Dip. Econ; F. R. Econ. S. (Lond.)
Principal.
Ganapathy High School Street,
Mangalore.

ಬೇಕಾಗಿದ್ದಾರೆ.

ನಿರುದ್ಯೋಗಿಗಳಾದ, ಉತ್ಸಾಹಿ ತರುಣರು ನಮ್ಮ ಟ್ಯಾಟ ಜೋಕ್ಸ್ ವಿಕ್ರಯಿಸುವುದಕ್ಕಾಗಿ ಬೇಕಾಗಿದ್ದಾರೆ. ತಿಂಗಳಿಗೆ ರೂಪಾಯಿ 80/-ಸಂಬಳ. ಸೆಕ್ಯುರಿಟಿ ಇಲ್ಲ. ಕೆಟಲಾಗು ಧರ್ಮಾರ್ಥ.

ಇಂಗ್ಲಿಷಿನಲ್ಲಿ ಇಲ್ಲಿಗೆ ಬರೆಯಿರಿ:—

National Trading Co.,
Jurabagon, Calcutta,(c)

ಶಿವರಾಮ ಕಾರಂತ ವಿರಚಿತ

"ಗ್ನಾನ—"

ಜ್ಞಾನದ ಮೇಲೆ ವ್ಯಂಗ ಟೀಕೆ.
ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.
ದಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ.
ಕ್ರೌನ್ ¼ ಆಕಾರದ 188 ಪುಟಗಳು.
ಉತ್ತಮ ತರಗತಿಯ ಹಾಸ್ಯ.
ಬೆಲೆ ರೂ. 1—4—0.
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು
ಇಲ್ಲಿಂದ ಪಡಕೊಳ್ಳಬಹುದು.

ನೋಟೀಸು.

ಬಾಲಗ್ರಹದಿಂದ ಮತ್ತು ಗ್ರಹಣಿಯಿಂದ ಮೃತ್ಯುವಿಗೆ ತುತ್ತಾಗುವ ಮಕ್ಕಳನ್ನು ಕಾಪಾಡಿಕೊಳ್ಳಿರಿ.

ಎಲ್ಲಾ ತರದ ಬಾಲಗ್ರಹ-ಪೀಡೆಯಿಂದ ಸ್ಮೃತಿ ತಪ್ಪಿ ಮೂರ್ಛೆ ವಗೈರೆ ಹೊಂದಿರುವ ಬಾಲಕರಿಗೆ ಮತ್ತು ನಾನಾ ವಿಧದ ಗ್ರಹಣಿಗಳಿಗೆ ಮಂತ್ರ ಸಾಮರ್ಥ್ಯದಿಂದಲೂ ದಿವ್ಯ ಔಷಧಿಯಿಂದಲೂ ಚಿಕಿತ್ಸೆಮಾಡಿ ಗುಣಪಡಿಸುತ್ತೇವೆ. ತಿರಾ ಗರೀಬರಿಗೆ ಪ್ರತಿಫಲವಿಲ್ಲದನೇ ಔಷಧಿ ಕೊಡುತ್ತೇವೆ.

ವಿಳಾಸ—

ದೇವಣ್ಣ ನಾರಾಯಣ ಕಿಣಿ.
ಕೋರ್ಟು ರಸ್ತೆ, ಕಾಸರಗೋಡು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ಹೊಸ ರಾಶಿ ಅಕ್ಕಿ ...	3—8	3—12
ಹೊಸ ಮುಸ್ಕಿ ...	3—12	4—6
ಹೊಸ ಗುಡ್ಡು ...	3—10	4—0
ಊರ ಅವ್ವಲ್ ಬೆಳ್ತಿಗೆ ...	4—0	4—12
ರಂಗೂನು ಬಿ. ಸೋ. ೧ಕ್ಕೆ...	5—12	6—4
ಎಲ್ಲೂರು ಬಿ. ಮು. ೧ಕ್ಕೆ...	4—2	4—4
ಗೋಧಿ ಗೋಣಿ ೧ಕ್ಕೆ ...	10—0	12—8
ತೊಗರಿ ಗೋಣಿ ೧ಕ್ಕೆ ...	9—6	10—0
ಹುರುಳಿ ಗೋಣಿ ೧ಕ್ಕೆ ...	6—0	7—8
ಕಡಲೆ ಗೋಣಿ ೧ಕ್ಕೆ ...	8—0	10—8
ತೊಗರಿಬೇಳೆ ಗೋಣಿ೧ಕ್ಕೆ...	10—0	17—0
ಉದ್ದು ಗೋಣಿ ೧ಕ್ಕೆ ...	9—0	9—8
ಹೆಸರು ಗೋಣಿ ೧ಕ್ಕೆ ...	9—0	9—6
ಉಂಡೆಬೆಲ್ಲ ಖಂಡಿ ೧ಕ್ಕೆ ...	32—8	35—0
ಉಪ್ಪು ಗೋಣಿ ೧ಕ್ಕೆ ...	4—8	5—0
ಕೊಬ್ರಿ ಖಂಡಿ ೧ಕ್ಕೆ ...	48—0	55—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ...	24—8	26—0
ಎಳ್ಳಿಂಡಿ ಖಂಡಿ ೧ಕ್ಕೆ ...	40—0	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ...	8—10	4—11
ಎಳ್ಳೆಣ್ಣೆ ಮುಡಿ ೧ಕ್ಕೆ ...	5—2	5—10
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ...	5—7	5—7
ಮೋರಿಸ ಸಕ್ಕರೆ ಮ. ೧ಕ್ಕೆ...	3—6	3—8
ಪ್ರೋಣಿಗೆ ...	5—0	6—4
ಸಾಸಿವೆ ಮುಡಿ ೧ಕ್ಕೆ ...	4—12	5—4
ಕಾಳುಮೆಣಸು ಖ. ೧ಕ್ಕೆ ...	127—8	130—0
ಯೇಲಕ್ಕಿ ಮಣ ೧ಕ್ಕೆ ...	24—0	35—0
ಗೇರುಬೀಜ ಮು. ೧ಕ್ಕೆ ...	3—8	8—12
ಕಚ್ಚಿಣ ಖಂಡಿ ೧ಕ್ಕೆ ...	42—0	44—0
ತಾಂಬ್ರತಗಡು ಮ. ೧ಕ್ಕೆ...	9—0	9—4
ತಾಂಬ್ರಪಾತ್ರೆಗಳು ಮ. ೧ಕ್ಕೆ	12—8	14—0
ಚೀನಬೆಳ್ಳಿ ಸೇರು ೧ಕ್ಕೆ ...	14—12	15—0
ಹಿತ್ತಾಳೆ ತಗಡು ಮ. ೧ಕ್ಕೆ...	9—2	9—4
ಪವನು ೧ಕ್ಕೆ ...	21—8	21—8
ಹುಣಸೆ ಹುಳಿ ಖಂಡಿ ೧ಕ್ಕೆ	27—8	40—0
ನೇಟಿವ್ ಕಾಫಿ ಖಂಡಿ ೧ಕ್ಕೆ	185—0	190—0
ಪ್ಲಟೇರಿ ಕಾಫಿ ಖಂಡಿ ೧ಕ್ಕೆ...	275—0	285—0
ಹಳೆ ಅಡಿಕೆ ...	100—0	120—0
ಹೊಸ ಅಡಿಕೆ ...	75—0	96—0

Standard Furniture Co. Ltd.

KALLAI, MALABAR

The BEST HOUSE for FURNITURE.

BRANCHES:—

Madras:—34—35, General Patters Road, Mount Road.

Trichinopoly:—11, Promenade Road, Cantt.

NEW ARRIVALS.

Medicines.

Dr. Schuessler's Twelve Tissue Remedies 5 gr. bot. As. 4/-
Homœopathy Medicines 5 gr. bot. As. 5/—
Sugar of Milk Dr Schwabe's original bot. 1 lb Rs. 2/-
Haarlem Oil—a world-renowned remedy As. 8/-per phial.
Dr. Haelo's New Curative Earth—Radium Cure Rs. 4/-per lb.
Dr. Schwabe's other special remedies are always in stock

Please consult us for your requirements.

Kanarese Book a Family Guide to Biochemistry Re. 1/-
,, Domestic Homoeopathy Rs. 1-4/-

If you own these two Books you will be able to pick up treatment and administer Tissue & Homœopathy Medicines successfully without consulting others.

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As. 2/6
Delightful in aroma, charming in appearance. Please try.

Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc., and stock.

Pipes and pipe fittings at cheap prices. Coir Mats and Mattings Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.

For Futher particulars please write to:—

Basel Mission Book & Tract Depository,
Mangalore, S. K. or Hubli, S. M.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,
ವೆನ್‍ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಶಾಲಿವಾಹನ ಬಿ। ಶಕ ೧೮೫೬ನೆಯ ಭಾವ ಸಂವತ್ಸರದ ಮಾಘ ಬ। ೧೪ಶನಿವಾರದಿಂದ ಫಾಲ್ಗುಣ ಶು। ೪ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯುಸಿಂಹಸೋಣ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
2	ಶನಿ	೧೩	೫೩	ಉ. ಷಾಢಾ	೧೪	೧೮	*ಮೀನ ಸಂಕ್ರಮಣ
3*	ರವಿ	೧೪	೧೮	ಶ್ರವಣಾ	೬೧	೧೯	
4	ಸೋಮ	೧೫	೧೨	ಧನಿಷ್ಠಾ	೬	೨೦	
5	ಕುಜ	೩೦	೫	ಶತಭಿಷಾ	೭	೨೧	
6	ಬುಧ	೧	೦	ಪೂ. ಭಾದ್ರ	೩೫	೨೨	
7	ಗುರು	೨	೫೧	ರೇವತಿ	೫೩	೨೩	
8	ಶುಕ್ರ	೪	೪೭	ಅಶ್ವಿನೀ	೫೧	೨೪	

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟಕೂಡಲೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಹಣವನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ ಅಗತ್ಯವಾಗಿ ತಿಳಿಸಬೇಕು.

ತೆರೆಯ ಮರೆಯಲ್ಲಿ

ಅಥವಾ

ಅಂತರಂಗ

ಲೇಖಕರು.—ಶ್ರೀ ಶಿವರಾಮ ಕಾರಂತರು.

೭ ತಪ್ಪಾರದು?

ನೀಲವ್ವನು ಬಡ ಕುಟುಂಬದಲ್ಲಿ ಹುಟ್ಟಿದವಳು. ಅವಳ ಪೂರ್ಣ ಹೆಸರು ನೀಲಾಮಣಿಯೆಂದು. ಈಗ ನೀಲವ್ವನ ಹೆಸರು ನಮ್ಮ ಶಹರಿನಲ್ಲಿ ತಿಳಿಯದ ಕೂಸುಗಳು ಸಹ ಇಲ್ಲೆನ್ನಬಹುದು. ಆದರೆ ನೀಲವ್ವನ ಬಾಲ್ಯವು ಜಕ್ಕೂ ನೀಲವಾಗಿರಲಿಲ್ಲ. ನೀಲವ್ವನು ನೋಡುವುದಕ್ಕೆ ಬಿಳಿದಾಗಿದ್ದಳು. ಈಗ ಅವಳ ಹೆಸರು ಎಷ್ಟು ಪ್ರಸಿದ್ಧಿಯಲ್ಲಿದೆಯೋ ಆಗ ಅಷ್ಟೇ ಮರೆಯಲ್ಲಿತ್ತು. ನೀಲಮ್ಮನೆಂಬ ಹೆಸರು ನಮ್ಮ ಊರಿನಲ್ಲಿ ಇದೆಯೋ ಎಂಬಷ್ಟು ಮರೆಯಲ್ಲಿತ್ತು. ಕಾರಣವಿಷ್ಟೆ: ನೀಲವ್ವನು ಹಳ್ಳಿಯ ಗುಡಿಸಿಲೊಂದರಲಿ ಹುಟ್ಟಿ ಬೆಳೆದವಳು. ಮಂಗಳೂರಿಗೆ ಬಲು ದೂರ ಬೆಳತಂಗಡಿಯಲ್ಲಿ ಅವಳು ಹುಟ್ಟಿದಳು. ಅವಳಿಗೆ ಹಿರಿಯಣ್ಣನು ಒಬ್ಬನಿದ್ದನು. ಅವನ ಹೆಸರು ನರಸಿಂಹನೆಂದು. ಈ ಎರಡೆ ಮಕ್ಕಳು ಆಗ ಬೆಳತಂಗಡಿಯಲ್ಲಿ ಶಾಲಾ ಮಾಸ್ತರಿಕೆಯನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದ ವೆಂಕಟರಾಯರ ಹೊಟ್ಟೆಯಲ್ಲಿ ಹುಟ್ಟಿದುವು. ಮಕ್ಕಳ ಮೇಲಿನ ಪ್ರೇಮವು ಅವರಿಗೆ ಅಧಿಕವಾಗಿತ್ತು. ತಮ್ಮ ಮಕ್ಕಳಿಗೆ ಒಂದೇ ಒಂದು ಏಟನ್ನು ಕೊಟ್ಟವರಲ್ಲ ಅವರು. ಆ ಪ್ರೇಮವು ಶಾಲೆಯ ಇನ್ನಿತರ ಬಾಲಕರ ಮೇಲೆಯೂ ಇತ್ತು. ಆಗ ಅವರ ಶಾಲೆಯಲ್ಲಿ ೨೦–೩೦ ಗಂಡು ಹುಡುಗರು ಪಾಠ ಕಲಿಯುತ್ತಿದ್ದರು. ಅವರಲ್ಲಿ ನರಸಿಂಹನೂ ಒಬ್ಬನು. ನರಸಿಂಹನು ಶಾಲೆಯಿಂದ ಮನೆಗೆ ಬಂದನೆಂದರೆ ಪುಸ್ತಕ ಹಿಡಿದು ಕುಳಿತುಕೊಳ್ಳುವನು. ತನ್ನ ಪಾಠಪುಸ್ತಕದಲ್ಲಿನ ಕಥೆಗಳನ್ನು ತಂಗಿಗೆ ಓದಿ ಹೇಳುವನು. ಇದರಿಂದ ಕಥೆಯ ಮೇಲಣ ಆಸೆಗಾಗಿ ನೀಲವ್ವನು ಬರಹ ಕಲಿಯಲು ಅಪೇಕ್ಷಿಸಿದಳು. ಆಗಿನ ಕಾಲದ ಮಾಸ್ತರರಾಗಿದ್ದ ಅವರು, 'ಅಪ್ಪನು ಶಾಲೆಗೆ ಬರುತ್ತೇನೆ' ಎಂದು ಹಟ ಹಿಡಿದಾಗ ಬರಲು ಉತ್ತೇಜನ ಕೊಡುತ್ತಿರಲಿಲ್ಲ. ಆಗ ಹೆಣ್ಣು ಹುಡುಗಿಯರು ಶಾಲೆಗೆ ಬಂದು ಓದು ಕಲಿಯುವುದು ಅಪೂರ್ವವೇ. ಅಂತ, ಇನ್ನೆಲ್ಲಿ ಅಲ್ಲದಿದ್ದರೂ ಆ ಊರಿನಲ್ಲಿ ಹೆಣ್ಣು ಹುಡುಗಿಯರು ಓದು ಬರಹ ಕಲಿಯುತ್ತಿದ್ದಿಲ್ಲ. ಮಾಸ್ತರ ವೆಂಕಟರಾಯರ ಮನಸ್ಸಿನಲ್ಲಿ "ಗಂಡು ಹುಡುಗರಿಗೆ ಕೊಟ್ಟಿ ಮನೆ ಇರುಗಲು ನಾಲ್ಕು ಬರಹ ಬೇಕಾಗಬಹುದು. ಆದರೆ ಹೆಂಗಸರಿಗೆ ಬರಹ ಏಕೆ?" ಎಂದಿತ್ತು. "ಹೆಂಗಸಿಗೆ ಉದ್ಯೋಗಕ್ಕಾಗದ ಬರೆಯ ಲೆಕ್ಕವೇನು? ಅನ್ನುತ್ತಿದ್ದರು. ಹಾಗೆ ಬೇರೆಯವರಿಗೆ ಒರೆಯುತ್ತಿದ್ದರೆ ?" ಎಂದು ಅವರ ಬಾಯಿಯಿಂದ ಬರುತ್ತಿತ್ತು. ಹೀಗಾಗಿ ನೀಲಮ್ಮನನ್ನು ಶಾಲೆಗೆ ಒಯ್ಯಲು ಅವರು ಅಷ್ಟು ಇಷ್ಟಪಡಲಿಲ್ಲ. ಆದರೆ ನೀಲಮ್ಮಗೆ ಕಥೆಗಳ ರುಚಿ ಹಿಡಿದಂತೆ ಅಣ್ಣನಿಂದಲೇ ಕದ್ದು ಕದ್ದು ಬರಹ ಕಲಿತುಕೊಂಡಳು. ಅವಳ ತಲೆ ಚುರುಕಿದ್ದುದರಿಂದ, ಒಂದು ವರುಷದೊಳಗೆ ಎಂಥ ಪುಸ್ತಕವನ್ನೂ ತಿರುವುತ್ತಿದ್ದಳು. ಆಗ ಅವಳಿಗೆ ಒಂಭತ್ತು ವರುಷ. ಒಂದು ದಿನ ತಂದೆಯು, ಮಗಳು ಸರಸರನೇ ನಾಲ್ಕನೆಯ ಪುಸ್ತಕ ಓದುವುದನ್ನು ಕಂಡೇ ಕಂಡರು. ಅವರ ಮನಸ್ಸಿಗೆ ಏನಾಯಿತೋ ಏನೋ. 'ಇನ್ನು ತಡೆಯುವುದು ಉಳಿದಿಲ್ಲ' ವೆಂದು ಅವಳನ್ನು ಶಾಲೆಗೆ ಒಯ್ದರು. ಆ ಕಾಲದಲ್ಲಿ ಊರವರ ಟೀಕೆ ಅದಕ್ಕೆ ಇತ್ತು—"ಏನು ಮಗಳಿಗೆ ಲಗ್ನ ಮಾಡಿಸುವ ಯೋಚನೆಯಿಲ್ಲವೇನು?" ಎಂದು ಊರವರು ಅನ್ನುತ್ತಿದ್ದರು.

ನೀಲವ್ವನ ಆಸಕ್ತಿ ಬಹು ವಿಧದಿಂದ ಹರಿಯುತ್ತಿತ್ತು. ಅವಳ ತಾಯಿಯನ್ನುವಂತೆ ಅವಳಲ್ಲಿ ಕನ್ಯಾಲಕ್ಷಣವಿರುವುದಕ್ಕಿಂತ ಅಧಿಕವಾಗಿ "ಗಡುಸು" ಲಕ್ಷಣವೇ ಹೆಚ್ಚು. ಶಾಲೆಯಲ್ಲಿ ಇತರ ಹುಡುಗರೊಡನೆ ಆಟವಾಡಲು ನಾಚುತ್ತಿರಲಿಲ್ಲ. ಒಂದು ದಿನ ಇತರ ಬಾಲಕರು ಸೇರಿ, ಕಟ್ಟಿಗೆಯ ತುಂಡುಗಳನ್ನು ಕೂಡಿಸಿ ಒಂದು ಚಿಕ್ಕ ಮನೆಯನ್ನು ಕಟ್ಟುತ್ತಿದ್ದರು. ಅವರಲ್ಲಿ ನರಸಿಂಹನೂ ಒಬ್ಬನು. ಅಣ್ಣನಿರುವುದನ್ನು ಕಂಡು ತಂಗಿಯೂ ಓಡಿದಳು. ಉಳಿದ ಬಾಲಕರು ಕೇಕೆಹಾಕಿ(?)—'ನೀನು ತಡವಾಗಿ ಬಂದೆ. ನಿನ್ನನ್ನು ನಮ್ಮ ಮನೆಗೆ ಸೇರಿಸಿಕೊಳ್ಳುವುದಿಲ್ಲ. ಬೇರೆ ಮನೆಯನ್ನು ಕಟ್ಟು' ಎಂದರು. ನೀಲಮ್ಮಗೆ ಸಿಟ್ಟು ಬಂದಿತು. ಮನೆಗೆ ಓಡಿ ಹೋಗಿ ಒಂದು ಕತ್ತಿಯನ್ನು ತಂದಳು. ಬೇಗ ಬೇಗನೆ ಸುತ್ತುಮುತ್ತಲಿನ ಮರವನ್ನೇರಿ ಚಿಕ್ಕ ಪುಟ್ಟ ಗೆಲ್ಲುಗಳನ್ನು ಕತ್ತರಿಸಿ ತಾನೇ ಒಂದು ಗುಡಿಸಲನ್ನು ಮರೆಯಲ್ಲಿ ಕಟ್ಟಲು ಆರಂಭಿಸಿದಳು. ಅದು ಪೂರ್ಣವಾಗಲು ಉಳಿದ ಬಾಲಕರನ್ನು ಕರೆದು ತೋರಿಸಿ "ನನ್ನಿಂದಾಗುವುದಿಲ್ಲವೇ?" ಎಂದುಕೊಳ್ಳುವ ಮನಸ್ಸು ಅವಳಿಗಿತ್ತು. ಅಂತೆಯೇ ಅತಿ ಚೆಲುವಿನ ಕೆಲಸದಿಂದ ಮನೆಯನ್ನು ಕಟ್ಟಿದಳು. ಬಳಿಯ ಗುಡ್ಡಕ್ಕೆ ಹೋಗಿ, ಮನೆಯನ್ನು ಹೊದೆಯಿಸಲು ಬೇಕಾದ ಹುಲ್ಲನ್ನು ಸಂಗ್ರಹಿಸಿ ತಂದು ಆ ಕೆಲಸವನ್ನು ತೊಡಗಿದಳು. ಇತ್ತ ತಂದೆಯು ಮಗಳನ್ನು ಮನೆಯಲ್ಲಿ ಕಾಣದೆ ಹುಡುಕ(?)ಹೊರಟನು(?). ಎದುರಿಗೆ ನೀಲವ್ವನ ದರುಶನವಾಯಿತು. ಅವಳ ಮಗ್ಗುಲಲ್ಲಿ ಮನೆಯು ಕಾಣಿಸಿತು. ತಡೆಯಬಾರದ ಕೋಪ ಬಂದಿತು. "ನಾಳೆ ಗಂಡನ ಮನೆಗೆ ಹೋಗುವವಳು ನೀನು. ಅಚಾರಿ* ಕೆಲಸವನ್ನು ಮಾಡುತ್ತಿದ್ದೀಯಾ?" ಎಂದು ಗದರಿಸಿ ಎಳೆದುಕೊಂಡು ಹೋದರು. ನೀಲವ್ವಗೆ ಅಳುವಿನ ಹಬ್ಬ ಆ ದಿನ. ತನ್ನ ತಪ್ಪೇನೂ ತಿಳಿಯಲಿಲ್ಲ. ಅಲ್ಲದೆ ತನ್ನ ಸಿದ್ಧತೆಯಾಗಿ ಹುಡುಗರನ್ನು ನಾಚಿಸಬೇಕೆಂದಿರುವ ಗಳಿಗೆಯಲ್ಲೇ ಮನೆಯು ನೆಲಸಮವಾದುದಕ್ಕೆ ಅವಳು ತೀರ ನೊಂದುಕೊಂಡಳು. ಎರಡು ದಿನಗಳ ವರೆಗೆ ಅವಳು ಯಾರೊಡನೆಯೂ ಸರಿಯಾಗಿ ಮಾತನಾಡಲು ಸಹ ಇಲ್ಲ. ಮುಂದೆ ಆ ರೀತಿಯ "ಗಂಡುಸರ" ಆಟಗಳಿಗೆ ಅವಳು ಹೋಗಲಿಲ್ಲ.

ನೀಲವ್ವನಿಗೆ ಹಾಡುಗಳ ಹುಚ್ಚು ತುಂಬ. ಊರಲ್ಲಿ ಕೇಳಿರುವ ಯಕ್ಷಗಾನದ ಹಾಡುಗಳನ್ನು ಅವಳು ಬಿಡದೆ ಕಲಿತಿದ್ದಳು. ಆದರೆ ಯಾರ ಮುಂದೆ ಹಾಡಲೂ ಧೈರ್ಯವಿರುತ್ತಿದ್ದಿಲ್ಲ. ಒಂದು ದಿನ ಅವಳ ಅಣ್ಣನು ಹೊಸ ಹಾಡೊಂದನ್ನು ಕಲಿತುಕೊಂಡು ಬಂದನು. ಅವನು ಒಂಟಿಯಾಳಕ್ಕೆ(?) ತಂದೆಯೊಡನೆ ಎಲ್ಲಿಗೋ ಹೋಗಿದ್ದನು. ಅಲ್ಲಿ ಊರಿನ ವೀರರು ಸೇರಿ ಒಂದು ನಾಟಕವಾಡಿದ್ದರು. ನಾಟಕವು 'ಶಕುಂತಲಾ ಪರಿಣಯ'. ತಾನು ಕಲಿತ ಯಕ್ಷಗಾನಕ್ಕೂ ಅಲ್ಲಿನ ಗಾನಕ್ಕೂ ಇರುವ ಆ ತರವನ್ನು ಅವನು ಕಂಡನು. ಅವನ ಮನಸ್ಸಿನಲ್ಲಿ ಅಲ್ಲಿನ ಒಂದು ಹಾಡು ಅಂಟಿತು. ದುಷ್ಯಂತನಾಡುವ ಹಾಡದು. ಅದನ್ನು ಮನಸ್ಸಿನಲ್ಲಿಯೇ ಉರು ಹಾಕಿ ಕಲಿತುಕೊಂಡನು. ಮನೆಗೆ ಬರಲು ತನ್ನ ಸರಾಕ್ರಮ(?) ಮೆರೆಯಿಸಲು, ಕೆಂಪಡಿಯ ಕದವನ್ನು ಮುಚ್ಚಿ ಸೀರೆಯೊಂದನ್ನು ತಲೆಗೆ ಸುತ್ತಿ ರುಮಾಲು ಮಾಡಿ ತನ್ನ ಶಾಲೆಯ ಅಂಗಿಯನ್ನೆಲ್ಲಾ ಹಾಕಿ ದುಷ್ಯಂತನ ಪಾರ್ಟನ್ನು ಮಾಡಿದನು. ಅದನ್ನು ಕಾಣಲು ಇನ್ನಾರಿಲ್ಲ. ನೀಲವ್ವ ಮಾತ್ರ. ನೀಲವ್ವಗೆ ಆ ಹೊಸ ಹಾಡು ಈ ನಾಟಕದ ರೀತಿ ಎಲ್ಲವನ್ನೂ ಕಂಡು ಮನಸೂರೆಯಾಯಿತು. ಅವನಿಂದ ಆ ಹಾಡನ್ನು ತಾನು ಕಲಿತಳು. ಒಂದು ದಿನ ಅವನ ತೆ ತಾನು ಸೀರೆಯನ್ನು ರುಮಾಲಾಗಿ ತಲೆಗೆ ಕಟ್ಟಿಕೊಂಡು ಗಂಡು ವೇಷ ಹಾಕಿ, ಏಕಾಂತದಲ್ಲಿ(?) ಹಾಡಿದಳು. ಆ ದಿನ ಅದನ್ನು ಯಾರಿಗೂ ತೋರಿಸಲಿಕ್ಕಿಲ್ಲ. ತಂದೆಗೆ ತೋರಿಸುವಂತಿದ್ದಿಲ್ಲ. ಅಣ್ಣನು ಮನೆಯಲ್ಲಿದ್ದಿರಲಿಲ್ಲ. ಆದರೆ ಉಕ್ಕಿ ಬರುವ ಉತ್ಸಾಹ ಮುಚ್ಚಿಡಲು ಹೊಸ ಹುರುಪನ್ನು ಸವರಿಕೊಂಡ ಅವಳು ತಾಯಿಯ ಮುಂದೆ ದಿಟ್ಟತನದಿಂದ ಬಂದು ನಿಂತಳು. ಅಣ್ಣ ತಮ್ಮಂದಿರ ಮುಖ ಪರಿಚಯ ಒಂದೇ ಇತ್ತು. ತಾಯಿಗೆ ಅದು ನರಸಿಂಹನೆಂದು ಕಂಡಿತು. ನಿನ್ನ ನಾಟಕ ಹುಳಾಯಿತು. ಅವರಿಗೆ ಹೇಳಿದರೆ ಪೆಟ್ಟಾಗುತ್ತದೆ. ಮಕ್ಕಳಿಗೆ ಇಲ್ಲದ್ದನ್ನೆಲ್ಲಾ ತೋರಿಸುವುದು. ಅವುಗಳು ಇಲ್ಲಿ ಹುಚ್ಚು ಹುಚ್ಚಾಗಿ ಕುಣಿಯುವುದು' ಎಂದಳು. ಥಕ್ಕನೆ ನರಸಿಂಹನಿಗೆ ತಾನೊಂದು ಕೆಲಸ ಹೇಳಿರುವುದು ನೆನಪಾಗಿ ಬೇಸರದೊಂದಿಗೆ ಸಿಟ್ಟನ್ನು ಸೇರಿಸಿ 'ನರಸಿಂಹಾ ಅಲ್ಲಿಗೆ ಹೋಗಿ ಬಾ ಎಂದರೆ 'ಇಲ್ಲೇ ಆಟವಾಡುತ್ತೀಯಾ? ತಂದೆಯವರು ಬರಲಿ'—ಎಂದಳು. ನೀಲವ್ವನಿಗೆ ಕಿಸಕ್ಕನೆ ನಗು ಬಂದಿತು. ಅಷ್ಟರಲ್ಲಿ ವೆಂಕಟರಾಯರ ಬರವು ಆಯಿತು. ಅವರಿಗೆ ನೀಲವ್ವನ ಗುರುತು ಕೂಡಲೇ ಹತ್ತಿ—ಹಿಡಿದು ನಾಲ್ಕೇಟನ್ನು ಹೊಡೆದರು. "ವೇಷ ಹಾಕಿ ಹಾಡುತ್ತೀಯಾ? ನಾಳೆ ಸೂಳೆಯಾಗಿ ಸಂಪಾದನೆಗೆ ಹೋಗುವಿಯಾ?" ಎಂದು ಚೆನ್ನಾಗಿ ಗದರಿಸಿದರು. ನೀಲವ್ವನಿಗೆ ಅಳು ಬಂದಿತು. ಮಾತಿನ ಅರ್ಥ ತಿಳಿಯದಿದ್ದರೂ "ತಾನು ಮದುವೆಯಾಗುವ ಹುಡುಗಿ ಹೀಗೆಲ್ಲಾ ಮಾಡಬಾರದು"—ಎಂದು ತಿಳಿದಳು. ಅಂದಿನಿಂದ ನೀಲವ್ವನ ಸ್ವರವು ತಗ್ಗಿತು.

ಅದೇ ವರುಷ ವೆಂಕಟರಾಯರು, ಸಾಹಸಪಟ್ಟು ನೀಲವ್ವನಿಗೆ ಒಬ್ಬ ಗಂಡನನ್ನು ನಿಶ್ಚಯಿಸಿ ತಮ್ಮ ಹೊರೆಯನ್ನಿಳಿಸಿಕೊಂಡರು. ವರನ ಹೆಸರು ಶ್ರೀಪಾದನೆಂದು. ಶ್ರೀಪಾದನು ಮಂಗಳೂರು ಮುನಿಸಿಪಲ್ ಶಾಲೆಯೊಂದರಲ್ಲಿ ಶಾಲಾ ಮಾಸ್ತರನು. ವೆಂಕಟರಾಯರಿಗೆ ತನ್ನಂತಿರುವ ಅಳಿಯನು ದೊರೆತುದಕ್ಕಾಗಿ ಆನಂದವಾಯಿತು. ದೂರವಾಯಿತೆಂದು ತಾಯಿಗೆ ಚಿಂತೆಯಾದರೂ ಅಳಿಯನು ಪುತ್ಥಳಿ ಚಿನ್ನದಂಥವನೆಂದು ಅವರು ಆನಂದವನ್ನೇ ಪಟ್ಟರು. ಮಗುವನ್ನು ಕಳುಹಿಸಿಕೊಡುವ ಗಳಿಗೆಯಲ್ಲಿ ಕಣ್ಣೀರನ್ನು ಕರೆಯುತ್ತ—"ನೀಲವ್ವ ನೀನೀಗ ದೊಡ್ಡವಳು. ಗಂಡನ ಮನೆಯಲ್ಲೂ ಇಲ್ಲಿ ಆಡಿದ ಹಾಗೆ ಆಡಿ ನಮಗೊಂದು ಅಪಕೀರ್ತಿ ತರಬೇಡ"—ಎಂದರು. ನೀಲವ್ವನು "ಆಯಿತಮ್ಮ" ಎಂದು ಅಳುತ್ತ ತಂದೆತಾಯಿಗಳ ಕಾಲನ್ನು ಮುಟ್ಟಿ ಆಶೀರ್ವಾದ ಪಡೆದು ಹೊರಟಳು. ಆಗ ದೊಡ್ಡವಳಾದ ನೀಲವ್ವಗೆ ೧೨ ವಯಸ್ಸು.

* ಬಡಗಿ ಕೆಲಸ

ಗಂಡನ ಮನೆಗೆ ಹೋದ ಬಳಿಕ ಅವಳು ಎರಡು ಮೂರು ಬಾರಿ ತವರುಮನೆಗೆ ಬಂದು ಹೋಗಿದ್ದಳು. ಕೊನೆಯಬಾರಿಯೆಂದರೆ ತನ್ನ ಪ್ರಥಮ ಬಾಣಂತಿತನವನ್ನು ಕಂಡಾಗ, ಆದರೆ ಗಂಡನಿಗೆ ಮೆಚ್ಚಿಗೆಯಾಗುವ ರೀತಿಯಲ್ಲಿ ಮೆಚ್ಚಾಗಿ ನಡೆಯುತ್ತಿದ್ದಳು. ಗಂಡು ಹುಡುಗರ ಆಟಪಾಟಗಳನ್ನೆಲ್ಲಾ ಮರೆತುಬಿಟ್ಟು ತನ್ನ ಹೊಣೆಯನ್ನು ತಿಳಿದು ಗಂಡನ ಆದರಕ್ಕೆ ಪಾತ್ರಳಾದಳು. ಶ್ರೀಪಾದನು ಸಹ ಮಾವನಿಗೆ ಒಂದು ಪತ್ರವನ್ನು ಬರೆದಿದ್ದನು. "ನಿಮ್ಮ ಹುಡುಗಿಯು ನನ್ನ ಪಾಲಿಗೆ ದೊರೆತುದು ನನ್ನ ಪೂರ್ವಜನ್ಮದ ಪುಣ್ಯ"ವೆಂದು. ಈ ಆನಂದಗಳಿಗೆಯನ್ನು ಕಂಡು ಅವರು ಸತ್ತರು. ಸತ್ತರೆಂದರೆ ಒಬ್ಬರೇ ಸಾಯಲಿಲ್ಲ. ೧೦–೧೨ ವರುಷಗಳ ಹಿಂದೆ ಊರಿಂದೂರನ್ನೇ ಕೊಚ್ಚಿಕೊಂಡು ಹೋದ 'ಇನ್‌ಫ್ಲುಯೆಂಜಾ' ಬೇನೆಯು ಮಾವನ ಕುಟುಂಬವನ್ನು ಹಾರಿಸಿಕೊಂಡು ಹೋಯಿತು. ಅವರ ವಂಶವು(?) ಒಂದೇ ಹುಳುವೂ ಉಳಿಯಲಿಲ್ಲ. ದಂಪತಿಗಳು ತೀರ ಸಾಹಸದಿಂದ ತಮ್ಮ ಜೀವನದ ಈ ತಾಪವನ್ನು ಸಹಿಸಿಕೊಂಡರು. ನಿಜಕ್ಕೂ ಶ್ರೀಪಾದನಿಗೆ ಹೆಂಡತಿಗಾದುದಕ್ಕಿಂತಲೂ ಇಮ್ಮಡಿ ವ್ಯಥೆಯಾಗಿತ್ತು. ಕಾರಣವಿಷ್ಟೆ: ಅವನಿಗೆ ಇತರ ಸಂಬಂಧಿಗಳಾರೂ ಇರಲಿಲ್ಲ. ಹೀಗಾಗಿ ಚಿಕ್ಕ ದಿನದಲ್ಲಿ ಕಳೆದುಕೊಂಡ ತಂದೆತಾಯಿಗಳ ಮೇಲಿನ ಪ್ರೇಮವನ್ನು ಅತ್ತೆ ಮಾವಂದಿರ ಮೇಲೆ ಇರಿಸಿದ್ದನು. ಈಗ ಅದೂ ಇಲ್ಲದಾಯಿತು.

ಇದಾಗಿ ನಾಲ್ಕಾರು ವರುಷಗಳು ಕಳೆದುವು. ನೀಲವ್ವನು ಈಗ ಮೂರು ಗಂಡು ಹುಡುಗರ ತಾಯಿ. ಹಿರಿ ಹುಡುಗನಿಗೆ ಈಗ ಐದೇ(?) ಎಂಟು(?) ವಯಸ್ಸು. ಅವರನ್ನು ಕಟ್ಟಿಕೊಂಡು ಸಂಸಾರದ ಸುಖವನ್ನು ಉಣ್ಣುತ್ತಿದ್ದಳು. ಇತ್ತ ಶ್ರೀಪಾದನು ಶರೀರದ ದುರ್ಬಲನು—ಎಷ್ಟೋ ಬಾರಿ ಅವನು 'ಅಸ್ತಿ ಮನೆ ಕಾಸುಕಡ್ಡಿಯಿಲ್ಲದ ನಾನು ಒಂದು ದಿನ ಕಣ್ಮುಚ್ಚಿದರೆ ನನ್ನ ಕುಟುಂಬದವರ ಗತಿ?' ಎಂದು ಚಿಂತಿಸಿದುದುಂಟು. ಅತ್ತೆ ಮಾವ ಇರ ಮರಣವು ಅವನಲ್ಲಿ—ಮರಣವು ಎಲ್ಲರಿಗೂ, ತನಗೂ ಇದೆ—ಎಂದು ಬಂದರೂ ಬರಬಹುದು—ಎಂಬ ಭಾರವನ್ನು ಬಲವಾಗಿ ನೆಟ್ಟಿತ್ತು. ಎಷ್ಟೋ ಬಾರಿ ಅದೇ ವಿಷಯವನ್ನು ಅವನು ನೀಲವ್ವನೊಡನೆಯೂ ಚರ್ಚಿಸಿದ್ದುಂಟು. ಆದರೆ ಚರ್ಚೆಗೆ ಯಾವ ಉತ್ತರವೂ ತೋರಿಯುತ್ತಿದ್ದಿರಲಿಲ್ಲ. ಅದನ್ನು ಕಟ್ಟಿಕೊಂಡು ಮನೆಯಲ್ಲಿರುವ ಪತಿಯನ್ನು ಅವಳು ದೇವರೆನ್ನುವ(?)ದನ್ನುತ್ತಿದ್ದಳು.

ಆದರೆ ಇವರ ಪಾಲಿಗೆ ಬಂದ ಸತ್ಯವು ಶ್ರೀಪಾದನ ಪಾಲಿಗೂ ಬಂತು. ವಿಷಮಜ್ವರಕ್ಕೆ ಅವನು ಬಲಿಯಾದನು. ಇದು ಅವನ ಇಹಯಾತ್ರೆಯ ದಿನ. ನೀಲವ್ವನ ಕಣ್ಣೀರನ್ನು ಕಟ್ಟಿಕೊಂಡು ಪತಿಯ ಹಾಸುಗೆಯ ಮಗ್ಗುಲಿಂದ ಕದಲಲಿಲ್ಲ. ಪತಿಗೆ ಸ್ಮೃತಿಯ ಲೋಪವಾಗಿತ್ತು. ಒಬ್ಬಿಬ್ಬರು ಗೆಳೆಯರು ಬಂದು ಹಿಂದಿನ ದಿನಗಳ ವರೆಗೆ ಕಂಡು ಹೋದರು. ಇಂದು ಅವರೂ ಬರಲಿಲ್ಲ. ಬಂದರೆ ಹೆಚ್ಚಿನ ಜವಾಬುದಾರಿಯಿದೆ ಎಂದು ತಿಳಿದುದರಿಂದಲೋ ಏನೋ. ಸಾಯುವ ಮುಂಚೆ ಶ್ರೀಪಾದನು ಕಣ್ಣನ್ನು ಸ್ವಲ್ಪ ತೆರೆದನು. ಪತ್ನಿಯ ದರುಶನವಾಯಿತು. ತನ್ನ ಸಂಸಾರಸಮುದ್ರದಲ್ಲಿ ತನ್ನನ್ನು ನಿಸ್ಸಂಕೋಚದಿಂದ ಅನುಸರಿಸಿದ ಮಡದಿಯು ನೆನಪಾಯಿತು. ಅಂದನು ಮೆಲ್ಲನೆ ಬಾಯಲ್ಲಿ 'ನೀಲು, ಆಯಿತೆಂದು ಕಾಣುತ್ತದೆ. ನಿನಗಾಗಿ ಒಂದು ದಮ್ಮಡಿಯನ್ನು ದುಡಿದು ಉಳಿಸಲು ನನ್ನಿಂದಾಗಲಿಲ್ಲ. ಈ ಮಕ್ಕಳನ್ನು ಕಟ್ಟಿಕೊಂಡು ಎಲ್ಲಿಗೆ ಹೋಗುವೆ?" ಎಂದನು. ಆಗ ನೀಲವ್ವನ ಒಡಲು ಉಕ್ಕಿ ಉಬ್ಬುತ್ತಿತ್ತು. ಆದರೆ ತನ್ನ ಕಣ್ಣೀರನ್ನು ಪತಿಯ ಮುಂದೆ ಹಾಕಿದರೆ ? ಸ್ವಯಂಕೂ ಅವರ ಮರಣವು ಶಾಂತಿಹೀನವಾಗುವುದೆಂದು ಅಸಾಧಾರಣ ಸಾಹಸದಿಂದ—'ಮಗನೇಕೆ ಆ ಚಿಂತೆ, ದೇವರಿರುವನು' ಎಂದಳು. ಅವನಿಗೂ ಅದೇ ನಿಜವೆಂದು ತೋರಿತು. ಆ ದಿನ ಅವನು ನಿಶ್ಚಿಂತೆಯಿಂದ ತನ್ನ ಪ್ರಾಣ ಬಿಟ್ಟನು.

ಅವನು ಕಣ್ಮರೆಯಾಗಲು, ನೀಲವ್ವನು ತನ್ನ ದುಃಖವನ್ನು ಹೊರಹೊಮ್ಮಿದಳು. ಅತ್ತು ಅತ್ತು ದಣಿವಾಯಿತು. ಜತೆಯಿಂದ ಅವಳ ಕೂಸುಗಳೂ ಅತ್ತವು. ಆಗ 'ದೇವರಿರುವನು' ಎಂದು ನುಡಿದ ಸ್ಥೈರ್ಯವು ಈಗ ಇಲ್ಲದಾಯಿತು. 'ಕಟ್ಟಿ ಎಳೆಯುವ ಈ ಜಗತ್ತಿನಲ್ಲಿ ಈ ಕೂಸುಗಳನ್ನು ಕಟ್ಟಿಕೊಂಡು ಮಾಡಲೇನು?' ಎಂಬ ತೀರ ಸತ್ವದ ಸಮಸ್ಯೆಯು ಅವಳ ಮುಂದೆ ಬಂದಿತು. ಎಲ್ಲಿರಲಿ ಎಲ್ಲಿ ಹೋಗಲಿ—ಎಂಬ ಕತ್ತಲು ಕವಿಯಿತು. ಯೋಚಿಸಿ ಯೋಚಿಸಿ ದಣಿದಳು. ಕೊನೆಗೆ 'ಆಪತ್ತಿಗೆ ಆತ್ಮಹತ್ಯೆಯೇ ಗತಿ'ಯೆಂದು ಎಣಿಸಿದಳು. ಆದರೆ ತಿರುಗಿ ಸಂಶಯವು ಬಂದಿತು. 'ನಾನು ಸತ್ತರೆ ತನ್ನ ಕೂಸುಗಳ ಗತಿ?—ಅವುಗಳ ಕೊರಳನ್ನು ಹಿಚುಕಲೆ? ಪತಿಯ ಪ್ರಸಾದವನ್ನು ಹಾಗೆ ಹಿಚುಕಿದರೆ ಅವನ ಆತ್ಮಕ್ಕೆ ತೃಪ್ತಿಯು ಬೇಕೆ(?)'—ಎಂದು ಅಂಜಿದಳು. ಅಂತು

(೧೪ನೇ ಪುಟಕ್ಕೆ ಮುಂದುವರಿಯುದು

ಇಂಗ್ಲಾಂಡು ಒಸ್ಟ್ರಿಯಾಗಳೊಳಗೆ ಮಾತುಕತೆ.

ಒಸ್ಟ್ರಿಯಾ ಚಾನ್ಸಲರು ಲಂಡನಿಗೆ ಬಂದರು.

ಕಮ್ಯೂನಿಸ್ಟರ ಪ್ರದರ್ಶನ

ಒಸ್ಟ್ರಿಯನ್ ಚೆನ್ಸಲರರಾದ ಡಾ. ಕರ್ಟ್ ವೊನ್ ಶುಶ್‌ನಿಗ್‌ರವರು ಅವರ ಪರಿವಾರ ಸಮೇತರಾಗಿ ಲಂಡನಿಗೆ ತಾ. ೨೪ರಲ್ಲಿ ತಲುಪಿದರು. ಅವರನ್ನು ಸರ್ ಜೋನ್ ಸೈಮನರೇ ಮೊದಲಾದ ರಾಜಕೀಯರುಗಳು ಎದುರುಗೊಂಡರು. ಚೆನ್ಸಲರರ ಆಗಮನವನ್ನು ಪ್ರತಿಭಟಿಸಿ ೩೦೦ ಮಂದಿ ಸೋಶಿಯಲಿಸ್ಟರು ಪ್ರದರ್ಶನ ಮಾಡಬೇಕೆಂದಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಒಸ್ಟ್ರಿಯಾ ಚೆನ್ಸಲರರು ಇಂಗ್ಲಾಂಡು ಮತ್ತು ಒಸ್ಟ್ರಿಯಾಗಳ ಮೈತ್ರಿ ಸ್ಥಾಪನೆಗಾಗಿ ಲಂಡನಿಗೆ ಬಂದರು. ಒಸ್ಟ್ರಿಯಾ ರಾಷ್ಟ್ರದ ಉದ್ದೇಶವೇನು? ಅದು ಯಾವ ದಾರಿ ಹಿಡಿದಿದೆ ಎಂಬ ಕುರಿತಾಗಿ ಅವರು ಇಂಗ್ಲಾಂಡಿನ ಅಧಿಕಾರಿಗಳಿಗೆ ತಿಳಿಸಿದರು. ಒಸ್ಟ್ರಿಯಾ ಮತ್ತು ಫ್ರೆಂಚ್ ಮಂತ್ರಿಗಳು ಪ್ರಕಟಿಸಿದ ಒಂದು ಪತ್ರಿಕೆಯಲ್ಲಿ ಈ ಎರಡು ರಾಷ್ಟ್ರಗಳೂ ಪರಸ್ಪರ ಸೌಹಾರ್ದದಿಂದ ನಡೆಯಬೇಕೆಂಬ ಯೋಚನೆಯಾಗಿದೆಯೆಂದು ತಿಳಿಸಲಾಗಿದೆ.

ವಿಮಾನ ಒಪ್ಪಂದದ ಕುರಿತು ಲೇಬರ್ ಪಾರ್ಟಿಯೆನ್ನುವುದೇನು?

ಜೋರ್ಜ್ ಲೆನ್ಸ್‌ಬುರಿಯವರ ಹೇಳಿಕೆ.

ಫ್ರಾನ್ಸ್ ಮತ್ತು ಇಂಗ್ಲಾಂಡುಗಳೊಳಗಾದ ವಿಮಾನ ಒಪ್ಪಂದದ ಕುರಿತು ಲೇಬರ್ ಪಾರ್ಟಿಯ ಅಭಿಮತವೇನೆಂದು ಜೋರ್ಜ್ ಲೆನ್ಸ್‌ಬರಿಯವರೊಡನೆ ವಿಚಾರಿಸಿದಾಗ ಅವರು “ನಮ್ಮ ಅಭಿಪ್ರಾಯವು ಏನೆಂದು ಪ್ರಶ್ನೆಯುಂಟಾಗಿದೆ. ಒಪ್ಪಂದವೆಂದರೇನೆಂಬುದು ನಮ್ಮಲ್ಲಿ ಕೆಲವರಿಗೆ ಮಾತ್ರ ತಿಳಿದಿದೆ. ಲೇಬರ್ ಪಾರ್ಟಿಯು ಮಟ್ಟಿಗೆ ಅದು ವಿಮಾನ ಯುದ್ಧವನ್ನು ಸಕ್ಷೇಪವಾಗಿ ನಿಲ್ಲಿಸಬೇಕೆಂದು ಹೇಳುತ್ತದೆ. ಅಂತರಾಷ್ಟ್ರೀಯವಾಗಿ ವಿಮಾನ ಬಲಗಳನ್ನು ನಿರ್ಬಂಧಿಸಬೇಕು. ಅದಿಲ್ಲದ ವಿನಹ ನಾವು ಪದೇ ಪದೇ ವಿಮಾನ ಪಥಕ್ಕಾಗಿ ಹೋರಾಡಬೇಕಾದೀತು. ಹೆಂಗಸರು ಮಕ್ಕಳ ಮೇಲೆ ಬೊಂಬೆಸೆಯಲು ಸಾಧಕವಾದ ಈ ವಿಮಾನಗಳನ್ನು ನಿಲ್ಲಿಸಲೇ ಬೇಕಾಗಿದೆ. ನಾವು ಸಿಕ್ಕಿದ ಪತ್ರಗಳಿಗೆ ಸಹಿ ಹಾಕುತ್ತೇವೆ. ನಮ್ಮಂಥ ಹುಚ್ಚರು ಬೇರೆ ಇಲ್ಲ” ಎಂದರು.

ಸಯಾಂ ಮಂತ್ರಿಯ ಮೇಲೆ ಗುಂಡು!

ಆಟದ ಬೈಲಲ್ಲಿ ಅತ್ಯಾಚಾರ!

ಮಂತ್ರಿಯವರು ಗಾಯಗೊಂಡರು!

ಅತ್ಯಾಚಾರಿಯ ಸೆರೆ

ಸಯಾಮಿನ ದೇಶ ಸಂರಕ್ಷಣಾ ಮಂತ್ರಿಯವರಾದ ಮಿ। ಲುವಾಂಗ್ ಪಿಬುಲಾ ಸೊಂಗ್ರಾಮರು ಫುಟ್ ಬೋಲ್ ಪಂದ್ಯಾಟವನ್ನು ನೋಡಿ ಹಿಂದಿರುಗುತ್ತಿದ್ದಾಗ ತಾ.೨೩ನೇ ದಿನ ಒಬ್ಬ ತರುಣನು ಅವರ ಮೇಲೆ ಗುಂಡು ಹಾರಿಸಿದನು. ಪಿಬುಲಾರವರು ಅವರ ಮೋಟರನ್ನು ಹಿಡಿದು ನಿಂತು ಗುಂಡನ್ನು ತಪ್ಪಿಸುತ್ತಿದ್ದಾಗ ಅವರ ಕತ್ತಿಗೂ ಕೈಗಳಿಗೂ ಗುಂಡುಗಳು ಬಿದ್ದುವು. ಅವರನ್ನು ಕೂಡಲೇ ಆಸ್ಪತ್ರೆಗೆ ಕೊಂಡೊಯ್ದರು. ಅವರ ಸ್ಥಿತಿಯು ನಿರಾಶಾಜನಕವಾಗಿಲ್ಲ. ಅತ್ಯಾಚಾರಿಯ ಸೆರೆಯಾಗಿದೆ.

ಜವಾಹರಲಾಲರ ಬಿಡುಗಡೆಯಾಗುವುದೇ?

ಚಕ್ರವರ್ತಿಯವರ ರಜತೋತ್ಸವ ಸಮಾರಂಭದ ಸಂಬಂಧವಾಗಿ ಪಂಡಿತ ಜವಾಹರಲಾಲರನ್ನೂ ಇನ್ನಿತರ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಲಾಗುವುದೆಂದು ವಾರ್ತೆಯಿದೆ. ಖಾನ್ ಅಬ್ದುಲ್ ಗಫರ್ ಖಾನ್, ಬಾಬು ಶರಚ್ಚಂದ್ರ ಬೋಸ್ ರೊಡಲಾದವರು ಜೈಲುಗಳ ಹೊರಗೆ ಬರುವರೋ ಎಂಬ ನಿರೀಕ್ಷೆಯಿದೆ.

ಇಂಡಿಯಾ ಸಿಲೋನುಗಳೊಳಗೆ ಟೆಲಿಫೋನು ಸ್ಥಾಪನೆ.

ಸಾಹಸವು ಕೈಗೂಡಿತು.

ಸಿಲೋನು ಮದ್ರಾಸುಗಳವರು ಮಾತನಾಡಿಕೊಂಡರು.

ಇಂಡಿಯಾ ಸಿಲೋನುಗಳೊಳಗೆ ಟೆಲಿಫೋನು ಸ್ಥಾಪನೆಯಾಗಿರುತ್ತದೆ. ನುಡಿಗಳು ಸರಿಯಾಗಿ ಕೇಳುತ್ತವೋ ಎಂದು ಪರೀಕ್ಷಿಸುವುದಕ್ಕಾಗಿ ಮದ್ರಾಸಿನ ‘ಹಿಂದೂ’ ಪತ್ರಿಕೆಯ ಸಂಪಾದಕರೂ ‘ಸಿಲೋನ್ ಟೈಮ್ಸ್’ ಪತ್ರಿಕೆಯ ಸಂಪಾದಕರೂ ಸ್ವಸ್ತಿವಚನಗಳನ್ನಾಡಿಕೊಂಡರು. ನುಡಿಗಳು ಸಮರ್ಪಕವಾಗಿ ಕೇಳಿದುವು. ಸಿಲೋನು ಇಂಡಿಯಾಗಳೊಳಗೆ ಟೆಲಿಫೋನು ಯೋಜನೆಯು ಪೂರ್ಣವಾದಂತಾಯಿತು. ಸಾರ್ವಜನಿಕರಿಗೂ ಈ ಖಾತೆಯನ್ನು ಒದಗಿಸಿಕೊಡುವ ಯೋಜನೆಯಿದೆ.

ಇಂಗ್ಲಾಂಡು ಜರ್ಮನಿಗಳ ಮೈತ್ರಿ! ಸರ್ ಜೋನ್ ಸೈಮನರು ಜರ್ಮನಿಗೆ ಹೋಗುವರು.

ಜರ್ಮನ್ ಸರಕಾರದ ಆಮಂತ್ರಣ.

ತನ್ನನ್ನು ಜರ್ಮನ್ ಸರಕಾರವು ಜರ್ಮನಿಗೆ ಬರಲು ಆಮಂತ್ರಿಸಿರುತ್ತಾರೆಂದು ಸರ್ ಜೋನ್ ಸೈಮನರು ಲಂಡನಿನಲ್ಲಿ ತಿಳಿಸಿರುವರು. ಇಂಗ್ಲಾಂಡು ಫ್ರಾನ್ಸ್‌ಗಳೊಳಗೆ ನಡೆದ ವಿಮಾನಬಲದ ಕುರಿತಾದ ಒಪ್ಪಂದದ ಕುರಿತು ಜರ್ಮನಿಯ ಅಭಿಪ್ರಾಯವೇನೆಂದು ಮುಖತಃ ತಿಳಿಯುವುದಕ್ಕಾಗಿಯೇ ಸರ್ ಜೋನ್ ಸೈಮನರು ಜರ್ಮನಿಗೆ ತೆರಳುವರು. ಫ್ರಾನ್ಸ್ ಮತ್ತು ಇಟಲಿ ಸರಕಾರಗಳು ಸೈಮನರ ಜರ್ಮನ್ ಪ್ರವಾಸಕ್ಕೆ ಒಪ್ಪಿದರೆ ಸೈಮನರು ಅತ್ತ ಬೇಗನೇ ಹೊರಡಲಿರುವರು.

ಕೊಮನ್ಸ್ ಸಭೆಯಲ್ಲಿ ಹಾಹಾಕಾರ! ಸರಕಾರವಿರುದ್ಧ ಪ್ರದರ್ಶನ!

ನಿರುದ್ಯೋಗಿಗಳ ಉಪಟಳ.

ಕೊಮನ್ಸ್ ಸಭೆಯಲ್ಲಿ ಕೃಷಿ ಖಾತೆಯ ಮಂತ್ರಿಯವರಾದ ಮಿ। ವಾಲ್ಟರ್ ಇಲಿಯಟರವರು ಭಾಷಣ ಮಾಡುತ್ತಿದ್ದಾಗ ಸಾರ್ವಜನಿಕರ ಗೆಲರಿಯಲ್ಲಿದ್ದವರು ಎದ್ದು ನಿಂತು “ನಿರುದ್ಯೋಗ ಶಾಸನಕ್ಕೆ ಧಿಕ್ಕಾರ! ರಾಷ್ಟ್ರೀಯ ಸರಕಾರಕ್ಕೆ ಧಿಕ್ಕಾರ!” ಎಂದು ಅರ್ಭಟಿಸಿದರು. ಅವರನ್ನು ಒಡನೆ ಹಿಡಿದು ಹೊರಗೆ ಕೊಂಡೊಯ್ಯಲಾಯಿತು.

ಪ್ರಧಾನ ಸಚಿವರ ಮೇಲೆ ಆರೋಪಣೆ!

ಚರ್ಚಿಲ್ಲರ ವಾಗ್ಬಾಣ.

ಟೋರಿ ಪಂಗಡವು ಮುರಿದು ಬೀಳುವ ಭಯ.

ಇಂಗ್ಲಾಂಡಿನಲ್ಲಿ ರಾಷ್ಟ್ರೀಯ ಸರಕಾರವು ಮುಗ್ಗರಿಸಿ ಬೀಳುವಂತೆ ಕಂಡುಬರುತ್ತದೆ. ಮಿ। ಮೆಕ್ಡೊನಾಲ್ಡರು ರಾಷ್ಟ್ರೀಯ ಸರಕಾರದ ಮುಖಂಡರಾಗಿ ಇನ್ನು ಹೆಚ್ಚು ಕಾಲ ಉಳಿಯುವ ಚಿಹ್ನೆಯು ತೋರಿಬರುವುದಿಲ್ಲ. ಪ್ರಧಾನ ಸಚಿವರು ರಾಷ್ಟ್ರೀಯ ಸರಕಾರದ ಮುಖಂಡರಾಗಿ ಉಳಿಯುವುದು ಸಂಭವವೋ ಎಂಬ ಕುರಿತಾದ ಚರ್ಚೆಯು ಈ ಇಂಗ್ಲಾಂಡಿನ ರಾಜಕೀಯ ರಂಗದಲ್ಲಿ ತರ್ಕಿಸಲ್ಪಡುತ್ತದೆ. ಮಿ। ಚರ್ಚಿಲ್ಲರು ಲೌಟನ್‌ನಲ್ಲಿ ಮೊನ್ನೆ ಭಾಷಣವೀಯುತ್ತಾ ‘ಮಿ। ಮೆಕ್ಡೊನಾಲ್ಡರನ್ನು ದೇಶವು, ಅದರಲ್ಲೂ, ಕನ್ಸರ್ವೇಟಿವ್ ಪಾರ್ಟಿಯು ನಂಬಿದುದರಿಂದ ಬಹಳ ಅಪಾಯವಿದೆ. ಅವರ ಮೇಲಿರುವ ಹೊರೆಯು ವಿಪತನು ತರುವುದು. ನಾಳೆ ಮಿ। ಬಾಲ್ಡವಿನ್ನರು ಇಂಗ್ಲಾಂಡನ್ನು ಜನರಲ್ ಇಲೆಕ್ಷನಿಗೆಳೆಯಬಹುದು. ಆದರೆ ನಾನು ಮಾತ್ರ ಅದಕ್ಕೊಪ್ಪಲಾರೆ’ ಎಂದರು. ಚರ್ಚಿಲ್ಲರ ಈ ನುಡಿಗಳು ಕನ್ಸರ್ವೇಟಿವ್ ಪಾರ್ಟಿಯಲ್ಲಿ ಒಡಕನ್ನು ತಂದೊಡ್ಡುವುದಾಗಿ ತಿಳಿಯಲಾಗಿದೆ. ಮಿ। ಮೆಕ್ಡೊನಾಲ್ಡರನ್ನು ವಿಧೇಯರಾಗಿ ನಂಬಿಕೊಂಡು ಬಂದವರಲ್ಲಿ ಅನೇಕರು ಅವರಿಗೆ ವಿರೋಧರಾಗಿರುವರು. ಈಗ ಅವರು ಮೆಕ್ಡೊನಾಲ್ಡರನ್ನು ನಂಬುವಂತಿಲ್ಲ. ಮೆಕ್ಡೊನಾಲ್ಡರು ೧೯೩೧ರ ಸಂದಿಗ್ಧಕಾಲದಲ್ಲಿ ಇಂಗ್ಲಾಂಡಿಗೆ ಮಾಡಿದ ಪ್ರಯೋಜನವನ್ನು ಮರೆಯಲಾಗಿದೆ.

ಚರ್ಚಿಲ್ಲರ ಪುತ್ರ ಮಿ। ರಾನ್‌ಡೋಲ್ಫ್ ಚರ್ಚಿಲ್ಲರು ಒಂದು ಕನ್ಸರ್ವೇಟಿವ್ ಸಂಘವನ್ನು ರಚಿಸಿಕೊಳ್ಳಲಿರುವರು. ಹಿಂದೂದೇಶದ ಸಮಸ್ಯೆಯಿಂದಾಗಿಯೇ ಕನ್ಸರ್ವೇಟಿವ್ ಪಾರ್ಟಿಯಲ್ಲಿ ಒಡಕು ಉಂಟಾಯಿತೆಂದು ಅವರು ತಿಳಿಸಿದರು.

ಸರ್ ಫಿಲಿಪ್ ಕನ್ಲಿಫ್ ಲಿಸ್ಟರರು ತನ್ನ ಅಭಿಪ್ರಾಯವನ್ನು ಮೊನ್ನೆ ಕೊಡುತ್ತಾ ‘ಜನರಲ್ ಇಲೆಕ್ಷನ್ ಆಗುವುದೆಂಬ ವಾರ್ತೆಯಿದೆ. ಆದರೆ ಅದೆಂದಿಗೂ ಆಗದು’ ಎಂದರು.

ಆಫ್ರಿಕದಲ್ಲಿ ಯುದ್ಧ!

ಎಬಿಸೀನಿಯಾ ಇಟಲಿಗಳೊಳಗೆ ಹೋರಾಟ!

ಯುದ್ಧನಾವೆಗಳು ಹೊರಡುವುವು.

ಇಟಲಿಯ ಸೈನ್ಯಗಳು ಆಫ್ರಿಕದ ಗಡಿಯತ್ತ ಕಡೆ ತೆರಳುತ್ತಿವೆ. ೫೦೦೦ ಸೈನಿಕರು ವಲ್ಕೇನಿಯಾ ಎಂಬ ಯುದ್ಧನಾವೆಯಲ್ಲಿ ಇಟಲಿಯಿಂದ ಹೊರಟರು. ತಾನು ಸುಮ್ಮಗಿದ್ದರೂ ಇಟಲಿಯು ಸೈನ್ಯವನ್ನು ಕಳುಹಿಸಿ ಯುದ್ಧಕ್ಕೆ ತೊಡಗಿರುವುದರಿಂದ ಮುಂದಿನ ಘಟನೆಗೆ ತಾನು ಜವಾಬ್ದಾರಿಯಾಗಿಲ್ಲವೆಂದು ಎಬಿಸೀನಿಯಾದಲ್ಲಿ ಮಿಲಿಟರಿಗಳು ಸಿದ್ಧವಾಗುತ್ತಿವೆ.

ಜನಾಂಗ ಸಭೆಯನ್ನು ಪಾರಾಗ್ವೇಯು ಬಿಟ್ಟಿತು!

ಶಸ್ತ್ರ ನಿರ್ಬಂಧದ ಪರಿಣಾಮ!

ಪಾರಾಗ್ವೇಯನ್ನು ಬಹಿಷ್ಕರಿಸಲಾಗುವುದೇ?

ಬೊಲಿವಿಯಾ ದೇಶದ ಮೇಲಿದ್ದ ಶಸ್ತ್ರ ನಿರ್ಬಂಧದ ಶರ್ತವನ್ನು ತೆಗೆದು ಅಂತಹ ಶರ್ತವನ್ನು ತನ್ನ ಮೇಲಿಟ್ಟುದುದು ಅನ್ಯಾಯವೆಂದು ಪಾರಾಗ್ವೇ ಸರಕಾರವು ಲೀಗ್ ಒಫ್ ನೇಶನ್ಸ್‌ಗೆ ಪತ್ರ ಬರೆದು ತಿಳಿಸಿ, ಇನ್ನು ತಾನು ಜನಾಂಗಸಭೆಯಲ್ಲಿರಲು ಸಮ್ಮತಿಸುವುದಿಲ್ಲವೆಂದು ತಿಳಿಸಿದೆ. ತನ್ನ ಪ್ರಾತಿನಿಧ್ಯವನ್ನು ಬೇಗನೇ ಹಿಂತೆಗೆಯಲಿದೆ. ಪಾರಾಗ್ವೇಯ ಆಚರಣೆಯಿಂದ ಮುಂದಕ್ಕೆ ಜನಾಂಗ ಸಭೆಯು ಅದನ್ನು ಬಹಿಷ್ಕರಿಸುವ ಶಾಸನಗಳನ್ನು ಮಾಡಲಿದೆ.

ಭಾರತದಲ್ಲಿ ಬ್ರಿಟಿಷ ಸೈನಿಕರು.

ಕೌನ್ಸಿಲ್ ಒಫ್ ಸ್ಟೇಟ್ಸಿನಲ್ಲಿ ಚರ್ಚೆ.

ದಿಲ್ಲಿಯಲ್ಲಿ ಕೌನ್ಸಿಲ್ ಒಫ್ ಸ್ಟೇಟ್ ಸಭೆಯು ಜರಗಿದಾಗ ಶ್ರೀ ಮೆಹ್ರೊತ್ರಾರವರು ಸೈನ್ಯ ಸಂಬಂಧವಾದ ಚರ್ಚೆಯನ್ನಾರಂಭಿಸಿ ಭಾರತದಲ್ಲಿ ಸೈನಿಕರ ಸಂಖ್ಯೆಯನ್ನು ಕಡಮೆ ಮಾಡಬೇಕೆಂದರು. ಭಾರತದ ಹಣವು ಸೈನ್ಯಗಳ ಮೇಲೆ ಬಹುವಾಗಿ ವೆಚ್ಚವಾಗುತ್ತದೆ. ಅದನ್ನು ನಿಲ್ಲಿಸುವುದಕ್ಕಾಗಿ ಶಾಸನ ವಾಗಬೇಕು ಎಂದರು. ಬಹುವಂಶ ಮತಗಳು ಇದಕ್ಕೆ ವಿರೋಧವಿದ್ದು ಆ ಠರಾವು ಬಿದ್ದು ಹೋಯಿತು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 53/1935.

ವಾದಿ–ಕೃಷ್ಣರಾಯ ಶ್ಯಾನಭಾಗ.

ಪ್ರತಿವಾದಿ–ಮಿ ಜಾರ ಲಕ್ಷ್ಮಣ ಭಂಡಾರಿ.

ಪ್ರಾಮಿಸರಿ ಹಣದ ಅದರ ಬಡ್ಡಿ ಬಗ್ಗೆ ಸಹಾ ರೂ. 210–5–0ನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ದಾವೆಯ ತಸ್ಕಿಯು ತಾ. 7–3–1935ಕ್ಕೆ ತಸ್ಕಿಗೆ ಇಡೋಣಾಗಿಯದೆ. ಆ ಕುರಿತು ಆಕ್ಷೇಪ ಇದ್ದರೆ ಆ ದಿವಸ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕುಂದಾಪುರ 25–2–'35 | K. Vittaldas Shenoi, ವಾದಿಯ ಕಡೆ ಎಡ್ವೊಕೇಟು.

Notice.

The Hindusthan Cinema Ltd, Mangalore.

Notice is hereby given that the shareholders in the Extra ordinary General Meeting held on 28–2–1935 have resolved that the Company should be wound up and have appointed the undersigned as liquidator. A meeting of creditors of the Company will be held on 31-3-35 at 4 P. M. at the registered office of the Company in Mangalore.

Mangalore, 28–2–35. | M. Keshava Pai, Advocate

Swadeshabhimani

enjoys circulation in India and abroad.

APPLY FOR ADVERTISEMENT RATES.

ಬಿಹಾರ್ ರಸಾಯನಿಕ ವೈದ್ಯ ಶಾಲೆಯಲ್ಲಿ ತಯಾರಾದ ಆಯುರ್ವೇದಿಯ ಔಷಧಗಳು.

ಪ್ರಸೂತಿ ಕಲ್ಯಾಣ–ಬಾಣಂತಿಯರ ಗರ್ಭಕೋಶದ ಎಲ್ಲಾ ತರದ ನಂಜನ್ನು ಶುದ್ಧೀಕರಿಸುವುದು.

ಕಾಮಕಲ್ಪ ರಸಾಯನ–ಧಾತುವೃದ್ಧಿ–ಬಲಹೀನತೆ.

ಅನಂತಮೂಲಸರಸ–ರಕ್ತಶುದ್ಧಿ ಶರೀರದಲ್ಲಿ ಬೊಕ್ಕೆ ಬೀಳುವುದು.

ದನವಂತ್ರಿ ಮುಲಾಮು–ಮೇಹ ಸಮ್ಮಂಧದ ಹುಣ್ಣು ಬಾಹು ಸಂದು ಬಾತುಕೊಳ್ಳುವುದು.

ಭೃಹ್ಮಿ ರಸಾಯನ–ಮೆದುಳಿನ ವಿಕಾರ ನೆನಪಿಲ್ಲದಿರುವಿಕೆ.

ಪುನರ್‌ನವಾಸವ–ಮೈಬಾತುಕೊಳ್ಳುವುದು ಅಲ್ಪವಯಸ್ಸಿನವರಿಗೆ ರಕ್ತಹೀನತೆಯ ಮೇಲೆ.

ಕಾಲಮೇಗ–ಇದು ಮಕ್ಕಳ ಕಲೀಜೆ ಮತ್ತು ಪ್ಲೀಹದ ಮೇಲೆ.

ಸಿದ್ಧ ಮಕರಧ್ವಜ [illegible]

The Behar Chemical Works, Bhagalpur.

ಏಜಂಟ್ಸ್–ಶಾ. [illegible] ಮಂಗಳೂರು, ದ. ಕ.

ಧರ್ಮವೆಂಬುದು ಪುಸ್ತಕದಲ್ಲಿಲ್ಲ. ಅದು ಮಾನವನ ಆತ್ಮದಲ್ಲಿದೆ. ಧರ್ಮವು ಆತ್ಮದಲ್ಲಿದೆಯೆಂದು ತಿಳಿಯುವವನು ದೇವರ ಮೇಲಿನ ಭಕ್ತಿಯನ್ನೇಕೆ ಮರೆಯಬೇಕು? ಏಕೆ ಧೈರ್ಯಗುಂದಬೇಕು?

ಜೆ. ಟಿ. ಸಂಡರ್‌ಲೇಂಡ್.

ಸ್ಫುಟವಿಚಾರಗಳು

ಮಂಗಳೂರು ಮಿಶ್ಯನ್ ಹ್ಯಾಸ್ಕೂಲು

ಎಂದರೆ ಜಿಲ್ಲೆಯಲ್ಲಿ ಅತಿ ಪುರಾತನ ವಿದ್ಯಾಸಂಸ್ಥೆ. ಈ ಶಾಲೆಯಲ್ಲಿ ಕಲಿಯದ ಹಿರಿಯರ ಸಂಖ್ಯೆ ಸಣ್ಣದು. ಈ ಶಾಲೆಯ ಸ್ಥಾಪನೆಯು ಒಂದೇ ಒಂದು ವಿಷಯವು ನಮ್ಮ ಜಿಲ್ಲೆಯ ಸಾವಿರಾರು ವಿದ್ಯಾರ್ಥಿಗಳ ಅದೃಷ್ಟವನ್ನು ತಿರುಗಿಸಿ, ಅವರಿಗೆ ಜೀವನದಲ್ಲಿ ಸತ್ಪಥಗಳನ್ನು ಕಲಿಸಿಕೊಟ್ಟಿದೆ. ಅಂತಹ ಶಾಲೆಯ ಪ್ರಕೃತಾವಸ್ಥೆಯೇನು? ದುಡ್ಡಿನಡಚಣೆಗೆ ಶಾಲೆಯು ಸಿಕ್ಕಿ ಎಂದು ಅವಸಾನ ಹೊಂದುವುದೆಂದು ಹೇಳುವಂತೆ ಬರುವಂತಿಲ್ಲ. ಅಂದಿನ ಜರ್ಮನರ ನರವು ಅದರ ಮೇಲೆ ಪೂರ್ಣವಾಗಿಲ್ಲ. ಮಿಶ್ಯನಿನವರು ಅದರ ಪುನರುದ್ಧಾರ ಕಾರ್ಯಕ್ಕೆ ಲಕ್ಷ್ಯಗೊಡುವುದಿಲ್ಲ. ಹೀಗಾಗಿ ಶಾಲೆಯು ಮಹಾ ಸಂಕಟಕ್ಕೊಳಗಾಗಿ ಮೊನ್ನೆ ಈ ಶಾಲೆಯ ಪರವಾಗಿ ಒಂದು ನಾಟಕವನ್ನಾಡಬೇಕಾಯಿತು. ಜನರ ಪ್ರೋತ್ಸಾಹವನ್ನು ನೋಡಿದ್ದಲ್ಲಿ ಮಿಶನ್ ಹ್ಯಾಸ್ಕೂಲು ಇನ್ನೂ ಜೀವಂತವಾಗಿರಬೇಕೆಂದು ಸಾರ್ವಜನಿಕರು ಆಶೀರ್ವದಿಸುವುದು ಖರೆಯೆಂದು ತಿಳಿದುಬರುವುದು. ಇಂತಹ ಪರಿಸ್ಥಿತಿಯಲ್ಲಿ ಈ ಶಾಲೆಯನ್ನು ಪುನರ್ವ್ಯವಸ್ಥೆಗೊಳಿಸಿ ಜಿಲ್ಲೆಯ ಕೀರ್ತಿಯನ್ನು ಉಳಿಸುವುದು ಕರ್ತವ್ಯವಾಗಿದೆ. ಸಂಬಂಧಪಟ್ಟವರು ಯಾವ ರೀತಿಯಿಂದಲೂ ಕೊನೆಗೆ ಅಧಿಕೃತ ಸೊಸೈಟಿಯನ್ನೋ, ವಂತಿಗೆದಾರರಾದಗಳನ್ನೋ ಎತ್ತಿ, ಬಂದ ರೋಗವನ್ನು ಪರಿಹರಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಬತ್ತೇರಿ-ಕುದ್ರೋಳಿಗಳ ನಡುವೆ ಇರುವ ಮಾರ್ಗಗಳು

ವಾಹನಗಳ ಸಂಚಾರಕ್ಕೆ ಅಯೋಗ್ಯವಾಗುವಷ್ಟು ಹಾಳು ಸ್ಥಿತಿಯಲ್ಲಿರುವಾಗ ನಮ್ಮ ನಗರಸಭೆಯವರಾಗಲೀ ಆ ವಾರ್ಡಿನ ಮುನಿಸಿಪಲ್ ಕೌನ್ಸಿಲರಾಗಲೀ ಅವುಗಳನ್ನು ಸರಿಗೊಳಿಸುವ ಚಿಂತನೆಯಲ್ಲೇ ಇಲ್ಲವೆಂದರೆ ಪಟ್ಟಣದ ಆ ಅಂಶವು ನಗರಸಭೆಗೆ ಸೇರಿದುದೋ ಅಲ್ಲವೋ ಎಂಬ ಪ್ರಶ್ನೆಯುಂಟಾಗುವುದು ಸಹಜವಾಗಿದೆ. ಬೋಳೂರಿನ ಕಾಫಿ ಕಾರ್ಖಾನೆಗಳಿಗೋ ಉರ್ವದ ಗೇರುಬೀಜ ಕಾರ್ಖಾನೆಗಳಿಗೋ ಈ ಮಾರ್ಗಗಳಿಂದ ಹೋಗಿ ಬರುವ ಲೋರಿ, ಮೋಟರು ಮತ್ತು ಗಾಡಿಗಳಿಗೆ ಲೆಕ್ಕವೇ ಇರುವುದಿಲ್ಲ. ದಿನಕ್ಕೆ ೫೦೦ರಿಂದ ೬೦೦ ಗಾಡಿಗಳು ಈ ಮಾರ್ಗವಾಗಿ ಹೋಗುತ್ತಿವೆ. ಗಟ್ಟದ ಮೇಲಿಂದ ಬರುವ ಲೋರಿಗಳ ಸಂಖ್ಯೆಯು ಈಗೀಗ ಹೆಚ್ಚುತ್ತಿವೆ. ಎಷ್ಟು ಜಾಗ್ರತೆಯಿಂದ ಹೋಗುವಾಗಲೂ ವಾಹನಗಳಿಗೆ ಹಾನಿತಟ್ಟದೆ ಇಲ್ಲ. ಮಾರ್ಗಗಳ ಇಬ್ಬದಿಯಲ್ಲಿರುವ ಚರಂಡಿಗಳು ದಿನೇ ದಿನೇ ಅಗಲವಾಗಿ ಮಾರ್ಗಗಳು ಅಗಲಕಿರಿದಾಗುತ್ತಿವೆ. ಮಾರ್ಗಗಳಲ್ಲಿರುವ ಏರುತಗ್ಗುಗಳ ದೆಸೆಯಿಂದಾಗಿ ಮೊನ್ನೆ ಒಂದು ಗಾಡಿಯು ಚಕ್ರ ಮುರಿದು ಬಿದ್ದು ದೊಡ್ಡ ಅನಾಹುತವಾಯಿತು. ಇನ್ನು ಬೆಳಗ್ಗಿನಿಂದ ರಾತ್ರಿಯವರೆಗೆ [illegible] ದೊಲಿಸರವಾಗುವ ಹಾನಿಯನ್ನು ಬೇರೆ ಹೇಳಬೇಕಾಗಿಲ್ಲ. ಹೇಳುವುದಾದರೂ ಯಾರೊಡನೆ? ಮಾರ್ಗಗಳ ಮೇಲ್ವಿಚಾರಕರು ಅತ್ತ ಬರುತ್ತಾರೋ ಇಲ್ಲವೋ ಎಂಬ ವಿಷಯವು ಮಾರ್ಗಗಳ ದುರವಸ್ಥೆಯಿಂದಲೇ ತಿಳಿದುಬರುವುದು. ನಗರ ಸಭೆಯವರು ಎಂದು ಸರಿಗೊಳಿಸುವರೋ ಎಂಬ ನಿರೀಕ್ಷಣೆಯಲ್ಲಿದ್ದ ಅತ್ತಲಾಗಿನ ನಾಗರಿಕರು ಕೆಲವರು ಮೊನ್ನೆ ಮುನಿಸಿಪಾಲಿಟಿಯ ಕಮಿಶನರರಿಗೊಂದು ಮನವಿಯನ್ನು ಮಾಡಿರುವರೆಂದು ಕೇಳುತ್ತೇವೆ. ಅವರ ಮೊರೆಯು ಮಾನಿಸಲ್ಪಡುವುದೋ ನಿರೀಕ್ಷಿಸುವೆವು.

ಸಿಂಡ್ರೆಲ್ಲಳ ಕಥೆಯಲ್ಲವೇ?

ಸಿಂಡ್ರೆಲ್ಲಳಿಗೆ ಯಾವ ಸುಖವೂ ಇಲ್ಲ. ತನ್ನ ಮಕ್ಕಳನ್ನು ವಿನೋದ ವಿಹಾರಗಳಿಗೆ ಕರೆದೊಯ್ಯುವ ಮಲತಾಯಿಯು ಸಿಂಡ್ರೆಲ್ಲಳನ್ನು ಅಡಿಗೆ ಕೋಣೆಯ ಕೊಳೆಯಲ್ಲೇ ಇರಲು ಬಿಟ್ಟುಹೋಗುವಳು. ಸಿಂಡ್ರೆಲ್ಲಳು ಕಷ್ಟವನ್ನು ಯಾರೊಡನೆ ಹೇಳಿಕೊಳ್ಳುವುದು? ಸಿಂಡ್ರೆಲ್ಲಳಂತಹ ಕಷ್ಟಕ್ಕೆ ಮೂರನೇ ತರಗತಿಯ ರೈಲ್ವೆ ಪ್ರಯಾಣಿಕರು ಒಳಗಾಗಿರುವರು. ಕೇಂದ್ರ ಶಾಸನ ಸಭೆಯಲ್ಲಿ ಮಿ॥ ಶಾಫಿದಾವುದಿಯವರು ತಂದ 'ಕಟ್‌ಮೋಶನ್' ೮೦ ಜನರಿಂದ ಸ್ವೀಕೃತವಾಗಿ ೩೭ ಜನರಿಂದ ಅನಂಗೀಕಾರವಾಗಿ ದೇಶದ ದುಃಖವು ಸಭಿಕರ ಸಹಾನುಭೂತಿಗೊಳಗಾದುದು ಶುಭಚಿಹ್ನೆ. ಆದರೇನು? ರೈಲ್ವೆ ಮೆಂಬರರು ಅಂಕೆಸಂಖ್ಯೆಗಳನ್ನು ಕೊಟ್ಟು ಮೂರನೇ ತರಗತಿಯ ರೈಲು ಪ್ರಯಾಣಿಕರಿಗೆ ಯಾವ ಕಷ್ಟವೂ ಇಲ್ಲವೆಂದು ಹೇಳುವ ಸಾಹಸವನ್ನು ವಹಿಸಿದರು. ಒಡವರು ಎಷ್ಟು ದಣಿದರೂ ದಣಿಯಲಿ; ತಮಗೆ ಸಿಗುವ ದಕ್ಷಿಣೆ ಸಿಗಲೆಂದು ಭಾವಿಸುವ ರೈಲ್ವೆ ಖಾತೆಯವರ ಸಂಬಳವನ್ನು ಕಡಿಯಬೇಕೆಂಬ ಠರಾವೂ ೫೪ ಮಂದಿಯಿಂದ ಅಂಗೀಕೃತವಾಯಿತು. ೪೩ ಮಂದಿಯಿಂದ ತಿರಸ್ಕೃತವಾಯಿತು. ಇಲ್ಲಿಯೂ ಸರಕಾರವು ಸೋತು ರೈಲ್ವೆಖಾತೆಗೆ ಸಹಾಯವಿಯುವ ಔದಾರ್ಯದಲ್ಲಿ ಅಪಯಶಸ್ಸನ್ನು ಹೊಂದಿತು. ಸರಕಾರವು ಇನ್ನಾದರೂ ಎಚ್ಚರಿಯಲಾರದೆ?

"ಆಶ್ರಿತ ರಾಜರೂ ಫೆಡರೇಶನೂ"

[illegible] ಸಮಸ್ಯೆಯು ತೀರ್ಮಾನ ಹೊಂದಿದೆ. ಈ ಸಮಯಾಂತ್ಯದಲ್ಲಿ ಮುಂಬಯಿಯಲ್ಲಿ ಜರಗಿದ ಆಶ್ರಿತ ರಾಜರ ಪರಿಷತ್ತಿನಲ್ಲಿ ಜಾಯಿಂಟ್ ಸಿಲೆಕ್ಟ್ ಕಮಿಟಿಯ ಶಿಫಾರಸುಗಳು "ಅಸಮಾಧಾನಕರ ಅಸಮರ್ಪಕರ"ವೆಂದು ತೀರ್ಮಾನಿಸಲ್ಪಟ್ಟು ಅವುಗಳು ತಮ್ಮ ಹಿತದೃಷ್ಟಿಯಿಂದ ತಿದ್ದುಪಡಿಗೊಳ್ಳುವ ವಿನಹ ಅವುಗಳನ್ನು ಸಂಸ್ಥಾನಾಧಿಪತಿಗಳು ಸ್ವೀಕರಿಸಲಾರರು ಎಂಬ ಠರಾವಾಗಿದೆ. ಈ ಠರಾವು ಪ್ರಕಟಗೊಂಡಂತೆ, ಸರ್ ಸಾಮುವೇಲ್ ಹೋರರು ಕೊಮನ್ಸ್ ಸಭೆಯಲ್ಲಿ ತಾ. ೨೬ರಲ್ಲಿ ಭಾಷಣ ಮಾಡುತ್ತ "ನಾವು ನಮ್ಮ ಧರ್ಮವನ್ನು ಚಾ ಚೂ ತಪ್ಪದೆ ಮಾಡಿದೆವು. ಎಲ್ಲಿಯಾದರೂ ತಪ್ಪಿ ಬಿದ್ದಿದ್ದರೆ ಮುಂದಕ್ಕಾದರೂ ಚಾ ಚೂ ತಪ್ಪದೆ ಸರಿಪಡಿಸಿ ಆಶ್ರಿತ ರಾಜರ ಸಂದೇಹವನ್ನು ನಿಶ್ಶೇಷವಾಗಿ ತೆಗೆದುಬಿಡುವೆವು" ಎಂದು ಆಶ್ವಾಸನೆಯಿತ್ತಿರುವರು. ಹೀಗೆಲ್ಲ ಹೇಳಿಯೂ "ಇಂಡಿಯಾ ಬಿಲ್ ಮುಂದೆ ಹೆಜ್ಜೆಯಿಡುವುದು ಖಚಿತ" ಎಂಬ ಧೈರ್ಯವನ್ನೂ ತೋರ್ಪಡಿಸಿದರು. ಆಶ್ರಿತ ರಾಜರು ತನ್ನ ಕೈ ಬಿಟ್ಟುದರಿಂದಾಗಿ ಹೋರ್ ದೊರೆಗಳಿಗೆ ಈ ಕೃತಕ ಧೈರ್ಯವು ಬಂದಿರಬಹುದೇನೋ! ಇಂಡಿಯಾ ಬಿಲ್‌ನಲ್ಲಿ ಯಾವ್ಯಾವ ತಿದ್ದುಪಾಟುಗಳಾಗಲಿವೆಯೆಂದು ನಿರೀಕ್ಷಿಸುವುದೊಂದೇ ಇನ್ನುಳಿದ ಕೆಲಸವಾಗಿದೆ. ಲೋಕವು ನಿರೀಕ್ಷಿಸುವಂತೆ ನಾವು ನಿರೀಕ್ಷಿಸೋಣ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ತಿಳಿಸತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಶ್ರೀಯುತ ಶಿವರಾಮ ಕಾರಂತರಲ್ಲಿಯೂ ಸ್ವದೇಶಾಭಿಮಾನಿ ಸಂಪಾದಕರಲ್ಲಿಯೂ ವಿಜ್ಞಾಪನೆ.

ಅಖಿಲ ಕರ್ನಾಟಕದಲ್ಲಿ ಪ್ರಾಯಶಃ ಸ್ವನಾಡ ದಕ್ಷಿಣ ಕನ್ನಡದ ಯುವಕ ಸಾಹಿತಿಗಳಲ್ಲಿ ಶಿರೋಮಣಿ ಆನಿಸಿ[illegible]ಗೇರಿದ ಶ್ರೀ॥ ಕಾರಂತರ ಕಥೆ, ನಾಟಕ ಇತ್ಯಾದಿಗಳನ್ನು ಜನತೆಗೆ ಓದುವರಿ ಅತ್ಯಾಸೆಗೆ ಎಷ್ಟರ ಮಟ್ಟಿಗೆ ಆಸಂದ ಹುಟ್ಟಿದೆಯೆಂದರೆ "ಕಾರಂತರ ಲೇಖನ (Article) ಇದ್ದರೆ, ಸ್ವದೇಶಾಭಿಮಾನಿಯ ಈ ವಾರದ ಸಂಚಿಕೆಯನ್ನು ಅಗತ್ಯ ತಕ್ಕೊಳ್ಳಬೇಕೆ"ಂದು ಹೇಳುವ ಹಲವರನ್ನು ನಾನು ಕೇಳಿದ್ದೇನೆ.

ಸ್ವದೇಶಾಭಿಮಾನಿಯ ಮನೇಜರರು ಕೆಲವು ತಿಂಗಳ ಹಿಂದಕ್ಕೆ ಮಾಸಕ್ಕೊಮ್ಮೆ "ಸಾಹಿತ್ಯ ಸಂಚಿಕೆ"ಯನ್ನು ಹೊರಪಡಿಸುತ್ತಿದ್ದರು. ಈಗಲಾದರೋ ಪತ್ರಿಕೆಯನ್ನು ೧೬ ಪುಟದಿಂದ ತಿಂಕ್ಕೇರಿಸಿದ ಕಾರಣದಿಂದಲೋ ಏನೋ ಸಾಹಿತ್ಯ ಸಂಚಿಕೆಗೆ ತಿಲಾಂಜಲಿಯನ್ನು ಕೊಟ್ಟಿರುತ್ತಾರೆಂದು ತೋರುತ್ತದೆ. ಪತ್ರಿಕಾ ವ್ಯವಸಾಯದಲ್ಲಿ

ಇಪ್ಪತ್ತು ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಮಹಿಳೆಯರ ಉನ್ನತಿಯ ಸಲುವಾಗಿ ಕೆಲಸ ಮಾಡುತ್ತಿರುವ, ಹದಿನಾಲ್ಕು ವರ್ಷಗಳಿಂದಲೂ ಕನ್ನಡನಾಡಿನ ಸೋದರಿಯರ ಉನ್ನತಿಯ ಸಲುವಾಗಿ "ಸರಸ್ವತಿ" ಎಂಬ ಮಾಸಪತ್ರಿಕೆಯನ್ನು ನಡೆಸುತ್ತಿರುವ ಕರ್ನಾಟಕದ ಆದರ್ಶ ಪೀ[illegible]

ರಮಣಿಯರಾದ ಬೆಂಗಳೂರಿನ

ಶ್ರೀಮತಿ ಆರ್ ಕಲ್ಯಾಣಮ್ಮನವರು

ಸಾಹಿತ್ಯ ಸಂಚಿಕೆಯೂ ಜತೆಯಲ್ಲಿದ್ದರೆ ಸಾಹಿತ್ಯದೇವಿಯ ಸೇವೆಯ ಹುರುಪನ್ನು ಜನತೆಯಲ್ಲುಂಟು ಮಾಡುವುದು, ತರುಣರಲ್ಲಿ ಸಾಹಿತ್ಯಾಭಿರುಚಿಯನ್ನು ಅಂಕುರಿಸುವುದು ಇವೇ ಕಾರ್ಯವು ಮುಂದಿನ ಜನಾಂಗಕ್ಕೆ ಒಂದು ಮಾರ್ಗದರ್ಶಕವಾಗಿದೆಂಬುದನ್ನು ಸಾಹಿತ್ಯರಂಗಕ್ಕಿಳಿದ ಸ್ವದೇಶಾಭಿಮಾನಿಯ ಸಂಪಾದಕರಿಗೆ ಪ್ರತ್ಯೇಕ ಹೇಳುವುದವಶ್ಯವಿಲ್ಲ.

ಹೀಗೆ ಹೊರಡುತ್ತಿದ್ದ ಸಾಹಿತ್ಯ ಸಂಚಿಕೆಗಳಲ್ಲಿ ಪ್ರತಿ ತಿಂಗಳಲ್ಲೂ ಶ್ರೀ॥ ಕಾರಂತರ ಒಂದಾದರೂ ಲೇಖನವಿಲ್ಲದಿರುತ್ತಿದ್ದಿಲ್ಲ. ಹೀಗಾಗಿ ಸಾಹಿತ್ಯ ಸಂಚಿಕೆಯು "ಹಾಲಿಗೆ ಸಕ್ಕರೆ ಹಾಕಿದಂತೆ" ಇತ್ತು. ಅವರ ಲೇಖನಗಳ ಪೈಕಿ "ನಾಡಿನ ಪ್ರಸಿದ್ಧ ಪುರುಷರು" ಎಂಬ ಶಿರೋನಾಮೆಯಲ್ಲಿ ನಂಬ್ರ ೧೪ರ ವರೆಗೆ ಮಾತ್ರವೇ ತಮ್ಮಾಭಿಪ್ರಾಯಗಳನ್ನು ಕೊಟ್ಟು ಜನತೆಗೆ ಮುಖ್ಯವಾಗಿ ಹಳ್ಳಿಯ ಎಳಿಮೆಂಟರಿ ಶಾಲಾ ಅರ್ಭಕರಿಗೆ ಸಹ ಪ್ರಸಿದ್ಧಪುರುಷರನ್ನು ಒಮ್ಮೆ ನೋಡಿಬಿಡಬೇಕೆನ್ನುವ ಲವಲವಿಕೆಯನ್ನು ಹುಟ್ಟಿಸಿಬಿಟ್ಟರು. ಅದಕ್ಕೀಗ ನನ್ನ ಮಕ್ಕಳೇ ಉದಾಹರಣೆ. ಶ್ರೀಯುತ "ಪಂಜೆ ಮಂಗೇಶರಾಯರ"ನ್ನು ಮಂಗಳೂರಿಗೆ ಹೋಗಿ ಕಾಣಬೇಕೆಂದು ಹಟಹಿಡಿದು ಹೇಳಿದ್ದರಿಂದ ಕದ್ರಿಯಲ್ಲಿರುವ ಅವರ ಮನೆಗೆ ಹೋಗಿ, "ಸಾಹಿತ್ಯ ಸಂಚಿಕೆಯಲ್ಲಿ ನಿಮ್ಮ ವಿಷಯ ಶ್ರೀಯುತ ಕಾರಂತರು ಬರೆದ ಮೇಲೆ ಪಾರ್ಶ್ವನಾಥ ಗಾದೆಗಳನ್ನು ಹೇಳುವ ಕವಿಶ್ರೇಷ್ಠರನ್ನು ಕಣ್ಣಾರೆ ನೋಡಬೇಕೆಂಬ ಛಲವನ್ನು ನಿವೃತ್ತಿಪಡಿಸುವರೆ ಈ ನನ್ನ ಮಕ್ಕಳನ್ನು ಕರೆದುಕೊಂಡು ಬಂದೆನು" ಎನಲು, ೬೦ ವರ್ಷದ ವೃದ್ಧರು ೧೬ ವರುಷದ ಹುಡುಗನಂತಾಗಿ 'ಯಾವ ಛಲ[illegible]

ಹುಟ್ಟಿರುವುದು [illegible] ನೀಡ [illegible] ಎಂದಿನ ಕೆಲವು ಉಪಚಾರಗಳಿಂದ ಮಕ್ಕಳಲ್ಲಿ ಸಾಹಿತ್ಯಾಭಿರುಚಿಯನ್ನು ಹೇಗೆ ಹುಟ್ಟಿಸಬಹುದೆಂಬುದನ್ನು ರಾಗ ತಾಳ ಹಾಡುಗಳಿಂದ ತೋರಿಸಿಯೂ, ಚಾಹ ಸಿಹಿ ಮಾಡಿಯೂ, ದಸರಾ ವಿಶೇಷ ಸಂಚಿಕೆಯನ್ನು ಕೊಟ್ಟು ಸಾಹಿತ್ಯ ಸೇವೆ ಎಂಬ ಕಬ್ಬಿಣಕ್ಕೆ ನನ್ನ ಮಕ್ಕಳಿಂದಲೂ ಒಂದೊಂದು ಮುದ್ರಣಗಳನ್ನು ಹಾಕಿಸಿಬಿಟ್ಟರು.

ಇವರಂತೆಯೇ ಸಾಹಿತ್ಯಸೇವೆಯಲ್ಲಿ ಯಾ ಇತರ ವಿಷಯಗಳಲ್ಲಿ ನುರಿತ ಹಲವು ಮಹನೀಯರಿದ್ದಾರೆ. ಅವರ ವಿಷಯದಲ್ಲೂ ಬರೆದ ಲೇಖನಗಳು ಈ ತಿಂಗಳಲ್ಲಿ ಬರುತ್ತವೆ, ಬರುವ ತಿಂಗಳಲ್ಲಿ ಬರುವುವು ಎಂದು ಅನೇಕಾನೇಕ ವಾಚಕರು ಬಾಯಾರಿದ ಚಕೋರಿಯು ಸ್ವಾತಿಯ ತೊಟ್ಟಿಗಳನ್ನು ಹಾರೈಸುವಂತೆ, ಆಶಿಸಿದ್ದರೆ ಶಿವಾಯ ಸಾ. ಸಂಚಿಕೆಯು ಈ ವರೆಗೂ ದಫ್ತರಿಯಿಂದ ಹೊರಟಿಲ್ಲ. ಕಾದು ಕಾದು, ತಿಂಗಳು ೬ ದಾಟಿಯೇ ಹೋಯಿತು.

ಆದುದರಿಂದ ಅರ್ಧದಲ್ಲಿ ನಿಲ್ಲಿಸಿಬಿಟ್ಟ "ನಾಡಿನ ಪ್ರಸಿದ್ಧ ಪುರುಷರ" ವಿಷಯ ಇನ್ನು ಮುಂದೆಯೂ ಪ್ರತಿ ತಿಂಗಳಲ್ಲೂ ಬರೆಯುತ್ತಾ ಇರಬೇಕಾಗಿ ಶ್ರೀ. ಕಾರಂತರೊಡನೆಯೂ, ಪುಟ ಜಾಸ್ತಿಯಾದರೆ ಸಾ. ಸಂಚಿಕೆಯನ್ನು ಹೊರಡಿಸುವ ವಾರ ಪುಟಗಳನ್ನು ೨೦ರಿಂದ ೧೬ಕ್ಕಾದರೂ ಇಳಿಸಿ, ಸಾ. ಸಂಚಿಕೆಯನ್ನು ಅಗತ್ಯ ಹೊರಡಿಸುವ ವಿಲೆವಾರಿಯನ್ನು ಮಾಡಿ ಸಾಹಿತ್ಯದ ಕಡೆಗೆ ಮುಂಚಿನದಕ್ಕಿಂತಲೂ ದ್ವಿಗುಣಿತ ಹುರುಪನ್ನುಂಟುಮಾಡಬೇಕೆಂದು ಮಾನ್ಯ ಸಂಪಾದಕರೊಡನೆಯೂ ವಿಜ್ಞಾಪಿಸಿಕೊಳ್ಳುವವನಾದ

21—2—35. ಸಾಹಿತಿಗಳ ಸ್ನೇಹಿತ.

ಸಂಪಾಜೆಯ ಪ್ರೋತ್ಸಾಹನ.

ಇದು ಸಾಧಾರಣ ಹದಿನಾರು ಗ್ರಾಮಗಳಿಗೆ ಮಧ್ಯಸ್ಥಳದಲ್ಲಿದ್ದುಕೊಂಡು ಕಾಡಿನ ಒಟಪಾಡೆಯನ್ನು ಮಾಡುತ್ತದೆ! ಸಂಪಾಜೆ ಪೋಲಿಸ್ ಸ್ಟೇಶನ್, ಸಂಪಾಜೆ ನಾಡು ಆಫೀಸು, ಗ್ರಾಮ ಚಾವಡಿ, ಕನ್ನಡ ಸಂಪಾಜೆ ಮತ್ತು ಕೊಡಗು ಸಂಪಾಜೆಯ ಸೊಸೈಟಿ ಆಫೀಸು, ಕನ್ನಡ ಮತ್ತು ಕೊಡಗು ಸಂಪಾಜೆಯ ಬ್ರಾಂಚ್ ಪೋಸ್ಟ್ ಆಫೀಸು, ಕನ್ನಡ ಮತ್ತು ಕೊಡಗು ಸಂಪಾಜೆಯ ಮುಸಾಫರಿ ಬಂಗ್ಲೆಗಳು, ಸಂಪಾಜೆ ಟೋಲ್ ಗೇಟ್, ಶ್ರೀ ಮಲ್ಲಿಕಾರ್ಜುನ ರೈಸ್ ಮಿಲ್ಸ್ ಮತ್ತು ಕೊಡಗ್ಗೆ ಭಟ್ಟರ 'ದಿ ರಿನೌನ್ಡ್ ರೋಯಲ್ ರೆಸ್ಟೋರೆಂಟ್' ಮೊದಲಾದ ಸ್ಥಳಗಳಿಗೆ ತೀರ ಸಮೀಪದಲ್ಲೇ ಇದೆ. ಇದನ್ನು ಈಗಿರುವ ಸ್ಥಳದಿಂದ ಸ್ಥಾನಾಂತರ ಮಾಡಬೇಕೆಂದು [illegible] ಕನ್ಯಾನಾಡಿಗೆ ಒಯ್ಯುತ್ತಾರಾಗಿ ವರ್ತಮಾನವಿದೆ. ಏಳು ಮೈಲ್ ಸಾಕೇಲದ ಮನೆಯಲ್ಲಿರುವ ರಬ್ಬರ್ ಸಿಂಡಿಕೇಟ್ ಮಾತ್ರವಲ್ಲದೆ ಬೇರೆ ಯಾವ ಸಂಸ್ಥೆಯೂ ಇಲ್ಲದ ಈ ಕನ್ಯಾನಾಡಿಗೆ ಯಾಕೆ ಈ ಪ್ರೋತ್ಸಾಹನವನ್ನು ಮರ್ಯಾದಿಸುತ್ತಾರೋ, ದೇವರಿಗೆ ಗೊತ್ತು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಮೇಲಾಫೀಸರು ಪ್ರೋತ್ಸಾಹನವನ್ನು ಈಗ ಇರುವಂತೆ ಸಂಪಾಜೆಯಲ್ಲೇ ಕಾಯಂ ಮಾಡಬೇಕಾಗಿ ಸಂಪಾಜೆಯವರ ಪ್ರಾರ್ಥನೆ.

ಸಂಪಾಜೆ ಮುಂಡಪ್ಪ ರೈ.

ಅನುಕ್ರಮಣಿಕೆ.

ಚಿತ್ರ ೩
ಪತ್ರಿಕಾ ಪ್ರಪಂಚ ೪
ಕಪ್ಪುರದಮೆ? ೬
ಇಂಗ್ಲಾಂಡಿನ ಟಿಪ್ಪಣಿಯಾಗಳೊಳಗೆ ಮಾತುಕತೆ ೮
ಹಿಡಂಬಾನಿನಲ್ಲಿ ಭಯಂಕರ ಮೋಟಾರು ಅನಾಹುತ ೫

ಅಗ್ರಲೇಖ
ಸ್ಫುಟವಿಚಾರಗಳು ೯
ನಮ್ಮ ಜಿಲ್ಲಾಬೋರ್ಡಿನ ಅವಸ್ಥೆ ೧೦

ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೩
ವಿವಿಧ ಸಮಾಚಾರಗಳು, ೧೬
ಹಿಂದೂ ವಿಶ್ವವಿದ್ಯಾನಿಲಯ ೧೪
ತಾಯಂದಿರ ರಕ್ಷಣೆ ೧೮

ಸ್ವದೇಶಾಭಿಮಾನಿ

ತಾ ೧ನೇ ಶುಕ್ರವಾರ ಮಾರ್ಚಿ '೩೪

ನಮ್ಮ ಜಿಲ್ಲಾಬೋರ್ಡಿನ ಅವಸ್ಥೆ

ಇತರ ಎಷ್ಟೋ ಕಡೆಗಳಲ್ಲಿ, ಸರಕಾರದವರು ಜಿಲ್ಲಾಬೋರ್ಡುಗಳನ್ನು ಮುಚ್ಚಿದ ವಿಚಾರಗಳನ್ನು ಕೇಳಿರುತ್ತೇವೆ ನಮಗೆ ಜಿಲ್ಲಾ ಬೋರ್ಡುಗಳಂತಹ ಸ್ಥಾನಿಕ ಸ್ವಾತಂತ್ರ್ಯವನ್ನು ಕೊಟ್ಟು, ಅದನ್ನು ದುರ್ವ್ಯಯಪಡಿಸಿದರೆಂಬುದೇ ಅಪಾದನೆ ಹೀಗಿರಲು–ನಮ್ಮ ಜಿಲ್ಲಾಬೋರ್ಡು ಹೇಗೆ ಮುಂದರಿಯುತ್ತಿದೆ–ಎಂಬುದರ ವಿಚಾರವನ್ನು ಮಾಡುವುದು ಒಳಿತು ನಮ್ಮ ಮತದಾರರಿಗೆ–ತಮ್ಮ ಪ್ರತಿನಿಧಿಗಳನ್ನು ಆರಿಸುವ ಅಧಿಕಾರವಿರುವುದೇ ಹೊರತು ಆರಿಸಲ್ಪಟ್ಟ ಪ್ರತಿನಿಧಿಗಳು, ಮತದಾರರಿಗೆ ಹೊಣೆಗಾರರಾಗಬೇಕಾಗಿಲ್ಲ ಅಷ್ಟೇ ಏಕೆ ತಾವು ತಮ್ಮ ಸದಸ್ಯತನದ ಅವಧಿಯು ಕಳೆದಲ್ಲಿ, ಏನು ಮಾಡಿದೆವು–ಎಂಬುದನ್ನು ಸಹ ಅವರಿಗೆ ತಿಳಿಸುವ ಅವಶ್ಯವಿಲ್ಲ ಇದರಿಂದಾಗಿ ಸದಸ್ಯರಲ್ಲಿ ಹೆಚ್ಚಿನವರಿಗೆ ಬೋರ್ಡಿನ ಮೀಟಿಂಗುಗಳಲ್ಲಿ ಆಗುವ ಚರ್ಚೆಗಳ ಮಹತ್ವವೂ ತಿಳಿಯದು ತಿಳಿದ ಕೆಲವರಿಗೆ ಅದರ ಜವಾಬುದಾರಿಯೆ ಏನೂ ಇಲ್ಲ ಇಂಥ ಅಭಿಪ್ರಾಯಕ್ಕೆ ನಮ್ಮ ಜಿಲ್ಲೆಯ ಆರ್ಥಿಕ ಆಡಳಿತೆಯೇ ವಿಶದವಾದ ಸಾಕ್ಷಿಯಾಗಿದೆ ಅದಕ್ಕೆ, ಆರ್ಥಿಕ ಧೋರಣೆ ಎಂಬುದೇ ತಿಳಿದಿಲ್ಲ

ತನ್ನ ಆಯವೆಷ್ಟು, ಅದಕ್ಕೆ ಸಮಂಜಸವಾಗಿ ವ್ಯಯವು ಹೇಗಿರಬೇಕು–ಎಂದು ಖಂಡಿತವಾಗಿಯೂ ತಿಳಿದಿಲ್ಲ ಅದರ ಆಡಳಿತೆಯ ಕ್ರಮವೂ ಯಾರದೇ ಹಣವನ್ನು ವೆಚ್ಚಮಾಡಲು ನಿಂತ, ಪರಭಾರೆ ಗೃಹಸ್ಥನಂತಾಗಿದೆ ಕಳೆದ ವರುಷದ ಅಂದಾಜುಪಟ್ಟಿ, ಆರ್ಥಿಕ ಧೋರಣೆಯನ್ನೂ, ಈ ವರುಷ ಅದು ಮುಂದರಿಸಲು ನಿಶ್ಚಯಮಾಡಿರುವ ಹಾದಿಯನ್ನೂ ತಿಳಿದರೆ ಇದು ಸ್ಪಷ್ಟವಾಗುವುದು

ಕಳೆದ ವರುಷದ ಆದಿಯಲ್ಲಿ ಅದರ ಕೈಯಲ್ಲಿ ರೂ ೨೦೬,೩೮೦ಗಳ ಶಿಲ್ಕು ಉಳಿದಿತ್ತು ಅಲ್ಲದೆ ಸಾಮಾನ್ಯ ಆಯದ ಕೆಳಗೆ ರೂ ೫೮೩,೮೪೦ರಷ್ಟು ಆಯವಿತ್ತು ಇಷ್ಟಕ್ಕೆ ಇದಿರಾಗಿ ಅವರು ಸಾಮಾನ್ಯ ಖಾತೆಯಲ್ಲಿ ರೂ ೭೩೬,೧೮೦ನ್ನು ವ್ಯಯಿಸಲು ನಿರ್ಧರಿಸಿದರು ಕೈಯ ಶಿಲ್ಕು ಹಣದಲ್ಲಿ ಈ ಧೋರಣೆಯಿಂದ ೬೪,೧೮೦ ರೂಪಾಯಿಗಳು ಮಾತ್ರ ಉಳಿಯುವಂತಾಯಿತು ನಿಜಕ್ಕೂ ಈ ವರುಷದ ಆದಿಗೆ ಉಳಿಯುವುದು ೬,೦೦೦ ರೂಪಾಯಿಗಳು ಒಂದೇ ವರುಷದಲ್ಲಿ ೨,೧೧,೦೦೦ ರೂ ಗಳನ್ನು ಕರಗಿಸಿಯಾಯಿತು ಇದು ದುಂದುಗಾರಿಕೆಯ ಫಲ ಇಷ್ಟು ವರುಷ ದುಂದುಗಾರರಾಗಲು ಹಿಂದಿನ ಶಿಲ್ಕು ಇದ್ದಿತ್ತು ಈ ವರುಷದ ಆದಿಗೆ ಕೇವಲ ರೂ ೬,೦೦೦ರಷ್ಟು ಶಿಲ್ಕು ಉಳಿಯುವುದು ಆದರೂ ಅವರ ಹೊಸ ವರುಷದ ಅಂದಾಜುಪಟ್ಟಿಯೂ ಇದರಂತೆಯೇ ಖರ್ಚಿನ ಧೋರಣೆಗೆ ಇಳಿದಿದೆ.

ಜಿಲ್ಲಾಬೋರ್ಡಿನ ಮುಖ್ಯ ಆಯಗಳೆಂದರೆ ಲೀಡ್ ಸೆಸ್, ವೃತ್ತಿಕರಗೆ, ಲ್ಯಾಸೆನ್ಸು ಫೀಸು, ಸರಕಾರಿ ಗ್ರೇಂಟು, ಬಸ್ ಕರಗೆ ಮೊದಲಾದುವುಗಳಿಂದಾಗಿರುವುದು.. ಇವುಗಳಲ್ಲಿ ಹೆಚ್ಚಿನ ಯಾವುವೂ ಬೆಳೆಯುವವಲ್ಲ ಬದಲು ಕಳೆದ ವರುಷ ಒಂದು ಲಕ್ಷ ದೊರಕೀತೆಂದು ಯೋಚಿಸಿದ ಬಸ್ಸುಗಳಿಂದ ಸಿಗುವ ಹಣವು ಕೇವಲ ೭೨೦೦೦ಕ್ಕೆ ಇಳಿಯಿತು ಬಸ್ಸುಗಳಿಂದ ಬರುವ ಆದಾಯದಿಂದಲೇ–ಬೋರ್ಡಿನವರು ದುಂದುಗಾರಿಕೆ ತೊಡಗಿದ್ದರು ಈಗ ಆಯವಿಲ್ಲವಾದರೂ–ಅವರ ಮುಖ್ಯ ಖರ್ಚುಗಳಲ್ಲಿ ರಸ್ತೆಗಳೂ ಮೊದಲಾದ ಕಾಮಗಾರಿಗಳಲ್ಲಾಗಲಿ, ವಿದ್ಯೆಯ ವಿಷಯವಾಗಲಿ ಯಾವ ಜಾಗ್ರತೆಯೂ ಇಲ್ಲ ಮೊದಲಿನಂತೆ ಖರ್ಚು ಮಾಡಲು ಅವರು ನಿರ್ಣಯಿಸಿದ್ದಾರೆ ಮೊದಲು–ಹೆಚ್ಚಿನ ವ್ಯಯಕ್ಕೆ ಹಿಂದಿನ ಶಿಲ್ಕು ಉಳಿದಿತ್ತು ಈ ವರುಷ ಅದು ಇಲ್ಲ ಇದರಿಂದಾಗಿ ಈ ಬಾರಿಯ ಅಂದಾಜುಪಟ್ಟಿಯು ಸಾಧಾರಣ ೨ ಲಕ್ಷ ರೂಪಾಯಿಯ ಆಯವಿಲ್ಲದ ವ್ಯಯವನ್ನು ಸೂಚಿಸುವುದು (ಇದರ ಹೆಚ್ಚಿನ ವಿಮರ್ಶೆಯನ್ನು ನಾಳೆ ಪ್ರಕಾಶವಾಗಲಿರುವ ಅಂದಾಜು ಪಟ್ಟಿಯನ್ನು ಕಂಡು ಮಾಡುವ)

ಈ ವರುಷದ ವ್ಯಯಕ್ಕೆ ದಾರಿಯೆಲ್ಲಿ? ಕೊನೆಗೆ ಕಾಸರಗೋಡು ತಾಲೂಕ ಬೋರ್ಡಿನವರು ಮಾಡಿದಂತೆ–ಸಂಬಳ ವಿಚಾರ ಶೀಲರಾದ ಪ್ರತಿಯೊಬ್ಬರೂ ತಮ್ಮ ಆಯಕ್ಕೆ ಸರಿಯಾಗಿ ವ್ಯಯವನ್ನು ತಿದ್ದಿಕೊಳ್ಳಲಿ–ಇವರಿಗೆ ಮಾತ್ರ ಈ ಧೋರಣೆ ಬೇಡವೇನು? ಇದು 'ಸರಕಾರಿ ಹಣಕ್ಕೆ ಲೆಕ್ಕವೇಕೆ'' ಎಂಬ ಧೋರಣೆಯೇನು?

ಜಿಲ್ಲಾ ಬೋರ್ಡಿನವರು ಈ ಮೊದಲು ಗೊತ್ತು ಮಾಡಿದ ರಿಟ್ರೆಂಚ್ ಮೆಂಟ್ ಕಮಿಟಿಯ ಅವಸ್ಥೆಯೇನಾಯಿತು? ಅದು ಯಾವ ಸೂಚನೆಯನ್ನು ಮಾಡಿಲ್ಲವೇ? ಇದ್ದರೆ ದಾರಿದ್ರ್ಯದಲ್ಲೂ ಅದು ಹೊರಗೆ ಬರಬಾರದೇನು?

ಪ್ರಾಥಮಿಕ ಶಿಕ್ಷಣಕ್ಕೆ ಸಾಲದ ಕೊರತೆಯನ್ನು ವ್ಯಯಿಸುವ ಬೋರ್ಡು ಸೆಕೆಂಡರಿ ಮತ್ತು ಎಲಿಮೆಂಟರಿ ಶಾಲೆಗಳಿಗೆ ೬೬ ಸಾವಿರ ವ್ಯಯಿಸುವುದು ಯಾವ ಧ್ಯೇಯದಿಂದ? ರವೆನ್ಯೂ ಗಾವು ಹೇಳ್ಳುತಿರುವುದರಿಂದೇನ? ಮೂಡಬಿದ್ರೆ, ಬೈಂದೂರುಗಳಲ್ಲಿ ಮಿಡಲ್ ಸ್ಕೂಲುಗಳು ಯಾಕೆ? ಕಡಿಮೆ ಸಂಬಳ ತೆರುವ ಹಾಯರ್ ಎಲಿಮೆಂಟರಿ ಶಾಲೆಗಳು ಜನರಿಗೆ ಒಗ್ಗದೆಂದೇನು? (ಅಥವಾ ಶಾಲೆಗೆ ಸಲ್ಲುವ ಕಟ್ಟಡದ ಬಾಡಿಗೆ ಕೆಲವರಿಗೆ ತಪ್ಪುತ್ತದಂತೇನು) ಎಷ್ಟು ಹೈಸ್ಕೂಲುಗಳಿಗೆ–ಕೆಳಗಿನ ದರ್ಜೆಗಳು ಅವಶ್ಯವಿವೆ? ಒರಗಾಲದಲ್ಲಿ ಜಿಲ್ಲಾ ಬೋರ್ಡಿನವರು–ರೋಡು ಮೇಸ್ತ್ರಿಗಳನ್ನು ನೇಮಿಸಿದುದರ ಉದ್ದೇಶವೇನು? ಫಲವೇನು? ಇಂಜಿನಿಯರಿಂಗ್ ಡಿಪಾರ್ಟುಮೆಂಟಿನಲ್ಲಿ ಎಷ್ಟು ಜನ ಸಾಕಷ್ಟು ಉದ್ಯೋಗವಿಲ್ಲದ ನೌಕರರಿದ್ದಾರೆ? ಹೊಸ ವ್ಯಯದ ಹಾದಿಗೆ ಸೆಳೆಯಲಿರುವ ಎಷ್ಟು ಹೊಸ ಸ್ಕೀಮುಗಳು ಬೋರ್ಡಿನ ಮುಂದಿವೆ? ಎಲಿಮೆಂಟರಿ ಶಾಲೆಗಳಲ್ಲಿ ಎಷ್ಟು ಟ್ರೆಂಡು ಸ್ಕೂಲ್ (?) ಯರಿದ್ದಾರೆ?

ನಮ್ಮ ಜಿಲ್ಲಾ ಬೋರ್ಡಿನ ವ್ಯಯಕ್ಕೆ ಯಾವ ಧೋರಣೆಯೂ ಇಲ್ಲ ಆಯದ ಗಮನ ಮೊದಲೇ ಇಲ್ಲ ಸದಸ್ಯರಿಗೆ ರಿಟ್ರೆಂಚ್ ಮೆಂಟಿನ ಇಷ್ಟವಿಲ್ಲ ಅದರಿಂದ ನಂಟರಿಷ್ಟರ ಕೆಲಸಕ್ಕೋ ಇನ್ನಿತರ ಆಯಗಳಿಗೋ ಹಾನಿ ಬಂದೀತೆಂಬ ಭೀತಿ ಇರಲೂಬಹುದು ಇದಿಲ್ಲದ ಕೆಲವು ಸದಸ್ಯರಿಗೆ ಇಡೀ ಬೋರ್ಡಿನ ಕ್ಷೇಮಚಿಂತನೆಗಿಂತ, ತಮ್ಮ ಮೆಂಬರು ದೋಸ್ತಿಗಳನ್ನು ಬೇಸರಪಡಿಸಬಾರದೆಂಬ ಉದಾರ ಮನಸ್ಸು ಉಳಿದವರಿಗೆ ಅವರ ಭತ್ತೆಯೊಂದನ್ನು ಬಿಟ್ಟು ಇತರ ಯಾವ ಚಿಂತೆಯೂ ಇಲ್ಲ ಜನರು ಕೊಡುವ ಹಣವನ್ನು ಸರಿಯಾಗಿ ವ್ಯಯಿಸಬೇಕೆಂಬ ಜವಾಬುದಾರಿಕೆಗೆ ಈ ಗೊಂದಲಗಳಲ್ಲಿ ಸ್ಥಾನವಿದೆಯೇ

ರೈಲ್ವೆ ಬಜೆಟ್ಟಿನ ವಿಮರ್ಶೆ

ಮೂರನೇ ತರಗತಿಯ ಪ್ರಯಾಣಿಕರ ಗೋಳು.

ತಾ. 20ನೇ ದಿನ ಎಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳು ಬಹು ಸ್ವಾರಸ್ಯವಾಗಿಯೂ ಮುಖ್ಯವಾಗಿಯೂ ಇದ್ದುವು ಮಿ। ಟಾಟಿನ್ ಹ್ಯಾಮರು ಶ್ರೀ। ಶಾಂತಸಿಂಗರ ಪ್ರಶ್ನೆಗಳಿಗೆ ಉತ್ತರವೀಯುತ್ತ 1932–33ರಲ್ಲಿ ಬಂಗಾಳದ ಹಿಂಸಾತತ್ವಗಳನ್ನು ತಡೆಯುವುದಕ್ಕಾಗಿ ಏರ್ಪಡಿಸಿದ ಸೈನ್ಯಪಡೆಗೆ 20,28000 ರೂಪಾಯಿಗಳ ಖರ್ಚಾಯಿತೆಂದೂ 1933-34ರಲ್ಲಿ 572000 ರೂಪಾಯಿಗಳ ವೆಚ್ಚವಾಯಿತೆಂದೂ ಮತ್ತು ಕಳೆದ ಸಪ್ಟಂಬರ ತಿಂಗಳ ವರೆಗೆ 185000 ರೂಪಾಯಿಗಳಾಯಿತೆಂದೂ ತಿಳಿಸಿದರು. ಇದರೊಂದಿಗೆ ಚಿತ್ತಗಾಂಗ್ ಗ್ಯಾರಿಸನ್ ಡಿಪೂವಿಗೆ ಕಳೆದ ಡಿಸೆಂಬರ 15ನೇ ತಾರೀಖಿನ ವರೆಗೆ 75 000 ರೂಪಾಯಿಗಳ ಹೆಚ್ಚಿನ ಖರ್ಚಾಯಿತೆಂದೂ ತಿಳಿಸಿದರು ಭೂಮಿಯ ಆಕ್ರಮಣ, ಇವುಗಳಿಗಾಗಿ ಬಂಗಾಳ ಸರಕಾರದವರು ಯುಕ್ತ ಕಂಡಂತೆ ಸಹಾಯ ಮಾಡಿರುವುದಾಗಿ ಉತ್ತರದಿಂದ ತಿಳಿದುಬಂತು

ಶ್ರೀ। ಗೋವಿಂದ ವಲ್ಲಭಪಂತರ ಪ್ರಶ್ನೆಗಳಿಗೆ ಹೋಮ್ ಮೆಂಬರರಾದ ಸರ್ ಹೆನ್ರಿ ಕ್ರೈಕರು ಪ್ರತ್ಯುತ್ತರವನ್ನೀಯುತ್ತಾ ಕಾನೂನುಭಂಗದ ಪ್ರಯುಕ್ತ ಜೈಲುಗಳಲ್ಲಿ ಶಿಕ್ಷೆಯನ್ನನುಭವಿಸುತ್ತಿರುವ ಕೈದಿಗಳ ಸಂಖ್ಯೆ ಈಗ 71 ಇರುವದೆ ಎಂದರು

ನಂತರ ರೈಲ್ವೆ ಬಜೆಟಿನ ಸಾಮಾನ್ಯ ಚರ್ಚೆಗಾರಂಭವಾಯಿತು. ಡಾ। ಜಿಯಾಉದ್ದೀನ್ ಅಹಮ್ಮದರು ಮಾತನಾಡುತ್ತಾ ಸ್ಟ್ಯಾಟಿಟಿಕಲ್ ಲೈನುಗಳ ಆಯವ್ಯಯವನ್ನು ಆರ್ಮಿಸ್ ಬಜೆಟಿಗೆ ಸಂಬಂಧಿಸುವರೇ? ಎಂದು ಪ್ರಶ್ನೆಯಿಟ್ಟರು

ದಿಲ್ಲಿಯ ಶಾಸನ ಸಭೆಯಲ್ಲಿ ಮುಸ್ಲಿಮರ ಡಿಪ್ಯುಟಿ ಲೀಡರ್ ಆಗಿ ಚುನಾಯಿಸಲ್ಪಟ್ಟು ಸರಕಾರಿಪಕ್ಷವಾಗಿ ನುಡಿಯುವ

ಸರ್. ಕವಾಸ್ಜಿ ಜಹಾಂಗೀರ್ ರವರು

ಶ್ರೀ। ಅಖಿಲ ಚಂದ್ರದತ್ತರು ಮಾತನಾಡುತ್ತಾ ರೈಲ್ವೆ ಉದ್ಯೋಗಗಳಿಗೆ ಹೆಚ್ಚು ಹೆಚ್ಚು ಭಾರತೀಯರನ್ನು ತುಂಬಬೇಕು ಮತ್ತು ಕೈಗಾರಿಕೆಗೆ ರೈಲ್ವೆಗಳು ಹೆಚ್ಚು ಬೆಂಬಲ ನೀಡಬೇಕು, ಮೂರನೆಯ ತರಗತಿಯ ಪ್ರಯಾಣಿಕರ ಕೊರತೆಗಳು ದಿನದಿನಕ್ಕೂ ಹೆಚ್ಚುತ್ತಾ ಬರುತ್ತವೆ, ಎಂದರು

ಶ್ರೀ। ಮುನ್ಶಿ ಈಶ್ವರಸ್ ರವರು ಮಾತನಾಡುತ್ತಾ 1933 34ರಲ್ಲಿ ರೈಲ್ವೆ ಅನಾಹುತಗಳಿಂದ 19231 ಜನರು ವ್ಯಥಿತಪಟ್ಟಿದ್ದಾರೆ ಮತ್ತು 1932 33ರಲ್ಲಿ ಈ ಅಂಕೆ 16285 ಮಾತ್ರವಿದ್ದಿತು. ಒಂದು ವರ್ಷದಲ್ಲಿ ಇಷ್ಟೊಂದು ಮಂದಿ ಜನರು ರೈಲ್ವೆ ಘಟನೆಗಳಿಗೆ ತುತ್ತಾಗುವುದು ಶೋಚನೀಯವೇ ಸರಿ. ಇದಕ್ಕೆ ರೈಲ್ವೇ ಅಧಿಕಾರಿಗಳೇ ಜವಾಬ್ದಾರರು ಎಂದರು

ಸರ್ ಹೆನ್ರಿ ಗಿಡ್ನಿಯವರು ಈ ಸಮತೂಕದ ಆಯವ್ಯಯ ಅಂದಾಜಿಗಾಗಿ ರೈಲ್ವೆ ಬೋರ್ಡಿನವರನ್ನು ಅಭಿನಂದಿಸಿ ನಮ್ಮ ಮಾರ್ಗಕ್ಕೆ ಆರ್ಥಿಕ ದುಃಸ್ಥಿತಿ ಭೂಕಂಪದಿಂದ ರೈಲ್ವೆ ಸ್ಟೇಶನುಗಳಿಂದುಂಟಾದ ಅನಾಹುತ, ಈ ಅಡಚಣೆಗಳ ಬಂದೊದಗಿದರೂ ರೈಲ್ವೆ ಬೋರ್ಡಿನವರು ಅವೆಲ್ಲವನ್ನೂ ಎದುರಿಸಿ ಸಮತೂಕದ ಬಜೆಟನ್ನು ಮಂಡಿಸಿದ್ದಾರೆ ಇದು ನಿಜವಾಗಿಯೂ ಪ್ರಶಂಸನೀಯವಾದುದು" ಎಂದರು. ಅಷ್ಟು ಹೊತ್ತಿಗೆ ಸಭೆಯವರು ಫಲಾಹಾರಕ್ಕೆ ಎದ್ದರು

ಫಲಾಹಾರದ ನಂತರ ಸಭೆಯು ಪುನಃ ಸೇರಿದಾಗ ಮಿ। ಬಾರ್ಲಾಯಿಯವರು ಈ ರೀತಿ ನುಡಿದರು– "ಇ ಆರ್ ಮತ್ತು ಎ ಬಿ ಆರ್. ರೈಲ್ವೆಗಳಲ್ಲಿ ಮೂರನೆಯ ತರಗತಿಯ ಪ್ರಯಾಣಿಕರಿಗಿರುವಷ್ಟು ತೊಂದರೆಗಳು ಮತ್ತಾರಿಗೂ ಇಲ್ಲ ಗಾಡಿಗಳಲ್ಲಿ ಮೂರನೆಯ ತರಗತಿ ಪ್ರಯಾಣಿಕರನ್ನು ಸಾರ್ಡಿನ್ ಗಳಂತೆ ತುಂಬುತ್ತಾರೆ. (ಸಾರ್ಡಿನುಗಳೆಂದರೆ ಒಣಗಿದ ಮೀನುಗಳೆಂದರ್ಥ ಲಂಡನಿನಿಂದ ಈ ಮೀನುಗಳನ್ನು ಒತ್ತಿ ಒತ್ತಿ ಸಣ್ಣ ಡಬ್ಬಿಗಳಲ್ಲಿ ತುಂಬಿ ವಿದೇಶಗಳಿಗೆ ಕಳುಹಿಸುತ್ತಾರೆ) ಇವೆಲ್ಲವನ್ನೂ ಸಂಪಡಿಸಬೇಕು. ಬೇಸಿಗೆ ಕಾಲದಲ್ಲಿ ಮೂರನೆಯ ತರಗತಿ ಗಾಡಿಗಳಲ್ಲಿ ಎಲೆಕ್ಟ್ರಿಕ್ ಬೀಸಣಿಗೆಗಳನ್ನು ಹಾಕಬೇಕು" ಎಂದರು.

ಮಿ। ಮೋರ್ಗನರು ಮಾತನಾಡಿ, ಮಿ। ಬಾರ್ಲೋಯಿಯವರು ಮೂರನೆಯ ತರಗತಿ ಪ್ರಯಾಣಿಕರ ಕಷ್ಟನಿಷ್ಠುರಗಳನ್ನು ಹೃದಯಂಗಮವಾಗಿ ವರ್ಣಿಸಿದ್ದಾರೆ. ಅದರಲ್ಲಿ ಸ್ವಲ್ಪವಾದರೂ ಉತ್ಪ್ರೇಕ್ಷೆಯಿಲ್ಲ ಮೈನ್ ಲೈನುಗಳಲ್ಲಿ ಮೂರನೆಯ ತರಗತಿ ಪ್ರಯಾಣಿಕರನ್ನು ಗಾಡಿಗಳಲ್ಲಿ ಕುರಿಗಳಂತೆ ತುಂಬುತ್ತಿದ್ದಾರೆ ಇವನ್ನು ತಪ್ಪಿಸಬೇಕು ಈ ತರಗತಿ ಚಾರ್ಜನ್ನು ತಗ್ಗಿಸುವುದು ಹಿತಕರ ಅದನ್ನು ಸಂಪೂರ್ಣವಾಗಿ ತೊಲಗಿಸಿದರೆ ಉತ್ತಮವಾಗುವುದು ಎಂದರು.

ಮಿ. ಮಥುರಾದಾಸ್ ವಾಸಂಜೀಯವರು ನಂತರ ಮಾತನಾಡಿದರ "ಸಂಬಳದ ಮೋಕಿ ನ್ನು ಮೊದಲಿದ್ದ ಸ್ಥಿತಿಗೆ ತಂದಿರುವುದು ಅಷ್ಟು ವಿವೇಕಮನದಿಂದಲ್ಲ. ರೈಲ್ವೆ ಚಾರ್ಜುಗಳಲ್ಲಿ ಸುಂಕಕೊಡುವ ಸಾಮಾನ್ಯ ಪ್ರಜೆಗೆ ಕಿಂಚಿತ್ತಾದರೂ ಪರಿಹಾರಕೊಡದೆ ಈ ಸಂಬಳಗಳನ್ನು ಮೊದಲಿದ್ದ ಸ್ಥಿತಿಗೆ ತರುವುದು ಒಳ್ಳೆಯ ರೀತಿಯಲ್ಲ ರೈಲ್ವೆ ಆಡಳಿತದಲ್ಲಿ ಸರಿಯಾದ ಆರ್ಥಿಕ ವ್ಯವಸ್ಥೆಯಿಲ್ಲ ಪೋಪ್ ಕಮಿಟಿ ವರದಿಯ ಅಂಶವೊಂದನ್ನು ಗಮನಿಸಿಲ್ಲ. ಅವೆಲ್ಲವೂ ಕಸದ ಬುಟ್ಟಿಗೆ ಎಸೆಯುವುದು" ಎಂದು ಉಗ್ರವಾಗಿ ಟೀಕಿಸಿದರು

ನಂತರ ಶ್ರೀ ಬೆನರ್ಜಿ ಶ್ರೀ। ಪ್ರಕಾಶ ಲಾಲ್ಚಂದ್ ನವಲ್ ರಾಯಿ ವಿ ವಿ ಗಿರಿ ಅಜರ ಅಲಿ ಇವರುಗಳು ಬಜೆಟನ್ನು ಟೀಕಿಸಿ ಮೂರನೆಯ ತರಗತಿ ಪ್ರಯಾಣಿಕರ ಶೋಚನೀಯ ಸ್ಥಿತಿಯನ್ನು ಹೃದಯಂಗಮವಾಗಿ ವಿವರಿಸಿದರ

ಶ್ರೀ। ವಿ ವಿ ಗಿರಿಯವರು ಮುಖ್ಯವಾಗಿ ರೈಲ್ವೆ ಕಾರ್ಮಿಕರ ಸ್ಥಿತಿಯನ್ನು ಸಭೆಯ ಮುಂದಿಟ್ಟರು ಮತ್ತು ರೈಲ್ವೆಗಳಲ್ಲಿ ಹೆಚ್ಚು ಮಂದಿ ಭಾರತೀಯರಿಗೆ ಉದ್ಯೋಗಗಳು ದಿರುವುದಕ್ಕಾಗಿ ಚಿಂತಿಸಿದರು

ಕೆಪ್ಟಂಟ್ ಸಿಲೆಕ್ಟ್ ರಿಪೋರ್ಟನಲ್ಲಿ ತಿದ್ದುಪಾಟುಗಳಾದರೆ ಮಾತ್ರ ಅದು ಹಿಂದೀಯರ ಸ್ವೀಕಾರಕ್ಕೆ ಪಾತ್ರರಾಗುವುದು ' ಎಂದು ನೊಸ್ಸೆ ಹೇಳಿದ ರೈಟ್ ಅನರಬಲ್

ವಿ ಎಸ್. ಶಾಸ್ತ್ರಿಗಳು.

ಸರ್ ಬೋಗರು ಎಲ್ಲವನ್ನೂ ಕೇಳಿ ಮಾತಾಡಿ ಟೀಕೆಗಳಿಗೆ ಉತ್ತರವನ್ನು ಕೊಡುತ್ತಾ "ಸರ್ ಜೋರ್ಜ್ ರೈನಿಯವರು ಹಾಕಿಕೊಟ್ಟ ರೀತಿನೀತಿಯ ಮೇಲ್ಪಂಕ್ತಿಯನ್ನು ನಾವು ಅನುಸರಿಸುತ್ತಿದ್ದೇವೆ ನಮ್ಮಲ್ಲಿರುವ ಏಜಂಟರುಗಳೆಲ್ಲರನ್ನೂ ಅವರ ಯುಕ್ತಾಯುಕ್ತತೆಯ ವಿಚಾರವಾಗಿ ಪರಿಷ್ಕರಿಸುತ್ತಿದ್ದೇವೆ ಕಲ್ಲಿದ್ದಲಿನ ವಿಷಯದಲ್ಲಿರುವ ಸ್ಪರ್ಧೆ ಪ್ರತಿಸ್ಪರ್ಧೆಗಳನ್ನು ಗಮನದಲ್ಲಿಟ್ಟು ಸಮರ್ಥರಾದವರಿಗೆ ನಾವು ಆರ್ಡರುಗಳನ್ನೂ ಕೊಡುತ್ತೇವೆ ರೈಲ್ವೆಗಳಿಗೆ ಬೇಕಾದುದು ಸುಲಭವಾದ್ದದಾಗಲು ಈ ರೀತಿನೀತಿಯನ್ನನುಸರಿಸಿ ಕಲ್ಲಿದ್ದಲನ್ನು ಕೊಳ್ಳುತ್ತಿದ್ದೇವೆ ಪ್ಯಾಸೆಂಜರ್ ಟ್ರಾಫಿಕ್ಕಿನ ವಿಚಾರವಾಗಿ ನಾನು ಹೇಳಬೇಕಾದುದಿಷ್ಟೆ ಎನ್ ಡಬ್ಲ್ಯೂ. ಆರ್. ರೈಲ್ವೆಯವರು ರೈಲ್ವೆ ರೇಟುಗಳನ್ನು ತಗ್ಗಿಸಿದ್ದಾರೆ. ಮತ್ತು ಇನ್ನೂ ಅನೇಕ ವಿಧಾನಗಳನ್ನು ಜಾರಿಯಲ್ಲಿಟ್ಟಿದ್ದಾರೆ ಈ ವಿಧಾನಗಳನ್ನು ಜಿ ಐ ಪಿ ಮತ್ತು ಇತರ ರೈಲ್ವೆಗಳಿಗೂ ಅನ್ವಯಿಸುವಂತೆ ಮಾಡುತ್ತಿದ್ದಾರೆ ಬಿ ಇ ಬಿ ಆರ್ ರೈಲ್ವೆ ಮತ್ತು ರಿಯಾಯಿತಿ ರಿಟರ್ನ್ ಟಿಕೇಟನ್ನು ಕೊಡುತ್ತಿದ್ದೇವೆ ನಾವು ಅನವಶ್ಯವಾಗಿ ಆರ್ಥಿಕ ಅಡಚಣೆಗಳಿಗೆ ಒಳಗಾಗುವುದಿಲ್ಲ ಅನೇಕ ಪರಿಶೋಧನೆಗಳನ್ನೂ ಮಾಡುತ್ತಿದ್ದೇವೆ" ಎಂದರು

ಮದ್ರಾಸು ಕೌನ್ಸಿಲು ವಾರ್ತೆ.

ಬಜೆಟಿನ ವಿಮರ್ಶೆ — ರೈತರ ಸಂಕಷ್ಟ!

ತಾ. ೨೫ರಲ್ಲಿ ಮದ್ರಾಸು ಕೌನ್ಸಿಲಿನಲ್ಲಿ ಬಜೆಟಿನ ಕುರಿತಾದ ಚರ್ಚೆಯಾಯಿತು. ಶ್ರೀ ಅಪ್ಪನೋಟ ಪಿಳ್ಳೆಯವರು ಭಾಷಣಮಾಡುತ್ತ ಸರಕಾರವು ಕೈಗಾರಿಕೆ ಸಂಸ್ಥೆಗಳನ್ನು ತೆರೆಯಬೇಕೆಂದೂ, ಕೈಗಾರಿಕೆಯು ಪುನರಭಿವೃದ್ಧಿಯಾಗದೆ ಸಂಸ್ಥಾನವು ಕಳೆಯುತ್ತಿರುವುದು ನಷ್ಟವೆಂದೂ ತಿಳಿಸಿದರು. "ಮೈಸೂರು ಎಚ್ಚತ್ತಿದೆ. ಅದು ದೇಶದೊಳಗಿನ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನೀಯುತ್ತಿದೆ. ಹತ್ತಿ, ಸಿಲ್ಕ್, ಊಲನ್ ಕೈಗಾರಿಕೆಗಳನ್ನೂ, ಗಾಂಧಾ, ಸಾಬೂನು, ಸುಗಂಧ ವಸ್ತುಗಳ ಕೈಗಾರಿಕೆಗಳನ್ನೂ ಅದು ಪ್ರೋತ್ಸಾಹಿಸುತ್ತಿದೆ. ಜಪಾನು ತನ್ನ ಸರಕುಗಳನ್ನೆಲ್ಲ ಈ ಪ್ರಾಂತ್ಯದಲ್ಲಿ ತಂದೊಡ್ಡುತ್ತಿದೆ. ಆದರೂ ನಾವು ಸುಮ್ಮಗಿದ್ದೇವೆ, ಆಗುವುದನ್ನೂ ಹೋಗುವುದನ್ನೂ ಕಣ್ಣಿಟ್ಟು ನೋಡುತ್ತೇವೆ. ಈ ರೀತಿಯ ಉಪೇಕ್ಷೆಯು ತೀರಾ ಘಾತುಕಪ್ರಾಯವಾದುದು. ಭಂಡವಾಳ ಬೇಕೆಂಬ ಒಂದೇ ನೆವವಿದೆ. ಈಗೀಗ ಭಂಡವಾಳವೂ ಅದಕ್ಕೆ ಬೇಕಾದ ಜನರೂ ನಮ್ಮಲ್ಲಿ ಬರಗಾಲ ಬಂದಿದೆಯೋ? ಅಗ್ಗದಿಂದ ಕೆಲಸಮಾಡುವ ಜನರಿರುತ್ತಾರೆ, ವಿದ್ಯಾವಂತರಿದ್ದಾರೆ. ಬೇಕಾದ ವಸ್ತು ಒದಗಿವೆ. ಆದರೂ ನಾವು ಸಾಹಸಕ್ಕೆ ಕೈಯಿಡದೆ ಸುಮ್ಮಗೆ ಕುಳಿತಿರುವುದು ಎಷ್ಟು ಮಟ್ಟಿಗೆ ಧರ್ಮವಲ್ಲ" ಎಂದರು.

ರಾ। ಪೆದ್ದಿರಾಜುರವರು ಕೃಷೀವಲರ ಪರವಾಗಿ ಮಾತಾಡುತ್ತ, ಸರಕಾರವು ರೈತರ ಹಿತದೃಷ್ಟಿಯಿಂದ ಹೆಚ್ಚಿನ ಯಾವ ಕೆಲಸವನ್ನೂ ಮಾಡಲಿಲ್ಲವೆಂದು ದೂರಿದರು. "ಕಂದಾಯವು ಸಿಗುವುದು ಮಧ್ಯಮ ತರಗತಿಯ ರೈತರಿಂದ. ಆದರೆ ಅವರ ಹಿತದೃಷ್ಟಿಯು ನಮ್ಮಲ್ಲಿಲ್ಲ. [illegible] ರೈತರ ಸೌಕರ್ಯಕ್ಕಾಗಿ ಏನನ್ನು ಮಾಡಿರುವರು? ಅವರು ರೈತರ ಕಡೆಗೆ ಗಮನವಿತ್ತಿಲ್ಲ. ನೀರು ಸಿಗದೆ ಬಳಲುವ ರೈತರಿಗಾಗಿ ಕಾಲುವೆಗಳನ್ನು ನಾವು ತೋಡಿ ಕೊಟ್ಟಿಲ್ಲ. ಗ್ರಾಮಪಂಚಾಯಿತಿಗಳನ್ನು ಪುನರ್ನವಕ್ಕೆ ತರಬೇಕಾಗಿದೆ. ಎಲಿಮೆಂಟರಿ ಶಾಲೆಗಳಿಗೆ ಹೆಚ್ಚು ಹೆಚ್ಚು ಹಣವನ್ನು ಕೊಡಲಾಗಬೇಕಾಗಿದೆ" ಎಂದರು.

ಹಿಂದುಸ್ಥಾನೀ ಸೇವಾದಳದ ಮುಖಂಡರಾದ

ಡಾ। ಎನ್. ಎಸ್. ಹರ್ಡಿಕರರು

ಇವರು ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಳಕ್ಕೆ ಸದಸ್ಯರಾಗಿಯೂ ಚುನಾಯಿಸಲ್ಪಟ್ಟಿದ್ದಾರೆ.

ಉಗಿಹಡಗದಲ್ಲಿ ಸ್ಫೋಟನ! ಎಂಟು ಮಂದಿ ಹತರಾದರು

ಫ್ರಾನ್ಸಿನಲ್ಲಿ ಗವರ್ನರ್ ಜನರಲ್ [illegible] ಎಂಬ ಉಗಿಹಡಗದಲ್ಲಿ ಗೇಸಿನ ಹಂಡೆಯೊಂದು ಒಡೆದು ಎಂಟು ಮಂದಿ ಕೂಡಲೇ ಮೃತರಾದರು. ಸ್ಫೋಟನದೊಡನೆ ಬೆಂಕಿಯದ್ದಿತು. ಅದನ್ನು ನಂದಿಸಲಾಯಿತು.

ಒಪ್ಪಿಯಾದ ಚೆನ್ಸಲರರು.

ಲಂಡನಿನಿಂದ ಹೊರಡುವಾಗ "ಯಾವ ಕಷ್ಟ ಒದಗಿದರೂ ನಾವು ಒಪ್ಪಿಯಾದನ್ನು ಪುನರ್ರಚಿಸುವೆವು. ಪುನರ್ರಚನೆಯೆಂದರೆ ನಿರಂಕುಶ ಪ್ರಭುತ್ವವೇನೋ ಹೌದು. ಆದರೂ ನಮಗೆ ಬೇಕಾದುದು ಶಾಂತಿ" ಎಂದರು.

ಇಂಗ್ಲಾಂಡು — ಜರ್ಮನಿ.

ಸರ್. ಜಾನ್ ಸೈಮನರು ಬರುವ ವಾರ ಜರ್ಮನಿಗೆ ಹೋಗಲಿರುವರು.

ದಕ್ಷಿಣಾಫ್ರಿಕದಲ್ಲಿ ಭಾರತೀಯರು.

ದಕ್ಷಿಣಾಫ್ರಿಕದ ಇಂಡಿಯನ್ ಏಜಂಟರಾಗಿ ಆಕ್ರಮಿಸಿದ ಸರ್ ಸಯ್ಯದ್ ರಜಾ ಅಲಿಯವರು ಅಲ್ಲಿ ತಲುಪಿದರು. ಅವರನ್ನು ಜೋಹಾನ್ಸಬರ್ಗಿನ ಮೇಯರರು ಸ್ವಾಗತೀಕರಿಸಿ "ಹಿಂದೀಯರು ಈ ಆದ್ಭುತ ದೇಶದ ಅಪ್ರಿಯ ನಾಗರಿಕರೆಂದು ನಾವು ಭಾವಿಸುವುದಿಲ್ಲ" ಎಂದರು. ಭಾರತೀಯರಿಗೆ ವೋಟಿನ ಹಕ್ಕನ್ನು ಇಷ್ಟರವರೆಗೆ ಕೊಡಲಿಲ್ಲವಾದರೂ ನಗರ ಸಭೆಯು ಮುಟ್ಟಿಗೆ ಅವರಿಗೆ ಸಮಾನ ಹಕ್ಕುಗಳು ದೊರೆಯುವಂತೇರ್ಪಾಡು ಆಗಲಿದೆಯೆಂದು ಮೇಯರರೆಂದರು. ಅಲಿಯವರು ಭಾಷಣ ಮಾಡುತ್ತ "ಹಿಂದೀಯರೂ ಯೂರೋಪಿಯನರೂ ಒಗ್ಗಟ್ಟಾಗುವ ದಿನಗಳನ್ನು ನಾನು ಆಶಿಸುವೆನೆಂ"ದರು.

ಸಯ್ಯದ್ ರಜಾ ಅಲಿಯವರು.

ಮೆಕ್ಕಾ ಯಾತ್ರೆ

ಹೈದರಾಬಾದ್ ಸಂಸ್ಥಾನದ ನಿಜಾಮರ ಪತ್ನಿ ದುಲ್ಹನ್ ಪಾಶಾ ಬೇಗಂರವರು ಮುಂಬಯಿ ಮಾರ್ಗವಾಗಿ ಮೆಕ್ಕಕ್ಕೆ ಪ್ರಯಾಣ ಬೆಳೆಸಿದರು.

ಅಮೆರಿಕಾದಲ್ಲಿ ಗ್ರಂಥ ವಿಕ್ರಯ

೧೯೩೨ರಲ್ಲಿ ಅಮೆರಿಕಾದಲ್ಲಿ ದುಡ್ಡಿನ ಸಂಕಷ್ಟ ಆದರೂ ೩೫೪,೦೦೦,೦೦೦ ಗ್ರಂಥಗಳು ವಿಕ್ರಯವಾದುವು. ೧೯೩೩ರಲ್ಲಿ ಅಲ್ಲಿ ಅಂತಹ ಕಷ್ಟವೇನೂ ಇದ್ದಿಲ್ಲ. ಕಳೆದ ವರ್ಷ ಅಲ್ಲಿ ೧೫೪,೦೦೦,೦೦೦ ಪುಸ್ತಕಗಳು ಮಾರಾಟವಾದುವು. ಇದರ ಕಾರಣವು ತಿಳಿದುಬಂದಿಲ್ಲ.

ಸಾರ್ವಭೌಮರ ರಜತೋತ್ಸವ

ಪಡಿಕೋಟೆ ಸಂಸ್ಥಾನದ ಮಹಾರಾಜರು ಸಾರ್ವಭೌಮರ ರಜತೋತ್ಸವಕ್ಕಾಗಿ ೩೫೦೦೦ ರೂಪಾಯಿಗಳ ನ್ನಿತ್ತಿರುವರು. ಅಲ್ಲಿಯ ಅಧಿಕಾರಿಗಳೂ ನಾಗರೀಕರೂ ಒಟ್ಟು ೫೫,೦೦೦ ರೂಪಾಯಿಗಳನ್ನು ಸಂಗ್ರಹಿಸಿರುವರು. ೫೦ ಸಾವಿರ ರೂಪಾಯಿಗಳು ದಾನಿಸಲ್ಪಟ್ಟಿವೆ.

ಯಜಮಾನನ ಕೊಲೆ.

ಮಹಾ ಮಹಮ್ಮದನೆಂಬವನು ತನ್ನ ಯಜಮಾನರಾದ ಮಿ। ಕ್ರೊಫರ್ಡರನ್ನು ಅಲ್ಲಹಾಬಾದಿನಲ್ಲಿ ಗುಂಡಿಕ್ಕಿ ಕೊಂದನೆಂಬ ಅಪಾದನೆಯ ಮೇಲೆ ವಿಚಾರಣೆಗೊಳಗಾಗಿರುವನು. ತಾನು ಆ ಅಪರಾಧವನ್ನು ಮಾಡಿಲ್ಲವೆಂದು ಆಪಾದಿತನ ಹೇಳಿಕೆ.

ಸ್ವದೇಶೀಯ ಅವಶ್ಯಕತೆ

ಶ್ರೀ ಭೂಲಾಭಾಯಿ ದೇಸಾಯಿಯವರು ಲಕ್ನೋವಿನಲ್ಲಿ ಸ್ವದೇಶೀ ಪ್ರದರ್ಶನ ಸಮಾರಂಭದಲ್ಲಿ ಭಾಷಣ ಮಾಡಿ "ಭಾರತದ ಸೌಭಾಗ್ಯ ಮಿತಿಯಾಗಿ ಜನರು ಹೊಟ್ಟೆತುಂಬ ಅನ್ನವನ್ನುಣ್ಣಬೇಕಾದರೆ ಸ್ವದೇಶಿಯೊಂದೇ ಮುಖ್ಯ ಹಾದಿ. ಪ್ರತಿಯೊಬ್ಬರೂ ಸ್ವದೇಶಿಯನ್ನು ಪ್ರೋತ್ಸಾಹಿಸುವುದು ಧರ್ಮ"ವೆಂದರು.

ಲಾಹೋರಿನ ವಿದ್ಯಾರ್ಥಿಗಳು.

ಜುಬಿಲಿ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ವಿದ್ಯಾರ್ಥಿಗಳು ಮುಷ್ಕರವನ್ನು ಬಿಟ್ಟಿರುವುದಿಲ್ಲ. ಹತ್ತನೇ ದಿನವಾದರೂ ಪಿಕೆಟಿಂಗನ್ನು ನಿಲ್ಲಿಸಲಿಲ್ಲ. ಪ್ರಿನ್ಸಿಪಾಲರು ತಾನು ಪೋಲೀಸರನ್ನು ಕರಿಯುವೆನೆಂದು ನೋಟೀಸು ಹಾಕಿದುದರ ಕಾರಣವಾಗಿ ವಿದ್ಯಾರ್ಥಿಗಳು ಗೇಟಿನ ಹೊರಗೆ ಪಿಕೆಟ್ ಮಾಡುತ್ತಿರುವರು.

ಮುಂಬಾಯಿಯಲ್ಲಿನ ಶರಾಬು ಗುತ್ತೆಗಳು

ತಾ ೨೮ರಲ್ಲಿ ಹರಾಜು ಮಾಡಲ್ಪಟ್ಟವು 170 ಶರಾಬು ಅಂಗಡಿಗಳಲ್ಲಿ ಒಂದು ಮಾತ್ರ ಹಲವು ಸಲ್ಲಿ ಹೋಗಿ 169 ಗುತ್ತೇದಾರರು ಹರಾಜಿಗೆ ನಿಲ್ಲಲೇ ಇಲ್ಲ. ತಮ್ಮ ಕಷ್ಟ ಪರಿಹಾರಾರ್ಥ ಸರಕಾರವು ಲಕ್ಷ್ಯವಿಡದ ವಿನಹಾ ಹರಾಜಿಗೆ ನಿಲ್ಲಲಾರೆವು ಎನ್ನುವರು.

ಅಬಿಸೀನಿಯದ ಆಧಿಕಾರಿಯಾದ
ರಾಸ್ ಟಿಪಾರಿ

ಫ್ರಾನ್ಸಿನ ನಿರುದ್ಯೋಗತೆ

ಫ್ರಾನ್ಸಿನಲ್ಲಿ ನಿರುದ್ಯೋಗಿಗಳು ಹೆಚ್ಚುತ್ತಿರುವುದರಿಂದ ಅವರ ಜೀವನೋಪಾಯವನ್ನು ಕಲ್ಪಿಸ ಪ್ರವರ್ತ್ತ ಕೌನ್ಸಿಲಿನಲ್ಲಿ ಆಲೋಚನೆಯಾಗಿ ಸಂಸ್ಥಾನದ ಕಾಡುಗಳಲ್ಲಿ ನಿರುದ್ಯೋಗಿಗಳಿಗೆ ಕೆಲಸಗಳನ್ನೊದಗಿಸಿಕೊಡಬೇಕೆಂದು ತೀರ್ಮಾನವಾಗಿದೆ. ಒಬ್ಬನ ಜೀವನನಿರ್ವಹಣದ ಬಗ್ಗೆ ಸಮಾರ್ಪಕ ಸಂಬಳವು ಸಿಗುವಂತೆ ನಿರ್ಧರಿಸಿದ್ದಾರೆ.

ಈ ಯುದ್ಧಭಂಗ ಚಳವಳದ ಸಂಬಂಧವಾಗಿ ಜೈಲುಗಳಲ್ಲಿ ಇನ್ನು ಇರುವ ರಾಜಕೀಯ ಕೈದಿಗಳ ಸಂಖ್ಯೆಯೆಷ್ಟು? ಎಂದು ಸಂಯುಕ್ತ ಶಾಸನಸಭೆಯಲ್ಲಿ ಕೇಳಿದ

ಶ್ರೀ. ಗೋವಿಂದ ವಲ್ಲಭ ಪಂತರವರು

ಶ್ರೀ। ನರಿಮಾನರ ಮೇಲಿನ ಮೊಕದ್ದಮೆ.

ಮೋಟರ್ ವಾಹನಗಳ ಶಾಸನದ ಮೇರೆಗೆ ಶಿಕ್ಷೆಗೆ ಗುರಿಯಾದ ಮೊಕದ್ದಮೆಯನ್ನು ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಕೋರ್ಟಿನಿಂದ ಸ್ಪೆಷಲ್ ಮೆಜಿಸ್ಟ್ರೇಟರ ಕೋರ್ಟಿಗೆ ವರ್ಗಾಯಿಸಬೇಕೆಂಬ ಪಬ್ಲಿಕ್ ಪ್ರಾಸಿಕ್ಯೂಟರರ ಅರಿಕೆಯು ಮಾಜಿಸ್ಟ್ರೇಟರಿಂದ ತಳ್ಳಿಹಾಕಲ್ಪಟ್ಟು, ಶ್ರೀ। ನರಿಮಾನರ ಈ ಮೊಕದ್ದಮೆಯ ವಿಚಾರಣೆಯನ್ನು ಪ್ರಾರಂಭಿಸಿದರು. ನರಿಮಾನರ ಮೇಲಿನ ಮೊಕದ್ದಮೆಯು ಸರಕಾರದ ವಾಹನಗಳ ಶಾಸನದಲ್ಲೇ ತಪ್ಪನ್ನು ಹಿಡಿದುಕೊಂಡಿದೆ.

ಶ್ರೀಮತಿ ಕಮಲಾದೇವಿಯವರು.

ಇವರು "ಧಿಕ್ಕಾರಿಪೋತ"ಎಂಬ ಚಲಚ್ಚಿತ್ರದಲ್ಲಿ ಮುಖ್ಯ ಪಾತ್ರವನ್ನು ವಹಿಸಲಿರುವರೆಂದು ತಿಳಿದುಬಂದಿದೆ.

ಬ್ರಿಟನ್ನಿನಲ್ಲಿ ಮಹಾ ಬಿರುಗಾಳಿ

ಕಳೆದ ವಾರ ಬ್ರಿಟನ್ ಇಡೀ ಪ್ರಚಂಡ ಬಿರುಗಾಳಿಯು ಬೀಸಿತು. ಆದರೊಡನೆ ಮಂಜು ಬಿತ್ತು. ಆಕಾಶದಲ್ಲಿ ಹಾರಾಡುತ್ತಿದ್ದ ವಿಮಾನಗಳು ಒಂದಾದಮೇಲೊಂದು ನೆಲಕ್ಕೆ ಕೆಳಗಿಳಿದುವು. ಪ್ರಯಾಣಿಕರು ಬದುಕಿಕೊಳ್ಳಲಾಯಿತು.

ಸಂಪಾದಕರು ಇನ್‌ಕಮ್‌ಟ್ಯಾಕ್ಸ್ ಕೊಡಲೊಪ್ಪಲಿಲ್ಲ

ಲಂಡನಿನ "ದಿ ನ್ಯೂ ಸ್ಟೇಟ್ಸ್‌ಮನ್" ಪತ್ರಿಕೆ ಸಂಪಾದಕರಾದ ಮಿ। ಜೋಸೆಫ್ ಸಿಡ್ನಿಯರು ಸರಕಾರವು ನೌಕಾ ಬಲ್ಲಾಳ್ಕೆ ತಂದುದರಿಂದ ಸಂಪಾದಕರು ಶಪ್ಪಿತ್ತೀಡಾಗಿರುವೆನೆಂದು ಹೇಳಿ ತನ್ನ ಪಾಲಿಗೆ ಬಿದ್ದಿರುವ ಇನ್‌ಕಮ್ ಟ್ಯಾಕ್ಸ್ ಕೊಡಲು ಸಿದ್ಧವಿಲ್ಲ.

ಅಕ್ಕಿಯ ಆಯಾತ

ಇಲ್ಲಿಯ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ವಿದೇಶೀ ಅಕ್ಕಿಯ ಆಯಾತವನ್ನು ನಿಷೇಧಿಸಬೇಕೆಂಬ ಠರಾವು ಸ್ವೀಕೃತಗೊಂಡಿದೆ.

೧೯೩೨ನೇ ಇಸವಿ ಮಾರ್ಚ ೧ನೇ ತಾರೀಕಿನ ದಿನ ಅಮೆರಿಕಾದಲ್ಲಿ ಕರ್ನಲ್ ಲಿಂಡ ಬರ್ಗರವರ ಮಗನನ್ನು ಕದ್ದೊಯ್ದು ತನಗೆ ೧೫೦೦೦ ರೂಪಾಯಿಗಳನ್ನು ಕೊಟ್ಟರೆ ಆ ಮಗನನ್ನು ಬಿಡುವೆನೆಂದು ಹೇಳಿ, ಆದರ ಕೊಲೆಮಾಡಿದ ಹಾಫ್‌ಮನ್‌ಗೆ ಮರಣದಂಡನೆಯಾಗಿದೆ

ಹಕ್ಕಿಕ ಹಾಫ್‌ಮನ್ನನು ತನ್ನ ವಕೀಲನೊಡನೆ ನ್ಯಾಯಾಸ್ಥಾನದಲ್ಲಿ ಮಾತನಾಡುತ್ತಿರುವುದು. ಕಟಕಟೆಯ ಮೇಲೆ ಕುಳಿತಿರುವವನೇ ಹಾಫ್‌ಮನ್. ಹಿಂಬದಿಯಲ್ಲಿ ಪೋಲೀಸನವನು ಹಕ್ಕಿಕಯನ್ನು ಕಾಯುತ್ತಿದ್ದಾನೆ.

ಮಂಗಳೂರು.

ಇದೇ ಬರುವ ತಾ. ೩ನೇ ಆದಿತ್ಯವಾರ ಸಂಜೆ ಘಂಟೆ ೫-೩೦ಕ್ಕೆ ಮಂಗಳೂರು ಲೈಸು ಮೈದಾನದಲ್ಲಿ ಶ್ರೀಯುತ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು "ಬೈಬಲಿನ ದೇವರು" ಎಂಬ ಕುರಿತು ಭಾಷಣ ಮಾಡುವರು.

ಇದೇ ಬರುವ ತಾ. ೩ನೇ ಆದಿತ್ಯವಾರ ಬೆಳಗ್ಗೆ ಘಂಟೆ ೮ಕ್ಕೆ ಮಂಗಳೂರು ಸಿಟಿ ಆರ್ಯಸಮಾಜ ಮಂದಿರದಲ್ಲಿ 'ದಯಾನಂದ ಋಷಿಬೋಧೋತ್ಸವ'ದ ಕುರಿತು ಭಾಷಣಗಳಾಗುವುವು. ಸರ್ವರಿಗೂ ಸುಸ್ವಾಗತವಿದೆ.

ಶಿವಮೊಗ್ಗಾ ನಿವಾಸಿ ಪ್ರಾಣಾಚಾರ್ಯ, ವೈದ್ಯವಿದ್ವಾನ್ ವ್ಯಾ ಪಾರ್ಥಸಾರಥಿಯುಣ ಪಂಡಿತ (ಸಂಪಾದಕ, ಆಯುರ್ವೇದ ಮಾರ್ತಾಂಡ) ಇವರನ್ನು ಸನ್ಮಾನಿಸಲು ಮಂಗಳೂರು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾ ಸದನದಲ್ಲಿ ತಾ. ೨೫ರಲ್ಲಿ ಟೀಪಾರ್ಟಿ ಸತ್ಕಾರವು ಜರಗಿತು.

ಬೋಳೂರಿನ ಡಾ॥ ಎಂ ಎನ್. ಪೈಗಳ ಡಿಸ್ಪೆನ್ಸರಿಯಲ್ಲಿ ಇದೇ ಮಾರ್ಚ ತಾ. ೧೦ರಿಂದ (ಬೆಳಗ್ಗೆ ಘಂಟೆ ೮ರಿಂದ ೧೧ರ ತನಕ, ಸಂಜೆ ೪ರಿಂದ ೬ರ ತನಕ) ಬಡವರಿಗೆ ಧರ್ಮಾರ್ಥವಾಗಿ ಮದ್ದುಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆಯೆಂದು ತಿಳಿದುಬರುತ್ತದೆ. ಶ್ರೀಯುತರ ಈ ಕಾರ್ಯವು ಅಭಿನಂದನೀಯವಿದೆ.

ಶೃಂಗೇರಿಯ ಜಗದ್ಗುರು ಸಂಸ್ಥಾನದ ಧರ್ಮಾಧಿಕಾರಿಗಳಾದ ಬ್ರಹ್ಮ ಶ್ರೀ ವಿದ್ವಾನ್ ಕೆ. ಶೇಷಶಾಸ್ತ್ರಿಗಳವರು ಕಳೆದ ವಾರ ಮಂಗಳೂರಿಗೆ ಬಂದು ಶ್ರೀ ಎಂ. ವಿ. ಶಾಸ್ತ್ರಿಗಳಲ್ಲಿ ಮೊಕ್ಕಾಂ ಮಾಡಿರುವರು. ಅವರೊಡನೆ ಮಾತನಾಡಲಪೇಕ್ಷಿಸುವ ಶೃಂಗೇರಿ ಮಠದ ಶಿಷ್ಯವರ್ಗದವರು ಶ್ರೀ ಎಂ ವಿ. ಶಾಸ್ತ್ರಿಗಳಲ್ಲಿ ಬಂದು ಸಂಧಿಸಬಹುದೆಂದು ತಿಳಿಸಲಾಗಿದೆ.

ಇಲ್ಲಿಯ [illegible] ಯುವಕ ಸಂಘದವರ ಪ್ರಯತ್ನದಿಂದಾಗಿ ಇದೇ ಕಳೆದ ತಾ. ೧೮ನೇ ಸೋಮವಾರದ ರಾತ್ರಿ ಶ್ರೀ [illegible] ಮನೆಯಂಗಳದಲ್ಲಿ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರಿಂದ 'ಪತಿಭಕ್ತಿ' ಎಂಬ ಹರಿಕಥೆಯನ್ನು ನಡೆಸಲಾಯಿತು. [illegible] ಮತ್ತಿತರ [illegible] ಶ್ರೀ ವಿದ್ಯಾರ್ಥಿಯವರು ಬಹುಮಾನಿಸಲ್ಪಟ್ಟರು. [illegible] ಶ್ರೀ ಎನ್. ಆನಂದರವರಿಂದ [illegible] ಶ್ರೀ ವಿದ್ಯಾರ್ಥಿಯವರ [illegible] ಮಾಲೆಗೆ ಕೊಡಿಸಲಾಯಿತು.

ಬೋಳೂರಿನ [illegible] ಸಂಪೂರ್ಣವಾಗಿ [illegible] ಅಲ್ಲಿಯ ಬಡಂಗಡಿಗಳು [illegible] ಮಾರ್ಗಗಳು [illegible] ಯೆಂದೂ, ಇದರಿಂದಾಗಿ ವಾಹನಗಳ ಸಂಚಾರಕ್ಕೆ [illegible] ಮೊದಲಾಗಿ ತಿಳಿಸಿ [illegible] ಮುನಿಸಿಪಾಲಿಟಿಯು ಕಮೀಶನರಿಗೆ ಊರ ಪ್ರಮುಖರ ಮನವಿಯೆಂದು ಹೋಗಿರುತ್ತದೆ.

ಸ್ಥಳೀಯ ಬಾರ್-ಎಟ್-ಲಾ ಮತ್ತು ಎಡ್ವೊಕೇಟರಾದ ಶ್ರೀ ಎಂ. ಕ[illegible] ನಂಬಿಯಾರರು ಪಾಲ್ಘಾಟಿನ [illegible] ಮುನ್ಸೀಫರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಇಲ್ಲಿಯ ಆರ್ಯಸಮಾಜದ ೧೬ನೇ ವಾರ್ಷಿಕ ವರ್ಧಂತಿ ಉತ್ಸವವು ಮಂಗಳೂರು ಸನ್ಯಾಸಿಗುಡ್ಡೆಯಲ್ಲಿರುವ ಸಮಾಜ ಮಂದಿರದಲ್ಲಿ ಇದೇ ತಾ. ೩ನೇ ಆದಿತ್ಯವಾರ ಜರಗುವುದು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಒದುವ ಸಭೆಯು ಇದೇ ಮಾರ್ಚ ೨೮ರಲ್ಲು ಬೆಳಗ್ಗೆ ೧೧ ಗಂಟೆಗೆ ಡಿಸ್ಟ್ರಿಕ್ಟ್ ಬೋರ್ಡ ಆಫೀಸಿನಲ್ಲಿ ಜರಗುವುದು.

ಮಂಗಳೂರು ಮುನಿಸಿಪಾಲಿಟಿಯ ಮುಂದಿನ ಅಧಿವೇಶನವು ಅದರ ಆಫೀಸಿನಲ್ಲಿ ಇದೇ ೨೬ರಲ್ಲಿ ಜ[illegible]

ಸರ್ವಜನೋಪಕಾರಾರ್ಥವಾಗಿ ನಡೆಸಲ್ಪಡುವ [illegible] ಚಿಕಿತ್ಸಾ ಭವನ ಎಂಬ ವೈದ್ಯಶಾಲೆಯ ೧೬ನೇಯ ವಾರ್ಷಿಕೋತ್ಸವವು, ವಕೀಲ ಶ್ರೀ ಬಿ ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಇದೇ ಮಾರ್ಚ ತಾ ೧೫ನೇ ದಿನ ಜರಗಲಿರುವುದು.

ಇಲ್ಲಿಯ [illegible] ವ್ಯಾಪಾರಸ್ಥರೊಬ್ಬರು ಕೆನರಾ ಹೈಸ್ಕೂಲಿನ [illegible] ವಿದ್ಯಾರ್ಥಿಗೆ ೩ ವರ್ಷಗಳಿಂದ ವಿದ್ಯಾರ್ಥಿವೇತನವನ್ನು ಕೊಡುತ್ತಿರುವುದು ಶ್ಲಾಘನೀಯ ವಾಗಿದೆ.

'ಮನೋರಂಜಕ'ದ ಒಂದು ಸಭೆಯು ತಾ. ೨೧ರಲ್ಲಿ ಶ್ರೀ ನಾಗೇಂದ್ರನಾಥ ಮಲ್ಯರ ಅಧ್ಯಕ್ಷತೆಯಲ್ಲಿ 'ಸ್ತ್ರೀ ಸ್ವಾತಂತ್ರ್ಯ' 'ಶಕ್ತಿಯುಕ್ತಿ' ಎಂಬ ವಿಷಯಗಳಲ್ಲಿ ಚರ್ಚೆ ನಡೆಯಿತು. ಮುಂದಿನ ಸಭೆಯು ತಾ. ೩೧ರಲ್ಲಿ ಜರಗುವುದು.

ಇಲ್ಲಿಯ ಬಾಸೆಲ್ ಮಿಶನ್ ಪ್ರೆಸ್ಸಿನ ಹೊಸ ಮೆನೇಜರಾಗಿ ಮಿ॥ ಇ. ಕ್ರಾಸ್ ಇವರು ಬಂದಿರುತ್ತಾರೆ. ಈ ತಿಂಗಳಲ್ಲಿ ಅವರು ಚಾರ್ಜು ವಹಿಸಲಿರುವರೆಂದು ತಿಳಿದು ಬರುತ್ತದೆ.

ಮಂಗಳೂರಿನ ಸುಪ್ರಸಿದ್ಧ ಕಾಫಿ ಪ್ಲೇಂಟರಾದ ಮಿ॥ ಪಿ. ಎಫ್ ಎಕ್ಸ್ ಸಾಲ್ಡಾಂಞಾರು ಕಳೆದ ಶನಿವಾರ ಬೆಳಗ್ಗೆ (ತಾ. ೨೯) ತಮ್ಮ ೬೬ನೇ ವಯಸ್ಸಿನಲ್ಲಿ ಮೃತರಾದರು. ಇವರ ಸಮಾಧಿಯು ಮಿಲಾಗ್ರಿಸ ಇಗರ್ಜಿಯಲ್ಲಿ ನಡೆಯಿತು.

ನಮ್ಮ ಜಿಲ್ಲಾ ಕಲೆಕ್ಟರರು ಗವರ್ನಮೆಂಟ್ ಕಾಲೇಜಿನಲ್ಲಿ ಜುಬಿಲಿಯನ್ನು ಆಚರಿಸುವ ಕುರಿತು, ಮಾರ್ಚ ತಾ. ೬ನೇ ದಿನ ಒಂದು ಸಭೆಯನ್ನು ಜರಗಿಸುವರು. ಸರ್ವರಿಗೂ ಸುಸ್ವಾಗತವಿದೆ.

ದಕ್ಷಿಣ ಕನ್ನಡ ಜಿಲ್ಲಾ ಕೌನ್ಸಿಲಿಗೆ ಪ್ರೊಪರೇಟರ್ ಆದಿದ್ರಾವಿಡರ ಕಡೆಯಿಂದ ಶ್ರೀ ಎಸ್ ಗೋ[illegible] ಸಾಲೆನ್ನರು ನೇಮಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಇಲ್ಲಿಯ ಕೆನರಾ ಬೇಂಕ್ ಲಿಮಿಟೆಡ್, ಇದರ ಶಾಖೆಯೊಂದು ಕಳೆದ ತಾ ೨೩ರಲ್ಲಿ ಹುಬ್ಬಳ್ಳಿಯಲ್ಲಿ, ಅಲ್ಲಿನ ಮಿ॥ ಜಸ್ಟರಾದ ಶ್ರೀ ಎಂ ಜೆ ದೇಸಾಯಿಯವರಿಂದ ತೆರೆಯಲ್ಪಟ್ಟಿತು. ಇದೇ ಬೇಂಕಿನ ಇನ್ನೊಂದು ಶಾಖೆಯು ಇದೇ ಮಾರ್ಚ ೨೮ರಲ್ಲು ದಾವಣಗೆರೆಯಲ್ಲಿ ತೆರೆಯಲ್ಪಡುವುದೆಂದು ತಿಳಿದುಬರುತ್ತದೆ.

ತಾ ೧೬-೨-೩೬ನೇಗೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೬ ಮಂದಿಗಳೂ ೩೦ ಜನನಗಳೂ ಆಗಿವೆಯೆಂದು ತಿಳಿದು ಬರುತ್ತದೆ. ಮರಣಗಳ ಪೈಕಿ ಕಾಲರದಿಂದ ೧, ವಿಷಮ ಜ್ವರದ ನ್ಯುಮೋನಿಯಾ ೨, ಕ್ಷಯ ೩, ಆಮಶಂಕೆ ೩, ದಡಿಗೆ ೧, ಅಪಘಾತ ೧, ಇತರ ಕಾರಣಗಳಿಂದ ೧೩, ಒಂದು ವರ್ಷದೊಳಗಿನ ಮಕ್ಕಳ ಮರಣ ೩. ಈ ವಾರದಲ್ಲಿ [illegible] ೪ ಜನರಿಗೆ ತಗಲಿದೆ.

ಕಳೆದ ೨೯ನೇ ಶನಿವಾರ ರಾತ್ರಿ ಇಲ್ಲಿಯ ಮಿಶನ್ ಹೈಸ್ಕೂಲಿನ ಪಥವಾಗಿ ಹಿಂದೂಸ್ಥಾನ ಸಿನೆಮಾದಲ್ಲಿ ಅ[illegible] ಹಳೇ ವಿದ್ಯಾರ್ಥಿಗಳೂ ಶಿಕ್ಷಕರೂ ಕೂಡಿ [illegible] 'ಯಯಾತಿ ನಾಟಕ' ಎಂಬ ನಾಟಕವು [illegible] ಪ್ರದರ್ಶನಗೊಂಡಿತು [illegible] ಸೊಸೈಟಿಯ ಉತ್ಪತ್ತಿಯ [illegible] ಸಾಹಿತ್ಯ [illegible] ನಾಟಕದಲ್ಲಿ [illegible] ಶಾಲೆಯ ಅಧಿಕಾರಿಗಳು [illegible] ಜನರಿಗೆ [illegible] ಸಹಾಯವನ್ನು [illegible] ಶ್ರೀನಿವಾಸ [illegible] ನಾಥ ಶರ್ಮ [illegible] ಶ್ರೀಧರ, ತಿಪ್ಪಯ್ಯ ಮೊದಲಾದವರಿಗೆ ಸುವರ್ಣಪದಕಗಳನ್ನಿತ್ತು ಬಹುಮಾನಿಸಿದರು. ರಾತ್ರಿ ಗಂಟೆ ೨ ೩೦ಕ್ಕೆ ನಾಟಕ ಮುಕ್ತಾಯವಾಯಿತು.

ಮೈಸೂರಿನ ಸುಪ್ರಸಿದ್ಧ ಕೀರ್ತನಕಾರರೂ, ಇಲ್ಲಿಗೆ ಹೋದ ಒಂದು ಕಥೆಗಳನ್ನು ನಡೆಸಿದವರೂ ಆದ 'ಕೀರ್ತನ ಕೇಸರಿ' ಶ್ರೀ ಜಿನದಾಸ [illegible] ಯವರು ನಮ್ಮ ಜಿಲ್ಲೆಯ ಕೆಲವು ಕಡೆಗಳಲ್ಲಿ ಕೆಲವು ಹರಿಕಥಾ ಪ್ರಯೋಗಗಳನ್ನು ನಡೆಸಿ, ಈಗ ಇಲ್ಲಿಗೆ ಬಂದಿರುವರು. ತಾ ೨೯ನೇ ಸಂಜೆ ಇವರು ಇಲ್ಲಿನ ಶ್ರೀ [illegible] ನಾಥ ಸ್ವಾಮಿಯವರ ಬಸದಿಯಲ್ಲಿ 'ಶ್ರೀಮತಿ ಅರ್ಜಿಕಾ ಚಂದನಾದೇವಿ' ಎಂಬ ಆಖ್ಯಾನದ ಹರಿಕಥೆಯನ್ನು ಪ್ರಶಂಸನೀಯವಾಗಿ ನಡೆಸಿದರು.

ಇಲ್ಲಿಯ ಕಾಸ್ಮೊಪೊಲಿಟನ್ ಕ್ಲಬ್ಬಿನ ದಿನಾಚರಣೆಯ ಸಂಬಂಧ ಕಳೆದ ಶನಿವಾರ ರಾತ್ರಿ, ವಿದ್ಯುದ್ದೀಪಗಳಿಂದ ಅಲಂಕೃತವಾಗಿರುವ ಕ್ಲಬ್ಬಿನ ಆವರಣದಲ್ಲಿ ಒಂದು ಯಕ್ಷಗಾನ ಕೂಟವು ಉತ್ಸಾಹಪೂರ್ವಕವಾಗಿ ಜರಗಿತು. ಪ್ರಸಂಗ "ಅಂಗದ ಸಂಧಾನ"

ಮರುದಿನ ಆದಿತ್ಯವಾರ ಬೆಳಗ್ಗೆ ಇದೇ ಕ್ಲಬ್ಬಿನ ದಿನಾಚರಣೆಯ ಸಂಬಂಧ ಟೆನ್ನಿಸ್ ಆಟ, ಕ್ಲಬ್ಬಿನ ಮೆಂಬರರ ಮಕ್ಕಳ ಆಟಗಳು, ಮತ್ತು ಪಾನಫಲಾಹಾರದ ಸತ್ಕಾರ ಇವು ಮುಗಿದು. ಅನಂತರ ಪುನಃ ಫಲಾಹಾರ ಕೂಟವು ಜರುಗಿದ ನಂತರ ಸಂಜೆ ೫ ಘಂಟೆಗೆ ಈ ಕ್ಲಬ್ಬಿನ ಪ್ರೆಸಿಡೆಂಟರುಗಳಾದ ದಿವಂಗತ ದಿವಾನ್ ಬಹದ್ದೂರ್ ಎಸ್ ಸುಬ್ಬರಾಯರ ಮತ್ತು ಶ್ರೀ ಅಣ್ಣಿಯಾಚಾ ಶ್ರೀನ[illegible]

ತಾಲೂಕುಗಳಿಂದ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಶ್ರೀ ಆದ್ಯ ಶಂಕರಭಗವತ್ಪಾದಾಚಾರ್ಯರು ಸ್ಥಾಪಿಸಿದ ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದ ಜೀರ್ಣೋದ್ಧಾರದ ಕೆಲಸವು ಬಹಳ ಭರದಿಂದ ಸಾಗುತ್ತಾ ಬಂದು ಇದೇ ಬರುವ ತಿಂಗಳ ತಾ. ೧೧ರ ಒಳಗೆ ಕೆಲಸವು ಸಂಪೂರ್ಣವಾಗಿ ಪ್ರತಿಷ್ಠೋತ್ಸವ, ಬ್ರಹ್ಮಕಲಶ ಮೊದಲಾದ ಉತ್ಸವಗಳು ಫಾಲ್ಗುಣ ಬ. ಸಪ್ತಮಿ ದಿವಸ ನಡೆಯಲಿರುವದೆಂದು ತಿಳಿದುಬರುತ್ತದೆ.

ಪುತ್ತೂರು:—ಇಲ್ಲಿಯ ಬೋರ್ಡು ಹೈಸ್ಕೂಲಿನ ವರ್ಧಂತ್ಯುತ್ಸವವನ್ನು ಇದೇ ಮಾರ್ಚ ತಿಂಗಳ ಎರಡನೇಯ ವಾರದಲ್ಲಿ ಜರುಗಿಸಬೇಕೆಂದು ನಿಶ್ಚೈಸಿದ್ದುದರಿಂದ ಶಾಲೆಯ ಹಳೆಯ ವಿದ್ಯಾರ್ಥಿಗಳೆಲ್ಲರೂ ಬಂದು ಹೋದರ ಸಮಾರಂಭದಲ್ಲಿ ಭಾಗಿಗಳಾಗಬೇಕಾಗಿ ಈ ಮೂಲಕ ಆಮಂತ್ರಿಸಲಾಗುತ್ತದೆ. ಇಲ್ಲಿ ಹಳೆ ವಿದ್ಯಾರ್ಥಿ ಸಂಘವೊಂದಿಲ್ಲದುದರಿಂದಲೂ, ಸಮಾರಂಭವು ಬಹಳ ಸಮೀಪಿಸಿರುವುದರಿಂದಲೂ ಅವರ ವಿಳಾಸವನ್ನು ಸಂಗ್ರಹಿಸಿ ಆಮಂತ್ರಣ ಪತ್ರವನ್ನು ಎಲ್ಲರಿಗೂ ಸಕಾಲದಲ್ಲಿ ತಲುಪಿಸುವುದು ಕೇವಲ ಅಸಾಧ್ಯವಾಗಿ ಕಾಣುವುದರಿಂದಲೂ ಓಲೆ ಪತ್ರಿಕೆಗೆ ಬರೆದಿರುತ್ತದೆ. ಎಲ್ಲಾ ಹಳೆಯ ವಿದ್ಯಾರ್ಥಿಗಳು ಉದಾರಹಸ್ತದಿಂದ ದ್ರವ್ಯ ಸಹಾಯ ಮಾಡಿ ಈ ಸಮಾರಂಭವು ಯೋಗ್ಯ ರೀತಿಯಲ್ಲಿ ಆಚರಿಸಲ್ಪಡುವಂತೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ" ಎಂದು ಸದ್ರಿ ಶಾಲಾ ಹೆಡ್ ಮಾಸ್ತರರು ತಿಳಿಸುತ್ತಾರೆ.

ಕಾಸರಗೋಡು:—ಕಳೆದ ತಾ ೧೦ರಲ್ಲಿ ಇಲ್ಲಿಯ ಬೋರ್ಡ ಹೈಸ್ಕೂಲಿನ ವರ್ಧಂತ್ಯುತ್ಸವವು ಪ್ರತಾಪರು ಡಿವಿಜನಲ್ ಮೆಜಿಸ್ಟ್ರೇಟರವರ ಅಧ್ಯಕ್ಷತೆಯಲ್ಲಿ ಜರಗಿತು.

ಕಳವಾರು:—ಈ ಸೆಂಟ್ರಲ್ [illegible] ಒಂದು ಸಭೆಯ ೨ ತಾ ೯-೩-೩೬ರಲ್ಲಿ ಕಳವಾರು [illegible] ಎಲಿಮೆಂಟರಿ ಶಾಲೆಯಲ್ಲಿ ಜರಗಲಿರುವುದೆಂದು ತಿಳಿದು ಬರುತ್ತದೆ.

ಹಳೆಯಂಗಡಿ:—ಇದೇ ಫೆಬ್ರವರಿ ತಾ. ೨೩ನೇಯ ದಿನ ಆದಿತ್ಯವಾರ [illegible] ಸಂತೆ ಮಾರ್ಕೆಟಿನ [illegible] ದಲ್ಲಿ ಒಂದು [illegible] ಸಭೆಯು [illegible] ಅಧ್ಯಕ್ಷತೆಯಲ್ಲಿ [illegible] (೧) [illegible] ಕೌನ್ಸಿಲಿನಲ್ಲಿ [illegible] ಶ್ರೀ [illegible] ವಾದದ [illegible] ಕೌನ್ಸಿಲ [illegible] ಸದರಿ ಬಿಲನ್ನು [illegible] (೨) [illegible] ಮಾಡಿಕೊಳ್ಳಬೇಕು.

ಉಡುಪಿ:—ತಾ. ೨೦ನೇಯ [illegible] ಇಲ್ಲಿನ ಶ್ರೀ ಅನಂತೇಶ್ವರ ದೇವಸ್ಥಾನದ [illegible] ದಲ್ಲಿ ವಕೀಲ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ನ್ಯಾಯವಿಧಾಯಕ ಸಭೆಯ ಮುಂದೆ [illegible] ಹಿಂದೂ ಮತಗಳ ಸಂಬಂಧವಾದ ಬಿಲನ್ನು [illegible]

[illegible] ಭಾವಚಿತ್ರಗಳನ್ನು [illegible] ರಾವ್ [illegible] ನೆಂಟರ [illegible] ಇಲ್ಲಿಯ [illegible] ಹಂಚಿನ, ಶ್ರೀ ಎನ್. ರಾಮರಾಯರಿಂದ 'ಶ್ರೀ [illegible]' [illegible], ವಾರ್ಷಿಕ ಜನರಲ್ ಮೀಟಿಂಗು [illegible] ಶ್ರೀ ಪಿ. ಕೃಷ್ಣರಾಯರ ಮತ್ತು ಶ್ರೀ ಎಸ್. ಎನ್. [illegible] ರಾವ್, ಬಿ ಎ ಬಿ. ಎಲ್ ಇವರ ಫೋಟೋ ಮತ್ತು ಕೆಲವರ ಸಂಗೀತದೊಂದಿಗೆ ಸಮಾರಂಭವು ಕೊನೆಗೊಂಡಿತು.

ಆಮಾನ್ [illegible] ಸ್ಪೆಷಲ್ ಡ್ಯೂಟಿಯ ಮೇಲಿರುವ [illegible] ಆಫೀಸರರು [illegible] ಡಿಸ್ಟ್ರಿಕ್ಟ್ [illegible] ಚಾರ್ಜನ್ನು ವಹಿಸುವಂತೆ ಹುಕುಂ ಆಗಿದೆ ಮತ್ತು ದಕ್ಷಿಣ ಕನ್ನಡದ ಜನರಲ್ ಡ್ಯೂಟಿಯ ಮೇಲಿನ [illegible] ಮುಖ್ಯರಿಗೆ ಜನರಲ್ ಡ್ಯೂಟಿಯ [illegible] ವಹಿಸು ವಂತೆ ವರ್ಗಾಯಿಸಲ್ಪಟ್ಟಿದ್ದಾರೆ.

ಒಂದು ಮಹಾ ಸಭೆ ಸೇರಿತು. ಇದನ್ನು ಅಧ್ಯಕ್ಷರು ವಕೀಲರು ಸದ್ರಿ ಬಿಲು ಶಾಸನವಾಗುವಲ್ಲಿ ಅದರಿಂದ ಉಂಟಾಗುವ ಅನಾಹುತಗಳ ಬಿಲಿನ ಕುಂದುಕೊರತೆಗಳನ್ನು ವಿವರಿಸಿದರು. ಅನಂತರ ಮಂಗಳೂರಿನ ವಕೀಲರಾದ ಶ್ರೀ ಪಿ. ವಾಸುದೇವರಾವ್ ಮತ್ತು ಶ್ರೀ ಎಸ್. ಯು. ಪಣಿಯಾಡಿಯವರೂ ಸದ್ರಿ ಬಿಲಿನಿಂದ ಪ್ರಯೋಜನವೇನೂ ಇಲ್ಲವೆಂದೂ, ಮಠಗಳ ಸುಧಾರಣೆಯಾಗಬೇಕಾದರೆ ಶಿಷ್ಯವರ್ಗದವರು ಕೂಡಿ ಯೋಗ್ಯ ಯೋಜನೆ ಮಾಡಬೇಕೆಂಬ ಸೂಚನೆಗಳನ್ನೂ ಕೊಟ್ಟು, ಬಿಲನ್ನು ಖಂಡಿಸಿದರು. ಈ ಸಂದರ್ಭದಲ್ಲಿ ಶ್ರೀಯುತ ಕೋರ್ದಕಲ್ ಶ್ರೀನಿವಾಸರಾಯರೂ ಬಿಲನ್ನು ವಿರೋಧಿಸಿ ಭಾಷಣ ಮಾಡಿದರು. ಕೊನೆಗೆ ಸರ್ವಾನುಮತದಿಂದ ಸದ್ರಿ ಬಿಲು ಮಂಜೂರು ಮಾಡಲಾರದೆಂಬ ಠರಾವು ನಿಶ್ಚಯವಾಯಿತು.

ಇದೇ ಕಳೆದ ತಾ. ೨೪ನೇ ಬೆಳಗ್ಗೆ ಸುಮಾರು ೯॥ ಘಂಟೆಗೆ ನಮ್ಮ ತಾಲೂಕಿನಲ್ಲಿ ದ್ರಾವಿಡ ಬ್ರಾಹ್ಮಣ ವರ್ಗದವರಲ್ಲಿ ಶ್ರೀಮಂತ ಕುಟುಂಬಕ್ಕೆ ಸೇರಿದ ಶ್ರೀ ಕಲ್ಕೂರ ರಾಘವೇಂದ್ರರಾಯರು ವೃದ್ಧಾಪ್ಯ ಹಾಗೂ ಕಾಯಿಲೆಯಿಂದ ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ದಿವಂಗತರು ಶ್ರೀಮಂತರಲ್ಲಿ ಜನಪ್ರಿಯರೂ ದಾನಶೀಲರೂ ಆಗಿದ್ದು, ತಾಲೂಕಿನಲ್ಲಿ ಪ್ರಭೃತಿಗಳೂ ಬ್ರಾಹ್ಮಣ [illegible] ಶ್ರೀಯುತರ ಕುಟುಂಬದವರೊಡನೆ ಸಹಾನುಭೂತಿಯುಳ್ಳವರಾಗಿದ್ದಾರೆ. ಸದರಿಯವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥನೆ.

ಇದೇ ದಿನ ಸಂಜೆ ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಸಿ. ಹಿ. ದಂಡಿಂಗ್ಲಾಯ ಬಿ. ಎ. ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಹಿಂದೂ ಮಠಗಳ ಸಂಬಂಧವಾದ ಬಿಲನ್ನು ಪ್ರತಿಭಟಿಸುವ ಬಗ್ಗೆ ಮಹಾಸಭೆಯು ಸೇರಿತು. ಇಂಥಹ ನಿಷೇಧಸೂಚಕ ಸಭೆ ಮತ್ತು ಠರಾವು ದಿನೇ ದಿನೇ ಹೆಚ್ಚುತ್ತಿರುವಾಗ ಮಾನ್ಯ ಕೌನ್ಸಿಲ್ ಸದಸ್ಯರು ಚೆನ್ನಾಗಿ ವಿವೇಚಿಸುವುದು ಉಚಿತ.

ಘರಂಗಿಪೇಟೆ:—ಈ ಸಂಬಂಧ [illegible] ಸಂಘದ [illegible] ಸಭೆಯು [illegible] ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಫೆಬ್ರವರಿ ತಾ. ೨೩ನೇ ದಿನ ಡಾ॥ ಎಸ್ ಎಸ್. ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. [illegible] ಪ್ರೊಸಿಡಿಂಗ್ಸನ್ನು ಓದಿ [illegible] ಅಧ್ಯಕ್ಷ ಶ್ರೀ ಎನ್ [illegible] ೩ನೇ ವರ್ಷದ [illegible] ಯಲ್ಲಿ [illegible] ಕೊಟ್ಟರು. [illegible] ವಿಷಯವನ್ನು [illegible] ವಿದ್ಯಾರ್ಥಿಗಳು "[illegible]" ಎಂಬ ಇತಿಹಾಸ ಕಥೆಯನ್ನು [illegible] ನಾಟಕರೂಪವಾಗಿ [illegible] ಪ್ರದರ್ಶಿಸಲ್ಪಟ್ಟಿತು. ಮುಂದಿನ ಸಭೆಯು ತಾ. ೭೬-೩ [illegible] ಜರಗಿಸಬೇಕೆಂದು [illegible] ಅಧ್ಯಕ್ಷರ [illegible] ಭಾಷಣ [illegible] ಸಭೆಯು ಮುಕ್ತಾಯವಾಯಿತು.

ಬಂಟ್ವಾಳ:—ಸ್ಥಳೀಯ [illegible] ನಡೆಯುತ್ತಿದ್ದ [illegible] ಈಗ [illegible]

ಕಲ್ಯಾಣಪುರ:—ಇಲ್ಲಿಯ ಪ್ರೈಮರಿ ಎಲಿಮೆಂಟರಿ [illegible] ಮುಖ್ಯೋಪಾಧ್ಯಾಯರಾಗಿ ಮಿ॥ ವಾಸುದೇವ [illegible] ಸಹಾಯಕರಾ [illegible] ಉಪಾಧ್ಯಾಯ [illegible] ಎಲಿಮೆಂಟರಿ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಸ್ವೀಕಾರ.

'ಸರಸ್ವತಿ' ಬೆಂಗಳೂರು—ಇದರ ದೀಪಾಂಕ [illegible] ನೇ ಸಂಪುಟದ ಪ್ರಥಮ ಸಂಚಿಕೆಯು ವಿಶೇಷಾಂಕವಾಗಿ ಹೊರಟಿದ್ದು, ಪ್ರಖ್ಯಾತ ಕನ್ನಡಿಗರ [illegible] ಲೇಖನಗಳಿಂದ ತುಂಬಿಯುತ್ತಲ್ಲದೆ [illegible] ಯೋಗ್ಯ ಚಿತ್ರಗಳೂ ಇವೆ. ಶ್ರೀಮತಿ [illegible], ಕಲ್ಯಾಣಮ್ಮನವರ ಸೇವಾವು ಸರ್ವ ಪ್ರಶಂಸನೀಯ. ಇವರ ಮಾಸಿಕವು ಬರೆಹಾಲು ಬದುಕಿ, ಪೋಷಕರ ಔದಾರ್ಯದ ಮತ್ತು ವಾಚಕರ [illegible] ಅನುಗ್ರಹಕ್ಕೆ ಪಾತ್ರವಾಗುವುದೆಂದು ಭರವಸೆಯಿದೆ.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ – ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು- ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿವೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ; ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಪೀರಿಯಲ್ ಪ್ರೆಸ್ ಆಫ್ ಇಂಡಿಯಾ" ಇದರ ಪುಟ 59ನ್ನು ನೋಡಿ.)

ವನಸ್ಪತಿ ತೈಲವಲ್ಲ–ವಿಷದ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಷಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ವನಸ್ಪತಿ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು. ಅದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು!—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನು ಹೂನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚಡಾ'ದಿಂದಲೂ, ಒಬ್ಬೊಬ್ಬ ಸರಬರಾಜುಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ. (ಸರ್ ಎಫ್. ಎ. ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ.)

ಗೋದ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧ ಪುರುಷರೇನು ಹೇಳುವರೋ ಓದಿರಿ:-

ಕವಿರವೀಂದ್ರ:—"ಗೋದ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಾಣೆ. ಇನ್ನು ಮುಂದೆ ಗೋದ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ."

ಕೆಲ ವರ್ಷಗಳ ಹಿಂದೆ ಡಾ। ಅನ್ನಿಬಿಸೆಂಟರು ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೋದ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು.

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೋದ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವದು:—"ಗೋದ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ. ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಕಾಣುತ್ತಿದ್ದೇನೆ. ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದರಿಂದ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೋದ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ — ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾದಿರ ಷಾ, ಪ್ರಿಂಟರ್ ಎಂಡ್ ಕೊ., 162, ಬ್ರೋಡ್ವೆ, ಮದರಾಸು.

ಹೆಡ್ ಆಫೀಸು: ಮುಂಬಾಯಿ. ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್, ಮತ್ತು ಕರಾಚಿ.

ವಿ. ಸೂ:—ಗೋದ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ ಸೋಪ್ ಮತ್ತು ಇತರ (ಬಟ್ಟೆ ಒಗೆಯುವ) ಸಾಬೂನುಗಳಲ್ಲಿ ಗೋದ್ರೆಜ್‌ರವರಿಗೆ ಸಂಬಂಧವಿಲ್ಲ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 39/1936.

ವಿಟ್ಲ [illegible] ಗ್ರಾಮದ [illegible] ಪೊದುವಾಳ್ ಅಂಬು ಪೊದುವಾಳರ [illegible] ಕಾಸರಗೋಡು ತಾಲ್ಲೂಕು [illegible] ತ್ರಿಕ್ಕರಿಪುರ ಗ್ರಾಮದಲ್ಲಿರುವ— ಅರ್ಜಿದಾರ.

ಮತ್ತು

ಶೀಲ [illegible] ಪೊದುವಾಳ್ [illegible] ಅವರ ಮಗ ಕಾಸರಗೋಡು ತಾಲ್ಲೂಕು [illegible] ತ್ರಿಕ್ಕರಿಪುರ ಗ್ರಾಮದಲ್ಲಿರುವ— ರಿಸ್ಪಾಂಡೆಂಟ್.

ಇವರೊಳಗೆ—

ಸದ್ರಿ ಅರ್ಜಿದಾರನ [illegible] ಮೃತ [illegible] ರಿಸ್ಪಾಂಡೆಂಟ್ [illegible] ಈ ಕೋರ್ಟ್ S. C. No. 604/34 ನೇ [illegible] ಪ್ರಕಾರ [illegible] ರೂ. 48–2–0 [illegible] ರೂ. 40–0–0 ಕೂಡಾ [illegible] ರೂ. 88–2–0ನ್ನು [illegible] ರೂ. 18–3–36ಕ್ಕೆ [illegible] 10ಕ್ಕೆ ಸದ್ರಿ ಕೋರ್ಟ್ ಮುಂದೆ [illegible]

ಕಾಸರಗೋಡು. K Rama Varma Rajah.

[illegible] B. L. Pleader

([illegible] 1 ನೇ) Kasaragod (S. K.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17—6—1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಮಾರ್ಗದಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮುಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸತ್ತವರನ್ನು ಬದುಕಿಸುವುದು ಹೇಗೆ?

ಕೆಲಿಫೋರ್ನಿಯಾದ ಡಾ॥ ಕಾರ್ನಿಷ್ ಎಂಬವರು ರೋಗವಿಲ್ಲದ ಒಂದು ನಾಯಿಯನ್ನು ಒಂದು ಗಾಜಿನ ಗುಡಾಣದಲ್ಲಿಟ್ಟು ಅದರೊಳಗೆ ಬರೇ ಸೌರಜನಕವೆಂಬ ಆವಿಯನ್ನೇ ಒಡುತ್ತಾ ಬಂದುದರಿಂದ ನಾಯಿಯು ಕೆಲವು ನಿಮಿಷಗಳಲ್ಲಿಯೇ ಸತ್ತಿತು. ಒಳಗೆ ಆಮ್ಲಜನಕವಿಲ್ಲದಿರುವುದೇ ನಾಯಿಯ ಮರಣಕ್ಕೆ ಕಾರಣವು. ಆ ನಾಯಿಯ ಮೃತ ಶರೀರವನ್ನು ಹೊರಗೆ ತೆಗೆದು ಕೆಲವು ರಸ ವಿಶೇಷಗಳನ್ನು ಕೊಳವೆಗಳ ಮೂಲಕ ಅದರ ಹೃದಯಕ್ಕೆ ಸೇರಿಸಿದರು. ಅದರ ಮುಸುಡಿನ ಮೇಲೆ ಆಮ್ಲಜನಕದ ಚೀಲವನ್ನು ಕಟ್ಟಿದರು. ನಾಲ್ಕೈದು ನಿಮಿಷಗಳ ಮೇಲೆ ನಾಯಿಯ ಎದೆಯು ಬಡೆಯಲಾರಂಭಿಸಿತು. ಅದರ ದೇಹದಲ್ಲೂ ಎದೆಯಲ್ಲೂ ರಕ್ತಚಲನೆಗಾರಂಭವಾಯಿತು. ನಾಯಿಯೂ ಬದುಕಿಕೊಂಡಿತು. ಒಂದೆರಡು ದಿನಗಳ ತನಕ ನಾಯಿಯು ಅಸ್ವಸ್ಥವಾಗಿದ್ದಿತು. ಆ ಮೇಲೆ ಮುಂಚಿನಂತೆ ಸ್ವಸ್ಥವಾಯಿತು.

ಬಾಲ್ಟಿಮೋರ್ ಜಿಲ್ಲೆಯಲ್ಲಿ ಕೆಲವು ಡಾಕ್ಟರರು ವಿದ್ಯುತ್ ಶಕ್ತಿಯಿಂದ ಅನೇಕ ಮೃತ ಪ್ರಾಣಿಗಳನ್ನು ಮೇಲಿನ ರೀತಿಯಿಂದ ಬದುಕಿಸಿರುವರು. ರಷ್ಯದಲ್ಲಿ ಡಾ॥ ಸರ್ಜ್ ಬ್ರೂರ್ ಹಾನೆಂಕೋ ಎಂಬವರು ಕೃತಕ ಹೃತ್ಕಮಲವನ್ನು ರಚಿಸಿ ಅದರ ಸಹಾಯದಿಂದ ಒಬ್ಬನನ್ನು ಬದುಕಿಸಿದರು. ಒಬ್ಬನು ನೇಣು ಹಾಕಿಕೊಂಡು ಮೃತನಾದನು. ಮೂರು ತಾಸುಗಳ ಮೇಲೆ ಈ ವೈದ್ಯರು ತನ್ನ ಶಸ್ತ್ರಕ್ರಿಯೆಯನ್ನು ನಡೆಸಿ ಅವನನ್ನು ಬದುಕಿಸಿದರು. ಕೃತಕ ಹೃದಯದಲ್ಲಿರುವ ರಬ್ಬರ್ ಕೊಳವೆಗಳನ್ನು ಮೃತನ ರಕ್ತನಾಳಗಳಿಗೆ ಸೇರಿಸಿ, ಗಾಳಿ ಹಾಕಿದುದರಿಂದ ಕೆಟ್ಟ ರಕ್ತವು ಹೊರಗೆ ಬಿದ್ದು, ಆಮ್ಲಜನಕದ ಸಹಾಯದಿಂದ ಶುದ್ಧವಾಗಿ ಶರೀರದಲ್ಲಿ ಪ್ರವಹಿಸತೊಡಗಿತು. ಅದುದರಿಂದಾಗಿ ಮೃತನ ಕೈಕಾಲುಗಳು ಸಡಿಲಾಗಿ ಉಷ್ಣೋತ್ಪನ್ನವಾಗಿ, ಕಣ್ಣು ತೆರೆದು ಒಮ್ಮೆ ಎಲ್ಲರನ್ನೂ ನೋಡಿ ಎರಡು ನಿಮಿಷಗಳ ನಂತರ ಪುನಃ ಮೃತನಾದನು.

ವಾಲ್ಡಿವೆಂ[illegible] ನಗರದ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯನ್ನು ಹೊಂದುತ್ತಿದ್ದ ಒಬ್ಬಳು ಸ್ತ್ರೀಯು ಹೃತ್ಕೋಶದ ಚಲನೆಯು ಅಕಸ್ಮಾತ್ ನಿಂತುಹೋಯಿತು. ವೈದ್ಯರು ಬಂದು ಕೂಡಲೇ ಅವಳ ಹೃದಯದಲ್ಲಿ ರಂಧ್ರವನ್ನು ತೆಗೆದು, ಹೃತ್ಕೋಶವನ್ನು ಹಿಡಿದು ಸ್ವಲ್ಪ ಹೊತ್ತು ಹಿಸುಕುತ್ತಾ ಬಂದುದರಿಂದ ಅವಳು ಕ್ರಮವಾಗಿ ಚೇತರಿಸಿಕೊಂಡಳು.

ಇಂತಹ ಘಟನೆಗಳು ತುಂಬಾ ಇವೆ. ಫ್ರೆಂಚ ಡಾಕ್ಟರರೊಬ್ಬರು [illegible] ಗಂಟೆಗಳ ಮೊದಲು ತೀರಿಕೊಂಡ ಒಂದು ಮಗುವಿನ ಹೃದಯವನ್ನು ತನ್ನ ಶಸ್ತ್ರಕ್ರಿಯೆಯಿಂದ ಪುನಃ ಚಲಿಸಿದರು. ಜಪಾನಿನಲ್ಲಿ ಡಾಕ್ಟರನೊಬ್ಬನು ಒಬ್ಬ ಹುಡುಗನ ಮೃತದೇಹದಲ್ಲಿ ಹೃದಯವು ಸ್ವಲ್ಪ ಕಾಲ ಬಡಿಯುತ್ತಿರುವಂತೆ ಮಾಡಿದನು.

(೭ನೇ ಪುಟದಿಂದ ಮುಂದುವರಿಯುದು.)

ಆ ಮನೆಯಲ್ಲಿ ಎಂಟು ಹತ್ತು ದಿನಗಳನ್ನು ಕಳೆದಳು. ಉಳಿದುದನ್ನು ತಿಂದಾಯಿತು. ಮುಂದೇನು ಎಂಬ ಚಿಂತೆ ಬಲವಾಯಿತು. ಆ ಸಮಯಕ್ಕೆ ಸರಿಯಾಗಿ ಅವಳ ಗಂಡನ ಒಬ್ಬ ಗೆಳೆಯನು ಬಂದನು. ಅವನ ಮುಂದೆ ತನ್ನ ಕಣ್ಣೀರನ್ನು ಸುರಿದಳು. ಅವನು ವ್ಯಥೆಗೊಂಡನು. ಮಕ್ಕಳನ್ನು ಕಂಡು ಕನಿಕರವಾಗಿರಬೇಕು—ಹೋದವನೇ ಮನೆಯಿಂದ ಒಂದು ಮುಡಿ ಅಕ್ಕಿಯನ್ನು ಕಳುಹಿಸಿದನು. ಹೀಗೆಯೇ ಕೆಲವು ದಿವಸಗಳು ಸಂದುವು. ಹಸಿವಿನ ಚಿಂತೆ ನೀಲವ್ವನಿಗೆ ತುಸು ದೂರಾಯಿತು. ಆದರೆ ಪ್ರತಿಫಲವಿಲ್ಲದೆ—ಹೇಗೆ ಇಷ್ಟನ್ನು ಸ್ವೀಕರಿಸಲಿ—ಎಷ್ಟು ದಿನ ಸ್ವೀಕರಿಸದಿರಲಿ'—ಎಂದೂ ತೋರಿತು. ತನ್ನ ಬಾಳ್ವೆಯನ್ನು ಕಂಡು ತನಗೇ ನಾಚುಗೆಯಾಯಿತು. ಒಂದು ದಿನ ಆ ದಾನಿಯು ಬಂದಾಗ—'ಏನೆಂದು ನೀವು ಇಷ್ಟೆಲ್ಲಾ ಕಳುಹಿಸುವಿರೋ ಕಾಣೆ. ನನಗಂತೂ ಈಗ ಋಣದ ಹೊರೆ ತೀರ ಅಧಿಕವಾಗಿ ಕಾಣುತ್ತಿದೆ' ಎಂದು ನುಡಿದು ಅತ್ತಳು. ಆತನು ಆ ದಿನ ಬಂದವನು ಅದರ ನಿವಾರಣೆಗೊಂದು ಸೂಚನೆಯನ್ನು ಸಿದ್ಧಪಡಿಸಿಯೇ ಬಂದಿದ್ದನು. ಮೊದಲಿನಿಂದಲೂ ಸಿದ್ಧವಿತ್ತು. ಆದರೆ ಅವಳ ಮುಂದಿರಿಸಲು ಧೈರ್ಯವಿರಲಿಲ್ಲ. ಈಗ ಧೈರ್ಯದಿಂದಿರಿಸಿದನು. ಆದರೆ ನೀಲವ್ವನಿಗೆ ಸಿಟ್ಟುಬಂದಿತು. ಅವನೂ ಬೇಸರಗೊಂಡು ಹೊರಟುಹೋದನು. ತಿರುಗಿ ಕಾಳು ಕಡಿಮೆಯಾಗಲು ತಾನಾಗಿ ತನ್ನ ಧನಿಯನ್ನು ಬರ ಹೇಳಿದಳು. ಅಂದಿನಿಂದವಳು ತನ್ನ ಮಾನವನ್ನು ಮಾರಿ ಅನ್ನವನ್ನು ಗಳಿಸತೊಡಗಿದಳು. ಬೇರೇನು ಮಾಡಲು ಅವಳಿಗೆ ಹಾದಿ ಕಾಣಲಿಲ್ಲ.

ಆದರೆ ಅವಳ ಧನಿಯು ಬಹು ಕಾಲ ಧನಿಕನಾಗಿ ಉಳಿಯಲಿಲ್ಲ. ಒಂದು ಅವನನ್ನು ದರಿದ್ರಲಕ್ಷ್ಮಿ ಬಂದು ವರಿಸಲು ಅವನು ಉಪಾಯ ಕಾಣದೆ ಹೇಳದೆ ಪರಾರಿಯಾದನು. ಆದರೆ ಮರುದಿನ ದಾರಿಯನ್ನು ಕೋರಿಸಿಹೋದುದರಿಂದ ನೀಲವ್ವನು ಅಂಜಿಕೆಯಿಲ್ಲದೆ ತನ್ನ ಜೀವನ ತಾನೇ ಮಾಡತೊಡಗಿದಳು. ಜೀವನಕ್ಕಾಗಿ ದೇಹವನ್ನು ವಿಕ್ರಯಿಸುವುದೇ ಅವಳ ವೃತ್ತಿಯಾಯಿತು. ಹೀಗಾಗಿ ಊರಲ್ಲಿ ನೀಲವ್ವನ ಹೆಸರು ಪ್ರಸಿದ್ಧಿಗೆ ಬಂದಿತು. 'ನೀಲವ್ವನ ಜೀವನವು ನಾಯಿಯ ಜೀವನ'ವೆಂದು ಸಂಸಾರಿಗರು ಸಾವಿರಸಾರಿ ನುಡಿದುದುಂಟು. ಆದರೆ ನೀಲವ್ವನು ಅದು ತನ್ನ ತಪ್ಪೆಂದು ಇದುವರೆಗೆ ತಿಳಿಯಲಿಲ್ಲ. 'ತಪ್ಪಾರದೆಂದು'' ತಿಳಿದವರು ಅವಳಿಗೆ ಹೇಳಬಾರದೇಕೆ?

ಸೋಡಿಯಂ ರೀಡಾನೇಟ್ ಎಂಬ ವಸ್ತುವನ್ನು ೪೫ ವರ್ಷ ವಯಸ್ಸಾದ ಮೇಲೆ ಸೇವಿಸುತ್ತಾ ಬಂದರೆ ತಮ್ಮ ಜೀವಿತ ಕಾಲವನ್ನು ಎರಡು ವರ್ಷಗಳ ಕಾಲವಾದರೂ ಹೆಚ್ಚಿಸಿಕೊಳ್ಳಬಹುದೆಂದು ಪ್ರೊಫೆಸರ್ ವಿಲ್ಬರ್ ಬ್ಯಾನ್ ಕ್ರಾಫ್ಟ್ ಎಂಬವರು ಹೇಳುತ್ತಾರೆ.

ಫೆಬ್ರುವರಿ ತಾ 20ರಿಂದ - ಮಾರ್ಚ ತಾ. 15ರ ವರೆಗೆ

ಪುಣ್ಯಕ್ಷೇತ್ರವಾದ ಧರ್ಮಸ್ಥಳಕ್ಕೆ ಯಾತ್ರೆ!

ಅರ್ಧ ಖರ್ಚಿನಲ್ಲಿ ಅತೀ ಮಹತ್ವದ ಯಾತ್ರೆ

ಮಂಗಳೂರು, ಬಂಟವಾಳ, ಚಿಕ್ಕಮಗಳೂರು, ಶಿವಮೊಗ್ಗಾ, ಮೂಡಿಗೆರೆ, ಸಕಲೇಶಪುರ, ಈ ಎಲ್ಲಾ ಸ್ಥಳಗಳಿಂದ ಧರ್ಮಸ್ಥಳಕ್ಕೆ ಅರ್ಧ ಚಾರ್ಜಿನಿಂದ ರಿಟರ್ನ್ ಟಿಕೇಟು ಕೊಡಲಾಗುವುದು.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.

ಪ್ರಕಟಣೆ

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯದ ನಂಬ್ರ 558/1932

ತಾಯಕ್ಕಾಟ್ಟ ಮನಯಿಲ್ ಎಡಮನ ಮರತ್ತಿಲ್ ನಾರಾಯಣನ್ ತಿರುಮುಂಪು ಕೂಡಾ—ವಾದಿರು

ಮತ್ತು

ತಾಯಕ್ಕಾಟ್ಟ ಮನಯಿಲ್ ಕಾರ್ನವ ನ ಆಡಳ್ತೆದಾರ ಗೋವಿಂದನ್ ತಿರುಮುಂಪು ಕೂಡಾ—ಪ್ರತಿವಾದಿರು

ಇವರೆಡೆಳಗೆ—

ತಾ 22—2—35

ತಾಯಕ್ಕಾಟ್ಟ ಮನೆಯಿಂದ ವಾದಿರಿಗೆ ಸಿಕ್ಕತಕ್ಕ ಮೇನ್ ಚಿಲವ, ಯಾನೆ ಜೀವನಾಂಶದ ವಗೈರೆ ಖರ್ಚಿನ ಐವೆಜನ್ನು ವಸೂಲು ಮಾಡಿಕೊಳ್ಳುವರೆ ವಾದಿರು ದಾಖ್ಲು ಮಾಡಿದ ಸದ್ರಿ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರದೆ ಬಾಕಿಯಿರಬಹುದಾದ ಸದ್ರಿ ತಾಯಕ್ಕಾಟ ಮನೆಯ ಸರ್ವ ಮೆಂಬರರಿಗೆ ಆಕ್ಷೇಪಗಳನ್ನು ವಗೈರೆ ಇದ್ದ ಪಕ್ಷದಲ್ಲಿ ಅವರು ತಮ್ಮ ಆಕ್ಷೇಪಗಳನ್ನು ಸದ್ರಿ ಕೋರ್ಟಿನ ಮುಂದೆ ಸದ್ರಿ ವ್ಯಾಜ್ಯವನ್ನು ಮುಂದರಿಸಿ ಇಟ್ಟ ತಾ 13—3—1935ನೇ ಹಗಲು ಘಂಟೆ 11ಕ್ಕೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಅವರ ಗೈರ ಹಾಜರಿಯಿಂದ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲಾದೀತೆಂದು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸೋಣಾಗಿಯದೆ.

ಕಾಸರಗೋಡು 22—2—35

K Rama Varma Rajah
B A B L Pleader
Kasaragod, S. K.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 33/1935.

1 ಕೊರಪಳು, 2 ತ್ಯಾಂಪಣ್ಣ ಬಂಟಾ, 3 ಬಟಿಯ ಬಂಟಾ, 4 ಸಾಂತ ಬಂಟಾ, 5 ಸಂಕರ ಬಂಟಾ, 6 ದುಗ್ಗ ಬಂಟಾ, 7 ಸುಬ್ಬಣ್ಣ ಬಂಟಾ, 8 ಕೊರಗಪ್ಪ ಬಂಟಾ, 9 ಮಾಲಿಂಗ ಬಂಟಾ, ಕಾಸರಗೋಡು ತಾಲ್ಲೂಕು ಬೇಳ ಗ್ರಾಮದಲ್ಲಿರುವವರು—ಅರ್ಜದಾರರು.

1, 2, 3ನೇಯವರ ಸಹೋದರನೂ ಬಾಕಿಯವರ ಮಾವ ಮೃತಪಟ್ಟ ತ್ಯಾಂಪಣ್ಣ ಬಂಟನಿಗೆ ಪೆರಡಾಲ ಗ್ರಾಮದ ಶಂಕರ ನಾರಾಯಣ ಭಟ್ಟರ ಮಗ, ಶಂಕರ ನಾರಾಯಣ ಭಟ್ಟರಿಂದ ಪ್ರೋನೋಟು ಬಾಬ್ತು ಬರತಕ್ಕ ಅಸಲು ಬಡ್ಡಿ ಐವಜನ್ನು ವಸೂಲು ಮಾಡಿಕೊಳ್ಳುವರೆ 1ನೇ ಅರ್ಜದಾರಳ ಹೆಸರಲ್ಲಿ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಅರ್ಜಿಯು ತಾರೀಕು 13—3—1935ಕ್ಕೆ ವಿಚಾರಣೆ ಇಟ್ಟಿರುವುದರಿಂದ ಆಕ್ಷೇಪಿಸುವವರು ಆ ದಿವಸ ಬಂದು ಆಕ್ಷೇಪಗಳನ್ನು ಜಾಹೀರು ಮಾಡುವರೆ. ತಪ್ಪಿದ್ದಲ್ಲಿ ಅಂಥವರ ಗೈರ ಹಾಜರಿಯಿಂದ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ಸರ್ವರಿಗೂ ತಿಳಿಸೋಣಾಗಿಯದೆ.

ಕಾಸರಗೋಡು 26—2—35

M. G. Ganesh Narayan Pai,
Pleader for Petitioners

ಅತ್ಯುತ್ತಮತರದ ಸೊಳ್ಳೆ ಪರದೆಗಳು.

ಆರೋಗ್ಯ, ಆನಂದ, ಸುನಿದ್ರೆ—ಇವುಗಳಿಗೆ ನಮ್ಮ ಸ್ವದೇಶೀ ಸೊಳ್ಳೆ ಪರದೆಗಳನ್ನು ಉಪಯೋಗಿಸಿರಿ. ಗಾಳಿಯು ಲೀಲಾಜಾಲವಾಗಿ ಪರದೆಯೊಳಕ್ಕೆ ಪ್ರವೇಶಿಸುವುದು. ಸ್ಯಾಂಪಲ್ ಪರದೆಯು ಒಟ್ಟು ಮತ್ತು ಆರ್ಡರ್ ಮಾಡುವಾಗ್ಗೆ ಸ್ವಲ್ಪ ಅಡ್ವಾನ್ಸ್ ಹಣ ಕಳಿಸಿದರೆ ಆನಂದ.

ಉದ್ದ	ಅಗಲ	ಎತ್ತರ	ಖರೀದಿ	ಉತ್ತಮತರದಹದ್ದು
೬ ಅಡಿ	[illegible] ಅಡಿ	[illegible] ಅಡಿ	ರೂ ೧—೧೨—೦	ರೂ [illegible]
೬ ಅಡಿ	೪ ಅಡಿ	೪ ಅಡಿ	[illegible]	[illegible]
೬ ೧॥ ಅಡಿ	೪ ೧॥ ಅಡಿ	೪ ೧॥ ಅಡಿ	[illegible]	[illegible]
೭ ಅಡಿ	೫ ಅಡಿ	೫ ಅಡಿ	[illegible]	[illegible]
೭ ೧॥ ಅಡಿ	೬ ಅಡಿ	೬ ಅಡಿ	[illegible]	[illegible]

ಜಿ. ಎನ್. ಶವರ್, ಪೋಸ್ಟ್ ಬಾಕ್ಸ್ ನಂಬ್ರ [illegible] ಕಲ್ಕತ್ತಾ

FREE FREE FREE

One New British-Make Cycle

To any one who purchases our Popular and wellrecognised

'HERBAL SANJIVANI KADHA'

The most effective remedy against impurity of blood, urinary troubles, body-heat, organic debility, Anaemia, wet dreams, piles, skin diseases, itches, eczyma ect. Malaria and low fevers also

for Particulars apply to —

N. Pandurang Rao, Udipi S K

Sole Agent for S. & N. Canara, Mercara (Coorg) & Mysore Province.

Manufactured by—

The Birje Chemical Works, Bombay, 2

Wanted-Influential and Energetic Agents all over.

ಬಿರ್ಜೆ ಕೆಮಿಕಲ್ ವರ್ಕ್ಸ್‌ನವರು ತಯಾರಿಸಿರುವ

ಹರ್ಬಲ ಸಂಜೀವಿನೀ ಕಷಾಯ.

ಲಕ್ಷಾವಧಿ ಜನರು ಉಪಯೋಗಿಸಿ ಉತ್ಕೃಷ್ಟವೆಂದು ಬಾಯಿ ತುಂಬಾ ಹೊಗಳುತ್ತಾರೆ. ಇದು ಅಜೀರ್ಣ, ಮಂದಾಗ್ನಿ, ಮಲಬದ್ಧತೆ, ವೀರ್ಯನಾಶ, ಸೊಂಟ ಬೆನ್ನುಹುರಿಗಳಲ್ಲಿ ನೋವು, ಗರ್ಮಿ, ದೇಹದ ಉಷ್ಣತೆ, ಗಜಗರ್ಣ, ರಕ್ತ ಕೆಡುವಿಕೆ, ಮೂಲವ್ಯಾಧಿ ಮಲೇರಿಯಾ ಜ್ವರ, ಮೊದಲಾದುವುಗಳನ್ನು ನಿಸ್ಸಂದೇಹವಾಗಿ ಗುಣಪಡಿಸುವುದು.

ಪ್ರತಿ ಜಿಲ್ಲೆಯಲ್ಲೂ ಸಬ್ ಏಜಂಟರು ಬೇಕು.

ಪುಕ್ಕಟೆ ಪುಕ್ಕಟೆ ಪುಕ್ಕಟೆ

ನಮ್ಮ ಸಂಜೀವಿನೀ ಕಷಾಯವನ್ನು [illegible] ಕೊಳ್ಳುವವರಿಗೆ

ಬ್ರಿಟಿಷರಿಂದ ತಯಾರು ಮಾಡಿದ ಸೈಕಲ ಒಂದು

ಇನಾಮಾಗಿ ಕೊಡುವೆವು. ವಿವರ ಬಗ್ಗೆ ಸೋಲ ಏಜಂಟರಿಗೆ ಬರೆಯಿರಿ.

ಸೋಲ ಏಜಂಟರು.—ಎನ್. ಪಾಂಡುರಂಗ ರಾವ್ ಉಡುಪಿ, ದ. ಕ.

WANTED

Energetic, Active and Influential men to work as organisers and gents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, angalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Parniah Chatram Road, Balepet,
BANGALORE CITY.

Shiromani Narayanacharya
Choukhambu, Benares City

[illegible]

ಶಿರೋಮಣಿ ನಾರಾಯಣಾಚಾರ್ಯ
[illegible] (ಕಾಶೀ)

The East & West Insurance Co., Ltd.
Established 1913.

Head Office:—East & West Buildings, Apollo Street, Fort, BOMBAY.

New business for the year 1933 shows an increase of 50% over that of 1932.

First-class Service to Policy-Holders, up-to-date contracts, Close co-operation between Head Office and field force, efficient and economic management are few of the factors responsible for the constant and steady growth of the Company.

It will pay you to take out a Policy to-day.
Agency terms liberal—Treatment sympathetic.

Please apply for Agency and particulars to:—

Padubidri Brs., Chief Agents, Padubidri :: Bombay No. 8.
M. N. V. Kamath & Sons, Golikatta Bazar, Mangalore, S. K.

Dalal & Co., Secretaries.

ಡಾಕ್ಟರ ವಾಮನ ಗೋಪಾಳರವರ

[illegible]

ಡಾ॥ ಗೋಪಾಲರಾವ್ ಕೇಶವರವರ
ಪ್ರೋಸ್ಪರಸ್ ಗುಳಿಗೆಗಳು.

[illegible]

ಗುಣಬಾರದಿದ್ದರೆ   ಹಣ ವಾಪಾಸು]

ಸುಪ್ರಸಿದ್ಧ ವೈದ್ಯರತ್ನ [illegible]

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

ವಿಳಾಸ:—ಸಂಜೀವಿನೀ ಔಷಧಾಲಯ [illegible], S. M. C.

CHEMICALS

Chemicals for manufacturing Sugar, Soap, Toilets Matches, Glass, Potteries, Leather, Carpet, ink, Drybatteries Photography & for Dyeing & Bleaching Cotton, Wool and Silk Write to

Rasiklal & Co.,
Post Box No. 2228 Bombay 2

The Popular Insurance Company, Ltd.

Head Office:—MANGALORE, S. India.

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rao, who has developed in him a great deal of life insurance sense.........

ಸಾಂಬಾರ ವರ್ತಮಾನ.

12000 ಮೈಲು ದೂರವಿರುವವರೊಡನೆ ಮಾತಾಡಿದರು!

ದಕ್ಷಿಣಾಫ್ರಿಕದಲ್ಲಿನ ಜನರಲ್ ಹರ್ಟ್ಜೋಗರು ಸುಪ ರಿಂಟೆಂಡೆಂಟರಾದ ಡಾ ಲೋ ಇವರು ನ್ಯೂಡಿಲ್ಲಿಯಲ್ಲಿ ರುವ ಡಿ "ಸ್ಮಿತ್" ಎಂಬ ತನ್ನ ಭಾವನೆಂಟನೊಡನೆ ರೇಡಿಯೋ ಟೆಲಿಫೋನಿನ ಮೂಲಕ ಮಾತಾಡಿದರು. ಈ ಮಾತು ಲಂಡನ್ ಮಾರ್ಗವಾಗಿ ಇಂಡಿಯಾದಿಂದ ಆಫ್ರಿಕಕ್ಕೆ ಹೋಯಿತು. ಅಂದರೆ ೧೨೦೦೦ ಮೈಲು ಗಳನ್ನು ದಾಟಿ ಹೋಯಿತು.

ಗ್ರಂಥಕರ್ತನೇ ಮಹಾ ಐಶ್ವರ್ಯವಂತ!

ರಷ್ಯದಲ್ಲಿ ಬೇಂಕರನಾಗಲೀ ಕೈಗಾರಿಕಾ ಸಂಸ್ಥೆಯ ಮುಖಂಡನಾಗಲೀ, ಮತ್ತಾರೂ ಮಹಾ ಐಶ್ವರ್ಯ ವಂತನಲ್ಲವಂತೆ ವಸಿಲಿ ವಸಿಲ್ ಒವಿಟ್ ಎಂಬ ಗ್ರಂಥ ಕರ್ತೃವೂ, ನಾಟಕಕಾರನೂ ಅಲ್ಲಿರುವ ಮಹಾ ಸಂಪನ್ನ ನಂತೆ ಇದೀ ಸೋವಿಯಟ್ ಆಧಿಪತ್ಯದಲ್ಲಿ ವರ್ಷಕ್ಕೆ ಒಂದು ಮಿಲಿಯ ರೂಬ್ಲುಗಳನ್ನು ಇವನು ಪಡೆಯುತ್ತಿ ದ್ದಾನೆ ಇವನ ನಾಟಕಗಳು ೧೦೦೦ ನಾಟ್ಯಮಂದಿರ ಗಳಲ್ಲೂ ನೂರಾರು ಕ್ಲಬ್ಬುಗಳಲ್ಲೂ ಪ್ರದರ್ಶಿತವಾಗು ವುದೇ ಇವನ ಸಿರಿವಂತಿಕೆಗೆ ಕಾರಣ

ಗವರ್ನರರ ಸಂಚಾರ,

ಬಳ್ಳಾರಿ ಜಿಲ್ಲೆಯಲ್ಲಿ ತಲೆದೋರಿರುವ ಕ್ಷಾಮದ ಹಾವಳಿಯನ್ನು ನೋಡಿಕೊಂಡು ಬರುವುದಕ್ಕಾಗಿ ಮದ್ರಾಸು ಗವರ್ನರರು ಅತ್ತ ತೆರಳಲಿರುವರು

ಮುಂಬಾಯಿ, ಕಲ್ಕತ್ತಾ ವಿಮಾನ.

ನಾಗಪುರವನ್ನು ಕಲ್ಕತ್ತಾ ಮುಂಬಾಯಿಗಳೊಡನೆ ವಿಮಾನದಿಂದ ಸಂಯೋಜಿಸಲಿರುವರು ಈ ಯೋಜನೆ ಯಿಂದ ನಷ್ಟವಾಗಲಾರದೆಂದೂಹಿಸಲಾಗಿದೆ

ಹೆಣವನ್ನು ತಡೆದರು.

ಅಜ್ಮೀರಿನಲ್ಲಿ ೧೮ ವರ್ಷ ಪ್ರಾಯದ ತರುಣಿ ಯೋರ್ವಳ ಶವವನ್ನು ಹಾದಿಯ ಮೇಲೆ ನಾಲ್ವರು ಒಯ್ಯುತ್ತಿದ್ದಾಗ ಪೋಲೀಸರು ಬಂದು ಅವರನ್ನು ತಡೆದು ಹೆಣವನ್ನು ಆಸ್ಪತ್ರೆಗೊಯ್ದರು ತರುಣಿಯು ಕುತ್ತಿಗೆಯು ಹಿಸುಕಲ್ಪಟ್ಟು ಗಾಯಗೊಳಿಸೆ ಗಂಡನನ್ನೂ ಇನ್ನಿತರರು ಕೆಲವರನ್ನೂ ಕೈದು ಮಾಡಿದ್ದಾರೆ

ಸುಭಾಷ್ಚಂದ್ರರ ಗ್ರಂಥ

ಇದನ್ನು ಏಕೆ ಬಹಿಷ್ಕರಿಸಿದಿರೆಂದು ಡಿಲ್ಲಿಯ ಶಾಸನ ಸಭೆಯಲ್ಲಿ ಶ್ರೀ ನೀಲಕಂಠ ದಾಸರು ಕೇಳಲಾಗಿ ಸರ್ ಜೇಮ್ಸ್ ಕ್ರೆರರು "ಅದು ಕ್ರಾಂತಿ ಪ್ರೇರಕವಾಗಿದೆ" ಎಂದರು "ಆ ಗ್ರಂಥದ ಪ್ರತಿಯು ನಿಮ್ಮಲ್ಲಿದೆಯೋ" ಎಂದು ಪ್ರಶ್ನಿಸಲು "ಇಲ್ಲ" ಎಂಬ ಉತ್ತರವು ದೊರೆ ಯಿತು. "ಕ್ರಾಂತಿಪ್ರೇರಕ ಭಾಗವಾವುದು?" ಎಂದು ಕೇಳಲಾಗಿ "ಅದು ಹೇಳಲು ಸಾಧ್ಯವಿಲ್ಲ"ವೆಂಬ ಉತ್ತರವು ಸಿಕ್ಕಿತು

ಭೂ ಸಂಚಾರ

ಗುಜರಾಥಿನ ಶ್ರೀ ಪಿ ಬಿ ಮೆಹತಾ ಎಂಬುವರು ಸೈಕಲ್ ಸವಾರಿ ಮಾಡಿ ಭೂಸಂಚಾರ ಮಾಡಬೇಕೆಂದು ಕಳೆದ ಜುಲಯಿ ತಿಂಗಳಲ್ಲಿ ಹೊರಟು ಈಗ ಈ ತಿಂಗ ಳಲ್ಲಿ ಸಿಂಗಾಪುರಕ್ಕೆ ತಲಪಿರುವರು ಭಾರತೀಯ ಯುವಕರು ಸಾಹಸಿಗರಲ್ಲವೆಂಬ ಅಪವಾದವನ್ನು ತೆಗೆದು ಬಿಡಬೇಕೆಂಬ ಆಶೆ ಅವರಲ್ಲಿದೆ

ಸರಕಾರವು ಕೈಕಟ್ಟಿತು

ಇರಾಕ್ ದೇಶದಲ್ಲಿ ರಾಜಕೀಯ ಭೇದಾಭಿಪ್ರಾಯ ಗಳು ಹುಟ್ಟಿದುದರಿಂದಾಗಿ ಇರಾಕ ಸರಕಾರವು ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದೆ ಏಳು ಮಂದಿ ಸಿನೇಟರರು ಪಾರ್ಲಿಮೆಂಟಿಗೆ ಹಾಜರಾಗಲಿಲ್ಲ

ಸಹಾಯ ಸಿಗದು!

ಫಿರೋಜಬಾದಿನಲ್ಲಿ ರಾಜಕೀಯ ಪರಿಷತ್ತು ಜರ ಗಿತು. ಅದರ ಒಂದು ಠರಾವು ಅನ್ನುವುದೇನೆಂದರೆ "ಮುಂದಿನ ಯುದ್ಧಗಳಲ್ಲಿ ಹಿಂದೀಯ ರೈತರಿಂದ ಬ್ರಿಟಿಷ ಸರಕಾರಕ್ಕೆ ಯಾವ ಸಹಾಯವೂ ಸಿಗದು" ಎಂದು.

ಸ್ಫೋಟನ!

ಕಲ್ಕತ್ತಾದ ಡಾ ಕೃಷ್ಣರ ಶಸ್ತ್ರರ ಆಫೀಸಿನೊಳಗೆ ಗೇಸ್ ಇದ್ದ ಹಂಡೆಯೊಂದು ಸ್ಫೋಟನಗೊಂಡು ಕಟ್ಟಡದ ಮಾಡು ಹಾರಿತ ವೈದ್ಯರ ಕಾಲುಗಳು ಅವರೊಡನೆ ಹಾನಿಗೆ ಮೂವರು ಜಖಂಗೊಂಡಿದ್ದು ವಿಕ್ಟೋರಿಯಾಸ್ಪತ್ರೆ ಯಲ್ಲಿರುವರು.

ಕಿಲುಬಿನ ಪರಿಣಾಮವಾಗಿ

ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ದೇವರ್ ಕುಲಂ ಎಂಬಲ್ಲಿ ವಿವಾಹದ ಉತ್ಸವದ ಭೋಜನವಾದ ಮೇಲೆ ಮೂವರು ಮೃತರಾದರು ಪೋಲೀಸರು ವಿಚಾರಿಸಲಾಗಿ ಕಲಾಯಿ ತೆಗೆಯದ ಪಾತ್ರೆಗಳಲ್ಲಿ ಅಡಿಗೆ ಮಾಡಿದುದರಿಂದ ಈ ಅನರ್ಥವುಂಟಾಯಿತೆಂದು ತಿಳಿದುಬಂದಿದೆ,

ಮುಯ್ಯಿಗೆ ಮುಯ್ಯಿ

ಅಲಿಗಢದ ಚರಣಸಿಂಗ್ ಎಂಬವನು ತನ್ನ ಮನೆ ಯನ್ನು ಒಬ್ಬ ಸಾಹುಕಾರನಿಗೆ ಆಧಾರ ಹಾಕಿ ಸಾಲ ಪಡೆ ದನು ಬಡತನದ ದೆಸೆಯಿಂದ ಸಾಲವನ್ನು ತೀರಿಸಲಾಗ ಲಿಲ್ಲ ಸಾಹುಕಾರನು ದಾವಾ ಮಾಡಿ ಮನೆಯನ್ನು ವಶಪಡಿಸಿಕೊಂಡನು ಶಿವಚರಣಸಿಂಗನು ಮನೆಮಾರು ಇಲ್ಲದೆ ಸಂಸಾರ ಸಹಿತ ಬೀದಿಗಳಲ್ಲಿ ಅಲೆಯುತ್ತ ಮಳೆಯಲ್ಲಿ ಎಲ್ಲರೂ ಕಷ್ಟಪಡುತ್ತಿರುವಾಗ ಎದುರಾಗಿ ಸಿಕ್ಕಿದ ಸಾಹುಕಾರನ ಮೇಲೆ ಶಿವಚರಣನು ಕ್ರೋಧಾವೇಶ ದಿಂದ ಬಿದ್ದು ಕತ್ತಿಯಿಂದ ಅವನನ್ನು ಕೊಂದನು ಶಿವಚರಣನಿಗೆ ಮರಣದಂಡನೆಯಾಗಿದೆ ಅಪ್ಪೀಲಿನಲ್ಲಿ ಹೈಕೋರ್ಟಿನವರು ಅವನನ್ನು ಬಿಡಲಿಲ್ಲ

ಪ್ರೋತ್ಸಾಹ

ಸೀಡನಿನ ಐನಾ ಬರ್ಗೋರ್ ಎಂಬ ಅವಿವಾಹಿತ ಸ್ತ್ರೀಯು ಬಹು ಸುಂದರಿ ಎಂದು ಹೆಸರು ಪಡೆದವಳು ಸೌಂದರ್ಯವನ್ನು ಪ್ರೋತ್ಸಾಹಿಸುವುದಕ್ಕಾಗಿ ಅಲ್ಲಿಯ ಸರಕಾರವು ೫೦೦ ಸವರಿನ್ ಕರೆನ್ಸಿ ನೋಟುಗಳ ಮೇಲೆ ಅವಳ ಭಾವಚಿತ್ರವನ್ನು ಪ್ರಕಟಿಸುವುದು

ಕೋಳಿ ಮತ್ತು ತತ್ತಿ

ಇವುಗಳ ವ್ಯಾಪಾರವು ಇಂಗ್ಲೆಂಡಿನಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಬಹುವಾಗಿ ವೃದ್ಧಿಹೊಂದಿದೆ ಈ ವ್ಯಾಪಾರ ವನ್ನು ಇನ್ನೂ ಅಭಿವೃದ್ಧಿಪಡಿಸುವುದಕ್ಕಾಗಿ ತರಬೇತೆಂದ ದೇಶ ದಲ್ಲೆಲ್ಲಾ ೩೦೦ ಪೇಂಕಿಂಗ ಸ್ಟೇಶನ್ ಗಳನ್ನು ಸ್ಥಾಪಿಸಿ ದಿರುವರು ಒಂದೊಂದು ಸ್ಟೇಶನಿನ ಸುತ್ತುಮುತ್ತಲೂ ೧೦ ಮೈಲುಗಳ ಒಳಗಿರುವ ಪ್ರದೇಶಕ್ಕೆಲ್ಲಾ ಕೋಳಿ ಗಳನ್ನೂ ತತ್ತಿಗಳನ್ನೂ ಒದಗಿಸಿಕೊಡುವರು ಈ ವ್ಯಾಪಾರದಲ್ಲಿ ನಿರತರಾಗಿರುವ ೫ ಲಕ್ಷ ಜನರು ಇಂಗ್ಲೆಂಡಿನಲ್ಲಿರುವರು ತಮ್ಮಲ್ಲಿರುವ ಕೋಳಿ ಮತ್ತು ತತ್ತಿಗಳನ್ನು ಅವರು ಈ ಸ್ಟೇಶನ್ ಗಳ ಮೂಲಕ ಮಾರಿಕೊಳ್ಳಬೇಕಾಗಿದೆ

ಮದ್ರಾಸಿನ ಅಂಟುರೋಗಗಳು

೩೦ ೧೯ನೇ ಫೆಬ್ರುವರಿಗೆ ಅಂತ್ಯವಾದ ಒಂದು ವಾರ ದಲ್ಲಿ ಅಲ್ಲಿ ೧೮೮ ಜನರಿಗೆ ಕಾಲರಾ ತಗಲಿತು ೮೧ ಜನರು ಮೃತರಾದರು ೧೩೬ ಜನರಿಗೆ ಸಿಡುಬು ಎದ್ದಿತು ೨೩ ಜನರು ಕಾಲವಾದರು ೩೭ ಜನರಿಗೆ ಪ್ಲೇಗು ತಗಲಿತು ೨೦ ಜನರು ಕಾಲಾಧೀನ ರಾದರು

ಹಿಂದೂದೇಶದಲ್ಲಿರುವ ಬ್ರಿಟಿಷ ಸೈನಿಕರು

ಇವರ ಸಂಖ್ಯೆಯನ್ನು ಕಡಮೆ ಮಾಡಬೇಕೆಂದು ಕೌನ್ಸಿಲ್ ಒಫ ಸ್ಟೇಟಿನಲ್ಲಿ ಶ್ರೀ ಮೆಹರೋತ್ರಾರವರು ತಂದ ಠರಾವು ೧೯ ಮಂದಿ ಸರಿ ಬಿಟ್ಟು ೩ ಮಂದಿ ತಿರಸ್ಕರಿಸಿ ಬಿದ್ದುಬಿಟ್ಟಿತು

ಭಾರತದ ಕವಿಶ್ರೇಷ್ಠ

ಲಖ್ನೋವಿನ ಲೆಫ್ಟಿನೆಂಟ್ ಕರ್ನಲ್ ಸಿ ಜಿ ಡಿ. ಗಹನ್ ಎಂಬವರು ಮನೆಯಲ್ಲಿ ಕುಳಿತಿದ್ದಾಗ ಒಬ್ಬನು ಅವರ ಗೃಹವನ್ನು ಪ್ರವೇಶಿಸಿದನು ತಾನು ಭಾರತದ ಕವಿಶ್ರೇಷ್ಠ ಕರ್ನಲರ ಮೇಲೆ ಒಂದು ಪದ ಕಟ್ಟಿದ್ದೇನೆ. ಅದನ್ನು ಹಾಡುತ್ತೇನೆ ಎಂದನು ಕರ್ನಲರು ಬೇಡ ವೆಂದರು ಆದರೂ ಅವನು ಹಟಕಟ್ಟಿದನು ಕೊನೆಗೆ ಕರ್ನಲರು ಪತ್ನಿಯೊಡನೆ ಕೇಳಬಹುದೆಂದು ಒಳಗೆ ಹೋದರು ಹಿಂದೆ ಬಂದು ಅದನ್ನು ತಾನು ಕೇಳುವು ದಿಲ್ಲವೆಂದರು. ಆದರೂ ಕವಿಶ್ರೇಷ್ಠನು ಆ ಪದ್ಯವನ್ನು ಹಾಡಿದನು ಆಷ್ಟರಲ್ಲಿ ಕರ್ನಲರು ಅವನನ್ನು ಮನೆ ಯಿಂದ ಹೊರಗೆ ಓಡಿಸಿದರು ಇಷ್ಟಾಗುವಾಗ ಅವರ ಮೇಜಿನ ಮೇಲಿದ್ದ ಬೆಳ್ಳಿಯ ಪೆಟ್ಟಿಗೆಯೊಂದು ಕಾಣೆಯಾ ದುದು ಕಂಡುಬಂತು ಪೋಲೀಸರನ್ನು ಕಳುಹಿಸಿ ಕವಿ ಯನ್ನು ಹಿಡಿಸಿದರು. ಕೋರ್ಟಿನಲ್ಲಿ ಅವನು ನಾನು ಭಾರತದ ಕವಿಶ್ರೇಷ್ಠ"ನೆಂದು ಹೇಳಿದನು ನೂರು ರೂಪಾಯಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿದನು.

ಮಹಾರಾಜರುಗಳ ಪರಿಷತ್ತು–

ಮುಂಬಾಯಿಯಲ್ಲಿ ಕಳೆದ ವಾರ ಜರಗಿತು ಎಲ್ಲಾ ಸಂಸ್ಥಾನಗಳ ಮಹಾರಾಜರುಗಳ ಪ್ರತಿನಿಧಿಗಳೂ ಅನೇಕ ಮಂದಿ ಮಹಾರಾಜರುಗಳೂ ಸಭೆಗೆ ಬಂದಿದ್ದರು ಇಂಡಿಯಾ ಬಿಲ್ಲಿನ ಕುರಿತಾಗಿ ಹಲಕೆಲವು ತಿದ್ದುಪಡಿ ಗಳು ಅವಶ್ಯವೆಂದು ನಿರ್ಧರಿಸಿಕೊಂಡಿದ್ದಾರೆ

ಮೌನದಾನ!

ಬಳ್ಳಾರಿಯ ಕ್ಷಾಮ ನಿವಾರಣೆಗೆಂದು ಯಾರೋ ಒಬ್ಬರು ಬಾಬುರಾಜೇಂದ್ರ ಪ್ರಸಾದರಿಗೆ ೪ ಸಾವಿರ ರೂಪಾಯಿಗಳ ಒಂದು ಚೆಕ್ ಕಳುಹಿಸಿರು ವರು ಕಳುಹಿಸಿದ ವ್ಯಕ್ತಿಯು ತನ್ನ ಹೆಸರು ಸೂಚಿಸ ಲಿಲ್ಲ

ಸಣ್ಣ ಮಹಾಜನರಾದರೇನು?

ಪಟಿಯಾಲದ ಮಹಾರಾಜರ ಎಂಟು ವಯಸ್ಸಿನ ಮಗನಾದ ಜಸವಂತಸಿಂಗನು ಕಾಡಿಗೆ ಹೋಗಿ ೯ ಅಡಿ ಉದ್ದದ ಒಂದು ಹೆಣ್ಣು ಹುಲಿಯನ್ನು ಗುಂಡಿಕ್ಕಿ ಕೊಂದನು ತನ್ನ ಏಳನೇ ವರ್ಷದಲ್ಲಿ ಅವನು ಒಂದು ಗಂಡು ಹುಲಿಯನ್ನು ಕೊಂದಿದ್ದನಂತೆ

ಬೇಗನೇ ತೀರ್ಮಾನಿಸದಿದ್ದುದಕ್ಕಾಗಿ–

ಮ್ಯಾಂಚೆಸ್ಟರ್‌ನಲ್ಲಿ ಒಬ್ಬ ಕೈದಿಯು ಕೋರ್ಟಿನಲ್ಲಿ ನಿಂತು ಮೆಜಿಸ್ಟ್ರೇಟರ ಮಾತುಗಳನ್ನು ಕೇಳುತ್ತಿದ್ದನು ಅಷ್ಟರಲ್ಲಿ ಕೈದಿಯು "ನನ್ನ ವಿಚಾರಣೆಯನ್ನು ಬೇಗನೇ ಮುಗಿಸಿರಿ" ಎಂದನು ಆದರೆ ಮೇಜಿಸ್ಟ್ರೇಟರು ಅವನ ಮಾತಿಗೆ ಕಿವಿಗೊಡಲಿಲ್ಲ ಕೈದಿಗೆ ಸಿಟ್ಟೇರಿತು ಒಡನೆ ಕಲ್ಲಿದ್ದಲಿನ ಒಂದು ದೊಡ್ಡ ತುಂಡನ್ನು ಕೈಗೆ ತೆಗೆದು ಮೆಜಿಸ್ಟ್ರೇಟರ ಮುಖಕ್ಕೆಸೆದನು ಪುಣ್ಯಕ್ಕೆ ಅದು ಅವರ ಕೈತಟ್ಟಿಗೆ ಬಿತ್ತು ಈ ತಪ್ಪಿಗಾಗಿ ಕೈದಿಗೆ ವರ್ಷ ಆರು ತಿಂಗಳುಗಳ ಹೆಚ್ಚಿನ ಶಿಕ್ಷೆ ವಿಧಿಸಿದರು

ರಷ್ಯವೇ ಮೊದಲು ನಿಂತಿದೆ!

ಕೈಗಾರಿಕೆಯಲ್ಲಿ ಯಾವ ರಾಷ್ಟ್ರವು ಪ್ರಥಮಸ್ಥಾನ ದಲ್ಲಿ ನಿಂತಿದೆಯೆಂಬ ಪ್ರಶ್ನೆ ನಡೆಯಿತು ಆಲ್ ಇಂಡಿ ಯನ್ ಕಾಂಗ್ರೆಸ್ಸಿನಲ್ಲಿ ಅಧಿಕಾರಿಯೊಬ್ಬರು ಹೀಗೆ ವಿವರಣೆ ಕೊಡುವರು "೧೯೩೦ರ ಸ್ಥಿತಿಯನ್ನು ಯಾವ ರಾಷ್ಟ್ರವೂ ಹೊಂದಿಲ್ಲ ಕೈಗಾರಿಕೆಯಲ್ಲಿ ಫ್ರಾನ್ಸ್ ಶೇಕಡಾ ೨೦ರಷ್ಟು ಅಧೋಗತಿಗಿಳಿದಿದೆ ಇಟೆಲಿಯು ೩೦ರಷ್ಟು ಜರ್ಮನಿಯು ೧೮ರಷ್ಟು ಗ್ರೇಟ್ ಬ್ರಿಟನ್ ಮನೋ ೧೯೩೦ರ ಸ್ಥಿತಿಗೆ ಬಂದರೂ ಯುದ್ಧಕ್ಕೆ ಮೊದ ಲಿದ್ದ ಸ್ಥಾನವನ್ನು ಹೊಂದಲಿಲ್ಲ "ರಷ್ಯವು ಮಾತ್ರ ೧೯೩೦ರ ಸ್ಥಿತಿಗಿಂತ ಶೇಕಡಾ ೩೦ರಷ್ಟು ಉನ್ನತಾವಸ್ಥೆಗೆ ಬಂದಿದೆ"

ಮೋಟಾರು ಹೆಚ್ಚಳಿ

ಹಂಗೇರಿಯಾ ಸರಕಾರಕ್ಕೆ ರೈಲನ್ನ ಹೆಚ್ಚಿಸಿ ಸಾಗೋ ಸಾಕಾಗುತು ಇನ್ನು ರೈಲನ್ನು ಹೆಚ್ಚಿಸದೆ ದೇಶದಲ್ಲೆಲ್ಲ ಮಾರ್ಗಗಳನ್ನು ಹೆಚ್ಚಿಸಿ ಮೋಟರ್ ವಾಹನಗಳನ್ನು ಹೆಚ್ಚಿಸುವ ನಿರ್ಧಾರವಾಗಿದೆ ಮೋಟರ್‌ಗಳ ಮೇಲಿ ರುವ ಕಂದಾಯವನ್ನೂ ಇಳಿಸಲಾಗಿದೆ

ಫ್ರಾನ್ಸಿನಲ್ಲಿ ನಿರುದ್ಯೋಗಿಗಳು

ಹೆಚ್ಚುತ್ತಿರುವರು ಕಳೆದ ತಿಂಗಳಲ್ಲಿ ೮೯೯೦೦೦ ನಿರುದ್ಯೋಗಿಗಳು ಅಲ್ಲಿದ್ದರು ಕಳೆದ ವರ್ಷಕ್ಕಿಂತ ೧೮೬,೦೦೦ ನಿರುದ್ಯೋಗಿಗಳು ಹೆಚ್ಚಾದರೆಂದು ಈ ಸಂಖ್ಯೆಯಿಂದ ತಿಳಿಯಬರುವುದು ೧೯೩೧ ನವಂಬರ ತಿಂಗಳಿಗಿಂತ ೫೯೮೦೦ ಮಂದಿ ನಿರುದ್ಯೋಗಿಗಳು ಹೆಚ್ಚಾದರು

ರುಂಡವಿಲ್ಲದ ಮುಂಡ.

ಕೊಲೊರೆಡೋವಿನ ಕಾರ್ನೆಗೀ ಜಿಲ್ಲೆಯ ಒಂದು ತೋಟದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬನು ಮೂರು ವಾರಗಳ ಹಿಂದೆ ಕಾಣೆಯಾಗಿದ್ದನು ೩೦೦ ಜನರು ಕೂಡಿ ಅವನನ್ನು ಹುಡುಕಿದರೂ ಅವನು ಸಿಗಲಿಲ್ಲ ಕಳೆದ ಶನಿವಾರ ತಲೆಯಿಲ್ಲದ ದೇಹವೊಂದು ಕಾಣಸಿಕ್ಕಿದೆ. ಕೊಲೆಯಾದವನ ಪತ್ನಿಯೂ ಗಂಡನ ಗುಮಾಸ್ತನೂ ಹಿಡಿಯಲ್ಪಟ್ಟರು. ಮೂವರನ್ನು ಸೆರೆಹಿಡಿದಿರುವರು.

ಬಾಬುರಾಜೇಂದ್ರ ಪ್ರಸಾದರು–

ಜಬ್ಬಲಪುರಕ್ಕೆ ಹೋಗಲಿರುವರು, ಅವರನ್ನು ಸ್ವಾಗತೀ ಕರಿಸುವುದಕ್ಕಾಗಿ ವ್ಯವಸ್ಥೆಗಳು ನಡೆದಿವೆ,

ಅಮೇರಿಕದ ಮೋಟಾರುಗಳು

ಹಿಂದೂಸ್ಥಾನಕ್ಕೆ ಧಾರಾಳವಾಗಿ ಆಮದಾಗುವುವು ೧೯೩೧ನೇ ನವಂಬರದೊಳಗೆ ಯುನೈಟೆಡ್ ಕಿಂಗ್‌ಡಮ್ ನಿಂದ ಇಂಡಿಯಕ್ಕೆ ೩,೬೫೩ ಕಾರುಗಳು ಅಲ್ಲಿಂದ ಬಂದುವು ಅಮೇರಿಕಾದಿಂದ ೧೧,೦೯೧ ಕಾರುಗಳು ಬಂದುವು

ಗುಂಡುಗಳ ಕಳ್ಳಾಟಿಕೆ.

ಅಹ್ಮದಾಬಾದಿನ ರೈಲ್ವೇ ಸ್ಟೇಶನಿನಲ್ಲಿದ್ದ ಕೋವಿಯ ಗುಂಡು ಮತ್ತು ಮದ್ದನ್ನು ಯಾರೋ ಕಳವು ಮಾಡಿರು ತ್ತಾರೆ ಪಾರ್ಸೆಲು ಇದೀ ಕಾಣೆಯಾಗಿದೆ

ರಿಯಾಯಿತಿ

ಕಲ್ಕತ್ತಾ ಯೂನಿವರ್ಸಿಟಿ ಸಿನೇಟಿನವರು ೨೯ ಮಂದಿ ಡಿಟೆನ್ಯೂಗಳನ್ನು ಯೂನಿವರ್ಸಿಟಿ ಪರೀಕ್ಷೆಗೆ ಕುಳಿತು ಕೊಳ್ಳಲು ಬಿಟ್ಟಿರುವರು

ಮೋಟರ್ ಅಪಘಾತಗಳು!

ರುಮೇನಿಯಾ ದೇಶದ ರಾಜಕುವರಿ ಇಲಿಯಾನಳೂ ಗ್ರೀಸ್ ದೇಶದ ರಾಜಕುವರಿ ಐರಿನ್‌ಳೂ ಪೇಸ್ ನಲ್ಲಿಯ ಪಾಡುವಾ ಮತ್ತು ರೋವಿಗೊ ಎಂಬಲ್ಲಿ ಮೋಟರಿನಲ್ಲಿ ಸಂಚರಿಸುತ್ತಿದ್ದಾಗ ಮೋಟಾರುಗಳು ಢಿಕ್ಕೆ ಬಡೆದು ಇಬ್ಬರೂ ಆಸ್ಪತ್ರೆಪಾಲಾದರು.

ಸಾರ್ವಭೌಮರ ಚಿತ್ರ

ಐದನೇ ಜಾರ್ಜರ ಪೂರ್ಣ ಚಿತ್ರವನ್ನು ಮಿ! ಜೋಬ್ಸ್ ಎಂಬವರು ಬರೆದಿರುವರು ಒಸ್ಟ್ರೇಲಿಯಾ ಸರಕಾರವು ಇದನ್ನು ತರಿಸಿಕೊಳ್ಳುತ್ತಿದೆಯಿತ್ತು ಈ ಚಿತ್ರವನ್ನು ಲಂಡನಿಗೆ ಕೊಂಡೊಯ್ಯಲಿರುವರು

ಶವವು ದೊರೆಯಿತು!

ಫೆಬ್ರವರಿ ೨ನೇ ದಿನ ಬೆಲ್ಜಿಯಸ್‌ನಲ್ಲಿಯ ಒಂದು ಹೊಟೇಲ್‌ನಲ್ಲಿ ಅರ್ಥರ್ ಗೀಲೆಂ ಎಂಬ ಶ್ರೀಮಂತ ನೊಬ್ಬನು ಕಾಣೆಯಾದನು ಅವನನ್ನು ಎಷ್ಟು ಹುಡುಕಿ ದರೂ ಸಿಗಲಾರದಾದನು. ಈ ವಾರದಲ್ಲಿ ಅಲ್ಲಿಯ ನದೀ ತೀರದಲ್ಲಿ ಅವನ ಶವವು ದೊರೆತಿದೆ ತಲೆಯಲ್ಲಿ ಗುಂಡೇ ಟಿನ ಗಾಯವಿದೆ ಯಾರೋ ಕೊಲೆಗೈದಿರಬೇಕೆಂಬ ಸಂಭಾವನೆ ಇದೆ

ಎತ್ತರವಿದ್ದುದರಿಂದ ಬದುಕಿದ.

ಬ್ರೂಕ್ಲಿನ್‌ನಲ್ಲಿ ಹೆರ್ರಿನೇಯರ್ಸ್ ಎಂಬವನೊಬ್ಬನು ೬ ಅಡಿ ೩ ಅಂಗುಲ ಎತ್ತರವಿದ್ದವನು ಆಕಸ್ಮಾತ್ತಾಗಿ ಅವನು ಕಲ್ಲಿದ್ದಲಿನ ಗುಂಡಿಯೊಳಗೆ ಬಿದ್ದನು. ಅವನ ಕಣ್ಣಿನವರೆಗೆ ಅವನ ಅದರಲ್ಲಿ ಮುಳುಗಿದನು ಅಷ್ಟು ಎತ್ತರವಿಲ್ಲದಿರುತ್ತಿದ್ದರೆ ಲೆಕ್ಕಕ್ಕೆ ಸಿಗದೆ ಸಾಯುವ ಸಾಗುತ್ತಿದ್ದನು

ಮೆನಿಂಜೈಟಿಸ್ ರೋಗ

ಅಲಿಘರದಲ್ಲಿ ಈ ರೋಗದಿಂದ ಒಂದೇ ವಾರದಲ್ಲಿ ೩ ಮಂದಿ ಯೂನಿವರ್ಸಿಟಿ ವಿದ್ಯಾರ್ಥಿಗಳು ಮೃತ ರಾದರು ಕೆಲವರು ಈ ರೋಗದಿಂದ ನರಳುತ್ತಿದ್ದಾರೆ ವಿದ್ಯಾರ್ಥಿಗಳಿಗೆ ಅಪಾಯವಿಂತೆ ವಿದ್ಯಾರ್ಥಿಗಳು ವಿದ್ಯಾ ನಿಲಯವನ್ನು ಬಿಟ್ಟು ತಮ್ಮ ತಮ್ಮ ಊರುಗಳಿಗೆ ಹೋಗಿರುವರು

ಜೀವವಿಮೆಯಲ್ಲಿ ಮೋಸ.

ಗ್ರೆಷಾಂ ಎಶ್ಯೂರೆನ್ಸ್ ಕಂಪೆನಿಯ ಏಜಂಟನಾಗಿ ಬರೋಡಾದಲ್ಲಿ ಕೆಲಸಮಾಡುತ್ತಿದ್ದ ಬಾಯಿಶಂಕರ್ ಶಿವಶಂಕರ್ ಪಂಡಿತ್ ಎಂಬವನು ಚಗನ್‌ಲಾಲ್ ಷಾ ಎಂಬವನಿಗೆ ಉಪದೇಶಕೊಟ್ಟು ಅವನನ್ನು ವಿಮೆಗೆಳೆ ದನು ಚಗನ್‌ಲಾಲನು ಈ ಮೊದಲೇ ಯೋರ್ಕಷಾ ಯರ್ ಕಂಪೆನಿಯಲ್ಲಿ ವಿಮೆಮಾಡಿ ತನ್ನ ಜನನ ತಾರೀ ಕನ್ನು ತಿಳಿಸಿದ್ದನು ಶಿವಶಂಕರನ ಮಾತಿನ ಮೇಲೆ ಗ್ರೆಷಾಂ ಕಂಪೆನಿಗೆ ಕಡಮೆ ವಯಸ್ಸನ್ನು ದಾಖಲು ಮಾಡಿದನು, ಅಲ್ಲದೆ ಚಗನ್‌ಲಾಲನು ತನ್ನ ಜನ್ಮ ತಾರೀಕನ್ನು ತಿದ್ದಿ ಪ್ರತಿಯನ್ನು ಕಳುಹಬೇಕೆಂದು ಯೋರ್ಕ್ ಷಯರ್ ಕಂಪೆನಿಗೆ ಬರೆದನು. ಈಗ ಇವರಿಬ್ಬರ ಮೇಲೆ ದಾವೆ ಹೂಡಲಾಗಿದೆ,

ಸ್ತ್ರೀಯರಿಗೆ ಜಯ.

ಟರ್ಕಿ ಚಕ್ರಾಧಿಪತ್ಯದ ರಾಜಕೀಯ ಪ್ರಜಾಪ್ರತಿನಿಧಿ ಸಭೆಗೆ ಉಮೇದ್ವಾರರಾಗಿ ನಿಂತಿದ್ದ ೩೦ ಮಂದಿ ಸ್ತ್ರೀಯ ರಲ್ಲಿ ೧೭ ಮಂದಿ ಚುನಾವಣೆಯಲ್ಲಿ ಜಯಶೀಲರಾಗಿರು ವರು. ಅಲ್ಲಿ ಮೊದಲು ಘೋಷಾ ಪದ್ಧತಿಯಿತ್ತು. ಆದೀಗ ಮಾಯವಾಗಿದೆ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಅಪ್ರತಿಮ.

ಆರೋಗ್ಯಕ್ಕೆ ಕವಚವು

32 ಗುಳಿಗೆಗಳ ಡಬ್ಬಿಯೊಂದಕ್ಕೆ ರೂ. 1

ಶಾಖೆ:—Shah Company MANGALORE
Pearl & Sons MANGALORE

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಪಟ್ಟು ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶಿಯ ಜ್ವಾಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ತೆತ್ತ ಮೂಲಧನ: ರೂ 3 31 035 ಕ್ಷೇಮನಿಧಿಗಳ: ರೂ. 4,50,000 ಠೇವಣಾತಿಗಳು: ರೂ. 58,62,486.

ಆಫೀಸುಗಳು: ಮಂಗಳೂರು, ಮುಂಬಾಯಿ, (ಫೋರ್ಟ್ ಮತ್ತು ಮಾಂಡ್ವಿ) ಆಲೆಪ್ಪಿ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ ಉಡುಪಿ, ಕುಂದಾಪುರ, ಗಂಗೊಳ್ಳಿ ಬಂಟವಾಳ, ಹುಬ್ಬಳ್ಳಿ, ಮತ್ತು ಧಾವಣಗೆರೆ

ಎಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd

Writing an Advertisement Advertisements make both a concious and sub-concious appeal and should be beautiful, sentimental or humorous not blatant or vulgar crisp in their appeals, whether of wording or design, not too highly coloured metaforically, and with a reason given (wherever possible) that appeals to the practicable mind, a mere statement of the name of the article or place is insufficient.

Get your advertisements written up by —**The Publicity Department, Swadeshabhimani, Mangalore.**

ಹಿಂದೂ ವಿಶ್ವವಿದ್ಯಾನಿಲಯ.

(All Rights Reserved)

ಕಾಶಿ ಪಟ್ಟಣದ ದಕ್ಷಿಣಕ್ಕೆ ಕೆಲವು ಮೈಲುಗಳ ತನಕ ನಡೆದರೆ ದೂರದಲ್ಲಿ ಮಿಂಚಿಸುತ್ತಿರುವ ಹಲವು ಭವ್ಯ ಮಂದಿರಗಳು ಕಂಡುಬರುವವು ದೂರದಲ್ಲಿ ಗಂಗಾನದಿಯು ತನಗೆ ಬೇಕಾದಂತೆ ಹರಿಯುತ್ತಿದೆ ಮರ ಮಟ್ಟುಗಳು ತಮ್ಮಿಚ್ಛಾನುಸಾರ ಬೆಳೆದಿವೆ ಎತ್ತರ ಸ್ಥಳದಲ್ಲಿ ನಿಂತು ನೋಡಿದರೆ ಸೃಷ್ಟಿಯು ರೂಪವೇ ಕಣ್ಮುಂದೆ ನಿಂತಂತಾಗುತ್ತದೆ, ಭಾರತೀಯರ ಬೆವರು ಗಂಗಾನದಿಯಂತೆ ಹರಿದಿರುವುದರಿಂದಲೇ ಈ ಸುಂದರ ಭೂಮಿಯ ಸೃಷ್ಟಿಯಾಗಿದೆಯೆಂದು ಊಹಿಸಬೇಕಾಗುತ್ತದೆ

ದೂರದಲ್ಲಿ ಕಾಣುವುದು ಹಿಂದೂ ಯುನಿವರ್ಸಿಟಿಯ ಕಲಾಶಾಲೆಗಳು, ವಿಜ್ಞಾನಮಂದಿರಗಳು; ಯಂತ್ರಾಲಯಗಳು, ಮಹಿಳಾ ವಿದ್ಯಾನಿಲಯಗಳು ಒಂದೊಂದು ಶಾಲೆಗೆ ಒಂದೊಂದು ಭವ್ಯ ಉಪಾರಗೃಹ ಕಟ್ಟಡಗಳನ್ನು ರಚಿಸಿದವರು ಕಲಾಭಿಜ್ಞರೇ ಆಗಿರಬೇಕೆಂದು ಬೇರೆ ಹೇಳುವ ಅಗತ್ಯವೇ ಇರುವುದಿಲ್ಲ ದೃಷ್ಟಿಯ ಬುದ್ಧಿಗೆ ಮೊದಲು ತಿಳಿದುಬರುವ ವಿಷಯವೇ ಅದು

'ಈ ಕಟ್ಟಡಗಳನ್ನು ಕಟ್ಟಿ ಎಷ್ಟು ವರ್ಷಗಳಾದುವು?'–ಎಂದು ನೀವು ಅಲ್ಲಿಯ ತಿಳಿದವರೊಡನೆ ವಿಚಾರಿಸಿದರೆ, ಒಡನೆ–'ಇಪ್ಪತ್ತು ವರ್ಷಗಳು ಪೂರ್ಣವಾಗಿರುವುದಿಲ್ಲ ಸಮಸ್ತ ಜಗತ್ತಿನಲ್ಲಿ, ಏಕೆ, ಕುಬೇರರಾಜ್ಯವಾದ ಅಮೆರಿಕಾದಲ್ಲೂ ಇಷ್ಟೊಂದು ಶೀಘ್ರವಾಗಿ ಇಷ್ಟು 'ಪರಿಪೂರ್ಣವಾದ ಯುನಿವರ್ಸಿಟಿಯಾಗಿಲ್ಲ' ಎಂಬ ಉತ್ತರವು ಸಿಗುವುದು. ಎಂದಾಗ, ಅದರ ಸಂಸ್ಥಾಪಕರ ಸಾಹಸವು 'ಅದ್ಭುತಕರ'ವೆಂಬು ಸಂಬೋಧಿಸಲ್ಪಡಲು ಯೋಗ್ಯವೋ ಅಯೋಗ್ಯವೋ ಎಂದು ನಾವೇ ಯೋಚಿಸಬೇಕಾಗಿದೆ

ಇನ್ನು, ಈ ಮಂದಿರಗಳ ರಚನೆಗೆ ತಗುಲಿದ ವೆಚ್ಚವೆಷ್ಟೆಂದು ತಿಳಿಯುವ ಜಿಜ್ಞಾಸೆಯು ಸ್ವಾಭಾವಿಕವಾಗಿ ತಲೆಯೆತ್ತುತ್ತದೆ ಪ್ರಾರಂಭದಲಿ ಒಂದೂವರೆ ಕೋಟಿ ರೂಪಾಯಿಗಳು ಈ ವಿದ್ಯಾನಿಲಯಕ್ಕಾಗಿ ವೆಚ್ಚವಾದುವಂತೆ ಇನ್ನೂ ನಾಲ್ಕು ಕೋಟಿ ರೂಪಾಯಿಗಳು ಅವಶ್ಯವಿದ್ದು ಯುನಿವರ್ಸಿಟಿಯು ಜಗತ್ತಿನ ವಿಚಾರಿಗಳಲ್ಲೇ ಒಂದು ಕ್ರಾಂತಿಯನ್ನು ಹರಡಲಿದೆ

ತುಂಬಿದ ಜೇಬನ್ನು ತೆರೆದು ಮನ ಬಂದಂತೆ ವೆಚ್ಚಮಾಡಿ ಕೀರ್ತಿಶಾಲಿಗಳಾದ ರಾಜರುಗಳಿಗೂ ನಾಗರಿಕರಿಗೂ ಭಾರತದಲ್ಲಿ ಕಡಿಮೆಯಿದ್ದಿಲ್ಲ––ಈಗಲೂ ಕಡಿಮೆಯಿಲ್ಲ ಆದರೆ, ಕಾಶಿಯ ಹಿಂದೂ ವಿಶ್ವವಿದ್ಯಾನಿಲಯವು ಸ್ಥಾಪಿತವಾದುದು ಬರಿಗೈಯ ಸಾಹಸಿಗಳಿಂದ ಮಾತ್ರ. ದುಡ್ಡನ್ನು ಕಾಲಬುಡಕ್ಕೆ ತರುವ ಶಕ್ತಿಯೂ ಅದಕ್ಕೆ ಸರಿದೂಗುವ ರಾಷ್ಟ್ರಭಕ್ತಿಯೂ ಅವರಲ್ಲಿತ್ತು ಅಂತಹ ಬಲವೇ ಅವರಿಗೆ ಯಶಸ್ಸನ್ನು ತಂದಿತು ಭಾರತೀಯರ ನಿಸ್ಸೀಮ ಸಾಹಸವೆಷ್ಟೆಂದು ಜಗತ್ತಿಗೆ ಸಾರುವ ಮಹಾಸಂಸ್ಥೆಯ ನಿರ್ಮಾಣವಾಯಿತು,–ನಿರ್ವಹಣವಾಯಿತು

ಹಿಂದೂ ಯುನಿವರ್ಸಿಟಿಯು ಭಿಕ್ಷೆಯ ಬಲದಿಂದ ಜನ್ಮವೆತ್ತಿದ ಮಹಾ ಸಂಸ್ಥೆ ಉದಾರಿಗಳ ಸಹಕಾರದಿಂದ ಅಂಗಪುಷ್ಟಿಯನ್ನು ಹೊಂದಿ ಬೆಳೆದ ಪ್ರಯೋಜನಕಾರೀ ವಿದ್ಯಾನಿಲಯ

ಡಾ। ಅನಿಬಿಸೆಂಟ್‍ರವರು ತನ್ನ ಜೀವನವನ್ನು ಭಾರತಮಾತೆಯ ಪದತಲದಲ್ಲಿ ಸಮರ್ಪಿಸಿದರು ಅವರ ನಿಸ್ವಾರ್ಥಪರ ಯಜ್ಞದ ಫಲವು ಕಾಶಿಯಲ್ಲಿನ ಸೆಂಟ್ರಲ್ ಹಿಂದೂ ಕೋಲೇಜಿನ ನಿರ್ಮಾಣದಲ್ಲಿ ಕಂಡು ಬಂತು ತನ್ನ ಸರ್ವಸ್ವವನ್ನು ವೆಚ್ಚಮಾಡಿ ಅವರು ಭಾರತೀಯ ಯುವಕ ಯುವತಿಯರಿಗಾಗಿ,–ಭಾರತದ ಸುಸಂಸ್ಕೃತಿಯ ಪಾಲನೆಗಾಗಿ ಈ ವಿದ್ಯಾನಿಲಯವನ್ನು ಸ್ಥಾಪಿಸಿದರು. ಕೋಲೇಜಿನೊಡನೆ ನಿಯೋಜಿತವಾಗಿ ಹುಡುಗರ ಶಾಲೆಯೊಂದನ್ನೂ ಅವರು ತೆರೆದರು... ಹೆಸರುವಾಸಿ ರಾಷ್ಟ್ರೀಯರ ಬೆಂಬಲದಿಂದ ಆ ಸಂಸ್ಥೆಯನ್ನು ನಡೆಸಿಕೊಂಡು ಬಂದರು ಬಾಬು ಭಗವಾನ್ ದಾಸ್, ಪಂಡಿತ ಇಕ್ಬಾಲ್ ನಾರಾಯಣ ಗುರುತು, ತೇಲಂಗ ಸಹೋದರರು, ಅಲ್ಲದೆ ಮಿ। ಜೋರ್ಜ್ ಎಸ್ ಅರುಂಡೇಲರೂ ಅವರೊಡನೆ ಸಹಕರಿಸಿ ನಡೆದರು ಇಷ್ಟಾಗುವಾಗ ೧೯೦೭ರಲ್ಲಿ ಶ್ರೀಮತಿ ಎನಿಬಿಸೆಂಟರು ಮದ್ರಾಸಿಗೆ ಹೋಗಿ ಅಡ್ಯಾರದ ಥಿಯೋಸೊಫಿಕಲ್ ಸೊಸೈಟಿಯ ಅಧ್ಯಕ್ಷರಾಗಿ ಅಲ್ಲೇ ವಾಸಿಸುವ ಸಂದರ್ಭವೊದಗಿತು ಹೀಗಾಗಿ ಅವರು ಸಮರ್ಥರಾದ ಅನುಯಾಯಿಗಳ ಪಾಲಿಗೆ ಈ ಶಾಲೆಯ ಭಾರವನ್ನು ಬಿಟ್ಟರು ಆಗಾಗ್ಗೆ ಬಂದು ಅದರ ಮೇಲ್ವಿಚಾರವನ್ನು ಮಾಡಿಕೊಂಡು ಹಿಂತೆರಳುತ್ತಿದ್ದರು ಶಾಲೆಯು ದಿನೇ ದಿನೇ ಅಭಿವೃದ್ಧಿಗೊಂಡು ಭಾರತದ ನಿಜಸಂಸ್ಕೃತಿಯ ರಕ್ಷಣಾಲಯವೆಂದು ಪ್ರಖ್ಯಾತವಾಯಿತು

ಇಷ್ಟಾಗುವಾಗ ೧೯೧೧ರಲ್ಲಿ ಮಿ। ಅರುಂಡೇಲರಿಗೂ ಶಾಲೆಯ ಇತರ ಅಧಿಕಾರಿಗಳಿಗೂ ಭಿನ್ನಾಭಿಪ್ರಾಯಗಳು ತಲದೋರಿ ಅರುಂಡೇಲರು ತನ್ನ ಪ್ರಿನ್ಸಿಪಾಲ್ ಪದವಿಗೆ ರಾಜಿನಾಮೆ ಕೊಟ್ಟರು

ಡಾ। ಎನಿಬಿಸೆಂಟರವರು.

ಈ ಪರಿಸ್ಥಿತಿಯಲ್ಲಿ ಅನಿಬಿಸೆಂಟರು ಹೃದಯಗೆಡಲಿಲ್ಲ ಬದಲಿಗೆ ಆ ಕೋಲೇಜನ್ನು ಅಖಿಳ ಭಾರತ ವಿಶ್ವವಿದ್ಯಾನಿಲಯವನ್ನಾಗಿ ಮಾರ್ಪಡಿಸುವ ಪದ್ದೇಜನೆಗೆ ತೊಡಗಿದರು. ಈ ವಿದ್ಯಾಮಂದಿರದಲ್ಲಿ ಹಿಂದೂ ಮುಸಲ್ಮಾನ ಕ್ರಿಸ್ತ ಪಾರಸಿಯೆಂಬ ಭೇದಗಳಿರದೆ ವಿದ್ಯಾದಾನವಾಗಬೇಕೆಂದು ಅವರು ಬಗೆದರ ತನ್ನ ಆಶಯವನ್ನು ಈಡೇರಿಸುವುದಕ್ಕಾಗಿ ಒಂದೆರಡು ಹೆಜ್ಜೆಗಳನ್ನಿಡುತ್ತಿರುವಾಗಲೇ, ಅವರು ರಾಷ್ಟ್ರೀಯತಾಭಾವದ ಆಕರ್ಷಣಕ್ಕೆ ಕಟ್ಟುಬಿದ್ದು ಹೋಮ್ ರೂಲ್ ಚಳವಳವನ್ನು ಹೂಡಬೇಕಾಯಿತು ಇದರಿಂದ ಅನಿರೀಕ್ಷಿತ ಫಲಗಳುಂಟಾದುವು ಅಖಿಳ ಭಾರತ ವಿಶ್ವವಿದ್ಯಾಲಯದ ಸ್ಥಾಪನೆಗೆ ಸಹಕಾರವನ್ನು ನೀಡಲು ಒಮ್ಮೆ ಸಿದ್ಧರಾದ ಮುಸಲ್ಮಾನರೇ ಮೊದಲಾದವರು ಹಿಂಜರಿದರು ಬಿಸೆಂಟರ ಕ್ರಿಯೆಯು ಹಿಂದೂ ಮುಸ್ಲಿಮ್ ಭೇದಕ್ಕೆಡೆಕೊಟ್ಟಿತು ಮುಸ್ಲಿಮರು ಆಲಿಘರದಲ್ಲಿ ವಿಶ್ವವಿದ್ಯಾನಿಲಯವೊಂದನ್ನು ಆಗಲೇ ತೆರೆದು ಬಿಸೆಂಟರೊಡನೆ ಕೂಡಿ ನಡೆಯಲು ಸಮ್ಮತಿಸಲಾರದಾದರು

ಈ ಸಂದಿಗ್ಧ ಸ್ಥಿತಿಯಲ್ಲಿ ಬೆನಾರೆಸ್‌ನ ಪ್ರಸಿದ್ಧ ಪುರುಷರಾದ ಪಂಡಿತ ಮಾಲವೀಯರ ಸಹಕಾರವು ಬಿಸೆಂಟರಿಗೆ ದೊರೆತು, ಇವರಿಬ್ಬರೂ ಕೂಡಿ ಹಿಂದೂ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸುವ ಸಾಹಸಕ್ಕೆ ತೊಡಗಿದರು ಮಾಲವೀಯರ ಕಾರ್ಯೋತ್ಸಾಹಕ್ಕೆ ಬಿಸೆಂಟರ ಧೈರ್ಯೋತ್ಸಾಹದ ಬೆಂಬಲವು ದೊರೆತು ಕಾರ್ಯಾರಂಭವಾಯಿತು

ಸೆಂಟ್ರಲ್ ಹಿಂದೂ ಕೋಲೇಜನ್ನೂ ಅದಕ್ಕೆ ಸಂಬಂಧಿಸಿಕೊಂಡಿದ್ದ ಇತರ ಕಟ್ಟಡಗಳನ್ನೂ ಬಿಸೆಂಟರು ಮಾಲವೀಯರಿಗಾಗಿ ಬಿಟ್ಟುಕೊಟ್ಟರು ಆದರೆ ಸೆಂಟ್ರಲ್ ಕೋಲೇಜ್ ಇದ್ದ ಸ್ಥಳವು ಅವರ ಉದ್ದೇಶ ಸಾಫಲ್ಯತೆಗೆ ಪ್ರಯೋಜನಕಾರಿಯಲ್ಲವೆಂದು ತಿಳಿದು, ಹೊಸತಾಗಿ ನಾಗ್ವಾ ಎಂಬಲ್ಲಿ ಒಂದು ದೊಡ್ಡ ಭೂಪ್ರದೇಶವನ್ನು ಆರಿಸಿಕೊಂಡರು

ನದೀತೀರದಲ್ಲಿ,–ಪಟ್ಟಣಕ್ಕಿಂತ ಒಂದು ಮೈಲು ದೂರದಲ್ಲಿ,–ಕಾಶಿಯ ಮಹಾರಾಜರ ಅರಮನೆಯೆದುರು,೧೯೧೬ನೇ ಫೆಬ್ರವರಿ ೪ರಲ್ಲಿ ಈ ವಿಶ್ವವಿದ್ಯಾಲಯದ ಶಂಕುಸ್ಥಾಪನೆಯಾಯಿತು ಮಹಾತ್ಮಾಜಿಯವರು, ರಾಜ ಮಹಾರಾಜರುಗಳು ರಾಷ್ಟ್ರಭಕ್ತರು, ಪ್ರಮುಖ ದೇಶೀಯರು ಮೊದಲಾದವರ ಸಮ್ಮುಖದಲ್ಲಿ ಹಿಂದೂ ವಿಶ್ವವಿದ್ಯಾನಿಲಯದ ಜನನೀಜನಕರೆಂದು ಪಂಡಿತ ಮಾಲವೀಯರನ್ನೂ ಬಿಸೆಂಟರವರನ್ನೂ ಪ್ರಶಂಸಿಸಲಾಯಿತು

ಕೆಲಸವು ಪ್ರಾರಂಭಿಸಲ್ಪಟ್ಟಿತು ದಿನಗಳೆದಷ್ಟಕ್ಕೆ ಮುಖಂಡರ ಮನದಲ್ಲಿ ವಿವಿಧ ಆಶಾಂಕುರಗಳಾದುವು ಅದನ್ನು ಆದರ್ಶಪ್ರಾಯವಾದ ವಿದ್ಯಾನಿಲಯವನ್ನಾಗಿ ಮಾಡಬೇಕೆಂಬ ನಿಷ್ಕರ್ಷೆಯಾಯಿತು ಪಂಡಿತ ಮಾಲವೀಯರು ಭಾಷಣ ಮಾಡುತ್ತಾ 'ಒಂದು ಕೋಟಿ ರೂಪಾಯಿಗಳು ಬೇಕಾಗಿವೆ'' ಎಂದರು ಹಿಂದು ಕೋಟಿ ರೂಪಾಯಿಗಳ ಸಂಚಯದ ಭಾವನೆಯು ಕೂಡಿದವರನ್ನೆಲ್ಲ ಅಧೀರರನ್ನಾಗಿ ಮಾಡಿತು ಹಲಕೆಲವರು ಸಾವಿರಗಟ್ಟಲೆ ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿದ್ದರು,–ಅವರು, ತಮ್ಮ ದ್ರವ್ಯವು ನಿಷ್ಫಲವಾಯಿತೆಂದೂಹಿಸಿದರು ಆದರೆ ಮಾಲವೀಯರ ಹೃದಯದ ಧ್ವನಿಯು ಬೇರೆ ರೀತಿಯಿಂದಲೇ ನುಡಿಯುತ್ತಿತ್ತು ಧೈರ್ಯದ ಪ್ರೋತ್ಸಾಹದಿಂದ ತುಂಬಿ ತುಳುಕುತ್ತಿದ್ದ ಅವರು "ನಾನು ಮಾಡುವೆನೆಂ"ದರು ಒಂದೂವರೆ ವರ್ಷ ದಾಟಲಿಲ್ಲ,–ಪಂಡಿತರು ೧ ಕೋಟಿ ೩೫೦೦೦ ರೂಪಾಯಿಗಳನ್ನು ಸಂಗ್ರಹಿಸಿದರು

ಪಂಡಿತ ಮಾಲವೀಯರ ಭಿಕ್ಷಾಟನದ ಪ್ರಭಾವದಿಂದಾಗಿ ರಾಜ ಮಹಾರಾಜರುಗಳ ನೇಕರು ಕೋಶದ ಬಾಗಿಲುಗಳನ್ನು ಅಗಲವಾಗಿ ತೆರೆಯಬೇಕಾಯಿತು ದೇಶದ ಅನೇಕ ಸಿರಿವಂತರು ಮಾಲವೀಯರ ಬತ್ತಾಯಪೂರ್ವಕವಾದ ಕರೆಗೆ ಕಿವಿಗೊಡಬೇಕಾಯಿತು. ಅಂತೂ ಮಾಲವೀಯರು ಬೇಡಿ, ಕಾಡಿ ತನ್ನ ನಿರ್ಧಾರಕ್ಕೊಂದು ರೂಪವನ್ನು ಕೊಟ್ಟರು 'ಬೇಡವರ ಅರಸ'ನೆಂಬ ಹೆಸರು ಅವರಿಗೆ ಲಭ್ಯವಾಯಿತು

ಕಲಾ ಶಾಲೆ ವಿಜ್ಞಾನ ಶಾಲೆ' ಯಂತ್ರ ಶಾಲೆ ಮೊದಲಾದ ಕಟ್ಟಡಗಳೂ ಆಧುನಿಕ



ಪಂಡಿತ ಮಾಲವೀಯರು.

ಸಾಹಿತ್ಯೋಪಕರಣಗಳೂ, ವಿದ್ಯಾರ್ಥಿಗಳಿಗಾಗಿ ಬೇರೆ ಬೇರೆ ಹೊಸ್ಟೆಲುಗಳೂ ನಿರ್ಮಿತವಾಗಿ ಸುಮಾರ ಎರಡು ಕೋಟಿ ರೂಪಾಯಿಗಳು ವ್ಯಯವಾದುವು ಆವಶ್ಯಕತೆಯು ವರ್ಷಂಪ್ರತಿ ಹೆಚ್ಚಿಸುವಂತೆ ಮಾಲವೀಯರ ಉತ್ಸಾಹವೂ ಹೆಚ್ಚಿ ಹಿಂದೂ ಯುನಿವರ್ಸಿಟಿಯು ಅಚ್ಚುಕಟ್ಟಾಗಿ ನಿಂತಿತು

ವಿದ್ಯಾಲಯದ ಭೂಮಿಗೆ ಕಾಲಿಟ್ಟೊಡನೆ ಅದರ ವಿಸ್ತೀರ್ಣದ ಅರಿವಾಗುವುದಿಲ್ಲ. ಕಾಲೇಜುಗಳೂ ಅವುಗಳಿಗೆ ಸಂಬಂಧಿಸಿದ ಹೋಸ್ಟಲುಗಳೂ ಒಂದು ಅಥವಾ ಒಂದೂವರೆ ಮೈಲು ದೂರದೂರವಾಗಿವೆ ಕಾಲ್ನಡೆಗಿಂತಲೂ ವಾಹನ ಸಂಚಾರವೇ ಹಿತವೆಂದು ಕಾಣುವಷ್ಟು ದೂರದಲ್ಲಿ ಒಂದೊಂದು ಕಟ್ಟಡವಿದೆ ಸುತ್ತಲೂ ಬಹು ವಿಶಾಲ ಪ್ರದೇಶ ಉದ್ಯಾನ, ಮೈದಾನುಗಳು, ಮರಗಿಡಗಳ ತೋಪುಗಳು, ಗದ್ದೆಗಳು, ವಿಶಾಲ ಮಾರ್ಗಗಳು ಎಲ್ಲವೂ ಕೂಡಿ ಯುನಿವರ್ಸಿಟಿಯ ಆಸ್ತಿಯು ಒಂದು ದೊಡ್ಡ ಪಟ್ಟಣದಷ್ಟಿದೆ

ಹಿಂದೂ ಯುನಿವರ್ಸಿಟಿಯಿಂದ ಹಿಂದೂ ದೇಶಕ್ಕಾದ ಹಿತವೆಷ್ಟೆಂಬುದು ಅಲ್ಲಿ ಕಲಿತು ಹೊರಗಾದ ಪದ ಉದ್ಯೋಗಸ್ಥರ ಸಂಖ್ಯಾಬಲದಿಂದಲೇ ತಿಳಿದುಬರುವುದು "ಇಲ್ಲಿ ಕಲಿತ ವಿದ್ಯಾರ್ಥಿಯು ಜೀವನ ಸಂಗ್ರಾಮದಲ್ಲಿ ಅಪಜಯವನ್ನು ಹೊಂದಿದ ಉದಾಹರಣೆಗಳೆಲ್ಲಿ?'' ಎಂಬ ಮಾಲವೀಯರ ಅಭಿಮಾನಪುರಸ್ಸರವಾದ ಪ್ರಶ್ನೆಯಿಂದಲೇ ಈ ಯುನಿವರ್ಸಿಟಿಯ ಮಹತ್ವದ ಪ್ರತಿಭೆಯೆಷ್ಟೆಂದು ಅರಿಯಲು ಸಾಧ್ಯವಿದೆ

ಪಂಡಿತ ಮಾಲವೀಯರ ಅವಿಶ್ರಾಂತ ಪರಿಶ್ರಮ, ಮಾತಿನ ಪ್ರೀತಿಯಿಂದ ಶ್ರೀಮಂತರ ಆತ್ಮವನ್ನೊಲಿಸುವ ಅನುಪಮ ಶಕ್ತಿ, ತನ್ನ ಗುರಿಯೇನೆಂದು ತಿಳಿದು ಮುಂದಡಿಯಿಡುವ ಅವರ ವಿಶಾಲಭಾವದ ಪ್ರತಿಭೆ,––ಎಲ್ಲಕ್ಕಿಂತಲೂ ಅವರ ಧೈರ್ಯ–ಸ್ಥೈರ್ಯ ಮತ್ತು ದೇಶವಾತ್ಸಲ್ಯಗಳೇ ಮೂರ್ತಿಮಂತವಾಗಿ, ವಿರಾಜಮಾನವಾಗಿ, ನಿಂತಿರುವ ಒಂದು ಸತ್ಯ ವಿಷಯವು ಈ ಹಿಂದೂ ವಿಶ್ವವಿದ್ಯಾನಿಲಯದ ಜೀವಿತದಿಂದ ಕಂಡುಬರುವುದು ––ಇಂತಹ ಧೀಮಂತರು ನಮ್ಮ ದೇಶದಲ್ಲಿ ಸಹಸ್ರ ಸಂಖ್ಯೆಯಿಂದ ಜನಿಸಲಿ!

ಮ. ಡಾ.

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗೆಗೆ ಜನರಿಂದ ದೊರೆತಿರುವ ಪ್ರಶಂಸೆ. ನೀವೂ ನಮ್ಮಲ್ಲಿಗೆ ಬರಬಹುದು_ತೃಪ್ತಿ ಹೊಂದಬಹುದು–ಮೆಚ್ಚಿದರೆ ಪಡೆಯಬಹುದು

ತಾಯಂದಿರ ರಕ್ಷಣೆ

ಜಾಪಾನಿನ ಮುಂದಿರುವ ಸಮಸ್ಯೆ.

(ಟೋಕಿಯೋದಿಂದ.)

ವೋಟಿನ ಅಧಿಕಾರ ಸಂಪಾದನೆಯ ಹವ್ಯಾಸವನ್ನು ಜಾಪಾನಿನ ಸ್ತ್ರೀಯರು ಮರೆತಿಲ್ಲ. ವೋಟಿನ ಅಧಿಕಾರವು ತಮಗೆ ಸಿಗಲಿಲ್ಲವೆಂದು ನಿರಾಶರಾಗಿಯೂ ಅವರಿರುವುದಿಲ್ಲ. ಅವರು ಈ ಬಗ್ಗೆ ಸದಾ ಚಳವಳಿಸುತ್ತಿರುವರು. ಪುರುಷ ಸಮಾನ ಹಕ್ಕು ಬಾಧ್ಯತೆಗಳು ತಮಗೂ ಸಿಗುವಂತಾಗಬೇಕೆಂದು ಅವರು ಹಟತೊಟ್ಟಿರುವರು. ಶಾಸನ ಸಭೆಯಲ್ಲಿ ಅನೇಕ ಮನವಿಗಳು ಅವರಿಂದ ಬಂದು ಬೀಳುತ್ತವೆ. ತಮ್ಮ ಸಾಹಸವು ಫಲಕಾರಿಯಾದೀತೆಂಬ ಧೈರ್ಯವು ಅವರಿಗಿರುವುದಿಲ್ಲ. ಸ್ತ್ರೀಯರಿಗೆ ವೋಟಿನ ಹಕ್ಕನ್ನು ಕೇಳುವ ಅವರ ಚಳವಳಿಯಿಂದ ಅವರಿಗೇನೂ ಸಿಗಲಾರದೆಂದು ಅವರು ತಿಳಿದುಕೊಂಡಿರಲೂ ಬಹುದು. ಅಲ್ಲಿನ ರಾಜಕೀಯ ವಾತಾವರಣವು ಪ್ರಕ್ಷುಬ್ಧವಾಗಿದೆ. ರಾಜಕೀಯ ರಂಗದಲ್ಲಿ ದುಡಿಯುವುದು ಕಷ್ಟತಮವಾಗಿದೆ. ಹಾಗಿರುವಾಗ ಸ್ತ್ರೀಯರು ತಮ್ಮ ಸ್ಫುಟವಾಕ್ಯಗಳನ್ನು ಪ್ರಕಟಿಸಲು ಸಾಧ್ಯವಾಗಿರುವುದಿಲ್ಲ. ಆದರೂ ಚಳವಳಿವು ಬಲಗುಂದುತ್ತಿಲ್ಲ. ಅದು ಮುಂದಡಿಯಿಡುತ್ತಿಲ್ಲವಾದರೂ ಅದು ಹಿಂದೆಯೂ ಸರಿಯುತ್ತಿಲ್ಲ. ರಾಷ್ಟ್ರೋದ್ಧಾರವಾಗಬೇಕೆಂಬ ಬಗ್ಗೆ ಕೆಲಸ ಮಾಡುವ ಸ್ತ್ರೀಯರು ಮಾತ್ರ ನಿರಾಶರಾಗಿಲ್ಲ. ಬದಲಿಗೆ, ಸಾಧುವೂ ಸಾಧಾರವೂ ಆದ ಹೆಜ್ಜೆಗಳನ್ನಿಡುತ್ತಿರುವರು. ಅವರ ಸಾಹಸವನ್ನು ಕಾಣುವಾಗ ಅವರು ರಾಷ್ಟ್ರದ ಏಳ್ಗೆಯನ್ನೇ ತಮ್ಮ ದೃಷ್ಟಿಪಥದಲ್ಲಿಟ್ಟುಕೊಂಡಿರುವರೆಂಬುದೂ ಪುರುಷರಂತೆ ಸ್ತ್ರೀಯರಿಗೂ ಸಮಾನ ಹಕ್ಕುಗಳು ದೊರೆಯದ ವಿನಹ ಅಂತಹ ರಾಷ್ಟ್ರೋದ್ಧಾರವಾಗಲಾರದೆಂದೂ ಅವರು ವಾದಿಸುತ್ತಿರುವರು. ಅಲ್ಲಿಯ ಸ್ತ್ರೀಯರ ಪತ್ರಿಕೆಯೊಂದು ಹೇಳುವುದೇನೆಂದರೆ-ಜಾಪಾನಿನ ಸ್ತ್ರೀಯರ ಲಕ್ಷ್ಯವೆಲ್ಲ ಶಾಸನ ಸಭೆಗಳ ಕಡೆಗೆ ಹರಿದಿದೆ. ತಾಯಂದಿರ ರಕ್ಷಣೆಗಾಗಿ ಶಾಸನಗಳನ್ನು ತರಬೇಕೆಂದು ಅವರು ಹೆಣಗುತ್ತಿರುವರು. ಹೀಗಿರುವುದರಿಂದ ಅವರ ಆಶಯಗಳೆಲ್ಲ ಪರಿಪೂರ್ಣವಾಗುವ ಸಾಧ್ಯವಿದೆಯೆಂದು ಭಾಸವಾಗುತ್ತದೆ. ೧೯೩೦ರಿಂದ ತಾಯಂದಿರ ರಕ್ಷಣೆಯಾಗುವಂತಹ ಒಂದು ಮಸೂದೆಯನ್ನು ಜಪಾನ್ ಸ್ತ್ರೀಯರು ತರಬಯಸುವರು. ಸ್ತ್ರೀಯರಲ್ಲಿನ ಬಡತನ, ಅವರು ಮಾಡಿಕೊಳ್ಳುತ್ತಿರುವ ಆತ್ಮಹತ್ಯೆ—ಇವುಗಳು ನಿವಾರಣವಾಗಬೇಕೆಂಬುದೇ ಈ ಶಾಸನಗಳ ಅಂತಿಮೋದ್ದೇಶ. ಕಳೆದ ನಾಲ್ಕು ವರ್ಷಗಳಲ್ಲಿ ೨೩೦೦ ಸ್ತ್ರೀಯರು ಆತ್ಮಹತ್ಯೆ ಮಾಡಿಕೊಂಡರಂತೆ. ಈ ಆತ್ಮಹತ್ಯೆಗೆ ಬಡತನವೇ ಕಾರಣವಾದುದರಿಂದ ಅದನ್ನು ಹೋಗಲಾಡಿಸುವುದು ಪ್ರಥಮ ಧರ್ಮವೆಂದು ಅಲ್ಲಿಯ ಸ್ತ್ರೀಸಮಾಜವು ನಿರ್ಧರಿಸಿಕೊಂಡಿದೆ.

ಲಂಡನ್ ಒಪ್ಪಂದ.

ಇಂಗ್ಲಾಂಡು ಮತ್ತು ಫ್ರಾನ್ಸ್ ದೇಶಗಳು ವಿಮಾನ ಬಲದ ಕುರಿತಾಗಿ ಮಾಡಿಕೊಂಡ ಒಪ್ಪಂದದಲ್ಲಿ ಜರ್ಮನಿಯು ಇನ್ನೂ ಭಾಗವಹಿಸಿರುವುದಿಲ್ಲ. ಜರ್ಮನಿಯನ್ನು ಈ ಒಪ್ಪಂದಕ್ಕೆ ಸೇರಿಸಿಕೊಳ್ಳುವುದಕ್ಕಾಗಿ ಸರ್ ಜೋನ್ ಸೈಮನರು ಬರ್ಲಿನ್‌ಗೆ ಹೋಗುವರೆಂದು ತಿಳಿದುಬಂದಿದೆ. ರಷ್ಯದ ಸರಕಾರದೊಡನೆ ವಿಚಾರಿಸುವುದಕ್ಕಾಗಿ ಅವರು ಮೋಸ್ಕೋವಿಗೂ ಹೋಗಲಿರುವರು. ಸರ್ ಜೋನ್ ಸೈಮನರು ಬರ್ಲಿನಿಗೆ ಹೋದರೆ ಹರ್ ಹಿಟ್ಲರರೊಡನೆ ರಾಜಕೀಯ ವಿಷಯವಾಗಿ ಕೂಲಂಕಷವಾಗಿ ತರ್ಕಿಸಿಕೊಳ್ಳುವುದು ಸಂಭವನೀಯವೆಂದು ಡೈಲಿ ಹೆರಾಲ್ಡ್ ಪತ್ರಿಕೆಯು ಹೇಳುತ್ತಿದೆ.

ಅಮೇರಿಕಾದ ನಗರಗಳಲ್ಲಿ ಅತ್ಯಾಚಾರಗಳು ನಡೆಯಲಾರಂಭವಾಗಿವೆ. ಅಲ್ಲಿಯ ಲಾಸೊಲೆಡಾಡ್ ಎಂಬಲ್ಲಿ ಕ್ರಿಸ್ತನ ಪ್ರತಿಮೆಯೊಂದನ್ನು ಜನರು ಕೆಡವಿ ಛಿದ್ರಗೊಳಿಸಿದರು. ಅದನ್ನು ಧರ್ಮಗುರುಗಳು ಪರೀಕ್ಷೆ ಮಾಡುತ್ತಿರುವರು.

ವಿದ್ಯಾರ್ಥಿಗಳ ಮುಷ್ಕರ.

ಲಾಹೋರಿನ ವಿಕ್ಟೋರಿಯಾ ಜುಬಿಲಿ ಟೆಕ್ನಿಕಲ್ ಸ್ಕೂಲ್‌ನಲ್ಲಿ ಕಳೆದ ಒಂದು ವಾರದಿಂದ ನಡೆಯುತ್ತಿರುವ ಮುಷ್ಕರವು ತಾರೀಕು ೬ರಲ್ಲಿ ವಿಪರೀತ ದೆಶೆಯನ್ನು ಹಿಡಿಯಿತು. ಮುಷ್ಕರ ಹಿಡಿದ ವಿದ್ಯಾರ್ಥಿಗಳು ಶಾಲಾ ಉಪಾಧ್ಯಾಯರನ್ನೂ ಕೆಲವು ವಿದ್ಯಾರ್ಥಿಗಳನ್ನೂ ಶಾಲಾ ಪಠಾರದಲ್ಲಿ ತಡೆದು ನಿಲ್ಲಿಸುತ್ತಿರುವರು. ಶಾಲೆಯ ಏಕ್ಟಿಂಗ್ ಪ್ರಿನ್ಸಿಪಾಲರನ್ನೂ ವಿದ್ಯಾರ್ಥಿಗಳು ತಡೆದಿರುವರು. ಅಲ್ಲಿಯ ಫಿಲಿಪ್ಪೋನನ್ನೂ ಕೂಡಾ ಮುಷ್ಕರಗಾರರು ವಶೀಕರಿಸಿಕೊಂಡಿರುವರು. ಲಾಹೋರ್ ವಿದ್ಯಾರ್ಥಿ ಸಂಘದವರು ಮುಷ್ಕರಗಾರರಿಗೆ ಸಹಾಯವೆಸಗುವುದರಲ್ಲಿರುವರು.

೨೫೦೦೦ ಅಡಿಗಳ ಮೇಲೆ ಹಾರಾಟ!

ಲೋಸ್ ಎಂಜಲ್ಸ್‌ನಲ್ಲಿ ವಿಲಿಪೋಸ್ಟ್ ಎಂಬ ಒಕ್ಕಣ್ಣ ವೈಮಾನಿಕನು ಆಕಾಶಮಾರ್ಗವಾಗಿ ನ್ಯೂಯೋರ್ಕಿಗೆ ಹಾರಿದನು. ೩೫೦೦೦ ಅಡಿಗಳನ್ನು ಮೇಲೆ ತನ್ನ ವಿಮಾನವನ್ನು ಕೆಗೆದುಕೊಂಡು ಹೋಗುವ ಹವ್ಯಾಸದಲ್ಲಿದ್ದಾನೆ. ಘಂಟೆಗೆ ೩೫೦ ಮೈಲು ವೇಗದಿಂದ ವಿಮಾನವನ್ನು ಹಾರಿಸುವನು. ೫೫೦೦೦ ಅಡಿಗಳನ್ನು ಈ ಮೊದಲೇ ಮುಟ್ಟಿರುವನಾದರೂ ಅವನ ಯಂತ್ರದ ನಳಿಗೆಯಲ್ಲಿ ಹಿಮ ಕಟ್ಟಿಕೊಂಡುದರಿಂದ ಅವನು ಕೂಡಲೇ ಕೆಳಗಿಳಿಯಬೇಕಾಯಿತು. ತಾನು ಇನ್ನೊಮ್ಮೆ ಮೇಲೆ ಹಾರುವೆನೆಂದು ನಿರ್ಧರಿಸಿರುವನು.

ಬರ್ಮಾದ ಭಾರತೀಯರು.

ಬರ್ಮಾದ ಸಂಕಷ್ಟಗಳನ್ನು ಬ್ರಿಟಿಷ್ ಸರಕಾರಕ್ಕೆ ತಿಳುಹಿಸಲೆಂದು ಲಂಡನಿಗೆ ಹೋದ ಭಾರತೀಯರು ಪಾರ್ಲಿಮೆಂಟ್ ಸದಸ್ಯರನ್ನು ಕಾಣುತ್ತಿರುವರು. ಬರ್ಮಾವನ್ನು ಪ್ರತ್ಯೇಕ ಪ್ರಾಂತ್ಯವನ್ನಾಗಿ ವಿಭಜಿಸಬೇಕೆಂಬ ಬಗ್ಗೆ ಮನವಿ ಮಾಡಲಿರುವರು.

ಸುಭಾಷ್ಚಂದ್ರ ಬೋಸರ ಗ್ರಂಥದ ಪ್ರಶಂಸೆ.

ಶ್ರೀ ಸುಭಾಷ್ಚಂದ್ರ ಬೋಸರು ಬರೆದಿರುವ 'ಇಂಡಿಯನ್ ಸ್ಟ್ರಗ್ಲ್' ಎಂಬ ಗ್ರಂಥವು ಲಂಡನಿನಲ್ಲಿ ಪ್ರಕಟವಾಗಿದೆ. ಅದರ ವಿಮರ್ಶೆಯಾಗತೊಡಗಿದೆ. ಡೈಲಿ ಹೆರಾಲ್ಡ್ ಪತ್ರಿಕೆಯಲ್ಲಿ ಈ ಗ್ರಂಥವನ್ನು ಅದರ ವಿದೇಶೀಯ ವಾರ್ತಾದಾಯಕರಾದ ಮಿ| ಡಬ್ಲ್ಯು. ಎನ್. ಈವರ್ ರವರು ವಿಮರ್ಶಿಸುತ್ತಾ "ಬೋಸರು ವಾದಿಗಳು; ಕ್ರೂರರು, ಸಮಾಜಕ್ಕೆ ಅಪಾಯಕರ ವ್ಯಕ್ತಿಯು ಎಂದು ಪರಿಗಣಿಸಲಾಗಿದೆ. ಆದರೆ ಅವರ ಪುಸ್ತಕವು ಇಲ್ಲಿದೆ. ಅದು ಶಾಂತವಾಗಿದೆ, ಸಮಾಧಾನದಿಂದಿದೆ. ನಿಷ್ಪಕ್ಷಪಾತವಾಗಿದೆ. ಭಾರತದ ಪ್ರಕೃತ ವಿಚಾರಗಳ ಕುರಿತಾಗಿರುವ ಉತ್ಕೃಷ್ಟ ಗ್ರಂಥವನ್ನೇ ನಾನು ಓದಿದಂತೆ ಭಾಸವಾಗುತ್ತದೆ. ಅವರ ಅಭಿಪ್ರಾಯವನ್ನು ಬಲವಾಗಿ ಹೇಳಿದ್ದಾರೆ. ಆದರೆ ಅಸಮಂಜಸವಾಗಿ ವ್ಯಕ್ತಗೊಳಿಸಿರುವುದಿಲ್ಲ".

ಸಿನಿಯರ್ ಮುಸೊಲಿನಿಯವರು ಕೂಡಾ ಈ ಪುಸ್ತಕಕ್ಕೆ ಮೆಚ್ಚಿರುವರು. ಕಳೆದ ತಿಂಗಳಲ್ಲಿ ಗ್ರಂಥಕರ್ತರೇ ತಮ್ಮ ಗ್ರಂಥದ ಒಂದು ಪ್ರತಿಯನ್ನು ಸಿನಿಯರ್ ಮುಸೊಲಿನಿಯವರಿಗರ್ಪಿಸಿದರು. ಅನ್ಯತಬಜಾರ ಪತ್ರಿಕೆಯನ್ನು ಇಟಲಿಯ ಅಧಿಪತಿಯು ಈ ಪುಸ್ತಕವನ್ನು ಕಂಡು ಬಹು ಸಂತೋಷಗೊಂಡರು. ಭಾರತದ ರಾಜಕೀಯ ಸ್ಥಿತಿಗತಿಗಳನ್ನರಿಯಲು ಸಾಧಕವಾದ ಗ್ರಂಥವೆಂದು ಈ ಪುಸ್ತಕವನ್ನು ಪ್ರಶಂಸಿಸಿದರು. ಅಲ್ಲದೆ ಭಾರತವಿಷಯಕವಾದ ತನ್ನ ಕೆಲವು ಸಂದೇಹಗಳನ್ನು ನಿವೃತ್ತಿಪಡಿಸಲು ಈ ಗ್ರಂಥವು ಕಾರಣವಾಗಿದೆಯೆಂದರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ. 21,24,250.	500
1929—	ರೂ. 1,66,18,620	9,32,900.
1934—	ರೂ. 3,46,77,223.	49,08,771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ. ಕಂಪೆನಿಯ ಆಸ್ತಿ 57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No. 6, Sankuram Chetty St., G. T. MADRAS.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು.

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

1934ನೇ ಇಸವಿ ದಶಂಬರ ತಾ. **31**ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು:—

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಪಿಸಿದ್ದು	3,50,000- 0- 0		
ತೆತ್ತು ಬಂದದ್ದು	2,25,000- 0- 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774-14- 8
ಕ್ಷೇಮನಿಧಿಗಳು	2,60,953- 7- 8	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	23,38,227- 7- 8
ಠೇವಣಾತಿಗಳು	24,95,329- 2- 3	ಸರಕಾರಿ ಬಧ್ರತೆಯ ಸ್ವತ್ತುಗಳ ಮೇಲೆ	6,51,559-15- 0
ಇತರ ಬಾಬುಗಳು (ಸಂಡ್ರೀಸ್)	1,35,286 9- 9	ಇತರ ಬಾಬುಗಳು	37,411-14-11
ಚಾಲ್ತಿ ವರ್ಷದ ಮುನಾಫೆ	45,885-10- 8	ನಗದಿ ಶಿಲ್ಕು	72,480-10- 1
	31,62,454-13-11		31,62,454-13-11

ಹಿಂದಿನ ವರ್ಷಗಳಂತೆಯೇ ಹಿಶೆದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣವಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ಸ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Established 1908.

EXCELLENT BONUSES.

1933 Valuation Results

	WHOLE LIFE	ENDOWMENT	
1925-'30	20	15	Per thousand
1931-'33	23	18	per year

Every "With Profit" Policy is entitled to "PERMANENT DISABILITY BENEFITS"—No extra premium PAYS DOUBLE THE ASSURED SUM IN THE EVENT OF DEATH BY ACCIDENT ON PAYMENT OF MINIMUM EXTRA PREMIUM OF RS 1-8-0 PER RS 1000 POLICY PER YEAR

Existing Policy holders may avail of this benefit. For particulars apply to —

KOCHIKAR BROTHERS,
Madras Branch Secretaries.

Offices at:—
Udipi, Mangalore, Bangalore, Calicut, Madras and Bombay.

Karnataka Chemical and Pharmaceutical Works, Ltd., Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ. ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ.
ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹಾಸ್ಟೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟೈನ್, ಅರೋರಾ ಕ್ರೀಮ್, ಕ್ರಮೋರ್ ಲಿವೋಸಿನ್, ಕರ್ಣಾಟಕ ರೋಸ ಪೌಡರ್.
ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡ್ಯಾರೆಕ್ಟರ್—ವೆಂಕಟ್ರಾಯ ಅಪ್ಪ ಬಾಳಿಗ.
ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.
ವ್ಯಾಪಾರದ ಡಿಪೋ.—(1) ದೇವಕರಣ ಮೆನ್ಸನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2
ಏಜಂಟ್ಸ—(2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ ಟೌನ್ ಮದರಾಸು.
ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ. ಮಂಗಳೂರು.

Edited, Printed & Published By A. S. Kamath, at the Sharada Press, Car Street, Mangalore.

ವಾರ್ಷಿಕ ಚಂದಾ: 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 2-13-0

for Quality Snuff
H. Rama Rao and Sons,
High Class Snuff Manufacturers
Mangalore, S. I.
ASK FOR:-
RAMA SNUFF.
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT".
Safeguard yourself & your family TODAY.
Buy a policy in THE BOMBAY LIFE
Madras Branch Secretaries.
Kochikar Brothers,
Udipi, Mangalore, Bangalore, Madras, Bombay and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೮ನೇ ಶುಕ್ರವಾರ ಮಾರ್ಚಿ ೧೯೩೫. (8-3-'35) ಸಂಚಿಕೆ ೯

ವಿಜಾಪುರ ಜಿಲ್ಲೆಯ ಬಾದಾಮಿಯಲ್ಲಿನ ಬಾಣಶಂಕರ ದೇವಸ್ಥಾನ.

ಭಾರತದ ಪೂರ್ವಸಂಸ್ಕೃತಿಯನ್ನು ಪ್ರದರ್ಶಿಸುವ ಹಲವು ನಗರಗಳಲ್ಲಿ ವಿಜಾಪುರ ಜಿಲ್ಲೆಯೂ ಒಂದಾಗಿದೆ. ಪ್ರಾಚೀನ ಶಿಲ್ಪಜ್ಞರ ಕಲಾಸಂಪನ್ನತೆಯೆಷ್ಟೆಂಬುದನ್ನು ಮೇಲಿನ ಭಾವಚಿತ್ರದಿಂದ ತಿಳಿಯಬಹುದು. ಇದು, ವಿಜಾಪುರ ಜಿಲ್ಲೆಯ ಸಮೀಪವಿರುವ ಬಾಣಶಂಕರ ದೇವಸ್ಥಾನದ ರಮ್ಯ ನೋಟ. ಕಟ್ಟಡಗಳು ಸರೋವರದಲ್ಲಿ ಪ್ರತಿಬಿಂಬಿತವಾಗಿದ್ದು, ನೋಟವು ಮನೋಹರವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಚಕ್ರ

(All Rights Reversed)

ರೈಲುಚಕ್ರ ತಿರುಗುತಿದೆ ।
ಕೈಯು ಚಕ್ರ ಹೋಗುತಿದೆ ।
ಥರ್ಡ್‌ಕ್ಲಾಸು ಸಿಕ್ಕುತಿದೆ ।
ಬುರುಡೆ ಕೂಡ ಒಡೆಯುತಿದೆ ।

'ನಾಲ್ಕೇ ಚರಣಗಳ 'ಪದ ಹೇಳಿದರೆ ಓದುಗರಿಗೆ ಅದರ ಗೂಢಾರ್ಥವಾಗುವುದಿಲ್ಲ ರಾಯರೇ' ಎಂದು ಬರೆದವರ ಸಮಾಧಾನಕ್ಕಾಗಿ ನನ್ನ ಅರ್ಥದ ನನ್ನ ನಾಲ್ಕು ಚರಣಗಳನ್ನು ನಿಮ್ಮ ಚರಣಕಮಲಗಳ ಮೇಲೆ ಸಾಲಾಗಿ ಇಟ್ಟಿದ್ದೇನೆ ಸ್ವಾಮಿ. ಓದುವುದಾದರೆ ಓದಬಹುದು; ಓದುವುದಿಲ್ಲವಾದರೆ ಪುಟವನ್ನು ತಿರುಗಿಸಿ ಹಾಕಿ, ನಮ್ಮ ಈ ಸಲದ ಅಗ್ರಲೇಖನವನ್ನು ಪ್ರಶ್ನಾವಳಿಯನ್ನೂ ಓದಿ ಮನಸ್ಸಿನಲ್ಲಿ ಸ್ಫೂರ್ತಿದೋರಿದೊಡನೆ ಉತ್ತರಗಳನ್ನು ಕಳುಹಿಸಿಕೊಡಬಹುದು ವೇದಿಕೆಯಲ್ಲಿ ಹರ್ಷವನ್ನೂ ದುಃಖವನ್ನೂ ತೋರಿಸುವ ಪೂರ್ಣ ಜವಾಬ್ದಾರಿಯು ನಿಮ್ಮನ್ನೇ ಹೊಂದಿಕೊಂಡಿದೆ—ತಿಳಿದಿರುವುದು

ಮೊನ್ನೆ ದಿಲ್ಲಿಯ ಶಾಸನಸಭೆಯಲ್ಲಿ ರೈಲ್ವೆಯ ಕುರಿತಾದ ಕೆಲವು ಸಮಸ್ಯೆಗಳ ಮೇಲೆ ಮಹಾ ಚರ್ಚೆಯು ನಡೆಯಿತು ಭೋರೆಲ್ಲನೆ ಬಂದಿತು. ಅದೇನೆಂದು ವಾಚಕ ಸಜ್ಜನರುಗಳಿಗೆ ತಿಳಿಸುವುದಕ್ಕಾಗಿ ಈ ವಾರ ಪೆನ್ನು ತಿರುಗಿಸಬೇಕೆಂಬ ಆಶೆಯಾಗಿದೆ

ರೈಲಿನಲ್ಲಿ ಒಂದನೇ ಎರಡನೇ ಮತ್ತು ಮೂರನೇ ದರ್ಜೆಗಳೆಂದ ಇರುವುವೆಂದು ನಿಮ್ಮೆಲ್ಲರಿಗೂ ತಿಳಿದ ವಿಷಯ ತಾವು ಒಂದನೇ ದರ್ಜೆಯ ಗಾಡಿಯಲ್ಲಿ ಕುಳಿತಿರಲಿಕ್ಕಿಲ್ಲವೆಂದು ನನ್ನ ಊಹೆ (ತಪ್ಪಾದರೆ ಮನಸ್ಸಿನಲ್ಲೇ "ಕ್ಷಮೆಯಿತ್ತಿರುವೆನು ಸಾಯ್ಬ" ಎಂದು ಹೇಳಿಬಿಡಿ) ಎರಡನೇ ಕ್ಲಾಸಿನ ಗಾಡಿಯಲ್ಲಿ ಕುಳಿತು ಕೊಳ್ಳುವವರು ಕಡಮೆಯೆಂಬುದರಲ್ಲೂ ನನಗೆ ಸ್ವಲ್ಪ ಧೈರ್ಯವಿದೆ. ಆದರೆ ಮೂರನೇ ದರ್ಜೆಯ ಗಾಡಿಯಲ್ಲಿ ಕುಳಿತುಕೊಳ್ಳುವವರು ನಮ್ಮಲ್ಲಿ ಧಾರಾಳ

ಈ ಮೂರನೇ ದರ್ಜೆಯ ಗಾಡಿಗಳಲ್ಲಿ ಕುಳಿತು ಕೊಳ್ಳುವ ರೈಲುವೇ ಪ್ರವಾಸಿಕರಿಗೆ ಬಹಳ ಅನಾನುಕೂಲತೆ, ಬಾಧಕಗಳು ತಪ್ಪುತ್ತಿವೆಯೆಂಬ ಚರ್ಚೆಯು ಶಾಸನಸಭೆಯಲ್ಲಿ ಪ್ರಾರಂಭವಾಯಿತು ಆ ಬಾಧಕಗಳೇನೆಂದು ಬೇರೆ ಹೇಳಬೇಕಾಗಿಲ್ಲ ಒಂದನೆಯದು ೩೦ ಜನರಿಗಿರುವ ಕೋಣೆಗಳಲ್ಲಿ ೬೦ ಜನರನ್ನು ತಳ್ಳುವ ಮೂರನೇ ತರಗತಿಯಲ್ಲಿ ಕುಳಿತಿರುವ ಪ್ರಯಾಣಿಕರೆಲ್ಲರೂ ಇಂಗ್ಲೆಂಡಿಗೆ ಹೋಗುವ ಹೇಸನು (ಭೂಕಬಾಯಿ) ಎಂದು ರೈಲ್ವೆ ಅಧಿಕಾರಿಗಳು ತಿಳಿದಿರುವುದು, ಎರಡನೆಯದು—ಮೂರನೇ ದರ್ಜೆಯ ಗಾಡಿಯಲ್ಲಿ ಪ್ರಯಾಣಿಕರಿಗೆ ಕುಳಿತಿರಲು ಸ್ಥಳ ಸಿಗದಿರುವುದು.

ವಾಚಕರಾದರೂ ರೈಲ್ವೆಸ್ಟೇಷನುಗಳಿಗೆ ಹೋಗಿ ಟಿಕೇಟು ಪಡೆಯುವಾಗಲೇ ಪ್ರಯಾಣದ ಕಷ್ಟದ ಪ್ರಥಮ ಸೂಚನೆಯಾಗುತ್ತದೆ ಸಾಮಾನು ಸರಕುಗಳನ್ನು ಹಾಕಿಸಲು ಕೊಂಡೊಯ್ಯುವಾಗ ಅದರ ದ್ವಿತೀಯ ಸೂಚನೆಯಾಗುತ್ತದೆ ತೃತೀಯ ಸೂಚನೆಯಾಗಬೇಕಾದರೆ ನಾವು ಬಂಡಿಯೊಳಗೆ ಕಾಲಿಡಬೇಕು. (ಒಮ್ಮೊಮ್ಮೆ ಕೋಣೆಗಳಿಗೆ ಒಳಗಿಂದ ಬಾಗಿಲು ಹಾಕಲ್ಪಟ್ಟು ಟಿಕೇಟು ಪಡೆದುಕೊಂಡವರಿಗೆ ರೈಲು ತಪ್ಪುವುದೂ ಇದೆ)

ಒಂದನೇ ಕ್ಲಾಸಿನ ಪ್ರಯಾಣಿಕರಿಗೆ ಎಲ್ಲಾ ಸೌಕರ್ಯಗಳೂ ತಯಾರು! ಹಾಸಿಗೆ ಸೀಟು ಪಾಯಿಖಾನೆ—ಎಲ್ಲವೂ ಇವೆ ಎರಡನೆ ಕ್ಲಾಸಿನವರಿಗೆ ಮಧ್ಯಮ ತರಗತಿಯ ಸೌಕರ್ಯಗಳು. ಮೂರನೇ ಕ್ಲಾಸಿನವರಿಗೆ ಏನೂ ಇಲ್ಲ! ಬಡವರ ಕಾಳಜಿ ಇಲ್ಲವೆಂದು ನನಗೆ ತಿಳಿದಿದೆಯಾದರೂ ರೈಲ್ವೆ ಅಧಿಕಾರಿಗಳ ಅಲಕ್ಷ್ಯದ ಕಾಲವಿದೆಯೆಂದು ನನಗೆ ತಿಳಿದಿರುತ್ತದೆ !

ಮೂರನೇ ತರಗತಿಯ ಪ್ರಯಾಣಿಕರು ಕೊಡುವ ರೈಲ್ವೆ ದರವು ಕಡಮೆಯೆಂದು ರೈಲ್ವೆವಾಲೆಯವರು ಹೇಳಬಹುದು ಅದು ಸತ್ಯವೂ ಆಗಿದೆ ಆದರೆ ಅವರ ದುಡ್ಡಿಗೆ ರೈಲಿನ ಕೋಣೆಯ ಬೆಂಚಿನ ಮೇಲೆ ಸುಖದಿಂದ ಕುಳಿತುಕೊಳ್ಳುವ ಹಕ್ಕಿಲ್ಲವೇ? ಕೊಡುವ ದುಡ್ಡು ಕಡಮೆಯೆಂದು ತಿಗಣೆಯ ಮೇಲೂ ತಲೆಯ ಮೇಲೂ ಒಟ್ಟೊಟ್ಟು ಪ್ರಯಾಣಿಕರನ್ನು ಹೇರುತ್ತಿಕೊಳ್ಳುವ ಹಕ್ಕಿದೆಯೆಂದು ತೋರಿಸಬೇಕೆ?

ಒಂದು ಕೋಣೆಗೆ ಇಂತಿಷ್ಟೇ ಜನರು ಪ್ರವೇಶಿಸಬೇಕೆಂದು ನಿಷ್ಕರ್ಷೆಯಿಲ್ಲದಿದ್ದರೆ ಈ ಬಡ ಪ್ರಯಾಣಿಕರಿಗೂ ಪಾರ್ಸೆಲ್ ಆಗಿ ಹೋಗುವ ಸಾಮಾನುಗಳಿಗೂ ಏನು ವ್ಯತ್ಯಾಸ? ಸಾಮಾನುಗಳನ್ನು ಪೆಟ್ಟಿಗೆಯೊಳಗೆ ಒಂದರ ಮೇಲೊಂದರಂತೆ ಹಾಕುತ್ತಾರೆ ಅಡಿಯಲ್ಲಿ ಅಥವಾ ಪ್ರಥಮವಾಗಿ ಪೆಟ್ಟಿಯನ್ನು ಪ್ರವೇಶಿಸಿದ ಸಾಮಾನು ಅಡಿಗೆ ಬಿದ್ದು ಬಿಟ್ಟು ಅದರ ಮೇಲೆ ಒತ್ತಿ ಒತ್ತಿ ಸಾಮಾನುಗಳನ್ನು ತುಂಬಿಸುತ್ತಾರೆ

ಈ ಅಭಿಪ್ರಾಯವನ್ನು ಎಂ ಎಲ್ ಎಯವರೊಬ್ಬರು ಸಭೆಯಲ್ಲಿಟ್ಟರು. ಅವರಿಗೆ ಸಾಯ್ಬನ ಶೇಕ್ ಹ್ಯಾಂಡ್!

ರೈಲ್ವೆ ಅಧಿಕಾರಿಗಳು ಬಡ ಪ್ರಯಾಣಿಕರ ಸುಖಕ್ಕಾಗಿ ಏನನ್ನು ಮಾಡಲಿರುವರೆಂದು ನೋಡುವವನಿದ್ದೇನೆ, ನೋಡಿ ಆಡಬೇಕೆಂದಿದ್ದೇನೆ ಆಡಿ ಹಾಡಬೇಕೆಂದಿದ್ದೇನೆ, ಹಾಡಿ ಬೇಡಬೇಕೆಂದಿದ್ದೇನೆ

'ಸಾಯ್ಬ'.

ಅಸ್ವಸ್ಥದಲ್ಲಿ ಬಿದ್ದು ಏಳುತ್ತಿರುವವರು ಓವಲ್ಟಿನ್ ನಲ್ಲಿರುವ ಚೈತನ್ಯದಾಯಕವೂ ಆರೋಗ್ಯದಾಯಕವೂ ಆದ ಗುಣಗಳನ್ನು ಕಂಡು ಸಂತೋಷಗೊಳ್ಳುವರು ಕುಂದಿದ ಅಜೀರ್ಣತೆಗೂ ಕ್ಷೀಣಿಸಿದ ಹಸಿವಿಗೂ ಓವಲ್ಟಿನ್ ಅತ್ಯುತ್ಕೃಷ್ಟ ಪಾನಕ

'ಓವಲ್ಟಿನ್' ನರಗಳನ್ನು ಪುಷ್ಟೀಕರಿಸುತ್ತದೆ ರಕ್ತವನ್ನು ವೃದ್ಧಿಗೊಳಿಸುತ್ತದೆ ನಿದ್ರೆಯನ್ನುತ್ಪನ್ನಮಾಡುತ್ತದೆ ರೋಗವನ್ನು ಓಡಿಸಿ ದೇಹಾರೋಗ್ಯವನ್ನು ವೃದ್ಧಿಸುತ್ತದೆ—ಇದೇ ದೇಹವನ್ನು ಬೆಳೆಯಿಸಿ ಬಲವನ್ನೀಯುತ್ತದೆ ಅಸ್ವಸ್ಥದಲ್ಲಿರುವವರು ಕೇಳಿದಾಗ 'ಓವಲ್ಟಿನ್' ಕೊಟ್ಟೊಡನೆ ಶೀಘ್ರ ಗುಣಲಾಭವಾಗುತ್ತದೆ

'ಓವಲ್ಟಿನ್' ಎಂಬುದು ದೇಹ ಪೋಷಣೆಗೆ ಅನುಪಮ ಪಾನಕ ಆರೋಗ್ಯವನ್ನೂ ಶಕ್ತಿಯನ್ನೂ ದೇಹದಲ್ಲಿ ತುಂಬಿಸುತ್ತದೆ ಬೆಳೆದ ಬಾರ್ಲಿ, ದನದ ಕೆನೆಹಾಲು ಗೋದಿ ಇವೇ ಮೊದಲಾದ ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲ್ಪಟ್ಟುದು

'ಓವಲ್‌ಟಿನ್'

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ ಜೇಮ್ಸ್ ರೈಟ್ ೩೬೫ ಡಿಕನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಯಿ ಮದ್ರಾಸು

317

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ



ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬೆಲೆ ಕಡಮೆಯಾದುದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೪ ಫಿಲ್ಮ್ ಎಕ್ಸ್‌ಪೋಷರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು ಫೋಟೋ ತೆಗೆಯುವ ವಿಧಾನ ಶಿಕ್ಷಣಕೊಡುವ ಪುಸ್ತಕ ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ ೩—೧೨—೦ ಉತ್ತಮವಾದುದು ೩—೧೨ 0 ಮಡಚುವ ಕ್ಯಾಮರಾ ರೂ ೫ ಉತ್ತಮವಾದ್ದು ರೂ ೭ ಸ್ಪೆಷಲ್ ರೂ ೧೦ ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನ ಸಾಮಗ್ರಿ ೧ ಶೀಸೆಗೆ ೪ ಆಣೆ ಫಿಕ್ಸಿಂಗ್ ಸಾಲ್ಟ್ ೧ ಡಬ್ಬಕ್ಕೆ ೩ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ

ಭಾರತ ಯೂನಿಯನ್ ಟ್ರೇಡಿಂಗ್ ಕಂ
ಪೋಸ್ಟ್‌ಬಾಕ್ಸ್ ನಂಬ್ರ ೨೩೯೪ (ಎಚ್ ಎ) ಕಲ್ಕತ್ತ

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

Authorised capital / ಅಧಿಕೃತ ಮೂಲಧನ	2,00,000—0—0
Subscribed capital / ಚಂದಾ ಆರ್ಜಿಸಿದ್ದು	34,930 -0—0
Paid-up capital / ತೆತ್ತು ಬಂದದ್ದು	30847—8 0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken

Shares are now available

For further particulars apply to —

Puttur, Dated 15—2—1935.

G N. Lakshman Pai,
Secretary

ಪತ್ರಿಕಾ ಪ್ರಪಂಚ:

ಜವಾಹರಲಾಲರು. ಹೊರಗೆ ಬೂದಿ, ಒಳಗೆ ಉರಿಯುವ ಅಗ್ನಿಜ್ವಾಲೆ. ಸ್ತ್ರೀಯರಿಗೆ ಔದ್ಯೋಗಿಕ ಶಿಕ್ಷಣ. ಪ್ರಾಣಾಯಾಮ
ಜಪಾನಿನ ರೈತರ ಕಷ್ಟನಿವಾರಣೆಗೋಸ್ಕರ ಒಂದು ಸಂಸ್ಥೆ. ಜಪಾನು ಏನು ಮಾಡುತ್ತಿದೆ?

ಜವಾಹರಲಾಲರು.

ಜವಾಹರಲಾಲರು ಚರಿತ್ರೆಯನ್ನು ಮಾಡಿದವರಲ್ಲದೆ ಅದರ ಕರ್ತರೂ ಎನ್ನಬಹುದು. ತೊಡಲೇ ಇರುವ ವಸ್ತುಗಳಿಂದ ತಮಗೆ ಬೇಕಾದ ರೀತಿಯಲ್ಲಿ ಕೊಂಡುಹೋಗಲು ಕೆಲವರು ಬಲ್ಲರು. ಆದರೆ, ಆ ವಸ್ತುಗಳಲ್ಲಿ ಚೈತನ್ಯ ಬರುವಂತೆ ಮಾಡುವವರು ಯಾರೂ ಇಲ್ಲವೆನ್ನಬಹುದು. ಸುತ್ತಿಗೆಯ ಬಲವಾದ ಪೆಟ್ಟುಗಳಿಂದ ಪ್ರಕೃತಸ್ಥಿತಿಯನ್ನು ಅಳಿಸಲು ಬೇಕಾಗುವ ಪ್ರಬಲವಾದ ಘಟನೆಗಳಂತೆ, ಜವಾಹರಲಾಲರಲ್ಲಿ ಶಕ್ತಿಯೂ ದೂರದರ್ಶಿತ್ವವೂ ಉಂಟು ಪ್ರತಿಯೊಬ್ಬ ಕ್ರಾಂತಿಕಾರನಲ್ಲಿರುವಂತೆ ಇವರಲ್ಲೂ ಸೃಷ್ಟಿಕರ್ತನು ಉಚ್ಚಪದವಿಯಲ್ಲಿರುವನು. ಸಭೆಯಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸುವುದರಲ್ಲಾಗಲೀ, ಪತ್ರಿಕೆಗೆ ಲೇಖನವನ್ನು ಬರೆಯುವುದರಲ್ಲಾಗಲೀ ಅಥವಾ ಇನ್ನಾವುದರಲ್ಲಾಗಲೀ, ಇವರು ತನ್ನ ಸ್ವಂತ ಪ್ರತಿಭೆಯನ್ನು ತೋರಿಸುತ್ತಿದ್ದರು. ತನ್ನ ಅಧ್ಯಕ್ಷಸ್ಥಾನವನ್ನು ಬಿಟ್ಟು ಗಲಭೆಯಾಗುವಲ್ಲಿಗೆ ಹೋಗಿ, ಅದನ್ನು ಶಾಂತಪಡಿಸುವುದೂ ಇಲ್ಲವೇ ಮೆರವಣಿಗೆಯ ಸಮಯದಲ್ಲಿ ಆದರಿಸುವ ಜನಸಂದಣಿಯು ಹೆಚ್ಚಾಗಲು, ಅವರ ನಡುವಿನಿಂದ ಸೈಕಲ್ ಸವಾರಿ ಮಾಡಿಕೊಂಡು ಹೋಗುವುದನ್ನು ನೋಡಿದರೆ ಯಾರಿಗೆ ತಾನೇ ಸೋಜಿಗವಾಗಲಿಕ್ಕಿಲ್ಲ? ಸಾಮಾನ್ಯವಾಗಿ ಇಂತಹ ಘಟನೆಗಳು ನಮಗೆ ಆಶ್ಚರ್ಯಕರವಾಗಿ ಕಂಡರೂ, ಅವರ ಶತ್ರುಗಳು ಕೂಡ ಅವರ ಕಾರ್ಯಗಳಲ್ಲಿ ಒಂದು ವಿಧದ ಸ್ವಾಭಾವಿಕತ್ವವನ್ನು ನೋಡಿ ಬೆರಗುಗೊಳ್ಳದಿರಲಾರರು. ಗಾಂಧೀಜೀಯವರೊಬ್ಬರನ್ನು ಬಿಟ್ಟು ಜವಾಹರಲಾಲರ ವಿನಹ ಬೇರೆ ಯಾರೂ ರಾಜಕೀಯ ವಿಷಯಗಳಲ್ಲಿ ತಮ್ಮ ಪ್ರಭಾವವನ್ನು ಬೀರಲಿಲ್ಲ. ಭಾರತದ ಏಳಿಗೆಗಾಗಿ ಅವರು ಮಾಡಿದ ಕಾರ್ಯಗಳಿಗೆ ಮಹತ್ವವನ್ನು ನಿಶ್ಚಯಿಸುವುದು ನಮಗೆ ಅಸಾಧ್ಯವೇ ಸರಿ

ಅವುಗಳಲ್ಲಿ ಎರಡನ್ನು ಇಲ್ಲಿ ಹೇಳಬಹುದು (೧) ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ (೨) ರಾಜಕೀಯ ಚಳವಳಕ್ಕೆ ಬೌದ್ಧಿಕ ಸಾಮಾಜಿಕ ರೂಪವನ್ನು ಕೊಡ ಲೆತ್ನಿಸಿದ್ದು ಎಂಬುದು? ಕಳೆದ ಬಾರಿ ಇಸವಿಯಲ್ಲಿ ಅವರ ಯೂರೋಪ ಸಂಚಾರವು ಭಾರತದ ಮೇಲೆ ಅಸಂಖ್ಯಾತ ರಾಜಕೀಯ ಕಾರ್ಯಗಳ ಅವರಿಗೆ ದೃಗ್ಗೋಚರವಾಗುವಂತೆ ಮಾಡಿತು. ಮದ್ರಾಸಿನ ಕಾಂಗ್ರೆಸ್ಸಿನಲ್ಲಿ ಗಾಂಧೀಜೀಯವರು ವಿರೋಧಿಸಿದರೂ ಪೂರ್ಣ ಸ್ವರಾಜ್ಯ ಸಿಕ್ಕಬೇಕೆಂಬ ಅವರ ಠರಾವು ಬಹು ಬಹುಮತದಿಂದ ಹಿಂದೂಸ್ಥಾನವು ರಾಜಕೀಯ ಚಳವಳಕ್ಕೆ ಹೊಸ ಮತ್ತು ಒಂದು ರೂಪವನ್ನು ಕೊಟ್ಟಿತು, ಎರಡು ವರ್ಷಗಳ ನಂತರ ಲಾಹೋರಿನಲ್ಲಿ ಭಾರತವನ್ನು ನವ ಚೈತನ್ಯಯುಕ್ತವಾಗಿ ಮಾಡಲಿಕ್ಕಾಗಿ ಎದುರಿಸಿದ ಚಳವಳದ ಶಂಕುಸ್ಥಾಪನೆಯಾಗಲು ಗಾಂಧೀಜೀ ಮೊದಲಾದವರು ಅದಕ್ಕೆ ಸೇರಿದಾಗ ಜವಾಹರಲಾಲರ ಪ್ರಯತ್ನವೂ ಫಲಿಸಿತು.

ಹಿಂದೂಸ್ಥಾನದ "ವೇಗ್ನೆಕಾರ್ಟಾ"ದಂತಿರುವ ಪ್ರಾಮುಖ್ಯ ಹಕ್ಕುಗಳ ಠರಾವು ಕರಾಚಿಯಿಂದ ದೂರವಾಗಿದ್ದರೂ ಕಾಂಗ್ರೆಸ್ಸಿನ ನೀತಿಯಲ್ಲಿ ಹೊಸ ವಿಧಾನವು ಆವಿರ್ಭವಿಸುವುದು ಕಂಡುಬರುತ್ತಿತ್ತು. ೧೯೨೯ರಲ್ಲಿ, ಅವರ ಪ್ರೈಲಿನಿಂದ ಬಿಡುಗಡೆಯ ಮೊದಲು ಸಾಮಾಜಿಕ ಸೂತ್ರಗಳು ಹುಟ್ಟಿ, ಪ್ರಬಲವಾದ್ದರೂ ಅವರ ಸ್ಫೂರ್ತಿಯುಕ್ತವಾದ "ವಿದರ್ ಇಂಡಿಯಾ" ಎಂಬ ಲೇಖನದಿಂದ ಎಲ್ಲರ ಮನವನ್ನು ಆ ವಿಷಯದ ಕಡೆಗೆ ಸೆಳೆಯಿತಲ್ಲದೆ, "ಸಿವಿಲ್ ಡಿಸ್‌ಒಬಿಡಿಯನ್ಸ್" ಚಳವಳದ ಅವಸರ ಕಾಲದಲ್ಲಿಯೂ ಮತ್ತೆ ತದನಂತರ 'ಡಿಸ್ಟ್ರಿಕ್ಟ'ನಲ್ಲಿ ನಡೆಯಲು ಪ್ರಾರಂಭಿಸಿದ ಪ್ರತಿಫಲಗಳು ಅವರ ದೃಷ್ಟಿಗೆ ಬೀಳುವಂತೆ ಮಾಡಿತು

"Bombay Chronicle"

ಹೊರಗೆ ಬೂದಿ, ಒಳಗೆ ಉರಿಯುವ ಅಗ್ನಿಜ್ವಾಲೆ!

ಯುರೋಪಿಯನರು ರಹಸ್ಯದಿಂದ ಯುದ್ಧಕ್ಕೆ ಸನ್ನಾಹಮಾಡುತ್ತಿರುವರು ಹೊರಗಿನಿಂದ ಮಾತ್ರ ಶಾಂತಿಸ್ಥಾಪನೆಗಾಗಿ ಪ್ರಯತ್ನಿಸುತ್ತಿರುವರು. ಯುರೋಪು ರಾಜಕೀಯ ರಹಸ್ಯಗಳ ತವರುಮನೆಯಾಗಿದೆ.

ಯುದ್ಧಕ್ಕೆ ಕಾರಣಗಳು

ಜನಾಂಗಗಳ ಯುದ್ಧ ಸನ್ನಾಹಗಳು ಹೆಚ್ಚಾಗುವೆಂದೂ ಕಡಿಮೆಯಾಗುವೆಂದೂ ಒಂದನೇಯದಾಗಿದೆ.

'ಜನಾಂಗದ ಕೆಲಸವೆಂದರೆ ಜನಾಂಗೋದ್ಧಾರವೆನಿಸುವುದು, ಪ್ರತಿಯೊಂದು ಜನಾಂಗವು ತನ್ನ ರಾಜ್ಯಕ್ಕಾಗಿಯೂ ಜನಾಂಗಕ್ಕಾಗಿಯೂ ಸ್ವಾತಂತ್ರ್ಯವನ್ನು ಪಡೆಯಬೇಕು

ಪ್ರತಿ ರಾಷ್ಟ್ರವು ಯುದ್ಧ ಸನ್ನಾಹವನ್ನು ಭದ್ರತೆಗಾಗಿ ಮಾಡುತ್ತಿರುವುದು

ಪ್ರತಿಯೊಂದು ತನಗೆ ಬೇಕಾದಷ್ಟು ಸನ್ನಾಹಮಾಡಿಕೊಂಡಿರುವುದು

ಪ್ರತಿಯೊಂದು ರಾಷ್ಟ್ರವು ತನ್ನ ನೆರೆಕರೆಯ ರಾಷ್ಟ್ರಗಳಿಗಿಂತ ಬಲವಾಗಿರಬೇಕೆಂದು ಯತ್ನಿಸುವುದು ಒಂದು ಜನಾಂಗವು ಹೆಚ್ಚು ಕಡಿಮೆ ಬಿಟ್ಟರೆ, ಮತ್ತೊಂದು ಅದಕ್ಕಿಂತ ಹೆಚ್ಚಿಗೆ ಕೂಡಿಹಾಕುವುದು ಹೀಗೆ ಪ್ರತಿಯೊಂದು ಜನಾಂಗವು ಈಗ ರಣರಂಗಕ್ಕಿಳಿದು ತನ್ನ ಪರಾಕ್ರಮವನ್ನು ತೋರಿಸಲು ಹಾತೊರೆಯುತ್ತಿರುವುದು

ಈ ಘೋರ ಯುದ್ಧವು ಪ್ರಬಲವಾದರೆ ಒಂದು ಜನಾಂಗವು ತನ್ನ ನೆರೆಕರೆಯ ರಾಷ್ಟ್ರಕ್ಕೆ ಹೆದರಿಸುವುದೋ ಅದೇ ರಾಷ್ಟ್ರಕ್ಕೆ ಅಳಿವು ಬಂದು ನಾಶವಾಗಿ ಮತ್ತೆ ಯಾವ ಜನಾಂಗವೂ ಅದರ ಸಹಾಯಕ್ಕೆ ಬರಲು ಹೆದರುವುದು

ಈ ಸನ್ನಾಹಕ್ಕೆ ಮಿತವನ್ನು ಕಾಣುವ ಬದಲು "ಸ್ಟೇಟ್ಸ್‌ಮೆನ"ರು ಯುದ್ಧದ ಕಾರಣಗಳನ್ನೇ ತೆಗೆದು ಹಾಕುವುದು ಉಚಿತ ರಾಷ್ಟ್ರ ಈ ದಿನಗಳಲ್ಲಿ ಯುದ್ಧಕ್ಕೆ ಅಪೇಕ್ಷಿಸಲಾರರು ಎಷ್ಟರ ವರೆಗೆ? ಅವರ ವ್ಯಾಪಾರ ಸಮೃದ್ಧಿಯಾಗುವ ವರೆಗೆ ಮಾತ್ರ

ಒಂದು ರಾಷ್ಟ್ರವು ಇತರ ರಾಷ್ಟ್ರಗಳ ಸೂರೆಯಿಂದ ಪೆಟ್ಟು ತಿನ್ನುವುದರಿಂದ ಖಂಡಿತವಾಗಿಯೂ ಒಂದು ಘೋರ ಯುದ್ಧವಾಗಬಹುದು

ಈ ಎಲ್ಲಾ ಅನಾಹುತಗಳು ತೆಗೆದುಹಾಕಲ್ಪಟ್ಟರೆ ಯುದ್ಧದ ಹೆದರಿಕೆ ಹೋಗಿಬಿಡುವುದು ಆಗ್ಗೆ ಜನಾಂಗಗಳೆಲ್ಲವೂ ಶಾಂತಿಯಿಂದಿರುವುದು ಅಲ್ಲದೆ ತಮ್ಮ ವ್ಯಾಪಾರವನ್ನು ಸಮೃದ್ಧಿಪಡಿಸಬಹುದು

"Bombay Chronicle"

ಸ್ತ್ರೀಯರಿಗೆ ಔದ್ಯೋಗಿಕ ಶಿಕ್ಷಣ.

ಸಾಮಾನ್ಯವಾಗಿ ಒಂದೊಂದು ದೇಶದಲ್ಲಿ ಈ ವಿದ್ಯಾಭ್ಯಾಸವನ್ನು ಪುರುಷರೇ ಮಾಡುತ್ತಿರುವರು. ಆದರೆ ಜರ್ಮನಿಯಲ್ಲಿ ಮೆಕ್ಯಾನಿಕಲ್ ಇಂಜನಿಯರಿಂಗ್, ಇಲೆಕ್ಟ್ರಿಕಲ್ ಇಂಜನಿಯರಿಂಗ ಇವೇ ಮೊದಲಾದ ಔದ್ಯೋಗಿಕ ಶಾಸ್ತ್ರಗಳಲ್ಲಿ ಸ್ತ್ರೀಯರು ಕಲಿಯಬೇಕು ಹೊಂದುವ ವ್ಯವಸ್ಥೆಯನ್ನು ಅಲ್ಲಿನ ಸರಕಾರದವರು ಮಾಡಿರುತ್ತಾರೆ. ಡಿಪ್ಲೊಮಾ ಸಿಕ್ಕಬೇಕಾದರೆ ಸ್ತ್ರೀಯರು ಔದ್ಯೋಗಿಕ ಶಿಕ್ಷಣ ಸಂಸ್ಥೆಗಳಲ್ಲಿ ೪ ವರ್ಷಗಳ ವಿದ್ಯಾಭ್ಯಾಸವನ್ನು ಮಾಡತಕ್ಕದ್ದು (ಪುರುಷರಿಗೂ ಇದೇ ರೀತಿ ಇರುವುದು) ಇದರ ನಂತರ ಈ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆಯಲು ಸ್ತ್ರೀಯರಿಗೆ ಅವಕಾಶವಿದೆ ಈ ಸಂಸ್ಥೆಗಳಿಗೆ ಸೇರಬೇಕಾದರೆ ಇವರಿಗೆ ಕನಿಷ್ಠಪಕ್ಷಕ್ಕೆ ೧೮ ವರುಷವಾದರೂ ಪ್ರಾಯವಾಗಬೇಕು. ಇದರ ಮೊದಲು ಅಲ್ಲಿ ರೂಢಿಯಲ್ಲಿ ಪ್ರಾಥಮಿಕ ಹೈಸ್ಕೂಲು, ಕಾಲೇಜ ವಿದ್ಯಾಭ್ಯಾಸವನ್ನು ಇವರು ಮಾಡುತ್ತಿರುವರು ಇದು ಅಲ್ಲದೆ ಬಡ ಹುಡುಗಿಯರಿಗೆ ಜೀವನಕ್ಕೆ, ವೃತ್ತಿಗಳನ್ನು ಕಲಿಸಲು ಶಾಲೆಗಳು ಇವೆ ಇವು ನಾಲ್ಕು ವಿಧದವುಗಳ (೧) ಮನೆವೃತ್ತಿ ಶಾಲೆಗಳು (Domestic Schools) ಇವುಗಳಲ್ಲಿ ಮನೆಗಳಲ್ಲಿ ಕೆಲಸಮಾಡುತ್ತಿರುವವರೇ ಕಲಿಯುತ್ತಿರುವರು, (೨) ಔದ್ಯೋಗಿಕ ಶಾಲೆಗಳು (Industrial Schools). ಇವುಗಳಲ್ಲಿ ಹೊಲಿಗೆ ಕೆಲಸದವರೂ ಟೊಪ್ಪಿಯ ಕೆಲಸದವರೂ ಕಲಿಯುತ್ತಿರುವರು (೩) ವ್ಯಾಪಾರ ಶಾಲೆಗಳು (Commercial Schools) ಇವುಗಳು ಅಲ್ಲಲ್ಲಿ ವ್ಯಾಪಾರ ಸಂಸ್ಥೆಗಳಲ್ಲಿ ಗುಮಾಸ್ತಿಕೆಯನ್ನು ನೋಡುವ ಸ್ತ್ರೀಯರಿಗಾಗಿ (೪) ಹಳ್ಳಿ ಶಾಲೆಗಳು, (Rural Schools) ಇವುಗಳು ಹಳ್ಳಿಗಳಲ್ಲಿದ್ದು, ಮನೆಕೆಲಸದಲ್ಲಿ ಹುಡುಗಿಯರನ್ನು ತರಬೇತು ಮಾಡುತ್ತಿದೆ. ಇದರಿಂದ ಜರ್ಮನಿಯಲ್ಲಿ, ಯಾವತ್ತು ಕಾರ್ಯಗಳಲ್ಲಿರುವ ಸ್ತ್ರೀಯರು ವಿದ್ಯೆ ಕಲಿತವರೇ ಆಗಿರುವರು. ಇವರ ವಿದ್ಯಾಭ್ಯಾಸವು ಸಾಮಾನ್ಯ ಒಬ್ಬ ಹಿಂದೀ ಗ್ರ್ಯಾಜ್ಯುವೇಟರ ವಿದ್ಯಾಭ್ಯಾಸದಷ್ಟಿರುವುದು ಇವರಿಗೆ ಜೀವನದ ಯಾವತ್ತು ವಿಷಯದಲ್ಲೂ ದುಡುಕದೆ ನಡೆಯುವ ಯೋಗ್ಯತೆಗಳು ಇವೆ ಯುನಿವರ್ಸಿಟಿ ವಿದ್ಯಾಭ್ಯಾಸಗಳಲ್ಲಿ ಸ್ತ್ರೀಯರಿಗೂ ಪುರುಷರಿಗೂ ಭೇದವು ಕಡಮೆ.

'Prabudha Bharath'

ಜಪಾನು ಏನು ಮಾಡುತ್ತಿದೆ? ಸತ್ಕಾರ್ಯಗಳಿಗೆ ಹಣ ಕೂಡಿಸುವವರಿಗೊಂದು ಸೂಚನೆ—

ಜಪಾನಿನಲ್ಲಿ 'ಗ್ರಾಮೋಫೋನ' ವಿಕ್ರಯಿಸುವ ಕಂಪನಿ ಒಂದು, ಅಲ್ಲಿಯ ಕೆಲವು ಸಾರ್ವಜನಿಕ ಸಂಸ್ಥೆಗಳಿಗೆ ಆರ್ಥಿಕಸಹಾಯವನ್ನು ಮಾಡುವ ಉದ್ದೇಶದಿಂದ ಕೆಲವು ರೆಕಾರ್ಡುಗಳನ್ನು ಇದಕ್ಕಾಗಿ ಅಂಗಡಿ ಅವು ಮಾರಿ ಬಂದ ಹಣವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಒಪ್ಪಿಸಿದರು. ನಮ್ಮಲ್ಲಿ ಈ ತರದಲ್ಲಿ ಅರ್ಥ (ದೇಶಹಿತ ಕಾರ್ಯಗಳಿಗೆ) ಸಂಚಯವನ್ನು ಯಾಕೆ ಮಾಡಕೂಡದು?

ಗ್ರಾಮೋದ್ಧಾರಕ್ಕೆ ಯುವಕರು ಏನುಮಾಡುತ್ತಿರುವರು?

ಜಪಾನಿನ ಯುವಕರ ಸಂಘದಲ್ಲಿ ೩೦೦೦೦೦೦ ಮಂದಿ ಸದಸ್ಯರು ಇರುವರು ಇವರು ಒಂದು ಲಕ್ಷ ರೂಪಾಯಿಯ ಫಂಡೊಂದನ್ನು ನಿರ್ಮಿಸಿದ್ದಾರೆ ಇದು ಮೇಲಿನವರು ಕೊಟ್ಟ ಪ್ರವೇಶಶುಲ್ಕದಿಂದಲೇ ಕೂಡಿಸಿದ್ದಾಗಿದೆ ಈ ಸಂಘದ ಮುಖ್ಯ ಉದ್ದೇಶವು, ದೇಶದ ಯಾವತ್ತೂ ಲಾಭಕರವಾದ ಉದ್ಯಮಗಳನ್ನು ಸ್ಥಿರವಾಗಿ ನಡೆಯಿಸಲು ದ್ರವ್ಯಸಹಾಯವನ್ನು ಮಾಡುವುದು ಈ ಸಂಘದವರು ಇಂಥಾ ಸಂಸ್ಥೆಗಳಿಗೆ ಬಡ್ಡಿ ಇಲ್ಲದೆ ದ್ರವ್ಯ ಸಹಾಯವನ್ನು ಮಾಡುವರು ಇದರಿಂದಾಗಿ ಕೈಗಾರಿಕೆಗಳಿಗೆ ಸುಲಭ ರೀತಿಯಲ್ಲಿ ಹಣವು ದೊರೆಯುತ್ತದೆ ಸಾಮಾನ್ಯವಾಗಿ ಒಂದು ದೇಶದ ಕೈಗಾರಿಕೆಯು ಹಣದ ಸಹಾಯವಿಲ್ಲದೆ ನಡೆಯದು ಕೈಗಾರಿಕೆಯ ಸಂಸ್ಥೆಗಳಿಗೆ ದ್ರವ್ಯಸಹಾಯ ಮಾಡುವುದೇ ಈ ಸಂಘದ ಉದ್ದೇಶ. ಈ ಸಂಸ್ಥೆಗಳು ಪಡಕೊಂಡ ಸಾಲಗಳನ್ನು ಅವರಿಗೆ ಅನುಕೂಲವಾದ ರೀತಿಯಲ್ಲಿ ಹಿಂದೆ ಕೊಡಬಹುದು ಇದರಿಂದಾಗಿ ದೇಶದಲ್ಲಿ ಸರ್ವರಿಗೂ ಉದ್ಯೋಗವು ದೊರೆಯುವುದು. ಇಂಥಾ ಸಂಸ್ಥೆ ನಮ್ಮಲ್ಲಿ ಎಲ್ಲಿವೆ?

ಪರದೇಶೀ ವಸ್ತ್ರದ ಬಹಿಷ್ಕಾರ—

ಈ ಚಳವಳವು ಬಹಳ ರಭಸದಿಂದ ನಡೆಯುತ್ತಿರುವುದು ಪರದೇಶದಿಂದ ಬಂದ ಎಲ್ಲಾ ವಸ್ತ್ರವನ್ನೂ ಸರಕಾರವು ತಮ್ಮ ವಶ ಮಾಡಿಕೊಳ್ಳುವುದು ಇದೂ ಅಲ್ಲದೆ ಪರದೇಶೀ ವಸ್ತ್ರದ ಉಪಯೋಗವನ್ನು ನಿಷೇಧಿಸುವ ಸರಕಾರೀ ಹುಕುಂಗಳು ಅಲ್ಲಲ್ಲಿ ಇದರಿಂದಾಗಿ ಹೊರಡುತ್ತಿವೆ. ಚೀನಾ ದೇಶಕ್ಕೆ ಹೆಚ್ಚಿನ ನಷ್ಟವು ಸಂಭವಿಸಿದೆ ಆದರೆ ಅವರು ಜಪಾನಿನವರಂತೆ ಎಬ್ಬಿಸುವ ಬದಲಾಗಿ ಸ್ವದೇಶೀ ಚಳವಳದಲ್ಲಿ ಮಗ್ನರಾಗಿದ್ದಾರೆ ನಮ್ಮಲ್ಲಿ ಈ ವಿಷಯಗಳು ಯಾವಾಗ ಮಾಡುವುವು?

Bombay Chronicle

ಪ್ರಾಣಾಯಾಮ

ಪ್ರಾಣಾಯಾಮವನ್ನು ಪ್ರತಿದಿನವು ಕೆಲವು ಕಾಲ ಮಾತ್ರ ಅಭ್ಯಾಸ ಮಾಡಿ ಬಿಟ್ಟುಬಿಡುವುದರಲ್ಲಿಯೂ ಪ್ರಯೋಜನವಿಲ್ಲ. ಬೆಳಗ್ಗೆ ಎದ್ದಾಗ ಪ್ರಾಣಾಯಾಮವನ್ನು ಹತ್ತು ನಿಮಿಷ ಮಾಡಿಬಿಟ್ಟು ಉಳಿದ ಸಮಯದಲ್ಲಿ ಸಾಧಾರಣವಾಗಿ ಶ್ವಾಸಿಸುವುದರಲ್ಲಿಯೂ ಪ್ರಯೋಜನವಿಲ್ಲ. ಯಾವಾಗಲೂ ದೀರ್ಘವಾಗಿ ಶ್ವಾಸಿಸುವುದನ್ನೇ ಅಭ್ಯಾಸಕ್ಕೆ ತರಬೇಕು. ಬಿಡಾರು ನಿಮಿಷಗಳಿಗೊಂದು ಸಲ ಕೆಲಸವಿಲ್ಲದಿರುವ ಶ್ವಾಸಕೋಶಗಳಿಗೆ ಕೆಲಸವನ್ನು ಕೊಡಬೇಕು ಅವು ತಮ್ಮ ಕೆಲಸವನ್ನು ತಪ್ಪದೆ ಮಾಡುವಂತೆ ನಾವು ಎಚ್ಚರಿರಬೇಕು ಆರಂಭದಲ್ಲಿ ಇದು ಸ್ವಲ್ಪ ಕಷ್ಟವಾಗಿ ಪರಿಣಮಿಸಬಹುದು. ಆ ಕೆಲಸವನ್ನು ಮಾಡಬೇಕೆಂದು ಒಂದು ನಿಮಿಷದ ವರೆಗೆ ಜ್ಞಾಪಕವಿಟ್ಟರೆ, ಒಂದು ಘಂಟೆಯ ಕಾಲದ ವರೆಗೆ ಮಾಡಿಬಿಡಬಹುದು ಕಾಲಕ್ರಮದಿಂದ ಅದೂ ಅಭ್ಯಾಸವಾಗುವುದು ಇದರಿಂದುಂಟಾಗುವ ಪ್ರಯೋಜನಗಳು—ನಮ್ಮ ಶ್ವಾಸಕೋಶಕ್ಕೆ ಹೀಗೆಯೇ ಚೆನ್ನಾಗಿ ವ್ಯಾಯಾಮ ಕೊಟ್ಟ ಮೇಲೆ ಅದರಿಂದುಂಟಾಗುವ ಪ್ರಯೋಜನವು ಆಶ್ಚರ್ಯಕರವಾಗಿರುವುದು, ಕಂಠೆಯ ಹೊಟ್ಟೆಯಲ್ಲಿ ಆಯಾಸವು ತೋರುವುದಿಲ್ಲ. ರಕ್ತವು ಆಗಾಗ ಶುದ್ಧಿಹೊಂದುವುದರಿಂದ ನರಗಳು, ಸ್ನಾಯುಗಳು ಮೊದಲಾದುವುಗಳಿಗೆ ಒಳ್ಳೆಯ ಪೋಷಣೆಯುಂಟಾಗುವುದು ಆಗ ಎಂತಹ ಕಷ್ಟಕಾರ್ಯವನ್ನಾದರೂ ಸುಲಭವಾಗಿ ನಡೆಸಬಹುದು ಇದರಿಂದ ನಮ್ಮ ದೇಹವು ಬಿಸಿಲು ಕಾಲದಲ್ಲಿ ತಂಪಾಗಿಯೂ ಮಳೆಗಾಲದಲ್ಲಿ ಬೆಚ್ಚಗಾಗಿಯೂ ಇರುವುದು. ನಮ್ಮ ಜೀರ್ಣಶಕ್ತಿಯೂ ಹೆಚ್ಚುವುದು, ನಾವು ತೆಗೆದುಕೊಳ್ಳುವ ಆಹಾರದಿಂದ ಒಳ್ಳೆಯ ಪ್ರಯೋಜನವುಂಟಾಗುವುದು

"Health for All"

ಜಪಾನಿನಲ್ಲಿ ರೈತರ ಕಷ್ಟನಿವಾರಣೆಗೋಸ್ಕರ ಒಂದು ಸಂಸ್ಥೆ.

ಈ ಸಂಸ್ಥೆಯವರು ೫ ಲಕ್ಷ ರೂಪಾಯಿಯ ಒಂದು ಫಂಡನ್ನು ನಿರ್ಮಿಸಿದ್ದಾರೆ ಈ ದ್ರವ್ಯವು ಸಾಮಾನ್ಯವಾಗಿ ರೈತರ ಹಿತಕ್ಕಾಗಿಯೇ ಉಪಯೋಗಿಸಲ್ಪಡುವುದು ರೈತರಿಗೆ ಆಗಾಗ್ಗೆ ಹವಾಗುಣದಿಂದಲೂ ಅನ್ಯ ಕಾರಣಗಳಿಂದಲೂ ಕಷ್ಟಗಳು ಒದಗುವುದುಂಟು. ಇವರಿಗೆ ಕೃಷಿಯ ಜ್ಞಾನವನ್ನು ಕೊಟ್ಟಲ್ಲಿ ಸಾಗುವಳಿಯು ಸಾಂಗವಾಗಿ ನಡೆಯುವುದು. ಇವರಿಗೆ ಸ್ವಲ್ಪ ವಿದ್ಯಾಭ್ಯಾಸವು ಅಗತ್ಯ ರೈತರ ಜೀವನದಲ್ಲಿ ಕೆಲವು ಕುಂದು ಕೊರತೆಗಳು ಇರುವುದರಿಂದಾಗಿ, ಅವರ ಮಕ್ಕಳು ಘನತರದ ಕಷ್ಟವನ್ನು ಅನುಭವಿಸುತ್ತಿರುವರು. ರೈತರ ಸಾಲದ ಹೊರೆಯ ನಿರ್ಮೂಲನೆಗೂ, ಮೇಲಿನ ಸಂಕಷ್ಟಗಳಿಂದ ರೈತರು ಬಿಡುವಂತೆ, ಜಪಾನಿನ ಕೆಲವು ಸದ್ಗೃಹಸ್ಥರು ಮೇಲಿನ ಸಂಸ್ಥೆಯನ್ನು ನಿರ್ಮಿಸಿದ್ದಾರೆ ರೈತರಿಗೆ ಸಾಲಗಳನ್ನು (ಬಡ್ಡಿ ಇಲ್ಲದ) ಕೊಡುವುದು, ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಶಾಲೆಗಳನ್ನು ತೆರೆಯುವುದು ಸ್ತ್ರೀಯರಲ್ಲಿಯೂ ಉದ್ಯೋಗಕ್ಕೆ ಪತ್ರಿಕೆಗಳನ್ನು ಪ್ರಕಟಿಸುವುದು, ನಾನಾಗುಣದಿಂದ ಬೆಳೆಯಾಗದೆ ಇದ್ದ ಸಮಯ ರೈತರ ಜೀವನಕ್ಕೆ ಸಹಾಯವನ್ನು ಮಾಡುವುದು, ಇವರಿಗೆ ಸಾರ್ವಜನಿಕ ವಾಚನಾಲಯ, ಔಷಧಶಾಲೆ ಪಿರಿಯಮಂದಿರ, ಇವುಗಳನ್ನು ನಿರ್ಮಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶ ರೈತರ ಮೇಲ್ಮೆಯೇ ದೇಶದ ಏಳಿಗೆಯು ಈ ಸಂಸ್ಥೆಯವರ ಬಿರುದು ಮಾತ ನಮ್ಮಲ್ಲಿ ಇಂಥಾ ಸಂಸ್ಥೆಯೊಂದು ಹುಟ್ಟಲೆಂದು ನಮ್ಮ ಕೋರಿಕೆ

Bombay Chronicle'

ಈಗಲೇ ತಯಾರಾಗಿದೆ! ಬೇಗನೆ ಕೊಂಡುಕೊಳ್ಳಿರಿ!! ತ್ವರೆ ಪಡಿರಿ!!!

ಎಸ್. ಗಣಪತಿರಾವ್ ಐಗಳ್, ಇವರಿಂದ ರಚಿತವಾದ

ಸೋಶಿಯೋಲೊಜಿ

ಅಥವಾ

ಸಮಾಜಶಾಸ್ತ್ರ

ಹಾಯರ್-ಎಲಿಮೆಂಟರಿಗ್ರೇಡಿನ ವಿದ್ಯಾರ್ಥಿಗಳಾದ ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯುಪಯುಕ್ತವಾದ ಪುಸ್ತಕ

ಟ್ರೈನಿಂಗ್ ಶಾಲೆಗಳ ಸಿಲೆಬಸ್ ಪ್ರಕಾರ ಬರೆಯಲ್ಪಟ್ಟಿದು.

ಖಾಸಗಿಯಾಗಿ ಹಾಯರ್ ಎಲಿಮೆಂಟರಿ ಗ್ರೇಡ್ ಪರೀಕ್ಷೆಗೆ ಹೋಗುವ ಲೋವರ್, ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ,—ಯಾರ ಸಹಾಯವೂ ಇಲ್ಲದೆ ಕಲಿಯಲು ಅತ್ಯುಪಯೋಗಕರವಾದ ಪುಸ್ತಕ. ನಾನಾ ಮತ್ತು ಸರಕಾರೀ ಪರೀಕ್ಷೆಯ ಪ್ರಶ್ನೆಗಳನ್ನು ಒಳಗೊಂಡಿದೆ.

284 ಪುಟಗಳುಳ್ಳದ್ದು, ಸುಂದರವಾದ ಬ್ಯಾಂಡು, ಮುದ್ದಾದ ಮುದ್ರಣ.

ಕ್ರಯ ಒಂದು ರೂಪಾಯಿ ಮಾತ್ರ.

ಪುಸ್ತಕ ದೊರೆಯುವ ವಿಳಾಸ—

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಲೋಧ್ರ

ಸುಕ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಆದರ್ಶಪ್ರಾಯ ಸೇವೆಗಾಗಿ

ಕಿರ್ಲೋಸ್ಕರ

ಪಂಪುಗಳನ್ನುಪಯೋಗಿಸಿರಿ.

ಕೃಷಿ, ಕಾರ್ಖಾನೆಗಳಿಗೆ, ಮನೆಗಳಿಗೆ

ನೀರನ್ನೊದಗಿಸುವುದಕ್ಕೆ ಒಂದೇ

ಸಮರ್ಪಕ ಏರ್ಪಾಡು

ಅಮೋಘ ಬಾಳಿಕೆ!! ಕಡಿಮೆ ಖರ್ಚು!!

ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ ಲಿಮಿಟೆಡ್, ಮದ್ರಾಸು

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ. 1–0–0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು

8 ಔನ್ಸಿನ ಬಾಟ್ಲಿ 1ಕ್ಕೆ ರೂ 2–8–0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ಮುಗಿಸುತ್ತಿದೆ. ಅದರ ಫಲವೇ—ಆಯಾಸ, ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು. ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿ ಬಿಡದಂತೆ ನೀವೀಗಲೇ ತಡೆಹಾಕಬೇಕು, ಉತ್ತಮೋಪಾಯವೇ ಜೀವಾಮೃತಸೇವನೆ—ಈ ಪರಿಣಾಮಕಾರೀ ಪೌಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು. ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಶಕ್ತಿಯುತ ಪುರುಷರನ್ನಾಗಿ ಮಾಡುವುದು. ಎಲ್ಲೆಲ್ಲಿಯೂ ದೊರೆವುದು —ದೊಡ್ಡದು ರೂ. 3—4—0. ಸಣ್ಣದು ರೂ. 1—12—0

ತಯಾರಿಸುವವರು —ಆಯುರ್ವೇದಾಶ್ರಮ, ಪೋಸ್ಟು ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುದರ್ಶನ ಗ್ರಂಥಮಾಲೆಗಳು.

ಗ್ರಾಮೋಫೋನ್ ಸಂಗೀತಂ—ಶ್ರೀಮತಿ ಕೃಷ್ಣಾಂಬಾ ಲಲಿತಾಂಬ ಅಶ್ವತ್ಥಮ್ಮ, ದುರ್ಗಾಬಾಯಿ ಕೋಟಿ, ಹೀರಾಬಾಯಿ, ಕಾಂತಾಮಣಿ, ರಾಜರತ್ನಂ, ಇಂದ್ರ ಕೋಕಿಲ ಸ್ವರದ ಹಾಡುಗಳು ಮತ್ತು ಶ್ರೀಯುತ ರಾಜಯ್ಯಂಗಾರು, ಚೆಂಬೈ ವೈದ್ಯನಾಥಂ, ಸುಬ್ಬಯ್ಯ ಭಾಗವತರ್ ಸುಬ್ರಹ್ಮಣ್ಯಂ, ಪಟ್ವರ್ಧನ್, ಜೋಶಿ, ಮುಂತಾದವರ ರಸಭರಿತ ಕೃತಿ, ಕೀರ್ತನೆಗಳು ತ್ರಿಪುರಾಂಬ ಕಾಂತಾಮಣಿಯರ ಫೋಟೋದೊಂದಿಗೆ ಇರುವುದು. ಇದರ ಬೆಲೆ ಆಣೆ ೧

ಭೈಕ್ಷ್ಯಾನಂದ ಭಜನೆ—ತ್ಯಾಗರಾಜರ ತೆಲುಗು ಕೃತಿಗಳು, ತುಕಾರಾಮ, ಕೇಶವದಾಸರ ಮರಾಠಿ ಪದಗಳು, ಪುರಂದರದಾಸ ಕನಕದಾಸರ ಕನ್ನಡ ಕೀರ್ತನೆಗಳು ಮತ್ತು ವೇದಾಂತ ತತ್ವವಿಚಾರದ ಪದಗಳು ಸಹ ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿವೆ. ಇದರ ಬೆಲೆ ಆಣೆ ೧

ಶ್ರೀ ಪಾಂಡುರಂಗ ವಿಲಾಸ ಬುಕ್ ಡಿಪೋ, ಬೆಂಗಳೂರು ಸಿಟಿ

ಪ್ರತಿಗಳು ಸಿಕ್ಕುವ ವಿಳಾಸಗಳು:—ಮೆಸರ್ಸ್ ಶೆಟ್ಟಿ ಬ್ರದರ್ಸ್ ರಥಬೀದಿ ಮಂಗಳೂರು. ದಿ ಲಲಿತ ಕಲಾ ಸ್ಟೋರ್ಸ್ ಮೂಡಬಿದ್ರೆ ಆರ್ ವಿಟ್ಠಪ್ಪ ಶೆಟ್ಟಿ ಕಾರ್ಕಳ, ಮೆಸರ್ಸ್ ಬಾಳಿಗ ಗುರುವಾಯನಕೆರೆ, ಉಡುಪಿ ದಿ ಸಚ್ಚಿದಾನಂದ ಸ್ಟೋರ್ಸ್ ಕುಂದಾಪುರ, ದಿ ಸತ್ಯನಾರಾಯಣ ಸ್ಟೋರ್ಸ್, ಪುತ್ತೂರು,

---

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯು ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಢುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.



ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ –
The Scientific Gold Bangles Co., Ltd.,
Head Office—43, Byragimatam Street,
Post Box No. 203, Madras.

---

77 *Years!*



Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE

ಸಯಾಂ ದೇಶದ ಅರಸರು ಸಿಂಹಾಸನವನ್ನು ತೊರೆದರು!

ನ್ಯಾಯವಿಲ್ಲದಲ್ಲಿ ತಾನಿಲ್ಲ!

ನರಪತಿಗಳಿಗೆ ಆದರ್ಶಪ್ರಾಯರು!

"ನನ್ನ ಹಕ್ಕುಗಳಿಲ್ಲದಿದ್ದಲ್ಲಿ ನಾನಿಲ್ಲ!"

ಸಯಾಂ ದೇಶದ ಅರಸರಾದ ರಾಜಾ ಪ್ರಜಾಧಿಪೋಕರು ಇದೇ ತಾ ೨ರಲ್ಲಿ ತನ್ನ ಸಿಂಹಾಸನವನ್ನು ತೊರೆದರು. ರಾಜನು ಸಿಂಹಾಸನವನ್ನು ಇಷ್ಟು ಶಾಂತಶೀಲನಾಗಿ ತೊರೆದ ಉದಾಹರಣೆಯೇ ಚರಿತ್ರೆಯಲ್ಲಿಲ್ಲವೆಂದು ರೂಟರ್ ವಾರ್ತಾದಾಯಕನೆನ್ನುತ್ತಿರುವನು. ರಾಜಾ ಪ್ರಜಾಧಿಪೋಕ್ ಎಂಬ ಹೆಸರನ್ನು ತೊರೆದು ಪರದೇಶದ ಒಂದು ಭಾಗದಲ್ಲಿ ತಾನು "ರಾಜಕುಮಾರ ಸುಖೋದಯ"ನೆಂಬ ಹೆಸರಿನಿಂದ ವಾಳುವೆನೆಂದು ಅರಸರ ಹೇಳಿಕೆ.

ಸಿಂಹಾಸನತ್ಯಾಗದ ಕಾರಣಗಳಿಷ್ಟು:— ತನ್ನ ರಾಜ್ಯಭಾರದಲ್ಲಿರುವ ಶಾಸನಸಭೆಯಲ್ಲಿ ನ್ಯಾಯವಿಲ್ಲ—ನೀತಿಯಿಲ್ಲ. ನಿರಂಕುಶ ಪ್ರಭುತ್ವವೇ ತಲೆದೋರಿದೆ. ಅದು ಹೋಗಬೇಕು. ಪ್ರಜಾ ಸ್ವಾತಂತ್ರ್ಯವಿರಬೇಕು ಎಂಬುದೇ ಅವರ ಹೇಳಿಕೆ. ಈಗಿನ ಶಾಸನಗಳನುಸಾರವಾಗಿ ಪ್ರಜೆಗಳು ಬಹಿರಂಗ ಭಾಷಣವೀಯಲು ಬಾರದು. ಸ್ವತಂತ್ರ ಲೇಖನವನ್ನು ರಾಜಕೀಯ ವಿಷಯಕವಾಗಿ ಬರೆಯಬಾರದು. ರಾಜಕೀಯ ಸಭೆಗಳನ್ನು ಜರಗಿಸಬಾರದು—ಈ ಕ್ರಮಗಳು, ನಿರ್ಬಂಧಗಳೆಲ್ಲಾ ಹೋಗಬೇಕು. ರಾಜಕೀಯ ಕೈದಿಗಳನ್ನು ಯಾವ ಶರ್ತವಿಲ್ಲದೇನೆ ಬಿಡುಗಡೆ ಮಾಡಬೇಕು. ಸೈನಿಕರು, ನಾವಿಕರು ಮೊದಲಾದವರು ರಾಜಕೀಯದಲ್ಲಿ ಕೈಯಿಡಬಾರದು. ಇವಿಷ್ಟು ಪ್ರಜಾಧಿಪೋಕರು ನ್ಯಾಯವಿಧಾಯಕ ಸಭೆಯೆದುರು ಇಟ್ಟ ಶರ್ತಗಳು. ಇವುಗಳನ್ನು ಶಾಸನ ಸಭಿಕರು ಪಾಲಿಸದ ವಿನಹ ತನಗೆ ಸಿಂಹಾಸನವು ಬೇಡವೆಂದು ಅವರ ಹೇಳಿಕೆ.

ಸಯಾಂನಲ್ಲಿ ಈ ಕ್ರಾಂತಿಯು ತಲೆದೋರಿದುದು ಆಕಸ್ಮಿಕವಾಗಿಯಲ್ಲ. ಕಳೆದ ಎರಡು ವರ್ಷಗಳಿಂದಲೂ ಪ್ರಜಾಧಿಪೋಕರಿಗೂ ಶಾಸನ ಸಭೆಯವರಿಗೂ ವಿವಾದಗಳೇಳುತ್ತಿದ್ದುವು. ಅವರ ಕೆಲವು ಕಠಿಣ ಶಾಸನಗಳನ್ನು ಕಂಡು ಪ್ರಜಾಧಿಪೋಕರ ದುಃಖ ಸೂಚನೆಯನ್ನು ಮಾಡಿದರು. ಆದರೆ ನಿರಂಕುಶ ಪ್ರಭುತ್ವವಾದಿಗಳಾದ ಆ ಮಂತ್ರಿಮಂಡಲದವರು ಇವರ ಸುಸ್ವಭಾವಕ್ಕೆ ಮಣಿಯಲಾರದಾದರು. ಈ ಸಂದರ್ಭದಲ್ಲಿ ಪ್ರಜಾಧಿಪೋಕರ ಪರಿಚಯವನ್ನು ಮಾಡಿಕೊಡುವುದು ಸಂಗತವಿದೆ.

ರಾಜಾ ಪ್ರಜಾಧಿಪೋಕನು ಚಿಕ್ಕಂದಿನಿಂದಲೂ ವಿಚಕ್ಷಣಶಾಲಿ. ಸೌಹಾರ್ದತಾ ಭಾವವಿದ್ದವನು. ಇಂಗ್ಲೆಂಡಿನಲ್ಲಿ ವಿದ್ಯೆಗಲಿತ ಮಹಾ ವಿದ್ಯಾವಂತನೆಂದು ಹೆಸರುಗಳಿಸಿದ. ವಿಶಾಲ ದೇಶಸಂಚಾರ ಮಾಡಿದವ. ತನ್ನ ಅಣ್ಣನು ಪುತ್ರ ಸಂತಾನವಿಲ್ಲದೆ ಚಿಕ್ಕ ವಯಸ್ಸಿನಲ್ಲಿ ಮರಣ ಹೊಂದಿದುದರಿಂದಾಗಿ ಸಿಂಹಾಸನವು ಪ್ರಜಾಧಿಪೋಕನಿಗೆ ಬಂತು.

ಸಯಾಂನಲ್ಲಿ ರಾಜಕೀಯ ಕ್ರಾಂತಿಯುಂಟಾದುದು ಎರಡು ವರ್ಷಗಳ ಹಿಂದೆ. ಅಂದಿನಿಂದ ಇಂದಿನ ವರೆಗೆ ಅಲ್ಲಿ ಮೂರು ಕ್ರಾಂತಿಗಳುಂಟಾದುವು. ಈ ಮೂರು ಕ್ರಾಂತಿಗಳಲ್ಲೂ ಅಲ್ಲಿ ಒಂದು ತಟಕು ನೆತ್ತರು ಹರಿಯಲಿಲ್ಲ.

ಈ ಕ್ರಾಂತಿಗಳ ರಾಜನಿಗೂ ರಾಜಕೀಯಕ್ಕೂ ಸಂಬಂಧಪಟ್ಟವುಗಳೇ ಅಲ್ಲ. ಎಲ್ಲವೂ ಪ್ರಜೆಗಳೊಳಗೇ ಎದ್ದ ಕ್ರಾಂತಿ.

ಸಯಾಂ ದೇಶದ ಆಡಳಿತವೆಲ್ಲವೂ ಪ್ರಜಾಧಿಪೋಕನ ಸಂಬಂಧಿಕರ ಕೈಯಲ್ಲಿದ್ದುವು. ರಾಜನು ಇವನಾದರೂ ಹಕ್ಕುಗಳೆಲ್ಲ ಅವರಲ್ಲಿ. ಇತ್ತೀಚೆಗೆ ಅವರ ಉಪಟಳವು ವಿಪರೀತವಾಯಿತು. ಫಲವಾಗಿ, ಈ ಅಧಿಕಾರಿಗಳನ್ನು ಪ್ರಜಾ ಸಾಮಾನ್ಯ ಮುಖಂಡರು ತಮ್ಮ ಕೈವಶಮಾಡಿಕೊಳ್ಳಲೆತ್ನಿಸಿದರು. ಇದೇ ಕ್ರಾಂತಿಯ ಮೂಲವಾಯಿತು. ಈ ಕಾದಾಟದಲ್ಲಿ ಪ್ರಜಾಧಿಪೋಕರು ತನ್ನವರನ್ನು ಬೆನ್ನಿಗೆ ಕಟ್ಟಿಕೊಳ್ಳದೆ ಜನರ ಪಕ್ಷವನ್ನೇ ವಹಿಸಿ, ಕ್ರಾಂತಿಕಾರರ ಸಾಧನೆಗೆ ತನ್ನ ಬೆಂಬಲವನ್ನು ಕೊಡುತ್ತಿದ್ದರು. ಬಡವರ ಮೇಲ್ಮೆಯನ್ನೇ ಬಯಸುತ್ತಿದ್ದರು. ಚರಿತ್ರೆಯಲ್ಲಿ ಇಂತಹ ಸುಗುಣ ಭಂಡಾರವಾದ ರಾಜನು ಕಂಡುಬರಲಿಲ್ಲ. ಪ್ರಜಾಧಿಪೋಕನೆಂದರೆ ಸಾಮಾನ್ಯ ಜನರಿಗೆ ಪ್ರಾಣ. ಅವರಿಗೆ ಏನಾದರೂ ಹಾನಿಯಾಯಿತೆಂದರೆ ಜನರು ಸಂತಾಪಸೂಚನೆಯನ್ನು ಒಡನೆ ಮಾಡುವರು.

೧೯೩೩ರಲ್ಲಿ ಇವರು ಪಟ್ಟಕ್ಕೆ ಬಂದರು. ಮರುವರ್ಷ ಪರದೇಶ ಸಂಚಾರದಲ್ಲಿದ್ದಾಗ ಇವರ ದೇಶದಲ್ಲಿ ಮಹಾ ಕ್ರಾಂತಿಯು ತಲೆದೋರಿತು. ಶಾಸನಗಾರರಿಗೂ ಜನರಿಗೂ ದ್ವಂದ್ವವು ನಡೆಯಿತು. ಜನರು ರೇಗಿದರು ಯಾರ ಮೇಲೆ? ಮಂತ್ರಿಮಂಡಲದ ಮೇಲೆ. ಆದರೆ ಅರಸನ ಮೇಲೆ ಅವರು ಬೇಸರಲೇ ಇಲ್ಲ. ಅರಸರ ಆಸ್ತಿಗಳಿಗಾಗಲೀ ಅರಮನೆಗಳಿಗಾಗಲೀ ಅವರು ಹಾನಿಯನ್ನುಂಟುಮಾಡಲಿಲ್ಲ. ಬದಲಿಗೆ, ಅಂತಹ ಕಾರ್ಯವು ತಮ್ಮವರಿಂದ ತೀರ ನಿಷೇಧಿತವೆಂದು ಠರಾವು ಮಾಡಿಕೊಂಡರು. ಅಲ್ಲದೆ ಒಡನೆ ಇವರನ್ನು ಪರದೇಶದಿಂದ ತರಿಸಿ ತಮ್ಮ ಸಂಕಷ್ಟಗಳನ್ನು ಹೇಳಿಕೊಂಡರು. ಈ ಸಂಘಟನೆಯಿಂದಲೂ ಶಾಸನಕಾರರು ಪ್ರಜಾಧಿಪೋಕರನ್ನು ವಕ್ರದೃಷ್ಟಿಯಿಂದ ನೋಡುವಂತಾಯಿತು.

ಎಲ್ಲಾ ಮಹಾರಾಜರುಗಳಂತೆ ಪ್ರಜಾಧಿಪೋಕರು ದುಂದುವ್ಯಯ ಮಾಡತಕ್ಕವರಲ್ಲ. ದೇಶದ ಹಿತವನ್ನು ಮರೆಯುವವರಲ್ಲ. ಇವರು ಗದ್ದುಗೆಯನ್ನೇರಿದಾಗ ಸಯಾಂನ ಆರ್ಥಿಕ ಸ್ಥಿತಿಯು ಪೂರ್ಣ ಕೆಟ್ಟುಹೋಗಿತ್ತು. ಅನೇಕ ಐರೋಪ್ಯ ರಾಷ್ಟ್ರಗಳಿಂದ ಸಾಲವನ್ನು ಪಡೆದು ಜೀವಿಸುತ್ತಿತ್ತು. ಆದರೆ ಪ್ರಜಾಧಿಪೋಕರು ತನ್ನ ಆಡಳಿತದಲ್ಲಿ ಅದ್ವಿತೀಯ ದಕ್ಷತೆಯನ್ನು ತೋರಿಸಿ, ದೇಶದ ಆಯವ್ಯಯಗಳನ್ನು ಆಂಗ್ಲ ಕ್ರಮಾನುಸಾರವಾಗಿ ಸರಿದೂಗಿಸಿ, ಶಿಸ್ತಿಗೆ ತಂದರು. ದೇಶದ ಮುಗ್ಗಟ್ಟಿನ ವೇಳೆಯಲ್ಲಿ ತನ್ನ ಸ್ವಂತ ವೆಚ್ಚವನ್ನು ಕೂಡಾ ಬಹುಮಟ್ಟಿಗೆ ತಗ್ಗಿಸಲೂ ಅವರು ಹಿಂದು ಮುಂದು ನೋಡಲಿಲ್ಲ. ಇವರು ಅಧಿಕಾರಕ್ಕೆ ಬಂದ ಮೇಲೆ ಐರೋಪ್ಯ ರಾಷ್ಟ್ರಗಳೊಡನೆ ರಾಜ್ಯಭಾರ ನಡೆಸಿ ಸಯಾಂನ್ನು ಗೌರವದಿಂದಿಟ್ಟು ಅದನ್ನು ಶಾಂತತೆಯಲ್ಲಿಟ್ಟರು.

ನೆರೆನಾಡಾದ ಜಪಾನ್ ರಾಷ್ಟ್ರವು ನೌಕಾಬಲವನ್ನು ಹೆಚ್ಚಿಸುತ್ತಿರುವುದನ್ನು ನೋಡಿ ತನ್ನ ದೇಶದ ಅಭಿವೃದ್ಧಿದೃಷ್ಟಿಯಿಂದ ಹಲವು ರಕ್ಷಣೋಪಾಯಗಳನ್ನು ಕಲ್ಪಿಸಿದರು.

ನರಪತಿಗಳೆಂದರೆ ಅವರಲ್ಲಿ ವಿಜಾತೀಯವಾದ ಪ್ರತಿಷ್ಠೆ ಹೆಚ್ಚು. ಸಾಮಾನ್ಯರೊಡನೆ ಮಾತಾಡಿದರೆ ಎಲ್ಲಿ ತಮ್ಮ ಗೌರವಕ್ಕೆ ಕುಂದು ಬರುವುದೋ, ಸಾಮಾನ್ಯರಂತೆ ವರ್ತಿಸಿದರೆ ಎಲ್ಲಿ ತಮ್ಮ ಪದವಿಯ ಹೆಸರು ನಾಶವಾದೀತೋ ಎಂದು ಅವರ ಶಂಕೆ. ಅವರು ಗುಣಕ್ಕೆ ಬಗ್ಗುವವರಲ್ಲ. ಪ್ರತಿಷ್ಠೆಯ ನಿರೀಕ್ಷಕರು.

ಆದರೆ ಪ್ರಜಾಧಿಪೋಕರು ಅಂತಹವರಲ್ಲ. ಪ್ರಜೆಗಳೊಡನೆ ಮಾತನಾಡುವುದೆಂದರೆ ಅವರಿಗೆ ಬಹು ಪ್ರೀತಿ. ರೇಡಿಯೋ ಮೂಲಕ ಮಾತನಾಡಿ ತನ್ನ ಪ್ರಜೆಗಳಿಗೆ ಸ್ವದೇಶಾಭಿಮಾನ, ಜೀವನ ಕ್ರಮಗಳ ಕುರಿತು ಆಗಾಗ್ಗೆ ಭಾಷಣ ಮಾಡುತ್ತಿದ್ದರು.

ಆಗಾಗ್ಗೆ ತನ್ನ ಹೆಂಡತಿಯನ್ನು ಕೂಡಿಕೊಂಡು ಸಿನೇಮಾಕ್ಕೆ ಹೋಗುವುದು ಅವರ ಪದ್ಧತಿ. ಹೋಗುವಾಗ ಕಾರ್ಯಕ್ರಮವಿಲ್ಲ. ಬೇಂಡು ವಾದ್ಯಗಳಿಲ್ಲ. ಮೆರವಣಿಗೆಯಿಲ್ಲ. ಎಲ್ಲರೂ ಹೋಗುವಂತೆ ತಾನೂ ಹೋಗುವರು. ತನಗಾಗಿ ಪ್ರತ್ಯೇಕ ಸಿನೆಮಾವನ್ನೇರ್ಪಡಿಸಿ ಹೋಗುವ ದುರಾಗ್ರಹಿಕೆಯು ಅವರಲ್ಲಿಲ್ಲ. ಅನಿರೀಕ್ಷಿತವಾಗಿ ಶಾಂತವಾಗಿ, ಎಲ್ಲಿ ಬೇಕಾದರೂ ಹೋಗುವುದು ಅವರ ವಾಡಿಕೆ. ಸಿನೆಮಾದ ಮಂದಿರದಲ್ಲಿ ದೊಡ್ಡ ಸ್ಥಾನದಲ್ಲಿ—ಉಪ್ಪರಿಗೆಯಲ್ಲಿ ಕುಳಿತುಕೊಳ್ಳಬೇಕೆಂಬ ಕ್ರಮವನ್ನು ಅವರು ಇಟ್ಟುಕೊಂಡಿರುವುದೇ ಇಲ್ಲ. ಸಾಮಾನ್ಯ ಜನರೊಡನೆ ಬೆರೆತು ಕುಳಿತು, ಸಂದರ್ಭ ಬಿದ್ದಾಗ ಬಳಿಯುದ್ದವರೊಡನೆ ಸರಸ ಮಾತು ಕತೆಗಳನ್ನು ಬೆಳೆಸುವರು. ಒಪ್ಪು ಬರೆಗಳಲ್ಲೂ ಬಹಳ ಸರಳರು. ತರತರದ ಜರಿಯ ವಸ್ತ್ರಗಳು, ವೇಷ ಭೂಷಣಗಳನ್ನು ಅವರು ತ್ಯಜಿಸುತ್ತಿದ್ದರು. ಅವರ ಪತ್ನಿಯೇನೋ ಸ್ವಲ್ಪ ಬೆಲೆಬಾಳುವ ವಸ್ತ್ರಗಳನ್ನು ಧರಿಸುವವಳಾದರೂ ಅವಳಲ್ಲೂ ಸರಳತೆಯೂ ಮಂದಹಾಸವೂ ಪ್ರಧಾನ ಗುಣಗಳು. ಸಯಾಂನಲ್ಲಿ "ನಗುವಿನ ರಾಣಿ" ಎಂದು ಹೆಸರು ಅವಳಿಗಿದೆ. ಯಾವಾಗ ನೋಡಿದರೂ ಅವಳ ಮುಖದಲ್ಲಿ ನಗು.

ಪ್ರಜಾಧಿಪೋಕರು ಪೂರ್ಣವಾಗಿ ಏಕಪತ್ನೀವ್ರತರು. ಸಯಾಂ ದೇಶದ ಹಿಂದಿನ ರಾಜರು ರಾಣೀವಾಸವನ್ನಿಟ್ಟುಕೊಂಡು ಬಹು ಭೋಗವಿಲಾಸದಿಂದಿದ್ದು ಜೀವನ ನಡೆಸಿದ ಕೀರ್ತಿಯಿದೆ. ಆದರೆ ಇವರು ಅದಕ್ಕೆ ದೂರ. ಅನಂದದ ಪ್ರಜಾಧಿಪೋಕರಿಗೆ ಸಯಾಂನ ಸಿಂಹಾಸನದಲ್ಲಿ ತಿರಸ್ಕಾರವನ್ನುಂಟುಮಾಡುವ ಕೆಲವು ಅಪಶಕುನಗಳು ಇರುವುವೆಂದು ಪ್ರಜಾಧಿಪೋಕರ ಕಾರ್ಯದರ್ಶಿಗಳು ತಿಳಿಸುತ್ತಾರೆ. ಆ ಅಪಶಕುನಗಳು ಯಾವುವೆಂದರೆ ಮೊತ್ತ ಮೊದಲು ರಾಜದಂಪತಿಗಳು ಒಟ್ಟಿಗೆ ಅರಸನಾದ ಅಷ್ಟೈಶ್ವರ್ಯವನ್ನು ಸಹಿಸಿ, ಅವಿನ ಅಥಿತಿಗಳಾಗಿ ಕೆಲಕಾಲ ಇರಬೇಕೆಂದು ಅಪೇಕ್ಷಿಸಿದರು. ಆ ಸಂಬಂಧವಾದ ಎಲ್ಲಾ ಸಿದ್ಧತೆಗಳನ್ನು ಮಾಡಿ ಬೆಲ್ಜಿಯಂಗೆ ಹೊರಡಬೇಕೆಂದಿರುವ ವೇಳೆಗೆ ಅಲ್ಲಿಯ ಅರಸನು ಕೂಲ್ಪಟ್ಟು ಆ ಪ್ರವಾಸದ ಮಾತು ಅಲ್ಲೇ ನಿಂತಿತು. ಇದಾದ ಮೇಲೆ ಹಾಲೆಂಡಿನ ರಾಣಿಯ ಅತಿಥಿಯಾಗಿರಲು ಪ್ರಯಾಣ ಮಾಡುವ ಸನ್ನಾಹದಲ್ಲಿದ್ದಾಗ ಅಲ್ಲಿನ ರಾಜನ ತಾಯಿಯು ತೀರಿಕೊಂಡಳು. ಈ ಪ್ರಯಾಣವೂ ಅಲ್ಲಿಯೇ ಬಿತ್ತು. ಮುಂದೆನೆಯು ಸಲದ್ದಾಗಿ ಅಸ್ಟ್ರಿಯದ ಸರ್ವಾಧಿಕಾರಿಯಾದ ಡಾ. ಎಂಜಿಲ್ ಬರ್ಟ್ ಡಾಲ್ಫೂಸರ ಅತಿಥಿಯಾಗಲು ವಿಯೆನ್ನಾಕ್ಕೆ ಹೊರಟ ವೇಳೆ ಡೊಲ್ಫಸನು ಕೊಲೆ ಮಾಡಲ್ಪಟ್ಟನು. ಕೊನೆಗೆ ಪ್ರಾಗ್ ಹೊಲ್ಲೆಂಡಿಗೆ ಹೋಗುವುದೆಂದು ಸಿದ್ಧನಾದಾಗ ಅಲ್ಲಿಯ ಅರಸನೇ ಮೃತನಾದನು.

ಚಕ್ರವರ್ತಿಯವರ ಪಟ್ಟಾಭಿಷೇಕದ ರಜತೋತ್ಸವದ ಸಮಯ ಬಹುಮಾನವಾಗಿ ಕೊಡಲಿರುವ ಪದಕಗಳ ಚಿತ್ರ.

ಫೆಬ್ರುವರಿ ತಾ 20ರಿಂದ — ಮಾರ್ಚಿ ತಾ. 15ರ ವರೆಗೆ

ಪುಣ್ಯಕ್ಷೇತ್ರವಾದ ಧರ್ಮಸ್ಥಳಕ್ಕೆ ಯಾತ್ರೆ!

ಅರ್ಧ ಖರ್ಚಿನಲ್ಲಿ ಅತೀ ಮಹತ್ವದ ಯಾತ್ರೆ

ಮಂಗಳೂರು, ಬಂಟವಾಳ, ಚಿಕ್ಕಮಗಳೂರು, ಶಿವಮೊಗ್ಗಾ, ಮೂಡಿಗೆರೆ, ಸಕಲೇಶಪುರ, ಈ ಎಲ್ಲಾ ಸ್ಥಳಗಳಿಂದ ಧರ್ಮಸ್ಥಳಕ್ಕೆ ಅರ್ಧ ಚಾರ್ಜಿನಿಂದ ರಿಟರ್ನ್ ಟಿಕೇಟು ಕೊಡಲಾಗುವುದು.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು.

LOOK SHARP! LOOK AHEAD!

Murdeshwar's Banking Institute.

Pioneer Institute on the WestCoast Opens out Careers for Business men, Graduates, Under-graduates, and S. S. L C's and also for those who have not passed any University examination.

Coaches students for the Specialised Banking Courses (C. A. I. B. & C. A. I I. B.) and also for Accountancy, Secretarial, and Insurance Courses (L. A A, A C. R A, F C. R. A, F I. S A, A. C. I I, etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well-qualified and experienced Lecturers

FEES VERY MODERATE

For further particulars apply to —

D. R Murdeshwar,
Dip. Econ, F R Econ, S (Lond.)
Principal

Ganapathy High School Street,
Mangalore.

ಬೇಕಾಗಿದ್ದಾರೆ.

ನಿರುದ್ಯೋಗಿಗಳಾದ, ಉತ್ಸಾಹಿ ತರುಣರು ನಮ್ಮ ಟ್ಯಾಟಿ ಬೋಕ್ಸ್ ವಿಕ್ರಯಿಸುವುದಕ್ಕಾಗಿ ಬೇಕಾಗಿದ್ದಾರೆ ತಿಂಗಳಿಗೆ ರೂಪಾಯಿ 30/-ಸಂಬಳ ಸೆಕ್ಯುರಿಟಿ ಇಲ್ಲ ಕೆಟಲಾಗು ಧರ್ಮಾರ್ಥ.

ಇಂಗ್ಲಿಷಿನಲ್ಲಿ ಇಲ್ಲಿಗೆ ಬರೆಯಿರಿ —

National Trading Co.,
Jaialagon, Calcutta,(c)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ
ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ
ದಪ್ಪಗಿನ ಏಂಟಿಕ್ ಕಾಗದದಲ್ಲಿ ಮುದ್ರಣ.
ಕ್ರೌನ್ ¼ ಆಕಾರದ 188 ಪುಟಗಳು.
ಉತ್ತಮ ತರಗತಿಯ ಹಾಸ್ಯ
ಬೆಲೆ ರೂ. 1—4—0.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

ಇಲ್ಲಿಂದ ಪಡಕೊಳ್ಳಬಹುದು.

ನೋಟೀಸು.

ಬಾಲಗ್ರಹದಿಂದ ಮತ್ತು ಗ್ರಹಣಿಯಿಂದ ಮೃತ್ಯುವಿಗೆ ತುತ್ತಾಗುವ ಮಕ್ಕಳನ್ನು ಕಾಪಾಡಿಕೊಳ್ಳಿರಿ.

ಎಲ್ಲಾ ತರದ ಬಾಲಗ್ರಹ ಪೀಡೆಯಿಂದ ಸ್ಮೃತಿ ತಪ್ಪಿ ಮೂರ್ಛೆ ವಗೈರೆ ಹೊಂದಿರುವ ಬಾಲಕರಿಗೆ ಮತ್ತು ನಾನಾ ವಿಧದ ಗ್ರಹಣಿಗಳಿಗೆ ಮಂತ್ರ ಸಾಮರ್ಥ್ಯದಿಂದಲೂ ದಿವ್ಯ ಔಷಧಿಯಿಂದಲೂ ಚಿಕಿತ್ಸೆಮಾಡಿ ಗುಣಪಡಿಸುತ್ತೇನೆ. ತೀರಾ ಗರೀಬರಿಗೆ ಪ್ರತಿಫಲವಿಲ್ಲದನೇ ಔಷಧಿ ಕೊಡುತ್ತದೆ ವಿಳಾಸ—

ದೇವಣ್ಣ ನಾರಾಯಣ ಕಿಣಿ.
ಕೋರ್ಟು ರಸ್ತೆ, ಕಾಸರಗೋಡು.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ಹೊಸ ರಾಶಿ ಅಕ್ಕಿ	3— 8	3—12
ಹೊಸ ಮುಸ್ಕತಿ	3—12	4— 6
ಹೊಸ ಗುಡ್ಡು	3—10	4— 0
ಊರ ಅದ್ವಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ. ೧ಕ್ಕೆ	5—12	6— 4
ಎಲ್ಲೂರು ಬೆ. ಮು ೧ಕ್ಕೆ	4— 2	4— 4
ಗೋದಿ ಗೋಣಿ ೧ಕ್ಕೆ	10— 0	12— 8
ತೊಗರಿ ಗೋಣಿ ೧ಕ್ಕೆ	9— 6	10— 0
ಹುರುಳಿ ಗೋಣಿ ೧ಕ್ಕೆ	6 — 4	7— 8
ಕಡಲೆ ಗೋಣಿ ೧ಕ್ಕೆ	8 — 0	10— 8
ತೊಗರಿಬೇಳೆ ಗೋಣಿ ೧ಕ್ಕೆ	10— 0	17— 0
ಉದ್ದು ಗೋಣಿ ೧ಕ್ಕೆ	8— 0	8— 8
ಹೆಸರು ಗೋಣಿ ೧ಕ್ಕೆ	9— 0	9— 8
ಊರುಬೆಲ್ಲ ಖಂಡಿ ೧ಕ್ಕೆ	32— 8	35 — 0
ಉಪ್ಪು ಗೋಣಿ ೧ಕ್ಕೆ	4— 8	5— 0
ಕೊಬ್ರಿ ಖಂಡಿ ೧ಕ್ಕೆ	48— 0	55— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	22— 8	24— 0
ಎಳ್ಳಿಂಡಿ ಖಂಡಿ ೧ಕ್ಕೆ	37— 8	—
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	3—10	4—11
ಎಳ್ಳೆಣ್ಣೆ ಮುಡಿ ೧ಕ್ಕೆ	5— 2	5—10
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	5— 7	5—7
ಮೋರಿಸ ಸಕ್ಕರೆ ಮು. ೧ಕ್ಕೆ	3— 6	3— 8
ಮೆಣಸು	4— 8	6— 4
ಸಾಸಿವೆ ಮುಡಿ ೧ಕ್ಕೆ	4—12	5— 4
ಕಾಳುಮೆಣಸು ಖ ೧ಕ್ಕೆ	120— 0	125— 0
ಯೇಲಕ್ಕಿ ಮಣ ೧ಕ್ಕೆ	22— 0	36— 0
ಗೇರುಬೀಜ ಮು. ೧ಕ್ಕೆ	3— 8	8—12
ಕಬ್ಬಿಣ ಖಂಡಿ ೧ಕ್ಕೆ	40— 0	40— 8
ತಾಂಮ್ರ ತಗಡು ಮ. ೧ಕ್ಕೆ	9 — 0	9— 1
ತಾಂಮ್ರ ಪಾತ್ರಗಳು ಮ ೧ಕ್ಕೆ	12— 8	14— 0
ಬೀಡಿಬೆಳ್ಳಿ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ	8— 12	9— 0
ಹಡಸು ೧ಕ್ಕೆ	23— 0	—
ಹುಣಸೆ ಹುಳಿ ಖಂಡಿ ೧ಕ್ಕೆ	25— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170— 0	180— 0
ಫ್ರೆಬೇರಿ ಕಾಫಿ ಖಂಡಿ ೧ಕ್ಕೆ	250— 0	—
ಹಳೆ ಅಡಿಕೆ	100— 0	115— 0
ಹೊಸ ಅಡಿಕೆ	75— 0	96 — 0

ಶಾಲಿವಾಹನ ಬ. ಶಕ ೧೮೫೬ನೆಯ ಭಾವ ಸಂವತ್ಸರದ ಫಾಲ್ಗುಣ ಶು ೪ ಶನಿವಾರದಿಂದ ಫಾಲ್ಗುಣ ೧೧ ಶು. ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇ ಯು ಸಿಂಹಸೋಣ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
9	ಶನಿ	೫	೪೪	ಭರಣೀ	೫೦	೨೫	* [illegible]
10	ರವಿ	೬	೪೭	ಕೃತ್ತಿಕಾ	೫೦	೨೬	
11	ಸೋಮ	೭	೪೭	ರೋಹಿಣೀ	೫೧	೨೬	
12	ಕುಜ	೮	೪೪	ಮೃಗಶಿರಾ	೫೪	೨೮	
13	ಬುಧ	೯	೪೬	ಆರ್ದ್ರಾ	೫೮	೨೯	
14	ಗುರು	೧೦	೫೦	ಪುನರ್ವಸು	೬೦	೩೦	
15	ಶುಕ್ರ	೧೧	೫೪	ಪುನರ್ವಸು	೪	೧	

Standard Furniture Co. Ltd
KALLAI, MALABAR
The BEST HOUSE for FURNITURE.

BRANCHES:—
Madras.—34—35, General Patters Road, Mount Road
Trichinopoly —11, Promenade Road, Cantt

NEW ARRIVALS.

Medicines.

Dr Schuessler's Twelve Tissue Remedies 5 gr. bot. As 4/—
Homoeopathy Medicines 5 gr bot. As. 5/—
Sugar of Milk Dr Schwabe's original bot 1lb Rs 2/—
Haarlem Oil—a world-renowned remedy As 8/-per phial
Dr Huele's New Curative Earth—Radium Cure Rs. 1/—per lb
Dr Schwabe's other special remedies are always in stock

Please consult us for your requirements.

Kanarese Book a Family Guide to Biochemistry Re 1/—
„ Domestic Homoeopathy Rs 1-4/—

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As. 2/6 Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc and stock—

Pipes and pipe fittings at cheap prices Coir Mats and Mattings
Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up to-date Machine in Standard and portable sizes

For Further particulars please write to —

Basel Mission Book & Tract Depository,
Mangalore, S K. or Hubli, S M.

ಕೀರ್ತಿಯುಂತ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮೋಹಕರವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್ ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು —
ಕುಂತಳ ಕೌಮುದಿ ತೈಲ,
ನೆಹಾಲೋಕ್ ಆಸ್ಪತ್ರೆ ಎದುರು, ಮಂಗಳೂರು

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟಿದ್ದರೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಹೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು.

ತೆರೆಯ ಮರೆಯಲ್ಲಿ

ಅಥವಾ

ಅಂತರಂಗ.

ಲೇಖಕರು.—ಶ್ರೀ। ಶಿವರಾಮ ಕಾರಂತರು.

೮ ತಂದೆಯ ಮಗುವೇ, ತಾಯಿಯ ಮಗುವೇ?

ನಿಜಕ್ಕೂ ತನಗೆ ಯೋಗ್ಯ ಪತ್ನಿಯನ್ನು ಆರಿಸುವುದು ಅವನ ಸ್ವಾತಂತ್ರ್ಯದಲ್ಲಿತ್ತು ಅವನ ತಂದೆಯು ಅವನಿಗೆ ಅಷ್ಟು ಸ್ವಾತಂತ್ರ್ಯವನ್ನು ಕೊಟ್ಟೇ ಇದ್ದನು ಅವನು ಮನೆಗೆ ಒಬ್ಬನೇ ಮಗನಾದುದರಿಂದ ಅವನ ಹಿತಯೋಚನೆಗಳಿಗೆ ವಿರುದ್ಧವಾಗಿ ವಿಶ್ವನಾಥರಾಯರು ಹೋಗುತ್ತಿರಲಿಲ್ಲ "ಮಗು ವ್ಯಾಸರಾಯ—ನನ್ನ ಆಕ್ಷೇಪವಿಲ್ಲ ನೀನು ಶ್ರೀಕಂಠ ರಾಯರ ಮಗಳನ್ನು ವರಿಸಿದರೂ ಸರಿಯೇ, ಇಲ್ಲವೆ ರಘುಪತಿ ರಾಯರ ಮಗಳನ್ನು ವರಿಸಿದರೂ ಸರಿಯೇ" ಎಂದು ಅವನಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು ಎಲ್ಲಾ ಮನೆಗಳಲ್ಲಿಯೂ ತರುಣರಿಗೆ ಈ ರೀತಿಯ ಸ್ವಾತಂತ್ರ್ಯವು ದೊರೆಯುತ್ತದೆಂದು ನಾವು ಹೇಳುವುದಿಲ್ಲ ಆದರೆ ಕೆಲವರಲ್ಲಾದರೂ ದೊರೆಯುತ್ತದೆಂಬುದು ನಿಜ ಅದು ದೊರೆಯದೆ ಇದ್ದವರು ಹೆಣ್ಣು ಹುಡುಗಿಯರು ಮಾತ್ರ ಅವರಿಗೂ ಅದನ್ನು ಕೊಟ್ಟರೆ ಪ್ರಪಂಚವೇ ತಲೆಕೆಳಗಾದೀತೆಂದು ನಮ್ಮ ಹಿರಿಯರು ತಿಳಿಯುತ್ತಾರೆ ಪ್ರಾಯಶಃ ಹಿಂದೆ ಇನ್ನೇ ಹಾಗಿದ್ದಿರಬೇಕು ಪಾತಾಳ ಲೋಕದಲ್ಲಿ ಹಿಂದಿನ ಕಾಲದಲ್ಲಿ ಜನರಿದ್ದರೆನ್ನುವರಲ್ಲ ಅದು ಪ್ರಾಯಶಃ ಭೂಮಿಯು ಸಮತೋಲವು, ಸ್ತ್ರೀ ಸ್ವಾತಂತ್ರ್ಯದಿಂದ ತಪ್ಪಿ ಬಿದ್ದಿರಬೇಕು ಅದನ್ನು ಇನ್ನಾದರೂ ನಮ್ಮ ಹಿರಿಯರು ಸರಿಪಡಿಸುವುದು ಧರ್ಮವಲ್ಲವೇ

ತಂದೆಯ ಮಾತು ಪ್ರಬುದ್ಧ ವ್ಯಾಸಗೆ ತಿಳಿಯಿತು ಅವನೀಗ ಬಿ ಎ ಪಾಠ ಮಾಡುತ್ತಿರುವನು ಇಷ್ಟಿದ್ದು ಅವನಿಗೆ ತಿಳಿಯಲ್ಲವೇ? ಮುಂದೆ ಅವನು ಲಾಯರಿ ಓದನ್ನು ಕಲಿಯಲು ನಿಶ್ಚಯಿಸಿರುವನು ಆದರೆ ಬೆಂಬಲಕ್ಕೆ ಸ್ವಲ್ಪ ಮಾವನ ಮನೆಯವರಿದ್ದರೆ ಅನುಕೂಲವಿತ್ತು ಆದುದರಿಂದ ಅವನ ಒಲವು ರಘುಪತಿ ರಾಯರ ಮಗಳ ಕಡೆಗೆ ಬಿದ್ದಿತು ರೂಪದ ಮಟ್ಟಿಗೆ ಅವರ ಮಗಳು ಸುನಂದೆಯಾಗಲಿ, ಶ್ರೀಕಂಠರಾಯರ ಮಗಳು ನಂದಿನಿಯಾಗಲಿ ಇಬ್ಬರೂ ಸರಿಸಮರೇ ಇಷ್ಟೊಂದು ರಂಭೆಯರೂ ಅಲ್ಲ ಇತ್ತ ಅಷ್ಟೊಂದು ಕುರೂಪಿಯರೂ ಅಲ್ಲ ಆದರೆ ನಂದಿನಿಗೆ ಅಲ್ಪ ಸ್ವಲ್ಪ ಓದು ಇದ್ದಿತ್ತು ವಿಶ್ವನಿಂಘವ್ಯಾಸರು ಯಾವಾಗಲೂ ಅನ್ನುವುದುಂಟು—'ಹಾದ—ಸುನಂದೆಯು ಕಲಿತು ಮುನಸೀಫಿ ಮಾಡಬೇಕೇನು' ಎಂದು ಆದುದರಿಂದ ಅವಳಿಗೆ ಅ ಆ ದ ಮೇಲಿನ ಸರಸ್ವತೀ ಪ್ರಸಾದ ದೊರೆಯಲಿಲ್ಲ ನಂದಿನಿಯು ಮೆಟ್ರಿಕು ತನಕವೂ ಓದಿರುವಳಂತೆ ಆದರೆ ಅವಳನ್ನು ಮದುವೆಯಾಗದಿದ್ದುದಕ್ಕಾಗಿ ವ್ಯಾಸನು ಈಗಲೂ ಸಂತೋಷ ಪಡುತ್ತಾನೆ ಕಾರಣವಿಷ್ಟೆ ಅವಳ ಗಂಡನೂ ವ್ಯಾಸನಂತೆ ಈಗ ವಕೀಲನು—ಅವನೇ ಅನ್ನುತ್ತಿರುವನಂತೆ 'ದಿನಕ್ಕೆ ನಮ್ಮ ಮನೆಗೆ ಎಂಟು ಜನ ಅಡುಗೆಯವರು ಬೇಕು'—ಆ ದೃಷ್ಟಿಯಿಂದ ಸುನಂದೆಯು ಎಷ್ಟೋ ಲೇಸು ಮನೆಕೆಲಸದ ಯೋಚನೆ ಅವನಿಗಿಲ್ಲದಂತೆ ಮಾಡಿದ್ದಳು ಅಲ್ಲದೆ ಮಾವನ ಮನೆಗೆ ಬರುವಾಗ ಹೆಚ್ಚಿಲ್ಲದಿದ್ದರೂ ಅಲ್ಪ ಸ್ವಲ್ಪ ಧನಕನಕಗಳನ್ನೂ ತಂದಿದ್ದಳು ಇದರಿಂದಲೇ ವ್ಯಾಸನು ರಘುಪತಿರಾಯರ ಅಳಿಯನಾದುದು

ಸರಿ, ಅಳಿಯನಾದ ಮೂರನೆಯ ವರುಷದಲ್ಲಿಯೇ ಮಂಗಳೂರಿನಲ್ಲಿ ವಕಾಲತು ತೊಡಗಿದನು ಆದರೆ ತೊಡಗಿದ ನಕ್ಷತ್ರ ಚೆನ್ನಾಗಿಲ್ಲದುದರಿಂದಲೋ, ನಿಜ ಆ ರಾತ್ರಿ ಆಕಾಶಕ್ಕೆ ಚೆನ್ನಾಗಿ ಮೋಡ ಮುಸುಕಿತ್ತು, ಅವನಿಗೆ ವಕಾಲತಿಗಿಂತಲೂ ನಾಲ್ಕರಷ್ಟು ವಿರಾಮವಿತ್ತು ಇದಕ್ಕಾಗಿ ಅವನು ಚಿಂತಿಸುವಂತಿಲ್ಲ ಉಣ್ಣುವುದಕ್ಕೆ ಅಷ್ಟೊಂದು ಯೋಚನೆ ಮಾಡಬೇಕಿಲ್ಲವಿತ್ತು ಪಿತ್ರಾರ್ಜಿತ ಆಯವೂ ಸ್ವಲ್ಪವಿತ್ತು ಇವೆರಡು ಸೇರಿದರೆ ಅವನ ಮಟ್ಟಿಗೆ ತೊಡಕು ತೊಂದರೆಗಳಿಲ್ಲ ಅಂತೂ ಮಗನು ಸುಖಿಯಾಗಿರುವ ದಿನಗಳಲ್ಲಿಯೇ ವಿಶ್ವನಾಥ ರಾಯರು, ಸರಕಾರಿ ಪೆನ್ಶನ್ ಋಣವನ್ನು ಮುಗಿಸುವ ಮೊದಲೇ ಕಾಲವಾದರು ಅವರೀಗ ಇರುತ್ತಿದ್ದರೆ ನಿಜಕ್ಕೂ ಮಗನ ಕುಟುಂಬವನ್ನು ಕಂಡು ಆನಂದ ಪಡುತ್ತಿದ್ದರು.

ಸುನಂದೆಗೆ ಈಗ ಮೂರು ಮಂದಿ ಮಕ್ಕಳಿರುವರು ಎರಡು ಹೆಣ್ಣು, ಮೂರನೆಯದು ಗಂಡು ಸುನಂದೆಗೆ ಮಕ್ಕಳನ್ನು ಆಡಿಸುವುದೆಂದರೆ ಜೀವನಸಾರವಾಗಿತ್ತು. ಬೆಳಗಿನ ಮುಂಜಾನೆ ಏಳುವಳು—ಹಾಗೆ ಮುಸುರೆಯನ್ನು ತಿಕ್ಕಿ, ಮೋರೆಯನ್ನು ತೊಳೆದು, ದನವನ್ನು ಕರೆಯಲು ಹೋಗುವಳು ಅಷ್ಟಕ್ಕೆ ಏಳು ತಾಸು ಬಾರಿಸುವುದು ಅಲ್ಲಿಯ ಕೆಲಸ ಮುಗಿಯಿತೆಂದರೆ ಕಿರಿಯ ಮಗು, ಅದಕ್ಕಿನ್ನೂ ಆರು ತಿಂಗಳಾಗಿಲ್ಲ, ಕೂಗತೊಡಗುವುದು ನಮ್ಮ ವ್ಯಾಸನಿಗೆ ಬೆಳಗಿನ ಎಂಟೂವರೆ ಘಂಟೆಯ ತನಕ ನಿದ್ದೆ ಮಾಡುವುದು ನಿತ್ಯದ ನಿಯಮ ನಿದ್ದೆಯ ಕಾಲದಲ್ಲಿ ಎಳ್ಳಷ್ಟು ಸದ್ದಾಗ ಬಾರದು ಮಗುವೆಲ್ಲಾದರೂ ಕೂಗಿತೆಂದರೆ ಪ್ರಳಯ ಕಾಲದ ಸಿಟ್ಟು ಬರುವುದು ಅದಕ್ಕೇ ಸುನಂದೆಯು ಬೇಗ ಬೇಗನೆ ಮಲಗುವ ಮನೆಗೆ ಧಾವಿಸಿ ಚಿಕ್ಕ ಕೂಸನ್ನು ಎತ್ತಿ ಆಡಿಸುವಳು ಅಷ್ಟಕ್ಕೆ ಹಿರಿಯ ಕೂಸುಗಳಿಗೆ ಎಚ್ಚರವಾಗುವುದು ನಡುವಿನ ಕೂಸು ಹೆಣ್ಣು ಹುಡುಗಿ ಅದಕ್ಕೆ ಶರೀರದಲ್ಲಿ ಪಿತ್ತಪ್ರಾಣ ಅಧಿಕ. ಹೀಗಾಗಿ ಏತರಿಂದಲೋ ಏನೋ ಅಳುವುದು ಅದರ ಜೀವನದ ಏಕಮಾತ್ರ ಕೆಲಸವೆಂದು ಕಾಣುವುದು ಅದು ಶ್ರುತಿ ಹಿಡಿಯಿತೆಂದರೆ ಮನೆಯ ಸುತ್ತು ಒಂದು ಮೈಲು ದೂರದ ತನಕ ಕಾಗೆಗಳು ಸಹ ನಿಲ್ಲುವಂತಿರಲಿಲ್ಲ ಸುನಂದೆಯು ಅವಸರದಿಂದ ಕೈಮಗುವನ್ನು ಬಿಟ್ಟು ಈ ನಡುವಿನ ಕೂಸಿನ ಬಳಿಗೆ ಹೋಗಿ, ಅದನ್ನು ಸಮಾಧಾನ ಪಡಿಸಿ, ತಿಂಡಿಯನ್ನೋ ಆಟದ ಸಾಮಾನುಗಳನ್ನೋ ಕೊಟ್ಟು ಶಾಂತಗೊಳಿಸಲು ಯತ್ನಿಸುವಳು ಅಷ್ಟರಲ್ಲಿ ಕೈಮಗುವಿಗೆ ಅರ್ಧ ಸ್ತನಪಾನವಾದುದರಿಂದ ಅದು ಚೀರುವುದು ಸರಿ ಒಂದನ್ನು ಸಮಾಧಾನಪಡಿಸ ಹೋದರೆ ಇನ್ನೊಂದು ಬಾಯಿ ತೆರೆಯಿತು ವ್ಯಾಸನಾಗ ಮುಸುಕಿನೊಳಗಿನಿಂದಲೇ "ಅಯ್ಯೋ, ಎಲ್ಲಿ ಸತ್ತಿದ್ದೀಯಾ? ಮಗು ಕೂಗುವುದು ಕೇಳಿಸುವುದಿಲ್ಲವೇ?" ಎಂದು ಗದರಿಸುವನು ಇನ್ನೊಮ್ಮೆ ಅವನೇಳುವುದರೊಳಗಾಗಿ ಈ ಸಂತೆಯು ನಿಂತರಾಯಿತು, ಇಲ್ಲವಾದರೆ ಸುನಂದೆಗೆ ಬೇರೆ ಮಂಗಳಾರತಿ ಬೇರೆ ವಿಧದಲ್ಲಿ

ಪಾಪ, ಅವಸರದಿಂದ ಓಡಿ ಎರಡೂ ಮಕ್ಕಳನ್ನು ಹಿಡಿದು ಅಂಗಣಕ್ಕೆ ಹೋಗಿ ಅವುಗಳನ್ನು ಆಡಿಸುತ್ತ ನಿಲ್ಲುವಳು ಅಷ್ಟರಲ್ಲಿ ಜ್ಯೇಷ್ಠ ಪುತ್ರನು ಮೆಲ್ಲಗೆ ಹಾಸಿಗೆ ಯಿಂದೇಳುವನು ಆ ಹುಡುಗನಿಗೆ ಪುಸ್ತಕಗಳನ್ನು ಕಂಡರೆ ಕೋಪ ಎದ್ದೊಡನೆಯೇ ಅಲ್ಲಿ ಇಲ್ಲಿ ನೋಡುವನು ಏನಾದರೂ ಕಾಗದವು ಸಿಕ್ಕಿತೆಂದರೆ ಹರಿದು ಚೂರು ಮಾಡಿ ಚೆದರಿದರೆ ಅವನಿಗೆ ಆನಂದ ಒಂದು ದಿನ ತಂದೆಯು ರಾತ್ರಿ ಓದಿ ಮುಗಿಸಿದ ಕಾದಂಬರಿಯೊಂದು ಅವನ ಕೈಗೆ ದೊರೆಯಿತು ಅದನ್ನು ನಗುತ್ತ ಕಿತ್ತುಕೊಂಡು ತಂದನೇ ತಂದನೇ ಹರಿದು ನಾಲ್ಕು ದಿಕ್ಕಿಗೂ ಎಸೆದು ಚೆಲ್ಲಿಬಿಟ್ಟನು ಇಷ್ಟಾಗುವಾಗ, ವ್ಯಾಸನನ್ನು ಟೆನ್ನಿಸ್ ಆಟಕ್ಕೆ ಒಯ್ಯಲು ಒಬ್ಬರಲ್ಲ ಇಬ್ಬರು ಮಿತ್ರರು ಬರುವರು ವ್ಯಾಸನೆಂದರೆ ಟೆನ್ನಿಸಿನಲ್ಲಿ ಪ್ರವೀಣ ಹೀಗಾಗಿ ಅವನಿಗೆ ಆಟದ ಗೆಳೆಯರು ಬಲು ಮಂದಿ ಅವರು ಬಂದವರು ದಾಕ್ಷಿಣ್ಯ ಮಾಡದೆ—"ಏ ಮಹಾರಾಯ—ಏಳೋ ಘಂಟೆ ೯ ಘಂಟೆಯಿತು" ಎನ್ನುವರು ವ್ಯಾಸನು ಮೆಲ್ಲನೆ ಕಣ್ಣು ಒರಸುತ್ತ ಏಳುವನು ಬೆಳಕನ್ನು ಕಾಣುತ್ತಲೇ ಚಾ' ಸ್ಮರಣೆಯು ಅವನ ಧ್ಯಾನ '...ಎಲ್ಲಿ ಸತ್ತೆಯಾ ಚಾ ಆಗಿದೆಯೇ ...ಎರಡು ಕಪ್ ತಾ ನೋಡುವಾ" ಎನ್ನುವನು ಸುನಂದೆಯು ಅವಸರದಿಂದ ಮಕ್ಕಳನ್ನು ಅಲ್ಲೇ ಬಿಟ್ಟು ಅಡುಗೆ ಮನೆಗೆ ಓಡಿ ಸ್ಟವ್ ಹೊತ್ತಿಸಿ ಚಾ ಸಿದ್ಧತೆ ಮಾಡುವಳು ಅಂತು ರಾಯರು ಮುಖ ತೊಳೆಯುವುದರೊಳಗೆ— ಇವತ್ತು ಆಗುವುದೇ? ಎಂದು ಕೇಳುವರು ಅಂತು ಅವಸರದಿಂದ 'ಚಾ' ಮೇಜಿನ ಮೇಲೆ ಬರಲು, ಗೆಳೆಯರೊಂದಿಗೆ ಗಬಗಬನೆ ಅದರ ಪಾನವಾಗುವುದು. ಅದರಲ್ಲಿ ಸಕ್ಕರೆ ಕಡಿಮೆಯಾದರೆ, ಇಲ್ಲವೆ ರುಚಿ ಕಡಿಮೆಯಾದರೆ, ಗೆಳೆಯರ ಮುಂದೆಯೇ ಸಿಪ್ಪಲ್ಲಿ ಈ ರೀತಿಯ ಕಷಾಯ ಮಾಡಲು ಬಂದೀತೇ' ಎಂದು ಕೂಗಿ ಬಿಡುವನು.

ಚಾ ಪಾನವಾಗುವ ಗಳಿಗೆಗೆ ಸರಿಯಾಗಿ ಬಂದ ಗೆಳೆಯನು 'ಏನು ವ್ಯಾಸರಾವ್ ...ನಮ್ಮ ಮನೆಯಲ್ಲಿ ದನ ಕಟ್ಟುವುದು ಒಳಗೇ ಹೊರಗೇ' ಎಂದು ಕೇಳುವನು ವ್ಯಾಸರಾಯನ ಸೂಕ್ಷ್ಮ ಬುದ್ಧಿಗೆ ಅದರ ಅರ್ಥವು ಹೊಳೆದು 'ಸುನಂದಾ ಇಲ್ಲಿ ಬಾ' ಎಂದು ಕಟ್ಟಪ್ಪಣೆಯಾಗುವುದು ಬಂದೊಡನೆಯೇ 'ನಿನಗೆ ಕಣ್ಣಿದೆಯೆ'? ಎಂದು ಬಿದ್ದಿರಾಗದ ಚೂರುಗಳನ್ನು ತೋರಿಸಿ 'ಇಂದು ಸಂಜೆಯೊಳಗಾದರೂ ಒಮ್ಮೆ ಗುಡಿಸಿಬಿಡು' ಎನ್ನುವನು ಸುನಂದೆಯ ಮುಖವು ಹಿಮಗಡ್ಡೆಯಂತಾಗುವುದು

ಸರಿ, ಪತಿರಾಯರ ನಿರ್ಗಮನವಾಗಲು ಕಸ ತೆಗೆಯುವೆನೆಂದು ಯೋಚಿಸುವ ಗಳಿಗೆಯಲ್ಲಿ, ವ್ಯಾಸನಿಗೆ ಹಿಂದಿನ ದಿನ ಎರವಾಗಿ ತಂದ ಕಾದಂಬರಿಯ ನೆನಪಾಗಿ ತಿರುಗಿ ಬಂದು ಹುಡುಕಿದರೆ ಅದೆಲ್ಲಿ ಸಿಗಬೇಕು? ಎಲ್ಲಿಟ್ಟಿದ್ದೆಯೋ? ಈಗ ಓದಲಿಕ್ಕೆ ತೊಡಗಿದೆಯೇನು? ಎಂದು ರೇಗುವನು ಸುನಂದೆಯು 'ಏನು? ಎಂಥದು' ಎಂದು ಹುಡುಕುವಳು ಅದರ ಒಂದು ಹಾಳೆಯು ವ್ಯಾಸನ ಕಣ್ಣೆದುರಿಗೆ ಬಿದ್ದಿರುವುದನ್ನು ಕಂಡು ಅವನ ಆವೇಶವು ಒಂದಕ್ಕೆ ನೂರಾಗುವುದು 'ಅಲ್ಲಿ, ನೀನಾಯಿತು—ನಿನ್ನ—ಮಕ್ಕಳಾಯಿತು ಮನೆಯಲ್ಲಿ ಬಿದ್ದು ನೀನು ಮಾಡುವುದೇನು? ಒಂದು ಗಳಿಗೆ ಮಕ್ಕಳು ತಂಟೆ ಮಾಡದಂತೆ ನೋಡಬಾರದೇ?' ಎಂದು ಕಿಡಿಕಿಡಿಯಾಗಿ 'ಹೇಳಿ ಪ್ರಯೋಜನವಿಲ್ಲವೆಂದು' ತನ್ನ ದುರ್ದೈವವನ್ನು ಹಳಿದು ಹೊರಟರೆ ತಿರುಗಿ ಬರುವಾಗ ಹನ್ನೊಂದು ಗಂಟೆ ಬಾರಿಸುವುದು

ಅಷ್ಟರಲ್ಲಿ, ಚಿಕ್ಕ ಅಡುಗೆ ಮಾಡಿ, ಬಿಸಿನೀರು ಕಾಯಿಸಿ, ಮಕ್ಕಳಿಗೆಲ್ಲ ಉಣಿಸಿ ಮಲಗಿಸಿಬಿಡಬೇಕು ಊಟಕ್ಕೆ ಬರುವ ಗಳಿಗೆಯಲ್ಲಿ ಮಕ್ಕಳು ಚಿಲಿಪಿಲಿಯೆಂದರೆ ಅವುಗಳ ಗತಿ ಮುಗಿಯಿತು. ಅಂತು ಸುನಂದೆಗೆ ಬೇರೆ ಕೆಲಸವೇನು? ಮುನಸೂಫಿ ಇದೆಯೇ ಅಷ್ಟನ್ನು ಮಾಡಿ ಪತಿಗಾಗಿ ಕಾದಿರುವಳು ಅವನು ಬರುವಾಗ ಗೆಳೆಯನೊಬ್ಬನು ತಗಲಿಕೊಂಡು ಬಂದರೆ—ಇವರಿಬ್ಬರಿಗೆ ಬಡಿಸಿ ಅವರು ಹೊರಟು ಹೋದ ಬಳಿಕ, ತನಗಾಗಿ ಒಂದಿಷ್ಟು ಗಂಜಿಮಾಡಲು ನೀರಿರಿಸಿದರೆ ಆಯಿತು ಇದಕ್ಕೆ ಮೊದಲು ಊಟದ ಕಾಲದಲ್ಲಿ 'ನಳಪಾಕ' ಎಂಬ ಬಿರುದು ನಿತ್ಯವೂ ಬರುತ್ತಿತ್ತು ಅವಳ ಯತ್ನಕ್ಕೆ ಅಷ್ಟಾದರೂ ಪ್ರಶಂಸೆ ಬೇಡವೇನು?

ಸರಿ, ಇಷ್ಟೆಲ್ಲ ಕೆಲಸ ಮಾಡಿ ಒಂದು ನಿಮಿಷ ವಿಶ್ರಾಂತಿ ತೆಗೆದುಕೊಳ್ಳುವಾ ಎಂದು ಗೋಡೆಗೆ ಒರಗಿ ಕುಳಿತುಕೊಂಡರೆ— 'ಅಮ್ಮ ರಾಯರಿಗೆ' ಎನ್ನುವ ಒಬ್ಬ ಹುಡುಗನು ಬರುವನು ಅವಸರದಿಂದ ಎದ್ದು ತಿರುಗಿ ಒಲೆಯ ಮುಂದಕ್ಕೆ ಓಡಿ, ನೀರಿರಿಸಿ ಕಾಫಿ ಮಾಡಿ ಜತೆಯಲ್ಲಿ ಒಂದಿಷ್ಟು ತಿಂಡಿಯನ್ನು ತಯಾರಿಸಿ ಕಳುಹಿ ಕೊಡಬೇಕು ಈ ಅಮ್ಮನಿಗೆ ಆಲಸ್ಯ ಹೆಚ್ಚೆಂದು ಈಗೀಗ ಹುಡುಗನು ವೇಳೆಗೆ ಮೊದಲೇ ಬಂದು ಬಿಡುತ್ತಿದ್ದನು

ಉಪಹಾರದ ಜಂಜಡವು ಮುಗಿಯುವಾಗ ಮಕ್ಕಳ ಕುತ್ತೂರಿ ಹಿಡಿಯುವುವು ಅದರ ಮೊದಲೇ ಅವಕ್ಕೆ ತಿಂಡಿ ತಿನಸನ್ನು ಕೊಟ್ಟು ಆಡುತ್ತ ಕುಳಿತುಕೊಳ್ಳುವ ಎಂದರೆ, ಹಾಳಾದ ಸೂರ್ಯನು ಕೆಂಪಾಗಿ ಮುಳುಗಿ ಬಿಡುವನು ಸರಿ ರಾತ್ರಿಯ ಅಂಕವು ಬರುವುದು ಭೋಜನಾನಂದ ದಣಿದು ಬರುವುದರೊಳಗೆ ಒಂದು ಅಡಿಗೆ ಮಾಡಿ ಮಂದಿ ಮಕ್ಕಳಿಗುಣಿಸಿ ಅವುಗಳನ್ನು ಮಲಗಿಸಿ ಜೋ ಜೋ ಮಾಡುತ್ತ ಕುಳಿತರಾಯಿತು ವ್ಯಾಸನು ಕೋರ್ಟಿನಿಂದ ನೇರಾಗಿ ಟೆನ್ನಿಸು ಆಡಲು ನಡೆಯುವನು ಸಂಜೆ ಆಟ ಉಪಹಾರಾದಿಗಳು ಮುಗಿದು ಕ್ಲಬ್ಬಿಗೆ ಬಂದು ಅಲ್ಲಿನ ಬ್ರಿಜ್ ದಾಡ್ ಫಿಡ್ ಮಂಡಳದಲ್ಲಿ ಭಾಗವಹಿಸುವನು ಅದರಲ್ಲಿಯೂ ಅವನು ಮುಂದೆಯೇ ಅಲ್ಲಿಂದ ಅವರು ಎದ್ದು ಹೊರಡುವಾಗ, ಕ್ಲಬ್ಬಿನ ಪವಾನಕೋಪಿಷ್ಟರಿಗೆ ಆರಾರ ಸಿಪ್ಪೆಗಳಾಗುವುವು ಅಂತು ಅವರು ಕ್ಲಬ್ಬಿನ್ನ ವರಲ್ಲ ಎಂಟು ಬೇಸರದಿಂದ, ಎದ್ದು ರಾತ್ರಿ ಒಂಭತ್ತು, ಹತ್ತು ವರೆಯೊಳಗಾಗಿ ಗೃಹವನ್ನು ಸೇರುವರು ಬಂದೊಡನೆಯೇ ಸುನಂದೆಯು ಕಾಲನ್ನು ತೊಳೆಯಲು ಇಷ್ಟು ನೀರನ್ನು ಕೊಡುವಳು ಕಾಲನ್ನು ತೊಳೆದು ಬಸ್ಸೆಂದು ಊಟಕ್ಕೆ ಕುಳಿತುಕೊಳ್ಳುವನು ರಾತ್ರಿ ಊಟಕ್ಕೆ ಸುರುಮಾಡುವುದೆಂದರೆ ಸುನಂದೆಗೆ ಇಷ್ಟ ಅದನ್ನು ಉಣ್ಣುತ್ತಾ ವ್ಯಾಸನು ತನಗಿರುವ ಸಂಗೀತ ಪ್ರಾಜ್ಞತೆಯನ್ನು ಸಾರು ಹುಳಿಯ ಒಳಗೂ ನೀರು ಸಾರಿನ ಒಳಗೋ ...ಸಾರು ಹುರುಳಿಗಳಿರುವ ಸಂಸಾರದೊಳಗೋ' ಎಂದು ಹಾಡಿ ಸ್ವರಂದರದಾಸನನ್ನು ನಾಚಿಸುವನು ಸರಿ, ಅಂತು ಇಂತು ಊಟದ ಶಾಸ್ತ್ರ ಮುಗಿಯಲು ರಾಯರ ಸವಾರಿ ಆಫೀಸು ಕೋಣೆಗೆ ಬಂದು 'ಇಸಿಚೆಯರನ್ನು ಎಳೆದು ಅಂದಿನ ವರ್ತಮಾನ ಪತ್ರಿಕೆಗಳನ್ನು' ನಿಕಂದರ್ಭಗಳಿದ್ದರೆ ಅವುಗಳನ್ನೇ ಓದುತ್ತ ಕುಳಿತುಕೊಳ್ಳುವನು

ಸುನಂದೆಯು ತಾನು ಊಟಮಾಡಿ, ಅಡುಗೆ ಮನೆಯನ್ನು ಚೊಕ್ಕಟವಾಗಿರಿಸಿ ಬುಸ್ಸೆಂದು ಪತಿಸಾನ್ನಿಧ್ಯಕ್ಕೆ ಓಡುವಳು ಹಗಲೆಲ್ಲ ಮೌನದಿಂದ ಕಳೆದ ಅವಳು ಚಿಕ್ಕ ನಗುವನ್ನು ನಗುತ್ತ ಗಂಡನ ಬಳಿ ನಿಂತು ಅದೇನೋ ಯುದ್ಧವಾಗುತ್ತದಂತಲ್ಲಾ. ...ಏನು' ಎಂದ ವರ್ತಮಾನದ ಆಸೆಯಿಂದ ಬಾಯಿ ತೆರೆಯುವಳು ಅಂತು, ಒಂದಲ್ಲ ಒಂದನ್ನು ಕೇಳಿ ಪತಿಯ ಅಧ್ಯಯನದ ಭಂಗ ಮಾಡುವುದು ಅವಳ ಚಟವು ಒರಳು ಅದಕ್ಕೆ ವ್ಯಾಸನು ಸಿಟ್ಟಿನಿಂದ 'ಆಹುಣ ಯುದ್ಧವಾಗುತ್ತದೆ ಗಂಡಹೆಂಡರಲ್ಲಿ' ಎಂದು ಉತ್ತರವಿತ್ತರೆ, ಸುನಂದೆಯ ಸ್ವರ ಗಂಟಲೊಳಗೇ ಇಳಿಯುವುದು 'ಯುದ್ಧವಾಗುತ್ತದೆ' ಅಂದರೆ 'ಗಂಡಹೆಂಡಿರಲ್ಲ' ಎಂದು ಉತ್ತರ 'ಈಗ ಮಹಾತ್ಮಾಗಾಂಧಿ ಏನು ಮಾಡುತ್ತಾನೆ' ಅಂದರೆ ನನ್ನಂತೆ ಜೈಲಿನಲ್ಲಿದ್ದಾನೆ' ಎಂದು ಉತ್ತರ ...ತಂದೆಯವರು ನಾಲ್ಕು ದಿನಕ್ಕಾದರೂ ಮಕ್ಕಳನ್ನು ಕಟ್ಟಿಕೊಂಡು ಬಾ ಎಂದಿದ್ದಾರೆ' ಎಂದರೆ 'ಹಾದೇ ಭಾವ ಹೋಟೇಲು ಚೆನ್ನಾಗಿದೆ' ಎಂದು ಕೆಲವು ಬಾಣದಂತಹ ಉತ್ತರಗಳಿರುತ್ತಿದ್ದುವು ಅವುಗಳಿಂದ ತೃಪ್ತಿಯಾಗಿ ಸುನಂದೆಯು ತನ್ನ ಹಾಸಿಗೆಯ ಮೇಲೆ ಮಲಗಿಬಿಟ್ಟರೆ ಏಳುವಾಗ ಬೆಳಗ್ಗೆ ...ಎಂದು ಲೆಕ್ಕ! ಇಷ್ಟೆಲ್ಲಾ

(೧೪ನೇ ಪುಟಕ್ಕೆ ಮುಂದುವರಿಯುದು)

ನಿಮ್ಮೊಡನೆ ಯೋಚಿಸಲು

ಮಠಗಳ ವಿಷಯ ನೀವೇನೆನ್ನುವಿರಿ?

ನಿಮ್ಮೊಡನೆ ತರ್ಕಿಸಲು

ವಿಚಾರರಂಗವಿದು

(ಪ್ರತ್ಯುತ್ತರವನ್ನು ಸ್ವದೇಶಾಭಿಮಾನಿಯ—ವಿಚಾರರಂಗ ವಿಭಾಗಕ್ಕೆ ಎಂದು ಪ್ರತ್ಯೇಕ ಬರೆದುಕೊಳ್ಳಿರಿ)

ಸೂಚನೆ:—ಹಿಂದೂ ಸಮಾಜದ ಮಠಗಳ ವಿಚಾರವಾದ ಸವಿಸ್ತಾರ ಪ್ರಶ್ನಾವಳಿಯೊಂದನ್ನು ಇಲ್ಲಿ ಕೊಟ್ಟಿರುವೆವು. ನಮ್ಮ ವಾಚಕರಲ್ಲಿ ಆದಷ್ಟು ಹೆಚ್ಚಿನ ಜನರು ಇದಕ್ಕೆ ಪ್ರತ್ಯುತ್ತರವನ್ನು ಕೊಡುವರೆಂದು ನಂಬಿದ್ದೇವೆ. ಈ ಪ್ರಶ್ನಾವಳಿಯ ಪ್ರತಿಗಳನ್ನು ಈ ವಿಷಯದಲ್ಲಿ ಅನುಭವವಿರುವ ಹಲವರಿಗೆ ಕಳುಹಿಸಿದೆ. ಪ್ರತ್ಯುತ್ತರಗಳಲ್ಲಿ ವಿಚಾರಪರವಾದುದನ್ನು ಪ್ರಕಟಿಸುವೆವು. ಸ್ವಂತ ಅಪೇಕ್ಷೆಯಿಲ್ಲದೆ ಯಾರೊಬ್ಬರ ಹೆಸರನ್ನೂ ಪ್ರಕಟಿಸುವುದಿಲ್ಲವೆಂದು ಭರವಸೆಯನ್ನು ಕೊಡಬಲ್ಲೆವು. ಈ ವಿಚಾರರಂಗವು ಮುಗಿಯಲು, ಮುಂದೆ ಇನ್ನಿತರ ಪ್ರಶ್ನೆಗಳನ್ನು ತರ್ಕಿಸಬೇಕೆಂದಿರುವೆವು. ಸ್ವದೇಶಾಭಿಮಾನಿಯು ವಾಚಕರೊಂದಿಗೆ ಕೂಡಿ ಯೋಚಿಸುವುದೇ ಈ ವಿಚಾರರಂಗದ ಗುರಿ.

ಸಂಖ್ಯೆ	ಪ್ರಶ್ನೆ	ಉತ್ತರ	ಉತ್ತರಕ್ಕೆ ಸಮಾಧಾನ
1	ಹಿಂದೂ ಸಮಾಜದ ಮಠಗಳು—ಸಮಾಜದ ಅಧಿಕಾರದುವುಗಳೇ?—ಅಲ್ಲಿನ ಮಠಾಧಿಪತಿಗಳ ಅಧಿಕಾರದುವುಗಳೇ?		
2	ಈ ಮಠಗಳು ಏಕೆ ಉಂಟಾದುವು?		
3	ನಿಮ್ಮ ಪರಿಚಿತ ಮಠಗಳು ಯಾವುವು?		
4	ಅವನ್ನು ಯಾರು ಸ್ಥಾಪಿಸಿದರು?		
5	ಏಕೆ ಸ್ಥಾಪಿಸಿರಬಹುದು?		
6	ಧರ್ಮ ಪ್ರಚಾರವು ಸ್ಥಾಪಕರ ಉದ್ದೇಶವಾಗಿತ್ತೇ?		
7	ಹಾಗಿದ್ದರೆ ಯಾವ ಧರ್ಮವನ್ನು ಸಾರಲು ಅವರು ಹೊರಟರು?		
8	ಆಗಿನ ಕಾಲದಲ್ಲಿ ಅಂಥ ಧರ್ಮವನ್ನು ಸಾರುವ ಆವಶ್ಯಕತೆ ಏಕೆ ಇದ್ದಿತು?		
9	ಈಗಲೂ ಅದೇ ಪಂಥವನ್ನು ಸಾರಲು ಪ್ರಸಂಗ ಉಳಿದಿದೆಯೇ?		
10	ಇಂತಹ ಧರ್ಮ ಇಲ್ಲವೆ ಸಂಪ್ರದಾಯ ರಕ್ಷಣೆಗಾಗಿ ಮಠಗಳು ಸ್ಥಾಪಿತಗೊಂಡರೆ—ಅವುಗಳಲ್ಲಿ ಸನ್ಯಾಸಿಯರಿಗೆ ಏಕೆ ಪಟ್ಟ ಕಟ್ಟಿದರು?		
11	ಅವರಿಗಿಂತ ಗೃಹಸ್ಥರು ಹೇಗೆ ಧರ್ಮಪ್ರಚಾರಕ್ಕೆ ಅಯೋಗ್ಯರು?		
12	ಈ ಸನ್ಯಾಸಪಟ್ಟವನ್ನು ಹಿಂದಿನ ಮಠಸ್ಥಾಪಕರು ಪೂರ್ವಾಶ್ರಮದ ಪ್ರಥಮ ಜಾತಿಯವರಿಗೆ ಕೊಟ್ಟರು?		
13	ಅವರನ್ನೇ ಆರಿಸಲು ಏನು ಕಾರಣವಿದ್ದಿರಬಹುದು?		
14	ಆರಿಸಲ್ಪಟ್ಟ ಈ ಸ್ವಾಮಿಯವರ ಈಗಿನ ಉತ್ತರಾಧಿಕಾರಿಗಳಲ್ಲಿ ಅಂಥ ಲಕ್ಷಣಗಳು ಉಳಿದಿವೆಯೋ?		
15	ಉಳಿದಿರುವುದಾದರೆ ಯಾವುವು? ಇಲ್ಲವಾದರೆ ಯಾವುವು?		
16	ಈಗಿನ ಸನ್ಯಾಸ ಆಶ್ರಮಗಳನ್ನು ನೇಮಿಸುವ ಅಧಿಕಾರವು ಯಾರಿಗಿರಬೇಕು?—ಶಿಷ್ಯ ಕೂಟಕ್ಕೋ? ಆಳುವ ಸನ್ಯಾಸಿಗಳಿಗೋ?		
17	ಸನ್ಯಾಸಿಯರಿಗಿರುವುದಾದರೆ ಅವರು ಚಿಕ್ಕ ಮಕ್ಕಳನ್ನು ಪಟ್ಟಕ್ಕೆ ಆರಿಸುವುದು ನ್ಯಾಯವೆ?		
18	ಸನ್ಯಾಸವನ್ನು ಗ್ರಹಿಸಿದ ಮಾತ್ರಕ್ಕೆ, ಧರ್ಮಪ್ರಚಾರದ ಗುರುಗಳಾಗಲು ಅವರಿಗೆ ಯೋಗ್ಯತೆ ಬಂತೇ?		
19	ಧರ್ಮ ಪ್ರಚಾರಕ್ಕೆ, ವಿಶೇಷ ಶಾಸ್ತ್ರ ಪರಿಚಯವೂ ಜೀವನದ ಅನುಭವವೂ ಬೇಡವೇ?		
20	ಚಿಕ್ಕ ಪ್ರಾಯದ ಸನ್ಯಾಸಿಯರಿಗೆ ಈ ಅನುಭವ ಇದೆಯೇ?		
21	ನುರಿತ ಗೃಹಸ್ಥ ಧರ್ಮಿಗಳು ಏಕೆ ಈ ಪಟ್ಟಕ್ಕೆ ಅಯೋಗ್ಯರು?		
22	ಶಾಸ್ತ್ರಪರಿಚಿತರಾದ ಅಂಥ ಜನರು ಸಿಗರೇನು?		
23	ಮಠದ ಸನ್ಯಾಸಿಯರಿಗೂ, ಅದರ ಆಸ್ತಿ, ಭೂಮಿಗಳಿಗೂ ಏನು ಸಂಬಂಧ?		
24	ಸನ್ಯಾಸವು ಸಂಪತ್ತಿನಿಂದ ದೂರವಾಗಿರಬೇಡವೆ?		
25	ಆಡಂಬರದ ಉತ್ಸವಗಳೂ, ಊಟಗಳು ಹಬ್ಬ ದಿಬ್ಬಣಗಳು—ಧರ್ಮ ಪ್ರಚಾರಕ್ಕೆ ಎಷ್ಟು ಸಹಾಯ ಮಾಡುವುವು?		
26	ಈ ಮಠಸ್ಥಾಪಕರಾದ ಮೂಲ ಗುರುಗಳು ಈ ಹಬ್ಬ ದಿಬ್ಬಣಗಳನ್ನು ಎಣಿಸಿರಬಹುದೇ?		
27	ಅಲ್ಲವಾದರೆ, ಈಗ ಬಂದಿರುವ ಈ ಆಡಂಬರದ ಪೂಜೆಗಳು—ಹೇಗೆ ಉಂಟಾದುವು?		
28	ಸಮಾಜದ ಬೆಳವಣಿಗೆಗೆ ಸರಿಯಾಗಿ ಅವು ಉಂಟಾದುವೇ?		
29	ಈ ಬದಲಾವಣೆಗಳನ್ನು ನಿರ್ಣಯಿಸುವ ಅಧಿಕಾರವು ಯಾರದು?		
30	ಈ ಹಬ್ಬ ಮುಷ್ಟಿಗಳಿಗೆ ವ್ಯಯವಾಗುವ ವಿಶೇಷ ಸಂಪತ್ತು, ಇನ್ನಿತರ ರೀತಿಯಿಂದ ಸಮಾಜಕ್ಕಾಗಿ ವ್ಯಯವಾಗಬಾರದೇ?		
31	ಹಾಗಿದ್ದರೆ ಯಾವ ಹಾದಿಯನ್ನು ಸೂಚಿಸುವಿರಿ?		
32	ಪೂಜೆಯ ವಿಶೇಷ ವೆಚ್ಚಗಳಿಗೂ ಧರ್ಮತತ್ತ್ವಗಳಿಗೂ ಏನು ಸಂಬಂಧವಿದೆ?		
33	ಧರ್ಮಕ್ಕೆ ಭಕ್ತಿ ಮುಖ್ಯವೇ, ಅಲ್ಲವೆ?		
34	ಹಾಗಿದ್ದರೆ—ದ್ರವ್ಯವ್ಯಯಕ್ಕೆ ಯಾವ ಸ್ಥಾನವಿದೆ?		
35	ಮಠದ ಸಂಪತ್ತನ್ನು ಯಾರು ಆಡಳಿತೆ ನೋಡಬೇಕು? ಸಮಾಜವೇ, ಗುರುಗಳೇ?		
36	ಧರ್ಮ ನಿರತರಾಗಿರಬೇಕಾದ ಗುರುಗಳು ಅದರ ಲೌಕಿಕದಲ್ಲಿ ಕೈಹಾಕುವುದು ಯೋಗ್ಯವೇ?		
37	ಈ ನಿಮಿತ್ತದಿಂದ ಅವರು ಭಿಕ್ಷೆಗೆ ಹೊರಟು ಸಾವಿರಾರು ರೂಪಾಯಿಗಳನ್ನು ಎಂಥ ಬಡಗಾಲದಲ್ಲೂ ದೇವರ ಹೆಸರಿನಿಂದ ಕಾಣಿಕೆ ಬೇಡುವುದು ನ್ಯಾಯವೆ?		
38	ಕಾಣಿಕೆ ಕೊಡಲಾರದವನು ಅಧರ್ಮಿಯೇನು?		
39	ಮಠವಿಲ್ಲದ ಜಾತಿಗಳಿಲ್ಲವೇ?		
40	ಅವುಗಳ ಅಭಿವೃದ್ಧಿಗೂ ಈ ಮಠಗಳಿರುವ ಜಾತಿಗಳ ಅಭಿವೃದ್ಧಿಗೂ ಏನು ಅಂತರ ಕಾಣುತ್ತಿರಿ?		
41	ಮಠವಿಲ್ಲದವರು, ತಮ್ಮ ಸಮಾಜದ ವ್ಯವಸ್ಥೆಯ ನಿರ್ವಾಹವನ್ನು ಹೇಗೆ ಮಾಡುತ್ತಾರೆ?		
42	ಅವರಂತೆ ಮಠವಿರುವವರೂ ಮಾಡಲು ಬರುವುದಿಲ್ಲವೇ?		
43	ಅದರಿಂದ ಮಠಕ್ಕಾಗಿ ವ್ಯಯವಾಗುವ ಹಣವು ಉಳಿಯುವುದಿಲ್ಲವೇ?		
44	ಈಗ ಕೌನ್ಸಿಲಿನ ಮುಂದೆ ಬಂದಿರುವ ಮಠದ ಬಿಲು ಬೇಕೇ ಬೇಡವೆ?		
45	ಈಗಿನ ಮಠಗಳು ಸರಿಯಾಗಿ ತಮ್ಮ ಆರ್ಥಿಕ ಆಡಳಿತೆ ಮಾಡುತ್ತಿವೆಯೋ?		
46	ಅವಕ್ಕೆ ವಿವಿಧ ಉಂಬಳಿಗಳನ್ನು ಕೊಟ್ಟ ಉದ್ದೇಶ ಈಗ ಪೂರೈಸಲ್ಪಡುತ್ತಿದೆಯೋ?		
47	ಉಂಬಳಿಗಳ ಉದ್ದೇಶವು ಉಳಿದಿದೆಯೇ?		
48	ಉಳಿದಿಲ್ಲವಾದರೆ, ಉಂಬಳಿಯನ್ನು ಏಕೆ ವಿನಿಯೋಗಿಸಬೇಕು?		
49	ಹೊಸ ಬಿಲಿನಂತೆ—ಒಬ್ಬ ಕಾರ್ಯನಿರ್ವಾಹಕನು ನೇಮಿಸಲ್ಪಟ್ಟರೆ ಹೇಗಾದೀತು? ಮಠದ ಕಾರ್ಯಕ್ಕೆ ಹಾನಿಯಿದೆಯೇ?		
50	ಸಮಾಜದ ಸ್ವಾತಂತ್ರ್ಯಕ್ಕೆ ತೊಡಕೇ?		
51	ಸ್ವಾಮಿಯರ ಆರ್ಥಿಕ ಸ್ವಾತಂತ್ರ್ಯಕ್ಕೆ ತೊಡಕೇ?		
52	ಸ್ವಾಮಿಯರಿಗೆ ಬರೇ ಧಾರ್ಮಿಕ ಸ್ವಾತಂತ್ರ್ಯವಿದ್ದರೆ ಸಾಲದೇನು?		
53	ಮಠಗಳನ್ನೇ ಇಲ್ಲದಂತೆ ಮಾಡಿದರೆ ಹೇಗೆ?		
54	ಆಗ ಅವುಗಳ ಆಸ್ತಿಪಾಸ್ತಿಗಳು ಯಾರನ್ನು ಸೇರಬೇಕು?		
55	ಆಗ ಧಾರ್ಮಿಕ ವಿಚಾರಗಳನ್ನು ಜನರು ಬಿಟ್ಟೇ ಬಿಟ್ಟಾರೇನು?		
56	ಸಮಾಜವು ಕಾಲಕ್ಕೆ ಸರಿಯಾಗಿ ಬೆಳೆಯುವ ಮಠಗಳನ್ನು ತೆಗೆಯುವುದರಿಂದ ಅನುಕೂಲವಾಗದೇನು?		
57	ಈಗಿನ ಮಠಗಳೂ, ಅಂಥ ಕೂಟಗಳೂ ಧರ್ಮವನ್ನು ರಕ್ಷಿಸುತ್ತಿವೆಯೇ? ಅಥವ ಕಟ್ಟಳೆಗಳನ್ನು ಕಾಯುತ್ತವೆಯೆ?		
58	ಕಟ್ಟಳೆಯು ಧರ್ಮವೆ?		
59	ಕಟ್ಟಳೆ ಮುರಿದವನಿಗೆ ದಂಡನೆ ಏಕೆ?		
60	ಹಾಗಿದ್ದರೆ—ಧರ್ಮಕ್ಕೆ (ಸತ್ಯ ಅಹಿಂಸೆ ಇತ್ಯಾದಿ) ನೇಮಗಳಿಗೆ ವಿರುದ್ಧವಾಗಿ ಆಚರಿಸಿದವನಿಗೆ ಮಠಗಳು ಏನು ಮಾಡಿವೆ?		
61	ಈ ಎಲ್ಲ ಪ್ರಶ್ನೆಗಳು ಕ್ರಿಸ್ತೀಯರ ಗುರುಮಠಗಳಿಗೆ ಅನ್ವಯಿಸುವುದಿಲ್ಲವೇನು? ಯಾವ ವಿಧದಿಂದ ಅನ್ವಯಿಸುವುವು? ಯಾವ ವಿಧದಿಂದ ಅನ್ವಯಿಸುವುದಿಲ್ಲ?		

(ಇನ್ನೂ ಕೆಲವು ಪ್ರಶ್ನೆಗಳನ್ನು ಆವಶ್ಯವಿದ್ದರೆ ತಮ್ಮ ಪ್ರತ್ಯುತ್ತರಗಳನ್ನು ಕಂಡು ಕೊಡಲಾಗುವುದು)

> ಶಾಸ್ತ್ರ, ಪುರಾಣ, ನೀತಿ, ವಿಜ್ಞಾನ, ತತ್ವ, ಸುಖ ಎಲ್ಲವೂ ಒತ್ತಟ್ಟಿಗಿರಲಿ— ಅವು ಬರಿಯ ಜಳ್ಳು. ಪ್ರೇಮ— ಪ್ರೇಮವೆಂಬುದೊಂದೇ ಅತ್ಮದ ಮಣಿ.
>
> ಸ್ವಾಮಿ ವಿವೇಕಾನಂದ

ಸ್ಫುಟವಿಚಾರಗಳು

ನಮ್ಮ ಜಿಲ್ಲಾ ಬೋರ್ಡು ಸೋದ್ತಿ ಎತ್ತಿ—

ಹಣಸಂಚಯ ಮಾಡಿ, ಆ ಹಣದಿಂದ ಶಾಲೆಗಳನ್ನೂ ಸೇತುವೆಗಳನ್ನೂ ಕಟ್ಟಿಸಬೇಕೆಂದು ಕಳೆದ ಶನಿವಾರ ನಡೆದ ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯಲ್ಲಿ ಶ್ರೀ. ಎಮ್. ರಾಮಕೃಷ್ಣ ಪೂಂಜರು ತಂದ ಸೂಚನೆಯು ಬಹುಮತದಿಂದ ತಿರಸ್ಕರಿಸಲ್ಪಟ್ಟಿತು. ತಿಂಗಳೊಂದಕ್ಕೆ ನಮ್ಮ ಜಿಲ್ಲೆಯಿಂದ ೩೦,೦೦೦ ರೂಪಾಯಿಗಳು ಗೋವೆಗೆ ಹೋಗುತ್ತವೆಂಬುದು ಶ್ರೀ ಪೂಂಜರ ವಾದದ ಒಂದಂಶ. ವಾದವೇನೋ ವಾಸ್ತವವೆ. ಅದರೆ ರೂ ೩೦,೦೦೦ವನ್ನು ನಮ್ಮ ಜಿಲ್ಲಾ ಬೋರ್ಡಿಗೆ ತಡೆಯುವಷ್ಟು ಸಾಮರ್ಥ್ಯವಿದೆಯೊ,—ಅದು ಒಂದು ವೇಳೆ ಸೋದ್ತಿಯ ಈ ಸೂಚನೆಯನ್ನು ಅನುಮೋದಿಸಿದರೆ ಗೋವೆಯ ಕಂಪೆನಿಗಳು ಸಂಚಯಿಸುವ ಮೊತ್ತದಷ್ಟನ್ನು ಗಳಿಸಲು ಸಾಧ್ಯವಿದೆಯೋ—ಎಂಬ ವಿಚಾರಗಳನ್ನು ಪರಿಶೀಲಿಸಿದರೆ, ಶ್ರೀ ಪೂಂಜರ 'ಮೂರು ವರ್ಷಗಳ ಅವಧಿ'ಯಲ್ಲಿ ಈ ಸೋದ್ತಿಯು ಎಷ್ಟಕ್ಕೂ ಗೋವೆಯ ಕಂಪೆನಿಗಳಷ್ಟು ಶಕ್ತಿಯುತವಾಗಲಾರದೆಂದು ನಿಸ್ಸಂದೇಹವಾಗಿ ಹೇಳಬಹುದು. ಗೋವೆಯ ಕಂಪೆನಿಗಳು ಇಷ್ಟೊಂದು ಪ್ರಚಾರವಾಗಬೇಕಾದರೆ ಅವುಗಳು ಕೆಲವು ವರ್ಷಗಳ ತನಕ ಚೆನ್ನಾಗಿ ದುಡಿಯಬೇಕಿತ್ತು. ಜನರಲ್ಲಿ ವಿಶ್ವಾಸವನ್ನು ನೆಲೆಯೂರಿಸುವ ಸಾಹಸಕ್ಕೆ ಎದೆಯೊಡ್ಡಬೇಕಾಗಿತ್ತು. ಅಂಥ ಸಾರ್ವಜನಿಕ ವಿಶ್ವಾಸವು ಥಟ್ಟನೆ ತಲೆದೋರಲಾರದು. ನಮ್ಮವರು ಈ ಸೋದ್ತಿಯ ಕಂಪೆನಿಯನ್ನು ಸ್ಥಾಪಿಸಿದರೆ ಒಂದು ಲಕ್ಷ, ಅರ್ಧ ಲಕ್ಷ, ೨೫,೦೦೦ ರೂಪಾಯಿಗಳ ಇಷ್ಟು ದೊಡ್ಡ ಬಹುಮಾನಗಳನ್ನು ಕೊಡಲು ಸಮರ್ಥರಾಗುವರೆಂಬ ಧೈರ್ಯವಿದೆಯೇ? ಗೋವೆಗೆ ಹೋಗುವ ದ್ರವ್ಯವನ್ನು ಇನ್ನು ನಿಲ್ಲಿಸಲು ನಮಗೆ ಸಾಧ್ಯವಿಲ್ಲ. ತಡೆಯುವ ಕೆಲಸಕ್ಕೆ ಸರಕಾರವೇ ಕೈಹಚ್ಚಬೇಕು. ಗೋವೆಯ ಸೋದ್ತಿಗೆ ನಮ್ಮ ಜಿಲ್ಲೆಯವರು ಹಣವನ್ನು ಹಾಕಬಾರದೆಂದು ಸರಕಾರವು ನಿರ್ಬಂಧಿಸದ ವಿನಹಾ ಜಿಲ್ಲಾ ಬೋರ್ಡು ಸೋದ್ತಿಗೆ ಮನಸ್ಸು ಮಾಡಿದರೆ ಜಿಲ್ಲೆಯವರ ದುಡ್ಡು ಎರಡು ವಿಧಗಳಿಂದ ಕೈತಪ್ಪಿ ಹೋಗುವಂತಾಗಿ, ಜನರಲ್ಲಿ ಬಡತನವು ಹೆಚ್ಚಿದಂತಾಗುವುದಲ್ಲದೆ ಅವರನ್ನು ಜುಗಾರಾಟಕ್ಕೆಳೆದುತಂದಂತೆಯೂ ಆಗುವುದು.

ಹಿಂದೂಸ್ಥಾನೀ ಸೇವಾದಲವು ಕ್ರಾಂತಿಕಾರಕ ಸಂಸ್ಥೆಯೆಂದು—

ಮೊನ್ನೆ ಗೃಹಮಂತ್ರಿಗಳು ಶಾಸನಸಭೆಯಲ್ಲಿ ಸ್ಪಷ್ಟವಾಗಿ ಹೇಳಿದರೆಂಬುದರಿಂದ ರಾಷ್ಟ್ರೀಯ ಸಂಸ್ಥೆಗಳೆಂದರೆ ಸರಕಾರಕ್ಕೆ ಎಷ್ಟು ಮಮತೆಯಿದೆ ಎಂಬುದು ತಿಳಿದುಬರುತ್ತದೆ. ತಾನು ಹಾಗೆಂದೊಡನೆ ಆ ಮಾತಿನ ನಿರೂಪಣೆಯನ್ನು ಯಾರೂ ಕೇಳುವುದಿಲ್ಲವೆಂಬ ಧೈರ್ಯದಿಂದ ಗೃಹಮಂತ್ರಿಗಳು ಇಂತಹ ದಿಟ್ಟತನದಿಂದ ನುಡಿದಿರಬೇಕು. ಹಿಂದೂಸ್ಥಾನೀ ಸೇವಾದಲವು ಸತ್ಯ—ಅಹಿಂಸೆ—ಮತ್ತು ಪ್ರೇಮಗಳ ತತ್ವಗಳನ್ನು ದೃಷ್ಟಿಪಥದಲ್ಲಿಟ್ಟು ದೇಶಕ್ಕಾಗಿ ರಾತ್ರಿಂದಿವಸ ದುಡಿಯುವ ಸಂಸ್ಥೆಯಾಗಿರುವುದಲ್ಲದೆ, ಅದು ಕ್ರಾಂತಿಕಾರಕವಾಗಿ ವರ್ತಿಸಿದ ಉದಾಹರಣೆಯು ಎಲ್ಲಿದೆ, ಯಾವುದಿದೆಯೆಂದು ಭಾರತೀಯರು ಗೃಹಮಂತ್ರಿಗಳೊಡನೆ ವಿಚಾರಿಸುವುದು ಅತ್ಯಗತ್ಯವಿದೆ. ಹಿಂದೂಸ್ಥಾನೀ ಸೇವಾದಲದ ಮುಖಂಡರಾದ ಡಾ॥ ಹರ್ಡೀಕರರು ಸುಮ್ಮಗಿರುವರೇ? ಅಥವಾ ಈ ಬಗ್ಗೆ ಪ್ರಚಂಡ ನಿಷೇಧದಿಂದ ಈ ಉದ್ಧಟತನಕ್ಕೆ ಸದುತ್ತರವೀಯುವರೇ?—ನೋಡಬೇಕಾಗಿದೆ. ಈ ಬಗ್ಗೆ ಪ್ರತಿಯೊಬ್ಬ ದೇಶೀಯನೂ ತನ್ನ ಮನಃಸಂತಾಪವನ್ನು ಸರಕಾರಕ್ಕೆ ಸೂಚಿಸಿ, ಸರಕಾರದ - ಮುಖಂಡರು ಅನಾವಶ್ಯವಾಗಿ ದೇಶಕ್ಕೆ ಮಾಡುವ ಅಪಮಾನವನ್ನು ತಡೆಯಬೇಕಾಗಿದೆ.

ಶಿವಾಜಿಯು ಸಂಕುಚಿತ ಬುದ್ಧಿಯುವನಿದ್ದನೇ?

ಮೊನ್ನೆ ಇಲ್ಲಿಯ ಗವರ್ನಮೆಂಟ್ ಕೊಲೆಜಿನಲ್ಲಿ ಶಿವಾಜಿಯ ತೈಲಚಿತ್ರವೊಂದನ್ನು ಅನಾವರಣ ಮಾಡುತ್ತಾ ನಿವೃತ್ತ ಸರಕಾರೀ ಅಧಿಕಾರಿಯೊಬ್ಬರು ಶಿವಾಜಿಯನ್ನು ನಿಂದಿಸಿ ಭಾಷಣ ಮಾಡಿದರೆಂದು ತಿಳಿದುಬರುತ್ತದೆ. ನಿಜವಾಗಿಯೂ ಆಶ್ಚರ್ಯವಿದು! ಭಾಷಣಕರ್ತರ ಆರೋಪಗಳಿಗೆ, ಮಹಾರಾಜ ಶಿವಾಜಿಯು ಅರ್ಹನಿರುವನೇ? ಅವನು ಮುಸಲ್ಮಾನರ ಹಗೆಯಾಗಿದ್ದನೇ? ಪಕ್ಷಪಾತಿಯಾಗಿದ್ದನೇ? ಅವನನ್ನು ದೂರಿದವರು ಶಿವಾಜಿಯ ಚರಿತ್ರೆಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ,—ಸಾವಧಾನದಿಂದ ಓದಿರುವರೇ? ಅಂತಹ ದುಷ್ಟನಾದ ಶಿವಾಜಿಯ ಚಿತ್ರದ ಅನಾವರಣದ ಕೆಲಸವು ಈ ಮಹನೀಯರಿಗೇಕೆಬೇಕಿತ್ತು? ಶಿವಾಜಿಯು ಲೂಟಿಗಾರನಂತೆ ಅವನು ದುಡ್ಡಿನ ಲೂಟಿಗಾಗಿ ಲೂಟಿಯನ್ನು ಮಾಡಲಿಲ್ಲ. ಧರ್ಮದ ಲೂಟಿಯನ್ನು ತಡೆಯುವ ಲೂಟಿಗೆ ಕೈಕೊಟ್ಟಿದ್ದನು. ಶ್ರೀಯುತರು ಶಿವಾಜಿಯನ್ನು ನಿಂದಿಸಿದುದರಿಂದ, ಅವನ ಚಿತ್ರವನ್ನು ಕೊಲೆಜಿನೊಳಗೆ ಇಡಿಸಿದ ಶಾಲಾಧಿಕಾರಿಗಳನ್ನು ದೂಷಿಸಿದಂತಾಯಿತು. ಪೂನೆಯ ಲೊಯ್ಡ್ ಬ್ರಿಜ್‌ನಲ್ಲಿ ಶಿವಾಜಿಯ ಪ್ರತಿಮೆಯನ್ನು ಅನಾವರಣ ಮಾಡಿದ ಪ್ರಿನ್ಸ್ ಒಫ್ ವೇಲ್ಸರಿಗಿಂತಲೂ ಈ ಮಹಾ 'ಯರು ಘನವಂತರೆರಬಹುದು. ಇರಲಿ, ಇದು ನಾಲಿಗೆಯ ಕ್ರಿಯೆಯಲ್ಲವೇ? ಕ್ಷಮ್ಯವೇ ಎನ್ನುವ

ಸಯಾಂ ದೇಶದ ಅರಸರು ಪಟ್ಟ ಬಿಟ್ಟುದರಿಂದ

ನಾವು ತಿಳಿಯಬೇಕಾದುದೇನ? ಜಗತ್ತಿನಲ್ಲಿ ಧರ್ಮಕ್ಕೆ ಸಂಕಟ ಬಂದಿದೆ. ಲೌಕಿಕ ವ್ಯವಹಾರದಲ್ಲಿ ಧರ್ಮವನ್ನು ಆಧರಿಸಿಕೊಂಡಿದ್ದರೆ ಕಷ್ಟಗಳ ತಪ್ಪುವಂತಿಲ್ಲ. ಜಗತ್ತಿನಲ್ಲಿ ನ್ಯಾಯವು ಮಾಯವಾಗಿದೆ. ಸಯಾಂ ರಾಜರು ಯಾವ ಕಾರಣಗಳಿಗಾಗಿ ಪಟ್ಟವನ್ನು ತೊರೆದರೋ ಅವೇ ಕಾರಣಗಳು ಇತರ ರಾಷ್ಟ್ರಗಳಲ್ಲಿಯೂ ಇವೆ. ಆದರೆ ಸಿಂಹಾಸನವನ್ನು ತೊರೆದವರೆಷ್ಟು ಮಂದಿ? ತಮ್ಮ ಅಧಿಕಾರವನ್ನು ತಾವು ನಡೆಸಲಾರದೆ, ನಿರ್ಬಂಧಿತರಾಗಿರುವ ಅರಸರುಗಳು ತಮ್ಮ ವ್ಯಕ್ತಿತ್ವವನ್ನು ತಿಳಿದು ಧೈರ್ಯದಿಂದ ಧರ್ಮವನ್ನು ಅರಿತ ಉದಾಹರಣೆಯಿಲ್ಲದೆ? ಪ್ರಜಾಧಿಪೋಷಕರು ಸಿಂಹಾಸನವನ್ನು ತೊರೆದುದು ಕೇವಲ ಧಾರ್ಮಿಕ ಪ್ರೇರಣೆಯಿಂದ. ಅಂತಹ ಸದ್ಬುದ್ಧಿಯನ್ನು ಕಳೆದುಕೊಂಡ ರಾಷ್ಟ್ರದ ಮುಂದಿನ ಗತಿಯೇನು?

ಸರ್ ಜೋಸೆಫ್ ಭೋರರ ಉಪದೇಶ

ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನಿಂದ ನಿವೃತ್ತಿಹೊಂದಲಿರುವ ಸರ್ ಜೋಸೆಫ್ ಭೋರರಿಗೆ ಕೇಂದ್ರ ಶಾಸನ ಸಭೆಯ ಯುರೋಪಿಯನ್ ಪಂಗಡದವರು ವಿದಾಯ ಸತ್ಕಾರವನ್ನು ತಾ ೩ನೇ ದಿನ ಮಾಡಿದರು. ಆ ವೇಳೆ ಭೋರರು ಯುರೋಪಿಯನರಿಗೆ ಉಪದೇಶವೀಯುತ್ತಾ—"ಬ್ರಿಟಿಷರು ಹಿಂದೂಸ್ಥಾನದಲ್ಲಿ ಅನವರತವೂ ನೆಲೆನಿಲ್ಲಬೇಕಾಗುವ ಕಾಲ ಬಂದಗಿದೆ. ನಾವು ಹೋದರೆ ನಮ್ಮ ಮಕ್ಕಳು ಇಲ್ಲಿಗೆ ಬರಬೇಕಾಗಿದೆ. ಅಂತೂ, ಬ್ರಿಟಿಷರು ಹಿಂದೂದೇಶದಿಂದ ಬೇರೆಯಾಗಿರಲು ಸಾಧ್ಯವಿಲ್ಲ. ಹೀಗಿರುವಾಗ ನಾವು ಹಿಂದೂದೇಶದ ಮೇಲ್ಮೆಯನ್ನೇ ಹಾರೈಸಬೇಕು. ನಮ್ಮ ಜೀವಮಾನವನ್ನು ಇಲ್ಲೇ ಕಳೆಯಬೇಕೆಂದಿರುವಾಗ ನಾವು ಈ ದೇಶದ ಅಭಿವೃದ್ಧಿಯನ್ನು ಲಕ್ಷಿಸಿ ಇದನ್ನು ಸ್ವನಾಡೆಂದು ತಿಳಿಯಬಾರದೇ?" ಎಂದು ಮುಂತಾಗಿ ಹೇಳಿದರು. ಇವೆಲ್ಲ ಮಾತಿನ ಉಪಚಾರ. ಬ್ರಿಟಿಷರು ಕ್ರಿಯಾತ್ಮಕವಾಗಿ, ಮಾನಸಿಕವಾಗಿ ಹೇಗಿರುವರೆಂದು ಪ್ರತಿಯೊಬ್ಬ ಭಾರತೀಯನೂ ತಿಳಿದಿರುವನು. ಹಿಂದೀಯರು ಹಿಂದೀಯರೆ. ಬ್ರಿಟಿಷರು ಬ್ರಿಟಿಷರೇ. ಭಾರತವು ಭಾರತವೇ. ಇಂಗ್ಲಾಂಡು ಇಂಗ್ಲಾಂಡೇ. ಎಂದಿನ ತನಕ ಬ್ರಿಟಿಷರು ಬ್ರಿಟಿಷರೋ ಅಂದಿನ ತನಕ ಅವರು ಹಿಂದೂದೇಶದ ಶ್ರೀಮಂತಿಕೆಯನ್ನು ಪ್ರಮುಖವೆಂದೆಣಿಸುವುದು ತೀರ ಅಸ್ವಾಭಾವಿಕ.

ದಿವಂಗತ ಅಮ್ಮೆಂಬಳ ಉಪೇಂದ್ರ ಪೈ,
(ಬಿ. ಎ. ಸಿ. ಸಿ ಎಸ್.)

ನಮ್ಮ ಜಿಲ್ಲೆಯ ಗೌಡಸ ರಸ್ವತ ಬ್ರಾಹ್ಮಣ ವೃಂದದಲ್ಲಿ, ಜನ್ಮವಿತ್ತು, ಅನುಪಮ ಕೀರ್ತಿಯನ್ನು ಪಡೆದು, ಮಂಗಳೂರಿನ ಪ್ರಮುಖ ಶಾಲೆಗಳಲ್ಲೊಂದಾದ ಕೆನರಾ ಹೈಸ್ಕೂಲನ್ನು ಸ್ಥಾಪಿಸಿ ಸಾರ್ವಜನಿಕ ವಿದ್ಯಾದಾನಕ್ಕನುಗ್ರಹವಿತ್ತು, ಪ್ರಮುಖ ಬೇಂಕುಗಳಲ್ಲೊಂದಾದ ಕೆನರಾ ಬೇಂಕನ್ನು ಸ್ಥಾಪಿಸಿ, ವರ್ತಕ ಸಂಘದವರಿಗೆ ತುಂಬಾ ಅನುಕೂಲತೆಗಳನ್ನೊದಗಿಸಿ ಕೊಟ್ಟು ಅಖಿಲಭಾರತದಲ್ಲಿ ಸ್ವಜಾತಿ—ವಿಜಾತಿ ಹಳೇ ವಿದ್ಯಾರ್ಥಿವೃಂದದಿಂದಲೂ ಅವರಗೌರವವನ್ನು ಹೊಂದಿದ ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯಪೈ ಬಿ. ಎ ಬಿ ಎಲ್, ಇವರ ಹಿರಿಯ ಸಹೋದರ ಕೀರ್ತಿಶೇಷ ಅಮ್ಮೆಂಬಳ ವೆಂಕಟರಮಣ ಪೈಯವರ ಕಿರಿಯ ಪುತ್ರರಾದ ಶ್ರೀಯುತ ಅಮ್ಮೆಂಬಳ ಉಪೇಂದ್ರಪೈಯವರು ಇದೇ ಮಾರ್ಚ ಒಂದನೇ ತಾರೀಖು (೧-೩ ೧೯೩೬) ಶುಕ್ರವಾರ ಮಂಗಳೂರಲ್ಲಿ ಪರಂಧಾಮವನ್ನೈದುದು ಅತೀ ಶೋಚನೀಯವಾದ ವಿಷಯವು.

೧೮೭೬ನೇ ಇಸವಿ ಡಿಸೆಂಬರ ೧೮ನೇ ದಿನ ಮಂಗಳೂರಿನ ಸ್ವಗೃಹದಲ್ಲಿ ಇವರು ಜನ್ಮವೆತ್ತಿದರು. "ಗಿಡದ ಬೆಳೆ ಮೊಳಕೆಯಲ್ಲಿ" ಎಂಬಂತೆ ಬಾಲ್ಯದಿಂದಲೇ ಆದರ್ಶ ಗುಣಯುಕ್ತರಾಗಿ ಬೆಳೆದರು. ಹಿರಿಯರಿಂದ ಸ್ಥಾಪಿಸಲ್ಪಟ್ಟ ಶಾಲೆಯಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದವರಲ್ಲಿ ತಾವೂ ಒಂದು ಸ್ಥಾನವನ್ನು ಸ್ವೀಕರಿಸಿದರು. ಅಲ್ಲಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಿ ಇವರು ಮದ್ರಾಸಿಗೆ ತೆರಳಿದರು. ಅಲ್ಲಿಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಪ್ರಸಂಗವನ್ನು ಮುಂದರಿಸಿದರು. ರಾಜಕೀಯ ಜಗತ್ತಿನಲ್ಲಿ ವಿಖ್ಯಾತರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರರು ಆ ಕಾಲದಲ್ಲಿ ಇವರ ಸಹಪಾಠಿಗಳು. ಶ್ರೀಯುತ ದಿವಾನ್ ಬಹದ್ದೂರ್ ಉದ್ಯಾವರ ರಾಮರಾಯರೂ ಶ್ರೀಯುತ ಮೂಲ್ಕಿ ನರಸಿಂಗರಾಯರೂ ಶ್ರೀಯುತರ ಮೆಟ್ರಿಕ್ಯುಲೇಶನ್ ಕ್ಲಾಸಿನ ಸಮಾನಸ್ಕಂಧರು. ಇವರೆಲ್ಲರೊಳಗೂ ಪರಸ್ಪರ ಸ್ನೇಹವೂ ಬಾಂಧವ್ಯವೂ ಇತ್ತು. ಮಾತ್ರವಲ್ಲ, ವಿದ್ಯಾಭ್ಯಾಸದಲ್ಲಿ ತಾವು ಅಗ್ರಗಣ್ಯರೆನಿಸಿಕೊಳ್ಳಬೇಕೆಂಬ ಕಾಂಕ್ಷೆಯು ಪ್ರತಿಯೊಬ್ಬರಲ್ಲಿಯೂ ಇತ್ತು. ಹೀಗೆ ಸಹಜವಾಗಿ ಪ್ರತಿಸ್ಪರ್ಧಿಗಳಾದ ಇವರು ಪ್ರತಿ ಪರೀಕ್ಷೆಯಲ್ಲಿಯೂ ಅಗ್ರಸ್ಥಾನಗಳನ್ನು ಪಡೆದು ಮನ್ನಿಸಲ್ಪಟ್ಟರು. ವಿಲಾಯತಿಗೆ ತೆರಳಿ ಅಲ್ಲಿನ ಐ ಸಿ ಎಸ್ ಪರೀಕ್ಷೆಗೆ ತಾನೂ ಒಬ್ಬ ಉಮೇದ್ವಾರನಾಗಬೇಕೆಂಬ ಒಪಲಾಷೆಯು ಶ್ರೀಯುತರಲ್ಲಿದ್ದರೂ ಆಗಿನ ಸಮಾಜ ಘೋರಣದ ದೆಸೆಯಿಂದ ಬರೇ ಪಿ. ಸಿ ಎಸ್ ಪರೀಕ್ಷೆಯ ಪ್ರಥಮ ಸ್ಥಾನವನ್ನು ಪಡೆದೇ ಸಂತುಷ್ಟರಾಗಬೇಕಾಯಿತು. ಉತ್ತೀರ್ಣರಾದ ಕೂಡಲೇ (೧೮೯೯) ಇವರು ಚೆಂಗಲ್ಪಟ್ಟು ಜಿಲ್ಲೆಯ ಪ್ರೊಬೇಷನರಿ ಡೆಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟರು. ಮದುರಾ, ರಾಮನಾಡು ಮುಂತಾದ ಜಿಲ್ಲೆಗಳಲ್ಲಿಯೂ ಇದೇ ಹುದ್ದೆಯಲ್ಲಿ ದಕ್ಷತೆಯಿಂದ ಅಧಿಕಾರವನ್ನು ನಡೆಸಿ ೧೯೨೦ನೇ ಇಸವಿಯಲ್ಲಿ ಟಿಪ್ಪೂರಿನ ಜಿಲ್ಲಾ ಕಲೆಕ್ಟರ ಪದವಿಯಿಂದ ಅಲಂಕೃತರಾದರು. ಅನಂತಪುರ, ಕಡಪೆ, ಕಡಲೂರು ಜಿಲ್ಲೆಗಳಲ್ಲಿ ಕಲೆಕ್ಟರರಾಗಿ ಜನತೆಯ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ ಧೈರ್ಯದಿಂದಲೂ ಶಾಕ್ತಿಯಿಂದಲೂ ತಮ್ಮ ಕಾರ್ಯವನ್ನು ನಡೆಸಿದರು. ಪ್ರತಿಯೊಂದು ಕಾರ್ಯದಲ್ಲಿಯೂ ಶಾಂತಿ, ದಯೆ, ಕ್ಷಮೆಗಳು ಉಕ್ಕಿ ಹೊರ ಸೂಸುತ್ತಿದ್ದುವು.

ಕಡಪೆಯಲ್ಲಿ ಕಲೆಕ್ಟರರಾಗಿರುವ ಕಾಲದಲ್ಲಿ ಅತಿ ಕಠಿಣವಾದೊಂದು ಸಂದರ್ಭವು ಒಂದೊದಗಿತು. ಖಿಲಾಫತ್ ಸ್ವಯಂಸೇವಕರಿಬ್ಬರು ಉದ್ರೇಕಜನಕ ಭಾಷಣಗಳನ್ನು ಕೊಟ್ಟು ಜನರನ್ನು ಉದ್ರೇಕಗೊಳಿಸಿದುದರಿಂದ ಅವರನ್ನು ದಸ್ತಗಿರಿ ಮಾಡಬೇಕು, ಜನರು ಉದ್ರೇಕಗೊಳ್ಳುವ ಸಂದರ್ಭವಿರುವುದಾದರೆ ಮಿಲಿಟರಿಯ ಸಹಾಯವನ್ನಾದರೂ ಪಡೆಯಬೇಕು ಎಂಬುದು ಪೋಲಿಸ್ ಅಧಿಕಾರಿಗಳ ಸೂಚನೆ. ಅದರೆ ಶ್ರೀಯುತರು ತಮ್ಮ ಸ್ವಂತ ಅಧಿಕಾರವನ್ನೇ ನಡೆಸಿದರು. ಆ ಸ್ವಯಂಸೇವಕರನ್ನು ತಮ್ಮ ಮೂಲಕ ಕರೆತರಿಸಿ ಅವರನ್ನು ವಿಧಿಸಿ ತಮ್ಮ ಸದ್ವಚನಗಳಿಂದಲೂ ಸದ್ವರ್ತನೆಯಿಂದಲೂ ಹಿಂದೂ ಮುಸಲ್ಮಾನರ ಮನಸ್ಸನ್ನು ಸಮಾಧಾನಗೊಳಿಸಿದರು. ಏನೊಂದು ಗಲಭೆಯಿಲ್ಲದೆ ಯುಕ್ತರೀತಿಯಿಂದ ಅಂತ್ಯಗೊಳಿಸಿದ ಈ ಕಾರ್ಯಕ್ಕಾಗಿ ಅಲ್ಲಿಯ ಜನರು ಶ್ರೀಯುತರನ್ನು ಪ್ರಶಂಸಿಸಿದರು. ಮಹಾತ್ಮಾಜಿಯವರು ಈ ವಿಷಯವನ್ನು ಟೀಕಿಸಿ ಬರೆಯುವಾಗ ಹೀಗೆಂದಿರುವರು. "ಕಡಪೆಯ ಶಾಂತಿಯುತ ಪರಿಣಾಮಕ್ಕಾಗಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರನ್ನು ಅಭಿನಂದಿಸಬೇಕೋ? ಅಲ್ಲವೇ ಸ್ವಯಂಸೇವಕರ ನಡತೆಯನ್ನು ಪ್ರಶಂಸಿಸಬೇಕೋ? ಎಂಬುದು ನನಗೆ ತಿಳಿಯದು."

ಕಡಲೂರಿನಲ್ಲಿ ಜಿಲ್ಲಾ ಕಲೆಕ್ಟರರಾಗಿರುವ ಕಾಲದಲ್ಲಿ ಅಲ್ಲಿಯ ರೈಲ್ವೆ ಮುಷ್ಕರವು ಶಾಂತಿಮಯವಾಗಿ ಪರಿಣಮಿಸುವುದಕ್ಕೆ ಕಾರಣರೂ ಇವರೇ. ಆ ಮುಷ್ಕರಗಾರರ ಸಮೂಹದಲ್ಲಿ ನಿರ್ಭಯರಾಗಿ ಎಂದಿನಂತಹ ತನ್ನ ಮಧುರ ವಚನಗಳಿಂದಲೂ ತನ್ನ ನಿರಹಂಕಾರಯುಕ್ತ ವರ್ತನದಿಂದಲೂ ಅವರ ಪ್ರಾಣಿಗಳನ್ನು ತಮ್ಮ ಕಡೆಗೆ ಆಕರ್ಷಿಸಿ ಎಷ್ಟು ಅಭಿಪ್ರಸಂಗಗಳನ್ನು ತಡೆದವರೂ ಇವರೇ. ೧೯೨೫ನೇ ಇಸವಿಯಲ್ಲಿ ಸರಕಾರಿ ಮೆಂಬರರಾಗಿ ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಇರುವಾಗಲೂ ಇವರು ತಮ್ಮ ಶಾಂತಿಯುಕ್ತ ಸಲಹೆಗಳನ್ನೇ ಸರಕಾರದ ಮುಂದೊತ್ತುತ್ತಿದ್ದರು. ಘೋರಣೆಗಿಂತಲೂ ಸಮಾಧಾನಕರವೇ ಉತ್ತಮವೆಂಬುದಾಗಿ ತಮ್ಮ ಸೂಚನೆಯನ್ನು ಸಕಾಲದಲ್ಲಿ ಪ್ರದರ್ಶಿಸುತ್ತಿದ್ದರು.

ಹೀಗೆ ತಮ್ಮ ಧೈರ್ಯಸ್ಥೈರ್ಯ ಸಾತ್ವಿಕ ಸ್ವಭಾವಗಳ ಬಲದಿಂದ ರಾಜಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿ ತಮ್ಮ ೫೩ನೇ ವರ್ಷದಲ್ಲಿ ರಾಜಕಾರ್ಯದಿಂದ ನಿವೃತ್ತರಾದರು. ಸಂತರ ಸಾವಿರನ್ನ ಪುರಷರಂತೆ ಕುಟುಂಬಸೇವೆಯಲ್ಲಿಯೂ ತನ್ನ ಮಾತೃವಿದ್ಯಾದಾಯಿನಿಯಾದ ಕೆನರಾ ಹೈಸ್ಕೂಲಿನ ಸೇವೆಯಲ್ಲಿಯೂ ತಾನು ತನುಮನಧನಗಳನ್ನಿತ್ತು ಅಶಕ್ತನಾಗಿ ಹೃದ್ರೋಗದಿಂದ ಇಹಲೋಕವನ್ನು ತ್ಯಜಿಸಿದರು. ಇವರ ಮರಣದ ಅಘಾತವನ್ನು ಸಹಿಸ ದವರು ವಿರಳ. ಸ್ಮಶಾನಯಾತ್ರೆಯ ಕಾಲದಲ್ಲಿ ಶವವನ್ನು ಹಿಂಬಾಲಿಸಿದವರ ಸಂಖ್ಯೆಯನ್ನು ನೋಡಿದುದಾದರೆ ಸಾಮಾನ್ಯರಂತಿದ್ದರೂ ಕೂಡಾ ಪ್ರತಿಯೊಬ್ಬನ ಹೃದಯದಲ್ಲಿಯೂ ತನ್ನ ಪ್ರತಿಭೆಯನ್ನು ಬೀರಿದ್ದರೆಂಬುದು ಸ್ಪಷ್ಟವಾಗುತ್ತಿತ್ತು. ಅವರ ಜಡದೇಹವು ನಮ್ಮ ನಡುವಿನಿಂದ ಭಸ್ಮೀಕೃತವಾದರೂ ಅವರ ದಿವ್ಯಜ್ಯೋತಿರ್ಮಯವಾದ ಅತ್ಮವು ಅವರ ಧ್ಯೇಯಗಳನ್ನು ಕಾರ್ಯರಂಗಕ್ಕೆ ತರುವಂತೆ ಆಜ್ಞಾಪಿಸುತ್ತಲಿರುವುದೆಂದು ನಮ್ಮ ಪ್ರತಿಯೊಬ್ಬನ ಊಹೆಯಾಗಿದೆ. ಅಂಥ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನನುಗ್ರಹಿಸಲಿ. ದುಃಖಿತರಾದ ಕುಟುಂಬದವರಿಗೆ ಇಂಥ ದುಃಖವನ್ನು ಸಹಿಸುವ ಶಕ್ತಿಯನ್ನು ಕರುಣಿಸಲಿ. ಸಹಸ್ರಾರು ಬಂಧು-ಬಾಂಧವ ಮಿತ್ರರು ಇವರ ಅಕಾಲಮರಣದಿಂದ ನೊಂದರೆ, ಅವರ ಆತ್ಮಶಾಂತಿಗಾಗಿ ಪ್ರಾರ್ಥಿಸುತ್ತ ಅವರು ತೋರಿದ ಪಥ ಅನುಸರಿಸಲಿ!

ಓಂ ಶಾಂತಿ! ಶಾಂತಿ! ಶಾಂತಿ!

ದಿವಂಗತ ಅಮ್ಮೆಂಬಳ ಉಪೇಂದ್ರ ಪೈಯವರು.

ಅನುಕ್ರಮಣಿಕೆ.

ಪತ್ರ ೨
ಪತ್ರಿಕಾ ಪ್ರಪಂಚ ೩
ಸಯಾಂ ದೇಶದ ಅರಸರು ಸಿಂಹಾಸನವನ್ನು ತೊರೆದರು. ೪
ತಂದೆಯ ಮಗುವೇ ತಾಯಿಯ ಮಗುವೇ? . ೬
ಮತಗಳ ವಿಷಯ ನೀವೇನೆನ್ನುವಿರಿ? . ೮

ಅಗ್ರಲೇಖ
ಸ್ಫುಟವಿಚಾರಗಳು . ೯
ಈ ಬಾರಿಯ ಪ್ರಶ್ನಾವಳಿ. . , ೧೦

ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು ೧೬
ಸರಕಾರಿ ನೌಕರರ ಸಂಬಳವೆಷ್ಟಿರಬೇಕು? ೧೮
ನೇಶನಲ್ ಗವರ್ನಮೆಂಟ್ ಮತ್ತು ಜನರಲ್ ಇಲೆ ಕ್ಷನ್ ಸಮಸ್ಯೆ ೧೯

ಸ್ವದೇಶಾಭಿಮಾನಿ

ತಾ ೮ನೇ ಶುಕ್ರವಾರ ಮಾರ್ಚಿ '೩೫

ಈ ಬಾರಿಯ ಪ್ರಶ್ನಾವಳಿ.

ಈ ಬಾರಿಯ ಸ್ವದೇಶಾಭಿಮಾನಿಯಲ್ಲಿ ಒಂದು ವಿಶೇಷವಾದ ಪ್ರಶ್ನಾವಳಿಯನ್ನು—ನಮ್ಮ ಮತಗಳ ಸಂಬಂಧವಾಗಿ ಪ್ರಕಟಿಸುತ್ತೇವೆ ಇದರ ಉದ್ದೇಶವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುವುದು ಒಳಿತು ಇನ್ನು ಮುಂದೆ ನಮ್ಮ ಜನರ ಜೀವನಕ್ಕೆ ಸಂಬಂಧಿಸುವ ವಿವಿಧ ಪ್ರಾಮುಖ್ಯ ವಿಷಯಗಳ ಮೇಲೆ—ಅಂದರೆ ನಮ್ಮ ಸಮಾಜದ ಪ್ರಶ್ನೆಗಳು ರಾಜಕೀಯ ವಿಚಾರಗಳು, ಆರ್ಥಿಕ ಸಮಸ್ಯೆಗಳು, ನಮ್ಮ ಬೋರ್ಡ ಕೌನ್ಸಿಲು ಮುಂತಾದುವುಗಳ ಕೆಲಸಗಳು—ಇವನ್ನೆಲ್ಲವು ಕುರಿತು—ಇಂಥ ಪ್ರಶ್ನಾವಳಿಗಳನ್ನು ಸಿದ್ಧಗೊಳಿಸಿ ನಮ್ಮ ವಾಚಕರ ಮುಂದಿರಿಸುತ್ತೇವೆ ಅಲ್ಲದೆ—ಈ ಪ್ರಶ್ನಾವಳಿಗಳ ಪ್ರತಿಯನ್ನು ಪ್ರತ್ಯೇಕವಾಗಿ, ಆಯಾಯ ವಿಷಯಗಳಲ್ಲಿ ಅನುಭವ, ಅಭಿರುಚಿಗಳಿರುವ ಜನರಿಗೆ ಕಳುಹಿಸಿ ಅವರ ಪ್ರತ್ಯುತ್ತರಗಳನ್ನು ಅಪೇಕ್ಷಿಸುತ್ತೇವೆ ಈ ಪ್ರಶ್ನಾವಳಿಯನ್ನು ಅಖಂಡವಾಗಿ ಯೋಚಿಸಿ, ಕ್ರಮಗತವಾಗಿ ತಮ್ಮ ಅಭಿಪ್ರಾಯಗಳನ್ನು ನಮ್ಮ ವಾಚಕರಾಗಲಿ, ಇತರ ಮಹನೀಯರಾಗಲಿ, ಸೂಚಿಸಿದ್ದಲ್ಲಿ—ಅವರ ಉತ್ತರಗಳನ್ನು ಪ್ರಕಟಿಸಲಾದೀತು

ಪ್ರಕಟಿಸುವ ಕಾಲದಲ್ಲಿ ಸ್ವಾಭಾವಿಕವಾಗಿ ಕೆಲವನ್ನು ಆರಿಸಬೇಕಾಗುತ್ತದೆ ಅಭಿಪ್ರಾಯಗಳು ಯಾವುದೇ ಪಕ್ಷವನ್ನು ವಹಿಸಿದರೂ—ಪ್ರಶ್ನೆಮಾಲಿಕೆಯಲ್ಲಿ ಬಯಸುವ ವಿವಿಧ ಪ್ರಶ್ನೆಗಳಿಗೆ ಸಮಂಜಸವಾಗಿ ಇರಬೇಕು ಅಲ್ಲದೆ ತರ್ಕದ ಸರಣಿಯು ಒಂದೊಂದು ಪ್ರಶ್ನೆಗೆ ಒಂದೊಂದಾಗಿ ಇರಕೂಡದು

ಈ ರೀತಿ ಬರುವ ಉತ್ತರಗಳಲ್ಲಿ ವಿಚಾರಶೀಲವಾದುವುಗಳನ್ನು ಅವಶ್ಯವಾಗಿ ಪ್ರಕಟಿಸುತ್ತೇವೆ ಅವಶ್ಯವಿದ್ದರೆ ನಿಮ್ಮ ವಿಚಾರವನ್ನು ಕರಳಿಸುವ ಉಪಪ್ರಶ್ನೆಗಳನ್ನೂ ಹಾಕಬಹುದು ನಮ್ಮ ಜೀವನವನ್ನು ಸಂಬಂಧಿಸುವ ಯಾವುದೇ ಪ್ರಶ್ನೆಯಿರಲಿ, ಅದು ಮತವಿಚಾರವಾಗಲಿ, ಆರ್ಥಿಕ ಸಮಸ್ಯೆಯಾಗಲಿ ಅವುಗಳನ್ನು ವಿಚಾರಶೀಲತೆಯಿಂದ ನೋಡುವ ಮನಸ್ಸು ನಮ್ಮ ಜನರಲ್ಲಿ ಬರಬೇಕು—ಎಂಬುದೇ ನಮ್ಮ ಗುರಿ ಎಂಥ ಪ್ರಸಂಗವಾದರೂ ಅಂಧಶ್ರದ್ಧೆಯ ಮೇಲೆ ಆಧರಿಸದೆ ನಮ್ಮ ಶಕ್ತಿಗೆ ಸರಿಯಾದ ರೀತಿಯಲ್ಲಿ ನಾವು ವಿಚಾರ ಮಾಡದೆ ಮುಂದರಿಯಲಾರೆವು ಹೀಗೆ ವಿಚಾರಕ್ಕಿಳಿದಲ್ಲಿ ನಮಗೆ ನಮ್ಮ ನಿಜವಾದ ಕುಂದುಕೊರತೆಗಳು ಕಾಣಿಸುವುವು.

ಈ ಪ್ರಶ್ನೆ ಮಾಲಿಕೆಯಲ್ಲಿ—ಒಂದು ವಿಚಾರವನ್ನು ಮಾತ್ರ ವಾಚಕರು ಮರೆಯಬಾರದು. ಇದು ಯಾವನೇ ಒಬ್ಬ ವ್ಯಕ್ತಿಯ ಕಡೆಗೆ ಕೈತೋರಿಸಿ ಬರೆಯಲ್ಪಡುವುದಿಲ್ಲ ಆದುದರಿಂದ—ಪ್ರತ್ಯುತ್ತರ ಕೊಡುವ ಜನರು, ವ್ಯಕ್ತಿಗಳನ್ನು ಮರೆತು, ಅವರು ಆಧರಿಸುವ ಪದ್ಧತಿ ಮತ್ತು ಸಂಸ್ಥೆಗಳ ವಿಮರ್ಶೆಯನ್ನಷ್ಟೆ ಮಾಡಬೇಕು. ಪ್ರತ್ಯುತ್ತರಗಳಲ್ಲಿ—ವ್ಯಕ್ತಿ ಟೀಕೆಯು ಬಂದರೆ ಆ ಭಾಗವನ್ನು ಪ್ರಕಟಿಸದೆಬಿಡಬೇಕಾಗಲೂ ಬಹುದು.

ಯಾರೊಬ್ಬರ ಪ್ರಕಟವಾದ ಪ್ರತ್ಯುತ್ತರ ಮಾಲಿಗೆ ಇನ್ನೊಂದು ಕಡೆಯಿಂದ ಟೀಕೆ ಬಂದರೆ ಅವುಗಳನ್ನು ಗಮನಿಸುವುದಿಲ್ಲ ಅಂಥವರು ಪ್ರಶ್ನಾವಳಿಗೆ ತಮ್ಮ ಉತ್ತರಗಳೇನೆಂದು ಹೇಳುವುದೇ ಕರ್ತವ್ಯವು

ಈ ವಿಚಾರತರಂಗಕ್ಕೆ ಸಕಾರಣವಾಗಿ ಉತ್ತರಿಸುವ ಅವಕಾಶವಿಲ್ಲದವರು ಆಯಾಯ ಸಂಸ್ಥೆಗಳ ಎದುರಿಗೆ ಬೇಕು—ಬೇಡ ಎಂಬ—ಎರಡೇ ಮಾತಿನಿಂದ ಉತ್ತರಿಸಬಹುದು ಹೆಚ್ಚು ಜನ ವಾಚಕರು ಭಾಗಿಗಳಾದರೆ—ಅವರ ಮತ (Vote) ಹೇಗೆ ಬಿದ್ದಿವೆ ಎಂಬುದನ್ನೂ ಪ್ರಕಟಿಸುವೆವು

ಪ್ರಕೃತದ ಪ್ರಶ್ನಾವಳಿಯನ್ನು ಮಾರ್ಚಿ, ಎಪ್ರಿಲು ತಿಂಗಳಲ್ಲಿ ಮುಗಿಸಿ ಮೇ ಪ್ರಾರಂಭಕ್ಕೆ ಇನ್ನೊಂದು ಪ್ರಶ್ನೆಯನ್ನು ತಮ್ಮ ಮುಂದೆ ಇರಿಸಬೇಕೆಂದಿರುವೆವು ಈ ಪರಸ್ಪರ ವಿಚಾರ ವಿನಿಮಯಗಳಲ್ಲಿ ಯಾರೂ ಹಿಂದುಳಿಯಬಾರದು

ಮಂಗಳೂರಿನ ನಾಗರಿಕರ ಕಣ್ಣು.

ಎಲ್ಲೆಲ್ಲೂ ಮುಂದರಿಯುವ ನಗರಗಳನ್ನು ಕೇಳುತ್ತೇವೆ ನಗರಗಳ ವಿಸ್ತರಣಗಳು ಬೆಳೆಯುತ್ತಿರುವುದನ್ನೂ ಕಾಣುತ್ತೇವೆ—ಆದರೆ ನಮ್ಮ ಮುನಿಸಿಪಾಲಿಟಿಯವರ ದೃಷ್ಟಿಯು ಸೊಗಸಿನ ಕಡೆಗೆ ಬೆಳೆಯುವುದನ್ನು ಮಾತ್ರ ಕಾಣುವುದಿಲ್ಲ ಮಂಗಳೂರಿನಲ್ಲಿ ಇಷ್ಟೊಂದು ಜನಸಂಖ್ಯೆಯಿದೆ ವಿದ್ಯಾವಂತರೂ ಅಪಾರವಾಗಿದ್ದಾರೆ ಆದರೆ ಜನರಿಗೆ ಚೆಲುವಿನ ಕಡೆಗೆ ದೃಷ್ಟಿಯೇ ಇಲ್ಲವೇನು? ನಮ್ಮ ನಗರದ ಯಾವ ಮೂಲೆಯಲ್ಲಿ—ಬಾಲರು, ವೃದ್ಧರು—ಹಿರಿಯರು ಕಿರಿಯರು ಇವರ ಸಲುವಾಗಿ—ಒಂದಾದರೂ ಉದ್ಯಾನವಿದೆಯೋ? ಹರಕುಮನೆ, ಗಲೀಜು ತುಂಬಿದ ಗಲ್ಲಿಗಳ ಎಡೆಯಲ್ಲಿ ಸಂಚರಿಸಲೇ ಬೇಕಾದ ಹಲವು ಬಡಬಗ್ಗರಿಗೆ—ಒಂದು ಗಳಿಗೆ ಯಾದರೂ ಚೆಲುವ ನೋಟ ನೋಡಲು ಅವಕಾಶವಿದೆಯೋ? ಒಂದಾದರೂ ಚೆನ್ನಾದ ಸಾಲು ಮರ (Avenue) ವಿದೆಯೋ ನಮ್ಮ ನಗರದಲ್ಲಿ ಚೆಲುವನ್ನು ಕಾಣಲು ಬೀದಿಯಲ್ಲಿ ಸಂಚರಿಸುವವನು, ಸನ್ಯಾಸಿಯಾಗಿ ಮನೆಗೆ ಬರಬೇಕಷ್ಟೆ

ಬೆಂಗಳೂರಿನ ಶಂಕರಪುರದ ಒಂದು ಸಾಲು ಮರವು, ಮೈಸೂರಿನ ಒಂದೇ ಒಂದು ಉದ್ಯಾನವು ನಮ್ಮಲ್ಲಿರಬೇಕೆಂದು ಬಯಸುವ ಗಳಿಗೆಯು ಮಂಗಳೂರಿನವರಿಗೆ ಎಷ್ಟು ದೂರವಿದೆ? ಸೆಂಟ್ ಲ್ಯಾಂಡ್ ಪೇಟೆ, ಕದ್ರಿ, ಬಂದರು ಮೈದಾನು, ಲೈಟ್ ಹೌಸ್ ಹಿಲ್—ಇಷ್ಟು ಅನುಕೂಲ ಸ್ಥಳಗಳಿದ್ದರೂ, ಒಂದು ರಮಣೀಯ ಉದ್ಯಾನವಿಲ್ಲ ಏನೋ, ಶ್ರೀಮಂತರಾದವರು ತಮ್ಮ ಮನೆಗಳೊಳಗೆ ತೋಟವನ್ನು ಮಾಡಬಹುದು ಆದರೆ ಪರಊರಿನಿಂದ ಬಂದು ನೆಲೆಸುವ ನೂರಾರು ವಿದ್ಯಾರ್ಥಿಗಳು, ಬಡವರು, ಇತರರು—ಇವರ ಸಲುವಾಗಿ ಏನು ಚೆಲುವಿದೆ?

ನಮ್ಮ ಮುನಿಸಿಪಲ್ ಸದಸ್ಯರಿಗೆ ಚೆಲುವಿನ ಕಣ್ಣು ಬರಬಾರದೇನು? ಮಂಗಳೂರಿನ ಜನರು, ಬರೀ ಉಂಡು ತಿರುಗುವ ಜನರಲ್ಲ ಸಂತೋಷಗೊಳ್ಳಬೇಕಾದ ಬುದ್ಧಿ—ಮನಸ್ಸುಗಳು ಅವರಿಗಿದೆ ಎಂಬ ಸಾಕ್ಷಿಯನ್ನು ಎಂದು ಕಾಣಬಹುದೋ?

ಕೋಮುವಾರು ತೀರ್ಮಾನದ ತೀವ್ರ ಖಂಡನೆ.

ಡಿಲ್ಲಿಯಲ್ಲಿ ಸಮ್ಮೇಳನ!

ಅಖಿಳ ಭಾರತ ಕೋಮುವಾರು ತೀರ್ಮಾನದ ವಿರೋಧವಾದ ಸಮ್ಮೇಳನವು ತಾ 21-2-'35ರಿಂದ ಡಿಲ್ಲಿಯಲ್ಲಿ ಮೂರು ದಿನಗಳ ವರೆಗೆ ನಡೆಯಿತು. ಸುಮಾರು 1,500 ಮಂದಿ ಸ್ತ್ರೀಪುರುಷರು ಹಾಜರಿದ್ದರು ಸರ್ ಸಪ್ರೂ ಪಿ ಸಿ ಅಚಾರಿ, ರಾಜಾ ಫಜ್ಲ ಘರಾಲಿ ಖಾನ್, ಹುಸೇನ್ ಇಮಾಮ್ ಮೊದಲಾದವರು ಚಿತ್ತೈಸಿದ್ದರು ಪಂಡಿತ ಮಾಲವೀಯರ ಅನುಮೋದನೆ ಮೇರೆಗೆ ಶ್ರೀ ವೈ ಸಿ ಚಿಂತಾಮಣಿಯವರು ಅಧ್ಯಕ್ಷ ಪೀಠವನ್ನೇರಿದರು. ಆ ವೇಳೆ ಸ್ವಾಗತಾಧ್ಯಕ್ಷರಾದ ಡಾ ಸೇನ್‌ರವರು ಕೋಮುವಾರು ಪ್ರಾತಿನಿಧ್ಯ ಮತ್ತು ಪೆಕ್ಟೋನಾಲ್ಡರ ಜಾತೀಯ ತೀರ್ಮಾನಗಳ ಚರಿತ್ರೆಯನ್ನು ವಿವರಿಸಿದರು. ಅವರು ಈ ಜಾತೀಯ ಏವಾರ್ಡು ಭಿನ್ನ ಭಿನ್ನ ತತ್ವಗಳಿಂದ ಕೂಡಿಕೊಂಡಿದೆ ಒಂದನ್ನೊಂದು ವಿರೋಧಿಸುವಂತಹ ತತ್ವಗಳೂ ಇವರಲ್ಲಿವೆ, ಅಲ್ಪಸಂಖ್ಯಾತರ ಪ್ರಾತಿನಿಧ್ಯ ಮತ್ತು ಸಂರಕ್ಷಣೆ ಇವೆರಡು ಪದ್ಧತಿಗಳೂ ಶುದ್ಧ ಅನ್ಯಾಯವಾಗಿವೆ ಎಂದು ಹೇಳಿದರು, ಅಲ್ಲದೆ ಇದನ್ನು ಅನುಸರಿಸುವುದರಿಂದ ಭರತ ಖಂಡವನ್ನು ಶಾಶ್ವತವಾಗಿ ಜಾತೀಯ ಕಾಳಗದ ಸಮರ ಭೂಮಿಯನ್ನಾಗಿ ಮಾಡಿದಂತಾಗುತ್ತದೆ ಎಂದು ಎಚ್ಚರವಿತ್ತರು. ಅನಂತರ ಶ್ರೀ ಚಿಂತಾಮಣಿಯವರು ಭಾಷಣ ಮಾಡಿದರು ಅವರೆಂದುದೇನೆಂದರೆ— ಯಾರು ಹೇಗೂ ನುಡಿಯಲಿ, ನಮ್ಮ ಕರ್ತವ್ಯವನ್ನು ನಾವು ಮಾಡೋಣ. ಆಳರಸರಿಗೆ ಬೇಸರವಾಗುತ್ತದೆಂದು ನಾವು ನಮ್ಮ ಕಾರ್ಯವನ್ನು ಮಾಡದಿರಲು ಸಾಧ್ಯವಿಲ್ಲ ಯಾರೂ ನಮಗೆ ವಿಘ್ನವನ್ನುಂಟುಮಾಡಲಾರರು ಜಾತೀಯ ಭೇದವು ಸಾರ್ವತ್ರಿಕವಾಗಿ ಪ್ರಚಾರವಾಗಬೇಕೆಂದು ಅವರ ಹವಣಿಕೆ ಅದನ್ನು ನಾವು ತಡೆಯಬೇಕು ಮುಸಲ್ಮಾನರೇನು ಮಾಡಿದ್ದಾರೆ? ಅವರಿಗೆ ಯಾವುದೂ ಬೇಡವಾಗಿದೆ, ತಮ್ಮ ಬೆಂಬಲವಾಗಿ ಬ್ರಿಟಿಷರಿದ್ದಾರೆ ಎಂಬ ಭಾವನೆಯು ಅವರಲ್ಲಿದೆ ಆದುದರಿಂದಲೇ ಅವರು ಅಲಕ್ಷ್ಯರಾಗಿದ್ದಾರೆ. ಅಲ್ಲಹಾಬಾದಿನಲ್ಲಿ ಪಂಡಿತ ಮಾಲವೀಯರಿಗೂ ಮುಸಲ್ಮಾನರಿಗೂ ಒಪ್ಪಂದವಾಗುವುದರಲ್ಲಿತ್ತು, ಅಷ್ಟರಲ್ಲಿ ಭಾರತ ಸಚಿವರು ಕೇಂದ್ರ ಶಾಸನಸಭೆಯಲ್ಲಿ ಮುಸ್ಲಿಮರ ಪ್ರಾತಿನಿಧ್ಯದ ವಿಚಾರವನ್ನು ಪ್ರಕಟಿಸಿದರು. ಕೇಂದ್ರ ಸರಕಾರದಿಂದ ಹಣವನ್ನೊದಗಿಸಿ ಸಿಂಧಪ್ರಾಂತ್ಯ ನಿರ್ಮಾಣಮಾಡಲಾಗುವುದೆಂದು ಹೇಳಿದರು ಒಡನೆ ಒಪ್ಪಂದದ ಮಾತು ಅಲ್ಲೇ ಬಿದ್ದುಬಿಟ್ಟಿತು ಐಕ್ಯಮತ್ಯಕ್ಕಾಗಿ ಬೇರೆ ಸಮ್ಮೇಳನವೇ ಅವಶ್ಯವಿಲ್ಲದಂತಾಯಿತು. ಎಂದಿನವರೆಗೆ ಮೂರನೆಯ ವರ್ಗವವರಾದ ಬ್ರಿಟಿಷರು ಅಧಿಕಾರ ವಹಿಸುವರೋ ಅಂದಿನ ವರೆಗೂ ಹಿಂದೂ ಮುಸಲ್ಮಾನ ಸಮಸ್ಯೆಯ ಪರಿಹಾರಾರ್ಥ ಹಿಂದುಗಳು ಯಾರೂ ಜವಾಬ್ದಾರಿಯನ್ನು ವಹಿಸಿಕೊಳ್ಳಬಾರದು, ಹಿಂದೂವಾಗಿ ನಾನು ಈ ಕರ್ತವ್ಯವನ್ನು ನಿಮ್ಮೆಲ್ಲರ ಮುಂದಿಡುತ್ತೇನೆ, ಇಂಡಿಯಕ್ಕೆ ಜವಾಬ್ದಾರಿ ಸರಕಾರವನ್ನು ಕೊಡಬೇಕಾಗಿದ್ದರೆ ಮೊದಲು ಈ ಜಾತೀಯ ಸಮಸ್ಯೆಯು ತೀರ್ಮಾನವಾಗಬೇಕೆಂಬುದಕ್ಕೆ ನನ್ನ ಸಹಿಯಿಲ್ಲ ಅದಾದ ಮೇಲೆ ಇದಾಗಬೇಕು, ಇದಾದ ಮೇಲೆ ಅದಾಗಿ ಫಲವಿಲ್ಲ?



ಪಂಡಿತ ಮಾಲವೀಯ ಶ್ರೀ ರಮಾನಂದ ಚಟರ್ಜಿಯವರನ್ನು ಕೂಡಿಕೊಂಡು ಹಿಂದೂ ಮಹಾಸಭೆಯ ಕೇಳಿಕೆಗಳನ್ನು ಬ್ರಿಟಿಷ ಸರಕಾರದೆದುರು ಇಡಲು ಇಂಗ್ಲೆಂಡಿಗೆ ತೆರಳಲಿರುವ

ಶ್ರೀ ಸಿ ವೈ ಚಿಂತಾಮಣಿಯವರು

ಪಂಡಿತ ಮಾಲವೀಯರು ಹೀಗೆಂದರು— 'ಈ ಜಾತೀಯ ತೀರ್ಮಾನದಿಂದ ಯಾರ ಪಂಗಡಕ್ಕೂ ಲಾಭವಿಲ್ಲವೆಂಬುದು ಖಂಡಿತ ಇದರಿಂದ ಯುರೋಪಿಯನರಿಗೆ ತುಂಬಾ ಪ್ರಯೋಜನ ಜವಾಬ್ದಾರಿ ಸರಕಾರ



ಜಾತೀಯ ಏವಾರ್ಡನ್ನು ಖಂಡಿಸಿದ

ಶ್ರೀ ಪಂಡಿತ ಮಾಲವೀಯರು

ವೆಂಬುದು ತಲೆದೋರಲು ಇದರಿಂದ ಎಂದೂ ಸಾಧ್ಯವಿಲ್ಲ ಇದು ದೇಶವಿಘಾತುಕವಾದುದು ಸ್ವನಾಶಕ್ಕೆ ಮೂಲ ಹೇತುವು ಆದುದರಿಂದ ನಮ್ಮ ಸರ್ವಸಾಮರ್ಥ್ಯಗಳನ್ನು ವ್ಯಯಿಸಿ ನಾವಿದನ್ನು ಪ್ರತಿಭಟಿಸಬೇಕು ರೌಲೆಟ್ ಶಾಸನಕ್ಕೆ ಸಿಕ್ಕಿದ ಗತಿಯು ಇದಕ್ಕೂ ಸಿಗಬೇಕಾಗಿದೆ ಮೂರನೆಯ ಪಕ್ಷವೊಂದಿರುವ ವರೆಗೆ ಹಿಂದೂ ಮುಸಲ್ಮಾನರೊಳಗೆ ಐಕ್ಯವು ತಲೆದೋರಲಾರದು ನಮ್ಮ ಅಧಿಕಾರ ನಮಗೆ ಬರಲಿ, ಆ ಮೇಲೆ ನಮ್ಮಲ್ಲಿ ಯಾವ ಭೇದವೂ ಇರಲಾರದು. ನಮ್ಮ ಹಣದ ಮುಗ್ಗಟ್ಟು ಹೋಗಿಬಿಡುವುದು

ಗ್ರೀಸ್‌ದೇಶದಲ್ಲಿ ಭಯಂಕರ ದಂಗೆ.

ಸೈನಿಕರೇ ಉರಿದೆದ್ದರು!

ನಾವಿಕರ ಕ್ರೋಧ! ಮಾರ್ಷಲ್ ಲೋ ಜ್ಯಾರಿಗೆ ಬಂತು!

ಗ್ರೀಸ ದೇಶದಲ್ಲಿ ಮಾಜಿ ಪ್ರಧಾನ ಮಂತ್ರಿಯಾಗಿ ವೆನಿಜಲೋಸ್ ಎಂಬವರಿದ್ದರು ಅವರನ್ನು ಪದಭ್ರಷ್ಟರನ್ನಾಗಿ ಮಾಡಿದ ಮೇಲೆ ಅವರು ಕ್ರೀಟ್ ಎಂಬ ದ್ವೀಪದಲ್ಲಿ ವಾಸಿಸುತ್ತಿದ್ದರು ಹಲವು ಮಾಸಗಳಿಂದ ಅವರ ಪಕ್ಷವೊಂದು ಗ್ರೀಸ್ ದೇಶದಲ್ಲಿ ತಲೆಯೆತ್ತುತ್ತಿದ್ದು ಪ್ರಕೃತ ಅಲ್ಲಿರುವ ಪ್ರಧಾನಮಂತ್ರಿ ಸಾಲ್ದಾರಿಸ್ ಎಂಬವರ ಮೇಲೆ ಹಗೆ ಕಟ್ಟಿಕೊಂಡಿದ್ದಾರೆ. ಇವರೊಡನೆ ಅಲ್ಲಿ ಮೊದಲು ಗ್ರೀಸಿನ ಡಿಕ್ಟೇಟರರಾಗಿದ್ದ ಜನರಲ ಪ್ಲಾಸ್ಟಿರಸ್ ಎಂಬವರೂ ಸೇರಿರುವರು ಸಾಲೊನಿಕಾ ಎಂಬಲ್ಲಿ ವೆನಿಜಲೋಸರ ಬಳಗಕ್ಕೆ ಸೇರಿದರು. ಎರಡನೇಯ ವ್ಯಕ್ತಿಯು ಗ್ರೀಸ ದೇಶದ ಕಿಂಗ್ ಜೋರ್ಜರನ್ನು ಓಡಿಸಿತ್ತು 1926ರಿಂದ ಅನ್ಯ ದೇಶವಾಸದಲ್ಲಿತ್ತು

ಈಗ ಸೈನಿಕರೆಲ್ಲರೂ ದಂಗೆಕೋರರೊಡನೆ ಸೇರಿಕೊಂಡಿರುವರು, ವೆನಿಜಲೋಸರು ಮಹಾ ಪಿತೂರಿ ನಡೆಸಿ ಸ್ಥಳಗಳನ್ನು ಕೈವಶಪಡಿಸಿಕೊಂಡಿರುವರು ಯುದ್ಧನಾವೆಗಳು ಕೆಲವು ದಂಗೆಗಾರರ ವಶ ಸೇರಿವೆ. ದಂಗೆಗಾರರ ಹೇಳಿಕೆಯಂತೆ ಬಂದರುಗಳನ್ನು ಬಿಟ್ಟು ಪರದೇಶಗಳಿಗೆ ಓಡಿದುವು. ಗ್ರೀಸ್ ಸರಕಾರವು ಅವರಿಗೆ ವಯರ್‌ಲೆಸ್ ವಾರ್ತೆಯನ್ನು ಕಳುಹಿಸಿ 'ನಿಮ್ಮನ್ನು ಸಮುದ್ರ ಕಳ್ಳರೆಂದು ಹೇಳುವೆವು' ಎಂದರೂ ಐದು ಯುದ್ಧನಾವೆಗಳು ಎತ್ತಲೋ ಓಡಿದುವು ರಿಪಬ್ಲಿಕನ್ ಗಾರ್ಡಿನ ಕಾಲಾಳುಗಳು ಕ್ರಾಂತಿಕಾರರೊಡನೆ ಸೇರಿಕೊಂಡಿರುವರು. ಎಲರೋಫ್ ಎಂಬ ಯುದ್ಧನಾವೆಯಲ್ಲಿ ನಾವಿಕರು ಸರಕಾರಕ್ಕೆ ವಿರೋಧವಾಗಿ ಹೋರಾಡಿದರು, ಸರಕಾರವು ವಿಮಾನಗಳನ್ನು ಕಳುಹಿಸಿ ಆ ಯುದ್ಧನಾವೆಯನ್ನು ಬೋಂಬುಗಳಿಂದ ಒಡೆದು ಹಾಕಿತು ಮಾರ್ಷಲ್ ಲೋ ಜಾರಿಯಾಗಿರುತ್ತದೆ

ಡಬ್ಲಿನ್‌ನಲ್ಲಿ ವಾಹನ ಸಂಚಾಲಕರ ಮುಷ್ಕರ.

ಒಬ್ಬ ಕೆಲಸಗಾರನನ್ನು ತೆಗೆದುದರ ಪರಿಣಾಮ.

ಡಬ್ಲಿನ್, ಮಾರ್ಚ ೩.

ಬಸ್ ಡ್ರೈವರನೊಬ್ಬನನ್ನು ಕೆಲಸದಿಂದ ತೆಗೆದುದರ ಪರಿಣಾಮವಾಗಿ ಡಬ್ಲಿನ್ ಸಿಟಿಯ ವಾಹನ ಸಂಚಾಲಕರೆಲ್ಲ ಮುಷ್ಕರ ಹಿಡಿದಿರುವರು. ಎಂಜಿನ್ ಡ್ರೈವರನನ್ನು ತೆಗೆದುದಕ್ಕಾಗಿ ಕೆಲಸಗಾರರ ಯೂನಿಯನಿನವರ ಸಾರ್ವತ್ರಿಕ ಮುಷ್ಕರ ನೋಟೀಸು ಕೊಟ್ಟರು. ಪರಿಣಾಮವಾಗಿ ಬಸ್, ರೈಲ್ವೇ ಟ್ರೇಮು, ಮೋಟರ್ ಮೊದಲಾದ ವಾಹನಗಳ ಚಾಲಕರು ಕೆಲಸಬಿಟ್ಟರು. ಡಬ್ಲಿನ್ ಸಿಟಿ ಟ್ರೇಮ್ ವೇ ಕಂಪೆನಿಯವರು ಕೆಲಸಗಾರರ ಕೇಳಿಕೆಗಳಿಗೊಡಂಬಟ್ಟಿರುವುದಿಲ್ಲ. ೬೦೦೦ ಜನರು ಸುಮ್ಮಗೆ ಕುಳಿತಿರುವರು.

ಚೀನಾದಲ್ಲಿ ಭಂಡಾಯಗಾರರ ಹಾವಳಿ

ಮಿಶನರಿಗಳ ಕೊಲೆಮಾಡಿದರು

ಹೆಂಡತಿಯ ಪತ್ತೆಯಿಲ್ಲ

ಶಂಘೈ ಮಾರ್ಚ ೩

ವೆಸ್ಟ್ ಚೀನ ಮಿಶನ್ನಿಗೆ ಸೇರಿದ ... ಆಸ್ಟ್ರೇಲಿಯನ್ ... ಎಂಬವರನ್ನು ಭಂಡಾಯಗಾರರು ಕೊಂದುಹಾಕಿದರೆಂದು ತಿಳಿಯುತ್ತದೆ. ಚೀನಾ ಇನ್‌ಲ್ಯಾಂಡ್ ಮಿಶನ್ ... ಯನ್ನು ಅಪಹರಿಸಿರುವರು. ಅವರ ಪತ್ನಿಯ ಪತ್ತೆ ಇಲ್ಲ.

ಮ್ಯುನಿಸಿಪಾಲಿಟಿಯ ಶತಮಾನೋತ್ಸವ

ಅಹ್ಮದಾಬಾದಿನಲ್ಲಿ ಸಮಾರಂಭ

ಮಹಾತ್ಮಾಜೀಯವರ ಸಂದೇಶ

ಅಹ್ಮದಾಬಾದ ಮಾರ್ಚ ೩

ಅಹ್ಮದಾಬಾದ್ ಮ್ಯುನಿಸಿಪಾಲಿಟಿಯ ಶತಮಾನೋತ್ಸವವು ಇಂದು ವಿಜೃಂಭಣೆಯಿಂದ ನಡೆಯಿತು. ಸರದಾರ ವಲ್ಲಭಭಾಯಿ ಪಟೇಲರು ಅಧ್ಯಕ್ಷರು. ಗಾಂಧೀಜಿಯವರು ಒಂದು ಸಂದೇಶವನ್ನು ಕಳುಹಿಸಿ ... ಅಷ್ಟ



ಸರದಾರ್ ವಲ್ಲಭಾಯಿ ಪಟೇಲರವರು

ಅಹಮ್ಮದಾಬಾದ್ ನಗರ ಸಭೆಯ ಶತಮಾನೋತ್ಸವದ ಅಧ್ಯಕ್ಷರು

ಬಾಬಾದ್ ಮ್ಯುನಿಸಿಪಾಲಿಟಿಯ ಪಾಯಖಾನೆಗಳೆಲ್ಲ ಸ್ವಚ್ಛಭಂಡಾರಗಳಂತೆ ಶುದ್ಧವಾಗುವ ದಿನವೂ, ಅದರ ಮಾರ್ಗಗಳು ಪರಿಶುದ್ಧತೆಯ ಮಾದರಿಯಾಗುವುದನ್ನೂ, ಅದರ ಮಕ್ಕಳೆಲ್ಲ ಶಾಲೆಗೆ ಹೋಗುವ ದಿನವನ್ನೂ ನಾನು ನಿರೀಕ್ಷಿಸುತ್ತಿದ್ದೇನೆ. ಅಲ್ಲಿಯ ಮರಣಸಂಖ್ಯೆಯು ಕಡಿಮೆಯಾಗಲಿ. ದೊಡ್ಡ ಜನರು ಬಡವರೆಂಬ ಭೇದ ವಿರಿದಿರಲಿ. ಕೂಲಿಗೂ ಧಂಡವಾಳಕ್ಕೂ ವ್ಯತ್ಯಾಸವಿರದಿರಲಿ. ನಗರದ ಅಧ್ಯಕ್ಷರು ಮಿಲುಗಳು ಯೋಗ್ಯವಾದ ಗೃಹಗಳನ್ನು ಕೆಲಸಗಾರರಿಗೆ ಕಟ್ಟಿಸಿಕೊಡುವ ದಿನಗಳು ಬರಲಿ. ಶ್ರೀಯುತ ವಲ್ಲಭಭಾಯಿಯವರಿಗೂ ಬೇಕಾದುದು ಇದೇ ಎಂದು ತಿಳಿಸಿರುವರು. ಸರ್ದಾರ ವಲ್ಲಭಭಾಯಿಯವರು ಭಾಷಣಮಾಡಿ 'ಅಹ್ಮದಾಬಾದ್ ನಗರವನ್ನು ಸರಕಾರವು ಅಲಕ್ಷಿಸಿದರೂ ಜನರು ಅಲಕ್ಷಿಸಬಾರದೆಂದು ಸಾರ್ವಜನಿಕ ಸಭೆಗೆ ತಿಳಿಸಿದರು.

ಲಂಡನ್ ಒಪ್ಪಂದ

ಎಂಗ್ಲೊ ಜರ್ಮನ್ ಮಾತುಕತೆ.

ಸರ್ ಜೋನ್ ಸೈಮನರು ಬರ್ಲಿನಿಗೆ ಹೋಗುವರು

ಬರ್ಲಿನ್, ಮಾರ್ಚ ೩

ಬ್ರಿಟಿಷ್ ಫೋರಿನ್ ಸೆಕ್ರೆಟರಿಗಳಾದ ಸರ್ ಜೋನ್ ಸೈಮನರು ಬೇಗನೆ ಬರ್ಲಿನಿಗೆ ಹೋಗಲಿರುವರು. ಅಲ್ಲಿ ಜರ್ಮನ್ ವಿದೇಶೀಯ ಓಫೀಸಿನಲ್ಲಿ ಮಾತುಕತೆ ನಡೆಸಬೇಕೆಂದಿದ್ದಾರೆ. ಅವರು ಜರ್ಮನ್ ಚೆಂಸಲರ ಹಿಟ್ಲರರೊಡನೆ ಮಾತನಾಡಿ ಮಾರ್ಚ ೧೦ಕ್ಕೆ ಹಿಂದಿರುಗುವರು. ಕ್ಯಾಬಿನೆಟ್ ಎಂತೋನಿಯವರು ಅವರನ್ನು ಹಿಂಬಾಲಿಸುವರೆಂದು ಊಹಿಸಲಾಗಿದೆ. ಪ್ರಧಾನ ಮಂತ್ರಿಯವರು ಮಾಸ್ಕೋವಿಗೂ ಹೋಗಲಿರುವರೆಂದು ತಿಳಿಯಿತು.



ಶ್ರೀ ಕೆ. ಎಫ್. ನರಿಮನ್

ಮುಂಬಯಿ ಅನರರಿ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಶ್ರೀ ಕೆ. ಎಫ್. ನರಿಮನರ ಮೇಲೆ ಮಾನನಷ್ಟದ ದಾವೆಯನ್ನು ಹೂಡಿದ್ದರು. ... ಫ್ಲೇಕರ್ ಎಂಬುವರು ಈ ಮೊಕದ್ದಮೆಯನ್ನು ಹಿಂದೆಗೆದುಕೊಂಡರು. ... ಕೇಳಿಕೊಂಡರು. ಶ್ರೀ ನರಿಮನರು ಸಮ್ಮತಿಸಲಿಲ್ಲ.

ಪಂಡಿತ ಮಾಲವೀಯರ ಅಸ್ವಸ್ಥ

ತೊಡೆಯಲ್ಲಿ ಬೊಕ್ಕೆಯೆದ್ದು ಸಂಕಟ ಪಡುತ್ತಿರುವರು.

ಬೊನಾರೆಸ್ ಮಾರ್ಚ ೩

ಒಂದು ವಾರದಿಂದ ಪಂಡಿತ ಮಾಲವೀಯರ ತೊಡೆಯಲ್ಲಿ ಎರಡು ಬೊಕ್ಕೆಗಳೆದ್ದು, ನಡೆಯಲಾರದಷ್ಟು ಅಸ್ವಸ್ಥತೆಯಿಂದ ಸಂಕಟಪಡುತ್ತಿರುವರು. ಪಂಡಿತರು ಒಂದು ಕಾರಣದಿಂದ ಮಾಲವೀಯರನ್ನು ಪೇಶಾವರಕ್ಕೆ ಕರೆತರಲೊಲ್ಲೆವು ಎಂದು ಹೇಳಿದರು. ... ಅವರ ಆರೋಗ್ಯ ಸ್ವಲ್ಪ ಸುಧಾರಿಸಿದೆ.

ಸ್ಪೇನಿಶ್ ರಾಜಕುವರನ ವಿವಾಹ.

ಹೆಣ್ಣಿಗಾಗಿ ಸಿಂಹಾಸನವು ಬೇಡವೆಂದು ಖಂಡಿತ ಹೇಳಿದ

ರೋಮ್ ಮಾರ್ಚ ೩

ಸ್ಪೈನಿನ ಮಾಜಿ ಅರಸರಾದ ಕಿಂಗ್ ಅಲ್ಫೋನ್ಸರು ದೇಶಭ್ರಷ್ಟರಾಗಿರುವರಷ್ಟೆ. ಅವರ ಎರಡನೆಯ ಪುತ್ರನಾದ ಡೋನ್ ಜೈಮ್ ಎಂಬವನು ಎಮನುಲ್ ಡಿ ಡೆಂಪಿಯರ್ ಎಂಬ ತರುಣಿಯನ್ನು ವಿವಾಹವಾದನು. ವಿವಾಹಬಂಧ ಪತ್ರಿಕೆಗೆ ಸಹಿಯನ್ನಿಕ್ಕುವ ತನಗಿನ್ನು ಸ್ಪೈನಿನ ಸಿಂಹಾಸನವು ಬೇಡವೆಂದು ಅವನು ಬರೆದುಕೊಟ್ಟನು. ಅವನ ತಂದೆಯು ಕಡೆಯ ಮಂದಿಯೂ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ನಿರುದ್ಯೋಗ ದಿನಾಚರಣೆ

ಕಲ್ಕತ್ತಾದಲ್ಲಿ ಠರಾವುಗಳು.

ಕಲ್ಕತ್ತಾ, ಮಾರ್ಚ ೩

೭೦೦೦ ನಿರುದ್ಯೋಗಿಗಳು ಕಲ್ಕತ್ತದಲ್ಲಿ ಸಭೆಗೂಡಿ ಅಖಿಲಭಾರತ ನಿರುದ್ಯೋಗ ದಿನಾಚರಣೆಯನ್ನು ಮಾಡಿದರು. ಧಂಡವಾಳಗಾರರು ಆರ್ಥಿಕವಾಗಿ ಪರಿಷ್ಕಾರ ಮಾಡಲಾರರು. ಕಾರ್ಖಾನೆಗಳಲ್ಲಿ 7 ತಾಸುಗಳ ಕೆಲಸದ ಅವಧಿಯನ್ನಿಟ್ಟು ನಿರುದ್ಯೋಗವನ್ನು ತೊಲಗಿಸಬೇಕು. ಅಖಿಲ ಹಿಂದೂದೇಶದಲ್ಲಿ ನಿರುದ್ಯೋಗಿಗಳ ಚಳವಳಿನಡೆಸಬೇಕು ಎಂಬ ಠರಾವುಗಳಾದುವು.

ಉತ್ತರ ಹಿಂದೂಸ್ಥಾನದಲ್ಲಿ

ಪುನಃ ಭೂಕಂಪ!!!

ಮೊರದಾಬಾದ್, ಡಿಲ್ಲಿ, ಕಲ್ಕತ್ತಾ ಲಕ್ನೋ, ಬಾರೈಲಿಗಳಲ್ಲಿ ಭಯಂಕರ ಕಂಪನ'

ಎಲ್ಲೆಲ್ಲೂ ಹಾಹಾಕಾರ! ಜನರು ದಿಗಿಲುಬಿದ್ದರು

ಮೊರದಾಬಾದ್ ಮಾರ್ಚ ೩

ಈ ದಿನ ಪ್ರಾತಃಕಾಲ ೪ ಘಂಟೆಗೆ ಮೊರದಾಬಾದಿನಲ್ಲಿ ಭಯಂಕರ ಭೂಕಂಪವುಂಟಾಯಿತು. ಜನರು ದಿಗಿಲುಬಿದ್ದು, ಹಾಸಿಗೆ ಬಿಟ್ಟು ಮನೆಗಳ ಹೊರಗೆ ಓಡಿದರು. ಮನೆಮಂದಿರಗಳ ಕಿಟಿಕಿ ಬಾಗಿಲುಗಳು ಒಂದಕ್ಕೊಂದು ತಾಗಿ ಭೀತಿಮಯ ಶಬ್ದವಾಯಿತು. ಮನೆಯೊಳಗಿನ ಸಾಮಗ್ರಿಗಳು ಬಿದ್ದು ಹುಡಿಯಾದುವು. ಒಂದು ಕಿಟುವು ಹಾಸಿಗೆಯಿಂದ ಸೆಳೆಯಲ್ಪಟ್ಟು ಕೆಳಗೆ ಬಿದ್ದು ಜಖಂಗೊಂಡಿತು. ಹಲವು ಮನೆಗಳ ಗೋಡೆಗಳು ಒಡೆದುಹೋಗಿವೆ. ಕಟ್ಟಡಗಳು ವಿಶೇಷವಾಗಿ ಹಾಳಾಗಲಿಲ್ಲವೆಂದೂ ವಾರ್ತೆಯಿದೆ.

ಡಿಲ್ಲಿಯಲ್ಲಿ ಕಂಪನ

ನ್ಯೂಡಿಲ್ಲಿ ಮಾರ್ಚ ೩

ಈ ದಿನ ಇಲ್ಲಿಯೂ ಬಲವತ್ತರವಾದ ಭೂಕಂಪವುಂಟಾಯಿತು. ಪ್ರಾತಃಕಾಲ ನಾಲ್ಕು ಘಂಟೆಯ ಕೆಲವು ನಿಮಿಷಗಳ ವರೆಗೆ ಇಲ್ಲಿಯ ಜನರು ಗಾಬರಿಗೊಂಡರು. ಪಟ್ಟಣವೆಲ್ಲಾ ಒಮ್ಮೆಲೇ ಎಚ್ಚತ್ತಿತು.

ಬಾರೈಲಿಯಲ್ಲಿ ಭೂಕಂಪ

ಜನರು ಕಂಗಾಲಾದರು

ಮಾರ್ಚ ೩

ಬಾರೈಲಿಯಲ್ಲಿ ಮಧ್ಯರಾತ್ರಿ ಭೂಮಿಯು ಎರಡು ಸಲ ಭಯಂಕರವಾಗಿ ಕಂಪಿಸಿತು. ಜನರೆಲ್ಲರೂ ಮನೆಗಳ ಹೊರಗೆ ಓಡಿಬಂದರು. ಹೀಗೆಯೇ ಭಯದಿಂದ ಪುನಃ ಮಲಗಲಿಲ್ಲ. ಪ್ರಾತಃಕಾಲ ೪ ಘಂಟೆಗೆ ಪುನಃ ಭೂಮಿಯು ನಡುಗಿ ಜನರ ಭಯವನ್ನು ಹೆಚ್ಚಿಸಲು ಕಾರಣವಾಯಿತು. ಪಟ್ಟಣದ ಒಂದು ಮನೆಯು ಬಿದ್ದು ನಾಲ್ವರು ಜಖಂಗೊಂಡರು. ಸ್ಟೇಶನ್, ಟೌನ್ ಹಾಲ್ ಮೊದಲಾದ ... ಈ ಕಂಪನದ ಪರಿಣಾಮ ...

ಕಲ್ಕತ್ತಾದಲ್ಲಿ ಭೂಕಂಪ

ಕಲ್ಕತ್ತಾ ಮಾರ್ಚ ೩

ಅಲಿಪುರದ ಸಿಸ್ಮೊಗ್ರಾಫಿನಿಂದ ತಿಳಿದುಬರುವಂತೆ ಕಲ್ಕತ್ತಾದಿಂದ ೬೦೦ ಮೈಲುಗಳ ದೂರದಲ್ಲಿ ಪಶ್ಚಿಮ ನೇಪಾಳದಲ್ಲಿ ಭೂಕಂಪವಾಯಿತೆಂದು ತಿಳಿದು ಬಂದಿದೆ. ಕಟ್ಟಡಗಳಿಗೆ ಹಾನಿ ತಟ್ಟಲಿಲ್ಲ. ಲಕ್ನೋವಿನಲ್ಲಿಯೂ ಇದೇ ರೀತಿ ಭೂಮಿಯು ಕಂಪಿಸಿತು. ವಿಶೇಷ ಹಾನಿಯಾಗಲಿಲ್ಲ.

ಮಾಜಿ ಮಂತ್ರಿಯವರ ಮೇಲೆ ಮೊಕದ್ದಮೆ.

ವಿಯೆನ್ನಾ, ಮಾರ್ಚ, ೩

೧೯೩೪ರ ಜುಲಾಯಿ ೨೫ರಲ್ಲಿ ಆಸ್ಟ್ರಿಯಾದಲ್ಲಿ ಕ್ರಾಂತಿಯು ನಡೆದಾಗ ಚಾನ್ಸಲರ್ ಡೊಲ್ಫಸರ ಕೊಲೆಯಾಯಿತಷ್ಟೆ! ಈ ಕೊಲೆಗೆ ಪ್ರೇರಕರೂ, ಪಿತೂರಿಗಾರರೂ ಡಾ॥ ಅಂತೋನ್ ರಿಂಟೆಲೆನ್ ಎಂಬವರೆಂದು ಅವರನ್ನು ಸೆರೆಹಿಡಿಯಲಾಯಿತು. ಇವರು ಅಲ್ಲಿಯ ಮಾಜಿ ವಿದ್ಯಾ ಮಂತ್ರಿಗಳು. ನಾಜಿಗಳಿಗೆ ದೇಶದ ಅಧಿಕಾರವನ್ನು ತಾನು ಕೊಡುವೆನೆಂದು ಇವರು ಹೇಳಿ ಒಳಸಂಚಿನಲ್ಲಿ ದ್ದಾರೆಂಬುದೇ ಆರೋಪ, ಮಿಲಿಟರಿ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ. ರಿಂಟೆಲೆನ್‌ನವರು ತಾನು ತಪ್ಪಿತಸ್ಥನಲ್ಲವೆನ್ನುತ್ತಿರುವರು.

ಲೇಡಿ ಯಂಗರ ಸುದ್ದಿಯಿಲ್ಲ

ವಿಮಾನಗಳು ಹುಡುಕಿ ಸೋತುವು.

ಊಸಾಕಾ ಮಾರ್ಚ, ೩

ಉತ್ತರ ರೋಡೇಶಿಯಾದ ಗವರ್ನರಿಂದ ಸರ್ ಹ್ಯೂಬರ್ಟ ವಿಂಟ್ರಿಪ್ ಯಂಗ್‌ರವರ ಪತ್ನಿಯಾದ ಲೇಡಿ ಯಂಗರು ದಾ॥ ಕಿರ್ ಎಂಬವರೊಡನೆ (ಇವರು ಸರಕಾರೀ ವೈದ್ಯರು) ಗಂಡನಿರುವ ದೇಶಕ್ಕೆ ವಿಮಾನದ ಮೂಲಕ ತಾ ... ನೇ ದಿನ ತೆರಳಿದರು. ಎರಡು ದಿವಸ ದಿನಗಳಾದರೂ ಅವರು ಎಲ್ಲಿ ಇಳಿದರೆಂಬ ವರ್ತಮಾನವು ಇಲ್ಲದಿರುವುದರಿಂದ ಅವರನ್ನು ಹುಡುಕ ಹೊರಟ ವಿಮಾನಗಳು ಪತ್ತೆಹಚ್ಚಲಾರದೆ ಹಿಂತಿರುಗಿದುವು.

ಸಾಲಗಾರರಿಗೆ ರಕ್ಷಣೆ

ಪಂಜಾಬಿನ ಕೌನ್ಸಿಲಿನಲ್ಲಿ ಹೊಸ ಠರಾವು

ಲಾಹೋರ್ ಮಾರ್ಚ ೩

ಸಾಲಗಾರರಿಗೆ ಇನ್ನು ಹೆಚ್ಚಿನ ಸಂರಕ್ಷಣೆಯನ್ನು ಕಲ್ಪಿಸಿಕೊಡುವುದಕ್ಕಾಗಿಯೂ ಅನವಶ್ಯಕತೆಯನ್ನು ಮಾಡಬಾರದೆಂದೂ ವ್ಯಾಪಾರಿಯಿಂದ ಬರಲಿರುವ ... ಪಂಜಾಬ ಕೌನ್ಸಿಲಿನಲ್ಲಿ ಚೌಧುರಿ ಚೋಟುರಾಂರವರು ಒಂದು ಶಾಸನದ ಠರಾವನ್ನು ತಂದಿರುವರು. ಈ ಶಾಸನದಂತೆ ಋಣದಾರರೊಬ್ಬ ರಿಂದಿನ ... ಸಾಲಗಳಿಗಾಗಿ ... ನ್ಯಾಯಾಲಯಕ್ಕೆ ಹೋಗಲು ಇಲ್ಲ.

ಮೊಗವೀರ ವ್ಯವಸಾಯಕ ಮಂಡಳಿ, ಮುಂಬಯಿ

ತಾ ೨೦—೨—೧೯೩೪ರಲ್ಲಿ ಜರಗಿದ ಈ ಮಂಡಳಿಯ ಆಡಳಿತ ಸಭೆಯ ... ಶ್ರೀ ... ವರ ಅಧ್ಯಕ್ಷತೆಯಲ್ಲಿ ... ಮೊಗವೀರ ಫ್ರೀ ನೈಟ್ ಸ್ಕೂಲಿನ ಉಪಾಧ್ಯಾಯರಾಗಿಯೂ ... ಬಹು ಉತ್ಸಾಹದಿಂದಲೂ ... ಮಂಡಳಿಯ ಸೇವೆಯನ್ನು ಹಲವು ವರ್ಷದಿಂದ ಮಾಡುತ್ತಿದ್ದ ... ಶ್ರೀ ... ದಂತೆ ... ೧೯೩೪ರಲ್ಲಿ ... ಮಂಡಳಿಗೆ ವಿಪರೀತ ನಷ್ಟವುಂಟಾಗಿರುವುದನ್ನು ... ಸಭ್ಯರೆಲ್ಲರೂ ... ಈ ದಿವಂಗತರ ಕುಟುಂಬದವರ ದುಃಖಭಾಗಿಗಳಾಗಲೆಂದು ... ತಂದೆ ... ಆತ್ಮಕ್ಕೆ ಸದ್ಗತಿಯನ್ನು ... ಈಶನಲ್ಲಿ ಪ್ರಾರ್ಥಿಸಿಕೊಂಡು ... ಸಭಾಕಾರ್ಯವನ್ನು ... ಮುಗಿಸಲಾಯಿತು.

ಸ್ವೀಕಾರ.

"ಬಾಲಚಂದ್ರ" ಮಾಸಪತ್ರಿಕೆ. ಉಡುಪಿ ದಕ್ಷಿಣ ಕನ್ನಡ ಜಿಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದಿಂದ ಹೊರಡುತ್ತಿರುವುದು.

ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ರೂ ೧—೦—೦

"ಚಾರಿತ್ರಿಕ ಬಂಧು" ಮಾಸಪತ್ರಿಕೆ—೩೩೪ ಸೆಂಡ್ ಹರ್‌ಸ್ಟ್ ರೋಡ್, ಮುಂಬಯಿ ೪, ವಾರ್ಷಿಕ ಚಂದಾ ರೂ. ೧—೮—೦

ಜಿಲ್ಲಾ ಬೋರ್ಡಿಗೆ ಶ್ರೀ| ಪುಂಜರ ಅಮೋಘ ಸೂಚನೆ!

ಬೋರ್ಡಿನಲ್ಲಿ ಹಣ ಕಡಿಮೆಯಾದರೆ— ಸೋದ್ತಿಯನ್ನು ಕೊಡಗೋಣವೆಂದು ಶ್ರೀ ಪುಂಜರು ಸೂಚಿಸಿರುತ್ತಾರೆ. ಅದಕ್ಕೆ ಕೆಲವೊಂದು ಮಂದಿ ಚತುರರಾದ ಸದಸ್ಯರ ಬೆಂಬಲವು ಇತ್ತು. ತಾರೀಕು ೨–೩–೧೯೩೪ರ ಜಿಲ್ಲಾ ಬೋರ್ಡಿನ ಸಭೆಯಲ್ಲಿ ಈ ಸೂಚನೆಯು ಬಂದಿತಂತೆ!

ಬೋರ್ಡಿನವರು, ಗನ್ ಬೋಟಿಚಾಳರನ್ನು ಕರೆಯಿಸಿ, ಅವರೊಂದಿಗೆ ಶಾಲಿನ ವ್ಯಾಪಾರ ನಡೆಯಿಸಿದರೆ, ಸಾಕಷ್ಟು ಲಾಭವಾಗದೇನು? ಸರಿಯಾಗಿ ಆಡಳಿತೆ ನೋಡಲಾರದೆ, ಆಯಕ್ಕಿಂತ ವಿಶಾರಿ ವ್ಯಯಿಸುವ ಸಂಸ್ಥೆಗಳಿಗೆ, ಜುಗಾರಿಯ ಮೇಲೆ ವಿಶ್ವಾಸಬರುವುದರಲ್ಲಿ ಆಶ್ಚರ್ಯವೇನು? (ಬಾತ್ಮಿ.)

ಮಂಗಳೂರು.

ಮಂಗಳೂರು ಡಿಸ್ಟ್ರಿಕ್ಟ್ ಕ್ಲಾಸಸ್ ಮಿಶ್ಯನಿನ ಮಾನಾರ್ಥ ಕಾರ್ಯದರ್ಶಿಯವರಾದ ಶ್ರೀ| ಎಸ್. ಆರ್ ವೆಂಕಟ್ರಮಣ, ಬಿ, ಎ, ಬಿ ಎಲ್. ಇವರು ಮಿಶ್ಯನಿನ ಕಾರ್ಯಕಲಾಪಗಳ ಕುರಿತು ಇದೇ ತಾ. ೯ನೇ ಶನಿವಾರ ಸಂಜೆ ೬–೩೦ಕ್ಕೆ ಮಹಿಳಾ ಸಭೆಯಲ್ಲಿ ಮಾಯಾಲಾಂಧ್ರಪ್ರದರ್ಶನ ಮಾಡಿ ಭಾಷಣ ಮಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ದಿ ಮಂಗಳೂರು ಕಾಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಇದೇ ಮಾರ್ಚ ತಾ. ೧೬ರಿಂದ ಏಪ್ರಿಲ್ ಪೂರ್ತಿಯೊಳಗೆ ಟೆನ್ನಿಸ್ ಪಂದ್ಯಾಟವು ಪ್ರಾರಂಭವಾಗಲಿದೆ. ಈ ಪಂದ್ಯಾಟದಲ್ಲಿ ದಕ್ಷಿಣ ಹಿಂದೂಸ್ಥಾನದವರು ಭಾಗವಹಿಸಬಹುದೆಂದು ಪ್ರಕಟಿಸಲಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸ ಲಿಚ್ಛಿಸುವವರು ಇದೇ ತಾ. ೧೨ರೊಳಗೆ ತಮ್ಮ ಹೆಸರು ವಿಳಾಸಗಳನ್ನು (ಸಿಂಗಲ್ಸಿಗೆ ರೂ ೩, ಡಬ್ಬಲ್ಸಿಗೆ ರೂ. ೫) ಪ್ರವೇಶಧನಸಹಿತ ಕಳುಹಿಸಬೇಕೆಂದು ಟೋರ್ನಮೆಂಟ್ ಕಮಿಟಿಯವರು ತಿಳಿಸುತ್ತಾರೆ.

ದಿವಂಗತ ಅಮ್ಮೆಂಬಳ ಉಪೇಂದ್ರಪ್ಪ, ಬಿ, ಎ, ಸಿ ಸಿ ಎಸ್. ಇವರ ಅಕಾಲಮರಣದಿಂದ ಉಂಟಾದ ಶೋಕವನ್ನು ಪ್ರದರ್ಶಿಸುವುದಕ್ಕಾಗಿ ಇದೇ ತಾ ೧೧ನೇ ಆದಿತ್ಯವಾರ ಸಾಯಂಕಾಲ ೫ ಘಂಟೆಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಒಂದು ಸಾರ್ವಜನಿಕ ಸಭೆಯು ರಾ| ದಿವಾನ್ ಬಹದ್ದೂರ್ ಬಿ. ವೆಂಕಟ್ರಾವ್ ಅವರ್ಗಳ್, ಬಿ ಎ, ಬಿ ಎಲ್. (ನಿವೃತ್ತ ಡಿಸ್ಟ್ರಿಕ್ಟ್ ಜಡ್ಜ) ಇವರ ಅಧ್ಯಕ್ಷತೆಯಲ್ಲಿ ಜರಗುವದು. ದಿವಂಗತರ ಶಾಲೆಯ ಹಳೇವಿದ್ಯಾರ್ಥಿಗಳೂ, ಅವರ ಮಿತ್ರರೂ ಸಹಕರಿಸಬೇಕಾಗಿ ವಿನಂತಿ.

ಇದೇ ತಾ. ೧೧ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೮ಕ್ಕೆ ಮಂಗಳೂರು ಸಿಟಿ ಆರ್ಯಸಮಾಜ ಮಂದಿರದಲ್ಲಿ ಶ್ರೀ| ಎ. ಬಾಲಕೃಷ್ಣ ನಾಯಕರವರು ‘ಧರ್ಮವೂ ರಾಜನೀತಿಯೂ’ ಎಂಬ ಕುರಿತು ಕನ್ನಡದಲ್ಲಿ ಭಾಷಣಮಾಡುವರು ಸರ್ವರಿಗೂ ಸುಸ್ವಾಗತವಿದೆ.

ತಾ. ೨೪ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೬ ಮರಣಗಳೂ ೩೧ ಜನನಗಳೂ ಆಗಿವೆ. ಸಿಡುಬು ರೋಗವು ಶಾಂತವಾಗುತ್ತಾ ಇದೆ.

ಮಂಗಳೂರು ಆರ್ಯ ಸಮಾಜದ ಹದಿನೇಳನೇ ವಾರ್ಷಿಕೋತ್ಸವವು ಕಳೆದ ಆದಿತ್ಯವಾರ ಸನ್ಯಾಸಿಗುಡ್ಡೆಯಲ್ಲಿ ಸಮಾಜಮಂದಿರದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಪ್ರಾತಃಕಾಲ ನಗರ ಸಂಕೀರ್ತನೆಯಾಗಿ ಮಂದಿರದ ಎದುರು ಆರ್ಯಮಹಿಳೆಯರು ವೇದ ಧ್ವಜಾರೋಹಣ ಮಾಡಿದರು. ನಂತರ ಹವನಸಂಧ್ಯಾವಂದನಾದಿಗಳು ನಡೆದು, ಶ್ರೀ| ಯು. ಗೋಪಾಲ ನಾಯಕರು ಈಶ್ವರೋಪಾಸನೆ ಮಾಡಿದರು. ಪೂರ್ವಾಹ್ನ ೯ ಘಂಟೆಗೆ ಬ್ರಹ್ಮಶ್ರೀ ಸಿದ್ಧೋಡಿ ಅನಂತ ಉಪಾಧ್ಯರು ವೇದೋಪದೇಶವನ್ನು ಮಾಡಿ ಮಾನವ ಸಮಾಜದ ಅಭಿವೃದ್ಧಿಗೆ ಅಗತ್ಯವುಳ್ಳ ಎಲ್ಲಾ ವಿಷಯಗಳನ್ನು ವೇದಮಂತ್ರಗಳು ಸ್ಫೂರ್ತಿದಾಯಕವಾದ ವಾಣಿಯಿಂದ ಹೇಗೆ ಬೋಧಿಸುತ್ತವೆ ಎಂಬುದನ್ನು ವಿವರಿಸಿ ಚಿತ್ತಾಕರ್ಷಕವಾದ ಭಾಷಣ ಮಾಡಿದರು. ೧೧ ಘಂಟೆಗೆ ಶ್ರೀಯುತ ಮೋಹನಪ್ಪ ತಿಂಗಳಾಯರು ವಿಶ್ವಧರ್ಮದ ಕುರಿತು ಭಾಷಣವಿತ್ತು, ಲೋಕದ ಎಲ್ಲಾ ಮತಗಳ ತುಲನಾತ್ಮಕ ವಿಚಾರವನ್ನು ಮಾಡಿದರು. ಮಧ್ಯಾಹ್ನ ೧–೩೦ ಘಂಟೆಗೆ ಹಿಂದೂಗಳ ಎಲ್ಲಾ ಪಂಗಡದ ಸುಮಾರು ೬೫೦ ಜನರು ಸಹಪಂಕ್ತಿ ಭೋಜನ ಮಾಡಿದರು. ೩॥ ಘಂಟೆಗೆ ಪ್ರೊಫೆಸರ್ ಕೆ. ವೆಂಕಟ್ರಾಯರು ತುಕಾರಾಮದಾಸ ಮೊದಲಾದ ಭಕ್ತರ ಅಭಂಗಗಳನ್ನು ಹಾಡಿ, ಮನೋರಂಜಕವಾದ ಹರಿಕಥಾ ಪ್ರಸಂಗವನ್ನು ಮಾಡಿದರು. ಸಾಯಂ ೫ ಘಂಟೆಗೆ ಶ್ರೀ| ಎಂ. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಶ್ರೀಮತಿ ಆನಂದಿಬಾಯಿ, ರೆವೆರೆಂಡ್ ಸುಬ್ಬುಕೃಷ್ಣಯ್ಯ ಮತ್ತು ಶ್ರೀ| ದಶಧರ್ಮಾಯರೂ ಸ್ವಾಮಿ ದಯಾನಂದರ ಜೀವನ ಚರಿತ್ರೆ ಮತ್ತು ಬೋಧನೆಗಳ ಕುರಿತು ಭಾಷಣಗಳನ್ನು ಮಾಡಿದರು.

ಈ ಮೊದಲು ಮಂಗಳೂರು ಸನ್ಯಾಸಿಗುಡ್ಡೆಯ ಆರ್ಯಸಮಾಜ ಮಂದಿರದಲ್ಲಿ ಶುದ್ಧಿಹೊಂದಿದ ‘ಧರ್ಮಾನಂದ ರಾವ್’ ಎಂಬವರೊಬ್ಬರು ಸಿಟಿ ಆರ್ಯ ಸಮಾಜದ ಹೆಸರಲ್ಲಿ ಹಣಸಂಗ್ರಹಿಸಲು ಹೊರಟಿರುವರೆಂದು ತಿಳಿದು ಬಂದಿದೆ. ಇವರ ವಶ ಮಂಗಳೂರು ಸಿಟಿ ಆರ್ಯಸಮಾಜದ ಬಗ್ಗೆ ಯಾರಾದರೂ ಹಣ ಕೊಟ್ಟರೆ ಅದಕ್ಕೆ ನಾವು ಜವಾಬ್ದಾರರಲ್ಲವೆಂದೂ, ಜಪ್ಪು ಮಾರ್ಕೆಟು ಬಳಿಯಿರುವ ಶ್ರೀ| ಕೆ. ತಣಿಯಪ್ಪ, ಗೋರಕಟ್ಟೆ ಬಜಾರಿನಲ್ಲಿರುವ ಶ್ರೀ| ಬಸ್ತಿ ದಾಸಪ್ಪ ಶೆಟ್ಟಿ, ಬಡವರ ಬಂಧು ಕಾರ್ಯಾಲಯದಲ್ಲಿರುವ (ಹಂಪನಕಟ್ಟೆ) ಬಿ ನರ್ಸಪ್ಪ, ಕೊಡಿಯಾಲ್ ಬೈಲಲ್ಲಿರುವ ಕೆ. ಸಂಜೀವ ಭಂಡಾರಿ, ಇವರುಗಳ ವಶ ಕೊಡಬೇಕೆಂದೂ ವಿನಂತಿಮಾಡಿಕೊಳ್ಳುತ್ತೇವೆ ಎಂದೂ ವಾರ್ಷಿಕೋತ್ಸವದ ನಿಶ್ಚಿತ ಕಾರ್ಯಕ್ರಮ ಮತ್ತು ತಾರೀಕನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದೆಂದೂ ಸಿಟಿ ಆರ್ಯ ಸಮಾಜದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇಲ್ಲಿಯ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿನ ಶಿವರಾತ್ರಿ ಮಹೋತ್ಸವವು ಸುಮಾರು ೨೦,೦೦೦ ಜನರ ನೆರವಿನಿಂದ ಸುಗಮವಾಗಿ ಜರಗಿತು.

ತಾಲೂಕುಗಳಿಂದ

ಮುಲ್ಕಿ—ಸ್ಥಳೀಯ ಶ್ರೀ ದುರ್ಗಾದೇವಿ ಟ್ರೈನ್ಯಾಟ್ ಸ್ಕೂಲಿನ ಪರವಾಗಿ ಏರ್ಪಡಿಸಿದ ಸೋದ್ತಿಯು ಇದೇ ಮಾರ್ಚ ತಾ. ೩ರಲ್ಲಿ ಅಪರಾಹ್ನ ಘಂಟೆ ೪ಕ್ಕೆ ಸ್ಥಳೀಯ ಮನೋರಮಾ ಹಾಲಿನಲ್ಲಿ ಬಹಿರಂಗವಾಗಿ ತೆಗೆಯಲ್ಪಟ್ಟಿತು. ನಿರ್ದಿಷ್ಟ ಟಿಕೇಟುಗಳಲ್ಲಿ ಸೇಕಡಾ ೫೦ರಷ್ಟು ಮಾತ್ರ ಮಾರಲ್ಪಟ್ಟುದರಿಂದ ಎಲ್ಲಾ ಇನಾಮುಗಳನ್ನು ಅರ್ಧಕ್ಕೆ ಇಳಿಸಿದುದಲ್ಲದೆ, ರೂ. ೫೦ ಎಂಟು ಇನಾಮುಗಳನ್ನೂ, ರೂ ೩–೮ ೧೦ ... ಗಳನ್ನೂ ಹೆಚ್ಚಿಸೋಣಾಯಿತು. ಪ್ರಥಮ ಬಹುಮಾನ ರೂ. ೫೦೦/ ಮುಂಬಾಯಿಯ ಶ್ರೀ| ಕೃಷ್ಣಪ್ಪ ಗುರುಂಜ ಎಂಬವರಿಗೂ, ದ್ವಿತೀಯ ಬಹುಮಾನ ರೂ ೨೫೦/ ಶ್ರೀ| ಬಪ್ಪನಾಡು ಲಕ್ಷ್ಮೀನಾರಾಯಣ ಎಂಬವರಿಗೂ, ರೂ. ೫೦/೮ ಎರಡು ಬಹುಮಾನಗಳಲ್ಲಿ ಒಂದು ಮುಂಬಾಯಿಗೂ ಇನ್ನೊಂದು ಹಳೆಯಂಗಡಿಗೂ, ರೂ ೨೫/೮ ಮೂರು ಬಹುಮಾನಗಳಲ್ಲಿ ಎರಡು ಮುಂಬಾಯಿಗೂ ಮೂರನೇದು ಸ್ಥಳೀಕ ನಿವಾಸಿಗೂ ಬಂದಿವೆಯೆಂದು ತಿಳಿದುಬರುತ್ತದೆ.

ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಭೆಯು ಇದೇ ಕಳೆದ ತಾ. ೩ನೇ ಶನಿವಾರ ನಿರ್ದಿಷ್ಟ ಸಮಯಕ್ಕೆ ಕಿಲ್ಪಾಡಿ ಬೋ| ಜನರಲ್ ಶಾಲೆಯಲ್ಲಿ ಇಲ್ಲಿಯ ವೃದ್ಧ ಉದ್ಯೋಗಸ್ಥರಾದ ಶ್ರೀ| ಎಂ ಉಮೇಶರಾವ್, ಎಲ್ ಎಂ, ಎಂಡ್ ಎಸ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಸಭೆಯು ಇದೇ ತಾ. ೩೦–೩–೩೪ನೇ ಶನಿವಾರ ಹೆಜಮಾಡಿ ಬೋ| ಜನರಲ್ ಶಾಲೆಯಲ್ಲಿ ಕೂಡಲಿರುವುದು.

ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಮಾಜಿ ಟ್ರಸ್ಟಿಗಳು ಸದ್ರಿ ದೇವಳದ ಮನೇಜರ ರಾ| ಉ ಎನಮನ ಶೆಣೈಯವರಿಗೆ ಕೊಟ್ಟ ಹೊಣೆಯಿಂದ ಅವರ ಅಧಿಕಾರಕ್ಕೆ ಮುಕ್ತಿದ್ದಂತಲೂ, ಅದನ್ನು ಭಂಡಾರಕ್ಕೆ ತೆರತಕ್ಕದ್ದೆಂತಲೂ ಪ್ರಸ್ತುತದ ಟ್ರಸ್ಟಿಗಳು ಕಾರ್ಕಳ ದಿ| ಮುನ್ಸಿಫ್ ಕೋರ್ಟಿನಲ್ಲಿ ದಾಖಲ್ಲು ಮಾಡಿದ ದಾವೆಯು ಡಿಸಮಿಸ್ ಮಾಡಲ್ಪಟ್ಟಿತಾಗಿ ತಿಳಿಯುತ್ತೇವೆ. ಇಂಥಾ ಸಂಸ್ಥಾನದಲ್ಲಿ ಇನ್ನುಮುಂದಾದರೂ ಇಂಥಾ ದುರ್ವ್ಯಾಜ್ಯಗಳು ಉಂಟಾಗಿ ದುರ್ವ್ಯಯವಾಗದಂತೆ ಆ ದೇವರು ನಡೆಸಲಿ.

ಬಂಟ್ವಾಳ—ಮುಸಿರುಲ್ ಇಸ್ಲಾಂ ಮದ್ರಸಿನ ಉಪಾಧ್ಯಾಯರು ವಾಡಿಕೆಯಂತೆ ರಮ್‍ಜಾನ್ ತಿಂಗಳ ರಜೆಯ ಮೇಲೆ ಸ್ವಊರಿಗೆ ಹೋಗಿ ಬಂದು, ಮದ್ರಸ್ಸು ಪ್ರಾರಂಭಿಸುವರೆ ತಮ್ಮದ್ದೆ ಸದ್ರಿಯವರ ತೀರ್ಥರೂಪರು ಅಕಸ್ಮಾತ್ ಸ್ವರ್ಗಸ್ಥರಾದರೆಂಬ ವರ್ತಮಾನ ತಂತಿಯ ಮೂಲಕ ತಿಳಿದೊಡನೆ ಪುನಹ ಒಂದು ತಿಂಗಳ ರಜೆ ಪಡೆಕೊಂಡು ಊರಿಗೆ ಹೋಗಿರುವರು.

ಕಿನ್ನಿಗೋಳಿ—ಇದೇ ತಾ. ೧೮ರಲ್ಲು ಇಲ್ಲಿಯ ನೇಶನಲ್ ಕ್ಲಬ್ಬಿನ ಪರಾರದಲ್ಲಿ ರಾತ್ರಿ ೯ ಘಂಟೆಗೆ ಶ್ರೀ| ಮೈಸೂರು ಗಂಗಾಚಾರ್ಯರವರಿಂದ “ಭಕ್ತ ರಾಮದಾಸ” ಎಂಬ ಹರಿಕಥೆಯು ನಡೆಯಿತು.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮ| ರಾ| ಯು. ಸುಬ್ರಹ್ಮಣ್ಯ ಭಟ್ರು ತಂದ ಮಸೂದೆ ಬಿಲ್ಲಿನ ಕುರಿತು ಚರ್ಚಿಸಲು ಒಂದು ಸಭೆಯು ರಾ| ತಾಳಿಪಾಡಿ ಗುತ್ತು ಸೋಮಪ್ಪ ಶೆಟ್ರು ಅಧ್ಯಕ್ಷತೆಯಲ್ಲಿ ಜರಗಿ, ಕುದೆಪ್ಪೂರು ಬಾಬುರಾಯರು ಸದ್ರಿ ಬಿಲ್ಲು ಮಠಗಳಿಗೆ ಹೆಚ್ಚಿನ ಹಾನಿ ತರುವಂಥಾದ್ದೆಂಬ ವಿವರಿಸಿ ಹೇಳಿ, ಅದು ಜ್ಯಾರಿಗೆ ಬಾರದಂತೆ ನಾವು ಪ್ರಯತ್ನಿಸಬೇಕಾಗಿ ಹೇಳಿದರು.

ತಾ. ೪–೩–೩೪ರಲ್ಲು ಇಲ್ಲಿಯ ಮಹತೋಭಾರ ಕಟೀಲು ಲಾಂಛನದ ರಾ| ಸಾಲ್ಡನ್‍ಹ ರದ್ರಿಗ್ಸರ ಪುತ್ರ ದಿ ಫಾ| ಜೋಸೆಫ್ ರುದಿಗ್ಸರಿಗೆ ಗುರುಪಟ್ಟದ ಸಮಾರಂಭವು ಬಹು ವಿಜೃಂಭಣೆಯಿಂದ ನಡೆಯಿತು. ಬಂದ ನೆಂಟರಿಷ್ಟರಿಗೆ ಭೋಜನಸಮಾರಂಭವು ಇತ್ತು.

ಮೊಂಡ್ಕೂರು:—ತಾ ೫–೩–೩೪ರ ಮಧ್ಯಾಹ್ನ ಡಿ ಬೋ| ಪ್ರೆಸಿಡೆಂಟರು ಅಕಸ್ಮಾತ್ತಾಗಿ ಇಲ್ಲಿಯ ಹಾ| ಎ| ಶಾಲೆಯನ್ನು ಸಂದರ್ಶಿಸಿ ಹೋಗಿರುತ್ತಾರೆ. ಅವರು ಬಂದಾಗ್ಗೆ ಮುಖ್ಯೋಪಾಧ್ಯಾಯರು ಹಾಜರಿರಲಿಲ್ಲ.

ತಾ. ೩ನೇ ಬೆಳಿಗ್ಗೆ ಮಂಗಳೂರು ರಿಸೆಟ್ಲ್‍ಮೆಂಟ್ ತಹಶೀಲ್ದಾರರು ಇಲ್ಲಿಗೆ ಬಂದು ಕಿರ್ದೆ ಪಡಿದ ಕುರಿತು ಜನರ ಆಕ್ಷೇಪಣಾ ಅರ್ಜಿಗಳನ್ನು ತನಿಕೆಮಾಡುತ್ತಲಿದ್ದರೆ.

ಪೆರ್ಡೂರುಬಿದ್ರೆ:—ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ವರ್ಷಂಪ್ರತಿ ಜರಗುವ ಉತ್ಸವ ಸಂಬಂಧವಾದ ‘ಧ್ವಜಾರೋಹಣ’ವು ಇದೇ ಭಾವ ಸಂವತ್ಸರದ ಮೀನ ಸಂಕ್ರಮಣ (೧೪–೩–೩೪)ನೇ ಗುರುವಾರ ದಿನವೂ ಆಯನೋತ್ಸವ ಮತ್ತು ಕೆಂಡಸೇವೆ ದಿ ಬಡಗು ಬೆಟ್ಟು ಯಕ್ಷಗಾನ ಕಾಲಕ್ಷೇಪ ತಾ ೧೫ನೇ ಶುಕ್ರವಾರವೂ, ರಥಾರೋಹಣ ಉತ್ಸವವು ತಾ. ೨೧–೩–೩೪ನೇ ಗುರುವಾರ ದಿನವೂ, ಓಕುಳಿ ಮೆರವಣಿಗೆಯು ಮತ್ತು ‘ಚೆಂಡಾಟ’ ಉತ್ಸವವು ತಾ ೨೨–೩–೩೪ನೇ ಶುಕ್ರವಾರ ದಿವಸವೂ ಜರಗುವುದು.

ಕಲ್ಯ ಪ್ರ:—ಇಲ್ಲಿಯ ಬೋ| ಹಾ ಎಲಿಮೆಂಟರಿ ಶಾಲೆಯು ತನ್ನ ೬೩ನೇ ವರ್ಷಾವಧಿ ಮಹೋತ್ಸವವನ್ನು ಮಹನ್ಯ ಡಿ| ಬೋ| ಮೆಂಬರರಾದ ಪೊಳಲಿ ಶೀನಪ್ಪ ಹೆಗ್ಡೆ ಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಿತು.

ಕರಂದಾಡಿ:—ಇಲ್ಲಿಯ ಶ್ರೀರಾಮ ಎ| ಶಾಲೆಯ ವರ್ಧಂತ್ಯುತ್ಸವವು ಮ| ರಾ| ಉಳ್ಳಾಲ ಮಂಜೇಶರಾವ್ ಬಿ ಎ ಎಲ್ ಟಿ, ಇವರ ಅಧ್ಯಕ್ಷತೆಯಲ್ಲಿ ಇದೇ ಕಳೆದ ತಾ. ೨೪ನೇ ದಿನ ಬಹು ವಿಜೃಂಭಣೆಯಿಂದ ಜರಗಿತು. ಅಧ್ಯಕ್ಷರನ್ನು ಶಾಪಿನಿಂದ ಬಿರುದಾವಳಿಯಿಂದ ಇಲ್ಲಿಗೆ ಕರೆತಂದು ಸ್ವಾಗತಿಸಿ ಕಲುವಾಯಿ ಸಭಾಸತ್ಕಾರ ವಾಯಿತು. ವಿಷಯಸೂಚಿಯಲ್ಲಿರುವಂತೆ ಶಾಲಾ ವರದಿ, ಇನಾಮು ಹಂಚುವುದು, ಸ್ಕೌಟು ಶಿಬಿರಾಗ್ನಿ, ಸಭಿಕರ ಭಾಷಣಗಳಾದ ತರುವಾಯ, ಅಧ್ಯಕ್ಷರ ಭಾಷಣವಾಯಿತು. ಸ್ಕೌಟುಗಳ ಪ್ರಯೋಜನ, ಉತ್ಸವಗಳನ್ನು ಆಚರಿಸುವ ಆವಶ್ಯಕತೆ, ಶಾಲೆಯಲ್ಲಿ ಕಲಿಸಬೇಕಾದ ಉಪವೃತ್ತಿಗಳು ಮೊದಲಾದ ಕುರಿತು ಹಲವು ಮಾತುಗಳನ್ನಾಡಿ ಗ್ರಾಮ ಉನ್ನತಿ, ಅಂತೂ ದೇಶೋನ್ನತಿಯ ಕಡೆಗೆ ದೃಷ್ಟಿಯನ್ನಿಡುವುದು ಶ್ರೇಯಸ್ಕರವೆಂಬುದಾಗಿ ಅಧ್ಯಕ್ಷರು ಸಭಾನಂದವಾಗುವಂತೆ ಭಾಷಣವಿತ್ತರು.

ಕಾರ್ಕಳ:—ಇಲ್ಲಿಯ ಪ್ರಸಿದ್ಧ ಎಣ್ಣೆಯ ವ್ಯಾಪಾರಿಗಳಾದ ಶ್ರೀ| ಕೆ. ವೆಂಕಟೇಶಪ್ರಭುಗಳು ತಮ್ಮ ಜ್ಯೇಷ್ಠ ಪುತ್ರನು ಯಜ್ಞೋಪವೀತಧಾರಣ ಮಾಡಿದ ಸಂತೋಷಕ್ಕಾಗಿ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ಬಗ್ಗೆ ೫೦ ರೂಪಾಯಿಗಳ ಧನ್ಯಸಹಾಯವನ್ನಿತ್ತು ಉಪಕಾರ ಮಾಡಿರುವರು.

ಜಿಲ್ಲಾ ಬೋರ್ಡಿನ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಂಬಳದಲ್ಲಿ ಮತ್ತೂ ಕಡಿತವಾಗಲಿರುವುದೆಂದು ಕೇಳಿದ ಅಧ್ಯಾಪಕವರ್ಗದಲ್ಲಿ ತುಂಬಾ ಅಸಮಾಧಾನವುಂಟಾಗಿರುವುದು.

ವಿಟ್ಲ:—ತಾ. ೧–೩–೩೪ನೇ ದಿನ ಸ್ಥಳೀಯ ಬೋ| ಹಾ| ಎ| ಶಾಲಾ ವಾರ್ಷಿಕೋತ್ಸವವು ಬಾಲಕ ಬಾಲಕಿಯರ ವಿವಿಧ ವಿನೋದಾವಳಿಗಳಿಂದ ಬಹು ವಿಜೃಂಭಣೆಯಿಂದ ಉಡುಪಿಯಿಂದ ಬಂದ ಶ್ರೀ| ಕಾಸಾ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕೊಲನಾಡು:—ಸ್ಥಳೀಯ ‘ಹಯಾತುಲ್ ಇಸ್ಲಾಮಿ’ನ ಸಂಘದವರ ವಿಶೇಷ ಸಭೆಯೊಂದು ಜನಾಬ್ ಹಸನ್ ಶಾಫಿಯವರ ಅಧ್ಯಕ್ಷತೆಯಲ್ಲಿ ಕೂಡಿಬಂದು, ಮುಖ್ಯವಾಗಿ ಸಂಘದ ವಿದ್ಯಾರ್ಥಿವೇತನ ಫಂಡನ್ನು ಇನ್ನೂ ವೃದ್ಧಿಪಡಿಸಬೇಕೆಂದೂ, ಬರುವ ತಿಂಗಳಿಂದಲೇ ಖುರಾನ್ ವಿದ್ಯಾರ್ಥಿಗಳಿಗೆ ಯೋಗ್ಯರಿಂದ ಕೆಲವೇ ಮಂದಿಗಾದರೂ ವೇತನವನ್ನು ಕೊಡಬೇಕೆಂದೂ ನಿರ್ಣಯಿಸಲಾಯಿತು.

ಉಡುಪಿ:—ಇದೇ ತಾ ೪ನೇ ಸೋಮವಾರ ಸಂಜೆ ೫॥ ಘಂಟೆಗೆ ಸ್ಥಳೀಯ ಬೋ| ಹೈಸ್ಕೂಲಿನಲ್ಲಿ ಸದ್ರಿ ಶಾಲೆಯ ವರ್ಧಂತ್ಯುತ್ಸವವು ಮಿ| ಎಂ ಎಸ್ ಕೃಷ್ಣ, ಎಂ. ಎಲ್ ಸಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡು ಪ್ರೆಸಿಡೆಂಟರೂ ಹಲವು ಬೋರ್ಡ ಮೆಂಬರರೂ ಹಾಜರಿದ್ದರು ಅಲ್ಲದೆ, ೩೦೦ಕ್ಕೆ ಮೇಲ್ಪಟ್ಟು ಊರ ಸ್ತ್ರೀಪುರುಷರೂ, ಅಧಿಕಾರಿಗಳೂ, ಸಾಹುಕಾರ ಪ್ರಮುಖರೂ ನೆರೆದುಬಂದಿದ್ದರು. ಶಾಲಾ ಹುಡುಗಿಯರಿಂದ ಸ್ವಾಗತ ಹಾಡು ಹಾಡಲ್ಪಟ್ಟೊಡನೆ, ಅಧ್ಯಕ್ಷರ ಚುನಾವಣೆಯಾದೊಡನೆ, ಶಾಲಾ ಮುಖ್ಯೋಪಾಧ್ಯಾಯರಾದ ಮಿ| ಜೋಕ್ ಫೆರ್ನಾಂಡಿಸ್, ಬಿ ಎ ಎಲ್ ಟಿ ಇವರು ಶಾಲಾ ವರದಿಯನ್ನು ಓದಿದರು. ಶಾಲಾ ಅಭಿವೃದ್ಧಿ ಬಗ್ಗೆ ವರಿಕೆಗಳ ವಿವರದೊಡನೆ ಶಾಲಾ ಇನ್ಸಪೆಕ್ಟರರ, ಜಿಲ್ಲಾ ಬೋರ್ಡು ಅಧ್ಯಕ್ಷರ ರಿಮಾರ್ಕುಗಳೂ ಓದಲಾಯಿತು. ಶಾಲಾ ಅಧ್ಯಾಪಕರ, ಊರ ಮಹನೀಯರ ಹಾಗೂ ಜಿಲ್ಲಾ ಬೋರ್ಡಿನ ಸದಭಿಪ್ರಾಯ ಸಹಕಾರ ಪ್ರೀತಿವಿಶ್ವಾಸಗಳಿಂದ ದಿನೇ ದಿನೇ ವೃದ್ಧಿಗೊಳ್ಳುತ್ತಿರುವ ಈ ಶಾಲೆಗೆ ಅಟ್ಟಡ ಸಂಸ್ಕರಣ, ವಿಹಾರಸ್ಥಳ ಮುಂತಾದವುಗಳ ಬಗ್ಗೆ ಅಧಿಕಾರಿಗಳು ತೀವ್ರ ಗಮನಕೊಡುವರೆಂದು ಆಶಿಸಲಾಯಿತು.

ಅನಂತರ ಡಾ ಯು ಸುಂದರರಾವು ಪೈಯವರು ಸದ್ರಿ ಶಾಲೆಯ ಹಳೆ ವಿದ್ಯಾರ್ಥಿಗಳದ್ದು ‘ಶಾಲಾಭ್ಯುದಯ’ವನ್ನು ಹಾರೈಸಿ ಭಾಷಣವಿತ್ತರು. ಧಧ್ಯಕ್ಷರಾಗಿ ಮತ್ತು ಶಾಲಾ ಕಟ್ಟಡ ಅಧೀನದ ಬಟ್ಟೆಗೆ ಕಟ್ಟಲಾಗದ್ದೆ ಶಾಲೆಯ ಕಟ್ಟೋಣವು ವಿದ್ಯಾರ್ಥಿಗಳಿಗೆ ಸಲ್ಲತಕ್ಕದ್ದಲ್ಲವಾಗಿ, ಅಧಿಕಾರಿಗಳು ಈ ಮೊದಲು ಸ್ಪಷ್ಟಪಟ್ಟಿಗೆ ಬಾಗದ ಪೂರ್ತಿಕ ಮಾಡಿಕೊಟ್ಟದ್ದಕ್ಕಿಂತ ಹೆಚ್ಚಿನ ಮತ್ತು ತೀವ್ರ ವ್ಯವಸ್ಥೆಯನ್ನು ಮಾಡಿಯಾರೆಂದು ನಂಬಿ ಶ್ರೇಯಬಚನಗಳನ್ನಾಡಿದರು. ಆ ಮೇಲೆ ಮಿಸೆಸ್ ಎಂ ಎಸ್. ಕೃಷ್ಣರವರು ಶಾಲಾ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸದ್ರಿ ಶಾಲೆಯ ಅಭಿವೃದ್ಧಿಯನ್ನು ವಿವೇಚಿಸಿ, ನಮ್ಮ ಜಿಲ್ಲೆಯಲ್ಲಿ ಉಡುಪಿಯು ಎರಡನೆಯದಾದರೂ, ಕೆಲವು ಸಂಗತಿಗಳಲ್ಲಿ ಪ್ರಾಥಮ್ಯ ಹೊಂದಿರುತ್ತಾ, ಮುಂದಕ್ಕೆ ಬಹಳ ಅಭಿವೃದ್ಧಿಹೊಂದು ವುದಿರುತ್ತ, ಸದ್ರಿ ಶಾಲೆಯೂ ಶೀಘ್ರ ಪ್ರಗತಿಯನ್ನೂ ಶ್ರೇಯಸ್ಸನ್ನೂ ಹೊಂದಲೆಂದೂ, ಇದಕ್ಕೆ ತಕ್ಕುದಾಗಿ ಅಧಿಕಾರಿಗಳೂ ಊರವರೂ ತಕ್ಕ ಪ್ರೋತ್ಸಾಹವೀಯಲೆಂದೂ ಬಯಸಿ ಭಾಷಣ ಮಾಡಿದರು. ಕೊನೆಗೆ ವಿವಿಧ ವಿನೋದಗಳೂ ಶಾಲಾಧ್ಯಾಪಕರಾದ ಶ್ರೀ| ಕೋಟ ಶಿವರಾಮ ಕಾರಂತರಿಂದ ವಿರಚಿತವಾದ ‘ಪರೀಕ್ಷಣ’ವೆಂಬ ಕನ್ನಡ ನಾಟಕಾಭಿನಯವೂ ಆದೊಡನೆ, ರಾಷ್ಟ್ರಗೀತದಿಂದ ವರ್ಧಂತ್ಯುತ್ಸವವು ಮುಕ್ತಾಯವಾಯಿತು.

“ಉಡುಪಿ ಅಷ್ಟಮಠಗಳ ಪೈಕಿ ಶ್ರೀ ಕೃಷ್ಣಾಪುರ ಮಠವು ಧನಕನಕಾದಿಗಳಿಂದಲೂ ಭೂಸಂಪತ್ತಿನಿಂದಲೂ ಕುಂದಿಕೊಂಡಿದೆಯೆಂಬುದು ಎಲ್ಲರೂ ತಿಳಿದ ವಿಷಯ. ಇಂಥಾ ಮಠದ ಅಧಿಪತಿಗಳಾದ ಸ್ವಾಮಿಯವರು ವಿಶೇಷ ಆಯಿ ಇಯಲ್ಲಿದ್ದರೂ ಕೂಡಾ ಈ ವರೆಗೆ ಸನ್ಯಾಸಾಶ್ರಮವನ್ನು ಕೊಡದೆ ಇದ್ದುದನ್ನು ನೋಡಿ ಅತೀ ದುಃಖವಾಗುತ್ತಿದೆ. ಇನ್ನು ಮುಂದೆಯಾದರೂ ಯೋಗ್ಯ ಹುಡುಗನಿಗೆ ಉಪಕ್ರಮಕೊಟ್ಟು, ಮಠದ ಸಂಪತ್ತು ಅನಾಥವಾಗದೆ ಶ್ರೀ ಕಾಳಿಂಗಮರ್ದನ ಕೃಷ್ಣ ದೇವರ ಪೂಜೆಗೆ ಊನವಾಗದ ಹಾಗೆ ವ್ಯವಸ್ಥೆ ಮಾಡುವಂತೆ ಶ್ರೀ ಕೃಷ್ಣನು ಪ್ರೇರಿಸಲೆಂದು ಪ್ರಾರ್ಥಿಸುವೆವು” ಎಂದೊಂದು ಬಾತ್ಮಿ.

Notice.

In the Court of the District Munsiff of Kasaragod.

S. C. 1/35.

Beepathumma Aisabi, Mahomed Sha Mogral Khadijabi—Plaintiffs

Mammunhi Beary—Deft.

Please take notice that the Plaintiffs who are the heirs and legal representatives of deceased Hassan Sha Mogral have filed the above suit against the defendent to recover the ammount due in respect of a promissary note executed by the deft in favour of the deceased Hassan Sha Mogral on 29—12—31 and the same stands posted to 13—3—35 Anybody having objection should appear before the Court on or before that date failing which the suit shall be decided exparte

Kasaragod, 5—3—35 | **K P. Anantha Rao.** *Advocate for Plaintiff*

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ್ ಸೂಟ್ 16/1

ಬಾಳೆ ಶಂಕಣ್ಣ ಸುಬ್ರಾಯ—ವಾದಿ

ಮತ್ತು

ಮೊಗ್ರ ಪೂಜಾರಿ ಕೂಡಾ 2 ಜನರು—ಪ್ರತಿವಾದಿರು

ಇವರೊಳಗೆ

1 ಮೊಗ್ರ ಪೂಜಾರಿ 2 ಚೆನ್ನಪ್ಪ ಪೂಜಾರಿ, ತಿರುಮಲ ಚೆಂಗ್ಸನ ಮಕ್ಕಳು ಉಡುಪಿ ತಾಲ್ಲೂಕು ನಟ್ಟಾಲು ಗ್ರಾಮದ ಬೇಂಗ್ರೆಯಲ್ಲಿರುವವರು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಗೆ ಬಹಾ ಚಾಲಗೇಣಿ ಬಾಕಿ ಬಗ್ಗೆ ಹೇಳಿಸಿದ ಹವಾಲಿ ಬಾಬ್ತು ನಿಮ್ಮಿಂದ ಬಹಾ ಅಸಲು ಬಡ್ಡಿ ಐವೇಜಿಗೆ ಮೇಲ್ಕಂಡ ದಾವಾ ದಾಖ್ಲೆ ಮಾಡಿರುತ್ತಾನೆ ಸದ್ರಿ ವ್ಯಾಜ್ಯದಲ್ಲಿ ನಿಮಗೆ ಪುನಃ ನೋಟೀಸಿಗೆ ಹುಕುಂ ಆಗಿ ತಾ 11—3—35ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿದೆ ಆದುದರಿಂದ ಆ ದಿನ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉಧಹರಿಸಬಹುದು ಇಲ್ಲವಾದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲಾಗುವುದು

ಕಾರ್ಕಳ, 5—3—35 | **K. Vektesh Pai,** ವಾದಿ ಕಡೆ ವಕೀಲ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 11/1935

1 ಬೀಪಾತುಮ್ಮ, ಪಳಲಿ ಅಬ್ದುಲ್ಲ ರಹಿಮಾನ್ ಬ್ಯಾರಿ ಮಗಳು, ಪ ಪಿ ಎ ಮುಹಮ್ಮದನ ಹೆಂಡ್ತಿ 2 ಅಬ್ದುಲ್ಲ, ಸದ್ರಿ ಪಿ ಎ ಮುಹಮ್ಮದನ ಮಗ ಮ್ಯಾನರ, ಈತನ ಕ್ಷೇಮ ಚಿಂತಕಳು ಈತನ ತಾಯಿ 1ನೇ ಅರ್ಜಿದಾರಳು ಮುಳಿಯಾರ ಗ್ರಾಮದ ಪಳಲಿಯಲ್ಲಿರುವವರು—ಅರ್ಜಿದಾರರು

ಮತ್ತು

ಅಬ್ದುಲ್ಲಾ ಖಾದರ್ ಬ್ಯಾರಿ, ಅಮ್ಮಲ ಬ್ಯಾರಿ ಮಗ, ಮೊಗ್ರಾಲ್ ಪುತ್ತೂರಿನಲ್ಲಿರುವವ—ರೆಸ್ಪಾಂಡೆಂಟ

ಇವರೊಳಗೆ—

1ನೇ ಅರ್ಜಿದಾರಳ ಗಂಡ ವ, 2ನೇ ಅರ್ಜಿದಾರನ ತಂದೆ ಮತ್ತು ರೆಸ್ಪಾಂಡೆಂಟನ ಮಗ ಮೃತಪಟ್ಟ P. A ಮುಹಮ್ಮದನು ಕಾಸರಗೋಡು ಕೆನರಾ ಬ್ಯಾಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳುವರೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 22—3—35ಕ್ಕೆ ಈ ಕೋರ್ಟಿನಲ್ಲಿ ತಸ್ಕಿಗೆ ಇಟ್ಟಿರುವುದರಿಂದ ಆಕ್ಷೇಪವುಳ್ಳವರು ಆ ದಿವಸ ಕೋರ್ಟಿಗೆ ಹ್ಯಾಜರು ಮಾಡಬಹುದು

Kasaragod, 1—3—35 | **P. Ahmad,** *Advocate for Petitioners*

ನೋಟೀಸು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್, ಮಂಗಳೂರು

ಈ ಕೆಳಗೆ ಹೆಸರು ಕಾಣಿಸಿದರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರಿಗೆ ವಾಸಿ ಆಗದೆ ಇರುವ ಕಾರಣದಿಂದಲೂ ಈಗ ಈ ಮೂಲಕ ತಿಳಿಯಪಡಿಸುವುದೇನೆಂದರೆ — ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ ಐವೇಜೂ—ರಿಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ವ ಬಡ್ಡಿಗೆ ಬಡ್ಡಿ ಕೂಡಿಸಿ ಇದೇ 1935ನೇ ಇಸವಿ ಮಾರ್ಚಿ ತಿಂಗಳ ತಾ 21ನೇ ಗುರುವಾರದ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಸದ್ರಿಯವರು ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1935ನೇ ಇಸವಿ ಮಾರ್ಚಿ ತಿಂಗಳ ತಾ 23ನೇ ಶನಿವಾರ ದಿವಸ ಮಧ್ಯಾಹ್ನ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತು

ಲೋನಿನ ನಂಬ್ರ ವ ತಾರೀಕು	ಸಾಲಗಾರನ ಹೆಸರು	ಸಾಲದ ಮೊಬಲಗು ರು
28/32/9—1—32	ಕಾರ್ಕಳ ಪೋಸ್ಟು ಕುಡ್ವ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಒಳಗಿರುವ ಅಪ್ಪು ಬೆಳ್ಚಡರ ಅಳಿಯ ನಾರಾಯಣ ಬೆಳ್ಚಡ	[illegible]
72 18 2 32	ಸುರತ್ಕಲ್ ಪೋಸ್ಟು ಮುದ್ದಾರು ಗ್ರಾಮದ ಕಾಂಟ್ರಾದಲ್ಲಿರುವ ದ ಜಾಯ್ ಕೋಸ್ತರ ಮಗ ಲೈಸ್ಟರ್ ಕೋಸ್ತ	60/
33?/1 [illegible]	ಸುರತ್ಕಲ್ ಪೋಸ್ಟು ಕರಂಬಾರದಲ್ಲಿರುವ ದಜಾಯಮ್ ಕೋಸ್ತರ ಮಗ ಸಿಪ್ರಿಯಂ ಕೋಸ್ತ	35/
4?7/[illegible]	ಬೆಮರಾರು ಪೋಸ್ಟು ಬಿ ಮಂಜುನಾಥ ಪ್ರಭುಗಳ ಮಗ ಬಿ ಅನಂತ ಪ್ರಭು	20/

ಮಂಗಳೂರು [illegible] | K Vittal Bhandary *Agent*

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel,
Calicut, 17—6 – 1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು· ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯ್ಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ

(೩ನೇ ಪುಟದಿಂದ ಮುಂದುವರಿದುದು.)

ಈ ಸಂಸಾರದ ಒಂದು ದಿವಸದ ಲೇವಾದೇವಿ ಇದಕ್ಕೆ ೩೦ರಿಂದ ಗುಣಿಸಿದರೆ ಒಂದು ತಿಂಗಳಿನದು. ಅದಕ್ಕೆ ೧೨ರಿಂದ ಗುಣಿಸಿದರೆ ಒಂದು ವರುಷದ್ದು. ಸುನಂದೆಯು ಲೆಖ್ಖದ ಪುಸ್ತಕ ೮ ವರುಷ ೬ ತಿಂಗಳು ೧೨ ದಿನಗಳ ಲೇವಾದೇವಿಯಿದೆ! ವರುಷ, ತಿಂಗಳು, ದಿನ—ಹೆಚ್ಚು ಕೇಳಿದರೆ ತಾಸು—ಎಲ್ಲವುಗಳ ಲೆಖ್ಖಾಚಾರ ಅವಳಿಗುಂಟು. ಚಿತ್ರಗುಪ್ತನ ಮಗಳಾಗಿ ಹಿಂದಿನ ಜನ್ಮದಲ್ಲಿ ಹುಟ್ಟಿದ್ದಳೋ ಏನೋ!'

ಒಂದು ದಿನ ಸುನಂದೆಗೆ ರಜೆ ಬಂದಿತು. ಏಕೋ ಏನೋ ಅವಳಿಗೆ ಮೆಲ್ಲನೆ ಜ್ವರ ಕೂಡಿತು. ಆದರೆ ವ್ಯಾಸರಾಯನಲ್ಲಿ ತಿಳುಹಲು ಅಂಜಿಕೆ. ಜ್ವರವೆಂದು ಬಾಯಿ ತೆರೆದರೆ 'ಅದು ಸಹಜವೇ. ಬಿಸಿಲು ಕಂಡರೆ ಜ್ವರ ರಾತ್ರಿ ಕಂಡರೆ ಶೀತ' ಎನ್ನುವನೇನೋ. ಅದರಲ್ಲೇ ತನ್ನ ದಿನಚರಿ ಸಾಗಿಸಿದಳು. ಐದನೆಯ ದಿನ ತಾಪವು ಅಧಿಕವಾಗಿತ್ತು. ಪ್ರೈಸೋತಿತ್ತು ಪತಿಗೆ ಬಡಿಸುವಾಗಲೇ ಮೂರ್ಛೆ ಬಿದ್ದಳು. ವ್ಯಾಸನು ಗಾಬರಿಯಾಗಿ ವೈದ್ಯರನ್ನು ಹೇಳಿ ಕಳುಹಿಸಿದನು. ಅವರು ಬಂದು ಬೇನೆಗೆ 'ವಿಷಮಜ್ವರ'ವೆಂದು ನಾಮಕರಣಮಾಡಿದರು. ಸುನಂದೆಯಾಗಿದ್ದರೆ ಬರೇ 'ಜ್ವರ'ವೆನ್ನುತ್ತಿದ್ದಳು. ಇವರು ಪಂಡಿತರಲ್ಲವೇ? 'ವಿಷಮ ಜ್ವರ' ಎಂದರು. ಹೀಗಾಗಿ ಅವಳ ಚಿಕ್ಕಿಂಗ್ ಚಾರ್ಜು ಅಡುಗೆ ಹುಡುಗನಿಗೆ ದೊರೆಯಿತು. ಡಾಕ್ಟರರು ಅಂಜಿಸಿದ್ದರಿಂದ ಸುನಂದೆಯ ಹತ್ತಿರ ಕೆಲಸವನ್ನು ಹೇಳುತ್ತಲಿದ್ದಿಲ್ಲ. ಆದರೂ ಮಕ್ಕಳು 'ಅಮ್ಮಾ' ಎಂದಾಗ ಕಾರಣ ಅವಕ್ಕೆ 'ಅಪ್ಪಾ' ಎನ್ನುವ ಪರಿಪಾಠವೇ ಇದ್ದಿರಲಿಲ್ಲ. ಅವನು ಎತ್ತಿ ಆಡಿಸಿ ಬಟ್ಟೆಬರೆಗಳನ್ನು ತೊಡಿಸಿಕೊಂಡವನಲ್ಲ. ಒಂದೂ ಅವೇ ತಣ್ಣಗಾಗಬೇಕು, ಇಲ್ಲವೇ ಅಡುಗೆ ಹುಡುಗನು ಕಪಿಕರದಿಂದ ಅವನ್ನು ...ತಿ ಕೊಳ್ಳಬೇಕು.

ಒಂದು ದಿನ ವ್ಯಾಸರಾಯನು, ಸುನಂದೆಯು ಮಲಗಿದ್ದ ಮಗ್ಗುಲು ಕೋಣೆಯಲ್ಲಿ ಓದುತ್ತಾ ಮಲಗಿದ್ದನು. ಒಳ್ಳೇ ರಸವತ್ತಾದ ಕಥೆ. ಹಿಡಿದರೆ ಬಿಡುವಂತಿಲ್ಲ. ಆ ಗಳಿಗೆಗೆ ಸರಿಯಾಗಿ ಸುನಂದೆಯ ನಡುವಿನ ಮಗು 'ಅಮ್ಮಾ' ಎಂದು ಕಿರುಚಿ ಬಿಟ್ಟಿತು. ಅದರ ಧ್ವನಿಯಿಂದ ಕೈಮಗುವೂ ಎಚ್ಚರಗೊಂಡು ಅಳತೊಡಗಿತು. ವ್ಯಾಸನಿಗೆ ಕೇಳುವುದಕ್ಕಾಗಲಿಲ್ಲ. 'ಏನೇ ಎಲ್ಲಿ ಸತ್ತಿದ್ದೀಯಾ?' ಎಂದು ಸಿಟ್ಟಿನಿಂದ ಕೂಗಿ ಬಿಟ್ಟನು. ಅವನ ರಣಗರ್ಜನೆಯು ಸುನಂದೆಯ ಕಿವಿಗೆ ಮುಟ್ಟಿತು. ಅಲ್ಲೇ ಅಳತೊಡಗಿದಳು. ಅವಳಿಗೆ ಔಷಧ ಕೊಡಲು ಅಡುಗೆ ಹುಡುಗನು ಬಂದನು. ಅವನ ಕಿವಿಯಲ್ಲಿ ಯಜಮಾನರನ್ನು ಬರಹೇಳು. ಬಳಿಕ ನೀನು ಸ್ವಲ್ಪ ಕೂಸನ್ನು ಆಡಿಸು' ಎಂದಳು. ಅವನು ಓದುತ್ತಿದ್ದ ರಾಯರಿಗೆ ತೊಂದರೆಕೊಟ್ಟು ಸುದ್ದಿ ತಿಳಿಸಿ ಮಕ್ಕಳನ್ನಾಡಿಸಲು ಓಡಿದನು. ವ್ಯಾಸರಾಯರು ಜಿಗುಪ್ಸೆಯಿಂದ 'ಸಾಕಪ್ಪ ಸಂಸಾರ' ಎಂದು ಪತ್ನಿಯ ಬಳಿಗೆ ಬಂದು 'ಏನು ಕರೆಯಿಸೋಣಾಯಿತು' ಎಂದನು. ಆದರೆ ಸುನಂದೆಯ ಕಪೋಲವನ್ನು ತೊಳೆದ ಕಣ್ಣೀರ ಧಾರೆಯು ಕಾಣಿಸಿತು. ಸ್ವರವು ಅಡಗಿ ಮೆಲ್ಲನೆ 'ಏನು... ಬರಹೇಳಿದೆ' ಎಂದನು. ಸುನಂದೆಯು ಕಣ್ಣನ್ನು ತೆರೆದಳು. ಎದುರಿಗಿರುವವನು ತನ್ನ ಇಹ ಜೀವನದ ನಾಥನು. ಅವಳಿಗೆ ದುಃಖವು ಉಕ್ಕಿ ಬಂದಿತು. ಗದ್ಗದಿತ ಕಂಠದಿಂದ—ಅವು ಯಾರ ಮಕ್ಕಳು? ಈಗ ಕೂಗಿದುವಲ್ಲ ಅವು. ನನ್ನವೇ, ನಿಮ್ಮವೇ?' ಎಂದಳು. ಅದೇ ಅವಳು ತನ್ನ ಪತಿದೇವನೊಡನೆ ಆಡಿದ ಕೊನೆಯ ತೀರ ಕೊನೆಯ ಮಾತುಗಳು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S No. 356/1931.
R E. P No. 1553/1934

ವಾದಿ—ಶೀತರಾಮ ಪಡಿಪ—ಅರ್ಜಿದಾರ

ಮತ್ತು

ಪ್ರ ರು ವಾಸುದೇವ ಭಟ್ಟ ಸಹ 2 ಜನರು—ಎದ್ರಿರು

ಇವರೊಳಗೆ—

2ನೇ ಎದ್ರಿ ಕೃಷ್ಣ ಭಟ್ಟ, ನಡುಮನೆ ಶ್ರೀನಿವಾಸ ಭಟ್ಟರ ಮಗ, ಕಾರ್ಕಳ ತಾಲ್ಲೂಕು ಬೋಳ ಕಸಬಾ ಗ್ರಾಮದಲ್ಲಿರುವವ

ಕಾರ್ಕಳ ಡಿ ಮು ಕೋರ್ಟು ಕ್ರಮ ನಂಬ್ರ 356/1931ನೇ ಡಿಕ್ರಿಯ ಬಾಬ್ತು R E P No 1553/'34ನೇ ಅಮ್ಲ ಜ್ಯಾರಿ ಪ್ರಕಾರದ ಐವೇಜನ್ನು ಸದ್ರಿ ಕೋರ್ಟು R E P No 1260/'33ನೇ ಅಮಲ್ ಜ್ಯಾರಿಯಲ್ಲಿ ಎದ್ರಿರ ಬಾಬ್ತು ಸ್ಥಿರಾಸ್ತಿಯನ್ನು ಬೋಳ ನಡಿಯಾಲ ನಾಮನ ಶಿಪ್ತಿಯೆಂಬವರು ಏಲಂ ಮಾಡಿಸಿರುವುದರಿಂದ ಆ ಏಲಮಿನಿಂದ ಹುಟ್ಟಿ ಬಂದ ಐವೇಜಿನಿಂದ ಸದ್ರಿ R E P No 1553/'34ನೇ ಅಮಲ್ ಜ್ಯಾರಿಯ ಪ್ರಕಾರದ ಐವೇಜನ್ನು ಕೂಡಾ Sec 73ರ ಪ್ರಕಾರ ಬಾಬಾಶಯದಿಂದ ಕೊಡೋಣಾಗಬೇಕಾಗಿ ವಗೈರೆ ದಾಖಲು ಮಾಡಿದ ಸದ್ರಿ R E P No 1553/34 ನೇ ಅಮಲ್ ಜ್ಯಾರಿಯ ಸದಿ 2ನೇ ಎದ್ರಿಗೆ ನೋಟೀಸ ಜ್ಯಾರಿ ಬಗ್ಗೆ ತಾ 13-3-'35ಕ್ಕೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ಅಮಲ್ ಜ್ಯಾರಿ ಕುರಿತ ಸದ್ರಿ 2ನೇ ಎದ್ರಿಯು ಹೇಳತಕ್ಕ ಆಕ್ಷೇಪಗಳೇನಾದರೂ ಇರುವುದಾದರೆ ಸದ್ರಿ ತಾ 13-3-35ನೇ ದಿನ ಬೆಳಿಗ್ಗೆ 10 ಘಂಟೆಗೆ 2ನೇ ಎದ್ರಿಯು ಸ್ವತಹಾ ಯಾ ವಕೀಲರ ಮುಖಾಂತರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಆ ಪ್ರಕಾರ ಆಕ್ಷೇಪಗಳನ್ನು ಹೇಳಿಕೊಳ್ಳದಿದ್ದರೆ ಸದ್ರಿ 2ನೇ ಎದ್ರಿಯನ್ನು ಎಕ್ಸಪಾರ್ಟ ಮಾಡಿ ಸದ್ರಿ ಅಮಲ್ ಜ್ಯಾರಿಯು ಮುಂದರಿಸೋಣಾಗಿ R E P No 1260/1933ನೇ ಅಮ್ಲ ಜ್ಯಾರಿಯಲ್ಲಿ ದಾವಾಶಯ ಕೊಡಿಸಿ ವಾರಂಟು ಬಗ್ಗೆ ಹುಕುಂ ಕೊಡೋಣಾಗುವುದು.

ಕಾರ್ಕಳ 28—2—35. } I V Naik, *Vakil*

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 46/35.

1. ಉಮ್ಮಾಬಿ, ಶ್ಯಾಮುಸುದ್ದಿ ಕೋಯನ ಹೆಂಡ್ತಿ. 2. ಅಟಿಕೋಯ, ಶ್ಯಾಮು ಸುದ್ದಿನ ಕೋಯನ ಮಗ 3. ಹಾಸಮ್ಮಾಬಿ, ಸೈಯದ್ದ ಅಬ್ದುಲ್ ಕೋಯನ ಹೆಂಡ್ತಿ 1, 2ನೇ ಅರ್ಜಿದಾರರು ಪಟ್ಲ ಗ್ರಾಮದಲ್ಲಿಯೂ, 3ನೇಯವಳು ಆರಿಕ್ಕಾಟ ಗ್ರಾಮದಲ್ಲಿಯೂ ಇರುವವರು—ಅರ್ಜಿದಾರರು.

1ನೇ ಅರ್ಜಿದಾರಳ ಮಗನೂ 2ನೇ ಅರ್ಜಿದಾರನ ಸಹೋದರನೂ 3ನೇ ಅರ್ಜಿದಾರಳ ಗಂಡ ಸೈಯದ್ ಅಬ್ದುಲ್ಲ ಕೋಯನು ಮೃತಪಟ್ಟಿರುವುದರಿಂದ, ಸದ್ರಿಯವನ ವಾರಿಸ್ಸಾರರಾದ ಅರ್ಜಿದಾರರು, 3ನೇ ಅರ್ಜಿದಾರಳ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 27—3—1935ಕ್ಕೆ ಇಟ್ಟಿದೆ. ಈ ಕುರಿತು ಯಾರಿಗಾದರೂ ಆಕ್ಷೇಪಣೆಗಳಿದ್ದರೆ, ಸದ್ರಿ ವ್ಯಾದೆಗೆ ಕೋರ್ಟಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿದೆ.

ಕಾಸರಗೋಡು, 6—3 '35 } K. Venkatesh Nayak B. A., L. L. B. *Counsel for Petitioners*

NOTICE.

A competitive examination for the award of the Victoria Jubilee Scholarship to a candidate belonging to the Brahmin community will be held in the Government College, Mangalore, on Tuesday, the 18th June 1935

2 Applications to the examination in the prescribed form will be received in the District Court till Saturday the 15th June 1935 after which none will be received.

3. Forms of application and copies of the rules regulating the award of the scholarship can be had from this office on payment of 1 anna and 2 annas respectively.

District Judge
& PRESIDENT VICTORIA JUBILEE SCHOLARSHIP FUND.

District Court, S. Kanara,
MANGALORE, 20TH FEB. '35

Tender Notice.

For Printing and supply of Stationery for 1935—1936

Sealed Tenders for the supply of stationery articles and for Printing for the Offices of the Dt Board and its Subordinate Offices will be received in the District Board Office up till 3 P M. on Thursday the 14th March 1935. List of articles of Stationery required and conditions of contract and Tender form for Printing can be obtained from the District Board Office on any working day between 11 A M and 5 P M. Covers containing tenders should be superscribed 'Tender for Stationery 1935 36' 'Tender for Printing 1935/1936' and addressed to the President, District Board, South Kanara, Mangalore.

South Kanara District Board Office 9—2—35 } A B Shetty, President, District Board office.

FREE FREE FREE

One New British-Make Cycle

To any one who purchases our Popular and wellrecognised

'HERBAL SANJIVANI KADHA'

The most effective remedy against impurity of blood, urinary troubles, body-heat organic debility Anaemia, wet dreams, piles, skin diseases, itches, eczyma ect. Malaria and low fevers also

for Particulars apply to —

N Pandurang Rao, Udipi S. K.
Sole Agent for S & N Canara, Mercara (Coorg) & Mysore Province

Manufactured by—
The Birje Chemical Works, Bombay, 2

Wanted—Influential and Energetic Agents all over.

ಬಿರ್ಜೆ ಕೆಮಿಕಲ್ ವರ್ಕ್ಸನವರು ತಯಾರಿಸಿರುವ

ಹರ್ಬಲ ಸಂಜೀವಿನೀ ಕಷಾಯ.

ಲಕ್ಷಾವಧಿ ಜನರು ಉಪಯೋಗಿಸಿ ಉತ್ಕೃಷ್ಟವೆಂದು ಬಾಯಿ ತುಂಬಾ ಹೊಗಳುತ್ತಾರೆ ಇದು ಅಜೀರ್ಣ, ಮುಂದಾಗ್ನಿ, ಮಲಬದ್ಧತೆ, ವೀರ್ಯನಾಶ, ಬೂಂಕ ಬೆನ್ನುಹುರಿಗಳಲ್ಲಿ ನೋವು, ಗರ್ಮಿ, ದೇಹದ ಉಷ್ಣತೆ, ಗಜಗರ್ಣ, ರಕ್ತ ಕೆಡುವಿಕೆ, ಮೂಲವ್ಯಾಧಿ ಮಲೆರಿಯಾ ಜ್ವರ, ಮೊದಲಾದುವುಗಳನ್ನು ನಿಸ್ಸಂದೇಹವಾಗಿ ಗುಣಪಡಿಸುವುದು

ಪ್ರತಿ ಜಿಲ್ಲೆಯಲ್ಲೂ ಸಬ್ ಏಜಂಟರು ಬೇಕು.

ಪುಕ್ಕಟೆ ಪುಕ್ಕಟೆ ಪುಕ್ಕಟೆ

ನಮ್ಮ ಸಂಜೀವಿನೀ ಕಷಾಯವನ್ನು ಕ್ರಯ ಕೊಟ್ಟು ತಕ್ಕೊಳ್ಳುವವರಿಗೆ

ಬ್ರಿಟಿಷರಿಂದ ತಯಾರು ಮಾಡಿದ ಸೈಕಲ ಒಂದು

ಇನಾಮಾಗಿ ಕೊಡುವೆವು. ವಿವರ ಬಗ್ಗೆ ಸೋಲ ಏಜಂಟರಿಗೆ ಬರೆಯಿರಿ

ಸೋಲ ಏಜಂಟರು.—ಎನ್ ಪಾಂಡುರಂಗ ರಾವ್ ಉಡುಪಿ, ದ. ಕ.

ಬಿಹಾರ್ ರಸಾಯನಿಕ ವೈದ್ಯ ಶಾಲೆಯಲ್ಲಿ ತಯಾರಾದ
ಆಯುರ್ವೇದಿಯ ಔಷಧಗಳು.

ಪ್ರಸೂತಿ ಕಲ್ಯಾಣ—ಬಾಣಂತಿಯರ ಗರ್ಭಕೋಶದ ಎಲ್ಲಾ ತರದ ನಂಜನ್ನು ಶುದ್ಧೀಕರಿಸುವುದು.

ಕಾಮಕಲ್ಪ ರಸಾಯನ—ಧಾತುವೃದ್ಧಿ—ಬಲಹೀನತೆ.

ಅನಂತಮೂಲಸರಸ—ರಕ್ತಶುದ್ಧಿ ಶರೀರದಲ್ಲಿ ಬೊಕ್ಕೆ ಬೀಳುವುದು.

ದನವಂತ್ರಿ ಮುಲಾಮು—ಮೇಹ ಸಮ್ಮಂಧದ ಹುಣ್ಣು ಬಾಯಿ ಸಂದು ಬಾತುಕೊಳ್ಳುವುದು

ಬ್ರಹ್ಮಿ ರಸಾಯನ—ಮೆದುಳಿನ ವಿಕಾರ ನೆನಪಿಲ್ಲದಿರುವಿಕೆ.

ಪುನರ್ನವಾಸವ—ಮೈಬಾತುಕೊಳ್ಳುವುದು ಅರಸಿನದೊಂದಿಗೆ ರಕ್ತಹೀನತೆಯ ಮೇಲೆ.

ಕಾಲಮೇಗ—ಇದು ಮಕ್ಕಳ ಕಲೀಜ ಮತ್ತು ಪ್ಲೀಹದ ಮೇಲೆ.

ಸಿದ್ಧ ಮಕರಧ್ವಜ ಪುರಿಬಾಧಿ ತೈಲ—ಮಂದರ ತೈಲ—ಲಕ್ಷ್ಮೀಮಣ ಗೃತ್, ಮಿತಸಂತತಿಯ ಉಪಕರಣಗಳು ಅನೇಕ ತರದ ಶಾಸ್ತ್ರೀಯ ಔಷಧಿಗಳ ಕೆಟಲಾಗು ಕೇಳಿ.

The Behar Chemical Works, Bhagalpur.

ಏಜಂಟ್ಸ—ಷಾ. ಕಂಪೆನಿ, ಗವರ್ನಮೆಂಟ್ ಕಾಲೇಜಿನ ಎದುರು ಮಂಗಳೂರು, ದ, ಕ,

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ
ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ಅವು ಹೊಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಅತಿ ಬೆಳಕುಳ್ಳ ಹಂಟಿಂಗ್ ಟಾರ್ಚ್ ಲೈಟ್ ದೀಪ ಮತ್ತು ಬಂಗಾರದ ಪ್ಲೇಟ್ ಮುಳ್ಳು ಹಾಕಿರುವ ಸ್ವರಾಜ್ಯ ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು. ನಿಮಗೆ ಇಷ್ಟವಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ೨೪೧೨ S. A. ಕಲ್ಕತ್ತಾ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore; Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba, Benares City

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ? ರಾಜರುಗಳು ಯುವಕರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ, ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಚಿಕ್ಕ ಯಾವಾಗಲೂ ಧಾರಣೆಮಾಡುತ್ತಿದ್ದರು, ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹೋದರಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಈ ಎಂಟು ಶ್ರೇಷ್ಠ ಇವುಗಳೆಲ್ಲಾ ಆಗುವವು. ಹಾಗಾದರೆ ನಮಗೆ ಅಂಥಾ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಕ್ಕಿ ಪ್ರಮಾಣದ ಕಂಠಿಸರ 1ಕ್ಕೆ ಅಣೆ 1ರಿಂದ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ. 50ರ ವರೆಗೆ ಮತ್ತು 1-4-5-6-7-8 ಮುಖಗಳ ಕಾಳು 1ಕ್ಕೆ ಅಣೆ 1ರಿಂದ ರೂಪಾ 10. ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 20ರಿಂದ 30ರ ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾ 50ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುತ್ತದೆ (ವಿವರಕ್ಕೆ ಕಾರ್ಡು ಬರೆದರೆ ಇನಾಮವಾಗಿ ಕಳುಹಿಸುತ್ತೇವೆ. 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ಪಟ್ಟೆಪತ್ರ, 1 ಕಾಶೀ ನಕ್ಷೆ, 1 ಕಟಿಲಾಗಿ ನೋಡಲು 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

The East & West Insurance Co., Ltd.

Established 1913

Head Office:–East & West Buildings, Apollo Street, Fort, BOMBAY

New business for the year 1933 shows an increase of 50% over that of 1932

First-class Service to Policy-Holders, up-to-date contracts, close co-operation between Head Office and field force, efficient and economic management are few of the factors responsible for the constant and steady growth of the Company.

It will pay you to take out a Policy to-day.
Agency terms liberal–Treatment sympathetic.

Please apply for Agency and particulars to—

Padubidri Brs., Chief Agents, Padubidri
M. N. V. Kamath & Sons, Golikatta Bazar, Bombay No. 8.
Mangalore, S. K.

Dalal & Co., Secretaries.

ಡಾಕ್ಟರ ವಾಮನ ಗೋಪಾಳರವರ



ಐಹಿಡಾಯಿಡ್ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
40 ವರ್ಷದ ಅನುಭವ
ಉಪಯೋಗಿಸಿದವರೇ ಹೇಳಿದ್ದಾರೆ

ಡಾ|| ಗೌತಮ ರಾವ್ ಕೇಶವರವರ ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಯಿ 4
ಸಬ್ ಏಜೆಂಟ್ — ಶಾ ಕಂಪನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಚ್. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ಇದನಂತರ ಏನು ಮಾಡಿದರೂ ಮರುವಾಗುವುದಿಲ್ಲ. ನೋಡಲೇ ಪೂರಾ ವಿಚಾರ ಮಾಡಿ ಔಷಧ ಬೇಕು. ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳಗಿನಂತೆ ಬರೆಯುತ್ತಾರೆ — ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪-೦-೦ ವಿ ಪಿ ಅಣೆ ೮

ವಿಳಾಸ:— ಸಂಜೀವಿನೀ ಔಷಧಾಲಯ ಮು. ಪೋ. ವಿಂಚೂರ, S. M. C.

CHEMICALS

Chemicals for manufacturing Sugar, Soap, Toilets Matches, Glass, Potteries, Leather, Carpet ink, Drybatteries Photography & for Dyeing & Bleaching Cotton, Wool and Silk Write to

Rasiklal & Co.,
Post Box No. 2328 Bombay 2

The Popular Insurance Company, Ltd.

Head Office:—MANGALORE, S. India.

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and thefact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rao, who has developed in him a great deal of life insurance sense . . .

ಸಾಂಬಾರ ವರ್ತಮಾನ.

'ಚಿತ್ರ ಮತ್ತು ಹಣಗಳ ಸಂಬಂಧ.

ಹೇಗಿರುವುದೆಂದು ಅನೇಕರಿಗೆ ತಿಳಿದಿಲ್ಲ ಈ ವಾರ್ತೆಯು ಪ್ರಕಟವಾದ ಮೇಲಾದರೂ ತಿಳಿಯದಿರದು ಮುಂಬಾಯಿಯಲ್ಲಿ 'ಹಿಲಾಲ್' ಎಂಬ ಉರ್ದು ಭಾಷೆಯ ದೈನಿಕಪತ್ರಿಕೆಯಿದೆ. ಅದು ಕಳೆದ ವಾರ ಗೌರ್ನರರ ಒಂದು ವ್ಯಂಗ್ಯಚಿತ್ರವನ್ನು ಪ್ರಕಟಿಸಿತು. ಆ ಚಿತ್ರಕ್ಕೂ ೩೦೦೦ ರೂಪಾಯಿಗಳಿಗೂ ನಡುವೆ ಅಂತರ್ಗತ ಸಂಬಂಧವಿದೆಯೆಂದು ಅದರ ಸಂಪಾದಕರಿಗೆ ತಿಳಿದಿದ್ದಿಲ್ಲ. ಕೂಡಲೇ ಮುಂಬಾಯಿ ಸರಕಾರದಿಂದ ಒಂದು ನೋಟೀಸು ಬಂದು, ಆ ಸಂಪಾದಕರೂ ಪ್ರಕಾಶಕರೂ ೧೦೦೦ ರೂಪಾಯಿಗಳ ಭದ್ರತೆಯನ್ನು ಕೊಡಬೇಕೆಂದು ಕೇಳಲಾಗಿದೆ

ಬೊಂಬುಗಳಿಗೆ ಎದೆಗೊಡಲು ಸಿದ್ಧರು

"ನಾನು ಅಹಿಂಸಾತತ್ವವನ್ನು ಸ್ವೀಕರಿಸುವ ಮೊದಲು ಹೇಡಿಯಾಗಿದ್ದೆನು ಆದರೆ ಅದನ್ನು ಸ್ವೀಕರಿಸಿದಂದಿನಿಂದ ನನ್ನಲ್ಲಿ ಧೈರ್ಯವು ಉಂಟಾಗಿದೆ ಈಗ ನಾನು ನನ್ನ ಕರ್ತವ್ಯಕ್ಕಾಗಿ ಬೊಂಬುಗಳಿಗೂ ಫಿರಂಗಿಗಳಿಗೂ ಎದೆಗೊಡಲು ಹೆದರುವುದಿಲ್ಲ" ಎಂದು ಡಾ॥ ಖಾನ್ ಸಾಹೇಬರು ವಿಶಾರತ್ನಿನ "ಸರ್ವೆಂಟ್ಸ್ ಒಫ್ ದಿ ಪೀಪಲ್ಸ್ ಸೊಸೈಟಿ"ಯಲ್ಲಿ ಹೇಳಿದರು

ನಿರ್ಬಲವು ನೀತಿಯಿಲ್ಲದ ಒಂದು ನಂಬಿಗೆಯಾಗಿದೆ ಬಲತ್ಕಾರವು ಅದನ್ನು ಎಂದೆಂದೂ ಜಯಿಸಲಸಾಧ್ಯ ಈ ನಂಬಿಗೆಯಿಂದ ಹಿಂದೂ ಮುಸ್ಲಿಂ ಐಕ್ಯತೆಯೂ ಉದಯಿಸಬೇಕಾಗಿದೆ ಇಲ್ಲದಿದ್ದಲ್ಲಿ ನಿಜವಾದ ಸ್ವಾತಂತ್ರ್ಯವು ಭಾರತಕ್ಕೆ ಸಿಗಲಾರದು ಸಭಾನಂತರ ಡಾ॥ ಖಾನ್‌ರವರು ಸವಿಸ್ತರವಾಗಿ ಗಾಂಧೀ ಆಶ್ರಮವನ್ನೂ ಹರಿಜನ ಕೊಲೊನಿ'ಯನ್ನೂ ಸಂದರ್ಶಿಸಿದರು

ಶವಸಂಸ್ಕಾರಕ್ಕೆ ಬಂಡವಾಳವನ್ನು ಕಳುಹಿಸಿರಿ.

"ಹಿಂದೂಸ್ಥಾನವು ಔಷಧಿಗಳನ್ನೂ ಆಹಾರವನ್ನೂ ಕಳುಹಿಸಲಸಮರ್ಥವಾದರೆ ಸಿಲೋನಿನಲ್ಲಿ ದಿನಂಪ್ರತಿ ಸಾಯುತ್ತಿರುವ ನೂರಾರು ಸಹೋದರ ಸಹೋದರಿಯರ ಶವಸಂಸ್ಕಾರಕ್ಕೆ ಹಣವನ್ನು ಕಳುಹಿಸಲಿ" ಎಂದು ಸಿಲೋನಿನಲ್ಲಿ ೩೦ ಹೆಂಗಸರಿರುವ ಹಳ್ಳಿಯೊಂದರಿಂದ ಬೊಂಬಾಯಿಯ ಶ್ರೀಮತಿ ಅನ್ನುತ ಕೌರ್ ಎಂಬವರಿಗೆ ಒಂದು ಪತ್ರವು ಬಂದಿತ್ತು. ನಾವು ನಮ್ಮ ಗಂಡಂದಿರನ್ನು ಬಹಳ ಹಿಂದೆಯೇ ಕಳೆದುಕೊಂಡಿರುವೆವು ಈಗ ಸಾಯುತ್ತಿರುವ ನಮ್ಮ ಮಕ್ಕಳ ಶವಸಂಸ್ಕಾರವನ್ನು ಮಾಡಲು ಹಣವಿಲ್ಲವೆಂದೂ ಆ ಪತ್ರದ ಹೇಳಿಕೆ

ಹೆಂಡತಿಕ್ಕಿಂತ ನಾಯಿಯ ಮೇಲೆ ಹೆಚ್ಚು ಪ್ರೀತಿ.

ಜೊಲ್ಲಂಡಿನ ಎಪ್ಪತ್ತು ವರ್ಷದ ರೈತನು ಇನ್ನೊಬ್ಬ ರೈತನ ಇಪ್ಪತ್ತಾರು ವರ್ಷ ಪ್ರಾಯದ ಮಗಳಲ್ಲಿ ಮೋಹಿತನಾದನು ಇಬ್ಬರೂ ಮದುವೆಯಾಗಲೊಪ್ಪಿಕೊಂಡರು ಮದುವೆಯ ಸಮಾರಂಭಕ್ಕಾಗಿ ಇಗರ್ಜಿಗೆ ಹೋಗುವ ಸ್ವಲ್ಪ ಮುಂಚೆ ಅವನ ಅತ್ಯಂತ ಪ್ರಿಯ ನಾಯಿಯು ಕಾಣೆಯಾಯಿತು ಆ ನಾಯಿ ಬಹು ವರ್ಷದಿಂದ ಅವನಲ್ಲಿತ್ತು. ಅದು ಎಲ್ಲಿಯಾದರೂ ಕಳೆಯಿತೆ ಎಂದು ಅವನು ಹುಚ್ಚನಂತಾಗುತ್ತಿದ್ದನು ಹೀಗಾಗಿ ಮದುವೆಯ ದಿನ ಅದನ್ನು ಹುಡುಕಲು ಹೊರಟನು

ಮದುಮಗಳ ಕಡೆಯವರು ಇಗರ್ಜಿಯಲ್ಲಿ ಕಾದು ಕಾದು ಬೇಸತ್ತರು ಕೊನೆಗೆ ಎಲ್ಲರೂ ಬಂದ ಹಾಗೆ ಹಿಂದೆ ಹೋದರು

ಸಾಯಂಕಾಲ ವ ದುಮಗನಿಂದ ಮುದಿ ರೈತನು ತನ್ನ ಪ್ರಿಯ ನಾಯಿಯನ್ನು ಕರಕೊಂಡು ಬರುತ್ತಿದ್ದನು ಅವನಿಗೆ ಮದುವೆಯು ತಪ್ಪಿ ಹೋಯಿತು ಎಂಬ ಬೇಸರವೇ ಇರಲಿಲ್ಲ ಹೆಂಡತಿಯನ್ನು ಕಳೆದುಕೊಂಡರೂ ಪ್ರಿಯ ನಾಯಿಯನ್ನು ಹುಡುಕಿಕೊಂಡನು

ನಾಲಗೆಯ ತಪ್ಪಿಗಾಗಿ ಕಾಲಿಗೆ ಪೆಟ್ಟು—

ಕೊಡುವ ಕಾಲವಿದು ಬಾಯಿಯ ಪ್ರಿಯವ ಬಾಯಿಗೇ ಪೆಟ್ಟು ಕೊಡದ ಕಾಲಹೋಯಿತು ಕಾಲನ್ನೇ ಮುರಿಯುವ ವಿಚಿತ್ರ ಕಾಲವಿದು ಕಂಟೋನ್ಮೆಂಟಿನಲ್ಲಿ ಅಬ್ದುಲ್ ಖಯ್ಯುಮ್ ಎಂಬವನು ಕೋರ್ಟಿನಲ್ಲಿ ವಿಚಾರಣೆಗೆ ಒಳಗಾಗಿದ್ದನು ಆ ವ್ಯಾಪಾರಿಯ ವಿರುದ್ಧ ಹೊರಿಸಿದ ಆರೋಪ ಸರ್ವನಾಶ ಎಂಬ ಒಬ್ಬ ಹಿಂದೂವನ್ನು ಕೊಂದ ವಾರ್ತೆಯು ಕೆಲವು ವಾರಗಳ ಹಿಂದೆ ಪ್ರಕಟವಾಗಿತ್ತಷ್ಟೆ ಈಗ ಅವರಿಬ್ಬರೂ ಮಾಡಿದ ತಪ್ಪುಗಳನ್ನಾಗಲೀ ಒಪ್ಪುಗಳನ್ನಾಗಲೀ ಪತ್ರಿಕೆಗಳಲ್ಲಿ ಹಾಕಬಾರದು ಭಾಷಣ ಮೂಲಕ ಪ್ರಕಟಿಸಬಾರದು ಎಂದು ಸರಕಾರು ೧೨ ಜನರ ಮೇಲೆ ಮೇಲೆ ನೋಟೀಸು ಹೋಗಿದೆ

ಚೈನದಲ್ಲಿ ಸಂಸ್ಕೃತವನ್ನು ಕಲಿಸುವುದಕ್ಕಾಗಿ ಕಲ್ಕತ್ತದ ಪ್ರೊಫೆಸರರೊಬ್ಬರಿಗೆ ಆಮಂತ್ರಣ

ಕಲ್ಕತ್ತದ ಪ್ರೊ॥ ಎಸಿ ಎನ್ ಸೇನ್ ಎಂಬವರನ್ನು ಕ್ವಿಯಾಂಗ್ಸಾನ್ ಪಂಡಿತ ಸಭೆಗೆ ಚೆಂಗಾಯಿಯ ಲ್ಯೂಟಿಷಾ ಎಂಬವರು ಕರೆದು ಚೀನಿ ಬೌದ್ಧ ಮಠಸ್ಥರಿಗೆ ಮಹಾಯಾನವನ್ನೂ ಪಂಡಿತ ಭೀಗೆ ಸಂಸ್ಕೃತವನ್ನೂ ಕಲಿಸಲು ಆಮಂತ್ರಣವಿತ್ತಿರುವರು

ಇಂತಹ ಆಮಂತ್ರಣವು ಸಿಗುವುದು ಭಾರತೀಯರಿಗೆ ಇದೇ ಪ್ರಥಮ ಸಲ ೧೯೩೪ರಲ್ಲಿ ಶ್ರೀಯುತರಿಗೆ ಇಂತಹ ಒಂದು ಆಮಂತ್ರಣವು ಬಂದಿತ್ತು ಆದರೆ ಆಗ್ಗೆ ಸರಕಾರದವರು ಅವರನ್ನು ಅಲ್ಲಿಗೆ ಹೋಗಲು ಬಿಡಲಿಲ್ಲ

ರಾಷ್ಟ್ರಗೀತೆಯಿಂದ ಐಕ್ಯ

ಬಾಬು ರಾಜೇಂದ್ರ ಪ್ರಸಾದರೂ, ಅಕ್ಬರ್ ಹೈದರಿ, ಮತ್ತು ಇತರ ನಾಯಕರೂ ಒಟ್ಟುಕೂಡಿ ಜಾತಿಭೇದವನ್ನು ಹೋಗಲಾಡಿಸಿ ಒಂದೇ ರಾಷ್ಟ್ರಗೀತವನ್ನು ರಚಿಸುವುದಕ್ಕಾಗಿ ಒಂದು ಹೊಸ ಉಪಾಯವನ್ನು ಹುಡುಕಲು ದೇಶದೊಡನೆ ಆಂಕೆದಾಡಿರುವರು

ಈ ಉಪಾಯವು ಶ್ರೀ ಅತುಲ್ ಆನಂದ ಚಕ್ರವರ್ತಿಯವರು ಬರೆದ "ಹಿಂದುಸ್ಥಾನದ ರಾಷ್ಟ್ರೀಯ ಗೀತೆ" ಎಂಬ ಪುಸ್ತಕದಲ್ಲಿ ಇರುವುದು ಈ ಪುಸ್ತಕದ ಲೇಖಕರೂ ಕಾಂಗ್ರೆಸ್ಸಿನ ಅಧ್ಯಕ್ಷರೂ ಮತ್ತು ಅನೇಕ ಪ್ರಮುಖ ದೇಶಿಗರೂ ಡಿಲ್ಲಿಯಲ್ಲಿ ಇದೇ ಉಪಾಯವನ್ನು ಜಾರಿಗೆ ತರಲು ಕೇಳಿಕೊಂಡರು

ಖಾದಿ ಭಂಡಾರದಲ್ಲಿ ಜಡ್ತಿ.

ಆಗ್ರದ ಗಾಂಧೀ ಆಶ್ರಮದ ಖಾದಿ ಭಂಡಾರದಲ್ಲಿ ಕಳೆದ ವಾರ ಪೋಲೀಸರು ಜಡ್ತಿ ನಡೆಸಿ ಲೆಕ್ಕ ಪರಿಶೋಧಕರಾದ ಶ್ರೀ ರಾಮಸೇವಕ ಖಾರೆ ಎಂಬವರಿಂದ ಕಾಗದ ಪತ್ರಗಳೆಲ್ಲವನ್ನು ತೆಗೆದುಕೊಂಡು ಹೋದರು ಅವರ್ನ್ಮೆಂಟ ಒಕ್ಕೇಶನ ಗೋಲಮೇಜಂದನೆಂಬವನ ಪತ್ರಿಗಾಗಿಯೇ ಈ ಜಡ್ತಿಯಂತೆ

ದರೋಡೆಗಾರ

೧೯೩೪ರಲ್ಲಿ ನಾಗಪೂರದ ನಾಗ್ಯಾಗೊಂಡ್ ನೆಂಬವನು ಆಪ್ಪತ್ತು ಸಾರ ಕೆದ್ದಾದಕ್ಕೆ ಹವಿನಾಲ್ಕು ವರ್ಷ ಜೈಲನ್ನು ಅನುಭವಿಸಿದನು ಈಗ ಇಂದೀ ಬಿಡ್ಡಗೆ ಹುವಳಿಯನ್ನುಂಡುವ ಕದಿಯುವಕ್ಕೆ ಅವನಿಗೆ ಮರಣಾಂತ ಶಿಕ್ಷೆಯು ವಿಧಿಸಲ್ಪಟ್ಟಿದೆ ಒಟ್ಟು ಸದಾಯದ ವರೆಗೆ ಅವನನ್ನು ಸೆರೆಹಿಡಿಯಲು ಸಾಧ್ಯವಾಗಲಿಲ್ಲ ಚಂದಾ ಜಿಲ್ಲೆಯಿಂದ ಅವನ ಮೇಲೆ ರಿಪೋರ್ಟುಗಳಿದ್ದುವು ನಾಗ್ಯಾನನ್ನು ಸೆರೆಹಿಡಿದ ಎರಡು ಹಿಂದೂ ಗೋಸಾಯಿಯು ಆವನ ಕೈಗಳನ್ನು ಕೇಳಿಕೊಟ್ಟನು ಆ ಗೋಸಾಯಿಯು ಅವನಿದ್ದ "ರಥ" ಹಳ್ಳಿಗೆ ಬಂದನು ಆ ದಿನ ರಾತ್ರಿ ನಾಗ್ಯಾಯನ ಸೆರೆಯಾಯಿತು ಆ ಹಳ್ಳಿಯ ಕೊತವಾಲ ಮತ್ತು ಬೇರಿಬ್ಬರು ಬಹು ಪ್ರಯಾಸದಿಂದ ಹೋರಾಡುತ್ತಾ ಕೊನೆಗೆ ಅವನನ್ನು ಹಿಡಿದರು

ವೆಸ್ಟ್ ಆಫ್ರಿಕದಲ್ಲಿ ಫ್ರೆಂಚರ ಹವಣಿಕೆ.

"ಟ್ರಾನ್ಸ್‌ಸಹರ್ ರೈಲ್ವೆಯನ್ನು ಮೆಡಿಟೆರೇನಿಯಸಗೂ ಭೂಶಿಂಕ್ಕೂ ಜೋಡಿಸಲು ಫ್ರೆಂಚ್ ಸರಕಾರದವರು ಯೋಚನೆಯಲ್ಲಿರುವರ ಈ ಲೈನ್ ಅಲ್ಜೀರಿಯದ ಕೊಲೊಂಬೊ ಬಿಚರ್ ನಿಂದ ಫ್ರೆಂಚ್ ಸುಡಾನಿನಲ್ಲಿರುವ ಗಾವೊ ಎಂಬಲ್ಲಿಗೆ ಹಾದುಹೋಗುವುದು ಬ್ರಿಟಿಷ್ ವಿದ್ಯಾಪರಿಶೋಧನವು ಮುಖ್ಯವಾಗಿ ಮುಂದೆ ಬರಬೇಕಾದರೆ ರೈಲ್ವೆಯು ನೈಜೀರಿಯದಿಂದ ಬ್ರಿಟಿಷ್ ಕೊಲೊನಿ ಕೆಪ ವೆಸ್ಟ್ ಉಬಾಂಘ ಮತ್ತು ಬೆಲ್ಜಿಯನ್ ಕೊಂಗೊ ಮುಂತಾದುವುಗಳನ್ನು ಹಾದು ಹೋಗಿ ಭೂಶಿರಕ್ಕೆ ಬರಲೇ ಬೇಕು

ಭಾರತದ ಮೇಲೆ ಭರವಸೆ

ಹಿಂದುಸ್ಥಾನದಲ್ಲಿ ಬಾಳುವ ಕಡಮೆಯಾಗಿದೆ ಪಾಶ್ಚಾತ್ಯರಿಗಿಂತ ಕರುಣಾ ಬೇಗನೆ ಅಧಿಕಾರಕ್ಕೆ ಬರುತ್ತಿರುವರು ಯೋಚನೆಗಳಲ್ಲಿ ಈ ಕಾಲ ಭಾರತವು ಪ್ರಾಚೀನ ಭಾರತಕ್ಕಿಂತ ಪ್ರಬಲತರವಾಯಾಗಿದೆ ಇವರಿರವರೇ ಯುವಕರು "ಇಂಡಿಯಾ ಬಿಲ್ಲ"ಗೆ ಎದುರಾಗಿ ನಿಂತಿರುವರೆಂದು ದೀನ ಬಂಧು ಎಂಡ್ರ್ಯೂಸರವರು ತಮ್ಮ "ರಿಟೀರ್ ಫ್ರೆಷ್ ವಿದ್ ಇಂಡಿಯಾ" ಎಂಬ ಲೇಖನದಲ್ಲಿ 'ಡೈಲಿ ಹೆರಾಲ್ಡ್' ಪತ್ರಿಕೆಯಲ್ಲಿ ಬರೆದಿರುವರು.

ಯುದ್ಧದ ಭ್ರಮೆ–

–ಯನ್ನು ಬಿಟ್ಟಿಲ್ಲವೆಂಬುದೇನೋ ಸಿದ್ಧಾಂತವಾದ ಮಾತು. ಆದರೆ ಕೆಲವು ಮಾಜಿ ಸೈನಿಕರು ಈ ಭ್ರಮೆಯನ್ನು ಬಿಟ್ಟಿಲ್ಲ ಮಿಡ್ಲ್‌ಸೆಕ್ಸಿನ ಟೆಡ್ಡಿಂಗ್ಟನ್‌ನಲ್ಲಿರುವ ಮಾಜಿ ಸೈನಿಕನೊಬ್ಬನು ಇತ್ತೀಚೆಗೆ ಅಂಗಡಿಗೆ ಹೋದವನು ಹಿಂದಿರುಗಲಿಲ್ಲ ಹಲವು ದಿನಗಳ ವರೆಗೂ ಅವನ ಪತ್ತೆಯಿಲ್ಲದಿರುವುದನ್ನು ನೋಡಿ ಮನೆಯವರು ಪೋಲೀಸರ ಸಹಾಯ ಪ್ರಾರ್ಥನೆಯನ್ನು ಮಾಡಿಯೇ ಬಿಟ್ಟರು ಒಂದು ದಿನ ಅವನು ಸರ್ರೀಯಲ್ಲಿ ತಿರುಗಾಡುತ್ತಿದ್ದುದು ಕಂಡುಬಂತು ದಾರಿಯಲ್ಲಿ ನಡೆಯುತ್ತಾ, "ನನ್ನನ್ನು ಈ ದಾರಿಗಳಲ್ಲಿ ಇಟ್ಟೇದಿ, ನಾನು ಮೊದಲು ಇಲ್ಲಿರಲಿಲ್ಲ" ಎಂದು ಮೊದಲಾಗಿ ಹೇಳುತ್ತಿದ್ದನು ಅವನನ್ನು ಹಿಡಿದು ಮನೆಗೆ ತಂದರು ಹಾಸಿಗೆಯಲ್ಲಿ ಬಿದ್ದುಕೊಂಡು ತಾನು ಸೈನಿಕನಾಗಿದ್ದ ಮಹಾಯುದ್ಧದ ಸಮಯದಲ್ಲಿ ಮಾಡಿದ ಕಾರ್ಯ, ಆಡಿದ ಮಾತುಗಳ ವರದಿಯನ್ನು ಹೇಳುತ್ತಿರುವನು ಮಹಾಯುದ್ಧದಲ್ಲಿ ನಡೆದುದನ್ನೆಲ್ಲಾ ಇವನು ಇದ್ದ ಕೈದ್ದ ಹಾಗೆಯೇ ಹೇಳುತ್ತಿರುವನು ಈ ಬಗೆಯ ಮುಚ್ಚತನದಿಂದ ಕೆಲವು ಚರಿತ್ರಕಾರರು ಬಹಳ ಪ್ರಯೋಜನ ಹೊಂದಲಿದ್ದಾರೆ

ಪೋಲೀಸರ ಮೇಲೆ ಬಿದ್ದರೆ–

ವಿನಾಗುತ್ತದೆಂಬುದಕ್ಕೆ ಲೈಲಾಪುರದಿಂದ ಬಂದಿರುವ ವಾರ್ತೆಯೇ ಸಾಕ್ಷಿ. ಅಲ್ಲಿಯ ಮುಂಬ್ ವಾಲ ಎಂಬಲ್ಲಿ ನಾರಂಗ ಎಂಬ ಪೋಕರಿಯೊಬ್ಬನು ಕಲಕ್ಟ್ರೆಸಿಕೊಂಡು ಓಡಿದನು ಪೋಲೀಸರು ಅವನನ್ನು ಹಿಂಬಾಲಿಸಿದರು ನಾರಂಗನು ತನ್ನ ಪಡೆಯವರೊಡನೆ ಪೋಲೀಸರನ್ನು ಸುತ್ತುಗಟ್ಟಿ ಗುಂಡುಹಾರಿಸಿದನು. ಪೋಲೀಸರು ಸ್ವರಕ್ಷಣೆ ಮಾಡಬೇಕಾಯಿತು ಗುಂಡು ಹಾರಿಸಿದರು ನಾರಂಗನು ಧರೆಗೊರಗಿದನು ಕೆಲವರನ್ನು ಕೈದುಮಾಡಿರುವರೆಂದು ಪ್ರತ್ಯೇಕ ಹೇಳುವುದಿಲ್ಲ

ಡಿಲ್ಲಿಯಲ್ಲಿ 'ಬ್ರೋಡ್ ಕಾಸ್ಟಿಂಗ್ ಸ್ಟೇಷನ್'

ಒಂದನ್ನು ಸ್ಥಾಪಿಸಬೇಕೆಂಬುದ್ದೇಶದಿಂದ ಸ್ಟೆಂಡಿಂಗ್ ಫೈನಾನ್ಸ್ ಕಮಿಟಿಯ ಸಭೆಯು ಡಿಲ್ಲಿಯಲ್ಲಿ ಜರಗಿ ಆ ಬಗ್ಗೆ ೬೪೮೦೦೦ವನ್ನು ವಿನಿಯೋಗಿಸಲು ಯುಕ್ತ ಇಂಡಸ್ಟ್ರೀಸ್ ಮತ್ತು ಲೇಬರ್ ಖಾತೆಗಳ ಸಮಕ್ಷಮ ಆ ಬಗ್ಗೆ ಒಂದು ಆಫೀಸನ್ನು ತೆರೆಯಬೇಕೆಂದಾಯಿತು ಡಿಲ್ಲಿಯಲ್ಲಿ ಜರಗುವ ಗಾಯನಗಳನ್ನು ನಾವು ಕೇಳುವ ಪುಣ್ಯವು ಬೇಗನೇ ಸನ್ನಿಹಿತವಾಗಿದೆ

'O K

'ಓ ಕೆ' ಎಂಬ ಅಕ್ಷರಗಳ ಅರ್ಥವು 'ಎಲ್ಲಾ ಸರಿಯುಂಟು'– ಎಲ್ಲರೂ ಸೌಖ್ಯ ಎಲ್ಲವೂ ಕ್ರಮ ಪ್ರಕಾರವಿದೆ ಎಂದಾಗಿದೆಯೆಂಬ ಭಾವನೆಯಿಂದ ಹಲವು ಜನರು ಇಂಗ್ಲೀಷಿನಲ್ಲಿ ಹೇಳುವುದು ಈಗೀಗ ರೂಢಿಯಲ್ಲಿ ಬಂದಿದೆ 'ಎಲ್ಲವೂ ಸರಿಯುಂಟೋ' ಎಂದು ಕೇಳಿದರೆ ಓ ಯಸ್ ಕ್ವೈಟ ಓ ಕೆ" ಎನ್ನುವುದು ಪದ್ಧತಿ ಆದರೆ "ಓ ಕೆ"ಯ ರೋಗವು ಎಲ್ಲಿಂದ ಬಂತೆಂದು ವಿಚಾರಿಸಿದವರು ತೀರ ವಿರಳ ಆದರೆ ಇದರ ವಿಚಾರವು ನೊಸ್ಸೆ ಪ್ರಿವಿ ಕೌನ್ಸಿಲಿನಲ್ಲಿ ತಿಳಿಸಲ್ಪಟ್ಟಿತು, ಓ ಕೆ ಎಂಬ ಅಕ್ಷರಗಳನ್ನುಪಯೋಗಿಸಿ ಸಮರ್ಪಕತೆಯ ಅರ್ಥವನ್ನು ೧೮೪೦ರಿಂದಲೂ ಜನರು ಪ್ರಚಾರಗೊಳಿಸಿದ್ದರು. ಈ ಅಕ್ಷರಗಳನ್ನು ಮೊದಲು ಅನೇಕರ ಹಳೆಯ ಕಾಲದವರು ತಮ್ಮ ಗುಪ್ತಸಂಕೇತಗಳನ್ನಾಗಿ ಉಪಯೋಗಿಸುತ್ತಿದ್ದರು Orl Korrect ಎಂದೋ Okth' ಎಂದೋ, 'Oakie Doke' ಎಂದೋ ಈ ಅಕ್ಷರಗಳ ಉತ್ಪತ್ತಿಯನ್ನು ನವೆಂದು ತಿಳಿದು ಎರಡಿಲ್ಲ.

ಪಕ್ಷಿಯ ಹತ್ಯೆಗೆ ಮರಣದಂಡನೆ

೧೯೩೪ರ ಫೆಬ್ರುವರಿ ೨೩ರಲ್ಲಿ ವಿಲ್ಲುಪುರಂ ಜಕ್ಷನ್‌ನಲ್ಲಿಯ ರೈಲ್ವೇ ಸ್ಟೇಶನಿನಲ್ಲಿ ಒಂದು ಪೆಟ್ಟಿಗೆಯು ಕಂಡುಬಂತು ಪರೀಕ್ಷಿಸಲಾಗಿ ಅದರೊಳಗೆ ಒಂದು ಶವವು ಸಿಕ್ಕಿತು. ಶವದ ಪರಿಶೋಧನೆಯಾಗಲು ಅದು ಮದ್ರಾಸಿಯ ರೈಲ್ವೇ ಮೈಲ್ ಸೋರ್ಟರನಾದ ಆರ್ ನಾರಾಯಣ ಸ್ವಾಮಿ ಆಯ್ಯರನ ಪತ್ನಿಯಾದ ಶ್ರೀಮತಿ ಕಾಂತಮಣಿ ಅಮ್ಮಳ್ ಎಂಬವಳ ಶವವೆಂದು ತಿಳಿದುಬಂತು. ಗಾಢವಾದ ವಿಚಾರಣೆಯಾದ ಮೇಲೆ ಅವಳನ್ನು ಕೊಂದ ಪಾಪಿಯು ಅವಳ ಪತಿಯೆಂದೇ ನಿರ್ಧಾರವಾಯಿತು ಇದೇ ನಾಲ್ಕನೇ ತಾರೀಕಿನ ದಿನ ಸ್ವಾಮಿಯನ್ನು ಮರಣದಂಡನೆಗೆ ಗುರಿಪಡಿಸಿರುವರು. ಈ ತೀರ್ಪನ್ನು ಕೇಳಿದ ಜನಸಮೂಹವು ಆನಂದದಿಂದ ಕೋಲಾಹಲವನ್ನು ಮಾಡಿತು.

ಸಾರ್ವಭೌಮರ ಅಪೇಕ್ಷೆ.

ಸಾರ್ವಭೌಮರ ಅಪೇಕ್ಷೆಯು ಮಹತ್ವಾಗಿರುವುದಿಲ್ಲ ತನ್ನ ಪಟ್ಟಾಭಿಷೇಕೋತ್ಸವದ ದಿನ ಇಂಗ್ಲಾಂಡಿನ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೆ ೩ಂದು ದಿನದ ಹೆಚ್ಚಿನ ರಜೆಯನ್ನು ಸಂಬಂಧಪಟ್ಟವರು ಕೊಡಬೇಕೆಂದು ಅವರು ಕೇಳಿಕೊಂಡ ಮೇರೆಗೆ ಅವರ ಅಪೇಕ್ಷೆಯನ್ನು ಪೂರೈಸಲಾಗಿದೆ, ಈ ವಾರ್ತೆಯನ್ನು ಕೇಳಿದ ಮಕ್ಕಳ ಆನಂದಕ್ಕೆ ಪಾರವೇ ಇಲ್ಲವಂತೆ.

ಬಾಡಿಗೆ ಕೊಡದ ಮಹಾರಾಜರೇ?

ಬಹವಾಲಪುರದ ಮಹಾರಾಜರ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಪ್ರತಿನಿಧಿಯಾಗಿ ೧೯೩೦ರಲ್ಲಿ ಜೋಸೆಫ್ ಬೆಂಜಮಿನ್ ಲೆವಿ ಎಂಬವನು ನೇರಿಕೊಂಡನು 'ಗ್ರೇಟ್ ಕೋರ್ಟ್' ಎಂಬ ಸ್ಥಳವನ್ನೂ ಅಲ್ಲಿಂದ ಬಂಗಲೆಯನ್ನೂ ಲೆವಿಯು ಮಹಾರಾಜರ ವಸತಿಗಾಗಿ ತನ್ನ ಹೆಸರಿನಲ್ಲಿ ಪಡೆದುಕೊಂಡನು ಮಹಾರಾಜರು ಊರಿಗೆ ಹೊರಡುವಾಗ ಬಂಗಲೆಯ ಬಾಡಿಗೆಯಾಗಿ ೯೪೩ ಪವನುಗಳನ್ನು ಬಾಕಿಮಾಡಿಕೊಂಡರು ಕೆಲವು ಸಮಯ ವ್ಯವಹಾರ ಯೊತ್ತರೇ ಲೆವಿಯ ಮೇಲೆ ದಾವಾ ದಾಖಲಾಯಿತು ಈಗ ದಿವಾಳಿಯ ಅರ್ಜಿಮಾಡಿಕೊಂಡಿರುವನು ಸಾರ್ವಭೌಮರ ರಜತೋತ್ಸವಕ್ಕೆ ಬಹವಾಲಪುರದ ಮಹಾರಾಜರು ಬಂದರೆ ಈ ಸಾಲವನ್ನು ತೀರಿಸಿಕೊಳ್ಳುವ ಆಶೆಯಲ್ಲಿರುವನಂತೆ

ಪರದೇಶಿಯ ಕುತಂತ್ರಗಳು ಅಮೇರಿಕದಲ್ಲಿ.

ಜರ್ಮನಿ ಇಟೆಲಿ, ರಷ್ಯಾ ಮತ್ತು ಮೆಕ್ಸಿಕೊಗಳು ಅಲ್ಲದೆ, ಅವುಗಳ ಭಿನ್ನಮತವಾದಿಗಳು ಏಜೆಂಟರೂ ಯುನೈಟೆಡ್ ಸ್ಟೇಟ್ಸಿನ ಪ್ರಜಾಧಿಪತ್ಯವನ್ನು ತಳ್ಳಿಹಾಕಲು ಹಂಚಿಕೆಯನ್ನು ನಡೆಯಿಸುತ್ತಿರುವರೆಂದು ವಾಶಿಂಗ್ಟನ್ನಿನ ಒಫಿಶಿಯಲ್ ರಿಪೋರ್ಟಿನಲ್ಲಿತ್ತು ಈ ರಿಪೋರ್ಟ್ ಹೌಸ್ ಒಫ್ ರಿಪ್ರೆಸೆಂಟೆಟಿವ್‌ಗಳ ಕಮಿಟಿಗೆ ಬಂದಿತ್ತು ಕಳೆದ ವರ್ಷ ನೇಮಕಹೊಂದಿದ ಪ್ರೆಸಿಡೆಂಟ ರೂಜವೆಲ್ಟರು ಕೆಲವರ ಸಿದ್ಧಾಂತಗಳನ್ನು ಪತ್ತೆಹಚ್ಚಲು ಹೇಳಿರುವರು ನೊಸಲು ನಾಜೀಪಕ್ಷೀಯರ ಪ್ರಸಾರಣವನ್ನು ಪತ್ತೆಹಚ್ಚಲಾರಂಭಿಸುವಾಗ, ಕಮಿಟಿಯು ಸಂಘಟನೆಗಳ ಸಂದರ್ಭವನ್ನು ಮುಂದುವರಿಸಿತು.

ಯುನೈಟೆಡ್ ಸ್ಟೇಟ್ಸಿನ ವ್ಯವಸ್ಥಾನೀಯದ ಎದುರು ಧರ್ಮಪ್ರಸಾರಣವನ್ನು ಹೂಡಿದವರು ಇಟೆಲಿಯವರು, ಜರ್ಮನರು ಮೆಕ್ಸಿಕನರು ರಷ್ಯನರು ಎಂಬುದಾಗಿ ಅದು ಈಗ ಬಹಿರಂಗಪಡಿಸುತ್ತದೆ

ರೋಮ್ ಎಬಿಸ್ಸಿನಿಯಗಳು ಹೋರಾಡುತ್ತಿವೆ. ರಹಸ್ಯವು ಹೊರಬಿತ್ತು'

ಎಬಿಸ್ಸಿನಿಯವನ್ನು ನಾಶಪಡಿಸುವ "ಫ್ರಾಂಕೋ–ಇಟೆಲಿಯ ಹಂಚಿಕೆ"ಯು ಬಯಲಾಯಿತು' ಇತ್ತೀಚೆಗೆ ನಡೆದ ರೋಮಿನ ಒಪ್ಪಂದದಲ್ಲಿ ಅಸ್ತಿತ್ವದ ಸ್ವತಂತ್ರ ರಾಷ್ಟ್ರವನ್ನೆದುರಾಯಿಸಿ ಇಟೆಲಿಯ ನೆಲೆಯನ್ನು ಗಟ್ಟಿ ಮಾಡಿಕೊಳ್ಳಬೇಕೆಂದು ನಾಲ್ಕು ಗುಟ್ಟಿನ ವಾಕ್ಯಗಳು ಇರುವುವು, ಮೊದಲನೆಯದರ ಉದ್ದೇಶವೇನೆಂದರೆ ಎಬಿಸ್ಸಿನಿಯವನ್ನು ಸಮುದ್ರದ ಮಧ್ಯೆ ವಿಂಗಡಿಸುವುದು ಅದರ ಯುದ್ಧಸಾಮಗ್ರಿಯ ದಕ್ಷಿಣಕ್ಕೆ ಸ್ವಲ್ಪ ಸ್ಥಳವನ್ನು ಬಿಟ್ಟುಬಿಡುವುದು ಫ್ರಾನ್ಸ್ ತನ್ನ ವಿಚಾರವನ್ನು ಬದಲಾಯಿಸಿತು ಎಬಿಸ್ಸಿನಿಯದಿಂದ ಇಟೆಲಿಗೆ ಹಾದುಹೋಗುವ ಒಂದೇ ರೈಲ್ವೆಯನ್ನೂ ಮತ್ತು ಕೆಂಪು ಸಮುದ್ರದ ತೀರದ ತನ್ನ ಪ್ರಾಂತ್ಯವನ್ನೂ ಅದು ತಡೆಗಟ್ಟುವುದರಿಂದ ಇಟೆಲಿಗೆ ಉತ್ಸಾಹಭಂಗವಾಗಿರುತ್ತದೆ ಮೆಡಿಟರೇನಿಯದಿಂದ ಎಬಿಸ್ಸಿನಿಯವನ್ನು ಕೂಡಿಸಿ ಸೆಂಟ್ರಲ್ ಆಫ್ರಿಕದ ವರೆಗೆ ತನ್ನ ಸಾಮ್ರಾಜ್ಯವನ್ನು ಮಾಡಬೇಕೆಂಬ ಆಸೆ ಧ್ವನಿಯಾಗಿ ಬ್ರಿಟನ್ ಹೊರತೇ ಇಂತಹ ತರವೊಂದನ್ನು ಇಟೆಲಿಗೆ ಹಾಕಿಬಿಟ್ಟಿದೆ, ಟೊಕ್ಕಿಯ ಮೇಲೆ ಬರೆಬಿದ್ದಂತಾಯಿತು.

ಕಡೆಯವಾಗಿ ವಾಯರ್ಥವಾಗಿ "ಕಾರ್ಟಿಬ್ರಾಂಟ" ಫ್ರಾನ್ಸಿನಿಂದಲೂ ಬ್ರಿಟನಿನ ಮುಟ್ಟಿಕೆಯಿಂದಲೂ ಸಿಕ್ಕಿದುದರಿಂದ ಮುಸ್ಸೊಲೋನಿಗೆ ಎಬಿಸ್ಸಿನಿಯದಲ್ಲಿ "ಇಚ್ಛೆ ಇದ್ದಂತೆ ಮಾಡಲು" ಎಡೆಕೊಟ್ಟಿತು. ಎಬಿಸ್ಸಿನಿಯವು ತನ್ನ ಹಳೆಯ ದಾರಿಯನ್ನು ಹಿಡಿದು, ಇಟೆಲಿಯನ್ನು ಎದುರಿಸಲು ಹೊರಟಿದೆ, ಮುಸ್ಸೊಲೋನಿಯ ಒಪ್ಪಿಗೆಯ ಮೇರೆಗೆ ತನ್ನ ಒಬ್ಬ ಮಗಳಿಗೂ ಜಪಾನಿನ ವೈಕೌಂಟ್ ಕುರೊಡನ ಮಗನಿಗೂ ಮದುವೆಮಾಡಬೇಕೆಂದಿದ್ದ ಎಬಿಸ್ಸಿನಿಯ ಅರಸನು ಈ ಮದುವೆಯನ್ನು ಕಡಿದುಹಾಕಿದನು

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ – (ನಿಶ್ಶಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ – (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

Distributors for South Kanara:—

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಡಬ್ಬಿಯೊಂದಕ್ಕೆ ರೂ. 1

ಕಾಮಶಾಸ್ತ್ರವನ್ನೋದಿರಿ.
Agents—Shah Company, Mangalore
„ Pearl & Sons, Mangalore.
Atank Nigrah Pharmacy.
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು ಸಂ. ಸ್ವ.

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಪಟ್ಟು ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶಿಯ ಜೊಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ತೆತ್ತ ಮೂಲಧನ: ರೂ. 3,31 035 ಕ್ಷೇಮನಿಧಿಗಳ: ರೂ. 4,50,000 ಠೇವಣಾತಿಗಳು: ರೂ. 58,62,486.

ಆಫೀಸುಗಳು—ಮಂಗಳೂರು, ಮುಂಬಾಯಿ, (ಫೋರ್ಟ್ ಮತ್ತು ಮಾಂಡ್ವಿ) ಆಲಪ್ಪಿ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ. ಬಂಟವಾಳ, ಹುಬ್ಬಳ್ಳಿ, ಮತ್ತು ದಾವಣಗೆರೆ.

ಎಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

Writing an Advertisement. Advertisements make both a concious and sub-concious appeal and should be beautiful, sentimental or humorous, not blatant or vulgar, crisp in their appeals, whether of wording or design, not too highly coloured metaforically, and with a reason given (where ever possible) that appeals to the practicable mind; a mere statement of the name of the article or place is insufficient.

Get your advertisements written up by —The Publicity Department, Swadeshabhimani, Mangalore.

ಸರಕಾರೀ ನೌಕರರ ಸಂಬಳವೆಷ್ಟಿರಬೇಕು?

ಬರೀ ೫೦೦ ರೂಪಾಯಿ ಸಾಕು.

(ಮಹಾತ್ಮಾ ಗಾಂಧಿಯವರು ಮೇಲಿನ ವಿಷಯಕವಾಗಿ "ಯಂಗ್ ಇಂಡಿಯಾ"ದಲ್ಲಿ ಬರೆದ ಲೇಖನದ ಅನುವಾದವಿದು) ಸಂ. ಸ್ವ.

ಕರಾಚಿಯಲ್ಲಿ ನಡೆದ ರಾಷ್ಟ್ರ ಮಹಾಸಭೆಯಲ್ಲಿ ಅಂಗೀಕೃತವಾದ "ಪ್ರಶ್ನೆಗಳ ಮುಖ್ಯ ಹಕ್ಕುಗಳ ನಿಷ್ಕರ್ಷೆ"ಯ ಒಂದಂಗವಾದ 'ಸರಕಾರಿ ಉದ್ಯೋಗಸ್ಥರ ಸಂಬಳವು ತಿಂಗಳೊಂದಕ್ಕೆ ೫೦೦ ರೂಪಾಯಿ ಅಥವಾ ಒಂದು ವರ್ಷಕ್ಕೆ ೬೦೦೦ ರೂಪಾಯಿಗಳಿಗೆ ಮೀರಬಾರದು" ಎಂಬ ಠರಾವು ವಿಶೇಷವಾದ ಗದ್ದಲವನ್ನುಂಟುಮಾಡಿರುತ್ತದೆ. ಪರಕೀಯರ ಆಡಳಿತವು ನಮ್ಮ ರಾಷ್ಟ್ರದಲ್ಲಿ ಪಸರಿಸಿ 'ತಲೆಭಾರದ-ಸಂಬಳದ ತತ್ವವು ನಮ್ಮಲ್ಲಿ ಚೆನ್ನಾಗಿ ಬೇರೂರಿದ್ದ ಪಕ್ಷದಲ್ಲಿ ಈ ೫೦೦ ರೂಪಾಯಿ ಸಂಬಳದ ನಿರ್ಣಯವು, ನಮ್ಮಲ್ಲನೇಕರಿಗೆ ವಿಚಿತ್ರವಾಗಿ ಕಂಡು ಬರುತ್ತಿರಲಿಲ್ಲ. ಈ ತಲೆಭಾರದ ಸಂಬಳಗಳಲ್ಲಿ ಪಾರಿಶುದ್ಧತೆಯಿಲ್ಲ. ಈ ವರೆಗೆ ಜರಗಿರುವ ೪೬ ರಾಷ್ಟ್ರ ಮಹಾಸಭಾ ಸಮ್ಮೇಳನಗಳ ಪ್ರತಿಯೊಬ್ಬ ಅಧ್ಯಕ್ಷರೂ ಸದಸ್ಯರೂ ಕಾಡ್ಗಿಚ್ಚಿನಂತೆ ಏರುತ್ತಾ ಹೋಗುತ್ತಲಿರುವ ಸರಕಾರದ ವೆಚ್ಚದ ಪಟ್ಟಿಯ ಕುರಿತಾಗಿ ತಮ್ಮ ದುಃಖಸೂಚನೆಯನ್ನು ಮಾಡಿದ್ದಾರೆ ಅನೇಕ ಅಧ್ಯಕ್ಷರ ತಲೆಭಾರದ ಸಂಬಳಗಳನ್ನು ಬಹುವಾಗಿ ಖಂಡಿಸಿರುತ್ತಾರೆ ಸುಮಾರು ಅರ್ಧ ಶತಮಾನದಿಂದ ಕೇಳಿ ಬರುತ್ತಲಿದ್ದ ಈ ಅಸಂತೃಪ್ತಿಯು ನಿಟ್ಟುಸಿರಿಗೆ ಮೊನ್ನೆ ನಡೆದ ಕರಾಚಿ ಸಭೆಯು ಒಂದು ಸ್ಪಷ್ಟ ರೂಪು ಕೊಟ್ಟಿತು

ರಾಷ್ಟ್ರಸಭೆಯ ತೀರ್ಮಾನದ ನ್ಯಾಯಪರತೆಯನ್ನು ಮನಗಾಣಬೇಕಾದರೆ, ಇತರ ದೇಶಗಳ ಜನರ ಸರಾಸರಿ ಸಂಪಾದನೆಯನ್ನೂ ಅಲ್ಲಿ ಸರಕಾರಿ ಸಂಬಳಗಳಿಗಾಗಿ ವೆಚ್ಚವಾಗುತ್ತಲಿರುವ ದ್ರವ್ಯವನ್ನೂ ನಮ್ಮ ದೇಶದ ಜನರ ಸಂಪಾದನೆಯನ್ನೂ ಇಲ್ಲಿಯ ತಲೆಭಾರ ಸಂಬಳಗಳನ್ನೂ ವಿಮರ್ಶಾತ್ಮಕ ದೃಷ್ಟಿಯಿಂದವಲೋಕಿಸಿ "ಯಂಗ್ ಇಂಡಿಯಾ" ಪ್ರಪಂಚದ ಪ್ರಧಾನ ರಾಜ್ಯಗಳ ಆಯವ್ಯಯದ ಪಟ್ಟಿಗಳನ್ನು ಸಂಗ್ರಹಿಸಲು ಯತ್ನಿಸುತ್ತಿದ್ದೇನೆ ನನ್ನ "ಯಂಗ್ ಇಂಡಿಯಾ" ಪತ್ರಿಕೆಯ ಓದುಗರಿಗೆ ವಿವಿಧ ರಾಷ್ಟ್ರಗಳ ಜನರ ಸರಾಸರಿ ಸಂಪಾದನೆಯು ಎಷ್ಟೆಂಬುದು ಗೊತ್ತಿದೆ ಆದರೆ ಸಂಬಳಗಳ ವಿಚಾರವಾಗಿ ಏನೂ ತಿಳಿಯದು ಜಪಾನ್ ದೇಶದಲ್ಲಿ ದೊಡ್ಡ ದೊಡ್ಡ ಹುದ್ದೇದಾರರಿಗೂ ಅವರ ಕೈಕೆಳಗಿನ ನೌಕರರಿಗೂ ಕೊಡುವ ಸಂಬಳಗಳನ್ನು ನಾನು ಕಂಡು ಹಿಡಿದಿದ್ದೇನೆ ಜಪಾನ್ ದೇಶದ ಅಧಿಕಾರಿಗಳ ಸಂಬಳದ ಪಟ್ಟಿಯು ಈ ಕೆಳಗೆ ಕೊಡಲ್ಪಟ್ಟಿದೆ –

ಗವರ್ನರ್ ಜನರಲರಿಗೆ ವಾರ್ಷಿಕವಾಗಿ– –೧೦,೦೦೦–೧೨,೭೦೦

„ „ ತಿಂಗಳಿಗೆ ೧೦೨೦ ರೂಪಾಯಿ– –ಗಿಂತ ಕಡಿಮೆ

ಗವರ್ನರರಿಗೆ ತಿಂಗಳಿಗೆ ರೂ ೬೦೦–೮೦೦

ಹೈಕೋರ್ಟು ಜಡ್ಜರಿಗೆ ವರ್ಷಕ್ಕೆ ರೂಪಾಯಿ– ೧೦,೦೦೦ದಿಂದ ೧೧೬೦೦೦

„ „ ತಿಂಗಳಿಗೆ ರೂ ೧೦೦೦

ಇತರ ನ್ಯಾಯಾಧೀಶರಿಗೆ „ ರೂ ೧೫೦–೨೦೦

ಪೋಲೀಸು ಮುಖ್ಯಾಧಿಕಾರಿಗೆ ತಿಂಗಳಿಗೆ– ರೂ ೬೦೦

ದಿವಾನ್ ಖಚೇರಿಯ ಅಧಿಕಾರಿಗೆ ತಿಂಗಳಿಗೆ– ರೂ ೧೦೦–೧೫೦

ಕೆಳಗಿನ ದರ್ಜೆಯ ಇತರ ಅಧಿಕಾರಿಗೆ– ರೂ ೨೫೦–೩೦೦

ಪೋಲೀಸ್ ಕೊನ್ಸ್ಟೇಬಲರಿಗೆ ತಿಂಗಳಿಗೆ– ರೂ ೩೦–೮೦

ಸಾರ್ಜಂಟರಿಗೆ ತಿಂಗಳಿಗೆ ರೂ ೭೦–೮೦

ಜಪಾನ್ ದೇಶದಲ್ಲಿ ಸರಾಸರಿ ಸಂಪಾದನೆ ತಲೆಯೊಂದಕ್ಕೆ ದಿನವಹಿ ನಾಲ್ಕಾಣೆ, ವರ್ಷಕ್ಕೆ ರೂ ೯೧–೮–೦.

ಜಪಾನ್ ದೇಶದ ಆದಾಯ ಮತ್ತು ಸಂಬಳಗಳೆಷ್ಟೆಂದು ತಿಳಿದವರು ಕೊಂಗ್ರೆಸ್ಸಿನವರು ಹೇಳಿರುವ ೫೦೦ ರೂಪಾಯಿಯ ಪರಮಾವಧಿಯು ಔದಾರ್ಯಪೂರ್ಣವಾದುದೆಂದು ಹೇಳದಿರಲಾರರು.

ಕಡಮೆ ಸಂಬಳದ ಮೇಲೆ ಕೆಲಸಮಾಡುವ ಜಪಾನಿನ ಅಧಿಕಾರವರ್ಗದ ವಿಚಕ್ಷಣತೆ, ದಕ್ಷತೆಯು, ಹೆಚ್ಚು ಸಂಬಳ ತಿನ್ನುವ ನಮ್ಮ ಅಧಿಕಾರ ವರ್ಗದವರಿಗಿಂತ ಯಾವ ವಿಧದಲ್ಲಿಯೂ ಹೀನವಾಗಿಲ್ಲ ಜಪಾನಿನ ಗಿರಣಿಗಳ ಕಾರ್ಯದಕ್ಷತೆಯ ವಿಚಾರವಾಗಿ ಮಿ ಅರ್ದೊ ಪರ್ಸಿಯವರು ಮಾಡಿದ ಭಾಷಣವೊಂದನ್ನು ನಾನು ಕೆಲವು ದಿನಗಳ ಹಿಂದೆ ಓದಿರುವೆ ಈ ಗಿರಣಿಗಳು ದೊಡ್ಡ ಸಾರ್ವಜನಿಕ ಸಂಸ್ಥೆಗಳು ಜಪಾನಿನ ಇತರ ಎಲ್ಲಾ ಸಂಸ್ಥೆಗಳ ಕಾರ್ಯದಕ್ಷತೆಯಂತೆ ಇರುವುದೆಂಬುದರಲ್ಲಿ ಸಂದೇಹವೇ ಇಲ್ಲ ಜಪಾನರ ನೈತಿಕ ವಿಚಾರವಾಗಿ ಮಿ ಪರ್ಸಿಯವರು 'ಚೀನಾದೇಶಸ್ಥರು ಒಮ್ಮೆ ವಾಗ್ದಾನ ಮಾಡಿದರೆ ಅದರಂತೆಯೇ ನಡೆಯುವರು ಆದರೆ ಜಪಾನರು ಮಾತ್ರ ಹಾಗಿರುವುದಿಲ್ಲ ಅವರು 'ಮಾತಿಗಾಗಿ ಕದಿಯುವುದುಂಟು' ಎಂಬ ಪೂರ್ವಕಾಲದ ಅಪವಾದನೆಯನ್ನು ನಂಬದಿರಿ ಆಡಿದ ಮಾತನ್ನು ಉಳಿಸಿಕೊಳ್ಳುವುದರಲ್ಲಿ ಈಗಿನ ಜಪಾನರು ಚೀನಾ ದೇಶಸ್ಥರಿಗಿಂತ ಸಹಸ್ರಪಾಲು ಮೇಲೆಂದು ಹೇಳಬೇಕು' ಎಂದು ತಿಳಿಸಿರುವರು.

ಜಪಾನರ ಕಾರ್ಯದಕ್ಷತೆ, ವಿಚಕ್ಷಣತೆ, ಸಹಿಷ್ಣುತೆ ಮೊದಲಾದ ಗುಣಗಳನ್ನು ಮಿ ಪರ್ಸಿಯವರು ಬಹು ವಿಧವಾಗಿ ಶ್ಲಾಘಿಸಿರುತ್ತಾರೆ ಮಿ ಪರ್ಸಿಯವರು ಹೇಳುತ್ತಿರುವುದು ಅವರವರ ಅಭಿಪ್ರಾಯವನ್ನಲ್ಲ–ತಮ್ಮ ಸ್ವಂತ ಅನುಭವವನ್ನು ಆದುದರಿಂದ ಕಾರ್ಯದಕ್ಷತೆ, ನೀತಿಗಳಿಗೂ ಹೆಚ್ಚು ಸಂಬಳಕ್ಕೂ ನಿಕಟ ಸಂಬಂಧವಿದೆ ಎಂಬುದೊಂದು ಮೂಢನಂಬಿಕೆ ಮಾತ್ರವಲ್ಲದೆ ಸಾಮಾನ್ಯ ಜೀವನವನ್ನು ನಡೆಸಲು ಕೂಡಾ ಸಾಲದಷ್ಟು ಸಂಬಳಕ್ಕೆ ಕೆಲಸಮಾಡುವ ನೌಕರರು ಕಾರ್ಯದಕ್ಷತೆಯನ್ನೂ ನೀತಿಯನ್ನೂ ಬಳಸಿಕೊಂಡಿರುವುದು ಸಾಧ್ಯವಾಗಿಲ್ಲ. ಮನುಷ್ಯನು ಸಮಾಜದಲ್ಲಿ ಯಾವ ಅಂತಸ್ತಿನಲ್ಲಿರುವನೋ ಅದಕ್ಕೆ ತಕ್ಕಂತೆ ಅವನ ವೆಚ್ಚಗಳಿರುವುವು. ಅವನ ಅಂತಸ್ತು ಏರಿದಂತೆಲ್ಲಾ ಅವನ ವೆಚ್ಚಗಳೂ ತಕ್ಕ ಮಟ್ಟಿಗೆ ಹೆಚ್ಚುವುವು. ಮನುಷ್ಯರಿಗೆ ಸಾಮಾನ್ಯವಾಗಿ ಬೇಕಾಗಿರುವ ಸೌಲಭ್ಯಗಳಲ್ಲದೆ ಇತರ ಕೃತಕ ಸನ್ನಿವೇಶಗಳನ್ನು ತಮ್ಮ ಸುತ್ತಲೂ ಬೆಳೆಸಿಕೊಂಡು ದುಂದುವ್ಯಯವನ್ನು ಮಾಡುವವರಿಗೆ ಬೇಕಾಗಿರುವಷ್ಟು ಹಣವನ್ನು ಕೊಡುವುದೂ ಸಾಧ್ಯವೂ ಅಲ್ಲ, ಧರ್ಮವೂ ಅಲ್ಲ ಇಂತಹ ದುಂದುವ್ಯಯ ಮಾಡುವವರು ಅನೇಕರು ನಮ್ಮಲ್ಲಿದ್ದಾರೆ ಸಂಬಳವು ಕಡಮೆಯಾದಾಗ ಈ ದುಂದುಗಾರರು ದೊಡ್ಡ ಗೊಂದಲದಲ್ಲಿ ಸಿಲುಕಿಕೊಂಡಿರುತ್ತಾರೆ ಆದರೆ ಸ್ವಲ್ಪ ಸಮಯದ ವರೆಗೆ ಅವರ ಕೃತಕ ಸನ್ನಿವೇಶಗಳು ಜೀವನದ ಸೊಬಗನ್ನಳಿತ ಮೇಲೆ '೫೦೦ ರೂಪಾಯಿ ಸಂಬಳ ಸಾಲದು' ಎಂಬ ಗೊಣಗಾಟವು ಖಂಡಿತವಾಗಿ ಕೊನೆಗಾಣುವುದು ನಮ್ಮ ಜನರಲ್ಲಿ ಕೃತಕ ಜೀವನವನ್ನು ಪ್ರಚಾರಗೊಳಿಸಿದುದು ಅನ್ಯರಾಷ್ಟ್ರೀಯರು ನಮ್ಮ ದೇಶಕ್ಕೆ ಮಾಡಿರುವ ಅಪಕಾರಗಳಲ್ಲಿ ಇದು ಮುಖ್ಯವಾದುದೆಂದು ನಾನ ಹೇಳುವೆನು. ಈ ಕೃತಕ ಜೀವನದ ಫಲವಾಗಿ ನಮ್ಮ ರಾಷ್ಟ್ರದ ಬಡತನವು ಹೆಚ್ಚಿ ಹೋಗಿ, ಈ ಮುಗ್ಗಟ್ಟಿನ ಕಾಲದಲ್ಲಿ ನಮ್ಮ ದೇಶದ ಆಯವ್ಯಯಗಳನ್ನು ಸುಗಮವಾಗಿ ನಡೆಸಲಾರದಂತಾಗಿದೆ ಈ ತಲೆಭಾರದ ಸಂಬಳಗಳಿಲ್ಲದಿದ್ದರೆ ಫಲವತ್ತಾದ ನಮ್ಮ ರಾಜ್ಯವು ಈ ಮುಗ್ಗಟ್ಟಿನಿಂದ ಪಾರಾಗುತ್ತಿಂಬುದರಲ್ಲಿ ಸಂದೇಹವಿಲ್ಲ

ನಾನು ಬ್ರಿಸ್ಟಲ್ ಪಟ್ಟಣದಲ್ಲಿದ್ದಾಗ ಈ ಕೃತಕ ಜೀವನವು ನಮ್ಮ ಜನರಲ್ಲಿ ಎಷ್ಟು ಬಲವತ್ತರವಾಗಿ ಬೇರೂರಿದೆಯೆಂಬುದು ನನಗೆ ಗೊತ್ತಾಯಿತು. ಶ್ರೀಮಂತರಾದ ವರ್ತಕರೂ ಉದ್ಯೋಗಿಗಳೂ ಈ ಕೃತಕ ಜೀವನವನ್ನು ಬಿಟ್ಟು ಸರಳ ಜೀವನವನ್ನನುಸರಿಸುವುದರಿಂದ ದೇಶಕ್ಕೆ ಹಿತವನ್ನುಂಟುಮಾಡಿದಂತಾಗುವುದೆಂದೂ ಸರಕಾರೀ ನೌಕರರು ಸರಳ ಜೀವನವನ್ನವಲಂಬಿಸಬೇಕೆಂದೂ ನಾನು ಹೇಳಿ, ಅವರ ಸಂಬಳವನ್ನು ಕಡಮೆಮಾಡಿ ದುಂದುವ್ಯಯವನ್ನು ನಿಲ್ಲುವಂತೆ ಮಾಡಬೇಕೆಂದುದ್ದೇಶಿಸಿದೆ

ಯುದ್ಧಗಳನ್ನು ನಿಲ್ಲಿಸಬಹುದೇ?

ರಕ್ಷಣೆಗೆ ಒಂದೇ ಉಪಾಯ.

ಯಾರಿಗೂ ಯುದ್ಧಗಳು ಬೇಕಾಗಿಲ್ಲ. ಆದರೆ ಎಲ್ಲರಿಗೂ ಅದರ ಹೆದರು ಉಂಟು. ಇದರಲ್ಲಿ ಆಶ್ಚರ್ಯಪಡುವ ಸಂಗತಿಯೆಂದರೆ ಇವುಗಳಿಗೆ ಏನೂ ಸಂಬಂಧವಿಲ್ಲದ ಸಾಮಾನ್ಯ ಜನರು ಸುಮ್ಮನೆ ಹೋರಾಡಿ ಸಾಯಬೇಕಾಗುವುದು. ನಿಜವಾಗಿ ಇದೇ ಯುದ್ಧಗಳನ್ನೇ ಉಂಟುಮಾಡುತ್ತದೆ ಎಂಬುದಾಗಿ ಈಗ ತಾನೇ ಪ್ರಕಟಿಸಿದ 'ಪೀಸಲ್ಸ್ ಪೀಸ್'ನಲ್ಲಿ ಸರ್ ನೋರ್ಮನ್ ಎಂಜಲರು ಬರೆದಿರುವರು

ಯುದ್ಧವು ಉಂಟಾಗುವುದು ಸರಕಾರದಿಂದಲ್ಲ, ಸಾಲದಿಂದಲ್ಲ, ಯುದ್ಧ ಸನ್ನದ್ಧರಿಂದಲ್ಲ, ಸಹಜಕ್ಕದಿಂದಲ್ಲ, ವಿಧಿವಶದಿಂದಲ್ಲ, ಅಥವಾ ಆಕಸ್ಮಿಕತ್ವಾಗಿಯಲ್ಲ– ಮನುಷ್ಯ ಪ್ರಾಣಿಗಳಿಂದಲೇ ಆಗುವುದು

ಅದು ಆಗುವುದು ಮನುಷ್ಯರಿಗೆ ಬೇಕಾಗಿರುವುದರಿಂದಲ್ಲ, ಅವರಿಗದು ಬೇಡ. ಅಥವಾ ಅವರ ಕ್ರಿಯೆಗಳಿಂದಲ್ಲ ಅವರ ಚರ್ಯೆಗಳೆಲ್ಲವೂ ಉತ್ತಮ. ಮಾನವ ಗುಂಪಿನಲ್ಲಿರುವ ನೀತಿಗಳಲ್ಲಿ ಅಂದರೆ ರಕ್ಷಣೆಯ ನೀತಿಗಳಲ್ಲಿ ಯೋಗ್ಯತೆಯುಳ್ಳದ ಜನಾಂಗಕ್ಕೆ ಹಿಂದಿನಿಂದ ಸಾಕಷ್ಟು ಶಾಂತಿಯಿರಬಹುದು ಆದರೆ ಅದರ ಫಲವೆಂದರೆ ಯುದ್ಧವು ಅಷ್ಟೆ

ಇಂತಹ ವಿಷಯಗಳಲ್ಲಿ ಜೋನ್ ಸ್ಮಿತ್ತರ ಆಲೋಚನೆಗಳೋ ಸರಿಯಾದ ರೀತಿಗಳು ಅಂತರ್ರಾಷ್ಟ್ರೀಯತೆ, ದೇಶಭಕ್ತಿ, ಮತ, ಸಾಮ್ರಾಜ್ಯವಾದ ಮೊದಲಾದುವುಗಳೇ ಕಳೆದ ಮಹಾಯುದ್ಧಕ್ಕೆ ಕಾರಣಗಳಾಗಿರುವುವು ಇವುಗಳನ್ನು ಬದಲಾಯಿಸದಿದ್ದರೆ ಇವುಗಳೇ ಈ ಘೋರ ಯುದ್ಧಕ್ಕೆ ಕಾರಣಗಳಾಗುವುವು.

ರಕ್ಷಣೆಗೆ ಉಪಾಯ.

ಯಾರಿಗೂ ಯುದ್ಧಗಳು ಬೇಡವೆಂಬುದು ಅರ್ಥವಿಲ್ಲದ ಮಾತು ಪ್ರಾಮುಖ್ಯವಾಗಿ ನಿಜವಿದು–ಎಷ್ಟು ಸಮಯದ ವರೆಗೆ ಅವರಿಗೆ ಶಾಂತಿಯು ಬೇಕಾಗಿದೆ?

ಸರ್ ನೊರ್ಮನರು ಯುದ್ಧವನ್ನು ನಿಲ್ಲಿಸಲಿಕ್ಕೆ ಒಂದೇ ಒಂದು ಉಪಾಯವಿರುವುದೆಂದು ಹೇಳುತ್ತಾರೆ –

"ಜನರು ಈ ಜಗತ್ತಿನ ಒಪ್ಪಂದಕ್ಕೆ ಸೇರುವುದಾದರೆ ಮತ್ತು ಅವರನ್ನು ಅವರು ರಕ್ಷಿಸಿಕೊಳ್ಳುವ ಭಾರವನ್ನು ಕೊಡುವುದಾದರೆ, ಈ ಒಪ್ಪಂದದ ಮೇರೆಗೆ ಅವರು ಶಾಂತಿಯನ್ನು ಸ್ಥಿರವಾಗಿ ಸ್ಥಾಪಿಸಬೇಕಾಗುವುದು. ಆಗ ಈ "ಲೀಗ್" ರಾಕ್ಷಸವಾಗುವುದು ಮತ್ತೆ ಜನಾಂಗಗಳು ತಮ್ಮ ಕರ್ತವ್ಯಗಳನ್ನು ಸರಕಾರಕ್ಕೂ ಪೋಲೀಸರಿಗೂ ಒಪ್ಪಿಸುವರು ಹೀಗಾದರೆ ಶಾಂತಿಸ್ಥಾಪನೆಯಾಗುವುದು ಇಲ್ಲದಿದ್ದರೆ ನಮಗೆ ಬೇಡವಾದ ಅನಾಹುತವೇ ಬರುವುದಕ್ಕೆ ಸಂಶಯವಿಲ್ಲ" ಎಂಬುದು ಸರ್ ನೊರ್ಮನ್ ಎಂಜಲರು ಬರೆದ ಲೇಖನದ ತಾತ್ಪರ್ಯ

ಕಣ್ಣಿನ ಪರೆ.

"ಐ–ಸನ್" ಎಂಬ ನೇತ್ರಭಾಸ್ಕರ' ಈ ಔಷಧವು ಕಣ್ಣುಪರೆ ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ ಖಾತರಿ ಗುಣಲಾಭ, ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Hary yasram Panchpota, Bengal

ಅತ್ಯುತ್ತಮತರದ ಸೊಳ್ಳೆ ಪರದೆಗಳು.

ಆರೋಗ್ಯ, ಅನುಕೂಲ, ಸುಖನಿದ್ರೆ ಇವುಗಳಿಗೆ ನಮ್ಮ ಸ್ವದೇಶೀ ಸೊಳ್ಳೆ ಪರದೆಗಳನ್ನು ಉಪಯೋಗಿಸಿರಿ ಗಾಳಿಯು ಲೀಲಾಜಾಲವಾಗಿ ಪರದೆಯೊಳಕ್ಕೆ ಪ್ರವೇಶಿಸುವುದು, ಸ್ಯಾಂಪಲ್ ಪರದೆಯ ಬಟ್ಟೆ ಮುಫತ್ತು ಆರ್ಡರ್ ಮಾಡುವಾಗ್ಗೆ ಸ್ವಲ್ಪ ಅಡ್ವಾನ್ಸ್ ಹಣ ಕಳಿಸಿದರೆ ಅನುಕೂಲ

ಉದ್ದ	ಅಗಲ	ಎತ್ತರ	ಖರೀದಿ	ಉತ್ತಮತರಹದ್ದು
೬ ಅಡಿ	೩ ೧/೨ ಅಡಿ	೩ ೧/೨ ಅಡಿ	ರೂ. ೧–೧೨–೦	ರೂ. ೨–೮–೦
೬ ಅಡಿ	೪ ಅಡಿ	೪ ಅಡಿ	„ ೨–೪–೦	„ ೩–೦–೦
೬ ೧/೨ ಅಡಿ	೪ ೧/೨ ಅಡಿ	೪ ೧/೨ ಅಡಿ	„ ೨–೮–೦	„ ೩–೮–೦
೭ ಅಡಿ	೫ ಅಡಿ	೫ ಅಡಿ	„ ೩–೨–೦	„ ೪–೧೦–೦
೭ ೧/೨ ಅಡಿ	೬ ಅಡಿ	೬ ಅಡಿ	„ ೪–೪–೦	„ ೫–೧೨–೦

ಜಿ. ಎಮ್. ಶರ್ಮ, ಪೋಸ್ಟ್ ಬಾಕ್ಸ್ ನಂಬ್ರ ೬೭೦೬, ಕಲ್ಕತ್ತಾ

Kanara Watch Works, Mangalore.

Suppliers of standard Watches, Time pieces, Wrist watches, Clocks and various kinds of sporting materials, etc., Quality and price unassailable Visit our Show-Room and be satisfied.

"ನೇಶನಲ್ ಗವರ್ನಮೆಂಟ್" ಮತ್ತು "ಜನರಲ್ ಇಲೆಕ್ಷನ್" ಸಮಸ್ಯೆ.

ಇಂಗ್ಲೆಂಡಿನಲ್ಲಿ ನಡೆಯುತ್ತಿರುವುದೇನು?

೧೯೩೧ರ ಅಕ್ಟೋಬರ ತಿಂಗಳಲ್ಲಿ ಬ್ರಿಟಿಷ ಚಕ್ರಾಧಿಪತ್ಯದ ಕೇಂದ್ರ ಸರಕಾರದಲ್ಲಿ ಹಿಂದೆ ಎಂದೂ ನಡೆದಿರದಂತಹ ಬದಲಾವಣೆಗಳಾಗಿ "ನೇಶನಲ್ ಗವರ್ನಮೆಂಟ್" ("ದೇಶೀಯ ಸರಕಾರ") ಎಂಬ ನೂತನ ಪ್ರಭುತ್ವ ಕ್ರಮವು ಜನ್ಮವೆತ್ತಿತು ಈ ನೂತನ ಪ್ರಭುತ್ವದ ನೀತಿ ರೀತಿಗಳನ್ನು ಅರಿತುಕೊಳ್ಳುವುದಕ್ಕಾಗಿ ಇದ ನ್ನಿಲ್ಲಿ ಕೊಟ್ಟಿದೆ. ಬ್ರಿಟಿಷ ಪ್ರಭುತ್ವದ ಕ್ರಮದ ಕುರಿತು ವಿವರವು ಹೀಗೆ. ಅಲ್ಲೀಗ ರಾಜನು ಹೆಸರಿಗೆ ಮಾತ್ರ–ಪ್ರಜೆಗಳ ಕೈಗೊಂಬೆಯಂತಿರ ಬೇಕು. ಶಾಸನಕರ್ತರು, ಪಾಲನ ಕರ್ತರು, ಎಲ್ಲರೂ ಪ್ರಜೆಗಳೆ ಪ್ರಜೆಗಳಿಂದ ಆರಿಸಲ್ಪಟ್ಟು ಪಾರ್ಲಿಮೆಂಟಿಗೆ ಕಳುಹಲ್ಪಟ್ಟವರೆ ಇವರು ಅಂದರೆ ಪಾರ್ಲಿಮೆಂಟು ಎಂಬುದು ಇವರೇ ಆಗಿರುತ್ತಾರೆ

ಅಲ್ಲಿನ ಪ್ರಜೆಗಳಲ್ಲಿ ಮೊದಲಿಂದಲೂ ಎರಡು ಪಂಗಡಗಳಿದ್ದುವು ವಿಗ್ಸ್ ಮತ್ತು ಟೋರಿಸ್ ವಿಗ್ಸ್ ಪಕ್ಷದವರು ಯಾವಾಗಲೂ ಪ್ರಗತಿ ಪಕ್ಷವಾದಿಗಳು, ಟೋರಿಸ್ ಎಂಬವರು ಪುರಾತನ ಸಂಪ್ರದಾಯದ ಪಕ್ಷವನ್ನು ಪ್ರತಿಪಾದಿಸುವವರು ಕೆಲವು ವರ್ಷಗಳ ನಂತರ ಅವರ ಹೆಸರುಗಳು ಕ್ರಮವಾಗಿ "ಲಿಬರಲ್ಸ್" ಮತ್ತು "ಕನ್ಸರ್ವೇಟಿವ್ಸ್" ಎಂಬುದಾಗಿ ಬದಲಾದಾಗ್ಯೂ ಅವರ ಮತಗಳು ಮಾತ್ರ ಮುಂಚಿನಂತೆಯೇ ಸ್ಥಿರವಾಗಿದ್ದುವು

ಪಾರ್ಲಿಮೆಂಟಿನಲ್ಲಿ ಯಾವ ಪಕ್ಷದ ಸದಸ್ಯರು ಹೆಚ್ಚಾಗಿದ್ದರೋ ಪ್ರಭುತ್ವವು ಆ ಪಕ್ಷಕ್ಕೆ ಸೇರುತ್ತದೆ ಆ ಪಕ್ಷದ ಮುಖಂಡನೇ ಮುಖ್ಯ ಮಂತ್ರಿ ಸಮಸ್ತ ಅಧಿಕಾರಿಗಳೂ ಆ ಗುಂಪಿನವರೆ ಪ್ರಭುತ್ವವಿಲ್ಲದ ಗುಂಪಿನವರು ಪಾರ್ಲಿಮೆಂಟಿನಲ್ಲಿ ವಿರೋಧಿಗಳಾಗಿರುತ್ತಾರೆ ಈ ರೀತಿ ನಿರ್ದಿಷ್ಟ ಸಮಯದ ವರೆಗೆ ಅಧಿಕಾರ ನಡೆಸಿ 'ಜನರಲ್ ಇಲೆಕ್ಷನ್' ಮರಳಿ ನಡೆದು ಬರಬೇಕು ಒಂದೊಂದು ವೇಳೆ ಸರಕಾರದವರು ತಂದ ಸೂಚನೆಗಳು ಸಭ್ಯರಿಂದ ಅಂಗೀಕೃತವಾಗದೆ, ಸರಕಾರವು ಸೋತು ಹೋದರೆ ಅಥವಾ ಪ್ರಭುತ್ವ ಪಕ್ಷದಲ್ಲಿ ಐಕ್ಯಮತ್ಯವು ತಪ್ಪಿ ಕೆಲವರು ಪರಪಕ್ಷವಾದಿಗಳನ್ನು ಅನುಮೋದಿಸಿದರೆ ಆ ಪ್ರಭುತ್ವ ಪಕ್ಷದವರೆಲ್ಲ ರಾಜಿನಾಮೆ ಕೊಡುವರು

ಆಗ ವಿರೋಧವಾದಿಗಳಾಗಿದ್ದ ಪಂಗಡದವರೇ ಪ್ರಭುತ್ವ ರಚನೆ ಮಾಡುವರು "ಜನರಲ್ ಇಲೆಕ್ಷನ್" ನಡೆಯುವುದು ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಎರಡು ಪಂಗಡಗಳವರೂ ಸೇರಿ ಒಂದು 'ಕೋಲಿಶನ್' ಎಂಬ ಏಕಭಾವದ ಸರಕಾರ ರಚನೆ ಮಾಡುವರು ಆದರೆ ಇದು ಶಾಶ್ವತವಲ್ಲ. ಯಾವ ಉದ್ದೇಶಕ್ಕಾಗಿ ಈ ಏಕಭಾವದ ಸರಕಾರವು ರೂಪಿಸಲ್ಪಟ್ಟಿತೋ ಆ ಸಾಧನೆಯು ಪೂರ್ಣವಾದೊಡನೆ ಆಯಾಯ ಪಂಗಡಿಗರು ಅವರವರ ಪಕ್ಷಕ್ಕೆ ಸೇರಿಬಿಡುತ್ತಿದ್ದರು ನಂತರ ಜನರಲ್ ಇಲೆಕ್ಷನ್ ಆಗುತ್ತಿತ್ತು. ಇದು ಬಹು ಕಾಲದಿಂದ ನಡೆದು ಬಂದ ಪದ್ಧತಿ

ಹೀಗಿರುವಾಗ ಅಲ್ಲಿ ಲೇಬರ್ ಪಂಗಡವೆಂಬುದು ತಲೆಯೆತ್ತಿತು ಈ ಹೊಸ ಪಂಗಡದವರು ಕೇವಲ ಕಾರ್ಮಿಕ ಕೃಷಿಕರು, ಬಡವರು; ಹಿಂದಿನವರಂತೆ ಜಮೀನುದಾರರೂ ಅಲ್ಲ, ವ್ಯಾಪಾರಸ್ಥರೂ ಅಲ್ಲ ತಮ್ಮ ಹೊಟ್ಟೆಗಿಲ್ಲದಿದ್ದರೂ ಇತರರ ಬೊಕ್ಕಸಗಳನ್ನು ತುಂಬಿಸಲು ಬೆವರು ಸುರಿಸಿ ಬಂದ ಕೂಲಿಯಿಂದ ಕಾಲಹರಣೆ ಮಾಡುತ್ತಿದ್ದವರು ಇವರ ಸಂಖ್ಯೆ ಅಪಾರ ಇವರ ಚಳವಳವು ತಲೆದೋರಿ ಇವರ ಕೂಗು ಇಂಗ್ಲೆಂಡಿನ ದಿಗೆಶೆಗಳನ್ನು ಭೇದಿಸತೊಡಗಿತು

ಕಾರ್ಮಿಕರ ಮುಂದಾಳಾಗಿ ಮಿ|| ರಾಮ್ಸೆ ಮೆಕ್ಡೋನಾಲ್ಡಿದ್ದರು. ಆದರೆ ೧೯೩೧ರ ಅಕ್ಟೋಬರದಲ್ಲಿ ಅವರು ಉಪಾಯಾಂತರದಿಂದ ದೇಶೀಯ ಸರಕಾರ ವಾದಿಗಳೊಡನೆ ಸೇರಿದರು. ಅಂದಿನಿಂದ ಲೇಬರ್ ಪಂಗಡದವರು ಮೆಕ್ಡೋನಾಲ್ಡರನ್ನು ದ್ವೇಷಿಸಲಾರಂಭಿಸುತ್ತಿರುವರು ಜನರಲ್ ಇಲೆಕ್ಷನನ್ನು ನಡಿಸಿ ಇವರನ್ನು ಪ್ರಧಾನ ಮಂತ್ರಿ ಪದವಿಯಿಂದ ಕೆಳಗಿಳಿಸಲಿರುವರು. ಪ್ರಕೃತಾವಸ್ಥೆಯನ್ನು ನೋಡುವಾಗ ಮೆಕ್ಡೋನಾಲ್ಡರ ಸ್ಥಿತಿಯು ಚೆನ್ನಾಗಿಲ್ಲವೆಂದು ತಿಳಿದು ಬರುವುದು.

"ನಿಮಗಾಗಿ ನಿಮ್ಮಿಂದ ಭಿಕ್ಷೆ"

ಕೊಮ್ಯುನಲ್ ಅವಾರ್ಡ್ ಮತ್ತು ರಾಜಕೀಯ ವಿಷಯದ ಸಂಧಿಯು ಜನರಿಗೆ ನನ್ನಿಂದ ಬೇಕಾಗಿದೆ ಆದರೆ ನನ್ನ ಜನರ ಪ್ರೀತಿಯನ್ನು ಕುರಿತು ಹೇಳಲು ನನಗೆ ಹೇಳು ವಂತಿಲ್ಲ. ನಾನು ಕ್ರಮ ಪಟ್ಟಿರ ವೆನು, ಭಾಷಣ ದಿಂದ ನಿವೃತ್ತಿಹೊಂದಬೇಕೆಂದಿರುವೆನು. ನಾನು ಒಂದೆ ಹೆಜ್ಜೆ ಮಾತ್ರ ಇಟ್ಟಿದ್ದೇನೆ ನಿಮಗೆ ರಾಜಕೀಯ ವಿಷಯಕವಾಗಿ ಭಾಷಣ ಮಾಡಲಾರೆನು ಎಂದು ಕವೀಂದ್ರ ರವೀಂದ್ರ ಟಾಗೋರರು ಓರಿಯಂಟಲ 'ಸರ್ವೆಂಟ್ಸ್ ಒಫ್ ಸೀವಿಲ್ಸ್ ಸೊಸೈಟಿ'ಯಲ್ಲಿ ಭಾಷಣಗೈದರು

'ನನ್ನ ಜೀವನವು ಲಿಂಗತ್ತಿನ ಪಾಂಡಿತ್ಯದಲ್ಲಿ ಬರೆದು ಹೋಗಬೇಕೆಂದು ನನ್ನ ಆಶೆ. ನನ್ನ ದೇಶದವರು ನನ್ನನ್ನು ಸರಿಯಾಗಿ ತಿಳಿದಿಲ್ಲ ನಾನು ಎಲ್ಲಿ ಹೋದರೂ ಜನರಿಗೆ ನನ್ನಿಂದ ವಾರ್ತೆಗಳೇ ಬೇಕಾಗಿವೆ ಇದರಿಂದಾಗಿ ನನಗೆ ವಿಶ್ರಾಂತಿಯೇ ಇಲ್ಲದಂತಾಗಿದೆ

'ನಾನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುತ್ತೇನೆ ಏಕೆಂದರೆ–ಬೇರೆ ಪ್ರದೇಶ ನನ್ನ ಮುಖ್ಯ ಧರ್ಮವಾಗಿದೆ ಇದರಿಂದ ನನಗೆ ಅಪಮಾನವಾಗಿಲ್ಲ ನಾನು ನಿಮಗಾಗಿ ನಿಮ್ಮಿಂದ ಬೇಡುತ್ತಿರುವುದು' ಎಂಬುದೇ ಟಾಗೋರರ ಹೇಳಿಕೆ.

ಹಿಡಿಯಲಾಗದ ಕೈ

ಫರಂಗೀ ರೋಗದಿಂದ ಅಶಕ್ತಳಾದ ಸ್ತ್ರೀ

ಈಗ ತನಗೆ ಬೇಕಾದುದನ್ನು ಮಾಡುತ್ತಾಳೆ

ದೀರ್ಘಕಾಲದ ಪಕ್ಷವಾತ ರೋಗದ ಇನ್ನೊಂದು ಉದಾಹರಣೆಯು ಪ್ರಪಂಚ ಖ್ಯಾತವಾದ ವಿಜ್ಞಾನ ಶಕ್ತಿಗೆ ತಲೆತಗ್ಗಿಸಿತು. ಆ ಸ್ತ್ರೀಯೇ ಹೀಗೆ ಬರೆದಿದ್ದಾಳೆ ಕೈ, ಅಂಗೈ, ಕಾಲು ಮತ್ತು ಪಾದಗಳಲ್ಲಿ ಕಳೆದ ಹದಿನೆಂಟು ವರ್ಷಗಳಿಂದಲೂ ವಾತ ರೋಗದಿಂದ ನರಳುತ್ತಿದ್ದೆ ಕ್ರುಶೆನ್ ಸೋಲ್ಟನ್ನು ಒಂದು ತಿಂಗಳು ಉಪಯೋಗಿಸುವುದೆಂದು ನಿರ್ಧರಿಸಿದೆ ಅದರ ಪ್ರಯೋಗದಿಂದ ಬಹು ಪ್ರಯೋಜನವುಂಟಾಯಿತೆಂದು ತಿಳಿಸಲು ಅತ್ಯಂತ ಸಂತೋಷಪಡುತ್ತೇನೆ ವಿದ್ಯುತ್ ಚಿಕಿತ್ಸೆಗಾಗಿ ನಾನ ಆಸ್ಪತ್ರೆಗೆ ಹೋಗಿದೆ ಅನೇಕ ವಿಧದ ಔಷಧಿಗಳನ್ನು ಪ್ರಯೋಗಿಸಿದೆ ಅವುಗಳಿಂದ ನನಗೆ ಯಾವ ಪ್ರಯೋಜನವೂ ಉಂಟಾಗಲಿಲ್ಲ. ನನ್ನ ಕೈಗಳು ಎಷ್ಟರ ಮಟ್ಟಿಗೆ ರೋಗಬಾಧಿತವಾಗಿದ್ದುವೆಂದರೆ — ಅವುಗಳಿಂದ ಯಾವ ವಸ್ತುವನ್ನಾದರೂ ಹಿಡಿಯಲಾಗುತ್ತಿದ್ದಿಲ್ಲ ಕ್ರುಶೆನ್ ಸೋಲ್ಟ್ ತೆಗೆದುಕೊಳ್ಳಲಾರಂಭಿಸಿದಂದಿನಿಂದ ಬೇಕಾದ ಎಲ್ಲಾ ಕೆಲಸಗಳನ್ನು ಮಾಡಲು ಶಕ್ತಳಾಗಿರುವೆನು ನಾನು ಅದನ್ನು ಯಾವಾಗಲೂ ತೆಗೆದುಕೊಳ್ಳುತ್ತೇನೆ

(ಮಿಸೆಸ್) ಎಲ್. ಬಿ.

ಮೂತ್ರಕೋಶ ಅದರ ದೇಹವನ್ನು ಶುದ್ಧೀಕರಿಸುವ ಅಂಗಾಂಗಗಳು ಸರಿಯಾಗಿ ಕೆಲಸ ಮಾಡದಿದ್ದರೆ ಆಗ ಕೆಲವು ವಿಷಗಳು ಹುಟ್ಟುತ್ತವೆ ಅವುಗಳ ಹೊರಗೆ ಹೋಗದೆ ರಕ್ತನಾಳಗಳನ್ನು ಸೇರುತ್ತವೆ, ಅದರಿಂದ ಅನೇಕ ವಿಧವಾದ ರೋಗಗಳುಂಟಾಗುತ್ತವೆ. ದೇಹ ಶುದ್ಧೀಕರಣದಲ್ಲಿ ಕ್ರುಶೆನ್ ಸೋಲ್ಟ್ ಅತ್ಯವಶ್ಯವಾದದು. ಮೂತ್ರಕೋಶದ ಹಾಳನ್ನು ತೆಗೆದು ಅದನ್ನು ಅತ್ಯಂತ ಪರಿಶುದ್ಧವಾಗಿ ಇಡುವುದರಲ್ಲಿ ಅತ್ಯಮೋಘ ಔಷಧ ಅದು ಸ್ವತಃ ರೋಗಗಳ ವಿಷವು ದೇಹದ ಮೇಲೆ ಪರಿಣಾಮಕಾರಿಯಾಗುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ಕ್ರುಶೆನ್ ಸೋಲ್ಟ್ ದೊರೆಯುತ್ತದೆ.

Swadeshabhimani
enjoys circulation in India and abroad
APPLY FOR ADVERTISEMENT RATES

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ
ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925–	ರೂ 21,24,250.	500
1929–	ರೂ 1,66,18,620	9,32,900.
1934–	ರೂ 3,46,77,229.	49,08,771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.
ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ.

ಏಜಂಟರುಗಳಿಲ್ಲದಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No. 6, Sankurama Chetty St., G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಸ್ಟ್ರೀಟ್, ಜಿ. ಟಿ. ಮದ್ರಾಸು.

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

1934ನೇ ಇಸವಿ ದಶಂಬರ ತಾ. **31**ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು:—

ಮೂಲಧನ:—		ನಿಯಾಮಿತ ಮೂಲಧನದ ವ್ಯಯ:—	
ಚಂದಾ ಅರ್ಪಿಸಿದ್ದು	3,50,000- 0- 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774-14- 8
ತೆತ್ತು ಬಂದದ್ದು	2,25,000- 0- 0	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	23,33,227- 7- 3
ಕ್ಷೇಮನಿಧಿಗಳು	2,60,958- 7- 8	ಸರಕಾರಿ ಭದ್ರತೆಯ ಸ್ವತ್ತುಗಳ ಮೇಲೆ	6,51,559-15- 0
ಠೇವಣಾತಿಗಳು	24,95,329- 2- 3	ಇತರ ಬಾಬುಗಳು	37,411-14-11
ಇತರ ಬಾಬುಗಳು (ಸಂಡ್ರೀಸ್)	1,35,286- 9- 9	ನಗದು ಶಿಲ್ಕು	72,480-10- 1
ಚಾಲ್ತಿ ವರ್ಷದ ಮುನಾಫೆ	45,885-10- 3		
	31,62,454-13-11		31,62,454-13-11

ಹಿಂದಿನ ವರ್ಷಗಳಂತೆಯೇ ಹಿಶೆದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪ್ಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Established 1908.

EXCELLENT BONUSES.

1933 Valuation Results.

	WHOLE LIFE	ENDOWMENT	
1925-'30	20	15	Per thousand
1931-'33	23	18	per year.

Every "With Profit" Policy is entitled to "PERMANENT DISABILITY BENEFITS."—No extra premium

PAYS DOUBLE THE ASSURED SUM IN THE EVENT OF DEATH BY ACCIDENT ON PAYMENT OF MINIMUM EXTRA PREMIUM OF RS. 1-8-0 PER RS. 1000 POLICY PER YEAR.

Existing Policy-holders may avail of this benefit. For particulars apply to:—

KOCHIKAR BROTHERS,
Madras Branch Secretaries.

Offices at:—
Udipi, Mangalore, Langalore, Calicut, Madras and Bombay.

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹಾಸ್ಪೀಟಲ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲೆಂಟ್ಯಾನ್, ಆರೋರಾ ಕ್ರೀಮ್, ಕ್ರಿಮೋರ್ ಲಿಮೋನಿಸ್, ಕರ್ಣಾಟಕ ರೋಸ ಪೊಮೇಡ್.

ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲೋಪತಿಕ್ ಔಷಧಗಳೂ, ಫೌಂಟೆನ್‌ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯರು ಅಪ್ಪಣ್ಣ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್ಸ್, 46 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ವ್ಯಾಸಪ್ಪ ನ್ಯಾಕನ ಬೀದಿ, ಜಾರ್ಜ್‌ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

ವಾರ್ಷಿಕ ಚಂದಾ: 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 2-13-0

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:
RAMA SNUFF.
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the BOMBAY LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೧೫ನೇ ಶುಕ್ರವಾರ ಮಾರ್ಚಿ ೧೯೩೫. (15-3-'35) ಸಂಚಿಕೆ ೧೧

ಮದ್ರಾಸು ನಗರದ ಪ್ರಗತಿ

ಮದ್ರಾಸು ನಗರ ರಚನೆಯ ಕಾರ್ಯವು ಭರದಿಂದ ಸಾಗುತ್ತಿದೆ. ದೊಡ್ಡ ದೊಡ್ಡ ಮಾರ್ಗಗಳ ರಚನೆಯಾಗುತ್ತಲಿದೆ. ನಗರದ ಸೌಂದರ್ಯವನ್ನು ಹೆಚ್ಚಿಸಲಾಗುತ್ತಿದೆ. ಮೇಲಿನ ಚಿತ್ರದಲ್ಲಿನ ನಂಬ್ರ (೧) ಪುನರ್ರಚಿತವಾದ ತ್ಯಾಗರಾಜ ನಗರ (ಮಾಂಬಳಂ ದೃಶ್ಯ). ನಾಗೇಶ್ವರರಾವ್ ರೋಡ್ (ಶ್ರೀ ನಾಗೇಶ್ವರರಾವ್ ಪಂತುಲುರವರ ಹೆಸರು). (೩) ಪ್ರಕಾಶಂ ರೋಡ್ (ಶ್ರೀ ಪ್ರಕಾಶಂರವರ ಹೆಸರು). (೨) ಪಾನಗುಲು ರೋಡ್. (೪) ಸರ್ ಉಸ್ಮಾನ್ ರೋಡ್.

ಚಕ್ರ

(All Rights Reversed)

ಮದ್ರಾಸು ಹೊಸ ಗವರ್ನರರಾದ ಲಾರ್ಡ್ ಎರ್ಸ್ಕಿನ್‌ರವರು ಬಳ್ಳಾರಿ, ಅನಂತಪುರಗಳಿಗೆ ಹೋಗಿ ಅಲ್ಲಿ ಹರಡಿರುವ ಕ್ಷಾಮಡಾಮರಗಳೇನೆಂದು ಕಂಡು ಕೊಂಡರು.

ಅನ್ನವಿಲ್ಲದೆ ಮರಣವಶರಾದ ಜನಸಮುದಾಯ, ನೀರಿಲ್ಲದೆ ಕಷ್ಟಪಡುವ ಕುಟುಂಬಗಳು, ಹೀಡು ಮತ್ತು ಹುಲ್ಲುಗಳಿಲ್ಲದೆ ಜೀವನ್ಮೃತಾವಸ್ಥೆಯಲ್ಲಿರುವ ಜಾನುವಾರುಗಳು — ಇವೆಲ್ಲವನ್ನು ಗವರ್ನರರು ಕಂಡು ಇಂಗ್ಲೆಂಡಿಗೂ ಹಿಂದೂಸ್ಥಾನಕ್ಕೂ ಇರುವ ವ್ಯತ್ಯಾಸವೇನೆಂದು ಕಂಡುಕೊಂಡಿರಬಹುದು.

ಹೋದಹೋದಲ್ಲಿ ಗವರ್ನರರಿಗೆ ಡೆಪ್ಯುಟೇಶನ್‌ಗಳು, ಮಾನಪತ್ರಗಳು ಸಮರ್ಪಿಸಲ್ಪಟ್ಟವು. ಈ ಮಾನಪತ್ರ, ಮತ್ತು ಡೆಪ್ಯುಟೇಶನ್‌ಗಳನ್ನು ಗವರ್ನರರಿಗೆ ಕೊಟ್ಟ "ದೊಡ್ಡ"ವರ ನೆಕ್ಟಾಯಿ ಕೊಲ್ಲಾರುಗಳನ್ನು ಕಂಡ ಗವರ್ನರರು ಏನನ್ನುತ್ತಾರೋ ಎಂಬ ಭಯವಿದೆ.

ಪೆನುಗೊಂಡ ಅನಂತಪುರ, ಹಿಂದೂಪುರಗಳಲ್ಲಿ ಜನರು ಮೂರು ನಾಲ್ಕು ಮೈಲುಗಳ ದೂರದಿಂದ ನೀರನ್ನು ಹೊತ್ತು ತಂದು ಜೀವಧಾರಣೆ ಮಾಡಿಕೊಳ್ಳುತ್ತಿರುವರಂತೆ. ಈ ದೃಶ್ಯವು ಗವರ್ನರರ ಕಣ್ಣಿಗೆ ಬೀಳದಂತೆ ಮಾಡುವ ಕೆಲವು ಪುಣ್ಯಾತ್ಮರೂ ಇದ್ದರೆ.

ದಿವಾನ್ ಬಹದೂರ್ ಎಸ್. ಗೋಪಾಲಸ್ವಾಮಿ ಅಯ್ಯಂಗಾರ ಎಂಬವರನ್ನು ಫೆಮಿನ್ ಕಮಿಶನರನ್ನಾಗಿ ನೇಮಕಮಾಡಿದ್ದರು. ಈ ಪುಣ್ಯಾತ್ಮರು ಪುಲಿವೆಂದ್ಲಾ ತಾಲೂಕನ್ನು ಸಂಚರಿಸಿ ಬಂದು "ಸರಕಾರವು [illegible] ಕಂದಾಯವನ್ನು ಮಾಫಿ ಬಿಟ್ಟುದು ಧಾರಾಳ ಹೋಯಿತು. ಇನ್ನೂ ಹೆಚ್ಚಿನ ಮಾಫಿಯು ಇವರಿಗೆ ಅಗತ್ಯವಿಲ್ಲ"ವೆಂದು ಹೇಳಿದರಂತೆ. ಎಂತಹ ಔದಾರ್ಯ!

ಇವರ ಸಹಾನುಭೂತಿಯೇನೆಂದು ಅಲ್ಲಿಯ ಜನರು ಇವರನ್ನು ಬಾಯಿತುಂಬಾ ಹೊಗಳಲಾರಂಭಿಸಿರುವರು. ಶ್ರೀ ಹನುಮಂತರಾವ್ ಕೌಜಲಗಿಯವರು ರಿವೆನ್ಯು ಮೆಂಬರರ ಸಹಾನುಭೂತಿಯನ್ನು ಸ್ಪಷ್ಟವಾಗಿ ವಿವರಿಸಿರುವರು.

ಒಂದು ವೇಳೆ ಈ ಫೆಮಿನ್ ಕಮಿಶನರರು ಸರಕಾರಕ್ಕೆ ಪೂರ್ಣ ಕಂದಾಯ ಮಾಫಿ ಮಾಡುವ ಸಲಹೆಯನ್ನು ಕೊಡುತ್ತಿದ್ದರೆ ಏನಾಗುತ್ತಿತ್ತೋ! ಇವರಿಗೆ ಎಷ್ಟು ನಷ್ಟವಾಗುತ್ತಿತ್ತೋ!

ನಮ್ಮವರೇ ಆದವರು ಒದಗಿ ನೋಡಿ ಈ ರೀತಿಯು ಕಾಣುತ್ತಿದ್ದರೆ ಮಿ. [illegible] ಅವರ ಸ್ವಭಾವವನ್ನಾದರೂ ದೂರು [illegible] ವಿಶ್ವಾಸವಲ್ಲವೇ?

ಮಾನ್ಯ ಗವರ್ನರರು ಕ್ಷಾಮಪ್ರದೇಶಗಳಲ್ಲಿ ಸಂಚರಿಸಿ ಬಂದುದರಿಂದ ಅವರಿಗೆ ಮದ್ರಾಸು ಪ್ರಾಂತ್ಯದವರ ಸ್ಥಿತಿ ಎಷ್ಟೆಂಬ ಒಂದು ಸಂಗತಿಯು ಈಗ ತಿಳಿದಿರಬಹುದು. ಅವರಿಗೆ ದೇವರು ಉದಾರಬುದ್ಧಿಯನ್ನು ಕೊಡಲಿ.

ದಿವಾನ್ ಬಹದ್ದೂರ್ ರಾವ್ ಬಹದ್ದೂರ್ ಖಾನ್ ಬಹದ್ದೂರ್ ಇವರಿಗೆಲ್ಲ ಸರಕಾರದ ಪ್ರೀತಿಯನ್ನು ಗಳಿಸಿ ಅದಕ್ಕೆ ಲಾಭವನ್ನು ಮಾಡಿಕೊಳ್ಳುವ ಮಹದಾಶೆ. ಅವರಿಗೆ ಬಡವರ ಕಷ್ಟಗಳು ಹೇಗೆ ತಿಳಿದಾವು?

ಹಿಂದೂದೇಶದಲ್ಲಿರುವ ಈ ಬಿರುದುಬಾವಲಿಗಳಿಂದ ಯಾವ ಪ್ರಯೋಜನವೂ ಆಗುತ್ತಿಲ್ಲವೆಂಬುದು ತಿಳಿದ ವಿಷಯವೆಂದ ನಾನು ಬೇರೆ ಹೇಳಬೇಕಾಗಿಲ್ಲ.

ಈಗೀಗ ಡೆಪ್ಯುಟೇಶನ್ಸ್ ಸರಕಾರಕ್ಕೆ ಹೋಗುವ ರೋಗವು ಹೆಚ್ಚುತ್ತಿದೆ. ಇವುಗಳು ಹೋಗಿ ಮಾತಾಡುವುದಾದರೂ ಏನು? ಅಧಿಕಾರಿಗಳ ಪರಿಚಯ ಮಾಡಿಕೊಂಡು ತಮ್ಮ ಸ್ಟೈಲನ್ನು ಅವರಿಗೆಲ್ಲ ತೋರಿಸಿಕೊಂಡು ಹಿಂದೆಬರುವುದು.

ಹೋದ ಹಾಗೆ ಹಿಂದೆ ಬಂದು, ಮತ್ತು ಸರಕಾರವು ಏನನ್ನೂ ಮಾಡಲಿಲ್ಲವೆನ್ನುವುದು. ಈ ರೋಗವು ಈಗ ಎಲ್ಲೆಲ್ಲೂ ವ್ಯಾಪಿಸಿಕೊಂಡಿದೆ.

ಅನಂತಪುರದಲ್ಲಿ ಕಷ್ಟಪಡುವುದು ಬಡವರು. ಡೆಪ್ಯುಟೇಶನ್ ಕೊಂಡೊಯ್ಯುವುದು ಶ್ರೀಮಂತರು. ಅನ್ನ ಬೇಕಾಗುವುದು ಬಡವರಿಗೆ. ಕೂಗುವುದು ದೊಡ್ಡವರು.

ಇಂತಹ ಮೊರೆಯಿಂದ ಫಲವಿಲ್ಲವೆಂಬುದನ್ನು ನಮ್ಮವರು ತಿಳಿಯಲಿ! ಬಡವರು ಬೇಡುವವರು, ಹರಕುಮುರುಕು ಬಟ್ಟೆಯುಡುವವರು ಇವರು ಗವರ್ನರರನ್ನೋ ವೈಸರಾಯರನ್ನೋ ಕಂಡು ತಮ್ಮ ಭಾಷೆಯಲ್ಲಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬೇಕು— ಎಂದರೆ ಮಾತ್ರ ಪ್ರಯೋಜನವಾಗುವುದು. ಸಾಯ್ಬನ ಈ ಸೂಚನೆಯನ್ನು ಟೆಸ್ಟ್ ಮಾಡಿ ನೋಡಲಿ!

'ಸಾಯ್ಬ'.

ಮಕ್ಕಳನ್ನು
ಆರೋಗ್ಯವಂತರನ್ನಾಗಿಯೂ,
ಬಲಿಷ್ಠರನ್ನಾಗಿಯೂ ಮತ್ತು
ಚೈತನ್ಯಯುಕ್ತರನ್ನಾಗಿಯೂ
ಮಾಡುತ್ತದೆ

ಮಕ್ಕಳನ್ನು ಬಲಿಷ್ಠರನ್ನಾಗಿಯೂ ಆರೋಗ್ಯಶಾಲಿಯರನ್ನಾಗಿಯೂ ಮಾಡುವುದಕ್ಕೆ ಅವರಿಗೆ 'ಓವಲ್ಟಿನ್'ನನ್ನು ದಿನನಿತ್ಯದ ಪಾನೀಯವನ್ನಾಗಿ ಕೊಡುವುದೊಂದಲ್ಲದೆ ಬೇರೆ ನಿಶ್ಚಿತದಾರಿಯಿಲ್ಲ. ಓವಲ್ಟಿನ್'ನಲ್ಲಿ ಪ್ರಕೃತಿಸಿದ್ಧವಾಗಿರುವ ದೇಹವರ್ಧಕ ಆಹಾರ ಸಾರವಿದೆ. ಇದು ಮಕ್ಕಳ ಆರೋಗ್ಯ, ಶಕ್ತಿ, ಮೇಧಾಶಕ್ತಿ, ಸ್ನಾಯುಶಕ್ತಿ, ದೇಹಶಕ್ತಿಗಳಿಗೆ ಬೇಕಾದ ಪೋಷಣಾಸಂಗ್ರಹಗಳನ್ನೊದಗಿಸಿಕೊಡುತ್ತದೆ. 'ಓವಲ್ಟಿನ್'ನ ಸೇವನೆಯೆಂದರೆ ದೇಹದಾರ್ಢ್ಯಕ್ಕೆ ಪಂಚಾಂಗ ವಿಟ್ಟಂತೆ.

'ಓವಲ್ಟಿನ್' ನನ್ನು ಎಲ್ಲಾ ಪ್ರಾಯದ ಮಕ್ಕಳೂ ಮೆಚ್ಚುತ್ತಾರೆ. ಅದರ ರುಚಿಕರವಾದ ಪರಿಮಳವನ್ನು ಅವರು ಆಸ್ವಾದಿಸಲಾಶಿಸುತ್ತಾರೆ. ತಮ್ಮ ಮಕ್ಕಳಿಗೆ ಇದನ್ನು ಕೊಡುವ ತಾಯಂದಿರು ಇದರ ಸತ್ಪರಿಣಾಮವನ್ನು ಕಂಡ ಕೊಳ್ಳುವರು. ಹಸುಳೆಗಳಿಗೆ ಧಾರಾಳ ಚೇತನವಿತ್ತು ದಿನೇ ದಿನೇ ಅವರನ್ನು ಬೆಳೆಸಿ ರಾತ್ರೆ ನಿದ್ರೆ ಕೊಡುತ್ತದೆ.

"ಓವಲ್ಟಿನ್"

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್—ಜೇಮ್ಸ್‌ರೈಟ್ ೬೩ಎ ಬಿಷನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಾಯಿ, ಮದ್ರಾಸು

OV 3'5

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ

ಹೊಸತಾಗಿ ಆಮದಾದುದು ದೊರೆಯ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು. ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು. ಫೋಟೋ ತೆಗೆಯುವ ವಿಧಾನ ಶಿಕ್ಷಣಕೊಡುವ ಪುಸ್ತಕ ಇವು ಉಚಿತವಾಗಿ ಕಳುಹಿಸಲಾಗುತ್ತದೆ. ಬಲವಾದ ಲೆನ್ಸ್. ಬೆಲೆ ಸಾಮಾನ್ಯವಾದುದು ರೂ ೩—೧೩—೦ ಉತ್ತಮವಾದುದು ೬—೧೩—೦ ಮಡಚುವ ಕ್ಯಾಮರಾ ರೂ ೫ ಉತ್ತಮವಾದ್ದು ರೂ ೬ ಸ್ಪೆಶಲ್ ರೂ ೧೦ ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧೬ ಆಣೆ ಎನ್ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ರೂಪಾಯಿ ೪ ಆಣೆ ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಕ್ಕೆ ೩ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ

ಪೋಸ್ಟ್‌ಬಾಕ್ಸ್ ನಂಬ್ರ ೨೩೯೪ (ಎಸ್ ಎ) ಕಲ್ಕತ್ತ

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

Authorised capital ಅಧಿಕೃತ ಮೂಲಧನ	2,00,000—0—0
Subscribed capital ಚಂದಾ ಆರ್ಪಿಸಿದ್ದು	34,930—0—0
Paid-up capital ತೆತ್ತು ಬಂದದ್ದು	30847—8—0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken.

Shares are now available.

For further particulars apply to:—

Puttur,
Dated 15—2—1935.

G. N. Lakshman Pai,
Secretary.

ಪತ್ರಿಕಾ ಪ್ರಪಂಚ:

ಹಿಂದೂದೇಶದ ಸುಖ. ವಿಷಮುಕಾಯಿಲೆಯಿಂದ ನಿವೃತ್ತಿಗೊಳಿಸುವುದು. ಕಲಾವಿದನ ಧರ್ಮ. ವೈದ್ಯನ ಕರ್ತವ್ಯ

ಹಿಂದೂದೇಶದ ಸುಖ.

ಹಿಂದೂದೇಶದಲ್ಲಿನ ಅಶಾಂತತೆಗೆ ಹಲವು ಕಾರಣಗಳಿವೆ. ಹಿಂದೀಯ ವಿದ್ವತ್ತು ಅನುಪಮವಾದುದು. ಹಿಂದೂದೇಶವು ಅಗಾಧವಾದ ತತ್ವಕ್ಕೆ ಜನನವಿತ್ತಿದೆ. ಆ ತತ್ವವನ್ನು ಸರಿಯಾಗಿ ತಿಳಿದವರು ಅದರಲ್ಲಿನ ಮಹತ್ವತೆಯನ್ನೂ ಮೂಲಭೂತ ಸ್ವರೂಪವನ್ನೂ ಕಂಡುಹಿಡಿದಿರುವರು. ಜಗತ್ತಿನಲ್ಲೇ ದೊಡ್ಡದೆನಿಸುವ ಧರ್ಮಬೋಧೆಯನ್ನು ಹಿಂದೂದೇಶವು ಹೆತ್ತಿದೆ. ಗದ್ಯಪದ್ಯಗಳಲ್ಲಿ ಅದ್ವಿತೀಯ ಸಾಹಿತ್ಯಗಳನ್ನು ಅದು ಹೊರಗೆಡಹಿದೆ. ಅದರೆ ಅದು ಸರಿಯಾದ ಚರಿತ್ರೆಯನ್ನು ಸೃಷ್ಟಿಸಿರುವುದಿಲ್ಲ. ವಿಜ್ಞಾನಕ್ಕೆ ಅದು ತನ್ನ ಲಕ್ಷ್ಯವನ್ನು ಕೊಡಲಿಲ್ಲ. ಭೌತಿಕಪ್ರಗತಿಯನ್ನದು ಗಣಿಸಲೇ ಇಲ್ಲ. ಭಾರತದ ಬರಿಯ ಕಲ್ಪನಾಭಾವ, ಕಪೋಲ ಕಲ್ಪಿತ ಸ್ವಭಾವ, ಆಲೋಚನಾ ಸಾಮರ್ಥ್ಯ ಕಾರ್ಯತಃ ಪ್ರಯೋಜನ ಬೀಳುವ, ಜೀವನದ ಯಶಸ್ವಿತೆಗೆ ಶೀಘ್ರ ಫಲಕಾರಿಯಾಗುವ ಸತ್ವಗಳನ್ನು ಅದು ಸೃಷ್ಟಿಸಿರುವುದಿಲ್ಲ. ಇಂತಹ ಭಾವುಕಜನಾಂಗವು ಜಗತ್ತಿನ ವಾಣಿಜ್ಯ ವ್ಯವಹಾರಚತುರರಾದ ವಿದೇಶೀಯರ ಪಾರತಂತ್ರ್ಯಕ್ಕೆ ಬಲಿಬೀಳುವುದು ಅಸ್ವಾಭಾವಿಕವಲ್ಲ. ಬ್ರಿಟಿಷರು ಅಥವಾ ಅಮೇರಿಕನರೆಂಬ ವಿದೇಶೀಯರಿಗೆ ಪರರ ಮೇಲೆ ಸಹಾನುಭೂತಿ ತಳೆದು ಬೇರೆಯವರ ಭಾವನೆಗಳನ್ನು ನೋಯಿಸಬಾರದೆಂಬ ಚಿಂತೆಯಲ್ಲಿ ಹೆಚ್ಚಿನ ಚಿತ್ತವಿರುವವರು ಅವರಲ್ಲ. ತಮ್ಮ ಉದ್ದೇಶಸಾಫಲ್ಯತೆಯು ಹವ್ಯಾಸದಲ್ಲಿ ಯಾವುದು ವಿಘ್ನಕಾರಕವಾಗಿ ನಿಂತರೂ ಅದನ್ನು ಗಣಿಸದೆ, ಅದರ ಬೆನ್ನಟ್ಟಿ ಮುರಿದು ಬಿಡುವವರವರು. ಅವರ ಈ ಸ್ವಭಾವವು ಭಾರತದಲ್ಲಿ ಅಂಥ ಹಿತಕ್ಕೆ ಅಪಾಯಸೂಚಕವಾಗಿದ್ದು ಆ ವೇಳೆಯಲ್ಲಿ ಯಾವ ಪರಿಣಾಮವನ್ನು ಉಂಟು ಮಾಡುವಷ್ಟು ಸಮರ್ಥವಾಗಲಿಲ್ಲ. ಆದರೆ ದೇಶದಲ್ಲಿ ಶಾಂತಿಯು ನೆಲೆನಿಂತು ಅದರಲ್ಲಿ ರೈಲ್ವೆಗಳು, ವ್ಯಾಪಾರವಾಣಿಜ್ಯಗಳು, ನೂತನ ಶಿಕ್ಷಣಕ್ರಮಗಳು ತಲೆದೋರಿದೊಡನೆ ಪರಿಣಾಮವು ಬೇರೆಯಾಗಿಯೇ ಕಂಡುಬಂದಿತು. ಪಾಶ್ಚಾತ್ಯ ಭಾವನೆಗಳು, ಪಾಶ್ಚಾತ್ಯ ಅಭ್ಯಾಸಗಳು, ಪಾಶ್ಚಾತ್ಯ ಕ್ರಮಗಳು, ಪಾಶ್ಚಾತ್ಯ ಶಾಸನಗಳು, ಪಾಶ್ಚಾತ್ಯ ಆದರ್ಶಗಳು ಪ್ರಬಲಗೊಂಡು ಹಿಂದೂದೇಶದ ಪ್ರಾಚೀನ ಸಂಸ್ಕೃತಿಯನ್ನು ಪ್ರತಿಭಟಿಸಿ ಸಂಕುಚಿತ ಜಾತೀಯ ಭಾವನೆ ಮತ್ತು ರೂಢಿಗಳು ಮಾಯವಾದವು. ಅಂತಹ ಪಾಶ್ಚಾತ್ಯ ಸಂಸ್ಕೃತಿಯು ಸ್ವಾರ್ಥತ್ಯಾಗದ ಕಳೆಯನ್ನು ಹೆಚ್ಚು ನಾಶಪಡಿಸುತ್ತಿತ್ತು. ಭಾರತದ ಅಶಾಂತಿಗೆ ಪ್ರಧಾನವಾದುದು ಪಾಶ್ಚಾತ್ಯ ಶಿಕ್ಷಣ. ಈಗ ಹಿಂದೂಸ್ಥಾನದಲ್ಲಿ ವಿದ್ಯೆಯೆಂದರೆ ಬರಿಯ ಸಾಹಿತ್ಯ ವಿಷಯ. ಪ್ರೌಢ ತರಗತಿಗಳಲ್ಲಿ ಅದು ಆಂಗ್ಲಭಾಷೆಯಿಂದಲೇ ಕೊಡಲ್ಪಡುತ್ತಿದೆ. ಈ ಅಭ್ಯಾಸದಿಂದಾಗಿ ದೇಶಭಾಷೆಗಳೆಲ್ಲ ಇಂಗ್ಲಿಷಿಗಿಂತ ಅಲ್ಪವಾದುವುಗಳೆಂಬ ಭಾವನೆಗೆಡೆಯುತ್ತಿದೆ. ಆದರ ಫಲವಾಗಿ ಯಾವುದು ದೇಶಭಾಷೆಯಲ್ಲಿದೆಯೋ ಅದು ತ್ಯಾಜ್ಯವಾಗಿ ಹೊರಗೆ ನಿಂತಿದೆ. ಇಂಗ್ಲಾಂಡಿನ ಭಾಷೆಯೂ ಸಾಹಿತ್ಯವೂ ಒಟ್ಟುಗೂಡಿ ಭಾರತೀಯ ಯುವಕರ ಹೃದಯದಲ್ಲಿ ಸ್ವಾತಂತ್ರ್ಯದ ಕಾಂತಿಯೊಂದನ್ನು ಬೆಳಗಿಸಿವೆ. ಇಂತಹ ಕ್ರಾಂತಿಯ ಕಾಂತಿಯನ್ನು ಅವರು ಮೊದಲೆಂದೂ ನೋಡಿದ್ದಿಲ್ಲ. ಒಂದು ಕಡೆಯಿಂದ ಸ್ವಾತಂತ್ರ್ಯಕಾಂಕ್ಷೆಯು ಅವಿಶ್ರಾಂತಿ, ಒಂದು ಕಡೆಯಿಂದ ಸಾಹಿತಿಕವಾದ ವಿದ್ಯೆಯ ನಿಷ್ಪ್ರಯೋಜಕತೆ— ಇವೆರಡು ಒಟ್ಟುಗೂಡಿ ಭಾರತೀಯ ಅಶಾಂತಿಗೆ ಕಾರಣವಾಯಿತು. ಸಾಹಿತ್ಯರೂಪದ ಆಂಗ್ಲವಿದ್ಯೆಯು ಉದ್ಯೋಗಗಳಲ್ಲೂ ಸಾಹಿತ್ಯಪ್ರಚಾರ ಕಾರ್ಯದಲ್ಲೂ ಪ್ರಯೋಜನಕಾರಿಯಾಯಿತು. ಅಲ್ಲದೆ ಸರಕಾರೀ ನೌಕರಿಯಲ್ಲೂ ಅದು ಪ್ರಯೋಜನಕ್ಕೆ ಬಿತ್ತು. ವಿನಹ ಸಮಷ್ಟಿರೀತಿಯಿಂದ ಅದು ದೇಶದ ಹಿತವನ್ನು ಮಾಡುವಷ್ಟು ಸಮರ್ಥವಾಗಲಿಲ್ಲ. ಈ ಘರ್ಷಣೆಯೊಂದಿಗೆ ಭಾರತೀಯ ಯುವಕರ ವಿದೇಶಸಂಚಾರವೂ ಸಿಕ್ಕಿ ಹಿಂದೂದೇಶವು ಪಾಶ್ಚಿಮಾತ್ಯ ದೇಶದ ಅಂಗವೆಂಬಂತಾಯಿತು. ಹಿಂದೂದೇಶದಮೇಲಿರುವ ಈ ಬಾಧಕಗಳನ್ನು ಈಗ ಥಟ್ಟನೆ ತೆಗೆದುಬಿಡಲು ಸಾಧ್ಯವಾಗಿಲ್ಲ. ವಿವಿಧ ವಿಷಯಗಳ ಸಂಪರ್ಕದಿಂದುಂಟಾಗಿರುವ ವಾತಾವರಣದ ನಿರ್ಮೂಲನವು ಅಷ್ಟು ಸುಲಭವಾಗಿರುವುದಿಲ್ಲ. ನಿಧಾನವಾಗಿ, ಅನುಕ್ರಮವಾಗಿ ನಾವು ಈ ರೋಗಕ್ಕೆ ಚಿಕಿತ್ಸೆಯನ್ನು ಕಂಡುಹಿಡಿಯತಕ್ಕವರು. ಚಿಕಿತ್ಸೆಯು ಈ ರೀತಿಯಾಗಿರಬೇಕು. ಸಾಹಿತ್ಯರೂಪದಿಂದಿರುವ ಶಿಕ್ಷಣಕ್ರಮಗಳನ್ನು ತರಿದು ಜನಜೀವನಕ್ಕೆ ಸಾಧಕವಾದ ಶಿಕ್ಷಣಗಳನ್ನು ಶಾಲೆಗಳಲ್ಲಿ ಕೊಡಬೇಕು. ಪ್ರಾಮುಖ್ಯವಾಗಿ ಕೈಗಾರಿಕೆಗೆ, ವಿಜ್ಞಾನಗಳಿಗೆ ಲಕ್ಷ್ಯವಿಡಬೇಕು. ಸಾಹಿತ್ಯಕ್ಕಿಂತಲೂ ಶಾಸ್ತ್ರೀಯ ವಿಷಯಗಳು ಸ್ಥಾನಮಾನವನ್ನು ಹೊಂದಬೇಕು. ಈ ಚಿಕಿತ್ಸೆಯೊಡನೆ ಈ ಉಪಚಿಕಿತ್ಸೆಗಳೂ ನಡೆಯುತ್ತಿರಬೇಕು. ದೇಶದ ರೈಲ್ವೆಯನ್ನು ಇನ್ನೂ ಅಭಿವೃದ್ಧಿಗೊಳಿಸಬೇಕು, ಹೀರಾವರಿ ಕೆಲಸಗಳು ಕೃಷಿಕೈಗಾರಿಕೆಗಳು ಹೆಚ್ಚಬೇಕು. ಬ್ಯಾಂಕುಗಳನ್ನು ಹೆಚ್ಚಿಸಿ ಜನರಲ್ಲಿ ಜತನದಬುದ್ಧಿಯನ್ನುಂಟುಮಾಡಬೇಕು. ಎಲ್ಲಾ ವರ್ಗದ—ಜನರು ಸರಕಾರದೊಡನೆ ಸಹಕರಿಸಿ ನಡೆಯುವಂತೆ ಪ್ರೋತ್ಸಾಹಿಸಬೇಕು.

The Statist England

ವಿಷಮುಕಾಯಿಲೆಯಿಂದ ನಿವೃತ್ತಿಗೊಳಿಸುವುದು

ವಿಷಮ ಕಾಯಿಲೆಗೆ ತುತ್ತಾಗಿ ಬದುಕುವ ಆಶೆಯೇ ತೋರದ ದೇಹದಂಡನೆಗೆ ಗುರಿಯಾಗಿರುವ ರೋಗಿಗಳನ್ನು ನೋಡಬಾರದ ರೀತಿಯಿಂದ ಕೊಂದಬಾರದೇ? ಎಂಬ ಪ್ರಶ್ನೆಯು ವೈದ್ಯಕೀಯ ಪ್ರಪಂಚದಲ್ಲಿ ಬಹು ವಿವಾದಕ್ಕೆ ಬಿದ್ದಿದೆ. ಅವರು ಆ ಸಂಬಂಧವಾಗಿ ಯಾವ ನಿಷ್ಕರ್ಷೆಯನ್ನೂ ಮಾಡಲಾರದಾಗಿರುವರು. ಒಬ್ಬ ಬಿಷಪರು ಹೀಗೆನ್ನುತ್ತಾರೆ —"ಇದಕ್ಕೆ ಉತ್ತರವನ್ನೀಯುವುದು ಕಷ್ಟವಾಗಿದೆ. ಮೊದಲು ನಾವು ವಿಚಾರಿಸಿ ಡಾಕ್ಟರನು ರೋಗಿಯನ್ನು ಕಾಯಿಲೆಯಿಂದ ಪಾರುಗಾಣಿಸ ಬಹುದೇ ಅಥವಾ ಅವನ ರೋಗವನ್ನು ಕಡಮೆಮಾಡುವುದರಲ್ಲಿ ಮಾತ್ರವೋ ಎಂಬ ದನ್ನು ತಿಳಿದ ಕೊಳ್ಳಬೇಕು. "ರೋಗವನ್ನು ನಿವಾರಿಸುವುದಕ್ಕಾಗಿ ಡಾಕ್ಟರನ ಹೋರಾಟ ಜೀವದ ಸಂಗಡ ತೀರದು. ಸಾಧ್ಯವಾದ ಮಟ್ಟದಿಂದ ಕೈಸ್ತಸೂತ್ರಗಳನ್ನು ಬಿಡಲಾಗದು." ಈ ವಿಷಯವಾಗಿ ವ ಕ್ರೈಸ್ತ ಧರ್ಮಗುರುಗಳು "ವಿಷಮ ಕಾಯಿಲೆಯಿಂದ ರೋಗಿಯನ್ನು ಪಾರುಗೊಳಿಸುವುದಕ್ಕಾಗಿ ಆತನಿಗೆ ನೋವಿಲ್ಲದ ರೀತಿಯಿಂದ ಮರಣವನ್ನು ಕೊಡಬಹುದು. ಆದರೆ ಬದುಕಿಸಿದ ರೋಗವು ಅಷ್ಟು ನಿಶ್ಚಯವಾಗಿ ನಿರ್ಧರಿಸಲ್ಪಡುವುದು ಅಸಾಧ್ಯವೆಂದು ಹಲವು ವೈದ್ಯರುಗಳ ಅಭಿಪ್ರಾಯವಾಗಿದೆ. ಒಬ್ಬ ಡಾಕ್ಟರು ರೋಗಿಯ ಸ್ಥಿತಿಯು ನಿರಾಶಾಜನಕವೆಂದರೆ ಇನ್ನೊಬ್ಬನು ಆಶಾಜನಕವೆನ್ನುವ ಸಂಭವವಿದೆ." ಸರ್ರೆಯ ಬಿಷಪರು ಇನ್ನೊಂದು ರೀತಿಯಿಂದ ಉತ್ತರವಿತ್ತಿರುವರು.—"ಕೊಲ್ಲುವುದು ನ್ಯಾಯವೆಂದು ಕಂಡುಬರಬಹುದು. ಆದರೆ ಡಾಕ್ಟರರು ಮತ್ತು ರೋಗಿಯೂ ವಿರೋಧಿಸಬಹುದು. ರೋಗಿಯನ್ನು ಕೊಂದ ಮೇಲೆ ಪತ್ರಿಕೆಗಳು ಆ ರೋಗಕ್ಕೆ ತಕ್ಕ ಔಷಧಿಗಳನ್ನು ಕಂಡುಹಿಡಿದರೆ? ಒಂದೆರಡು ದಿನಗಳ ವರೆಗೆ ಕಾದು ನೋಡುತ್ತಿದ್ದರೆ ಕೈತಪ್ಪಿ ಹೋಗುವಂತಹ ವಿಷಯಗಳಿಗೂ ಜಯಸಿಗುವ ಉಪಾಯಗಳು ಲಭಿಸುತ್ತವೆಯೆಂದು ತಿಳಿದು ಪಶ್ಚಾತ್ತಾಪಕ್ಕೆ ಒಳಗಾದವರೂ ಇರುವುದಿಲ್ಲವೇ"

The Hindu Illustrated Weekly

ಕಲಾವಿದನ ಧರ್ಮ

ಜಾರ್ಜ್ ರೋಡಿನ್ ಎಂಬ ಫ್ರೆಂಚ್ ಶಿಲ್ಪಿಯು Le Levure ಎಂಬುದರಲ್ಲಿ ಹೀಗೆ ಹೇಳಿದ್ದಾನೆ— ನಾನು ಧಾರ್ಮಿಕ ಪುರುಷನಲ್ಲ. ಮನುಷ್ಯಧರ್ಮವೆಂದರೇನು? ಧರ್ಮವೆಂದರೆ ಮಾನವನ ಜೀವನಪಥವು. ... ನಿಯಮಾವಳಿಗಳೆಂದಾದರೆ ಕೆಲವು ಸೂತ್ರಗಳಿಗೆ ತಲೆಬಗ್ಗಿಸಬೇಕೆಂದಾದರೆ ನಾನು ಧಾರ್ಮಿಕ ವ್ಯಕ್ತಿಯಲ್ಲವೆಂಬುದು ಖಂಡಿತ. ನನ್ನಮಟ್ಟಿಗೆ ಧರ್ಮವೆಂದರೆ ಕ್ರಮದ ಪರಿಪಾಲನೆ ಮಾತ್ರವಾಗಿಲ್ಲ. ಮಂತ್ರೋಚ್ಚಾರಣೆಯೊಂದೇ ಧರ್ಮವೆಂದೆನಿಸಲ್ಪಡುವುದಿಲ್ಲ. ನನ್ನ ಧರ್ಮವೆಂಬುದು ಅತ್ಯಗತ್ಯವಾದುದು. ಅವರ್ಣನೀಯವಾದುದು. ಜೀವಂತ ಮನುಷ್ಯನನ್ನು ಬಾಳ್ವೆಗಾಗಿ ಪ್ರೋತ್ಸಾಹಿಸುತ್ತಿರುವ ಶಕ್ತಿಯೇ ಧರ್ಮ. ನನ್ನ ಧರ್ಮವು ದೃಷ್ಟಿಗೆ ಸಿಗಲಾರದಾದುದು. ಆಚರಾಮರತೆಯ ಕಡೆ ಅಮರಲೋಕದ ಕಡೆ ಧಾವಿಸುತ್ತಿರುವ ಅಂತಶ್ಚೇತನವೇ ನನ್ನ ಧರ್ಮ. ಈ ರೀತಿಯಿಂದ ಮಾತ್ರ ನಾನು ಧಾರ್ಮಿಕನು. ಯಾವ ಧರ್ಮವೂ ಇಲ್ಲದಿಲ್ಲವೆಂದಾದರೆ ನಾನು ನನಗೆ ಬೇಕಾದ ಒಂದು ಧರ್ಮವನ್ನು ಕಂಡುಹಿಡಿಯುವೆನು. ನಿಜವಾದ ಕಲಾವಿದರು ಜೀವಂತ ಮನುಷ್ಯರಲ್ಲಿ ಅತ್ಯುತ್ತಮ ಧಾರ್ಮಿಕ ವ್ಯಕ್ತಿಗಳು. ಈ ಕಲಾವಿದರು ಬುದ್ಧಿಯ ಬಲದಿಂದಿರುವವರೆಂದು ಜನರು ಹೇಳುವರು. ತೋರುವ ಜಗತ್ತೇ ನಮಗೆ ಸಾಕೆಂದು ಊಹಿಸುವರು. ನಾವು ಮಕ್ಕಳೆಂದೂ, ನಮಗೆ ಬಣ್ಣಗಳ ಮೇಲೆ ಗೊಂಬೆಗಳ ಮೇಲೆ ಬಹು ಮಮತೆಯೆಂದೂ ಅವುಗಳನ್ನು ಕಂಡಾಗ ನಾವು ಮಕ್ಕಳಂತಾಗುತ್ತೇವೆಯೆಂದೂ ಜನರ ಮಾತು. ಅವರಿಗೆ ನಮ್ಮನ್ನು ತಿಳಿಯಲು ಗೊತ್ತಿಲ್ಲ. ರೇಖೆಗಳು, ಆಥವಾ ನೆರಳುಗಳು ನಮಗೆ ವಾಸ್ತವ್ಯದ ವಿಷಯಗಳನ್ನು ತಿಳಿಸುತ್ತವೆ. ನಮ್ಮ ಮನಸ್ಸು ಮೇಲಿಂದ ಕೆಳಗಿಳಿದು, ವಿಷಯಗಳ ಆತ್ಮವನ್ನು ಹೊಕ್ಕು ಒಳಗೆ ಹುದುಗಿದ್ದ ಮೇಲೆ ಬಂದು ನಾವು ಚಿತ್ರಿಸುವಾಗ ನಮ್ಮ ಚಿತ್ರಗಳಿಗೆ ಪೂರ್ಣ ನೈತಿಕ ವರ್ಚಸ್ಸನ್ನು ಕೊಡುತ್ತೇವೆ. ಕಲಾವಂತನೆಂಬವನು ಪ್ರಕೃತಿಯ ಸತ್ವವನ್ನು ತನ್ನ ಕೃತಿಗಳ ಮೂಲಕ ತಿಳಿಸಬೇಕು. ಬಾಹ್ಯದ ನಿಜವನ್ನು ಹೇಳಿದರಾಗದು. ಅಂತರಾತ್ಮನ ನಿಜತ್ವವನ್ನುಸುರಬೇಕು. ಶಿಲ್ಪಿಯು ಮೂರ್ತಿಯನ್ನು ಕೆತ್ತುವಾಗ ಅದರ ಸ್ನಾಯುಸೌಷ್ಠವವನ್ನು ತೋರಿಸುವುದಲ್ಲ. ಆ ಮೂರ್ತಿಯು ಪ್ರತಿನಿಧಿಸುವ ವ್ಯಕ್ತಿಯು ಜೀವಕಳೆಯೇನೆಂದು ಚಿತ್ರಿಸುತ್ತಾನೆ. ಅದು ಕಲೆ.

Transcript Boston

ವೈದ್ಯನ ಕರ್ತವ್ಯ.

ಪೆರಿಸಿನ ಎಫ್. ಕರೆಲಿನ್ ಎಂಬ ಪ್ರಖ್ಯಾತ ಡಾಕ್ಟರರೊಬ್ಬರು ಹೀಗೆ ಬರೆದಿರುತ್ತಾರೆ—ಡಾಕ್ಟರನೆಂಬವನಿಗೆ ಆರು ಮುಖ್ಯ ಗುಣಗಳಿರಬೇಕು. ಕರ್ತವ್ಯದಕ್ಷತೆ, ಜವಾಬ್ದಾರಿಕೆ, ದಯಾಪರತೆ, ಕ್ರಿಯಾತ್ಮಕತೆ, ಸೌಂದರ್ಯಪ್ರೇಮ, ... ಇವುಗಳ ಮೂರ್ತಸ್ವರೂಪದಿಂದಿರುವ ವೈದ್ಯನೇ ಈ ವೃತ್ತಿಗರ್ಹನು. ರೋಗಿಯ ಕಡೆಗೆ ತನ್ನ ಕರ್ತವ್ಯವೇನೆಂಬುದನ್ನು ಡಾಕ್ಟರನು ಪ್ರಥಮತಃ ತಿಳಿಯಬೇಕು. ಈ ಬುದ್ಧಿಯು ಸುಮ್ಮನೆ ಬರಲಾರದು. ಅಂತರಿಕವಾಗಿ ಅವನಲ್ಲಿ ಬಂಧುಪ್ರೇಮವಿರಬೇಕು. ... ರೋಗಿಗಳ ಕುರಿತ ದೃಷ್ಟಿಯಿಂದ ನಿಸ್ವಾರ್ಥಪರನಾಗಿ ... ಅವನಲ್ಲಿರಬೇಕು. ವೈಯಕ್ತಿಕವಾಗಿ ರೋಗಿಯ ಉಪಕಾರದಲ್ಲಿ ... ತನ್ನ ಕರ್ತವ್ಯವೆಂದರೇನೆಂದು ತಿಳಿದ ... ರೆಂಬ ಜೀವಭಾವವನ್ನವನು ... ಬೇಕು. ಉದ್ಯೋಗದಲ್ಲಿ ನೈಪುಣ್ಯವನ್ನು ಹೊಂದುವುದೂ ಅದರಿಂದ ತಾನು ಶ್ರೀಮಂತನಾಗುವುದೂ ... ವಿಚಾರಗಳು. ಮೊದಲು ಬೇಕಾದುದು ಕಾರ್ಯದ ಮೇಲಿನ ಶ್ರದ್ಧೆ—ಕರ್ತವ್ಯನಿಷ್ಠೆ. ಹೀಗಿದ್ದರೆ ಮಾತ್ರ ಡಾಕ್ಟರನು ಅವನ ವೃತ್ತಿಯಲ್ಲಿ ಚತುರನಾಗಿ ಒಡಂಬಡಿಕೆಯ ಜವಾಬ್ದಾರಿಯುಳ್ಳವನಾಗಿ ಡಾಕ್ಟರನು ರೂಢಿಬದ್ಧವಾಗಿರುವ ಹಿತದ ದಾರಿಯನ್ನು ಅನುಸರಿಸಬೇಕು. ಆದುವುದೆಂದರೆ ವಾದಿಸುವುದನ್ನು ಮಾಡುವಂತಹ ಕ್ರಮದಿಂದಲೇ ಮಾಡಬೇಕು. ಯಾವ ಪ್ರಸಂಗವೇ ಬಂದಿರಲಿ — ಅದನ್ನು ಪೂರೈಸುವ ರೀತಿಯಲ್ಲೇ ಪೂರೈಸಬೇಕು. ದಾಕ್ಷಿಣ್ಯಪರವಶವಾಗಿರುವ ಸಂಘಟನೆಗಳಿಗೆ ವೈದ್ಯನು ಜವಾಬ್ದಾರನಾಗಿಲ್ಲ. ಅಂತಹ ಸಂಘಟನೆಗಳಿಗೆ ಕೆಲವರಿ ವೈದ್ಯನು ತನ್ನ ಸಾಹಸವನ್ನು ಮಾಡದಿರುವುದೂ ನೀತಿಯಲ್ಲ. ತಾನು ಹಾಗೆ ಮಾಡದೆ ಇರುವುದರಿಂದ—ವೈದ್ಯಕೀಯ ವಿಜ್ಞಾನವನ್ನು ಕಡಿದಂತೆ ಆಗುವುದು. ಡಾಕ್ಟರನು ದಯಾಭರಿತನಾಗಬೇಕು. ಕಠಿಣನಾದ ಸರ್ಜನು ಭಯಂಕರ ಕೆಲವು ಮಾಯವಾಗದೆ ಕುಟುಂಬದವರ ಶ್ರೇಯೋದೃಷ್ಟಿಯಿಂದ ರೋಗಿಯ ಸ್ಥಿತಿಯನ್ನು ಹೇಳಬೇಕು. ಅವನ ... ವಾಸ್ತವವಾಗಿಯೂ ನಿರಾಶಿಸಿದ್ದರೆ ಆ ಸತ್ಯವನ್ನು ಅವನಿಗೆ ಹೇಳುವುದು ಎಂದೂ ಸರಿಯಾಗದು. ಆದರೂ ರೋಗಿಯು ಗುಣಹೊಂದುತ್ತಾನೆ—ಬದುಕುತ್ತಾನೆ ಎಂಬ ಆಶ್ವಾಸನೆಯನ್ನು ಕೊಟ್ಟು ಅವನನ್ನು ಹುರಿದುಂಬಿಸುವ ಕ್ರಮವು ಅನರ್ಥಕಾರಿಯಾಗುವುದಿಲ್ಲ. ಅದೂ ಒಂದು ಬಗೆಯ ಚಿಕಿತ್ಸೆಯೇ ಆಗಿದೆ. ವೈದ್ಯನಲ್ಲಿ ತನ್ನ ಜಯದ ಪೂರ್ಣ ನಂಬಿಕೆಯಿರಬೇಕು. ಈ ದೃಢತೆಯು ಒಂದು ಕ್ರಿಯಾ ... ಆಗಿದ್ದರೆ ಕೆಟ್ಟುದಲ್ಲ. ಇಂತಹ ಸ್ವಭಾವದಿಂದಾಗಿ ಅವನಲ್ಲಿ ಕ್ರಿಯಾಶಕ್ತಿಯು ಹೆಚ್ಚುತ್ತದೆ. ... ಹೆಚ್ಚುತ್ತದೆ. ... ವೈದ್ಯರ ... ಮಾರ್ಗಪ್ರವರ್ತಕರೆಂಬ ಹೆಸರಿದೆ. ಹೀಗಿದ್ದ ಅನೇಕ ವೈದ್ಯರು ... [illegible] ... ಧೈರ್ಯವು ಒಂದು ... [illegible] ... ಇದಿಲ್ಲದಿದ್ದರೆ ವೈದ್ಯನಿಂದ ... [illegible] ... ವೈದ್ಯ ... [illegible] ... ಬೇಕು ತನ್ನ ... [illegible] ... ಜ್ಞಾನವಿಲ್ಲದೆ ಅವನು ಮಾಡಿದ ಕೆಲಸಗಳಲ್ಲಿ ವೈದ್ಯಕೀಯ ವಿಜ್ಞಾನದಿಂದಾಗಲೀ ... [illegible] ... ಇದಲ್ಲದ ವೈದ್ಯನ ... [illegible] ... ಬೇಕು. ಅದುದರಿಂದ ... [illegible]

Revue De M.

ಈಗಲೇ ತಯಾರಾಗಿದೆ! ಬೇಗನೆ ಕೊಂಡುಕೊಳ್ಳಿರಿ!! ತ್ವರೆ ಮಾಡಿರಿ!!!
ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿತವಾದ
ಸೋಶಿಯೋಲೋಜಿ
ಅಥವಾ
ಸಮಾಜಶಾಸ್ತ್ರ.
ಹಾಯರ್ ಎಲಿಮೆಂಟರಿಗ್ರೇಡಿನ ವಿದ್ಯಾರ್ಥಿಗಳಾದ ಉಪಾಧ್ಯಾಯ ...
ಉಪಾಧ್ಯಾಯನಿಯರಿಗೂ ಅತ್ಯುಪಯುಕ್ತವಾದ ಪುಸ್ತಕ
ಟ್ರೈನಿಂಗ್ ಶಾಲೆಗಳ ಸಿಲೆಬಸ್ ಪ್ರಕಾರ ಬರೆಯಲ್ಪಟ್ಟುದು
ಖಾಸಗಿಯಾಗಿ ಹಾಯರ್ ಎಲಿಮೆಂಟರಿ ಗ್ರೇಡ್ ಪರೀಕ್ಷೆಗೆ ಹೋಗುವ ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ,-ಯಾರ ಸಹಾಯವೂ ಇಲ್ಲದೆ ಕಲಿಯಲು ಅತ್ಯುಪಯೋಗಕರವಾದ ಪುಸ್ತಕ. ಶಾಲಾ ತನಿಖೆ ಸರಕಾರೀ ಪರೀಕ್ಷೆಯ ಪ್ರಶ್ನೆಗಳನ್ನು ಒಳಗೊಂಡಿವೆ
284 ಪುಟಗಳುಳ್ಳದ್ದು, ಸುಂದರವಾದ ಬ್ಯಾಂಡು, ಮುದ್ದಾದ ಮುದ್ರಣ
ಕ್ರಯ ಒಂದು ರೂಪಾಯಿ ಮಾತ್ರ
ಪುಸ್ತಕ ದೊರೆಯುವ ವಿಳಾಸ—
ಶಾರದಾ ಛಾಪಖಾನೆ, ಕಥೋಲಿಕ ಮಂಗಳೂರು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಪಂಡಿತ ಡಿ. ಗೋಪಾಲಾಚಾರ್ಯರವರ

ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ .. ಗಿಸುತ್ತಿದೆ ಅದರ ಫಲವೇ—ಆಯಾಸ ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿ ಬಿಡದಂತೆ ನೀವೀಗಲೇ ತಡೆಹಾಕಬೇಕು. ಉತ್ತಮೋಪಾಯವೇ ಜೀವಾಮೃತಸೇವನೆ ಈ ಪರಿಣಾಮಕಾರೀ ಪೌಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು. ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಕ್ರಿಯಾತ ಪುರುಷರನ್ನಾಗಿ ಮಾಡುವುದು ಟ್ಟ್ಲಿಯ ೩ ದೊರೆವುದು — ದೊಡ್ಡದು ರೂ 3—4—0 ಸಣ್ಣದು ರೂ 1—12—0

ತಯಾರಿಸುವವರು — ಆಯುರ್ವೇದಾಶ್ರಮ, ಪೋಸ್ಟು ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು. ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ

Comfortable like an AEROPLANE

Use our swadeshi Mosquitonet for health, comfort and sound sleep as if you are in an Aeroplane. Sample cutting free. More convenient if some advance sent with order

L		B		H		Price	Best
6	Ft	3½	Ft.	3½	Ft	Rs 1/12	2/8
6		4	,	4	,,	, 2/4	3/-
6½	,,	4½		4½	,,	,, 2/8	3/8
7	,,	5	,	5	,	, 3/2	4/10
7½	,,	6	,	6	,,	,, 4/4	5/12

G M Sharma, Post Box F 6706 Calcutta

An Advertisement in

'Swadeshabhimani'

Means a sure fortune to you

Ask for Contract Rates

The Swadeshabhimani office,

Car Street, Mangalore

ಕಿರ್ಲೋಸ್ಕರ

ಆದರ್ಶಪ್ರಾಯಕ

ಉಕ್ಕಿನ ಸಾಮಾನುಗಳು—

ಆಧುನಿಕ ಮನೆಮಂದಿರಗಳಿಗೆ ಅತ್ಯುತ್ಕೃಷ್ಟವಾಗಿ ರಚಿಸಲ್ಪಟ್ಟಿದೆ.

ಉತ್ತಮ ಬಣ್ಣಗಳು. ಮಡಚಬಹುದು ದರ ಸುಲಭ

ಕುರ್ಚಿಗಳು, ಮೇಜುಗಳು, ಮಡಚುವ ಹಾಸಿಗೆಗಳು,

ಸೋಫಾಗಳು, ಬೆಂಚುಗಳು, ಶೆಲ್ಫ್‌ಗಳು,

—ತೊಟ್ಟಿಲುಗಳು, ಇತ್ಯಾದಿ.

ಕೆಟಲಾಗಿಗೂ ದರಗಳ ಮಾಹಿತಿ ಬಗ್ಗೂ ಬರೆದುಕೊಳ್ಳಿರಿ

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

— ಡಿಸ್ಟ್ರಿಬ್ಯೂಟರರು —ಪೆರ್ರಿ ಮತ್ತು ಕಂಪೆನಿ ಲಿಮಿಟೆಡ್, ಮದ್ರಾಸು.

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

ಗೌರವ ಕಾರ್ಯದರ್ಶಿ,

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾದಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ.ಎ, ಎಂ ಎಲ್.

ಇವರಿಂದ ರಚಿತವಾದ

ಶ್ರುತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಶ್ಲಾಘಿಸಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

S.G.B.C.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ

The Scientific Gold Bangles Co, Ltd,
Head Office 43, Byragimatam Street,
Post Box No 203, Madras

77 Years!



Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai

Sawkar Mahal,

Car Street, MANGALORE.

ಆಚಾರ ಕ್ರಾಂತಿ ೩.

ಮಿಲಿಯಾಧಿಪತಿ ಥೋಮಸ್ ಬಾಟಾ.

ಸಂಕ್ಷಿಪ್ತ ಜೀವನ ಚರಿತ್ರೆ.

[All Rights Reserved]

ಕೆಲವರು ಸ್ವಂತ ಸಾಹಸದಿಂದ, ಕೆಲವರು ಅನ್ಯರ ಸಹಾಯದಿಂದ, ಕೆಲವರು ಅದೃಷ್ಟದ ಲೀಲೆಯಿಂದ, ಕೆಲವರು ಕಾಲಕ್ರಮೇಣ, ಕೆಲವರು ಥಟ್ಟನೆ ಜೀವಿತದಲ್ಲಿ ಯಶಸ್ಸಂಪಾದನೆ ಮಾಡುತ್ತಿರುವುದು ಲೋಕದಲ್ಲಿ ಸರ್ವಸಾಮಾನ್ಯವಾಗಿ ಕಂಡು ಬರುವ ವಿಷಯ.

ಕೆಲವರಿಗೆ ಸ್ವಸಾಮರ್ಥ್ಯದ ಮೇಲೆ ವಿಶ್ವಾಸವಿರುವುದಿಲ್ಲ. ಕೆಲವರಿಗೆ ವಿಶ್ವಾಸವಿದ್ದರೂ ಅದನ್ನು ಕಾರ್ಯರೂಪವಾಗಿ ಪ್ರದರ್ಶಿಸಲು ಚೈತನ್ಯವಿರುವುದಿಲ್ಲ. ಕೆಲವರಿಗೆ ಅಂತಹ ಚೈತನ್ಯವಿದ್ದರೆ ಅದನ್ನು ಹೊರಗೆಡಹುವಷ್ಟು ಇಚ್ಛೆಯಿರುವುದಿಲ್ಲ. ಒಂದು ವೇಳೆ ಇಚ್ಛೆಯಿದ್ದರೂ ಧೈರ್ಯವು ಕೈಬಿಡುತ್ತದೆ. ಆದರೆ ಮತ್ತೆ ಕೆಲವರಿದ್ದಾರೆ. ಅವರಿಗೆ ಯಾವ ಬಲವೂ ಅಗತ್ಯವಿರುವುದಿಲ್ಲ. ಸ್ವಸಾಹಸದಿಂದ, ಸ್ವಂತ ಕಲ್ಪನಾಶಕ್ತಿಯ ಬಲದಿಂದ ಅವರು ತಮ್ಮ ತಮ್ಮ ಜೀವನಪಥವನ್ನು ಯಶೋರೀತಿಯಿಂದ ಕಲ್ಪಿಸಿಕೊಳ್ಳುತ್ತಾರೆ. ಅವರಿಗೆ ಜೀವನವೆಂಬುದು ನುಂಗಿ ನೀರು ಕುಡಿದಂತೆ. ಬರುವ ಕಷ್ಟಗಳು ಅವರಿಗೆ ಬರದಿರುವುದಿಲ್ಲ. ಆದರೆ ಅವರನ್ನು ಹಿಮ್ಮೆಟ್ಟಿಸಲ್ಲಿಸುವಷ್ಟು ಶಕ್ತಿಯು ಅವುಗಳಿಗೆ ಸಿಗುವಷ್ಟು ಪುಷ್ಕರವರಾಗುವುದಿಲ್ಲ. ಒಂದು ವೇಳೆ ಅವು ಮುಂದೊತ್ತಿ ಬಂದರೂ ಅವರವುಗಳಿಗೆ ಭಯಪಡುವುದಿಲ್ಲ. ಧ್ಯೇಯಸಾಧನೆಯಾಗದೆ ಅವರು ವಿರಮಿಸುವುದೇ ಇಲ್ಲ. ತಮ್ಮ ಕಲ್ಪನಾಶಕ್ತಿಯು ಎಷ್ಟು ಭರದಿಂದ ಮುಂದೋಡುತ್ತಿದೆಯೋ ಅಷ್ಟೇ ವೇಗವಾಗಿ ಅವರ ಕಾರ್ಯರೂಪದ ಸಾಹಸವೂ ಅದರ ಬೆಂಬತ್ತುತ್ತದೆ. ತಮ್ಮ ಧ್ಯೇಯವು ಪೂರ್ತಿಗೊಳ್ಳದೆ ಅವರಿಗೆ ಮನಃಶಾಂತಿಯೇ ಇರುವುದಿಲ್ಲ. ಇಂತಹವರ ಜೀವನವು ಆದರ್ಶಪ್ರಾಯವಾದುದು. ಅನುಕರಣೀಯವಾದುದು.

ಜೀವನದ ವಿಜಯಮಾಲೆಯನ್ನು ಹೊಂದಬೇಕೆಂದು ಟೊಂಕಕಟ್ಟುವ ಪ್ರತಿಭಾ ಸಂಪನ್ನನಿಗೆ, ಧೀರಾಳುವಿಗೆ ಬಡತನವು ಒಂದು ವಿಘ್ನವಲ್ಲ. ಅನಾನುಕೂಲತೆಗಳು ನೆವಗಳಲ್ಲ. ಅವನಿಗೆ ಮನೋದಾರ್ಢ್ಯವೇ ಸರ್ವ ಸೌಕರ್ಯಗಳನ್ನೊದಗಿಸಿಕೊಡುವ ಕಾಮಧೇನುವಿನಂತೆ. "ಬಡವನಾಗಿ ಹೋದೆ, ಇಲ್ಲದಿದ್ದರೆ ನನ್ನ ಸಾಹಸವನ್ನು ನೋಡಬೇಕಿತ್ತು" "ಮನಸ್ಸೆಲ್ಲಾ ಉಂಟು ಕೈಯಲ್ಲಿ ಕಾಸಿಲ್ಲ" "ಏನು ಮಾಡುವುದು? ಇದು ತಕ್ಕ ಸಮಯವಲ್ಲ" ಎಂಬ ಪೊಳ್ಳು, ರೂಢಿಯ ನೆವಗಳು ಅವನಿಗೆ ನಿರ್ಬಂಧವಾಗಿ ನಿಲ್ಲುವುದಿಲ್ಲ.

೧೯೩೨ನೇ ಇಸವಿಯಲ್ಲಿ ಮಹಾ ಹೆಸರುವಾಸಿಗಳೂ ಧನಿಕರೂ ಆದ ಕೆಲವರು ಮರಣ ಹೊಂದಿದರು. ೧೯೩೨ರ ಮಾರ್ಚಿ ತಾ ೧೨ರಲ್ಲಿ ಸ್ವೀಡನ್ ಬೆಂಕಿಪೆಟ್ಟಿಗೆ ಕಾರ್ಖಾನೆಯ ಸಹಸ್ರ ಮಿಲಿಯಾಧಿಪತಿ ಐವಾರ್ ಕ್ರೂಗರ್ ಎಂಬವನು ಗುಂಡು ಹೊಡೆದುಕೊಂಡು ಪ್ರಾಣತ್ಯಾಗ ಮಾಡಿದನು. ಕೊಡಕ್ ಫಿಲ್ಮ್ ಕಂಪೆನಿಯ ಮಿಲಿಯಾಧಿಪತಿ ಜೋರ್ಜ್ ಈಸ್ಟ್ ಮೇನ್ ಎಂಬವನು "ನನ್ನ ಕೆಲಸವು ಮುಗಿಯಿತು. ನಾನಿನ್ನು ಏಕೆ ನಿಲ್ಲಲಿ?" ಎಂದು ಒಂದು ಕಾಗದವನ್ನು ಮೇಜಿನ ಮೇಲೆ ಬರೆದಿಟ್ಟು ಪ್ರಾಣತ್ಯಾಗ ಮಾಡಿದನು. ಲಿಪ್ಟನ್ ಚಹಾ ವ್ಯಾಪಾರಿಯಾಗಿ ಸಹಸ್ರ ಕಾರ್ಖಾನೆಗಳನ್ನು ನಡೆಸುತ್ತಿದ್ದ ಥೊಮಸ್ ಲಿಪ್ಟನ್ ಎಂಬವನೂ ಅದೇ ವರ್ಷ ತೀರಿಕೊಂಡನು. ೧೯೩೨ರ ಜುಲಾಯಿ ತಾ ೩೨ರಲ್ಲಿ ಮತ್ತೊಬ್ಬ ಶ್ರೀಮಂತನು ವಿಮಾನದಿಂದ ಕೆಳಗೆ ಬಿದ್ದು ಮೃತನಾದನು. ಇವನ ಕುರಿತು ಇಲ್ಲಿ ಉಲ್ಲೇಖಿಸುವ

ಮಧ್ಯ ಯುರೋಪು ದೇಶದ ಮೊರೇವಿಯಾದಲ್ಲಿ 'ಮಕುಟರಹಿತ ನೃಪ'ನೆಂದರೆ ಥೋಮಸ್ ಬಾಟಾ. ಕೆಲವರು ಅವನನ್ನು 'ಬಾಟ್ಯಾ' ಎಂದು ಕರೆಯುವುದೂ ಇದೆ. ಬಾಟಾನು ಹುಟ್ಟಿನಲ್ಲೇ ಬಡವನು. ಬಾಟಾನ ಯೌವನ ದಿನಗಳಲ್ಲಿ ಅವನ ತಂದೆಯು ಮೋಚೆಯ ಒಂದು ಸಣ್ಣ ಅಂಗಡಿಯನ್ನಿಟ್ಟು ದಿನಹರಣ ಮಾಡುತ್ತಿದ್ದನು. ಮಗನನ್ನು ಬೇರೆ ಕಡೆಗೆ ಕಳುಹಿಸಲು ಮನಸ್ಸಿಲ್ಲದ ತಂದೆಯು ಥೋಮಸ್ ಬಾಟಾನನ್ನು ತನ್ನ ಅಂಗಡಿಯಲ್ಲೇ ಉಳ್ಳಿಸಿದನು. ಮಗನಲ್ಲಿ ವ್ಯವಹಾರ ಚಾತುರ್ಯವು ತುಂಬಾ ಇದ್ದುದನ್ನು ತಂದೆಯು ಕಾಣದಿರಲಿಲ್ಲ. ಅವನನ್ನು ಮೋಚೆಯ ವ್ಯಾಪಾರದಲ್ಲಿ ಸರ್ವ ಪಾರಂಗತನನ್ನಾಗಿ ಮಾಡಿದನು.

ಬಾಟಾನು ಮೊದಮೊದಲು ಪರರ ಅಂಗಡಿಗಳಲ್ಲಿ ತನ್ನ ಚತುರತೆಯನ್ನು ತೋರಿಸಬೇಕಾಯಿತು. ಉಂಡುಟ್ಟು, ಕಷ್ಟದಿಂದ ಸ್ವಲ್ಪವನ್ನು ಉಳಿಸಬೇಕಾಯಿತು. ಕೆಲವು ವರ್ಷಗಳು ಕಳೆಯುತ್ತಲೇ ಅವನು ಪಾದರಕ್ಷೆಯ ಸಣ್ಣ ಅಂಗಡಿಯೊಂದನ್ನು ಸ್ಥಾಪಿಸಿದನು. ದಿನ ಕಳೆದಷ್ಟಕ್ಕೆ ಅವನ ವ್ಯಾಪಾರವು ಬೆಳೆಯುತ್ತಾ ಬಂತು. ಬಾಟಾನ ಪಾದರಕ್ಷೆಗಳೆಂದರೆ ಬಾಳುವ, ಉತ್ತಮ ವಸ್ತುಗಳೆಂಬ ಹೆಸರು ಮೆಲ್ಲಮೆಲ್ಲನೆ ದೇಶದಲ್ಲಿ ಹರಡಿತು.

ತನ್ನ ವ್ಯಾಪಾರವು ವೃದ್ಧಿಗೊಳ್ಳುತ್ತಿರುವುದನ್ನು ಕಂಡ ಬಾಟಾನು ಮೊರೇವಿಯದ ಜಿನ್ ಎಂಬ ಪಟ್ಟಣದಲ್ಲಿ ಮೋಚೆಯ ಒಂದು ದೊಡ್ಡ ಕಂಪೆನಿಯನ್ನು ಸ್ಥಾಪಿಸಿದನು. ಅಲ್ಲಿ ವಾಸಿಸುತ್ತಾ ಧೈರ್ಯದಿಂದ ವ್ಯಾಪಾರವನ್ನು ಮುಂದೊತ್ತಿ ತನ್ನ ಹೆಸರನ್ನು ಸ್ಥಾಪಿಸಿದನು. 'ಬಾಟಾ ಶೂ' ಎಂಬುದು ಯುರೋಪು ದೇಶದಲ್ಲಿ ಪ್ರಖ್ಯಾತವಾಯಿತು. ಎಲ್ಲಾ ಕಡೆಗಳು ಅವನನ್ನು ಪ್ರೋತ್ಸಾಹಿಸಿದವು. ಅವನಲ್ಲಿ ವ್ಯಾಪಾರ ನಡೆಸದೆ ನಿರ್ವಾಹವಿಲ್ಲದಾಯಿತು. ಕ್ರಮೇಣ, ಪ್ರತಿಯೊಂದು ದೊಡ್ಡ ಪಟ್ಟಣದಲ್ಲೂ ಅವನು ತನ್ನ ಕಾರ್ಖಾನೆಯ ಶಾಖೋಪಶಾಖೆಗಳನ್ನು ತೆರೆದನು. ಇಂಗ್ಲಿಷರು, ಫ್ರೆಂಚರು, ಜರ್ಮನರು ಎಂಬ ಭೇದಾಭೇದವಿಲ್ಲದೆ ಅವನು ಕೆಲಸಗಾರರನ್ನು ನೇಮಿಸಿ ಬಂಧುಭಾವವನ್ನು ಪ್ರಚುರಗೊಳಿಸಿದನು. ನೋಡುವುದೇನು? ಕೆಲವು ವರ್ಷಗಳಲ್ಲಿ ದೇಶ ವಿದೇಶಗಳಲ್ಲಿ ಅವನ ಕಂಪೆನಿಯ ೩೦೦೦ ಶಾಖೆಗಳು ಸಂಸ್ಥಾಪಿಸಲ್ಪಟ್ಟವು. ಮಧ್ಯ ಯುರೋಪಿನಲ್ಲಿ ಅವನಿಗೆ 'ಯುರೋಪಿನ ಹೆನ್ರಿ ಫೋರ್ಡ್' ಎಂಬ ಹೆಸರನ್ನು ಗಳಿಸಿದನು.

ಕಲೆ, ವಿಜ್ಞಾನ, ತತ್ವ ಇವೆಲ್ಲವನ್ನೂ ಕಲಿಯಬೇಕೆಂಬುದು ಅವನ ಹವ್ಯಾಸ. ಅವನು ಸ್ವಲ್ಪ ಸಮಯದಲ್ಲೇ ವಿಮಾನ ಚಲನೆಯ ಕೆಲಸವನ್ನು ಕಲಿತುಕೊಂಡನು. ಅಗತ್ಯಬಿದ್ದಲ್ಲಿ ಅವನು ಹೆಚ್ಚಾಗಿ ವಿಮಾನ ಮೂಲಕವೇ ದೇಶಸಂಚಾರ ಮಾಡುತ್ತಿದ್ದನು. ತನಗಾಗಿ, ತನ್ನ ಕೆಲಸಗಾರರಿಗಾಗಿ ಅವನು ಒಟ್ಟು ಹನ್ನೊಂದು ವಿಮಾನಗಳನ್ನಿಟ್ಟುಕೊಳ್ಳಬೇಕಾಯಿತು.

ಉತ್ತಮ ವರ್ತಕರಲ್ಲಿರಬೇಕಾದ ಸಕಲ ಗುಣಗಳು ಅವನಲ್ಲಿ ಮೂರ್ತಿಮಂತವಾಗಿದ್ದುವು. ಹೆನ್ರಿ ಫೋರ್ಡರಂತೆ ಅವನಿಗೆ ತನ್ನ ಕೆಲಸಗಾರರ ಮೇಲೆ ಅತಿಶಯವಾದ ವಿಶ್ವಾಸ. ಹೆಚ್ಚು ಕೆಲಸವಾಗಬೇಕು—ಎಂಬುದು ಅವನ ಉದ್ದೇಶವಾಗಿದ್ದಿಲ್ಲ. ಮಾಡಿದ ಕೆಲಸವು ಕೂಲಂಕಷವಾಗಿ, ಸಮರ್ಪಕವಾಗಿ ಮುಗಿದರೆ ಅವನಿಗೆ ಅತ್ಯಾನಂದ. ಮೇಲಾಟದ ಪ್ರಯೋಜನಗಳೇನೆಂದು ಅವನಿಗೆ ಪೂರ್ಣ ಅರಿದು. ತನ್ನ ಕೆಲಸಗಾರರಲ್ಲಿ ಯಾರು ಎಷ್ಟು ಹೆಚ್ಚು ಕೆಲಸವನ್ನು—ಉತ್ತಮ ರೀತಿಯಿಂದ—ಅಲ್ಪ ವೇಳೆಯಲ್ಲಿ—ಮಾಡುವನೋ, ಅವನಿಗೆ ಅಷ್ಟು ಹೆಚ್ಚಿನ ಸಂಬಳವನ್ನು ಕೊಡುತ್ತಿದ್ದನು. ಅದರೊಡನೆ ತರಗತಿಯ ಪ್ರಶಂಸೆಯನ್ನೂ ದಾನಮಾಡುತ್ತಿದ್ದನು.

ಥೋಮಸ್ ಬಾಟಾನೆಂದರೆ ಕಾರ್ಯದಕ್ಷತೆ, ಕಾರ್ಯಪ್ರತಿಷ್ಠೆಗಳ ಪ್ರತಿಮೂರ್ತಿ. ಎಷ್ಟು ಕಷ್ಟಸಾಧ್ಯ ಕೆಲಸವೋ, ಅದನ್ನು ಅಷ್ಟು ಅವಸರದಿಂದ, ಅಷ್ಟು ಉತ್ಸಾಹಪೂರ್ವಕವಾಗಿ ಕೈಕೊಳ್ಳುವ ಗುಣವು ಅವನಲ್ಲೊಂದು ವೈಶಿಷ್ಟ್ಯ. ವ್ಯಾಪಾರ ಕೇಂದ್ರವೊಂದನ್ನು ಕಂಡುಹಿಡಿದು ಆ ಸ್ಥಾನದಲ್ಲಿ ಅಗತ್ಯಬಿದ್ದ ಕಟ್ಟೋಣಗಳನ್ನು ನಾಲ್ಕಾರು ದಿನಗಳಲ್ಲಿ ಅವನು ರಚಿಸಿದ ಉದಾಹರಣೆಗಳೂ ಇವೆ. ಕೆಲಸದ ಅವಸರದಿಂದ ಅವನು ಇಂದು ಒಂದು ಊರಲ್ಲಿದ್ದರೆ ನಾಳೆ ವಿಮಾನದ ಮೂಲಕ ಮತ್ತೊಂದು ಊರಿಗೆ ಹಾರಿಹೋಗುವನು. ಉದ್ಯಮದ ಶರ್ತವು ಅವನಿಗೆ ಸರಿಯಾದ ಆಹಾರವನ್ನಾಗಲೀ ನಿದ್ರೆಯನ್ನಾಗಲೀ ಕೊಡುತ್ತಿರಲಿಲ್ಲ. ಅಷ್ಟಾದರೂ ಅವನು ಬಳಲದೆ, ಬಾಡದೆ, ಬೇಸರಿಸದೆ, ಅಧಿಕಾರದರ್ಪವನ್ನು ತೋರಿಸದೆ, ಕೈಯಲ್ಲಿದ್ದ ತನ್ನ ಕೆಲಸವನ್ನು ಪೂರೈಸಿದ ಉದಾಹರಣೆಗಳು ಅನೇಕವಿವೆ. ಕೆಲಸ, ಕೆಲಸ—ಕೆಲಸವೆಂಬುದೇ ಅವನಿಗೊಂದು ವಿಹಾರ. ಅವನಿಗೆ ವಿಶ್ರಾಂತಿಯು ಸಿಗುವುದು ಕೆಲಸದಲ್ಲಿ ಮಾತ್ರ. ದಿನಕ್ಕೆ ೫ ತಾಸುಗಳ ದುಡಿತದ ಕ್ರಮ ಅವನದು. ಅವನ ಕಾರ್ಖಾನೆಗಳು ಬೆಳಿಗ್ಗೆ ೭ ಗಂಟೆಗೆ ತೆರೆಯಲ್ಪಡುವುವು. ಮಧ್ಯಾಹ್ನ ೧೨ ಗಂಟೆಯ ತನಕ ಕೆಲಸ ಮಾಡಿದ ಮೇಲೆ ೧ ಗಂಟೆಯು ವಿರಾಮವು ಸಿಗುವುದು. ೧ ಘಂಟೆಗೆ ಪ್ರಾರಂಭವಾದ ಕೆಲಸವು ಸರಿಯಾದ ೫ ಗಂಟೆಗೆ ಅಂತ್ಯವಾಗುವುದು. ಶನಿವಾರ ದಿನ—ಕೆಲಸವು ಮುಗಿದ ಮೇಲೆ,—ಅವನ ಕೆಲಸಗಾರರೆಲ್ಲ ಕೂಡಿಕೊಂಡು ಒಂದು ರೌಂಡ್ ಟೇಬಲ್ ಸಭೆ ಮಾಡುವರು. ಅವರಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸುವವನು ಬಾಟಾ. ಮುಂದಿನ ವಾರಕ್ಕೆ ಬೇಕಾದ ವ್ಯಾಪಾರೀ ಸಲಹೆಗಳನ್ನು ಕೊಡುವನು. ತನ್ನ ಯಾವ ಶಾಖೆಯಲ್ಲಿ ಎಷ್ಟು ಕೊರತೆಯಿದೆ, ಅದನ್ನು ಹೋಗಲಾಡಿಸಬೇಕೆಂತು? ತನ್ನ ಕಾರ್ಖಾನೆಗಳ ಕೆಲಸಗಳು ಇನ್ನೂ ಉತ್ಕೃಷ್ಟವಾಗುವುದು ಹೇಗೆ ಮೊದಲಾದ ವಿಚಾರಗಳ ವಿಮರ್ಶೆ ನಡೆಯುವುದು. ಪ್ರತಿಯೊಂದು ವ್ಯವಹಾರದಲ್ಲೂ ತನ್ನ ಕೆಲಸಗಾರರ ಮತವೇನೆಂದು ನೊಡಲು ವಿಚಾರಿಸುವುದು. ಅವನ ರೂಢಿ. ಹೀಗಿದ್ದುದರಿಂದ ಕೆಲಸಗಾರರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಬಾಟಾನಿಗೆ ನಿರ್ಭಯರಾಗಿ ಕೊಡುವರು. ಅಲ್ಲದೆ ತಾವು ಕೊಟ್ಟ ಸೂಚನೆಗಳು ಅಂಗೀಕೃತವಾದರೆ ಅವುಗಳಿಂದ ಹೆಚ್ಚಿನ ಫಲವೂ ದೊರಕುವಂತೆ ಅವರು ಸಾಧಿಸುವರು. ತಮ್ಮ ವಶವಿರುವ ಕೆಲಸವಲ್ಲ ಸ್ವಕ್ಷ್ಯಕರವಾಗಬೇಕು. ತಮ್ಮ ಯಜಮಾನನು ಅದರಿಂದ ಸಂತೋಷಗೊಳ್ಳಬೇಕು ಎಂಬುದೇ ಅವರ ಹಂಬಲು. ಕಾರ್ಖಾನೆಗಳನ್ನು ಸಂದರ್ಶಿಸಲು ಬರುವ ಹೊರಗಿನ ಜನರು ಅಸಂಖ್ಯ. ಅಂತಹ ಜನರಾರೆಂದು ಕೂಡಾ ನೋಡುವಷ್ಟು ಬಿಡುವು ಆ ಕೆಲಸಗಾರರಿಗಿರುವುದಿಲ್ಲ. ಎಂದಾಗ ಅವರ ಕಾರ್ಯದಕ್ಷತೆ ಎಷ್ಟಿರಬೇಕು, ಅವರಿಗೆ ಕೆಲಸದ ಮೇಲೆ ಆಸಕ್ತಿಯು ಎಷ್ಟಿರಬೇಕು ಎಂದು ನಾವೇ ಊಹಿಸಿಕೊಳ್ಳಬಹುದು.

ಮುಖ್ಯ ಕಾರ್ಖಾನೆಯ ಒಂದು ಪಾರ್ಶ್ವದಲ್ಲಿ ಚರ್ಮದ ತುಂಡುಗಳು ಹದವಾಗುವುವು. ಅವುಗಳನ್ನು ಒಂದು ಯಂತ್ರವು ಮತ್ತೊಂದು ಕಡೆಗೆ ಸಾಗಿಸುವುದು. ಆ ಯಂತ್ರದ ಬಳಿಗೊಯ್ಯುವುದು. ಸಾಲಾಗಿ ನಿಂತಿರುವ ನೂರಾರು ಕೆಲಸಗಾರರು ಆ ಚರ್ಮಗಳಿಂದ ಪಾದರಕ್ಷೆಗಳನ್ನು ತಯಾರಿಸುವರು. ಸಿದ್ಧವಾದ ಪಾದರಕ್ಷೆಗಳು ಮುಖ್ಯಸ್ಥರ ಆಫೀಸುಗಳಿಗೆ ಯಂತ್ರದ ಮೂಲಕ ಸಾಗಿಸಲ್ಪಡುವುವು. ಅವರು ಅವುಗಳನ್ನು ಪರಿಶೀಲಿಸಿ, ಬೇರ್ಪಡಿಸಿ, ಉತ್ತಮವಾದುವುಗಳನ್ನು ಪೆಟ್ಟಿಗೆಗಳ ಕೋಣೆಗಳಿಗೆ ಕಳುಹಿಸುವರು. ಅರ್ಧ ಗಂಟೆಯೊಳಗೆ ಸಾವಿರಾರು ಪೆಟ್ಟಿಗೆಗಳಲ್ಲಿ ಪಾದರಕ್ಷೆಗಳು ತುಂಬುವುವು. ಸಮಯವನ್ನು ಹಾಳುಮಾಡುವ ಪದ್ಧತಿ ಅಲ್ಲಿಲ್ಲ. ಒಡನೆ ಎಲ್ಲಾ ಪೆಟ್ಟಿಗೆಗಳು ಯಂತ್ರಗಳ ಮೂಲಕ ರೈಲುಗಳನ್ನೋ, ಲಾರಿಗಳನ್ನೋ, ಸ್ಟೀಮರುಗಳನ್ನೋ ಹತ್ತಿ ಪರದೇಶಗಳಿಗೆ ಹೋಗುವುವು. ಯಾವುದಾದರೂ ಒಂದು ಯಂತ್ರವು ಹಾಳಾಗಿ ಬಿಟ್ಟರೆ, ಒಡನೆ ಮೇಲ್ವಿಚಾರಕರ ಮುಂದಲವು ಸೇರಿಸಲ್ಪಡುವುದು. ಆ ಬಗ್ಗೆ ಏನು ಮಾಡಬೇಕೆಂದು ಕೂಡಲೇ ನಿರ್ಧಾರವಾಗಿ, ಹಾಳಾದ ಭಾಗವು ಅತ್ಯವಸರದಿಂದ ಸರಿಯಾಗುವುದು.

ಬಾಟಾನು ದ್ರವ್ಯಾರ್ಜನೆಯಲ್ಲಿ ಮನಸ್ಸಿಟ್ಟಂತೆ ಕೆಲಸಗಾರರ ಗುಣನಡತೆಯಲ್ಲೂ ಲಕ್ಷ್ಯವಿಟ್ಟಿದ್ದನು. ತನ್ನ ಕೈಕೆಳಗಿನ ಕೆಲಸಗಾರರು ಕುಡಿಕತನದ ಅಭ್ಯಾಸವನ್ನುಳ್ಳವರಾಗಬಾರದೆಂದೇ ಅವನ ಆಜ್ಞೆ. ಕಾರ್ಖಾನೆಯ ಪ್ರತಿಯೊಂದು ಬಾಗಿಲಿನಲ್ಲಿಯೂ ಕುಡಿಕತನದ ಕೆಡುಕನ್ನು ವಿವರಿಸುವ ಚಿತ್ರಗಳನ್ನು ತೂಗಹಾಕಿಸಿದ್ದನು. ನೈತಿಕ ಉಪದೇಶಗಳನ್ನೊಳಗೊಂಡ ಇತರ ಪ್ರಕಟಣೆಗಳು ಅಲ್ಲಲ್ಲಿ ಅಂಟಿಸಲ್ಪಟ್ಟಿರುವುದು ಕಂಡು ಬರುತ್ತದೆ.

ಬಾಟಾನಿಗೆ ಹಾಲಿನ ಮೇಲೆ ಹೆಚ್ಚು ಪ್ರೀತಿ. ಕಾಯಕಷ್ಟದಿಂದ ದುಡಿಯುವವರ ದೇಹಪ್ರಕೃತಿಗೆ ಹಾಲು ಅತ್ಯುತ್ತಮವಾದುದು, ಅದನ್ನು ಆದಷ್ಟು ಹೆಚ್ಚು ಕುಡಿಯಬೇಕು ಎಂದು ಅವನು ಪದೇ ಪದೇ ಹೇಳುತ್ತಿದ್ದನು. ಇದರಿಂದಾಗಿ, ಮೊರೇವಿಯದಲ್ಲಿ ಪಥ್ಯವಾಗುವಷ್ಟು ಹಾಲು ಬೇರೆ ಎಲ್ಲಿಯೂ ದೊರೆಯುತ್ತಿದ್ದಿಲ್ಲ.

ಬಾಟಾನ ಮನೆಯು ಅವನ ಕಾರ್ಖಾನೆಯ ಸಮೀಪವೇ ಇದೆ. ದೊಡ್ಡ ವಿಲಾಸೀ ಬಿರಲ್ಲವದು, ಸಣ್ಣ ಸುಂದರ ಕಟ್ಟಡ. ಮನೆಗೆಲಸಗಳಿಗೆ ಹೆಚ್ಚು ಕೆಲಸಗಾರರಿಲ್ಲ. ತನ್ನ ಕೈ ಸಾಧ್ಯವೆಂದಿರುವ ಯಾವ ಕೆಲಸವನ್ನೂ ಅವನು ತನ್ನ ಕೆಲಸಗಾರರಿಂದ ಮಾಡಿಸುತ್ತಿದ್ದಿಲ್ಲ.

ಥೋಮಸ್ ಬಾಟಾನು ೧೯೩೨ರ ಜುಲಾಯಿ ತಿಂಗಳಲ್ಲಿ ಹಿಂದೂದೇಶಕ್ಕೆ ಬರುವವನಿದ್ದನು. ಕಲ್ಕತ್ತಾ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳನ್ನು ಸಂದರ್ಶಿಸಿ, ಅಲ್ಲಿಯ ವಿಸ್ತಾರವಾದ ವ್ಯಾಪಾರ ಕೇಂದ್ರಗಳನ್ನು ಆಯ್ದುಕೊಂಡು ಅವುಗಳನ್ನು ಕ್ರಯಕ್ಕೆ ಪಡೆದ ಕೂಡಲೇ ಪ್ರತಿಯೊಂದು ಪಟ್ಟಣದಲ್ಲಿಯೂ ತನ್ನ ಕಾರ್ಖಾನೆಯ ಶಾಖೋಪಶಾಖೆಗಳನ್ನು ತೆರೆಯಬೇಕೆಂದು ಅವನ ಅಭಿಲಾಷೆಯಾಗಿತ್ತು. ಆದರೆ ದೈವವು ಬೇರೆಯೇ ಬಗೆಯಿತು.

(ಮು ಜಾ.)

ಪಾತಃಕಟ್ಟಿ ವೈದ್ಯ

ವಿಷೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧಿ. ಉಪಯೋಗಿಸಿ ನೋಡಿ
ಕ್ರಯ ಬಾಟ್ಲಿ 1ಕ್ಕೆ ರೂ 1-0-0

ಗುಹ್ಯರೋಗ ನಿವಾರಿಣೀ ತೈಲ
Anti-Veneral Oil
(A. V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ಪರೀಕ್ಷಿತ ಔಷಧಿ. ಕುಟುಂಬ ಪಾರಂಪರ್ಯದ ಈ ಕಠಿನ ರೋಗವು ಗುಣವಾಗುವುದು. ಸ್ತ್ರೀರೋಗಿಗಳೂ ಹೊಟ್ಟೆಯ ವ್ಯಾಧಿಗಳುಳ್ಳವರು ವೈದ್ಯನಂತೆ ತೆಗೆದುಕೊಳ್ಳಬಹುದು.

8 ದಿವಸಗಳ ಬಾಟ್ಲಿ 1ಕ್ಕೆ ರೂ 2-8-0

ಕೆ. ವಿ. ಕೃಷ್ಣನ್,
ಕಲ್ಲಾಯಿ ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಕಣ್ಣಿನ ಪರೆ.

"ಐ—ಸನ್" ಎಂಬ ನೇತ್ರಭಾಸ್ಕರೌಷಧವು ಕಣ್ಣುಪರೆ ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತ್ರಿ ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ—
Hary yasyam, Panchpota, Beng

LOOK SHARP! LOOK AHEAD!

Murdeshwar's Banking Institute.

Pioneer Institute on the WestCoast

Opens out Careers for Business men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE.

For further particulars apply to:—

D. R. Murdeshwar,
Dip. Econ; F. R. Econ; S. (Lond.)
Principal.
Ganapathy High School Street,
Mangalore.

ಬೇಕಾಗಿದ್ದಾರೆ.

ನಿರುದ್ಯೋಗಿಗಳಾದ, ಉತ್ಸಾಹಿ ತರುಣರು ನಮ್ಮ ಬ್ಲ್ಯಾಕ ಬೋರ್ಡ್ಸ್ ವಿಕ್ರಯಿಸುವುದಕ್ಕಾಗಿ ಬೇಕಾಗಿದ್ದಾರೆ. ತಿಂಗಳಿಗೆ ರೂಪಾಯಿ 80/-ಸಂಬಳ. ಸೆಕ್ಯುರಿಟಿ ಇಲ್ಲ. ಕಟಲಾಗು ಧರ್ಮಾರ್ಥ.

ಇಂಗ್ಲಿಷಿನಲ್ಲಿ ಇಲ್ಲಿಗೆ ಬರೆಯಿರಿ:—

National Trading Co.,
Jarabagan, Calcutta, (c)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ.
ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.
ದಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ.
ಕ್ರೌನ್ ⅛ ಆಕಾರದ 188 ಪುಟಗಳು.
ಉತ್ತಮ ತರಗತಿಯ ಹಾಸ್ಯ.
ಬೆಲೆ ರೂ. 1—4—0.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

ಇಲ್ಲಿಂದ ಪಡಕೊಳ್ಳಬಹುದು.

ನೋಟೀಸು.

ಬಾಲಗ್ರಹದಿಂದ ಮತ್ತು ಗ್ರಹಣಿಯಿಂದ ಮೃತ್ಯುವಿಗೆ ತುತ್ತಾಗುವ ಮಕ್ಕಳನ್ನು ಕಾಪಾಡಿಕೊಳ್ಳಿರಿ.

ಎಲ್ಲಾ ತರದ ಬಾಲಗ್ರಹ ಪೀಡೆಯಿಂದ ಸ್ಮೃತಿ ತಪ್ಪಿ ಮೂರ್ಛೆ ವಗೈರೆ ಹೊಂದಿರುವ ಬಾಲಕರಿಗೆ ಮತ್ತು ನಾನಾ ವಿಧದ ಗ್ರಹಣಿಗಳಿಗೆ ಮಂತ್ರ ಸಾಮರ್ಥ್ಯದಿಂದಲೂ ದಿವ್ಯ ಔಷಧಿಯಿಂದಲೂ ಚಿಕಿತ್ಸೆ ಮಾಡಿ ಗುಣಪಡಿಸುತ್ತೇವೆ. ತೀರಾ ಗರೀಬರಿಗೆ ಪ್ರತಿಫಲವಿಲ್ಲದೆನೇ ಔಷಧಿ ಕೊಡುತ್ತದೆ.

ವಿಳಾಸ—

ದೇವಣ್ಣ ನಾರಾಯಣ ಕಿಣಿ.
ಕೋರ್ಟು ರಸ್ತೆ, ಕಾಸರಗೋಡು.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ರಾಶಿ ಅಕ್ಕಿ ...	3— 8	3—12
ಹೊಸ ಮುಸ್ಸಿ ...	3—12	4— 6
ಹೊಸ ಗುಡ್ಡು ...	3— 8	4— 0
ಊರ ಅಪ್ಪಲ್ ಬೆಸ್ತಿಗೆ ...	4— 0	4—12
ರಂಗೂನು ಬೆ. ಗೋ. ಗೆಳ್ಳೆ...	6— 0	6— 4
ಎಲ್ಲೂರು ಬೆ. ಮು. ಗೆಳ್ಳೆ...	4— 2	4— 4
ಗೋಧಿ ಗೋಣಿ ಗೆಳ್ಳೆ ...	10— 0	12— 8
ತೊಗರಿ ಗೋಣಿ ಗೆಳ್ಳೆ ...	9— 6	10— 0
ಹುರುಳಿ ಗೋಣಿ ಗೆಳ್ಳೆ ...	6— 4	7— 8
ಕಡಲೆ ಗೋಣಿ ಗೆಳ್ಳೆ ...	8— 0	10— 8
ತೊಗರಿಬೇಳೆ ಗೋಣಿಗೆಳ್ಳೆ...	10— 0	17— 0
ಉದ್ದು ಗೋಣಿ ಗೆಳ್ಳೆ ...	8— 0	8— 8
ಹೆಸರು ಗೋಣಿ ಗೆಳ್ಳೆ ...	9— 0	9— 8
ಊರುಬೆಲ್ಲ ಖಂಡಿ ಗೆಳ್ಳೆ ...	32— 8	35— 0
ಉಪ್ಪು ಗೋಣಿ ಗೆಳ್ಳೆ ...	4— 8	5— 0
ಕೊಬ್ರಿ ಖಂಡಿ ಗೆಳ್ಳೆ ...	48— 0	55— 0
ಕೊಬ್ರಿ ಹಿಂಡಿ ಖಂಡಿ ಗೆಳ್ಳೆ...	21— 0	22— 0
ಎಳ್ಳಿಂಡಿ ಖಂಡಿ ಗೆಳ್ಳೆ ...	37— 8	40— 0
ಕೊಬ್ರಿ ಎಣ್ಣೆ ಮಣ ಗೆಳ್ಳೆ...	5—10	4—11
ಎಳ್ಳೆಣ್ಣೆ ಮಣ ಗೆಳ್ಳೆ ...	5— 2	5—10
ಚಿಮಿಣಿಎಣ್ಣೆ ಪೆಟ್ಟಿಗೆ ಗೆಳ್ಳೆ...	5— 7	5—7.
ಪೋರ್ಟ್ ಸಕ್ಕರೆ ಮು. ಗೆಳ್ಳೆ...	3— 6	3— 7
ಮೆಣಸು ...	4— 4	6— 4
ಸಾಬುವ ಮುಡಿ ಗೆಳ್ಳೆ ...	5—12	6— 0
ಕಾಳುಮೆಣಸು ಖ. ಗೆಳ್ಳೆ ...	115— 0	117— 8.
ಯೇಲಕ್ಕಿ ಮಣ ಗೆಳ್ಳೆ ...	22— 0	27— 0
ಗೇರುಬೀಜ ಮು. ಗೆಳ್ಳೆ ...	3— 8	8—12
ಕಚ್ಚಿಣ ಖಂಡಿ ಗೆಳ್ಳೆ ...	40— 0	40— 8
ತಾಂಬ್ರತಗಡು ಮು. ಗೆಳ್ಳೆ...	9— 0	9— 1
ತಾಂಬ್ರಪಾತ್ರಗಳು ಮು. ಗೆಳ್ಳೆ	12— 8	14— 0
ಚೀನಬೆಳ್ಳಿ ಸೇರು ಗೆಳ್ಳೆ ...	14—12	15— 0
ಹಿತ್ತಾಳೆ ತಗಡು ಮು. ಗೆಳ್ಳೆ...	8—12	9— 0
ಶವಸು ಗೆಳ್ಳೆ ...	22— 8	23—
ಹುಣಸೆ ಹುಳಿ ಖಂಡಿ ಗೆಳ್ಳೆ	25— 0	30— 0
ನೇಟಿವ್ ಕಾಫಿ ಖಂಡಿ ಗೆಳ್ಳೆ	170— 0	180— 0
ಫಟೇರಿ ಕಾಫಿ ಖಂಡಿ ಗೆಳ್ಳೆ...	250— 0	—
ಹಳೆ ಅಡಿಕೆ ...	100— 0	115— 0
ಹೊಸ ಅಡಿಕೆ ...	80— 0	95 — 0

ಶಾಲಿವಾಹನ ಬ. ಶಕ ೧೮೫೬ನೆಯ ಭಾವ ಸಂವತ್ಸರದ ಫಾಲ್ಗುಣ ಶು ೧೨ ಶನಿವಾರದಿಂದ ಫಾಲ್ಗುಣ ೧೮ ಶು ಶುಕ್ರವಾರದ ವರೆಗಿನ ಪಂಚಾಂಗ. (ಗ್ರಹಲಾಘವೀಯ ಸಿದ್ಧಾಂತ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಹಬ್ಬ
16	ಶನಿ	೧೩	೫೯	ಪುಷ್ಯ	೯	೨	* 20, ಹೋಳಿ
17	ರವಿ	೧೪	೬೦	ಆಶ್ಲೇಷಾ	೧೫	೩	
18	ಸೋಮ	೧೪	೪	ಮಘಾ	೨೧	೪	
19	ಕುಜ	೧೫	೯	ಪುಬ್ಬಾ	೨೮	೫	
20	ಬುಧ	೧೫	೧೪	ಉತ್ತರಾ	೪೪	೬	
21	ಗುರು	೧	೧೭	ಹಸ್ತಾ	೪೮	೭	
22	ಶುಕ್ರ	೨	೨೦	ಚಿತ್ತಾ	೪೧	೮	

Standard Furniture Co. Ltd

KALLAI, MALABAR

The BEST HOUSE for FURNITURE.

BRANCHES:—

Madras:—34—35, General Patters Road, Mount Road.

Trichinopoly:—11, Promenade Road, Cantt.

NEW ARRIVALS.

Medicines.

Dr. Schuessler's Twelve Tissue Remedies 5 gr. bot. As. 4/–
Homoeopathy Medicines 5 gr. bot. As. 5/—
Sugar of Milk Dr. Schwabe's original bot. 1 lb Rs. 2/–
Haarlem Oil—a world-renowned remedy As. 8/–per phial.
Dr. Haele's New Curative Earth—Radium Cure Rs. 4/–per lb.
Dr. Schwabe's other special remedies are always in stock

Please consult us for your requirements.

Kanarese Book a Family Guide to Biochemistry Re. 1/–
" Domestic Homoeopathy Re. 1-4/–

If you own these two Books you will be able to pick up treatment and administer Tissue & Homoeopathy Medicines successfully without consulting others.

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As. 2/6
Delightful in aroma, charming in appearance. Please try.

Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc. and stock—

Pipes and pipe fittings at cheap prices. Coir Mats and Mattings

Steadler Pencils and Stationeries.

We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.

For Further particulars please write to:—

Basel Mission Book & Tract Depository,
Mangalore, S. K. or Hubli, S. M.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನ ಮಾಂಗ್ಯಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—
ಕುಂತಳ ಕೌಮುದಿ ತೈಲ,
ಜೆನರಲ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲುಪಿದೊಡನೆ ಅಗತ್ಯವಾಗಿ ತಿಳಿಸಬೇಕು.

ತೆರೆಯಮರೆಯಲ್ಲಿ

ಅಥವಾ

ಅಂತರಂಗ.

ಲೇಖಕರು:— ಶ್ರೀ ಶಿವರಾಮ ಕಾರಂತರು.

೯ ಸಾವಿರಕ್ಕೊಬ್ಬಳು

ನಿಜಕ್ಕೂ ಅನ್ನುವರು ಅಂಥವಳಿರುವುದು ಸಾವಿರಕ್ಕೊಬ್ಬಳು—ಎಂದು. ದೇವಮ್ಮನಂಥವರು ಸಾವಿರಕ್ಕೊಬ್ಬಳೇ—ಅಂತ' ಇರಲೂ ಬಹುದು. ದೇವಮ್ಮಳು ಹುಟ್ಟುವಾಗ ತಕ್ಕ ಮಟ್ಟಿನ ರೂಪವನ್ನು ತೆಗೆದುಕೊಂಡೇ ಹುಟ್ಟಿದ್ದಳು ಸರಿ ಹುಟ್ಟಿ ೮–೧೦ ವರುಷಗಳಾಗುವುದರಲ್ಲಿಯೇ ಅವಳನ್ನು ಒಬ್ಬ ಗಂಡಯ್ಯನ ಕೊರಳಿಗೆ ಕಟ್ಟಿದರು ಈ ಗಂಡಯ್ಯನ ಹೆಸರು ಗುಂಡಪ್ಪನೆಂದು ಗುಂಡಪ್ಪನು ಮಂಗಳೂರಿನ ಛಾಪಖಾನೆಯೊಂದರಲ್ಲಿ ಮೊಳೆ ಜೋಡಿಸುವ ವೃತ್ತಿಯಲ್ಲಿರುವನು. ಅವನಿಗೀಗ ಇಪ್ಪತ್ತೆರಡು ವಯಸ್ಸು ತೀರ ಅಭಿಮಾನಿಯವನು ಅಭಿಮಾನವು ಇದ್ದಂತೆ ಶರೀರವೂ ಸ್ವಲ್ಪ ದುರ್ಬಲವಾಗಿತ್ತು ಅವನ ತಂದೆಯು ತಪ್ಪಿ ಅವನಿಗೆ ನಾಲ್ಕು ಬರಹಗಳನ್ನು ಹೇಳಿಕೊಟ್ಟುದರಿಂದ ಅವನ ವರ್ಗದ ಮಿಕ್ಕ ತರುಣರಂತೆ ಕೂಲಿದುಡಿತಕ್ಕೆ ಹೋಗದೆ ಅವನು ಛಾಪಖಾನೆಯಲ್ಲಿ ಮೊಳೆ ಜೋಡಿಸಲು ನಿಂತನು. ಈಗ ಅವನಿಗೆ ತಿಂಗಳೊಂದರ ಹದಿನೆರಡು ರೂಪಾಯಿಗಳ ಸಂಬಳ ಸಿಗುತ್ತಿತ್ತು. ಗುಂಡಪ್ಪನ ಸಂಸಾರ ಮಾತ್ರ ಹದಿನೆರಡರ ಇಮ್ಮಡಿಯದು. ಮನೆಯಲ್ಲಿ ಅವನ ಮುದುಕಿ ತಾಯಿ, ಕಾಲಿಲ್ಲದ ಒಬ್ಬಳು ಅಕ್ಕ-ಎಲ್ಲವೂ ಚೆನ್ನಾಗಿರುವ ದೇವಮ್ಮ ಇನ್ನು ಅವನದೇ ಎಂಬುವ ಕೂಸೊಂದು ಆದರೆ ದೇವಮ್ಮನು ಬಂದ ಬಳಿಕ ಮನೆಯ ಆಯವು ಊಟಕ್ಕೆ ಸಾಲದಾಯಿತಾದರೂ ಮನೆಯಲ್ಲಿ ಜಗಳಕ್ಕೆ ಕಡಿಮೆಯಿರಲಿಲ್ಲ. ದೇವಮ್ಮನು [illegible]ಬಾಗಿ, ಗುಂಡಪ್ಪನ ಪ್ರೀತಿಯ ಹಿರಿಭಾಗವು ಅವಳ ಮೇಲೆ ಹರಿಯಿತು ಕೂಸೊಂದು ಹುಟ್ಟಲು ಅದರ ಪಾಲಿಗೂ ಸ್ವಲ್ಪ ಸೇರಿತು ಇನ್ನುಳಿದ ಅಂಶ ಸಾಕಿ ಸಲಹಿದ ತಾಯಿಯ ಪಾಲಿಗೆ ಸಂದಿತು ಯಾರ ಪಾಲಿನದೂ ಪ್ರೀತಿ ಅವನ ಕುಂಟು ಅಕ್ಕನಿಗೆ ಸಲ್ಲುತ್ತಿತ್ತು ಅದೀಗ ಲೋಪವಾದದನ್ನು ಕಂಡು, ಅವಳು ತಮ್ಮನ ಮೇಲೆ ರೇಗತೊಡಗಿದಳು. ಸಾಲದುದಕ್ಕೆ ದೇವಮ್ಮನೊಡನೆ ದಿನಕ್ಕೆ ಹತ್ತು ಜಗಳಗಳನ್ನು ತೆಗೆಯತೊಡಗಿದಳು ಆದರೆ ದೇವಮ್ಮನಿಗೆ ಗ[illegible]ದಾಗ ಗಂಟಲಿನಿಂದ ಸ್ವರವೇ ಹೊರಡುತ್ತಿರಲಿಲ್ಲ ಹೊರಟರೂ ಅತ್ತಿಗೆಯ ದುಂಡುಧ್ವನಿ ಮುಂದೆ ಯಾರಿಗೂ ಅದು ಕೇಳಿಸುತ್ತಿರಲಿಲ್ಲ ಬಾಯಿಜಗಳದಲ್ಲಿ ಸ್ಪರ್ಧಿಗಳಾಗಿ ನಿಲ್ಲಬೇಕಾದವರಿಗೆ ಕಂಠಸಾಧ್ಯದ ಶಕ್ತಿ ಬಲವಾಗಿರಬೇಕಲ್ಲವೇ! ಅದು ದೇವಮ್ಮನಿಗಿರಲಿಲ್ಲ. ಆದುದರಿಂದ ತಾನು ಕೇಳಿದುದನ್ನೆಲ್ಲ, ತನ್ನ ಯಜಮಾನನು ಮನೆಗೆ ಬಂದೊಡನೆಯೇ ಅವನ ಕಿವಿಯ ಮೇಲೆ ಹಾಕುವಳು ಇತ್ತ ಗುಂಡಪ್ಪನಿಗೆ ನಿಜಕ್ಕೂ ಮನೆಯ ಹರಟೆಯು ಬೇಕಿದ್ದಿರಲಿಲ್ಲ ಅವನಿಗೆ ಅಕ್ಕನ ಮೇಲೆ ಪ್ರೇಮವೂ ಇದ್ದಿತು ಇತ್ತ ಹಗಲೆಲ್ಲಾ ಛಾಪಖಾನೆಯಲ್ಲಿ ಸೀಸದ ಮೊಳೆಗಳನ್ನು ಜೋಡಿಸಿ ಜೋಡಿಸಿ ಮಾತು ಬರುವಂತೆ ಮಾಡುವುದರಲ್ಲೇ ಅವನು ಊಜಿ ಬಿಟ್ಟ ಮಾವಿನ ಹಣ್ಣಿನಂತಾಗುತ್ತಿದ್ದನು. ತಿರುಗಿ ಮನೆಗೆ ಬಂದೊಡನೆಯೇ—ಪಂಚಾಯತ ಕೋರ್ಟನ್ನು ತೆರೆಯಲು ಅವನು ಸಿದ್ಧನಿರಲಿಲ್ಲ ಹಲವು ದಿವಸಗಳನ್ನು ನ್ಯಾಯ ತೀರ್ಮಾನದಲ್ಲಿ ಕಳೆದನು ತಪ್ಪು ಅಧಿಕವಾಗಿ ಅಕ್ಕನದೆಂದು ತೋರಿತು ಆದರೇನು? ಸುಮ್ಮನಾದನು ಒಡಹುಟ್ಟಿದವಳನ್ನು ತಾಯಿಯ ಕಣ್ಣಮುಂದೆಯೇ ಗದರಿಸಲಾರದೆ ಹೋದನು ಇತ್ತ ಅವಳ ಪಾಲಿಗೆ ಒಂದು ಕಾಲೂ ಇದ್ದಿಲ್ಲ ತನಗೇಕೆ ಆ ಪಾಪವೆಂದು ಸುಮ್ಮನೆ ಕುಳಿತನು ಆದರೆ ಒಂದು ದಿನ ಅವಳು ತಾನಾಗಿ 'ನಿಮ್ಮ ಕಂಟಿ ಬೇಡ ನಾನು ನನ್ನ ಮಾವನ ಮನೆಗೆ ಹೋಗುತ್ತೇನೆ' ಎಂದು ಹೊರಟೇ ಹೋದಳು. 'ಅಕ್ಕ, ಸಿಟ್ಟಾಗಿ ಹೊರಟು ಹೋಗಬೇಡ' ಎನ್ನುವ ಮನಸ್ಸು ಗುಂಡಪ್ಪನಿಗೆ ಬಂದಿತು ಆದರೆ ಅದು ಸಂಬಳದ ದಿನ ಸಂಜೆ ಬಂದುದು ಬಂದ ಸಂಬಳ ೧೨ ರೂಪಾಯಿಗಳು ಮಾತ್ರ ಎಂದು ತಿಳಿದುದರಿಂದ ಸುಮ್ಮನಾದನು.

ಮುಂದೆ ಅವನ ಸಂಸಾರದಲ್ಲಿ ಜಗಳಗಳಿದ್ದಿಲ್ಲ ಆದರೆ ತನ್ನ ಕಿಸೆಯು ಸಂಸಾರಕ್ಕೆ ಸಾಲದೆಂಬುದು ತಿಳಿಯುತ್ತ ಬಂದಿತು ಅಂತು ಸುದೈವಕ್ಕೋ ದುರ್ದೈವಕ್ಕೋ ಸರಿಯಾಗಿ ಅವನ ಮುದಿ ತಾಯಿಯು ಸತ್ತಳು. ಅವಳ ಬೊಜ್ಜಕ್ಕೆಂದು ಇಷ್ಟು ಸಾಲವನ್ನು ಮಾಡಿದನು. ಅವಳ ಮರಣದ ಬಳಿಕ ಒಂದು ಹಿಡಿ ಅಕ್ಕಿಯು ಉಳಿತಾಯವಾದರೂ, ಬೊಜ್ಜಕ್ಕೆ ಮಾಡಿದ ಸಾಲ ತೀರಿಸಲು ತಿಂಗಳಿಗೆ ಎರಡು ರೂಪಾಯಿಗಳನ್ನು ತೆಗೆದಿರಿಸಬೇಕಾಗುತ್ತಿತ್ತು

ಈಗ ದೇವಮ್ಮನಿಗೆ ಇಪ್ಪತ್ತು ವಯಸ್ಸು, ಗುಂಡಪ್ಪನಿಗೆ ಇಪ್ಪತ್ತೆಂಟು. ಅವರ ಸಂಸಾರದಲ್ಲಿ ಮೂವರು ಕೂಸುಗಳು ಜೀವನವನ್ನು ಧರಿಸಿದುವು. ಗಂಡನಿಗಿಷ್ಟು ಅನ್ನ ಮಾಡಿ ಬಡಿಸಿದ ಬಳಿಕ ತಿರುಗಿ ಅನ್ನ ಮಾಡುವ ಗಳಿಗೆಯ ತನಕ ಈ ಮಕ್ಕಳ ಚಾಕರಿಯಾಗುತ್ತಿತ್ತು ಇತ್ತ ದಿನೇ ದಿನೇ ಜೀವನವು ಕಠಿಣವಾಗುತ್ತ ಬಂದಿತು. ಗುಂಡಪ್ಪನು ಸಂಜೆಗೆ ಬಂದವನೇ ಮಕ್ಕಳನ್ನು ತುಸು ಹೊತ್ತು ಆಡಿಸುವನು ಬಳಿಕ ಹೆಂಡತಿಯ ಬಳಿಯಲ್ಲಿ, ಅಡುಗೆಯ ಒಲೆಯ ಮುಂದೆ ಕುಳಿತು 'ಹೌದೇ ನಾನು ಒಬ್ಬನೇ ದಣಿದು ದುಡಿದರೆ ಏನೆಂದು ದುಡಿದೇನು' ಈ ತಿಂಗಳಿನಿಂದ ಹದಿನೈದು ರೂಪಾಯಿ ಕೊಡುತ್ತಿದ್ದಾರೆ ಆದರೆ ಸಾಮಾನುಗಳ ಬೆಲೆ ದುಬಾರಿಯಾಗಿ, ಒಂದು ಹೊತ್ತಿಗೂ ಸಾಲದು.' ಎನ್ನುವನು ಹೇಗಾದರೂ ಮಾಡಿ ದೇವಮ್ಮನನ್ನು ದುಡಿತಕ್ಕೆ ಕಳುಹಿಸುವ ಮನವು ಅವನದು ಇಬ್ಬರೂ ದುಡಿದರೆ ದುಂಡಗಿನ ಊಟಗಳಾದರೂ ಸಿಗುತ್ತಿದ್ದುವಲ್ಲ ಎಂಬ ಆಸೆ ಆದರೆ ಅವಳನ್ನು ದುಡಿತಕ್ಕೆ ಕಳುಹಿಸಬೇಕೆಂದರೆ, ಮನೆಯಲ್ಲಿ ಕುಳಿತು ನೂಲುವುದಕ್ಕಲ್ಲ ನೇಯುವುದಕ್ಕಲ್ಲ ಮಂಗಳೂರಿನ ಹಲವು ಗೇರು ಬೀಜದ ಕಾರಖಾನೆಗಳೊಂದರಲ್ಲಿ ಕೆಲಸಕ್ಕೆ ಊರಿನಲ್ಲಿ ಗೇರು ಬೀಜವೋ, ಕಾಫಿಯೋ, ಹಂಚೋ ಎಂದು ಎಷ್ಟೋ ಕಾರಖಾನೆಗಳಿವೆ ಅವುಗಳಲ್ಲಿ ಎಷ್ಟು ಜನರು ದುಡಿಯುತ್ತಲಿಲ್ಲ ಅವರಲ್ಲಿಯೂ ಸ್ತ್ರೀಯರಿಲ್ಲವೇ? ಒಂದು ದಿನ ಗುಂಡಪ್ಪನೇ ಅದನ್ನು ಬಾಯ್ಬಿಟ್ಟು ಹೇಳಿದನು 'ದೇವಮ್ಮ, [illegible]ನೀನೇ ನೋಡು, ಒಂದು ಹೊತ್ತು ಊಟಕ್ಕಿಲ್ಲದೆ ಬಿದ್ದಿರುವುದು ಲೇಸೇ, ಇಲ್ಲವೇ—ಊರಿನ ಇತರರಂತೆ ನೀನೂ ಕಾರಖಾನೆಗೆ ಹೋಗುವುದು ಒಳಿತೇ?' ಎಂದು ಕೇಳಿದನು ದೇವಮ್ಮನಿಗೆ ದುಡಿಯಬಾರದೆಂದು ಇರಲಿಲ್ಲ ಹೊಟ್ಟೆ ತುಂಬಾ ಉಣಬಾರದು ಎಂಬ ಹಟವು ಇರಲಿಲ್ಲ ಆದರೆ ಸಾವಿರಾರು ಹೆಂಗುಸರ ಜತೆಯಲ್ಲಿ ಕಾರಖಾನೆಯಲ್ಲಿ ಕುಳಿತು ಕೈ ಮಸಿ ಮಾಡಿಕೊಳ್ಳುವ ಕೆಲಸಗಳಾವುವೂ ಒಪ್ಪುತ್ತಿರಲಿಲ್ಲ ಅವಳು ಮೌನವಾದುದನ್ನು ಕಂಡು [illegible] ಸುಮ್ಮನಾಗಿ ಬಿಟ್ಟ' ಎನ್ನುವನು ಗುಂಡಪ್ಪ ಇವಳು ಚಿಕ್ಕ [illegible]ವನ್ನು ಬಿಟ್ಟು [illegible], ಅಲ್ಲಿಗೆ ಹೋಗಿ ನಾನು ಆ ಅಮ್ಮಣ್ಣಿಯನ್ನು ಕಾಣಬೇಕೇ ಎಂದಳು ಅಮ್ಮಣ್ಣಿಯೆಂದರೆ ಕಾರ್ಖಾನೆಯ [illegible] ಆ ಪ್ರಾಂತ್ಯಕ್ಕೆಲ್ಲ ಗೊತ್ತು ಅವಳು ನಾನಾ ತೆರದಿಂದ ದುಡಿಯ ಒಲ್ಲೆನೆಂದೇ ಅವಳ ಕೀರ್ತಿ ಹೀಗೆ ಮಾತನಾಡಿದುದನ್ನು ಕೇಳಿದೊಡನೆಯೇ ಗುಂಡಪ್ಪನು ತಾಳ್ಮೆಗೆಟ್ಟು—ಅಮ್ಮಣ್ಣಿಯ ಥರದವರು ಸಾವಿರಕ್ಕೊಬ್ಬರು [illegible] ಹಾಗಿರುತ್ತಾರೇನು? ಎಂದು ಬಿಟ್ಟನು ದೇವಮ್ಮನು ಸುಮ್ಮನಾದಳು ಇನ್ನು ಒಂದು ತಿಂಗಳ ವರೆಗೆ ಆ ಪ್ರಸ್ತಾಪವು ಬರಲಿಲ್ಲ ತಿರುಗಿ [illegible] ಗಳ [illegible] ತಿಂಗಳ ಅವಸ್ಥೆ [illegible] —ತ ಪತಾಪಿಗಳ ಉಂಡರ ಮಕ್ಕಳಿಗೆ [illegible] ಮಕ್ಕಳ ಎಷ್ಟರ ತಂದೆತಾಯಿಗಳಿಗಿಲ್ಲ—ಎಂಬ [illegible] ದೇವಮ್ಮನೂ ಯೋಚಿಸ ತೊಡಗಿದಳು ತಾನಾದರೂ ಅರೆ ಹೊಟ್ಟೆಯಲ್ಲಿರಬಹುದು. [illegible]ತ್ತವೂ ಬೆಳೆಯುತ್ತಿರುವ ಮಕ್ಕಳನ್ನು ಅರೆಹೊಟ್ಟೆ ಕೆಡೆಯಬಾರದೆಂದು ಆಂತು ತಾನಾಗಿ ಅದೃಷ್ಟ ಪರೀಕ್ಷೆ ಮಾಡುವೆನೆಂದು 'ನಾಳೆಯಿಂದ ಗೇರು ಬೀಜದ ಕಾರಖಾನೆಗೆ ಹೋಗುತ್ತೇನೆ' ಎಂದಳು ಗುಂಡಪ್ಪನಿಗೆ ತುಂಬಾ ಆನಂದವಾಯಿತು

ಅಡಿದ ಮಾತಿನಂತೆ ದೇವಮ್ಮನು ಕಾರಖಾನೆಗೆ ಕೆಲಸವನ್ನು ಹುಡುಕಿ ಹೋದಳು ಅವಳ ಸುದೈವ ಮೊದಲಿಗೇ ಕಾಲಿರಿಸಿದುದು ಬೋಳೂರಿನ ಒಂದು ಗೇರು ಬೀಜದ ಕಾರಖಾನೆ ಅಲ್ಲಿಯ ಮೇಸ್ತ್ರಿಯು ನಂದೆ [illegible]ತೊಡನೆಯೇ ಅವನು ಯಜಮಾನರ ಬಳಿಗೋಡಿ ಸನ್ನಿ ತಿಳಿಸಿ ಅವಳನ್ನು ಸೇರಿಸಿಕೊಂಡನು ಆ ಸಮಯದಲ್ಲಿ ಗೇರು ಬೀಜಕ್ಕೆ ವಿಶೇಷ ಧಾರಣೆಯಾಗಿತ್ತು ಕಾರಖಾನೆಯವರು ಹಗಲು ರಾತ್ರಿ ಕೆಲಸ ಮಾಡಬೇಕೆಂದು ಎಣಿಸಿದ್ದರು. ದೇವಮ್ಮನಿಗೆ ಹಾಗಾಗಿ ನೌಕರಿ ಸಿಕ್ಕಿತು. ತಿಂಗಳಿಗೆ ಎಂಟು ರೂಪಾಯಿಗಳ ವೇತನವು ನಿಶ್ಚಯವಾಯಿತು

ಅಂದಿನಿಂದ ನಿತ್ಯವೂ ಅವಳ ಕಾರಖಾನೆಗೆ ಬೆಳಗ್ಗೆ ಎದ್ದು ನಡೆಯತೊಡಗಿದಳು ಇಷ್ಟು ಅಡುಗೆ ಮಾಡಿ ಗುಂಡಪ್ಪನಿಗೂ ಮಕ್ಕಳಿಗೂ ಬಡಿಸಿ, ತಾನಿಷ್ಟು ಬುತ್ತಿ ಹಿಡಿದು ಹೊರಟರೆ ಬರುವಾಗ ಸಂಜೆಯಾಗುವುದು ಅಲ್ಲಿಯ ತನಕ ಮನೆಯ ಯಜಮಾನಿಕೆಯು ಅವಳ ಏಳು ವರ್ಷದ ಹೆಣ್ಣು ಕೂಸಿಗೆ. ಅದರೊತ್ತಿನವಕ್ಕೆ ಐದು ವರುಷ, ಮೂರು ವರುಷಗಳು ಅವೆರಡು ಮಕ್ಕಳನ್ನು ಆಡಿಸುವುದು ಉಣಿಸುವುದು ಆ ಹಿರಿ ಹುಡುಗಿಯ ಜವಾಬುದಾರಿ ಹೇಗೋ ಏದ್ದಾಡಿ ಆ ಮಗುವು ಅಷ್ಟನ್ನು ಮಾಡಿಸುತ್ತಿದ್ದಳು ಅಂತು ತಾಯಿಯಾಗಿ, ಮಕ್ಕಳೊಡನೆ ಸುಖ ಪಡುವ ಯೋಗ ದೇವಮ್ಮಗೆ ತಪ್ಪಿದರೂ, ಅವುಗಳಿಗೆ ಹೊಟ್ಟೆ ತುಂಬಾ ಉಣಿಸಸ್ಸೀಯುವ ಸುಖ ದೊರೆಯಿತು ಒಂದು ದಿನವಂತೂ ಅವಳ ನಡುವಿನ ಮಗು ಆಟವಾಡುತ್ತಿದ್ದಾಗ ಬಾವಿಗೆ ಬಿದ್ದಿತಂತೆ ಕೊನೆಗೆ ನೆರೆಕರೆಯವರು ಕೂಡಲೇ ಕಂಡು [illegible]ದಕ್ಕಾಯಿತು. ಇಲ್ಲದಿದ್ದರೆ ದೇವಮ್ಮನು ಮರಳುವಾಗ ಒಂದಕ್ಕೆ ಎರಡಾಗುತ್ತಿತ್ತು. ಅಂದಿನಿಂದ ತಂದೆತಾಯಿಗಳಿಬ್ಬರಿಗೂ ಯೋಚನೆ ಬಲವಾಗುತ್ತಿತ್ತು ಕಿರಿ ಮಗುವಿಗೆ 'ಮನೆಯಿಂದ ಹೊರಗೆ ಕಾಲಿರಿಸಿದರೆ ಚರ್ಮ ಸುಲಿಯುತ್ತೇನೆ' ಎಂದರು ಕಿರಿ ಮಗುವಿಗೆ ಏನೋ ಇಷ್ಟು ಔಷಧ ಕೊಡತೊಡಗಿದರು ಅದರಿಂದ ಆ ಕೂಸು ಹಗಲೆಲ್ಲಾ ಅಧಿಕವಾಗಿ ನಿದ್ದೆ ಮಾಡುತ್ತಿತ್ತು. ಉಳಿದುದು ಹಿರಿಹುಡುಗಿ ಅವಳಿಗೆ 'ಏಳು' ವಯಸ್ಸಿಂದ ಮೇಲೆ 'ತಿಳಿವಿಲ್ಲವೇ?'

ಒಂದೆರಡು ತಿಂಗಳಲ್ಲಿ ದೇವಮ್ಮನಿಗೆ ಇದು ನಿತ್ಯಜೀವನವಾಗಿ ಕಂಡಿತು ಮಕ್ಕಳಿಂದ ದೂರವಿರುವುದಾಗಲಿ, ಕಾರಖಾನೆಯ ಇದ್ದಲು ಹುಡಿಯನ್ನು ಸೇವಿಸುವುದಾಗಲೀ, ಜೀವನದ ಒಂದು ಅವಶ್ಯವೆನಿಸಿದ ಅಂಗವೆಂದು ತೋರಿತು 'ಏನೇ ಆಗಲಿ, ಊಟಕ್ಕಾದರೂ ಚಿಂತೆಯಿಲ್ಲವಲ್ಲ' ಎಂಬುದು ಅವಳ ಸಮಾಧಾನ ಇತ್ತ ಒಬ್ಬಳಾದರೆ ಬೇಸರ ಸುತ್ತಮುತ್ತ, ಎಲ್ಲಿ ನೋಡಿದರೆ ಅಲ್ಲಿ—ಇದೇ ರೀತಿ ದುಡಿಯುವ ಸಾವಿರಾರು ಮಂದಿ ಗೆಳತಿಯರಿರಲು ಅವಳ ಭಾಗ್ಯವೇನು ಹೆಚ್ಚು? ಇಲ್ಲವೆ ಕಡಿಮೆ.' ಹೀಗಾಗಿ ನಿಜಕ್ಕೂ ಇದೇ ಸುಖಜೀವನವೆಂದು ಅವಳು ತಿಳಿಯುವುದರಲ್ಲಿದ್ದಳು ಆದರೆ ಅಷ್ಟರಲ್ಲಿ ಒಂದು ದಿನ ವಿಚಿತ್ರ ಕಥೆಯೊಂದು ನಡೆಯಿತು ಇವಳು ಗೇರು ಬೀಜಗಳನ್ನು ಸುಲಿಯುತ್ತಿರುವಾಗ ಇವಳ ಸಾಲಿನಲ್ಲಿ ಕುಳಿತ ಒತ್ತಿನ ಹೆಂಗುಸೊಬ್ಬಳು, 'ಮೇಸ್ತ್ರಿಯವರು ಸಂಜೆ ಕೆಲಸವಾದೊಡನೆ ತನಗೆ ಸಿಕ್ಕಬೇಕು ಎಂದಿದ್ದಾರೆ' ಎಂದಳು ಏಕೆಂದು ಅವಳಿಗೆ ತಿಳಿಯಲಿಲ್ಲ ಇದೇನು ಸಂಬಳದ ದಿನವಲ್ಲ ಅದಕ್ಕೆ 'ಏಕಂತೆ' ಎಂದಳು ಆಗವಳು 'ಸಂಬಳ ಹೆಚ್ಚಿಸುವುದಕ್ಕಂತೆ' ಎಂದಳು [illegible] ಆನಂದವಾಯಿತು ಅವಳಿಗೆ

ಸಂಜೆ ಕೆಲಸ ಮುಗಿಯುತ್ತಲೇ ಮೇಸ್ತ್ರಿಯ ಆಫೀಸಿಗೆ ಹೋದಳು ಅವನೊಬ್ಬನೇ ಕುಳಿತಿದ್ದನು ಇವಳ ಒಳ[illegible] ನಗುಮೊಗದಿಂದ [illegible] ಎಂದಿನಿಂದ ತಿಂಗಳಿಗೆ [illegible] ಮಾಡಿದೆ ಎಂದನು ಅವಳಿಗೆ ತನ್ನ ಭಾಗ್ಯವನ್ನು [illegible] ಆನಂದವು ಉಕ್ಕೇರಿತು ಅಷ್ಟರಲ್ಲಿ ಅವನು 'ಏಕೆ ದ[illegible] ದೆಯಾ?' ಎಂದನು ಮುಂದಿನ ಅವನ ಮಾತುಗಳನ್ನು ಒರೆಯಲಿಕ್ಕಿಲ್ಲ ದೇವಮ್ಮನಿಗೆ ಸಿಟ್ಟು ಬಂದಿತು ಅಳು ಬಂದಿತು ಆವೇಶದಿಂದ ಹೊರಗೆ ಬಂದಳು ಅಲ್ಲಿ, ಅವಳಿಗೆ ಸುದ್ದಿ ತಿಳಿಸಿದ ಗೆಳತಿಯ ಭೇಟಿಯಾಯಿತು ಅವಳು ಇವಳ ಕಣ್ಣೀರನ್ನು ಕಂಡು 'ಏಕೆ ಅಳುತ್ತಿ' ಎಂದಳು. ದೇವಮ್ಮನು ಎಲ್ಲ ಚರಿತ್ರೆಯನ್ನು ವಿವರಿಸಿದಳು 'ಈ [illegible] ನಂತೆ ಸಿಗಬೇಕೆ?' ಎಂದಳು [illegible] ಇವಳನ್ನು ಸಮಾಧಾನಪಡಿಸಿದಳು - 'ದೇವಮ್ಮ, ನಾವು [illegible] ಹೊಟ್ಟೆ ತುಂಬಬೇಕಾದರೆ ಏನನ್ನು [illegible] ಸಿಕ್ಕಿತ್ತಮ್ಮನವರೇ, ಸಾವಿತ್ರಿ [illegible] ವಳ. [illegible] ಮ್ಮಗೆ ಸಿಟ್ಟು ಬಂದಿತು [illegible] ಮಾತು ಅಮ್ಮಣ್ಣಿ ಮಂತ್ರಿ ನಾನೂ [illegible] 'ಕೇನು?' ಈ ಕಾರ್ಖಾನೆಯಲ್ಲಿ [illegible] ಇದ್ದರೆ ಇನ್ನೊಂದಿದೆ' ಎಂದಳು. ಗೆಳತಿಯ [illegible] ಬೇರೆ ಕಾರ್ಖಾನೆಗಳು ಸ್ವರ್ಗವಲ್ಲ ಇದು ನರಕವಲ್ಲ ಮನುಷ್ಯರಿರುವಲ್ಲಿ ಇದು ತಪ್ಪದು ಅಮ್ಮಣ್ಣಿಯೆನ್ನುವೆ ಅವಳೇನು ಮಾಡಬೇಕು? ಮನೆಯಲ್ಲಿ ಆರ ಮಕ್ಕಳಿರುವರು! ಅವುಗಳಿಗೆ ತಿನ್ನುವುದಕ್ಕೆ ಮಣ್ಣನ್ನು ಕೊಡುವುದೇನು?' ಎಂದಳು ಆ ಬಳಿಕ [illegible] ಹಲವು ಜನರ ಕಥೆ ಹೇಳಿದಳು ಕೊನೆಗೆ ತನ್ನ ಹೆಸರನ್ನು [illegible] ಶಿಶುವೃತೆಯರ ಸಾಲಿಗೆ ಸೇರಿಸಿದಳು ಕೇಳುತ್ತ ಕೇಳುತ್ತ ದೇವಮ್ಮನ ಅಳು ನಿಂತಿತು ಅವಳು ತಬ್ಬಿಬ್ಬಾದಳು. ತಾನು ಕೇಳಿದ ಚರಿತ್ರೆಗಳನ್ನು ಅಲ್ಲಗಳೆಯಲು ಸಾಧ್ಯವಿರಲಿಲ್ಲ ಅವರಿಗಿಂತ ತಾನು ಹೆಚ್ಚಿಗೆ ಎನ್ನಲು ಧೈರ್ಯವಿರಲಿಲ್ಲ ಇತ್ತ ತಿಂಗಳಿಗೆ ಎರಡು ರೂಪಾಯಿಗಳು ಹೆಚ್ಚಿಗೆ ಸಿಕ್ಕಿದರೆ ಕಹಿಯೆನಿಸಲೂ ಇಲ್ಲ ಇನ್ನು ಮುಂದೆ ಅಮ್ಮಣ್ಣಿಯಂತೆ ಆರೆಂಟು ಮಕ್ಕಳಾದರೆ ಅವುಗಳನ್ನು ಸಾಕುವುದು ಹೇಗೆ ಎಂದೂ ಹೊಳೆಯಿತು ಕೊನೆಗೆ ಗೆಳತಿ [illegible] ವಾಣಿಗಳು 'ನಾವೇನು ಸಾವಿತ್ರಿಯರೇ, ಸೀತಾಮ್ಮನವರೇ' ಎಂದ ಮಾತು ಕೇಳಿಸಿತು.

ಅವಳು ಕಣ್ಣಿಗೆ ಮುಗ್ಧಳಾಗಿ ನಿಂತ ಗಳಿಗೆಯಲ್ಲಿ, ಅದೇ ಮೇಸ್ತ್ರಿಯು ಹೊರಕ್ಕೆ ಬಂದನು. ತನ್ನ ಪ್ರೀತಿಯ ಕೈಯನ್ನು ಕೊಟ್ಟು ಅವಳನ್ನು ಒಳಕ್ಕೆ ಒಯ್ದನು.

ಕೆಲವು ಸಮಯವು ಹೀಗೆ ಸಂದಿತು ದೇವಮ್ಮನ ಅಂತರಂಗವು ಅವಳ ಒಡಲಲ್ಲೇ ಇದ್ದಿತು ಅಥವಾ ಹೆಚ್ಚೆಂದರೆ ಆ ಕಾರ್ಖಾನೆಯ ಹತ್ತೆಂಟು ಗೆಳತಿಯರಿಗೆ ತಿಳಿದಿತ್ತು ಯಾರೂ ಅವಳನ್ನು ದೂರುವಂತಿದ್ದಿಲ್ಲ. ತಮ್ಮ ಬಾಳ್ವೆಯ ಒಂದು ಅಂಗವ[illegible] ಮಾನಗೇಡಿತನವೆಂದು ಅವರು ತಿಳಿದಿದ್ದರು

ಒಂದು ದಿನ ಅದೆಂಥ ದಿನವೋ! ಬಂದಿತು. ದೇವಮ್ಮನ ಸಂಸಾರದಲ್ಲಿ ನಾಲ್ಕನೆಯ ಜನನವಾಯಿತು ಗುಂಡಪ್ಪ

(೧೪ನೇ ಪುಟಕ್ಕೆ ಮುಂದುವರಿಯುವುದು)

ಬೆಳ್ಳಾರಿ ಮತ್ತು ಅನಂತಪುರಗಳಲ್ಲಿ ಕ್ಷಾಮ!!!

ಜನಜಾನುವಾರುಗಳ ಅಸಹನೀಯ ಕಷ್ಟಗಳು!

ಮದ್ರಾಸು ಗವರ್ನರರ ಪ್ರವಾಸ ವಾರ್ತೆ.

ಮದ್ರಾಸು ಗವರ್ನರರಾದ ಲೋರ್ಡ್ ಎರ್ಸ್ಕಿನರವರು ಬೆಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ತಲೆದೋರಿರುವ ಕ್ಷಾಮದ ಹಾವಳಿಯನ್ನು ನೋಡಿಕೊಂಡು ಬರುವುದಕ್ಕಾಗಿ ಅತ್ತ ತೆರಳಿರುವರು ಗವರ್ನರರು ಹೋದಹೋದಲ್ಲಿ ಅವರನ್ನು ಅಲ್ಲಲ್ಲಿಯ ಜನಸಮುದಾಯವು ಭೇಟಿಮಾಡಿ,ತಮ್ಮ ಕಷ್ಟಪರಂಪರೆಗಳನ್ನು ಹೇಳಿಕೊಂಡಿತು ಸಾವಿರಾರು ಜನರು ಅನ್ನಾಹಾರವಿಲ್ಲದೆ ಬಹು ಸಂಕಷ್ಟಕ್ಕೀಡಾಗಿರುವುದೂ ಜಾನುವಾರುಗಳು ಮನುಷ್ಯರಿಗಿಂತಲೂ ಕಷ್ಟದಿಂದಿರುವುದೂ ಎಲ್ಲೆಲ್ಲೂ ನೆಲೆನಿಂತಿರುವ ಹೃದಯವಿದೀರ್ಣ ದೃಶ್ಯವಾಗಿದೆ ಗೂಟಿ,ಮತ್ತು ಪೆನುಕೊಂಡಾ ಡಿವಿಜನಿಗೆ ಗವರ್ನರರು ಹೋದಾಗ ಅಲ್ಲಿ ಸಾವಿರಾರು ಜನರು ಕಷ್ಟಕ್ಕೆ ತುತ್ತಾಗಿರುವುದನ್ನು ಕಂಡರು ಗವರ್ನರರು ವಿಚಾರಿಸಲಾಗಿ ಅಲ್ಲಿಯ ಕೆಲಸಗಾರರಿಗೆ ಸಾಕಷ್ಟು ಸಂಬಳವನ್ನು ಕೊಡಲಾಗದೆ ಜನರಿಗೆ ಸಾಕಷ್ಟು ಅನ್ನಾಹಾರಗಳು ದೊರೆಯುವುದೇ ದುರ್ಲಭವಾಗಿದೆಯೆಂದು ತಿಳಿದುಬಂತು ನೀರಾವರಿ ಕೆಲಸಗಳನ್ನು ಮುಂದರಿಸಿ, ತುಂಗಭದ್ರಾ ಪ್ರೊಜೆಕ್ಟಿನ ಕೆಲಸವನ್ನು ಪೂರ್ಣವಾಗಿ ಕೈಕೊಂಡು ಸರಕಾರವು ತಮ್ಮನ್ನು ರಕ್ಷಿಸುವ ಏರ್ಪಾಡನ್ನು ಶೀಘ್ರವಾಗಿ ಮಾಡಬೇಕೆಂದು ಜನರು ಮೊರೆಯಿಟ್ಟರು ಗೂಟಿ ಡಿವಿಜನ್ ಎಂದರೆ ಸಾಧಾರಣ ಸಮಯದಲ್ಲಿ ಸರಕಾರಕ್ಕೆ ೨ ಲಕ್ಷ ರೂಪಾಯಿಗಳಷ್ಟು ಕಂದಾಯ ತೆರುವ ಪ್ರದೇಶ ಅಲ್ಲಿ ಕೃಷಿಕರು ಮಹಾಕಷ್ಟಕ್ಕೆ ಬಲಿಬಿದ್ದಿರುವರು ಕ್ಷಾಮಗಳು ಪದೇ ಪದೇ ಬರುತ್ತಿರುವುದರಿಂದ ಸರಿಯಾದ ಬೆಳೆಯಾಗದೆ ರೈತರಲ್ಲಿ ಚಿಕ್ಕಾಸೂ ಉಳಿಯದಂತಾಗಿದೆ ಸಾಕಷ್ಟು ನೀರು ಇಲ್ಲದೆ ಆ ಪ್ರದೇಶವೆಲ್ಲ ಜನರ ವಾಸಕ್ಕೆ ಅಯೋಗ್ಯವೆಂಬ ಭಾವನೆಯು ತಲೆದೋರುವಂತಾಗಿದೆ ಪಟ್ಟಣಗಳಲ್ಲಿನ ಜನರಿಗೆ ಉಡಲು ಸರಿಯಾದ ವಸ್ತ್ರವಿಲ್ಲ ಅತ್ಯ ಅಲ್ಪ ಸಂಪಾದನೆಯಿಂದಾಗಿ ತಮಗೆ ಸಾಕಷ್ಟು ಉಡಿಗೆ ತೊಡಿಗೆಗಳನ್ನು ಮಾಡಿಕೊಳ್ಳಲಾಗುತ್ತಿಲ್ಲವೆಂದು ಜನರು ಗವರ್ನರರಿಗೆ ತಿಳಿಸಿರುತ್ತಾರೆ ಗುಂಟಕಲ್ಲಿಗೆ ಗವರ್ನರರು ಹೋಗಿ ಅಲ್ಲಿಯ ಕೊಕ್ಕರಚೇಡು ಕ್ಷಾಮ ಕಾಮಗಾರಿಗಳನ್ನು ಕಂಡರು ಅಲ್ಲಿ ನಾಲ್ಕು ಆಶ್ರಯಗಳು ಸಂಸ್ಥಾಪಿಸಲ್ಪಟ್ಟಿವೆ ಸುಮಾರು ನಾಲ್ಕು ಸಾವಿರ ಕೆಲಸಗಾರರಿಗೆ ಕಲ್ಲು ಒಡೆಯುವ, ಮಾರ್ಗ ಸರಿ ಮಾಡುವ ಇವೇ ಮೊದಲಾದ ಕೆಲಸಗಳನ್ನು ಕೊಡಲಾಗಿದೆ ಕೊಕ್ಕರ ಚೇಡಿಯಲ್ಲಿ ೧೫೦೦ ಕೆಲಸಗಾರರನ್ನು ನೇಮಕ ಮಾಡಲಾಗಿದೆ ಇವರಲ್ಲಿ ೫೬೦ ಮಂದಿ ಪುರುಷರು ೨೨೪ ಮಂದಿ ಸ್ತ್ರೀಯರು ೧೨೨ ಮಕ್ಕಳು ಬೆಳ್ಳಾರಿ ಜಿಲ್ಲೆಯನ್ನು ಗವರ್ನರರು ಸಂದರ್ಶಿಸಿದಾಗ ಅಲ್ಲಿಯ ಭೂಮಿಯೆಲ್ಲಾ ಬಂಜರಾಗಿ ಬಿದ್ದುದು ಕಂಡು ಬಂದಿತು ಒಂದು ಕಾಲದಲ್ಲಿ ಬಹುವಿಧದ ಬೆಳೆಗಳನ್ನು ಬೆಳೆಯುತ್ತಿದ್ದ ಸ್ಥಳವು ಈಗ ಯಾರಿಗೂ ಬೇಡವಾದ ಮರುಭೂಮಿಯಂತಾಗಿದೆ ನೀರು ಇಲ್ಲದೆ ಕೃಷಿಯಾಗುವುದಿಲ್ಲ ಕೃಷಿಯಿಲ್ಲದೆ ಜನರಿಗೆ ಕೆಲಸವಿಲ್ಲ ಹಸುರು ಭೂಮಿಯನ್ನು ಕಾಣುವುದೇ ಪ್ರಯಾಸಕರವಾಗಿದೆ ಒಂದು ಮೂಲೆಯಲ್ಲಿ ಒಂದು ಗದ್ದೆಯಿದ್ದರೆ ಇನ್ನೊಂದು ಗದ್ದೆಯು ದೂರದ ಇನ್ನೊಂದು ಮೂಲೆಯಲ್ಲಿದೆ ನಡುವೆ ಇರುವ ಭೂಮಿಯು ನಿಷ್ಪ್ರಯೋಜಕವಾಗಿರುತ್ತದೆ

ಅನಂತಪುರ ಜಿಲ್ಲೆಯ ಪೆನುಕೊಂಡಾ ಡಿವಜನಿನಲ್ಲಿ ಭಯಂಕರ ಕ್ಷಾಮವು ತಲೆದೋರಿದೆ ಈ ತಾಲೂಕಿನಲ್ಲಿ ಸಂಚರಿಸಿದರೆ ಜನರು ಪಡುವ ಕಷ್ಟದ ಅರಿವುಂಟಾಗುತ್ತದೆ ಪೆನುಕೊಂಡದಲ್ಲಿ ಕ್ಷಾಮವು ಒಂದು ಗಾದೆಯ ವಿಷಯವಾಗಿದೆ. ಹಾಗಿದ್ದರೂ ಈ ವರ್ಷ ಜನರು ಬಹಳ ಕಷ್ಟಕ್ಕೀಡಾಗಿರುತ್ತಾರೆ. ಪೆಟ್ಟಣವಾಸಿಗಳಿಗೆ ಕುಡಿಯುವ ನೀರು ದೊರೆಯದೆ ಉಂಟಾಗುತ್ತಿರುವ ಹಾವಳಿಯು ಅವರ್ಣನೀಯವಿದೆ ಹಲವು ಕಡೆಗಳಲ್ಲಿ ನೀರನ್ನು ಮೂರು ನಾಲ್ಕು ಮೈಲುಗಳ ದೂರದಿಂದ ಹೊತ್ತು ತರುತ್ತಿರುವರು ಕೆಲವು ಕಡೆಗಳಲ್ಲಿ ನೀರಿಗೂ ಕ್ರಯ ಕೊಡಬೇಕಾಗಿ ಬಂದಿದೆ ಒಂದು ಸಣ್ಣ ಕುಟುಂಬಕ್ಕೆ ಒಂದು ತಿಂಗಳಿಗೆ ೬ ರೂಪಾಯಿಯ ನೀರು ಬೇಕಾಗಿದೆ ಈ ಪರಿಸ್ಥಿತಿಯಲ್ಲಿ ಬಡವರ ಮತ್ತು ಅಲ್ಪ ಸಂಬಳ ಪಡೆಯುವ ಕೆಲಸಗಾರರ ಸ್ಥಿತಿಯೇನೆಂದು ನಾವೇ ಊಹಿಸಿಕೊಳ್ಳಬಹುದು ಪೋಲೀಸ್ ಖಾತೆಯಲ್ಲಿರುವವರಿಗೂ ಮತ್ತು ಲೋಕಲ್ ಬೋರ್ಡ್ ಖಾತೆಗಳಲ್ಲೂ ಇರುವವರಿಗೂ ನೀರಿನ ಎಲೊವೆನ್ಸನ್ನು ಕೊಡಲಾಗುತ್ತದೆ

ನೀರಿನ ಅಭಾವದಿಂದ ಕಷ್ಟಪಡುತ್ತಿರುವವರು ಇಡೀ ರಾತ್ರಿಯನ್ನೆಲ್ಲ ದೂರದೂರದಿಂದ ನೀರನ್ನು ಹೊರುವುದರಲ್ಲೇ ಕಳೆಯುತ್ತಾರೆ ಹೀಗಿರುವಾಗ ಜನರು ಸ್ನಾನಕ್ಕೂ ಬಟ್ಟೆ ಒಗೆಯುವುದಕ್ಕೂ ಎಷ್ಟು ನೀರನ್ನುಪಯೋಗಿಸುವರೆಂದು ನಾವೇ ನಿರ್ಧರಿಸಬಹುದು ರೈತರನೇಕರು ದನಕರುಗಳನ್ನು ಸಾಕಲು ಸಮರ್ಥರಾಗದೆ ಅವುಗಳನ್ನು ಸಿಕ್ಕಿದ ಬೆಲೆಗೆ ಮಾರುತ್ತಿರುವರು ಎರಡು ನೂರು ರೂಪಾಯಿಗಳಿಗೂ ದನಗಳನ್ನು ಮಾರಿದ ಉದಾಹರಣೆಗಳುಂಟು ಮಳೆಯು ಬಾರದಿರುವುದರಿಂದ ಬೆಳೆಯು ಬೆಳೆಯುವುದಂತೂ ಇಲ್ಲವೇ ಇಲ್ಲ ಮಡಕಶಿರಾ ಎಂಬಲ್ಲಿ ೧೫೦೦ ಜನರನ್ನು ಕೆರೆಯ ಗೋಡೆಯನ್ನು ಕಟ್ಟುವ ಕೆಲಸದಲ್ಲಿ ನೇಮಿಸಲಾಗಿದೆ

ಪೆನುಕೊಂಡಾ ಮತ್ತು ಹಿಂದೂಪುರಗಳಲ್ಲಿ ಸಂಪೂರ್ಣ ಕಂದಾಯವನ್ನು ಮಾಫಿ ಮಾಡಲಾಗಿದೆಯಾದರೂ ಜನರ ಕಷ್ಟವು ಕಡಮೆಯಾಗಿಲ್ಲ ಕೊಡುವರೆ ಹಣವಿಲ್ಲ, ಬದರ ಮೇಲೆ ಕೊಳ್ಳಲೂ ಧನವಿಲ್ಲ ಮೇಲಾಗಿ ಎರಡು ಪ್ರಾಂತ್ಯಗಳಲ್ಲಿಯೂ ಪ್ಲೇಗು ತಲೆದೋರಿದೆ ಕೂಲಿಗಳಲ್ಲಿ ಅನೇಕರು ಮೃತರಾಗಿ ಈ ಮಹಾರೋಗವು ಎಂದು ಭಯಂಕರವಾಗಿ ವ್ಯಾಪಿಸುವುದೋ ಎಂಬ ಭಯವುಂಟಾಗಿದೆ ಅನೇಕರು ಮನೆಮಾರುಗಳನ್ನು ತೊರೆದು ಜೀವದಾಶೆಯಿಂದ ಪರಪ್ರಾಂತ್ಯಗಳಿಗೆ ನಡೆದಿರುವರು ಕುಮುದಾವತಿ ಪ್ರೊಜೆಕ್ಟಿನ ಕೆಲಸವನ್ನು ಕೈಗೊಂಡು ಸರಕಾರವು ಜನರಿಗೆ ಕೆಲಸವನ್ನೊದಗಿಸಿ ಕೊಡಬೇಕೆಂದು ಪ್ರಾರ್ಥಿಸಲಾಗಿದೆ

ಬೋರ್ಡ್ ಒಫ್ ರೆವೆನ್ಯೂ ಇದರ ಮೆಂಬರರೂ ಫಮಿನ್ ಕಮಿಶನರರೂ ಆದ ದಿವಾನ್ ಬಹದೂರ್ ಎಸ್ ಗೋಪಾಲಸ್ವಾಮಿ ಐಯ್ಯಂಗಾರರು ಪುಲ್‌ವೆಂದ್ಲ ತಾಲೂಕಿನ ಕ್ಷಾಮದ ಪರಿಸ್ಥಿತಿಯನ್ನು ವಿಮರ್ಶಿಸುತ್ತಾ ಆ ತಾ ಕಿಗೆ ಸರಕಾರವು ಕೊಟ್ಟ ಶೀಕಡಾ ...ರಪ ... ರಿಯಾಯಿತಿಯು ಧಾರಾಳವಾಯಿತು ..., ಮುಂದಕ್ಕೆ ಆ ತಾಲೂಕಿಗೆ ಹೆಚ್ಚಿನ ರಿಯಾಯಿತಿಯು ಬೇಡವೆಂದೂ ಹೇಳಿದರು ರಾಯಚೋಟಿ ತಾಲೂಕಿನಲ್ಲಿಯ ನೀರಿನಭಾವವನ್ನು ಕುರಿತಾಗಿ ಹೇಳುತ್ತಾ ಅವರು ಅಲ್ಲಿ ನೀರಾವರಿ ಕೆಲಸಗಳನ್ನಾರಂಭಿಸಿದೆ ಎಂದಿರುವರು

ಮದ್ರಾಸಿನ ಶಾಸನಸಭೆಯಲ್ಲಿ

ಮದ್ಯಪಾನ ನಿಷೇಧ.

ಶ್ರೀ ಕೆ ಕೋಟಿ ರೆಡ್ಡಿ –ಕಳೆದ ಹದಿನೈದು ವರ್ಷಗಳಿಂದ ಮದ್ಯಪಾನ ನಿಷೇಧವನ್ನು ಪೂರ್ಣವಾಗಿ ನಿಷೇಧಿಸುವುದೇ ಸರಕಾರದ ಧ್ಯೇಯವೆಂದು ಸರಕಾರವು ಹೇಳುತ್ತಿದೆ ಆದರೆ ಇಷ್ಟರ ತನಕ ಅದರ ವಾಗ್ದಾನವು ನೆರವೇರುತ್ತ ಬಂದುದು ಕಂಡುಬರುವುದಿಲ್ಲ ಇದರ ಗತಿಯೇನು?

ಮಿ। ಯಾಕೂಬ್ ಹಸನ್ –ಇಪ್ಪತ್ತು ವರ್ಷಗಳೊಳಗೆ ಈ ಮದ್ಯಪಾನದ ರೋಗವನ್ನು ಪೂರ್ಣವಾಗಿ ನಿರೋಧಿಸುವ ಧ್ಯೇಯವು ತನ್ನಲ್ಲಿದೆಯೆಂದು ಸರಕಾರವು ಹೇಳಿದೆ ಈಗ ೧೫ ವರ್ಷಗಳು ದಾಟಿದರೂ ಸರಕಾರವು ಏನನ್ನೂ ಮಾಡಿಲ್ಲ ಈ ರೋಗವು ಜನರ ಬಡತನಕ್ಕೆ ಕಾರಣವಾಗುತ್ತಿದೆ ಏನು ಮಾಡಿದಿರಿ ಎಂದು ಪ್ರಶ್ನಿಸಿದೊಡನೆ ಸಂಬಂಧಪಟ್ಟ ಮಂತ್ರಿಗಳು ಉಪಾಯಾಂತರದಿಂದ ಆ ವಿಷಯವನ್ನೇ ನೋಲಿತ್ತುವುದಿಲ್ಲ

ಶ್ರೀ ಎ ಬಿ ಶೆಟ್ಟಿ –ಈ ವಿಷಯವಾಗಿ ಸರಕಾರವು ಏಕೆ ಸುಮ್ಮಗಿದೆ? ಪ್ರಾರಂಭದಲ್ಲಿ ಅಲ್ಲಿ ಇಲ್ಲಿ ಒಂದೊಂದಾಗಿ ಮದ್ಯದಂಗಡಿಗಳನ್ನು ಮುಚ್ಚಲಾಯಿತು ಆ ಮೇಲೆ ಆ ಕ್ರಮವನ್ನು ಮೆಲ್ಲ ಮೆಲ್ಲನೆ ಬಿಡುತ್ತಾ ಬಂದರು ಮಂತ್ರಿವರ್ಯರು ಹೇಳುವುದೇನು?

ಶ್ರೀ ಆರ್ ಶ್ರೀನಿವಾಸನ್ –ಈಗ ಲೈಸನ್ಸ್ ಕೊಡುವ ಕ್ರಮದಲ್ಲೇ ನ್ಯೂನ್ಯಾತಿರೇಕಗಳಿವೆ ಜನರಿಗೆ ಅಗ್ಗವಾದ ಉತ್ತಮ ಪಾನೀಯವು ಬೇಕಾಗಿದೆ

ಮಿ। ಎಚ್ ಎಸ್ ಕ್ರೀಷ್ನ –ಈಗೀಗ ನಮ್ಮಲ್ಲಿ ಒಂದು ಕ್ರಮವಾಗಿ ಹೋಗಿದೆ,–ಮದ್ಯಪಾನವನ್ನು ಪೂರ್ಣವಾಗಿ ನಿಷೇಧಿಸಬೇಕೆಂದು ಪ್ರತಿಯೊಬ್ಬರೂ ಹೇಳುತ್ತಾರೆ ಆದರೆ ನಿಜ ಸಂಗತಿಯನ್ನು ಅವರು ತಿಳಿಯುವುದೇ ಇಲ್ಲ ಪೂರ್ಣ ಮದ್ಯಪಾನ ನಿರೋಧವು ಯಾವ ದೇಶದೇಶದಲ್ಲೂ ಜಯಶೀಲವಾಗಲಿಲ್ಲ ಜನರ ಅಭಿಪ್ರಾಯವೇನೆಂದು ನಾವು ಮೊದಲು ತಿಳಿಯುವ ನಾವು ಮೊದಲು ಜನರಿಗೆ ಬೋಧಿಸುವ ಆ ಮೇಲೆ ಸರಕಾರಕ್ಕೆ ಹೇಳುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರುಬೀಜದ ಶರಾಯಿಯನ್ನು ತಯಾರಿಸುವ ಕಾರ್ಖಾನೆಯನ್ನು ತೆರೆದು ಜನರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡುವ

ಮಿ। ಮಹಮ್ಮದ್ ಷಮ್ನಾಡರು –ಮಿ। ಯಾಕೂಬ್ ಹಸನರ ಮಾತಿಗೆ ನಾನು ಒಪ್ಪಲಾರೆ ತಾನೊಬ್ಬ ಮುಸ್ಲಿಮ ಧುರೀಣನೆಂದು ಇತರೇ ಹೇಳಿಕೊಳ್ಳುತ್ತಿದ್ದಾರೆ ಇವರು ಕೊಟ್ಟ ಸೂಚನೆಗಳಾವುವೂ ರಚನಾತ್ಮಕವಾಗಿಲ್ಲ ಮದ್ಯಪಾನ ನಿರೋಧ ಮಾಡಿದರೆ ಉಂಟಾಗುವ ನಷ್ಟವನ್ನು ಭರ್ತಿ ಮಾಡುವ ಉಪಾಯವೇನೆಂದು ಇವರು ಏಕೆ ಹೇಳಲಿಲ್ಲ?

ಶ್ರೀ ಎ ರಂಗನಾಥ ಮುದಲಿಯಾರ್ –ಕುಡಿಕರ ಮತ್ತು ಕುಡಿಕರಲ್ಲದವರ ವೋಟುಗಳನ್ನು ನಾವು ಪಡೆದರೆ ಮದ್ಯಪಾನ ನಿರೋಧವನ್ನು ಎಲ್ಲರೂ ಸಮರ್ಥಿಸುವುದು ಖಂಡಿತ ಮಾಲೀಕಬರೆಂದಂತೆ ಅದಕ್ಕೆ ಸಂಬಂಧಪಟ್ಟ ಮಂತ್ರಿವರ್ಯರು ಮನಸ್ಸು ಕೊಟ್ಟು ಕೆಲಸ ಮಾಡಿದರೆ ಎಲ್ಲವೂ ಸರಿಹೋಗುತ್ತದೆ ಸರ್ ಎ ಪಿ ಪಾತ್ರೋರವರು ಎಕ್ಸೈಜ್ ಖಾತೆಗೆ ಮಂತ್ರಿಯಾಗಿದ್ದಾಗ ಪೂರ್ಣ ನಿರೋಧವನ್ನು ಪುಷ್ಟೀಕರಿಸಿ ಮಾತನಾಡಿದ್ದರು. ಈಗ ಸದ್ದಡಗಿದೆ ಈಗ ಶ್ರೀ। ಕುಮಾರಸ್ವಾಮಿ ರೆಡ್ಡಿಯವರು ಅವರ ಮಂತ್ರಿಯಾಗಿದ್ದಾರೆ ಅವರೇನೋ “ಈ ವಿಷಯದಲಿ ಸರಕಾರವು ತಲೆ ಹಾಕದು” ಎನ್ನುತ್ತಿರುವ

ಶ್ರೀ। ಕುಮಾರಸ್ವಾಮಿ ರೆಡ್ಡಿಯವರು.– ‘ಛೆ, ಛೆ, ಹಾಗೆ ಹೇಳಬೇಡಿ’ ನಾನು ಹಾಗೆನ್ನಲಿಲ್ಲ

ಶ್ರೀ ರಂಗನಾಥ ಮುದಲಿಯಾರರು:– ಹಾಗಾದರೆ ನಿಮ್ಮ ಅಭಿಪ್ರಾಯವೇನು?–ಹೇಳಿ

ಮಿ। ಅಬ್ದುಲ್ ಹಮೀದ್ ಖಾನ್.– ಸರಕಾರವು ಈ ವಿಷಯವಾಗಿ ಏನೂ ಕೆಲಸ ಮಾಡಿರುವುದಿಲ್ಲ ಮಿ। ಮಹಮದ್ ಷಮ್ನಾಡರ ಮನೋಪರಿವರ್ತನೆಯನ್ನು ನೋಡಿ ಆಶ್ಚರ್ಯವಾಗುತ್ತಿದೆ ಇಸ್ಲಾಂ ಮತಸ್ಥರಾಗಿ ಅವರು ಹೀಗೆ ಹೇಳುತ್ತಿರುವುದು ಆಶ್ಚರ್ಯಕರ

ಮಿ। ಮಹಮ್ಮದ್ ಷಮ್ನಾಡರು –ಮುಸ್ಲಿಮರು ಮಾತ್ರ ಮದ್ಯಪಾನ ಮಾಡಬಾರದೆಂದು ಪೈಗಂಬರರು ಹೇಳಿರುವರು ಬೇರೆ ಮತಗಳಿಗೆ ಅವರು ಹೇಳಲಿಲ್ಲ’ (ಎಲ್ಲರೂ ನಕ್ಕರು)

ಮಿ। ಅಬ್ದುಲ್ ಹಮೀದ್ ಖಾನ್ – ಓಹೋ ಹಾಗೋ! ಹಾಗಾದರೆ ನೀವು ಪೈಗಂಬರರ ಉಪದೇಶಗಳನ್ನು ಸರಿಯಾಗಿ ಓದಿರುವುದಿಲ್ಲ ಮುಸ್ಲಿಮರಿಗೆ ಮಾತ್ರ ಈ ಉಪದೇಶವಲ್ಲ ಇಡೀ ಜಗತ್ತಿಗೇ ಆಗಿದೆ

ಮಂತ್ರಿಗಳ ಪ್ರತಿಪಾದನೆ.

ಮಾನ್ಯ ಶ್ರೀ। ಎಸ್ ಕುಮಾರ ಸ್ವಾಮಿ ರೆಡ್ಡಿಯಾರರು –ನೀವೆಲ್ಲಾ ಮಾತನಾಡಿದುದನ್ನು ನಾನು ಕೇಳಿದೆ ಮದ್ಯಪಾನ ನಿರೋಧದ ಕುರಿತು ಸರಕಾರವು ನಿರ್ಧಾರಪೂರ್ವಕವಾಗಿ ಮೊದಲೇ ಹೇಳಿರುತ್ತದೆ

ಮದ್ಯಪಾನನಿಷೇಧವೆಂದೊಡನೆ ಎಲ್ಲಾ ಗುತ್ತಿಗೆಗಳನ್ನೂ ಮದ್ಯದಂಗಡಿಗಳನ್ನೂ ಪೂರ್ಣ ಮುಚ್ಚಿ ಬಿಡುವುದಲ್ಲ ಅವುಗಳನ್ನು ಮುಚ್ಚಿದರೆ ಜನರು ಕಳ್ಳಾಟಿಕೆಯಿಂದ ಶರಾಬು ತಯಾರಿಸುತ್ತಾರೆ ಹಾಗಾದರೆ ಸರಕಾರದ ಜೇಬು ತುಂಬುವುದು ಹೋಗಿ ಗೂಂಡಾಗಳ ಚೀಲ ತುಂಬುತ್ತದೆ ಕ್ಷಾಮಪೀಡಿತ ಸ್ಥಳಗಳಲ್ಲಿ ನಿರೋಧಿಸಬೇಕೆಂಬ ಸೂಚನೆಯನ್ನು ವಿಮರ್ಶಿಸಲಾಗುವುದು ಎಕ್ಸೈಜ್ ಖಾತೆಯನ್ನು ಸಣ್ಣದು ಮಾಡಬೇಕಂತೆ ಅದು ಮಾಧ ವರ್ತನೆ ಹೆಚ್ಚು ಲಾಭ ಸಿಗುವ ಖಾತೆಗಳಲ್ಲಿ ಇದೊಂದು ದೌಷ್ಟ್ಯವನ್ನು ನಿಲ್ಲಿಸುವುದರಲ್ಲಿ ಸರಕಾರವು ಹೆಚ್ಚು ಚಿಕ್ಕಪಡುವುದು

ಸರಕಾರವು ಅಲ್ಲಲ್ಲ ಪರಿಶೋಧಿಸುತ್ತಾ ಇದೆ ಯಾವ ಪ್ರಯೋಗವು ಜಯಶೀಲವಾಗುತ್ತದೋ ಅದನ್ನು ಎತ್ತಿ ಹಿಡಿಯುವುದು ಸರಕಾರದ ನಿಯಮ ಹೊಸ ಹೊಸ ಡಿಸ್ಟಿಲ್ಲೆರಿಗಳನ್ನು ಸ್ಥಾಪಿಸಬೇಕೆಂಬ ಸೂಚನೆಯಿದೆ ಈಗ ಮಲಬಾರಿನಲ್ಲಿ ಕೆಲವುಗಳನ್ನು ಸ್ಥಾಪಿಸಿ ಪರೀಕ್ಷಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಒಂದನ್ನು ಸ್ಥಾಪಿಸಬೇಕೆಂಬ ಸೂಚನೆಯನ್ನೂ ಆಲೋಚಿಸಲಾಗುವುದು ಸೇಲಮಿನಲ್ಲಿ ಮದ್ಯದಂಗಡಿಗಳನ್ನು ತೆರೆಯಲಾಗಿದೆಯೆಂಬುದು ಸಹಜ ಜನರಿಗೆ ಅವುಗಳು ಬೇಕೆಂಬ ಬಗ್ಗೆ ಸಾಕ್ಷಿಗಳು ದೊರೆತಿರುವುದರಿಂದಲೇ ಹಾಗೆ ಮಾಡಲಾಯಿತು ಹೊಸ ಸಾಕ್ಷ್ಯಗಳು ಅದಕ್ಕೆ ವಿರೋಧವಾಗಿ ಬಂದರೆ ನಾವು ಆ ಬಗ್ಗೆ ಪುನಃ ಯೋಚಿಸುವೆವು. ಜನರ ಅಭಿಮತವೇನೆಂದು ಸರಕಾರವು ಯಾವಾಗಲೂ ನೋಡಿಕೊಳ್ಳುವುದು.

ಹೀಗಾಗಿ ಶ್ರೀ ಕೆ ಕೋಟಿ ರೆಡ್ಡಿಯವರ ಎಕ್ಸೈಜ್ ಆಫೀಸರರ ಸಂಬಳಕ್ಕೆ ಬೇರ್ಪಡಿಸಿದ ರೂ ೧೫,೬೦೦೦ರಲ್ಲಿ ನೂರರ ಕಡಿತ ಕುರಿತು ತಂದ ಠರಾವು ಬಿದ್ದುಹೋಯಿತು ಇದು ಬಿದ್ದುಹೋಗುವಾಗ ರೆಡ್ಡಿಯವರು ಹಾಜರಿರಲಿಲ್ಲ ಈ ಠರಾವು ಹಿಂದೆಗೆಯಲ್ಪಟ್ಟುದೂ ಇಲ್ಲ. ಆ ಮೇಲೆ ಎಕ್ಸೈಜ್ ಖಾತೆಗೆ ಪ್ರತ್ಯೇಕಿಸಿಟ್ಟ ಹಣವು ಮಂಜೂರುಗೊಂಡಿತು.

ಈ ಜಗತ್ತಿನಲ್ಲಿ ಹೋರಾಟವು ಅಗತ್ಯ. ಸೆಣಸಾಟವು ಬೇಕಾದುದು. ಮಾತ್ರ ಸುಳ್ಳಿಗೆ ಎದೆಯೊಡ್ಡಿ ಸತ್ಯದ ಸ್ಥಾಪನೆಯನ್ನು ಮಾಡಬೇಕು.

ರವೀಂದ್ರನಾಥ ಠಾಗೂರ್.

ಸ್ಫುಟವಿಚಾರಗಳು

ಎಂಟನೇ ಕರ್ಣಾಟಕ ರಾಜಕೀಯ ಪರಿಷತ್ತನ್ನು

ಮಂಗಳೂರಲ್ಲಿ ಎಪ್ರಿಲ್ ಕೊನೆಯ ವಾರದಲ್ಲಿ ಜರಗಿಸಬೇಕೆಂದು ಕಳೆದ ಆದಿತ್ಯವಾರ 'ಕೊಂಗ್ರೆಸ್ ಗೃಹ'ದಲ್ಲಿ . ಸ್ವ ಸ ಯಾಗಿರುತ್ತದೆಂದು ತಿಳಿಸುವಾಗ, ಈ ಬಗ್ಗೆ ಇ ಲಿ ಒಂದೆರಡು ಸೂಚನೆಗಳನ್ನು ಕೊಡುವುದು ಅಪ್ರಕೃತವಾಗಲಾರದು. ಪರಿಷತ್ತು ಏನೋ ಜರಗಲೇಬೇಕಾದುದು. ಎಲ್ಲ ಕರ್ನಾಟಕಸ್ಥರೂ ಒಂದಾಗಿ ನೆರೆದು, ಒ ದು, ಪ್ರಾಂತ್ಯದ ಮುಂದಿನ ಹೆಜ್ಜೆಗಳನ್ನು ನಿಶ್ಚೈಸಲೇಬೇಕಾದುದು. ಆದರೆ ಅಂದು ದಿವಂಗತ ಜೆ. ಎಂ. ಸೇನಗುಪ್ತರ ಅಧ್ಯಕ್ಷತೆಯಲ್ಲಿ ಜರಗಿದ ರಾಜಕೀಯ ಪರಿಷತ್ತಿನ ಹೆಚ್ಚಿನ ಕಾಲವನ್ನು ಮಾತಿನಲ್ಲೇ ಕಳೆದಂತೆ ಆಗಬಾರದ ... ಮಾತಿನ ಯುಗವು ಮಾಯವಾಗಿದೆ. ಈಗ ಬೇಕಾದುದು — ನಿಶ್ಚಯದಿಂದ, ದೃಢತೆಯಿಂದ ಮಾಡಬೇಕಾದ ಕಾರ್ಯಗಳು. ತಮ್ಮ ತಮ್ಮ ವಾಗ್ವೈಖರಿಯನ್ನು ತೋರಿಸಿ ಮೆರೆಯುವ ಹವ್ಯಾಸವನ್ನು ಬಿಗಿಹಿಡಿದು, ಶಾಂತತಾರೀತಿಯಿಂದ, ಕಾರ್ಯಕಾರೀ ಪ್ರೋಗ್ರಾಂಗಳನ್ನು ಮಾಡಿ, ಈ ಪರಿಷತ್ತನ್ನು ಅಂತ್ಯಗೊಳಿಸಬೇಕಾಗಿದೆ. ಮಾತುಗಾರರ ಸಂಖ್ಯೆಯನ್ನು ಕಡಮೆಮಾಡಿದಷ್ಟು ಉತ್ತಮ. ರಚನಾಬದ್ಧವಾದ ಹತ್ತು ಸೂಚನೆಗಳು ಸಾಕು ... ಬಿಲ್ಲದ ನೂರ ಠರಾವುಗಳು ಬೇಡ. ಈ ಸಲದ ಪರಿಷತ್ತಿನಲ್ಲಿ ಕರ್ನಾಟಕ ಏಕೀಕರಣ ಪ್ರಶ್ನೆಯು ಮುಂದಾಗಿ ಬರುತ್ತು, ಪರಿಷತ್ತಿನವರು ಆ ಬಗ್ಗೆ ಸಾಕಷ್ಟು ಪ್ರಚಾರಕಾರ್ಯವನ್ನು ನಡೆಸುವರೆಂದು ಹಾರೈಸುತ್ತೇವೆ.

ಚಕ್ರವರ್ತಿಗಳ ರಜತೋತ್ಸವ ಕಮಿಟಿಯು

ಇದೇ ತಾ ೬ನೇ ದಿನ ಗವರ್ನಮೆಂಟ್ ಕೊಲಿಜಿನಲ್ಲಿ ಜಿಲ್ಲಾ ಕಲೆಕ್ಟರರಾದ ಮಿ। ಗೋನ್ ದೊರೆಗಳ ನೇತೃತ್ವದಲ್ಲಿ ಜರಗಿ ನಿಧಿಸಂಗ್ರಹಕಾರ್ಯಾರಂಭವಾಯಿತೆಂಬುದ ಸಂತೋಷಕರವೇ. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ನಾಣ್ಣುಡಿಯಂತೆ ನಮ್ಮ ಅರಸರು ನಮಗೆ ದೈವಸಂಭೂತರೇ ಸರಿ. ಅದರಲ್ಲೂ ಜೋರ್ಜ್ ಚಕ್ರವರ್ತಿಗಳು ಅನುಪಮ ಗುಣಭರಿತರು. ಪ್ರಜಾ ಹಿತೈಷಿಗಳು. ಅಂಥವರು ೨೫ ವರ್ಷಗಳ ಕಾಲ ರಾಜ್ಯಭಾರ ಮಾಡಿದುದರ ಸಮಾರಂಭವನ್ನು ಪ್ರಜೆಗಳು ನಿಸ್ಸೀಮ ಭಕ್ತಿಯಿಂದ ಆಚರಿಸಬೇಕಾಗಿದೆ. ಆ ಬಗ್ಗೆ ಯಾರೂ ಏನೂ ಹೇಳುವಂತಿಲ್ಲ. ಜಿಲ್ಲಾ ಕಲೆಕ್ಟರರಂತಹವರೇ ಈ ಕಮಿಟಿಯ ಮುಖಂಡತ್ವವನ್ನು ವಹಿಸಿರುವುದರಿಂದ ಜನರು ಅವರ ಕೇಳಿಕೆಗೆ ಒಡಂಬಟ್ಟು ತಮ್ಮಿಂದ ಸಾಧ್ಯವಿದ್ದಷ್ಟು ಕೊಡುವರೆಂಬುದು ವಾಸ್ತವ ವಿಷಯ. ನಮ್ಮ ಕಲೆಕ್ಟರರ ಸಾಹಸವೂ ನಾಗರಿಕರ ಪ್ರಯತ್ನವೂ ನಿಷ್ಫಲವಾಗಲಾರವು. ಅಷ್ಟು ಸಾಹಸಪಟ್ಟು, ಹಣಿಯ ಬೆವರನ್ನು ಕತ್ತಿನಲ್ಲಿ ಹರಿಸಿ ಸಂಗ್ರಹಿಸಿದ ದ್ರವ್ಯವನ್ನು ನಮ್ಮ ಜಿಲ್ಲೆಯೊಳಗೆ ಉಪಯೋಗಿಸಿದರಾಗದೇ? ನಮ್ಮದೇ ಹಣ ನಮಗೇ ವೆಚ್ಚವಾದಂತಾಗುವುದು "Cha ity begins at home" ಎಂದಿರುವಾಗ, ಆ ಹಣವು ನಮ್ಮಲ್ಲೇ ಉಳಿಯುವಂತೇರ್ಪಡಿಸಿದರಾಗದೇ? ಈ ವಿಷಯವಾಗಿ ಮಾನ್ಯ ಕಲೆಕ್ಟರರೊಡನೆ ವಿಚಾರಿಸಿದಾಗ 'ಅಂಥ ಭರವಸೆಯನ್ನು ಕೊಡುವುದು ಸಾಧ್ಯವಲ್ಲ' ಎಂದರು. ಈ ಮಾತಿನಿಂದಲೇ ನಮ್ಮ ಹಣದ ಗತಿಯು ಸ್ಪಷ್ಟವಾಗಿದೆ. ಹೀಗಿರುವಾಗ, ಸಂಬಂಧಪಟ್ಟವರು ಪೂರ್ಣವಾಗಿ ಅಲ್ಲದಿದ್ದರೂ ಹೆಚ್ಚಿನಂಶವನ್ನಾದರೂ ನಮ್ಮ ಜಿಲ್ಲೆಯಲ್ಲೇ ಉಳಿಸುವಂತೆ ವ್ಯವಸ್ಥೆ ಮಾಡುವರಾಗಿ ಆಶಿಸಿದವರಿದ್ದೇವೆ. ಅಲ್ಲದೆ ಅವರ ಸಾಹಸವು ಯಶಸ್ವಿಯಾಗಲೆಂದೂ ಬಯಸಿದವರಿದ್ದೇವೆ.

ಪಂಡಿತ ಜವಾಹರಲಾಲರ ಬಿಡುಗಡೆಯು–

ಪ್ರಶ್ನೆಯು ಸರಕಾರದ ಸಮಾಲೋಚನೆಗೊಳಗಾಗಿದೆಯೆಂದು ಸರ್ ಹೆನ್ರಿ ಕ್ರೈಕರು ಶಾಸನಸಭೆಯಲ್ಲಿ ಹೇಗೂ ಹೇಳಿದರು. ವಾರ್ತೆಯು ಆನಂದದಾಯಕವೇ ಆಗಿದೆ. ಜವಾಹರಲಾಲರು ಪತ್ನೀಸಮೇತರಾಗಿ ವಿದೇಶಕ್ಕೆ ತೆರಳುವರಾದರೆ ಅವರನ್ನು ಸರಕಾರವು ಬಿಡುವುದು ನಿಜವೆಂಬ ವಾರ್ತೆಯು ಮೊನ್ನೆ ಹರಡಿತು. ಈ ವಾರ್ತೆಯ ಸತ್ಯತೆಯನ್ನು ವಿಚಾರಿಸಲಾಗಿ ಸರಕಾರವೇ 'ನಾಕಾರ'ವನ್ನು ಸೂಚಿಸಿತು. ಈಗ ಅದೇ ಸರಕಾರವು 'ಅಸ್ತು' ಎಂದಿದೆ. ಅಂತೂ ಬಿಡುಗಡೆಯಾಗಲಿರುವುದು ಸತ್ಯವೆಂದೆನ್ನ ... ಸಾರ್ವಭೌಮರ ಪಟ್ಟಾಭಿಷೇಕ ಮಹೋತ್ಸವದ ಆನಂದಸೂಚಕವಾಗಿ ಈ ಈ ಬಿಡುಗಡೆಯಾಗಲಿರುವುದೆಂದ ಸಾಧಾರಣ ... ವಾರ್ತೆ ... ಇದು ಸತ್ಯವೆಂದಾದರೆ ಸರಕಾರವು ತಪ್ಪು ... ಹೆಜ್ಜೆಯನ್ನಿಟ್ಟಂತೆ. ಆದರೆ ಒಂದು ಸ್ವದ ... ವಿದೆಯೆನ್ನಬಹುದು. ಪಂಡಿತ ಜವಾಹರಲಾಲರನ್ನು ಅವರ ಪತ್ನಿಯ ... ಜನಕ ಸ್ಥಿತಿಯ ದೃಷ್ಟಿಯಿಂದಲಾದರೂ ಇಷ್ಟರಲ್ಲೇ ಬಿಡುಗಡೆ ಮಾಡಬೇಕಿತ್ತು. ಆದರೂ ಇಷ್ಟರ ವರೆಗೆ ಕಾಯ ... ರೆಯಿತೇ ಇತ್ತು. ರಜತೋತ್ಸವದ ಈ ಸಂದರ್ಭದಲ್ಲಿ ವಿಕಸಿತ ಭಾವವನ್ನು ಪ್ರದರ್ಶಿಸಿ ಜವಾಹರಲಾಲರ ಬಿಡುಗಡೆ ಮಾಡಲಿರುವ ಸರಕಾರವು ಖಾನ್ ... ವೆಡಲಿದ ರಾಜಕೀಯ ... ನಿಷ್ಟು ... ಗದೇ?

ಉಡುಪಿಯವರು ಎಚ್ಚತ್ತು–

... ಸುಬ್ರಹ್ಮಣ್ಯಭಟ್ಟರ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ತಂದಿರುವ ಹಿಂದೂ ಮಠಗಳ ಮಸೂದೆಯ ಕುರಿತು ಚಳವಳಿಸುತ್ತಿರುವುದು ಗೋಚರಿಸುತ್ತಿದೆ. ಅನೇಕ ಸಭೆಗಳು, ಭಾಷಣಗಳು, ಪ್ರಾತಿನಿಧ್ಯಗಳು ಜರಗಿವೆ- ಜರಗುತ್ತಲಿವೆ. ಹಿಂದೂ ಮಠ ಹಿತೈಷಿಗಳ ಜಗತ್ತಿಗೆ ಜಗತ್ತೇ ಎಚ್ಚತ್ತ ತೋರುತ್ತಿದೆ. ಶ್ರೀ। ಭಟ್ಟರು ಕೌನ್ಸಿಲಿನಲ್ಲಿಯ ಗುಡುಗು. ಅವರು ಈಗ ತನ್ನ ಬಿಲಿನ ಗುಡುಗಾಟವನ್ನು ಸಮಸ್ತ ಹಿಂದೂಗಳಿಗೆ ಕೇಳಿಸಿರುವರು. ದಾರಿ ತಪ್ಪಿದವರಿಗೆ ಎಚ್ಚರವಿತ್ತಿರುವರು. ಪರಿಣಾಮವಾವುದೋ ಹೇಳಬರುವುದಿಲ್ಲ. ಆದರೂ ಶ್ರೀ। ಭಟ್ಟರ ಮುಖ್ಯವು ಕಟ್ಟಿದಲ್ಲಿ ಅವರ ಹಲವೊಂದು ಸೂಚನೆಗಳಲ್ಲಿ ಕಾಠಿಣ್ಯ ನಿರ್ದಾಕ್ಷಿಣ್ಯತೆಗಳಿರುವಾದರೂ ಅವುಗಳ ಪರಿಣಾಮವು ಅನಪೇಕ್ಷಿತವಾಗಲಾರದೆಂಬ ಭರವಸೆಯಿದೆ. ಅವರ ಎಲ್ಲಾ ಸೂಚನೆಗಳು ಇದ್ದಕ್ಕಿದ್ದ ಹಾಗೆ ಸ್ವೀಕೃತವಾಗುವುದು ಅಸಂಭವ. ಅದು ಉಡುಪಿ ಮೊದಲಾದೆಡೆಗಳಲ್ಲಿನ ಪ್ರಚಂಡ ಚಳವಳದಿಂದಲೇ ಸ್ವಯಂವಕ್ತ. ಅವುಗಳು ಹಾಗೆ ಅಂಗೀಕೃತವಾಗವುದೂ ಸರಿಯಲ್ಲ. ಇಷ್ಟಿದ್ದರೂ ಮಠಾಧಿಪತಿಗಳಿಗೆ ಎಚ್ಚರವನ್ನಿತ್ತು ಅವರ ಸ್ವಚಿಂತನೆಗ ಪ್ರೇರಕವನ್ನಿತ್ತ ಬಿಲು ಪೂರ್ಣ ದೋಷಯುಕ್ತವಲ್ಲ.

ಸರ್ ಆರ್ ಕೆ ಷಣ್ಮುಗಂ ಚೆಟ್ಟಿಯರರು

ಕೊಚ್ಚಿಯ ದಿವಾನರಾಗಿ ನೇಮಕ ಹೊಂದಿರುತ್ತಾರೆಂದು ತಿಳಿದ ಪತ್ರಿಕಾ ಲೋಕವು ಆಶ್ಚರ್ಯಗೊಂಡಿದೆ. ಚೆಟ್ಟಿಯಾರರೆಂದರೆ ಒಂದು ಕಾಲದಲ್ಲಿ ಎಲ್ಲರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದವರು. ಆದರೆ ಜನರು ಅವರ ತಾರುಣ್ಯಕ್ಕೆ ಮೆಚ್ಚಿ ಅವರನ್ನು ಶಿರಸ್ಸಿಗೇರಿಸಿಕೊಂಡುದರಿಂದ ಪ್ರತಿಫಲವು ಬೇರೆಯೇ ದೊರೆಯಿತು. ಇಂತಹ ಪ್ರತಿಫಲದ ಪ್ರತಿಬಿಂಬವು ಚೆಟ್ಟಿಯಾರರ ಅಪಜಯದಲ್ಲಿ ಪರ್ಯವಸಾನ ಹೊಂದಿತು. ಅಂತಹ ಇತಿಹಾಸವನ್ನುಂಟು ಮಾಡಿದ ಶ್ರೀ। ಚೆಟ್ಟಿಯಾರರು ಕೊಚ್ಚಿಯ ದಿವಾನರಾದರೆಂಬುದು ಆಕರ್ಷಣೀಯ ವಾರ್ತೆ. ದಿವಾನಗಿರಿಯೆಂದರೆ ಅಷ್ಟೊಂದು ಸುಲಭವಾದುದಲ್ಲ. ಸಂಸ್ಥಾನದ ಆಡಳಿತೆಯ ವ್ಯಾಹ್ಯಾಂತರ್ಯಗಳ ತಿಳಿವು ಅದಕ್ಕೆ ಬೇಕು. ಅಂತಹ ಜ್ಞಾನವು ತರುಣರಾದ ಚೆಟ್ಟಿಯಾರರಿಗಿರುವುದೇ ಎಂಬ ಪ್ರಶ್ನೆಯಿದೆ. ಚೆಟ್ಟಿಯಾರರ ನಡಾವಳಿಯನ್ನು ಜನರು ನೋಡುತ್ತಲೇ ಇರುವರು.

ದೇಶೀಯ ವೈದ್ಯರುಗಳ ರಿಜಿಸ್ಟ್ರೇಶನ್ ಆಕ್ಟು.

ದೇಶೀಯ ವೈದ್ಯರುಗಳ ರಿಜಿಸ್ಟ್ರೇಶನ್ ವಿಷಯ ಗವರ್ನಮೆಂಟ್ ಆರ್ಡರು ನಂಬ್ರ ೨೩೧ನೇ ಪಿ ಎಚ್ ತಾ. ೧–೨ ೩೪ರಲ್ಲು ಪ್ರಕಟಿಸಿದ ನಂತರ ಜನತೆಯ ಅಭಿಪ್ರಾಯವು ಸಂಸ್ಥಾನದ ಎಲ್ಲಾ ಕಡೆಯಿಂದಲೂ ಪತ್ರಿಕೆಗಳ ಮೂಲಕ ಬರುತ್ತಿರುವುದನ್ನು ವಾಚಕರು ಪದೇ ಪದೇ ಓದಿರಬಹುದು. ಅದರಲ್ಲಿ ಕೇವಲ ದೇಶೀಯ ವೈದ್ಯವನ್ನು ಕಾಯ ಚಿಕಿತ್ಸಾ ಪ್ರಧಾನವಾಗಿಟ್ಟು ಕಲಿತು ಅಭ್ಯಾಸ ಮಾಡುವವರಿಗೆ 'ಬಿ' ಕ್ಲಾಸು ಎಂತಲೂ, ದೇಶೀಯ ವೈದ್ಯದೊಂದಿಗೆ ಲಘು ಶಸ್ತ್ರಕರ್ಮ, ಪ್ರಸೂತಿ ತಂತ್ರ ಮತ್ತು ನ್ಯಾಯವಿಚಾರ ಆಯುರ್ವೇದ (ಮೆಡಿಕೋ ಲೀಗಲ್ ವರ್ಕ್) ದಲ್ಲಿಯೂ ಜ್ಞಾನವಿದ್ದು ಅಭ್ಯಾಸಮಾಡುವವರಿಗೆ 'ಎ' ಕ್ಲಾಸು ರಿಜಿಸ್ಟ್ರೇಶನ್ ಎಂದೂ ನಮೂದಿಸಿರುವರು. ಆದರೆ ಎ ಕ್ಲಾಸಿನಲ್ಲಿ ಮಾತ್ರ ಆಯುರ್ವೇದವನ್ನು ಉತ್ಕೃಷ್ಟ ಲಕ್ಷಣಸಮನ್ವಿತವಾಗಿ ಇತರ ಕಾಲೇಜುಗಳಲ್ಲಿಯೋ ಸ್ಕೂಲುಗಳಲ್ಲಿಯೋ ೪ ವರ್ಷ ಅಭ್ಯಾಸಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಅಥವಾ ಗುರು ಮುಖೇನ ಕಲಿತು ಸಿ ಭಾ ವಿದ್ಯಾಪೀಠ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರನ್ನು ಮದ್ರಾಸು ಯೂನಿವರ್ಸಿಟಿಯಲ್ಲಿ ಆಯುರ್ವೇದ ಶಿರೋಮಣಿ ಪರೀಕ್ಷೆಯ ಉಪಾಧಿ ಪಡೆಕೊಂಡವನ್ನು ... ಕಲಿಯದ ಯಾವ ಪರೀಕ್ಷೆಯಲ್ಲಿಯೂ ಪಾಸಾಗದ ಬರೇ ಹತ್ತು ವರ್ಷದ ಸರ್ಟಿಫಿಕೇಟು ದಾಖಲೆ ಮಾಡಿದವ ಪರಂಪರೆ ವೈದ್ಯರುಗಳ ಇನ್ನಿತರ ವೈದ್ಯವಾನಿಗಳ ವರ ಕೂಡ ಏಕತ್ರ ಸಮಾವೇಶ ಮಾಡಿರುವರಲ್ಲದೆ ಬಿ ಕ್ಲಾಸಿನಲ್ಲಿ ರಿಜಿಸ್ಟ್ರು ಮಾಡಿಸಿಕೊಂಡ ವೈದ್ಯರುಗಳನ್ನು ... ಕ್ಲಾಸಿಗೆ ಮಾರ್ಪಡಿಸುವಂತೆ ಸಂದರ್ಭವನ್ನು ... ಕೊಡದೆ ... ಅವರು 'ಬಿ' ಕ್ಲಾಸಿನಲ್ಲಿಯೇ ಮರಣದ ವರೆಗೂ ನರಳಬೇಕಾಗುವುದು. ಕಾಲೇಜುಗಳಲ್ಲಿ ೪ ವರ್ಷ ಕಲಿತು ಗವರ್ನಮೆಂಟು ಲೋಕಲ್ ಬೋರ್ಡ ಮತ್ತು ಮ್ಯುನಿಸಿಪಲ್ ಕೌನ್ಸಿಲುಗಳ ಕೆಳಗೆ ಸುಮಾರು ೧೦ ವರ್ಷಕ್ಕಿಂತಲೂ ಹೆಚ್ಚು ಸಮಯದಿಂದ ಉದ್ಯೋಗಸ್ಥರಾಗಿರುವವರಿಗೆ ಮತ್ತು ಖಾಸಗಿ ವೈದ್ಯಾಭ್ಯಾಸ ಮಾಡುವವರಿಗೂ ಕೂಡ ಪ್ರಸೂತಿ ತಂತ್ರದಲ್ಲಿ ಹೆಚ್ಚಿನ ಜ್ಞಾನ ಇಂದರೆ ಸೆಂಟ್ರಲ್ ಬೋರ್ಡಿನವರು ತೃಪ್ತಿಪಡುವಷ್ಟು ಮಾತ್ರ ಅವರಿಗಿಲ್ಲ ... ಎಂದು ಕಾರಣದಿಂದ ... ಕ್ಲಾಸಿಗೆ ಪ್ರವೇಶವಿಲ್ಲ. 'ಬಿ' ಕ್ಲಾಸಿನಲ್ಲಿಯೇ ಮುಕ್ತಿ ... ಅಸಮಂಜಸವಾಗುವುದು. ... ಮದ್ರಾಸು ಕೌನ್ಸಿಲಿನಲ್ಲಿ ಪಾಸಾದ ಮೆಡಿಕಲ್ ರಿಜಿಸ್ಟ್ರೇಶನು ಆಕ್ಟನ್ನು ಪ್ರಥಮದಲ್ಲಿ ಜ್ಯಾರಿಗೆ ತರುವ ವೇಳೆಯಲ್ಲಿಯೂ ಕೂಡಾ ಮದ್ರಾಸು ಮೆಡಿಕಲ್ ಕೌನ್ಸಿಲಿನವರು ನಿರ್ದೇಶಿಸಿದಷ್ಟು ... ವಿಲ್ಲದವರನ್ನು ... ಎಲ್ ಎಂ ಪಿ ಯವರಿಗಿಂತಲೂ ಕೆಳಗೆ ಡ್ರೆಸ್ಸರ್ ಮತ್ತು ಕಂಪೌಂಡರಾಗಿ ನೋಡಲಾದ ಸ್ಥಳಗಳಲ್ಲಿರುವ ಖಾಸಗಿ ವೈದ್ಯಶಾಲೆಗಳಲ್ಲಿ ಕಲಿತವರನ್ನು ಕೂಡ ರಿಜಿಸ್ಟ್ರು (ಅಂದರೆ ಎಲ್ ಎಂ ಪಿ ಯವರೊಂದಿಗೆ) ಮಾಡಿರುವರು. ನಂತರ ಗವರ್ನಮೆಂಟು ಮತ್ತು ಯೂನಿವರ್ಸಿಟಿಯ ವೈದ್ಯಶಾಲೆಗಳಲ್ಲಿ ಕಲಿತು ತೇರ್ಗಡೆ ಹೊಂದಿದವರನ್ನು ಮಾತ್ರ ರಿಜಿಸ್ಟ್ರುಮಾಡಿಸಿಕೊಳ್ಳುವ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರಷ್ಟೆ. ಅದೇ ತತ್ವವನ್ನು ಇಲ್ಲಿಯೂ ಯಾಕೆ ಪ್ರಯೋಗಿಸಬಾರದು? ಅದು ಸರ್ವಥಾ ಅಸಾಧ್ಯವೆಂತಾದರೆ ವಿದ್ಯಾ ಇಲಾಖೆಯಲ್ಲಿ ಉಪಾಧ್ಯಾಯರಿಗೆ ಲೋವರ ಗ್ರೇಡಿನಿಂದ ಹೈಯರ್ ಗ್ರೇಡಿಗೆ ಹೋಗುವ ಏರ್ಪಾಡು, (ಲೋಕಲ್ ವೆರ್ನಾಕ್ಯುಲರ್ ಟ್ರೈನ್ ಆದ ಬಿ ಎ ವ್ಯಾಲ್ಯೂಗಳಿಗೆ (ಪಾಪ್ರಸು) ಇಂಗ್ಲಿಷ್ ಟ್ರೈನ್ ಆದವರೊಂದಿಗೆ ಪ್ರಮೋಶನ್ ಆಗುವ ಹಾಗೆ ಮಾಡಿದ ಏರ್ಪಾಡಿನಂತೆ ಮದ್ರಾಸು ಆಯುರ್ವೇದ ಕಾಲೇಜು ಮೈಲಾಪುರ ವೆಂಕಟ್ರಮಣ ಮೆಡಿಕಲ್ ಸ್ಕೂಲು ಬೆಜವಾಡ ಆಯುರ್ವೇದಿಕ್ ಕಾಲೇಜ್ ಮೈಸೂರು ತಿರುವಾಂಕೂರು 'ಗವರ್ನಮೆಂಟು' ಹೊರಡಾದ ಮತ್ತು ಖಾಸಗಿ ದೇಶೀಯ ವೈದ್ಯಶಾಲೆಗಳಲ್ಲಿ ಕಲಿತು, ತೇರ್ಗಡೆ ಹೊಂದಿ ಪ್ರಕೃತ ಗವರ್ನಮೆಂಟು ಲೋಕಲ್ ಬೋರ್ಡು ಮುನಿಸಿಪಲ್ ಕೌನ್ಸಿಲುಗಳ ಕೆಳಗೆ ವೈದ್ಯ ಉದ್ಯೋಗಸ್ಥರಾಗಿರುವವರಿಗೆ ಮತ್ತು ಖಾಸಗಿ ವೈದ್ಯಾಭ್ಯಾಸ ಮಾಡುತ್ತಿರುವ ... ಎಂ ಅಲ್ಲದವರಿಗೆ ... ತಿಂಗಳು ಪ್ರಸೂತಿ ತಂತ್ರದಲ್ಲಿ ಕರ್ಮ ಅಭ್ಯಾಸ ಮಾಡುವುದಕ್ಕೋಸ್ಕರ ... ಇಂಡಿಯನ್ ಮೆಡಿಕಲ್ ಸ್ಕೂಲಿನಲ್ಲಿ ಏರ್ಪಾಡು ಮಾಡಬೇಕಾಗಿ ನನ್ನ ಸೂಚನೆ. ನಮ್ಮ ದೇಶೀಯ ವೈದ್ಯ ಮುಂದಾಳುಗಳು ಈ ವಿಷಯದಲ್ಲಿ ಇನ್ನಾದರೂ ತೀವ್ರ ಚಳವಳವನ್ನು ಹೂಡಿಯಾರೆಂದು ನಿರೀಕ್ಷಿಸುವ ಇತಿ

'ಆಯುರ್ವೇದಾಭಿವೃದ್ಧಿ ಕಾಂಕ್ಷಿ

'ಜೋಗಟ್ಟೆಯ ಯಕ್ಷಗಾನ ಸಭೆಯ ಕುರಿತಾಗಿ ಯಕ್ಷಗಾನ ಮಿತ್ರ'ರೊಬ್ಬರು ಶ್ರೀ ಶಂಕರನಾರಾಯಣ ಪೊಳ್ಳಿಗೆ ಉತ್ತರವಿತ್ತ ಲೇಖನವೊಂದು ನಮಗೆ ತಲುಪಿದೆ. ಸ್ಥಳಾಭಾವದಿಂದ ಅದನ್ನು ಪ್ರಕಟಿಸಲಾಗಲಿಲ್ಲ. ಸಂ ಸ್ವ.

ಹಿಂದೀಯ ಶಿಕ್ಷಣಕ್ರಮದ ದೊಡ್ಡ ನ್ಯೂನ್ಯತೆ.

ಹಿಂದೀಯ ಶಾಲೆಗಳಲ್ಲಿ ... ಬಂಗಾಳದ ವಿದ್ಯಾರ್ಥಿಗಳಿಂತ ... ವಿದ್ಯಾರ್ಥಿಗಳಿಗೆ ಧಾರ್ಮಿಕ ವಿಷಯಗಳು ತಿಳಿದೇ ಇಲ್ಲ. ಅವರಿಗೆ ದೊರೆಯುತ್ತಿರುವ ಶಿಕ್ಷಣವು ವಿಕಟವಾದುದು ... ಮಾತ್ರ ... ಹೃದಯವನ್ನು ಸೃಜಿಸುವೆವು. ಈಗ ಹಿಂದೀಯ ವಿದ್ಯಾಮಂದಿರಗಳಲ್ಲಿ ... ಪ್ರಕೃತಿಯ ... ಈಗ ನಮ್ಮ ವಿದ್ಯಾರ್ಥಿಗಳಿಗೆ ಬೇಕಾ ... ಇಂತಹ ಶಿಕ್ಷಣಕ್ರಮಗಳನ್ನು ಹಿಂದೀಯ ಶಾಲೆಗಳು ... ಒಂದೇ ... ಅವರ ನ ... ಈ ಸಂದರ್ಭದಲ್ಲಿ ಅವರ ... ಯಲ್ಲಿ ಶಾಲೆಗಳು ... ಇದೆ. ನಮ್ಮ ಇಂದಿನ ವಿದ್ಯಾರ್ಥಿಗಳ ಮುಂದಿನ ಜನಾಂಗವಾಗಿರುತ್ತಾರೆ. ಅವರ ... ಯೊಡನೆ ಅವರ ನೈತಿಕ ಸ್ವಭಾವವು ಬೆಳೆಯಬೇಕು. ಅವರನ್ನು ಅತ್ಯಂತ ಜಾಗ್ರತೆಯಿಂದ ... ಬೇಕು. ಅವರ ಬುದ್ಧಿಯು ಬೆಳೆದಂತೆ ಅವರ ಗುಣವೂ ಬೆಳೆಯಬೇಕು. ಆದರೆ ನಾವೇನು ಮಾಡುತ್ತಿದ್ದೇವೆ. ಬುದ್ಧಿಯ ಬೆಳವಣಿಗೆಗಾಗಿ ರಾತ್ರಿಂದಿನ ... ತ್ತಿರುವೆವು. ಅವರ ಗುಣದ ಬೆಳವಣಿಗೆಯನ್ನು ... ದಿರುವೆವು. ಪರಿಣಾಮವಾಗಿ ಅನ್ಯಾಯವು ... ಅದೊಂದು ಕಲೆಯಾಗಿಯೇ ಪರಿಣಮಿಸುತ್ತಿದೆಯೋ ಎಂಬ ಸಂದೇಹವೂ ಉತ್ಪನ್ನವಾಗುವ ಸಂದರ್ಭದಲ್ಲಿ ಇದರ ಅರ್ಥವೇನು? ನಮ್ಮ ಹುಡುಗ ಹುಡುಗಿಯರಿಗೆ ಈಗ ಸಿಗುವ ವಿದ್ಯೆಯು ನಿಸ್ಸತ್ವತೆಯಿಂದ ... ಇಲ್ಲ. ಅದರಲ್ಲಿ ವಿಶೇಷ ದೋಷವಿದೆ. ಈ ... ಅನೀತಿಯ ತೊಡರಿಗೆ ಅಡ್ಡವಾಗಿ ನಿಂತು ಅದು ಮುಂದೆ ಹರಿಯದಂತೆ ತಡೆಯಬೇಕಾಗಿದೆ. ದೌಷ್ಟ್ಯವನ್ನು ಮಾಯಗೊಳಿಸಿ ಪವಿತ್ರ ವಾತಾವರಣದ ಕಲ್ಪನೆಯಾಗುವಂತೆ ನೋಡಬೇಕಾಗಿದೆ. ಶಾಲೆಗಳಲ್ಲಿ ಧಾರ್ಮಿಕ ಉಪದೇಶಗಳನ್ನು ಕೊಟ್ಟು ಅವು ಹುಡುಗ ಹುಡುಗಿಯರ ಮನದಲ್ಲಿ ಉಳಿಸಿ ಬಿಟ್ಟುವಂತೆ ಮಾಡಬೇಕಾಗಿದೆ.

D. J. Sind College Miscell ıny.

ಅನುಕ್ರಮಣಿಕೆ.

ಚಿತ್ರ	೨
ಪತ್ರಿಕಾ ಪ್ರಪಂಚ	೩
ಮಿಲಿಯಾಧಿಪತಿ ಥೋಮಸ್ ಬಾಟಾ.	೫
ಸಾಧಿರಲೊಬ್ಬಳು.	೬
ಬೆಳ್ಳಾರಿ ಮತ್ತು ಅನಂತಪುರಗಳಲ್ಲಿ ಕ್ಷಾಮ	೮
ಅಗ್ರಲೇಖ	
ಸ್ಫುಟವಿಚಾರಗಳು	೯
ಜಸ್ಟಿಸ್ ಮಂತ್ರಿಮಂಡಲದ ಅವಸಾನವೇ?	
ವರ್ತಮಾನ ಸಂಗ್ರಹ	
ಮಂಗಳೂರು ತಾಲೂಕುಗಳಿಂದ	೧೨
ವಿವಿಧ ಸಮಾಚಾರಗಳು	೧೬
ಭಾರತೀಯ ಮಹಿಳೆಯರ ಭವಿಷ್ಯ ಜೀವನ	೧೮
ಶಾಸನಸಭೆಯಲ್ಲಿ ಸರಕಾರಕ್ಕೆ ಪುನಃ ಸೋಲು	೧೯

ಸ್ವದೇಶಾಭಿಮಾನಿ

ತಾ ೧೫ನೇ ಶುಕ್ರವಾರ ಮಾರ್ಚಿ '೩೫

ಜಸ್ಟಿಸ್ ಮಂತ್ರಿಮಂಡಲದ ಅವಸಾನವೇ?

ಇದೇ ತಾ ೭ರಲ್ಲಿ ಮದ್ರಾಸಿನ ಶಾಸನ ಸಭೆಯಲ್ಲಿ ಯುನೈಟೆಡ್ ನೇಶನಲಿಸ್ ಪಂಗಡದ ಮುಂದಾಳುಗಳಾದ ಡಾ। ಸುಬ್ಬರಾಯನರವರು "ಜಸ್ಟಿಸ್ ಮಂತ್ರಿಮಂಡಲದ ಮೇಲೆ ನಮಗೆ ವಿಶ್ವಾಸವಿಲ್ಲ" ಎಂಬ ಠರಾವನ್ನು ತರುವೆನೆಂದು ಅಧ್ಯಕ್ಷರಿಗೆ ತಿಳಿಸಿದರು. ಸೂಚನೆಯನ್ನು ಡೆಮೊಕ್ರೆಟಿಕ್ ಪಕ್ಷದ ಮುಂದಾಳಾದ ಶ್ರೀ। ಕೆ. ಭಾಷ್ಯಂ ಅಯ್ಯಂಗಾರರು ಅನುಮೋದಿಸಿದರು. ಈ ಅವಿಶ್ವಾಸದ ಠರಾವಿಗೆ ಸಮ್ಮತಿ ಕೊಡುವವರೆಲ್ಲ ಎದ್ದು ನಿಲ್ಲಬೇಕಾಗಿ ಅಧ್ಯಕ್ಷರು ಕೇಳಿಕೊಂಡ ಮೇರೆಗೆ ೮೭ ಮಂದಿ ಒಡನೆ ಎದ್ದು ನಿಂತರು. ಅಧ್ಯಕ್ಷರು ಈ ಠರಾವನ್ನು ಸ್ವೀಕರಿಸದೆ ನಿರ್ವಾಹವಿಲ್ಲದಾಯಿತು ಈ ಠರಾವಿನ ಸಾಧಕ ಬಾಧಕ ಸ್ವೀಕಾರ ತಿರಸ್ಕಾರಗಳ ಕುರಿತ ತಾ ೧೯ನೇ ದಿನ ಚರ್ಚೆಯು ನಡೆಯುವುದೆಂದು ಸಭೆಗೆ ತಿಳಿಸಿದರು. ಈ ಠರಾವಿಗೆ ಸಮ್ಮತವಿತ್ತವರಲ್ಲಿ ಯುನೈಟೆಡ್ ನೆಶನಲಿಸ್ಟ ಪಕ್ಷೀಯರು ೩೩ ಮಂದಿ ಡೆಮೊಕ್ರಟಿಕ್ ಪಕ್ಷೀಯರು ೧೨ ಇಂಡಿಪೆಂಡೆಂಟ್ ಪಕ್ಷೀಯರು ೧೮ ಮಂದಿ ಇನ್ನಿತರರ ೩ ಮಂದಿ ಅಂತೂ ಈಗ ಸಭೆಯಲ್ಲಿರುವ ೯೩ ಮಂದಿ ಸದಸ್ಯರಲ್ಲಿ ೮೭ ಮಂದಿ ಅವಿಶ್ವಾಸದ ಠರಾವಿಗೆ ಸಮ್ಮತವೀಯುವರೆಂದು ಖಂಡಿತವಿದೆ

ಅಂತೂ ಜ್ವಾಲಾಮುಖಿಯು ಸ್ಫೋಟನವಾಗಲಿದೆ ಸುಮಾರು ಎರಡೂವರೆ ವರ್ಷಗಳಿಂದಲೂ ಕುದಿಯುತ್ತಿದ್ದ ಜನರ ಅಸಂತೃಪ್ತಿ-ವೈಷಮ್ಯಗಳು ಈಗ ಉಕ್ಕೇರಿವೆ ಈ ಪ್ರವಾಹವನ್ನು ತಡೆಯುವುದೇ ಸಾಧ್ಯವಾಗಿಲ್ಲ

ಜಸ್ಟಿಸ್ ಮಂತ್ರಿಮಂಡಲವು ಸಂಸ್ಥಾನದ ಪ್ರಜೆಗಳ ಹಿತವನ್ನು ಬಯಸುವಂತಿಲ್ಲ, ಅದರಿಂದ ದೇಶಕ್ಕೆ ಯಾವ ಪ್ರಯೋಜನವೂ ಇಲ್ಲವೆಂಬ ಕೂಗು ಎಂದಿನಿಂದಲೋ ಕೇಳಿಬರುತ್ತಾ ಇದೆ ಅದು ಕೊಂಗ್ರೆಸ್ಸಿನ ಚಳವಳವನ್ನು ನೋಡುತ್ತಿದ್ದ ವಕ್ರ ದೃಷ್ಟಿ ಅದರೊಳಗಿಂದು ಳಗೇ ತನ್ನ ಪ್ರತಿನಿಧಿಗಳನ್ನು ಕೊಂಗ್ರೆಸ್ಸಿನೆದುರು ಚುನಾವಣೆಗೆ ನಿಲ್ಲಿಸಿದ ವರ್ತನೆ, ಸಂಸ್ಥಾನದ ಆಡಳಿತೆಯಲ್ಲಿ ಅಲಕ್ಷ್ಯ ಭಾವವನ್ನು ಪ್ರದರ್ಶಿಸಿ ಸರ್ವಕಾಲದಲ್ಲೂ ಸರಕಾರದ ಬೆಂಬಲವಾಗಿ ನಿಂತ ಧೈರ್ಯ-ಇವೆಲ್ಲವೂ ಚಿರಸ್ಮರಣೀಯವೆ ೧೯೩೨ರ ನವಂಬರದಲ್ಲಿ ಚೀಫ್ ಮಿನಿಸ್ಟರರು ಪದವಿಗೇರಿದರು ಅವರು ಆ ಸ್ಥಾನಾರೂಢರಾಗುವಾಗ "ಬೊಬ್ಬಿಲಿ ಮಹಾರಾಜರು ಹಿಂದಿನ ಮುಖ್ಯ ಮಂತ್ರಿಗಳಂತಾಗದಿರಲಿ ಅವರು ಮಂತ್ರಿಮಂಡಲದಲ್ಲಿ ಐಕ್ಯವನ್ನುಂಟುಮಾಡಿ, ವಿಶಾಲ ಮನಸ್ಸಿನಿಂದ ವರ್ತಿಸಿ ಸರ್ವ ರೀತಿಯಲ್ಲೂ ದೇಶೋದ್ಧಾರ ಕಾರ್ಯದಲ್ಲಿ ನಿರತರಾಗಲಿ" ಎಂದು ಆಶಿಸಿದವರು ಬಹಳ ಆದರೆ ನಡೆದುದೇನು? ತೀರ ವ್ಯತಿರಿಕ್ತ ಸಂಸ್ಥಾನಾಡಳಿತದಲ್ಲಿ, ಶಾಸನ ರಚನೆಯಲ್ಲಿ ಒಂದು ನಿಶ್ಚಿತ ಧೋರಣೆಯಿಲ್ಲ, ಔದಾರ್ಯ ಪ್ರದರ್ಶನದ ಒಂದೇ ಒಂದು ಉದಾಹರಣೆಯಿಲ್ಲ, ಸಾರ್ವಜನಿಕ ಕೇಳಿಕೆಯ ಮೇಲೆ ಸಹಾನುಭೂತಿಯಿಲ್ಲ ಅದರಲ್ಲೂ ರಾಷ್ಟ್ರೀಯತಾ ಭಾವನೆಯ—ವಾಸನೆಯಿಲ್ಲ ಎಲ್ಲವೂ ಸ್ವೇಚ್ಛಾವರ್ತನೆ ಸ್ವಂತ ಆಶಯುಗಳು ನೆರವೇರಿದರೆ ಸರಿ,—ಮಂತ್ರಿ ಮಂಡಲಕ್ಕೆ ಪೂರ್ಣ ತೃಪ್ತಿ ತಾಲೂಕು ಬೋರ್ಡುಗಳು ಹೋದುವು ಡಿಸ್ಟ್ರಿಕ್ಟ್ ಬೋರ್ಡುಗಳು ನಿರ್ಬಲಗೊಂಡುವು ಮುಖ್ಯವಾಗಿ, ಜನತೆಯ ಪ್ರತಿನಿಧಿಯಾದ ಕೊಂಗ್ರೆಸ್ಸಿನ ಮೇಲೆ ಕಡೆಗಣ್ಣಿನ ನೋಟ ಯಾರು ಸಹಿಸಿಯಾರು?—ಈ ನಿರಂಕುಶ ವರ್ತನೆಯನ್ನು?

ಜಸ್ಟಿಸ್ ಪಂಗಡದ ಮೇಲೆ ಜನತೆಗೆ ಇಂದಿಗೂ ವಿಶ್ವಾಸವಿಲ್ಲವೆಂದು ಮೊನ್ನೆ ಡಾ। ಮಲ್ಲಯ್ಯರವರ ಸ್ಥಾನಕ್ಕೆ ಜಸ್ಟಿಸ್ ಪಂಗಡದ ಪ್ರತಿನಿಧಿಯನ್ನು ಪ್ರತಿಭಟಿಸಿ ನಿಂತ ರಾಷ್ಟ್ರಪಕ್ಷೀಯರಾದ ಶ್ರೀ ಓ ಪಿ ರೆಡ್ಡಿಯವರ ಸರ್ವಾನುಮತ ಚುನಾವಣೆಯಿಂದಲೇ ಸ್ವಯಂ ವಿದಿತ ಹೀಗಿರುವಾಗ ಕೌನ್ಸಿಲಿಗೆ ತನ್ನ ಕರ್ತವ್ಯವು ತಿಳಿದಿದೆ ತನ್ನ ಶಕ್ತಿಸಾಮರ್ಥ್ಯಗಳನ್ನು ಮಂತ್ರಿಮಂಡಲಕ್ಕೆ ತೋರಿಸುವ ಧೈರ್ಯವು ತಲೆದೋರಿದೆ ಮಂತ್ರಿ ಮಂಡಲದ ದುರ್ವರ್ತನೆಗೆ ಚಿಕಿತ್ಸೆಯನ್ನು ಹಚ್ಚುವ ಸಾಹಸದಲ್ಲಿ ಎದೆಗೊಟ್ಟು ನಿಂತಿದೆ ಇದೀಗ ಅದರ ಕರ್ತವ್ಯ ಅದಕ್ಕೆ ಯಶಸ್ಸನ್ನು ಬಯಸುವುದು ಧರ್ಮವಿದೆ

ಸುಜ್ಞರ ಅಜ್ಞಾನ

ಪಂಡಿತ ಮದನಮೋಹನ ಮಾಳವೀಯ, ಶ್ರೀ ಎಂ. ಎಸ್ ಅಣೆ ಶ್ರೀ। ಸಿ ವೈ ಚಿಂತಾಮಣಿ ಶ್ರೀ ರಾಮಾನಂದ ಚಟರ್ಜಿ ಶ್ರೀ। ಕೆ ನಟರಾಜನ್, ಸದಾ ೧೯ ಮಹತಂಬಲ್‌ಸಿಂಗ್ ಮತ್ತು ಮತ್ತಾ ರಾಷ್ಟ್ರದ ಒಬ್ಬ ಪ್ರತಿನಿಧಿ,—ಇಷ್ಟು ಜನರು ಒಟ್ಟಾಗಿ ಇದೇ ಬರುವ ತಾರೀಕು ೨೬ನೇ ದಿನ ಇಂಗ್ಲಾಂಡಿಗೆ ತೆರಳಲಿರುವರು ಉದ್ದೇಶವೇನೋ ಮಹತ್ತಾದುದು. ಕಮ್ಯೂನಲ್ ಎವಾರ್ಡಿನಿಂದ ದೇಶಕ್ಕುಂಟಾಗುವ ಹಾನಿ ಇಂಡಿಯ ಬಿಲ್ಲಿನಿಂದ ಭಾರತಕ್ಕೊದಗುವ ವಿಪತ್ತು-ಇವುಗಳೆಷ್ಟೆಂದು ಬ್ರಿಟಿಷ ಸರಕಾರಕ್ಕೂ ಪಾರ್ಲಿಮೆಂಟಿಗೂ ತಿಳಿಸುವುದೇ ಇವರ ಪ್ರವಾಸದ ಉದ್ದೇಶ ಪ್ರವಾಸಿಕರೆಲ್ಲರೂ ದೇಶದಲ್ಲಿ ಸುಜ್ಞರೆಂದು ಹೆಸರುಗೊಂಡವರು. ಆದರೆ ಮಾಡಲೇನು? ವೃದ್ಧಾಪ್ಯವು ಸನ್ನಿಹಿತವಾಗುತ್ತಿರುವಂತೆ ಅವರಲ್ಲಿ ಅಜ್ಞಾನವೂ ಹೆಚ್ಚುತ್ತಿರುವ ಲಕ್ಷಣಗಳು ತೋರುತ್ತಿವೆ ಪಂಡಿತ ಮಾಳವೀಯರಿಗೆ ಬ್ರಿಟಿಷ ಸರಕಾರ, ಪಾರ್ಲಿಮೆಂಟ್ ಮೊದಲಾದವರ ಸ್ವಭಾವವು ತಿಳಿದಿದೆ ರೌಂಡ್‌ಟೇಬಲ್ ಕಾಲದಲ್ಲಾದರೂ ಅವರಿಗೆ ಇದರ ಅರಿವು ಚೆನ್ನಾಗಿ ಉಂಟಾಗಿದೆ ಲಂಡನಿನಿಂದ ಹಿಂದೆ ಬಂದೊಡನೆ ಅವರು ಮಾಳವೀಯರು ಬ್ರಿಟಿಷ ಸರಕಾರವನ್ನು ಉಗ್ರವಾಗಿ ಟೀಕಿಸಿದ ವಿಷಯವು ಮರೆಯುವಂಥದಲ್ಲ ಹೀಗಿರುವಾಗ ಇವರು "ಇರುಳು ಕಂಡ ಬಾವಿಗೆ ಹಗಲಲ್ಲಿ ಬೀಳಲು" ಹೊರಟಿರುವುದು ಮಹದಾಶ್ಚರ್ಯಕರ ಅವರೊಡನೆ ಚಟರ್ಜಿ ಅಣೆ, ಚಿಂತಾಮಣಿಗಳೂ ಸೇರಿಕೊಂಡಿರುವುದು ಮತ್ತೂ ವಿಚಿತ್ರ ಇವರ ಮನವಿಯು ಯಾವ ರೀತಿಯಿಂದ ಫಲಿಸುವುದೆಂದು ಪ್ರತಿಯೊಬ್ಬ ಭಾರತೀಯನೂ ಈಗಲೇ ನಿರ್ಧರಿಸಿರುವನು

ಶಾಸನಸಭೆಯಲ್ಲಿ ಭುಲಾಭಾಯಿಯವರ ಉಜ್ವಲ ಭಾಷಣ.

ಬಜೆಟ್ಟಿನ ತೀರ್ಮಾನ!

ತಾ ೬ರಲ್ಲಿ ಎಸೆಂಬ್ಲಿಯಲ್ಲಿ ನಡೆದ ಪ್ರಶ್ನೋತ್ತರಗಳು ಸ್ವಾರಸ್ಯವಾಗಿದ್ದುವು

ಶ್ರೀ। ಸತ್ಯಮೂರ್ತಿಯವರು ಇಂದಿನ ಬ್ರಿಟಿಷ ವಾಣಿಜ್ಯ ಒಪ್ಪಂದದ ವಿಷಯವನ್ನು ಅದರೊಂದಿಗೆ ಎಸೆಂಬ್ಲಿಯವರಿತ್ತ ಅಭಿಪ್ರಾಯವನ್ನೂ ಪ್ರಸ್ತಾಪಿಸುತ್ತ—'ಈ ವಿಷಯಗಳಲ್ಲಿ ಇಂಡಿಯಾ ಸರಕಾರದವರು ಮಾತಿಗೆ ತಿವಿಗೊಡದೆ ಸೆಕ್ರಿಟರಿ ಒಫ್ ಸ್ಟೇಟರು ವರ್ತಿಸಲ್ಲವೇ?' ಎಂದು ಪ್ರಶ್ನಿಸಿದರು.

ಸರ್ ಜೋಸೆಫ ಭೋರರು ಉತ್ತರಕೊಡುತ್ತಾ ಸೆಕ್ರಿಟರಿ ಒಫ್ ಸ್ಟೇಟರಿಗೂ ಇಂಡಿಯಾ ಸರಕಾರಕ್ಕೂ ನಡೆಯುವ ಪತ್ರವ್ಯವಹಾರಗಳ ಒಳಗುಟ್ಟನ್ನು ಬಹಿರಂಗಪಡಿಸುವುದು ಅಧಿಕಾರದ ಸಾಮಾನ್ಯ ಕ್ರಮವಲ್ಲ ಆದರೆ ಪ್ರತ್ಯೇಕ ಪರಿಸ್ಥಿತಿಗಳಿಗನುಸಾರವಾಗಿ ನಾನು ಒಂದಂಶವನ್ನು ಮಾತ್ರ ವಿಶದಪಡಿಸುತ್ತೇನೆ. ಶ್ರೀ। ಎಸ್ ಸತ್ಯಮೂರ್ತಿಯವರು ಕೇಳಿದ ಪ್ರಶ್ನೆಗೆ ಇಲ್ಲವೆಂಬ ಉತ್ತರವನ್ನೇ ಕೊಡಬೇಕಾಗಿದೆ ಎಂದರು

ಮಿ। ಆಸಫ್ ಅಲಿಯವರ ಪ್ರಶ್ನೆಗಳಿಗೆ ಶ್ರೀ। ಟಾಟನ್ ಹ್ಯಾಮರು ಪ್ರತ್ಯುತ್ತರವೀಯುತ್ತಾ— ೧೯೧೯ನೇ ಆಗೋಸ್ತು ತಿಂಗಳಿಂದ ೯೮೮ ಭಾರತೀಯ ಕಿಂಗ್ಸ್ ಕಮಿಶನ್ ಬೇಂಕುಗಳಲ್ಲಿ ಕೆಲಸಮಾಡುತ್ತಿರುವರು. ಅವರಲ್ಲಿ ೧೯೬ ಮಂದಿ ಉದ್ಯೋಗಿಗಳು ಈಗ ಕೆಲಸದಲ್ಲಿದ್ದಾರೆ ೮೭ ಮಂದಿ ಉದ್ಯೋಗಿಗಳು ನಿವೃತ್ತರಾಗಿ ಕೆಲಸವನ್ನು ಬಿಟ್ಟರು ಮತ್ತೆ ಕೆಲವರು ರಾಜಿನಾಮೆಯಿತ್ತರು. ಹಲವು ಮಂದಿ ಕೆಲಸದಿಂದ ತೆಗೆಯಲ್ಪಟ್ಟರು ಎಂದು

ನಂತರ ಬಜೆಟ್ಟಿನ ಕೇಳಿಕೆಗಳ ಮೇಲೆ ವೋಟುಗಳಾರಂಭವಾಯಿತು ಶ್ರೀ ಭುಲಾಭಾಯಿ ದೇಸಾಯಿಯವರು ಒಂದು ಕಟ್‌ಮೋಷನನ್ನು ಸೂಚಿಸುತ್ತಾ ಎಕ್ಸಿಕ್ಯೂಟಿವ್‌ಕೌನ್ಸಿಲಿಗೆ ಕೊಡಲಾಗುತ್ತಿರುವ ಗ್ರಾಂಟನ್ನು ಒಂದು ರೂಪಾಯಿಗೆ ಇಳಿಸಬೇಕೆಂಬ ಒಂದು ಸೂಚನೆಯನ್ನು ತಂದರು ಅವರು ವರ್ಷವರ್ಷವೂ ಪ್ರಜಾಪ್ರತಿನಿಧಿಗಳಾಗಿ ಈ ಶಾಸನದ ಎದುರಿಗೆ ಕುಳಿತಿರುವ ಸದಸ್ಯ ಮಹನೀಯರುಗಳ ತಮ್ಮ ಟೀಕಾತ್ಮಕ ಭಾಷಣಗಳನ್ನು ಮಾಡುತ್ತಲೇ ಇದ್ದಾರೆ ಈ ಮುಂದಿರುವನ್ನೆಂಟ ಸಿರುವ ದೊಡ್ಡ ಅಧಿಕಾರಿಗಳಲ್ಲಿ ನ್ಯಾಯದೃಷ್ಟಿಯಿದ್ದರೆ ನಮ್ಮವರ ಮನಸ್ಸಿನಲ್ಲಿ ಇನ್ನೂ ಅಲ್ಪ ಸ್ವಲ್ಪ ಉಳಿದಿರುವ ಮನಸ್ಸಾಕ್ಷಿಯು ಉದ್ವಿಗ್ನವಾಗದೆ ಇರಲಾರದು ಭಾರತಾಭ್ಯುದಯದ ದಾರಿಗಳೆಲ್ಲ ಇಂದು ಅತ್ಯಂತ ಶಿಥಿಲಾವಸ್ಥೆಯಲ್ಲಿದೆ ಆದರೂ ಮಿಲಿಟರಿ ಮತ್ತು ಸಿವಿಲ ಅಧಿಕಾರಿಗಳು ಏಳಿಗೆ ಹೊಂದಲೆಂಬ ಉದ್ದೇಶದಿಂದ ಇಂತಹ ಅಧಿಕಾರ ಯಂತ್ರಗಳನ್ನು ಸರಕಾರದವರು ನಡೆಸಿಕೊಂಡು ಬರುತ್ತಿದ್ದಾರೆ ಭಾರತಾಭ್ಯುದಯದ ಅಡಿಗಲ್ಲೊಂದನ್ನು ಗ್ರಾಮದ ಮೇಲೆ ನಿರ್ಮಿಸಬೇಕಾಗಿತ್ತು ಶಸ್ತ್ರಾಸ್ತ್ರ ಪ್ರದರ್ಶನಗಳಿಂದಲೂ ಶಸ್ತ್ರಸನ್ಯಾಸ ಕ್ರಮಗಳಿಂದಲೂ ಸರಕಾರದವರು ಗ್ರಾಮಗಳಲ್ಲಿದ್ದ ಪ್ರತಿ ಜಾಸ್ತಿಯ ಕರವನ್ನೂ ಹಿಂಡಿ ನೂರು ವರ್ಷಗಳು ದುಡಿದು ಈಗ ಈ ಸರಕಾರವನ್ನು ನಿರ್ಮಿಸಿದ್ದಾರೆ

ಈ ಅರ್ಥಾಂಗ ವಾಯುವುಳ್ಳ ಸರಕಾರದಿಂದ ಪ್ರಜೆಗಳೇನು ಮಾಡಿಯಾರು? ಸ್ವಾತಂತ್ರ್ಯ ಸಂಗ್ರಾಮವು ಪ್ರಾರಂಭವಾಗಿದೆ ಒಮ್ಮೆ ಮೊದಲಾದ ಈ ಸಂಗ್ರಾಮವು-ಪ್ರಜೆಗಳಿಗೆ ತಮ್ಮ ಹಕ್ಕುಬಾಧ್ಯತೆಗಳು ಲಭಿಸುವವರೆಗೂ ಮುಗಿಯಲಾರದು ಇದೇ ಸ್ವಾತಂತ್ರ್ಯದ ಮೂಲಮಂತ್ರ ನಮ್ಮ ಪಕ್ಷದವರು ಇಷ್ಟೊಂದು ಮಾತನಾಡುತ್ತಿದ್ದಾರಲ್ಲ, ಅವರೇನಾದರೂ ಸರಕಾರದ ಹೃದಯವನ್ನೇ ಮಾರ್ಪಡಿಸಿದರೇ? ಇಲ್ಲವೇ ಇಲ್ಲವೆಂದು ನನಗೆ ತೋರುತ್ತದೆ ಪಂಜಾಬಿನ ಪ್ರಕರಣವನ್ನು ನೋಡಿ ಅಲ್ಲಿ ಭಾರತೀಯರ ರಕ್ತವನ್ನು ಹಿಂಡುತ್ತಿದ್ದಾರೆ ಇಂಡಿಯಾ ಸರಕಾರದವರು ತಮ್ಮ ಸ್ವಂತ ಅಧಿಕಾರಿಗಳ ವರದಿಯಿದ್ದಾಗ್ಗೆ ಅದನ್ನೂ ಲಕ್ಷಿಸದೆ ಪಂಜಾಬಿನ ಮೇಲೆ ಪ್ರತೀಕಾರ ಕ್ರಿಯೆಯನ್ನು ತೆಗೆದುಕೊಳ್ಳಲು ಆರಂಭಿಸಿದ್ದಾರೆಯೋ? ಇಲ್ಲ ಖರ್ಚು ಖರ್ಚು ಎಂಬ ಕೂಗಿನಿಂದ ಹಣ ಕೊಡಿ ಹಣ ಕೊಡಿ ಎಂದು ಮೊರೆಯಿಟ್ಟರೆ ಈ ಸರಕಾರಕ್ಕೇನು ಅಧಿಕಾರವಿದೆ? ಈ ಪರಿಸ್ಥಿತಿಗಳಿಂದ ಅವರಿಗೆ ಒಂದು ಬಿಡಿಕಾಸನ್ನು ಕೊಡಕೂಡದು' ಎಂದರು.

ಸರದಾರ್ ಮಂಗಳಸಿಂಗರು ನಂತರ ಮಾತನಾಡುತ್ತ ಅಧಿಕಾರಿಗಳು ಹಣವನ್ನು ವೆಚ್ಚಮಾಡುತ್ತ ಹೋದಂತೆಲ್ಲ ಅಧಿಕಾರೇತರ ಸದಸ್ಯರು ಅವರಿಗೆ ಹಣವನ್ನು ಒದಗಿಸಿಕೊಡುತ್ತಿರುವುದು ಯಾವ ನ್ಯಾಯ? ಅವರಿಗೆ ಒಂದು ಕಾಸನ್ನೂ ಕೊಡಕೂಡದು. ಅವರ ನಡತೆಗೆ ಇದೊಂದು ಔಷಧ ಎಂದರು

ಮುಂಬಾಯಿಯಲ್ಲಿ ಮದ್ಯಪಾನವು ಕಡಿಮೆಯಾಗುತ್ತದೆ.

ನ್ಯಾಯವಿಧಾಯಕ ಸಭೆಯಲ್ಲಿ ಮಂತ್ರಿಗಳ ಹೇಳಿಕೆ.

ಮುಂಬ್ಯಾ, ಮಾರ್ಚಿ ತಾ ೭.

ಎಕ್ಸೈಜ್ ಇಲಾಖೆಯ ಆದಾಯ ನೀತಿಯ ವಿಚಾರವಾಗಿ ಮುಂಬಾಯಿಯ ನ್ಯಾಯವಿಧಾಯಕ ಸಭೆಯ ಹಲವು ಸದಸ್ಯರು ಉಗ್ರವಾಗಿ ಟೀಕಿಸಿ ಭಾಷಣ ಮಾಡಿದರು ಮಂತ್ರಿಗಳಾದ ದಿವಾನ್ ಬಹದ್ದೂರ್ ಎಸ್ ಟಿ ಕಂಬ್ಳಿಯವರು ಸದಸ್ಯರ ಟೀಕೆಗಳಿಗೆ ಸಮಾಧಾನವೀಯುತ್ತಾ ಟೆಂಪರೆನ್ಸ್ ಮತ್ತು ಪ್ರೊಹಿಬಿಷನ್ ನಿರೋಧದ ಉದ್ಯಮಗಳಿಗೆ ಭಂಗ ಬರದಂತೆ ಸರಕಾರವು ಅಧಿಕ ವರಮಾನವನ್ನು ಗ್ರಹಿಸಿಕೊಳ್ಳುವುದೇ ಇಂಡಿಯಾ ಸರಕಾರದ ಎಕ್ಸೈಜ್ ರೀತಿನೀತಿಯೆಂದರು

೧೯೨೪-೨೫ರಲ್ಲಿ ೧೫ ೧೫ ೧೩೫ ಗೆಲನುಗಳಷ್ಟು ಮದ್ಯವನ್ನು ಮುಂಬಾಯಿ ಪ್ರಾಂತ್ಯದ ಪ್ರಜೆಗಳು ಪಾನ ಮಾಡಿದರಂತೆ ೧೯೩೩-೩೪ರಲ್ಲಿ ಈ ಸಂಖ್ಯೆಯು ೧೦,೪೯,೧೦೨ ಗೆಲನುಗಳಷ್ಟು ಕಡಮೆಯಾಯಿತು. ಅಂದರೆ ಒಟ್ಟು ೫ ಲಕ್ಷ ಗೆಲನುಗಳು ಕಡಮೆಯಾಯಿತಂತೆ. ಕಳೆದ ಹತ್ತು ವರ್ಷಗಳಿಂದ ವರ್ಷವರ್ಷಕ್ಕೂ ಮದ್ಯಪಾನವು ಅಲ್ಲಿಯ ಪ್ರಜೆಗಳಲ್ಲಿ ಕಡಮೆಯಾಗುತ್ತಿದೆ

೧೯೨೫—೨೬	೧ ೪೫ ೪೭೬ ಗೆಲನುಗಳು
೧೯೨೬—೨೭	೧ ೩೦ ೬೭೫
೧೯೨೭—೨೮	೧೨ ೩೭ ೭೩೪
೧೯೨೯—೩೦	೧೨ ೮೮ ೯೦೭
೧೯೩೦—೩೧	೯ ೬೫ ೮೫೩
೧೯೩೧—೩೨	೧೦ ೩೫ ೬೭೬
೧೯೩೨—೩೩	೧೦ ೩೯ ೦೬೫
೧೯೩೩—೩೪	೧೦ ೪೨ ೧೦೦

೧೯೨೭-೨೮ರಲ್ಲಿ ೧೯೨೮-೨೯ರಲ್ಲಿ ಮದ್ಯಪಾನವು ವಿಶೇಷವಾಗಿತ್ತು ೧೯೩೦-೩೧ರಲ್ಲಿ ಶಾಸನಭಂಗ ಚಳವಳಿಯ ದೆಸೆಯಿಂದಲೂ ಪಿಕೆಟಿಂಗಿನಿಂದಲೂ ಅದು ಕಡಮೆಯಾಯಿತು

ಪ್ರೊಫೆಸರ್ ಗಣೇಶ ಪ್ರಸಾದರ ಮರಣ

ಭಾಷಣ ಮಾಡುತ್ತಿದ್ದಾಗ ಕೆಳಗೆ ಬಿದ್ದು ದಿವಂಗತರಾದರು.

ಆಗ್ರಾ ಮಾರ್ಚಿ ೧೦

ಕಲಕತ್ತಾ ವಿಶ್ವವಿದ್ಯಾಲಯದ ಗಣಿತ ಶಾಸ್ತ್ರ ಅಧ್ಯಾಪಕರಾದ ಡಾ। ಗಣೇಶ ಪ್ರಸಾದರು ಆಗ್ರಾವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯ ಕೌನ್ಸಿಲ್ ಮೀಟಿಂಗಿನಲ್ಲಿ ಭಾಗವಹಿಸಿ ಸಣ್ಣ ಭಾಷಣವೊಂದನ್ನು ಮಾಡಿ ಪಶ್ಚಾತ್ತನೆ ಕೆಳಕ್ಕೆ ಬಿದ್ದುಬಿಟ್ಟರು ಕಣ್ಣಿನವೇ ಥಾಂಸನ್ ಚಿಕಿತ್ಸಾಲಯಕ್ಕೆ ಅವರನ್ನು ಸಾಗಿಸಲಾಗಿ ಅಲ್ಲಿ ಅವರು ಮೃತಪಟ್ಟರು. ಮೆದುಳಿನಲ್ಲಿದ್ದ ರಕ್ತನಾಳ ಒಡೆದು ಹೋದ ಪ್ರಯುಕ್ತ ಈ ಮರಣವುಂಟಾಯಿತೆಂದು ಹೇಳಲಾಗಿದೆ ಅದಕ್ಕೆ ವೈದ್ಯಶಾಸ್ತ್ರದಲ್ಲಿ "ಸೆರಿಬ್ರಲ್ ಹೆಮರೇಜ್" ಎಂಬುದಾಗಿ ಹೇಳುತ್ತಾರೆ

ದಿವಂಗತರು ಹಿಂದೆ ಕಾಶಿಯ ಹಿಂದೂ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು

ಡಾ। ಗಣೇಶಪ್ರಸಾದರು ನಮ್ಮ ದೇಶದ ಗಣಿತಶಾಸ್ತ್ರಜ್ಞರಲ್ಲಿ ಬಹಳ ಹೆಸರುವಾಸಿಯಾದವರು ಅವರು ಅನೇಕ ಹೊಸ ಶೋಧನೆಗಳನ್ನು ನಡೆಸಿದ್ದಾರೆ ಕ್ಯಾಲ್ಕ್ಯುಲೇಶನ್ ಮೇಲೆ ಪುಸ್ತಕಗಳನ್ನು ಬರೆದಿದ್ದಾರೆ. ಹಾರ್ಮೋನಿಕ್ಸ್ ಎಂಬ ಗಣಿತಶಾಸ್ತ್ರದ ಭಾಗದಲ್ಲಿ ಇವರು ಅದ್ವಿತೀಯ ಪಂಡಿತರಾಗಿದ್ದರು ಇವರು ಜರ್ಮನಿಯ ಗಾಟಿಂಜೆನ್ ವಿಶ್ವವಿದ್ಯಾಲಯದಲ್ಲಿಯೂ ಹೆಸರು ಪಡೆದಿದ್ದರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ೧೯೧೪ರಲ್ಲಿ ನೂತನ ವಿಜ್ಞಾನ ಬೋಧನಾಲಯವೇರ್ಪಟ್ಟಾಗ ಅಲ್ಲಿಗೆ ಇವರನ್ನು ವಿಶೇಷ ಅಧ್ಯಾಪಕರನ್ನಾಗಿ ತೆಗೆದುಕೊಳ್ಳಲಾಯಿತು ೧೯೧೮-೧೯೨೮ ವರೆಗೆ ಇವರು ಬನಾರಸ್ ಸೆಂಟ್ರಲ್ ಹಿಂದೂ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಇವರು ಬಹಳ ಸ್ವತಂತ್ರ ಸ್ವಭಾವದವರು ಉತ್ಕಟ ದೇಶಾಭಿಮಾನಿಗಳು, ಬಹಳ ಸರಳಜೀವಿಗಳು, ಇವರ ಮರಣದಿಂದ ನಮ್ಮ ದೇಶದ ವಿದ್ವನ್ಮಂಡಲಿಗೆ ಬಹಳ ನಷ್ಟವುಂಟಾಯಿತೆಂದು ಹೇಳಬಹುದು.

ಯೂರೋಪ್.

ಪೋಲೀಸ್ ಇನ್ಸ್‌ಪೆಕ್ಟರನ ಪಿತೂರಿ. ಶಿಕ್ಷೆ ವಿಧಿಸಿದರು!

ಲಿಲ್ಲೆ, ಮಾರ್ಚ್, ೯

ಇಲ್ಲಿ ಬಹು ಪ್ರಖ್ಯಾತನಾದ ಪೋಲೀಸ್ ಇನ್ಸ್‌ಪೆಕ್ಟರ್ ಮುಂಡಾಲ ಎಂಬವನು ಸರಕಾರದ ಹಿತ ಚಿಂತಕನಂತೆ ವರ್ತಿಸುತ್ತಿದ್ದನು. ಕಳೆದ ವರ್ಷ ಅಲ್ಲಿಯ ಇನ್‌ಲೆಂಡ್ ರೆವಿನ್ಯೂ ಆಫೀಸಿನಿಂದ ೩೦೦,೦೦೦ ಫ್ರಾಂಕ್ಸ್‌ಗಳ ಅಂಚೆಟಿಕೆಟು ಕದ್ದೊಯ್ಯಲ್ಪಟ್ಟಿತು. ಅಪರಾಧಿಗಳು ಯಾರೆಂದು ಕಂಡುಹಿಡಿಯಲಾಗಲಿಲ್ಲ. ಜಪ್ತಿ ನಡೆಸಿದಾಗ ಕಳ್ಳರ ಮುಖಂಡನು ಮುಂಡಾಲನೆಂದೇ ತಿಳಿದುಬಂತು. ಅವನನ್ನು ನಾಲ್ಕು ವರ್ಷಗಳ ಕಠಿಣ ಸಜೆಗೆ ಗುರಿಪಡಿಸಿದರು.

ಶ್ರೀ ಸುಭಾಷ್ಚಂದ್ರ ಭೋಸರು ಇನ್ನೊಂದು ಗ್ರಂಥರಚನೆ!

ವಿಯೆನ್ನಾ, ಮಾರ್ಚಿ ೮

ಜಿನೇವಾದಲ್ಲಿ ಶ್ರೀ ವಿ ಜೆ ಪಟೇಲರ ತೈಲಚಿತ್ರದ ಅನಾವರಣಕ್ಕಾಗಿ ಶ್ರೀ ಬೋಸರು ಜಿನೇವಾಕ್ಕೆ ಇದೇ ೩೦ ೧೫ಕ್ಕೆ ಹೋದರು. ಅಲ್ಲಿಂದ ಪ್ಯಾರಿಸಿಗೆ ತಾನು ಹೋಗುವೆನೆಂದಿರುವರು. ತಾನು ಸ್ವಲ್ಪ ಸೌಖ್ಯ ಹೊಂದಿರುವೆನೆಂದೂ ಆದರೂ ಯಾವುದೋ ಗೂಢ ರೋಗವೊಂದು ತನ್ನಲ್ಲಿದೆಯೆಂದೂ ಅವರು ತಿಳಿಸಿದರು. "ರಾಷ್ಟ್ರೀಯ ಚಳವಳದ ಚರಿತ್ರೆ"ಯೊಂದನ್ನು ಅವರು ಬರೆಯಲಾರಂಭಿಸಿರುವರು. ವಿಯೆನ್ನಾದ ಮುನಿಸಿಪಾಲಿಟಿಯ ಹಲವು ಕ್ರಮನಿಯಮಗಳನ್ನು ಅವರು ಪರಿಶೀಲಿಸಿ ಅವುಗಳು ಹಿಂದೂದೇಶಕ್ಕೆ ಯೋಗ್ಯವಾಗಿವೆ ಎನ್ನುತ್ತಿರುವರು.

ಶ್ರೀ ಸುಭಾಷ್ಚಂದ್ರ ಭೋಸರು

ಗ್ರೀಸ್ ದೇಶದ ಸ್ಥಿತಿ ದಂಗೆಗಾರರನ್ನು ಹಿಡಿದರು.

ಎಥೆನ್ಸ್, ಮಾರ್ಚ್ ೧೧,

ಕಳೆದ ಕೆಲವು ದಿನಗಳ ಹಿಂದೆ ಗ್ರೀಕ ದೇಶದಲ್ಲಿ ಸರಕಾರದೆದುರು ಎದ್ದ ದಂಗೆಯು ಶಮನವಾಗುತ್ತಿದೆ. ಸರಕಾರದ ಸೈನ್ಯಗಳು ಕ್ರಾಂತಿಕಾರರನ್ನು ಸದೆಬಡಿದಿವೆ. ಕ್ರಾಂತಿಕಾರರ ಹೆಲ್ಲಿ ಎಂಬ ಯುದ್ಧನಾವೆಗೆ ಸರಕಾರದವರು ಬೋಂಬು ಹಾಕಿ ಒಡೆದು, ಕ್ರಾಂತಿಕಾರರನ್ನು ಸೋಲಿಸಿದರು. ದಂಗೆಗಾರರು ವಶಪಡಿಸಿಕೊಂಡ ಕವಾಲ ಎಂಬ ಪ್ರಾಂತ್ಯವು ಸರಕಾರಕ್ಕೆ ದೊರೆಯಿತು. ಸೆರೆಸ್ ಎಂಬಲ್ಲಿ ೩೦೦೦ ಮಂದಿಯನ್ನು ಕೈದುಮಾಡಲಾಗಿದೆ. ಗ್ರೀಕ್ ಕ್ರಾಂತಿಕಾರರನಾದ ಜನರಲ್ ಕಮೆನೋಸನು ಮನಸ್ತಿರಿ ಎಂಬಲ್ಲಿ ಆಶ್ರಯಪಡೆಯುತ್ತಿರುವನು.

ಹವನಾದಲ್ಲಿ ಕ್ರಾಂತಿ!

ಹವಾನಾ, ಮಾರ್ಚ್, ೧೧

ಇಲ್ಲಿ ಕ್ರಮುಪ್ರಸಿದ್ಧರ ಹಾವಳಿಗಾರಂಭವಾಗಿರುತ್ತದೆ. ವಿದ್ಯಾರ್ಥಿಗಳು, ಪೋಲೀಸರು, ಸೈನಿಕರು ಇವರೆಲ್ಲರೂ ಪರಸ್ಪರ ಕಾದಾಟಕ್ಕೆ ತೊಡಗಿರುವರು. ಬೋಂಬುಗಳನ್ನು ಎಸೆಯಲಾಗುತ್ತಿದೆ. ರಾತ್ರಿ ಇಡೀ ಜಗಳವು ನಡೆಯುತ್ತಲೇ ಇತ್ತು. ಬ್ರಿಟಿಷರ ರೈಲ್ವೆಗಳ ಕೆಲಸಗಾರರು ಕಾರ್ಯನಿರತರಾಗಿರುವರು. ಟ್ರೇಮುಗಳು ಬಸ್ಸುಗಳು ಕೆಲಸಮಾಡುತ್ತಿವೆ. ವಿದ್ಯುತ್ ಕೆಲಸಗಳನ್ನು ಮಿಲಿಟರಿ ಕಾವಲಿನಿಂದ ನಡೆಸಲಾಗುತ್ತಿದೆ. ದಂಗೆಯು ಯಾವಾಗ ನಿಲ್ಲುವುದೋ ತಿಳಿದಿಲ್ಲ.

ಸ್ಪರ್ಧೆಯಲ್ಲಿ ಸೋಲು!

ಜೋಹಾನ್ಸ್‌ಬರ್ಗ್, ಮಾರ್ಚ್, ೧೧

ಅಲ್ಲಿ ವರ್ಲ್ಡ್ ಹೆವಿವೈಟ್ ಚಾಂಪಿಯನ್‌ಶಿಪ್ (ಭಾರವೆತ್ತುವ ಸ್ಪರ್ಧೆ) ಯಲ್ಲಿ ಮ್ಯಾಕ್ಸ್‌ಶೆಮೆಲಿಂಗ್ ಎಂಬವನು ಅಮೇರಿಕದ ಸ್ಟೀವ್ ಹಮಾಸ್ ಎಂಬವನನ್ನು ಸೋಲಿಸಿರುವನು. ಹಮಾಸನ ಮೈಮೇಲೆಲ್ಲಾ ಗಾಯಗಳಾಗಿವೆ.

ಜರ್ಮನಿ

ಹರ್‌ಹಿಟ್ಲರರು ಅಸ್ವಸ್ಥರಾಗಿರುವರು. ಸರ್ ಜೋನ್ ಸೈಮನರ ಜರ್ಮನ್ ಪ್ರವಾಸ.

ಬರ್ಲಿನ್, ಮಾರ್ಚ್ ೯

ಹರ್‌ಹಿಟ್ಲರರು ಚಳಿಜ್ವರದಿಂದ ಅಸ್ವಸ್ಥರಾಗಿರುವರು. ಒಂದು ಪಕ್ಷದ ವರೆಗೆ ಬವೇರಿಯದಲ್ಲಿದ್ದು ವಿಶ್ರಾಂತಿ ಪಡೆಯಲು ಹೊರಟರು. ಸರ್ ಜೋನ್ ಸೈಮನರ ಆಗಮನಕ್ಕಾಗಿ ಸಿದ್ಧತೆಗಳಾಗುತ್ತಿದೆ. ಬವೇರಿಯ ವಿದ್ಯಾಮಂತ್ರಿಗಳು ವಿಮಾನ ಅಪಘಾತದಿಂದ ಮೃತರಾದರು. ಹಿಟ್ಲರರು ಅವರ ಶವಸಂಸ್ಕಾರವನ್ನು ನಡೆಸಲು ಸಹಕರಿಸಿದರು.

ಇಂಗ್ಲಾಂಡ್.

ಲೇಬರ್ ಸಂಗಡಿಗರ ಚಳವಳ ಮಿ। ಬಾಲ್ಡವಿನ್ನರ ಉತ್ತರ

ಲಂಡನ್ ಮಾರ್ಚ್ ೧೧

ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಲೇಬರ್ ಪಾರ್ಟಿಯವರು ಒಂದು ಠರಾವನ್ನು ತಂದು ಸರಕಾರದ ಸ್ವಂತಸ್ತ್ರ ರಕ್ಷಣಾಕ್ರಮಗಳನ್ನು ಟೀಕಿಸಿದರು. ಈ ಠರಾವು ೪೩೪ರಿಂದ ತಿರಸ್ಕರಿಸಲ್ಪಟ್ಟು ೧೪ ಜನರಿಂದ ಸ್ವೀಕೃತವಾಗದೆ ಬಿದ್ದುಬಿಟ್ಟಿತು. ಲೇಬರ್ ಪಕ್ಷದವರು ಸರಕಾರದ ಶಸ್ತ್ರಸೂತ್ರಗಳನ್ನೂ ಕ್ಷೇತ್ರಪಕ್ಷವನ್ನೂ ನಿಂದಿಸಿದರು. ಸರಕಾರವು ಶಸ್ತ್ರವಿನ್ಯಾಸಕ್ಕೆ ಸಿದ್ಧವಾಗುವುದೇ ಇಲ್ಲವೆಂದು ಟೀಕಿಸಿದರು. ಮಿ। ಬಾಲ್ಡವಿನ್ನರು ಅದಕ್ಕೆ ಉತ್ತರಕೊಡುತ್ತ ಬ್ರಿಟಿಷ ಸರಕಾರವು ಮನಃಪೂರ್ವಕವಾಗಿ ಶಸ್ತ್ರನ್ಯೂನತೆಗೆ ತೊಡಗಿದೆ. ಆದರೆ ಬೇರೆ ರಾಷ್ಟ್ರಗಳು ಮುಂದರಿದಂತೆ ಬ್ರಿಟಿಷ ಸರಕಾರವು ಹಿಂದಿರುಗಲಿಲ್ಲವೆಂದೂ ಹೇಳಿದರು. ಆರೆ ದೇಶಗಳು ೧೯೩೩-೩೪ರಲ್ಲಿ ೩೫೦ ೦೦೦ ೦೦೦ ಪೌಂಡುಗಳನ್ನು ಸೈನ್ಯಕ್ಕಾಗಿ ಕೊಟ್ಟರೆ ೧೯೩೪ರಲ್ಲಿ ೪೯೦ ೦೦೦ ೦೦೦ ಪೌಂಡುಗಳನ್ನು ಕೊಟ್ಟಿವೆ. ಹೀಗೆ ಇಂಗ್ಲಾಂಡು ಮುನ್ನಡೆಯಲಿಲ್ಲವೆಂದು ಅವರು ಸ್ಫೂರ್ತಿಯಿಂದ ನುಡಿದರು.

ಮಿ। ಬಾಲ್ಡವಿನ್ನರವರು.

ರಜತೋತ್ಸವದ ಸಿದ್ಧತೆಗಳು

ಲಂಡನ್, ಫೆಬ್ರವರಿ ೨೮

ಸಾರ್ವಭೌಮರ ಪಟ್ಟಾಭಿಷೇಕ ಮಹೋತ್ಸವದ ಸಂದೇಶಗಳನ್ನು ಬ್ರಿಟಿಷ ದ್ವೀಪದ ೫ ಕಡೆಗಳಿಂದ ಪಡೆದುಕೊಂಡು ೧೬೦೦ ಮಂದಿ ಬಾಲಕರು ಡ್ಯೂಕ್ ಒಫ್ ಯೋರ್ಕರ ಬಳಿಗೆ ರಾತ್ರಿ ಹಗಲು ಓಡಿ ಆ ಸಂದೇಶಗಳನ್ನು ಕೊಡುವ ಒಂದು ಹೊಸ ಏರ್ಪಾಡು ಲಂಡನಿನಲ್ಲಾಗಿದೆ. ೧೩ರಿಂದ ೧೮ ವರ್ಷ ಪ್ರಾಯದ ಈ ಬಾಲಕರು ಎಲ್ಲಿಯೂ ನಿಲ್ಲದೆ ಒಮ್ಮೆಗೆ ಐದ್ನೈದು ಮೈಲುಗಳಷ್ಟು ಓಡಿ ಸಂದೇಶಗಳನ್ನು ಅರಸರ ಮುಗದಿಗೆ ಕೊಡುವರು. ಅವರು ಈ ಸಂದೇಶಗಳನ್ನು ತಂದೆಗೆ ಒಟ್ಟಾಗಿ ಕಳುಹಿಸುವರು. ಒಟ್ಟು ೨೨೫೦ ಮೈಲುಗಳನ್ನು ಈ ಬಾಲಕರು ಓಡಬೇಕಾಗಿದೆ.

ಆಂಗ್ಲೋ ಇಂಡಿಯನ್ ಮಾತುಕತೆ.

ರಷ್ಯಾ, ಮಾರ್ಚಿ ೨೨ ೧೧

ರಷ್ಯದ ಎಂಬೆಸೆಡರರಾದ ಮಿ। ಮೈಸ್ಕಿಯವರು ಪೋರ್ಬಿನ್ ಆಫೀಸಿಗೆ ಬಂದಿದ್ದರು. ಲೋಡ್ ಪ್ರಿವಿಸೀಲ್‌ರಾದ ಮಿ। ಅಂತೋನಿ ಎಡೆನ್‌ರವರು ಮೋಸ್ಕೋವಿಗೆ ಹೋಗಲಿರುವರೆಂಬ ವಾರ್ತೆಯಿಂದ ರಷ್ಯಾ ಸರಕಾರವು ಆನಂದಿತವಾಗಿದೆಯೆಂದು ಅವರು ತಿಳಿಸಿದರು.

ರಷ್ಯಕ್ಕೆ ಹೋಗಿ ಅಲ್ಲಿ ರಾಜಕೀಯ ಮಾತುಕತೆ ನಡೆಸಲಿರುವ ಲೋರ್ಡ್ ಪ್ರಿವಿಸೀಲರಾದ ಮಿ। ಅಂತೋನಿ ಎಡೆನ್ (ಪತ್ರವನ್ನು ಕೈಯಲ್ಲಿ ಹಿಡಕೊಂಡವರು) ಮತ್ತು ಸರ್ ಜೋನ್ ಸೈಮನರು.

ಕೊಲೊಂಬೊ

ಮಾಲ್ಡೀವಿಯ ಸುಲ್ತಾನರು.

ಕೊಲಂಬೊ ಮಾರ್ಚ್ ೧೨.

ಮಾಲ್ಡೀವ್ ದ್ವೀಪಗಳ ಸುಲ್ತಾನ ಮಹಮ್ಮದ್ ಶಮ್ಸುದ್ದೀನ್‌ರೆಂಬವರ ೨ ಮಂತ್ರಿಗಳಾದ ಮೇಲೆ ಅಲ್ಲಿ ಸುಲ್ತಾನರಿದ್ದರೂ ಮಾಜಿ ಸುಲ್ತಾನ್ ಮಹಮ್ಮದ್ ಮಾನ ದ್ವೀಪ ಎಂಬವರ ಪರ ಪ್ರಿನ್ಸ್ ಅಬ್ದುಲ್ ಮಜೀದ್ ಎಂಬವರನ್ನು ಸುಲ್ತಾನರನ್ನಾಗಿ ಆರಿಸಲಾಗಿದೆ.

ಚೈನಾ

ಚೀನಾದ ನಿಷೇಧ.

ನಾನ್‌ಕಿಂಗ ಮಾರ್ಚ್ ೧೧

ಸೋವಿಯಟ್ ಸರಕಾರವು ಚೈನೀಸ್ ಈಸ್ಟರ್ನ್ ರೈಲ್ವೆಯನ್ನು ಜಪಾನಿಗೆ ವಿಕ್ರಯಿಸುವುದರಲ್ಲಿದೆ. ಇದನ್ನು ಕೇಳಿ ಚೀನಾ ಸರಕಾರವು ನಿಷೇಧ ಸೂಚನೆ ಮಾಡಿದೆ. ತನಗೂ ಸೋವಿಯಟ್ ಸರಕಾರಕ್ಕೂ ಈ ರೈಲ್ವೆಯಲ್ಲಿ ಅಧಿಕಾರವಿರುವುದರಿಂದ ಈ ವಿಕ್ರಯವು ಅನ್ಯಾಯವಾಗಿದೆ. ಆದರ ಹೇಳಿಕೆ ಹೀಗೆ ಮಾಡುವುದಕ್ಕೆ ತಾನು ಜವಾಬ್ದಾರಿಯಾಗಿಲ್ಲವೆಂದು ತಿಳಿಸಿದೆ.

ಹಿಂದೂದೇಶ

ಮುಸ್ಲಿಮರ ಕೇಳಿಕೆ.

ಸ್ಯಾಂಡಿಲ್ಲಿಗೆ ಮೊನ್ನೆ ೭೬ ಮಂದಿ ಮುಸ್ಲಿಮರ ವರಗದವೊಂದು ಹೋಗಿ, ವೈಸರಾಯರಿಗೊಂದು ಮನವಿಯನ್ನಿತ್ತಿತು. ಆ ಮನವಿಯಲ್ಲಿದ್ದುದೇನು? "ಮುಸ್ಲಿಮರು ಬಿಹಾರ್ ಮತ್ತು ಒರಿಸ್ಸಾ ಖಾತೆಗಳಲ್ಲಿ ಹೆಚ್ಚು ಪ್ರಸಿದ್ಧಿಯಿಲ್ಲ. ಅವರ ಸಂಖ್ಯೆಯು ಈ ಖಾತೆಗಳಲ್ಲಿ ಕಡಮೆ. ಇದು ಹೋಗಬೇಕು. ಅಲ್ಲದೆ, ಮುಸ್ಲಿಮರಲ್ಲದವರು ತಮ್ಮ ಪ್ರಾಂತ್ಯಗಳಲ್ಲೇ ಕೆಲಸ ನೋಡಿಕೊಂಡಿರಬಾರದು; ಅವರನ್ನು ಅವರ ಪ್ರಾಂತ್ಯದ ಹೊರಗೆ ಕಳುಹಿಸಬೇಕು. ಹಾಗೆ ಮಾಡಿದರೆ, ಹೆಚ್ಚಿನ ಅಸೀ, ಅಧಿಕಾರಿಗಳ ಪರಸ್ಪರ ಸ್ನೇಹಭಾವದ ದಾಕ್ಷಿಣ್ಯ ಆದರಿಂದುಂಟಾಗುವ ಹಾವಳಿ, ಇವೆಲ್ಲ ನಿಲ್ಲುವುವು" ಎಂಬುದೇ ಆ ಮನವಿಯ ಹೇಳಿಕೆ. ವೈಸರಾಯರ ಉತ್ತರವೇನೋ ತಿಳಿದಿಲ್ಲ.

'ಅಭ್ಯಾಸ'ವೆಂಬುದರ ಅರ್ಥವನ್ನು

—ತಿಳಿದವರು ಹಲವು. ಆದರೆ ಅದರ ಅನರ್ಥವನ್ನು ತಿಳಿದವರು ಎಷ್ಟು ಮಂದಿ? ಅಭ್ಯಾಸದ ಪ್ರತಾಪವನ್ನು ನೋಡಿ. ಲಾಹೋರಿನ ಬೇಗಮುಹಮ್ಮಕಸ್ಪಳು ಈಗ ನೂರು ವರ್ಷ ಪ್ರಾಯಸ್ಥೆಳಾಗಿರುವಳು. ಅವಳ ಆಯುಷ್ಯದಲ್ಲಿ ೩೩ ವರ್ಷಗಳನ್ನು ಜೈಲಲ್ಲೇ ಕಳೆದಳಂತೆ. ಒಂದು ದಿನವನ್ನಾದರೂ ಕದಿಯದೆ ಕಳೆಯಲು ಅವಳಿಗಾಗುವುದಿಲ್ಲ. ಸೆಂಟ್ರಲ್ ಜೈಲಿನಿಂದ ಮೊನ್ನೆ ಹೊರಗೆ ಬಂದು ಪುನಃ ಕದ್ದು ಪುನಃ ಸೆರೆಯನ್ನು ತನ್ನ ೧೦೦ನೇ ವಯಸ್ಸಿನಲ್ಲಿ ಪ್ರವೇಶಿಸಿರುವಳು.

ಬೆಂಕಿ! ಬೆಂಕಿ! ಬೆಂಕಿ!

ಎಂದು ಮೂರು ಸಲ ಹೇಳಿದೊಡನೆ ಎದೆಯುದ್ದವನು ಕಂಗಾಲಾಗುವನಷ್ಟೆ. ಆದರೆ ಈ ವಾರ್ತೆಯನ್ನು ಓದಿ ಯಾರೂ ಅಷ್ಟು ಕಳವಳಪಡಬೇಕಾದುದಿಲ್ಲ. ಮಾರ್ಚ್ ೧ ನೇ ತಾರೀಖಿನ ದಿನ ಲಕ್ನೋದ ಗವರ್ನ್‌ಮೆಂಟ್ ಹೌಸಿನ ಹಾಲಿನಲ್ಲಿ ಮಹಾ ಬೆಂಕಿ ಎದ್ದಿತು. ಮೂರು ಮೂರು ಸಲ ಬೆಂಕಿ ಬೆಂಕಿ ಬೆಂಕಿ ಎಂದು ಎಲ್ಲರೂ ಓಡಿದರು. ನೋಡುವುದೇನು? ಸುಡುತ್ತಿರುವುದು ಬರೀ ಬೈಹುಲ್ಲು! ಸರಕಾರದ ಬೈಹುಲ್ಲಿನವೇ! ಆ ಬೆಂಕಿಯನ್ನು ನಂದಿಸುವುದಕ್ಕಾಗಿ ಫಯರ್ ಬ್ರಿಗೇಡಿನವರೇ ಸಾಲುಸಾಲಾಗಿ ಓಡಿ ಬಂದರು. ಬೆಂಕಿಯು ಈಗ ನಂದಿದಬಹುದಷ್ಟೆ.

ಶ್ರೀ ಜಯರಾಮ್ ದೌಲತ್ ರಾವ್‌ರವರು.

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಪರವಾಗಿ ಮಧ್ಯಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದು ಅಲ್ಲಿಯ ಮಹಾರಾಷ್ಟ್ರ ಪ್ರಾಂತಗಳಿಗಾಗಿ ಕೆಲವು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಿರುವರು.

ಹೊಡೆದುದೇ ಅಲ್ಲ—ಕೊಂದೇ ಬಿಟ್ಟರು

ಲಕ್ನೋವಿನಿಂದ ಒಂದು ಭಯಂಕರ ವಾರ್ತೆಯು ತಲಪಿದೆ. ಅಲ್ಲಿಯ ಬಿಂದಾ ಎಂಬಲ್ಲಿ ಒಬ್ಬ ಕೊಲೆಗಾರ. ಅವನನ್ನು ಹಿಡಿಯುವುದಕ್ಕೆಂದು ಧೈರ್ಯಶಾಲಿಯಾದ ಪೋಲೀಸ ಸಬ್ ಇನ್ಸ್‌ಪೆಕ್ಟರೊಬ್ಬರು (ಅವರ ಹೆಸರು ತಿಳಿದಿಲ್ಲ) ಆ ಗ್ರಾಮಕ್ಕೆ ಹೋದರು. ಸಾಹಸಪಟ್ಟು ಅಲ್ಲಿ ಕೊಲೆಗಡುಕನನ್ನು ಸೆರೆಹಿಡಿದರು. ಅವನನ್ನು ಹಿಡಿದುಕೊಂಡು ಬರುವಾಗ ಮಧ್ಯೆ, ಒಂದು ಮನೆಯ ಬಳಿ ಆ ಧೂರ್ತನು ಎದೆಯೊಡೆಯುವಂತೆ ಅರ್ಭಟಿಸಿದನು. ಒಡನೆ ಬಂದರಲ್ಲ! ಅವನ ಸಂಗಾತಿಗಳು! ಹಾರೆ ಗುದ್ದಲಿ ಕತ್ತಿ ಕೈದುಗಳನ್ನು ತಂದು ಸಬ್ ಇನ್ಸ್‌ಪೆಕ್ಟರ ತಲೆಯಿಂದ ಕಾಲಿನ ವರೆಗೆ ಮನವಣೆಯ ಪೂಜೆ ಮಾಡಿದರು. ಎಂತಹ ಕಷ್ಟ ಬಂತಲ್ಲ! ಜೀವನ್ಮೃತರಾಗಿ ಪಕ್ಕದಲ್ಲಿದ್ದ ಬೇಲಿಯಲ್ಲೇ ಬಿದ್ದರು. ಈ ಸುದ್ದಿಯು ಅಲ್ಲೇ ಕೆಲವು ಹೊತ್ತಿನಲ್ಲಿ ದಿ। ಸೂಪರಿಂಟೆಂಡೆಂಟರಿಗೆ ತಿಳಿದು ಬಂದು ಅವರು ಕೂಡಲೇ ಸಬ್ ಇನ್ಸ್‌ಪೆಕ್ಟರನ್ನು ಆಸ್ಪತ್ರೆಗೆ ಸಾಗಿಸಿದರು. ಪಾಪ, ಸಬ್ ಇನ್ಸ್‌ಪೆಕ್ಟರರು ಆಸ್ಪತ್ರೆಯಲ್ಲೇ ಪ್ರಾಣಬಿಟ್ಟರು. ಹೊಡೆದವರ ದಸ್ತಗಿರಿಯಾಗಿರುತ್ತದೆ.

ಪಂಡಿತ ಜವಾಹರಲಾಲರ ಬಿಡುಗಡೆ?

ದಿಲ್ಲಿಯ ಶಾಸನ ಸಭೆಯಲ್ಲಿ ಶ್ರೀ। ನೀಲಕಾಂತ ದಾಸರು ಪಂಡಿತ ಜವಾಹರಲಾಲರ ಬಿಡುಗಡೆಯ ಪ್ರಶ್ನೆಯನ್ನೆತ್ತಿ "ಬಿಡುಗಡೆಯಾಗುತ್ತದೆಯೆಂಬ ವಾರ್ತೆಯು ನಿಜವೋ" ಎಂದು ಕೇಳಿದರು. ಅದಕ್ಕೆ ಸರ್ ಹೆನ್ರಿ ಕ್ರೈಕರು ಹೀಗೆಂದರು:—"ಪಂಡಿತ ಜವಾಹರಲಾಲರನ್ನು ಬಿಡುಗಡೆ ಮಾಡುವ ಅಥವಾ ಅವರನ್ನು ಪರದೇಶಕ್ಕೆ ಪತ್ನಿಯೊಡನೆ ಕಳುಹಿಸುವ ವಿಚಾರವು ಸರಕಾರದ ಆಲೋಚನೆಯಲ್ಲಿದೆ" ಎಂದರು. ಜವಾಹರಲಾಲರ ಬಿಡುಗಡೆಯು ಬೇಗನೇ ಆಗಲಿರುವುದು?

ಮಂಗಳೂರು.

ಮಂಗಳೂರು:— ಇಲ್ಲಿಗೆ ಬಂದಿರುವ ಗಾಯಕ ಶಿಖಾಮಣಿ ಶ್ರೀಮಾನ್ ಯಂ. ಆನಂದ ರಾಯರವರ ಸಂಗೀತ ಕಚೇರಿಯು ಇದೇ ಕಳೆದ ತಾ. ೬ನೇ ಸಂಜೆ ಮುಖ್ಯ ಪ್ರಾಣ ದೇವಸ್ಥಾನದಲ್ಲಿ ಶ್ರೀಗಳಾದ ರಾವ ಬಹದೂರ್ ನೆಲ್ಲಿಕಾಯಿ ವೆಂಕಟರಾವ್, ಕುಡಾಕೆ ವೆಂಕಟ್ರಮಣಾಚಾರ್ ಹಾಗೂ ಪತ್ತುನಾಯಕರ ಪ್ರೋತ್ಸಾಹದಿಂದ ನೆರವೇರಿತು. ಈ ಸಂದರ್ಭದಲ್ಲಿ ವ್ಯವಸ್ಥಾಪಕರ ಅಪೇಕ್ಷೆಯಂತೆ ಶ್ರೀ ಪುಂಡಲೀಕಾಚಾರ್ಯರು ಸಮಯೋಚಿತವಾದ ಭಾಷಣದಿಂದ ಗಾಯಕರ ಶ್ರೇಯಸ್ಸನ್ನು ಬಯಸಿ ಸಭಿಕರನ್ನು ಸಂತೋಷಗೊಳಿಸಿದರು. ಕೆಲವು ಗೌಡಸಾರಸ್ವತ ಪ್ರಮುಖರು ತಾ. ೮ಕ್ಕೆ ಏರ್ಪಡಿಸಿದ ಸಂಗೀತ ಕಚೇರಿಯಲ್ಲಿ ಶ್ರೀಮತಿಯವರನ್ನೂ ಹಾರ್ಮೋನಿಯಂ ಮಾಸ್ಟರ್ ಬಿ ಆನಂದರಾಯರನ್ನೂ ಬೆಳ್ಳಿಯ ಕಪ್ಪು ಮೊದಲಾದ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಿದರೆಂದು ತಿಳಿಯುತ್ತೇನೆ.

ಕಳೆದ ಡಿಸೆಂಬರ ೫ನೇ ತಾರೀಕಿನಲ್ಲಿ "ಕೃಷ್ಣ, ಬುದ್ಧ, ಕ್ರಿಸ್ತ", 'ಇದ್ದವರು ಮೂವರು ಉದ್ಧವರು ಯಾರು?' ಎಂಬ ಪುಸ್ತಕದ ಗ್ರಂಥಕರ್ತರಿಗೆ ಉಡುಪಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮಂಗಳೂರು ಬಿಷೋಪರ ಮತ್ತು ಗುರುಗಳ ಮೇಲೆ ದಾವೆಯ ತನಿಖೆಯ ಸಮಯದಲ್ಲಿ ಡಾ. ಜೆ. ಎಸ್ ಸಿಕೇರ ಎಂಬವರು ಸುಳ್ಳುಗಾರರೆಂದು ಹೇಳಿದುದಕ್ಕೆ ಮುನ್ಸಿಫರು ಗ್ರಂಥಕರ್ತರಿಗೆ ಏಳು ದಿನದ ಸಾದಾ ಸಜೆಯನ್ನು ವಿಧಿಸಿದ್ದರು. ಇದೇ ತಿಂಗಳ ತಾ. ೬ರಲ್ಲಿ ಡಿಸ್ಟ್ರಿಕ್ಟ್ ಜಡ್ಜರು ಅದನ್ನು ರದ್ದುಮಾಡಿರುತ್ತಾರೆ.

ಇದೇ ಕಳೆದ ತಾ ೧೪ನೇ ಬುಧವಾರ ಸಂಜೆ ೬ ಗಂಟೆಗೆ ಕೋರ್ಟ್‌ಹಿಲ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಸ್ವಾಮಿ ಈಶ್ವರಾನಂದ ಸಾಹಿತ್ಯ ಸಂಘದ ದ್ವಿತೀಯ ವಾರ್ಷಿಕೋತ್ಸವವು ಶ್ರೀಮಾನ್ ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ತಾ. ೨–೩–೩೬ರಲ್ಲಿ ಮಂಗಳೂರು ಡಿ. ಬೋ. ಆಫೀಸಿನಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಬೋರ್ಡ್ ಸ್ಕೂಲ್ ಉಪಾಧ್ಯಾಯರ ವಿಶೇಷ ಸಭೆಯು ಸೇರಿತು. ಸುಮಾರು ೧೫೦ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರು ಹಾಜರಿದ್ದರು. ಶ್ರೀ ಎಸ್ ಎನ್ ಚನ್ನಪ್ಪ ಗೌಡರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಸಂಘದ ಕಾರ್ಯದರ್ಶಿಯವರು ಸಭೆಯ ಉದ್ದೇಶ, ಮುಂದೆ ಉಪಾಧ್ಯಾಯರಿಗೆ ಬರುವ ಆಪತ್ತು, ಈ ಬಾಬಿನಲ್ಲಿ ಬೋರ್ಡಿನವರು ತೋರಿಸಬೇಕಾದ ಸಹಾನುಭೂತಿ, ಮುಂತಾದ ವಿಷಯಗಳನ್ನು ವಿವರಿಸಿ ಹೇಳಿದ ನಂತರ, ಮು। ೮೫ ಮೋಳಹಳ್ಳಿ ಶಿವರಾಯರು ಬೋರ್ಡಿನ ಈಗಿನ ಪರಿಸ್ಥಿತಿಯನ್ನು ಜನರಲ್ ಮತ್ತು ಎಜ್ಯುಕೇಶನ್ ಫಂಡಿನ ಸಾರಾಂಶವನ್ನೂ ಹೇಳಿ ೧೯೩೫–೩೬ಕ್ಕೆ ಸ್ಕೇಲಿನಂತೆ ಉಪಾಧ್ಯಾಯರಿಗೆ ಸಂಬಳ ಕೊಡಲಿಕ್ಕೆ ಬೋರ್ಡಿನಲ್ಲಿ ದುಡ್ಡಿನ ಅಭಾವ ತುಂಬಾ ಇದೆಯೆಂದು ಸೂಚಿಸಿದರು. ನಂತರ ಈ ಕೆಳಗಿನ ಠರಾವುಗಳಾದುವು— ೧ ಬೋರ್ಡ್ ಉಪಾಧ್ಯಾಯರಿಗೆ ಈಗಿರುವ ಸಂಬಳವೇ ಅತಿ ಕಡಮೆಯಾಗಿರುವುದರಿಂದಲೂ, ೧೯೩೪ನೇ ಏಪ್ರಿಲಿನಲ್ಲಿ ಜ್ಯಾರಿಗೆ ಬಂದ ಸ್ಕೇಲು ಬಹು ಮಂದಿ ಉಪಾಧ್ಯಾಯರಿಗೆ ಗೋಚರಕ್ಕೆ ಬಾರದಿರುವುದರಿಂದಲೂ, ಜನರಲ್ ಫಂಡಿನಲ್ಲಿ ಹಣ ಉಳಿಯುವಂತೆ ಬೋರ್ಡಿನವರು ಪ್ರಯತ್ನಿಸಿ ಎಜುಕೇಶನ್ ಫಂಡನ್ನು ತಕ್ಕಷ್ಟು ಪುಷ್ಟೀಕರಿಸಿ ಸಂಬಳದಲ್ಲಿ ಕಡಿತವಾಗದಂತೆ ನಡೆಸಿಕೊಳ್ಳಬೇಕಾಗಿ ಬೋರ್ಡನ್ನು ಕೇಳಿಕೊಳ್ಳುವುದಾಗಿ ನಿರ್ಣಯಿಸಲಾಯಿತು. ೨ ಸಂಬಳದಲ್ಲಿ ಕಡಿತವಾಗದೆ ನಿವೃತ್ತಿಯಿಲ್ಲದ ಸಂದರ್ಭದಲ್ಲಿ ಒಡ ಎಲಿಮೆಂಟರಿ ಶಾಲಾ ಉಪಾಧ್ಯಾಯರನ್ನು ಮಾತ್ರ ಬಲಿಕೊಡದೆ ಬೋರ್ಡಿನ ಎಲ್ಲಾ ಸಂಸ್ಥೆಯವರನ್ನೂ ಉಪಾಧ್ಯಾಯರನ್ನೂ ಏಕರೀತಿಯಿಂದ ನಡೆಸುವಂತೆ ಮಾನ್ಯ ಬೋರ್ಡನ್ನು ಕೇಳಿಕೊಳ್ಳುವುದಾಗಿ ನಿರ್ಣಯಿಸಲಾಯಿತು. ೩ ಡಿ। ಬೋರ್ಡಿನವರು ೧೯೩೪ನೇ ಏಪ್ರಿಲ್ ೧ರಲ್ಲಿ ಜಾರಿಗೆ ತಂದ ಉಪಾಧ್ಯಾಯರ ಸಂಬಳದ ಸ್ಕೇಲು ಮಾನ್ಯ ಸರಕಾರದವರಿಂದಲೇ ಸೂಚಿಸಲ್ಪಟ್ಟು ಅವರ ಅನುಜ್ಞೆಗೊಳಪಟ್ಟುದರಿಂದ ಆ ಸ್ಕೇಲು ಪ್ರಕಾರ ಸಂಬಳ ಕೊಡುವರೆ ಬೋರ್ಡಿನಲ್ಲಿ ಕಡಿಮೆಯಾಗುವ ಹಣವನ್ನು ಸರಕಾರವೇ ಕೊಡುವಂತೆ ಮಾನ್ಯ ಸರಕಾರವನ್ನು ಕೇಳಿಕೊಳ್ಳುವಂತೆ ನಿರ್ಣಯಿಸಲಾಯಿತು. (೪) ಡಿ। ಬೋರ್ಡಿನಲ್ಲಿ ಉಪಾಧ್ಯಾಯರ ಸಂಕಷ್ಟವು ನಿವೃತ್ತಿ ಹೊಂದಬೇಕಾದಲ್ಲಿ ಉಪಾಧ್ಯಾಯರ ಪ್ರತಿನಿಧಿಗಳಿಂದ

ತಾಲೂಕುಗಳಿಂದ.

ಮೂಲ್ಕಿ:—ರಾಜಶ್ರೀ ಯಂ. ಬಿ ಅಮೀನರವರ ಮೂಲಕ ಮುಂಬಾಯಿ ಮಹನೀಯರು ಮೂಲ್ಕಿ ಜಿಲ್ಲಾ ಹರಿಜನ ಸೇವಾ ಸಂಘಕ್ಕೆ ರೂ. ೧೮೦ಕ್ಕೆ ವಂತಿಗೆ ಕೊಟ್ಟವರು ಶ್ರೀಗಳಾದ-ಕೆ. ವೆಂಕಪ್ಪಸುವರ್ಣರು, ಯಚ್. ಮೈಂದನವರು, ಬಾಬು ಯನ್. ಕೋಟ್ಯಾನವರು, ಸೋಮಯನವರು, .ಬಿ. ನಾರಾಯಣನವರು, ಯಂ. ಮಮ್ಮುಕುಕ್ಕನವರು, ಯಂ. ಚಂದಯ ಕೋಟಿಯನವರು, ಸೋಮೇಶ್ವರ ಫಕೀರನವರು, ಟಿ. ವೈ. ಸುವರ್ಣನವರು, ಯಂ. ಗಡಿಯಾರರವರು, ಸಂಕಪ್ಪ ವಿ ಸಾಲಿಯಾನರು ಯಂ. ಕೋಟ್ಯಿ ಸಾಲಿಯಾನರು, ಬಿ ವೈ. ಕೂಳೂರು ಕಾರವರು, ವೈ. ಎ ಸುವರ್ಣರವರು, ಯಂ. ಕೆ. ಎಲ್ಲಪ್ಪ ದೇವಡಿಗರು, ಯಚ್. ರಾಮು ಶೆಟ್ಟಿ ಚಂದಯ ಶೆಟ್ಟಿ, ಒಬ್ಬ ಹಿತಚಿಂತಕರು ರೂ. ೩

ಧನ ಸಹಾಯ ಮಾಡಿದ ಮಹನೀಯರಿಗೂ ಆ ಕುರಿತು ತುಂಬಾ ಪ್ರಯಾಸಪಟ್ಟ ರಾ ಯಂ ಬಿ. ಅಮೀನರವರಿಗೂ ಯಂ. ಕೂಸಪ್ಪನವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಮುಂಬಾಯಿಯ ಇತರ ಮಹನೀಯರೂ

ಕೂಡಿದ ಒಂದು ಡೆಪ್ಯುಟೇಶನನ್ನು ಮಾನ್ಯ ಸರಕಾರದ ಮುಂದೆ ಕೊಂಡುಹೋಗುವುದಾಗಿ ನಿರ್ಣಯಿಸಲಾಯಿತು. ೫ ಉಪಾಧ್ಯಾಯರ ಸಂಬಳದಲ್ಲಿ ಕಡಿತವಾಗದಂತೆ ತಕ್ಕ ಸೂಚನೆಗಳನ್ನು ಬೋರ್ಡಿನ ಮುಂದಿಡುವರೇ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು. ಸದ್ರಿ ಕಮಿಟಿಯವರು ಇದೇ ೨೪ನೇ ಪೂರ್ವಾಹ್ನ ೧೧ ಗಂಟೆಗೆ ಮಂಗಳೂರಿನ ಕೋ ಒಪರೇಟಿವ್ ಬೇಂಕಿನ ಕಟ್ಟಡದಲ್ಲಿ ಸೇರಬೇಕಾಗಿಯೂ, ಜಿಲ್ಲೆಯ ಎಲ್ಲಾ ಸಂಘಗಳು ತಮಗೆ ತೋರುವ ಸೂಚನೆಗಳನ್ನು ಇದೇ ತಾ ೨೦ರ ಒಳಗೆ ಸಂಘದ ಕಾರ್ಯದರ್ಶಿಯವರಿಗೆ ವಿಟ್ಲಕ್ಕೆ ಕಳುಹಿಸಿ ಕೊಡಬೇಕಾಗಿ ನಿರ್ಣಯಿಸಲಾಯಿತು.

ಅಖಿಲ ಹಿಂದೂಸ್ಥಾನ ಹರಿಜನ ಸೇವಾ ಸಂಘದ ಜನರಲ್ ಕಾರ್ಯದರ್ಶಿಯವರಾದ ಎ. ವಿ. ಥಕ್ಕರರು ಇದೇ ತಾ. ೪ನೇ ಸೋಮವಾರ ಮಂಗಳೂರಿಗೆ ಬಂದಿದ್ದರು. ಬಂದವರೇ ಡಿ ಸಿ ಮಿಶನಿನಲ್ಲಿಳಿದು, ಊಟ ವಿಶ್ರಾಂತಿಗಳನ್ನು ತೀರಿಸಿ, ಸಂಜೆ ಸಂಘದ ಕಚೇರಿಯಿಂದ ಅಲ್ಲಿಯೇ ನಡೆಯುತ್ತಿರುವ ಟ್ರೈನಿಂಗ್ ಕ್ಲಾಸನ್ನು ನೋಡಿದರು. ಸಂಜೆ ಗಂಟೆ ೫ಕ್ಕೆ ಅವರ ಸಮಕ್ಷಮದಲ್ಲಿಯೇ ಜಿಲ್ಲಾ ಸಂಘವು ಕೂಡಿಬಂದಿತು.

ಮರುದಿನ ಬೆಳಗ್ಗೆ ಫಲಾಹಾರ ತೀರಿಸಿ ಕಾರ್ಕಳಕ್ಕೆ ಹೋಗಿ, ಅಲ್ಲಿಯ ಪ್ರಮುಖರನ್ನೆಲ್ಲ ಕಂಡು ಮಾತಾಡಿ ಮಧ್ಯಾಹ್ನದ ಊಟವನ್ನು ಶ್ರೀನಿವಾಸ ಆಶ್ರಮದಲ್ಲಿ ತೀರಿಸಿ, ಘಂಟೆ ೨-೩೦ಕ್ಕೆ ಸ್ಥಳೀಕ ಸಂಘದ ಹೆಸರಿನಲ್ಲಿ ಮಹನೀಯರೊಬ್ಬರು ದಾನವಿತ್ತ ೦.೭೨ ಎಕ್ರೆ ೬೫ ಸೆನ್ಸ್ ಸ್ಥಳದ ಮಧ್ಯದಲ್ಲಿ ತೋಡಲಿರುವ ಬಾವಿಯ ಆರಂಭವನ್ನು ಮಾಡಿದರು. ಆ ಬಾವಿಗೆ ಅಮೃತ ಕೂಪವೆಂದು ನಾಮಕರಣ ಮಾಡಿದರು. ಅಲ್ಲಿಂದ ರಾ। ವಕೀಲ ಸದಾಶಿವ ಭಟ್ಟರಲ್ಲಿ ಕೃಪೆಯಾಗಿಸಿ ತೆಗೆದುಕೊಂಡು, ಮಂಗಳೂರಿಗೆ ಬಂದು, ಸಾಯಂಕಾಲದ ಫಲಾಹಾರವನ್ನು ಮಿ। ಮಲ್ಯ ಬ್ರದರ್ಸರ ಮನೆಯಲ್ಲಿ ತೀರಿಸಿ, ಮಿಶನಿನಲ್ಲಿ ನಡೆದ ಮಾಯಾಲಾಂದ್ರ ಪ್ರದರ್ಶನವನ್ನು ನೋಡಿ ರಾತ್ರಿಯ ಭೋಜನವನ್ನು ಡಾ। ಆಡಿಗರಲ್ಲಿ ತೀರಿಸಿ ಅಲ್ಲಿಯೇ ವಿಶ್ರಾಂತಿ ಪಡೆದರು.

ತಾ ೬-೩-೩೬ನೇ ಬುಧವಾರ ಬೆಳಗ್ಗೆ ೬ ಘಂಟೆಯ ರೈಲಿನಲ್ಲಿ ಕಾಸರಗೋಡಿಗೆ ಹೋದರು. ಅವರನ್ನು ಇದಿರುಗೊಳ್ಳುವುದಕ್ಕೆ ಬಂದಿದ್ದ ವಕೀಲ ಶ್ರೀ ರಾಮಶೆಟ್ಟಿ ಮತ್ತು ಉಮೇಶರಾಯರೇ ಮೊದಲಾದವರೊಂದಿಗೆ ಶ್ರೀ ರಾಮಶೆಟ್ಟರಲ್ಲಿಗೆ ಹೋಗಿ ಫಲಾಹಾರವನ್ನು ತೀರಿಸಿ, ಒಂದೆರಡು ಕಾಲೊನಿಗಳನ್ನು ಸಂದರ್ಶಿಸಿ, ನೆಲ್ಲಿಕುಂಜೆ ಲೇಬರ್ ಶಾಲೆಯಲ್ಲಿ ಸಾಧಾರಣ ೪೦ ಮಕ್ಕಳಿಗೆ ಸಂಘದ ಕಡೆಯಿಂದ ವಸ್ತ್ರದಾನವನ್ನು ಮಾಡಿ, ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯಕಲಾಪವು ಇನ್ನಷ್ಟು ಭರದಿಂದ ಸಾಗುವಂತೆ ಆಶೀರ್ವದಿಸಿ, ಮಲಬಾರಿಗೆ ಪ್ರಯಾಣಬೆಳೆಸಿದರು. ಸಂಚಾರದ ಸಮಯ ಅವರೊಡನೆ ಕರ್ನಾಟಕ ಪ್ರಾಂತಿಕ ಸಂಘದ ಅಧ್ಯಕ್ಷರೂ, ನಮ್ಮ ಜಿಲ್ಲಾ ಸಂಘದ ಅಧ್ಯಕ್ಷರೂ ಇದ್ದರು.

ಮಂಗಳೂರು ಶ್ರೀ ಶಾಂತೀಶ್ವರಸ್ವಾಮಿ ಚೈತ್ಯಾಲಯದಲ್ಲಿ ನಡೆಯುವ ವರ್ಷಾವಧಿ ಮಹೋತ್ಸವವು ಇದೇ ತಾ. ೧೯–೩–೩೬ರಿಂದ ಪ್ರಾರಂಭವಾಗಿ ತಾ. ೨೫ನೇ ಬುಧವಾರ ಮಹೋತ್ಸವದೊಡನೆ ೧೦೮ ಕಲಶಾಭಿಷೇಕ ಮತ್ತು ತಾ. ೨೬ನೇ ಗುರುವಾರ ಪಂಚಾಮೃತ ಅಭಿಷೇಕ, ಸಂಘ ಸಂತರ್ಪಣ ಇತ್ಯಾದಿ ಶ್ರೀ ಸನ್ನಿಧಿಯಲ್ಲಿ ನಡೆಯಲಿರುವುವು.

ಈ ಕಡೆಗೆ ತಮ್ಮ ಗಮನವನ್ನು ಬೇಗನೆ ಕೊಡುವರೆಂದು ಕೋರುತ್ತೇವೆ" ಎಂದು ಸದ್ರಿ ಸೇವಾ ಸಂಘದ ಜನರಲ್ ಸೆಕ್ರೆಟರಿ—ಎಂ. ಕೆ ಯಲ್ಲಪ್ಪ, ಇವರು ತಿಳಿಸುತ್ತಾರೆ.

ಪೊಳಲಿ:—ಇಲ್ಲಿ ವರ್ಷಂಪ್ರತಿಯಂತೆ ಅಮ್ಮನವರ ದೇವಸ್ಥಾನದಲ್ಲಿ ಮೀನ ಸಂಕ್ರಮಣದ ದಿನ. ಧ್ವಜಾರೋಹಣ ಮಹಾ ಜನರಿಗೆ ಬರಲಿಕ್ಕೆ ಪ್ರಯಾಣ ಸೌಕರ್ಯವಾಗುವಂತೆ ಊರವರೇ ಸೇರಿ ಕಳೆದ ಮಳೆಗಾಲದಲ್ಲಿ ಗುರುಪುರದಿಂದ ಪೊಳಲಿಗೆ ರಸ್ತೆ ಕೆಲಸ ಆರಂಭಿಸಿದರು. ಅರೆವಾಸಿ ಕೆಲಸವಾಗಿ ಹಣದ ಅಡಚಣೆಯಿಂದ ಕೆಲಸ ನಿಂತಿತು. ಮುಂದೆ ಉತ್ಸವದ ಸಮಯ ಫೆಬ್ರವರಿ ತಿಂಗಳ ಆಖೈರು ಒಳಗಾದರೂ ಗಾಡಿ ಮೋಟಾರುಗಳು ಪೊಳಲಿಗೆ ಸರಾಗವಾಗಿ ಬರುವಂತೆ ಮಾಡಬೇಕೆಂದೆಣಿಸಿ ೩.೪ ದಿನಗಳಿಂದ ತಿರಿಗಿ ರಸ್ತೆ ಕೆಲಸಕ್ಕೆ ಪ್ರಾರಂಭವಾಗಿಯದೆ.

ಮಹಾ ಜನರು ಸ್ವಲ್ಪ ಮಟ್ಟಿಗಾದರೂ ಸಹಾಯ ಮಾಡಬೇಕಾಗಿ ಈಗ ಕೇಳಿಕೊಳ್ಳದೆ ಉಪಾಯವಿಲ್ಲ. ಪೂರ್ಣ ಕೆಲಸ ಪೂರೈಸಲಿಕ್ಕೆ ಮೂನ್ನೂರು ರೂಪಾಯಿಯಾದರೂ ಬೇಕು. ಆದುದರಿಂದ ಸಾರ್ವಜನಿಕ ಹಿತಚಿಂತನೆಯಿಂದ ಗುರುಪುರದಲ್ಲಿ ದಪ್ಪಿ ಹಿಡಕೊಂಡು ಸಹಾಯ ಕೇಳುವ ರಸ್ತೆಯ ಕಮಿಟಿಯ ಕಡೆಯ ಜನರ ಕೈಯಲ್ಲಿ ಶಕ್ತ್ಯಾನುಸಾರ ಧನ ಸಹಾಯ ಮಾಡಬೇಕಾಗಿ ಸಮ್ಮಂಧಪಟ್ಟ ಪೊಳಲಿ ಕೃಷ್ಣ ಭಟ್ಟರೂ ಸುಬ್ರಾಯ ತಂತ್ರಿಗಳೂ ವಿನಂತಿಮಾಡಿಕೊಳ್ಳುತ್ತಾರೆ.

ನಂದಳಿಕೆ:— ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರುಷಾವಧಿ ಜರಗತಕ್ಕ ಮಹೋತ್ಸವವು ಇದೇ ತಾ ೨೦–೩–೩೬ರಲ್ಲು ಜರಗುವುದಾಗಿ ಆಡಳಿತೆ ಮೊಕ್ತೇಸರರು ಬಾವಡಿ ವೆಂಕಪ್ಪ ಹೆಗ್ಗಡೆಯವರು ಮಹಾಜನರಿಗೆ ಈ ಮೂಲಕ ತಿಳಿಸುತ್ತಾರೆ.

ಜೋಗಟ್ಟೆ:—ತಾ ೧೧–೩–೩೬ನೇ ಸೋಮವಾರ, ತಾ. ೧೩–೩–೩೬ನೇ ಬುಧವಾರ, ತಾ ೧೪–೩–೩೬ನೇ ಗುರುವಾರ ಈ ಮೂರು ದಿನಗಳಲ್ಲಿ ತೋಕೂರು ಜೋಗಟ್ಟೆ ಯಕ್ಷಗಾನೋತ್ತೇಜಕ ಸಂಘದ ಮಂದಿರ ಮುಂದುಗಡೆಯಲ್ಲಿ ಕಟೀಲ್ ಶ್ರೀ ದುರ್ಗಾಪರಮೇಶ್ವರೀ ಕೃಪಾಪೋಷಿತ ದಶಾವತಾರ ಮಂಡಳಿಯವರು ಯಕ್ಷಗಾನ ಬಯಲಾಟಗಳನ್ನಾಡುವರು.

ಬಪ್ಪನಾಡ್ಲ:—ಇಲ್ಲಿ ಈ ವರ್ಷದ ತಿರುಮುದೇಲಳಿ ಜಾತ್ರೆಯು ಬಹು ಸಂಭ್ರಮದಿಂದ ಜರಗಿತು.

ಪುತ್ತೂರು:—ರಥ ಸಪ್ತಮಿ ಅದಿತ್ಯವಾರ ದಿವಸ ಶ್ರೀ ಮಹಾಲಿಂಗೇಶ್ವರ ದೇವಳ ಸನ್ನಿಧಿಯಲ್ಲಿ ಇಲ್ಲಿಯ ಸಂಗೀತ ಶಾಲೆಯ ಮುಖ್ಯೋಪಧ್ಯಾಯರಾಗಿ ಶ್ರೀಯುತ ಗಣೇಶ ಜೋಯಿಸರ ಪುತ್ರಿ ಕುಮಾರಿ ಭವಾನಿ ಎಂಬ ಕೇವಲ ೫ ವರ್ಷ ಪ್ರಾಯದ ಬಾಲಿಕೆಯು "ಅನಸೂಯಾ" ಎಂಬ ಹರಿಕೀರ್ತನೆಯನ್ನು ನಡೆಯಿಸಿ ಮಹಾಜನರ ಪ್ರೀತಿಗೆ ಪಾತ್ರಳಾಗಿದ್ದಾಳೆ. ಇಲ್ಲಿಯ ಹೈಸ್ಕೂಲಿನ ಸಂಸ್ಕೃತ ಪಂಡಿತರಾದ ರಾ। ಕೆ ಎಸ್. ಪರಮೇಶ್ವರ ಶಾಸ್ತ್ರಿಗಳು ಬಾಲಿಕೆಯನ್ನು ಪ್ರಶಂಸಿಸಿದರು. ಆವಳು ಪ್ರಥಮತಃ ಹಾಡಿದ ಈ ಕೀರ್ತನೆಯನ್ನು ಜನರು ಕೇಳಿ ತುಂಬಾ ಆಶ್ಚರ್ಯಪಟ್ಟಿರುವರು.

ಅಶ್ವತ್ಥ:—ಮಂಗಳೂರು ತಾಲೂಕು ಅಶ್ವತ್ಥ ಗ್ರಾಮದ ಶ್ರೀ ಉಳ್ಳಾಲ್ತಿ ದುಗ್ರಂತಾಯ ದೈವಂಗಳ ವರ್ಷಾವಧಿ ಜಾತ್ರೆಯು ತಾ ೧೨–೩–೩೬ರಲ್ಲಿ ಜರಗಿತು.

ಫಲಿಮಾರು:—ಇದೇ ಮಾರ್ಚ ತಾರೀಕು ೭ನೇ ಗುರುವಾರ ರಾತ್ರಿ ಘಂಟೆ ೭ಕ್ಕೆ ವೇ। ಕೀರ್ತನ ಭೂಷಣ ಶ್ರೀನಿವಾಸದಾಸರವರಿಂದ "ಗುರುದಕ್ಷಿಣ" ಎಂಬ ಹರಿಕಥಾ ವ್ಯಾಖ್ಯಾನವು ಬಲು ಚಲೋದಾಗಿ ನಡೆಯಿತು. ನಂತರ ಸ್ಥಳೀಕ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ರಥೋತ್ಸವವು ಹೆಚ್ಚಿನ ವೈಭವದಿಂದ ಜರಗಿ ಪ್ರೇಕ್ಷಕರ ಕಣ್ಣಿಗೆ ಹಬ್ಬದೂಟವಾಯಿತು.

ತಾ. ೯ನೇ ಶನಿವಾರ ಸ್ಥಳೀಕ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪಡುಬಿದ್ರಿ ಸೆಂಟರಿನ ಉಪಾಧ್ಯಾಯರ ಮಾಸಿಕ ಸಭೆಯು ಶ್ರೀ ಪಿ. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸುಮಾರು ೭೫ ಜನ ಉಪಾಧ್ಯಾಯರು ಆರದು ಹಾಜರಿದ್ದರು. ಫಲಿಮಾರು ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರಾರ್ಥನೆ ಲೆಜಿಮ್ ಆಟ, ನರ್ತನ ನಾಟಕ, ಯಕ್ಷಗಾನ ಸಭೆ ಮುಂತಾದ ಹೊಸ ವಿನೋದಗಳು ಅಂದು ವೃದಸ್ಥೆ ಪ್ರಾರಿಸಲ್ಪಟ್ಟಿದ್ದವು. ನಂತರ ಒಂದೆಂಥಾ ಅತಿಥಿಗಳಿಗೆ ಶಾಲೆಯವರ ಕಡೆಯಿಂದ ಬಾಳೆಹಣ್ಣು, ಸಿಯಾಳ, ಪಾನ್‌ಸುಪಾರಿಗಳು ಹಂಚಲ್ಪಟ್ಟು ಸಭಾ ವಿಸರ್ಜನೆಯಾಯಿತು.

ಇದೇ ಸಾಯಂಕಾಲ ಘಂಟೆ ೪ಕ್ಕೆ ಮೂಲ್ಕಿ ಹೈಸ್ಕೂಲಿನ ಮತ್ತು ಕೊಲಕಾಡಿ ಹ್ಯಾಯರ್ ಎಲಿಮೆಂಟರಿ ಶಾಲೆಯ ಸ್ಕೌಟು ಟ್ರೂಪಿನವರು ಫಲಿಮಾರಿಗೆ ಸಂದರ್ಶನ ಕೊಟ್ಟಿತ್ತು. ಇಲ್ಲಿಯ ಬೇರೆ ಬೇರೆ ಚಟುವಟಿಕೆಯ ಸ್ಥಳಗಳನ್ನು ನೋಡಿದುದಲ್ಲದೆ ರಾತ್ರಿಯಲ್ಲಿ ಸ್ಥಳೀಕ ಬೋ. ಶಾಲೆಯಲ್ಲಿ ಸದ್ರಿ ಶಾಲೆಯ ಮುಖ್ಯ ಅಧ್ಯಾಪಕರ ಅತಿಥಿಗಳಾಗಿ ಉಳಕೊಂಡು ಊಟಉಪಚಾರಗಳಿಂದ ಸತ್ಕರಿಸಲ್ಪಟ್ಟರು. ನಂತರ ಫಲಿಮಾರು, ಮೂಲ್ಕಿ ಮತ್ತು ಕೊಲಕಾಡಿನ ಮೂರು ಶಾಲೆಗಳ ಬಾಲವೀರರು ಒಟ್ಟು ಸೇರಿ ಒಂದು ಶಿಬಿರಾಗ್ನಿಯನ್ನು ಶಾಲಾ ಮೈದಾನಿನಲ್ಲಿ ಏರ್ಪಡಿಸಿ ಪ್ರೇಕ್ಷಕರಾಗಿ ಬಂದಿದ್ದ ಅನೇಕರ ಮನಸ್ಸಂತೋಷಗೊಳಿಸಿತು.

ಸುಬ್ರಹ್ಮಣ್ಯ:—ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿರುವ ಶೃಂಗೇರಿ ಮಠದ ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದ ಜೀರ್ಣೋದ್ಧಾರದ ಕುರಿತು ಕಳೆದ ವರ್ಷ ಸುಬ್ರಹ್ಮಣ್ಯ ಟೆಂಪಲ್ ಟ್ರಸ್ಟ್ ಬೋರ್ಡಿನವರು ಇದನ್ನು ಕಟ್ಟಿಸಲು ೫೦೦೦ ರೂಪಾಯಿ ಅಂದಾಜುಮಾಡಿ ಶೃಂಗೇರಿ ಮಠದವರು ಕಟ್ಟಿಸುವುದಾದರೆ ಟೆಂಪ್ಲ್ ಬೋರ್ಡಿನವರು ೧೫೦೦ ರೂಪಾಯಿ ಟೆಂಪ್ಲ್ ಫಂಡಿನಿಂದ ಕೊಡುವುದೆಂದೂ ನಿರ್ಧರಿಸಿದ ಠರಾವನ್ನು ಮೈಸೂರು ಸೀಮೆಯಿಂದ ಟ್ರಸ್ಟಿಯಾದ ಶ್ರೀ ಮಾಳಿಗೆ ವೆಂಕಟರಾಮಯ್ಯನವರು ಶ್ರೀ ಮಠಕ್ಕೆ ಅರಿಕೆ ಮಾಡಿದರು. ಶ್ರೀ ಮಠದವರು ಗರ್ಭಗುಡಿಯನ್ನು ಸಧ್ಯದಲ್ಲಿ ಕಟ್ಟಿಸುವುದೆಂತ ನಿಶ್ಚಯಿಸಿ ಏರ್ಪಡಿಸಿದರು. ಈ ಮಧ್ಯೆ ವಿಚಾರಮಾಡುವಾಗ ಶ್ರೀ ಶಂಕರಾಚಾರ್ಯರಿಂದ ಪ್ರತಿಷ್ಠಿಸಿದ ಅನಾದಿಯಾದ ಶ್ರೀ ಚಂದ್ರಮೌಳೀಶ್ವರ ವಿಗ್ರಹವು ಮಾಯವಾದಂತೆ ವಿಚಾರದಿಂದ ಅಧಿಕಾರಿಗಳಿಗೆ ತಿಳಿದುಬಂದುದರಿಂದ ಈ ಅಂಶವು ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಶಿವಿಗೂ ಹೋಗಿ ಶ್ರೀ ಮಠದ ಅರ್ಚನೆಯಲ್ಲಿರುವ ಬಾಣಲಿಂಗವನ್ನು ಪ್ರತಿಷ್ಠಿಸಬೇಕೆಂದು ಶ್ರೀ ಜಗದ್ಗುರುಗಳವರ ಅನುಜ್ಞೆಯಾದ ಮೇರೆಗೆ ಇದನ್ನು ಬ್ರಾಹ್ಮಣರ ಮೂಲಕ ತರಿಸುವ ಏರ್ಪಾಡು ಜಗ್ಗಿರೆ ಕೆಲಸಗಳು ನಿಧಾನವಾಗಿವೆ. ಗರ್ಭಗೃಹದ ಕೆಲಸವು ಸಂಪೂರ್ಣವಾಗಿದ್ದರೂ ಕೂಡ ಈ ಮೇಲಿನ ಮೊದಲಾದ ಕಾರಣಗಳಿಂದ, ಈ ಮೊದಲು ಪ್ರಕಟಿಸಿದಂತೆ ಇದೇ ತಿಂಗಳ ತಾ ೧೧ರಲ್ಲು ನಡೆಯಲಿಕ್ಕಿದ್ದ ಪ್ರತಿಷ್ಠೆಯ ಕಾರ್ಯವು ಮುಂದರಿಸಲ್ಪಟ್ಟಂತೆ ತಿಳಿದು ಬರುತ್ತದೆ.

ಉಡುಪಿ:—ಇದೇ ತಾ ೫ನೆಗೆ ಸ್ಥಳೀಯ ಬಾರ್ ಎಸೋಸಿಯೇಶನಿನಲ್ಲಿ, ದಿ। ಂಗತ ಹಾರಾಡಿ ಕೇಶವ ಪೈ ವಕೀಲ, ಇವರ ತೈಲಚಿತ್ರ ಅನಾವರಣವು ಮಿ। ಸಿ ಎಲ್. ಕುಲಾಸೋ ಎಂ ಎಲ್ ಡಿಸ್ಟ್ರಿಕ್ಟ್ ಮುನ್ಸೀಫರಿಂದ ನಡೆಸಲಾಯಿತು.

ತಾ. ೯ನೇ ಮಧ್ಯಾಹ್ನ ಕಟಪಾಡಿಯಲ್ಲಿ ಮಂಗಳೂರ ನಾಯಕರ ಶ್ರೀಮಂತ ಮನೆತನದ ಶ್ರೀ ನಾಗಪ್ಪ ನಾಯಕರು ವೃದ್ಧಾಪ್ಯ ಹಾಗೂ ಕಾಯಿಲೆಯಿಂದ ದೈವಾಧೀನರಾದರೆಂದು ತಿಳಿಸಲು ವಿಷಾದವಾಗಿದೆ. ದಿವಂಗತರು ತುಂಬಾ ರಾಷ್ಟ್ರಭಕ್ತರೂ ಖಾದಿಪ್ರಿಯರೂ ಆಗಿರುತ್ತ, ಜನಾದರಣೀಯರೂ ವಿಶ್ವಾಸಾರ್ಹರೂ ಆಗಿದ್ದರಲ್ಲದೆ ಈಚೆಗೆ ಜರಗಿದ್ದ ರಾಷ್ಟ್ರಸಂಗ್ರಾಮದಲ್ಲಿ ಮೇಲ್ಮೇಲೆ ಭಾಗವಹಿಸಿ ಹೆಸರುಗೊಂಡ ದೇಶಪುತ್ರರನ್ನು ಹೊಂದಿರುವ ಮಾನಕ್ಕೂ ಪಾತ್ರರಾಗಿದ್ದರು. ದಿವಂಗತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಕೋರುವುದಲ್ಲದೆ ಸದ್ರಿಯವರ ಕುಟುಂಬದವರೊಡನೆ ನಮ್ಮ ಸಹಸಂತಾಪವಿರುವುದು.

ಇದೇ ತಾ ೨ ಮತ್ತು ೩ನೆಗೆ ಮಧ್ಯಾಹ್ನ ೩ ಘಂಟೆಯ ಹೊತ್ತಿಗೆ ಶ್ರೀ ಮದನಂತೇಶ್ವರ ದೇವಸ್ಥಾನದ ಪೌಳಿಯಲ್ಲಿ ಪ್ರೊ। ಬಿ ರಾಘವೇಂದ್ರ ರಾವ್ ಬಿ ಓ. ಸಿ. ಇವರು "ಬ್ರಹ್ಮಚರ್ಯ ಮತ್ತು ವ್ಯಾಯಾಮದ ಕುರಿತು ಭಾಷಣವನ್ನು ನಿದರ್ಶನೆಗಳೊಂದಿಗೆ ಮಾಡಿದರು. ಅಗ್ಗಿ ಸಂಸ್ಕೃತ ಕಾಲೇಜಿನ ಅಧ್ಯಾಪಕ ಮತ್ತು ವಿದ್ಯಾರ್ಥಿವರ್ಗದವರಿದ್ದಲ್ಲದೆ, ಶ್ರೀ ಸೋದೆ ಫಲಿಮಾರು, ಶಿರೂರು ಮಠಗಳ ಶ್ರೀಪಾದಂಗಳವರೂ ಹಾಜರಿದ್ದರು. ಇವರ ಭಾಷಣ ಪ್ರದರ್ಶನಗಳು ಸರ್ವರಲ್ಲಿಯೂ ವ್ಯಾಯಾಮ ಪ್ರೀತಿಯುಂಟುಮಾಡಿರುತ್ತದೆ. ಸಂಸ್ಕೃತ ಕಾಲೇಜಿನ ವ್ಯವಸ್ಥಾಪಕರು ಕಡ್ಡಾಯ ವ್ಯಾಯಾಮ ಶಿಕ್ಷಣವನ್ನು ತಮ್ಮ ವಿದ್ಯಾರ್ಥಿಗಳಿಗೆ ಕೊಡುವ ಏರ್ಪಾಡುಮಾಡುವರೋ ಎಂದು ಆಶೆ ತೋರುತ್ತದೆ. ಈ ಬಗ್ಗೆ ಸದ್ರಿ ಅಧಿಕಾರಿಗಳು ತೀವ್ರಯೋಜನೆ ಮಾಡಿ ವ್ಯಾಯಾಮ ಅಂಗಸಾಧನೆ ಆಟಗಳ ಕಡೆಗೆ ತಕ್ಕ ಲಕ್ಷ್ಯವೀಯುವರೇ?

Old! *Famous!*

East & West Insurance Co., Limited.

Bonus Declard Rs 15/- Per Thousand Per Annum

Insurance in Force About	Rs 90,00,000
Annual Premium Income Over	Rs. 4,50 000
Life Fund Over	Rs 7,00,000

Prompt Settlement of Claims
Low Rates of Premium and Various Attractive Plans.

Attractive and liberal agency contracts are offered to honest, influential gentlemen

Inquiries Solicited:—
Messrs **Padubidri Bros**, *Chief Agents,* PADUBIDRI, BOMBAY
OR
Head Office
East & West Buildings, Apollo Street, Fort Bombay

ಫೆಬ್ರವರಿ ತಾ. 20ರಿಂದ — ಮಾರ್ಚಿ ತಾ. 15ರ ವರೆಗೆ

ಪುಣ್ಯಕ್ಷೇತ್ರವಾದ ಧರ್ಮಸ್ಥಳಕ್ಕೆ ಯಾತ್ರೆ!

ಅರ್ಧ ಖರ್ಚಿನಲ್ಲಿ ಅತೀ ಮಹತ್ವದ ಯಾತ್ರೆ

ಮಂಗಳೂರು, ಬಂಟವಾಳ, ಚಿಕ್ಕಮಗಳೂರು, ಶಿವಮೊಗ್ಗಾ, ಮೂಡಿಗೆರೆ, ಸಕಲೇಶಪುರ, ಈ ಎಲ್ಲಾ ಸ್ಥಳಗಳಿಂದ ಧರ್ಮಸ್ಥಳಕ್ಕೆ ಅರ್ಧ ಚಾರ್ಜಿನಿಂದ ರಿಟರ್ನ್ ಟಿಕೇಟು ಕೊಡಲಾಗುವುದು.

ಈ ಸಂದರ್ಭವನ್ನು ಕಳಕೊಳ್ಳಬೇಡಿರಿ!

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಮಂಗಳೂರು

ಮುಂದಿನ ವಾರ

ಸ್ವದೇಶಾಭಿಮಾನಿಯಲ್ಲಿ ವಿನೋದಪರ ಕತೆ, ಹಾಸ್ಯಭರಿತ ವಾರ್ತೆ, ವಿಚಿತ್ರ ವಾರ್ತಾ ಸಂಗ್ರಹ, ವಿವಿಧ ಚಿತ್ರಾವಳಿಗಳು ಬರುವುವು. ಕಾದಿರಿ·

ಶರಣ ಸಂದೇಶ.

ನೀವು ಹಿಂದುಗಳೋ ಹಾಗಾದರೆ ಜಾಗ್ರತೆ ಚಂದಾದಾರರಾಗಿರಿ

ಇದು ವಿಚಾರಕ್ರಾಂತಿಯ ವಾರಪತ್ರಿಕೆ.

ಸಂಪಾದಕರು:—ಶ್ರೀ ಹರ್ಡೇಕರ್ ಮಂಜಪ್ಪನವರು, ಹಿಂದು ಸಮಾಜ ಸುಧಾರಣೆ, ಹಿಂದು ಸಂಘಟನೆ, ಧಾರ್ಮಿಕ ಸತ್ಯಸಿದ್ಧಾಂತ ಪ್ರತಿಪಾದನೆ, ಶ್ರೀ ಬಸವಾದಿ ಪ್ರಮಥರ ತತ್ವಪ್ರಸಾರಣೆ ಮತ್ತು ರಾಜಕೀಯ ಗುಣದೋಷ ವಿಮರ್ಶೆ ಇವೆ ಈ ಪತ್ರಿಕೆಯ ಪಂಚಪ್ರಾಣ

೨೦ ಪುಟ ವಾರ್ಷಿಕಚಂದಾ ಅಂಚೆವೆಚ್ಚ ಸೇರಿ ರೂ ೩ ಮಾತ್ರ

ಮೆನೇಜರ್ – ಶರಣ ಸಂದೇಶ.

ಪೋಸ್ಟು ಆಲಮಟ್ಟಿ, ಜ ಬಿಜಾಪುರ

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ ಗೋಡೆಯ ಗಡಿಯಾರ ಅಹಿದ ಸಾಮಾನು ಮೊದಲಾದವುಗಳನ್ನು ಪಡೆದು ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕಳಿಗೆ ಜನರಿಂದ ದೊರೆತಿರುವ ಪ್ರಶಂಸೆ ನೀವೂ ನಮ್ಮಲ್ಲಿಗೆ ಬರಬಹುದು ತೃಪ್ತಿ ಹೊಂದಬಹುದು ಹೊಟ್ಟೆದರೆ ಪಡೆಯಬಹುದು

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter.—

Modern Hindu Hotel,
CALICUT, 17—6 - 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಹೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನು ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! — ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

(೩ನೇ ಪುಟದಿಂದ ಮುಂದುವರಿದುದು.)

ನಿಗೆ ಪತ್ನಿಯು ಗರ್ಭಿಣಿಯೆಂದು ಕೇಳಿ ಬೇಸರವಾಗಿತ್ತು. ಇನ್ನು ಮುಂದೆ ಹುಟ್ಟುವ ಮಕ್ಕಳಿಗೆ ಈ ಬರಗಾಲದ ದಿನಗಳಲ್ಲಿ ಸಾಕುವುದಕ್ಕಿಲ್ಲವೆಂದು. ಆದರೆ ಕೂಸು ಹುಟ್ಟಿತೆಂದು ಸುದ್ದಿ ಕೇಳಲು ಸಂತೋಷದಿಂದ ತಾಯಿಯ ಬಳಿಗೆ ಬಂದನು. ಮಗುವು ಬಳಿಯಲ್ಲಿ ಮಲಗಿತ್ತು. ಮಗುವಿನ ದರ್ಶನವಾಯಿತು. ಎದೆ ಬಿರಿಯಿತು! ಮಗುವಿನ ಮೈಬಣ್ಣವು ತೀರ ತೀರ ಕರಿದಾಗಿತ್ತು ತನ್ನಂತೆಯೂ ಅದಿರಲಿಲ್ಲ —ತನ್ನ ದೇವಕಿಯಂತೆಯೂ ಇರಲಿಲ್ಲ ವ್ಯಥೆಯು ತಡೆಯಲು ಆಗಲಿಲ್ಲ —"ಅಮ್ಮಣ್ಣಿಯಂತೆ, ನೀನು ಸಾವಿರಕ್ಕೆ ಇನ್ನೊಬ್ಬಳಾದೆಯಾ?" ಎಂದನು ಹಿಂದೆ ತಾನೇ ಆಡಿದ ಮಾತು ಅವನಿಗೆ ಚೆನ್ನಾಗಿ ನೆನಪಿನಲ್ಲಿತ್ತು. ದೇವಮ್ಮನು ಕಣ್ಣೀರನ್ನು ಕರೆದಳು ತನ್ನ ಕಥೆಯನ್ನು ಅತ್ತು ಅತ್ತು ಹೇಳಿಕೊಂಡಳು ಗುಂಡಪ್ಪನ ಒಡಲು ಕರಗಿತು. ಸಿಟ್ಟಾದರೂ ಸಂತವಿಸಿಕೊಂಡನು ತನ್ನನ್ನು ತಾನೇ? ನಿಟ್ಟುಸಿರು ಬಿಟ್ಟನು—"ನಿಜ, ಒಬ್ಬೊಬ್ಬರೇ ಸೇರಿ ಸಾವಿರವಾಗುವುದು" ಎಂದನು.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R I A No 443/1935
O P No 100/1934

ಮೃತಪಟ್ಟ ಸರಾಪ ಮಂಜುನಾಥ ಕಮ್ತಿ ರಿಗೆ ಬರತಕ್ಕ ಸಾಲಗಳ ಬಾಬಿನಲ್ಲಿ

ಕೆ ನರಸಿಂಹ ಕಮ್ತಿ, ಮಂಜುನಾಥ ಕಮ್ತಿರ ಮಗ-ಕಾಸರಗೋಡು ಕಸಬೆಯಲ್ಲಿರುವವ ಅರ್ಜಿದಾರ

ಮೇಲ್ಕಾಣಿಸಿದ O P ನಂಬ್ರ 100/'34ನೇ ಅರ್ಜಿಯ ಹುಕುಂ ಪ್ರಕಾರ ತನಗೆ ಕೊಡೋಣಾದ ಸಕ್ಸೆಶನ್ ಸರ್ಟಿಫಿಕೇಟಿನಲ್ಲಿ ಮೃತನ ಬಾಬ್ತು ಬೇರೆ ಸಾಲಗಳು ಬರಲಿಕ್ಕೆ ಇರುವವುಗಳನ್ನು ಸಹಾ ಕೂಡಿಸಿ ಸದ್ರಿ ಸರ್ಟಿಫಿಕೇಟನ್ನು ಎಕ್ಸ್ಟೆಂಡ್ ಮಾಡಬೇಕೆಂತ ಸದ್ರಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಾಣಿಸಿದ R. I A ನಂಬ್ರ 443 1935ನೇ ಅರ್ಜಿಯು ತಾ 1-4-1935ಕ್ಕೆ ತನ್ಸಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾರೀಕಿನಲ್ಲಿ ಈ ಕೋರ್ಟಿನಲ್ಲಿ ದಾಖಲು ಮಾಡತಕ್ಕದ್ದೆಂತಲೂ ತಪ್ಪಿದರೆ ಅರ್ಜಿದಾರನು ಅಪೇಕ್ಷಿಸಿದಂತೆ ಸದ್ರಿ ಸರ್ಟಿಫಿಕೇಟು ಎಕ್ಸ್ಟೆಂಡ್ ಮಾಡಲಾದೀತೆಂತ ಸಹಾ ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗಿದೆ

Kasaragod, } P. Ananda Rao,
10—3—35 } *Vakil for Petitioner*

ನೋಟೀಸು

ಮಂಗಳೂರು ಕಸಬಾ ಬಜಾರ್ ಪಂಚ್ಯಾತ ಕೋರ್ಟಿನಲ್ಲಿ.

ವ್ಯಾಜ್ಯ ನಂಬ್ರ 488/34

ಯು ರಘುನಾಥ ಕಿಣಿ, ಉಳ್ಳಾಲ ವಾಗಪ್ಪ ಕಿಣಿಗಳ ಮಗ ಉಳ್ಳಾಲ ಕಸಬಾ ಗ್ರಾಮಸ್ಥ—ವಾದಿ

ಮತ್ತು

ಗೋಪಾಲ ಕೃಷ್ಣ ಪೈ, ಸಿಲೇಶ್ವರ ನರಸಿಂಹ ಪೈಗಳ ಮಗ ಮಂಗಳೂರು ಶಹರು ತೇರಬೀದಿ-ಮಂಗಳೂರು ಪ್ರತಿವಾದಿ

ಈ ದಾವೆಯ ಪ್ರತಿವಾದಿ ಗೋಪಾಲ ಕೃಷ್ಣ ಪೈಯವರಿಗೆ ಕೊಡುವ ನೋಟೀಸು

ಮೇಲಿನ ವಾದಿಯು ನಿಮ್ಮ ಮೇಲೆ ರೂ. 50-0-0ಕ್ಕೆ ಮಾಡಿದ ವ್ಯಾಜ್ಯವು ಇದೇ ತಿಂಗಳ ತಾ. 26—3—35ಕ್ಕೆ ತನ್ಸಿಗೆ ಇಟ್ಟಿದೆ ಸದ್ರಿ ತಾರೀಕಿನಲ್ಲಿ ನೀವು ಕೋರ್ಟಿನ ಮುಂದೆ ಹಾಜರಾಗದಿದ್ದರೆ ವ್ಯಾಜ್ಯವನ್ನು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

ಮಂಗಳೂರು, M. Raghavendra Pai,
12—3—35 ಪ್ರಿಸಿಡೆಂಟ

ಕರ್ನಾಟಕ ಸಾಹಿತ್ಯ ಪರಿಷತ್ತು

ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜಪೇಟೆ ಬೆಂಗಳೂರು ಸಿಟಿ.

ಅಧ್ಯಕ್ಷರು.—ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರವರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ. ಸಿ ಐ. ಇ. ಮಹಾಸ್ವಾಮಿಯವರು.

ವಿಶೇಷ ಸಾಹಿತ್ಯೋತ್ಸವ.

ಬರುವ ಮೇ ತಿಂಗಳಲ್ಲಿ.

ಮಹಾಶಯರೆ,

ಪರಿಷತ್ತು ಕೆಲವು ವಿದ್ಯಾಭಿಮಾನಿಗಳಾದ ಮಹಾಜನರ ಮತ್ತು ಸಂಸ್ಥೆಗಳ ಉದಾರ ಸಹಾಯವನ್ನು ಪಡೆದು ಕಳೆದ ವರ್ಷ ಮೇ ತಿಂಗಳಲ್ಲಿ ಒಂದು ವಾರ (೬-೫-೧೯೩೪ರಿಂದ ೧೨-೫-೧೯೩೪ರ) ವಿಶೇಷ ಸಾಹಿತ್ಯೋತ್ಸವವನ್ನು ನಡೆಸಿದ್ದು ತಮಗೆ ಜ್ಞಾಪಕದಲ್ಲಿರಬಹುದು ಆ ಉತ್ಸವವನ್ನು ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ ಇಸ್ಮೈಲ್ ಸಾಹೇಬರವರು ಪ್ರಾರಂಭಗೊಳಿಸಿದರು

ಆ ಉತ್ಸವದಲ್ಲಿ ಕನ್ನಡ ಉಪನ್ಯಾಸಗಳು, ಕನ್ನಡ ಗ್ರಂಥಪ್ರದರ್ಶನ ವಿಜ್ಞಾನಶಾಲೆ ಯಂತ್ರ ಕರ್ಮ ಶಾಲೆಗಳ ಸವಿೂಕ್ಷಣ, ಕಾವ್ಯವಾಚನ ಮೊದಲಾದ ಅನೇಕ ಬಗೆಯ ವಿದ್ಯೆ ಸಾಹಿತ್ಯಗಳ ಕಾರ್ಯಗಳ ನಡೆದುವು ಉಪನ್ಯಾಸ ವಿಷಯಗಳಲ್ಲಿ ವಿವಿಧ ವಿಜ್ಞಾನಶಾಸ್ತ್ರಗಳೂ, ರಾಜ್ಯಶಾಸ್ತ್ರ ಅರ್ಥಶಾಸ್ತ್ರಗಳೂ ಇತಿಹಾಸ ಭಾಗಗಳೂ, ಕಾವ್ಯವಿಮರ್ಶೆಯೂ ಸಮಾಜ ತತ್ವಶೋಧನೆಯೂ ಸೇರಿದ್ದುವು. ಪ್ರಸಿದ್ಧ ವಿದ್ವಾಂಸರೂ ಪರಿಶೋಧಕರೂ ಆ ಉಪನ್ಯಾಸಗಳನ್ನು ಕೊಟ್ಟು ಉಪಕರಿಸಿದರು. ಪ್ರತಿಯೊಂದು ಉಪನ್ಯಾಸವೂ ಮುಗಿದ ಬಳಿಕ ಪ್ರಶ್ನೋತ್ತರಗಳು ನಡೆದು, ವಿಷಯವು ಮತ್ತಷ್ಟು ಮನದಟ್ಟುವಂತೆ ಆಯಿತು. ಈ ಬಗೆಬಗೆಯ ಜ್ಞಾನ ಸಮಾರಾಧನೆಯಿಂದ ಪ್ರಯೋಜನ ಪಡೆಯಲು ಕರ್ಣಾಟಕ ದೇಶದ ಎಲ್ಲಾ ಭಾಗಗಳಿಂದಲೂ ಬಹು ಮಂದಿ ದಯಮಾಡಿದ್ದರು ಪ್ರತಿ ದಿವಸವೂ ಪ್ರತಿಯೊಂದು ಉತ್ಸವ ಕಾರ್ಯಕ್ಕೂ ೬೦೦-೭೦೦ ಮಂದಿ ಇದ್ದಿರುತ್ತಿದ್ದರು ಅವರಲ್ಲಿ ಸುಮಾರು ೩೦೦ ಮಂದಿ ಉಪಾಧ್ಯಾಯರು ಮತ್ತು ವಿದ್ಯಾಪ್ರಚಾರದಲ್ಲಿ ಆಸಕ್ತರಾದ ಇತರ ಮಹಾಶಯರು. ಪರಸ್ಥಳಗಳಿಂದ ದಯಮಾಡಿದ್ದ ಅನೇಕ ಮಂದಿಗೆ ಭೋಜನವಸತಿಗಳ ಅನುಕೂಲವನ್ನು ಬಹುಮಟ್ಟಿಗೆ ಉಚಿತಾರ್ಥವಾಗಿ ಏರ್ಪಡಿಸಿತ್ತು ಈ ಸಾಹಿತ್ಯೋತ್ಸವವನ್ನು ಮಹಾಜನರು ನೋಡಿ ಸಂತೋಷಿಸಿದರು

ಪಾಠಶಾಲೆಗಳಲ್ಲಿ ಬೋಧನಕಾರ್ಯವು ಸಮರ್ಪಕವಾಗಿ ನಡೆಯುವುದಕ್ಕೂ ಕನ್ನಡ ಭಾಷೆ ಬೆಳೆದು ಬಲಿಪಡುವುದಕ್ಕೂ ಇಂಥ ಪ್ರಕೃತಲೋಕ ವಿಚಾರಗಳನ್ನು ಕುರಿತ ಉಪನ್ಯಾಸಗಳ ಬಹು ಪ್ರಯೋಜನಕರವೆಂದು ಆ ಅನುಭವದಿಂದ ತೋರಿಬಂದಿದೆ ಅಂಥ ವಿಶೇಷ ಸಾಹಿತ್ಯೋತ್ಸವವನ್ನು ಈ ವರ್ಷವೂ ನಡೆಸಬೇಕೆಂದು ಪರಿಷತ್ತಿಗೆ ನೂರಾರು ಕೋರಿಕೆಗಳು ಬಂದಿವೆ ಹೀಗೆ ಬಹು ಕಡೆಗಳಿಂದ ಬರುತ್ತಿರುವ ಸೂಚನೆಗಳನ್ನು ಅಂಗೀಕರಿಸಿ, ಈ ಸಾರಿಯೂ—ಎಂದರೆ ೧೯೩೫ನೆಯ ಇಸವಿ ಮೇ ತಿಂಗಳ ಬೇಸಿಗೆಯ ರಜಾ ದಿನಗಳಲ್ಲಿ—ಅಂಥ ಸಾಹಿತ್ಯೋತ್ಸವವನ್ನು ಏರ್ಪಡಿಸಬೇಕೆಂದು ಪರಿಷತ್ತು ಸಂಕಲ್ಪಮಾಡಿದೆ ಸಾಧ್ಯವಾದರೆ ಈ ಸಲದ ಉತ್ಸವವು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಯಬೇಕಾಗಿದೆ ಉಪಾಧ್ಯಾಯರುಗಳ ಭೋಜನಸೌಕರ್ಯ, ಉಪನ್ಯಾಸಕರ ಪ್ರಯಾಣ, ವಿಜ್ಞಾನ ಪ್ರದರ್ಶನಗಳಿಗೆ ಬೇಕಾಗುವ ಸಲಕರಣೆಗಳು ಮುದ್ರಣಕಾರ್ಯ ಈ ಅನೇಕ ಬಾಬುಗಳಿಗಾಗಿ ಹೋದ ವರ್ಷ ಸುಮಾರು ೧೬೦೦ ರೂಪಾಯಿ ವೆಚ್ಚ ತಗಲಿತು ಈ ಸಲದ ವೆಚ್ಚ ಸ್ವಲ್ಪ ಹೆಚ್ಚಾದೀತು ಆದರೆ ಪರಿಷತ್ತಿನ ಹಣದ ಸ್ಥಿತಿಯು ಇನ್ನೂ ಬಹು ಕಷ್ಟಕರವಾಗಿದೆ ಮಹಾಜನರು ದೊಡ್ಡ ಮನಸ್ಸು ಮಾಡಿದಲ್ಲದೆ ಈ ಸಮಾರಂಭವನ್ನು ಪರಿಷತ್ತು ನೆರವೇರಿಸುವುದು ಸಾಧ್ಯ ತೋರುವುದಿಲ್ಲ.

ದೇಶದ ವಿದ್ಯಾಭಿವೃದ್ಧಿಗೆ ಇಷ್ಟು ಪ್ರಯೋಜನಕರವಾದ ಕಾರ್ಯವನ್ನು ಅಸಾಧ್ಯವೆಂದು ಬಿಡಲು ಪರಿಷತ್ತಿಗೆ ಮನಸ್ಸು ಬಾರದು. ಪರಿಷತ್ತು ತಮ್ಮಂಥವರ ಔದಾರ್ಯವನ್ನು ನಂಬಿಕೊಂಡು ನಿಂತಿದೆ. ಕಾಲಸ್ಥಿತಿ ಈಗ ಸಂಕೋಚಕರವಾಗಿದ್ದರೂ ತಮ್ಮ ದೇಶಭಾಷಾಭಿಮಾನಗಳು ದೊಡ್ಡವಾದ ಕಾರಣ ಈ ಪ್ರಾರ್ಥನೆಯನ್ನು ತಾವು ವಿಶ್ವಾಸದಿಂದ ಲಾಲಿಸುವಿರೆಂದು ನಿರೀಕ್ಷಿಸಿಕೊಂಡಿದ್ದೇವೆ ತಮ್ಮ ಉಪಕಾರಕ್ಕಾಗಿ ಪರಿಷತ್ತು ಅತ್ಯಂತ ಕೃತಜ್ಞತೆಯುಳ್ಳದ್ದಾಗಿರುವುದೆಂಬುದನ್ನು ನಾವು ಮಾತಿನಿಂದ ಹೇಳಬೇಕಾಗಿಲ್ಲ. ದ್ರವ್ಯಸಹಾಯ ಎಷ್ಟು ಬೇಗ ದೊರೆತರೆ ಮುಂದಿನ ಏರ್ಪಾಟುಗಳನ್ನು ನಡೆಸಲು ಅಷ್ಟು ಅನುಕೂಲವಾಗುವುದು. ಆದಕಾರಣ ನಾವು ಕುತೂಹಲದಿಂದ ತಮ್ಮ ಅನುಗ್ರಹವನ್ನು ಎದುರು ನೋಡುತ್ತಿರುತ್ತೇವೆ ಇಂತು ತಮ್ಮ ವಿಧೇಯ,

ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ ಎ.
ವ್ಯವಸ್ಥಾಪಕ, ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವದ ಉಪಸಮಿತಿ

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ತಂದಿರುವ ಹಿಂದು ಮಠಗಳ ಸಂಬಂಧವಾದ ೧೯೩೪ನೇ ನಂಬರು ೨೪ನೇ ಬಿಲ್ಲು.

ಇದರಲ್ಲಿಯ ಪ್ರಕರಣಗಳನ್ನು ಓದಿ ಗ್ರಹಿಸಿದ್ದಲ್ಲಿ ಇದರ ಅಂತಿಮ ಪರಿಣಾಮವು ಹಿಂದು ಮಠದ ಆ ಮಠಗಳ ಶ್ರೇಯೋಭಿವೃದ್ಧಿಯು ನಾಶವಾಗುವುದು ಖಚಿತವೆಂತ ತೋರುತ್ತದೆ ಯಾಕೆಂದರೆ ಅದರ ಕನ್ನಡ ತರ್ಜುಮೆ ಯಾ ಇತರ ದೇಶಭಾಷೆಗಳಲ್ಲಿ ಪರಿವರ್ತನೆ ಆದದ್ದು ತೋರುವುದಿಲ್ಲ ಈ ಬಿಲ್ಲು ಇದ್ದಂತೆಯೆ ಸ್ವೀಕಾರವಾದರೆ ಮಠಾಧಿಪತಿಗಳ ದಂಡಕಮಂಡಲವನ್ನು ಧರಿಸಿದ ನಿಜವಾದ ಸನ್ಯಾಸಿಗಳಾಗಬೇಕೆಂದಲ್ಲದೆ ಮಠದ ಸಂಬಂಧವಾದ ಎಷ್ಟೋ ಅಮೂಲ್ಯವಾದ ವ್ಯವಹಾರಗಳಲ್ಲಿ ಭಾಗಿಗಳಾಗಲಿಕ್ಕೆ ಅರ್ಹರಲ್ಲವೆಂತ ವಿದಿತವಾಗ ಬಹುದು. ಮಠಾಧಿಪತಿಗಳು ಭಿಕ್ಷೆಗೆ ಅರ್ಹರಾದರೂ ಅವರಿಗೆ ಭಿಕ್ಷೆ ಕೊಡುವ ಪದ್ಧತಿಯು ಅನಾದಿಯಿಂದ ಮಾನ್ಯವಾದ ರೀತಿಯು ಬೇರೆಯೇ ಉಂಟು. ಈಗ ತಂದ ಬಿಲ್ಲಿನ ಮಸೂದೆಯು ಅವರನ್ನು ಇನ್ನೊಂದು ರೀತಿಯ ಭಿಕ್ಷುಕರಾಗುವಂತೆ ಸ್ಥಾನಚ್ಯುತಿ ಮಾಡುವಂತಿದೆ. ಈ ಬಿಲ್ಲಿನ ದೋಷಗಳು ಈ ಚಿಕ್ಕ ಉಪನ್ಯಾಸದಲ್ಲಿ ಬರೆಯಲು ಸಾಧ್ಯವಿಲ್ಲ. ಆಯಾಯ ಮಠಾಭಿಮಾನಿಗಳು ಈ ಬಿಲನ್ನು ವಿಮರ್ಶಿಸಿ ಅದನ್ನು ಖಂಡಿಸುವಂತೆ ವರ್ತಿಸುವುದು ಉತ್ತಮ. ಶಿಷ್ಯವರ್ಗಕ್ಕೆ ಸ್ವತಂತ್ರವು ಮಠಗಳ ಆದಿವಸ್ಥದಲ್ಲಿ ಇರಗೊಡಿಸಿದಂತೆ ಪ್ರಕರಣಗಳು ಸೂಚಿಸಿಯವೆ ಈ ಪ್ರಕರಣಗಳ ಉಪಯೋಗವು ಕನ್ನಡಿಯ ಗಂಟಿನಂತೆ ಅಲ್ಲದೆ ಅನ್ಯಥಾ ಶಿಷ್ಯಮಂಡಲಿಗೆ ಏನೇನೂ ಪ್ರಯೋಜನವಿಲ್ಲ ಅರ್ಥ ವಿವರಣೆಯನ್ನು ಓದಿದರೆ ಎಲ್ಲಾ ಸಮಾಜಗಳ ಎಲ್ಲಾ ಮಠಗಳು ಸ್ಥಳಿಕ ಗವರ್ನರರ ಆಜ್ಞೆ ಮೇರೆಗೆ ಈ ಕಾನೂನಿನೊಳಗೆ ಸೇರಬಹುದೆಂದು ತೋರುತ್ತದೆ ಮದ್ರಾಸು ಗವರ್ನಮೆಂಟಿನವರ ಆಜ್ಞೆಯು ಯಾವ್ಯಾವ ಕಾಲದಲ್ಲಿ ಯಾವ ರೀತಿಯಿಂದ ಬದಲಿಸಲ್ಪಡುವುದೆಂಬುದು ಹೇಳಲಾಗುವುದಿಲ್ಲ. ಉಡುಪಿಯಲ್ಲಿ ಶಿಷ್ಯವರ್ಗದವರು ಈ ಮನವಿದ್ಯಾ ಕಾನೂನನ್ನು ಖಂಡಿಸಿ ಠರಾವುಗಳು ಮಾಡಿದ್ದಂತೆ ತೋರುವುದು. ಬೇರೆ ಸ್ಥಳಗಳಲ್ಲಿ ಆಯಾಯ ಜಾತಿಯ ಮುಖಂಡರು ಇರುವರಾದರೂ ಅನೇಕ ಮಹತೋಭಾರ ದೇವಸ್ಥಾನಗಳು ಇರುವುದಾದರೂ ಅವರ್ಯಾರೂ ಎದುರಿಗೆ ಬಂದು ಬಿಲನ್ನು ನಿಷೇಧಿಸಿದ್ದು ತೋರುವುದಿಲ್ಲ ಈ ಸಂಸ್ಥಾನದ ಬೇರೆ ಕಡೆಗಳಲ್ಲಿ ಚಳವಳವು ಸರಿಯಾಗಿ ನಡೆಯುತ್ತದೆ ಮಠಾಭಿಮಾನಿಗಳೂ, ಮಠಾಭಿಮಾನವು ತಮ್ಮ ಪಾಲಿಗೆ ಸೇರತಕ್ಕದ್ದಲ್ಲ ಎಂಬುವರೂ ಒಕ್ಕೂಟದಿಂದ ಖಂಡಿಸುವುದು ಇಷ್ಟಲಾಗಿರುತ್ತದೆ ಒಂದು ವ್ಯಕ್ತಿಯ ಮೇಲೆ ಇನ್ನೊಂದು ವ್ಯಕ್ತಿಗೆ ಹಿತವಿಲ್ಲದಿದ್ದರೂ ಆ ವ್ಯಕ್ತಿಯ ಮೇಲೆ ಮೂರನೆಯವನು ಅತ್ಯಾಚಾರ ನಡೆಸಿದರೆ ಈ ವ್ಯಕ್ತಿಯು ಬಿಡಲಾರನು ಈ ಗ್ರಹಿಕೆಯಿಂದಾದರೂ ಹಿಂದು ಮಠಾಭಿಮಾನಿಗಳು ಮೇಲೆ ವಿವರಿಸಿದ ಬಿಲನ್ನು ಖಂಡಿಸಿ ಅಧಿಕಾರಿಗಳಿಗೆ ತಮ್ಮ ಆಕ್ಷೇಪಗಳನ್ನು ಅರುಹುವುದು ಯುಕ್ತವಾಗಿರುತ್ತದೆ

ಮಠಾಭಿಮಾನಿ.

Attur Vaikunta Prabhu Bank, Mangalore.

ಈ ಮೂಲಕ ತಿಳಿಯಪಡಿಸ ಪುದೇನೆಂದರೆ

ಸದ್ರಿ ಬ್ಯಾಂಕಿನಲ್ಲಿ ಈ ಮುಂಚೆ ಎರಡು ವರ್ಷಗಳ ಬಾಗ್ಯಾತು ಕ್ಲಾರ್ಕನಾಗಿದ್ದ R ನಾರಾಯಣ ಎಂಬವನನ್ನು ಈ ಬ್ಯಾಂಕಿನ ಕೆಲಸದಿಂದ ತೆಗೆದುಹಾಕಿರುತ್ತದೆ ಬ್ಯಾಂಕಿನಲ್ಲಿ ಸಲ್ಲತಕ್ಕ ಯಾವತ್ತೂ ಸಾಲಗಳ ಅಸಲು ಬಡ್ಡಿ ವಗೈರೆ ಐವೇಜನ್ನು ಬ್ಯಾಂಕಿನ ಸಮಯದಲ್ಲಿ ಬ್ಯಾಂಕಿನಲ್ಲಿಯೇ ಬಂದು ಪ್ರೊಪ್ರೈಟರರ ಕೂಡೆ ಕೊಡತಕ್ಕದ್ದು ಅವುಗಳಿಗೆ ಪ್ರೊಪ್ರೈಟರರ ಸಹಿ ಇರುವ ರಶೀದಿ ಕೊಡಲಾಗುವುದು. ಅಲ್ಲದೆ ಬ್ಯಾಂಕಿನಲ್ಲಿ ಸಲ್ಲತಕ್ಕ ಹಣವನ್ನು ಸದ್ರಿ R ನಾರಾಯಣನ ಕೂಡೆ ಕೊಟ್ಟಲ್ಲಿ ಅದು ಬ್ಯಾಂಕಿಗೆ ತಲಪಲಿಕ್ಕಿಲ್ಲ. ಮಾತ್ರವಲ್ಲದೆ ಅದಕ್ಕೆ ಬ್ಯಾಂಕು ಎಷ್ಟು ಮಾತ್ರಕ್ಕೂ ಜವಾಬ್ದಾರಿಯಾಗಲಿಕ್ಕಿಲ್ಲ

A V Prabhu Bank, } A. Vaikunta Prabhu,
12 3 —1935 } *Proprietor.*

ಹಿಂದೂದೇಶದ ಇತರ ವ್ಯಾಪಾರಸ್ಥರ ಸಾಮಾನುಗಳಿಗಿಂತ ಪ್ರಿಯವಾದುದು, ನಿಕೃಷ್ಟವಾದುದು ಎಂದು ನಿರೂಪಿಸಿದರೆ ನಿಮ್ಮ ಬೆಲೆಗಿಂತ ಎರಡು ಪಾಲು ಹಿಂದೆ ಕೊಡುತ್ತೇವೆ

ಸುಖವಾಗಿ ನಿದ್ರಿಸಿರಿ.



ನಮ್ಮ ಹಿಂದೀಯ ನುಸಿಪರದೆಗಳನ್ನು ಪ್ರತಿಯೊಬ್ಬರೂ ಹೊಗಳುತ್ತಾರೆ, ಅದರ ಎಂಳಿಕೆ, ಅದರ ಗಟ್ಟಿ ಮುಟ್ಟುತನ, ಅದರ ಸುಂದರ ಕೆಲಸಗಳು ಆಕರ್ಷಣೀಯ.

ಉದ್ದ	ಅಗಲ	ಎತ್ತರ	ಸಾಧಾರಣ ಕ್ರಯ	ಉತ್ತಮ ಬೆಲೆ.
6	3½	3½	1/4/-	1/8/-
6	4	4	1/8/	1/12/-
6½	4½	4½	1/12/-	2/-
7	5	5	2/-	2/4/-
7½	6	5	2/4/-	2/8/-

ಪೆಕಿಂಗ್ ಧರ್ಮಾರ್ಥ. ಅಂಚೆ ವೆಚ್ಚ ಪ್ರತ್ಯೇಕ.

Prabhat Trading Co,
12 Sikderpara Lane Calcutta (Burra Bazar)

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba Benares City

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯದ ಅರ್ಥದ ಹಿರಿದರು? ರುದ್ರಾಕ್ಷಿಯನ್ನು ಧರಿಸುವವರ ಆರೋಗ್ಯವೇ ... ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಧಾರಣೆ ಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸರ್ವೇಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ... ಇವೆಲ್ಲಾ ಆಗುವವು. ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ... ಹೊಂದಿದ ನಮ್ಮ ... ಶಿರೋಮಣಿ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು

... 1ಕ್ಕೆ ಆಣೆ 1ರಿಂದ ರೂ 2ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ ...ರಿಂದ ರೂ ...ರ ವರೆಗೆ ... ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 5ರ ವರೆಗೆ ಮತ್ತು 3–4–5–6–7–8 ಮುಖಗಳ ... 1ಕ್ಕೆ ಆಣೆ 4ರಿಂದ ರೂಪಾಯಿ 10 ಮತ್ತು 9–10–11 ಮುಖಗಳುಳ್ಳ ... 1ಕ್ಕೆ ರೂ 20ರ 30ರ ವರೆಗೆ 12–13–14 ಮುಖದ ... 1ಕ್ಕೆ ... 100ರ ವರೆಗೆ ... ರುದ್ರಾಕ್ಷಿ ... ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ... ಕ್ರಯ ಜಾಸ್ತಿ ... (... 1 ... 3 ... 1 ... 1 ... 1 ... 3 ...)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬನಾರಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ... ರಿಸ್ಟ್ ವಾಚುಗಳು ... ಬಂಗಾರಕ್ಕಿಂತಲೂ ಹೆಚ್ಚು ... ರಮ್ಯವಾಗಿವೆ ... ವರ್ಷಗಳ ಗ್ಯಾರಂಟಿ ... ಉತ್ತಮ ... ಟೈಂಪೀಸ್ ... ಗಂಟೆಯನ್ನು ತೋರಿಸುತ್ತೆ ... ವರ್ಷಗಳ ಗ್ಯಾರಂಟಿ ... ಒಂದು ಲಿವರ್ ಪಾಕೆಟ್ ಗಡಿಯಾರ ... ಗ್ಯಾರಂಟಿ ... ಬಂಗಾರದ ... ಫೌಂಟನ್ ಪೆನ್ ಈ ... ಸಾಮಾನುಗಳೆಲ್ಲಾ ಐದೇ ರೂಪಾಯಿಗೆ ... ಪ್ಯಾಕಿಂಗ್ ಮತ್ತು ಪೋಸ್ಟೇಜ ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ... A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ



ಬಹುದಾಯುಷ್ಯ
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
... ವರ್ಷದ ಅನುಭವ
ಉಪಯೋಗಿಸಿದವರೇ ಬಲ್ಲರು
ಬೇಕಾದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫೋಸ್ಪರಸ್ ಗುಳಿಗೆಗಳ
...

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ... ಮುಂಬಾಯಿ ...
... ಕಂಪೆನಿ ಬೆಂಗಳೂರು
[... ಇಂಗ್ಲೀಷ್ ಅಥವಾ ...]

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ... ಅವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ... ಹಡೆಯುವುದರಿಂದ ಹೆಂಗಸರ ಆರೋಗ್ಯ ... ಬಹಳ ... ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ... ಶರೀರಕ್ಕೆ ಏನೂ ... ಪೂರ್ಣವಾಗಿದ್ದು ... ಗರ್ಭಧಾರಣ ಬಂದಾಗುವುದು ... ವೈದ್ಯ, ಎಲ್ ... ಈ ಚೂರ್ಣದಿಂದ ... ಗರ್ಭಧಾರಣವೂ ಆಗುವುದಿಲ್ಲ ... ರೂ ...

ವಿಳಾಸ—ಸಂಜೀವಿನೀ ಔಷಧಾಲಯ ... ವಿಂಠಜಿ, S M C

ಬಿಹಾರ್ ರಸಾಯನಿಕ ವೈದ್ಯ ಶಾಲೆಯಲ್ಲಿ ತಯಾರಾದ ಆಯುರ್ವೇದಿಯ ಔಷಧಗಳು.

ಪ್ರಸೂತಿ ಕಲ್ಯಾಣ—... ಗರ್ಭಕೋಶದ ಎಲ್ಲಾ ತರದ ... ಶುದ್ಧೀಕರಿಸುವುದು
ಕಾಮಕಲ್ಪ ರಸಾಯನ—ಧಾತುವೃದ್ಧಿ—ಬಲಹೀನತೆ
... ಸರಸ—ರಕ್ತಶುದ್ಧಿ ಶರೀರದಲ್ಲಿ ...
ಧನವಂತ್ರಿ ಮುಲಾಮು—... ಹುಣ್ಣು ಬಾವು ... ವಾಸಿ ಕೊಳ್ಳುವುದು
ಬ್ರಾಹ್ಮಿ ರಸಾಯನ—ಮೆದುಳಿನ ವಿಕಾರ ನೆನಪಿಲ್ಲದಿರುವಿಕೆ
ಪುನರ್ನವಾಸವ—ಮೈಬಾತುಕೊಳ್ಳುವುದು ... ರಕ್ತಹೀನತೆಯ ...
ಕಾಲಮೇಘ—ಇದು ಮಕ್ಕಳ ಕಲೀಜ ಮತ್ತು ಪ್ಲೀಹದ ...
... ಅನೇಕ ತರದ ... ಔಷಧಿಗಳು ...

The Behar Chemical Works Bhagalpur
... ಕಂಪೆನಿ, ಗವರ್ನಮೆಂಟ್ ... ಬೆಂಗಳೂರು ...

The Popular Insurance Company, Ltd.

Head Office:—MANGALORE, S India

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD, CALCUTTA This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country If the Directors of this Comany can continue in the present rate of progress and can control the finances with wisdom and care they would make history From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN, TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd, promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rao, who has developed in him a great deal of life insurance sense

ಸಾಂಬಾರ ವರ್ತಮಾನ.

ಪ್ರೇಮದ ಸುಖವೆಲ್ಲಿ?

ಎಂಬ ಪ್ರಶ್ನೆಗೆ ಉತ್ತರವು ದೊರೆತಿರುತ್ತದೆ. ಲುಧಿಯಾನಾದಲ್ಲಿ ೨೨ ವರ್ಷ ಪ್ರಾಯದ ನವತರುಣಿ ಪ್ರಣಯಪುರುಷನ ಕೈವಶದಲ್ಲಿದ್ದಳು. ಹಲವು ಸಮಯದ ವರೆಗೆ ಪ್ರೇಮ ಸುಖದ ನಿವಾಸಸ್ಥಾನವನ್ನು ಕಂಡುಹಿಡಿದಳು. ಹೀಗಿರುವಾಗ ಪ್ರಣಯನಿಗಿರುವ ೪ ವರ್ಷ ಪ್ರಾಯದ ಒಂಭು ಮಗುವು—"ಅಪ್ಪಾ, ನೀವು ಅವಳೊಡನೆ ಮಾತನಾಡಬಾರದೆಂದು ತಾಯಿ ಹೇಳಿದರೂ ಕೇಳುವುದಿಲ್ಲವಲ್ಲ ನಾನು ಅಮ್ಮನೊಡನೆ ಹೇಳುವೆನು" ಎಂದು ತೊದಲ್ನುಡಿಯನ್ನಾಡಿತು ಮಗುವಿನ ಮಾತು ಈ ತರುಣಿಯ ಕಿವಿಗೆ ಬಿತ್ತು. ಮರುದಿನ ತನ್ನವನು ಹೊರಗೆ ಹೋಗಿದ್ದಾಗ ಮಗುವನ್ನು ತನ್ನ ಮನೆಗೆ ಕರೆದು, ಆಡಿಸಿದಳು. ಆಡಿಸಿದಂತೆ ಕೊಂದುಬಿಟ್ಟಳು ಅವಳ ಕ್ರೂರಕೃತ್ಯವು ಗುಟ್ಟಿನಲ್ಲಿರುವುದಕ್ಕಾಗದೆ ಬಯಲಾಯಿತು. ಅವಳನ್ನು ಸೆರೆಹಿಡಿದು ಲುಧಿಯಾನ ಸೆರೆಯಲ್ಲಿ ಹಾಕಿದರು ವಿಚಾರಣೆಯಾಗುವ ದಿನ ಜೈಲಿನ ಗೋಡೆಯನ್ನು ಹತ್ತಿ ಗ್ರಾಮದಲ್ಲಿರುವ ತನ್ನ ಅಣ್ಣನ ಮನೆಗೆ ಓಡಿದಳು ಅವನು ಅವಳಿಗೆ ಆಶ್ರಯವೀಯಲಿಲ್ಲ ಸುದ್ದಿಯನ್ನು ಪೋಲೀಸರಿಗೆ ಮುಟ್ಟಿಸಿದನು. ಅವಳನ್ನು ಪುನರಪಿ ಸೆರೆಹಿಡಿದು, ವಿಚಾರಿಸಿ ಫಾಶಿ ಶಿಕ್ಷೆ ಕೊಟ್ಟರು

× × × × × ×

ವೆರ್ಸೋವಾದಲ್ಲಿ ವಿಮಾನ ಅಪಘಾತ! ವಿಮಾನವು ಸಮುದ್ರಕ್ಕೆ ಬಿತ್ತು

ಆಂಧ್ಹೇರಿಯಿಂದ ತಾ. ೮ರಲ್ಲು ಬಂದ ವಾರ್ತೆಯಿಂದ ತಿಳಿದುಬರುವಂತೆ ಅಲ್ಲಿಯ ಸಮುದ್ರದ ಮೇಲೆ ಹಾರಾಡುತ್ತಿದ್ದ G T A D S ಎಂಬ ವಿಮಾನವೊಂದು ಡೊನಾಲ್ಡ್ ಲಿಪೋಂಚ್ ಎಂಬ ಅದರ ವೈಮಾನಿಕ ನೊಡಗೂಡಿ ತಳಕೆಳಗಾಗಿ ನೀರಿಗೆ ಧಾವಿಸಿಕೊಂಡು ಬಂದು ಬಿತ್ತು ಅದರ ಮುಂಭಾಗವು ಸಮುದ್ರದಡಿ ಭೂಮಿಯಲ್ಲಿ ಮುಳುಗಿ ಕೊತಿದೆಂದೂ ವೈಮಾನಿಕನು ಯಂತ್ರದೊಳಗೆ ಸಿಲುಕಿ ಮೃತನಾದನೆಂದೂ ಅವನ ಶವವನ್ನು ಪೋಲೀಸರೂ ಬೆಸ್ತರೂ ಮೇಲೆ ತಂದರೆಂದೂ ಗೊತ್ತಾಗಿದೆ ಬೊಂಬಾಯಿ ವಿಮಾನ ಕ್ಲಬ್ಬಿನವರ ವಿಮಾನವೆಂದು ತಿಳಿದುಬಂದಿದೆ.

× × × × × ×

ಡಾ। ಮೂಂಜೆಯವರ ಮಿಲಿಟರಿ ಶಾಲೆ ೧ ಲಕ್ಷ ರೂಪಾಯಿಗಳ ಉದಾರ ದಾನ.

ಡಾ। ಮೂಂಜೆಯವರು ಸೆಂಟ್ರಲ್ ಹಿಂದೂ ಮಿಲಿಟರಿ ಶಾಲೆಯೊಂದನ್ನು ಸ್ಥಾಪಿಸುವ ಉದ್ದೇಶದಿಂದ [illegible] ಪ್ರಾರಂಭಿಸಿರುವರು. ಧುಲಿಯಾದಲ್ಲಿ ಕಳೆದ ವಾರ ಶ್ರೀ ಎಸ್ ಸಿ ಕೇಳ್ಕರರ ಅಧ್ಯಕ್ಷತೆಯಲ್ಲಿ ಆ ಸಂಬಂಧವಾದ ಸಭೆಯು ಜರಗಿ, ಡಾ। ಮೂಂಜೆಯವರ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನಿತ್ತ ಶ್ರೀ। ಪ್ರತಾಪಸೇಟ್ ಎಂಬವರನ್ನು ಅಭಿನಂದಿಸಲಾಯಿತು

× × × × × ×

ಬ್ರಿಟಿಷರ ಶಿಕ್ಷಣಕ್ಕಾಗಿ ಆದ ವೆಚ್ಚ.

೧೯೩೫ರಲ್ಲಿ ಬ್ರಿಟಿಷರ ಶಿಕ್ಷಣಕ್ಕಾಗಿ [illegible] ಪವನುಗಳನ್ನು ವಿನಿಯೋಗಿಸಲಾಯಿತು ೧೯೩೪ರಲ್ಲಿ ವೆಚ್ಚಮಾಡುವುದಕ್ಕಾಗಿ [illegible] ಪವನುಗಳನ್ನು ಪ್ರತ್ಯೇಕಿಸಿಟ್ಟಿದ್ದಾರೆ ಅಂದರೆ ಈ ವರ್ಷ [illegible] ಪವನುಗಳನ್ನು ಹೆಚ್ಚಿಗೆ ಕೊಟ್ಟರು ಈ ಹಣದಲ್ಲಿ ಬೋರ್ಡ್ ಆಫ್ ಎಜ್ಯುಕೇಶನ್‌ಗೆ [illegible] ಪವನುಗಳನ್ನು ಪ್ರತ್ಯೇಕಿಸಿಡಲಾಗಿದೆ ವಿಜ್ಞಾನಶಿಕ್ಷಣಗಳಿಗಾಗಿ ೨೮,೯೦೦ ಪವನುಗಳನ್ನು ಪ್ರತ್ಯೇಕಿಸಿಟ್ಟಿದ್ದಾರೆ

× × × × × ×

ಮುಂಬಾಯಿಯ ಗಿರಣಿಯಲ್ಲಿ ಬೆಂಕಿ ಬಿದ್ದು ೫ ಲಕ್ಷ ರೂಪಾಯಿಗಳ ನಷ್ಟ!

ಮುಂಬಾಯಿಯ ಟೇಂಕ ಬಂದರ್ ರೋಡ್‌ನಲ್ಲಿರುವ ಹೈದರಾಲಿ ಮೆನ್ಯುಫೆಕ್ಚರಿಂಗ್ ಹೆಂಡ್ ಪ್ರೆಸ್ಸಿಂಗ್ ಫೆಕ್ಟರಿಯಲ್ಲಿ ಯಂತ್ರವೊಂದನ್ನು ಸರಿಗೊಳಿಸಿದ ಮೇಲೆ ಹೇಗೋ ಬಳಿಯಿರುವ ಹತ್ತಿಗೆ ಬೆಂಕಿ ಬಿದ್ದು ನಂದಿಸಲಸಾಧ್ಯವಾಗಿ ಯಂತ್ರದ ಕೋಣೆಯಲ್ಲೆಲ್ಲಾ ಹರಡಿ ಬಹು ಬೇಗನೆ ಕಾರ್ಖಾನೆಯನ್ನು ಸುಡಲಾರಂಭಿಸಿತು, ಅಪಾಯಸೂಚಕ ಘಂಟೆಯನ್ನು ಬಾರಿಸಲು ಫಯರ್ ಬ್ರಿಗೇಡುಗಳು ಬಂದುವು ಆದರೆ ನೀರಿನ ಒತ್ತಾಟವು ಕಡಮೆಯಾಗಿದ್ದುದರಿಂದ ಅವುಗಳಿಂದ ನೀರು ಸರಿಯಾಗಿ ಹಾರದೆ ಬೆಂಕಿಯು ಭಯಂಕರವಾಗಿ ಹರಡಿತು ಒಟ್ಟು ೫ ಲಕ್ಷ ರೂಪಾಯಿಗಳ ನಷ್ಟವಾಗಿದೆಯೆಂಬ ಅಂದಾಜಾಗಿದೆ.

× × × × × ×

ಸರ್ ಮಲ್ಕೊಂ ಕೇಂಪ್‌ಬೆಲ್‌ರು ತನ್ನ ಮೊದಲಿನ ದಾಖಲೆಯನ್ನು ಮುರಿದರು.

ಸರ್ ಮಲ್ಕೊಂ ಕೇಂಪ್‌ಬೆಲ್‌ರೆಂಬ ಇಂಗ್ಲೆಂಡಿನ ಅಪ್ರತಿಮ ಮೋಟರ್ ಚಾಲಕರು ಕಳೆದ ವರ್ಷದಲ್ಲಿ ಡೈಟೋನಾಬೀಚ್ ಎಂಬಲ್ಲಿ ತನ್ನ ಮೋಟರನ್ನು ಗಂಟೆಗೆ ೨೭೨ ಮೈಲುಗಳಂತೆ ಓಡಿಸಿ ಜಗತ್ತಿನ ಮೋಟರ್ ಓಟದ ದಾಖಲೆಯನ್ನು ಮುರಿದು ಮುಂದೆ ನಿಂತಿದ್ದರು ಅವರ ನಂತರ ಅನೇಕರು ಅವರನ್ನು ಸೋಲಿಸಲು ಯತ್ನಿಸಿ ನಿಷ್ಫಲರಾದರು. ಕಳೆದ ವಾರ ಕೇಂಪ್‌ಬೆಲ್ಲರು ಡೈಟೋನಾದಲ್ಲಿ ಪುನಃ ತನ್ನ ಬ್ಲ್ಯೂಬರ್ಡ್ ಎಂಬ ಮೋಟರನ್ನು ಓಡಿಸಿ ಗಂಟೆಗೆ ೨೭೬ ಮೈಲುಗಳಷ್ಟು ಸಂಚರಿಸಿ ತನ್ನ ಮೊದಲಿನ ದಾಖಲೆಯನ್ನು ತಾನೇ ಮುರಿದಿರುವರು. ಒಂದು ಕಡೆ, ಅವರ ಮೋಟರು ಮೇಲೆ ಹಾರಿ ೩೦ ಅಡಿಗಳನ್ನು ಬಿಟ್ಟು ಮುಂದೆ ಬಿದ್ದಿತು.

× × × × × ×

ಅಫೀಮಿನ ಬೆಳೆಯು—

ಈ ವರ್ಷ ಕಡಮೆಯಾಗಿದೆಯೆಂದು ಸರಕಾರವೇ ತಿಳಿಸಿದುದರಿಂದ ಸಮಾಧಾನವಾಗಲು ಕಾರಣವಿದೆ. ಕಳೆದ ಸಲ [illegible] ಬಿಗಾಗಳಷ್ಟು ಅಫೀಮನ್ನು ಬೆಳೆಸಲಾಗಿತ್ತು ಈ ವರ್ಷ ಬರೇ [illegible] ಬಿಗಾಗಳಷ್ಟು ಮಾತ್ರ ಕಳೆದ ವರ್ಷ ಒಟ್ಟು [illegible] ರೂಪಾಯಿ ಲಾಭವಾಗಿತ್ತು ಈ ವರ್ಷ ಆ ಲಾಭವು [illegible] ರೂಪಾಯಿಗಳಲ್ಲಿ ನಿಂತಿತು

× × × × × ×

ಕದ್ದ ಕೈಯೇ ಹಿಡಿಸಿ ಕೊಟ್ಟಿತು

ಮುಂಬಾಯಿಯಲ್ಲಿ [illegible] ಈ ವ್ಯಕ್ತಿಗೆ ಎರಡು ಯಶಸ್ವಿಯಾಗಿದ್ದ ಯಾವಾಗ ನೋಡಿದರೂ ಮುಂಬಾಯಿಯಲ್ಲಿ ವಿಚಿತ್ರ ರೀತಿಯಲ್ಲಿ ಕಳ್ಳತನ ನಡೆಯುತ್ತಿತ್ತು ಆದರೆ ವ್ಯಕ್ತಿಯು ಮಾತ್ರ ಅಂಟಿಸಿಗುತ್ತಿದ್ದಿಲ್ಲ ಇತ್ತಲಾಗೆ ಒಂದು ಕಡೆಯಲ್ಲಿ ಒಂದು ಮನೆಯ ಬಾಗಿಲೊಡೆದು [illegible] ವಸ್ತುಗಳವೆಗಳು ಕಾಣೆಯಾದುವು. ಪೋಲೀಸರು ತನಿಖೆ ಮಾಡಿ ಮಾಡಿ ತಲೆ ಕೆಡಿಸಿಕೊಂಡರು ಬೆರಳಿನ ಗುರುತು ಮಾತ್ರ [illegible] ಇದ್ದುದನ್ನು ಕಂಡರು ಹೆಬ್ಬೆಟ್ಟಿನ ಗುರುತೂ ದೊರೆಯಿತು ಒಂದೆರಡು ದಿನಗಳಲ್ಲಿ ಉಸ್ಮಾನ್ ರಜಾ ಖಾನ್ ಎಂಬವನನ್ನು ಸಂದೇಹದ ಮೇಲೆ ಹಿಡಿದು [illegible] ರಿಂದ ಇತ್ತೀಚೆ ತನಕ [illegible] ಕಳ್ಳತನಕ್ಕೆ ಕಾರಣನಾದವನು ಇವನೆಂದು ತಿಳಿದುಬಂದಿತು, ವಿವಿಧ ಶಿಕ್ಷೆಗೊಳಗಾಗಿ ಈಗ ಜೈಲಲ್ಲಿ ರಜೆಯ ಸುಖವನ್ನು ಪಡೆಯುತ್ತಿದ್ದಾನೆ

× × × × × ×

ಇಂಗ್ಲೆಂಡಿಗೆ ಪ್ರಯಾಣ ಬೆಳೆಸುತ್ತಾರೆ

ಪಂಡಿತ ಮಾಲವೀಯರು ಇನ್ನಿತರ ಕೆಲವರನ್ನು ಕೂಡಿಕೊಂಡು ಜಾತೀಯ ಏವಾರ್ಡಿನ ಕುರಿತಾದ ನ್ಯೂನತೆಗಳನ್ನು ಬ್ರಿಟಿಷ ಸರಕಾರಕ್ಕೆ ತಿಳಿಸುವುದಕ್ಕಾಗಿ ಅತ್ತ ತೆರಳಲಿರುವರು ಸದ್ಯ ಮಾಲವೀಯರು ಅಸ್ವಸ್ಥರಾಗಿರುವರು ಮಾರ್ಚ ೨೬ರಲ್ಲಿ ಇವರು ಅತ್ತ ತೆರಳುವುದೆಂದು ನಿಶ್ಚಯವಾಗಿದೆ. ಶ್ರೀ। ಚಿಂತಾಮಣಿ ಮತ್ತು ಒಬ್ಬ ರಾಷ್ಟ್ರೀಯ ಪಕ್ಷದ ಮುಸ್ಲಿಂ ಧುರೀಣರು ಅತ್ತ ತೆರಳಲಿರುವರಂತೆ ಸರ್ದಾರ ಮಂಗಳಸಿಂಘರ ಮುಖಂಡತ್ವದಲ್ಲಿ ಸಿಖ್ಖರ ಒಂದು ಪ್ರಾತಿನಿಧ್ಯಮಂಡಲವು ಅತ್ತ ಹೋಗಲಿದೆಯೆಂದು ಗೊತ್ತಾಗಿದೆ

× × × × × ×

ಶ್ರೀಮತಿ ಕಮಲಾನೆಹರುರವರು.

ಇವರ ದೇಹಸ್ಥಿತಿಯು ಉತ್ತಮವಾಗಿಯೇ ಇದೆ ಭೋವಾಲಿಯ ಡಾ। ದೇಶಕ್ಕರರು ಹೀಗೆಂದಿರುವರು ಶ್ರೀಮತಿ ಕಮಲಾನೆಹರುರವರನ್ನು ನಾನು ಕಳೆದ [illegible] ತಿಂಗಳಲ್ಲಿ ಪರೀಕ್ಷಿಸಿದೆ ದೇಹಸ್ಥಿತಿಯು ಕೆಟ್ಟಿರಲಿಲ್ಲ ಈಗಲೂ ಹಾಗೆಯೇ ಇದೆ. ಅವರು ತೂಕದಲ್ಲಿ ಸ್ವಲ್ಪ ಹೆಚ್ಚಿರುವರು ಒಕ್ಟೋಬರ ೨೬ರಲ್ಲಿ ಅವರು ೯೬ ಪೌಂಡು ಭಾರವಿದ್ದರು. ಈಗ ೯೮ ಪೌಂಡುಗಳಷ್ಟಿರುವರು. ಕೆಮ್ಮು, ಜ್ವರಗಳು ಮೊದಲಿನಷ್ಟು ವಿಶೇಷವಾಗಿರುವುದಿಲ್ಲ ಆದರೂ ಅವರು ದೇಹಾರೋಗ್ಯ ಸಂಪಾದನೆಗಾಗಿ ಯುರೋಪಿಗೆ ತೆರಳಬೇಕೆಂದು ನಾನು ಸೂಚಿಸುತ್ತೇನೆ"

× × × × × ×

ರೈಫಲ್ ಉಪಯೋಗವನ್ನು ಕಲಿಸಿದುದಕ್ಕಾಗಿ—

ಹಿಂದೂಸ್ಥಾನೀ ಸೇವಾದಳವನ್ನು ಬಹಿಷ್ಕರಿಸಲಾಗಿದೆಯೆಂದೂ, ಹಿಂದೂಸ್ಥಾನೀ ಸೇವಾದಳವು ಅಹಿಂಸಾತ್ಮಕ ತತ್ವವನ್ನೊಳಗೊಂಡ ಸಂಸ್ಥೆಯಲ್ಲವೆಂದೂ ಡಿಲ್ಲಿಯ ಶಾಸನ ಸಭೆಯಲ್ಲಿ ಶ್ರೀ। ಸತ್ಯಮೂರ್ತಿಯವರ ಪ್ರಶ್ನೆಗೆ ಸರ್ ಹೆನ್ರಿ ಕ್ರೈಕರು ಹೇಳಿರುವರು.

× × × × × ×

ಬೇಲಿ ಹೊಲವನ್ನು ಮೇಯಿತು.

ನೆಲ್ಲೂರಿನಲ್ಲಿ ಶ್ರೀ ಎಂ ವಿ. ಸುಂದರರಾವು ಐಯ್ಯರೆಂಬವರು ನೂಜೆ ಒಫಿಶಿಯಲ್ ರಿಸೀವರರಾಗಿದ್ದಾಗ ಸ್ವಲ್ಪ ದ್ರವ್ಯವನ್ನು ಅವರ ಕೈಯಲ್ಲಿ ಕೊಡಲಾಯಿತು. ಆ ಹಣವು ಹಿಂದೆ ಬರಲಿಲ್ಲ ಮೋಕದ್ದಮೆ ನಡೆದು ಶ್ರೀಯುತರ ವಿಶ್ವಾಸಘಾತುಕತನಕ್ಕಾಗಿ ೩ ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿದೆ. ಅವರೊಡನೆ ಒಬ್ಬ ವಕೀಲರಿಗೂ ಶಿಕ್ಷೆಯಾಗಿದೆ ಪಾಪ ಅಪ್ಪೀಲು ಮಾಡಲಿರುವರಂತೆ.

× × × × × ×

ಹುಡುಗಿಯರಿಗೆ ಸ್ವಾತಂತ್ರ್ಯವೀಯಬೇಕೊ

ಎಂದು ಯಾರಾದರೂ ಪ್ರಶ್ನಿಸಿದರೆ "ಅವರಿಗೆ ತಿರುಗಾಟದ ಸ್ವತಂತ್ರ್ಯವನ್ನು ಮಾತ್ರ ಕೊಡಬೇಡಿ" ಎಂದು ಹೇಳುವ ಸೀತಿಷ್ಟರಿರದಿರಲಿಕ್ಕಿಲ್ಲ. ಏಕೆಂದು ತಿಳಿಯಬೇಕೆ? ಲಾಹೋರಿನಲ್ಲಿ ದಾಮೋದರು ಅಕ್ಕತಂಗಿಯರು ಯಾವಾಗಲೂ ಅವರು ಒಂದಾಗಿ ತಿರುಗಾಡುವ ಅಭ್ಯಾಸ ಮೊನ್ನೆ ಲಾಹೋರ್ ಜೂ ನೋಡಲಿಕ್ಕೆಂದು ಅಲ್ಲಿಗೆ ಹೋದರು ಅವರೊಡನೆ ಬೇರಾರೂ ಇರಲಿಲ್ಲ ಆ ಮಟ್ಟಿಗೆ ಸ್ವಾತಂತ್ರ್ಯವನ್ನು ವಹಿಸಿಕೊಂಡಿದ್ದರು ಮಧ್ಯದಾರಿಯಲ್ಲಿ ಇಬ್ಬರು ತರುಣರು ಸಿಕ್ಕಿದರು. ಏನೋ ನೆಪಕಲ್ಪಿಸಿ ಹಟ್ಟ ಮೂರವರನ್ನೂ ಟಕ್ಕಿಯ ಕಡೆಗೆ ಕರೆದೊಯ್ದರು ಅಪಾಯವು ಸಂಭವಿಸುತ್ತದೆಯೆಂದಿದ್ದಾಗ ಈ ಅಕ್ಕತಂಗಿಯರಿಗೆ ಸೂಚನೆ ದೊರೆತು ಬೊಬ್ಬಿಟ್ಟರು ಒಡನೆ ಹಳ್ಳಿಗರು ಬಂದು ಅವರನ್ನು ದುಷ್ಕರ ಕೈಯಿಂದ ತಪ್ಪಿಸಿದರು ಒಬ್ಬನನ್ನು ಸೆರೆಹಿಡಿದು ಪ್ರೂಪರು. ಹುಡುಗಿಯರ ಸ್ವಾತಂತ್ರ್ಯಕ್ಕೆ ಅಡ್ಡಿ ಬಂದುದೇಕೆಂದು ಪ್ರಶ್ನಿಸಿದ್ದಾರೆ

× × × × × ×

ರೋಗದ ಭಯದಿಂದ ಜಾತ್ರೆಗೆ ಬಹಿಷ್ಕಾರ

ಧಾರವಾಡ ಜಿಲ್ಲೆಯ ಯಮನೂರ್ ಎಂಬಲ್ಲಿ ಮಾರ್ಚ ೨೬ ೨೭ರಲ್ಲಿ ಮಹಾಜಾತ್ರೆಯು ನಡೆಯುವ ಸಿದ್ಧತೆಯಾಗಿತ್ತು. ಅಷ್ಟರಲ್ಲಿ ಮುಂಬಯಿ ಸರಕಾರದ ಒಂದು ಆಜ್ಞೆಯು ಕಲೆ, ಎಪಿಡೆಮಿಕ್ ಡಿಸೀಜಸ್ ಏಕ್ಟ್ ಮೇರೆಗೆ ಅಂತಹ ಯಾತ್ರೆಯನ್ನು ಜರಗಿಸಬಾರದಾಗಿ ತಿಳಿಸಲಾಯಿತು ಅಲ್ಲಿ ನೀರಿನ ಅಭಾವವು ತಲೆದೋರಿರುವುದರಿಂದ ಅಂಟುರೋಗಗಳು ಹರಡುವ ಭಯವಿದೆಯೆಂಬುದರಿಂದ ಹೀಗೆ ಮಾಡಲಾಯಿತೆಂದು ತಿಳಿಸಲಾಗಿದೆ

× × × × × ×

"ಕಷ್ಟಗಳು ಬಂದರೆ ಒತ್ತೆಯಾಗಿ ಬರುವುದಿಲ್ಲ".

ಎಂಬ ಗಾದೆಯೊಂದು ಇಂಗ್ಲೀಷಿನಲ್ಲಿರುವುದನ್ನು ತಿಳಿದವರು ತಿಳಿದಿರಬಹುದು (ಅನುಭವಿಸಿದವರೂ ಇರಬಹುದಲ್ಲ) ಇದನ್ನು ಓದಿ ಬಳ್ಳಾರಿಯ ಹೆಬ್ಬಾಳ ಗ್ರಾಮದಲ್ಲಿ ಕ್ಷಾಮವು ವಿಶೇಷವಾಗಿ ತಲೆದೋರಿ ಜನರು ಅನ್ನನೀರಿಲ್ಲದೆ ಸಾಯುವಂತಾದರು ಕಳೆದ ಒಕ್ಟೋಬರದಲ್ಲಿ ಈ ಕಷ್ಟವು ವಿಷಮತೆಗೇರಿತು ಇದನ್ನು ಕಂಡು ಕೆಲವು ಬಡವರು ಅಲ್ಲಿಯ ಹನುಮಂತ ರೆಡ್ಡಿ ಎಂಬವರಲ್ಲಿಗೆ ಹೋಗಿ ಅವರು ದಾಸ್ತಾನು ಇಟ್ಟಿರುವ ದವಸಧಾನ್ಯಗಳನ್ನು ಬೇಡಿದರು ಏನೋ ಕೆಲಸವಾಯಿತು ಒಕ್ಟೋಬರ ೨೨ ನೇ ದಿನ ಹತ್ತೆಂಟು ಮಂದಿ ಒಟ್ಟುಗೂಡಿ ಹನುಮಂತ ರೆಡ್ಡಿಯವರ ಧಾನ್ಯಗಳ ಕೋಣೆಯ ಬಾಗಿಲನ್ನೊಡೆದು ಸಾಮಾನುಗಳನ್ನು ದೋಚಿಕೊಂಡರು ಹಂಚಿಕೊಂಡರು ಹಾಗೂ ಹೊಟ್ಟೆಯ ಕಷ್ಟವನ್ನು ನಿವಾರಿಸಿ ಕುಳಿತಿರುವಾಗ, ಬಾಗಿಲು ಒಡೆದವರನ್ನು ಕೈದುಮಾಡಿದರು ಸ್ಟೇಶನಿಗೆ ಕರೆದೊಯ್ದು ನ್ಯಾಯವಿಚಾರಣೆಯಾಯಿತು ಆದರೂ ಬಡವರ ಕಷ್ಟವು ಕಡಿಮೆಯಾಗಲಿಲ್ಲ ಹಸಿದ ಏಳು ಹೊಟ್ಟೆಗಳಿಗೆ ತಲಾ ಒಂದು ವರ್ಷದ ಶಿಕ್ಷೆಯನ್ನು ಸೆಶ್ಶನ್ಸ್ ಜಡ್ಜರು ಕೊಟ್ಟರು.

ತಂದೆಯನ್ನೇ ತಿವಿದುಕೊಂದ ಮಗನು—

ಎಲ್ಲೂರಿನಲ್ಲಿ ಶಿಕ್ಷೆಗೆ ಗುರಿಯಾದನು. ನಡೆದ ಕತೆ ಕೇಳಿ ತಂದೆಯ ಪ್ರಥಮ ಪತ್ನಿಯ ಪ್ರಥಮ ಮಗನವನು ೨೨ ವರ್ಷ ಪ್ರಾಯದವನಿದ್ದನು, ಅವನು ದೊಡ್ಡವನಾಗುತ್ತಿದ್ದಾಗ ಅವನ ತಾಯಿಯ ೨ ಇಹಲೋಕವನ್ನು ತೊರೆದುಹೋದಳು ಗಂಡನು ಮುದುಕನಾದರೂ ಸ್ವಲ್ಪ ಕಾಲದಲ್ಲಿ ಇನ್ನೊಂದು ಹೆಂಡತಿಯನ್ನು ಮಾಡಿಕೊಂಡನು. ದಿನಗಳು ಕಳೆಯುತ್ತಿದ್ದಂತೆ ಮಗನ ಔದಾಸೀನ್ಯವು ಹೆಚ್ಚಿ ಅವನು ಕೆಲಸಕ್ಕೆ ಸರಿಯಾಗಿ ಹೋಗುತ್ತಿದ್ದಿಲ್ಲವೆಂಬುದು ತಂದೆಗೆ ತಿಳಿದುಬಂತಲ್ಲ ಅನೇಕ ಸಲ ಅವನಿಗೆ ಹೊಡೆದನು. (ಆದರಲ್ಲೂ ಅವನ ಪತ್ನಿಯು ಕೂಡಿದಳೋ ತಿಳಿದಿಲ್ಲ) ಆದರೂ ಇದನ್ನೆಲ್ಲ ಸಹಿಸಿಕೊಂಡು ಮಗನು ಬಚ್ಚಲುಬರಿದುವಮಾಡುತ್ತಲೇ ಇದ್ದನು ಒಂದು ದಿನ ತಂದೆಯು ಪತ್ನಿಗೆ ಎಚ್ಚರಕೊಟ್ಟು ಮಗನಿಗೆ ಮುಂದಕ್ಕೆ ಅನ್ನಹಾಕಬೇಡವೆಂದು ಹೇಳಿದನು. (ಪತ್ನಿಯು ಆಜ್ಞೆಯನ್ನು ಪರಿಪಾಲಿಸಿದಳೋ ತಿಳಿಯದು) ಮಗನು ಮಾತ್ರ ಅಡಿಗೆಕೋಣೆಗೆ ಹೋಕ್ಕು ಪಾತ್ರೆಗಳನ್ನು ಬರಿದುಮಾಡುತ್ತಿದ್ದ ಈ ಸುದ್ದಿಯು ತಂದೆಗೆ ಗೊತ್ತಾಗಿ ಮಗನನ್ನು ಹಿಡಿದು ಬೆತ್ತದಿಂದ ನಾಲ್ಕು ಪೆಟ್ಟುಕೊಟ್ಟ, ಯುವಕನಲ್ಲವೇ? ಒಡನೆ ಅವನಿಗೆ ಸಿಟ್ಟು ಬಂದು ಒಂದು ಚೂರಿಯನ್ನು ತೆಗೆದು, ತಂದೆಯ ಹೊಟ್ಟೆಯ ಮೇಲೆ ಚುಚ್ಚಿಬಿಟ್ಟ. ಮುದುಕ ಬೇರಿಲ್ಲನೆ ಬಿದ್ದ ಪ್ರಥಮ ಪತ್ನಿಯ ಹಾದಿಬಿಡದ ಮಗನನ್ನು ಕೈದುಮಾಡಿ ವಿಚಾರಣೆಯಾಯಿತು ಹಲವು ವಕೀಲರು ಅವನು ಆತ್ಮರಕ್ಷಣೆಗಾಗಿ ತಂದೆಯನ್ನು ಕೊಂದುದು ಎಂದರು ಕೆಲವರು ಸಿಟ್ಟಿನಿಂದ ತಂದೆಗೆ ಹೊಡೆದುದು ಎಂದರು ಕೊನೆಗೆ ತರುಣನಿಗೆ ಒಂದು ವರ್ಷದ ಕಠಿಣ ಸಜೆಯನ್ನು ವಿಧಿಸಲಾಯಿತು.

× × × × × ×

ಗುಡಿಯೊಳಗಿದ್ದು ಗುಡಿಯನ್ನು ಕತ್ತರಿಸುವವರು—

ಲೋಕದಲ್ಲಿ ಹಬ್ಬೋ ಕಡಮೆಯೋ ಎಂದು ಲೆಕ್ಕ ಹಾಕುವ ಕೆಲಸವು ಗಣಿತಜ್ಞರಿಗಿರಲಿ' ಆದರೂ ಅಂತಹ ಉದಾಹರಣೆಗಳಿಗೆ ಕಡಮೆಯಿಲ್ಲವಂತೆ ಓದಿ, ಇದೊಂದು ಆರೋಪವನ್ನು ಬೆಂಗಾಳಪುರದ ಅಸ್ಸ ಸರಕಾರೀ ನೌಕರರ ಸಹಕಾರ ಸಂಘದಲ್ಲಿನ ಕರಣಿಕನಾದ ಜಗ್ಗನೆಂಬವನನ್ನು ಒಳಗೈಮಾಡಿಕೊಂಡು ಸಂಘದ ಅಧ್ಯಕ್ಷರಾದ ಶ್ರೀ। ಡಿ. ಎಲ್ ಪಟ್ನಾಯಕರೂ ಸೆಕ್ರೆಟರಿ ಕೃಷ್ಣಚಂದ್ರಚೌಧುರಿ ಎಂಬವರೂ ಸಂಘದ ೪೦೦೦ ರೂಪಾಯಿಗಳನ್ನು ದುರ್ವಿನಿಯೋಗಗೊಳಿಸಿದರೆಂಬ ಒಗ್ಗೆ ಕೈದುಮಾಡಲ್ಪಟ್ಟಿರುವರು ಪಟ್ನಾಯಕರು ಹಿಂದೆ ಲ್ ಕಟ್ ಎಂಬಲ್ಲಿ ಸಬ್ ರಿಜಿಸ್ಟ್ರಾರರು ಚೌಧುರಿಯವರು ಬೆರಹಾಂಪುರದ ಡಿ ಪು. ಕೋರ್ಟಿನಲ್ಲಿ ಹೆಡ್ ಕ್ಲಾರ್ಕರು ಇದು ಆರೋಪಣೆ—ತಿಳಿದಿರಲಿ!

× × × × × ×

'ಇದ್ದವರಿಗುಂಟು, ಇಲ್ಲದವರಿಗೆ ಇಲ್ಲ ಈ ಕಾಲ' —

ಎಂದು ಒಮ್ಮೆ ಪುರಂದರದಾಸ ಹಾಡಿದ್ದನಂತೆ. ಅವನ ಕಾಲಕ್ಕೂ ಈಗಿನ ಕಾಲಕ್ಕೂ ವ್ಯತ್ಯಾಸವಿಲ್ಲವೆಂದು ತಿಳಿಯುವುದಕ್ಕಾಗಿ ಈ ವಾರ್ತೆ ಇಲ್ಲಿದೆ ಸಿಂಧ್ ದೇಶದಲ್ಲಿ ಜನರಿಗೆ ಕೆಲಸವಿಲ್ಲದೆ ಮಹಾ ಕಷ್ಟವು ಸನ್ನಿಹಿತವಾಗಿದೆ ಅಲ್ಲಿಯ ಪಂಡಿತ್ರಿತ—ನಿರ್ಗತಿಕ ಸ್ತ್ರೀಯರು ದಿನಕ್ಕೆ ಬರೀ ಎರಡು ಪೈಗಳ ಸಂಬಳದಲ್ಲಿ ಕೆಲಸ ಮಾಡುತ್ತಿರುವರು ಯೋಗ್ಯ ಉದ್ಯೋಗಗಳಿಲ್ಲದಿರುವುದೇ ಅದಂ ಈ ದೀನಾವಸ್ಥೆಗೆ ಕಾರಣವಾಗಿ ಬಂದಿದೆ. ಶ್ರೀ ಜಮುರಾಮ್ ದೌಲತರಾಮರವರು ಗ್ರಾಮ ಕೈಗಾರಿಕಾ ಸಂಘದ ಪರವಾಗಿ ಸಿಂಧ್ ಪ್ರಾಂತ್ಯದಲ್ಲಿ ಸಂಚರಿಸಿ ಈ ಸ್ಥಿತಿಯನ್ನು ಕಂಡು ಸಾಧುವಾಸ್ವಾನ್ [illegible] ಪಟ್ಟಣಗಳಲ್ಲಿ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವವರಿದ್ದಾರೆ

× × × × × ×

ವೇಶ್ಯೆಯರ ಮೇಲಿನ ಶಾಸನವು

ಸದ್ಯಕ್ಕೆ ಕರ್ನಾಟಕಕ್ಕೆ ಬರುವುದು ಬೇಡವೆಂದು ಹೇಳಿ ಸರಕಾರವು ಅಲ್ಲಿಯ ಮುನಿಸಿಪಾಲಿಟಿಯ ಸೂಚನೆಯನ್ನು ತಿರಸ್ಕರಿಸಿರುತ್ತದೆ. ಆದರೆ ಮುನಿಸಿಪಾಲಿಟಿಯವರು ಈ ಬಗ್ಗೆ ಹೆಚ್ಚಿನ ಸಾಹಸಗೈದು ತಮ್ಮ ಸೂಚನೆಯು ಅಂಗೀಕೃತವಾಗುವತನಕ ಮಾಡಲಿರುವ ೨

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ – (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ – (ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.



Distributors for South Kanara:—

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಡಬ್ಬಿಯೊಂದಕ್ಕೆ ರೂ. 1

ಕಾಮಶಾಸ್ತ್ರವನ್ನೋದಿರಿ

Agents – Shah Company, Mangalore

„ Pearl & Sons, Mangalore

Atank Nigrah Pharmacy
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

Writing an Advertisement. Advertisements make both a concious and sub-concious appeal and should be beautiful, sentimental or humorous, not blatant or vulgar, crisp in their appeals, whether of wording or design, not too highly coloured metaforically, and with a reason given wherever possible that appeals to the practicable mind, a mere statement of the name of the article or place is insufficient.

Get your advertisements written up by —**The Publicity Department, Swadeshabhimani. Mangalore**

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿಯು ಈ ಸಂಸ್ಥೆಯು ವರ್ಷಪ್ರತಿ ದೃಢವಾಗಿ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇದರಲ್ಲಿ ಸಾರ್ವಜನಿಕರು ಇಟ್ಟಿರುವ ವಿಶ್ವಾಸಕ್ಕೂ ಸಂಸ್ಥೆಯು ಸೇವೆಗೂ ಇದೇ ದಾಖಲೆಯಾಗಿದೆ.

19 ಆಫೀಸುಗಳಿರುವ ಹೆಸರಾದ ಬೇಂಕು

ನಮ್ಮ ಆಫೀಸುಗಳು:—

ಬೊಂಬಾಯಿ (ಫೋರ್ಟ್ ಮತ್ತು ಮಾಂಡ್ವಿ), ಹುಬ್ಬಳ್ಳಿ, ಮಂಗಳೂರು, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಂ, ಅಲ್ಲೆಪ್ಪಿ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿವೆ

ಪ್ರಗತಿಸೂಚಕ ಪಟ್ಟಿ.

ವಂತಿಗೆ ಭಂಡವಾಳ	ಶಿಕ್ತ ಭಂಡವಾಳ	ರಿಜರ್ವ್	ಡಿಪೋಜಿಟ್	ವ್ಯವಹಾರದಲ್ಲಿರುವ ಭಂಡವಾಳ
1916 2,25,000	1916 2,00,000	[illegible] 80,000	1916 3,60,000	1916 6,83,000
1920 3,00,000	1920 3,00,000	[illegible] 1,61,000	1920 8,99,000	1920 14,19,000
1934 3,00,000	1924 3,00,000	1924 2,62,000	1924 18,10,000	1924 24,69,000
1928 3,00,000	1928 3,00,000	[illegible] 3,88,000	1928 37,42,000	1928 46,99,000
1932 6,00,000	1932 3,30,000	1932 4,31,000	1932 55,46,000	1932 65,62,000
1934 6,00,000	1934 3,31,000	1934 4,50,000	1934 58,62,000	1934 73,49,000

ಗಿರಾಕಿಗಳಿಗೆ ಎಲ್ಲಾ ತರದ ಸೌಕರ್ಯಗಳು.

ಸುಲಭ ರೀತಿಯ ವ್ಯಾಪಾರ ವಹಿವಾಟುಗಳು.

ಡಿಪೋಜಿಟ್ ಹಣಕ್ಕೆ ಶೇಕಡಾ 4ರಂತೆ ಬಡ್ಡಿ ಕೊಡಲಾಗುವುದು.

ಭಾರತೀಯ ಮಹಿಳೆಯರ ಭವಿಷ್ಯ ಜೀವನ.

ಲೇಖಕ—ಬಿ ಲಕ್ಷ್ಮಣದೇವವಿದ್ಯಾರ್ಥಿ, ಸಂಪಾದಕ ಸದ್ಧರ್ಮ ಪ್ರಚಾರಕ ಗ್ರಂಥಮಾಲೆ ಮಂಗಳೂರು

ಹಿಂದುಸ್ಥಾನದ ಇಂದಿನ ಪರಿಸ್ಥಿತಿಯನ್ನು ಸರಿಯಾಗಿ ಪರಿಶೀಲನೆ ಮಾಡಿ ನೋಡಿದ್ದಲ್ಲಿ ದೇಶದಲ್ಲೆಲ್ಲಿಯೂ ಬಹು ವಿಧದ ಸುಧಾರಣಾ ಕ್ರಾಂತಿಯು ಪಸರಿಸುತ್ತಿದೆಯೆಂಬುದು ವಿದಿತವಾಗುತ್ತದೆ ವರ್ತಮಾನ ಪತ್ರಿಕೆಗಳ ಲೇಖನಗಳೂ ವ್ಯಾಖ್ಯಾನ ವೇದಿಕೆಗಳಿಂದ ಜನತಾ ಸಮುದಾಯದ ಮುಂದೆ ಚೆಲ್ಲಲ್ಪಡುತ್ತಿರುವ ಭಾಷಣಗಳೂ ಗ್ರಂಥಕರ್ತರುಗಳಿಂದ ಪ್ರಕಟಿಸಲ್ಪಡುವ ಗ್ರಂಥಗಳ ಪ್ರತಿಯೊಂದು ವಾಕ್ಯಗಳಲ್ಲೂ ಈ ಸಮಾಜಸುಧಾರಣಾ ಕ್ರಾಂತಿಯ ಅತ್ಯುಜ್ವಲವಾದ ಪ್ರಭೆಯು ಪ್ರತಿಯೊಬ್ಬನಿಗೂ ಗೋಚರಿಸುತ್ತಿದೆ ಅಸ್ಪೃಶ್ಯತಾನಿವಾರಣೆ, ಸನಾತನಧರ್ಮ ಸಂರಕ್ಷಣೆ, ಶುದ್ಧೀ ಸಂಘಟನೆ, ರಾಷ್ಟ್ರೀಯ ಸ್ವಾತಂತ್ರ್ಯತೆ ಇತ್ಯಾದಿ ಕಾರ್ಯಗಳಿಗಾಗಿ ದೇಶದ ಸಮಸ್ತ ಮುಖಂಡರು ಅಹೋರಾತ್ರಿ ಯತ್ನಿಸುತ್ತಿರುವರಾದರೂ ಭಾರತೀಯ ಮಹಿಳೆಯರ ಭವಿಷ್ಯ ಜೀವನದ ನಿಶ್ಚಿತಸಿದ್ಧಾಂತವು ಹೇಗಿರಬೇಕೆಂಬ ಪ್ರಶ್ನೆಯು ಭಾರತೀಯ ಮುಖಂಡರ ಮುಂದೆ ಅಗ್ರಸ್ಥಾನದಲ್ಲಿ ನಿಂತಿದೆ

ಭಾರತೀಯ ಮಹಿಳೆಯರ, ಪಾಶ್ಚಾತ್ಯ ಸಭ್ಯತೆಯನ್ನು ಅನುಕರಣೆಮಾಡಿ ಆಂಗ್ಲೇಯ ಸ್ತ್ರೀಯರಂತೆ ರಾಜಕೀಯ ಅಧಿಕಾರ ಹಾಗೂ ಆರ್ಥಿಕ ಸ್ವತಂತ್ರತೆಗಾಗಿ ಸತತ ಪ್ರಯತ್ನಮಾಡತಕ್ಕದ್ದು—ಎಂಬ ಅಭಿಪ್ರಾಯವನ್ನು ಪಾಶ್ಚಾತ್ಯ ಶಿಕ್ಷಣದಿಂದ ಪ್ರಭಾವಿತರಾದ ನಮ್ಮವರನೇಕರು ಕಳೆದ ೩೦ ವರ್ಷಗಳಿಂದಲೂ ಪ್ರಕಟಿಸುತ್ತಿರುವರು ವರ್ತಮಾನ ಆಂಗ್ಲೇಯ ಜನಾಂಗವು ಇದೇ ಅಪಥಿಯಲ್ಲಾಗಾಯ್ತು ಅಲ್ಲಿಯ ಮಹಿಳಾಸಮಾಜಕ್ಕೆ ಭಾರತೀಯರ ಪ್ರಾಚೀನ ಸಭ್ಯತೆಯನ್ನೇ ಅನುಕರಣೆಮಾಡಲು ಪ್ರೋತ್ಸಾಹಿಸುತ್ತಿದೆ ಜರ್ಮನಿಯ ಸರ್ವಾಧಿಕಾರಿಯು ಜಗತ್ತಿನ ರಾಜನೈತಿಕ ವಿಷಯದಲ್ಲಿ ಸುಪ್ರಸಿದ್ಧರೂ ಆಗಿರುವ ಹರ್ ಹಿಟ್ಲರರ ಹೀಗೆ ಬರೆದಿರುವರು

The India ... [illegible] ... equality ... [illegible] ... produ... [illegible] ... intelle... ctualism ... [illegible] ... women

ಅರ್ಥಾತ್—ಆರ್ಥಿಕ ಮತ್ತು ರಾಜನೈತಿಕ ಅಧಿಕಾರಗಳಲ್ಲಿ ಸ್ತ್ರೀಯರು ಪುರುಷರ ಸಮಭಾಗವಹಿಸುವ ಆದರ್ಶತೆಯು ಯಹೂದಿ ಜನಾಂಗದ ಪತನಶೀಲವಾದ ಬುದ್ಧಿಯ ಫಲಸ್ವರೂಪವಾಗಿರುತ್ತದೆ ಮತ್ತು ಇದು ಜರ್ಮನಾ ಮಹಿಳೆಯರಿಗೆ ಅಯೋಗ್ಯವಾಗಿರುತ್ತದೆ ಹಿಟ್ಲರರ ಈ ವಿಚಾರವು ಭಾರತೀಯ ಸಮಾಜದ ಸುಧಾರಕರಲ್ಲಿ ಆಶ್ಚರ್ಯವನ್ನುಂಟುಮಾಡದಿರದು ಪರಂತು ಹಿಟ್ಲರರಿಗಿಂತ ಮೊದಲೇ ಯುರೋಪಿನ ಮಹಾದ್ವೀಪದಲ್ಲಿ ಅನೇಕ ವಿದ್ವಾಂಸರ ಹಾಗೂ ವಿಚಾರಶೀಲ ವ್ಯಕ್ತಿಗಳನೇಕರು ಪಾಶ್ಚಾತ್ಯ ಮಹಿಳೆಯರಿಗೆ ಭಾರತೀಯರ ಆದರ್ಶನೀಯ ಸಂಸ್ಕೃತಿಯೆ ಶುಭದಾಯಕವೆಂಬುದನ್ನು ಸಮರ್ಥಿಸುವರು ಈ ಕುರಿತು 'ಮಹಾತ್ಮ ಟಾಲ್‌ಸ್ಟಾಯ್' ಮತ್ತು ಅನ್ನಾ ಕರ್ನೀನಾ' ತೂಟ್ ... [illegible] ... ಗ್ರಂಥಗಳಲ್ಲಿಯೂ ಸ್ಪಷ್ಟವಾಗಿ ಪ್ರಕಟಿಸಿರುವರು

ಇದೊಂದು ಸಮಸ್ಯೆ.

ಹಿಂದುಸ್ಥಾನದಲ್ಲಿಯೆ ಪಶ್ಚಿಮ ಸಭ್ಯತೆಯ ಪ್ರಭಾವವು ಪುರುಷ ಸಮಾಜದ ಮೇಲೆಷ್ಟು ಪ್ರಬಲವಾಗಿ ಸ್ತ್ರೀಸಮಾಜದ ಮೇಲೆ ಇನ್ನೂ ಅಲ್ಲಿಯೂ ಸರಿಯಾಗಿ ಬೀಳಲಿಲ್ಲವೆನ್ನಬಹುದು ಇದರ ಮುಖ್ಯ ಕಾರಣವೇನೆಂದರೆ ಆಂಗ್ಲೇಯ ಸಭ್ಯತೆಯಲ್ಲಿ ಅವ್ಯಕ್ತರಾದ ಪುರುಷರ ಇಲ್ಲಿಯ ಸಭ್ಯತೆಯ ಉತ್ತಮೋತ್ತಮವಾದ ಸಿದ್ಧಾಂತ ರಕ್ಷಣೆಯಲ್ಲಿ ಉಂಟಾಗತಕ್ಕ ಆರ್ಥಿಕ ಕಠಿಣತೆಗಳನ್ನು ನಿವಾರಿಸಿಕೊಳ್ಳುವ ಸ್ವತಂತ್ರತೆಯನ್ನು ಇಟ್ಟುಕೊಂಡಿರುವರು. ಈ ತರದ ಸ್ವಾತಂತ್ರ್ಯವು ಹಿಂದೂಸ್ಥಾನದ ಸ್ತ್ರೀಯರಲ್ಲಿ ಇನ್ನೂ ಬರಲಿಲ್ಲ. ಹೀಗಿರುವಲ್ಲಿ ಭಾರತೀಯ ಮಹಿಳೆಯರ ಭವಿಷ್ಯ ಜೀವನವು ಹೇಗಾಗುವುದು? ಅಥವಾ ಹೇಗಾಗಬೇಕು? ಎಂಬ ಪ್ರಶ್ನೆಯು ಇಲ್ಲಿ ಸಹಜವಾಗಿ ಉಂಟಾಗುತ್ತದೆ ಇಂದಿನ ಶಿಕ್ಷಣದ ವಾತಾವರಣದಲ್ಲಿ ಸಾಕಲ್ಪಟ್ಟ ಕನ್ಯೆಯರು ಪ್ರಾಚೀನ ಕಾಲದ ಸೀತೆ, ಸಾವಿತ್ರಿ ಮುಂತಾದವರ ಜೀವನವನ್ನು ಸ್ವಲ್ಪವೂ ಸಮ್ಮತಿಸುವುದಿಲ್ಲ ಅಂದಿನ ಮಹಿಳಾ ಜೀವನವು ತೀರಾ ಸಂಕುಚಿತ ವಿಚಾರಯುಕ್ತವಾಗಿರುತ್ತದೆಂಬುದೇ ಈಗಿನವರ ಭಾವನೆ ಈಗಿನ ಸಮಾಜ ಸುಧಾರಕರಲ್ಲಿ ಹೆಚ್ಚಿನವರು ಹೀಗೆಯೇ ಅಭಿಪ್ರಾಯಪಡುತ್ತಾರೆ ಭಾರತೀಯ ಮಹಿಳೆಯರೆಲ್ಲರೂ ಆಂಗ್ಲೇಯ ಪದ್ಧತಿಯನ್ನೇ ಸಂಪೂರ್ಣವಾಗಿ ಸ್ವೀಕರಿಸಬೇಕೆಂಬ ವಿಚಾರವನ್ನು ಹೆಚ್ಚಿನವರು ಪ್ರಕಟಿಸುತ್ತಾರೆ ಮತ್ತು ಈ ಕುರಿತು ತಮ್ಮ ಕನ್ಯೆಯರನ್ನು ಪೂರ್ಣ ಸ್ವತಂತ್ರರನ್ನಾಗಿ ಬಿಟ್ಟಿರುವರು ಇದರಿಂದಾಗಿಯೇ ಈಗಿನ ಶಿಕ್ಷಣಾಲಯಗಳಲ್ಲಿ ವಿದ್ಯಾಭ್ಯಾಸವನ್ನು ಮಾಡುವ ಬಾಲಿಕೆಯರು ತಮ್ಮ ಹೆಚ್ಚಿನ ಸಮಯವನ್ನು ಪಾಶ್ಚಾತ್ಯರ ಆಡಂಬರದ ಸಭ್ಯತೆಯನ್ನು ಅನುಕರಣೆ ಮಾಡುವುದರಲ್ಲಿಯೇ ಕಳೆಯುತ್ತಿದ್ದಾರೆ ಇದರಿಂದಾಗಿ ವಿನಯಶೀಲತೆ, ವಿಧೇಯತೆ, ಭವಿಷ್ಯ ಜೀವನದ ವಿಚಾರ ಆರೋಗ್ಯಾಭಿವೃದ್ಧಿ ಮುಂತಾದ ಗುಣಗಳು ತೀರಾ ಮಾಯವಾಗಿ, ಶುದ್ಧ ಚತನ, ... [illegible] ... ಹೊಟೇಲುಗಳ ಸಂಚಾರ, ಕೃತಿಮ ಸೌಂದರ್ಯ ಇತ್ಯಾದಿ ವ್ಯವಹಾರಗಳು ಆವರಿಸಿಕೊಂಡಿವೆ ಎಷ್ಟೋ ಸಂದರ್ಭಗಳಲ್ಲಿ ಇವುಗಳು ಅನೇಕ ಮಹಿಳೆಯರ ಸದಾಚಾರವನ್ನು ಕೆಡಿಸಿರುತ್ತದೆಂಬುದಕ್ಕೆ ಸಾಕಷ್ಟು ಉದಾಹರಣೆಗಳು ಈಗಲೂ ನಮಗೆ ಅಲ್ಲಲ್ಲಿ ದೊರೆಯುತ್ತಿವೆ ಆದ ಕಾರಣದಲೇ ಭಾರತೀಯ ಮತ್ತು ಆಂಗ್ಲೇಯ ಸಭ್ಯತೆ ಇವೆರಡರಲ್ಲಿ ಭಾರತೀಯ ಮಹಿಳೆಯರ ಯಾವುದನ್ನು ಅನುಸರಿಸತಕ್ಕದ್ದು? ಯಾವುದನ್ನು ಅನುಸರಿಸುವುದರಿಂದ ಭಾರತೀಯ ಜನಾಂಗದ ಹಾಗೂ ರಾಷ್ಟ್ರದ ಉನ್ನತಿಯಾಗುವುದು ಎಂಬ ಸಮಸ್ಯೆಯು ನಮ್ಮ ಮುಂದೆ ನಿಲ್ಲುವುದು

ಅಂದಿನ—ಇಂದಿನ ಸಭ್ಯತೆ.

ಹಿಂದುಸ್ಥಾನದ ಪ್ರಾಚೀನ ಸಭ್ಯತೆ (ವ್ಯವಹಾರ)ಯು ತನ್ನ ಆದರ್ಶಗಳನ್ನು ಅತ್ಯಂತ ಶ್ರೇಷ್ಠತಮವಾಗಿ ಮಾಡಿ ಸೀತಾ ಸಾವಿತ್ರಿಯರಂತಹ ಸ್ತ್ರೀರತ್ನಗಳನ್ನು ಜಗತ್ತಿನ ಮುಂದೆ ಇಟ್ಟಿತು ಪರಂತು, ಇಂದಿನ ಆಂಗ್ಲೇಯ ಸಭ್ಯತೆಯು ಹಿಂದೂಸ್ಥಾನವನ್ನು ಪ್ರವೇಶಿಸಿ ಒಂದೂವರೆ ಶತಮಾನಕ್ಕಿಂತ ಹೆಚ್ಚು ಕಾಲವು ದಾಟಿಹೋದರೂ ಇಲ್ಲಿಯ ಮಹಿಳೆಯರಲ್ಲಿ ಆ ಕಾಲದ ಮಹಿಳೆಯರಲ್ಲಿದ್ದಂತಹ ಮಾನವ ಸಮುದಾಯದಲ್ಲಿ ಸರ್ವರ ಉನ್ನತಿಗೆ ಅನುಕೂಲವಾದ ಸಭ್ಯತೆಯನ್ನು ಸ್ಥಿರಗೊಳಿಸಲಿಲ್ಲ ಈ ಕುರಿತ ನಿರ್ದಿಷ್ಟವಾದ ಒಂದು ಸಾಹಿತ್ಯವನ್ನು ನಮ್ಮ ಮುಂದೆ ಇಟ್ಟು ಭಾರತೀಯ ಸಮಾಜದ ಸುಧಾರಣೆಯಲ್ಲಿ ಅಗಗಣ್ಯರಾಗಿದ್ದ ಆದರ್ಶ ಸಿದ್ಧಿ ತನ್ನನ್ನು ತಾನ ಗುಂಡಿನೇಟಿಗೆ ಅರ್ಪಿಸಿದ ... [illegible] ಸನ್ಯಾಸಿ ಸ್ವಾಮಿ ಶ್ರದ್ಧಾನಂದರೂ ... [illegible] ಅವಶಿಷ್ಟ ವರ್ಗದವರೂ ಸ್ಥಾಪಿಸಿದ ಕನ್ಯಾಗುರುಕುಲಗಳಲ್ಲಿ ಕಲಿಯುತ್ತಿರುವ ಕನ್ಯೆಯರ ಮತ್ತು ಆಂಗ್ಲ ವಿದ್ಯಾಭ್ಯಾಸವನ್ನು ಕಲಿಸುತ್ತಿರುವ ಹೈಸ್ಕೂಲ ಮತ್ತು ಕೊಲೇಜುಗಳಲ್ಲಿ ಇರುವ ಕನ್ಯೆಯರ ನಡೆನುಡಿ, ಹಾವಭಾವ, ಉಡಿಗೆ ತೊಡಿಗೆ, ಆಹಾರವಿಹಾರ ಇತ್ಯಾದಿಗಳನ್ನೂ ಪ್ರತ್ಯಕ್ಷವಾಗಿ ಪರಿಶೀಲಿಸಿ ತುಲನೆ ಮಾಡಿದಲ್ಲಿ ನಮ್ಮ ಮೇಲಿನ ಅಭಿಪ್ರಾಯಕ್ಕೆ ಸಾಕಷ್ಟು ಉದಾಹರಣೆಗಳು ದೊರಕುವವು

ಈಗಿನ ಸುಧಾರಕರ ಅಭಿಪ್ರಾಯವೇನೆಂದರೆ ಸ್ತ್ರೀಯರು ಪುರುಷರಂತೆಯೇ ಬಿ ಎ ಎಮ್ ಎ ಮುಂತಾದ ಉಪಾಧಿಗಳನ್ನು ಸಂಗ್ರಹಿಸತಕ್ಕದ್ದು. ಪುರುಷರಂತೆ ಸರ್ವ ವಿಷಯಗಳಲ್ಲಿ ಸ್ವತಂತ್ರರಾಗಿರತಕ್ಕದ್ದು. ರಾಜನೈತಿಕ ಅಧಿಕಾರವನ್ನೂ ಅವರಿಗೆ ಕೊಡತಕ್ಕದ್ದು. ಆಫೀಸುಗಳಲ್ಲಿ, ಕಾರ್ಖಾನೆಗಳಲ್ಲಿ ವಕಾಲತಿನಲ್ಲಿ, ವೈದ್ಯಕೀಯ ಇಲಾಖೆಗಳಲ್ಲಿ ವ್ಯಾಪಾರ ಇತ್ಯಾದಿ ಸಮಸ್ತ ವ್ಯವಹಾರಗಳಲ್ಲಿ ಪೂರ್ಣರೂಪದಲ್ಲಿ ಸ್ವತಂತ್ರತೆಯು ಸಿಗಬೇಕು ಅವರ ಇಚ್ಛಾನುಸಾರ ಒಬ್ಬ ಪತಿಯನ್ನು ತ್ಯಜಿಸಿ ಇನ್ನೊಬ್ಬ ಪತಿಯನ್ನು ವರಿಸುವ ಅಧಿಕಾರವನ್ನೀಯತಕ್ಕದ್ದು ಇತ್ಯಾದಿ, ಆದರೆ ಹಿಂದೂಸ್ಥಾನದ ಹಳೆಯ ಸಂಪ್ರದಾಯವಾದಿಗಳು ಇದಕ್ಕೆ ವಿಪರೀತವಾಗಿ ಬಾಲಕಿಯರಿಗೆ ಶಿಕ್ಷಣವು ಅನಾವಶ್ಯಕವಾದುದು, ಒಂದು ವೇಳೆ ಶಿಕ್ಷಣ ವೀಯುವುದಾದರೂ ರಾಮಾಯಣ ಮುಂತಾದುವುಗಳನ್ನು ಓದುವಷ್ಟು ಮಾತ್ರ ಸಮರ್ಥರನ್ನಾಗಿ ಮಾಡತಕ್ಕದ್ದು ಮನೆಯೊಳಗಿದ್ದುಕೊಂಡು ಮಾತಾ ಪಿತೃಗಳ ಹಾಗೂ ಪತಿ ಸೇವೆಯೇ ಸ್ತ್ರೀಯರ ಕರ್ತವ್ಯಗಳಲ್ಲದೆ ರಾಜನೈತಿಕ ಮತ್ತು ಆರ್ಥಿಕ ಸ್ವತಂತ್ರತೆಯನ್ನೀಯುವುದರಿಂದ ಅವರ ಜೀವನವು ದುಃಖಮಯವಾಗಿ ಪರಿಣಮಿಸುವುದಲ್ಲದೆ ಭಾರತೀಯ ಸಭ್ಯತೆಯು ನಾಶವಾಗುವುದು ಎಂದು ಅಭಿಪ್ರಾಯಪಡುತ್ತಾರೆ ಭಾರತೀಯ ಮತ್ತು ಆಂಗ್ಲೇಯ ಸಭ್ಯತೆಗಳ ಪರಸ್ಪರ ಈ ತಿಕ್ಕಾಟವು ಕಳೆದ ೫೦ ವರ್ಷಗಳಿಂದಲೂ ನಡೆದು ಬಂದಿದೆ ಇದುವರೆಗೂ ಇದರ ತೀರ್ಮಾನವು ನಮ್ಮ ಮುಂದಿಲ್ಲ ಆದರೆ ಈ ಎರಡು ಸಭ್ಯತೆಗಳಲ್ಲಿ ಜಾತೀಯ ಸಭ್ಯತೆಯನ್ನು ಅನುಸರಿಸಿಕೊಂಡು ಬಂದವರೇ ಸ್ವಲ್ಪ ಮಟ್ಟಿಗೆ ಸುಖಿಗಳಾಗಿದ್ದಾರೆನ್ನಬಹುದು ಕಾರಣವೇನೆಂದರೆ ಪಾಶ್ಚಾತ್ಯ ಸಭ್ಯತೆಯಿಂದುಂಟಾಗುವ ದುಂದು ಗಾರಿಕೆ ಜೀವನ ಸಾಧನಗಳ ಅವಶ್ಯಕತೆಯ ಪರಮಾವಧಿ ಜೀವನ ಪರಾಧೀನತೆ ಇತ್ಯಾದಿಗಳಿಂದುಂಟಾಗುವ ಜಿಗುಪ್ಸೆಯು ಪ್ರಾಚೀನ ಸಭ್ಯತೆಯವರಲ್ಲಿಲ್ಲ ಅವರು ತಮ್ಮ ಪರಿಶ್ರಮದಲ್ಲಿ ದೊರೆತುದುದನ್ನು ಆತ್ಮ ತುಷ್ಟಿಯಿಂದ ಉಪಯೋಗಿಸುತ್ತಾರೆ ಈ ತರದ ಆತ್ಮತೃಪ್ತಿಯು ಈಗಿನ ಸಭ್ಯತೆಯಲ್ಲಿ ದೊರೆಯಲಾರದು ಈ ಅಭಿಪ್ರಾಯವನ್ನು ಹಿಂದೂಸ್ಥಾನದ ಸ್ತ್ರೀಯರ ಮುಂದಿನ ಜೀವನದಲ್ಲಿಯೂ ಸ್ವದೇಶವಾಗಿ ಅನುಕರಣೆ ಮಾಡಬಹುದು

ಆಂಗ್ಲೇಯ ಶಿಕ್ಷಣ.

ಪಾಶ್ಚಾತ್ಯ ಶಿಕ್ಷಣದ ಈಗಿನ ಕನ್ಯೆಯರು ತಮ್ಮ ಜೀವನದಲ್ಲಿ ಕಟುಕವಾದ ಮಾರ್ಗವನ್ನೇ ಅನುಕರಣೆ ಮಾಡುತ್ತಾರೆ. ಯಾವ ಸಭ್ಯತೆಯನ್ನು ಆಂಗ್ಲೇಯರು ತಮ್ಮ ಜನಾಂಗದ ಅಭಿವೃದ್ಧಿಗೆ ಹಾನಿಕಾರಕವೆಂದು ತಿಳಿದುಕೊಂಡಿರುವರೋ, ಅದನ್ನೇ ಇಲ್ಲಿಯ ಮಹಿಳೆಯರು ಅನುಸರಿಸುತ್ತಿದ್ದಾರೆ. ತಾತ್ಪರ್ಯವೇನೆಂದರೆ—ಈಗಿನ ಬಾಲಿಕೆಯರು ಪಾಶ್ಚಾತ್ಯ ರೀತಿಯ ಉಡಿಗೆತೊಡಿಗೆಗಳಿಂದ ಶೃಂಗರಿಸಿಕೊಳ್ಳುವುದನ್ನೂ, ಬಹು ವಿಧದ ವೆಚ್ಚದಿಂದ ಅಡಿಗೆ ತಯಾರಿಸುವುದನ್ನೂ, ಬಹು ಕಾಲದ ವರೆಗೆ ಅವಿವಾಹಿತೆಯರಾಗಿದ್ದು ಸ್ವಚ್ಛಂದತೆಯಲ್ಲಿ ವಿಹರಿಸುತ್ತಿರುವುದನ್ನು ಆದರ್ಶವೆಂದು ಭಾವಿಸಿರುವರಲ್ಲದೆ ಜೀವನದ ಜವಾಬ್ದಾರಿಕೆ ಏನೆಂಬುದನ್ನು, ಸದಾಚಾರದ ಸಂರಕ್ಷಣೆ ಏನೆಂಬುದನ್ನು ತಿಳಿಯಲು ಯತ್ನಿಸುವುದಿಲ್ಲ ಇಂದಾ ತಿಳುವಳಿಕೆಗಳುಂಟಾಗುವ ಶಿಕ್ಷಣವಂತೂ ಈಗಿನ ಶಿಕ್ಷಣಾಲಯಗಳಲ್ಲಿ ಇವರಿಗೆ ದೊರೆಯುವುದಿಲ್ಲ ಇದರಿಂದಾಗಿಯೇ ಭಾರತೀಯ ಮಹಿಳೆಯರ ಭವಿಷ್ಯ ಜೀವನವು ಬಹಳ ದುಃಖದಾಯಕವಾಗಿ ನಿಂತಿರುವುದು ರಾಷ್ಟ್ರೀಯ ಆಂದೋಲನದಲ್ಲಿ ಅನೇಕ ಮಹಿಳೆಯರು ಅಪ್ರತಿಮವಾದ ಪರಾಕ್ರಮದಿಂದ ಸೆರೆಮನೆವಾಸವನ್ನು ಅನುಭವಿಸುವರೆಂಬುದು ನಿಜ ... [illegible] ... ಪ್ರಚಾರದಲ್ಲಿ ಮುಂದೆ ಬಂದು ತಮ್ಮ ಉಡಿಗೆ ತೊಡಿಗೆಗಳನ್ನು ಪರಿವರ್ತನೆ ಮಾಡಿರುವರೆಂಬುದೂ ನಿಜ ಆದರೆ ಈ ಪರಿವರ್ತನೆಯು ವಿಧೇಯ ದೃಷ್ಟಿಯಿಂದಾಗದೆ ಆಧುನಿಕ ಶೃಂಗಾರ ವೈಭವಗಳನ್ನು ಹೆಚ್ಚಿಸುವುದಕ್ಕಾಗಿ ಆಗಿರುತ್ತದೆ ಎಲ್ಲಿ ನೋಡಿದರೂ ಅಂಗ ಪ್ರತ್ಯಂಗಗಳ ಅಲುಗುವಿಕೆಯು ಗೋಚರಿಸುವಂತಹ ತೆಳಗಿನ ಸೀರೆಗಳೂ ಅರ್ಧ ನಗ್ನಾವಸ್ಥೆಯ ಕುಪ್ಪಸಗಳೂ ಹೆಜ್ಜೆ ಹೆಜ್ಜೆಗೂ ನಮಗೆ ಗೋಚರಿಸುತ್ತಿವೆ ಹೋಟೆಲುಗಳಲ್ಲಿ ಕಾಪಿ ಕುಡಿಯುವುದು ಸಹಪಾಠಿ ಗಂಡಸರ ಕೈಕೈ ಹಿಡಿದು ಕ್ಲಬ್ಬುಗಳಲ್ಲಿ ಅಥವ ಮೈದಾನಗಳಲ್ಲಿ ವಿಹರಿಸುವುದು ಇತ್ಯಾದಿ ವ್ಯವಹಾರಗಳೇ ಈಗಿನ ಶಿಕ್ಷಣದಲ್ಲಿ ದೊರೆಯುವ ಪ್ರತಿಫಲವು ಇಂತಹ ಮಹಿಳೆಯರ ಮತ್ತು ಅವರನ್ನು ಮೆಚ್ಚಿಕೊಂಡಿರುವ ಪುರುಷರ ಭವಿಷ್ಯ ಜೀವನವು ಭಾರತೀಯ ಜನಾಂಗದ ಹಾಗೂ ರಾಷ್ಟ್ರದ ಅಭಿವೃದ್ಧಿಯಲ್ಲಿ ಎಂತಹ ಭಯಂಕರವಾದ ತಡೆಯನ್ನುಂಟು ಮಾಡುವುದೆಂಬುದನ್ನು ಎಲ್ಲರೂ ವಿಚಾರಿಸಿಬಲ್ಲರು ... [illegible] ... ವಿಚಾರವಾದ ತಕ್ಕದ್ದಾಗಿರುತ್ತದೆ

Swadeshabhimani

enjoys circulation in India and abroad

APPLY FOR ADVERTISEMENT RATES

FREE FREE FREE

One New British-Make Cycle

To any one who purchases our Popular and wellrecognised

'HERBAL SANJIVANI KADHA'

The most effective remedy against impurity of blood urinary troubles, body-heat organic debility Anaemia, wet dreams, piles skin diseases, itches eczema etc Malaria and low fevers also

for Particulars apply to—

N Pandurang Rao, Udipi S. K.

Sole Agent for S. & N Canara, Mercara (Coorg) & Mysore Province

Manufactured by—

The Birje Chemical Works, Bombay, 2

Wanted—Influential and Energetic Agents all over.

ಬಿರ್ಜೆ ಕೆಮಿಕಲ್ ವರ್ಕ್ಸ್‌ನವರು ತಯಾರಿಸಿರುವ

ಹರ್ಬಲ ಸಂಜೀವಿನೀ ಕಷಾಯ.

ಲಕ್ಷಾವಧಿ ಜನರು ಉಪಯೋಗಿಸಿ ಉತ್ಕೃಷ್ಟವೆಂದು ಬಾಯಿ ತುಂಬಾ ಹೊಗಳುತ್ತಾರೆ. ಇದು ಅಜೀರ್ಣ, ಮಂದಾಗ್ನಿ, ಮಲಬದ್ಧತೆ, ವೀರ್ಯನಾಶ, ಸೊಂಟ ಬೆನ್ನುಹುರಿಗಳಲ್ಲಿ ನೋವು, ಗರ್ಮಿ, ದೇಹದ ಉಷ್ಣತೆ, ಗಜಗರ್ಣ, ರಕ್ತ ಕೆಡುವಿಕೆ, ಮೂಲವ್ಯಾಧಿ ಮಲೇರಿಯಾ ಜ್ವರ, ಮೊದಲಾದುವುಗಳನ್ನು ನಿಸ್ಸಂದೇಹವಾಗಿ ಗುಣಪಡಿಸುವುದು.

ಪ್ರತಿ ಜಿಲ್ಲೆಯಲ್ಲೂ ಸಬ್ ಏಜಂಟರು ಬೇಕು.

ಪುಕ್ಕಟೆ ಪುಕ್ಕಟೆ ಪುಕ್ಕಟೆ

ನಮ್ಮ ಸಂಜೀವಿನೀ ಕಷಾಯವನ್ನು ರಖಂ ಆಗಿ ಪಡಕೊಳ್ಳುವವರಿಗೆ

ಬ್ರಿಟಿಷರಿಂದ ತಯಾರು ಮಾಡಿದ ಸೈಕಲ ಒಂದು

ಇನಾಮಾಗಿ ಕೊಡುವೆವು, ವಿವರ ಬಗ್ಗೆ ಸೋಲ ಏಜಂಟರಿಗೆ ಬರೆಯಿರಿ

ಸೋಲ ಏಜಂಟರು—ಎನ್. ಪಾಂಡುರಂಗ ರಾವ್ ಉಡುಪಿ, ದ. ಕ.

ಶಾಸನಸಭೆಯಲ್ಲಿ ಸರಕಾರಕ್ಕೆ ಪುನಃ ಸೋಲು!

ಈ ದಿನ ಸಭೆಯು ಪ್ರಾರಂಭವಾದಾಗ ಶ್ರೀ। ಆಣೆಯವರು ಗೃಹಖಾತೆಗಳ ಶೀರ್ಷಿಕೆಯಿಂದ ೧೦೦ ರೂಪಾಯಿಗಳನ್ನು ಕಡಿಯುವ ಠರಾವನ್ನು ತಂದರು. ಅಲ್ಲದೆ ಕೊಂಗ್ರೆಸ್ಸಿನವರು ಕಾಯಿದೆಭಂಗ ಚಳವಳವನ್ನು ತ್ಯಜಿಸಿದ ಮೇಲೂ ಸರಕಾರವು ಅನುಸರಿಸುತ್ತಿರುವ ದಬ್ಬಾಳಿಕೆಯ ಧೋರಣೆಯನ್ನು ಅವರು ಖಂಡಿಸಿದರು. ಕೊಂಗ್ರೆಸ್ಸಿನ ಮುಂದಾಳುಗಳೆಂಬವರು ನ್ಯಾಯವಿಧಾಯಕ ಸಭೆಗೆ ಬಂದು ಸರಕಾರದೊಡನೆ ಸಹಕರಿಸಿ ನಡೆಯುತ್ತಿರುವಾಗ ದಬ್ಬಾಳಿಕೆಯ ಸೂತ್ರವನ್ನು ಇನ್ನೂ ಹಿಡಿದುಕೊಂಡು ಮುಂದರಿಯುವುದು ಅಗತ್ಯವಿದೆಯೆ?

ಶ್ರೀ। ಭುಲಾಭಾಯಿ ದೇಸಾಯಿಯವರು.

ದಬ್ಬಾಳಿಕೆಯು ಅಂತಹ ಕಠಿಣ ಪ್ರಸಂಗಗಳಲ್ಲಿ ಬೇಕೇನೋ ಸಹಜ. ಆದರೆ ಕೊಂಗ್ರೆಸ್ಸಿನವರು ಶಾಸನೋಲ್ಲಂಘನಾ ಚಳವಳವನ್ನು ಹಿಂದೆಗೆದ ಈ ವೇಳೆಯಲ್ಲಿ ದಬ್ಬಾಳಿಕೆಯ ಅಗತ್ಯವಿದೆಯೋ? ಅಲ್ಲದೆ ಅನೇಕ [illegible] ಶಾಸನೋಲ್ಲಂಘನಕಾರರನ್ನು ಇನ್ನೂ ಬಂದೀಖಾನೆಗಳ ಮಧ್ಯೆ ನಿಬಂಧದಲ್ಲಿಡುವ ಆವಶ್ಯಕತೆಯೇನು?' ಎಂದು ಅವರು ವಿಚಾರಿಸಿದರು.

ಸರ್ ಹೆನ್ರಿ ಕ್ರೇಕರ—ಕಾಯಿದೆಭಂಗ ಚಳವಳವು ತ್ಯಜಿಸಲ್ಪಟ್ಟಿರುವುದಿಲ್ಲ.

ಶ್ರೀ। ಆಣೆ—'ಬಹೋ ತಾಜ್ಯ' ಮತ್ತು 'ನಿವೃತ್ತಿ'ಗಳ ಅರ್ಥವೇನು? ನ್ಯಾಯದ [illegible] ನೆವಗಳನ್ನು ಹುಡುಕುವುದಕ್ಕಾಗಿ ಈ ಶಬ್ದಾರ್ಥಗಳನ್ನು ಮಂಡಿಸಬೇಡಿರಿ. ನಿಮ್ಮ ದಬ್ಬಾಳಿಕೆಯ ರಾಜ್ಯವನ್ನೂ ಶಾಸನಗಳನ್ನೂ ಅನುಸರಿಸಿಕೊಂಡು, ಕೈದಿಗಳನ್ನು ಸೆರೆಗಳಲ್ಲಿಡಲು ಈ ನೆವನವನ್ನು ಹುಡುಕುವುದು ನ್ಯಾಯವಲ್ಲ. ನೀವು ಹಾಗೆಯೇ ಅನುಸರಿಸುತ್ತಾ ಹೋದರೆ ಸರಕಾರ ಮತ್ತು ಜನರೊಳಗೆ ಮೆಲ್ಲಗೆ ತಲದೋರುತ್ತಿರುವ ಮೈತ್ರಿಭಾವವನ್ನು ನೀವು ಪುನಃ ಮುರಿದಿಕ್ಕಿದಂತಾಗುವುದು ಎಂಬುದರಲ್ಲಿ ಸಂದೇಹವಿಲ್ಲ' ಎಂದರು. ಶ್ರೀ। ಆಣೆಯವರು ಮುಂದರಿಸುತ್ತಾ 'ನೀವು ಶಾಸನಭಂಗ ಮಾಡಿದ ಕೈದಿಗಳನ್ನು ಹೀಗೆ ಶಾಶ್ವತವಾಗಿ ಶಿಕ್ಷಿಸುತ್ತಿರುವದರಿಂದ ಆಗುವ ಲಾಭವಾದರೂ ಏನು? ಕೊಂಗ್ರೆಸ್ಸಿನವರು ದೇಶದ ಗತಿಯನ್ನು ಶಾಸನಸಭೆಯ ಮೂಲಕ ತಿಳಿಸುವುದಕ್ಕಾಗಿ ಇಲ್ಲಿಗೆ ಬಂದಿರುವರು. ಹೀಗಿರುವಾಗ ತೀವ್ರ ಪ್ರತಿಫಲವನ್ನು ಕೊಡುವುದಾದರೂ ಯಾವ ರೀತಿಯಿಂದ? ನೂರಾರು ತರುಣರ ಮೇಲೆ ಬಹಿಷ್ಕಾರಾಸ್ತ್ರವನ್ನು ಪ್ರಯೋಗಿಸಿರುವಿರಿ. ಅನೇಕ ಸಂಸ್ಥೆಗಳನ್ನು ನಿಷೇಧಿಸಿಬಿಟ್ಟಿರುವಿರಿ. ಹಿಂದೂಸ್ಥಾನೀ ಸೇವಾದಲ, ಖುದೈಕಿದಮತ್‌ಗಾರ್ ಸಂಸ್ಥೆ, ಕೆಂಪಂಗಿಯವರ ಕೂಟ ಮೊದಲಾದುವುಗಳ ಮೇಲಿರುವ ನಿರ್ಬಂಧಗಳನ್ನು ತೆಗೆಯಿರೆಂದು ಹೇಳಿದುದಕ್ಕೆ ಪ್ರತ್ಯುತ್ತರವೇನು?' ಎಂದು ಪ್ರಶ್ನಿಸಿದರು.

ಈ ವ್ಯಾಖ್ಯಾನಂತರ ಶ್ರೀ। ಆಣೆಯವರೇ ಮಾತನಾಡಿದರು. 'ಜನರು ಈಗ ಕೈನೀಡಿರು[illegible]

ಸರ್ ಕವಾಸ್ಜಿ ಜಹಂಗೀರ್‌ರವರು

ಗರ ಆ ಕೈಗಳನ್ನು ಪ್ರೇಮದಿಂದ ಸರಕಾರವು ಹಿಡಿದುಕೊಳ್ಳಲಿ. ಈ ಸುಸಂದರ್ಭವನ್ನು ಬಿಟ್ಟರೆ ಮತ್ತೆ ಜನರು ಅದೇ ಕೈಯಲ್ಲಿ ಪುನಃ ಶಸ್ತ್ರಗಳನ್ನು ಹಿಡಿದುಕೊಳ್ಳಬಹುದು. ಹೋರಾಟಕ್ಕೆ ಪುನಃ ಸಿದ್ಧರಾಗಬಹುದು. ದಬ್ಬಾಳಿಕೆಯು ಅಪಯಶಸ್ಸು ಹೊಂದಿದೆಯೆಂಬುದನ್ನು ಸರಕಾರವು ತಿಳಿದಿರಲಿ. ಪಂಡಿತ ಜವಾಹರಲಾಲ ನೆಹರು ಮತ್ತು ಅಬ್ದುಲ್ ಗಫರ್ ಖಾನರನ್ನು ಬಿಡುಗಡೆ ಮಾಡಿ ಶಾಂತಿಗಾಗಿ ಸಿದ್ಧವಿರುವೆನೆಂಬುದನ್ನು ಜನರಿಗೆ ತಿಳಿಸಲಿ' ಎಂದರು.

"ರಾಜಕೀಯ ಕೈದಿಗಳನ್ನು ಬಿಡಿರಿ"

ನಿಷೇಧಾಸ್ತ್ರಗಳನ್ನು ಕಿತ್ತೊಗೆದು ಮೈತ್ರಿ ಸಂಪಾದಿಸಿರಿ'

ಶ್ರೀ। ಆಣೆಯವರ ಉಜ್ವಲ ಭಾಷಣ!

ಸರಕಾರದ ಉತ್ತರಗಳು.

ನ್ಯೂಡಿಲ್ಲಿ ಮಾರ್ಚಿ ೫

ಶ್ರೀ। ಎಂ. ಎಸ್. ಆಣೆಯವರು ಸರಕಾರದ ದಬ್ಬಾಳಿಕೆಯ ಧೋರಣವನ್ನು ಖಂಡಿಸಲು ತಂದ ಠರಾವು ಶಾಸನ ಸಭೆಯಲ್ಲಿ ೭೪ ವೋಟುಗಳನ್ನು ಪಡೆದು ೫೦ ಮಂದಿಯಿಂದ ತಿರಸ್ಕೃತವಾಗಿ ಮಂಜೂರುಗೊಂಡಿತು.

ಶ್ರೀ। ಸತ್ಯಮೂರ್ತಿಯವರು

ಸರ್ ಕವಾಸಿ ಜಹಾಂಗೀರರು ಎದ್ದು ಅವರು ಮೊದಲಾಗಿ ಶ್ರೀ। ಆಣೆಯವರನ್ನು ಅಭಿನಂದಿಸಿ ಅವರ ಭಾಷಣವು ಅವರ ಸ್ಥಾನಕ್ಕೆ ತಕ್ಕುದಾಗಿ ಶ್ರೇಷ್ಠವಿರುವುದೆಂದು ಸೂಚಿಸಿ ಕಾಯಿದೆಭಂಗ ಚಳವಳವನ್ನು ಬಿಟ್ಟುಬಿಡಿರೆಂದು ಸರ್ ಹೆನ್ರಿ ಹೈಗರು ಅಂದು ಹೇಳಿಲ್ಲವೆಂದೂ ಅವರ ಆ ಚಳವಳವನ್ನು ಕಾಲನಿರ್ದೇಶವಿಲ್ಲದೆ ಹಿಂದೆಗೆದುಕೊಂಡ ಕೊಂಗ್ರೆಸ್ಸಿನವರಿಗೆ ಹೇಳಿದ್ದರೆಂದೂ ತಿಳಿಸಿದರು.

ಜಹಾಂಗೀರರು ಶ್ರೀ। ಆಣೆಯವರ ಅಭಿಪ್ರಾಯಗಳನ್ನೆತ್ತಿ ಹಿಡಿದು ಮಾತನಾಡುತ್ತಾ ರಾಜದ್ರೋಹಾತ್ಮಕರಾಗಿರುವ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಶ್ರೀ। ಆಣೆಯವರೆಂದುದಕ್ಕೆ ತಾನೊಪ್ಪಲಾರೆನೆಂದರು. ಜನತೆ [illegible] ಜನರ ಜಾಗ್ರತೆಯನ್ನು ಕಾನೂನೇ ತೆಗೆದುಕೊಳ್ಳಬೇಕು. ಶಾಸನವೇ ಅವರಿಗೆ ನ್ಯಾಯದಾನ ಮಾಡಬೇಕು ಎಂದರು. ಸರಕಾರವು ಆಣೆಯವರ ಸೂಚನೆಗಳನ್ನು ಪರಿಶೀಲಿಸುವುದಿಲ್ಲವಾದರೆ ತಾನು ಶ್ರೀ। ಆಣೆಯವರ ಪರವಾಗಿ ನಿಲ್ಲಬೇಕಾಗುತ್ತದೆ ಎಂದು ಹೇಳಿದರು.

ಅನಂತರ ಸರ್ ನೃಪೇಂದ್ರ ಸರಕಾರರ ಪರ ಮಾತಾಯಿತು. ಅವರು "ಈಗ ಸರಕಾರ ಮತ್ತು ಜಹಾಂಗೀರರೊಳಗಿರುವ ಸಮಸ್ಯೆಯಾವುದು? ಆಣೆಯವರಾದರೋ ರಾಜಕೀಯ ಕೈದಿಗಳನ್ನೂ ಡೆಟಿನ್ಯೂಗಳನ್ನೂ ಬಿಡುಗಡೆಯಾಗಬೇಕೆಂದು ಅಭಿಪ್ರಾಯಪಡುತ್ತಿರುವರು. ಜಹಾಂಗೀರರೆನ್ನುವುದೇನು? ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಜಹಾಂಗೀರರು ಹೇಳುವುದು ಯಾವ ಆಧಾರದಿಂದ? ಲಾ ಮೆಂಬರರ ಹೇಳಿಕೆ ಮೇರೆಗೆ ೧೫೦೦೦ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದೂ ೭೯ ಮಂದಿಯನ್ನು ಮಾತ್ರ ಬಿಡುಗಡೆ ಮಾಡಲಾಗಲಿಲ್ಲವೆಂದೂ ತಿಳಿದುಬಂದಿದೆ. ಈ ೭೯ ಜನರು ಕಾಯಿದೆಭಂಗ ಮಾಡಿದುದಲ್ಲದೆ, ಅರಾಜಕ ಪ್ರವರ್ತನೆಗೆ ಕೈಹಾಕಿದುದೂ ಇದೆಯೆಂದೂ ತಿಳಿಸಲಾಗಿದೆ. ಹೀಗಾಗಿ ಈ ಕೈದಿಗಳನ್ನು ಬಿಡಲಾಗಲಿಲ್ಲ. ಈಗ ಬೇಕಾದುದೇನು?" ಎಂದು ವಿಚಾರಿಸಿದರು.

ಶ್ರೀ। ಸತ್ಯಮೂರ್ತಿಯವರು.—ಈ ಕೈದು ಮತ್ತು ಬಿಡುಗಡೆಗಳ ವಿವರದ ಪಟ್ಟಿ ಇದೆಯೋ?

ಲಾ ಮೆಂಬರರು.—ಆ ಪಟ್ಟಿಯನ್ನು ಬೇಗನೆ ನಿಮ್ಮ ಮುಂದಿಡಲಾಗುವುದು.

ಅದಲ್ಲಿಗೆ [illegible] ಶ್ರೀ। ಶ್ರೀಕಂಠ ನಲ್ಲವರು ಎದ್ದು "ಸರಕಾರವು ಪ್ರಾಣಹತ್ಯ ಮಾಡುತ್ತಿದೆಯೆಂದಾಗ ಕೊಂಗ್ರೆಸ್ಸಿನವರು ಶಾಸನಸಭೆಗೆ ಹೊಕ್ಕರು. ಲಾ ಮೆಂಬರರೇನೋ ತನ್ನ ಉದ್ಯೋಗಕ್ಕನುಸಾರವಾಗಿ ವಾದಿಸುತ್ತಿರುವರು. ಅವರ ನುಡಿಗಳ ಅರ್ಥವು ನಮಗಾಗುತ್ತಿದೆ. ದಬ್ಬಾಳಿಕೆಯು ಸರಕಾರಕ್ಕೆ ಬೇಕಂತೆ. ಅದು [illegible] ಸೋತಿದೆ, ದಕ್ಷಿಣಾಫ್ರಿಕದಲ್ಲಿ ಸೋತಿದೆ. ರಷ್ಯದಲ್ಲೂ ಸೋತಿದೆ. [illegible] ದೇಶದಲ್ಲೂ ಅದು ಅಪಜಯವನ್ನು ಹೊಂದಿದೆ. ಹಿಂದೂದೇಶದಲ್ಲೂ ಅದು ಅಪಯಶಸ್ಸನ್ನು ಹೊಂದಿದ್ದುದಕ್ಕೆ ಸಂದೇಹವಿಲ್ಲ. ಅಹಿಂಸಾಧರ್ಮವನ್ನವಲಂಬಿಸಿರುವ ಹಿಂದೂಸ್ಥಾನೀ ಸೇವಾದಳವು ನಿಷೇಧಿಸಲ್ಪಟ್ಟಿದೆ. ಪ್ರೇಮ ಮತ್ತು ವಿದ್ಯೆ [illegible] ಗುರಿಯಾಗಿದೆ. ಕೆಂಪಂಗಿಯವರನ್ನು, ಅಬ್ದುಲ್ ಘಫರ್ ಖಾನರನ್ನು ಸೆರೆಹಿಡಿಯಲಾಗಿದೆ. ಇದರ ಅರ್ಥವೇನು? ಸರಕಾರವು ಶಾಂತಿಗಾಗಿ ಸಿದ್ಧವಿಲ್ಲವೆ? ಪಂಡಿತ ಜವಾಹರಲಾಲರನ್ನು ಶರ್ತಗಳ ಮೇಲೆ ಬಿಡುಗಡೆ ಮಾಡುವರೆಂಬ ವಾರ್ತೆ [illegible] ನಿಜವೋ? [illegible]" ಎಂದು ವಿಸ್ತಾರಪೂರ್ಣ ಭಾಷಣ ಮಾಡಿದರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1924–	ರೂ 21,24,250	500
1929–	ರೂ 1,66,18,620	9,32,900.
1934–	ರೂ 3,46,77,223.	19,06,771

ಕ್ಲೆಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ. ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ. 1933–34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ

The Laxhmi Insurance Co., Ltd,
Madras Branch,
No. 6, Sankuram Chetty St., G. T. MADRAS.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga. 5. Madras, 6. Bunder Mangalore, 7. Mercara.

1934ನೇ ಇಸವಿ ದಶಂಬರ ತಾ. 31ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು:-

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಜಿಸಿದ್ದು	3,50,000- 0- 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774-14- 8
ತೆತ್ತು ಬಂದದ್ದು	2,25,000- 0- 0	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	23,33,227- 7- 3
ಕ್ಷೇಮನಿಧಿಗಳು	2,60,953- 7- 8	ಸರಕಾರಿ ಬಧ್ರತೆಯ ಸ್ವತ್ತುಗಳ ಮೇಲೆ	6,51,559-15- 0
ಠೇವಣಾತಿಗಳು	24,95,329- 2- 3	ಇತರ ಬಾಬುಗಳು	37,411-14-11
ಇತರ ಬಾಬುಗಳು (ಸಂಡ್ರೀಸ್)	1,85,286 9- 9	ನಗದು ಶಿಲ್ಕು	72,480-10- 1
ಚಾಲ್ತಿ ವರ್ಷದ ಮುನಾಫೆ	45,885-10- 8		
	31,62,454-13-11		31,62,454-13-11

ಹಿಂದಿನ ವರ್ಷಗಳಂತೆಯೇ ಹಿಶೆದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು. ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Established 1908.

EXCELLENT BONUSES.

1933 Valuation Results.

	WHOLE LIFE	ENDOWMENT	
1925-'30	20	15	Per thousand
1931-'33	23	18	per year.

Every "With Profit" Policy is entitled to "PERMANENT DISABILITY BENEFITS."—No extra premium

PAYS DOUBLE THE ASSURED SUM IN THE EVENT OF DEATH BY ACCIDENT ON PAYMENT OF MINIMUM EXTRA PREMIUM OF RS. 1-8-0 PER RS. 1000 POLICY PER YEAR.

Existing Policy-holders may avail of this benefit. For particulars apply to:—

KOCHIKAR BROTHERS,
Madras Branch Secretaries.

Offices at:—
Udipi, Mangalore, Bangalore, Calicut, Madras and Bombay.

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್‌ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಅರೋರಾ ಕ್ರೀಮ್, ಕ್ರಿಮೋರ್ ಲಿಮೋನಿಸ್, ಕರ್ಣಾಟಕ ರೋಸ ಪೌಡರ್. ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೇಜಿಂಗ್ ಡೈರೆಕ್ಟರ್—ವೆಂಕಟರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

(2) 1/70 ನ್ಯಾಪಿಯರ್ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.

ಏಜಂಟ್ಸ್— ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

ವಾರ್ಷಿಕ ಚಂದಾ: 2 ರೂಪಾಯಿ.   ಬಿಡಿ ಸಂಚಿಕೆ 1 ಆಣೆ.   ಟಪ್ಪಾಲು ಹಾಸಲು ಸೇರಿ ರೂ. 2-13-0.

P
for Quality Snuff
H. Rama Rao
and Sons.
HighClassSnuff Manufacturers
Mangalore, S I
ASK FOR
RAMA SNUFF
The charm of Snuff Usersl

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your
family TODAY
Buy a policy in
THE BOMBAY LIFE
Kochikar Brothers

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯   ಮಂಗಳೂರು. ತಾ. ೨೨ನೇ ಶುಕ್ರವಾರ ಮಾರ್ಚಿ ೧೯೩೫   (2- - 3 - '35)   ಸಂಚಿಕೆ ೧೨



ಶುಚೀಂದ್ರಂ ದೇವಸ್ಥಾನ.

ಕನ್ಯಾಕುಮಾರಿಗೆ ನಾಗರಕೋವಿಲಿನಿಂದ ಹೋಗುವಾಗ ಹಾದಿಯಲ್ಲಿ ನಡುವೆ ಕಾಣಸಿಗುವ ಪ್ರಸಿದ್ಧ ಯಾತ್ರಾ ಸ್ಥಳವಿದು.
ಈ ದೇವಸ್ಥಾನದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಮೂರ್ತಿಗಳಿವೆ ಚಿತ್ರದಲ್ಲಿ ಕಾಣುವ
ಸರೋವರದ ನೀರು ಬಹು ಪವಿತ್ರವಾದುದು ವರ್ಷಂಪ್ರತಿ ಲಕ್ಷಗಟ್ಟಳೆ
ಜನರು ಈ ಸರೋವರದಲ್ಲಿ ತೀರ್ಥಸ್ನಾನ ಮಾಡುವರು.

ಚಕ್ರ

(All Rights Reserved)

ಶ್ರೀ. ಯು ಸಿ ಸುಬ್ರಹ್ಮಣ್ಯ ಭಟ್ಟರು ಶ್ರೀ ಸುಬ್ರಹ್ಮಣ್ಯ ದೇವರ ಮೇಲೆ ಪೂರ್ಣ ಭರವಸೆಯನ್ನಿಟ್ಟು, ಆಯೂಷಜಯುಗಳನ್ನು ಅವನ ಕಾಲಬುಡದಲ್ಲಿರಿಸಿ, ಹಿಂದೂ ಮಠಗಳನ್ನು ಸುಧಾರಿಸುವುದಕ್ಕಾಗಿ ಮದ್ರಾಸು ಕೌನ್ಸಿಲಿಗೊಂದು ಸಣ್ಣ ದೀಲು ತರಲಿರುವರೆಂದು ಊರೆಲ್ಲಾ ಸುದ್ದಿ—, ಆ ಸುದ್ದಿಯೊಡನೆ ಮಠಗಳ ಹಂಡೆಗಳು ಹಾರಲಾರಂಭಿಸಿ, ತುಪ್ಪದ ಕೊಪ್ಪರಿಗೆಗಳೆಲ್ಲ ಧಿಮಿ ಧಿಮಿ ಕುಣಿಯಲಾರಂಭಿಸಿರುವುವು

ಅಷ್ಟಷ್ಟು ದೊಡ್ಡ ಕೊಪ್ಪರಿಗೆಗಳೇ ಭಯದಿಂದ ನಡುಗುತ್ತಿರುವಾಗ ಇನ್ನು ಹಸನಾದ ಹಾಸಿಗೆ, ನೈವೇದ್ಯ ಭರಣ, ಹಾಲಿನ ಕೊಡ, ದುಡ್ಡಿನ ಖಜಾನೆ, ಆಯ ಪಲ್ಲಿನ ಆನೆ, ಅಡ್ಡರ ಅಂಬಾರಿ ಕಾಳಿಕುಳೊಳ್ಳುವ ಪಲ್ಲಕಿಗಳ ಗತಿಯೇನೆಂದು ನೀವೇ ಊಹಿಸಿರಿ, ಬಾಯ್ಬಿಟ್ಟು ಹೇಳಲಾರ

ಹಾಲಿನ ಕೊಡವೊಂದು ತುಪ್ಪದ ಕೊಪ್ಪರಿಗೆಯ ಕಾಲಡಿಗೆ ಬಿದ್ದು, ದಿಗಿಲುಗೊಂಡು "ಮಹಾಸ್ವಾಮಿ, ಇನ್ನು ನಮ್ಮ ಗತಿಯೇನು? ನನ್ನ ಗತಿಗಿಂತಲೂ ನಿಮ್ಮ ಗತಿಯೇನು? ನಿಮಗಾರು ಗತಿ? ಭಟ್ಟರಿಗೆ ಕೊಟ್ಟವರು ಈ ಮತಿ?" ಎಂದು ಬೊಬ್ಬಿಟ್ಟಿತಂತೆ

ಆಗ, ತುಪ್ಪದ ಕೊಪ್ಪರಿಗೆಯು ತನ್ನ ಪರಿವಾರವನ್ನು ಒಂದು ಸಲ ಗಮ್ಮನೆ ಹಾಲಿನ ಕೊಡದ ಮುಖದ ಮೇಲೆ ತೀರಿ, "ಏ ಹೇಡಿ! ಹೆದರದಿರು! ಹೆದರದಿರು! ನನ್ನಾಶ್ರಯದಲ್ಲಿರುವವರೆಲ್ಲರೂ ಭಟ್ಟರ ಬೀಲನ್ನು ಗಟ್ಟಿಕ್ಕೆ ಹಾಕಿಸಬೇಕೆಂದು ಅಪ್ಪಣೆಯಿತ್ತಿದ್ದೇನೆ ಅವರು ಸೋತರೆ ಮುಂದಕ್ಕೆ ಅವರು ನನ್ನ ಮಾಡಿನಡಿ ಬರಬಾರದೆಂದು ಹೇಳಿದ್ದೇನೆ ಆದುದರಿಂದ ಭಯಗೊಳ್ಳದಿರು ಕೌನ್ಸಿಲಿನ ಅನೇಕ ಸದಸ್ಯರನ್ನು ಕಂಡು ನಾನು ಮಾತಾಡಿ, ಅವರು ಭಟ್ಟರ ಬಿಲವನ್ನು ಮುರಿಯಬೇಕೆಂದಿದ್ದೇನೆ" ಎಂದಿತು

ಇದನ್ನು ಕೇಳಿ ಹಾಲಿನ ಕೊಡಕ್ಕೆ ಬಹು ಆನಂದವಾಯಿತು. ಆದರೂ ಕಣ್ಣನ್ನು ಪಿಳಿಪಿಳಿ ಮಾಡುತ್ತಾ— "ಸ್ವಾಮಿ, ನನ್ನನ್ನು ಮಠಗಳ ಹೊರಗೆ ಹಾಕಿದರೆ ನಮಗೆ ಕೌನ್ಸಿಲಿನಲ್ಲಾದರೂ ಕ್ವಾರ್ಟರ್ ದೊರೆಕೀತೇ? ದೊರಕಿದರೂ ನಮ್ಮ ಇಷ್ಟು ಭಾರವಾದ ದೇಹಗಳನ್ನು ಹೊರುವಷ್ಟು ದೊಡ್ಡ ರಾಚಿಗಳು ಅಲ್ಲಿ ದೊರೆತಾವೇ? ಅವುಗಳು ದೊರೆತರೂ ಸಂಬಳ ನಿರಿ ಕೊಟ್ಟಾರೇ? ದಿನಕ್ಕೆ ೨೫ ಕುಡ್ತೆ ಹಾಲು ೧೮ ಬಾಳೆ ಹಣ್ಣು ೩ ಪ್ಲೇಟ್ ನೈವೇದ್ಯಕ್ಕೆ ಕೊರತೆ ಬಂದೀತೇ?" ಎಂದು ಪ್ರಶ್ನಿಸಿತು "ನೀನು ಭಯಪಡಬೇಡ, ದೇವರಿದ್ದಾನೆ All India Ghee and Milk Conference (ಅಖಿಳ ಭಾರತ ಘೃತ ಮತ್ತು ಕ್ಷೀರ ಪರಿಷತ್ತು) ಎಂಬುದು ನನ್ನ ಅಧ್ಯಕ್ಷತನದಲ್ಲಿ ಜರಗಲಿದೆ, ಅದರಲ್ಲೇನು ನಿರ್ಧಾರವಾಗುವುದೋ ನೋಡುವ" ಎಂದಿತು

ಇದನ್ನು ಕೇಳಿದ ಕೊಡವು ಸಮಾಧಾನಗೊಂಡು ಮೆಲ್ಲನೆ ತುಪ್ಪದ—ಕೊಪ್ಪರಿಗೆಯ ಕಿವಿಯಲ್ಲಿ ಏನನ್ನೋ 'ಪಿಸು ಪಿಸು' ಮಾತಾಡಿ ಹೊರಟುಹೋಯಿತು ಬಹುಶಃ ಶ್ರೀ ಭಟ್ಟರಿಗೆ ಮುಂದಕ್ಕೆ ಹಾಲುತುಪ್ಪಗಳು ಸಿಗದಂತೆ ಮಾಡಬೇಕೆಂಬ ಪಿತೂರಿ ನಡೆಯಿತೋ ಸಾಯ್ಬನಿಗೆ ತಿಳಿದಿಲ್ಲ ತಿಳಿದರೂ ಹೇಳಲಾರ ಹೇಳಿದರೂ ಇದ್ದ ಹಾಗೆ ಹೇಳಲಾರ

ಅಂತೂ ತುಪ್ಪ ಹಾಲು ಬಾಳೆಹಣ್ಣುಗಳ ರಾಜ್ಯದಲ್ಲಿ ಮಹಾ ಆಂದೋಲನವಾರಂಭವಾಗಿದೆ ಒಟ್ಟಿಂಟಿಗರಾದ ಭಟ್ಟರೂ ಮಠದ ಕೊಪ್ಪರಿಗೆಗಳೂ ಎದುರುಬದುರಾಗಿ ನಿಂತಂತಿವೆ, ನೋಡುತ್ತಿರುವ ... ಏನಾಗುವುದೆಂದು

ಏನಾದರೇನಯ್ಯ ನಮಗೆ? ಈ ಮಠಗಳಿಂದಾಗಲೀ ಈ ಮಂದಿಗಳಿಂದಾಗಲೀ, ಈ ಪರಿಷತ್ತಿನಿಂದಾಗಲೀ ನಮಗೇನಾದರೂ ಲಾಭವುಂಟೇ? ಉಂಬಳಿ, ಜಮೀನು, ಪೂಜೆಪುರಸ್ಕಾರಗಳೆಲ್ಲ ಮಠಗಳಿಗೆ ಸಮರ್ಪಿತವಾಗಿ ಮಠಗಳೊಳಗೇ ವಿನಿಯೋಗವಾಗುತ್ತವೆ ಕೈಗಾರಿಕೆ, ಕೃಷಿ ಮೊದಲಾದುವನ್ನು ಅವು ಪ್ರೋತ್ಸಾಹಿಸುತ್ತಿವೆಯೇ? ಹತ್ತು ಜನರಿಗೆ ಅನ್ನ ಕೊಡುವ ಏರ್ಪಾಡುಗಳನ್ನು ಅವು ಮಾಡಿವೆಯೋ? ಕೊಟ್ಟವರಿಗೆ ಕ್ಷೀರಾನ್ನ, ಬಿಟ್ಟವರಿಗೆ ... ಮತ್ತೇಕೆ ಈ ನೋವು?

ಹೋದರೆ ಏನು? ಬಂದರೆ ಏನು?
ಇಂತಹ ಸಂತೆಗಳು!

ಬಿದ್ದರೆ ಏನು? ಎದ್ದರೆ ಏನು?
ಇಂತಹ ಕಂತೆಗಳು!
ಮಂದಿಗೆ ಇಲ್ಲ, ಮನುಷ್ಯರಿಗಿಲ್ಲ
ಇವುಗಳ ಉಪಯೋಗ!
ಹಂದಿಗೆ ಉಂಟು, ದಂಢಗೆ ಉಂಟು
ಜನರೇ ಕೇಳಿರಿ!

'ಸಾಯಬ'

ರಾತ್ರಿ ಮಲಗಲು ಹೋಗುವ ಮೊದಲು ಒಂದು ಕಪ್ 'ಓವಲ್ಟಿನ್' ಸೇವಿಸಿದಿರೆಂದರೆ, ನಿಮಗೆ ಸುಖವಾದ ಸ್ವಸ್ಥವಾದ ನಿದ್ರೆಯು ಲಭಿಸುವುದು ಈ ನಿದ್ರೆಯು ನಿಮ್ಮ ಸ್ನಾಯುಗಳನ್ನು ಶಾಂತಗೊಳಿಸಿ, ಅದಕ್ಕೆ ಹೊಸ ಚೇತನದ ಬಲವನ್ನೀಯುವುದು 'ಓವಲ್ಟಿನ್' ಬಳಲಿದ ದೇಹವನ್ನೂ ಮನಸ್ಸನ್ನೂ ಪುನರ್ರಚಿಸುತ್ತದೆ ಬೆಳಿಗ್ಗೆ ಏಳುವಾಗ ನೀವು ನೂತನ ಚೇತನವುಳ್ಳವರಾಗುವಿರಿ

ಓವಲ್ಟಿನ್ ಪೂರ್ಣವಾಗಿ ಶುದ್ಧವಾದ ಪೋಷಣೆಯ ವಸ್ತು ಪ್ರಕೃತಿಸಿದ್ಧವಾದ ಒಳೆದ ಬಾರ್ಲಿ, ದನದ ಕೆನೆಹಾಲು, ವಿಶಿಷ್ಟವಾದ ಕೊಕ್ಕೊಗಳಿಂದ ತಯಾರಾಗಿದೆ ಟಾನಿಕ ಆಹಾರವೂ ಪಾನಕವೂ ಆದ ಇದನ್ನ ಬಿಡದೆ ಸೇವಿಸುತ್ತಾ ಬಂದಲ್ಲಿ ದೇಹಕ್ಕೆ ಶಕ್ತಿ ಬಲಗಳನ್ನು ಕೊಡುತ್ತದೆ

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ, ಮತ್ತು ಶಕ್ತಿದಾಯಕ

ಓವಲ್ಟಿನ್

ಟೋನಿಕ್ ಆಹಾರ ಪಾನಕ - ಶಾಂತಮಯ ಸುಖನಿದ್ರೆಯನ್ನುಂಟುಮಾಡುತ್ತದೆ

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ ಜೇಮ್ಸ್ ರೈಟ್ ೬೬ ಎ ರಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಯಿ ಮತ್ತು ಮದ್ರಾಸು

OV 333

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ

ಹೊಸತು! ಅಮದಾದುದು ದೊರೆಯುವ ಇತರ ಕ್ಯಾಮರಗಳ ೧೫ ಬೆಲೆಕೆ ಬರುವಂಥದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಪುಸ್ತಕ ಇವು ಉಚಿತ ದಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ. ೩—೧೩—೦ ಉತ್ತಮವಾದುದು ೩—೧೫—೦ ಮಡಚುವ ಕ್ಯಾಮರಾ ರೂ. ೫ ಉತ್ತಮವಾದ್ದು ರೂ. ೭ ಸ್ಪೆಶಲ್ ರೂ. ೧೦ ಹೆಚ್ಚಿಗೆ ಫಿಲ್ಮ ಬೇಕಾದರೆ ಡಜನ್ ೧ಕ್ಕೆ ೩ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನ ಸಾಮಗ್ರಿ ೧ ಶೀಸೆಗೆ ೪ ಆಣೆ ಫಿಕ್ಸಿಂಗ್ ಸಾಲ್ಟ್ ೧ ಡಬ್ಬಕ್ಕೆ ೩ ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ

ಭಾರತ ಯೂನಿಯನ್ ಟ್ರೇಡಿಂಗ್ ಕಂ
ಪೋಸ್ಟ್‌ಬಾಕ್ಸ್ ನಂಬ್ರ ೨೩೯೪ (ಎಸ್ ಎ) ಕಲ್ಕತ್ತಾ

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್,

ಪುತ್ತೂರು.

Authorised capital ಅಧಿಕೃತ ಮೂಲಧನ	2,00,000—0—0
Subscribed capital ಚಂದಾ ಅರ್ಪಿಸಿದ್ದು	34,930 -0—0
Paid-up capital ಕೆತ್ತು ಬಂದದ್ದು	30847—8—0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken
Shares are now available

For further particulars apply to —

Puttur,
Dated 15—2—1935.

G. N Lakshman Pai,
Secretary.

ಪತ್ರಿಕಾ ಪ್ರಪಂಚ:

ಜಾತಿಭೇದದ ತತ್ವ. ಹಿಂದೀಯ ಶಿಕ್ಷಣಕ್ರಮ ಇಸ್ಲಾಮಿಯ ಕವಿವರ್ಯ. ಜಾನುವಾರುಗಳ ಅಭಿವೃದ್ಧಿ. ಹಿಂದೂದೇಶಕ್ಕೆ ಇಂಗ್ಲೆಂಡಿನ ಋಣ.

ಜಾತಿಭೇದದ ತತ್ವ.

ಶ್ರೀ ಜೆ. ಸಿ. ಭಾಡೆ ಎಂ ಇವರು ಕೆಳಗೆ ಸೂಚಿಸಿರುವ ತ್ರೈಮಾಸಿಕದಲ್ಲಿ ಒಂದು ಲೇಖನವನ್ನು ಬರೆದು ಜಾತಿಭೇದವೆಂಬುದು ಮನುಷ್ಯನಿರ್ಮಿತ ವಿಚಾರವಲ್ಲವೆ, ಅದು ದೇವನಿರ್ಮಿತ ವಿಷಯವಲ್ಲವೆಂದು ಸಕಾರಣಯುಕ್ತವಾಗಿ ಪ್ರತಿಪಾದಿಸುತ್ತಾರೆ ಸಮಾಜದಲ್ಲಿ ಸ್ವಾಭಾವಿಕ ವೃತ್ತಿಗಳನ್ನು ಒಂದೊಂದು ವರ್ಗದವರು ಆಯಾಯ ಸಮಯಕ್ಕನುಸಾರವಾಗಿ ಅನುಸರಿಸಿ ಬಂದ ದೆಸೆಯಿಂದ ಜಾತಿಯೆಂಬ ಪಾಲು ಉಂಟಾಯಿತೆಂದು ಅವರೆನ್ನುತ್ತಾರೆ ಅವರೆನ್ನುವುದೇನೆಂದರೆ, "ಋಗ್ವೇದ" ವೆಂಬುದು ಹಿಂದುಗಳ ಅತ್ಯಂತ ಪ್ರಾಚೀನ ಧರ್ಮಿಕ ಗ್ರಂಥ. ಅದರಲ್ಲೂ ಕೂಡಾ ಜಾತಿಯ ಹೆಸರೆತ್ತಲ್ಪಟ್ಟಿರುವುದಿಲ್ಲ ಆರ್ಯರೆಂಬವರು ಆಗಿದ್ದರಾದರೂ ಅವರು ಸರ್ವಮತಸಹಿಷ್ಣುಗಳಾಗಿಯೇ ಇದ್ದರೆಂದೂ ಅವರು ಕೂಡಾ ಒಂದು ಜಾತಿಯೆಂಬ ಪರಿಭೇದವನ್ನು ಮಾಡಿಕೊಂಡಿರಲಿಲ್ಲವೆಂದೂ ತಿಳಿದುಬರುತ್ತದೆ ಆಗಿನ ಕಾಲದಲ್ಲಿ ಭಾರತವರ್ಷದಲ್ಲಿ ಅನಾರ್ಯರೆಂಬವರಿದ್ದರು. ಅವರು ಹಿಂದೂದೇಶದಲ್ಲಿ ಅನಾದಿಕಾಲದಿಂದಲೂ ಇದ್ದವರು ಅವರನ್ನು ಕಂಡರೆ, ಆರ್ಯರು ಭಯಪಡುತ್ತಿದ್ದರು. ಆರ್ಯನಂಶಸ್ಥರು ಪಂಜಾಬಿನಲ್ಲಿ ನೆಲೆಗೊಂಡಾಗ, ಅವರ ಕಸಬುಗಳಲ್ಲಿ ವ್ಯತ್ಯಾಸವುಂಟಾಯಿತು ಕೆಲವರು ಗದ್ದೆಯನ್ನುತ್ತಿದ್ದರು ಇನ್ನು ಕೆಲವರು ತಂತಮ್ಮ ಭೂರಕ್ಷಣೆ ಮಾಡಲುಪಕ್ರಮಿಸಿದರು. ಮತ್ತೆ ಕೆಲವರು ಪೂಜಾವಿಧಿಗಳನ್ನು ನೆರವೇರಿಸಿ ತಮ್ಮ ಕುಲದೇವರುಗಳನ್ನು ಆರಾಧಿಸಲಾರಂಭಿಸಿದರು ಇಂತಹ ಭೇದವು ತಲೆದೋರಿರುವುದು ಸಹಜವಾದುದು. ಒಂದು ಸಮಾಜವು ಒಂದು ದೇಶದಲ್ಲಿ ನೆಲೆಸಿಂತರೆ, ಅವರವರ ಕಸಬು ಪ್ರಕಾರವಾಗಿ ಅವರವರಲ್ಲಿ ಪ್ರತ್ಯೇಕತೆಯು ಕಂಡುಬರುವುದು ಸಿದ್ಧವಾದುದು ಹಲವು ಕಾಲದ ವರೆಗೆ ಆರ್ಯರು ಜಾತಿಭೇದಕ್ಕೆ ಮನಸ್ಸುಕೊಡಲಿಲ್ಲ ಆದರೆ ಅನಾರ್ಯರ ಹಾವಳಿಯು ಅಸಹನೀಯವಾದಕ್ಕೆ ಪರಿಣಾಮವಾಗಿ ಅವರನ್ನು ಆರ್ಯರೊಡನೆ ಸೇರಿಸಿಕೊಳ್ಳಲಾಯಿತು ಮಾತ್ರ ಸಮಾಜದಲ್ಲವರಿಗೆ ಅಧಮ ತರಗತಿಯನ್ನು ವರ್ಗಿಸಿಕೊಡಲಾಯಿತು ಕಸಬುದಾರಿ ಭೇದದೊಡನೆ ವರ್ಣಭೇದವೆಂಬ ದ್ವಂದ್ವವು ತಲೆಯೆತ್ತಿ ಶೂದ್ರರೆಂಬ ಇನ್ನೊಂದು ತರಗತಿಯ ರಚನೆಯಾಯಿತು. ಈ ಭೇದಾಭೇದಗಳು ವಿಸ್ತೃತ ಬೆಳೆಯುತ್ತಾ ಬೆಳೆಯುತ್ತಾ ಕೊನೆಗೆ ಕಸಬುದಾರಿಯಾದ ಪರಿಭೇದವು ಜನ್ಮಭೇದದಲ್ಲಿ ಪರ್ಯವಸಾನ ಹೊಂದಿತು ಹಲವು ಕಾಲವು ಕಳೆಯಲು ಈ ಕುಲ್ಪ [illegible] ಭೇದವು ಮತ್ತೊಂದು ಪ್ರಾಚೀಯನ್ನು ಬಿಟ್ಟು ಭಾಷಾಭೇದವನ್ನು ಪ್ರಚುರಿಸಿತು ಹೀಗಾಗಿ, ಉದ್ಯೋಗ ತರಗತಿ ಜನ್ಮ ಭಾಷೆಗಳೆಂಬವಾಗಿ ಈ ಜಾತಿಭೇದವೆಂಬ ಮಹಾಭೂತದ ಜನನವಾಯಿತು.

ಅಮೇರಿಕಾದಲ್ಲಿ ಬಿಳಿಯವರು ಮತ್ತು ನಿಗ್ರೋಗಳು ಎಂಬ ಭೇದವಿದೆ ಬಿಳಿಯವರು ಕಪ್ಪಿನವರನ್ನು ಬಹಿಷ್ಕರಿಸುತ್ತಾರೆ ಅವರು ತಮ್ಮೊಡನೆ ಸೇರಬಾರದೆಂದು ಅವರು ವಿವಿಧಶಾಸನಗಳನ್ನು ಮಾಡುತ್ತಾರೆ ಅಂದಿನ ಬ್ರಾಹ್ಮಣನು ಶೂದ್ರನನ್ನು ಪ್ರತ್ಯೇಕಿಸಿ ಮಾಡಿದ ಶಾಸನದಂತೆಯೇ ಅಮೇರಿಕಾದಲ್ಲಿನ ಶಾಸನಗಳಾದುವು ಇದೇ ರೀತಿ ಆಫ್ರಿಕದ ಬಿಳಿ ಜನರು ಕರಿಯರುಗಳಿನವರನ್ನು ಬಹಿಷ್ಕರಿಸಿ ಅವರಿಗೆ ಯಾವುದರ ಹಕ್ಕನ್ನುಗಳೀ ಕೊಡದೆ, ಅವರನ್ನು ದೂರವಿರಿಸಲು ಪ್ರಯತ್ನಿಸುತ್ತಿದ್ದಾರೆ ಹಿಂದೂದೇಶದಲ್ಲಿನ ಅಸ್ಪೃಶ್ಯರನ್ನು ಪ್ರತ್ಯೇಕವಾಗಿರಿಸುವುದಕ್ಕಾಗಿ ಬ್ರಾಹ್ಮಣನು ಮಾಡಿದ ಉಪಾಯವು ಹೀಗೆಯೇ ಇದೆ

"Students Brotherhood Quarterly"

ಹಿಂದೀಯ ಶಿಕ್ಷಣಕ್ರಮ.

ಡಾ। ಸ್ಪಿವಲ್ ಪೌಲ್‌ರವರು ಹಿಂದೀಯ ಶಿಕ್ಷಣಕ್ರಮದ ಕುರಿತೊಂದು ಲೇಖನವನ್ನು ಕೆಳಗೆ ಕೊಟ್ಟಿರುವ ರಿವ್ಯೂನಲ್ಲಿ ಪ್ರಕಟಿಸಿರುವರು ಅವರು ಪ್ರಕೃತದ ಶಿಕ್ಷಣಕ್ರಮಗಳನ್ನು ಮನಃಪೂರ್ವಕವಾಗಿ ಖಂಡಿಸಿ ಇವುಗಳಿಂದ ವಿದ್ಯಾರ್ಥಿಗಳ ನೈತಿಕ ಉನ್ನತಿಯು ಎಷ್ಟುಕಷ್ಟು ಆಗಲಾರದೆಂದು ಅಭಿಪ್ರಾಯಪಡುತ್ತಿರುವರು ವಿದ್ಯಾರ್ಥಿಗಳಲ್ಲಿ ಜ್ಞಾನಾರ್ಜನೆಯ ತೃಷೆಯುನ್ನುಕ್ರನ್ನಗೊಳಿಸುವುದೇ ಅಧ್ಯಾಪಕನ ಪ್ರಥಮ ಕರ್ತವ್ಯವಲ್ಲದೆ ರೂಢಿಯಲ್ಲಿರುವ ಕೆಲವು ಸಾಹಿತ್ಯಗಳನ್ನೋ ಮುದ್ರಗ್ರಂಥಗಳನ್ನೋ ಅವರಿಗೆ ಓದಲು ಕೊಟ್ಟರೆ ಏನೂ ಫಲವಿಲ್ಲವೆಂದು ಅವರ ಮತವಾಗಿರುತ್ತದೆ ಅರ್ಥ ತಿಳಿಯದ ವಿದ್ಯೆ ಕಲಿಯುವ ಫಲವೇನು? ರುಚಿಯಿಲ್ಲದ ಭೋಜನದಿಂದೇನು? ಶಾಲೆಯಲ್ಲಿ ತಾವು ಕಲಿತುದನ್ನೆಲ್ಲಾ ಶಾಲೆಯಲ್ಲೇ ಬಿಟ್ಟು, ವಿದ್ಯಾರ್ಥಿಗಳು ಹೊರಗಾಗುವುದಾದರೆ ಅಂತಹ ವಿದ್ಯೆಯೇಕೆ? ಅಮೇರಿಕಾದ ಶಾಲೆಗಳು ಇಂತಹ ಕ್ರಮಗಳಿಗೆ ತಿಲಾಂಜಲಿಯನ್ನು ಬಿಡುತ್ತಾ ಬರುತ್ತಿವೆ. ತಮ್ಮ ವಿದ್ಯಾರ್ಥಿಗಳಲ್ಲಿ ಜ್ಞಾನಸಂಪಾದನೆಯ ಗುಣವಿರಬೇಕೆಂಬುದೇ ಅವರ ಆದರ್ಶವಾಗಿಬಿಟ್ಟಿದೆ ಆ ಕ್ರಮಗಳನ್ನು ಹಿಂದೀಯರು ಕಲಿಯಬೇಕೆಂದು ಪೌಲರವರ ಹೇಳಿಕೆ ಕೈಗಾರಿಕೆಗಳನ್ನು ಹುಡುಗರಿಗೆ ಕಲಿಸಬೇಕೆಂಬ ಸೂಚನೆಯೇನೋ ಇದೆ ಆದರೆ, ಯುನಿವರ್ಸಿಟಿಗಳನ್ನು ಪ್ರವೇಶಿಸುವ ರೂಢಿಯನ್ನು ಯಾರೂ ಬಿಟ್ಟುಕೊಟ್ಟಂತೆ ಕಾಣುವುದಿಲ್ಲ. ಹಲವು ಕಮಿಶನುಗಳು ಹಲವು ಸೂಚನೆಗಳನ್ನು ಮಾಡಿವೆ ಆದರೆ, ಅವುಗಳನ್ನು ಕಾರ್ಯತಃ ಸ್ವೀಕರಿಸಿದಂತೆ ಗೋಚರಿಸುವುದಿಲ್ಲ ಬರಿಗೆ ಪಾಲಾ ಶಿಕ್ಷಣವೆಂದರೆ— ವಿದ್ಯಾರ್ಥಿಗಳನ್ನು ಯುನಿವರ್ಸಿಟಿಗಳಿಗೆ ಯೋಗ್ಯರನ್ನಾಗಿ ಮಾಡುವ ಹಮ್ಮಾಸವು ನಾಗಾಲೋಟದಿಂದ ಓಡುತ್ತಿದೆ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನಿಟ್ಟು ಅವರು ಜ್ಞಾನಸಂಪಾದನೆಯನ್ನು ಎಷ್ಟು ಮಾಡಿಕೊಂಡಿರುವರೆಂದು ನಾವು ಕಂಡುಕೊಳ್ಳಬೇಕು ಆ ಪ್ರಾಥಮಿಕರು ಸರ್ವವನ್ನೂ ತಿಳಿದವರೆಂಬ ಭಾವನೆಯು ವಿದ್ಯಾರ್ಥಿಗಳಿಂದ ತೊಲಗಿ ಹೋಗಿ ಅವರು ಹಣದ ಸಂಪಾದನೆಗಿಂತಲೂ ವಿದ್ಯೆಯಲ್ಲಿನ ಅಭಿರುಚಿಯನ್ನು ಗಳಿಸಲು ಯತ್ನಿಸಬೇಕು

"Muslim Review"

ಇಸ್ಲಾಮಿಯ ಕವಿವರ್ಯ

ಪಿ. ಮೊಹಮ್ಮದ್ ಎಂ. ಎ. ಬಿ. ಸಿ. ಎಲ್ (ಆಕ್ಸ್‌ಫರ್ಡ್) ಬ್ಯಾರಿಸ್ಟರ್ ಎಟ್ ಲಾ ಇವರು, ಕೆಳಗೆ ಸೂಚಿತವಾದ ಮಾಸಪತ್ರಿಕೆಯಲ್ಲಿ ಮಿರ್ಜಾ ಅಸಾದುಲ್ಲಾಖಾನ್ ಗಾಲಿಬ್ ಎಂಬ ಇಸ್ಲಾಮಿನ ಕವಿವರ್ಯರೊಬ್ಬರನ್ನು ಕುರಿತು ಪ್ರಶಂಸಿಸುತ್ತಾ ಹೀಗೆ ಬರೆದಿರುವರು.

ಮಿರ್ಜಾ ಅಸಾದುಲ್ಲಾಖಾನ ಗಾಲಿಬನ ವಿದ್ವತ್ತು ಅತ್ಯಂತ ಗಣನೀಯವಾದುದು. [illegible] ಕಾಲವಾದ ಇವನ ಕೃತಿ ಅತ್ಯಾರಿ [illegible] ಮೊದಲಾದವರ [illegible] ಅಪ್ರತಿಮವಾದುದು. [illegible] ಫಜಲ [illegible] ಇವನ ಫಜಲ್‌ಗಳು ಅನುಕರಣೀಯವಾದುವುಗಳು. [illegible] ಪ್ರೀಯಸಾ [illegible] ಯೋಗ್ಯತೆಯು ವಿಶ್ವಕ್ಕೆ ಅವನಲ್ಲಿತ್ತು. ಅಬ್ದುಲ್ ಫಜಲ್ ಅಥವಾ ಜಾಮಿರಂಗಳ ಗದ್ಯಕ್ಕಿಂತಲೂ ಉಜ್ವಲಶೈಲಿಯಲ್ಲಿ ಅವನು ಬರೆಯುತ್ತಿದ್ದನು. ಈ ಕವಿಯಲ್ಲಿದ್ದ ಅಂತಹ ವೈಶಿಷ್ಟ್ಯವಾದರೂ ಏನು? ಅವನ ಗದ್ಯಪದ್ಯಗಳಲ್ಲಿ ಅವನು ತನ್ನ ಜೀವನದ ಅನುಭವದ ಸುಧೆಯನ್ನೇ ಸುರಿಯುತ್ತಿದ್ದನು ಗಾಲಿಬನೆಂದರೆ ತನ್ನ ಅತ್ಯಧಿಕ ಪ್ರಾಧಿಕಾರದ ಪರರ ಕ್ಷೇಮವನ್ನು ಚಿಂತಿಸಿದವನು ಜೀವನವನ್ನು ಅವರ ಜೀವಿತಸಿಂಧುವಿನಾವರ್ತಗಳೊಡನೆ ಅವನು ಹಾಡುತ್ತಾನೆ ಹೃದಯವನ್ನು ಪೂರ್ಣವಾಗಿ ತೆರೆದು ತನ್ನ ಸುಖದುಃಖಗಳ ಕಥೆಯನ್ನು ಅವನು ಸಂಗೀತದೂಪದಿಂದ ಹಾಡಿ ಕೇಳಿಸುತ್ತಾನೆ ಅವನತಿಪಥವನ್ನು ಹಿಡಿದ ತನ್ನ ಜೀವನ ತನ್ನ ಆಶಾನಿರಾಶೆಗಳು, ತನ್ನ ಬಡತನಗಳ ಹೃದಯಂಗಮ ವಿವರವನ್ನು ಮಾಡುತ್ತಾ, ಹಾಡುತ್ತಾ, ನರ್ತಿಸಿ, ಅವನು ಪರರಿಗೆ ಮಾರ್ಗದರ್ಶಕನಾಗಿರುತ್ತಾನೆ. ಅವನ ಕವಿತೆಯಲ್ಲಿ ಉಜ್ವಲ ಪ್ರಭೆಯಿದೆ, ಸೊಬಗು ಇದೆ ಅವನ ಗದ್ಯಗಳೂ ಅಂತೆಯೇ, ಅದರಲ್ಲಿ ಒಂದು ವಿಚಿತ್ರ ಶಕ್ತಿಯೇ ಅಡಕವಾಗಿದೆ ಅವನ ಗದ್ಯಗಳ ಪ್ರಸರಣವಾದರೆ ಅವನು ತನ್ನ ಸಮಕಾಲೀನರೊಳಗೆ ಅದ್ವಿತೀಯನಾಗಿ ನಿಂತುದು ತಿಳಿದುಬರುವುದು, ಶೈಲಿಯ ಮಾಧುರ್ಯ, ಅದರ ಸಾರಳ್ಯ, ಅದರಲ್ಲಿನ ಕೌಶಲ್ಯ ಹಾಗೂ ಬಿಚ್ಚುಹೇಳಿಕೆ, ಧಾರಾಳವಾಗಿ ಹರಿಯುವ ಭಾವನಾಶಕ್ತಿ ಇವೆಲ್ಲವೂ ಅವನಿಗೆ ಕೀರ್ತಿ ತರುವ ಮಹಾ ವಿಷಯಗಳು. ಅವನ ಭಾವನೆಯು ಸುಂದರವಾದುದು. ಪೂರ್ಣವಾದುದು, ಅರ್ಥಗರ್ಭಿತವಾದುದು, ಸಾರಳದ ಬಣ್ಣದಿಂದ ಸುಶೋಭಿತ ಶಬ್ದಯುಕ್ತವಾದುದು. ಅವನು ಉರ್ದು ಮತ್ತು ಪರ್ಶಿಯನ್ ಭಾಷೆಗಳಲ್ಲಿ ರಚಿಸಿದ ಕೃತಿಗಳು ಪ್ರಶಂಸನಾರ್ಹವಾದುವುಗಳು ಅವನ ಸಾಮಾಜಿಕಭಾವನೆಯೂ ಅತ್ಯಂತ ವಿಶಾಲವಾದುದು. ಅವನು ಇಸ್ಲಾಮಿನ ಪರವಾಗಿ ವಾದಿಸುತ್ತಿದ್ದನು ಆದರೆ ಆ ವಾದದಲ್ಲಿ ಅವನು ಭಾವವೈಶಾಲ್ಯದ ಗೀತೆಯನ್ನು ಹಾಡುತ್ತಿದ್ದನು. ಜಾತಿಮತಗಳ ಸಂಕುಚಿತ ಕ್ಷೇತ್ರದಲ್ಲೇ ಅವನು ನಿಲ್ಲದೆ ವಿಶ್ವಪ್ರೇಮವನ್ನು ಬೋಧಿಸುತ್ತಿದ್ದನು

Hindustan Review.

ಜಾನುವಾರುಗಳ ಅಭಿವೃದ್ಧಿ

ಈ ದೇಶದಲ್ಲಿ ಜಾನುವಾರುಗಳ ರಕ್ಷಣೆಯು ಸಮರ್ಪಕವಾಗಿ ನಡೆಯುತ್ತಿಲ್ಲ ಅವುಗಳಿಗೆ ತಕ್ಕಷ್ಟು ಆಹಾರಗಳನ್ನು ಹಾಕಲಾಗುವುದಿಲ್ಲ ಇದರ ಪರಿಣಾಮವಾಗಿ ಪುಷ್ಟಜಾನುವಾರುಗಳನ್ನು ಕಾಣುವುದೇ ಅಪರೂಪವಾಗಿದೆ ಮಳೆಗಾಲದ ಒಂದು ಸಮಯದಲ್ಲಲ್ಲದೆ ಅವುಗಳಿಗೆ ಸರಿಯಾದ ಹುಲ್ಲುಮೇವುಗಳು ದೊರೆಯುವುದಿಲ್ಲ ಅವುಗಳನ್ನು ಈ ರೀತಿಯಾದ ಅಲಕ್ಷ್ಯಕ್ಕೆ ಸಗಣಿಗಾಗಿ ಮಾತ್ರ ಸಾಕಲಾಗುತ್ತದೆ ದೊಡ್ಡ ರುಜನೆಗಳಿರುವ ದನಕರುಗಳೊಡನೆ ಅನಾರೋಗ್ಯಕರವಾದ ದನಕರುಗಳನ್ನು ತಿರುಗಾಡ ಬಿಡುತ್ತಾರೆ ಈ ಅಭ್ಯಾಸದಿಂದಾಗಿ ಮಹಾ ಹಾನಿಯಿದೆ ಈಗಿನ ಕ್ರಮಗಳಲ್ಲಿ ಮಹಾ ದೋಷವಿದೆ ದನಕರುಗಳಿಗೆ ಸಾಕಷ್ಟು ಆಹಾರವನ್ನು ಒದಗಿಸಿಕೊಳ್ಳುವುದು. ದೊಡ್ಡ ಕೆಲಸ ಎಷ್ಟು ಜಾನುವಾರುಗಳನೆಯೋ ಅಷ್ಟು ಆಹಾರವನ್ನು ತರಿಸಬೇಕು ಆದರೆ ಈಗ ಹಾಗಾಗುವುದಿಲ್ಲ ಹೆಚ್ಚು ಜಾನುವಾರುಗಳಿದ್ದರೆ ಕಡಮೆ ಆಹಾರವು ಹಂಚಲ್ಪಡುತ್ತದೆ. ದನಕರುಗಳು ಒಮ್ಮೆ ಉಪವಾಸವನ್ನನುಭವಿಸಿದುವೆಂದರೆ ಮತ್ತೆ ಅವುಗಳು ಪುಷ್ಟವಾಗಿ ಬೆಳೆಯಲಾರವು ದನಕರುಗಳನ್ನು ಸಾಕುವ ಒಂದು ಗುಟ್ಟೇ ಇದು. ಅವುಗಳನ್ನು ಬಿಡದೆ ಸಾಕಷ್ಟು ಆಹಾರ ಹಾಕಿ ಸಾಕಬೇಕು ಎರಡನೆಯ ಸ್ಥಾನ್ನಿತಿಯೆಂದರೆ—ಅವುಗಳ ಸಂತಾನಾಭಿವೃದ್ಧಿ ರೋಗಗ್ರಸ್ತ ಎತ್ತುಗಳಿಗೆ ಹುಟ್ಟಿದ ಕರುಗಳು ರೋಗಗ್ರಸ್ತವಾಗಿಯೇ ಜನಿಸುವುವು ಆದುದರಿಂದ ಈ ವಿಷಯದಲ್ಲಿ ಹಿಂದೂದೇಶವು ಎಚ್ಚರವಿರಬೇಕಾಗಿದೆ ರೋಗಗಳು ಬಂದು ಹರಡಿದರೆ ಮತ್ತೆ ಗುಣಪಡಿಸುವುದು ಕಷ್ಟ ದನಕರುಗಳ ಸಂಖ್ಯೆಯನ್ನು ಕಡಮೆಮಾಡಬೇಕ [illegible] ಗಳನ್ನು ಸಿಕ್ಕಾಬಟ್ಟೆ ಬಿಡದೆ ಅವುಗಳನ್ನು ಪ್ರತ್ಯೇಕವಾಗಿರಿಸಬೇಕು. ದನಗಳನ್ನು ಹಟ್ಟಿಯಲ್ಲಿಯೇ ಕಟ್ಟಿಹಾಕದೆ ಅವುಗಳನ್ನು ದೈನದಿನ ಪ್ರದೇಶಗಳಲ್ಲಿ ಬಿಡಬೇಕು ಈ ಸೂಚನೆಗಳನ್ನು ಸ್ವೀಕರಿಸಿ ಕಾರ್ಯತಃ ನಡೆಸಿದರೆ ನಮ್ಮ ಜಾನುವಾರುಗಳ ಸ್ಥಿತಿ ಹೆಚ್ಚುವುದರಲ್ಲಿ ಸಂದೇಹವಿಲ್ಲ

The Indian Review

ಹಿಂದೂದೇಶಕ್ಕೆ ಇಂಗ್ಲೆಂಡಿನ ಋಣ.

[illegible] ಕೆಳಗೆ ಸೂಚಿತವಾದ ಮಾಸಿಕದಲ್ಲಿ [illegible] "ಹಿಂದೂದೇಶದಲ್ಲಿ ಬ್ರಿಟಿಷರ ಆಳ್ವಿಕೆ" ಎಂಬ [illegible] ಲೇಖನವೊಂದನ್ನು ಪ್ರಕಟಿಸಿದ್ದರು. ಅದನ್ನಲ್ಲಿ ಸಂಕ್ಷೇಪಗೊಳಿಸಿ ಕೊಡಲಾಗಿದೆ "[illegible] ಹಿಂದೂದೇಶವು ಗ್ರೇಟ್‌ಬ್ರಿಟನ್ನನ್ನು ಸಾಮ್ರಾಜ್ಯಕ್ಕೆ ಏನನ್ನು ಕೊಟ್ಟಿದೆ [illegible] ಭಾರತದೇಶವು ಇಂಗ್ಲೆಂಡಿಗೆ [illegible] ಮತ್ತು ರಾಜಕೀಯ ಸಾಮರ್ಥ್ಯಗಳನ್ನೊದಗಿಸಿ ಕೊಡುತ್ತದೆ. ಪ್ರತಿಪಾದನೆಯನ್ನು ನಾನು ಮಾಡುತ್ತೇನೆ ಇದ್ದೇನೆ ಹಿಂದೂದೇಶದ ಅದ್ಭುತಕರ ಜನಾಂಗದಿಂದ ಅದು ನನ್ನ ಸಾಮ್ರಾಜ್ಯಕ್ಕೂ ಇಡೀ ಪ್ರಪಂಚಕ್ಕೂ ಉದ್ಯೋಗಗಳನ್ನು ಕಲ್ಪಿಸಿಕೊಟ್ಟಿದೆ. ಭಾರತದೇಶದ ಈ ಸೇವೆಯು ನಿಜವಾದ ತಿಳಿವು ಹೆಚ್ಚಿನವರಿಗಿರುವುದಿಲ್ಲ ವೆಸ್ಟ್ ಇಂಡೀಸ್‌ನಲ್ಲಿ ಗುಲಾಮಗಿರಿಯನ್ನು ನಿರ್ಮೂಲಗೊಳಿಸಿದ ಮೇಲೆ ಅಲ್ಲಿಯ ಸ್ಥಿತಿಯು ಪೂರ್ಣವಾಗಿ ಮಾರ್ಪಟ್ಟಿತು ಈ ಸಮಯದಲ್ಲಿ ಹಿಂದೀಯರ ಕೂಲಿಯ ಸಹಾಯವು ನಮಗೆ ದೊರೆಯದಿರುತ್ತಿದ್ದರೆ ಅಲ್ಲಿಯ ಭೂಮಿಯೆಲ್ಲ ಮರುಭೂಮಿಯಾಗಿ ಅದು ಕಾಲಕ್ರಮೇಣ ಅನ್ಯರ ವಶಕ್ಕೆ ಸೇರಿಹೋಗುತ್ತಿತ್ತು ಟ್ರಿನಿಡಾಡ್‌ನಲ್ಲಿ ಈಗ ೮೬,೦೦೦ ಪೂರ್ವದೇಶಸ್ಥ ಭಾರತೀಯರಿರುವರು. ಜಮೈಕಾದಲ್ಲಿ ೧೯,೦೦೦ ಜನರಿರುವರು. ಮಾರಿಷಸ್ ಕಾಲನಿಯನ್ನು ಕೊಳೆಯುವುದರಿಂದ ರಕ್ಷಿಸುವುದಕ್ಕೆ ಈ ಸ್ತ್ರೀಪುರುಷರ ಸಾಹಸ ಸ್ವಾತಂತ್ರ್ಯ [illegible] ದೊಡ್ಡ ಆಸ್ತಿಯಾಗಿ ಪರಿಣಮಿಸಿತು. ಹಿಂದೀಯ ಉದ್ಯಮಿಗಳ ಸಹಾಯವೊಂದಲ್ಲದಿದ್ದಿದ್ದರೆ ವೆಸ್ಟ್ ಇಂಡೀಸ್ ಕಾಲೋನಿ [illegible] ಜೊತೆ [illegible] ದಲ್ಲಿ ಬ್ರಿಟಿಷ ಜನಾಂಗವು ತಲೆಯೆತ್ತುತ್ತಿರಲಾಗದಂತಾಗುತ್ತಿತ್ತು ದಕ್ಷಿಣಾಮೇರಿಕದ ನಾಗಪಾಶದಿಂದ ಬ್ರಿಟಿಷ ಗಯಾನವು ಹಿಂದೀಯ ಉದ್ಯಮಿಗಳಿಲ್ಲದಿರುತ್ತಿದ್ದರೆ ನಮಗೆ ಲಭ್ಯವಾಗುತ್ತಿದ್ದಿಲ್ಲ ಅಲ್ಲಿನ ೨೭೮,೦೦೦ ಜನರಲ್ಲಿ ೧೦೪,೦೦೦ ಹಿಂದೀಯರು ಹಿಂದೀಯ ಉದ್ಯಮವನ್ನು ನಾವು ಫ್ರೆಂಚರಿಗೂ ಡಚ್ಚರಿಗೂ ಕೊಟ್ಟಿದ್ದೇವೆ ಪೆಸಿಫಿಕ ಸಮುದ್ರದಾಚೆಗೆ ಹಿಂದೀಯ ಕೂಲಿಗಾರರು ಹೋಗುವರು

ಫಿಜಿದ್ವೀಪದಲ್ಲಿ [illegible] ಭಾರತೀಯರಿರುವರು ಆಫ್ರಿಕವು ಹಿಂದೂ ದೇಶದ ಋಣಗ್ರಸ್ತವಾಗಿದೆ ಹಿಂದೀಯ ಕೂಲಿಗಾರರು ಒಂದು ದೊಡ್ಡ ಕ್ಷೇತ್ರವಾಯಿತು. ನೇಟಾಲ ಸಕ್ಕರೆಯ [illegible] ಹಿಂದೀಯ ಕೂಲಿಗಾರ [illegible] ದಲ್ಲಿ ವಿದುತ್ತಿದ್ದರೆ ಅದರ ಕೊಳೆವಾಗಳನ್ನು [illegible] ಪೂರ್ವ ಆಫ್ರಿಕಾ [illegible] ಅಲ್ಲಿ [illegible] ಅಲ್ಲಿನ ಇಂಗ್ಲೀಯರ [illegible] ಸಂಖ್ಯೆಯು [illegible] ೩೦,೦೦೦ ಹಿಂದೀಯರು [illegible] ಹಿಂದೀಯರು ಕೆಲಸಗಾರರನ್ನು ಅನೇಕ ಸಾಧಿಸಿದರು ಇಂತಹ ದೂರದ [illegible] ೩೦,೦೦೦ [illegible] ಬಿಡು [illegible] ನಾವು [illegible] ೩೦೦ ಬ್ರಿಟಿಷ ಅಧಿಕಾರಿಗಳು ೧೦೦೦ ಹಿಂದೀಯರು [illegible] ೧೦೦ [illegible] ಅಧಿಕಾರಿಗಳು ೩೦,೦೦೦ ಜನ ಕಾರ್ಮಿಕರನ್ನು ೧೭ ಕಿಂ ಹಿಂದೀಯ ಕೂಲಿಗಾರರ [illegible] ಈ ಜನರಲ್ಲಿ [illegible] ಅಲ್ಲಿಗೆ [illegible] ಅವರು ಸ್ವತಂತ್ರ [illegible]

North American Review

ಈಗಲೇ ತಯಾರಾಗಿದೆ! ಬೇಗನೆ ಕೊಂಡುಕೊಳ್ಳಿರಿ!! ತ್ವರೆ ಪಡಿರಿ!!!

ಎಮ್. ಗಣಪತಿರಾವ್ ಉಗ್ರ, ಇವರಿಂದ ರಚಿತವಾದ

ಸೋಸಿಯೋಲೋಜಿ

ಅಥವಾ

ಸಮಾಜಶಾಸ್ತ್ರ.

ಹಾಯರ್ ಎಲಿಮೆಂಟರಿಗ್ರೇಡಿನ ವಿದ್ಯಾರ್ಥಿಗಳಾದ [illegible]

ಉಪಾಧ್ಯಾಯನಿಯರಿಗೂ ಅತ್ಯವಶ್ಯಕವಾದ ಪುಸ್ತಕ

ಟ್ರೈನಿಂಗ್ ಶಾಲೆಗಳ ಸಿಲೆಬಸ್ ಪ್ರಕಾರ ಬರೆಯಲ್ಪಟ್ಟುದು

ಖಾಸಗಿಯಾಗಿ ಹಾಯರ್ ಎಲಿಮೆಂಟರಿ ಗ್ರೇಡ್ ಪರೀಕ್ಷೆಗೆ ಹೋಗುವ ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ,—ಯಾರ ಸಹಾಯವೂ ಇಲ್ಲದೆ ಕಲಿಯಲು ಅತ್ಯುಪಯೋಗಕರವಾದ ಪುಸ್ತಕ. ರೋಡು ಮತ್ತು ಸರಕಾರೀ ಪರೀಕ್ಷೆಯ ಪ್ರಶ್ನೆಗಳನ್ನು ಒಳಗೊಂಡಿದೆ

284 ಪುಟಗಳುಳ್ಳದ್ದು, ಸುಂದರವಾದ ಬ್ಯಾಂಡು, ಮುದ್ದಾದ ಮುದ್ರಣ.

ಕ್ರಯ ಒಂದು ರೂಪಾಯಿ ಮಾತ್ರ.

ಪುಸ್ತಕ ದೊರೆಯುವ ವಿಳಾಸ— ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟಿನ ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಭರ್ಗಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಪಂಡಿತ ಡಿ ಗೋಪಾಲಾಚಾರ್ಲುರವರ

ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಒಳ್ಳೆಯ ಆರೋಗ್ಯವನ್ನು ನಿಧಾನವಾಗಿ ಹೀರಿ ಮುಗಿಸುತ್ತಿದೆ ಅದರ ಫಲವೇ—ಆಯಾಸ ನರಗಳ ದುರ್ಬಲತೆ, ಶಿರೋವೇದನೆ ಕರ್ಕಶಸ್ವಭಾವ ಇವೇ ಮೊದಲಾದುವು ಇವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿ ಬಿಡದ ತೆ ಈವಾಗಲೇ ತಡೆಹಾಕಬೇಕು ಉತ್ತಮೋಪಾಯವೇ ಜೀವಾಮೃತಸೇವನೆ ಈ ಪರಿಣಾಮಕಾರೀ ಪೌಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನು ಉಂಟುಮಾಡುವುದು. ನೀವು ಕಳೆಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣಶಕ್ತಿ ಸಂಪನ್ನರನ್ನಾಗಿ ಮಾಡುವುದು ಶೀಶೆಯೂ ದೊರೆವುದು—ದೊಡ್ಡದು ರೂ 3 4—0 ಸಣ್ಣದು ರೂ 1—12 0

ತಯಾರಿಸುವವರು—ಆಯುರ್ವೇದಾಶ್ರಮ, ಪೋಸ್ಟ್ ಬೋಕ್ಸ್ 287, ಮದರಾಸು.

ಮೈಸೂರು ಸಂಸ್ಥಾನದ ಡಿಸ್ಟ್ರಿಬ್ಯೂಟರರು ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,

92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Comfortable like an AEROPLANE

Use our swadeshi Mosquitones for health Comfort and sound sleep as it .. are in an Aeroplane Sample .. fitting free More .. .. sent with order

I		B		H		Price	Best
6	1 ft	3½	1 ft	3½	1 ft	Rs 1 12	2/8
6		4		4		2 4	3/
6½		4½		4½	,	2/8	3 8
7		5				3 2	4 10
7½		6	,	6	,	4 4	12

G M Sharma, Post Box 6706, Calcutta

An Advertisement In

'Swadeshabhimani'

Means a sure fortune to you

Ask for Contract Rates

The Swadeshabhimani office,

Car Street, Mangalore

ಆದರ್ಶಪ್ರಾಯ ಸೇವೆಗಾಗಿ

ಕಿರ್ಲೋಸ್ಕರ

ಪಂಪುಗಳನ್ನುಪಯೋಗಿಸಿರಿ

ಕೃಷಿ ಕಾರ್ಖಾನೆಗಳಿಗೆ, ಮನೆಗಳಿಗೆ ನೀರನ್ನೊದಗಿಸ ವುದಕ್ಕೆ ಒಂದೇ ಸಮರ್ಪಕ ಏರ್ಪಾಡು



ಅಮೋಘ! ಬಾಳಿಕೆ!! ಕಡಿಮೆ ಖರ್ಚು!!

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ ಲಿಮಿಟೆಡ್, ಮದ್ರಾಸು

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ

Vishuchika Samhari

(PILCO)

ಕೊಲರಕ್ಕೆ ದಿವ್ಯೌಷಧ ಉಪಯೋಗಿಸಿದರೆ ಗುಣ ಖಾತ್ರಿ

ಕ್ರಯ ಡಬ್ಬಿ 1ಕ್ಕೆ ರೂ 1-..-0

ಗುಹ್ಯರೋಗ ನಿವಾರಿಣೀ ತೈಲ

Anti-Veneraei Oil

(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ವ ಶಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

6 ಔನ್ಸ್‌ಗಳ ಬಾಟ್ಲು 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,

ಕಲ್ಲಾಯಿ, ಮಲಬಾರ್,

ಅಥವಾ

ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ

ಇಲ್ಲಿ ಸಿಗುವುದು.

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲಿಕೆ ಹಾಗೂ ರಾಸಾಯನಿಕ ಔಷಧಿಗಳ ವಿಕ್ರಯದ ವಿಷಯದಲ್ಲಿ ಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಗೌರವ ಕಾರ್ಯದರ್ಶಿ,

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ನೈಷ್ಠಿಕಸಂಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ) ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ತರಿಸಿಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟಿನ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು



ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ

The Scientific Gold Bangles Co., Ltd., Head Office 41, Byragimutam Street, Post Box No. 208, Madras.

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ, ಧೋತಿ, ಸೀರೆ, ಜೈರವಾಸು, ಚೆಕ್ಕು, ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು.

Srinivasa Ranga Pai,

Representatives for South Kanara and Malabar.

For— **A & F Harvey,**

Managers.—Madura Mills Co., Ltd.,

ಜರ್ಮನಿಯು ಸೈನ್ಯವನ್ನು ಹೆಚ್ಚಿಸುತ್ತದೆ!

ವರ್ಸೇಲಿ ಸಂಧಿಯನ್ನು ಮುರಿದಿಕ್ಕಲಾಯಿತು! ಇದು ಇನ್ನೊಂದು ಯುದ್ಧದ ಮೂಲವೋ?

ಈ ಆಶ್ಚರ್ಯಕರ ಪ್ರಕಟಣೆಯು ಯುರೋಪು ಖಂಡವನ್ನು ದಿಗಿಲುಗೊಳಿಸಿರುತ್ತದೆ. ವಿದೇಶೀಯ ಪತ್ರಿಕಾ ಪ್ರತಿನಿಧಿಗಳ ಒಂದು ಸಭೆಯನ್ನು ಮಾಡಿ ಜರ್ಮನಿಯ ಪ್ರಚಾರ ಮಂತ್ರಿಗಳಾದ ಡಾ| ಗೋಬೆಲ್ಸ್‌ರವರು ಇದನ್ನು ಅವರಿಗೆ ತಿಳಿಸಿದರು. ಜರ್ಮನಿಯ ಒಂದು ಆರೋಪವಿದು: ಎಲ್ಲಾ ರಾಷ್ಟ್ರಗಳು ವರ್ಸೇಲಿ ಸಂಧಿಯ ಪ್ರಕಾರ ನಡೆದುಕೊಳ್ಳಲಿಲ್ಲ. ವಿಶೇಷತಃ ಅವರು ಶಸ್ತ್ರತ್ಯಾಗ ಮಾಡಲಿಲ್ಲ—ಆದುದರಿಂದ ತಾನೂ ಅದನ್ನು ಮಾನ್ಯ ಮಾಡುವುದಿಲ್ಲ. ವರ್ಸೇಲಿ ಸಂಧಿಯಲ್ಲಿನ ಸೈನ್ಯ, ನಾವೆ ಮತ್ತು ಆಕಾಶಯಾನಗಳ ಕುರಿತಾದ ಸಂಕ್ಷಿಪ್ತ ಶರ್ತವು ಇದು. ಇದನ್ನೇ ಜರ್ಮನಿಯು ಉಲ್ಲಂಘಿಸಿತು.

ಜರ್ಮನಿಯ ಸೈನ್ಯವು ಮುಂದಕ್ಕೆ ಅಧಿಕ ಪ್ರಮಾಣದಲ್ಲಿಂದರೆ ೧೦೦,೦೦೦ ಜನರಿಷ್ಟಿರಬೇಕು. ಇವರಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಮದ್ದು ಗುಂಡು ತಯಾರಿಸಬೇಕು. ಇವರಿಗೆ ಬೇಕಾದುದಕ್ಕಿಂತ ಹೆಚ್ಚಾಗಿರುವ ಎಲ್ಲಾ ಶಸ್ತ್ರಗಳನ್ನು ಜರ್ಮನಿಯು ಬಿಟ್ಟುಕೊಡಬೇಕು. ಮುಂದಕ್ಕೆ ಅವುಗಳನ್ನು ತಯಾರಿಸಬಾರದು. ಜರ್ಮನಿಯು ಹೊಸ ಸೈನ್ಯವನ್ನಿಟ್ಟುಕೊಳ್ಳುವುದಿಲ್ಲವೆಂದು ಒಪ್ಪಿದೆ. ಆದರೆ ೧೨ ವರ್ಷಗಳ ತನಕ ಸ್ವಯಂಸಿದ್ಧರಾಗಿ ಬರುವವರನ್ನು ಸೈನ್ಯಕ್ಕೆ ಸೇರಿಸುವುದು. ೨೫ ವರ್ಷಗಳ ತನಕ ಅಧಿಕಾರಿಗಳನ್ನು ನೇಮಿಸುವುದು. ಸೈನ್ಯದ ಹೊರಗೆ ಒಂದಿಂಚು ತರಬೇತು ಮಾಡಬಾರದು. ಈಗ ಇದ್ದ ಸಿಬ್ಬಂದಿಯನ್ನು ನಿಷೇಧಿಸಲಾಗಿದೆ.

ಮುಂದಕ್ಕೆ ಜರ್ಮನಿಯು ನಾವಿಕ ಬಲವನ್ನಿಟ್ಟುಕೊಳ್ಳಬಾರದು. ೬ ಯುದ್ಧನೌಕೆಗಳನ್ನೂ ೬ ಸಣ್ಣ ಸಣ್ಣ ನಾವೆಗಳನ್ನೂ ೧೨ ಶಸ್ತ್ರ ನಾವೆಗಳನ್ನೂ ೧೨ ಟೋರ್ಪಿಡೋ ಬೋಟುಗಳನ್ನೂ ತನ್ನ ರಕ್ಷಣೆಗಾಗಿ ಇಟ್ಟುಕೊಳ್ಳಬೇಕು. ಸಬ್‌ಮೆರಿನ್‌ಗಳನ್ನು ಅದು ಸರ್ವಥಾ ಇಟ್ಟುಕೊಳ್ಳಬಾರದು. ೧೦,೦೦೦ ಟನ್ನುಗಳಿಗಿಂತ ಭಾರವುಳ್ಳ ಹೊಸ ಹಡಗುಗಳನ್ನು ರಚಿಸಬಾರದು. ಸೈನ್ಯ ಬಲದಂತೆ ನಾವಿಕ ಬಲಕ್ಕೆ ಸ್ವಯಂಸಿದ್ಧರಾಗಿ ಬರುವವರನ್ನು ಹೆಚ್ಚು ಕಾಲ ಸೇರಿಸಿಕೊಳ್ಳಬಾರದು. ನಾವಿಕ ಕೋಟೆಕೊತ್ತಳಗಳನ್ನು ನಿರ್ಮೂಲ ಮಾಡಬೇಕು. ಈ ಸೈನ್ಯಗಳ ಮೇಲ್ವಿಚಾರಕ್ಕಾಗಿ ಕಮಿಶನ್‌ಗಳಿವೆ. ಈ ಸೈನ್ಯಗಳಿಗೆ ಬೇಕಾದ ಕ್ರಮಗಳನ್ನು ೧೯೩೫ರಲ್ಲಿ ನಿರ್ಧರಿಸಲಾಗಿದೆ.

ಈ ವಿಷಯವಾಗಿ ಹರ್ ಹಿಟ್ಲರರು ಭಾಷಣಮಾಡಿ "ನಾವು ನಮ್ಮ ಶರ್ತಗಳನ್ನು ಪರಿಪಾಲಿಸಿಕೊಂಡು ಬಂದಿರುವೆವು. ವರ್ಸೇಲಿ ಸಂಧಿಗನುಗುಣವಾಗಿ ನಡೆದುಕೊಂಡು ಬಂದಿರುವೆವು. ಆದರೆ ಇತರ ಜನಾಂಗಗಳು ಆ ಶರ್ತಗಳನ್ನು ಮನ್ನಿಸಲಿಲ್ಲ. ಎಲ್ಲ ರಾಷ್ಟ್ರಗಳೂ ಶಸ್ತ್ರಗಳನ್ನು ಹೆಚ್ಚಿಸಿಕೊಂಡು, ಜರ್ಮನಿಯು ಮಾತ್ರ ಆತ್ಮರಕ್ಷಣೆ ಮಾಡದ ಸ್ಥಿತಿಯಲ್ಲಿದೆ. ಯಾವಾಗ ಅವರು ಮಾಡಿದುದನ್ನು ಅವರು ಅನುಸರಿಸುವುದಿಲ್ಲವೋ ಆಗ ನಾವು ನಮ್ಮ ಇಚ್ಛಾನುಸಾರ ವರ್ತಿಸುವುದು ಸಂಗತವಾಗಿದೆ. ಜರ್ಮನಿಯು ತನ್ನ ಮಂತ್ರಿಮಂಡಲವನ್ನು ರಕ್ಷಿಸಬೇಕಾಗಿದೆ. ಅದು ಮುಂದಕ್ಕೆ ಯಾವುದನ್ನೂ ರಹಸ್ಯವಾಗಿಟ್ಟುಕೊಳ್ಳಲು ಸಾಧ್ಯವಾಗಿಲ್ಲ. ಹೀಗೆಂದೊಡನೆ ಜರ್ಮನಿಯು ಬೇರೆಯವರ ಮೇಲೆ ಬೀಳುವುದಕ್ಕಾಗಿ ಈ ಶಸ್ತ್ರಸಿದ್ಧತೆಗಳನ್ನು ಮಾಡುತ್ತಿದೆಯೆಂದು ಯಾರೂ ತಿಳಿಯಬಾರದು. ಅದು ಸ್ವಂತ ರಕ್ಷಣೆಗಾಗಿಯೂ, ಶಾಂತಿಪಾಲನೆಗಾಗಿಯೂ ಹೀಗೆ ಮಾಡಿದೆ. ಜರ್ಮನಿಯು ಮಾನಮರ್ಯಾದೆಗಳನ್ನುಳಿಸುವುದೇ ಅದರ ಮುಖ್ಯ ಧ್ಯೇಯವಾಗಿ ನಿಂತಿದೆ" ಎಂದರು. ಹರ್ ಹಿಟ್ಲರರ ಈ ನುಡಿಗಳನ್ನು ಡಾ| ಗೋಬೆಲ್ಸರು ಪ್ರತಿಧ್ವನಿಸಿ ಹೀಗೆಂದಿರುವರು—"ಮೊನ್ನೆ ಹರ್ ಹಿಟ್ಲರರು ಬವೇರಿಯಾಕ್ಕೆ ಹೋಗಿ ಚಳಿಜ್ವರದಿಂದ ಗುಣಮುಖರಾಗುತ್ತಿದ್ದಾಗ ಮಂತ್ರಿಗಳ ಸಭೆಯೊಂದನ್ನು ಜರಗಿಸಿದರು. ಅಲ್ಲಿ ಈ ವಿಷಯವು ನಿರ್ಧರಿಸಲ್ಪಟ್ಟಿತು. ಇಂಗ್ಲಾಂಡು, ಫ್ರಾನ್ಸ್ ಮತ್ತಿತರ ರಾಷ್ಟ್ರಗಳು ತಮ್ಮ ಮೇಲಿನ ಜವಾಬ್ದಾರಿಕೆಯನ್ನು ತಾವಾಗಿ ಕಂಡ ಕೊಳ್ಳುವುದಿಲ್ಲ. ಅಲ್ಲದೆ ಜರ್ಮನಿಯ ಸಲಹೆಗಳನ್ನು ಸ್ವೀಕರಿಸುವುದಿಲ್ಲ. ರಷ್ಯದಲ್ಲಿ ಶಸ್ತ್ರಸಿದ್ಧತೆಯು ಭರದಿಂದ ಸಾಗುತ್ತಿದೆ. ಹೀಗಿರುವಾಗ ಜರ್ಮನಿಯು ಸುಮ್ಮನಿರುವುದು ಸಾಧ್ಯವಾಗಿಲ್ಲ." ಭೂಸೈನ್ಯ, ನಾವಿಕ ಸೈನ್ಯ, ವಿಮಾನ ಸೈನ್ಯ ಇವುಗಳಿಗೆಲ್ಲ ಹೊಸಬರನ್ನು ಸೇರಿಸಲಿರುವೆವೆಂದು ತಾ[illegible] ಹೇಳಿದರು.

ಈ ಘೋಷಣೆಯು [illegible] ದೊರೆತ [illegible] ಗಳ [illegible] ತಮ್ಮ ಸ್ಥಾನದಿಂದ [illegible] ಮಾಡಿ [illegible] ವಿಧೇಯವಾಗಿರುವೆವೆಂದ [illegible].

ಗೀಗಿ೧೮ರಲ್ಲಿ ನಡೆದ ಮಹಾಯುದ್ಧದಲ್ಲಿ ಜರ್ಮನಿಯು ಸೋತುಹೋಯಿತು. ವರ್ಸೇಲಿ ಎಂಬಲ್ಲಿ ಇಂಗ್ಲಾಂಡಿಗೂ ಮತ್ತು ಇನ್ನಿತರ ರಾಷ್ಟ್ರಗಳಿಗೂ ಒಂದು ಒಪ್ಪಂದವು ನಡೆಯಿತು. ಆ ಒಪ್ಪಂದಕ್ಕನುಸಾರವಾಗಿ ಜರ್ಮನಿಯು ತನ್ನ ಸೈನ್ಯವನ್ನು ನಿರ್ದಿಷ್ಟ ಸಂಖ್ಯೆಗಿಂತ ಹೆಚ್ಚಿಸಬಾರದು, ವಿಮಾನಬಲವನ್ನು ನಿರ್ದಿಷ್ಟ ಸಂಖ್ಯೆಯಲ್ಲೇ ಇಡಬೇಕು ಎಂಬಿವೇ ಮೊದಲಾದ ನಿಷ್ಕರ್ಷೆಯಾಗಿದ್ದಿತು. ಮುಖ್ಯವಾಗಿ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಬಾರದೆಂಬುದು ಈ ಶರ್ತಗಳಲ್ಲಿ ಪ್ರಾಮುಖ್ಯವಾದುದು. ಆ ಶರ್ತದ ಮೇರೆಗೆ ಇಂದಿನವರೆಗೂ ಜರ್ಮನಿಯು ನಡೆದುಕೊಳ್ಳುತ್ತಾ ಬಂತು. ಆದರೆ ಇಂಗ್ಲಾಂಡು, ಫ್ರಾನ್ಸ್, ರಷ್ಯ, ಜಪಾನ್ ಮೊದಲಾದ ರಾಷ್ಟ್ರಗಳವರು ಲೀಗ್ ಒಫ್ ನೇಶನ್ಸ್‌ನ ಸೂಚನೆಯನ್ನು ಮನ್ನಿಸದೆ ತಂತಮ್ಮ ದೇಶಗಳ ಸೈನ್ಯಬಲ, ವಿಮಾನಬಲ ಮತ್ತು ಶಸ್ತ್ರಬಲಗಳನ್ನು ಹೆಚ್ಚಿಸುತ್ತಾ ಬಂದರು. ಒಂದು ಕಡೆಯಿಂದ ಜನಾಂಗಸಭೆಯಲ್ಲಿ ಕುಳಿತು ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳು ಶಸ್ತ್ರತ್ಯಾಗ ಮಾಡೋಣವೆಂದು ಭಾಷಣಮಾಡುತ್ತಿದ್ದರು. ಒಂದು ಕಡೆಯಿಂದ ಅವರು ತಂತಮ್ಮ ದೇಶಗಳಲ್ಲಿ ಶಸ್ತ್ರಗಳನ್ನು ಹೆಚ್ಚಿಸುತ್ತಿದ್ದರು. ಜರ್ಮನಿಯು ಕೂಡಾ ಹೊರಗಿನ ದೇಶಗಳಿಗೆ ಹೆದರಿ ಸ್ವರಕ್ಷಣೆಗಾಗಿ ಶಸ್ತ್ರಗಳನ್ನು ತಯಾರಿಸುತ್ತಿದ್ದಿತು. ಆದರೆ ಅದರ ಸಿದ್ಧತೆಯು ಅಧಿಕೃತವಾಗಿಯೂ ಸಾರ್ವಜನಿಕ ತಿಳಿದುಬಂದಿರಲಿಲ್ಲ. ಇದೇ ತಾರೀಖು ೧೬ಕ್ಕೆ ಜರ್ಮನಿಯು ಒಂದು ಬಹಿರಂಗ ಪ್ರಕಟಣೆಯನ್ನು ಮಾಡಿ ತಾನು ಮುಂದಕ್ಕೆ ವರ್ಸೇಲಿ ಸಂಧಿಯನ್ನು ಧಿಕ್ಕರಿಸಿ ಮುಖ್ಯವಾದ ಸೈನ್ಯಬಲಗಳನ್ನು ಪುನರ್ರಚಿಸಿಕೊಳ್ಳುವೆನೆಂದೂ ೧೨ ಸೈನ್ಯಬಲಗಳಿರುವ ೩೬ ಡಿವಿಜನ್‌ಗಳನ್ನು ಮಾಡಿಕೊಳ್ಳುವೆನೆಂದೂ ಹೇಳಿದೆ.

ಮಿ| ಮೆಕ್ಡೋನಾಲ್ಡರು.

ಜರ್ಮನಿಯಲ್ಲೆಲ್ಲ ಮಹಾ ಕೋಲಾಹಲ, ರಾಷ್ಟ್ರಧ್ವಜಗಳು ದಶದಿಕ್ಕುಗಳು ಏರಿಸಲ್ಪಟ್ಟವು. ವಿಲಕ್ಷಣವಾದ ಪ್ರದರ್ಶನವು ಜರಗಿತು. ಮಹಾಯುದ್ಧದಲ್ಲಿ ಮೃತರಾದ ಯೋಧರ ಸ್ಮರಣೆಯನ್ನು ಮಾಡಿದರು. ಎಪ್ರಿಲ್ ೧ರಿಂದ ಹೊಸ ವ್ಯೂಹವನ್ನು ರಚಿಸಲಾಗುವುದು. ಜರ್ಮನಿಯ ನಿರ್ಧಾರವನ್ನು ಟರ್ಕಿಯ ಸರಕಾರವು ಅಭಿವಂದಿಸಿದೆ. ತಾನೂ ಸೈನ್ಯಬಲವನ್ನು ಹೆಚ್ಚಿಸುವೆನೆಂದು ಅದು ತಿಳಿಸಿದೆ.

ಹರ್ ಹಿಟ್ಲರರ ಈ ಪ್ರಕಟಣೆಯು ಇಂಗ್ಲಾಂಡಿನಲ್ಲಿ ಜನರ ಮಹದಾಶ್ಚರ್ಯಕ್ಕೆ ಕಾರಣವಾಗಿದೆ. ಲಂಡನಿನ ಸರಕಾರಿ ಅಧಿಕಾರಿಗಳೆಲ್ಲ ಈ ಅನಿರೀಕ್ಷಿತ ವಾರ್ತೆಯಿಂದಾಗಿ ಆಲೋಚನೆಗೀಡಾಗಿರುವರು. ಈ ಸುದ್ದಿಯು ತಲುಪಿದೊಡನೆ ರಾಮ್ಸೆ ಮೆಕ್ಡೋನಾಲ್ಡರು, ಸರ್ ಜೋರ್ಜ್ ಸೈಮನರು, ಮತ್ತು ಮಿ| ಬೋಲ್ಡ್‌ವಿನ್ನರೂ ಒಂದಾಗಿ ಮಾತುಕತೆ ನಡೆಸಿದರು.

ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರ್.

ಇಂಗ್ಲಾಂಡಿನ ಮಂತ್ರಿಗಳ ಸಭೆಯು ಬೇಗನೇ ಜರಗಲಿದೆ. ಯಾರೂ ಯಾವ ರೀತಿಯ ಟೀಕೆಯನ್ನೂ ಮಾಡುತ್ತಿಲ್ಲ. ವಿದೇಶೀಯ ಸಚಿವರಾದ ಸರ್ ಜೋನ್ ಸೈಮನರ ಅಭಿಪ್ರಾಯವೇನೆಂದು ಎಲ್ಲರೂ ನಿರೀಕ್ಷಿಸುತ್ತಿರುವರು. ಸೈಮನರೂ ಲೋರ್ಡ್ ಪ್ರಿವಿಸೀಲರಾದ ಮಿ| ಅಂತೋನಿ ಏಡನರೂ ಜರ್ಮನಿಗೆ ಬೇಗನೇ ಹೋಗಲಿದ್ದರು. ಅಷ್ಟರಲ್ಲಿ ಇಂತಹ ಪರಿಸ್ಥಿತಿಯು ಉಂಟಾಗಿರುವುದರಿಂದ ಯುರೋಪಿನ ರಾಜಕೀಯ ರಂಗದಲ್ಲಿ ಒಂದು ವಿಚಿತ್ರ ಸಂದಿಗ್ಧತೆಯೇ ತಲೆದೋರಿದಂತಾಗಿದೆ. ಇಂಗ್ಲಾಂಡಿನ ರಾಜಕೀಯ ಧುರೀಣರು ಇಟಲಿ, ಪರಿಸ್, ಫ್ರಾನ್ಸ್‌ಗಳೊಡನೆ ವಿಚಾರ ವಿನಿಮಯ ಮಾಡತೊಡಗಿರುವರು. ಫ್ರಾನ್ಸ್ ತನ್ನ ಇಂಗ್ಲಾಂಡಿನ ಎಂಬೆಸೆಡೊರರ ಮೂಲಕ ಜರ್ಮನಿಯ ಆಚಾರದ ಕುರಿತಾದ ತನ್ನ ಅಭಿಪ್ರಾಯವನ್ನು ಬ್ರಿಟಿಷ ಸರಕಾರಕ್ಕೆ ಕಳುಹಿಸಿ ಜರ್ಮನಿಯ ವರ್ತನೆಯನ್ನು ಕೂಡಲೇ ವಿಚಾರಿಸಿ ತಿಳಿಯಬೇಕೆಂದು ಸೂಚಿಸಿದೆ.

ಫ್ರಾನ್ಸಿನ ವಿದೇಶೀಯ ಸಚಿವರಾದ ಫ್ಲೆಂಡಿನರು ಚೇಂಬರ್ ಒಫ್ ಡಿಪ್ಯುಟೀಸ್‌ನಲ್ಲಿ ಭಾಷಣ ಮಾಡಿ ಫ್ರಾನ್ಸು ಶಸ್ತ್ರಗಳನ್ನು ಹೆಚ್ಚಿಸುತ್ತಿರುವುದು ಕಾರಣಯುಕ್ತ ವಿಷಯವೆಂದು ಹೇಳಿದುದರಿಂದಾಗಿಯೇ ತಾನೂ ಸೈನ್ಯವನ್ನು ಹೆಚ್ಚಿಸಲು ಏರ್ಪಾಡು ಮಾಡಿದೆನೆಂದು ಹರ್ ಹಿಟ್ಲರರು ಎಂಬೆಸೆಡೊರರಿಗೆ ಹೇಳಿರುವರು. ಹಿಟ್ಲರರ ಹೇಳಿಕೆ ಮೇರೆಗೆ ಅರ್ಧ ಮಿಲಿಯ ಸೈನಿಕರನ್ನು ಹೆಚ್ಚಿಸಲಿದ್ದಾರೆ. ಫ್ರಾನ್ಸಿನವರ ಸೈನ್ಯಬಲ ೪೦೦,೦೦೦ ಮಾತ್ರ.

ಲಂಡನಿನ ಮಂತ್ರಿಮಂಡಲವು ಅತ್ಯವಸರದಿಂದ ಸೇರಿತು. ಮೆಕ್ಡೊನಾಲ್ಡ್, ಬಾಲ್ಡ್‌ವಿನ್, ಸೈಮನ್ ಮೊದಲಾದವರು ೯೦ ನಿಮಿಷಗಳ ವರೆಗೆ ಮಾತುಕತೆ ನಡೆಸಿ ಮುಂದಿನ ಕಾರ್ಯಾಸಕ್ತರಾಗಿರುವರು. ಲೋರ್ಡ್ ಪ್ರಿವಿಸೀಲರಾದ ಮಿ| ಅಂತೋನಿ ಏಡನರು ಬರ್ಲಿನಿಗೂ ರಷ್ಯಕ್ಕೂ ಹೋಗಲಿರುವರೆಂಬುದು ನಿಶ್ಚಯಿಸಲಾಗಿದೆ.

ಫ್ರಾನ್ಸ್ ಸರಕಾರವು ಜರ್ಮನಿಯ ವರ್ತನೆಯನ್ನು ಕಂಡು ಅತ್ಯಾಶ್ಚರ್ಯಗೊಂಡಿದೆ. ವಾರ್ತೆಯು ನೆಟ್ಟಗೆ ಪ್ರಧಾನ ಮಂತ್ರಿಯವರಿಗೂ ಸಮರ ಮಂತ್ರಿಗೂ ಬಂದಿತು. ಫ್ರಾನ್ಸು ಲಂಡನ್ ಮತ್ತು ರೋಮ್‌ಗಳೊಡನೆ ವಿಚಾರಿಸಿದ ನಂತರವೇ ಒಂದು ನಿರ್ಧಾರಕ್ಕೆ ಬರಲಿರುವುದೆಂದು ತಿಳಿದುಬಂದಿದೆ.

ಲೀಗ್ ಒಫ್ ನೇಶನ್ಸ್ ಸಭೆಯು ಈ ವಿಚಾರದಲ್ಲಿ ಕೈಹಾಕಿ ಸ್ವಮನಸ್ಸಿನಿಂದ ಏನನ್ನೂ ಯಾವುದೂ ನಿರ್ಧರಿಸಲ್ಪಡುವಂತಿಲ್ಲ. ಯಾವ ಸರಕಾರವೂ ಹರ್ ಹಿಟ್ಲರರೊಡನೆ ಮಾತುಕತೆ ನಡೆಸಲು ಹಿಂಜರಿಯುವಂತಹ ಸನ್ನಿವೇಶವೇ ತಲೆಯೆತ್ತಿ ನಿಂತಿದೆ. ಜನಾಂಗ ಸಭೆಯು ಜರ್ಮನಿಯ ವರ್ತನೆಯನ್ನು ಸಕಲ ರಾಷ್ಟ್ರಗಳ ಒಪ್ಪಿಗೆಯ ನಂತರ ಖಂಡಿಸುವುದೋ, ಖಂಡಿಸಿದರೆ ಮುಂದೇನಾಗುವುದೋ ಎಂಬ ಭೀತಿಯಿದೆ. ಯುದ್ಧದ ಸಂಘಟನೆಯನ್ನು ಸಾಹಸಪಟ್ಟು ತಪ್ಪಿಸಿಕೊಳ್ಳಬಲ್ಲವರಾದರೂ, ಲೀಗ್ ಒಫ್ ನೇಶನ್ಸ್ ಜರ್ಮನಿಯ ವರ್ತನೆಯನ್ನು ಸಹಿಸುವುದೇ. ಅಸ್ವಾಭಾವಿಕವೆಂದೂ ಹಿಸಲ್ಪಟ್ಟಿದೆ ಕೆಲವು ಪತ್ರಿಕೆಗಳ ತಮ್ಮ ಅಗ್ರಲೇಖನಗಳನ್ನು ಬರೆದು ಜನಾಂಗ [illegible] ಕರಾರನ್ನು ಹರಿದು ಬಿಸುಡುವುದಾದರೆ ಮುಂದಕ್ಕೆ ಮಾನವ ಸಮಾಜದಲ್ಲಿ ಶಿಸ್ತು, ಸೂಕ್ತ ಕಾನೂನುಗಳೆಂಬುವು ಇರುವುದಾದರೂ ಹೇಗೆ? ಇಷ್ಟಿಷ್ಟು ದೊಡ್ಡ ರಾಷ್ಟ್ರಗಳು ಮಾಡಿದ ನಿರ್ಧಾರಕ್ಕೆ ಬೆಲೆಯಿಲ್ಲವೆಂದಾದರೆ ಇದು ಎಲ್ಲರಿಗೂ ಅವಮಾನಕರವಲ್ಲವೇ?" ಎಂದು ಹೇಳುತ್ತಿರುವುವು.

ಮಿ| ಬಾಲ್ಡ್‌ವಿನ್ನರು.

ಇಟಲಿಯಲ್ಲಿ ಸಿನಿಯರ್ ಮುಸೊಲಿನಿಯವರು ಮಾತ್ರ ಯಾವ ದಿಗಿಲನ್ನೂ ಸೂಚಿಸುವುದಿಲ್ಲ. ಜರ್ಮನಿಯು ಈ ರೀತಿ ಮಾಡುವುದೆಂದು ತಿಳಿದೇ ತಾನು ಜರ್ಮನಿಯನ್ನು ಲೀಗ್ ಒಫ್ ನೇಶನ್ಸ್‌ಗೆ ಸೇರಿಸಲು ಸಾಧಿಸಿದೆನು ಎಂದು ಅವರು ಹೇಳುತ್ತಾರೆ. ಅಲ್ಲದೆ ಜರ್ಮನಿಯು ಈ ರೀತಿ ಮಾಡುವುದೆಂದು ತಿಳಿದೇ ಇಟಲಿಯು ಕೂಡಾ [illegible] ಸೈನ್ಯವನ್ನು ಸನ್ನದ್ಧರನ್ನಾಗಿ ಮಾಡಲು ಸಮರ್ಥವಿರುವುದೆಂಬುದು ತಾನು ಇತ್ತೀಚೆಗೆ ಹೇಳಿದೆನೆಂದೂ ಅವರು ಹೇಳುತ್ತಾರೆ.

LOOK SHARP! LOOK AHEAD!

Murdeshwar's Banking Institute.

Pioneer Institute on the WestCoast

Opens out Careers for Business men, Graduates, Under-graduates, and S. S. L. C's and also for those who have not passed any University examination

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted

Enrol yourself NOW. Classes are in full swing. Expert tuition (Oral or Postal) by well qualified and experienced Lecturers

FEES VERY MODERATE

For further particulars apply to:

D. R. Murdeshwar,
Dip. Econ., F. R. Econ. S. (Lond.)
Principal
Ganapathy High School Street,
Mangalore.

ಬೇಕಾಗಿದ್ದಾರೆ.

ನಿರುದ್ಯೋಗಿಗಳಿಂದ, ಉತ್ಸಾಹಿ ತರುಣರು ನಮ್ಮ ಬ್ಲ್ಯಾಕ್ ಬೋರ್ಡ್ಸ್ ವಿಕ್ರಯಿಸುವುದಕ್ಕಾಗಿ ಬೇಕಾಗಿದ್ದಾರೆ ತಿಂಗಳಿಗೆ ರೂಪಾಯಿ 30/-ಸಂಪಾದಿಸಬಹುದು ಇಲ್ಲ, ಕಟಲಾಗು ಧರ್ಮಾರ್ಥ

ಇಂಗ್ಲಿಷಿನಲ್ಲಿ ಇಲ್ಲಿಗೆ ಬರೆಯಿರಿ —

National Trading Co
Jaunbagan, Calcutta,(c)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ
ದಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ
ಕ್ರೌನ್ 8 ಆಕಾರದ 188 ಪುಟಗಳು
ಉತ್ತಮ ತರಗತಿಯ ಹಾಸ್ಯ
ಬೆಲೆ ರೂ. 1—4—0.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

ಇಲ್ಲಿಂದ ಪಡೆಕೊಳ್ಳಬಹುದು

ಚಕ್ಷುಷ ಹರಿ.

"ಚಕ್ಷುಷ" ಎಂಬ ನೇತ್ರೌಷಧದಿಂದ ಹೊಸದಾಗಿ ಕಣ್ಣುಹರಿ, ದೃಷ್ಟಿಮಾಂದ್ಯ ಇತ್ಯಾದಿಯನ್ನು ತೀವ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣದಾಯಿ. ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2.

ಹೆಚ್ಚಿನ ವಿವರಕ್ಕೆ ಇಂಗ್ಲೀಷಿನಲ್ಲಿ —

Hary yasram, Panchpota, Bengal

Swadeshabhimani enjoys circulation in India and abroad.

APPLY FOR ADVERTISEMENT RATES.

ಮಂಗಳೂರಿನ ಪೇಟೆಧಾರಣೆ.

ಸಾಮಾಗ್ರಿಗಳು	ಇಂದ	ವರೆಗೆ
	ರೂ. ಅ.	ರೂ. ಅ.
ಹೊಸ ರಾಶಿ ಅಕ್ಕಿ	3—10	3—14
ಹೊಸ ಮುಸ್ಕಿ	3—14	4—6
ಹೊಸ ಗುಡ್ಡು	3—8	4—0
ಊರ ಅವ್ವಲ್ ಬೆಳ್ತಿಗೆ	4—0	4—12
ರಂಗೂನು ಬೆ. ಗೋ. ಗಳ್ಳಿ	6—0	6—6
ಎಲ್ಲಾರು ಬೆ. ಮು. ಗಳ್ಳಿ	4—2	4—4
ಗೋಧಿ ಗೋಣಿ ಗಳ್ಳಿ	10—0	12—8
ತೊಗರಿ ಗೋಣಿ ಗಳ್ಳಿ	9—6	10—0
ಹುರುಳಿ ಗೋಣಿ ಗಳ್ಳಿ	6—8	7—10
ಕಡಲೆ ಗೋಣಿ ಗಳ್ಳಿ	8—0	10—8
ತೊಗರಿಬೇಳೆ ಗೋಣಿ ಗಳ್ಳಿ	10—0	17—0
ಉದ್ದು ಗೋಣಿ ಗಳ್ಳಿ	8—0	8—8
ಹೆಸರು ಗೋಣಿ ಗಳ್ಳಿ	9—0	9—8
ಊರುಬೆಲ್ಲ ಖಂಡಿ ಗಳ್ಳಿ	32—8	35—0
ಉಪ್ಪು ಗೋಣಿ ಗಳ್ಳಿ	4—8	5—0
ಕೊಬ್ರಿ ಖಂಡಿ ಗಳ್ಳಿ	48—0	55—0
ಕೊಬ್ರಿ ಹಿಂಡಿ ಖಂಡಿ ಗಳ್ಳಿ	20—0	21—0
ಎಳ್ಳಿಂಡಿ ಖಂಡಿ ಗಳ್ಳಿ	37—8	40—0
ಕೊಬ್ರಿ ಎಣ್ಣೆ ಮುಡಿ ಗಳ್ಳಿ	3—7	4—6
ಎಳ್ಳೆಣ್ಣೆ ಮುಡಿ ಗಳ್ಳಿ	5—2	5—10
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳಿ	5—7	5—7
ದೇಶೀಯ ಸಕ್ಕರೆ ಮು. ಗಳ್ಳಿ	3—5	3—6
ಮೆಣಸು	4—4	6—4
ಸಾಸಿವೆ ಮುಡಿ ಗಳ್ಳಿ	5—12	6—0
ಕಾಳುಮೆಣಸು ಖ. ಗಳ್ಳಿ	120—0	122—8
ಯೇಲಕ್ಕಿ ಮಣ ಗಳ್ಳಿ	22—0	27—0
ಗೇರುಬೀಜ ಮು. ಗಳ್ಳಿ	3—10	8—12
ಕಚ್ಚಿಲ ಖಂಡಿ ಗಳ್ಳಿ	40—0	40—8
ತಾಂಬ್ರ ತಗಡು ಮು. ಗಳ್ಳಿ	9—0	9—1
ತಾಂಬ್ರ ಪಾತ್ರೆಗಳು ಮು. ಗಳ್ಳಿ	12—8	14—0
ಬೀಡಿಎಲೆ ಸೇರು ಗಳ್ಳಿ	14—12	15—0
ಹಿತ್ತಾಳೆ ತಗಡು ಮು. ಗಳ್ಳಿ	8—12	9—0
ಹವನು ಗಳ್ಳಿ	22—8	23—
ಹುಣಸೆ ಹುಳಿ ಖಂಡಿ ಗಳ್ಳಿ	25—0	27—8
ಸೇಟಿದ್ ಕಾಫಿ ಖಂಡಿ ಗಳ್ಳಿ	160—0	165—0
ಪ್ಲೇಟಿನ ಕಾಫಿ ಖಂಡಿ ಗಳ್ಳಿ	235—0	240—0
ಹಳೆ ಅಡಿಕೆ	100—0	110—0
ಹೊಸ ಅಡಿಕೆ	75—0	95—0

ಶಾಲಿವಾಹನ ಶಕ ೧೮೫೭ನೆಯ ಭಾವ ಸಂವತ್ಸರದ ಫಾಲ್ಗುಣ ಶು ೩ಶನಿವಾರದಿಂದ ಫಾಲ್ಗುಣ ೧೧ ಶು. ಶುಕ್ರವಾರದ ವರೆಗಿನ ಪಂಚಾಂಗ (ಗಣಿತಸಿದ್ಧಾಂತಸೂಕ್ತ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
23	ಶನಿ	೩	೩೦	ಸ್ವಾತಿ	೪೩	೯	
24	ರವಿ	೪	೩೦	ವಿಶಾಖಾ	೪೮	೧೦	
25	ಸೋಮ	೫	೩೦	ಅನುರಾಧಾ	೪೫	೧೧	
26	ಕುಜ	೬	೧೬	ಜ್ಯೇಷ್ಠಾ	೪೪	೧೨	
27	ಬುಧ		೧೪	ಮೂಲಾ	೪೨	೧೩	
28	ಗುರು	೮	೧೦	ಪೂ. ಷಾ.	೩೯	೧೪	
29	ಶುಕ್ರ	೯	೫	ಉ. ಷಾ.	೩೫	೧೫	

Standard Furniture Co. Ltd
KALLAI, MALABAR
The BEST HOUSE for FURNITURE.

BRANCHES:—
Madras —34—35, General Patters Road, Mount Road
Trichinopoly —11, Promenade Road, Cantt

NEW ARRIVALS.

Medicines.

Dr. Schuessler's Twelve Tissue Remedies 5 gr bot. As 4/-
Homoeopathy Medicines ½ gr bot As 5/—
Sugar of Milk Dr Schwabe's original bot 1 lb Rs 2/-
Haarlem Oil—a world renowned remedy As 8/-per phial
Dr Haele's New Curative Earth—Radium Cure Rs 4/-per lb
Dr Schwabe's other special remedies are always in stock
Please consult us for your requirements.
Kanarese Book a Family Guide to Biochemistry Re 1/-
" Domestic Homoeopathy Rs 1-4/-
If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6
Delightful in aroma charming in appearance Please try

Kirloskar Pumps.

We are the Representatives for Kirloskar Brothers for their reliable Shallow well and Deep-well Pumps, Spring Cots, Spring Couches etc. and stock—
Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you

Olympia Typwriter.

An up to date Machine in Standard and portable sizes
For Further particulars please write to —

Basel Mission Book & Tract Depository,
Mangalore, S. K. or Hubli, S. M.

ರೇಷ್ಮೆಯಂತೆ, ಮಿದುವಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ
(ಮನಮೋಹಕರವಾದ ಸುಗಂಧವನ್ನುಳ್ಳದು)
ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.
ತಯಾರಿಸುವವರು. — ಬೆಲೆ ಸೀಸೆ ಒಂದಕ್ಕೆ ರೂ.0—12—0.
ಆರ್ ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.
ಏಜಂಟರು —
ಕುಂತಳ ಕೌಮುದಿ ತೈಲ,
ಜೆನರಲ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲುಪಿದೊಡನೆ— ಅಗತ್ಯವಾಗಿ ತಿಳಿಸಬೇಕು.

ದೊಡ್ಡ ಚಿಕ್ಕವರು—ಚಿಕ್ಕ ದೊಡ್ಡವರು

ಈ ಹೆಸರಿನ ಕೆಳಗೆ ಇನ್ನೊಂದು ಲೇಖನಮಾಲೆಯನ್ನು ಸ್ವದೇಶಾಭಿಮಾನಿಯ ಸಲುವಾಗಿ ಶ್ರೀ ಕಾರಂತರು ಬರೆಯುವರು. ಈ ಲೇಖನಗಳಲ್ಲಿ, ನಿಜವಾದ ವ್ಯಕ್ತಿಗಳೇ ಆದರೆ ವ್ಯಕ್ತಿಗಳ ಹೆಸರನ್ನು ಬಯಲಿಗೆ ತರದೆ, ದೊಡ್ಡವರ ಚಿಕ್ಕತನವನ್ನೂ ಚಿಕ್ಕವರ ದೊಡ್ಡತನವನ್ನೂ ತೋರಿಸಿ—ಜನಸಾಮಾನ್ಯರಲ್ಲಿಯೂ ಕಾಣಬರುವುದರ ಎಷ್ಟು ಸಣಸೊಗಸು ಕುಂದುಕೊರತೆಗಳನ್ನು ತೋರಿಸುವ ಬರೆಹಗಳಿವು. ಲೇಖನಗಳು ಸಹಜಸಿದ್ಧವಾದ ಹಾಸ್ಯಲಹರಿಯಲ್ಲಿ ಹರಿದರೂ, ಚಿತ್ರಗಳು ತೀರ ಸತ್ಯವಾಗಿ ಹೊಳೆಯುವಂಥವು. ಈ ಪತ್ರಿಕೆಯ ಸಾಹಿತ್ಯ ಸಂಚಿಕೆಯಲ್ಲಿ ಬರುತ್ತಿದ್ದ "ಪ್ರಸಿದ್ಧ ಪುರುಷರ"—ಲೇಖನಮಾಲೆಯ ವಿಚಾರವಾಗಿ ಒಬ್ಬರು ಓದುಗರು ತಮ್ಮ ಮನಸ್ಸನ್ನು ಪ್ರಕಟಿಸಿದರು. ಆ ಲೇಖನವನ್ನು ಇಲ್ಲಿ ಮುಗಿಸುವ ಉದ್ದೇಶವಿಲ್ಲವಾದರೂ ವೈವಿಧ್ಯದ ಸಲುವಾಗಿ ತತ್ಕಾಲಕ್ಕೆ ನಿಲ್ಲಿಸಿರುವೆವಷ್ಟೆ. ಮುಂದೊಮ್ಮೆ ಅದೇ ನೆರಿಗನ್ನು ಹಿಡಿದು ಲೇಖನಗಳನ್ನು ಪ್ರಕಟಿಸುವೆವು.

ಈಗಿನ ಲೇಖನಮಾಲೆಯಲ್ಲಿ ಬರುವ ಕೆಲವು ವ್ಯಕ್ತಿಗಳು —೧. ನಮ್ಮ ಶಂಭು, ೨ ಮೂನಪ್ಪ, ೩ ಒಟ್ಟು ಸಾಟಿ ಶಾಸ್ತ್ರಿಗಳು, ೪. ಉದ್ಧಾರದ ಉತ್ತಮಸಾಯರು, ೫. ಪೀಕದಾನಿ ರಾಮಯ್ಯನವರು, ೬. ಸುಧಾರಣೆಗೆ ಶಿವಪ್ಪನವರು, ೭. ವಿಲಾವರಿ ವಾಸುದೇವಯ್ಯ, ೮ ಪ್ರದರ್ಶನದ ಶಾವಪ್ಪನವರು, ೯ ದೇಶಭಕ್ತ-ದಾಸಪ್ಪನವರು, ೧೦. ಮುಂದರಿಸುವ ಮೂವಯ್ಯ, ೧೧. ಕ್ರಾಂತಿಕಾರ ಕೃಷ್ಣಯ್ಯ, ೧೨. ಕಾಫಿ ಕಾಳಪ್ಪನವರು, ೧೩. ಬೇಟೆ ಬಂಡ್ಯಪ್ಪನವರು, ೧೪ ಪೂಜಾರಿ ಪರಮೇಶ್ವರಯ್ಯ, ೧೫. ಗೌರವದ ಗುಡಾಣ

ತೆರೆಯಮರೆಯಲ್ಲಿ

ಅಥವಾ

ಅಂತರಂಗ.

ಲೇಖಕರು — ಶ್ರೀ ಶಿವರಾಮ ಕಾರಂತರು

೧೦ ಅಂತರಂಗ

ವಿಶ್ವವೆಲ್ಲಾ ನರ್ತಿಸುತ್ತಿದೆ, ನಲವಿನಿಂದ ನಲಿಯುತ್ತಿದೆ ತಂತಮ್ಮಲ್ಲಿ ಒಲವಿನಿಂದ ಕೂಡಿ ಆಡುತ್ತಿದೆ. ಎಲ್ಲಿ ನೋಡಿದರಲ್ಲಿ ಚೆಲುವುಂಟು. ಸೃಷ್ಟಿಯು ಅಂತರಂಗ ಬಹಿರಂಗಗಳಲ್ಲಿ ಚೆಲುವಿನಿಂದ ಸೊಬಗಿ ಹರಿಯುತ್ತದೆ. ದೇವಾನದೇವತೆಗಳು ಸಹ ವಿಶ್ವದ ತಾರೆಗಳನ್ನೋ ಇಳೆಯ ಸೃಷ್ಟಿವರ್ಗವನ್ನೋ ಕಂಡು ಮುಗ್ಧರಾಗಿ—ಮಹಾ ಶಿಲ್ಪಿ ವಿಶ್ವಕರ್ಮನ ಮುಂದೆ ಕರಜೋಡಿಸಿ ಸ್ತುತಿ ಹೇಳುವ ಹಾ ಶಿಲ್ಪಿ ನಿನ್ನ ಕೆಲಸವೆಂದರೆ ಪರಿಪೂರ್ಣವಾದುದು. ನೀನು ಮಾಡಿದ ಸೃಷ್ಟಿಲೀಲೆಯು ಅನುಪಮಲೀಲೆಯು. ನಿನ್ನ ಕರಕೌಶಲವು ಅತ್ಯದ್ಭುತವಾದುದು. ನಿನ್ನ ಲೀಲೆಯ ಸ್ವಾರಸ್ಯವು ಅವರ್ಣನೀಯವಾದುದು'' ಎಂದು ಹೇಳುತ್ತಲಿದ್ದರು. ವಿಶ್ವಕರ್ಮನು ತನ್ನ ಲೀಲೆಯು ಅಂತಹುದೇ ಎಂದು ಅರಿತಿದ್ದನು. ಅವನ ಕೃತಿಗಳಲ್ಲಿ ಪ್ರೇಮ, ಸೊಗಸು, ಸೌರಸ್ಯಗಳೇ ತುಂಬಿ ತುಳುಕುತ್ತಿದ್ದುವೆಂದು ಅವನಿಗೂ ತಿಳಿದಿದೆ. ಇದರಿಂದ ಚೇಷ್ಟೆಗೋ ಹೆಮ್ಮೆಗೋ "ಪ್ರಿಯ ದೇವತೆಗಳಿರಾ, ನೀವೆಲ್ಲರೂ ಒಂದೇ ತೆರನಾಗಿ ಹೇಳುತ್ತಿರುವಿರಿ. ಆದರೆ ನನ್ನ ಸೃಷ್ಟಿಯನ್ನು ಸಂದರ್ಶಿಸ ಹೋದವರಲ್ಲಿ ಯಾರಾದರೂ ವೈರ, ವಿಕಾರ, ಸ್ವರಭಂಗಗಳು ಕಾಣಿಸಲಿಲ್ಲವೇ'' ಎಂದನು. ಕಾಣಿಸಿತೆಂದು ನುಡಿಯಲು ಯಾರೂ ಸಮರ್ಥರು. ಎಲ್ಲರೂ "ಇಲ್ಲ ದೇವ ಶಿಲ್ಪಿ—ಸೌರಸ್ಯವನ್ನು ಭಂಗಗೊಳಿಸುವ ಒಂದೇ ಒಂದು ಸ್ವರವೂ ನಿನ್ನ ಸೃಷ್ಟಿಯ ಗಾನತರಂಗದಲ್ಲಿಲ್ಲ'' ಎಂದರು. ವಿಶ್ವಕರ್ಮನು ತನ್ನ ಕೃತಿಯ ಪ್ರಶಂಸೆಯಿಂದ ತಾನೇ ಪುಲಕಿತನಾಗುವುದರಲ್ಲಿದ್ದನು. ಅಷ್ಟರಲ್ಲಿ—ರಸಸೌರಸ್ಯಗಳಲ್ಲಿ ಪ್ರವೀಣನಾದ ದೇವ ಮುನಿಯು 'ಮಹಾಶಿಲ್ಪಿಯೇ', ಸಿಟ್ಟಾಗಬೇಡ—ನನ್ನ ಸೂಕ್ಷ್ಮ ಕಿವಿಗೆ ನಿನ್ನ ಸೃಷ್ಟಿರಾಷ್ಟ್ರದ ಒಂದೆಡೆಯಿಂದ ಅಪಸ್ವರವು ಕೇಳಿಸುತ್ತಿದೆ ಎಂದನು. ಶಿಲ್ಪಿಯು ತಿರುಗಿ ಹಸನ್ಮುಖಿಯಾಗಿ 'ನಾರದಾ, ನಿಜವೇ? ಹಾಗಿದ್ದರೆ—ಎಲ್ಲಿಂದ ಆ ಅಪಸ್ವರವು ಹೊರಟಿತೆಂದು ಹೇಳಬಲ್ಲೆಯಾ?'' ಎಂದನು. ನಾರದನು 'ಹೇಳಿದರೆ ನೀನು ಸಿಟ್ಟಾಗಲಾರೆಯಷ್ಟೇ?' ಎಂದನು. ಸಿಟ್ಟಾಗುವುದಿಲ್ಲವೆಂಬ ಭರವಸೆಯು ದೊರೆಯಲು—ನಾರದನು ಹೇಳಿದನು—"ಮಹಾಶಿಲ್ಪಿಯೇ ನೀನು ರಚಿಸಿದ ಮಾನವ ದಂಪತಿಗಳಿಂದ ನಾನು ಅಪಶ್ರುತಿಯನ್ನು ಕೇಳಿದೆನು'' ಎಂದನು. ವಿಶ್ವಕರ್ಮನಿಗೆ ನಿಜಕ್ಕೂ ಸಿಟ್ಟು ಬಂದಿತು—'ನಾರದಾ, ನೀನು ವಿಶ್ವದಲ್ಲಿ ಎಂದಿದ್ದರೆ ನನಗೆ ಬೇಸರವಿಲ್ಲವಿತ್ತು. ನಾನು ನನ್ನ ಕಲೆಯನ್ನು ಯಾರಲ್ಲಿ ಪೂರ್ಣಗೊಳಿಸಿ ಯಾರನ್ನು ನನ್ನಂತೆಯೇ ಸೃಷ್ಟಿಕರ್ತರನ್ನಾಗಲು ಮಾಡಿಟ್ಟೆನೋ ಅವರಲ್ಲಿ ಅಪಸ್ವರವೇ! ತೀರ ಸುಳ್ಳು' ಎಂದನು. ಅವನ ಮನವು ತಡೆಯಲಿಲ್ಲ. 'ನಾರದಾ ನನ್ನ ಕೃತಿಯ ಕೌಶಲ್ಯವನ್ನು ಅರಿತಿದ್ದರೆ ನೀನು ಹೀಗೆ ಆಡುತ್ತಿರಲಿಲ್ಲ. ನಾನು ಈ ಮಾನವ ಕುಟುಂಬದ ಪ್ರಾಣಿಯು ಸೃಷ್ಟಿಯಲ್ಲಿನ ಆದರ್ಶ ಜೀವಿಯಾಗಲೆಂದು ಮಾಡಿದೆನು. ನಾರದಾ ಇತರ ನನ್ನ ಕೃತಿಗಳೆಷ್ಟರಲ್ಲೊ ಗಂಡು ಹೆಣ್ಣೆಂದು ಮಾಡಿರುವೆನು. ಅಂತೆಯೇ ಇವರಲ್ಲಿಯೂ ಮಾಡಿರುವೆನು. ಆದರೆ ನಾರದಾ, ಈ ಜೀವಿಗಳ ಶರೀರವು ಭಿನ್ನವಾಗಿದ್ದರೂ ಅವರಲ್ಲಿನ ಬುದ್ಧಿಗಳು, ಆತ್ಮಗಳು ಒಂದಾಗುವಂತೆ ಅವರಲ್ಲಿ ಚೇತನವನ್ನು ಕೊಟ್ಟಿರುವೆನು. ಅವರು ಸೃಷ್ಟಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯದಿಂದ ವರ್ತಿಸಬಲ್ಲರು ನಿಜ. ಆದರೆ ಅವರಿಗೆ ಉಭಯತರ ಗೆಳೆತನವು ಅವಶ್ಯವೆಂದು ಮಾಡಿ, ಅವರು ವಿಶ್ವ ಪ್ರಾಣಿಗಳು ಹೊಂದದ ಆತ್ಮೈಕ್ಯವನ್ನು ಹೊಂದುವಂತೆ ಮಾಡಿರುವೆನು' ಅಂಥ ವಿಚಿತ್ರ ಕೃತಿಯಲ್ಲಿ ಅಪಸ್ವರವೆಂದರೆ ತೀರ ಸುಳ್ಳು. ಯಮ ಧರ್ಮ—ನಿನಗೆ ಸೃಷ್ಟಿಯ ವಿಚಾರವು ತಿಳಿದಿದೆ''—ಎಂದು ಯಮರಾಯನ ಕಡೆಗೆ ನೋಡಿ ಮಾಡಿದನು. ಯಮರಾಯನು ನಯವಿನಯದಿಂದ "ದೇವಾ ಮಾನವ ದಂಪತಿಗಳು ಶರೀರ ತ್ಯಾಗದ ಕಾಲದಲ್ಲಿಯೂ ಸಹ ಒಂದಾಗುವರು. ಅವರು ಸಹಗಮನವನ್ನಾಚರಿಸುತ್ತಿರುವರು'' ಎಂದನು. ನಾರದನು ನಿಜ ಯಮರಾಯಾ, ಸಹಗಮನವು ಅವರಲ್ಲಿದೆ. ಆದರೆ ಅವರಲ್ಲಿ ಸ್ತ್ರೀಯು ಮೊದಲಾಗಿ ಮಡಿದರೆ ಪುರುಷನು ಸಹಗಮನ ಮಾಡುತ್ತಾನೆಯೋ'' ಎಂದು ಕೇಳಲು ಯಮನ ಉಸಿರು ಕಟ್ಟಿತು. ವಿಶ್ವಕರ್ಮನು ಯೋಚನಾಪರನಾದನು. ಅವನ ಯೋಚನೆಯಂತೆ ಮಾನವೀ ದಂಪತಿಗಳಲ್ಲಿನ ಗಂಡು ಹೆಣ್ಣುಗಳಲ್ಲಿ ಯಾರೇ ಮಡಿಯಲಿ ಇನ್ನೊಬ್ಬರು ಉಳಿಯಲಾರರ ಎಂಬಂತೆ ಉದ್ದೇಶಿಸಿದ್ದನು. ಆದರೆ ಯಮರಾಯನು ಸರಿಯಾಗಿ ಉತ್ತರಿಸದಿದ್ದುದನ್ನು ಕಂಡು ತಾನೇ ನೋಡಿಕೊಂಡು ಬರುವೆನೆಂದು ಹೊರಟನು. ದೇವತೆಗಳು ತಮ್ಮಲ್ಲೇ ಪಿಸುಮಾತಿಗೆ ಹೊರಟರು. ನಾರದನು ಎಲ್ಲರ ತಂಟೆಗೆ ಹೋಗುತ್ತಿರುವೆನೆಂದು ಈಗ ವಿಶ್ವದ ನಿರ್ಮಾಣಕನಾದ ವಿಶ್ವಕರ್ಮನ ಸೃಷ್ಟಿಯನ್ನು ಟೀಕಿಸಿದುದು ತಪ್ಪಾಯಿತೆಂದು ನುಡಿದರು. ಆದರೆ ನಾರದನು ಅಂತರಂಗದಲ್ಲಿ ನಗುತ್ತಿದ್ದನು.

ವಿಶ್ವಕರ್ಮನು ಭೂಮಿ ಗವತರಿಸಿದನು. ಗಾಳಿಯ ರೂಪದಿಂದ ಸಂಚರಿಸತೊಡಗಿದನು. ಮಾನವರಿರುವ ಎಲ್ಲೆಡೆಗಳನ್ನು ಶೋಧಿಸತೊಡಗಿದನು. ಅವನಿಗಾಶ್ಚರ್ಯವಾಯಿತು. ನಾರದನೆಂದಂತೆ ತನ್ನ ಸೃಷ್ಟಿ ಗಾನದಲ್ಲಿ ಅಪಶ್ರುತಿಯು ಹೊರಟಂತೆ ಕೇಳಿಸಿತು. ಎಲ್ಲಿ ನೋಡಿದರೂ ಅಲ್ಲಿ ಇದೆ ವಾದ. ಸಿಟ್ಟಾದನು—ಅವನು ನಿಯೋಜಿಸಿದಂತೆ ಅವನ ಮೂಲ ನಿರ್ಮಾಣದ ಸ್ತ್ರೀ ಪುರುಷರು ತಮ್ಮ ಕಾರ್ಯವನ್ನು ಪೂರೈಸಿ ಸ್ವರ್ಗಕ್ಕೆ ಮರಳಬೇಕಿತ್ತು. ಆದರೆ ವಿಶ್ವಕರ್ಮನು ತನ್ನ ದಿವ್ಯ ದೃಷ್ಟಿಯನ್ನು ಸ್ವರ್ಗಕ್ಕೆ ಹರಿಸಿದರೆ ಅಲ್ಲಿ ಅವರೇ ಇಲ್ಲವಾಯಿತ. ಇನ್ನೇನು ಮಾಡಲಿ ಈ ಅಪಶ್ರುತಿಯ ರಹಸ್ಯವೇನು? ಎಲ್ಲಿಂದ ಹೊರಡುತ್ತಿದೆ—ಎಂದು ಹುಡುಕುವುದರ ಸಲುವಾಗಿ—ಆ ಮಾನವ ದಂಪತಿಗಳ ಹಿರಿಯರನ್ನು ಹುಡುಕಹೋದನು. ಅವರ ನೆಲೆಯನ್ನು ಅರಿಯಲು ಎಲ್ಲಾ ಶೋಧಿಸಿದನು. ಅವರಿರುವಲ್ಲಿಗೆ ಹೋಗಿ ತನ್ನ ಆಗಮನವನ್ನು ತಿಳಿಸಿದನು. ಆದಿ ಪುರುಷನ ಅವನ ಮುಂದೆ ಬಂದು ನಮಿಸಿ—'ದೇವಾ ನಿಮ್ಮ ಅಪೂರ್ವದ ಆಗಮನ ನಿನ್ನ ದಯೆಯಿಂದ, ನಿನ್ನ ಪ್ರತಿಬಿಂಬವೆಂಬ ಮಾನವ ಜೀವಿಗಳು—ಇಂದು ಇಳೆಯಲ್ಲಿ ನಾಯಕರಾಗಿ ಮೆರೆಯುತ್ತಿರುವರು'' ಎಂದನು. ವಿಶ್ವಕರ್ಮನು "ಆದಿ ಪುರುಷ ನಿಮ್ಮೊಳು ಇಳೆಗೆ ನಾಯಕರಾಗಿರುವವರು ತಮಗೆ ತಾವೇ ಆಳಾಗುತ್ತಿರುವರೇ!' ಎಂದನು. ಅದರ ಮರ್ಮವು ಆದಿ ಪುರುಷನಿಗೆ ಹೊಳೆಯಿತು. ಅವನು ಕರ ಜೋಡಿಸಿ 'ದೇವಾ ನಿನ್ನಿಂದ ಶಕ್ತಿಯನ್ನು ನಾವು ಭಾವೀ ಸೃಷ್ಟಿಯನ್ನು ಉಪಕ್ರಮಿಸುವ ಮೊದಲು ವಿವಾಹಿತರಾಗಿದ್ದ. ಸತಿಪತಿಯರಾದ ನಾವು ನಿರಸನರೆಂದು ನಮ್ಮ ಯಾವತ್ತು ಕ್ರಿಯೆಗಳಲ್ಲಿ ವರ್ತಿಸುತ್ತಿರುವೆವು'' ಎಂದನು. ಈ ಉತ್ತರವು ವಿಶ್ವಕರ್ಮನಿಗೆ ತೃಪ್ತಿಯನ್ನು ಕೊಡಲಿಲ್ಲ. ಅವನು ಆದಿ ಪ್ರಕೃತಿಯನ್ನು ಕರೆದು "ಮಗಳೇ ನೀನು ನಿನ್ನ ಪತಿಯ ನುಡಿಯು ನುಡಿದುದು ನಿಜವೇ? ನಿನ್ನನ್ನು ಅವನು ಚೆನ್ನಾಗಿ ಕಾಣುತ್ತಿರುವನೇ?' ಎಂದನು. ಆದಿ ಪ್ರಕೃತಿಯು ತಲ್ಲಣಿಸುತ್ತ "ನಿಜ, ಸೃಷ್ಟಿಕರ್ತೃವೆ" ಎಂದಳು. ಅವಳ ತಲ್ಲಣವನ್ನು ಕಂಡ ವಿಶ್ವಕರ್ಮನಿಗೆ ಸಂಶಯವಾಯಿತು. ಅವನು ಆಗ "ಬರುತ್ತೇನೆ ಮಗಳೇ'' ಎಂದು ಕಣ್ಮರೆಯಾದನು. ಆದರೆ ಅಲ್ಲಿಗೆ ತಿರುಗೊಮ್ಮೆ ಬಂದನು. ಬರುವಾಗ ಅದೃಶ್ಯ ಶರೀರಿಯಾಗಿ ಬಂದನು. ಬರುವಾಗ ನೋಡುವನೇನನ್ನು—'ಆದಿ ಪುರುಷನು ವಿಲಾಸದಿಂದ ಕುಳಿತು ಹಣ್ಣು ಹಂಪಲುಗಳನ್ನು ಸೇವಿಸುತ್ತಿರುವನು. ಅವನ ಕಾಲುಬುಡದಲ್ಲಿ ಆದಿನಾರಿಯು ಕುಳಿತು ತಿಕ್ಕುತ್ತಿರುವಳು.'—ವಿಶ್ವಕರ್ಮನಿಗೆ ಅತ್ಯಂತ ಕೋಪವು ಬಂದಿತು. ಆದರೆ ಅದನ್ನು ತೋರಿಸಿಕೊಳ್ಳಬಾರದೆಂದು ಸುಮ್ಮನಿದ್ದನು.

ಒಂದೆರಡು ತಾಸುಗಳಲ್ಲಿ, ಆದಿ ಪುರುಷನು ತನ್ನ ಮಡದಿಯನ್ನು ಬಿಟ್ಟು ಅದೆಲ್ಲಿಗೋ ವಿಹಾರಕ್ಕೆ ಹೊರಟನು. ಅವನಿಲ್ಲದ ಈ ಗಳಿಗೆಯಲ್ಲಿ ತಿರುಗಿ ವಿಶ್ವಕರ್ಮನು ಆ ಮನೆಯಲ್ಲಿ ಕಾಣಿಸಿಕೊಂಡನು. ಆಗ ಆದಿ ಪ್ರಕೃತಿಗೆ ಆಶ್ಚರ್ಯವಾಯಿತು—"ತಂದೆಯೇ ಇದೇನು ತಿರುಗಿ ಬಂದೆ?'' ಎಂದು ಕೇಳಿದಳು. ಆಗ ಅವನು ಕರುಣೆಯಿಂದ 'ಮಗಳೇ, ನೀನಾಗ ಸುಳ್ಳಾಡಿದೆ. ಆದುದಾಗಲೀ ನೀನು ತಲ್ಲಣಿಸುತ್ತಿದ್ದೆ. ಸತ್ಯವನ್ನು ಹೇಳು. ನೀನು ಸುಖಿಯಾಗಿರುವೆಯಾ? ನಿನ್ನ ಅಂತರಂಗವನ್ನು ತಿಳಿಯುವುದಕ್ಕಾಗಿಯೇ ನಾನಿಲ್ಲಿಯ ತನಕ ಬಂದಿರುವೆನು' ಎಂದನು. ಆದಿ ಪ್ರಕೃತಿಗೆ ಭೀತಿಯಾಯಿತು. 'ಅಪ್ಪಾ—ನಾನಾಡಿದುದು ಸುಳ್ಳು ನಿಜ. ಆದರೆ ಬೇರೇನು ಹೇಳಲಾರೆ. ಅವರು ಈಗಲೇ ಬರಬಹುದು.

ಅವರೆಂದು ಯಾರನ್ನು ಕರೆಯುವೆ ಮಗಳೇ?

"ನನ್ನ ಪತಿದೇವರನ್ನು'

ಅದೇನು?''

ನಾನು ಅವರನ್ನು ಕರೆಯುವುದೇ ಹಾಗೆ''

ಅವನೇನೆನ್ನುತ್ತಿರುವನು? ನಿನ್ನನ್ನು ಹೇಗೆ ಕರೆಯುವನು?

ನೀನು—ಎಂದು'

'ಮಗೂ ನೀವಿಬ್ಬರೂ ವಿವಾಹದಿಂದ ಸರಿಸಮರೆಂದಾದರೆ ನೀನು 'ನೀವು'—ಎಂಬ ಆ ತೆರವು ಎಲ್ಲಿ?' ಮಗಳೇ! ಅವನು ಈಗಲೇ ಬಾರದಂತೆ ನನ್ನ ಶಕ್ತಿಯಿಂದ ಅವನನ್ನು ತುಸ ನಿಮ್ಮಿಂದ ದೂರವಿರಿಸುವೆನು. ಅಷ್ಟರಲ್ಲಿ ನಿನ್ನ ಅಂತರಂಗವನ್ನು ಹೇಳಲೇಬೇಕು.' ವಿಶ್ವಕರ್ಮನ ಒಲವು ಅಧಿಕವಾಯಿತು. ಆದಿ ದೇವಿಯು ಮಗಳಂತೆ ತನ್ನ ಇತಿಹಾಸವನ್ನು ತಿಳಿಸಿದಳು —

'ತಂದೆಯೇ ನಿನ್ನ ಮನೆಯಿಂದ ನಾವು ಹೊರಟು ಬರುವಾಗ ನಾವಿಬ್ಬರೂ ... ಆನಂದದಿಂದ ಬದುಕಿದ್ದೆವು. ಇಲ್ಲಿ ... ಅವಸ್ವರವಿಲ್ಲದಂತೆ ಹಾಡಿದೆವು. ... ಬಿಂಬಗಳನ್ನು ... ನಾವು ಕಾಣಿದೆವು. ... ಗರ್ಭಿಣಿಯಾಗಿ ... ಉಳಿದುಕೊಂಡೆ. ... ವ್ಯವಹಾರವು ನನ್ನ ಪತಿದೇವರದ್ದಾಯಿತು. ... ಅವನ ಸಹಾಯವು ನನಗೆ ಬೇಕಾಯಿತು. ನಾವು ಅವಳ ... ಪಡೆದೆವು. ಸೃಷ್ಟಿಯ ಪ್ರಥಮ ಪ್ರತಿಬಿಂಬಗಳನ್ನು ಜಗತ್ತಿಗೆ ... ದೆವು. ಆದರೆ ಅಂದಿನಿಂದ ನನ್ನ ಪತಿಯೇ ನನ್ನ ಮೇಲೆ ಅಧಿಕಾರ ನಿರ್ವಾಹಕ್ಕೆ ತೊಡಗಿದನು. ಅಷ್ಟು ದಿನ ಅವನ ಸೇವೆಯನ್ನು ಕೋರಿದ ನಾನು ಈಗ ಅವನ ಅಧಿಕಾರವನ್ನು ನಿರ್ವಹಿಸದಾದೆ. ಅಂದಿನಿಂದ ... ಅವನು ... ನಾದನು. ನಾನು ದಾಸಿಯಾದೆ. ... ಅವನ ... ಗಿಂತ ಶ್ರೇಷ್ಠನೆ ದನು. ನಾನೂ ... ಯನ್ನು ಕೇಳಿ ವಿಶ್ವಕರ್ಮನಿಗೆ ಅಳು ... ತನ್ನ ಉದ್ದೇಶವು ಹೀಗೆ ವಿಪರ್ಯಾಸವಾಗಿತ್ತೆಂದು ಅವನು ತಿಳಿಯಲಿಲ್ಲ.

ಅಷ್ಟರಲ್ಲಿ ಆದಿಪ್ರಕೃತಿಯು "ಅಪ್ಪಾ ಈಗ ನಾನು ಅವನಂದಂತೆ ಕುಣಿಯಬೇಕಾದ ದಾಸಿಯಾಗಿರುವೆನು. ತೋರಿಕೆಗೆ ನಾನು ಸ್ವತಂತ್ರಳು. ಅವನ ಅರ್ಧಾಂಗಿ. ಆದರೆ ನಿಜವನ್ನು ಎಣಿಸಿದರೆ ನಾನು ... ಅವನು ಸರ್ವಸ್ವವು? ಏನು ಮಾಡಲಿ'''

ವಿಶ್ವಕರ್ಮನು ತಿರುಗಿ ಯೋಚಿಸತೊಡಗಿ ಹೀಗೆಂದನು—"ಮಗಳೇ, ನಿನಗೆ ತಿರುಗಿ ನಿನ್ನ ಸ್ವಾತಂತ್ರ್ಯವು ಬೇಡವೇ? ನಿನ್ನ ತಪ್ಪನ್ನು ತಿದ್ದಿ ತಿರುಗಿ ನೀನು ಸುಖದಿಂದಿರಬೇಡವೇ?''

ಸ್ವಾತಂತ್ರ್ಯ ಬೇಡವೆಂದರೇನು ತಂದೆ! ಆದರೆ ಅದನ್ನು ಗಳಿಸಲು ನನ್ನಿಂದ ಶಕ್ಯವೇ ಅಲ್ಲವೇ ಎಂದು ನಾನರಿಯೆ''

"ಮಗಳೇ, ಅದರ ಮಾರ್ಗವನ್ನು ನಾನು ಸೂಚಿಸುವೆನು. ಮಗುವಾದಾಗ ನಿಮ್ಮನ್ನು ... ಕೊಡುವಾಗ ಏನೆಂದಿದ್ದೆ? 'ನಿಮ್ಮಂತೆ ನಲಿಯುವ ಕೌಟುಂಬಿಕವನ್ನು ಪಡೆದು ಸ್ವರ್ಗಕ್ಕೆ ಸಾಗಿರಿ' ಎಂದೆನಲ್ಲ. ಅದನ್ನು ಇಲ್ಲೇಕೆ ಮರೆ?''

(೧೪ನೇ ಪುಟಕ್ಕೆ ಮುಂದುವರಿಯುದೆ)

ನಮ್ಮ ಮುಂದಾಳುಗಳು.

ನಮ್ಮ ಜಿಲ್ಲೆಯು ಮುಂದಾಳುಗಳಿಂದ ತುಂಬಿದೆ. ಅವರ ಸಂಖ್ಯೆಯು ಅಪಾರವಾಗಿರುತ್ತ ಅವರಿಂದ ನಮಗಾಗುತ್ತಿರುವ ಪ್ರಯೋಜನವನ್ನು ನಾವು ತಿಳಿಯದಿರುವುದು ಅನ್ಯಾಯವೇ ಸರಿ. ಆಗಾಗ ನಮಗೆ ನಮ್ಮ ಮುಂದಾಳುಗಳ ವಿಚಾರ ದೊರಕುವ ವಾರ್ತೆಗಳನ್ನು ಪ್ರಕಟಿಸುತ್ತ ಬಂದು, ಅವರನ್ನು ಎಚ್ಚರಿಸಬೇಕೆಂದು ನಮ್ಮ ಅಭಿಲಾಷೆಯಿದೆ. ಈ ಮುಂದಾಳುಗಳ ವಿಷಯವಾಗಿ ನಿಶ್ಚಿತವಾಗಿ ತಿಳಿದ ವಿಷಯವನ್ನು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸುವುದಕ್ಕಾಗಿ ನಮಗೆ ಆಗಾಗ ತಿಳಿಸುತ್ತಿರಬೇಕು. ಸಂಗತಿಗಳು ವೈಯಕ್ತಿಕವಾಗಿರದೆ, ಮುಂದಾಳುಗಳ ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದವುಗಳಿರಬೇಕು. ಸಂಪಾದಕ.

ಶ್ರೀ ನೆಲ್ಲಿಕಾಯಿ ವೆಂಕಟರಾಯರವರ ಅಧ್ಯಕ್ಷತೆಯಲ್ಲಿ ನಮ್ಮ ಜಿಲ್ಲಾ ಕೌನ್ಸಿಲು ಮುಂದರಿಯುತ್ತಿದೆಯೆಂದು ತಿಳಿಯಲು ನಮ್ಮ ಹಳ್ಳಿಯ ಎಯ್ಡೆಡ್ ಶಾಲೆಯವರು ಸಂತೋಷ ಪಡಬಹುದು. ಸದ್ಯದಲ್ಲೇ ಅವರಿಂದ ನಮಗೆ ದೊರೆಯುತ್ತಿರುವ ಲಾಭಗಳು'

೧ ಕೌನ್ಸಿಲಿನ ಮೀಟಿಂಗನ್ನು ಸರಿಯಾಗಿ ಕರೆಯದೆ ಸದಸ್ಯರಿಗೆ ಸಾಕಷ್ಟು ವಿರಾಮವನ್ನು ಉಂಟುಮಾಡುತ್ತಿದ್ದಾರೆ

೨ ಹಾಯರ್ ಎಲಿಮೆಂಟರಿ ಶಾಲೆಗಳಿಗಾದರೂ ತ್ರೈಮಾಸಿಕದ ಗ್ರಾಂಟನ್ನು ಕೊಡಬೇಕೆಂದು ನಿಷ್ಕರ್ಷೆಯಿದ್ದರೂ, ರಾಯರು ಹಣವನ್ನು ಸಲ್ಲಿಸದೆ, ಶಾಲೆಯವರನ್ನು ಗೋಳಾಡಿಸಿದರೂ ಕೌನ್ಸಿಲಿಗೆ ಈ ಹಣದ ಬಡ್ಡಿಯನ್ನು ಉಳಿಸಿಕೊಳ್ಳುತ್ತಿರುವುದು

ಕೊಡಲಿರುವ ಗ್ರಾಂಟನ್ನು ಕೊಡದೆ ಹೋದರೆ, ಅದರ ಉಪಯೋಗವು ಇತರರಿಗೆ ದೊರೆಯದೆ ಹೋದೀತೆ?

೩ ಸರಕಾರದ ಬೆಂಬಲಕ್ಕೆ ಅವರು ನಿಂತರು. ಸರಕಾರವು 'ನಿಮಗೆ ಬಿಲ್ಡಿಂಗ್ ಗ್ರಾಂಟು ಬೇಕೇ' ಎಂದು ಕೇಳಿದರೂ ಔದಾರ್ಯದಿಂದ (= ಆಲಸ್ಯ?) ಅದನ್ನು ಕೇಳದೆ ಕಳೆದುಕೊಂಡರು

ತಮಗೆ ಎಷ್ಟೋ ತಾಪತ್ರಯವಿದ್ದು, ಕೆಲಸ ನಡೆಯಿಸಲಾರದೆ ಹೋದರೂ ಔದಾರ್ಯದಿಂದ ಅಧ್ಯಕ್ಷಪದವಿಯನ್ನು ಭದ್ರವಾಗಿ ಕಾಯ್ದುಕೊಂಡುದು

+ + + +

ನಮ್ಮ ಜಿಲ್ಲಾ ಬೋರ್ಡಿನ ಸದಸ್ಯರುಗಳು ಮುಂದಾಳುಗಳಲ್ಲವೆಂದು ಹೇಳುವವರಾರು? ಕುಂದಾಪುರ ತಾಲೂಕಿನ ಮೆಂಬರರೊಬ್ಬರ ಔದಾರ್ಯದಿಂದ ತಮ್ಮ ನಂಟರಿಷ್ಟರಿಗೆಲ್ಲ ಅನುಕೂಲವಾದ ಸ್ಥಳಗಳಲ್ಲಿ ಶಾಲಾ ಮಾಸ್ತರಿಕೆಯನ್ನು ಕೊಟ್ಟಿದ್ದಾರೆ. ಇನ್ನು ನಮ್ಮ ಜನರು ಆದಷ್ಟು ಹೆಚ್ಚಾಗಿ ಸದಸ್ಯರೊಡನೆ ನಂಟಸ್ತಿಕೆಯನ್ನು ಬೆಳೆಯಿಸುವುದರಿಂದ ಲಾಭವಿದೆ

+ + + +

ಜಿಲ್ಲಾ ಬೋರ್ಡಿನ ಆಶ್ರಯದಿಂದ-ಸೆಕ್ರೆಟರಿ ಸಾಹೇಬರ ಜಾತಿ ಬೇರಾಯಿತು. ಅವರಿಗಿಂತ ಸರ್ವೀಸಾದ ಎಲ್‌ಟಿಗಳು ತಂತಮ್ಮ ಶಾಲೆಯಲ್ಲಿ ಬಿದ್ದರೂ, ಮುಖ್ಯ ಮಂತ್ರಿಗಳಾದ ಇವರಿಗೆ ರೂ ೧೨೫ರಿಂದ ೧೫೦ಕ್ಕೇರಿಸಿದರು? ಮುಂದಿನ ಬಜೆಟಿನಲ್ಲಿ ರೂ. ೩೦-೪೦ರ ಭತ್ತೆಯೂ ದೊರೆತೀತೆಂಬ ಭರವಸೆಯಿದೆ

+ + + +

ಸೆಕ್ರೆಟರಿ ಸಾಹೇಬರು ಈಗ ತಮ್ಮ ಸರಿಸಮಾನರಾದ ಹೈಸ್ಕೂಲು ಹೆಡ್ಮಾಸ್ತರರಿಗೂ ರಜೆಯನ್ನು ಕೊಡಬಲ್ಲ ಅಧಿಕಾರಿಗಳು' ಬೋರ್ಡಿನ ಮುಂದಾಳುಗಳ ದಯೆಯೆಂದರೆ ಹೀಗೆ

ಬೋರ್ಡಿನ ಕೃಪೆಯು ನೆರಳಿಂದ ಎಲ್ಲರಿಗೂ ತಂಪಿದೆ. ಸೆಕ್ರೆಟರಿಯವರ ಬಂಧುಗಳೊಬ್ಬರಿದ್ದಾರಂತೆ. ಅವರು ಇನ್ಸ್ಪೆಕ್ಟರ್ ಏಜನ್ಸಿಯಲ್ಲಿ ಪ್ರವೀಣರಂತೆ. ಉಪಾಧ್ಯಾಯರೊಬ್ಬೊಬ್ಬರೇ ಆಗಿ, ಅವರಿಂದಾಗಿ-ತಮ್ಮ ಸಂತತಿಯವರ ಸಲುವಾಗಿ ವಿಮೆ ಮಾಡುತ್ತಿದ್ದಾರೆ. ಉಪಾಧ್ಯಾಯರಿಗೆ ತಮ್ಮ ಮಕ್ಕಳು ಮರಿಗಳ ಸಲುವಾಗಿ ಇನ್ನಾದರೂ ಯೋಚನೆ ಬಂತಲ್ಲ

+ +

ನಮ್ಮ ಮುಂದಾಳುಗಳೊಬ್ಬರು ಸ್ಥಳದ ಸಂಕಷ್ಟನಿವಾರಣೆಗೆ ಪ್ರಚಂಡವಾದ ಕೆಲಸಗಳನ್ನು ಮಾಡುವರೆಂದು ಓದಿದ್ದೆವು. ಅಂತಹ ಪ್ರಚಂಡ ಚಳವಳ ಪ್ರಚಂಡ ಸಪ್ತಾಹ, ಪ್ರಚಂಡ ಮೆರವಣಿಗೆ (?) ಪ್ರಚಂಡ ಉಪನ್ಯಾಸ ಸಭೆಗಳಾಗುವುವೆಂದು ವಾರ್ತೆಯಿದ್ದರೂ ಆ ವರುಷದ ದಿನಗಳು ಬಾರದಿರುವುದು ವಿಷಾದವೇ ಸರಿ. ಹಳ್ಳಿಯ ರೈತರು ಪೇಟೆಗೆ ಒಮ್ಮೆ ಸಾಲುಸಾಲಾಗಿ ಬಂದು ಸಭೆ ದ ಧೂಮಕೇತುಗಳಾಗಲು ಹಾತೊರೆಯುತ್ತಿದ್ದಾರೆ ಇನ್ನೂ ಬಾರವೇ ಆ ಪ್ರಿಯ ದಿನಗಳು?

+ + +

ಗವರ್ನಮೆಂಟ್ ಕಾಲೇಜಿನಲ್ಲಿ ಶಿವಾಜಿ ಚಿತ್ರದ ಅನಾವರಣವಾಯಿತು. 'ಅಂಥ ಪುಂಡನೂ ಪೋಲಿಯೂ ಆದ ಶಿವಾಜಿಯ ಚಿತ್ರವನ್ನು ಇರಿಸುವುದರಲ್ಲಿ ಅರ್ಥವಿಲ್ಲ'ವೆಂದು ಶ್ರೀ ರಿಟಾಯರ್ಡ್ ಜಡ್ಜಿ ವೆಂಕಟರಾಯರು ಹೇಳಿದರು. ಇಂಥ ಚಿಲ್ಲರೆ ಪುಂಡನ ಚಿತ್ರವನ್ನು ಅನಾವರಣಮಾಡುವ ಹೇಯ ಕೆಲಸಕ್ಕಾದರೂ ಒಡಂಬಟ್ಟು ಅವರು ಈ ಬುದ್ಧಿಯ ಮಾತುಗಳನ್ನು ಹೇಳಿದ ಬಗ್ಗೆ ಕಾಲೇಜಿನ ವಿದ್ಯಾರ್ಥಿಗಳು ಋಣಿಯಾಗದೆ ಇರರು. ಇನ್ನು ಮುಂದಾದರೂ ಆ ಚಿತ್ರವನ್ನು ಕಿತ್ತು ಅಲ್ಲಿಗೆ ನಮ್ಮ ಉಪದೇಶಕರ ಚಿತ್ರವನ್ನು ಇರಿಸುವರೆಂದು ನಮ್ಮ ಸೂಚನೆ. ಹಾಗೆ ಮಾಡುವುದಾದರೆ ಅದರ ಕೆಳಗೆ ಒಂದು ಪ್ರತಿ ಹಿಂದೂಸ್ಥಾನದ ಚರಿತ್ರೆಯನ್ನು (Hang) ತೂಗಬಹುದು

ನಿಮ್ಮೊಡನೆ ಯೋಚಿಸಲು	ಮತಗಳ ವಿಷಯ ನೀವೇನೆನ್ನುವಿರಿ?	ನಿಮ್ಮೊಡನೆ ತರ್ಕಿಸಲು
	ವಿಚಾರರಂಗವಿದು.	

ತಾ. 8-3-'35ರಲ್ಲಿ ಪ್ರಕಟವಾದ ವಿಚಾರರಂಗಕ್ಕೆ ಈ ಕೆಳಗಣ ಉತ್ತರಗಳನ್ನು ಶ್ರೀಮಾನ್ ಮೊಳಹಳ್ಳಿ ಶಿವರಾವ್, ಪುತ್ತೂರು. ಇವರು ದಯಮಾಡಿ ಕಳುಹಿಸಿರುವರು:—

ಪ್ರಶ್ನೆ 1ಕ್ಕೆ ಉತ್ತರ—ಸಮಾಜದ ಅಧಿಕಾರದವುಗಳು ಆದರೆ, ಅಧಿಕಾರ ನಡೆಸುವುದು ಮಠಾಧಿಪತಿಗಳು. ಪ್ರ 2 ಸಮಾಜದ ಹಿತಕ್ಕಾಗಿ. ಪ್ರ 3 ಚಿತ್ರಾಪುರ ಪ್ರ 4 ಮತ್ತು 5 ತಿಳಿಯದು. ಪ್ರ 6 ಇರಬಹುದು. ಪ್ರ 9. ಇಲ್ಲ ಪ್ರ. 10 ಅದೇ ಕಾರ್ಯಕ್ಕಾಗಿ ಇದ್ದ ತಕ್ಕವರು ಸರಿಯಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸ್ಯಾರೆಂದು ಪ್ರ. 11 ಅಂತಹ ಕಲಹಗಳಿಂದ ಸರಿಯಾಗಲಾರದು ಪ್ರ 16 ಶಿಷ್ಯಕೂಟಕ್ಕೆ ಪ್ರ 17 ಅಲ್ಲ ಪ್ರ 18 ಇಲ್ಲ ಪ್ರ 19 ಬೇಕು ಪ್ರ 20. ಇಲ್ಲ ಪ್ರ 21 ಅಯೋಗ್ಯರಲ್ಲ ಪ್ರ 22 ಸಿಗಬಹುದು ಪ್ರ 23 ದುಡ್ಡಿನ ಸಂಬಂಧ ಪ್ರ 24 ಆಗಿರಬೇಕು. ಪ್ರ 25 ಏನೂ ಸಹಾಯವಿಲ್ಲ ಪ್ರ 26 ಇಲ್ಲ ಪ್ರ 27 ಶಿಷ್ಯರ ಹುಚ್ಚಿನಿಂದ. ಪ್ರ 28 ಅಲ್ಲ ಪ್ರ 29 ಶಿಷ್ಯವರ್ಗಕ್ಕೆ ಪ್ರ 30 ಬೇಕು ಪ್ರ 31 ವಿದ್ಯೆ ವೇತನಗಳು ಕೈಗಾರಿಕೆ—ಬಡವರಿಗೆ ಸಹಾಯ. ಪ್ರ 32 ಇಲ್ಲ ಪ್ರ 34 ಆಕೂಡ ಪ್ರ 34 ಸ್ಥಾನವಿಲ್ಲ ಪ್ರ, 35 ಸಮಾಜ, ಪ್ರ 36 ಯೋಗ್ಯವಲ್ಲ ಪ್ರ 37 ಬೇಡಿದರೆ ಬೇಡಲಿ—ಆದರೆ ಭಿಕ್ಷೆಯು ಸ್ವಂತಕ್ಕಾಗಬಾರದು ಪ್ರ 38 ಅಲ್ಲ ಪ್ರ 39 ಇದೆ ಪ್ರ 40. ವಿಶೇಷವೇನೂ ಗೊತ್ತಾಗುವುದಿಲ್ಲ. ಪ್ರ 41 ಜಾತಿಯ ಕೂಟದ ಮೂಲಕ ಬರುತ್ತದೆ ಪ್ರ, 43. ಉಳಿಯಬಹುದು. ಪ್ರ 44 ಆ ರೂಪಿನಲ್ಲಿ ಬೇಡ ಪ್ರ, 45 ಇಲ್ಲ ಪ್ರ. 46 ಇಲ್ಲವೇ ಇಲ್ಲ ಪ್ರ 47 ಹೆಟ್ಟಿನ ಮಟ್ಟಿಗೆ ಇಲ್ಲವೆನ್ನಬಹುದು ಪ್ರ 48. ಬೇರೆ ಸತ್ಕಾರ್ಯಗಳಿಗಾಗಿ. ಪ್ರ 49 ಅನರ್ಥ – ಹಾನಿಯಾದೀತು ಪ್ರ 50 ಇಲ್ಲ ಪ್ರ 51 ಆಕೂಡ/ ಪ್ರ 52 ಸಾಕಲ್ಲ? ಪ್ರ. 53 ಅದೂ ಆಗಬಹುದು. ಪ್ರ 54 ಆಯಾ ಸಮಾಜಕ್ಕೆ ಸೇರಬೇಕು ಪ್ರ 55 ಹೆಟ್ಟಿನ ಮಟ್ಟಿಗೆ ಬಿಟ್ಟಾರು ಪ್ರ 56 ಖಂಡಿತವಾಗಿಯೂ ಅನುಕೂಲವಾಗುವುದು ಪ್ರ 57 ಇಲ್ಲ—ಅದೂ ಇಲ್ಲ – ಇದೂ ಇಲ್ಲ ಪ್ರ 58 ಅಲ್ಲ ಪ್ರ 59 ಬೇಡ ಪ್ರ 60 ಮನಸೋ ಇಚ್ಛೆ

ಕನ್ನಡ ಭಾಷೆ ಮತ್ತು ಸಾಹಿತ್ಯ

ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಭಾಷಣ

ಇದೇ ತಿಂಗಳ ೩ನೆ ತಾರೀಖಿನಂದು ಮೈಸೂರು ಟ್ರೈನಿಂಗ್ ಕಾಲೇಜಿನ ವಿದ್ಯಾರ್ಥಿ ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ಶ್ರೀ ಬಿ ಎಂ ಶ್ರೀಕಂಠಯ್ಯನವರ ಕನ್ನಡ ಭಾಷೆ ಮತ್ತು ಸಾಹಿತ್ಯ ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು

ಉಪನ್ಯಾಸಕರು ತಮ್ಮ ಭಾಷಣದಲ್ಲಿ ಕನ್ನಡದ ಚರಿತ್ರೆ ವ್ಯಾಪನೆಗಳನ್ನು ಸೂಚಿಸುತ್ತ, 'ಕನ್ನಡ ನಾಡಿನ ಸುತ್ತಲೂ ಇರುವ ಮಹಾರಾಷ್ಟ್ರ ಆಂಧ್ರ ಮತ್ತು ತಮಿಳ ದೇಶಗಳಲ್ಲಿ ಆಯಾ ಜನರ ಮಹಾರಾಷ್ಟ್ರ ತೆಲುಗು ತಮಿಳು ಮಲೆಯಾಳ ಭಾಷೆಗಳು ಪ್ರಚಾರದಲ್ಲಿವೆ ಮೇಲೆ ಸೂಚಿಸಿದ ನಾಡಿನವರು ತಮ್ಮ ಭಾಷಾ ವೃದ್ಧಿಗಾಗಿ ಪತ್ರಿಕೆಗಳ ಮತ್ತು ಗ್ರಂಥಗಳ ಪ್ರಚಾರವನ್ನು ಕ್ರಮೇಣ ಹೆಚ್ಚಿಸುತ್ತಿದ್ದಾರೆ ಆದರೆ ಕನ್ನಡದಲ್ಲಿ ಒಂದು ಗ್ರಂಥವನ್ನಾಗಲೀ ಪತ್ರಿಕೆಯನ್ನಾಗಲೀ ಹೊರಡಿಸಿದರೆ, ಅದರ ಖರ್ಚೇ ಏಳದಿದ್ದರೆ ಇನ್ನು ಸಾಹಿತ್ಯದ ಮಾತೇಕೆ? ಕರ್ನಾಟಕದ ಗಡಿನಾಡುಗಳಲ್ಲಿ ಈಗಲೂ ಕನ್ನಡಕ್ಕೂ ಅಲ್ಲಿಯ ಭಾಷೆಗೂ ಹೋರಾಟವು ನಡೆದೂ ನಡೆಯುತ್ತಲೇ ಇದೆ. ಅಲ್ಲಿಯ ಜನರು ಆಡುವ ಭಾಷೆ ಕನ್ನಡವಾಗಿದ್ದರೂ ಅವರು ವ್ಯವಹಾರಕ್ಕಾಗಿಯೂ ಇತರರೊಡನೆ ಸಂಭಾಷಣೆಗಾಗಿಯೂ ಬೇರೆ ಭಾಷೆಯನ್ನಿಟ್ಟುಕೊಂಡಿದ್ದಾರೆ. ಅವರಿಗೆ ಕನ್ನಡದಲ್ಲಿ ಮಮತೆ ಅಭಿಮಾನಗಳಿವೆ ಆದರೆ ಅವು ಹೊರಗೆ ಬರಲು ಅವಕಾಶವಿಲ್ಲ' ಎಂದರು. ಇದನ್ನು ಉದಹರಿಸಲು ಶ್ರೀಯುವರು ತಮ್ಮ ಅನುಭವವೊಂದನ್ನು ಹೇಳಿದರು

"ನಾ ಕೊಳ್ಳೇಗಾಲಪುರದ ಮಾರ್ಗವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಎಲ್ಲರೂ ಮರಾಠಿ ಪತ್ರಿಕೆಗಳನ್ನು ಹಿಡಿದು ಓದುತ್ತಿದ್ದರು ನನ್ನ ಪಕ್ಕದಲ್ಲಿ ಕುಳಿತಿದ್ದವರು ಏನನ್ನೂ ಮಾತಾಡದೆ ಸುಮ್ಮನಿದ್ದರು. ಅಲ್ಲಿದ್ದವರೊಬ್ಬರಿಗೂ ಕನ್ನಡ ಓದಲು ಬಾರದು. ನನ್ನ ಪಾಡಿಗೆ ನಾನು 'ಸಚಿತ್ರ ಕರ್ನಾಟಕ'ವನ್ನು ಓದುತ್ತಿದ್ದೆ. ಬಸ್ಸು ಕೊಳ್ಳೇಗಾಲಪುರವನ್ನು ಮುಟ್ಟಿದೊಡನೆಯೇ ಹಾದಿಯಲ್ಲಿ ಬಂದ ಮಗುವು 'ಅಪ್ಪ, ಅಪ್ಪ ಬಂದ' ಎಂದಿತು. ಬಸ್ಸಿನಲ್ಲಿದ್ದ ತಂದೆಯೂ ಕನ್ನಡದಲ್ಲಿಯೇ ಮಾತನಾಡಿದನು. ನಾನು ಆತನನ್ನು ಕುರಿತು 'ನಿಮಗೆ ಕನ್ನಡ ಗೊತ್ತೆಂದು ತಿಳಿದಿರಲಿಲ್ಲ. ತಿಳಿದಿದ್ದರೆ ನಿಮ್ಮೊಂದಿಗೆ ಮಾತನಾಡುತ್ತ ಬರಬಹುದಾಗಿತ್ತಲ್ಲ, ನೀವು ಸಚಿತ್ರ ಕರ್ನಾಟಕವನ್ನಾದರೂ ಓದಬಹುದಾಗಿತ್ತು' ಎಂದು ಹೇಳಿದೆ. ಆತನು ತನಗೆ ಕನ್ನಡ ಮಾತನಾಡಲು ಮಾತ್ರ ಬರುವುದೆಂದೂ ಓದಲು ಬಾರದೆಂದೂ ತಿಳಿಸಿದನು. ಅವರ ತಾಯ್ನುಡಿಯು ಕನ್ನಡ. ಆದರೆ ಅದರ ಅಭಿವೃದ್ಧಿ ಪ್ರಚಾರಗಳು ಗಡಿನಾಡುಗಳಲ್ಲಿ ನಡೆಯುತ್ತಿಲ್ಲ."

Attur Vaikunta Prabhu Bank, Mangalore.

ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ಬ್ಯಾಂಕಿನಲ್ಲಿ ಈ ಮುಂಚೆ ಎರಡು ವರ್ಷಗಳ ಲಾಗ್ಯಾತು ಕ್ಲಾರ್ಕನಾಗಿದ್ದ R ನಾರಾಯಣ ಎಂಬವನನ್ನು ಈ ಬ್ಯಾಂಕಿನ ಕೆಲಸದಿಂದ ತೆಗೆದುಹಾಕಿರುತ್ತದೆ ಬ್ಯಾಂಕಿನಲ್ಲಿ ಸಲ್ಲತಕ್ಕ ಯಾವತ್ತೂ ಸಾಲಗಳ ಅಸಲು ಬಡ್ಡಿ ವಗೈರೆ ಐವೇಜನ್ನು ಬ್ಯಾಂಕಿನ ಸಮಯದಲ್ಲಿ ಬ್ಯಾಂಕಿನಲ್ಲಿಯೇ ಬಂದು ಪ್ರೊಪ್ರೈಟರರ ಕೂಡೆ ಕೊಡತಕ್ಕದ್ದು. ಅವುಗಳಿಗೆ ಪ್ರೊಪ್ರೈಟರರ ಸಹಿ ಇರುವ ರಶೀದಿ ಕೊಡಲಾಗುವುದು. ಅಲ್ಲದೆ ಬ್ಯಾಂಕಿನಲ್ಲಿ ಸಲ್ಲತಕ್ಕ ಹಣವನ್ನು ಸದ್ರಿ R ನಾರಾಯಣನ ಕೂಡೆ ಕೊಟ್ಟಲ್ಲಿ ಅದು ಬ್ಯಾಂಕಿಗೆ ಸಲುವಲಿಕ್ಕಿಲ್ಲ. ಮಾತ್ರವಲ್ಲದೆ ಅದಕ್ಕೆ ಬ್ಯಾಂಕು ಎಷ್ಟು ಮಾತ್ರಕ್ಕೂ ಜವಾಬ್ದಾರಿಯಾಗಲಿಕ್ಕಿಲ್ಲ

A V Prabhu Bank,
12—3—1935

A. Vaikunta Prabhu,
Proprietor

ಸ್ವದೇಶದ ಇತರ ವ್ಯಾಪಾರಸ್ಥರ ಸಾಮಾನುಗಳಿಗಿಂತ ಪ್ರಿಯವಾದುದು ನಿಕೃಷ್ಟವಾದುದು ಎಂದು ರುಜುಪಡಿಸಿದರೆ ನಿಮ್ಮ ಬೆಲೆಗಿಂತ ಎರಡು ಪಾಲನ್ನು ಹಿಂದೆ ಕೊಡುತ್ತೇವೆ



ಸುಖವಾಗಿ ನಿದ್ರಿಸಿರಿ.

ನಮ್ಮ ಹಿಂದೀಯ ಸಂಪರದೆಗಳನ್ನು ಪ್ರತಿಯೊಬ್ಬರೂ ಹೊಗಳುತ್ತಾರೆ, ಅದರ ಬಾಳಿಕೆ ಅದರ ಗಟ್ಟಿ ಮುಟ್ಟುತನ, ಅದರ ಸುಂದರ ಕೆಲಸಗಳ ಆಕರ್ಷಣೀಯ

ಉದ್ದ.	ಅಗಲ.	ಎತ್ತರ	ಸಾಧಾರಣ ಕ್ರಯ	ಉತ್ತಮ ಬೆಲೆ
5	3½	3½	1/4	1/8/–
6	4	4	1/8/	1/12/–
6½	4½	4½	1/12	2/–
7		5	2	2/4/–
7½	6	5	2/4 –	2/8/–

ಪೆಕಿಂಗ್ ಧರ್ಮಾರ್ಥ ಅಂಚೆ ವೆಚ್ಚ ಪ್ರತ್ಯೇಕ.

Prabhat Trading Co,
12 Sikderpara Lane Calcutta (Burra Bazar)

ಮಾತುಕತೆಗಳಿಂದಾಗಿ ಯಾವ ದೇಶವೂ ಉನ್ನತಿ ಹೊಂದಲಿಲ್ಲ. ರಾಷ್ಟ್ರಗಳ ತಕ್ಕಡಿಯಲ್ಲಿ ಭಾರತವು ಕೆಳಗಿಳಿದಿದೆ ಕಾರಣ-ಅದು ತನ ಉಚ್ಚ ಆದರ್ಶಗಳನ್ನು ಮರೆತಿದೆ ಅದು ಎಚ್ಚರಗೊಳ್ಳದ ವಿನಹಾ ಅದಕ್ಕೆ ಮೋಕ್ಷವಿಲ್ಲ.

ಮಿ॥ ಇ. ಬಿ. ಹವೆಲ್

ಸ್ಫುಟವಿಚಾರಗಳು

ಇಟೆಲಿ-ಯುಗೋಸ್ಲೆವಿಯಾಗಳೊಳಗೆ—

ಕೆಲವು ಸಮಯದಿಂದ ಪರಸ್ಪರ ಮನಃಕ್ಲೇಶಗಳಿದ್ದುವು ಮಾರ್ಸೈಲ್ಸ್‌ನಲ್ಲಿ ಯುಗೋಸ್ಲೆವಿಯಾ ಅರಸರಾದ ಅಲೆಕ್ಸಾಂಡರರನ್ನೂ ಬಾರ್ತೋಥವರನ್ನೂ ಕೊಲೆ ಮಾಡಿದ ನಂತರ ಯುಗೋಸ್ಲೆವಿಯಾವು ಇಟೆಲಿಯನ್ನು ಘೋರ ನೋಟದಿಂದಲೇ ನೋಡುತ್ತಿತ್ತು. ಇಟೆಲಿಯು ಕೂಡ ಅದೇ ರೀತಿಯಿಂದ ಉತ್ತರಿಸುತ್ತಿತ್ತು ಅಲ್ಲದೆ ಯುಗೋಸ್ಲೆವಿಯಾದೆದುರು ಹಂಗೇರಿಯಾವನ್ನೂ ನಿಲ್ಲಿಸುವಷ್ಟು ಸಾಹಸವನ್ನು ಇಟೆಲಿಯು ಮಾಡಿತ್ತು. ಆದರ ಫ್ರಾನ್ಸಿನ ಮಂತ್ರಿವರ್ಯರಾದ ಲಾವಲರು ಇಟೆಲಿಯ ಅಧಿಪತಿಗಳಾದ ಸೀನ್ಯೊರ್ ಮುಸೊಲಿನಿಯವರೊಡನೆ ನಡೆಸಿದ ಮಾತುಕತೆಯ ಪರಿಣಾಮವಾಗಿ ಈಗ ಇಟೆಲಿಯು ಯುಗೋಸ್ಲೆವಿಯಾವನ್ನು ಅಕ್ಕರೆಯಿಂದ ಕರೆದು ಮುಂದಕ್ಕೆ ತಾನು ಯಾವ ದ್ವೇಷವನ್ನೂ ಕಟ್ಟಿಕೊಳ್ಳುವುದಿಲ್ಲವೆಂದು ಹೇಳಿದೆ. ತಂತಮ್ಮೊಳಗೆ ಮೈತ್ರಿಯಿರಬೇಕೆಂದು ಹೇಳಿಕೊಂಡಿದೆ ಈ ರೀತಿಯ ಸೌಹಾರ್ದತೆಯಿಂದ ಯುರೋಪಿನ ರಾಜಕೀಯ ರಂಗವು ಶಾಂತಮಯವಾಗುವುದೆಂದು ಹೇಳಬೇಕಿಲ್ಲ.

ವ್ಯಾಪಾರಮಾಂದ್ಯವು ತೊಲಗಿದೆಯೆಂಬ

ಆನಂದ ಸೂಚನೆಯನ್ನು ಬ್ರಿಟಿಷ್ ಬೋರ್ಡ್ ಆಫ್ ಟ್ರೇಡ್‌ನ ಅಧ್ಯಕ್ಷರಾದ ಮಿ॥ ವಾಲ್ಟರ್ ರನ್ಸಿಮೆನರು ಮಾಡಿರುವರು 'ನಾವು ದಿನೇ ದಿನೇ ವೃದ್ಧಿಂಗತ ಪಥವನ್ನು ಹಿಡಿದಿದ್ದೇವೆ' ಎಂಬ ಇವರ ನುಡಿಯಲ್ಲಿ ಸತ್ಯಾಂಶವಿಷ್ಟೆನೆಯೋ ತಿಳಿಯದು [illegible]ರಲ್ಲಿ ವ್ಯಾಪಾರವು ಅಷ್ಟೊಂದು ವೃದ್ಧಿಹೊಂದಿರುವುದು ಕಂಡು ಬರುವುದಿಲ್ಲ [illegible]ರಲ್ಲಿ ಜಗತ್ತಿನ ವ್ಯಾಪಾರವು ವೃದ್ಧಿಹೊಂದುವುದೆಂದು ಒಂದು ಆಶ್ವಾಸನೆಯಿದೆ ಈ ಆಶ್ವಾಸನೆಯು ಎಷ್ಟರ ಮಟ್ಟಿಗೆ ಕಾರ್ಯಕಾರಿಯಾಗುವುದೆಂದು ಊಹಿಸಲಸದಳ [illegible]ಕ್ಕಿಂತ [illegible]ರಲ್ಲಿ ಕಬ್ಬಿಣದ ವ್ಯಾಪಾರವು ಶೇಕಡಾ ೨೭ ರಷ್ಟು ಹೆಚ್ಚಿದೆ ಉಕ್ಕಿನ ವ್ಯಾಪಾರವು ಶೇಕಡಾ ೩೦ ರಷ್ಟು ಹೆಚ್ಚಿದೆ ಆದರೆ ಇತರ ಸಾಮಗ್ರಿಗಳಲ್ಲಿ ಯಾವ ಹೆಚ್ಚಿನ ವ್ಯಾಪಾರಾಭಿವೃದ್ಧಿಯೂ ಉಂಟಾಗಿರುವುದಿಲ್ಲ [illegible]ರ ಪೂರ್ಣತೆಯ ಸ್ಥಿತಿಯನ್ನು ಹೊಂದಲು ಇನ್ನೆಷ್ಟು ವರ್ಷಗಳಿವೆಯೋ! ಬ್ರಿಟಿಷ ರಾಜನೀತಿಜ್ಞರು ನಿಜವಾಗಿಯೂ ಜಗತ್ತಿನ ವ್ಯಾಪಾರದ ಉನ್ನತಿಯನ್ನು ಬಯಸುವರೇ? ಬಯಸುವುದಾದರೆ ಅವರು ಸ್ವದೇಶದ ಹಿತದೊಡನೆ ಅನ್ಯರಾಷ್ಟ್ರಗಳನ್ನು ನೆನಸಿನಲ್ಲಿಟ್ಟುಕೊಂಡು ಪ್ರಪಂಚವನ್ನೇ ಉದ್ಧರಿಸುವ ಸತ್ಕಾರ್ಯಕ್ಕೆ ಕೈಯಿಡಬೇಕಾಗಿದೆ ಆದರೆ ರನ್ಸಿಮೆನರು ಬ್ರಿಟಿಷರ ಹಿತವೊಂದನ್ನೇ ಲಕ್ಷಿಸಿ ನುಡಿದಂತಿದೆ. ಜಗತ್ತಿನ ಎಲ್ಲಾ ರಾಷ್ಟ್ರಗಳೂ ಒಂದಾಗಿ ಆರ್ಥಿಕವಾದ ಸುಧಾರಣೆಯನ್ನು ಮಾಡಿಕೊಳ್ಳದಿದ್ದರೆ ರನ್ಸಿಮೆನರ ಉತ್ಸಾಹಕ್ಕೆ ಹೆಚ್ಚಿನ ಬೆಲೆಯು ಸಿಗಲಾರದು.

ಶ್ರೀಮಾನ್ ವಿ. ಶ್ರೀನಿವಾಸ ಶಾಸ್ತ್ರಿಗಳು—

ರಾಜಕೀಯವನ್ನು ಬಿಟ್ಟು ಸಂಗೀತ ಶಾಸ್ತ್ರದ ವಿಮರ್ಶೆಗೆ ಕೈಯಿಕ್ಕಿರುವರು. ಅವರು ನಾಗಪುರ ಮನೋಹರ ಗಾಯನ ಸಮಾಜದ ವಾರ್ಷಿಕೋತ್ಸವದಲ್ಲಿ ಭಾಷಣ ಮಾಡುತ್ತಾ "ಹಲವು ಗಾಯಕರು ತಾವು ಹಾಡುವ ಗಾಯನದ ಅರ್ಥವನ್ನು ತಮ್ಮ ಮೋರೆಗಳಲ್ಲಿ ಒಂದಿಷ್ಟಾದರೂ ತೋರಿಸುವುದಿಲ್ಲ; ಆನಂದಮಯ ಗಾನವನ್ನು ದುಃಖಪೂರ್ಣ ಮುಖಚರ್ಯೆಯಿಂದ ಹಾಡುತ್ತಾರೆ. ಸಂಗೀತವೆಂದರೆ ಆನಂದದಾಯಕ ಕಲೆ. ಕೇಳುವವರಿಗೆ ಆನಂದವಾಗಬೇಕೆಂಬ ಉದ್ದೇಶವದರಲ್ಲಿದೆ ಆದರೆ ಅನೇಕರು ಸಂಗೀತವನ್ನು ಯಾರಿಗೂ ಅರ್ಥವಾಗದ ರೀತಿಯಿಂದ ಹಾಡುತ್ತಾರೆ. ಅರ್ಥ ತಿಳಿಯದ ಗಾನದಲ್ಲಿ ಆನಂದವೆಲ್ಲಿಂದ? ಅರ್ಥವನ್ನು ತಿಳಿಸದ ಗಾನಕ್ಕೆ ಗಾನವೆನ್ನುವುದೆಂತು? ಶ್ರೋತೃಗಳ ತಲೆ ತಿರುಗಿಸಿ ಅವರನ್ನು ಕಂಗೆಡಿಸುವ ಗಾಯನವೇ ಪ್ರಥಮ ಶ್ರೇಣಿಯ ಗಾಯನವೆಂದು ಹಲವರು ತಿಳಿದುಕೊಂಡಿರುವರು" ಎಂದಿರುವರು ಶಾಸ್ತ್ರಿಗಳ ಟೀಕೆಯು ಅರ್ಥಪೂರ್ಣವಾದುದು, ಸಂಗೀತ ಕಲೆಯನ್ನು ಅಭ್ಯಸಿಸುವವರ ಲಕ್ಷ್ಯಾರ್ಹವಾದುದು

ಜೈಲುಗಳಲ್ಲಿ ಕೈದಿಗಳ ರಕ್ಷಣೆ—

ಒಂದು ಮಹಾ ಸಮಸ್ಯೆಯು ಮೊನ್ನೆ ಮದ್ರಾಸು ಕೌನ್ಸಿಲಿನಲ್ಲಿ ಬಂತು ಶ್ರೀ॥ ಕೆ. ಕೋಟಿ ರೆಡ್ಡಿಯವರೂ ಶ್ರೀ॥ ಎ. ಬಿ. ಶೆಟ್ಟಿಯವರೂ ಜೈಲುಗಳ ಸುಧಾರಣೆಗಾಗಿಯೂ ಕೈದಿಗಳ ರಕ್ಷಣೆಗಾಗಿಯೂ ಪ್ರಸ್ತಾವನೆಯ ವಾಗಿ ವಾದಿಸಿದರು ಕೈದಿಗಳನ್ನು ಜೈಲುಗಳಲ್ಲೇ ಕೊಳೆಯ ಬಿಡುವುದು ಸರಿಯಲ್ಲ [illegible] ಭಾವಿ ಯೋಗ್ಯವನ್ನು [illegible] ಕೊಡು [illegible] ಕೈಕಸುಬುಗಳನ್ನು ಮಾಡಿಸಬೇಕೆಂದು ಶ್ರೀ॥ ರೆಡ್ಡಿಯವರೆಂದರು. ಅಲ್ಲದೆ ಕೈದಿಗಳಿಗೆ ಬೋಧಕರನ್ನು ಕೊಡಬೇಕೆಂದು ಅವರು ಸೂಚಿಸಿದರು. ಶ್ರೀ॥ ಎ. ಬಿ. ಶೆಟ್ಟರು ಕೈದಿಗಳ ಭಾವೀ ಜೀವನದ ವಿಷಯವಾಗಿ ವಿವರವಾಗಿ ಹೇಳಿದರು. ಮದ್ರಾಸು ಸಂಸ್ಥಾನದಲ್ಲಿ ಅಲ್ಪಾವಧಿ ಶಿಕ್ಷೆಗೆ ಗುರಿಯಾಗುವವರ ಸಂಖ್ಯೆಯು ಹೆಚ್ಚುತ್ತಿದೆ ಇದರಿಂದ [illegible] ಎಂದು ಅವರು ಸೂಚಿಸಿದರು. ಒಮ್ಮೆ ಶಿಕ್ಷೆಯನ್ನನುಭವಿಸಿ ಹೊರಗೆ ಬಂದ ಕೈದಿಯು [illegible] ಸಮಾಜದಲ್ಲಿ [illegible] ಜೀವನವನ್ನು ನಡೆಸ [illegible] ಕಷ್ಟವಾಗಿದೆ [illegible] ಉದ್ಯೋಗವು [illegible] ಯದು, ಮುಂದೆ [illegible] ಅವನ ಜೀವನವೇ ವ್ಯರ್ಥವಾಗುವುದು ಎಂಬಿವೇ ಸತ್ಯವಿಷಯಗಳನ್ನು ಶ್ರೀ॥ ಶೆಟ್ಟರು ಸಭೆಯಲ್ಲಿ ಹೇಳಿದರು. ಸದಸ್ಯರೆಂದಂತೆ ಜೈಲುಗಳನ್ನು ಸುಧಾರಿಸಿ ಕೈದಿಗಳನ್ನು ರಕ್ಷಿಸಿ ಅವರ ಭಾವೀ ಜೀವನದ ಸುಖ [illegible] ಸರಕಾರವು ಲಕ್ಷಿಸುವುದು ಆಗತ್ಯವಲ್ಲವೇ?

ಶ್ರೀ॥ ಜಯಕರರು—

ದೀರ್ಘ [illegible] ಮೊನ್ನೆ ಪೂನಾದ ಕೈಗಾರಿಕಾ ಪ್ರದರ್ಶನದಲ್ಲಿ ಅಧ್ಯಕ್ಷರಾಗಿದ್ದಾಗ ಭಾಷಣ ಮಾಡಿದರು ದೇಶದಲ್ಲಿ ಕೈಗಾರಿಕೆಗಳು ಹೆಚ್ಚಿ, ಜನರಲ್ಲಿ ಉದ್ಯೋಗಶೀಲವು ಹೆಚ್ಚಬೇಕೆಂದು ಅವರೊಪ್ಪುವರ ಆದರೆ ಅವರು ಗಾಂಧಿಜೀಯವರ ರಾಜಕೀಯ ಚಳವಳದಲ್ಲಿ ಸಹಾನುಭೂತಿ ತೋರಿಸುವುದಿಲ್ಲ "ಯಾರಲ್ಲಿ ದುಡ್ಡಿಲ್ಲವೋ ಅವರಿಗೆ ರಾಜಕೀಯದಲ್ಲಿ ಸ್ಥಾನವಿಲ್ಲ ಗಾಂಧಿಜೀಯವರ ರಾಜಕೀಯದಲ್ಲಿ ನಿಮಗೆ ಸ್ಥಾನವಿಲ್ಲ" ಎಂದು ವ್ಯಂಗ್ಯವಾಗಿ ನುಡಿದಿರುವರು ಗಾಂಧಿಜೀಯವರ ಸಾಹಸವೆಲ್ಲ ವಿಕಹಸ್ತ ತಾಳವೆಂಬ ಭಾವನೆಯು ಶ್ರೀಯುತರಿಗಿದ್ದಂತಿದೆ ಶ್ರೀ॥ ಜಯಕರರು ದೇಶದಲ್ಲಿ ನಡೆಯುವ ಔದ್ಯೋಗಿಕ ಕ್ರಾಂತಿಯನ್ನು ಸಹೃದಯರಾಗಿ ಪರಿಶೀಲಿಸಿ ನುಡಿಯುತ್ತಿದ್ದರೆ. ಗಾಂಧಿಜೀಯವರ ಚಳವಳವನ್ನು ಕಂಡು ಅವರನ್ನು ಅಭಿವಂದಿಸುತ್ತಿದ್ದರು ಮಾಡಲೇನು? ಕಣ್ಣಿದ್ದೂ ನೋಡುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಾ ಸಂಘ

ಈ ಸಂಘವು ಕೈಕೊಂಡಿರುವ ಹಲವು ಕೆಲಸಗಳಲ್ಲಿ ಹಳ್ಳಿಗಳಲ್ಲಿರುವ ಹರಿಜನ ಮಕ್ಕಳು ಅದಷ್ಟು ಸಂಖ್ಯೆಯಿಂದ ಶಾಲೆಗಳಿಗೆ ಹೋಗುವಂತೆ ಪ್ರಯತ್ನಿಸುವುದು ಅತ್ಯಗತ್ಯವಿದೆ. ಈ ವಿಷಯದಲ್ಲಿ ಅನೇಕ ಗೃಹಸ್ಥ ಪ್ರಮುಖರೂ, ಉಪಾಧ್ಯಾಯರೂ, ನಮ್ಮ ಸಂಘದ ಸದಸ್ಯರೂ ಅನೇಕ ಬಾರಿ ಆಲೋಚನೆ ಕೊಟ್ಟಿರುವ ರಾವರೂ ಮತ್ತು ಡಿ॥ ಬೋರ್ಡಿನ [illegible] ಎಲ್ಲಾ ಶಾಲೆಗಳಿಗೂ ದೊರೆತಿರುವುದಾದರೂ ಆ ಭಾಗದಲ್ಲಿ ಯಾವ ತರದ ಕೆಲಸ ಮಾಡುವುದೆಂದು ತಿಳಿಯುವುದು ಒಂದು ತರದ ಕಠಿಣ ಕೆಲಸವೇ ಆಗಿರುತ್ತದೆ [illegible] ಕೊಂಡು ಮಧ್ಯಾಹ್ನದ ಊಟಕೊಡುವ ವ್ಯವಸ್ಥೆ ಮಾಡಿದರೆ ಪ್ರಯೋಜನವಾದೀತೆಂದು ಸಾಮಾನ್ಯವಾಗಿ ತಿಳಿದು ಬಂದರೂ, ನಮ್ಮ ಸ್ಕೀಮಿನ ಮೇರೆಗೆ ಅದಕ್ಕೆ ಬೇಕಾದ ಹಣವನ್ನು ಸೆಂಟ್ರಲ್ ಬೋರ್ಡಿನಿಂದ ಪಡೆಯಲು ಎಡೆಯಿಲ್ಲ ಆದ್ದರಿಂದ ಹಳ್ಳಿಗಳಲ್ಲಿ ಟಿಕೇಟಿನ ಮೂಲಕ 'ಪ್ರಿಂಟ ಬಾಟನ'ವನ್ನು ನಡೆಸಿ, ಅದರಿಂದ ಹಣ ಸಂಗ್ರಹಿಸಿ ಸ್ಥಳೀಕ ಹರಿಜನ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯಾಗುವಂತೆ ಪ್ರಯತ್ನಿಸುವುದಾಗಿ ಹೇಳಿದ ನಮ್ಮ ಕಾರ್ಯದರ್ಶಿಯವರ ಮಾತಿಗೆ ಮತವಿತ್ತು ಅದನ್ನು ಈ ಮೊದಲು ಪತ್ರಿಕೆಗಳಲ್ಲಿ ಪ್ರಕಟಿಸಿದ್ದೆವು ಆ ಕೆಲಸದಲ್ಲಿ ಊರ ಮಹನೀಯರೂ, ಸರಕಾರಿ ನೌಕರರೂ [illegible] ಕೊಡಬೇಕಾಗಿಯೂ ಕೇಳಿಕೊಂಡಿರುವೆವು ಅದಕ್ಕೆ ಬೇಕಾದ ಟಿಕೇಟುಗಳನ್ನು ಕಮಿಟಿಯ ಕಡೆಯಿಂದಲೇ ಒದಗಿಸಿಕೊಟ್ಟಿರುವೆವು

ಆ ತರದ [illegible] ಮೊದಲಾಗಿ [illegible] ರಾತ್ರಿ ಉಪ್ಪಿನಂಗಡಿಯಲ್ಲಿ ನಡೆದ [illegible] ರೂ ೧೦ [illegible] ಜಮೆಯಾಗಿತ್ತು [illegible] ರಾತ್ರಿ [illegible]ಯಲ್ಲಿ ನಡೆದ [illegible] ಸಂಘಾತ'ದಿಂದ [illegible] ರಾತ್ರಿ [illegible]ಯಲ್ಲಿ ನಡೆದ [illegible]ದಿಂದ [illegible] ರೂ ೧೮ [illegible] ಜಮೆಯಾಗಿತ್ತು [illegible] ಸ್ಥಳಗಳಲ್ಲಿ [illegible] ತಿಳಿದುಬಂದಿದೆ. ಈ ಎಲ್ಲಾ ಕಡೆಗಳಲ್ಲಿಯೂ [illegible] ನಮ್ಮ ಕಾರ್ಯದರ್ಶಿಯವರಿಗೆ ಬೇಕಾದ [illegible] ಸಹಕರಿಸಬೇಕಾಗಿ [illegible]ಗಳಲ್ಲಿಯೂ ಉಪಾಧ್ಯಾಯರಲ್ಲಿಯೂ ಈ ಮೂಲಕ [illegible] ಕೇಳಿಕೊಳ್ಳುತ್ತೇನೆ. [illegible] ಆ ಕೆಲಸಕ್ಕೆ ಎಲ್ಲಾ ತರ [illegible] ಉಪಾಧ್ಯಾಯರುಗಳು ಎಡೆಗೊಡಬೇಕೆಂಬ ಡಿ॥ ಬೋ॥ ಪ್ರೆಸಿಡೆಂಟರ ಅಪೇಕ್ಷೆಯನ್ನು ಈ ಕೆಳಗೆ ಪ್ರಕಟಿಸುತ್ತೇನೆ

ಎಂ. ಆರ್. ಪೂಂಜ, ಅಧ್ಯಕ್ಷ
ಜಿಲ್ಲಾ ಹರಿಜನ ಸೇವಕ ಸಂಘ

ಡಿಸ್ಟ್ರಿಕ್ಟ ಬೋರ್ಡಿಗೆ ಸಂಬಂಧಪಟ್ಟ ಶಾಲೆಗಳಿಗೆ ಹರಿಜನ ಮಕ್ಕಳು ನಿರಾತಂಕವಾಗಿ ಬರಬಹುದಾದರೂ ಅವರಿಗೆ ಸಾಕಷ್ಟು ಪ್ರೋತ್ಸಾಹವು ಸಿಕ್ಕದಿರುವುದರಿಂದ ಅವರು ಬಹಳ ಸಂಖ್ಯೆಯಿಂದ ಬರುವಂತೆ ಆಗಲಿಲ್ಲ ಹೀಗಿರುವಾಗ, ಹಳ್ಳಿಗಳಲ್ಲಿರುವ ಶಾಲೆಗಳಿಗೆ ಬರಬಹುದಾದ ಹರಿಜನ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುವ ವ್ಯವಸ್ಥೆಯನ್ನು ಜಿಲ್ಲಾ ಹರಿಜನ ಸೇವಕ ಸಂಘದವರು ಮಾಡುತ್ತಿರುವುದು ಆ ಮಕ್ಕಳಿಗೆ ಒಂದು ತರದ ಪ್ರೋತ್ಸಾಹವನ್ನು ಕೊಡಲು ಸಾಧ್ಯವಾಗಬಹುದು. ಅದಕ್ಕಾಗಿ ಸಂಘದ ಕಾರ್ಯದರ್ಶಿಯವರು ಅಲ್ಲಲ್ಲಿ ಟಿಕೇಟಿನ ಕ್ರಮದಿಂದ ಫಂಡ ಮೇಳನವನ್ನು ನಡೆಸುತ್ತಿರುವುದು ಉತ್ತಮ ದಾರಿಯೆಂದು ನನ್ನ ಅಭಿಪ್ರಾಯ ಆ ಭಾಗದಲ್ಲಿ ಎಲ್ಲಾ ಶಾಲಾ ಉಪಾಧ್ಯಾಯರುಗಳು ಅವರವರ ಶಾಲೆಗಳಲ್ಲಿ ಬೇಕಾದ ಎಡೆಕೊಟ್ಟು ತಮ್ಮ ಪೂರ್ಣ ಸಹಕಾರ ಕೊಡಬೇಕೆಂದು ನನ್ನ ಅಪೇಕ್ಷೆಯಾಗುತ್ತದೆ

ಎ. ಬಿ. ಶೆಟ್ಟಿ, ಪ್ರೆಸಿಡೆಂಟ್,
ದ. ಕ. ಡಿಸ್ಟ್ರಿಕ್ಟ ಬೋರ್ಡ್.

ಅಮ್ಮೆಂಬಳ ಸುಬ್ಬರಾವ್ ಪೈ ಮೆಮೋರಿಯಲ್ ಫಂಡಿಗೆ ಧನಸಹಾಯ ಮಾಡಿದವರ ಮೂರನೆಯ ಪಟ್ಟಿ

ದಿವಂಗತ ಎ. ಉಪೇಂದ್ರಪೈ ಬಿ. ಎ., ಬಿ. ಎಲ್. [illegible] ಎಂ. ಎಲ್. ಎ. ನಿವೃತ್ತ ಕಲೆಕ್ಟರರು ಇವರ ಸ್ಮರಣಾರ್ಥವಾಗಿ ಇವರ ವಿಧೇಯ ಅಳಿಯರು ವೈಕುಂಠ ಪ್ರಭುಗಳು ರೂ. ೧೦೫; ದಿವಂಗತ ಯಂ. ಶ್ರೀನಿವಾಸ [illegible] ಪೈಯವರ ಸ್ಮರಣಾರ್ಥ ಡಾ॥ ಎಸ್. ಆರ್. ಪೈಗಳು ರೂ ೧೦೫; ದಿವಂಗತ ಯು. ಮಹಾಲಕ್ಷ್ಮಿಯವರ ಸ್ಮರಣಾರ್ಥ ಡಾ॥ ಎಸ್. ಆರ್. ಪೈಗಳು ರೂ. ೧೦೫, ಬಿ. ವಾಮನ ಶ್ರೀನಿವಾಸ ಬಾಳಿಗ (ಫೌಂಡೇಶನ್ ಟೀಚರ್) ರೂ. ೧೦೫, ಶ್ರೀಮತಿ ಗೌರಿಯಮ್ಮ ಶ್ರೀ [illegible] ಸ್ಮರಣಾರ್ಥ ಅವರ ಮಕ್ಕಳು ರೂ. ೧೦೧ [illegible] ಎಸ್. ಎಸ್. ರಾವ್, ಎಂ. ಬಿ. ಬಿ. ಎಸ್. ರೂ ೧೦೧, ಎಸ್. ರಾಯಪ್ಪನಾಯಕರು ರೂ. ೧೦೧, ಮಂಗಳೂರ ಪಾಂಡುರಂಗ ನಾಯಕ್ ಬಿ. ಎ., ಬಿ. ಎಲ್., ರೂ ೧೦೧, ಯು. ರಂಗಪ್ಪಭಂಡಾರಿ ರೂ. ೧೦೧, ತೋನ್ಸೆ ಗೋವಿಂದ ಪೈಗಳ ಸ್ಮರಣಾರ್ಥ [illegible] ಅನಂತಪೈ [illegible] ರೂ ೧೦೧ [illegible] ರಾಮಚಂದ್ರ [illegible] ರೂ ೧೦೧, [illegible] ಬಹದ್ದೂರ್ ಬಿ. ವೆಂಕಟ್ರಾವ್ ಬಿ. ಎ., ಬಿ. ಎಲ್., ರೂ. ೧೦೧, ಕೊಟ್ಟಿಕಾರ್ ರಘುನಾಥ ಪೈ ರೂ. ೧೦೧, ವಿ. ಎನ್. ಕುಡ್ವ [illegible] ಎಸ್. ರೂ ೧೦೦, ರಾವ್ ಬಹದ್ದೂರ್ ಎಂ. ಕೇಶವ ಪೈ [illegible] ಎಂ. ಡಿ. (ದ್ವಿತೀಯ ಕಂತು) ರೂ. ೫೦. ಒಟ್ಟು ರೂ ೧೧೪೩

ಮದ್ರಾಸ್ ಅಧಿಪತ್ಯಕ್ಕೆ ಸೇರಿದ ಪೈಕಾರದಲ್ಲಿ ವಿದ್ಯುತ್‌ಶಕ್ತಿಯ ಏರ್ಪಾಡು

ನೀಲಗಿರಿ [illegible]ಯಲ್ಲಿ ಸುಮಾರು [illegible] ಅಡಿ ಎತ್ತರದ [illegible]ಗಳ ಜಲಸ್ಥಾನದ ಭೂಮಿಯ ನೀರನ್ನು ಪಡೆದು [illegible] ಬರುವ [illegible] ನದಿಯು [illegible] ದಾರಿಯಲ್ಲಿ ಅನೇಕ ಕಡೆ [illegible]. ಈ [illegible]ಗಳಲ್ಲಿ [illegible] ಸುಮಾರು ೪೦೦೦ ಅಡಿಗಳಷ್ಟು [illegible] ಬೀಳುವುದರಿಂದ [illegible] ಜಲಪಾತಗಳ ಶಕ್ತಿಯನ್ನು [illegible] ಸುಮಾರು ೩೦೦೦ ಅಡಿ [illegible] ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು [illegible] ಮದ್ರಾಸ್ ಸರಕಾರದವರು ಪ್ರಯತ್ನಿಸಿದ್ದಾರೆ.

ಪೈಕಾರ ನದಿಯ ಜಲಾಶಯದ ಭೂಮಿಯಲ್ಲಿ ಪ್ರತಿ ವರ್ಷ ಬೀಳುವ ಮಳೆಯು ಸುಮಾರು ೧೧೦ ಅಂಗುಲಗಳು. ಜೂನ್ ತಿಂಗಳಿಂದ ನವಂಬರಿನೊಳಗೆ ಒಟ್ಟು ಮಳೆಯಲ್ಲಿ [illegible] ಬೀಳುವುದು. ಆದುದರಿಂದ ಈ ಪ್ರವಾಹವನ್ನು ಗಮನಿಸಿದರೆ, ಬಿರುಬೇಸಗೆಯಲ್ಲಿ [illegible] ಪ್ರವಾಹವಾಗಿಯೂ ಮತ್ತೊಂದು ಕಾಲದಲ್ಲಿ ಬತ್ತಿದ ನದಿಯಾಗಿಯೂ ಇರುವುದು. ಅದುದರಿಂದ ಅನುಕೂಲವಾದ ಕಡೆಗಳಲ್ಲಿ ಸುಮಾರು ೩೩೦ ಕೋಟಿ ಘನ ಅಡಿಗಳ ನೀರನ್ನು ಹಿಡಿಯುವ ಜಲಾಶಯಗಳನ್ನು ನಿರ್ಮಿಸಿ ಅವುಗಳಿಂದ ಹೊರಡುವ ನೀರಿನ ವೇಗದಿಂದ ೯೦,೦೦೦ ಅಶ್ವಶಕ್ತಿಗಳ ವಿದ್ಯುಚ್ಛಕ್ತಿಯನ್ನು ಪೈಕಾರದಲ್ಲಿಯೂ ಅದಕ್ಕಿಂತಲೂ ತಗ್ಗಾದ ಮತ್ತೊಂದು ಕಡೆ ೩೬,೦೦೦ ಅಶ್ವಶಕ್ತಿಗಳ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬೇಕೆಂದು ಯೋಜನೆಯಿರುವುದು.

ಈ ಪ್ರಯತ್ನದ ಮೊದಲನೇ ಮೆಟ್ಟಲಾಗಿ ೬,೦೦೦ ಅಡಿಗಳ ಎತ್ತರದ ಪ್ರವಾಹವನ್ನು [illegible]ಕೊಂಡು [illegible] ಅಶ್ವಶಕ್ತಿಗಳ ವಿದ್ಯುತ್ತನ್ನು ನಿರ್ಮಿಸುವ ನದಿಯ ನೀರನ್ನು [illegible]. ಕಣಿವೆಗೆ [illegible] ಮೂಲಕ ತಿರುಗಿಸಿ ಕಣಿವೆಗೆ ಅಡ್ಡಕಟ್ಟನ್ನು ಹಾಕಿ [illegible] ನೀರನ್ನು ೨೭ ಅಂಗುಲ, ೨೯ ಅಂಗುಲ, ೩೧ ಅಂಗುಲ ವ್ಯಾಸವಿರುವ ಮೂರು ಉಕ್ಕಿನ ಕೊಳವೆಗಳ ಮೂಲಕ [illegible] ಅಡಿಗಳ ದೂರ ಇಳಿಜಾರಿನಲ್ಲಿ ಸಾಗಿಸಿ ವಿದ್ಯುತ್ ಯಂತ್ರವು ತಿರುಗುವಂತೆ ಮಾಡುವರು. ಇಲ್ಲಿ ಉತ್ಪತ್ತಿಯಾದ ಶಕ್ತಿಯನ್ನು ೫೦ ಮೈಲಿಗಳ ದೂರ ಕೊಯಮುತ್ತೂರಿಗೆ ಸಾಗಿಸಿ, ಅಲ್ಲಿಂದ ನೆರೆಹೊರೆಯ ಜಿಲ್ಲೆಗಳಿಗೆ ಶಕ್ತಿಯನ್ನು ಹಂಚುವರು.

ಅನುಕ್ರಮಣಿಕೆ.

ಚಿತ್ರ. ೩
ಪತ್ರಿಕಾ ಪ್ರಪಂಚ. ೪
ಜರ್ಮನಿಯು ಸೈನ್ಯವನ್ನು ಹೆಚ್ಚಿಸುತ್ತಿದೆ. ೫
ಅಂತರಂಗ ೬
ನಮ್ಮ ಮುಂದಾಳುಗಳು ೮

ಅಗ್ರಲೇಖ
ಸ್ಫುಟವಿಚಾರಗಳು ೯
ಜರ್ಮನಿಯ ಗಂಟಲು ಸರಿಯಾಯಿತು. ೧೦

ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು. ೧೬
ಬಾಲವನ ೧೮
ಹೆಡ್ಡಾಪ್ಸ್‌ನ ಅರಸನ ಕೊಲೆಗಾಗಿ ವೈರಿಗಳ ಯತ್ನ ೧೯

ಸ್ವದೇಶಾಭಿಮಾನಿ

ತಾ. ೨೨ನೇ ಶುಕ್ರವಾರ ಮಾರ್ಚ್ '೩೫

ಜರ್ಮನಿಯ ಗಂಟಲು ಸರಿಯಾಯಿತು.

ಜರ್ಮನಿಯು ಇದುವರೆಗೆ ವರ್ಸೇಲಿಸ್ ಒಪ್ಪಂದವನ್ನು ಗಂಟಲಲ್ಲಿ ತುರುಕಿಕೊಂಡು ಕುಳಿತಿತ್ತು. ಸೋಲನ್ನು ಪಡೆದ ಜನಾಂಗವಾದುದರಿಂದ ಯುದ್ಧದ ಆರೋಪ್ಯ, ಅಪರಾಧ—ಎಲ್ಲಕ್ಕೂ ಭಾಗಿಯಾಗಿತ್ತು. ಅಷ್ಟೇ ಅಲ್ಲದೆ ಇನ್ನು ಮುಂದೆಯೂ ಜರ್ಮನಿಯು ಹಲ್ಲು ಉಗುರುಗಳನ್ನು ಕಳಚಿ ತನ್ನನ್ನು ಶಕ್ತಿಯುತ ನಿರಪಾಯಿಯಾಗಿ ಮಾಡಬೇಕೆಂದು ಆ ಒಪ್ಪಂದದ ಹವಣಿಕೆಯಾಗಿತ್ತು. ಈ ಮಹಾ ಕಾರ್ಯದಲ್ಲಿ ಫ್ರಾನ್ಸ್, ಇಂಗ್ಲೆಂಡುಗಳೆಲ್ಲ ತಮ್ಮ ಭಾರವನ್ನು ಹೊರಿಸಿದ್ದವು. ಜರ್ಮನಿಗೆ—ವಾಯುನಾವೆಯ ಅಧಿಕಾರವಿಲ್ಲ, ಬೇಕಾದಷ್ಟಿದ್ದಂತೆ ಸಾರ್ವತ್ರಿಕ ಪ್ರಜಾ ಶಿಕ್ಷಣವಿಲ್ಲ, ಯುದ್ಧನಾವೆಗಳಿವೆ—ಅಮಿತ ಮಿತಿಯಿದೆ.

ಜರ್ಮನಿಯು ಈ ತೆರದ ನಿರ್ಬಂಧಗಳಿಗೆ ಸಿಲುಕಿ ಕೆಲವು ವರುಷಗಳನ್ನು ಕಳೆಯಬೇಕಾಯಿತು. ತನ್ನ ಶಕ್ತಿ ಮೀರಿ ಯುದ್ಧದ ದಂಡವನ್ನು ತೆತ್ತಿತು. ಇತ್ತ ಆರ್ಥಿಕ ಮುಗ್ಗಟ್ಟು ಅದನ್ನು ಕಾಡಿತು. ಮಾಡಿದ್ದೆಲ್ಲ ಯುದ್ಧದ ದಂಡಕ್ಕಾಯಿತು. ಇತ್ತ ಈ ಹಣವನ್ನು ಗಳಿಸಲು ಸುತ್ತಲಿನ ಜನಾಂಗಗಳು ಅದಕ್ಕೆ ಅವಕಾಶ ಕೊಡಲಿಲ್ಲ. ಅದರ ಮಾಲುಗಳು ತಮ್ಮ ನಾಡಿಗೆ ಬಾರದಂತೆ ಸುಂಕ ಹೊರಿಸಿದುವು. ಸಂಧಿ ಕರಾರಿನಂತೆ ಜರ್ಮನಿಗೆ ಸುವರ್ಣ ಪ್ರಮಿತಿಯನ್ನು ಬಿಡಲು ಅನುಕೂಲವಾಗಲಿಲ್ಲ. ಇಂಗ್ಲೆಂಡು ಸಹ ಬಿಟ್ಟಿತು. ಯುದ್ಧದ ಸಾಲವನ್ನು ಇಂಗ್ಲೆಂಡು, ಫ್ರಾನ್ಸ್, ಇಟಲಿಗಳೆಲ್ಲ ನಿರಾಕರಿಸಿದುವು—ಜರ್ಮನಿಯು ಯುದ್ಧದಂಡವನ್ನು ನಿರಾಕರಿಸಿದರೇನು—ಎಂಬ ಪ್ರಶ್ನೆ ಬಂತು.

ಈ ಎಲ್ಲ ಪ್ರಶ್ನೆಗಳನ್ನು ಉತ್ತರಿಸುವ ಧೈರ್ಯವು ಜರ್ಮನಿಯ ಈಗಿನ ಮುಖಂಡನಾದ ಹಿಟ್ಲರನಿಗೆ ಬಂದಿದೆ. "ನಮ್ಮ ಮಾಲುಗಳನ್ನು ಕೊಂಡಲ್ಲದೆ ಸಾಲ ತೀರಿಸಲಾರೆವು" ಎಂದು ಅವನು ನುಡಿಯಬೇಕಾಯಿತು. ಈಗ ಬಂದಿದೆ—ನಿಶ್ಶಸ್ತ್ರತೆಯ ವಿಚಾರ. ವರ್ಸೇಲಿನ ಒಪ್ಪಂದದ ಭಾವವನ್ನು ಮುರಿಯುವಂತೆ ಮಿಕ್ಕ ಜನಾಂಗಗಳು ಬೇಕಂತೆ ತಮ್ಮ ಶಸ್ತ್ರಗಳನ್ನೂ ವಿಮಾನಗಳನ್ನೂ ಹೆಚ್ಚಿಸುತ್ತಿರುವಾಗ, ಜರ್ಮನಿಯು ಮಾತ್ರ ಸುಮ್ಮನಿರಬೇಕೆ? ಯುದ್ಧದ ಅಪರಾಧವು ಜರ್ಮನಿಯ ಮೇಲೆ ಹೊರಿಸಲ್ಪಟ್ಟಿದ್ದರೂ, ಕಳೆದ ಮಹಾಯುದ್ಧವನ್ನು ತೊಡಗಿದ ಪಾಪದ ಪಾಲಿಗೆ ಇನ್ನೂ ಹಲವು ಜನಾಂಗಗಳು ಇದ್ದವೆಂಬುದು ಎಲ್ಲರಿಗೂ ತಿಳಿದ ಮಾತು. ಹೀಗಿರಲು—ನಿನ್ನೆ ದಿನ, ಹಿಟ್ಲರನ ಮಂತ್ರಿಯು "ನಾವು ಸಹ ಇನ್ನು ಮುಂದೆ ಶಸ್ತ್ರವನ್ನು ಹೆಚ್ಚಿಸದೆ ಮಾರ್ಗವಿಲ್ಲ. ಈ ವಿಷಯದಲ್ಲಿ ಇನ್ನು ಗುಪ್ತ ವ್ಯವಹಾರ ನಮಗಿಲ್ಲ. ಇತರ ಜನಾಂಗಗಳು ಬಹಿರಂಗವಾಗಿ ವರ್ಸೇಲಿ ಒಪ್ಪಂದವನ್ನು ಅತಿಕ್ರಮಿಸುತ್ತಿರುವಾಗ ನಾವು ಹೇಗೆ ಸುಮ್ಮನಿರುವುದು? ಅವರಿಗೆ ನಮ್ಮ ಭೀತಿಯಿದೆಯಾದರೆ, ನಮಗೆ ಅವರ ಭೀತಿಯಿಲ್ಲ. ಜರ್ಮನಿಯ ಪ್ರಜೆಗಳನ್ನು ಆಪತ್ಕಾಲದಲ್ಲಿ ರಕ್ಷಿಸುವ ಜವಾಬುದಾರಿಯು ಯಾರದು?"—ಎಂದು ತಮ್ಮ ಪರಿಸ್ಥಿತಿಯನ್ನು ಬಣ್ಣಿಸಿದರು. ಈ ಮಾತುಗಳಿಂದ ಯುರೋಪು ತಳಮಳಗೊಂಡಿದೆಯಂತೆ. ಮುಖ್ಯವಾದ ತಳಮಳವು ಫ್ರಾನ್ಸಿನಲ್ಲಿ ಉಂಟಾಗಿರಬಹುದು.

ಆದರೆ, ಜರ್ಮನಿಯ ಈ ನಿರ್ಧಾರವನ್ನು ಸಮದೃಷ್ಟಿಯಿಂದಲೂ, ಸಹಾನುಭೂತಿಯಿಂದಲೂ ನೋಡಿದಲ್ಲಿ—ಹಿಟ್ಲರನ ನಿರ್ಧಾರದಿಂದ ಬೆರಗಾಗಲು ಕಾರಣವಿಲ್ಲ.

ಅಪನಂಬುಗೆಯಿಂದ ಒಂದು ಜನಾಂಗವು ಯುದ್ಧೋಪಕರಣವನ್ನು ಬೆಳೆಸಿದರೆ, ಇನ್ನೊಂದು ಸುಮ್ಮನಿರಬಲ್ಲುದೇ?

ನಿರುದ್ಯೋಗಿಗಳ ಸಂಘ.

ಎಲ್ಲೆಲ್ಲೂ ಹಬ್ಬುತ್ತಿರುವ ಈ ಪ್ರಶ್ನೆಯ ವಿಚಾರವಾಗಿ ಈ ಮೊದಲು, ಒಂದು ಲೇಖನವನ್ನು ಬರೆದಿದ್ದೆವು. ಆದರೆ ಅದಕ್ಕೂ ಅವರ ವಿಚಾರವಾಗಿ ಯಾವುದೊಂದು ಸರಿಯಾದ ಏರ್ಪಾಡನ್ನು ಮಾಡುವುದಕ್ಕೂ, ಆ ಸಂಬಂಧವಾದ ಚಳವಳಿಗಳನ್ನು ನಡೆಸುವುದಕ್ಕೂ ಸರಕಾರದ ಗಮನವನ್ನು ಸೆಳೆಯುವುದಕ್ಕೂ ಇನ್ನೂ ಹೆಚ್ಚಿನ ವ್ಯವಸ್ಥೆಯು ನಮ್ಮಲ್ಲಿ ಬೇಕಾಗಿದೆ. ಮುಂದರಿದ ಸ್ಥಿತಿಯೊಂದ ದೇಶದವರು ಈ ವಿಷಯದ ಸಂಖ್ಯಾ ಪ್ರಮಾಣಗಳನ್ನು ಸಂಗ್ರಹಿಸಿ ಆಗಾಗ ಪ್ರಕಟಿಸುತ್ತಿರುತ್ತಾರೆ. ಯಾವಾಗ ಎಷ್ಟು ಜನ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆ ಎಂಬ ವಿಚಾರವು ಅವರ ಗಣಕದ ಬೆರಳ ತುದಿಯಲ್ಲಿದೆ. ಅಷ್ಟೇ ಅಲ್ಲ, ನಿರುದ್ಯೋಗಿಗಳಿಗೆ ನಿವೃತ್ತಿಯನ್ನು ಉಂಟುಮಾಡುವ ಬಗ್ಗೆ—ಇಂಗ್ಲೆಂಡು, ಜರ್ಮನಿ, ಅಮೇರಿಕ ದೇಶಗಳ ಸರಕಾರಗಳು ಒಂದು ರೀತಿಯ ಸಹಾಯ ಧನಗಳನ್ನು ಕೊಡುತ್ತಾರೆ. ನಿರುದ್ಯೋಗಿಗಳ ಸಂಘಗಳಿವೆ. ಉದ್ಯೋಗ ಹುಡುಕುವವರೂ, ಕೆಲಸಗಾರರೂ ಈ ಸಂಘದವರೊಡನೆ ಸಹಕರಿಸುತ್ತಾರೆ. ಈ ಸಂಘಗಳೆಂದರೆ ಸರಕಾರ, ಕೆಲಸಗಾರ, ಧನಿಗಳೊಳಗಿನ ಮಧ್ಯವರ್ತಿಯು. ಹಿಂದುಸ್ಥಾನ, ಚೀನಾ ದೇಶಗಳಲ್ಲಿ ಪರಮಾವಧಿಯ ನಿರುದ್ಯೋಗವಿದ್ದರೂ—ನಿರುದ್ಯೋಗಿಗಳ ಸಂಖ್ಯೆ ಎಂಬುದಿಲ್ಲ. ಸರಕಾರಕ್ಕೇನೆ ಅದರ ಗೊಡವೆ ಸಿಳಿದಿಲ್ಲ. ನಿರಕ್ಷರಕುಕ್ಷಿಗಳ ವಿಚಾರದಲ್ಲಿ ಈ ಸಂಖ್ಯೆಯನ್ನು, ಸಂಘಗಳನ್ನು ತೆರೆಯುವುದು ಕಷ್ಟವಾಗುವುದು. ಆದರೆ ವಿಶ್ವವಿದ್ಯಾಲಯದ ಬಾಗಿಲನ್ನು ದಾಟಿದವರ ವಿಚಾರವಾಗಿ ಇಂಥ ಸಂಘವನ್ನು ಏಕೆ ಏರ್ಪಡಿಸಬಾರದು?

ಹೊರಗಿನ ವಿಚಾರ ಹಾಗಿರಲಿ ಈಗಿನ ದಿನಗಳಲ್ಲಿ ಸರಕಾರದ ಮೇಲೆ ವಿಶೇಷ ಭಾರವನ್ನು ಹಾಕಿದರಾಗದು. ಅವರು ಮಾಡಲಿಲ್ಲವೆಂದು ನಾವು ನಮ್ಮ ಕರ್ತವ್ಯವನ್ನು ಬಿಡಲಾಗದು. ನಮ್ಮ ಜಿಲ್ಲೆಯ ಮಟ್ಟಿಗಾದರೂ ಇಂಥ ಒಂದು ಸಂಸ್ಥೆಯನ್ನು ಮಾಡಲು ಸಾಧ್ಯವಿದೆ. ಆದರೆ ಇದರ ನಿರ್ಮಾಣಕ್ಕೆ—ನಮ್ಮ ಜಿಲ್ಲೆಯ ಮುಂದಾಳುಗಳು ಕೈಹಚ್ಚಬೇಕು. ಎಲ್ಲ ಸ್ಥಿತಿ, ಜಾತಿಗಳವರೂ ಸೇರಬೇಕು. ಈ ಪ್ರಶ್ನೆಯು ಯಾವುದೇ ಒಂದು ಜಾತಿಗೆ ಅನ್ವಯಿಸಿದ ಪ್ರಶ್ನೆಯಲ್ಲ.

ಮೊದಲಿನ ನಮ್ಮ ಕೆಲಸವೆಂದರೆ, ಪ್ರಕಟಣೆಯ ಮೂಲಕ—ಎಷ್ಟೋ ಮಂದಿ ವಿದ್ಯಾವಂತರಾದ ನಿರುದ್ಯೋಗಿಗಳ ಸಂಖ್ಯೆ ಯೋಗ್ಯತೆ ಇವುಗಳ ಒಂದು ದಾಖಲೆಯನ್ನು ಸಂಗ್ರಹಿಸುವುದು. ಅನಂತರ—ಈ ಸಂಖ್ಯೆಯನ್ನು ಯಾವಾವ ರೀತಿಯಿಂದ ತಗ್ಗಿಸಬಹುದೆಂದು ಯೋಚಿಸುವುದು. ಉದ್ಯೋಗ ಸಾಧಿಸುವವರೂ, ಪಡೆಯುವವರೂ ಈ ಸಂಘದ ಮೂಲಕವೇ ಕೆಲಸ ಸಾಧಿಸಲು ಯತ್ನಿಸುವುದು.

ಇದರಿಂದ ಅನಾವಶ್ಯಕವಾದ ವ್ಯಕ್ತಿಶ್ರಮ, ಪಕ್ಷಪಾತ, ಜಾತಿ ವೈಷಮ್ಯಗಳನ್ನು ತಪ್ಪಿಸಲು ಬಂದೀತು. ಹೊಟ್ಟೆ ಹಸಿವನ್ನು ಹಿಂಗಿಸುವ ವಿಷಯದಲ್ಲಿ—ಜಾತಿ, ಜಾತಿಗಳನ್ನು ಎತ್ತಿ ಕಟ್ಟುವಂಥ ನೀಚತನಕ್ಕೆ ಸಮಾಜವು ಅವಕಾಶವನ್ನು ಕೊಡಬಾರದು. ಮುಖಂಡರೂ, ಧನಿಗಳೂ ಸಹಕರಿಸಿದರೆ ಈ ಕೆಲಸ ಕಷ್ಟದ್ದಲ್ಲ.

ಎಲ್ಲರ ಸಂಖ್ಯೆಯನ್ನೂ, ಯೋಗ್ಯತೆಯನ್ನೂ ಆದಷ್ಟು ಕೂಲಂಕಷವಾಗಿ ತಿಳಿದುಕೊಂಡು ಎಲ್ಲ ಸ್ಥಳ ಖಾಲಿಯಾಗುವುದು, ಯಾರು ಅತಿ ಹೆಚ್ಚಿನ ಯೋಗ್ಯತೆಯುಳ್ಳವರು, ಯಾರು ಅತಿ ಬಡವರು, ಯಾರು ಸಂಸಾರದ ಹೊರೆಯುಳ್ಳವರು, ಯಾರು ಯಾವ ಕೆಲಸಕ್ಕೆ ತಕ್ಕವರು, ಯಾರು ನಿರುದ್ಯೋಗದ ಅತಿ ಹೆಚ್ಚಿನ ದಿನಗಳನ್ನು ಕಳೆದಿರುವರು—ಎಂಬುದನ್ನು ಗಮನಿಸಿ ಕೆಲಸವನ್ನು ದೊರಕಿಸಬೇಕು.

ನಮ್ಮ ಬೋರ್ಡುಗಳು, ಮುನಿಸಿಪಾಲಿಟಿಗಳು, ಕಾರ್ಖಾನೆಯ ಯಜಮಾನರು, ಈ ಸಂಘದೊಡನೆ ಸಹಕರಿಸಿ ಕೆಲಸ ಮಾಡಿದಲ್ಲದೆ ಈ ಪ್ರಶ್ನೆಯು ತೀರ್ಮಾನವು ಸಾಧ್ಯವಿಲ್ಲ.

ಇದಲ್ಲವಾದರೆ—ಈಗಿರುವಂತೆ ಕೇವಲ ಜಾತಿ ಬಾಂಧವ್ಯಗಳ ಮೇಲೆ ಪ್ರಶ್ನೆಯು ತೀರ್ಮಾನವಾಗುವುದು. ಏನೂ ಆಧಾರವಿಲ್ಲದವರೂ ಸಂಸಾರಿಗಳೂ, ಬೇರೆ ವ್ಯಕ್ತಿಗೆ ಇಳಿಯಲು ಅನುಕೂಲವಿಲ್ಲದೆ ನಯುಸ್ವಾದವರೂ ಇರುತ್ತ, ಒಂದೆರಡು ಖಾಲಿ ಬೀಳುವ ಉದ್ಯೋಗಗಳು ಕೆಲವು ದಿನ ಸುಮ್ಮನಿರಲು ಅನುಕೂಲ ಎಂದವರಿಗೂ, ಶ್ರೀಮಂತರ ಮಕ್ಕಳಿಗೂ (ಕಾರಣ, ಅವರಿಗಿರುವ ಅನುಕೂಲಸ್ಥರ ಮೇಲಿನ ವರ್ಚಸ್ಸು ಬಡವರಿಗಿಲ್ಲ) ಹೋಗಿ ಹೊಸ ಗೋಳಿನ ಮೊತ್ತವು ಹೆಚ್ಚುವುದೇ ಆಗಿದೆ.

ಆದರೆ—ಎಂಬ ಪಕ್ಷ ಈ ಉಪದೇಶವನ್ನು ನಮ್ಮ ಮುಂದಾಳುಗಳಲ್ಲಿ ಬಯಸಬಹುದೇನು?

ಮದ್ರಾಸು ಕೌನ್ಸಿಲಿನಲ್ಲಿ

ತಾ ೧೮ರಲ್ಲಿ ಮದ್ರಾಸು ಕೌನ್ಸಿಲಿನ ಸಭೆಯು ಜರಗಿತು. ಶ್ರೀ। ಜಿ ರಾಮೇಶ್ವರರಾಯರೆಂದರು. "ಈ ಸಂಸ್ಥಾನದ ಗ್ರಾಮನಿವಾಸಿಗಳಿಗೆ ಕೊಟ್ಟ ಉಪ್ಪಿನ ಕಂದಾಯದ ರಿಯಾಯತಿಯನ್ನು ಸರಕಾರವು ಹಿಂದೆ ತೆಗೆದುದು ಏಕೆ? ಜನರು ತಮಗೆ ದೊರೆತ ರಿಯಾಯಿತಿಗಳನ್ನು ದುರುಪಯೋಗಗೊಳಿಸಿದರೇ?"

ಫೈನಾನ್ಸ್ ಮೆಂಬರರು—"ಈ ಪ್ರಶ್ನೆಯು ಕೇಂದ್ರ ಶಾಸನ ಸಭೆಗೆ ಸಂಬಂಧಪಟ್ಟುದು. ಸ್ಥಳೀಕ ಸರಕಾರಗಳಿಗೆ ಈ ವಿಷಯ ಸಕ್ಕಿಲ್ಲ."

ಶ್ರೀ। ರಾಮೇಶ್ವರರಾಯರು—"ಉತ್ತರವು ಸಮರ್ಪಕವಾದುದಲ್ಲ. ಈ ವಿಷಯವು ಸಾರ್ವಜನಿಕ ವಿಷಯ ಆದಕ್ಕೆ ಕೇಳಿದೆ ಇದೆಂತಹ ಉತ್ತರ?"

ಸರ್ ಜೋಸ್ ಟನ್ ಸ್ಪೀಕರು—"ನೀವು ಭಾಷಣ ಮಾಡಲು ತೊಡಗಿರುವಿರಾ?"

ಅಧ್ಯಕ್ಷರು "ರಾಯರೇ ಇದು ಪ್ರಶ್ನೆಯ ಸಮಯ ಈ ವೇಳೆಯಲ್ಲಿ ಭಾಷಣಮಾಡುವ ಅಧಿಕಾರವಿಲ್ಲ, ತಿಳಿಯಿತೇ?"

ಶ್ರೀ। ರಾಮೇಶ್ವರರಾವ್—"ಅದು ತಿಳಿದಿದೆ ನಾನು ಮಾಡುವುದು ಭಾಷಣವಲ್ಲ, ಪ್ರಶ್ನೆಯಿಟ್ಟು ಅದಕ್ಕನುಗುಣವಾದ ಉತ್ತರವನ್ನು ನಿರೀಕ್ಷಿಸುವ ಹಕ್ಕನ್ನು ಕಾಪಾಡಿಕೊಳ್ಳುವುದು ತಪ್ಪೇ?"

ಅಧ್ಯಕ್ಷರು—"ರಕ್ಷಣೆ—ಕಾಪಾಡುವಿಕೆಯ ಪ್ರಶ್ನೆ ಈಗಿಲ್ಲ. ನೀವೆತ್ತಿದ ವಿಷಯವು ನಮ್ಮ ಸ್ಥಾನಿಕರಿಂದ ಲಕ್ಷ್ಯಕ್ಕೆ ಸಂಬಂಧಪಟ್ಟುದಲ್ಲ."

ಶ್ರೀ। ರಾಮೇಶ್ವರರಾಯರು—"ಅನಂತಪುರ ಜಿಲ್ಲೆಯಿಂದ ಅಧಿಕಾರಿಗಳ ರಿಪೋರ್ಟುಗಳು ಬಂದಿದ್ದು ಜನರು ತಮ್ಮ ರಿಯಾಯತಿಗಳ ದುರುಪಯೋಗ ಮಾಡಿಕೊಳ್ಳುತ್ತಿರುವರೆಂದು ತಿಳಿಸಲ್ಪಡಲಿಲ್ಲವೇ? ಸರಕಾರವು ಜನರಿಗೆ ಎಚ್ಚರವನ್ನು ಮುಟ್ಟಿಸಲಿಲ್ಲವೇ?"

ಅರ್ಥಸಚಿವರು—"ಈ ವಿಷಯವು ನಮಗೆ ಸಂಬಂಧಿಸಿದುದೇ ಅಲ್ಲ. ಇದಕ್ಕೆ ನಮ್ಮಿಂದ ಉತ್ತರವು ದೊರೆಯಲಾರದು."

(ಅಲ್ಲಿಗೆ ಈ ವಿಷಯವು ಮುಗಿಯಿತು. ಎಲ್ಲರೂ ಬಾಯ್ಮುಚ್ಚಿದರು.)

ಶ್ರೀ। ವಿ. ಜಿ. ವಾಸುದೇವ ಪಿಳ್ಳೆ—"ಎಲ್ಲೂರಿನಲ್ಲಿ ಮುಕ್ಕೋಟಿ ಏಕಾದಶಿ ದಿನ ಹರಿಜನರ ಒಂದು ಮೆರವಣಿಗೆಯನ್ನು ಪೋಲೀಸರು ತಡೆದು ಸನಾತನಿಗಳ ಮೆರವಣಿಗೆಯನ್ನು ಹೋಗಬಿಟ್ಟುದು ಏಕೆ?"

ಹೋಮ್ ಮೆಂಬರರು—"ಸರಿ ಸರಿ, ಈ ವಾರ್ತೆ ಬಂದಿದೆ. ಸನಾತನಿಗಳ ಒಂದು ಮೆರವಣಿಗೆಯು ಕಿಂಗ್ಸ್ ರೋಡಿನಲ್ಲಿ ಹೋಗುತ್ತಿತ್ತು. ಈ ಮೆರವಣಿಗೆಗೆ ಪೋಲೀಸ ಬಂದೋಬಸ್ತು ಇತ್ತು. ಅದು ಹೋಗುತ್ತಿರುವಾಗ ಹರಿಜನರ ಒಂದು ಮಂಡಲಿಯು ಬಂತು. ಗಲಾಟೆಯಾಗದೆಂತೆ, ಪೋಲೀಸರು ಹರಿಜನರನ್ನು ತಡೆದುದು ಖರೆ. ಹರಿಜನರ ಮುಖಂಡರೊಡನೆ ಮಾತನಾಡಿ ಅವರು ಇನ್ನೊಂದು ದಾರಿಯಿಂದ ಹೋಗುವಂತೆ ಪೋಲೀಸರು ಹೇಳಿದರು. ಅವರು ಹಾಗೆಯೇ ಇನ್ನೊಂದು ಮಾರ್ಗ ಹಿಡಿದರು, ಪೋಲೀಸರು ಬಲಾತ್ಕಾರ ನಡೆಸಲಿಲ್ಲ.

(ಈ ವಿಷಯವು ಮುಗಿಯಿತು.)

ಮೈಸೂರಿನ ಶ್ರೀಮನ್ಮಹಾರಾಜರವರು.

ಕೆಲವು ದಿನಗಳ ಹಿಂದೆ ಮುಂಬಾಯಿಗೆ ತೆರಳಿದರು. ಅಲ್ಲಿ ಇಪರು ಸಂಕರ ಸರಕಾರದ ಸೇಲ್ಸ್ ಡಿಪೋವನ್ನು ನೋಡಿದರು. ಅಲ್ಲಿ ನಡೆಯುವ ಕೆಲಸಗಳನ್ನು ಕಂಡು ಮಹಾರಾಜರು ಸಂತೋಷಿತರಾದರು.

ಶ್ರೀ। ಜಿ ರಾಮೇಶ್ವರರಾಯರ ಪ್ರಶ್ನೆ—"ಕ್ಷಾಮಪೀಡಿತ ಸ್ಥಳಗಳಲ್ಲಿ ಕೂಲಿಗಳ ದರವನ್ನು ಹೆಚ್ಚಿಸಬೇಕೆಂದು ಮನವಿಗಳು ಬಂದಿವೆಯೋ? ಈಗ ಎಷ್ಟು ಕೂಲಿ ಕೊಡಲಾಗುತ್ತಿದೆ?"

ಅಧ್ಯಕ್ಷರು—"ಮನವಿಗಳು ಬಂದಿವೆ. ಆದರೆ ಈಗ ಆ ಕೂಲಿಗಳ ಸಂಬಳವೆಷ್ಟೆಂದು ತಿಳಿದುಬಂದಿಲ್ಲ. ಬೇಗನೆ ಕೂಲಿಯನ್ನು ಹೆಚ್ಚಿಸಲಿದ್ದೇನೆ."

ರಾಮೇಶ್ವರರಾಯರು—"ಯಾವಾಗ ಹೆಚ್ಚಿಸುವಿರಿ? ಈ ತಿಂಗಳಲ್ಲಿ ಹೆಚ್ಚಿಸಬಹುದೇ?"

ಮಿ। ಸಡಿಟರು "ಯಾವಾಗ ಎಂದು ಹೇಗೆ ಹೇಳಲಿ? ಹಾಗೂ ಬೇಗನೇ ಹೆಚ್ಚಿಸುವುದು ಖರೆ."

ಶ್ರೀ। ಕೋಟಿರೆಡ್ಡಿ—"ಕ್ಷಾಮಪೀಡಿತ ಪ್ರಾಂತ್ಯದ ಸ್ತ್ರೀಯರು ಉಣ್ಣುವಷ್ಟು ಆಹಾರವನ್ನಾದರೂ ಜೈಲುಗಳಲ್ಲಿ ಕೈದಿಗಳಿಗೆ ಕೊಡಲಾಗುತ್ತಿದೆಯೋ?"

ಮಿ। ಸೂಟರರು—"ಕೈದಿಗಿಂತ ಕ್ಷಾಮಪೀಡಿತ ಪ್ರಾಂತ್ಯಗಳಲ್ಲಿನ ಸ್ತ್ರೀ ಕೆಲಸಗಾರರಿಗೆ ಹೆಚ್ಚು ಆಹಾರವನ್ನು ಕೊಡುತ್ತೇವೆ. ಹೆಚ್ಚಿನ ಮಟ್ಟಿಗೆ ಕೈದಿಗೆ ಹೆಚ್ಚು ಆಹಾರವನ್ನು ಕೊಡುತ್ತೇವಾದರೂ ಸ್ತ್ರೀಯರು ಉಣ್ಣುವ ಆಹಾರವು ಅವರಿಗಿಂತ ಹೆಚ್ಚು."

ಲಂಡನ್.

ಬಂಗಾಳದ ಕ್ರಾಂತಿಕಾರರು!
ಸರ್. ಸಾಮುವೇಲ್ ಹೋರರ ಹೇಳಿಕೆ.

ಮಾರ್ಚಿ, ೧೪

ಡಚೆಸ್ ಒಫ್ ಅಥೋಲ್‌ರವರು ಕಾಮನ್ಸ್ ಸಭೆಯಲ್ಲಿ ಪ್ರಶ್ನೆಯೊಂದು ಕೇಳುತ್ತ ಬಂಗಾಳದಲ್ಲಿ ಟೇಬರ್ ಚಳವಳಿಯು ತಲೆದೋರುತ್ತಿದ್ದು, ಅಲ್ಲಿ ಕಮ್ಯೂನಿಸ್ಟರ ಹಾವಳಿಗಾರಂಭವಾದುದು ಖರೆಯೋ ಎಂದು ಕೇಳಿದರು. ಉತ್ತರವಾಗಿ ಹೋರರು "ಅಲ್ಲಿಯ ಸರಕಾರಗಳು ಈ ಬಗ್ಗೆ ತಕ್ಕ ಶಾಸನವಮಾಡಿವೆ. ಅಲ್ಲಿ ವಿಶೇಷವಾದ ಭೀತಿಗೆ ಕಾರಣವಿಲ್ಲ" ಎಂದರು. ಬಂಗಾಳದ ೨೨ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕ್ರಾಂತಿಕಾರರೊಡನೆ ಶಾಸನದತ್ತವಾದ ಅಧಿಕಾರ ಕೊಟ್ಟಿರುವುದು ನಿಜವೋ, ಹಾಗಾದರೆ ಈ ಅಧಿಕಾರವನ್ನು ಏಕೆ ಕೊಡಲಾಯಿತು? ಅಲ್ಲಿ ಚಳವಳಿ ಪ್ರಬಲವಾದುದಕ್ಕೋ?" ಎಂದು ಡಚೆಸರು ಕೇಳಿದುದಕ್ಕೆ ಹೋರರು "ಅದು ನಿಜವಾದುದು, ಆದರೆ ಕ್ರಾಂತಿಯು ಹೆಚ್ಚುತ್ತಿಲ್ಲ. ಕಮ್ಯೂನಿಸ್ಟರ ಹಾವಳಿಯು ಹೆಚ್ಚಿಲ್ಲ" ಎಂದರು.

ಬ್ರಿಟಿಷ ಸೈನ್ಯವು ಬೆಳೆಯುತ್ತದೆ.
ಜರ್ಮನಿಗೆ ಉತ್ತರವೇ?

ಲಂಡನ್, ಮಾರ್ಚಿ ೧೪

ಕಾಮನ್ಸ್ ಸಭೆಯಲ್ಲಿ ಸೈನ್ಯದ [illegible] ಮಂಡಿಸಲಾಯಿತು. ಜರ್ಮನಿಯು ಸೈನ್ಯವನ್ನು ಹೆಚ್ಚಿಸಲು ತೊಡಗಿದುದರಿಂದ ಬ್ರಿಟನ್ ಕೂಡ ತನ್ನ ಭೂಸೈನ್ಯ ವಿಮಾನಸೈನ್ಯಗಳನ್ನು ಹೆಚ್ಚಿಸಬೇಕೆಂದು [illegible] ೪೫೦ ೦೦೦ [illegible] ವೈಮಾನಿಕ ಸೈನ್ಯವನ್ನು ಹೆಚ್ಚಿಸಿ [illegible] ಎಚ್ಚರವಿರಬೇಕೆಂದು ಸಂಕಲ್ಪಿಸಿದ್ದಾರೆ.

ಡ್ಯೂಕ್ ಒಫ್ ಮೆಂಚೆಸ್ಟರರ ಮೇಲೆ ಮೋಸದ ದಾವೆ.

೧೯೩೩ರಲ್ಲಿ ಡ್ಯೂಕ್ ಒಫ್ ಮೆಂಚೆಸ್ಟರರು ಇಬ್ಬರನ್ನು ಮೋಸದಿಂದ ನಂಬಿಸಿ ೩೫೦ ಪವನುಗಳನ್ನು ಪಡೆದುದಕ್ಕಾಗಿ ಅವರ ಮೇಲೆ ದಾವೆ ನಡೆದಿದೆ. [illegible] ಜಾಮೀನಿನ ಮೇಲೆ ಅವರನ್ನು ಬಿಡಲಾಗಿದೆ.

ದಿವಂಗತ ಶ್ರೀ ವಿ. ಜ. ಪರಂಬರವರು.



ಇವರ ತೈಲಚಿತ್ರದ ಅನಾವರಣವು ವಿಧಿ ಸಭೆಯಲ್ಲಿ ಶ್ರೀ ಸುಬ್ಬರಾಯರಿಂದ ನಡೆಯಲಿರುವುದು

ಅಮೇರಿಕಾ

ಕಾರ್ನೆರಾನಿಗೆ ಜಯ.
ಲೋಕವಿಖ್ಯಾತ ಬೋಕ್ಸರ್.

ನ್ಯೂಯೋರ್ಕ್, ಮಾರ್ಚಿ ೧೬

ಲೋಕವಿಖ್ಯಾತ ಪ್ರಿಮೊ ಕಾರ್ನೆರಾ ಎಂಬ ಬೋಕ್ಸರನು ಇಂಪೆಲಿಟಿಯರ್ ಎಂಬವನೊಡನೆ ರಂಗಕ್ಕಿಳಿದನು. ೨೦ ೦೦೦ ಪ್ರೇಕ್ಷಕರ ಸಮಕ್ಷಮ ದ್ವಂದ್ವಯುದ್ಧವು ನಡೆಯಿತು. ಇಂಪೆಲಿಟಿಯರ್‌ನನ್ನು ಕಾರ್ನೆರನು ಸೋಲಿಸಿಬಿಟ್ಟನು.

ಸ್ವೀಕಾರ

"ಕಥಾಕುಂಜ" ಬೆಳಗಾಂವಿ. ಇದರ ವಿಶೇಷ ಸಂಚಿಕೆಯು ಹಸ್ತಗತವಾಗಿದೆ. ಬೆಲೆ ೦ ರೂ ೦

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪಂಡಿತ ತಾರಾನಾಥ ಮೊದಲಾದ ಪ್ರಸಿದ್ಧ ಕಥೆಗಾರರ ಕಥೆಗಳು ಇದರಲ್ಲಿವೆ. ಸಂಪಾದಕರು ಅಭಿನಂದನೀಯರು.

ಗ್ರೀಸ್

ಗ್ರೀಸ್ ದೇಶದ ದಂಗೆ!
ಕ್ರಾಂತಿಕಾರರಿಗೆ ಶಿಕ್ಷೆ.

ಎಥೆನ್ಸ್, ಮಾರ್ಚ ೧೪

ಗ್ರೀಸ್ ದೇಶದಲ್ಲಿ ಸರಕಾರದ ವಿರುದ್ಧವಾಗಿ ಎದ್ದ ಕ್ರಾಂತಿಕಾರರನ್ನು ಸೆರೆ ಹಿಡಿಯಲಾಗಿದೆ. ಪ್ರಥಮ ಹಂಗಾಮದ ೩೦ ಮಂದಿಯು ವಿಚಾರಣೆಗೆ ಗುರಿಯಾಗಿದೆ. ಇವರಿಗೆ ಫಾಶಿ ಶಿಕ್ಷೆಯು ವಿಧಿಸಲ್ಪಡುವುದೋ ಎಂದು ನಿರೀಕ್ಷಿಸಲ್ಪಟ್ಟಿದೆ. ಗ್ರೀಕ್ ಸರಕಾರಕ್ಕೆ ಒಂದು ಮಿಲಿಯ ಹಣವು ವೆಚ್ಚವಾಯಿತು. ಈ ಕ್ರಾಂತಿಯನ್ನು ಅಡಗಿಸುವುದಕ್ಕೆ.

ಆಫ್ರಿಕ.

ಇಂಡಿಯಾ ಏಜಂಟರ ಮನವಿ.
ಹಿಂದೀಯರೊಳಗೆ ಐಕ್ಯವಿರಲಿ!

ಮಾರ್ಚಿ ೧೪

ದಕ್ಷಿಣಾಫ್ರಿಕಕ್ಕೆ ಇಂಡಿಯಾ ಏಜಂಟರಾಗಿ ನೇಮಕಗೊಂಡ ಸಯ್ಯದ್ ರಜಾ ಅಲಿಯವರು ಕೇಪ್‌ಟೌನಿಗೆ ತಲುಪಿದರು. ಅವರನ್ನು ನೂರಾರು ಹಿಂದೀಯರು ಬೀಳ್ಕೊಟ್ಟರು. ಹಿಂದೀಯರಿಗೂ ಬಿಟಿಷರಿಗೂ ಅಲ್ಲಿರುವ [illegible] ಹಿಂದೀಯರೊಳಗೆ ಐಕ್ಯವಿರಲಿ. ಬ್ರಿಟಿಷರಲ್ಲಿ [illegible], ಎಲ್ಲರೂ ಸಹಕರಿಸಿ ನಡೆಯಲಿ [illegible] ಸಂಕಷ್ಟಗಳು [illegible] ಎಂದರು. ದಕ್ಷಿಣಾಫ್ರಿಕಕ್ಕೆ ಸಂಯುಕ್ತ [illegible] ಆಗಬೇಕು ಎಂದರು.

ಮಿ। ಸಯ್ಯದ್ ರಜಾ ಆಲಿಯವರು.

ಫ್ರೆಂಚ್ ಗವರ್ನರ್ ಜನರಲರು ಕಾಣೆಯಾದರು!
ವಿಮಾನದಲ್ಲಿ ಹೊರಟವರ ಪತ್ತೆಯಿಲ್ಲ.

ಫ್ರೆಂಚ್ ಇಕ್ವಿಟೋರಿಯಲ್ ಆಫ್ರಿಕದಲ್ಲಿ ಗವರ್ನರ್ ಜನರಲರಾಗಿದ್ದ ಎಡ್ವರ್ಡ್ ರೆನಾರ್ಡರು ಪತ್ನೀಸಮೇತರಾಗಿ ವಿಮಾನದಲ್ಲಿ ಹೊರಟವರು ಎತ್ತ ಹೋದರೆಂದು ತಿಳಿಯಲಿಲ್ಲ. ವಿಮಾನ ಪಡೆಗಳು ಅವರನ್ನು ಹುಡುಕಿ ಹುಡುಕಿ ದಣಿದುವು! ಅವರ ಕೊನೆಯ ವಾರ್ತೆ [illegible] ಪ್ರವೇಶವನ್ನು [illegible] ಮಾರ್ಗವಾಗಿ [illegible] ವಿಮಾನದಲ್ಲಿ ಗಂಡಹೆಂಡಿರಲ್ಲದೆ ಮತ್ತೆ ನಾಲ್ಕು ಜನರಿದ್ದರು.

ರೆನಾರ್ಡರು ಆರು ಜನರ ಸಹಿತ ಬೆಟ್ಟದ [illegible] ವಿಮಾನ ಸಹಿತ ಬಿದ್ದು ಮೃತರಾಗಿರುವರೆಂದು ಈಗ ಬಂದ ವಾರ್ತೆ.

ಬೇಕಾಗಿದೆ

[illegible] ತಾಲೂಕು ಕಾಪು ಗೌಡಸಾರಸ್ವತ ಬ್ರಾಹ್ಮಣ ವೃಂದಕ್ಕೆ ಸೇರಿದ ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಪೂಜಾ ವಗ್ಯೆರೆ ಒಗ್ಗೆ ಒಂದು ವೈದಿಕರ ಬಿದಾರವು ಅಗತ್ಯ ಉಂಟು. ಯಾರಿಗಾದರೂ ಬರುವ ಮನಸ್ಸಿದ್ದರೆ ವೈದಿಕರು ಬರುವ ಏಪ್ರಿಲ್ ತಾ ೧೫ರ ಒಳಗೆ ಈ ಕೆಳಗೆ ದಸ್ಕತು ಮಾಡಿದವರ ಹತ್ತಿರ ನೋಕ್ತಾವ ಕಾಗದ ಮೂಲಕ ವಿವರದ ಕುರಿತು ತಿಳಕೊಳ್ಳಬಹುದು. ಇತರ ಯಾರ ವಶ ಈ ವಿವರ ತಿಳಕೊಳ್ಳುವಲ್ಲಿ ಅವರು ಸರಿಯಾಗಿ ಹೇಳಲಿಕ್ಕಿಲ್ಲ ಅಥವಾ ಈಗ ಪ್ರಕೃತ ಬೇಡವೆನ್ನುವರು. ಆದರಿಂದ ಸ್ವತಃ ಕೆಳಗೆ ದಸ್ಕತು ಹಾಕಿದವರ ವಶವೆ ಮಾತನಾಡಬಹುದೆಂತ ಈ ಮೂಲಕ ತಿಳಿಸಿರುತ್ತೇವೆ.

ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದ ಮೊನೆಜರ, ಕಾಪು ಪಟೇಲ ಶ್ರೀಧರ ಶಾನುಭಾಗ

ಜರ್ಮನಿ

ಜರ್ಮನಿಯಲ್ಲಿ ಸೈನಿಕರು.

ಮಾರ್ಚಿ ೧೬

ಹಿಟ್ಲರರು ವರ್ಸೇಲಿ ಸಂಧಿಯನ್ನು ಅಲ್ಲಗಳೆದು ಅದರ ಶರ್ತಗಳನ್ನುಲ್ಲಂಘಿಸಿ ಹೊಸ ಸೈನಿಕರನ್ನು ಏಪ್ರಿಲ್ ೧ರಿಂದ ಮೊದಲುಗೊಂಡು ಸ್ವೀಕರಿಸುವರು. ೧೯೧೪ರಲ್ಲಿ ಜನಿಸಿದವರನ್ನು ೨೧ರಿಂದ ೨೫ ವರ್ಷ ಪ್ರಾಯವಿರುವ ಪ್ರತಿಯೊಬ್ಬನನ್ನೂ ಸೈನ್ಯದ ತರಬೇತಿಗಾಗಿ ಕರೆಯಲಾಗಿದೆ. ೧೨ ತಿಂಗಳುಗಳ ತರಬೇತನ್ನು ಹೊಂದಬೇಕಾಗಿದೆ. ೨೫ರಿಂದ ೩೦ ವರ್ಷ ಪ್ರಾಯವಿರುವವರು ಮಿಲಿಟರಿ ತರಬೇತಿಗೆ ಹೋಗಬೇಕೆಂದು ಆಜ್ಞೆಯಾಗಿದೆ.

ಹಿಂದೂದೇಶ

ಸಂಗೀತವಂದರೇನು?
ಶ್ರೀ। ಶ್ರೀನಿವಾಸಶಾಸ್ತ್ರಿಗಳ ಹೇಳಿಕೆ

ನಾಗಪುರದ ಗಾಯನಸಮಾಜದ ವಾರ್ಷಿಕೋತ್ಸವಕ್ಕೆ ಅಧ್ಯಕ್ಷರಾಗಿದ್ದ ಶ್ರೀ। ಶ್ರೀನಿವಾಸ ಶಾಸ್ತ್ರಿಗಳು ಭಾಷಣ ಮಾಡುತ್ತ "ಗಾಯನವು ಬಹು ಪ್ರಿಯಕರ ಕಲೆ. ಅದು ಸ್ವಾಭಾವಿಕವೆಂದರೆ ಮಾನವಪ್ರಾಣಿಗೆ ಆನಂದ [illegible] ವವರಿಗೆ ಕಷ್ಟ, ಕೇಳುವವರಿಗೆ ಸುಖ. ಆದರೆ ಕೆಲವರು ಹಾಡುವಾಗ ಅವರ ಮನಸ್ಸಿನಲ್ಲುಂಟಾಗುವ ನೈಜ ಆನಂದವನ್ನು ಪ್ರದರ್ಶಿಸುವುದಿಲ್ಲ. ಹಾಡುವಾಗ ಅವರ ವದನರಾಜ್ಯವು ಬೇರೆಯಾಗಿಯೇ ತೋರಿಬರುತ್ತದೆ. ಸಂಗೀತಜ್ಞರೆಂಬವರು [illegible] ಸಂಗೀತವು [illegible] ಆನಂದವನ್ನುಂಟು ಮಾಡಬೇಕು. [illegible] ಸಂಗೀತದ ಅರ್ಥವನ್ನು ತಿಳಿಯುವುದೇ ತಪ್ಪು. [illegible]

ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು

Latest News.

ಕರಾಚಿಯಲ್ಲಿ ಪೋಲೀಸರು ಗುಂಡು ಹೊಡೆದರು!

೨೭ ಜನರ ಮರಣ ೯೭ ಜನರು ಜಖಂಗೊಂಡರು
ಹಿಂದೂಮುಸ್ಲಿಮರ ಗಲಭೆ!—ಮಿಲಿಟರಿಯವರ ಸಾಹಸ

ಕರಾಚಿ ಮಾರ್ಚಿ ೧೯,

ಅಬ್ದುಲ ಖಯ್ಯೂಮನಿಗೆ ಫಾಶಿ ಶಿಕ್ಷೆ ಕೊಟ್ಟುದಕ್ಕಾಗಿ ರೇಗಿದ ಮುಸ್ಲಿಮರು ಪ್ರಚಂಡ ಜನಸಮೂಹವನ್ನು [illegible] ತಡೆಯಲಸಮರ್ಥರಾಗಿ ಕೊನೆಗೆ ಗುಂಡು ಹಾರಿಸಿದರು. ೨೭ ಜನರು ಮೃತರಾದರು. ೯೭ ಜನರು ಗಾಯಗೊಂಡ ಬೆಳ್ಳ ನಿಕ್ಕಿದೆ. ಕರಾಚಿಯ ಕೋರ್ಟಿನಲ್ಲಿ ಬಹಿರಂಗವಾಗಿ ಮಹಾರಾಜ ನಥೂರಾಮನನ್ನು ಅಬ್ದುಲ್ ಖಯ್ಯೂಮನು ಕೊಂದನು. ಇಷ್ಟರ ವರೆಗೂ ವಿಚಾರಣೆ ನಡೆಯುತ್ತಿತ್ತು. ಅವರನ್ನು ಈ ದಿನ ಗಲ್ಲಿಗೇರಿಸಿದರು.

ಅಧಿಕಾರಿಗಳು ಈ ಗಲಭೆಯಾಗುವುದೆಂದು ಮೊದಲೇ ನಿರೀಕ್ಷಿಸಿ ಅಗತ್ಯ ಪ್ರಸಂಗಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಮೃತ ಶರೀರವನ್ನು ಮೆರವಣಿಗೆಗೆ ಕಳುಹಿಸಿದರು. ಅಲ್ಲಿಗೆ ಸಾವಿರಾರು ಮುಸ್ಲಿಮರು ಹೋಗಿ ಮೃತರ ಆತ್ಮಕ್ಕಾಗಿ ಪ್ರಾರ್ಥಿಸಿಕೊಂಡರು.

ಅಬ್ದುಲ್ಲನನ್ನು ಗಲ್ಲಿಗೇರಿಸಿದ ವಾರ್ತೆಯು ಹಬ್ಬಲು ಒಂದೊಡನೆ ಕರಾಚಿಯ ಮುಸ್ಲಿಮರ ಅಂಗಡಿಗಳೆಲ್ಲ ಮುಚ್ಚಲ್ಪಟ್ಟುವು. ಒಡನೆ ಪೋಲೀಸರ ಕಾಪಿನೊಂದಿಗೆ ಶವವನ್ನು [illegible] ಜನರ ಮೆರವಣಿಗೆಯನ್ನು ಮಾಡಬೇಕೆಂದು ಮುಸ್ಲಿಮರು ಸಿದ್ಧರಾದರೂ ಅಧಿಕಾರಿಗಳು ಅದನ್ನು ತಡೆದರು.

ಇದನ್ನು ಕೇಳಿದೊಡನೆ ಮುಸ್ಲಿಮರ ಸ್ತ್ರೀಪುರುಷರಲ್ಲಿ ಆವೇಶವು ತಲೆದೋರಿ ೩೦,೦೦೦ ಜನರು ಒಟ್ಟಾಗಿ ಶವವನ್ನು ಮೆರವಣಿಗೆಯಲ್ಲಿ ಕೊಂಡೊಯ್ದರು. ಮೆರವಣಿಗೆಯು ಹೊರಡುತ್ತಲೇ ಪೋಲೀಸರು ಒಂದು ಜನರನ್ನು ಹೋಗಲಾಜ್ಞೆಯಿತ್ತರು. ಆದರೆ ಯಾರೂ ಕದಲಲಿಲ್ಲ.

ಒಡನೆ ಮಿಲಿಟರಿಯನ್ನು ಬರಮಾಡಲಾಯಿತು. ಜನರನ್ನು ಹೋಗಹೇಳಿದರೂ ಅವರು ಕ್ಷಮ್ಯರಾಗದಿರಲು ಒಡನೆ ಗುಂಡು ಹಾರಿಸಿದರು.

ಗುಂಡಿನ ಪೆಟ್ಟಿನಿಂದ ಮಡಿದವರ ಸಂಖ್ಯೆಯು ಹೆಚ್ಚಿರಬಹುದೆಂದೂ ಒಟ್ಟು ೨೦೦ ಜನರಾದರೂ ಗಾಯಗೊಂಡಿರಬೇಕೆಂದೂ ಊಹಿಸಲಾಗಿದೆ. ಗಾಯಗೊಂಡವರನ್ನು ಲಾರಿಗಳಲ್ಲಿ ಹಾಕಿ ಸಿವಿಲ್ ಆಸ್ಪತ್ರೆಗೊಯ್ಯುತ್ತಿರುವರು. ಅಬ್ದುಲ್ ಖಯ್ಯೂಮನ ಶವವನ್ನು ಪೋಲೀಸರು ಸ್ಮಶಾನಕ್ಕೊಯ್ದರು.

ಈಗ ಪಟ್ಟಣವು ಶಾಂತವಾಗಿರುವುದಾದರೂ ಅಲ್ಲಲ್ಲಿ ಪಂಗಡಗಳು [illegible] ಜಾಗ್ರತೆಯಿಂದಿದ್ದರೂ ಪರಿಸ್ಥಿತಿಯು ವಿಷಮವಾಗಲು ಕಾರಣವೇನೆಂದು ಅಧಿಕಾರಿಗಳ ಚಿಂತನೆ.

೨೫ ಮಿಲಿಟರಿ ಜನರು ೪೭ ಸಲ ಗುಂಡು [illegible] [illegible]

[illegible]

ಪೂರ್ವಕಥೆ.

[illegible] ಅಬ್ದುಲ್ಲನಿಗೆ ಫಾಶಿ ಶಿಕ್ಷೆಯು ವಿಧಿಸಲ್ಪಟ್ಟಿತು.



[illegible] ಶ್ರೀ ನರಿಮಾನರು ತಮ್ಮ ಮಾನಹಾನಿ [illegible] ಪುನರ್ವಿಚಾರಣೆ ನಡೆದ [illegible] ಕೋರ್ಟಿನಲ್ಲಿ [illegible] ಹಣವನ್ನು ಪಡೆಯುವುದು ಸರಿಯಲ್ಲವೆಂದು, [illegible] ನ್ಯಾಯವಿತ್ತರು. ಈಗ ಸರಕಾರವು ಈ ನಿರ್ಣಯವನ್ನು ಪ್ರತಿಭಟಿಸಿ [illegible] ಕೋರ್ಟಿಗೆ ವಿಚಾರಣೆಗಾಗಿ ಅರ್ಜಿ ಮಾಡಿದೆ.

ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸದಸ್ಯರ ಸಾಮಾನ್ಯ ಸಭೆಯೊಂದು ಇದೇ ತಾ. ೨೯ನೇ ಶುಕ್ರವಾರ ಬೆಳಿಗ್ಗೆ ೧೦ ಘಂಟೆಗೆ ಡಿ ಬೋ ಆಫೀಸಿನಲ್ಲಿ ಜರಗಲಿರುವುದು.

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಆರೋರಾ ಕ್ರೀಮ್, ಕ್ರಿಮೊರ್ ಲಿಮೊನಿಸ್, ಕರ್ಣಾಟಕ ರೋಸ ಪೊಮೇಡ್ ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು

ಮೆನೆಜಿಂಗ್ ಡ್ಯಾರೆಕ್ಟರ್—ವೆಂಕಟ್ರಾಯ ಅಪ್ಪ ಬಾಳಿಗ

ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ —(1) ದೇವಕರಣ ಮೆನ್ಶನ್ಸ್, 46 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2

ಏಜಂಟ್ಸ್— (2) 1/70 ನೈನಪ್ಪ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

ವಾರ್ಷಿಕ ಚಂದಾ 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 2-18-0.

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:-
RAMA SNUFF.
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries:
Kochikar Brothers,
Calicut, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೨೯ನೇ ಶುಕ್ರವಾರ ಮಾರ್ಚಿ ೧೯೩೫. (29 – 3 '35) ಸಂಚಿಕೆ ೧೩



ಕೃಷ್ಣಾನದಿಯ ಅಣೆಕಟ್ಟು, ಬೆಜವಾಡ.

ಚಿಕ

(All Rights Reversed)

“ಕಿಡಿ ಕಾಡು ಸುಟ್ಟಿತು” ಎಂದು ಒಂದು ಗಾದೆ—ಅದನ್ನು ನೀವೂ ನಾಲಿಗೆಯ ತುದಿಯಲ್ಲಿಟ್ಟುಕೊಂಡಿರಬಹುದು. ಈ ವಾರ ಕರಾಚಿಯಲ್ಲಿ ತೋರಿಬಂದ ಅದೊಂದು ಕಿಡಿಯ ವಿಷಯವಾಗಿ ನಮಗೆ ಹೇಳಬೇಕೆಂದಿದ್ದೇನೆ

× × × × × ×

ನಾಥೂರಾಂ ಎಂಬ ವಿದ್ವಾಂಸನು, ಹಿಂದೂಗಳ ಮಹಾರಕ್ಷಕನು ತಾನೆಂದು ತನ್ನೊಳಗೆ ಭಾವಿಸಿ “ಇಸ್ಲಾಮಿನ ಚರಿತ್ರೆ” ಯೆಂಬ ಅಧಿಕಪ್ರಸಂಗ ಗ್ರಂಥವನ್ನು ಬರೆದು, ಇಸ್ಲಾಮನ್ನು ದೂರಿ ಪೈಗಂಬರರನ್ನು ನಿಂದಿಸಿದ. (ಹಿಂದೂಗಳ ದೇವರು, ಮಠಗಳು, ಅಸ್ಪೃಶ್ಯತೆ ಮೊದಲಾದುವುಗಳನ್ನು ಕುರಿತು)

× × × × × ×

ಇವನ ಬುದ್ಧಿವಂತಿಕೆಗೆ ಅನುಸಾರವಾಗಿ ೧೮ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು! ಅಧಿಕ ಪ್ರಸಂಗದ ಫಲವೆಂದು ಅದನ್ನು ಸ್ವೀಕರಿಸಿ ಪುನಃ ಅಪ್ಪೀಲಿಗೆಂದು ಕೋರ್ಟಿನಲ್ಲಿ ನಿಂತಿದ್ದನು.

× × × × × ×

ಅಷ್ಟರಲ್ಲಿ ಅಬ್ದುಲ್‌ಖಯುಂ ಎಂಬವನು ಹಿಂದಿನಿಂದ ಬಂದು ನಾಥೂರಾಮನ ಬೆನ್ನಿನ ಮೇಲೆ ಬಕ್ಕನೆ ಚೂರಿಯನ್ನು ಕುತ್ತಿದ. ನಾಥೂರಾಮನನ್ನು ದೇವರು ತನ್ನ ಬಳಿಗೆ ಕರೆದುಕೊಂಡ.

× × × × × ×

ಅಬ್ದುಲ್ಲನ ಮತಾಭಿಮಾನಕ್ಕೆ ಬಹುಮಾನವಾಯಿತು ಫಾಶಿ ಶಿಕ್ಷೆಯೂ ವಿಧಿಸಲ್ಪಟ್ಟಿತು. ಗಲ್ಲಿಗೇರಿಸಿ ಶವವನ್ನು ಸಂಬಂಧಿಕರಿಗೆ ಕೊಟ್ಟರು

× × × × × ×

ಅವರು ಶವವನ್ನು ಹಿಡಿದುಕೊಂಡು ಗಲಾಟೆ ನಡೆಸಿದರು ೩೦,೦೦೦ ಜನರು ಸೇರಿದರು. ಅಷ್ಟರಲ್ಲಿ ಕರಾಚಿಯ ಡಿ| ಮೆಜಿಸ್ಟ್ರೇಟರಿಗೆ ಸಾಮ್ರಾಜ್ಯ ನಾಶವಾದೀತೆಂಬ ಭಯವಿದ್ದಿತು ಕೂಡಲೇ ಮಿಲಿಟರಿಯ ಕರುಣಾಳುಗಳನ್ನು ಅಲ್ಲಿಗೆ ಕಳುಹಿಸಿದರು.

× × × × × ×

ರೋಗ ಬಯಸಿದ್ದೂ ಹಾಲು, ವೈದ್ಯರಿತ್ತುದೂ ಹಾಲೆಂಬ ಹಾಗಾಯಿತು ಈ ಸೈನಿಕರಿಗೆ ಗುಂಡು ಹಿಡಿದುಕೊಂಡು ಜೋಲಿಟು ಸಭೆಗೆ ಎಚ್ಚರವಿತ್ತರು ಆದರೆ ಜನರು ಕದಲಿಲ್ಲ ಎಲ್ಲರೂ ಒಕ್ಕಣ್ಣರಾಜ್ಯಕ್ಕೆ ಗುಂಡನ್ನು ಕಳುಹಿಸಿ “ಧುಂ ಧುಂ” ಎಂದು ಗುಂಡಿಟ್ಟರು.

× × × × × ×

ಜನರ ಕಾಲಿನೂ ಜೊಡೆಯಲಿಲ್ಲ ಅಥವಾ ಆಕಾಶಕ್ಕೂ ಹೊಡೆಯಲಿಲ್ಲ—ಅಂತೂ ೩೭ ಜನರು ಪರಮಾತ್ಮನ ಬಳಿಗೆ ಹೋದರು ೧೦೦ ಜನರು ಆಸ್ಪತ್ರೆಯ ಪಾಲಾದರು

× × × × × ×

ಈ ಚಕ್ರವು ಸುತ್ತುತ್ತಾ, ಎಸೆಂಬ್ಲಿಯೊಳಗೆ ಹೋಗಿ ಹಿಂದೂ ಮುಸ್ಲಿಮರು ಒಂದಾಗಿ ಸರಕಾರದವರೊಡನೆ ಚರ್ಚಿಸಿ, ವಿಚಾರಣಾ ಸಮಿತಿಯನ್ನೇರ್ಪಡಿಸಬೇಕೆಂದು ಹೋರಾಡಿದರು

× × × × × ×

ಕರಾಚಿಯ ಅಧಿಕಾರಿಗಳು ಮಾಡಿದುದು ಸರಿಯೆಂದು ಸರಕಾರದವರ ಹೇಳಿಕೆ ಅವರು ಮಾಡಿದುದು ತಪ್ಪೆಂದು ಸದಸ್ಯರ ಹೇಳಿಕೆ ಅಂತೂ ಕರಾಚಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಪೆನ್ಶನಿನ ಪೊಟಲಗನ್ನು ಲೆಕ್ಕ ಮಾಡುವ ಸಂದರ್ಭವು ಬಂದಿದೆ

× + × × × ×

ಗಲ್ಲಿಗೇರಿಸಿದ ಶವವನ್ನು ಸಂಬಂಧಿಕರಿಗೆ ಕೊಟ್ಟುದೇಕೆ? ಎಂದು ಸಾಯ್ಬನ ಪ್ರಶ್ನೆ ಸಂಬಂಧಿಕರಿಗೆ ಶವಗಳನ್ನು ಕೊಡದೆ ಸರಕಾರದವರೇ ಅವುಗಳನ್ನು ಹೂತಿಟ್ಟ ಉದಾಹರಣೆಗಳನೆಯಷ್ಟೆ ಪ್ರಾಣತೆಗೆದ ಮೇಲೆ ಶವ ಸಂಸ್ಕಾರ ಮಾಡುವ ಹಕ್ಕೂ ಸರಕಾರಕ್ಕಿರಬೇಕಲ್ಲವೆ?

× × × × × ×

“ಇಸ್ಲಾಮಿನ ಚರಿತ್ರೆ” ಯನ್ನು ಬರೆದ ನಾಥೂರಾಮನಿಗಾಗಲೀ, ಅವನನ್ನು ಕೊಂದು ಗಲ್ಲಿಗೇರಿಸಿದ ಖಯುಂನಿಗಾಗಲೀ ಇನ್ನೇತರ ದುಃಖವೂ ಬೇಸರವೂ ಇಲ್ಲ ಇನ್ನು ಬಳಲಬೇಕಾದುದು ನಮ್ಮ ವಿಚಾರಶಾ ಸಮಿತಿ, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು “ಇಷ್ಟರ ನ್ಯಾಯ, ಇದ್ದ ಪರಿಗಣಾಯ”.

× × × × × ×

ಪಾಪ, ಕರಾಚಿಯ ಡಿ| ಮೆಜಿಸ್ಟ್ರೇಟರಾದ ಮಿ| ಟೈಲರರಿಗೆ ಮಹಾ ಚಿಂತೆಯೊದಗಿರಬೇಕು. ಪರಲೋಕವಾಸಿಗಳಾದ ೩೭ ಜನರು ಮಿಲಿಟರಿಯವರ ತುಪಾಕಿಗಳಿಗೂ, ಸೈನ್ಯಾಧಿಪತಿಗಳಿಗೂ, ಡಿ. ಮೆಜಿಸ್ಟ್ರೇಟರಿಗೂ ಸದಾ ಸುಖವನ್ನು ಬಯಸಲಿ.

× × × × × ×

ಕರಾಚಿಯ ಅಧಿಕಾರಿಗಳು ಮಾಡಿದುದು ಸರಿಯೆಂದು ಹೇಳುವ ಹೋರಿಗೂ ಬರೆಸುತ್ತಿರಲೆಂದು ಬೇಡುವ,



ಅನ್ಯರಲ್ಲಿನ ಶಕ್ತಿಬಲಗಳನ್ನು ಕಂಡು ಬೆರಗಾಗುವಿರೇಕೆ? ಅದನ್ನು ನೀವೂ ಹೊಂದಲಾಗುವುದಿಲ್ಲವೇ? ಶಕ್ತಿಯುತ ಸ್ನಾಯು, ಗಟ್ಟಿಯಾದ ಮೆದುಳು, ಚೇತನಯುತ ದೇಹಗಳು ಪೂರ್ಣವೂ ಯುಕ್ತವೂ ಆದ ರಕ್ಷಣೆಯಲ್ಲಿದೆ

‘ಓವಲ್ಟಿನ್’ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಆಹಾರಸಾರವಿದೆ ಬೆಳೆದ ಬಾರ್ಲಿ, ದನದ ಕೆನೆಹಾಲುಗಳು ಅತ್ಯಮೂಲ್ಯ ಪಾನೀಯಗಳು ದೇಹವೃದ್ಧಿಗೆ ಸಾಧಕವಾದವುಗಳು. ಬಲವನ್ನೂ ಶಕ್ತಿಯನ್ನೂ ಆರೋಗ್ಯವನ್ನೂ ಕೊಟ್ಟು ಕಾಪಾಡುತ್ತದೆ ಅದರ ಚೇತನದಾಯಕ ಗುಣವನ್ನು ನೀವು ಕೂಡಲೇ ಕಂಡುಹಿಡಿಯುವಿರಿ ಆರೋಗ್ಯವನ್ನು ಹೊಂದುವಿರಿ

ನಿಮ್ಮ ಆಹಾರಕ್ಕೆ ‘ಓವಲ್ಟಿನ್’ ಸೇರಿಸಿರಿ,—ಅದು ಆರೋಗ್ಯಕರ ಬಲವರ್ಧಕ ಮತ್ತು ಶಕ್ತಿದಾಯಕ

ಓವಲ್‌ಟಿನ್

ಮೆದುಳು, ನರ ದೇಹಗಳನ್ನು ವೃದ್ಧಿಸುತ್ತದೆ

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಸಿಗುತ್ತದೆ.

ಏಜಂಟ —ಜೇಮ್ಸ್ ರೈಟ್, 85 ಎ ಕ್ಲೈವ್‌ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV1341

ಉತ್ತಮ ತರದ ಮಡಚುವ ಮತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು. ಮತ್ತು ಉತ್ತಮವಾದುದು ಫೊಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ. ೨—೧೨—೦, ಉತ್ತಮವಾದುದು ೩—೧೨—೦ ಮಡಚುವ ಕ್ಯಾಮರಾ ರೂ ೫ ಉತ್ತಮವಾದ್ದು ರೂ. ೭ ಸ್ಪೆಶಲ್ ರೂ ೧೦ ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೩ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಕ್ಕೆ ೨ ಆಣೆ. ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ

ಭಾರತ ಯೂನಿಯನ್ ಟ್ರೇಡಿಂಗ್ ಕಂ

ಪೋಸ್ಟ್‌ಬಾಕ್ಸ್ ನಂಬ್ರ ೨೩೯೪ (ಎಸ್. ಎ) ಕಲ್ಕತ್ತ

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

Authorised capital / ಅಧಿಕೃತ ಮೂಲಧನ	2,00,000—0—0
Subscribed capital / ಚಂದಾ ಆರ್ಜಿಸಿದ್ದು	34,930 0—0
Paid-up capital / ತೆತ್ತು ಬಂದದ್ದು	30847—8 0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken

Shares are now available

For further particulars apply to:—

Puttur,
Dated 15—2—1935.

G. N. Lakshman Pai,
Secretary.

ಪತ್ರಿಕಾ ಪ್ರಪಂಚ:

ಭಾರತದ ನಿಜವಾದ ವಿದ್ಯಾಕ್ರಮವಾವುದಿರಬೇಕು? ಶಿಕ್ಷಣದಲ್ಲಿರುವ ನ್ಯೂನ್ಯತೆಗಳು ಹಿಂದೂದೇಶದಲ್ಲಿನ ಕೃಷಿ ಕೈಗಾರಿಕೆ. ನೌಕಾಶಾಸ್ತ್ರವು ನಮಗೆ ತಿಳಿದಿತ್ತೇ? ಹಿಂದೂ ಮುಸ್ಲಿಮ್ ಸಮಸ್ಯೆ. ಹಿಂದೂದೇಶದ ಭವಿತವ್ಯತೆ. ಉಪಾಧ್ಯಾಯ.

ಭಾರತದ ನಿಜವಾದ ಶಿಕ್ಷಣಕ್ರಮ ವಾವುದಿರಬೇಕು?

[illegible]

Imperial and Asiatic Quarterly Review

ಶಿಕ್ಷಣದಲ್ಲಿರುವ ನ್ಯೂನ್ಯತೆಗಳು.

[illegible]

'The Socialist Review'

ಹಿಂದೂದೇಶದಲ್ಲಿನ ಕೃಷಿ ಕೈಗಾರಿಕೆ.

ಡಾ॥ ಹೆರೊಲ್ಡ್ ಎಚ್ ಮೆನ್, ಪ್ರಿನ್ಸಿಪಾಲ್, ಎಗ್ರಿಕಲ್ಚರಲ್ ಕೊಲೆಜ್ ಪೂನಾ, ಇವರು ಬರೆದ [illegible]

Agricultural Journal of India

ನೌಕಾಶಾಸ್ತ್ರವು ನಮಗೆ ತಿಳಿದಿತ್ತೇ?

[illegible]

Indian Businessman

ಹಿಂದೂ ಮುಸ್ಲಿಮ ಸಮಸ್ಯೆ.

[illegible]

"Modern Behar"

ಹಿಂದೂದೇಶದ ಭವಿತವ್ಯತೆ.

[illegible]

"Central Hindu College Magazine"

ಉಪಾಧ್ಯಾಯ.

[illegible]

ಹ! ಹ!! ಹ!!!

'ಸ್ವದೇಶಾಭಿಮಾನಿ'ಯನ್ನು

ಓದುವುದೆಂದರೆ ಆಬಾಲವೃದ್ಧರಿಗೊಂದು ಮಹಾ ಹಬ್ಬ'-ಪ್ರತಿವಾರವೂ ಹೊಸ ಹೊಸ ಏರ್ಪಾಟು!"

ಮುಂದಿನ ವಾರ·

20 ಪುಟಗಳ ಸಂಚಿಕೆಯಲ್ಲಿ—

ವಿನೋದಭರಿತ ವಾರ್ತಾವಾಹಿನಿ,

ವ್ಯಂಗಲೇಖನಗಳು ಶ್ರೀ॥ ಕಾರಂತರ ಲೇಖನ

ವನ್ನೋದಿ—ನಕ್ಕು ನಕ್ಕು ಮೈಮರೆಯುವಿರಿ.

ಹಲವು ಚಿತ್ರಗಳು, ಎಷ್ಟೋ ಆನಂದಕರ ವಾರ್ತೆಗಳು, ಎಷ್ಟೋ ರಾಜಕೀಯ ಸುದ್ದಿಗಳು—ಇತ್ಯಾದಿ ಪ್ರಕಟವಾಗುವುವು. ಬೆಲೆ ಆಣೆ 1.

ಎಲ್ಲಿ ಕೇಳಿದರಲ್ಲಿ ಸ್ವದೇಶಾಭಿಮಾನಿಯು ಇದೆ–ಏಜಂಟರ ಬಳಿಗೆ ಧಾವಿಸಿರಿ!

ಲೋದ್ರ

ಸುಪ್ರಸಿದ್ಧವಾದ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ   ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಪಂಡಿತ ಡಿ ಗೋಪಾಲಾಚಾರ್ಲುರವರ

ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ಮುಗಿಸುತ್ತಿದೆ ಅದರ ಫಲವೇ—ಆಯಾಸ ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿ ಬಿಡದಂತೆ ನೀವೀಗಲೇ ತಡೆಹಾಕಬೇಕು, ಉತ್ತಮೋಪಾಯವೇ ಜೀವಾಮೃತಸೇವನೆ— ಈ ಪರಿಣಾಮಕಾರೀ ಪೌಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಶಕ್ತಿಯುಕ್ತ ಪುರುಷರನ್ನಾಗಿ ಮಾಡುವುದು   ಎಲ್ಲೆಲ್ಲಿಯೂ ದೊರೆವುದು —ದೊಡ್ಡದು ರೂ 3—4—0 ಸಣ್ಣದು ರೂ. 1—12—0

ತಯಾರಿಸುವವರು —ಆಯುರ್ವೇದಾಶ್ರಮ, ಪೋಸ್ಟ್ ಬೋಕ್ಸ್ 287, ಮದರಾಸು,

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು   ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Comfortable like an AEROPLANE

Use our swadeshi Mosquitonet for health, Comfort and sound sleep, as if you are in an Aeroplane. Sample cutting free. More convenient if some advance sent with order

L.		B.		H		Price	Best
6	Fit	3½	Fit.	3½	Fit.	Rs. 1/12	2/8
6	„	4	„	4	„	„ 2/4	3/-
6½	„	4½	„	4½	„	„ 2/8	3/8
7	„	5	„	5	„	„ 3/2	4/10
7½	„	6	„	6	„	„ 4/4	5/12

G. M. Sharma, Post Box F 6706, Calcutta.

An Advertisement in

'Swadeshabhimani'

Means a sure fortune to you

Ask for Contract Rates

The Swadeshabhimani office,

Car Street, Mangalore.

ಆದರ್ಶಪ್ರಾಯ ಸೇವೆಗಾಗಿ

ಕಿರ್ಲೋಸ್ಕರ

ಪಂಪುಗಳನ್ನುಪಯೋಗಿಸಿರಿ.

ಕೃಷಿ, ಕಾರ್ಖಾನೆಗಳಿಗೆ, ಮನೆಗಳಿಗೆ

ನೀರನ್ನೊದಗಿಸುವುದಕ್ಕೆ ಒಂದೇ

ಸಾರ್ವಕಾಲಿಕ ಏರ್ಪಾಡು

ಅಮೋಘ! ಬಾಳಿಕೆ! ಕಡಿಮೆ ಖರ್ಚು!!

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ ಲಿಮಿಟೆಡ್, ಮದ್ರಾಸು

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari

(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ. 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil

(A. V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ. ಕುಟುಂಬ ಪಾರಂಪರ್ಯದ ಈ ತರದ ರೋಗವೂ ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಕಾಲಾದಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಜಾಹೀರಾತು

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹಳ್ಳಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾವಳಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ—   ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸೈಂಟಿಫಿಕ್

ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ

ವಿಳಾಸ

The Scientific Gold Bangles Co., Ltd.,
Head Office —48, Byragimatam Street,
Post Box No 203, Madras

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ, ಧೋತಿ ಸೀರೆ, ಖೈರವಾಸು, ಚೌಕ, ಚೀಟಿ ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು.

Srinivasa Ranga Pai,
Representatives for South Kanara and Malabar

For— **A. & F. Harvey,**
Managers —Madura Mills Co., Ltd

ಮಹಾತ್ಮರ ಒಂದು ತಿಂಗಳ ಮೌನವ್ರತ!!!

“ಮಹಾತ್ಮಾಜೀಯವರು ತಾ॥ ೨೨ರಿಂದ ಮೊದಲುಗೊಂಡು ಬರುವ ತಿಂಗಳ ತಾ. ೧೯ರ ವರೆಗೆ ಒಂದು ತಿಂಗಳ ಮೌನವ್ರತವನ್ನು ಕೈಗೊಂಡಿರುವರು. ಅವರ ಕಾರ್ಯದರ್ಶಿಗಳಾದ ಶ್ರೀ॥ ಮಹದೇವ ದೇಸಾಯಿಯವರು ಈ ಸಂಬಂಧವಾಗಿ ಒಂದು ಪ್ರಕಟಣೆಯನ್ನು ಹೊರಡಿಸಿ ಹೀಗೆಂದಿದ್ದಾರೆ —“ಮಹಾತ್ಮಾಜೀಯವರ ಮೌನವ್ರತವು ಯಾವ ರಾಜಕೀಯ ಕಾರಣವಾಗಿಯೂ ಪ್ರಾರಂಭಿಸಲ್ಪಟ್ಟುದಲ್ಲ—ಅನೇಕ ಮುಖ್ಯ ಪತ್ರವ್ಯವಹಾರಗಳು ಬಾಕಿ—ಉಳಿದಿವೆ ಅವುಗಳನ್ನೆಲ್ಲ ಒಮ್ಮೆ ವ್ಯವಹರಿಸಿ ಮುಗಿಸುವುದಕ್ಕಾಗಿಯೇ ಈ ಮೌನವ್ರತವನ್ನಾರಂಭಿಸಲಾಗಿದೆ. ಇಂತಹ ವ್ರತದ ಶಾಂತಿಯನ್ನು ಹೊಂದಿ ಅವರು ಕೈಯಲ್ಲಿರುವ ಪತ್ರಗಳನ್ನು ಪರಿಷ್ಕರಿಸಿ ಬಿಡಬೇಕೆಂದು ಹೀಗೆ ಮಾಡಲಾಗಿದೆ ಮಹಾತ್ಮರು ಸದಾರೋಗ್ಯದಲ್ಲಿಯೇ ಇದ್ದಾರೆ ಮಹಾತ್ಮಾಜೀಯವರನ್ನು ಕಾಣಬರುವವರೂ ಈ ವಿಷಯವನ್ನು ಗಮನಿಸಬೇಕು ಅವರಿಗೆ ಪತ್ರ ಬರೆಯುವವರೂ ಈ ವಿಷಯವಾಗಿ ಲಕ್ಷ್ಯವಿಡಬೇಕು ಈ ಮೌನವ್ರತಕ್ಕೆ ಮತ್ತಾವ ಕಾರಣವೂ ಇಲ್ಲ

‘ಪಂಡಿತ ಜವಾಹರಲಾಲರನ್ನು ಬಿಡಿರಿ”

ಶ್ರೀ॥ ಸುಭಾಷ್ಚಂದ್ರ ಬೋಸರ ಹಿಂದೀಯ ಚಳವಳಿ ಎಂಬ ಪುಸ್ತಕವನ್ನು ಓದಿದ ಫ್ರಾನ್ಸಿನ ಮಹಾ ತತ್ವೇತ್ತರರಾದ ರೋಮೈನ್ ರೋಲೆಂಡರವರು ಬೋಸರಿಗೆ ಪತ್ರ ಬರೆದು ಹೀಗೆ ಹೇಳಿರುವರು—‘ಹಿಂದೀಯ ರಾಷ್ಟ್ರವಿಷಯಗಳನ್ನು ತಿಳಿಯಬೇಕೆಂದೆನ್ನುವವರಿಗೆ ನಿಮ್ಮ ಗ್ರಂಥವು ಮಹದುಪಕಾರಿಯಾಗುವುದು. ಅದರಲ್ಲಿ ಕಂಡುಬರುವ ನಿಮ್ಮ ಐತಿಹಾಸಿಕ ಶಕ್ತಿಯು ಶ್ಲಾಘ್ಯವಾಗಿದೆ ಅದು ಬರೆಯಲ್ಪಟ್ಟ ಶೈಲಿ ಮತ್ತು ಅದರಲ್ಲಡಕವಾಗಿರುವ ಭಾವಸಂಕಲಗಳು ನಿಮಗೆ ಕೀರ್ತಿ ತರುವಂತಹುದಾಗಿವೆ ನಿಮ್ಮ ಎಲ್ಲಾ ಅಭಿಪ್ರಾಯಗಳನ್ನು ನಾನು ಅನುಮೋದಿಸುವುದಿಲ್ಲವಾದರೂ ನಿಮ್ಮ ಗ್ರಂಥವು ನನ್ನ ಭಾವ ಪರಿವರ್ತನೆಗೆ ಕಾರಣವಾಗಿದೆ ನಿಮ್ಮ ಸಲಹೆಗಳು ಸಾಧಾರವಾಗಿವೆ ನಿಮ್ಮ ಗ್ರಂಥದಲ್ಲಿ ವ್ಯಕ್ತವಾಗಿರುವ ನಿಮ್ಮ ರಾಜಕೀಯ ಭಾವನೆಯು ಲಕ್ಷ್ಯಣೀಯವಿದೆ ನಿಮ್ಮಂಥವರನ್ನೂ ಪಂಡಿತ ಜವಾಹರಲಾಲರಂತಹವರನ್ನೂ ಗಡಿಪಾರು ಮಾಡುವುದೂ ಸೆರೆಮನೆಯ ಪಾಲು ಮಾಡುವುದೂ ಬಹು ಖೇದಕರವಾಗಿದೆ

ನೆಹರೂರವರನ್ನು ಹೇಗಾದರೂ ಮಾಡಿ ಬಿಡುಗಡೆ ಮಾಡಬೇಕಾಗಿದೆ ಯೂರೋಪು ಅಮೆರಿಕಾಗಳಲ್ಲಿ ಈ ಬಗ್ಗೆ ಚಳವಳವನ್ನು ಹೊರಡಿಸಬೇಕಾಗಿದೆ ಹಿಂದೂದೇಶದ ವಿಷಯ ನಿರಾಧಾರ ವಾರ್ತೆಗಳನ್ನು ಹರಡುವ ಈ ಎರಡು ದೇಶಗಳಲ್ಲಿ ಸಾರ್ವಜನಿಕ ವಿಶ್ವಾಸವನ್ನು ಪಡೆಯುವಷ್ಟು ಸಮರ್ಥವಾದ ಚಳವಳವನ್ನು ಹೂಡಬೇಕಾಗಿದೆ

ಇಂಗ್ಲಾಂಡು ಜರ್ಮನಿಗಳೊಳಗೆ ಮಾತುಕತೆ.

ಮೊದಲೇ ಪ್ರಕಟಿಸಿದಂತೆ ಬ್ರಿಟಿಷ ವಿದೇಶೀಯ ಸಚಿವರಾದ ಸರ್ ಜೋನ್ ಸೈಮನರೂ ಲೋರ್ಡ್ ಪ್ರಿವಿಸೀಲರಾದ ಮಿ॥ ಅಂತೋನಿ ಏಡನರೂ ತಾ ೨೪ನೇ ಸಂಜೆ ಜರ್ಮನಿಗೆ ತಲುಪಿ ಬರ್ಲಿನ್ ನಗರದಲ್ಲಿಳಿದರು ಜರ್ಮನಿಯ ವಿದೇಶೀಯ ಮಂತ್ರಿಯವರೂ, ಬೆರನ್ ವೊನ್ ನೂರತ್ ಮತ್ತು ಸರ್ ಎರಿಕ್ ಫಿಪ್ಸ್ ಎಂಬ ಬ್ರಿಟಿಷ ಎಂಬೆಸೆಡರರೂ ರಾಜ ಸತ್ಕಾರಗಳನ್ನಿತ್ತು ಅವರನ್ನು ಸ್ವಾಗತೀಕರಿಸಿದರು. ಜರ್ಮನ್ನ ಸೈನಿಕರು ಜರ್ಮನ್ ರಾಷ್ಟ್ರಧ್ವಜಗಳನ್ನೆತ್ತಿ ಹಿಡಿದು “ಜಯವಾಗಲಿ” ಎಂದರು. ಅತಿಥಿಗಳನ್ನು ಹೊಟೆಲ್ ಅಡ್ಲೊನ್ ಎಂಬಲ್ಲಿಗೆ ಕರೆದೊಯ್ಯಲಾಯಿತು. ತಾ ೨೫ನೇ ದಿನ ಬೆಳಗ್ಗೆ ಸರ್ ಜೋನ್ ಸೈಮನರೂ ಅಂತೋನಿ ಏಡನರೂ ಹರ್ ಹಿಟ್ಲರರ ಚೆನ್ಸಲರಿಗೆ ಮೋಟರ್ ಕಾರ್ ಮೂಲಕ ಹೋದರು ಅವರ ಭಾವ ಚಿತ್ರವನ್ನು ತೆಗೆಯುವುದಕ್ಕಾಗಿ ನೂರಾರು ಭಾವ ಚಿತ್ರಕಾರರೂ ಪತ್ರಿಕಾ ಪ್ರತಿನಿಧಿಗಳೂ ಮಾರ್ಗದಲ್ಲಿ ಉದ್ದಕ್ಕೂ ನಿಂತಿದ್ದರು

ಹರ್ ಹಿಟ್ಲರರು ಅವರನ್ನು ಸ್ವಾಗತೀಕರಿಸಿದ ನಂತರ ಸಭಾರಂಭವಾಯಿತು ಸಭೆಯಲ್ಲಿ ಅತಿಥಿಗಳಲ್ಲದೆ ಸರ್ ಎರಿಕ್ ಫಿಪ್ಸ್, ಹರ್ ಹಿಟ್ಲರ್, ಜರ್ಮನ್ನ ವಿದೇಶೀಯ ಮಂತ್ರಿಗಳು, ಶಸ್ತ್ರತ್ಯಾಗ ಕಮಿಶನರರಾದ ಹರ್ ವೊನ್ ರಿಬನ್ ಟ್ರೊಪ್ ಮೊದಲಾದವರಿದ್ದರು

ಈ ಸಭೆಯ ಫಲಿತಾಂಶವು ಸಕ್ಕನೆ ಕಂಡುಬರಲಾರದೆಂದೂಹಿಸಲಾಗಿದೆ ಹರ್ ಹಿಟ್ಲರರು ಸ್ವದೇಶದ ಶರ್ತಗಳನ್ನೇ ಬ್ರಿಟಿಷ ಪ್ರಾತಿನಿಧ್ಯದೆದುರು ಇಟ್ಟಿರುವರು ತಾನು ಪತ್ರಿಕೆಗಳಲ್ಲಿ ಹೇಗೆ ಪ್ರಕಟಿಸಿರುವೆನೋ ಹಾಗಲ್ಲದೆ, ಬೇರಾವ ರೀತಿಯಿಂದಲಾದರೂ ಶರ್ತಗಳನ್ನು ಹಿಂದೆಗೆಯಲಾರೆನೆಂದು ಅವರು ಹೇಳಿರುವರು ಯುರೋಪು ಖಂಡದಲ್ಲಿ ಜರ್ಮನಿಯೂ ಇತರ ರಾಷ್ಟ್ರಗಳಂತೆ ಸಮಾನ ಹಕ್ಕುಬಾಧ್ಯತೆ ಗೌರವಾದರಗಳಿಂದ ರಕ್ಷಿಸಲ್ಪಡಬೇಕೆಂದೇ ಅವರು ಒತ್ತಿ ಹೇಳಿರುವರು ಫ್ರಾನ್ಸ್, ಇಟೆಲಿ ಬ್ರಿಟನುಗಳಂತೆ ತಾನೂ ಸ್ವತಂತ್ರವಿರಬೇಕಾಗಿ ಅವರು ಹೇಳಿರುವರು ಒಸ್ಟ್ರಿಯಾದಲ್ಲಿ ಜರ್ಮನಿಗಿರುವ ಹಕ್ಕುಗಳನ್ನು ಇತರ ರಾಷ್ಟ್ರಗಳು ಮುರಿದಿಕ್ಕ ಮಾಡಿರುವ ಹಂಚಿಕೆಗಳಿಗೆ ತಾವೆಂದಿಗೂ ಒಡಂಬಡಲಾರೆನೆಂದು ಅವರು ಸ್ಪಷ್ಟೀಕರಿಸಿರುವರು ಜರ್ಮನಿಯ ಶರ್ತಗಳಿವು

ಶಸ್ತ್ರತ್ಯಾಗ — ಈ ವಿಷಯದಲ್ಲಿ ಹೆಚ್ಚು ಕಡಮೆಯೆಂಬ ಭಾವನೆಯಿಲ್ಲ ಇತರ ರಾಷ್ಟ್ರಗಳೂ ಸಿದ್ಧವಿದ್ದರೆ ಜರ್ಮನಿಯೂ ಶಸ್ತ್ರತ್ಯಾಗ ಮಾಡಲು ಸಿದ್ಧವಿದೆ ಜರ್ಮನಿಯು ಇತರ ಜನಾಂಗಿಕರೊಡನೆ ಹೋರಾಡುವ ಆಶಯಕ್ಕೆ ಕೈಹಚ್ಚುವುದಿಲ್ಲ. ತನ್ನ ಮಟ್ಟಿಗೆ ತಾನು ಭದ್ರತೆಯಿಂದಿರಲು ಇಚ್ಛಿಸುತ್ತದೆ

ಡೆನ್ಯೂಬ್ ಒಪ್ಪಂದ ಒಸ್ಟ್ರಿಯಾ ದೇಶದ ಮೇಲೆ ಜರ್ಮನಿಗಿರುವ ಅಧಿಕಾರಗಳ ಮೇಲೆ ಯಾರೂ ಕೈಹಾಕಬಾರದು ಒಸ್ಟ್ರಿಯಾದ ಆಂತರಿಕ ಪರಿಸ್ಥಿತಿಗೆ ಕೈಯಿಕ್ಕುವ ಹಮ್ಮಿಸಕ್ಕೆ ಯಾವ ರಾಷ್ಟ್ರವೂ ಹೋಗಬಾರದು

ವಿಮಾನ ಒಪ್ಪಂದ: ಈ ಮಟ್ಟಿಗೆ ಜರ್ಮನಿಯು ತನ್ನ ಸೂಚನೆಗಳೇನೆಂದು ತಿಳಿಸಿದೆ ತನ್ನ ರಕ್ಷಣೆಗೆ ಬೇಕಾದಷ್ಟು ವಿಮಾನಗಳನ್ನು ಅದು ಇಟ್ಟುಕೊಳ್ಳುವುದು.

ಲೀಗ್ ಓಫ್ ನೇಶನ್ಸ್: ಜನಾಂಗ ಸಭೆಗೆ ಜರ್ಮನಿಯು ಶಾಶ್ವತವಾಗಿ ಸೇರುವ ವಿಷಯವು ಇತರ ರಾಷ್ಟ್ರಗಳನ್ನು ಹೊಂದಿಕೊಂಡಿದೆ. ಸಮಷ್ಟಿ ಹಿತದೃಷ್ಟಿಯಿಂದ ಭದ್ರತೆಯ ಮತ್ತು ಸಮಾನತೆಯ ಒಪ್ಪಂದಗಳಿರುವುವಾದರೆ ಜರ್ಮನಿಯು ಸಿದ್ಧ. ಯಾವ ಒಪ್ಪಂದವೂ ಏಕಪಕ್ಷೀಯ ಹಿತವನ್ನು ಬಯಸಬಾರದು.

ಜವಾಹರಲಾಲರ ಬಿಡುಗಡೆಗಾಗಿ ಮೊರೆ.

ಇಂಗ್ಲಾಂಡು ಜರ್ಮನಿಗಳೊಳಗಿನ ಮಾತುಕತೆ- ಒಪ್ಪಂದದ ನಿರೀಕ್ಷೆ.

ಕರಾಚಿಯ ಗುಂಡಿನೇಟು—ಶಾಸನ ಸಭೆಯಲ್ಲಿ ಚರ್ಚೆ

ಕರಾಚಿಯ ಗುಂಡಿನೇಟಿನ ವಿಷಯವಾಗಿ ಶಾಸನಸಭೆಯಲ್ಲಿ ಚರ್ಚೆ.

ಅಧಿಕಾರಿಗಳ ಮೇಲೆ ಆರೋಪ!

ಸರಕಾರದ ಹೇಳಿಕೆ.

ಕರಾಚಿಯಲ್ಲಿ ನಡೆದ ಗುಂಡಿನೇಟಿನ ಪ್ರಕರಣದ ವಿಚಾರವಾಗಿ ಶ್ರೀ॥ ಕನ್ಹಯಲಾಲ್ ಎಲ್. ಗೌಬಾರವರು ಒಂದು ನಿರ್ಣಯವನ್ನು ಶಾಸನಸಭೆಯ ಮುಂದಿಟ್ಟರು ಅದಕ್ಕೆ ಸಭೆಯ ಅನುಮತಿಯು ದೊರಕಲಾಗಿ ತಾ. ೧೨ರಲ್ಲಿ ಚರ್ಚೆಗಾರಂಭವಾಯಿತು. ಶ್ರೀ॥ ಗೌಬಾರವರು ‘ನಾನು ಈಗ ಕೋಮುವಾರು ಪ್ರಶ್ನೆಯನ್ನು ಚರ್ಚಿಸಲು ಉದ್ಯುಕ್ತನಾಗಿರುವುದಿಲ್ಲ ಅಬ್ದುಲ್ ಕಯಾಮನ ದುಷ್ಕೃತ್ಯವನ್ನು ಸಮರ್ಥಿಸುವುದೂ ಇಲ್ಲ. ಈಗ ಇರುವುದು ಒಂದೇ ಒಂದು ಪ್ರಶ್ನೆ ಅದೇನೆಂದರೆ ವಿಷಾದಕರವಾದ ಪ್ರಾಣಹಾನಿಯ ಸಂದಿಗ್ಧತೆಯನ್ನು ತಡೆಗಟ್ಟಿ ಅಧಿಕಾರಿಗಳು ಗಲಭೆಯನ್ನು ನಿಲ್ಲಿಸುವುದಕ್ಕಾಗುತ್ತಿರಲಿಲ್ಲವೇ ಎಂಬುದು ನನ್ನ ಮೊದಲಿನ ಪ್ರಶ್ನೆ ಒಂದು ರೀತಿಯಲ್ಲಿ ಯೋಚಿಸಿ ನೋಡಿದರೆ, ಈ ಪ್ರಕರಣವನ್ನು ಯಾವ ರೀತಿಯಿಂದಲಾದರೂ ತಡೆಯಬಹುದಾಗಿತ್ತೆಂದು ಭಾಸವಾಗುವುದಿಲ್ಲವೇ? ಸರಕಾರದವರು ಕರಾಚಿಯ ಮುಖಂಡರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ವರ್ತಿಸುತ್ತಿದ್ದರೆ ಈಗ ನಡೆದ ಪ್ರಾಣನಷ್ಟದ ಹಾವಳಿಯು ತಪ್ಪುತ್ತಿತ್ತು ಯಾವ ಗಲಭೆಯೂ ನಡೆಯುತ್ತಿರಲಿಲ್ಲ. ನಾನು ಹೋದ ವಾರದಲ್ಲಿ ಕೇಳುವುದಿಷ್ಟೇ—ಮೊದಲನೆಯದಾಗಿ ಗೋಳಿಬಾರಿನ ಪ್ರಸಂಗವನ್ನು ತಪ್ಪಿಸಲು ಅಸಾಧ್ಯವೇ ಆಗಿತ್ತೇ? ಒಂದು ವೇಳೆ ಅದನ್ನು ತಡೆಯಲು ಅಸಾಧ್ಯವೆಂದು ಕಂಡ ಮೇಲಾದರೂ ಸೈನ್ಯಾಧಿಕಾರಿಗಳು ಆ ಸಮಯಕ್ಕೆ ಬೇಕಾದಷ್ಟು ಗುಂಡುಗಳನ್ನು ಹಾರಿಸಲಿಲ್ಲವೇಕೆ? ಅವರು ಹಾರಿಸಿದುದು ಉಚಿತ ಪ್ರಮಾಣದಷ್ಟು ಗುಂಡುಗಳನ್ನೇ? ಈ ಪ್ರಶ್ನೆಗಳಿಗೆ ಗೃಹಮಂತ್ರಿಗಳು ಉತ್ತರವೀಯುವರೇ? ಅಲ್ಲದೆ ವಿಚಾರಣಾ ಸಮಿತಿಯೊಂದನ್ನೇರ್ಪಡಿಸಿ ನ್ಯಾಯದಾನ ಮಾಡಬೇಕು

ಈ ನಿರ್ಣಯವನ್ನು ಶ್ರೀ ಶಾಂತಸಿಂಘರು ವಿರೋಧಿಸಿ ಮಾತನಾಡಿದರು ಅವರು “ಈ ನಿರ್ಣಯವನ್ನು ಯಾವ ಸರಕಾರವೇ ಆಗಲಿ ಎಂದೂ ಅಂಗೀಕರಿಸದೆಂದು ನನ್ನ ಭಾವನೆ ಇಂಡಿಯಾ ಸರಕಾರವು ಹಾಗಿರಲಿ ಒಂದು ವೇಳೆ ಇದ್ದರೆ,—ರಾಷ್ಟ್ರೀಯ ಸರಕಾರವೂ ಈ ನಿರ್ಣಯವನ್ನು ಎಂದೂ ಒಪ್ಪುತ್ತಿದ್ದಿಲ್ಲ ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ತಕ್ಷಣವೇ ಎಚ್ಚರಗೊಂಡು ಗಲಭೆಯನ್ನು ಅಡಗಿಸುವುದು ಕರ್ತವ್ಯ” ಎಂದರು ಸರ್ ಗುಲಾಂ ಹುಸೇನ್ ಹಿದಾಯತುಲ್ಲಾರವರು ನುಡಿಯುತ್ತಾ ‘ಗುಂಡಿನೇಟು ಅನವಶ್ಯಕವಾಗಿ ಅಧಿಕವಾಯಿತು ಇಷ್ಟು ಕಾಠಿಣ್ಯದ ಅಗತ್ಯವಿದ್ದಿಲ್ಲ” ಎಂದರು

ತನ್ಮಧ್ಯೆ ಸರ್ ಹೆನ್ರಿ ಕ್ರೈಕರು ಹೀಗೆಂದರು—“ಕರಾಚಿಯ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡಿರುವುದಿಲ್ಲವೆಂದು ಮಿ॥ ಗೌಬಾರವರು ಆಕ್ಷೇಪವೆತ್ತಿದ್ದಾರೆ. ಈ ವಿಷಯವನ್ನು ಸ್ಪಷ್ಟೀಕರಿಸಬೇಕಾಗಿದೆ. ಅಬ್ದುಲ್ ಕಯಾಮನ ಕಳೇಬರವನ್ನು ಅವನ ಬಂಧುಗಳ ವಶ ಕೊಡಲಾಯಿತು. ಬಂಧುಗಳು ಬೇಡವೆಂದು ಮೊರೆಯಿಟ್ಟಾಗೂ ಅವರ ಸಲಹೆಗಳನ್ನು ದುರ್ಲಕ್ಷಿಸಿ, ಹೂತ ಹೆಣವನ್ನು ಬಲಾತ್ಕಾರದಿಂದ ತೆಗೆದು, ನಗರದಲ್ಲಿ ಮೆರವಣಿಗೆ ಮಾಡಬೇಕೆಂದು ಜನಸಮೂಹವು ನಿರ್ಧರಿಸಿತು. ಕಳೇಬರವನ್ನು ನಗರದ ಮಧ್ಯೆ ಹೂಳಿಡಬೇಕೆಂದು ಡೋಬಿಕಾರರ ಇಚ್ಛೆಯಾಗಿರಲಿಲ್ಲ. ಹಿಂದೂಗಳ ಮೇಲೆ ತಮಗಿದ್ದ ಕ್ರೋಧವನ್ನು ಯಾವ ರೀತಿಯಿಂದಲಾದರೂ ತೀರಿಸಿಕೊಳ್ಳಬೇಕೆಂಬ ಬುದ್ಧಿಯಿಂದ ಜನರು ಹಾಹಾಕಾರವನ್ನೆಬ್ಬಿಸಿ ಕಲ್ಲೆಸೆದರು. ಇಬ್ಬರು ಒನರರಿ ಮೆಜಿಸ್ಟ್ರೇಟರು ಕಲ್ಲುಗಳಿಂದ ಗಾಯಗೊಂಡರು. ಗುಂಪಿನಲ್ಲಿದ್ದವನೊಬ್ಬನು ಸೈನಿಕನೊಬ್ಬನ ಬಂದೂಕನ್ನು ಕಸಗೊಂಡು ಗೊಂದಲವನ್ನೆಬ್ಬಿಸಿದನು ಪರಿಸ್ಥಿತಿಯು ಉಲ್ಬಣಗೊಂಡಿತೆಂದಾಗ ಮಿಲಿಟರಿಯವರು ಗುಂಡು ಹಾರಿಸಿದರು ಮಿಲಿಟರಿ ಅಧಿಕಾರಿಗಳಿಂದ ಬಂದ ವರದಿಯು ಮೇರೆಗೆ ೧೦ ೦೦೦ ಜನರು ಗುಂಪು ಕೂಡಿದ್ದರೆಂದು ತಿಳಿದು ಬರುತ್ತದೆ ಜನಸಮೂಹವು ಆವೇಶಮಯವಾಗಿ ಸಿಪಾಯಿಗಳ ಮೇಲೆ ಹಾರಲು ಯತ್ನಿಸುತ್ತಿದ್ದಾಗ ಮಿಲಿಟರಿಯವರು ಗುಂಡು ಹಾರಿಸಿದರು. ಸ್ವರಕ್ಷಣೆಗಾಗಿಯೂ ಮಿಲಿಟರಿಯ ಶಿಸ್ತು ರಕ್ಷಣೆಗಾಗಿಯೂ ಹೀಗೆ ಮಾಡಿದರು ೩೦ ಮಂದಿ ಆಂಗ್ಲ ಸಿಪಾಯರು ಒಟ್ಟು ೪೭ ರೌಂಡುಗಳ ಗುಂಡುಗಳನ್ನು ಹಾರಿಸಿದರು ಮಿಲಿಟರಿಯವರು ಗುಂಡನ್ನು ಹಾರಿಸಿಯೇ ಹಾರಿಸುವರೆಂದು ಜನಸಮೂಹಕ್ಕೆ ತಿಳಿದಿತ್ತು ಇದನ್ನು ತಿಳಿದ ಮೇಲಾದರೂ ಜನರು ಚದರಬೇಕಿತ್ತು ಆದರೆ ಜನರು ಕದಲಲಿಲ್ಲ. ಇದರಿಂದ ತಿಳಿಯುವುದಾದರೂ ಏನು! ಸರಕಾರದ ಯಾವ ಅಧಿಕಾರಿಯೂ ಸಂದಾರ್ಭದಲ್ಲಿ ಅವರು ಕರ್ತವ್ಯ ಲೋಪಮಾಡಿಲ್ಲ. ಹದ್ದುಮೀರಿಯೂ ಕರ್ತವ್ಯವನ್ನು ನೆರವೇರಿಸಲಿಲ್ಲ. ಅವರನ್ನು ದಂಡಿಸಲು ಯಾವ ಆಧಾರವೂ ಇಲ್ಲ”.

ಮಿ॥ ಜಿನ್ನಾರವರೆದ್ದು—ಕರಾಚಿಯ ಸಿವಿಲ್ ಅಧಿಕಾರಿಗಳು ಪರಿಸ್ಥಿತಿಯನ್ನು ಕಂಡು ವರ್ತಿಸಲಿಲ್ಲ ಮಾರ್ಚ ೨೧ನೇ ತಾರೀಕಿನ ದಿನ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಒಂದು ಪ್ರಕಟನೆಯನ್ನು ಹೊರಡಿಸಿ ನಿಷಿದ್ಧ ಸಭೆಗಳನ್ನು ಮಾಡಿದರೆ ಶಿಕ್ಷಿಸಲಾಗುವುದೆಂದಿದ್ದರು ಪರಿಸ್ಥಿತಿಯು ಏನಾಗುವುದೆಂದು ಅವರಿಗೆ ಮೊದಲೇ ತಿಳಿದಿತ್ತು. ಅದೆಲ್ಲ ಹಾಗಿರಲಿ ನಾವು ಸರಕಾರವನ್ನು ಮಾನಿಸಬೇಕಾದರೆ ಒಂದು ಸ್ವತಂತ್ರ ವಿಚಾರಣಾ ಸಮಿತಿಯನ್ನೇರ್ಪಡಿಸಬೇಕು” ಎಂದರು

ಸೂಚನೆಯನ್ನು ಓಟಿಗೆ ಹಾಕಲಾಗಿ ೬೭ ಮಂದಿ ಅನುಕೂಲವಾಗಿಯೂ, ೫೩ ಮಂದಿ ಪ್ರತಿಕೂಲವಾಗಿಯೂ ಓಟು ಮಾಡಿದರು

ಎಂ. ಎಸ್ ಆಣೆಯವರು ತಾಟಸ್ಥ್ಯವನ್ನು ವಹಿಸಿದರು. ಅನಿಲ ಚಂದ್ರದತ್ತರು ಸೂಚನೆಗೆ ಪರವಾಗಿ ಓಟುಮಾಡಿದರು

ಮಿ॥ ಬಾಲ್ಕೃಂಡ್ ನವಲ್‌ರಾಯ ಶಾಂತಸಿಂಗ್ ಭಾಯಿ ಪರಮಾನಂದ, ಬ್ರಿಜ್‌ಲಾಲ್ ಬಿಜೋಣಿ ಇವರುಗಳು ಸರಕಾರದ ಕಡೆ ಓಟು ಮಾಡಿದರು

ಹಿಂದೂದೇಶದ ಇತರ ಪ್ರಾಂತಗಳ ಸಾಮಾನುಗಳಿಗಿಂತ ಪ್ರಿಯವಾದುದು, ನಿಶ್ಚಯವಾದುದು ಎಂದು ನಿರೂಪಿಸಿದರೆ ನಿಮ್ಮ ಬೆಲೆಗಿಂತ ಎರಡು ಪಾಲನ್ನು ಕೊಡ ಕೊಡುತ್ತೇವೆ.

ಸುಖವಾಗಿ ನಿದ್ರಿಸಿರಿ.



ನಮ್ಮ ಹಿಂದೀಯ ಮಂಚದಗಳನ್ನು ಪ್ರತಿಯೊಬ್ಬರೂ ಹೊಗಳುತ್ತಾರೆ, ಅದರ ಬಾಳಿಕೆ, ಅದರ ಗಟ್ಟಿಮುಟ್ಟುತನ, ಅದರ ಸುಂದರ ಕೆಲಸಗಳು ಆಕರ್ಷಣೀಯ.

ಉದ್ದ.	ಅಗಲ	ಎತ್ತರ.	ಸಾಧಾರಣ ಕ್ರಯ.	ಉತ್ತಮ ಬೆಲೆ.
6	3½	3½	1/4/–	1/8/–
6	4	4	1/8/–	1/12/–
6½	4½	4½	1/12/–	2 –
7	5	5	2/–	2/4/–
7½	6	5	2/4/–	2/8/–

ಪೆಕಿಂಗ್ ಫರ್ಮಾರ್ಡ್ ಅಂಚೆ ವೆಚ್ಚ ಫ್ರೀ.

Prabhat Trading Co,
12 Sikderparn Lane Calcutta

LOOK SHARP! LOOK AHEAD!

Murdeshwar's Banking Institute.

Pioneer Institute on the WestCoast

Opens out Careers for Business men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1936 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to,—

D. R. Murdeshwar,
Dip. Econ., F. R. Econ. S. (Lond.)
Principal

Ganapathy High School Street,
Mangalore

ಬೇಕಾಗಿದ್ದಾರೆ.

ನಿರುದ್ಯೋಗಿಗಳಾದ, ಉತ್ಸಾಹಿ ತರುಣರು ನಮ್ಮ ಬ್ಯೂಟಿ ಬೋಕ್ಸ್ ವಿಕ್ರಯಿಸುವುದಕ್ಕಾಗಿ ಬೇಕಾಗಿದ್ದಾರೆ. ತಿಂಗಳಿಗೆ ರೂಪಾಯಿ 80/-ಸಂಬಳ ಸೆಕ್ಯುರಿಟಿ ಇಲ್ಲ. ಕೆಟಲಾಗು ಧರ್ಮಾರ್ಥ.

ಇಂಗ್ಲಿಷಿನಲ್ಲಿ ಇಲ್ಲಿಗೆ ಬರೆಯಿರಿ.

National Trading Co.,
Jarabagon, Calcutta, (c)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟೀಕ್ ಕಾಗದದಲ್ಲಿ ಮುದ್ರಣ

ಕ್ರೌನ್ 1/8 ಆಕಾರದ 188 ಪುಟಗಳು

ಉತ್ತಮ ತರಗತಿಯ ಹಾಸ್ಯ

ಬೆಲೆ ರೂ. 1—4—0.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

ಇಲ್ಲಿಂದ ಪಡಕೊಳ್ಳಬಹುದು

ಶಾಲಿವಾಹನ ೧೮೫೭ ಶಕ ೧೮೫೭ನೆಯ ಭಾವ ಸಂವತ್ಸರದ ಫಾಲ್ಗುಣ ಬ. ೧೧ ಶನಿವಾರದಿಂದ ಚೈತ್ರ ೨ ಶು. ಶುಕ್ರವಾರದ ವರೇಗಿನ ಪಂಚಾಂಗ (ಗಣಕಲನೇಯ ಸಿಂಹಸೋಣ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
30	ಶನಿ	೧೧	೫೩	ಶ್ರವಣಾ	೨೧	೧೬	
31	ರವಿ	೧೨	೪೭	ಧನಿಷ್ಠಾ	೨೪	೧೬	
1	ಸೋಮ	೧೩	೪೧	ಶತಭಿಷಾ	೨೩	೧೮	
2	ಮಂಗಳ	೧೪	೩೬	ಪೂ. ಭಾ.	೧೯	೧೯	
3	ಬುಧ	೩೦	೩೧	ಉ. ಭಾ.	೧೬	೨೦	
4	ಗುರು	೧	೨೬	ರೇವತೀ	೧೩	೨೧	
5	ಶುಕ್ರ	೨	೨೨	ಅಶ್ವಿನೀ	೧೧	೨೨	

ಇಷ್ಟಸಿದ್ಧಿ

ಇಷ್ಟದೇವತಾ ಅನುಗ್ರಹದಿಂದ ವಶೀಕರಣ, ಸ್ತ್ರೀವಶ್ಯ, ಪುರುಷವಶ್ಯ, ಶತ್ರುನಾಶ, ವ್ಯಾಧಿನಾಶ, ಧನಲಾಭ ಮುಂತಾದವುಗಳು ಈ ಶಕ್ತಿಯಿಂದ ಉತ್ಪನ್ನವಾಗುವವು. ಸಂಪೂರ್ಣ ಪುಸ್ತಕದ ಬೆಲೆ, ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ:—

Hary yasram, Panchpota, Bengal

Swadeshabhimani

enjoys circulation in India and abroad.

APPLY FOR ADVERTISEMENT RATES

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3—10	3—4
ಮುಸ್ಸಿ	3—14	4—6
ಗುಡ್ಡು	3—9	4—0
ಉಪ್ಪರ ಅಪ್ಪಲ್ ಬೆಣ್ಣೆಗೆ	4—0	4—12
ರಂಗೂನು ಬಿ. ಗೋ ಅಕ್ಕಿ	6—0	6—6
ಎಲ್ಲೂರು ಬಿ. ಮು ಅಕ್ಕಿ	4—2	4—4
ಗೋದಿ ಗೋಣಿ ಒಕ್ಕೆ	10—0	10—8
ತೊಗರಿ ಗೋಣಿ ಒಕ್ಕೆ	9—0	10—0
ಹುರುಳಿ ಗೋಣಿ ಒಕ್ಕೆ	6—12	7—10
ಕಡಲೆ ಗೋಣಿ ಒಕ್ಕೆ	8—0	10—8
ತೊಗರಿಬೇಳೆ ಗೋಣಿ ಒಕ್ಕೆ	10—0	17 0
ಉದ್ದು ಗೋಣಿ ಒಕ್ಕೆ	8 0	8—8
ಹೆಸರು ಗೋಣಿ ಒಕ್ಕೆ	[illegible]	[illegible]—8
ಊರುಬೆಲ್ಲ ಖಂಡಿ ಒಕ್ಕೆ	32—8	35—0
ಉಪ್ಪು ಗೋಣಿ ಒಕ್ಕೆ	4—8	5—0
ಕೊಬ್ರಿ ಖಂಡಿ ಒಕ್ಕೆ	48 0	55—0
ಕೊಬ್ರಿ ಹಿಂಡಿ ಖಂಡಿ ಒಕ್ಕೆ	20—0	[illegible]
ಎಣ್ಣೆ ಖಂಡಿ ಒಕ್ಕೆ	37—8	40 0
ಕೊಬ್ರಿ ಎಣ್ಣೆ ಮುಡಿ ಒಕ್ಕೆ	3—7	4 0
ಎಳ್ಳೆಣ್ಣೆ ಮುಡಿ ಒಕ್ಕೆ	5—2	5—10
ಹರಳೆಣ್ಣೆ ಪಟ್ಟಿಗೆ ಒಕ್ಕೆ	5—7	5—7
ಮೋರಿಸ ಸಕ್ಕರೆ ಮು ಒಕ್ಕೆ	3—5	3—6
ಮೆಣಸು	4—4	3—4
ಸಾಸಿವೆ ಮುಡಿ ಒಕ್ಕೆ	5—12	6—0
ಕಾಳುಮೆಣಸು ಖ. ಒಕ್ಕೆ	120—0	122 8
ಯೇಲಕ್ಕಿ ಮುಡಿ ಒಕ್ಕೆ	22—0	27—0
ಗೇರುಬೀಜ ಮು. ಒಕ್ಕೆ	3—10	8 14
ಕಬ್ಬಿಣ ಖಂಡಿ ಒಕ್ಕೆ	40—0	40—8
ಕಾಂಪ್ಯುಕಗಳು ಮು ಒಕ್ಕೆ	9—0	9—1
ಕಾಂಪ್ಯುಪಾತ್ರಗಳು ಮು ಒಕ್ಕೆ	11—0	12—0
ಚಟಿಬೆಲ್ಲ ಸೇರು ಒಕ್ಕೆ	14—12	15—0
ಹಿತ್ತಾಳೆ ತಗಡು ಮು. ಒಕ್ಕೆ	8—12	9—0
ಹವನು ಒಕ್ಕೆ	22—8	23—
ಹುಣಿಸೆ ಹುಳಿ ಖಂಡಿ ಒಕ್ಕೆ	25—0	27—8
ನೇಟಿವ್ ಕಾಫಿ ಖಂಡಿ ಒಕ್ಕೆ	160—0	165—0
ಪ್ಲಾಂಟೇಶನ್ ಕಾಫಿ ಖಂಡಿ ಒಕ್ಕೆ	235 0	240—0
ಹಳೆ ಅಡಿಕೆ	100—0	116 0
ಹೊಸ ಅಡಿಕೆ	75—0	95 0

Standard Furniture Co. Ltd.

KALLAI, MALABAR

The BEST HOUSE for FURNITURE.

BRANCHES:—

Madras—34—35, General Patters Road, Mount Road

Trichinopoly—11, Promenade Road, Cantt

NEW ARRIVALS.

Medicines.

Dr Schuessler's Twelve Tissue Remedies 5 gr bot. As 4/

Homoeopathy Medicines 5 gr bot As 5/—

Sugar of Milk Dr Schwabe's original bot 1lb Rs 2/-

Haarlem Oil—a world renowned remedy As 8/-per phial

Dr Haele's New Curative Earth—Radium Cure Rs 4/ per lb

Dr Schwabe's other special remedies are always in stock

Please consult us for your requirements

Kanarese Book a Family Guide to Biochemistry Re 1/-

" Domestic Homoeopathy Rs 1-4/-

If you wn these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6

Delightful in ar ma charming in appearance Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps Spring Cots Spring Couches etc and stock

Pipes and pipe fittings at easy prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you

Olympia Typwriter.

An up to date Machine in standard and portable sizes

For Further particulars please write —

Basel Mission Book & Tract Depository

Mangalore S K or Hubli, S M

ರೇಷ್ಮೆಯಂತೆ, ನುಣುಪಾದ ಮತ್ತು
ಹೊಳಪಾದ ಕೇಶಧಾವ.

ದಿನಸಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ

(ಮನವಮುಗ್ಧಕರವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0

ಆರ್ ಸಿ ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು —

ಕುಂತಳ ಕೌಮುದಿ ತೈಲ,
ದರ್ಬಾರ್ ಆಸ್ಪತ್ರೆ ಎದುರು ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು.

ಚಿಕ್ಕದೊಡ್ಡವರು- -ದೊಡ್ಡಚಿಕ್ಕವರು.

ಲೇಖಕರು:—ಶ್ರೀ| ಶಿವರಾಮ ಕಾರಂತರು.

೧. ನಮ್ಮ ಶಂಭು

ನನಗೆ ನಮ್ಮ ಶಂಭುವಿನ ಪರಿಚಯವಾಗಿ ಇಂದಿಗೆ ಸುಮಾರು ಎಂಟು ವರುಷಗಳಾದರೂ ಆದುವು. ಈಗ ಶಂಭು ಒಬ್ಬ ಸ್ಕೂಲು ಮಾಸ್ತರನಾಗಿದ್ದಾನೆ. ಆಗ ಒಬ್ಬ ಸ್ಕೂಲು ವಿದ್ಯಾರ್ಥಿಯಾಗಿದ್ದ, ಈ ನನ್ನ ಪರಿಚಯದಿಂದ, ಸರಾಸರಿ, ಕೇಳಬಹುದಾದ ಸಂಗತಿಯೆಂದರೆ ಶಂಭುವು-ಪರಿಳಿತವಿಲ್ಲದ ಮನುಷ್ಯನೆಂದು. ಇಂದು ಹೇಗೆ ಅವನಿದ್ದಾನೆಯೋ, ಅಂದು, ಎಂದರೆ, ನಮ್ಮಿಬ್ಬರ ಪ್ರಥಮ ಮುಲಾಖತ್ತಿದಾಗ, ಹಾಗೆಯೇ ಇದ್ದನು. ಆಗ ಅವನು ಕರಿ ಶಿಲೆಯ ಗೊಂಬೆಯಂತಿದ್ದನು. ಈಗ ಅವನ ರೂಪವು ಅವನ ನೆರಳಿನದ್ದೇ ಬಿದ್ದಿ ತಾಳಿದೆ. ಆಗ ಅವನ ಬುದ್ಧಿಯಲ್ಲಿ ಆರು ವರ್ಷದ ಕೂಸಿನಷ್ಟು ನಿಷ್ಕಲಂಕನೂ, ನಿರ್ಲೇಪಿಯಾಗಿದ್ದನು. ಈಗ ಎಪ್ಪತ್ತೆರಡು ತಿಂಗಳಿನ ಕೂಸಿನಂತೆ ಕಾಣಿಸುತ್ತಾನೆ ಉಡುಗೆ ತೊಡಿಗೆ ಎಲ್ಲವೂ ಹಾಗೆಯೇ ಇದೆ ಆಗಿಸಿಂದಲೂ, ಮಹಾತ್ಮಾ ಗಾಂಧಿ ಟೋಪಿ, ಅದರ ಉಪಾಂಗಗಳಾದ ಮುಂಡು, ಶರ್ಟು, ಶಾಲುಗಳನ್ನು ಉಡುತ್ತಿದ್ದಾನೆ ಈಗಲೂ ಅದೇ ಬಣ್ಣದ ಉಡುಗೆ, ಅದೇ ಅಂಚಿನ ಶಾಲು, ಅಷ್ಟೇ ಅಗಲದ ಪಂಚೆಯಲ್ಲಿಯೇ ಅವನು ಕಾಣಿಸಬಹುದು ತೂಕದ ಮಟ್ಟಿಗೆ ಆಗಿಸಿಂದ ಈಗ ಎರಡು ತೊಲೆ ಹೆಚ್ಚಿರಬೇಕು ಇದು ಅವನ ಶರೀರದ ಬೆಳವಣಿಗೆಯಿಂದಲೂ ಅಲ್ಲ, ಬುದ್ಧಿಯ ಬೆಳವಣಿಗೆಯಿಂದಲೂ ಅಲ್ಲ ಅವನ ಬುದ್ಧಿಯ ವಿಚಾರ ನೀವೇ ನಿರ್ಧರಿಸಲು ಶಕ್ಯವಿದೆ ಮುಖ್ಯ ನಾನೊಬ್ಬ ಪತ್ತೇದಾರನಾಗಿದ್ದರೆ, ಶಂಭುವು ತೂಕದಲ್ಲಿ ಸದರಿ ಎರಡು ತೊಲೆ ಹೆಚ್ಚಲು ಕಾರಣವೇನೆಂದು ಊಹಿಸಬಹುದಾದರೆ, ಅದು ಆಗ ಇಲ್ಲದೆ ಈಗ ಬೆಳೆದಿರುವ, ಮುಖದ ಮೇಲಿನ ರಿಜರ್ವ್‌ಡ್ ಫೋರ್ಸ್ಸಿನ ದೆಸೆಯಿಂದ

ನಾನು ನನ್ನ ಜನ್ಮದಲ್ಲಿ ಕಂಡುದು ಒಬ್ಬ ಶಂಭುವನ್ನು ಅವನಂತಿರುವ ಎರಡನೇ ಶಂಭವನ್ನು ಕಾಣಲಾರದೆ ಹೋದೆ. ಅವನು ಪೂರ್ವವಕ್ತಿ—ಎಂದರೆ ನಮ್ಮ ಜಿಲ್ಲೆಯ ಮೂಡಲಿನ ಪುತ್ತೂರಿನವನು.

ಅವನು ಕಡುಬಿಸಿಸಿದ ಪುತ್ತೂರಿಗೆ ಕೆಲವು ವರ್ಷಗಳ ಹಿಂದೆ ವಿದ್ಯಾಭ್ಯಾಸಮಾಡುವ ಸಲುವಾಗಿ ಬಂದಿದ್ದನು ಅದರಿಂದ ನನಗೆ ಅವನ ಪರಿಚಯವಾಗುವ ಕಾರಣವಿದ್ದಿಲ್ಲ. ಆದರೊಮ್ಮೆ ಅವನಾಗಿ ನನ್ನನ್ನು ಕಾಣಲು ಬಂದನು ನಾನು ಒಂದು ಬೇಸಗೆಯ ಸಮಯ. ಶಾಂತಿಶಿಬಿರವೆಂಬೊಂದು,— ಬಿಡುಗಾಲದ ಉದ್ಯೋಗ ಕೊಂಡಿದ್ದ ಒಂದು ತಿಂಗಳ ಅವಧಿಯನ್ನು ಉಪಯುಕ್ತವಾಗಿ ಕಳೆಯಬೇಕೆಂಬ ಉದ್ದೇಶ ನನ್ನದಿತ್ತು ಅದಕ್ಕೆ ಬಂದು ಸೇರುವೆನೆಂಬ ಉತ್ಸಾಹ ಅವನದಿತ್ತು ಅದಕ್ಕೂ ತುಸು ಮೊದಲು ಅವನ ಗೆಳೆಯನೊಬ್ಬ ಸನ್ಯಾಸಿಯಾಗಿ ಊರುಬಿಟ್ಟಿದ್ದನಂತೆ ಅವನು ಹಾಗೆಲ್ಲಾದರೂ ಮಾಡಿ ನನ್ನ ತಲೆಯ ಮೇಲೆ ಅಪವಾದ ಹಾಕುವನೇ ಎಂದು ನನ್ನ ಭೀತಿಯಿದ್ದರೂ, ಅವನ ಸೌಜನ್ಯ ಕಂಡು ಶಿಬಿರಕ್ಕೆ ಸೇರಿಸಿದ್ದಾಯಿತು.

ಶಿಬಿರದ ಕಾಲದಲ್ಲಿ ಇತರ ಹುಡುಗರಂತೆ ಮಾತುಗಾರನಾಗಿರಲಿಲ್ಲ ಅವನು ಉಪನ್ಯಾಸದ ಕಾಲ ಬಂದು, ಕುಳಿತರೆ, ಒಂದು ತಾಸೊ, ಎಷ್ಟೋ ಸಮಯ, ಉಪನ್ಯಾಸ ಮುಗಿದ ಮೇಲೂ ಕುಳಿತಿರುವ. ಎದ್ದು ಹೋಗುವ ತನಕ ಚಾಚೂ ಪ್ರಶ್ನೆಯಾಗಲಿ, ಚಲನೆಯಾಗಲಿ ಇದ್ದಿಲ್ಲ ನಮ್ಮೆದುರಿಗೆ ಕುಳಿತರೆ ಕಣ್ದೆರೆದು ನೋಡುತ್ತ ಕುಳಿತಿರುವ ಕೆಲವು ಬಾರಿ ಏನನ್ನಾದರೂ ಬರೆದುಕೊಂಡಾಗ ಬರೆದುಕೊಂಡ. ಉಳಿದ ಸಮಯ ಹಿಂದೀ ಪಾಠವನ್ನು ಓದುತ್ತಲೋ, ಇಲ್ಲವೆ ರಾಟೆ (ತಕ್ಲಿ) ತಿರುವುತ್ತಲೂ ಇದ್ದನು ಅಂದಿನಿಂದ ಇಂದಿನವರೆಗೂ ಅವನು ಹಿಂದೀಪಾಠ ಮುಂದರಿಸುತ್ತಿರುವನೆಂಬುದೇ ನನ್ನ ನಂಬುಗೆ ಆದರೆ ಅವನ ಜ್ಞಾನಕ್ಕೆ ಸರಿಯಾದ ಪರೀಕ್ಷೆಯನ್ನು ಈಗಿನ ಸುಧಾರಣೆಯ ದಿವಸಗಳಲ್ಲೂ ಹಿಂದೀ ಪ್ರಚಾರ ಸಭೆಯವರು ಇರಿಸಿಲ್ಲವೆಂಬುದು ನನ್ನ ಅಭಿಪ್ರಾಯ ಮೊನ್ನೆ ಒಂದು ದಿನ ಒಂದು ಕಠಿಣದ ಸಮಸ್ಯೆ ಅವನಿಗೆ ತೋರಿಬಂದುದರಿಂದಲೋ ಏನೋ—ನನ್ನ ಗೆಳೆಯರೊಬ್ಬರ ಬಳಿಗೆ ಬಂದು—'ಸರ್, ಮೈ ಜಾತಾ ಹೈ ಯೇ? ಅಥವಾ ಜಾತಾ ಹೈ'ಯೇ? ಯಾವುದು ಸರಿ' ಎಂದು ಕೇಳಿದನು. ಪ್ರಾಯಶಃ 'ಹೈ' ಏಕವಚನವಿರಬೇಕು' ಎಂದು ನಿರ್ಧರಿಸಿ ಹೋದುದನ್ನು ಕಂಡೆನು

ಶಂಭುವಿನ ವಿಚಾರ, ಪರಿಶ್ರಮ, ಉತ್ಸಾಹ, ಆದರ್ಶಪ್ರಾಯವಾದದ್ದು. ಅವನ ಬುದ್ಧಿಸರಣಿ ಹರಿಯುವ ರೀತಿ ಮಿಂಚಿನ ತೀವ್ರತೆ, ವಕ್ರತೆಯನ್ನೆಲ್ಲಾ ಮೀರಿಸುವುದು. ಒಂದು ದಿನ ಅವನಿಗೆ ದೇಶಸೇವೆಮಾಡುವ ಉತ್ಸಾಹವಾಗಿ (ಈಗ ಅದು ಸತ್ತಿಲ್ಲ) ನಾನು ಕುಳಿತಲ್ಲಿಗೆ ಬಂದನು. ನಾನಾಗ ಏನನ್ನೊ ಬರೆಯುತ್ತ ಕುಳಿತಿದ್ದೆ. ಆತ ಬಂದು ನನ್ನ ಕಾಲಿನ ಬಳಿ ಕುಳಿತನು. ನಾನು ಬರೆಯುತ್ತಲೇ ಇದ್ದೆ. ಮುಖವೆತ್ತಿ ಅವನ ಕಡೆಗೆ ತಿರುಗಿತು.

'ಸರ್, ಒಂದು ಮುಖ್ಯ ವಿಷಯ ನಿಮ್ಮಲ್ಲಿ ಕೇಳಲು ಬಂದೆ, ಹೇಳಲೋ? ಎಂದನು.

ನನ್ನ ಉತ್ತರವನ್ನು ಊಹಿಸುವ ಶಕ್ತಿ ಅವನಿಗಿದ್ದುದರಿಂದ ನಾನು ಅವನಿಗೆ ಉತ್ತರಕೊಡಲಿಲ್ಲ.

'ಸರ್! ಮಹಾತ್ಮಾ ಗಾಂಧಿಯವರು ಈಗ ಸಬರ್ಮತಿಯಲ್ಲಿ ಇಲ್ಲವಂತೆ.'

'ಸಬರ್ಮತಿ ಆಶ್ರಮದಲ್ಲಿ ಹತ್ತಿ ಬೆಳೆಯಲು ಕಾರಣವೇನು?'

'ಸರ್! ವ್ಯಾಸರಾಯರು ವಿಮಾನದಲ್ಲಿ ಇಂಗ್ಲೆಂಡಿಗೆ ಹೋಗುತ್ತಾರಂತೆ, ಏನು ಕಾರಣವಿರಬಹುದು.'

(ಅವನಿಗೆ ತಿಳಿದಿತ್ತು, ನನಗೂ ವ್ಯಾಸರಾಯರಿಗೂ ತೊಡಗಿರದ ಪತ್ರವ್ಯವಹಾರ ನಿಂತು ಬಹಳ ದಿನವಾಗಿತ್ತೆಂದು)

'ನಿಮಗೆ ಗೊತ್ತಿಲ್ಲಾಂತ ಕಾಣುತ್ತೆ . . .

'ಸರ್! ನಾನು ಮಾಸ್ಟ್ರು ಆಗುವಾ ಅಂತ ಇದ್ದೇನೆ. ದೇಶಸೇವೆ ಅದರಿಂದ ಆಗಲಿಕ್ಕಿಲ್ಲವೇ?'

'ಸರ್' ಜಪಾನಿಯರು ಕೆಂಪು ಬಟ್ಟೆ ಹೆಚ್ಚಾಗಿ ಉಡುತ್ತಿದ್ದಾರೆ, ಏಕೆ ಸರ್? ನಮ್ಮಲ್ಲಿನ ವಿಧವೆಯರೂ ಅದೇ ಬಣ್ಣದ ಬಟ್ಟೆ ಉಡುತ್ತಿದ್ದಾರೆ.'

"ಮೊನ್ನೆ ಸರ್, ನಮ್ಮ ಊರಿನಲ್ಲಿ ಒಬ್ಬರು, ಕಡ್ಡವಾಸದ ದಿವಸ, ಒಂದು ಹುಡುಗನನ್ನು ಗುಂಡುಹೊಡೆದು ಕೊಂದಿಲ್ಲವೆ? ಅಂದು, ಅಂದರೆ—ಅವರು ಲ್ಯಾಟು ಹಿಡಿದು ಶಿಕಾರಿಗೆ ಹೋಗಿದ್ದರು ಹೋದದ್ದು ಸರಿ, ಕತ್ತಲೆಯಲ್ಲಿ ಏನೋ ಎರಡು ಕಣ್ಣು ನೋಡಿ ಹೊಡೆದರು

'ಆದರೂ ಸರಿ, ಬಿಲ್ಲುಬಾಣ ಹಿಡಿಯುವುದು ಒಳ್ಳೆದೆಂದು ಕಾಣುವುದು ಸರ್'

'ಸರ್' ನಿಮ್ಮಣ್ಣ ಈಗ ಎಲ್ಲಿ ಸ್ಕೂಲುಮಾಸ್ತರರು?'

ಈ ರೀತಿ ರಸವತ್ತಾದ ಸಂಭಾಷಣೆ ನಡೆಯುತ್ತಿತ್ತು ನಾನು ಬರೆಯುತ್ತಲೇ ಇದ್ದೆ ಬರಹ ಮುಗಿಯಿತು, ಅಂಗಿ ಹಾಕಿಕೊಂಡು ಎಲ್ಲಿಗೋ ಹೊರಡಲು ಅಣಿಯಾದೆ

'ಪೋಸ್ಟಾಫೀಸಿಗೆ ಎಂದು ಕಾಣುತ್ತದೆ' ಎಂದನು ಶಂಭು ನಾನು ಬೇಗ ಹಾಕಿ ಹೊರಟೆ ಶಂಭುವು—'ನಾನೂ ಬರಲೇ?' ಎಂದು ಕೇಳಿದನು 'ಹೂ' ಸರಕಾರಿ ರಸ್ತೆ ಅಲ್ಲವೆ, ಪೋಸ್ಟಾಫೀಸೂ ಸರಕಾರದ್ದು' ಎಂದೆನು. ನಾನು 'ಹೂಂ, ನೀವು ಚೇಷ್ಟೆಮಾಡುತ್ತೀರಿ' ಎಂದು ಅವನು ಶೋಧಮಾಡಿದನು ಈ ಶೋಧನೆಯನ್ನು ಹಲವು ಸಾರಿ ಮಾಡಿ ಆತನು ನನ್ನನ್ನು ಸೋಲಿಸಿದ್ದನೆಂದರೆ ನಿಮಗೆ ಆಶ್ಚರ್ಯವಾದೀತು.

ನಾನು ಹೊರಟವನು ಅಂಚೆಮನೆಗೆ ಹೋಗಿ ಅಲ್ಲಿಂದ ನನಗೆ ಬಂದ ಪತ್ರಗಳನ್ನು ತೆಗೆದುಕೊಂಡು ಹೊರಟೆ. ಶಂಭು ಹೊರಟನು ಇಬ್ಬರೂ ಪುತ್ತೂರು ಹಾಸ್ಟೆಲಿನ ಕಡೆಗೆ ಬಂದೆವು ದಾರಿಯಲ್ಲಿ ಯಾರೋ ಸ್ನೇಹಿತರು ಭೇಟಿಯಾದರು ಶಂಭು ನಮಸ್ಕರಿಸಲು ಅವರು—'ಶಂಭು, ಆ ಕಾರ್ಡು ಟಪ್ಪಾಲಿಗೆ ಹಾಕಿದೆಯಾ?' ಎಂದು ಕೇಳಿದರು 'ಕಾರ್ಡು' ಯಾವುದು? ಹೋ, ಗೊತ್ತಾಯಿತು ನೀವು ಟಪ್ಪಾಲಿಗೆ ಕೊಟ್ಟದ್ದು ಮನೆಯಲ್ಲಿ ಬಿಟ್ಟಿರಬೇಕು'— ಎಂದನು

ನಾನು—'ಇಲ್ಲಪ್ಪ, ಕಿಸೆಯಲ್ಲಿ ಒಂದು ಕಾರ್ಡು ಕಾಣಿಸುತ್ತಿದೆ.

ಅದರ ನೆನಪಾಗಿ, ಶಂಭುವು ಅದನ್ನು ತೆಗೆದುಕೊಂಡು ನೋಡಲು ಅದೇ ಕಾರ್ಡು ಆಗಿತ್ತು ಈಗಲೇ ಹಾಕಿ ಬರುವೆನೆಂದು ಅಂಚೆ ಆಫೀಸಿಗೆ ಹೋದನು ಇನ್ನರೆ ತಾಸಿನಲ್ಲಿ ನಾನು ನಿದ್ದೆಮಾಡಲು ಮಲಗಿದ್ದಾಗ ಶಂಭುವು ಬಂದು ನನ್ನೊಡನೆ—'ಸರ್, ಪ್ರೆಸಿಡೆಂಟರಿಗೆ ಹೇಳಿ ಒಂದು ಮಾಸ್ತರಿಕೆ ಎಲ್ಲಾದರೂ . . ಎಂದನು. (ಆಗಲೂ ಕಾರ್ಡು ಕಿಸೆಯಲ್ಲಿ ಇತ್ತು.)

'ಅದಿರಲಿ ಸರ್, ಬೇಪೂರು ಸುಬ್ರಾಯರು ನಾಳೆ ಪುತ್ತೂರಿಗೆ ಬರುತ್ತಾರೆ—ಅಂತೆ. ನಿಮಗೆ ತಿಳಿದಿದೆಯೇ?' ಎಂದನು

ನಾನು 'ಏತಪ್ಪನವರಲ್ಲಿ ಕೋಳಿ ಸಾಕುತ್ತಾರೆಯೇನು?'

ಶಂಭು-ಸರ್! ಅಂದರೆ ಮಾಸ್ತರಿಕೆಮಾಡಿದರೆ ದೇಶಸೇವೆ ಆಗಲಿಕ್ಕಿಲ್ಲವೋ ಹುಡುಗರಿಗೆ ಹಿಂದಿ ಹೇಳಿಕೊಡಬಹುದಿತ್ತು.

ನಾನು—ಮೊನ್ನೆ ನಮ್ಮ ಸಹಕಾರಿ ಸುಪರ್‌ವೈಜರರು ಸುಬ್ರಮಣ್ಯಕ್ಕೆ ಹೋದವರು ಬಂದರೇ?

ಶಂಭು—ಅವರಿಗೆ ಹೋಗಲಿಕ್ಕೆ ಆಗಲಿಲ್ಲವಂತೆ. ಸರ್, ನಾನು ಬೆಂಗಳೂರಿಗೆ ಹೋಗಿಬರುವುದು ಎಂದು ಮಾಡಿದ್ದೇನೆ.

ನಾನು—ಬೆಳಿಗ್ಗೆ ಮೊಡರ್ನ್ ಬಸ್ಸು-ಏಳುವರೆ ಗಂಟೆಗೆ ಪುತ್ತೂರಿಗೆ ಬರುತ್ತದೆ ಎಂದು ಕಾಣುತ್ತದೆ.

ಈಗ ಮಧ್ಯಾಹ್ನ ಮೂರುವರೆ ತಾಸು ಸರಿದಿತ್ತು. ನನಗೆ ನಿದ್ದೆ ಬಹಳವಾಗಿತ್ತು. 'ಶಂಭು, ಊಟವಾಗಿದೆಯೇ ನಿನಗೆ' ಎಂದು ಕೇಳಿದೆ.

ಶಂಭುವಿಗೆ ಆ ದಿನ ಇದೀ ಊಟವಾಗಲಿಲ್ಲವೆಂದು ತೋರಿ ಊಟಕ್ಕೆ ಹೊರಟುಹೋದನು. ಅದೇ ದಿವಸ ಮನೆಯನ್ನು ಸೇರಿರಬೇಕೆಂದು ನಾನು ಊಹಿಸಿದೆನು.

ಇನಂತರ ಒಮ್ಮೆ ಪ್ರಸಂಗವಶಾತ್ ಶಂಭುವಿನ ಪ್ರಸ್ತಾಪವನ್ನು ಯಾರೋ ನನ್ನೊಡನೆ ತೆಗೆದರು. 'ಏನು ಮಾಡುತ್ತಾನೆ ಅವನು? ಮಾಸ್ತರಿಕೆ ಎಲ್ಲಾದರೂ ಸಿಕ್ಕಿತೇ?' ಎಂದು ಕೇಳಿದೆ. ಆಗ ಅವರೆಂದರು—'ಬೆಂಗಳೂರಲ್ಲಿ ಒಬ್ಬರು ಸನ್ಯಾಸಿಯರಿದ್ದಾರೆ; ಅಲ್ಲಿ ಅವನನ್ನು ಬರಹೇಳಿದರಂತೆ. ಹೋಗಿದ್ದಾನೆ ಎಂದು ತಿಳಿಯಿತು. ನನಗೆ ಗಡಿಬಿಡಿಯಾಯಿತು. ತನ್ನ ಗೆಳೆಯನಂತೆ ಇವನೂ ಸನ್ಯಾಸಿಯಾದರೆ, ಎಂದು. ಅಂದರೆ ಮದುವೆಯಾಗಿದ್ದನು, ಆದರೂ ಸನ್ಯಾಸಿಯಾಗಿರದ ಹೆಂಡತಿ ಅವನಿಗಿದ್ದಳು. ಅವರೇ ಅಂದರು— 'ಹೆಂಡತಿಯನ್ನೂ ಕರೆದೊಯ್ದಿದ್ದಾನೆ' ಎಂದು. ಅಚ್ಚರಿಗೊಂಡೆ ನಾನು. 'ಇಲ್ಲ, ಮನೆಗೆ ತಾಯಿಗೆ ಮೊನ್ನೆ ಕಾಗದ ಬಂದಿದೆ, ತಾಯಿಯನ್ನೂ ಕರೆದುಕೊಂಡು ಆ ಸಾಧುಗಳ ಬಳಿಯಲ್ಲಿಯೇ ಇರುತ್ತಾನಂತೆ' ಎಂದರು

'ಮೊನ್ನೆ?'

'ಅಹುದು, ನಿನ್ನೆಲ್ಲಾ ಮೊನ್ನೆ' ಎಂದರು ಅವರು

'ಸರಿ, ಹಾಗಾದರೂ ಸರಿ, ಅಲ್ಲೆಲ್ಲಾದರೂ ಒಂದುಶಾಲೆ ಸೇರಿ ಹಿಂದಿ ಕಲಿಸಲಿ' ಎಂದೆ ನಾನು

'ಹಿಂದಿ ಕಲಿಸಲಿಕ್ಕಿಲ್ಲವಂತೆ, ಮಗ್ಗ, ನೂಲು, ಗಾಂಧಿ ವಿಚಾರವಂತೆ'-ಎಂದರು

'ಸರಿ, ಮೊದಲಿಂದಲೂ ತಕ್ಲಿ ಹಿಡಿದವನಾದುದರಿಂದ ಒಲ ಆ ಕಡೆ ಹರಿಯಿತು' ಎಂದೆ

ಸರಿ, ನಮ್ಮ ಮಾತುಕತೆಯು ಮುಗಿಯಿತು ಶಂಭು ಊರು ಬಿಟ್ಟಿದ್ದಕ್ಕಾಗಿ ನನಗೆ ಬಲು ಬೇಸರವಾಯಿತು. ಅದೇ ಸಂಜೆ ನಾನು ನನ್ನ ಮಿತ್ರ ಮಾನಪ್ಪನವರೊಡನೆ ಮಂಜಳಗುಡ್ಡದ ಕಡೆ ತಿರುಗಾಟಕ್ಕೆ ಹೋದಾಗ ದೇಶಭಕ್ತ ಶಂಭುವಿನ ಭೇಟಿಯಾಯಿತು ದಿಗಿಲುಗೊಂಡ ನಾನು 'ಮದ್ರಾಸು ' ಎಂದೆ ಮುಂದಿನ ವಿಚಾರ ಅವನೇ ತೆಗೆದನು

ಶಂಭು—'ಸರ್, ಮದ್ರಾಸಿಗೆ ಹೋದದ್ದು ಹೌದು ಆದರೆ ತಾಯಿ ಅಲ್ಲಿಗೆ ಬರುವುದಿಲ್ಲ, ಎಂದಳು '

ಮಾನಪ್ಪ—ಯಾಕೆ ಹೋದದ್ದು?

ಶಂಭು—ಸಾಧುಗಳು ಬರಹೇಳಿದ್ದರು

ಮಾನಪ್ಪ—ಆ ಸಾಧುಗಳೇ, ಬಹಳ ಚೆನ್ನಾಯಿತು

ಶಂಭು ಆದರೆ ಏಕೋ, ಇಲ್ಲಿ ಬಹಳ ಉಪಯೋಗವಿಲ್ಲವೆಂದು ತಿಳಿಯಿತು

ನಾನು—ಅದು ಹೇಗೆ ತಿಳಿಯಿತು?

ಶಂಭು—ನಾನು ಹೋದ ದಿವಸವೇ ಒಬ್ಬರು ಹೇಳಿದರು 'ಖಾದಿಯಿಂದ ಸ್ವರಾಜ್ಯ ಸಿಕ್ಕಿದರೆ ಇನ್ನೇನು'' ಎಂದು ನನಗೂ ಹಾಗೆ ಕಾಣುತ್ತದೆ

ನಾನು—ಅದು ಸರಿಯಪ್ಪ

ಶಂಭು—ಸರ್ ಪ್ರೆಸಿಡೆಂಟರು ಮನೆಯಲ್ಲಿದ್ದಾರೆಯೇ?

ನಾನು—ಇನ್ನೆಲ್ಲಿಗೂ ಹೋಗದಿದ್ದರೆ—

ಶಂಭು—ಹಾಗಾದರೆ ಮನೆಯಲ್ಲಿದ್ದಾರೆ ಅವರನ್ನು ನೋಡಿ ಆ ಪಂಚಾಯಿತ ಶಾಲೆಯಲ್ಲಿ ಒಂದು ಮಾಸ್ತರಿಕೆ

. . . . . .

ಒಂದು ಪ್ರಸಂಗ ಹೇಳಬೇಕಾಗಿದೆ ನಾನು ಶಂಭುವಿನ ಸಲುವಾಗಿ ಮಾಜಿ ಪ್ರೆಸಿಡೆಂಟ್ ಶಿವರಾಯರನ್ನು ಕೇಳಿದೆ ಅವರು ನಗುತ್ತ—'ಯಾರು ಶಂಭುವೋ ಇತ್ತಲಾಗೆ ಯಾರೂ ಮಾಸ್ತರು ಸತ್ತ ಬಗ್ಗೆ ರಿಪೋರ್ಟು ಬರಲಿಲ್ಲ'ವೆಂದರು

. . . . . .

ಅದು ನಿಜ ಯಾರೂ ಸತ್ತಿರಲಿಲ್ಲ ಆದರೂ ಶಂಭು ಮಾಸ್ತರನೇನೋ ಆಗಿಯೇ ಆಗಿದ್ದಾನೆ ಚಿಕ್ಕ ಮಕ್ಕಳಿಗೆ, ಹಿಂದಿಯನ್ನೂ, ಖಾದಿಯನ್ನೂ ಅದೇ ಆಗಬೇಕೆಂದು ಒತ್ತಾಯವಿಲ್ಲ, ಮುಖಂಡರು ಹೇಳುವ ಇನ್ನಾವುದನ್ನೂ ಹೇಳಿ—ದೇಶಸೇವೆಯನ್ನು ಮಾಡಬೇಕೆಂಬ ಮನಸ್ಸು ಅವನದು.

ಮೊನ್ನೆ ಅವನ ಶಾಲೆಗೆ, ಇನ್ಸ್‌ಪೆಕ್ಟರರ ಸವಾರಿ ಹೋಗಿತ್ತಂತೆ. ಅವನು ಅವರಿಗಾಗಿ ಕುಂಬಾ ಮೆಹನತ್ತು ವಹಿಸಿ ಎಳನೀರನ್ನೂ ತರಿಸಿದ್ದನು ಅವನು ಅವರ ಬೆನ್ನನ್ನೇ ಬಿಡಲಿಲ್ಲ. ನಾಲ್ಕು ಶಾಲೆಯ ಪರ್ಯಟಣೆಯ ವರೆಗೆ, ಉಸಿರು ಬಿಡದೆ, ಅವರ ಹಾಸುಗೆ ಹೊತ್ತು ತಿರುಗಿದ್ದಾನೆ ಇನ್ಸ್‌ಪೆಕ್ಟರರಿಗೂ ಖುಶಿಯಾಗಿರಬೇಕು

ಇನ್ಸ್‌ಪೆಕ್ಟರರಿಗೆ ಅವನ ಶಾಲೆಯ ಪರೀಕ್ಷೆಯ ಕಾಲದಲ್ಲಿ ಒಂದು ತೊಡಕು ಬಂದಿತ್ತಂತೆ. ಅವರು ಒಮ್ಮೆ ಮೂರನೇ ಕ್ಲಾಸಿಗೆ ಹೋಗಿ, "ಹುಡುಗರೇ, ನಮ್ಮ ಘಟ್ಟಗಳಲ್ಲಿ ಅತಿ ಎತ್ತರವಾದ ಶಿಖರವಾವುದು?" ಎಂದು ಕೇಳಲು ಶಂಭುವು, "ಕುದುರೆ ಮುಖ ಅಲ್ಲವೇ, ಸರ್, ನಾನೂ ಕಾರಂತರೂ ಅಲ್ಲಿಗೊಮ್ಮೆ ಹೋಗಿದ್ದೆವು" ಎಂದನು. ಅದರಿಂದಲೇ ಒಂದು ದಿನ ಅವರು ನನ್ನನ್ನು ಕಂಡೊಡನೆಯೇ "ಕುದುರೆ ಮುಖ ಚೆನ್ನಾಗಿದೆಯೋ" ಎಂದು ಕೇಳಿದರು.

ಈ ಎಲ್ಲಾ ಪ್ರಸಂಗಗಳಿಂದ ಶಂಭುವಿನ ವಿಚಾರ ನಿಮಗೆ ತಿಳಿಯಬಹುದು. ಸರಿ, ಅವನ ಪರಿಚಯ ಇನ್ನೂ ಆಗಬೇಕೆಂದಿದ್ದರೆ—ಈ ಅನುಭವಗಳಿಗೆ ಹಿಂದಲೋ 12 ದಿಂದಲೋ ಒಂದು ಗ್ಲೋಸಿನಿಂದಲೋ ಗುಣಿಸಿದರಾಯಿತು.

ಮತಗಳ ವಿಷಯ ನೀವೇನೆನ್ನುವಿರಿ?

ನಿಮ್ಮೊಡನೆ ಯೋಚಿಸಲು — ನಿಮ್ಮೊಡನೆ ತರ್ಕಿಸಲು

ವಿಚಾರರಂಗವಿದು.

೩

ತಾ. ೮-೩-೩೫ರಲ್ಲಿ ಪ್ರಕಟವಾದ ವಿಚಾರ ರಂಗಕ್ಕೆ ಶ್ರೀಮತಿ ಬಿ. ಎಸ್. ಸರೋಜಿನಿ ಬಾಯಿಯವರು ಈ ಕೆಳಗಣ ಉತ್ತರಗಳನ್ನು ಕಳುಹಿಸಿರುವರು:-

ಪ್ರ. ೧೫ಕ್ಕೆ ಉತ್ತರ:—ಹಿಂದೂ ಸಮಾಜದ ಮತಗಳು ಸಮಾಜದ ಅಧಿಕಾರವುಗಳು, ಆದರೆ ಈಗಿನ ಪರಿಸ್ಥಿತಿಯಲ್ಲಿ ಅಂಥಾ ಮಠಗಳನ್ನು ಧರ್ಮಗುರುಗಳು ಪಿತ್ರಾರ್ಜಿತ ಆಸ್ತಿ ಯಾ ಸೊತ್ತುಗಳೆಂದು ಭಾವಿಸಿಕೊಂಡು ಅದನ್ನು ಉಪಭೋಗಿಸುತ್ತಾರೆ. ಪ್ರ. ೧೧ ಮೇಲಿನ ಉದಾಹರಣೆಯಂತೆ ಅವರಿಗಿಂತ ಧರ್ಮ ಪ್ರಚಾರವನ್ನು ಮಾಡಲೂ ಅಯೋಗ್ಯರು ಆದರೆ ಈಗಿನ ಬೋಳು ಸನ್ಯಾಸಿಗಳಿಗಿಂತಲೂ ಮದುವೆಯಾದ ಗೃಹಸ್ಥರೇ ಯೋಗ್ಯರು. ಪ್ರ. ೧೨. ಯೋಗ್ಯ ಜನರಿಂದ ವಿಚಾರ ಪೂರ್ವಕವಾಗಿ ಕುಲ, ಶೀಲ, ಪಾಂಡಿತ್ಯ, ಪ್ರಾಮಾಣಿಕತನ, ಮತ್ತು ಕಾರ್ಯದಕ್ಷತೆ ಇರುವವರನ್ನು ಪರೀಕ್ಷಿಸಿ ಅಂಥವರಲ್ಲಿ ತೇರ್ಗಡೆಯಾದವರನ್ನು ಚುನಾಯಿಸಿ ಅವರಿಗೆ ಆ ಮೇಲೆ ಅನುಭವ, ಕಾರ್ಯದಕ್ಷತೆ, ಸದಾಚಾರ ಸಂಪನ್ನತೆ ಮುಂತಾದುವುಗಳಲ್ಲಿ ಶಕ್ತವಾದ ನಂತರ ಅವರಿಗೆ ಬಿಟ್ಟುಕೊಡುತ್ತಿದ್ದರು. ಪ್ರ. ೧೪. ಅಂತವರನ್ನ, ಆರಿಸದಿದ್ದಲ್ಲಿ ಸ್ವಾರ್ಥ, ಲೋಭ, ಮುಖಸ್ತುತಿ, ಅಸಭ್ಯ ವರ್ತನೆ, ಅಲ್ಪತೆ, ನಿರಕ್ಷರತೆ ಮುಂತಾದ ರಾಕ್ಷಸರ ಬಲಿಗೆ ಬಿದ್ದು ಈಗಿನಂತೆ ಮಠಗಳು ಅನಾಯಕತ್ವಕ್ಕೆ ಒಳಪಟ್ಟು ಗುರುಗಳೂ, ಶಿಷ್ಯರೂ ಅನೇಕ ತೊಂದರೆ ಕಷ್ಟಗಳಿಗೆ ಗುರಿಯಾಗಬೇಕಾಗುವುದು. ಪ್ರ. ೧೫. ಈಗಿನವರಲ್ಲಿ ಉಳಿದಿರುವ ಲಕ್ಷಣಗಳು ಜರತಾರಿ ಪೋಷಾಕುಗಳನ್ನು ಮೈಯಲ್ಲಿ ಧರಿಸಿ ಕಲೆದಿಂಬುಗಳ ರಾಶಿಯಲ್ಲಿ ಕೂರುವಣ. ಮಠದ ಧನಕನಕಾದಿಗಳ ದುಂದುಗಾರಿಕೆ, ನಾಟಕ ಸಿನೆಮಾಗಳ ಅವಲೋಕನ ಮತ್ತು ಇಂಗ್ಲೀಷ್ ಕಾರುಗಳಲ್ಲಿ ಬೆಡಗುವೈಯ್ಯಾರಗಳಿಂದ ಬೀದಿ ಬೀದಿ ಮೆರೆಯೋಣ ಆಸೆಯವಾದ ತಿಂಡಿ ಪಾಷಕಗಳನ್ನು ಸೇವಿಸೋಣ ಮುಂತಾದ ಗುಣಗಳು ಅಚ್ಚಳಿಯದೆ ನಿಂತಿವೆ, ಇಲ್ಲದ ಗುಣಗಳು ಧರ್ಮಸಂರಕ್ಷಣೆ ಒಟ್ಟಾರೆ ೧೨ನೇ ಪ್ರಶ್ನೆಯ ಉತ್ತರದಲ್ಲಿ ಇರುವ ಗುಣಗಳು ಎಲ್ಲಾ ಕೊಳೆದು ಹೋಗಿವೆ. ಪ್ರ. ೧೬. ಈಗಿನ ಸನ್ಯಾಸ ಆಶ್ರಮವನ್ನು ನೇಮಿಸುವ ಅಧಿಕಾರವು ಶಿಷ್ಯಕೂಟಕ್ಕಿರಬೇಕು. ಪ್ರ. ೧೭. ಸನ್ಯಾಸಿಯರು ಚಿಕ್ಕ ಚಿಕ್ಕ ಮಕ್ಕಳನ್ನು ಪಟ್ಟಕ್ಕೆ ಆರಿಸುವುದು ಅನ್ಯಾಯವು. ಪ್ರ. ೧೮. ಧರ್ಮಪ್ರಚಾರಕ್ಕೆ ವಿದೇಶ ಶಾಸ್ತ್ರ ಪರಿಚಯವೂ ಜೀವನದ ಅನುಭವವೂ ಬೇಕಾಗಿದೆ. ಪ್ರ. ೨೦. ಚಿಕ್ಕ ಪ್ರಾಯದ ಸನ್ಯಾಸಿಯರಿಗೆ ಇವರ ಗಂಧವೂ ಕೂಡಾ ಇರುವುದಿಲ್ಲ. ಪ್ರ. ೨೫. ಆಡಂಬರದ ಉತ್ಸವಗಳೂ, ಊಟಗಳೂ, ದಿಬ್ಬಣಗಳೂ, ಧರ್ಮಪ್ರಚಾರಕ್ಕೆ ಎಳ್ಳಷ್ಟು ಸಹಾಯ ಮಾಡಲಾರವು. ಅದನ್ನು ನಡೆಸುವ ಏಜಂಟರಿಗೆ ತಮ್ಮ ಇಚ್ಛಾನುಸಾರ ಲಾಭಮಾಡಿಕೊಳ್ಳಬಹುದು, ಪ್ರ. ೨೬. ಈ ಮಠಸ್ಥಾಪಕರಾದ ಮೂಲ ಗುರುಗಳು ಇಂತಹ ಹಬ್ಬ ದಿಬ್ಬಣಗಳನ್ನು ಎಣಿಸಲಾರರು. ಪ್ರ. ೨೭. ಈಗ ಬಂದಿರುವ ಆಡಂಬರದ ಪೂಜೆಗಳು ಅವರ ಸ್ವಾರ್ಥದಿಂದಲೇ ಉಂಟಾದುವು. ಪ್ರ. ೩೧. ಈ ಹಬ್ಬ ಹುಣ್ಣಿಮೆಗಳಿಗೆ ವ್ಯಯವಾಗುವ ವಿಶೇಷ ಸಂಪತ್ತನ್ನು ಇನ್ನಿತರ ರೀತಿಯಿಂದ ಸಮಾಜಕ್ಕಾಗಿ ವಿನಿಯೋಗಿಸಬಹುದು. ಪ್ರ. ೩೫. ಮಠದ ಸಂಪತ್ತನ್ನು ಸಮಾಜವೇ ಆಡಳಿತ ನೋಡಬೇಕು. ಪ್ರ. ೩೬. ಧರ್ಮನಿರತರಾದ ಗುರುಗಳು ಆದರ ಲೌಕಿಕದಲ್ಲಿ ಕೈಹಾಕುವುದು ಅತ್ಯಂತ ಅಯೋಗ್ಯವು; ಹೇಯವೂ ಆಗಿರುವುದು. ಪ್ರ. ೩೭. ಅವರು ಭಕ್ತಿಗೆ ಜೋಟು ಸಾವಿರಾರು ರೂಪಾಯಿಗಳನ್ನು ಎಂತಹ ಬರಗಾಲದಲ್ಲಿಯೂ ದೇವರ ಹೆಸರಿನಿಂದ ಕಾಣಿಕೆ ಬೇಡುವುದು ಅನ್ಯಾಯವೂ ತುಚ್ಛವೂ ಆಗಿರುತ್ತದೆ. ಪ್ರ. ೪೧. ಮಠವಿಲ್ಲದ ಜಾತಿಗಳು ತಮ್ಮ ಸಮಾಜದ ನಿರ್ಣಯಗಳನ್ನು ಆಯಾ ಸಮಾಜದ ಸಂಘಗಳನ್ನು ಸ್ಥಾಪಿಸಿ ಅದರ ಮೂಲಕ ಮಾಡಿಕೊಳ್ಳುತ್ತವೆ. ಪ್ರ. ೪೪. ಈಗ ಕೌನ್ಸಿಲಿನ ಮುಂದೆ ಬಂದಿರುವ ಬಿಲ್ಲಿನಿಂದ ಸ್ವಲ್ಪ ತೊಂದರೆ ಎಂದು ಕಂಡರೂ ಅನಾಯಕತ್ವದಿಂದ ಸ್ವಲ್ಪ ಸುಧಾರಿಸುವುದು. ಪ್ರ. ೪೫. ಈಗಿನ ಮಠಗಳು ಸರಿಯಾಗಿ ತಮ್ಮ ಆರ್ಥಿಕ ಆಡಳಿತೆ ಮಾಡುವುದಿಲ್ಲ. ಪ್ರ. ೪೬. ಅವಕ್ಕೆ ಬಿಟ್ಟಿರುವ ವಿವಿಧ ಉಂಬಳಿಗಳ ಉದ್ದೇಶವು ಈಗ ಪೂರೈಸಲ್ಪಡುವುದಿಲ್ಲ. ಪ್ರ. ೪೭. ಉಂಬಳಿಗಳ ಉದ್ದೇಶವು ಉಳಿದುದಿಲ್ಲ. ಪ್ರ. ೪೯. ಹೊಸ ಬಿಲ್ಲಿನಂತೆ ಒಬ್ಬ ಕಾರ್ಯನಿರ್ವಾಹಕನನ್ನು ನೇಮಿಸಲ್ಪಟ್ಟರೆ ಅಷ್ಟೊಂದು ಒಳ್ಳೆಯದೆಂದೂ ನಾಜೂಕೆಂದೂ ಹೇಳಬರುವುದಿಲ್ಲ, ಏಕೆಂದರೆ ಆತನನ್ನು ಪ್ರೋತ್ಸಾಹಿಸುವ ಯಾ ಆತನನ್ನು ಅಲ್ಲಗಳೆಯುವ ಸ್ವಾತಂತ್ರ್ಯವು ಮಠಾಧಿಪತಿಗಳಿಗೆ ಇರುತ್ತದೆ. ಆದುದರಿಂದ ಆತನು ತನ್ನ ಕಾರ್ಯನಿರ್ವಾಹದಲ್ಲಿ ಮಠಾಧಿಪತಿಗಳ ಪ್ರೀತಿಗೆ ಪಾತ್ರನಾಗಬೇಕಾಗಿದೆ. (ಆತನು ಅವರ ಕೈಯೊಳಗಿನ ಸೂತ್ರಗೊಂಬೆಯ ಹಾಗೆ ಇರಬೇಕಾಗುತ್ತದೆ) ಇದರಿಂದ ಎಷ್ಟೋ ಗೊಂದಲಗಳು ಮುಂದೆ ಬಂದು ಮಠದ ವ್ಯವಹಾರಗಳಿಗೆ ತೊಂದರೆಯಾಗಬಹುದು ಇದರ ನಿವಾರಣೆಯಾವುದೆಂದರೆ ಸನ್ಯಾಸಿಗಳಿಗೂ ಮಠದ ಸಂಪತ್ತಿಗೂ ಯಾವ ತರದ ಸಂಬಂಧವೂ ಇರಕೂಡದು. ಹೀಗೆ ಮಾಡಿದರೆ ಯಾವ ಹಾನಿಯೂ ಇರಲಾರದು. ಪ್ರ. ೫೦ ಸಮಾಜದ ಸ್ವಾತಂತ್ರ್ಯಕ್ಕೆ ತೊಡಕಾಗಲಾರದು. ಪ್ರ. ೫೨. ಸ್ವಾಮಿಯವರಿಗೆ ಬರೇ ಧಾರ್ಮಿಕ ಸ್ವಾತಂತ್ರ್ಯ ಮಾತ್ರವಿದ್ದರೆ ಸಾಕು. ಪ್ರ. ೫೩. ಮಠಗಳನ್ನೇ ಇಲ್ಲದಂತೇ ಮಾಡಿದರೆ ಎಲ್ಲಾ ಸಾಮಾಜಿಕ ಗೊಂದಲಗಳು ಇಲ್ಲದಂತಾಗಿ ಶಿಷ್ಯವರ್ಗವು ಯಾವ ಸಾಮಾಜಿಕರು, ರೋಗವಿಲ್ಲದ ಆರೋಗ್ಯ ಮನುಷ್ಯನಂತೆ ಜನಾಂಗವು ಏಳಿಗೆಯ ಶಿಖರವನ್ನು ಏರಬಹುದು. ಪ್ರ. ೫೪. ಅವುಗಳ ಆಸ್ತಿಪಾಸ್ತಿಗಳನ್ನು ಈ ಮೊದಲು ಧರ್ಮಗುರುಗಳ ದಂಡದಿಂದ ಅನ್ಯಾಯವಾಗಿ ಜಪ್ತಲ್ಪಟ್ಟವರಿಗೆ ಕೊಡಬಹುದು, ಮತ್ತು ಸಮಾಜದ ಹೆಸರಿನಿಂದ ಕೈಗಾರಿಕೆ ಕೇಂದ್ರಗಳನ್ನು ಸ್ಥಾಪಿಸಿ ಸಮಾಜದ ಅನಾಥರಿಗೂ, ವಿಧವೆಯರಿಗೂ ಆ ಮೇಲೆ ಎಲ್ಲರಿಗೂ ಒಂದು ತುತ್ತು ಅನ್ನವು ದೊರೆಯುವಂತೆ ಉದ್ಯೋಗವನ್ನು ಕಲ್ಪಿಸಿಕೊಡಬಹುದು; ಮತ್ತು ಸಮಾಜದ ವಿದ್ಯಾಸಂಸ್ಥೆಗಳನ್ನೂ ಚಿಕಿತ್ಸಾಲಯಗಳನ್ನೂ ಸ್ಥಾಪಿಸಬಹುದು. ಪ್ರ. ೫೫ ಆಗ ಜನರು ಧಾರ್ಮಿಕ ವಿಚಾರವನ್ನು ಬಿಟ್ಟರೂ ವಿಶೇಷವೇನೂ ಹಾನಿಯಾಗಲಾರದು. ಪ್ರ. ೫೬ ಈಗಿನ ಮಠಗಳು ಧರ್ಮವನ್ನು ರಕ್ಷಿಸುವುದಿಲ್ಲ. ಕಟ್ಟಳೆಗಳನ್ನು ಕಾಯುತ್ತವೆ ಅಂದರೆ ಜನರಿಂದ ತಪ್ಪನ್ನು ಮಾಡಿಸಿ ಆ ಮೂಲಕ ತಮ್ಮ ಕೋಶವನ್ನು ತುಂಬಿಸುವ ಹವ್ಯಾಸವಾಗಿದೆ. ಆದರೆ ತಪ್ಪನ್ನು ಆಗದ ಹಾಗೆ ಮಾಡುವ ಹವ್ಯಾಸವಿರುವುದಿಲ್ಲ. ಇದಕ್ಕೆ ಧರ್ಮಘಾತ ಎಂದು ಹೆಸರು ಕೊಡಬಹುದು. ಪ್ರ. ೫೮ ಕಟ್ಟಳೆಯು ಧರ್ಮವಲ್ಲ, ಅದು ಮಠಾಧಿಪತಿಗಳು ದ್ರವ್ಯವನ್ನ ಗಳಿಸುವ ಒಂದು ಸಾಧನವಾಗಿದೆ. ಪ್ರ. ೫೯ ಆದುದರಿಂದ ಕಟ್ಟಲೆ ಮುರಿದವನಿಗೆ ದಂಡನೆ ಬೇಕ. ಪ್ರ. ೬೦. ಸತ್ಯ, ಅಹಿಂಸೆ ಇತ್ಯಾದಿ ನಿಯಮಗಳಿಗೆ ವಿರುದ್ಧವಾಗಿ ಆಚರಿಸುವವರಿಗೆ ಮಠಗಳು ಏನನ್ನೂ ಮಾಡುವುದಿಲ್ಲ. ಅಂತಹದಕ್ಕೆ ಕೈಹಾಕುವ ಯಾ ಕೇಳುವ ಧಾರ್ಷ್ಟ್ಯವು ಅವರಿಗೆ ಇರುವುದಿಲ್ಲ; ಅಂಥಾದಕ್ಕೆ ಕೈಹಾಕಿದರೆ ಅವರ ದುಡಿತದ ಹಾನಿಯು ತಟ್ಟಿಹೋಗುವುದು; ಇದಕ್ಕೆ ಎಷ್ಟೋ ಕಾರಣಗಳಿವೆ; ಅಪೇಕ್ಷಿಸಿದರೆ ತಿಳಿಸಬಹುದು.

೪

ತಾ. ೮-೩-೩೫ರಲ್ಲಿ ಪ್ರಕಟವಾದ ವಿಚಾರ ರಂಗಕ್ಕೆ ಈ ಕೆಳಗಣ ಉತ್ತರಗಳನ್ನು ಶ್ರೀ। ಬಿ. ವಿಷ್ಣು ಕುದ್ಮತ್ತಾಯ, ಪುತ್ತೂರು, ಇವರು ಕಳುಹಿಸಿರುವರು:-

ಪ್ರ ೧ ಮಠಾಧಿಪತಿಗಳು ಮಠಗಳು ಸಮಾಜದ ಅಧಿಕಾರವುಗಳೇ. ಸಮಾಜದ ಅಧಿಪತಿಗಳೇ ಗುರುಗಳು. ಪ್ರ. ೨. ಸಮಾಜ ಸುಧಾರಣೆ ಬಗ್ಗೆ. ಪ್ರ. ೩. ಮುಖ್ಯವಾಗಿ ಉಡುಪಿ, ಅಷ್ಟಮಠಗಳು—ವಗೈರೆ, ಪ್ರ. ೪. ಶ್ರೀ ಮಧ್ವಾಚಾರ್ಯರು. ವಗೈರೆ ಮಠಾಚಾರ್ಯರುಗಳು. ಪ್ರ. ೫. ಸಮಾಜ ಸುಧಾರಣೆಯ ರಕ್ಷೆ, ವ. ತತ್ಸಂಬಂಧ ಸಂಪ್ರದಾಯ ರಕ್ಷಣೆ ಬಗ್ಗೆ. (ವಿಮರ್ಶೆ:—ತತ್ಸಂಬಂಧವಾದ ಸಂಪ್ರದಾಯವೆಂದರೆ, ಸುಧಾರಣೆಯೆಂದರೆ, ಯಾವುದೆಂಬ ವಿವರ ಬೇಕು.) ಪ್ರ. ೬. ಹೌದು, ಧರ್ಮಪ್ರಚಾರ.(ವಿ:—ಯಾವುದನ್ನು—ಧರ್ಮವೆನ್ನುತ್ತೀರಿ ಎಂದು ಒಂದಾವರ್ತಿ ಆಚಾರ್ಯರ ಉದ್ದೇಶವನ್ನು ವಿವರಿಸಬೇಕು.) ಪ್ರ. ೭. ಸನಾತನ ವೈದಿಕ ಧರ್ಮವನ್ನು. ವಿ:-ಸನಾತನ ವೈದಿಕ ಧರ್ಮವೆಂದರೆ ಯಾವುದನ್ನು ಕರೆಯುತ್ತೀರಿ, ಹಾಗಿದ್ದರೆ ಎಲ್ಲ ಮಠಗಳೂ ಒಂದೇ ಉದ್ದೇಶದ್ದಾದುವೇನು?) ಪ್ರ ೮. ಇತ್ತು. ಬೌದ್ಧ ಮೌಲಾದಿ ಕ್ರೈಸ್ತ ವಗೈರೆ ವಿಧರ್ಮೀಯರ ದಾಳಿ ತಡೆಯಲು (ವಿ. ಮಹಮ್ಮದೀಯ, ಕ್ರೈಸ್ತ, ಧರ್ಮದ ದಾಳಿ ತಪ್ಪಿಸಲು—ಯಾವ ಮಠಗಳಾದುವೆಂದು ಆಧಾರಬದ್ಧವಾಗಿ ಹೇಳಬಲ್ಲಿರಾ?) ಪ್ರ. ೯. ಹೌದು. ಪ್ರಪಂಚ ಇರುವಷ್ಟು ದಿನ (ವಿ. ಇರುವ ಮಠಗಳಲ್ಲಿ—ಯಾವಾವ ಮಠವು ಯಾವ ವಿಧರ್ಮವನ್ನು ಇದಿರಿಸಲು ಹುಟ್ಟಿತು, ಅದನ್ನು ಎಷ್ಟು ಹಿಮ್ಮೆಟ್ಟಿಸಿದೆ? ಈಗ ಏನು ಹಿಮ್ಮೆಟ್ಟಿಸುತ್ತಿದೆ,) ಪ್ರ. ೧೦. ಕೇವಲ ಧರ್ಮ ಪ್ರಭುವಿಗೆ ಸನ್ಯಾಸಿ, ಯಾ ತಪಸ್ವಿಯೆಂದೇ ಹೆಸರು. ಇಂತಹ ಸನ್ಯಾಸಿ ಯಾ ತಪಸ್ವಿಯರಿಗೇನೆ, ಆ ಪಟ್ಟವು ಯೋಗ್ಯ. ಪ್ರ. ೧೧ ಸ್ವಧರ್ಮೋಚಿತಕಾರ್ಯ ಪರಂಪರೆಯಿಂದಾಗಿ, ಸಮಯಾಭಾವದ ಮೂಲಕ (ವಿ. ಸಮಯವುಳ್ಳ—ವೃದ್ಧ ವಾನಪ್ರಸ್ಥರಿಲ್ಲವೇನು?) ಪ್ರ. ೧೨. ಶಿಷ್ಯವರ್ಗಕ್ಕೆ ಸೇರಿದ ಪ್ರತಿಭಾಪೂರ್ಣ ವಿದ್ಯಾರ್ಥಿಗೆ, ವ. ಬಾಲ ಬ್ರಹ್ಮಚಾರಿಗಳಿಗೆ. ಪ್ರ. ೧೩. ಸ್ವಮತ ತತ್ವಗಳ ಪ್ರಚಾರ, ವ. ಕರಬೇಕು.(ವಿ. ಇದು ಕಾರಣವಲ್ಲ ಉದ್ದೇಶ.) ಪ್ರ. ೧೪. ಅಲ್ಲಲ್ಲಿ ಅಪವಾದಗಳು ಉಂಟಾಗಿರಬಹುದಾದರೂ, ಉಳಿದೇ ಇಲ್ಲವೆಂದರೆ ಅದು ಮೂರ್ಖತನ (ವಿ. ನಿಮ್ಮ ಪರಿಚಿತ ಮಠಗಳಲ್ಲಿ ಧರ್ಮಿಷ್ಠ ಸನ್ಯಾಸಿಗಳ ಸಂಖ್ಯೆಯು ಸೇಕಡಾ ಎಷ್ಟರಂತಿರಬಹುದು,) ಪ್ರ. ೧೫ ಪರಂಪರಾಗತ ಧರ್ಮಪಾಲನೆ ಮಟ್ಟಿಗೆ ಉಳಿದಿದೆ, ಕಾಲೋಚಿತ ನೂತನ ಧರ್ಮದ ಸೃಷ್ಟಿ ಯಾ ಸುಧಾರಣೆ ಮಟ್ಟಿಗೆ ಉಳಿದಿಲ್ಲ. (ವಿ."ಧರ್ಮ" ಎಂಬುದು ಮೇಲೆ ಯಾವ ಉದ್ದೇಶದಿಂದ ಹೇಳಿದರೋ, ಅದೇ ಅರ್ಥ ಇಲ್ಲಿ ಮಾಡುವಿರಾ?) ಪ್ರ. ೧೬. ಸನ್ಯಾಸಿಗಳಿಗೆನ. ಅಂದ್ರೇ ಮೊಟ್ಟಮೊದಲಿಗೆ ಈ ಸನ್ಯಾಸಿಗಳಿಂದಾಗಿ ಶಿಷ್ಯಕೂಟವಾಗಿದೆಯೋ, ಶಿಷ್ಯಕೂಟದಿಂದಾಗಿ ಸನ್ಯಾಸವಾಗಿದೆಯೇ? ಎಂಬುದರ ನೆಲೆಯೇ ಇದರ ನೆಲೆ. ಸ್ವಮತ ಧರ್ಮಪ್ರಚಾರದ ಅಧಿಕಾರಿಯನ್ನಾರಿಸೋಣ, ವ ಅದಕ್ಕಾಗಿ ತರ್ಬೇತು ಮಾಡೋಣ, ಇವೆರಡೂ ಸ್ವತಹ ತನ್ನಂತೆ ಅನ್ಯರಿಂದಾಗದು. ಪ್ರ ೧೭. ನ್ಯಾಯವೇ ಎಳೆ ಪ್ರಾಯದಲ್ಲಿ ಆರಿಸದಿದ್ದರೆ, ಅನುಗುಣವಾದ ವಿದ್ಯೆ ವ. ಅನುಭವ ಸಂಗ್ರಹಕ್ಕವಕಾಶವಿಲ್ಲ. (ವಿ. ಬಾಲಕನ ಮನಸ್ಸು ಮುಂದೆಯೂ ವೈರಾಗ್ಯದ ಕಡೆಗೆ ಹರಿಯುವುದೆಂಬ ಗೊತ್ತೇನು? ಸ್ವಾಭಾವಿಕವಾಗಿ ಆತನು ರಸಿಕ ಜೀವಿಯಾಗಿದ್ದರೆ—ಸನ್ಯಾಸದಿಂದ ಅವನು ನರಳಲಾರನೇನು. ಪ್ರ. ೧೮ ಪರೀಕ್ಷೆಯಿಂದ, ನಾಮಧಾರಿ ಹಲ್ಕು ಬಂಕು ಆದರೆ ಯೋಗ್ಯತೆ ಒಡನೆ ಬರಲಾರದು. ಪ್ರ ೧೯ ಧರ್ಮಪ್ರಚಾರಕ್ಕೆ ಅಖಂಡ ಶಾಸ್ತ್ರಾನುಭವವೂ, ಜನಜೀವನದ ಅನುಭವವೂ ಧಾರಾಳಬೇಕು. ಪ್ರ. ೨೦. ಅಪೂರ್ಣವಿರಬಹುದು. ಪ್ರ. ೨೧ ನುರಿತ ಗೃಹಸ್ಥ ಧರ್ಮಿಗಳು ಈ ಸನ್ಯಾಸ ಧರ್ಮದಲ್ಲೂ ನುರಿತರುಪದೇಶಿದಿಲ್ಲ. ಅವರ ಕಾರ್ಯರಂಗದಲ್ಲಿ ಕಾರ್ಯದ ಭಾಸವೂ ಇಲ್ಲ ವ, ಈ ಪಟ್ಟವನ್ನಾಕ್ರಮಿಸಬೇಕೆಂಬ ಅಭಿಲಾಷೆಯೂ ಇರದು. ವ್ಯವಧಾನವೂ ಇಕ್ಕಟ್ಟಾಗುವುದು. ಅಲ್ಲದೆ ಸ್ವಧರ್ಮೋಚಿತವಾದ ಗೃಹಸ್ಥ ಧರ್ಮವನ್ನು ಬಿಟ್ಟು, ಇತರ ಧರ್ಮದಲ್ಲಿ "ನಿಶ್ಶಾಮರಾಗಿ" ಪ್ರವೇಶಿಸುವರೇಕೆ? (ಸನ್ಯಾಸಿಯ ಉದ್ದೇಶವು ಧರ್ಮಪ್ರಚಾರವೆನ್ನುತ್ತೀರಿ ಅದು ಸನ್ಯಾಸ ಧರ್ಮವೆಂದು ಹೇಳಿಲ್ಲವಷ್ಟೆ. ಗೃಹಸ್ಥರಿಗೆ ಸನ್ಯಾಸ ಬೋಧಿಸಲು ಮಠಗಳಾದುವೇನು? ನೀವು ಸನ್ಯಾಸಧರ್ಮ, ಧರ್ಮ, ಸಂಪ್ರದಾಯ—ಇವನ್ನೆಲ್ಲ ಕಲಿಸುವಂತಿದೆ.) ಪ್ರ. ೨೨. ಶಾಸ್ತ್ರಪರಿಚಿತರಾದಂಥಾ ಜನರು ಸಿಗರೇನು? ಶಾಸ್ತ್ರಗಳ ಮತ್ತು ಧರ್ಮಾಧರ್ಮಗಳ ಪರಿಚಿತರಾಗಿ ಗೃಹಸ್ಥ ಧರ್ಮದಲ್ಲಿ ನುರಿತವರಾದರೆ ಸ್ವಧರ್ಮೋಚಿತ ಕರ್ಮ ಬಿಟ್ಟು, ಪರಧರ್ಮವನ್ನು ಆಲಿಂಗಿಸುವವರು ಸಿಗುವುದು ಮಾತ್ರ ದುರ್ಲಭ.(ವಿ. ಇಲ್ಲ—ನೀವು ಧರ್ಮವನ್ನೂ, ಆಶ್ರಮ ಧರ್ಮವನ್ನೂ ಗಲಿಬಿಲಿ ಮಾಡುವಿರಿ, ಗೃಹಸ್ಥ ಧರ್ಮಿಗಳು ವಿರಕ್ತರಾಗಬೇಕೆಂದು ಶಾಸ್ತ್ರವೇ ಹೇಳುವುದಿಲ್ಲ.) ಪ್ರ. ೨೩ ಮಠಕ್ಕೂ ಸನ್ಯಾಸಿಗೂ ಇರುವ ಸಮ್ಮಂಧವೇ ಮಠದಾಸ್ತಿ ಭೂಮಿಗೂ, ಇದೆ (ವಿ. ಸನ್ಯಾಸವೂ ವೈರಾಗ್ಯ—ವೈರಾಗ್ಯವುದ್ಭವದಿಂದ, ಭೂಮಿಯಿಂದ ದೂರಾಗಿರುವಿಕೆ ಮಠವಿತ್ತೆಂದ ಮಾತ್ರಕ್ಕೆ ಮೋಹಪರ ಸಂಪತ್ತಿರಬೇಕೆಂದು ಅರ್ಥವಾಗದು.) ಪ್ರ. ೨೪ ಸನ್ಯಾಸಕ್ಕೂ ಸಂಪತ್ತಿಗೂ ಸಮ್ಮಂಧವಿಲ್ಲ. ಮಠದಿಂದಾಗಿ—ಮಠದಾಸ್ತಿ ಸಂಪತ್ತಿಗೂ ಸನ್ಯಾಸಿಗೂ ಮಾತ್ರ ಸಂಬಂಧವಿದೆ. (ವಿ. ಯಾವುದರಿಂದಾದರೂ ಈ ಸಂಬಂಧವಿರುವುದು ಧರ್ಮದೃಷ್ಟಿಯಿಂದ ನ್ಯಾಯವೇ—ಎಂಬುದು ಪ್ರಶ್ನೆ.) ಪ್ರ. ೨೫. ಇವೆಲ್ಲ ಧರ್ಮಪ್ರಚಾರಕ್ಕೆ ಸಹಾಯಕವಾಗಲೆಂದೂ ಮಾಡುವುದಲ್ಲ—ಅವು ಕೂಡಾ ಧರ್ಮದ ಒಂದು ಅಂಗವಷ್ಟೆ (ವಿ. ತಮಗೆ ಈ ಎರಡು ಅಭಿಪ್ರಾಯಗಳೂ ಪರಸ್ಪರ ವಿರುದ್ಧವಾಗಿ ಕಾಣವೇನು?) ಪ್ರ. ೨೬. ಬಹುಶಃ ಎಣಿಸಿರಬಹುದು. ಪ್ರ. ೨೭ ಪ್ರಪಂಚವು ಪ್ರಗತಿಯಲ್ಲಿ ಕ್ರಮಿಸುತ್ತಿರುವುದು ಪ್ರಕೃತಿನಿಯಮ. ಈ ದೃಶ್ಯ ಜಗತ್ತೆ ಇದಕ್ಕೆ ವಿರುದ್ಧವಿಲ್ಲ. ಅಂತೆಯೇ ಕಾಲ-ಕಾಲಾಂತರಗಳಲ್ಲಿ ಈ ಆಡಂಬರದ ರೂಪ ಹೊಂದಿವೆ. (ಹೊಂದಿರುವುದರ ನ್ಯಾಯವನ್ನು ಕೇಳುತ್ತಿರುವುದು ಪ್ರಶ್ನೆ?) ಪ್ರ. ೨೮. ಸಮಾಜದ ಬೆಳವಣಿಗೆಯಿಂದಾಗಿಯೇ ಅವು ಉಂಟಾದುವು, ಪ್ರ. ೨೯. ಮಠಾಧಿಪತಿಗಳಿಗೇನೆ, ಆದರೂ ಇವು ಪರಿಸ್ಥಿತಿಯನ್ನು ಹೊಂದ್ಯುಂಟು. ಪ್ರ. ೩೦. ಕೂಡದು. ಹಬ್ಬಹುಣ್ಣಿಮೆಗಳಿಗೆ ವ್ಯಯವಾದ ಸಶೇಷವನ್ನುಪಯೋಗಿಸಬಹುದು. ಪ್ರ. ೩೧. ಧಾರ್ಮಿಕ ವಿದ್ಯಾಭಿವೃದ್ಧಿ, ವ. ಜೀರ್ಣೋದ್ಧಾರ. ಪ್ರ. ೩೨. ಧರ್ಮದ ತತ್ವಗಳೇ ಈ ವಿಶೇಷ(?) ವೆಚ್ಚಗಳ ಮೂಲದ ಉಂಟಾದವೆ ಮಾಡಿವೆ.(ವಿ. ಧರ್ಮ ತತ್ವಗಳನ್ನು ಹೇಗೆ ಹಣ ಸಂಪಾದಿಸಿದರೆಂದು ಹೇಳುವಿರಾ?) ಪ್ರ. ೩೩. ಅಲ್ಲಲ್ಲ. ಧರ್ಮಕ್ಕೆ ವಿಚಾರಪರ ಕರ್ಮವಲ್ಲದ ಕುರುಡು "ಭಕ್ತಿ" ಯಲ್ಲ. ಪ್ರ. ೩೪. ಅರ್ಥ ಬಲವಿಲ್ಲದೆ ಕೊಡ್ಡು ಧರ್ಮಕ್ಕೆನೇ ಸ್ಥಾನವಿಲ್ಲ. ಪ್ರ. ೩೫. ಸಮಾಜದ ಅಧಿಮತದಂತೆ ಗುರುಗಳು, (ವಿ. ಹಿಂದೆ ನಿಮ್ಮ ನೀವೇ ಸಮಾಜದ ಮೇಲಿನ ಅಧಿಪತಿಗಳು ಗುರುಗಳೆಂದಿದ್ದಿರಿ.) ಪ್ರ. ೩೬. ಸ್ವತಹ ಕೈಹಾಕುವುದು ಯೋಗ್ಯವಲ್ಲ. ಪ್ರ. ೩೭. ಯಾವ ನಿಮಿತ್ತ? ಆದರೂ ದೇವರ ಹೆಸರಿನಿಂದ ಬೇಡುವುದು ನ್ಯಾಯವಲ್ಲ. ಪ್ರ. ೩೮, ಕಾಣಿಕೆಯ ದುಡ್ಡಿಗೂ ಧರ್ಮಕ್ಕೂ ಧರ್ಮಕರ್ಮಕ್ಕೂ ಸಂಬಂಧವೇ ಇಲ್ಲ. ಪ್ರ. ೩೯. ನೂರಾರುಂಟು, ವ. ಇರಬಹುದು. ಪ್ರ. ೪೦, ಅಜಗಜಾಂತರದಷ್ಟುಂಟು—(ವಿ. ಯಾವುದೆಂದು ವಿವರದಿಂದ ಸ್ಪಷ್ಟೀಕರಿಸಬೇಕಾಗುತ್ತದು.) ಪ್ರ. ೪೧. ಹಿರಿಯರ ಕಟ್ಟಳೆಯಂತೆ ಅಥವಾ ಕುರುಡ ಕುಂಟರ ನಡೆಯಂತೆ, (ವಿ. ಮಠಗಳ ಪದ್ಧತಿಯೂ ಅದೇ ಪ್ರಕಾರ ನಡೆಯುತ್ತ ಬಂದಿಲ್ಲವೇ?) ಪ್ರ. ೪೨. ಅಂತೆ ಮಾಡಲು ಬಾರದೇನು? ಧಾರ್ಮಿಕ ಶಿಷ್ಟಾಚಾರವಲ್ಲ.(ವಿ. ಧರ್ಮವೂ ಶಿಷ್ಟಾಚಾರವೂ ಪರಸ್ಪರ ಸಂಬಂಧವಿಲ್ಲದ ಮಾತುಗಳು) ಪ್ರ. ೪೩. ಏರಿದಷ್ಟು ಉಳಿಯಬಹುದಾದರೂ, ಅದಕ್ಕಿಂತಲೂ ಸಮಾಜ ವ್ಯವಹಾರಗಳಲ್ಲಿನ ದುಂದುಗಾರಿಕೆಯಿಂದಲ್ಲದರೆ ಶತಾಂಶ, ಸಹಸ್ರಾಂಶ ಉಳಿಯಬಹುದಲ್ಲವೇ? (ವಿ. ಇತರ ರೀತಿಯಿಂದ ಹಣ ಹಾಳಾಗುವುದೆಂದು ಎಲ್ಲಾ ರೀತಿಯಿಂದ ಹಾಳಾಗಬೇಕೆಂಬುದು ತಮ್ಮ ವಾದವೇ?) ಪ್ರ. ೪೪. ಬೇಡ, ಅವಶ್ಯವೇ ಇಲ್ಲ. (ವಿ. ಬೇಕೆಂದು ನಿಮ್ಮ ೪೩ನೇ ಉತ್ತರವು ಸೂಚಿಸುವುದಿಲ್ಲವೇ) ಪ್ರ. ೪೫. ಸಾಮುದಾಯಿಕವಾಗಿ ವಿಚಾರಿಸಿದರೆ ಪ್ರತಿಯೊಂದು ಸಂಸ್ಥೆಗಳಲ್ಲೂ ನ್ಯೂನತೆಗಳಿಲ್ಲದಿಲ್ಲ. ಅಂತಹವುಗಳಲ್ಲಿ ಮೊಂದು ಅದು ಅನಿವಾರ್ಯ. (ವಿ. ಉತ್ತರ ಸ್ಪಷ್ಟವಿಲ್ಲ.) ಪ್ರ. ೪೬. ಉಳಿದಿರಲೇಬೇಕು. (ವಿ. ಯಾವುದೆಂದು ಹೇಳುವಿರಿ? ಉಳಿದಿರಲೇಬೇಕೆಂಬ ನಿಮ್ಮ ನಿಶ್ಚಿತಕ್ಕೆ ಯಾವ ಆಧಾರಗಳಿವೆ?) ಪ್ರ. ೪೭. ಉಳಿಸುವುದರ ಸಲುವಾಗಿ—ಪ್ರ. ೪೮. ಸಮಯೋಚಿತ ಹಾನಿ ತಪ್ಪಲೇಬೇಕು. ಪ್ರ. ೫೦. ಹೊಸ ಬಿಲ್ಲಿನ ಕಾರ್ಯಕರ್ತನಿಗೆ ಸಮಾಜದ ಮೇಲೇನು ಸ್ವಾತಂತ್ರ್ಯವಿದೆ? ಆದುದರಿಂದೇನೂ ತೊಡಕಿರದು. ಪ್ರ. ೫೧. ನ್ಯಾಯ ಪರ (ಮಠದ?) ಆರ್ಥಿಕ ಸ್ವಾತಂತ್ರ್ಯಕ್ಕೂ ತೊಡಕುಂಟು. ಪ್ರ. ೫೨. ಸ್ವಾಮಿಯವರಿಗೆ ಸಾಕು. ಎಂತಾವುದಕ್ಕೆ ಸಾಲದು. ಪ್ರ. ೫೩. ಅರಾಜಕವಾದ ರಾಜ್ಯದಂತೆ. (ವಿ. ೪೯ನೇ ಪ್ರಶ್ನೆಯ ಉತ್ತರದೊಡನೆ ಹೋಲಿಸಿ ನೋಡಿರಿ.) ಪ್ರ. ೫೪ ಎಸ್ಟೇಟನ್ನು ಯಂತೆ ಸೀದಾ ಗವರ್ನಮೆಂಟಿಗೆ. ಪ್ರ. ೫೫. ಇಲ್ಲ. ಆಗ ಈ ಧಾರ್ಮಿಕ ವಿಚಾರಪರತೆಯ ಸುಭಾವ ಒಂದಿಷ್ಟು ಜನತೆಗೆ ಗೋಚರಿಸಬಹುದು. ಪ್ರ. ೫೬. ಕಾಲಕ್ಕೆ ಸರಿಯಾಗಿ ಕುಡಿಯಲನುಕೂಲವಾಗಬಹುದು. ಪ್ರ. ೫೭. ಅರ್ಥಮರ್ಥ ಶಕ್ತ್ಯಾನುಸಾರ ರಕ್ಷಿಸಿಕೊಂಡಿವೆ. ಪ್ರ. ೫೮. ಧರ್ಮದ ನಡಾವಳಿಕೆಯೇ ಕಟ್ಟಳೆ. ಪ್ರ. ೫೯. ಧರ್ಮದ ಕಟ್ಟಳೆಯಂತೆ ಬೇಕು. ಪ್ರ. ೬೦. ವಿಧರ್ಮೀಯ ರಾಜಕೀಯ ಧೋರಣೆಯಿಂದಾಗಿ ಕಣ್ಣಿದ್ದು, ಕುರುಡರಂತೆ ಕುಳಿತಿರಬೇಕಾಗಿದೆ. (ವಿ. ಸ್ಪಷ್ಟವಾದ ಯಾವಾವ ಉದಾಹರಣೆ ಕೊಡುತ್ತೀರಿ?)

ವಿಶೇಷ ಸೂಚನೆ:—

ಈ ಪ್ರಶ್ನಾವಳಿಯ ಮುಂದೆಯೇ 'ವಿ' ಗುರುತು ಹಾಕಿ ಕೆಲವು ಪ್ರಶ್ನೆ ರೂಪದ ವಿಮರ್ಶೆಯನ್ನು ಹಾಕಿರುತ್ತೇವೆ. ಕಾರಣ:—ಈ ಪ್ರಶ್ನಾವಳಿಯನ್ನು ಉತ್ತರಿಸುವ ಗಲಿಬಿಲಿಯಲ್ಲಿ ಮಠಗಳ ಜನ್ಮಕ್ಕೆ ಕಾರಣವಾದ ಧರ್ಮತತ್ವ, ಸನ್ಯಾಸದ ವ್ಯಕ್ತಿಧರ್ಮ, ಗೃಹಸ್ಥ ಧರ್ಮ, ಪರಂಪರೆಯಿಂದ ಬಂದ ಸಂಪ್ರದಾಯ—ಇವನ್ನೆಲ್ಲ ನಿಶ್ಚಿತ ಅರ್ಥವಿಲ್ಲದೆ ತೀರ ಉತ್ತರಿಸುವಂತೆ ಕಾಣುವುದು. ಯಾವುದಾದರೂ ಒಂದು ಮಠವನ್ನು ಎತ್ತಿ ತೋರಿಸಿ—ಅದನ್ನು ಇಂಥವೇ ತತ್ವಗಳ ಪ್ರಚಾರಕ್ಕೆ ಮಾಡಿದರು—ಎಂದು ಹೇಳಿ, ಅನಂತರ ಆ ತತ್ವಪ್ರಚಾರಗಳು ಈಗ ನಡೆಯುವುವೇ? ಅವುಗಳಿಗೆ ಸನ್ಯಾಸಿಗಳು ಹೇಗೆ ಸಹಾಯಕರು, ಮಠದ ಸಂಪತ್ತು ಹೇಗೆ ಸಹಾಯಕ, ಆ ತತ್ವಗಳನ್ನು ವಿರೋಧಿಸಿದ ವಿಧರ್ಮಗಳಾವುವು, ಆ ತತ್ವಗಳ ಪ್ರಚಾರಕ್ಕೆ ಮಠದ ಬಿಲ್ಲು ಹೇಗೆ ವಿರೋಧಿ ಎಂದು ಸ್ಪಷ್ಟಪಡಿಸಬೇಕು. ಸರಿಯಾದ ಉದಾಹರಣೆ ಇಲ್ಲದೆ ಕೊಡುವ ಉತ್ತರಗಳಿಂದ ಪ್ರಯೋಜನವಿಲ್ಲ. ಭ್ರಮೆಯನ್ನು ಬೆಳೆಯಿಸಬಹುದಷ್ಟೆ.

ಇಂಥ ಮಠ, ಇಂಥ ತತ್ವಕ್ಕೇನೇ ಹುಟ್ಟಿತು. ಮಧ್ವಾಚಾರ್ಯರು ಸ್ಥಾಪಿಸಿದ—ಬೇರೆ ಬೇರೆ ಮಠಗಳಲ್ಲಿ ಒಂದೊಂದು ಯಾವ ಭಿನ್ನತತ್ವ ಸಾರುತ್ತದೆ ಆ ತತ್ವರಕ್ಷಣೆ, ಈಗಿನ ಯಾವ ಹಬ್ಬ, ಎಷ್ಟು ಸಾರ್ಥಕವಾಗಿದೆ—ಎಂದು ಮುಂತಾಗಿ ತೋರಿಸುವ ಉದಾಹರಣೆಗಳೂ, ಅಷ್ಟು ವಿವರದಿಂದ ಕಾಣುವ ಉತ್ತರಗಳೂ, ಇಲ್ಲದೆ ಕೊಡುವ ಉತ್ತರಗಳು ವಿಚಾರವನ್ನು ಕೆರಳಿಸವು.

> **ನಮ್ಮ ಕರ್ತವ್ಯವು**
> **ಸಮುದ್ರದ ಈಚೆ ದಡದಲ್ಲಿರುವ ಮಾನವರಣರಂಗದಲ್ಲಿದೆ. ಆದುದರಿಂದ ನಾವು ಹೋರಾಡಲೇಬೇಕಾಗಿದೆ. ದೇವಲೋಕವೆಂಬ ಆಚೆಯ ದಡವನ್ನು ಮರೆತು ವರ್ತಿಸಬೇಕಾಗಿ ಬಂದಿದೆ.**
> ರೊಮೈನ್ ರೋಲೆಂಡ್

ಸ್ಫುಟವಿಚಾರಗಳು

ಮುಂಬಾಯಿಯ ಕನ್ನಡಿಗರು—

೨೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ತಾವಿರುವ ಮುಂಬಾಯಿಯಲ್ಲಿ ಈ ಸಲ ಜರಗಿಸಬೇಕೆಂದು ನಿರ್ಧರಿಸುವುದಕ್ಕಾಗಿ ದಿವಾನ್ ಬಹದ್ದೂರ್ ಎಸ್. ಟಿ. ಕಂಬಳಿಯವರ ಅಧ್ಯಕ್ಷತೆಯಲ್ಲಿ ಕೂಡಿ ಬಂದು ಆ ಬಗೆ ಸರ್ವಾನುಮತದಿಂದ ಠರಾವನ್ನು ಮಾಡಿಕೊಂಡರು. 'ನಾವು ಇಲ್ಲಿ ಸಾಹಿತ್ಯ ಪರಿಷತ್ತನ್ನು ಕರೆಯುವುದು ಕರ್ನಾಟಕ ಭಾಷೆಯಾದ ನಮ್ಮ ಮಾತೃಭಾಷೆಯಲ್ಲಿ ನಮಗಿರುವ ಒಲುಮೆಯನ್ನು ತೋರಿಸುವುದಕ್ಕಾಗಿ' ಎಂದು ವಿನೀತರಾಗಿ ಅಧ್ಯಕ್ಷರು ಹೇಳಿದರು. ಶ್ರೀಮಾನ್ ಜಿ. ವಿ. ಜಹಗೀರ್‌ದಾರ್‌ರವರು ಈ ವಿಷಯವನ್ನು ಒತ್ತಿ ಹೇಳಿ ಸಭೆಯ ಠರಾವನ್ನು ಅನುಮೋದಿಸಿದರು. ಇಷ್ಟರಲ್ಲೇ ಅವರ ಅರಿಕೆಯ ಸಾಹಿತ್ಯ ಪರಿಷತ್ತಿನ [illegible] ದರಿಗೆ ಹೋಗಿರಬಹುದು. ಈ ಅರಿಕೆಯನ್ನವರು ಹೆಚ್ಚಿನ ಲಕ್ಷ್ಯವನ್ನಿತ್ತು ಪರಾಮರ್ಶಿಸುವರೆಂದು ನಮ್ಮ ನಂಬುಗೆ. ಅರಿಕೆಯೇನೋ ಪ್ರೇಮಪೂರಿತವಾದುದ, ವಿಷಯವೂ ಅತ್ಯಂತ ಗಹನವಾದುದು. ಗುಜರಾಥಿ ಮತ್ತು ಮರಾಠಿ ಭಾಷೆಗಳ ನಡುವೆ ಗುಟುಕು ಜೀವನದಿಂದ ಬಾಳುವ ಕನ್ನಡವು [illegible] ಸಕಲ ಕನ್ನಡಿಗರನ್ನೂ ಆಕರ್ಷಿಸಬಹುದೋ ಪರಿಷತ್ತು ಯಶಸ್ವಿಯಾಗಬಹುದೇ? ಎಂಬ ಸಂದೇಹವು ಪರಿಷತ್ತಿನವರಿಗಿರುವುದು ಸಹಜ. ಆದರೂ ಮುಂಬಾಯಿಯ ಕನ್ನಡಿಗರ ಸಂಖ್ಯೆಯೂ ಉತ್ಸಾಹವೂ ನಮ್ಮ [illegible] ಮುಂಬಾಯಿಯವರ ಆಶಯವು ನೆರವೇರಲೆಂದು ಕೋರುವೆವು.

ಪಂಡಿತ ಜವಾಹರಲಾಲರ ಬಿಡುಗಡೆಯು

ಯಾವ ವಿಧದಿಂದಲಾದರೂ ಆಗಲೇಬೇಕೆಂದು ಫ್ರಾನ್ಸಿನ ಮಹಾ ತತ್ವೇತ್ತರರೂ ಮುನಿಗಳೂ ಆದ ರೊಮೈನ್ ರೋಲೆಂಡರು ಶ್ರೀ ಸುಭಾಷ್ಚಂದ್ರ ಬೋಸರಿಗೆ ಬರೆದ ಪತ್ರದಲ್ಲಿ ಹೇಳಿ 'ಈ ಬಗ್ಗೆ ಯುರೋಪು ಅಮೇರಿಕಾಗಳಲ್ಲಿ ಪ್ರಚಂಡ ಚಳವಳವನ್ನು ಹೂಡಬೇಕಾಗಿದೆ' ಎಂದು ಸೂಚಿಸಿರುವರು. ಅಲ್ಲದೆ 'ಪಂಡಿತ ಜವಾಹರಲಾಲರಂತಹವರನ್ನು ಸೆರೆಯಲ್ಲಿಡುವುದು ಅತ್ಯಂತ ಖೇದಕರ'ವೆಂದೂ ಸೂಚಿಸಿರುವರು. ಈ ವಾಣಿಯು ಸಾಮಾನ್ಯ ಮನುಷ್ಯನಿಂದ ಬಾರದೆ, ವಿಭೂತಿಪುರುಷರೊಬ್ಬರಿಂದ ಬಂದಿದೆ. ಇದನ್ನು ಸರಕಾರವು ಇಷ್ಟರಲ್ಲೇ ತಿಳಿದಿರಬೇಕು. ಪಂಡಿತರ ಬಿಡುಗಡೆಯಾಗುವುದೆಂದು ಮೊನ್ನೆ ವಾರ್ತೆ ಹರಡಿತು. ಆ ವಾರ್ತೆಯು ಸಾಧಾರವೆಂದೂ ಪ್ರಕಟವಾಯಿತು. ಕೆಲವು ದಿನಗಳಲ್ಲಿ ಮಗದೊಂದ ವಾರ್ತೆಯು ಹರಡಿ, ಜವಾಹರಲಾಲರನ್ನು ಬಿಡುಗಡೆ ಮಾಡುವುದಿಲ್ಲವೆಂದು ತಿಳಿದುಬಂತು. ಇನ್ನಾದರೂ ಸರಕಾರವು ವಿಶಾಲಮನಸ್ಸಿನಿಂದ ತರ್ಕಿಸಿ ಜವಾಹರಲಾಲರನ್ನು ಬಿಡುಗಡೆಮಾಡವುದೇ?

ಮದ್ರಾಸಿನ ಶಿಕ್ಷಣಖಾತೆಯವರು

ಒಂದು ಪ್ರಕಟನೆಯನ್ನು ಕೆಲಸಮಯದ ಹಿಂದೆ ಹೊರಡಿಸಿ ಸರಕಾರಿ ಶಾಲೆಗಳಲ್ಲಿ ಶೇಕಡ ೩೦ಕ್ಕಿಂತ ಹೆಚ್ಚಿನ ಸಂಬಳ ಮಾಫಿಯಾಗಿ ಬಿಡಬಾರದಾಗಿ ಅಪ್ಪಣೆಕೊಟ್ಟರು. ಇದರ ಪರಿಣಾಮವೇನೆಂದು ಎಲ್ಲಾ ಶಾಲೆಗಳು ಕ್ಷಿಪ್ರದಲ್ಲೇ ಕಂಡುಕೊಂಡುವು. ಶಾಲೆಗಳ ದೆಸ್ಸುಗಳು ಹಾಳಿಬೀಳುವುದನ್ನು ಕಂಡ ಶಾಲಾಧಿಕಾರಿಗಳ ಮೊರೆ, ಸರಕಾರವು ಹುಡುಗಾಟಿಕೆ ಮಾಡಿತು ಎಂದು ಹೇಳಿದ ವಿದ್ಯಾರ್ಥಿಗಳ ಹತ್ತರ ಗೋಳು ಅಂತೂ ಪ್ರಚಂಡ ಚಳವಳವೇ ನಡೆಗಿತು. ಈಗ, ಖಾತೆಯವರು ಸುಜ್ಞಾನ ಹೊಂದಿ, ಚೇತರಿಸಿಕೊಂಡು, ಅಂದಿನ ಅಪ್ಪಣೆಯನ್ನು ರದ್ದುಗೊಳಿಸಿರುವರು. ಇಂತಹ ಜ್ಞಾನವು ಸದಾ ಇವರಲ್ಲಿರಲಿ!

ಶ್ರೀ ಶಿರ್ವಾಣಿಯವರು

ಈ ಸಂದಿಗ್ಧ ಸಮಯದಲ್ಲಿ ಪರಲೋಕವಾಸಿಗಳಾದರೆಂಬ ವಾರ್ತೆಯು ದೇಶಕ್ಕೊಂದು ಆಘಾತವೆಂಬುದರಲ್ಲಿ ಸಂದೇಹವಿಲ್ಲ. ಅವರ ಉಜ್ವಲ ರಾಷ್ಟ್ರಾಭಿಮಾನ ಜನತಾಭಿಮಾನಗಳು ಎಷ್ಟೆಂದು ಅವರ ಚರಿತ್ರೆಯನ್ನು ತಿಳಿದವರು ಹೇಳುವರು. ಅವರ ನಿಷ್ಕಾಮಸೇವೆಯು ಅವರ ಕೀರ್ತಿಯಲ್ಲಿ ಚಿರಸ್ಥಾಯಿಯಾಗಿ ನಿಲ್ಲುವುದು. ಅವರು ಹಿಂದೂ ಮುಸ್ಲಿಮ್ ಐಕ್ಯಕ್ಕಾಗಿ ಮಾಡಿದ ಸಾಹಸವು ಚರಿತ್ರೆಯಲ್ಲೇ ಲಿಖಿತವಾಗುವಂತಹುದು. ಅವರನ್ನು ಶಾಸನಸಭೆಗೆ ಕಳುಹಿಸಿದ ಜನತೆಯ ಪ್ರೀತಿವಿಶ್ವಾಸಗಳೇ ಅವರ ಸದ್ಗುಣಗಳ ಸಂಕೇತಗಳಾಗಿವೆ. ಮರಣಶಯ್ಯೆಯಲ್ಲೂ ಜೆ. ಪಿ. [illegible] ಯನ್ನು [illegible] ಲೇಖನವನ್ನು ಸಂಕ್ಷಿಪ್ತ [illegible] ಅವರ [illegible] ಶಿರ್ವಾಣಿಯವರ ತಹ ಉಜ್ವಲ ಮುಸಲ್ಮಾನ ದೇಶಬಂಧುಗಳು ಭಾರತದಲ್ಲಿ ಸಹಸ್ರಗಟ್ಟಲೆಯಾಗಿ ಮುಂದರಿದರೆ [illegible] ಭಾರತದ ಭಾಗ್ಯೋದಯವಾದ ದಿನ.

ಶ್ರೀ ಕಾರ್ನಾಡು ಸದಾಶಿವರಾಯರು—

ಕಳೆದ [illegible] ನಡೆದ ಸಭೆಯ ಅಧ್ಯಕ್ಷರಾಗಿ [illegible] ಮಾಡಿದ ಭಾಷಣವನ್ನು ಟೀಕಿಸಿ [illegible] ದಲ್ಲಿ [illegible] ವಿಚಾರಿಗಳೊಬ್ಬರು [illegible] ಪ್ರಶ್ನೆಯಿಟ್ಟರು. [illegible] ನಡುವುಗಳಲ್ಲಿ ಕೋರ್ಟಿನೊಳಗೇನೇ [illegible] ಕೊಂದ ಸಂಗತಿಯನ್ನೇಕೆ ತಿಳಿಸಲಿಲ್ಲ. ತಮ್ಮ ಮ[illegible] ಶವವನ್ನು [illegible] ಮ್ಯಾಜಿಸ್ಟ್ರೇಟರ [illegible] ಮೇಲೆಲ್ಲಾ ಕಲ್ಲೆಸೆದ ಬೊಬ್ಬಿಡುತ್ತಾ ಮೇಲೆ ಬೀಳಬಂದ ಜನತೆಯ ವರ್ತನೆ ಮತ್ತು ಕೊಲೆಗಾರರನ್ನು ಧರ್ಮವೀರರನ್ನಾಗಿ ಮಾಡುವ ಅವರ ಮೂಢಬುದ್ಧಿಯ ಕುರಿತು ನೀವು ಒಂದು ಮಾತನ್ನೂ ಹೇಳಲಿಲ್ಲವೇಕೆ?' ಎಂಬಿವೇ ಮೊದಲಾದುವು 'ವಿಚಾರಿ'ಯ ಪ್ರಶ್ನೆಗಳು. ಪ್ರಶ್ನೆಗಳು ಅಪ್ರಾಸಂಗಿಕವಲ್ಲದಿದ್ದರೂ 'ವಿಚಾರಿ'ಗೆ ನಮ್ಮ ಪ್ರಶ್ನೆಗಳಿವು: ಜನರು ಮುಖಂಡರ ಮಾತಿಗೆ ಸೊಪ್ಪು ಹಾಕಲಿಲ್ಲವೆಂಬುದಕ್ಕೆ ಆಧಾರವೇನು? ಮುಖಂಡರು ಶಕ್ತಿಪೂರ್ವಕ ಕೆಲಸ ಮಾಡಿದ್ದರೆ ಹೀಗಾಗುತ್ತಿತ್ತೇ? ಜನರು ಅವರನ್ನು ಮೀರಿ ನಡೆದಿದ್ದಾಗ ಮುಖಂಡರ ನಿರ್ಬಲತೆಯು ವ್ಯಕ್ತವಾದಂತಲ್ಲವೇ? ಕೊಲೆಗಾರರನ್ನು ಧರ್ಮವೀರರನ್ನಾಗಿ ಮಾಡಿದ ಜನರು [illegible] ಅಥವಾ ಸ್ವಧರ್ಮಾಂಧನಾಗಿ ಪರಧರ್ಮವನ್ನು [illegible] ಗ್ರಂಥವನ್ನು ಬರೆದ [illegible] ಯನೋ? ಪ್ರಶ್ನೆಗಳನ್ನೂ ಉತ್ತರಗಳನ್ನೂ ಎಷ್ಟು ಬೇಕಾದರೂ ಮುಂದರಿಸಬಹುದು. ಆದರೆ ಹಿಂದೂ ಮುಸಲ್ಮಾನ ಐಕ್ಯ ಸಾಧನೆಯ ದೃಷ್ಟಿಯಿಂದ ಸಹನೆಯನ್ನು ತಾಳುವುದು ಶ್ರೀ ರಾಯರ ಮತ್ತು 'ವಿಚಾರಿ'ಯ ಧರ್ಮ.

ಕರಾಚಿಯಲ್ಲಿ ಮಿಲಿಟರಿಯವರು

ಸಾವಿರಗಟ್ಟಳೆ ಜನರ ಮೇಲೆ ಗುಂಡು ಹಾರಿಸಿ ೩೭ ಜನರನ್ನು ಕೆಡವಿದುದೂ, ನೂರಾರು ಜನರನ್ನು ಗಾಯಗೊಳಿಸಿದುದೂ ಸರಿಯೋ, ತಪ್ಪೋ? ಎಂಬ ಪ್ರಶ್ನೆಯು ತಲೆದೋರಿರುತ್ತದೆ. ಅಲ್ಲಿಯ ಸರಕಾರವು ವಿವೇಕವನ್ನು ಮರೆತು ವರ್ತಿಸಿತೆಂದೂ ಜನರ ಕ್ಷೋಭೆಯನ್ನು ಬೇರೆ ಉಪಾಯದಿಂದ ನಿಲ್ಲಿಸಬಹುದಾಗಿತ್ತೆಂದೂ ಶಾಸನಸಭೆಯಲ್ಲಿ ಹೇಳಿಕೆಯಾಗಿರುತ್ತದೆ. ಬಹು ಪಕ್ಷೀಯರೆಲ್ಲ ಕರಾಚಿಯ ಅಧಿಕಾರಿಗಳ ವರ್ತನೆಯನ್ನು ಖಂಡಿಸುತ್ತಿದ್ದಾರೆ. ಜನರು ವ್ಯಕ್ತರಾದರು ಎಂದೊಡನೆ ಎಲ್ಲಾ ತಪ್ಪುಗಳನ್ನು ಕೊಂದವರ ಮೇಲೆ ಹೊರಿಸಿ ಅವರನ್ನು ಹಂಗಿಗೆ ತರುವುದು ಮಾನವನ ಸಹಜಸಿದ್ಧ ಗುಣ. ಆದರೆ ವಿಷಯದ ಮತ್ತೊಂದು ಪಕ್ಷವನ್ನು ಹಿಡಿದು ಪರಾಮರ್ಶಿಸಿದರೆ ಕೊಲೆಗಾರನ ಕೃತ್ಯಕ್ಕೆ ಆಧಾರಭೂತವಾದ ವಿಷಯಗಳಿರುವುದು ಗೋಚರವಾಗುತ್ತದೆ. ಕರಾಚಿಯಲ್ಲಿ ನಡೆದ ಸಂಘಟನೆಯನ್ನು ಸಿಕ್ಕಸಿಕ್ಕವರು ಸಿಕ್ಕಸಿಕ್ಕಂತೆ ತರ್ಕಿಸಿ ನಿರ್ಧರಿಸುವುದರಲ್ಲಿ ಏನೂ ಪುರುಷಾರ್ಥವಿಲ್ಲ. ಘಟನೆಯ ಸಾಧಾರವಾದ ಜ್ಞಾನವು (First hand knowledge) ಇಲ್ಲದೆ ಇಂತಹ ವಿಷಯಗಳನ್ನು ಪತ್ರಿಕೆಗಳ ವಾರ್ತೆಗಳ ಮೇಲೆ ಆಧರಿಸಿ ತೀರ್ಮಾನಿಸುವುದು ಎಂದೂ ಸರಿಯಲ್ಲ. ನಿಷ್ಪಕ್ಷಪಾತಿಗಳು ಕೂಲಂಕಷವಾಗಿ ವಿಚಾರಮಾಡಿ, ನಿರ್ದಾಕ್ಷಿಣ್ಯವಾಗಿ ತೀರ್ಮಾನವನ್ನೀಯುವುದೇ ಈ ಸಂಘಟನೆಗೆ ಯೋಗ್ಯ ಚಿಕಿತ್ಸೆ. ಅಂತಹ ಮಂಡಲದ ಸ್ಥಾಪನೆಯಾಗಲಿ. ಆಗ ಈ ಮಹಾಸಮಸ್ಯೆಯು ಇತ್ಯರ್ಥವಾಗುವುದು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಶಾಲಾ ಉಪಾಧ್ಯಾಯರ ಕಮಿಟಿ ಮೆಂಬರರ ಸಭೆಯು—

ಇದೇ ಮಾರ್ಚಿ ತಾ ೩ನೇ ರಲ್ಲಿ, ಮಂಗಳೂರು ಕೋ ಒಪರೇಟಿವ್ ಬೇಂಕಿನ ಮಹಡಿಗೆಯಲ್ಲಿ ಶ್ರೀ ಎಂ ರಾಮಕೃಷ್ಣ ಪೂಂಜರವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಪಾಸಾದ ನಿರ್ಣಯಗಳು —

೧. ಬೋರ್ಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಬಳದ ಹೊಸ ಸ್ಕೇಲನ್ನು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ರೀತಿಯಲ್ಲಿ ಜ್ಯಾರಿಗೆ ತಂದುದಕ್ಕಾಗಿ ಉಪಾಧ್ಯಾಯರೆಲ್ಲರೂ ಮುಖ್ಯ ಮಂತ್ರಿಗಳಿಗೆ ಕೃತಜ್ಞರಾಗಿರುತ್ತಾರೆ ಎಂಬ ನಿರ್ಣಯವನ್ನು ಮುಖ್ಯ ಮಂತ್ರಿಗಳಾದ ಬೊಬ್ಬಿಲಿ ಮಹಾರಾಜರವರಿಗೆ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

೨. ಬೋರ್ಡ್ ಶಾಲಾ ಉಪಾಧ್ಯಾಯರ ಸಂಬಳದಲ್ಲಿ ಬೋರ್ಡಿನವರ ಹಣದ ಅಭಾವದಿಂದ ಕಡಿತವು ಉಂಟಾಗದಂತೆ ಸರಕಾರವು ಉದಾರಹಸ್ತದಿಂದ ಬೋರ್ಡಿಗೆ ಗ್ರೇಂಟನ್ನು ಕೊಡುವಂತೆ ಸರಕಾರಕ್ಕೆ ಮನವಿ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

೩. ಬೋರ್ಡಿನ ಹಣದ ಅಭಾವ ಕಡಿಮೆಮಾಡಲಿಕ್ಕೆ ಬೋರ್ಡಿಗೆ ಈ ಕೆಳಗಿನ ಸೂಚನೆಗಳನ್ನು ಕೊಡಬೇಕೆಂದು ನಿರ್ಣಯಿಸಲಾಯಿತು.

(i) ಟಪ್ಪಾಲನ್ನು ಹಾಯರ್ ಎಲಿಮೆಂಟರಿ ಶಾಲೆ ಅಥವಾ ಸೆಂಟರ್ ಶಾಲೆಗಳ ಮೂಲಕ ಬಟವಾಡೆ ಮಾಡುವುದು (ii) ಸಂಬಳವನ್ನು ಬೇಂಕುಗಳ ಮೂಲಕ ಬಟವಾಡೆಮಾಡುವುದು (iii) ಶಾಲಾ ಕಟ್ಟಡಗಳ [illegible] ಕಡಿಮೆಮಾಡುವುದು (iv) ಸದ್ಯದ ಶಾಲೆಗಳನ್ನು ಬಿಟ್ಟು ಉಳಿದ ಶಾಲೆಗಳಲ್ಲಿರುವ ಕಂಪಕ್ಟ್ [illegible] ತೆಗೆದು [illegible] (v) [illegible] ಕಡಿಮೆ ಮಾಡುವುದು (vi) ಎಸಗಿ ಹೈಸ್ಕೂಲುಗಳಲ್ಲಿ ಬೋ. ಹೈಸ್ಕೂಲುಗಳ III ಫೋರ್ಮ್ ಕೆಳಗಿನ ಕ್ಲಾಸುಗಳನ್ನು ತೆಗೆದುಹಾಕುವುದು (vii) ಹೈಸ್ಕೂಲ ಕ್ಲಾಸುಗಳಲ್ಲಿ ಒಂದೊಂದು ಡಿವಿಜನಲ್ಲಿ ೪೦ ಮಕ್ಕಳಿಗೆ ಕಡಿಮೆಯಿದ್ದರೆ ಡಿವಿಜನುಗಳನ್ನು ಮಿತಿಗೆ ಇರುವುದು.

೪. ಬೋರ್ಡಿನ ಎಲ್ಲಾ ಇಲಾಖೆಗಳ ಖರ್ಚು ಕಡಿಮೆ ಮಾಡಿ ಜನರಲ್ ಫಂಡನ್ನು ಹೆಚ್ಚಿಸುವುದು.

೫. [illegible] ಖರ್ಚುಮಾಡುವಷ್ಟು ಹಣವನ್ನು ಜನರಲ್ ಫಂಡಿನಿಂದ ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ಖರ್ಚುಮಾಡುವುದು.

೬. ಬೋರ್ಡ್ ಶಾಲೆಗಳಲ್ಲಿ ೫ನೇ ತರಗತಿಯ ವರೆಗೆ ಸಂಬಳ ಮಾಫಿ ಮಾಡಿ ೬ನೇ ದರ್ಜೆಗಳಲ್ಲಿ ಸಂಬಳ ವಿಧಿಸಿ ಬಡ ಮಕ್ಕಳಿಗೆ ಮಾಫಿಮಾಡುವುದು.

೭. ಬಜೆಟ್ ಕೂಟದ ಸಮಯ ಶ್ರೀಗಳಾದ ವಿ. ಬಾಬುಶೆಟ್ಟಿ, ಒಗ್ಗೆಯೇ ಕೃಷ್ಣರಾಯರು ಮತ್ತು ಜೈಲಂಗಡಿ [illegible] ಇವರನ್ನು ಪಾಲಿಟೆಕ್ನಿಕ್‌ಗಳನ್ನು ತಿಳಿಸುವುದಕ್ಕೆ ಪ್ರತಿನಿಧಿಗಳಾಗಿ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

ಎಸೆಂಬ್ಲಿಯಲ್ಲಿ ಫೈನಾನ್ಸ್ ಮಸೂದೆಯ ಚರ್ಚೆ

ಡಾ॥ ಭಗವಾನ್‌ದಾಸರ ಅತ್ಯುಜ್ವಲ ಭಾಷಣ.

ತಾ ೬ನೇ ದಿನ ಪಂಡಿತ ನೀಲಕಂಠ ದಾಸರು ಜಂಜಿಬಾರಿನ ಕುರಿತಾಗಿ ಒಂದು ನಿರ್ಣಯವನ್ನು ತಂದರು. ಆದನ್ನಿತ್ತು ಹಿಡಿದು ಅಧ್ಯಕ್ಷರು ಭಾಷಣವಾಡಿರೆಂದು ಹೇಳಿದಾಗ ಶ್ರೀ ನೀಲಕಂಠದಾಸರು ತಮ್ಮ ಸ್ಥಾನದಲ್ಲಿರಲಿಲ್ಲ. ಪ್ರತಿಫಲವಾಗಿ ಆ ನಿರ್ಣಯವು ಹಾಗೆಯೇ ಬಿದ್ದುಹೋಯಿತು.

ಡಾ॥ ಭಗವಾನದಾಸರು ಫೈನಾನ್ಸ್ ಮಸೂದೆಯ ವಿಷಯವಾಗಿ ಒಂದು ಗಂಟೆಯ ವರೆಗೆ ಮಾತಾಡಿ ಪರಿಸ್ಥಿತಿಯನ್ನು ವಿವರಿಸಿದರು. "ಸರಕಾರದವರು ಬಹಳ ಗೊಂದಲದಲ್ಲಿ ಸಿಲುಕಿದ್ದಿದ್ದಾರೆ" ನಮಗೇನು ಮಾಡಲು ಸಾಧ್ಯ? ನಿಬಂಧನೆಗಳೇ ಹಾಗಿವೆಯೆಂಬ ನೆವವನ್ನು ಹಿಡಿದು ಮಾತನಾಡತ್ತಾರೆ" ಎಂದರು. ಮುಂದರಿಸಿ "ವಿರೋಧಪಕ್ಷದವರು ದಿನಂಪ್ರತಿ ಪ್ರಜೆಗಳ ಕಷ್ಟನಷ್ಟಗಳನ್ನು ಸರಕಾರದ ಮುಂದಿಡುತ್ತಿದ್ದಾರೆ. ಭಾರತವು ಅನಾದಿಕಾಲದಿಂದಲೂ [illegible] ಪುಷ್ಟಿಗಳಿಲ್ಲದೆ [illegible]. ಆದರೆ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಅದು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು [illegible] ಈ ಅವಸ್ಥೆಯು ಬ್ರಿಟಿಷರ ತಪ್ಪಿಲ್ಲ. ನಡೆದುಕೊಂಡು ಬರುತ್ತಿರುವ ಪದ್ಧತಿಯ ಪರಿಣಾಮದ [illegible] ಭಾರತೀಯರು ರಂಡಿ [illegible] ಆದಿ ಬ್ರಿಟಿಷರ ಸಹಾಯವು ಬೇಕಾಗಿದೆ. ಭಾರತೀಯರನ್ನು ಉದ್ಯೋಗಗಳಿಗೆ ತುಂಬಬೇಕೆಂದು ನಮ್ಮ ಕೋರಿಕೆ. [illegible] ಅಧಿಕಾರಿಗಳ ಹೃದಯವು ಭಾರತ [illegible] ಬೇಕು. ಅಷ್ಟೆ" ಎಂದರು.

ಡಾ॥ ಭಗವಾನದಾಸರು ಉಪ್ಪಿನ ತೆರಿಗೆಯನ್ನು ಕಡಿಮೆಮಾಡಬೇಕೆಂದು ಕೋರಿ ಭಾಷಣ ಮಾಡಿದರು. ಸಂಬಳದ ಕಡಿತವನ್ನು ಇದ್ದಂತೆಯೇ ಇಟ್ಟು "ಮಹಾತ್ಮಾಜಿಯವರ ಅತ್ಯಮೂಲ್ಯ ಸಲಹೆಗಳನ್ನು ಕೇಳಿ ಗ್ರಾಮ [illegible] ಒಂದು [illegible] ವಿಚಾರಿಸದೇ [illegible] ಗಳು ತಲೆದೋರುವುವು" ಎಂದರು.

ಅನಂತ ಸೇಟ್ ಅಬ್ದುಲ್ಲಾ ಹಾರೂನ್ ಇವರು ಮಾತನಾಡುತ್ತ [illegible] ಸಾಲ [illegible] ಬಹು ವಿಚಕ್ಷಣತೆಯಿಂದ ಪರಿಹರಿಸಬೇಕು. ಸುಂಕ ತೆರಿಗೆಗಳನ್ನು ಒಟ್ಟುಗೆ ಕಡಿಮೆ ಮಾಡಬೇಕು. ಹಸಿ ಚರ್ಮದ ಮೇಲಿನ ಸುಂಕವನ್ನು ತೆಗೆದುಹಾಕುವುದು. ಸರಕಾರದ [illegible] ಸುಂಕವನ್ನು ಕಡಿಮೆ ಮಾಡದೇ [illegible] ಇಲ್ಲವೇ ಎಂದು ತಿಳಿಯದಾಗಿದೆ ಎಂದರು.

ಡಾ॥ [illegible] ಅಂತ ದರಗಳನ್ನು ಇಳಿಸಬೇಕೆಂದು [illegible] ಸುಂಕಗಳನ್ನು ಅಧಿಕ ಪ್ರಮಾಣದಲ್ಲೇ ಇಟ್ಟುಕೊಳ್ಳುವ [illegible] ಅವರು ಹೇಳಿದರು.

ನಂತರ ಮಿ. [illegible] ಯವರು ಮಾತನಾಡಿದರು. ಇವರು ಹೇಳಿದ್ದೇನೆಂದರೆ "ಇಂಡಿಯಾದಿಂದ ಅಪಾರವಾದ ಬಂಗಾರವು ಹೊರದೇಶಗಳಿಗೆ ಸಾಗಿಸಲ್ಪಡುತ್ತಿದೆ. ಇದನ್ನು ಸರಕಾರದವರು ಯಾವ ರೀತಿಯಿಂದಲಾದರೂ ತಡೆದು ನಿಲ್ಲಿಸಬೇಕು. ಅನೇಕ ಬಡಸಂಸಾರಗಳು ತಮ್ಮಲ್ಲಿದ್ದ ಅಲ್ಪಸ್ವಲ್ಪ ಬಂಗಾರವನ್ನು ಹಾಳುಮಾಡಿಕೊಳ್ಳುತ್ತವೆ. ಈ ಸಾರಿ ಬಜೆಟ್ಟಿನಲ್ಲಿ ಬೆಳ್ಳಿಯ ಮೇಲಿನ ಸುಂಕವನ್ನು ಕಡಿಮೆ ಮಾಡಿದ್ದಾರೆ. ಆದರೆ ಅದನ್ನು ಸಂಪೂರ್ಣವಾಗಿ ತೊಲಗಿಸಿದ್ದರೆ ದೇಶಕ್ಕೂ ಕ್ಷೇಮ ಪ್ರಜೆಗಳಿಗೂ ಸುಖ. ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಅದು—ಉಪ್ಪಿನ ಮೇಲೆ ಹಾಕಿರುವ ಅನ್ಯಾಯ ಸುಂಕ. ಅದನ್ನು ಸರಕಾರವು ಉಪ್ಪಿನ ಉತ್ಪತ್ತಿಗಾರರ ದೃಷ್ಟಿಯಿಂದ ಹಾಕಿದ್ದು [illegible] ಹೆಚ್ಚಿನ ವರ್ತಕರ [illegible] ಒಯ್ಯುವುದರಿಂದ [illegible] ಅದನ್ನು ಹೊರಿಸಲಾಗಿದೆ. ಬಂಗಾಳ ಮತ್ತು ಬಿಹಾರದ ಪ್ರತಿನಿಧಿಗಳ ಒತ್ತಾಯದಿಂದ ಸರಕಾರದವರು ಈ ಸುಂಕವನ್ನು ವಿಧಿಸಿರುವರು. ಉತ್ತರ ಮತ್ತು ಪಶ್ಚಿಮ ಭಾರತದಿಂದ ಬಂಗಾಳಕ್ಕೆ ಒಂದು [illegible] ಉಪ್ಪಾದರೂ ಬರುತ್ತಿಲ್ಲ. ಆಧಿಕ ದೃಷ್ಟಿಯಿಂದ [illegible] ಈ ಯೋಜನೆಯು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಸುಂಕವನ್ನು [illegible] ಒಂದು ರೂಪಾಯಿಗೆ ಇಳಿಸಬೇಕು."

ಅನುಕ್ರಮಣಿಕೆ.

—

ಕಥೆ ... ೩
ಪತ್ರಿಕಾ ಪ್ರಪಂಚ ... ೪
ಮಹಾತ್ಮರ ಒಂದು ತಿಂಗಳ ಮೌನವ್ರತ ... ೫
ಹೆಮ್ಮೆ ಶಂಖು ... ೭
ಅಗ್ರಲೇಖ
ಸ್ಫುಟವಿಚಾರಗಳು ... ೯
ಪಂಚಾಯತುಗಳ ಅವಸ್ಥೆ ... ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ... ೧೨
ವಿವಿಧ ಸಮಾಚಾರಗಳು, ... ೧೬
ನಮ್ಮ ಮುಂದಾಳುಗಳು ... ೧೮
ಪ್ರಕಾಶಿಸುವ ಹೃದಯವುಳ್ಳ ವಿಚಿತ್ರ ಸ್ತ್ರೀ ... ೧೯

ಸ್ವದೇಶಾಭಿಮಾನಿ.

ತಾ ೨೯ನೇ ಶುಕ್ರವಾರ ಮಾರ್ಚಿ '೩೫.

ಪಂಚಾಯತುಗಳ ಅವಸ್ಥೆ

ಮದ್ರಾಸು ಸರಕಾರದವರು, ತಾಲೂಕು ಬೋರ್ಡುಗಳನ್ನು ಅಳಿಸುವಾಗ, ಅವುಗಳಿಗಿಂತ ಇನ್ನೂ ಚಿಕ್ಕ ಸಂಸ್ಥೆಗಳಾದ ಗ್ರಾಮ ಪಂಚಾಯತುಗಳನ್ನು ಸುಧಾರಿಸಲು ಅನುಕೂಲವಾದೀತು ಎಂದಿದ್ದರು. ಅದೇ ಭಾವನೆಯನ್ನು, ಮಾಜಿ ಗವರ್ನರ ಜನರಲರು ಸಹ ಪ್ರಕಟಪಡಿಸಿದ್ದರು. ಈಗ ತಾಲೂಕು ಬೋರ್ಡುಗಳನ್ನು ಅಳಿಸಿ ಎರಡು ವರುಷಗಳಾಗುತ್ತ ಬಂದುವು. ಅದರ ಯಾವತ್ತು ಹೊರೆಯನ್ನು ಸರಕಾರವು ಜಿಲ್ಲಾ ಬೋರ್ಡಿಗೆ ಹಾಕಿತು. ಗ್ರಾಮ ಪಂಚಾಯತುಗಳ ವಿಚಾರವನ್ನು ಇದ್ದಂತೆ ಇರಿಸಿತು.

ಜಿಲ್ಲಾ ಬೋರ್ಡು, ತಾಲೂಕ ಬೋರ್ಡುಗಳ ಜವಾಬುದಾರಿಯನ್ನು ಹೊರಬೇಕಾಗಿ ಬಂದುದರಿಂದ, ಅದರ ಹೊರೆ, ಗಲಿಬಿಲಿಗಳು ಹೆಚ್ಚಾದುವು. ಸಾಂಪತ್ತಿಕ ಸ್ಥಿತಿಯು ಎಳ್ಳಷ್ಟು ಅನುಕೂಲಿಸಲಿಲ್ಲ. ಹಂಚಿಹೋದ ಅಧಿಕಾರವನ್ನು ಕೇಂದ್ರೀಕರಿಸಿತು ನಿಜ. ಆದರೆ ಈ ಕೇಂದ್ರೀಕರಣದಿಂದ, ಹಾನಿ ಹೊರತು ಯಾವ ಉಪಯೋಗವಾದಂತೆ ನಮಗೆ ಕಂಡುಬರುವುದಿಲ್ಲ.

ಇತ್ತ ಸರಕಾರವು ಪಂಚಾಯತುಗಳ ಕಡೆಗೆ ತೋರಿಸಿದ ಧೋರಣೆ ಯಾವುದು? ಅದರ ಸಹಾಯಕ ಬೆಂಬಲವನ್ನು ಹೆಚ್ಚಾಗಿ ಮಾಡಲಿಲ್ಲ. ಇದ್ದ ಸಾಂಪತ್ತಿಕ ಸ್ಥಿತಿಯಲ್ಲಿ ಪಂಚಾಯತುಗಳು ಕೆಲಸ ಮಾಡುವುದೆಂದರೆ ಮುಖ್ಯತಃ ಸ್ಥಳೀಕ ರಸ್ತೆಗಳು, ಬಾವಿಗಳು, ಕಾಲುಹಾದಿಗಳು ಇವುಗಳ ನಿರ್ಮಾಣ ಸುಧಾರಣೆಯಿಂದಾಗಿರುತ್ತದೆ. ಈ ಕಾರ್ಯನಿರ್ವಾಹಕ್ಕೆ ಮುಖ್ಯತಃ ಇಂಜಿನಿಯರಿಂಗ್ ಡಿಪಾರ್ಟುಮೆಂಟಿಗೆ ಸಹಾನುಭೂತಿ ಬೇಕು. ನಮ್ಮ ಜಿಲ್ಲೆಯ ಅನುಭವದಿಂದ ಹೇಳುವುದಾದರೆ ಈ ಡಿಪಾರ್ಟುಮೆಂಟಿನವರು ಆ ತರದ ಸಹಾನುಭೂತಿಯನ್ನು ತೋರಿದಂತಿಲ್ಲ. ಹಳ್ಳಿಯವರು ತಾವಾಗಿ ನಿರ್ವಹಿಸಿದ ಕೆಲಸವನ್ನು ಆಗಾಗಲೇ ಪರಿಶೀಲಿಸುವ, ತಿದ್ದುವ ವಿಚಾರಗಳಲ್ಲಿ ಅದು ಸಾಕಷ್ಟು ಜಡತೆಯನ್ನು ತೋರಿದೆ. ಮಳೆ ಬಂದು ಮಾಡಿದ್ದೆಲ್ಲಾ ತೊಳ್ಕೊಂಡು ಹೋದ ಬಳಿಕ ಪರಿಶೀಲನೆಗೆ ಗ್ರಾಂಟನ್ನು ನಿರಾಕರಿಸಿದ ಉದಾಹರಣೆಗಳು ಬಹಳ ಇವೆ.

ಇತ್ತ ಅದರ ಮೀಟಿಂಗುಗಳನ್ನು ನಡೆಸುವುದರಲ್ಲೂ, ಪತ್ರವ್ಯವಹಾರದಲ್ಲೂ, ಇತರ ವ್ಯವಸ್ಥೆಗಳಲ್ಲೂ ಸಹಾಯಕರಾಗಿ ಅಲ್ಲಲ್ಲಿ ಕೆಲವು ಸುಪರ್‌ವೈಜರರು ನೇಮಕರಾಗಿದ್ದರು. ಪಂಚಾಯತ ಸುಧಾರಣೆಗೆ ಹೊರಟ ಸರಕಾರವು ಒಮ್ಮೆಗೇ ಅವರ ಹುದ್ದೆಗಳನ್ನು ತೆಗೆಯಿತು. ಈ ಕೆಲಸವನ್ನು ಇನ್ನಾರು ಮಾಡಬೇಕು?

ಸುಧಾರಣೆಯ ಚಿಹ್ನೆಯೆಂದು—ಒಂದೊಂದು ಜಿಲ್ಲಾ ಪಂಚಾಯತ ಆಫೀಸರರನ್ನು ಹೊರಿಸಿದ್ದಾಯಿತು. ಈ ಆಫೀಸರರು ಕೇವಲ-ಪಂಚಾಯತ ಚುನಾವಣೆಯನ್ನು ನಿರ್ವಹಿಸಲು—ಎಂದು, ಅವರ ಕೆಲಸದ ಮಿತಿಯನ್ನು ಹೇಳಿಬಿಟ್ಟಿತು. ನಮ್ಮ ಜಿಲ್ಲೆಯ ಅನುಭವದಿಂದ ಎನ್ನುವುದಾದರೆ—ಈ ಪಂಚಾಯತ ಆಫೀಸರರು ಜಿಲ್ಲಾ ಬೋರ್ಡಿಗೆ ಒಂದು ಸಂಪತ್ತಿನ ಹೊರೆಯೇ ಹೊರತು ಹೆಚ್ಚಿನ ಉಪಯೋಗವಿಲ್ಲ. ಈ ಹೊರೆಯನ್ನು ಹೊತ್ತುಕೊಳ್ಳದೆ ಬೋರ್ಡಿಗೆ ನಿರ್ವಹವಿಲ್ಲ.

ಇತ್ತ ಮಾರ್ಗದರ್ಶಕತೆಯೂ, ಸಾಂಪತ್ತಿಕ ಅನುಕೂಲತೆಯೂ ಎರಡೂ ಕಡಿಮೆಯಾಯಿತೆಂದರೆ-ಪಂಚಾಯತುಗಳು ಏನು ಮಾಡಿಯಾವು?

ನಮ್ಮ ಜನರು ಸಾಮಾಜಿಕ ಕೆಲಸಗಳನ್ನು ನಿರ್ವಹಿಸುವುದರಲ್ಲಿ ಮೊದಲೇ ಉದಾಸೀನರು. ಅವರಲ್ಲಿನ ನಿಸ್ವಾರ್ಥಬುದ್ಧಿಯನ್ನು ಕೆರಳಿಸಿ ಪ್ರೋತ್ಸಾಹಿಸಿ ಕೆಲಸಮಾಡುವುದೆಂಬುದು ಬಲ ಕಷ್ಟದ ಮಾತು. ಹೀಗಿರಲು ಇದ್ದ ಸಹಾನುಬುದ್ಧಿಯನ್ನು ಸರಕಾರವು ತೆಗೆಯುತ್ತ ಬಂದುದರಿಂದ ಪಂಚಾಯತುಗಳಿಗೆ ಈ ಹೊಸ ಧೋರಣೆಯಿಂದ ಹಾನಿ ಹೊರತು ಏನ ಉಪಯೋಗವಾಯಿತಂತೆ.

ಎಷ್ಟೋ ಕಡೆಗಳಲ್ಲಿ ಹಣದ ಕೊರತೆಯಿಂದ ಮಾಡಿದ್ದೆಲ್ಲ ಮಣ್ಣುಗೂಡುತ್ತಲಿದೆ. ಪುತ್ತೂರು ತಾಲೂಕಿನ ಎಷ್ಟೋ ಕಡೆಗಳಲ್ಲಿ ಬಲು ಶ್ರಮದಿಂದ ಕಟ್ಟಿದ ಮಾಡಿದ ಪಂಚಾಯತ ರಸ್ತೆಗಳ ದುರಸ್ತಿಗೆ ಹಣವಿಲ್ಲದೆ ಕೆಟ್ಟು, ತಿರುಗಿ ಅಲ್ಲಿ ಕಾಡ ಬೆಳೆಯ ಪ್ರಸಂಗ ಬಂದಿದೆ. ಎಷ್ಟೋ ಕಡೆಗಳಲ್ಲಿ ಮಳೆಯಿಂದ ಕೊರೆದು ಹೋದ ಕೊಂಕಲುಗಳಿಂದ ಹೊಸ ಹಾದಿಯನ್ನೆ ಮಾಡಬೇಕಾಗಿ ಬಂದಿದೆ.

ನಮ್ಮ ಜಿಲ್ಲೆಯ ಕೌನ್ಸಿಲು ಸದಸ್ಯರು ಈ ವಿಷಯದಲ್ಲಿ ಸರಕಾರದೊಡನೆ ಹೆಚ್ಚಿನ ಪ್ರಸ್ತಾಪಕ್ಕೆ ತೊಡಗುವುದು ಲೇಸಲ್ಲವೇ?

ಪತ್ರಕರ್ತರ ಸಮ್ಮೇಳನವೊಂದನ್ನು—

ಮಂಗಳೂರಿನ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಸಮಯ ಜರಗಿಸಬೇಕೆಂದು ಶ್ರೀ ಹನುಮಂತರಾವ ಮೋಹಿರೆಯವರಿಂದೊಂದು ಸೂಚನೆಯಿದೆಯೆಂದ ತಿಳಿದುಬರುತ್ತದೆ. ಶ್ರೀಯುತರ ಸಲಹೆಯೇನೋ ಅಪ್ರಿಯವಲ್ಲ. ಆದರೆ ಅಂತಹ ಸಮ್ಮೇಳನವನ್ನು ಜರಗಿಸುವ ಉದ್ದೇಶವಾದರೂ ಏನು?- ಅದರಿಂದ ಪತ್ರಿಕಾಕರ್ತರ ಸ್ಥಿತಿಗತಿಗಳನ್ನು ಸುಧಾರಿಸುವ ಆಶೆಯನ್ನು ಕಟ್ಟಿಕೊಳ್ಳಲಾಗದೆಯೋ ಎಂದು ತಿಳಿಸುವುದುತ್ತಮ. ಅಂದು ಬಾಗಲಕೋಟೆಯಲ್ಲೊಂದು ಸಮ್ಮೇಳನವು ಜರಗಿತು. ಅಲ್ಲಿ ನಡೆದುದೇನು? ಬರಿಯ ಚರ್ಚೆಗಳೂ ಠರಾವುಗಳೂ ಆಗಿ, ಕಾರ್ಯತಃ ಯಾವ ಕೆಲಸವೂ ಆಗುವುದಿಲ್ಲವಾದರೆ ಈ ವಿಷಯವಾಗಿ ಮೌನವನ್ನು ತಾಳುವುದು ಲೇಸು. ಪ್ರಯೋಜನಕಾರಿ ಕೆಲಸವು ನೆರವೇರುವುದಾದರೆ ಸಕಲರೂ ಸಹಕರಿಸಿ ನಡೆಯುವುದು ಅಗತ್ಯ.

ಜವಾಹರಲಾಲರ ಬಿಡುಗಡೆಯಿಲ್ಲ

ತಾ ೧೧ನೇ ದಿನ ಎಸೆಂಬ್ಲಿ ಪ್ರಶ್ನೋತ್ತರ ಕಾಲದಲ್ಲಿ ಹೋಮ್ ಮೆಂಬರರಾದ ಸರ್ ಹೆನ್ರಿ ಕ್ರೈಕರು ತ್ರೀವ್ರಕಾಶರ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನೀಯುತ್ತಾ 'ಲಂಡನಿನಲ್ಲಿ ನಡೆಯುವ ಇಂಡಿಯನ್ ಸಿವಿಲ್ ಸರ್ವಿಸ್ ಕೊಂಪಿಟಿಶನ್ ಪರೀಕ್ಷೆಗೆ ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಸಿಲೋನ್ ಈ ಪ್ರದೇಶಗಳಿಂದ ವಿದ್ಯಾರ್ಥಿಗಳು ಕುಳಿತುಕೊಳ್ಳಬಹುದು. ಇವರೊಂದಿಗೆ ಬ್ರಿಟಿಷ ಸಾಮ್ರಾಜ್ಯದ ಪ್ರತಿಯೊಬ್ಬರೂ ಲಂಡನಿನಲ್ಲಿ ನಡೆಯುವ ಪರೀಕ್ಷೆಗೆ ಬರಬಹುದು. ಹೊಸ ರಾಜ್ಯಾಂಗ ಸುಧಾರಣೆಗಳು ಬಂದ ಮೇಲೆ ಸಿಲೋನ್ ಪ್ರಾಂತ್ಯವನ್ನು ಆ ಪಟ್ಟಿಯಿಂದ ಪ್ರತ್ಯೇಕಿಸುವ ವಿಚಾರವು ಸರಕಾರದ ಪರ್ಯಾಲೋಚನೆಯಲ್ಲಿದೆ. ಡೊಮಿನಿಯನ್ನುಗಳ ಸಿವಿಲ್ ಸರ್ವಿಸ್ ಉದ್ಯೋಗಗಳಿಗೆ ನ್ಯಾಯಬದ್ಧರಾದ ಭಾರತೀಯ ನಿವಾಸಿಗಳನ್ನು ನಿಯಮಿಸಲು ಯಾವ ಸ್ಟ್ಯಾಚ್ಯುಟರಿ ಪ್ರತಿಬಂಧಕವೂ ಇಲ್ಲ' ಎಂದರು.

ಪಂಡಿತರ ಬಿಡುಗಡೆಯೇ!

ಶ್ರೀ ನೀಲಕಂಠದಾಸರ ಅವಸರದ ಪ್ರಶ್ನೆಗಳಿಗೆ ಹೋಮ್ ಮೆಂಬರರಾದ ಸರ್ ಹೆನ್ರಿ ಕ್ರೈಕರು ಪ್ರತ್ಯುತ್ತರವನ್ನೀಯುತ್ತಾ ಹೇಳಿದ್ದೇನೆಂದರೆ "ಪಂಡಿತ ಜವಾಹರಲಾಲರನ್ನು ಬಿಡುಗಡೆ ಮಾಡುವ ವಿಷಯವಾಗಲೀ ಅಥವಾ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದಂತೆ, ಅವರ ಪತ್ನಿ ಶ್ರೀಮತಿ ಕಮಲಾ ನೆಹರೂರವರನ್ನು ಪಾಶ್ಚಿಮಾತ್ಯ ದೇಶಗಳ ಹವಾಗುಣಕ್ಕಾಗಿ ಕರೆದುಕೊಂಡು ಹೋಗುವುದಾಗಿದ್ದರೆ ಆಗ ಅವರನ್ನು ಬಿಡುಗಡೆ ಮಾಡುವುದಾಗಲೀ ಸರಕಾರದ ಯೋಚನೆಯಲ್ಲಿಲ್ಲ. ಈ ವಿಷಯವು ಇಂಡಿಯಾ ಸರಕಾರದವರ ಯೋಚನೆಯಲ್ಲಿ ಇಲ್ಲ. ಪ್ರಾಂತಿಕ ಸರಕಾರಗಳ ಯೋಚನೆಯಲ್ಲಿಯೂ ಇಲ್ಲ. ಎಂದರು.

ಅನೇಕ ಉಪಪ್ರಶ್ನೆಗಳಿಗೆ ಸರ್ ಹೆನ್ರಿ ಕ್ರೈಕರು ಉತ್ತರವನ್ನೀಯುತ್ತಾ ಶ್ರೀಮತಿ ಕಮಲಾ ನೆಹರೂರವರ-ದೇಹಸ್ಥಿತಿಯು ಈಚೆಗೆ ಸ್ವಲ್ಪ ಉತ್ತಮವಾಗಿದೆಯೆಂದು ನನಗೆ ವರದಿ ಬಂದಿದೆ. ಶ್ರೀಮತಿಯವರ ದೇಹಸ್ಥಿತಿಯ ವಿಚಾರವಾಗಿ ಕಳೆದ ದಶ ಬರತಿಗಳಲ್ಲಿ ನನಗೆ ವರದಿಯು ಬಂದಿತ್ತು ಎಂದರು.

ನಂತರ ಶ್ರೀ ಗೋವಿಂದ ದಾಸರ ಈ ದಿವಸ ಪ್ರಾತಃಕಾಲದ ವರ್ತಮಾನ ಪತ್ರಿಕೆಗಳಲ್ಲಿ ಶ್ರೀಮತಿ ಕಮಲಾ ನೆಹರೂರವರ ದೇಹಸ್ಥಿತಿಯ ವಿಚಾರವಾಗಿ ಬಂದ ಸುದ್ದಿಯನ್ನು ಹೋಮ್ ಮೆಂಬರರು ನೋಡಿದರೇ? ಅವರ ದೇಹಸ್ಥಿತಿಯು ಚಿಂತಾಜನಕವಾಗಿದೆ ಎಂದರು.

ಸರ್ ಹೆನ್ರಿ ಕ್ರೈಕರು—ಈ ದಿವಸದ ಪತ್ರಿಕೆಗಳಲ್ಲಿ ಬಂದ ಸುದ್ದಿಯನ್ನು ಇನ್ನೂ ನೋಡಿಲ್ಲ.

ನಂತರ ಶ್ರೀ ಎನ್ ಎಮ್ ಜೋಶಿಯವರು ತಮ್ಮ ಹೆಸರಿನಲ್ಲಿದ್ದ ಕಟ್ ಮೋಷನ್ನನ್ನು ಪ್ರತಿಪಾದಿಸುತ್ತಾ ಕೂಲಿಗಾರರ ಕುಂದುಕೊರತೆಗಳನ್ನು ನಿವೇದಿಸಿ ಭಾರತೀಯ ಗಿರಣಿ ಕೂಲಿಗಾರರ ಸ್ಥಿತಿಯನ್ನು ಉತ್ತಮಗೊಳಿಸಲು ಸರಕಾರದವರು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದರು. ಅವರು ಹೇಳಿದ್ದೇನೆಂದರೆ ,ಭಾರತ ಕೂಲಿಗಾರರಜೀವನವು ಬಹಳ ಕಠಿಣಸ್ಥಿತಿಯಲ್ಲಿದೆ. ಅವರ ಆರೋಗ್ಯಗಳು ಸಮರ್ಪಕವಾಗಿಲ್ಲ. ಅಲ್ಲದೆ ಅವರಿಗೆ ಕೊಡುತ್ತಿರುವ ವೇತನಗಳು ಜೀವನಕ್ಕೆ ಸಾಕಾಗುತ್ತಿಲ್ಲ. ಹಲವು ಎಸೆಂಬ್ಲಿ ಸದಸ್ಯರು ಶ್ರೀ ಎನ್ ಎಂ ಜೋಶಿಯವರ ಕಟ್ ಮೋಷನನ್ನು ಸಮರ್ಥಿಸಿ ಮಾತನಾಡಿ ಕೂಲಿಗಾರರ ಕಷ್ಟ ಪರಂಪರೆಗಳನ್ನು ತೊಲಗಿಸಲು ಒಂದು ಕೈಗಾರಿಕೆಯ ಪಾಠಶಾಲೆಯನ್ನು ಸ್ಥಾಪಿಸಬೇಕೆಂದೂ, ಮತ್ತು ಕೇಂದ್ರದೊಂದಿಗೆ ಪ್ರಾಂತಿಕ ಸಮಿತಿಗಳನ್ನೂ ನಿರ್ಮಿಸಿ ಇಂದಿಯಾದ ಅದ್ಯಂತವೂ ಇರುವ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಮುಂದರಿಯಬೇಕೆಂದು ತಿಳಿಸಿದರು.

ಶ್ರೀ ಜೋಶಿಯವರು ಕೆಲವು ಟ್ರೇಡ್ಸ್ ಯೂನಿಯನ್ನುಗಳ ಬಗ್ಗೆ ಸರಕಾರದವರು ತೋರಿಸುತ್ತಿರುವ ಅನಾದರಣೆಗಳನ್ನು ಖಂಡಿಸಿದರು.

ಕರ್ಣಾಟಕ ಸಾಹಿತ್ಯ ಸಮ್ಮೇಳನ, ಮುಂಬಾಯಿ ಕನ್ನಡಿಗರ ಏರ್ಪಾಡು.

ಮುಂಬಾಯಿಯಲ್ಲಿ ೨೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ನಡೆಸಬೇಕೆಂದು ತೀರ್ಮಾನಿಸುವುದಕ್ಕಾಗಿ ಈ ತಿಂಗಳ ೧೭ನೇ ದಿನ ಹಲವು ಪ್ರಮುಖ ಕನ್ನಡಿಗರು ಕಲೆತು ಚರ್ಚಿಸಿದರು. ದಿವಾನ್ ಬಹದ್ದೂರ್ ಎಸ್. ಟಿ. ಕಂಬಳಿಯವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ 'ನಾವು ಈ ಸಾರಿ ಸಾಹಿತ್ಯ ಸಮ್ಮೇಳನವನ್ನು ಮುಂಬಾಯಿಯಲ್ಲಿ ಜರಗಿಸಬೇಕು. ಇದೊಂದು ಮಹಾಕಾರ್ಯ. ಈ ಯೋಚನೆಗೆ ಈಗಾಗಲೇ ಅನೇಕ ತೊಡಕುಗಳುಂಟಾಗಿವೆ. ಆದರೆ ಅವುಗಳೆಲ್ಲವನ್ನೂ ನಾವು ದೂರಗೊತ್ತಿ ಈ ಸತ್ಕಾರ್ಯದ ಸಾಧನೆಯನ್ನು ಅಳಿಯದ ಶ್ರದ್ಧೆಯಿಂದ ಮಾಡಬೇಕು' ಎಂದರು. ಶ್ರೀಮಾನ್ ಆರ್ ವಿ. ಜಹಗೀರದಾರ್ ರವರು ಸಾಹಿತ್ಯ ಸಮ್ಮೇಳನದ ಪೂರ್ವೇತಿಹಾಸವನ್ನು ತಿಳಿಸಿ, ಸಮ್ಮೇಳನವು ಮುಂಬಾಯಿಯಲ್ಲೇ ನಡೆಯಬೇಕೆಂದು ಒತ್ತಾಯಪಡಿಸಿದರು.

ಅನಂತರ ಸಮ್ಮೇಳನವು ಮುಂಬಾಯಿಯಲ್ಲೇ ನಡೆಯಬೇಕೆಂಬ ಠರಾವು ಅಂಗೀಕೃತವಾಯಿತು. ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಅದಕ್ಕೆ ದಿವಾನ್ ಬಹದ್ದೂರ್ ಕಂಬಳಿಯವರನ್ನು ಅಧ್ಯಕ್ಷರು. ರಾವ್ ಬಹದ್ದೂರ್ ಕೆ ರಾಮಸ್ವಾಮಿ ಮುಂತಾದ ೩೦ ಮಂದಿ ಕರ್ನಾಟಕ ಭಾಷಾ ಪ್ರೇಮಿಗಳು ಸದಸ್ಯರು.

ರಾವ್ ಬಹದ್ದೂರ್ ಎಂ. ಕೆ ರಾಮಸ್ವಾಮಿಯವರು ಅರ್ಥಗರ್ಭಿತವಾದ ಭಾಷಣವನ್ನು ಮಾಡಿದರು. ಅವರ ಭಾಷಣದ ಸಾರಾಂಶವೇನೆಂದರೆ ಕನ್ನಡಿಗರು ಮುಂಬಾಯಿಯಲ್ಲಿ ಸರ್ವಸಾಮಾನ್ಯರಾಗಿರುವರು. ಅವರನ್ನು ಕೆಲವು ವರ್ಷಗಳಲ್ಲಿ ಹುಡುಕಬೇಕಾಗಿಲ್ಲ. ಕನ್ನಡಿಗರೆಲ್ಲರೂ ಕರ್ನಾಟಕ ಮಾತೆಯೇ ಮಹಾಕಾಯಿ. ನಮ್ಮಲ್ಲಿ ಜಾತಿ ಮತ, ಕೋಮುವಾರು ಭೇದಗಳು ಸರ್ವಥಾ ಬೇಡ. ನಾವು ಅಲ್ಲಿನವರನ್ನು ಕರೆದು ಸನ್ಮಾನಿಸ ಬೇಕು. ನಮ್ಮ ಸುಯೋಗ ಮತ್ತು ಕರ್ತವ್ಯ ಇವನ್ನು ಕೇಳದರು ಮೊದಲಿನ ನಂತರ ಅಧ್ಯಕ್ಷರು "ನಾವು ಇಲ್ಲಿ ಸಾಹಿತ್ಯ ಪರಿಷತ್ತನ್ನು ಕರೆಯುವುದು ಕರ್ನಾಟಕ ಭಾಷೆಯಲ್ಲಿ ನಮ್ಮ ಮಾತೃಭಾಷೆಯಲ್ಲಿ ನಮಗಿರುವ ಒಲುಮೆಯನ್ನು ತೋರಿಸುವುದಕ್ಕಾಗಿ. ನಾವು ಹೀಗೆ ಮಾಡುವುದರಿಂದ ಮರಾಠಿ ಭಾಷೆಯನ್ನು ಕೀಳುಮಾಡುವೆನೆಂಬ ಭಾವ ಬೇಡ. ಎಲ್ಲರೂ ಸಹಕರಿಸಿ ಉದ್ಯೋಗಸ್ಥರಿಂದ ನಮ್ಮ ಕೈಲಾದ ಈ ಉದ್ಯಮಕ್ಕೆ ಬೆಂಬಲವನ್ನೀಯಬೇಕು" ಎಂದು ಹೇಳಿದರು. ವಂದನಾ ಸಮರ್ಪಣೆಯಾದ ನಂತರ ಸಭೆ ಮುಕ್ತಾಯವಾಯಿತು.

ರೈತ ಪರಿಷತ್ತನ್ನು ಸರಕಾರವು ನಿಷೇಧಿಸಿತು

ನೆಲಮಂಗಲ ತಾಲೂಕಿನ ತೊರೆಯ ಕೊಪ್ಪನಹಳ್ಳಿ ಗ್ರಾಮದಲ್ಲಿ ೨೭ನೇ ದಿನ ಜರಗಲಿದ್ದ ರೈತರ ಪರಿಷತ್ತನ್ನು ಸರಕಾರವು ನಿಷೇಧಿಸಿತು. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾದ ಶ್ರೀ ವಿ. ವೆಂಕಟಪ್ಪ ಎಂ ಎಲ್ ಸಿ ಇವರಿಗೆ ನೋಟೀಸು ಹೋಗಿದೆ. ಶ್ರೀ ಹೊಸಕೋಟೆ ಕೃಷ್ಣರಾಯರು ಚಿಕ್ಕಮಗಳೂರಿನಿಂದ ತಂತಿ ಕೊಟ್ಟು ಸರಕಾರಕ್ಕೆ ಸಂತಾಪ ಸೂಚಿಸಿ ಜನರು ತಮ್ಮ ಸಂಕಷ್ಟಗಳನ್ನು ಹೇಳಿಕೊಳ್ಳುವುದು ನ್ಯಾಯ ವೆಂದರು.

ಭೂಕಂಪ

ಸಿಲ್ಚರಿನಿಂದ ಬಂದ ವಾರ್ತೆಯಿಂದ ಅಲ್ಲಿ ಸಾಧಾರಣ ತೀವ್ರತೆಯಿಂದ ಭೂಕಂಪವುಂಟಾಯಿತೆಂದು ತಿಳಿದುಬರುತ್ತದೆ. ನಷ್ಟವು ಸಂಭವಿಸಿರುವುದಿಲ್ಲ.

ಶಾಲಾ ಪಠ್ಯಪುಸ್ತಕಗಳು

ಸರಕಾರದ ಸೂಚನೆ

ಮದ್ರಾಸು ಸರಕಾರವು ಶಾಲಾ ಪಠ್ಯಪುಸ್ತಕಗಳ ಕುರಿತು ಹೀಗೆ ಪ್ರಕಟಿಸಿರುತ್ತದೆ.

ಶಾಲಾ ಪಠ್ಯ ಪುಸ್ತಕಗಳಲ್ಲಿ ಪದೇಪದೇ ಆಗುತ್ತಿರುವ ಬದಲಾವಣೆಗಳ ಕುರಿತು ಅನೇಕ ಸಲ ಸರಕಾರಕ್ಕೆ ಮನವಿಗಳು ಬಂದಿವೆ. ಈಗ ತಿಳಿಸುವುದೇನೆಂದರೆ ಪಠ್ಯ ಪುಸ್ತಕಗಳನ್ನು ಶಾಲೆಯು ಒಮ್ಮೆ ಅಂಗೀಕರಿಸಿದ ಮೇಲೆ ಐದು ವರ್ಷಗಳಿಗೆ ಅವುಗಳನ್ನು ಬದಲಿಸಿ ಇತರ ಪುಸ್ತಕಗಳನ್ನು ನಿರ್ಣಯಿಸಬಾರದು.

ಹನ್ನೆರಡು ಮಿಲ್ಲಿಯ ಜನರು ಕ್ಷಾಮಪೀಡಿತರಾಗಿರುವರು!

ಅಮೇರಿಕಾ

ಫಿಲಿಪ್ಪೈನರಿಗೆ ಸ್ವಾತಂತ್ರ್ಯ

ಮಿ। ರೂಜ್‌ವೆಲ್ಟರು ಒಪ್ಪಿದರು

ರಾಜ್ಯಾಂಗರಚನೆಗೆ ಸಮ್ಮತ ಸಿಕ್ಕಿತು.

ಕಳೆದ ನವಂಬರ ತಾ ೧೫ರಲ್ಲಿ ಫಿಲಿಪ್ಪೈನ್ ದ್ವೀಪವಾಸಿಗಳಿಗೆ ನೂತನ ರಾಜ್ಯಭಾರಕ್ರಮವನ್ನು ಕೊಡುವುದೆಂದು ಸಂಕಲ್ಪಿಸಿ ಆ ಸಂಬಂಧವಾದ ವರದಿಯು ಬರೆಯಲ್ಪಟ್ಟಿತು ಈ ವರದಿಯು ಅಮೇರಿಕಾದ ಅಧ್ಯಕ್ಷರಾದ ರೂಜ್‌ವೆಲ್ಟರಿಂದ ಅನುಮೋದಿಸಲ್ಪಟ್ಟಿದೆ. ಫಿಲಿಪ್ಪೈನ್ ಚಳವಳಗಾರರ ಮುಖಂಡರೂ ಅಲ್ಲಿಯ ಗವರ್ನರರಾದ ಮಿ। ಫ್ರಾಂಕ್ ಮರ್ಫಿಯವರೂ ಅಲ್ಲದೆ ಫಿಲಿಪ್ಪೈನರ ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾಗಲಿರುವ ಮಿ। ಮಾನುವೇಲ್ ಕ್ವೇಜನರೂ ಈ ರಾಜ್ಯದಾನವನ್ನು ಮನ್ನಿಸಿರುವರು

ಜರ್ಮನಿ

ಜರ್ಮನಿ ಮತ್ತು ರುಮೇನಿಯಾ ಗಳೊಳಗೆ ಸ್ನೇಹ

ವಾಣಿಜ್ಯವ್ಯವಹಾರದಲ್ಲಿ ಮೈತ್ರಿ.

ಬುಕಾರೆಸ್ಟ್ ಮಾರ್ಚ ೨೩

ಜರ್ಮನಿ ಹಾಗೂ ರುಮೇನಿಯಾಗಳ್ಳ ಇದ್ದ ಮನಸ್ತಾಪವು ತೊಲಗಿಹೋಗಿ ಮೈತ್ರಿಯು ಬೆಳೆಯುವ ಚಿಹ್ನೆಯು ತೋರುತ್ತಲಿದೆ. ಫ್ರಾನ್ಸಿನ ಮೇಲೆಯೇ ರುಮೇನಿಯಾವು ಹೊಂದಿಕೊಂಡಿರುವುದನ್ನು ಹೋಗಲಾಡಿಸಿ ವ್ಯಾಪಾರ ವಾಣಿಜ್ಯಗಳಲ್ಲಿ ಅದು ಜರ್ಮನಿಯೊಡನೆಯೂ ಸೇರಿಕೊಳ್ಳಬೇಕೆಂದು ಮುಖಂಡರ ನಿರ್ಧಾರವಾಗಿದೆ ಈ ಮೈತ್ರಿಯು ಯೂರೋಪಿನ ಶಾಂತಿಗೆ ಸಾಧಕವಾಗುವುದು

ಇಟಲಿ

ಇಟಲಿಯು ಯುದ್ಧಕ್ಕೆ ಸಿದ್ಧವಿದೆ

ಸೀನಿಯರ್ ಮುಸ್ಸೋಲಿನಿಯವರ ಹೇಳಿಕೆ

ಒಂದು ಮಿಲಿಯ ಜನರು ಸಶಸ್ತ್ರರಾಗಿರುವರು

ರೋಮ ಮಾರ್ಚ ೨೩

ಜರ್ಮನಿಯು ತನ್ನ ಸೈನ್ಯವನ್ನು ಹೆಚ್ಚಿಸುವ ನಿರ್ಧಾರವನ್ನು ಮಾಡಿರುವುದನ್ನು ನೋಡಿ ಇಟಲಿಯು ಎಚ್ಚತ್ತಿದೆ. ೪ ೦೦ ೦೦೦ ಎಂಟಿಸಿಯವರ ಜೊತೆಗೆ ಅಲ್ಲದ್ದರೂ ಕಳೆದ ವಾರ ಪುನಃ ೬ ೫೦ ೦೦೦ ಮಿಲಿಟರಿಯವರನ್ನು ಕರೆಯಲಾಗಿದೆ ೧೯೧೧ರ ಸಿರ್ಗಿಯವರನ್ನೂ ತಾವಿಲ್ಲಿಗೆ ತನಗೆ ಇಷ್ಟು ಸೈನ್ಯವನ್ನಿಟ್ಟುಕೊಳ್ಳುವ ಅಧಿಕಾರವಿದೆಯೆಂದು ಮುಸ್ಸೋಲಿನಿಯವರೆಂದಿರುವರು ಒಂದು ಮಿಲಿಯ ಸೈನಿಕರು ಸದಾ ಸಿದ್ಧರೇ ಇರುವರೆಂದ ಅವರು ಹೇಳುತ್ತಿರುವರು "ಮಿಲ್ಲಿಯ ಶಸ್ತ್ರಧಾರಿಗಳ ಸಹಾಯದ ಮೇಲೆ ಯೂರೋಪಿನವರೊಡನೆ ನಮಗಿರುವ ಶಾಂತಿಪ್ರಿಯತೆಯು ಹೊಂದಿಕೊಂಡಿದೆ" ಎಂದ ಮುಸ್ಸೋಲಿನಿಯವರು ಇಟಲಿಯ ಶಾಸನ ಸಭೆಯಲ್ಲಿ ಹೇಳಿದರು. "ನಾವು ಎಂತಹ ಪ್ರಸಂಗಕ್ಕೂ ಸಿದ್ಧರಿದ್ದೇವೆ ನಮ್ಮ ಅದೃಷ್ಟದ ದಾರಿಗಳಿಗೆ ಎದುರಾಗಿ ನಿಂತಿರುವ ಎಲ್ಲಾ ವಿಘ್ನಗಳನ್ನು ಕಡೆಹಾಯಿಸಿ ನಾವು ಮಾ ಬರಿಯುವೆವು ಫೆಸಿಸ್ಟ್ ಇಟಲಿಯ ಧೈರ್ಯ ಸಾಹಸಗಳೆಷ್ಟೆಂದು ನಾವು ಬೇಗನೇ ತೋರಿಸುವೆವು" ಎಂದರು

Irish Free State

Hospital's Sweepstake

DERBY

Drawing Date—3—6—1935.
Last date for Air Mail
13—5—1935.

Price 10 Shillings or Rs. 6-12-0 each or £2-10-0 or Rs. 33-12-0 for 6 tickets.

Tel.—8 DHAKAPPA, Sirsi, N. K.

S. L. DHAKAPPA
Authorized Agent,
Sirsi, N. KANARA.

ಇಟಲಿ ಎಬಿಸಿನಿಯಾಗಳೊಳಗೆ ಪುನಹ ಕಲಹ

ಇಟಲಿಯು ನಷ್ಟವನ್ನು ಕೇಳಿರುತ್ತದೆ.

ರೋಮ್, ಮಾರ್ಚ ೨೫

ಎರಿಟ್ರಿಯಾ ಎಂಬಲ್ಲಿನ ಟಿಮರ್ಗರ್ ಎಂಬಲ್ಲಿ ಇಟಲಿ—ಎಬಿಸಿನಿಯಾಗಳ ಸೈನಿಕರು ಹೊಡೆದುಕೊಂಡಿರುವರು. ಇಟಲಿಯು ಸೈನಿಕರನೇಕರನ್ನು ಎಬಿಸಿನಿಯಾದ ಕಾಲಾಳುಗಳು ಕೊಂದರು ಇಟಲಿಯು ಮಹಾಪಾತಕಿಯಿಂದ ಹಿಂದೆಗಲಬೇಕೆಂದು ಎಬಿಸಿನಿಯಾದವರಿಗೆ ಆಜ್ಞೆಯಾಯಿತು ಎಬಿಸಿನಿಯಾದವರು ಆ ಆಜ್ಞೆಯನ್ನು ಧಿಕ್ಕರಿಸಿದರು ಇಟಲಿಯು ಎಬಿಸಿನಿಯಾಕ್ಕೆ ಪತ್ರ ಬರೆದು ನಷ್ಟಪರಿಹಾರ ಕೊಡಬೇಕೆಂದಿದೆ

ಆರ್ಚ ಬಿಷಪ್ ಒಫ್ ವೆಸ್ಟಮಿನಿಸ್ಟರ್

ರೋಮ ಮಾರ್ಚ ೨೫

ರೈಟ ರೆವೆರೆಂಡ ಆರ್ಥರ್ ಹಿನ್ಸ್ಲಿ ಡಿ ಡಿ (ಸ ದೀಗಿನ ಬರ್ಮಿಂಗಂ ಆರ್ಚ ಬಿಷಪ್ ಮತ್ತು ಆಫ್ರಿಕದ ಎಪೊಸ್ಟೋಲಿಕ ಡೆಲಿಗೇಟ್) ಇವರನ್ನು ವೆಸ್ಟ್ ಮಿನಿಸ್ಟರ್‌ದ ಆರ್ಚ ಬಿಷಪರನ್ನಾಗಿ ನೇಮಕ ಮಾಡಲಾಗಿದೆ ಸಾರ್ವಭೌಮರಿಗೆ ಶುಭಸಂದೇಶವನ್ನು ಕಳುಹಿಸುವ ಹಕ್ಕನ್ನು ಪೋಪ್ ಸಾಹೇಬರು ಇವರಿಗೆ ಕೊಡುವರ ೧೮೯೭ರಲ್ಲಿ ಆಗಿನ ಪೋಪ್ ಸಾಹೇಬರ ಕ್ವೀನ್ ವಿಕ್ಟೋರಿಯಾರವರ ಜುಬಿಲಿಗೆ ಸಂದೇಶವನ್ನು ಕಳುಹಿಸಿದ್ದರು.

ಪ್ಲೇಗ್.

ಮಧ್ಯ ಯೂರೋಪಿನಲ್ಲಾಗುವುದೇನು?

(ಒರೆದುಬಂದುದರಿಂದ

ಮಧ್ಯಯೂರೋಪಿನ ದೃಷ್ಟಿಯೆಲ್ಲ ಇಟಲಿ ಮತ್ತು ಎಬಿಸಿನಿಯಾಗಳ ಕಲಹದತ್ತಕಡೆ ಸರಿದಿದೆ ಇದರೊಡನೆ ಜರ್ಮನಿಗೆ ಒಪ್ಪಿಯಾದ ಮೇಲಿರುವ ಆಶೆಯನ್ನು ಸಂದೇಹದೃಷ್ಟಿಯಿಂದಲೇ ಕಾಣಲಾಗುತ್ತಿದೆ ಇಟಲಿ ಸೈನಿಕ ವರ್ತನೆಯನ್ನು ಜರ್ಮನಿಯು ಕಣ್ಣಿಟ್ಟು ನೋಡುತ್ತಿದೆ ಎಬಿಸಿನಿಯಾದಲ್ಲಿ ಇಟಲಿ ಸೈನಿಕರ ವರ್ತನೆಯು ಮಧ್ಯ ಯೂರೋಪಿನ ವಿಮರ್ಶೆಯಲ್ಲಿದೆ ರೋಮ ದೇಶಕ್ಕೆ ಹೋಗಿರುವ ಆಸ್ಟ್ರಿಯದ ತಜ್ಞರಾಗಿರುವ ಪ್ರೊಫೆಸರ್ ದಾಸಗುಪ್ತರನ್ನು ಸ್ಪೆಷಲ್ ಪಿಸ್ತ ವಿದ್ಯಾರ್ಥಿಗಳು ಕರೆದು ಭಾಷಣಮಾಡಲಿರುವರೆಂದು ತಿಳಿಯಬರುತ್ತಿದೆ ಇಂತಹ ಶಿಕ್ಷಣ ಉಪದೇಶಗಳಿಂದ ಹಿಂದೂದೇಶ ಮತ್ತು ಯೂರೋಪಿನ ಮೈತ್ರಿವರ್ಧನೆಯಾಗುವುದೆಂದು ನಿರೀಕ್ಷಿಸಲಾಗಿದೆ ಇಂತಹ ಉಪದೇಶಗಳನ್ನು ಪಿನಸ್ ಫ್ರಾನ್ಸ್ ಗಳಲ್ಲಿ ನಡಿಸಬೇಕೆಂದಾಗಿದೆ.

ಚೈನಾ

೧೨ ಮಿಲಿಯ ಜನರು ಕ್ಷಾಮಪೀಡಿತರಾಗಿರುವರು!

ಶೇಂಘೈ ಮಾರ್ಚ ೨೩

ಚೈನಾದ ಎಂಗ್ಸಿ ಎಂಬ ಪ್ರಾಂತ್ಯದಲ್ಲಿ ಕಳೆದ ಒಂದೂವರೆ ವರ್ಷದಿಂದ ಮಳೆ ಬಾರದೆ ೧೨ ಮಿಲಿಯ ಜನರು ಕ್ಷಾಮಪೀಡಿತರಾಗಿರುವರು ಈ ವಾರ್ತೆಯನ್ನು ವಿದೇಶೀಯ ಸಂಶೋಧಕರಾದವರೊಬ್ಬರು ಪ್ರಕಟಿಸಿರುವರು ನೇಂಕಿಂಗ್ ನಗರದಲ್ಲಿ ೩೦ ೦೦೦ ಜನರು ಭಿಕ್ಷಾನ್ನವನ್ನುಂಡು ದಿನಹರಣ ಮಾಡುತ್ತಿರುವರು ಜನರು ವಿದೇಶಗಳಿಗೆ ಕುಟುಂಬ ಸಮೇತ ಸಾಗುತ್ತಿರುವರು.

ಐಯರ್ಲೆಂಡ್

ಡಬ್ಲಿನ್‌ನಲ್ಲಿ ಅನೇಕ ದಸ್ತಗಿರಿಗಳು.

ರಿಪಬ್ಲಿಕನ್ ಪಕ್ಷೀಯರ ಸೆರೆ!

ಡಬ್ಲಿನ್ ನಗರದಲ್ಲಿ ಐರಿಶ್ ರಿಪಬ್ಲಿಕನ್ ಸೈನಿಕರವರಳ ಅವರ—ಟ್ರೇಮ್, ಕೋಟಾರು ಮೊದಲಾದವುಗಳನ್ನೂ ಸ್ಥಳಿಸಿ ಪೋಲೀಸರನ್ನು ಕಂಗೆಡಿಸಿದರು. ಒಬ್ಬರು ಪೋಲೀಸರು ಅವರ "ಗುಂಡಿನ ದಾಳಿಗೆ" ಬಿದ್ದರು. ಒಡನೆ ಅಲ್ಲಿಯ ಪೋಲೀಸರು ದಸ್ತಗಿರಿಗಾರಂಭಿಸಿದರು. ಅನೇಕ ಮುಂದಾಳುಗಳ ಮನೆಮಂದಿರಗಳಲ್ಲಿ ತಪಾಸಣೆಯೂ ನಡೆಯಿತು. ಕ್ರಾಸ್‌ವೆಲ್ ಸ್ಟ್ರೀಟಿನಲ್ಲಿ [illegible] ಬಂಧಿಸಲಾಗಿದೆ, ಐರಿಶ್ ಸರಕಾರವು ಚಳವಳಗಾರರನ್ನು [illegible]

ಫ್ರಾನ್ಸು ಯುದ್ಧನಾವೆಗಳನ್ನು ರಚಿಸುತ್ತದೆ—ಚೇಂಬರಿನ ಅನುಮೋದನೆ

ಎರಡು ನಾವೆಗಳ ಶೀಘ್ರ ರಚನೆ.

ಪೆರಿಸ್ ಮಾರ್ಚ, ೨೫

ಫ್ರಾನ್ಸಿನ ಚೇಂಬರಿನಲ್ಲಿ ಯುದ್ಧನಾವೆಗಳ ರಚನೆಯ ಕುರಿತಾದ ಚರ್ಚೆಯು ನಡೆಯಿತು ೩೫,೦೦೦ ಟನ್ ಭಾರವುಳ್ಳ ಯುದ್ಧನಾವೆಗಳನ್ನು ರಚಿಸಬೇಕೆಂಬ ಸೂಚನೆಗೆ ೮೫೩ ಅನುಕೂಲ ೧೨೫ ಪ್ರತಿಕೂಲ ಓಟುಗಳು ದೊರಕಿದವು ಫ್ರಾನ್ಸಿಗೆ ಈಗ ಇರುವ ೬೬ ೦೦೦ ಟನ್ ಭಾರದ ಯುದ್ಧನಾವೆಗಳಲ್ಲದೆ ಈ ನಾವೆಗಳನ್ನು ರಚಿಸಿಕೊಳ್ಳಬೇಕಾಗಿ ನಿಶ್ಚಯಿಸಲಾಯಿತು

೧೪ ೫೦೦ ೦೦೦ ಪೌಂಡ ಗಳ ವೆಚ್ಚಮಾಡಿ ಮೊದಲನೆಯ ಯುದ್ಧನಾವೆಯ ಕೆಲಸವು ಪ್ರಾರಂಭವಾಗುವುದು. ಆಕಾಶಮಾರ್ಗವಾಗಿ ಬಂದು ಫ್ರಾನ್ಸಿನ ಮೇಲೆ ಬೀಳುವ ಶತ್ರುಗಳಿಂದ ರಕ್ಷಣಾಯೋಜನೆಗಳನ್ನು ಮಾಡಬೇಕೆಂದೂ ನಿರ್ಧರಿಸಲಾಗಿದೆ

ಆಫ್ರಿಕ.

ದಕ್ಷಿಣಾಫ್ರಿಕದ ಹಿಂದೀಯರು ಮಂತ್ರಿಯವರೊಡನೆ ಅರಿಕೆ.

ಜೋಹಾನ್ಸ್‌ಬರ್ಗ್ ಮಾರ್ಚ ೨೩

ದಕ್ಷಿಣಾಫ್ರಿಕದ ಕೇಪ್ ಟೌನ್ ಕಾಂಗ್ರೆಸಿನ ಪ್ರತಿನಿಧಿಗಳ ಒಂದು ಮಂಡಲವು ಮಿನಿಸ್ಟರ್ ಒಫ್ ದಿ ಇಂಟೀರಿಯರ ಇವರ ಬಳಿಗೆ ಹೋದರು. ಮನವಿಯನ್ನು ಕೊಂಡೊಯ್ದು ಆಫ್ರಿಕದ ಎಲ್ಲ ಭಾಗಗಳಿಗೂ ಹಿಂದೀಯರು ಹೋಗಬಾರದೆಂದು ಇರುವ ನಿರ್ಬಂಧವನ್ನು ತೆಗೆದುಹಾಕಬೇಕೆಂದೂ ಈ ನಿರ್ಬಂಧದಿಂದಾಗಿ ಹಿಂದೀಯ ಜನತೆಯು ಒಂದೇ ಸ್ಥಳದಲ್ಲಿ ನೆಲಸಬೇಕಾಗಿದೆಯೆಂದೂ ಹೇಳಿದರು ವಾಣಿಜ್ಯ ಸಂಬಂಧವಾದ ಲೈಸನುಗಳನ್ನು ತಮಗೆ ಕೊಡಬೇಕೆಂದೂ ಅವರು ಕೇಳಿದರು ಇದನ್ನು ಆಲೋಚಿಸುತ್ತೇನೆಂದು ಅಧಿಕಾರಿಯ ಆಶ್ವಾಸನೆ

Latest News.

ಬರ್ಲಿನ್‌ನಲ್ಲಿ ನಡೆದುದೇನು?

ಸೈಮನ್-ಹಿಟ್ಲರರ ಮಾತುಕತೆ

ಬರ್ಲಿನ ಮಾರ್ಚ ತಾ ೨೬

ಬರ್ಲಿನ್‌ನಲ್ಲಿ ಹಿಟ್ಲರರೂ ಸರ್ ಜೋನ್ ಸೈಮನರೂ ಸಂಭಾಷಣ ಮಾಡಿ ಎರಡು ದಿವಸ ಕಳೆದವು ಬಂದಿಲ್ಲ ಸ್ನೇಹಪರವಾದ ಮಾತುಕತೆಗಳ ಮಾತ್ರ ನಡೆದುವು ಹಿಟ್ಲರರು ಜರ್ಮನಿಯ ಪರವಾಗಿ ವಾದಿಸಿ ಜರ್ಮನಿಯು ಶಸ್ತ್ರಗಳನ್ನು ಇಟ್ಟುಕೊಳ್ಳುವ ಹಕ್ಕನ್ನು ಬ್ರಿಟಿಷ ಪ್ರತಿನಿಧಿಗಳೆದುರು ಇಟ್ಟು ರಷ್ಯದ ಹಿಂಬದಿಯ ಮುಂದರಿಯುತ್ತಿರುವಾಗ ಜರ್ಮನಿಯು ಸುಮ್ಮಗಿರುವುದು ಒಳಿತಲ್ಲವೆಂದರು.

ರಷ್ಯದ ಸೈನ್ಯಗಳು ಕಾಲಾಳುಗಳ ಪಶ್ಚಿಮ ಪ್ರಾಂತ್ಯದಿಂದ ತೆಗೆದು ಅವನ್ನು ಪೂರ್ವ ಪ್ರಾಂತ್ಯದಲ್ಲಿ ಇಡಬೇಕೆಂದೂ, ಫ್ರಾನ್ಸ ಸೈನ್ಯವನ್ನು ಕಡಿಮೆಮಾಡುವಂತೆ ಯೂರೋಪಿನ ರಾಷ್ಟ್ರಗಳೆಲ್ಲವೂ ಪ್ರಯತ್ನಿಸಬೇಕೆಂದೂ ಹಿಟ್ಲರರ ಸೂಚನೆಯಿದೆ.

ಈ ಸಂಭಾಷಣೆಯು ಪ್ರತಿನಿಧಿಗಳ ಹೃದಯ ಪೂರ್ವಕ ಮಾತುಗಳಿಂದಲೇ ನಡೆದು ಕೊನೆಗೊಂಡಿತೆಂದು ತಿಳಿದುಬರುತ್ತದೆ. ಯೂರೋಪಿನ ಶಾಂತಿರಕ್ಷಣೆಗಾಗಿ ಎಷ್ಟು ಮುಂದರಿಯುತ್ತಾರೋ ಅಷ್ಟು ಮುಂದರಿದು ತಾನೂ ಹೋಗುವೆನೆಂದು ಹಿಟ್ಲರರು ಹೇಳಿರುವರು ಪರರಾಷ್ಟ್ರಗಳು ಮೊದಲಾಗಿ ಶಸ್ತ್ರಸನ್ಯಾಸವಾಗಿ ಪ್ರತ್ಯಕ್ಷಗ ಮಾಡಿದರೆ ತಾನೂ ಹಾಗೆಯೇ ಮಾಡುವೆನೆಂದು ಜರ್ಮನಿಯು, ತಿಳಿಸಿದೆ. ಮಾತುಕತೆಯು ಪರಿಣಾಮವೇನೆಂದು ತಿಳಿದುಬಂದಿಲ್ಲವಾದರೂ ಸಂಭಾಷಣೆಯು ಯಶಸ್ವಿಯಾಯಿತೆಂದೇ ಸೈಮನರ ಹೇಳಿಕೆ ಬ್ರಿಟಿಷ ಪ್ರತಿನಿಧಿಗಳು ಸ್ವದೇಶಕ್ಕೆ ಹಿಂದಿರುಗಿದರು.

ಅಶನಾರ್ಥಕ್ಕಾಗಿ ದಾನ.

ಠಾಗೋರರು ಕೊಡಬೇಕೆಂದು ತೀರ್ಮಾನವಾಯಿತು.

ಕಲ್ಕತ್ತಾ, ಪ್ರೆಸಿಡೆನ್ಸಿಗೆ ಡಾ ಠಾಗೋರರ ಸಹೋದರ [illegible]

ಸಾರ್ಥಕ್ಕಾಗಿ ಡಾ ಠಾಗೂರರೇ ಮೊದಲಾದವರ ಮೇಲೆ ಕಂಡ ದಾವೆಯು ತೀರ್ಮಾನ ಹೊಂದಿದೆ ಶ್ರೀಯುತ ಯವರಿಗೆ ಡಾ ಠಾಗೂರರು ರೂ ೩೫೦೦ನ್ನು ಒಂದೂವರ ವರ್ಷದ ಅಶನಾರ್ಥಕ್ಕಾಗಿ ಕೊಡಬೇಕೆಂದು ಕೋರ್ಟು ನಿರ್ಧರಿಸಿದೆ.

ಜಪಾನು ಜನಾಂಗಸಭೆಯನ್ನು ಬಿಟ್ಟಿತು

ಟೋಕಿಯೋದಲ್ಲಿ ವಾರ್ತೆ.

ಜಪಾನು ಜನಾಂಗ ಸಭೆಯನ್ನು ಬಿಡ ಬೇಕೆಂದು ಜಪಾನು ಕೊಟ್ಟ ನೋಟೀಸಿನ ಅವಧಿಯು ತಾ ೨೭ಕ್ಕೆ ಮುಗಿದಿದೆ ಮುಂದಕ್ಕೆ ಜಪಾನು ಲೀಗ್ ಒಫ್ ನೇಶನ್ಸ ಸದಸ್ಯತ್ವದಲ್ಲಿರಲಾರದೆ ಎಂದಿದೆ ಲೀಗಿನ ಸೆಕ್ರೆಟರಿ ಜನರಲ್‌ರಿಂದ ಏನೆನೋ ಬರಲು ಜಪಾನನ್ನು ಕಳೆದ ಕೊಂಡದ್ದಕ್ಕಾಗಿ ವ್ಯಥಿಸಿರುವ .

ನಾಜಿಗಳನ್ನು ಗಲ್ಲಿಗೇರಿಸಿದರು

ಪಿತೂರಿಯ ಪರಿಣಾಮ

ಬರ್ಲಿನ್ ಮಾರ್ಚ ೨೬

ಲಿಥುಯಾನಿಯ ಒಂದಂಶವನ್ನು ಜರ್ಮನಿಗೆ ಸೇರಿಸುವುದಕ್ಕಾಗಿ ಪಿತೂರಿ ನಡೆಸಿ ವಿಚಾರಣೆಗೊಳಗಾದ ೨೬ ಮಂದಿ ನಾಜಿಗಳಲ್ಲಿ ನಾಲ್ವರನ್ನು ಗಲ್ಲಿಗೇರಿಸಲಾದರಂತೆ. ಈ ನಾಜಿಗಳು ಮೇಮೆಲ್ ಎಂಬ ಜಿಲ್ಲೆಯವರು ಈ ಶಿಕ್ಷೆಗಳ ಕುರಿತಾಗಿ ಬರ್ಲಿನ ನಗರದಲ್ಲಿ ಪ್ರತಿಕೂಲಸ್ಥಿತಿಯಿದ್ದಿದೆ ಡಾ ನ್ಯೂಮೆನ್ ನಾಜಿಗಳ ಮುಖಂಡರಿಗೆ ೧೨ ವರುಷಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

ಲಾಹೋರು ವಿದ್ಯಾರ್ಥಿಗಳ ಮುಷ್ಕರ

ವಿಕ್ಟೋರಿಯಾ ಜುಬಿಲಿ ಟೆಕ್ನಿಕಲ್ ಶಾಲೆಯ ಎದುರು ಸರ್ಪಕಾವಲು

[illegible]

ಕೆನಡಾದ ಹೊಸ ಗವರ್ನರ್ ಜನರಲ್.

ಮಿ। ಜೋನ್ ಬಚನ್

[illegible]

ಒಸ್ಟ್ರೇಲಿಯಾ—ಇಂಗ್ಲಾಂಡು ಹಾರಾಟ

ಇಂಗ್ಲಾಂಡಿನಿಂದ ಒಸ್ಟ್ರೇಲಿಯಾಗೆ ವಿಮಾನ ಹಾರಿಸಿದ [illegible] ಎಂಬವರು [illegible] ಅವರು [illegible] ಒಸ್ಟ್ರೇಲಿಯಾ [illegible] ಹಾರಲಿರುವರು.

ಮಂಗಳೂರು

ಮುಂಬಯಿಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ನಿರ್ಣಯಗಳ ಮೇರೆಗೆ ನಮ್ಮ ಜಿಲ್ಲೆಯಲ್ಲಿ ಕೊಂಗ್ರೆಸ್ ಸದಸ್ಯರನ್ನು ಕೂಡಿಸುವ ಕೆಲಸವು ಇನ್ನೂ ಮುಂದರಿಯುತ್ತಿಲ್ಲ. ಈ ಮೊದಲು ನಮ್ಮ ಜಿಲ್ಲೆಯಿಂದ ರಾಷ್ಟ್ರೀಯ ಸಭೆಗೆ ೨೪ ಪ್ರತಿನಿಧಿಗಳನ್ನು ಕಳುಹಿಸುವ ಅಧಿಕಾರ ಇತ್ತು. ಈಗಿನ ನಿಯಮಗಳ ಮೇರೆಗೆ ೫೦೦ ಸದಸ್ಯರಿಗೆ ಒಬ್ಬ ಪ್ರತಿನಿಧಿಯನ್ನು ಮಾತ್ರ ಕಳುಹಿಸಬಹುದು ಹೀಗಿರುತ್ತಾ ನಮ್ಮ ಜಿಲ್ಲೆಯಲ್ಲಿ ಕನಿಷ್ಠ ಪಕ್ಷಕ್ಕೆ ೬೦೦೦ ಸದಸ್ಯರನ್ನಾದರೂ ಕೂಡಿಸುವುದು ಅವಶ್ಯ. ಎಪ್ರಿಲ್ ತಾ. ೬ರಿಂದ ೧೪ರ ವರೆಗೆ ಅದೇ ಜಿಲ್ಲೆಯಲ್ಲಿ ಈ ಕೆಲಸವನ್ನೇ ಮುಂದರಿಸಬೇಕಾಗಿ ನಿಶ್ಚಯಿಸಿರುತ್ತದೆ ರೈತರ ಏಳಿಗೆಗಾಗಿ ಜಿಲ್ಲೆಯಲ್ಲಿ ಹಳ್ಳಿ ಸಂಘಗಳನ್ನು ನಿರ್ಮಿಸಬೇಕಾಗಿ ಕೂಡಾ ಕಮಿಟಿಯವರು ನಿರ್ಣಯಿಸಿರುವರು. ಸ್ವಯಂಸೇವಕ ದಳಗಳನ್ನು ಪುನರುಜ್ಜೀವನಗೊಳಿಸುವುದು ಅಗತ್ಯವೆಂದು ನಿರ್ಣಯವಾಗಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಗೆ ಕೊಂಗ್ರೆಸಿನ ಪರವಾಗಿ ಸದಸ್ಯರನ್ನು ನಿಲ್ಲಿಸಬೇಕಾಗಿ ಕೂಡಾ ನಿರ್ಣಯಿಸಲಾಗಿಯದೆ.

ಈ ಎಲ್ಲಾ ಕಾರ್ಯಗಳನ್ನು ಮುಂದರಿಸುವರೆ ಶ್ರೀಮತಿ ಕಮಲಾ ದೇವಿಯವರೂ ಕಾರ್ಯದರ್ಶಿಗಳಾದ ಶ್ರೀಯುತ ರಂಗರಾವ್ ಕಲಬೇರಿಕರ್ ಮತ್ತು ಹಲಸಿನಾಡ ಸೂರಪ್ಪಯ್ಯನವರೂ ಜಿಲ್ಲೆಯಲ್ಲಿ ಸಂಚರಿಸಲಿರುವರು

ಶ್ರೀ ಕಾಳಿಕಾಂಬ ಪ್ರಸಾದಿಕ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭೆಯ ವಾರ್ಷಿಕೋತ್ಸವಾಧಿವೇಶನವು ಇದೇ ಬರುವ ತಾ. ೧೧-೪-೩೫ನೆಯ ಗುರುವಾರ ಸಂಜೆಗೆ ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಅಧ್ಯಕ್ಷತೆಯಲ್ಲಿ ಜರಗುವುದು

ಕುದ್ರೋಳಿಯ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ "ವಿವಾಹ ಸಮಯದಲ್ಲಿ ಊರವರ ಮಂತಿಗೆಯು ಬೇಕೋ ಬೇಡವೋ" ಎಂಬ ವಾಗ್ವಾದವು ಬರುವ ರವಿವಾರ ಜರಗಲಿದೆ

ಕಳೆದ ಶನಿವಾರ ಸಂಜೆ ಶ್ರೀ ಶಿವಭಕ್ತಿಯೋಗ ಸಂಘ ನಾಟಕ ಮಂಡಳಿಯವರು ವಿಚಿತ್ರ ಸಂಸಾರವೆಂಬ ಸಾಮಾಜಿಕ ನಾಟಕವನ್ನು ಗಣ್ಯನಕ್ಷನ ವಿನೋದಗಳೊಡಗೂಡಿ ಅಭಿನಯಿಸಿದರು

ಕಳೆದ ಶನಿವಾರ ರಾತ್ರಿ ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಕರ್ಣಪರ್ವ ಯಕ್ಷಗಾನವು ಶ್ರೀ ಉಡುಪಿ ಸೀತಾರಾಮಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಸಂಗಾಂತ್ಯದಲ್ಲಿ ಅಧ್ಯಕ್ಷರು ಅರ್ಥಧಾರಿಗಳ ಗುಣದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ಹೇಳಿ ಅವರ ಮನ ನೋಯಿಸಿದಂತಾಯಿತು ಶ್ರೀ ಉಳ್ಳಾಲ ಮಂಗೇಶರಾಯರ ವಂದನೋಕ್ತಿಯಿಂದ ಸಭೆಯು ಮುಕ್ತಾಯವಾಯಿತಾದರೂ ಭಿನ್ನಾಭಿಪ್ರಾಯಗಳು ಹೋಗಿರುವುದಿಲ್ಲ

ಚಕ್ರವರ್ತಿಯವರ ಪಟ್ಟಾಭಿಷೇಕದ ರಜತೋತ್ಸವಕ್ಕೆ ನಮ್ಮ ನಗರ ಸಭೆಯು ರೂ ೧೫೦ನ್ನು ಮಾತ್ರ ಮಂಜೂರು ಮಾಡಿತು ಇದಕ್ಕೂ ಶ್ರೀ ಕಲಬೇರಿಕರರು ತನ್ನ ಸಮ್ಮತವನ್ನು ಸೂಚಿಸದೆ ಆಕ್ಷೇಪವನ್ನು ಮಾಡಿಕೊಂಡರು.

ತಾ ೨೩ಕ್ಕೆ ಅಂತ್ಯವಾಗುವ ವಾರದಲ್ಲಿ ನಮ್ಮ ಮುನಿಸಿಪಾಲಿಟಿಯಲ್ಲಿ ೨೦ ಮರಣ ೪೩ ಜನನಗಳಾಗಿವೆ ೩ ಮಂದಿ ಕ್ಷಯ ರೋಗದಿಂದ ಮೃತರಾದರು

ಹೊಸತಾಗಿ ಸ್ಥಾಪಿಸಲ್ಪಟ್ಟ ಸರಕಾರಿ ರಿಜರ್ವ ಬೇಂಕಿನ ಪಾಲುಗಳಿಗೆ ನಮ್ಮ ಜಿಲ್ಲೆಯಿಂದ ಇಲ್ಲಿಯ ಪೋಸ್ಟು ಆಫೀಸು ಮತ್ತು ಇಂಪೀರಿಯಲ್ ಬೇಂಕಿನಲ್ಲಿ ಸುಮಾರು ೨೦ ಲಕ್ಷ ರೂಪಾಯಿಗಳಷ್ಟು ಮೊತ್ತದ ಅರ್ಜಿಗಳು ಬಂದಿರುವುವೆಂದು ವಾರ್ತೆಯು ಹರಡಿದೆ. ನಿಜವಾದರೆ ನಮ್ಮಲ್ಲೂ ಶ್ರೀಮಂತರಿದ್ದಾರೆಂದಾಯಿತು

ಕಳೆದ ಸೋಮವಾರ ಮೈದಾನದಲ್ಲಿ ಕೊಂಗ್ರೆಸ್ಸಿನ ಪರ ಸಭೆ. ಶ್ರೀ ಕಾ ಸದಾಶಿವರಾಯರು ಶ್ರೀ ಶಿವರಾಜನವರ ಮರಣಕ್ಕಾಗಿ ದುಃಖ ಸೂಚಿಸಿ ನುಡಿದರು. ಕರಾಚಿಯಲ್ಲಿ ಪೋಲೀಸರು ಗುಂಡು ಹೊಡೆದುದನ್ನು ವಿಮರ್ಶಿಸಿದರು. ಸಭೆಯು ಅಷ್ಟು ದೊಡ್ಡದಿರಲಿಲ್ಲ

ಮುನಿಸಿಪಾಲಿಟಿಯಲ್ಲಿ ಒಮ್ಮೆ ಯಾವಾಗಲೂ ಕೆಲಸ ಮಾಡಿದವರಿಗೆನೇ ಕೆಲಸವು ಖಾಲಿ ಬಿದ್ದೊಡನೆ ಕೊಡುವುದು ನ್ಯಾಯವೆಂದು ಶ್ರೀಮತಿ ಶಾಂಭವಿ ಆರ್. ಪೂಂಜರು ಹೇಳಿ ಸ್ತ್ರೀಯರಿಗೆ ಸ್ವಭಾವಸಿದ್ಧವಾದ ಕರುಣೆಯನ್ನು ತೋರಿದರು.

ಪ್ರತಿಯೊಂದು ಹಾಸ್ಯವನ್ನು ನೋಡಿದವರು ಮುನಿಸಿಪಾಲಿಟಿಯಲ್ಲಿ ಎಷ್ಟಿರುವರು ಎಂಬ ಲೆಕ್ಕ ಕೊಡಿ ಎಂದು ಶ್ರೀ ಅಚಪ್ಪರು ನಗರ ಸಭೆಯಲ್ಲಿ ಕೇಳಿರುವರು.

ಕಳೆದ ರವಿವಾರ ಸಂಜೆ ಇಲ್ಲಿಯ ರೈಲ್ವೆ ಇನ್ಸ್‌ಟಿಟ್ಯೂಟಿನಲ್ಲಿ ಫಿಡ್ಲ್ ವಿದ್ವಾನ್ ವಿ. ಕೃಷ್ಣರಾಯರ ಫಿಡ್ಲ್ ವಾದನ ಮತ್ತು ಕೆನರಾ ಹೈಸ್ಕೂಲಿನ ಶ್ರೀ ವಾಸುದೇವ ಪ್ರಭು, ಎಂ. ಎ. ಎಲ್. ಟಿ. ಯವರ ಕೊಳಲು ವಾದನವು ಇತ್ತು ಎರಡೂ ಮನೋರಂಜಕವೇ

ಇಲ್ಲಿಯ ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ ಶ್ರೀಮತಿ ಕಿಲ್ಪಾಡಿ ಸುಂದರಿ ಬಾಯಿಯವರು ರೂ. ೧೧,೦೦೦ವನ್ನು ದಾನಮಾಡಿರುವರೆಂದು ವಾರ್ತೆಯಿದೆ. ನಿಜವಾದರೆ ಅವರ ದಾನವು ಶ್ಲಾಘ್ಯವೇ ಸರಿ.

ನಮ್ಮ ಜಿಲ್ಲೆಯವರಾಗಿದ್ದು ವಿಶಾಖಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಅಸಿಸ್ಟೆಂಟ ಸರ್ಜನರಾಗಿದ್ದ ಕೆಪ್ಟನ್ ಎಂ. ನರಸಿಂಗ ರಾಯರು ತನ್ನ ೪೮ನೇ ವಯಸ್ಸಿನಲ್ಲಿ ಕಳೆದ ವಾರ ಹೃದ್ರೋಗದಿಂದ ಮೃತರಾಗಿರುವರೆಂದು ತಿಳಿಸಲು ದುಃಖಿಸುತ್ತೇವೆ

ಇಲ್ಲಿಯ ವೆಟ್‌ಸ್ಟರ್ನ್ ಮಾರ್ಕೆಟಿನ ಸುಪರಿಂಟೆಂಡೆಂಟರಾಗಿದ್ದ ಮಿ। ಅಮೀರುದ್ದೀನ್ ಸಾಹೇಬರು ಕಾಯಿಲೆಯಲ್ಲಿದ್ದು ಕಳೆದ ತಾ ೨೦ರಲ್ಲು ಮೃತರಾಗಿರುವರು.

ಶ್ರೀ ಕೆ ಭವಾನಿಶಂಕರ ರಾಯರೆಂಬವರು ಇಂಡಿಯಾ ಸರಕಾರದ ಸೇನಾಖಾತೆಯ ಡಿಪ್ಯುಟಿ ಫಿನೇನ್ಸಿಯಲ್ ಎಡ್ವೈಸರ್ ಆಗಿ ಬದಲಿ ಕೆಲಸ ನೋಡುವುದಕ್ಕಾಗಿ ನೇಮಕಹೊಂದಿರುವರು ಇವರು ದಕ್ಷಿಣ ಕನ್ನಡಿಗರು ಕಾಯಂ ಆಗಿ ಘನ ಉದ್ಯೋಗದಲ್ಲಿ ಸತ್ಕೀರ್ತಿಯನ್ನು ಪಡೆಂದಲೆಂದು ಹಾರೈಸುವೆವು

ಇಲ್ಲಿಯ ಡಿಪ್ಯುಟಿ ಕಲೆಕ್ಟರರಾಗಿ ಮಿ। ಅನ್ನಯ್ಯ ರೆಡ್ಡಿಯವರಿದ್ದರು ಇವರ ಬದಲಿಗೆ ನೀಲಗಿರಿಯ ಟ್ರೆಜರಿ ಆಫೀಸರರಾದ ಮಿ। ಪಿ ಲೋಬೋರವರು ವರ್ಗಾಯಿಸಲ್ಪಟ್ಟಿರುವರು

ಇದೇ ಬುಧವಾರ ಬೆಳಗ್ಗೆ ಶಂಕರ್ ವಿಠಲ ಮೋಟರ ಕಂಪೆನಿಯ ಬಸ್ ಒಂದು ಕಾರ್ಕಳ ಮಾರ್ಗವಾಗಿ ಬರುವಾಗ ಕೂಳೂರು ಹೊಳೆಯ ಬಳಿ ಪಣಂಬೂರಿನಲ್ಲಿ ಒಂದು ಸಂಕದ ದಂಡೆಗೆ ಢಿಕ್ಕಿ ಬಡೆದು ಕೆಳಗೆ ಗದ್ದೆಗೆ ಮಗುಚಿ ಬಿದ್ದು ಒಳಗಿದ್ದ ೧೩ ಮಂದಿ ಗಾಯ ಹೊಂದಿರುವರು

ಬರುವ ಮೇ ತಿಂಗಳಲ್ಲಿ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತನ್ನು ಮಂಗಳೂರಲ್ಲಿ ಬಾಬುರಾಜೇಂದ್ರಪ್ರಸಾದರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದು ನಿರ್ಧಾರವಾಗಿದೆ ಆ ಬಗ್ಗೆ ಪ್ರಾಂತದ ತರುಣ ತರುಣಿಯರು ಸ್ವಯಂ ಸೇವಕರಾಗಿ ಕೆಲಸಮಾಡಲು ಅಧಿಕ ಸಂಖ್ಯೆಯಿಂದ ಮುಂದರಿಯಲೆಂದು ಸ್ವಾಗತ ಕಮಿಟಿಯವರು ಕೇಳಿಕೊಂಡಿರುವರು ಅವರ ಕೇಳಿಕೆಯು ನಮ್ಮವರಿಗೆ ಕೇಳುವುದೆಂದು ನಿರೀಕ್ಷಿಸಬಹುದಲ್ಲವೇ?

ಕಳೆದ ಶನಿವಾರ ಗಟ್ಟಿದಿಂದ ಕಾಫಿ ತರುತ್ತಿದ್ದ ಲೋರಿಯೊಂದು ಬಂಟವಾಳದ ಸಂಕದ ಬಳಿ ರಸ್ತೆ ತಪ್ಪಿ ಬಿದ್ದು ಡ್ರೈವರನು ಮೃತಹೊಂದಿರುವನು ಒಬ್ಬ ಪ್ರಯಾಣಿಕನಿಗೆ ಗಾಯ ಆಗಿ ಅವನು ಆಸ್ಪತ್ರೆಯಲ್ಲಿರುವನು

ಗೋಮಾಂಸ ಮಾರಾಟದ ಕಟ್ಟಡವನ್ನು ಕಟ್ಟಿಸುವ ಬಗ್ಗೆ ಒಂದು ಯೋಗ್ಯ ಸ್ಥಳವನ್ನು ಮುನಿಸಿಪಾಲಿಟಿಯವರು ನಿಶ್ಚಯಿಸಲಿರುವರು ಪಟ್ಟಣದ ಹೊರಗಿಂದ ರಾಗದೇ?

ಎಲ್ಲಾ ಕಡೆಗಳಂತೆ ಮಂಗಳೂರಲ್ಲಿಯೂ ಸೆಕೆಗೂ ನೀರಿನಭಾವಕ್ಕೂ ಕಡಮೆಯಾಗಿಲ್ಲ

ಬೋಳೂರಿನ ಬ್ರಾಂಚ ಬ್ರಾಹ್ಮಣ ಸಂಘದ ವಾರ್ಷಿಕೋತ್ಸವವು ತಾ ೨೪ರಲ್ಲಿ ಬೋಳೂರು ಪಟೇಲರ ಮನೆಯಲ್ಲಿ ಶ್ರೀ ಕೆ ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು

ಶ್ರೀಯುತ ಎ ಶಿವರಾಮರಾಯರು ಮಂಗಳೂರಿನ ಬೆಂಚ್ ಕೋರ್ಟಿನಲ್ಲಿ ಸ್ಪೆಶಲ್ ಮಜಿಸ್ಟ್ರೇಟರಾಗಿ ನೇಮಕ ಹೊಂದಿರುವರು

ಸೋದಾ ಕ್ಷೇತ್ರ—ಇಲ್ಲಿ ಶ್ರೀ ವಾದಿರಾಜ ಸ್ವಾಮಿಗಳ ಪುಣ್ಯ ದಿನವಾದ ತಾ ೨೩-೩ ೩೫ರಲ್ಲಿ ಹರಿಕಥಾ ವಿದ್ವಾನ್ ಬೇಲೂರು ಕೇಶವದಾಸರವರ ಅಧ್ಯಕ್ಷತೆಯಲ್ಲಿ ಮಹಾ ಸಭೆಯೊಂದು ನಡೆಯಿತು ಹಾಗೂ ವೇದಮೂರ್ತಿ ಶ್ರೀ ದಾಸರವರೂ ಪಂಡಿತ ಮಧ್ವ ಜನಾರ್ದನಾಚಾರ್ಯರವರೂ ಭಾಷಣಗಳನ್ನು ಮಾಡಿದರು. ಉಡುಪಿಯ ಶ್ರೀಕೃಷ್ಣಾಪುರ ಮಠದ ಶ್ರೀ ವಿದ್ಯಾಪೂರ್ಣತೀರ್ಥ ಶ್ರೀಪಾದಂಗಳವರ ನಿಧನದ ಕುರಿತು ದುಃಖಸೂಚಕ ಠರಾವೂ, ಮದ್ರಾಸ್ ಕೌನ್ಸಿಲಿನಲ್ಲಿ ಚರ್ಚೆಗೆ ಬಂದಿರುವ 'ಹಿಂದೂ ಮಠಗಳ ಬಿಲ್ಲಿ'ನ ಖಂಡನ ಠರಾವೂ ಸರ್ವಾನುಮತಿಯಿಂದ ಪಾಸುಮಾಡಲ್ಪಟ್ಟವು.

ತಾಲೂಕುಗಳಿಂದ.

ಕಲ್ಯಾಣಪುರ:— ಹಿಂದೀ ಪ್ರಚಾರಾರ್ಥವಾಗಿ ಬಂದಿದ್ದ ಶ್ರೀ ಪಟೀಲ್ ಗಣಪತಿ ಶರ್ಮ, ಇವರು ಸ್ಥಳೀಯ ಹಿಂದೂ ಶಾಲೆಯಲ್ಲಿ ಇದೇ ಕಳೆದ ತಾ. ೨೧ರಲ್ಲು ಹಿಂದೀ ಕ್ಲಾಸೊಂದನ್ನು ತೆರೆದಿರುವರಾಗಿಯೂ, ಬೃಹಸ್ಪತಿವಾರದಲ್ಲೊಂದು ಕ್ಲಾಸನ್ನು ಬೇಗನೆ ತೆರೆಯಲಿರುವರೆಂದೂ ತಿಳಿಯುತ್ತೇವೆ

ರಿಟಾಯರ್ಡ್ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರರಾದ ಶ್ರೀ ಕಲ್ಯಾಣಪುರ ಸುಂದರರಾವ್ ಇವರು ಈಗ ತಮ್ಮ ಹುಟ್ಟೂರಿನಲ್ಲಿಯೇ ಸ್ವಗೃಹದಲ್ಲಿ ವಾಸಮಾಡುತ್ತಿದ್ದು ಇಲ್ಲಿನ ಶ್ರೀ ಸುಂದರಕಟ್ಟೆ ಗಣಪತಿ ದೇವಸ್ಥಾನದ ಜೀರ್ಣೋದ್ಧಾರದಂತಹ ಮಹತ್ಕಾರ್ಯಕ್ಕೆ ಕೈ ಹಚ್ಚಿರುವುದು ಬಹಳ ಅಭಿನಂದನೀಯ ಮಾತ್ರವೇ ಕಲ್ಯಾಣಪುರ ಸಂತೆಕಟ್ಟೆಯ ಬಳಿಯಲ್ಲಿ ಪ್ರಯಾಣಿಕರ ದಾಹಶಾಂತಿಗೋಸ್ಕರ ಬೆಲ್ಲ ನೀರಿನ ವ್ಯವಸ್ಥೆಯನ್ನು ಮಾಡಿಸಿರುವುದು ಪುಣ್ಯಪ್ರದ ಉದಾರ ಮಹಾಶಯರಿಗೆ ಶ್ರೀ ಪರಮಾತ್ಮನು ಆಯುರಾರೋಗ್ಯಸುಖವನ್ನಿತ್ತು ಅವರ ಕೈಯಿಂದ ಇನ್ನೂ ಇಂತಹ ಪುಣ್ಯಕಾರ್ಯಗಳನ್ನು ಮಾಡಿಸುವಂತೆ ಅನುಗ್ರಹಿಸಲಿ

ಮುಂಡ್ಕೂರು:—ಇದೇ ತಾ ೨೦ ೩ ೩೫ರಲ್ಲು ಬೆಳಿಗ್ಗೆ ಯುವತಿಯಾದ ಓರ್ವ ಬ್ರಾಹ್ಮಣ ಕನ್ನಿಕೆಯು ಬಾವಿಗೆ ಬಿದ್ದು ಮೃತಳಾಗಿದ್ದಾಳೆ ಆತ್ಮಹತ್ಯೆಯೋ ಎಂಬ ಸಂಗತಿ ತಿಳಿದುಬಂದಿಲ್ಲ

ತಾಳಿಪಾಡಿ:—ಇದೇ ತಾ ೨೩ ೩-೩೫ರಲ್ಲು ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಭೆಯು ತಾಳಿಪಾಡಿ ಪೋಂಪೈ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು

ಕಿನ್ನಿಗೋಳಿ:—ಮಂಗಳೂರು ರೆವೆನ್ಯೂ ಡಿವಿಜನಲ್ ಆಫೀಸರರಾದ ಮಿ। ರಾ। ರಾ ಅನ್ನಯ್ಯ ರೆಡ್ಡಿಗಾರು ಇವರು ತಾ ೨೨ರಲ್ಲು ಇಲ್ಲಿಗೆ ಬಂದಿದ್ದು ಕೆಲವು ಗ್ರಾಮಗಳನ್ನು ಸಂದರ್ಶಿಸಿ ತಾ ೨೬-೩-೩೫ನೇ ಬೆಳಿಗ್ಗೆ ಮಂಗಳೂರಿಗೆ ಹೋಗಿದ್ದಾರೆ

ಇಲ್ಲಿಯ ಸಂತೆಮಾರ್ಕೆಟಿನಲ್ಲಿ ದಕ್ಷಿಣ ಡಿಸ್ಟ್ರಿಕ್ಟ್ ಬೋರ್ಡಿನವರು ಒಂದು ಕಟ್ಟೋಣವನ್ನು ಕಟ್ಟಿಸಿ ಕೆಲಸವು ಸಂಪೂರ್ಣವಾಗುತ್ತಾ ಬಂದಿದೆ

ಕಳೆದ ವರ್ಷ ಕಡಿಮೆ ಮಳೆ ಬಂದುದರಿಂದ ಈ ವರ್ಷ ಈಗಲೇ ಬಾವಿಗಳೆಲ್ಲ ಬತ್ತಿ ಹೋಗಿದೆ ಸರಕಾರಿ ಬಾವಿಗಳಲ್ಲಿ ನೀರು ಮಾತ್ರ ಕಾಣುತ್ತದೆ ದಯಾಳು ಬೋರ್ಡಿನವರು ಸ್ವಲ್ಪ ರಿಪೇರಿ ಮಾಡಿಸಿದರೆ ಜನ ಸೇವೆಯವರಿಗೆ ಬಹಳ ಸಹಾಯವಾಗುತ್ತಿತ್ತು

ನಮ್ಮ ಸಾರ್ವಭೌಮರ ರಜತೋತ್ಸವದ ಬಗ್ಗೆ ಗ್ರಾಮಾಧಿಕಾರಿಗಳ ಕೆಲಸವು ಭರದಿಂದ ನಡೆಯುತ್ತಿವೆ ಆ ದಿನ ಆಟಪಾಟಗಳು, ಬಡಬಗ್ಗರಿಗೆ ಊಟ ಮುಂತಾದ್ದನ್ನು ಹಾಕಲು ಸಹ ಏರ್ಪಾಡು ಮಾಡಲಾಗುತ್ತದೆಂದು ತಿಳಿದುಬರುತ್ತದೆ

ಸಂಪಾಜೆ:—ಈಗ ಒಂದೆರಡು ವರ್ಷಗಳಿಂದೀಚೆಗೆ ಸಂಪಾಜೆಯ ಆಸುಪಾಸಿನ ಗೊಂಡಾರಣ್ಯದಲ್ಲಿದ್ದುಕೊಂಡು ಇಚ್ಛಾನುಸಾರ ಬೈರಿಗೆಯು ಬೆಳೆಗೂ ಜನರಿಗೂ ವಿಶೇಷ ಹಾವಳಿಯನ್ನು ಕೊಡುತ್ತಿದ್ದ ಆನೆಯೊಂದನ್ನು ರೂಲ್ ೫ ನಂಬ್ರ ೪೩ನೇ ೧೯ ೫ ೧೯೦೮ರ ಚೀಫ್ ಕಮಿಶನರ್ ಸಾಹೇಬರ ಪ್ರಕಟಣೆಯನ್ನನುಸರಿಸಿ ಈಗಿನ ಕೊಡಗು ಕಮಿಶನರವರು ತನ್ನ ಆಫೀಸಿನ ತಾರೀಕು ೧೫-೩-೩೫ರ ಜ್ಞಾಪಿಕೆಯಿಂದ "ಸಂಪಾಜೆ ರೋಗ್" ಎಂದು ಡಿಕ್ಲೇರ ಮಾಡಿರುತ್ತಾರೆ ಪರವಾನೆ ಪಡೆದು ಆನೆಯನ್ನು ಇಚ್ಛೆಯುಳ್ಳವರು ಗುಂಡಿಟ್ಟು ಕೊಲ್ಲಬಹುದಾಗಿ ತಿಳಿಸುತ್ತಾರೆ ಆನೆಯ ಎತ್ತರ ಅಂದಾಜು ಎಂಟು ಅಡಿ ಎಡ ರಿನ ಕಾಲಿನ ಸುತ್ತಳತೆ ಸುಮಾರು ನಾಲ್ಕು ಅಡಿ, ಬಾಯಿಯಿಂದ ಹೊರಗೆ ಕಾಣುವ ಕೊಂಬುಗಳ ಉದ್ದ ಅಂದಾಜು ಎರಡುವರೆ ಅಡಿ

ಪೊಳಲಿ—ಇಲ್ಲಿಯ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ಕಳೆದ ಮೀನಸಂಕ್ರಮಣದ ದಿನ ಧ್ವಜಾರೋಹಣವಾಗಿದೆ ಎಪ್ರಿಲ್ ತಾ ೪ನೇ ದಿನ ಚೆಂಡಿನ ಉತ್ಸವವು ಆರಂಭವಾಗಿ ತಾ. ೮ನೇ ಸೋಮವಾರ ಕಡೆಚೆಂಡು ಮಹೋತ್ಸವವು ಜರಗುವುದು

ಪುತ್ತೂರು:— ಇಲ್ಲಿಯ ಹುಡುಗರ ಮತ್ತು ಹುಡುಗಿಯರ ಹ್ಯಾಯರ್ ಎಲಿಮೆಂಟರಿ ಶಾಲೆಗಳ ಈ ವರ್ಷದ ವರ್ಧಂತಿ ಉತ್ಸವವು ಇದೇ ಬರುವ ಎಪ್ರಿಲ್ ತಾ. ೬ ಮತ್ತು ೭ನೇ ಶನಿವಾರ ಮತ್ತು ಆದಿತ್ಯವಾರ ದಿನಗಳಲ್ಲಿ ಹುಡುಗರ ಶಾಲೆಯ ಪಠಾರದಲ್ಲಿ ಜರಗಿಸಲ್ಪಡುವುದು.

ಉಡುಪಿ—ದಾನಶೀಲ ಶ್ರೀ ಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾಪೂರ್ಣ ತೀರ್ಥ ಶ್ರೀ ಪಾದಂಗಳವರು ಇದೇ ತಾ ೨೧ನೇ ಮಧ್ಯಾಹ್ನ ೧। ಗಂಟೆಗೆ ತಮ್ಮ ೬೩ನೆಯ ವಯಸ್ಸಿನಲ್ಲಿ ತಮ್ಮ ಪಾಡಿಗ್ರಾರು ಮೊಕ್ಕಾಮಿನಲ್ಲಿ ಕಾಲವಾದರು ದಿವಂಗತರು ೧೮೭೩ನೆ ಇಸವಿಯಲ್ಲಿ (ಶ್ರೀಮುಖ ಸಂ।ರದ ಶ್ರಾವಣ ೨೩ಕ್ಕೆ) ಜನಿಸಿದವರಾಗಿ, ತಮ್ಮ ೭ನೆ ವಯಸ್ಸಿನಲ್ಲೆ ಸನ್ಯಾಸದೀಕ್ಷೆಯನ್ನು ಪಡೆದವರಾದರು. ಉಡುಪಿ ಶ್ರೀ ಕೃಷ್ಣದೇವರ ಸನ್ನಿಧಿಯಲ್ಲಿ ೩ ಸಲ ಪರ್ಯಾಯವನ್ನು ನಿರ್ವಹಿಸಿಕೊಂಡು ಮಹೋತ್ಸವಗಳನ್ನು ಸಾಂಗವಾಗಿ ನೆರವೇರಿಸಿ, ದಾನಧರ್ಮಗಳಿಂದಾಗಿ ದಾನಶೀಲರೆಂದು ಸಂಬೋಧಿಸಲ್ಪಡುತ್ತಿದ್ದರು. ವೇದಶಾಸ್ತ್ರ ಪುರಾಣಾದಿಗಳ ಅಭ್ಯಾಸದಿಂದ ವಿದ್ಯಾಪೂರ್ಣರೆಂಬ ತಮ್ಮ ನಾಮಾಂಕಿತಕ್ಕೆ ಸಾರ್ಥಕ್ಯವನ್ನು ಪಡೆದುದಲ್ಲದೆ, ಭಾಗವತ ಪುರಾಣ, ಪ್ರವಚನ, ಹರಿಕೀರ್ತನಾಸೇವೆಗೈಯಿಸಿಯೂ ಪಾಡಿಗಾರಿನಲ್ಲಿ ಒಂದು ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿಯೂ ಸನ್ಯಾಸಿ ಭಿಕ್ಷುಮಂಡಲ ಚಂದ್ರಶಾಲೆಗಳ (ಶ್ರೀ ಕೃಷ್ಣ ದೇವಳಕ್ಕೆ ಸಂಬಂಧಪಟ್ಟ) ಜೀರ್ಣೋದ್ಧಾರ ಹಾಗೂ ದೇವಳದ ಮುಂಗಡೆಯ ಗೋಪುರನಿರ್ಮಾಣದಿಂದಲೂ ಕೊನೆಗೆ ಬಂಗಾರದ ಪಲ್ಲಕ್ಕಿಯೊಂದನ್ನು ೬೦-೭೦ ಸಹಸ್ರರೂಪಾಯಿಗಳ ವೆಚ್ಚದಿಂದ (ಹೆಚ್ಚಿನ ಅಂಶದ ಖರ್ಚನ್ನು ತಾವೇ ವಹಿಸಿ) ನಿರ್ಮಿಸಿ ಶ್ರೀ ಕೃಷ್ಣನಿಗರ್ಪಿಸಿಯೂ ಕೃತಾರ್ಥರೆಂದೂ ಕೀರ್ತಿಗೊಳಗಾದರು ಈಚೆಗೆ ಕಫಜ್ವರದಿಂದ ಪೀಡಿತರಾಗಿ ಕೃಶರಾಗಿ ಕಂಗಾಲಾಗಿದ್ದರೂ ತಾ ೨೧ನೆಯ ದಿನ ಸೂರ್ಯೋದಯದಿಂದ ಮಧ್ಯಾಹ್ನದ ವರೆಗೆ ದಿವ್ಯಚಿತ್ತದಿಂದ ಪೂಜಾದಿ ನಿತ್ಯವಿಧಿಗಳನ್ನು ನೆರವೇರಿಸಿ ಪಾನಪೋಷಣಗಳನ್ನು ಮಾಡಿ, ದ್ವಂದ್ವಮಠಾಧೀಶರಾದ ಶ್ರೀ ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರೊಡನೆ ಭಿಕ್ಷೆಯನ್ನು ಗೈದರು ಅನಂತರ ಒಂದು ಗಂಟೆಯ ಕಾಲಕ್ಕೆ ದ್ವಿತೀಯ ಜಪಸ್ತೋತ್ರಾದಿಗಳನ್ನು ಮುಗಿಸಿ, ಶುದ್ಧಮನಸ್ಸಿನಿಂದ ಧ್ಯಾನಾರೂಢರಾಗಿ ನಶ್ವರಶರೀರವನ್ನು ತ್ಯಜಿಸಿ ಪರಂಧಾಮವನೈದಿದರು. ಕೂಡಲೇ ನಾರಾಯಣಸ್ಮರಣೆ ಸಂಕೀರ್ತನೆಗೆ ಆರಂಭವಾಗಿ ನಾನಾ ವಾದ್ಯ ಘೋಷಗಳ ಘೋಷಗಳಾಗಲು ಸಹಸ್ರಾರು ಜನರು ಶ್ರೀಗಳವರ ವೃಂದಾವನ ಯಾತ್ರೆಯ ದೃಶ್ಯವನ್ನು ಈಕ್ಷಿಸಲು ನೆರೆದರು ಸದರಿ ಮೆರವಣಿಗೆಯು ವೈಭವದಿಂದ ಕಲ್ಸಂಕ ಬಡಗುಪೇಟೆ ನಾಲ್ಕು ಬೀದಿಗಳನ್ನು ದಾಟಿ ಮಧ್ವಸರೋವರದಲ್ಲಿ ಶ್ರೀಗಳವರ ಪಾರ್ಥಿವಶರೀರವನ್ನು ಸ್ನಾನಮಾಡಿಸಿ ಶ್ರೀ ಕೃಷ್ಣನ ದರ್ಶನಗೈದು ವೃಂದಾವನದಲ್ಲಿ ಸಮಾಧಿಗೊಳಿಸಲ್ಪಟ್ಟ ಕಂಡದಲ್ಲ ಯಥಾವಿಧಿಪೂರ್ವಕವಾಗಿ ಪರಿನಾಮ ಸ್ಥಾಪಿಸಿದನೆ ... [illegible] ಶ್ರೀ ಪಾದಂಗಳವರ ಸಮಾರಾಧನೆಯು ತಾ. ... -೪ ೩೫ನೆ ಸೋಮವಾರ ನಡೆಯುತ್ತಿದ್ದಿತು ಆದೇ ಶ್ರೀಗಳವರ ಪೂರ್ವಾಶ್ರಮದ ... ಗಣಪಯ್ಯ ತಂತ್ರಿಗಳ ಪುತ್ರನಿಗೆ ಸನ್ಯಾಸಪಟ್ಟವು ಕಟ್ಟಲಾಗುವುದೆಂದು ತಿಳಿದುಬರುತ್ತದೆ ಶ್ರೀ ಪಾದಂಗಳವರ ನಿಧನದಿಂದ ಉಡುಪಿ ಅಷ್ಟಮಠಗಳ ಸನ್ಯಾಸಿಗಳಲ್ಲಿ ದಾನಶೀಲರೆಂದೂ ನಿಷ್ಠಾವಂತ ವಿದ್ವಾಂಸರೆಂದೂ ವಯೋವೃದ್ಧ ಜ್ಞಾನವೃದ್ಧರೆಂದೂ ಹೆಸರಾದ ಯತಿವರ್ಯರೊಬ್ಬರು ಹಾಗೂ ಮಹಾನುಭಾವರು ಅದೃಶ್ಯರಾದಂತಾಯಿತು

ಶ್ರೀಮಾನ್ ಪಂಚಮ ಜೋರ್ಜ ಚಕ್ರವರ್ತಿ ಸಾರ್ವಭೌಮರ ರಜತೋತ್ಸವ ಸಮಾರಂಭದ ಕಾರ್ಯವನ್ನು ಬ್ರಿಟಿಶ ಸಾಮ್ರಾಜ್ಯದಲ್ಲಿನಂತೆ ಹಾಗೂ ಅಖಿಲಭಾರತದಲ್ಲೂ ಉಜ್ವಲಿಸುವಂತೆ ಉಡುಪಿಯಲ್ಲೂ ಉತ್ಸವವನ್ನು ಜರುಗಿಸಬೇಕೆಂದು ಪುರಜನರ ಮಹಾಸಭೆಯೊಂದು ತಾ ೨೭ನೇ ಬುಧವಾರ ಸಂಜೆ ೬ ಗಂಟೆಗೆ ವಿಕ್ಟೋರಿಯಾ ಜುಬಿಲಿ ಎಸೋಸಿಯೇಶನ್ ಕ್ಲಬ್ಬಿ"ನಲ್ಲಿ ಸೇರತಕ್ಕದ್ದಿದೆ ಈ ಉತ್ಸವವನ್ನು ಹೇಗೆ ಜರುಗಿಸಬಹುದೆಂಬುವಾಗ ಯೋಜನೆಗಳೂ ಹೂಡತಕ್ಕದಿವೆ ಕುಂದಾಪುರದ ಎವಿಜನಿನ ಸಬ್ ಕಲೆಕ್ಟರರಾದಿಯಾಗಿ ಇಲ್ಲಿನ ಪ್ರಮುಖ ಮ್ಯಾಜಿಸ್ಟ್ರೇಟರೂ ವಕೀಲರೂ ಸಾಹುಕಾರರೂ ಸಹಿಗಳಿಂದ ಪತ್ರಿಕೆಗಳನ್ನು ಹೊರಡಿಸಿರುವರು

ತೋಕೂರು ಜೋಗಟ್ಟೆ—ಇತ್ತಲಾಗೆ ಹೊಸತಾಗಿ ಕಟ್ಟಿಸಿದ ತೋಕೂರು ಜೋಗಟ್ಟೆ ಬೋರ್ಡ ಮಧುಸೂದನ್ ಶಾಲೆಯ ಪ್ರವೇಶೋತ್ಸವವು ಇದೇ ಕಳೆದ ೧೩ ೭ನೇ ಬುಧವಾರ ಶ್ರೀ ಎ ಬಿ ಶೆಟ್ಟಿ, ಎಂ. ಎಲ್ ಸಿ ಯವರಿಂದ ಜರಗಿಸೋಣಾಯಿತು ಶಾಲಾ ಬಾಲಕರ ವಿವಿಧ ವಿನೋದಗಳಾಗಿ ಸಭಿಕರಲ್ಲಿ ಜನಾಬ್ ಕುಂಞಾಮು ಸಾಹೇಬ್ ಬಹದ್ದೂರರೂ, ಶ್ರೀಮಾನ್ ಪುಣಿಂಚತ್ತಾಯರೂ ಸ್ವಸ್ತಿವಚನಗಳನ್ನಾಡಿದ ಮೇಲೆ ಅಧ್ಯಕ್ಷರ ಭಾಷಣಾನಂತರ ಹೆಡ್ಮಾಸ್ಟರ್ ಶ್ರೀ ಅನಂತ ಭಟ್ಟರು ಧನ್ಯವಾದಗಳನ್ನರ್ಪಿಸಿದ ಬಳಿಕ ಈ ಸಮಾರಂಭವು ಕೊನೆಗಂಡಿತು.

'ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ – ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು– ಓದಿರಿ ಇದನ್ನು'—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜಿನಸ್ ಡ್ರಗ್ಸ್ ಒಫ್ ಇಂಡಿಯಾ" ಇದರ ಪುಟ ೬೮ನ್ನು ನೋಡಿ.)

ವನಸ್ಪತಿ ತೈಲವಲ್ಲ–ಮೀನಿನ ತೈಲ' ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'–

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ ಕಚರಾದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೂಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ

ಕವಿರವೀಂದ್ರ.—'ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ

ಕೆಲ ವರ್ಷಗಳ ಹಿಂದೆ **ಡಾ। ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದುದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕು ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ.'

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ

ಸೋಲ್ ಏಜಂಟರು:

ನಾದಿರ ಷಾ, ಪ್ರಿಂಟರ್ ಎಂಡ್ ಕೊ., ೧೦೦ ಬ್ರೋಡ್ವೆ, ಮದರಾಸು

ಹೆಡ್ ಆಫೀಸು: ಮುಂಬಾಯಿ ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ ಸೂ. ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್ ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೋದ್ರೆಜ್‌ರವರಿಗೆ ಸಂಬಂಧವಿಲ್ಲ

ಅರುಣೋದಯ.

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಷ್ಕೃತ ಲೇಖನಗಳು ಬರುವವಲ್ಲದೆ ದೇಶ ವಿದೇಶದ ಸುದ್ದಿ ಸಂಗತಿಗಳೂ ಬರುವುವು ಅಲ್ಲದೆ ಮನೋಹರವಾದ ಕಥೆ ಕವಿತೆಗಳೂ ಇರುವುವು ಚಿತ್ರ ಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಶಾಸ್ತ್ರೀಯ ಶೋಧನೆಗಳೂ ಪ್ರಕಟವಾಗುವುವು. ಇದೀ ಕರ್ನಾಟಕದಲ್ಲಿ ಇದು ಪ್ರಚಾರದಿಂದಾವುದರಿಂದ ಜಾಹೀರಾತುದಾರರಿಗೆ ಇದೊಂದು ಉತ್ತಮ ಸಾಧನ ಅಲ್ಲದ್ದಿಗೆ ವಿಚಾರಿಸ ಬೇಕು.

ವಾರ್ಷಿಕ ಚಂದಾ ರೂ. ೨—೮—೦

ಮೆನೇಜರ್–ಅರುಣೋದಯ. ಬೆಳಗಾಂವಿ

WHITE LEPROSY

AND

LEUCODERMA

A few days application of this medicine cures WHITE LEPROSY and LEUCODERMA radically Get rid of this horrible disease by application of this medicine in spite of failure by hundreds of Hakims, Doctors Kavirajas and advertisers Rs 500 rewarded if proved fallible Price Rs 2

VAIDYARAJ AKHIL KISHORE RAM

P O KATRISARAI (GAYA)

"GUPTA MANTRA"

A reward of Rs 100

The objects which can not be achieved by spending lacs of rupees may be had by repeating this Mantra seven times There is no necessity of undergoing any hardship to make it effective It is effective without any preparation This is a WASHIKARAN MANTRA It will make you to mate give you service and advancement and bring you profit in trade A reward of Rs 100 if proved fallible Price including postage etc Rs 2 7-0

Siddh Mantra Ashram

KATRISARAI (GAYA)

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter –

Modern Hindu Hotel
CALICUT, 17–6–1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did

Yours faithfully,

(Sd) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನು ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

I A No 480/35. O P ನಂಬ್ರ 4/34

1. ಬೀಪಾತುಮ್ಮಾ, 2. ಐಸಬಿ, 3. ಮಹಮ್ಮದ ಶ್ಯಾಮೊಗ್ರಾಲ, 4 ಖದೀಜಾಬಿ—

ಅರ್ಜಿದಾರರು

ಮತ್ತು

1. M K. ಮುಹಮ್ಮದ ಬ್ಯಾರಿ, 2 ಕುಞ್ಞಾಮು ಶ್ಯಾಮೊಗ್ರಾಲ—ರೆಸ್ಪಾಂಡೆಂಟರು

ಮೇಲ್ಕಂಡ ಅರ್ಜಿದಾರರು ಮೃತಪಟ್ಟ ಹಸನ್ ಶ್ಯಾಮೊಗ್ರಾಲರಿಗೆ ಹೊರಗಿನಿಂದ ಬರತಕ್ಕ ಸಾಲವನ್ನು ವಸೂಲು ಮಾಡುವ ಬಗ್ಗೆ O P. 4/34ರಲ್ಲಿ ಪಡೆದ ಸಕ್ಸೆಶನ್ ಸರ್ಟಿಫಿಕೇಟನ್ನು ಅದರಲ್ಲಿ ಪರಾಮೂಶಿನಿಂದ ಬಿಟ್ಟು ಹೋದ ಇನ್ನೂ ಇತರ ಹೊರಗಿನಿಂದ ಬರತಕ್ಕ ಸಾಲಗಳಿಗೆ ಎಕ್ಸ್ಟೆಂಡ್ ಮಾಡುವ ಬಗ್ಗೆ ಈ ಕೋರ್ಟಿನಲ್ಲಿ I A 480/35ನೇ ಅರ್ಜಿ ದಾಖಲ್ಲು ಮಾಡಿರುತ್ತದೆ ಸದ್ರಿ ಅರ್ಜಿಯು ತಾ 9-4-35ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಬಗ್ಗೆ ಆಕ್ಷೇಪ ಇದ್ದವರು ತಾವು ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ಆಕ್ಷೇಪಗಳನ್ನು ಹೇಳತಕ್ಕದ್ದು ಇಲ್ಲದಿದ್ದರೆ ಸದ್ರಿ ಅರ್ಜಿಯು ಎಕ್ಸಪಾರ್ಟಿಯಾಗಿ ತೀರ್ಮಾನವಾಗುವುದು

KASABAGOD, 27-3-1935   **K. P Anantha Rao,**
Advocate for Petitioners

ನೋಟೀಸು

The Canara Banking Corporation Udipi, Ltd., Mangalore

ಇದೇ 1935ನೇ ಇಸವಿ ಮಾರ್ಚ ತಿಂಗಳ ತಾ 8ನೇ ಶುಕ್ರವಾರದ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಈ ಕೆಳಗೆ ಹೆಸರು ಕಾಣಿಸಿದವರು ಅಡವಿಟ್ಟ ನಗಗಳನ್ನು ತಾರೀಕು 23ನೇ ಮಾರ್ಚ ತಿಂಗಳ 1935ರಲ್ಲು ಬ್ಯಾಂಕಿನ ಆಫೀಸಿನಲ್ಲಿ ಘಂಟೆ ೧ರಿಂದ ೨ರ ವರೆಗೆ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜನ್ನು ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿ ಉಳಿದ ಐವೇಜನ್ನು ಸದ್ರಿಯವರ ಲೆಕ್ಕಕ್ಕೆ ಅಮಾನತು ಇಟ್ಟಿದ್ದು ಕೃರ್ಯದಲ್ಲಿ ಕೊಂಡುಹೋಗಬೇಕಾಗಿಯೂ, ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ

ಸಾಲದ ನಂಬ್ರ J L 28/32

Bhirmanna Belchada Nephew of Appu Belchada Residing Near Sri Ananthapadmanabha Temple Kudpu, Post Kulshekar ಏಲಂ ಮಾಡಿ ಹುಟ್ಟಿ ಬಂದ ಹಣ ರೂಪಾಯಿ 136-0 0 ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂ 80 13-4 ಅಮಾನತು ಲೆಕ್ಕಕ್ಕೆ ಇಟ್ಟು ಉಳಿದ ಹಣ ರೂ 55-2-8 ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಖರ್ಚು ಕೂಡಾ ಕೊಡತಕ್ಕದ್ದು

Office of the Corporation Mangalore D 27—3—35   K Vittal Bhandary
Agent

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S. No 269/'32   R E P 1604/34
R. E A No 1194/34

ಪದ್ಮನಾಭ ನ್ಯಾಕ—ವಾದಿ, ಅರ್ಜಿದಾರ

ವೆಂಕ್ಟೇಶ ಪೈ ಸಹಾ—ಪ್ರತಿವಾದಿರು—ಎದ್ರು.

2ನೇ ಎದ್ರುಯು ಎಡ್ರೆಸು—

Ramu Pai, C/o Sri Krishnu Durbar Hindu Hotel Bagamansion No 2. Lalbhag Parel 12 Bombay

ಸದ್ರಿ ಅಮ್ಲುಜ್ಯಾರಿಯಲ್ಲಿ ಅರ್ಜಿದಾರನ ಕಡೆಯಿಂದ ಹಾಜರು ಪಡಿಸಿದ ಸ್ಥಿರಾಸ್ತಿ ಏಲಂ ಇಸ್ತಿಹಾರು ಡ್ರಾಫ್ಟು ಮಂಜೂರಿ ಕುರಿತು ಮತ್ತು ಸದ್ರಿ ಆಸ್ತಿ ಏಲಂ ಸಮಯ ಅರ್ಜಿದಾರಗೆ ಯಾ ಆತನ ಕಡೆ ವಕೀಲರಿಗೆ ಬಿಡ್ ಮಾಡುವರೆ Set off ಮಾಡುವರೆ ಪರ್ಮಿಶನ್ ಕೊಡಿಸಬೇಕಾಗಿ ವಗೈರೆ ಅರ್ಜಿದಾರನು ದಾಖಲ್ಲು ಮಾಡಿದ ಅರ್ಜಿ ಕೂಡಾ ತಾ 17-4-35ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ದಿವಸ ಹಗಲು 10 ಗಂಟೆಗೆ 2ನೇ ಎದ್ರುಯು ಈ ಕೋರ್ಟು ಮುಂದೆ ಸ್ವತಹಾ ಯಾ ವಕೀಲರದ್ವಾರಾ ಹಾಜರಾಗಿ ಆಕ್ಷೇಪಣೆ ಹೇಳದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ, 21—3—35   **M. Makunda Kamath,**
ಅರ್ಜಿದಾರನ ಕಡೆ ವಕೀಲ

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 108/1935

ವಾದಿ—ಪಾಬಯ್ಯಯಾನೆ ವೆಂಕಟ್ರಮಣ ಶ್ಯಾನುಭೋಗ

ಪ್ರತಿವಾದಿ ಶಂಕರ ಭಟ್ಟ

ಸದ್ರಿ ವಾದಿಯು ತನಗೆ ಬಹಾ ಲೇವಾದೇವಿ ಅಸಲು ಬಡ್ಡಿ ಹಗ್ಗೆ ಕೂಡಾ ರೂಪಾಯಿ 49 0-8ಕ್ಕೆ ಸದ್ರಿ ಪ್ರತಿವಾದಿಯ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ಮುಕ್ಕುರು ದಾವೆಯು ತನಿಖೆಯು ತಾ 8-4-1935ನೇ ದಿವಸ ಇಟ್ಟಿರುವುದರಿಂದ ಆ ವಿಷಯದಲ್ಲಿ ಆಕ್ಷೇಪ ಇದ್ದರೆ ಆ ದಿವಸ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು ತಪ್ಪಿದರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

ಕುಂದಾಪುರ [illegible]   **K Vittaldas Shenai,**
ವಾದಿಯ ಕಡೆ ಎಡ್ವೋಕೇಟು

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 20/1935

1 ಮಹಾಲಿಂಗ ಸೆಟ್ಟಿ, 2 ದೂಜ ಸೆಟ್ಟಿ, 3 ಚಂದಯ್ಯ ಸೆಟ್ಟಿ, 4 ನಂದ್ಯಪ್ಪ ಸೆಟ್ಟಿ, ಪುಂಡಾಯಾನೆ ಅಣ್ಣಪ್ಪ ಸೆಟ್ರು ಅಳಿಯಂದಿರು ಪದ್ಮಾವು ಸೆಟ್ಟಿರ ಮಗಂದಿರು, ಉಡ್ಪಿ ತಾಲ್ಕು ಶಿರ್ವ ಗ್ರಾಮದ ಮುದರ ಬೆಟ್ಟುನಲ್ಲಿರುವವರು—ಅರ್ಜಿದಾರರು

ಮತ್ತು

ಶೀತು ಸೆಟ್ಟಿ, ಶಿರ್ವ ಶಿದ್ದು ಸೆಟ್ರ ವಿಧವೆ ಮನಶಿ ಸೆಟ್ಟಿರ ಮಗಳು ಉಡುಪಿ ತಾಲ್ಕು ಶಿರ್ವ ಗ್ರಾಮದ ಮುಟ್ಲುಪಾಡಿ ಹೊಸ ಮನೆ—ಎದ್ರುಳು

ಇವರೊಳಗೆ—

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರರ ಸಹೋದರ ವ ಎದ್ರುಳ ಗಂಡ ಉಡುಪಿ ಗವರ್ನವೆಂಟು ಆಸ್ಪತ್ರೆಯಲ್ಲಿ ತಾ 26-2-'35ರಲ್ಲಿ ಮೃತಪಟ್ಟ ಶಿವಳ್ಳಿ ಮುದರ ಬೆಟ್ಟು ಶಿದ್ದು ಸೆಟ್ಟಿಗೆ The District Educational Council of South Kanara, Mangalore ಇವರಿಂದ ಮುಟ್ಲುಪಾಡಿ ಎಲಿಮೆಂಟರಿ ಶಾಲೆಯ ಬಾಬ್ತು ಕಳೆದ 1933-34ನೇ ವರುಷಕ್ಕೆ ಬರತಕ್ಕ ಗ್ರೆಂಟಿನ ರೂಪಾಯಿ 338—15—4ನ್ನು ವಸೂಲು ಮಾಡುವರೆ ಅರ್ಜಿದಾರರಗೋಸ್ಕರ 4ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಸದ್ರಿ ಅರ್ಜಿಯು ತಾ 12-4-35ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನಿಖೆ ಸಮಯ ಸದ್ರಿ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ.

Advocate's office, Udipi, 24—3—35   **M.Damodar Kamath,**
Advocate for Petitioners

ನೋಟೀಸು.

The Canara Banking Corporation Udipi Ltd, Udipi.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಸೂಲು ಕೊಡಬೇಕಾಗಿ ಅನೇಕ ದಫೆಯಿಂದ ತಿಳಿಸಿದರೂ ಕೊಟ್ಟು ತೀರಿಸದೆ ಇದ್ದುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ.—ಸದ್ರಿ ಸಾಲಗಾರರು ಬ್ಯಾಂಕಿಗೆ ಬಹ ಅಸಲು, ಬಡ್ಡಿ ಹಣಗಳನ್ನು ತಾ 3-5-35ನೇ ಶುಕ್ರವಾರ ಮಧ್ಯಾಹ್ನ ಗಂಟೆ 3ರ ಒಳಗೆ ಬ್ಯಾಂಕಿನಲ್ಲಿ ಕಟ್ಟಿ ಅವರು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ, ಇದೇ 1935ನೇ ಇಸವಿ ಮೇ 10ನೇ ತಾರೀಕಿನ ಮಧ್ಯಾಹ್ನ 2 ಗಂಟೆಗೆ ಸದ್ರಿ ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ, ಹುಟ್ಟಿದ ಹಣವನ್ನು ಸದ್ರಿ ಸಾಲಕ್ಕೆ ವಜಾ ಮಾಡಿ ಉಳಿದ ಐವೇಜಿನ ವಸೂಲಿನ ಬಗ್ಗೆ ಸಾಲಗಾರರ ಮೇಲೆ ಅಲಾಯಿದಾ ದಾವಾ ನಡಿಸಲಾದೀತು

ಸಾಲದ ನಂಬ್ರ	ಸಾಲಗಾರನ ಹೆಸರು.	ಸಾಲದ ಐವೇಜು ರೂ
179/32	ಮಣಿಪುರ ತಿಮ್ಮಪ್ಪ ಸೆಟ್ಟಿ	55/-
764/32	ಬಿ ಅಣ್ಣು ಸೆಟ್ಟಿ	50/
177/33	ಕಲ್ಯಾಡಿ ಚಂದು ಮರಕಾಲ	15/-
127/33	ಕುಡುಕನಾದು ಗಂಗಾಧರ ನಾರಾಯಣ ಪಯ್ಯ	23/-
50/33	ಕೊಡವೂರು ಗುರುವ ಮರಕಾಲ	15/
603/33	ಬಿ ಜಗಜ್ಜೀವನ ದಾಸ ಸೆಟ್ಟಿ	1600/
386/33	ಸುಲೇಮಾನ್ ಅಬ್ದುಲ್ಲ ಸಾರಂಗ	20/
1024/33	ಕಲ್ಯಾಂಪೆ ಪೊಲಿನ್ ಸೋಜಾ ಬಾಯ	10/-
60 34	ಉಗ್ಗೆಲ ಬೆಟ್ಟುದೊಂಬ ಪೂಜಾರಿ	30/-
611/34	ಕೆ ಅನಂತ ಮರಕಾಲ	70/-

ಬಾಕಿ ಇರುವ ಬಡ್ಡಿ ರಿಜಿಸ್ಟ್ರಿ ಮತ್ತು ಈ ನೋಟೀಸಿನ ಖರ್ಚು ಸಹಾ ಬರತಕ್ಕದ್ದು

Office of the Corporation Udipi Date 26—9—35   **S Ganesh Rao**
Agent

ಶರಣ ಸಂದೇಶ.

ನೀವು ಹಿಂದುಗಳೋ ಹಾಗಾದರೆ ಜಾಗ್ರತೆ ಚಂದಾದಾರರಾಗಿರಿ

ಇದು ವಿಚಾರಕ್ರಾಂತಿಯ ವಾರಪತ್ರಿಕೆ

ಸಂಪಾದಕರು ಶ್ರೀ ಹರ್ಡೇಕರ ಮಂಜಪ್ಪನವರು, ಹಿಂದು ಸಮಾಜ ಸುಧಾರಣೆ, ಹಿಂದು ಸಂಘಟನೆ ಧಾರ್ಮಿಕ ಸತ್ಯಸಿದ್ಧಾಂತ ಪ್ರತಿಪಾದನೆ, ಶ್ರೀ ಬಸವಾದಿ ಪ್ರಮಥರ ತತ್ವಪ್ರಸಾರಣೆ ಮತ್ತು ರಾಜಕೀಯ ಗಣದೋಷ ವಿಮರ್ಶೆ ಇವೆ ಈ ಪತ್ರಿಕೆಯ ಪ್ರಧಾನ

೨೦ ಪುಟ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ ೩ ಮಾತ್ರ

ಮೆನೇಜರ್ ಶರಣ ಸಂದೇಶ

ಪೋಸ್ಟ್ ಆಲಮಟ್ಟಿ ಜಿ ಬಿಜಾಪುರ

"ವಿಶ್ವಬಂಧು"ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು ೨ ವಿಶ್ವಬಂಧುವು ಅಹಿಂಸಾಧರ್ಮಪ್ರಚಾರಕನು ೩ ವಿಶ್ವಬಂಧುವು ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಪ್ರಕಟ ಮಾಡುವನು ೪ ಕನ್ನಡ ನುಡಿಸೇವೆಯೂ ಕನ್ನಡ ಸಾಹಿತ್ಯ ಪ್ರಭಾವನೆಯೂ 'ವಿಶ್ವಬಂಧುವಿನ ಧ್ಯೇಯಗಳು ೫ ವಿದ್ಯಾಭ್ಯಾಸದ ನೂತನ ರೀತಿ ನೀತಿಗಳನ್ನು ವಿಶ್ವಬಂಧುವು ಪ್ರಕಟಮಾಡುವನು ೬ ಒಟ್ಟಿನಲ್ಲಿ ಆರ್ಥಿಕ, ನೈತಿಕ, ಧಾರ್ಮಿಕ, ರಾಜಕೀಯ ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು ಸರ್ವಾಂಗ ಸುಂದರನಾದ 'ವಿಶ್ವಬಂಧು'ವು ಸರ್ವರ ಆದರಣೆಗೂ ಪಾತ್ರನಾಗಿರುವನು.

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ ೨-೧೪-೦ ಮಾತ್ರ

"ವಿಶ್ವಬಂಧು" ಕಾರ್ಯಾಲಯ, ಎಲ್ ಜೈನವಿದ್ಯಾರ್ಥಿನಿಲಯ, ಮೈಸೂರು.

Attur Vaikunta Prabhu Bank, Mangalore.

ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದ್ರಿ ಬ್ಯಾಂಕಿನಲ್ಲಿ ಈ ಮುಂಚೆ ಎರಡು ವರ್ಷಗಳ ಲಾಗ್ಯಾತ ಕ್ಲಾರ್ಕನಾಗಿದ್ದ R ನಾರಾಯಣ ಎಂಬವನನ್ನು ಈ ಬ್ಯಾಂಕಿನ ಕೆಲಸದಿಂದ ತೆಗೆದುಹಾಕಿರುತ್ತದೆ ಬ್ಯಾಂಕಿನಲ್ಲಿ ಸಲ್ಲತಕ್ಕ ಯಾವತ್ತೂ ಸಾಲಗಳ ಅಸಲು ಬಡ್ಡಿ ವಗೈರೆ ಐವೇಜನು ಬ್ಯಾಂಕಿನ ಸಮಯದಲ್ಲಿ ಬ್ಯಾಂಕಿನಲ್ಲಿಯೇ ಬಂದು ಪ್ರೊಪ್ರೈಟರರ ಕೂಡೆ ಕೊಡತಕ್ಕದ್ದು ಅವುಗಳಿಗೆ ಪ್ರೊಪ್ರೈಟರರ ಸಹಿ ಇರುವ ರಶೀಧಿ ಕೊಡಲಾಗುವುದು ಅಲ್ಲದೆ ಬ್ಯಾಂಕಿನಲ್ಲಿ ಸಲ್ಲತಕ್ಕ ಹಣವನ್ನು ಸದ್ರಿ R ನಾರಾಯಣನ ಕೂಡೆ ಕೊಟ್ಟಲ್ಲಿ ಅದು ಬ್ಯಾಂಕಿಗೆ ತಲಪಲಿಕ್ಕಿಲ್ಲ ಮಾತ್ರವಲ್ಲದೆ ಅದಕ್ಕೆ ಬ್ಯಾಂಕು ಎಷ್ಟು ಮಾತ್ರಕ್ಕೂ ಜವಾಬ್ದಾರಿಯಾಗಲಿಕ್ಕಿಲ್ಲ

A. V Prabhu Bank, 12—3—1935.   **A. Vaikunta Prabhu,**
Proprietor.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

— Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purnaiah Chatram Road, Balepet
BANGALORE CITY

Shiromani Narayanacharya
Choukhamba, Benares City

[illegible]

ಶಿರೋಮಣಿ ನಾರಾಯಣಾಚಾರ್ಯ
[illegible] (ಕಾಶಿ)

ಐದ ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



[illegible]

ಕಿರ್ಮಾ ಬ್ರದರ್ಸ್ ಅಂಡ್ ಕಂಪೆನಿ,
[illegible]

ಡಾಕ್ಟರ ವಾಮನ ಗೋಪಾಳರವರ



[illegible]

ಡಾ॥ ಗೌತಮ ರಾವ್ ಕೇಶವರವರ

[illegible]

ಗುಣಬಾರದಿದ್ದರೆ ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

[illegible], S M C

ಬಿಹಾರ್ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ ಆಯುರ್ವೇದಿಯ ಔಷಧಗಳು.

[illegible]

The Behar Chemical Works [illegible]

The Popular Insurance Company, Ltd.

Head Office:—MANGALORE, S India

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD, CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rao, who has developed in him a great deal of life insurance sense........

ಸಪ್ರೂರವರ ಔದಾರ್ಯ—

ಸಪ್ರೂರವರು ತಿಳಿದವರಿಗೆ ತಿಳಿದಿದೆ. ದೇಶದ ಬೇರೆ ಬೇರೆಯವರೂ ಔದಾರ್ಯದಿಂದ ಇಂಗ್ಲೆಂಡಿಗೆ ಹೋಗಿ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಭಾಗವಹಿಸಿದವರು ಇವರು. ಜಾಯಿಂಟ್ ಸಿಲೆಕ್ಟ್ ಕಮಿಟಿಯ ರಿಪೋರ್ಟಿನ ಜನನವಾಗಲು ಕಾರಣರಾದವರಲ್ಲಿ ಇವರೊಬ್ಬರು. ಈಗ ಸಂಯುಕ್ತ ಪ್ರಾಂತ್ಯದ ಲಿಬರಲ್ ಮುಖಂಡರ ಸಮಿತಿಯ ಅಧ್ಯಕ್ಷರಾಗಿರುವರು. ಮೊನ್ನೆ ಕಾನ್‌ಪುರಕ್ಕೆ ತೆರಳಿದ್ದಾಗ, ಅವರಿಗೆ ಅಲ್ಲಿಯ ಮುನಿಸಿಪಲ್ ಬೋರ್ಡು ಒಂದು ಮಾನಪತ್ರವನ್ನರ್ಪಿಸಬೇಕೆಂದು ಬಗೆಯಿತು. ಆದರೆ, ಸಪ್ರೂರವರು ಒಂದು ಪತ್ರವನ್ನು ಬರೆದು "ನಾನು ಈ ಮಾನಪತ್ರಗಳನ್ನೆಲ್ಲ ಪಡೆಯುವುದನ್ನು ನಿಲ್ಲಿಸಿರುತ್ತೇನೆ. ನನ್ನ ಮನೋಧರ್ಮವು ಸದ್ಯಕ್ಕೆ ಹಾಗೆ ನಿಂತಿದೆ. ತಮಗೆ ಉಪಕೃತನೇ" ಎಂದು ತಿಳಿಸಿರುವರು. ನಿಜವಾಗಿಯೂ ಔದಾರ್ಯವಲ್ಲವೇ ಇದು?

'ಹುಟ್ಟುಗುಣ ಗಟ್ಟಹತ್ತಿದರೂ ಬಿಡದು'—

ಎಂಬ ಗಾದೆಯು ಹುಟ್ಟಿ ಸಹಸ್ರಾರು ವರ್ಷಗಳಾದುವೆಂದು ಗಾದೆಯ ಚರಿತ್ರಕಾರರು ಕಂಡುಹಿಡಿದಿದ್ದಾರೆ. ಇದಕ್ಕನುಸಾರವಾಗಿ ಸಾಮಾನ್ಯ ಜನರೇ ಅಲ್ಲ—ಗಾಂಧಿಜಿಯವರೂ ವರ್ತಿಸುತ್ತಾರೆಂದು ತಿಳಿದುಬಂದಿದೆ. ಇಂದೋರಿನ ಹಿಂದೀ ಸಾಹಿತ್ಯ ಸಮ್ಮೇಲನಕ್ಕೆ ಗಾಂಧಿಜೀಯವರನ್ನು ಅಧ್ಯಕ್ಷರನ್ನಾಗಿ ಆರಿಸಿದರು. "ತಾವು ಬರಲೇ ಬೇಕು" ಎಂದು ಗಾಂಧಿಜೀಯವರಿಗೆ ಬರೆದರು. ಅದಕ್ಕೆ ಗಾಂಧಿಯವರು ಹೀಗೆ ಬರೆದಿದ್ದಾರೆ—ನಿಮ್ಮ ಆಮಂತ್ರಣ ತಲುಪಿತು. ಒಂದು ಶರ್ತ ಮಾತ್ರ ಇದೆ. ರಾಷ್ಟ್ರಭಾಷೆಯ ಪ್ರಚಾರಕ್ಕಾಗಿ ಒಂದು ಲಕ್ಷ ರೂಪಾಯಿಯ ಥೈಲಿಯೊಂದನ್ನು ನೀವು ಕೊಡುವಿರಾದರೆ ನಿಮ್ಮ ಆಮಂತ್ರಣವನ್ನು ಸ್ವೀಕರಿಸುವೆನು" ಗಾಂಧಿಯವರು ಹುಟ್ಟಿನಲ್ಲೇ ಬನಿಯಾರಾಗಿರುವುದರಿಂದ ಇಂದೋರಿನವರು ಒಪ್ಪಿರುವರು

ಸೂಜಿಯ ತೂತಿನೊಳಗಿಂದ ಹೋಗುವ ಶ್ರೀಮಂತರು—

ಈ ಲೋಕದಲ್ಲಿರಬಹುದೋ ಎಂದು ಬೈಬಲಿನ ಕರ್ತರು ಬಹು ದೀರ್ಘವಾಗಿ ಆಲೋಚಿಸಿ ಕೊನೆಗೆ ಹೀಗೆ ಬರೆದರು "ಸೂಜಿಯ ತೂತಿನೊಳಗಿಂದ ಒಂದು ಒಂಟೆಯಾದರೂ ಸುಲಭವಾಗಿ ಹೋಗಬಹುದು ಆದರೆ ಐಶ್ವರ್ಯವಂತರಿಗೆ ಅದು ಸುಲಭವಲ್ಲ" ಆದರೆ ತುರ್ಕಿ ದೇಶದ ಮೇಡಂ ಹಲೈಡ್ ಎಡಿಬ್ ಹಾನುಮ್ ಎಂಬವರು ಸೇಟ್ ಜಮ್ನಾಲಾಲ್ ಬಜಾಜರ ಔದಾರ್ಯವನ್ನು ಶ್ಲಾಘಿಸಿ "ಬೈಬಲು ಹೇಳಿರುವುದು ನಿಜವಾದರೂ ಬಜಾಜರಂತಹವರು ಸೂಜಿಯೊಳಗಿಂದ ಹೋಗಲು ಸುಲಭವೇ ಸರಿ" ಎಂದರು

ಬಾಯಿಮಾಡಿದ ತಪ್ಪಿಗೆ ಕಾಲಿಗೆ ಹೊಡೆಯುವವರು

ಎಲ್ಲಿ ನೋಡಿದರೂ ಕಡಮೆಯಾಗಿಲ್ಲ, ಗವರ್ನರರೂ ಕೂಡಾ ಈ ಅಭ್ಯಾಸಕ್ಕೆ ತೊಡಗಿದ್ದಾರಂತೆ. ಜಾವಾ ಪ್ರಾಂತ್ಯದಲ್ಲಿ ಹುಡುಗಿಯರನ್ನು ಕದ್ದೊಯ್ಯುವ ಚಾಳಿಯು ತಲೆದೋರಿದೆಯಂತೆ. ಇಂದು ಕಂಡ ಸುಂದರಿಯರು ನಾಳೆ ಇಲ್ಲ. ನೆನ್ನೆ ಕಂಡ ರಂಭೆಯರು ಇಂದಿಲ್ಲ—ಹೀಗಾಗಿದೆ ಅಲ್ಲಿಯ ಕತೆ. ಈ ರೋಗವನ್ನು ತಡೆಯುವುದಕ್ಕಾಗಿ ಅಲ್ಲಿಯ ಗವರ್ನರರಾದ ಕರ್ನೆಲ್ ಟಾಲ್ಬೋಟರು ಒಂದು ಮಹದುಪಾಯವನ್ನು ಹೂಡಿರುವರಂತೆ. ಯಾವ ಹಳ್ಳಿಯ ಹುಡುಗಿಯು ಕಾಣೆಯಾಗುವಳೋ ಅಲ್ಲಿಯ ಪಟೇಲರನ್ನ ಕೆಲಸದಿಂದ ನಿವೃತ್ತಪಡಿಸಲಾಗುವುದು ಎಂದು ಗವರ್ನರರು ಪ್ರಕಟಿಸಿರುತ್ತಾರೆ. ಎಲ್ಲಾ ತರುಣಿಯರನ್ನು ಪಟೇಲರ ಮನೆಯಲ್ಲಿ ಕಂದಿರಿಸಿ ಕುರಿಗಳನ್ನು ಸಾಕಿದಂತೆ ಮುಂದೆ ಮುಂದೆಯಾಗಿ ಸಾಕಿಪರಾಗದೇ?

ಅತ್ಯದ್ಭುತಕರ ಶೋಧೆಯು—

ಯಾವುದೆಂದು ನಾವು ಈಗ ಪ್ರಶ್ನೆಯಿಟ್ಟರೆ ರೇಡಿಯೋ ಮತ್ತು ರೇಡಿಯೋ ಮೂಲಕ ಚಿತ್ರಪಟಗಳನ್ನು ಒಂದೂರಿನಿಂದ ಇನ್ನೊಂದೂರಿಗೆ ಕಳುಹಿಸುವ ಟೆಲಿವಿಷನ್ ಕ್ರಮವೆಂದು ಯಾರೂ ಹೇಳುವರು. ಆದರೆ ವೇಗದಲ್ಲಿ ಅದಕ್ಕಿಂತಲೂ ಅದ್ಭುತಕರ ಶೋಧೆಯು ನಡೆಯುತಿದೆ. ಫ್ರಾನ್ಸಿನ ಮೆಥ್ಯೂ ಎಂಬವರು ಒಂದು ಆಕಾಶಬಾಣವನ್ನು ತಯಾರಿಸಲಿರುವರು. ಇದು ೪೦ ಸೆಕೆಂಡುಗಳಲ್ಲಿ ೩೦ ೦೦೦ ಅಡಿಗಳ ಮೇಲಕ್ಕೆ ಹಾರಿ, ಅಲ್ಲಿ ಒಡೆದು, ಇದರೊಳಗಿರುವ ಉಕ್ಕಿನ ತಗಡುಗಳು ಮಳೆಯನ್ನು ಕರೆಯುವುವಂತೆ. ಈ ತಗಡುಗಳು

ಸಾಂಬಾರ ವರ್ತಮಾನ.

[“ಸಾಂಬಾರ ವರ್ತಮಾನ”ಗಳಿಗೆ ಮೀಸಲಾಗಿಟ್ಟ ಈ ನಾಲ್ಕು ಕಲಮುಗಳಲ್ಲಿ ಅಲ್ಲಲ್ಲಿನ ನೈಜ ವಾರ್ತೆಗಳನ್ನು ಹಾಸ್ಯರಸಪೂರಿತವಾಗಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ. ಈ ವಾರ್ತೆಗಳನ್ನು ಆಧುನಿಕಾಸ್ಯಪ್ರಿಯರಾದ ಪ್ರಖ್ಯಾತ ಸಾಹಿತಿಗಳೊಬ್ಬರಿಂದ ವಿಶಿಷ್ಟವಾಗಿ ಸ್ವದೇಶಾಭಿಮಾನಿಗೆಂದೇ ಬರೆಸಲಾಗುತ್ತಿದೆ.]

ಆಕಾಶದಲ್ಲಿ ಹಾರಾಡುವುವು. ವೈರಿಗಳು ವಿಮಾನ ಮೂಲಕ ಬಂದು ಬೊಂಬೆಸೆದರೂ ಆ ಬೊಂಬು ಭೂಮಿಯ ಜನರಿಗೆ ತಗಲದೆ ಈ ತಗಡುಗಳಿಗೆ ತಾಗಿ ಬೀಳುವುವು. ಇವರು ಒಂದು ಶೋಧೆಯನ್ನು ನಡೆಸಿ, ನೀರಡಿಯಲ್ಲಿ ಮೂವತ್ತು ಮೈಲುಗಳ ದೂರದಿಂದ ಬರುತ್ತಿರುವ ಸಬ್‌ಮೆರಿನ್‌ನ ಎಚ್ಚರವನ್ನು ಕೊಡುವ ಒಂದು ಯಂತ್ರವನ್ನು ಕಂಡುಹಿಡಿದಿದ್ದಾರೆ. ಇನ್ನು, ಸೆಕೆಂಡಿಗೆ ೬ ಮೈಲುಗಳ ವೇಗದಿಂದ ಓಡುವ ಒಂದು ಆಕಾಶಬಾಣವನ್ನು ತಯಾರಿಸಿ ಚಂದ್ರನನ್ನು ೧೨ ತಾಸುಗಳೊಳಗೆ ತಲಪುವ ಒಂದು ಯೋಜನೆಯನ್ನು ಮಾಡಲಿರುವರು. ಗ್ರಿಂಡೆಲ್ ಮೆಥ್ಯೂರವರು ಇಷ್ಟರಲ್ಲೇ ಸಮಾಧಾನ ಹೊಂದುವುದಿಲ್ಲ. ಮನುಷ್ಯನನ್ನು ಮರಣದ ಬಾಯಿಯಿಂದ ತಾನು ತಪ್ಪಿಸುವೆನೆನ್ನುತ್ತಿರುವರು

ಇಂತಹ ವಿದ್ಯಾರ್ಥಿಗಳು ಇಲ್ಲಿರುವರೇ?

ಡರ್ಬನ್ನಿನ ಮಿ। ಆ ಎಂ ಬಾಪಾ ಎಂಬ ದಕ್ಷಿಣಾಫ್ರಿಕದ ಹಿಂದೀಯ ಯುವಕನು ೧೯೩೫ರಲ್ಲಿ ತನ್ನ ೧೯ನೇ ವರ್ಷ ಪ್ರಾಯದಲ್ಲಿ ಒಂದು ಸಣ್ಣ ಶಾಲೆಯಲ್ಲಿ ಒಂದನೇ ತರಗತಿಗೆ ಸೇರಿಸಲ್ಪಟ್ಟು ಅ—ರ—ಥ—ನ ವನ್ನು ಕಲಿಯುತ್ತಿದ್ದನು ಎರಡು ವರ್ಷದೊಳಗೆ ಅವನು ಅಲ್ಲಿಯ ಶಾಸ್ತ್ರಿ ಕಾಲೇಜಿಗೆ ಸೇರಿಸಲ್ಪಟ್ಟನು. ಹೈಸ್ಕೂಲಿನ ಪಾಠಪಟ್ಟಿಗಳಲ್ಲಿರುವ ಪುಸ್ತಕಗಳೆಲ್ಲವೂ ಅವನ ನಾಲಿಗೆಯ ತುದಿಯಲ್ಲಿ ನಿಂತುವು. ಹೈಸ್ಕೂಲು ವಿದ್ಯಾರ್ಥಿಗಳನ್ನು ಪ್ರತಿಯೊಂದು ಪಾಠದಲ್ಲೂ ಸೋಲಿಸಿದನು ಶಾಲೆಗೆ ಸೇರಿದ ೫ ವರ್ಷಗಳೊಳಗೆ ತನ್ನ ಕಾಲೇಜ್ ವಿದ್ಯಾಭ್ಯಾಸಂಗವನ್ನು ತೀರಿಸಿ ಪ್ರಥಮಸ್ಥಾನದಲ್ಲಿ ನಿಂತಿರುವನು ಇವನ ನೈಪುಣ್ಯವನ್ನು ಕಂಡವರೆಲ್ಲರೂ ಬೆರಗಾಗುತ್ತಿರುವರು

ಏನಿದಾಶ್ಚರ್ಯ! ?

ಕಾಬೂಲಿನ "ಇಸ್ಲಾ" ಎಂಬ ಪತ್ರಿಕೆಯು ಅಫ್ಘಾನಿಸ್ಥಾನದಲ್ಲಿನ ಒಂದು ವಿಚಿತ್ರ ವಾರ್ತೆಯನ್ನು ಪ್ರಕಟಿಸಿದೆ. ಈ ವಿಷಯವು ಸತ್ಯವೆಂದು ಅಲ್ಲಿಯ ಅಧಿಕಾರಿಗಳು ಪರೀಕ್ಷೆಯ ನಂತರ ಹೇಳಿರುವರು ಆರೆ ರೇಕ— ಮಧ್ಯವಯಸ್ಕಳಾಗಿದ್ದ ಸ್ತ್ರೀಯೊಬ್ಬಳು ಅಲ್ಲಿ ಮೃತಳಾದಳು ಅವಳನ್ನು ಸ್ಮಶಾನದಲ್ಲಿ ಹೂಳಿಟ್ಟರು. ಮೂರು ದಿನಗಳ ನಂತರ ಇಬ್ಬರು ಮೂವರು ಕೂಡಿಕೊಂಡು ಅವಳ ಗೋರಿಯ ಮೇಲೆ ನಿಂತು ಕುರಾನು ಓದಲಾರಂಭಿಸಿದರು ಅಷ್ಟರಲ್ಲಿ ಭೂಮಿಯಡಿಯಿಂದ ವಿಚಿತ್ರ ಶಬ್ದವು ಕೇಳಬಂತು. ಯಾರೋ ಕೂಗುತ್ತಿದ್ದಂತೆ ಕೇಳಿಸಿತು ಒಡನೆ ಹಲಕೆಲವರನ್ನು ಕರೆದು ಮಣ್ಣನ್ನು ಅಗೆದುತೆಗೆದರು ಹೆಂಗಸು ಜೀವವಿದ್ದಂತೆ ಕಂಡು ಬಂತು ಅವಳನ್ನು ಮನೆಗೆ ಕರೆದೊಯ್ದು ಶಸ್ತ್ರಕ್ರಿಯೆ ನಡೆಸಿದರು ಈಗ ಸೌಖ್ಯವಾಗಿದ್ದಾಳೆ. ಅವಳೊಡನೆ ವಿಚಾರಿಸಿದಾಗ, ತನ್ನ ಬಳಿ ದೇವ ಗಡ್ಡದವನೊಬ್ಬನು ನಿಂತು ಬೊಬ್ಬಿಡಲು ಹೇಳಿದಂತೆ ಭಾಸವಾಯಿತೆಂದೂ ಅದಕ್ಕಾಗಿ ತಾನು ಬೊಬ್ಬಿಟ್ಟೆನೆಂದೂ ಅವಳು ಹೇಳಿದಳು. ಈ ವಿಚಾರವಾಗಿ ಸ್ಥಳೀಯ ಅಧಿಕಾರಿಗಳು ತನಿಖೆಮಾಡಿ ಈ ವಿಷಯವು "Substantially true" ಎಂದು ತೀರ್ಮಾನಿಸಿರುವರು.

ತೆಲು ಚರ್ಮದ ಪೋಲೀಸರು—

ಇರುವರೆಂದು ಈ ವಾರ್ತೆಯಿಂದ ತಿಳಿದುಬರುವುದು. ಬಕ್ರಿದ್ ಹಬ್ಬದ ದಿನ ಲಕ್ನೋವಿನ ಮುಸಲ್ಮಾನ ಪೋಲೀಸನೊಬ್ಬನನ್ನು ದಾರಿಯ ಒಂದು ಪಕ್ಕದಲ್ಲಿ ಪಹರೆಗೆ ನಿಲ್ಲಿಸಿದ್ದರು ಆದರೆ, ಪೋಲೀಸನಲ್ಲವೇ! ತನ್ನ ಪಹರೆಯ ಕರ್ತವ್ಯವನ್ನು ತ್ಯಜಿಸಿ, ಮೇಲಧಿಕಾರಿಯ ಕಣ್ಣು ತಪ್ಪಿಸಿ ಪ್ರಾರ್ಥನೆಗೆಂದು ಹೊರಟ. ಅಷ್ಟರಲ್ಲಿ ಪೋಲೀಸ ಸುಪರಿಂಟೆಂಡೆಂಟರು ಅವನನ್ನು ಪಹರೆಗೆ ನಿಲ್ಲಿಸಿದಲ್ಲಿಗೆ ಬಂದು ವಿಚಾರಿಸಿದರು ಅಲ್ಲಿದ್ದವರು ಸತ್ಯವನ್ನು ಹೇಳಿದರು. ಸ್ವಲ್ಪ ಕಳೆದು, ಪ್ರಾರ್ಥನೆ ಮುಗಿಸಿ ಪೋಲೀಸನು ತನ್ನ ಸ್ಥಾನಕ್ಕೆ ಬಂದನು. ಅಲ್ಲಿಯವರು ನಡೆದ ಸಂಗತಿಯನ್ನು ತಿಳಿಸಿದರು ಈ ವಾರ್ತೆಯನ್ನು ಕೇಳಿದುದೇ ತಡ—ಪೋಲೀಸನು ಬೋಲ್ಡಿನ ಸ್ಟ್ರೋಕ್ ಹೊಡೆದುಬಿದ್ದನು ತನಗೆ ಮುಂದಕ್ಕೆ ಯಾವ ಶಿಕ್ಷೆಯು ವಿಧಿಸಲ್ಪಡುವುದೋ ಎಂಬ ಭಯದಿಂದ ಈ ಮರಣವಾಯಿತಂತೆ!

ಪೆಟ್ಟಿಗೆಯಲ್ಲೇ ಕುಳಿತು ಆರು ತಿಂಗಳು ಕಳೆದವನು—

ಟ್ರಾಂಕ್ವೆಬಾರ್‌ನ ಬಳಿಯ ತಿರುವಿರಕಾಚಿ ಎಂಬಲ್ಲಿರುವನು ಇವನ ಹೆಸರು ರಾಜುಪಿಳ್ಳೆ ಮೊದಲು ಗ್ರಾಮದ ಪಟೇಲನಾಗಿದ್ದ. ಸರಕಾರದ ಹಣವನ್ನು ದುರ್ವಿನಿಯೋಗಪಡಿಸಿದ. ಪೋಲೀಸರ ವಾರಂಟು ಹೊರಡಿತು. ಆದರೆ ರಾಜು ಕಾಣಸಿಗಲಿಲ್ಲ. ಎಲ್ಲೆಲ್ಲಿ ತನಿಖೆಮಾಡಿದರೂ ಅವನ ಪತ್ತೆಯೇ ಇಲ್ಲದಾಯಿತು ಮೊನ್ನೆ ಅವನನ್ನು ಹಿಡಿದು ವಿಚಾರಿಸಲಾಗಿ ತಾನು ಕಳೆದ ಆರು ತಿಂಗಳುಗಳಿಂದ ಪೆಟ್ಟಿಗೆಯೊಂದರಲ್ಲೇ ಹಗಲಿಡೀ ವಾಸಿಸಿಕೊಂಡು ರಾತ್ರಿವೇಳೆ ಹೊರಗೆ ಹೊರಡುತ್ತಿದ್ದೆನೆಂದು ಒಪ್ಪಿಕೊಂಡ.

ಸುಳ್ಳೂ ಅಲ್ಲ, ಸತ್ಯವೂ ಅಲ್ಲ—

ಎಂದಾಗುವ ಕೆಲವು ವಾರ್ತೆಗಳಿರುವಂತೆ ಈ ವಾರ್ತೆ. ಸಿನೆಮ ಪ್ರಪಂಚದಲ್ಲಿ ಚಾರ್ಲಿಚಾಪ್ಲಿನನೆಂದರೆ ಕೇಳದವರಿಲ್ಲ. ಅವನು ಇತ್ತೀಚೆಗೆ ತನ್ನ ಪ್ರಥಮ ಪತ್ನಿಯಾದ ಮಿಲ್ಡ್ರೆಡ್ ಹೆರಿಸ್ ಎಂಬವಳನ್ನು ತೊರೆದು ಪೌಲೆಟ್ ಗೊಡಾರ್ಡ್ ಎಂಬವಳನ್ನು ವಿವಾಹವಾಗಿರುವನೆಂದು ಎಲ್ಲೆಲ್ಲಿಂದಲೂ ವಾರ್ತೆಗಳಿವೆ ೧೯೩೩ರ ಜೂನ್ ತಿಂಗಳಿನಿಂದಲೇ ಈ ವಾರ್ತೆಯು ಹರಡಿದೆಯಾದರೂ ತಾನು ಅವಳನ್ನು ವಿವಾಹವಾಗಲಿಲ್ಲವೆಂದೇ ಚಾರ್ಲಿಯು ಹೇಳುತ್ತಿರುವನು. ಚಾರ್ಲಿಯ ಪ್ರಥಮ ಪತ್ನಿಯು ಅವನಿಗೊಂದು ತಂತಿಬಿಟ್ಟು "ನಿನ್ನ ದ್ವಿತೀಯ ವಿವಾಹಕ್ಕಾಗಿ ನನ್ನ ವಂದನೆಗಳು" ಎಂದಿರುವಳು ಆದರೂ ಈ ವಾರ್ತೆಯು ಸುಳ್ಳಂತೆ!

ಆಶ್ಚರ್ಯಕರ ಶೋಧೆ

ಸ್ವಾಭಾವಿಕ ಮರಣವೊದಗಿದರೆ ಮನುಷ್ಯನ ಅಂಗಾಂಗಗಳೂ, ಮಿದುಳೂ ಪೂರ್ಣವಾಗಿ ಸತ್ತು ಹೋಗುತ್ತವೆ. ಆದರೆ ಇತ್ತೀಚೆಗೆ ನಡೆಸಿದ ಶೋಧೆಯಿಂದಾಗಿ ಮನುಷ್ಯನ ರುಂಡಮುಂಡಗಳನ್ನು ಬೇರ್ಪಡಿಸಿದರೆ ರುಂಡವು ಹಲವು ತಾಸುಗಳ ವರೆಗೆ ಜೀವಂತವಿರುತ್ತದೆಂದು ತಿಳಿದುಬಂದಿದೆ ಫ್ರಾನ್ಸಿನಲ್ಲಿ ವಾಲೆಂಟೈನ್ ಕೆಥೆರೀನ್ ಎಂಬವಳನ್ನು ಕತ್ತಿಯ ಬಾಯಿಗೆ ಗೊಡ್ಡಿ ಅವಳ ರುಂಡವನ್ನು ಕಡಿದರು. ಅವಳ ರುಂಡವನ್ನು ಮೆಲ್ಲನೆ ಎತ್ತಲು ಹೋದಾಗ ಅದು ಮುಖವು ಕ್ರೌರ್ಯವನ್ನು ಪ್ರದರ್ಶಿಸಿತು ಎಡ್ವರ್ಡ್ ಗೋರ್ಡನ್ ಎಂಬವರು ಈ ಬಗ್ಗೆ ಹೆಚ್ಚಿನ ಪರಿಶೋಧನೆಗಳನ್ನು ಮಾಡಿ ಹೀಗೆ ಹೇಳಿರುವರು "ಎರಡು ರುಂಡಗಳನ್ನು ಬೆಳಕಿನೆದುರು ಹಿಡಿದಾಗ ಅವುಗಳು ಥಟ್ಟನೆ ಕಣ್ಣು ಮುಚ್ಚಿಕೊಂಡವು. ಒಂದು ರುಂಡದ ಬಾಯಿಯಿಂದ ನಾಲಿಗೆಯು ಹೊರಗಾಗಿತ್ತು. ಆ ನಾಲಿಗೆಗೆ ಸೂಜಿಯೊಂದನ್ನು ಚುಚ್ಚಲು ನಾಲಿಗೆಯು ಥಟ್ಟನೆ ಒಳಗೆ ಸೆಳೆಯಲ್ಪಟ್ಟಿತು ಮುಖದಲ್ಲಿ ಅಸಹನೆಯು ವ್ಯಕ್ತವಾಯಿತು ಟೆಲ್ಲರ ಎಂಬ ಮಹಾ ಪುಂಡನನ್ನು ಕತ್ತರಿಸಿಯಿಟ್ಟು ಕೊಂಡು ಅವನ ರುಂಡವನ್ನು ಒಂದು ಕಡೆಯಲ್ಲಿಟ್ಟು ದೂರದಲ್ಲಿ ನಿಂತು ಅವನ ಹೆಸರನ್ನೆತ್ತಿ ಕರೆದಾಗ—ಕರೆಯು ಬಂದತ್ತಕಡೆ ರುಂಡದಲ್ಲಿನ ಕಣ್ಣುಗಳು ತಿರುಗಿದವು. ಅದೇ ರೀತಿ ಮತ್ತೊಂದು ಕಡೆಯಿಂದ ನಿಂತು ಕರೆದಾಗಲೂ ಕಣ್ಣುಗಳು ಹೊರಳಿದುವು ಈ ಶೋಧೆಯಿಂದ ವ್ಯಕ್ತವಾಗುವುದೇನೆಂದರೆ ಮನುಷ್ಯನ ದೇಹವು ಸತ್ತರೂ ಮಿದುಳು ಥಟ್ಟನೆ ಸಾಯುವುದಿಲ್ಲ

ವಧುವು ಬೇಕಾಗಿದ್ದಾಳೆ—

ಎಂದು ಪ್ರಕಟವಾದೊಡನೆ, ತಮ್ಮ ಹೆಮ್ಮಕ್ಕಳ ಭಾವಚಿತ್ರಗಳನ್ನು ವರನಿಗೆ ಕಳುಹಿಸುವ ಪದ್ಧತಿಯು ಎಲ್ಲಿಯೂ ಇದ್ದುದೇ. ಅಂತಹ ಪದ್ಧತಿಯಿಂದಾದ ಹಾಸ್ಯವನ್ನು ಓದಿರಿ—ಸೌತ್ ಶೀಲ್ಡ್ ಎಂಬಲ್ಲಿ ಜೇಮ್ಸ್ ರೋಬರ್ಟ್ ಕಿಂಗ್ ಎಂಬ ೪೫ ವರ್ಷ ಪ್ರಾಯದ ನಿರುದ್ಯೋಗಿಯಿದ್ದ. ಒಂದು ದಿನ "೪೫ ವರ್ಷ ಪ್ರಾಯದ ವಿಧವೆಯು ಬೇಕಾಗಿದ್ದಾಳೆ ಗಂಡ ಯಾವನಿಷ್ಟ. ಕೂಡಲೇ ಬರೆದುಕೊಳ್ಳಬಹುದು" ಎಂದು ತನ್ನ ವಿಳಾಸವನ್ನು ಕೊಟ್ಟ. ಈ ಜಾಹೀರಾತನ್ನು ಓದಿ ಲಿನ್ನೆ ಎಂಬ ವಿಧವೆಯು ಅವನೊಡನೆ ಪತ್ರವ್ಯವಹಾರ

ನಡೆಸಿ, ಅವನ ಭೇಟಿಯಾಗಿ ಅವನಿಗೆ ಗುಪ್ತವಾಗಿ ದ್ರವ್ಯವನ್ನು ಕೊಟ್ಟು, ಅವನನ್ನು ವಿವಾಹಕ್ಕೆ ಸಿದ್ಧನಾಗು ಎಂದಳು. ತಾನು ವಿಧುರನೆಂದೇ ಅವನು ಸಿದ್ಧಾಂತವಾಗಿ ಹೇಳಿಬಿಟ್ಟನು. ದಿನೇ ದಿನೇ ಲಿನ್ನಳಿಂದ ಹಣವನ್ನು ಸುಲಿಯುತ್ತಿದ್ದನೇ ಹೊರತು, ವಿವಾಹಕ್ಕೆ ದಿನವಿಡಲಿಲ್ಲ. ಅಷ್ಟರಲ್ಲಿ ಅವಳಿಗೊಂದು ಪತ್ರವು ತಲುಪಿ ಕಿಂಗನು ವಿವಾಹಿತನೆಂದೂ, ಅವನಿಗೆ ಮೂವರು ಮಕ್ಕಳಿರುವರೆಂದೂ ತಿಳಿಯಲಾಯಿತು ಈಗ ಕೋರ್ಟಿನಲ್ಲಿ ಮಾನನಷ್ಟದ ದಾವೆ ಹೂಡಿದ್ದಾಳೆ. ತಾನು ಅವನ ಪತ್ನಿಯಾಗಿಬಿಟ್ಟಿದ್ದೇನೆಂದು ಲಿನ್ನಳ ಮಾತು.

ಐದು ಮಕ್ಕಳನ್ನು ಹೆತ್ತ ಮುದುಕಿ.

ಇವಳು ಚೀನಾ ದೇಶದ ಕಂಗ್ಸಾನ್ ಎಂಬಲ್ಲಿದ್ದವರು. ಇವಳ ಪ್ರಾಯ ೫೦ ವರ್ಷಗಳು. ಲಿ ಹಿಟ್ಸೂ ಎಂಬ ರೈತನ ಹೆಂಡತಿಯವಳು ಮೊನ್ನೆ ಒಂದೇ ಸಲ ಮೂವರು ಗಂಡುಮಕ್ಕಳನ್ನೂ ಇಬ್ಬರು ಹೆಣ್ಣು ಮಕ್ಕಳನ್ನೂ ಹೆತ್ತಿರುವಳು. ಊರಿನಲ್ಲೆಲ್ಲಾ ಮಹಾ ಕೋಲಾಹಲ ಇವಳನ್ನೂ ಈ ಮಕ್ಕಳನ್ನೂ ನೋಡುವುದಕ್ಕಾಗಿ ಸಾವಿರಾರು ಜನರು ಅತ್ತಹೋಗುತ್ತಿರುವರು ಕೆನಡಾದಲ್ಲಿನ ದಿಯೋನ್ ಕುಟುಂಬದಲ್ಲಿ ಒಬ್ಬಳು ಸ್ತ್ರೀಯೂ ಇತ್ತಲಾಗೆ ೫ ಹೆಣ್ಣು ಮಕ್ಕಳನ್ನು ಒಮ್ಮೆಲೇ ಹೆತ್ತಿರುವಳು

ಮರಣಹೊಂದುವಾಗಲೂ ಜೆ. ಪಿ. ಸಿ ವರದಿಯ ಖಂಡನೆ.

ಶ್ರೀ ಓರ್ಮಣೆಯವರ ಮರಣದೃಶ್ಯವು ಹೃದಯವಿದ್ರಾವಕವಾದುದು. ಡಾ ಅನ್ಸಾರಿಯವರು ಅವರನ್ನು ಉಳಿಸಬೇಕೆಂದು ಬಹಳ ಪ್ರಯತ್ನ ನಡೆಸಿದರೂ ಸಾರ್ಥಕವಾಗಲಿಲ್ಲ ಮರಣಶಯ್ಯೆಯ ಬಳಿ ಡಾ। ಜಕೀರ್ ಹುಸೇನ್, ಫರಿದುಲ್ ಹಕ್ ಮಿತ್ರರು ಇದ್ದರು ಇಬ್ಬರು ಪತ್ರಿಕಾ ಪ್ರತಿನಿಧಿಗಳೂ ಅವರ ಮನೆಯಲ್ಲಿ ಇದ್ದರು. ಬೆಳಿಗ್ಗೆ ಘಂಟೆ ೪-೪೫ಕ್ಕೆ ಓರ್ಮಣೆಯವರ ಉಸಿರು ನಿಂತಿತು ಪ್ರಾಣವು ಹೋಯಿತೆಂದು ಎಲ್ಲರೂ ತಿಳಿದರು ಆದರೆ ಕೆಲವು ನಿಮಿಷಗಳಲ್ಲಿ ಪುನಃ ಅವರು ಚೇತರಿಸಿಕೊಂಡರು ಪುನಃ ಒಂದೂವರೆ ತಾಸಿನ ವರೆಗೆ ಅವರು ಮೃತ್ಯುವಿನೊಡನೆ ಕಾದಾಡಿದರು. ಅವರ ಕಳೇಬರದ ಬಳಿ ಜೆ ಪಿ ಸಿ ವರದಿಯನ್ನು ಖಂಡಿಸಿ ಬರೆಯಲ್ಪಟ್ಟಿದ್ದ ಟೈಪ್ಡ್ ಲೇಖನವೊಂದು ಇದ್ದಿತು ಅದೇ ಅವರ ಮರಣಶಾಸನವೆಂದು ಅವರ ಕುಟುಂಬದವರ ಹೇಳಿಕೆ

ಬುದ್ಧಿಹೇಳುವವರು ಬುದ್ಧಿವಂತರಲ್ಲ—

ಎಂಬುದು ಹೀಗಿದೆ ಲಾಹೋರಿನಲ್ಲಿ ಒಬ್ಬ ಮುನಿಸಿಪಲ್ ಶಾಲಾ ಉಪಾಧ್ಯಾಯರು (ಹೆಸರು ತಿಳಿದುಬಂದಿಲ್ಲ) ತನ್ನ ಕೋಣೆಯ ಬಾಗಿಲಬಳಿಯಿದ್ದ ವಿದ್ಯುತ್ ಸರಿಗೆಯು ಹಾಳಾಗಿದೆಯಾದುದರಿಂದ ಅದನ್ನು ಯಾರೂ ಮುಟ್ಟಬಾರದಾಗಿ ಮನೆಯ ಹುಡುಗಹುಡುಗಿಯರಿಗೂ ಇತರರಿಗೂ ಭಯವನ್ನು ಹುಟ್ಟಿಸಿ ಬುದ್ಧಿಹೇಳಿದರು ಅವರ ಎಚ್ಚರವನ್ನು ಕೇಳಿ ಮನೆಯವರೆಲ್ಲರೂ ಬಹು ಜಾಗ್ರತೆಯಿಂದಲೇ ಇದ್ದರು ಆದರೆ, ಮೊನ್ನೆ ಬುದ್ಧಿ ಹೇಳಿದ ಉಪಾಧ್ಯಾಯರು ಅವಸರದಿಂದ ಒಳಪ್ರವೇಶಿಸುತ್ತಾ ಥಟ್ಟನೇ ಆ ವಿದ್ಯುತ್ ಸರಿಗೆಯನ್ನು ಹಿಡಿದರು ಅವರ ಬೊಬ್ಬೆ ಕೇಳಿ ಒಳಗಿನವರು ಓಡಿಬಂದರು ವ್ಯಕ್ತನು ಹಿಡಿದಿದ್ದ ಸರಿಗೆಯು ಅವನ ಕೈಯಲ್ಲೇ ಇತ್ತು ಒಳಗಿಂದ ಓಡಿಬಂದವರು ಅದನ್ನು ಅವನ ಕೈಯಿಂದ ತಪ್ಪಿಸಬೇಕೆಂದು ಆತುರಿಸಿದರೂ ಬಳಿಯಲ್ಲಿದ್ದವನೊಬ್ಬನು ಅರ್ಭಟಿಸುತ್ತಾ, "ಮುಟ್ಟಬೇಡಿ, ನೀವೂ ಸಾಯುವಿರಿ ಎಂದನು ದೈವವಶಾತ್ ಯಾರೂ ಅದನ್ನು ಮುಟ್ಟಲಿಲ್ಲ.

ಕಲ್ಕತ್ತಾ ನೋಯಿರರಾದ ನಳಿನಿರಂಜನ್ ಸರಕಾರರವರು—

ಸುಪ್ರಸಿದ್ಧರು. ಅವರ ಮೇಲೊಂದು ದಾವೆಯು ಕಲ್ಕತ್ತಾ ಕೋರ್ಟಿನಲ್ಲಿ ದಾಖಲಾಗಿ ವಿಚಾರಿಸಲ್ಪಡುತ್ತಿದೆ ಪ್ರೊಫೆಸರ ಪ್ರಮಥನಾಥ ಸರಕಾರ ಎಂಬವರ ಪತ್ನಿ ಶ್ರೀಮತಿ ವೀಣಾ ಸರಕಾರಳೊಡನೆ ವ್ಯಭಿಚಾರ ಸಂಪರ್ಕವನ್ನು ಬೆಳೆಸಿದರೆಂದು ಅವರ ಮೇಲೆ ಅಪವಾದ ಹೊರಿಸಲಾಗಿದೆ ಶ್ರೀಯುತರು ಪರದೇಶಗಳಿಗೆ ಹೋಗುವಾಗಲೂ ಅವಳಿಗೆ ಪತ್ರಗಳನ್ನು ಬರೆಯುತ್ತಿದ್ದು, ರಹಸ್ಯವಾಗಿ ಪ್ರಣಯಲೀಲೆಯಲ್ಲಿ ದಿನಹರಣ ಮಾಡುತ್ತಿದ್ದರೆಂಬುದನ್ನು ಪುಷ್ಟೀಕರಿಸುವ ದಾಖಲೆಗಳ ಸಮೇತ ಅವಳ ಗಂಡನು ದಾವೆ ಹೂಡಿರುವನು. ವಾದಿಯ ಭಾವ ಶ್ರೀ ವಿನೋದ ಬಿಹಾರಿ ವಿಶ್ವಾಸರು ಸಾಕ್ಷಿಯಾಗಿ ಬಂದು ಶ್ರೀ ಸರಕಾರರು ವೀಣಾಳೊಡನೆ ಮಿತ್ಯ ಸಂಪರ್ಕದಲ್ಲಿದ್ದುದನ್ನು ತಾನು ಕಂಡಿರುವೆನೆಂದು ಹೇಳಿರುವರು ತನ್ನ ಪತಿಯು ತನಗೆ ಬರೆದ ಕೆಲವು ಪತ್ರಗಳನ್ನು ಕೋರ್ಟಿನೆದುರು ಇಡಲು ತನ್ನ ಅಡ್ಡಿಯಿಲ್ಲವೆಂದು ವೀಣಾಳು ಹೇಳಿರುವಳು.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪ್ಹಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ - (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ - (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ - (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ - (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕ ನಿಗ್ರಹ ಮಾತ್ರೆಗಳನ್ನು ಉಪಯೋಗಿಸಲಿಕ್ಕೆ
ಜೀವನದ ಜಯಶೀಲತೆಯ ಏನೆಯೆಂದು ... ದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನೊಂದಕ್ಕೆ ರೂ 1
ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ... ಕಾಮಶಾಸ್ತ್ರವನ್ನೋದಿರಿ.

Agents —Shah Company Manhal Rd.
Pearl & Sons Ma...

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು ಸಂ. ಸ್ವ.

Writing an Advertisement Advertisements make both conscious and sub-conscious appeal and should be beautiful, sentimental or humorous not blatant or vulgar crisp in their appeals whether of wording or design not too highly coloured metaphorically, and with a reason given wherever possible) that appeals to the practicable mind a mere statement of the name of the article or place is insufficient

Let you ... Advertise ... by —The Publicity Department Swadeshabhimani, Mangalore

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿಯು ಈ ಸಂಸ್ಥೆಯು ವರ್ಷಂಪ್ರತಿ ದೃಢವಾಗಿ ಬೆಳೆಯುತ್ತಿರುವುದಕೆ ಸಾಕ್ಷಿಯಾಗಿದೆ. ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇದರಲ್ಲಿ ಸಾರ್ವಜನಿಕರು ಇಟ್ಟಿರುವ ವಿಶ್ವಾಸಕ್ಕೆ ನ ಸ್ಥಾಯಿ ಸೇವೆಗೆ ಇದೇ ದಾಖಲೆಯಾಗಿದೆ

19 ಆಫೀಸುಗಳಿರುವ ಹೆಸರಾದ ಬೇಂಕು
ನಮ್ಮ ಆಫೀಸುಗಳು—
ಬೊಂಬಾಯಿ (ಫೋರ್ಟ ಮತ್ತು ಮಾರ್ಕೆಟ್) ಹುಬ್ಬಳ್ಳಿ, ಮಂಗಳೂರು, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲ ಅಲ್ಲೆಪ್ಪೆ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರ ಇತ್ಯಾದಿ ಕಡೆಗಳಲ್ಲಿವೆ

ಪ್ರಗತಿಸೂಚಕ ಪಟ್ಟಿ.

ವಂತಿಗೆ ಬಂಡವಾಳ	ತೆತ್ತ ಬಂಡವಾಳ	ರಿಜರ್ವ್	ಡಿಪೋಸಿಟ್	ವ್ಯವಹಾರದಲ್ಲಿರುವ ಬಂಡವಾಳ
1916	1916	1916	1916	1916
2,25,000	2,00,000	89,000	3,60,000	6,83,000
1920	1920	1920	1920	1920
3,00,000	3,00,000	1,61,000	8,99,000	14,19,000
1924	1924	1924	1924	1924
3,00,000	3,00,000	2,62,000	18,10,000	24,69,000
1928	1928	1928	1928	1928
3,00,000	3,00,000	3,88,000	37,42,000	46,99,000
1932	1932	1932	1932	1932
6,00,000	3,30,000	4,31,000	55,46,000	65,62,000
1934	1934	1934	1934	1934
6,00,000	3,91,000	4,50,000	58,62,000	73,49,000

ಗಿರಾಕಿಗಳಿಗೆ ಎಲ್ಲಾ ತರದ ಸೌಕರ್ಯಗಳು
ಸುಲಭ ರೀತಿಯ ವ್ಯಾಪಾರ ವಹಿವಾಟುಗಳು

ನಮ್ಮ ಮುಂದಾಳುಗಳು

ಮೊನ್ನೆ ಶನಿವಾರ ದಿವಸ ಗವರ್ನಮೆಂಟು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಪ್ರಸಿದ್ಧ ಯಕ್ಷಗಾನ ಸಭೆಯು ಜರಗಿತು. ಜಿಲ್ಲೆಯ ಹಲವು ಮುಂದಾಳು ಅರ್ಥಗಾರರೂ ಸೇರಿದ್ದರು. ಆ ದಿನ ಮುಂದಾಳುಗಳೆಲ್ಲ ದವರೆಂದರೆ–ಅಧ್ಯಕ್ಷರಾಗಿದ್ದ ಪಂಡಿತ ಸೀತಾ ರಾಮಾಚಾರ್ಯರು. ಅವರಂಥ ಬಾಯಿ ಹರಕರನ್ನು ಏಕೆ ಅಧ್ಯಕ್ಷರಾಗಿ ಮಾಡಿದರೋ ತಿಳಿಯದು. ಅಂತು ಪರಿಣಾಮವನ್ನು ಮುಂದಾಳು ಅರ್ಥಗಾರರು ಉಣ್ಣಬೇಕಾಯಿತು ಆ ದಿನ ಕರ್ಣಪರ್ವದಲ್ಲಿ ಕರ್ಣನ ಅರ್ಥವನ್ನು ಶ್ರೀ। ಕುಬಣ್ಣ ರಾಯರಂಥ ಬಿ. ಎ ಬಿ ಎಲ್ ಅರ್ಥಗಾರರು ವಹಿಸಿದ್ದರೂ ಅವರ ಅರ್ಥವು ಅಧ್ಯಕ್ಷರಿಗೆ ರುಚಿಸಲಿಲ್ಲವಂತೆ. ಶ್ರೀಯುತರಿಗೆ ಮುಂದಾಳುಗಳೆಲ್ಲದ ಅಧ್ಯಕ್ಷರು, ನೀವು ಇನ್ನು ಮುಂದೆ ಇಂಥ ಮುಖ್ಯ ಪಾತ್ರವನ್ನು ವಹಿಸಲು ನಾಲಾಯಕ್–ಎಂದರಂತೆ ಕೋರ್ಟಿನಲ್ಲೂ ವಾದಿಸಲು ಸಮರ್ಥರಾಗಿದ್ದ ಶ್ರೀ। ಕುಬಣ್ಣ ರಾಯರು, ಚಿಲ್ಲರೆ ಯಕ್ಷಗಾನ ಸಭೆಯಲ್ಲಿ ವಾದಿಸಲು ಅಸಮರ್ಥರೆಂದು ತೀರ್ಮಾನಿಸಿದರೆಂದು ತಿಳಿಯಲು–ಯಕ್ಷಗಾನ ವಿಶ್ವಕ್ಕೆ ಬೇಸರವಾದೀತು ಶ್ರೀ। ಅಧ್ಯಕ್ಷರು ತಮ್ಮ ನಿರ್ಧಾರವನ್ನು ಲಾ ರಿಪೋರ್ಟುಗಳನ್ನು ಕಂಡು ಮಾಡಲಿಲ್ಲವೆಂದು ನಾವು ಸ್ಪಷ್ಟವಾಗಿ ನುಡಿಯಬಲ್ಲೆವು

\+ + + +

ಮಂಗಳೂರಿಗೆ ಶ್ರೀ। ಬಾಬುರಾಜೇಂದ್ರ ಪ್ರಸಾದರು ಬರುವರೆಂದು ಕೇಳಿ ಯಾರಿಗೂ ಆನಂದವಾಗದಿರದು ಶ್ರೀಮತಿ ಕಮಲಾ ದೇವಿಯವರು ಖುದ್ದು ವಾರ್ಧಾಕ್ಕೆ ಹೋಗಿ ಅವರನ್ನು ಆಮಂತ್ರಿಸಿದ್ದಾರೆ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ (ಅಖಿಲ) ರಾಷ್ಟ್ರೀಯ ಪರಿಷತ್ತನ್ನು ಮಂಗಳೂರಲ್ಲಿ ಜರಗಿಸುವರು ಹಣ ಕೊಡುತ್ತಲಿದೆ ಈ ಉತ್ಸಾಹನನ್ನು ಕಂಡು ಸಂತೋಷಪಡಬೇಕು ಆದರೆ–ಇನ್ನೂ ಕಾಂಗ್ರೆಸು, ಪರಿಷತ್ತುಗಳಂತಹ ಸಭೆಗಳನ್ನು ಕರೆಯುವ ಕಾರಣವನ್ನು ಮಾತ್ರ ಅರಿಯೆವು ಇನ್ನೂ ನಮ್ಮ ಮುಖಂಡರಿಗೆ ಇಂಥ ಸಂತೆಗಳನ್ನು ಜರಗಿಸುವ ಹುಚ್ಚು ಬಿಟ್ಟಿಲ್ಲವೇ? ಇದು ಕೆಲಸಗಾರರನ್ನು ಮಾತ್ರ ಕೂಡಿಸಿ ಕೆಲಸಕ್ಕೆ ಬರುವ, ಕೆಲಸಕ್ಕೆ ತರುವ, ಠರಾವು ಮಾಡುವ ಬದಲು–ಸಂತೆಗಳನ್ನು ಜರಗಿಸುವ ಕಾಲವಲ್ಲ ಒಂದು ಕಾಂಗ್ರೆಸಿನಿಂದ ಎಷ್ಟು ಲಕ್ಷ ರೂಪಾಯಿ ಧ್ವಂಸವಾಗುತ್ತಿದೆ ಅಲ್ಲಿ ಸೇರುವ ಜನರಲ್ಲಿ ಕೆಲಸಗಾರರೆಷ್ಟು? ಈ ಸಂತೆಯಿಂದ ಬ್ರಿಟನು ಅಂಜುವ ದಿನ ಹೋಯಿತ ಇನ್ನು ಮಂಗಳೂರಿನ ಸಂತೆಗೆ ಅವರು ಅಂಜುವರೇ?

\+ + + +

ಶ್ರೀಮತಿ ಕಮಲಾದೇವಿಯವರು ತೊಡಗಲಿರುವ ಈ ನವೀನ ಸಾಹಸಗಳಲ್ಲಿ–ಶ್ರೀ। ಕಾರ್ನಾಡು ಸದಾಶಿವ ರಾಯರ ಹೆಸರಾಗಲಿ, ಕೋಟಿಚೆನ್ನಯ ಭಂಡಾರಿಗಳ ಹೆಸರಾಗಲಿ ಕಾಣುವುದಿಲ್ಲ ಪ್ರಾಯಶಃ ಅವರು ಕೆಲಸಗಾರರಲ್ಲವೆಂದು ಹಿಂದುಳಿದಿರಬೇಕು

\+ + + +

ಶ್ರೀಮತಿಯವರು ಗ್ರಾಮಸುಧಾರಣೆಗೆ ಕೈಯಿಕ್ಕುವರೆಂದೂ, ಸೋಶಲಿಸ್ಟ್ ಪಂಗಡ ಮಾಡುವರೆಂದೂ ಕೇಳಿದ್ದೇವೆ ಅವರ ಉತ್ಸಾಹವು ನಿಜವಾದರೆ ಅವರು ತಮ್ಮ ಹುಟ್ಟೂರಾದ ದಕ್ಷಿಣಕನ್ನಡಕ್ಕೇನೆ ಶ್ರಮವಹಿಸಿದರೆ ಲೇಸು.

ಬಡವರು, ಹಳ್ಳಿಗರು ಪೇಟೆಯಲ್ಲಿಲ್ಲವೆಂದು ತಿಳಿದು–ಸ್ವತಃ ತಮ್ಮ ಮೋಟರು ಕಾರಿನಿಂದ ಇಳಿದು ಹಳ್ಳಿಗಳಲ್ಲಿ ಹೋಗಿ ವಾಸ ಮಾಡಿ ನೋಡಲಿ ಉಪನ್ಯಾಸ ಮಾಡಿ ದೇಶಸೇವಕರೆನಿಸುವ ಕಾಲ, ಮುಖಂಡರ ಪಾಲಿಗೂ ಹೋಗಿದೆಯೆಂಬುದು, ನಮ್ಮ ಮುಖಂಡರೆಲ್ಲ ತಿಳಿದಿದ್ದರೆ ಲೇಸಿತ್ತು

ಸೋಶಿಯಲಿಸಂ–ಎಂದರೆ ಸಮತಾವಾದವಂತೆ ಅದರಲ್ಲಿ ಧನಸತ್ತಾವಾದಕ್ಕೆ ಎಲ್ಲಿಯ ಅವಕಾಶ' ಶ್ರೀಮತಿಯವರೂ, ಅವರ ಸೋಶಲಿಸ್ಟ್ ಗೆಳೆಯರೂ ತಮ್ಮ ಜೀವನದಲ್ಲಿ, ತಾವು ಧನಸತ್ತೆಗೆ ವಿರೋಧಿಗಳೆಂದು ತೋರಿಸಿ ಜನರ ವಿಶ್ವಾಸವನ್ನು ತಮ್ಮ ಕಡೆಗೆ ಸೆಳೆಯಲಾರರೇನು'

\+ + + +

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ। ಸುಬ್ರಮಣ್ಯ ಭಟ್ಟರ ಕರ್ನಾಟಕ ಪ್ರಾಂತ್ಯದ ಪ್ರಶ್ನೆ ತಂದರೆಂದೂ, ಸರಕಾರವು ಕರ್ನಾಟಕವು ಪ್ರತ್ಯೇಕವಾಗಿರಲು ಅದರ ಆರ್ಥಿಕ ನೆಲೆಗಟ್ಟು ಸಾಲದೆಂದೂ ಹೇಳಲು ತಮ್ಮ ಠರಾವನ್ನು ಹಿಂದೆಗೆದರೆಂದೂ ಕೇಳುತ್ತೇವೆ

ಈ ವಿಚಾರವಾಗಿ ಕರ್ನಾಟಕಕ್ಕೆ ಸಾಕಷ್ಟು ಆರ್ಥಿಕ ಬಲವಿದೆ–ಎಂದು ಕರ್ನಾಟಕ ಏಕೀಕರಣ ಸಮಿತಿಯವರು ದಾಖಲೆಯನ್ನು ಸಹ ತೋರಿಸಿದ್ದರು

ಶ್ರೀ ಸುಬ್ರಮಣ್ಯ ಭಟ್ಟರ ಶೂರತನವು ಮೆಚ್ಚುವಂತಹದೇ–ಆದರೆ ಅದು 'ಭಂಡವಾಳವಿಲ್ಲದ ಬಡಾಯಿಯೆಂದಿಷ್ಟು ವ್ಯಥೆಪಡಬೇಕಾಗಿದೆ' ಕೌನ್ಸಿಲು ಮೆಂಬರಿಕೆಯ ಜವಾಬುದಾರಿಯನ್ನು ಹೊಂದುವವರು ಇಂಥ ಪ್ರಶ್ನೆಯನ್ನು ತರುವಾಗ ಅದರ ಸಂಖ್ಯಾಪ್ರಮಾಣಗಳಿಲ್ಲದೆ ಅಲ್ಲಿಗೆ ಹೋದರೇಕೋ ತಿಳಿಯದು!

ಆರ್ಥಿಕ ಬಲವಿಲ್ಲವೆಂದೊಡನೆ ಇವರು ಬೆಪ್ಪಾದರಾದರೆ–ಇವರ ಬುದ್ಧಿ ಏಕೀಕರಣದ ವಿಷಯವಾಗಿ ಎಷ್ಟು ಓಡಿದೆ–ಎಂಬುದು ಸ್ಪಷ್ಟವಾಗುವುದು

Old! *Famous*

East & West Insurance Co., Limited

Bonus Declard Rs 15/- Per Thousand Per Annum

Insurance in Force About	Rs 90,00,000
Annual Premium Income Over	Rs 4,50 000
Life Fund Over	Rs 7 00,000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest, influential gentlemen

Inquiries Solicited — **Messrs Padubidri Bros ,** *Chief Agents,* PADUBIDRI : BOMBAY

OR

Head Office **East & West Buildings,** Apollo Street, Fort Bombay

ಶ್ರೀ।ಶೆರ್ವಾಣಿಯವರು ಕಾಲವಶರಾದರು!

ಉಜ್ವಲ ರಾಷ್ಟ್ರಭಕ್ತನ ಮರಣ!

ದೇಶಕ್ಕೆ ಮಹಾ ನಷ್ಟ! — ಭಾರತದಲ್ಲಿ ಸಂತಾಪ!

ಸಂಯುಕ್ತ ಪ್ರಾಂತ್ಯದ ಉಜ್ವಲ ರಾಷ್ಟ್ರಭಕ್ತರೂ ರಾಷ್ಟ್ರಸಭೆಯ ಧುರೀಣರೂ ಆದ ಶ್ರೀ। ಟಿ ಕೆ ಶೆರ್ವಾಣಿಯವರು ಕಳೆದ ಶುಕ್ರವಾರ ದಿನ ಮುಂಜಾನೆ ೬ ಘಂಟೆಗೆ ದಿಲ್ಲಿಯಲ್ಲಿ ತನ್ನ ೪೭ನೇ ವರ್ಷ ಪ್ರಾಯದಲ್ಲಿ ಅಕಾಲ ಮೃತ್ಯುವಿನ ವಶವಾದರು

ತಸಾದಕ್ ಅಹ್ಮದ್ ಖಾನ್ ಶೆರ್ವಾಣಿಯವರು ಆಲಿಘರದ ಪ್ರಸಿದ್ಧ ಕುಟುಂಬದಲ್ಲಿ ಜನಿಸಿದರು ಅಲ್ಲಿನ ಎಂ ಎ ಒ ಕೊಲೇಜಿನಲ್ಲಿ ವಿದ್ಯಾಭ್ಯಾಸವನ್ನು ಹೊಂದಿದರು ಚಿಕ್ಕಂದಿನಿಂದಲೂ ಅವರು ಸುಪ್ರಖ್ಯಾತರು.



ಶ್ರೀ। ಶೆರ್ವಾಣಿಯವರು.

ಒಳ್ಳೆಯ ವಾಗ್ಮಿಗಳೂ ಆಟಗಾರರೂ ಆಗಿದ್ದರು. ೧೯೧೦ರಲ್ಲಿ ಕೊಲೇಜಿನಲಿ ಒಂದು ಪ್ರಚಂಡ ಮುಷ್ಕರವು ತಲೆದೋರಿತು ಅದರ ಮುಖಂಡರು ಶ್ರೀ। ಶೆರ್ವಾಣಿಯವರಾಗಿದ್ದರು. ಇವರ ಭವಿತವ್ಯತೆಯು ಇವರ ಬಾಲ್ಯದಲ್ಲೇ ದೃಗ್ಗೋಚರವಾಗಿತ್ತು ತನ್ನ ಡಿಗ್ರಿಯನ್ನು ಪಡೆದಾದ ಮೇಲೆ ಇವರು ಇಂಗ್ಲೆಂಡಿಗೆ ತೆರಳಿ ಕೇಂಬ್ರಿಜ್‌ನಲ್ಲಿ ವಕಾಲತನ್ನು ಕಲಿತರು

ಆಲಿಘರದ ವಕೀಲರಲ್ಲಿ ಶೆರ್ವಾಣಿಯವರು ಹೆಸರುವಾಸಿಗಳು ಸಂಕುಚಿತ ಸ್ವಭಾವಕ್ಕೆ ತಿಲಾಂಜಲಿಯನ್ನಿತ್ತು ಮುಂದಡಿಯಿಟ್ಟ ಹಲವು ಮುಸ್ಲಿಮರಲ್ಲಿ ಇವರು ಅಗ್ರಗಣ್ಯರು ಆಲಿಘರದಲ್ಲಿ ರಾಷ್ಟ್ರೀಯತಾ ಭಾವನೆಯನ್ನು ಪ್ರಚುರಗೊಳಿಸಿದವರೂ ಇವರೇ

ಮಹಾತ್ಮಾಜೀಯವರ ಸ್ವಾತಂತ್ರ್ಯದ ಕಡೆಗೆ ಕಿವಿಗೊಟ್ಟು ಆಲಿಘರದಲ್ಲಿ ನೂತನ ಚರಿತ್ರೆಯನ್ನು ರಚಿಸಲು ಶೆರ್ವಾಣಿಯವರು ಪ್ರೇರಕರಾದರು ಅವರು ತನ್ನ ವಕಾಲತನ್ನು ತ್ಯಜಿಸಿ ಗಾಂಧಿಜೀಯವರ ಅನುಯಾಯಿಗಳಾದರು ಪಂಡಿತ ಮೋತಿಲಾಲ ನೆಹರುಗಳೇ ಮೊದಲಾದವರ ಒಡನಾಡಿಯಾಗಿ ಅನೇಕ ಸಲ ಸೆರೆಯ ಪಾಲಾದರು ಹಿಂದೂ ಮುಸ್ಲಿಮ್ ಐಕ್ಯಕ್ಕಾಗಿ ಅಂದು ಪೂರ್ಣ ತ್ಯಾಗಮಾಡಿ ಚಳವಳವನ್ನು ಹೂಡಿದವರಲ್ಲಿ ಇವರೂ ಮುಂದಾಳುಗಳಾಗಿದ್ದರು ನ್ಯಾಯವಿಧಾಯಕ ಸಭೆಗೆ ಹೊಕ್ಕು ದೇಶಕ್ಕಾಗಿ ಬಹುವಾಗಿ ಕಾದಾಡಿದರು

ಎಸೆಂಬ್ಲಿಯಲ್ಲಿ ಕುಳಿತು ಏನೂ ಪ್ರಯೋಜನವಾಗದಿದ್ದುದನ್ನು ಕಂಡು ಅವರು ಅಸಹಕಾರ ಚಳವಳದಲ್ಲಿ ಪುನಃ ಭಾಗವಹಿಸಿದರು ವರ್ಕಿಂಗ್ ಕಮಿಟಿಯ ಸದಸ್ಯರೊಬ್ಬರಾಗಿ ಭಾಷಣಮಾಡುತ್ತಿದ್ದಾಗ ಸೆರೆ ಹಿಡಿಯಲ್ಪಟ್ಟು ವಲ್ಲಭಭಾಯಿ ಪಟೇಲರೇ ಮೊದಲಾದವರೊಡನೆ ಸೆರೆಯ ಪಾಲಾದರು

ನಮಗೆ ಬರೇ ಮುಂದಾಳುಗಳ ಉಪಯೋಗವಿಲ್ಲ ತಮ್ಮ ಕರ್ತವ್ಯದ ಭಾರ, ಕೂಲಂಕಷ ತಿಳಿದ ತಜ್ಞರು ಬೇಕು

\+ + + +

ನಮ್ಮ ಬೋರ್ಡಿನ ಬಜೆಟು ಸಭೆಯು ಈ ವರುಷದಿಂದ ಮುಂದಿನ ವರ್ಷಕ್ಕೆ ಹಾರಿದೆ ಎಪ್ರಿಲಿನಲ್ಲಿ ಅದನ್ನು ಮಾಡುವರೆಂದು ವರ್ತಮಾನ

ಎರಡೂ ವರುಷಗಳ ಅಂದಾಜುಪಟ್ಟಿಯನ್ನು 1936ರ ಮಾರ್ಚಿಯಲ್ಲಿ ಮಾಡಿದರೆ ಎಷ್ಟು ಶ್ರಮ ಉಳಿಯುವುದಿಲ್ಲ

\+ + + +

ನಮ್ಮ ಜಿಲ್ಲೆಯ ಉಪಾಧ್ಯಾಯರೆಲ್ಲ ಈಗ ಚೆನ್ನಾಗಿ ಎಚ್ಚತ್ತಿದ್ದಾರೆ ಕಾರಣ ಜಿಲ್ಲಾ ಬೋರ್ಡಿನ ಡಿ ಇ ಓ, ಕಾರ್ಯದರ್ಶಿಗಳು ಸೇರಿ ದಿನಕ್ಕೊಂದೊಂದು ಎಂಬಂತೆ ಪತ್ರಗಳಿಂದ ಚುಚ್ಚಿ–ಅವರನ್ನು ಎಚ್ಚರಿಸುತ್ತಲಿದ್ದಾರೆ ಮೊದಲು ಸೆಂಟರಿನಿಂದ ಕಾಸು ಖರ್ಚಿಲ್ಲದೆ ಬಟವಾಡೆಯಾಗುತ್ತಿದ್ದ ಕಾಗದಗಳೆಲ್ಲ ಟಪ್ಪಾಲು ಮೂಲಕವೇ ಈಗ ಓಡುತ್ತಿವೆ ಟಪ್ಪಾಲು ಖಾತೆಗೆ ಅನುಕೂಲವಾಗಲೆಂದೋ ಮಾಸ್ತರರಿಗೆ ಪತ್ರವ್ಯವಹಾರದ ಪದ್ಧತಿಯನ್ನು ಕಲಿಸಲೆಂದೋ ಹೀಗೆ ಆರ್ಡರು ಹೊರಡುತ್ತಿರಬೇಕು. ಇನ್ನೂ ಒಂದು ಧೋರಣೆ ಒಳಿತಿದೆ ಇಬ್ಬರೂ ಈ ರೀತಿ ಪತ್ರವ್ಯವಹಾರ ಬೆಳಸಿದರೆ ವಿಪರೀತ ಖರ್ಚಾಗುವುದೆಂದು ಹಳ್ಳಿ ಶಾಲಾ ಮಾಸ್ತರರು ಬರೆಯುವ ಅನಾವಶ್ಯಕ(?)ದ ಪತ್ರಗಳಿಗೆ ಆಫೀಸಿನಿಂದ ಉತ್ತರವು ಹೊರಡುವುದೇ ಇಲ್ಲವಂತೆ ಬೋರ್ಡು ಆಫೀಸಿನಿಂದ ಅರ್ಜೆಂಟು ಕಾಗದಗಳು ಹೊರಬೀಳುತ್ತಲೇ ಇವೆ ಮಾಸ್ತರರು ಬರೆಯುವ ಪತ್ರವ್ಯವಹಾರಗಳ ಉತ್ತರವನ್ನು ಹಿಂದೀ ಸ್ವರಾಜ್ಯ ಸಿಕ್ಕುವುದರೊಳಗೆ ಸಲಿಸಿದರೆ ಸಾಕೆಂದು ನಿರ್ಧರಿಸಿದ್ದಾರೆ —

ಶಿಸ್ತನ್ನು ಹೇಳಿಕೊಡುವವರಿಗೆ ಸ್ವತಃ ಶಿಸ್ತು ಬೇಡ–ಎಂಬುದಕ್ಕೆ ಇದೊಂದೇ ನಿದರ್ಶನ ಸಾಲದೇ?

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ, ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ ನೀವೂ ನಮ್ಮಲ್ಲಿಗೆ ಬರಬಹುದು_ತೃಪ್ತಿ ಹೊಂದಬಹುದು ಕೊಟ್ಟದರೆ ಪಡೆಯಬಹುದು

ಪ್ರಕಾಶಿಸುವ ಹೃದಯವುಳ್ಳ ವಿಚಿತ್ರ ಸ್ತ್ರೀ!

ಆತ್ಮವು ದೃಗ್ಗೋಚರ ವಸ್ತುವಾಗುವುದೇ?

ಇಟಲಿಯಲ್ಲಿ ಅನ್ನಾಮೊರಾನೋ!

ವಿಜ್ಞಾನಪ್ರಪಂಚವು ಕಂಗೆಟ್ಟಿದೆ!

ವಿಚಿತ್ರ ವಾರ್ತೆಯಿದು—ಇಟಲಿಯ ಪಿರಾನೋ ಎಂಬಲ್ಲಿ ಅನ್ನಾಮೊರಾನೋ ಎಂಬ ಹೆಸ್ಸಳೊಬ್ಬಳು. ಅವಳು ನಿದ್ರಿಸಿದಾಗ ಅವಳ ಹೃದಯದಿಂದ ಒಂದು ವಿಚಿತ್ರ ಪ್ರಕಾಶ—ಇಡೀ ಕೋಣೆಯು ದೇದೀಪ್ಯಮಾನವಾಗುವುದು—ವಿಜ್ಞಾನಿಗಳು ಶೋಧ ನಡೆಸಿದರು—ಕಾರಣವನ್ನೇನೋ ಕೊಟ್ಟಿರುವರು—ಆದರೂ ಕಂಗೆಟ್ಟಿರುವರು ಹಿಂದೂ ಸಚಿತ್ರ ಸಾಪ್ತಾಹಿಕದಲ್ಲಿನ ಲೇಖನವನ್ನಾಧರಿಸಿ ಇದನ್ನು ಬರೆಯಲಾಯಿತು. ಸಂ. ಸ್ವ.

ಇಟಲಿಯ ಟ್ರೀಸ್ಟ್ ಎಂಬಲ್ಲಿ ಪಿರಾನೋ ಎಂಬ ಸಣ್ಣ ನಗರ. ಅಲ್ಲಿ ಗಂಡ ಹೆಂಡಿರಿಬ್ಬರು ಮೀನು ಹಿಡಿದು, ಅವುಗಳನ್ನು ಮಾರಿ, ದೊರೆತ ಹಣದಿಂದ ಕಾಲಹರಣ ಮಾಡುತ್ತಿದ್ದರು ಹದಿನಾರು ಮಕ್ಕಳ ತಂದೆತಾಯಿಗಳಾಗಿ ಅವರು ಹಲವರ ತೋರ್ಬೆರಳ ವ್ಯಕ್ತಿಗಳಾಗಿದ್ದರು

ಅನ್ನಮೊರಾನೋ ಎಂದು ಪತ್ನಿಯ ಹೆಸರು. ಮೊದಲಿನಿಂದಲೂ ಉಬ್ಬಸದಿಂದ ಪೀಡಿತಳವಳು ಹಲವು ವಿಧದ ಔಷಧಿಗಳನ್ನುಪಯೋಗಿಸಿದಳು ಆದರೂ ಗುಣ ಹೊಂದಲಿಲ್ಲ ಕಳೆದ ವರ್ಷ ಅವಳ ಪರಿಸ್ಥಿತಿಯು ತೀರ ಕೆಟ್ಟುಹೋಗಿ ಅವಳನ್ನು ಪಿರಾನೋ ಆಸ್ಪತ್ರೆಗೆ ಕೊಂಡೊಯ್ಯಬೇಕಾಗಿ ಬಂತು

ರಾತ್ರೆ ೯ ಘಂಟೆಯಾಗಿದ್ದಿತು ಆಸ್ಪತ್ರೆಯ ವಾರ್ಡುಗಳಲ್ಲಿನ ಬೆಳಕು ಆರಿಸಲ್ಪಟ್ಟಿತು ಮಿನುಗು ದೀಪಗಳನ್ನಿಡಲಾಯಿತು ಹೆಚ್ಚಿನ ಮಟ್ಟಿಗೆ ಕತ್ತಲೆಯು ಹರಡಿದ್ದಿತು, ಮೇಲ್ವಿಚಾರಕಳಾದ ದಾದಿಯೊಬ್ಬಳು ಮಂದಿರದೊಳಗೆ ತಿರುಗಾಡುತ್ತಿದ್ದಳು

ಅನ್ನಮೊರಾನೊ ಮಲಗಿದ್ದಲ್ಲಿ ದಾದಿಗೊಂದು ಬೆಳಕು ತೋರಿಬಂತು ಕತ್ತಲೆಯ ಕೋಣೆಯು ಪ್ರಕಾಶಮಾನವಾಗಿರುವುದನ್ನು ದಾದಿಯು ಕಂಡಳು ಒಡನೆ ಅತ್ತ ಧಾವಿಸಿ ನೋಡುತ್ತಾಳೇನು?—ಕೋಣೆಯು ಪ್ರಕಾಶಿತವಾಗಿದೆ ಅನ್ನಳು ಹಾಕಿಕೊಂಡ ಕುಪ್ಪಟದಡಿಯಿಂದ ಹಸುರಾದ ವಿದ್ಯುತ್ ಪ್ರಕಾಶವು ಎದ್ದುಕೊಂಡು ಬಂದಂತೆ ತೋರಿತು ದಾದಿಯು ಅವಳ ಬಳಿ ಸಾರಿ, ಮೆಲ್ಲನೆ ಕುಪ್ಪಟವನ್ನು ಮೇಲೆತ್ತಿದಳು ಪುನಃ ನೋಡುತ್ತಾಳೇನು? ಅನ್ನಾಳ ರವಿಕೆಯೊಳಗಿಂದ ಪ್ರಕಾಶವು ಎದ್ದಿತ್ತು ಅದನ್ನು ಒಂದು ಪಾರ್ಶ್ವದಲ್ಲೆತ್ತಿ ಹಿಡಿದು ನೋಡಿದಳು ಅನ್ನಾಳ ಎದೆಯ ಎಡ ಪಾರ್ಶ್ವದಿಂದ ಬೆಳಕು ಹೊರಟು ಒಂದಿಷ್ಟು ಅನ್ನಾಳ ಮೋರೆ, ಅವಳ ಕೋಣೆ ಎಲ್ಲವೂ ಪ್ರಕಾಶಮಾನವಾಗಿದ್ದುವು

ದಾದಿಯು ಒಡನೆ ಮುಖ್ಯ ವೈದ್ಯರನ್ನು ಕರೆದಳು ಅವರು ಬರುವಷ್ಟರಲ್ಲಿ ಬೆಳಕು ಸ್ವಲ್ಪ ಸ್ವಲ್ಪವಾಗಿ ನಂದಿಕೊಳ್ಳುತ್ತಾ ಬರುತ್ತಿತ್ತು ಅದು ಮಾಯವಾಗುತ್ತಾ ಬರುತ್ತಿದ್ದುದನ್ನು ಡಾಕ್ಟರರೂ ಕಂಡರು ಇಷ್ಟಾಗುವಾಗಲೂ ಅನ್ನಾಮೊರಾನಳು ದೀರ್ಘ ನಿದ್ರಾಪರವಶಳಾಗಿದ್ದಳು

ಆ ಬೆಳಕು ಮಾಯವಾದೊಡನೆ ಅನ್ನಾಳು ಮೆಲ್ಲನೆ ಎಚ್ಚತ್ತಳು ಡಾಕ್ಟರರು ಅವಳನ್ನು ಪೂರ್ಣವಾಗಿ ಎಚ್ಚರಿಸಿ ಅವಳ ಎದೆಯಿಂದೆದ್ದು ಬಂದ ಪ್ರಕಾಶದ ಕಥೆಯನ್ನು ಅವಳಿಗೆ ಹೇಳಿದರು ಅನ್ನಾಳಿಗೆ ಆಶ್ಚರ್ಯವಾಯಿತು ಅದರೊಡನೆ ನಾಚಿಕೆಯೂ ಆಯಿತು ಭಯವಿಹ್ವಲಳಾದಳು ಅವಳ ಮೋರೆಯು ವರ್ಣಗೆಟ್ಟಿತು ಕಣ್ಣೀರು ಹರಿಯಿತು ಮೆಲ್ಲನೆ ದುಃಖಿಸುತ್ತಾ ಹೇಳಿದಳು—"ಇದು ಆಗಾಗ ಆಗುತ್ತಿದೆ ಆದರೆ ಇದನ್ನು ನಾನು ಯಾರಿಗೂ ಹೇಳುತ್ತಿದ್ದಿಲ್ಲ ನನ್ನ ಗಂಡನು ಕೂಡಾ ಇದರಿಂದಾಗಿ ಬಹಳ ನಾಚಿಕೊಳ್ಳುತ್ತಿದ್ದಾನೆ ಯಾರಿಗೂ ತಿಳಿಸಬಾರದೆಂದಿದ್ದಾನೆ ದಯವಿಟ್ಟು ನೀವೂ ಇದನ್ನು ಯಾರಿಗೂ ತಿಳಿಸಬಾರದು, ನನ್ನ ಮಾನವನ್ನುಳಿಸಬೇಕು" ಎಂದಳು

ಈ ವಿಷಯವು ರಹಸ್ಯವಾಗಿಯೇ ಇತ್ತು ಆ ಪ್ರಕಾಶವನ್ನು ನಿಲ್ಲಿಸುವುದಕ್ಕಾಗಿ ಆಸ್ಪತ್ರೆಯ ಪ್ರಸಿದ್ಧ ವೈದ್ಯರುಗಳಾದ ಸಂಬೋ, ಕೊಟೆಂ, ಟೋಪರಂಜಿನ್ ಎಂಬ ಮೂವರೂ ಸಾಹಸಪಟ್ಟರು ಡಾ ಸಂಬೋರವರ ಅನೇಕ ದಿನಗಳ ತನಕ ಅನ್ನಳ ನಿದ್ರೆಯ ಕಾಲ ಎಚ್ಚರವಿದ್ದು ಬೆಳಕನ್ನು ಕಾದುಕುಳಿತರು ಕೆಲವು ದಿನಗಳ ವರೆಗೆ ಅದು ಕಂಡುಬರಲಿಲ್ಲ ಒಂದು ದಿನ ರಾತ್ರೆ ಅದು ಪುನಃ ಕಂಡುಬಂತು ಅವರು ಒಡನೆ ಮಹಾ ವಿಜ್ಞಾನಿಗಳನ್ನು ಕರೆದು ಕೋಣೆಯಲ್ಲಿ ಕತ್ತಲನ್ನುಂಟುಮಾಡಿ ಅದನ್ನು ಪರೀಕ್ಷಿಸಿದರು ಪ್ರಕಾಶವು ಮೆಲ್ಲಮೆಲ್ಲನೆ ಹೆಚ್ಚಿ, ಮೆಲ್ಲಮೆಲ್ಲನೆ ಕಡಮೆಯಾಗುತ್ತಾ ಬಂದು ಕೊನೆಗೆ ಮಾಯವಾಯಿತು

ಅವಳ ನರಯೋನಿಗಳನ್ನು ಪರೀಕ್ಷಿಸಲಾಗಿ ಅನ್ನಳು ಉಬ್ಬಸ ಒಂದರಿಂದಲ್ಲದೆ ಬೇರಾವ ರೋಗದಿಂದಲೂ ಬಾಧಿತಳಾಗಿದ್ದಿಲ್ಲವೆಂದು ಕಂಡುಹಿಡಿದರು. ಯಾವ ಪರಿಶೋಧನೆಯಿಂದಲಾದರೂ ಅವರಿಗೆ ಯಾವ ನಿರ್ಧಾರವನ್ನು ಮಾಡಲಾಗಲಿಲ್ಲ—ಅವರು ಕಂಗೆಟ್ಟರು

ಆಸ್ಪತ್ರೆಯಲ್ಲಿನ ರಹಸ್ಯನಲ್ಲವೇ? ಎಷ್ಟು ಕಾಯ್ದುಕೊಳ್ಳಲ್ಪಟ್ಟರೇನಾಯಿತು ಗುಟ್ಟು ರಟ್ಟಾಯಿತು ಅನ್ನಾಮೊರಾನೋಳ ವಿಚಿತ್ರ ದೇಹಪ್ರಕೃತಿಯ ವಾರ್ತೆಯು ಸಮಸ್ತ ಇಟಲಿಯಲ್ಲಿ ಆಬಾಲವೃದ್ಧರ ಕಿವಿಗೆ ತಲುಪಿತು ಈ ಅದ್ಭುತ ವಿಚಾರವು ಜನರ ಮನವನ್ನು ಸೆಳೆಯಿತು ಅನ್ನಾಳಿಗಿರುವ ಪ್ರಕಾಶಮಾನ ಹೃದಯವು ಅವಳಿಗೆ ಜನರಿಂದ ಅಪಹಾಸ್ಯವನ್ನು ತರುವ ಬದಲಿಗೆ ಇಟಲಿಯ ಜನಾಂಗವು ಅವಳನ್ನು ದೈವಸಂಭೂತೆಯಾಗಿ ತಿಳಿಯಿತು ಅವಳ ಗೃಹವೆಂಬುದು ಮಹಾ ಪುಣ್ಯಕ್ಷೇತ್ರವಾಯಿತು ಅಸಂಖ್ಯ ಜನರು ಅವಳ ಸಂದರ್ಶನಕ್ಕಾಗಿ ಹೋದರು

ಇದನ್ನೆಲ್ಲಾ ಕಂಡು ಗಂಡನಿಗೆ ಅಸಹನೀಯವಾಯಿತು ವೈದ್ಯರು ತನ್ನ ಪತ್ನಿಯ ಕುರಿತಾದ ರಹಸ್ಯವನ್ನು ಬಯಲು ಹೋಗಿಸಿದ ದಕ್ಕಾಗಿ ಅವನು ರೇಗಿಕೊಂಡು ಆಸ್ಪತ್ರೆಯ ಧರ್ಮವನ್ನು ಮೀರಿದುದಕ್ಕಾಗಿ ನಿಮ್ಮ ಮೇಲೆ ದಾವಾ ಹೂಡುವೆನು' ಎಂದನು ದೊಡ್ಡ ದೊಡ್ಡ ಅಧಿಕಾರಿಗಳು ಅವನ ಬಳಿಗೆ ಹೋಗಿ ಅವನಿಗೆ ಉಪದೇಶಿಸಿದರು ಅನ್ನಳ ದೇಹಸ್ಥಿತಿಯು ಇಟಲಿ ದೇಶದ ವಿಜ್ಞಾನ ಸಾಹಸದಲ್ಲಿ ಅದ್ಭುತ ವಿಷಯವಾಗಿ ನಿಂತ ಅದರಿಂದಾಗಿ ನಿಮ್ಮ ಕುಟುಂಬವು ಕೀರ್ತಿಯನ್ನೆ ಹೊಂದುವುದು ಎಂದ ಅವನಿಗೆ ಮನಗಾಣಿಸಿದ ಮೇಲೆ ಅನ್ನಾಳನ್ನು ರೋಮಾ ದೇಶದ ವಿಶ್ವವಿದ್ಯಾಲಯದ ಶಸ್ತ್ರಾಲಯಕ್ಕೆ ಕೊಂಡೊಯ್ಯಲು ಅವನ ಸಮ್ಮತಿಸಿದನು

ನೂರಾರು ಪತ್ರಿಕಾಕರ್ತರೂ ಛಾಯಾ ಚಿತ್ರಕಾರರೂ ಅವಳನ್ನು ಕಂಡರು ಅಂತೂ ಇಟಲಿಯಲ್ಲಿ ಇದೊಂದು ಮಹಾದಾಶ್ಚರ್ಯಕರ ವಿಷಯವಾಗಿ ಪರಿಣಮಿಸಿತು

ಡಾ॥ ಗಿಯೊಕೊಂಡೊ ಪ್ರೊಟ್ಟಿ ಎಂಬವರು ಅವಳ ದೇಹಪ್ರಕೃತಿಯನ್ನು ಪರೀಕ್ಷಿಸಿ, ಹೃತ್ಕಮಲದಿಂದ ಹೊರಸೂಸುವ ಪ್ರಕಾಶಕ್ಕೆ ಕಾರಣವೇನೆಂದು ಕಂಡು ಹಿಡಿಯಲು ತನ್ನಿಂದ ಅಸಾಧ್ಯವಾಗಿದೆ ಎಂದು ಹೇಳಿದರು ಅವರು ಇನ್ನಿತರ ಹನ್ನೆರಡು ಮಂದಿ ಪ್ರಮುಖ ಡಾಕ್ಟರರ ಸಮಕ್ಷದ ಅನೇಕ ಶೋಧೆಗಳನ್ನು ಮಾಡಿ ಆ ಬೆಳಕಿನ ವೇಗ, ಉದ್ದ ಮೊದಲಾದ ವಿವರಗಳನ್ನು ಸಂಗ್ರಹಿಸಿರುವರು ಈ ಪ್ರಕಾಶವು ಅವಳ ಎದೆಯ ಮೇಲೆ ತೋರಿಬರುವಾಗ ಅವಳ ಶ್ವಾಸೋಚ್ಛ್ವಾಸವು ಎರಡು ಪಾಲಷ್ಟು ವೇಗದಿಂದ ನಡೆಯುತ್ತದೆ ಅವಳ ನರನಾಡಿಗಳು ದ್ವಿಗುಣಿತ ಶಕ್ತಿಯಿಂದ ಹಾರುತ್ತವೆ. ಹೀಗಿದ್ದರೂ ಅವಳ ಎದೆಯಲ್ಲಿ ತೋರುವ ಪ್ರಕಾಶವು ವಿದ್ಯುಚ್ಛಕ್ತಿಯಲ್ಲವೆಂದು ನಿರ್ಧರಿಸಿದ್ದಾರೆ

ಅನ್ನಾಳ ಈ ವಿಚಿತ್ರ ದೇಹಪ್ರಕೃತಿಯು ಜಗತ್ತಿನ ವಿಜ್ಞಾನವನ್ನೇ ಮೂಲೆ ಗುಂಪಾಗಿ ಮಾಡಿ ಮುಂದಿನ ವಿಜ್ಞಾನ ಪ್ರಪಂಚದಲ್ಲಿ ನವೀನ ಶೋಧೆಯೊಂದರ ಜನನವಾಗುವುದಕ್ಕೆ ಕಾರಣವಾಗುವುದೆಂದ ಪ್ರತಿಯೊಬ್ಬ ದೇಹಶಾಸ್ತ್ರಜ್ಞನ ಮತವಾಗಿದೆ ಅನ್ನಾಳ ಮನದಲ್ಲಿರುವ ಒಂದು ಮಹದಾಶೆಯು ಅವಳ ನರನಾಡಿಗಳಲ್ಲಿ ಕೇಂದ್ರೀಕರಿಸಿಕೊಂಡು ಈ ರೀತಿಯ ಪ್ರಕಾಶಕ್ಕೆ ಕಾರಣವಾಗಿದೆಯೆಂದು ಡಾ॥ ಪ್ರೊಟ್ಟಿಯವರೆನ್ನುತ್ತಾರೆ ಆದರೆ ಇದು ಸಾಧಾರ ವಿಷಯವಲ್ಲವೆಂದು ಕೆಲವರೆನ್ನುತ್ತಿದ್ದಾರೆ ಅವಳ ಮೈಮೂಳೆಯಲ್ಲಿರುವ ಧಾವನೆಯು ಹೃದಯದ ರಕ್ತಸಂಚಾರದಲ್ಲಿ ತೋರುತ್ತಿರುವುದೆಂದು. ಅವರ ಮತ ಅನ್ನಾಳಿಗೆ ಯಾವ ಮಹದಿಚ್ಛೆಯೂ ಇರುವುದಿಲ್ಲ ತಾನು ದೈವಭಕ್ತೆಯಾಗಬೇಕೆಂಬ ಮಹದಾಶೆಯು ತನ್ನಲಿದೆಯೆಂದು ಅವಳ ತಿಳಿಸಿರುವಳು

ಈ ರೀತಿ ಇಂದ ಒಂದು ಸಂಗತಿಯು ಸ್ಪಷ್ಟವಾಗುತ್ತದೆ ಅದೇನೆಂದರೆ—ಆತ್ಮವೆಂಬುದು ಇರುವುದು ದೃಗ್ಗೋಚರವಾಗಬೇಕಾದರೆ ಆತ್ಮವೆಂಬ ಮಹಾಶಕ್ತಿಯೊಂದು ಇರಬೇಕು. ಅದಕ್ಕೆ ಒಂದು ಆಧಾರ ಸ್ಥೂಲ ರೂಪವಿರಬೇಕು ಧ್ಯಾನ, ಆಶೆ, ನಿರಾಶೆ, ಬುದ್ಧಿ ಶಕ್ತಿ ಮೊದಲಾದವುಗಳಿಗೆಲ್ಲ ರೂಪವಿರಬೇಕು.

ಅನ್ನಾಳು ಇನ್ನೂ ಚಿಕಿತ್ಸಾಲಯದಲ್ಲೇ ಇದ್ದಾಳೆ ಇನ್ನೂ ಗಾಢವಾದ ಪರಿಶೋಧನೆಯು ನಡೆಯುತ್ತಲಿದೆ ಅನ್ನಾಳ ದೇಹವು ಹೊಸ ವಿಜ್ಞಾನಯುಗವನ್ನೇ ಸ್ಥಾಪಿಸಬಹುದು

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24,250	000
1929—	ರೂ 1,66,18,620	9,32,900
1934—	ರೂ 3,46,77,223	49,06,771

ಕ್ಲೆಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ. 1933—34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಇಳಿಸಬೇಕಾಗಿದೆ ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No. 6, Sankuram Chetty St., G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು.

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

1934ನೇ ಇಸವಿ ದಶಂಬರ ತಾ. **31**ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು:—

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಪಿಸಿದ್ದು	3,50,000- 0- 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774-14- 8
ತೆತ್ತು ಬಂದದ್ದು	2,25,000- 0- 0	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	23,38,227- 7- 8
ಕ್ಷೇಮನಿಧಿಗಳು	2,60,958- 7- 8	ಸರಕಾರಿ ಬಧ್ರತೆಯ ಸ್ವತ್ತುಗಳ ಮೇಲೆ	6,51,559-15- 0
ಠೇವಣಾತಿಗಳು	24,95,829- 2- 8	ಇತರ ಬಾಬುಗಳು	87,411-14-11
ಇತರ ಬಾಬುಗಳು (ಸಂಡ್ರೀಸ್)	1,85,286 9- 9	ನಗದಿ ಶಿಲ್ಕು	72,480-10- 1
ಚಾಲ್ತಿ ವರ್ಷದ ಮುನಾಫೆ	45,885-10- 8		
	81,62,454-13-11		81,62,454-13-11

ಹಿಂದಿನ ವರ್ಷಗಳಂತೆಯೇ ಹಿಸೆದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ಸ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಕಿತಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ,

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Established 1908.

EXCELLENT BONUSES.
1933 Valuation Results.

	WHOLE LIFE	ENDOWMENT	
1925-'30	20	15	Per thousand
1931-'33	23	18	per year.

Every "With Profit" Policy is entitled to "PERMANENT DISABILITY BENEFITS."—No extra premium.
PAYS DOUBLE THE ASSURED SUM IN THE EVENT OF DEATH BY ACCIDENT
ON PAYMENT OF MINIMUM EXTRA PREMIUM OF RS. 1-8-0 PER RS. 1000 POLICY PER YEAR.

Existing Policy-holders may avail of this benefit. For particulars apply to:—

KOCHIKAR BROTHERS,
Madras Branch Secretaries.

Offices at:—
Udipi, Mangalore, Bangalore, Calicut, Madras and Bombay.

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಅರೋರಾ ಕ್ರೀಮ್, ಕ್ರಿಮೋರ್ ಲಿಮೋನಿಸ್, ಕರ್ಣಾಟಕ ರೋಸ ಪೊಮೇಡ್.
ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್ಸ್, 46 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2
ಏಜಂಟ್ಸ್— (2) 1/70 ನ್ಯಾಷನಲ್ ಸ್ಟೋಕಸ ಬೀದಿ, ಜಾರ್ಜ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

ವಾರ್ಷಿಕ ಚಂದಾ 3 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 3-13-0.

P
for Quality Snuff
H. Rama Rao and Sons.
High Class Snuff Manufacturers
Mangalore, S I
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries
Kochikar Brothers

ESTABLISHED 1906
(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯. ಮಂಗಳೂರು ತಾ. ೫ನೇ ಶುಕ್ರವಾರ ಎಪ್ರಿಲ್ ೧೯೩೫ (5-4-'35) ಸಂಚಿಕೆ ೧೪



ಕೃಷ್ಣಾ ನದಿಯ ಪುಷ್ಕರ ಮತ್ತು ಸಂಕ, ಬೆಜವಾಡ.

ಚಕ್ರ

(All Rights Reversed)

ಸಾಯ್ಬನಿಗೊಂದು ಹೊಸ ಸುದ್ದಿ ತಿಳಿದಿದೆ; ಕೇಳಿ ದುಃಖಿತನಾಗದೇಕೋ, ಸಂತೋಷಿಸಬೇಕೋ, ತಿಳಿಯದು. ವಾಚಕರಲ್ಲಾರಾದರೂ ತಿಳಿಸಿದರ್‍ತಗಬಹುದು.

× × × × × ×

ಹೀಗೆಂದೊಡನೆ ಅದೇನೆಂದು ಕತ್ತರಿಯುವವರು ಸಾವಿರ ಮಂದಿ. ಅದೇನೆಂದು ತಿಳಿಯಬೇಕೆಂದು ನಿಮ್ಮ ಕುತೂಹಲವು ನಿಮ್ಮನ್ನು ದಾಟಿ ಮುಂದರಿಯುತ್ತದೆ.

× × × × × ×

ಆದರೂ ಅದನ್ನು ಥಟ್ಟನೆ ಹೇಳಲಾರೆ. ಮಹಾ ವಿಷಯವದು. ಬಹು ಗುಟ್ಟಿನದಲ್ಲಿದಯಂತೆ ಈ ವಾರ್ತೆ. ಆದರೆ ಅದು ಹೇಗೋ 'ಔಟ್' ಆಗಿದೆ ಅದನ್ನು ಬಯಲುಗೊಳಿಸಬೇಕೆಂಬ ಮನಸ್ಸು ಸಾಯ್ಬನಿಗೂ ಇಲ್ಲ. ಆದರೂ ಗುಟ್ಟನ್ನು ಇಟ್ಟುಗೊಳಿಸಬೇಕೆಂದು ಮನಸ್ಸಾಗುತ್ತಿದೆ.

× × × × × ×

ವಾಚಕರೇ, ಅದೇನೆಂದು ತಿಳಿಯಲು ಆವಸರ ಮಾಡಬೇಡಿ; ಸಮ್ಮಾಡಿ ಸಮಾಧಾನರಾಗಿರಿ. ಈಗ ಇಷ್ಟು ಕುತೂಹಲಿಗಳಾಗಿ, ಆ ವಾರ್ತೆಯು ತಿಳಿದು ಬಂದೊಡನೆ ನೀವು "ಇಷ್ಟೆಯೋ! ಇದಕ್ಕಿಷ್ಟು ಗಾಬರಿ ಯೇಕೆ? ಎಂದೆನ್ನುವಿರಿ! ನಿಮಗೆ ಸಣ್ಣ ಸಂಗತಿಯಾದರೂ ಅದು ನಮಗೆ (ಅಂದರೆ ದೇಶಾಭಿಮಾನಿಗಳಿಗೆ) ಬಹು ಮಹತ್ತ್ವದ ವಿಚಾರ.

× × × × × ×

ಆ ವಾರ್ತೆಯನ್ನು ಹೇಳಬೇಕೆ? ಹೇಗೆ ಹೇಳಲಿ? ಸಾಧಾರಣ ವಾರ್ತೆಯಲ್ಲವಂತೆ ಅದು, ಆದರೂ ನಿಜವಾದುದೆನ್ನಲು ನನ್ನ ಆಡಿಯಿಲ್ಲ.

× × × × × ×

ಎಂತಹ ಮಹದ್ವಿಚಾರವಪ್ಪ ಅದು! ನಮ್ಮನ್ನು ಪ್ರೀತಿಸುತ್ತಿರುವ ಉತ್ತಮರಿಗೆ ಇಂತಹ ವಿಪತ್ತು ಸಂಭವಿಸುವುದೇ? ಹಿಂದೂದೇಶವನ್ನು ಕರುಣಾದ್ರ್ರದೃಷ್ಟಿಯಿಂದ ಕಾಣುವ ಅವರಿಗೆ ಈ ಗತಿಯೊದಗಬಹುದೇ?

× + × × × ×

ನಮಗೆ ಸ್ವರಾಜ್ಯವನ್ನು ಕೊಡುವುದು ಅಗತ್ಯವೆಂದು ವಾದಿಸಿದ ಅವರಿಗೆ ಈ ದುರ್ಗತಿಯೊದಗುವುದೆಂದರೆ ಯಾರಿಗೆ ತಾನೇ ದುಃಖವಾಗಲಾರದು? ಎಷ್ಟು ಸಲ ವಾಗ್ದಾನವಿತ್ತರವರು! ಹಿಂದೂದೇಶದ ಮೇಲೆ ಎಷ್ಟು ಮಮತೆಯಿತ್ತು ಆ ಪುಣ್ಯಾತ್ಮರಿಗೆ! ಅವರ ಕಣ್ಣುಗಳಲ್ಲೇ ನೋವುಂಟಾಗಬೇಕೇ? ಅವರ ಕಣ್ಣುಗಳನ್ನು ಬಾಧಿಸಲು ಬಂದ ಆ ನೋವುರಾಯನಿಗೆ ದೊಡ್ಡ ಎಷ್ಟೊಯ ದೊಡ್ಡ ದೊಡ್ಡ ಕಣ್ಣುಗಳು ಸಿಗಲಿಲ್ಲವೇನು?

× × × × × ×

ಈ ಸುದ್ದಿಯನ್ನು ಹರಡಲು ನನಗೆ ಮನಸ್ಸೇ ಬರುವುದಿಲ್ಲ ನೋಡಿ! ಪ್ರೀತಿಯಿಂದ ಕೂರೆಯಾದ ಮನಸ್ಸು ನನ್ನದು. ಪಾಪ! ಅವರೇ ಐದಚ್ಯುತರಾಗಬೇಕೇ?

× × × × × ×

ಪ್ರಿಯ ವಾಚಕವೃಂದವೇ ಸಿಟ್ಟುಗೊಳ್ಳದಿರು! ನಿನ್ನನ್ನು ಇಷ್ಟರವರೆಗೂ ತ್ರಿಶಂಕುಸ್ವರ್ಗದಲ್ಲಿಟ್ಟುಕೊಂಡುಬಂದ ಸಾಯ್ಬನನ್ನು ಕ್ಷಮಿಸು. ಇನ್ನೂ ಗುಟ್ಟನ್ನು ರಟ್ಟುಗೊಳಿಸದಿರುವುದಕ್ಕಾಗಿ ತಾಳ್ಮೆಯನ್ನು ವಹಿಸು.

× × × × × ×

ವಾರ್ತೆಯೇನೆಂದು ಹೇಳಲಿ?—ಹೇಳಲೇ?—ನಮ್ಮ ಪ್ರಧಾನಮಂತ್ರಿವರ್ಯರಾದ ಮೆಕ್ಡೊನಾಲ್ಡರು ತನ್ನ ಮಂತ್ರಿಪದವಿಗೆ ರಾಜಿನಾಮೆ ಕೊಡುವರಂತೆ. ಬರುವ ಯುಗಾದಿಗೆ ಯಾರೋ ಏನೋ— ಆಜ್ಞೆ

× + × × × ×

ಹಿಂದೀಯರಿಗೆ ಸ್ವಾತಂತ್ರ್ಯವನ್ನು ಕೊಡುವ ಏರ್ಪಾಡನ್ನು ಮಾಡಬೇಕೆಂದು ಹಲವು ಸಲ ಬಾಯಿಮಾತಿನಿಂದ ಹೇಳಿದ ಮೆಕ್ಡೊನಾಲ್ಡರು ಮಂತ್ರಿಪದವಿಯಿಂದ ಕೆಳಗಿಳಿಯುವುದೆಂದರೆ ಭಾರತೀಯರಿಗೆ ಬಹು ದುಃಖದ ವಿಷಯವೇ! (ಮಾತಿನಲ್ಲಿ ಸ್ವರಾಜ್ಯಕೊಡುವವರು ಈಗಿನ ಕಾಲದಲ್ಲಿ ಯಾರಿದ್ದಾರೆ?)

× × × × × ×

ಶ್ರೀ ಮೆಕ್ಡೊನಾಲ್ಡರು ಇನ್ನೂ ಹಲವು ಶತಮಾನಗಳವರೆಗೆ ಈ ಪದವಿಯಲ್ಲಿದ್ದು ಹಾಗೆಯೇ ಹೇಳಿ ಜನರನ್ನು ತಣಿಸುವಷ್ಟು ಕರುಣಾಳುಗಳಾಗಿರಲಿ ಎಂದು ...

'ಸಾಯ್ಬ'

ಅವನಿಗೆ ನಾನೇ ಮೊಲೆಯುಣ್ಣಿಸುತ್ತೇನೆ

ತನ್ನ ಮಗುವಿಗೆ ತಾನೇ ಮೊಲೆಯುಣ್ಣಿಸುವಂತೆ ಪ್ರತಿಯೊಬ್ಬ ತಾಯಿಯೂ ಸಿದ್ಧಳಿರಬೇಕು. ಮಗುವಿನ ಆರೋಗ್ಯಪಾಲನೆಗೂ, ಅದು ಬಾಲರೋಗಗಳಿಗೆ ತುತ್ತಾಗದಂತೆಯೂ ಅದಕ್ಕೆ ಸ್ವಾಭಾವಿಕವಾಗಿ ಮೊಲೆಯುಣ್ಣಿಸಬೇಕು. ಎದೆ ಹಾಲು ನಿಮ್ಮ ಮಗುವಿಗೆ ಸಮರ್ಪಕವಾದ ಆಹಾರವಾಗಿದೆ. ಇದು ಮಗುವಿನ ಸೂಕ್ಷ್ಮ ಜೀರ್ಣಶಕ್ತಿಗೆ ತಕ್ಕುದಾದ ಆಹಾರವಾಗಿದೆ. ಮಗುವಿನ ಆರೋಗ್ಯಕರ ಬೆಳವಣಿಗೆಗೂ ವೃದ್ಧಿಗೂ ಸಾಧಕವಾದ ಪೌಷ್ಟಿಕ ಸಾರವು ಇದರಲ್ಲಿದೆ.

'ಓವಲ್ಟಿನ್' ಪಾನೀಯವನ್ನು ಮಗು ಜನಿಸುವ ಮೊದಲೂ, ಹುಟ್ಟಿ ಬೆಳೆಯುತ್ತಿರುವಾಗಲೂ ಅನುಕ್ರಮವಾಗಿ ಸೇವಿಸುತ್ತಾ ಇದ್ದರೆ, ಎದೆ ಹಾಲು ನಿಶ್ಚಿತವಾಗಿ ವೃದ್ಧಿಹೊಂದುತ್ತದೆ. ಅಲ್ಲದೆ ತಾಯಿಯ ಬಲ ಮತ್ತು ಚೈತನ್ಯವು ಕಾಪಾಡಲ್ಪಡುತ್ತದೆ. 'ಓವಲ್ಟಿನ್' ಎಂಬುದು ಪ್ರಕೃತಿಸಿದ್ಧ ಆಹಾರ. ಇದನ್ನು, ಬೆಳೆದ ಬಾರ್ಲಿ ಬೀಜ, ದನದ ಕೆನೆ ಹಾಲು ಮತ್ತು ಕೋಳಿಮೊಟ್ಟೆಗಳಿಂದ ತಯಾರಿಸಲಾಗುತ್ತದೆ. ಆರೋಗ್ಯ, ಶಕ್ತಿ ಮತ್ತು ಚೈತನ್ಯ ರಕ್ಷಣೆಗೆ ಇದು ಅತ್ಯಮೂಲ್ಯ ಪಾನಕ. ಪಡೆಯುವಾಗ ತಾಜಾ ಓವಲ್ಟಿನ್ನನ್ನೇ ಪಡೆಯಿರಿ ನಕಲಿಗಳನ್ನು ತ್ಯಜಿಸಿರಿ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

ಓವಲ್‌ಟಿನ್

ಟೋನಿಕ್ ಆಹಾರ ಪಾನಕ.

OVALTINE

ತಾಯಂದಿರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕೊಟ್ಟು ಸಾಕುವಂತೆ ಸಹಕರಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್:—ಜೇಮ್ಸ್ ರ್‍ಯಾಟ್, ೪೬ಎ, ರಿಪನ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸ.

OV 301

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆಮದಾದುದು. ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು. ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೊ ತೆಗೆಯುವ ವಿಧಾನ ಶಿಕ್ಷಣಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ. ಬಲವಾದ ಲೆನ್ಸ್. ಬೆಲೆ ಸಾಮಾನ್ಯವಾದುದು ರೂ. ೩—೧೨—೦, ಉತ್ತಮವಾದುದು ೬—೧೨—೦, ಮಡಚುವ ಕ್ಯಾಮರಾ ರೂ. ೫, ಉತ್ತಮವಾದ್ದು ರೂ. ೭, ಸ್ಪೆಷಲ್ ರೂ. ೧೦, ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಕ್ಕೆ ೩ ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.

ಪೋಸ್ಟ್‌ಬಾಕ್ಸ್ ನಂಬ್ರ ೨೪೯ (ಎಸ್. ಎ.) ಕಲ್ಕತ್ತಾ.

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

Authorised capital / ಅಧಿಕೃತ ಮೂಲಧನ	2,00,000—0—0
Subscribed capital / ಚಂದಾ ಆರ್ಪಿಸಿದ್ದು	34,930—0—0
Paid-up capital / ತೆತ್ತು ಬಂದದ್ದು	30847—8—0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken.

Shares are now available.

For further particulars apply to:—

Puttur,
Dated 15—2—1935.

G. N. Lakshman Pai,
Secretary.

ಪತ್ರಿಕಾ ಪ್ರಪಂಚ:

ಹಿಂದೂದೇಶ ಮತ್ತು ಇಂಗ್ಲಾಂಡುಗಳಲ್ಲಿ ಜಾತಿಭೇದ. ವಕೀಲರ ನಡತೆ ಹೇಗಿರಬೇಕು? ಠಂಕಸಾಲೆಗಳನ್ನು ಮುಚ್ಚುವುದೇಕೆ? ಮುಂದಿನ ಭಾರತ. ಕೃಷಿಯಿಂದುತ್ಪನ್ನವಾಗುವ ಭಂಡವಾಳ ಭಾರತದಲ್ಲಿನ ರಾಷ್ಟ್ರೀಯ ಚಳವಳ.

ಹಿಂದೂದೇಶ ಮತ್ತು ಇಂಗ್ಲಾಂಡುಗಳಲ್ಲಿ ಜಾತಿಭೇದ.

ಹಿಂದೂದೇಶದಲ್ಲಿ ಜಾತಿಭೇದವು ದುಷ್ಪರಿಣಾಮಗಳನ್ನು ತಂದೊಡ್ಡಿದೆಯೆಂದೂ, ಅದರಿಂದಾಗಿ ಜನಿಸಿದ ದಾವಳಿಯ ದೆಸೆಯಿಂದಾಗಿ ಸಾಮಾಜಿಕ ವಾತಾವರಣವೇ ಕೆಟ್ಟುಹೋಗಿ ರಾಷ್ಟ್ರೋನ್ನತಿಗೆ ಮಹಾವಿಘ್ನವೊದಗಿದೆಯೆಂದೂ ಹೆಚ್ಚಾಗಿ ಹೇಳುವ ರೂಢಿಯಾಗಿದೆ. ಇದರಿಂದಾಗಿ ವೈಯಕ್ತಿಕ ಸ್ವಾತಂತ್ರ್ಯ, ಭಾವನಾ ಸ್ವಾತಂತ್ರ್ಯ ಮೊದಲಾದ ಅಪೇಕ್ಷಣೀಯ ಗುಣಾವಳಿಗಳಿಗೆ ತಿಲಾಂಜಲಿ ಯನ್ನಿತ್ತಂತಾಗಿದೆಯೆಂದೂ ಹೇಳಲಿಕ್ಕೆಯಿದೆ. ಆದರೆ, ಮಿ॥ ಜೆ ಎಫ್ ನಿಕೊಲ್ಸರವರು ಹೇಳುವಂತೆ ಭಾರತದಲ್ಲಿ ಮಾತ್ರ ಜಾತಿಭೇದವು ಇನಿತು ಅಪೇಕ್ಷಣೀಯ ಗುಣಾವಳಿಗಳನ್ನು ಮುಚ್ಚುಮರೆಯಲ್ಲಿ ಡುವುದಲ್ಲವೆಂದು ತಿಳಿದುಬರುತ್ತದೆ. ಅವರು "ಇಂಗ್ಲಾಂಡಿನಲ್ಲಿ ಸ್ವತಂತ್ರ ಸಂಸ್ಥೆಗಳಾವುವೂ ಜನರಲ್ಲಿ ಭಾವನಾಸ್ವಾತಂತ್ರ್ಯವನ್ನಿತ್ತಿದೆ ವಾಗ್ಸ್ವಾತಂತ್ರ್ಯ, ಕ್ರಿಯಾಸ್ವಾತಂತ್ರ್ಯ, ಮತ್ತು ಜಾತಿಭೇದಗಳು ಎಷ್ಟಿವೆಯೆಂದು ಪರಿಶೀಲನಾದೃಷ್ಟಿಯಿಂದ ಅವಲೋಕಿಸಿದರೆ ತಿಳಿದುಬಂದೀತು" ಎನ್ನುತ್ತಾರೆ. ಇಂಗ್ಲಾಂಡಿನಲ್ಲಿ ಸಾಮಾಜಿಕ ಜನಜೀವನವನ್ನು ವಿಶಾಲವಾದ ಮೂರು ವಿಭಾಗಗಳನ್ನಾಗಿ ಮಾಡಿರುವರು ಕೂಲಿಗಾರರು ಮಧ್ಯಮ ಸ್ಥಿತಿಯವರು ಮತ್ತು ಸಿರಿವಂತರು ಅಲ್ಲದೆ ಈ ೩ ಪಂಗಡಗಳಲ್ಲೂ ಅನೇಕ ತುಂಡು ಪಂಗಡಗಳಿವೆ. ಹೀಗೆ ಸಮಾಜವನ್ನು ತಮ್ಮ ಪ್ರಾನುಸಾರವಾಗಿ ಪ್ರಥಕ್ಕರಿಸುವ ಅಭ್ಯಾಸವು ಅಲ್ಲಿ ಬಹು ಭರದಿಂದಲೇ ಸಾಗುತ್ತಿದೆ. ಒಬ್ಬ ವ್ಯಕ್ತಿಯು ಸಹಜವಾಗಿ ಯಾವ ಪಂಗಡದವನು ಎಂದು ನಿರ್ಣಯಿಸುವುದು ಕಷ್ಟತರವಾಗುತ್ತದೆ. ಒಬ್ಬ ಆಂಗ್ಲಗ್ರಂಥಕರ್ತರು ಬರೆಯುವುದೇನೆಂದರೆ—"ನಾವು ಇಂಗ್ಲೀಷರು ನಮ್ಮ ಸಮಾಜವನ್ನು ಪರಿಹರಿಯಾದ ಜಾತಿಭೇದದ ದಂಡದಿಂದಲೇ ದಿಲುತ್ತೇವೆ. ನಮ್ಮ ಸಮಾಜದ ಅದ್ಯಂತದಲ್ಲೂ ಈ ರೋಗವು ಹರಡಿಕೊಂಡಿದೆ" ಎಂದಿರುವರು.

'Mysore and South Indian Review

ವಕೀಲರ ನಡತೆ ಹೇಗಿರಬೇಕು?

ಮಿ॥ ಡೊನಾಲ್ಡ್ ಆರ್ ರಿಚ್‌ಬರ್ಗ ಎಂಬ ಪ್ರಖ್ಯಾತ ವಕೀಲರೊಬ್ಬರು ಕೆಳಗೆ ಕಾಣಿಸಿರುವ ಮಾಸಿಕವೊಂದರಲ್ಲಿ ಹೀಗೆ ಬರೆದಿರುವರು "ನಾವು ವಕೀಲರೆಂಬುವರು ಶಾಂತಿಪ್ರೇರಕರೋ ಜಗಳಗಂಟ ಪ್ರಚಾರಕರೋ, ಅಥವಾ ಸಮಾಜದಲ್ಲಿ ಭಿನ್ನಾಭಿಪ್ರಾಯಗಳನ್ನುತ್ಪನ್ನಗೊಳಿಸಿ, ಸಮಾಜದ ವಿಭಕ್ತತೆಯಿಂದ ಹುಟ್ಟಿಬಂದ ಸಂಪಾದನೆಯಿಂದ ಜೀವಿಸುವ ಪರೋಪಜೀವಿಗಳೋ? ಈ ಪ್ರಶ್ನೆಯನ್ನು ಇತ್ಯರ್ಥಿಸುವಾಗ ಪ್ರಕೃತ ವ್ಯವಹಾರದಲ್ಲಿರುವ ವಿಶಾಲ ಶಾಸನಬದ್ಧ ಅಡಚಣೆಯು ಅಗತ್ಯವೋ ಎಂಬ ಪ್ರಶ್ನೆಯು ಸ್ವಾಭಾವಿಕವಾಗಿ ತಲೆಯೆತ್ತಿ ಸಾಮಾನ್ಯನನ್ನು ಆಲೋಚನೆಗಿಡುತ್ತದೆ. ಸಮಾಜದ ಪ್ರಾಥಮಿಕ ವಾತಾವರಣದಲ್ಲಿ ಅಲ್ಪಸ್ವಲ್ಪ ಕಾಯಿದೆ ಕಾನೂನುಗಳು ಅಗತ್ಯವಿವೆ. ಅಲ್ಲದೆ, ನಾಗರಿಕತೆಯು ಹೆಚ್ಚುತ್ತಾ ಹೋದಂತೆ ಪರಿಣಾಮವಾಗಿ ಸಮಾಜದ ಮತ್ತು ವ್ಯಾಪಾರವಾಣಿಜ್ಯದಲ್ಲಿ ತಲೆದೋರುವ ಪಂಥೀಯಗಳ ದೃಷ್ಟಿಯಿಂದ ಸಂಬಂಧಗಭೂತವಾದ ಹಲವು ಶಾಸನಗಳೂ, ಅಡಚಣೆಗಳೂ ಅಗತ್ಯವಿರುತ್ತವೆ. ಈ ಮಾರ್ಗದರ್ಶಕ ಶಾಸನಸೂತ್ರಗಳು ಸಾಮಾಜಿಕ ವ್ಯವಹಾರವನ್ನೋ ವಾಣಿಜ್ಯಪ್ರಪಂಚವನ್ನೋ ಶಿಸ್ತಿನಿಂದ ನಡೆಸುವಂತೆ ಮಾಡುವುದು ಅಗತ್ಯವಿದೆ. ಹೀಗಿರುವುದರಿಂದ ಔದ್ಯೋಗಿಕ ವಕೀಲರ ಅಗತ್ಯವು ಅನಿವಾರ್ಯವಾಗಿ ಕಂಡುಬರುತ್ತದೆ. ವಕೀಲನ ಆಚರಣೆಯನ್ನು ಮೂರು ವಿಭಾಗಗಳನ್ನಾಗಿ ಮಾಡಬಹುದು. (೧) ಉಪದೇಶ, ಪ್ರತಿಪಾದನ, ಮತ್ತು ಶಾಸನರಚನೆ. ಒಬ್ಬ ವಕೀಲನು ಶಾಂತಿಪ್ರೇರಕನೋ ಅಥವಾ ಪರೋಪಜೀವಿಯೋ ಎಂದು ನಿರ್ಧರಿಸುವ ಮೊದಲು ಶಾಂತಿಪ್ರೇರಕರೆಂದರೇನು, ಪರೋಪಜೀವಿಗಳೆಂದರಾರು ಎಂದು ವಿಚಾರಿಸತಕ್ಕದ್ದು. ಆದರೆ ಈ ವಿಚಾರವು ಎಲ್ಲಾ ಸಂದರ್ಭಗಳಲ್ಲೂ ಸುಲಭಸಾಧ್ಯವಾಗಿಲ್ಲ. ಒಬ್ಬ ಕಕ್ಷಿಗಾರನ ಹಕ್ಕುಬಾಧ್ಯತೆಗಳನ್ನು ಅವನಿಗೆ ಸಿಗಬೇಕಾದ ನ್ಯಾಯಪರತೆಯ ಮೂಲಕ ಎತ್ತಿಹಿಡಿದು ಆ ಕಕ್ಷಿಗಾರನಿಗೆ ಬೆಂಬಲವಾಗಿ ನಿಂತರೆ ವಕೀಲನು ತನ್ನ ಕೈಂಕರ್ಯವನ್ನು ನೆರವೇರಿಸಿದಂತಾಗುತ್ತದೆ. ಆದರೆ ಅದೇ ವಕೀಲನು ನ್ಯಾಯನೀತಿಗಳನ್ನು ಲೆಕ್ಕಿಸದೆ, ವ್ಯಕ್ತಿಸಂಬಂಧವಾದ ವಿಚಾರಪರಂಪರೆಗಳನ್ನು ಲಕ್ಷಿಸದೆ ಶಾಸನದ ಹಿಡಿತದ ಮೂಲಕ ತನ್ನ ಮತ್ತು ತನ್ನ ಕಕ್ಷಿಗಾರನ ಹಿತವನ್ನೇ ದೃಷ್ಟಿಪಥದಲ್ಲಿಟ್ಟು ವಾದಿಸಿದರೆ ಆಗ ಆ ವಕೀಲನು ಪರಾಶ್ರಯದಿಂದ ಜೀವಿಸುವ ಪರಪಿಂಡಿಯಾಗುವನು. ಯಾವ ವಕೀಲನು ತನ್ನ ವಾದಕ್ಕೆ ನ್ಯಾಯದ ಬೆಂಬಲವನ್ನು ಕೋರಿ ನ್ಯಾಯವಾದಿಯೂ ವಿಶ್ವಾಸಾರ್ಹನೂ ಆಗಿ ಆಚರಿಸುತ್ತಾನೋ ಅಂತಹವನು ಸಮಾಜದ ಶಾಂತಿರಕ್ಷಕನಾಗುತ್ತಾನೆ. ಅಲ್ಲದೆ, ಯಾವ ವಕೀಲನು ಪ್ರತಿವಾದಿಯ ನಿರ್ಬಲತೆಯ ಸದುಪಯೋಗವನ್ನು ಮಾಡಿಕೊಂಡು ಅವನ ಸಕಲ ಶಕ್ತಿಯ ಅಪಹರಣಕ್ಕಾಗಿ ಹಲವು ವಿಧದಿಂದಲೂ ಸಾಧಿಸುವನೋ ಅವನು ಪರೋಪಜೀವಿಯೇ ಸರಿ. ಶಾಸನಪ್ರಪಂಚದಲ್ಲಿ ನ್ಯಾಯವಾದಿಗಳಾಗಿ ವರ್ತಿಸಿ ಸಮಾಜಕ್ಕೆ ಕಲ್ಯಾಣವನ್ನುಂಟುಮಾಡುವ ಸಂದರ್ಭಗಳು ವಕೀಲರಿಗೆ ಅನೇಕವಿವೆ. ಸಾರ್ವಜನಿಕರಿಗಾಗಿರುವ ಶಾಸನಗಳ ನ್ಯಾಯಾನ್ಯಾಯಗಳ ಮೇಲೆ ಅವನು ತನ್ನ ನಿಷ್ಪಕ್ಷಪಾತ ಅಭಿಪ್ರಾಯವನ್ನಿತ್ತು ತಿಳಿಸಬಹುದು. ಹಾಗಿಲ್ಲದೆ, ಅವನು ಶಾಸನದ ಅಥವಾ ನಿಯಮಗಳನ್ನುಲ್ಲಂಘಿಸಿ ಶಾಸನಗಳ ಪ್ರಯೋಜನವು ಜನತೆಗೆ ದೊರೆಯದಂತೆಯೂ ಮಾಡಬಹುದು. ಆದರೆ ಉಚಿತವಾವುದು? ಪರಸ್ಪರ ವಾಗ ದ್ವಿಪಕ್ಷಗಳನ್ನು ಜಗಳಕ್ಕೆಳಸಿ ಅಂತಹ ದ್ವಂದ್ವದ ಪ್ರಯೋಜನವನ್ನು ಹೊಂದುವ ವಕೀಲರು ಸಾರ್ವಜನಿಕರನ್ನು ಹೆಚ್ಚುಕಾಲ ಮೋಸಗೊಳಿಸಲಾರರು. ಈಗಿನ ದಿನಗಳಲ್ಲಿ ನೀತಿಯ ನೆಲೆಗಟ್ಟನ್ನು ಆಧರಿಸಿ ನಿಂತಿರುವ ಆಚರಣೆಗಳೇ ಎತ್ತಿಹಿಡಿದು ಮುಂದೆ ತಪ್ಪುವ ವಾತಾವರಣದ ಜನನವಾಗಿರುವುದು ವ್ಯಕ್ತವಾಗುತ್ತಾ ಬರುತ್ತಿದೆ. ಆದುದರಿಂದ ಬಹುಮಂದಿ ವಕೀಲರು ನ್ಯಾಯವನ್ನೇ ಅನುಸರಿಸಿ ನಡೆದು ತಮಗೂ ತಮ್ಮವರಿಗೂ ಹಿತವನ್ನುಂಟುಮಾಡಬೇಕಾಗಿದೆ.

Atlantic monthly

ಕೃಷಿಯಿಂದುತ್ಪನ್ನವಾಗುವ ಭಂಡವಾಳ.

ಕೃಷಿಕೈಗಾರಿಕೆಯು ದೇಶದ ದ್ರವ್ಯಸಂಪತ್ತನ್ನು ಹೆಚ್ಚಿಸಲು ಹೇಗೆ ಸಹಕಾರಿಯಾಗುತ್ತದೆ ಎಂಬ ಸಂಗತಿಯನ್ನು ಫ್ರಾನ್ಸಿನ ಪಬ್ಲಿಕ್ ವರ್ಕ್ಸಿನ ಮಂತ್ರಿವರ್ಯರಾದ ಯೂಸ್‌ಗ್ಯೂಟ್ ಎಂಬವರು ಪ್ರಕಟಿಸಿರುತ್ತಾರೆ. ಅವರ ನಿರೂಪಣೆಯಿಂದ ತಿಳಿದುಬರುವಂತೆ— ಕಲ್ಲಿದ್ದಲು ಕಬ್ಬಿಣ ಮೊದಲಾದ ಕೈಗಾರಿಕೆಗಳಿಗಿಂತಲೂ ಅತಿ ಹೆಚ್ಚಾಗಿ ಗೋಧಿಯ ಕೃಷಿಯಿಂದ ದ್ರವ್ಯವು ಲಭ್ಯವಾಗುತ್ತದೆ. ಫ್ರಾನ್ಸಿನಲ್ಲಿ ೧೯೦೭ರಲ್ಲಿ ಧಾನ್ಯ ಮತ್ತು ಹುಲ್ಲನ್ನು ಮಾರ್ಕೆಟ್ಟಿಗೆ ತಂದು ವಿಕ್ರಯಿಸಿದುದರಿಂದ ಅವುಗಳ ಕೃಷಿಕರಿಗೆ ಒಟ್ಟು ೮೪,೦೦೦ ೦೦೦ ಪವನುಗಳು ದೊರೆತುವು. ಈ ಮೊತ್ತದಲ್ಲಿ ಕೇವಲ ಆಳರಸ್ನೂ ಅವರ ಸ್ವಂತ ಉಪಯೋಗಕ್ಕಾಗಿ ವಿನಿಯೋಗಿಸುವರು. ಇತರ ಧಾನ್ಯಗಳನ್ನು ಆ ವರ್ಷ ಫ್ರಾನ್ಸಿನ ಮಾರ್ಕೆಟ್ಟಿನಲ್ಲಿ ಎಕ್ರಯಿಸಿ ಒಟ್ಟು ೩೬ ೦೦೦ ೦೦೦ ಪವನುಗಳು ದೊರೆತುವು—ಎಂದಾಗ ಯಾವ ಕೃಷಿಯಿಂದಾಗಿ ಹೇರಳ ಲಾಭವಾಯಿತೆಂದು ನಾವೇ ನಿಷ್ಕರ್ಷಿಸಿಕೊಳ್ಳಬಹುದು. ಆದುದರಿಂದ ಕೃಷಿಕೈಗಾರಿಕೆಯೆಂಬುದು ದೇಶದ ಸಂಪತ್ತಿಗೆ ಆಧಾರಭೂತವಾದ ವಿಷಯವು. ಸಂಯುಕ್ತ ಅಮೇರಿಕಾದಲ್ಲಿ ಲೆಕ್ಕತೆಗೆದಾಗ ಹೀಗೆಯೇ ವ್ಯಕ್ತವಾಯಿತು. ಫ್ರಾನ್ಸಿನಲ್ಲಿ ೧೯೦೭ರಲ್ಲಿ ೧೦೦,೦೦೦,೦೦೦ ಪವನುಗಳು ಕೃಷಿಯಿಂದ ದೊರೆತುವು. ಈ ಮೊಬಲಗಿನಲ್ಲಿ ಗೋಧಿಯ ಕೃಷಿಯಿಂದ ದೊರೆತ ದ್ರವ್ಯವು ಬಹುಮಟ್ಟಿಗೆ ಹೆಚ್ಚಾಗಿತ್ತು. ಗ್ಯೂಟರವರು ಹೇಳುವುದೇನೆಂದರೆ "ಕೃಷಿಯಿಂದ ರಾಷ್ಟ್ರದ ಸಂಪತ್ತು ಹೆಚ್ಚುತ್ತದೆ. ಅವನ ಕಸಬಿನೆಡೆಗೆ ಅಮೂಲ್ಯ ವಸ್ತುಗಳೆಂದು ಪರಿಗಣಿಸಲ್ಪಟ್ಟಿರುವ ಕಲ್ಲಿದ್ದಲು ಕಬ್ಬಿಣಗಳ ಮಾತೇನು? ೧೯೧೬ರಲ್ಲಿ ಭಂಗಾರದ ಉತ್ಪತ್ತಿಯು ೮೬,೦೦೦ ೦೦೦ ಪವನುಗಳು. ಆದರೆ ೧೯೧೬ರಲ್ಲಾದ ಗೋಧಿಯ ಉತ್ಪತ್ತಿಯು ೧೩೬,೦೦೦ ೦೦೦ ಪವನುಗಳು."

The Indian Review

ಠಂಕಸಾಲೆಗಳನ್ನು ಮುಚ್ಚುವುದೇಕೆ?

ಮಿ॥ ಪೋರ್ಟನ್ ಫ್ಲೋನ್ ಎಂಬವರು ಬರೆದ ಲೇಖನದ ಸಾರಾಂಶವಿದು —"ಹಿಂದೂದೇಶದಲ್ಲಿ ಅನಾದಿಕಾಲದಿಂದಲೂ ಚಿನ್ನಬೆಳ್ಳಿಗಳ ನಾಣ್ಯಗಳನ್ನು ಕರಗಿಸಿ ಅವುಗಳಿಂದ ಆಭರಣಗಳನ್ನು ಮಾಡಿಕೊಳ್ಳುವ ಪದ್ಧತಿ ಇತ್ತು. ಈ ಅಭ್ಯಾಸದಿಂದ ಆಪತ್ಕಾಲಕ್ಕೆ ಒಡವೆ ಹೆಚ್ಚು. ಆಗ ಕಳ್ಳತನವು ಕಡಮೆಯಾಗಿತ್ತು. ಪೋಲೀಸರ ಅಗತ್ಯವು ಹೆಚ್ಚಾಗಿ ಬೇಕಾಗಿದ್ದಿಲ್ಲ. ಜನರಿಗೆ ಮಿತವ್ಯಯ, ಜೋಪಾನಗಳೇ ಪರೀಕೆಂದು ತಿಳಿದಿತ್ತು. ನಾಣ್ಯರೂಪದಲ್ಲಿರುವ ದುಡ್ಡಿನ ಬೆಲೆಯು ಪೇಟೆಯ ಅಂಗಡಿಗೆ ಬೀಳುತ್ತಿತ್ತು. ಆದರೆ, ನಗರಗಳು ಹೋಗುತ್ತಿದ್ದಂತೆ ಆಭರಣಗಳ ರೂಪದಲ್ಲಿದ್ದ ಚಿನ್ನಬೆಳ್ಳಿಗಳ ದೆಸೆಯಿಂದ ಕಾಲದಲ್ಲಿ ದರವೂ ಆಧಾರವಾದ ಗ್ರಾಮ ಬೆಲೆಯೂ ಹೆಚ್ಚಬೇಕಾಯಿತು. ಜನರಲ್ಲಿ ದಾರಿದ್ರ್ಯವು ಕಡಮೆಯಾಗಿದ್ದಿತು. ಆದರೆ ಗೋಲ್ಡ್ ಸ್ಟಾಂಡರ್ಡ್ ಜಾರಿಗೆ ಬಂದಂದಿನಿಂದಲೂ ಭಾರತೀಯರ ನಗನಾಣ್ಯಗಳು ಅಕ್ಕಸಾಲಿಗರ ಪಾಲಾಗಿ ವಿದೇಶಗಳಿಗೆ ತೆರಳುತ್ತಿವೆ. ಬ್ಯಾಂಕುಗಳೂ ದೇಶದಿಂದ ಮಾಯವಾದುವು. ಸರಕಾರವು ಲಾಭವನ್ನು ದೃಷ್ಟಿಯಲ್ಲಿಟ್ಟು ಬೆಳ್ಳಿಯನ್ನು ಮಾರತೊಡಗಿದೆ. ಹಿಂದೂದೇಶದ ಬಡತನಕ್ಕೆ ಇದೇ ಮೂಲವಾಗಿದೆ.

Economist

ಮುಂದಿನ ಭಾರತ

ಜೊಸೆಫ್ ಟೈಲ ಎಂಬವರು ಬ್ರಿಟಿಷ್ ಹಿಂದೂಸ್ಥಾನದ ಆಡಳಿತ ಸಮಸ್ಯೆಗಳು ಎಂಬ ಗ್ರಂಥವನ್ನು ಬರೆದರು. ಅದರ ಭಾವಾರ್ಥವನ್ನು ಕರ್ನಲ್ ಎಲ್ ಜೆ ಎ ಗ್ರೇ ಸಿ ಎಸ್ ಐ ಇವರು ಕೆಳಗಿನ ಪತ್ರಿಕೆಯಲ್ಲಿ ಟೀಕಾಸಮೇತ ಪ್ರಕಟಿಸಿದರು. ಈ ಗ್ರಂಥದಲ್ಲಿ ಬ್ರಿಟಿಷ ಆಡಳಿತವು ಹಿಂದೀಯರಿಗೆ ಸ್ವರಾಜ್ಯಕ್ಕೆ ಹೇಗೆ ಅಸಮರ್ಥವಾಗಿದೆಯೆಂಬುದನ್ನು ಪ್ರತಿಪಾದಿಸಿದ್ದಾರೆ. ಹಿಂದೂದೇಶದಲ್ಲಿರುವ ಸರ್ಕಾರಗಳ ಟೈಲಿಯವರು ಬಹಳವಾಗಿ ವಿಮರ್ಶಿಸಿರುವರು. ಕಾನೂನು ಕಾಯಿದೆಗಳ ಹಿಂದೀಯರಿಗೆ ಒಗ್ಗುವಂತಹವುಗಳೇ ಅಲ್ಲವೆಂದು ಅವರು ಟೀಕಿಸಿರುವರು. ಜನಸಾಮಾನ್ಯರನ್ನು ಕುರಿತಂತೆ ಬಹಳ ಹೀನಾಯವಾದ ವೆಂದು ಟೈಲಿಯವರ ಅಭಿಪ್ರಾಯ. ವಕೀಲರ ಸಂಖ್ಯೆಯು ಹೆಚ್ಚುತ್ತಿದ್ದು ಅವರು ಜನತೆಯಲ್ಲಿನ ಸಾರವನ್ನೇ ನುಂಗುತ್ತಿರುವರು. ಈ ಶಾಸನಗಳನ್ನು ಜನರು ಮೆಚ್ಚುತ್ತಿರುವರೆಂದು ಹೇಳಲು ಸಾಧ್ಯವಿಲ್ಲ. ಅಜ್ಞಾನಾಂಧಕಾರದ ಪರಿಣಾಮವಾಗಿ ಅವರು ಮೌನವ್ರತಧಾರಣೆ ಮಾಡಿರುವರು. ಆದರೆ ಈ ಮೌನತೆಯು ಅವರ ಸಮ್ಮತವೆಂದು ಸ್ವೀಕರಿಸಲ್ಪಟ್ಟಿದೆ. ಈಗಿನ ಕಾನೂನುಕ್ರಮಗಳು ಸುಸಂಸ್ಕೃತರಿಗೆ ಯೋಗ್ಯವಾದುವುಗಳು. ಭಾರತೀಯರಿಗೆ ಈ ಶಾಸನಗಳು ಎಂದೂ ಹಿಡಿಸುವು. ಈಗಿನ ಶಾಸನಗಳು ಸಾಮಾನ್ಯರನ್ನು ತಂಗಿಡಿಸುತ್ತವೆ. ಅವು ಬಹು ಬೆಚ್ಚಿಸಿ ಮುಂದೆರಯುತ್ತವೆ. ಅಲ್ಲದೆ ಬಹು ವೆಚ್ಚಕ್ಕೆ ಕಾರಣವಾಗಿವೆ. ಹಿಂದೂದೇಶದ ಒಂದು ಮೂಲೆಗೆ ಅಂತಹವರಿಗೆ ಅವುಗಳಿಂದ ಪ್ರಯೋಜನವಿಲ್ಲ. ಕ್ರಿಮಿನಲ್ ವ್ಯವಹಾರದಲ್ಲಿ ನ್ಯಾಯವು ಸಿಗದಿರುವುದರಿಂದ ಬ್ರಿಟಿಷ ಆಡಳಿತಕ್ಕೆ ಬಾಧಕವಿದೆ. ಯಾವ ವಿವರವೂ ಇಲ್ಲದೆ ಅಪರಾಧಿಗಳನ್ನು ಬಿಡುಗಡೆ ಮಾಡುವುದರಿಂದ ಅಪರಾಧಗಳು ಹೆಚ್ಚುತ್ತವೆ. ಆಳರಸರ ಗೌರವಕ್ಕೆ ಇದು ಕುಂದನ್ನುಂಟುಮಾಡುತ್ತದೆ. ಹೀಗೆಯೇ ಶಾಸನಸೂತ್ರಗಳಾಗಿ ಆಡಂಬರಗಳ ಸಂಖ್ಯೆಯು ಹೆಚ್ಚುತ್ತದೆ. ಸರಕಾರದ ಮುದ್ರಾಂಕವೂ ಅಧಿಕಾಧಿಕವಾಗಿ ಬೇಕಾಗಿರುತ್ತದೆ. ಭೂಕಂದಾಯದಲ್ಲಿರುವ ಕಾರ್ಯವು ಹಿಂದೀಯ ರೈತರನ್ನು ಸಾಲಕ್ಕೆ ಇಳಿಸಿದೆ.

'United Service Magazine'

ಭಾರತದಲ್ಲಿನ ರಾಷ್ಟ್ರೀಯ ಚಳವಳ.

ಸರ್ ಚಾರ್ಲ್ಸ ಇಲಿಯಟರವರು ಈ ಕೆಳಗಿನ ಪತ್ರಿಕೆಯ [illegible] ಸಂಚಿಕೆಯಲ್ಲಿ ತನ್ನ ಭಾವನೆಯನ್ನು ಪ್ರಕಟಿಸಿರುವರು. ಅವರು ಭಾರತೀಯ ಚಳವಳದ ಕುರಿತಾಗಿ ಹೀಗೆಂದಿರುವರು—"ಇಂ ವರ್ಷಗಳ ಹಿಂದೆ ನಾನು ಹಿಂದೂದೇಶಕ್ಕೆ ಹೋದಾಗ [illegible] ಮನುಷ್ಯರುಗಳ [illegible] ಅಜ್ಞಾನವಶರಾಗಿದ್ದರು. ಆದರಲ್ಲಿ ಸಾರ್ವಜನಿಕ [illegible] ಆದರೆ ಈಗ [illegible] ವ್ಯವಹಾರಗಳು [illegible] ವಾಣಿಜ್ಯ ಸೂತ್ರಗಳು [illegible] ಜನರಲ್ಲಿ [illegible] ಪ್ರವಚನಗಳನ್ನು [illegible] ದೇಶೀಯ ಭಾವನೆ—ದೇಶಪ್ರೇಮಗಳಿಂದ [illegible] — ನಾವು [illegible] ದೇಶವನ್ನೇ [illegible] ಜನಾಂಗದವರು [illegible] ಎಂದು ಪ್ರಶ್ನಿಸುತ್ತಿರುವರು. [illegible] ಈ ಪ್ರೇಮವನ್ನು [illegible] ಆದರೆ ಇದರಿಂದ [illegible] ಕೇವಲ [illegible] ಫಲವು [illegible] ದೇಶದ [illegible] ರಾಷ್ಟ್ರೀಯ [illegible] ಎಂದು ನನ್ನನ್ನು [illegible] ನಾನು ಈ ವಾದವನ್ನು [illegible] ಕೈಕೊಳ್ಳಬೇಕು. [illegible] ಆದರೆ [illegible] ಒಂದು ರಾಷ್ಟ್ರ [illegible] ಜನರ ವ್ಯವಹಾರವನ್ನು [illegible] ಹೇಗೆ?

'Southwork Diocesan Chronicle'



ಹ! ಹ!! ಹ!!!

'ಸ್ವದೇಶಾಭಿಮಾನಿ'ಯನ್ನು ಓದುವುದೆಂದರೆ ಆಬಾಲವೃದ್ಧರಿಗೊಂದು ಮಹಾ ಹಬ್ಬ'- ಪ್ರತಿವಾರವೂ ಹೊಸ ಹೊಸ ಏರ್ಪಾಟು!

ಮುಂದಿನ ವಾರ:

20 ಪುಟಗಳ ಸಂಚಿಕೆಯಲ್ಲಿ—

ವಿನೋದಭರಿತ ವಾರ್ತಾವಾಹಿನಿ,
ವ್ಯಂಗಲೇಖನಗಳು. ಶ್ರೀ॥ ಕಾರಂತರ ಲೇಖನ
ವನಿಸ್ಮೃತಿ—ನಕ್ಕು ನಕ್ಕು ಮೈಮರೆಯುವಿರಿ.

ಹಲವು ಚಿತ್ರಗಳು, ಎಷ್ಟೋ ಆನಂದಕರ ವಾರ್ತೆಗಳು, ಎಷ್ಟೋ ರಾಜಕೀಯ ಸುದ್ದಿಗಳು—ಇತ್ಯಾದಿ ಪ್ರಕಟವಾಗುವುವು. ಬೆಲೆ ಆಣೆ 1.

ಎಲ್ಲಿ ಕೇಳಿದರಲ್ಲಿ ಸ್ವದೇಶಾಭಿಮಾನಿಯು ಇದೆ-ಏಜಂಟರ ಬಳಿಗೆ ಧಾವಿಸಿರಿ!

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜನಲ್ಲಿ ದೊರೆಯುತ್ತದೆ ರೂ 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು

ದಕ್ಷಿಣ ಕನ್ನಡ ಮತ್ತು ಕೊಡಗ ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜೀವಾಮೃತವನ್ನು ಸೇವಿಸಿ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ ಅಸಹಾಯಕರಾಗಿದ್ದೀರೋ, ದೇಹವು ಕುಂದುತ್ತಿದೆಯೇ, ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸರರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಶಕ್ತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು. ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಗಳ ಅಣುಗಳನ್ನು ಪೋಷಿಸುತ್ತದೆ ಜೀವನದ ಆನಂದವೇ ಹಸ್ತಗತವಾಗುತ್ತದೆ ವಯ ಪುಂಸ್ತ್ರೀಭೇದ, ಕಾಲಗಳ ಭೇದಾಭೇದವೇ ಇಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ

ತಯಾರಿಸುವವರು — **ಆಯುರ್ವೇದಾಶ್ರಮ, ಪೋ ಬೋಕ್ಸ್ 287, ಮದರಾಸು**
ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು - **ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ**

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೊಲೆರಕ್ಕೆ ದಿವ್ಯೌಷಧ ಉಪಯೋಗಿಸಿದರೆ ಗುಣ ಖಾತ್ರಿ.
ಕ್ರಯ ಡಬ್ಬಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ ಕುಟುಂಬ ಪರಂಪರೆಯಾಗಿ ಬಂದ ತಗಲಿದ ರೋಗವು ಗುಣವಾಗುವುದು. ರೋಗಿಗಳು ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದನ್ನೂ ತೆಗೆದುಕೊಳ್ಳಬಹುದು
8 ಔನ್ಸಿನ ಬಾಟ್ಲಿ 1ಕ್ಕೆ ರೂ 2—8—0.

ಕೆ. ವಿ ಕೃಷ್ಣನ್,
ಕಲ್ಲಾಯಿ ಮಲಬಾರ್,
ಅಥವಾ
ಬಾಲ್ ಪಿ ಮಕ್ ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ಅರುಣೋದಯ.

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಷ್ಕೃತ ಲೇಖನಗಳು ಬರುವವಲ್ಲದೆ ದೇಶ ವಿದೇಶದ ಸುದ್ದಿ ಸಂಗತಿಗಳೂ ಬರುವುವು ಅಲ್ಲದೆ ಮನೋಹರವಾದ ಕತೆ ಕವಿತೆಗಳೂ ಇರುವುವು ಚಿತ್ರ ಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಶಾಸ್ತ್ರೀಯ ಶೋಧಗಳೂ ಪ್ರಕಟವಾಗುವುವು. ಇದು ಕರ್ನಾಟಕದಲ್ಲಿ ಇದರ ಪ್ರಚಾರವಿರುವುದರಿಂದ ಜಾಹೀರಾತುದಾರರಿಗೆ ಇದೊಂದು ಉತ್ತಮ ಸಾಧನ ಅಲ್ಲಲ್ಲಿಗೆ ಏಜಂಟರು ಬೇಕು

ವಾರ್ಷಿಕ ಚಂದಾ, ರೂ 3 0—0

ಮೆನೇಜರ್—ಅರುಣೋದಯ, ಬೆಳಗಾವಿ

Modern Hindu Hotel

P. J. R. Bros.,
Mangalore S K

ಬೋರ್ಡಿಂಗ್ ಮತ್ತು ಲೋಜಿಂಗ್, ಕಾಫಿ, ಚಾ, ಕೊಕ್ಕೋ, ಇನ್ನೂ ಇತರ ಪಾನೀಯಗಳೂ ಒಳ್ಳೇ ತರದ ತಿಂಡಿ ಸಾಮಾನುಗಳೂ ಯಾವಾಗಲೂ ನಮ್ಮಲ್ಲಿ ತಯಾರಿರುತ್ತವೆ ರುಚಿಕರವಾದ ಊಟ ಕಡಿಮೆ ಛಾರ್ಜು ಸ್ನಾನಕ್ಕೂ ಇನ್ನು ಇತರ ದಿನಚರ್ಯೆಗಳಿಗೂ ಅನುಕೂಲವಾಗಿದೆ

An Advertisement in

‘Swadeshabhimani’

Means a sure fortune to you

Ask for Contract Rates

The Swadeshabhimani office,
Car Street Mangalore

ಕಿರ್ಲೋಸ್ಕರ ಕಿಫಾಯತ್ ರಹತನ್ನು

ನೂರಾರು ಕೃಷಿಕರು ಅವರ ಭೂಮಿಯನ್ನು ಸಮರ್ಪಕವಾಗಿ ಉಳಲು ಉಪಯೋಗಿಸುತ್ತಿದ್ದಾರೆ.

ನೀವೇಕೆ ಉಪಯೋಗಿಸಲಾರಿರಿ?

ಉತ್ತಮ ಸಾಹಿತ್ಯ, ಉತ್ತಮ ತರಗತಿಯ ಕಾಮಗಾರಿ, ಉತ್ಕೃಷ್ಟ ಆಯೋಜನೆ, ಒಂದು ದಿನಕ್ಕೆ 3 ಎಕ್ಕರೆ ಭೂಮಿಯನ್ನುಳಲು ಸಹಾಯಕವಾಗುವುದೇ ಕಿರ್ಲೋಸ್ಕರ ನೊಗದ ಪ್ರಯೋಜನ



ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ, ಸತಾರ.
ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ, ಎಂ ಎಲ್
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— **ಶಾರದಾ ಛಾಪಖಾನೆ,**
ರಥಬೀದಿ ಮಂಗಳೂರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಪತ್ರಿಕೆಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

The Scientific Gold Bangle Co Ltd.,
Head Office 19 Byragimatam Street,
P o Box No 203 Madras

---

77 Years!



Two generations of approved service enables us to pick and choose what is cheap, lasting & good to suit the pockets & the tastes of our long standing wide circle of

CUSTOMERS

who know our

Premier House for Swadeshi

Mill Yarns—Handloom Cloths, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE.

ಭಾರತದ ಸಣ್ಣ ಸಣ್ಣ ಕೈಗಾರಿಕೆಗಳ ಶೋಚನೀಯಾವಸ್ಥೆ— ಸರಕಾರ ಮತ್ತು ಜನರ ದುರ್ಲಕ್ಷ್ಯವಿದ್ದರೂ ಇವುಗಳು ಜೀವಿಸಿಕೊಂಡು ಬಂದ ಕ್ರಮ—ಇವುಗಳ ಮಹತ್ವ.

ಭಾರತದ ಸಣ್ಣ ಸಣ್ಣ ಕೈಗಾರಿಕೆಗಳು ಈಗಿನ ದಿನಗಳಲ್ಲಿ ವಿಚಿತ್ರ ಪರಿಸ್ಥಿತಿಗೊಳಗಾಗಿವೆ. ಅವುಗಳ ಮಾಹತ್ಮ್ಯವು ಎಷ್ಟೆಂದು ತಿಳಿಯಬೇಕಾದರೆ ನಾವು ಮೊದಲು ಹಿಂದೂ ದೇಶದ ಪ್ರಕೃತ ಪರಿಸ್ಥಿತಿಯನ್ನರಿಯಬೇಕಾಗಿದೆ- ಭಾರತದಲ್ಲಿ ಈಗ ಸಣ್ಣ ಕೈಗಾರಿಕೆಗಳ ಆವಶ್ಯಕತೆಯು ಬಹುವಾಗಿ ಹೆಚ್ಚುತ್ತದೆ ಕಬ್ಬಿಣ, ಉಕ್ಕು, ಹತ್ತಿ, ಚರ್ಮ ಕಲ್ಲಿದ್ದಲುಗಳ ಕಾರ್ಖಾನೆ ಮೊದಲಾದ ಹಲವು ದೊಡ್ಡ ದೊಡ್ಡ ಕೈಗಾರಿಕೆಗಳು ಹಿಂದೂದೇಶದಲ್ಲಿ ಇನ್ನೂ ಜೀವಂತವಾಗಿರುವುವಾದರೂ, ಅವುಗಳ ಅಲ್ಪ ಸಂಖ್ಯೆಯನ್ನು ಗಣನೆಗೆ ತಂದುಕೊಂಡರೆ ಅವುಗಳಿಂದ ಭಾರತವರ್ಷವು ಬಲಿಷ್ಠವಾಗುವುದೆಂಬ ಮಾತು ನಿಜವಲ್ಲವೆಂದು ತಿಳಿದು ಬರುವುದು. ಹಿಂದೂದೇಶವು ಅನಾದಿ ಕಾಲದಿಂದಲೂ ಸಣ್ಣ ಸಣ್ಣ ಕೈಗಾರಿಕೆಗಳ ತವರು ಮನೆ ಹಿಂದೂದೇಶದ ಪಂಚಪ್ರಾಣವೇ ಇವುಗಳಾಗಿವೆ ವಿದೇಶೀಯ ಸಂಪರ್ಕದಿಂದ ದೊಡ್ಡ ಕೈಗಾರಿಕೆಗಳ ಜನನವು ಇಲ್ಲಿ ಆಯಿತಾದರೂ ಅವುಗಳಲ್ಲಿ ಕೆಲಸಮಾಡಿ ಹೊಟ್ಟೆ ಹೊರುವವರ ಸಂಖ್ಯೆಯು ೩೦ ಮಿಲಿಯ ಮಾತ್ರ ೫೫ ಮಿಲಿಯ ದುಡಿಮೆಗಾರರಲ್ಲಿ ಮಿಕ್ಕವರೆಲ್ಲಾ ಸಣ್ಣ ಸಣ್ಣ ಕೈಗಾರಿಕೆಗಳಿಂದ ಜೀವನೋಪಾಯ ಮಾಡುತ್ತಿರುವವರು. ಸಣ್ಣ ಕೈಗಾರಿಕೆಗಳೆಂದರೆ ಯಂತ್ರೋಪಕರಣಗಳ ಸಹಾಯದಿಂದ ನಡೆಯುವಂತಹುಗಳಲ್ಲ ಹಳ್ಳಿ ಹಳ್ಳಿಗಳಲ್ಲಿ ಹೆಂಗಸರು ಮಕ್ಕಳು ಒಟ್ಟುಗೂಡಿ ಮನೆಯೊಳಗೇನೆ ಕುಳಿತು ಪೂರೈಸುವ ಹಲವು ಕೈಗಾರಿಕೆಗಳು ಹಳ್ಳಿಗಳಲ್ಲಿನ ನೇಯ್ಗೆ, ಕಬ್ಬಿಣದ, ಮಡಿಕೆ ಮಾಡುವ, ಎಣ್ಣೆ ತೆಗೆಯುವ, ಚಾಪೆ ಮಾಡುವ, ಕೆಲಸಗಳೆಲ್ಲ ಗ್ರಾಮಕೈಗಾರಿಕೆಗಳ ವರ್ಗಕ್ಕೆ ಸೇರಿದವುಗಳು.

ಕೃಷಿ ಕೈಗಾರಿಕೆಯೂ ಈ ಸಣ್ಣ ಕೈಗಾರಿಕೆಗಳ ವರ್ಗಕ್ಕೆ ಸೇರಿದುದು. ಹಿಂದೂ ದೇಶದ ಸಾಮಾನ್ಯ ಕೃಷೀವಲನು ತನ್ನ ಸಣ್ಣ ಭೂಮಿಯಲ್ಲಿ ಅತಿಸಿಧಾನವಾಗಿ ಅತ್ಯಲ್ಪ ಕೃಷಿಯನ್ನು ಮಾಡುತ್ತಾನೆ ಬ್ರಿಟನ್ ಮತ್ತು ಅಮೆರಿಕಾಗಳ ರೈತರು ಮಾಡುವ ಉತ್ಪತ್ತಿಗೂ ಹಿಂದೀಯ ರೈತರು ಮಾಡುವ ಉತ್ಪತ್ತಿಗೂ ಅಜಗಜಾಂತರವಿದೆ ಈ ಕಾರಣವಾಗಿ ಈ ಕೃಷಿ ಕೈಗಾರಿಕೆಯನ್ನೂ ಸಣ್ಣ ಕೈಗಾರಿಕೆಗಳ ವರ್ಗಕ್ಕೆ ಸೇರಿಸಬೇಕಾಗುತ್ತದೆ.

ಭಾರತವು ಗ್ರಾಮಗಳಿಂದಾಗಿ ಬದುಕಿದೆ ಶೇಕಡಾ ೯೦ರಷ್ಟು ಭಾರತೀಯರು ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ (ಜರ್ಮನಿಯಲ್ಲಾದರೆ ಅಲ್ಲಿಯ ಶೇಕಡಾ ೫೫ರಷ್ಟು ಜನರು ಹಳ್ಳಿಗಳಲ್ಲಿರುವರು ಇಂಗ್ಲಾಂಡಿನಲ್ಲಿ ಶೇಕಡಾ ೨೨ರಷ್ಟು ಜನರು ಹಳ್ಳಿಯಲ್ಲಿ ವಾಸಿಸುವರು) ಹೀಗಿರುವಾಗ ಹಿಂದೂದೇಶಕ್ಕೆ ಗ್ರಾಮಗಳ ಪುನರುದ್ಧಾರ ವಿಚಾರವು ಎಷ್ಟೆಂದು ಮಹತ್ವನ್ನುಳ್ಳದೆಂದು ಬೇರೆ ಹೇಳಬೇಕಾಗಿಲ್ಲ ಪೇಟೆ ಪಟ್ಟಣಗಳಲ್ಲಿರುವ ಗಣಿಗಳಲ್ಲೂ, ರೈಲ್ವೆಗಳಲ್ಲೂ, ಕಾರ್ಖಾನೆಗಳಲ್ಲೂ ದೇಶದ ಬಹುಮಂತ ಜನತೆಯು ಕೆಲಸಮಾಡುತ್ತಿದೆಯೆಂಬ ಭಾವನೆಯು ಅನೇಕರಲ್ಲಿದೆ. ಇದು ತೀರ ತಪ್ಪಾಗಿರುತ್ತದೆ. ಗ್ರಾಮಗಳಲ್ಲಿರುವ ಕೈಗಾರಿಕೆಗಳು ಹಿಂದೂದೇಶದ ಬಹುಮಂದಿ ಸಂಖ್ಯೆಯನ್ನು ಸಲಹುತ್ತಿವೆಯೆಂಬ ವಿಚಾರವು ಮೇಲೆ ಕೊಟ್ಟ ಸಂಖ್ಯಾಪ್ರಮಾಣದಿಂದಲೇ ಸ್ವಯಂ ವ್ಯಕ್ತ. ಸಣ್ಣ ಕೈಗಾರಿಕೆಗಳಿಂದ ಯಾವ ಪ್ರಯೋಜನವೂ ಇಲ್ಲವೆಂಬ ಭಾವನೆಯು ನಮ್ಮ ಜನರಿಂದ ತೊಲಗಿಹೋಗಬೇಕು. ಗ್ರಾಮಗಳಲ್ಲಿ ಮಾತ್ರ ಸಣ್ಣ ಕೈಗಾರಿಕೆಗಳು ಇರುವುವಲ್ಲದೆ, ಪಟ್ಟಣಗಳಲ್ಲೂ ಸಣ್ಣ ಸಣ್ಣ ಕೈಗಾರಿಕಾ ಸಂಸ್ಥೆಗಳಿವೆ. ಅವುಗಳಲ್ಲಿ ಸಾವಿರಾರು ಕೂಲಿಗಳು ದುಡಿಯುತ್ತಾರೆ. ಈ ಸಣ್ಣ ಕೈಗಾರಿಕೆಗಳಲ್ಲಿರುವಷ್ಟು ಶಕ್ತಿಯು ದೊಡ್ಡ ಕೈಗಾರಿಕೆಗಳಲ್ಲಿರುವುದಿಲ್ಲ, ನೇಯ್ಗೆಯ ಕೈಗಾರಿಕೆಯೊಂದು ಹಲವು ಶತ

ಸಣ್ಣ ಕೈಗಾರಿಕೆಗಳ ಮಹತ್ವ.

[ಭಾರತದಲ್ಲಿ ನವಕ್ರಾಂತಿಯು ತಲೆದೋರಿದ್ದು—ಕೈಗಾರಿಕೆಯ ಪ್ರಪಂಚದಲ್ಲಿ ನೂತನ ಚೇತನವು ದೃಷ್ಟಿಗೋಚರವಾಗಿದೆ. ಸಣ್ಣ ಕೈಗಾರಿಕೆಗಳನ್ನು ಬಿಡಬೇಕೋ ಇಡಬೇಕೋ ಎಂಬ ಸಮಸ್ಯೆಯು ದೇಶದ ಅರ್ಥಶಾಸ್ತ್ರಜ್ಞರನ್ನು ಕಂಗೆಡಿಸಿದೆ. ಕೆಳಗಣ ಲೇಖನದಲ್ಲಿ ಸಣ್ಣ ಕೈಗಾರಿಕೆಗಳ ಜೀವಿತವು ದೇಶಕ್ಕೆ ಎಷ್ಟೊಂದು ಫಲಕಾರಿಯಾಗಿದೆಯೆಂದು ಪ್ರತಿಪಾದಿಸಲ್ಪಟ್ಟಿದೆ. ಪ್ರೊ। ಮಣಿ ಮೋಹನ್ ಸೆನ್. ಎಂ. ಎ (ಅರ್ಥಶಾಸ್ತ್ರಜ್ಞರು) ಇವರ ಲೇಖನವೊಂದರ ಭಾವಾರ್ಥವಿದು.]

ಮಾನಗಳಿಂದ ಝುರ್ಝುರಿತಗೊಂಡು, ಜನತೆಯ ಅಲಕ್ಷ್ಯಕ್ಕೆ ತುತ್ತಾಗಿ, ಗುಟುಕು ಜೀವನದಿಂದದೆಯಾದರೂ ಈ ಕೈಗಾರಿಕೆಯು ಮುಹಾಶಕ್ತಿಯು ಅಸುಪಮವಾಗಿಯೇ ನಿಂತಿದೆ ಒಂದು ಕಡೆಯಿಂದ ಅದಕ್ಕೆ ಆಳರಸರಿಂದ ಆಘಾತ, ಒಂದೆಡೆಯಿಂದ ಅದಕ್ಕೆ ಜನರಿಂದ ಒದೆತ, ಇನ್ನೊಂದೆಡೆಯಿಂದ ಅದಕ್ಕೆ ವಿದೇಶೀಯ ಸ್ಪರ್ಧೆಯ ಕತ್ತರಿ—ಹೀಗಿದ್ದರೂ ಈ ಕೈಗಾರಿಕೆಯು ಉಸಿರುಗಟ್ಟಿ, ಬದುಕಿ, ಭಾರತದ ಭಾವೀ ಕಲ್ಯಾಣಕ್ಕೆ ತಾನು ಸದಾಸಿದ್ಧಸಿರುವೆನೆಂದು ಮೊರೆಯಿಡುತ್ತಿದೆ ಈ ಕೈಗಾರಿಕೆಯ ಆಶ್ರಯದಲ್ಲಿ ಮುಂದಿನ ಭಾರತದ ಉದ್ಧಾರವಾಗಲಿದೆ ಒಡವರ ಭಾಗ್ಯವು ತಿರುಗಿ ಹೋಗಲಿದೆ—ಮಾತ್ರ ಜನರ ಸಹಾನುಭೂತಿಪರವಾದ ಪ್ರೋತ್ಸಾಹವು ಅಗತ್ಯವಿದೆ

ಪರೋಪ್ಯ ಕ್ರಮಸಿದ್ಧಾಂತಗಳಿಗನುಸಾರವಾಗಿ ವಿದ್ಯುಚ್ಛಕ್ತಿ ಉಗಿ ಮೊದಲಾದುವುಗಳ ಸಹಾಯದಿಂದ ಪಟ್ಟಣಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಜೀವಿಸಿಕೊಂಡಿವೆ ಆಧುನಿಕ ಯಂತ್ರೋಪಕರಣಗಳ ಸಹಾಯದಿಂದ ಇವು ನಡೆಯುತ್ತವೆಯಾದರೂ ಇವುಗಳ ಸಣ್ಣ ಕೈಗಾರಿಕೆಗಳ ವರ್ಗಕ್ಕೆ ಸೇರಿದವುಗಳು (ಗೋಧಿ ಹಿಟ್ಟು ತಯಾರಿಸುವುದು, ಭತ್ತಕುಟ್ಟುವುದು, ಎಣ್ಣೆ ತೆಗೆಯುವುದು, ಮುದ್ರಿಸುವುದು—ಇವೆಲ್ಲ ಸಣ್ಣ ಕೈಗಾರಿಕೆಗಳೇ)

ಈ ಶಕ್ತಿಗಳೆಷ್ಟಿಲ್ಲ ಭಾರತೀಯರ ರಕ್ಷಿಸಿಕೊಂಡು ಬರಬೇಕಾಗಿದೆ ಇವುಗಳಲ್ಲಿ ಸುಧಾರಣೆಗಳನ್ನುಂಟುಮಾಡಿಕೊಳ್ಳಬೇಕಾಗಿದೆ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿ ನೋಡಿದರೆ ಹಿಂದೂದೇಶಕ್ಕೆ ಈ ಕೈಗಾರಿಕೆಗಳನ್ನು ಬಿಟ್ಟರೆ ಬೇರೆ ಗತಿಯಿಲ್ಲವೆಂದು ತಿಳಿದು ಬರುವುದು

ಸಣ್ಣ ಕೈಗಾರಿಕೆಗಳ ರಕ್ಷಣೆಯಾಗಬೇಕೆಂದು ಹೇಳುವುದು ಏಕೆಂದರೆ –

(೧) ದೇಶದ ಆರ್ಥಿಕಸ್ಥಿತಿಯ ದೃಷ್ಟಿಯಿಂದ

(೨) ೫೨॥ ಮಿಲಿಯ ಜನರು ಇವುಗಳನ್ನು ಹೊಂದಿಕೊಂಡಿರುವುದರಿಂದ,

(೩) ಹಿಂದೀಯ ಜನತೆಯನ್ನು ನಿರುದ್ಯೋಗತೆ, ಉಪವಾಸಗಳ ದುರಂತ ಕಷ್ಟಗಳಿಂದ ವಿಮುಕ್ತನ್ನಾಗಿ ಮಾಡುವ ಹಾದಿಯು ಇದೊಂದೇ ಆಗಿರುವುದರಿಂದ,

(೪) ಈ ಕೈಗಾರಿಕೆಗಳಲ್ಲಿ ಅಡಕವಾಗಿರುವ ಕಲೆಯ ದೃಷ್ಟಿಯಿಂದ, ಭಾರತ ದೇಶದ ಪ್ರಾಚೀನ ಕಲೆಯು ನಾಮಾವಶೇಷವಾಗ ಬಾರದು ಎಂಬುದರಿಂದ;

ವಿದೇಶಗಳಿಂದ ಆಯಾತವಾಗುವ ವಸ್ತು ಒಡವೆಗಳ ದೆಸೆಯಿಂದ ಈ ಗ್ರಾಮಕೈಗಾರಿಕೆಗಳ ಪ್ರಾಣವು ಹಾರಿಹೋಗುವ ದುಸ್ಥಿತಿಯು ಬಂದೊದಗಿದೆ ಬಟ್ಟೆಬರೆ, ಚರ್ಮದೆಣ್ಣೆ, ಗಾಜಿನ ಸಾಮಾನುಗಳು, ಎನಾಮೆಲ್ ಸಾಮಗ್ರಿಗಳು ಇತ್ಯಾದಿಗಳನ್ನು ನಾವು ಪರದೇಶಗಳಿಂದ ಆಮದು ಮಾಡುತ್ತಿರುವುದರಿಂದಾಗಿ ಆತ್ಮಘಾತಮಾಡಿಕೊಂಡಂತಾಗುತ್ತದೆ ಗಿರಣಿಗಳ ಸ್ಪರ್ಧೆಯಿಂದಲೂ ದೇಶಕ್ಕೆ ಮಹಾ ವಿಪತ್ತು ಒದಗಿದೆ ಈ ದುರ್ನಿಮಿತ್ತಗಳನ್ನು ಶೀಘ್ರದಲ್ಲೇ ಹೋಗಲಾಡಿಸದಿದ್ದರೆ ಭಾರತದ ವಿನಾಶವು ಅನತಿದೂರವಿರಲಾರದು.

ಗ್ರಾಮೋದ್ಯೋಗಗಳ ಪುನರುದ್ಧಾರವಾಗಬೇಕಾದರೆ, ಅದಕ್ಕೆ ಅಗತ್ಯವಿರುವ ದ್ರವ್ಯ ಸಂಚಯದ ಕಾರ್ಯವನ್ನು ಸರಕಾರವೂ ಜನರ ಮುಖಂಡರೂ ಮಾಡಿಕೊಳ್ಳಬೇಕು ಅನಂತರ ಆ ದ್ರವ್ಯವನ್ನು ಅಗತ್ಯಕಂಡಂತೆ ಉಪಯೋಗಿಸಿ ಸಣ್ಣ ಗ್ರಾಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿ, ಆ ಮೂಲಕ ಉತ್ಪತ್ತಿಯಾಗುವ ಸಾಮಗ್ರಿಗಳನ್ನು ವಿಕ್ರಯಿಸುವ ಬಗ್ಗೆ ಮಾರ್ಕೆಟುಗಳನ್ನು ಒದಗಿಸಿ ಕೊಡಬೇಕು. ಜನರಲ್ಲಿ ಸ್ವದೇಶೀ ಪ್ರೇಮವು ಹುಟ್ಟಬೇಕು. ಒಬ್ಬರ ಮೇಲ್ಮೆಯೇ ತನ್ನ ಮೇಲ್ಮೆಯೆಂದು ಪ್ರತಿಯೊಬ್ಬನೂ ತಿಳಿದುಕೊಂಡಿರಬೇಕು. ಅಂದೇ ನಮ್ಮ ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲ

ಯಾವ ಹಂಗಿಗೂ ಬೀಳದೆ, ದೊಡ್ಡ ಕೈಗಾರಿಕೆಗಳ ಲೂಟಿಗೆ ಸಿಗದೆ ವೃದ್ಧಿಹೊಂದುವ ಕೈಗಾರಿಕೆಗಳು:

೧ ಒಂದು ವಸ್ತುವು ಒಂದು ಸಂಗಡದವರಿಗ ಅಥವಾ ಒಂದು ಪ್ರಾಂತ್ಯಕ್ಕೆ ಬೇಕಾಗುತ್ತಿದ್ದರೆ ಅಂತಹ ವಸ್ತುವನ್ನು ತಯಾರಿಸುವ ಉದ್ಯೋಗವು ವೃದ್ಧಿಹೊಂದಲವಕಾಶವಿದೆ

೨ ಶೃಂಗಾರಭರಿತವಾಗಿರಬೇಕಾದ ಶಾಲುಗಳು, ಜಮಖಾನಗಳು, ತೆಳ್ಳಗಿನ ಬಟ್ಟೆ ಒರೆಗಳು, ಕೊಪ್ಪಿನ ಸಾಮಗ್ರಿಗಳು, ಕೆತ್ತನೆಯ ಕೆಲಸಗಳು ಇವುಗಳೆಲ್ಲ ವೃದ್ಧಿಹೊಂದಬಹುದು ಇವುಗಳನ್ನು ತಯಾರಿಸಲು ದೊಡ್ಡ ಕೈಗಾರಿಕೆ ಸಂಸ್ಥೆಗಳಿಗೆ ಸಾಧ್ಯವಾಗುವುದಿಲ್ಲ ಇವುಗಳನ್ನೆಲ್ಲ ಸಣ್ಣ ಉದ್ಯೋಗಗಳೇ ತಯಾರಿಸಬೇಕಾಗಿದೆ ಅಲ್ಲದೆ ಈ ಸಾಮಗ್ರಿಗಳಿಗೆ ಹೆಚ್ಚಿನ ಮಟ್ಟಿಗೆ ಗಿರಾಕಿಗಳು ದೊರೆಯುವ, ಒಂದೊಂದು ಸಂಗಡದ ಧನಿಕರು ಮಾತ್ರ ಗಿರಾಕಿಗಳಾಗಿ ದೊರೆಯುವುದರಿಂದ ಈ ಕೈಗಾರಿಕೆಗಳನ್ನು ಮುಂದೊತ್ತಿ ನಡೆಸಿಕೊಳ್ಳಬಹುದು

೩. ಮರದ ಕೆಲಸ, ಪಾದರಕ್ಷೆಗಳ ಕೆಲಸ, ಹೊಲಿಗೆ ಕೆಲಸ, ಬುಕ್‌ಬ್ಯಾಂಡಿಂಗ್ ಕೆಲಸ ಇವುಗಳಲ್ಲಿ ವಿಶೇಷ ಪ್ರಾವೀಣ್ಯವನ್ನು ತೋರಿಸಿದರೆ ಈ ವ್ಯಕ್ತಿಗಳಲ್ಲಾ ಜನರ ಜೀವನವು ಕಷ್ಟವಿಲ್ಲದೆ ನಡೆಯಬಹುದು. ಯುರೋಪು ಅಮೆರಿಕಾಗಳಲ್ಲಿ ಯಂತ್ರಗಳ ಸಹಾಯದಿಂದ ತಯಾರಾಗುವ ವಸ್ತುಒಡವೆಗಳನ್ನೂ ಮೀರಿಸಿ ಇವುಗಳನ್ನು ಸುಂದರವಾಗಿ ತಯಾರಿಸಬಹುದು.

೪. ಬರಿಯ ಸೌಂದರ್ಯದ ಮೇಲೆ ಹೊಂದಿಕೊಂಡಿರದೆ ದಪ್ಪನಾಗಿರುವ ಖದ್ದರ್ ಬಟ್ಟೆಗಳನ್ನೋ ಕಂಬಳಿಗಳನ್ನೋ ತಯಾರಿಸುವ ಕೈಗಾರಿಕೆಗಳಲ್ಲಿ ದೊಡ್ಡ ಕಾರ್ಖಾನೆಗಳು ಸ್ಪರ್ಧಿಸಲು ಸಾಧ್ಯವಿರುವುದಿಲ್ಲ. ಅಂತಹ ಕೈಗಾರಿಕೆಗಳಿಗೆ ಮನವಿಕ್ಕಬಹುದು. ಈ ಬಟ್ಟೆಗಳು ದಪ್ಪನಾಗಿದ್ದು ಬಾಳಿಕೆಯಲ್ಲಿ ಜನರ ಮನವನ್ನಾಕರ್ಷಿಸುವಂತಿದ್ದರೆ ಈ ವ್ಯಾಪಾರಕ್ಕೆ ಯಾವ ಭಯವೂ ಇರುವುದಿಲ್ಲ

ಈ ಕೈಗಾರಿಕೆಗಳಿಗೆಲ್ಲ ಸರಕಾರ ಮತ್ತು ಜನರ ಪ್ರೋತ್ಸಾಹವು ಅತ್ಯವಶ್ಯವಿರುತ್ತದೆ. ಸ್ಥಾನಿಕ ಸ್ಥಿತಿಗತಿಗಳ ವಾತಾವರಣಕ್ಕನುಸರಿಸಿ ಅಲ್ಲಿಯ ಜನರಿಗೆ ಬೋಧನೆಯು ದೊರೆತು ಅವರು ಈ ಉದ್ಯಮಗಳನ್ನು ಆದಷ್ಟು ಸುಲಭಸಾಧ್ಯವಾಗಿ ನಡೆಸುವಂತೆ ಯೋಜಿಸಬೇಕು. ಈ ಉದ್ಯೋಗಗಳಿಗೆ ಆರ್ಥಿಕ ಸಹಾಯವು ಬೇಕೆನ್ನುವಾಗ ಇವುಗಳನ್ನು ಪರದೇಶೀಯ ಸ್ಪರ್ಧೆಯ ಬಲೆಯಿಂದ ತಪ್ಪಿಸುವುದು ಮುಖ್ಯ ಕೆಲಸ ವಿದೇಶಗಳ ಸರಕುಗಳ ಮೇಲೆ ಭಾರವಾದ ಸುಂಕಗಳನ್ನು ಹೊರಿಸಿ ಇವುಗಳ ರಕ್ಷಣೆಯಾಗಬೇಕು ಬರಿಯ ಬಟ್ಟೆಯೊಂದಲ್ಲದೆ ಇನ್ನಿತರ ದೇಶೀಯ ವಸ್ತುಗಳೂ ಸ್ವದೇಶಿಯೆಂಬ ಭಾವನೆಯು ಜನರಲ್ಲಿ ಹರಡಿ, ಅವರಲ್ಲಿ ಸ್ವದೇಶೀ ಪ್ರೇಮವು ಉಂಟಾಗಬೇಕು ಸ್ವದೇಶಿಯೊಂದರ ವಾತ್ಸಲ್ಯವು ಮಾತ್ರ ಸಾಲದು. ಈ ಉದ್ಯೋಗಗಳಿಗೆ ಆರ್ಥಿಕ ಸಹಾಯಮತ್ತುಉಪಕರಣ ಸಹಾಯಗಳನ್ನಿತ್ತು ಅವರ ವೃತ್ತಿಯಲ್ಲಿ ಪರಿಪೂರ್ಣತೆಯು ಕಂಡುಬರಬೇಕು. ಜಪಾನು ತನ್ನ ದೊಡ್ಡ ಕೈಗಾರಿಕೆಗಳ ಮೂಲಕ ಪ್ರಗತಿ ಹೊಂದಿದೆ ಅದು ಸಣ್ಣ ಕೈಗಾರಿಕೆಗಳನ್ನು ಮರೆಯಲಿಲ್ಲ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಅದು ಸಾಕಷ್ಟು ಪ್ರೋತ್ಸಾಹವನ್ನಿತ್ತು ಸಿದ್ಧವಾದ ಸಾಮಗ್ರಿಗಳನ್ನು ವಿಕ್ರಯಿಸುವ ಏರ್ಪಾಡನ್ನು ಅದು ಮಾಡಿತು. A. S. K.

Kanara Watch Works, Mangalore.

Suppliers of standard Watches, Time pieces, Wrist watches, Clocks and various kinds of sporting materials. etc., Quality and price unassailable Visit our Show-Room and be satisfied.

WHITE LEPROSY

AND

LEUCODERMA

A few days application of this medicine cures WHITE LEPROSY and LEUCODERMA radically. Get rid of this horrible disease by application of this medicine in spite of failure by hundreds of Hakims Doctors Kavirajs and advertisers Rs 500 rewarded if proved fallible. Price Rs 2.-.

VAIDYARAJ AKHIL KISHORE RAM

P O Katrisarai (Gaya.

Comfortable like an Aeroplane

Use our swadeshi Mosquito net for health. Comfort a sound sleep as if you are in an Aeroplane Sample cutting free More convenient if some advance sent with order.

L.	B	H	Price.	Best
6 Ft,	3½ Ft,	3½ Ft,	Rs, 1,12	2¾
6 „	4 „	4 „	„ 2,4	3¼
6½ „	4½ „	4½ „	„ 2,8	3¾
7 „	5 „	5 „	„ 3,2	4/1
7½ „	6 „	6 „	„ 4,4	5/1

G. M. Sharma, Post Box F 6706 Calcutt

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,
Dip. Econ., F. R. Econ. S. (Lond.)
Principal
Ganapathy High School Street,
Mangalore

ಕಣ್ಣಿನ ಹನಿ.

"ಐ-ಸನ್" ಎಂಬ ನೇತ್ರಭಾಸ್ಕರ-ಈ ಔಷಧವು ಕಣ್ಣುಹನಿ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Hary yasram, Panchpota, Bengal

Swadeshabhimani

enjoys circulation in India and abroad.

APPLY FOR ADVERTISEMENT RATES

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ	3—10	3—4
ಮುಸ್ಕಿ	3—14	4—6
ಗುಡ್ಡು	3—11	4—2
ಊರ ಅವ್ವಲ್ ಬೆಳ್ತಿಗೆ	4—0	4—12
ರಂಗೂನು ಬೆ ಗೋಣಿ ಒಕ್ಕೆ	6—3	6—6
ಎಲ್ಲೂರು ಬೆ ಮು ಒಕ್ಕೆ	4—2	4—4
ಗೋದಿ ಗೋಣಿ ಒಕ್ಕೆ	10—0	10—8
ತೊಗರಿ ಗೋಣಿ ಒಕ್ಕೆ	9—0	10—0
ಹುರುಳಿ ಗೋಣಿ ಒಕ್ಕೆ	7—4	7—8
ಕಡಲೆ ಗೋಣಿ ಒಕ್ಕೆ	5—0	10—8
ಕೊತ್ತಂಬರಿ ಗೋಣಿ ಒಕ್ಕೆ	10—0	17—0
ಉದ್ದು ಗೋ ೩ ಒಕ್ಕೆ	8—0	8—8
ಹೆಸರು ಗೋಣಿ ಒಕ್ಕೆ	0—0	9—6
ಉಂಡೆಬೆಲ್ಲ ಖಂಡಿ ಒಕ್ಕೆ	32—8	35 0
ಉಪ್ಪು ಗೋಣಿ ಒಕ್ಕೆ	4—8	5—0
ಕೊಬ್ರಿ ಖಂಡಿ ಒಕ್ಕೆ	48—0	55—0
ಕೊಬ್ರಿ ಹಿಂಡಿ ಖಂಡಿ ಒಕ್ಕೆ	20—6	21—0
ಎಳ್ಳೆಂಡಿ ಖಂಡಿ ಒಕ್ಕೆ	37—8	40—0
ತೆಂಗಿನ ಎಣ್ಣೆ ಮಣ ಒಕ್ಕೆ	3—7	4—0
ಎಳ್ಳೆಣ್ಣೆ ಮಣ ಒಕ್ಕೆ	5—2	5—10
ಚಿಮಣಿ ಎಣ್ಣೆ ಪೆಟ್ಟಿಗೆ ಒಕ್ಕೆ	5 7	5—7
ಮೋರಿಸ ಸಕ್ಕರೆ ಮ ಒಕ್ಕೆ	3—5	3—6
ಮೆಣಸು	4—4	6 6
ಸಾಸಿವೆ ಮುಡಿ ಒಕ್ಕೆ	5—12	6—0
ಕಾಳುಮೆಣಸು ಖ ಒಕ್ಕೆ	120—0	122 6
ಯೇಲಕ್ಕಿ ಮಣ ಒಕ್ಕೆ	22—0	27—0
ಗೇರುಬೀಜ ಮು ಒಕ್ಕೆ	3—14	3—14
ಕಬ್ಬಿಣ ಖಂಡಿ ಒಕ್ಕೆ	40—0	40—8
ತಾಂಮ್ರತಗಡು ಮ ಒಕ್ಕೆ	9—0	9—1
ತಾಂಮ್ರಪಾತ್ರಗಳು ಮ ಒಕ್ಕೆ	11—0	12—0
ಚೀನಾಬೆಳ್ಳಿ ಸೇರು ಒಕ್ಕೆ	14—12	15—0
ಹಿತ್ತಾಳೆ ತಗಡು ಮ ಒಕ್ಕೆ	8—12	9—0
ಸವನು ಒಕ್ಕೆ	22—8	23—
ಹುಣಸೆ ಹುಳಿ ಖಂಡಿ ಒಕ್ಕೆ	25—0	27—8
ನೇಟಿವ್ ಕಾಫಿ ಖಂಡಿ ಒಕ್ಕೆ	155—0	160—0
ಫ್ಲಾಂಟೇಶನ್ ಕಾಫಿ ಖಂಡಿ ಒಕ್ಕೆ	220—0	220—0
ಹಳೆ ಅಡಿಕೆ	100—0	110—0
ಹೊಸ ಅಡಿಕೆ	75—0	95—0

Standard Furniture Co. Ltd.
KALLAI, MALABAR
The BEST HOUSE for FURNITURE.

BRANCHES —
Madras —34-35 General Patters Road, Mount Road
Trichinopoly —11, Promenade Road, Cantt

NEW ARRIVALS.

Medicines.

Dr Schuessler's Twelve Tissue Remedies 5 gr bot As 4/-
Homoeopathy Medicines 5 gr bot As 5/-
Sugar of Milk Dr Schwabe's original bot 1 lb Rs 2/-
Haarlem Oil—a world-renowned remedy As 8/- per phial
Dr Haele's New Curative Earth—Radium Cure Rs 1/- per lb
Dr Schwabe's other special remedies are always in stock
Please ... your ...
Kanarese Book a Family Guide to Biochemistry Re 1/-
... Homoeopathy Rs 1-4/-
If you ... these two books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6
Delightful in aroma charming in appearance Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps, Spring Cots, Spring Couches etc and stock—
Pipes and pipe fittings at cheap prices Coir Mats and Mattings Steadler Pencils and Stationeries
We are the ... agents for ... all stationeries and shall be glad to serve you

Olympia Typwriter.

At ... Machine in Standard and portable sizes
... direct —

Basel Mission Book & Tract Depository,
Mangalore S K or Hubli, S M

ಬೇಕಾಗಿದ್ದಾರೆ.

ನಿರುದ್ಯೋಗಿಗಳಾದ, ಉತ್ಸಾಹಿ ತರುಣರು ನಮ್ಮ ಬ್ಯೂಟಿ ಬೋಕ್ಸ್ ವಿಕ್ರಯಿಸುವುದಕ್ಕಾಗಿ ಬೇಕಾಗಿದ್ದಾರೆ ತಿಂಗಳಿಗೆ ರೂಪಾಯಿ 30/-ಸಂಬಳ ಸೆಕ್ಯುರಿಟಿ ಇಲ್ಲ ಕೆಟಲಾಗು ಧರ್ಮಾರ್ಥ

ಇಂಗ್ಲೀಷಿನಲ್ಲಿ ಇಲ್ಲಿಗೆ ಬರೆಯಿರಿ —

National Trading Co.,
Jarabagon, Calcutta, (c)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ
ದಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ
ಕ್ರಾನ್ ¼ ಆಕಾರದ 188 ಪುಟಗಳು
ಉತ್ತಮ ತರಗತಿಯ ಹಾಸ್ಯ
ಬೆಲೆ ರೂ. 1—4—0.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಇಲ್ಲಿಂದ ಪಡಕೊಳ್ಳಬಹುದು

ರೇಶ್ಮೆಯಂತೆ, ನುಣುಪಾದ ಮತ್ತು
ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚೆಯಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಬಾಗರೂಕತೆಯಿಂದ ತಿಕ್ಕಿರಿ
(ಮನ ... ಶವಾದ ಸುಗಂಧವನ್ನುಳ್ಳದು)
ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತದೆ.
ತಯಾರಕರು — ಬೆಲೆ ಸೀಸೆ ಒಂದಕ್ಕೆ ರೂ.0—12—0.
ಆರ್ ಸಿ ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.
ಏಜಂಟರು —
ಕುಂತಳ ಕೌಮುದಿ ತೈಲ,
ವೆನ್‌ಲೋಕ್ ಆಸ್ಪತ್ರೆ ಎದುರು ಮಂಗಳೂರು.

ಶಾಲಿವಾಹನ ಬಾ ಶಕ ೧೮೫೭ನೆಯ ಭಾವ ಸಂವತ್ಸರದ ಚೈತ್ರ ಶುದ್ಧ ೩ ಶನಿವಾರದಿಂದ ಚೈತ್ರ ಶು ೯ ಶುಕ್ರವಾರದ ವರೆಗಿನ ಪಂಚಾಂಗ (ಗ್ರೆಗೋರಿಯನ್ ಸನ್ ಸೋಮ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ಹಬ್ಬ
6	ಶನಿ	೩	೨೦	ಭರಣೀ	೧೦	೨೩	
7	ರವಿ	೪	೧೮	ಕೃತ್ತಿಕಾ	೧೦	೨೪	
8	ಸೋಮ	೫	೧೮	ರೋಹಿಣಿ	೧೧	೨೫	
9	ಮಂಗಳ	೬	೧೯	ಮೃಗಶಿರಾ	೧೩	೨೬	
10	ಬುಧ	೭	೨೨	ಆರ್ದ್ರಾ	೯	೨೭	
11	ಗುರು	೮	೨೪	ಪುನರ್ವಸೂ	೨೨	೨೮	
12	ಶು	೯	೨೯	ಪುಷ್ಯಾ	೨೬	೨೯	

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು

ಚಿಕ್ಕದೊಡ್ಡವರು- -ದೊಡ್ಡಚಿಕ್ಕವರು.

ಲೇಖಕರು:— ಶ್ರೀ ಶಿವರಾಮ ಕಾರಂತರು.

೨. ಒಟ್ಟುಸಾಟಿ ಶಾಸ್ತ್ರಿಗಳು.

ಹೋಲ್‌ಸೇಲ್ ವಹಿವಾಟಿನ ವಿನಹ ಚಿಲ್ಲರೆ ವಹಿವಾಟನ್ನು ಎಂದೂ ಮಾಡದ ಸ್ವಭಾವ ನಮ್ಮ ಶಾಸ್ತ್ರಿಗಳದ್ದು ಅದಕ್ಕೆನೆ ಅವರಿಗೆ ಅಂಥಾ ಭಾರಿ ಹೆಸರು ಅವರ ಜೀವನದ ಪ್ರತಿಯೊಂದು ಕೆಲಸವೂ ಒಟ್ಟುಸಾಟಿಯಿಂದ ನಡೆಯುವುದು ಚಿಲ್ಲರೆ ಬುದ್ಧಿ, ಚಿಲ್ಲರೆ ವ್ಯಾಪಾರ, ಚಿಲ್ಲರೆ ಕಾರ್ಯ, ಚಿಲ್ಲರೆ ಮಾತು—ಯಾವುದೂ ಇಲ್ಲ ಅವರಲ್ಲಿ, ರಖಂವಾರು ಜನಗಳು ಅವರು

ಅವರ ರೂಪವೂ ರಖಂವಾರು—ಎಂದು ಹೇಳಬೇಕಾಗಿಲ್ಲ ಸಾಧಾರಣ ಎರಡೆರಡು ಟನ್ನಿನ ಮೂರು ಲಾರಿಗಳಿದ್ದರೆ ಅವರನ್ನು ಒಂದೂರಿಂದ ಒಂದೂರಿಗೆ ಸಾಗಿಸುವುದು ಸಾಧ್ಯ ರಖಂ ಹತ್ತು ಥಾನು ಕೋಟಿಂಗ್ ಬಟ್ಟೆಯಿದ್ದರೆ ಅವರಿಗೆ ತೆಳ್ಳಗಿನ ಒಂದು ಶರ್ಟು ಆದೀತು ನೋಟಕ್ಕೆ ಅವರು ಬಲು ಭಯಂಕರವಾಗಿ ಕಾಣಿಸುವ ಜನರು ಅವರೆದುರಿಗೆ ನಿಂತರೆ ಪೂರ್ಣ ಶರೀರವನ್ನು ಕಾಣಲು, ನಮ್ಮ ಕಣ್ಣು ಚಿಕ್ಕದೆನಿಸಬಹುದು ಆದರೆ—ಮುಖ ನೋಡಿದರೆ ಅವರ ಗುರುತು ಹಿಡಿಯುವುದು ಕಷ್ಟವಲ್ಲ ಇಲ್ಲವಾದರೂ ಇತರ ಜನರು ಅವರು ಸುತ್ತಲಿರುವಾಗ ಕಷ್ಟವಿಲ್ಲ ಅವರು ಊರಲ್ಲಿ ತಿರುಗಾಡುವಾಗ [illegible] ತೊಡಕು ಕಾರಣ ಊರಿನ ಚಿಟ್ಟೆವಾವುದು, ಅವರ ಯಾರ—ಎಂದು ಗುರುತಿಸುವುದು ಕಷ್ಟ ಆದರೆ ಮುಖದಿಂದ ಅವರನ್ನು ಸುಲಭದಲ್ಲಿ ತಿಳಿಯಬಹುದು. [illegible] ಲಿರುವ ಬಾಯಿ [illegible] ಎಲೆ ಅಡಿಕೆಯಿಂದ ಯಾವಾಗಲೂ [illegible] ಎಷ್ಟು ಆದಕ್ಕೆ ಅವರ ಎಲೆಅಡಿಕೆಯ ಗಿರಣಿ ಯಾವಾಗಲೂ ನಡೆಯುತ್ತಲೇ ಇರುತ್ತದೆ ಅವರ ಮುಖ್ಯಾಹಾರವು ಈ ಮೆಲುಕಾಡಿದ ನಡೆಯುವಾಗ [illegible] ಬ್ರಹ್ಮದೇಗುಲದಲ್ಲಿ—ಅನವಿಲ್ಲ [illegible] ಬ್ರಹ್ಮದೇಗುಲ'ವನ್ನು ಕುರಿತು ಬರೆದ ಶ್ರೀ [illegible] ತಕ್ಕಿ ಹಾರುವುದನ್ನು ಕಂಡರೆ ಶಾಸ್ತ್ರಿಗಳಿಗೆ ಆಗದ

ಇದರಿಂದ ಶಾಸ್ತ್ರಿಗಳು ಸಾಹಿತಿಗಳು—ಎಂದ [illegible] ಬರೀ ಸಾಹಿತಿಗಳಲ್ಲ [illegible] ಸಾಹಿತ್ಯ [illegible] ಅವರ ಕೈಗೆ ಸಿಕ್ಕಿದರೆ [illegible] ಅದರ ಕರುಳನ್ನೆಲ್ಲ ತೆಗೆದ [illegible] ಹಾಕಿ [illegible] ನಡೆದು [illegible] ಬೆಡಗನ್ನು [illegible] ಒಂದ ಪುಟ್ಟವ ನವರೂ [illegible] ಗೋಕಾಕರೂ ಅವರ ಸಭಾಗ್ರದಲ್ಲಿ [illegible] ಪುಕ್ಕಟೆಯಾಗಲಿ, ಕೊಂಡಾಗಲಿ ಕಡವಾಗಿಯಾಗಲಿ [illegible] ಕನ್ನಡ ಕವಿತೆಯನ್ನು ಓದಬೇಕು ಅವರಿಗೆ—ಟೀಕಿಸಬೇಕು ಅವರ ಟೀಕೆಗೆ ಬಲಿಯಾಗದ ಇಬ್ಬರು ಪ್ರಣಾಕೃತಿ ದರೆ ನಾನು ಮತ್ತು ಗೆಳೆಯ ರಾಜರತ್ನಂರು ರತ್ನರ ವಿಚಾರ ಹೇಳಬೇಕಿಲ್ಲ ಅವರು ತಮ್ಮಂತೆಯೇ ಉರುಟಿದ್ದಾರೆಂದು ಶರ್ಮರ ಅಭಿಮಾನ ನನ್ನ ವಿಚಾರ—ಏಕೋ [illegible] ಅವರದು ನನ್ನ ಗದ್ಯ ಅವರಿಗೆ ಪದ್ಯವಾಗಿಯೂ ಪದ್ಯ ಗದ್ಯವಾಗಿಯೂ, ಚಂಪುವು ನಾಟ್ಯವಾಗಿಯೂ, ನಾಟ್ಯವು ಲೇಖ್ಯವಾಗಿಯ [illegible] ಕಾಣಿಸುವುದು ಅವರಿಗೆ ಆದರೆ—ಎಲ್ಲರೊಡನೆ ಅವರು ಕಾದುವರೆಂದಿಲ್ಲ [illegible] ತೊಡಗಿದರೆ ಪೀಠದಾಸಿ ದ್ರವ್ಯ ಮುಂದಿರಿಸಿದರೆ—ರಾಜಿಯಾಯಿತು.

ಇನ್ನೊಂದು ಗುಟ್ಟು ಶಾಸ್ತ್ರಿಗಳದು ಅವರಿಗೆ ಯಾರ ಕಾವ್ಯದ ಮೇಲೆ ಅತಿ ಮಮತೆಯೋ, [illegible] ಅವರು ಸಾರಸಿಂಪರು ಶ್ರೀ ಶಾಸ್ತ್ರಿಗಳ ಇತರ ಸಾಹಿತ್ಯ ವ್ಯವಸ್ಥಾಯಿಗಳು ಅಂಬೆಗಾಲಿಕ್ಕುವುದನ್ನು ಕಂಡು [illegible] ತಾವೇ ಅದರ ತಯಾರಿಗೆ ಹೊರಟುದ್ದುಂಟು ಅದರ ವಿಮರ್ಶೆಯನ್ನು ನಾನು ಮಾಡಬಹುದು ಶಾಸ್ತ್ರಿಗಳು ವ್ಯಕ್ತಿತ್ವವನ್ನು ವಿಮರ್ಶೆ ಮಾಡುವಾಗ—ಅವರಿಗೇನೆ ಅವರ ಕೈಕಾಲುಗಳು ಥಟ್ಟನೆ ಎಲ್ಲಿವೆ ಎಂದು ಕೇಳಿದರೆ ಹೇಳಲು ಕಷ್ಟವಾದೀತು' ಹೀಗಿರಲು—ಅವರ ಕವಿತೆಗಳ ಭಾವರಸಗಳನ್ನು ಹುಡುಕಿದರೆ ನಮಗೂ ಪಜೀತಿಯಾದೀತು.

ಈಗ ನಮ್ಮ ಶಾಸ್ತ್ರಿಗಳು ಕನ್ನಡ, ಸಂಸ್ಕೃತ, ಆಯುರ್ವೇದಗಳ ಪಂಡಿತರೆಂದೂ ಹೇಳಬೇಕು ತ್ರಿಪಾಂಡಿತ್ಯ ಅವರದು ಇದರಲ್ಲಿ ಅತಿ ಚಿಕ್ಕಸ್ಥಾನವು ಸಾಹಿತ್ಯಕ್ಕೆ

ಶಾಸ್ತ್ರಿಗಳ ಮುಖ್ಯ ವಿಚಾರ—ಅವರ ಒಟ್ಟು ಸಾಟಿ ವಿಚಾರ ಉದ್ಯೋಗಗಳಿಂದ ಪ್ರಸಿದ್ಧವಾದ [illegible] ಈಗ ನಾವು ಕುಳಿತು ಮಾತನಾಡುತ್ತಿರ ವಾಗಲೇ ಅವರಿಗೆ ಯಾರಾದರೂ ಡಾ। ವರ್ನಾಫರು ಮಂಗನ ಗ್ರಂಥಿಗಳನ್ನು ಜನರಿಗೆ ಕಸಿಕಟ್ಟಿ, ಅದರಿಂದ ಮನುಷ್ಯನ ತಾರುಣ್ಯ ವರ್ಧಿಸುತ್ತಾರೆ—ಎಂದರೆಂದು ತಿಳಿಯಿತು ನರ-ವಾನರ ಶಬ್ದಗಳಿಗಿರುವ ನಿಕಟಸಂಬಂಧ ಶ್ರೀ ಶಾಸ್ತ್ರಿಗಳಿಗೆ ಗೊತ್ತು ಕೂಡಲೇ ಅವರು ವಾನರವೀರರ ಕಡೆಗೆ ಮನಸ್ಸು ಹರಿಸುವರು, ಮುಂದೆ ಬಹಳ ದಿವಸಗಳ ತನಕ ಅವರಿಗೆ ಈ ವಾನರ ಸಂಸ್ಥೆಯ ವಿಚಾರ ಮನಸ್ಸು ಓಡುವುದು

ಒಂದು ಕಡೆಯಲ್ಲಿ ಒಂದು ಭೂಮಿಯನ್ನು ಕೊಂಡು ಒಂದು ಭಾರಿ ಪಂಜರವನ್ನು ಕಟ್ಟಿಸತೊಡಗುವರು ಇನ್ನೊಂದು ಕಡೆ, ಊರಲ್ಲಿರುವ ಮಂಗಗಳನ್ನೆಲ್ಲಾ ತಂದು ಕೊಟ್ಟವರಿಗೆ ತಲಾ ಒಂದರ (ಮಂಗನ) ಒಂದೊಂದು ರೂಪಾಯಿಯಂತೆ ಕೊಡುವೆನೆಂದರು ಯೋಚನೆ ಬಂದ ಮೂರು ದಿವಸಗಳಲ್ಲಿ ಶಾಸ್ತ್ರಿಗಳ ಮನೆಯ ಒಳಗೆ ಹೊರಗೆ ಸುತ್ತಮುತ್ತ—ಎಲ್ಲಿ ನೋಡಿದರೂ ಮಂಗಗಳು

೧೨೭೩–ಮಂಗಗಳು ಜಮೆಯಾದುವು ಅವುಗಳಿಗೆ ಹಲ್ವಾ ಮತ್ತು ಇನ್ನಿತರ ಆಹಾರಗಳೂ ಕೊಡಲ್ಪಟ್ಟವು ಇದರಿಂದ ಬಹಳ ವೆಚ್ಚ ತಗಲುವುದೆಂದು ಯಾರೋ ಅವರಿಗೆ ಸೂಚಿಸುವರು. ಶಾಸ್ತ್ರಿಗಳು ಮೊದಲು ಈ ಕೋತಿಗಳನ್ನು ಚೆನ್ನಾಗಿ ಬೆಳೆಸಿ ಡಾ। ವರ್ನಾಫರಿಗೆ ಕಳುಹಿಸುವ ನಿರ್ಧಾರ ಮಾಡಿದ್ದರು ಆದರೆ ಈಗ ಅವನ್ನು ಸಾಗುವ ಪ್ರಕ್ರಿಯನ್ನು ಅವರು ಗಮನಿಸಲು [illegible] ಮಂಗವನ್ನು ಸಾಕಿ ಪೂರೈಸುವ ತಿಲ್ಲ ಎಂದು ನಿರ್ಧರಿಸುವರು

ಸರಿ, ಒಂದು ತಿಂಗಳಾಗಲು, ಶಾಸ್ತ್ರಿಗಳ ರಾಜ್ಯದಲ್ಲಿ 271 ಮಂಗಗಳು ಮಾತ್ರ ಉಳಿಯುವುವು ಹೀಗಾದರಾಗದೆಂದ, ಮಂಗಗಳು [illegible] ಮತ್ತು ಬೆಳೆ [illegible] ಬೇಕಾಗುವ ಆಹಾರವಾವುದೆಂ ಶೋಧನೆಗಾಗಿ [illegible]

ಹೀಗೆ ಕೆಲವು ಸಮಯ [illegible] ಮೇಲೆ ಶಾಸ್ತ್ರಿಗಳು ಡಾ। ವರ್ನಾಫರೊಡನೆ [illegible] ಮಂಗಗಳ ಗ್ರಂಥಿಯೇ ಬೇಕೇ ಅದನ್ನು [illegible] ಎಂದ [illegible] ಉಳಿಸುವರ ವರ್ನಾಫರು [illegible] ಶಾಸ್ತ್ರಿಗಳು [illegible] ಈ ಉದ್ಯೋಗವನ್ನು ಬಿಡಬೇಕಾಯಿತು

ಅಷ್ಟರಲ್ಲಿಯೇ ಶಾಸ್ತ್ರಿಗಳು [illegible] ನೆರೆಹಳ್ಳಿಗೆ ಹೋದರು. ಹಾದಿಯಲ್ಲಿ ಅವರ [illegible] ತಿರುವ ತಾಳೆಮರಗಳನ್ನು [illegible] ಹೊಸ ಸ್ಫೂರ್ತಿ [illegible] ಈ ಮರಗಳ ನಮ್ಮಲ್ಲಿ [illegible] ಇವುಗಳ [illegible] ಬೆಳ್ಳಿ [illegible] ಮರದ [illegible] ಆರ್ಟ್ ಸಿಲ್ಕ್ [illegible] ತಾಳೆಮರಗಳಿಂದ [illegible] ಆರ್ಟ್ ಸಿಲ್ಕ್ ತಯಾರಿಸುವರು.

ಬಡ ಹಿಂದೂದೇಶದಲ್ಲಿ ಒಬ್ಬರೂ ಈ [illegible] ತೊಡಗಿಲ್ಲವೆಂದು ಶ್ರೀ ಶಾಸ್ತ್ರಿಗಳು ಈ ಕೆಲಸಕ್ಕೆ ತಮ್ಮ ಸಹಜ ಗುಣದಂತೆ ರಖಂವಾರು ಕೈಹಾಕುತ್ತಾರೆ [illegible] ತಾಳೆ ಮರಗಳಿದ್ದರೂ ತಮಗೆ ಸಾಟಿಯಿಂದು ಸಾಕಿಗೆ ಹೊಡೆದರು ಮರುದಿನಕ್ಕೆ ಮನೆಯ ಮುಂದೆ ತಾಳೆಮರಗಳು ಒಂದು ಬಿದ್ದವು ಅವನ್ನು ಕಡಿದು ನಾರು ತೆಗೆದು ಗೊಜ್ಜು ಮಾಡುವ ಕಷ್ಟ ಕೆಲಸದ ಬದಲು ಇಡೀ ಮರಗಳನ್ನು ನೀರಿನ ಬಾವಿಗಳಿಗೆ ಹಾಕಿ ಕೊಳೆಯಿಸುವರು. ಮರವೆಲ್ಲಾ ನಾರಷ್ಟು ಚಟ್ಟೆಯಾಗುವುದು (ಇವರು ಸಹ) ಅನಂತರ ಅದರಿಂದ ನೂಲನ್ನು ಹೇಗೆ ಮಾಡುವುದೆಂದು ಯೋಚಿಸುವರು ಒಂದು ಸ್ಥಾನದ ಉದ್ಧಾರಕ್ಕೆ ಬಲೆಯುಳ್ಳ ಯಂತ್ರಗಳುಳ್ಳ ಕೈಗಾರಿಕೆ ಉಪಯೋಗವಿಲ್ಲವೆಂದು ಅವರಿಗೆ ತಿಳಿದಿದೆ ಅದುಕಾರಣ ಅವರು ಕೈಗಾರಿಕೆಗೆ ಸಲುವಾಗಿ ಮನೆಯಲ್ಲಿರುವ ಸೀವಿಗೆ ಅಚ್ಚುಗಳನ್ನು ಉಪಯೋಗಿಸಲು ನಿರ್ಧರಿಸುತ್ತಾರೆ

ತಾಳೆಮರದ [illegible] ಸೇವಿಗೆ ಅಚ್ಚಿನಲ್ಲಿ ಒತ್ತಿ ನೂಲು ಮಾಡುತ್ತಾರೆ [illegible] ದಪ್ಪವಾಯಿತೆಂಬ ಶೋಧೆಯಾಗುವುದು ಅದಕ್ಕೂ ಸಪೂರದ ಚರಡೆಗಳನ್ನು ಉಪಯೋಗಿಸುವರು ಹೊಯಿದ ನೂಲು ನೇಯಲು ಬರುವುದಿಲ್ಲವೆಂದು [illegible] ತಕರಾರು [illegible] ಅವರು ನಿರಾಶರಾಗಬೇಕಾಗುವುದು.

ಇಂಥಾ ನೂರಾರು ಒಟ್ಟುಸಾಟಿ ಕಾರುಭಾರು ಮಾಡುತ್ತಿರುವವರು ನಮ್ಮ ಶಾಸ್ತ್ರಿಗಳು ಇದರ ಉದ್ದೇಶ [illegible] ಬಹುದು—ಕಾಸು ಮಾಡಲು ಎಂದು ಅವರು ಮಾತನಾಡುತ್ತ ಇರುವಾಗ ಸಾವಿರ ರೂಪಾಯಿಯ ಪ್ರಾಮಿಸರಿ ನೋಟಿಗೆ ಅವರಿಗೇ ತಿಳಿಯದಂತೆ ಅವರಿಂದ ಸಹಿ ಪಡೆಯಲು ಸಾಧ್ಯವಿದೆ' ಹೀಗಿರಲು ಅವರಲ್ಲಿ ಆಯುದ ವಿಚಾರವಾಗಲೀ ತನ್ನ ವಿಚಾರವಾಗಲೀ ಯೋಚನೆಯೇ ಇಲ್ಲ

ನಿರ್ಭಾಗ್ಯ ಮಲೆನಾಡು ರೈತರು.

(ಬರೆದು ಬಂದುದು)

ನಮ್ಮ ಭರತಖಂಡದ ದಕ್ಷಿಣಭಾಗದಲ್ಲಿ ರಾಮರಾಜ್ಯವೆಂದೂ, ಮಾದರಿಯ ಸಂಸ್ಥಾನವೆಂದೂ, ಬಿರುದು ಪಡೆದದ್ದು ಮೈಸೂರು ದೇಶವು ಮಾತ್ರವೇ ಎಂಬುದೂ ಇಂಥಾ ಬಿರುದುಗಳನ್ನು ಪಡೆದಿರುವ ದೇಶದ ಪಶ್ಚಿಮ ಭಾಗವೆಲ್ಲವೂ ಸಂಪೂರ್ಣ ಮಲೆನಾಡೆಂಬುದೂ ಸಕಲರಿಗೂ ವೇದ್ಯವೇ ಇರುತ್ತದೆ ಇದು ನಮ್ಮ ದೇಶದ ಒಂದು ಮೂಲೆ ಕೆಲವೆಡೆಗಳಲ್ಲಿ ಮಾತ್ರ ಪ್ರಯಾಣದ ಬಗ್ಗೆ ಮೋಟಾರು ಬಸ್ಸುಗಳ ಅನುಕೂಲತೆಗಳಿರತ್ತವೆ ಈ ಮಲೆನಾಡಿನ ಅನೇಕ ರೈತರು ಎತ್ತರ ಪ್ರದೇಶದ ಗುಡ್ಡಗಳಲ್ಲಿಯೇ ವಾಸಿಸುತ್ತಿರುವರು ಈ ಮಲೆನಾಡು ಪ್ರದೇಶಗಳಲ್ಲಿ ಅತಿ ಶ್ರೇಷ್ಠ ಮಹತ್ವಗಳುಳ್ಳ ದೇವತಾಶಿಲಾ ಪ್ರತಿಷ್ಠೆಗಳು ನಮ್ಮ ಜಗದ್ಗುರುಗಳಾದ ಶ್ರೀ ಆದಿ ಶಂಕರಾಚಾರ್ಯರ ಸ್ವಹಸ್ತದಿಂದಲೇ ನಿರ್ಮಿಸಲ್ಪಟ್ಟವೆಯೆಂದೂ, ಸಿದ್ಧಾರಿಯಾಗಿರತಕ್ಕ ಪ್ರದೇಶವೆಂದೂ ಪುರಾಣ ಪ್ರಸಿದ್ಧವಾದ ಚರಿತ್ರೆಗಳಿರುವುವೆಂದೂ ತಿಳಿಯಬರುತ್ತದೆ ಬಸ್ಸುಗಳ ಅನುಕೂಲತೆಗಳು ಹೆಚ್ಚಿದ ಹಾಗೂ ಇಲ್ಲಿ ರೈತಾಪಿಗಳನೇಕರು ಕೋರ್ಟು ಕಚೇರಿಗಳನ್ನು ಹತ್ತುವುದೂ ಈಪ್ಪಾರ್ಸೂಯೆಗಳ [illegible] ಹೆಚ್ಚಿ ಅನೇಕ ಖಾತೆದಾರರು, ಗೇಣಿದಾರರುಗಳಾಗಿಯೂ, ಯಾಚಕರಾಗಿಯೂ ಅನೇಕ ಗೇಣಿದಾರರುಗಳು ಖಾತೆದಾರರು ಮತ್ತು ಯಾಚಕರಾಗಿಯೂ ಜೀವನೋಪಾಯವಿಲ್ಲದೆ ದೇಶಾಂತರ [illegible] ಗಿರುವುದೂ ತಿಳಿಯಬರುತ್ತದೆ ಈಗ್ಗೆ ಸುಮಾರು [illegible] ನಾಲ್ಕು ಸಂವತ್ಸರಗಳಿಂದಲೂ, ಇಲ್ಲಿಯ ರೈತರುಗಳು ಬೆಳೆಯತಕ್ಕ ಪೈರುಗಳಿಗೆ ಸರಿಯಾದ ಬೆಲೆ ಇಲ್ಲದೇ ಹೇಳತೀರದಷ್ಟು ಸಾಲಸೋಲುಗಳಿಗೆ ತುತ್ತಾಗಿ ಅವಮರ್ಯಾದೆಗೆ ಒಳಿಯಾಗಿ ಸಂಸಾರವನ್ನು ನಡೆಸುತ್ತಲಿರುವರು ಕಾರಣ ಮಲೆನಾಡ ರೈತರುಗಳು [illegible] ಮತ್ತು [illegible] ಕರ ಬೇಸಾಯ ಮಾಡಬೇಕಾದರೆ ಕನಿಷ್ಠಪಕ್ಷ ವರ್ಷಂಪ್ರತಿ [illegible] ಪರಿಕರ [illegible], ಜೀವನ, ಬೇಸಾಯ [illegible] ಮತ್ತು ಇತರ ತೆರಿಗೆಗಳ ಬಗ್ಗೆ [illegible] ಯೋಗಿಸಲೇಬೇಕಾಗಿರುತ್ತದೆ ಇಷ್ಟು ದ್ರವ್ಯವನ್ನು ವಿನಿಯೋಗಿಸಿಯೂ [illegible] ಉತ್ಪತ್ತಿ [illegible] ಭತ್ತವು [illegible] ಪ್ರಯತ್ನದಿಂದ [illegible] ಈಗಿನ ಚಾಲ್ತಿ ದರದಂತೆ [illegible] ರೂಪಾಯಿಗಳ ಬೆಲೆಗಿಂತ ಹೆಚ್ಚಾಗಿ ಸಿಕ್ಕುವುದೇ ಇಲ್ಲವೆನ್ನಬಹುದು ಈ ಮೇಲೆ [illegible] ಕಾರಣಗಳಿಂದ ಮಲೆನಾಡಿನ ರೈತರ ಪರಿಸ್ಥಿತಿ [illegible] ವಾಚಕರೇ ಊಹಿಸಬಹುದು ಈ ಮಲೆನಾಡ [illegible] ಗಳಲ್ಲಿ [illegible] ಅಭಿವೃದ್ಧಿ [illegible] ಕರು [illegible] ಇವರಲ್ಲಿ [illegible] ಇಲ್ಲ ಕೇವಲ ಅನುಭವ ಮತ್ತು ಶ್ರವಣಮಾತ್ರದಿಂದಲೇ [illegible] ಹಾರಗಳನ್ನು ಅರಿತವರಾಗಿರುತ್ತಾರೆಂದ ತಿಳಿಯ ಬರುತ್ತದೆ ಇವರುಗಳಿಗೆ ಸರ್ಕಾರವೆಂದರೆ ಒಂದ [illegible] ದೇವತಾಂಶವೆಂದೂ [illegible] ಭಾವನೆಯಿದ್ದುದರಿಂದ ಸರ್ಕಾರದವರಲ್ಲಿ ಸಂಪೂರ್ಣ ಅಭಿಮಾನವನ್ನಿಟ್ಟಿರುವುದಲ್ಲದೆ ಅದರಂತೆಯೇ ಸರ್ಕಾರದವರೂ ರೈತರುಗಳನ್ನು ತಮ್ಮ ಆಧಾರಭೂತರೆಂದು ಅರಿತವರಾಗಿ ಬಡ ರೈತರುಗಳ ಪುನರುಜ್ಜೀವನದ ಬಗ್ಗೆ ತಕ್ಕಾಸ ಕಾನೂನುಗಳನ್ನು ಈ ಕೆಳಗೆ ನಮೂದ [illegible] ಕಲ್ಪಿಸಿಕೊಟ್ಟು ತಮ್ಮ ಮಕ್ಕಳಂತೆ ಕಾಪಾಡುತ್ತಾರೆಂಬ ಭರವಸೆಯಿಂದ ವಿನ್ನವಿಸಿಕೊಳ್ಳುತ್ತಾರೆ

(೧) ಕಂದಾಯ:— ಈಗ ನಮ್ಮ ಮೇಲೆ ತಾವು ಹೊರಿಸಿರುವ ಕಂದಾಯ, ಸೆಸ್ಸು, ಹುಲ್ಲುಬನ್ನಿ ಇವುಗಳು ತಮ್ಮ ಸರ್ಕಾರಕ್ಕೆ ಸಮರ್ಪಕವಾಗಿದ್ದಾಗ್ಯೂ ಬಹಳ [illegible] ಯೆಂಬ ತಮ್ಮ ಭಾವನೆಯು ಸರಿಯಾಗಿದ್ದರೂ ಈಗಿನ ಪರಿಸ್ಥಿತಿಯಲ್ಲಿ ನಮಗೆ ಬಹಳ ಹೆಚ್ಚಾಗಿರುತ್ತದೆ ಆದ್ದರಿಂದ ತಾವು ಕಂದಾಯವನ್ನು ಆದಷ್ಟು ಪ್ರಯತ್ನಪಟ್ಟು ನಮ್ಮ ಮೇಲೆ ಕರುಣೆಯಿಟ್ಟು, ಈಗಿರುವುದಕ್ಕಿಂತಲೂ ಅರ್ಧ ಕಡಿಮೆ ಮಾಡಿಕೊಟ್ಟು ಕಾಪಾಡಬೇಕು

ಇದುವರೆಗೂ ನಮ್ಮಲ್ಲಿ ಅನೇಕರು ಹೇಳತೀರದಷ್ಟು ಸಾಲಗಳಿಗೆ ತುತ್ತಾಗಿ, ತಮ್ಮ ಸ್ವಾರ್ಜಿತ ಮತ್ತು ಪಿತ್ರಾರ್ಜಿತ ಸ್ವತ್ತುಗಳೂ ಒಂದರಲ್ಲಿ ಹರಾಜಿಗೀಡಾಗಿ ನಮ್ಮಲ್ಲಿ ಧನಿಕರಾದರೂ ನಿಂತರೆ ಒಂದೆರಡು ವರ್ಷಗಳ ಕಂದಾಯ ಬಾಕಿಗೆ ಪರಾಧೀನವಾಗುತ್ತದೆ ಇಲ್ಲವೇ ಸರ್ಕಾರದವರ ಪರ ಉಳಿದು ಜಮೀನೂ ಹಾಳು ರೈತನೂ ನಿರ್ಗತಿಕನಾಗುತ್ತಾನೆ ಸರ್ಕಾರಕ್ಕೂ ಮುಂದಿನ ಸಾಲಿನಿಂದ ವರ್ಷಂಪ್ರತಿ ಬರುತ್ತಿದ್ದ ಕಂದಾಯದ ಉತ್ಪತ್ತಿಯೂ ಇಲ್ಲದಂತಾಗುತ್ತದೆ ಒಂದು ವೇಳೆ ಕಂದಾಯವನ್ನು ಅರ್ಧಕ್ಕೆ ಇಳಿಸಿ ಕಾಪಾಡಿದರೆ ಸರ್ಕಾರಕ್ಕೆ ಸಲ್ಲತಕ್ಕ ಕಂದಾಯ ಇತ್ಯಾದಿಗಳು ಸರಿಯಾಗಿ ಸಲ್ಲಿಸಲೂ, ನಾವು ಪುನರುಜ್ಜೀವನ ಹೊಂದುವುದಕ್ಕೂ

(ಇನ್ನೂ ಇದೆ)

ಪ್ರೆಸಿಡೆಂಟ್ ಹಿಂಡನ್‌ಬರ್ಗರು

ಜರ್ಮನಿಯಲ್ಲಿ ನವೀನ ಕ್ರಾಂತಿಯು ತಲೆಯೆತ್ತಿದೆ—ದಾಸ್ಯ, ಪರಾವಲಂಬನ, ಭಯ, ನಿರಾಶೆಗಳನ್ನೆಲ್ಲ ತೆಗೆದೆಸೆಯಬೇಕೆಂದು ಅಲ್ಲಿ ನಿರ್ಧಾರವಾಗಿದೆಯೆಂಬ ಕೂಗು ಈಗ ಸಕಲ ದೆಸೆಗಳಿಂದಲೂ ಕೇಳಿಬರುತ್ತಿದೆ. ಅದು ಸುಳ್ಳಲ್ಲ. ಅಲ್ಲಿಯ ಇಂದಿನ ಕ್ರಾಂತಿಯೆಂದರೆ ಯಾರನ್ನೂ ಎದುರಾಯಿಸುವ ಮಹಾಕ್ರಾಂತಿ ಅನ್ಯರಾಷ್ಟ್ರಗಳ ಪದತಲದಲ್ಲಿ ಬಿದ್ದು ನರಳಿ, ಫಕ್ಕನೆ ಸ್ಮೃತಿ ಬಂದಂತಾಗಿದೆ ಜರ್ಮನಿಗೀಗ ಅಲ್ಲಿ ಈಗ ಶಾಂತಿ ಸಮಾಧಾನಗಳ ಸದ್ದಡಗಿದೆ ಧೈರ್ಯದಿಂದಲೇ ದೇಶಕ್ಕೆ ಮುಕ್ತಿಯೆಂಬ ತತ್ವವು ಸರ್ವತೋಮುಖವಾಗಿ ಸಾರಲ್ಪಡುತ್ತಿದೆ.

೧೯೧೪ರ ಮಹಾಯುದ್ಧದಲ್ಲಿ ಜರ್ಮನಿಯು ಸೋತು ಸುಣ್ಣವಾಯಿತು ಜನ, ಧನ ಮೊದಲಾದ ಎಲ್ಲಾ ಸಂಪತ್ತನ್ನೂ ಕಳೆದುಕೊಂಡು, ಅವುಗಳೊಡನೆ ಹೃದಯದ ವೀರತೆಯನ್ನೂ ನಿರುಪಾಯಕವಾಗಿ ಕಳೆದುಕೊಂಡು ಅದು ಮೂಲೆಪಾಲಾಗಬೇಕಾಯಿತು ಮುಂದಾಳುಗಳ ಆವಶ್ಯಕತೆಯು ಬಹಳವಾಯಿತು ಅಂತಹ ಸಂದಿಗ್ಧ ಸಮಯದಲ್ಲಿ ಜರ್ಮನಿಯ ಉದ್ಧಾರಕರ್ತೃವಾಗಿ ಒಂದವನೇ ಹಿಂಡನ್‌ಬರ್ಗ್

ಪಾಲ್ ಹಿಂಡನ್ ಬರ್ಗನೆಂದರೆ ವಿಶ್ವವಿದ್ಯಾಮಂದಿರಗಳಲ್ಲಿ ಬಿರುದಾಂಕಿತನಾದವನಲ್ಲ–ಧನಿಕನಲ್ಲ ಧುರೀಣತೆಗಾಗಿ ಪ್ರಯತ್ನಪೂರ್ವಕವಾಗಿ ಸಾಧಿಸಿದವನಲ್ಲ

ಅಲ್ಪಜ್ಞನವನು ಅವಿದ್ಯಾವಂತನವನು ಯೌವನಕ್ಕೆ ಪದಾರ್ಪಣ ಮಾಡುವಾಗಲೇ ಸೈನಿಕನಾಗಿ ಬಿಟ್ಟ ಮತ್ತೆ ಅಲ್ಲಿಂದ ಕದಲಲಾರದಾದ ಸೈನಿಕ ಸ್ವಭಾವವು ಮೂರ್ತಿಮಂತವಾಗಿದ್ದ ಒಬ್ಬ ವ್ಯಕ್ತಿಯು ಜರ್ಮನಿಯಲ್ಲಿ ಆಗಿನ ಕಾಲದಲ್ಲಿದ್ದನಾದರೆ, ಅವನು ಹಿಂಡನ್‌ಬರ್ಗ್

ಅವನ ರಾಷ್ಟ್ರಭಕ್ತಿಯೆಂದರೆ ಅದು ವರ್ಣನಾತೀತ "ದೇಶಕ್ಕಾಗಿ ಏನನ್ನರ್ಪಿಸುವೆ?" ಎಂದು ಕೇಳಿದಾಗ ತನ್ನ ಅಂಗಿಯಲ್ಲಿನ ಎದೆಯ ಗುಂಡಿಗಳನ್ನು ಟಪ್ಪನೆ ಹಾರಿಸಿ ತೋರಿಸಿದ ವೀರನವನು ಜರ್ಮನಿಯು ದಾಸ್ಯಕ್ಕೊಳಗಾಗಿದೆ–ನಾಶವು ಸಮೀಪಿಸಿದೆ ಎಂಬ ಪ್ರತಿಯೊಂದು ನೋಟಿಯು ಅವನ ಹೃದಯದಲ್ಲಿ ಬಿಸಿಯುಸಿರನ್ನು ಎಬ್ಬಿಸುತ್ತಿತ್ತು ಅಂತಹ ದಿವ್ಯ ರಾಷ್ಟ್ರಭಕ್ತಿಯವನದು

೧೯೧೪ರಲ್ಲಿ ರಷ್ಯಾದೊಡನೆ ಜರ್ಮನಿಯು ಯುದ್ಧಕ್ಕಿಳಿಯಬೇಕಾಯಿತು ಹಿಂಡನ್ ಬರ್ಗನ ಧೈರ್ಯ ಸಾಹಸ, ದೇಶಪ್ರೇಮಗಳನ್ನು ಹಲವು ವೇಳೆ ಕಂಡುಕೊಂಡ ಜನರ ಪ್ರತಿನಿಧಿಗಳ ಹಿಂಡನ್‌ಬರ್ಗರನ್ನೇ ಮುಖ್ಯಸ್ಥನನ್ನಾಗಿ ನೇಮಿಸಿದರು

ಯುದ್ಧವು ನಡೆಯುತ್ತಿತ್ತು ಇತ್ತಂಡದವರ ಸೋಲುಗೆಲುವುಗಳ ಇತ್ಯರ್ಥವಾಗದಷ್ಟು ಸಂದಿಗ್ಧತೆಯು ತಲೆದೋರಿತು ಒಮ್ಮೆ ಜರ್ಮನಿಯು ಸೋತು ಮಣ್ಣು ಮುಕ್ಕುವುದೋ ಎಂಬ ಶಂಕೆಯೂ ತಲೆದೋರಿದ್ದಿತು ಆದರೆ ಹಿಂಡನ್‌ಬರ್ಗರು ಧೈರ್ಯಗೆಡಲಿಲ್ಲ ವೀರನಂತೆ ಕಾದಾಡಿ ಮರಳಿ ದೇಶಕ್ಕೆ ಬರುವೆನು ಎಂಬ ಖಚಿತೋದ್ಗಾರಗಳನ್ನು ಅವರು ತೆಗೆದು ಜರ್ಮನಿಯ ಜನರ ಪ್ರೇಮಕ್ಕೆ ಪಾತ್ರರಾದರು–ಹಲವು ಮಾಸಗಳು ಕಳೆದುವು–ಕೊನೆಗೆ ರಷ್ಯಾವು ಹಿಂಡನ್‌ಬರ್ಗರ ಯುದ್ಧಕೌಶಲ್ಯಕ್ಕೆ ಮಣಿಯಬೇಕಾಯಿತು ಎಂದು ರಷ್ಯವು ಸೋತಿತೋ ಅಂದೇ ಹಿಂಡನ್‌ಬರ್ಗರು ಜರ್ಮನಿಯ ಜನರ ದೇವರಾದರು–ರಕ್ಷಕನಾದರು

ಯುದ್ಧವು ಕಳೆದಾದ ಮೇಲೆ ಹಿಂಡನ್‌ಬರ್ಗರು ಶಾಂತಚಿತ್ತದಿಂದ ತನ್ನ ಹಳ್ಳಿಯಲ್ಲಿ ಕಾಲಕಳೆದರು ಆದರೆ ೧೯೨೫ರಲ್ಲಿ ಪ್ರಜಾಧಿಪತ್ಯದ ಅಧ್ಯಕ್ಷನಾಗಿದ್ದ ಇಬರ್ಟನ್ ಕಾಲವಾದ. ಒಡನೆ ಜರ್ಮನಿಯ ಜನರು ಹಿಂಡನ್‌ಬರ್ಗರನ್ನು ಕರೆದು ಅಧ್ಯಕ್ಷ ಪದವಿಯನ್ನಿತ್ತು ಅವರನ್ನು ಗೌರವಿಸಿದರು.

೧೯೩೪ರಲ್ಲಿ ತನ್ನ ಅವಸಾನವಾಗುವವರೆಗೂ ಹಿಂಡನ್‌ಬರ್ಗರು ಜರ್ಮನರಲ್ಲಿ ಸ್ಫೂರ್ತಿ, ಚೈತನ್ಯ, ದೇಶವಾತ್ಸಲ್ಯಗಳನ್ನು ತುಂಬಿದರು ಜನರ ವಿದ್ಯೆ ಬುದ್ಧಿಗಳ ಪ್ರಗತಿಸಾಧಕವಾದ ಪ್ರತಿಯೊಂದು ಸೌಕರ್ಯಗಳನ್ನೇರ್ಪಡಿಸಿಕೊಟ್ಟರು

ದಿವಂಗತ ಹಿಂಡನ್‌ಬರ್ಗರು.

೧೯೩೪ರ ಆಗೋಸ್ಟ ೩ರಲ್ಲಿ ಇವರು ಬರ್ಲಿನ್ ನಗರದಲ್ಲಿ ಸ್ವರ್ಗಸ್ಥರಾದಾಗ ಜರ್ಮನಿಯು ಪ್ರದರ್ಶಿಸಿದ ಸಂತಾಪವು ಇತಿಹಾಸ ಪ್ರಸಿದ್ಧವಾದುದು ಜನರ ಮರಣದಿನವು ಮಹಾಯುದ್ಧವಾರಂಭವಾದ ೨೦ನೇ ವರ್ಷದ ಸ್ಮಾರಕ ದಿನವಾಗಿತ್ತು

ಇಂದು ಜರ್ಮನಿಯ ಪ್ರಜಾಧಿಕಾರದ ಅಧ್ಯಕ್ಷರಾಗಿರುವ ಹರ್ ಹಿಟ್ಲರರು, ಹಿಂಡನ್‌ಬರ್ಗರೂ ಜರ್ಮನಿಯ ರಾಜಕೀಯ ರಥದ ಚಕ್ರಗಳಂತಿದ್ದವರ ಹಿಟ್ಲರರ ಅದೃಷ್ಟದ ರೂಪಕತೆಗೆ ಹಿಂಡನ್‌ಬರ್ಗರೇ ಮುಖ್ಯ ಕಾರಣರು ಎಂಬ ಪ್ರತೀತಿಯೂ ಇದೆ ಜರ್ಮನರಿಗೆ ಹಿಂಡನ್‌ಬರ್ಗ್, ಹಿಟ್ಲರರೆಂದರೆ ಅವತಾರಪುರುಷರು–ಇವರಿಬ್ಬರನ್ನೂ ಪೂಜಿಸುವವರು ಅಲ್ಲಿ ಸಾವಿರಾರು ಜನ.

Old! *Famous!*

East & West Insurance Co., Limited.

Bonus Declard R 15/ Per Thousand Per Annum

Insurance in Force About Rs 9,00,00,000
Annual Premium Income Over Rs 4,50,000
Life Fund Over Rs 7,00,000

Prompt Settlement of Claims
Low Rates of Premium and Various Attractive Plans.

Attractive and liberal agency contracts are offered to honest, influential gentlemen

Inquiries Solicited —
Messrs Padubidri Bros ,
Chief Agents,
PADUBIDRI BOMBAY

OR

Head Office:
East & West Buildings,
Apollo Street, Fort Bombay

ನಿಮ್ಮೊಡನೆ ಯೋಚಿಸಲು

ಮಠಗಳ ವಿಷಯ ನೀವೇನೆನ್ನುವಿರಿ?

ವಿಚಾರರಂಗವಿದು.

ನಿಮ್ಮೊಡನೆ ತರ್ಕಿಸಲು

ಉತ್ತರ ೪.

ಪ್ರಶ್ನೆ ೧ಕ್ಕೆ ಉತ್ತರ —ಪ್ರಸ್ತುತವಿರುವ ಸ್ವಾಮಿಯರಾಗಲಿ ಈ ಶಿಷ್ಯವರ್ಗದಲ್ಲಾಗಲಿ ಶೇಕಡ ಒಬ್ಬರಿರುವರೋ ಎಂಬುದು ಸಂದೇಹ ಪ್ರ ೧೬. ಈಗಿನ ಕಾಲದಲ್ಲಿ ಪಟ್ಟ ಕಟ್ಟುವ ಅಧಿಕಾರವು ಗುರು ಶಿಷ್ಯರೊಳಗೆ ಇದ್ದ ಕೂಡದು ಈ ಅಧಿಕಾರವು ಸಭಾಜಕ್ಕಿರತಕ್ಕದ್ದು ಪ್ರ ೧೭ ಚಿಕ್ಕಮಕ್ಕಳನ್ನು ಪಟ್ಟಕ್ಕಾರಿಸುವುದು ಧರ್ಮವಲ್ಲ ಕಾರಣ, ಸತ್ಯ, ಧರ್ಮ, ಗುಣನಡತೆ, ವಿದ್ಯೆ ಬುದ್ಧಿ ವಿವೇಕ ಮೊದಲಾದ ಸಂಜ್ಞಾನವು ಪ್ರಾಯಪೂರ್ತಿಯಾಗದೆ ಎಷ್ಟಕ್ಕು ಸಿದ್ಧಿಯಾಗದು ಆದ್ದರಿಂದ ಚಿಕ್ಕವರಿಗೆ ಪಟ್ಟಕಟ್ಟುವುದು ಸರಿಯಲ್ಲ ಪ್ರ ೧೮ ಆತ್ಮಜ್ಞಾನವಿಲ್ಲದೆ ಸನ್ಯಾಸ ಸ್ವೀಕರಿಸಿದರೆ ಯೋಗಿಯಲ್ಲಿ ಅವನು ರಾವಣ ಸನ್ಯಾಸಿ ಪ್ರ ೧೯ ಧರ್ಮಪ್ರಚಾರಕ್ಕೆ ಯಾವನಲ್ಲಿ ಆತ್ಮವಿಚಾರವು ಉತ್ಪತ್ತಿಯಾಗುವುದೋ ಅವನೇ ಶಾಸ್ತ್ರಜ್ಞನು ಧರ್ಮಜ್ಞನು, ತತ್ವಜ್ಞನು, ಸತ್ಯವಂತನು ಆಗುವನು ಪ್ರ ೨೦ ಆತ್ಮಧ್ಯಾನವಿರುವ ಗೃಹಸ್ತ ಶಿಷ್ಯನೆ ಧಾರ್ಮಿಕ ಪಟ್ಟಕ್ಕೆ ಯೋಗ್ಯನಾಗುವನು ಪ್ರ ೨೧ ವಿರಕ್ತರಾದ ಸನ್ಯಾಸಿಗೂ ಮಠದ ಆಸ್ತಿಪಾಸ್ತಿಗಳಿಗೂ ಸಂಬಂಧವಿರುವುದಿಲ್ಲ ದೇಹಕ್ಕೂ ಆತ್ಮಕ್ಕೂ ಸಂಬಂಧವಿದೆಯೇ? ಆದರಂತೆ ಪರಿಪೂರ್ಣ ಸನ್ಯಾಸಿಗೂ ಮಠದ ಸಂಪತ್ತಿಗೂ ಏನೂ ಸಂಬಂಧವಿದ್ದೀತ? ಪ್ರ ೨೨ ಆಡಂಬರಗಳು ದೇಹಸುಖಕ್ಕೆ ಸಂಬಂಧಪಟ್ಟವು ಊಟ, ಪಟ್ಟೆ ಬಟ್ಟೆಗಳು ಈ ಸುಖದ ವಿಚಾರಕ್ಕೆ ಕ್ರಮಪಡಿಸಿ ಮಾಯೆಯೆಂಬ ರಜ್ಜುವಿನಿಂದ ಬಂಧಿಸಲ್ಪಟ್ಟರೆ ಇದು ಧರ್ಮವಿಚಾರಕ್ಕೆ ಸಮ್ಮತವ ಆತ್ಮವಿಚಾರಕ್ಕೆ ಸಹಾಯವಿಲ್ಲ ಪ್ರ ೨೩ ಆಡಂಬರದ ಪೂಜೆ ಧರ್ಮವಿಚಾರವಿಲ್ಲದ ಸನ್ಯಾಸಿ ಕಾಲದಲ್ಲಿ ಲೋಕ ನೆಚ್ಚಿ ಪ್ರಸ್ಥಾಪಿಸುವ ದಾಂಭಿಕ ಎಲ್ಲೆಯಿಲ್ಲದೆ ಧರ್ಮಕ್ಕೆ ಸಂಬಂಧಪಟ್ಟದ್ದಲ್ಲ ಪ್ರ ೨೦ ಹಬ್ಬ ಹುಣ್ಣಿಮೆ ಮೊದಲಾದ ಉತ್ಸವಗಳ ಖರ್ಚನ್ನು ಬೇರೆ ರೀತಿಗೆ ಉಪಯೋಗಿಸಿದರೆ ಮಠ ದೇವಸ್ಥಾನಾದಿಗಳಲ್ಲಿ ಜನರಿಗೆ ವಿಶ್ವಾಸವಿಲ್ಲದೆ ಸಮಾಜದ ಬೆಳವಣಿಗೆಗೆ ಹಾನಿಯಾದೀತು ಇದಕ್ಕೆ ಕಾರಣ ಜನರು ನಂಬೋದಿಲ್ಲ ಎಂದು ಸ್ಥಳದಲ್ಲಿ ... ಉತ್ಸವಗಳ ಹೆಚ್ಚಾದಷ್ಟೊ ಅಷ್ಟು ಮಠಗಳ ಶಕ್ತಿಗಳು ಕ್ಷೀಣಿಯಾಗುತ್ತವೆ ... ೨೧ ಪೂಜೆ ... ಧರ್ಮತತ್ವಕ್ಕೂ ಸಂಪರ್ಕ ಇಲ್ಲ ... ಧ್ಯಾನದಿಂದ ... ಪ್ರ ೨೭ ಮಠದ ಸಂಪತ್ತಿನ ಅಧಿಕಾರ ... ಒಳ್ಳೆಯ ಬುದ್ಧಿಶಾಲಿ ... ನಿರ್ವಹಕನಲ್ಲಿರತಕ್ಕದ್ದು ಪ್ರ ೨೮ ಧರ್ಮಾಚರಣದ ಗುರುಗಳು ಸದಾ ಆತ್ಮವಿಚಾರದಲ್ಲಿದ್ದು ಆ ಜ್ಞಾನದಿಂದ ಲೋಕಕ್ಕೆ ಧರ್ಮೋಪದೇಶ ಮಾಡತಕ್ಕದ್ದು ಇದೇ ಸನ್ಯಾಸಿಗಳ ಕರ್ಮ ಅಲ್ಲದೆ ಲೌಕಿಕ ಸುಖವ್ಯವಹಾರದಲ್ಲಿ ಎಂದಿಗೂ ಇರಕೂಡದು ಪ್ರ ೨೯. ಮಠದ ಸನ್ಯಾಸಿಗಳು ಭಿಕ್ಷೆ ಕೊಡುವುದಲ್ಲದೆ ಬೇಡುವವರಲ್ಲ, ಭಿಕ್ಷೆ ಎಂಬುವ ಶಬ್ದವೇ ಧರ್ಮವೆಂಬರ್ಥ ಅಂಥಾ ಸದ್ಧರ್ಮವನ್ನು ಲೋಕಕ್ಕೆ ಪ್ರಯ ಮಾಡುವುದು ಇದೇ ಸನ್ಯಾಸಿಗಳಿಗಿರುವ ಮುಖ್ಯ ಕರ್ತವ್ಯ, ಈಗಿನ ಸನ್ಯಾಸಿಗಳು ಬೇಡುವುದಲ್ಲದೆ ಕೊಡುವುದಿಲ್ಲವೆಂಬ ಅರ್ಥ ಪ್ರ ೪೦ ಮಠ ಇದ್ದವರು ಕೂಡ ನಡೆಯುವ ನಡತೆಗಳು ಮಠ ಇಲ್ಲದವರಿಗಿಂತ ಹೆಚ್ಚಿಗೆ ಯಾವ ರೀತಿಯೂ ಕಾಣುವಂತಿಲ್ಲ ಮಠದ ಸ್ವಾಮಿಯರಿಗೂ ಬಾಕಿ ಮಠ ಇಲ್ಲದವರಿಗೂ ಸ್ವಲ್ಪ ಅಂಬರಾದಿ ಗೋಪಿಚಂದನಾದಿಗಳಲ್ಲಿ ಅಭ್ಯಂತರ ತೋರುತ್ತದೆ ಪ್ರ ೪೧ ಮಠದಲ್ಲಿ ಆಗುವ ಪುರುಷ್ಯಾದಿಗಳನ್ನು ನಿಲ್ಲಿಸಿದರೆ ಮಠದ ಸೊತ್ತುಗಳು ವೃದ್ಧಿಯಾದೀತು. ಪ್ರ ೪೪ ಮಠಗಳು ಇನ್ನೂ ಕೆಲವು ಕಾಲ ಸರಿಯಾಗಿ ಇರಬೇಕೆಂದಾದರೆ ನ್ಯಾಯವಾದ ವ್ಯವಸ್ಥೆಯಲ್ಲಿದ್ದರೆ ಕೌನ್ಸಿಲಿನ ಮುಂದಿಟ್ಟು ಜೀಲಿನ ಪ್ರಕಾರ ನಡೆಯುವುದೆ ಬಹಳ ಲೇಸು ಪ್ರ ೪೫ ಕೆಲವು ಮಠಗಳ ವ್ಯವಸ್ಥೆ ನೋಡುವಾಗ ಮಠಗಳ ಆರ್ಥಿಕ ಸ್ಥಿತಿಗಳು ಒಳ್ಳೆ ರೀತಿಯಲ್ಲಿದ್ದಂತೆ ತೋರುವುದಿಲ್ಲ ವಿಚಾರಿಸಿದರೆ ಶೇಕಡದಲ್ಲಿ ಒಂದು ಮಠ ಒಳ್ಳೆದಿರಲಿಕ್ಕೂ ಸಾಕು ಪ್ರ ೪೬ ಬಜೇಟು ಮಾಡದೆ ನೋಡುವ ಆಡಳ್ತೆಯಲ್ಲಿ ಎಷ್ಟು ಉಂಬಳಿ ಮಗ್ಗೆರೆ ಇದ್ದರೂ ವ್ಯರ್ಥವೆ ಪ್ರ ೪೭ ಹೊಸ ಜೀಲಿನಂತೆ ಕಾರ್ಯನಿರ್ವಾಹಕನ ಮತ ಆಡಳಿತೆ ಇದ್ದರೆ ಮಠಗಳು ವೃದ್ಧಿ ಸ್ಥಿತಿಯಲ್ಲಿ ನಿಲ್ಲಲಿಕ್ಕೆ ಕಾರಣವಾದ್ದರಿಂದ ಮಠಗಳ ಕಾರ್ಯಕ್ಕೆ ವೃದ್ಧಿಯಲ್ಲದೆ ಹಾನಿಯಾದೀತೆ? ಪ್ರ ೪೮ ಈಗಿನ ಕಾಲದಲ್ಲಿ ಮಠ ದೇವಸ್ಥಾನಾದಿಗಳಲ್ಲಿ ದುಡ್ಡಿದ್ದವರಿಗೆ ಎಲ್ಲಾ ವೈಭವಗಳು ಸ್ವರ್ಗಸುಖವೂ ಮೋಕ್ಷಸುಖವೂ ಸನ್ಯಾಸಿಯವರ ಭೇಟಿಯೂ ದೇವರ ಸಂದರ್ಶನವೂ ಬ್ರಾಹ್ಮಣರ ಆಶೀರ್ವಾದ ಸುಖವೂ ದೊರಕುವುದು ದುಡ್ಡಿಲ್ಲದವರಿಗೆ ಮಠ ದೇವಸ್ಥಾನದ ಒಳಗೆ ಹೊಗ್ಗುವುದೆ ಅಸಾಧ್ಯ ದೇವರ ದರ್ಶನ ಸನ್ಯಾಸಿ ದರ್ಶನ ಧರ್ಮೋಪದೇಶ ಸಕಲ ಸಂಪತ್ತುಗಳ ದುಡ್ಡಿದ್ದವರಿಗೆ ಹೋಗಿರುವ ಕಾಲದಲ್ಲಿ ಧರ್ಮವಿಚಾರ ಉಂಟೆ? ಪ್ರ ೪೯ ಕಟ್ಟಳೆ ಅಂದರೆ ಒಂದು ರೀತಿ ಇದು ಒರಿಯರ ಕಾಲದಿಂದಲೇ ನಡೆದು ಬರುವುದು ಒಂದು ಕಟ್ಟಳೆ ಪೂರ್ವಜರು ಎಲ್ಲರೂ ಜ್ಞಾನಿಗಳಂತ ಹೇಳಕೂಡದು. ಕೆಲವರು ಅಜ್ಞಾನಿಗಳು ಒಂದು ಕಟ್ಟಳೆ ಮಾಡಿಬಹುದಾದ ಅಂಥ ಕಟ್ಟಳೆಯಿಂದ ಏನು ಫಲ ದೊರಕುವುದಿಲ್ಲ

ಎಂದೂ ... ಕೆಲವು ದೇವಸ್ಥಾನಾದಿಗಳ ... ಆಡಳಿತೆಯಲ್ಲಿಯೂ ಇರುವುದು ಅಲ್ಲದೆ ಕೆಲವು ಮಠಗಳಲ್ಲಿ ಸನ್ಯಾಸಿಯವರ ಒಟ್ಟಿಗೇನೆ ಅವರ ಬಂಧುಗಳು ಸಂಬಂಧಪಟ್ಟವರ ಮಠದ ಆಡಳಿತ ಸಂಬಂಧಪಟ್ಟವರ ಶಿಷ್ಯವರ್ಗ ಮಾಡಿಕೊಳ್ಳುವರು ಇಂಥಾ ಮಠಗಳು ಎಷ್ಟು ಅಭಿವೃದ್ಧಿಗೊಂಡು ಒಲ್ಲದೆ ಧರ್ಮ ಪ್ರಚಾರವಾದೀತೆ?

ಸ್ತ್ರೀ ವಿದ್ಯಾಭ್ಯಾಸ.

ಲೇಡಿ ಮಿಜರ್ಾರವರ ಭಾಷಣ.

ಮಾರ್ಚಿ ತಾ ೩೧ನೇ ದಿನ ಸಂಜೆ ಬೆಂಗಳೂರು ಬಳೇ ಪೇಟೆಯಲ್ಲಿರುವ ಆರ್ಯಬಾಲಿಕಾ ಪಾಠಶಾಲೆಯ ವಾರ್ಷಿಕೋತ್ಸವವು ವೈಭವದಿಂದ ನೆರವೇರಿತು ಲೇಡಿ ಮಿರ್ಜಾ ಇಸ್ಮಾಯಿಲ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಅವರು ಒಂದು ಸಮಯೋಚಿತ ಭಾಷಣವನ್ನೂ ಮಾಡಿದರು ಅದರಲ್ಲಿ ಭಾರತದ ಹಿರಿಯರ ಕರ್ತವ್ಯವನ್ನೂ ಸ್ಪಷ್ಟಪಡಿಸಿದರು.

ಭಾರತವು ಮುಂದುವರಿಯಬೇಕಾದರೆ ಸ್ತ್ರೀಯರೂ ಪುರುಷರೊಡನೆ ಸರಿಸಮಾನವಾದ ಜವಾಬ್ದಾರಿಯನ್ನು ಕೈಕೊಳ್ಳಬೇಕು ದೇಶಸೇವೆ ಬೇಕಾದ ಹಾಗೆ ಇದೆ, ಕೊಡುವವರು ಕಡಮೆ ಸ್ತ್ರೀಯರಿಗಾಗಿ ಸ್ಕೂಲು ಕಾಲೇಜುಗಳನ್ನು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ತೆರೆಯಬೇಕು ಎಲ್ಲಕ್ಕಿಂತ ಮೊದಲು ಹುಡುಗಿಯರ ಮಿಡಲ್ ಸ್ಕೂಲುಗಳು ಹೆಚ್ಚಬೇಕು ಈಗಿರುವ ಶಾಲೆಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕು ಬಾಲಕಿಯರಿಗೆ ದೈಹಿಕ ಶಿಕ್ಷಣ ಕೊಡಬೇಕು ಈಗಿರುವ ಸ್ತ್ರೀ ವಿದ್ಯಾಭ್ಯಾಸವು ಅಸಂಪೂರ್ಣವಾಗಿದೆ" ಎಂದು ನುಡಿದರು

ಖಾದಿಯ ಪ್ರಚಾರವು ಕೊಂಗ್ರೆಸ್ಸಿನ ಕಾರ್ಯಗಳಲ್ಲಿ ಪ್ರಾಮುಖ್ಯ ವಿಷಯ— ಖಾದಿಯು ಬಡವರ ಕಾಮಧೇನು. ಸರ್ವರೂ ಶುದ್ಧ ಖಾದಿಯನ್ನೇ ಧರಿಸಲಿ.

ಬಾಬು ರಾಜೇಂದ್ರ ಪ್ರಸಾದ

ಸ್ಫುಟವಿಚಾರಗಳು

ಮಲೆನಾಡಿನ ರೈತರ ಕಷ್ಟಗಳೆಷ್ಟೆಂದು-

ಈ ಸಂಚಿಕೆಯಲ್ಲಿ ಪ್ರಕಟಿತವಾದ "ಪ್ರಜಾಹಿತೈಷಿ"ಗಳೊಬ್ಬರ ಲೇಖನದಿಂದ ವ್ಯಕ್ತವಾಗುವುದು — ವರ್ಷಂಪ್ರತಿ ಧರ್ಮಕಾರ್ಯಗಳು, ಜೀವನ, ದೇಸಿಯ ಕಂದಾಯ ಮತ್ತು ಇತರ ಕೆಲಸಗಳ ಬಗ್ಗೆ ೬೦೦ ರೂಪಾಯಿಗಳನ್ನು ವಿನಿಯೋಗಿಸಲೇ ಬೇಕಾಗಿರುತ್ತೆ. ಇಷ್ಟು ದ್ರವ್ಯವನ್ನು ವಿನಿಯೋಗಿಸಿಯೂ ಇವುಗಳಲ್ಲಿಯ ಉತ್ಪತ್ತಿಯು ಸರಾಸರಿ ೩೦ ಮಣ ಸಾಟು ಅಡಿಕೆ ಮತ್ತು ೧೫ ಖಂಡುಗ ಭತ್ತವೂ ವಿಶ್ವಪ್ರಯತ್ನದಿಂದ ಸಿಕ್ಕಬಹುದು. ತ್ರಿದರದಂತೆ ೧೫೦ ರೂಪಾಯಿಗಳ ಬೆಲೆಗಿಂತ ಹೆಚ್ಚಾಗಿ ಸಿಕ್ಕುವುದೇ "ಇಲ್ಲವೆನ್ನಬಹುದು" ಎಂದು ಶ್ರೀಯುತರು ಬರೆಯುತ್ತಾರೆ. ಪರಿಶೀಲಿಸಿ ನೋಡಿದ್ದಲ್ಲಿ ಪ್ರಕೃತ ಸ್ಥಿತಿಯು ಅವರನ್ನು ಮೇಲೆ ವಿವರಿಸಲ್ಪಟ್ಟ ದುರ್ಗತಿಗೀಡು ಮಾಡಲಿಲ್ಲವೆಂದು ಧೈರ್ಯವಾಗಿ ಹೇಳಲಾಗುವುದಿಲ್ಲ. ಮಲೆನಾಡ ರೈತರೆಂದರೆ ಮೈಸೂರು ಸರಕಾರದ ಬೆನ್ನೆಲುಬು. ಶ್ರೀಮನ್ಮಹಾರಾಜ ಸರಕಾರದವರು ಪ್ರಜಾಹಿತೈಷಿ'ಗಳ ಮನವಿಗೆ ಕಿವಿಗೊಡುವುದು ಅಗತ್ಯವಿದೆ.

ಸೈಮನ್-ಹಿಟ್ಲರ್

ಮಾತುಕತೆಯು ಮೊನ್ನೆ ಬರ್ಲಿನ್‌ನಲ್ಲಿ ನಡೆದು, ಬಹುಪಕ್ಷ, ಬಿದ್ದು ಹೋಯಿತು ಎಂದೇ ತೀರ್ಮಾನಿಸಲ್ಪಟ್ಟಿದೆ. ಹರ್ ಹಿಟ್ಲರರನ್ನು ಮುಖಾಮುಖಿ ಸಂಭಾಷಣೆಯಿಂದಲಾದರೂ ಬ್ರಿಟಿಷ ರಾಜನೀತಿಜ್ಞರು ದಾಕ್ಷಿಣ್ಯದ ಮುಷ್ಟಿಯೊಳಗೆ ಸಿಲುಕಿಸಿ, ಸಮಾಧಾನಿಸಿ, ತಮ್ಮ ಕಾರ್ಯಸಾಧನೆ ಮಾಡಬೇಕೆಂದು ಬಗೆದಿದ್ದರಾದರೂ ಅದು ನಿರರ್ಥಕವಾಯಿತು. ಸರ್ ಜೋನ್ ಸೈಮನರೂ ಮಿ| ಅಂತೋನಿ ಎಡನ್‌ರೂ ಬರ್ಲಿನ್‌ನಿಂದ ನಿರುತ್ಸಾಹಿಗಳಾಗಿ ಹೊರಗೆ ನಡೆದುದನ್ನು ನೋಡಿದರೆ ಹಿಟ್ಲರರು 'ಮೊದಲು ಅನ್ಯರಾಷ್ಟ್ರಗಳನ್ನು ಸದ್ದಾರಿಗೆ ತನ್ನಿರಿ- ಆ ಮೇಲೆ ನಮಗೆ ಬುದ್ಧಿ ಹೇಳಬನ್ನಿ' ಎಂದು ಕಂಠೋಕ್ತವಾಗಿ ಹೇಳಿದುದು ಸಹಜವೆಂದು ತಿಳಿದುಬರುವುದು. ಈ ಮಾತುಕತೆಗಳ ಪ್ರತಿಫಲವಾಗಿ ಯುರೋಪಿನಲ್ಲಿ ಶಾಂತಿಯು ಸ್ವಲ್ಪ ಕಾಲವಾದರೂ ನೆಲಸಲು ಕಾರಣವಾಯಿತಾದರೂ, ಬ್ರಿಟಿಷ ಪ್ರಭೃತಿಗಳಿಗೆ ಅಪಜಯವುಂಟಾದುದು ಶೋಚನೀಯವೇ ಸರಿ. ಮಿ ಅಂತೋನಿಯವರು ಮೊಸ್ಕೋವಿಗೆ ಹೋಗಿ ರಷ್ಯಾದ ಸರಕಾರದಧಿಪತಿಗಳನ್ನು ಕಂಡು ಮಾತುಕತೆ ನಡೆಸಲಿದ್ದಾರೆ. ಪರಿಣಾಮವೇನೋ—ನಿರೀಕ್ಷಿಸುವ.

ಯೂರೋಪು ಖಂಡದಲ್ಲಿ ನಡೆಯುವುದೇನು?

ಜರ್ಮನಿಯು ಸೈನ್ಯವನ್ನು ಹೆಚ್ಚಿಸುತ್ತೇನೆಂದು ಮುಂದಾಗಿ ತಿಳಿಸಿ ಮುಂದರಿಯುತ್ತಿದೆ. ಇಟಲಿಯು "ನನ್ನ ಸೈನ್ಯವೇ ನನ್ನ ರಕ್ಷಣೆ" ಎಂದು ಎದೆ ತಟ್ಟುತ್ತಿದೆ. ಎಬಿಸೀನಿಯಾವು ಮಿಲಿಟರಿಯನ್ನು ಮುನ್ನಡೆಸುತ್ತಾ "ಜನಾಂಗ ಸಭೆಯು ಇಟಲಿ ಅಬಿಸೀನಿಯಾಗಳ ಮಧ್ಯೆ (ಬೇಕಾದರೆ) ಕೈಯಿಕ್ಕಿ ನಮ್ಮೊಳಗೆ ಒಪ್ಪಂದ ಮಾಡಲಿ- ನಮಗೆ ಅಗತ್ಯವಿಲ್ಲ" ಎನ್ನುತ್ತಿದೆ. ತನ್ಮಧ್ಯೆ, ಮೊನ್ನೆ ಜಪಾನು ಲೀಗ್ ಆಫ್ ನೇಶನ್ಸ್ ಸಭೆಯ ಹೊರಗೆ ಹೋಯಿತು. ಇದನ್ನು ಕಂಡು ಬೆರಗಾದ ಇಟಲಿಯು ತನ್ನ ಸೈನ್ಯವನ್ನೂ ಎಚ್ಚರಿಸಿರುತ್ತದೆ. ಯೂರೋಪು ಖಂಡದ ಶಾಸ್ತ್ರಾಸ್ತ್ರ ತಯಾರಿಸುವ ಕಾರ್ಖಾನೆಗಳಲ್ಲಿ ರಾತ್ರಿಂದಿವ ಕೆಲಸ ನಡೆಸಿ ಆಯುಧಗಳನ್ನು ತಯಾರಿಸುತ್ತಿವೆ. ಬಾಯಿಯಿಂದ ಸಮಷ್ಟಿ ಹಿತವನ್ನು ಸಾರುತ್ತಿರುವ ರಾಷ್ಟ್ರಗಳೆಲ್ಲ ಅಂತರ್ಯದಲ್ಲಿ "ನಮ್ಮ ಗತಿ ನಮಗೆ" ಎಂಬ ಭಾವನೆಯಿಂದ ರಹಸ್ಯವಾಗಿ ರಕ್ಷಣಾಯೋಜನೆಗಳನ್ನು ಮಾಡುತ್ತಿವೆ. ಜಪಾನು ಅಮೇರಿಕಾದೊಡನೆ ದ್ವೇಷವನ್ನು ಕಟ್ಟಿಕೊಂಡಿದೆ. ರಷ್ಯದೊಡನಿರುವ ಮನಃಕ್ಲೇಶವು ಅದರ ಹೃದಯದಿಂದ ಹೋಗುವಂತಿಲ್ಲ. ಅಮೇರಿಕಾಕ್ಕೆ ಜಪಾನಿನ ಸಿಲ್ಕು ಬೇಕಾಗಿಲ್ಲ. ಚೈನವಂತೂ ಜಪಾನನ್ನು ಎಲ್ಲಾ ವಿಧದಿಂದಲೂ ಬಹಿಷ್ಕರಿಸುತ್ತಿದೆ. ಅಂತೂ ಯುರೋಪು ಖಂಡದಲ್ಲಿ ಮತ್ಸರ, ಸ್ಪರ್ಧೆ, ಕುತಂತ್ರಗಳು ನಾಗಲೋಟದಿಂದ ಮುಂದಡಿಯಿಡುತ್ತಿವೆ. ಇವು ಯುದ್ಧದಲ್ಲೇ ಪರ್ಯವಸಾನಗೊಳ್ಳುವುದೆಂಬ ತಜ್ಞರ ನುಡಿಯು ಸತ್ಯವೆಂದೇ ತಿಳಿಯುತ್ತಾ ಬರುತ್ತಿದೆ. ಭಾರತೀಯರು ಈಗ ಅಪ್ರತ್ಯಕ್ಷರಾಗಿಯಾದರೂ ಸಿದ್ಧರಿರುವುದು ಲೇಸಲ್ಲವೇ?

ಇದು ಮೈಸೂರಿಗೆ ಭೂಷಣವಲ್ಲ!

ಮೈಸೂರು ಪ್ರಜಾ ಸಂಯುಕ್ತ ಮಂಡಲಿಯವರು ತಾ ೨೦-೩-೩೫ರಿಂದ ತಾರೀಕು ೨೦-೪-೩೫ರ ವರೆಗೆ ರೈತರ ಸಭೆಗಳನ್ನು ಅಲ್ಲಲ್ಲಿ ಜರಗಿಸಿ ತಮ್ಮ ಕಷ್ಟನಷ್ಟಗಳನ್ನು ಸರಕಾರದ ಗಮನಕ್ಕೆ ತರಬೇಕೆಂದು ಪ್ರಾರಂಭಿಸಿದ ಕ್ರಮವನ್ನು ಕೋಲಾರ ಜಿಲ್ಲಾ ಬೂದಿಗೆರೆ ಹೋಬಳಿ ರೈತರ ಸಮ್ಮೇಳನವು, ಮಾಗಡಿ ತಾಲೂಕು ರೈತರ ಸಮ್ಮೇಳನವು, ಜರಗಬೇಕೆಂದು ನಿರ್ಧಾರವಾಗಿ, ಸಿದ್ಧತೆಗಳಾಗುತ್ತಿದ್ದಂತೆ ಪ್ರಭುತ್ವದವರು ಪೋಲೀಸ್ ಸಂಬಂಧಪಟ್ಟ ಕ್ರಮಸೇವೆಯಂತೆ ಆಜ್ಞೆಯನ್ನು ಹೊರಡಿಸಿ ನಮ್ಮ ಆಚರಣೆಯಿಂದ ರೈತರಿಗೆ ಸರಕಾರದ ಮೇಲಿರುವ ವಿಶ್ವಾಸವು ಕಡಮೆಯಾಗುವಂತಿದೆಯಾದುದರಿಂದ ನೀವು ಅಂತಹ ಸಭೆಗಳನ್ನು ಜರಗಿಸಬಾರದು' ಎಂದು ಸಮ್ಮೇಳನಗಳ ಅಧ್ಯಕ್ಷ ಉಪಾಧ್ಯಕ್ಷರಿಗೆಲ್ಲ ತಿಳಿಸಿಬಿಟ್ಟರು. ಎಂತಹ ವರ್ತನೆಯಿದು. ಎಂತಹ ಅಪಹಾಸ್ಯಕರ ಭಯವಿದು. ಜನರು ತಂತಮ್ಮ ಕಷ್ಟಸುಖಗಳನ್ನು ಒಬ್ಬರೊಡನೊಬ್ಬರು ಹೇಳಿ ಪರಿಹಾರವನ್ನು ಮಾಡಿಕೊಳ್ಳುವಷ್ಟು ಸ್ವಾತಂತ್ರ್ಯವಿಲ್ಲವೆಂದರೆ ಇಂತಹ ಜನಾಂಗವನ್ನಾಳುವವರ ಶಕ್ತಿಯನ್ನು ಯಾವ ಮಾನದಂಡದಿಂದ ಅಳೆಯಬಹುದು? ಕೂಗನ್ನು ಮುಸುಕಿಗೆ ಹೊಡೆಯುವ ತಾಯಿಗಿಂತ, ಅದಕ್ಕೆ ಮೊಲೆಯುಣ್ಣಿಸಿ ಸಮಾಧಾನಿಸುವ ತಾಯಿಯು ವ್ಯವಹಾರಚತುರಳಲ್ಲವೇ? ಮೈಸೂರು ಪ್ರಭುತ್ವದವರು ಜನರ ಕೂಗನ್ನು ಕೇಳಿ ತಕ್ಕ ಚಿಕಿತ್ಸೆಯನ್ನೇರ್ಪಡಿಸುವ ಬದಲು ರೈತಾಪಿ ಜನರನ್ನು ಈ ರೀತಿ ನೋಯಿಸಬೇಕೇ? ಇದರಿಂದ ಯಾರಿಗೆ ಲಾಭ?

೮೦ ಉದ್ಯೋಗ-೧೦,೦೦೦ ಅರ್ಜಿಗಳು

ರಿಜರ್ವ್ ಬೇಂಕ್ ಸ್ಥಾಪನೆಯಾಗಿ ಅದಕ್ಕೆ ೮೦ ಉದ್ಯೋಗಿಗಳನ್ನು ನೇಮಕ ಮಾಡಲಿದ್ದಾರೆಂದು ತಿಳಿದೊಡನೆ ದೇಶದ ಹಲವೆಡೆಗಳಿಂದಲೂ ವಿದ್ಯಾವಂತರ ೧೦,೦೦೦ ಅರ್ಜಿಗಳು ಹೋಗಿವೆಯೆಂದು ತಿಳಿದು ಬಂದಿದೆ. ಎಂತಹ ಶೋಚನೀಯ ಪರಿಸ್ಥಿತಿ. ಭಾರತೀಯ ಯುವಕರು ಕೆಲಸವಿಲ್ಲದೆ ಬೀದಿ ಬೀದಿ ಅಲೆದಾಡಿ ಒಂದು ಉದ್ಯೋಗವು ಖಾಲಿಯೆಂದಾಕ್ಷಣ ಸಾವಿರಗಟ್ಟಲೆಯಾಗಿ ಅಲ್ಲಿಗೆ ಓಡಿ ಕೈಸೇದಿ ಬೇಡುತ್ತಿರುವ ಈ ದೃಶ್ಯವು ಎಷ್ಟರವರೆಗೆ ಸಹಿಸಲು ಸಾಧ್ಯ' ಈ ಜ್ವಾಲಾಮುಖಿಯ ಮೇಲೆ ಕುಳಿತಿರುವ ದೇಶವು ಯಾವ ಉಪಾಯದಿಂದ ರಕ್ಷಿಸಲ್ಪಡಬೇಕು? ನಿರುದ್ಯೋಗ ಸಮಸ್ಯೆಯು ಪ್ರಾಬಲ್ಯವು ಎಷ್ಟಿದೆಯೆಂದು ಸರಕಾರವು ಈಗಲಾದರೂ ಕಂಡುಕೊಂಡಿತಲ್ಲವೇ? ಈ ಪರಿಸ್ಥಿತಿಗೆ ಕಾರಣರಾರು? ಜನರೇ? ಅಥವಾ ಸರಕಾರವೇ? ಸರಕಾರವೇ ಕಾರಣವೆಂದು ತಿಳಿದವರ ಹೇಳಿಕೆ. ಶೀಘ್ರದಲ್ಲೇ ಸರಕಾರವು ಕೈಗಾರಿಕೆ ಕೇಂದ್ರಗಳನ್ನು ಸಂಸ್ಥಾಪಿಸಿ ಈ ನಿರುದ್ಯೋಗಿಗಳಿಗೆ ಜೀವನೋಪಾಯವನ್ನು ಕಲ್ಪಿಸಿಕೊಡುವ ಸಾಹಸಕ್ಕೆ ತೊಡಗದಿದ್ದರೆ ಜನರ ಸಂಕಷ್ಟಗಳೊಡನೆ ಸರಕಾರದ ಸುಖಶಾಂತಿಗಳೂ ಕಡಮೆಯಾಗುವುದು ಸಹಜ. ೧೦,೦೦೦ ನಿರುದ್ಯೋಗಿಗಳು-ಅವರನ್ನಾಧರಿಸಿಕೊಂಡಿರುವ (ಕಡಮೆ ಪಕ್ಷ) ೨೦,೦೦೦ ಕುಟುಂಬಿಕರು—ಇವರನ್ನೆಲ್ಲ (ಹೆಸರಗಿರುವ ಇತರರನ್ನೂ) ರಕ್ಷಿಸಲೇ ಬೇಕಾಗಿದೆ.

ಸರ್ ತೇಜಬಹದ್ದೂರ್ ಸಪ್ರೂಗಳ ಸೇವೆ

ಮೊನ್ನೆ ಅಲಿಘರದ ವಿದ್ಯಾರ್ಥಿಗಳಿಗೆ ಉಪದೇಶವನ್ನೀಯುತ್ತಾ ಸರ್ ತೇಜ ಬಹದ್ದೂರ್ ಸಪ್ರೂರವರು ಬಹು ನಿರಾಶಾ ಮನೋಪರಿಸ್ಥಿತಿಯಿಂದ ಮಾತನಾಡಿದರು. 'ನೂತನ ರಾಜ್ಯಾಂಗರಚನೆಯಾಗುತ್ತಿದೆ, ಆದರೇನು? ನಮ್ಮಲ್ಲಿ ಒಗ್ಗಟ್ಟಿಲ್ಲ, ಸತ್ವವಿಲ್ಲ. ಇಂತಹ ಸಂದರ್ಭದಲ್ಲಿ ನಮಗೆ ಆಳರಸರು ಕೊಟ್ಟಿರುವ ರಾಜ್ಯಾಂಗ ದಾನವೇ ದೊಡ್ಡದು. ನಾವು ಅಷ್ಟರಲ್ಲೇ ತೃಪ್ತಿಹೊಂದಬೇಕಾಗಿ ಬಂದಿದೆ' ಎಂದು ಮೊದಲಾಗಿ ಬಹು ಖಿನ್ನಮನಸ್ಕರಾಗಿ ನುಡಿದರು. ಶ್ರೀ ಸಪ್ರೂಗಳಂತಹ ರಾಜಕೀಯ ಪ್ರಭೃತಿಗಳೇ ಹೀಗೆ ನಿರಾಶಾವಾದಿಗಳಾಗಿ ಮುಂದಿನ ಜನಾಂಗವಾದ ಇಂದಿನ ವಿದ್ಯಾರ್ಥಿಗಳೆದುರು ಹೇಳುವುದೆಂದರೆ ಇದೆಂತಹ ಸೇವೆ? ಇದು ದೈನ್ಯಮುಖದ ಕತ್ತರಿಯಲ್ಲದೆ ಮತ್ತೇನು? ಸಪ್ರೂಗಳ ವಯಸ್ಸು ಮೀರುತ್ತಾ ಬರುತ್ತಿರುವಂತೆ ಅವರಲ್ಲಿ ಧೈರ್ಯವೂ ಸಾಹಸವೂ ಕಡಮೆಯಾಗಿ ನಿರಾಶೆಯ ಕಗ್ಗತ್ತಲು ತೋರಿಬರುವುದು ಸಹಜವಾದುದು. ಆದರೆ ಅವರು ಯುವಕರೆದುರು ಅಂತಹ ದೌರ್ಬಲ್ಯ ಪ್ರದರ್ಶನ ಮಾಡಿ ವಿದ್ಯಾರ್ಥಿಗಳನ್ನು ನಿರುತ್ಸಾಹಿಗಳನ್ನಾಗಿ ಮಾಡುವುದು ತೀರಾ ಅನವಶ್ಯ. ಶ್ರೀಯುತರ ನಿರಾಶೆಗೆ ಎಂದೂ ಕಾರಣವಿಲ್ಲ. ಜನರಲ್ಲಿ ಒಗ್ಗಟ್ಟು ಹೆಚ್ಚುತ್ತಾ ಇದೆ. ಶಕ್ತಿಯು ವೃದ್ಧಿಯಾಗುತ್ತಿದೆ—ಕಣ್ಣಿದ್ದವರಿಗೆ ಕಾಣುತ್ತಿದೆ.

ದಕ್ಷಿಣ ಕನ್ನಡ ಜಿಲ್ಲಾ ವರ್ಗದಾರರ ಸಂಘದ ಪ್ರಕಟಣೆ

ಈ ಜಿಲ್ಲೆಯಲ್ಲಿ ಸ್ವಾತಂತ್ರ್ಯದ ಕಳೆದ ೧—೨ ವರ್ಷಗಳಲ್ಲಿ ರಿಜರ್ವ ಕಟ್ಟಳೆಗಳಲ್ಲಿ ಜನರಿಗೆ ಸೂಕ್ತ ರೀತಿಯ ವಸ್ಕರ ತಗೆಯುವರೆ ಇರುತ್ತಿದ್ದ ಹಕ್ಕು ಬಾಧ್ಯತೆಗಳನ್ನು ರದ್ದು ಮಾಡಿದ ಸಂಬಂಧ ಕೊಡಲಾದ ತಕ್ಕ ಸಹಾಯ ರಿಪೋರ್ಟು ಮಾಡುವದೆ ಮಂಗಳೂರಲ್ಲಿ ಕಳೆದ ೧೬—೨ ೯೩೫ರಲ್ಲಿ ನಡೆದ ಜಿಲ್ಲಾ ವರ್ಗದಾರ ಸಂಘದಲ್ಲಿ ಮ. ರಾ| ಸೋಮಶೇಖರನ್ ಹಂಜಾ ಡಾ. ಮಾದಪ್ಪಯ್ಯ ಮತ್ತು ಇನ್ನು ಕೆಲವರ ಕಮಿಟಿಯೊಂದು ನೇಮಕಮಾಡಿದ್ದು, ಸದ್ರಿ ಕಮಿಟಿಯವರು ಇದೇ ತಿಂಗಳ ಅಖೈರಿಯ ಮೇ ತಿಂಗಳಲ್ಲಿ ಸಂಚಾರಮಾಡುವರು. ಹಾಗೆ ಸಂಚಾರದ ಕ್ರಮವನ್ನು ನಿಶ್ಚೈಸುವ ಮುಂಚೆ, ಕಮಿಟಿಯವರು ಯಾವ್ಯಾವ ಗ್ರಾಮಗಳಿಗೆ ಬಂದು ಸ್ವತಃ ಸಂದರ್ಶಿಸಬೇಕೆಂತ ಇಚ್ಛೈಸುವವರು ದಯವಿಟ್ಟು ಇದೇ ತಿಂಗಳ ೧೫ನೇ ತಾರೀಕಿನ ಒಳಗೆ ನನಗೆ ಬರಹ ಮೂಲಕ ತಿಳಿಸತಕ್ಕದ್ದು. ಹಾಗೆ ಬರೆಯುವ ಪತ್ರಗಳಲ್ಲಿ—

(೧) ಸಂಬಂಧಪಟ್ಟ ರಿಜರ್ವ ಕಾಡಿನ ಹೆಸರು

(೨) ಕಮಿಟಿಯವರು ಸಂದರ್ಶಿಸಬೇಕಾದ ಗ್ರಾಮ, (ತಾಲೂಕು)

(೩) ಬರೆಯುವವರ ಪೂರ್ಣ ವಿಳಾಸ ಕಾಣಿಸಿ ಬರೆಯತಕ್ಕದ್ದು.

ಇದೇ ತಾ ೧೫ರ ನಂತರ ಕಮಿಟಿಯವರ ಸಂಚಾರದ ಕಾರ್ಯಕ್ರಮವನ್ನು ತಿಳಿಸುವುದಲ್ಲದೆ ರೈತರು ಸಂಗ್ರಹಿಸಬೇಕಾದ ಅನುಭವದ ವಿಷಯ ಕೂಡಾ ಪತ್ರಿಕೆಗಳ ಮೂಲಕ ತಿಳಿಸಲಾಗುವುದು.

ಮಂಗಳೂರು, ೧—೪—೩೫. ಕೋ. ರಾಮಕೃಷ್ಣ ಕಾರಂತ ಕಾರ್ಯದರ್ಶಿ

ರಾಷ್ಟ್ರೀಯ ವಾರ.

ತಾ ೩೧—೪—'೩೫.

ವರ್ಷಂಪ್ರತಿ ಅಖಿಳ ಭಾರತದಲ್ಲಿ ರಾಷ್ಟ್ರೀಯ ವಾರವೆಂದು ಆಚರಿಸಲಾಗುವ ಅವಧಿಯು ಸಮೀಪಿಸಿತು. ನಮ್ಮ ಕನ್ನಡಿಗರೂ ಕೂಡ ಈ ಸಪ್ತಾಹವನ್ನು ಆಚರಿಸುವುದರಲ್ಲಿ ಹಿಂದುಳಿಯಲಿಕ್ಕಿಲ್ಲ. ಬೇಗನೇ ತಿಂಗಳಲ್ಲಿ ಅಖಿಲ ಕರ್ನಾಟಕ ರಾಷ್ಟ್ರೀಯ ಪರಿಷತ್ತು (ಮಂಗಳೂರಿನಲ್ಲಿ) ಸೇರುವುದಿರುತ್ತಾ, ಸದ್ಯ ರಾಷ್ಟ್ರಪತಿಯಾಗಿರುವ ಶ್ರೀ| ಬಾಬು ರಾಜೇಂದ್ರ ಪ್ರಸಾದರವರೂ ಆಗ್ಗೆ ಕರ್ನಾಟಕದಲ್ಲಿ ಪ್ರವಾಸಮಾಡುವುದಿರುತ್ತಾ, ರಾಷ್ಟ್ರೀಯ ಸಪ್ತಾಹದಲ್ಲಿ ಕರ್ನಾಟಕಸ್ಥರ ಜವಾಬ್ದಾರಿಯು ವಿಶೇಷವಾಗಿರುತ್ತದೆ. ಎಂದಿನಂತೆ ವಿಧಾಯಕ ಕಾರ್ಯಕ್ರಮವನ್ನು ಅದಷ್ಟು ಆಚರಣೆಯಲ್ಲಿ ತರಲು ಪ್ರಯತ್ನಿಸುವುದು ಉತ್ತಮವೂ ಅಗತ್ಯವೂ ಇದೆ. ಅದ್ದರಿಂದ ದೇಶಬಾಂಧವರು ಸರ್ವತ್ರವಾಗಿ ಖಾದಿ, ಅಸ್ಪೃಶ್ಯತಾ ನಿವಾರಣೆ, ಜಾತೀಯ ಐಕ್ಯತೆ, ಮದ್ಯಪಾನ ನಿಷೇಧ, ಹಳ್ಳಿಗಳಲ್ಲಿ ವಿದ್ಯಾಪ್ರಸಾರ, ಹಳ್ಳಿ ಕೈಗಾರಿಕೆಗಳ ಉಜ್ಜೀವನ, ಹಳ್ಳಿಗಳ ಆರೋಗ್ಯ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿದೆ. ಅದರೆ, ಎಲ್ಲವುದಕ್ಕೂ ಪ್ರಧಾನವೂ ಕಡಿಮೆ ತರಬೇಕಾದದ್ದು, ನಿರುದ್ಯೋಗಿಗಳಿಂದ ಹಳ್ಳಿಗರಲ್ಲಿ ಸ್ವಾವಲಂಬನ ಉದ್ಯೋಗಶೀಲತೆ ಸಂಪಾದನೆಯನ್ನುಂಟುಮಾಡುವಂತೆ ಜನವನ್ನು ಅಣಗಿಸಬಲ್ಲ ಪವಿತ್ರ ಮನೋನಿಷ್ಠೆ ನಮ್ಮ ದೇಶಪ್ರೇಮಿಗಳಾದ ಪ್ರತಿಯೊಬ್ಬ ಸ್ತ್ರೀಪುರುಷರೂ ಈ ಸಪ್ತಾಹದಲ್ಲಿ ಎಂದಿಷ್ಟು ಖಾದಿಯನ್ನು ಬಿಡದ ಕರವಸ್ತ್ರ ಅಥವಾ ಒಂದು ಅಂಗಿವಸ್ತ್ರವನ್ನಾದರೂ ಕೊಂಡುಕೊಳ್ಳುವುದು ತೀರಾ ಅವಶ್ಯವೆಂದು ಒತ್ತಿ ಹೇಳಬೇಕಾಗಿಲ್ಲವಷ್ಟೆ. ಪರಿಷತ್ತಿನ ಕೆಲಸ ಸಿದ್ಧತೆ ಅವಶ್ಯಕತೆಯ ನೆಲೆಯಿಂದಲಾದರೂ ಒಂದಿಷ್ಟು ಬಡವರ ಹಣವನ್ನು ಕೊಂಡುಕೊಂಡು ದೇಶಬಾಂಧವರಲ್ಲಿ ಒಂದಿಷ್ಟು ಶಾಂತಿ ಸಮಾಧಾನ ಸಂತೋಷವನ್ನುಂಟು ಮಾಡಬೇಕೆಂದು ಪ್ರಾರ್ಥಿಸಿ.

ಶ್ರೀ ಕೆ ಎಫ್ ನರಿಮನ್ನರು ಮುಂಬಾಯಿಯ ಮೇಯರರಾದರು

ಮುಂಬಾಯಿಯ ಶ್ರೀ ಕೆ ಎಫ್ ನರಿಮನ್ನರನ್ನು ಮುಂಬಾಯಿಯ ಮೇಯರರನ್ನಾಗಿ ಚುನಾಯಿಸಲಾಗಿದೆ. ಅವರಿಗೆ ಒಟ್ಟು ೬೩ ವೋಟುಗಳು ದೊರೆತುವು ... ನಿಗಳಲ್ಲಿ ... ಮಂದಿ ... ಕೌನ್ಸಿಲರು ... ಸುಸ್ತೀನ್ ... ಜೀಜೀ ... ನರಿಮನ್ ... ಪ್ರಚಂಡ ... ಗೆದ್ದರು



ವೋಟು ತೆಗೆದು ಬಳಿಕ ನರಿಮನ್ನರಿಗೆ ಬಹುಮತದ ವೋಟುಗಳು ದೊರೆತುವು. ಫಲಿತಾಂಶವನ್ನು ಪ್ರಕಟಿಸಿದೊಡನೆ ಕೌನ್ಸಿಲ್ ಸಭೆಯಲ್ಲೆಲ್ಲಾ "ಕೊಂಗ್ರೆಸ್ಸಿಗೆ ಜಯ" ಹಾಡಿದರು. ಎಂಬ ಘೋಷವು ಕೇಳಿಬಂತು. ಶ್ರೀ ನರಿಮನ್ನರನ್ನು ಸಭೆಯ ಜನರು ಅಭಿನಂದಿಸಿದರು. ಶ್ರೀಯುತ ನರಿಮನ್ನರು ಭಾಷಣ ಮಾಡುತ್ತಾ ಎಲ್ಲರ ಸಹಕಾರದ ಸಹಾನುಭೂತಿಗಳಿಗೆ ಉಪಕಾರಸ್ಮರಣೆ ಮಾಡಿದರು. ಶ್ರೀ ನರಿಮನ್ನರು ಮುಂಬಾಯಿಯ ಮಾತುಕತೆಯಲ್ಲಿ ಪ್ರಸಿದ್ಧರು. ಬಹು ಶ್ರೀಮಂತರಲ್ಲ. ದಿಟ್ಟರೂ ಉಜ್ವಲ ದೇಶಾಭಿಮಾನಿಗಳೂ. ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರು. ಮೊನ್ನೆ ಮುಂಬಾಯಿಯಲ್ಲಿ ನಡೆದ ಕೊಂಗ್ರೆಸ್ ಅಧಿವೇಶನಕ್ಕೆ ಸ್ವಾಗತಾಧ್ಯಕ್ಷರಾಗಿದ್ದವರು.

ಅನುಕ್ರಮಣಿಕೆ.

ಪತ್ರ ೨
ಪತ್ರಿಕಾ ಪ್ರಪಂಚ ೪
ಸಣ್ಣ ಕೈಗಾರಿಕೆಗಳ ಮಹತ್ವ ೫
ಒಟ್ಟು ಸಾಟಿ ಶಾಸ್ತ್ರಗಳು ೬
ಅಗ್ರಲೇಖ
ಪ್ರೆಸಿಡೆಂಟ್ ಹಿಂಡೆನ್‌ಬರ್ಗ್ ೮
ಸ್ಫುಟವಿಚಾರಗಳು ೯
ನಮ್ಮ ಜಿಲ್ಲೆಯ ನೈಸರ್ಗಿಕ ಸಂಪತ್ತು ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು. ೧೬
ನಮ್ಮ ಮುಂದಾಳುಗಳು ೧೮
ಕಲ್ಕತ್ತಾ ಮೋಯರರ ಮೇಲೆ ದಾವೆ ೧೯

ಸ್ವದೇಶಾಭಿಮಾನಿ.

ತಾ ೨೯ನೇ ಶುಕ್ರವಾರ ಮಾರ್ಚಿ '೩೫

ನಮ್ಮ ಜಿಲ್ಲೆಯ ನೈಸರ್ಗಿಕ ಸಂಪತ್ತು

ಸಾಮಾನ್ಯ ಮದ್ರಾಸು ಸಂಸ್ಥಾನದಲ್ಲಿ, ನೈಸರ್ಗಿಕವಾದ ಸಂಪತ್ತುಳ್ಳ ಭಾಗಗಳೆಂದರೆ ದಕ್ಷಿಣ ಕನ್ನಡ ಮಲಬಾರು ಜಿಲ್ಲೆಗಳು ಈ ಎರಡೂ ಜಿಲ್ಲೆಗಳಲ್ಲಿ ಎಷ್ಟು ವಿಶಾಲವಾದ ಕಾಡುಪ್ರದೇಶಗಳಿವೆ, ವೇಗವಾಗಿ ಹರಿಯುವ ನದಿಗಳಿವೆ, ಹುಲ್ಲುಗಾವಲುಗಳಿವೆ ಆದರೆ ನಮ್ಮ ಸರಕಾರವಾಗಲಿ, ಜನರಾಗಲಿ ಅದರಿಂದ ಉಪಯೋಗವನ್ನು ಹೊಂದುತ್ತಿರುವರೇ ಎಂಬುದೊಂದು ದೊಡ್ಡ ಪ್ರಶ್ನೆಯಾಗಿದೆ

ಮೊದಲಿನ ಸಂಪತ್ತೆಂಬುದು ಶಕ್ತಿ. ಯಾವ ದೊಡ್ಡ ಕೈಗಾರಿಕೆ, ಉದ್ಯೋಗಗಳನ್ನು ಕೊಳ್ಳುವುದಕ್ಕೂ—ಅಗ್ಗದಲ್ಲಿ ಯಂತ್ರಗಳನ್ನು ನಡೆಯಿಸುವಂತೆ ಶಕ್ತಿಯು ಬೇಕು ನಮ್ಮಲ್ಲಿ ಈ ಕೆಲಸಕ್ಕೆ ಕಲ್ಲಿದ್ದಲು ಇಲ್ಲದೆ ಹೋದರೂ, ಮರಮಟ್ಟುಗಳಿವೆ ಕಾಡುಪ್ರಾಂತ್ಯಗಳಲ್ಲಿ ಕಾರ್ಖಾನೆಗಳನ್ನು ತೆಗೆಯಲು ಶಕ್ಯವಿದ್ದರೆ, ಬಹಳ ಕಡಮೆ ವ್ಯಯದಿಂದ ಶಕ್ತಿಯ ಪೂರೈಕೆಯಾಗುವುದು ಅದಕ್ಕಿಂತ ಅಗತ್ಯವಾದುದು ವಿದ್ಯುತ್ತಿನ ಉತ್ಪಾದನೆ ನಮ್ಮ ಜಿಲ್ಲೆಯಲ್ಲಿ ಎಷ್ಟು ವೇಗವಾಗಿ ಹರಿಯುವ ನದಿಗಳಿಲ್ಲ, ಚಿಕ್ಕಪುಟ್ಟ ಜಲಪಾತಗಳು ಬೇಕಷ್ಟು ಇವೆ ಇವುಗಳ ಉಪಯೋಗವನ್ನು ಯಾಕೆ ದೊರಕಿಸಿಕೊಳ್ಳಬಾರದು? ಪ್ರಕೃತ ಮಂಗಳೂರಿನಲ್ಲಿ ತೆರೆದಿರುವ ವಿದ್ಯುತ್ ಉತ್ಪಾದನೆಯ ಕೇಂದ್ರವು—ಸಾರ್ವಜನಿಕರಿಗೂ ಅನುಕೂಲವಾಗುವಷ್ಟು ಅನುಕೂಲವಾಗಿದೆಯೇ? ಕೈಗಾರಿಕೆಗಳ ಅಭಿವೃದ್ಧಿಗೆ ಇನ್ನೂ ಅಗ್ಗವಾಗಿ ವಿದ್ಯುತ್ ಶಕ್ತಿಯು ದೊರೆಯಬೇಕು ಇಂಗ್ಲೆಂಡಿನಲ್ಲಿ ಎಲ್ಲೆಲ್ಲೂ ವಿದ್ಯುತ್ ಪ್ರಚಾರವಾಗಿದೆ—ಕಾರಣ, ಅಲ್ಲಿ ಒಂದು ಯುನಿಟಿಗೆ ಬರೇ ಒಂದು ಪೆನ್ನಿನಷ್ಟು ಮೌಲ್ಯ ಬೀಳುವುದು. ನಮ್ಮಲ್ಲಿ ಇದರ ನಾಲ್ಮಡಿ ಬೀಳುವುದು. ವಿದ್ಯುತ್ತನ್ನು ಇಷ್ಟು ಅಗ್ಗವಾಗಿ ಕೊಡಲು ಬಂದರೆ ಮಾತ್ರ ಅಲ್ಲಲ್ಲಿ ಹಳ್ಳಿಯ ಕೈಗಾರಿಕೆಗಳನ್ನು ಹೆಚ್ಚಿಸಿಕೊಳ್ಳಬಹುದು. ಮಂಗಳೂರಿನ ವಿದ್ಯುತ್ ಕೇಂದ್ರವಾದರೂ, ತನ್ನ ಧ್ಯಾನಯೋಗಗಳನ್ನು ನಡೆಯಿಸಲು ಇಂಥ ನೈಸರ್ಗಿಕ ಅನುಕೂಲತೆಗೆ ಕೈಹಾಕಬೇಕು ಭಂಡವಲವು ತುಸು ಜಾಸ್ತಿ ಬೇಕಾದರೂ, ಅದರಿಂದ ದೊರೆಯುವ ಲಾಭವೂ ಹಾಗೆಯೇ ಇದೆ, ಜನರಿಗೂ ಅದು ಇನ್ನಷ್ಟು ಪ್ರಿಯವಾದೀತು.

ಘಟ್ಟದ ಸರಹದ್ದಿನಲ್ಲಿ ಇಂಥ ಕೈಶಕ್ತಿ ಕೇಂದ್ರಗಳನ್ನ ಹೊರಡಿಸುವುದರಿಂದ—ನಮ್ಮ ಕಾಡುಗಳ ಮರಗಳ ಕೈಗಾರಿಕೆಯನ್ನು ಹೆಚ್ಚಿಸಬಹುದು ಸಾಗುವಾನಿಯ ತೋಟಗಳನ್ನು ಬೇಕಷ್ಟು ಬೆಳೆಸಬಹುದು, ಮರಕೊಯ್ಯುವ ಉದ್ಯೋಗವನ್ನು ಹೆಚ್ಚಿಸಿ, ನಮ್ಮ ಕಾಡುಗಳಿಂದ ಬಂದರುಗಳಿಗೆ ಸಾಗುವ ವ್ಯಾಪಾರವನ್ನು ಹೆಚ್ಚಿಸಬಹುದು

ಘಟ್ಟದ ಇನ್ನೊಂದು ಸಂಪತ್ತೆಂದರೆ ವಿಶೇಷವಾಗಿ ಬೆಳೆಯುತ್ತಿರುವ ಹುಲ್ಲು. ಹೊಸ ಹಾದಿಗಳನ್ನೂ ವ್ಯವಸ್ಥೆ ಮಾಡಿದರೆ—ಪ್ರತಿವರುಷ ಕಿಚ್ಚಿಗೆ ಧ್ವಂಸವಾಗುತ್ತಿರುವ ಬೆಟ್ಟದ ಸರಹದ್ದಿನ ಹುಲ್ಲನ್ನು—ಕರಾವಳಿಯ ಜನರಿಗೆ ಒದಗಿಸಿಕೊಡಲು ಬಂದೀತು ಅಳುದ್ದ ಪ್ರಮಾಣದ ಹುಲ್ಲು ಈಗ ವ್ಯರ್ಥವಾಗಿ ನಷ್ಟವಾಗುತ್ತಿದೆ ಇವುಗಳನ್ನು ಕತ್ತರಿಸಿ, ಬೆಟ್ಟಗಳಲ್ಲೇ ಮೂಟೆ ಬಿಗಿದು ಕೆಳಗೆ ಸಾಗಿಸಬಾರದೇಕೆ? ಕೆಮ್ಮಣ್ಣುಗುಂಡಿಯಲ್ಲಿ ಮಾಡಿದಂತೆ ಏರಿಯಲ್ ರೋಪವೇ—ಹಾಕಿಸಿದ್ದಲ್ಲಿ ಅದನ್ನು ಕೆಳನಾಡಿಗೆ ಮುಟ್ಟಿಸುವ ಕೆಲಸವು ತೀರ ಸುಲಭವಾದೀತು ಅನಂತರ ಬೆಟ್ಟದ ಬುಡದಿಂದ ಹುಲ್ಲನ್ನು ಕರಾವಳಿಗೆ ಸಾಗಿಸುವ ಕೆಲಸ ಇಂಥ ಯೋಚನೆಯು ಸಫಲವಾಗಲು, ಹಾಸನ, ಮಂಗಳೂರಿನಂತಹ ರೈಲ್ವೆ ಯೋಜನೆಗಳೂ ತೊಡಗಿ ಸಫಲವಾಗಬೇಕು

ಈ ಹುಲ್ಲಿನ ಸಂಗ್ರಹದಿಂದ, ಅಗ್ಗವಾದ ಶಕ್ತಿಯಿಂದ ನಮ್ಮಲ್ಲಿ ಕಾಗದದ ತಯಾರಿಯನ್ನು ಮಾಡಲು ಬಹಳ ಅನುಕೂಲವಿದೆ ನಮ್ಮ ಸರಕಾರವಾಗಲಿ, ಬೋರ್ಡಾಗಲಿ ಈ ಬಗೆಯಲ್ಲಿರುವ ನಮ್ಮ ನೈಸರ್ಗಿಕ ಸಂಪತ್ತಿನ ಒಂದು ಅಂದಾಜು ಮಾಡಿ, ಅದರ ಬೆಳವಣಿಗೆಗೆ ಏನು ಭಂಡವಳ ಬೇಕೆಂದು ನಿರ್ಣಯಿಸಿ—೧೦—೨೦ ವರುಷಗಳಿಗೆ ಹಂಚಿ ಬರುವ ಒಂದು ವಿಶಾಲ ಧೋರಣೆಯನ್ನು ತಂದು ಜಿಲ್ಲೆಯ ಉದ್ಯೋಗದ ಬೆಳವಣಿಗೆಯನ್ನು ಹೆಚ್ಚಿಸಬೇಕು. ಈ ಎಲ್ಲ ಸಾಹಸಗಳನ್ನು ವಿಚಾರಶೀಲತೆ, ಜಾಗ್ರತೆಯಿಂದ ಮುಂದರಿಸಿದರೆ—ಸರಕಾರದ ಆದಾಯವಾದರೂ ಹೆಚ್ಚದಿರಲಾರದು.

ಮೈಸೂರಿನ ಸಮಾಚಾರಗಳು.

(ನಮ್ಮ ಸ್ವಂತ ಸುದ್ದಿಗಾರರಿಂದ)

ಶ್ರೀ. ತಗಡೂರು ರಾಮಚಂದ್ರರಾಯರ ಉಪವಾಸದ ಪ್ರಕರಣ.

ತಗಡೂರರವರ ಪರಿಚಯವನ್ನು ಹೊಸದಾಗಿ ಮಾಡಿಕೊಡಬೇಕಾಗಿಲ್ಲ ಅವರು ಬಡವರಿಗಾಗಿ ಹೋರಾಡುತ್ತಿರುವವರು, ಅವರು ಬೆಂಗಳೂರಿಗೆ ಬಂದು ತಮ್ಮ ತಗಡೂರು ಕೇಂದ್ರದ ಸಾರ್ವಜನಿಕ ಕಾರ್ಯಕ್ಕಾಗಿ ಇಲ್ಲಿನ ಕೆಲವು (ಏಳು ಮಂದಿ) ಶ್ರೀಮಂತ ಕುಟುಂಬವನ್ನು ಧನಸಹಾಯ ಬೇಡಿದರು ಅವರು ಪ್ರತ್ಯಸಹಾಯದ ಭರವಸೆ ಕೊಡಲಿಲ್ಲ ತಮ್ಮ ಉದ್ಯೋಗ ಸಾಧನೆಗಾಗಿ ತಗಡೂರರವರು ಮಾರ್ಚಿ ೧೦ನೇಯ ತಾರೀಕಿನಿಂದ ೨೧ ದಿವಸಗಳ ಉಪವಾಸವನ್ನು ಕೈಗೊಂಡರು ಆದರೂ ಪ್ರಾರ್ಥಿತರಾದ ಶ್ರೀಮಂತರ ಎದೆಕರಗಲಿಲ್ಲ

ಅನೇಕರು ತಗಡೂರರವರು ಕೈಗೊಂಡಿರುವ ಮಾರ್ಗವು ಸರಿಯಲ್ಲವೆಂದು ಟೀಕೆಮಾಡತೊಡಗಿರುವರು ಶ್ರೀ ತಗಡೂರರವರು "ನನ್ನ ಉಪವಾಸಪ್ರಕರವು ತಪ್ಪೆಂದೂ, ಈ ಉದ್ದೇಶವನ್ನು ಬೇರೆ ಮಾರ್ಗದಿಂದ ಸಾಧಿಸಿಕೊಳ್ಳೋಣವೆಂದೂ ಹೇಳಿ ಕಾರ್ಯತಃ ಮಾಡುವುದಾದರೆ ಆ ಮಹನೀಯರುಗಳಿಗೆ ನಾನು ಶರಣಾಗತನಾಗಿ, ಅವರು ಹೇಳಿದಂತೆ ಮಾಡಲು ಸಿದ್ಧನಾಗಿದ್ದೇನೆ" ಎಂದು ಒಂದು ಪ್ರಾರ್ಥನೆಯನ್ನು ಹೊರಡಿಸಿದರು ಇನ್ನು ಕೆಲವು ಮುಖಂಡರುಗಳು ತಗಡೂರರವರೊಡನೆ ಸಹಾನುಭೂತಿಯನ್ನು ತೋರಿ, ಅವರಿಗೆ ಬೇಕಾಗಿರುವ ಹಣವನ್ನು ತಾವು ಸಾರ್ವಜನಿಕರಿಂದ ವಸೂಲು ಮಾಡಿಕೊಡುವುದಾಗಿ ಭರವಸೆಯಿತ್ತ ಮೇಲೆ ಶ್ರೀ ತಗಡೂರರವರು ಮಾರ್ಚಿ ೧೮ನೇ ತಾರೀಕಿನ ಸಂಜೆ ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿದರು

ಬೆಂಗಳೂರು, ೨-೪-'೩೫

ಈ ಸುದ್ದಿ ಬೆಂಗಳೂರಿನ ಪುರಪ್ರಮುಖರಲ್ಲಿ ಒಬ್ಬರಾದ ಶ್ರೀ ಸುಬ್ಬರಾಮ ಚೆಟ್ಟಿರವರು ಮಹಾತ್ಮಾಗಾಂಧಿಯವರಿಗೆ ಒಂದು ಪತ್ರ ಬರೆದರು, ಅದರಲ್ಲಿ, ಅವರು ತಗಡೂರರವರ ಉಪವಾಸದ ಕಾರಣ ವಿವರಗಳನ್ನು ತಿಳಿಸಿ, ಈ ಸಂದರ್ಭದಲ್ಲಿ ಏನುಮಾಡಬೇಕೆಂದು ಸಲಹೆ ಕೇಳಿದ್ದರು, ಮಹಾತ್ಮಾ ಗಾಂಧಿಯವರು ಅದಕ್ಕೆ ಉತ್ತರವಾಗಿ, ತಗಡೂರರವರ ಉಪವಾಸವನ್ನು ಕಂತು ಉಗ್ರವಾಗಿ ಟೀಕೆಮಾಡಿ ಖಂಡಿಸಿ ಬರೆದರು 'ಮದ್ರಾಸ್ ಮೆಯಿಲ್' ಪತ್ರಿಕೆಯ ಸುದ್ದಿಗಾರರು ಮಹಾತ್ಮಾಜೀಯವರ ಪತ್ರದ ಪದಗಳನ್ನು ಎತ್ತಿ ಬರೆದು, ತಗಡೂರರವರ ಉಪವಾಸದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಶ್ರೀ ತಗಡೂರರವರೂ 'ಮದ್ರಾಸ್ ಮೈಲ್' ಪತ್ರಿಕೆಗೆ ಉತ್ತರ ಬರೆದು ಕಳುಹಿಸಿದರು

ಪ್ರಕರಣ ಇಲ್ಲಿಗೆ ನಿಂತಿದೆ ಈಗ ಇವರು ಉದ್ದೇಶವು ಸ್ತುತ್ಯವಾದುದೆಂಬುದರಲ್ಲಿ ಸಂದೇಹವಿಲ್ಲ ಇವರ ಉದ್ದೇಶದಲ್ಲಿ ಸಹಾನುಭೂತಿ ತೋರಿ ಮುಂದೆ ಬಂದು ಅವರಿಗೆ ಜನರಿಂದ ವಸೂಲುಮಾಡಿ ಕೊಡುವ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಮಹನೀಯರ ಶ್ರದ್ಧೆಯೂ ಜನಾನುರಾಗವೂ ಮೆಚ್ಚತಕ್ಕದು ಆದರೆ ಶ್ರೀ ತಗಡೂರರವರ ಒಂದು ಮಹತ್ವ ಉದ್ದೇಶವು ನೆರವೇರಿದಂತಾಯಿತೇ? ಶ್ರೀಮಂತರ ಹೃದಯ ಕರಗಿದಂತಾಯಿತೇ? ಅವರು ಧನ್ಯ ಸಹಾಯನೀಯುವವರೆಂದು ವಾಗ್ದಾನವನ್ನಾದರೂ ಮಾಡಿದರೇ? ತಗಡೂರರವರು ಉಪವಾಸವನ್ನು ಬಿಡದೆ ಇನ್ನೂ ಒಂದೆರಡು ದಿವಸ ಮುಂದುವರಿಸಿದ್ದರೆ ಶ್ರೀಮಂತರ ಹೃದಯ ಕರಗುತ್ತಿತ್ತೇನೋ? ಅಷ್ಟಕ್ಕೂ ಆ ಮಹಾಶಯರು ಹಾಗೆ ಬರದೆ ಇದ್ದಿದ್ದರೆ ತಗಡೂರರವರು ತಮ್ಮ ಉಪವಾಸದ ಅವಧಿಯನ್ನ ಕೊನೆಮುಟ್ಟಿಸಿ ಬಿಟ್ಟಿದ್ದರೇ?

ಮೈಸೂರು ಮಹಾರಾಣಿ ಕಾಲೇಜನ್ನು ತೆಗೆಯುವರೇ?

ಮೈಸೂರಿನಲ್ಲಿರುವ ಮಹಾರಾಣಿ ಕಾಲೇಜನ್ನು ತೆಗೆದುಹಾಕಿಬಿಡಬೇಕೆಂದು ಮೈಸೂರು ವಿಶ್ವವಿದ್ಯಾಲಯದವರು ಉದ್ದೇಶಿಸಿದ್ದಾರೆ ಮಹಾರಾಣಿ ಕಾಲೇಜು ೫೦ ವರ್ಷಗಳ ಹಿಂದೆ ಸ್ಥಾಪಿತವಾಗಿ ಬಹಳ ಪುರಾತನವಾದುದೆಂದೂ ಅದರಿಂದ ರಾಜಧಾನಿಯಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಬಹಳ ಉತ್ತೇಜನ ದೊರೆತಿದೆಯೆಂದೂ ಅದ್ದರಿಂದ ಅದನ್ನು ತೆಗೆದುಹಾಕದೆ ಉಳಿಸುವ ಕೃಪೆಮಾಡಬೇಕೆಂದೂ ರಾಜಧಾನಿಯ ನಿವಾಸಿಗಳು ಶ್ರೀಮನ್ಮಹಾರಾಜರವರಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿದ್ದಾರೆ. ನೋಡಬೇಕು ಏನಾಗುತ್ತದೆಯೋ ಒಂದು ವೇಳೆ ತೆಗೆದುಹಾಕಿದರೆ ಆಕ್ಸ್ ಏನು? ಕಾಲೇಜು ವ್ಯಾಸಂಗ ಮಾಡಲಿಚ್ಛಿಸುವ ಬಾಲಕಿಯರು ಬೆಂಗಳೂರಿನಲ್ಲಿರುವ ವರೆಗಳನ್ನು ಮದುವೆಯಾದರಾಯಿತು, ಬೆಂಗಳೂರಿನ ವರಿಗೆ—ಅಳಿಯಂದಿರನ್ನು ಒದಗಿಸುವುದರೊಂದಿಗೆ ಅತ್ತೆ ಸೊಸೆಯರನ್ನು ಒದಗಿಸಬೇಕಾಗುತ್ತದೆ ಅಷ್ಟೆ!

"ಬೆಂಗಳೂರು ಗರ್ಲ್‌ಗೈಡ್"ಭವನ

ಮಾರ್ಚಿ ೨೭ನೆಯ ತಾರೀಕಿನ ದಿವಸ ಶ್ರೀಮದ್ಯುವರಾಣಿಯವರು ಈ ಭವನದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಒಂದು ವರ್ಷದ ಹಿಂದೆ ಈ ಕಟ್ಟಡದ ಶಿಲಾಪಾದಿಯನ್ನು ಶ್ರೀಮದ್ಯುವರಾಣಿಯವರೇ ಸ್ಥಾಪಿಸಿದರು ಯುವರಾಣಿಯವರು ತಮ್ಮ ಭಾಷಣದ ಕೊನೆಯಲ್ಲಿ "ಮೈಸೂರಿನ ಗರ್ಲ್‌ಗೈಡ್"ಗಳು (ಬಾಲಕಿಯರ ಸ್ಕೌಟು ದಳ) ಮುಂದೆ ಅಂತರರಾಷ್ಟ್ರೀಯ ಸೌಹಾರ್ದವನ್ನು ನೆಲೆಗೊಳಿಸುವುದರಲ್ಲಿಯೂ ಪ್ರಪಂಚದ ಶಾಂತಿಸ್ಥಾಪನೆಯಲ್ಲಿಯೂ ನೆರವಾಗಲಿ" ಎಂದು ಹಾರೈಸಿದರು

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ಟು ಅಧಿವೇಶನ.

ವಿಶ್ವವಿದ್ಯಾಲಯದ ಸೆನೆಟ್ಟಿನ ಅಧಿವೇಶನವು ಮಾರ್ಚಿ ೨೮ನೆಯ ತಾರೀಕು ವಿಶ್ವವಿದ್ಯಾಲಯದ ಸಂಘದ ಭವನದಲ್ಲಿ ವೈಸ್ ಛಾನ್ಸಲರಾದ ಡಾ। ಇ ಪಿ ಮೆಟ್‌ಕಾಫ್‌ರವರ ಅಧ್ಯಕ್ಷತೆಯಲ್ಲಿ ಸೇರಿತು.

ಪ್ರಪಂಚವನ್ನೇ ಆವರಿಸಿರುವ ಹಣಕಾಸಿನ ದುಃಸ್ಥಿತಿ ವಿಶ್ವವಿದ್ಯಾಲಯವನ್ನು ಆವರಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ ಅಧ್ಯಕ್ಷರು ಸಿನೇಟಿನ ಮುಂದಿಟ್ಟ ಆಯವ್ಯಯ ಅಂದಾಜು ಪಟ್ಟಿಯಲ್ಲಿ ೧,೩೬,೮೦೦ ರೂಪಾಯಿಗಳಷ್ಟು "ಡೆಫಿಸಿಟ್ಟು" ಇತ್ತು. ವಿಶ್ವವಿದ್ಯಾಲಯದ ವರಮಾನವನ್ನು ಹೇಗೆ ಹೆಚ್ಚಿಸಬೇಕು, ಈ ಕೊರತೆಯನ್ನು ಹೇಗೆ ಸಂಪಾದಿಸಬೇಕೆಂಬ ಬಗ್ಗೆ ದೀರ್ಘ ಚರ್ಚೆಯಾಯಿತು, ಸರಕಾರದವರನ್ನು ಹೆಚ್ಚು ಸಹಾಯಧನವನ್ನು ಕೇಳುವುದು, ಅಧ್ಯಾಪಕರ ಸಂಬಳಕ್ಕೆ ಕತ್ತರಿ ಪ್ರಯೋಗಮಾಡುವುದು "ಎಂದು ಮುಖ್ಯವಾದ ಸಲಹೆಗಳು ಬಂದುವು. ಮೊದಲನೆಯದು ಅಸಾಧ್ಯ ಎಂದು ಬಿಟ್ಟರು ಸರಕಾರದ ಸೆಕ್ರೆಟರಿಗಳು, ಎರಡನೆಯದನ್ನೂ ಆದರಿಸಬಾರದು ಎಂದು ಅಧ್ಯಾಪಕರ ಮೇಲೆ ಕನಿಕರದಿಂದ ನುಡಿದರೊಬ್ಬರು, ಅಂತೂ ವಿಶ್ವವಿದ್ಯಾಲಯಕ್ಕೆ ಬಂದಿದೆ, ಹಣದ ಮುಗ್ಗಟ್ಟು. ಇದಕ್ಕೆ ಒಂದೇ ಉಪಾಯ ಎಂದು ತೋರುತ್ತೆ, ವಿದ್ಯಾರ್ಥಿಗಳ ಫೀಜನ್ನು ಇನ್ನಷ್ಟು ಏರಿಸಿಬಿಟ್ಟರೆ ಬರಬರುತ್ತಾ ವಿದ್ಯಾರ್ಥಿಗಳ ಸಂಖ್ಯೆ ಕಡಮೆಯಾಗುತ್ತೆ, ಇದರಿಂದ ವರಮಾನ ಹೇಗೆ ಹೆಚ್ಚೀತು ಎಂದು ಕೇಳಬಹುದು. ಹೆಚ್ಚದಿದ್ದರೆ ಬೇಡ ವಿಶ್ವವಿದ್ಯಾಲಯವನ್ನೆ ಮುಚ್ಚಿಬಿಡಬಹುದೋ ಇಲ್ಲವೋ? ಆಗ ಈ ಸಮಸ್ಯೆಯೇ ಇರುವುದಿಲ್ಲ!

ಈ ಹಣಕಾಸಿನ ಮುಗ್ಗಟ್ಟಿನಲ್ಲಿ ಎಂರಾಪಗೊಳ್ಳಬಾರದೆಂದು ಒಬ್ಬಿಬ್ಬರು ಸೂಚಿಸಿದರು.

ಆಶಾವಾದಿಗಳು ಹಣಕಾಸಿನ ದುಃಸ್ಥಿತಿಯಿಂದ ಕಂಗೆಡುವುದಿಲ್ಲ, ಶ್ರೀಮಾನ್ ಎಂ ರಾಮಚಂದ್ರರಾಯರು ಆಶಾವಾದಿಗಳೆನ್ನುವುದರಲ್ಲಿ ಸಂದೇಹವಿಲ್ಲ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ—ವಿದ್ಯಾರ್ಥಿನಿಯರನ್ನು ಆದೀತೇ?—ಯುದ್ಧಶಿಕ್ಷಣ ಕೊಡಬೇಕೆಂದೂ ವ್ಯವಸಾಯ ಶಾಸ್ತ್ರದ ಡಿಪ್ಲೊಮಾ ಕೋರ್ಸ್ ಇಡಬೇಕೆಂದೂ ಎರಡು ನಿರ್ಣಯಗಳನ್ನು ಸಭೆಯ ಮುಂದಿಟ್ಟರು

ಮೊದಲನೆಯದನ್ನು ಅನುಮೋದಿಸುವವರೇ ಇರಲಿಲ್ಲವಂತೆ, ಎರಡನೆಯದು ಬಹುಮತದಿಂದ ಅಂಗೀಕಾರವಾಗದೆ ಹೋಯಿತಂತೆ' ಅಸಹಕಾರ ತತ್ತ್ವವು ಬೇರೂರುತ್ತಿರುವ ಈ ಕಾಲದಲ್ಲಿ ನಮಗೆ ಯುದ್ಧಶಿಕ್ಷಣ ಬೇಕೂ ಇಲ್ಲ ಅಂತ ಕಾಣುತ್ತೆ! ಎರಡನೆಯ ನಿರ್ಣಯವನ್ನು ಅಂಗೀಕರಿಸಿದ್ದರೆ ಚೆನ್ನಾಗಿತ್ತು, ಕಾಲೇಜುವ್ಯಾಸಂಗ ಮುಗಿಸಿ ಕೆಲಸ ಸಿಕ್ಕದೆ ಅಲೆದಾಡುವ ವಿದ್ಯಾವಂತರು ಮನೆ ಹಿತ್ತಿಲಿನಲ್ಲಿ ಏನಾದರೂ ಸ್ವಲ್ಪ ವ್ಯವಸಾಯಗಿವಸಾಯ ಮಾಡುವುದಕ್ಕೆ ಅವಕಾಶವಾಗುತ್ತಿತ್ತು

ಶಿವಮೊಗ್ಗೆಯಲ್ಲಿ ಚಿನ್ನದ ಗಣಿ

ವಿಶ್ವವಿದ್ಯಾಲಯಕ್ಕೆ ದುಡ್ಡಿಲ್ಲ ದುಡ್ಡಿಲ್ಲವೆಂದು ಸಿಡಿಮಿಡಿಗೊಳ್ಳಬೇಕೇ? ಸರಕಾರದವರು ಧಾರಾಳ ಮನಸ್ಸಿನಿಂದ ಗ್ರಾಂಟು ಹೆಚ್ಚಿಸುವುದು ತಾನೇ? ಮೈಸೂರಿನ ಭಂಡಾರಕ್ಕೆ ಏನು ಕೊರತೆ? ಶಿವಮೊಗ್ಗೆಯ ಸಮೀಪದಲ್ಲಿ ಒಂದು ಚಿನ್ನದ ಗಣಿ ಇದೆಯಂತೆ ಆದರೆ ಅದು ಹಿಂದೆ ಇದ್ದ ಗಣಿಯೇ! ಆದರೂ ಭೂಗರ್ಭದಲ್ಲಿ ಅಡಗಿರುವ ರಹಸ್ಯವನ್ನು ಕಂಡಿರುವವರಾರು? ಎಷ್ಟು ತೆಗೆದರೂ ಮುಗಿಯದಷ್ಟು ಚಿನ್ನ ದೊರೆಯಬಹುದು.

ಕೋಲಾರದ ಚಿನ್ನದ ಗಣಿಯ ಮಿ॥ ವ್ಯಾಲೆಂಟೈನ್‌ರವರು ಅಲ್ಲಿ ಹೋಗಿ ಆಗಲೆ ಪರೀಕ್ಷೆ ನಡೆಸಿದ್ದಾರೆ ಮೈಸೂರು ಸುವರ್ಣಭೂಮಿ ಆದರೂ ಮೈಸೂರಿಗೆ ದೊರೆಯುವುದು ರಾಯಲ್ಟಿ ಮಾತ್ರ

ತತ್ವಶಾಸ್ತ್ರ ಸಮ್ಮೇಳನ

ಮಾರ್ಚಿ ತಾ ೩೧ಕ್ಕೆ ಮೈಸೂರು ಟೌನ್ ಹಾಲಿನಲ್ಲಿ ನಂಜನಗೂಡು ಕರ್ನಾಟಕ ಸಂಘದವರ ಆಶ್ರಯದಲ್ಲಿ ೩ನೆಯ ತತ್ವಶಾಸ್ತ್ರದ ಸಮ್ಮೇಳನವು ನಡೆಯಿತು ಮಹಾರಾಜ ಕಾಲೇಜು ತತ್ವಶಾಸ್ತ್ರ ಪ್ರೊಫೆಸರರಾದ ಎ ಆರ್ ವಾಡಿಯಾರವರು ಆರಂಭೋತ್ಸವವನ್ನು ನೆರವೇರಿಸಿದರು ಅವರ ಭಾಷಣದ ಈ ವಾಕ್ಯವು ಮನನೀಯವಾಗಿದೆ 'ಎಲ್ಲ ಸತ್ಪುರುಷರೂ ದೇವರ ಸಾಮೀಪ್ಯವನ್ನು ಸೇರಬಲ್ಲರು. ದೇವಲೋಕವನ್ನು ಹೋಗುವವರಿಗೆ ಧರ್ಮಗುರುಗಳು ಕೈದೀಪಿಗೆಗಳಂತೆ ಆ ಲೋಕದಲ್ಲಿ ಜೊರಾಷ್ಟ್ರ ಮತದವರಾಗಲಿ, ಹಿಂದುವಾಗಲಿ, ಬೌದ್ಧನಾಗಲಿ, ಜೈನನಾಗಲಿ ಕ್ರೈಸ್ತನಾಗಲಿ ಅಥವಾ ಮಹಮ್ಮದೀಯನಾಗಲಿ ಇರುವುದಿಲ್ಲ ಅಲ್ಲಿ ಈ ಮತಮುದ್ರೆಗಳಿಗೆ ಅರ್ಥವಿಲ್ಲ ಪರಿಶುದ್ಧವಾದ ಜೀವಮುಖ್ಯ ಪರಸ್ಪರ ಪ್ರೇಮ—ಸೇವೆಗಳೇ ಆ ಮುದ್ರೆ

ಫ್ರಾನ್ಸ್

ಫ್ರಾನ್ಸ್ ಕೂಡಾ ಎದ್ದಿತು.

ಬೇರಬರಿನಲ್ಲಿ ಹೊಸ ಶಾಸನ.

ಪೆರಿಸ್, ಎಪ್ರಿಲ್ ೧.

ಫ್ರಾನ್ಸಿನ ವಿಮಾನಬಲವು ಬಹು ದುರ್ಬಲವಾಗಿದೆ. ಅವರ ಸಂಖ್ಯೆ ಏರ್ಪಡಿಸಲ್ಪಟ್ಟಿಲ್ಲ. ಇದು ದೇಶಕ್ಕೆ ಘಾತುಕವಾದ ವಿಷಯ. ಆದುದರಿಂದ, ಇನ್ನು ಮುಂದಕ್ಕೆ ವಿಮಾನ ಒಪ್ಪಂದವನ್ನು ಆಧರಿಸಿ [illegible] ಬೇಕಾಗಿದೆ. ತಾವು ತಮ್ಮ ಬಲವನ್ನು ಹೆಚ್ಚಿಸಬೇಕೆಂದು ಬೇರೆ [illegible] ನಿರ್ಧರಿಸಿದೆ, [illegible] ಅಂತ್ಯದೊಳಗೆ ಜರ್ಮನಿಯಷ್ಟೇ ಶಕ್ತಿಯು ತಮಗೆ ಬೇಕೆಂದು ಸಂಕಲ್ಪ ಮಾಗಿದೆ,

ಪೆರಿಸ್

ವೈಮಾನಿಕನ ಮರಣ.

ಕೆಲವರು ಜಖಂಗೊಂಡರು!

ಪೆರಿಸ್, ಎಪ್ರಿಲ್, ೧.

ಫ್ರಾನ್ಸಿನ ಪ್ರಖ್ಯಾತ ವೈಮಾನಿಕನಾದ [illegible] ಎಂಬವನು ಪೆರಿಸ್ಸಿನಿಂದ ಲಂಡನಿಗೆ ವಿಮಾನ ಮೂಲಕ ಹಾರಿ ಹೋಗುತ್ತಿದ್ದಾಗ ವಿಮಾನವು ನಡುವೆ ಆಕಾಶದಲ್ಲಿ ಹಾಳಾಗಿ, ಅವನು ತಟ್ಟನೆ ಕೆಳಗಿಳಿಯ ಬೇಕಾಯಿತು. ವಿಮಾನವು ಭೂಮಿಗೆ ಬಿದ್ದು ಅದರ [illegible] ಒಡೆದು ಅವನು ಮೃತನಾದನು. [illegible] ಅಧಿಕಾರಿಗಳು ಜಖಂಗೊಂಡು ಬದುಕಿದರು. ಮೃತ ವೈಮಾನಿಕನು ಪೆರಿಸ್ ಲಂಡನ್‌ಗಳಿಗೆ ಮೊದಲು [illegible] ಹಾರಿದವನು.

ಇಂಗ್ಲಾಂಡು.

ಸೈನಿಕರು ಮೆಜಿಸ್ಟ್ರೇಟರಾದುದು ಏಕೆ?

ಲಂಡನ್, ಎಪ್ರಿಲ್ ೧

ಕೊಮನ್ಸ್ ಸಭೆಯಲ್ಲಿ ಮಿ। ಎನ್ನೆಸ್ಟ್ [illegible] ಎಂಬವರು ಒಂದು ಪ್ರಶ್ನೆಯಾಡುತ್ತಾ ಹಿಂದೂದೇಶದಲ್ಲಿ ಅದರಲ್ಲೂ ಬಂಗಾಳದಲ್ಲಿ ಐ. ಸಿ. ಎಸ್. ಪದವೀಧರರನ್ನು ಬಿಟ್ಟು ಮಿಲಿಟರಿ ಅಧಿಕಾರಿಗಳನ್ನು ಎಡಿಶನಲ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರನ್ನಾಗಿ ನೇಮಕ ಮಾಡಿದುದು ಏಕೆ? ಎಂದು ಕೇಳಿದಾಗ ಸರಕಾರವು "ಬಂಗಾಳದಲ್ಲಿ ರಾಜದ್ರೋಹಿಗಳ ಸಂಖ್ಯೆ ಹೆಚ್ಚಿದೆ. ಅವರನ್ನು ಅಡಗಿಸುವುದಕ್ಕಾಗಿ ಅಲ್ಲಿಯ ಸ್ಥಿತಿಗತಿಗಳನ್ನು ತಿಳಿದಿದ್ದವರೇ ಅಗತ್ಯ. ಅದಕ್ಕಾಗಿ ಸೈನ್ಯಾಧಿಕಾರಿಗಳನ್ನು ನೇಮಿಸಲಾಯಿತು." ಎಂದಿತು.

ಜಿನೆವಾ

ಎಬಿಸೀನಿಯಾ ಇಟಲಿಗಳೊಳಗಿನ ಹೆಣಗಾಟ.

ಲೀಗ್ ಒಫ್ ನೇಶನ್ಸ್ ಕೈಯಿಂದಲಿದೆ.

ಜಿನೆವಾ ಎಪ್ರಿಲ್, ೧.

ಎಬಿಸೀನಿಯಾ ಇಟಲಿಗಳ ಸೈನ್ಯಗಳು ಯುದ್ಧಕ್ಕೆ ಸಿದ್ಧವಾಗುತ್ತಿವೆ. ಎಬಿಸೀನಿಯಾ ಸರಕಾರವು ಜನಾಂಗ ಸಭೆಗೊಂದು ಪತ್ರ ಬರೆದು "ನ್ಯಾಯ ವಿಚಾರಣಾ ಅಥವಾ ಒಪ್ಪಂದವನ್ನು ಸ್ವೀಕರಿಸದಿದ್ದರೆ ನಾವು ಸುಮ್ಮನಿರುತ್ತೇವೆ. ಇಟಲಿಯವರು ಸುಮ್ಮನಿದ್ದರೆ [illegible] ಇಂಗೆಳೆಗೆ ಈ ಕಾರ್ಯವು ನೆರವೇರಲಿ" ಎಂದಿದೆ. ಜನಾಂಗ ಸಭೆಯು ಈ ವಿಚಾರವಾಗಿ ಯೋಚಿಸುತ್ತಿದೆ.

Irish Free State

Hospital's Sweeptake

DERBY.

Drawing Date—3—6—1935.
Last date for Air Mail.
13—5—1935,
Price 10 Shillings or Rs. 6-12-0
each or £2-10-0 or Rs. 33-12-0
for 6 tickets.

Tel:—S. DHAKAPPA, Sirsi, N. K.

S. L. DHAKAPPA
Authorized Agent,
Sirsi, N. KANARA.

ಶಾಲಾ ಪಠ್ಯ ಪುಸ್ತಕಗಳು.

ಸರಕಾರದ ಸೂಚನೆ.

ಮದ್ರಾಸು ಸರಕಾರವು ಶಾಲಾ ಪಠ್ಯಪುಸ್ತಕಗಳ ಕುರಿತು ಹೀಗೆ ಪ್ರಕಟಿಸಿರುತ್ತದೆ. ಶಾಲಾ ಪಠ್ಯ ಪುಸ್ತಕಗಳಲ್ಲಿ ಪದೇ ಪದೇ ಆಗುತ್ತಿರುವ ಬದಲಾವಣೆಗಳ ಕುರಿತು ಅನೇಕ ಸಲ ಸರಕಾರಕ್ಕೆ ಮನವಿಗಳು ಬಂದಿವೆ. ಈಗ ತಿಳಿಸುವುದೇನೆಂದರೆ, ಪಠ್ಯಪುಸ್ತಕಗಳನ್ನು ಶಾಲೆಯು ಒಮ್ಮೆ ಪರಿಗ್ರಹಿಸಿದ ಮೇಲೆ ಐದು ವರ್ಷಗಳೊಳಗೆ ಅವುಗಳನ್ನು ಬದಲಿಸಿ ಬೇರೆ ಪುಸ್ತಕಗಳನ್ನು [illegible] ಹುಡುಗರ ಶಾಲೆಗಳಾದರೆ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರ, ಹುಡುಗಿಯರ ಶಾಲೆಗಳಾದರೆ [illegible] ಇನ್ಸ್‌ಪೆಕ್ಟರೆಸ್ [illegible] ವಿನಾ ಅವುಗಳನ್ನು ಬದಲಿಸಬಾರದು. ಈಗ ಉಪಯೋಗದಲ್ಲಿರುವ ಪುಸ್ತಕಗಳ ಮಟ್ಟಿಗೆ ಅವುಗಳು ಕೊನೆಯದಾಗಿ ಶಾಲೆಗಳಿಂದ ಪರಿಗ್ರಹಿತವಾದಂದಿನಿಂದ ಮೊದಲ್ಗೊಂಡು ಐದು ವರ್ಷಗಳ ಅವಧಿಯನ್ನು [illegible] ಈ ಅವ್ವನೆಯು ಎಲ್ಲಾ [illegible] ಶಾಲೆಗಳಿಗೆ ಅನ್ವಯಿಸುತ್ತದೆ. [illegible] ಅನ್ವಯಿಸುತ್ತದೆ.

ಟೆಕ್ಸ್ಟ್ ಬುಕ ಕಮಿಟಿಯವರು ಶಿಫಾರಸು ಮಾಡಿದ ಪುಸ್ತಕಗಳ ಪಟ್ಟಿಯಿಂದಲೇ ಪಾಠಪುಸ್ತಕಗಳನ್ನು ಆರಿಸಬೇಕು. ಡಿಸ್ಟ್ರಿಕ್ಟ್ ಬೋರ್ಡ [illegible] ಶಾಲೆಗಳ ಮಟ್ಟಿಗೆ [illegible] ವನ್ನು ಕೊಡಲಾಗಿದೆ. ಮುನಿಸಿಪಲ್ ಶಾಲೆಗಳ ಮಟ್ಟಿಗೆ ಚೆಯರ್‌ಮನರು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರ ಮತ್ತು ಶಾಲಾ ಇನ್ಸ್‌ಪೆಕ್ಟರರ ಶಿಫಾರಸು ಮೇರೆಗೆ ಪುಸ್ತಕಗಳನ್ನು ಆರಿಸಬೇಕು.

ಸಂಗೀತ ವಿದ್ಯೆಗೆ ಪ್ರಾಶಸ್ತ್ಯ ಕೊಡಬೇಕು

ಮಾರ್ಚಿ ೧೭ನೆಯ ತಾರೀಕಿನ ದಿನ ಮೈಸೂರಿನಲ್ಲಿ ತ್ಯಾಗರಾಜ ಜಯಂತ್ಯೋತ್ಸವವು ನೆರವೇರಿತು. ಆ ಸಂದರ್ಭದಲ್ಲಿ ಸಂಗೀತ ಸಮ್ಮೇಳನವೊಂದು ಕೂಡಿತ್ತು. ಸರ್ ಸಿ. ವಿ. ರಾಮನ್ ಇವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು. ಅವರು ತಮ್ಮ ಭಾವಪೂರಿತವಾದ ಮಾಸ್ಮರಣೀಯವಾದ ಭಾಷಣದಲ್ಲಿ ಸಂಗೀತ

ಸರ್ ಸಿ. ವಿ. ರಾಮನ ರವರು.

ವಿದ್ಯೆಯನ್ನು ಪ್ರಶಂಸಿಸಿ ಅದರ ಆವಶ್ಯಕತೆಯನ್ನು ಕುರಿತು ಪ್ರಸ್ತಾಪಿಸಿದರು. ಸ್ಕೂಲು ಕಾಲೇಜುಗಳ ವಿದ್ಯಾಭ್ಯಾಸಕ್ರಮದಲ್ಲಿ ಸಂಗೀತಕ್ಕೆ ಸ್ಥಾನವಿರಬೇಕೆಂದು ಸೂಚಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಗೀತ ಶಾಸ್ತ್ರಾಭ್ಯಾಸಕ್ಕೆ ಅವಕಾಶ ಕಲ್ಪಿಸುವಂತೆ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಬೇಡಿಕೊಳ್ಳತಕ್ಕದ್ದೆಂದು ನಿರ್ಣಯವೂ ಅಂಗೀಕೃತವಾಯಿತು.

ಮೈಸೂರು ವಕೀಲರುಗಳ ಪರಿಷತ್ತು

ಒಂದನ್ನು ಚಿಕ್ಕಮಗಳೂರಲ್ಲಿ ಇದೇ ತಾ. ೬, ೭ರಲ್ಲಿ ಜರಗಿಸುವುದಕ್ಕಾಗಿ ಏರ್ಪಾಡುಗಳು ನಡೆದಿವೆ. ಅಧ್ಯಕ್ಷರನ್ನಾಗಿ ಶ್ರೀ। ಸಂಪಿಗೆ ವೆಂಕಟಪತಯ್ಯನವರು ಆರಿಸಲ್ಪಟ್ಟಿರುವರು. ಪ್ರತಿನಿಧಿಗಳು ಕಡೂರು ಮೂರ್ಗವಾಗಿಯೂ ಮೈಸೂರು ಅರಸೀಕೆರೆ ಸೆಕ್ಷನ್ [illegible] ಮೂರ್ಗವಾಗಿಯೂ ಹೋಗುವ ವ್ಯವಸ್ಥೆಯಿದೆ. ಪ್ರತಿನಿಧಿಗಳಿಗೆ [illegible] ರಿಯಾಯತಿಯನ್ನು [illegible] ಕಂಪೆನಿಗಳು ಒಪ್ಪಿವೆ. ಶ್ರೀ। ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂ. ಎ. ರವರು ಈ ಸಮಯದಲ್ಲಿ ಸ್ವದೇಶೀ ಪ್ರದರ್ಶನವೊಂದನ್ನು ತೆರೆಯಲಿರುವರು.

ಗ್ರೀಸ್.

ಗ್ರೀಕ್ ಸಿನೆಟು ರದ್ದಾಯಿತು.

ಎಥೆನ್ಸ್, ಎಪ್ರಿಲ್, ೧

ಸಾರ್ವಜನಿಕರಿಗೆ ಅನೇಕ ಸಾರ್ವಜನಿಕ ಸಂಸ್ಥೆಗಳ ಮೇಲಿರುವ ವಿಶ್ವಾಸವನ್ನು ಕಡಿದಿಕ್ಕುವ 'ಯುತ್ನ ದಂಗೆ' ಎಂಬ ದೂಷಣೆಯ ಮೇಲೆ ಗ್ರೀಕ್ ಸರಕಾರವು ಗ್ರೀಕ್ ಸಿನೆಟನ್ನೇ ರದ್ದುಗೊಳಿಸಿದೆ.

ಸ್ಪೈನ್

ಸ್ಪೈನ್‌ನಲ್ಲಿ ರಾಜಕೀಯ ಅಂದೋಲನ.

ಮಡ್ರಿಡ್, ಎಪ್ರಿಲ್, ೧.

ಸ್ಪೈನ್‌ನಲ್ಲಿ ಭಯಂಕರ ಪರಿಸ್ಥಿತಿಯು ತಲೆದೋರಿದೆ. ಅರಾಜಕ ಪ್ರವೃತ್ತಿಯು ಹೆಚ್ಚುತ್ತಿದೆ. ಕೆಬಿನೆಟನ್ನು [illegible] ನಾದ ಸೆಣರಿಯಾರ್ ಮಾರ್ಟಿನೆಜ್ [illegible] ವನು ಮಂತ್ರಿಮಂಡಲದ ರಚನೆಗಾಗಿ ಯತ್ನಿಸುತ್ತಿರುವನು. ಅಲ್ಲಿಯ ಮಂತ್ರಿಯ ಬರಿಷ್ಕನು ಈ ಕಾರ್ಯಕ್ಕೆ ತಾನು ಸಿದ್ಧನಿಲ್ಲವೆಂದಿರುವನು.

ಡಾ। ಹರ್ಡೀಕರರು.



ಪ್ರಾಂತಿಕ ರಾಜಕೀಯ ಪರಿಷತ್ತಿನ ಕುರಿತು ದಕ್ಷಿಣ ಕನ್ನಡದಲ್ಲಿ ಪ್ರಚಾರಕಾರ್ಯ ನಡೆಸಲು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಂದ ಕಳುಹಿಸಲ್ಪಟ್ಟಿರ ಡಾಕ್ಟರ್ ಹರ್ಡೀಕರರು ಕಳೆದ ಮಂಗಳವಾರ ಸಂಜೆ ಚಿಕ್ಕಮಗಳೂರ ಮಾರ್ಗವಾಗಿ ಮಂಗಳೂರಿಗೆ [illegible] ಕಾಂಗ್ರೆಸ್ ಕೆಲಸಗಾರರು ಕೆಲವರನ್ನು ಎದುರುಗೊಂಡರು. ಶ್ರೀಮತಿ ಕಮಲಾದೇವಿಯವರ ಮನೆಗೆ ಕರೆದೊಯ್ದರು. ಅಲ್ಲಿ ಜಿಲ್ಲೆಯ ಸಂಚಾರ ಕಾರ್ಯಕ್ರಮದ ಕುರಿತು ಚರ್ಚೆ ನಡೆಯಿತು. ಡಾಕ್ಟರ್ ಹರ್ಡೀಕರ್ ಶ್ರೀಮತಿ ಕಮಲಾದೇವಿಯವರೇ ಮೊದಲಾದವರು ಬರುವ ವಾರ್ತೆಯಲ್ಲಿ ಜಿಲ್ಲೆಯಲ್ಲೆಲ್ಲಾ ಸಂಚರಿಸಲಿರುವರೆಂದು ತಿಳಿದುಬರುತ್ತದೆ

ಇಟೆಲಿ

ಯುದ್ಧದ ಕಾರ್ಮೋಡ

ಪೋಪ್ ಸಾಹೇಬರ ಎಚ್ಚರಿಕೆ.

ರೋಮ್ ಎಪ್ರಿಲ್ ೨

ಪೋಪ್ ಸಾಹೇಬರು ಚಕ್ರವರ್ತಿಯವರಿಗೆ [illegible] ಸಂದೇಶವೊಂದನ್ನು ಕಳುಹಿಸಲಿರುವರು. ಸಮಾರಂಭಕ್ಕೆ ತನ್ನ ಪ್ರತಿನಿಧಿ ಮಂಡಳವನ್ನು ಅವರು ಲಂಡನಿಗೆ ಕಳುಹಿಸುವುದಿಲ್ಲ. ಪೋಪ್ ಸಾಹೇಬರು ಯುವ್ವಾತುರರಾಗಿರುವ ಜನಾಂಗಗಳ ವರ್ತನೆಯನ್ನು ಖಂಡಿಸಿ ಜಗತ್ತು ಕಳೆದ ಯುದ್ಧದ ಆಘಾತದಿಂದೇಳಲಿಲ್ಲ. ಇನ್ನೊಂದು ಯುದ್ಧವಾದರೆ ಮಹದಾಪತ್ತುಂಟಾಗುವುದು ಎಂದು ಎಚ್ಚರಿಸಿರುವರು.

ಲಂಡನ್.

ಪಾರ್ಲಿಮೆಂಟ್ ಮೆಂಬರರ ಮಗನ ದ್ರೋಹ.

ಪ್ರಣಯಿನಿಯ ಕೊಲೆಗಾಗಿ ಯತ್ನ.

ಪಾರ್ಲಿಮೆಂಟ್ ಮೆಂಬರರಾದ ಹೋಮರ್ ರಸೆಲ್ ಎಂಬವರ ಪುತ್ರ ಜೋನ್ ರಸೆಲ್ ಎಂಬವನು ಮಿಸ್ [illegible] ಹರ್ವಾರ್ಡ್ [illegible] ಎಂಬ ತರುಣಿ

ಯನ್ನು ರಹಸ್ಯವಾಗಿ ವಿವಾಹವಾಗಿ, ಅವಳು ಗರ್ಭಧರಿಸಿದುದನ್ನು ಕಂಡು ಅವಳನ್ನು ಥ್ರೆಂಟ್ ನದಿಗೆ ದೂಡಿ ಅವಳ ಪ್ರಾಣಾಪಹರಣಕ್ಕೆ ಯತ್ನಿಸಿದನೆಂದು ಅಪರಾಧಿತನಾಗಿ ಶಿಕ್ಷೆಗೆ ಗುರಿಯಾಗಿದ್ದಾನೆ. "ನನ್ನನ್ನು ಕೊಂದುಬಿಡು ಎಂದು ಅವಳು ಹೇಳಿದುದರಿಂದ ನಾನು ಅವಳನ್ನು ಹೊಳೆಗೆ ದೂಡಿದೆ" ಎಂದು ಅವನ ಹೇಳಿಕೆ. ಕಡೆಯವರೆಗೂ ಅವಳು ಅವನನ್ನೇ ಪ್ರೀತಿಸುತ್ತಾಳೆ.

ತಾಯಿ ಮಕ್ಕಳನ್ನು ಕೊಂದಳು.

ಒಬ್ಬ ಹೆಂಗಸಿನ ದಸ್ತಗಿರಿ.

ಬೆಂಗಳೂರು, ಎಪ್ರಿಲ್, ೧,

ಪೊನ್ನೆ ಕಸಬಾರ ಮಧ್ಯಾಹ್ನ ಅಕ್ಕಿಪೇಟೆ ಕೊಟ್ಟಿಗೆ ಪಾಳ್ಯದ [illegible] ಗಲ್ಲಿಯಲ್ಲಿ ಒಂದು ದುರ್ಘಟನೆಯು ನಡೆಯಿತು! ಆ ದುರ್ಘಟನೆಯ ವಿವರಗಳು ಹೀಗಿರುವುವು.

ಒಂದು ಲಿಂಗಾಯತ ಜಾತಿಯ ಸಂಸಾರ ಮನೆಯಲ್ಲಿ ಗಂಡ, ಹೆಂಡತಿ, ನಾಲ್ಕು ಮಕ್ಕಳು ಮತ್ತು ಗಂಡನ ತಾಯಿ, ಹೆಂಡತಿಯಾದ ದೇವಮ್ಮ ಎಂಬಾಕೆಗೆ [illegible] ವರ್ಷ ವಯಸ್ಸು. ಆಕೆಗೆ ನಾಲ್ಕು ಮಕ್ಕಳು. ಆಗಾಗ್ಗೆ ಮನೆಗೆ ಒಂದು ಪಾಲು, ಬಸ್ಸು ವಾಸ [illegible] ಮನೆಯಲ್ಲಿ ಗಂಡನು ಇರಲಿಲ್ಲ. ಅತ್ತೆಯೂ ಎಲ್ಲಿಯೋ ಹೋಗಿದ್ದಳು. ಈ ಸಂದರ್ಭದಲ್ಲಿ ದೇವಮ್ಮನು ತನ್ನ ಎರಡು ಸೊಂಟದಲ್ಲಿ ಎರಡು ಮಕ್ಕಳನ್ನು ಎತ್ತಿಕೊಂಡು ಮನೆಯ ಹತ್ತಿರವಿದ್ದ ಬಾವಿಗೆ [illegible] ಹೋಗಿ [illegible] ಈ ದೃಶ್ಯವನ್ನು ಕೇಳಿ ಅಕ್ಕ ಪಕ್ಕದವರು [illegible] ಪೋಲೀಸರು ದೇವಮ್ಮನನ್ನು [illegible] ದೇವಮ್ಮನ ಪ್ರಾಣಹಾನಿಯಾಗಲಿಲ್ಲ. ಆದರೆ ಮಕ್ಕಳೆರಡೂ ಮರಣಹೊಂದಿದುವು. ಈ ಮಕ್ಕಳಲ್ಲಿ ಮಗನಿಗೆ ೬ ವರ್ಷವೂ, ಮಗಳಿಗೆ ೪ ವರ್ಷ ಪ್ರಾಯ.

Latest News.

[illegible] ಪೋಲೀಸ [illegible] ಹಾಕಿ ಕೊಂದು, [illegible] ಫೈರಿಯೊಡನೆ [illegible]

[illegible] ಆಂಗ್ಲರ [illegible] ಹೊರಟಿದ್ದ [illegible] ಮಾಡಿ [illegible] ಬಿದ್ದನು.

[illegible] ಪ್ರಾಂತ್ಯಗಳಲ್ಲಿ [illegible] ಜನರಿಗೆ [illegible] ಬೋಧಿಸುತ್ತಿದ್ದರು.

ಪೆರಿಸ್, ಎಪ್ರಿಲ್ ೪

ಫ್ರಾನ್ಸಿನ ಯುದ್ಧಮಂತ್ರಿಯಾದ [illegible] ನರು [illegible] ಭಾಷಣ ಮಾಡುತ್ತಾ, ಫ್ರಾನ್ಸಿನ [illegible] ತಯಾರಿ [illegible] ಜರ್ಮನಿಯ [illegible] ಹೆಚ್ಚುವುದು [illegible] ದಿವಸಗಳಲ್ಲಿ [illegible] ನಾವು ನಮ್ಮನ್ನು [illegible] ಪೈಕಿ [illegible] ಯುದ್ಧ [illegible] ೩೦೦ ವಿಮಾನಗಳನ್ನು [illegible] ವಿಮಾನದಳಗಳನ್ನು ನಾವು [illegible] ಸಿದ್ಧವಾಗಿದ [illegible] ಎಂದರು. [illegible] ದೇಶವು ಸ್ವತಃ [illegible] ಎಂದೇ ಫ್ರಾನ್ಸಿನ ಮಂತ್ರಿಯವರ ಹೇಳಿಕೆ [illegible] ರಕ್ಷಣ ಯೋಜನೆಗಳನ್ನು ನಾವು [illegible] ೧೦೦,೦೦೦,೦೦೦ ಫ್ರಾಂಕುಗಳು ನಮ್ಮ ಕೈಯಲ್ಲಿವೆ. ಅವುಗಳನ್ನು ವೆಚ್ಚಮಾಡಿ ನಾವು ಬದುಕಬೇಕು" ಎಂದರು.

ಮಂಗಳೂರು.

ತಾ ೨೭—೩—೧೯೩೫ರಲ್ಲಿ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿಯವರು ಬೆಳ್ತಂಗಡಿಗೆ ಹೋಗಿದ್ದು, ಶ್ರೀಯುತ ವಿದ್ವಾನ್ ಪಿ. ಎ. ಅಮ್ಮಂಣಾಯರೊಡನೆ, ಶ್ರೀ ಎಸ್. ಕೆ. ಭಟರವರೊಡನೆ, ತಂಜು ಮೂಡಬಿದ್ರಿ, ಮರು ದಿನ ಬೆಳಿಗ್ಗೆ ೧೦ ಘಂಟೆಗೆ ಬಿಲ್ಲವ ಲೈಬ್ರರಿ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿದ್ದರು. ಅಲ್ಲಿ ಕಲಿಯುವ ೫ ಹರಿಜನ ಹುಡುಗರಿಗೆ ಆ ಊರ ಪಟೇಲ್ ಯವರಾಜ ಹೆಗ್ಗಡೆಯವರಿಂದ ಒಬ್ಬೊಬ್ಬನಿಗೆ ಒಂದೊಂದು ಅಂಗಿ, ಇಜಾರು, ಟೊಪ್ಪಿಯಂತೆ ಕೊಡಿಸಿದ್ದರು. ೩ ಮಂದಿ ಹುಡುಗಿಯರಿಗೆ ಬೇಕಾದ ವಸ್ತ್ರವನ್ನು ಕೂಡಲೇ ಕಳುಹಿಸಿ ಕೊಡುವುದಾಗಿಯೂ ಹೇಳಿದ್ದಾರೆ. ಈ ಬ ಮಕ್ಕಳ ಉಡುಪಿಗೆ ತಗಲುವ ತಗಲುವ ಖರ್ಚಿನ ಅರ್ಧ ಐವೇಜು ರೂ ೪ ಅಲ್ಲಿಯೇ ವಸೂಲಾಗಿತ್ತು. ಕಾರ್ಯದರ್ಶಿಯವರು ಈ ಹೊತ್ತು ಫಲಿಮಾರಿಗೆ ಹೊರಟಿರುತ್ತಾರೆ.

ಮಂಗಳೂರಿನಲ್ಲಿಯೂ ಜಿಲ್ಲೆಯ ಇನ್ನೂ ಇತರ ಸ್ಥಳಗಳಲ್ಲೂ ಕೆಲವು ಅವಿದ್ಯಾವಿದರು ಡಿಪ್ರೆಸ್ಡ್ ಕ್ಲಾಸಸ್ ಮಿಶನಿನ ಹೆಸರಿನಲ್ಲಿ ಅಧಿಕಾರಪತ್ರವಿಲ್ಲದೆ ಹಣಸಂಗ್ರಹ ಮಾಡುತ್ತಲಿದ್ದಾರೆಂಬುದು ನಮ್ಮ ತಿಳುವಳಿಕೆಗೆ ಬಂದಿದೆ. ಮಿಶನಿನಿಂದ ಬರಹ ಮೂಲಕ ಅಧಿಕಾರ ಹೊಂದಿ ಬರುವ ಗೃಹಸ್ಥರ ಕೂಡೆ ಅಥವಾ ಬರಹಮೂಲಕ ಅಧಿಕಾರ ಪತ್ರವಿರುವ ಬಿಲ್‌ಕಲೆಕ್ಟರನ ಮೂಲಕ ಮಾತ್ರವೇ ಮಿಶನಿನ ಬಗ್ಗೆ ತಮ್ಮ ಧನಸಹಾಯವನ್ನು ಮಾಡಬೇಕಾಗಿ ವಿನಂತಿ. ಮಿಶನಿನ ಬಗ್ಗೆ ಕೊಡುವ ಅತೀ ಚಿಕ್ಕ ಮೊಬಲಗಿಗೆ ಕೂಡ ಛಾಪಾ ರಶೀದಿಯನ್ನು ಕೊಡುವ ನಿಯಮವನ್ನು ಮುಂಚಿನಿಂದಲೂ ಅನುಸರಿಸಿಬರುತ್ತೇವೆ. ಪ್ರತಿ ತಿಂಗಳಲ್ಲಿ ವಸೂಲಾಗುವ ವಂತಿಗೆಗಳ ಮೊತ್ತಕ್ಕೆ ಒಂದು ತಿಂಗಳ ವಂತಿಗೆ ಬಾಬ್ತು ರಶೀದಿಯನ್ನು ಮರುತಿಂಗಳ ವಂತಿಗೆ ವಸೂಲಿಗೆ ಹೋಗುವಾಗ ಬಿಲ್‌ಕಲೆಕ್ಟರನು ಚಂದಾದಾರರಿಗೆ ಕೊಡುವ ಏರ್ಪಾಡಿದೆ. ಏಕಗಂಟಿನಿಂದ್ಲ ಕೊಡುವ ಧನಸಹಾಯಕ್ಕೆ ಕೂಡಲೇ ರಶೀದಿ ಕೊಡಲ್ಪಡುತ್ತದೆಂದು ಡಿ ಸಿ ಮಿಶ್ಯನಿನ ಅಧಿಕಾರಸ್ಥರೊಬ್ಬರು ತಿಳಿಸುತ್ತಾರೆ.

ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಳಿಯವರು ತಮ್ಮ ಸತ್ಯಸಂಕಲ್ಪ, ಯೇಸುಕ್ರಿಸ್ತ, ಭಸ್ಮಾಸುರ ಮೋಹಿನಿ, ಉನ್ಮತ್ತ ಹರಿಕುಮಾರ ಮುಂತಾದ ಹೊಸ ನಾಟಕಗಳನ್ನು ಎಪ್ರಿಲ್ ತಿಂಗಳ ಆಖೈರಿಗೆ ಮಂಗಳೂರಿನ ಹಿಂದೂಸ್ತಾನ ಸಿನೆಮಾಮಂದಿರದಲ್ಲಿ ಜನಮನೋರಂಜಕವಾಗುವಂತೆ ಅಭಿನಯಿಸಲಿಕ್ಕಿರುವರು.

ಕದ್ರಿ ಶೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘ ಮಂಗಳೂರು—ಇದರ ಪ್ರಥಮ ವಾರ್ಷಿಕೋತ್ಸವವು ಮಂಗಳೂರು ಬಿ ಇ ಎಂ ಹೈಸ್ಕೂಲಿನ ಕರ್ನಾಟಕ ಪಂಡಿತರಾದ ಶ್ರೀಮಾನ್ ರಾಮಶರ್ಮ ಮಹೋಪಾಧ್ಯಾಯ ಇವರ ಅಧ್ಯಕ್ಷತೆಯಲ್ಲಿ ಕದ್ರಿ ದೇವಸ್ಥಾನದ ರಾಜಾಂಗಣದಲ್ಲಿ ಇದೇ ಎಪ್ರಿಲ್ ೩೦, ೧೧ನೇ ಗುರುವಾರ ರಾತ್ರಿ ೯ ಘಂಟೆಗೆ ಸರಿಯಾಗಿ ದಕ್ಷಿಣ ಕನ್ನಡದಲ್ಲಿ ಪ್ರಖ್ಯಾತರಾದ ಯಕ್ಷಗಾನಾಭಿಜ್ಞರಿಂದ "ದುರ್ಯೋಧನನ ಘೋಷ ಯಾತ್ರೆ" ಎಂಬ ಪ್ರಸಂಗದ ಯಕ್ಷಗಾನ ಕಾಲಕ್ಷೇಪದೊಡನೆ ಜರಗಲಿರುವುದು. ಯಕ್ಷಗಾನಾಭಿಮಾನಿಗಳೆಲ್ಲರಿಗೂ ಸ್ವಾಗತವಿದೆ.

ಇದೇ ಕಳೆದ ತಾ ೩೦ ೩–೩೫ನೇ ಶನಿವಾರ ರಾತ್ರಿ ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದ ಕಡೆಯ ಬಳಿಯಲ್ಲಿ ಒಂದು ಯಕ್ಷಗಾನ ಸಮಾರಂಭವು ಬಹು ವಿಜೃಂಭಣೆಯಿಂದ ಜರಗಿತು. ಪ್ರಸಂಗ ಕುಮಾರ ವಿಜಯ.

ಅಮ್ಮೆಂಬಳ ಸುಬ್ಬರಾವ್ ಮೆಮೋರಿಯಲ್ ಫಂಡಿಗೆ ಧನಸಹಾಯ ಮಾಡಿದವರ ನಾಲ್ಕನೆಯ ಪಟ್ಟೀ—ಅರ್ಕುಳ ವಾಸುದೇವರಾವ್, ಫೌಂಡೇಶನ್ ಟೀಚರ್ ರೂ ೧೦೦, ದಿವಂಗತ ಕುಂದಿ ಸರ್ವೋತ್ತಮ ಕಮ್ತಿಯವರ ಸ್ಮಾರಕಾರ್ಥವಾಗಿ ಅವರ ಧರ್ಮಪತ್ನಿ ನೇತ್ರಾವತಿ ಯಾನೆ ಸತ್ಯಭಾಮಮ್ಮ ರೂ ೧೦೦, ಮಂಗಳೂರು ತಿಮ್ಮ ಪೈಯವರ ಸ್ಮಾರಕಾರ್ಥ ಗೋವಿಂದ ಪೈ ಮತ್ತು ಸಹೋದರರು ರೂ ೧೦೦ ಹಾರಾಡಿ ಕೇಶವ ಪೈ, ಬಿ. ಎ., ಬಿ ಎಲ್, ಇವರ ಸ್ಮಾರಕಾರ್ಥ ಯು ಕೆ ಭುಜಂಗನಾಯಕರು ರೂ ೧೦೦, ರಾವ್‌ಬಹದ್ದೂರ್ ಎಂ. ಕೇಶವ ಪೈ ಒ ಬಿ ಇ. ಎಂ. ಡಿ. (ಮೂರನೆಯ ಕಂತು) ರೂ ೧೦೦, ದಿವಂಗತ ಕೊಟ್ಟಿಕಾರ್ ಸುಬ್ರಾಯ ಕಾಮತರ ಸ್ಮಾರಕಾರ್ಥ ಮೆಸರ್ಸ್ ಕೊಟ್ಟಿಕಾರ್ ಬ್ರದರ್ಸ್ ರೂ ೧೦೦, ಸೋಣ ಮಂಜುನಾಥ ಕಾಮತರ ಸ್ಮಾರಕಾರ್ಥ ಕುಂದಾಪುರ ಕಾಮತ್ ಬ್ರದರ್ಸ್ ರೂ. ೧೦೫, ಶ್ರೀಮತಿ ಭವಾನಿಬಾಯಿ ಕಾಮತರ ಸ್ಮಾರಕಾರ್ಥ ಡಾ। ಎಂ. ವಿ. ಕಾಮತ್ ರೂ. ೧೦೫, ಉಳ್ಳಾಲ ಶ್ರೀನಿವಾಸ ಶೆಣೆಯವರ ಸ್ಮಾರಕಾರ್ಥ ಅವರ ಮಕ್ಕಳು ಉಳ್ಳಾಲ ಗೋವಿಂದ ಶೆಣೆ ಮತ್ತು ಸಹೋದರರು ರೂ. ೧೦೫, ಎಂ ಭುಜಂಗರಾವ್ ಬಿ. ಎ ಬಿ. ಎಲ್., ಸಬ್ ಜಡ್ಜ್ ಮಡಿಕೇರಿ, ತಂದೆ ಸ್ಮಾರಕಾರ್ಥ ರೂ. ೧೦೫, ಕೆ. ಸದಾಶಿವರಾಯರ ಪ್ರಥಮ ಪತ್ನಿ ಕೆ ಸುಲೋಚನಾಬಾಯಿಯವರ ಸ್ಮಾರಕಾರ್ಥ ರೂ ೧೦೫, ಎಂ ಆರ್ ಭಟ್ಟರ ಪುತ್ರಿ ಉಮಾಬಾಯಿಯವರ ಸ್ಮಾರಕಾರ್ಥ ರೂ. ೧೭೮, ಬಿ. ಪದ್ಮನಾಭ ಬಾಳಿಗ, ಫೌಂಡೇಶನ್ ಟೀಚರ್ ರೂ ೧೦೦, ಅಮ್ಮೆಂಬಳ ವಾಮನಪ್ಪ, ಬಿ ಎ. ರವರ ಸ್ಮಾರಕಾರ್ಥ ರೂ. ೧೦೫, ಅಮ್ಮೆಂಬಳ ರಾಘವೇಂದ್ರಪ್ಪೈಗಳ ಸ್ಮಾರಕಾರ್ಥ ರೂ ೧೦೫, ಜಿ ವೈಕುಂಠ ಬಾಳಿಗಾ ಎಂಡ್ ಸನ್ಸ್ ರೂ. ೧೦೦, ಪಿ ಎಸ್. ಭಂಡಾರ್ಕಾರರು ರೂ ೧೦೦ ಕುಂಬಳೆ ರಘುನಾಥ ಕೃಷ್ಣಪ್ರಭು ಮತ್ತು ಅಣ್ಣಪ್ಪ ಶ್ರೀಧರನಾಯಕರು ಕೃಷ್ಣಪ್ರಭುಗಳ ಸ್ಮಾರಕಾರ್ಥ ರೂ. ೧೦೦, ಪಿ ಕೃಷ್ಣ ಪೈಯವರ ಸ್ಮಾರಕಾರ್ಥ ಡಾ। ಪಿ ಸಂಜೀವಪೈ ಎಂ ಬಿ ಸಿ ಎಮ್ ರೂ ೧೫೫.

ಅತ್ತಾವರ ಶ್ರೀ ಅರಸುಮುಂಡಿತ್ತಾಯ ದೈವದ ಉತ್ಸವವು ಇದೇ ತಿಂಗಳ ತಾ ೪ರಿಂದ ಪ್ರಾರಂಭವಾಗಿ ಧ್ವಜಾರೋಹಣ ಅರಸುದೈವದ ಉತ್ಸವ ಅರ್ಧ ರಥೋತ್ಸವ ಜುಮಾದಿ ದೈವದ ಉತ್ಸವ, ದೀಪೋತ್ಸವ ಮೊದಲಾದ ಸಮಾರಂಭಗಳೊಡಗೂಡಿ ಜರಗಲಿರುವುದು. ಸರ್ವರಿಗೂ ಸುಸ್ವಾಗತವಿದೆಯೆಂದು ಮೊಕ್ತೇಸರರಾದ ಶ್ರೀ ಎ. ವೆಂಕಪ್ಪ ಪೂಜಾರಿಯವರು ವಿನಂತಿಸುತ್ತಾರೆ.

ಕಳೆದ ಶನಿವಾರ ಮೆಶರ್ಸ್ ಪಿಯರ್‌ಲೆಸ್ಲಿ ಮತ್ತು ಕಂಪೆನಿಯವರ ಎಸ್ ಎಸ್ ಕ್ಲೀನ್ ಮೋರಿಸನ್ ಸ್ಟೀಮರು ಸಮುದ್ರಕಿನಾರೆಯನ್ನು ಹಿಡಿಯುತ್ತಿದ್ದಾಗ ಯೂಸುಬ್ ಸಲಾಮತಿ ಎಂಬ ಮಂಜಿಗೆ ಡಿಕ್ಕಿ ಬಡೆದು ಮಂಜಿಯು ಮುಳುಗಿ ಅದರಲ್ಲಿದ್ದ ಏಳು ಜನರು ನೀರುಪಾಲಾಗಿ ರಕ್ಷಿಸಲ್ಪಟ್ಟರು. ತನಿಖೆಯು ನಡೆಯುತ್ತಿದೆ.

ತಾ ೨೭ರಲ್ಲಿ ಮಂಗಳೂರಿನಿಂದ ಸುಮಾರು ೫ ಮೈಲು ದೂರದ ಪಣಂಬೂರಿನಲ್ಲಿ ಏಂಕರ್ ವೀಲ್ ಮೋಟರ್ ಬಸ್ಸೊಂದು ರಸ್ತೆಯ ಮೋರಿಯ ದಂಡೆಗೆ ಢಿಕ್ಕಿ ಬಡಿದು ಮಗುಚಿಬಿದ್ದು ಜಖಂಗೊಂಡ ಆಸ್ಪತ್ರೆಯಲ್ಲಿದ್ದ ಹೆಜಮಾಡಿ ಬಳಿಯ ಶ್ರೀಲ ರಾಮಪ್ಪ ನಾಯ್ಕರು ತಾ ೨೮ನೇ ರಾತ್ರಿ ೨ ಘಂಟೆಗೆ ವ್ಯಕ್ತಗಾಗಿರುವುದು ವಿಷಾದಕರವಿರುತ್ತದೆ. ಇವರು ೪೬ ವರ್ಷ ಪ್ರಾಯದವರಿದ್ದರು. ಈ ಅಪಘಾತದಲ್ಲಿ ಪೆಟ್ಟು ಪೆಟ್ಟಾಗಿದ್ದ ಇನ್ನೂ ೩ ಮಂದಿ ಸೌಖ್ಯ ಹೊಂದುತ್ತಿರುವರೆಂದು ತಿಳಿದುಬರುತ್ತದೆ.

ಸ್ಥಳೀಕ ಶ್ರೀಕೃಷ್ಣ ಸಿನೆಮಾ ಮಂದಿರದಲ್ಲಿ ತಾ ೩ರಿಂದ ಶಾಕುಂತಲ ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತಿರುವುದು. ಇದರಲ್ಲಿ ಎಸ್ ಮಾಧುರಿ ರಾಜಕೇಂದ್ರೋ, ಇ ಬಿಲ್ಲಿಮೋರಿಯಾ ಘೋರಿ ದೀಕ್ಷಿತ್ ಮೊದಲಾದ ಸುಪ್ರಸಿದ್ಧ ನಟರು ಪಾತ್ರವಹಿಸಿರುವರು. ತಾ. ೮ರಿಂದ ಲಾಲ್ ಯೇ ಯಮನ್ ಎಂಬ ಸುಪ್ರಸಿದ್ಧ ಚಿತ್ರವನ್ನು ತೋರಿಸಲಾಗುವುದು.

ಕಳೆದ ಆದಿತ್ಯವಾರ ಇಲ್ಲಿಯ ಗವರ್ನಮೆಂಟ್ ಕೋಲೇಜಿನಲ್ಲಿ ಚಕ್ರವರ್ತಿಗಳ ರಜತೋತ್ಸವ ಫಂಡಿಗಾಗಿ ವಿವಿಧ ವಿನೋದ ಪ್ರದರ್ಶನವೊಂದು ಜಯಶೀಲವಾಗಿ ನಡೆಯಿತು.

ಇಲ್ಲಿಯ ಫಾದರ್ ಮುಲ್ಲರ್ ಆಸ್ಪತ್ರೆಯ ಡಾಕ್ಟರ್ ಎಲ ಎಲ್ ಡಿ ಮಸ್ಕರೇಂಞಾ ಮೊಮ್ಮಗಳೂ ಪೇಶಾವರದ ಬ್ರಿಟಿಷ್ ಮಿಲಿಟರಿ ಆಸ್ಪತ್ರೆಯ ಅಸಿಸ್ಟಾಂಟ್ ಸರ್ಜನ್‌ರಾದ ಡಾಕ್ಟರ್ ಎಸ್ ಸಿ ಪಿಂಟೋ ಎಂ ಬಿ ಬಿ. ಎಸ್, ಐ ಎಮ್ ಡಿ ಇವರ ಪತ್ನಿಯೂ ಆಗಿರುವ ಮಿಸೆಸ್ ವ ಡ್ಸಾ ಪಿಂಟೋರವರು ಸೀನಿಯರ್ ಕೇಂಬ್ರಿಡ್ ಪರೀಕ್ಷೆಯಲ್ಲಿ ಪಾಸಾಗಿರುವರೆಂಬುದು ಅಭಿನಂದನೀಯ.

ಸ್ಥಳೀಕ ನಗರಸಭೆಯು ಮಾರ್ಚಿ ೩೦ ೩ರಲ್ಲು ಚೆಯರ್‌ಮೇನರಾದ ಡಾಕ್ಟರ್ ವಿಠಲಶೆಟ್ಟಿ ಗೈರಹಾಜರಿಯಲ್ಲಿ ರಾವ್‌ಬಹದ್ದೂರ್ ಎಸ್ ಎಸ್ ಸುವರ್ಣರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈದಾನಿನಲ್ಲಿನ ಗೂಡಿನ ಅಂಗಡಿಗಳನ್ನು ೬ ವಾರಗಳೊಳಗೆ ತೆಗೆಯಲು ಕಮೀಶನರಿಗೆ ಅಧಿಕಾರವೀಯಲಾಯಿತು. ಮುನಿಸಿಪಲ್ ಲೈಬ್ರರಿಗೆ ರಾವ್ ಬಾ. ಬಿ. ವೆಂಕಟ್ರಾಯರಿತ್ತ 'ವೇದಾಂತ ಕೇಸರಿಯ' ೪೫ ಪುಸ್ತಕಗಳನ್ನು ಆಭಾರಪೂರ್ವಕವಾಗಿ ಸ್ವೀಕರಿಸಲಾಯಿತು. ಅಗಲಕಿರಿದಾದ ಕೋರ್ಟುರಸ್ತೆಯಲ್ಲಿ ಬಸ್ಸುಗಳನಿಲ್ಲಿಸುವ ಬೇರೆ ರಸ್ತೆಯಲ್ಲಿಯ್ಯುವ ಕುರಿತು ವಿಚಾರಿಸುವರೆ ಕಮಿಟಿಯೊಂದನ್ನು ಅಧ್ಯಕ್ಷರು ಸೂಚಿಸಿದರು.

ತಾಲೂಕುಗಳಿಂದ.

ಫರಂಗಿಪೇಟೆ—ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ತಾ. ೨೩—೩—೧೯೩೫ನೇ ಶನಿವಾರ ದಿನ ಫಜೀರು ಸೈಂಟ್ ಜೋಸೆಫ್ಸ್ ಶಾಲೆಯ ಅಧ್ಯಾಪಕ ರಾ। ಎಸ್. ಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. Vನೇ ಕ್ಲಾಸಿಗೆ ಗಣಿತಪಾಠದಲ್ಲಿ ಮೇರಮಜ್ಜಲು ಶಾಲಾ ಅಧ್ಯಾಪಕ ರಾ। ಡಿ. ಮಾಧವರಾಯರು ಒಂದು ಮಾದರಿಪಾಠವನ್ನು ಕೊಟ್ಟ ಬಳಿಕ, ಫರಂಗಿಪೇಟೆ ಶಾಲಾ ಬಾಲಕರು, ಕಥಾನಕ, ಅಭಿನಯಗೀತ ಇತ್ಯಾದಿಗಳನ್ನು ಪ್ರದರ್ಶಿಸಿದರು. ಪಾಠಗಳ ಪಟ್ಟಿಯ ಕುರಿತು ಚರ್ಚೆಗಳು ನಡೆದು ಸಾಮಾನ್ಯ ತಿಳುವಳಿಕೆಯ ಪಾಠಗಳನ್ನು ಮೇಲಿನ ಕ್ಲಾಸುಗಳಿಗೆ ಒಂದು ವರ್ಷದಲ್ಲಿ ಕಲಿಸಲಿಕ್ಕೆ ಸಾಧ್ಯವಿಲ್ಲವೆಂದಾಯಿತು.

ಕಲ್ಲಡ್ಕ—ಕಲ್ಲಡ್ಕ ಬೋರ್ಡು ಹಾ। ಎ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ದ್ವಿತೀಯ ವಾರ್ಷಿಕ ದಿನಾಚರಣೆಯನ್ನು ತಾ ೨೭–೪—೧೯೩೫ನೇ ಶನಿವಾರ ಅಪರಾಹ್ನ ೪ ಘಂಟೆ ಹಕ್ಕೆ ಮಂಗಳೂರು ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಕೆ ಸಂಜೀವಭಟ್, ಎಂ ಪಿ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿಸುವುದೆಂದು ನಿಶ್ಚಯಿಸಿರುತ್ತದೆ. ಆ ಕುರಿತು ಶಾಲೆಯ ಹಳೆ ವಿದ್ಯಾರ್ಥಿಗಳೆಲ್ಲರೂ ತಮ್ಮ ಇಷ್ಟಮಿತ್ರರೊಡಗೂಡಿ ಬಂದು ಸಮ್ಮೇಳನೆ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ಅಧ್ಯಕ್ಷರು ತಿಳಿಸುತ್ತಾರೆ.

ಉಡುಪಿ:—ತಾ ೨೧ ೪ ೩೫ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಸರಿಯಾಗಿ ಉಡುಪಿ ಅಜ್ಜರಕಾಡಿನಲ್ಲಿರುವ ಶ್ರೀ ಕೆ. ಜಗನ್ನಾಥ ನಾಯ್ಕರ ಮೆಮೋರಿಯಲ್ ಹಾ ಎ ಶಾಲೆಯ ಆಟ್ಟೋಣದಲ್ಲಿ ಉಡುಪಿ ಕಾರ್ಕಳ ಮತ್ತು ಕುಂದಾಪುರ ತಾಲೂಕಿನ ಪ್ರಾಥಮಿಕ ಶಾಲೆಗಳ ಹಿಂದು ಮೆನೇಜರರ ಸಂಘದ ಪ್ರಥಮ ಸಭೆಯು ಜರಗುವುದು. ವಿಷಯ ಸಂಘದ ಆವಶ್ಯಕತೆ, ಸ್ಥಾಪನೆ, ಅಧ್ಯಕ್ಷರ ಕಾರ್ಯದರ್ಶಿ ಸಮಿತಿ ಸದಸ್ಯರ ಆಯ್ಕೆ, ಗ್ರಾಂಟಿನ ಕಡಿತದಿಂದಾಗುವ ಅನ್ಯಾಯದ ನಿವಾರಣೆ, ಮೆನೇಜರರ ಕರ್ತವ್ಯ ಇತ್ಯಾದಿ. ಎಲ್ಲಾ ಹಿಂದೂ ಮೆನೇಜರರೂ ಬಂದು ಸಂಘದ ಸದಸ್ಯರಾಗಬೇಕಾಗಿ ಕೋರಲಾಗಿದೆ.

ಮುಂಚಿತವಾಗಿ ಪ್ರಕಟಿಸಿದಂತೆ ಸ್ಥಳೀಯ ರೆಕ್ರೀಯೇಶನ್ ಕ್ಲಬ್ಬಿನಲ್ಲಿ ಸಾಯಂಕಾಲ ೬ ಗಂಟೆಗೆ ಕುಂದಾಪುರ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಐದನೆ ಜೋರ್ಜ್ ಚಕ್ರವರ್ತಿಗಳ ಪಟ್ಟಾಭಿಷೇಕದ ರಜತೋತ್ಸವವನ್ನು ಹೇಗೆ ವಿಜೃಂಭಿಸಬಹುದೆಂದು ಯೋಚಿಸಲಿಕ್ಕೆ ಪುರಜನರ ಮಹಾಸಭೆ ಸೇರಿತು. ಆಫೀಸರರೂ, ವಕೀಲರೂ ಇನ್ನಿತರ ಊರ ಪ್ರಮುಖರೂ ಮಹಿಳೆಯರೂ ಕೂಡಿ ಸುಮಾರು ೧೦೦ ಮಂದಿ ನೆರೆದಿದ್ದರು. ಕೃಷ್ಣವಸ್ವಾಮಿಯವರು ಪ್ರಾರ್ಥನೆ ಹಾಡಿದರು. ಅಧ್ಯಕ್ಷರು ವ್ಯಾಸರಾಯರ ಮತ್ತು ಮದ್ರಾಸು ಗವರ್ನರರ ತತ್ಸಂಬಂಧದ ಜಾಹೀರುನಾಮೆಗಳನ್ನು ಓದಿ ರಜತೋತ್ಸವವನ್ನು ವಿಜೃಂಭಣೆಮಾಡುವ ಆವಶ್ಯಕತೆ ಹಾಗೂ ಕರ್ತವ್ಯದ ಕುರಿತು ವಿವರಿಸಿದರು. ಇದಕ್ಕೋಸ್ಕರ ಧನಸಂಚಯವು ಹೇಗೆ ವಿನಿಯೋಗಿಸಲ್ಪಡುವುದೆಂದೂ ಮಾನ್ಯ ಸಭಿಕರು ವ್ಯಾಸರಾಯಫಂಡಿಗೂ ಸ್ಥಳೀಕ ಫಂಡಿಗೂ ಆತ್ಮಸಂತೋಷದಿಂದ ಬೇಕಾದ ರೀತಿಯಲ್ಲಿ ದ್ರವ್ಯ ಸಹಾಯವಮಾಡಬೇಕೆಂದು ಕೇಳಿಕೊಂಡರು. ... ಪಿ ಎಲ್ ಕುಲಕರ್ಣಿ ಎಚ್ ಎಲ ಡಿಸ್ಟ್ರಿಕ್ಟ್ ಮುನ್ಸೀಫ್ ಖಾನ್‌ಬಹದ್ದೂರ್ ಹ ಜ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬರೂ ಮಿಸೆಸ್ ಎಚ್ ಮನೋರಮಾಬಾಯಿ ಪಿ ಎ. ಎಲ್ ಟಿ ಮಿ ರೋಕ್ ಫೆರ್ನಾಂಡಿಸ್ ಬಿ ಎ ಎಲ್ ಟಿ ಶ್ರೀ ಎ ಲಕ್ಷ್ಮೀನಾರಾಯಣರಾವ್ ಬಿ ಎ ಬಿ ಎಲ್ ಶ್ರೀ ಪಿ ಪಾಂಡುರಂಗನಾಯಕ್ ಬಿ ಎ, ಬಿ ಎಲ್, ಮಿ। ಎ. ಎಸ್ ಕಾಟ್ ಬಿ ಎ ಎಲ್ ಟಿ, (ಇವರು ಕನ್ನಡದಲ್ಲಿ) ಇವರೆಲ್ಲ ಜೋರ್ಜ್ ಸಾರ್ವಭೌಮರ ರಜತೋತ್ಸವವನ್ನು ಯೋಗ್ಯ ರೀತಿಯಲ್ಲಿ ಆಚರಣೆಮಾಡಬೇಕೆಂದು ಮೊದಲನೆಯವರು ತಂದ ಠರಾವನ್ನು ಉಳಿದವರು ಸಂದರ್ಭೋಚಿತವಾದ ಭಾಷಣಗಳಿಂದ ಪುಷ್ಟೀಕರಿಸಿದರು. ಅನಂತರ ಮಿ। ಜೆ. ಸಿ. ರೇಗೊ, ಬಿ ಎ, ಬಿ ಎಲ್ ರವರು ಸೂಚಿಸಿದ ಪಲವು ಮಹಿಳೆ ಮಹಾನುಭಾವರಿಂದೊಡಗೂಡಿದ ಕಾರ್ಯನಿರ್ವಾಹಕ ಸಮಿತಿಯು ಇತರ ಮಹನೀಯರ ಪುಷ್ಟೀಕರಣದಿಂದ ಮಂಜೂರಾಯಿತು. ಇದಕ್ಕೆ ಗವರ್ನಮೆಂಟ್ ಆಸ್ಪತ್ರೆಯ ಅಧಿಕಾರಿಗಳಾದ ಮಿ। ಪಟಾಕೆ ಎಲ್ ಎಮ್ ಎಸ್ ರವರು ಅಧ್ಯಕ್ಷರೂ, ಶ್ರೀ. ಪಿ ಗೋಪಾಲನಾಯಕ್, ವರ್ತಕರು ಹಾಗೂ ಕೆನರಾ ಬೇಂಕಿಂಗ್ ಕೋರ್ಪೋರೇಶನಿನ ಡೈರೆಕ್ಟರ್ ಕಾರ್ಯದರ್ಶಿಗಳೂ ಆಗಿರುತ್ತಾರೆ. ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಆ ಮೇಲೆ ಸದ್ರಿ ರಜತೋತ್ಸವದ ದಿನ ಜರಗಿಸಬೇಕಾದ ತಾತ್ಕಾಲಿಕವಾದ ಕಾರ್ಯಕ್ರಮದ ಪಟ್ಟಿಯನ್ನು ಸಭೆಯ ಮುಂದಿಟ್ಟರು. ಇದನ್ನು ಅನುಮೋದಿಸಿ ಹಲವರ ಭಾಷಣಗಳಾದುವು. ವಂತಿಗೆಯ ಪಟ್ಟಿಯನ್ನು ಸಭಿಕರಲ್ಲಿ ಕೊಂಡುಹೋಗಲಾಗಿ ಸುಮಾರು ರೂ ೨೫೦ರ ನಿಧಿಯೂ ಕೂಡಿಸಲಾಯಿತು. ಸಭಾಧ್ಯಕ್ಷರಿಗೂ ಸಭೆ ಜರಗಿಸಲಿಕ್ಕೆ ಸ್ಥಳವಿತ್ತ ಕ್ಲಬ್ಬಿನ ಅಧಿಕಾರಿಗಳಿಗೂ ವಂದನೆಗಳು ಅರ್ಪಿಸಲಾಗಿ ರಾತ್ರಿ ೮ ಗಂಟೆಗೆ ಸಭೆಯು ಮುಕ್ತಾಯವಾಯಿತು. ನಿಧಿಸಂಚಯವು ಭರದಿಂದ ಆಗುತ್ತಲಿದೆ.

ತಾ. ೩ರಂದ್ಕೆ ಶ್ರೀ ಗಣಪಯ್ಯ ತಂತ್ರಿಗಳ ಮಗಂದಿರಾದ ಶ್ರೀ ಕೃಷ್ಣಮೂರ್ತಿಯವರಿಗೆ ಶ್ರೀ ಕೃಷ್ಣಾಪುರ ಮಠದ ಯತೀಶ್ವರರಿಂದ ಸನ್ಯಾಸದೀಕ್ಷೆ ಕೊಟ್ಟು ಶ್ರೀ ವಿದ್ಯಾನಂದರೆಂದು ಅಭಿನಂದಿಸಲಾಯಿತು. ದಿವಂಗತ ಆರಾಧನೆಯು ಬಹು ವಿಜೃಂಭಣೆಯಿಂದ ತಾ ೧ನೇ ಸೋಮವಾರ ನಡೆಸಲಾಗಿ ಸುಮಾರು ೪–೫ ಸಹಸ್ರ ಜನರಿಗೆ ಸಂತರ್ಪಣೆ ದಕ್ಷಿಣೆ ಸಹಿತ ಜರಗಿತು. ತಾ. ೩ನೆ ದಿನ ಮಠದ ಬಾಗಿಲಲ್ಲಿ ಬಡವರಿಗೆಲ್ಲ ತಲಾ ಅರ್ಧ ಸೇರಿನಂತೆ ಅಕ್ಕಿಯೂ ಕಾಲಾಣೆಯೂ ಹಂಚಲಾಯಿತು.

ಹೊಸ ಸ್ವಾಮಿಯವರಿಗೆ ಯೋಗ್ಯ ವಿದ್ಯಾಭ್ಯಾಸ ಮಾಡಿಸಿ ನಿಜವಾಗಿಯೂ ಸನ್ಯಾಸಿಗಳೂ ಜಗದ್ಗುರುಗಳೂ ಶ್ರೀಮನ್ಮಧ್ವಾಚಾರ್ಯರ ಆತ್ಮೀಯ ತತ್ವಗಳ ಪ್ರಸಾರಕರೂ ಆಗುವಂತೆ ದ್ವಂದ್ವಮತೀಯರಾದ ಶ್ರೀ ಫುತ್ತಿಗೆ ಸ್ವಾಮಿಯವರು ಗಮನಿಸುವರಾಗಿ ಆಶಿಸಲಾಗುತ್ತದೆ.

ಇಚ್ಲಂಪಾಡಿ:—ಇದೇ ಕಳೆದ ತಾ ೨೮ನೇ ದಿನ ರಾತ್ರೆ ಶ್ರೀ ಪಟೇಲ ಬಿ ಶೀನಪ್ಪ ರೈಗಳವರ ಪರಿಶ್ರಮದಿಂದ ಇಚ್ಲಂಪಾಡಿ ಮನೆಯಲ್ಲಿ ಯಕ್ಷಗಾನ ಸುಪ್ರಸಿದ್ಧರಾದ ಬಲಿಪ ನಾರಾಯಣ ಭಾಗವತರ ಹಾಡುವಿಕೆಯಿಂದಲೂ ಕೆಮ್ಮಣ್ಣು ನಾರ್ಣಪ್ಪಯ್ಯನವರ ಮೃದಂಗ ವಾದನದಿಂದಲೂ ಉತ್ಸಾಹಶಾಲಿಗಳಾದ ಅನೇಕ ಅರ್ಥದಾರಿಗಳ ಸಹಕಾರದಿಂದಲೂ "ಕೃಷ್ಣ ಸಂಧಾನ"ವೆಂಬ ಪ್ರಸಂಗವು ಕವಿವರ್ಯ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಅಧ್ಯಕ್ಷತೆಯಲ್ಲಿ ಬಹಳ ಯಶಸ್ವಿಯಾಗಿ ಜರಗಿತು.

ಬ್ರಹ್ಮಾವರ — ಇದೇ ೩ರಲ್ಲು ಬ್ರಹ್ಮಾವರದ ಹಿಂದೀ ಪ್ರೇಮಿಗಳ ಸಭೆಯೊಂದು ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಹಿಂದೀ ಕ್ಲಾಸುಗಳನ್ನು ಕ್ರಮಯುತವಾಗಿ ನಡೆಸಿದ್ದ ಶ್ರೀ ಪಟೇಲ್ ಗಣಪತಿ ರಾವ್ ಅಧ್ಯಕ್ಷತೆಯಲ್ಲಿ ಆ ದಿವಸ ಹಿಂದೀ ಭಾಷಾಭ್ಯಾಸದ ಆವಶ್ಯಕತೆಯ ಕುರಿತು ಶ್ರೀ ಬಿ ಲಕ್ಷ್ಮೀನಾರಾಯಣ ಅಡಿಗ ಶ್ರೀ ರಾಮರಾಯ ಪೈಗಳೇ ಮೊದಲಾದವರ ಭಾಷಣಗಳಾದ ಬಳಿಕ ಅಧ್ಯಕ್ಷರು ಹಿಂದೀ ಪ್ರಚಾರದ ಕರಿತ ವ್ಯಾಖ್ಯಾನಮಾಡುತ್ತಾ ಬ್ರಹ್ಮಾವರದಲ್ಲಿ ಕ್ಲಾಸನ್ನು ತೆರೆಯಲು ತನಗೆ ಸಹಕರಿಸಿದ ಶ್ರೀ ಪೈ ಶ್ರೀ ಅಡಿಗ ಹಾಗೂ ಶ್ರೀಮತಿ ಗುಲಾಬಿಬಾಯಿಯವರೇ ಮೊದಲಾದವರಿಗೆ ಧನ್ಯವಾದಗಳನ್ನು ಸೂಚಿಸಿದ ನಂತರ ಸಭಾಂತ್ಯವಾಯಿತು.

ಪೆರ್ಡೂರ್—ಈ ಸೆಂಟರಿನ ಉಪಾಧ್ಯಾಯ ಸಂಘದ ವರ್ಧಂತಿ ಉತ್ಸವವು ಪೆರ್ಡೂರ ಶ್ರೀ ಸತ್ಯನಾರಾಯಣ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೩೧–೩–೩೫ನೆಯ ಆದಿತ್ಯವಾರ ಉಡುಪಿಯ ಬೋರ್ಡ್ ಹೈಸ್ಕೂಲ್ ಉಪಾಧ್ಯಾಯರಾದ ಮ ರಾ ಕೆ ಶಿವಯ್ಯನವರು ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಕುಬಣೂರು—ಇಲ್ಲಿಯ ಯಕ್ಷಗಾನೋತ್ತೇಜಕ ಸಭೆಯ ಹನ್ನೊಂದನೆಯ ವರ್ಧಂತಿಯು ಇದೇ ಬರುವ ತಾರೀಕು ೧೭ ೪ ೧೯೩೫ನೇಯ ಬುಧವಾರ ರಾತ್ರೆ ೯ ಗಂಟೆಗೆ ಸರಿಯಾಗಿ ಕುಬಣೂರು ಗೋಪಾಲಕೃಷ್ಣ ಕುಬಣೂರಾಯರ ಮನೆಯಲ್ಲಿ ಜರಗಲಿರುವುದು. ಭಾಗವತರು—ಶ್ರೀ ಮಹಾಬಲ ನೋಂಡರು, ಮೃದಂಗ ವಾದಕರು ರಾ। ಕದ್ರಿ ಕಿಟ್ಟಣ್ಣನವರು. ಯಕ್ಷಗಾನ ಕಲಾಕೋವಿದರನೇಕರೂ ಪಾತ್ರಗಳನ್ನು ವಹಿಸಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ—ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ; ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜಿನಸ್ ಡ್ರಗ್ಸ್ ಆಫ್ ಇಂಡಿಯಾ" ಇದರ ಪುಟ 59ನ್ನು ನೋಡಿ.)

ವನಸ್ಪತಿ ತೈಲವಲ್ಲ—ಮೀನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಷಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'—

ಇವುಗಳಿಗೆ ಸರಿಗಟ್ಟುವಂತಹುದು ಯಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ

ಕವಿರವೀಂದ್ರ.—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ **ಡಾ। ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲಿ ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು.

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು — 'ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಪ್ರಶಂಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ... ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನ ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ತಯಾರಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ"

ಗೊಡ್ರೆಜ್ ಗಂಧದ ಸಾಬೂನು ಮತ್ತು } ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ

ಸೋಲ್ ಏಜಂಟರು:

ನಾದಿರ ಷಾ, ಪ್ರಿಂಟರ್ ಎಂಡ್ ಕೋ, ಲಿ। ಬ್ರಾಂಚ್, ಮದರಾಸು.

ಹೆಡ್ ಆಫೀಸು ಬೊಂಬಾಯಿ ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ: ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಲಟ್ಟಿಯಾಗಿರುವ) ಸಾಬೂನುಗಳಲ್ಲಿ ಗೊಡ್ರೆಜರವರಿಗೆ ಸಂಬಂಧವಿಲ್ಲ

ಹಿಂದೂದೇಶದ ಅತಿ ವ್ಯಾಪಾರಸ್ಥರ ಗಾದಾಮುಗಳಿಗಿಂತ ಪ್ರಿಯವಾದುದು, ನಿಶ್ಚಿತವಾದುದು ಎಂದು ಸಿದ್ಧಪಡಿಸಿದರೆ ನಿಮ್ಮ ಬೆಲೆಗಿಂತ ಎರಡು ಪಾಲನ್ನು ಹಿಂದೆ ಕೊಡುತ್ತೇವೆ.

ಸುಖವಾಗಿ ನಿದ್ರಿಸಿರಿ.

ನಮ್ಮ ಹಿಂದೀಯ ಮುಸಿ ಪರದೆಗಳನ್ನು ಪ್ರತಿಯೊಬ್ಬರೂ ಹೊಗಳುತ್ತಾರೆ, ಅದರ ಬಾಳಿಕೆ, ಅದರ ಗಟ್ಟಿಮುಟ್ಟುತನ, ಅದರ ಸುಂದರ ಕೆಲಸಗಳು ಆಕರ್ಷಣೀಯ

ಉದ್ದ.	ಅಗಲ	ಎತ್ತರ	ಸಾಧಾರಣ ಕ್ರಯ	ಉತ್ತಮ ಬೆಲೆ.
6	3½	3½	1/4/-	1/8/-
6	4	4	1/8/	1/12/-
6½	4½	4½	1/12/-	2/-
7	5	5	2/-	2/4/-
7½	6	5	2/4/	2/8/-

ಪೆಕಿಂಗ್ ಪೋಸ್ಟೇಜ್ ಅಂಚೆ ವೆಚ್ಚ ಪ್ರತ್ಯೇಕ,

Prabhat Trading Co,
12 Sikderpara Lane Calcutta

"GUPTA MANTRA"

A reward of Rs 100

The objects, which cannot be achieved by spending lacs of rupees may be had by repeating this Mantra seven times There is no necessity of undergoing any hardship to make it effective. It is effective without any preparation This is a WASHIKARAN MANTRA' It will make you fortunate give you service and advancement and bring you profit in trade A reward of Rs. 100 if proved fallible Price including postage etc., Rs 2-7-0.

Siddh Mantra Ashram,
Kapiisarai (Gaya.)

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter -

Modern Hindu Hotel,
Calicut, 17—6—1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ
ಮಂಗಳೂರಿನಿಂದ - ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ,
—ಮೂಡಗೆರೆಗೆ, ಸಕಲೇಶಪುರಕ್ಕೆ
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಹಿತಾವಹವಾದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಸೀಟಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

(೬ನೇ ಪುಟದಿಂದ ಮುಂದುವರಿದುದು)

ಬಹಳ ಸಹಾಯ ಮಾಡಿದಂತಾಗಿ ರೈತರು ಚಿರ ಋಣಿಯಾಗಿರುವುದರಲ್ಲಿಯೂ ನಿಸ್ಸಂಶಯವೇ ಸರಿ. ಕಾರಣ ಸುಮಾರು ೧೦೦ ರೂಪಾಯಿಗಳ ಕಂದಾಯ ಕೊಡಬೇಕಾಗಿದ್ದ ಆರ್ಥಿಕ ದುಸ್ಥಿತಿಯಿಂದ ೫೦ ರೂಪಾಯಿಗಳು ಮಾತ್ರ ತನ್ನಲ್ಲಿದ್ದಲ್ಲಿ ಎಷ್ಟು ಬೇಡಿದಾಗ್ಯೂ ಉಳಿದರ್ಧವನ್ನು ಮುನಾಫೆ ಬಿಡುವುದಿಲ್ಲ. ಬಿಟ್ಟುಕೊಟ್ಟಲ್ಲಿ ತನ್ನ ಜೀವನ ಪಥವು ಸುಲಲಿತವಾಗಿ ನಡೆಯುವುದು. ಇಲ್ಲವಾದರೆ ಮೇಲಿನ ದುಃಸ್ಥಿತಿಗೆ ಸರ್ಕಾರವೂ, ಜಮೀನೂ ಖಾತೆದಾರನೂ ತುತ್ತಾಗಬೇಕಾಗುವುದರಲ್ಲಿ ಸಂಶಯವೇ ಇಲ್ಲ.

(೨) ಸಾಲ ತೀರ್ಮಾನ.—ಯಾವ ರೈತನಿಗೆ ಆಗಲೀ ಸುಮಾರು ಸಾವಿರ ರೂಪಾಯಿ ಸಾಲವಿದ್ದರೆ, ಸಾಲ ಕೊಟ್ಟವರು ೧೦ ವರ್ಷಗಳ ಕಾಲ ನಿಬಡ್ಡಿಯಂತೆ ಸುಧಾರಿಸಿ ನಂತರ ೨ ಆಣೆಯ ಬಡ್ಡಿಯ ಮೇರೆಗೆ ೧೦ ಕಂತಿನ ಪ್ರಕಾರ ವಸೂಲು ಮಾಡುವಂತೆ ಸರ್ಕಾರದವರು ಏರ್ಪಡಿಸುವುದು ಒಳ್ಳೆಯದು. ಈ ಏರ್ಪಾಟು ಮಾಡಿದಲ್ಲಿ ಸಾಲಕೊಟ್ಟವರೂ, ಕೊಂಡವರೂ, ಜಮೀನುಗಳೂ ಊರ್ಜಿತಸ್ಥಿತಿಗೆ ಬರುವುದರಲ್ಲಿ ನಿಸ್ಸಂದೇಹವೇ ಸರಿ.

(೩) ರಿಲೀಫ್ ಆಕ್ಟ್.—ಈಗ ಜಾರಿಗೆ ರಿಲೀಫ್ ಆಕ್ಟ್ ಸಹಾಯವು ಜಾರಿಗೆ ಬಂದದ್ದರಿಂದ ಜಮೀನುಗಳು ಪರಾಧೀನವಾಗುವುದಿಲ್ಲ, ಜೀವನ ಬೇಸಾಯ, ಕಂದಾಯ, ಸಾಲ ತೀರ್ಮಾನ ಇವುಗಳ ಬಗ್ಗೆ ಧನಸಹಾಯವೂ ಸಿಕ್ಕುವುದಿಲ್ಲ. ರಿಲೀಫ್ ಆಕ್ಟ್ ಒಳಕೊಂಡಿರುವ ಅಂಶಗಳಿಂದ ಸಾಲ ಕೊಟ್ಟವರು ಮುಂದು ಸಹಾಯ ಮಾಡುವಂತೆಯೂ ಇಲ್ಲ. ಕಾರಣ ಒತ್ತಾಯ ಮಾಡಲಿಕ್ಕೆ ಅವಕಾಶವಿಲ್ಲ. ಇದು ಒಳ್ಳೆಯದೇ ಸರಿ. ಆದರೆ ಸಾಲ ಕೊಟ್ಟವನು ನಿರ್ಗತಿಕನಾಗುತ್ತಾನೆ. ಆದ್ದರಿಂದ ಸಾಲ ತೀರ್ಮಾನ ಶಿರೋನಾಮೆಯಲ್ಲಿ ನಮೂದು ಮಾಡಿದಂತೆ ಏರ್ಪಡಿಸಿದರೆ ಉಭಯತ್ರರಿಗೂ ಒಳ್ಳೆಯದಾಗಿ ಸರ್ಕಾರದವರೂ ಕಂದಾಯ ವಿಷಯದಲ್ಲಿ ರಿಯಾಯತಿ ತೋರಿಸಿದಲ್ಲಿ ರೈತರು ಪುನರುಜ್ಜೀವನ ಹೊಂದಬಹುದು.

(೪) ಪೈರುಗಳ ಮಾರಾಟ.—ಈ ಬಗ್ಗೆ ನಮ್ಮ ಘನಹೊಂದಿದ ಸರಕಾರದವರು ನಮ್ಮ ದೇಶದ ಶ್ರೀಮಂತರುಗಳ ಸಹಾಯವನ್ನು ಪಡೆದುಕೊಂಡು ನಾವು ಬೆಳೆಯತಕ್ಕ ಅಡಿಕೆ, ಭತ್ತ ಇವುಗಳನ್ನು ತಮ್ಮ ಸರ್ಕಾರದ ಸ್ಥಳದ ಅಧಿಕಾರಿಗಳ ಮೂಲಕ ಸರ್ಕಾರದ ವಶಾ ಪಡೆದುಕೊಳ್ಳುವಂತೆಯೂ, ಪೈರುಗಳನ್ನು ಪಡೆದುಕೊಳ್ಳುವ ವೇಳೆಯಲ್ಲಿ ರೈತರುಗಳ ವಾರ್ಷಿಕ ಜೀವನ ಎಂದರೆ ೧೫ ವರ್ಷ ವಯಸ್ಸಿನ ಒಳಗಿರುವವರಿಗೆ ತಲಾ ಮಾಹೆಯಾನಾ ೫ ರೂಪಾಯಿನಂತೆಯೂ, ೧೫ರ ಮೇಲ್ಪಟ್ಟವರಿಗೆ ತಲಾ ಮಾಹೆಯಾನಾ ೧೦ ರೂಪಾಯಿನಂತೆಯೂ ಒದಗಿಸಿಕೊಡುವುದಲ್ಲದೆ ವಾರ್ಷಿಕ ಧಾರ್ಮಿಕ ಖರ್ಚುಗಳು, ಬೇಕಾದ ಬೇಸಾಯ, ಆರೋಗ್ಯ ಚಿಕಿತ್ಸೆ ಕಂದಾಯ ಮತ್ತು ಇತರ ತೆರಿಗೆಗಳ ಬಗ್ಗೆ ಬೇಕಾದ ಧನಸಹಾಯವನ್ನೂ ಒದಗಿಸಿಕೊಟ್ಟು, ಸರಕಾರದವರು ತಾವು ಪಡೆದುಕೊಂಡ ಪೈರುಗಳ ಮಾರಾಟದ ಬಗ್ಗೆ ತಮ್ಮ ಚಿತ್ತಕ್ಕೆ ಒಪ್ಪಿದಂತೆ ಮಾಡಬಹುದು.

ಈಗ ಮೇಲ್ಕಂಡ ಅನುಕೂಲತೆಗಳನ್ನು ನಮ್ಮ ಘನಹೊಂದಿದ ಶ್ರೀಮನ್ಮಹಾರಾಜ ಸರಕಾರದವರು ಒದಗಿಸಿಕೊಟ್ಟಲ್ಲಿ ನಮ್ಮ ದೇಶದಲ್ಲಿ ಸುಭಿಕ್ಷತೆಯು ನೆಲೆಸುವುದರಲ್ಲಿ ಸಂದೇಹವೇ ಇಲ್ಲವೆಂಬುದು ನಮ್ಮ ಮಾತಾಪಿತೃಗಳ ಸಮಾನರಾದ ಘನಹೊಂದಿದ ಕರ್ನಾಟಕ ಸಿಂಹಾಸನಾಧೀಶ್ವರ, ರಾಜರ್ಷಿ ಬಿರುದಾಂಕಿತರಾದ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ದಿವ್ಯಚಿತ್ತಕ್ಕೆ ವೇದ್ಯವೇ ಇರುತ್ತದೆ. ಈಗ ಕಂಡಂತೆ ಅನುಕೂಲತೆಗಳನ್ನು ಶ್ರೀಮನ್ಮಹಾರಾಜ ಸರ್ಕಾರದವರು ಕಲ್ಪಿಸಿಕೊಟ್ಟಲ್ಲಿ ರೈತಾಪಿಗಳು ಚಿರಋಣಿಯಾಗಿ ದೇಶದ ಮುಂದಿನೇಳಿಗೆಯಲ್ಲಿ ಭಾಗಿಗಳಾಗುವುದರಲ್ಲಿ ಸಂದೇಹವೇ ಇಲ್ಲವೆಂಬುದಾಗಿ ತಿಳಿದು ಬರುತ್ತದೆ. ಶ್ರೀಮನ್ಮಹಾರಾಜ ಸರ್ಕಾರದವರು ಆದಷ್ಟು ಬೇಗನೆ ಈ ಬಗೆಯ ಕಷ್ಟಪರಿಹಾರದ ಬಗ್ಗೆ ಪ್ರಯತ್ನಪಟ್ಟು ಸರ್ಕಾರದ ಸ್ತಂಭದೋಪಾದಿಯಲ್ಲಿರುವ ರೈತಾಪಿಗಳನ್ನು ಕಾಪಾಡುವರಾಗಿ ನಂಬಿ, ರೈತಾಪಿಗಳು ಅರಿಕೆಮಾಡಿಕೊಳ್ಳುತ್ತಾರೆ.

"ಪ್ರಜಾಹಿತೈಷಿ"

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S No 385/1927
R. E P No 1119/1933

ಮಹಾಬಲ ಹೆಗ್ಡೆ—ವಾದಿ ಅರ್ಜಿದಾರ

ಮತ್ತು

ಲಕ್ಷ್ಮಣ ನಾಯ್ಕ ಸಹಾ—3 ಜನರು ಪ್ರತಿವಾದಿರು ಎದ್ರಿರು

ಇವರೊಳಗೆ—

1ನೇ ಎದ್ರಿ ಲಕ್ಷ್ಮಣ ನಾಯ್ಕ, ಅಪ್ಪು ನಾಯ್ಕರ ಮಗ, ಕಾರ್ಕಳ ತಾಲ್ಲೂಕು ಕಣಜಾರು ಗ್ರಾಮದ ಪೆಲತ್ತೂರು

3ನೇ ಎದ್ರಿ ಶ್ರೀನಿವಾಸ ಭಟ್ಟ, ಕೃಷ್ಣ ಭಟ್ಟರ ಮಗ, ಕಾರ್ಕಳ ತಾಲ್ಲೂಕು ಸೀರೆ ಗ್ರಾಮ

ಈ ಎರಡು ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅಮಲ್ ಜ್ಯಾರಿಯಲ್ಲಿ 1ನೇ ಎದ್ರಿಯ ಮೂಲಗೇಣಿ ವ ಭೋಗ್ಯಾದಿ ಹಕ್ಕನ್ನು ಅರ್ಜಿದಾರನು ಏಲಮಿಗೆ ಇಡಿಸಿರುವುದರಿಂದ ಅದರ ಇಸ್ತಿಹಾರಿನ ನೋಟೀಸು ಜ್ಯಾರಿ ಬಗ್ಗೆ ತಾ 11—4—1935ಕ್ಕೆ ಇಟ್ಟಿರುವುದರಿಂದ, ನಿಮಗೆ ಜ್ಯಾರಿ ಆಗತಕ್ಕ ನೋಟೀಸು ಮೇಲ್ಕಂಡ ವಾಯಿದೆಗೆ ವ ನೆಗೆ ಹಚ್ಚಿ ವ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿ ಜ್ಯಾರಿಯಾಗಬೇಕಾಗಿ ಹುಕುಂ ಆಗಿರುತ್ತದೆ.

ಸದ್ರಿ ಇಸ್ತಿಹಾರಿನ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ ತಾ 11—4—35ನೇ ದಿನ ಮೇಲ್ಕಂಡ ಕೋರ್ಟಿನಲ್ಲಿ ಎಳಗ್ಗೆ 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ವ್ಯವಹರಣೆಯು ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಮೊಕ್ಕಾಂ—ಕಾರ್ಕಳ,
29—3—35

S N Shetty,
Pleader for Petitioner

ನೋಟೀಸು

The Canara Bank Ltd Udipi South Kanara

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಸೂಲು ಕೊಡಬೇಕಾಗಿ ಅನೇಕ ದಫೆಯಿಂದ ತಿಳಿಸಿದ್ದಾಗ್ಯೂ ಅವುಗಳನ್ನು ಕೊಟ್ಟು ತೀರಿಸದೆ ಇದ್ದುದರಿಂದಲೂ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಜ್ಯಾರಿ ಆಗದೆ ವಾಪಾಸು ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಸದ್ರಿ ಸಾಲಗಾರರು ಬ್ಯಾಂಕಿಗೆ ಬಹ ಅಸಲು, ಬಡ್ಡಿ ವಗೈರೆ ಹಣಗಳನ್ನು ತಾ 23—4—35ನೇ ಮಂಗಳವಾರ ಮಧ್ಯಾಹ್ನ [illegible] ಒಳಗೆ ಬ್ಯಾಂಕಿನಲ್ಲಿ ಕಟ್ಟಿ ಅವರು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಇದೇ 1935ನೇ ಇಸವಿ ಎಪ್ರಿಲ್ 27ನೇ ಶನಿವಾರ ದಿವಸ ಮಧ್ಯಾಹ್ನ 12 ಗಂಟೆಗೆ ಸದ್ರಿ ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿದ ಹಣವನ್ನು ಸದ್ರಿ ಸಾಲಕ್ಕೆ ವಜಾಮಾಡಿ ಉಳಿದ ಐವೇಜಿನ ವಸೂಲಿನ ಬಗ್ಗೆ ಸಾಲಗಾರರ ಮೇಲೆ ಅಲಾಯಿದ ದಾವಾ ನಡಿಸಲಾದೀತು.

ಸಾಲದ ನಂಬ್ರ 128/32 P Bheema Rao, C/o Shanker Vittal Motor Co, Ltd, Mangalore. Now at the residence of Mr. K Guru Rao, Durgadabail, Hubli. ಸಾಲದ ಅಸ್ಲು ರೂ. 55/—(ರೂಪಾಯಿ ಐವತ್ತೈದು)

N B—ಬಾಕಿ ಇರುವ ಬಡ್ಡಿ, ರಿಜಿಸ್ಟ್ರಿ ಮತ್ತು ಈ ನೋಟೀಸಿನ ಖರ್ಚು ವಗೈರೆ ಸಹಾ ಬರತಕ್ಕದ್ದು

Office of the Canara Bank Ltd, Udipi
30—3—35

H S. Bhat,
Agent.

Notice.

The Canara Bank Ltd, Kasaragod

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಕಾಸರಗೋಡು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲೀ, ಅವುಗಳ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ವಸೂಲು ಬಗ್ಗೆ ಸದರಿಯವರು ಅಡವಿಟ್ಟ ನಗಗಳು ಇದೇ 1935ನೇ ಇಸವಿ ಎಪ್ರಿಲ್ ತಾ 26ನೇ ಶುಕ್ರವಾರ ದಿವಸ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಕ ನಂಬ್ರ 1 ಲೋನ್ ನಂಬ್ರ 519/32 ಹೆಸರು Vishnu Tantri S/o Vishnu Tantri, Land holder Madikai Village Kanhangad P O ಅಸ್ಲು ರೂ 150

ಕ ನಂಬ್ರ 2 ಲೋನ್ ನಂಬ್ರ 1386/32 ಹೆಸರು Moidin Kutty Haji S/o Kutty Pokar Talangere Kasaragod ಅಸ್ಲು ರೂ 60

ಕ ನಂಬ್ರ 3 ಲೋನ್ ನಂಬ್ರ 1725/32 ಹೆಸರು Kunnil Abdulrahiman Beary S/o Emmu Beary Merchant Kasaragod ಅಸ್ಲು ರೂ 200

ಕ ನಂಬ್ರ 4 ಲೋನ್ ನಂಬ್ರ 2002/33 ಹೆಸರು Mammunl S/o Maire Abdulla Cultivator, [illegible] Talangere Kasaragod ಅಸ್ಲು ರೂ [illegible]

Office of the Bank Kasaragod
28 3 35

K M Nayak
Agent

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯದ ನಂಬ್ರ 20/1935

ಪಿಟ್ಟನ್ನ ಶ್ಯಾನುಭಾಗ—ವಾದಿ

ಕೃಷ್ಣ ಶ್ಯಾನುಭಾಗ ಮಂಜುನಾಥ ಶ್ಯಾನುಭಾಗರ ಮಗ ಕೊಡಿಯಾಲ ಬೈಲಲ್ಲಿ ವಾಸಸ್ತ—ಪ್ರತಿವಾದಿ

ಸದ್ರಿ ಪ್ರತಿವಾದಿಯು ಸ್ತಿರಾಸ್ತಿ ಜವಾಬ್ದಾರಿಯಿಂದ ವಾದಿಗೆ ಬರತಕ್ಕ ಅಸಲು ಬಡ್ಡಿ ರೂ 350/—ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಸದ್ರಿ ದಾವೆ ಮಾಡಿರುತ್ತಾನೆ. ಅದು ಮೇಲ್ಕಂಡ ಕೋರ್ಟು ಮುಂದೆ ತಾ 10—4—35ರಲ್ಲಿ ತನ್ಕಿಗೆ ಇಟ್ಟಿರುತ್ತದೆ. ಆ ಕುರಿತು ಪ್ರತಿವಾದಿಯು ಆಕ್ಷೇಪವಿದ್ದರೆ ಸದ್ರಿ ತಾರೀಕಿಗೆ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು. ತಪ್ಪಿದರೆ ಪ್ರತಿವಾದಿಯ ಶಿವಾಯ ತೀರ್ಮಾನವಾಗುವುದು, ತಿಳಿದಿರುವುದು.

ಮಂಗಳೂರು,
18—3—35

P N Bhandarkar,
Vakil for Plaintiff

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 318/1929.

ಟಿ ಇ ನಾರಾಯಣನ್ ತಿರುಮುಂಪು ಪರಮೇಶ್ವರನ್ ತಿರುಮುಂಪು ಮಗ ಕಾಸರಗೋಡು ತಾಲ್ಕು ತೆಂಕು ತ್ರಿಕ್ಕಪುರ ಗ್ರಾಮದಲ್ಲಿರುವವ—ವಾದಿ

ಮತ್ತು

ತಾಯಕ್ಕಾಟ್ಟ ಮನೆಯ ಕಾರ್ನವನ, ಆಡಳ್ತೆದಾರ ಗೋವಿಂದನ್ ತಿರುಮುಂಪು ವಲಿಯ ಉಣ್ಣಿ ನಾರಾಯಮ್ಮ ತಿರುಮುಂಪು ಮಗ ಕಾಸರಗೋಡು ತಾಲ್ಕು ತೆಂಕು ತ್ರಿಕ್ಕಪುರ ಗ್ರಾಮದಲ್ಲಿರುವವ—ಪ್ರತಿವಾದಿ

ತಾ 1—4—35

ಮೇಲ್ಕಂಡ ವ್ಯಾಜ್ಯದ ವಾದಿಯು ಒಫೀಶಿಯಲ್ ರಿಸೀವರರಿಂದ ಕ್ರಯಕ್ಕೆ ಪಡಕೊಂಡ ದಾವಾ ಆಸ್ತಿಯಲ್ಲಿರ ವ ಪುದಿಯಮುರಂ ಎಂಬ [illegible] ಯನ್ನು ಪ್ರತಿವಾದಿಯು ಬಾಧಿಗೆ ಮಾಡಿ [illegible] ಅನುಭವಿಸಿಕೊಂಡು ಬರುವಲ್ಲಿ ಸದಿ ಪ್ರತಿವಾದಿಯಿಂದ ಪ್ಲೈಂಟಿನಲ್ಲಿ ಹೇಳಿದ ಐವೇಜು ರೂ 288 0 0 ನ್ನು ವ ವರ್ಷಂಪ್ರತಿ ರೂ 96—0—0ರಂತೆ ಮುಂದಿನ [illegible] ಐವೇಜ ಸಹಾ ಸದಿ ಪ್ರತಿವಾದಿಯ [illegible] ನೆಲೆಯಲ್ಲಿಯೂ ತಾಯಕ್ಕಾಟ್ಟ ಮನೆಯ ಕಾರ್ನವನ ಆಡಳ್ತೆದಾರನ [illegible] ಕೂಡಾ ವಸೂಲು ಮಾಡಿ [illegible] ಸದ್ರಿ ವಾದಿಯು ದಾಖ್ಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 15 1—1935ಕ್ಕೆ ತನ್ಕಿ ಬಗ್ಗೆ ಮುಂದಿರಿಸಿ ಇಟ್ಟಿರುವುದರಿಂದ ಸದ್ರಿ ವ್ಯಾಜ್ಯದಲ್ಲಿ ಸದಿ ತಾಯಕ್ಕಾಟ್ಟ ಮನೆಯ ಸರ್ವ ಮೆಂಬರರಿಗೆ ಯಾ, ಅವರ ಪೈಕಿ ಯಾರಿಗಾದರೂ ಆಕ್ಷೇಪ ವಗೈರೆ ಇದ್ದಪಕ್ಷಕ್ಕೆ ಅವರು ತನ್ನ ಆಕ್ಷೇಪ ವಗೈರೆಯನ್ನು ಸದ್ರಿ ತನಿಕೆ ದಿವಸ ಹಗಲು ಗಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಅವರ ಗೈರ ಹಾಜರಿಯಿಂದ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲಾದೀತೆಂದು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸೋಣಾಗಿದೆ.

ಕಾಸರಗೋಡು
1—4—35

K Rama Varma Rajah,
B A B L
Vakil for Plaintiff

Attur Vaikunta Prabhu Bank, Mangalore.

ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದ್ರಿ ಬ್ಯಾಂಕಿನಲ್ಲಿ ಈ ಮುಂಚೆ ಎರಡು ವರ್ಷಗಳ ಲಾಗಾಯ್ತು ಕ್ಲಾರ್ಕನಾಗಿದ್ದ R ನಾರಾಯಣ ಎಂಬವನನ್ನು ಈ ಬ್ಯಾಂಕಿನ ಕೆಲಸದಿಂದ ತೆಗೆದುಹಾಕಿರುತ್ತದೆ. ಬ್ಯಾಂಕಿನಲ್ಲಿ ಸಲ್ಲತಕ್ಕ ಯಾವತ್ತೂ ಸಾಲಗಳ ಅಸಲು ಬಡ್ಡಿ ವಗೈರೆ ಐವೇಜನು ಬ್ಯಾಂಕಿನ ಸಮಯದಲ್ಲಿ ಬ್ಯಾಂಕಿನಲ್ಲಿಯೇ ಬಂದು ಪ್ರೊಪ್ರೈಟರರ ಕೂಡೆ ಕೊಡತಕ್ಕದ್ದು. ಅವುಗಳಿಗೆ ಪ್ರೊಪ್ರೈಟರರ ಸಹಿ ಇರುವ ರಶೀದಿ ಕೊಡಲಾಗುವುದು. ಅಲ್ಲದೆ ಬ್ಯಾಂಕಿನಲ್ಲಿ ಸಲ್ಲತಕ್ಕ ಹಣವನ್ನು ಸದ್ರಿ R ನಾರಾಯಣನ ಕೂಡೆ ಕೊಟ್ಟಲ್ಲಿ ಅದು ಬ್ಯಾಂಕಿಗೆ ಸಲಪಲಿಕ್ಕಿಲ್ಲ. ಮಾತ್ರವಲ್ಲದೆ ಅದಕ್ಕೆ ಬ್ಯಾಂಕು ಎಷ್ಟು ಮಾತ್ರಕ್ಕೂ ಜವಾಬ್ದಾರಿಯಾಗಲಿಕ್ಕಿಲ್ಲ.

A V Prabhu Bank,
12—3—1935

A. Vaikunta Prabhu,
Proprietor

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Puttaiah Chatram Road, Balepet,
BANGALORE CITY.

Shiromani Narayanacharya
Choukhamba, Benares City

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬನಾರಸ್ (ಕಾಶಿ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



[illegible]

ಶರ್ಮ ಬ್ರದರ್ಸ್ ಅಂಡ್ ಕಂಪೆನಿ,
[illegible] ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ



ಐಟಿಡಾಯಿಡ್ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
[illegible] ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು.
[illegible]

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, [illegible], ಮುಂಬಾಯಿ [illegible]
[illegible]

ಗುಣಬಾರದಿದ್ದರೆ ಹಣ ವಾಪಾಸು

[illegible]

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ).

[illegible]

ವಿಳಾಸ — ಸಂಜೀವಿನೀ ಔಷಧಾಲಯ ಮು ಪೋ ಮಿರಜ, S M C

ಬಿಹಾರ್ ರಸಾಯನಿಕ ವೈದ್ಯ ಶಾಲೆಯಲ್ಲಿ ತಯಾರಾದ ಆಯುರ್ವೇದಿಯ ಔಷಧಗಳು.

ಪ್ರಸೂತಿ ಕಲ್ಯಾಣ—[illegible]
ಕಾಮಕಲ್ಪ ರಸಾಯನ—ಧಾತುಪುಷ್ಟಿ—ಬಲಹೀನತೆ
ಅನಂತಮೂಲಸರಸ—ರಕ್ತಶುದ್ಧಿ [illegible]
ದಸವಂತ್ರಿ ಮುಲಾಮು—[illegible]
ಬ್ರಾಹ್ಮಿ ರಸಾಯನ—[illegible]
ಪುನರ್ನವಾಸವ—[illegible]
ಕಾಲಮೇಗ—ಇದು ಮಕ್ಕಳ ಕಲೀಜ ಮತ್ತು ಪ್ಲೀಹದ ಮೇಲೆ
[illegible]

The Behar Chemical Works, Bhagalpur
ಏಜಂಟ್ಸ್—[illegible] ಕಂಪೆನಿ, [illegible] ಮಂಗಳೂರು, ದ. ಕ.

The Popular Insurance Company, Ltd.

Head Office: MANGALORE, S. India

The Pioneer Life Office of the West Coast.

Wanted influential District agents in Unrepresented areas.

A few Press opinions.

"INSURANCE HERALD," CALCUTTA This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Company can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

"THE ARTISAN," TRIVANDRUM We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rao, who has developed in him a great deal of life insurance sense.

ಸಾಂಬಾರ ವರ್ತಮಾನ.

["ಸಾಂಬಾರ ವರ್ತಮಾನ"ಗಳಿಗೆ ಮೀಸಲಾಗಿಟ್ಟ ಈ ನಾಲ್ಕು ಕಲಮುಗಳಲ್ಲಿ ಅಲ್ಲಲ್ಲಿನ ಸ್ವೈರ ವಾರ್ತೆಗಳನ್ನು ಹಾಸ್ಯರಸಪೂರ್ಣವಾಗಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ. ಈ ವಾರ್ತೆಗಳನ್ನು ಲಘುಹಾಸ್ಯ ಪ್ರಿಯರಾದ ಪ್ರಖ್ಯಾತ ಸಾಹಿತಿಗಳೊಬ್ಬರಿಂದ ವಿಶಿಷ್ಟವಾಗಿ ಸ್ವದೇಶಾಭಿಮಾನಿಗೆಂದೇ ಬರೆಸಲಾಗುತ್ತಿದೆ]

ಸಾಧುಗಳ ಶಕ್ತಿ.

ಶ್ರೀ ಜೆ. ಎಸ್. ಚೌಧುರಿಯವರು 'ಟೈಮ್ಸ್' ಎಂಬ ಪತ್ರಿಕೆಯಲ್ಲಿ ಸಚಿತ್ರವಾಗಿ ಒಂದು ಲೇಖನವನ್ನು ಬರೆದು ಈ ಕಥೆ ಹೇಳಿದ್ದಾರೆ:- ಹಿಮಾಲಯ ಪ್ರದೇಶದಲ್ಲಿ ದೊಡ್ಡ ದೊಡ್ಡ ಆನೆಗಳನ್ನು ಹಿಡಿಯುವುದಕ್ಕಾಗಿ ಮಿ| ಎಂಡರ್ಸನ್ ಎಂಬ ಆಂಗ್ಲೇಯ ಅಧಿಕಾರಿಯೊಬ್ಬರು ಪಂಜರವನ್ನಿಟ್ಟು, ಬಳಿಯಲ್ಲಿನ ಕಾಡಿಗೆ ಹೋಗಿ ಒಂದು ಹುಲಿಗೆ ಗುಂಡಿಟ್ಟು ಹೊಡೆದರು. ಹುಲಿಯು ಅರ್ಧ ಸತ್ತು ತಿಂದು ಎಂಡರ್ಸನರನ್ನು ಓಡಿಸಿಕೊಂಡು ಬಂತು. ಅವರ ದುರ್ಭಾಗ್ಯವು ಕರ್ತವ್ಯಪರಾಯಣವಾಯಿತು. ಎಂಡರ್ಸನರು ಓಡಿದರು ಓಡುತ್ತಾ ಒಂದು ಕಡೆ ಕುಳಿತಿದ್ದ ಒಬ್ಬ ಸಾಧುವಿನ ಆಶ್ರಯಕ್ಕೆ ಹೋದರು. ಮಾತುಕತೆಯಾಗುತ್ತಾ, ಒಂದು ಹುಲಿಯು ತನ್ನನ್ನು ಓಡಿಸಿಕೊಂಡು ಬಂದುದರಿಂದ ತಾನು ಇಲ್ಲಿಗೆ ಬಂದೆನೆಂದು ಎಂಡರ್ಸನ್ನರು ಹೇಳಿದರು. ಅಷ್ಟರಲ್ಲಿ ಅದೇ ಹುಲಿಯು ಅಲ್ಲಿಗೆ ಓಡಿಬಂದು ತನ್ನನ್ನು ಘಾಯಗೊಳಿಸಿದವನ ಮೇಲೆ ಹಾರಲು ಸಿದ್ಧವಾಯಿತು. ಒಡನೆ ಆ ಸಾಧುವು "ಬಟ್ಟಾ ಬಂದೆ ಹೋಗು" ಎಂದರು. ಹುಲಿಯು ಅಲ್ಲೇ ನಿಂತಿತು. "ಹುಲಿಗೆ ನೀವು ಹೊಡೆದಿರಾ?" ಎಂದರು ಸಾಧುಗಳು. 'ಹೌದು' ಎಂದರು ಎಂಡರ್ಸನರು. "ನೀವು ಅದಕ್ಕೆ ಹೊಡೆಯುವ ಮೊದಲು ಅದು ನಿಮಗೆ ಕಚ್ಚಿತೇ?" ಎಂದರು ಸಾಧುಗಳು. 'ಇಲ್ಲ' ಎಂದರು ಎಂಡರ್ಸನರು. ಸಾಧುಗಳು ಹುಲಿಯ ಬೆನ್ನು ಸವರಿ ಹೋಗೆಂದರು. ಒಡನೆ ಹುಲಿಯು ಸ್ವಸ್ಥಗೊಂಡಂತೆ ಕಂಡಿತು. ಅದು ಕೋಪವನ್ನು ಮರೆತು ವನಕ್ಕೆ ತೆರಳಿತು. ಮಿ| ಎಂಡರ್ಸನರು ಅಂದಿನಿಂದ ಆ ಸಾಧುವಿನ ಶಿಷ್ಯರಾದರು.

× × × × × ×

ಹೈದರಾಬಾದಿನ ದರ್ಬಾರು—

ಎಂದರೆ ಅದೆಷ್ಟೆಂದು ಯಾರೂ ವಿವರಿಸಬಲ್ಲರು. ಅಲ್ಲಿಯ ಪ್ರಭುಗಳು ಜ್ಯುಬಿಲಿ ಸಮಾರಂಭಕ್ಕೆ ಲಕ್ಷಗಟ್ಟಲೆ ರೂಪಾಯಿಗಳನ್ನು ಕೊಡಲು ಸಿದ್ಧರು. ಆದರೆ ಮಾಡಲೇನು? ೪೦೦೦ ಜನರಮೈಲ ಗಳಷ್ಟು ವಿಸ್ತೀರ್ಣವುಳ್ಳ ಆ ಪ್ರಾಂತ್ಯದಲ್ಲಿ ತರಬೇತಿ ಪಡೆದ ಒಬ್ಬಳು ಸೂಲಗಿತ್ತಿಯೂ ಇಲ್ಲವೆಂದು ಈಗ ಮಿಸ್ ಅರ್ ಪಿಗ್ಗೊಟ್ ಎಂಬ ಮಿಶನೆರಿಯೊಬ್ಬಳು ಕಂಡುಹಿಡಿದಿರುವಳು. ಮಕ್ಕಳನ್ನು ಹೆತ್ತ ಸ್ತ್ರೀಯರ ರಕ್ಷಣೆಗಾಗಿ ಒಂದಾದರೂ ಚಿಕಿತ್ಸಾಲಯವಲ್ಲವಂತೆ. ಯಾರೂ ಆಶ್ಚರ್ಯಪಡಬಾರದು, ಸಂಸ್ಕೃತಿಯೆಂದರೆ ಬೇರೆಯಲ್ಲ.

× × × × × ×

ಪತ್ನಿಯೊಡನೆ ಕಿವಿಯೂ ಹೋಯಿತು

ನಿಜವಾಗಿಯೂ ಅತ್ಯಂತ ದುಃಖಕರ ವಾರ್ತೆಯಿದು (ದುಃಖವೆಂದರೇನೆಂದು ತಿಳಿದವರಿಗೆ) ಡಿಲ್ಲಿಯಲ್ಲಿ ಮಹಮ್ಮದ್ ಹುಸೇನ್ ಎಂಬವನು ತನ್ನ ಅಂಗಡಿಯನ್ನು ಬಿಟ್ಟು ಡಿಲ್ಲಿಯ ಪೇಟೆಗೆ ಹೋಗಿ ಹಿಂದೆಬರುವಾಗ ಅವನ ಅಂಗಡಿಗೆ ಯಾರೋ ಬೀಗಹಾಕಿದ್ದರು. ವಿಚಾರಿಸಿದಾಗ ಯಾರೋ ಬಂದು ಬೀಗಹಾಕಿಹೋದರೆಂದು ಯಾರೋ ಹೇಳಿದರು. ಅವನು ನೆಟ್ಟಗೆ ಮನೆಗೆ ಹೋದನು. ಅಲ್ಲಿ ನೋಡುವಾಗ ಅವನ ಪತ್ನಿಯು ಕಾಣೆ. ವಿಚಾರಿಸುತ್ತಿರಲು ಆಸಿಕ್ ಎಂಬವನು ತನ್ನ ಪತ್ನಿಯನ್ನೊಯ್ದನೆಂದು ತಿಳಿದುಬಂದು ಅವನ ಮನೆಗೆ ತೆರಳಿದನು. ಒಳಗೆ ಹೋಗುತ್ತಲೇ ಇವನನ್ನು ಒಬ್ಬಳು ಸ್ತ್ರೀಯು ಹಿಡಿದು ಕಿವಿಯನ್ನು ಕಚ್ಚಿ, ಇಡೀ ಕಿವಿಯನ್ನು ತನ್ನ ಬಾಯೊಳಗಿಟ್ಟುಕೊಂಡು ಹೋಗೆಂದು ಬಿಟ್ಟಳು. ಹುಸೇನನು ಪೋಲೀಸಿಗೆ ತಿಳಿಸಿದ್ದಾನೆ — ಯಾರಿಗೆ ಬೇಸರವಾಗದು?

× × × × × ×

ಪರಲೋಕದಲ್ಲಿ ಮದುವೆಯಾಗಲು—

ನಿರ್ಧರಿಸಿ, ಅತ್ತ ಒಟ್ಟಾಗಿ ತೆರಳುವ ಗುಟ್ಟಿನ ದಂಪತಿಗಳಿಗೆ ಎಲ್ಲಿಯೂ ಕಡಮೆಯಿಲ್ಲ. ಜಿನೆವಾದಲ್ಲಿ ಓರ್ವ ಉಪಾಧ್ಯಾಯರು. ಅವರಿಗೊಂದು ಹೊಟೇಲಿನ ಹುಡುಗಿಯ ಮೇಲೆ ಪ್ರೇಮವು ಬಿತ್ತು. (ಅದನ್ನು ಎಬ್ಬಿಸಲಾಗಲಿಲ್ಲ ಅವರಿಗೆ) ವಿವಾಹವಾಗಬೇಕೆಂದಿದ್ದಾಗ ಅವರಿಬ್ಬರ ಪೂರ್ವಾಪಿತೃಗಳೂ ಅದಕ್ಕೊಪ್ಪದಾದರು. ಆಗ ಈ ದಂಪತಿಗಳು ಪರಲೋಕವಾಸದ ನಿರ್ಧಾರಮಾಡಿ ಜಿನೆವಾ ಧಲ್ಲಿನ ವಿಮಾನವೊಂದರಲ್ಲಿ ಕುಳಿತು, ೨೦೦೦ ಅಡಿಗಳ ಮೇಲಿಂದ ಕೆಳಗೆ ಹಾರಿ ಪ್ರಾಣಬಿಟ್ಟರು. ಇಂತಹ ನಿರ್ಧಾರ ಮಾಡುವ ಪ್ರಣಯಿಗಳು ಎಷ್ಟು ಸಾಮರ್ಥ್ಯವಂತರೆಂದು ನಾವೇ ಯೋಚಿಸಿಕೊಳ್ಳೋಣ.

ಬಂಧನವಾಸವು ಶೀಘ್ರ ಮರಣಕ್ಕೆ ಕಾರಣ—

—ಎಂದು ಶ್ರೀ ಜಮ್ನಾದಾಸ್ ಮ್ಹೆತಾ ಇವರು ಲಂಡನಿನಲ್ಲಿ ಒಂದು ಭಾಷಣ ಮಾಡುತ್ತಾ ಹೇಳಿದರು. "ಶ್ರೀ ವಿಟ್ಠಲಭಾಯಿ ಪಟೇಲರು ಬಂಧನವಾಸದಿಂದಾಗಿಯೇ ಅಲ್ಪಾಯುಗಳಾಗಿ ಮೃತರಾದರು. ಅವರಂತಹ ವೀರಾಗ್ರೇಸರನ್ನು ನೋಡಸಿಗುವುದು ದುರ್ಲಭ. ಯೂರೋಪಿನಲ್ಲಿ ಕಾಂಗ್ರೆಸಿನ ರಕ್ಷಕರಾಗಿದ್ದವರು ಅವರೊಬ್ಬರೇ" ಎಂದರು.

× × × × × ×

ಭಿಕ್ಷುಕರ ಮೇಲೆ ಬಾಣಾಸ್ತ್ರ

ಪಂಜಾಬ್ ನ್ಯಾಯವಿಧಾಯಕ ಸಭೆಯಲ್ಲಿ ಭಿಕ್ಷುಕರ ಶಾಸನವೆಂಬುದು ಚರ್ಚೆಗೆ ಬಂದು ಬಿದ್ದು ಹೋಯಿತು. ಅದರ ಪರಿಣಾಮವಾಗಿ ಪಂಜಾಬಿನಲ್ಲಿ ಭಿಕ್ಷುಕರ ಮೇಲೆ ಬಾಣಾಸ್ತ್ರವನ್ನು ಪ್ರಯೋಗಿಸಲಾಗುತ್ತಿದೆ. ಸಿಕ್ಕಸಿಕ್ಕ ಭಿಕ್ಷುಕರನ್ನು ಸೆರೆಹಿಡಿಯಲಾಗುತ್ತಿದೆ. ಮೊದಲಿನ ದಿನ ಏಳು ಮಂದಿ ಫಕೀರರನ್ನು ಪೋಲೀಸರು ಸೆರೆಹಿಡಿದರು. ಪೋಲೀಸರು ಯಾವ ಭೇದವನ್ನೂ ಇಡದೆ ಬೇಡುವವರನ್ನೆಲ್ಲ ಸೆರೆಹಿಡಿದು ಈ ರೋಗವನ್ನು ನಿಲ್ಲಿಸಬೇಕೆಂದು ನಿರ್ಧರಿಸಿರುತ್ತಾರೆ. ನಿಶ್ಚಿಂತನಾಗಿಯೂ ಹೇಳಿದರು.

× × × × × ×

"ಸುಂದರಿಯಲ್ಲ—ಹೋಗು!"

ಲಾಹೋರಿನಲ್ಲಿ ಶಾವತ್ ಪ್ಯಾರಿ ಎಂಬವಳನ್ನು ೧೧ ವರ್ಷಗಳ ಹಿಂದೆ ಕಿಶೋರಿ ಚಂದ್ ಎಂಬ ವಕೀಲನಿಗೆ ವಿವಾಹಮಾಡಿದ್ದರು. ಒಂದೂವರೆ ವರ್ಷ ಮಾತ್ರ ಅವನು ಹೆಂಡತಿಯನ್ನು ಮನೆಯಲ್ಲಿಟ್ಟುಕೊಂಡು ಆ ಮೇಲೆ ಅತ್ತೆಯ ಮನೆಗೆ ಅವಳನ್ನು ಕಳುಹಿಸಿ ಪುನಃ ಹಿಂದೆ ಕರೆತರಲೇ ಇಲ್ಲ. ಹೆಂಡತಿಯು ಸುಂದರಿಯಾಗಿಲ್ಲ ಆದುದರಿಂದ ಅವಳನ್ನು ಬಿಟ್ಟೆ ಎಂದು ಗಂಡನ ನುಡಿ. ಈಗ ತಿಂಗಳಿಗೆ ೪೦ ರೂಪಾಯಿ ಅಶನಾರ್ಥ ಕೊಡಬೇಕೆಂದು ಪ್ಯಾರಿಯು ಗಂಡನ ಮೇಲೆ ದಾವೆ ತಂದಿರುವಳು. ರೂಪವತಿಯರ ಪತಿಗಳ ಸ್ಥಿತಿಯನ್ನು ತಿಳಿದ ಕಿಶೋರನು ಏನು ಮಾಡುವನೋ!

× × × × × ×

ಕಳ್ಳರು ಬುದ್ಧಿವಂತರೆಂದು ಈಗ ತಿಳಿದುಬಂತು!

ಡಿಲ್ಲಿಯ ಬಾಲಾ ಸಾಹೇಬ್ ಗುರುದ್ವಾರದಲ್ಲಿ ಮಹಾ ಹಬ್ಬ. ಸಾವಿರಾರು ಸಿಖ್ಖರು ನೆರೆದಿದ್ದರು. ಎಲ್ಲರೂ ಗುರುದ್ವಾರದೊಳಗೆ ಹೋಗಿದ್ದರು. ತಮ್ಮ ಪಾದರಕ್ಷೆಗಳನ್ನೆಲ್ಲ ಹೊರಗೆ ಇರಿಸಿದ್ದರು. ಭಕ್ತಾದಿಗಳು ತಮ್ಮ ಮುಡಿಪನ್ನರ್ಪಿಸಿ ಹೊರಗೆ ಬರುವಾಗ ನೋಡುವುದೇನು? ಒಟ್ಟು ನೂರು ಜೋಡಿ ಪಾದರಕ್ಷೆಗಳು ಕಾಣೆಯಾಗಿದ್ದುವು. ಕಳ್ಳತನವು ವಿಶೇಷವಲ್ಲವಂತೆ. ಸಾವಿರಾರು ಪಾದರಕ್ಷೆಗಳಲ್ಲಿ ಹೊಸ ಹೊಸ ಪಾದರಕ್ಷೆಗಳನ್ನೇ ಆರಿಸಿದ ಕಳ್ಳರ ಬುದ್ಧಿವಂತಿಕೆಯೇ ವಿಶೇಷವಂತೆ.

* * *

ಆಯುಸ್ಸು ಮುಗಿದರೆ ಏನಾಗುವುದೆಂದು—

ಸರ್ವರಿಗೂ ತಿಳಿದಿದೆ. ಆದರೆ ಆಯುಸ್ಸು ಮುಗಿದ ಮನುಷ್ಯನು ಬಾಳೆಯ ಮರವೊಂದರ ಆಶ್ರಯದಲ್ಲಿ ನಿಂತಾಗ ಏನಾಯಿತೆಂದು ತಿಳಿಯಬೇಕೆಂದಿರುವವರು ಈ ವಾರ್ತೆಯನ್ನು ಓದಬಹುದು. ಮನ್ನಾರಗುಡಿ ಎಂಬಲ್ಲಿನ ಪವಾನಿ ಎಂಬ ಹಳ್ಳಿಯಲ್ಲಿ ೨೦ ವರ್ಷ ಪ್ರಾಯದ ಕರುಪ್ಪಕೋನಾನ್ ಎಂಬ ಕುರುಬನು ಕುರಿಮಂದೆಯ ಕಾವಲುನೋಡುತ್ತಿದ್ದನು. ಅಷ್ಟರಲ್ಲಿ ವಿಪರೀತ ಮಳೆಯು ಬಂತು. ಗುಡುಗು ಸಿಡಿಲೂ ಬಂದಿತು. ಮಳೆಯ ಹೊಡೆತದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅವನು ಒಂದು ದೊಡ್ಡ ಬಾಳೆಯಮರದ ಆಶ್ರಯದಲ್ಲಿ ನಿಂತನು. ಒಡನೆ 'ಕಣಾರ್' ಎಂದಿತು—ಸಿಡಿಲೊಂದು. ಕರುಪ್ಪನು ಭಸ್ಮೀಭೂತನಾದನು. ಬಾಳೆಯಮರವೂ ಅವನಂತಾಯಿತು. ಅವನ ಬಳಿಯಲ್ಲಿ ಒಬ್ಬನು ಕಿವುಡನಾಗಿರುವನು.

ಚಕ್ರವರ್ತಿಯವರ ರಜತೋತ್ಸವದ ಬಹಿಷ್ಕಾರ—

ಮಾಡಬೇಕೆಂದು ಕೊಮಿಲ್ಲಾದ ಮೌಲ್ವಿ ಅಶ್ರಫುದ್ದೀನ್ ಚೌಧುರಿ ಎಂಬವರು ಮೊನ್ನೆ ಭಾಷಣಮಾಡುತ್ತಾ 'ಸರಕಾರದ ಪ್ರಚಾರಕಾರ್ಯಕ್ಕೆ ಯಾರೂ ಲಕ್ಷ್ಯವೀಯಬಾರದು' ಎಂದು ಹೇಳಿದರು. ಹೇಳಿ ಬಾಯಿ ಮುಚ್ಚಬೇಕಾದರೆ ಪೋಲೀಸರು ಎದುರು ಬಂದು ನಿಂತು ಅವರನ್ನು ಸ್ವೀಕರಿಸಿಕೊಯ್ದರು. ಪುಣ್ಯಾತ್ಮರನ್ನು ಈಗ ೧೫೦೦ ರೂಪಾಯಿಗಳ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವರು. ಲೋಕಲ್ ಬೋರ್ಡ್ ಚುನಾವಣೆಯ ಸಮಯ ಅವರು ಭಾಷಣಮಾಡಿ ಗರ್ಜಿಸಿದ ಫಲವಂತೆ ಇದು.

* * *

ವಿದ್ಯಾರ್ಥಿಗಳನ್ನು ಎಚ್ಚರಿಸುವುದಕ್ಕಾಗಿ—

ಒಂದು ವಿಶೇಷ ವಾರ್ತೆ—ಜಬ್ಬಲಪುರದ ಬಿ. ಎಸ್ ಸಿ. ಕ್ಲಾಸಿನ ಗುರುದಾಸ್ ಮುಖರ್ಜಿ ಎಂಬ ವಿದ್ಯಾರ್ಥಿಯು ರಾತ್ರಿಂದಿವ ಅನ್ನಾಹಾರ ನಿದ್ರೆಗಳನ್ನು ಮರೆತು ಪರೀಕ್ಷೆಗಾಗಿ ಓದಿದನು. ತಂದೆತಾಯಿಗಳು ಎಷ್ಟು ಎಚ್ಚರಿಸಿದರೂ ಮಗನ ವಿದ್ಯಾತುರವು ಹೆಚ್ಚಿ ಅವನು ದೀಪವನ್ನು ರಾತ್ರಿ ಇಡೀ ಆರಿಸುತ್ತಿದ್ದಿಲ್ಲ. ಚಹಾ ಕುಡಿದು ದಿನಂಪ್ರತಿ ರಾತ್ರೆ ಓದುತ್ತಿದ್ದನು. ಹೀಗೆ ಓದಿದವನ ಪಾಡು ಏನಾದೀತೆಂದು ನಾವೇ ಊಹಿಸಿಕೊಳ್ಳಬಹುದು. ಪರೀಕ್ಷೆಗೆ ಕೆಲವು ದಿನಗಳಿರುವಾಗಲೇ ಅವನು ಭ್ರಾಂತನಾದನು. ಪಠ್ಯಪುಸ್ತಕಗಳನ್ನು ಚಿಂತಪಾರಮಾಡಿಕೊಂಡಿಟ್ಟು ಅವನು ದಾರಿಯ ಮೇಲೆ ನಡೆಯುತ್ತಾ ಏನೋ ಹೇಳಿದನು. ಕೆಲವು ದಿನಗಳ ವರೆಗೆ ಮನೆಗೆ ಬರಲೇ ಇಲ್ಲ. ಹೆತ್ತವರು ಮಗನನ್ನು ಹುಡುಕಿ ತಂದು ನೋಡಲಾಗಿ ಅವನು ಹುಚ್ಚನಾದುದು ಕಂಡುಬಂತು. ಪಾಪ, ಆ ಹೆತ್ತವರು ಮಗನ ವಿದ್ಯೆಗೆ ವೆಚ್ಚಗೈದುದಕ್ಕಿಂತ ಹೆಚ್ಚಿನ ದ್ರವ್ಯವನ್ನು ಅವನ ಭ್ರಾಂತಿನಿವಾರಣೆಗೆ ವೆಚ್ಚಮಾಡುತ್ತಿರುವರು.

* * *

ಮರಣದ ರೂಪ—

ಹೇಗಿರುವುದೆಂದು ಯಾರೂ ನೋಡಿಲ್ಲ. ಆದರೆ ಅದು ಇದೆಯೆಂಬುದು ಖಂಡಿತ. ಲೋಕದಲ್ಲಿ ಎಷ್ಟು ವಿಧಗಳ ಮರಣಗಳಿವೆಯೆಂದು ಲೆಕ್ಕವಿಟ್ಟರೆ ತಿಳಿದೀತು. ಸಹಸ್ರ ರೀತಿಯ ಮರಣಗಳ ರೂಪದಲ್ಲಿ ಇದೂ ಒಂದು. ಸುಕ್ಕೂರಿನ ರೈಲ್ವೇ ಪಹರೆಯಲ್ಲಿ ಒಬ್ಬ ವಿಧವೆ. ಅವಳಿಗೆ ಎರಡು ಮಕ್ಕಳಿದ್ದುವು. ಅವುಗಳನ್ನು ರೈಲ್ವೇ ಸ್ಟೇಶನಿನ ಬಳಿ ಇರುವ ತನ್ನ ಬಿಡಾರದಲ್ಲಿ ಮಲಗಿಸಿ ರೈಲ್ವೆ ಕೆಲಸಕ್ಕೆ ಹೋಗಿದ್ದಳು. ಮಧ್ಯಾಹ್ನದಲ್ಲಿ ಒಂದು ಇಂಜಿನು ಎರಡು ರೈಲ್ವೆಗಾಡಿಗಳನ್ನು ದೂಡಿಬಿಟ್ಟಿತು. ಈ ಗಾಡಿಗಳು ಕಂಬಿಯಲ್ಲಿ ಓಡುತ್ತಾ ಬಳಿಯಿರುವ ಕಟ್ಟಡದ ಮೇಲೆ ಬಿದ್ದು, ಕಟ್ಟಡವನ್ನು ಕೆಡವಿದುವು. ಕೋಣೆಯಲ್ಲಿ ಮಲಗಿರುವ ಎರಡು ಮಕ್ಕಳೂ ಮೃತವಾಗಿ, ಶವಗಳನ್ನು ಸುಕ್ಕೂರು ಆಸ್ಪತ್ರೆಗೊಯ್ದರು.

* * *

ಚಾರ್ಲಿ ಚಾಪ್ಲಿನನು ಸುಳ್ಳು ಹೇಳಿದನೇ?

ಚಾರ್ಲಿ ಚಾಪ್ಲಿನನು ತನ್ನ ಪ್ರಥಮ ಪತ್ನಿಯನ್ನು ತ್ಯಜಿಸಿ ಪೌಲೆಟ್ ಗೊಡಾರ್ಡ್ ಎಂಬವಳನ್ನು ವಿವಾಹವಾಗಿರುವನು ಎಂಬ ವಾರ್ತೆಯು ಸರ್ವತ್ರ ಹರಡಿದ್ದಿತು. ಆದರೆ ಚಾರ್ಲಿಯು ಅಂತಹ ವಾರ್ತೆಯು ಸುಳ್ಳೆಂದು ಹೇಳುತ್ತಿದ್ದನು. ಮೊನ್ನೆಯ ವರೆಗೂ ಅವನು ಈ ವಾರ್ತೆಯು ಸುಳ್ಳೆಂದು ಅಲ್ಲಗಳೆದನು. ಮೊನ್ನೆ ಪುನಃ ಒಂದು ವಾರ್ತೆಯು ಬಂದಿದೆ. ತಾನು ಗೊಡಾರ್ಡಳನ್ನು ವಿವಾಹವಾಗಿರುವುದು ನಿಜವೆಂದು ಅವನು ಒಪ್ಪಿರುವನಂತೆ. ಒಂದು ಸಣ್ಣ ದೋಣಿಯಲ್ಲಿ ಕೆಲವರ ಸಮಕ್ಷಮ ತಾನು ಅವಳನ್ನು ವಿವಾಹವಾದನೆಂದು ಹೇಳಿರುತ್ತಾನೆ. ಏಕೆ ಸುಳ್ಳುಹೇಳಿದನೆಂದು ನೀವೇ ತರ್ಕಿಸಿರಿ.

ಸೂಚನೆಗಳು ಹಲವು—

—ಅದಕ್ಕೆ ಅನುಸರಿಸುವವರು. ಕಡಮೆ. ಕೆಲ ದಿಲ್ಲಿಯಲ್ಲಿ ವಿದ್ಯಾರ್ಥಿಗಳ ಕೂಟದಲ್ಲಿ ಭಾಷಣ ಮಾಡುವಾಗ ಶ್ರೀ ಲಾಲಾ ಶ್ರೀರಾಮ್‌ರವರು ವಿಲಾಯತಿ ಆಟಗಳಿಗಿಂತ ಅಗ್ಗವೂ ಉತ್ತಮವೂ ಆಗಿರುವ ಹಿಂದೀ ಆಟಗಳನ್ನೇ ಯಾವಾಗಲೂ ಆಡುತ್ತಿರಬೇಕಾಗಿ ಉಪದೇಶಿಸಿದರು.

ಇಲ್ಲ, ಗೊತ್ತಿಲ್ಲ, ಆಗುವುದಿಲ್ಲ, ಬೇಡ—

ಎಂಬ ನುಡಿಗಳ ಪ್ರಯೋಗವು ಎಲ್ಲಿ ಹೆಚ್ಚಾಗುತ್ತದೆಂದು ಲೆಕ್ಕತೆಗೆಯಬಯಸುವವರು ನೆಟ್ಟಗೆ ನ್ಯಾಯವಿಧಾಯಕ ಸಭೆಗಳನ್ನು ಹೊಕ್ಕು ಹೋಮ್ ಮೆಂಬರರುಗಳ ಕುರ್ಚಿಯ ಬಳಿ ಕುಳಿತಿರಬೇಕು. ಈ ನುಡಿಗಳ ಧಾಳಿಯೇ ಹೊರಗಾಗುವುದನ್ನು ಅಲ್ಲಿ ನೋಡಬಹುದು. ಮುಂಬಾಯಿ ಕೌನ್ಸಿಲಿನಲ್ಲಿ ಶ್ರೀ ಆರ್ ಜಿ. ಸೋಮನ್‌ರವರು ಹೋಮ್ ಮೆಂಬರರಿಗೆ ಪ್ರಶ್ನೆಯಿಟ್ಟು "ಹಿಂದೂಸ್ಥಾನೀ ಸೇವಾದಲವು ಕಾಂಗ್ರೆಸ್ಸಿನ ಅಂಗವೆಂಬುದು ತಮಗೆ ಗೊತ್ತೋ?" ಎಂದರು. 'ಇಲ್ಲ' ಎಂದರು ಹೋಮ್ ಮೆಂಬರರು. "ಅದರ ಮೇಲಿರುವ ಬಹಿಷ್ಕಾರವನ್ನು ತೆಗೆಯುವಿರೇ?" ಎಂದು ಪ್ರಶ್ನೆಯಾಯಿತು. "ಆಗುವುದಿಲ್ಲ" ಎಂದಿತು ಉತ್ತರ. ಬಿಹಾರಿನಲ್ಲಿ ಸೇವಾದಳದ ಮೇಲೆ ಬಹಿಷ್ಕಾರ ಇಲ್ಲ—ಅದು ಗೊತ್ತೋ?" ಎಂದಿತು ಪ್ರಶ್ನೆ. "ಗೊತ್ತಿಲ್ಲ!" ಎಂದಿತು ಉತ್ತರ. ಅಂತೂ ಚಟುಕುನುಡಿಗಳ ಸರಗಳೇ!

× × × × × ×

ನೆನಹಿನ ಶಕ್ತಿ ಇಲ್ಲದ ರಾಜರು—

ಒಬ್ಬರಿರುವರು. ಅವರ ಕತೆ ಕೇಳಿ. ಕಾಶೀಪುರದ ಮಹಾರಾಜರು ಹಿಂದೂದೇಶಕ್ಕಿಂತಲೂ ಇಂಗ್ಲಾಂಡಿನಲ್ಲಿ ಹೆಚ್ಚಿಗೆ ವಾಸಿಸುವ ಅಭ್ಯಾಸವಮಾಡಿಕೊಂಡವರು. ೧೯೩೦ರಲ್ಲಿ ಇವರು ಹಿಂದೂದೇಶಕ್ಕೆ ಬಂದಾಗ ಇಂಗ್ಲಾಂಡಿನಿಂದ, ಮಾನು ಹಿಡಿಯುವ ಒಂದು ಬಿತ್ತವನ್ನು ಒಂದು ಗಾಳವನ್ನೂ ಒಲ್ಲಿಯ ಹಾರ್ಡಿ ಬ್ರದರ್ಸ್ ಕಂಪೆನಿಯವರಿಂದ ಪಡೆದುಕೊಂಡಿದ್ದರು. ಆದರೆ, ಮಹಾರಾಜರು ೮ ಸಂಬಂಧವಾದ ಬೀಲಿನ ಹಣವನ್ನು ಕೊಡಲಿಲ್ಲವಂತೆ. ಇತ್ತಲಾಗೆ ಈ ರಾಜರು ಪುನಹ ಇಂಗ್ಲೆಂಡಿಗೆ ಹೋದಾಗ ಆ ಕಂಪೆನಿಯವರು ಇವರ ಮೇಲೆ ೩೪ ಪವನಗಳ ದಾವೆ ತಂದರು. ವೆಸ್ಟ್ ಮಿನಿಸ್ಟರ್ ಕೌಂಟಿ ಕೋರ್ಟಿನಲ್ಲಿ ವಿಚಾರಣೆ ನಡೆಯಿತು. "ನಾನು ಏನನ್ನೂ ಪಡೆದ ನೆನಪು ನನಗಿಲ್ಲ" ಎಂದು ರಾಜರ ವಾದ. "ನಿಮಗೆ ನೆನಹಿನ ಶಕ್ತಿಯು ಇದೆಯೋ?" ಎಂದು ಜಡ್ಜರು ಕೇಳಿದಾಗ ಈ ಜ್ಞಾನಶೂರ ರಾಜರು "ಇಲ್ಲ" ಎಂದರು. ಒಡನೆ ಜಡ್ಜರು "ನಿಮಗೆ ಯಾವುದರ ನೆನಪು ಇಲ್ಲ. ನಿಮಗೆ ಜ್ಞಾಪಕಶಕ್ತಿಯೇ ಇಲ್ಲವಾದುದರಿಂದ ಆ ಸಾಮಾನುಗಳ ಕ್ರಯವನ್ನು ಕೊಟ್ಟುಬಿಡಿರಿ" ಎಂದು ತೀರ್ಮಾನಿಸಿದರು. ಜಡ್ಜರು "ನಿಮಗೆ ಬೇರೆ ಏನಾದರೂ ಹೇಳಲಿಕ್ಕಿದೆಯೋ?" ಎಂದು ಕೇಳಿದರು. ಅದಕ್ಕೆ ಮಹಾರಾಜರು "ಇಂಗ್ಲಾಂಡಿನಲ್ಲಿ ನನಗೆ ಸಾಲವಿಲ್ಲ. ಹಿಂದೂಸ್ಥಾನದಲ್ಲಿ ನಾನು ಯಾರಿಗೆ ಹಣಸಲ್ಲಿಸಬೇಕು ನನಗೂ ಅನೇಕರು ಕೊಡಬೇಕು. ಅವೆಲ್ಲ ವ್ಯಾಪಾರ" ಎಂದರು. ಈ ರಾಜ ವ್ಯವಹಾರ ಕೌಶಲ್ಯವು ಆದರ್ಶನೀಯವೇ.

× × × × × ×

ಚಕ್ರವರ್ತಿಯವರ ಆಮಂತ್ರಣವನ್ನು—

ತಿರಸ್ಕರಿಸ ಬಾರದು ಇದ್ದರೆಂದು ಈಗ ತಿಳಿಯಿತು. ಐರ್ಲೆಂಡಿನ ಅಧ್ಯಕ್ಷರಾದ ಮಿ| ಡಿ| ವೆಲೆರಾರಿಗೆ ಪ್ರಧಾನ ಮಂತ್ರಿಯವರ ದ ಮುಖಾಂತರ ಚಕ್ರವರ್ತಿಯವರ ಪರವಾಗಿ ಒಂದು ಆಮಂತ್ರಣವನ್ನು ಕಳುಹಿಸಿ "ರಜತೋತ್ಸವ ಸಮಾರಂಭಕ್ಕೆ ಚಿತ್ತೈಸಬೇಕು" ಎಂದು ತಿಳಿಸಿದರು. ಡಿ ವೆಲೆರಾರು ಅದನ್ನು ಓದಿ ಸದ್ಯದ ಸ್ಥಿತಿಯಲ್ಲಿ ತಾನು ಆ ಸಮಾರಂಭದಲ್ಲಿ ಭಾಗವಹಿಸಲು ಸಿದ್ಧವಿಲ್ಲವೆಂದು ಮಂತ್ರಿಮಂಡಲಕ್ಕೆ ತಿಳಿಸಿದರು. ಐರ್ಲೆಂಡಿನ ಪರವಾಗಿ ಅಲ್ಲಿಯ ಹೈಕಮಿಶನರರು ೬ ಸಮಾರಂಭಕ್ಕೆ ಹೋಗಬಹುದು ಎಂದು ಅಪ್ಪಣೆ ಕೊಟ್ಟಿದ್ದಾರೆ.

× × × × × ×

ಸ್ತ್ರೀಯರು ಈ ಕೀರ್ತಿಯನ್ನಾಶಿಸಬಾರದು

ಹನಿಯಪುರವೆಂಬಲ್ಲಿ ಒಂದು ನೂರು ವರ್ಷಗಳ ಹಿಂದೆ ಕಾರುಣ್ಯಮಯಿ ಎಂಬವಳು ತನ್ನ ಪತಿಯ ಮೃತಶರೀರದೊಡನೆ ಸಹಗಮನ ಮಾಡಿದಳು. ಈ ಅವಳ ಮೊಮ್ಮಕ್ಕಳು ಕೆಲವರಿಗೆ ಅವಳ ಮೇಲೆ ಭಕ್ತಿಯುಂಟಾಗಿ ಅವಳು ಸಹಗಮನ ಮಾಡಿದ ಸ್ಥಳದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿ ಅವಳನ್ನು ದೇವಿಯಂತೆ ಪೂಜಿಸಬೇಕೆಂದು ನಿರ್ಧರಿಸಿರುತ್ತಾರೆ. ಕಟ್ಟಡದ ಕೆಲಸವು ನಡೆಯುತ್ತಿದೆ. ಹರಿಜನರಿಗೆ ಊಟೋಪಚಾರಗಳು ನಡೆಯುತ್ತಿವೆ. ನಮ್ಮ ಸ್ತ್ರೀಯರಲ್ಲಿ ಯಾರಿಗಾದರೂ ಈ ಕೀರ್ತಿಯ ಆಶೆಯುಂಟಾಗುವುದು ಬೇಡವೆಂದು ನಾವು ಹೇಳಬೇಕಲ್ಲವೇ?

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ-(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ-(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ-(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ-(ಲಿವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಔಷಧಗಳೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕ ನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ
ಜೀವನದ ಜಯಶೀಲತೆಯು ಬಯಸುವವರು, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಚಿಕಿತ್ಸಾ ಪುಸ್ತಕ ಉಚಿತ ಕಳುಹಿಸಲ್ಪಡುವ ನಮ್ಮ
ಕಾಮಶಾಸ್ತ್ರವನ್ನೋದಿರಿ.
Agents—Shah Company, Mangalore
„ Pearl & Sons Mangalore
Atank Nigrah Pharmacy,
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. —ಸಂ, ಸ್ವ.

Writing an Advertisement Advertisements must have serious and succinct appeal and should be beautiful, sentimental or humorous, not blatant or vulgar, crisp in their appeals whether of wording or design, not too highly coloured metaphorically, and with a reason-given (wherever possible) that appeals to the practicable mind; a mere statement of the name of the article or place is insufficient.

Get your advertisements designed by — **The Publicity Department, Swadeshabhimani, Mangalore**

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿಯು ಈ ಸಂಸ್ಥೆಯು ವರ್ಷಂಪ್ರತಿ ದೃಢವಾಗಿ ಏಳಿಗೆಯಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇದರಲ್ಲಿ ಸಾರ್ವಜನಿಕರು ಇಟ್ಟಿರುವ ವಿಶ್ವಾಸಕ್ಕೂ ಸಂಸ್ಥೆಯ ಸೇವೆಗೂ ಇದೇ ದಾಖಲೆಯಾಗಿದೆ.

ಪ್ರಗತಿಸೂಚಕ ಪಟ್ಟಿ.

19 ಆಫೀಸುಗಳಿರುವ ಹೆಸರಾದ ಬೇಂಕು
ನಮ್ಮ ಆಫೀಸುಗಳು:—
ಬೊಂಬಾಯಿ (ಫೋರ್ಟ್ ಮತ್ತು ಮಾಂಡ್ವಿ), ಹುಬ್ಬಳ್ಳಿ, ಮಂಗಳೂರು, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಂ, ಆಲ್ಲೆಪ್ಪಿ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿವೆ

ವಸೂಲಾದ ಭಂಡವಾಳ	ರಿಸರ್ವ್ ಫಂಡ್	ರಿಜರ್ವ	ಡಿಪೋಸಿಟ್	ವ್ಯವಹಾರದಲ್ಲಿರುವ ಭಂಡವಾಳ
1916 2,25,000	1916 2,00,000	1916 ..80,000	1916 ..60,000	1916 6,63,000
1920 3,00,000	1920 3,00,000	1920 1,61,000	1920 8,99,000	1920 14,19,000
1924 3,00,000	1924 3,00,000	1924 2,62,000	1924 18,10,000	1924 24,69,000
1928 3,00,000	1928 3,00,000	1928 3,88,000	1928 37,42,000	1928 46,99,000
1932 6,00,000	1932 3,80,000	1932 4,31,000	1932 55,46,000	1932 65,62,000
1934 6,00,000	1934 3,81,000	1934 4,50,000	1934 58,62,000	1934 73,49,000

ಗಿರಾಕಿಗಳಿಗೆ ಎಲ್ಲಾ ತರದ ಸೌಕರ್ಯಗಳು.
ಸುಲಭ ರೀತಿಯ ವ್ಯಾಪಾರ ವಹಿವಾಟುಗಳು.

ನಮ್ಮ ಮುಂದಾಳುಗಳು

ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನಿಂದ ಒಳ್ಳೆವಾರ್ತೆ ಕೇಳುತ್ತಿದೆ, ಗ್ರ್ಯಾಂಟುಗಳಲ್ಲಿ ಸಾಕಷ್ಟು ಕಡಿತವಾಗಿದೆಯಂತೆ. ಹಾಗಿರಲು ನಮ್ಮ ಜಿಲ್ಲಾ ಎಡ್ಯುಕೇಶನಲ್ ಆಫೀಸರರು ಅನೇಕ ರೀತಿಯ ಕಡಿತಗಳನ್ನು ಸೂಚಿಸುವುದರಲ್ಲಿ ಆಶ್ಚರ್ಯವಿಲ್ಲ. ಕೆಲವೊಂದು ಎಯ್ಡೆಡ್ ಶಾಲೆಗಳಿಗೆ ಉಪಾಧ್ಯಾಯ ಇಸುಮುಗಳನ್ನು ಕಡಿತವನ್ನು ಸೂಚಿಸಿದ್ದರಂತೆ. ಆದರೆ ಸಭೆಗೆ ಬಂದ ಒಬ್ಬರು ಮೆಂಬರರು—'ನೀವು ಕಥೊಲಿಕ ಶಾಲೆಗಳಿಗೂ ಈ ರೀತಿಯ ಕಡಿತ ಏಕೆ ಮಾಡಿಲ್ಲ?' ಎಂದರಂತೆ! ಶ್ರೀ ಕಣ್ಣಪ್ಪನವರು ಕಥೊಲಿಕರಾದುದು ಅವರ ತಪ್ಪೆ!

\+ + + +

ಈ ಬಾರಿಯ ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಮುಂದಾಳುಗಳ ಸಾಮಾನ್ಯ ಸಭೆಯು ಅಸಾಮಾನ್ಯವಾಗಿತ್ತಂತೆ! ಕೆಲವರು ಸದಸ್ಯರು ಬೀದಿಯ ಹುಡುಗರು ಜಗಳಾಡುವಷ್ಟು ಸ್ಥೈರ್ಯದಿಂದ ಜಟ್ಟಿಗಳಾಗಿ ನಿಂತಿದ್ದರಂತೆ! ಇಂತಹ ವಾತಾವರಣದಲ್ಲಿ ಸಭ್ಯಗೃಹಸ್ಥರಾದ ಶ್ರೀ ಅಬ್ದುಲ್ಲಾ ಸಾಹೇಬರೂ ಸಹ ಮೈಮರೆತು ಒಬ್ಬ ಗುಮಾಸ್ತರಿಗೆ ವಿಧಿಸಿದ ಶಿಕ್ಷೆಯು ವಿಚಾರ ಅದು ತೀರ ಕಡಿಮೆಯಾಯಿತೆಂದು ಹೇಳಿದರಂತೆ. ಶ್ರೀ ಎ. ಬಿ. ಶೆಟ್ಟರು ಅವರಿಗೆ ಅವರ ಅಮೂಲ್ಯ ಸೂಚನೆಗಾಗಿ ಧನ್ಯವಾದವಿತ್ತರು! ಶ್ರೀ ಸಾಹೇಬರೂ ಹಿಂದೆ ಅಧ್ಯಕ್ಷರಾಗಿದ್ದರೂ ಒಂದು ತಾಲೂಕು ಬೋರ್ಡಿಗೆ ಆಗ ಅವರು ಇಷ್ಟೇ ಜಬರದಸ್ತಿಯಿಂದ ಕಾರ್ಯ ನಿರ್ವಹಿಸಿದ್ದರೇನು?

\+ + + +

ಶ್ರೀ ಮಹಾಬಲ ಹೆಗ್ಗಡೆಯವರು ಜಿಲ್ಲಾ ಬೋರ್ಡಿನ ಮುಂದೆ ಬರುತ್ತಲಿರುವ ಸಪ್ಲಿಮೆಂಟರಿ ಎಜೆಂಡಾಗಳ ಸಲುವಾಗಿ ಜಿಗುಪ್ಸೆಗೊಂಡರಂತೆ! ಪಾಪ-ಎಷ್ಟು ಎಜೆಂಡಾ ನೋಡಬೇಕು. ಅವರು ಅಧ್ಯಕ್ಷರಾಗಿದ್ದಾಗ ಎಜೆಂಡಾದಲ್ಲಿ ಬೀಳದ ವಿಷಯಗಳು ಸಭೆಯಲ್ಲಿ ಚರ್ಚೆಯಾಗಿದ್ದುವು—ಅಂಥ ಶಿಸ್ತನ್ನು ಈಗಿನ ಬೋರ್ಡು ಅನುಸರಿಸಬಾರದೇನು?

\+ + + +

ನಮ್ಮ ಇಡೀ ಜಿಲ್ಲಾ ಬೋರ್ಡಿನಲ್ಲಿ ಮೊಳಹಳ್ಳಿ ಶಿವರಾಯರಂಥ ಸ್ವಾರ್ಥಿ ಮೆಂಬರರಿಲ್ಲ ಫಕ್ತ ಜಿಲ್ಲಾ ಬೋರ್ಡಿನ ದುಡ್ಡನ್ನು ಪುತ್ತೂರು ತಾಲೂಕಿಗೆ ಎಳೆಯುತ್ತಲೇ ಇದ್ದಾರೆ ಇನ್ನಾದರೆ ಉಳಿದವರು ಧನ್ಯರು—ಶ್ರೀ ಉಡುಪಿ ಬಿ. ಜಿ ಆಚಾರ್ಯರೂ, ಶ್ರೀ ಪುಂಜರೂ ಇತರ ತಾಲೂಕುಗಳ ಪರವಾಗಿ ಮುಂದೆ ಬಂದು ಕಾದತೊಡಗಿದ್ದಾರೆ ಇನ್ನು ಪುತ್ತೂರು ತಾಲೂಕಿಗೆ ಎರಡು ವರ್ಷಗಳ ತನಕ ಗ್ರಾಮಾಭಿವೃದ್ಧಿ ಬಾಬತು ಹಣ ಸಿಗಲಾರದು ಈ ಧರ್ಮವೀರರ ಸಲುವಾಗಿ ೧೮ ವೋಟುಗಳು ಇದ್ದುವು

\+ + + +

ಈ ವೀರರಲ್ಲಿ ಒಬ್ಬರು ಹಿಂದೊಮ್ಮೆ-ಪುತ್ತೂರು ತಾಲೂಕಿನ ಅರಂತೋಡಿನಲ್ಲಿ ಆಗಲಿದ್ದ ಒಂದು ಸೂಲಗಿತ್ತಿ ಟ್ರೈನಿಂಗ್ ತರಗತಿಗೆ ಹಣ ಹೋಗಬಾರದೆಂದೂ ವಾದಿಸಿ, ಅದು ಇತರ ತಾಲೂಕುಗಳಿಗೆ ಸಿಗಬೇಕೆಂದು ವಾದಿಸಿದ್ದರು. ಈ ತರಗತಿಯನ್ನು ತೆರೆಯಲು ಯತ್ನಿಸಿದ ಜಿಲ್ಲಾ ಹೆಲ್ತ್ ಆಫೀಸರರು-ಈ ವೀರರ ಕಡೆಗೆ ನೋಡಿ ಇನ್ನೆಲ್ಲಿ ಅದನ್ನು ತೆರೆಯಲಿ-ಎಂದು ಕೇಳಿದ್ದರು ಆದರೆ-ಉತ್ತರ ದೊರೆಯಲಿಲ್ಲ! ಇತ್ತ-ಅರಂತೋಡಿನಲ್ಲಿ ಬಂದ ಅರ್ಜಿಗಳೂ ಕಲಿಕೆಗಾದುವು ಹೊಸ ಅರ್ಜಿಯೇ ಲೀದು ಹಣವು-ಹಾಗೆಯೇ ವ್ಯರ್ಥವಾಯಿತು' ಎಂಥಾ 'ಡಾಗ್ ಇನ್ ದಿ ಮೆಂಟರ್' ಪಾಲಿಸಿಯು ಮುಖಂಡರು ನಮ್ಮವರು'

\+ + + +

ನಮ್ಮ ಉದಾರ ಜಿಲ್ಲಾ ಬೋರ್ಡಿನ ಮುಂದಾಳುಗಳು ಕೆಲವು ಹೊಸ ಸಂಕ, ಶಾಲೆ ಮೊದಲಾದುವುಗಳನ್ನು ಈ ವರ್ಷ ತೆಗೆಯಲಿದ್ದಾರೆ ಶುಭಚಿಹ್ನೆ' ಅದರ ಜತೆಯಲ್ಲಿ ಈಗಲೇ ಕಡಿಮೆ ಬಿದ್ದಿರುವ ಹಣ ಭರತಿ ಮಾಡಲಿಕ್ಕೂ, ಈ ಕೆಪಿಟಲ್ ಖರ್ಚುಗಳಿಗೂ ಒಂದು ಚಿಕ್ಕ ಟಂಕಸಾಲೆಯನ್ನು ತೆರೆಯದೆ ಇರಲಾರರೆಂದು ನಂಬಿದ್ದೇವೆ

\+ + + +

ಶ್ರೀಮತಿ ಶಾಂಭವಿ ಪುಂಜರು ಸಹಶಿಕ್ಷಣದ ವಿಚಾರ ಹೊಸ ಧೋರಣೆ ವಹಿಸಿದ್ದಾರೆ. ಸ್ತ್ರೀಯರ ಏಳಿಗೆಯನ್ನು ಮಾಡುವ ಸಲುವಾಗಿ ಕಾಸರಗೋಡಿನಲ್ಲಿ ಹೊಸ ಹುಡುಗಿಯರ ಹಾಯರ್ ಎಲಿಮೆಂಟರಿ ಶಾಲೆಯೊಂದು ತೆರೆಯಲಿದೆ ಅದರಲ್ಲೂ ಆಶ್ಚರ್ಯವೆಂದರೆ—ಥಂ ಎಂದು ಎಂಟೂ ತರಗತಿಗಳು ಒಮ್ಮೆನೇ ಏಳಲಿರುವುವು ಚೆಂಪಿಯನ್ನು, ಸಾಹೇಬರು ಈಗಿರುವ ಉರ್ದು-ಹುಡುಗಿಯರ ಹುಡುಗರ ಶಾಲೆಯನ್ನು ಒಟ್ಟುಮಾಡಬೇಕೆಂದು-ಸೂಚಿಸಿದ್ದಾರೆ ಇವರು ಇನ್ನೂ ಬಾಲಾವಸ್ಥೆಯಲ್ಲಿ ಸಹಶಿಕ್ಷಣ ಬೇಡವೆಂದು ಸ್ತ್ರೀಯರಿಗೆ ಪ್ರತ್ಯೇಕ ಶಿಕ್ಷಣ ಸೂಚಿಸುವಂತಿದೆ ಚಿಕ್ಕ ಹುಡುಗರ ಶಾಲೆಯಲ್ಲಿ ಚಿಕ್ಕ ಹುಡುಗಿಯರು ಕಲಿತು ಅನರ್ಥವಾಗುವುದೆಂದು ಅವರು ನಂಬಿದ್ದಾರೆಯೇ? ಹಾಗಿದ್ದರೆ ಸ್ತ್ರೀಸದಸ್ಯರ ಸಲುವಾಗಿ ಒಂದು ಜಿಲ್ಲಾ ಬೋರ್ಡನ್ನು ಅವರು ಸೂಚಿಸುವುದು ಒಳಿತು ಈಗಿರುವ ಸ್ತ್ರೀಪುರುಷರು ಬೆರೆತು ಜಿಲ್ಲೆಯ ಆಡಳಿತ ನೋಡುವುದರಲ್ಲಿ ಏನೂ ಅರ್ಥವಿರಲಾರದು

\+ + + +

ಉಡುಪಿಯ ಧರ್ಮ ಗುರುಗಳಾದ ಶ್ರೀಮಾನ್ ಕೃಷ್ಣಾಪುರದ ಸ್ವಾಮಿಜೀಯವರು ಸಮಾಧಿವಶರಾಗಿ, ಪರಮಾತ್ಮನ ಸನ್ನಿಧಿ ಸೇರಿದರೆಂದೂ, ಅವರ ಶವ (ಜಡ ಶರೀರ) ವನ್ನು ಭೂತಾಯಿಯ ವಶ ಒಪ್ಪಿಸಲಾಯಿತೆಂದೂ, ಕೇಳುತ್ತೇವೆ ಶ್ರೀಯವರು ಅಷ್ಟು ಪಾರಮಾರ್ಥದಲ್ಲಿ ಮುಂದರಿದೂ, ಮೃತ್ಯುಕಾಲದಲ್ಲಿ ತಮ್ಮ' ಬಂಧುವಿಗೇನೆ ಮಠದ ಪಟ್ಟಿ (ಅಸ್ತಿ ಉಂಬಳಿ!) ಮಾಡುವ ಯೋಚನೆ ಮಾಡಿದುದನ್ನು ಕಂಡರೆ, ಪರಮಾತ್ಮನ ಸನ್ನಿಧಿ ಸೇರಲು ಮೊಹಬಿಡಬೇಕೆಂಬ ಅವಶ್ಯವಿಲ್ಲವೆಂದು ಕಾಣುವುದು ಪಾರಮಾರ್ಥದಲ್ಲಿ ಮುಂದರಿದ ಸ್ವಾಮಿಜಿಯವರೇ ಹೀಗಿರಲು, ಹಿಂದೆ ಬಿದ್ದ ಇತರ ಕಿರಿಮಠಾಧೀಶರು ತಂತಮ್ಮ 'ಬಂಧುಗಳಲ್ಲಿ ಸ್ವಾಮಿಪಟ್ಟವನ್ನು ಬಟವಾಡೆ ಮಾಡುವುದರಲ್ಲಿ ಏನು ಆಶ್ಚರ್ಯ?

ಕರ್ನಾಟಕ ಸಾಹಿತ್ಯ ಪರಿಷತ್ತು

ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ವಿಶೇಷ ಸಾಹಿತ್ಯೋತ್ಸವ

ಎಪ್ರಿಲ್ ೨೫ರಿಂದ — ಮೇ ೧ರ ವರೆಗೆ

ಉಪನ್ಯಾಸಗಳು, ಕಾವ್ಯವಾಚನ, ಸಂಗೀತ, ವಿಜ್ಞಾನ ಪ್ರದರ್ಶನ ಇತ್ಯಾದಿ

ಸಮಸ್ತ ಕನ್ನಡ ಮಹಾಜನರ ಉಪಯೋಗಕ್ಕಾಗಿಯೂ, ವಿಶೇಷವಾಗಿ ಉಪಾಧ್ಯಾಯರ ಮತ್ತು ವಿದ್ಯಾಪ್ರಚಾರದಲ್ಲಿ ಆಸಕ್ತರಾದ ಇತರ ಮಹಾಶಯರ ಪ್ರಯೋಜನಕ್ಕಾಗಿಯೂ ಕರ್ನಾಟಕ ಸಾಹಿತ್ಯ ಪರಿಷತ್ತು ಕಳೆದ ವರ್ಷ ಏರ್ಪಡಿಸಿದ್ದಂತೆ, ಈ ವರ್ಷವೂ ಬೇಸಿಗೆಯ ರಜಾಕಾಲದಲ್ಲಿ, ತಾ. ೨೫-೪-೧೯೩೫ನೆಯ ಗುರುವಾರದಿಂದ ತಾ ೧-೫-೧೯೩೫ನೆಯ ಬುಧವಾರದ ವರೆಗೆ ಒಂದು ವಿಶೇಷ ಸಾಹಿತ್ಯೋತ್ಸವವನ್ನು ನೆರವೇರಿಸಲು ನಿಶ್ಚಯಿಸಿದೆ

ಈ ವಾರದಲ್ಲಿ ಪ್ರತಿ ದಿವಸವೂ ಪ್ರಸಿದ್ಧರಾದ ಪಂಡಿತರುಗಳಿಂದ ಉಪನ್ಯಾಸಗಳು ನಡೆಯುವುವು ಉಪನ್ಯಾಸ ವಿಷಯಗಳು ಸಾಧ್ಯವಾಗುವ ಮಟ್ಟಿಗೆ ಈ ಕೆಳಗಿನಂತೆ ಇರಬೇಕೆಂದು ಉದ್ದೇಶ ಮಾಡಿದೆ

೧ ಭೌತ ಶಾಸ್ತ್ರದಲ್ಲಿ ಶಕ್ತಿಯ ವಿಚಾರದಲ್ಲಿ ಉಚಿತ ಸಿದ್ಧಾಂತಗಳು, ೨ ಎಲೆಕ್ಟ್ರಾನ್, ೩ ಕಾರ್ಖಾನೆಗಳೂ ರಸಾಯನ ಶಾಸ್ತ್ರವೂ, ೪ ಬಯೋ ಕೆಮಿಸ್ಟ್ರಿ, ೫ ಜೀವೋತ್ಪತ್ತಿಯ ವಿಚಾರದಲ್ಲಿ ಉಚಿತ ಸಿದ್ಧಾಂತಗಳು, ೬ ಭೂಮಿಯ ವಯಸ್ಸು, ೭ ಇಂಡಿಯಾ ದೇಶದ ಹೊಸರಾಜ್ಯ ವ್ಯವಸ್ಥೆ, ೮ ಯೂರೋಪು ಖಂಡದ ಕೆಲವು ಹೊಸ ಸರಕಾರಗಳು ೯ ಪ್ರಪಂಚದ ಈಗಿನ ಆರ್ಥಿಕ ಸ್ಥಿತಿ, ೧೦ ಇಂಡಿಯಾ ದೇಶದ ರಿಜರ್ವ್ ಬ್ಯಾಂಕ್, ೧೧ ಸಂಯುಕ್ತ ಸರಕಾರದಲ್ಲಿ ರಾಜ್ಯಾಡಳಿತ ವ್ಯವಸ್ಥೆ, ೧೨ ಸ್ತ್ರೀಪುರುಷರ ಸಮತ್ವ, ೧೩ ಸ್ತ್ರೀಯರಿಗೆ ಯೋಗ್ಯವಾದ ವಿದ್ಯಾಭ್ಯಾಸ, ೧೪. ಹಿಂದುಳಿದ ಪಂಗಡಗಳವರ ಸಮಸ್ಯೆಗಳು, ೧೫ ಹರಿಜನರ ಉದ್ಧಾರ, ೧೬. ಸಾಹಿತ್ಯ ಸ್ವರೂಪವನ್ನು ಕುರಿತು ಉಚಿತ ಸಿದ್ಧಾಂತಗಳು, ೧೭ ಇಂಡಿಯಾ ದೇಶದ ದೇಶಭಾಷೆಗಳ ಪುನರುಜ್ಜೀವನ, ೧೮ ಇಂಡಿಯಾ ದೇಶದ ಜನಪದ ತತ್ವ ಮತ್ತು ದೇಶಭಾಷೆಗಳ ಸಮಸ್ಯೆ, ೧೯ ವಿದ್ಯಾಭ್ಯಾಸ ಕ್ರಮದಲ್ಲಿ ಈಗಿನ ಪ್ರಯೋಗ ಪರೀಕ್ಷೆಗಳು, ೨೦ ಬುದ್ಧಿಶಕ್ತಿ ... ೨೧ ಈಚೆಗೆ ನಡೆದಿರುವ ಪ್ರಾಚೀನ ಚರಿತ್ರೆಯ ವಿಚಾರಗಳು ೨೨ ಜೈನಮತತತ್ವಗಳು ೨೩ ವೀರಶೈವ ಮತತತ್ವಗಳು, ೨೪ ಉಪನಿಷತ್ತುಗಳು, ೨೫ ಸಂಸ್ಕೃತ ನಾಟಕಗಳು

ಉಪನ್ಯಾಸಕರು ಮುಖ್ಯವೂ ಮತ್ತು ಕಷ್ಟವೂ ಆದ ವಿಷಯಗಳನ್ನು ಬ್ಲೇಕ್ ಬೋರ್ಡಿನ ಸಹಾಯದಿಂದಲೂ ಮ್ಯಾಜಿಕ್ ಲ್ಯಾಂಟರ್ನ್ ಸಹಾಯದಿಂದಲೂ ವಿವರಿಸುವರು.

ಪ್ರತಿಯೊಂದು ಉಪನ್ಯಾಸವೂ ಸುಮಾರು ಒಂದು ಘಂಟೆ ನಡೆಯುವುದು. ಆದಾದ ಬಳಿಕ ಇನ್ನೊಂದು ಘಂಟೆ ಪ್ರಶ್ನೋತ್ತರಗಳು ನಡೆಯಬಹುದು.

ಮೇಲ್ಕಂಡ ವಾರದಲ್ಲಿ ಕಾವ್ಯವಾಚನ, ಸಂಗೀತ ಮೊದಲಾದ ಇತರ ಸಾಹಿತ್ಯಕಾರ್ಯಗಳೂ ನಡೆಯುವುವಲ್ಲದೆ ಬೆಂಗಳೂರಲ್ಲಿರುವ ಕಾರ್ಖಾನೆಗಳನ್ನೂ ವಿಜ್ಞಾನಕಾರ್ಯ ಶಾಲೆಗಳನ್ನೂ ನೋಡಿಕೊಂಡು ಬರಲು ಏರ್ಪಾಟು ಮಾಡಲಾಗುವುದು.

ಈ ಎಲ್ಲ ಕಾರ್ಯಗಳಿಗೂ ಪ್ರವೇಶವು ಟಿಕೇಟಿನ ಮೂಲಕ ದೊರೆಯುವುದು ಪರಿಷತ್ತಿನ ಸದಸ್ಯರಿಗೆ ಟಿಕೇಟುಗಳನ್ನು ಉಚಿತವಾಗಿ ಕೊಡಲಾಗುವುದು. ಈ ಕೆಳಗಿನ ತರಗತಿಯ ಉಪಾಧ್ಯಾಯರುಗಳಿಗೆ ಟಿಕೇಟುಗಳನ್ನು ಉಚಿತವಾಗಿ ಕೊಡಲಾಗುವುದು

೧ ಮಿಡಲ್ ಸ್ಕೂಲ್ ಉಪಾಧ್ಯಾಯರುಗಳು, ೨ ನಾರ್ಮಲ್ ಸ್ಕೂಲ್ ಉಪಾಧ್ಯಾಯರುಗಳು, ೩ ಹೈಸ್ಕೂಲ್ ಪಂಡಿತರುಗಳು, ೪ ಬೆಂಗಳೂರು ಪಟ್ಟಣದೊಳಗಿನ ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳು

ಈ ನಾಲ್ಕು ತರಗತಿಯ ಉಪಾಧ್ಯಾಯರುಗಳಲ್ಲಿ ಟಿಕೇಟುಗಳನ್ನಪೇಕ್ಷಿಸುವವರು ಈ ಕೆಳಗೆ ರುಜು ಮಾಡಿರುವವರಿಗೆ ತಮ್ಮ ದರಖಾಸ್ತುಗಳನ್ನು ಕಳುಹಿಸಬೇಕು. ದರಖಾಸ್ತು ೧೯೩೫ನೆಯ ಎಪ್ರಿಲ್ ೧೮ನೆಯ ತಾರೀಕಿನೊಳಗಾಗಿ ವ್ಯವಸ್ಥಾಪಕರಿಗೆ ತಲಪಿರಬೇಕು, ಈ ತಾರೀಕಿನ ತರುವಾಯ ಬರುವ ಅಪೇಕ್ಷಾ ಪತ್ರಗಳಿಗೆ ಗಮನಕೊಡಲಾಗುವುದಿಲ್ಲ ವಿಶೇಷ ಸಾಹಿತ್ಯೋತ್ಸವಕ್ಕೆ ಬರುವ ಉಪಾಧ್ಯಾಯರು ಮತ್ತು ಪಂಡಿತರು ತಮ್ಮ ತಮ್ಮ ಶಾಲೆಯ ಹೆಡ್ಮಾಸ್ಟರವರಿಂದ ಅಥವಾ ಇನ್ಸ್‌ಪೆಕ್ಟರವರಿಂದ ರುಜುವಾದ ಪರಿಚಯ ಪತ್ರವನ್ನು ತರಬೇಕು ಪರಿಚಯ ಪತ್ರವಿಲ್ಲದೆ ಬರುವವರಿಗೆ ಉಚಿತವಾಗಿ ಟಿಕೇಟುಗಳು ದೊರೆಯಲಾರವು

(ಪರಿಷತ್ಸದಸ್ಯರಲ್ಲದ ಅಥವಾ ಮೇಲ್ಕಂಡ ತರಗತಿಯ ಉಪಾಧ್ಯಾಯರಲ್ಲದ) ಮಹಾಜನರಿಗೆ ಪ್ರವೇಶಾಧಿಕಾರವು ಈ ಕೆಳಗಿನಂತೆ ದೊರೆಯುವುದು,

ಒಟ್ಟು ಸಾಹಿತ್ಯೋತ್ಸವದ ವಾರಕ್ಕೆ ತಲಾ ರೂ ~-೨-೦ ಒಂದು ದಿನದ ಮಟ್ಟಿಗೆ ತಲಾ ರೂ ೦-೪-೦ ಈ ಟಿಕೇಟುಗಳನ್ನು ಪರಿಷತ್ತಿನ ಕಾರ್ಯಾಲಯದಲ್ಲಿ ಪಡೆಯಬಹುದು

ಪರಸ್ಥಳಗಳಿಂದ ಬರುವ ಉಪಾಧ್ಯಾಯರು ಭೋಜನವಸತಿಗಳ ಅನುಕೂಲವನ್ನು ಬಯಸುವುದಾದರೆ, ಅಂಥವರು ತಮ್ಮ ದರಖಾಸ್ತಿನಲ್ಲಿ ಆ ಸಂಗತಿಯನ್ನು ಸ್ಪಷ್ಟವಾಗಿ ಬರೆದು, ಅದರೊಡನೆ ಒಟ್ಟು ವಾರಕ್ಕೆ ತಲೆಯೊಂದಕ್ಕೆ ರೂ ೨ರಂತೆ ಕಳುಹಿಸಿದರೆ ಸಾಧ್ಯವಾದ ಮಟ್ಟಿಗೆ ಅನುಕೂಲಪಡಿಸಲಾಗುವುದು.

ಈ ವಿಶೇಷೋತ್ಸವಕ್ಕೆ ಮಹಾಜನರು ಬಹುಸಂಖ್ಯೆಯಲ್ಲಿ ದಯಮಾಡಿಸಿ, ಪ್ರಸಿದ್ಧ ವಿದ್ವಾಂಸರ ಉಪನ್ಯಾಸ ಪ್ರಸಂಗಗಳಿಂದ ಜ್ಞಾನ ಲಾಭ ಪಡೆದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಉದ್ದೇಶವನ್ನು ಈಡೇರಿಸಬೇಕೆಂದು ಪ್ರಾರ್ಥನೆ

ಎಂ. ಆರ್. ಶ್ರೀನಿವಾಸಮೂರ್ತಿ, ಬಿ. ಎ.,
ವ್ಯವಸ್ಥಾಪಕ,
ವಿಶೇಷ ಸಾಹಿತ್ಯೋತ್ಸವ ಸಮಿತಿ.

ಶರಣ ಸಂದೇಶ.

ನೀವು ಹಿಂದುಗಳೋ ಹಾಗಾದರೆ ಜಾಗ್ರತೆ ಚಂದಾದಾರರಾಗಿರಿ.

ಇದು ವಿಚಾರಕ್ರಾಂತಿಯ ವಾರಪತ್ರಿಕೆ.

ಸಂಪಾದಕರು:—ಶ್ರೀ ಹರ್ಡೇಕರ್ ಮಂಜಪ್ಪನವರು, ಹಿಂದು ಸಮಾಜ ಸುಧಾರಣೆ, ಹಿಂದು ಸಂಘಟನೆ, ಧಾರ್ಮಿಕ ಸತ್ಯಸಿದ್ಧಾಂತ ಪ್ರತಿಪಾದನೆ, ಶ್ರೀ ಬಸವಾದಿ ಪ್ರಮಥರ ತತ್ವಪ್ರಸಾರಣೆ ಮತ್ತು ರಾಜಕೀಯ ಗುಣದೋಷ ವಿಮರ್ಶನೆ ಇವೆ ಈ ಪತ್ರಿಕೆಯ ಪಂಚಪ್ರಾಣ

೨೦ ಪುಟ. ವಾರ್ಷಿಕಚಂದಾ ಅಂಚೆವೆಚ್ಚ ಸೇರಿ ರೂ. ೩ ಮಾತ್ರ.

ಮೆನೇಜರ್—ಶರಣ ಸಂದೇಶ

ಪೋಸ್ಟು ಆಲಮಟ್ಟಿ, ಜಿ. ಬಿಜಾಪುರ.

"ವಿಶ್ವಬಂಧು"ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು ೨ 'ವಿಶ್ವಬಂಧು'ವು ಅಹಿಂಸಾ ಧರ್ಮಪ್ರಚಾರಕನು ೩ 'ವಿಶ್ವಬಂಧು'ವು ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಪ್ರಕಟ ಮಾಡುವನು ೪. ಕನ್ನಡ ನುಡಿಸೇವೆಯೂ, ಕನ್ನಡ ಸಾಹಿತ್ಯ ಪ್ರಭಾವನೆಯೂ 'ವಿಶ್ವಬಂಧುವಿನ ಧ್ಯೇಯಗಳು ೫ ವಿದ್ಯಾಭ್ಯಾಸದ ನೂತನ ರೀತಿ ನೀತಿಗಳನ್ನು 'ವಿಶ್ವಬಂಧು'ವು ಪ್ರಕಟಮಾಡುವನು ೬ ಒಟ್ಟಿನಲ್ಲಿ ಆರ್ಥಿಕ, ನೈತಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು ಸರ್ವಾಂಗ ಸುಂದರನಾದ 'ವಿಶ್ವಬಂಧು'ವು ಸರ್ವರ ಆದರಣೆಗೂ ಪಾತ್ರನಾಗಿರುವನು

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ. ೨-೧೪-೦ ಮಾತ್ರ.

"ವಿಶ್ವಬಂಧು" ಕಾರ್ಯಾಲಯ, ಎಂ ಎಲ್ ಜೈನವಿದ್ಯಾರ್ಥಿನಿಲಯ, ಮೈಸೂರು.

ಕಲ್ಕತ್ತಾ ಮೇಯರರ ಮೇಲೆ ದಾವೆ.

ಶ್ರೀಮತಿ ವೀಣಾ ಸರ್ಕಾರಳ ವಾದ.

ಕಳೆದ ವಾರ ಪ್ರಕಟವಾದಂತೆ ಕಲ್ಕತ್ತಾ ಮೇಯರರಾದ ಶ್ರೀ। ನಳಿನಿರಂಜನ ಸರ್ಕಾರರ ಮೇಲಿನ—ದಾವೆಯು ಕಲ್ಕತ್ತಾದ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ತನಿಖೆಗೆ ಬಂತು. ನಳಿನಿರಂಜನರೊಡನೆ ದುಷ್ಟ ಸಂಪರ್ಕ ಸ್ಥಿಳಿದಳೆಂದು ಆರೋಪಿತಳಾದ ಪ್ರೊಫೆಸರ್ ಪ್ರಮಾದನಾಥ ಸರ್ಕಾರರವರ ಪತ್ನಿಯಾದ ವೀಣಾ ಸರ್ಕಾರರಳು ಸಾಕ್ಷಿಯಾಗಿ ಈ ರೀತಿ ಹೇಳಿದಳು. "ಸಿಟಿ ಕಾಲೇಜಿನ ಪ್ರೊಫೆಸರರಾದ ಪ್ರಮಾದನಾಥ ಸರ್ಕಾರರನ್ನು ನಾನು 1929 ರಲ್ಲಿ ವಿವಾಹವಾದೆ. ಅಪಾದಿತರು ನನ್ನ ತಂದೆಯ ಪ್ರಥಮ ಅಳಿಯಂದಿರು. ನನ್ನ ಮೇಲಾದ ಆರೋಪಗಳು ತೀರಾ ಸುಳ್ಳು. ನನ್ನ ಪತಿಯು ಬರೆದ ಪತ್ರಗಳನ್ನು ಕೋರ್ಟಿನವರು ಪರಿಶೀಲಿಸುವುದರಲ್ಲಿ ನನ್ನ ಅಡ್ಡಿಯಿಲ್ಲ. ನಾನು ಕಲ್ಕತ್ತಾ ಯುನಿವರ್ಸಿಟಿಯ ಗ್ರೇಜುವೇಟಳಾಗಿದ್ದೇನೆ. ಪ್ರಾಯ ೨೪ ವರ್ಷಗಳು. ೧೯೨೯ರ ಮೇ ತಿಂಗಳಲ್ಲಿ ನನ್ನ ವಿವಾಹವು ನಿಷ್ಕರ್ಷಿಸಲ್ಪಟ್ಟು ಅದೇ ಅಕ್ಟೋಬರದಲ್ಲಿ ವಿವಾಹವು ನೆರವೇರಿತು. ನನ್ನ ಗಂಡನ ನಡವಳಿಕೆಯನ್ನು ಕಂಡು ನಾನು ಅವರನ್ನು ವಿವಾಹವಾಗುವುದಿಲ್ಲವೆಂದು ಒಮ್ಮೆ ಹೇಳಿದ್ದೆ. ಆದರೆ ಗಂಡನು ನನಗೆ ಸವಿವರವನ್ನು ಕೊಟ್ಟ ಮೇಲೆ ನಾನು ಒಪ್ಪಿದೆ. ವಿವಾಹದಲ್ಲಿ ಬಲಾತ್ಕಾರವಿರಲಿಲ್ಲ. ಮದುವೆಯ ನಂತರ ನಾನು ಗಂಡನೊಡನೆ ಕೃಷ್ಣಾ ನಗರಕ್ಕೆ ಹೋಗಿ ಒಂದು ವಾರದ ವರೆಗೆ ಅವರೊಡನಿದ್ದೆ. ೧೯೩೦ರ ಜೂನ್ ತಿಂಗಳಲ್ಲಿ ನಾನು ನನ್ನ ಗಂಡನೊಡನೆ ಮನೆಗೆ ಹೋಗಲಿಲ್ಲವೆಂಬುದು ಸುಳ್ಳು. ನಾನು ಅಪಾದಿತರಿಗೆ ಪತ್ರಗಳನ್ನು ಬರೆಯಲೇ ಇಲ್ಲ. ಅವರೂ ನನಗೆ ಪತ್ರಗಳನ್ನು ಬರೆದಿರುವುದಿಲ್ಲ. ಎಫ್. ಎ. ಪರೀಕ್ಷೆಯಲ್ಲಿ ನಾನು ಉತ್ತೀರ್ಣಳಾದ ನಂತರ ಗಂಡನ ಅಪ್ಪಣೆಯ ಮೇರೆಗೆ ಬಿ. ಎ. ಕ್ಲಾಸಿಗೆ ಡಿಯೊಸೆಸನ್ ಕಾಲೇಜಿಗೆ ಸೇರಿದೆ. ನನ್ನ ಗಂಡನೇ ನನ್ನ ಕಾಲೇಜು ಸಂಬಳವನ್ನು ಕೊಡುತ್ತಿದ್ದರು. ೧೯೩೧ರ ಮೇ ತಿಂಗಳಲ್ಲಿ ನಾನು ಅಸ್ವಸ್ಥಳಾಗಿ ಹವಾ ಬದಲಾವಣೆಗೆಂದು ನಳಿನಿರಂಜನ್ ಸರ್ಕಾರರೊಡನೆ ಶಿಲ್ಲಾಂಗಿಗೆ ಹೋದೆ. ಹೀಗೆ ಹೋಗುವುದಕ್ಕೆ ಗಂಡನ ಒಪ್ಪಿಗೆಯನ್ನು ತಂತಿ ಮೂಲಕ ಪಡೆದುಕೊಂಡಿದ್ದೆ. ಅಲ್ಲದೆ ನನ್ನ ಪತಿಯು ನನಗೆ ಪತ್ರ ಬರೆದು ಆರೋಗ್ಯದ ಮಟ್ಟಿಗೆ ಜಾಗ್ರತೆಯಿಂದಿರಬೇಕೆಂದು ಸೂಚಿಸುತ್ತಿದ್ದರು. ಒಕ್ಟೋಬರದಲ್ಲಿ ನಾನು ನನ್ನ ಪತಿಯ ಬಳಿಗೆ ಫೆನಿಗೆ ಹೋದೆ. ಆಗ ನಾನು ಗರ್ಭವತಿಯಾಗಿದ್ದೆನೆಂಬುದು ಪೂರ್ಣ ಸುಳ್ಳು.

ಪ್ರಶ್ನೆ:—ನಿನ್ನ ಮಗುವಿನ ತಂದೆಯು ತಾನಲ್ಲನೆಂದು ನಿನ್ನ ಗಂಡನು ಹೇಳುತ್ತಿರುವನಲ್ಲ?

ಉತ್ತರ:—ಅದರ ತಂದೆ ಅವರೆ. ಫೆನಿಯಲ್ಲಿ ಫೆಬ್ರವರಿಯ ಕೆಲವು ದಿನಗಳಲ್ಲೂ ಮಾರ್ಚಿಯ ಕೆಲವು ದಿನಗಳಲ್ಲೂ ನಾವು ಪ್ರತ್ಯೇಕವಾಗಿ ಮಲಗುತ್ತಿದ್ದೆವು. ಗಂಡು ಮಗುವು ಚಿತ್ತರಂಜನ ಸೇವಾಸದನದಲ್ಲಿ ಜನಿಸಿತು. ಆ ಬಗ್ಗೆ ಆದ ವೆಚ್ಚವನ್ನು ಪತಿಯುವರು ಹೊತ್ತರು.

ಪ್ರಶ್ನೆ:—ನೀನು ಅಪಾದಿತನೊಡನೆ ನಿಷಿದ್ಧಾಚರದಲ್ಲಿದ್ದುದನ್ನು ನಿನ್ನ ಗಂಡನು ಹಿಂದೂಸ್ಥಾನ್ ಬಿಲ್ಡಿಂಗಿನಲ್ಲಿ ನೋಡಿರುವುದು ಖರೆಯೋ?

ಉತ್ತರ:—ಅದು ಬರಿಯ ಕಲ್ಪನೆ.

ಪ್ರಶ್ನೆ: ನಿನ್ನ ಗಂಡನು ನಿನ್ನ ಆತ್ಮಘಾತಕ್ಕಾಗಿ ದೂರುತ್ತಿದ್ದನೇ?

ಉತ್ತರ:—ಇಲ್ಲ, ಆದರೆ ವ್ಯಂಗ್ಯವಾಗಿ ಆಧುನಿಕ ಸ್ತ್ರೀಯರನ್ನು ನಿಂದಿಸುತ್ತಿದ್ದರು.

ಪ್ರಶ್ನೆ:—ನೀನು ಅಪಾದಿತನೊಡನೆ ಸೇರಬಾರದೆಂದು ನಿನ್ನ ಪತಿಯು ಹೇಳುತ್ತಿದ್ದಿಲ್ಲವೇ?

ಉತ್ತರ:—ಇಲ್ಲ.

ಡೈರಿಗಳನ್ನೂ, ಕಾಗದ ಪತ್ರಗಳನ್ನೂ ಕೋರ್ಟಿನವರು ಪರಿಶೀಲಿಸಿದರು. ಕೋರ್ಟಿನ ಹೊರಗೆ ಜನಸಂದಣಿಯು ಸೇರದಂತೆ ಪೋಲೀಸರೂ ಸವಾರರೂ ಎಚ್ಚರ ತೆಗೆದುಕೊಂಡಿದ್ದರು. ಈ ವಿಚಾರವಾಗುತ್ತಿದ್ದಾಗ ಪತ್ರಿಕಾ ಪ್ರತಿನಿಧಿಗಳೂ ಅನೇಕ ವಕೀಲರೂ ಕೋರ್ಟಿನಲ್ಲಿ ಉಪಸ್ಥಿತರಾಗಿದ್ದರು.

ಶ್ರಿಂಗೇರಿ ಶ್ರೀ ಜಗದ್ಗುರುಗಳವರು ಗೌಡ ಸಾರಸ್ವತ ಬ್ರಾಹ್ಮಣ ವೃಂದದವರಿಗೆ ನಿರೂಪಿಸಿದ

ರಾಯಸ ಪತ್ರ

೭. ಶ್ರೀ ಶ್ರಿಂಗೇರಿ ಶಂಕರಾಚಾರ್ಯ ಇವರ ಪತ್ರ

"ಶ್ರೀ ವಿದ್ಯಾಶಂಕರ"

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಇತ್ಯಾದಿ ಸಕಲ ಬಿರುದಾವಲೀ ವಿರಾಜಮಾನ ಶ್ರಿಂಗೇರೀ ಶ್ರೀ ವಿರೂಪಾಕ್ಷ ಶ್ರೀ ವಿದ್ಯಾಶಂಕರ ದೇವ ದಿವ್ಯ ಶ್ರೀ ಪಾದ ಪದ್ಮಾರಾಧಕ ಶ್ರೀಮದಭಿನವ ಕೋದಂಡ ನೃಸಿಂಹಭಾರತೀ ಸ್ವಾಮಿ ಕರಕಮಲ ಸಂಜಾತ ಶ್ರೀಮದಭಿನವ ವಿದ್ಯಾರಣ್ಯಭಾರತೀ ಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯ ಶಿಷ್ಯರಾದ ಅಶೇಷ ಬ್ರಹ್ಮವೃಂದ ಜೋಯಿಸೀ ವ ಧರ್ಮಾಧಿಕಾರೀ, ವೈದಿಕ ಮಂಡಳೀ ವ ಗೃಹಸ್ಥ ಮಂಡಳೀ ಪ್ರೈರಾಗ ವಾಸಸ್ಥರಾದ ಇವರಿಗೆ—ಆಶೀರ್ವಚನ ಪೂರ್ವಕ ನಾರಾಯಣಸ್ಮರಣ ಪತ್ರಿಕಾ.

ಶಕೆ ೧೮೫೦ ಸಿದ್ಧಾರ್ಥಿನಾಮ ಸಂವತ್ಸರ ವೈಶಾಖ ಶುದ್ಧ ೧೨ ಯು ಶುಕ್ರವಾರದ ವರೆಗೆ ಪಂಜಕೂರ ಮುಕ್ಕಾಮಿನಲ್ಲಿ ಶ್ರೀ। ಪೂಜಾ ತತ್ಪರರಾಗಿ ಆನಂದ ನಿರ್ಭರಿತರಾಗಿದ್ದೇವೆ. ಸಾಂಪ್ರತ, ಸಮಸ್ತ ದೇಶ ಸಂಚಾರಮಾಡಿ ಈ ಸ್ಥಳಕ್ಕೆ ದಿಗ್ವಿಜಯ ಮಾಡಿರುತ್ತೇವೆ. ಇಲ್ಲಿ ರಂಗರಾವ್ ರಾಮಚಂದ್ರ ಭೇಂಡೆ, ಸಾರಸ್ವತ ಗೌಡಬ್ರಾಹ್ಮಣ ಶೇಣವಿಯೂ ಉಪನಾಮದ ಇವರು ಸಂಸ್ಥಾನದ ಶರಣಾಗತರಾಗಿ ವಿಜ್ಞಾಪನೆ ಮಾಡಿಕೊಂಡಿದ್ದಾರೇನೆಂದರೆ:—ತಮ್ಮ ಮನೆಯಲ್ಲಿ (ವೇದೋಕ್ತ ಕರ್ಮ) ಹವ್ಯ ಕವ್ಯಾದಿಗಳು ಬ್ರಾಹ್ಮಣ ಸಾಂಪ್ರದಾಯಾನುರೂಪ ನಡೆಯುತ್ತಿವೆ. ಪರಂತು ಮನೆಯೊಳಗಣ ಯಾರಾದರೂ ಮೃತಪಟ್ಟಲ್ಲಿ ಶವ ಒಯ್ಯುವರೆ ಇಲ್ಲಿಯ ಬ್ರಾಹ್ಮಣರು ತಕರಾರು ಮಾಡುತ್ತಾರೆ. ಹೀಗೆ ವಿಜ್ಞಾಪನೆ ಮಾಡಿದ ಕಾರಣ ಸಂಸ್ಥಾನದಿಂದ ಲಕ್ಷ್ಯವಾಗುತ್ತದೇನೆಂದರೆ:—

ಶೇಣವಿಯ ಇವರಿಗೆ ಷಟ್ಕರ್ಮಾಧಿಕಾರವಿದೆ. ಇವರ ಶವಗಳನ್ನು ಕೊಂಡುಹೋಗತಕ್ಕದ್ದು. ಇದರಲ್ಲೇನೂ ದೋಷವಿಲ್ಲ. ಕಾರಣ ವೇದಾಧಿಕಾರಿಗಳಾಗಿದ್ದಾರೆ. ಇವರಿಗೆ ಬ್ರಾಹ್ಮಣರ ವಿನಹ ಗತಿ ಇಲ್ಲ. ಸದರಿನಲ್ಲಿ ಬರೆದಂತೆ ಸರ್ವ ದೇಶಗಳಲ್ಲಿಯೂ ಸಾಂಪ್ರದಾಯವಿದೆ. (ಕನ್ನಡ ಪರಿವರ್ತನೆ ಮಾಡಿದವರು:—

ಅಂಕುರಾಜ ಸುಬ್ಬರಾಯ ಶರ್ಮಾ,
ಹಿಂದೂಮತ ಪ್ರಚಾರಕ.)

(ಇದರ ಮೂಲಪ್ರತಿಯು ಪ್ರೈರಾಗ ಎಂಬಲ್ಲಿರುವ ರಾ। ಗೋಪಾಲಕೃಷ್ಣ ಭೇಂಡೆ ಇವರಲ್ಲಿರುತ್ತದೆ.)

ಬೆನ್ನು ನೋವಿನಿಂದ ನಿದ್ದೆಯೇ ಇಲ್ಲ!

ಸದಾ ಬಳಲಿಕೊಂಡೇ ಇರುವಳು.

ಕ್ರುಶ್ಚೆನನ್ನು ಪ್ರಯೋಗಿಸಿದಳು—ಈಗ ಸುದೃಢಳಾಗಿರುವಳು!

ಬೆನ್ನು ನೋವಿನ ಅನುಭವವಿದ್ದವರಿಗೆ ಮಾತ್ರ ಅದರ ಸಂಕಷ್ಟವು ತಿಳಿದಿದೆ. ಬೆನ್ನುನೋವನ್ನು ಹೋಗಲಾಡಿಸುವುದಕ್ಕಾಗಿ ಒಂದರ ಹಿಂದೆ ಒಂದು ಮದ್ದನ್ನುಪಯೋಗಿಸಿ, ಸೋತು ನಿರಾಶಳಾದ ಸ್ತ್ರೀಯ ಮನೋಪರಿಸ್ಥಿತಿಯನ್ನು ಅವರೇ ತಿಳಿಯಲು ಸಮರ್ಥರು. ಆದರೆ, ಅಂತಹ ಸ್ತ್ರೀಯು ಈ ರೀತಿಯ ಪತ್ರ ಬರೆಯಲು ಸಮರ್ಥಳಾದಳೆಂದು ತಿಳಿದು ಅವರು ಆನಂದಿಸದಿರರು:—"ನಾನು ಯಾವಾಗಲೂ ಸಂಕಷ್ಟಪಡುತ್ತಿದ್ದೆ. ಬೆನ್ನು ನೋವಿನಿಂದಾಗಿ ಚೈತನ್ಯವಿದ್ದಿಲ್ಲ. ರಾತ್ರಿ ನಿದ್ರೆ ಕೂಡ ಬರುತ್ತಿದ್ದಿಲ್ಲ. ಔಷಧಿಗಳೆಂಬುವುಗಳಲ್ಲಿ ಅನೇಕವನ್ನುಪಯೋಗಿಸಿದ ನಂತರ (ಅವುಗಳು ಹಿತವನ್ನುಂಟುಮಾಡಲಿಲ್ಲ.) ನಾನು ಕ್ರುಶ್ಚೆನ್ ಲವಣ

(ಸೋಲ್ಟ್) ಪ್ರಯೋಗಿಸಲು ನಿರ್ಧರಿಸಿದೆ. ಈಗ ನಾನು ಬೇರೆಯೇ ಸ್ತ್ರೀಯಾಗಿದ್ದೇನೆಂದು ಹೇಳಲು ಅತ್ಯಾನಂದವಾಗುತ್ತದೆ. ದೇಹದಾರ್ಢ್ಯ ಚೈತನ್ಯಗಳು ತುಂಬಿ ಬೆನ್ನುನೋವು ಮಾಯವಾಗಿದೆ.

(ಮಿಸೆಸ್) ಎಂ. ಎ.

ಮೂತ್ರಕೋಶದ ಚೈತನ್ಯವಿಹೀನತೆಯಿಂದಲೂ ರಕ್ತಪಥದಲ್ಲಿ ಕಲ್ಮಶಗಳು ತುಂಬುವುದರಿಂದಲೂ ಬೆನ್ನುನೋವು ತಲೆದೋರುತ್ತದೆ. ಕ್ರುಶ್ಚೆನ್‌ನಲ್ಲಿರುವ 6 ಬಗೆಯ ಲವಣಗಳು ನಿಮ್ಮ ಮೂತ್ರಕೋಶವನ್ನು ಆರೋಗ್ಯವಂತವಾಗಿ ಮಾಡುವುವು. ಅದರಲ್ಲೂ ರಕ್ತಪಥದಲ್ಲೂ ಇರುವ ಕಲ್ಮಶಗಳನ್ನು ಅದು ತೆಗೆದು ಬಿಡುವುದು. ದೀರ್ಘವಾದ ಕಷ್ಟದಾಯಕವಾದ ಆ ನೋವು ಇದರ ಉಪಯೋಗದಿಂದ ಶೀಘ್ರವಾಗಿ ಗುಣಹೊಂದುವುದನ್ನು ನೀವು ನೋಡುವಿರಿ. ಇದರ ಒಂದೊಂದು ಸಣ್ಣ ಸಣ್ಣ ಡೋಜುಗಳನ್ನು ಸೇವಿಸುತ್ತಾ ಬಂದಂತೆ ನೋವು ಕಡಿಮೆಯಾಗುತ್ತಾ ಕೊನೆಗೆ ಆರೋಗ್ಯವು ಕನಸಿನ ಸುದ್ದಿಯಾಯಿತೋ ಎಂದು ಭಾಸವಾಗುವುದು.

ಎಲ್ಲಾ ಕೆಮಿಸ್ಟರರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ

ಕ್ರುಶ್ಚೆನ್ ಸೋಲ್ಟ್ ದೊರೆಯುತ್ತದೆ.

Sept 21—1

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಏಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ
1925—	ರೂ. 21,24,250.	500.
1929—	ರೂ. 1,66,18,620.	9,2,900.
1934—	ರೂ. 46,77,223.	49,08,771.

ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ. ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No. 6, Sankuram Chatty St., G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಶಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು.

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1. Udipi, 2. Goondapoor, 3. Car Street, Mangalore, 4. Shimoga, 5. Madras, 6 Bunder Mangalore, 7. Mercara

1934ನೇ ಇಸವಿ ದಶಂಬರ ತಾ. 31ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು:—

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಪಿಸಿದ್ದು	3,50,000- 0- 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774-14- 8
ಕೆತ್ತು ಬಂದದ್ದು	2,25,000- 0- 0	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	28,88,227- 7- 3
ಕ್ಷೇಮನಿಧಿಗಳು	2,60,958- 7- 8	ಸರಕಾರಿ ಬಧ್ರತೆಯ ಸ್ವತ್ತುಗಳ ಮೇಲೆ	6,51,559-15- 0
ಠೇವಣಾತಿಗಳು	24,95,829- 2- 3	ಇತರ ಬಾಬುಗಳು	37,411-14-11
ಇತರ ಬಾಬುಗಳು (ಸಂಡ್ರೀಸ್)	1,35,286 9- 9	ನಗದಿ ಶಿಲ್ಕು	72,480-10- 1
ಚಾಲ್ತಿ ವರ್ಷದ ಮುನಾಫೆ	45,385-10- 8		
	31,62,454-13-11		31,62,454-13-11

ಹಿಂದಿನ ವರ್ಷಗಳಂತೆಯೇ ಹಿಶೆದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣವಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ಬಿಲ್ಲೆಯುಳ್ಳ ಮತ್ತು ಕಂಪನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಕಿತಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

'ಅಮೃತಾಂಜನ ಡಿಪೋ', ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Established 1908.

EXCELLENT BONUSES.
1933 Valuation Results

	WHOLE LIFE	ENDOWMENT	
1925-'30	20	15	Per thousand
1931-'33	23	18	per year

Every "With Profit" Policy is entitled to "PERMANENT DISABILITY BENEFITS"—No extra premium

PAYS DOUBLE THE ASSURED SUM IN THE EVENT OF DEATH BY ACCIDENT ON PAYMENT OF MINIMUM EXTRA PREMIUM OF RS 1-8-0 PER RS 1000 POLICY PER YEAR

Existing Policy holders may avail of this benefit

For particulars apply to —

KOCHIKAR BROTHERS.
Madras Branch Secretaries

Offices at:—
Udipi, Mangalore, Bangalore, Calicut, Madras and Bombay

Karnataka Chemical and Pharmaceutical Works, Ltd , Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ, ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲೆಂಟೈನ್, ಅರೋರಾ ಕ್ರೀಮ್, ಕ್ರಿಮೊರ್ ಲಿಮೊನಿಸ್, ಕರ್ಣಾಟಕ ಟೋಸ ಪೌಡರ್ ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪೆತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ

ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.

ಏಜಂಟ್ಸ್— ವ್ಯಾಪಾರದ ಡಿಪೊ —(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2

(2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್, ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 2-13-0

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY.
Buy a policy in
THE BOMBAY LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ

ಪುಸ್ತಕ ೨೯. ಮಂಗಳೂರು ತಾ. ೧೨ನೇ ಶುಕ್ರವಾರ ಎಪ್ರಿಲ್ ೧೯೩೫. (12-4-'35) ಸಂಚಿಕೆ ೧೫



ಸೂರ್ಯಾಸ್ತಮಯ.

ಚಕ್ರ

(All Rights Reversed)

ಅಹೋ! ಹೋ! ಹೋ! ಏನು ಗೌಜಿಯಯ್ಯಾ ಬ್ರಿಟಿಷ ಸಾಮ್ರಾಜ್ಯದಲ್ಲೆಲ್ಲ!!! ನಮ್ಮ ಸಾರ್ವಭೌಮರಾದ ಐದನೇ ಜಾರ್ಜ್ ಮಹಾರಾಜರಿಗೆ ಪಟ್ಟಾಭಿಷೇಕವಾಗಿ ಬರುವ ಮೇ ತಿಂಗಳ ೬ನೇ ತಾರೀಕಿಗೆ ೨೫ ವರ್ಷಗಳು ಸಲ್ಲುತ್ತವಂತೆ. ಅವರ ಸಿಲ್ವರ್ ಜುಬಿಲಿಯನ್ನಾಚರಿಸುವುದಕ್ಕಾಗಿ ದೇಶವಿದೇಶಗಳಲ್ಲಿ ಸಂಗ್ರಹವಾಗುತ್ತಿರುವ ದ್ರವ್ಯದ ಪ್ರವಾಹವನ್ನು ಕಂಡರೆ ಬಿಹಾರದ ಭೂಕಂಪದಲ್ಲಿ ಸತ್ತವರಿಗೆ ಎಷ್ಟು ಹೊಟ್ಟೆಯುರಿ ಏಳುವುದೋ ಯಾರು ಬಲ್ಲ?

ಮಹಾಮಹಾ ರಾಜರುಗಳ ಲಕ್ಷಗಟ್ಟಲೆ ದಾನವೇನು? ಅಧಿಕಾರಿಶಾಹಿಯ ಸಾಹಸವೇನು? ಸಾಧನೆಯೇನು?—ಬೇಡುವುದೇನು? ಓಡುವುದೇನು? ಹಾಡುವುದೇನು!—ಅಂತೂ ನಿಧಿಸಂಗ್ರಹದ ಕುದುರೆಯು ನಾಗಾಲೋಟದಿಂದ ಓಡಹತ್ತಿದೆ.

ಜನರ ಕೈಯಲ್ಲಿ ದುಡ್ಡಿಲ್ಲ—ಜನರಿಗೆ ಸಂಕಷ್ಟಗಳು ಒದಗಿವೆ—ಉಣ್ಣಲು ಗತಿಯಿಲ್ಲ—ಬಟ್ಟೆಯ ಎಡಲು ಮತಿಯಿಲ್ಲ—ಎಂದು ಹೇಳುವವರ ಮಾತು ಎಷ್ಟು ಸುಳ್ಳೆಂದು ಈ ಮಹಾ ನಿಧಿಸಂಗ್ರಹವನ್ನು ಕಂಡೊಡನೆ ವಿದಿತವಾಗುವುದು. ನಮ್ಮ ಜನರಿಗೆ ಸಾರ್ವಭೌಮರ ಮೇಲೆ ಎಷ್ಟೊಂದು ಪ್ರೇಮವಿದೆಯೆಂದು ಇದರಿಂದ ವ್ಯಕ್ತವಾಗುವುದು.

ಮಹಾರಾಜಶ್ರೀ ಸಾಯ್ಬನವರು ತನ್ನ ಸಿಲ್ವರ್ ಜುಬಿಲಿಯನ್ನು ಆಚರಿಸಬೇಕೆಂದು ಯೋಚಿಸಿದರೆ ಹೀಗೆ ಧನಸಂಗ್ರಹವಾದೀತೊ? ಹಣ್ಣಾದ ಸಾಯ್ಬರ ಸೇವೆಯನ್ನು ಮನ್ನಿಸಿ ಕನ್ನಡಿಗರು ಸಹಾಯಮಾಡಿಯಾರೆಂದು ನಂಬಬಹುದೇ?

ನಾವು ಮಾಡಿನ ಪಕ್ಕಾಸಿಗೆ ನೇಣುಹಾಕಿ "ಈಗ ಪ್ರಾಣಬಿಡುತ್ತೇವೆ" ಎಂದು ಜನರಿಗೆ ತಿಳಿಸಿ ಸತ್ಯಾಗ್ರಹವನ್ನಾಚರಿಸಲು ನಿರ್ಧರಿಸಿದರೂ ನಮ್ಮ ಮೇಲೆ ಕರುಣೆದೋರಿ ಟಿಕ್ಕಾಸನ್ನು ದಾನಮಾಡುವ ಪುಣ್ಯಾತ್ಮರು ಇಡೀ ಭಾರತಭೂಮಿಯಲ್ಲಿರಲಾರರು. ಸ್ವಾಮಿ! ಸಾರ್ವಭೌಮರ ಜುಬಿಲಿಗೆ ಮಾತ್ರ ಲಕ್ಷಗಟ್ಟಲೆಯಾಗಿ ಸುರಿಸುವವರು ತಯ್ಯಾರು! ಅಯ್ಯಾ ಉದಾರ ಮಹಾಶಯರೇ ನೀವೇನೂ ಚಿಂತೆಮಾಡಬೇಕಾದ ಅವಶ್ಯವಿಲ್ಲ—ನಿಮ್ಮ ಔದಾರ್ಯಕ್ಕನುಸಾರವಾಗಿ ನಿಮಗೆ ಯೋಗ್ಯ ಬಿರುದುಗಳನ್ನು ದಾನಮಾಡುವಂತೆ ಸರಕಾರಕ್ಕೆ ನಾನು ತಿಳಿಸುವೆನು—ತಿಳಿದಿರಲಿ.

ನಿಮಗೆ ಬೇಕಾದುದೂ ಅದೇ. ನಾನು ಹೇಳುವುದೂ ಅದೇ. ಅವರು ಕೊಡುವುದೂ ಅದೇ! ಆದುದರಿಂದ ವ್ಯಸನಿಸಬಾರದು ಗೊತ್ತಾಯಿತೇ?

ನೀವು ಸಾವಿರಗಟ್ಟಲೆ ರೂಪಾಯಿಗಳನ್ನು ಕೊಟ್ಟು ಊರಲ್ಲೇ ಕುಳಿತಿರಬಾರದು. ದಯವಿಟ್ಟು ನನ್ನೊಡನೆ ರಜತೋತ್ಸವ ಸಮಾರಂಭಕ್ಕೆ ದಯಮಾಡಿ ಬರಬೇಕು. ತಪ್ಪಿದರೆ ದೊಡ್ಡ ದೊಡ್ಡ ಇಂಗ್ಲಾಂಡಿಗರ ಸ್ನೇಹವಾಗುವ ಸಂದರ್ಭವು ತಪ್ಪೀತು. ದೊರೆಯುವ ಮೋಕ್ಷವೂ ತಪ್ಪೀತು. ನಾಳೆಯೇ ಹೊರಡಿರಿ. ನಾನು ಜೂನ್ ತಿಂಗಳ ನಂತರ ಹೊರಡುವೆನು—

ಸಾರ್ವಭೌಮರ ಸ್ನೇಹವಾದೀತು. ದೊಡ್ಡ ದೊಡ್ಡ ಯೂರೋಪಿಯನರೊಡನೆ ಕೂಡಿಕೊಂಡು ಡಿನ್ನರ್ ಸಪ್ಪರ್ ಟೀಗಳು ನಡೆದು ನಮಗೆ ಅವರ ಪರಿಚಯವಾದೀತು. ಏನಾದರೊಂದು ಪ್ರಯೋಜನವಾದೀತು—ಎಂದು ನಾವು ಜ್ಯುಬಿಲಿಯ ನಿಧಿಗೆ ಕೈಬಿಟ್ಟು ದಾನಮಾಡಿರುವೆವು. ನೋಡಬೇಕು—ನಮಗೆ ದೊರೆಯುವ ಮಾನಮರ್ಯಾದೆಯನ್ನು.

ಇಂಗ್ಲಾಂಡಿಗೆ ಹೋದರೆ ಜುಬಿಲಿ ಉತ್ಸವದ ಗಡಿಬಿಡಿಯಲ್ಲಿ ನಮ್ಮನ್ನು ಒಂದಿಷ್ಟು ಮಾತಾಡಿಸುವವರಾರಾದರೂ ಸಿಕ್ಕಿದರೆ ಪುಣ್ಯವಂತರೇ ಸರಿ! ಸಾರ್ವಭೌಮರ ಶೇಕ್‌ಹೇಂಡ್ ಹೇಗೂ ಸಿಗುವುದು. ಖಂಡಿತವೆಂದು ತಿಳಿಯೋಣ—ಅಂತಹ ಶೇಕ್‌ಹೇಂಡ್ ಎಲ್ಲರಿಗೂ ದೊರೆಯುವುದೇ?

ಬಿಹಾರಿನ ಭೂಕಂಪವಾದಾಗ ನಾವು ಲಕ್ಷಗಟ್ಟಲೆ ರೂಪಾಯಿಗಳನ್ನು ದಾನಮಾಡಿದರೆ ನಮಗೆ ಸಿಗುವುದಾದರೂ ಏನು? "ನಿಮ್ಮ ಹಣವನ್ನು ಜಮಾ ಬರೆಕೊಂಡಿದೆ—ಥೇಂಕ್ಸ್" ಎಂದು ತಿಳಿಸುತ್ತಿದ್ದರು—ಅಷ್ಟೆ—ಡಿಗ್ರಿ-ಬಿರುದುಗಳು ದೊರೆಯುವ ಆಶೆಯುಂಟೇ?

ಬಿಹಾರಿನವರು ಅನ್ಯಾಯ ಮಾಡಿದುದರಿಂದಲ್ಲವೆ? ಅವರಿಗೆ ಕಷ್ಟಬಂದುದು? ಅನ್ಯಾಯಗಾರರಿಗೆ ನಾವೇಕೆ ಸಹಾಯಮಾಡಬೇಕು? ಆದುದರಿಂದ—

ಬನ್ನಿರೆಲ್ಲ ಬಾಲರೇ। ಪಯಣ ಮಾಡುವಾ
ತನ್ನಿರೆಲ್ಲ ರಾಯರೇ। ಬಿರುದು ಪಡೆಯುವಾ॥
ಧಾರೆ ರಾಶಿ ತನ್ನಿರೇ। ನಿಮ್ಮ ದಾನವಾ।
ಆಶೆಯಿಟ್ಟು ಬಿಡಿಸಿರಿ। ನಿಮ್ಮ ಚೀಲವಾ॥

([illegible])

ಆರೋಗ್ಯಕ್ಕೂ ಶಕ್ತಿಗೂ ಅತ್ಯಮೋಘವಾದ ಕೌಟುಂಬಿಕ ಪಾನ!

ಆರೋಗ್ಯಕ್ಕೆ ಓವಲ್ಟಿನ್ ಎಂಬುದು ಅತ್ಯಮೋಘ ಪಾನಕವೆಂದ ಸರ್ವ ಜಗತ್ತೇ ಸಿದ್ಧ ಮಾಡಿರುತ್ತದೆ. ನಿಮ್ಮ ಮನೆಯಲ್ಲಿ ಓವಲ್ಟಿನ್ [illegible] ದಿನನಿತ್ಯದ ಪಾನಕವನ್ನಾಗಿ ಮಾಡಿರಿ. ನಿಮ್ಮ ಕುಟುಂಬದ ಪ್ರತಿಯೊಂಬರಿಗೂ [illegible] ದೇಹವರ್ಧಕ ಶಕ್ತಿಯ ಪ್ರಯೋಜನವು ದೊರೆಯುವುದು. [illegible] ಆರೋಗ್ಯವು [illegible] ಪಾನಕವೇ ಅವಶ್ಯ. ಓವಲ್ಟಿನ್ [illegible] ಆರೋಗ್ಯಕ [illegible]

ನಿಮ್ಮ ಮನೆಯಲ್ಲಿ "ಓವಲ್ಟಿನ್"ನನ್ನು [illegible] [illegible] ದೇಹಾರೋಗ್ಯಕ್ಕಾಗಿ [illegible] "ಓವಲ್ಟಿನ್" [illegible]

"ಓವಲ್ಟಿನ್" ಟೋನಿಕ್, ಆಹಾರ, ಪಾನಕ

OVALTINE

ಮಿದುಳು, ನರ, ದೇಹಗಳನ್ನು ರಚಿಸುತ್ತದೆ

[illegible]

[illegible] ಜೇಮ್ಸ್ [illegible]

OV 309

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ

ಹೊಸತು. ಆದುದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬೆಲೆಕಡಿಮೆ ಬರುವಂಥದು ಮತ್ತು ಉತ್ತಮವಾದ ಫೊಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು ಫೋಟೋ ತೆಗೆಯುವ ವಿಧಾನ ಶಿಕ್ಷಣಕೊಡುವ ಪುಸ್ತಕ ಇವು ಉಚಿತವಾಗಿ ಕಳುಹಿಸಲಾಗುತ್ತದೆ. ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ. ೨—೧೨—೦ ಉತ್ತಮವಾದುದು ೪—೧೨—೦ ಮಡಚುವ ಕ್ಯಾಮರಾ ರೂ ೫ ಉತ್ತಮವಾದ್ದು ರೂ ೭ ಸ್ಪೆಶಲ್ ರೂ ೧೦ ಪೆಟ್ಟಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ ಪ್ಯಾಕಿಂಗ್, ಸಾಲ್ಟ್ ೧ ಡಬ್ಬಕ್ಕೆ ೨ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ

ಭಾರತ ಯೂನಿಯನ್ ಟ್ರೇಡಿಂಗ್ ಕಂ
ಪೋಸ್ಟ್‌ಬಾಕ್ಸ್ ನಂಬ್ರ ೨೪೯ (ಎಸ್ ೨) ಕಲ್ಕತ್ತಾ

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್,

ಪುತ್ತೂರು

Authorised capital ಅಧಿಕೃತ ಮೂಲಧನ	2,00,000—0—0
Subscribed capital ಚಂದಾ ಅರ್ಪಿಸಿದ್ದು	34 930 0 0
Paid-up capital ತೆತ್ತು ಬಂದದ್ದು	30847 8 0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken

Shares are now available

For further particulars apply to —

Puttur,
Dated 15—2—1935

G N Lakshman Pai,
Secretary.

ಪತ್ರಿಕಾ ಪ್ರಪಂಚ:

ಹಿಂದೂದೇಶದಲ್ಲಿ ಕೃಷಿಕೈಗಾರಿಕೆಯ ಸುಧಾರಣೆ. ಹಿಂದೂದೇಶದಲ್ಲಿನ ವಿಷಮಪರಿಸ್ಥಿತಿಗೆ ಕಾರಣ! ಸ್ತ್ರೀ-ಶಿಕ್ಷಣ. ಜಪಾನಿನಲ್ಲಿ ಶಿಕ್ಷಣ. ಭಾರತದ ಆಡಳಿತೆ. ನಾವು ಗಮನಿಸಬೇಕಾದ ವಿಷಯ.

ಹಿಂದೂದೇಶದಲ್ಲಿ ಕೃಷಿಕೈಗಾರಿಕೆಯ ಸುಧಾರಣೆ.

ಶ್ರೀ॥ ದೇವೇಂದ್ರಪ್ರಸಾದ ಘೋಷರೆಂಬವರು 'Calcutta Review' ಎಂಬುದರಲ್ಲಿ ಹಿಂದೂದೇಶದಲ್ಲಿನ ಕೃಷಿಕೈಗಾರಿಕೆಯ ಸುಧಾರಣೆಯ ಕುರಿತು ಹೀಗೆ ಬರೆದಿರುವರು:—"ಹಿಂದೂದೇಶದ ೩೧೪,೬೯೧,೦೫೬ ಜನರಲ್ಲಿ ೧೯೫,೬೬೮,೪೦೦ ಜನರು ಕೃಷಿಯಿಂದಲೇ ಜೀವನ ನಡೆಸುತ್ತಿರುವವರು. ಇವರಲ್ಲಿ ೩,೮೫೦ ಸಾವಿರ ಪುರುಷರೂ, ೪೭೩,೭೩೦ ಸ್ತ್ರೀಯರೂ ಕೃಷೀವಲರು. ಹಿಂದೂದೇಶದ ಜನಸಂಖ್ಯೆಯಲ್ಲಿ ಇಪ್ಪತ್ತರ ಒಂದು ಪಾಲು ಜನರು ಪಟ್ಟಣಗಳಲ್ಲಿ ವಾಸಿಸುವವರು. ಭಾರತವರ್ಷವು ಕೃಷೀಕರ ಭೂಮಿ, ಶೇಕಡಾ ೮೦ ಮಂದಿ ರೈತರು. ಹೀಗಿರುವಾಗ, ಕೃಷಿಕೈಗಾರಿಕೆಯನ್ನು ಭಾರತೀಯರು ಅಲಕ್ಷಿಸುವುದು ಎಂದೂ ಸಮಂಜಸವಲ್ಲ.

ಹಿಂದೂದೇಶದಲ್ಲಿನ ವಿಷಮಪರಿಸ್ಥಿತಿಗೆ ಕಾರಣ.

ಡಾ॥ ಗೋಲ್ಡ್‌ವಿನ್ ಸ್ಮಿತ್‌ರವರು Canadian Magazineನಲ್ಲಿ ಮೇಲಿನ ಶಿರೋನಾಮೆಯಿಂದ ಹೀಗೆ ಬರೆದಿರುವರು:— "ಜಗತ್ತಿನಲ್ಲಿರುವ ಯಾವ ರಾಷ್ಟ್ರವೂ ಬ್ರಿಟಿಷ್‌ಸಾಮ್ರಾಜ್ಯಾಂತರ್ಗತವಾಗಿರುವ ಹಿಂದೂದೇಶದಷ್ಟು ಶಾಂತವೂ ಪ್ರಯೋಜನಕಾರಿಯೂ ಆಗಿರುವುದಿಲ್ಲ. ಆದರೆ ಈ ಶಾಂತತೆಯು ಒಂದಲ್ಲ ಒಂದು ದಿನ ಅಂತ್ಯಗೊಳ್ಳುವುದು. ಅನ್ಯದೇಶವನ್ನು ಆಳುತ್ತಾ ಆ ದೇಶದ ಮಕ್ಕಳನ್ನು ರಕ್ಷಿಸಲಾರದವರ ಆಡಳಿತವು ನೆಮ್ಮದಿಯಿಂದಿರುವುದು ನಿಶ್ಚಯವಾಗಿ ಅಸಂಭವ. ಹಿಂದೂದೇಶದವರಲ್ಲಿ ಒಂದು ಬಗೆಯ ಸ್ಫೂರ್ತಿಯು ತಲೆದೋರಿದೆ. ಆ ಸ್ಫೂರ್ತಿಯು ಜಪಾನಿನ ಮೂಲಕವೇ ಅವರಿಗೆ ಬರಬಹುದು. ಮೇಲಿನಿಂದೊಂದು ಆಳರಸರ ಕೈಯಲ್ಲಿರುವ ತನಕ ಈ ಕ್ರಾಂತಿಯು ಯಾವರೀತಿಯಿಂದ ತಲೆದೋರುತ್ತದೆಂದು ಹೇಳಲು ಸಾಧ್ಯವಿರುವುದಿಲ್ಲ."

ದೊಡ್ಡ ಕುಟುಂಬ ಪೋಷಣೆಯ ಭಾರವು ಒಬ್ಬನ ಮೇಲಿದ್ದು, ಅವನು ೪೦ ತಾಸುಗಳ ಕೆಲಸದಿಂದಾಗಿ ಹೆಚ್ಚಿನ ನಷ್ಟಕ್ಕೆ ಗುರಿಯಾಗಿ ಕುಟುಂಬ ಪೋಷಣೆಯನ್ನು ಸರಿಯಾಗಿ ಮಾಡಲು ಅಸಮರ್ಥನಾದನೆಂದು ಸಾಕ್ಷ್ಯಪೂರ್ವಕವಾಗಿ ತಿಳಿದುಬಂದರೆ ಆ ತಹವನಿಗೆ Employers and Workers Confederations ಎಂಬ ಸಂಸ್ಥೆಯವರು ಸ್ಥಾಪಿಸಿದ Compensation Fundನಿಂದ ಸಹಾಯವು ದೊರೆಯುವುದು. ಈ ನಿಧಿಯನ್ನು ಔದ್ಯೋಗಿಕ ಸಂಸ್ಥೆಗಳ ಭಂಡವಾಳಿಗರ ಸಹಾಯದಿಂದಲೂ ಕೆಲಸಗಾರರ ಸಹಾಯದಿಂದಲೂ ಏರ್ಪಡಿಸಲಾಗಿದೆ. ವಾರಕ್ಕೆ ೪೦ ತಾಸುಗಳಷ್ಟು ಕೆಲಸಮಾಡುವ ಮಜೂರಿಗಾರರು ಈ ನಿಧಿಗೆ ಶೇಕಡಾ ೧ರಷ್ಟು ದವ್ಯ ಸಹಾಯವನ್ನು ಮಾಡುತ್ತಾರೆ. ಯಜಮಾನರು ವಾರಕ್ಕೆ ಹಂಚಲ್ಪಡುವ ಒಟ್ಟು ಮಜೂರಿಯ ಮೊತ್ತದಿಂದ ಶೇಕಡಾ ೧ರಷ್ಟನ್ನು ಈ ನಿಧಿಗೆ ಕೊಡುತ್ತಾರೆ. ಕೆಲವು ಕಂಪೆನಿಗಳು ವಾರಕ್ಕೆ ೪೦ ತಾಸುಗಳಷ್ಟೇ ಕೆಲಸ ಮಾಡದೆ ನಿರ್ವಾಹವಿಲ್ಲದಾಗಿದೆ. ಇವುಗಳು ೪೦ ತಾಸುಗಳ ಕ್ರಮವನ್ನನುಸರಿಸಿದರೆ ಮಹಾ ನಷ್ಟವು ಸಂಭವಿಸುವುದು. ಇಂತಹ ಕಂಪನಿಗಳು ವಾರಕ್ಕೆ ೪೮ ತಾಸುಗಳ ತನಕ ಕೆಲಸ ಮಾಡಬಹುದು. ಮಾತ್ರ, ವಾರದ ಮಜೂರಿಯ ಒಟ್ಟು ಮೊಬಲಗಿನಿಂದ ಶೇಕಡಾ ೪ರಷ್ಟನ್ನು ಈ ನಿಧಿಗೆ ಕೊಡಬೇಕು. ಈ ಫೆಮಿಲಿ ಬಜೆಟ್ ಕೊಂಪೆನ್‌ಸೇಷನ್ ಫಂಡಿನಿಂದ ಬಡವರಿಗೆ ಬಹಳ ಪ್ರಯೋಜನವಾಗುತ್ತಲಿದೆ. ಈ ಶರ್ತಗಳನ್ನು ಹೆಚ್ಚಾಗಿ ಎಲ್ಲಾ ಕೊನ್‌ಫೆಡರೇಶನ್‌ಗಳು, ಕೃಷಿ ವಾಣಿಜ್ಯ, ಬೇಂಕು ಕೈಗಾರಿಕೆಗಳೂ ಅಂಗೀಕರಿಸಿವೆ.

ಕೃಷಿಕರ ನಿರುದ್ಯೋಗತೆಯನ್ನು ನಿವಾರಿಸುವುದಕ್ಕಾಗಿ ಅನೇಕ ಏರ್ಪಾಡುಗಳಾಗುತ್ತಿವೆ. ಅವರ ಉಪಕರಣ, ಅವರ ಉದ್ಯೋಗ ಕ್ರಮ ಇವುಗಳಲ್ಲೆಲ್ಲ ಸುಧಾರಣೆಯಾಗುತ್ತಿದೆ.

ವ್ಯಾಪಾರವನ್ನು ನಡೆಸುವ ಕಂಪೆನಿಗಳು, ಶಾಪುಗಳು ಮೊದಲಾದುವುಗಳಲ್ಲಿ ಸಮಯವನ್ನು ಮೀರಿ ಕೆಲಸಮಾಡಿಸಲಾಗುವುದಿಲ್ಲ. ೧೦ ಜನ ಕೆಲಸಗಾರರನ್ನಿಡುವ ಕಂಪೆನಿಯು ಕೆಲಸದ ತಾಸುಗಳನ್ನು ಅಥವಾ ದಿನಗಳನ್ನು ಕಡಮೆಮಾಡಿ ಹೊಸ ನಿರುದ್ಯೋಗಿಗಳನ್ನು ಸ್ವೀಕರಿಸಬೇಕೆಂಬ ನಿಯಮವಿದೆ. ಸ್ತ್ರೀಯರ ಸಂಖ್ಯೆಯನ್ನು ತಮ್ಮ ಕಂಪೆನಿಗಳಲ್ಲಿ ಕಡಮೆಮಾಡಬೇಕೆಂಬ ಸೂಚನೆಯೂ ಇದೆ. ಶೇಕಡಾ ೧೨ ಅಥವಾ ೧೫ಕ್ಕಿಂತ ಹೆಚ್ಚು ಸ್ತ್ರೀಯರನ್ನು ಯಾವ ಕಂಪೆನಿಯೂ ಕೆಲಸಕ್ಕೆ ನೇಮಿಸಬಾರದು.

ಹಿಂದೂದೇಶದ ನಿರುದ್ಯೋಗಿಗಳ ಸಂಖ್ಯೆ ಎಷ್ಟೆಂದು ತಿಳಿದುಬಂದಿಲ್ಲ. ಅದು ಜರ್ಮನಿಯಲ್ಲಿನ ೨,೭೭,೪೦೦೦ದ ಸಂಖ್ಯೆಯನ್ನೂ, ಗ್ರೇಟ್ ಬ್ರಿಟನಿನ ೨,೨೭,೨೦೦೦ ಸಂಖ್ಯೆಯನ್ನೂ, ಇಟಲಿಯ ೧೦,೧೧,೦೦೦ ಸಂಖ್ಯೆಯನ್ನೂ ಮೀರಿ ಮುಂದರಿಯುತ್ತಿದೆ ಎಂಬುದಕ್ಕೆ ಸಂದೇಹವೇ ಇಲ್ಲ. ಜನರ ಆಗ್ರಹಪೂರ್ವಕ ಕೇಳಿಕೆಯಿರುವಾಗಲೂ ಸರಕಾರವು ಭಾರತದಲ್ಲಿನ ನಿರುದ್ಯೋಗಿಗಳ ಸಂಖ್ಯೆಯ ಪಟ್ಟಿಯನ್ನು ತಯಾರಿಸಿ ಅವರಿಗೆ ಜೀವನ ಉಪಾಯ ಮಾರ್ಗ ತೋರಿಸಲು ತೊಡಗದಿರುವುದು ವಿಷಾದಕರವಿದೆ.

ಭಾರತದ ನಿರುದ್ಯೋಗ ಸಮಸ್ಯೆಯು ನಿವಾರಿಸಲ್ಪಡಬೇಕಾದರೆ ಮೊದಲು ಸರಕಾರವೇ ಟೊಂಕಕಟ್ಟಿ ನಿರುದ್ಯೋಗಿಗಳ ಪಟ್ಟಿಯನ್ನು ಸ್ಥಳೀಕ ಅಧಿಕಾರಿಗಳ ಮೂಲಕ ಜರಗಿಸುವ ವ್ಯವಸ್ಥೆ ಮಾಡಬೇಕು. ಆ ಪರಿಷತ್ತಿನಲ್ಲಿ ಈ ಜಾಡ್ಯದ ನಿವಾರಣೆಗೆ ತಕ್ಕ ಉಪಾಯಗಳನ್ನು ನಿರ್ಧರಿಸಿಕೊಂಡು ಸರಕಾರದ ಹಣದ ಸಹಾಯದಿಂದ ವಿವಿಧ ಕೈಗಾರಿಕೆಗಳನ್ನು ಪ್ರಾರಂಭಿಸಿಯೋ ರಸ್ತೆ, ಕಾಲುವೆ ಮೊದಲಾದುವುಗಳನ್ನು ರಚಿಸಿಯೋ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕಾಗಿದೆ.

ಲಾಭದಾಯಕವೆನಿಸುವ ಪ್ರತಿಯೊಂದು ಕೈಗಾರಿಕೆಯನ್ನು ಸರಕಾರವು ಪ್ರೋತ್ಸಾಹಿಸಬೇಕು. ಕೂಡಿದಷ್ಟು ವಿದ್ಯಾವಂತರಿಗೋ ಅವಿದ್ಯಾವಂತರಿಗೋ ಉದ್ಯೋಗಗಳು ದೊರೆಯುವಂತಾಗಬೇಕು. ಸಂಕಗಳು ಮಾರ್ಗಗಳು, ಬಂದರಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡಬೇಕು. ಅನಾವಶ್ಯವೆಂದಿರುವ ಕಾಡುಗಳನ್ನು ಕಡಿದು, ಜನರ ವಾಸಕ್ಕೆ ತಕ್ಕುದಾದ ಭೂಮಿಗಳನ್ನು ರಚಿಸಬೇಕು. ವಿಶಿಷ್ಟವಾದ ನಿಧಿಗಳನ್ನು ಸ್ಥಾಪಿಸಿ ಆ ದ್ರವ್ಯದ ಮೂಲಕ ನಿರುದ್ಯೋಗಿಗಳಿಗೆ ಸದ್ದಾರಿಯನ್ನು ತೋರಿಸಬೇಕು. ಚಕ್ರವರ್ತಿಯವರ ರಜತೋತ್ಸವ ಸಮಾರಂಭಕ್ಕೆ ಸಂಗ್ರಹವಾಗಿರುವ ಮಹಾನಿಧಿಯ ಅಂಶವೊಂದನ್ನು ಈ ವಿಷಯಕ್ಕೆ ಮೀಸಲಾಗಿಟ್ಟು, ಮತಷ್ಟು ಬೇಕಾದ ಮೊತ್ತವನ್ನು ಸಾರ್ವಜನಿಕರಿಂದ ಸಂಗ್ರಹಿಸುತ್ತಾ ಇರಬೇಕು. ಈಗ ಬೇಡುವವರೆಂದಿರುವವರ ಸಂಖ್ಯೆಯನ್ನು ಕಂಡುಹಿಡಿದು ಅವರಲ್ಲಿ ನಿಜವಾದ ಭಿಕ್ಷುಕರಾರು, ಕೆಲಸ ಮಾಡಲು ಮನಸ್ಸಿಲ್ಲದೆ ವ್ಯಾಗ್ರೈರಾಗಿ ಈ ವೃತ್ತಿಗಿಳಿದಿರುವವರು ಎಷ್ಟು ಮಂದಿ—ಮೊದಲಾದ ಕೂಲಂಕಷವನ್ನು ಪಡೆಯಬೇಕು. ಅವರಲ್ಲಿ ಉದ್ಯೋಗಕ್ಕೆ ತಕ್ಕವರೆಂಬವರನ್ನು ವಿವಿಧ ಕೈಗಾರಿಕೆಗೋ ಮಜೂರಿಯ ಕೆಲಸಕ್ಕೋ ಕಳುಹಿಸಬೇಕು. ಹಾಗಾದರೆ ಹಿಂದೂದೇಶದ ನಿರುದ್ಯೋಗಿಗಳ ಸಂಖ್ಯೆಯು ಕಡಮೆಯಾಗುವುದರಲ್ಲಿ ಸಂದೇಹವಿಲ್ಲ.

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ ಗೋಡೆಯ ಗಡಿಯಾರ, ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ. ನೀವೂ ನಮ್ಮಲ್ಲಿಗೆ ಬರಬಹುದು_ತೃಪ್ತಿ ಹೊಂದಬಹುದು ಮೆಚ್ಚಿದರೆ ಪಡೆಯಬಹುದು

ಸರಕಾರದ ಪ್ರಯೋಜನವೇ ಪ್ರಜೆಗಳ ಪ್ರಯೋಜನ. ಪ್ರಜೆಗಳೂ ಸರಕಾರವೂ ಒಂದೇ.

ಮೈಸೂರಿನ ಶ್ರೀ ಮನ್ಮಹಾರಾಜರು

ಸ್ಫುಟವಿಚಾರಗಳು

ಇಂತಹ ಔದಾಸೀನ್ಯವೇಕೆ?

ಮೊನ್ನೆ ಶಾಸನ ಸಭೆಯಲ್ಲಿ ನಿರುದ್ಯೋಗಿಗಳ ಕುರಿತಾದ ಚರ್ಚೆಯಿದ್ದಾಗ ಸರ್ ಫ್ರಾಂಕ್ ನ್ಯೂಸರು ಬಹು ಗಂಭೀರವಾಗಿ ನುಡಿಯುತ್ತಾ "ಸರಕಾರಕ್ಕೆ ನಿರುದ್ಯೋಗಿಗಳ ಮೇಲೆ ಬಹು ಸಹಾನುಭೂತಿಯಿದೆ" ಎಂದು ಹೇಳಿದರು. ಪಾಪ! ಎಷ್ಟು ಮನಃಪೂರ್ವಕವಾಗಿ ಹೇಳಿದರೋ! "ಸಹಾನುಭೂತಿಯಿದೆ" ಎಂದು ಬಾಯಿಯಲ್ಲಿ ಹೇಳುವುದು ಅದೇನ ಕಷ್ಟ? ಸಹಾನುಭೂತಿಯನ್ನು ಕಾರ್ಯಕಾರಿಯಾಗಿ ತೋರಿಸುವ ಬುದ್ಧಿಯು ಮಾತ್ರ ಇನ್ನೂ ಬಂದಿಲ್ಲ. ಹಿಂದೂದೇಶದಲ್ಲಿ ಎಷ್ಟು ನಿರುದ್ಯೋಗಿಗಳಿರುವರೆಂದು ಒಂದು ಲೆಕ್ಕವನ್ನಾದರೂ ತೆಗೆಯಿರಿ ಎಂದು ಕಳೆದ ಕೆಲವು ವರ್ಷಗಳಿಂದ ಜನರು ಮೊರೆಯಿಡುತ್ತಿರುವರಾದರೂ ಸರಕಾರದ "ಸಹಾನುಭೂತಿ"ಯು ಈ ಮೊರೆಯ ಮೇಲೆ ಬೀಳಲಿಲ್ಲ. ಗಣತಿಯಲ್ಲಿ ಒಂದು ಸಾಹಸವನ್ನು ಮಾಡಿದರು. ಆದರೇನು? ಅದರ ಫಲಿತಾಂಶವು ಕಂಡುಬರಲೇ ಇಲ್ಲ. ಇಂಗ್ಲಾಂಡಿನಲ್ಲಿ ನಿರುದ್ಯೋಗಿಗಳು ಎಷ್ಟಿರುವರೆಂದು ವಾರಂಪ್ರತಿ ಲೆಕ್ಕವಿಡುವ ಕ್ರಮವಿದೆ. ಆದರೆ ಇಲ್ಲಿ—ಅದೇ ಬ್ರಿಟಿಷ ರಾಜಕಾರಣಪಟುಗಳು ಬೇರೆ ರೀತಿಯಿಂದಲೇ ವರ್ತಿಸುತ್ತಿದ್ದಾರೆ. ಸರಕಾರದ ಮನೋಗತವು ಜನರಿಗಾದರೂ ತಿಳಿಯುವುದು ಹೇಗೆ?

ಬೊಬ್ಬಿಲಿ ರಾಜರ ಅಪಸ್ವರ.

ಬೊಬ್ಬಿಲಿ ಮಹಾರಾಜರು ಮೊನ್ನೆ ಒಂದು ಭಾಷಣಮಾಡುತ್ತಾ 'ನನ್ನ ಪಂಗಡವು ಡೊಮಿನಿಯನ್ ಸ್ಟೇಟಸ್‌ಗಾಗಿ ನಿಂತಿದೆ—ಅದನ್ನು ಹೊಂದುವುದರಲ್ಲಿ ನಿರತವಾಗಿದೆ' ಎಂದರು. ಇದನ್ನು ಕೇಳಿದವರೆಲ್ಲರೂ ಆಶ್ಚರ್ಯಗೊಳ್ಳಬೇಕು. ಸ್ವರವು ತೀರ ಅಪಸ್ವರ ಎಂದೂ ಕೇಳಿಸದಿರುವಂತಹದ್ದು. ಇಷ್ಟರತನಕವೂ ಸರಕಾರದೊಡನೆ ಕೈಗೆ ಕೈ ಹಿಡಿದು ಕುಣಿದಾಡಿದ ಇವರು ಈಗ ಕೊಂಗ್ರೆಸ್ಸಿನವರ ಪ್ರಭಾವವನ್ನೋ ತನ್ನ ಸೋಲನ್ನೋ ಮನಗಂಡು, ಈಗ ಜನತೆಯ ಮನಶ್ಶಾಂತಿಗಾಗಿ ಹೀಗೆ ನುಡಿಯುತ್ತಿರಬಹುದು. ಮಹಾರಾಜರ ನುಡಿಗಳ ಅರ್ಥವನ್ನು ಮಾಡಿಕೊಳ್ಳುವಷ್ಟು ಜ್ಞಾನವು ಈಗ ಸಂಸ್ಥಾನದ ಪ್ರಜೆಗಳಲ್ಲಿದೆ—ಎಂದು ಅವರಿಗೆ ತಿಳಿಸುವುದು ಒಳ್ಳೆತಲ್ಲವೇ?

ಬರಿಯ ಹುಡುಗಾಟಿಕೆ

ಶಾಸನ ಸಭೆಯಲ್ಲಿ ಒಂದೆರಡು ದಿನಗಳ ತನಕ ಫೈನಾನ್ಸ್ ಮಸೂದೆಯನ್ನು ಸರಕಾರ ಮತ್ತು ರಾಷ್ಟ್ರೀಯರು ಒಟ್ಟುಗೂಡಿ ಚರ್ಚಿಸಿ, ಟೀಕಿಸಿ, ವಾಗ್ಯುದ್ಧ ನಡೆಸಿದ ಮೇಲೆ ವೈಸರಾಯರು ತನ್ನ ವಿಶೇಷಾಧಿಕಾರವನ್ನು ಹೊರಡಿಸಿ, ಆ ಮಸೂದೆಯು ಮುಂದೆ ಇದ್ದಂತೆಯೇ ಇದ್ದು ಮಂಜೂರುಗೊಳ್ಳಬೇಕೆಂದು ಆಜ್ಞಾಪಿಸಿರುತ್ತಾರೆ. ಚರ್ಚೆಗೆ ತಗಲಿರುವ ವೆಚ್ಚವೆಷ್ಟು? ಸದಸ್ಯರ ಮಿದುಳು ಹಾಳಾದುದೆಷ್ಟು? ಅವರ ಪ್ರಶ್ನೆಗಳಿಗೆ ಯುಕ್ತಿಯುಕ್ತ ಉತ್ತರ ಕೊಡಲು ಅಧ್ಯಕ್ಷರೂ, ಫೈನಾನ್ಸ್ ಮೆಂಬರರೂ ತಲೆ ಕೆರೆದು ಮಾಡಿದುದೆಷ್ಟು? ಚರ್ಚೆಯ ಗೋಡೆಯನ್ನು ಕಟ್ಟಿ ಮಸೂದೆಯ ಕಟ್ಟಡಕ್ಕೆ ಮಾಡ ಹಾಕಬೇಕೆಂದಾಗ ... [illegible]

ಹೊರಡಿತು! ಶಾಸನ ಸಭೆಗೆ ರಾಷ್ಟ್ರೀಯರು ಸೇರಿ ಫಲವಾದರೂ ಏನಾಯಿತು? ತಮಗೆ ಬೇಡವಾದುದನ್ನು ಸರಕಾರವು ಬೇಕೆಂದು ಮುರಿದು ತೆಗೆಯುವ ಅಧಿಕಾರವನ್ನು ತಡೆಯಲು ಸಾಮರ್ಥ್ಯವಿಲ್ಲದಿರುವ ಎಸೆಂಬ್ಲಿ ಸದಸ್ಯರು ಇನ್ನು ಮಾಡುವುದಾದರೂ ಏನು?

ಜಸ್ಟಿಸ್ ಪಾರ್ಟಿಗೆ ಪುನಃ ಸೋಲು.

ಡಾ| ಮಲ್ಲಯ್ಯರವರ ನಿಧನದಿಂದ ಮದ್ರಾಸು ಕೌನ್ಸಿಲಿನಲ್ಲಿ ಖಾಲಿಬಿದ್ದ ಸ್ಥಾನಕ್ಕೆ ಮದ್ರಾಸಿನ ಸುಪ್ರಸಿದ್ಧ ಮಹಿಳೆಯರಾದ ಶ್ರೀಮತಿ ಲಕ್ಷ್ಮೀಪತಿಯವರು ಶೇಕಡಾ ೮೩ರಷ್ಟು ವೋಟುಗಳನ್ನು ಪಡೆದು, ಆರಿಸಲ್ಪಟ್ಟಿರುವರು. ಜಸ್ಟಿಸ್ ಪಾರ್ಟಿಯ ಉಮೇದ್ವಾರರಿಗೆ ತಲೆಭಾರವಾದ ಅಪಜಯವುಂಟಾಯಿತು. 'ಕೊಂಗ್ರೆಸ್ಸಿನಲ್ಲಿ ಬಲವಿಲ್ಲ' ಎಂದು ಹೇಳಿದ ಬೊಬ್ಬಿಲಿ ಮಹಾರಾಜರೂ, 'ದೇಶಿಗರಲ್ಲಿ ಒಗ್ಗಟ್ಟಿಲ್ಲ' ಎಂದ ಜಯಕರರೂ ಈಗ ಎಚ್ಚರವಿರಬೇಕಾಗಿದೆ. ಜಸ್ಟಿಸ್ ಮಂತ್ರಿಮಂಡಲದ ನೀತಿಯ ಮೇಲೆ ಜನತೆಗೆ ವಿಶ್ವಾಸವಿಲ್ಲವೆಂಬುದು ಈ ಚುನಾವಣೆಯಿಂದ ವ್ಯಕ್ತವಾಗುತ್ತದೆ. ಜಸ್ಟಿಸ್ ಪಕ್ಷವು ಇನ್ನಾದರೂ ತನ್ನ ತಪ್ಪನ್ನು ಒಪ್ಪಿಕೊಂಡು ಸದ್ದಾರಿಗೆ ಬರಬೇಕಾಗಿದೆ.

ಈಗ ಬಯಲಾಯಿತು

ಸರ್ ಜೋನ ಸೈಮನ್ ಮತ್ತು ಹಿಟ್ಲರರೊಳಗೆ ನಡೆದ ಮಾತುಕತೆಗಳ ಪೂರ್ಣ ವಿವರವು ಈಗ ಸರ್ ಜೋನ್ ಸೈಮನರಿಂದ ಕೋಮನ್ಸ್ ಸಭೆಯಲ್ಲಿ ಬಯಲಾಗಿದೆ. ಹಿಟ್ಲರರ ೩೬ ಡಿವಿಜನುಗಳೂ ಅವುಗಳಲ್ಲಿರುವ ೫೫೦ ೦೦೦ ಸೈನಿಕರೂ ನಾಜಿ ಶಾಖೆಗಾರರೂ ಪೋಲೀಸರೂ ತನಗೆ ಬೇಕೆಂದಿರುವರ. ತನಗೆ ತನ್ನ ವಸಾಹತುಗಳೂ ಬೇಕಾಗಿವೆ ಎಂದು ಹೇಳಿರುತ್ತಾರೆ. ಮತ್ತು ಈ ದೀನಾವಸ್ಥೆಯಲ್ಲಿ ತಾನ ಲೀಗ್ ಆಫ್ ನೇಶನ್ಸಿನಲ್ಲಿರಲು ಒಪ್ಪೆನು ಎಂದು ಅವರು ಹೇಳಿರುವರು' ಎಂದು ಸೈಮನರು ಸಭೆಗೆ ತಿಳಿಸಿರುವರು. ಇಂಗ್ಲಾಂಡಿಗೆ ಜರ್ಮನಿಯ ಮಾನವನ್ನುಳಿಸಲು ಹಿಟ್ಲರರು ಯುದ್ಧಕ್ಕೆ ಸಿದ್ಧರಾಗಿರುವರು. ಬ್ರಿಟಿಷ ಮುತ್ಸದ್ದಿಗಳ ಆಚರಣೆಯನ್ನು ನೋಡಬೇಕಾಗಿದೆ.

ಕುಷ್ಠ ರೋಗಿಗಳಿಗೆ ಸಹಾಯ.

ಸಿಲ್ವರ್ ಜುಬಿಲಿಯ ಪರವಾಗಿ ಮಿ| ಇ. ಎಂ. ಗೋನ್ ದೊರೆಗಳವರು ಹೊರಡಿಸಿದ ಮನವಿಯನ್ನು (ಇನ್ನೊಂದೆಡೆಯಲ್ಲಿ ಪ್ರಕಟವಾಗಿದೆ) ಓದಿದರೆ ಜುಬಿಲಿ ಸಂಬಂಧವಾದ ನಿಧಿಯ ಶೇಕಡಾ ೭೦ರಷ್ಟನ್ನು ನಮ್ಮ ಜಿಲ್ಲೆಯೊಳಗಣ ಜನರ ಕಷ್ಟ ನಿವಾರಣೆಗಾಗಿಯೇ ವೆಚ್ಚ ಮಾಡುವಂತೆ ನಿಶ್ಚೈಸಲಾಗಿದೆಯೆಂದು ತಿಳಿದು ಬರುವುದು. ಪ್ರಥಮವಾಗಿ, ಕುಷ್ಠ ರೋಗಿಗಳ ವಸತಿಗಾಗಿ ಚಿಕಿತ್ಸಾಲಯವನ್ನು ಇನ್ನೂ ದೊಡ್ಡದಾಗಿ ಕಟ್ಟಿಸುವ ನಿರ್ಧಾರವಾಗಿದೆಯೆಂದೂ ಅದಕ್ಕಾಗಿ ಸಾರ್ವಜನಿಕರು ಕೂಡಿದಷ್ಟು ಹೆಚ್ಚು ಧನ ಸಹಾಯವನ್ನು ಜುಬಿಲಿ ನಿಧಿಗೆ ಕಳುಹಿಸಿ ಕೊಡಬೇಕೆಂದೂ ಅವರು ವಿನಂತಿಸಿದ್ದಾರೆ. ಮಂಗಳೂರು ಪಟ್ಟಣದ ಮಾರ್ಗಗಳಲ್ಲಿ ನೂರಾರು ಕುಷ್ಠ ರೋಗಿಗಳು ನರಳುತ್ತಿರುವುದು ಎಲ್ಲರಿಗೂ ಗೋಚರವಾಗಿರುವ ವಿಷಯ. ಈ ರೋಗಿಗಳು ಸಾರ್ವಜನಿಕರಿಗೆ ಅಪಾಯಕರವಾಗಿರುವರೆಂಬ ಮಿ| ಗೋನರ ಮಾತಿನಲ್ಲಿ ಸತ್ಯವಿದೆ. ಸಾರ್ವಜನಿಕರಿಗೆ ತಿಳಿಯದೆ ರೋಗವನ್ನುಂಟುಮಾಡುವ ಈ ರೋಗಿಗಳ ಶುಶ್ರೂಷೆಗೆ ನಮ್ಮವರು ಏನಾದರೊಂದು ವ್ಯವಸ್ಥೆಯನ್ನು ಮಾಡಲೇ ಬೇಕಾಗಿದೆ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಸಟ್ಟಾ ಆಡುವವರಿಗೆ ಕಠಿಣ ಶಿಕ್ಷೆ ಕೊಡಬೇಕು.

ಸಟ್ಟಾವನ್ನು ನಿಲ್ಲಿಸುವ ಉಪಾಯ.

ಆಯ್ಯಾ, ಸ್ವದೇಶಾಭಿಮಾನಿಯೇ!

ಮುಂಬಾಯಿ ಶಹರಿನಲ್ಲಿ ಕಳೆದ ಹತ್ತು ವರ್ಷಗಳಿಂದೀಚೆಗೆ ವಾಸಮಾಡುವಂಥಾ ಜನರಲ್ಲಿ "ಸಟ್ಟಾ" ಆಟವು ದುಂದುಗಾರಿಕೆಯಲ್ಲಿ ಒಂದಾಗಿ ಅಂಟಿಕೊಂಡಿರುತ್ತದೆ. ಇದರ ವಿಷಯವಾಗಿ ಎಷ್ಟು ವಿವರಿಸಿದರೂ ತೀರದು. ಇದೀ ಮುಂಬಾಯಿ ಶಹರದ ಪ್ರತೀ ಒಂದು ಮೂಲೆಯಲ್ಲಿಯೂ ಗಲ್ಲಿಗಳಲ್ಲಿಯೂ, ರಾಜಮಾರ್ಗಗಳಲ್ಲಿಯೂ ಸಟ್ಟೆಯ ಅಂಕಡೆಗಳ ಜಾಹೀರಾತುಗಳು ಹಚ್ಚಿಕೊಂಡಿರುವುವು. ಆ ಜಾಹೀರಾತಿನಲ್ಲಿ "ನಾಳೆಯ ಧಾರಣೆ" ಬಿಸ್‌ಟಾಕ್ ಕೊಟ್ಟಿದ್ದು ಅಮೇರಿಕನ್ ತೇಜಿ ಮಂದಿಯ ನಿಜವಾಗಿ ಚಾನ್ಸು ಕೊಟ್ಟೇವು. "ಫಿಟ್ ಅಂಕಡೆಗಳನ್ನು ಕೊಡುತ್ತೇವೆ" ಇಲ್ಲದಿದ್ದರೆ ಹಣ ಫೆರತ್ ಎಂದು ಈ ರೀತಿಯ ಜಾಹೀರಾತಿನ ಬೋರ್ಡುಗಳು ನಮ್ಮ ಕಣ್ಣಿಗೆ ಎಲ್ಲೆಲ್ಲಿಯೂ ಕಾಣಿಸುತ್ತವೆ. ಅದಲ್ಲದೆ ರಸ್ತೆಗಳಲ್ಲಿಯೂ, ಫುಟ್‌ಪಾತ್‌ಗಳಲ್ಲಿಯೂ ಎಂತುಕೊಂಡು ಡಂಕಾ ಓಪನಿಂಗ್, ಕ್ಲೋಜಿಂಗ್ ಎಂಬ ಅಂಕಡೆಗಳನ್ನು ಚೋಕಿನಿಂದ ಬರೆದದ್ದು ಎಲ್ಲಾ ಕಡೆಗಳಲ್ಲಿ ಕಂಡುಬರುತ್ತವೆ. ಅದನ್ನು ನೋಡುವುದಕ್ಕೆ ಗುಂಪುಗುಂಪಾಗಿ ಅಲ್ಲಲ್ಲಿ ಜನರು ಸೇರಿರುವುದನ್ನು ನಮ್ಮ ಕಣ್ಣಿನಿಂದ ಕಾಣುತ್ತೇವೆ. ಅದೇ ರೀತಿಯಲ್ಲಿ ಏನೂ ಗೊತ್ತಿಲ್ಲದ ಮನುಷ್ಯರು ಹುಚ್ಚರಂತೆ ಗಡ್ಡವನ್ನು ಬೆಳೆಸಿಕೊಂಡು ಮೈದಾನುಗಳಲ್ಲಿ ಕೂತಿರುವಂಥ ಕಪಟ ಸನ್ಯಾಸಿಗಳ ಕೂಡೆ ಹೋಗಿ ಅಲ್ಲಿಯೂ ಗುಂಪುಗುಂಪಾಗಿ ಸೇರಿ ಈವತ್ತು ಏನು ಬರುತ್ತದೆ? ನಾಳೆಯ ಧಾರಣೆ ಯಾವುದು ಎಂದು ಸನ್ಯಾಸಿಗಳಿಗೆ ಉಪದ್ರ ಕೊಡುತ್ತಾ ... [illegible] ಎಲ್ಲಾ ಹೋಟೆಲುಗಳಲ್ಲಿಯೂ ವೀಳ್ಯದೆಲೆ ಮಾರುವಂಥ ಅಂಗಡಿಗಳಲ್ಲಿಯೂ ಅಂಕಡೆಗಳ ಚಿಕೋಟಿಗಳನ್ನು ತೂಗಾಡಿಸುವುದನ್ನು ನಾವು ನೋಡುತ್ತೇವೆ. ಬೆಳಗ್ಗೆ ಆಗುವುದೇ ತಡ ಮಧ್ಯರಾತ್ರಿ ವರೆಗೆ ಜನರು ಗುಂಪಾಗಿ ಸೇರಿ ಐದು ಬಂತು. ಮೂರು ಬಂದಿರುತ್ತದೆ. ನಾಳೆ ತೇಜಿ ಬರುತ್ತದೆ. ಐದು ತೇಜಿ ಬಂದು ಗೆಲುವಾಯಿತು ಎಂದು ಅವರೊಳಗೆ ಗುಣಗುಟ್ಟುತ್ತಿರುವರು. ಎಲ್ಲಿ ನೋಡಿದರೂ ಒಂದೇ ಪ್ರಕಾರವಾಗಿ ಮುಂಬಯಿ ನಗರದಲ್ಲಿ ಗಡಿಬಿಡಿ ನಡೆಯುತ್ತಾ ಇರುತ್ತದೆ. ಇಷ್ಟು ಸಟ್ಟಾ ಆಡುವ ಉತ್ತೇಜನಕ್ಕೆ ಇಲ್ಲಿಯ ಮರಾಠಿ ಗುಜರಾಥಿ ಪತ್ರಿಕೆಗಳೇ ಕಾರಣವೆಂದು ಹೇಳಬಹುದು. ಯಾಕೆಂದರೆ ಇವುಗಳು ಸಟ್ಟೆಯ ಜಾಹೀರಾತನ್ನು ಕ್ರಮವಾಗಿ ಪ್ರಕಟಿಸುತ್ತವೆ. ಯಾವಾಗಲೂ ವರ್ತಮಾನ ಪತ್ರಿಕೆಗಳು ಹೊರಗೆ ಬಿದ್ದಕೂಡಲೇ ಅವನ್ನು ಓದಲಿಕ್ಕೆ ಬಾರದಿದ್ದರೂ ಸಟ್ಟೆಯ ಜಾಹೀರಾತುಗಳ ಕಡೆಗೆ ಲಕ್ಷ್ಯವಿಟ್ಟು ಮಾನ ಸ್ವರು ಹುಚ್ಚುತನದಿಂದ ಧುಮಿಕಿ ಪೇಪರನ್ನು ಅಡಿಮೇಲಾಗಿ ನೋಡುತ್ತಿರುವರು.

ಸಟ್ಟೆಯ ಜಾಹೀರಾತನ್ನು ಕೊಡುವ ಕನ್ನಾಲಾಲ್ ನ್ಯೂಜ ಬುಲೆಟಿನ್ ವರ್ತಮಾನ ನಾಳೆಯ ಧಾರಣೆ ಈ ರೀತಿಯ ಜಾಹೀರಾತುಗಳ ಪೇಪರುಗಳು ತುಂಬಾ ಹರಡಿರುತ್ತವೆ. ಇದರ ದೆಸೆಯಿಂದ ಸಾವಿರಾರು ಜನರು ಹೊಟ್ಟೆಬಟ್ಟೆಗಿಲ್ಲದೆ ಎಲ್ಲಾ ರಸ್ತೆಗಳ ಇಕ್ಕಡೆಗಳಲ್ಲಿ ಬಿದ್ದು ನರಳುತ್ತಿರುವುದನ್ನು ನಮ್ಮ ಸಮಕ್ಷಮದಲ್ಲಿ ನೋಡುತ್ತೇವೆ. ಈ ಪ್ರಕಾರ ಘಾತಕಮಾಡುವಂಥಾ ಜುಗಾರಿಯ ಲಕ್ಷ್ಯಕ್ಕೆ ಮುಂಬಯಿ ಸರಕಾರದವರು ಯೋಗ್ಯ ಕಾನೂನುಗಳನ್ನು ಜ್ಯಾರಿಗೆ ತಂದು, ಅದನ್ನು ನಿಲ್ಲಿಸದೆ ಸುಮ್ಮನೆ ಕುಳಿತುಕೊಂಡಿರುವುದು ಬಹಳ ಆಶ್ಚರ್ಯಕರವಾದ ಸಂಗತಿಯಾಗಿರುತ್ತದೆ. ಮುಂಬ್ಯಯಲ್ಲಿ ಅಚ್ಚಾಗುತ್ತಿರುವ ರಾಷ್ಟ್ರೀಯ ಪತ್ರಿಕೆಯಾದ "ನವಶಕ್ತಿ" ಎಂಬ ಪ್ರೈಸಾದಿನ ಮರಾಠಿ ಪತ್ರಿಕೆಯು ಮಾತ್ರ ಸಟ್ಟೆಯ ಯಾವ ಜಾಹೀರಾತುಗಳನ್ನೂ ಪ್ರಕಟಿಸದೆ ಇರುವುದರಿಂದ ಅದರ ಉಪಕಾರವನ್ನು ಸ್ಮರಿಸಬೇಕಾಗಿದೆ. ಇದು ಹೊರತು ಬಾಕಿ ಉಳಿದ ವರ್ತಮಾನ ಪತ್ರಿಕೆಗಳಲ್ಲಿ ಸಟ್ಟೆಯ ಜಾಹೀರಾತನ್ನು ಪ್ರಕಟಿಸುವರು.

ಈ ಸಂಬಂಧವಾಗಿ ಎಷ್ಟೋ ಬಡಬಗ್ಗರು ಕೆಟ್ಟು ಹೋಗದಂತೆ ಅವರ ಸಂರಕ್ಷಣೆಗಾಗಿ ಸಟ್ಟೆಯಿಂದ ಹಾನಿಯಾಗುವ ಹಾಗೆ ಕೆಲವು ಕಲಾಪ್ರಗಳನ್ನು ಕೆಳಗೆ ನಮೂದಿಸಿದ ಪ್ರಕಾರ ಸಟ್ಟೆಯಾಡುವುದು ಕಡಿಮೆಯಾಗುವುದೆಂದು ನನ್ನ ಮನಸ್ಸಿನಲ್ಲಿ ಭರವಸೆಯಿದೆ.

೧ ಮುಂಬಾಯಿಯಲ್ಲಿರುವ ವರ್ತಮಾನ ಪತ್ರಿಕೆಗಳಲ್ಲಿ ಸಟ್ಟೆಯ ಜಾಹೀರಾತನ್ನು ಪ್ರಕಟಿಸುವುದಕ್ಕೆ ಬಹಿಷ್ಕಾರ ಹಾಕಬೇಕು.

೨ ರಸ್ತೆಗಳಲ್ಲಿ 'ಶುವರ್‌ಚಾನ್ಸ್ ಧಾರಣೆ' 'ಅಂಕಡೆ ಬಾರದಿದ್ದರೆ ಹಣ ಪರತ್' ಇತ್ಯಾದಿ ಬೋಧಿಸುವ ಈ ತರದ ಬೋರ್ಡುಗಳನ್ನು ತೂಗಾಡಿಸುವುದನ್ನು ನಿಲ್ಲಿಸಬೇಕು.

೩ ರಸ್ತೆಗಳಲ್ಲಿ, ಫುಟ್‌ಪಾತ್‌ಗಳಲ್ಲಿ ಇರುವ ಅಂಕಡೆಗಳನ್ನು ಬಿಡಿಸುವ ಠಕ್ಕ ಜ್ಯೋತಿಷ್ಯರನ್ನೂ, ಸಟ್ಟೆ ಅಂಕಡೆಗಳ ಚಿಕೋಟಿಗಳನ್ನು ಹಿಡಿದು ಅಲ್ಲಲ್ಲಿ ತಿರುಗುತ್ತಿರುವವರನ್ನೂ, ಅದಲ್ಲದೆ ಚಿಕೋಟಿಯನ್ನು ಛಾಪಿಸುವ ಯಜಮಾನರ ಕೂಡೆ ಹೇಳಿ ಅವುಗಳನು ಛಾಪಿಸದಂತೆಯೂ ಮಾಡಿಸಬೇಕು.

೪ ರಸ್ತೆಗಳಲ್ಲಿ ತಿರುಗಾಡುತ್ತಿರುವ ಜನರು ಸಟ್ಟೆಯ ಅಂಕಡೆಯ ಕಡೆಗೆ ಧುಮಿಸದ ಹಾಗೆ ಅದಕ್ಕೆ ತಕ್ಕ ಕಾಯಿದೆಗಳನ್ನು ಜ್ಯಾರಿಗೆ ತರಬೇಕು.

೫ ಸಟ್ಟೆಯ ಬೀಟು ತೆಕ್ಕೊಳ್ಳುವವರನ್ನೂ ಯಾ ಅವರ ಕೈಕೆಳಗೆ ಇದ್ದು ಕೆಲಸಮಾಡುವಂಥವರನ್ನೂ ಶಿಕ್ಷಿಸಬೇಕು.

೬ ಪ್ರಥಮದಲ್ಲಿ ಈ ಪ್ರಶ್ನೆಯನ್ನು ಮುಂಬ್ಯಾ ಕೊರ್ಪೊರೇಶನಿನ ಕೈಯೊಳಗೆ ಸೇರಿಸಿ ಇದಕ್ಕೆ ತಕ್ಕ ವ್ಯವಸ್ಥೆ ಮಾಡುವಂಥಾಗಬೇಕು. ಅದೇ ಪ್ರಕಾರ ಮುಂಬ್ಯಾ ಪ್ರಾಂತಿಕ ಕೊಂಗ್ರೆಸ್ ಸಮಿತಿಯವರು ಮೇಲೆ ಹೇಳಿದ ಪ್ರಶ್ನೆಗಳನ್ನು ತಮ್ಮ ನಿರ್ಬಂಧದಲ್ಲಿರಿಸಿ ಸಟ್ಟೆಯಾಡುವಂಥಾ ಕೆಟ್ಟ ಅಭ್ಯಾಸವನ್ನು ನಿರ್ಮೂಲಮಾಡಿಸಿದರೆ ಮುಂಬ್ಯಾ ಶಹರಿನಲ್ಲಿ ಸಟ್ಟೆಯಾಡುವ ಸಂಖ್ಯೆಯು ಕಡಿಮೆಯಾಗುವುದು.

ವಿ. ಎಸ್. ಶಿಬ್ರೂರುಕರ್.

ಭಾರತೀಯ ನಾಟ್ಯಕಲಾ ವಿಲಾಸ, ಬೆಂಗಳೂರು

ಇದೇ ತಿಂಗಳು ೯ ಮತ್ತು ೧೦ನೆಯ ತಾರೀಕುಗಳಲ್ಲಿ ಶ್ರೀಮತಿ ರುಗ್ಮಿಣಿ ದೇವಿ ಮತ್ತು ಗೋಪೀನಾಥ ಇವರ ಅಮೋಘವಾದ ನಾಟ್ಯ ಪ್ರದರ್ಶನವು ಕಂಟೋನ್‌ಮೆಂಟ್ ಬಿ. ಆರ್. ವಿ. ಥಿಯೇಟರಿನಲ್ಲಿ ನಡೆಯಿತು. ಇದೇ ತಾ| ೧೧ ಮತ್ತು ೧೨ರಲ್ಲಿ ಸದ್ರಿ ಥಿಯೇಟರಿನಲ್ಲಿ ಪ್ರಪಂಚದಲ್ಲೆಲ್ಲಾ ವಿಖ್ಯಾತರಾದ ಶ್ರೀ| ಉದಯಶಂಕರರ ನಾಟ್ಯ ಪ್ರದರ್ಶನವು ನಡೆಯುವುದು.

(೧೪ನೇ ಪುಟದಿಂದ ಮುಂದುವರಿದುದು)

ರಾಷ್ಟ್ರಬಂಧುವಿನಲ್ಲಿ ಪಂಡಿತಾಚಾರ್ಯರು ಶ್ರೀ| ಸೀತಾರಾಮಾಚಾರ್ಯರನ್ನು ಕುರಿತು ಬರೆದ ಟೀಕೆಯನ್ನು ಕಂಡಾಯಿತು. ನಮ್ಮ ವ್ಯಂಗಟೀಕೆಯ ಬರಹವು, ಪಂಡಿತಾ(!)ಚಾರ್ಯರಿಗೆ ತಿಳಿಯದೆ ಹೋಯಿತೆಂದು ವ್ಯಸನವಾಗಿದೆ. ಶ್ರೀ| ಕುಬಣರಾಯರೂ ಇದನ್ನು ಕಿಪಾರಸೆಂದೇ ತಿಳಿದಿದ್ದಾರೆ. ನಮ್ಮ ಉದ್ದೇಶವು— ಶ್ರೀ| ಆಚಾರ್ಯರು ಮುಂದಾಳುಗಳಲ್ಲವಾದರೂ ನಿರ್ಭೀತ, ಸರಳ ಟೀಕಾಕಾರರು ಎಂದು ಹೇಳಿ, ಬುದ್ಧಿವಂತರಾದ ಶ್ರೀ| ಕುಬಣರಾಯರೇ ನೆಗೆದು ಬಿದ್ದರೆಂದು ಹೇಳುವ ಮಾತು ಅವರಿಗೆ ~~ಅರ್ಥವಾಗದೆ ಹೋದದ್ದು~~ 'ಮುದಿ ಸ್ವದೇಶಾಭಿಮಾನಿ'ಯ ಮೂಸ್ಪನ್ನು ಕಂಡು ಸಿಟ್ಟಾದರೆ ನಾವೇನು ಮಾಡಲಿ!

ಅನುಕ್ರಮಣಿಕೆ

ಕಥೆ ೩
ಪತ್ರಿಕಾ ಪ್ರಪಂಚ ೪
ಸಣ್ಣ ಕೈಗಾರಿಕೆಗಳ ಮಹತ್ವ ೫
ವಿದ್ಯುದ್ಯೋಗದ ಶಾಸ್ತ್ರಕ್ಕೆ ಇಟಲಿಯಲ್ಲಿ ಪ್ರೋತ್ಸಾಹ
ಕಾಲ್ ಚಿಕಿತ್ಸೆ ೮
ನಮಗೆ ಈಗ ಬೇಕಾಗಿರುವುದೇನು? ೭
ಅಗ್ರಲೇಖ
ಸ್ಫುಟವಿಚಾರಗಳು ೯
ಬೇಟಿ ಬಂಧ್ಯಪ್ಪನವರು ೫
ಬೋರ್ಡಿನ ವಿಭಜನೆಯಾಗಬೇಕೆ? ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು, ೧೬
ನಮ್ಮ ಮುಂದಾಳುಗಳು ೧೮
ಉಪ್ಪಿನ ಮೇಲಿನ ಸುಂಕವನ್ನು ಕಡಿಮೆ ಮಾಡಿರಿ ೧೯

ಸ್ವದೇಶಾಭಿಮಾನಿ

ತಾ ೧೨ನೇ ಶುಕ್ರವಾರ ಏಪ್ರಿಲ್ '೩೫

ಬೋರ್ಡಿನ ವಿಭಜನೆಯಾಗಬೇಕೇ?

ಜಿಲ್ಲಾ ಬೋರ್ಡು ಪುತ್ತೂರು ತಾಲೂಕಿನ ವಿಷಯವಾಗಿ ಮಾಡಿದ ಒಂದು ವಿಚಿತ್ರ ಠರಾವನ್ನು ಕುರಿತು ನೀವು ಕೇಳಿರಬಹುದು. ಗ್ರಾಮಗಳ ಸುಧಾರಣೆಯ ವಿಷಯವಾದ ಗ್ರಾಂಟನ್ನು ಎರಡು ವರುಷಗಳ ತನಕ ಅದಕ್ಕೆ ಕೊಡಕೂಡದೆಂದು, ಅದು ನಿರ್ಣಯಮಾಡಿರುತ್ತದೆ. ಈ ಠರಾವನ್ನು ಕುರಿತು ತೀರ ಅಸಮಾಧಾನವು ಆ ತಾಲೂಕಿನಲ್ಲಿ ಉಂಟಾಗಿರುವುದೆಂದು, ಅಲ್ಲಿಂದ ಬಂದಿರುವ ವಾರ್ತೆಯಿಂದ ತಿಳಿಯುವುದು. ಪ್ರಥಮ ಬಾರಿಗೆ, ನಮ್ಮ ಬೋರ್ಡಿನ ವರ್ತನೆಯನ್ನು ಖಂಡಿಸಲು ಅಲ್ಲಿ ಪ್ರಮುಖರು ನಿಶ್ಚಯಿಸಿರುವರು ಅಲ್ಲದೆ– ಇದೇ ರೀತಿ ಬೋರ್ಡು ಆಚರಿಸಿದರೆ, ತಾವು ಜಿಲ್ಲಾ ವಿಭಜನೆಯ ವಿಷಯದಲ್ಲಿ ಯೋಚಿಸತಕ್ಕದ್ದಾಗಬಹುದಾಗಿ ಅವರ ಉದ್ದೇಶವಿರುವಂತೆ ಕಾಣುವುದು.

ಜಿಲ್ಲಾ ಬೋರ್ಡಿನ ನಿರ್ಣಯವೂ ಮಹತ್ವದ್ದೇ ಸರಿ. ಅದರಂತೆ ಪುತ್ತೂರಿನ ನಿಷೇಧ ಸೂಚಕ ಸಭೆಯ ನಿರ್ಣಯಗಳಿವೆ. ಇದರ ಫಲಿತಾಂಶವೇನಾಗಬಹುದೆಂದು ಎಲ್ಲರೂ ಯೋಚಿಸಬೇಕಾಗಿ ಬಂದಿದೆ.

ಮೊದಲಿಗೆ ಬೋರ್ಡಿನ ನಿರ್ಣಯವನ್ನು ಕುರಿತು ನೋಡುವ. ಪುತ್ತೂರು ತಾಲೂಕಿಗೆ ಅತಿಯಾಗಿ ಮದ್ದು ಹೋಗುತ್ತಿದೆ ಎಂಬುದು ಅವರ ನಿರ್ಣಯಕ್ಕೆ ಕಾರಣವಾಗಿರಬೇಕು– ಇದರ ಜತೆಯಲ್ಲಿ ಜಿಲ್ಲಾ ಮುಂದಾಳುಗಳ ವ್ಯಕ್ತಿ ವೈಷಮ್ಯವೂ ಸೇರಿದೆಯೆಂಬುದು ನಿರ್ವಿವಾದದ ಮಾತು. ಬೋರ್ಡು ಕೊಡುವುದಿಲ್ಲವೆಂದ ಗ್ರಾಂಟು ಈ ಮೊದಲು, ಲೋಕಲ್ ಬೋರ್ಡು ಇನ್ಸ್‌ಪೆಕ್ಟರರಿಂದ ಹಂಚಲ್ಪಡುತ್ತಿತ್ತು. ಗ್ರಾಮಗಳಿಗೆ ರಸ್ತೆಗಳ ಬಗ್ಗೆ ಸಲುವ ಈ ಗ್ರಾಂಟನ್ನು ಗಳಿಸಲು–ಎರಡು ಬಾರಿಯದೆ ಪಂಚಾಯತುಗಳು ತಮ್ಮ ಸ್ವಂತ ಶ್ರಮದಿಂದ, ಅಂದಾಜು ಪಟ್ಟಿಯ ಅರ್ಧದಷ್ಟು ಸಿಗುವ ಗ್ರಾಂಟಿನಿಂದಲೇ ಕೆಲಸ ನಿರ್ವಹಿಸುವುದು ಇದು ಹಳ್ಳಿಯ ಜನರು ತಾವಾಗಿ ಉದ್ಯಮ ತೊಡಗಿದರೆ ಸಾಧ್ಯವು. ಗ್ರಾಮಪಂಚಾಯತುಗಳು ಅಲ್ಲಿರಬೇಕು. ಇನ್ನು ಪಂಚಾಯತುಗಳು ಇಲ್ಲದ ಕಡೆಗಳಿಗೆ ಈ ಗ್ರಾಂಟಿನ ಉಪಯೋಗವು ಸಿಗಲು ಗ್ರಾಂಟಿನ ಜತೆಗೆ ಅಷ್ಟೇ ಹಣವನ್ನು ಬೋರ್ಡು ಸೇರಿಸಬೇಕು. ಪುತ್ತೂರಿಗೆ ಗ್ರಾಂಟು ಕೊಡಬಾರದೆಂದು ನಿರ್ಣಯಿಸಿದ ಬೋರ್ಡು, ತಾನು ಕಡಮೆ ಬೀಳುವ ಹಣವನ್ನು ಪೂರೈಸಲು ಸಿದ್ಧವಿದೆಯೋ–ಎಂಬ ವಿಚಾರ ಮಾಡಿದಂತಿಲ್ಲ. ಈ ಸಿದ್ಧತೆಯಿಲ್ಲವಾದರೆ ತ್ವರೆಯಿಂದ ಅಂದಾಜು ಪಟ್ಟಿಗಳು ಸಿದ್ಧವಾಗದಿದ್ದರೆ ಗ್ರಾಂಟು ಯಾರಿಗೂ ಇಲ್ಲವಾದೀತು.

ಪುತ್ತೂರಿಗೆ ಗ್ರಾಂಟು ಕೊಡಕೂಡದು ಎಂಬ ವಿಚಾರದಲ್ಲಿ ಅವರು ಅದನ್ನು ಹೇಗೆ ಗಳಿಸಿದರು ಎಂಬ ವಿಷಯವನ್ನು ಯೋಚಿಸಬೇಕು. ಅಲ್ಲಲ್ಲಿನ ಪಂಚಾಯತುಗಳಿಂದ ಅಲ್ಲಿನ ಕೆಲಸಗಾರರಿಂದ ಅದು ಸಾಧ್ಯವಾಯಿತು. ಅವರ ಅವಿಶ್ರಾಂತ ಶ್ರಮದಿಂದ ಆ ತಾಲೂಕಿನಲ್ಲಿ ರಸ್ತೆಗಳು ಹೆಚ್ಚಾಗಿವೆ. ಜನರು ಈ ರೀತಿಯ ಶ್ರಮಕ್ಕೆ ಸಿದ್ಧರಾಗಿ, ತಮ್ಮ ಆಡಳಿತೆ ನಡೆಸುವಾಗ ಪ್ರೋತ್ಸಾಹಬೇಕೇ?– ಇಲ್ಲವೆ ಜಿಲ್ಲಾ ಬೋರ್ಡಿನವರಂತೆ "ನಿಮ್ಮನ್ನು ಹೊರಕ್ಕೆ ನೂಕಿದ್ದೇವೆ"–ಎನ್ನಬೇಕೆ? ಉಳಿದ ತಾಲೂಕುಗಳು ಹಿಂದುಳಿಯ ಬಾರದು ನಿಜ.

ಅದಕ್ಕೆ ಒಂದೇ ದಾರಿಯದೆ. ಅವರ ಎಲ್ಲಾ ಸೌಕರ್ಯಗಳನ್ನು ಬೋರ್ಡು ಒಂದೇ ನಡೆಯಿಸಲಾರದು. ಜನರೂ ನೆರವಾಗಬೇಕು. ಅಲ್ಲೂ ಪಂಚಾಯತುಗಳ ನಿರ್ಮಾಣವಾಗಿ ಜನರು ತಮ್ಮ ಸೌಕರ್ಯಗಳನ್ನು ಕಲ್ಪಿಸಲು ಕಲಿಯಬೇಕು. "ಹೀಗೆ ನಮ್ಮ ತಾಲೂಕಿನಲ್ಲಿ ಗ್ರಾಮದ ವ್ಯವಸ್ಥೆ ಮಾಡಲಾರದವರೆಂದರು, ತು ಬಾಯಿಬಡಕತನದ ದಾ...ದ ತೀರ ಹಾಸಿ... ಹಾದಿಯ... ಹಿಡಿದಿದ್ದಾರೆ.

ಈಗ ಜಿಲ್ಲಾ ವಿಭಜನೆಯ ಮಾತು. ಈ ಮಾತು ಜಿಲ್ಲಾ ಸಭೆಯಲ್ಲಿ ಬರುವುದು ನಿಶ್ಚಯ. ಜಿಲ್ಲೆಯ ಬೋರ್ಡು ತನ್ನ ತಿರಸ್ಕಾರವನ್ನು ಬಹಿರಂಗವಾಗಿ ಪುತ್ತೂರು ತಾಲೂಕಿನ ಕಡೆಗೆ ತೋರಿಸುತ್ತ, ಅದರಿಗಾದರೂ ಎರಿದಾರಿಯಿಲ್ಲ. ಆದರೆ ವಿಭಜನೆಯಿಂದ ಏನು ಹಾನಿ ಏನು ಲಾಭವೆಂಬ ವಿಚಾರ ಕಾಣಿಯಬೇಕು. ಅದರ ಸಾಮಾನ್ಯ ಆಡಳಿತೆಯ ವಿಚಾರ ಅಧಿಕಾರವು ಸಿಕ್ಕೇಂದ್ರೀಕೃತವಾದ ತಾಲೂಕು ಬೋರ್ಡುಗಳನ್ನು ಕೆಡಿಸಿ ಜಿಲ್ಲಾ ಬೋರ್ಡು ಅದನ್ನು ಕೆಲಸ ಮಾಡಲು ಸಾಮರ್ಥ್ಯವನ್ನು ತೋರಿಸಿಲ್ಲ. ಜನರಿಗೂ ಬೋರ್ಡಿಗೂ ಇರುವ ಸಂಬಂಧ ಇನ್ನಷ್ಟು ದೂರ ಬಿತ್ತು. ವಿಭಜನೆಯಿಂದ–ಸ್ವಂತ ಶ್ರಮಕ್ಕೆ ಸಿದ್ಧರಿರುವ ಭಾಗದವರು ಮುಂದರಿಯುತ್ತಾರೆ.

ಇದರಿಂದ ಎಲ್ಲವೂ ಲಾಭವೆನ್ನುವಂತಿಲ್ಲ. ಒಂದು ಜಿಲ್ಲೆಯು ಇಡೀ ಇರುವಾಗ, ಅದರ ಕೈಯಲ್ಲಿರುವ ಅಧಿಕ ಹಣದಿಂದ ಹೆಚ್ಚಿನ ಯೋಜನೆ ಮಾಡಲು ಶಕ್ಯವಿದೆ. ಆದರೆ ವಿಭಜನೆಯಾದರೆ, ಆಯವು ಹಂಚಿ ಹೋಗಿ ದೊಡ್ಡ ಸೇತುವೆಗಳಂತಹ ಕಾಮಗಾರಿಗಳು ಸಾಧ್ಯವಾಗಲಾರದು. ತಮ್ಮ ಊರಿನ ಆಡಳಿತೆಯಲ್ಲಿ ಭಾಗವಹಿಸಲು ಇನ್ನೂ ನಾಲ್ಕು ಮಂದಿ ಸದಸ್ಯರಿಗೆ ಸಾಧ್ಯವಾದೀತು. ಇತ್ತ–ಆಡಳಿತೆಯ ವೆಚ್ಚವು ಸ್ವಲ್ಪ ಹೆಚ್ಚದಿರಲಾರದು. ಅಂಥ ಸಮಯದಲ್ಲಿ –ಜಿಲ್ಲಾ ಬೋರ್ಡು–ಪಂಚಾಯತ ಆಫೀಸರು ಡಿ. ಬಿ. ಇ. ಓ. ರವರು–ಇವರಿಗೆ ಯಾವ ಸ್ಥಾನ ಎಂಬ ವಿಚಾರವೂ ಬರುವುದು.

ಅಂತು–ಜಿಲ್ಲಾ ಬೋರ್ಡು, ತನ್ನ ವರ್ತನೆಯಿಂದ ಜನರು ಸಹ ಅದರ ಕಾರುಭಾರದಲ್ಲಿ, ವಿಚಾರ ವಿನಿಮಯಮಾಡುವ ಪ್ರಸಂಗವನ್ನು ತಂದುದು ಸಂತೋಷವೇ ಸರಿ. ಈ ಪ್ರಸಂಗದಲ್ಲಿ ಅದರ ಸದಸ್ಯರಾದರೂ, ವ್ಯಕ್ತಿದ್ವೇಷ ವ್ಯಕ್ತವ್ಯ ಮೀರಿದ ಜಾಣಾಕ್ಷತೆಯನ್ನು ತೋರಿಸಿದ್ದರೆ ಲೇಸಿತ್ತು.

8ನೇ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತು.

ಬರುವ ಮೇ ತಿಂಗಳ ತಾ. 9, 10, 11 ರಲ್ಲು ಮಂಗಳೂರಲ್ಲಿ ಜರಗುವುದು. ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬುರಾಜೇಂದ್ರ ಪ್ರಸಾದರು ಪರಿಷತ್ತನ್ನು ತೆರೆಯುವರು. ಸಂಯುಕ್ತ ಪ್ರಾಂತದ ಸನ್ನಾನ್ಯ ಪ್ರಮುಖರೂ ಎಸೆಂಬ್ಲಿ ಮೆಂಬರರೂ ಆಗಿರುವ ಶ್ರೀ ಪ್ರಕಾಶರು ಅಧ್ಯಕ್ಷರಾಗುವರು.

ಮಂಗಳೂರು, ಕರ್ನಾಟಕದ ಪಶ್ಚಿಮ ಕರಾವಳಿಯ ಪ್ರಾಮುಖ್ಯ ಶಹರ. ಪಡುವಣ ಕಡಲು ಮೂಡಣ ಸಹ್ಯಾದ್ರಿ ಬೆಟ್ಟಗಳ ನಡುವಿನ ಕರ್ನಾಟಕ ಭಾಗವು ಇತಿಹಾಸ ಪ್ರಸಿದ್ಧವಾದದು. ಹಿಂದಿನ ಇತಿಹಾಸದ ಪ್ರಥಮ ರಾಜವಂಶವಾದ ಕದಂಬರ ರಾಜಧಾನಿಯು ಈ ನಾಡಿನ ಬನವಸಿಯು. ದ್ವೈತ ಮತಸ್ಥಾಪಕ ಮಧ್ವಾಚಾರ್ಯರು ಈ ಜಿಲ್ಲೆಯ ಉಡುಪಿಯವರು. ಹರಿಜನರೂ ದೇವದರ್ಶನ ಮಾಡುವ ವ್ಯವಸ್ಥೆಗೊಳಿಸಿದ ವಾದಿರಾಜ ಸ್ವಾಮಿಗಳು ದಕ್ಷಿಣ ಕನ್ನಡಿಗರು. ಅವರ ಕಾರ್ಯವನ್ನು ಉಡುಪಿಯಲ್ಲಿ ಈವತ್ತೂ ಸುಪ್ರಸಿದ್ಧ ಶ್ರೀ ಕೃಷ್ಣ ದೇವಸ್ಥಾನದಲ್ಲಿ ನೋಡಬಹುದು. ವಿಜಯನಗರದ ಮೂರನೇ ವಂಶದ ನರಸ ನಾಯಕನು ಈ ತುಳುನಾಡಿನವನು. ವಿಜಯನಗರವನ್ನು ಪನತೆಗೇರಿಸಿದ್ದ ತುಳುವ ಕೃಷ್ಣದೇವರಾಯನು.

ಶಿಲ್ಪಕಲೆಯಲ್ಲೂ ಈ ನಾಡು ಹಿಂದುಳಿದಿಲ್ಲ. ಮಂಗಳೂರಿನಿಂದ 30 ಮೈಲು ದೂರವಿರುವ ಕಾರ್ಕಳದಲ್ಲಿ 42 ಫೀಟು ಉದ್ದವಾದ ಒಂದೇ ಕಲ್ಲಿನಿಂದ ಕೊರೆಯಲ್ಪಟ್ಟ ಗೋಮಟೇಶ್ವರ ವಿಗ್ರಹವೂ, ಜೈನಕಾಶಿಯೆಂಬ ಮೂಡಬಿದ್ರೆಯಲ್ಲಿನ ಸಾವಿರ ಕಂಭದ ಬಸದಿಯೂ ಇಡೀ ಹಿಂದೂಸ್ಥಾನದ ಶಿಲ್ಪಕಲೆಯ ಇತಿಹಾಸದಲ್ಲಿ ಗೌರವಸ್ಥಾನ ಪಡೆದಿದೆ.

ಆಧುನಿಕ ಕಾಲದ ಮುದ್ದಣ್ಣ ಕವಿಯೂ, ಹಿಂದಿನವನಾದ ಪಂಪನೂ ಈ ನಾಡಿನವರು. ಹಳ್ಳಿಯ ಜನರಿಗೆ ಮನರಂಜನೆಯೊಡನೆ ತತ್ವ ಬೋಧೆಯನ್ನು ಮಾಡುವ ಯಕ್ಷಗಾನ ಕಲೆಯ ಬೀಡು ಈ ನಾಡು.

ಇಲ್ಲಿನ ಸೃಷ್ಟಿಯ ಸೊಬಗು ವಿಶ್ವಕವಿ ರವೀಂದ್ರನಾಥ ಠಾಗೋರರಿಂದ ಕೂಡ ಹಿಂದೂಸ್ಥಾನದ ಹೂದೋಟವೆಂಬ ಹೆಸರಿಗೆ ಪಾತ್ರವಾಯಿತು. ಕೈಗಾರಿಕೆಗಳಲ್ಲೂ ನಮ್ಮ ನಾಡು ಹಿಂದಿಲ್ಲ. ಕೆಲಸಕ್ಕೆ ಬಾರದ್ದೆಂದಿದ್ದ ಮಣ್ಣಿನಿಂದ ಹಂಚುಗಳನ್ನು ತಯ್ಯಾರಿಸಿ ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ಹಿಂದುಸ್ಥಾನದ ಮನೆಗಳಿಗೆ ಹಸನಾದ ಮಾಡುಗಳನ್ನು ಪೂರೈಸುವ ಕಾರಖಾನೆಗಳು ಮಂಗಳೂರಲ್ಲಿ. ಕನ್ನಡದಲ್ಲಿ ಪ್ರಥಮ ಮುದ್ರಣದ ಅಚ್ಚುಗಳು ತಯಾರಾದ ಛಾಪಖಾನೆಯು ಮಂಗಳೂರಲ್ಲಿ. ಇತ್ತಲಾಗಿ ಗೇರುಬೀಜ ಹುರಿದ ಪ್ರಥಮ ಕಾರ್ಖಾನೆಗಳು ಸ್ಥಾಪಿತವಾದುದು ಮಂಗಳೂರಲ್ಲಿ. ಉದ್ಯಾನ ನಗರವೆಂಬ ಮೆಚ್ಚಿಗೆಯ ಹೆಸರನ್ನು ಶ್ರೀಮತಿ ಸರೋಜಿನಿ ದೇವಿಯವರಿಂದ ಪಡೆದ ಪಟ್ಟಣ ಮಂಗಳೂರು.

ಕಾಂಗ್ರೆಸು ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಮನ್ನಿಸಿ ಕರ್ನಾಟಕವನ್ನು ಒಂದು ಪ್ರಾಂತವಾಗಿ ಮಾಡಿದ ಮೇಲೆ ಅತ್ಯಂತ ಜಯಶೀಲವಾಗಿ ಪ್ರಥಮ ಪ್ರಾಂತಿಕ ಪರಿಷತ್ತು ನಡೆದದ್ದು ಮಂಗಳೂರಲ್ಲಿ. ಎರಡು ಸತ್ಯಾಗ್ರಹ ಸಮರಗಳನ್ನು ಹೂಡಿತು. ಮುಂದೇನು ಮಾಡಬೇಕೆಂದು ವಿಚಾರ ಮಾಡುವ ಈ ಸಂದಿಗ್ಧ ಸಮಯದಲ್ಲಿ ಉತ್ಸಾಹದಿಂದ ಪರಿಷತ್ತನ್ನು ಕರೆಯುವ ಜವಾಬ್ದಾರಿಯನ್ನು ಹೊತ್ತಿರುವುದು ಮಂಗಳೂರು.

ಮೈಸೂರಿನ ಸಮಾಚಾರಗಳು.

(ಬೆಂಗಳೂರು ಪತ್ರ–ಸ್ವಂತ ಪ್ರತಿನಿಧಿಗಳಿಂದ)

ತಾ. ೯–೪–೧೯೩೫

ರೈತರ ಸಭೆಗಳೂ ಸರಕಾರವೂ.

ಮೈಸೂರು ಸಂಸ್ಥಾನದಲ್ಲಿ ರೈತರ ಸಭೆಗಳು ಕೂಡಕೂಡದೆಂದು ಹೊರಟಿರುವ ಸರಕಾರದ ಹುಕುಮುಗಳ ಸಂಬಂಧವಾಗಿ ಮೈಸೂರು ಪ್ರಜಾ ಸಂಯುಕ್ತಮಂಡಲಿಯ ಅಧ್ಯಕ್ಷರೂ, ಕೋಲಾರದ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರೂ ಆದ ಶ್ರೀ ಕೆ. ಚಂಗಲರಾಯ ರೆಡ್ಡಿಯವರು ದಿವಾನ್ ಸಾಹೇಬರವರ ಭೇಟಿ ತೆಗೆದುಕೊಂಡು, ರೈತರ ಸಭೆಗಳ ಉದ್ದೇಶವನ್ನು ಅವರಿಗೆ ತಿಳಿಸಿ, ರೈತರ ಸಭೆಗಳು ಕೂಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಂಡರು. ದಿವಾನ್ ಸಾಹೇಬರವರು ಶ್ರೀ. ರೆಡ್ಡಿಯವರ ಮಾತುಗಳನ್ನು ಸಮಾಧಾನಚಿತ್ತದಿಂದ ಕೇಳಿದರೆಂದೂ ಈ ಸಂಬಂಧದಲ್ಲಿ ತಮ್ಮ ಕೈಲಾದದ್ದೆಲ್ಲವನ್ನೂ ಮಾಡುವುದಾಗಿ ಭರವಸೆಯಿತ್ತರೆಂದೂ ತಿಳಿದು ಬಂದಿದೆ.

ವಿದ್ಯಾರ್ಥಿಯ ಆತ್ಮಹತ್ಯೆ.

ಮಾರ್ಚಿ ತಾ ೩೦ನೆಯ ದಿನ ಮೈಸೂರು ಮಹಾರಾಜಾ ಕಾಲೇಜು ಬಳಿ ಇರುವ ಕುಕ್ಕನಹಳ್ಳಿ ಕೆರೆಯಲ್ಲಿ ಒಂದು ಶವವು ತೇಲುತ್ತಿತ್ತು. ಕೆರೆಯ ಕಾವಲುಗಾರನಿಗೆ ಅದು ಗೋಚರವಾಗಿ ಪೋಲೀಸಿನವರಿಗೆ ವರ್ತಮಾನ ತಿಳಿದು ಅವರು ಮಹಜರ್ ಮುಂತಾದ ಕಾರ್ಯಕ್ರಮಗಳನ್ನು ಜರಗಿಸಿದರು. ಆ ದುರ್ಘಟನೆಯ ಬಗ್ಗೆ ಈ ರೀತಿ ವಿವರಗಳು ತಿಳಿದುಬಂದಿವೆ–

ಆತ್ಮಹತ್ಯೆಮಾಡಿಕೊಂಡವನು ಮೈಸೂರು ಮೆಡಿಕಲ್ ಕಾಲೇಜಿನ ಎಚ್. ಎನ್. ರಾಮಸ್ವಾಮೈಯಂಗಾರ್ ಎಂಬ ವಿದ್ಯಾರ್ಥಿ. ಸುಮಾರು ೨೩ ವರ್ಷ ವಯಸ್ಸು. ತಂದೆ ಹೊಳೆನರಸೀಪುರದಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರು. ವಿದ್ಯಾರ್ಥಿಗೆ ಮದುವೆಯೂ ಆಗಿದೆ. ಅವನು ಎಂ. ಬಿ. ಬಿ. ಎಸ್. ತರಗತಿಯ ಕೊನೆಯ ವರ್ಷದ ಪರೀಕ್ಷೆಗೆ ಹೋಗಿದ್ದನು. ೨೮ನೆಯ ತಾರೀಕಿನ ದಿವಸ ಮಧ್ಯಾಹ್ನ ಸರ್ಜರಿಯ ಎರಡನೆಯ ಪೇಪರಿತ್ತು. ಆ ದಿನ ಸಾಯಂಕಾಲವೇ ಅವನು ಆತ್ಮಹತ್ಯೆ ಮಾಡಿಕೊಂಡನು.

ಮೃತ ವಿದ್ಯಾರ್ಥಿಯ ಅಂಗಿನ ಜೇಬಿನಲ್ಲಿದ್ದ ಒಂದು ಕಾಗದವು ಪೋಲೀಸಿನವರ ಕೈಗೆ ಸಿಕ್ಕಿತು. ಅವನ ಆತ್ಮಹತ್ಯೆಗೆ ಕಾರಣವೇನೆಂಬುದು ಆ ಕಾಗದದಿಂದ ತಿಳಿದುಬಂದಿಲ್ಲ. ಪರೀಕ್ಷೆಯಲ್ಲಿ ಪಾಸಾಗದೆ ಹೋಗಬಹುದೆಂದೂ ಅದರಿಂದ ತನಗೆ ಅವಮಾನವಾಗುವುದೆಂದೂ ಬಗೆದು ವಿದ್ಯಾರ್ಥಿಯು ಆತ್ಮಹತ್ಯೆಮಾಡಿಕೊಂಡಿರಬಹುದೆಂದೂ ಊಹಿಸಲಾಗಿದೆ. ಊಹೆಯೇ ಹೊರತು ನಿಜವಾದ ಕಾರಣ ತಿಳಿದುಬಂದಿಲ್ಲ. ಊಹೆಯು ನಿಜವಾಗಿರುವ ಪಕ್ಷಕ್ಕೆ, ಎಂತಹ ಹೃದಯದೌರ್ಬಲ್ಯ ವಿದ್ಯಾರ್ಥಿಯದು! ವಿದ್ಯಾರ್ಥಿಯ ಅಕಾಲಮೃತ್ಯುವಿಗಾಗಿ ಸಂತಾಪಪಡಬೇಕಾಗಿದೆಯಾದರೂ ಆತನು ಕೈಕೊಂಡ ಮಾರ್ಗವು ಅನುಮೋದಿಸುವಂತಿಲ್ಲ.

ಸ್ವಾತಂತ್ರ್ಯ ಹೋರಾಟದಲ್ಲಿ ಶಕ್ತಿಮೀರಿ ಭಾಗವಹಿಸಿದ ಕನ್ನಡಿಗರು ಇಂದು ಕರ್ನಾಟಕದ ಮುಂದಿರುವ ಮಹತ್ವದ ಪ್ರಶ್ನೆಗಳನ್ನು ಬಿಡಿಸುವುದರಲ್ಲಿ ಹಿಂದುಳಿಯಲಾರರು ಆದ್ದರಿಂದ, ಮಂಗಳೂರಿಗೆ ಕನ್ನಡಿಗರೆಲ್ಲರೂ ಪ್ರತಿನಿಧಿಗಳಾಗಿಯೂ ಪ್ರೇಕ್ಷಕರಾಗಿಯೂ ಪರಿಷತ್ತಿನ ಸಮಯದಲ್ಲಿ ಬಂದು ಕರ್ನಾಟಕಕ್ಕೆ ಕರ್ತವ್ಯದ ದಾರಿಯನ್ನೂ ತೋರಿಸುವರೆಂದೂ, ಕರ್ನಾಟಕದ ಕಡಲಕಡೆಯ, ಈ ಭಾಗದ ಜನರ ಪರಸ್ಪರ ಭೇಟಿ ಪರಿಚಯಗಳಿಂದ ಕರ್ನಾಟಕದ ಸಾಂಸ್ಕೃತಿಕ ಏಕೀಕರಣಕ್ಕೆ ಸಹಾಯಕರಾಗುವರೆಂದೂ ನಂಬಿದ್ದೇವೆ.

ಸ್ವಾಗತ ಸಮಿತಿ.

ಲಂಡನ್.

ರಾಜಕೀಯ ಸಂಬಂಧವಿದೆಯೇ? ಜೀವನದಲ್ಲಿ ನಿರಾಶೆಗೊಂಡ ಪರಿಣಾಮ.

ಲಂಡನಿನಲ್ಲಿ ಮೊನ್ನೆ ಡಾ। ಫೆಭಿಯನ್ ಮುತ್ತು ಫ್ರಾಮ್ಯನ್ ಎಂಬಿಬ್ಬರು ಜರ್ಮನರ ಮರಣವಾಯಿತು. ಇವರ ಮರಣಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲವೆಂದು ತಿಳಿದುಬಂದಿದೆ. ಜೀವನದಲ್ಲಿ ನಿರಾಶೆಗೊಂಡೇ ಅವರ ಮರಣವು ಸಂಭವಿಸುವಂತಾಯಿತು.

ಬರ್ಲಿನ್.

ವಿಮಾನವು ಭೂಮಿಗೆ ಬಿತ್ತು ೫ ಮಂದಿಯ ಮರಣ.

ಪ್ರೇಗ್ ಮತ್ತು ಎಮ್ಸ್ಟರ್‌ಡಮ್ ಮಾರ್ಗವಾಗಿ ಹಾರಾಡುತ್ತಿದ್ದ ಡಚ್ ಪ್ರಯಾಣಿಕ ವಿಮಾನವೊಂದು ಭೂಮಿಗೆ ಬಿದ್ದು ೫ ಜನರು ಮೃತರಾದರು. ವಿಮಾನವು ಹೆಚ್ಚು ಎತ್ತರದಲ್ಲಿ ಹಾರುತ್ತಿದ್ದಿಲ್ಲ.

ಶ್ರೀ। ತುಷಾರ ಕಾಂತಿಘೋಷರು.

ಜಾರ್ಜ್ ೫ನೇ ಅರಸರನ್ನು ಕೋರ್ಟಿಗೆ ಎಳೆದಿದ್ದ ಲೇಖನವನ್ನು ಪ್ರಕಟಿಸಿದ್ದ ಆನಂದಬಜಾರ ಪತ್ರಿಕೆಯ ಸಂಪಾದಕರಾದ ಶ್ರೀ। ತುಷಾರಕಾಂತಿ ಘೋಷರಿಗೆ ಕಲ್ಕತ್ತಾ ಹೈಕೋರ್ಟ್ ಕಾರಾವಾಸವನ್ನು ವಿಧಿಸಿತು.

ಜನಸಂದಣಿಯ ಮೇಲೆ ಮೋಟರು. ಇಬ್ಬರ ಮರಣ, ೧೬ ಜನರಿಗೆ ಜಖಂ

ಬಾರ್ಸಿಲೋನಾದಿಂದ ಬಂದ ವಾರ್ತೆಯಂತೆ ಮೋಟರುಕಾರುಗಳ ಓಟದ ಸ್ಪರ್ಧೆಯನ್ನು ನೋಡುತ್ತಿದ್ದ ಜನಸಂದಣಿಯ ಮೇಲೆ ಒಂದು ಮೋಟರು ಆಕಸ್ಮಾತ್ತಾಗಿ ಬಿದ್ದು ಇಬ್ಬರ ಮರಣವಾಯಿತು. ೧೬ ಜನರು ವಿಶೇಷ ಜಖಂಗೊಂಡರು.

ಮ್ಯುನಿಚ್

ಶಸ್ತ್ರಗಳು ಹೆಚ್ಚಲಿ! ಸೈನ್ಯವು ಹೆಚ್ಚಲಿ! ಶಸ್ತ್ರಗಳಿಂದಲೇ ಶಾಂತಿರಕ್ಷಣೆ. ಜರ್ಮನಿಯ ಧುರೀಣರ ಅಭಿಪ್ರಾಯ.

ನಾನು ಕ್ರಿಸ್ತವಿರೋಧಿ, ನಾಸ್ತಿಕ ಆದರಲ್ಲೇ ನನಗೆ ಅಭಿಮಾನ. ಶಸ್ತ್ರಗಳನ್ನು ತಯಾರಿಸಬಾರದೆಂದು ನಿರ್ಬಂಧಿಸುವುದು ಅನೀತಿ. ಶಸ್ತ್ರಗಳಿಂದಲೇ ಶಾಂತಿ ರಕ್ಷಣೆ. ಫ್ರಾನ್ಸ್, ಜರ್ಮನಿಗಳಿಗೆ ಶಾಂತಿ ಬೇಕು. ಅವರ ಭೂಮಿಯಡಿಯಲ್ಲಿರುವ ಶಕ್ತಿಗಳು ಕೆಲವು ಯುದ್ಧವನ್ನೆಬ್ಬಿಸುತ್ತವೆ ಎಂದು — ಫೀಲ್ಡ್ ಮಾರ್ಷಲ್ ವೊನ್ ಲುಡೆನ್‌ಡೊರ್ಫ್‌ರವರ ಹೇಳಿಕೆ.

ಆಫ್ರಿಕ.

ಆಫ್ರಿಕದ ಗವರ್ನರರ ಪರಿಷತ್ತು ಪರಸ್ಪರ ಸಹಕಾರ.

ಯುಗಾಂಡ, ಟಾಂಗನಿಯಾಕಾ, ಕೆನ್ಯಾ, ಜಂಜೀಬಾರ್‌ಗಳ ಗವರ್ನರರುಗಳು ತಮ್ಮ ಒಂದು ಪರಿಷತ್ತನ್ನು ಎಂಟೆಬ್‌ನಲ್ಲಿ ಜರಗಿಸಿದರು. ಸರಕುಗಳ ವಿನಿಮಯ, ಸುಂಕದ ವ್ಯವಸ್ಥೆ, ವೈಮಾನಿಕ ಒಪ್ಪಂದಗಳು ಜರಗಿದುವು.

ಹನ್ನೆರಡು ಮಂದಿ ಮೃತರಾದರು.

ಮುಂಬಾಯಿಯಲ್ಲಿ ಸ್ಫೋಟನ!

ಅನೇಕ ಮನೆಗಳು ನಿರ್ಮೂಲಗೊಂಡುವು

ಮುಂಬಾಯಿಯ ಪೋರ್ಟಿಯಲ್ಲಿರುವ ಸಿಡಿಮದ್ದುಗಳ ಕಾರ್ಖಾನೆಯಲ್ಲಿ ಕಳೆದ ಅಕ್ಟೋಬರ ತಿಂಗಳಲ್ಲಿ ಕಾಂಗ್ರೆಸ್ ಅಧಿವೇಶನದ ವೇಳೆ ಮಹಾ ಸ್ಫೋಟನವಾಗಿತ್ತು. ಅನೇಕರು ಜಖಂಗೊಂಡಿದ್ದರು. ಅದೇ ಕಾರ್ಖಾನೆಯಲ್ಲಿ ಇದೇ ತಾ. ೭ನೇ ಮಧ್ಯಾಹ್ನ ಮತ್ತೊಂದು ಭಯಂಕರ ಸ್ಫೋಟನವಾಯಿತು. ಇದರ ಕಟ್ಟಡದ ಮಾಡು ಗೋಡೆಗಳು ನೂರಾರು ಅಡಿಗಳ ದೂರಕ್ಕೆ ಸೆಯಲ್ಪಟ್ಟುವು. ೮ ಮಂದಿ ಬಾಲಕರೂ, ಒಬ್ಬಳು ಬಾಲಕಿಯೂ, ಇಬ್ಬರು ಸ್ತ್ರೀಯರೂ, ೪ ಮಂದಿ ಪುರುಷರೂ ಕಟ್ಟಡದಡಿಯಲ್ಲಿ ಬಿದ್ದು, ಸ್ಫೋಟನಕ್ಕೆ ಸಿಕ್ಕಿಯೂ ಮೃತರಾದರು.

ಸ್ಫೋಟನವು ಮಹಾ ಶಬ್ದವನ್ನು ಎಬ್ಬಿಸಿ ಸುತ್ತುಮುತ್ತಲಿನ ಮನೆಮಠಗಳು ಅದುರಿದುವು. ಶಬ್ದವು ಪೇಟೆಯ ವರೆಗೂ ಕೇಳಿಬಂತು. ಒಡನೆ ಜನಸಂದಣಿಯು ಅತ್ತ ಓಡಿತು. ಶ್ರೀಮಾನ್ ನರಿಮಾನರೇ ಮೊದಲಾದ ಮುಂದಾಳುಗಳು ಆ ಸ್ಥಾನಕ್ಕೆ ಕೂಡಲೇ ಬಂದು ಜಖಂಗೊಂಡವರನ್ನು ಆಸ್ಪತ್ರೆಗೆ ಕಳುಹಿಸಿದರು. ಇಂತಹ ಭೀಷಣ ಸ್ಫೋಟನವು ಇತ್ತೀಚೆಗೆ ಅಲ್ಲಿ ನಡೆದಿರುವುದಿಲ್ಲ.

ಸಿಡಿಮದ್ದುಗಳನ್ನು ಕ್ರಮಪಡಿಸುತ್ತಿರುವಾಗ ಒಂದು ಕಲ್ಲೊಂದು ತಾಗಿ ಬೆಂಕಿಯೆದ್ದು ಈ ಸ್ಫೋಟನವಾಯಿತೆಂದು ತಿಳಿದುಬರುತ್ತದೆ.

— —

ಫೈನಾನ್ಸ್ ಬಿಲ್ಲನ್ನು ರಾಷ್ಟ್ರೀಯರ ಅಭಯಗಳಿಗೆ ವಿರೋಧವಾಗಿ ಶಾಸನಸಭೆಯಲ್ಲಿ ತನ್ನ ವಿಶೇಷಾಧಿಕಾರದಿಂದ ತೂರಿದುಹಾಕಿದ

ಲೋರ್ಡ್ ವಿಲ್ಲಿಂಗ್ಡನ್ನರು.

ಹಾಗಾದರೆ ಶಾಸನಸಭೆಯೇಕೆ? ಎಂದು ಪತ್ರಿಕೆಗಳು ಕೇಳುತ್ತಿವೆ

ಚುಟುಕು ಸುದ್ದಿ.

ಕಲ್ಕತ್ತದ, ಹೋಟೆಯಲ್ಲಿ ಶ್ರೀ ಪಿ ಕೆ ಘೋಷರು ಕೈಗಳಿಗೆ ಬೇಡಿತೊಟ್ಟು ೬ ತಾಸುಗಳ ತನಕ ಈಜಾಡಿದರು

ಮೈಸೂರು ಮಹಾರಾಜರು ಉದಕಮಂಡಲಕ್ಕೆ ಮೊನ್ನೆ ತೆರಳಿರುವರು

ಸರ್ದಾರ ಪಟೇಲರು ಕೃಷಿಕರ ಪರಿಷತ್ತಿಗಾಗಿ ಈ ತಿಂಗಳ ಕೊನೆಯಲ್ಲಿ ಅಲ್ಲಹಾಬಾದಿಗೆ ಹೋಗುವರು

ಬರ್ಮಾ ದೇಶದಲ್ಲಿ ಭಯಂಕರ ಬಿರುಗಾಳಿ ಬೀಸಿ ಅನೇಕ ಕಟ್ಟಡಗಳು ಬಿದ್ದುವು. ಸಿವಿಲ್ ಆಸ್ಪತ್ರೆಯ ಗೋಡೆಯು ಬಿತ್ತು.

ಅಲ್ಲಹಾಬಾದಿನ ಬಳಿ ದಿಗ್ವಿಜಯಸಿಂಘ ಎಂಬ ದರೋಡೆಕಾರನನ್ನು ಶಸ್ತ್ರಸಮೇತ ಹಿಡಿದಿರುವರು

ಸಾರನಾಥದಲ್ಲಿ ಓಡುತ್ತಿದ್ದ ರೈಲು ಪತ್ತಿ, ಗುಂಡು ಹೊಡೆದು ಸರ್ಕಾರಿ ಚೀಲಗಳನ್ನು ಯಾರೋ ಎತ್ತಿ ಒಯ್ದರು.

ಮುಂಬಾಯಿಯಲ್ಲಿ ಸೌತ್ ಇಂಡಿಯನ್ ಕೋ-ಎಡ್ಯುಕೇಶನ್ ಸೊಸೈಟಿ ಎಂಬುದು ಸ್ಥಾಪಿತವಾಗಿದೆ

ಲಕ್ನೋದ ಸೋಶಿಯಲಿಸ್ಟರು ತಾ. ೭ಕ್ಕೆ ಚಟಗಾಂವ್ ದಿನವನ್ನಾಗಿ ಆಚರಿಸಿದರು.

ಮುಂಬಾಯಿಯ 'ಆಜಾದ್' ಪತ್ರಿಕೆಯು ಕರಾಚಿಯ ಗಂಡಸೇಟು ಪ್ರಕರಣವನ್ನು ಟೀಕಿಸಿದುದಕ್ಕೆ ೩೦೦೦ ರೂಪಾಯಿಗಳನ್ನು ಭದ್ರತೆಕೊಡಬೇಕೆಂಬ ನೋಟೀಸು ಹೋಗಿದೆ

ಲಾಹೋರ ಸೆಂಟ್ರಲ್ ಜೈಲಿನಲ್ಲಿದ್ದ ಕೆಲವು ಕೈದಿಗಳಲ್ಲಿ ಒಬ್ಬನು ತೀರಿಹೋದಾಗ ಉಳಿದ ಕೈದಿಗಳು ಅವನು ವಿಷಪ್ರಯೋಗದಿಂದ ಮೃತನಾದನೆಂದು ಜೈಲಿನೊಳಗೆ ಕ್ಷೋಭೆಯೆಬ್ಬಿಸಿದರು.

ಅಜ್ಮೀರ್‌ನಲ್ಲಿಯ ಡಿ. ಎಸ್. ಪಿ ಇವರಿಗೆ ಗುಂಡು ಹಾರಿದ ಸಂಬಂಧವಾಗಿ ಅಲ್ಲಿಯ ಕಾಂಗ್ರೆಸ್ ಕೆಲಸಗಾರರಬ್ಬರ ಮನೆಗಳಲ್ಲಿ ಜಪ್ತಿ ನಡೆಯಿತು

ಪಂಡಿತ ಮಾಲವೀಯರ ಪಕ್ಷ ಸ್ವಾತಂತ್ರ್ಯ ವಿಧಾಯಕ ಸಭೆಗೆ ಹೋಗಕೂಡದ ನಿರ್ಧಾರ ಕೊಂಡಿಟ್ಟುಕೊಂಡಿರುವುದರಿಂದ ಚುನಾವಣೆಗೆ ನಿಲ್ಲುವುದರ ಬಗ್ಗೆ ಕಾಂಗ್ರೆಸ್ ಅಡ್ಡಿಬರುವುದಿಲ್ಲ

ಮುಂಬಾಯಿಯ ಗವರ್ನರರಾದ ಲೋರ್ಡ್ ಬ್ರಬೋರ್ನರು ದಿಲ್ಲಿಗೆ ಹೋಗಿರುವರು

ಲಾಹೋರಿನಲ್ಲಿ ಅಸ್ವಸ್ಥರಾಗಿದ್ದ ಶ್ರೀ। ರಾಜೇಂದ್ರಪ್ರಸಾದರು ಈಗ ಸ್ವಲ್ಪ ಆರೋಗ್ಯವನ್ನು ಹೊಂದಿರುವರು.

ಬೋರಸದಿನಲ್ಲಿಯ ಪ್ಲೇಗು ರೋಗಗ್ರಸ್ತ ಜನರನ್ನು ಕಂಡು ಬಂದ ಸರದಾರ ಪಟೇಲರು ಅಸ್ವಸ್ಥರಾಗಿ ಈಗ ಸೌಖ್ಯಗೊಂಡಿರುವರು

ಹಿಂದೂ ಮಹಾಸಭೆಯ ಒಂದು ದೊಡ್ಡ ಕಟ್ಟಡವು ದಿಲ್ಲಿಯಲ್ಲಿ ರಚಿಸಲ್ಪಡುತ್ತಿದೆ

B. C. I. Bank Ltd.

Vizagapatam

Applications are invited for Taluk Managers and Agents on Rs. 80—10-180/- and Rs. 25-50-2½-75-5-100 - p m with PENSION and FAMILY RELIEF BONUS CERTIFICATE FREE OF PREMIUMS in the undermentioned places in South Kanara and North Malabar districts

1 Taliparamba Taluk, 2 Tellicherry Town, 3 Tellicherry Taluk, 4 Cannanore Taluk, 5. Cannanore Town, 6 Kasaragod Taluk, 7. Hosadurg, 8 Mangalore Town, 9 Mangalore Taluk, 10 Bantwal, 11 Puttur Taluk, 12 Belthangadi, 13. Karkal, 14 Udipi, 15. Coondapoor, 16. Shankarnarayana

Apply with 2 anna postage stamps giving full particulars and enclosing copies of testimonials to—

B S. Shetty,	or C. J. Oliver B. A.
Dt. Inspector	Provincial Inspector,
Perdur Post, (S. K. Dt.)	Retd. Sub-Megistrate, Fort Salem

ಉಪ್ಪಿನ ಕರವನ್ನು ಕಡಿಮೆಮಾಡಬೇಕೆಂದು ಹೇಳಿ ಬಡವರ ಪರವಾಗಿ ಉಜ್ವಲವಾಗಿ ಶಾಸನಸಭೆಯಲ್ಲಿ ವಾದಿಸಿದ

ಶ್ರೀ। ವಲ್ಲಭ ಪಂತರವರು.



ಪೋಲೀಸ್ ಅಧಿಕಾರಿಗಳ ಮೇಲೆ ಗುಂಡು!

ಅಜ್ಮೀರ್, ಏಪ್ರಿಲ್ ೫

ಪೋಲೀಸ್ ಸುಪರಿಂಟೆಂಡೆಂಟರಾದ ಮಿ। ಡೋಗ್ರಾ ಮತ್ತು ಪೋಲೀಸ್ ಸಿ ಐ ಡಿ ಇನ್ಸ್‌ಪೆಕ್ಟರ್ ಮಿ। ಖ್ವಾಜಾ ಸಿಕಂದರ್‌ದ್ದೀನ್ ಇವರಿಬ್ಬರೂ ನಿನ್ನೆ ರಾತ್ರೆ ಸಿನೇಮಾ ನೋಡಿಕೊಂಡು ಹಿಂತಿರುಗುತ್ತಿದ್ದಾಗ್ಗೆ ೧೧ ಘಂಟೆಯ ಸಮಯ ಕಛೇರಿ ರಸ್ತೆಯಲ್ಲಿ ಯಾರೋ ಗುಂಡನ್ನು ಹಾರಿಸಿದರು. ಆ ವ್ಯಕ್ತಿಯು ಇವರ ಎದುರಿಗೆ ಬಂದು ಒಂದೆರಡು ಗಜ ದೂರದಲ್ಲಿ ನಿಂತು ಗುಂಡನ್ನು ಹಾರಿಸಿದನು. ಮೊದಲನೆಯ ಏಟು ಡೋಗ್ರಾರವರ ಬಲತೋಳಿಗೆ ಬಿದ್ದು ಎಲುಬನ್ನು ಮುರಿಯಿತು. ವ್ಯಕ್ತಿಯು ಓಡಿದನು. ಆದರೆ ಡೋಗ್ರಾರವರು ಸಹಾಯಕ್ಕಾಗಿ ಕೂಗಿಕೊಂಡರು. ಆಗ ಪುನಃ ಆ ವ್ಯಕ್ತಿಯು ಇನ್ನೆರಡು ಗುಂಡುಗಳನ್ನು ಹಾರಿಸಿದನು. ಅವುಗಳಲ್ಲೊಂದು ಗುಂಡು ಕಾಲಿಗೆ ತಗಲಿತು. ಇನ್ನೊಂದು ತಪ್ಪಿತು. ಮೊದಲನೇ ಏಟು ಬಿದ್ದ ಕೂಡಲೇ ಡೋಗ್ರಾರವರು ಕೈಕಲಿನಿಂದ ಬಿದ್ದು ರಕ್ತಪ್ರವಾಹವನ್ನು ಹರಿಸುತ್ತಿದ್ದರು. ಎರಡನೇ ಏಟು ಬಲತೋಳಿಗೆ ಪೆಟ್ಟು ತಾಗಿತು.

ಆ ಮೇಲೆ ಅಕ್ಕಪಕ್ಕದ ಜನರು ಬಂದು ಇವರನ್ನು ಆಸ್ಪತ್ರೆಗೆ ಸಾಗಿಸಿದರು. ನಾಳೆ ಇವರಿಗೆ ಆಪರೇಶನ್ ನಡೆಯುವುದು. ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಹೋಗಿ ತನಿಖೆ ನಡೆಸಿದರು. ಇನ್ನೂ ಏನೂ ತಿಳಿದುಬರುವುದಿಲ್ಲ. ಡೋಗ್ರಾರವರ ಹೇಳಿಕೆಯನ್ನು ಮೆಜಿಸ್ಟ್ರೇಟರು ತೆಗೆದುಕೊಂಡಿರುವರು. ಎದುರಾಳಿಯ ಗುರುತನ್ನು ಇಷ್ಟಾಗಿ ಸ್ವಲ್ಪ ತಿಳಿಸಿದ್ದಾರೆ. ಘಟನೆಯು ನಡೆದ ಎಡೆಯು ನಿರ್ಜನವಾದುದರಿಂದ ಆತನನ್ನು ಇವರು ಸರಿಯಾಗಿ ಗುರುತಿಸಲಾಗಲಿಲ್ಲ

ರೂಜ್‌ವೆಲ್ಟರ ರೈಲನ್ನು ಕೆಡವುದಕ್ಕಾಗಿ ಯತ್ನ.

ನ್ಯೂಯೋರ್ಕ್, ಏಪ್ರಿಲ್ ೯

ನೋರ್ತ್ ಕೆರೋಲಿನಾದಿಂದ ನ್ಯೂಯೋರ್ಕಿಗೆ ಪ್ರೆಸಿಡೆಂಟ್ ರೂಜ್‌ವೆಲ್ಟರ ರೈಲು ಹೊರಡುತ್ತಿತ್ತು. ಅಷ್ಟರಲ್ಲಿ ಒಂದು ಮೋಟರು ಕಂಬಿಯ ಮೇಲೆ ನಿಲ್ಲಿಸಲ್ಪಟ್ಟುದುದು ಕಂಡುಬಂತು. ರೈಲನ್ನು ಒಡನೆ ನಿಲ್ಲಿಸಲಾಯಿತು. ಮೋಟರನ್ನು ಯಾರೋ ಕದ್ದುತಂದು ಅಲ್ಲಿಟ್ಟಿದ್ದರೆಂದು ತಿಳಿದುಬಂತು. ಯಾರಿಗೂ ಜಖಂ ಆಗಲಿಲ್ಲ, ಮೋಟರಿನಲ್ಲಿ ಯಾರೂ ಇರಲಿಲ್ಲ

ಮಂಗಳೂರು.

ಅಖಿಲ ಕರ್ನಾಟಕ ಮುಸ್ಲಿಮರ(?) ಒಸೆಯು ಅಧಿವೇಶನವು ಮೇ ತಾ. ೧೧ರಲ್ಲಿ ಮಂಗಳೂರಲ್ಲಿ ಜರಗಲಿರುವುದೆಂದು ತಿಳಿದುಬರುತ್ತದೆ. ಅಧ್ಯಕ್ಷರಾರೆಂದು ತಿಳಿದು ಬಂದಿಲ್ಲ.

ಇಲ್ಲಿ ನಡೆದ ಕಾನ್ಸ್ಟಿಟ್ಯೂಷನ್ ಕ್ಲಬ್ಬಿನ ಟೆನ್ನಿಸ್ ಟೂರ್ನಮೆಂಟ್ ಕಳೆದ ಆದಿತ್ಯವಾರ ಮುಗಿಯಿತು. ಮಿಕ್ಸೆಡ್ ಡಬ್ಬಲ್ಸ್‌ನಲ್ಲಿ ಮಿಸ್ [illegible] ಮತ್ತು [illegible]ರರೂ, ಡಬ್ಬಲ್ಸ್‌ನಲ್ಲಿ ಶ್ರೀ [illegible] ಮತ್ತು ನಾರಾಯಣರಾಯರೂ, ಸಿಂಗಲ್ಸ್‌ನಲ್ಲಿ ಮೈಸೂರಿನ ಶ್ರೀ ಸೀತಾರಾಮರವರೂ ಬಹುಮಾನ ಪಡೆದಿರುವರು.

ಕಳೆದ ಶನಿವಾರ ಸಂಜೆ ಮೈದಾನಿನಲ್ಲಿ ಡಾ। ಹರ್ಡೀಕರರು ಭಾಷಣಮಾಡಿ, ಕರ್ನಾಟಕ ರಾಜಕೀಯ ಪರಿಷತ್ತಿಗೆ ಸಾರ್ವಜನಿಕರ ಸಹಕಾರವನ್ನು ಬೇಡಿದರು.

ಜರ್ಮನಿಯ ಒಬ್ಬ ಲೋಕಸಂಚಾರಿಯು ದಬ್ಬಿನ(?) ದೋಣಿಯಲ್ಲಿ ಬಂದು ಇಲ್ಲಿಯ ಬಂದರದಲ್ಲಿ ಇಳಿದಿದ್ದನು.

ಕಾಂಗ್ರೆಸ್ ಕೆಲಸಗಾರರಾದ ಶ್ರೀ ಎ ಕೆ ಭಂಡಾರಿಯವರು ದಕ್ಷಿಣ ಭಾರತ ಹರಿಜನ ಸೇವಕ ಸಂಘಗಳ ಇನ್ಸ್‌ಪೆಕ್ಟರರ ಉದ್ಯೋಗದಲ್ಲಿ ಶಿಕ್ಷಣ ಪಡೆಯಲು ಈ ದಿನ ದಿಲ್ಲಿಗೆ ಹೊರಟರು

ಇದೇ ತಾ. ೧೨ರಿಂದ ೧೫ರ ವರೆಗೆ ಇಲ್ಲಿಯ ಥಿಯೋಸೊಫಿಕಲ್ ಲೋಜಿನಲ್ಲಿ ಬೆಸೆಂಟ್ ಗರ್ಲ್ಸ್ ಸ್ಕೂಲಿನವರು ವಸಂತೋತ್ಸವವನ್ನು ಆಚರಿಸುವರು

ಇದೇ ತಾ ೧೩ನೇ ದಿನ ಗಣಪತಿ ಹೈಸ್ಕೂಲಿನಲ್ಲಿ ಬಾಲಿಕಾ ಕಲಾಕುಶಲೆಯರ ಅಭಿನಯಗೀತ ಮೊದಲಾದವುಗಳ ಪ್ರದರ್ಶನಗಳಿವೆ

ಶ್ರೀಮತಿ ಕಮಲಾದೇವಿ ಡಾ। ಹರ್ಡೀಕರ್, ಶ್ರೀ ಕಿಲ್ಲೆಯವರು ಇದೇ ತಾ. ೧೧ರಲ್ಲಿ ಕಾಸರಗೋಡು, ೧೩ರಲ್ಲಿ ಕಾರ್ಕಳ, ತಾ ೧೪ರಲ್ಲಿ ಉಡುಪಿ, ೧೫ರಲ್ಲಿ ಕುಂದಾಪುರ, ೧೬ರಲ್ಲಿ ಹಾಲಾಡಿ, ಸೋಮೇಶ್ವರ ಮೂಡಬಿದ್ರೆ, ಬಂಟ್ವಾಳ ಮತ್ತು ಪುತ್ತೂರುಗಳಲ್ಲಿ ಸಂಚಾರಮಾಡುವರು.

ಕಳೆದ ಜನವರಿ ತಿಂಗಳಲ್ಲಿ ಇಲ್ಲಿಂದ ಮಕ್ಕಾ ಯಾತ್ರೆಗಾಗಿ ಹೋದ ಬಂಟ್ವಾಳದ ಮೈಲಾರ್ ಪರಿಸರದ ಎಂಟು ಮಂದಿಗಳೂ ಬೊಂಬಾಯಿಗೆ ಬಂದಿಳಿದಿದ್ದಾರೆಂದೂ, ಅವರ ಪೈಕಿ [illegible] ಜನಾಬ್ ಹಾಜಿ ಉಮರ್ ಕೂಡಿಬೈಲರವರು ವಿಪರೀತ ಜ್ವರದಿಂದ ಬೊಂಬಾಯಿಯಲ್ಲಿ ಸ್ವರ್ಗಸ್ಥರಾದರೆಂದೂ, ಉಳಿದವರು ಇದೇ ತಾ ೧೨ನೇ ಶುಕ್ರವಾರ ಮಂಗಳೂರು ಬಂದರದಲ್ಲಿ ಇಳಿದರೆಂದೂ ತಿಳಿದುಬಂದಿದೆ.

ಇದೇ ಕಳೆದ ತಾ. ೬ಕ್ಕೆ ಅಂತ್ಯವಾದ ವಾರದ ಮಂಗಳೂರು ಮುನಿಸಿಪಾಲಿಟಿಯ ವರದಿಯಿಂದ ತಿಳಿದುಬರುವಂತೆ, ಕಳೆದ ವಾರ ಮಂಗಳೂರು ನಗರದೊಳಗೆ ಒಟ್ಟಿಗೆ ೧೮ ಮರಣಗಳೂ ೫೦ ಜನನಗಳೂ ಆಗಿವೆ.

ಮಂಗಳೂರು ಸಿಟಿ ಆರ್ಯಸಮಾಜದ ಕಾರ್ಯದರ್ಶಿಗಳಾದ ಶ್ರೀ ಬಿ ಲಕ್ಷ್ಮಣದೇವ ವಿದ್ಯಾರ್ಥಿಗಳು ಕಳೆದ ತಾ ೩೫ರಿಂದ(?) ತೀರ್ಥಹಳ್ಳಿ ಶಿವಮೊಗ್ಗ, ಕೊಪ್ಪ, ಬಾಳೆಹೊನ್ನೂರು, ಕಡೂರು, ಈ ಪ್ರಾಂತ್ಯಗಳಲ್ಲಿ ಸಂಚರಿಸುತ್ತ ಭಜನ ಕೀರ್ತನೆ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಶಿವಮೊಗ್ಗದಲ್ಲಿ ಮತ್ತು ತೀರ್ಥಹಳ್ಳಿಯಲ್ಲಿ ಆರ್ಯಸಮಾಜಗಳನ್ನು ಸ್ಥಾಪಿಸುವ ಆಲೋಚನೆಗಳು ನಡೆಯುತ್ತಿವೆ. ಶ್ರೀಯುತರು ಮುಂದಕ್ಕೆ ಹುಬ್ಬಳ್ಳಿ ಧಾರವಾಡ, ಬೆಳಗಾವಿ, ಚೆನ್ನಪಟ್ಟಣ, ಮೈಸೂರು, ಬೆಂಗಳೂರು, ಮಡಿಕೇರಿ ಮುಂತಾದ ಸ್ಥಳಗಳನ್ನು ಸಂದರ್ಶಿಸಲಿರುವರು.

ಪರಾರ್ಜಿ(?) ತಾ. ೬ರಲ್ಲಿ ಜಿಲ್ಲಾ ಹರಿಜನ ಸೇವಾಸಂಘದ ಕಾರ್ಯದರ್ಶಿಯವರು ಶಿರಿಮಾಡಿಗೆ(?) ಹೋಗಿದ್ದು, ಅಲ್ಲಿನ ಹಲವು ಪ್ರಮುಖರನ್ನು ಕಂಡು ಮಾತಾಡಿದರು. ಅಸ್ಪೃಶ್ಯತಾ ನಿವಾರಣೆಯ, ಹರಿಜನೋದ್ಧಾರದ ಮತ್ತು ಅಲ್ಲಿಯ ಬೋರ್ಡು ಹಾ। ಎ। ಶಾಲೆಯ ಹರಿಜನ ಮಕ್ಕಳಿಗೆ ವಸ್ತ್ರಕೊಡುವ ವಿಷಯದಲ್ಲಿ ಮಾತುಕತೆಗಳಾಗಿದ್ದುವು.

ಮರುದಿನ ಬೆಳಿಗ್ಗೆ ಅಲ್ಲಿಯ ೩ ಮಂದಿ ಹುಡುಗರಿಗೆ ಶ್ರೀಯುತ [illegible] ಕೊರಗಪ್ಪ ಬಂಗೇರರ ಕೈಯಿಂದ ಒಂದೊಂದು ಇಜಾರು, ಅಂಗಿ ಮತ್ತು ಟೋಪಿಯಂತೆ ಕೊಡಿಸಿದರು. ೩ ಹುಡುಗಿಯರಿಗೆ ಬೇಕಾದ ಬಟ್ಟೆಗಳನ್ನು ಒಂದೆರಡು ದಿನಗಳಲ್ಲಿ ಕಳುಹಿಸಿ ಕೊಡುವುದಾಗಿ ಹೇಳಿದ್ದಾರೆ. ರೂ ೪-೮-೦ ವಂತಿಗೆಯಾಗಿ ವಸೂಲಾಯಿತು.

ಇದೇ ತಾ ೧೩, ೧೪ರಲ್ಲಿ ಇಲ್ಲಿಯ ಥಿಯೊಸೊಫಿಕಲ್ ಲೋಜಿನಲ್ಲಿ ಪ್ರಥಮ ಜಿಲ್ಲಾ ಥಿಯೋಸೊಫಿಕಲ್ ಕಾನ್ಫರೆನ್ಸ್ ರಿಟೈರ್ಡ್ ಸಿವಿಲ್ ಸರ್ಜನರಾದ ಡಾ। ಸಿ. ರಾಮಾನುಜಮ್(?), ಎಂ. ಬಿ. ಎಂಡ್ ಸಿ. ಎಂ. ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಥಿಯೋಸೊಫಿಕಲ್ ಸಂಘಗಳ ಕುರಿತು ಅಧ್ಯಕ್ಷರೂ, ಇಸ್ಲಾಮಿನ ಕುರಿತು ಸಯ್ಯದ್ ಹಾರಿಸ್ [illegible]ರವರೂ ಭಾಷಣ ಮಾಡಲಿರುವರು. ಶ್ರೀ ವೆಂಕಟರಾಯರ ಹರಿಕಥೆಯೂ ಇದೆ. ಸರ್ವರಿಗೂ ಸ್ವಾಗತ

ಇಲ್ಲಿಯ ಶ್ರೀ ಕೃಷ್ಣ ಸಿನೆಮ ಕಂಪೆನಿಯವರು ನಮ್ಮ ಸಾರ್ವಭೌಮರ ರಜತೋತ್ಸವದ ಸಲುವಾಗಿ ಜಿಲ್ಲಾ ಕಲೆಕ್ಟರರಾದ ಮಿ। ಇ. ಎಂ. ಗೋಸ್(?), ಐ. ಸಿ. ಎಸ್., ರವರ ನೇತೃತ್ವದಲ್ಲಿ ಇದೇ ತಿಂಗಳ ೩೦ನೇ ದಿನದ ಸಂಜೆ ೫-೩೦ ರಾತ್ರಿ ೭-೩೦ ಮತ್ತು ೯-೩೦ಕ್ಕೆ ತೊಡಗಿ ವಿಶೇಷವಾದ ದೃಶ್ಯಗಳನ್ನು ತೋರಿಸುವರು. ಅಂದು ಜಮೆಯಾದ ಹಣವು ರಜತೋತ್ಸವದ ದಿನವಾದ ಇದೇ ಮೇ ತಿಂಗಳ ತಾ ೬ರಲ್ಲಿ ಬಡಬಗ್ಗರಿಗೆ ಅನ್ನವಿಕ್ಕಲೂ, ಶಾಲಾ ವಿದ್ಯಾರ್ಥಿಗಳಿಗೆ ಫಲಾಹಾರ ವಿನೋದಗಳನ್ನು ಒದಗಿಸಲೂ ವಿನಿಯೋಗಿಸಲ್ಪಡುವುದು.

ಉಳ್ಳಾಲ:— ತಾ. ೨೦-೪-೧೯೩೫ಕ್ಕೆ ಇಲ್ಲಿಯ ಮೇಲಂಗಡಿಯ ಮಸೀದಿ ವಠಾರದಲ್ಲಿ ಹಜ್ರತ್ ಸೈಯದ್ ಮುಹಮ್ಮದ್ ಶರೀಫ ಮದನೀಯರುತ್ಸವವು (ಉರುಸು) ಎಂದಿಗಿಂತಲೂ ಮಿಗಿಲಾದ ವೈಭವದಿಂದ ಜರಗಿತು

ಸೂರಿಂಜೆ:— ದಕ್ಷಿಣ ಕನ್ನಡ ಜಿಲ್ಲಾ ಸೂರಿಂಜೆ ಮೊಹಿಯುದ್ದೀನ್ ಮಸಜೀದಿಯ ಮತ್ತು ಶಾಲೆಯ ಸಹಾಯಾರ್ಥವಾಗಿ ಏರ್ಪಡಿಸಿದ ಸೋಡ್ತಿಯನ್ನು ಇದೇ ತಾ ೩೧ ೩-೧೯೩೫ಕ್ಕೆ ಜನಾಬ್ ಎಂ ಕುಂಞಿಮಮ್ಮ ಸಾಹೇಬ್ ಬಹದ್ದೂರ್ (ಮುನ್ಸಿಪಾಲ್ ಕೌನ್ಸಿಲರ್) ಮತ್ತು ಜನಾಬ್ ಎ ಮೂಸಬ್ಬ ಸಾಹೇಬ್ ಬಹದೂರ ವಕೀಲ್ ಮಂಗಳೂರು, ಇವರು ಅಧ್ಯಕ್ಷತೆಯಲ್ಲಿ ತೆಗೆಯಲಾಯಿತು. ೧ನೇ ಬಹುಮಾನದ ರೂ ೧೦೦-ನಂಬ್ರ ೪೩೦೬ನೇ ಟಿಕೇಟಿಗೂ, ೨ನೇ ಬಹುಮಾನ ರೂ ೫೦- ನಂಬ್ರ ೨೫೫೫ನೇ ಟಿಕೇಟಿಗೂ, ೩ನೇ ಎರಡು ಇನಾಮುಗಳ ರೂ ೨೫ರಂತೆ, ನಂಬ್ರ ೫೫೮೮ನೇ ಮತ್ತು ನಂಬ್ರ ೫೦೭ನೇ ಟಿಕೇಟಿಗೂ ದೊರೆತಿರುತ್ತದೆ. ಬಾಕಿ ಬಹುಮಾನಗಳ ಪಟ್ಟಿಯನ್ನಪೇಕ್ಷಿಸುವವರು, ಸೋಡ್ತಿ ಕಮಿಟಿಯ ಸೆಕ್ರಿಟರಿಗಳವರಿಗೆ ಬರೆದಲ್ಲಿ ರವಾನಿಸಲಾಗುವುದು. ಎಂದು ಸೋಡ್ತಿ ಕಮಿಟಿಯ ಪ್ರೆಸಿಡೆಂಟರು ಮತ್ತು ಸೆಕ್ರಿಟರಿ [illegible] ನಮಗೆ ತಿಳಿಸಿರುತ್ತಾರೆ

ಮಲ್ಪೆ(?):— ಸ್ಥಳೀಯ ಸಂಟ್ರಲ್(?) ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ ೩೦ರಲ್ಲಿ ಹೆಜಮಾಡಿ ಬೋ। ಎ। ಶಾಲೆಯಲ್ಲಿ ಡಾ। ಎ ಕೆ ಬಿ ರಾಮಚಂದ್ರ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ತಾ ೬ನೇ ಶನಿವಾರ ಸಾಯಂಕಾಲ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿ ಶ್ರೀ ಕಿಲ್ಲೆಯವರು ಇಲ್ಲಿಗೆ ಬಂದಿದ್ದು ಅವರ ನೇತೃತ್ವದಲ್ಲಿ ಹರಿಜನ ಮಕ್ಕಳ ನಗರಸಂಕೀರ್ತನೆಯು ನಡೆಯಿತು. ಅದೇ ಸಮಯದಲ್ಲಿ ಶ್ರೀ ಬಂಗ್ಲೆ ಸೀತಾರಾಮ [illegible] ಅವರೆಲ್ಲರನ್ನು ಸವರ್ಣ ಹಿಂದೂಗಳೊಂದಿಗೆ ತನ್ನ ಬಂಗ್ಲೆಗೆ ಆಮಂತ್ರಿಸಿ ಒಂದು ಉಪಹಾರ ಕೊಟ್ಟರು

ಉಡುಪಿ:— ಇದೇ ತಾ ೩ನೇ ಬುಧವಾರ ತೆಂಕಪೇಟೆಯಲ್ಲಿರುವ ಬೋ। ಹುಡುಗಿಯರ ಶಾಲೆಯ ವರ್ಧಂತಿಯು ಮಿ. ಸಿ ಎಚ್ ಕುಲಾಸೋ, ಎಂ ಎಲ್. ಡಿಸ್ಟ್ರಿಕ್ಟ್ ಮುನ್ಸಿಫ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು

ಅಖಿಲ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಪ್ರಚಾರ ಕಾರ್ಯ ನಿಮಿತ್ತವಾಗಿ ಶ್ರೀ। ಕಮಲಾದೇವಿಯವರೂ, ಡಾ। ಹರ್ಡೀಕರರೂ ಮುಂತಾದವರೂ ಇಲ್ಲಿಗೆ ತಾ. ೧೪ನೇ ಸಂಜೆ ಚಿತ್ತೈಸುವರು, ತಾ ೧೫ನೇ ದಿನವಿಡೀ ಕಾಂಗ್ರೆಸು ಕೆಲಸಗಾರರನ್ನು ಭೆಟ್ಟಿಮಾಡುವುದೂ, ಸಂಜೆ ಪ್ರಾಯಶಃ ಗಾಂಧೀ (ಅಜ್ಜರ ಕಾಡು) ಮೈದಾನಿನಲ್ಲಿ ಸಾರ್ವಜನಿಕ ಸಭೆ ಸೇರಿಸುವುದೂ ಇದೆ. ಉಡುಪಿ ತಾಲೂಕಿನವರು ಬಹುಸಂಖ್ಯಾಕರಾಗಿ ಕಾಂಗ್ರೆಸ್ ಸದಸ್ಯರಾಗಿ ಸೇರಿ, ಸಭೆಗೆ ಬಂದೂ, ಈ ಪ್ರಮುಖರನ್ನು ಪ್ರೋತ್ಸಾಹಿಸಿ ಸಹಕರಿಸುವುದು ತೀರ ಅವಶ್ಯ

ಉಡುಪಿಗೊಂದು ಮುನಿಸಿಪಾಲಿಟಿಯನ್ನು ಹೊರಿಸಬೇಕೆಂದು ಸರಕಾರದ ಹವಣಿಕೆಗಳಾಗುತ್ತಿವೆ.

ತಾಲೂಕುಗಳಿಂದ

ಕಾರ್ಕಳ:— ಇಲ್ಲಿನ ಐಕ್ಯೋದಯ(?) ಯೂನಿಯನ್ ಕ್ಲಬ್ಬಿನಲ್ಲಿ ತಾ. ೩-೪-೧೯೩೫ರ ದಿನ ಸಂಜೆ ಜಿಲ್ಲಾ ಮುನ್ಸೀಫರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ನಡೆದು ಮಿ। ಅಬ್ದುಲ್ ಕರೀಮ್, ಬಿ. ಎ. ಎಲ್. ಟಿ. ಎಸ್., ಇವರು ಇಸ್ಲಾಂ ಮತ್ತು ಇತರ ಧರ್ಮಗಳೊಳಗಿರುವ ಸಾಮಂಜಸ್ಯವನ್ನು ಸ್ಥಾಪಿಸಿದರು. ಇಂತಹ ಭಾಷಣಗಳು ಹೆಚ್ಚಾಗಿ ಆದಷ್ಟು ಹಿಂದೂಮುಸಲ್ಮಾನ ಐಕ್ಯತೆಯು ಸುಲಭಸಾಧ್ಯವಾಗಬಹುದು.

ಸಿಲ್ವರ್ ಜುಬಿಲಿ ಮಹೋತ್ಸವದಲ್ಲಿ ಕಾಂಗ್ರೆಸ್ ಕೆಲಸಗಾರರು ಭಾಗವಹಿಸಕೂಡದೆಂದು ನಿಷೇಧವಾಗಿದೆ. ಇಲ್ಲಿಯವರು ಮಾತ್ರ ಏನು ಮಾಡಿರುವರೆಂಬುದು ಸ್ಪಷ್ಟವಾಗಿಲ್ಲ.

ಕಳೆದ ಫೆಬ್ರುವರಿ ತಿಂಗಳಲ್ಲಿ ನಡೆದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಥಮ ಮತ್ತು ಮಧ್ಯಮ ಪರೀಕ್ಷೆಗಳನ್ನು ಈ ಕೇಂದ್ರದಿಂದ ಕೊಟ್ಟ ಎಲ್ಲ ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿರುವರೆಂದೂ, ಅವರಲ್ಲಿ ಪ್ರಥಮದ ೧೩ ಮತ್ತು ಮಧ್ಯಮದ ಇಬ್ಬರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರೆಂದೂ ತಿಳಿದುಬರುತ್ತದೆ

ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಪ್ರತಿಷ್ಠಿತ ಕುಟುಂಬಗಳೆರಡಕ್ಕೆ ಸೇರಿದ ವಧೂವರರಿಬ್ಬರ ಒಂದು ಪ್ರೌಢವಿವಾಹವು ವರದಕ್ಷಿಣೆ, ವಾದ್ಯಘೋಷ, ಭೂರಿಭೋಜನ ಮೆರವಣಿಗೆ ಉತ್ಸವಗಳಿಲ್ಲದೆ ಅತ್ಯಂತ ಸರಳ ರೀತಿಯಿಂದ ನಡೆದಿರುವುದು ತುಂಬಾ ಶ್ಲಾಘನೀಯವಾಗಿರುವುದು ಮಾತ್ರವಲ್ಲದೆ ಅನುಕರಣೀಯವೂ ಆಗಿದೆ

ಇಲ್ಲಿಯ ಶ್ರೀ ಶ್ರೀನಿವಾಸ ಆಶ್ರಮದ ಕೈಗಾರಿಕೆ ಶಾಲೆಯಲ್ಲಿ ನೇಯಿಗೆ ವಸ್ತ್ರಗಳಿಗೆ ರಂಗು ಹಾಕುವಿಕೆ ಕಾಯಿಪಲ್ಯ, ಹಣ್ಣುಹಂಪಲು ಮತ್ತು ತೋಟಗಾರಿಕೆ(?) ಬ್ರೆಡ್ ಬಿಸ್ಕೀಟು ವಗೈರೆ ತಯಾರಿಸುವ ಕ್ರಮಮುಂತಾದ ಕೈಗಾರಿಕೆಗಳಲ್ಲಿ ಮುಫತ್ತಾಗಿ ಕೊಡುವ ಏರ್ಪಾಡು ಮಾಡಲಾಗಿದೆ. ಈ ಶಾಖೆಗಳಲ್ಲಿ ಹುಡುಗರನ್ನು ಅವರವರ ಅಭಿರುಚಿ ಮೇರೆಗೆ ಸೇರಿಸಿಕೊಳ್ಳಲಾಗುವುದು. ನಿರ್ಧನಿಕರಾದ ಯೋಗ್ಯ ಹುಡುಗರಿಗೆ ಆಶ್ರಮದಿಂದಲೇ ಊಟದ ಮತ್ತು ಉಳಕೊಳ್ಳುವ ವ್ಯವಸ್ಥೆ ಮಾಡಲಾಗುವುದು. ಇವರು ಆಶ್ರಮದ ನಿಯಮಗಳಿಗೆ ಅನುಗುಣವಾಗಿ ನಡೆಯತಕ್ಕದು. ಮೇಲಣ ಯಾವುದೇ ಒಂದು ಕೈಗಾರಿಕೆಯಲ್ಲಿ ಪ್ರವೀಣತೆಯನ್ನು ಹೊಂದಿದವರಿಗೆ ಸಾಧ್ಯವಾದ ಮಟ್ಟಿಗೆ ಆಶ್ರಮದಲ್ಲಿಯೇ ಕೆಲಸ ಕೊಡುವ ಏರ್ಪಾಡು ಸಹ ಮಾಡಲಾಗುವುದು. ಪ್ರವೇಶ ಅರ್ಜಿಗಳಿಗೆ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಆಶ್ರಮದ ಸುಪರಿಂಟೆಂಡೆಂಟರಿಗೆ ಬರೆಕೊಳ್ಳಬಹುದು.

ಪೊಳಲಿ:— ಗುರುಪುರದಿಂದ ಪೊಳಲಿಗೆ ಆಗುವ ಹೊಸ ರಸ್ತೆಯ ಕೆಲಸವು ಮುಗಿದು ತಾ. ೪ನೇ ಗುರುವಾರ ಅಪರಾಹ್ನ ೩-೩೦ಕ್ಕೆ ಡಿ। ಬೋ। ಮೆಂಬರರಾದ ರಾ। ಮಳಲಿ ರಾಮಚಂದ್ರಬಲ್ಲಾಳರವರಿಂದ ತೆರೆಯಲಾಯಿತು. ವಾದ್ಯಘೋಷದೊಡನೆ ಪೊಳಲಿ ದೇವಸ್ಥಾನದ ವರೆಗೆ ಮೆರವಣಿಗೆಯಿಂದ ಹೋದರು. ಇನ್ನು ದೇವಸ್ಥಾನದ ವರೆಗೆ ಮೋಟಾರ್ ಕಾರು, ಟೇಕ್ಸಿ, ಬಂಡಿಗಳ ಚಲಾವಣೆಯಾಗಬಹುದು. ಮೋಟಾರು ಬಸ್ಸುಗಳು ಮಾತ್ರ ಈ ವರ್ಷ ಹೋಗಲು ಸಾಧ್ಯವಿಲ್ಲ.

ವಿಟ್ಲ:— ಸ್ಥಳೀಯ ಬೋರ್ಡು ಹಾ। ಎ। ಶಾಲಾ ವಾರ್ಷಿಕ ವರ್ಧಂತ್ಯುತ್ಸವವು ಇದೇ ಎಪ್ರಿಲ್ ೨೩ನೇ ದಿನ ಜರಗುವುದು.

ಪುತ್ತೂರು:— ಇಲ್ಲಿಯ ಬೋರ್ಡು ಹೈಸ್ಕೂಲಿನ ವರ್ಧಂತಿ ಉತ್ಸವವು ಇದೇ ಕಳೆದ ತಾ. ೩ನೇ ದಿನ ಬಹು ವಿಜೃಂಭಣೆಯಿಂದ ಸೈಂಟ್ ಎಲೋಶಿಯಸ್ ಕಾಲೇಜಿನ ರೆ। ಫಾ। ಪ್ರೊಫೆಸರ ಪಿಯೋ(?) ಯಸ್ ಜೆ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ೧೧ ಘಂಟೆ [illegible] ಶಾಲಾ ಮಕ್ಕಳಿಗೂ ಹಳೇ ವಿದ್ಯಾರ್ಥಿಗಳಿಗೂ ಫಲಾಹಾರ ಸತ್ಕಾರವು ನಡೆಯಿತು. ಹಳೆ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಅಂದು ಸಭಾಂಗಣಕ್ಕೆ(?) ಬಂದು ನೆರೆದಿದ್ದರು. ಆಮೇಲೆ ವಿವಿಧ ಪಂದ್ಯಾಟಗಳು ನಡೆದುವು. ಸಾಯಂ ೫ ಘಂಟೆಗೆ ಸರಿಯಾಗಿ ವರ್ಧಂತ್ಯುತ್ಸವದ ಕಾರ್ಯಕ್ರಮವು ಆರಂಭವಾಯಿತು. ಈ ದಿನ ಮಾನ್ಯ ಡಿ ಬೋ। ಪ್ರೆಸಿಡೆಂಟ್ ಇವರೂ ಬಂದಿದ್ದರು. ಅಧ್ಯಕ್ಷರ ಆರಂಭಭಾಷಣದೊಡನೆ ಹ' ವಿದ್ಯಾರ್ಥಿಗಳ ಸಂದೇಶಗಳು ಓದಲ್ಪಟ್ಟುವು. ನಂತರ ಶಾಲಾ ರಿಪೋರ್ಟನ್ನು ಹೆಡ್ ಮಾಸ್ಟರರು ಓದಲು ಶ್ರೀ ಯಸ್. ಯನ್. ಚನ್ನಪ್ಪಗೌಡರು ಶಾಲೆಯ ಶ್ರೇಯಸ್ಸನ್ನು ಕೋರಿ ಭಾಷಣಮಾಡಿದರು(?). ಶ್ರೀಯುತ ಉಗ್ರಾಣ ಮಂಗೇಶರಾಯರು ಅದಕ್ಕೆ ಪ್ರತ್ಯುತ್ತರವನ್ನಿತ್ತ ಮೇಲೆ ಅಧ್ಯಕ್ಷರಿಂದ ಬಹುಮಾನಗಳು ಹಂಚಲಾದುವು. ಅಧ್ಯಕ್ಷರು ತಮ್ಮ ಗಂಭೀರ ವಾಣಿಯಿಂದ ಭಾಷಣಮಾಡಿ ಹಳ್ಳಿಗಳ ಉದ್ಧಾರದಿಂದಲೇ ದೇಶದ ಏಳಿಗೆ ಎಂಬುದನ್ನು ವಿಶದವಾಗಿ ನಿರೂಪಿಸಿದರು. ಅನಂತರ "ದರಿದ್ರನಾರಾಯಣ" "ಸಾವಿತ್ರೀ ಸತ್ಯವಾನ್" ಎಂಬ ನಾಟಕವೂ ವಿವಿಧ ವಿನೋದಾವಳಿಗಳೂ ಅಭಿನಯಿಸಲ್ಪಟ್ಟವು.

ಮರುದಿನ ಸಾಯಂಕಾಲ, ಸೈಂಟ್ ಎಲೋಶಿಯಸ್ ಕಾಲೇಜಿನ ಹಳೇ ವಿದ್ಯಾರ್ಥಿಗಳು ಮಾನ್ಯ ಅಧ್ಯಕ್ಷರಿಗೊಂದು ಸತ್ಕಾರಕೂಟವನ್ನು ಶಾಲಾ ವಠಾರದಲ್ಲಿ ಸಂಭ್ರಮದಿಂದ ಜರುಗಿಸಿದರು. ಅದೇ ರಾತ್ರಿ ಬಹುಜನರ ಅಪೇಕ್ಷೆಯ ಮೇರೆಗೆ ಪುನಃ "ದರಿದ್ರನಾರಾಯಣ", "ವರದಕ್ಷಿಣೆ", "ಹಿರಿಯಕ್ಕನ ಚಾಳಿ" ಮತ್ತು ವಿವಿಧ ವಿನೋದಾವಳಿಗಳನ್ನು ಅಭಿನಯಿಸಿ ಸಭಿಕರನ್ನು ರಂಜಿಸಿದರು. ಶಾಲಾ ವಿದ್ಯಾರ್ಥಿನಿಯರಿಂದ ವಿವಿಧ ಪ್ರಹಸನನಾಟಕಗಳು ಅಭಿನಯಿಸಲ್ಪಟ್ಟವು.

ದಕ್ಷಿಣ ಕನ್ನಡ 'ಡಿಸ್ಟ್ರಿಕ್ಟ್ ಟೀಚರ್ಸ್ ಗಿಲ್ಡ್'ನವರು ಇದೇ ಎಪ್ರಿಲ್ ತಿಂಗಳ ತಾ. ೧೬ರಿಂದ ಮೊದಲ್ಗೊಂಡು ೩ ದಿನಗಳ ವರೆಗೆ ಪುತ್ತೂರಲ್ಲಿ 'ಎಜ್ಯುಕೇಶನಲ್ ಕೇಂಪ್' ಜರಗಿಸಿ ಅದರಲ್ಲಿ ವಿದ್ಯಾಸಂಬಂಧವಾದ ಅನೇಕ ವಿಷಯಗಳಲ್ಲಿ ಚರ್ಚಿಸಲಿರುವುದರಿಂದಲೂ, ಇದರಲ್ಲಿ ಭಾಗವಹಿಸಿ ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂದಿರುವವರು ಸಭೆಗೆ ದಯಮಾಡಿ ಬರಬೇಕಾಗಿಯೂ ಮತ್ತು ಹಾಗೆ ಬರುವ ಉಪಾಧ್ಯಾಯರು ತಮಗೆ ಡ್ಯೂಟಿ ಮೇಲೆ ರಜೆ ಕೊಡಿಸುವಂತೆ ಮಾನ್ಯ ಡಿ। ಬೋ। ಪ್ರೆಸಿಡೆಂಟರಿಗೆ ಬರಕೊಳ್ಳಬೇಕಾಗಿಯೂ ಈ ಮೂಲಕ ತಿಳಿಸಲಾಗುತ್ತದೆ. ಅಲ್ಲದೆ ಇದೇ ಸಂದರ್ಭದಲ್ಲಿ ಹೆಚ್ಚಿನವರಿಗೆ ಅನುಕೂಲವಾಗುವಂತೆ ತಾ ೧೭ನೇ ಬುಧವಾರ ಬೆಳಿಗ್ಗೆ ಘಂಟೆ ೮ರಿಂದ ನಮ್ಮ ತಾಲೂಕು ಸಂಘದ ಮಹಾಸಭೆಯನ್ನು ಜರಗಿಸುವುದಾಗಿ ನಿರ್ಣಯಿಸಿರುವುದರಿಂದಲೂ ಆದಷ್ಟುಮಟ್ಟಿಗೆ ಉಪಾಧ್ಯಾಯ ಉಪಾಧ್ಯಾಯಿನಿಯರು ದಯಮಾಡಿ ಬರಬೇಕಾಗಿ ಕೇಳಿಕೊಳ್ಳುತ್ತೇನೆ" ಎಂದು ಕೆ. ಎಸ್ ಗಟ್ಟಿ, (ತಾಲೂಕು ಸಂಘದ ಕಾರ್ಯದರ್ಶಿ) ಇವರು ತಿಳಿಸುತ್ತಾರೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನವರು ಇದೇ ತಾ ೨೮-೩-೧೯೩೫ರಲ್ಲಿ ಹಳ್ಳಿಯ ರಸ್ತೆಗಳ ಸುಧಾರಣೆಗಾಗಿ ನಿಶ್ಚಿತ(?) ಹಣವನ್ನು ಪುತ್ತೂರು ತಾಲೂಕಿಗೆ ಇನ್ನು ಎರಡು ವರ್ಷಗಳ ತನಕ ಕೊಡಕೂಡದೆಂದು ಮಂಜೂರು ಮಾಡಿದ ನಿರ್ಣಯದ ಕುರಿತು ತಮ್ಮ ಅಸಮ್ಮತಿಯನ್ನು ಸೂಚಿಸುವುದಕ್ಕಾಗಿ ಆ ತಾಲೂಕಿನ ಗ್ರಾಮಗಳ ಪ್ರಮುಖರು ಇದೇ ತಾ ೬ರಲ್ಲಿ ಪುತ್ತೂರು ಸಹಕಾರಿ ಸಂಘದ ಕಟ್ಟಡದಲ್ಲಿ ಸಭೆಗೂಡಿದರು. ಶ್ರೀ। ಬೆಳ್ಳಿ ರಾಮಚಂದ್ರರಾವ್, ಎಂ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ಕೆಲವರು ಆಗ್ರಹಪೂರ್ವಕ ಭಾಷಣಗಳನ್ನು ಮಾಡಿದ ತರುವಾಯ, ಕಳೆದ ತಾ ೨೮ರಲ್ಲಿ ಜಿಲ್ಲಾ ಬೋರ್ಡಿನ ಸಭೆಯಲ್ಲಿ ಪುತ್ತೂರು ತಾಲೂಕಿಗೆ ಹಳ್ಳಿಯ ರಸ್ತೆಗಳ ಸುಧಾರಣೆಗೆ ಸಂಬಂಧಿಸಿದ ಗ್ರಾಂಟನ್ನು ಇನ್ನು ೨ ವರ್ಷಗಳ ತನಕ ಕೊಡಕೂಡದೆಂದು ಮಾಡಿದ ನಿರ್ಣಯದಿಂದ ಸದ್ರಿ ಜಿಲ್ಲಾ ಬೋರ್ಡು ತನ್ನ ಗೌರವಕ್ಕೆ ಕಡಿಮೆಯಾದ ಕೆಲಸ ಮಾಡಿದೆಯೆಂದು ಈ ಸಭೆಯು ತಿಳಿಯುವುದು. ಇಂತಹ ಅನ್ಯಾಯದಾಯಕ ಮತ್ತು ನಿರಾಧಾರವಾದ ನಿರ್ಣಯವನ್ನು ಸದ್ರಿ ಬೋರ್ಡು ರದ್ದುಮಾಡಬೇಕೆಂದೂ, (೨) ಮೇಲೆ ತಿಳಿಸಲ್ಪಟ್ಟ ಠರಾವನ್ನು ರದ್ದುಪಡಿಸುವರೆ ಒಂದು ಸ್ಪೆಶ್ಯಲ್ ಮೀಟಿಂಗನ್ನು ಜರಗಿಸುವಂತೆ ಜಿಲ್ಲಾ ಬೋರ್ಡು ಪ್ರೆಸಿಡೆಂಟರನ್ನೂ ಮತ್ತು ನಮ್ಮ ತಾಲೂಕಿನ ಸದಸ್ಯರನ್ನು ಈ ಸಭೆಯು ಕೇಳಿಕೊಳ್ಳುತ್ತದೆಂದೂ, (೩) ಮೇಲೆ ತಿಳಿಸಲ್ಪಟ್ಟ ಠರಾವನ್ನು ಜಿಲ್ಲಾ ಬೋರ್ಡು ರದ್ದುಮಾಡದಿದ್ದಲ್ಲಿ, ಅದರಿಂದ ಪುತ್ತೂರು ತಾಲೂಕಿಗೆ ಸಂಭವಿಸುವ ಅನ್ಯಾಯವನ್ನು ಹೋಗಲಾಡಿಸುವರೆ ಇನ್ನು ಮುಂದೆ ಇಂತಹ ಗ್ರಾಂಟಿನ ಅಧಿಕಾರವನ್ನು ಜಿಲ್ಲಾ ಬೋರ್ಡಿಗೆ ಕೊಡಕೂಡದೆಂತಲೂ, ಬದಲಿಗೆ ಇನ್ಸ್‌ಪೆಕ್ಟರ್ ಒಫ್ ಲೋಕಲ್ ಬೋರ್ಡ್ಸ್ ಇವರ ಮುಖಾಂತರ ನೇರವಾಗಿ ಪಂಚಾಯಿತಿಗಳ ಯೋಗ್ಯತೆ ಮೇರೆಗೆ ಗ್ರಾಂಟನ್ನು ಹಂಚಿಕೊಡಬೇಕೆಂತಲೂ ಸರಕಾರವನ್ನು ಕೇಳಿಕೊಳ್ಳುತ್ತದೆಂದೂ, (೪) ಜಿಲ್ಲಾ ಬೋರ್ಡಿನ ಬಹುಪಕ್ಷವು ಪುತ್ತೂರಿನ ಕಡೆ ತೀರ ಪಕ್ಷಪಾತವುಳ್ಳದ್ದಾಗಿರುವುದರಿಂದ [illegible]ಗೋಸ್ಕರ ನಮ್ಮ ತಾಲೂಕನ್ನೂ ಅಗತ್ಯವಿದ್ದರೆ ಇನ್ನೊಂದು ತಾಲೂಕನ್ನು ಜತೆಗೆ ತೆಗೆದುಕೊಂಡು ಜಿಲ್ಲಾ ಬೋರ್ಡಿನ ವಿಭಜನೆಗೆ ನಮ್ಮ ತಾಲೂಕಿನ ಸದಸ್ಯರು ಪ್ರಯತ್ನಮಾಡತಕ್ಕದ್ದೆಂದೂ ಠರಾವು ಮಾಡಿದರು.

Old! *Famous!*

East & West Insurance Co., Limited.

Bonus Declard Rs. 15/- Per Thousand Per Annum

Insurance in Force About	Rs 90,00,000
Annual Premium Income Over	Rs 4,50 000
Life Fund Over	Rs 7,00,000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest, influential gentlemen.

Inquiries Solicited — Messrs **Padubidri Bros**, *Chief Agents*, Padubidri & BOMBAY

OR

Head Office East & West Buildings, Apollo Street, Fort Bombay

Comfortable like an Aeroplane

Use our swadeshi Mosquitonet for health, Comfort and sound sleep, as if you are in an Aeroplane Sample cutting free. More convenient if some advance sent with order.

L.	B	H	Price	Best
6 Ft	3½ Ft	3½ Ft.	Rs. 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G M Sharma, Post Box F 6706 Calcutta

"ಶ್ರೀ ದತ್ತರಾಜ ಸಮರ್ಥ"

ಬರುವರು!

ಬೇಗನೆ ಬರುವರು!

ಅಖಿಲ ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತ್ಯ ಮಹಾ ಪರಿಷತ್ತಿನ ಗೌರವರನ್ನು ಪಡೆದ, ನಟ ಮಹಾ ನಟರಿಂದೊಡಗೂಡಿದ

ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಲದವರು

ಬೇಗನೇ ಬರುವರು—ಮತ್ತು

ಮಂಗಳೂರು ಹಿಂದೂಸ್ಥಾನ ಸಿನೆಮಾ ಥಿಯೇಟರಿನಲ್ಲಿ

ತಾ. ೨೦ ೪ ೧೯೩೪ನೇ ಶನಿವಾರ ರಾತ್ರಿ ೯-೩೦ ಗಂಟೆಗೆ

ಪ್ರಥಮವಾಗಿ

"ಯುಚ್ಚಿವರ್ ನ್ಯಾಕ್"

ಎಂಟು ಪ್ರಬಲವಾದ ಐತಿಹಾಸಿಕ ನಾಟಕವನ್ನಾಡುವರು. ಸಕಲ ದೇಶಬಂಧುಗಳು ಪ್ರೋತ್ಸಾಹಿಸಬೇಕಾಗಿ ವಿನಂತಿ ಇದೆ ವಿಶೇಷ ವಿಟಂರ ಅದೇ ದಿನ ಹಂಚಲ್ಪಡುವ ಹಸ್ತಪತ್ರಿಕೆಯಲ್ಲಿ.

ಗರುಡ ಸದಾಶಿವರಾಯ,

ಕರ್ನಾಟಕ ನಾಟಕಾಲಂಕಾರ, ಅಭಿನಯ ಶೇಖರ

Information.

If you want a job of printing that will make you feel proud of yourself, do not forget to send your next order to us

Sharada Press,
Car Street Mangalore

"ವಿಶ್ವಬಂಧು"ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು. ೨ ವಿಶ್ವಬಂಧು'ವು ಅಹಿಂಸಾ ಧರ್ಮಪ್ರಚಾರಕನು. ೩ 'ವಿಶ್ವಬಂಧು'ವು ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಪ್ರಕಟ ಮಾಡುವನು ೪ ಕನ್ನಡ ನುಡಿಸೇವೆಯೂ ಕನ್ನಡ ಸಾಹಿತ್ಯ ಪ್ರಭಾವನೆಯೂ 'ವಿಶ್ವಬಂಧು'ವಿನ ಧ್ಯೇಯಗಳು ೫ ವಿದ್ಯಾಭ್ಯಾಸದ ನೂತನ ರೀತಿ ನೀತಿಗಳನ್ನು 'ವಿಶ್ವಬಂಧು'ವು ಪ್ರಕಟಿಸುವನು ೬ ಒಟ್ಟಿನಲ್ಲಿ ಆರ್ಥಿಕ, ನೈತಿಕ, ಧಾರ್ಮಿಕ ರಾಜಕೀಯ, ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು ಸರ್ವಾಂಗ ಸುಂದರನಾದ ವಿಶ್ವಬಂಧು'ವು ಸರ್ವರ ಆದರಣೆಗೂ ಪಾತ್ರನಾಗಿರುವನು

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ. ೨-೧೨-೦ ಮಾತ್ರ.

"ವಿಶ್ವಬಂಧು" ಕಾರ್ಯಾಲಯ, ಎಂ. ಎಲ್. ಜೈನವಿದ್ಯಾರ್ಥಿ ನಿಲಯ ಮೈಸೂರು

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter –

Modern Hindu Hotel,
Calicut 17—6 – 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
ಮೂಡಗೆರೆಗೆ, ಸಕಲೇಶಪುರಕ್ಕೆ
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿ

ರೋಯಲ್ ಸಿಲ್ವರ್ ಜುಬಿಲಿ ನಿಧಿ ಸಂಗ್ರಹ

(ಸಿಲ್ವರ್ ಜುಬಿಲಿ ಕಮಿಟಿಯ ಅಧ್ಯಕ್ಷರಾದ ಮಿ॥ ಇ. ಎಂ. ಗೋನ್ ದೊರೆಗಳು ನಮಗೆ ಕಳುಹಿಸಿದ ಇಂಗ್ಲಿಷ್ ಪತ್ರದ ಭಾವಾರ್ಥವಿದು.)

ದಿಲ್ಲಿಯಲ್ಲಿ ಸ್ಥಾಪಿತವಾದ ವೈಸರಾಯರ ಫಂಡಿನ ಕುರಿತಾಗಿ ಮಂಗಳೂರು ಸಿಲ್ವರ್ ಜುಬಿಲಿಕಮಿಟಿಯು ತನ್ನ ಉದ್ದೇಶಗಳನ್ನು ೧೧ನೇ ಮಾರ್ಚ್ ದಿನ ಪ್ರಕಟಿಸಿರುತ್ತದೆ. ಜಿಲ್ಲೆಯ ಜನರ ಕಷ್ಟನಿವಾರಣೆಗಾಗಿ ಈ ಫಂಡಿನ ಹಣವನ್ನು ಉಪಯೋಗಿಸುವುದೇ ಕಮಿಟಿಯ ಉದ್ದೇಶವೆಂದೂ ಅದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಹಕಾರವು ದೊರೆಯುವುದೆಂದೂ ಆ ಮನವಿಯಲ್ಲಿ ತಿಳಿಸಲಾಗಿತ್ತು: ಪ್ರತಿಯೊಂದು ಜಿಲ್ಲೆಯಲ್ಲಾದ ನಿಧಿಸಂಗ್ರಹದಿಂದ ಶೇಕಡಾ ೭೦/-ರಷ್ಟನ್ನು ಆಯಾಯಾ ಜಿಲ್ಲೆಯಲ್ಲೇ ವೆಚ್ಚಮಾಡಬೇಕೆಂದು ಈಗ ಸೆಂಟ್ರಲ್ ಕಮಿಟಿಯು ನಿರ್ಧರಿಸಿರುತ್ತದೆ.

ಕಮಿಟಿಯು ನಿರೀಕ್ಷಿಸಿದಷ್ಟು ಪ್ರೋತ್ಸಾಹವು ಅದಕ್ಕೆ ಇಷ್ಟರ ವರೆಗೆ ದೊರೆತಿರುವುದಿಲ್ಲ. ಸಬ್ ಕಮಿಟಿಯವರು ತಮ್ಮ ಬಳಿಗೆ ಬಂದು ಹಣವನ್ನು ಸಂಗ್ರಹಿಸುವ ಸಮಯವನ್ನು ಅವರು ಕಾಯುತ್ತಿರಬಹುದು. ಮಂಗಳೂರಿನವರು ತಮ್ಮ ವಂತಿಗೆಗಳನ್ನು ಹಿಡಿದುಕೊಂಡು ಸಂಗ್ರಹಕಾರರನ್ನು ನಿರೀಕ್ಷಿಸುವುದಿಲ್ಲವೆಂದೇ ನಾವು ಭಾವಿಸುತ್ತೇವೆ. ವಂತಿಗೆ ಕೊಡುವರಿಗೆ ಸಬ್ ಕಮಿಟಿಯ ಉಪಯೋಗದಲ್ಲಿರುವಂತಹ ರಶೀದಿಗಳನ್ನು ಇಂಪೀರಿಯಲ್ ಬೇಂಕ್—ಹಣಪಡೆದು—ಕೊಡುತ್ತದೆ. ಈ ವಿಷಯವಾಗಿ ಯಾರೂ ಅಂಜಬೇಕಾದುದಿಲ್ಲ. ಇಷ್ಟು ದೊಡ್ಡ ಮಂಗಳೂರಿನ ಪಟ್ಟಣದಲ್ಲಿ ಹಣವನ್ನು ಸಂಗ್ರಹಿಸುವ ಕೆಲಸವು ಬಹು ಪ್ರಯಾಸಕರ. ಸಂಗ್ರಹಕಾರರಿಗೆ ಬಹು ಸ್ವಲ್ಪ ಬಿಡುವಿರುವುದರಿಂದ ಇದು ಬಹು ಕಷ್ಟಸಾಧ್ಯ. ಆದುದರಿಂದ ಸಾರ್ವಜನಿಕರು ತಾವಾಗಿಯೇ ಹಣವನ್ನು ರವಾನಿಸಿದರೆ ಕಮಿಟಿಯು ಅವರಿಗೆ ಋಣಿಯಾಗುವುದು.

ವೈಸರಾಯರ ಫಂಡಿನ ನಿಧಿಯನ್ನು ಜನರ ಕಷ್ಟ ನಿವಾರಣೆಗಾಗಿಯೇ ಉಪಯೋಗಿಸಬೇಕೆಂದು ನಿಶ್ಚಿಸಲಾಗಿದೆ. ೧೯೩೧, ೧೯೩೩ ಮತ್ತು ೧೯೩೪ರಲ್ಲಿ ಇಂತಹ ಪ್ರಸಂಗಗಳಲ್ಲಿ ಜಮೆಯಾದ ಮೊತ್ತವು ಬೇಕಾದಷ್ಟು ಆಗದೆ ಕಮಿಟಿಯ ಆಶಯಗಳು ಈಡೇರಲಿಲ್ಲ. ಬಡ್ಡಿಯನ್ನು ಹೊಂದುತ್ತಿದ್ದ ಈ ಮೊತ್ತವು ಟೌನ್ ಹೋಲ್ ಕಟ್ಟಡಕ್ಕೆ ಬೇಕಾಗುವ ರೂಪಾಯಿ ೩೦,೦೦೦ದಷ್ಟೂ ಆಗಲಿಲ್ಲ. ಸಿಲ್ವರ್ ಜುಬಿಲಿಯು ಆಗಿ ಮುಗಿದೊಡನೆ ಈ ಕಮಿಟಿಯು ಮತ್ತೊಂದು ಸಾಹಸಕ್ಕೆ ತೊಡಗಲಿದೆ. ಈಗಿರುವ ಕುಷ್ಠರೋಗಿಗಳ ಚಿಕಿತ್ಸಾಲಯವನ್ನು ದೊಡ್ಡದಾಗಿ ಕಟ್ಟಬೇಕೆಂದಿದೆ. ಈಗ ಈ ಚಿಕಿತ್ಸಾಲಯದಲ್ಲಿ ಹೆಚ್ಚು ರೋಗಿಗಳನ್ನು ಪ್ರವೇಶಿಸಲಾಗುವುದಿಲ್ಲ. ಇದರ ಪರಿಣಾಮವಾಗಿ ಕುಷ್ಠರೋಗಿಗಳು ಮಾರ್ಗದ ಬದಿಗಳಲ್ಲಿ ಕುಳಿತು ತಾವೂ ಬಳಲಿ, ಸಾರ್ವಜನಿಕರಿಗೆ ಅಪಾಯಕರ ಜೀವಿಗಳಾಗಿ ಪರಿಣಮಿಸಿದ್ದಾರೆ. ಚಿಕಿತ್ಸಾಲಯವು ಇರದಿರುವಾಗ ಅವರನ್ನು ಮಾರ್ಗಗಳಿಂದ ಎಲ್ಲಿಗೆ ತೆಗೆದುಕೊಂಡು ಹೋಗಲು ಸಾಧ್ಯ? ಚಿಕಿತ್ಸಾಲಯದಲ್ಲಿ ಸ್ಥಳವಿದ್ದರೆ ಇವರನ್ನು ಅಲ್ಲಿಗೆ ಒಯ್ಯುವ ವ್ಯವಸ್ಥೆಯನ್ನು ಮಾಡಬಹುದು.

ಈಗ ಎಲ್ಲಾ ಕುಷ್ಠರೋಗಿಗಳನ್ನು ತಗೆದುಕೊಳ್ಳಲಾಗುತ್ತಿದೆ. ಆದರೆ ಆಸ್ಪತ್ರೆಯಲ್ಲಿ ತುಂಬಾ ರೋಗಿಗಳಿರುವಾಗ ಹೊರಗಿನವರನ್ನು ಎಲ್ಲಿಗೆ ಒಯ್ಯುವುದು? ಆದುದರಿಂದ 'Leper Hospital Extension Scheme'ಗೆ ಧನಸಹಾಯ ಮಾಡುವುದಕ್ಕೆ ಈ ಸಂಭವವು ಅತ್ಯುತ್ತಮ. ಈಗಾಗಲೇ ವಂತಿಗೆ ಕೊಟ್ಟವರ ದ್ರವ್ಯವು ಸಾಕಷ್ಟು ಆದರೆ ಈ ವಿಷಯಕ್ಕಾಗಿಯೇ ಉಪಯೋಗಿಸಲ್ಪಡುವುದು. ಸಾಕಷ್ಟು ಮೊತ್ತವು ಸಂಗ್ರಹವಾಗದಿದ್ದರೆ ಕಮಿಟಿಯು ಈ ದ್ರವ್ಯವನ್ನು ಇನ್ನಿತರ ಸಾರ್ವಜನಿಕ ವಿಷಯಗಳಿಗಾಗಿ ವ್ಯಯಿಸುವುದು.

ಧ್ವಜ ದಿನ.

ವೈಸರಾಯರ ಫಂಡಿಗೋ ಸಬ್ ಕಮಿಟಿಗಳಿಗೋ ವಂತಿಗೆ ಕೊಡುವವರಲ್ಲದೆ ಸಣ್ಣಸಣ್ಣ ವಂತಿಗೆ ಕೊಡಲು ಸಿದ್ಧರಾದವರು ಇಲ್ಲಿರುವುದು ಸಹಜ. ಈ ವಂತಿಗೆಯ ಸಂಗ್ರಹಕ್ಕಾಗಿ ಮಂಗಳೂರಿನಲ್ಲಿ ಮೇ ೬ರಲ್ಲಿ ಧ್ವಜ ದಿನವನ್ನು ಆಚರಿಸಲಾಗುವುದು. ಈ ದಿನ ಸ್ವಯಂಸೇವಕರು ಪೆಟ್ಟಿಗೆಗಳನ್ನು ಹಿಡಿದುಕೊಂಡು ಸಣ್ಣ ಪತಾಕೆಗಳನ್ನು ಜನರಿಗೆ ವಿಕ್ರಯಿಸುವರು. ಒಂದಾಣೆಗಿಂತ ಹೆಚ್ಚು ಕೊಟ್ಟವರಿಗೆ ಈ ಪತಾಕೆಗಳು ದೊರೆಯುವುವು. ವೈಸರಾಯರ ಫಂಡಿಗೆ ವಂತಿಗೆಯಿತ್ತುದಕ್ಕಾಗಿ ಮಾತ್ರ ಈ ಧ್ವಜವು ಸಿಗುವುದು. ಆ ದಿನ ನಮ್ಮ ಊರಲ್ಲಿ ಪತಾಕೆ ಧರಿಸದವರು ಕಾಣ ಸಿಗುವುದು ಕಷ್ಟವಾಗುವಂತೆ ಸಾರ್ವಜನಿಕರು ಸಹಕರಿಸುವರೆಂದು ಹಾರೈಸಲಾಗಿದೆ. ಆ ದಿನ ಪತಾಕೆ ಧರಿಸದವರನ್ನೋ, ವಾಹನಗಳನ್ನೋ ನಿಲ್ಲಿಸಿ ಸ್ವಯಂಸೇವಕರು ಪತಾಕೆಗಳನ್ನು ವಿಕ್ರಯಿಸುವರು. ಮೈದಾನಿನಲ್ಲಿ ಜರಗುವ ಸಮಾರಂಭದಲ್ಲಿ ಈ ಧ್ವಜ ವಿಕ್ರಯವು ಮುಖ್ಯ ಕಾರ್ಯಕ್ರಮವಾಗುವುದು. ಮಕ್ಕಳು ಮಂಗಳೆಗೆ ಹೆತ್ತವರು ಅವುಗಳನ್ನು ಪಡೆದುಕೊಡುರೆಂಬುದು ಆಶಿಸಲಾಗಿದೆ.

ಇ. ಎಂ. ಗೋನ್, ಅಧ್ಯಕ್ಷ,
ಸಿಲ್ವರ್ ಜುಬಿಲಿ ಕಮಿಟಿ,

ಮಂಗಳೂರು, ತಾ. ೧೦—೪—೩೫.

ಬರದಿಂದ ಬಳಲುವ ಬಳ್ಳಾರಿ ಮೊದಲಾದ ಜಿಲ್ಲೆಯವರಿಗೆ ನೆರವಾಗಿರಿ.

ಬಳ್ಳಾರಿ, ಅನಂತಪುರ ಮತ್ತು ಕಡಪಾ ಕರ್ನೂಲು ಈ ಜಿಲ್ಲೆಗಳನ್ನೊಳಗೊಂಡ ದತ್ತ ಮಂಡಲವೆಂದೆನಿಸಿಕೊಳ್ಳುವ ಪ್ರದೇಶದ ಜನರು ಭಯಂಕರ ಕ್ಷಾಮದಿಂದ ಬಳಲುತ್ತಿರುವ ಸಂಗತಿಯು ಈಗ ಎಲ್ಲರಿಗೂ ವಿದಿತವಿಷಯವೇ ಆಗಿದೆ. ಸರಕಾರದವರೂ ಸಹ ಇಷ್ಟರಲ್ಲಿ ರಿಲೀಫ್ ಕೆಲಸವನ್ನಾರಂಭಿಸುವರು. ಆದರೆ ಅಷ್ಟರಿಂದಲೇ ಅಲ್ಲಿಯವರ ಬರಗಾಲದ ಭವಣೆಯು ತಪ್ಪಲಾರದು. ಶ್ರೀ॥ ಕೋಟ ರೆಡ್ಡಿ, ಎಮ್. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ 'ಸೆಂಟ್ರಲ್ ರಿಲೀಫ್ ಕಮಿಟಿ'ಯೊಂದು ಸ್ಥಾಪಿಸಲ್ಪಟ್ಟಿದೆ. ಆದ್ದರಿಂದ ಈ ಕಮಿಟಿಗೆ ಕರ್ನಾಟಕ ಜನತೆಯು ಉದಾರಹಸ್ತದಿಂದ ಹಣವನ್ನು ಕಳಿಸಬೇಕೆಂದು ಈ ಮೂಲಕ ಕರ್ನಾಟಕ ವಣಿಕ್ ಸಂಘದ ಆಗ್ರಹದ ವಿಜ್ಞಾಪನೆಯುಂಟು. ಕರ್ನಾಟಕ ವರ್ತಕ ಸಮಾಜವಂತೂ ತನ್ನ ಮಾನವಧರ್ಮದ ಈ ಕರ್ತವ್ಯವನ್ನು ಈ ಕಾಲಕ್ಕೆ ಮಾಡದೆ ಇರಲಾರದೆಂದು ಭರವಸೆಯಿದೆ.

ಕನ್ನಡ ನಾಡಿನ ಇನ್ನಿತರ ಕೆಲವು ಭಾಗಗಳಲ್ಲಿಯೂ ಮಳೆಬೆಳೆಗಳಿಲ್ಲದೆ ಜನರು ಕಂಗಾಲಾಗಿರುವರೆಂಬುದು ನಿಜ; ಆಯಾ ಭಾಗಗಳಿಗೂ ತಕ್ಕ ಸಹಾಯವು ಆಗುವುದು ಅಗತ್ಯವಾಗಿದೆ. ಆದರೆ ಪೂರ್ವ ಕರ್ನಾಟಕ ಜಿಲ್ಲೆಗಳಾದ ಬಳ್ಳಾರಿ—ಅನಂತಪುರಗಳ ಜನತೆಗೆ ಅವರ ಸದ್ಯದ ಆಪತ್ಕಾಲದಲ್ಲಿ ಉಳಿದ ಭಾಗದ ಕನ್ನಡಿಗರು ಸಕಾಲಕ್ಕೆ ಸಹಾಯಮಾಡಿ ಸಮಸ್ತ ಕರ್ನಾಟಕವು ಅಖಂಡವಾದೊಂದು ಜೀವಂತ ಜನಾಂಗವೆಂಬುದನ್ನು ಪ್ರತ್ಯಕ್ಷ ಕೃತಿಯಿಂದ ಕನ್ನಡಿಗರು ವ್ಯಕ್ತಪಡಿಸಬೇಕಾಗಿದೆ. ಈ ಕಾಲದಲ್ಲಿ ನಿಮ್ಮ ಕರ್ನಾಟಕ ಬಾಂಧವರು ಎಲ್ಲಿದ್ದಾರೆಂದು ಬಳ್ಳಾರಿ ಅನಂತಪುರಗಳ ಕನ್ನಡಿಗರಿಗೆ ಆಂಧ್ರರು ಮೂದಲಿಸುತ್ತಿದ್ದುದಕ್ಕೆ ಕನ್ನಡಿಗರು ಯೋಗ್ಯ ಉತ್ತರವನ್ನು ಕೊಟ್ಟಂತಾಗುವುದು. ಇರಲಿ ಕನ್ನಡ ನಾಡಿನ ಧನಿಕ ವರ್ತಕ ಪ್ರಮುಖರಂತೂ ಕೊಡುಗೈಯಿಂದ ಹಣವನ್ನು ಕೊಡುವರೆಂದು ಆಶಿಸಲಾಗಿದೆ. ಹಣವನ್ನು ಕಳಿಸುವವರು 'ಪ್ರೆಸಿಡೆಂಟ್ ಫ್ಯಾಮಿನ್ ಸೆಂಟ್ರಲ್ ರಿಲೀಫ್ ಕಮಿಟಿ, ಅನಂತಪುರ,' ಈ ವಿಳಾಸಕ್ಕೆ ಕಳುಹಿಸಬೇಕು.

ಮುರಿಗಯ್ಯ ಸೋಮಯ್ಯ ಜಂಗಿನ
ವೀರಭದ್ರಪ್ಪ, ಬಸವಪ್ಪ ಬಳ್ಳಾರಿ,
ಗೌ. ಕಾರ್ಯದರ್ಶಿಗಳು, ಕರ್ನಾಟಕ ಚೇಂಬರ ಆಫ್ ಕಾಮರ್ಸ ಗದಗ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

I. P. ನಂಬ್ರ. 14/1985.

ಎಮ್ಮ ಮಾಧವರಾವ್—ಎಮ್ಮ ಕೃಷ್ಣರಾಯರ ಮಗ—ಬಂಟ್ವಾಳ ಕಸಬಾ—ಅರ್ಜಿದಾರ.

ಮತ್ತು

ಮರೋಳಿ ಕೊಗ್ಗ ಕಮ್ತಿ & ಸನ್ಸ ಬ್ಯಾಂಕ ಮೆನೆಜಿಂಗ್ ಪಾರ್ಟನರ ಶ್ರೀಂಗೇರಿ ದಾಸ ಪೈ—ರೆಸ್ಪಾಂಡೆಂಟ.

ಈ ಮೂಲಕ ಸರ್ವಜನರಿಗೆ ತಿಳಿಸುವುದೇನೆಂದರೆ:—

ಸದ್ರಿ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಮಾಡಬೇಕಾಗಿ ದಾಖಲು ಮಾಡಿದ ಸದ್ರಿ ದಿವಾಳಿ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತನಿಖೆ ಬಗ್ಗೆ ತಾ. 6—6—1985ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಇದ್ದವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾರೀಕಿನಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಹಗಲು 11 ಘಂಟೆಗೆ ಹಾಜರಾಗಿ ಜಾಹೀರು ಮಾಡತಕ್ಕದ್ದು.

G. Upendra Prabhu,
Vakil for Petitioner.
ಮಂಗಳೂರು, 6—4—35.

WANTED

A driver for a Diesel Steam Road Roller under the South Kanara District Board. Applications with particulars regarding age, caste, community, qualification and past experience should reach the President, District Board, South Kanara, Mangalore, on or before 1st May 1935. The pay of the post will not exceed Rs. 30 per mensem. Only those possessing the prescribed technical qualifications need apply.

Mangalore,
5—4—1935

Sd/- A. B. Shetty,
President, District Bord,
South Kanara.

WHITE LEPROSY
AND
LEUCODERMA

A few day's application of this medicine cures WHITE LEPROSY and LEUCODERMA radically Ged rid of this horrible disease by application of this medicine inspite of failure by hundreds of Hakims, Doctors, Kavirajas and advertisers. Rs. 500 rewrded if proved fallible. Price Rs 2/-.

VAIDYARAJ AKHIL KISHORE RAM
P. O. Katribahai, (Gaya.)

ಸಂತತಿ ಪ್ರತಿಬಂಧಕ

ಸರಕಾರದಿಂದ ರಿಜಿಸ್ಟರಾಗಿದೆ. ಅಗ್ಗವಾದುದು. ಅಪಾಯರಹಿತ. ಮಕ್ಕಳನ್ನು ತಡೆಯುವುದಕ್ಕೆ. ಡಾ॥ ಆರ್. ಸೇನ್ ಗುಪ್ತ ಎಂ. ಡಿ (ಅಮೆರಿಕಾ) ಪ್ರಿನ್ಸಿಪಾಲ್. ಡೋಜಿ ಮೆಡಿಕಲ್ ಕೊಲೇಜ್ ಆಫ್, ಹೋಮಿಯೋಪತಿಯವರದು. 18 ತಿಂಗಳ ಮದ್ದು. ಒಂದು ಬಾಟ್ಲಿಗೆ Rs. 1/- ಮಾತ್ರ.

ಬಿ. ಕೆ. ಪಾಲ್, ಏಜಂಟರು.
ಫ್ರೆಂಡ್ಸ್ ಹೋಮಿಯೋ ಹೋಮ್.
65/1 ಮಾನಿಕ್ ಟಲ್ಲ ಸ್ಟ್ರೀಟ್, ಕಲ್ಕತ್ತ.

1¼ Crore

Karnatics know nothing of your products;—

Advertise them in

Swadeshabhimani

the pioneer Weekly of the South Kanara District

For Advertisement rates apply to:

The Advertisement Manager,
Swadeshabhimani,
Mangalore.

ಮಠಗಳಿಗೇ ಬೇಡವಾಗಿದೆ ಸಂಪತ್ತು!

ನಾವು ಮಠಗಳ ವಿಷಯವಾದ ಪ್ರಶ್ನಾವಳಿಯನ್ನು ನಮ್ಮ ಜಿಲ್ಲೆಯ ಎಲ್ಲಾ ಮಠಗಳಿಗೆ ಕಳುಹಿಸಿದ್ದೆವು. ಅವರೆಲ್ಲರೂ ಮೌನವಾಗಿದ್ದಾರೆ!

ಮಠಗಳು ಇಂತಹ ಹೇಡಿತನವನ್ನು ಏಕೆ ವಹಿಸುವುವು?

ಸಂಪಾದಕ:—ಸ್ವದೇಶಾಭಿಮಾನಿ.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba, Benares City

ಶಾಸ್ತ್ರಿಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಾ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸರ್ವಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಈ ರೀತಿ ಇವುಗಳೆಲ್ಲಾ ಆಗುವವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು

ಸಣ್ಣ ಅರ್ಧ ಪ್ರಮಾಣದ ಕಂಠೀಸರ 1ಕ್ಕೆ ಆಣೆ 1ರಿಂದ ರೂ 25ರ ವರೆಗೆ, 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 10ರ ವರೆಗೆ ಮತ್ತು 3–4 5–6–7–8 ಮುಖಗಳ ಕಾಳು 1ಕ್ಕೆ ಆಣೆ 1ರಿಂದ ರೂಪಾಯಿ 10 ಮತ್ತು 9 10–11 ಮುಖಗಳುಳ್ಳ ಕಾಳು 1ಕ್ಕೆ ರೂ 2ರಿಂದ 30ರ ವರೆಗೆ 12–13–14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 100ರ ವರೆಗೆ ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕೆಟಲಾಗ ನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ಇವು ಹೊಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತದೆ ೧೦ ವರ್ಷಗಳ ಗ್ಯಾರಂಟಿ ಒಂದು ಸಿಲ್ವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಒಂದು ಪಾಕೆಟ್ ಟಾರ್ಚ್ ಲೈಟ್ ಮತ್ತು ಬಂಗಾರದ ಪ್ಲೇಟ್ ಮಾಡಿದ ಸುಂದರ ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ನಿಮಗೆ ಇಷ್ಟವಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ೨೪೧೩ S A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨
ಸ್ಟಾಕಿಸ್ಟ— ಶಾ ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ]

ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಪವಾರ್ ಕೆ ರಾವ್ ರವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

" ಬಹಳ ಸಾರ ಹಡೆಯುತ್ತಿದ್ದರಿಂದ ಹೆಂಗಸರ ಆಶಿಶಯ ಅಶಕ್ತಿಯಾಗುತ್ತದೆ, ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ನೊಡಲೇ ಪೂರಾ ಬಿಟ್ಟರ ಮಾಡಿ ಔಷಧ ಬೇಡಿರಿ ಮುಂಬಯಿ ಸರ್ಟಿಫಿಕೇಟ ಡಾಕ್ಟರ ಬಿ. ಎ ವೈದ್ಯ, ಎಲ್. ಸಿ ಪಿ ಎಸ್, ಕೆಳವಾಹುದು ಕಾಣೀ . ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ದಪ್ಪಿ ಕಿಮ್ಮತ್ತು ರೂ ೪–೦–೦ ವಿ ಪಿ ಆಣೆ ೮

ವಿಳಾಸ —ಸಂಜೀವಿನೀ ಔಷಧಾಲಯ ಮು ಪೊ. ಮಿರಜ, S M C

ಬಹಾರ್ ರಸಾಯನಿಕ ವೈದ್ಯ ಶಾಲೆಯಲ್ಲಿ ತಯಾರಾದ ಆಯುರ್ವೇದಿಯ ಔಷಧಗಳು.

ಪ್ರಸೂತಿ ಕಲ್ಯಾಣ–ಬಾಣಂತಿಯರ ಗರ್ಭಕೋಶದ ಎಲ್ಲಾ ತರದ ನಂಜನ್ನು ಶುದ್ಧೀಕರಿಸುವುದು
ಕಾಮಕಲ್ಪ ರಸಾಯನ–ಧಾತುವೃದ್ಧಿ—ಬಲಹೀನತೆ
ಅನಂತಮೂಲಸರಸ–ರಕ್ತಶುದ್ಧಿ ಶರೀರದಲ್ಲಿ ಬೊಕ್ಕೆ ಏಳುವುದು
ದನವಂತ್ರಿ ಮುಲಾಮು—ಮೋಹ ಸಮ್ಮಂಧದ ಹುಣ್ಣು ಬಾವು ಸಂದು ಬಾತುಕೊಳ್ಳುವುದು
ಬ್ರಹ್ಮಿ ರಸಾಯನ–ಮೆದುಳಿನ ವಿಕಾರ ನೆನಪಿಲ್ಲದಿರುವಿಕೆ
ಪುನರ್ನವಾಸವ–ಪ್ಲೀಹ ಬಾತುಕೊಳ್ಳುವುದು ಅರಸಿನಮುಂತಿಗೆ ರಕ್ತಹೀನತೆಯು ಮೇಲೆ
ಕಾಲಮೇಗ–ಇದು ಮಕ್ಕಳ ಕಲೀಜ ಮತ್ತು ಪ್ಲೀಹದ ಮೇಲೆ
ಸಿದ್ಧ ಮಕರಧ್ವಜ ಪ ರಜಾದಿ ತೈಲ—ಮಂಡರ ತೈಲ—ಲಕ್ಷ್ಮೀವಿಲಾಸ ರಸ, ಮೃತಸಂಜೀವನಿ ಉಪಕರಣಗಳು ಅನೇಕ ತರದ ಶಾಸ್ತ್ರೀಯ ಔಷಧಿಗಳ ಕೆಟಲಾಗು ಕೇಳಿ.

The Behar Chemical Works, Bhagalpur
ಏಜಂಟ್ಸ್—ಶಾ. ಕಂಪೆನಿ, ಗವರ್ನಮೆಂಟ್ ಕೋಲೇಜಿನ ಎದುರು ಮಂಗಳೂರು ದ. ಕ.

The Popular Insurance Company, Ltd.

Head Office: MANGALORE, S India
The Pioneer Life Office of the West Coast.
Wanted influential District agents in Unrepresented areas.

A few Press opinions.

'INSURANCE HERALD, CALCUTTA This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground It is directed by influential people of Mangalore and managed by Mr B. Vittal Rao, who has developed in him a great deal of life insurance sense . . .

ಸಾಂಬಾರ ವರ್ತಮಾನ.

["ಸಾಂಬಾರ ವರ್ತಮಾನ"ಕ್ಕೆಂದೇ ಮೀಸಲಾಗಿಟ್ಟ ಈ ನಾಲ್ಕು ಕಲಮುಗಳಲ್ಲಿ ಅಲ್ಲಲ್ಲಿನ ಸ್ವಾರಸ್ಯ ವಾರ್ತೆಗಳನ್ನು ಹಾಸ್ಯರಸಪೂರಿತವಾಗಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ. ಈ ವಾರ್ತೆಗಳನ್ನು ಲಘುಹಾಸ್ಯಪ್ರಿಯರಾದ ಪ್ರಖ್ಯಾತ ಸಾಹಿತಿಗಳೊಬ್ಬರಿಂದ ವಿಶಿಷ್ಟವಾಗಿ ಸ್ವದೇಶಾಭಿಮಾನಿಗೆಂದೇ ಬರೆಸಲಾಗುತ್ತಿದೆ.]

ಮೋಟಾರಿನ ಕೂಗು

ಅದರ ಹಾರ್ನಿನಿಂದ ಕೇಳಬರುವುದೆಂದು ಪ್ರತಿಯೊಬ್ಬನಿಗೂ ತಿಳಿದಿದ್ದೇ. ಆದರೆ ಈ ಕೂಗಿನಿಂದ ಪ್ರಯೋಜನವಾಗುವ ಬದಲು ಮರಣವಾದ ವಾರ್ತೆಯು ಬಂದಿದೆ. ಮುಂಬಾಯಿಯ ಮಹಾಲಕ್ಷ್ಮಿ ಮಾರ್ಗದ ಬೀದಿಯಲ್ಲಿ ಒಂದು ಮೋಟಾರು ಓಡುತ್ತಿತ್ತು. ಆರು ವರ್ಷ ಪ್ರಾಯದ ಒಂದು ಮಗುವು ಅದರ ಬದಿಯಿಂದಾಗಿ ದಾಟಿ ಹೋಗುತ್ತಿತ್ತು. ಅಷ್ಟರಲ್ಲಿ ಡ್ರೈವರನು "ಟ್ರಾಂ" ಎಂದು ಹಾರ್ನ್ ಮಾಡಿದ ಮಗುವು ಕಂಗಾಲಾಗಿ ಥಟ್ಟನೆ ದಾರಿಯ ಮೇಲೆ ಬಿದ್ದಿತು. ಅಷ್ಟರಲ್ಲಿ ಅದೇ ಮೋಟಾರು ಮಗುವಿನ ಮೇಲೆ ಓಡಿ ಅದನ್ನು ಆಸ್ಪತ್ರೆಪಾಲುಮಾಡಿತು. ಡ್ರೈವರನು ಆಲೋಚಿಸಬೇಕಾಗಿದೆ.

× + × × × ×

'ಇಂಗ್ಲಿಷ್‌ನಲ್ಲಿ ಸ್ಟೈಲ್ ಇದೆ'—

—ಎಂದು ಹೇಳುವ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆಯು ಎಷ್ಟು ಕಷ್ಟವೆಂದು ಗೊತ್ತು. ಹಲವರಿಗೆ ಒಂದು ವಾಕ್ಯದಷ್ಟು ಇಂಗ್ಲಿಷನ್ನು ಕಲಿಯಲು ವಾರಗಟ್ಟಲೆ 'ತಲೆನೋವು' ಬೇಕಾಗುತ್ತದೆ—ಎಂದಾಗ, ಇಂಗ್ಲಿಷು ಕಲಿಯಲು ಕಠಿಣ ಭಾಷೆಯೆಂದು ತಿಳಿದುಬರುವುದು. ಸಿಲೋನಿನಲ್ಲಿ ಪೌಲಿನ್ ಸಿಲ್ವ ಎಂಬ ಯುವಕನು ಇಂಗ್ಲಿಷ್ ಕಲಿಯಲಾರಂಭಿಸಿದ ಒಂದೆರಡು ತಿಂಗಳುಗಳಾಗುತ್ತಲೇ ಅವನ ತಲೆಯು ತಿರುಗಿತು. ಇಂಗ್ಲಿಷು ಕಲಿತು ಹುಚ್ಚನಾಗಿ ಬಿಟ್ಟ. ಈಗ ಅವನನ್ನು, ಅವನ ತಾಯಿ ಹೌಸ್ ಆಫ್ ಒಬ್ಸರ್ವೇಶನಿಗೆ ಕಳುಹಿಸಿರುವಳು. "ಈ ಇಂಗ್ಲಿಷು ಹಾಳಾಗ" ಎನ್ನುತ್ತಿರುವಳು.

× × × × × ×

'ಒಂದೆಲ್ಲಿದ್ದರೆ ಇನ್ನೊಂದು ಕಷ್ಟವು'

ಒಂದೇ ಬರುತ್ತಿದೆ"ಯೆಂದು ಹೇಳುವ ಸಾಂಸಾರಿಗಳು ಕಡಿಮೆಯಿಲ್ಲ. ಈ ಮಾತು ಸುಧಾರಕರಿಗೂ ಅನ್ವಯಿಸುತ್ತಿದೆ. ಗಾಂಧೀಜಿಯವರ ಸಾಹಸದಿಂದ ಹಲವು ದೇವಸ್ಥಾನಗಳಿಗೆ ಹರಿಜನರನ್ನು ಪ್ರವೇಶಿಸಲಾಯಿತಷ್ಟೆ. ಈಗ ಕೆಲವು ಹರಿಜನರು ತಾವು ಪ್ರವೇಶಿಸಿದ ದೇವಸ್ಥಾನಗಳಿಗೆ ಕಾಣಿಕೆಗಳನ್ನು ತಂದು ಯಜ್ಞವನ್ನು ನಡೆಸಲು ಪ್ರಾರಂಭಿಸಿರುವರಂತೆ. ಈ ಕಷ್ಟವನ್ನು ನೋಡಿ ಗಾಂಧಿಯವರು "ಹೀಗೆ ಅವರು ಅರ್ಪಿಸುವ ಪ್ರಾಣಿಗಳ ವಧೆಯು ಪಾಪವು ಸುಧಾರಕರ ಮೇಲೆ ಬೀಳುತ್ತದೆ. ಅದರಿಂದ ಎಚ್ಚರಿರಬೇಕು" ಎಂದಿರುವರು.

× × × × × ×

ಮಹಾ ದಾನ!

ಶಿಲ್ಲಾಂಗ್‌ನಲ್ಲಿ ಸಾರ್ವಜನಿಕರ ರಕ್ಷಣೋತ್ಸವ ಸಮಿತಿಯ ಸೆಕ್ರೆಟರಿಯವರು ಭಾಷಣ ಮಾಡುತ್ತಾ— "ಈ ಕಾರ್ಯಕ್ಕೆ ಯಾರು ಥಟ್ಟನೆ ಹಣಕೊಡುವರೋ ಅವರ ದಾನವು ಮಹಾ ದಾನವಾಗುವುದು" ಎಂದರು. ಈ ಮಾತು ಮುಗಿಯುವುದರೊಳಗಾಗಿ ದಾದಿಂಮ್ ದಾಸ್ ಎಂಬ ಯುವಕನೊಬ್ಬನು ಜೇಬಿನಿಂದ ಎರಡಾಣೆಗಳನ್ನು ತೆಗೆದು, "ಇಗೋಳ್ಳಿ, ನಾನು ಥಟ್ಟನೆ ಕೊಟ್ಟೆನು. ನನ್ನ ದಾನವು ಮಹಾ ದಾನವಾಯಿತಷ್ಟೆ" ಎಂದನು. ಎಲ್ಲರೂ ನಕ್ಕರು.

× × × × × ×

ಹಲ್ಲುಗಳು ಕಿವಿಯ ಕೆಲಸ ಮಾಡುವುವು

ಅದು ಹೇಗೆಂದು ಓದಿರಿ. ಒಂದು ಬಗೆಯ ಸಣ್ಣ ಯಂತ್ರವಿದೆ. ಅದಕ್ಕೆ ಸಂಬಂಧಿಸಿಕೊಂಡಿರುವ ಒಂದು ಸರಿಗೆಯನ್ನು ನಿಮ್ಮ ಬಳಿಯಿರುವ ಕಿವುಡನ ಅವನ ಹಲ್ಲಿನಲ್ಲಿ ಕಚ್ಚಿ ಹಿಡಿಯಬೇಕು. ಆ ಮೇಲೆ ನೀವು ಮಾತನಾಡಿರಿ. ನಿಮ್ಮ ಮಾತು ಆ ಯಂತ್ರದ ಸರಿಗೆಯ ಮೂಲಕ ಕಿವುಡನ ಹಲ್ಲುಗಳಿಗೆ ಹೋಗಿ ಅವನಿಗೆ ನಿಮ್ಮ ಮಾತುಗಳು ಕೇಳುವುವು. ಲಂಡನಿನ ಮಹಾ ವಿಶ್ವವಿದ್ಯಾಲಯದ ಶೋಧನಾಲಯದಲ್ಲಿ ಈ ಶೋಧೆಯನ್ನು ಮಾಡಿ ತೋರಿಸಿದರು.

× × × × × ×

ಅತೀ ಸಣ್ಣ ಬೈಬಲ್ ಗ್ರಂಥ.

ಕಾಲು ಅಂಗುಲ ಉದ್ದಗಲದ ಒಂದು ಬೈಬಲ್ ಇದೆ. ಇದನ್ನು ಒಬ್ಬನ ಉಂಗುರದ ಕಲ್ಲಿನ ಬದಲು ಇಟ್ಟುಕೊಳ್ಳಬಹುದು. ಆದರೆ ಇದಕ್ಕಿಂತಲೂ ಸಣ್ಣ ಬೈಬಲ್ ಗ್ರಂಥವು ಎಡಿನ್‌ಬರೋದಲ್ಲಿ ಕಾಣಸಿಕ್ಕಿದೆ. ಈ ಗ್ರಂಥವು ೧೮೯೫ರಲ್ಲಿ ಬರೆಯಲ್ಪಟ್ಟಿತು. ಇದರಲ್ಲಿನ ಅಕ್ಷರಗಳನ್ನು ಓದಬೇಕಾದರೆ ಭೂತಕನ್ನಡಿ ಬೇಕಾಗಿದೆ.

ಸ್ವದೇಶೀ ಹಗ್ಗದಿಂದ ಮರಣ!

'ಸ್ವದೇಶೀ' ಎಂದರೆ ಸ್ವದೇಶದಲ್ಲಿ ಸ್ವದೇಶದವರಿಂದ ತಯಾರಾದುವುಗಳೆಂದು ಅರ್ಥ. ಅಂತಹ ಸ್ವದೇಶೀ ಹಗ್ಗವೊಂದನ್ನು ತಯಾರಿಸಿ ಒಬ್ಬನು ಪ್ರಾಣತ್ಯಾಗ ಮಾಡಿದ ಕತೆಯಿದೆ. ಕೇಳಿ. ಸಬರ್ಮತಿ ಸೆಂಟ್ರಲ್ ಜೈಲಿನಲ್ಲಿ ಓರ್ವ ಕೈದಿಯು ೧೦ ವರ್ಷಗಳ ಶಿಕ್ಷೆಗೆ ಗುರಿಯಾಗಿ ದಿನಹರಿಕೆ ಮಾಡುತ್ತಿದ್ದನು. ಮೊನ್ನೆ ಅವನಿಗೆ ಈ ಪ್ರಪಂಚದ ಮೇಲೆ ವಿರಕ್ತಿಯುಂಟಾಗಿ ಪರಲೋಕದ ಆಶೆಯಾಯಿತು. ಪ್ರಾಣತ್ಯಾಗ ಮಾಡುವೆನೆಂದು ಹೇಗೆ ಹೇಗೆ ನಿರ್ಧರಿಸಿದರೂ ಆ ಕ್ರಿಯೆಗೆ ಬೇಕಾದ ಸಾಹಿತ್ಯವು ಅವನಲ್ಲಿರಲಿಲ್ಲ. ಕಟ್ಟಕಡೆಗೆ ಅವನಿಗೆ ಒಂದು ಯೋಚನೆಯು ಹುಟ್ಟಿತು. ತಾನು ರಾತ್ರಿಯಲ್ಲಿ ಹೊದೆಯುತ್ತಿದ್ದ ಕಂಬಳಿಯಿಂದ ಒಂದೊಂದೇ ನೂಲನ್ನು ಹೊರಗೆ ತೆಗೆದು, ಅವುಗಳಿಂದ ತಕ್ಕುದಾದ ಒಂದು ಹಗ್ಗವನ್ನು ತಯಾರಿಸಿ ಅದನ್ನು ಮಾಡಿನ ಅಡ್ಡಕ್ಕೆ ಹಾಕಿಕೊಂಡು ಉರುಲು ಹಾಕಿ, ಕುತ್ತಿಗೆಗೆ ಸಿಕ್ಕಿಸಿಕೊಂಡಿದನು. ಪ್ರಾಣಪಕ್ಷಿಯು ಹಾರಿಹೋಯಿತೆಂದು ಬೇರೆ ಹೇಳುವುದಿಲ್ಲ.

× × × × × ×

ಇಂಗ್ಲಾಂಡಿನಲ್ಲಿರುವ ನಿಮ್ಮ ಮಿತ್ರನನ್ನು ಇಲ್ಲಿಂದ ನೋಡಬಹುದು—

ಎಂದು ಬ್ರಿಟಿಷ್ ಟೆಲಿಗ್ರಾಫ್ ಮತ್ತು ಟೆಲಿಫೋನ್ ಇಲಾಖೆಯ ಡೈರೆಕ್ಟರರಾದ ಮಿ ಲಯೋನೆಲ್ ಸೈಮನ್ ಎಂಬವರು ತಿಳಿಸಿರುವರಂತೆ. ಯಾರಿಗೂ ಆಶ್ಚರ್ಯವಾಗಬಹುದು. "ಇನ್ನು ಹತ್ತು ವರ್ಷಗಳೊಳಗೆ ಸಾವಿರಾರು ಮೈಲುಗಳ ದೂರದಲ್ಲಿರುವ ನಿಮ್ಮ ಮಿತ್ರನನ್ನು ನೀವು ತಂತಿಯ ಮೂಲಕ ಕರೆದು ಅವರ ಮುಖವನ್ನು ನೋಡಿ ಮಾತಾಡಬಹುದು. ಟೆಲಿವಿಶನ್ ಆಯೋಜನೆಯಿಂದ ಇದು ಈಗಲೇ ಸಾಧ್ಯವಾಗಿದೆ. ಮುಂದಕ್ಕೆ ಪೂರ್ಣ ಸಾಧ್ಯವಾಗಿ ಅಗ್ಗವೂ ಆಗುವುದು." ಎಂದು ಹೇಳುತ್ತಾರೆ. ಆ ದಿನವು ಬರೆಗೆ ನಾವು ಬದುಕಿ ಉಳಿಯುವ

× × × × × ×

'ಆರು ಗಂಡಂದಿರಂತೆ ಇವನಿಲ್ಲ'—

ಎಂದು ಹೇಳಿ ಇಲಿನ್ನೋಯಿನಲ್ಲಿ ಮಿಸ್ಸಿ ಒಲ್ಬರ್ ಎಂಬವಳು ನನ್ನ ಅವಳ ಗಂಡನನ್ನು ಬಿಟ್ಟಿರುವಳು. ತನ್ನ ಹಿಂದಿನ ಆರು ಮಂದಿ ಗಂಡಂದಿರಂತೆ ಇವನು ಪ್ರಿಯಕರನಲ್ಲ ಎಂದುದರಿಂದ ಅವಳಿಗೆ ಇವನ ಅಗತ್ಯವಿಲ್ಲವೆಂದು ಅವಳು ಹೇಳಿದಳು. ಆದರೆ, ಗಂಡನು—ತಾನು ನಿಜವಾಗಿಯೂ ಅವಳ ಪ್ರೀತಿಗೆ ಪಾತ್ರನಾಗಿದ್ದೇನೆ, ಅವಳು ತನ್ನನ್ನು ಬಿಡಲು ಸಾಧ್ಯವೇ ಇಲ್ಲ ಎನ್ನುತ್ತಿರುವನು.

× × × × × ×

ರಕ್ತವುಳ್ಳ ಸಸ್ಯಗಳು ಇವೆ.

ಅಮೇರಿಕದ ಸಂಶೋಧನಾ ಶಾಲೆಯೊಂದರಲ್ಲಿ ಬಾಸಿ ಡ್ರಿಪ್ ಎಂಬ ಒಂದು ತರದ ಮೂಲಿಕೆಯಿದೆ. ಇದು ಆಸ್ಟ್ರೇಲಿಯ ಪ್ರದೇಶದಲ್ಲಿ ಬೆಳೆಯುತ್ತದೆ. ಆ ಮೂಲಿಕೆಯನ್ನು ಹಿಂಡಿದರೆ ರಕ್ತದಂತೆ ವರ್ಣವೂ ಪೀಟಿಯೂ ಇರುವ ದ್ರಾವಕವು ಹೊರಡುತ್ತದೆ. ರಕ್ತದಲ್ಲಿರುವ ಗುಣಗಳೇ ಈ ರಸದಲ್ಲೂ ಇರುತ್ತದೆ.

× × × × × ×

ಮಹಾತ್ಮರ ಪತ್ರ.

ಶ್ರೀ ತಗದೂರು ರಾಮಚಂದ್ರರಾಯರಿಗೆ ಮಹಾತ್ಮರು ಎರಡನೇ ಪತ್ರದಲ್ಲಿ ಹೀಗೆ ತಿಳಿಸಿರುತ್ತಾರೆ. "ಪ್ರಿಯ ತಗದೂರುರವರೇ ನಿಮ್ಮನ್ನು ಸಮಾಧಾನಗೊಳಿಸುವುದು ನನಗೆ ಹೇಗೆ ಸಾಧ್ಯ? ನಿಮ್ಮ ಉಪವಾಸದ ಬಗ್ಗೆ ನನ್ನ ಅಭಿಪ್ರಾಯವು ಮೊದಲಿನಂತೆಯೇ ಇದೆ. ನಿಮ್ಮ ವಿಷಯವಾಗಿ ನನಗೇನೂ ತಿಳಿಯದು. ನಿಮ್ಮ ವಿಷಯವಾಗಿ ಹೇಳಿದಂತೆಯೇ ನನ್ನ ವಿಷಯವಾಗಿಯೂ ಹೇಳುತ್ತೇನೆ. ಸಾರ್ವಜನಿಕರು ನಿರಾದರೂ ಮಾಡಿ ನನಗೆ ಹಣ ಕೊಡಲಿ ಎಂದು ನಾನು ಅಪೇಕ್ಷಿಸುವುದಿಲ್ಲ. ಕೊಟ್ಟರೆ ಅದನ್ನು ನಾನು ಹೇಗೆ ವೆಚ್ಚ ಮಾಡುವೆನೆಂಬುದನ್ನು ಅವರು ತಿಳಿದುಕೊಳ್ಳಬೇಕು. ನಿಮ್ಮ ಮೇಲೆ ದ್ವೇಷ ಇಲ್ಲದಿರುವುದರಿಂದ ಯಾರಿಗೂ ನೀವೇನೂ ಗಮನಕೊಡಬೇಕಾದುದಿಲ್ಲ. ನಿಮ್ಮ

ಎಂ. ಕೆ. ಗಾಂಧಿ.

೨೨ + ೪೫.

೨೨ ಎಂಬುದು ಸ್ಪೈನಿನ ಯುವಕನೊಬ್ಬನ ವಯಸ್ಸು. ೪೫ ಎಂಬುದು ಅವನ ಪ್ರಿಯತಮೆಯೊಬ್ಬಳ ವಯಸ್ಸು. ಇವರ ವಿವಾಹವು ಮೊನ್ನೆ ಅಲ್ಲಿ ನಡೆಯಿತು. "ನನ್ನ ಪ್ರಿಯತಮೆ" ಎಂದು ಅವನು ಅವಳನ್ನು ಪ್ರೀತಿಸುತ್ತಾನೆ. "ನನ್ನ ಪ್ರಾಣಪ್ರಿಯ"ನೆಂದು ಅವಳು ಅವನನ್ನು ಅಪ್ಪುತ್ತಾಳೆ. ಈ ವಿವಾಹವಾಗದಂತೆ ಯತ್ನಿಸಿದ ಸುಧಾರಕರ ಸಾಹಸವೂ ನಿರರ್ಥಕವಾಯಿತು. ಪರಲೋಕವಾಸಿಯಾದ ದೇವರ ಬಳಿ ಯಾವ ರೀತಿಯ ಸಾಕ್ಷ್ಯವಿರುವುದೋ ಅವರಿಗೇ ಗೊತ್ತು!

× × × × × ×

ಅತ್ತೆಯ ಕಾಟದ ಅರ್ಥವು

ಜೆಪ್ಪಿನ ಸ್ತ್ರೀಯರಿಗೆ ತಿಳಿದಿದೆ. ಲಕ್ಷ್ಮೀ ಒಳ ಒಂದು ಹಳ್ಳಿಯಲ್ಲಿ ಒಬ್ಬಳು ಯುವತಿಗೆ ಅತ್ತೆಯ ಕಾಟವು ಕಡನೆಯಾಗಿ ಸಿಗುತ್ತಿದ್ದಿಲ್ಲ. ಮುಂಜಾನೆಯ ಪೂಜೆಗಾರಂಭವಾದರೆ ಸಂಜೆಯ ವರೆಗೂ ಆರಾಧನೆ ಸೊಸೆಗೆ ಸಹಿಸಲಾರದಾಯಿತು. ತನ್ನ ಎಳೆಯ ಕೂಸನ್ನು ಬಾವಿಗೆ ಹಾಕಿ ತಾನೂ ಅದರ ಹಿಂದೆ ಹಾರಿದಳು. ಅಷ್ಟರಲ್ಲಾಯಿತು—ಜನರು ಕಂಡು ಅವಳನ್ನು ಮೇಲ್ಕಗೆ ತರಲು ಮಗು ಮಾತ್ರ ತೀರಿಕೊಂಡಿತು. ಈಗ ಅವಳ ಮೇಲೆ ದಾವೆಹೂಡಲಾಗಿದೆ. ಅತ್ತೆಯು ಅಳುತ್ತಿರುವಳು ("ಕಣ್ಣುಕಟ್ಟು" ಇರಬಹುದು)

× × × × × ×

ಅಂದು ಬದುಕಿ ಇಂದು ಸತ್ತಳು

ಜೇಮ್ ಟೌನ್ ಇನ್ಸ್‌ಟಿಟ್ಯೂಟಿನಲ್ಲಿ ಮೊನ್ನೆ ೮೦ ವರ್ಷ ಪ್ರಾಯದ ಮುದುಕಿಯೊಬ್ಬಳು ಪ್ರಾಣಬಿಟ್ಟಳು. ಇವಳ ಶವಸಂಸ್ಕಾರವು ಅತ್ಯಂತ ವಿಜೃಂಭಣೆಯಿಂದಲೇ ಜರುಗಿತು. ಇವಳನ್ನು ಜನರು ಗೌರವಿಸುತ್ತಿದ್ದುದಕ್ಕೆ ಒಂದು ದೊಡ್ಡ ಕಾರಣವಿದೆ. ಇವಳು ೧೮ ವರ್ಷ ಪ್ರಾಯದ ಹುಡುಗಿಯಾಗಿದ್ದಾಗ ಜ್ವರಕ್ಕೆ ತುತ್ತಾಗಿ ಮೃತಳಾದಳು. ಡಾಕ್ಟರರು ಬಂದು ಇವಳು ಸತ್ತು ಹೋದುದು ನಿಜವೆಂದರು. ಇವಳ ಶವವನ್ನು ದಾರಿಯಲ್ಲಿ ಒಯ್ಯುತ್ತಿರುವಾಗ ಪೆಟ್ಟಿಗೆಯೊಳಗಿಂದ ಇವಳು ಎದ್ದಳು. ಈ ವೈಚಿತ್ರ್ಯವನ್ನು ಕಂಡು, ಹೊತ್ತವರು ಪೆಟ್ಟಿಗೆಯನ್ನು ದಾರಿಯ ಮೇಲೆ ಹಾಕಿ ಓಡಿಬಿಟ್ಟರು. ಇವಳು ಪೆಟ್ಟಿಗೆಯಿಂದೆದ್ದು ಮೆಲ್ಲನೆ ಮನೆಗೆ ನಡೆದಳು. ಕೆಲವು ದಿನಗಳಲ್ಲಿ ಸುಖಗೊಂಡಳು. ಇವಳು ಬದುಕಿದುದನ್ನು ಕಂಡು ಅಲ್ಲಿಯ ಜನರು ಇವಳನ್ನು ಪವಿತ್ರಳೆಂದು ಗೌರವಿಸುತ್ತಿದ್ದರು.

× × × × × ×

ತಬಲಾ ಬಾರಿಸುವ ಜಾಣ.

ಹುಬ್ಬಳ್ಳಿಯಲ್ಲಿ ಶ್ರೀ ಕೃಷ್ಣನೆಂಬ ಏಳು ವರ್ಷದ ಬಾಲಕನಿರುವನು. ಚಿಕ್ಕಂದಿನಿಂದಲೂ ತಬಲಾ ಬಾರಿಸುವ ಆಶೆಯು ಇವನಲ್ಲಿ ವಿಪರೀತ. ಈಗ ಇವನು ಎಂತಹ ಗವಾಯಿಗಳು ಹಾಡುವಾಗಲೂ ತಬಲಾ ಬಾರಿಸುವಷ್ಟು ಪ್ರವೀಣನಿರುತ್ತಾನೆ. ಹುಬ್ಬಳ್ಳಿಯ ಗಜಾನನ ಕರ್ನಾಟಕ ಎಮೆಚೂರ್ಸ್ ಕ್ಲಬ್ಬಿನವರು "ವೀರ ಪುಲಕೇಶಿ" ನಾಟಕವಾಡಿದಾಗ ಈ ಬಾಲಕನೇ ತಬಲಾ ಬಾರಿಸಿರುವನು. ಆ ದಿನ ನಾಟಕ ನೋಡಿದವರು ನೋಡಿದುದು ಇವನ ಜಾಣ್ಮೆಯನ್ನು.

× × × × × ×

ಹೀಗೇಕೆ ಮಾಡಿದನೆಂದು ಹೇಳುವವರು ಇಲ್ಲ.

ಪುರಾಡ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಮನೆಗೆ ಮೊನ್ನೆ ಕಾಳಿಪ್ರಾದಾಸ ಎಂಬ ಬಂಗಾಳೀ ಯುವಕನು ಹೋಗಿ, ಅವರ ಆಫೀಸಿನಲ್ಲಿದ್ದ ಅವರ ಕುರ್ಚಿಯ ಮೇಲೆ ಕುಳಿತು, ಬಳಿಯಿದ್ದ ಟೆಲಿಫೋನ್ ಮೂಲಕ ಮಾತನಾಡಲಾರಂಭಿಸಿದನು. ಇದನ್ನು ಕಂಡು ಕೆಲಸಗಾರರು ಬೇಗನೆ ಅವನನ್ನು ಹಿಡಿಯಬಂದರು. ಅಷ್ಟರಲ್ಲಿ ಅವನು ಮೇಜಿನಲ್ಲಿದ್ದ ಕಾಯಿಬುರುಡೆಯನ್ನು ತೆಗೆದು ಒಬ್ಬನ ಮೇಲೆಸೆದು ಗಾಯಗೊಳಿಸಿದ. ಅವನನ್ನು ಸೆರೆಹಿಡಿಯಲಾಗಿದೆ.

ಭಂಗಾರವು ಹರಿಯಿತು.

ಕಳೆದ ವಾರದ ವರದಿಯಂತೆ ಮುಂಬಾಯಿ ಬಂದರಿಂದ ೧,೫೫,೯೯,೮೮೩ ರೂಪಾಯಿಗಳಷ್ಟು ಬೆಲೆಯುಳ್ಳ ಚಿನ್ನವು ಪರದೇಶಗಳಿಗೆ ಹೋಯಿತು. ಬ್ರಿಟನ್ನು ಭಾರತದೊಡನೆ ಗೋಲ್ಡ್ ಸ್ಟಾಂಡಾರ್ಡನ್ನು ಬಿಟ್ಟಂದಿನಿಂದ ೨,೫೩,೮೦,೯೬,೩೩೬ ರೂಪಾಯಿಗಳ ಚಿನ್ನವು ಅತ್ತ ಹರಿಯಿತು.

× × × × × ×

ವರದಕ್ಷಿಣೆಯಿಲ್ಲ, ವೆಚ್ಚವಿಲ್ಲ.

ಇದು ವಿವಾಹದ ಕಾಲ. ಎಲ್ಲೆಲ್ಲೂ ಮದುವೆಯಾಗಳು. ಸಾವಿರಗಟ್ಟಲೆ ರೂಪಾಯಿಗಳನ್ನು ವರದಕ್ಷಿಣೆಯಾಗಿ ಕೊಡಬೇಕೆಂದು ತಂದೆತಾಯಿಗಳ ಪಾಡುಗಳು!— ಸಾವಿರಗಟ್ಟಲೆ ರೂಪಾಯಿಗಳು ದೊರೆಯುವುವೆಂದು ಯುವಕರಿಗೆ ಹಾರಾಟ! ಹಿಂದೂದೇಶದಲ್ಲಿ ಮದುವೆ ಎಂದರೆ ಒಂದು ವ್ಯಾಪಾರವೇ ಆಗಿಬಿಟ್ಟಿದೆ. ಆದರೆ ತುರ್ಕಿದೇಶದಲ್ಲಿ ಒಂದು ಶಾಸನವು ಪ್ರಚಾರವಾಗಿದೆ. ವಿವಾಹಕ್ಕೆಂದು ಯಾರೂ ಹೆಚ್ಚು ವೆಚ್ಚಮಾಡಬಾರದು. ವರದಕ್ಷಿಣೆ ತೆಗೆದುಕೊಳ್ಳಬಾರದು—ಕೊಡಬಾರದು. ವಧೂವರರನ್ನು ವೈದ್ಯರು ಪರೀಕ್ಷಿಸಿ ಶಿಫಾರಸು ಮಾಡಿದರೆ ಮಾತ್ರ ವಿವಾಹ. ವಿವಾಹವು ಕೆಲವು ಕುಟುಂಬದವರ ಸಮಕ್ಷಮ ಮಾತ್ರ ನಡೆಯಬೇಕು. ವಾದ್ಯಘೋಷ, ಗದ್ದಲ, ಗೌಜಿ, ವೆಚ್ಚಗಳಿರಕೂಡದು! ನಮಗೆ ವಿಚಿತ್ರವಲ್ಲವೇ ಇದು?

× × × × × ×

"ಮೈಸೂರಾಯರೂ ನಾಗರ ಹಾವೂ"

ಎಂಬ ಶಿರೋನಾಮೆಯನ್ನು ಓದಿದೊಡನೆ ಗಾಬರಿಗೊಳ್ಳುವವರು ಅನೇಕರು. ಆ ಗಾಬರಿಗೆ ಕಾರಣವೂ ಉಂಟು. ಡಿಲ್ಲಿ ದರ್ಬಾರು ಕ್ಷೇತ್ರದಲ್ಲಿ ಮೊನ್ನೆ ಒಂದು ಫೋಟೋ ಪ್ರಯೋಗವನ್ನು ನೋಡಲು ಹೋದಾಗ ಮೈಸೂರಾಯರು ಟೀ ಕುಡಿಯಲಿದ್ದ ಮೇಜಿನ ಅಡಿಯಲ್ಲಿ ೩ ಅಡಿ ಉದ್ದದ ಒಂದು ನಾಗರಹಾವು ಕುಳಿತುಕೊಂಡಿದ್ದಿತು. ಅದನ್ನು ಕೂಡಲೇ ಕೊಂದುಬಿಡಲಾಯಿತು. "ಪ್ರಾಣಾಪಾಯವು ತಪ್ಪಿತೆಂದು ಒಂದು ಪತ್ರಿಕೆಯು ಹೇಳುತ್ತಿದೆ.

× × × × + ×

ನಮ್ಮ ದುಡ್ಡು

ಹೀಗೆ ಹರಿಯುತ್ತಿದೆ. ನೋಡಬೇಕೆಂದಾಗ ಹಲವರಿಗೆ ಅಜೆಯಾಗಬಹುದು. ನಮ್ಮ ದೇಶದ ಭಂಗಾರ, ಬೆಳ್ಳಿ ರೂಪದಲ್ಲೂ, ಕಂದಾಯದ ರೂಪದಲ್ಲೂ ಕಡಲಿನ ಆಚೆ ಹರಿಯುತ್ತಿದೆ. ಈಗ ವರ್ತಮಾನಗಳ ಮೂಲಕವೂ ಅದು ಹರಿಯುತ್ತಿದೆಯೆಂದು ಪ್ರಕಟವಾಗಿದೆ. ಇಂಡಿಯನ ಸರಕಾರವು ವರ್ತಮಾನ ಸಂಗ್ರಹ ಕಾರ್ಯವೊಂದರಲ್ಲಿ ರೂಟರ್ ನ್ಯೂಸ್ ಏಜನ್ಸಿಗೆ ಕಳೆದ ವರ್ಷ ೯೯,೫೦೦ ರೂಪಾಯಿಗಳನ್ನು ವೆಚ್ಚಮಾಡಿದಂತೆ ಈ ಹಣ ಮೆಲ್ಲಗೆ ಇಂಗ್ಲಾಂಡಿಗೆ ಹೋಗಿದೆ. ಎಸೋಸಿಯೇಟೆಡ್ ಪ್ರೆಸ್ಸಿಗೆ ಸರಕಾರವು ೧೭,೦೦೦ ರೂಪಾಯಿಗಳನ್ನು ಪಾರಿತೋಷಕವಾಗಿ ಕೊಟ್ಟಿತು.

× × × × × ×

"ಎಪ್ರಿಲ್ ಫೂಲ್"

ಕತೆಯಂತೆ ಇದು. ಎಪ್ರಿಲ್ ೧ನೇ ದಿನ ಡಿಲ್ಲಿಯಲ್ಲಿ ನಡೆದ ಸ್ವಾತಂತ್ರ್ಯವಿದು. ಸರ್ ಗುಲಾಮ್ ಹುಸೇನ್, ಶ್ರೀ ಎಂ ಎಸ್ ಅಣೆ ಮತ್ತು ಸರ್ ಕವಾಸ್‌ಜಿ ಜಹಾಂಗೀರರವರಿಗೆ ಒಂದು ಟೆಲಿಫೋನು ಕರೆಬಂದು, "ನೀವು ಹೋಮ್ ಮೆಂಬರರ ಬಳಿಗೆ ಕೂಡಲೇ ಬರಬೇಕು" ಎಂದು ತಿಳಿಸಿತು. ಅಗತ್ಯವಿರಬಹುದೆಂದು ಭಾವಿಸಿ ಮೂವರೂ ಅತ್ತಕಡೆ ನಡೆದರು. ಅಲ್ಲಿಗೆ ಹೋಗುವಾಗ "ನಿಮ್ಮನ್ನು ಯಾರೂ ಕರೆಯಲಿಲ್ಲ, ಮಾತಾಡುವ ಕೆಲಸವಿಲ್ಲ, ಭೇಟಿಯನ್ನು ಅಪೇಕ್ಷಿಸಿಲ್ಲ. ಹಿಂತಿರುಗಬಹುದು" ಎಂದು ಉತ್ತರವು ದೊರೆಯಿತು. ಯಾರೋ ತಮಾಷೆಗಾಗಿ ಹೀಗೆ ಮಾಡಿದರಂತೆ.

× × × × × ×

ನಿರುದ್ಯೋಗಿಗಳ ಸಂಖ್ಯೆ—

ಎಷ್ಟೆಂದು ತಿಳಿದು ನಿರುದ್ಯೋಗಿಗಳು ಸಮಾಧಾನಗೊಳ್ಳಬೇಕಾಗಿದೆ. ಅಮೇರಿಕದಲ್ಲಿ ೭,೭೬೫,೦೦೦ ನಿರುದ್ಯೋಗಿಗಳು ಇರುವರು, ಬ್ರಿಟನಿನಲ್ಲಿ ೨,೩೬೭,೨೦೦ ಇಟೆಲಿಯಲ್ಲಿ ೧,೦೧೯,೬೦೦, ಇಂಡಿಯದಲ್ಲಿ ಎಷ್ಟೆಂಬ ಲೆಕ್ಕವನ್ನು ತೆಗೆಯಬಾರದಲ್ಲ! (ತಲೆ ತಿರುಗೀತೆಂಬ ಭಯದಿಂದಾಗಿರಬಹುದು.)

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ ಘೃತಾದಿ ಯೋಗಗಳೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ

ಜೀವನದ ಜಯಶೀಲತೆಯ ಏನೆಂಬುದನ್ನು ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಖಚಿತತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಕಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

Agents—Shah Company Mangalore
Pearl & Sons Mangalore

Atank Nigrah Pharmacy
Chickpet, Bangalore

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ

Writing an Advertisement Advertisements make both a concious and sub-concious appeal and should be beautiful, sentimental or humorous not blatant or vulgar crisp in their appeals whether of wording or design not too highly coloured metaforically, and with a reason given (where ever possible) that appeals to the practicable mind a mere statement of the name of the article or place is insufficient.

—The Publicity Department Swadeshabhimani, Mangalore

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿಯು ಈ ಸಂಸ್ಥೆಯು ವರ್ಷಂಪ್ರತಿ ಸ್ಥಿರವಾಗಿ ಏಳಿಗೆ ಹೊಂದುತ್ತಿರುವುದಕ್ಕೆ ಸಾಕ್ಷಿಯಾಗಿದೆ. ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇವರಲ್ಲಿ ಸಾರ್ವಜನಿಕರು ಇಟ್ಟಿರುವ ವಿಶ್ವಾಸಕ್ಕೆ ಸಂಸ್ಥೆಯ ಸೇವೆಗೂ ಇದೇ ದಾಖಲೆಯಾಗಿದೆ.

19 ಆಫೀಸುಗಳಿರುವ ಹೆಸರಾದ ಬೇಂಕು

ನಮ್ಮ ಆಫೀಸುಗಳು.—

ಬೊಂಬಾಯಿ (ಫೋರ್ಟ್ ಮತ್ತು ಮಾಂಡ್ವಿ), ಹುಬ್ಬಳ್ಳಿ, ಮಂಗಳೂರು, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಂ, ಆಲ್ಲೆಪ್ಪಿ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿವೆ

ಪ್ರಗತಿಸೂಚಕ ಪಟ್ಟಿ.

ವಂತಿಗೆ ಭಂಡವಾಳ	ತೆತ್ತ ಭಂಡವಾಳ	ರಿಜರ್ವ್	ಡಿಪೋಜಿಟ್	ವ್ಯವಹಾರದಲ್ಲಿರುವ ಭಂಡವಾಳ
1916	1916	1916	1916	1916
2 25,000	2,00,000	89,000	3,60,000	6,83,000
1920	1920	1920	1920	1920
3,00,000	3,00,000	1 61,000	8,99,000	14,19,000
1924	1924	1924	1924	1924
3,00,000	3,00,000	2 62 000	18,10 000	24,69,000
1928	1928	1928	1928	1928
3,00,000	3,00,000	3 88 000	37 42,000	46,99,000
1932	1932	1932	1932	1932
6,00,000	3,30,000	1 31 000	55 46 000	65,62 000
1934	1934	1934	1934	1934
6,00,000	3,31,000	4 50,000	58,62,000	73,49,000

ಗಿರಾಕಿಗಳಿಗೆ ಎಲ್ಲಾ ತರದ ಸೌಕರ್ಯಗಳು

ಸುಲಭ ರೀತಿಯ ವ್ಯಾಪಾರ ವಹಿವಾಟುಗಳು.

ಚಂದ್ರನ ಬಳಿಗೆ ಯಾತ್ರೆಯಾಗಲಿದೆ!

ಒಂದು ವಾರದೊಳಗೆ ಚಂದ್ರಲೋಕ ವನ್ನು ಸೇರುವರು.

ವಿಜ್ಞಾನದ ವಿಚಿತ್ರ ಪರಮಾವಧಿ.

ಅನೇಕ ವರ್ಷಗಳಿಂದ ವಿಜ್ಞಾನಿಗಳ ತಲೆಯನ್ನು ಕರಡು ಮಾಡಿದ ವಿಷಯವೆಂದರೆ ಚಂದ್ರ ಮಂಡಲ. ಚಂದ್ರನೆಂಬ ಗ್ರಹವು ಯಾವ ಪರಿಸ್ಥಿತಿಯನ್ನುಳ್ಳದು, ಭೂಮಿಗೆ ಅದರೊಡನಿರುವ ಸಂಬಂಧವೇನು? ಚಂದ್ರ ಮಂಡಲದಲ್ಲಿ ಜನರು ವಾಸಿಸುತ್ತಾರೋ, ಅಲ್ಲಿ ಮರಮಟ್ಟುಗಳು ಇರುವುವೋ, ಚಂದ್ರಮಂಡಲವು ಭೂಮಂಡಲದಂತಿದೆಯೋ-ಎಂಬಿವೇ ಮೊದಲಾದ ಸಮಸ್ಯೆಗಳು ವಿಜ್ಞಾನಿಗಳ ಮೆದುಳನ್ನು ತಿನ್ನುತ್ತಿದ್ದುವು. ಇತ್ತೀಚೆಗೆ ಬರುತ್ತಿರುವ ವಾರ್ತೆಗಳಿಂದ ಚಂದ್ರನು ಭೂಮಿಯಂತಿರುವ ಒಂದು ವಿಚಿತ್ರ ಗ್ರಹವೆಂದೂ ಮಂಜುಗಡ್ಡೆಯ ಲೋಕವದೆಂದೂ, ತೀರದು ಬಂತು ಮಂಜಿನಿಂದಾವೃತವಾದ ಗುಡ್ಡ ಬೆಟ್ಟಗಳು ಚಂದ್ರನಲ್ಲಿವೆಯೆಂದೂ, ಬಹು ದೊಡ್ಡ ದೊಡ್ಡ ಬಾವಿಗಳು, ಖನಿಗಳೂ ಅಲ್ಲಿವೆಯೆಂದೂ ದೂರದರ್ಶಕ ಯಂತ್ರಗಳ ಸಹಾಯದಿಂದ ಕಂಡುಕೊಂಡಿರುವರು

ಮೊಸ್ಕೊವಿನಿಂದ ಒಂದು ವಾರ್ತೆ ಅಲ್ಲಿಯ ಇಬ್ಬರು ಶೋಧನಕಾರರು ಒಂದು ವಿಮಾನದಲ್ಲಿ ಕುಳಿತು ಅತ್ಯಂತ ರಭಸದಿಂದ ಚಂದ್ರಮಂಡಲಕ್ಕೆ ಹೋಗಿ ಹಿಂದಿರುಗಿ ಬರುವರಂತೆ ಈ ಶೋಧೆಯು ಈ ವರ್ಷದ ಒಳಗೆ ನಡೆಯುವುದು ಇವರ ಸಾಧನೆಯು ಯಶಸ್ವಿಯಾದರೆ ವಿಜ್ಞಾನ ಪ್ರಪಂಚದಲ್ಲಿ ಮಹಾ ಕ್ರಾಂತಿಯೇ ಉಂಟಾಗುವುದು

ಹತ್ತು ವರ್ಷಗಳ ಮೊದಲು ಮಸಚುಸೆಟ್ಸ್ ಫಿಸಿಕ್ಸ್ ಯುನಿವರ್ಸಿಟಿಯ ಮುಖಂಡರಾದ ಪ್ರೊಫೆಸರ್ ಗೊಡಾರ್ಡ್ ಎಂಬವರು ಒಂದು ಸಲಹೆಯನ್ನು ಪ್ರಕಟಿಸಿ ಒಂದು ಆಕಾಶ ಬಾಣವನ್ನು ರಚಿಸಿ, ಅದು ಹಲವು ಮೈಲುಗಳಿಗೊಂದು ಸಲ ತನ್ನ ಬಾಲದಲ್ಲಿರುವ ಮದ್ದನ್ನು ಸಿಡಿಯುವಂತೆ ಮಾಡಿ ವಿಮಾನವು ಮುಂದರಿಯುವಂತೆ ನಿರ್ಮಿಸಬೇಕೆಂದು ಹೇಳಿದರು ಈ ವಿಮಾನವು ಒಂದು ಸೆಕೆಂಡಿಗೆ ೭ ಮೈಲುಗಳ ರಭಸದಿಂದ ಹಾರಿದರೆ ೩೨ ತಾಸುಗಳಲ್ಲಿ ಚಂದ್ರಮಂಡಲವನ್ನು ತಲಪಬಹುದೆಂದೂ ಅವರು ಹೇಳಿದರು ಅವರ ಈ ಸಲಹೆಯು ಹಲವರ ಲಕ್ಷ್ಯಕ್ಕೆ ಪಾತ್ರವಾಯಿತು ಇದರ ನಂತರ ಅಮೆರಿಕಾದ ಪ್ರೊಫೆಸರ್ ಜೆಕ್ಸ್ ಸ್ಟುವರ್ಟ್ ಎಂಬವರು ಒಂದು ಶೋಧೆ ನಡೆಸಿ ಚಂದ್ರಮಂಡಲದ ಯಾತ್ರೆಯನ್ನು ಮತ್ತಷ್ಟು ಶೀಘ್ರವಾಗಿ ನೆರವೇರಿಸಬಹುದೆಂದು ಸೂಚಿಸಿದರು ಇದರ ನಂತರ ಫ್ರಾನ್ಸಿನ ಎಸ್ನಾಲ್ಟ್ ಪೆಲ್ಟೆರಿ ಎಂಬವರು ಒಂದು ಸೆಕೆಂಡಿಗೆ ೧೮೫ ಮೈಲುಗಳ ವೇಗದಿಂದ ಹಾರುವ ವಿಮಾನವನ್ನು ತಯಾರಿಸುವೆನೆಂದರು ಪೆಲ್ಟೆರಿಯವರು ಸೂಚಿಸಿದಂತೆ ೧೯೪೫ನೇ ಇಸವಿಯೊಳಗೆ ಚಂದ್ರಮಂಡಲದ ಯಾತ್ರೆಯ ಸಮಸ್ಯೆಯು ತೀರ್ಮಾನ ಹೊಂದುವುದಂತೆ ಅವರ ಸಲಹೆಗಳು ಸ್ವೀಕರಿಸಲ್ಪಟ್ಟರೆ ಒಬ್ಬ ಮನುಷ್ಯನು ಗಂಜಿಯ ಊಟವನ್ನು ಭೂಮಿಯಲ್ಲಿ ತೀರಿಸಿ, ಮಧ್ಯಾಹ್ನದ ಭೋಜನವನ್ನು ಚಂದ್ರಮಂಡಲದಲ್ಲಿ ಮಾಡಿ, ರಾತ್ರಿಯೂಟವನ್ನು ಭೂಮಿಯ ಮೇಲೆ ತನ್ನ ಮನೆಯಲ್ಲಿ ಯಥಾ ಸಮಯದಲ್ಲಿ ಮಾಡಬಹುದಂತೆ ಜರ್ಮನಿಯ ಹರ್ಒಬೆರ್ತ್ ಎಂಬ ವಿಜ್ಞಾನಿಯು ಮೊನ್ನೆ ಹೀಗೆಂದು ತಿಳಿಸಿರುವನು "ಯಾರಾದರೊಬ್ಬ ಮಿಲಿಯಾಧಿಪತಿಯು ನನಗೆ ೫೦,೦೦೦ ಪವನುಗಳನ್ನಿತ್ತರೆ, ಚಂದ್ರ ಮಂಡಲಕ್ಕೆ ಹೋಗುವ ಒಂದು ವಿಮಾನವನ್ನು ರಚಿಸಿ ಅದರಲ್ಲಿ ಒಬ್ಬನನ್ನು ಕುಳ್ಳಿರಿಸಿಕೊಂಡು ಚಂದ್ರಮಂಡಲದ ೨೪೦,೦೦೦ ಮೈಲುಗಳನ್ನು ನಾನು ದಾಟಿಹೋಗಿ ಹಿಂದೆ ಬರುವೆನು ನನ್ನ ವಿಮಾನವು ೪೦೦ ಟನ್ನುಗಳಷ್ಟು ಇದ್ದೀತು ೨೫ ಟನ್ ಆಲ್ಕಹಾಲ್, ೫ ಟನ್ ಜಲಧಾತು ದ್ರಾವಕಗಳು ನನಗೆ ಬೇಕು"

ಈ ಶೋಧೆಯು ಇನ್ನೂ ಮುಂದರಿಯುತ್ತಾ ಇದೆ-ಪರಿಣಾಮವು ನಿರೀಕ್ಷಿಸಲ್ಪಟ್ಟಿದೆ.

ನಮ್ಮ ಮುಂದಾಳುಗಳು

ಜಿಲ್ಲಾ ಬೋರ್ಡಿನ ಉದಾರದೃಷ್ಟಿಯು ದಿನಂದಿನ ಬೆಳೆಯುತ್ತಿದೆ. ಶಾಲಾ ಮಾಸ್ತರರಿಗೆ ಸ್ಕೂಲಿನ ಪ್ರಕಾರ ಸಲ್ಲಲಿರುವ ಸಪ್ಲಿಮೆಂಟರಿ ಬಿಲ್ಲುಗಳು ಮೇಲಕ್ಕೆ ಬೀಳುವುದಿಲ್ಲವಂತೆ ಹಳ್ಳಿ ಶಾಲಾ ಮಾಸ್ತರರು ಜಿಲ್ಲಾ ಬೋರ್ಡ್ ಆಫೀಸಿಗೆ ಬಂದು ಗೋಣ ನೀಡಿ ಉದ್ದವಾದುದೇ ಬಂತು ಕೊಡುವ ಹಣವನ್ನು ಕೊಡದೆ ಉಳಿಸಿಬಿಟ್ಟರೆ, ಬೋರ್ಡಿಗೆ ಲಾಭವಿದೆಯೆಂದೋ, ಸೆಕ್ರೆಟರಿಯವರು ಜಿಲ್ಲಾ ಸಂದರ್ಶನೆಗೆ ಹೊರಟುದರಿಂದಲೋ, ಡಿ ಬಿ ಇ ಓ ಸಾಹೇಬರಿಗೆ ಈಗಿನ ಕೆಲಸವೇ ಅಧಿಕವಾಗಿ, ಇನ್ಸ್ಪೆಕ್ಟರು ಸ್ಪೆಶ್ಯಲ್ ಡಿ ಬಿ ಇ ಓ ಬೇಕಾದುದರಿಂದಲೋ ಹೀಗಾಗುತ್ತಿರಬಹುದು ಹಳ್ಳಿಯಲ್ಲಿರುವ ಮಾಸ್ತರರಿಗೆ ಜೀವ ಎಳೆಯುವ ಹಣದ ತಗಾದೆ ಇರಲಾರದು

\+ \+ \+ \+

ಜಿಲ್ಲಾ ಬೋರ್ಡ್ ಪುತ್ತೂರು ಅತಿಯಾಗಿ ದುಡ್ಡು ತಿಂದು ಕೊಬ್ಬಿದೆ ಎಂದು ನಿರ್ಣಯಿಸಿದ ಮೇಲೆಯೂ ಲೋಕಲ್ ಬೋರ್ಡ್ ಇನ್ಸ್ಪೆಕ್ಟರರು ಅದೇ ತಾಲೂಕಿನ ಪಂಚಾಯತುಗಳ ಸಲುವಾಗಿ, ಬಾವಿ ತೆಗಿಯುವರೆ ಕಂಡಾಪಟ್ಟೆ ಹಣ ಸೆಂಕ್ಷನು ಮಾಡಿರುವರೆಂದು ಪದಂತಿ ಈ ಒಂದೇ ತಾಲೂಕಿನ ಪಂಚಾಯತುಗಳ ಬಾವಿಗಳಿಗೆ (ಒಂದಲ್ಲ, ಎರಡಲ್ಲ ೧೩) ಅವರು ಸಾಧಾರಣ ೬-೭೦೦ ರೂಪಾಯಿ ಕೊಡಲು ನಿರ್ಣಯಿಸಿರುತ್ತಾರಂತೆ' ಇಂಥ ಅನ್ಯಾಯವಿನ್ನೊಂದಿದೆಯೇ'

\+ \+ \+ \+

ಜಿಲ್ಲಾ ಬೋರ್ಡಿನ ನೌಕರರಲ್ಲಿ-ಮೂರು ವರ್ಗವಿದೆಯಂತೆ ಕಾಯಂ, ಹಂಗಾಮಿ, ಅಂತರಪಿಶಾಚಿ ಹುದ್ದೆಗಳೆಂದು ಇವುಗಳಲ್ಲಿ ಮೊದಲಿನ ಎರಡು ವರ್ಗ ತಿಳಿದಿದೆ ಮೂರನೆಯ ವರ್ಗದಲ್ಲಿ ಅದರ ನೌಕರರಲ್ಲಿ ಒಬ್ಬ ಓವರ್‌ಸಿಯರರಿಗೆ ಮುಕ್ತಿ ದೊರಕಿದೆಯಂತೆ ಬೋರ್ಡ್ ಅವರಿಗೆ ಕೆಲಸಕೊಟ್ಟು-ಕೆಲಸ ಹೇಳದೆ, ಸಂಬಳ ಕೊಡದೆ ಇದೆ ಇಂಜಿನಿಯರ ಸಾಹೇಬರು ಅವರು ಬೋರ್ಡಿನ ನೌಕರರು, ನನ್ನದಲ್ಲ ಎನ್ನುತ್ತಿದ್ದಾರೆ ಗಾಳಿ ತಿಂದೇ ಬದುಕಬಹುದಾದ ಇಂಥ ಆಫೀಸರರನ್ನು ಬೋರ್ಡ್ ಇನ್ನಷ್ಟು ನೇಮಕಮಾಡಲಾರದೇ'

\+ \+ \+ \+

ನಮ್ಮ ಜಿಲ್ಲಾ ಕಲೆಕ್ಟರ್ ಗೋನ್ ಸಾಹೇಬರು ಮೊನ್ನೆ ಒಂದು ಕಡೆಯಲ್ಲಿ ರುದ್ರಾಪತಾರ ತಾಳಿ, ಎಲಿನೇಶನ್ ಸಂಬಂಧದ ಒಂದು ಕಟ್ಟಡ ಮಾಡನ್ನು ಧಫೇದಾರರ ಸಹಾಯದಿಂದ, ಮುಳಿ ಎಳೆದು ವಶಪಡಿಸಿಕೊಂಡರೆಂದೂ ಮರುದಿನ ತಹಶಿಲ್ದಾರರು ತಾನು ಆ ಸ್ಥಳ ವಶ ಮಾಡಿಕೊಂಡಿರುವೆನೆಂದೂ, ಸ್ಥಳದ ತತ್ಕಾಲಿಕ ಅಧಿಕಾರಿಗಳಿಗೆ ತಿಳಿಸಿದರೆಂದೂ ತಿಳಿಯುವುದು ಇದರಲ್ಲಿ-ತಹಶಿಲ್ದಾರರ ಅಧಿಕಾರವು ಮೇಲೇ, ಕಲೆಕ್ಟರರ ಅಧಿಕಾರವು ಹೆಚ್ಚಿನದೋ ಎಂದು ತಿಳಿಯುವುದು ತುಸು ಕಷ್ಟವಾಗಿದೆ

\+ \+ \+ \+

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಬೆಂಗಳೂರಿನ ಕೇಂದ್ರದಿಂದ ಕಾರ್ಯದರ್ಶಿಯವರು ವಸಂತ ವ್ಯಾಖ್ಯಾನ ಮಾಲೆಯ ವಿಚಾರವಾಗಿ ಕಳುಹಿಸುತ್ತಿರುವ ಪ್ರಕಟಣೆಗಳು ಬರುತ್ತಿವೆ ಅವರ ಉಪನ್ಯಾಸಗಳೂ ಉಪಯುಕ್ತ. ಈ ಉಪನ್ಯಾಸಗಳಲ್ಲಿ ಹೊರಗಿನವರೂ ಭಾಗಿಗಳಾಗುವರೆಂಬ ಆಸೆಯಿದೆ ಆದರೆ ಈ ಬಾರಿ ಸಹ ಉಪನ್ಯಾಸಕ ವೃಂದದಲ್ಲಿ, ಮೈಸೂರಿನ ಹೊರಗಿನವರನ್ನು ಬರಮಾಡಲಾರರೆಂದು ನಮ್ಮ ಅಪಾರವಾದ ವಿಶ್ವಾಸವಿದೆ!

\+ \+ \+ \+

ಉಡುಪಿಯು ಮುನಿಸಿಪಾಲಿಟಿಯಾಗುವ ಯೋಚನೆ ಅದಕ್ಕಾಗಿ ಚುರುಕಿನಿಂದ ನಮ್ಮ ಪಂಚಾಯತ್ ಆಫೀಸರರು ಕೆಲಸ ಮಾಡುತ್ತಿರುವರು ಇತ್ತ-ಬೋರ್ಡ್ ಶಾಲೆಗಳ ಮಾಸ್ತರರಿಗೆ ಚಳಿಯು ಶುರುವಾಗಿ, ಮುನಿಸಿಪಾಲಿಟಿಯಾಗುವುದರೊಳಗೇ, ಪರವೂರನ್ನು ಸೇರುವ ವಿಷಯ ಬಹಳ ಉತ್ಸಾಹದಿಂದ-ವರ್ಗಾವರ್ಗಿ ಚಟುವಟಿಕೆಗಳು ತೊಡಗಿವೆಯೆಂದು ಕೇಳುತ್ತೇವೆ ಒಬ್ಬೊಬ್ಬರು ಜಿಲ್ಲಾ ಬೋರ್ಡ್ ಮೆಂಬರರ ಹಿಂದೆ, ನಾಲ್ಕು ನಾಲ್ಕು ಮಾಸ್ತರರು, ಪರಿಚಯ ಪತ್ರಕ್ಕಾಗಿ ಓಡಾಡಿದರೆ ಅವರ ಗತಿಯೇನು?

\+ \+ \+ \+

ನಮ್ಮ ಜಿಲ್ಲಾ ಬೋರ್ಡ್ ಇನ್ನು ಮುಂದೆ ಕಾಂಗ್ರೆಸ್ಸಿನ ಮುಖಂಡರ ಧಾಳಿಗೂ ಬಲಿಯಾಗಲಿದೆ ಕಾಂಗ್ರೆಸ್ಸಿನ ಪರವಾಗಿ ಸದಸ್ಯರನ್ನು ನಿಲ್ಲಿಸಿ, ಅಲ್ಲಿ ಸುಧಾರಣೆ ಎಬ್ಬಿಸಿ ಬೋರ್ಡನ್ನು ಮುಂದೆ ತರುವ ಈ ಯತ್ನವು ಸ್ತುತ್ಯವೇ ಸರಿ ಅದೂ ಕಷ್ಟವಿಲ್ಲ ನಾಲ್ಕಾಣೆ ಕೊಟ್ಟವರು ಯಾರೂ ಕಾಂಗ್ರೆಸ್ಸಿನ ಜನವಾಗಬಹುದಾದುದರಿಂದ, ಮುಂದಿನ ಚುನಾವಣೆಗೆ ನಿಲ್ಲುವ ಸದಸ್ಯರು-ಇದಕ್ಕಾಗಿ ನಾಲ್ಕಾಣೆ (ಬರೀ ನಾಲ್ಕಾಣೆ) ಜಾಸ್ತಿ ತೆಗೆದಿರಿಸಿದರಾಯಿತು

\+ \+ \+ \+

ಕರ್ಣಾಟಕ ಪ್ರಾಂತಿಕ ಪರಿಷತ್ತು ಸಮೀಪಿಸಿತು ಆದುದರಿಂದ ಎಲ್ಲೆಲ್ಲಿಯೂ ಕಾಂಗ್ರೆಸು ಮೆಂಬರರನ್ನು ಕೂಡಿಸುವ ಯತ್ನ ನಡೆಯುತ್ತಿದೆ ಇಷ್ಟು ಅವಸರವೇನು-ಪರಿಷತ್ತು ನಡೆಯುವುದು ಮೇ ತಿಂಗಳಲ್ಲಿ ಆಗ ಬಾಬು ರಾಜೇಂದ್ರ ಪ್ರಸಾದರನ್ನು ನೋಡಲು ಬರುವವರು ನಾಲ್ಕಾಣೆ ಕೊಡದೆ ಹೋದಾರೆ ಅಲ್ಲೇ ಕೇಳಿದರಾಯಿತಲ್ಲ

\+ \+ \+ \+

ಗ್ರಾಮ ಸುಧಾರಣೆಯು ಭರದಿಂದ ಸಾಗುವಂತೆ, ಇನ್ನು ಮುಂದೆ ಮಂಗಳೂರು, ಬಂಟ್ವಾಳ, ಕುಂದಾಪುರ, ಮೂಲ್ಕಿ ಮೊದಲಾದ ಚಿಕ್ಕ ಸ್ಥಳಗಳನ್ನು ಹಳ್ಳಿಗಳೆಂದು ಕರೆಯಬೇಕೆಂದೂ, ಅಲ್ಲೇ ವಿಶೇಷ ಕೈಗಾರಿಕೆ, ಹರಿಜನ ಪ್ರಚಾರಕಾರ್ಯ ಮೊದಲಾದುವುಗಳು ನಡೆಯಬೇಕೆಂದೂ, ನಮ್ಮ ಮುಖಂಡರ ಸಿದಾಸಕ್ಕೆ, ಸಂಚಾರಕ್ಕೆ ತೊಡಕಾದ ಯಾವತ್ತೂ ಜಿಲ್ಲೆಯ ಹಳ್ಳಿಗಳನ್ನು ನಗರಗಳೆಂದು ಕರೆಯಬೇಕೆಂದೂ-ಸದ್ಯದೇ (ಈಗಾಗಲೇ ಆಗಿರದಿದ್ದರೆ) ನಿರ್ಣಯವಾಗುವುದೆಂದು ಕೇಳುತ್ತೇವೆ

(ಕನೇ ಪುಟಕ್ಕೆ ಮುಂದುವರಿದಿದೆ.)

ಆರೋಗ್ಯ—ಬಲ—ಸೇವಾ

ಕರ್ನಾಟಕ ವ್ಯಾಯಾಮ ವಿದ್ಯಾ ಪೀಠ, ಧಾರವಾಡ.

ಶಾರೀರಿಕ ಶಿಕ್ಷಣ ಶಿಬಿರ ೧೯೩೬.

ಧರ್ಮಾರ್ಥ ಶಾರೀರಿಕ ಶಿಕ್ಷಣ

ಇತ್ತಿತ್ತಲಾಗಿ ದೇಶದಲ್ಲೆಲ್ಲಾ ಪ್ರತಿ ಒಬ್ಬನಿಗೆ ತನ್ನ ಆರೋಗ್ಯ ಬೆಳಸಬೇಕು ಮತ್ತು ಸದೃಢನಾಗಬೇಕೆಂಬ ಇಚ್ಛೆಯು ದಿನೇ ದಿನೇ ಬೆಳೆಯುತ್ತ ನಡೆದಿದೆ ಮತ್ತು ಇದರ ಜೊತೆಯಲ್ಲಿ ಆತ್ಮಸಂರಕ್ಷಣದ ವಿಷಯಗಳನ್ನು ಕಲಿಯಬೇಕೆಂದು ಎಣಿಸುತ್ತಿರುವರು ಅಲ್ಲದೆ ಎಲ್ಲ ಮುನಿಸಿಪಾಲಿಟಿಗಳು ಲೋಕಲ್ ಬೋರ್ಡುಗಳಾದರೂ ತಮ್ಮಲ್ಲಿಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಕೂಡಾ ಆರೋಗ್ಯ ಬೆಳಸಿ ಸಶಕ್ತರಾಗಿ ಆತ್ಮಸಂರಕ್ಷಣದ ವಿಷಯಗಳಲ್ಲಿ ತಜ್ಞರಾಗಬೇಕೆಂದು ಬಯಸುತ್ತಿರುತ್ತಿರುವರು ಆತ್ಮ ಸಂರಕ್ಷಣದ ವಿಷಯಗಳಲ್ಲಿ ಮುಖ್ಯವಾದ ಲಾಠಿ, ಭಾಲಾ, ತಲವಾರ, ಪಟ್ಟಾ, ಜಂಬಿಯಾ ಮೊದಲಾದ ವಿಷಯಗಳನ್ನು ಯೋಗ್ಯರೀತಿಯಲ್ಲಿ ಕಲಿಸುವ ಅನುಕೂಲತೆ ಇಲ್ಲದ್ದರಿಂದ ಮತ್ತು ಶಿಕ್ಷಕರ ಅಭಾವದ ಮೂಲಕ ಶಿಕ್ಷಣ ಕೇಂದ್ರಗಳು ಸ್ಥಾಪಿತವಾಗಿಲ್ಲಾದ್ದರಿಂದ ಕಲಿಯಬೇಕೆಂಬ ಉತ್ಕಟೇಚ್ಛೆ ಇದ್ದವರು ಸಿಂಹರಾಗಿ ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ

ಅದರಲ್ಲಿಯೂ ಈಗಿನ ಕಾಲದಲ್ಲಿ ಸ್ತ್ರೀಯರು ತಮ್ಮ ಆತ್ಮಸಂರಕ್ಷಣೆಯ ಮಾರ್ಗವನ್ನು ತಾವೇ ಕಂಡುಕೊಳ್ಳಬೇಕಾಗುತ್ತದೆ. ಅಂದರೆ ಸ್ತ್ರೀಯರು ಶಾರೀರಿಕ ಶಿಕ್ಷಣ ಪಡೆದು ಜಂಬಿಯಾ ಲಾಠಿ ಮೊದಲಾದ ವಿಷಯಗಳಲ್ಲಿ ತಜ್ಞರಾಗುವುದು ಅವಶ್ಯವು ಮತ್ತು ಸ್ತ್ರೀವರ್ಗದಲ್ಲಾದರೂ ಈ ವಿಷಯಗಳನ್ನು ಕಲಿಯಬೇಕೆಂಬ ಕುತೂಹಲವು ದಿನೇದಿನೇ ಬೆಳೆಯಹತ್ತಿದೆ ಅಂಥ ಸ್ತ್ರೀಯರಿಗೂ ಆಸ್ಪದ ದೊರೆಯದಾಗಿದೆ ಈ ಎಲ್ಲ ಅನಾನುಕೂಲತೆಗಳನ್ನು ಹೋಗಲಾಡಿಸಿ ತಮ್ಮ ಪ್ರಾಂತದಲ್ಲಿಯ ಯುವಕರಿಗೂ ಮತ್ತು ಸ್ತ್ರೀಯರಿಗೂ ಶಿಕ್ಷಣ ಕೊಡುವುದಕ್ಕಾಗಿ "ಕರ್ನಾಟಕ ವ್ಯಾಯಾಮ ವಿದ್ಯಾಪೀಠ"ದ ವತಿಯಿಂದ ಇದೇ ಮೇ ತಿಂಗಳ ಬೇಸಿಗೆ ರಜೆಯಲ್ಲಿ ಶಿಬಿರವು ತೆರೆಯಲ್ಪಡುವುದು ಶಿಬಿರವು ಮೇ ೧ ರ ದ ಜೂನ್ ೨ರ ವರೆಗೆ ಒಂದು ತಿಂಗಳು ನಡೆಯುವುದು ಶಿಬಿರದಲ್ಲಿ ಲಾಠಿ, ಲೆಝಿಮ, ಭಾಲಾ ಮೊದಲಾದ ಸ್ವರಕ್ಷಣದ ವಿಷಯಗಳು ಮಲಖಾಂಬ, ಕುಸ್ತಿ, ಆಸನ ಮತ್ತು ಶಕ್ತಿವರ್ಧಕ ವಿಷಯಗಳು ಕ್ರೀಡಾಪಟ ಇತರ ಶಾರೀರಿಕ ವ್ಯಾಯಾಮಗಳು ಲಕ್ಷ್ಮೀ, ಕವಾಯತ ಮೊದಲಾದ ವಿಷಯಗಳು ಕಲಿಸಲ್ಪಡುವುವು ಈ ಎಲ್ಲ ವಿಷಯಗಳನ್ನು ಕಲಿಸುವುದಕ್ಕಾಗಿ ಅಮರಾವತಿಯ ಹನುಮಾನ ವ್ಯಾಯಾಮ ಪ್ರಸಾರಕ ಮಂಡಲದಲ್ಲಿ ಶಿಕ್ಷಣ ಪಡೆದ ಬಂದಿರುವ ತಜ್ಞ ಶಿಕ್ಷಕರು ನೇಮಿಸಲ್ಪಟ್ಟಿದ್ದಾರೆ ಶಿಬಿರದಲ್ಲಿ ಇರುವವರಿಗೆ ಊಟದ ಮತ್ತು ವಸತಿ ಗೃಹದ ವ್ಯವಸ್ಥೆ ಮಾಡಲ್ಪಡುವುದು ಆದ್ದರಿಂದ ಶಿಬಿರದಲ್ಲಿ ಸೇರಿ ಶಿಕ್ಷಣ ಪಡೆಯ ಬಯಸುವ ಉಮೇದುವಾರರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿ ವಿಶೇಷ ಮಾಹಿತಿ ಪಡೆಯಬೇಕು ಮತ್ತು ಪ್ರಕಟನಾ ನಂತರ ವ್ಯಕ್ತ ಪತ್ರಿಕೆಗಳಲ್ಲಿ ಓದಬೇಕು.

ಶಾರೀರಿಕ ಶಿಕ್ಷಣ ವರ್ಗ.

ಇದಲ್ಲದೆ ಸ್ಥಳೀಕ ಜನರಿಗೆ ಮೇ ತಿಂಗಳ ರಜೆಯ ಲಾಭವು ಎಲ್ಲರಿಗೂ ಸಿಗಬೇಕೆಂದು ಸ್ತ್ರೀಯರ ಮತ್ತು ಪುರುಷರ ಸಲುವಾಗಿ ಶಿಕ್ಷಣ ವರ್ಗಗಳು ಮಾಳಮಡ್ಡಿ (Gib Town) ಸಾರಸ್ವತ ಕಾಲನಿ ಮತ್ತು ಅನುಕೂಲವಿದ್ದ ಇತರ ಸ್ಥಳಗಳಲ್ಲಿ ಪ್ರಾರಂಭವಾಗುವವು ಸ್ತ್ರೀಯರಿಗಾಗಿ ಲಾಠಿ ಜಂಬಿಯಾ ಮತ್ತು ಈಜುವುದು Swimming ಇವೇ ಮೊದಲಾದ ವಿಷಯಗಳು ಕಲಿಸಲ್ಪಡುವುವು ಶಿಕ್ಷಣವರ್ಗವನ್ನು ಸೇರಬಿಚ್ಛಿಸುವವರು ಮುಂಗಡವಾಗಿ ಪತ್ರವ್ಯವಹಾರ ಮಾಡಬೇಕು. - ಸ್ತ್ರೀಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು.

ಮೇಲ್ಕಂಡ ಶಾರೀರಿಕ ಶಿಕ್ಷಣ ಶಿಬಿರ ಮತ್ತು ವರ್ಗಗಳ ಲಾಭವನ್ನು ಎಲ್ಲ ಜನರು, ವಿಶೇಷತಃ ತರುಣರು ಪಡೆಯಬೇಕಾಗಿ ನಮ್ರವಾದ ಬಿನ್ನಹ.

ಇಷ್ಟರತನಕ ಯಾರೂ ಕೇಳಲಿಲ್ಲ, ಪಡೆಯಲಿಲ್ಲ.



ನಮ್ಮ ಒಟ್ಟೋ ಗೋಲ್ಡ್ ಅಥವಾ ಬ್ರಾಸ್ ಹೃದಯ ಮನಗಳನ್ನು ಮುಟ್ಟುವಂತಹದ್ದು. ೧೨ ಬಾಟ್ಲಿಗಳನ್ನು ರೂ ೧-೧೫-೦ಕ್ಕೆ ಪಡೆಯುವವರಿಗೆ ೧ ರಿಸ್ಟ್ ವಾಚ್, ೧ ಇನ್‌ಫೆಂಟ್ ಪೋಕೆಟ್ ವಾಚ್ (ಗ್ಯಾರಂಟಿ ಸಮೇತ), ೧ ಟಿ ಟೈಪೀಸ್ (ಸರಿಯಾಗಿ ಸಮಯ ತೋರಿಸುತ್ತದೆ)-ಹತ್ತು ವರ್ಷಗಳ ಗ್ಯಾರಂಟಿ, ಒಂದು ಇಮಿಟೇಶನ್ ಮುತ್ತಿನ ಸರ, ಪೆಕಿಂಗ್ ಮತ್ತು ಪೋಸ್ಟೇಜ್ ಪ್ರತ್ಯೇಕ. (ಒಪ್ಪಿಗೆಯಿಲ್ಲವಾದರೆ ಹಣ ವಾಪಾಸು.

ವಿಳಾಸ—International Trading Co.,
G. I P A. Post Box No. 6714, Section S. P., Calcutta.

‘ಉಪ್ಪಿನ ಮೇಲಿನ ಸುಂಕವನ್ನು ಕಡಮೆ ಮಾಡಿರಿ!’

ಎಸೆಂಬ್ಲಿಯಲ್ಲಿ ಬಿರುಸು ನುಡಿಗಳು!

ಇದು ಬಡವರ ಮೇಲಿನ ಹೊರೆ!

ಈ ತಿಂಗಳಾರಂಭದಲ್ಲಿ ಕೇಂದ್ರ ನ್ಯಾಯ ವಿಧಾಯಕ ಸಭೆಯಲ್ಲಿ ಉಪ್ಪಿನ ಮೇಲಿನ ಸುಂಕದ ಚರ್ಚೆಯು ಬಂತು ಒಂದು ಮಣದ ಮೇಲೆ ಎಂಟಾಣೆಯಷ್ಟು ಕಡಮೆ ಮಾಡ ಬೇಕೆಂದು ಸದಸ್ಯರೆಲ್ಲ ಹಳಿಹಿಡಿದರು ಬಹಳ ವಾಗಿ ವಾಗ್ಯುದ್ಧವು ನಡೆದ ಮೇಲೆ ಸದಸ್ಯರು ವಿಜಯಿಗಳಾದರು ಈ ರೀತಿ ಸುಂಕದ ದರ ವನ್ನು ಇಳಿಸಿದುದರಿಂದ ಸರಕಾರಕ್ಕೆ ೩೨೫ ಲಕ್ಷ ರೂಪಾಯಿಗಳ ನಷ್ಟವಾಗಲಿದೆಯೆಂದು ಸರ್ ಜೇಮ್ಸ್ ಗ್ರಿಗ್ಗರು ಭವಿಷ್ಯ ನುಡಿದರು

ಸೇಠ್ ಗೋವಿಂದ ದಾಸರು ಉಪ್ಪಿನ ಕರದಿಂದ ದೊರೆಯುವ ಲಾಭವನ್ನೆಲ್ಲ ಸರ ಕಾರವು ಗ್ರಾಮೋದ್ಧಾರಕ್ಕಾಗಿ ವಿನಿಯೋಗಿಸ ಬೇಕು, ಅದನ್ನು ಗಾಂಧೀಜಿಯವರ ವಶ ಕೊಡ ಬೇಕು ಎಂದರು

ಶ್ರೀ ಸತ್ಯಮೂರ್ತಿಯವರು

ಶ್ರೀ ಜೋಶಿಯವರ ನುಡಿಯುತ್ತಾ ಈ ಉಪ್ಪಿನ ಕರವು ಹೋದರೇನ ಹಿತವಿದೆ ಬಡ ವರು ಬಂಗ್ಲೆವಾಸಿಗಳನ್ನುವ ಎಲ್ಲರ ಮೇಲಿನ ಹೊರೆಯಿದು ಆದರೆ ಇದನ್ನು ತೆಗೆಯುವ ನಿರ್ಧಾರವನ್ನು ನಾವು ಮಾಡಿದರೂ ಗವರ್ನರ್ ಜನರಲರು ಈ ನಿರ್ಧಾರವನ್ನು ಧಿಕ್ಕರಿಸಿ ಬಿಡುವ ಅಧಿಕಾರ ಅವರಿಗಿದೆ ಅವರ ಧಿಕ್ಕಾರವೂ ಬೇಡ, ‘ಜನರ ಮೇಲೆ ಈ ಭಾರವೂ ಬೇಡ, ಒಂದು ಮಣಕ್ಕೆ ಎಂಟಾಣೆಯಷ್ಟರ ಕಂದಾಯ ಮಾಫಿಯಾಗಲಿ’ ಎಂದರು

ಮಿ। ಲ್ಯಾಡರು ನುಡಿಯುತ್ತಾ ನಿಜ, ನಿಜ, ಈ ಸುಂಕಗಳೆಲ್ಲ ತಲೆ ಭಾರವಾಗಿ ಹೋಗಿ ಬಡವರಿಗೆ ಕಷ್ಟದಾಯಕವಾಗಿದೆ, ಖರೆ, ಆದರೆ ೮ ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟಿನಿಂದ ತೆಗೆದು ಹಾಕುವುದೆಂದರೆ ಕಷ್ಟ’ ಎಂದರು

ಶ್ರೀ। ಸತ್ಯಮೂರ್ತಿಯವರು ‘ಹಾಗೆ ಹಣವು ಹೋಗುತ್ತದಲ್ಲಾ ಎಂದು ನೀವು ದುಃಖಿಸಿ ಫಲವಿಲ್ಲ ಸಕ್ಕರೆಯ ಖಾತೆಯಿಂದ ನಿಮಗೆ ಅಷ್ಟೇ ಲಾಭವಾಗಲಿರುವುದರಿಂದ ಅದರಿಂದುಂಟಾದ ನಷ್ಟವು ಮಾಯವಾಗು ವುದು ಎಂದರು

ಪಂಡಿತ ಗೋವಿಂದ ವಲ್ಲಭ ಪಂತರು ಉಪ್ಪಿನ ಕರದ ನೇ ಪ್ರಕರಣವನ್ನು ಸಭೆಗೆ ತಿಳಿಸಿ ಸರಕಾರವು ಹೇಗೆ ಮಾಡಿದರೂ ೧೦ ಕೋಟಿ ರೂಪಾಯಿಗಳನ್ನು ಉಳಿಸಲು ಸಾಧ್ಯ ವಿದೆ ಎಂದರು

ಫೈನಾನ್ಸ್ ಮೆಂಬರು ಸರಕಾರದ ಪರ ವಾಗಿ ವಾದಿಸಿ ಬಡವರ ಮೇಲೆ ಕರ ಹೇರಿ ಸುವ ಮನಸ್ಸು ಸರಕಾರಕ್ಕಿಲ್ಲವಾದರೂ ಬೇರೆ ಗತ್ಯಂತರವೇ ಇಲ್ಲವಲ್ಲಾ ಎಂದು ನುಡಿ ದರು

ಸರ್ ಕವಾಸಿ ಜಹಾಂಗೀರರು ಕಾಂಗ್ರೆಸ್ ಪಾರ್ಟಿಯನ್ನು ಸಮರ್ಥಿಸುತ್ತಾ ಉಪ್ಪಿನ ಕರವನ್ನು ತೆಗೆದುಹಾಕದ ತೆ ... ತ್ತವಾದಿ ದರು ೧೫೦ ಲಕ್ಷ ರೂಪಾಯಿಗಳನ್ನು ಸರಕಾರವು ಬಿಟ್ಟುಕೊಟ್ಟರೆ ಆ ಮೊತ್ತವನ್ನು ಇತರ ಸಾರ್ವಜನಿಕ ಕೆಲಸಗಳಿಗೆ ಉಪಯೋಗಿ ಸ್ಬುವ ಎಂದು ಅವರು ಸಭೆಗೆ ತಿಳಿಸಿದರು ‘ನಿಮ್ಮ ಆ ಸೂಚನೆಯು ಬೇಡ ಸ್ವಾಮಿ’ ಎಂದೊಡನೆ ಅದು ಬಿದ್ದುಬಿಟ್ಟಿತು ಆ ದಿನದ ಸಭೆ ಅಲ್ಲಿಗೆ ಕೊನೆಗೊಂಡಿತು

ಮರುದಿನದ ಸಭೆಯಲ್ಲಿ ಶ್ರೀ ಸೇಠ್ ಗೋವಿಂದದಾಸರು ಮಾತನಾಡುತ್ತಾ ‘ಉಪ್ಪಿನ ಕರವು ಬಹು ಅನ್ಯಾಯವನ್ನು ಮಾಡುತ್ತದೆ ಅದು ಬಡವರಿಗೆ ಸುಖವನ್ನು ಕೊಡುವಂತಿಲ್ಲ ಉಪ್ಪಿನ ಕರದಿಂದ ದೊರೆತ ದ್ರವ್ಯವನ್ನು ಸಾರ್ವ ಜನಿಕ ಹಿತದೃಷ್ಟಿಯಿಂದ ವೆಚ್ಚಮಾಡುವುದಾದರೆ ವ್ಯಸನವಿಲ್ಲ ಉಪ್ಪು ಬಡವರ ಆಹಾರದಲ್ಲಿ ಮುಖ್ಯ ಅಂಗ ಉಪ್ಪಿನ ಕರವು ಜ್ಯಾರಿಯಾ ದೊಡನೆ ಜನರು ಉಪ್ಪನ್ನು ಉಪಯೋಗಿಸುವುದೇ ಕಡಮೆಯಾಗುತ್ತದೆ’ ಎಂದರು

ಡಾ। ರಾಜನರು ವಾದಿಸಿ ‘ಕಡಲಿನ ನೀರನ್ನು ತೆಗೆದು ಉಪ್ಪು ಮಾಡುವ ಅಧಿಕಾರವು ಬಡವರಿಗಿಲ್ಲ ಬಡವರು ಸುಖದ ... ಲಿಕ್ಕ ... ಕಷ್ಟವಾಗ ... ದೆ ... ದ ... ಈ ಕರವು ಹೋಗ ... ಎಂದರು

ಈ ಠರಾವು ಸಭೆಯ ... ಸಮ್ಮತಿ ... ಪ್ರಕ ... ತ ಸರಕಾರಕ್ಕೆ ... ಯಿತು.

ಇದರಲ್ಲಿ ನ್ಯಾಯವಿಲ್ಲ!

ಆದರೂ ಗವರ್ನರ್ ಜನರಲರು ಈ ಮಸೂದೆಯನ್ನು ಧಿಕ್ಕರಿಸುವರೆಂದು ತಿಳಿಯಲಾಗಿದೆ ಸರ್ ಜೇಮ್ಸ್ ಗ್ರಿಗ್ಗರು ಸರಕಾರದ ಪರ ವಾಗಿ ವಾದಿಸುತ್ತಾ ಉಪ್ಪಿನಕರವನ್ನು ಮಣಕ್ಕೆ ರೂ ೧-೪-೦ಯಂತೆ ಇಡಬೇಕೆಂದು ಹೇಳಿದರು

ಸರ್. ಕವಾಸ್ಜಿ ಜಹಂಗೀರ್‌ರವರು.

ಸರಕಾರದ ಬಜೆಟಿನಲ್ಲಿ ಕಡಮೆ ಬಿದ್ದಿರುವ ೩ ಕೋಟಿ ರೂಪಾಯಿಗಳ ನಷ್ಟವನ್ನು ಸರಿ ದೂಗಿಸುವ ... ವಾದರೆ ಇದು ಇರಲೇಬೇಕೆಂದು ಅವರ ಅಭಿಪ್ರಾಯ ... ಸಭಿಕರಿತ್ತ ಸೂಚನೆಗಳ ... ಅವರು ಹೇಳಿದರು

ಹಿಮಾಲಯ ಪರ್ವತ ಶಿಖರಾರೋಹಣ ಮಾಡುವುದಕ್ಕಾಗಿ ಬಂದಿದ್ದ ಜರ್ಮನರು ಎಡದಿಂದ ಬಲಕ್ಕೆ ಡಾ। ಶೀಬ್, ಡಾ ರೋಮಿಯ್, ಡಾ। ಕೆಸ್ಸರನ್ ಮತ್ತು ಡಾ। ವಿ. ರೊಸೆಂಟೇ ‘ವಿಕ್ಟೋರಿಯಾ’ ಎಂಬ ಇಟೆಲಿಯನ್ ಸ್ಟೀಮರಿನಲ್ಲಿ ಬಂದರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಏಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
192.–	ರೂ 21,24,250	.00
1929–	ರೂ 1,66,18,620	9 2 900
1934–	ರೂ 46 77 223.	49 08 771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ. 1933–34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co , Ltd,
Madras Branch,
No 6, Sankuram Chetty St , G. T MADRAS

ದಿ ಲಕ್ಷ್ಮಿ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ ೬ ಸಂಕುರಾಮು ಚೆಟ್ಟಿ ಬೀದಿ, ಜ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5 Madras, 6. Bunder Mangalore, 7. Mercara

1934ನೇ ಇಸವಿ ದಶಂಬರ ತಾ. 31ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು:—

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಪಿಸಿದ್ದು	3,50,000– 0– 0		
ತೆತ್ತು ಬಂದದ್ದು	2,25,000– 0– 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774–14– 8
ಕ್ಷೇಮನಿಧಿಗಳು	2,60,958– 7– 8	ಚಿನ್ನಾಭರಣ ವಗೈರೆ ಮೇಲಣ ಸಾಲಗಳು	28,83,227– 7– 3
ಠೇವಣಾತಿಗಳು	24,95,329– 2– 3	ಸರಕಾರಿ ಬಧ್ರತೆಯ ಸ್ವತ್ತುಗಳ ಮೇಲೆ	6,51,559–15– 0
ಇತರ ಬಾಬುಗಳು (ಸಂಡ್ರೀಸ್)	1,35,286 9– 9	ಇತರ ಬಾಬುಗಳು	37,411–14–11
ಚಾಲ್ತಿ ವರ್ಷದ ಮುನಾಫೆ	45,885–10– 8	ನಗದಿ ಶಿಲ್ಕು	72,480–10– 1
	31,62,454–13–11		31,62,454–13–11

ಹಿಂದಿನ ವರ್ಷಗಳಂತೆಯೇ ಹಿಸೆದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಕಿತಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ,

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ರಜತೋತ್ಸವ ವರ್ಷ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆ 1910)

(ಚೆಯರ್‌ಮೆನ್—ಸರ್ ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ ಜೆ ಪಿ)

ಇದರ ದಕ್ಷಿಣ ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳು, ಮುಂಬಾಯಿ ನಗರ ಮತ್ತು ಉಪನಗರಗಳ ಪ್ರಾಮುಖ್ಯ ಏಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

ಕಳೆದ ಕಾಲ ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪವಿತ್ರಸೇವೆಯಲ್ಲಿ ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು ಅವರ ಕಷ್ಟಗಳೂ ಆಶೆಗಳೂ ಮತ್ತು ಆದಾಯಗಳೂ ನಮ್ಮದೆಂದೇ ಪರಿಗಣಿಸುತ್ತಾ ಬಂದಿರುವೆವು ಹಿಂದೀ ಜೀವವಿಮಾ ಪ್ರಪಂಚದ ನಮ್ಮ ಅನುಲಕ್ಷ್ಯವೂ ಅನನುಗ್ರಹಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಬೆಲೆಬಾಳುವ ಪೋಲಿಸಿಗಳನ್ನು ಜ್ಯಾರಿಯಲ್ಲಿಟ್ಟುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡಿರುತ್ತದೆ ಸ್ವಂತ ಅಭಿಮಾನಾಸ್ಪದವಾದ ನಮ್ಮ ಮಹತ್ವಾದ ಲಾಭವೆಂದರೆ—ಒಂದೆರಡು ಉದಾಹರಣೆಗಳಲ್ಲದೆ ಕಳೆದ 25 ವರ್ಷಗಳ ಅವಧಿಯಲ್ಲಿ ನಮ್ಮ ಶತಾಧಿಕ ಏಜಂಟರಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ಸಿಕಟಸಂಬಂಧವನ್ನು ಮುರಿದಿಕ್ಕಿರುವುದಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಹ ಬಂದು ಕಾಣಿರಿ

(1) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್, ಮುಂಬಯಿ ನಂ 2 (2) ಪೋಸ್ಟ್ ಬಾಕ್ಸ್ 337, ಮೌಂಟ್ ರೋಡ್ ಮದ್ರಾಸು (3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ (4) ಹಜೂರ್ ರೋಡ್, ಕಲ್ಲಿಕೋಟೆ (5) ರಥಬೀದಿ, ಮಂಗಳೂರ (6 ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd , Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್‌ಹೋಲ್ಡ್ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟು ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲೆಂಟೈನ್, ಅರೋರಾ ಕ್ರೀಮ್, ಕ್ರಿಮೋರ್ ಲಿಮೋನಿಸ್, ಕರ್ಣಾಟಕ ರೋಸ್ ಪೊಮೇಡ್. ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ—(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾಷನಲ್ ಸ್ಕೂಲ ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ: 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 2-13-0.

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the
THE BOMBAY LIFE
Madras Branch Secretaries
Kochikar Brothers,
Udipi, Mangalore, Bangalore, Madras, Bombay and Calicut

ESTABLISHED 1906
(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯ | ಮಂಗಳೂರು ತಾ. ೧೯ನೇ ಶುಕ್ರವಾರ ಏಪ್ರಿಲ್ ೧೯೩೫ (19-4-'35) | ಸಂಚಿಕೆ ೧೬



ಜರ್ಮನಿಯ ನಗರವನ್ನು ಹೊಸ ಹೊಸ ಕಟ್ಟಡಗಳು, ಉದ್ಯಾನಗಳು ಮೊದಲಾದುವುಗಳಿಂದ ಪುನರ್ರಚಿಸಲು ಏರ್ಪಾಡುಗಳಾಗುತ್ತಿವೆ. ಮೇಲೆ ಕಾಣುತ್ತಿರುವುದು ನಗರ ರಚನೆಯ ರೇಖಾಚಿತ್ರ.

Registered No. M. 496

The Canara Banking Corporation Udipi, Ltd.

Head office—UDIPI, S. K. (Incorporated in British India) ESTD. 1906.

Branches:—1 Udipi, 2 Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7 Mercara.

1934ನೇ ಇಸವಿ ದಶಂಬರ ತಾ. 31ನೇ ದಿನದಲ್ಲಿದ್ದ ಪ್ರಕಾರ ಸೊತ್ತಿನ ತಪಶೀಲು:–

ಮೂಲಧನ:—		ನಿಯಮಿತ ಮೂಲಧನದ ವ್ಯಯ:—	
ಚಂದಾ ಅರ್ಪಿಸಿದ್ದು	3,50,000- 0- 0	ಭೂಸ್ವತ್ತು, ಕಟ್ಟೋಣಗಳು, ಫರ್ನಿಚರ್ ವಗೈರೆ	67,774-14- 8
ತೆತ್ತು ಬಂದದ್ದು	2,25,000- 0- 0	ಆಭರಣ ವಗೈರೆ ಮೇಲಣ ಸಾಲಗಳು	28,88,227- 7- 8
ಕ್ಷೇಮನಿಧಿಗಳು	2,60,958- 7- 8	ಸರಕಾರಿ ಬಧ್ರತೆಯ ಸ್ವತ್ತುಗಳ ಮೇಲೆ	6,51,559-15- 0
ಠೇವಣಾತಿಗಳು	24,95,329- 2- 8	ಇತರ ಬಾಬುಗಳು	87,411-14-11
ಇತರ ಬಾಬುಗಳು (ಸಂಡ್ರೀಸ್)	1,85,286 9- 9	ನಗದು ಶಿಲ್ಕು	72,480-10- 1
ಚಾಲ್ತಿ ವರ್ಷದ ಮುನಾಫೆ	45,885-10- 8		
	31,62,454-13-11		31,62,454-13-11

ಹಿಂದಿನ ವರ್ಷಗಳಂತೆಯೇ ಷೇರುದಾರರಿಗೆ ಶೇಕಡಾ 12ರಂತೆ ಲಾಭಾಂಶ ಹಂಚೋಣಾಗಿದೆ.

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪ್ಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತಾ,

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ರಜತೋತ್ಸವ ವರ್ಷ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆ 1910)

(ಚೆಯರ್‌ಮೆನ್:—ಸರ್. ಅಖ್ಬರ್ ಭಾಯಿ ಸಮೆಲ್ದಾಸ್, ಕೆಟಿ ಸಿ ಐ ಇ ಜ ಒ)

ಇದರ ದಕ್ಷಿಣ ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳು; ಮುಂಬಾಯಿ ನಗರ ಮತ್ತು ಉಪನಗರಗಳ ಪ್ರಾಮುಖ್ಯ ಎಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

ಕಳೆದ ಕಾಲು ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪವಿತ್ರ ಸೇವೆಯಲ್ಲಿ, ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು ಅವರ ಕಷ್ಟಗಳೂ ಅಕ್ಕರೆಗಳೂ ಮತ್ತು ಆಶಯಗಳೂ ನಮ್ಮವೆಂದೇ ಪರಿಗಣಿಸುತ್ತಾ ಬಂದಿರುವೆವು ಹಿಂದೀ ಜೀವವಿಮಾ ಪ್ರಪಂಚದ ನಮ್ಮ ಅನುಲಕ್ಷ್ಯತೆಯೂ ಅನನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಬೆಲೆಬಾಳುವ ಪೋಲಿಸಿಗಳನ್ನು ಚಾಲ್ತಿಯಲ್ಲಿಟ್ಟುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡಿರುತ್ತದೆ ಉತ್ಕಂಠ ಅಭಿಮಾನಾಸ್ಪದವಾದ ನಮ್ಮ ಮಹತ್ವಾದ ಲಾಭವೆಂದರೆ—ಹಿಂದ್ಯರು ಉದಾಹರಣೆಗಳಿಲ್ಲದೆ ಕಳೆದ 25 ವರ್ಷಗಳ ಅವಧಿಯೊಳಗೆ ನಮ್ಮ ಶಾಖಾಧಿಕ ಏಜಂಟರ ಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಮುರಿದಿಕ್ಕಿರುವುದಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಹ ಬಂದು ಕಾಣಿರಿ —

(1) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್‌ಚಾಲ್, ಮುಂಬ್ಯಾನಂ 2
(2) ಪೋಸ್ಟ್ ಬಾಕ್ಸ್ 337, ಮೌಂಟ್ ರೋಡ್ ಮದ್ರಾಸು
(3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ
(4) ಹಜೂರ್ ರೋಡ್, ಕಲ್ಲಿಕೋಟೆ
(5) ರಥಬೀದಿ, ಮಂಗಳೂರು
(6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd., Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟು ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಅರೋರಾ ಕ್ರೀಮ್, ಕ್ರಿಮೊರ್ ಲಿಮೊನಿಸ್, ಕರ್ಣಾಟಕ ರೋಸ ಪೊಮೇಡ್. ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೊಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಚ್ಯುತ ಬಾಳಿಗ

ಹೆಡ್ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.

ಏಜಂಟ್ಸ್— ವ್ಯಾಪಾರದ ಡಿಪೋ.–(1) ದೇವಕರಣ ಮೆನ್ಸಿಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2
(2) 1/70 ನ್ಯಾಶನಲ್ ನ್ಯಾಳಕ ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore,

ವಾರ್ಷಿಕ ಚಂದಾ: ೩ ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. ೩-೧೮-೦

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:
RAMA SNUFF.
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೯. | ಮಂಗಳೂರು ತಾ. ೧೯ನೇ ಶುಕ್ರವಾರ ಎಪ್ರಿಲ್ ೧೯೩೫. (19-4-'35) | ಸಂಚಿಕೆ ೧೬



ಜರ್ಮನಿಯು ನಗರವನ್ನು ಹೊಸ ಹೊಸ ಕಟ್ಟಡಗಳು, ಉದ್ಯಾನಗಳು ಮೊದಲಾದುವುಗಳಿಂದ ಪುನರ್ರಚಿಸಲು ಏರ್ಪಾಡುಗಳಾಗುತ್ತಿವೆ. ಮೇಲೆ ಕಾಣುತ್ತಿರುವುದು ನಗರ ರಚನೆಯ ರೇಖಾಚಿತ್ರ.

ಚಕ್ರ

(All Rights Reserve

ನಮ್ಮ ಅದೃಷ್ಟ, ಖುದಾವಂದ್ ಇದು ಯಾರ್ತ್ಯಾರು ನಮಗೆ ಸಹಾಯ ಮಾಡಬೇಕೆಂದು ಬಂದರೋ ಅವರಿಗೆ ಕೇಡದ ಕಷ್ಟ, ದುಡ್ಡಿನ ಕಷ್ಟ ಇದ್ದೇ ಇರುವುದು ಎಷ್ಟು ಮುಂದಾಳುಗಳು ನಮ್ಮ ದೇಶಕ್ಕಾಗಿ ಹೋರಾಡಲು ಬಂದರು! ಅವರ ಗತಿಯೇನಾಯಿತು? ಹಲವರು ಶತ್ರುವಿಯ ಅರಮನೆಗೋ, ಹಲವರು ಸ್ವರ್ಗಕ್ಕೋ ಹೋಗಬೇಕಾಯಿತು. ಹಲವರು ಟಿಕೇಟುಗಳಿಗಾಗಿ ಬಹಳ ಪೇಚಾಟಪಡುತ್ತಿರುವರೆಂಬ ಸುದ್ದಿ ನಿಮಗೆ ಸಿಕ್ಕಿರಬಹುದು.

× + × × × ×

ಹಿಂದೂ ದೇಶಕ್ಕೆ ಹಿತವಾಗುತ್ತದೆಂದಿರುವಾಗ, ಯಾವಾಗಲೂ ಹಿಂದೂದೇಶದ ಭಾಗ್ಯದ ಕೊಡವು ಒಡೆದು ಚೂರುಚೂರಾಗಿ ಬಿಡುತ್ತದೆ. ಅದು ಹೇಗೆಂದು ನೀವು ಕೇಳಬಹುದು. ಅದರರ್ಥ ನೀವೇ ಮಾಡಿಕೊಳ್ಳಿ. ನಾನು ಎಲ್ಲವನ್ನೂ ಹೇಳುತ್ತಹೋದರೆ ನೀವು ನಿಮ್ಮ ಮಿದುಳನ್ನು ಪ್ರಯೋಗಿಸುವುದೆಂದು?

+ × × × × ×

ನಮ್ಮ ದೇಶಕ್ಕೆ ಸ್ವರಾಜ್ಯವನ್ನು ಕೊಡಬೇಕೆಂದು ಹೇಳಿ ಮೂರು ರೌಂಡ ಟೇಬಲ್‌ಗಳ ಮೇಲೆ ನಿಂತು, ಹೆತ್ತಿಪ್ಪತ್ತು ಸಲ ಮುಷ್ಟಿ ಎತ್ತಿ ಘೋಷೆಯಿಂದ ಮಾತನಾಡಿದ ಆ ಪುಣ್ಯಾತ್ಮರಾದ ರಾಜಮಾನ್ಯರಾದ ಶ್ರೀಗಳಾದ ವಾಸ್ಟ ಮೆಕ್ಡೊನಾಲ್ಡರಿಗೆ ಕಣ್ಣುನೋವು ಆಗಿ ಅವರು ಮತ್ತೆ ಜರಗಿದ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತಾಯಿತು. ಆದರಿಂದಾಗಿ ನಮಗಾದ ನಷ್ಟವು ಎಷ್ಟು ದೊಡ್ಡದೆಂದು ನಮಗೆ ಗೊತ್ತು. ನಿಮಗೆ ಗೊತ್ತಿಲ್ಲದಿದ್ದರೂ ನನಗೆ ಗೊತ್ತು. ಇಂಗ್ಲಾಂಡಿನಲ್ಲಿ "ಭಾರತ ಹಿತಚಿಂತಕರೊಬ್ಬರು ಅವರೇ ಆಗಿದ್ದರು.

× × × × × ×

ಅವರ ನಂತರ ಇತ್ತೀಚೆಗೆ ನಮ್ಮ ಅಪ್ರತಿಕ್ರಾಂತ ಸರ್ ಸಾಮುವೇಲ್ ಹೋರ್‌ರು ನಮ್ಮ ಹಿತೈಷಿಗಳಾಗಲು ಯತ್ನಿಸಿದರು. ಅವರು ನಮಗಾಗಿ ಮೊನ್ನೆ ಕೊಮನ್ಸ್ ಸಭೆಯಲ್ಲಿ ಹೆಣಗಾಡಿದುದನ್ನು ನೋಡಿದರೆ, ನಮಗೆ ಆ ಸ್ವರಾಜ್ಯವೂ ಬೇಡಾ ಆ ಹೆಣಗಾಟ ನಿಲ್ಲಲಿ— ಎಂದು ಕೇಳಬೇಕೆನ್ನಿಸುತ್ತಿತ್ತು. ಎಷ್ಟು ಕೂಗ ಬೇಕು? ಎಷ್ಟು ಇಡ ಬೇಕು? ಎಷ್ಟು ಉಗುಳಿಯನ್ನು ಭಕ್ಷಿಸಿ ತಿಂದಾಲು— ಅದೇನು ವಿವರಿಸುವುದೇ ಕಷ್ಟ.

× × × × × ×

ಮೊನ್ನೆ ಇಂಡಿಯಾ ಬಿಲ್‌ನ ಮೇಲೆ ಕೊಮನ್ಸ್ ಸಭೆಯಲ್ಲಿ ಚರ್ಚೆ ನಡೆಯಿತು. ಮಿ। ಹೋರರ ನಮ್ಮ ಕಡೆಗೆ ವಾಲಿ ಮಾತನಾಡಿದುದಕ್ಕೆ ಅವರ ಮಿತ್ರರೆಲ್ಲರೂ ಕೂಡಿ ಅವರನ್ನು ಮೇಲೆ ಕೆಳಗೆ ಮಾಡಿಬಿಟ್ಟರು. ಅವರನ್ನು ವಿರೋಧಿಸಿ ನಮ್ಮ ಹೋರರು ಬಹುವಾಗಿ ವಾದಿಸಿದರು. ಅಂತೂ ತಾನೇ ಸೋತುಹೋದರು. ಈಗ ನಮಗೆ ಬೇಡವೆಂದಿರುವ ಪ್ರೊವಿನ್ಸಿಯಲ್ ಓಟೊನೊಮಿ (ಪ್ರಾಂತಿಕ ಸ್ವರಾಜ್ಯ)ವನ್ನು ಕೊಟ್ಟು ನಮ್ಮನ್ನು ಪ್ರೋತ್ಸಾಹಿಸಿ ಸೋಲಿಸಿ ತಾವು ಧನ್ಯರಾಗಬೇಕೆಂದು ನಿರ್ಧರಿಸಿಕೊಂಡಿರುತ್ತಾರೆ.

× × × × × ×

ಪಾಪ! ಈಗ ಹೋರರಿಗೆ ಜ್ವರ ಬರುತ್ತಿದೆಯಂತೆ. ಹಾಸಿಗೆಯ ಮೇಲೆ ಮಲಗಿರುವರು. ಅಕ್ಕಲಾಗಿನಿಂದ ಅವರಿಲ್ಲದ ವೇಳೆ ಇಂಡಿಯಾ ಬಿಲ್ಲಿನ ಮೇಲೆ ಚರ್ಚೆಯಾಗಿ ಕಲಾವುಗಳೂ ಆಗಿವೆ. ನೋಡಿ, ನಮ್ಮ ಹಿತೈಷಿಗಳೆಂದರೆ?

× × × × × +

ಮನೆಯೊಳಗೆ ಅಕ್ಕಿ ಇಲ್ಲದಿರುವುದನ್ನು ಕಂಡು ಸೊಸೆಯನ್ನು ಅವಳ ಗಂಡನ ಬಾಯಿಗಿಕ್ಕಿ ಬಿಡಬೇಕೆಂದು ಸುಮುವಂತಳಾಗಿದ್ದ ಅತ್ತೆಯು ಕಪಟ ನಾಟಕವನ್ನಾಡಿ "ನನಗೆ ಹೊಟ್ಟೆ ನೋವು" ಎಂದು ಮಲಗಿದ ಕಥೆಯು ಸ್ಮರಣೆಯಾದೀತು ನಿಮಗೆ. ಅಂತಹ ಕಥೆಯು ಚಿತ್ತಕ್ಕೆ ಬಂದರೆ ಅದು ನಿಮ್ಮ ತಪ್ಪು. ಹೋರರ ತಪ್ಪಿಲ್ಲ ತಿಳಿದಿರಿ. ಸಲಾಂ.

× × × × × ×

ಶ್ರೀ ಹೋರರು ಬೇಗನೆ ಸುಖಗೊಂಡು ಹಾಸಿಗೆ ಬಿಡಲೆಂದೂ, ಶ್ರೀ ಮೆಕ್ಡೊನಾಲ್ಡರ ಕಣ್ಣಿನ ರೋಗವು ಬೇಗನೇ ಗುಣಹೊಂದಿ ನಮಗೆ ಓಟೊನೊಮಿ ದೊರೆಯಲೆಂದೂ ಬೇಡುವ,

'ಸಾಯ'.



ಅಸ್ವಸ್ಥದಲ್ಲಿ ಬಿದ್ದು ಏಳುತ್ತಿರುವವರ 'ಓವಲ್ಟಿನ್'ನಲ್ಲಿರುವ ಚೈತನ್ಯದಾಯಕವೂ ಆರೋಗ್ಯದಾಯಕವೂ ಆದ ಗುಣಗಳನ್ನು ಕಂಡು ಸಂತೋಷಗೊಳ್ಳುವರು. ಕುಂದಿದ ಅಜೀರ್ಣತೆಗೂ ಕ್ಷೀಣತೆಯ ಹಸಿವಿಗೂ 'ಓವಲ್ಟಿನ್' ಅತ್ಯುತ್ಕೃಷ್ಟ ಪಾನಕ.

'ಓವಲ್ಟಿನ್' ನರಗಳನ್ನು ಪುಷ್ಟೀಕರಿಸುತ್ತದೆ, ರಕ್ತವನ್ನು ವೃದ್ಧಿಗೊಳಿಸುತ್ತದೆ, ನಿದ್ರೆಯನ್ನುತ್ಪನ್ನಮಾಡುತ್ತದೆ, ರೋಗವನ್ನು ಓಡಿಸಿ ದೇಹಾರೋಗ್ಯವನ್ನು ವೃದ್ಧಿಸುತ್ತದೆ,—ಇದೀ ದೇಹವನ್ನು ಬಳೆಯಿಸಿ ಬಲವನ್ನೀಯುತ್ತದೆ. ಅಸ್ವಸ್ಥದಲ್ಲಿರುವವರ ಕೋರಿಕೆಗೆ ಓವಲ್ಟಿನ್ ಕೊಟ್ಟರೆ ಶೀಘ್ರ ಗುಣಲಾಭವಾಗುತ್ತದೆ.

'ಓವಲ್ಟಿನ್' ಎಂಬ ದೇಹ ಪೋಷಣೆಗೆ ಬೇಕಾದ ಸಕಲ ಆರೋಗ್ಯವನ್ನೂ ಶಕ್ತಿಯನ್ನೂ ದೇಹದಲ್ಲಿ ತುಂಬಿಸುತ್ತದೆ. ಒಳ್ಳೆದಾದ ದನದ ಹಾಲು ಮೊಟ್ಟೆ ಮೊದಲಾದ ಪ್ರಕೃತಿ ಸಿದ್ಧ ವಸ್ತುಗಳಿಂದ ತಯಾರಿಸಲ್ಪಟ್ಟಿದೆ.

ಎಂದು ಚಹಾಕ್ಕೆ ಓವಲ್ಟಿನ ಸೇರಿಸಿ—ಅದು ಆರೋಗ್ಯಕರ ಬಲವರ್ಧಕ ಮತ್ತು ಶಕ್ತಿದಾಯಕ.

'ಓವಲ್‌ಟಿನ್'

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ —ಜೇಮ್ಸ್ ರೈಟ್ ೩೨ ರಿಪನ್ ಸ್ಟ್ರೀಟ್, ಕಲ್ಕತ್ತಾ ಪತ್ರ ಬರೆದು ಉಚಿತ ಮಾದರಿ

117

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೊಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೪ ಫಿಲ್ಮ್ ಎಕ್ಸ್ಪೋಜರ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು ಫೋಟೋ ತೆಗೆಯುವ ವಿಧಾನ ಶಿಕ್ಷಣಕೊಡುವ ಪುಸ್ತಕ— ಇವು ಉಚಿತವಾಗಿ ಕಳುಹಿಸಲಾಗುತ್ತದೆ. ಬಲವಾದ ಲೆನ್ಸ್. ಬೆಲೆ ಸಾಮಾನ್ಯವಾದುದು ರೂ ೨—೧೩—೦, ಉತ್ತಮವಾದುದು ೩—೧೩—೦ ಮಡಚುವ ಕ್ಯಾಮರಾ ರೂ ೫ ಉತ್ತಮವಾದ್ದು ರೂ ೭ ಸ್ಪೆಶಲ್ ರೂ ೧೦ ಪೆಟ್ಟಿಗೆ ಫಿಲ್ಮ್ ಬೇಕಾದರೆ ಡಜನ್ ೧೪ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಶೆಗೆ ೪ ಆಣೆ ಫಿಕ್ಸಿಂಗ್ ಸಾಲ್ಟ್ ೧ ಡಬ್ಬಕ್ಕೆ ೩ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ

ಪೋಸ್ಟ್‌ಬಾಕ್ಸ್ ನಂಬ್ರ ೨೪೪೪ (ಎಸ್ ಎ.) ಕಲ್ಕತ್ತಾ

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

Authorised capital ಅಧಿಕೃತ ಮೂಲಧನ	2,00,000—0—0
Subscribed capital ಚಂದಾ-ಆರ್ಪಿಸಿದ್ದು	34,930—0—0
Paid-up capital ತೆತ್ತು ಬಂದದ್ದು	30847—8—0

Fixed, Current, Cumulative and Savings Banks deposits are accepted at most favourable rates.

All kinds of Banking business undertaken

Shares are now available.

For further particulars apply to:—

Puttur,
Dated 15—2—1935

G. N. Lakshman Pai,
Secretary.

ಜ್ವಾಲಾಮುಖಿ

ಜ್ವಾಲಾಮುಖಿಯು ಸತ್ತಿರುವುದೆಂದು ಎಂದೂ ಹೇಳಲು ಸಾಧ್ಯವಿರುವುದಿಲ್ಲ "Chamber's Journal' ಎಂಬುದರಲ್ಲಿ ಡಾ॥ ಎಲಿಸ್‌ವಿಲ್ಲಿ ಎಂಬವರು ಹೀಗೆ ಬರೆಯುತ್ತಾರೆ ಜ್ವಾಲಾಮುಖಿಗಳಲ್ಲಿ ಬೆಂಕಿಯು ಸದಾ ಇರುವುದು ಮೇಲೆ ಬೆಂಕಿಯು ಕಾಣಿಸುವುದಿಲ್ಲವಾದರೂ, ಅದರ ಗರ್ಭವೆಲ್ಲ ಅಗ್ನಿಮಯವಾಗಿರುತ್ತದೆ. ಅದು ಯಾವಾಗ ಮೇಲೆದ್ದೀತೆಂದು ಊಹಿಸಲು ಬರುವುದಿಲ್ಲ. ಜ್ವಾಲಾಮುಖಿಗಳುತ್ಪನ್ನವಾಗಲು ಕಾರಣವೇನು?—ಎಂಬ ಪ್ರಶ್ನೆ ಇದೆ. ದೊಡ್ಡ ದೊಡ್ಡ ಗುಡ್ಡಗಳು ವಿಪರೀತ ಉಷ್ಣದಿಂದಾಗಿ ಒಡೆದು ಹೋಗುವಂತೆ ಭೂಮಿಯ ಒಳಗಣ ಉಷ್ಣದಿಂದಲೂ, ಹಲವು ಬಗೆಯ ಲೋಹಗಳ ಸಮ್ಮಿಳನದಿಂದಲೂ ಸ್ಫೋಟನವಾಗುತ್ತದೆ. ಸಮುದ್ರದಡಿಯ ನೆಲದಲ್ಲಿರುವ ಒಡಲಾಗ್ನಿಯ ದೆಸೆಯಿಂದಾಗಿಯೂ ಅಲ್ಲಲ್ಲಿ ಜ್ವಾಲಾಮುಖಿಗಳು ತಲೆಯೆತ್ತುತ್ತವೆ. ಜಪಾನಿನ ಬಳಿ ಬಂಡೇಸಿಯನ್ ಎಂಬ ಪ್ರಾಂತ್ಯವು ಹಲವು ಶತಮಾನಗಳ ವರೆಗೆ ಪ್ರಾಕೃತಿಕವಾದ ಯಾವ ದುರ್ಘಟನೆಗಳಿಗೂ ಒಳಗಾಗುತ್ತಿದ್ದಿಲ್ಲ, ಆದರೆ, ೧೮೮೮ರಲ್ಲಿ ಅಲ್ಲಿಯ ಅಂದವಾದ ಪೈರುಪಚ್ಚೆಗಳ, ಫಲವತ್ತಾದ ಭೂಮಿಯು ಭೀಷಣವಾದ ಅಗ್ನಿಯ ಕುಂಡವಾಗಿ ಪರಿವರ್ತಿತವಾಯಿತು ೧೮೮೪ರಲ್ಲಿ ಜಪಾನಿನ ಅಸಾನ ಎಂಬ ಪ್ರದೇಶದಲ್ಲಿ ಭಯಂಕರ ಜ್ವಾಲಾಮುಖಿಯು ತಲೆದೋರಿ, ಅದರ ಪ್ರಥಮ ಜ್ವಾಲಾಮುಖಿಯು ೮೦೦೦ ಅಡಿಗಳ ಎತ್ತರಕ್ಕೆ ನೆಗೆಯಿತು, ಒಡನೆ ಅದರಿಂದ ಹತ್ತು ಮೈಲುಗಳಷ್ಟು ವಿಸ್ತೀರ್ಣವುಳ್ಳ ಬಿಸಿಬಿಸಿ ಕೆಸರಿನ ಮಹಾ ಸರೋವರವೇ ಆ ಜ್ವಾಲಾಮುಖಿಯೊಳಗಿಂದ ಹೊರಗೆ ಬಂತು. ಅದು ೪೩ ಗ್ರಾಮಗಳನ್ನು ಕಂಡ ಕಂಡಂತೆ ನುಂಗಿತು. ಚರಿತ್ರೆಯಲ್ಲಿ ಉಕ್ತವಾದ ಹಲವು ಜ್ವಾಲಾಮುಖಿಗಳು ಜಗತ್ತಿನಲ್ಲಿ ಕಂಡುಬಂದಿದ್ದವು ಅವುಗಳ ವಿವರವು ಹೀಗಿದೆ—

ದೇಶ	ವರ್ಷ	ಮರಣ
ಕಂಟೆನಿಯಾ	೧೧೩೭	೧೫,೦೦೦
ಸಿಸಿಲಿಯಾ	೧೧೬೯	೬೦,೦೦೦
ನೇಪಲ್ಸ್	೧೪೫೬	೪೦ ೦೦೦
ಲಿಸ್ಬನ್	೧೫೩೧	೩೦ ೦೦೦
	೧೭೫೫	೬೦,೦೦೦
ನೇಪಲ್ಸ್	೧೬೨೬	೭೦ ೦೦೦
ಸಿಸಿಲಿ	೧೬೯೩	೧೦೦,೦೦೦
ಯೆಡ್ಡೋ, ಜಪಾನ್	೧೭೦೩	೨೦೦ ೦೦೦
ಎಬ್ರುಜಿ ಇಟಲಿ	೧೭೦೩	೧೫ ೦೦೦
ಅಲ್ ಗ್ರಿಯರ್ಸ್	೧೭೧೬	೨೦ ೦೦೦
ಚೈನಾ	೧೭೩೧	೧೦೦ ೦೦೦
ಲಿಮ್ಯಾ ಪೆರು	೧೭೪೬	೧೮ ೦೦೦
ಗ್ರ್ಯಾಂಡ್ ಕೈರೋ	೧೭೫೪	೪೦,೦೦೦
ಕಶ್ಯಾನ್ ಪರ್ಶಿಯಾ	೧೭೫೫	೪೦,೦೦೦
ಸಿರಿಯಾ	೧೭೫೯	೩೦ ೦೦೦
ದಕ್ಷಿಣ ಇಟಲಿ	೧೭೮೩	೫೦ ೦೦೦
ಪೆರು	೧೮೬೮	೨೫,೦೦೦
ಜಾವಾ	೧೮೮೩	೧೬೦,೦೦೦
ಚೈನಾ ಮತ್ತು ಜಪಾನ್	೧೮೯೧	೪೦,೦೦೦
ಪೆಲೀ ಮಾರ್ಟಿನಿಗ್	೧೯೦೨	೪೦,೦೦೦
ವೆಸೂವಿಯಸ್ ಇಟಲಿ	೧೯೦೬	೪೪೦

ಪತ್ರಿಕಾ ಪ್ರಪಂಚ.

ದೇಶವಿದೇಶಗಳ ಪತ್ರಿಕಾಪ್ರಪಂಚದಲ್ಲಿ ವಿವಿಧ ವ್ಯವಹಾರಗಳ ಕುರಿತು ಪ್ರಕಟವಾಗುತ್ತಿರುವ ಸದಭಿಪ್ರಾಯಗಳನ್ನು ಈ ಭಾಗದಲ್ಲಿ ಪ್ರತಿವಾರವೂ ಅನುಕೂಲವಿದ್ದಷ್ಟು ಪ್ರಕಟಿಸಲಾಗುತ್ತದೆ. ವಿಷಯ ವೈವಿಧ್ಯವನ್ನಪೇಕ್ಷಿಸುವ ವಾಚಕವೃಂದದ ವಿವಿಧ ವಿಷಯ ಜ್ಞಾನದ ಬೆಳವಣಿಗೆಗೆ ಇದರಿಂದ ಹೆಚ್ಚಿನ ಪ್ರಯೋಜನವಾದೀತೆಂದು ಭಾವಿಸಲ್ಪಟ್ಟಿದೆ.

ಜನಾಂಗಗಳೊಳಗೆ ಒಗ್ಗಟ್ಟು ಇಲ್ಲ ಹೀಗಿರುವುದರಿಂದ ರಾಜಕೀಯವಾಗಿಯಾಗಲೀ ಆರ್ಥಿಕವಾಗಿಯಾಗಲೀ ತನಗೇನು ಬೇಕಾಗಿದೆಯೆಂದು ಹಿಂದೂದೇಶವು ಹೇಳಲು ಸಮರ್ಥವಾಗಿರುವುದಿಲ್ಲ. ಹಿಂದೂದೇಶದ ಜನರಲ್ಲಿಯ ಅಂತರಗಳು ಜಾತಿ, ನೀತಿ, ಅದರಲ್ಲೂ ಭಾಷೆಗಳ ವಿಭಕ್ತತೆಯಿಂದಾಗಿ ಬಹುವಾಗಿ ಬೆಳೆದುಕೊಂಡಿರುತ್ತವೆ. ಹೀಗಿರುವುದರಿಂದ ಹಿಂದೂದೇಶವನ್ನು ಇತರ ರಾಷ್ಟ್ರಗಳಂತೆ ಘನತೆಗೇರಿಸುವುದೆಂತು ಎಂದು ಒಬ್ಬ ರಾಜನೀತಿಜ್ಞನು ಆಲೋಚಿಸಿದರೆ ಆತನು ಹಿಂದೂದೇಶದ ಹಲವು ಪರಿಸ್ಥಿತಿಗಳ ದೆಸೆಯಿಂದಾಗಿ ಕಂಗೆಟ್ಟು ಹೋಗುವನು. ಹಿಂದೂದೇಶದ ಪ್ರಗತಿಯು ಜಗತ್ತಿನ ಹಿತ ಅಥವಾ ಅಹಿತದಲ್ಲೇ ಪರಿಣಮಿತವಾಗುವುದೆಂಬುದು ಸಿದ್ಧವಾದುದು. ಹಿಂದೂದೇಶವು ಪರೋಕ್ಷ ರಾಷ್ಟ್ರಗಳನ್ನು ನೈತಿಕವಾಗಿ ಸದ್ದಾರಿಗೆ ತರುತ್ತಿದೆ. ಇದೇ ಹಿಂದೂದೇಶದ ನೆಲಗಟ್ಟಾಗಿದೆ. ಹಿಂದೂದೇಶದಲ್ಲಿ ಸಾಮಾನ್ಯ ಮನುಷ್ಯನು ವಿದ್ಯಾವಂತನಾಗಿರುವುದಿಲ್ಲ. ಸಾಮಾನ್ಯರು ವಿದ್ಯಾವಂತರಾಗಿ ಅವರಿಗೆ ಸಮಾಜದ ಜವಾಬ್ದಾರಿಕೆಯೇನೆಂದು ತಿಳಿದುಬಾರದ ವಿನಹ ಹಿಂದೂದೇಶದಲ್ಲಿ ಯಾವ ಸುಧಾರಣೆಯೂ ಆಗಲಾರದೆಂದು ನಾನು ಒತ್ತಿಹೇಳುತ್ತೇನೆ. ಭಾರತ ದೇಶದ ಕೂಲಿಗಳು, ಬಡವರು ಸುಸ್ಥಿತಿಗೆ ಬರಬೇಕಾಗಿದೆ. ಹಿಂದೂದೇಶದಲ್ಲಿ ವರ್ಷಕ್ಕೆ ತಲಾ ಎರಡು ಪವನುಗಳಂತೆಯೂ ಇಂಗ್ಲಂಡಿನಲ್ಲಿ ತಲಾ ೪೪ ಪವನುಗಳಂತೆಯೂ ಸಂಪಾದನೆಯುದೆಯೆಂದು ಲಾರ್ಡ ಕರ್ಜನರೇ ಲೆಕ್ಕ ತೆಗೆದು ಹೇಳುತ್ತಾರೆ. ಹಿಂದೂದೇಶದವರ ಜೀವನಕ್ರಮವು ಅಷ್ಟು ಸರಳವಾದುದರಿಂದ ಅವರ ಸಂಪಾದನೆಯು ಅಷ್ಟು ಕಡಮೆಯಾಗಿ ಎಣಿಕೆಂದು ಹೇಳುವವರಿದ್ದಾರೆ. ಆದರೆ ನಾಗರಿಕ ಜನಾಂಗಗಳಲ್ಲಿ ಎಲ್ಲಿಯಾದರೂ ಇಂತಹ ದುರಂತ ದಾರಿದ್ರ್ಯವು ಕಂಡುಬರುತ್ತಿದೆಯೇ? ಭಾರತದಲ್ಲಿ ಸಾಗುತ್ತಿರುವ ಅಸಂಖ್ಯ ಮರಣಗಳು ನಾನಾ ರೋಗಗಳಿಂದಲೇ ಸಂಭವಿಸುತ್ತಿದೆಯಲ್ಲ—ಜನರ ಬಡತನದಿಂದಾಗಿಯೂ ಅಸಂಖ್ಯ ಮರಣಗಳುಂಟಾಗುತ್ತವೆ. ಕೇವಲ ಅರ್ಧದಷ್ಟು ಜನರು ಹಿಂದೂದೇಶದಲ್ಲಿ ಕೃಷಿಯಿಂದಾಗಿ ಜೀವಿಸುವವರೆಂದಿರುವಾಗ ಕ್ಷಾಮಡಾಮರಗಳು ತಲೆದೋರಿ, ಅಲ್ಲಿ ಬೆಳೆಯುಂಟಾಗದೆ ಹೋದರೆ ಅವರ ಜೀವನ ನಾಶವೂ ಖಚಿತವಾಗುವುದೆಂಬುದನ್ನು ನಾವು ಊಹಿಸಬೇಕಾಗಿದೆ.

ಬೌದ್ಧಿಕ ದಾರಿದ್ರ್ಯ

ಪಂಜಾಬು ವಿದ್ಯಾರ್ಥಿಗಳ ಐದನೇಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಿದ ಡಾ॥ ಶಾಕೂರರು ಹೀಗೆ ಹೇಳಿದರು "...ತನ್ನ ಅದೃಷ್ಟದ ಮೇಲೆ ತಾನೇ ರಾಜ್ಯವಾಳುತ್ತಿದ್ದ ಕಾಲವು ಮೊದಲು ದೇಶಕ್ಕಿತ್ತು. ಆಗ ಎಂದಿಗೂ ಆರಿಹೋಗದ ಜ್ಯೋತಿಯನ್ನು ತೋರುವ ಕಲ್ಪನೆಗಳು ಹೊರಹೊಮ್ಮುತ್ತಿದ್ದವು. ಆಗ ತನ್ನ ಸ್ವಾತಂತ್ರ್ಯವನ್ನು ಅದು ಲಕ್ಷಿಸಿ ಮೆರೆಯುವ ಕಾಲವಾಗಿತ್ತು. ತನ್ನ ಬೌದ್ಧಿಕ ಮತ್ತು ತ್ಯಾಗಸಂಪತ್ತಿನಿಂದ ತನ್ನ ಯುಗವೊಂದನ್ನು ಸ್ಥಾಪಿಸುವುದು ಆಗ ಜೀವನದ ಮುಖ್ಯೋದ್ದೇಶವಾಗಿತ್ತು. ಇತ್ತೀಚೆಗೆ ಹಿಂದೂದೇಶದಲ್ಲಿ ಆದರಾತಿಥ್ಯಕ್ಕೆ ಎಡೆಗೊಡಲೊಂಬುವ ಸಂಕುಚಿತವಾದ ಪರದೇಶೀಯ ಸಂಸ್ಕೃತಿಯಿಂದ ನಮ್ಮ ಮನಸ್ಸು ಪೋಷಿತವಾಗುತ್ತದೆ. ಬೇರೆಯವರಿಗೆ ನೀಡದೆ ನಮಗಾಗಿ ಮಾತ್ರ ಆಹಾರವನ್ನಿಟ್ಟುಕೊಳ್ಳುವ ನಮ್ಮ ಈ ಬುದ್ಧಿಯು ದಾರಿದ್ರ್ಯವನ್ನೇ ಸೂಚಿಸುತ್ತದೆ. ಬೌದ್ಧಿಕ ಜೀವನದಲ್ಲಿ ನಾವು ಈ ತೆರನಾದ ದಾರಿದ್ರ್ಯದ ವಶವಾಗಿದ್ದೇವೆ. ನಮ್ಮ ಕಲ್ಪನಾ ಶಕ್ತಿ ನಮ್ಮ ವಿಶ್ವಾಸಗಳು ನಮ್ಮ ಕೈಬಿಟ್ಟಿವೆ. ಈಗ ನಮಗೆ ಹೀನಾವಸ್ಥೆಯು ಬಂದೊದಗಿದೆ. ತಾವೇ ಶ್ರೇಷ್ಠರೆಂದು ಭಾವಿಸಿಕೊಳ್ಳುತ್ತಿರುವ ಜೀವಿಗಳ ಸಂಖ್ಯೆಯು ಈಗ ಹೆಚ್ಚುತ್ತಿದೆ. ಈ ಜೀವಿಗಳ ಶ್ರೇಷ್ಠತೆಯೆಲ್ಲ ಪರದೇಶೀಯ ಅನುಕರಣೆಯಲ್ಲೇ ಹೊಂದಿಕೊಂಡಿದೆ. ತಮ್ಮ ಈ ಪರಿಸ್ಥಿತಿಯು ಎಷ್ಟು ಹಾಸ್ಯಾಸ್ಪದವಾಗಿದೆಯೆಂದು ಅವರಿಗೆ ತಿಳಿಯದು. ಬೇರೆಯವರಿಗೆ ಕೊಡುವ ನಮ್ಮ ಶಕ್ತಿಯೇ ನಮ್ಮ ಬಲ. ನಮ್ಮ ಆಡಂಬರದ ಜೀವನದಿಂದ ಅದನ್ನು ಅಳೆಯಲು ಬರುವುದಿಲ್ಲ.

Indian Express'

ಪೌರ್ವಾತ್ಯರಿಗೆ ಪಾಶ್ಚಿಮಾತ್ಯ ಶಿಕ್ಷಣ

೧೯೦೧ನೇ ಸಪ್ಟಂಬರ ತಿಂಗಳಲ್ಲಿ ಸಿಲೋನಿನ ಅಕ್ಟಿಂಗ್ ಗವರ್ನರರಾದ ಸರ್ ಹಗ್ ಕ್ಲಿಫರ್ಡರು ಅಲ್ಲಿಯ ರೋಯಲ್ ಕೊಲೇಜನಲ್ಲಿ ಭಾಷಣಮಾಡುತ್ತ ಹೀಗೆಂದರು "ನಾನು ಹೇಳ ಬಯಸುವುದಿಷ್ಟೆ, ಇಲ್ಲಿಯ ಶಾಲೆಗಳಲ್ಲೆಲ್ಲ ಬರಿಯ ಪಾಶ್ಚಿಮಾತ್ಯ ಶಿಕ್ಷಣವನ್ನು ಮಾತ್ರ ಮಕ್ಕಳಿಗೆ ಕೊಡಲಾಗುತ್ತದೆ. ಪಾಶ್ಚಿಮಾತ್ಯ ಸಂಸ್ಕೃತಿಗೆ ಅಲ್ಪತ್ವವನ್ನೇನೂ ನಾನು ಬಯಸುವುದಿಲ್ಲವಾದರೂ ಇಲ್ಲಿ ಸ್ವದೇಶೀಯ ಕಡೆಯ ಶಿಕ್ಷಣವು ದೊರೆಯುವುದು ಅಗತ್ಯವಾಗಿದೆ. ನಿಮ್ಮ ಜನರ ಭಾಷೆಯಿಂದ ನಿಮ್ಮ ಜನರ, ನಿಮ್ಮ ಹಿರಿಯರ, ನಿಮ್ಮ ಇತಿಹಾಸದ ಕುರಿತು ನೀವು ತಿಳಿಯಬೇಕಾಗಿದೆ. ಅಂದಿನ ಜನರು ಹೇಗೆ ಅಭಿವೃದ್ಧಿಹೊಂದಿದರು ಅಥವಾ ಹೇಗೆ ಅಧೋಗತಿಗಿಳಿದರು. ಅಂದಿನವರಿಂದ ನಾವು ಪಡೆಯಬೇಕಾದ ಸದ್ವಿಚಾರಗಳು ಯಾವುವು ಇದನ್ನು ತಿಳಿದುಕೊಂಡು ಈ ದೇಶದ ಜನರು ತಮ್ಮ ದೇಶದ ಭಾವೀಯಶಸ್ಸನ್ನು ರೂಪಿಸಿಕೊಳ್ಳಬೇಕಾಗಿದೆ. ನಿಮ್ಮ ಹಿರಿಯರ ಶಕ್ತಿಗಳೇನು ಅವರ ಯಶಸ್ಸು ಎಲ್ಲಿ ಅಡಗಿತ್ತು ಎಂಬ ವಿಚಾರಗಳನ್ನು ತಿಳಿದು ನಿಮ್ಮ ಭಾಷೆ, ನಿಮ್ಮ ಇತಿಹಾಸಗಳನ್ನು ನೀವು ತಿಳಿದುಕೊಂಡು ಜಗತ್ತಿನ ಜನಾಂಗಗಳೆದುರು ಅಭಿಮಾನದಿಂದ ಮೆರೆಯಬೇಕಾಗಿದೆ. ನಿಮ್ಮ ದೇಶಿಗರಲ್ಲಿ ಬಡವರಾಗಿರುವವರ ಮತ್ತು ಅನಾಗರಿಕರಾಗಿರುವವರ ಕೂಲಂಕಷ ಪರಿಚಯವು ನಿಮಗಿದ್ದು ನೀವು ಅವರ ಉದ್ಧಾರಕ್ಕಾಗಿ ಹೆಣಗಾಡಬೇಕಾಗಿದೆ. ಶಿಕ್ಷಿತವರ್ಗದವರ ಕಲ್ಯಾಣವನ್ನು ಅವರು ಹೇಗಾದರೂ ಮಾಡಿಕೊಳ್ಳುತ್ತಾರೆ. ನೀವು ಎತ್ತಬೇಕಾದುದು ನಿಮ್ಮಲ್ಲಿನ ಸಾಮಾನ್ಯಜನರನ್ನು. ಈ ವಿಷಯವು ಅತೀ ಅಗತ್ಯವಿದೆಯೆಂದು ನಾನು ಮನಗಂಡಿರುತ್ತೇನೆ. ಇದಕ್ಕಾಗಿ ನಿಮ್ಮವರೆಲ್ಲರೂ ಅಹರ್ನಿಶಿ ದುಡಿಯುವರೆಂದು ನಾನು ಹಾರೈಸುತ್ತೇನೆ. ಈ ಸಂಬಂಧವಾಗಿ ಮುಖ್ಯತಃ ಮಕ್ಕಳ ಹೆತ್ತವರು ಸಾಧಿಸಬೇಕಾಗಿದೆ. ಅವರಿಂದಲ್ಲದೆ ಬೇರಾರಿಂದಲೂ ಈ ಕೆಲಸವು ಕಷ್ಟತರವಾಗಿದೆ.

Indian Review.

ಶರೀರ ಸಂಪತ್ತು.

ನಮ್ಮ ದಿನನಿತ್ಯದ ವ್ಯವಹಾರದಲ್ಲಿ ನಾವು ನಮ್ಮ ಶರೀರ ಸಂಪತ್ತುಗಳ ಕಡೆಗೆ ಹೆಚ್ಚು ಲಕ್ಷ್ಯವನ್ನೀಯಬೇಕಾಗಿದೆ. ಈ ವಿಷಯಕವಾಗಿ ಸಾಪ್ತಾಹಿಕ ಅಥವಾ ವಾರ್ಷಿಕ ವರದಿಯನ್ನಿಟ್ಟರೆ ಫಲಕಾರಿಯಾಗದು. ದೇಹಸ್ಥಿತಿಯ ವಿಷಯವಾಗಿ ಜಾಗರೂಕರಾಗಿರಬೇಕೆಂದಾದರೆ, ಒಂದು ವಿಷಯದಲ್ಲಿ ಬಹು ಎಚ್ಚರವನ್ನು ವಹಿಸಬೇಕು. ನಿತ್ಯವೂ ಎಷ್ಟು ಚೈತನ್ಯವು ವೆಚ್ಚವಾಗುತ್ತದೋ ಅಷ್ಟು ಶಕ್ತಿಯನ್ನು ಆ ದಿನವೇ ಸಂಪಾದಿಸಬೇಕು. ವ್ಯಾಯಾಮ, ವಿಶ್ರಾಂತಿ ಮತ್ತು ಸಾತ್ವಿಕ ಮನೋರಂಜನೆಗಳು ಚೇತನದಾಯಕವಾಗಿವೆ. ಒಂದು ದಿನ ರಾತ್ರಿ ಎರಡು ತಾಸುಗಳ ನಿದ್ರೆಯು ಕಡಮೆಯಾಯಿತೆಂದರೆ ಅದನ್ನು ಮರುದಿನ ಸಂಪಾದಿಸಬೇಕು. ಇಂದು ಚಿತ್ತವು ಕಷ್ಟದಾಯಕವಾದ ಕೆಲಸದಿಂದ ಬಳಲಿದ್ದರೆ, ಅದನ್ನು ನಾಳೆ ಇತರ ಸಾತ್ವಿಕ ವಿಚಾರಗಳಿಂದ ರಂಜಿಸಬೇಕು. ಈ ಮಾರ್ಗವನ್ನನುಸರಿಸುವುದರಿಂದ ದೇಹಪ್ರಕೃತಿಯಲ್ಲಿ ಆಕಸ್ಮಾತ್ತಾಗಿ ಯಾವ ಪರಿವರ್ತನೆಯೂ ಆಗಲಾರದು. ಪ್ರಕೃತಿಸಿದ್ಧವಾಗಿ ವೆಚ್ಚವಾದ ಶಕ್ತಿಯನ್ನು ಆಗಿಂದಾಗಲೇ ಸರಿಗೊಳಿಸಬೇಕೆಂದು ಒಂದುಕೊಳ್ಳಬೇಕು. ಅಥವಾ ಪಕ್ಷಕ್ಕೊಮ್ಮೆ ಮಾಡಿಕೊಳ್ಳುವೆನೆಂದರೆ— ಪ್ರಕೃತಿಯು ಒಪ್ಪಲಾರದು. ಎರಡು ಮೂರು ದಿನಗಳೊಳಗಾದರೂ ದಿನಂಪ್ರತಿ ಕಳೆದುಹೋದ ಚೈತನ್ಯವನ್ನು ಪುನರಾರ್ಜಿಸುವುದು ಅಗತ್ಯವಿದೆ. ಆರೋಗ್ಯ ಸಂಬಂಧವಾದ ನಿಯಮವನ್ನು ಬಾಕಿಮಾಡಿಕೊಳ್ಳುವೆನೆಂದರೆ ನಿಸರ್ಗವು ಸಮ್ಮತಿಸುವುದಿಲ್ಲ. ನಾವು ಹಣವನ್ನು ಕಡಮೆಯಾಗಿ ವೆಚ್ಚಮಾಡಿದರೆ ನಮ್ಮ ಮುಪ್ಪಿನದಿನಗಳಿಗೆ ಕೂಡಿಟ್ಟಂತಾಗುವುದು ಸಹಜ. ಅದರಂತೆ, ಹಾಗೆ ಕಡಮೆ ವೆಚ್ಚಮಾಡಿ ಉಳಿಸಿದ ಹಣದಿಂದ ನಮಗೆ ಮುಂದಿನ ರಕ್ಷಣೆಯೂ ಭದ್ರತೆಯೂ ಸಿಗುವುದು. ಹಾಗೆಯೇ ಶಕ್ತಿಯನ್ನು ಹೆಚ್ಚು ವೆಚ್ಚಮಾಡದೆ ಅದನ್ನು ಜತನದಿಂದ ರಕ್ಷಿಸಿಕೊಂಡರೆ ದೇಹಸೌಖ್ಯವು ಲಭಿಸುವುದು. ಕೈಯಲ್ಲಿರುವ ಹಣವನ್ನು ಒಮ್ಮೆಲೇ ವೆಚ್ಚಮಾಡಿ ಮತ್ತೆ ಅನ್ಯತರ ದಿನಗಳಲ್ಲಿ ಬಳಲುವುದು ಸರಿಯಲ್ಲ. ಪ್ರತಿದಿನವೂ ಸ್ವಯಂಪೂರ್ಣವಾಗಿರುವಂತೆ ವರ್ತಿಸುವುದೇ ಶರೀರ ಮತ್ತು ಸಂಪತ್ತುಗಳ ಸಂಪಾದನೆಯಲ್ಲಿರುವ ಮಹತ್ವದ ವಿಷಯವಾಗಿದೆ.

'Efficiency'

ಆಂಗ್ಲೋ ಇಂಡಿಯಾನರ ಆಡಳಿತ.

ಮಿ॥ ಜೇಮ್ಸ್ ಓ' ಗ್ರೇಡಿ, ಎಂ. ಪಿ. ಇವರು "Weekly Budget" ಎಂಬ ಪತ್ರಿಕೆಯಲ್ಲಿ ಅತ್ಯಂತ ಕುತೂಹಲಕಾರಿಯಾದ ಒಂದು ಲೇಖನವನ್ನು ಬರೆದಿರುವರು ಅದರಲ್ಲಿ ಅವರು ಹೀಗೆಂದಿದ್ದಾರೆ—"ಇಂಡಿಯಾ" ಎಂದು ಹೇಳಿದೊಡನೆ ನಮ್ಮ ಮನಸ್ಸಿನಲ್ಲಿ ತಲೆದೋರುವ ಭಾವನೆಯಾದರೂ ಏನು? ಆ ಹೆಸರನ್ನೆತ್ತಿದೊಡನೆ ಪೂರ್ವದೇಶಗಳ ಕಥಾನುಬದ್ಧವಾಗಿ ಬಂದಿರುವ ಸಂಪತ್ತಿನ ಸ್ಮರಣೆಯು ನಮಗಾಗುತ್ತದೆ. ಮಹಾಮಹಾ ಅರಸರು ಶೃಂಗಾರಭರಿತವಾದ ಉಡಿಗೆತೊಡಿಗೆಗಳು, ಅರಮನೆಗಳು, ಮಸೀದಿಗಳು, ಅತಿದ್ಯಾವಂತರಾದ ಶ್ರೀಮಂತರುಗಳ ನೆನಪು ನಮಗುಂಟಾಗುತ್ತದೆ. ವನಗಳು, ಗುಡ್ಡ ಬೆಟ್ಟಗಳು, ನದಿಗಳು, ಸಮುದ್ರಗಳು, ಇವುಗಳ ಸ್ಮರಣೆಯೂ ನಮಗುಂಟಾಗುತ್ತದೆ. ಯಾರು ಹಿಂದೂದೇಶವನ್ನು ಆಳುವರೋ ಅವರು ಜಗತ್ತಿನಲ್ಲಿ ಮಹಾಸಾಮ್ರಾಜ್ಯ ಸಿರಿಸಂಪನ್ನರೆಂದು ಯಾರೋ ಒಬ್ಬ ಮಹಾ ಪುರುಷರು ಹೇಳಿರುವರು ಅವರು ಯಾರೋ ನೆನಪಾಗುವುದಿಲ್ಲ. ಆ ದೇಶದ ಆಂತರಿಕ ಪರಿಸ್ಥಿತಿಯೇನು? ನೋಡಲನೆಯದಾಗಿ, ಹಿಂದೂದೇಶದಲ್ಲಿನ

ಕಿರ್ಲೋಸ್ಕರ ಕಿಫಾಯತ್ ರಹತನ್ನು

ನೂರಾರು ಕೃಷಿಕರು ಅವರ ಭೂಮಿಯನ್ನು ಸಮರ್ಪಕವಾಗಿ ಉಳಲು ಉಪಯೋಗಿಸುತ್ತಿದ್ದಾರೆ

ನೀವೇಕೆ ಉಪಯೋಗಿಸಲಾರಿರಿ?

ಉತ್ತಮ ಸಾಹಿತ್ಯ, ಉತ್ತಮ ತರಗತಿಯ ಕಾಮಗಾರಿ, ಉತ್ಕೃಷ್ಟ ಆಯೋಜನ, ಒಂದು ದಿನಕ್ಕೆ ೩ ಎಕ್ಕರೆ ಭೂಮಿಯನ್ನುಳಲು ಸಹಾಯಕವಾಗುವುದೇ ಕಿರ್ಲೋಸ್ಕರ ನೊಗದ ಪ್ರಯೋಜನ



ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ, ಸತಾರಾ.

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ., ಲಿಮಿಟೆಡ್, ಮದ್ರಾಸು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು

ಚಿತ್ರಾಧುತಿ ಸಮೇತ
ಋಗ್ವೇದೀ ಸಂಧ್ಯಾವಂದನೆ.

(ವೈಶ್ವದೇವಂಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ , ಎಂ ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು.

ಜೀವಾಮೃತವನ್ನು ಸೇವಿಸಿ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ, ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ, ನಿರಾಶಾಸ್ಥಿತಿಯಲ್ಲಿ ದುಃಖದಲ್ಲಿರುವಿರೋ ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಶಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಿಗಳ ಅಣುಗಳನ್ನು ಪೋಷಿಸುತ್ತದೆ ಜೀವನದ ಆನಂದವೇ ಹಸ್ತಗತವಾಗುತ್ತದೆ ಪ್ರಾಯ, ಪುಂಸ್ತ್ರೀಭೇದ, ಕಾಲಗಳ ಭೇದಾಭೇದವೇ ಇಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಚಾತುಕುಟ್ಟಿ ವೈದ್ಯರ
ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೋಲರಕ್ಕೆ ದಿವ್ಯೌಷಧ, ಉಪಯೋಗಿಸಿದರೆ ಗುಣ ಖಾತ್ರಿ
ಕ್ರಯ ಡಬ್ಬಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ಪ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು
8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 2—8—0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.
ವಿಳಾಸ
The Scientific Gold Bangles Co., Ltd.,
Head Office 13 Byragimattam Street,
Post Box No 208, Madras

Arunodaya

ಅರುಣೋದಯ.

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಪ್ಲುತ ಲೇಖನಗಳು ಬರುವವಲ್ಲದೆ ದೇಶ ವಿದೇಶದ ಸುದ್ದಿ ಸಂಗತಿಗಳೂ ಬರುವುವು. ಅಲ್ಲದೆ ಮನೋಹರವಾದ ಕತೆ ಕವಿತೆಗಳೂ ಇರುವುವು ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಶಾಸ್ತ್ರೀಯ ಶೋಧಗಳೂ ಪ್ರಕಟವಾಗುವುವು. ಇದೀ ಕರ್ನಾಟಕದಲ್ಲಿ ಇದರ ಪ್ರಚಾರವಿರುವುದರಿಂದ ಜಾಹೀರಾತುದಾರರಿಗೆ ಇದೊಂದು ಉತ್ತಮ ಸಾಧನ ಅಲ್ಲಲ್ಲಿಗೆ ಏಜಂಟರು ಬೇಕು

ವಾರ್ಷಿಕ ಚಂದಾ ರೂ. ೨—೮—೦

ಮೆನೇಜರ್—ಅರುಣೋದಯ. ಬೆಳಗಾಂವಿ

Modern Hindu Hotel

P. J. R. Bros.,
Mangalore, S K

ಬೋರ್ಡಿಂಗ್ ಮತ್ತು ಲೋಜಿಂಗ್, ಕಾಫಿ, ಚಾ, ಕೋಕ್ಕೋ, ಇನ್ನೂ ಇತರ ಪಾನೀಯಗಳೂ ಒಳ್ಳೇ ತರದ ತಿಂಡಿ ಸಾಮಾನುಗಳೂ ಯಾವಾಗಲೂ ನಮ್ಮಲ್ಲಿ ತಯಾರಿರುತ್ತವೆ ರುಚಿಕರವಾದ ಊಟ, ಕಡಿಮೆ ಚಾರ್ಜು, ಸ್ನಾನಕ್ಕೂ ಇನ್ನು ಇತರ ದಿನಚರ್ಯೆಗಳಿಗೂ ಅನುಕೂಲವಾಗಿದೆ

An Advertisement In
'Swadeshabhimani'

Means a sure fortune to you

Ask for Contract Rates

The Swadeshabhimani office,
Car Street, Mangalore

ರಾಮು—'ಏನು, ಓಡುವಿರೆತ್ತ?'

ಜೋರ್ಜ್—'ಸ್ವದೇಶಾಭಿಮಾನಿಯ ಏಜಂಟರ ಒಳಗೆ—ಮಾತಾಡಲು ಸಮಯವಿಲ್ಲ—ಮತ್ತೆ ಪ್ರತಿಗಳು ದೊರೆಯುವುದಿಲ್ಲ ಬೇಗನೇ ಒಂದು ಪ್ರತಿಯನ್ನು ಪಡೆದುಕೊಂಡು ಬರುತ್ತೇನೆ—

ರಾಮು—'ಬೇಗನೇ ಧಾವಿಸಿರಿ—ನನಗೂ ಒಂದು ಪ್ರತಿಯನ್ನು ತನ್ನಿ ಇಗೋಳ್ಳಿ ಬಂದಾಣೆ'

'ಸ್ವದೇಶಾಭಿಮಾನಿ'ಯು

ಪ್ರಕಟವಾದ ಪ್ರತಿವಾರದಲ್ಲೂ ಈ ಗುಲ್ಲು ಅಖಿಲ ಕರ್ನಾಟಕದಲ್ಲಿ ಕೇಳುತ್ತದೆ ಸ್ವದೇಶಾಭಿಮಾನಿಯನ್ನು ಓದುವುದೆಂದರೆ ಜನರಿಗೆ ಅಷ್ಟು ಉತ್ಸಾಹ'—ಅಷ್ಟು ಆಶೆ'—ಕಾರಣವೇನು?—ಭಾಷಾಶೈಲಿ, ಚಿತ್ರಪಟಗಳು, ವರ್ತಮಾನ ಸಂಗ್ರಹಗಳು,—ಇವುಗಳಲ್ಲೆಲ್ಲ ಅದು ಅಗ್ರಗಣ್ಯವಾಗಿ ನಿಂತಿದೆ **ಬಿಡಿ ಸಂಚಿಕೆ ಬೆಲೆ ಆಣೆ 1.**

"GUPTA MANTRA"

A reward of Rs 100

The objects which cannot be achieved by spending lacs of rupees may be had by repeating this Mantra seven times. There is no necessity of undergoing any hardship to make it effective It is effective without any preparation. This is a 'WASHIKARAN MANTRA.' It will make you fortunate give you service and advancement and bring you profit in trade. A reward of Rs 100, if proved fallible Price including postage etc. Rs 2-7-0.

Siddh Mantra Ashram,
KATRISARAI (GAYA)

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS
who know our

Premier House for Swadeshi.

Mill Yarns—Handloom Clothes, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE.

ಜಾಯಿಂಟ್ ಸ್ಟಾಕ್ ಕಂಪೆನಿಗಳು.

ಜಾಯಿಂಟ್ ಸ್ಟಾಕ್ ಕಂಪೆನಿಗಳೆಂದರೇನು?—ಇವುಗಳ ಪ್ರಾಚೀನತೆ—ಹಿಂದೂದೇಶದಲ್ಲಿ ಇವುಗಳ ಆವಶ್ಯಕತೆ—ಇವುಗಳಿಂದ ಭಂಡವಾಳಿಗನಿಗೆ ಅಥವಾ ಸಮಾಜಕ್ಕೆ ಸಿಗುವ ಪ್ರಯೋಜನಗಳು—ಪಾಲುಗಾರರ ಮತ್ತು ಆಡಳಿತದಾರರ ಕರ್ತವ್ಯ. ಈಗಿನ ಕಂಪೆನಿಗಳಲ್ಲಿರುವ ಕುಂದುಕೊರತೆಗಳು.

[ಈ ಲೇಖನದಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳ ಕುರಿತಾಗಿ ಕೆಲವು ಸಲಹೆಗಳನ್ನೀಯಲಾಗಿದೆ. ಪಾಲುಗಾರಿಕೆಯ ಮೇಲೆ ವ್ಯಾಪಾರ ವ್ಯವಹಾರಗಳನ್ನು ನಡೆಸುವ ಬೇಂಕುಗಳು, ಕೊರ್ಪರೇಶನ್‌ಗಳು, ಕಂಪೆನಿಗಳು ಮತ್ತು ಪಾಲುಗಾರರೆಂಬ ಸಾರ್ವಜನಿಕರಿಗೆ ಇವುಗಳಿಂದ ಹೆಚ್ಚಿನ ಪ್ರಯೋಜನವಿದೆಯೆಂಬ ನಂಬಿಕೆ ಇದೆ.]

ಹಲವರು ಹಲವು ಪಾಲುಗಳನ್ನು ಹಾಕಿಕೊಂಡು ಏಕತ್ರರಾಗಿ ವ್ಯಾಪಾರ ವ್ಯವಹಾರ ನಡೆಸುವ ಜಾಯಿಂಟ್ ಸ್ಟಾಕ್ ಕ್ರಮವು ಇಂದಿನದಲ್ಲ. ಪಾಲಿ ಮತ್ತು ಇನ್ನಿತರ ಅನೇಕ ಸಂಸ್ಕೃತ ಗ್ರಂಥಗಳಲ್ಲಿ ಈ ರೀತಿಯ ವ್ಯಾಪಾರ ವ್ಯವಹಾರಗಳ ಕುರಿತಾಗಿ ಉಲ್ಲೇಖನಗಳಿರುವುವು. ಇಂದಿನವರಂತೆ ಅಂದಿನವರೂ ಉತ್ತಮ ವರ್ತಕರಾಗಿದ್ದು ವ್ಯಾಪಾರ ವಾಣಿಜ್ಯಗಳಲ್ಲಿ ಚೆನ್ನಾಗಿ ನುರಿತವರಾಗಿದ್ದರೆಂದು ತಿಳಿದುಬರುತ್ತದೆ. ಇಂಗ್ಲಾಂಡಿನಲ್ಲಿಯೂ ಈ ಜಾಯಿಂಟ್ ಸ್ಟಾಕ್ ವಾಣಿಜ್ಯಕ್ರಮವು ೧೬ನೇ ಶತಮಾನದಿಂದಲೂ ವ್ಯವಹಾರದಲ್ಲಿತ್ತೆಂದು ಸರ್ ಜೋಶುವಾ ಚೈಲ್ಡ್ ಮೊದಲಾದ ಅನೇಕ ಇತಿಹಾಸಜ್ಞರು ಬರೆದಿಟ್ಟಿರುವರು. ಆದರೆ ಈ ಕ್ರಮವು ಇಂದಿನಂತೆ ವಿಶಾಲವಾಗಿ ಹರಡಿಕೊಂಡಿದ್ದಿಲ್ಲ. ವಿಜ್ಞಾನದ ಪ್ರಸಾರವು ಹೆಚ್ಚುತ್ತಾ ಹೋದಂತೆ, ಯಂತ್ರೋಪಕರಣಗಳು ಹೆಚ್ಚುತ್ತಾ ಹೋದಂತೆ ವ್ಯಾಪಾರವೂ ಮುಂದರಿಯಿಟ್ಟಿತು. ಸಣ್ಣ ಕೈಗಾರಿಕೆಗಳು ದಿನೇ ದಿನೇ ದೊಡ್ಡ ಆಕಾರವನ್ನು ಹೊಂದಿಕೊಂಡು, ಒಂದು ಕಾಲದಲ್ಲಿ ಗುಡಿಸಲೊಳಗೆ ದಿನಹರಣೆ ಮಾಡುತ್ತಿದ್ದವು, ಮತ್ತೆ ಪಟ್ಟಣಕ್ಕಿಳಿದು ಲಕ್ಷಗಟ್ಟಳೆ ಜನರ ಸಹಕಾರದಿಂದ ಬೆಳೆದುವು. ಹೀಗೆ ವಾಣಿಜ್ಯ ಜಗತ್ತಿನಲ್ಲಿ ನವ ಸುಧಾರಣೆಗಳು ತಲೆದೋರುತ್ತಾ ಹೋದಂತೆ ಆ ಸುಧಾರಣೆಗಳ ಅಡಿಗಲ್ಲಾಗಿರುವ ಸೂತ್ರಗಳೂ ಬದಲಾವಣೆ ಹೊಂದುತ್ತಾ ಕೊನೆಗೆ ಸ್ಥಿರತೆಗೆ ಬಂದುವು. ಅಂತಹ ಸೂತ್ರಗಳಲ್ಲಿ ಪ್ರಾಮುಖ್ಯವಾದುದು ಭಂಡವಾಳದ ಸಂಗ್ರಹ ಕೆಲಸ.

ವಾಣಿಜ್ಯರಂಗದಲ್ಲಿ ಚೆನ್ನಾಗಿ ನುರಿತ ಜಾಣಾಕ್ಷರು ಹಲವರು ಒಟ್ಟಾಗಿ, ಸಾರ್ವಜನಿಕರಿಂದ ಪಾಲುಗಳನ್ನೆತ್ತಿ ಭಂಡವಾಳವನ್ನು ಕೂಡಿಸಿ, ಆ ಭಂಡವಾಳವನ್ನು ತಮ್ಮ ವ್ಯಾಪಾರ ವ್ಯವಹಾರದಲ್ಲಿ ಪ್ರಯೋಗಿಸುತ್ತಾರೆ. ಪ್ರತಿಯೊಂದು ಪಾಲಿಗೆ ಇಂತಿಷ್ಟು ರೂಪಾಯಿಯೆಂದು ನಿರ್ಧರಿಸಿ, ಅಧಿಕೃತ ಭಂಡವಾಳ (Authorised Capital) ಎಂಬುದನ್ನು ಸ್ಥಾಪಿಸುವರು. ಒಟ್ಟು ವಿಕ್ರಯವಾದ ಪಾಲುಗಳ ಕ್ರಯವನ್ನು ಪಾಲುವಂತಿಗೆ (Subscribed Capital) ಎಂದು ನಿರ್ಧರಿಸಿರುವರು. ಆ ಮೇಲೆ, ತೆತ್ತ ಮೂಲಧನ (Paid-up Capital) ಎಂದರೆ, ಪಾಲುಗಾರರು ಕಂಪೆನಿಗೆ ಕೊಟ್ಟು ಬಿಟ್ಟ ಮೊತ್ತವೆಂದು ನಿಷ್ಕರ್ಷಿಸುವರು. ಅಧಿಕೃತ ಭಂಡವಾಳವು ಪಾಲುವಂತಿಗೆಗಿಂತ ಹೆಚ್ಚಿಗಿರುತ್ತದೆ. ಪಾಲುವಂತಿಗೆಯು ತೆತ್ತ ಮೂಲಧನಕ್ಕಿಂತ ಅತಿ ಹೆಚ್ಚಿಗಿರುತ್ತದೆ. ಹೀಗೆ ಒದಗಿಬಂದ ಭಂಡವಾಳವನ್ನು ಕಂಪೆನಿಯ ಮೆನೇಜಿಂಗ್ ಡೈರೆಕ್ಟರನು, ಪಾಲುಗಾರರ ಪಕ್ಷದಿಂದ ಅವರವರ ವಂತಿಗೆ ಮೇರೆಗಿನ ಅಧಿಕಾರದ ಮೇಲೆ ಆರಿಸಿ ಬಂದಿರುವ ಡೈರೆಕ್ಟರ ಸಹಾಯದಿಂದ ವ್ಯಾಪಾರವನ್ನು ನಡೆಸುವನು. ವರ್ಷಂಪ್ರತಿ ಲೆಕ್ಕಪತ್ರಗಳ ಪರಿಶೀಲನೆಯಾಗಿ ಲಾಭವು ಹುಟ್ಟಿ ಬಂದರೆ ಆ ಲಾಭದಲ್ಲಿ ಇಂತಿಷ್ಟು ಅಂಶವನ್ನು ಪಾಲುಗಾರರಿಗೆ ಡಿವಿಡೆಂಡ್ ಆಗಿ ಹಂಚುವರು. ಇಂತಿಷ್ಟೇ ಹಣವನ್ನು ಕಂಪೆನಿಯ ಭಾವೀ ಭದ್ರತೆಯ ದೃಷ್ಟಿಯಿಂದ (Reserve Fund) ಭದ್ರತೆಯ ಹಣವಾಗಿ ಪ್ರತ್ಯೇಕಿಸಿಡುವರು. ಹೀಗೆ ವ್ಯಾಪಾರವು ನಡೆಯುವುದು.

ಒಂದು ದೃಷ್ಟಿಯಿಂದ ನೋಡಿದ್ದಲ್ಲಿ ಮೆನೇಜಿಂಗ್ ಡೈರೆಕ್ಟರರೇ ಮೊದಲಾದ ಆಫೀಸಿನ ಹುದ್ದೆದಾರರು ಪಾಲುಗಾರರ ಸೇವಕರಾಗಿರುವರು. ಆದರೆ ಇನ್ನೊಂದು ದೃಷ್ಟಿಯಿಂದ ಆಲೋಚಿಸಿದ್ದಲ್ಲಿ ಕಂಪೆನಿಯ ಮುಖ್ಯಸ್ಥರೇ ಪಾಲುಗಾರರ ಆಡಳಿತದಾರರಾಗುವರು. ಮೆನೇಜಿಂಗ್ ಡೈರೆಕ್ಟರನೂ, ಇನ್ನಿತರ ಉದ್ಯೋಗಸ್ಥರೂ ನಂಬಿಗಸ್ಥರಾಗಿದ್ದರೆ ಅವರು ಪಾಲುಗಾರರಿಗೆ ಸಲ್ಲುವ ಗೌರವಗಳನ್ನು ಅವರಿಗೆ ಸಲ್ಲಿಸಿ ಅವರ ದುಡ್ಡಿಗೆ ತಕ್ಕ ಬೆಲೆಯನ್ನು ಕೊಡುವರು. ಆದರೆ ಅವಿಶ್ವಾಸಿಗಳಾದ ಕಂಪೆನಿಯ ವ್ಯಾಪಾರಿಕರು ತಮ್ಮ ಪಾಲುಗಳೆಲ್ಲ ವಿಕ್ರಯಿಸಿ ಹೋದೊಡನೆ ಕಂಪೆನಿಯಲ್ಲಿ ಸರ್ವಾಧಿಕಾರವನ್ನು ವಹಿಸಿ, ಪಾಲುಗಾರರನ್ನು ಮನ್ನಿಸಿ ನಡೆಯುವ ಬದಲು ಅವರನ್ನು ಧಿಕ್ಕರಿಸಿ ನಡೆಯುವರು. ಹಾಗೂ ತಮಗೆ ಬೇಕಾಗಿಲ್ಲದ ಪಾಲುಗಾರರು ತಮ್ಮ ವಿರೋಧವಾಗಿ ನುಡಿದರೆ, ಅಥವಾ ಆಚರಿಸಿದರೆ, ತಮ್ಮ ಪ್ರತಿಭೆಯನ್ನುಪಯೋಗಿಸಿ, ಅಂತಹ ಪಾಲುಗಾರರು ತಮ್ಮ ಪಾಲುಗಳನ್ನು ಹಿಂತೆಗೆಯುವಂತೆಯೋ, ಅಥವಾ ಅವುಗಳನ್ನು ಬೇರೆಯವರಿಗೆ, ಅಥವಾ ತಮಗೆ ವಿಕ್ರಯಿಸಿ ಬಿಡುವಂತೆಯೋ ವ್ಯವಸ್ಥೆಮಾಡುವರು. ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳಬೇಕೆಂದು ಬಯಸುವ ಕಂಪೆನಿಯ ವ್ಯಾಪಾರಿಕರು ಎಂತಹ ಕುಟಿಲೋಪಾಯಗಳನ್ನು ಹೂಡಲಿಕ್ಕೂ ಹಿಂಜರಿಯುವುದಿಲ್ಲ. ಯುರೋಪು ಅಮೇರಿಕಾಗಳಲ್ಲೂ, ಏಕೆ ಹಿಂದೂದೇಶದ ಹಲವೆಡೆಗಳಲ್ಲೂ ಇಂತಹ ಪರಿಸ್ಥಿತಿಯು ತಲೆದೋರಿ ಅನೇಕ ಕಂಪೆನಿಗಳು ನಿರ್ನಾಮಗೊಂಡ ಉದಾಹರಣೆಗಳಿವೆ.

ಹಿಂದೂದೇಶದಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳು ಹೆಚ್ಚಾಗಿ ಯಶಸ್ಸನ್ನು ಹೊಂದುವದಿಲ್ಲ. ಆದರೆ ಯುರೋಪು ಅಮೇರಿಕಾಗಳಲ್ಲಿ ಇಂತಹ ಕಂಪೆನಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಕಾರಣವಾದರೂ ಏನು? ಹಿಂದೀಯ ಪಾಲುಗಾರರಿಗೆ ವಾಣಿಜ್ಯ ಸಂಬಂಧವಾದ ಅನುಭವವು ಹೆಚ್ಚಿಗಿರುವುದಿಲ್ಲ. ಕಂಪೆನಿಯ ಅಧಿಕಾರಿಗಳು ಅವರಾಗಿದ್ದರೂ, ಅವರಿಗೆ ತಮ್ಮ ದ್ರವ್ಯವನ್ನು ವಿನಿಯೋಗಿಸುವ ಸದ್ದಾರಿಯು ಕಂಡುಬರುವುದಿಲ್ಲ. ಅಲ್ಲದೆ ಹೊಸ ಹೊಸ ವಾಣಿಜ್ಯ ಸಾಹಸಗಳಿಗೆ ಕೈಯಿಕ್ಕಲು ಅವರಿಗೆ ಸಾಕಷ್ಟು ಧೈರ್ಯವೂ ಇರುವುದಿಲ್ಲ. ಮೇಲಾಗಿ, ಡೈರೆಕ್ಟರರ ಮೇಲೆ ತಮ್ಮ ಪ್ರತಿಭೆಯನ್ನುಪಯೋಗಿಸಿ ಅವರನ್ನು ಯೋಗ್ಯ ನಿರ್ಬಂಧದಲ್ಲಿಡಲು ಅವರಿಗೆ ತಿಳಿದಿರುವುದಿಲ್ಲ. ಹಿಂದೀಯ ಧನಿಕರು ವ್ಯಾಪಾರದಲ್ಲಿ ಸಹಸ್ರಾರು ರೂಪಾಯಿಗಳನ್ನು ಹಾಕಿಬಿಡುತ್ತಾರಾದರೂ ವಿಚಕ್ಷಣಶಾಲಿಗಳಾದ ಡೈರೆಕ್ಟರರನ್ನು ಆರಿಸಲು ತಪ್ಪಿಬೀಳುತ್ತಾರೆ. ವಕೀಲರೋ, ವೈದ್ಯರೋ, ಭೂಮ್ಯಾಲಿಕರೋ ಪಾಲುಗಾರರಾಗಿರುವಾಗ ಅವರಿಗೆ ವ್ಯಾಪಾರ ಸಂಬಂಧದ ಎಷ್ಟು ಅನುಭವವಿರಬಹುದು? ಹೀಗಿರುವಾಗ ಅಂತಹ ಕಂಪೆನಿಗಳು ದುಃಖಕ್ಕೀಡಾಗುವುದು ಅಸ್ವಾಭಾವಿಕವೋ? ತಮ್ಮ ಜವಾಬ್ದಾರಿಕೆಯನ್ನು ಪೂರ್ಣವಾಗಿ ಅರಿತು ಮನಃಪೂರ್ವಕವಾಗಿಯೂ ಕೌಶಲ್ಯಪೂರ್ವಕವಾಗಿಯೂ ಕೆಲಸಮಾಡುವ ಮೆನೆಜರರು ಹಿಂದೂದೇಶದಲ್ಲಿ ದೊರೆಯುವುದು ವಿರಳ. ಇದರ ಪರಿಣಾಮವಾಗಿ ವಿದೇಶೀಯ ಕಂಪೆನಿಗಳಂತೆ ನಮ್ಮ ದೇಶದ ಜಾಯಿಂಟ್ ಸ್ಟಾಕ್ ಕಂಪೆನಿಗಳು ಪ್ರಗತಿಸೂಚನೆಯನ್ನು ಮಾಡುವುದಿಲ್ಲ. ಈ ವಿಷಯವಾಗಿ ಹಿಂದೂದೇಶದಲ್ಲಿ ಅಕ್ಷಣೀಯ ಸುಧಾರಣೆಗಳೂ ವ್ಯವಸ್ಥೆಗಳೂ ಆಗದಿದ್ದರೆ, ನಮ್ಮ ದೇಶದಲ್ಲಿ ಎಷ್ಟು ಜಾಯಿಂಟ್ ಸ್ಟಾಕ್ ಕಂಪೆನಿಗಳು ಹೆಚ್ಚಿದರೂ ಅವುಗಳಿಂದ ಪಾಲುಗಾರರಿಗಾಗಲೀ, ಸಾರ್ವಜನಿಕರಿಗಾಗಲೀ, ದೇಶಕ್ಕಾಗಲೀ ಪ್ರಯೋಜನವಾಗಲಾರದು. ಇತ್ತೀಚೆಗೆ ಬಂಗಾಳದಲ್ಲಿ ಮುರಿದುಬಿದ್ದ ಅನೇಕ ಜಾಯಿಂಟ್ ಸ್ಟಾಕ್ ಕಂಪೆನಿಗಳ ದೆಸೆಯಿಂದಾಗಿ ಈಗ ಅಲ್ಲಿ ಶ್ರೀಮಂತರು ತಮ್ಮ ದ್ರವ್ಯವನ್ನು ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿ ಹಾಕಲು ಅಂಜುತ್ತಿರುವರು. ಜನರಿಗೆ ಒಮ್ಮೆ ಇಂತಹ ಅವಿಶ್ವಾಸವು ತಲೆದೋರಿತೆಂದರೆ ಮತ್ತೆ ಮುಂದಕ್ಕೆ ಜನಿಸುವ ಕಂಪೆನಿಗಳಿಗೆ ಪ್ರೋತ್ಸಾಹವೇ ದೊರೆಯುವುದಿಲ್ಲ. ಜಾಯಿಂಟ್ ಸ್ಟಾಕ್ ಕಂಪೆನಿಗಳು ಸೋತು ಬೀಳುವುದು ಅಪರೂಪ, ಅವುಗಳಲ್ಲಿಟ್ಟ ಹಣದಲ್ಲಿ ಲಾಭವಿದೆಯೆಂಬ ಭಾವನೆಯು ಸಾರ್ವಜನಿಕರಲ್ಲಿ ನೆಲೆಯೂರಿರುವಾಗ, ಅಂತಹ ಕಂಪೆನಿಗಳು ಒಂದರ ಹಿಂದೆ ಒಂದು ಬಿದ್ದರೆ ಆಗುವ ಪರಿಣಾಮವಾದರೂ ಏನೆಂದು ಬೇರೆ ಹೇಳಬೇಕಾಗಿಲ್ಲ. ದಕ್ಷಿಣ ಕನ್ನಡ ಜಿಲೆಯಲ್ಲಿ ಬ್ಯಾಂಕುಗಳು, ಮಂಗಳೂರಲ್ಲಿ ಒಂದು ಸಿನಿಮಾ ಕಂಪೆನಿ, ಇನ್ಸೂರೇನ್ಸ್ ಸಂಸ್ಥೆಗಳು ತಲೆಯೆತ್ತಿದಂತೆ ಬಿದ್ದು ಬಿಟ್ಟು ಜನರಲ್ಲಿ ಉಂಟಾದ ಪರಿಣಾಮವಾದರೂ ಏನೆಂದು ಬೇರೆ ವಿವರಿಸುವುದೇ ಅನಗತ್ಯವಾಗಿದೆ.

ಹಿಂದೂದೇಶದಲ್ಲಿ ಭೂಮಿಯ ಆದಾಯದ ಮೇಲೋ, ನಗಗಳ ಒತ್ತೆಯ ಮೇಲೋ ಹಣವನ್ನು ಕೊಟ್ಟರೆ ಅಂತಹ ವ್ಯಾಪಾರದಿಂದ ಹೆಚ್ಚು ಲಾಭ ಹೆಚ್ಚಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಜನರು ತಮ್ಮ ಹಣವನ್ನು ಬೇರೆ ವಿಧವಾದ ಉದ್ಯಮಗಳಲ್ಲಿ ತೊಡಗಿಸುವುದು ಬಹಳ ಕಷ್ಟವಾಗಿದೆ. ಇಂತಹ ಒಂದು ದೌರ್ಬಲ್ಯ ಇಂದಾಗಿಯೂ ಹಿಂದೂದೇಶದ ವಾಣಿಜ್ಯ ಪ್ರಪಂಚವು ವಿಶಾಲವಾಗುತ್ತ ಬರುವುದಿಲ್ಲ. ಯುರೋಪು ಅಮೇರಿಕಾಗಳಲ್ಲಿ ಕೈಗಾರಿಕೆಯ ಕಂಪೆನಿಗಳೇ ಮೊದಲಾದುವುಗಳಿಗೆ ದೊಡ್ಡ ದೊಡ್ಡ ಬ್ಯಾಂಕುಗಳು ಆರ್ಥಿಕ ಸಹಾಯವನ್ನು ಮಾಡುತ್ತವೆಯಾದುದರಿಂದ ವ್ಯಾಪಾರವು ವಿಸ್ತರಿಸುವುದಕ್ಕೆ ಬಹಳ ಸೌಕರ್ಯವಿರುತ್ತದೆ. ಆದರೆ ಹಿಂದೂದೇಶದಲ್ಲಿ ಬ್ಯಾಂಕುಗಳು ಇಂತಹ ವ್ಯಾಪಾರೀ ಕಂಪೆನಿಗಳಿಗೆ ಆರ್ಥಿಕ ಸಹಾಯವನ್ನು ನೀಡುವುದೇ ಕಡಮೆ. ಬ್ಯಾಂಕುಗಳಿಗೆ ಸಾಹಸದ ಪ್ರವೃತ್ತಿಯಿಲ್ಲ. ಅಧ್ಯಯನದ ಅಂಜಿಕೆಯೋ ಹೆಚ್ಚು. ಹೀಗಾಗಿ ಅವುಗಳು ಪ್ರಗತಿಪರವಾಗಿ ನಡೆಯುವ ಸಂದರ್ಭಗಳು ಬಹು ಕಡಮೆಯಾಗಿವೆ. ಹಿಂದೂದೇಶದಲ್ಲಿ ವ್ಯಾಪಾರೀ ಸಂಸ್ಥೆಗಳಿಗೆ ಸಹಾಯವೀಯುವ ಬ್ಯಾಂಕುಗಳ ಸಂಖ್ಯೆಯೂ ಕಡಮೆ.

ಇತ್ತೀಚೆಗೆ ಹಿಂದೂದೇಶದಲ್ಲಿ ಅನೇಕ ಆಂಗ್ಲೇಯ ಮತ್ತು ಹಿಂದೀಯ ಜಾಯಿಂಟ್ ಸ್ಟಾಕ್ ಕಂಪೆನಿಗಳು ಒಂದೇ ಸಮನೆ ಹೆಚ್ಚಿದುವು — ಕೋಟಿಗಟ್ಟಳೆ ರೂಪಾಯಿಗಳನ್ನು ವಿನಿಯೋಗಿಸಲಾಯಿತು. ಆದರೆ ಪಾಲುಗಾರರು ಡೈರೆಕ್ಟರರ ಮೇಲೆ ತಮ್ಮ ಶಕ್ತಿಯನ್ನು ತೋರಿಸಲು ಅಸಮರ್ಥರಾದುದರಿಂದ ಅನೇಕ ಕಂಪೆನಿಗಳು ಬಿದ್ದುಹೋದುವು. ಈ ಕಂಪೆನಿಗಳ ಸೋಲಿಗೆ ಮೆನೆಜರರ ಮತ್ತು ಡೈರೆಕ್ಟರರ ಕೌಶಲ್ಯದ ಅಭಾವವು ಕಾರಣವಾದಂತೆ ಜಗದ್ವ್ಯಾಪಕವಾದ ಆರ್ಥಿಕ ದುರವಸ್ಥೆಯೂ ಕಾರಣವಾಗಿದೆ.

ಹಿಂದೂದೇಶದ ವಾಣಿಜ್ಯ ವ್ಯವಹಾರದಲ್ಲಿ ಉತ್ತಮ ಪ್ರಗತಿಯು ತಲೆದೋರಬೇಕಾದರೆ, ಹಿಂದೀಯ ಕೈಗಾರಿಕೆಗಳು ಉನ್ನತಿ ಹೊಂದಬೇಕಾದರೆ ಇಲ್ಲಿ ಉತ್ತಮ ಧೋರಣೆಗಳ ಮೇಲೆ ಹೊಂದಿಕೊಂಡಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳ ಸಂಖ್ಯೆಯು ಹೆಚ್ಚಬೇಕಾಗಿದೆ. ಅವುಗಳು ಹೆಚ್ಚಿದರಷ್ಟೇ ಸಾಲದು; ಅವುಗಳ ಆಡಳಿತ ವಿಚಾರವೂ ಅಷ್ಟೇ ಶ್ರದ್ಧಾದರಗಳಿಂದ ನಿರ್ವಹಿಸಲ್ಪಡುವಂತಾಗಬೇಕು.

ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿ ದುಡ್ಡನ್ನು ವಿನಿಯೋಗಿಸಿದರೆ ಸಿಗುವ ಪ್ರಯೋಜನಗಳು ಹಲವಿವೆ. ಅವುಗಳಲ್ಲಿ ಪ್ರಾಮುಖ್ಯವಾದುವುಗಳಿವು:— ೧. ಪಾಲುಗಾರರಿಗೆ ದುಡ್ಡಿನ ಮೇಲಿನ ಜವಾಬ್ದಾರಿಕೆಯು ಇರುವುದಿಲ್ಲ. ೨. ಒಬ್ಬೊಬ್ಬನ ಸೊತ್ತಾಗಿರುವ ಕಂಪೆನಿಗಳಂತೆ ಇವು ಮುಳುಗುವುದಿಲ್ಲ. ೩. ಜಾಯಿಂಟ್ ಸ್ಟಾಕ್ ಕಂಪೆನಿಯ ಅಧಿಕಾರಗಳು ನಿರ್ಬಂಧಿಸಲ್ಪಟ್ಟವೆಯಾದುದರಿಂದ ದುಡ್ಡಿನ ದುರ್ವಿನಿಯೋಗವಾಗುವ ಭಯವಿರುವುದಿಲ್ಲ. ೪. ತನಗೆ ಬೇಕಾದಷ್ಟು ದ್ರವ್ಯವನ್ನು ಯಾವ ಬಗೆಯ ಸಾಹಸದಲ್ಲೂ ಭದ್ರತೆಯ ಮೂಲಕ ವಿನಿಯೋಗಿಸಬಹುದು. ೫. ವಿಧವಿಧದ ವ್ಯಾಪಾರದಲ್ಲೂ ದ್ರವ್ಯವನ್ನು ಹಾಕಿ ಪರೀಕ್ಷಿಸಬಹುದು. ೬. ಇಂತಹ ಸಾಹಸಗಳನ್ನು ಒಬ್ಬೊಬ್ಬರ ಕಂಪೆನಿಗಳಲ್ಲಿ ಮಾಡಲು ಸಾಧ್ಯವಿರುವುದಿಲ್ಲ. ೭. ಪಾಲುಗಳನ್ನು ಸುಲಭವಾಗಿ ವರ್ಗಾಯಿಸಿಕೊಳ್ಳಬಹುದು. ೮. ಬೇಡವೆಂದಾದರೆ ವಿಕ್ರಯಿಸಿ ಬಿಡಬಹುದು. ೯. ಏಕಾಂಗಿಯಾಗಿ ವ್ಯಾಪಾರಮಾಡುವವನಿಗೆ ಈ ಸೌಲಭ್ಯವಿರಲಾರದು. ೧೦. ಪಾಲುಗಾರರಿಗೆ ವ್ಯಾಪಾರದ ಪ್ರತಿಯೊಂದು ಅಂಶದಲ್ಲೂ ಅಧಿಕಾರವಿದೆ. ೧೧. ದುಡ್ಡನ್ನು ಈ ರೀತಿ ವಿನಿಯೋಗಿಸುವುದರಿಂದ ತನಗೆ ನಿರ್ದಿಷ್ಟ ಲಾಭವೂ, ತನ್ನ ಸಮಾಜಕ್ಕೆ ಹೇರಳ ಪ್ರಯೋಜನವೂ ಸಿಗುವುದು. ೧೨. ಒಬ್ಬಂಟಿಗನ ಸಂಸ್ಥೆಯು ಅವನ ಜೀವಮಾನದ ವರೆಗೆ ಮಾತ್ರ ಆಯುಸ್ಸನ್ನು ಪಡೆಯುವುದು, ಆದರೆ ಜಾಯಿಂಟ್ ಸ್ಟಾಕ್ ಕಂಪೆನಿಯ ಅಸ್ತಿತ್ವವು ಹಾಗೆ ಅಸ್ಥಿರವಾಗಿಲ್ಲ. ೧೩. ತನಗೆ ಬೇಡವಾದ ಅಧಿಕಾರಿಗಳನ್ನು ತೆಗೆದು, ಸಮರ್ಪಕವಾಗಿ ಕೆಲಸ ಮಾಡುವವರನ್ನು ನೇಮಿಸ ಮಾಡುವ ಅಧಿಕಾರವಿದೆ—ಅಂದರೆ ತಮ್ಮ ದುಡ್ಡಿನಿಂದ ಲಾಭವನ್ನು ಪಡೆವ ಸಂತೆ ಏರ್ಪಡಿಸುವ ಪೂರ್ಣ ಅಧಿಕಾರವಿದೆ. ೧೪. ಕೈಯಲ್ಲಿ ದುಡ್ಡಿಲ್ಲದೆ, ವಾಣಿಜ್ಯಕುಶಲರಾಗಿರುವವರಿಗೆ ಪಾಲುಗಾರರ ಸಹಾಯವು ದೊರೆತು, ಸಮಾಜದ ವ್ಯಕ್ತಿಗಳ ಬುದ್ಧಿಕುಶಲತೆಗಳನ್ನು ಪರಿಶೀಲಿಸಲು ಸಂದರ್ಭವೂ, ಅಲ್ಲದೆ ಸಮಾಜದ ನಿರುದ್ಯೋಗವಾಗಿರುವ ಬುದ್ಧಿವಂತರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟಂತೆಯೂ ಆಗುವುದು. ೧೫. ಕೊನೆಯದಾಗಿ, ಕೈಗಾರಿಕೆಗಳನ್ನು ಉದ್ಧರಿಸಿ ತಮ್ಮ ಏಳಿಗೆಯೊಡನೆ ಬಡಜನರನ್ನೂ ಉದ್ಧರಿಸಿದಂತಾಗುವುದು.

"ಶ್ರೀ ದತ್ತಾತ್ರೇಯ ಸಮರ್ಥ"

ಬರುವರು

ಬೇಗನೆ ಬರುವರು

ಅಖಿಲ ಕನ್ನಡ ನಾಡಿನ ಸುಪ್ರಸಿದ್ಧ ನಾಟಕ ಮಹಾಪಾತ್ರಗಳ ಗೌರವವನ್ನು ಪಡೆದ ನಟ ಮಹಾ ನಟರಿಂದ ಮೆರೆಯುವ

ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಲಿಯವರು

ಬೇಗನೇ ಬರುವರು ಮತ್ತು

ಮಂಗಳೂರು ಹಿಂದೂಸ್ಥಾನ ಸಿನೆಮಾ ಥಿಯೇಟರಿನಲ್ಲಿ

ಈ ೨೦ ಏಪ್ರಿಲ್‌ನೇ ದಿವಸದ ರಾತ್ರಿ ೯-೩೦ ಗಂಟೆಗೆ

ಪ್ರಥಮವಾಗಿ

'ಬ್ಲ್ಯಾಕ್ ಪ್ರಿನ್ಸ್'

ಎಂಬ ಪ್ರಖ್ಯಾತವಾದ ಐತಿಹಾಸಿಕ ನಾಟಕವನ್ನಾಡುವರು. ಸಕಲ ದೇಶಬಂಧುಗಳು ಪ್ರೋತ್ಸಾಹಿಸ ಬೇಕಾಗಿ ವಿನಂತಿ ಇದೆ. ವಿಶೇಷ ವಿವರ ಆದೇ ದಿನ ಹಂಚಲ್ಪಡುವ ಹಸ್ತಪತ್ರಿಕೆಯಲ್ಲಿ.

ಗರುಡ ಸದಾಶಿವರಾಯರು,

ಕಂಪೆನಿ ಶೇಠ ನಾಟಕಕಂಪೆನಿ, ಎ. ಧನಯ ಕೇಸರಿ,

LOOK SHARP! LOOK AHEAD

Murdeshwar's Banking Institute.

Pioneer Institute on the WestCoast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A C R A, F. C. R. A, F I. S A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW Classes are in full swing. Expert tuition (Oral or Postal) by well-qualified and experienced Lecturers

FEES VERY MODERATE

For further particulars apply to —

D R Murdeshwar,

Dip Econ, F R Econ, S (Lond.)

Principal

Ganapathy High School Street,

Mangalore.

WHITE LEPROSY

AND

LEUCODERMA

A few day's application of this medicine cures WHITE LEPROSY and LEUCODERMA radically Get rid of this horrible disease by application of this medicine in spite of failure by hundreds of Hakims, Doctors Kavirajas and advertisers Rs 500 rewarded if proved fallible Price Rs 2/

VAIDYARAJ AKHIL KISHORE RAM

P. O KATRISARAI (GAYA)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ

ಕ್ರೌನ್ 1/8 ಆಕಾರದ 188 ಪುಟಗಳು

ಉತ್ತಮ ತರಗತಿಯ ಹಾಸ್ಯ

ಬೆಲೆ ರೂ. 1—4—0.

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

ಇಲ್ಲಿಂದ ಪಡಕೊಳ್ಳಬಹುದು

ಉಚಿತ ಪರೆ.

"ಆ—ಸನ್" ಎಂಬ ನೇತ್ರಭಾಸ್ಕರ್—ಈ ಔಷಧವ ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣವಾಕ್ಯ, ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Hary yasram, Panchpota, Bengal

Swadeshabhimani

enjoys circulation in India and abroad.

APPLY FOR ADVERTISEMENT RATES

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	4—0	4— 3
ಮುಸ್ಕಿ	3—14	4— 6
ಗುಡ್ಡ	4— 0	4— 6
ಊರ ಅವ್ವಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ. ಒಕ್ಕೆ	6— 8	6—12
ಎಲ್ಲೂರು ಬೆ. ಮು. ಒಕ್ಕೆ	4— 4	4— 8
ಗೋಧಿ ಗೋಣಿ ಒಕ್ಕೆ	10— 0	10— 8
ತೊಗರಿ ಗೋಣಿ ಒಕ್ಕೆ	8—12	9— 8
ಹುರುಳಿ ಗೋಣಿ ಒಕ್ಕೆ	7— 8	7—12
ಕಡಲೆ ಗೋಣಿ ಒಕ್ಕೆ	8 — 0	10— 8
ತೊಗರಿಬೇಳೆ ಗೋಣಿ ಒಕ್ಕೆ	10— 0	17— 0
ಉದ್ದು ಗೋಣಿ ಒಕ್ಕೆ	8— 0	8— 8
ಹೆಸರು ಗೋಣಿ ಒಕ್ಕೆ	9— 0	9— 8
ಊರುಬೆಲ್ಲ ಖಂಡಿ ಒಕ್ಕೆ	32— 8	35— 0
ಉಪ್ಪು ಗೋಣಿ ಒಕ್ಕೆ	4— 8	5— 0
ಕೊಬ್ಬರಿ ಖಂಡಿ ಒಕ್ಕೆ	48— 0	55— 0
ಕೊಬ್ಬರಿ ಹಿಂಡಿ ಖಂಡಿ ಒಕ್ಕೆ	20— 8	21— 0
ಎಳ್ಳಿಂಡಿ ಖಂಡಿ ಒಕ್ಕೆ	37— 8	40— 0
ಕೊಬ್ಬರಿ ಎಣ್ಣೆ ಮಣ ಒಕ್ಕೆ	3— 10	4— 8
ಎಳ್ಳೆಣ್ಣೆ ಮಣ ಒಕ್ಕೆ	5— 2	5—10
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕೆ	5— 7	5—7
ಮೋರಿಸ ಸಕ್ಕರೆ ಮು. ಒಕ್ಕೆ	3— 7	3— 9
ಹುಣಸು	4—12	6— 4
ಸಾಸಿವೆ ಮುಡಿ ಒಕ್ಕೆ	5 —12	6— 0
ಕಾಳುಮೆಣಸು ಖ ಒಕ್ಕೆ	120— 0	122— 8
ಯೇಲಕ್ಕಿ ಮಣ ಒಕ್ಕೆ	22— 0	27— 0
ಗೇರುಬೀಜ ಮು. ಒಕ್ಕೆ	3—12	3—13
ಕಬ್ಬಿಣ ಖಂಡಿ ಒಕ್ಕೆ	40— 0	40— 8
ಕಾಂಪ್ರುಕಗಳು ಮು. ಒಕ್ಕೆ	9 — 0	9— 1
ಕಾಂಪ್ರುಜಾತ್ರಿಗಳ ಮು ಒಕ್ಕೆ	11— 0	12— 0
ಚೀನಬೆಳ್ಳಿ ಸೇರು ಒಕ್ಕೆ	14—12	15— 0
ಹಿತ್ತಾಳೆ ತಗಡು ಮು. ಒಕ್ಕೆ.	8— 12	9— 0
ಸವನು ಒಕ್ಕೆ	23— 0	23— 4
ಹುಣಸೆ ಹುಳಿ ಖಂಡಿ ಒಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಒಕ್ಕೆ	160— 0	170— 0
ಪ್ಲಾಂಟ ಕಾಫಿ ಖಂಡಿ ಒಕ್ಕೆ	240— 0	245— 0
ಹಳೆ ಅಡಿಕೆ	100— 0	110— 0
ಹೊಸ ಅಡಿಕೆ	80— 0	96 — 0

ಶಾಲಿವಾಹನ ಬ। ಶಕ ೧೮೫೭ನೆಯ ಭಾವ ಸಂವತ್ಸರದ ಚೈತ್ರ ಬ। ೨ ಶನಿವಾರದಿಂದ ಚೈತ್ರ ಬ।೮ ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ಸಿಂಹಸೋಣ)

[illegible]	[illegible]	[illegible]	[illegible]	[illegible]	[illegible]	[illegible]	[illegible]
20	ಶನಿ	೨	೫೫	ಸ್ವಾತೀ	೩	೭	
21	ರವಿ	೩	೫೩	ವಿಶಾಖಾ	೧	೮	
22	ಸೋಮ	೪	೫೧	ಅನುರಾಧಾ	೫೯	೯	
23	ಮಂಗಳ	೫	೪೭	ಜ್ಯೇಷ್ಠ	೪	೧೦	
24	ಬುಧ	೬	೪೩	ಮೂಲ	೨	೧೧	
25	ಗುರು	೭	೩೮	ಪೂ. ಷಾಢ	೫೭	೧೨	
26	ಶುಕ್ರ	೮	೩೨	ಶ್ರವಣಾ	೫೩	೧೪	

ಇಷ್ಟರವರೆಗೆ ಯಾರೂ ಕೇಳಲಿಲ್ಲ, ಪಡೆಯಲಿಲ್ಲ.

ನಮ್ಮ ಒಟ್ಟೋ ಗೋಲ್ಡ್ ಅಥವಾ ಖಾಸ್ ಹೃದಯ ಮನಗಳನ್ನು ಮುಟ್ಟಿಸುವುದಕ್ಕೆ ೧೨ ದಾಟ್ಗಳನ್ನು ರೂ ೧—೧೫—೦ಕ್ಕೆ ಕಳೆಯುವವರಿಗೆ ೧ ರಿಸ್ಟ್ ವಾಚ್, ೧ ಇನ್ಫೆಂಟ್ ಪಾಕೆಟ್ ವಾಚ್ (ಚೈನ್ ಸಮೇತ), ೧ ಟೈಂಪೀಸ್ (ಸರಿಯಾಗಿ ಸಮಯ ತೋರಿಸುತ್ತದೆ)—ಹತ್ತು ವರ್ಷಗಳ ಗ್ಯಾರಂಟಿ, ಒಂದು ಇಮಿಟೇಶನ್ ಮುತ್ತಿನ ಸರ, ಪೆಕಿಂಗ್ ಮತ್ತು ಪೋಸ್ಟೇಜ್ ಪ್ರತ್ಯೇಕ. (ಒಪ್ಪಿಯದಿಲ್ಲವಾದರೆ ಹಣ ವಾಪಸು.

ವಿಳಾಸ—**International Trading Co.,**

G. I. P. A. Post Box No. 6714, Section S. P., Calcutta.

NEW ARRIVALS.

Medicines.

Dr. Schuessler's Twelve Tissue Remedies 5 gr bot. As 4/-

Homoeopathy Medicines 5 gr bot As. 5/—

Sugar of Milk Dr Schwabe's original bot 1lb Rs 2/-

Haarlem Oil—a world-renowned remedy As 8/ per phial

Dr Haele's New Curative Earth—Radium Cure Rs. 4/ per lb

Dr. Schwabe's other special remedies are always in stock

Please consult us for your requirements

Kanarese Book a Family Guide to Biochemistry Re 1/-

" Domestic Homoeopathy Rs 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6

Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps Spring Cots, Spring Couches etc, and stock –

Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you

Olympia Typwriter.

An up to date Machine in Standard and portable sizes

[illegible]

Basel Mission Book & Tract Depository,

Mangalore, S K. or Hubli, S M

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನಸಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ

(ಮನ. ಉಗ್ಗಳವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತದೆ.

ತಯ್ಯಾರಿಸುವವರು — ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು –

ಕುಂತಳ ಕೌಮುದಿ ತೈಲ,

ವೆನ್ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟಿದ್ದರೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲುಪಿದೊಡನೆ—ಜಾಗ್ರತೆಯಾಗಿ ತಿಳಿಸಬೇಕು.

ಚಿಕ್ಕದೊಡ್ಡವರು-ದೊಡ್ಡಚಿಕ್ಕವರು

ಲೇಖಕರು:—ಶ್ರೀ ಶಿವರಾಮ ಕಾರಂತರು.

೪. ಪ್ರದರ್ಶನದ ಪಾವಪ್ಪನವರು

ಪಾವಪ್ಪನವರು ಹೆಸರಿಗೆ ಮಾತ್ರ—ನೋಟಕ್ಕೆ ಅವರು ನಿಜವಾಗಿಯೂ ಕೋರ್ಜ (ಮುಡಿ) ಅಕ್ಕಿ ದಾಸ್ತಾನಿರುವ ಕುತ್ತಾಟದಂತೆ ಕಾಣುತ್ತಾರೆ. ಎನು ಭೀಮಕಾಯ' ಎನು ಮೆಲುನಡಿಗೆ. ಹಿಂದಿನ ಕವಿಗಳು—ಮದಗಜ ಗಮನವನ್ನು ಕುರಿತು ಕೊಂಡಾಡಿದ್ದರೆ ನಮ್ಮ ಪಾವಪ್ಪನವರನ್ನು ಕುರಿತು ಅದು ಹೇಳಿರಬೇಕು. ಆ ಅಲಂಕಾರಕ್ಕೆ ಹೆಣ್ಣುಲಿಂಗವನ್ನು ಸೇರಿಸಿ ಮದಗಜಗಮನೆ—ಎಂದು ಮಾಡಿದರು. ಪಾವಪ್ಪನವರು ಒಳ್ಳೇ ಬಿಳಿಟರಿ ಜನಾಂಗಕ್ಕೆ ಸೇರಿದವರು. ನಮ್ಮ ಜಿಲ್ಲೆಯ ಮೂಲನಿವಾಸಿಗಳಲ್ಲಿ ಒಬ್ಬರು. ಬಂಟರು, ಆದರೆ ನಾನು ಮಾತ್ರ ಇದುತನಕ ಅವರು ಸಿಟ್ಟಾದುದನ್ನು ಕಂಡವನಲ್ಲ. ಅವರ ಶರೀರವನ್ನು ನೋಡುವಾಗ, ಈ ಶರೀರದಿಂದ ಸಿಟ್ಟಿನ ಜ್ವಾಲಾಮುಖಿ ಒಡೆದರೆ ಏನಾದೀತು—ಎಂದು ಅಂಜಿದ್ದುಂಟು. ಆದರೆ ಅವರನ್ನು ನೀವು ಅತಿಯಾಗಿ ಕೆರಳಿಸಿದರೆ ಪ್ರಸನ್ನರಾಗಿ ನಕ್ಕಾರು. ಇನ್ನೂ ಕೆರಳಿಸಿದರೆ—ವೀಳ್ಯವನ್ನು ಕೊಟ್ಟಾರು. ರಣವೀಳ್ಯವಲ್ಲ—ವಕ್ಕಾಲಿಗೆ ಮೂರರ ಬೀಡಾ.

ಹಿಂದೊಂದು ಕಾಲದಲ್ಲಿ ಅವರ ಗ್ರಾಮದ ಶ್ಯಾನುಭಾಗರಾಗಿದ್ದರು. ಎಷ್ಟೋ ಬಾರಿ, ಅವರು ಸಂಕಲೆ ಹಿಡಿದು ಸಂಚಾರಕ್ಕೆ ಕಾಡಿಗೆ ಹೋದಾಗ ಅವರ ತಹಶಿಲಾರರು—ಕಾಡಾನೆ ಬಂತು'ಎಂದು ಹೆದರಿ ಓಡಿಹೋಗಿದ್ದರಂತೆ. ಕಸ್ತಿನ ಮೇಲಾಫೀಸರರಿಗೆ ಈ ರೀತಿ ಆಡಿದ್ದು [illegible] ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಅಂತರಾಷ್ಟ್ರೀಯವಾಗಿ ಜರಗುವ ಸ್ಪರ್ಧೆಗೆ ಯಾರನ್ನಾದರೂ ನಮ್ಮ ಜಿಲ್ಲೆಯಿಂದ ಕಳುಹಿಸುವುದಾದರೆ—ಅದಕ್ಕೆ ಪಾವಪ್ಪನವರೇ ಬೇಕು. [illegible] ಅವರಿಂದ ನಮಗೆ ಜಯವಿದೆ. ಅವರ ಓಡಲು ಅಷ್ಟು ಚುರುಕಿಂದಲ್ಲ. ಅವರ ಓಟದ ಹಾದಿಯಲ್ಲಿ ನಿಂತರೆ, ಉಳಿದ ಸ್ಪರ್ಧಿಗಳು [illegible] ಜಾಗವೇ ಇಲ್ಲ. ಆಗ ಅವರೇ ಏಕಮಾತ್ರ ವೀರರಾಗುವರು.

ಅವರೊಡನೆ ಎಷ್ಟೋ [illegible] ಗುಡ್ಡದಿಂದ ಗುಡ್ಡಕ್ಕೆ ಶಾಲೆಯಿಂದ [illegible] ನಾನು ತಿರುಗಿದ್ದುಂಟು. ಹಾಗೆ ತಿರುಗಿದ ಒಡನೆ ಅವರಿಗೆ ಸಿಡುಕಲ್ಲೋ ಕಲ್ ಫಂಡಿನಿಂದ ಭತ್ತೆ ಸಿಗಬೇಕಿತ್ತು. (ಒಂದೆ ದಾವಾಸದ ಒಡನೆ) ನಮ್ಮ ಪಯಣ ೧೦ ಮೈಲು ಇರಲಿ, ೩೦ ಮೈಲು ಇರಲಿ ಅವರು ಜತೆಯಲ್ಲಿ ಬರುತ್ತಾರೆ. ಹೋಗುವ [illegible] ಒಳ್ಳೇದಾದರಾಯಿತು. ಉಳಿದ ವಿಚಾರ ಅವರಿಗಿಲ್ಲ. ಅವರ ಶರೀರವನ್ನು ತಾನಲ್ಲ, ಪರಮಾತ್ಮನು ಸಾಗಿಸಬೇಕು. ಶರೀರದ ಭಾರ ಭೂತಾಯಿ ಹೊರಬೇಕು ಎಂದು ಅವರಿಗೆ ಗೊತ್ತು. ಈ ವರ್ಷದ 'ಸ್ಕೂಲ್ ಡೇ'ಗೆ ಅವರೊಡನೆ ಹೊರಟರೆ ಮುಂದಿನ ವರ್ಷವಾದರೂ ನೀವು ತಪ್ಪದೆ, ಸ್ಕೂಲ್ ಡೇಗೆ ಸಮಯಕ್ಕೆ ಸರಿಯಾಗಿ ಮುಟ್ಟುವಿರಿ—ಎಂಬುದು ಖಂಡಿತ.

ಅವರ ಮದಗಜಗಮನವನ್ನು ಅರಿತ ಅವರ ಗೆಳೆಯರು ಒಬ್ಬೊಬ್ಬರೇ ಸಹಕಾರಿ ಸಂಘ, ಸಾಹುಕಾರಿ ಸಂಘ, ವಿದ್ಯಾ ಸಂಸ್ಥೆ, ಗರ್ಭಿಣಿ ಮಂಡಳಿ ಇನ್ನು ಆಗಲಿರುವ, ಆಗಿರುವ ಎಲ್ಲಾ ಸಂಸ್ಥೆಯ ಮುಂದಾಳುಗಳೂ ಹೋದಲ್ಲೆಲ್ಲ ಅವರನ್ನು ಒಯ್ಯುತ್ತಾರೆ. ಅವರು ಮೆಲುನಡೆಯಿಂದ ಹೋಗುವ ರೀತಿ ನೋಡಿದರೆ, ಹಾದಿಯಲ್ಲಿ ಹೋಗುವ ವಿಮಾನಯುಗದ ಸಂಪಾದಿ ಕಾಫಿಬೀಜದ ಲಾರಿಗಳೂ ಸಹ ಭಕ್ತಿಯಿಂದ ಹೆಜ್ಜೆ ಇಡುವುವು. ಸರಿ—ನಮ್ಮ ಪಾವಪ್ಪನವರನ್ನು ಒಯ್ಯುವುದಾದರೂ ಎಲ್ಲಿಗೆ? ಎಲ್ಲಿಗೆ ಒಯ್ದರೆ ಅವರು ಬರುತ್ತಾರೆ. ಅವರಿಗೆ ಎಲ್ಲಾ ಸಾರ್ವಜನಿಕ ಸಂಸ್ಥೆಗಳಲ್ಲೂ ಉತ್ಸಾಹವಿದೆ, ಉಲ್ಲಾಸವಿದೆ. ಸಹಕಾರ ಸಂಸ್ಥೆ, ರಾಜ ಪಂಚಾಯತಿ, ಯಕ್ಷಗಾನ ಮಂಡಳದ ಸಮಾರಂಭ, ಗ್ರಾಮ ಸುಧಾರಣೆಯ ಆವೇಶ, ಶಾಲಾ ವರ್ಧಂತಿ, ಸೂಲಗಿತ್ತಿಯರ ಕ್ಲಾಸು, ಕೋಳಿ ಇಲ್ಲವೆ ತರಕಾರಿಗಳ ಪ್ರದರ್ಶನ (ಎರಡೂ ಸಮ) ಎಲ್ಲವೂ ಅವರಿಗೆ ಬೇಕಾದುದು. ಬೆಳಗಿಂದ ಹಿಡಿದು ಸಂಜೆಯ ವರೆಗೆ ಅದಕ್ಕಾಗಿ ಕೆಲಸ ಮಾಡುವರು. ಪರ್ವತದಂಥ ಶರೀರ. ಅದರಷ್ಟೆ ಗಾತ್ರದ ಉತ್ಸಾಹ, ಅದರಂಥ ಶ್ರದ್ಧೆ.

"ನೀನನ್ನಬಹುದು ಒಬ್ಬನಿಂದ ಇಷ್ಟೆಲ್ಲಾ ಆಗುತ್ತಿದೆಯೋ—ಏನು ಫಲ, ಎಲ್ಲಾ ಹಂಚಿ' ಎಂದು ಎನ್ನುತಲೇ ಇರಿ. ನಿಮ್ಮ ಕಣ್ಣೆದುರಿಗೆ ಪಂಚಾಯತ ಸಭೆಯನ್ನೊ, ಸಹಕಾರಿ ಸಮಾರಾಧನೆಯನ್ನೊ, ತರಕಾರಿ ಪ್ರದರ್ಶನವನ್ನೋ ಕೂಡಿಸಿ, ಕೆಂಪು ಶಾಯಿಯಿಂದ ಅದರ ಪ್ರೊಸೀಡಿಂಗ್ಸುಗಳನ್ನು ಬರೆಯದೇ ಬಿಡುತ್ತಾರೆ. ಯಾರೂ ಬರಲಿಲ್ಲವೇ? ಶಾಲಾ ಮಕ್ಕಳನ್ನಾದರೂ ಕರೆದುತಂದಾರು. ಅವರೂ ಒಪ್ಪದಿದ್ದರೆ ಅವರ ಸಲುವಾಗಿ, ಅವರಕ್ಕಿ ಪಂಚಕಜ್ಜಾಯವನ್ನು ಮಾಡಿಯಾರು.

ಅವರ ಕಿಸೆಯೇ ತೂತು'. ಅವರ ಹೊಟ್ಟೆಯಲ್ಲಿ ಕರುಳು ಕುಣಿದ ಶಬ್ದವಾದರೂ ಕೇಳೀತು, ಅವರ ಕಿಸೆಯಲ್ಲಿ ಕಾಸು ಕುಣಿದ ಶಬ್ದ ನಾನು ಕೇಳಿಲ್ಲ. ಆದರೆ—ಎಲ್ಲಾ ಸಾಹಸಕ್ಕೆ ಅವರು ಮುಂದಾಳು. ಅವರ ಯತ್ನಗಳಿಗೆ ದುಡ್ಡು ಬೇಡವೇ ಎಂಬ ಸಂಶಯ ನಮಗೆ ಬಂದೀತು.

ಒಂದು ದಿನ ನಾನು ಅವರ ಊರಿಗೆ ದೊಡ್ಡ ಮನುಷ್ಯನಾಗಿ ಹೋಗಿದ್ದೆ. ಮಹಾ ಸಭೆಗಳೆರಡು, ಮಹಾ ನಾಟಕಗಳೆರಡು, ಮಹಾ ಯಕ್ಷಗಾನ ಒಂದು—ಜಮಾಬಂದಿ [illegible] ಕಾರ್ಯಕ್ರಮಗಳನ್ನು ಇರಿಸಿಕೊಂಡಿದ್ದೆವು. ನಾನೆಂದೆ 'ಪಾವಪ್ಪನವರೇ, ಜನರು ಕಾಣುವುದಿಲ್ಲ—ಏನು ಎಲ್ಲಾ ಕಡೆಗೂ ವರ್ತಮಾನ ಹೋಗಿಲ್ಲವೇ'—ಎಂದೆ. 'ಥೆ—ನೋ ಎಯರ್ (ಇಂಗ್ಲಿಷು)—ಇರುವೆಗಳ ಸಾಲಿನಂತೆ ಬರುತ್ತಾರೆ'' ಎಂದರು. ನನಗೆ ಕಾದು ಕಾದು ಬೇಸರವಾಯಿತು. ಕುಳಿತಲ್ಲಿ ನಿದ್ರೆ ಬಂದಿತು. (ನಿದ್ರೆಯಲ್ಲಿ ನನಗೂ ಮೀರಿದ ನಿಪುಣರು ಅವರು. ನಾನು ಕುಳಿತಲ್ಲಿ ನಿದ್ರಿಸಿದರೆ, ಅವರು ನಡೆಯುವುದೇ ನಿದ್ರೆಯಲ್ಲ) ರಾತ್ರಿ—ಎಂಟು ತಾಸಿಗೆ ಎಚ್ಚರವಾಯಿತು. ಎಚ್ಚರವಾಯಿತೆಂದು ಕಣ್ತೆರೆದು ನೋಡಿದರೆ—ನಾನು ಮಲಗಿದ ಜಾಗದಲ್ಲಿ ಇರುವೆ [illegible] ಮುತ್ತಿಕೊಂಡಿತ್ತು. ಅದರಿಂದ ಎಚ್ಚರವಾಯಿತು. ಪಾವಪ್ಪನವರೇ—ಇವೇ ಇರುವೆಗಳೇ ಸಭೆಗೆ—ಎಂದೆ. ಅವರು ನಕ್ಕರು.

ಅದೇ ಊರಿನಲ್ಲಿ ಸ್ವಲ್ಪ ದಿನಗಳ ನಂತರ ಒಂಭತ್ತು ಪ್ರದರ್ಶನಗಳ [illegible] ಜರಗಿದ್ದುವು. ಅಲ್ಲಾದ ಒಂದು ತರಕಾರಿ ಪ್ರದರ್ಶನದ [illegible] ಹೇಳುತ್ತೇನೆ. ನಾನು [illegible] ಪ್ರದರ್ಶನದ ಚಪ್ಪರದ ಬಳಿ ಹೋಗಿ [illegible] ಸ್ವಾಗತಿಸಿ [illegible] ಪ್ರಸನ್ನನಂದೆ. ಅನಂತರ ಅಲ್ಲಿ ನೆರೆದ ಜನರ [illegible] ನಾನೆಂದ [illegible] ಪ್ರದರ್ಶನವೆಲ್ಲ—[illegible] ಸತ್ತ್ರ [illegible] ಇದ [illegible] ಹಣ್ಣುಗಳಿಂದ [illegible] ಇದ [illegible]—ಇದರ ಹುಡಿಯನ್ನು ವಿಲಾಯತಿಗೆ ಕಳುಹಿಸುವುದು—ಎಂದರು. ಇನ್ನೂ ಹಾಗೇ ಪತ್ತು [illegible] ಬುಟ್ಟಿಗಳನ್ನು ತೋರಿಸಿದರು. ಕಂಡ ನಕ್ಕೆ—ಇದೇನು ಪ್ರದರ್ಶನ ಎಂದೆ. ಅವರ ನಕ್ಕರ [illegible] ಬಂದ ಚಪ್ಪರದ ಹೊರಕ್ಕೆ ಬಂದೆ. ಪಾವಪ್ಪನವರು ಅಲ್ಲಿ ಕುಳಿತರು. ಹೊರಗಿನಿಂದ ನಿಂತು ನೋಡಿದರೆ ಚಪ್ಪರದ ಬಿಡಾರವೆ [illegible] ನನಗೆ ಆಶ್ಚರ್ಯವಾಯಿತು. "ಯಾರಪ್ಪ ಇದು ಇಷ್ಟು ದಪ್ಪದ, ಮಂಡಿಗಡ್ಡೆ (ಮರಸಣಿಗೆ) ಕಳುಹಿಸಿದವರು ಎಂದೆ. ತಿರುಗಿ ಒಳಗೆ ಹೋಗಿ ನೋಡಲು ನನ್ನ ಭ್ರಮೆ ಬಯಲಾಯಿತು. ಬಂದುದು ಕಡುದ್ದು ಮುಂದಿಗಡ್ಡೆಯನ್ನಲ್ಲ. ಪಾವಪ್ಪನವರ ಶರೀರವನ್ನು.

ಅನಂತರ ಅದೇ ಊರಲ್ಲಿ ಆರು ಕೃಷಿ ಪ್ರದರ್ಶನಗಳೂ, ಎಂಟು ಕೋಳಿ ಹುಳುವಿನ ಪ್ರದರ್ಶನಗಳೂ ಆದುವು. ಇನ್ನೊಮ್ಮೆ ನಾಲ್ಕು ವರುಷಗಳ ತರುವಾಯ ಅದೇ ಊರಲ್ಲಿ ಅದೇ ಪಾವಪ್ಪನವರ ಕೇಳಿಕೆಯಂತೆ ಮಕ್ಕಳ ಕೂಟವನ್ನು ಜರುಗಿಸಿದ್ದಾಯಿತು. ಬಂದ ಸಂಜೆ—ಹೊತ್ತು ಮೈಯಾಗಿತ್ತು. ಚಪ್ಪರದ ಎದುರಿನಿಂದ ಏನೋ ದೂರದಿಂದ ಇರುವೆಯ ಸಾಲೊಂದು ಇಳಿಯಿತು. ಸಾಧಾರಣ ಐವತ್ತು ನೂರು ಮಂದಿ ಹೊಲೆಯರ ಹಸುರುವಾಣಿ ಹೊತ್ತು ಬರುತ್ತಿದ್ದರು ನಮ್ಮಲ್ಲಿಗೆ. ನಿಜಕ್ಕೂ ಇರುವೆಗಳ ಸಾಲಿನಂತೆ, ಅದೇ ಭಕ್ತಿಯಿಂದ ಬಂದು ಮಕ್ಕಳಿಗೆ ತರಕಾರಿಯ ಕಾಣಿಕೆಯಿತ್ತರು. ಕನಸೆಂದು ತಿಳಿದೆ. ಎಲ್ಲವೂ ಕನಸೆಂದು ನಂಬಿದೆ. ನಿಜಕ್ಕೂ—ಹಿಂದಿನ ಇರುವೆಗಳ ಸಾಲು, ತರಕಾರಿಯ ಪ್ರದರ್ಶನವನ್ನು ಹೊತ್ತು ನಮ್ಮ ಮುಂದೆ ಆ ದಿನ ಇಳಿಸಿದರು.

ಪಾವಪ್ಪನವರ ದೊಳ್ಳು ಬೊಜ್ಜುಗಳೆಲ್ಲಾ ಪರ್ವತಪ್ರಾಯವಾದ ವಿಶ್ವಾಸದಿಂದ ನಿರ್ಮಿತವಾಗಿತ್ತೆಂದು ಆಗ ಮನಗಂಡೆ.

ಉದಯಶಂಕರರೂ ನಾಟ್ಯಕಲೆಯೂ.

(ಬರೆದು ಬಂದುದು)

ಹೋದ ವಾರ ಉದಯಶಂಕರರ ನಾಟ್ಯಕಲಾ ವಿಲಾಸ ವೈಭವವನ್ನು ನೋಡಿ ಆನಂದಿಸುವ ಸುಯೋಗವು ಬೆಂಗಳೂರಿನವರಿಗೆ ದೊರಕಿತ್ತು. ಆದರೆ ಆ ಸುಯೋಗವನ್ನು ಅನೇಕ ಮಂದಿ ಉಪಯೋಗಿಸಿಕೊಂಡಂತೆ ಕಾಣುವುದಿಲ್ಲ. ೧೦ ಮತ್ತು ೧೧ನೆಯ ತಾರೀಕು ಎರಡು ದಿವಸ ಅವರ ನಾಟ್ಯವಿತ್ತು. ೯ನೆಯ ತಾರೀಕಿನ ದಿವಸ ಮೈಸೂರಿನಲ್ಲಿ ಅವರ ನಾಟ್ಯ ಪ್ರದರ್ಶನವು ಅಲ್ಲಿನ ಟೌನ್ ಹಾಲಿನಲ್ಲಿ ನಡೆಯಿತಂತೆ. ಪ್ರೇಕ್ಷಕರ ಸಂಖ್ಯೆ ಮೈಸೂರಿನಲ್ಲಿ ಅಷ್ಟು ಹೆಚ್ಚಾಗಿದ್ದಿರಲಾರದು. ಬೆಂಗಳೂರಿನಲ್ಲಿ ಮೊದಲನೆಯ ದಿನ ಪ್ರೇಕ್ಷಕರು ಸುಮಾರಾಗಿ ನೆರೆದಿದ್ದರಂತೆ, ಎರಡನೆಯ ದಿನ, ನಾವು ಕಂಡ ಹಾಗೆ, ಅಷ್ಟೊಂದು ಹೆಚ್ಚಾಗಿದ್ದರುವಂತೆ ತೋರಬರಲಿಲ್ಲ. ಕೊನೆಯ ತರಗತಿಗೆ ರೂ ೧—೨—೦ ಹಾಕಿದ್ದುದೇ ಪ್ರೇಕ್ಷಕರ ಅಲ್ಪಸಂಖ್ಯೆಗೆ—ಅಷ್ಟೇನೂ ಅಲ್ಪವಾಗಿರಲಿಲ್ಲ, ಆದರೆ ನಾವು ನಿರೀಕ್ಷಿಸಿದ್ದಷ್ಟು ರಷ್ (ನೂಕಾಟ) ಎಂದರೆ ನೂಕುನುಗ್ಗಲಾಟ, ಇರಲಿಲ್ಲ—ಎಂದು ಕೆಲವರ ಅಭಿಪ್ರಾಯ.

ಅಂತೂ ನಾಟ್ಯಕ್ಕೆ ಹೋಗಿದ್ದವರೆಲ್ಲಾ ಅವರ ನಾಟ್ಯವನ್ನು ಮೆಚ್ಚಿದರು. ಲೋಕೋಭಿನ್ನರುಚಿ—ಇದೇನೋ ನಮಗೆ ಅರ್ಥವಾಗಲಿಲ್ಲ. ಈ ನಾಟ್ಯ ಎಂದವರೂ ಒಬ್ಬಿಬ್ಬರಿದ್ದರು, ಏನೋ ಮೈಲಾಟದ ಕುಣಿತದ ಹಾಗಿದೆ ಎಂದ ಮಿತ್ರರೂ ಇದ್ದರು. ಒಟ್ಟಿನಲ್ಲಿ ಮೆಚ್ಚಿದವರು ಅಪರೂಪ ಎಂದು ನಮಗೆ ತೋರಿಬಂದಿತು.

ಏನೋ ಈ ಕಾಲದಲ್ಲಿ ಈ ನಾಟ್ಯ ನಮಗೆ ಅರ್ಥವೇ ಆಗುವುದಿಲ್ಲ ಎಂದವರ ಮಾತಿನಲ್ಲಿ ಸ್ವಲ್ಪ ಹುರುಳಿದೆ. ಏಕೆಂದರೆ, ಹಸ್ತಪತ್ರಿಕೆಯನ್ನು ಕೊಂಡುಕೊಂಡು ಕೈಲಿ ಹಿಡಿದುಕೊಂಡು ಅಲ್ಲಿ ಕೊಟ್ಟಿದ್ದ ನಾಟ್ಯಪ್ರಸಂಗಗಳ ವಿವರಣೆಗಳನ್ನು ಆಗಾಗ್ಗೆ ಓದಿಕೊಳ್ಳದೆ ಹೋಗಿದ್ದರೆ ನಮಗೂ ಅರ್ಥವಾಗುತ್ತಿರಲಿಲ್ಲ, ಈಗಲಾದರೂ ಸಂಪೂರ್ಣವಾಗಿ ಅರ್ಥವಾಗಿದೆಯೆಂದು ಹೇಳುವ ಧೈರ್ಯ ನಮಗಿಲ್ಲ.

ಇದರಿಂದ ಉದಯಶಂಕರರ ನಾಟ್ಯವನ್ನು ನಾವು ಹಳಿಯುತ್ತಿರುವೆವೆಂದು ಯಾರೂ ಭಾವಿಸಬಾರದು. ಉತ್ತಮವಾದ ಕಲೆ ಒಂದೇ ಸಮನಾಗಿ ಎಲ್ಲ ಜನರಿಗೂ ಅರ್ಥವಾಗುವುದಿಲ್ಲ. ಉತ್ತಮ ಕಲೆಯ ರಸಾಸ್ವಾದನೆಗೆ ಒಂದು ಮಟ್ಟಕ್ಕೆ ಏರಿದ ಬುದ್ಧಿಸಂಸ್ಕಾರ ಬೇಕು. ಮೊತ್ತಮೊದಲು, ಆ ಕಲೆಯ ಭಾಷೆಯನ್ನು ಸ್ವಲ್ಪ ಮಾತ್ರವಾದರೂ ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿರಬೇಕು. ಸುಶ್ರಾವ್ಯವಾದ ಸಂಗೀತವನ್ನು ಕೇಳಿದರೆ ಎಲ್ಲರಿಗೂ ಆನಂದವಾಗುವುದು. ಜೋಗುಳವನ್ನು ಕೇಳಿ ಮಗುವೂ ಮೈಮರೆತು ಮಲಗುವುದು. ಆದರೂ ತಕ್ಕಮಟ್ಟಿಗೆ ಸ್ವರಜ್ಞಾನ, ರಾಗಜ್ಞಾನ, ತಾಳಜ್ಞಾನಗಳಿದ್ದರೆ ಸಂಗೀತದ ವೈವಿಧ್ಯ ವೈಖರಿಯು ಹೆಚ್ಚು ಸ್ಪಷ್ಟವಾಗಿ ಹೆಚ್ಚು ಆನಂದವಾಗುವುದು. ಉದಯಶಂಕರರ ನಾಟ್ಯ ವಿಷಯದಲ್ಲಿಯೂ ಹಾಗೆಯೇ. ಸಂಗೀತಜ್ಞಾನವಿಲ್ಲದವರಿಗೆ ಸಂಗೀತದಿಂದ ಎಷ್ಟು ಮಟ್ಟಿನ ಆನಂದ ಲಭಿಸುವುದೋ ನಾಟ್ಯಜ್ಞಾನವಿಲ್ಲದವರಿಗೂ ಉದಯಶಂಕರರ ನಾಟ್ಯದಿಂದ ಅಷ್ಟೇ ಆನಂದವು ದೊರಕೀತೆಂದು ನಮ್ಮ ನಂಬಿಕೆ.

ಉದಯಶಂಕರರ ನಾಟ್ಯದ ವೈಶಿಷ್ಟ್ಯವನ್ನು ಕುರಿತು ಹೇಳುವ ಮೊದಲು ಭಾರತೀಯ ನಾಟ್ಯವೆನ್ನುವುದನ್ನು ಸೂಕ್ಷ್ಮವಾಗಿ ಹೇಳಬೇಕಾಗಿದೆ.

ಕಲೆಯೆಲ್ಲವೂ ಲಯಪ್ರಧಾನವಾದುದು. ವರ್ಣಚಿತ್ರದಲ್ಲಿ ಕೂಡ ನಮ್ಮ ಬಾಹ್ಯಚಕ್ಷುವಿಗೆ ಮೀರಿದ ಒಂದು ಲಯವು ಅಡಗಿದೆ. ನೃತ್ಯಗೀತಗಳಲ್ಲಿ ಆ ಲಯವು ಹೆಚ್ಚು ಸ್ಪಷ್ಟವಾದುದು. ನಮ್ಮ ಅನುಭವಕ್ಕೆ ಬಂದ ಮಟ್ಟಿಗೆ ಪಾಶ್ಚಾತ್ಯ ನೃತ್ಯದಲ್ಲಿ ಲಯವೊಂದೇ ಪ್ರಧಾನವಾದುದು. ಭಾರತೀಯ ನಾಟ್ಯವು ಬರಿಯ ಕುಣಿತವಲ್ಲ. ಬರಿಯ ಕುಣಿತವು ಪ್ರಾಸಸಹಿತವಾದ ಕರ್ಣೇಂದ್ರಿಯಕ್ಕೆ ಸೊಗಸುವ ಪದ್ಯಪ್ರಬಂಧದಂತಿದ್ದರೆ ಭಾರತೀಯ ನಾಟ್ಯವು ಪ್ರಾಸಸಹಿತವಾಗಿದ್ದು ಮೃದುಮನೋಹರವಾದ ಅರ್ಥಗಾಂಭೀರ್ಯವುಳ್ಳ ಉತ್ತಮ ಕವಿತೆಯಂತೆ ಇದೆ. ಭಾರತೀಯ ನಾಟ್ಯವು ಕಾವ್ಯಾನಂದವನ್ನು ಕೊಡಬಲ್ಲುದು, ಕಾವ್ಯದಂತೆಯೇ ರಸೋದ್ರೇಕವನ್ನು ಮಾಡಬಲ್ಲುದು. ನೃತ್ಯಗೀತಾಭಿನಯಗಳ ಸಮ್ಮೇಳನವೇ ಭಾರತೀಯ ನಾಟ್ಯದ ವೈಶಿಷ್ಟ್ಯ.

ಭಾರತೀಯ ನಾಟ್ಯದ ಶಕ್ತಿವೆಲ್ಲವೂ ಉದಯಶಂಕರರ ನಾಟ್ಯದಲ್ಲಿದೆ. ಅವರ ನಾಟ್ಯದಲ್ಲಿ ನೃತ್ಯಕ್ಕೆ ಎಷ್ಟು ಪ್ರಾಧಾನ್ಯವಿದೆಯೋ ಆ ಗಭಂಗಿಗಳಿಗೆ ಅಷ್ಟೇ ಪ್ರಾಧಾನ್ಯವಿದೆ, ಕೆಲವು ವೇಳೆ ಹೆಚ್ಚಿನ ಪ್ರಾಧಾನ್ಯವಿದೆ. ಉದಯ...

(೧೧ನೇ ಪುಟಕ್ಕೆ ಮುಂದುವರಿಸಿದೆ)

ನಮ್ಮ ಮೈಸೂರಿನ ಪತ್ರ:

(ನಮ್ಮ ಸ್ವಂತ ಸುದ್ದಿಗಾರರಿಂದ)

ಶ್ರೀ ತಗಡೂರು ರಾಮಚಂದ್ರರಾಯರ ಉಪವಾಸದ ಪ್ರಕರಣ. ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಸಹಾಯಾರ್ಥ ನಾಟಕ. ಪ್ರಥಮ ಪಂಡಿತ ಸಮ್ಮೇಳನ—ಸರ್ ಮಿರ್ಜಾ ಇಸ್ಮಯಿಲ್‌ರವರ ಭಾಷಣ. ರಾವ್ ಬಹದ್ದೂರ್ ಶ್ರೀಮಾನ್ ಬಿ. ಕೆ. ಗುರುದಾಚಾರ್ಯರವರಿಗೆ ಬೆಂಗಳೂರು ಪುರಜನರ ಸನ್ಮಾನ. ಮೈಸೂರು ಲಾಯರುಗಳ ಸಮ್ಮೇಳನ ಕನ್ನಡದ ಸ್ಥಾನವೂ ಹಿಂದಿಯೂ.

ಶ್ರೀ ತಗಡೂರು ರಾಮಚಂದ್ರರಾಯರ ಉಪವಾಸದ ಪ್ರಕರಣ.

ಈ ಪ್ರಕರಣದ ಸಂಬಂಧವಾಗಿ ಹೋದ ವಾರ ಕೆಲವು ವಿವರಗಳನ್ನು ತಿಳಿಸಿದೆ. ಅಲ್ಲಿಗೇ ಮುಗಿಯಲಿಲ್ಲ ಅದು. ಶ್ರೀ ತಗಡೂರರವರು ಮತ್ತೆ ಮಹಾತ್ಮಾ ಗಾಂಧಿಯವರಿಗೆ–'ತಾವು ದೊಡ್ಡವರು, ಅವತಾರ ಪುರುಷರು, ಆದರೂ ವಿಚಾರಿಸದೆ ಹೀಗೆ ಬರೆದಿರುವುದಕ್ಕಾಗಿ ನಾನು ತುಂಬಾ ವಿಷಾದಪಡುತ್ತೇನೆ' ಎಂದು ಹೇಳಿ, ತಮ್ಮ ಉಪವಾಸದ ಉದ್ದೇಶವನ್ನು ಸ್ಪಷ್ಟಪಡಿಸಿ, ಒಂದು ಪತ್ರವನ್ನು ಬರೆದರು ಅದಕ್ಕೆ ಉತ್ತರವಾಗಿ ಮಹಾತ್ಮಾ ಗಾಂಧಿಯವರು ಈ ರೀತಿ ಬರೆದರು –'ನಿಮ್ಮ ಕಾಗದವು ನನ್ನ ಮೊದಲಿನ ಅಭಿಪ್ರಾಯವನ್ನೇ ಖಚಿತಪಡಿಸುತ್ತದೆ ನಿಮ್ಮ ಉಪವಾಸವು ಒಂದು ಬಗೆಯ ಹಿಂಸೆಯೇ ಸಂಯಮಯುತವಾದ ಮೌನವಾದ ನಿಸ್ವಾರ್ಥ ಸೇವೆಯಿಂದ ಔದಾಸೀನ್ಯವನ್ನು ಸಹಾನುಭೂತಿಯನ್ನಾಗಿ ತಿರುಗಿಸಿಕೊಳ್ಳಬಹುದು'

ಮಹಾತ್ಮಾ ಗಾಂಧಿಯವರು ಮ|| ರಾ|| ಸುಬ್ಬರಾಮ ಶೆಟ್ಟರಿಗೆ ಮತ್ತೊಂದು ಪತ್ರ ಬರೆದು ಅದರಲ್ಲಿ ತಗಡೂರರವರಿಗೆ ಹಣ ಕೊಡುವವರು ಅವರು ಇನ್ನು ಮುಂದೆ ಇಂಥ ಉದ್ದೇಶಕ್ಕೆ ಉಪವಾಸ ಮಾಡುವುದಿಲ್ಲವೆಂದು ವಾಗ್ದಾನ ತೆಗೆದುಕೊಂಡು ಹಣ ಕೊಡಬೇಕೆಂದೂ, ಹಣ ಕೊಟ್ಟ ಸಂದರ್ಭದಲ್ಲಿ ಆ ಮೊಬಲಗು ಸರಿಯಾದ ಉದ್ದೇಶಕ್ಕೆ ವಿನಿಯೋಗವಾಗುವಂತೆ ನೋಡಿಕೊಳ್ಳಬೇಕೆಂದೂ ತಿಳಿಸುತ್ತಾರೆ

ಈ ಪತ್ರವು ತಗಡೂರರವರ ಮನಸ್ಸನ್ನು ನೋಯಿಸಿರುವುದರಲ್ಲಿ ಆಶ್ಚರ್ಯವಿಲ್ಲ ಅವರು ಮಹಾತ್ಮಾ ಗಾಂಧಿಯವರಿಗೆ ಮತ್ತೊಂದು ದೀರ್ಘಪತ್ರವನ್ನು ಬರೆದು ತಾವು ಇದುವರೆಗೆ ಮಾಡಿರುವ ಸಾರ್ವಜನಿಕ ಕಾರ್ಯಗಳನ್ನು ವಿವರಿಸಿ, ತಾವು ಇದುವರೆಗೆ ಗಳಿಸಿರುವ ಹಣವನ್ನು ದುರುಪಯೋಗಪಡಿಸಿಲ್ಲವೆಂದೂ ತಾವು ನೆಚ್ಚಮಾಡಿರುವ ಹಣಕ್ಕೆ ತಕ್ಕ ಲೆಕ್ಕಪತ್ರಗಳ ನ್ನಿಟ್ಟಿರುವುದು ಎಲ್ಲರಿಗೂ ಗೊತ್ತಿದೆಯೆಂದೂ, ಇಲ್ಲಿನ ವಿದ್ಯಮಾನಗಳನ್ನು ಸರಿಯಾಗಿ ತಿಳಿದುಕೊಳ್ಳದೆ ತಮಗೆ ತೋರಿದಂತೆ ಕಾಗದ ಒರೆದಿರುವುದು ಬಹಳ ದುಃಖಕರವಾಗಿದೆಯೆಂದೂ ಆದ್ದರಿಂದ ಎಲ್ಲವನ್ನೂ ಪರಿಶೀಲಿಸಿ ಸರಿಯಾದ ಉತ್ತರ ಬರೆಯಬೇಕೆಂದೂ ಅದರಲ್ಲಿ ಪ್ರಾರ್ಥಿಸಿಕೊಂಡಿದ್ದಾರೆ, ಇಲ್ಲಿನ ಪರಿಸ್ಥಿತಿ ಮಹಾತ್ಮರಿಗೆ ಇಷ್ಟು ಹೊತ್ತಿಗೆ ಚೆನ್ನಾಗಿ ಗೊತ್ತಾಗಿರಬೇಕೆಂದು ತೋರುತ್ತದೆ ನೋಡಬೇಕು ಈ ಸಲ ತಗಡೂರರವರಿಗೆ ಏನು ಜವಾಬು ಕೊಡುತ್ತಾರೆಯೋ ಅಂತೂ ಜವಾಬು ಕೊಡುವ ಮುನ್ನ ಮಹಾತ್ಮಾ ಗಾಂಧಿಯವರು ಇಲ್ಲಿನ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದುಕೊಂಡು ಅನಂತರ ತಮ್ಮ ಅಭಿಪ್ರಾಯವನ್ನು ತಿಳಿಸುವುದು ಒಳ್ಳೆಯದು

ಕರ್ನಾಟಕ ಸಾಹಿತ್ಯಪರಿಷತ್ತಿಗೆ ಸಹಾಯಾರ್ಥ ನಾಟಕ.

ಬೆಂಗಳೂರು ಅಮೆಚೂರ್ ನಾಟಕ ಮಂಡಲಿಯವರು ಇದೇ ತಿಂಗಳ ತಾ ೩ನೆಯ ಬುಧವಾರ ಸಾಯಂಕಾಲ ಶಿವಾನಂದ ನಾಟಕ ಶಾಲೆಯಲ್ಲಿ ಮೈಸೂರು ದೇಶದ ಸಚಿವ ಶ್ರೇಷ್ಠರಾದ ಅಮೀನ್ ಎಲ್ ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಯಿಲ್‌ರವರ ಘನವಾದ ಸಮ್ಮುಖದಲ್ಲಿ, ಮೈಸೂರು ಸರಕಾರದ ಕನ್ನಡ ಟ್ರಾನ್ಸ್‌ಲೇಟರೂ, ಪರಿಷತ್ತಿನ ಗೌರವ ಕಾರ್ಯದರ್ಶಿಯವರೂ ಆದ ಶ್ರೀಮಾನ್ ಸಿ ಕೆ ವೆಂಕಟರಾಮಯ್ಯ, ಎಂ ಎ ಎಲ್ ಎಲ್ ಬಿ ಅವರಿಂದ ರಚಿತವಾದ 'ಮಹರ್ಷಿ ನಚಿಕೇತ' ಎಂಬ ನಾಟಕವನ್ನು ಆಡಿದರು ನಾಟಕ ಮಂದಿರವು ಪರಿಷದಭಿಮಾನಿಗಳಿಂದಲೂ, ಕನ್ನಡ ಭಾಷಾಭಿಮಾನಿಗಳಿಂದಲೂ, ಮಹಾ ಜನರಿಂದಲೂ ಕಿಕ್ಕಿರಿದು ತುಂಬಿದ್ದಿತು ದಿವಾನ್ ಸಾಹೇಬರವರು ರಾತ್ರಿ ೯ ಗಂಟೆಯವರೆಗೆ ನಾಟಕವನ್ನು ನೋಡಿ ಸಂತೋಷಿಸಿದರು ಅವರು ನಾಟಕ ಶಾಲೆಯನ್ನು ಬಿಡುವಾಗ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀಮಾನ್ ಡಿ ವಿ ಗುಂಡಪ್ಪನವರು ಅವರಿಗೆ ಪುಷ್ಪಮಾಲೆಯನ್ನು ಸಮರ್ಪಿಸಿ, ಅವರನ್ನು ಬೀಳ್ಕೊಂಡರು ಆ ದಿವಸದ ಉತ್ಪತ್ತಿ ಸುಮಾರು ೧೦೦೦ ರೂಪಾಯಿಗಳಾಗಿವೆಯೆಂದೂ ಆ ದಿನದ ಖರ್ಚು ಕಳೆದು ಸುಮಾರು ೬೦೦ ರೂಪಾಯಿಗಳನ್ನು ಮಂಡಲಿಯವರು ಪರಿಷತ್ತಿಗೆ ಕೊಡಬಹುದೆಂದೂ ತಿಳಿದು ಬರುತ್ತದೆ

ಪ್ರಥಮ ಪಂಡಿತ ಸಮ್ಮೇಳನ—ಸರ್ ಮಿರ್ಜಾ ಇಸ್ಮಯಿಲ್‌ರವರ ಭಾಷಣ.

ಮೈಸೂರು ದೇಶದ ವಿದ್ಯಾಶಾಲಾ ಪಂಡಿತ ಮಂಡಲದ ಆಶ್ರಯದಲ್ಲಿ ಮೈಸೂರು ಸಂಸ್ಥಾನದ ಪಂಡಿತರ ಮೊದಲನೆಯ ಮಹಾ ಸಮ್ಮೇಳನವು ಇದೇ ತಿಂಗಳ ತಾ ೫ರಿಂದ ಮೊದಲುಗೊಂಡು ೩ ದಿವಸಗಳು ನಡೆಯಿತು. ಸಂಸ್ಥಾನದ ಸಚಿವ ಶ್ರೇಷ್ಠರಾದ ಅಮೀನ್ ಎಲ್ ಮುಲ್ಕ್ ಸರ್ ಮಿರ್ಜಾ ಎಂ ಇಸ್ಮಯಿಲ್‌ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಪ್ರಾಕ್ತನ ವಿಮರ್ಶ ವಿಚಕ್ಷಣ ಪ್ರಾಚ್ಯ ವಿದ್ಯಾವೈಭವ ಮಹಾಮಹೋಪಾಧ್ಯಾಯ ರಾವ್ ಬಹದ್ದೂರ್ ಆರ್ ನರಸಿಂಹಾಚಾರ್ಯ ಎಂ ಎ ಎಂ ಆರ್ ಎ ಎಸ್ ಅವರು ಸಮ್ಮೇಳನದ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು

ಸಮ್ಮೇಳನವು ತಾ ೫ನೆಯ ದಿನ ಒಳಗ್ಗೆ ೯ ಗಂಟೆಗೆ ಪ್ರಾರಂಭವಾಯಿತು ಸ್ವಾಗತ ಪದ್ಯಪಠನವಾದ ಮೇಲೆ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ ವೆಂಕಟರಮಯ್ಯನವರು ದಿವಾನ್ ಸಾಹೇಬರವರಿಗೂ ಪಂಡಿತ ಪ್ರತಿನಿಧಿಗಳಿಗೂ ಸ್ವಾಗತವನ್ನು ಬಯಸಿ, ಚಿಕ್ಕ ಭಾಷಣಮಾಡಿದರು ಅವರು ಭಾಷಣದಲ್ಲಿ ಹೇಗೆ ಶ್ರೀಮನ್ಮಹಾರಾಜರವರ ಸರ್ಕಾರದವರ ಮತ್ತು ದಿವಾನ್ ಸಾಹೇಬರವರ ಆಶ್ರಯದಲ್ಲಿ ಪಂಡಿತರು ಅಭಿವೃದ್ಧಿಹೊಂದುತ್ತಿರುವರೆಂದೂ ಆದರೂ ಪಂಡಿತರಿಗೆ ಈಗ ದೊರೆಯುತ್ತಿರುವ ಪ್ರೋತ್ಸಾಹ ಸಾಲದೆಂದೂ ತಿಳಿಸಿ, ಪಂಡಿತರಾದರೂ ಕಾಲಸ್ಥಿತಿಗನುಗುಣವಾಗಿ ನಡೆದುಕೊಂಡು ಜನತೆಗೆ ಹೆಚ್ಚು ಪ್ರಯೋಜನಕರವಾಗುವಂತೆ ತಮ್ಮ ಕರ್ತವ್ಯವನ್ನು ಪರಿಪಾಲಿಸುತ್ತ ಬರಬೇಕೆಂದೂ ಹೇಳಿ, ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವಂತೆ ದಿವಾನ್ ಸಾಹೇಬರವರನ್ನು ಪ್ರಾರ್ಥಿಸಿಕೊಂಡರು

ಅನಂತರ ದಿವಾನ್ ಸಾಹೇಬರವರು ಎದ್ದು ಭಾಷಣಮಾಡಿದರು

ಅವರ ಸಮಗ್ರ ಭಾಷಣವನ್ನು ಇಲ್ಲಿ ಎತ್ತಿಕೊಡಲು ಅವಕಾಶವಿಲ್ಲ ಅವರ ಭಾಷಣದ ಒಂದೊಂದು ವಾಕ್ಯವು ಮುಖ್ಯವಾಗಿದ್ದು ಗಮನಾರ್ಹವಾಗಿದೆ ಪಂಡಿತರ ಮೇಲೆ ದಿವಾನರಿಗಿರುವ ಅಭಿಮಾನವು ಅಪಾರವಾದುದು ಅವರ ಭಾಷಣದ ಉದ್ದಕ್ಕೂ ಅದು ವ್ಯಕ್ತವಾಗಿದೆ ಪಂಡಿತರ ಸತ್ವವನ್ನು ಅವರು ಬಲ್ಲವರಾಗಿದ್ದಾರೆ ಪಂಡಿತರ ಜ್ಞಾನಭಂಡಾರದ ಅರಿವು ಅವರಿಗಿದೆ ಆದರೂ ಪಂಡಿತರ ಲೋಪಗಳನ್ನು ಅವರು ಮರೆತಿಲ್ಲ ಪಂಡಿತರು ಬರಿಯ ಸಂಪ್ರದಾಯ ಶರಣರಾಗದೆ ಆಧುನಿಕ ವಿಚಾರಗಳಿಗೂ ತಕ್ಕ ಮನ್ನಣೆಕೊಡಬೇಕೆಂದು ಸೂಚಿಸಿದ್ದಾರೆ 'ಪ್ರಾಚೀನವಾದುದೆಲ್ಲವೂ ಭೂಷಣೀಯವಲ್ಲ ಆಧುನಿಕವಾದುದೆಲ್ಲವೂ ಖಂಡನೀಯವಲ್ಲ' ಎಂದು ಹೇಳಿದ ದಿವಾನರ ವಾಕ್ಯದಲ್ಲಿ ಅದೆಷ್ಟು ಪ್ರಗತಿಪರ ಭಾವನೆಯಿದೆ! ಪಂಡಿತರುಗಳು ಈ ವಾಕ್ಯಕ್ಕೆ ಗಮನಕೊಡಬೇಕು ದಿವಾನರವರು ಆಧುನಿಕರಿಗೂ ಎಚ್ಚರಿಕೆ ಕೊಟ್ಟಿದ್ದಾರೆ ಪ್ರಾಚೀನ ಸಂಸ್ಕೃತಿಯಿಂದ ತೀರ ಭಿನ್ನವಾಗಿ ಬಿಟ್ಟರೆ ಆಧುನಿಕ ವಿದ್ಯೆಯು ಎಷ್ಟೇ ನಯವಾಗಲಿ, ನಾಜೂಕಾಗಿರಲಿ–ಸಮಾಜದಲ್ಲಿ ಆಳವಾಗಿ ಬೇರುಬಿಡಲಾರದು ಪ್ರಾಚೀನ ಆಧುನಿಕಗಳ ಸಮನ್ವಯವೇ ದಿವಾನರ ಭಾಷಣದ ಸಾರಸರ್ವಸ್ವ ಆ ಸಮನ್ವಯವೇ ಪ್ರಗತಿಯ ಜೀವನಾಡಿ, ಅದು ಎಲ್ಲರ ಗುರಿಯಾಗಿರಬೇಕು

ಅನಂತರ ಸಮ್ಮೇಳನಾಧ್ಯಕ್ಷರಾದ ಶ್ರೀ ನರಸಿಂಹಾಚಾರ್ಯರವರು ವಿದ್ವತ್ಪೂರ್ಣವಾದ ಭಾಷಣವನ್ನು ಮಾಡಿದರು ಅವರು ಸಂಸ್ಕೃತ ಭಾಷೆಯು ಬಹಳ ಅಮೂಲ್ಯವಾದುದೆಂದೂ ಸಂಸ್ಕೃತ ಭಾಷೆಯನ್ನು ಮೃತಭಾಷೆಯೆಂದು ಭಾವಿಸುವುದು ತಪ್ಪೆಂದೂ, ಆ ಭಾಷೆಯನ್ನು ಜಾತಿಮತ ಭೇದವಿಲ್ಲದೆ ಎಲ್ಲರೂ ಕಲಿಯಬೇಕಾದುದು ಆವಶ್ಯಕವೆಂದೂ ಸಂಸ್ಕೃತ ಭಾಷೆಯ ಪ್ರಾಮುಖ್ಯತೆಯನ್ನು ಕುರಿತು ವಿವರಿಸಿದರು ನಮ್ಮ ಪಂಡಿತರುಗಳು ಸಂಸ್ಕೃತ ಮತ್ತು ಕನ್ನಡದ ಜೊತೆಗೆ ಮತ್ತೊಂದು ದ್ರಾವಿಡ ಭಾಷಾಪರಿಚಯವನ್ನೂ ಹೊಂದಿರುವುದು ಒಳ್ಳೆಯದೆಂದು ಸೂಚಿಸಿದರು ಕೊನೆಯಲ್ಲಿ, ಹಿಂದಿನಿಂದಲೂ ಮೈಸೂರು ದೊರೆಗಳು ಪಂಡಿತರಿಗೆ ಬೇಕಾದಷ್ಟು ಆಶ್ರಯಕೊಟ್ಟಿದ್ದರೆಂದೂ ಮುಂದೆ ಈ ಪಂಡಿತಮಂಡಲವು ಅಭಿವೃದ್ಧಿಹೊಂದಲೆಂದೂ ಹಾರೈಸಿರಿಸಿದರು

ಸಮ್ಮೇಳನದ ಮೂರು ದಿವಸವೂ ಉಪನ್ಯಾಸಗಳೂ ಭಾರತ ವಾಚನ ಸಂಗೀತಗಳೂ ನಡೆದುವು ಕೊನೆಯ ದಿವಸ ಸಾಯಂಕಾಲವೂ ದಿವಾನ್ ಸಾಹೇಬರವರು ದಯಮಾಡಿಸಿದ್ದರು ದಿವಾನ್ ಸಾಹೇಬರೊಡನೆ ಪಂಡಿತ ಪ್ರತಿನಿಧಿಗಳೂ ಮಂಡಲದ ಕಾರ್ಯಕರ್ತರೂ ಭಾವಚಿತ್ರವನ್ನು ತೆಗೆಯಿಸಿಕೊಂಡರು

ರಾವ್ ಬಹದ್ದೂರ್ ಶ್ರೀಮಾನ್ ಬಿ. ಕೆ. ಗುರುದಾಚಾರ್ಯರವರಿಗೆ ಬೆಂಗಳೂರು ಪುರಜನರ ಸನ್ಮಾನ.

ಬೆಂಗಳೂರ ಪೌರಸಭಾಧ್ಯಕ್ಷರೂ ನ್ಯಾಯವಿಧಾಯಕ ಸಭೆಯ ಸದಸ್ಯರೂ ಆದ ಶ್ರೀಮಾನ್ ಬಿ ಕೆ ಗರುಡಾಚಾರ್ಯರವರಿಗೆ ಇಂಡಿಯಾ ಸರಕಾರದವರು 'ರಾವ್ ಬಹದ್ದೂರ್'' ಎಂಬ ಪ್ರಶಸ್ತಿಯನ್ನು ದಯಪಾಲಿಸಿದ ಪ್ರಯುಕ್ತ ಅವರ ಗೌರವಾರ್ಥವಾಗಿ ಮೊನ್ನೆ ತಾ ೫ನೇ ದಿನ ಲಾಲ್‌ಬಾಗಿನಲ್ಲಿ ಬೆಂಗಳೂರು ಪುರಜನರು ಒಂದು ಸಂತೋಷಕೂಟವನ್ನೇರ್ಪಡಿಸಿದ್ದರು ದಿವಾನ್ ಸಾಹೇಬರು ಮೊದಲುಗೊಂಡು, ಅನೇಕ ಜನ ಪುರಪ್ರಮುಖರು ಈ ಸಂತೋಷ ಉತ್ಸವದಲ್ಲಿ ಒಂದು ಭಾಗಗಳಾಗಿ ಶ್ರೀ ಗರುಡಾಚಾರ್ಯರಲ್ಲಿ ತಮಗಿರುವ ಅಭಿಮಾನವನ್ನು ವ್ಯಕ್ತಪಡಿಸಿದರು

ಪುರಜನರ ಪರವಾಗಿ ಸಾಹುಕಾರ ಮಂಡಿ ಹರಿಯಣ್ಣನವರು ಅಭಿನಂದನ ಸನ್ಮಾನ ಪತ್ರಿಕೆಯನ್ನು ಓದಿದರು, ಅದನ್ನು ಬೆಳ್ಳಿಯ ಸಂಪುಟದಲ್ಲಿಟ್ಟು ಶ್ರೀಮಾನ್ ಗರುಡಾಚಾರ್ಯರವರಿಗೆ ಸಮರ್ಪಿಸಿದರು ಶ್ರೀ ಗರುಡಾಚಾರ್ಯರವರು ಸನ್ಮಾನ ಪತ್ರಿಕೆಗೆ ಉತ್ತರ ಕೊಟ್ಟು ಭಾಷಣ ಮಾಡಿದರು

ಮೈಸೂರು ಲಾಯರುಗಳ ಸಮ್ಮೇಳನ

ಇದೇ ತಿಂಗಳ ತಾ ೬ನೇ ದಿನ ಚಿಕ್ಕಮಗಳೂರಿನಲ್ಲಿ ಮೈಸೂರು ಲಾಯರುಗಳ ೧೧ನೇ ಮೈಸೂರು ಲಾಯರುಗಳ ಸಮ್ಮೇಳನವು ಸೇರಿತು ಶ್ರೀಮಾನ್ ಎಸ್ ವೆಂಕಟಪತಯ್ಯನವರು ಸಮ್ಮೇಳನದ ಅಧ್ಯಕ್ಷರಾಗಿದ್ದರು

ಅವರು ತಮ್ಮ ಭಾಷಣದಲ್ಲಿ ಲಾಯರುಗಳ ಸಮ್ಮೇಳನಕ್ಕೆ ಸದ್ಯ ಇರುವ ಆವಶ್ಯಕತೆಗಳನ್ನು ವಿವರಿಸಿದರು ಮೈಸೂರಿನ ನ್ಯಾಯಪದ್ಧತಿಗಳಲ್ಲಿ ಕೆಲವು ಬದಲಾವಣೆಗಳನ್ನೂ ಸೂಚಿಸಿದರು ಈಚೆಗೆ ರೈತರ ಸಭೆಗಳನ್ನು ಸರಕಾರದವರು ನಿರೋಧಿಸಿರುವ ಬಗ್ಗೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು. ಆ ದಿನ ಮಧ್ಯಾಹ್ನ ಕೆಲವು ಗೊತ್ತುವಳಿಗಳನ್ನೂ ವಿಚಾರ ಮಾಡುವ ಬಗ್ಗೆ ವಿಷಯ ನಿಶ್ಚಯ ಸಮಿತಿ ಸೇರಿತು

ಬೆಂಗಳೂರಿನ ಹವೆ

ಈಗ ಒಂದು ತಿಂಗಳಿಂದಲೂ ಬೆಂಗಳೂರಿನಲ್ಲಿ ಸೆಕೆ ಹೆಚ್ಚಾಗಿದ್ದು, ಈ ತಿಂಗಳ ಮೊದಲಲ್ಲಿ ಮಳೆಯಾದುದರಿಂದ ಹವೆ ಹಿತಕರವಾಗಿ ಪರಿಣಮಿಸಿತ್ತು ಈಗ ಪುನಃ ಸೆಕೆಗೆ ಆರಂಭವಾಗಿದೆ

ಕನ್ನಡದ ಸ್ಥಾನವೂ ಹಿಂದಿಯೂ.

ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಪ್ರಕಟಣೆ.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸ ಕ್ರಮದಲ್ಲಿ ಹಿಂದೀ ಭಾಷೆಯನ್ನು ಸೇರಿಸುವ ವಿಚಾರದಲ್ಲಿಯೂ ಹಿಂದಿಯಿಂದ ಕನ್ನಡದ ಸ್ಥಾನವು ಹೇಗೆ ವ್ಯತ್ಯಾಸ ಹೊಂದಬಹುದೆಂಬ ವಿಚಾರದಲ್ಲಿಯೂ ಕಳೆದ ೨–೩ ತಿಂಗಳುಗಳಲ್ಲಿ ಕನ್ನಡನಾಡಿನ ನಾನಾ ಭಾಗಗಳ ಮಹಾ ಜನರುಗಳಿಂದಲೂ ಮುಖಂಡರಗಳಿಂದಲೂ ಪರಿಷತ್ತಿಗೆ ಅನೇಕ ಕಾಗದಗಳು ಬಂದಿರತ್ತವೆ ಇದರಿಂದ ಪರಿಷತ್ತಿನ ಕಾ ನಿ ಮಂಡಲಿಯು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿ ಬಂದದ್ದರ ಮೇಲೆ ಈ ವಿಚಾರದಲ್ಲಿ ಸದ್ಯದ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ತಿಳಿಯಪಡಿಸಬೇಕೆಂದು ವಿದ್ಯಾಪ್ರಚಾರದ ಇಲಾಖೆಯ ಮುಖ್ಯಾಧಿಕಾರಿಗಳನ್ನು ಬೇಡಲಾಯಿತು ಅದಕ್ಕೆ ಪ್ರತ್ಯುತ್ತರವಾಗಿ ಆ ಅಧಿಕಾರಿಗಳು ಅಪ್ಪಣೆಕೊಡಿಸಿದ ಪತ್ರದ ಮೇಲೆ ಕಾ ನಿ ಮಂಡಲಿಯು ೨೩–೩–೩೫ನೆಯ ಕಾ ನ ಅಧಿವೇಶನದಲ್ಲಿ ಮಾಡಿರುವ ತೀರ್ಮಾನವನ್ನು ಕನ್ನಡದ ಅಭಿಮಾನಿಗಳ ತಿಳಿವಳಿಕೆಯ ಬಗ್ಗೆ ಈ ಕೆಳಗೆ ಪ್ರಕಟಿಸಿದೆ —

'ಹಿಂದೀ ಭಾಷೆಯನ್ನು ಮಿಡಲ್ ಸ್ಕೂಲುಗಳಲ್ಲಿ ನಿರ್ಬಂಧ ವಿಷಯವನ್ನಾಗಿ ಸೇರಿಸಿಲ್ಲವೆಂದೂ ಮಿಡಲ್ ಸ್ಕೂಲು ಹೈಸ್ಕೂಲುಗಳಲ್ಲಿ ಸಹ ಅದು ಇನ್ನು ಮುಂದೆ ಐಚ್ಛಿಕ ವಿಷಯಮಾತ್ರವಾಗಿರುವುದೆಂದೂ ಈ ಏರ್ಪಾಡನ್ನು ಸಹ ದೊಡ್ಡ ದೊಡ್ಡ ಮಿಡಲ್ ಸ್ಕೂಲುಗಳಲ್ಲಿ ಮಾತ್ರ ಹಣ ಒದಗಿ ಬಂದಂತೆ ಮಾಡಲಾಗುವುದೆಂದೂ, ಹಿಂದೀ ಭಾಷೆಯನ್ನು ಈಗ ಎರಡು ಮೂರು ಹೈಸ್ಕೂಲುಗಳಲ್ಲಿ ಮಾತ್ರ ಕಲಿಸುತ್ತಿದೆಯೆಂದೂ, ಇದರಿಂದ ಕನ್ನಡಕ್ಕೆ ಎಷ್ಟು ಮಾತ್ರವೂ ಬಾಧೆಯಾಗಿಲ್ಲವೆಂದೂ ಮೈಸೂರು ವಿದ್ಯಾ ಇಲಾಖೆಯ ಡೈರೆಕ್ಟರವರು ತಿಳಿಸಿರುತ್ತಾರೆ ಈ ಭರವಸೆಗಾಗಿ ಕಾರ್ಯನಿರ್ವಾಹಕ ಮಂಡಲಿಯು ಮೈಸೂರಿನ ವಿದ್ಯಾಭ್ಯಾಸದ ಇಲಾಖೆಯ ಡೈರಕ್ಟರವರಿಗೆ ಪರಿಷತ್ತಿನ ಕೃತಜ್ಞತೆಯನ್ನು ಸಮರ್ಪಿಸುತ್ತದೆಯಲ್ಲದೆ ಇನ್ನು ಮುಂದೆಯೂ ಸಹ ಸರಕಾರದ ವಿದ್ಯಾಭ್ಯಾಸ ಕ್ರಮದಲ್ಲಿ ಕನ್ನಡಕ್ಕೆ ಹಿಂದೀ ಮುಂತಾದ ಅನ್ಯಭಾಷೆಗಳಿಂದ ಎಷ್ಟು ಮಾತ್ರವೂ ಹಾನಿತಟ್ಟದಂತೆ ಅಭಿಮಾನದಿಂದ ಕನ್ನಡವನ್ನು ಕಾಪಾಡಿ ಬಲಪಡಿಸಬೇಕೆಂದು ಅವರನ್ನು ಬೇಡುತ್ತದೆ ಈ ವಿಚಾರದಲ್ಲಿ ಕನ್ನಡನಾಡಿನ ನಾನಾ ಭಾಗಗಳ ಮಹಾಶಯರು ನೂರಾರು ಮಂದಿ ಕಳವಳಗೊಂಡಿರುತ್ತಾರೆಂದು ಪರಿಷತ್ತಿಗೆ ಬಂದಿರುವ ಹತ್ತಾರು ಪತ್ರಗಳಿಂದ ತೋರಿ ಬಂದಿರುವ ಕಾರಣ, ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿ ಈ ವಿಚಾರಕ್ಕೆ ಹೆಚ್ಚು ಗಮನಕೊಡಬೇಕಾಗಿದೆ ವಿದ್ಯಾಭ್ಯಾಸ ಇಲಾಖೆಯ ಅಧಿಕಾರಿಗಳು ನಡಸುವ ಆಡಳಿತದ ರೀತಿ ವಿವರಗಳಿಂದಲೂ ~~ಕನ್ನಡಕ್ಕೆ ಅಪಾಯ ತಗಲದಂತೆ~~ ಡೈರೆಕ್ಟರವರು ನೋಡಿಕೊಳ್ಳಬೇಕೆಂದೂ ವಿಶ್ವವಿದ್ಯಾನಿಲಯದವರು ಸಹ ಈ ವಿಚಾರದಲ್ಲಿ ಕನ್ನಡಕ್ಕೆ ಸಲ್ಲಬೇಕಾದ ಆದರಣೆಯನ್ನು ಗಮನದಲ್ಲಿರಿಸಬೇಕೆಂದೂ, ಕಾರ್ಯನಿರ್ವಾಹಕ ಮಂಡಲಿ ಬೇಡುತ್ತದೆ.

ಒಬ್ಬ ವ್ಯಕ್ತಿಯ ವಿಶ್ವಾಸವನ್ನು ಅವನ ವರ್ಣ ಮತ್ತು ವಾಕ್ಯಗಳಿಂದ ಅರಿಯಲಾಗುವುದಿಲ್ಲ; ಆದರೆ ಅವನ ವಿಶ್ವಾಸ ಬಲದಿಂದ ಪರಿಪಾಟಿ ಮಾಡಲ್ಪಟ್ಟ ಕಾರ್ಯಗಳಿಂದ ಮಾತ್ರ ಅದನ್ನು ವಿಶದವಾಗಿ ತಿಳಿಯಲು ಸಾಧ್ಯ.

ಬರ್ನಾರ್ಡ್ ಷಾ.

ಸ್ಫುಟವಿಚಾರಗಳು

ಇದು ಸದಾಚಾರವೋ ಅನಾಚಾರವೋ?

ಕೊಂಗ್ರೆಸ್ಸಿನ ಧುರೀಣರೆಂಬವರು ಒಬ್ಬೊಬ್ಬರಾಗಿ ಕೊಂಗ್ರೆಸ್ಸಿನ ಕೆಲಸಕ್ಕೆ ರಾಜೆಕೊಟ್ಟು ಹಿಂದೆಬೀಳುತ್ತಿರುವುದು ಈಗ ಕಂಡುಬರುತ್ತಿದೆ. ಇತ್ತೀಚೆಗೆ ಡಾ। ಅನ್ಸಾರಿಯವರು ದೇಹಪ್ರಕೃತಿಯು ಕೆಟ್ಟ ಕಾರಣವಾಗಿ ರಾಜಿನಾಮೆ ಕೊಟ್ಟರು. ಇದೇ ವಾರ ಶ್ರೀ। ಸಿ. ರಾಜಗೋಪಾಲಾಚಾರ್ಯರೂ ಸಾರ್ವಜನಿಕ ಜೀವನವನ್ನು ತೊರೆದು, ಕೊಂಗ್ರೆಸ್ಸಿನ ಕೆಲಸಕ್ಕೆ ರಾಜಿನಾಮೆ ಕಳುಹಿಸಿದರು. ಮಹಾತ್ಮಾ ಗಾಂಧಿಯವರು ಕೂಡಾ ಎಷ್ಟು ಅಸಂತಪಡಿಸಿದರೂ ಅವರು ಒಡಂಬಡಲಿಲ್ಲವೆಂದು ತಿಳಿದುಬರುತ್ತದೆ. ಯಾವ ಸಮಯದಲ್ಲಿ ರಾಷ್ಟ್ರಧುರೀಣರ ಅವಶ್ಯಕತೆಯು ದೇಶಕ್ಕೆ ಇದೆಯೋ, ಅದೇ ಸಮಯದಲ್ಲಿ ಧುರೀಣರೆಂಬವರು—ಯಾವ ಕಾರಣದಿಂದಲಾದರೂ—ತಟಸ್ಥರಾಗಿ ಕುಳಿತುಬಿಡುವುದು ದೇಶಹಿತದೃಷ್ಟ್ಯಾ ಸದಾಚಾರವಲ್ಲ. 'ಸ್ವಾಮಿಕಾರ್ಯಕ್ಕೆ ತಾಮುಮಿಯಲೇ ಬೇಕು ಸಮಗಿಲ್ಲ' ಎಂದಿರುವಾಗ, ಮುಖಂಡರು ತಮ್ಮ ಖಾಸಗಿ ತಾಪತ್ರಯಗಳನ್ನು ಮುಂದಿರಿಸಿ, ರಾಜಕೀಯ ರಂಗದಲ್ಲಿ ಹಿಂಗಿಬೀಳುವುದು ಭೂಷಣಪ್ರಾಯವಾಗಿಲ್ಲ. ಧನ್ಯಾಭಿಪ್ರಾಯಕ್ಕೆ ತಲೆಯೊಡ್ಡಿ ರಾಷ್ಟ್ರಸೇವೆ ಮಾಡಲು ಕೂಡದ ಮುಂದಾಳುಗಳು 'ಮುಂದಾಳುಗಳು' ಎಂಬ ಕರೆಯಿಸ್ಲ್ಪಡಲು ಎಂದೂ ಅರ್ಹರಲ್ಲ. ಯಾರು ತನ್ನ ಸ್ವಂತ ವಿಚಾರಗಳನ್ನು ಮರೆತು ರಾಷ್ಟ್ರಕಾರ್ಯಕ್ಕಾಗಿ ಮಡಿಯಲು ಸಿದ್ಧನಿರುವನೋ ಅವನೇ ನಿಜವಾದ ಮುಂದಾಳು. ಈ ದೃಷ್ಟಿಯಿಂದವಲೋಕಿಸಿದರೆ ನಮ್ಮ ದೇಶದಲ್ಲಿ 'ಧುರೀಣರು' ಎಂಬವರು ಎಷ್ಟಿರುವರೆಂದು ನಾವೇ ತಿಳಿಯಬಹುದು.

ಸೈನ್ಯದ ಹಿಂದೀಕರಣ ಸಮಸ್ಯೆಯು

ಸದ್ಯಕ್ಕೆ ಬಗೆಹರಿಯುವ ಸೂಚನೆಯು ಎಲ್ಲಿಯೂ ಕಂಡುಬರುವುದಿಲ್ಲ. ಮೂರು ರೌಂಡ್‌ಟೇಬಲ್ ಪರಿಷತ್ತುಗಳಲ್ಲಿ ಈ ವಿಷಯಕವಾಗಿ ಠರಾವುಗಳಾದರೂ, ಸೈನ್ಯವಿಷಯಕವಾಗಿ ಹಿಂದೂದೇಶಕ್ಕೆ ಏಕಾದ ಸೌಕರ್ಯಗಳೇನೆಂದು ಮಹಾತ್ಮಾಗಾಂಧಿಯವರು ಲಂಡನ್ನಿನಲ್ಲಿ ಕೂಲಂಕಷವಾಗಿ ತಿಳಿಸಿದರಾದರೂ ಬ್ರಿಟಿಷ ಸರಕಾರವು ಈ ಮಾತಿಗೆ ಹೆಚ್ಚಿನ ಲಕ್ಷ್ಯವಿತ್ತಂತೆ ತೋರುವುದಿಲ್ಲ. ಜೈಂಟ್ ಸಿಲೆಕ್ಟ್ ಕಮಿಟಿಯ ವರದಿಯು ಕೂಡಾ ಈ ಪ್ರಶ್ನೆಯನ್ನು ಪೂರ್ಣವಾಗಿ ಪರಿಷ್ಕರಿಸಿಬಿಡುವ ಅಭಿಪ್ರಾಯವನ್ನು ಸೂಚಿಸಿರುವುದಿಲ್ಲ. 'ಹಿಂದೂದೇಶದ ಯೋದ್ಧ ವರ್ಗದವರೊಳಗಿರುವ ಭೇದಾಭೇದದ ಪರಿಣಾಮವಾಗಿ ಸೈನ್ಯದ ಹಿಂದೀಕರಣದ ಪ್ರಶ್ನೆಯು ಬಿಗುವಾಗಿನಿಂತಿದೆ. ಅಲ್ಲದೆ ಸೈನ್ಯಕ್ಕೆ ಸೇರಬೇಕೆಂದಿರುವ ಹಿಂದೀಯರಲ್ಲಿ ಎಲ್ಲರೂ ವಿವಾಹಿತರಾಗಿರುವುದರಿಂದ ಅವರಿಗೆ ಪ್ರತ್ಯೆ ಪ್ರತ್ಯೇಕ ವಸತಿಗಳನ್ನು ಕಟ್ಟಿಸಿಕೊಡುವುದು ಕಷ್ಟತರವಾಗಿದೆ' ಎಂದು ಬ್ರಿಟಿಷ ಸೈನ್ಯಾಧಿಕಾರಿಗಳ ಹೇಳಿಕೆ. ಈ ಮಾತಿನಲ್ಲಿ ಎಷ್ಟು ಜೊಳ್ಳು ತುಂಬಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಇವರಿಗೆ ವಸತಿಗಳನ್ನು ಕಟ್ಟಿಸಿಕೊಡುವುದರಲ್ಲಿ ವೆಚ್ಚವಾಗುವುದಕ್ಕಿಂತ ಹೆಚ್ಚು ದ್ರವ್ಯವು ಬ್ರಿಟಿಷ ಸೈನಿಕರ ಮೇಲೆ ಪೂರಿದ ಸಂಬಳಕ್ಕಾಗಿಯೂ ವರ್ಗಾವರ್ಗಿಗಳಿಗಾಗಿಯೂ ವೆಚ್ಚವಾಗುವುದಿಲ್ಲವೇ? ಈ ಕಾರಣಗಳೆಲ್ಲ ಬರಿಯ ಉತ್ಪ್ರೇಕ್ಷೆ. ಸ್ವಪ್ರಯೋಜನಾರ್ಥವಾಗಿ ಮುಂದುಮಾಡಲ್ಪಟ್ಟವುಗಳು. ಇನ್ನು ಹತ್ತಿಪ್ಪತ್ತು ವರ್ಷಗಳೊಳಗಾದರೂ ಬ್ರಿಟಿಷ ಸರಕಾರವು ಸೈನ್ಯದ ಹಿಂದೀಕರಣವನ್ನು ಮಾಡುವ ಆಶ್ವಾಸನೆಯನ್ನು ಹಿಂದೂದೇಶಕ್ಕೆ ಕೊಡುವುದೇ?

ಬ್ರಿಟನು, ಫ್ರಾನ್ಸ್ ಮತ್ತು ಇಟಲಿಗಳ ಪ್ರಭುತ್ವದವರೊಳಗೆ ಸ್ಟ್ರೆಸಾದಲ್ಲಿ ಸಂಧಾನವು ನಡೆದು ಮೂರು ರಾಷ್ಟ್ರಗಳೂ ವಿಚಾರವಿನಿಮಯ ಮಾಡಿ, ಬೇಕಾದ ನಿರ್ಣಯಗಳನ್ನು ಮಾಡಿಕೊಂಡು ಪರಿಷತ್ತನ್ನು ಯಶಸ್ವಿಯಾಗಿ ಮಾಡಿದುದನ್ನು ಪರಿಶೀಲಿಸುವಾಗ್ಗೆ ಮುಂದಕ್ಕೆ ಯುರೋಪಿನಲ್ಲಿ ಶಾಶ್ವತವಾಗಿ ಶಾಂತಿಸ್ಥಾಪನೆಯಾಗುವುದೋ ಎಂಬ ಆಶೆಯು ಮನದಲ್ಲಿ ಮೂಡುತ್ತಿದೆ. ಮೂರು ರಾಷ್ಟ್ರಗಳೂ ಎಲ್ಲಾ ವಿಷಯಗಳಲ್ಲೂ ಒಪ್ಪಂದ ಮಾಡಿಕೊಂಡಿರುವ ವಿಷಯವು ಯುರೋಪು ಖಂಡಕ್ಕೊಂದು ಅಭಿಮಾನದ ಸಂಗತಿಯೇನೋ ಹೌದು. ಆದರೆ ಇವುಗಳು ಜರ್ಮನಿಯನ್ನು ಸಮಾಧಾನಪಡಿಸವು. ಅದನ್ನು 'ಅಸಾಧ್ಯ'ವೆಂದು ದೂರಬಿಟ್ಟರೆ ತ್ರಿರಾಷ್ಟ್ರಗಳು ಮಾಡಿಕೊಂಡಿರುವ ಸಂಧಾನದ ನಕಲಿಗೆ ಜೀರಿಗೆಯಷ್ಟು ತಾಗುವ ಅಗತ್ಯವೇ ಇರುವುದಿಲ್ಲ. ಮೂರು ರಾಷ್ಟ್ರಗಳ ಮುಖಂಡರೂ ತಾವು ಯುರೋಪಿನ ಪೂರ್ಣ ಶಾಂತಿಗಾಗಿ ಯತ್ನಿಸುತ್ತಿದ್ದೇವೆ ಎನ್ನುತ್ತಿರುವರು. ಇವರ ನುಡಿಗಳು ಶುದ್ಧಹೃದಯದಿಂದ ಬಂದುವುಗಳಾದರೂ ಇವರ ವರ್ತನೆಯ ಪರಿಶುದ್ಧತೆಯು ಮೇಲೆ ಸಾಂಕೇತಿಕವಿರದ ಮಂಚಾಂಗಕ್ಕೆ ಹೊಂದಿಕೊಂಡಿದೆ. ಜರ್ಮನಿಯ ನ್ಯಾಯವಾದ ಕೇಳಿಕೆಗಳಿಗೆ ಇವರು ಮನ್ನಣೆ ಇತ್ತು, ಒಸಾಂಗ ಸಭೆಯ ಹೊರಗಿರುವ ಜರ್ಮನನ್ನು ಪ್ರೈತ್ರೀಭಾವದಿಂದ ತಮ್ಮ ಪಂಗಡಕ್ಕೆ ಸೇರಿಸಿಕೊಂಡು ಮುಂದಿಡಿಯುವುದೇ ಮುಂದಕ್ಕಿರುವ ಸಾಹಸ. ವಿನಹಾ ವಾಕ್ಕಿನಲ್ಲಿ ಮಾತ್ರ ಶಾಂತಿಯನ್ನು ಬಯಸುವುದರಲ್ಲಿಯೂ ಪರಿಷತ್ತುಗಳನ್ನು ಜರಗಿಸುವುದರಲ್ಲಿಯೂ ಅಪೇಕ್ಷಿತ ಫಲವು ಸಿಗಲಾರದು.

"ಕರಾಚಿಯ ಪ್ರಕರಣದ ತನಿಖೆ ಮಾಡುವುದಿಲ್ಲ"

ಹಿಂದೀ ಸರಕಾರವು ಖಂಡಿತವಾಗಿ ಹೇಳಿಬಿಟ್ಟಿತು. "ಜಂತೆಯ ವಿಚಾರಣಾ ಮಂಡಲವನ್ನು ನೇಮಿಸಿ ತನಿಖೆ ನಡೆಸಿದರೆ ಅದರ ವಯಾವ ಪ್ರಯೋಜನವೂ ಸಿಗಲಾರದು ಎಂಬುದರಿಂದ ಆ ಕಾರ್ಯಕ್ಕೆ ನಾವು ಕೈಹಚ್ಚುವುದಿಲ್ಲ" ಎಂದು ಸರಕಾರವು ಹೇಳಿರುತ್ತದೆ. ಆದರೆ ಈ ವಾದದಲ್ಲಿ ಹೆಚ್ಚಿನ ಸಾರವಿಲ್ಲ. ಜಯಾಯ ವಿಷಯದ ಪ್ರಯೋಜನವು ಆಯಾಯ ವಿಷಯದಲ್ಲೇ ಇದೆ. ಕರಾಚಿಯ ಗುಂಡೇಟಿನ ಪ್ರಕರಣದ ಕುರಿತಾಗಿ ವಿಚಾರಣೆ ನಡೆದರೆ ನಿಜವಾಗಿಯೂ ತಪ್ಪಿದ್ದವರಾರು ಎಂದು (ಕಷ್ಟದಲ್ಲಾದರೂ) ತಿಳಿದುಬರುತ್ತಿತ್ತು. ಅಥವಾ 'ಇಬ್ಬರೂ ಸರಿ, ಇಬ್ಬರೂ ತಪ್ಪು' ಎಂಬ ಗಾದೆಗನುಸಾರವಾದ ತೀರ್ಮಾನವನ್ನಾದರೂ ಮಾಡಬಹುದಿತ್ತು. ಮೊನ್ನೆ ಲಂಡನಿನಲ್ಲಿ ಮಿ। ಡೇವಿಡ್ ಗ್ರೆನ್‌ವಿಲ್‌ರವರು ಹಾಕಿದ ಪ್ರಶ್ನೆಗೆ ಅಂಡರ್ ಸಕ್ರೆಟರಿ ಆಫ್ ಸ್ಟೇಟ್ ಫೋರ್ ಇಂಡಿಯಾ (ಮಿ। ಆರ್. ಎ. ಬಟ್ಲರ್) ಇವರು 'ಮಿಲಿಟರಿಯವರೂ ಮುಂಬಾಯಿ ಸರಕಾರವೂ ಕರ್ತವ್ಯನಿಷ್ಠೆಯಿಂದ ಕೆಲಸ ಮಾಡಿರುವರು" ಎಂದು ಹೇಳಿ ತನಿಖೆಯ ಅಗತ್ಯವಿಲ್ಲವೆಂದುದರಲ್ಲೂ ಸಕಾರಣಯುಕ್ತವಾದ ಪ್ರತಿಪಾದನೆಯಿಲ್ಲ. ಇಂತಹ ಪ್ರಸಂಗದಲ್ಲಿ ಸರಕಾರವು ಹೆಚ್ಚಿನ ಗಮನವನ್ನಿಡದೆ ವರ್ತಿಸುವುದು ಅದಕ್ಕೆ ಹಿತಕರವಾಗಿಲ್ಲ. ಸಾರ್ವಜನಿಕರಿಗೆ ಅದರ ಮೇಲಿನ ಮಮತಾದರಗಳು ಕಡಿಮೆಯಾಗಲು ಇಂತಹ ವರ್ತನೆಯು ಕಾರಣವಾದೀತು. ಸರಕಾರವು ತನಿಖೆಯ ವಿಷಯವಾಗಿ ಲಕ್ಷ್ಯ ಕೊಡಲು ಸಮರ್ಥವಾಗಿಲ್ಲವಾದರೂ, ಜನರ ಕೇಳಿಕೆಗಳಿಗೆ ತಕ್ಕ ಸಮಾಧಾನವನ್ನಾದರೂ ಕೊಡಬಹುದಿತ್ತು. ಅದು ಸರಕಾರದ ಕರ್ತವ್ಯ.

ಮೈಸೂರಿನ ಸಮಾಚಾರಗಳು.

ಬೆಂಗಳೂರು ಪತ್ರ-ಸ್ವಂತ ಪ್ರತಿನಿಧಿಯಿಂದ

ಬೆಂಗಳೂರು, ೧೬—೪—೩೫.

ರೈತರೂ ಮೈಸೂರು ಸರಕಾರವೂ.

ಮೈಸೂರು ದೇಶದಲ್ಲಿ ಸರಿಯಾದ ಮಳೆ ಬೆಳೆಯಿಲ್ಲದೆ ಕಷ್ಟಪಡುತ್ತಿರುವ ರೈತರ ಕಷ್ಟ ನಿವಾರಣೋಪಾಯವನ್ನು ಪರಿಶೀಲಿಸಿ ಸಲಹೆ ಕೊಡುವುದಕ್ಕಾಗಿ ಸರಕಾರದವರು ಒಂದು ಸಮಿತಿಯನ್ನು ಏರ್ಪಡಿಸಿದ್ದರು. ಆ ಸಮಿತಿಯು ಈ ಸಂಬಂಧವಾಗಿ ಪರಿಸ್ಥಿತಿಯನ್ನು ಪರಿಶೀಲಿಸಿ ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿದೆ. ವರದಿಯ ಸಲಹೆಗಳಲ್ಲಿ ಮುಖ್ಯವಾದುವು ಎರಡು—ಭೂಕಂದಾಯವನ್ನು ಕಡಿಮೆ ಮಾಡುವುದು ಮತ್ತು ರೈತರಿಗೆ ಎಲ್ಲಾ ಬಗೆಯ ಅವಶ್ಯವಿರುವ ಸಹಾಯಗಳನ್ನು ಕೊಡಲು ಅಲ್ಲಲ್ಲಿ ಸಂಘಗಳನ್ನು ಏರ್ಪಡಿಸುವುದು. ವರದಿಯ ಸಲಹೆಗಳನ್ನು ಸರಕಾರದವರು ಅನುಮೋದಿಸಿದ್ದಾರೆಂದು ತಿಳಿದುಬರುತ್ತದೆ.

ಕೆಂಟೋನ್ಮೆಂಟು ಕಾಂಗ್ರೆಸ್ ಸಮಿತಿ

ಕೆಂಟೋನ್ಮೆಂಟಿನ ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಮೊದಲನೆಯ ಮೀಟಿಂಗು ೩೨ ೭ನೇ ದಿನ ಸಂಜೆ ನಡೆಯಿತು. ಸಮಿತಿಯು ಅಧಿಕಾರಿಗಳ ಚುನಾವಣೆ ಯಾದ ನಂತರ, ಬಾಬೂ ರಾಜೇಂದ್ರಪ್ರಸಾದರವರು ಕೈಗೊಂಡಿರುವ ಅಖಿಲಭಾರತ ಸಂಚಾರ ಸಂಬಂಧದಲ್ಲಿ ಅವರು ಬೆಂಗಳೂರು ಕೆಂಟೋನ್ಮೆಂಟಿಗೂ ಬರುವಂತೆ ಪ್ರಾರ್ಥಿಸಿಕೊಳ್ಳತಕ್ಕದೆಂದು ತೀರ್ಮಾನವಾಯಿತು.

ದ್ವಿತೀಯ ಸಂಗೀತ ಸಮ್ಮೇಳನ

ಇದೇ ತಾ ೧೪ರಲ್ಲು ಬೆಳಗ್ಗೆ ಮೈಸೂರು ದಿವಂಗತ ಗಾನವಿಶಾರದ ಬಿಡಾರ ಕೃಷ್ಣಪ್ಪನವರ ಶ್ರೀ ಸೀತಾರಾಮ ಮಂದಿರದಲ್ಲಿ ದ್ವಿತೀಯ ಸಂಗೀತ ಸಮ್ಮೇಳನವು ಪ್ರಾರಂಭವಾಯಿತು. ಆದ ಪ್ರಾರಂಭೋತ್ಸವವನ್ನು ಸರ್ ಮಿ. ರಾಮಸ್ವಾಮಿ ಅಯ್ಯರವರ ನೆರವೇರಿಸಬೇಕಾಗಿತ್ತು. ಅವರು ಒದಗಿದ ಅನನುಕೂಲದಿಂದ ಮೈಸೂರಿನ ಶ್ರೀ ಅಂಬಿಲ ಸುಬ್ರಹ್ಮಣ್ಯ ಅಯ್ಯರವರು ಪ್ರಾರಂಭೋತ್ಸವನ್ನು ಜರುಗಿಸಿದರು. ಕೀರ್ತನಾಚಾರ್ಯ ಶ್ರೀಮಾನ್ ಸಿ. ಆರ್. ಕುಂಭಕೋಣಂ ಸ್ವಾಮಿ ಯ್ಯಂಗಾರ್ಯರವರು ಸಮ್ಮೇಳನದ ಅಧ್ಯಕ್ಷರಾಗಿದ್ದು, ಶ್ರೀಮಾನ್ ಎಂ. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ಯರವರು ಶ್ರೀ ಸುಬ್ರಹ್ಮಣ್ಯ ಅಯ್ಯರವರಿಗೆ ಒಂದು ಬಿನ್ನವತ್ತಳೆಯನ್ನು ಸಮರ್ಪಿಸಿದರು. ಅನಂತರ ಅಧ್ಯಕ್ಷರು ಎಂ. ಲಕ್ಷ್ಮೀನಾರಾಯಣ ರಾವ್ ಸ್ವಾಗತ ಭಾಷಣವನ್ನು ಓದಿದರು. ಅನಂತರ ಸುಬ್ರಹ್ಮಣ್ಯ ಅಯ್ಯರು ದಿವಂಗತ ಬಿಡಾರ ಕೃಷ್ಣಪ್ಪನವರ ಭಾವಚಿತ್ರ ಅನಾವರಣ ಮಾಡಿದರು. ಅಬಳಿಕ ಅಧ್ಯಕ್ಷರು ಭಾಷಣಮಾಡಿದರು. ಅವರ ತಮ್ಮ ಭಾಷಣದಲ್ಲಿ "ಪ್ರತಿಯೊಂದು ಮನೆಯೂ ಸಂಗೀತದ ಕೇಂದ್ರವಾಗಬೇಕು. ಶಾಲೆಗಳಲ್ಲಿ ಸುಮಧುರ ಸಂಗೀತ ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಿನ ಗಮನಕೊಡಬೇಕು" ಎಂದು ಹೇಳಿದರು.

ಬೇಸಗೆಯ ಹಿಂದೀ ತರಗತಿಗಳು.

ಬೆಂಗಳೂರಿನಲ್ಲಿಯೂ ಮೈಸೂರಿನಲ್ಲಿಯೂ ಬೇಸಗೆಯ ಹಿಂದೀ ತರಗತಿಗಳು ನಡೆಯಲು ಏರ್ಪಾಡಾಗಿದೆ.

ಬೆಂಗಳೂರಿನ ಬೇಸಗೆಯ ಹಿಂದೀ ಶಿಕ್ಷಣ ಕಾರ್ಯಕ್ರಮದ ಪ್ರಾರಂಭೋತ್ಸವವು ೧೧ನೇ ತಾರೀಖು ಸಾಯಂಕಾಲ ದೇಶೀಯ ವಿದ್ಯಾಶಾಲೆಯ ಸಭಾಂಗಣದಲ್ಲಿ ನಿವೃತ್ತ ಸಬಾರ್ಡಿನೇಟ್ ರಾಜಕಾರ್ಯ ಪ್ರವೀಣ ವಿ. ಜಿ. ಬಿ. ಸೋಮಶೇಖರರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರು ತಮ್ಮ ಭಾಷಣದಲ್ಲಿ—ಪ್ರತಿಯೊಬ್ಬ ಕನ್ನಡಿಗನಿಗೂ ಅವನ ಭಾರತೀಯನಾಗುವ ಹಕ್ಕು ಉಂಟು. ಹಾಗೆ ಅವನು ಭಾರತೀಯನಾಗಬೇಕಾದರೆ ಹಿಂದೀ ಭಾಷೆ ಬಂದೇ ತೀರಬೇಕು. ಪ್ರತಿಯೊಬ್ಬನೂ ವಿಶಾಲಭರತ ಖಂಡದ ಭಾಷೆಯನ್ನು ಕಲಿಯಬೇಕು—ಎಂದು ಹೇಳಿದರು. ಬೆಂಗಳೂರು ಮೈಸೂರಿನವರು ಈ ಬೇಸಗೆಯ ಹಿಂದೀ ತರಗತಿಗಳ ಸಂಪೂರ್ಣ ಪ್ರಯೋಜನವನ್ನು ಹೊಂದಬೇಕಾಗಿದೆ. ಹಿಂದೀ ಕಲಿಯುವವರನ್ನು ಯಾರೂ ಬೇಡವೆಂದು ತಡೆಯುವುದಿಲ್ಲ. ತಡೆದರೆ ಕೇಳುವವರೂ ಇಲ್ಲ. ದಿನಂಪ್ರತಿ ಹಿಂದಿಯ ಪ್ರಾಮುಖ್ಯತೆಯು ಹೆಚ್ಚುತ್ತಿದೆ.

ಬೆಂಗಳೂರು ಪೌರಸಭೆಯವರು ಬೇಸಗೆಯ ಹಿಂದೀ ತರಗತಿಗಳ ಸಹಾಯಾರ್ಥವಾಗಿ ೫೦೦ ರೂಪಾಯಿಗಳನ್ನು ದಾನ ಮಾಡಿದರೆಂದು ಕೇಳುತ್ತೇವೆ. ಪೌರಸಭೆಯವರು ಕನ್ನಡಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಲಿ ಎಂದು ನಮ್ಮ ಹಾರೈಕೆ.

ಸಂಪಾದಕರ ಟಿಪ್ಪಾಲು ಪೆಟ್ಟಿಗೆ.

ವಾಚಕರಾದರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು.

(ಸಂ. ಸ್ವ.)

ಪ್ರಜಾಸಂಯುಕ್ತ ಪಕ್ಷವೂ ರೈತರೂ

ನಮ್ಮ ಕೊಪ್ಪ ತಾಲೂಕಿನಲ್ಲಿ ಕೆಲವು ತಿಂಗಳುಗಳ ಕೆಳಗೆ ರೈತರ ಒಂದು ಸಭೆಯು ನಡೆದಿತ್ತಷ್ಟೆ. ಮಾರ್ಚ ೧೧ನೇ "ವಿಶ್ವಕರ್ನಾಟಕ" ಪತ್ರಿಕೆಯಲ್ಲಿ "ಪ್ರಜಾಸಂಯುಕ್ತ ಪಕ್ಷವೂ ರೈತರೂ" ಎಂಬ ಶಿರೋನಾಮೆಯಲ್ಲಿ ಶ್ರೀ। ವಿ. ವೆಂಕಟಪ್ಪ, ಪ್ರಜಾಸಂಯುಕ್ತ ಪಕ್ಷ ಕಾರ್ಯದರ್ಶಿಯವರು ಪ್ರಕಟಿಸಿದ ಲೇಖನವನ್ನು ಪರಿಶೀಲಿಸಿ ನೋಡಿದೆನು. ನಮ್ಮ ಕೊಪ್ಪ ತಾಲೂಕು ರೈತರ ದುಃಸ್ಥಿತಿಯ ಕಷ್ಟನಿವಾರಣೆಯ ಬಗ್ಗೆ ಇದುವರೆಗೂ ಯಾವ ವಿಧವಾದ ನಿರ್ವಾಹಗಳೂ ನಡೆದಂತೆ ಕಂಡುಬರುತ್ತಿಲ್ಲ. ಈ ಬಗ್ಗೆ ಪ್ರಯತ್ನಪಡುತ್ತಿದ್ದ ಶ್ರೀ। ಹೊಸಕೊಪ್ಪದವರು ಈ ದಿಶೆ ಒಂದು ಸಭೆಯನ್ನು ಸೇರಿಸುವರೆಂದು ನಂಬಿದ್ದೇವೆ. ಶ್ರೀನಿವಾಸರಾಯರು ಸರ್ಕಾರದವರ ಮನವಿಗೆ ತಾ ೨೬—೧—೩೫ರಲ್ಲಿ ರೈತರ ಕಷ್ಟನಿವಾರಣೆ ಬಗ್ಗೆ ಸಲಹೆಗಳನ್ನೂ ಅರಿಕೆಗಳನ್ನೂ ಸುಮಾರು ೩೦೦ ರೈತರುಸಹಿತ ಒಬ್ಬ "ಪ್ರಜಾಹಿತೈಷಿ" ಸುಬ್ರಹ್ಮಣ್ಯಂ ಎಂಬವರು ರಿಜಿಸ್ಟ್ರೇಷನ್ ಮೂಲಕ ಕಳುಹಿಸಿದ್ದರೂ ಅಲ್ಲದೆ, ೩. ೨೪—೧—೩೫ರಲ್ಲಿಯೂ ಒಂದು ಮನವಿಯನ್ನು ಇದೇ ಜಿಲ್ಲಾ ಸಬ್ ಡಿವಿಜನ್ ಆಫೀಸರವರ ಮೂಲಕ ಡೆಪ್ಯುಟಿ ಕಮೀಷನರವರಿಗೂ ರವಾನಿಸಿದ್ದರೂ, ಯಾವುದಕ್ಕೂ ಸರ್ಕಾರದವರುಗಳಿಂದ ಪ್ರತ್ಯುತ್ತರವಿಲ್ಲದೇ ಸದರಿ "ಪ್ರಜಾಹಿತೈಷಿ" ಸುಬ್ರಹ್ಮಣ್ಯಂರವರಿಗೆ ರೆವಿನ್ಯೂ ಅಧಿಕಾರಿಗಳೂ ಪೋಲೀಸ್ ಅಧಿಕಾರಿಗಳೂ ಕರೆದು, ಜಿಲ್ಲಾ ಡೆಪ್ಯುಟಿ ಕಮೀಷನರವರ ಹುಕುಂ ಮೇರೆ ವಿಚಾರ ನಡೆಯಿಸ ಪ್ರಯತ್ನಿಸಿದರೂ ಮತ್ತು ರೈತರ ಸಭೆಯನ್ನು ಎಲ್ಲಿಯೂ ಸೇರಿಸಬಾರದಾಗಿಯೂ, ಹುಕುಂ ದಯಪಾಲಿಸಿರುವುದಾಗಿ ಕೇಳಿ ತಿಳಿದುಬರುತ್ತಿದ್ದುದರಿಂದ ನಮ್ಮ ಮಲೆನಾಡಿನ ರೈತರ ಮುಖಂಡರಾದ ಶ್ರೀಮಾನ್ ಹೊಸಕೊಪ್ಪದವರು ಈ ಬಗ್ಗೆ ತಾವು ಹಿಂದೆ ಮುಂದೆ ನೋಡದೆ ಪ್ರವರ್ತಿಸುತ್ತಿದ್ದಂತೆಯೇ ಮುಂದೆಯೂ ಮುಂದುವರಿದು ಮಲೆನಾಡು ರೈತಾಪಿಗಳನ್ನು "ಪ್ರಜಾಹಿತೈಷಿ" ಸುಬ್ರಹ್ಮಣ್ಯಂರವರು ಸರಕಾರದವರಲ್ಲಿ ಅರಿಕೆ ಮಾಡಿಕೊಂಡಿರುವ ಅಂದಗಳಂತೆಯೇ ಸೌಕರ್ಯಗಳನ್ನು ಬಡ ರೈತರು ಪ್ರಯತ್ನಿಸಿ ಪಡೆಯುವಂತೆಯೂ, ನಮ್ಮ ನಾಯಕರ ಶ್ರೀನಿವಾಸರಾಜ' ಸರಕಾರದವರು ತಕ್ಕ ಕಷ್ಟನಿವಾರಣೆಗಳನ್ನು ಸದರಿ "ಪ್ರಜಾಹಿತೈಷಿ" ಸುಬ್ರಹ್ಮಣ್ಯಂರವರು ಈ ಕೊಪ್ಪ ತಾಲೂಕಿನ ಎಲ್ಲಾ ರೈತಾಪಿಗಳ ಪರವಾಗಿ ಸರಕಾರದವರಲ್ಲಿ ವಿನ್ನವಿಸಿಕೊಂಡಂತೆ ಏರ್ಪಡಿಸಿ ಕಾರ್ಯರೂಪಕ್ಕೆ ತರುವಂತೆಯೂ, ಈ ಮಲೆನಾಡು ಬಡ ರೈತಾಪಿಗಳು ಮುನ್ನೆಚ್ಚರಿಕೆ ಕಡೆ "ಪ್ರಜಾಸಂಯುಕ್ತಪಕ್ಷ" ಕಾರ್ಯದರ್ಶಿಗಳು ಗಮನಕೊಟ್ಟು ನಮ್ಮ ಬಡ ರೈತಾಪಿಗಳ ಪರವಾಗಿ ಸಹಾಯಮಾಡಿ ಕಾಪಾಡುತ್ತಾರೆಂದೂ ನಂಬುತ್ತೇವೆ.

ಇತಿ—

"ಪ್ರಜಾಹಿತೈಷಿ".

ಮಾನ್ಯ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲ್‌ನವರ ಶ್ರದ್ಧೆಗೆ.

ಅಯ್ಯಾ,

ಈ ವರ್ಷ ಎಯ್ಡೆಡ್ ಶಾಲೆಗಳ ಸಹಾಯ ಧನವು (Grant) ಕೆಲವರ ಸಹಿತ ಕಡಿಮೆ ಮಾಡಲ್ಪಟ್ಟಿದೆ ಎಂದು ವರ್ತಮಾನವಿದೆ. ಆದರೂ ಇನ್ನೂ ಹೆಚ್ಚಿನ ಶಾಲೆಗಳಿಗೆ ಇಷ್ಟರ ತನಕ ಬಿಲ್ಲಿನ ದರ್ಶನವೇ ಆಗದಿದ್ದುದು ಅತ್ಯಂತ ಶೋಚನೀಯಕರವಾದ ಸಂಗತಿಯೇ ಸರಿ. ಅಂತಹ ಶಾಲೆಗಳಿಗೆ ಗ್ರಾಂಟು ಸಿಗದೇ ಇದ್ದರೆ ಯಾವ ತರದ ಹಾನಿಯನ್ನು ಹೊಂದಿಕೊಳ್ಳಬೇಕೆಂಬುದು ತಿಳಿಯದೆ ಅತ್ಯಂತ ವಿಷಮಾವಸ್ಥೆಯಲ್ಲಿರುವರು. ಅದುದರಿಂದ ಮಾನ್ಯ ಅಧಿಕಾರಿಗಳು ಅದರ ಕಡೆಗೆ ಲಕ್ಷ್ಯವಿಟ್ಟು ಯೋಚಿಸಿ, ಸಂಬಂಧಪಟ್ಟ ಶಾಲೆಗಳಿಗೆ ಬಿಲ್ಲ ಬೇಗನೆ ಕಳುಹಿಸಿ ಕೊಡಬೇಕಾಗಿ ವಿನೀತ ಅಪೇಕ್ಷೆ.

ಬಡ ಮೇನೇಜರ್.

ಅನುಕ್ರಮಣಿಕೆ.

ಕಥೆ	೨
ಪತ್ರಿಕಾ ಪ್ರಪಂಚ	೩
ಪ್ಯಾಂಟ್ ಸ್ಟೋರ್ ಕ	೫
ನಮ್ಮ ಮೈಸೂರಿನ ಪತ್ರ	೭
ಪ್ರದರ್ಶನದ ಪಾಠಪ್ರಸಂಗ	೮
ಅಗ್ರಲೇಖ	
ಸ್ಫುಟವಿಚಾರಗಳು	೯
ನಮ್ಮ ಬೋರ್ಡಿಗೆ ಬಂದ ತೊಡಕೇನು?	೧೦
ವರ್ತಮಾನ ಸಂಗ್ರಹ	
ಊರುಗಳಿಂದ, ತಾಲೂಕುಗಳಿಂದ	೧೨
ವಿವಿಧ ಸಮಾಚಾರಗಳು	೧೬
ನಮ್ಮ ಮುಂದಾಳುಗಳು	೧೮
ಪ್ರಾಣಿವಧೆಯ ರೂಢಿಯನ್ನು ಕೂಡಲೇ ನಿಲ್ಲಿಸಿರಿ	೧೯

ಸ್ವದೇಶಾಭಿಮಾನಿ.

ತಾ ೧೨ನೇ ಶುಕ್ರವಾರ ಎಪ್ರಿಲ್ '೩೫

ನಮ್ಮ ಬೋರ್ಡಿಗೆ ಬಂದ ತೊಡಕೇನು?

ನಮ್ಮ ಯಾವತ್ತು ಸ್ಥಾನಿಕ ಸಂಸ್ಥೆಗಳಿಗೆ ಬಂದಿರುವ ತೊಡಕೆಂದರೆ ಸಮರ್ಥರಾದ ಸದಸ್ಯರ ಅಭಾವ ನಮ್ಮ ಮತದಾರರಲ್ಲಿ ಜೀವ ಕಳೆಯಿಲ್ಲ ಅವರು ಯಾರಿಗೂ ಓಟು ಕೊಡಲಿ ಆತುರರಾಗಿಲ್ಲ ಕೊಟ್ಟರೆ ಯಾರಿಗೂ ಕೊಟ್ಟಾರು ಇಂಥವರೇ ತಮ್ಮ ಪ್ರತಿನಿಧಿಗಳಾಗಬೇಕು—ಎಂಬ ಸಂಗತಿ ಅವರೂ ಯೋಚಿಸುವುದಿಲ್ಲ ಹೀಗಾಗಿ ಸದಸ್ಯರು ಯಾರಲ್ಲಿ ಹೆಚ್ಚಿಗೆ ಹಣವಿದೆಯೋ ಅವರು ಉಮೇದವಾರರಾಗಿರುತ್ತಾರೆ ಅಷ್ಟು, ಮನೆ-ಇಲ್ಲವೆ ಅವು ಇದ್ದವರ ಹಾಗು ತುಂಬಾ ಇದ್ದರೆ ಕೆಲಸವಾಯಿತೆಂದೇ ಲೆಕ್ಕ ಇದರ ಜತೆಯಲ್ಲಿ—ಜಾತಿವಾರು ಬಾವುಟವನ್ನು ಹಿಡಿದು ತಿರುಗಬೇಕು ಈ ನಿಶಾನಿ ಹಿಡಿದುಬಿಟ್ಟರೆ ಎರಡನೆಯ ವಿಚಾರವೇ ನಮ್ಮ ಕಣ್ಣಿಗೆ ಕಾಣುವುದಿಲ್ಲ ನಮ್ಮ 'ಜಾತಿಯ ಮಗನಿಗೆ ನಮ್ಮ ಓಟು ಆದರೆ ಜಾತಿಗೂ ಬೋರ್ಡಿನ ಆಡಳಿತಗೂ ಯಾವ ಸಂಬಂಧವಿದೆ ಎಂದು ಯೋಚಿಸುವವರಿಲ್ಲ. ಇದ್ದರೆ ಅದು 'ಜಾತಿ ಬಂಧುಗಳಿಗೆ' ಕೆಲಸಕೊಡಿಸುವ ಸಂಬಂಧವೊಂದೇ ನಮ್ಮ ಹಿಂದಿನ ಬೋರ್ಡುಗಳು ಈ ಇತಿಹಾಸವನ್ನು ಹೇಳಿದ್ದಾವು ಈ ಬೋರ್ಡು ಬೇರೆ ಕಥೆ ಹೇಳುವುದೆಂಬ ವಿಶ್ವಾಸವೇಕೆ?'

ಬರತಕ್ಕ ಸದಸ್ಯರಲ್ಲು ನಾವು ವಿಶೇಷ ವ್ಯತ್ಯಾಸ ಕಾಣುವುದಿಲ್ಲ ಅದೊಂದು ಗೌರವದ ಹುದ್ದೆ, ಆದುದರಿಂದ ತಾವು ಉಮೇದುವಾರರಾಗಬೇಕೆಂಬುದೇ ಜನರ ತಲೆಯಲ್ಲಿ ಸಭೆಯಲ್ಲಾಗುವ ಕಾರ್ಯಕ್ರಮದ ಅರಿವು ಕೊನೆಯತನಕವೂ ಇಲ್ಲದ ಜನರು ಬೇಕಷ್ಟು ನಮ್ಮಲ್ಲಿದ್ದಾರೆ ಓದು ಬರಹ ಸಾಕಷ್ಟು ಇಲ್ಲದ ಪ್ರಾಣಿಗಳು—ಜಿಲ್ಲೆಯ ಸಾರ್ವಜನಿಕ ವಿಚಾರ, ಆರ್ಥಿಕಧೋರಣೆಗಳ ವಿಷಯವೇನು? ಅಭಿಪ್ರಾಯಪಟ್ಟವು? ನಮ್ಮ ಜಿಲ್ಲೆಯ ಸ್ತ್ರೀ ಸದಸ್ಯರಲ್ಲಿ ಬಹುಪಕ್ಷ ಅಲಂಕಾರದ ಗೊಂಬೆಗಳು ಆದರೆ ವಿದ್ಯಾವತಿಯರಾದ ಬಡ ಜನರಿಗೆ ಆ 'ಅಧಿಕಾರ' ಸಿಗಬಾರದು ಇನ್ನು ಇತರ ಸದಸ್ಯರಲ್ಲಿ—ವಕೀಲರಂಥ ಬಲ್ಲವರೂ ಬೋರ್ಡಿನ ಪಾಲಿಗೆ ಗೊಂಬೆಗಳೇ ಆಗಿರುತ್ತಾರೆ. ಮುಖ್ಯಕಾರಣವಿಷ್ಟೆ—ಅವರಿಗೆ ತಾತ್ಪರ್ಯ ಬಹಳ. ಅವರು ಬೋರ್ಡಿಗೆ ಬರುವುದೆಂಬುದು 'ಗೌರವದ ಮೆಂಬರಿಕೆಯ ಉಪಯೋಗಕ್ಕೆ. ಆ ಗೌರವದ ಹಿಂದೆ ಜವಾಬುದಾರಿಯಿದೆಯೆಂದೂ ಅವರೂ ತಿಳಿದಿಲ್ಲ, ಮತದಾರರೂ ಅವರಿಗೆ ತಿಳಿಸಿಲ್ಲ.

ಈ ಹೇಯ ಸ್ಥಿತಿಯು ನಿಲ್ಲಬೇಕಾದರೆ ಜನರು ಎಚ್ಚರವಾಗಬೇಕು ಮತದಾರರು ಅವರನ್ನು 'ಏನು ಮಾಡಿದ್ದೀರಿ ಈ ವರುಷ?' ಎಂದು ಕೇಳಬೇಕು ತಮ್ಮ ಪ್ರತಿನಿಧಿಗಳನ್ನು ತಾವೇ ಆರಿಸುವಂತೆ ಅವರು ಸಂಘಟಿತರಾಗಬೇಕು ಅಲ್ಲಲ್ಲಿನ ಸಹಕಾರಿ ಸಂಸ್ಥೆಗಳೂ, ಮುಖ್ಯತಃ ಭೂಮ್ಯಾಲೀಕರ ಸಂಘಗಳೂ, ಪಂಚಾಯತಗಳೂ ಹಳ್ಳಿನ ಚಟುವಟಿಕೆ ವಹಿಸಬೇಕು ಸ್ವಾರ್ಥಿಗಳೂ, ದುಷ್ಟಿನ ಹಂಗಿಗರೂ, 'ಜಾತಿ ರೋಗಿ'ಗಳೂ ಈ ಪ್ರಾತಿನಿಧ್ಯಕ್ಕೆ ಕಾಲಿಡದಂತೆ ಎಚ್ಚರ ವಹಿಸಬೇಕು

ಅನಂತರ—ಅಲ್ಲಿ, ಇಲ್ಲಿ ಒಬ್ಬೊಬ್ಬ ಸದಸ್ಯರು ಉತ್ಸಾಹ, ನಿಸ್ವಾರ್ಥತೆ ತೋರಿದರೂ ಪ್ರಯೋಜನವಿಲ್ಲ ತಮ್ಮ ನಂಟನೊಬ್ಬನಿಗ ಎರಡು ಕಾಸಿನ ಲಾಭ ದೊರಕುವುದಾದರೆ ಬೋರ್ಡನ್ನೆ ತಲೆಕೆಳಗೆ ಮಾಡಲು ಸಿದ್ಧರಿರುವ ಸದಸ್ಯರಿರುವಾಗ—ಯಾವ ಹೊಸ ಯೋಜನೆಗೂ ವ್ಯವಸ್ಥೆ ಬೇಕು ಜಿಲ್ಲೆಯಲ್ಲಿ ಕೆಲಸಗಾರರ ಕೂಟವೊಂದು ಬೇಕು ಅವರು ಈ ಕೆಳಗಿನ ವಿಚಾರಕ್ಕೆ ಕೈಯಿಕ್ಕಬೇಕು

ಮೊದಲಿಗೆ ಬೋರ್ಡಿಗೆ ಹಣ ದೊರೆಯುವ ಹಾದಿಗಳಾವುವು ಅವುಗಳ ವಿನಿಯೋಗದ ಸ್ಥಿತಿಯೇನು ಈ ಕಾನೂನುಗಳನ್ನು ಕಲಿಯಲೇ ಬೇಕು ನಮ್ಮ ಪ್ರತಿನಿಧಿಗಳಲ್ಲಿ ಬಹು ಅಂಶದವರಿಗೆ ಇದರ ಗಂಧಗಾಳಿಯೂ ಇರುವುದಿಲ್ಲ

ಅನಂತರ—ಪ್ರತಿನಿಧಿಗಳು ತಮ್ಮ ಒಂದು ಧ್ಯೇಯದ ಸಲುವಾಗಿ ಒಂದು ಪಂಗಡ ರಚಿಸಿ, ಆ ಪಂಗಡದ ಪರವಾಗಿ ಸದಸ್ಯರನ್ನು ಆರಿಸಬೇಕು ಜನರಿಗೆ ಮುಂದಾಗಿ ತಮ್ಮ ಧೋರಣೆ ಇ ಧದ ತ ವ್ರ ಬೋರ್ಡಿನ ಆಯ ವ್ಯಯ ಸಲು ಹೀಗೆ ಮಾಡತಕ್ಕವರು, ಜಿಲ್ಲೆಯ ಸಲುವಾಗಿ ಈ ಕೆಲಸ ಮಾಡಿಸುತ್ತೇವೆ ಅದಕೆ ಇಷ್ಟು ಉಪ್ಪನ್ನ ಬೇಕು ಅದನ್ನು ಹೀಗೆ ಒದಗಿಸಬೇಕು—ಎಂದು ಬನ್ನಾಗಿ ಮತದಾರರಿಗೆ ತಿಳಿಸಬೇಕು.

ಆಗಾಗ ಮತದಾರರಿಗೆ ತಪ್ಪಿಲ್ಲದಾದ ಆಗದ ಕೆಲಸಗಳನ್ನು ವಿವರಿಸಿ ತಿಳಿಸಬೇಕು.

ಮತದಾರರ ಆವಶ್ಯಕತೆಗಳೇನೆಂದು ತಿಳಿಯಬೇಕು ಉವಸ ಸ್ತ್ರೀಯನ್ನು ... ಬೇಕು

ಇವನ್ನೆಲ್ಲ ಬಿಟ್ಟು—ನಾನು ನಮ್ಮಪ್ಪನ ಕಾಲದಿಂದಲೂ ಮೆಂಬರನು, ಇನ್ನು ಅವು ನನ್ನ ಕುಟುಂಬಕ್ಕೆ ಮೂಲಗೇಣಿಗೆ ದೊರೆಯಬೇಕು ಎಲ್ಲಾ ತರದ ಸೇವೆ ಮಾಡುವುದರಲ್ಲಿ ನಾನು ನಿಪುಣ—ಎಂದು ವೋಟಿನ ಸಮಯ ಸಕ್ಕರೆ ಪಾನಕ ಹೋಳಿಗೆ ಆದಿಯಿಂದ ಸುಧಾರಿಸುವ ಸದಸ್ಯರನ್ನು ಬೋರ್ಡಿನ ಒಳಕ್ಕೇ ಕಾಲಿರಿಸಲು ಬಿಡದಿರಬೇಕು

ಭಗಿನಿ ಸೇವಾ ಸಮಾಜ

ಮೈಸೂರಿನ ಭಗಿನಿ ಸೇವಾಸಮಾಜವು ಅದರ ಗೌರವ ಕಾರ್ಯದರ್ಶಿಗಳಾದ ಶ್ರೀಮತಿ ವೈ ಕೆ ಅಮೃತಬಾಯಿಯವರ ನೇತೃತ್ವದಲ್ಲಿ ಬಹಳ ಅಭಿವೃದ್ಧಿ ಹೊಂದುತ್ತಿದೆ ಅವರು ಕನ್ನಡದಲ್ಲಿ ವಿಶೇಷ ಅಭಿಮಾನವುಳ್ಳವರು ಈಗ ಒಂದು ವರ್ಷದ ಕೆಳಗೆ ಸಮಾಜದ ಕರ್ನಾಟಕ ಸಂಘವನ್ನು ಸ್ಥಾಪಿಸಿದರು ಈಗ ಸಮಾಜಕ್ಕಾಗಿ ಪ್ರತ್ಯೇಕ ಕಟ್ಟಡವನ್ನು ಸಂಪಾದಿಸಬೇಕೆಂದು ಅವರೂ ಅವರ ಸಹೋದ್ಯೋಗಿಗಳೂ ಬಹಳ ಪ್ರಯತ್ನಪಡುತ್ತಿದ್ದಾರೆ ಕಟ್ಟಡದ ಸಹಾಯಾರ್ಥವಾಗಿ ಮಹಾರಾಜರವರು ೮೦೦೦ ರೂ ಗಳನ್ನು ದಯಪಾಲಿಸಿರುವರು.

ವಿಜ್ಞಾನ ಶೋಧೆಗಳು

ಆಕಾಶಬಾಣಗಳ ಸದುಪಯೋಗ

ಜಪಾನಿನಲ್ಲಿ ಒಬ್ಬ ಶೋಧಕನು ಒಂದು ವಿಚಿತ್ರ ಆಕಾಶಬಾಣವನ್ನು ರಚಿಸಿರುವನು ಅದರ ತುದಿಯಲ್ಲಿ ಸಾವಿರಾರು ಗುಂಡುಗಳಿವೆ. ಈ ಆಕಾಶಬಾಣದ ಬಾಲಕ್ಕೆ ಬೆಂಕಿಕೊಟ್ಟೊಡನೆ ಅದು ಆಕಾಶಕ್ಕೆ ಹಾರುತ್ತದೆ. ಇಂತಿಷ್ಟೇ ಎತ್ತರಕ್ಕೆ ಹಾರಿದೊಡನೆ ಅದರ ಬಾಯಿಯಲ್ಲಿರುವ ಗುಂಡುಗಳು ಹೊರಗೆ ಹಾರುವುವು ವೈರಿಗಳ ವಿಮಾನಗಳನ್ನು ಸುಡುವುದಕ್ಕೆ ಇದೊಂದು ಮಹದ್ಯೋಜನೆಯಂತೆ. ಮುಂದಿನ ಯುದ್ಧಗಳಲ್ಲಿ ಇದರ ಪ್ರಯೋಗವಾಗಲಿರುವುದು

ಕಲ್ಲಿದ್ದಲಿನ ಮೇಲೆ ಶೋಧೆ

ಕಲ್ಲಿದ್ದಲ ಪ್ರಯೋಜನಗಳು ಹಲವಿವೆ ಇತ್ತೀಚೆಗೆ ಇನ್ನೊಂದು ಪ್ರಯೋಜನವು ಸಿಕ್ಕಿದೆ ಒಂದು ತುಂಡು ಕಲ್ಲಿದ್ದಲನ್ನು ಒಂದು ನೂತನ 'ಸ್ಟವ್'ಗೆ ಕಟ್ಟಿಗೆಯನ್ನಾಗಿ ಉಪಯೋಗಿಸಿದರೆ ಅದು ತಾನಾಗಿಯೇ ಒಂದರಿಂದ ಒಂದೂವರೆ ದಿನದ ತನಕ ಸುಡುತ್ತ ಇರುವುದು ಈ ಕಲ್ಲಿದ್ದಲಿನ ತುಂಡಿಗೆ ವಿಚಿತ್ರವಾದ ಜ್ವಾಲಾಶಕ್ತಿಯು ಇರುವುದು

ತಾರು

ಗೋಡೆಗೆ ಬಳಿಯುವ ತಾರಿನ ಪ್ರಯೋಜನವು ಬಹಳವಿದ ಈಗೀಗ ಸಕ್ಕರೆಯ ಬದಲಿಗೆ ಉಪಯೋಗಿಸಲ್ಪಡುವ ಸೆಕ್ರಿನ್ ಎಂಬ ಪದಾರ್ಥವು ತಾರಿನಿಂದಲೇ ಉಂಟಾಯಿತು (Naphthalene) ಅಥವಾ ಪ್ಲೇಗ್‌ಗೋಳಿ ಎಂಬ ವಸ್ತ್ರದ ಹುಳುಗಳನ್ನೋಡಿಸುವ ಬಿಳಿಯ ಗುಳಿಗೆಯೂ ಅದರಿಂದಲೇ ಉಂಟಾದುದು ಕಾರ್ಬೋಲಿಕ್ ಎಸಿಡ್ ಎಂಬುದೂ ತಾರಿನಿಂದ ಉಂಟಾದುದು ಫೋಟೋಗ್ರಾಫರನು ಚಿತ್ರಗಳನ್ನು ಡೆವೆಲೊಪ್ ಮಾಡಲು ಉಪಯೋಗಿಸುವ ಕೆಲವು ದ್ರಾವಕಗಳು ತಾರಿನಿಂದ ಬಂದವುಗಳು ಜೆಸ್ಮಿನ್, ಒಟ್ಟೊ, ರೋಸ್, ಮಸ್ಕ್, ಅತ್ತರ್ ಮತ್ತು ಅನೇಕ ಬಗೆಯ ಪರಿಮಳ ದ್ರವ್ಯಗಳನ್ನು ತಾರಿನಿಂದ ತಗೆಯುತ್ತಾರೆ ಅನೇಕ ಬಗೆಯ ಎಸೆನ್ಸ್‌ಗಳನ್ನು ಇದರಿಂದಲೇ ತಯಾರು ಮಾಡುತ್ತಾರೆ

ತಾಯಿಯನ್ನು ತಿಂದ ಮರಿಗಳು

ಗೊಡ್ಡಾ ಎಂಬಲ್ಲಿನ ಡುಮ್ಕಾ ಎಂಬಲ್ಲಿ ಒಬ್ಬ ಹಿಂದೀಯ ಪ್ರಾಣಿಶಾಸ್ತ್ರಜ್ಞನು ಒಂದು ದೊಡ್ಡ ಚೇಳನ್ನು ಹಿಡಿದು ಅದನ್ನು ಒಂದು ಬಾಟ್ಲಿಯೊಳಗೆ ಹಾಕಿ ಇಟ್ಟನು ಒಂದೆರಡು ದಿನಗಳಲ್ಲಿ ಅದು ನೂರಕ್ಕು ಮಿಕ್ಕಿ ಮರಿಗಳನ್ನಿಟ್ಟಿತು ಶೋಧೆಯು ನಡೆಯುತ್ತಾ ಇತ್ತು, ಮರಿಗಳು ಹುಟ್ಟಿದ ಎರಡು ದಿನಗಳ ನಂತರ ಆ ಬಾಟ್ಲಿಯೊಳಗೆ ನೋಡಲು, ಚೇಳುಗಳ ತಾಯಿಯು ಕಂಡುಬರಲಿಲ್ಲ. ಅದರ ಎಲುಬುಗಳು ಮಾತ್ರ ಕಂಡುಬಂದವು ಪರೀಕ್ಷಿಸಲಾಗಿ ಹಸಿವನ್ನು ತಡೆಯಲಾರದ ಮರಿಗಳೆಲ್ಲ ಒಟ್ಟುಗೂಡಿ ತಾಯಿಯ ಮೇಲೆ ಬಿದ್ದು ಅದನ್ನು ತಿಂದುವು ಎಂದು ತಿಳಿದುಬಂತು

ಲೋರಿಗೆ ಸೆಕ್ಕಿಟ್ಟಿನ್

ಕೆಲವು ಕಡೆಗಳಲ್ಲಿ ಪೆಟ್ರೋಲನ್ನು ಹೊತ್ತುಕೊಂಡು ಓಡುವ ಲೋರಿಗಳ ಹಿಂದಿನಿಂದ ಒಂದು ಸರಪಣಿಯು ಮಾರ್ಗದ ಮೇಲೆ ಎಳೆಯಲ್ಪಡುತ್ತಾ ಹೋಗುವುದನ್ನು ಕಾಣಬಹುದು ಈ ಸರಪಣಿಯನ್ನು ಲೋರಿಯ ಹಿಂಭಾಗದಲ್ಲಿ ಸಿಕ್ಕಿಸಿರುವರು ಇದು ಏತಕ್ಕಾಗಿ ಎಂದು ಚಿಂತಿಸಿ ಭ್ರಾಂತರಾಗುವವರು ಹಲವರು ಲೋರಿಯು ವೇಗವಾಗಿ ಓಡುವಾಗ ಮಾರ್ಗದಲ್ಲಿ ಆಕಸ್ಮಾತ್ತಾಗಿ ವಿದ್ಯುತ್ತಿನ ಕಿಡಿಗಳು ಏಳುವುದು ಕಾಣಬಹುದು. ಪೆಟ್ರೋಲಿನ ಲೋರಿಯು ವಿದ್ಯುತ್ ಪ್ರವಾಹಕ್ಕೆ ಸಿಕ್ಕಿದರೆ ಅದು ಸುಟ್ಟುಹೋಗುವುದು ಸಹಜ. ಅಂತಹ ವಿದ್ಯುತ್ ಪ್ರವಾಹವನ್ನು ಈ ಸರಪಣಿಯ ಮೂಲಕ ಭೂಮಿಗೆ ಕಳುಹಿಸುವುದಕ್ಕಾಗಿ ಈ ಸರಪಣಿಯನ್ನು ಮಾರ್ಗದಲ್ಲಿ ಎಳೆದೊಯ್ಯುತ್ತಾರೆ.

ಪ್ರಕಾಶದ ಶಕ್ತಿ

ಸೆನ್ ಕ್ಲೆಮೆಂಟೆ ಎಂಬಲ್ಲಿ ವೆಂಕೋವರ್ ಎಂಬವನು ಒಂದು ದೀಪಸ್ತಂಭವನ್ನು ರಚಿಸಿರುವನು. ಅದರ ದೀಪಕ್ಕೆ ೬೦೦,೦೦೦ ಕೇಂಡ್ಲ್‌ಗಳಷ್ಟು ~~ಪ್ರಕಾಶ ಶಕ್ತಿಯುಳ್ಳ ಒಂದು~~ ಭೂತಕನ್ನಡಿ ಇದೆ. ಈ ದೀಪಸ್ತಂಭದ ಬೆಳಕು ೧೦೪ ಮೈಲುಗಳ ದೂರದಲ್ಲಿರುವ ಸಾಂತಾ ಬಾರ್ಬರು ಎಂಬಲ್ಲಿಗೆ ಅನಾಯಾಸವಾಗಿ ಕಾಣುತ್ತದೆ.

ಯೂರೋಪಿನಲ್ಲಿ ಸಂಧಾನ!

ಬ್ರಿಟನ್, ಫ್ರಾನ್ಸ್. ಇಟಲಿಗಳೊಳಗೆ ಮಾತುಕತೆ.

ಶಾಂತಿಸ್ಥಾಪನೆಗಾಗಿ ಸಾಹಸ! ಒಪ್ಪಂದವು ನಡೆಯಿತು

ಯೂರೋಪಿನಲ್ಲಿ ಕಳೆದ ಕೆಲವು ತಿಂಗಳುಗಳಿಂದ ಯುದ್ಧದ ಭಯವು ತಲೆದೋರಿರುವುದೂ ಬ್ರಿಟನಿನ ಪರವಾಗಿ ಸರ್ ಜೋನ್ ಸೈಮನರೂ ಮಿ। ಅಂತೋನಿ ಏಡನರೂ ಜರ್ಮನಿಗೆ ಹೋಗಿ ಅಲ್ಲಿ ಹರ್ ಹಿಟ್ಲರರೊಡನೆ ಮಾತುಕತೆ ನಡೆಸಿ, ಅಲ್ಲಿಂದ ಮೊಸ್ಕೊ ಪ್ರೇಗ್ ವಾರ್ಸಾ ಮೊದಲಾದ ದೇಶಗಳಿಗೆ ಹೋಗಿ ಅಲ್ಲಿಯ ರಾಜನೀತಿಜ್ಞರೊಡನೆ ಸಂಭಾಷಿಸಿದುದೂ ಮೊದಲು ಪ್ರಕಟವಾಗಿತ್ತು. ಇಷ್ಟಾದರೂ ಶಾಂತಿ ಸ್ಥಾಪನೆಯ ಸ್ಥಿರತೆಯು ನರಳು ಎಲ್ಲೂ ಕಂಡು ಬರಲಿಲ್ಲ. ಜರ್ಮನಿಯಲ್ಲಿ ತಾನು ಸೈನ್ಯವನ್ನು ಹೆಚ್ಚಿಸುವೆನೆಂದು ಹರ್ ಹಿಟ್ಲರರು ಹೇಳಿದರು. ಅದಕ್ಕೆ ಉತ್ತರವಾಗಿ ಸಿಞಯರ್ ಮುಸೊಲಿನಿಯವರು ತಾನೂ ಸೈನ್ಯವನ್ನು ಸಿದ್ಧ ಮಾಡಿಕೊಂಡಿರುವೆನೆಂದರು. ಒಂದು ಕಡೆಯಿಂದ ಎಬಿಸೀನಿಯದಲ್ಲೂ ಕ್ಷೋಭೆ. ಇಂತಹ ಸಂದಿಗ್ಧತೆಯನ್ನು ನಿವಾರಿಸಿ ಶಾಂತಿಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಬ್ರಿಟನಿನ ಪ್ರಧಾನ ಸಚಿವರಾದ ಮಿ। ರಾಮ್ಸೆ ಮೆಕ್ಡೊನಾಲ್ಡ್ [illegible] ಫ್ರಾನ್ಸಿನ [illegible] ಎರಡು ಆಯವರೂ [illegible] ಸ್ಟ್ರೇಸಾ ಎಂಬಲ್ಲಿ ಒಂದು ಸಭೆ [illegible] ಹೊರಟರು. ರೂಪ [illegible] ಪ್ರತಿನಿಧಿಗಳು ಅಲ್ಲಿಯ ಬೊರೊಮಿಯೊ ಅರಮನೆಯಲ್ಲಿ [illegible] ಎಂಬ ಕತೆ ನಡೆಸಿದರು. ಅನೇಕ ಮಾತುಕತೆ [illegible] ನಡೆದುವು. ಸೈಮನರು ಬರ್ಲಿನ್ನಲ್ಲಿ ತಾನು ಹಿಟ್ಲರರೊಡನೆ ನಡೆಸಿದ ಸಂಭಾಷಣೆಯ ಸಾರವನ್ನು ತಿಳಿಸಿದರು. ಬ್ರಿಟನಿನ ಸ್ಥಿತಿ [illegible] ಆಲೋಚನೆಗಳು ಏನೆಂದು ತಿಳಿಸಿದರು. ಮುಸೊಲಿನಿ [illegible] ಇಟಲಿಯ ಉದ್ದೇಶಗಳನ್ನು [illegible] ಕಳೆದ ಅನೇಕ ದಿನಗಳ ಚರ್ಚೆಯಾದ ಮೇಲೆ ಪೂರ್ಣ ಸಂಧಾನವು ಈ ಮೂರು ಬಲಗಳೊಳಗೆ ಏರ್ಪ [illegible] ಮತ್ತು ಬ್ರಿಟಿಷ್ ಪ್ರತಿನಿಧಿಗಳ ಸಹಿಯನ್ನು ಕೊಟ್ಟು ಈ ರೀತಿಯ ಪ್ರಕಟಣೆ [illegible].

"ಜರ್ಮನಿಯು ಪುನಃ ಸೈನ್ಯವನ್ನು ಹೆಚ್ಚಿಸಿಕೊಂಡ ಕುರಿತಾಗಿ ಫ್ರಾನ್ಸ್ ಸರ್ಕಾರ ರಾಷ್ಟ್ರಸಂಘಕ್ಕೆ ಅರ್ಜಿ [illegible] ಸಂಬಂಧಪಟ್ಟ ಮೂರು ಪಕ್ಷಗಳೂ ಏಕರೀತಿಯ ಧೋರಣೆಯನ್ನು ಅನುಸರಿಸಬೇಕೆಂದು ಮಂತ್ರಿಗಳು ಒಪ್ಪಿದರು. ಯೂರೋಪಿನ ಪೂರ್ವದೇಶಗಳಲ್ಲಿ ಶಾಂತಿ ಸ್ಥಾಪನೆಯಾಗುವುದಕ್ಕಾಗಿ ಸರ್ವ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕೆಂದು ನಿರ್ಣಯಿಸಿತು.

ಆಸ್ಟ್ರಿಯಾದ ಸ್ವಾತಂತ್ರ್ಯ ಮತ್ತು ಗಾಂಭೀರ್ಯಗಳನ್ನು ಕಾಯಬೇಕಾಗಿಯೂ ಈ ಸಂಬಂಧವಾಗಿ ಏಕರೀತಿಯ [illegible]

ಚುಟುಕು ವಾರ್ತೆ

ಕೊಡೈಕೆನಲ್ ಎಂಬಲ್ಲಿ ಸಭಾ ಸಂಸ್ಥಾನದ ಮಹಾರಾಣಿ ಗುರುಚರಣ [illegible]ಗೆ ಪುತ್ರೋತ್ಸವವಾಗಿದೆ. ಸಂತೋಷ!

ಕೈಬರ್ ಘಾಟಿನಲ್ಲಿ ವಾಹನಗಳು ಹೋಗ ಬಹುದು ಎಂದು ಪ್ರಕಟಿಸಲಾಗಿದೆ. ಒಂದು ರೂಪಾಯಿ ಸುಂಕ ಮಾತ್ರವಿದೆ. ಲಾಭವಾಯಿತು!

ಸಾರ್ವಭೌಮರ ರಜತೋತ್ಸವದ ದಿನ ಬ್ರಿಟಿಷ ನಾವಿಕರ ಮಂಡಲದ ಪೂರ್ಣ ತನಿಖೆಯು ನಡೆಯುವುದು ಸಿದ್ಧರಾಗಲಿ!

ರಾಣೀ ಲೇಡಿ ಅಸ್ಸಾಮಲಿ ಚೆಟ್ಟಿಯಾರರು ಸಾರ್ವಭೌಮರನ್ನೂ ಅವರ ಪತ್ನಿಯವರನ್ನೂ ಮಾರ್ಚ ತಾ ೩೧ರಲ್ಲಿ ವಿಸ್ತಾರ ಮಂದಿರದಲ್ಲಿ ಕಂಡು ಸಂಭಾಷಿಸಿ [illegible] ಚಹಾ ಸಹ ಕುಡಿದರು.

'ನ್ಯೂ ಯೋರ್ಕ್ ಟೈಮ್ಸ್' ಪತ್ರಿಕೆಯ ಪ್ರಸಿದ್ಧ [illegible]ರಾದ ಮಿ। ಅಡೋಲ್ಫ್ ಓಚ್ಸ್ ಎಂಬವರು ಕಾಲವಾದಾಗ ಅವರ ಗೌರವಾರ್ಥವಾಗಿ ಎಸೋಸಿಯೇಟೆಡ್ ಪ್ರೆಸ್ಸಿನ ತಂತಿವಾಹಕ ಕೆಲಸವು ಎರಡು ನಿಮಿಷಗಳ ಕಾಲ ಜಗತ್ತಿನಲ್ಲಿ ನಿಲ್ಲಿಸಲ್ಪಟ್ಟಿತು.

[illegible] ಸಭೆಯು ಅಂತ್ಯವಾಗಿ ಎಲ್ಲಾ ಸದಸ್ಯರೂ ದಿಲ್ಲಿಯಿಂದ ಅವರವರ ಊರಿಗೆ ಹೊರಟರು.

[illegible] ಸಂಬಂಧವಾಗಿ ಕೇಂದ್ರ [illegible] ಯೂರೋಪಿನ [illegible] ಸಂಧಾನ [illegible] ನಿರ್ಣಯ [illegible]

ಯೂರೋಪಿನ ಸಂಧಾನದ [illegible] ಬ್ರಿಟಿಷ್ [illegible]

ಫ್ರಾನ್ಸಿನ [illegible] ಇಂಗ್ಲೆಂಡು ಫ್ರಾನ್ಸ್ ಮತ್ತು ಇಟಲಿಗಳೊಳಗೆ ಒಪ್ಪಂದವಾಗುವುದೆಂದರೆ ಶಾಂತಿ [illegible] "ನಮ್ಮ ಪರಿಷತ್ತು ಅನಿವಾರ್ಯವಾಗಿ [illegible] ಅಂತರ್ರಾಷ್ಟ್ರೀಯ [illegible] ಕೆಲಸವು [illegible] ನಡೆಯುವುದು" ಎಂದರು.

'ನವದಿಲ್ಲಿ'ಯ ಸಂಸ್ಥಾಪಕರಾದ ಲೋರ್ಡ್ ಹಾರ್ಡಿಂಜ್ ದೊರೆಗಳ ಪ್ರತಿಮೆಯನ್ನು [illegible] ಅಲ್ಲಿಯ ಮುನಿಸಿಪಲ್ ಕಮಿಟಿಯು ನಿರ್ಣಯಿಸಿದೆ.

ಕೇಂಪ್ ಬೆಲ್ಪುರದಲ್ಲಿ ಸಿಖ್ಖರಿಗೂ ಹಿಂದೂ ಸನಾತನಿಗಳಿಗೂ ಒಂದು ದೇವಸ್ಥಾನದ ಕುರಿತು ವಿವಾದವೆದ್ದು ಕ್ಷೋಭೆಯುದ್ಭವಿಸಿದೆ.

ಅಲ್ಲಾಹಾಬಾದಿನಲ್ಲಿ ಮಿಶನರಿಗಳಾದ ರೆವರೆಂಡ್ ಸಿ. ಎ. [illegible] (ಅಮೇರಿಕನರು) ಶಿಕಾರಿಗೆ ಹೋಗಿ [illegible] ಗುಂಡು ಹಾರಿ ಅವರೇ [illegible] ಶಿಕಾರಿ ಮುಗಿಯಲಿಲ್ಲ.

ಮುಂಬಾಯಿಯ ಬೆಲ್ಲಾರ್ಡ್ ಎಸ್ಟೇಟಿನಲ್ಲಿ ಒಂದೂ ಪತ್ರಿಕೆಯ ಶಾಖೆಯು ತೆರೆಯಲ್ಪಟ್ಟಿದೆ.

ಬ್ರಿಟಿಷ ಸ್ತ್ರೀಯರುಗಳಿಗೆ ಹಿಂದೀಯರು [illegible]ವಾಗದಂತೆ ಮಾಡಲು ಇಂಗ್ಲಾಂಡಿನಲ್ಲಿ ಚಳವಳಿಯೆದ್ದಿದೆಯೆಂಬುದನ್ನು ಕೇಳಿ ಜಮ್ನಾದಾಸ್ ಮೆಹ್ತಾರವರು ನಿಷೇಧಸೂಚಕ ತಂತಿಯನ್ನು ಅತ್ತ ಕಳುಹಿಸಿರುವರು. ಪ್ರಯೋಜನ?

ಇಂಡಿಯನ್ ಸಿವಿಲ್ ಮತ್ತು ಮಿಲಿಟರಿ ಪೆನ್ಶನಿಯರ ಪರಿಷತ್ತು ಲಂಡನಿನಲ್ಲಿ ಜರಗಿ ತಪ್ಪು ಬಗ್ಗೆ ಹೊಸ ಸುಧಾರಣಾ ರಾಜ್ಯದಲ್ಲಿ ವ್ಯವಸ್ಥೆಯಾಗಬೇಕೆಂದಿರುವರು.

ಇಂಡಿಯಾ ಡೆಲ್ಲಿಯ ಕುರಿತಾಗಿ ತನ್ನ ಧೋರಣೆ [illegible] ಲೋರ್ಡ್ [illegible] ಪತ್ರಿಕೆಯು [illegible]

ಮಾನನೀಯರಾದ ಸಂಸ್ಥಾನಕ್ಕೆ ಗವರ್ನರ್ ಜನರಲ್ [illegible] ಅಧಿಕಾರಗಳನ್ನು ಕೊಟ್ಟಿರುವ [illegible] ಅವರ ವ್ಯವಹಾರ [illegible]

[illegible]

[illegible] ಕಾಂಗ್ರೆಸ್ಸಿನಲ್ಲಿ [illegible] ಪತ್ರಿಕೆ [illegible]

[illegible] ಕಾಂಗ್ರೆಸ್ನಲ್ಲಿ [illegible] ಸರ್ಕಾರ [illegible]

[illegible] ದಿನ ಅವರ [illegible] ಹೊರಗೆ [illegible]

Latest News.

ಬ್ರಿಟಿಷ್ ಬಜೆಟ್-ಎಲ್ಲವೂ ತೃಪ್ತಿಕರ.

ಚೆಂಬರ್ಲೈನರ ಹೇಳಿಕೆ

ಲಂಡನ್, ಎಪ್ರಿಲ್ ೧೫

ಚೆನ್ಸಲರ್ ಒಫ್ ಎಕ್ಸ್ಚೆಕರರಾದ ಮಿ। ನೆವಿಲ್ ಚೆಂಬರ್ಲೈನರು ಪಾರ್ಲಿಮೆಂಟ್ ಸಭೆಯಲ್ಲಿ ತನ್ನ ಆಯವ್ಯಯ ಪತ್ರವನ್ನು ಇಟ್ಟರು. ಅವರ ವರದಿಯು ತೋರಿಸಿರುವಂತೆ ರಾಷ್ಟ್ರದ ಸಾಲವು ೨೩ ೦೦೦,೦೦೦ ಪವನುಗಳನ್ನು ಕಡಿಮೆಯಾದುದರಿಂದಲೂ ಆರ್ಥಿಕ ಮುಗ್ಗಟ್ಟು ಕಡಿಮೆಯಾಗುತ್ತಿದೆಯೆಂದೂ, ಕೈಗಾರಿಕೆಯಿಂದ ಸರಕುಗಳ ಸಿದ್ಧತೆಯು ನೇಕಡಾ ೧೨ರಷ್ಟು ಹೆಚ್ಚಿದೆಯೆಂದೂ, ೩೦ ೦೦೦,೦೦೦ ಪವನುಗಳಷ್ಟು ಹೆಚ್ಚಿನ ರಕ್ಷ ನಡೆದಿದೆಯೆಂದೂ ತಿಳಿದುಬಂದಿದೆ. ಎಲ್ಲಾ ರೀತಿಯಿಂದಲೂ ವ್ಯಾಪಾರವಾಣಿಜ್ಯವು ವಾಯವಾಗುತ್ತಿದೆಯೆಂದೂ ಹೇಳಿದರು.

ಮುಜಾಫರಪುರದಲ್ಲಿ ಭೂಕಂಪ

ಕಲ್ಕತ್ತಾ, ಎಪ್ರಿಲ್ ೧೩

ಈ ದಿನ ಬೆಳಿಗ್ಗೆ ೩ ಘಂಟೆಗೆ ಇಲ್ಲಿ ಭಯಂಕರವಾದ ಭೂಕಂಪವುಂಟಾಯಿತು. ಕಳೆದ ಮೂರು ತಿಂಗಳುಗಳಲ್ಲಿ ಅಲ್ಲಿ ಇಂತಹ ಕಂಪವುಂಟಾಗಿರುವುದಿಲ್ಲ. ನಷ್ಟವಾದ ವಾರ್ತೆಗಳು ಬಂದಿಲ್ಲ. ಕಳೆದ ೨ ದಿನಗಳಿಂದ ಹವೆಯು ತಣ್ಣಗಿರುವುದಿಲ್ಲ.

ಶಾಸನ ಸಭೆಗೆ ಕೃತ್ರಿಮ ಹವೆ ೯೦ ಸಾವಿರ ರೂಪಾಯಿಗಳ ವೆಚ್ಚ

ನ್ಯೂಡೆಲ್ಲಿ, ಎಪ್ರಿಲ್ ೧೩

ಶಾಸನಸಭೆಯ ಮಂದಿರದ ಹವೆಯನ್ನು ತಣ್ಣಗೆ ಮಾಡುವುದಕ್ಕಾಗಿ ಪ್ಲೆಂಟ್ ಸ್ಥಾಪಿಸಿ [illegible] ೯೦,೦೦೦ವೆಂದೂ ಈ ಮಂದಿರದೊಳಗೆ ವಿಶೇಷ ಸೆಕೆಯು ಇರುವುದಿಲ್ಲವೆಂದೂ ಇಂಡಸ್ಟ್ರೀಸ್ ಡಿಪಾರ್ಟ್ಮೆಂಟಿನ ಸೆಕ್ರೆಟರಿಯವರು ಹೇಳಿದರು.

ಸರ್ ಸಾಮುವೇಲ್ ಹೋರರು ಸೌಖ್ಯ ಹೊಂದುತ್ತಿರುವರು

ಲಂಡನ್, ಎಪ್ರಿಲ್ ೧೫

ಸರ್ ಸಾಮುವೇಲ್ ಹೋರರು ತನ್ನ ಅಸ್ವಸ್ಥದಿಂದ [illegible] ವೃದ್ಧಿ [illegible] ಅದರೂ ಸಮಾಧಾನಪೂರ್ವಕ [illegible] ಹೊಂದುತ್ತಿದ್ದಾರೆ. [illegible]

ದಿವಾನರ ಪ್ರಯಾಣ.

ಮೈಸೂರು ದಿವಾನರು [illegible] ದಿನ [illegible] ಬೆಂಗಳೂರು ಬಿಟ್ಟು [illegible] ಉದಕಮಂಡಲಕ್ಕೆ ಪ್ರಯಾಣ ಬೆಳೆಸಿದರು. [illegible] ವೊದಲನೇ ವಾರದಲ್ಲಿ [illegible] ಹಿಂದಿರುಗಬಹುದೆಂದು ನಿರೀಕ್ಷಿಸಲಾಗಿದೆ.

ವಜ್ರಗಳು! —— ವಜ್ರಗಳು!

ನಮ್ಮಲ್ಲಿ ಆಂಟ್‌ವರ್ಪ್‌ನಿಂದ ನೇರಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಳೆಗಳಿಲ್ಲದ ಉತ್ತಮ ವರ್ಗದ "ಬ್ಲು ಜಾಗರ" ವಜ್ರಗಳೂ, "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವುಕಾರ ಶ್ರೀನಿವಾಸ ರಂಗ ಪೈ,

ಸಾವುಕಾರ ಮಹಾಲ್ ರಥಬೀದಿ ಮಂಗಳೂರು

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು

B. C. I. Bank Ltd.

Vizagapatam

Applications are invited for Taluk Managers and Agents on Rs. 60 10 150 and Rs 25—30—25—75—100 p m with PENSION and FAMILY RELIEF BONUS CERTIFICATE FREE OF PREMIUMS in the undermentioned places in South Kanara and North Malabar districts

1 Taliparamba Taluk, 2 Tellicherry Town 3 Tellicherry Taluk, 4 Cannanore Taluk, 5, Cannanore Town, 6 Kasaragod Taluk, 7. Hosdurg 8 Mangalore Town, 9 Mangalore Taluk 10 Bantwal, 11 Puttur Taluk, 12 Belthangadi, 13. Karkal, 14 Udipi, 15. Coondapoor 16 Shankaranarayana

Apply with 3 anna postage stamps giving full particulars and enclosing copies of testimonials to—

B. S. Shetty,	or	C. J. Olivar B. A.
Dt. Inspector		Provincial Inspector,
Perdur Post (S. K. Dt.)		Retd. Sub Registrar, Fort Salem

ಮಂಗಳೂರು.

ಇಲ್ಲಿಯ ಬಸೆಂಟ್ ಬಾಲಿಕಾ ಪಾಠಶಾಲೆಯು ಹೆಣ್ಣು ಮಕ್ಕಳು ಕಳೆದ ತಾ. ೧೨ರಲ್ಲಿ ವಸಂತೋತ್ಸವವನ್ನು ಆಚರಿಸಿದರು. ಅಂದು ಶ್ರೀಮತಿ ಶಾಂಭವಿ ಪೂಂಜ ಬಿ. ಎ.ಯವರು ಒಂದು ಫೆನ್ಸಿ ಬಜಾರನ್ನು ತೆರೆದುದಲ್ಲದೆ, ಶ್ರೀಮತಿ ಬಿ. ಗೌರೀಬಾಯಿ ಮಾಧವರಾಯರು ಆಟಪಾಠಗಳಲ್ಲಿ ಗೆದ್ದ ಮಕ್ಕಳಿಗೆಲ್ಲ ಇನಾಮುಗಳನ್ನು ಹಂಚಿದರು.

ಕಳೆದ ಶನಿವಾರ ರಾತ್ರೆ ಕೊಡಿಯಾಲ್‌ಬೈಲಿನಲ್ಲಿ ಶ್ರೀ ತಿಮ್ಮಪ್ಪ ಹೆಗ್ಗಡೆಯವರ ನೇತೃತ್ವದಲ್ಲಿ ೩-೪ ಮೇಳಗಳ ಹುಲಿವೇಷಧಾರಿಗಳಿಂದೊಡಗೂಡಿದ ದಶಾವತಾರ ಆಟವು ಬಹಳ ವಿಜೃಂಭಣೆಯಿಂದ ನಡೆಯಿತು

(ಬರ್ಮದ ಸಹಿತ) ಸಮಗ್ರ ಭಾರತದ ಪೋಸ್ಟಲ್ ಮತ್ತು ಆರ್ ಎಂ ಎಸ್ ಯೂನಿಯನಿನ (ಮಂಗಳೂರು ಬ್ರೆಂಚ್) ಡಿಸ್ಟ್ರಿಕ್ಟ್ ಕೊನ್ಫರೆನ್ಸಿನ ಹತ್ತನೆಯ ಅಧಿವೇಶನವು ಇದೇ ಏಪ್ರಿಲ್ ತಾ. ೨೮ರಲ್ಲಿ ಇಲ್ಲಿಯ ರೋಜಾರಿಯೋ ಸೆಕೆಂಡರಿ ಶಾಲೆಯಲ್ಲಿ ಶ್ರೀಮಾನ್ ಯು ಸಿ ಸುಬ್ರಹ್ಮಣ್ಯ ಭಟ್, ಬಿ ಎ. ಬಿ ಎಲ್ ಎಂ ಎಲ್ ಸಿ ಇವರ ಅಧ್ಯಕ್ಷತೆಯಲ್ಲಿ ಜರಗುವುದು

ಶ್ರೀ ಬಡಿಲ ತಿಮ್ಮಪ್ಪ ಶೆಟ್ಟಿಯವರು ಮಂಗಳೂರು ಬೆಂಚ್ ಕೋರ್ಟಿನ ಒನರರಿ ಮೇಜಿಸ್ಟ್ರೇಟರಾಗಿ ಶ್ರೀ ಪೆರ್ಲ ನಾಂಜು ಶೆಟ್ಟರ ಸ್ಥಾನದಲ್ಲಿ ನೇಮಕವಾಗಿರುವರು.

ಸಾಮ್ರಾಟರ ರಜತೋತ್ಸವ ನಿಧಿಗಾಗಿ ಶ್ರೀ ಕೃಷ್ಣ ಸಿನೇಮಾದವರು ತಾ. ೨೨ರಲ್ಲಿ 'ಲೋಕಲ್' ಮತ್ತು ಹಾರ್ಡಿಯವರ ಪ್ರಹಸನಗಳನ್ನೂ ಮಿಕ್ಕಿ ಮೌಸ್ ಕಾರ್ಟೂನುಗಳೊಡನೆ ೩ ಪ್ರಯೋಗಗಳಿಂದ ಪ್ರದರ್ಶಿಸುವರು

ಮುಂದಿನ ಜಿಲ್ಲಾ ಬೋರ್ಡಿನ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ ಪಕ್ಷದ ಉಮೇದುವಾರರನ್ನು ನಿಲ್ಲಿಸಬೇಕೆಂದೂ ಸಾಧ್ಯವಿದ್ದಷ್ಟು ಉತ್ಸಾಹದಿಂದ ಕಾಂಗ್ರೆಸ್ ಮೆಂಬರರನ್ನು ಹೆಚ್ಚಿಸಬೇಕೆಂದೂ ಜಿಲ್ಲಾ ಕಾಂಗ್ರೆಸ್ ಕಮಿಟಿಯು ತೀರ್ಮಾನಿಸಿ ಶ್ರೀ ಹಲಸನಾಡು ಸುಬ್ಬಯ್ಯನವರು ಜಿಲ್ಲಾ ಕಾಂ. ಕಮಿಟಿಯ ಪ್ರಮುಖ ಕಾರ್ಯದರ್ಶಿಗಳಾಗಿ ಚುನಾವಣೆ ಹೊಂದಿದ್ದಾರೆ

ಡಿಸ್ಟ್ರಿಕ್ಟ್ ಬೋರ್ಡಿನ ಸ್ಪೆಶಲ್ ಸಾಮಾನ್ಯ ಮೀಟಿಂಗ್ ಅದರ ಆಫೀಸಿನಲ್ಲಿ ಇದೇ ತಾ ೨೭ನೇ ಶನಿವಾರ ಬೆಳಗ್ಗೆ ೧೧ ಗಂಟೆಗೆ ಜರಗಿ ೧೯೩೪ ೩೫ನೇ ಇಸ್ವಿಯ ಪುನರ್ವರ್ತಿಸಿದ ಎಸ್ಟಿಮೇಟ್ ವಿಷಯವೂ ೧೯೩೫-೩೬ರ ಬಜೆಟಿನ ಅಂದಾಜು ಪಟ್ಟಿಯ ಅಂದಾಜು ಪಟ್ಟಿಯ ವಿಚಾರವೂ ಸಭೆಯ ಮುಂದಿರಿಸಲಾಗುತ್ತದೆ.

ಕರ್ನಾಟಕ ರಾಜಕೀಯ ಪರಿಷತ್ತು ಮಂಗಳೂರಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಭವ್ಯ ಮಂಟಪದಲ್ಲಿ ಮೇ ತಿಂಗಳ ತಾ ೯, ೧೦ ಗಳಲ್ಲಿ ಜರಗುವುದು ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ ಬಾಬು ರಾಜೇಂದ್ರ ಪ್ರಸಾದರು ಪರಿಷತ್ತನ್ನು ತೆರೆಯುವರು, ಬೆಂಗಳೂರಿನ ಕಾಂಗ್ರೆಸ್ ಮುಖಂಡರಾದ ಶ್ರೀಮಾನ್ ಶ್ರೀ ಪ್ರಕಾಶ್ ಎಂ. ಎಲ್ ಎ ಯವರು ಅಧ್ಯಕ್ಷರು ಪ್ರತಿನಿಧಿ ಹಾಸಲು ರೂ ೨, ೩ ದಿವಸಗಳ ವಸತಿ ಬಾಡಿಗೆ ೮ ಆಣೆ, ಭೋಜನಕ್ಕೆ ದಿನ ಒಂದಕ್ಕೆ ೮ ಆಣೆ, ಊಟ ಒಂದಕ್ಕೆ ೫ ಆಣೆ ಪ್ರೇಕ್ಷಕರ ಪ್ರವೇಶ ಹಾಸಲು ೧ನೇ ತರಗತಿ ರೂ ೨, ೨ನೇ ತರಗತಿ ರೂಪಾಯಿ ೧ ೩ನೇ ತರಗತಿ ೮ ಆಣೆ ಪ್ರತಿನಿಧಿಗಳು ಮಾತ್ರವೆ ಪರಿಷತ್ತಿನ ಚರ್ಚೆಗಳಲ್ಲಿ ಭಾಗ ವಹಿಸಬಹುದು ಪರಿಷತ್ತಿನಲ್ಲಿ ನಿರ್ಣಯಗಳನ್ನು ತರಲಿಚ್ಛಿಸುವವರು ಇದೇ ತಿಂಗಳ ತಾ ೩೦ರೊಳಗೆ ಸ್ವಾಗತ ಕಮಿಟಿಯ ಕಾರ್ಯದರ್ಶಿಗಳಿಗೆ ಅವನ್ನು ಕಳುಹಿಸತಕ್ಕದ್ದು ಎಂದು ತಿಳಿಸುತ್ತಾರೆ

ಇದೇ ತಿಂಗಳ ತಾ ೨೧ನೇ ಆದಿತ್ಯವಾರ ಸಾಯಂಕಾಲ ಘಂಟೆ ೩ ೩೦ಕ್ಕೆ ಕೆಲವು ಮಹತ್ವದ ವಿಚಾರವನ್ನು ಪರ್ಯಾಲೋಚಿಸುವುದಕ್ಕಾಗಿ ಅದ್ವೈತ ಸಮಿತಿಯ ಕಾ ಸ. ಮಂಡಳಿಯ ವಿಶೇಷಾಧಿವೇಶನವು ಉಳ್ಳಾಲದ ಅದ್ವೈತಾಶ್ರಮದಲ್ಲಿ ನಡೆಯಲಿರುವುದರಿಂದ ಸದಸ್ಯರೆಲ್ಲರೂ ಅವಶ್ಯ ಉಪಸ್ಥಿತರಾಗಬೇಕಾಗಿ ಕಾರ್ಯದರ್ಶಿಯವರ ವಿನಂತಿ ಇದೆ

ರಾವ್ ಸಾಹೇಬ್ ಎ ಜೆ ಲೋಬೋರವರ ಹಿರೀ ಮಗಳಾದ ಮಿಸೆಸ್ ಹಿಲ್ಡಾ ಬ್ರಿಟೋರವರು ಮದ್ರಾಸು ನಗರದ ಒನರರಿ ಮೆಜಿಸ್ಟ್ರೇಟರಾಗಿ ಸರಕಾರದವರಿಂದ ನೇಮಿಸಲ್ಪಟ್ಟಿರುವರೆಂದು ತಿಳಿಸಲು ಸಂತೋಷಿಸುತ್ತೇವೆ

ಕುದ್ರೋಳಿಯ ಶ್ರೀ ಶಿವಭಕ್ತಿಯೋಗ ಸಂಘದ ವಾರ್ಷಿಕೋತ್ಸವವನ್ನು ಕಳೆದ ಶನಿವಾರ ದಿನ ಅಪ್ಪಯನಲ್ಲಿ ರಾ। ಪುಟ್ಟಣ್ಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಲಾಯಿತು

ತಾಲೂಕುಗಳಿಂದ

ಉಚ್ಚಿಲ—ಇದೇ ತಾರೀಖು ೧೪-೪-೩೫ರಲ್ಲಿ ಸೌರಮಾನ ಯುಗಾದಿ ಹಬ್ಬದ ಮಹೋತ್ಸವವು ಉಚ್ಚಿಲ ಬೋವಿ ಎಲಿಮೆಂಟರಿ ಶಾಲೆಯಲ್ಲಿ ಜರಗಿತು ಪೂರ್ವಾಹ್ನ ಗಂಟೆ ೧೦ಕ್ಕೆ ಮ। ರಾ। ರಾ। ಯು ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಊರವರ ಮತ್ತು ಶಾಲಾ ವಿದ್ಯಾರ್ಥಿಗಳ ಸಭೆಸೇರಿತು ಯುಗಾದಿಯ ವಿಷಯ ರಾ। ಡಿ ಪಿ ಅವರ್ಗಳ್ ಬಿ.ಎ ಯವರೂ ಸದ್ರಿ ಶಾಲೆಯ ವ್ಯವಸ್ಥಾಪಕ ಪಾಧ್ಯಾಯರಾದ ರಾ। ಯು. ವೀರಪ್ಪನವರೂ, ಮ ರಾ। ಯು ರಾಮಪ್ಪ ಅವರ್ಗಳ್ ವಿದ್ವಾನ್‌ರವರೂ ಭಾಷಣಮಾಡಿದ ನಂತರ ಅಧ್ಯಕ್ಷರ ಭಾಷಣವೂ ಮಕ್ಕಳಿಗೆ ಮಿಠಾಯಿ ಹಂಚಲಾಗಿ ಸಭೆಯು ಮುಕ್ತಾಯವಾಯಿತು ಸಾಯಂಕಾಲ ಗಂಟೆ ೮ಕ್ಕೆ ಸರಿಯಾಗಿ ರಾ। ಚಿಂತಾಮಣಿ ಭಟ್ಟರಿಂದ ರಚಿಸಲ್ಪಟ್ಟ ಯಾವ ಎಂಬ ಹರಿಕಥೆಯು ಯೋಗ್ಯರೀತಿಯಲ್ಲಿ ಮತ್ತು ಬೋಧಪ್ರದವಾಗಿ ಅಭಿನಯಿಸಲ್ಪಟ್ಟಿತು ಸಭೆಯು ಕಿಕ್ಕಿರಿದಿತ್ತು ಈ ಸಮಾರಂಭದಲ್ಲಿ ರಾ। ಕೊರಗಪ್ಪನವರು ಹಾರ್ಮೋನಿಯಮ ವಾದನದಲ್ಲಿ ಸಹಾಯಮಾಡಿ ಸಭಿಕರನ್ನು ಸಂತೋಷಗೊಳಿಸಿದರು ಅನಂತರ ರಾ। ಯು. ಗೋಪಾಲಕೃಷ್ಣರಾವ್ ಅವರ್ಗಳ್ ಬಿ ಎ ಮತ್ತು ರಾ। ಯು ರಾಮಪ್ಪ ಅವರ್ಗಳ್ ವಿದ್ವಾನ್ ಇವರ ಭಾಷಣಗಳು ಮತ್ತು ಉಪಕಾರಸ್ಮರಣೆಯೊಂದಿಗೆ ಸಭೆಯು ಮುಕ್ತಾಯವಾಯಿತು

ಕಾರ್ಕಳ—ಶ್ರೀ ಪದ್ಮಸಾಲಿ ಶೆಟ್ಟಿಗಾರ ವೈಶ್ಯ ಸಮಾಜಸೇವಾ ಯುವಕ ಸಂಘದ ಆಶ್ರಯದಲ್ಲಿ ಶ್ರೀ ರಾಮಜಯಂತಿ ಮತ್ತು ಸೌರಯುಗಾದಿಯು ಯಥೋಚಿತ ಸುಂದರ ರೀತಿಯಲ್ಲಿ ಆಚರಿಸಲ್ಪಟ್ಟವು

ಪುತ್ತೂರು—ತಾ ೯ ೪ ೩೫ನೇ ಮಂಗಳವಾರ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿಯವರು ಲೇಬರ್ ಶಾಲೆಯಲ್ಲಿ ಓದುವ ಹರಿಜನ ಬಾಲಕ ಬಾಲಿಕೆಯರಿಗೂ ಸ್ಕೌಟ್ ದಳದವರಿಗೂ ಪ್ರೈಸ್ ಕೊಡುವುದಕ್ಕಾಗಿ ಶ್ರೀ ಕೆ ನಾಗಪ್ಪ ಶೆಟ್ರನ್ನು ಕೂಡಿಕೊಂಡು ವಂತಿಗೆ ವಸೂಲಿಗಾಗಿ ಕೆಲಸಮಾಡಿದ್ದರು ರೂ ೬೬ ವಸೂಲಾಗಿತ್ತು ತಾ ೨೦ ೪ ೩೫ನೇ ಶನಿವಾರ ಪ್ರೈಸ್ ಕೊಡುವುದೆಂದೂ ಅದೇ ದಿನ ಇನ್ನೊಮ್ಮೆ ನಗರ ಸಂಕೀರ್ತನೆ ಮಾಡಿಸುವುದೆಂದೂ ಆಲೋಚನೆಯಿದೆ

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ಇದೇ ತಾ ೨೫ನೇ ಗುರುವಾರ ದಿನ ಅಪರಾಹ್ನ ಘಂಟೆ ೩ ೩೦ಕ್ಕೆ ರಾ। ಯು. ಕಣ್ಣಪ್ಪ, ಎಂ ಎ. ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ಶಿರ್ವ—ಈ ಕೇರಪ್ರದ ಈ ತಿಂಗಳ ಅಧ್ಯಾಪಕರ ಸಭೆಯು ತಾ ೧೩-೪-೩೫ನೇ ಶನಿವಾರ ಮಧ್ಯಾಹ್ನ ಮುದರಂಗಡಿ ಇಗರ್ಜಿ ಶಾಲಾ ಬಳಿ ಕೂಡಿತು ಬಾಗಿಲು ಮುಚ್ಚಿತ್ತಾದುದರಿಂದ ಶಾಲಾ ಹಿಂಬದಿಯ ಪಂಚಾಂಗದಲ್ಲಿ ಸಂತೂರು ಬಿ. ಇ. ಎಂ ಶಾಲಾ ಮುಖ್ಯೋಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿಯವರು ಗೈರ್‌ಹಾಜರಾಗಿದ್ದುದರಿಂದ, ಯಾವ ರಿಕಾರ್ಡೂ ಇಲ್ಲದ್ದರಿಂದ ಪ್ರತ್ಯೇಕ ಹಾಜರಿ ತೆಗೆದುಕೊಂಡು ಮೇಲಾಫೀಸರರಿಗೆ ಬರೆದುಕೊಳ್ಳಬೇಕೆಂದೂ ಅಪ್ಪಣೆಯಾಗಿತ್ತು ಬಾಗಿಲುಹಾಕಿದುದು ಸಹಶಿಕ್ಷಕರೆಂದೂ ಸಂಘದ ಯಾವ ಸದಸ್ಯನಿಗೂ ಅವಮಾನವಾದಲ್ಲಿ ಅಂಥವರ ವರ್ತನೆಯು ತೀವ್ರ ಖಂಡಿಸಲ್ಪಡತಕ್ಕದೆಂದೂ ಪಶ್ಚಾತ್ತಾಪವನ್ನು ಸೂಚಿಸಿದ ಠರಾವುಗಳು ಪಾಸಾದುವು ಬರುವ ತಿಂಗಳ ಸಭೆಯನ್ನು ಸದರಿ ಅಧ್ಯಕ್ಷರು ಕರೆದು, ಸಂತೂರು ಬಿ ಇ ಯ ಮ್ ಸ್ಕೂಲಿನಲ್ಲಿ ಸಭೆಯಲ್ಲಿ ನಿಶ್ಚಯಿಸಲಾಯಿತು

ಮುಂಡ್ಕೂರು— ತಾ ೧೩-೪ ೩೫ರಲ್ಲು ವಲ್ಲಿಯ ಬೋರ್ಡು ಹ್ಯಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವನ್ನು ಬಹು ವಿಜೃಂಭಣೆಯಿಂದ ನಡೆಯಿತು

ಕಿನ್ನಿಗೋಳಿ—ತಾ ೧೨-೪-೩೫ರಲ್ಲು ಬೆಳಗ್ಗೆ ಇಲ್ಲಿಗೆ ಬನಾರಸಿನ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಮದನಮೋಹನ ಸಿಂಗ್ ಎಂಬವರು ಬಂದಿದ್ದು, ಹಿಂದೂ ಮುಸಲ್ಮಾನರ ಐಕ್ಯ, ಅಸ್ಪೃಶ್ಯತೆ ನಿವಾರಣೆ ಗ್ರಾಮ ಕೈಗಾರಿಕೆಯ ಆವಶ್ಯಕತೆ ಮೊದಲಾದುವುಗಳ ಕುರಿತು ಸುಮಾರು ೧ ಗಂಟೆಯ ಕಾಲ ಭಾಷಣವಿತ್ತರು ೨೦೦ ಮಂದಿ ನೆರೆದಿತ್ತು. ಇವರು ಅದೇ ದಿನ ಮೂಲ್ಕಿಗೆ ಹೋಗಿ ಅಲ್ಲಿಯೂ ಭಾಷಣ ಕೊಟ್ಟು ಮರುದಿನ ಉಡುಪಿ ಕಡೆಗೆ ತೆರಳಿರುತ್ತಾರೆ.

ಇಲ್ಲಿಯ ಪೇಟೆಯವರು ಈಗ ನೀರಿನ ಅಭಾವದಿಂದ ಬಳಲುತ್ತಿರಾಗಿ ತಿಳಿದು ದಯಾಳು ಡಾ। ಬೋರ್ಡಿಕರವರು ಒಂದು ಬಾವಿಯನ್ನು ತೋಡಿಸುವ ಆಲೋಚನೆಮಾಡಿದ್ದಾರೆ

ಬಂಟವಾಳ—ರೋಯಲ್ ಸಿಲ್ವರ್ ಜುಬಿಲಿಯ ಸಮಾರಂಭವನ್ನು ಆಚರಿಸಲು ಅನುಕೂಲ ಮಾಡುವಂತೆ ಹಣ ಶೇಖರಿಸುವುದಕ್ಕಾಗಿ ಇಲ್ಲಿಯ ಯೂನಿಯನ್ ಕ್ಲಬ್ಬಿನ ಮಾಳಿಗೆಯಲ್ಲಿ ಊರ ಪ್ರಮುಖರ ಮತ್ತು ಸರಕಾರಿ ಉದ್ಯೋಗಸ್ಥರ ಸಭೆಯು ಸೇರಿ ಒಂದು ಕಮಿಟಿಯು ರಚಿಸಲ್ಪಟ್ಟಿತ್ತು ಸುಮಾರು ರೂಪಾಯಿ ೨೧ ಕೂಡಲೇ ವಂತಿಗೆಯಾಯಿತು.

ಇಲ್ಲಿಯ ಟೆಂಪಲ್ ಹ್ಯಾಸ್ಕೂಲಿನ ವರ್ಧಂತಿ ಉತ್ಸವವು ಜಿಲ್ಲಾ ಎಜ್ಯುಕೇಶನಲ ಆಫೀಸರರಾದ ಮಿ। ಯು ಕಣ್ಣಪ್ಪ ಎಂ. ಎ ಎಲ್. ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು ವಿದ್ಯಾರ್ಥಿಗಳು ವಿಜಯ ಸಿಂಹಾಸನ ಎಂಬ ನಾಟಕವಾಡಿ ಸಭಿಕರನ್ನು ಆನಂದಗೊಳಿಸಿದರು

ಇಲ್ಲಿ ಚಿಲ್ಲರೆ ಕಳವು ಮಾಡುತ್ತಿದ್ದ ಇಬ್ಬರು ಆದಿ ದ್ರಾವಿಡರನ್ನು ಕೈದು ಮಾಡಿರುವರು

ಉಡುಪಿ—ತಾ ೧೨ಕ್ಕೆ ಇಲ್ಲಿನ ಮೋಡೆಲ್ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು ಮಾನ್ಯ ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿತು ಅಂದು ನೆರೆದು ಬಂದಿದ್ದ ಸ್ತ್ರೀ ಪುರುಷರ ಬಾಹುಳ್ಯ ವರ್ಧಂತಿ ವಂತಿಗೆದಾರರ ಪಟ್ಟಿ ಹಾಗೂ ವಿದ್ಯಾ ಖಾತೆಯವರು ಗ್ರೇಂಟನ್ನು ಹೆಚ್ಚಿಸಿದ ಕಾರಣಗಳಿಂದ ಸದ್ರಿ ಶಾಲೆಯು ಜನ ಪ್ರೀತಿಗೂ ವಿಶೇಷ ಫಲಕಾರಿಯೂ ಆಗಿರುವುದೆಂದು ತಿಳಿಯಬೇಕು ಅನಂದ ಪಡುತ್ತೇವೆಂದೂ ಸದರಿ ಶಾಲೆಗೆ ಶ್ರೇಯೋಭಿವೃದ್ಧಿಯನ್ನು ಬಯಸುತ್ತೇವೆಂದೂ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿಶದಪಡಿಸಿದರು ಶಾಲಾ ಮಕ್ಕಳಿಂದ ಸ್ವಾಮಿನಿಷ್ಠೆ ಎಂಬ ಕನ್ನಡ ನಾಟಕದ ಅಭಿನಯವು ತೋರ್ಪಡಿಸಲ್ಪಟ್ಟಿತ್ತು ಮೇಲಾಗಿ ಶಾಲಾ ಚಿಕ್ಕ ಬಾಲಕಿಯರಿಂದ ಲೇಜಿಂ ಕವಾತು ಬಹು ಶ್ಲಾಘನೀಯವಾಗಿತ್ತು.

ತಾ ೧೩ನೇ ರಾತ್ರಿ ಶ್ರೀಮತಿ ಕಮಲಾದೇವಿ ಶ್ರೀ ಎನ್ ಎಸ ಹರ್ಡೀಕರ ಶ್ರೀ ಒ ಅನಂತ ರೈ ಶ್ರೀ ಯು ಶ್ರೀನಿವಾಸ ಮಲ್ಯ, ಎಂ. ಎಲ್ ಸಿ ಮಲ್ಯರವರು ಕರ್ನಾಟಕ ಪ್ರಾಂತಿಕ ಪರಿಷತ್ತಿನ ಪ್ರಚಾರ ಕಾರ್ಯಕ್ಕಾಗಿ ಚಿತ್ತೈಸಿದರು. ಮರುದಿನ ತಾ ೧೪ನೇ ಪ್ರಾತಃಕಾಲದಿಂದ ಊರ ಮಹನೀಯರನ್ನು ಕಂಡು, ಸ್ವಾಗತ ಕಮಿಟಿಯ ಸದಸ್ಯರನ್ನು ಸೇರಿಸಿದರು. ಮಿಸೆಸ್ ರಂಗರಾವ್ ತಲಚೇರಿಕಾರರು ಮಹಿಳಾ ಪರಿಷತ್ತಿನ ಸದಸ್ಯೆಯರನ್ನು ಕೂಡಿಸಿದರು. ಸಾಯಂಕಾಲ ೬ ಗಂಟೆಗೆ ಅಜ್ಜರ ಕಾಡಿನಲ್ಲಿರುವ ಗಾಂಧಿ ಮೈದಾನದಲ್ಲಿ ಶ್ರೀ. ಎಂ ವಿಟ್ಠಲ ಕಾಮತ್ ಬಿ ಎ ಬಿ ಎಲ ವಕೀಲರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರಗಿತು. ಶ್ರೀಮತಿ ಕಮಲಾದೇವಿಯವರು ಸದರಿ ಪರಿಷತ್ತನ್ನು ಜರಗಿಸುವುದರ ಅವಶ್ಯಕತೆಯನ್ನೂ ಸದ್ಯ ರಾಷ್ಟ್ರೀಯ ಚಳವಳದ ಧೋರಣೆಯ ವಿವೇಚನೆ ಅವಶ್ಯಕತೆಯನ್ನೂ ಯಾವುದಕ್ಕೂ ಮೇಲಾಗಿ ನಮ್ಮ ಜಿಲ್ಲೆಯ ಸಿಸಟ್ಲ್‌ಮೆಂಟಿನ ಧೋರಣೆಯನ್ನು ಎಂದಿನ ಮೇ ತಿಂಗಳ ಮೊದಲನೆ ವಾರದಲ್ಲಿ ಆಚರಿಸಲಿರುವ ಪ್ರಚಾರ ಕಾರ್ಯವನ್ನು ಕುರಿತು ಸ್ಫೂರ್ತಿದಾಯಕ ಭಾಷಣವನ್ನು ಇಂಗ್ಲಿಷಿನಲ್ಲಿತ್ತರು ಅನಂತರ ಶ್ರೀ ಎನ್ ಎಸ್ ಹರ್ಡೀಕರರೂ ಶ್ರೀ ಎನ್ ಎಸ್ ಕಿಲ್ಲೆಯವರೂ ಸಂದರ್ಭೋಚಿತವಾದ ಮತ್ತು ಕಾಂಗ್ರೆಸ್ ಹೇಗೆ ಜನ ಸಮುದಾಯವನ್ನು ಪ್ರತಿನಿಧಿಸುತ್ತದೆ ಮತ್ತು ಹೇಗೆ ಅವರ ಹಿತಚಿಂತನೆ ಮತ್ತು ಸೇವೆಯನ್ನು ಮಾಡುತ್ತದೆಂದು ಅರ್ಥಗರ್ಭಿತವಾದ ಭಾಷಣಗಳನ್ನು ಕನ್ನಡದಲ್ಲಿ ಮಾಡಿದರು ಸಿಸೆಟ್ಲ್‌ಮೆಂಟ್ ನಿಷೇಧವಾದವನ್ನು ಮತ್ತು ಪ್ರಾಂತಿಕ ಪರಿಷತ್ತನ್ನು ತುಂಬಾ ಯಶಸ್ವಿಯಾಗುವಂತೆ ಪ್ರೋತ್ಸಾಹಿಸಿ ಸಹಕರಿಸಬೇಕೆಂದು ಕೇಳಿಕೊಳ್ಳಲಾಯಿತು ತಾ ೧೫ನೇ ಪ್ರಾತಃಕಾಲವೂ ಕೆಲವು ಮಂದಿಯನ್ನು ಕಂಡು ಸೀದಾ ಕುಂದಾಪುರಕ್ಕೆ ಈ ಮಂಡಳಿಯು ತೆರಳಿಹೋಯಿತು

ಎಂದಿನಂತೆ ಈ ವರ್ಷವೂ ಶ್ರೀ ರಾಮ ನವಮಿ ಉತ್ಸವವು ಶ್ರೀಮದನಂತೇಶ್ವರದ ಪಟಾರದಲ್ಲಿ ಬಹು ಸಂಭ್ರಮದಿಂದ ನಿತ್ಯವೂ ಪುರಾಣ ಹರಿಕೀರ್ತನೆ ಸಂಗೀತ ಭಜನೆ ಮೊದಲಾದ ಕಾರ್ಯಕ್ರಮಗಳಿಂದ ಕೊನೆಯ ದಿನ ವಾದ್ಯವಿರುದಾವಳಿಯಿಂದೊಡಗೂಡಿದ ರಾಮೋತ್ಸವದಿಂದ ದಶಮಿ ದಿನ ಸಂತರ್ಪಣೆಯಿಂದ ಜರಗಿಸಲಾಯಿತು

ಡಾ ಮಂಜೇಶ್ವರ ಬಾಲಕೃಷ್ಣ ಪ್ರಭು ಎಂ. ಬಿ. ಎಸ್ ಇವರು ಮದ್ರಾಸ್ ಯುನಿವರ್ಸಿಟಿಯ ಎಂ ಡಿ. (ಮಿಡ್ ವೈಫರಿ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರಾಗಿ ತಿಳಿಸಲು ಸಂತೋಷಪಡುತ್ತೇವೆ

ಪ್ರಯಾಣಿಕರಿಗೂ ವಿದ್ಯಾರ್ಥಿಗಳಿಗೂ ಉಳಕೊಳ್ಳಲು ಅನುಕೂಲವಾಗುವಂತೆ ಆಧುನಿಕ ರೀತ್ಯಾ ವ್ಯವಸ್ಥೆಗೊಳಿಸಲಾದ ಶ್ರೀ ರಾಮಾ ರೆಸ್ಟೋರೆಂಟ್ ಎಂಬ ಊಟೋಪಚಾರದ ಉತ್ತಮ ವಿಶ್ರಾಂತಿ ಗೃಹವು ಉಡುಪಿಯಲ್ಲಿನ ಶ್ರೀ ಕಾಶೀಮಠದ ಬಿಲ್ಡಿಂಗ್ಸಿನಲ್ಲಿ ಈಚೆಗೆ ತೆರೆಯಲಾಗಿದೆ

ಇಲ್ಲಿನ ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನವರು ಉಡ್ಪಿಯಿಂದ ಪೂರ್ವಕ್ಕೆ ಕಾರ್ಕಳ ರಸ್ತೆಯಲ್ಲಿ ಸುಮಾರು ೨॥ ಮೈಲು ದೂರದಲ್ಲಿರುವ ಬುಡ್ ಪಾಲೆಂಬ ಜಮೀನನ್ನು ಕೊಂಡುಕೊಂಡಿದ್ದು, ಅದನ್ನು ನಿವಾಸ ಯೋಗ್ಯವನ್ನಾಗಿಯೂ ಕೈಗಾರಿಕೆ ಕೇಂದ್ರವನ್ನಾಗಿಯೂ ಮಾಡುವ ಏರ್ಪಾಡ ಆಗುತ್ತಲಿದೆ ಆ ಬಗ್ಗೆ ಪ್ರಥಮದಲ್ಲಾಗಿ ನೀರಿನ ಸರಬರಾಯಿ ಮಾಡಬೇಕೆಂದು ನೆಲ ಕೊರೆದು, ನೀರಿನ ಮಿತಿಯನ್ನು ಕಂಡು ಹಿಡಿದು, ನಳ್ಳಿಗಳ ಮೂಲಕ ನೀರನ್ನು ಮನೆಗಳಿಗೆಲ್ಲ ಒದಗಿಸುವುದಕ್ಕಾಗಿ ದೊಡ್ಡ ಕೆರೆಯನ್ನು ತೋಡಿ ಸಜ್ಜುಗೊಳಿಸುತ್ತಿದೆ ಈ ಜಾಗದಲ್ಲಿ ಆವೆ ಮಣ್ಣು ಯಥೇಷ್ಟವಾಗಿ ಸಿಗುವುದಿದ್ದುದರಿಂದ, ಇಟ್ಟಿಗೆಗಳನ್ನು ಕಳೆದ ವರ್ಷದಿಂದಲೇ ತಯಾರಿಸುತ್ತಿದ್ದೂ ಈ ವರ್ಷ ಹಂಚಿನ ಕಾರ್ಖಾನೆ ಯ ಸ್ಥಾಪಿಸಲ್ಪಡಲಿಗಿದೆ ಇದೇ ತಿಂಗಳ ಮೊದಲಿಂದ ಹಂಚುಗಳು ತಯಾರಾಗುತ್ತಲಿವೆ ಇಲ್ಲಿನ ಹಂಚುಗಳು ಇತರ ಹಂಚುಗಳಿಗಿಂತ ಹಗುರವಾಗಿ ಮತ್ತೂ ಉತ್ತಮವಾಗಿಯೂ ಇವೆ ಅಲ್ಲದೆ ಮರ ಕೊಯುವ ಯಂತ್ರವೂ ಕಮ್ಮಾರ ಸಾಲೆಯೂ ಪ್ರಾರಂಭಿಸಲ್ಪಟ್ಟವೆ ವಿದ್ಯುಚ್ಛಕ್ತಿಯನ್ನು ನಿರ್ಮಾಣ ಮಾಡಿ ದೀಪಗಳನ್ನೂ ಬೆಳಗಿಸುವ ಕೆಲಸವು ನಡೆಯುತ್ತಲಿದೆ ಕಾರ್ಖಾನೆ ಮತ್ತು ಇತರ ಕಟ್ಟಡಗಳು ಮೇ ತಿಂಗಳೊಳಗೆ ಪೂರ್ತಿಯಾಗಬಹುದು ಅಲ್ಲದೆ ಡಾ ಟಿ ಮಾಧವ ಪೈಗಳು ಸ್ವಂತ ಖರ್ಚಿನಿಂದ ರೋಗಿಗಳ ಬಗ್ಗೆ ಆರೋಗ್ಯ ಭವನ (ಸೆನೆಟೋರಿಯಂ)ದ ಕೆಲಸವೂ ಭರದಿಂದ ಸಾಗುತ್ತಲಿದೆ

ಸ್ವೀಕಾರ.

ಜ್ಯೋತಿ ಮಾಸ ಪತ್ರಿಕೆ ಕುಂಟಲ ವಾರ್ಷಿಕ ಚಂದಾ ರೂ ೧ ೮ ೦ ಸಂಪಾದಕರು. ಮಿ. ಕೆ ಹೃದಯ ಪ್ರಕಾಶಕರ ಮಿ ಮಹಮ್ಮದ್ ಕೆಂಬಲ್ ಶ್ರೀ ಸತ್ಯವ ಪರ್ತಿಯವ ಸಂದೇಶ ಶ್ರೀ ಪುಣಿಂಚತ್ತಾಯ ಜನ್ ಪುಷ್ಪಾಂಜಲಿ (ಪದ್ಯ) ಸವಿಜವು ಸಾಹಿತ್ಯವು ವಿದ್ವಾನ್ ಸ ತೃಲ್ ಸುಬ್ಬರಾಯರ ಶ್ರೀಯುತ ಪ್ರಾಥನೆ ಸರ್ದಾರ್ ಇಕ್ಬಾಲ ಅಲಿ ಷಹಾ ಇವರ ಮರ ಭೂಮಿಯ ಅಗಾಧ ಪುರುಷ ಗಟಿತ್ಯ) ಶ್ರೀ ಕೆ ಈಶ್ವರ ಭಟ್ ಉದ್ಯಾವರ ಪದ್ಯಗಳು ಕವಿ ಭೂಷಣ ಕೆ ಪಿ. ಎಂ ಕಪ್ಪ ಶೆಟ್ಟಿಯವರ ಯಕ್ಷಗಾನ ಶ್ರೀ ಎಚ್ ಕೆ ಕಪ್ಪಣ್ಣನವರ ಹೀಗೂ ಉಂಟು (ಕಥೆ) ಬಗೆಬಗೆ ಹಾಸ್ಯಗಳು ಇವೇ ಮೊದಲಾದುವುಗಳೂ ತುಂಬಿದೆ ಇದೇ ಏಪ್ರಿಲ್ ತಿಂಗಳಲ್ಲಿ ಶೃಂಗಾರ ಭರಿತವಾಗಿ ಹೊರಬಿದ್ದ ಕನ್ನಡ ಮಾತೆಯ ಸೇವೆಗಾಗಿ ಹೊರಟಿರುವ ವ್ಯಸ್ಲಿಮ ಬಾಂಧವರಿಗೆ ಆದರಲ್ಲೂ ವಿದ್ಯಾಸಹೋದರತ್ವವನ್ನು, ಮಹೋದ್ದೇಶವನ್ನಾಗಿ ದೃಷ್ಟಿ ಪಥದಲ್ಲಿಟ್ಟು ಸಮಾಜಕ್ಕೆ ತೊಡಗಿರುವ ಸಂಪಾದಕರನ್ನೂ ಪ್ರಕಾಶಕರನ್ನೂ ನಾವು ಪ್ರೋತ್ಸಾಹಿಸುವುದು ಧರ್ಮವಿದೆ ಇವಕ್ಕೆ ಅಖಿಲ ಕನ್ನಡ ಜನ ನೆರವು ದೊರೆಯಲೆಂದು ಕೋರುವೆವು

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ

ಈ ಸಂಘದ ೧೯೩೪ನೇ ಇಸವಿಯ ಮೆಂಬರರ ವಾರ್ಷಿಕ ಮಹಾ ಸಭೆಯನ್ನು ಇದೇ ಏಪ್ರಿಲ್ ತಾರೀಖು ೨೧ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಕೋಟೆಯೊಳಗಣ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಮಂದಿರದಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಬಿ ಎ ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚೈಸಿರುವುದರಿಂದ ಎಲ್ಲರೂ ದಯಮಾಡಿ ಚಿತ್ತೈಸಿ ಸಭಾಕಾರ್ಯವನ್ನು ಸಾಂಗಗೊಳಿಸಿ ಪ್ರೋತ್ಸಾಹಿಸಬೇಕಾಗಿ ಮಂಡಳಿಯ ಸದಸ್ಯರೆಲ್ಲರಿಗೂ ಮಂಡಳಿಯ ಗೌರವ ಕಾರ್ಯದರ್ಶಿಯವರು ಈ ಮೂಲಕವಾಗಿ ತಿಳಿಸುತ್ತಾರೆ

Old!   *Famous!*

East & West Insurance Co., Limited.

Bonus Declard Rs 15/- Per Thousand Per Annum

Insurance in Force About	Rs 90,00,000
Annual Premium Income Over	Rs. 4,50 000
Life Fund Over	Rs 7,00,000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest, influential gentlemen

Inquiries Solicited —
Messrs Padubidri Bros ,
Chief Agents
PADUBIDRI   BOMBAY

OR

Head Office
East & West Buildings,
Apollo Street, Fort Bombay

Comfortable like an Aeroplane

Use our swadeshi Mosquitonet for health, Comfort and sound sleep, as if you are in an Aeroplane Sample cutting free. More convenient if some advance sent with order

L	B	H	Price	Best
6 Ft	3½ Ft	3½ Ft	Rs 1/12	2/6
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G M. Sharma, Post Box F 6706
Calcutta

ಗುಪ್ತ ಮಹಾಮಂತ್ರ.

ಅತ್ಯಂತ ಫಲಕಾರಿ

ಇದನ್ನು ಉಚ್ಚರಿಸಿದ ಮಾತ್ರದಲ್ಲಿ ಎಂತಹ ಕಷ್ಟ ಕೆಲಸವೂ ಸುಲಭವಾಗುವುದು ಸ್ತ್ರೀ ಪರೀಕ್ಷೆಯಲ್ಲಿ ವಿಜಯ, ಕೋರ್ಟು ವ್ಯವಹರಣೆಯಲ್ಲಿ ಗೆಲುವು, ನೌಕರಿಯಲ್ಲಿ ಜಯ, ಪ್ರಗತಿ, ಮಕ್ಕಳ ಐಶ್ವರ್ಯವೆಲ್ಲ ಲಭ್ಯವಾಗುತ್ತದೆ ಇದು ನಿಮ್ಮನ್ನು ಅದೃಷ್ಟಶಾಲಿಗಳನ್ನಾಗಿ ಮಾಡುತ್ತದೆ

2 ರೂಪಾಯಿಗಳನ್ನು ಪತ್ತೆಮಾಡಿ, ಅಥವಾ ಸಫಲಿಸದಿದ್ದರೆ
೨೦ ರೂಪಾಯಿ ಬಹುಮಾನ ಪಡೆಯಿರಿ

Prasidha Mantra Asram,
No 17 P O Katrisari Gay

Kanara Watch Works, Mangalore.

Suppliers of standard Watches, time pieces, Wrist watches, Clocks and various kinds of sporting materials etc, Quality and price unassailable Visit our Show Room and be satisfied

“ವಿಶ್ವಬಂಧು”ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು ೨ ವಿಶ್ವಬಂಧುವು ಅಹಿಂಸಾಧರ್ಮದ ಪ್ರಚಾರಕನು ೩ ವಿಶ್ವಬಂಧುವು ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಪ್ರಕಟ ಮಾಡುವನು ೪ ಕನ್ನಡದ ಸೇವೆಯೂ ಕನ್ನಡ ಸಾಹಿತ್ಯ ಪ್ರಭಾವನೆಯೂ ವಿಶ್ವಬಂಧುವಿನ ಧ್ಯೇಯಗಳು ೫ ವಿದ್ಯಾಭ್ಯಾಸದ ನೂತನ ರೀತಿ ನೀತಿಗಳನ್ನು ವಿಶ್ವಬಂಧುವು ಪ್ರಕಟಮಾಡುವನು ೬ ಒಟ್ಟಿನಲ್ಲಿ ಆರ್ಥಿಕ ನೈತಿಕ ಧಾರ್ಮಿಕ ರಾಜಕೀಯ ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು ಸರ್ವಾಂಗಸುಂದರನಾದ ವಿಶ್ವಬಂಧುವು ಸರ್ವರ ಆದರಣೆಗೂ ಪಾತ್ರನಾಗಿರುವನು

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ ೨-೧೪-೦ ಮಾತ್ರ

“ವಿಶ್ವಬಂಧು” ಕಾರ್ಯಾಲಯ, ... ಜೈನವಿದ್ಯಾರ್ಥಿನಿಲಯ, ಮೈಸೂರು.

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter -

Modern Hindu Hotel
CALICUT, 17—6 1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did

Yours faithfully,
(Sd) **A. V. Ramaswami.**

The same service is offered to all We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ
ಮಂಗಳೂರಿನಿಂದ - ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ!   ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ

ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಫೈನಾನ್ಸ್ ಬಿಲ್ಲಿನ ಮೇಲೆ ಚರ್ಚೆ.

ಸದಸ್ಯರ ತೀಕ್ಷ್ಣ ಟೀಕೆಗಳು!

ತಾ. ೧೧ನೇ ದಿನ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ, ವೈಸರಾಯರಿಂದ 'ಸರ್ಟಿಫೈ' ಮಾಡಲ್ಪಟ್ಟ ಫೈನಾನ್ಸ್ ಬಿಲ್ಲಿನ ಮೇಲೆ ಚರ್ಚೆಯಾರಂಭವಾಯಿತು. ಶಾಸನಸಭೆಯ ಹಲವು ಮೆಂಬರರೂ ರಾಷ್ಟ್ರೀಯವಾದಿಗಳೂ ಸಭೆಯ ಕಾರ್ಯಕಲಾಪಗಳನ್ನು ನಿರೀಕ್ಷಿಸುತ್ತಿದ್ದರು ಎಸೆಂಬ್ಲಿಯ ಮುಖಂಡರಾದ ಸರ್ ಎನ್ ಎನ್ ಸರ್ಕಾರರವರೂ ಹಾಜರಿದ್ದರು.

ಶ್ರೀ| ಪಿ ಎನ್ ಸಪ್ರೂರವರು ಮಾತನಾಡುತ್ತಾ ಆವೇಶದಿಂದ 'ನಾನು ಸರಕಾರದ ವರ್ತನೆಯನ್ನು ಎಂದೂ ಅಭಿನಂದಿಸಲಾರೆ ಅದು ಫೈನಾನ್ಸ್ ಬಿಲ್ಲನ್ನು ತನ್ನ ವಿಶಿಷ್ಟ ಅಧಿಕಾರಗಳಿಂದ ತೊಡೆದುಹಾಕಿ ಸರ್ಟಿಫೈ ಮಾಡಿರುತ್ತದೆ ಹೀಗಾದರೆ ಸಭೆಯಲ್ಲಿ ಮಾಡಿದ ವಾಗ್ವಾದಗಳ ಫಲವೇನಾಯಿತು?–ಸಭಿಕರ ಸಾಹಸದಲ್ಲಿ ಏನು ಫಲವಿದ್ದಂತಾಯಿತು? ಈಗ ಈ ಬಿಲ್ಲನ್ನು ಶಾಸನವಾಗಿ ಮಾಡಲು ಸಿದ್ಧರಿರುವಿರಿ ಇದು ಯಾವ ನ್ಯಾಯ ಎಂದರು

ಆಗ ಅಧ್ಯಕ್ಷರು– ನೀವು ನಿಮ್ಮ ಅಭಿಪ್ರಾಯಗಳನ್ನು ಸೂಚಿಸಿರಿ ಅದನ್ನು ಎಲ್ಲೆಲ್ಲಿ ಸರಿಗೊಳಿಸಬೇಕೆಂದು ಹೇಳಿರಿ ಅದನ್ನು ಪೂರ್ಣ ತೊಡೆದುಹಾಕಲಿಕ್ಕಿಲ್ಲವೆಂದಿರಿ ನಿಮ್ಮ ಉಪಸೂಚನೆಗಳು ಕಾರ್ಯಕಾರಿ ಯುಕ್ತ ನ್ಯಾಯವಾದುವುಗಳು ಎಂದಾದರೆ ಸರಕಾರವು ಅವುಗಳನ್ನು ಸ್ವೀಕರಿಸಲು ಸದಾಸಿದ್ಧವೇ ಇದೆ ನಿಮ್ಮ ಸಲಹೆಗಳನ್ನು ಸ್ವೀಕರಿಸುವುದಕ್ಕಾಗಿ ಇದನ್ನು ಇನ್ನೂ ತೆರೆದೇ ಇಡಲಾಗಿದೆ' ಎಂದರು

ಸಪ್ರೂರವರು– ನಿಮಗೆ ಉಪಸೂಚನೆಗಳು ಏಕೆ? ನೀವು ಈ ಬಿಲ್ಲನ್ನು ಸರ್ಟಿಫೈ ಮಾಡುವಾಗ ಮಾಡಿದ ಭಾಷಣದ ಭಾಷೆಯಿಂದ ನಮ್ಮ ಉಪಸೂಚನೆಗಳನ್ನು ನೀವು ಸ್ವೀಕರಿಸಲು ಸಿದ್ಧರಿಲ್ಲ–ಆ ಶಾಸನವನ್ನು ನೀವು ಇದ್ದಕ್ಕಿದ್ದ ಹಾಗೆ ಮಂಜೂರುಮಾಡುವ ಸಾಹಸದಲ್ಲಿದ್ದೀರಿ ಎಂದು ವ್ಯಕ್ತವಾಗುತ್ತದೆ ನಾವು ಕೊಡುವ ಉಪಸೂಚನೆಗಳನ್ನು ನೀವು ಸ್ವೀಕರಿಸುವಿರೆಂಬುದಕ್ಕೆ ವಾಗ್ದಾನವೆಲ್ಲಿದೆ? ನಾವು ಕೊಡುವ ಸೂಚನೆಗಳು ನ್ಯಾಯವಾದವುಗಳು ಅವುಗಳನ್ನು ಸ್ವೀಕರಿಸಲು ಸಿದ್ಧರಿರುವಿರಾ? ಎಂದರು

ಸರ್ ಜೇಮ್ಸ್ ಗ್ರಿಗ್ಗರು– ನಿಮ್ಮ ಮಾತಿಗೆ ಉತ್ತರವಾಗಿ ನಾವು ಯಾವುದನ್ನೂ ಈಗ ಸವಿವರವಾಗಿ ಹೇಳಲು ಸಿದ್ಧರಿಲ್ಲ'

ಸಪ್ರೂರವರು– ಈಗ ತಲೆದೋರಿರುವ ಸಂದಿಗ್ಧತೆಗೆಲ್ಲ ಸರಕಾರವೇ ಕಾರಣರಲ್ಲದೆ ಅದರ ಜವಾಬ್ದಾರಿಕೆಯನ್ನು ನಾವು ಹೊರಲಾರೆವು ನಿಮಗೆ ಇಚ್ಛೆಯಿದ್ದರೆ ನೀವು ಸರಕಾರೀ ನೌಕರರ ಸಂಬಳದ ಕಡಿತವನ್ನು ಹಿಂದೆ ಕೊಡುವ ಪ್ರಶ್ನೆಯನ್ನು ಬಾಕಿಯಿಟ್ಟು ೧೯೩೪/೩೫ರ ಉಳಿತಾಯವನ್ನು ಕಂದಾಯದ ಹೊರೆಯನ್ನಿಳಿಸುವುದಕ್ಕಾಗಿ ಉಪಯೋಗಿಸಬಹುದಿತ್ತು ಇಂತಹ ಕಡಿತವನ್ನು ಪುನ ಕೊಡುವ ಮೊದಲು ಸರಕಾರವು ಎರಡು ಶಾಸನಸಭೆಗಳ ಸದಸ್ಯರ ಒಂದು ಪರಿಷತ್ತನ್ನು ಜರಗಿಸಿ ಅಭಿಪ್ರಾಯ ಸಂಗ್ರಹಮಾಡಬಹುದಿದ್ದಿತ ಆದರೆ ಸರಕಾರವು ಮಾಡಿದುದೇನು? ಸಾರ್ವಜನಿಕರ ಅಭಿಪ್ರಾಯವನ್ನು ಅಂಗೀಕರಿಸದೆ–ಅಂಗೀಕರಿಸಲು ಒಂದಿಷ್ಟು ಯತ್ನಿಸದೆ–ಯ ರೋಪಿಯನ್ ಪಕ್ಷದವರ ಸಲಹೆಗಳೇನೆಂದು ಕೂಡಾ ಕೇಳುವಷ್ಟು ಚಿಂತೆಮಾಡದೆ, ತಮ್ಮ ಇಚ್ಛಾನುಸಾರ ವರ್ತಿಸಿ ರಾಜ್ಯರಚನಾಬದ್ಧವಾದ ಕ್ರಮನಿಯಮಗಳನ್ನು ಕೂಡಾ ಪರಿಪಾಲಿಸಲಿಲ್ಲ ಸರ್ ಜೇಮ್ಸ್ ಗ್ರಿಗ್ಗರು ಮಾಡಿದ ಭಾಷಣವು ಬಹು ಅಪಾಯಕರವಿದೆ ಒಂದು ರಾಜಕೀಯ ಪಕ್ಷವು ನಿಮಗೆ ವಿಘ್ನಕಾರಕವಾಗಿ ನಿಂತಿತೆಂದು ನೀವು ತಿಳಿದಾಗ ಇನ್ನೊಂದು ಶಾಂತವಾದ ಪಕ್ಷವನ್ನಾದರೂ ನೀವು ಕೇಳಿಕೊಳ್ಳಬಹುದಿತ್ತಲ್ಲ? ನಮಗೆ ಶಾಸನಗಳ ನ್ಯಾಯಗಳನ್ನು ತಿಳಿಯಬೇಕಾಗಿದೆ. ಅವುಗಳ ಸಾಧಕಬಾಧಕಗಳೇನೆಂದು ತಿಳಿಯಬೇಕಾಗಿದೆ ಅದಕ್ಕಾಗಿ ನಾವು ಚರ್ಚೆ ನಡೆಸುತ್ತಿದ್ದೇವೆ ವ್ಯಕ್ತಿಪರವಾದ ಆಲೋಚನೆಗಳಿಗಾಗಲೀ ನಿರ್ಧಾರಗಳಿಗಾಗಲೀ ನಾವು ತಲೆಬಗ್ಗಿಸಿ ನಡೆಯಲಾರೆವು ಸಹಕಾರವೆಂಬುದು ನಿಮಗೆ ಬೇಕಾದ ವಿಷಯ–ಯಾವಾಗಲೂ ಅದು ಬೇಕಾಗಿದೆಯೆಂದು ಬೇಡುತ್ತೀರಿ. ಸಹಕಾರವೆಂದರೆ ಆತ್ಮ ವಿರೋಧವಾಗಿ ನಡೆದು, ವ್ಯಕ್ತಿಗತ ನಿರ್ಣಯಗಳಿಗೆ ಮಾನ್ಯವೀಯಬೇಕೆಂದು ನೀವೇ ಅರ್ಥಮಾಡಿಕೊಳ್ಳುವಿರಾದರೆ– ನಾನು ಅಸಹಕಾರಿಯೆಂದೇ ತಿಳಿಯಿರಿ (ಧ್ವನಿ 'ನಾವೆಲ್ಲರೂ') ನಿಮ್ಮ ಸೈನ್ಯಖಾತೆಯ ವಿಚಾರದಾಗಿ ನಿಮ್ಮ ವಿನಿಮಯ ವಿಚಾರವಾಗಿ, ನಿಮ್ಮ ವಾಣಿಜ್ಯ ಧೋರಣೆಯ ಕುರಿತಾಗಿ ನಾವು ಯೋಚಿಸುತ್ತಾ ಹೋದರೆ ನಿಮಗೆ ನಮ್ಮ ಸಹಕಾರವು ಅಗತ್ಯವಿಲ್ಲ ನೀವು ನಿಮ್ಮಿಚ್ಛಾನುಸಾರ ವರ್ತಿಸುವವರು ಎಂದು ವ್ಯಕ್ತವಾಗುತ್ತದೆ ಸಾರ್ವಜನಿಕರು ಹೇಳಿದ ಹಾಗೆ ನೀವು ಕೇಳುವುದಾದರೆ ನಿಮ್ಮ ದುಡ್ಡಿನ ದರವನ್ನೆಯೂ ನ್ಯಾಯವಾಗಿ ನಿಮ್ಮ ತಕ್ಕಡಿಯ ಸಮರೂಪದಲ್ಲಿ ನಿಲ್ಲುವುದರಲ್ಲಿ ಸಂದೇಹವೇ ಇಲ್ಲ ಸಾರ್ವಜನಿಕರ ಉದ್ಧಾರವಾಗದೆ ಸಾರ್ವಜನಿಕರ ಸುಖವು ಹೆಚ್ಚದೆ ನೀವು ಎಷ್ಟು ಲಾಭ ಪಡೆದರೇನ? ನಿಮ್ಮ ಉಳಿತಾಯದ ಪಟ್ಟಿಯು ಎಷ್ಟು ದೊಡ್ಡದಾದರೇನು? ಅದರಿಂದ ಪ್ರಯೋಜನವಾಗಲಾರದು ಎಂದರು

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಅಡಿಕೆಗೆ ತಗಲುವ "ಮಹಾಲಿ" ಅಥವಾ ಕೊಳೆರೋಗ

(By the Agriculture Demonstrator Mangalore)

ಈ ಹಾನಿಕರವಾದ ರೋಗವನ್ನು ಹತೋಟಿಗೆ ತರುವ ವಿಧವನ್ನು ಆರೋಗ್ಯದಲ್ಲಿಡುವ ಕುರಿತ ಮಾಲಿಕರಿಗೆ ಸೂಚನೆಗಳು

ಈ ರೋಗವು ಅತೀ ಸೂಕ್ಷ್ಮ ರೂಪವಾದ ಸಸ್ಯಜಾತಿಯ ಅಣುಗಳಿಂದ ಹುಟ್ಟುತ್ತದೆ ಮತ್ತು ಪ್ರಸ್ತುತ ತೋಟದಲ್ಲಿ ತಲೆದೋರಿ ಅದರ ಮೇಲೆ ತನ್ನ ಪರಿಣಾಮವನ್ನುಂಟುಮಾಡುತ್ತದೆ ಎಳೆಕಾಯಿಗಳ ಮೇಲೊಂದು ಕೆಳುವಾದ ಬಿಳಿಪದರು ಬೆಳೆದು ಕಾಣಬರುವುದೇ ಈ ರೋಗದ ಗುರುತು ಪ್ರಥಮದಲ್ಲಿ ಆ ಎಳೆಕಾಯಿಯು ಕೊಳೆತು ಮೆತ್ತಗಾಗಿ ಕಡೆಗೆ ಬಿದ್ದು ಹೋಗುವುದು. ಕೆಲವು ವೇಳೆ ಈ ರೋಗವು ಮರಕ್ಕೆ ಕೂಡ ಅಂಟಿ ಅದರ ಕುದಿ ಕೊಳೆತು ಮರವು ಒಣಗಿ ಸಾಯುವುದು ಈ ರೋಗವು ಅತೀ ಹಾನಿಕರವಾದುದರಿಂದ ಇಲಾಖೆಯವರು ಕೊಟ್ಟ ಸಲಹೆಗಳನ್ನು ಅನುಸರಿಸಿ ಮರದ ಆರೋಗ್ಯವನ್ನು ಕಾಪಾಡುವುದರಲ್ಲಿಯೂ ರೋಗವನ್ನು ಹತೋಟಿಗೆ ತರುವುದರಲ್ಲಿಯೂ ತೋಟದ ಮಾಲಿಕರು ನಮ್ಮೊಡನೆ ಭಾಗಿಗಳಾಗಬೇಕೆಂದು ಕೋರುತ್ತೇವೆ

ಈ ಅಂಟು ರೋಗವು ಮರದಿಂದ ಮರಕ್ಕೂ ತೋಟದಿಂದ ತೋಟಕ್ಕೂ ಬೇಗನೆ ಹಬ್ಬುವುದರಿಂದ ರೋಗಪೀಡಿತವಾದ ತೋಟಗಳ ಆಸುಪಾಸಿನ ತೋಟಗಳ ಮಾಲಿಕರು ಈ ವಿಚಾರದಲ್ಲಿ ಅತ್ಯಂತ ಜಾಗರೂಕರಾಗಿದ್ದು ತಮ್ಮ ತೋಟಗಳನ್ನು ಕಾಪಾಡುವುದು ಒಳ್ಳೆಯದು ಇದ ಅಂಟುರೋಗವಾದ ದರಿಂದ ಈ ಕೆಳಗಿನ ಕೆಲವು ಸುಲಭ ಸೂಚನೆಗಳನ್ನು ಅನುಸರಿಸುವುದರಿಂದ ಅವರಿಗೆ ಪ್ರಯೋಜನವಾಗಬಹುದು.

೧ ಮರದಲ್ಲಿ ಇರುವ ಒಣಗಿದ ಹಳೆಅಡಿಕೆ ಗೊಂಚಲುಗಳನ್ನೆಲ್ಲಾ ಬಿಂದು ಳಿಯ ದಂತೆ ತೆಗೆದು ಸುಡಬೇಕು ಇದರಿಂದ ಅವುಗಳಲ್ಲಿ ಅಡಗಿರುವ ರೋಗಕ್ರಿಮಿಗಳು ಲಕ್ಷಗಟ್ಟಲೆಯಲ್ಲಿ ನಾಶವಾಗುವುವು.

೨ ತೋಟದಲ್ಲಿ ಬಿದ್ದಿರುವ ಹಳೆ ಗೊನೆ ಮತ್ತು ಕೊಳೆತ ಕಾಯಿಗಳನ್ನೆಲ್ಲಾ ಸುಡಬೇಕು

೩ ಒಣಗಿದ, ಉದುರಿದ ಗೊನೆಗಳು ಹಳೆ ಕಾಯಿ, ಸಿಪ್ಪೆ ಮೊದಲಾದುವುಗಳನ್ನು ಸೌದೆಗಾಗಲೀ ಗೊಬ್ಬರಕ್ಕಾಗಲೀ ಅಲ್ಲಲ್ಲಿ ರಾಶಿ ಹಾಕಿಡುವ ಪದ್ಧತಿಯು ಉಂಟು ಇದು ಕೂಡದು ಅವುಗಳನ್ನು ಸುಡಲೇ ಬೇಕು

೪ ಗೊನೆ, ಹಾಳೆ, ಕಡ್ಡಿ ಮೊದಲಾದುವುಗಳನ್ನು ರೋಗ ತಗಲಿದ ತೋಟಗಳಿಂದ ಬೇರೆ ತೋಟಗಳಿಗಾಗಲೀ ಬೇರೆ ಹಳ್ಳಿಗಾಗಲೀ ಒಯ್ಯಕೂಡದು.

೫ ಹಾಗೆಯೇ ಮರದ ಯಾವ ಭಾಗವನ್ನಾಗಲೀ ಸಸಿಗಳನ್ನಾಗಲೀ ಇನ್ನಿತರ ಸ್ಥಾನಗಳಿಗೆ ಒಯ್ಯಬಾರದು ಹಾಗೆ ಒಯ್ದರೆ ರೋಗದ ಅಣುಗಳನ್ನು ಬೇರೆ ಕಡೆಗೆ ಹೊತ್ತಂತಾಗುತ್ತದೆ

೬ ರೋಗ ತಗಲಿದ ತೋಟಗಳಿಂದ ಅಡಿಕೆ ಕೊಯ್ಯುವವರನ್ನು ನಿಮ್ಮ ತೋಟಗಳಿಗೆ ಕೆಲಸಕ್ಕೆ ಕರೆಯುವುದಾದರೆ ಅವರ ಕೊಯ್ಯುವ ಹತ್ಯಾರಗಳನ್ನೆಲ್ಲಾ ರೋಗಾಣುಗಳಿಂದ ವಿರಹಿತವಾಗಿರುವಂತೆ ಸರಿಯಾಗಿ ನೋಡಿಕೊಳ್ಳಬೇಕು

೭ ಸಂಕ್ಷೇಪವಾಗಿ ಹೇಳುವುದಾದರೆ ರೋಗಾಣುಗಳ ಕಡೆಗೆ ಬೇಕಾದ ಎಲ್ಲಾ ನಿಯಮಗಳನ್ನು ಅನುಸರಿಸುವುದು ಒಳ್ಳೆಯದು. ರೋಗ ತಗಲಿದ ಸ್ಥಳದ ಎಳೆ ಸಸಿಗಳನ್ನು ಕೂಡ ನೆಡುವುದಕ್ಕೆ ಉಪಯೋಗಿಸುವುದು ಹಾನಿಕರವು

೮ ಅಡಿಕೆಯ ಗೊನೆಗಳಿಗೆ ಬೋರ್ಡೋ ಮಿಕ್ಸ್ಚರ್ (Bordeaux mixture) ಎಂಬ ಔಷಧವನ್ನು ವರ್ಷಕಾಲವು ತಲೆತೋರುವ ಮುಂಚೆಯೇ ಹಾಯಿಸಬೇಕು ಕಾಯಿಗಳು ಬೆಳೆಯುತ್ತಿರುವಾಗಲೇ ಇನ್ನೊಂದಾವರ್ತಿ ಹಾಯಿಸುವುದು ಒಳ್ಳೆಯದು

೯ ಪ್ರತಿ ತಾಲೂಕಿಗೊಬ್ಬ ಕೃಷಿ ಡೆಮೋನ್ಸ್ಟ್ರೇಟರು ಇರುವರು ಯಾವ ಕಡೆಯಲ್ಲಿ ಆದರೂ ರೋಗವು ತಲೆದೋರಿದರೆ ಆ ಸಂಗತಿಯನ್ನು ಆಯಾ ತಾಲೂಕಿನ ಉದ್ಯೋಗಸ್ಥರಿಗೆ ತಿಳಿಯಪಡಿಸಿ ರೋಗವನ್ನು ಹತೋಟಿಗೆ ತರುವುದರಲ್ಲಿ ಅವರ ಸಹಾಯ ಮತ್ತು ಸೂಚನೆಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು. ನಿಮಗೆ ಸಲಹೆಗಳನ್ನು ಕೊಡಲಿಕ್ಕೆ ಅವರು ಯಾವಾಗಲೂ ಸಿದ್ಧರಾಗಿರುವರು

೬ನೇ ಪುಟದಿಂದ ಮುಂದುವರಿದುದು,

ಶಂಕರರ ಅಂಗಭಂಗಿಗಳು ಭರತ ನಾಟ್ಯ ಶಾಸ್ತ್ರ ಸೂತ್ರಗಳಿಗೆ ಸರಿಯಾಗಿವೆಯೋ ಇಲ್ಲವೋ ನಮಗೆ ತಿಳಿಯದು ಅವರ ಅಂಗಭಂಗಿಗಳಲ್ಲಿ ಅರ್ಥವ್ಯಕ್ತಿಯಿದೆ ಅವರ ಹುಟಿಯ ಒಂದು ಕೊಂಕು ಅವರ ಒಂದು ಭ್ರೂ ವಿಲಾಸವು ಅವರ ಕೈ ಕಿರುಬೆರಳಿನ ಒಂದು ಚಲನವು ನೂರಾರು ಪದಗಳು ವಿಶದಪಡಿಸುವಷ್ಟು ಅರ್ಥವನ್ನು ವ್ಯಕ್ತಪಡಿಸಬಲ್ಲವು

ಉದಯಶಂಕರರು ಇಲ್ಲಿ ಪ್ರದರ್ಶಿಸಿದ ನಾಟ್ಯ ಪ್ರಸಂಗಗಳ ಕೆಲವು ಮಾತ್ರ ಅವುಗಳಲ್ಲಿ ಸಾಮಾನ್ಯವಾಗಿ ಎಲ್ಲವೂ ನಮ್ಮ ಪುರಾಣೇತಿಹಾಸ ಪ್ರಸಿದ್ಧವಾದ ಕಥಾಭಾಗಗಳಿಗೆ ಸಂಬಂಧಿಸಿದುವು ಅವರು ಪ್ರದರ್ಶಿಸಿದ 'ಹಾವಾಡಿಗ ನೃತ್ಯ ಮತ್ತು ಅವರ ಸಹೋದ್ಯೋಗಿಗಳು ಪ್ರದರ್ಶಿಸಿದ 'ಕಿರಾತ ನೃತ್ಯ' ಇವು ಸಾಮಾನ್ಯ ಜೀವನಕ್ಕೆ ಸಂಬಂಧಿಸಿದುವು

'ಕಾರ್ತಿಕೇಯ', ನಿರಾಶಾ ಮತ್ತು ಶಿವಪಾರ್ವತೀ ನೃತ್ಯ ದ್ವಂದ್ವ' ಎಂಬುವು ಉತ್ತಮೋತ್ತಮವಾಗಿದ್ದುವು ಶಿವಪಾರ್ವತೀ ನೃತ್ಯ' ವನ್ನು ಸುಮಾರು ಮುಕ್ಕಾಲು ಗಂಟೆ ಕಾಲ ಪ್ರದರ್ಶಿಸಿದರು

ಉದಯಶಂಕರರ ನೃತ್ಯದ ಜೊತೆಗೆ ಅಗುತ್ತಿದ್ದ ಸಂಗೀತದ ಹಿಮ್ಮೇಳವು ಅವರ ನೃತ್ಯಾಭಿನಯಗಳಿಗೆ ಅತ್ಯಂತ ಪರಿಪೋಷಕವಾಗಿದ್ದು ಆಯಾ ನಾಟ್ಯ ಪ್ರಸಂಗಕ್ಕೆ ಅವಶ್ಯಕವಾದ ಆವರಣವನ್ನು ಅತ್ಯುತ್ತಮ ರೀತಿಯಲ್ಲಿ ಒದಗಿಸಿ ಕೊಡುತ್ತಿದ್ದಿತು

ಉದಯಶಂಕರರು ತಮ್ಮ ಶಿಷ್ಯಂದಿರೆಲ್ಲರನ್ನೂ ಚೆನ್ನಾಗಿ ತಯಾರುಮಾಡಿದ್ದಾರೆ ಶ್ರೀಮತಿ ಸಿಮ್ಕಿಯವರು ಅವರ ಮುಖ್ಯ ಮುಖ್ಯ ನಾಟಕಗಳಲ್ಲಿ ಅವರ ಬಲಗೈ

ಉದಯಶಂಕರರ ನಾಟ್ಯವು ಒಂದು ಕಥೆಯನ್ನು, ಅಥವಾ ಒಂದು ಭಾವವನ್ನು ಅಥವಾ ಜೀವನದ ಒಂದು ಸನ್ನಿವೇಶವನ್ನು ಗೀತಕ್ಕೆ ಹೊಂದಿಸಿಕೊಂಡು ನೃತ್ಯಕ್ಕೆ (ತಾಳಕ್ಕೆ ಲಯಕ್ಕೆ) ಅಳವಡಿಸಿಕೊಂಡು ಪ್ರದರ್ಶಿಸುತ್ತದೆ

ಒಂದು ಉದಾಹರಣೆಯನ್ನು ಕೊಟ್ಟರೆ ಇದು ಹೆಚ್ಚು ಸ್ಪಷ್ಟವಾಗಬಹುದು 'ನಿರಾಶಾ' ಎಂಬುದು ಒಂದು ನಾಟ್ಯಪ್ರಸಂಗ–ಇಬ್ಬರು ನೃತ್ಯ ಬಾಲಿಕೆಯರು ನೃತ್ಯವನ್ನು ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದಾರೆ ಅವರ ನೃತ್ಯವನ್ನು ನೋಡಿ ಅವರಿಗೆ ಮನಸೋತ ಒಬ್ಬ ಆಗಂತುಕನು ಅವರನ್ನು ಹಿಂಬಾಲಿಸಿಕೊಂಡು ಬರುತ್ತಾನೆ ಎಲ್ಲೆಲ್ಲೂ ಬೆಳದಿಂಗಳು ಚೆಲ್ಲಿದೆ ಅವರೊಡನೆ ಒಂದೆರಡು ನಲ್ನುಡಿಯಾಡಬೇಕೆಂದು ಅವನ ಆಸೆ ಅವರೂ ಒಮ್ಮೆ ಅವನ ಹತ್ತಿರ ಸುಳಿಯುತ್ತಾರೆ, ಬೇಗ ತಪ್ಪಿಸಿಕೊಳ್ಳುತ್ತಾರೆ ಬಾಲಿಕೆಯರ ಒಡನೆ ಬಂದಿದ್ದ ಯುವಕರಿಬ್ಬರಿಗೆ ಇದು ಸೈರಿಸುವುದಿಲ್ಲ ಅವರು ಬಾಲಿಕೆಯರನ್ನು ಬೇಗ ಒಯ್ಯುತ್ತಾರೆ ಆಗಂತುಕನು ಒಬ್ಬಂಟಿಗನಾಗಿ ಆ ಬಾಲಿಕೆಯರ ಮನೋಹರ ರೂಪವೂ ಅವರ ನೃತ್ಯದ ಬೆಡಗೂ ಅವನ ಹೃದಯದಲ್ಲಿ ಉದ್ರೇಕಗೊಳಿಸಿದ್ದ ಭಾವದಲ್ಲಿ ಲೀನನಾಗಿ ಕೊನೆಗೆ ಹಾಗೇ ನಿರಾಶೆಯಲ್ಲಿ ಮುಳುಗುತ್ತಾನೆ–ಇದಿಷ್ಟನ್ನೂ ನೃತ್ಯದ ಮೂಲಕ ಅಭಿನಯಿಸಿ ತೋರಬೇಕು

ನಮ್ಮ ಪ್ರಾಚೀನ ಕಲೆಯೊಂದನ್ನು ಪುನರುಜ್ಜೀವನಗೊಳಿಸಿ ನಮ್ಮ ಭಾರತ ದೇಶಕ್ಕೆ ಕೀರ್ತಿ ತಂದಿರುವ ಉದಯಶಂಕರರಿಗಾಗಿ ನಾವೆಲ್ಲರೂ ಹೆಮ್ಮೆ ಪಡಬೇಕು.

'ಪ್ರತಿನಿಧಿ

The Ammembal Subba Rao Pai Memorial Fund

CANARA HIGH SCHOOL

MANGALORE

Applications for loan stipends from the above Fund should reach the HONORARY TREASURER of the Fund by the 15th of June 1935 Printed application forms are available at the Office of the Fund between 9 a m and 11 a m every day at a cost of one anna each for original application forms and half an anna each for renewal application forms If forms are to be sent by post postage stamps equivalent to the price of the form or forms required and one three-fourth anna stamp for each form to cover the postage for the same should be sent Only Gowd Saraswath Brahmin students need apply Applicants will note that first preference will be given to running stipendiaries while awarding stipends and if funds are available after that, new applicants' cases will be considered, with preference for applications for technical courses

(Sd) M Madhava Rao, B.A.,B.L.
Hon. Secretary

CANARA HIGH SCHOOL,
MANGALORE 17-4-35

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purnaih Chatram Road, Balepet
BANGALORE CITY

Shiromani Narayanacharya
Choukhamba Benares City

ಶಾಸ್ತ್ರಿಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ? ರಾಮಾನುಜಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹನಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಈ ಎಂಟು ಶೀಘ್ರ ಇವುಗಳೆಲ್ಲಾ ಆಗುವುವು ಹಾಗಾದರೆ ನಿಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುತ್ತದೆ

ಸಣ್ಣ ಅಥವ ಪ್ರಮಾಣದ ಕಂಠಸರ 1ಕ್ಕೆ ಅಣೆ 100ದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 100ದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 300ದ ರೂ 500ರ ವರೆಗೆ ಮತ್ತು 1—4 5—6—7 8 ಮುಖಗಳು ಕಾಳು 1ಕ್ಕೆ ಅಣೆ 100ದ ರೂಪಾಯಿ 10 ಮತ್ತು 9 10 11 ಮುಖಗಳುಳ್ಳ ಕಾಳು 1ಕ್ಕೆ ರೂ 200ದ 300 ವರೆಗೆ 12 13 14 ಮುಖದ ಕಾಳು 1ಕ್ಕೆ ರೂಪಾಯಿ 50ರಿಂದ 100ರ ವರೆಗೆ ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣವಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷೀ ಅದಕ್ಕಿಂತ ದೊಡ್ಡವಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಅಣೆ ಸ್ಟಾಂಪ್ ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕೆಟಲಾಗಿ ಸೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬನಾರಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚ್‌ಗಳು ಇವು ಹೊಳೆಯುವಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂಪೀಸ್ ಗ್ಯಾರಂಟಿ ಗಂಟೆಯನ್ನು ತೋರ ಸುತ್ತ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಅದರ ಜೊತೆ ಒಂದು ಗೋಲ್ಡನ್ ಪ್ಲೇಟ್ ಗಿಲ್ಟ್ ಮತ್ತು ಬಂಗಾರದ ಪ್ಲೇಟ್ ಮಾಡಿದ ಹಾಕಿರುವ ಫೌಂಟನ್‌ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ಎಂದಿಗೆ ಇಷ್ಟವಿದ್ದರೆ ಬೆಲೆಯು ವಾಪಸ್ 1 ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ೩೪೧ ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ

ಐಟಿಡಾಯಿಡ್ ಸಾರ್ಸಪರಿಲಾ ಕೆಟ್ಟ ರಕ್ತಕ್ಕೆ ಪಂಚೌಷಧ ೪೫ ವರ್ಷದ ಅನುಭವ. ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ ಫೋಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಘಾಕುರದ್ವಾರ ಮುಂಬಾಯಿ ೪
ಸೋಲ್ ಏಜೆಂಟ್— ಶಾ ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಸ್ ಕೆ ಬಸ್ತೂರ ರವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕಾರವು ಅಶಕ್ತಿಯಾಗುತ್ತದೆ ಒಮ್ಮೆ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಪಾದಿಸುತ್ತ ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ಇದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಂಬಾಯಿ ಸರ್ಟಿಫಿಕೇಟ್ ಡಾಕ್ಟರ ಬಿ. ಎ. ವೈದ್ಯ, ಎಲ್ ಸಿ ಪಿ ಎಸ್ ಕೆಳಗಿನಂತೆ ಕೊಟ್ಟಿರುವರು ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪—೦—೦ ವಿ ಪಿ ಅಲಗ

ವಿಳಾಸ—ಸಂಜೀವಿನೀ ಔಷಧಾಲಯ ನಂ ೩೦ ಮಿರಜ, S M C

ಬಿಹಾರ್ ರಸಾಯನಿಕ ವೈದ್ಯ ಶಾಲೆಯಲ್ಲಿ ತಯಾರಾದ ಆಯುರ್ವೇದಿಯ ಔಷಧಗಳು.

ಪ್ರಸೂತಿ ಕಲ್ಯಾಣ—ಬಾಣಂತಿಯರ ಗರ್ಭಕೋಶದ ಎಲ್ಲಾ ತರದ ರೋಗಗಳನ್ನು ಶೀಘ್ರ ಗುಣಪಡಿಸುವುದು
ಕಾಮಕಲ್ಪ ರಸಾಯನ—ಧಾತು ವೃದ್ಧಿ—ಬಲಹೀನತೆ
ಅನಂತಮೂಲಸರಸ—ರಕ್ತಶುದ್ಧಿ ಶರೀರದಲ್ಲಿ ತುರಿಕೆ ಹೋಗಲಾಡಿಸುವುದು
ದನವಂತ್ರಿ ಮುಲಾಮು—ದೇಹದ ಸಮಸ್ತದದ ಹುಣ್ಣು ವಾಸಿ ಮಾಡಿಕೊಳ್ಳುವುದು
ಭೃಂಗ್ರ ರಸಾಯನ—ತಲೆಯ ವಿಕಾರ ನೆನಪಿಲ್ಲದಿರುವಿಕೆ
ಪುನರ್ನವಾಸವ—ಮೈಬಾತುಕೊಳ್ಳುವುದು ಅರಸಿನದಮ್ಮದಿಗೆ ರಕ್ತಹೀನತೆಯ ಮೇಲೆ
ಕಾಲಮೇಗ—ಇದು ಮಕ್ಕಳ ಕಲೀಜ ಮತ್ತು ಜ್ವರದ ಮೇಲೆ
ಸಿದ್ಧ ಮಕರಧ್ವಜ ಮಂಜಾಧಿ ತೈಲ—ಮಂದರ ತೈಲ—ಲಕ್ಷ್ಮೀವಿಲಾಸ ಗ್ರಂಥ ಮತ್ತಿತರ ಅನೇಕ ತರದ ಶಾಸ್ತ್ರೀಯ ಔಷಧಗಳ ಕೆಟಲಾಗು ಕೇಳಿ

The Behar Chemical Works, Bhagalpur
ಏಜೆಂಟ್ಸ್— ಶಾ. ಕಂಪೆನಿ, ಗವರ್ನಮೆಂಟ್ ಕಾಲೇಜಿನ ಎದುರು ಮಂಗಳೂರು ದ. ಕ.

The Popular Insurance Company, Ltd.

Head Office—MANGALORE, S India

The Pioneer Life Office of the West Coast.

Wanted influential District agents in Unrepresented areas.

A few Press opinions.

"INSURANCE HERALD, CALCUTTA This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds

"THE ARTISAN, TRIVANDRUM We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground It is directed by influential people of Mangalore and managed by Mr B. Vittal Rao, who has developed in him a great deal of life insurance sense

ಸಾಂಬಾರ ವರ್ತಮಾನ.

["ಸಾಂಬಾರ ವರ್ತಮಾನ"ಕ್ಕೆಂದೇ ಮೀಸಲಾಗಿಟ್ಟ ಈ ನಾಲ್ಕು ಕಲಮುಗಳಲ್ಲಿ ಅಲ್ಲಲ್ಲಿನ ಸೈಜ ವಾರ್ತೆಗಳನ್ನು ಹಾಸ್ಯರಸಪೂರಿತವಾಗಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ. ಈ ವಾರ್ತೆಗಳನ್ನು ಲಘುಹಾಸ್ಯಪ್ರಿಯರಾದ ಪ್ರಖ್ಯಾತ ಸಾಹಿತಿಗಳೊಬ್ಬರಿಂದ ವಿಶಿಷ್ಟವಾಗಿ ಸ್ವದೇಶಾಭಿಮಾನಿಗೆಂದೇ ಬರೆಸಲಾಗುತ್ತಿದೆ.]

ಮುದುಕರ ಪ್ರೇಮ—

—ಎಂಬುದು ಬಹು ಹಳತಾದುದು ಎಂದು ಕೆಲವರ ಅಭಿಪ್ರಾಯವಿರುತ್ತದೆ. ಆದರೆ ಮುದುಕರ ಪ್ರೀತಿಯು ಯಾವಾಗಲೂ ಅಗಾಧವಾದುದು. ಅದರಲ್ಲಿ ಅವರಿಗೆ ಅವರಂತೆ ಶಿಥಿಲಮನಸ್ಕರಾದ ಮಕ್ಕಳ ಮೇಲೆ ಬಹು ಮಮತೆ. ಇದನ್ನು ನಾವು ಮನೆಯಲ್ಲಿ ಕಂಡು ತಿಳಿದವರು ಸಾವಿರಾರು ಮಂದಿ. ಇದೊಂದು ನಿಜವಾಗಿ ನಡೆದ ಕಥೆ.—ಲಂಡನಿನ ವಿಹಾರ ಸರೋವರದ ಬಳಿ ಒಬ್ಬ ಮುದಿಪ್ರಾಯದ ಕೆಲಸಗಾರನು ಕೆಲಸದಲ್ಲಿ ನಿರತನಾಗಿದ್ದ. ಕೆಲವು ಮಂದಿ ಹುಡುಗರು ಬಂದು ಅವನ ಕೈಯಲ್ಲಿ ತಮ್ಮ ಪಾದರಕ್ಷೆಗಳನ್ನು ಸಜ್ಜುಗೊಳಿಸಲು ಹೇಳಿ, ಅಲ್ಲೇ ನಿಂತರು. ಅವರಲ್ಲಿ ಓರ್ವ ಬಾಲಕನು ತನ್ನ ಪಾದರಕ್ಷೆಯನ್ನು ಮುದುಕನ ಕೈಯಲ್ಲಿ ಕೊಟ್ಟು ಕೊಳೆಯ ಬದಿಗೆ ವಿಹಾರ ನಡೆದನು. ಆಡುತ್ತಾ ಆಡುತ್ತಾ ಹೋಗಿ ಥಟ್ಟನೆ ನೀರಿಗೆ ಬಿದ್ದುಬಿಟ್ಟನು. ಇದನ್ನು ಕಂಡ ಮುದುಕನು ಹಿಂದುಮುಂದು ನೋಡದೆ ನೀರಿಗೆ ಹಾರಿದನು. ಆದರೆ ತಾನೂ ಮೇಲೆ ಬರಲಿಲ್ಲ, ಮಗುವನ್ನೂ ಮೇಲೆ ತರಲಾಗಲಿಲ್ಲ.

× × × × × ×

೧೫೦೦ ಅಡಿಗಳ ಮೇಲಿಂದ ಬಿದ್ದರೆ—

ಪ್ರಾಣಪಕ್ಷಿಯು ಹೇಳದೆ ಕೇಳದೆ ಪರಲೋಕವಾಸಿಯಾಗುತ್ತದೆಂದು ಹೇಳುವುದು ಸಹಜ. ಆದರೆ ಈ ಹೇಳಿಕೆಯು ಸುಳ್ಳಾದ ಸಂಗತಿಯು ಇಲ್ಲಿದೆ ನೋಡಿ. ಒಕ್ಸ್‌ಫರ್ಡಿನಲ್ಲಿಯ ಟ್ರೈಫನ್ ಪರ್ವತವನ್ನು ಅಲ್ಲಿಯ ಮಿಸ್ ಎಡ್ವಾ ಪ್ರಿಟ್ಚಾರ್ಡ್ ಎಂಬವಳು ಒಬ್ಬಳು ಸಂಗಾತಿಯೊಡನೆ ಹತ್ತಿ ಹೋದಳು. ಅಲ್ಲಿ ಸುತ್ತುತ್ತಿರುವಾಗ ಬಹುವಾಗಿ ಜಾರಿಬಿದ್ದಳು. ಅವಳ ಸಂಗಾತಿಯು ಅವಳನ್ನು ಅಲ್ಲೇ ಮಲಗಿಸಿ, ಗುಡ್ಡದ ತಪ್ಪಲಿಗೆ ಇಳಿದು ಹೋಗಿ ಡಾಕ್ಟರರನ್ನು ಗುಡ್ಡಕ್ಕೆ ತಂದಾಗ ಜಾರಿಬಿದ್ದ ಮಿಸ್ ಎಡ್ವಾಪ್ರಿಯು ಕಾಣೆ! ಅವಳನ್ನು ಹುಡುಕಿ ಹುಡುಕಿ ಬೇಸತ್ತರು. ಅಳಬಿಟ್ಟು ಹೋದರು. ಮರುದಿನ ಪುನಃ ಹುಡುಕುತ್ತಿದ್ದಾಗ ೧೫೦೦ ಅಡಿಗಳ ಕೆಳಗಣ ಕಂದರವೊಂದರಲ್ಲಿ ಅವಳು ಎದ್ದು ಕುಳಿತು ಅಳುತ್ತಿದ್ದುದು ಕಂಡುಬಂತು. ಅವಳು ಸಾಯಲಿಲ್ಲವಂತೆ.

× × × × × ×

೫೮ ಮೊಮ್ಮಕ್ಕಳ ಅಜ್ಜಿ ತೀರಿಕೊಂಡಳು

ಉತ್ತರ ಪೋಲಾಂಡಿನಲ್ಲಿ ವಂಟೋಸಾ ಎಂಬ ಸಣ್ಣ ಹಳ್ಳಿ. ಅಲ್ಲಿ ಮರಿಯಾ ಡಿಮುಟ್ರೊವ್ಸ್ ಎಂಬ ೮೬ ವರ್ಷ ಪ್ರಾಯದ ವೃದ್ಧೆಯೊಬ್ಬಳು ಮೊನ್ನೆ ತೀರಿಕೊಂಡಳು. ಅವಳ ಸ್ಮರಣಾರ್ಥ ಅಲ್ಲಿ ಎಲ್ಲರೂ ಶೋಕಿಸಿದರು. ಕಾರಣವಿಷ್ಟೆ—ಆ ಸಣ್ಣ ಹಳ್ಳಿಯು ಆಕೆಯಿಂದಲೇ ನಿರ್ಮಿತವಾಗಿತ್ತು. ಅಲ್ಲಿದ್ದವರೆಂದರೆ ಅವಳ ೫೮ ಮೊಮ್ಮಕ್ಕಳ ೮೩ ಮಕ್ಕಳು. ಅಂಚೆಪೇದೆ, ಪೋಲೀಸ ಕಟ್ಟಾಳ, ರೊಟ್ಟಿ ಮಾಡುವವ, ವ್ಯಾಪಾರಿ ಎಲ್ಲರೂ ಅವಳ ಕುಟುಂಬಿಕರೇ. ಅಂತಹವಳು ಸತ್ತರೆ ಶೋಕಿಸಬೇಡವೇ? ಅಲ್ಲಿಂದ ರಾಣಿಯು ಕಾಲವಾದರೆ ಅವರು ಶೋಕಿಸುವುದು ತಪ್ಪೇ?

× × × × × ×

ವಿಚಿತ್ರ ವಿವಾಹ—

ಎಂಬ ನಾಟಕಗಳು ಅಭಿನಯಿಸಲ್ಪಡುವುದು ಮಾತ್ರವಲ್ಲ, ವಿಚಿತ್ರ ವಿವಾಹಗಳು ಜರಗುವುದೂ ಇದೆ. ನತಾಲಿ ಲೆಶವ್ ಎಂಬ ಸ್ತ್ರೀಯೊಬ್ಬಳು—ತಾನು ಯಾವ ಜನಾಂಗದವಳೆಂದು ಅವಳಿಗೇ ಗೊತ್ತಿಲ್ಲ (ಮಿಶ್ರವರ್ಣವೆನ್ನುವ) ಮದ್ರಾಸಿಗೆ ಬಂದು ಲೆಶವೆನ್ ಎಂಬವರನ್ನು ವಿವಾಹವಾದಳು. ಅದಾಗಿ ಸ್ವಲ್ಪ ಸಮಯವು ಕಳೆಯುತ್ತಲೇ ಅಲ್ಲಿಯ ಪೋಲೀಸರು ಅವಳ ಕೋಲಂಕಷವನ್ನರಿಯಬೇಕೆಂದು ಸೆಟಾಡಿದರು. ಆದರೆ ಪಟ್ಟಿಗೆ ತಿಳಿದುಬರಲಿಲ್ಲ. ಅಷ್ಟರಲ್ಲಿ ಅವಳು ಲಂಡನಿಗೆ ಹೋದಳು. ಅಲ್ಲಿಯ ಪಿಕಡೆಲ್ಲಿ ಸರ್ಕಸಿಗೆ ಹೋಗಿ ವಲ್ಲಿಯಂ ರಿಚಾರ್ಡ್ ಎಂಬ ತನ್ನ ಮೊದಲಿನ ಗಂಡನನ್ನು ಕಂಡು ಕ್ಷಮೆ ಬೇಡಿ ತನ್ನನ್ನು ಸ್ವೀಕರಿಸಬೇಕೆಂದೂ ತಾನು ತನ್ನ ಅನಾಚಾರಕ್ಕಾಗಿ ಪಶ್ಚಾತ್ತಾಪಪಟ್ಟಿರುವೆನೆಂದೂ ತಿಳಿಸಿದಳು. ಪತಿಯು ಅವಳನ್ನು ಸ್ವೀಕರಿಸಿದ.

× × × × × ×

ಸಾಯುವವರನ್ನು ಕೊಲ್ಲಬೇಕೋ?

ಎಂಬ ಪ್ರಶ್ನೆಯು ಅಂದು ಮರಣೋನ್ಮುಖವಾದ ಕರುವನ್ನು ಗಾಂಧೀಜಿಯವರು ಕೊಲ್ಲಿಸಿದಂದಿನಿಂದ ತಲೆಯೆತ್ತಿದೆ ಎನ್ನುವ ನ್ಯೂಕಾಸ್ಲ್‌ನಲ್ಲಿಯ ಮಂತ್ರಿವರ್ಯರೊಬ್ಬರು ಈ ವಿಷಯಕವಾಗಿ ಮಾತನಾಡುತ್ತಾರೆ. ರೋಗವು ಗುಣವಾಗುವುದಿಲ್ಲವಾದರೆ, ರೋಗಿಗೆ ಬಾಳಿಗಿಂತ ಮರಣವೇ ಹಿತವೆಂದು ಕಂಡುಬಂದರೆ, ಅಂತಹ ರೋಗಿಯನ್ನು ಕೃತ್ರಿಮವಾಗಿ ಕೊಲ್ಲಲು ಅಧಿಕಾರವಿರುವಂತಾಗಬೇಕು. ಬದುಕಲಾರದ ಅತಿಯಿಂದ ಬದುಕಿ ದಣಿಯುವುದಕ್ಕಿಂತ ದೇಹವು ಮರಣದಿಂದ ಸುಖವನ್ನು ಹೊಂದುವುದು ಅಗತ್ಯವಿದೆ"ಯೆಂದು ಅವರ ಮತ. ಅವರಿಗೆ ಉತ್ತರ ಕಳುಹಿಸಬೇಕೆಂದಿರುವವರು ಹಾಗೆ ಮಾಡಬಹುದು. ವಿಳಾಸ ಮಾತ್ರ ಇಲ್ಲ.

× × × × × ×

ಯೇಸುಕ್ರಿಸ್ತನು ಹೇಳಿದುದೇನು?

ಎಂಬುದು ಪ್ರತಿಯೊಬ್ಬ ಕ್ರಿಸ್ತೀಯನಿಗೆ ತಿಳಿದಿದೆ. "ಈ ಕೆನ್ನೆಗೆ ಹೊಡೆದರೆ ಹೊಡೆದವನಿಗೆ ನಿನ್ನ ಆ ಕೆನ್ನೆಯನ್ನೂ ತೋರಿಸು. "ವೈರಿಯು ಮಾಡಿದುದೇನೆಂದು ಅವನಿಗೆ ತಿಳಿಯದು". ದೇವರೇ ಅವನನ್ನು ಕ್ಷಮಿಸು" ಎಂಬುದು ಯೇಸು ಕ್ರಿಸ್ತನ ತತ್ವಗಳು. ಅವುಗಳನ್ನು ಸರಿಯಾಗಿ ನಡೆಯುವವರಿರುವರೋ ಎಂದು ಪ್ರಶ್ನೆಯುಕ್ತ ಭ್ರಾಂತಿಗೊಳ್ಳುವವರು ಈ ವಾರ್ತೆಯನ್ನು ಓದಿಕೊಳ್ಳಲಿ. ಟೋಕಿಯೋದ ಮಾರ್ಗದಲ್ಲಿ ಮಿಸ ಪಿರಾಶಿ ಬಿ ಮುಹನ್ ಎಂಬವಳು ಒಂದು ಮೋಟರಿನಡಿಗೆ ಬಿದ್ದುಬಿಟ್ಟು ಆಸ್ಪತ್ರೆಸಾಲಾದಳು. ಅವಳು ಮರಣಶಯ್ಯೆಯಲ್ಲಿ ಮಲಗಿ ಹೀಗೆ ಹೇಳಿದಳು. "ದಯವಿಟ್ಟು ಆ ಡ್ರೈವರನನ್ನು ಕ್ಷಮಿಸಿರಿ. ಅವನು ತೀರ ಬಡವ. ನಂತೆ ನಾನು ಸತ್ತರೂ ಚಿಂತಿಲ್ಲ. ಅವನಿಗೆ ಶಿಕ್ಷೆ ಕೊಡಬೇಡಿ. ಅವನ ಲೈಸನ್ಸನ್ನು ತೆಗೆದುಬಿಡಬೇಡಿ. ಅವನ ಕೆಲಸವು ಹೋದರೆ ಇನ್ನೊಂದು ಕೆಲಸವನ್ನು ಕೊಡಿರಿ. ಅವನಿಗೆ ಬಹಳ ಕಷ್ಟವಾದೀತು". ಈ ಮಹಿಳೆಯು ಕ್ರೈಸ್ತಮಂದಿರ ಉಪಾಸಿಕೆ, ಉಪದೇಶಕಿಯೂ ಆಗಿದ್ದಳು.

× × × × × ×

ಅಧಿಕ ಪ್ರಸಂಗದ ಫಲ—

ಮೇನರ್ ಅಧಿಕ ಪ್ರಸಂಗಿಗಳಿಗೆ ತಿಳಿದಿರುವುದು ಹೆಚ್ಚು. ಬಾಲಕರಲ್ಲಿಯೂ ಕೆಲವು ಅಧಿಕಪ್ರಸಂಗಿಗಳಿದ್ದಾರೆ. ಅಂತಹ ಒಬ್ಬ ಬಾಲಕನ ಕಾಣುವ ಹಾಗಿಲ್ಲದ ಕೃತ್ಯವನ್ನು ನೋಡಿ. ಸ್ಪೇನಿಯಾದಲ್ಲಿ ಓರ್ವ ಬಾಲಕನು ತನ್ನ ಸ್ನೇಹಿತನ ಕಂಬಿಯ ನಳಿಗೆಯೊಳಗೆ ಬೆಂಕಿಪೆಟ್ಟಿಗೆಯ ಮದ್ದನ್ನು ಬೇಕಾದಷ್ಟು ತುಂಬಿಸಿ ಬೆಂಕಿ ಕೊಟ್ಟ. ಈ ಹವ್ಯಾಸಕ್ಕೆ ಕೈಹಾಕಬೇಡವೆಂದು ಅವನ ತಂದೆಯು ಎಷ್ಟು ಹೇಳಿದರೂ ಅವನ ಕಿವಿ ಕಿವುಡಾಗಿತ್ತು. ಅವನು ಬೆಂಕಿ ಕೊಟ್ಟನೆಂದವಷ್ಟೆ. ಬೆಂಕಿ ಕೊಟ್ಟರೆ ಆಗುವುದೇನು? ಮದ್ದು ಸುಟ್ಟು ಬೊಂಬು ಒಡೆಯಿತು. ಆದರ ಒಂದು ಚೂರು ಹುಡುಗನ ಮೆದುಳನ್ನು ದಾಟಿ ಓಡಿತು. ಬಿದ್ದವನು ಪ್ರಾಣಸಮೇತ ಪರಲೋಕವಾಸಿಯಾದನು.

ಅಡಿಗೆ ಕೆಲಸದಲ್ಲಿ ಯಾರು ಕುಶಲರು?

ಎಂದು ಯಾರಾದರೂ ನಿಮ್ಮೊಡನೆ ಕೇಳಿದರೆ ನೀವು ಹೇಳುವುದಾದರೂ ಏನು? "ಸ್ತ್ರೀಯರು!" ಎಂದು. ಆದರೆ ನೀವು ಹೀಗೆ ಹೇಳುವ ಮೊದಲು ಸ್ವಲ್ಪ ಆಲೋಚಿಸಿಕೊಂಡಿದ್ದರೆ ಹಾಗೆ ಬಾಯ್ಬಿಡಲಾರಿರಿ. ಒಂದು ವೇಳೆ ಹಾಗೆ ಹೇಳಿದರೂ ಮುಂದಕ್ಕೆ—ಈ ಕಥೆಯನ್ನು ಓದಿದಮೇಲೆ ಎಂದೂ ಹಾಗೆ ಹೇಳಲಾರಿರಿ ಎಂಬುದು ಖಂಡಿತ. ಡೊಸೆಟ್‌ನಲ್ಲಿ ಒಂದು ಸ್ಪರ್ಧೆಯು ನಡೆಯಿತು. ಅಡಿಗೆಕೋಣೆಯ ಸುಧಾರಣೆಯು ಹೇಗಾಗಬೇಕು—ಎಂತಹ ಉಪಕರಣಗಳು ಅವಶ್ಯ—ಅವುಗಳ ಉಪಯೋಗ ಹೇಗೆ ಎಂಬ ಬಗ್ಗೆ ಒಂದು ಪರೀಕ್ಷೆಯು ಅಲ್ಲಿ ನಡೆಯಿತು. ೩೦ ೦೦೦ ಸ್ತ್ರೀಯರೂ ಕೆಲವು ಪುರುಷರೂ ಅದರಲ್ಲಿ ಭಾಗವಹಿಸಿದರು. ಪರೀಕ್ಷೆಯ ಉತ್ತರಗಳನ್ನು ಪರಿಶೀಲಿಸಿದಾಗ ಮಿ। ಅಂತೋನಿ ಒಬ್ರಿ ಎಂಬವನ ಸಲಹೆಗಳು ಅಡಿಗೆಕೋಣೆಯ ಸುಧಾರಣೆಗೆ ಅತ್ಯವಶ್ಯವೂ ಸೌಕರ್ಯಕರವೂ ಎಂದು ಕಂಡುಬಂತು. ಅವನ ಸಂಬಾರಮಿಶ್ರಣದ ಸೂತ್ರವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅವನಿಗೆ ೫೦೦ ಪವನುಗಳು ಬಹುಮಾನಸಲ್ಲಿಸಲ್ಪಟ್ಟವು. ಅವನನ್ನು ಕಂಡು ಉರಿದೇಳುವ ಸ್ತ್ರೀಯರಿರಲಾರರಷ್ಟೆ!

× × × × + ×

ಕೋತಿಯ ಚೇಷ್ಟೆ

ಬೆಲ್ಜಿಯಂನಲ್ಲಿಯ ನಗರದ ದೊಡ್ಡ ಘಂಟೆಯು ಒಂದು ದಿನ ಬೆಳಗ್ಗೆ ಒಂದೇ ಸವನೆ ಬಡೆಯಲಾರಂಭಿಸಿತು. ಸುತ್ತುಮುತ್ತಲಿನ ಕ್ರೈಸ್ತರು ಯಾರೋ ತೀರಿಕೊಂಡರೆಂದು ಅತ್ತಕಡೆ ಚಿರಶಾಂತಿಯನ್ನು ಬೇಡಲಾರಂಭಿಸಿದರು. ಅನೇಕರು ಯೇಸುವಿನ ಗುಣಸ್ಮರಣೆಗೈದರು. ಇಷ್ಟಾಗುವಾಗಲೂ ಘಂಟೆಯು ಬಡೆಯುತ್ತಾ ಇತ್ತು. ಅರ್ಧಗಂಟೆಯ ತನಕ ಹೀಗೆಯೇ ನಡೆಯಲು ಅಲ್ಲಿಯವರು ನಗರಕ್ಕೆ ಓಡಿಬಂದು ನೋಡಲು ಘಂಟೆಯ ಕಂಭವನ್ನು ಹತ್ತಿದ್ದ ಒಂದು ಕೋತಿಯು ಘಂಟೆಯನ್ನು ಆನಂದದಿಂದ ಹೊಡೆಯುತ್ತಿತ್ತು. ಅಲ್ಲಿನ ಮೃಗಾಲಯದ ಕೋತಿಯಂತೆ ಅದು. ಅದರ ಯಜಮಾನನು ಬಂದು ಅದನ್ನು ಹಿಡಿದು ಗೂಡಿನಲ್ಲಿ ಹಾಕಿದನು.

× × × × × ×

ಆಯುಷ್ಯದ ಬಲುಮೆಯಿಂದ—

ಸತ್ತವರು ಬದುಕಿದ್ದಾರೆ, ಬದುಕಿದವರು ಸಾಯುತ್ತಾರೆ. ಅನಾದಿಕಾಲದಿಂದಲೂ ನಡೆದು ಬಂದ ಪ್ರಕೃತಿಯಿದು. ಆದರ ಬಲುಮೆಯಿಂದ ಬದುಕಿದವನ ಸುದ್ದಿಯನ್ನು ಓದಿರಿ—ಬೆಲ್ಗ್ರೇಡ್‌ನಲ್ಲಿ ಬುಜಾನಿ ಬಗ್ರೆಚ್ ಎಂಬವನು ತನ್ನ ಪ್ರಿಯತಮೆಯಿಂದ ತ್ಯಜಿಸಲ್ಪಟ್ಟು ಬಹುವಾಗಿ ಶೋಕತಪ್ತನಾಗಿ ಬಂದೂಕಿನಿಂದ ತನ್ನ ಹೃದಯಕ್ಕೆ ಹೊಡೆದುಕೊಂಡನು. ಗುಂಡು ಅವನ ಹೃತ್ಕಮಲವನ್ನು ತೂತುಗೊಳಿಸಿಬಿಟ್ಟಿತು. ಅವನು ಸ್ಮೃತಿತಪ್ಪಿ ಬಿದ್ದನು. ಅವನನ್ನು ಆಸ್ಪತ್ರೆಗೊಯ್ಯಲಾಗಿ ಅವನು ಬದುಕುವುದು ದುಃಸಂಭವವೆಂದಾಯಿತು. ಆದರೂ, ವೈದ್ಯರು ಅವನ ಹೃತ್ಕಮಲದ ಎರಡು ಪಾರ್ಶ್ವಗಳ ಎರಡು ತೂತುಗಳನ್ನೂ ಹೊಲಿದರು. ಕೆಲವು ದಿನಗಳಲ್ಲಿ ರೋಗಿಯು ಸುಖಗೊಂಡನು. ಈಗ ಅವನ ಎದೆಯು ಚೆನ್ನಾಗಿಯೇ ಇರುವುದು.

× × × × × ×

ಹೆಚ್ಚು ಉತ್ಸಾಹಿಗಳಾರು?

ಯುವಕರೋ ಮುದುಕರೋ— "ಯುವಕರು" ಎಂಬ ಉತ್ತರವು ತಕ್ಷಣವೇ ಸಿಗಬಹುದು. ಆ ಉತ್ತರದಲ್ಲಿ ಸತ್ಯವಿಲ್ಲವೆಂದು ಖಂಡಿತ. ಇಂಗ್ಲೆಂಡ್ ಮತ್ತು ಔಸ್ಟ್ರೇಲಿಯಾಗಳೊಳಗೆ ವಿಶ್ವಗಟ್ಟಲೆಯಾಗಿ ವಿಮಾನವನ್ನು ಹಾರಿಸಬೇಕೆಂದು ಆಲೋಚಿಸಿದ್ದಾರೆ. ಮೇ ತಿಂಗಳಲ್ಲಿ ಈ ಲೈನನ್ನು ತೆರೆಯುವುದಾಗಿ ನಿಶ್ಚಯಿಸಿರುತ್ತಾರೆ. ಈ ವಿಮಾನ ಸಂಚಾರದ ಕುತೂಹಲದಿಂದ ಮೆಲ್ಬೋರ್ನಿನ ಮಿ। ಆರ್. ಸಿ. ಬ್ಲೇಕ ವುಡ್ ಎಂಬ ಮುದುಕನು ಮುಂದಕ್ಕೆ ಜನರ ನೂಕುನುಗ್ಗಲಿನಲ್ಲಿ ತನಗೆ ಟಿಕೇಟು ದೊರೆಯುವುದು ಕಷ್ಟವೆಂದು ನೆನಸಿ ಕಳೆದ ಡಿಸೆಂಬರಿನಲ್ಲೇ ತನ್ನ ಟಿಕೇಟಿಗಾಗಿ ಎಲ್ಲರಿಗಿಂತಲೂ ಮೊದಲು ಅರ್ಜಿ ಹಾಕಿದನು. ಈಗ ಅವನಿಗೆ ಈ ಸರ್ವಿಸಿನ ಮೊದಲನೆ ಟಿಕೇಟು ದೊರಕಿದೆ.

× × × × × ×

ತಾನೊಂದು ನೆನೆದರೆ ದೈವತಾ ಬೇರೊಂದು ನೆನೆದುದು.

ವಿಯೆನ್ನಾದಲ್ಲಿ ಫ್ರಾ ಲೋರೆನ್ಜ್ ಎಂಬವಳು ಗವರ್ನ್‌ಮೆಂಟ್ ಸೆಂಟ್ರಲ್ ಟೆಲಿಗ್ರಾಫ್ ಆಫೀಸಿನಲ್ಲಿಯ ಮೆನೇಜರನ್ನು ಮನೆಗೆ ಕರೆದು ತನ್ನ ಗಂಡನಿಗೆ ಒಂದು ಕೆಲಸವನ್ನು ತನ್ನ ಆಫೀಸಿನಲ್ಲಿ ಕೊಡಬೇಕೆಂದೂ ಕೊಡದಿದ್ದರೆ ತಾನು ಮೆನೇಜರನ ಒಂದು ಪ್ರೋಜೆಕ್ಟಿನ ರಹಸ್ಯಾಚಾರದ ಗುಟ್ಟನ್ನು ಬಯಲುಗೊಳಿಸುವೆನೆಂದೂ ಹೇಳಿದ. ಅವಳ ಮಾತುಗಳನ್ನು ಮಹೋನ್ನತನು ಕೇಳಿ ಅವನು ಗುಟ್ಟನ್ನು ರಟ್ಟುಗೊಳಿಸಿದನು. ಈಗ ಮೆನೇಜರನೂ ಲೋರೆನ್ಜಳೂ ಕಠಿಣ ಶಿಕ್ಷೆಗೆ ಗುರಿಯಾಗಿರುವರು.

× × × × × ×

ತನ್ನ ಕರ್ಮದ ಫಲ ತನಗೆ.

ಬಾರ್ಸಿಲೋನಾ ಎಂಬಲ್ಲಿ ಕೆಲವು ಪೋಲೀಸರು ಒಂದು ಮೋಟರಿನಲ್ಲಿಯ ಭಿಕಾರಿಯಾಗಿರುವ ಚೆನ್ನು ಹತ್ತಿ ಓಡುತ್ತಾ, ಅವರ ಮೋಟರಿಗೊಂದು ಬೋಂಬನ್ನು ಎಸೆದರು. ಆದರೆ ಆ ಬೋಂಬು ಅವರ ಮೇಲೆ ಬೀಳಲಿಲ್ಲ. ಹಿಂಬಾಲಿಸುತ್ತಿದ್ದ ಪೋಲೀಸರ ಮೋಟಾರು ಒಡನೆ ಬಿದ್ದ ಸ್ಥಳವನ್ನು ದಾಟುತ್ತಿದ್ದಾಗ ಒಡನೆ ಬೋಂಬು ಸಿಡಿಯಿತು. ಕೂಡಲೇ ಒಬ್ಬ ಮಹಾಧಿಕಾರಿಯು ಪ್ರಾಣಬಿಟ್ಟನು. ಮೂವರು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಮೋಟರು ಅಗ್ನಿನಾರಾಯಣನ ಮುಖಮೊಯಿಂದ ಪವಾಯ ವಾಯಿತು. ಕರ್ಮದ ಫಲವೆಂದರೆ ಬೇರಾವುದು?

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಿಂದ ಶಿಫಾರಸು ಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ. ಅಜ್ಜಿ ಕಥೆಗಳು (ಸಚಿತ್ರ).

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.	ರೂ	ಆ	ಪೈ
ನಾಲ್ಕನೇ ದರ್ಜೆ	0	6	0				
ಮೂರನೇ ,,	0	4	6	ಎರಡನೇ ದರ್ಜೆ	0	8	0
ಎರಡನೇ ,,	0	4	0				
ಸಮಾಜಶಾಸ್ತ್ರ.				ಮೂರನೇ ,,	0	8	0
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ನಾಲ್ಕನೇ ,,	0	5	0
ಮೂರನೇ ,,	0	2	6				
				ಐದನೇ ,,	0	6	0

ಮೂರು ಕರಡಿಗಳು
ಜೇನು ಸತ್ತು ಕಾಗೆ ಬಡವಾಯಿತು
ಮೊಣಸಿನ ಕಾಳಪ್ಪ
ಅರ್ಗಣೆ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗು.
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ.
(ಇವುಗಳ ಕ್ರಯ. 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಉತ್ಕೃಷ್ಟ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು' ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ-(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ-(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ-(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ-(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ

ಜೀವ ದ ಜಯಶೀಲತೆಯು ಏನೆಂಬುದನ್ನೇರಿ ಲೋಕ ದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಿಪ್ಪಣಿ ಹಾಕಲು ವಿನಹ ಕಳ ಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

Shah Company M ... Pearl & Sons Ma ...

Atank Nigrah Pharmacy

Chickpet Bangalore

ಆತಂಕನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಬೆಂಗಳೂರು

Writing an Advertisement. Advertisements make both conscious and sub-conscious appeal and should be beautiful, sentimental or humorous, not blatant or vulgar. Depend then upon appeals whether of wording or design, not too highly coloured metaphorically, and with a reason given where possible that appeals to the practicable mind. A mere statement of the name of the article or place is insufficient.

— The Publicity Department, Swadeshabhimani, Mangalore

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿಯು ... ವರ್ಷ ಪ್ರತಿ ವೃದ್ಧವಾಗಿ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇದರಲ್ಲಿ ಸಾರ್ವಜನಿಕರು ಇಟ್ಟಿರುವ ವಿಶ್ವಾಸಕ್ಕೂ ಸ್ವಾರ್ಥ ಸೇವೆಗೂ ಇದೇ ದಾಖಲೆಯಾಗಿದೆ

19 ಆಫೀಸುಗಳಿರುವ ಹೆಸರಾದ ಬೇಂಕು

ನಮ್ಮ ಆಫೀಸುಗಳು.—

ಬೊಂಬಾಯಿ (ಫ್ರೋಟ್ ಮತ್ತು ಮಾಟ್ಟುಂಗ) ಹುಬ್ಬಳ್ಳಿ ಮಂಗಳೂರು ಕಲ್ಲಿಕೋಟೆ ಕೊಚ್ಚಿ ಎರ್ನಾಕುಲಂ ಅಲ್ಲೆಪ್ಪೆ ಬೆಂಗಳೂರು ದಾವಣಗೆರೆ ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿವೆ

ಪ್ರಗತಿಸೂಚಕ ಪಟ್ಟಿ.

ವಸೂಲಾದ ಭಂಡವಾಳ	ಕೆತ್ತ ಭಂಡವಾಳ	ರಿಜರ್ವ್	ಡಿಪೋಜಿಟ್	ವ್ಯವಹಾರದಲ್ಲಿರುವ ಭಂಡವಾಳ
1916 2 25,000	1916 00 000	916 89,000	1916 8,60,000	1916 6,88,000
1920 3,00 000	1920 3 00 000	1920 1 61 000	1920 8,99 000	1920 11,19,000
1924 3,00 000	1924 3 00 000	924 2 62 000	19 4 18,10 000	1924 24,69,000
1928 3 00,000	1928 3,00 000	19 8 3 88 000	1928 37 12 000	1928 46,99,000
1932 6 00 000	1932 3,30,000	1932 4,31,000	1932 55,46,000	1932 65,62,000
1934 6 00,000	1934 3 31 000	1934 4 50 000	1934 58,62 000	1934 73,49 000

ಗಿರಾಕಿಗಳಿಗೆ ಎಲ್ಲಾ ತರದ ಘಾಕರ್ಯಗಳು

ಸುಲಭ ರೀತಿಯ ವ್ಯಾಪಾರ ವಹಿವಾಟುಗಳು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ ಸ್ವ.

ನಮ್ಮ ಮುಂದಾಳುಗಳು

ನಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಓವರ್ಸಿಯರರು ಸ್ವರ್ಗಕ್ಕೇರಿದರೆಂಬ ಸಂತೋಷ ಸಮಾಚಾರವು ನಮಗೆ ದೊರಕಿದೆ. ಅವರನ್ನು ತಿರುಗಿ ಸೇರಿಸಿಕೊಳ್ಳುವುದರಲ್ಲಿ ಈಗಿನ ಎಂಜಿನಿಯರರು ಕಾರಣ ಎಂಬುದನ್ನು ಕೇಳಿ, ಅವರ ಕರುಣೆಯನ್ನೂ ಕೊಂಡಾಡಬೇಕು ಅವರ ಬಾಕಿ ಸಂಬಳವನ್ನು ಕೆರಳಿಸಿದ ಜಿಲ್ಲಾ ಬೋರ್ಡು, ಈ ಮೊದಲೇ ಅಷ್ಟು ಮಾಡಿದ್ದರೇ ಅವರಿಂದ ಸಾಕಷ್ಟು ಕೆಲಸವನ್ನು ಪಡೆಯಬಹುದಿತ್ತು

\+ + + +

ನಮ್ಮ ಹಳ್ಳಿಯ ಶಾಲೆಗಳು ಈಗ ಕಾಲೇಜುಗಳಾಗುತ್ತ ಬಂದಿವೆ ಪುತ್ತೂರು ತಾಲೂಕಿನ ವಿಟ್ಲ ಶಾಲೆಯು ಆದರ್ಶಪ್ರಾಯವಾದ ಕಾಲೇಜು ಆಗುವ ಭರದಲ್ಲಿರುವುದು ಅದರ ಕಡೆಗೆ ಅವರು ಮಾಡಿದ ಪ್ರಥಮ ಸುಧಾರಣೆಯೆಂದರೆ—ತಮ್ಮ ಎಂಟನೇ ತರಗತಿಯ ಬಾಲಕರಲ್ಲೇನೇ—"ಸ್ಟೆಂಡಿಂಗ್ ಅಪ್" ಕಾರ್ಯ ತೊಡಗಿದುದು ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಸಿಗದ ಈ ಕಿರಿಯ ಬಾಲಕರನ್ನು ಏಕೆ ನಿಲ್ಲಿಸಿದರೆಂದು ಯಾರು ಕೇಳಬೇಕು ಇನ್ಸ್‌ಪೆಕ್ಟರರಿಗೆ ಅವಕಾಶವಾಗಲಾರದು—ನಮ್ಮ ಬೋರ್ಡು ಪ್ರೆಸಿಡೆಂಟರು ಈ ಅನ್ಯಾಯವನ್ನು ನಿವಾರಿಸಲಾರರೇನು?

\+ + + +

ನಮ್ಮ ಜಿಲ್ಲೆಯ ಎಷ್ಟೋ ಕಡೆಗಳಲ್ಲಿನ ಶಾಲಾ ಇನ್ಸ್‌ಪೆಕ್ಟರರು ಶಿಕ್ಷಣದಲ್ಲಿ ಅತಿ ಹೆಚ್ಚಿನ ಮೆಹನತ್ತು ವಹಿಸುತ್ತಿದ್ದಾರೆಂದು ವಾರ್ತೆ ಬಂದಿದೆ ಇದರಿಂದಾಗಿ ಅವರ ಮನೆಯ ತರಕಾರಿ, ಕಾಳುಕಡ್ಡಿಗಳ ಸಪ್ಲೈ ಸುಖದಿಂದ ಸಾಗಬಹುದು ಹಿರಿಯರ ಸೇವೆಗೆ ಅನುವು ದೊರಕಿದರ ಉಪಾಧ್ಯಾಯರು ಧನ್ಯರು ಒಂದು ಕಡೆ ಶಾಲೆಯ ಮೇಜಿನ ಮೇಲೆ ಇರಿಸಿದ ಹೂದಾನಿಗಳ ಮೇಲೆ ಇನ್ಸ್‌ಪೆಕ್ಟರರ ದೃಷ್ಟಿ ಬಿತ್ತೆಂದು ಹೇಳುತ್ತಾರೆ ಸರಿ ಉಪಾಧ್ಯಾಯರ ಪಾಲಿಗೆ ಬಂತು ಖರ್ಚು ಹಿರಿಯರಿಗೆ ತರಕಾರಿಗಳು ಸಪ್ಲೈ ಆಗುವಂತೆ ಕೋಮಲವಾದ ಹೂ ಹಣ್ಣುಗಳೂ ಸಿಲ್ಲುತ್ತಿರಬಹುದು ಈ ಮಳೆಗಾಲದಲ್ಲಿ ಒಳ್ಳೆ ಕಸಿಮಾವಿನ ಹಣ್ಣುಗಳು ಆಗುವುವೆಂಬ ಸಮಾಚಾರವು ನಮಗೆ ದೊರಕಿದೆ

\+ + + +

ಬಸ್ರೂರಿನ ಎಯ್ಡೆಡ್ ಶಾಲೆಯ ಉಪಾಧ್ಯಾಯರು ಇನ್ನೂ ಪೂರ್ಣ ಡೆಡ್ ಆಗಿಲ್ಲವಂತೆ ಬೆಳಗಿಂದ ಹಿಡಿದು ಸಂಜೆಯ ತನಕ ಕೆಲಸ ಮಾಡುವ ಬಡಪಾಯಿಗಳಿಗೆ, ಹೊಸ ಶಾಲೆ ಕಟ್ಟಡಕ್ಕೆ ಒಂದು ಸ್ಥಳ ಸಿಗಬಾರದೇ ಶಿಕ್ಷಣ ಪ್ರೇಮಿಗಳಾದ ಅಲ್ಲಿನ ಇನ್ಸ್‌ಪೆಕ್ಟರರು ಈ ವಿಷಯ ಯತ್ನಿಸುವರೆಂದು ನಂಬಿಕೆ

\+ + + +

ಸುಳ್ಯದಲ್ಲಿ ಒಂದು ಅನಾವಶ್ಯಕವಾದ ಆಸ್ಪತ್ರೆಯಿದೆಯಂತೆ—ಅದನ್ನು ತೆಗೆದು ಉಡುಪಿ ತಾಲೂಕಿಗೆ ಸಾಗಿಸಿದಲ್ಲಿ ಎಷ್ಟೋ ಲೇಸೆಂದೂ ಆಗ ಪುತ್ತೂರಿನ ಒಳನಾಡಿನ ಜನರ ವೈದ್ಯ ಸಹಾಯಕ್ಕೆ ಬರೇ ೩೦–೪೦ ಮೈಲು ನಡೆದರೆ ಸಾಕೆಂದೂ, ರೋಗಿಗಳು ಹೀಗೆ ನಡೆದರೆ, ಅದರಲ್ಲೂ ಮಳೆಗಾಲದಲ್ಲಿ ನಡೆದರೆ ಅವರ ಬೇನೆಯು ಹುಟ್ಟಿ ಅಡಗುವುದೆಂದೂ ಸುದ್ದಿ ಬಂದಿದೆ

\+ + + +

ಪ್ರತಿ ತಾಲೂಕಿನ ಕೇಂದ್ರದಿಂದ ಘಟ್ಟದ ಪ್ರಾಂತ್ಯಕ್ಕೆ ಹೋಗುವ ನೇರವಾದ ದಾರಿಗಳಿವೆ ಆದರೆ ಕುಂದಾಪುರ, ಉಡುಪಿ ತಾಲೂಕುಗಳಿಗೆ ಇದು ಅವಶ್ಯವಿಲ್ಲವೋ ಏನೋ, ಉಡುಪಿಗಾದರೂ ಕಾರ್ಕಳದ ಹಾದಿಯೆಂದು ಸಮಾಧಾನ ಪಟ್ಟರೆ ಕುಂದಾಪುರದ ಗತಿಯೇನು? ಸೇತುವೆಯಿರುವ ಒಂದೇ ಒಂದು ಹಾದಿ ಆ ತಾಲೂಕಿಗೆ ಯೇನು! ಮಳೆಗಾಲದಲ್ಲಿ ಅವರ ಗತಿಯೇನು? ಅಲ್ಲಿ ಸೌಡದ ಹೊಳೆಗೆ ಸೇತುವೆಯು ನಾಟಲಾರದೇ!

\+ + + +

ನಮ್ಮಲ್ಲಿನ ಸಾರ್ವಜನಿಕ ಸಂಸ್ಥೆಗಳೆಂದರೆ—ಹತ್ತು ಜನರೆಮೇಹನತ್ತಿನ ಸಂಘಗಳು ಹತ್ತು ಜನರಿಂದ ಹಣಪಡೆಯುವ ಅಧಿಕಾರ ಇವಕ್ಕಿದೆಯೇ ಹೊರತು—ಹಣದ ವ್ಯಯ ಹೇಗಾಯಿತೆಂದು ಕೇಳುವ ಅಧಿಕಾರ ಅವರಿಗೇಕೆ' ನಮ್ಮ ಹರಿಜನ ಫಂಡು, ರಾಷ್ಟ್ರೀಯ ಫಂಡು, ಸ್ಮಾರಕ ಫಂಡು—ಈ ಎಲ್ಲಾ ಫಂಡುಗಳು ಹಣಕೂಡಿಸುತ್ತಿವೆ, ಕಳೆಯುತ್ತಿವೆ ಆದರೆ ಅದರ ಲೆಕ್ಕಾಚಾರ ಪತ್ರಿಕೆಗಳಲ್ಲಿ (ತಂತಮ್ಮಲ್ಲೇ ಅಲ್ಲ) ಪ್ರಕಟಿಸಿದ್ದರೆ ದುಡ್ಡು ಕೊಟ್ಟ ದುರ್ದೈವಿಗೆ ಇನ್ನೊಮ್ಮೆ ಕೊಡುವ ಮನಸ್ಸು ಬರುತ್ತಿತ್ತೋ ಏನೋ

ನಮ್ಮ ಜಿಲ್ಲೆಯಲ್ಲಿ ಕೂಡಿದ ಹರಿಜನ ಫಂಡು ಹೇಗೆ ಹರಿದುಹೋಯಿತು, ಹೇಗೆ ಹರಿಯುತ್ತಿದೆ—ಎಂದು ಕೂಲಂಕಷವಾಗಿ ತಿಳಿಸಿದರೆ ಪತ್ರಿಕೆಗಳ ಪ್ರಕಟಿಸಲಾರವೇನು? ಪ್ರಕಟಿಸಿದರೆ ಜನರೂ ಓದಬಹುದೆಂಬ ವಿಶ್ವಾಸವಿದೆ

\+ + + +

ಯೇಸುವಿನ ಹೆಸರಲ್ಲಿ ನಮ್ಮ ಕೊಕ್ಕಡದ ಪಾದ್ರಿ ಸಾಹೇಬರು ಆದಷ್ಟು ಹೆಚ್ಚಿನ ಗ್ರಾಮ ಕಲಹಗಳಿಗೆ ಪ್ರೋತ್ಸಾಹವೀಯುತ್ತಿದ್ದಾರ ತೆ ಬ್ರಾಹ್ಮಣರಿಗೆ ಹರಿಜನರಿಗೆ, ಅವರಿಗೆ ಇವರಿಗೆ—ಸದಾ ಜಗಳ ಬರುತ್ತಲೇ ಇದೆ ಪಾದ್ರಿ ಹೀಗೆ ಯೇಸು ಭಕ್ತರು ಮಾಡದಿದ್ದರೆ ಅಲ್ಲಿನ ಬೆಪ್ಪು ಬ್ರಾಹ್ಮಣರು ಹೆದರ ವರೇ? ಯೇಸುವಿಗೆ ಕೃತ್ಯುಯಿದೆಯೇ—ಎಲ್ಲಾ ಬಿಟ್ಟು ವಕೀಲರ ಗತಿಯೇನ? ಒಂದು ಗಲ್ಲದ ಮೇಲೆ ಏಟು ಬಿದ್ದರೆ ಎರಡನೇ ಗಲ್ಲವನ್ನು ತೋರಿಸು' ಎಂದ ಏಸುಸ್ವಾಮಿ ಹೇಳಿದನು. ನಮ್ಮ ಪಾದ್ರಿ ಸಾಹೆಬರು ಇನ್ನೂ ನಾಲ್ಕು ಜನರ ಗಲ್ಲಗಳನ್ನು ತೋರಿಸಲು ಸಿದ್ಧರಿದ್ದಾರೆ

1¼ CRORE

Karnatics

know nothing

of your

products,—

Advertise them

in

Swadeshabhimani

the pioneer

Weekly of the

South Kanara District

For Advertisement rates apply to

The Advertisement Manager,

Swadeshabhimani

Mangalore.

ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭಾ, ಬೆಂಗಳೂರು.

ಪ್ರಿಯ ಮಹನೀಯರೆ,

'ಇದುವರೆಗೂ ದಕ್ಷಿಣ ದೇಶದಲ್ಲಿ ಹಿಂದೀ ಪ್ರಚಾರ ಕಾರ್ಯವು ಮದ್ರಾಸಿನ ಸಂಸ್ಥೆಯ ಕಡೆಯಿಂದ ನಡೆಯುತ್ತಿದ್ದುದು ಸರಿಯಷ್ಟೆ ಈಚೆಗೆ ಕರ್ನಾಟಕದ ಹಿಂದೀ ಪ್ರೇಮಿಗಳಲ್ಲಿಯೂ ಪ್ರಚಾರಕರಲ್ಲಿಯೂ, ನಮ್ಮ ಪ್ರಾಂತ್ಯಕ್ಕೇ ಒಂದು ಸಂಸ್ಥೆಯ ಆವಶ್ಯಕತೆಯು ತೋರಿದುದರಿಂದ ತಾ ೩–೩–೩೫ಕ್ಕೆ ಬೆಂಗಳೂರಲ್ಲಿ ಆಚಾರ್ಯ ಕಾಲೇಲ್ಕರರ ಸಮ್ಮುಖದಲ್ಲಿ "ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭೆ" ಯು ಸ್ಥಾಪಿತವಾಯಿತು ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಹಿಂದೀ ಪ್ರೇಮಿಗಳಾದ ಮುಖಂಡರನ್ನೊಳಗೊಂಡ ಒಂದು ಕೇಂದ್ರಸಂಸ್ಥೆಯು ರೂಪುಗೊಂಡಿತು ಮತ್ತು ಕೆಳಗೆ ಕಂಡ ಮಹನೀಯರು ಕಾರ್ಯಕಾರಿಣಿ ಸಮಿತಿಗೆ ಚುನಾಯಿಸಲ್ಪಟ್ಟರು—ಅಧ್ಯಕ್ಷರು—ಶ್ರೀಮಾನ್ ನವರತ್ನ ರಾಮರಾಯರು, ಬಿ ಎ, ಬಿ ಎಲ್, ಮೈಸೂರು ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ನಿವೃತ್ತ ಡೈರೆಕ್ಟರರು. ಕೋಶಾಧ್ಯಕ್ಷರು—ರಾವ್ ಬಹದ್ದೂರ್ ಡಾ। ಸಿ ಬಿ ರಾಮರಾಯರು, ಎಂ ಡಿ, 'ಶಾಂತಿ ನಿವಾಸ' ಬಸವನಗುಡಿ, ಬೆಂಗಳೂರು ಕಾರ್ಯದರ್ಶಿಗಳು ಶ್ರೀ। ಕೆ ಸಂಪದ್ಗಿರಿರಾಯರು ಎಂ ಎ ಮುಖ್ಯೋಪಾಧ್ಯಾಯರು, ನ್ಯಾಷನಲ್ ಹೈಸ್ಕೂಲು, ಮತ್ತು ಶ್ರೀ ಸಟ್ಟೂರು ಶ್ರೀನಿವಾಸರಾಯರು, ಬಿ ಎಸ್ ಸಿ, ಬಿ ಎಲ್, ಅಡ್ವೋಕೇಟ್, ಬೆಂಗಳೂರು ಸದಸ್ಯರು—ಮ ರಾ ಗಳಾದ ೧ ಗೂಲೂರು ಶ್ರೀನಿವಾಸರಾಯರು ಬಿ ಎ, ಬಿ ಎಲ್ ಅಡ್ವೊಕೇಟ್, ಬೆಂಗಳೂರು ೨ ಟಿ ಕೃಷ್ಣಮೂರ್ತಿಯವರು ಎಂ ಎ ಬಿ ಎಸ್‌ಸಿ ಮಹಾರಾಜರ ಕಾಲೇಜು ಮೈಸೂರು ೩ ವಿಶ್ವೇಶ್ವರ ನಾರಾಯಣ ಬಿಜೂರು ಬಿ ಎಸ್ ಎಲ್ ಟಿ, ಗಣಪತಿ ಹೈಸ್ಕೂಲು ಮಂಗಳೂರು, ೪ ಶ್ರೀಮತಿ ಲಕ್ಷ್ಮೀ ಬಾಯಿ ಶಂಕರನಾರಾಯಣರಾವ್ ಬಸವನಗುಡಿ, ಬೆಂಗಳೂರು, ೫ ಪಂಡಿತ ಸಿದ್ಧನಾಥ ಪಂತರು, ಪ್ರವರ್ತಕ—ಹಿಂದೀ ಜ್ಞಾನ ಯಾತ್ರೀ ಮಂಡಲ, ಬೆಂಗಳೂರು, ೬ ರಂಗನಾಥ ರಾಮಚಂದ್ರ ದಿವಾಕರ್, ಎಂ ಎ ಎಲ್ ಎಲ್ ಬಿ, ಧಾರವಾಡ, ೭ ದ ಕೃ ಭಾರದ್ವಾಜರು, ಬೆಂಗಳೂರು, ೮ ಶ್ರೀಮತಿ ದ್ವಾರಕಾಬಾಯಿ ಕಡಂಬಿ, ಕಾರ್ಯದರ್ಶಿ, ಮಲ್ಲೇಶ್ವರ ಸ್ತ್ರೀಸಮಾಜ, ಬೆಂಗಳೂರು ೯ ಪ್ರೊ ಎ ಆರ್ ವಾಡಿಯಾ ಬಿ ಎ, (ಕ್ಯಾಂಟಬ್) ಬಾರ್ ಅಟ್ ಲಾ ಮೈಸೂರು

ಕರ್ನಾಟಕದಲ್ಲಿ ಹಿಂದೀ ಪ್ರಚಾರ ಕಾರ್ಯವು ಈಗಾಗಲೇ ಅನೇಕ ಕಡೆಗಳಲ್ಲಿ ನಡೆಯುತ್ತಿದೆ ಇನ್ನೂ ಕೆಲವು ಭಾಗಗಳಲ್ಲಿ ಪ್ರಾರಂಭಿಸಬೇಕಾಗಿದೆ ಹಿಂದೀ ಪ್ರಚಾರದ ಈಗಿನ ಸ್ಥಿತಿಯನ್ನು ಕಂಡುಕೊಳ್ಳುವುದಕ್ಕೂ ಮುಂದಿನ ಕಾರ್ಯಕ್ರಮವನ್ನು ಸಿದ್ಧಪಡಿಸುವುದಕ್ಕೂ ಅನುಕೂಲವಾಗುವಂತೆ ಅ ಕ ಹಿಂದೀ ಪ್ರಚಾರ ಸಭೆಯ ಕಾರ್ಯಕಾರಿಣಿ ಸಮಿತಿಯವರು ತಮ್ಮ ತಾ ೧೦–೩–೩೫ನೆಯ ಅಧಿವೇಶನದಲ್ಲಿ ಒಂದು ಪ್ರಶ್ನಾವಳಿಯನ್ನು ತಯಾರಿಸಿದ್ದಾರೆ ಮತ್ತು ಅದನ್ನು ತಮ್ಮಂಥಾ ಹಿಂದೀ ಅಭಿಮಾನಿಗಳಿಗೆ ಕಳುಹಿಸಬೇಕೆಂದ ತೀರ್ಮಾನ ಮಾಡಿದ್ದಾರೆ ತಾವು ದಯೆಯಿಟ್ಟು ಆದಷ್ಟು ಬೇಗನೆ ಈ ಪ್ರಶ್ನೆಗಳಿಗೆ ತಮ್ಮ ಉತ್ತರವನ್ನು ಕಳುಹಿಸಿಕೊಟ್ಟು ಈ ಕೆಲಸದಲ್ಲಿ ನೆರವಾಗಬೇಕಾಗಿ ಪ್ರಾರ್ಥಿಸುತ್ತೇವೆ

ಪ್ರಶ್ನಾವಳಿ

೧ ನಿಮ್ಮ ನೆರೆಹೊರೆಯ ಜನರಲ್ಲಿ ಹಿಂದೀ ಭಾಷೆಯನ್ನು ಕಲಿಯಲು ಶ್ರದ್ಧಾದರಗಳಿವೆಯೆ? ಆದಷ್ಟು ಜನರನ್ನು ಕಂಡು ಸ್ವತಃ ವಿಚಾರಿಸಿ ಎಷ್ಟು ಮಂದಿಗೆ ಹಿಂದೀ ಕಲಿಯಲು ಕುತೂಹಲವಿರುವುದೋ ದಯವಿಟ್ಟು ತಿಳಿಸಿರಿ. ಮುಖ್ಯರಾದವರ ಹೆಸರುಗಳನ್ನು ಸೂಚಿಸಿರಿ

೨ ನಿಮ್ಮ ಊರಿನಲ್ಲಿ ಪ್ರಚಾರಕಾರ್ಯವು ಹೇಗೆ ನಡೆಯುತ್ತಲಿದೆ? ಅಧ್ಯಾಪಕರು ಅಲ್ಲೇ ದೊರೆಯುತ್ತಾರೆಯೋ? ಅಥವಾ ಹೊರಗಿನಿಂದ ಅಧ್ಯಾಪಕರನ್ನು ಒದಗಿಸಬೇಕೇ?

೩ ನಿಮ್ಮ ಸ್ಥಳದಲ್ಲಿ ಹಿಂದೀ ಪ್ರಚಾರಕರು ಬೇಕಾಗಿದ್ದಾರೆಯೋ? ಬೇಕಾಗಿದ್ದರೆ ಸ್ಥಳದಲ್ಲಿಯೇ ದೊರಕಬಹುದಾದ ಕಟ್ಟಡ, ದ್ರವ್ಯ ಮುಂತಾದ ಸಹಾಯಗಳ ವಿವರವನ್ನು ತಿಳುಹಿಸಿರಿ

೪ ಹಿಂದೀ ಭಾಷೆಯನ್ನು ಕಲಿತು ಮುಂದಕ್ಕೆ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ಇಷ್ಟಪಡುವರಾರಾದರೂ ಇದ್ದಾರೆಯೆ? ಇದ್ದರೆ ಅವರು ನಿರೀಕ್ಷಿಸುವ ಸಹಾಯವೇನು?

೫ ಹಿಂದೀ ಭಾಷಾ ಪ್ರಚಾರದಲ್ಲಿ ಆಸಕ್ತಿಗೊಂಡಿರುವ ಸಂಘ, ಸಮಾಜಗಳ ಹೆಸರುಗಳನ್ನು ತಿಳುಹಿಸಿ, ಯಾವುದಾದರೂ ಗ್ರಾಮ ಪಂಚಾಯತ ಸಭೆಯೋ, ಸಹಕಾರ ಸಂಘವೋ ಆಸಕ್ತಿಯನ್ನು ವಹಿಸಿದ್ದ ಪಕ್ಷದಲ್ಲಿ ಉತ್ತಮವಾದ ಸುದ್ದಿಯೇ ಆಗುವುದು

೬ ನಮ್ಮ ಉದ್ದೇಶ ಸಾಧನೆಗಾಗಿ ಯಾರ ಯಾರ ಸಹಾನುಭೂತಿಯನ್ನು ಪಡೆಯಬಹುದೆಂದು ನಿಮಗೆ ತೋರುವುದೋ ಅಂತಹ ಮಹನೀಯರ ಹೆಸರು ಪರಿಚಯಗಳನ್ನು ತಿಳುಹಿಸಿರಿ

೭ ನಿಮ್ಮ ನೆರೆಯಲ್ಲಿ ಈ ಕೆಲಸವನ್ನು ಯಾವುದಾದರೂ ಸಂಘವೋ ಸಮಿತಿಯೋ ಕೈಗೊಂಡು ನಡೆಸುತ್ತಿದ್ದಲ್ಲಿ ಅಂತಹ ಪ್ರಯತ್ನದ ಸಮಗ್ರ ವೃತ್ತಾಂತ, ವರದಿ, ನಿಯಮಾದಿಗಳನ್ನು ಕಳುಹಿಸಿಕೊಡಿರಿ

ಕೆ. ಸಂಪದ್ಗಿರಿರಾವ್, ಕಾರ್ಯದರ್ಶಿ
ಕಾರ್ಯಾಲಯ —**ನ್ಯಾಷನಲ್ ಹೈಸ್ಕೂಲ್,**
ಪೋ ಬಸವನಗುಡಿ

ನೋಟೀಸು.

ದಿ ಕೆನರಾ ಬ್ಯಾಂಕ್ ಲಿಮಿಟೆಡ್,
ಪುತ್ತೂರು

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಗಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ವ ಅದರ ಮೇಲಣ ಬಡ್ಡಿಯನ್ನಾಗಲೀ ವಾಯಿದೆ ಕೊಡದೆ ಬಾಕಿ ಮಾಡಿರುದುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಮರಳಿ ಬಂದುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ, ರಿಜಿಸ್ಟ್ರಿ ನೋಟೀಸು ಖರ್ಚು ವ ಈ ನೋಟೀಸು ಖರ್ಚು ಸಹ ಕೂಡಿಸಿ ತಾ 6–5 1935ರ ವರೆಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿ ಕೊಂಡು ಹೋಗದೆ ವಾಕಿಯಿಟ್ಟಲ್ಲಿ ಈಡಿಟ್ಟ ನಗಗಳನ್ನು ತಾ 13–5–35ನೇ ಮಂಗಳವಾರ ಮಧ್ಯಾಹ್ನ ಘಂಟೆ ಎರಡಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

L No 31/34 Ramakrishna Bhat S/o Ganapathi Bhat, Kabaka Puttur, Rs 30/-

CANARA BANK LTD, PUTTUR, 10-4-35 | A Venkat Rao, *Agent*

WANTED.

A partner for a chief Agency Concern of a well established old Insurance Company Only men with influence need apply to—

Messrs. **Padubidri Bros,**
Chief Agents,
East & West Insurance Co., Ltd,
40, Narayanlal Bansilal Mansions,
Bombay No. 8.

ಪ್ರಾಣವಧೆಯ ರೂಢಿಯನ್ನು ಕೂಡಲೇ ನಿಲ್ಲಿಸಿರಿ!

ಮಹಾತ್ಮಾ ಗಾಂಧಿಯವರು 'ಹರಿಜನ' ಪತ್ರಿಕೆಯಲ್ಲಿ ಹೀಗೆಂದು ಬರೆದಿರುವರು — 'ದೇವಸ್ಥಾನಗಳ ಸುಧಾರಣೆಯ ಪ್ರಶ್ನೆಯು ಪ್ರತ್ಯೇಕವಾದುದೆಂಬುದು ನಿಜ. ಹರಿಜನರನ್ನು ದೇವಸ್ಥಾನಗಳೊಳಗೆ ಪ್ರವೇಶಿಸಬಿಡುವ ಪ್ರಶ್ನೆಯಿಂದಾಗಿ ಸುಧಾರಣೆಯು ನಿಲ್ಲಲಾರದು. ಸುಧಾರಣೆಯು ಮುಂಸಾಗುತ್ತಾ ಇರಬೇಕು. ಆದರೆ ಯಾವ ದೇವಸ್ಥಾನಗಳಲ್ಲಿ ಪ್ರಾಣವಧೆಯಾಗುತ್ತದೋ ಆ ದೇವಸ್ಥಾನದ ಕುರಿತು ನಾನು ಬೇರೆಯೇ ಹೇಳಬೇಕಾಗಿದೆ. ಅಲ್ಲಿ ಪ್ರಾಣವಧೆಯ ರೂಢಿಯು ನಿಲ್ಲಲಾರದೆ ಹೋದರೆ ನಾನು ಅಂತಹ ದೇವಸ್ಥಾನವನ್ನು ಎಂದೂ ಮುಟ್ಟಲಾರೆ. ಭಕ್ತನಿಗೆ ದೇವಸ್ಥಾನದ ಅಂತರಂಗ ದೌಷ್ಟ್ಯದ ವಿಷಯವಾಗಿ ಏನು ಗೊತ್ತು? ಹಾಗೆ ನಡೆಯುವ ದೌಷ್ಟ್ಯವು ಭಕ್ತನಿಗೆ ಕಾಣಿಸಿಕೊಳ್ಳದು. ಆದರೆ ಪ್ರಾಣವಧೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಅದು ನಡೆಯುವ ಸಂಗತಿಯು ಸರ್ವವಿದಿತವಾಗಿರುವಾಗ ಅಂತಹ ಪ್ರಾಣವಧೆಯ ಪಾಪವು ಭಕ್ತನ ಮೇಲೆ ಬೀಳುವುದು ನಿಶ್ಚಯ. ಒಬ್ಬ ಪಾತ್ರ್ರದಾಯಕನು ಹೀಗೆ ಬರೆಯುತ್ತಾನೆ — "ನನ್ನ ಈ ಕೆಳಗಣ ಸತ್ಯಾಂಶವು ನಿಮಗೆ ನನ್ನ ಪತ್ರದ ಅರ್ಥವನ್ನು ತಿಳಿಸೀತು. ನಾನು ಹತ್ತು ದಿನಗಳ ಹಿಂದೆ ಕಂಡ ದೃಶ್ಯವು ನನ್ನ ಹೃದಯವನ್ನು ಕೊರೆಯುತ್ತಿದೆ. ಅದನ್ನು ತಮಗೆ ತಿಳಿಸುವುದಕ್ಕಾಗಿ ಹೀಗೆ ಬರೆದೆ — ನಮಗೆ ವಿಹರಿಸಲು ಸ್ವಲ್ಪ ಸಮಯವು ದೊರೆತೊಡನೆ ನಾವು ಗೋಲ್ ಪಾರ್ಕ್ ಮತ್ತು ಜೀರಾಹತ್ ಮಧ್ಯೆಯಿರುವ ದಿಗೋರ್ನ ದೇವಸ್ಥಾನವನ್ನು ನೋಡಲೆಂದು ಬರಲು ಹೊರಟೆವು. ಚಹಾ ಬೆಳೆಸುವ ಪ್ರಾಂತ್ಯದಲ್ಲಿದ್ದ ಈ ದೇವಸ್ಥಾನವನ್ನು ನಾನು ಈ ಮೊದಲು ನೋಡಿರಲಿಲ್ಲ. ಈ ದೇವಸ್ಥಾನದ ಸುತ್ತಲಿರುವ ರಮ್ಯ ಪ್ರದೇಶವು ನನ್ನ ಮನವನ್ನಾಕರ್ಷಿಸಿತ. ಪೂರದಿಂದ ಬ್ರಹ್ಮಪುತ್ರ ನದಿಯು ಹರಿದುಕೊಂಡಿತ್ತು. ಅನೇಕ ಮೆಟ್ಟಿಲುಗಳನ್ನು ಹತ್ತಿದರೆ ಈ ದೇವಸ್ಥಾನಕ್ಕೆ ತಲುಪಬಹುದು. ಗುಡ್ಡವನ್ನು ಹತ್ತುವಾಗ ಗಿಡಗಳ ಪೊದರುಗಳೆಡೆಯಿಂದ ಕೋತಿಗಳು ಓಡಿಬಂದು ನಮ್ಮ ಕೈಯಲ್ಲಿರುವ ಆಹಾರಗಳನ್ನು ಸೆಳೆದುಕೊಂಡು ಓಡುತ್ತವೆ.

ಈ ದೇವಸ್ಥಾನದ ಪರಿಸರವು ಅಸಹ್ಯ ಪರಿಸ್ಥಿತಿಯಲ್ಲಿದೆ. ಅಲ್ಲಲ್ಲಿ ಕಸಕಡ್ಡಿಗಳು ತುಂಬಿವೆ. ರಮ್ಯ ನೋಟವು ಒಂದಾದರೂ ಅಲ್ಲಿಲ್ಲ. ಆದರೆ ದೇವಸ್ಥಾನದ ಮಂದಿರ ರಚನೆಯ ಕೆಲಸವು ಅಧಿಕವಾಗಿ ವಿದ್ವತ್ತನ್ನು ಪ್ರದರ್ಶಿಸುವಂತಿದೆ. ಮುಂದಿನ ಗೋಪುರಗಳ ಮೇಲೆ ಮಾಡಿರುವ ಕೆತ್ತನೆಯ ಕೆಲಸಗಳು ಮನೋರಂಜಕವಾಗಿವೆ. ಆದರೆ ಅಲ್ಲಿಯ ಪುರೋಹಿತರು ಈ ಸೌಂದರ್ಯಮಯ ದೇವಾಲಯವನ್ನು ಒಂದು ವ್ಯಾಪಾರದ ...

'ಅದು ನಿಲ್ಲದ ವಿನಹ ನಾನು ದೇವಸ್ಥಾನವನ್ನು ಮುಟ್ಟಲಾರೆ!

ಮಹಾತ್ಮಾ ಗಾಂಧಿಯವರ ನಿವೇದನೆ.

ರೂಪಕ್ಕೆ ತಂದಿರುವರು. ಅವರ ಸ್ವಾರ್ಥ, ಅವರ ಲೋಭಗಳಿಂದಾಗಿ ಈ ದೇವಸ್ಥಾನಕ್ಕೆ ದೀನರು-ದರಿದ್ರರು ಕಾಲಿಡಲು ಅವಕಾಶವಿರುವುದಿಲ್ಲ. ಇಂತಹ ದೇವಸ್ಥಾನಗಳಲ್ಲಿ ದೇವರು ಹೇಗೆ ನೆಲೆಯಾಗಿರುವನೋ ಎಂಬ ಶಂಕೆಯು ನನ್ನನ್ನು ಬಾಧಿಸುತ್ತಿದೆ.

ನಾವು ದೇವಸ್ಥಾನಕ್ಕೆ ಹೋದ ದಿನ ದೇವಸ್ಥಾನದ ಪರಿಸರದಲ್ಲೆಲ್ಲ ಜನರು ತುಂಬಿಕೊಂಡಿದ್ದರು. ಅಲ್ಲಿಯ ಚಹಾ ತೋಟಗಾರರ ಕೆಲಸಗಾರರೇ ಹೆಚ್ಚಾಗಿದ್ದಂತೆ ಕಂಡುಬಂತು. ದೊಡ್ಡ ದೊಡ್ಡ ಓಣಿಗಳಲ್ಲಿ ನಾವು ಯಾವುದನ್ನು ಕಾಣಬಯಸಿದ್ದೆವೋ ಅಂತಹ ದೃಶ್ಯವು ಇಲ್ಲಿಯೂ ನಮಗೆ ಕಂಡುಬಂದಿತು. ಒಬ್ಬ ಭಕ್ತನು ಒಂದು ಜೋಡು ಪಾರಿವಾಳವನ್ನು ಪುರೋಹಿತನಿಗೆ ಕೊಡುತ್ತಿದ್ದನು. ಪುರೋಹಿತನು ನಿತ್ಯದ ಎರಡಾಣೆಗಳನ್ನು ಕೊಡದೆ ಅವುಗಳನ್ನು ಸ್ವೀಕರಿಸುವುದಿಲ್ಲ ಎನ್ನುತ್ತಿದ್ದನು. ಇನ್ನೊಬ್ಬ ಭಕ್ತನು ಭಟ್ಟರಿಗೆ ಒಂದು ಆಣೆಯನ್ನು ಕೊಟ್ಟನು. ಭಟ್ಟನು ಇನ್ನೂ ನಾಲ್ಕಾಣೆ ಹೆಚ್ಚು ಕೊಡಬೇಕೆಂದನು. ಮೊದಲು ಕೊಟ್ಟ ಒಂದು ರೂಪಾಯಿಯು ಆ ಹರಕೆಗೆ ಸಾಕಾಗುವುದಿಲ್ಲವೆಂದು ಭಟ್ಟನು ವಾದಿಸುತ್ತಿದ್ದನು. ಎಷ್ಟೋ ಜನರು ಮೂರ್ತಿಯ ದರ್ಶನ ಮಾಡಲಾರದೆ, ಕೊನೆಗೆ ಬಾಗಿಲೆಡೆಯಿಂದಲೋ ಸಂದುಗೊಂದುಗಳಿಂದಲೋ ಮೂರ್ತಿಯನ್ನು ನೋಡುತ್ತಿದ್ದರು. ಭಟ್ಟರು ಅತ್ತ ಬರುತ್ತಿರುವರೆಂದರೆ ಒಡನೆ ಅಲ್ಲಿಂದ ಏಳುತ್ತಿದ್ದರು. ಈ ರೀತಿ ಕಳ್ಳತನದಿಂದ ಅವರು ದೇವದರ್ಶನವನ್ನು ಮಾಡುತ್ತಿದ್ದರು. ಈ ದೃಶ್ಯವನ್ನು ಕಂಡು ನನ್ನ ಹೃದಯ ಒಡೆಯಿತು. ಭಾರವಾದ ಹೃದಯವನ್ನು ಹಿಡಿದುಕೊಂಡು ಹೊರಟುಹೋದೆ. ಈ ದೇವಸ್ಥಾನವನ್ನು ಹರಿಜನರಿಗೆ ತೆರೆಯುವಂತೆ ಮಾಡಬೇಕೆಂದು ನಿರ್ಧರಿಸಿದೆ.

ಆಸ್ಸಾಂನಲ್ಲಿಯ ಹೆಚ್ಚಿನ ದೇವಸ್ಥಾನಗಳು ಹಿಂದೂ ಮತಸ್ಥರಾದವರೆಲ್ಲರಿಗಾಗಿ ತೆರೆಯಲ್ಪಟ್ಟಿರುವುದು ತಮಗೆ ತಿಳಿದಿದೆ. ಆದರೆ ದಿಗೋರ್ನದಲ್ಲಿಯ ದೇವಸ್ಥಾನವು ಮಾತ್ರ ಅದಕ್ಕೆ ಅಪವಾದ. ಬಡ ಚಹಾತೋಟಗಳ ಕೆಲಸಗಾರರು ಈ ಪುರೋಹಿತರ ಬೊಕ್ಕಸಗಳನ್ನು ತುಂಬುತ್ತಿರುವರು. ಇಲ್ಲಿಗೆ ಬರುವವರೆಲ್ಲ ಬಡವರು. —ಸಾವಿರಾರು ಹರಿಜನರೂ ಅಲ್ಲಿರುವರು. ಹಾಗಿರುವಾಗ ಈ ದೇವಸ್ಥಾನವು ಹರಿಜನರಿಗಾಗಿ ತೆರೆಯಲ್ಪಟ್ಟರೆ ದೇವರ ಸೇವೆಯಾದೀತು. ಇಲ್ಲಿಯ ಚಹಾತೋಟಗಳ ಕೆಲಸಗಾರರನ್ನು ಅಸ್ಪೃಶ್ಯರೆಂದು ಭಾವಿಸಲಾಗಿದೆ. ಅಲ್ಲದೆ ಇಲ್ಲಿ ಪ್ರಾಣಿಬಲಿಯು ಸದಾ ನಡೆಯುತ್ತಿರುತ್ತದೆ. ಈ ದೇವಸ್ಥಾನ ಪ್ರವೇಶಕ್ಕಾಗಿ ಹರಿಜನರು ಸಾಧಿಸಬಹುದು.'

ಇಂತಹ ದೇವಸ್ಥಾನಕ್ಕೆ ಹರಿಜನರನ್ನು ಪ್ರವೇಶಿಸಬಿಡುವುದೆಂದರೆ—ಮುಂದಕ್ಕೆ ಅವರನ್ನು ಈ ಪ್ರಾಣಿಬಲಿಗೆ ಪ್ರೋತ್ಸಾಹಿಸಿದಂತಾಗುವುದು. ಅವರು ಒಬ್ಬೊಬ್ಬರಾಗಿ ಪ್ರಾಣಿಪಕ್ಷಿಗಳನ್ನು ತಂದು ಈ ದೇವಸ್ಥಾನದಲ್ಲಿ ಬಲಿ ಕೊಡಬಹುದು. ಆದುದರಿಂದ ಮೊದಲು ಈ ದೇವಸ್ಥಾನದಲ್ಲಿನ ಪ್ರಾಣಿಬಲಿಯ ರೂಢಿಯು ನಿಲ್ಲಬೇಕು. ಈ ಬಗ್ಗೆ ಊರ ಪ್ರಮುಖರು ಧೈರ್ಯದಿಂದ ಚಳವಳಿಸಬೇಕು. ಆ ಮೇಲೆ ಹರಿಜನ ಪ್ರವೇಶಕ್ಕಾಗಿ ವ್ಯವಸ್ಥೆ ಮಾಡಬೇಕು.



ಪುರುಷರೊಡನೆ ಸಮಾನತೆ ಕೇಳುವ ಪಾಶ್ಚಾತ್ಯ ದೇಶಗಳ ಸ್ತ್ರೀಯರು ಈಗ ಅಂಗಸಾಧನೆಗೆ ತೊಡಗಿರುವರು. ಜರ್ಮನಿಯ ಇಂಗ್ಲೆಂಡ ಸ್ತ್ರೀಯರು ಸ್ವಸಂರಕ್ಷಣೆ ಕಲಿಯತೊಡಗಿದ್ದಾರೆ. ಶಾಲೆಗಳಲ್ಲಿ ತರುಣಿಯರು ಅಂಗಸಾಧನೆಗೆ ಹೆಚ್ಚು ಲಕ್ಷ್ಯವೀಯುತ್ತಿರುವರು. ಈ ಚಿತ್ರದಲ್ಲಿ ಜರ್ಮನಿಯ ತರುಣಿಯರು ದಿಬ್ಬದ ಹಗ್ಗಗಳ ಸಹಾಯದಿಂದ ಮಾಡುವ ಕಸರತ್ತುಗಳನ್ನು ನೋಡಬಹುದು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,34,250.	500
1929—	ರೂ 1,66,16,620	9 3,000
1934—	ರೂ ,46,77,333.	49,08,771.

ಕ್ಲೆಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ. ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No. 6, Sankuram Chetty St., G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S. K (Incorporated in British India) Tel.-'BANKING' **ESTD. 1906.**

Branches:—1 Udipi, 2 Coondapoor, 3 Car Street, Mangalore, 4 Shimoga, 5 Madras, 6 Bunder Mangalore, 7. Mercara

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬ್ಯಾಂಕು ಇದೇ ಆಗಿರುತ್ತದೆ

ಅಧಿಕೃತ ವ ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ! 3,50,000—0—0
ಕೆತ್ತು ಬಂದ ಮೂಲಧನ	2 58,305—0—0
ಕ್ಷೇಮನಿಧಿ ಮತ್ತು ಇತರ ಅಪದ್ಧನಗಳು	3,12,144—0—0

ಚಾಲ್ತಿ ಸೇವಿಂಗ್ಸ್ ಬ್ಯಾಂಕ್, ಕಾಯಂ ವ ಅಲ್ಪ ಅವಧಿಯ ಠೇವಣಾತಿಗಳು ಸ್ವೀಕರಿಸಲ್ಪಡುವುವು ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ"

ಬೊಂಬಾಯಿ, ಮದ್ರಾಸು, ಕರಾಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ವ ಟಪಾಲಕವಾಗಲೀ ಡಿಮಾಂಡ್ ಡ್ರಾಫ್ಟ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ ಬ್ಯಾಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುವುವು

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರಕೊಳ್ಳಿರಿ

ಕಾರ್ಪರೇಶನ್ ಆಫೀಸು, ಉಡುಪಿ, 7-4-35 **M. Shrinivas Prabhu,** *Manager*

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ರಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ವ ಲಾಪಿನ ಕಿಂಗ್ ಎಂಡ್ ಕ್ವೀನ್ ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷಿಸುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಘೋಷಿಸುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ರಜತೋತ್ಸವ ವರ್ಷ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನ 1910)

(ಚೆಯರ್ ಮೆನ್ — ಸರ್ ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ)

ಇದರ ದಕ್ಷಿಣ ಹಿಂದೂಸ್ಥಾನದ ಶಾಖೆಯು ಪ್ರಮುಖ ಕಛೇರಿ ... ನಗರ ... ಉಪ ... [illegible]

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಜೀವವಿಮೆಯ ಪವಿತ್ರ ಸೇವೆಯಲ್ಲಿ ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮುಂದಿಟ್ಟುಕೊಂಡು ಮುಂದುವರಿಯುತ್ತಾ ಬಂದಿರುತ್ತೇವೆ ಅವರ ಕಷ್ಟಗಳೂ ಅಶೆಗಳೂ ಮತ್ತು ಅವಶ್ಯಕತೆಗಳೂ ನಮ್ಮದೆಂದೇ ಪರಿಗಣಿಸುತ್ತಾ ಬಂದಿರುವೆವು ... ಜೀವವಿಮಾ ... ನಮ್ಮ ಅನುಲಕ್ಷ್ಯತೆಯೂ ಅನನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ... ಪೋಲಿಸಿಗಳನ್ನು ... ಸಮರ್ಥರನ್ನಾಗಿ ಮಾಡಿರುತ್ತದೆ ... ನಮ್ಮ ಮಹತ್ವದ ಲಾಭವೆಂದರೆ ಒಂದೇ ಉದಾಹರಣೆಗಳಲ್ಲಿ ಕಳೆದ 25 ವರ್ಷಗಳ ಅವಧಿಯೊಳಗೆ ನಮ್ಮ ಪ್ರಾಥಿಕ ಏಜಂಟರುಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಬಿಟ್ಟಿರುವುದಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಃ ಬಂದು ಕಾಣಿರಿ —

(1) ಇಸ್ಮಾಯಿಲ್ ಬಿಲ್ಡಿಂಗ್ ಲೋಹರ್ ಚಾಲ್, ಮುಂಬೈ ನಂ 2 (2) ಪೋಸ್ಟ್ ಬಾಕ್ಸ್ 387 ಮೌಂಟ್ ರೋಡ್ ಮದರಾಸು (3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ (4) ಕಜೂರ್ ರೋಡ ಕಲ್ಲಿಕೋಟೆ (5) ರಥಬೀದಿ, ಮಂಗಳೂರು. (6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd, Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ್ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನನ್ನೇ ಉಪಯೋಗಿಸಿರಿ ಸಿಲಿಕೇಟ ಬರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ವಿಲ್ವೆಟಿನ್ ಡಿಯೋರಾ ಕ್ರೀಮ್ ಕ್ರಿಮೊರ್ ಲಿಮೊನಿಸ್, ಕರ್ಣಾಟಕ ಕೋಶ ಪೊಮೇಡ್.

ಇದಲ್ಲದೆ ನಮ್ಮಲ್ಲಿ ಎಲ್ಲಾ ತರಹೆದ ವೈದ್ಯಕೀಯ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೆನ್ನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ —(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾಷನಪ್ಪ ನ್ಯಾಕನ ಬೀದಿ, ಪಾರ್ಕ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A S. Kamath at the Sharada Press, Car Street, Mangalore,

ವಾರ್ಷಿಕ ಚಂದಾ 3 ರೂಪಾಯಿ. ಬಿಡಿ ಸಂಚಿಕೆ 1 ಅಣೆ. ಟಪ್ಪಾಲು ಹಾಸಲು ಸೇರಿ ರೂ. 2-13-0.

P
for Quality Snuff
H. Rama Rao
and Sons.
High Class Snuff Manufacturers
Mangalore, S. I.
ASK FOR -
RAMA SNUFF
The charm of 'Snuff Users'

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in the
THE BOMBAY LIFE
Madras Branch Secretaries
Kochikar Brothers,
Udipi Mangalore, Bangalore Madras, Bombay and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯. ಮಂಗಳೂರು ತಾ. ೨೬ನೇ ಶುಕ್ರವಾರ ಎಪ್ರಿಲ್ ೧೯೩೫ (26-4-'35) ಸಂಚಿಕೆ ೧೬

ಗರ್ಭಾ ನೃತ್ಯ

ಗುಜರಾಥಿ ಬಾಲಕಿಯರ ನರ್ತನ. ನವರಾತ್ರಿಯ ವೇಳೆ ಈ ನರ್ತನ ಮಂಡಳಿಗಳು ಮನೆಮನೆಗೆ ಹೋಗಿ ನರ್ತಿಸುವುವು.

ಚಕ್ರ

(All Rights Reversed)

ಮೊನ್ನೆ ಸ್ನೇಹಿತರು “ದಿ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯನ್ನು ತೆಗೆದುಕೊಂಡು, ಕನ್ನಡಕವನ್ನು ಸರಿ ಮಾಡಿ ಅದರ ಪ್ರಥಮ ಪುಟವನ್ನು ದಿಟ್ಟಿಸಿ ನೋಡು ತ್ತಿರುವಷ್ಟರಲ್ಲಿ “From canvassing they come to Blows” ಎಂಬ ಶೀರ್ಷಿಕೆಯುಂಟಿದ್ದ ಒಂದು ವರ್ತಮಾನವನ್ನು ನೋಡಿ, ಆನಂದಗೊಂಡು, ಅದನ್ನು ಓದಲುಪಕ್ರಮಿಸಿದ. ಒಂದೆರಡು ಪಂಕ್ತಿ ಗಳನ್ನು ಓದುತ್ತಲೇ “ಮೌಲಾನಾ ಶೌಕತಾಲಿಯವರು ಅವರಿಗೆ ಹೊಡೆದರು' ಎಂದು ತಿಳಿದುಬಂತು

× + × × × ×

ಅಲಿಘರದ ರೈಲ್ವೇ ಸ್ಟೇಶನಿನಲ್ಲಿ ತಾ ೧೫ನೇ ದಿನ ಮಕ್ಕಾದಿಂದ ಹಿಂತಿರುಗಿದ ನವಾಬ್ ಬಹದೂರ್ “ಸರ್ ಮೊಹಮ್ಮದುಲ್ಲಾ ಖಾನ್ ಖಾನ್ ಬಹದೂರ್ ಮೌಲ್ವೀ ಹಬೀಬುಲ್ಲಾರವರು ಇಳಿಯುತ್ತಿದ್ದಾಗ, ಅಲಿ ಘರದ ವೈಸ್ ಚೆನ್ಸಲರ್ ಪದವಿಯ ಉಮೇದ್ವಾರಿಕೆಗೆ ಶೌಕತಾಲಿಯವರು ವೋಟುಗಳನ್ನು ಸಂಪಾದಿಸು ತ್ತಿದ್ದರು.

× × × × × ×

ವೈಸ್ ಚೆನ್ಸಲರ್ ಶಿಪ್ಪಿಂದಿಯ ಬಗ್ಗೆ ಮುಸ್ಲಿಮರು ಪ್ರಶ್ನಿಸಿದಾಗ ನಮ್ಮ ದೊಡ್ಡಣ್ಣನವರು ‘ನೀವು ಇಸ್ಲಾಮು ಮತಸ್ಥರು, ನಿಮ್ಮಲ್ಲಿ ಒಗ್ಗಟ್ಟಿಲ್ಲ' ಎಂದು ಮೊದಲಾಗಿ ಆವೇಶಪೂರಿತವಾಗಿ ನುಡಿದರು ಅದಕ್ಕೆ ಆ ಮಹನೀಯರು “ಹೋಗಿರಯ್ಯಾ, ಇಸ್ಲಾಮಿಗೂ ವೈಸ್ ಚೆನ್ಸಲರ ಪದವಿಗೂ ಏನು ಸಂಬಂಧ? ಇಬ್ಬರು ಉಮೇದ್ವಾರರೂ ಮುಸ್ಲಿಮರಾಗಿರುವಾಗ ನಾವು ಮಾಡುವುದಾದರೂ ಏನು?” ಎಂದು ಹೇಳಿದರು'

× × × × × ×

ಒಡನೆ ಬಾಂಕಯ್ಯ ದೊಡ್ಡಣ್ಣನವರಿಗೆ ಕೋಪ! ರೌದ್ರಾವತಾರವನ್ನು ತಾಳಿದರು! ಎಷ್ಟೋ ವರ್ಷಗಳಿಂದ “ಶಾಂತಿಗಾಗಿ ಬದುಕಿರುವೆ! ಶಾಂತಿಗಾಗಿ ಬಾಳಿರುವೆ! ನಾನು ಶಾಂತಿಪಾಲಕ—ಪ್ರೇರಕ” ಎಂದು ವಾದಿಸುತ್ತಿದ್ದ ಅವರ ಕಣ್ಣುಗಳೆರಡೂ ದಿಸ್ಸ್ಫುಟು ಅಂಟೊಡೆಗಳಂತೆ ಉರುಳತೊಡಗಿದುವು—ಅವುಗಳ ಬಣ್ಣವನ್ನೇ ಹೊಂದಿದುವು ಇಂಜಿನಿನ ಪೈಪಿನೊಳಗಿಂದ ಗಾಳಿಯು ರಭಸದಿಂದ ಹೊರಡುವಂತೆ ಅವರ ಮೂಗಿನ ಎರಡು ಹೊಳ್ಳೆಗಳಿಂದ ಉಸಿರು ಜೋರಾಗಿ ಬಂತು ಅವರಿಗೆ ತಡೆಯಲಾಗಲಿಲ್ಲ ತನ್ನ ಕೋಮಲವಾದ ಕೈಗಳನ್ನು ಮೇಲಕ್ಕೆ ಎತ್ತಿ ಹಾಗೆ ಹೇಳಿದವರಿಗೆ ಒಂದು ಬಿಗಿದುಬಿಟ್ಟರು! ಪೆಟ್ಟು ತಿಂದವರು ತುಂಬಾ ಜಪಿಂಗೊಂಡರು ಈ ಮಧ್ಯೆ ಸುತ್ತಿದ್ದವರು ದೊಡ್ಡಣ್ಣ ಶೌಕತಾಲಿಯವರ ಕೈಹಿಡಿದರು ಅವರಿಗೂ ಪೆಟ್ಟು ಬಿದ್ದು ಅವರೂ ಜಪಿಂಗೊಂಡರು ಇಬ್ಬರನ್ನೂ ಆಸ್ಪತ್ರೆಗೊಯ್ಯಲಾಯಿತು

× × × × × ×

ಸಾವಿರಾರು ಜನರು ಕೂಡಿದರು ಸರ್ ಮಹಮ್ಮದ್ ಯೂಸೂಫ್, ವಿ. ಕೋಜಾಲ್ ಬಾಪ್ ಮೊದಲಾದವರು ಅಣ್ಣನವರನ್ನು ಹಿಡಿದರು! ಸಮಾಧಾನಿಸಿದರು

× × × × × ×

ರಾಮನವಮಿ—ಮೊಹರಂಗಳು ಒಟ್ಟಾದುದರಿಂದ ಅನೇಕ ಕಡೆಗಳಲ್ಲಿನ ಹಿಂದೂಮುಸ್ಲಿಮರು ಪ್ರಾಣ ಬಿಟ್ಟರು ಅಂತಹ ದುಃಸಂಧಿಯ ಫಲವಾಗಿ ನಮ್ಮ ಅಣ್ಣನವರಿಗೆ ಸಿಟ್ಟು ಬಂದಿರಬಹುದು!

× × × × × ×

ಏನೋ ಪುಣ್ಯವಶಾತ್ ಅಣ್ಣನವರನ್ನು ಪೋಲೀಸರು ಕೈದುಮಾಡಲಿಲ್ಲ ಫಿರ್ಯಾದು ದಾಖಲಾಗಲಿದೆ ಅವರಿಗೆ ಕಾರಾವಾಸವು ದೊರೆಯದಂತೆ ನನ್ನ (ಸ್ವಾಮಿನ) ಪ್ರಾರ್ಥನೆ.

× × × × × ×

ನಮ್ಮ ಅಣ್ಣನವರು ಸೆರೆಯ ಕಷ್ಟಕ್ಕೆ ಹೆದರುವವರಲ್ಲ ಅವರಿಗೆ ಅದರ ಅಭ್ಯಾಸವಿದೆ ಅವರನ್ನು ಆ ಮಟ್ಟಿಗೆ ಗಾಂಧಿಯವರು ತರಬೇತುಗೊಳಿಸಿರುವರು ಮಾತ್ರ, ಈ ಸಲ ಅವರಿಗೆ ‘ಎ' ಕ್ಲಾಸು ದೊರೆಯದೆ ‘ಸಿ' ಗ ರೊಟ್ಟಿಯು ಸಿಕ್ಕಿದರೆ ಮಾತ್ರ ಅವರು ಕ್ಷೀಣರಾಗಿ ದೇಹ ಭಾರವನ್ನು ಕಡಮೆ ಮಾಡುವುದು ಖಂಡಿತ!

× × × ×

ಶೌಕತಾಲಿಯವರೇ, ನಿಮ್ಮ ಕೋಪವು ಶಾಂತವಾಗಲಿ!

‘ಸಾಯ್ಬ'.

ಮಕ್ಕಳನ್ನು
ಆರೋಗ್ಯವಂತರನ್ನಾಗಿಯೂ,
ಬಲಿಷ್ಠರನ್ನಾಗಿಯೂ ಮತ್ತು
ಚೈತನ್ಯಯುಕ್ತರನ್ನಾಗಿಯೂ
ಮಾಡುತ್ತದೆ.

ಮಕ್ಕಳನ್ನು ಬಲಿಷ್ಠರನ್ನಾಗಿಯೂ ಆರೋಗ್ಯಶಾಲಿಯರನ್ನಾಗಿಯೂ ಮಾಡುವುದಕ್ಕೆ ಅವರಿಗೆ ಓವಲ್ಟಿನ್'ನನ್ನು ದಿನನಿತ್ಯದ ಪಾನೀಯವನ್ನಾಗಿ ಕೊಡುವುದೊಂದಲ್ಲದೆ ಬೇರೆ ನಿಶ್ಚಿತದಾರಿಯಿಲ್ಲ ಓವಲ್ಟಿನ್'ನಲ್ಲಿ ಪ್ರಕೃತಿಸಿದ್ಧವಾಗಿರುವ ದೇಹವರ್ಧಕ ಆಹಾರ ಸಾರವಿದೆ ಇದು ಮಕ್ಕಳ ಆರೋಗ್ಯ, ಶಕ್ತಿ, ಮೇಧಾಶಕ್ತಿ, ಸ್ನಾಯುಶಕ್ತಿ, ದೇಹಶಕ್ತಿಗಳಿಗೆ ಬೇಕಾದ ಪೋಷಕಾಂಶಗಳನ್ನೊದಗಿಸಿಕೊಡುತ್ತದೆ ಓವಲ್ಟಿನ್'ನ ಸೇವನೆಯೊಂದರೆ ದೇಹದಾರ್ಢ್ಯಕ್ಕೆ ಪಂಚಾಂಗ ವಿಟ್ಟಂತೆ

‘ಓವಲ್ಟಿನ್'ನನ್ನು ಎಲ್ಲಾ ಪ್ರಾಯದ ಮಕ್ಕಳೂ ಮೆಚ್ಚುತ್ತಾರೆ ಅದರ ರುಚಿಕರವಾದ ಪರಿಮಳವನ್ನು ಅವರ ಆಸ್ವಾದಿಸಲಾಶಿಸುತ್ತಾರೆ ತಮ್ಮ ಮಕ್ಕಳಿಗೆ ಇದನ್ನು ಕೊಡುವ ತಾಯಂದಿರು ಇದರ ಸತ್ಪರಿಣಾಮವನ್ನು ಕಂಡ ಕೊಳ್ಳುವರು ಹಸುಳೆಗಳಿಗೆ ಧಾರಾಳ ಚೇತನವಿತ್ತು ದಿನೇ ದಿನೇ ಅವರನ್ನು ಬೆಳೆಸಿ ರಾತ್ರಿ ನಿದ್ರೆ ಕೊಡುತ್ತದೆ

ನಿಮ್ಮ ಚಹಕ್ಕೆ ಓವಲ್ಟಿನ್ ಸೇರಿಸಿರಿ, ಅದ ಆರೋಗ್ಯಕರ ಬಲವರ್ಧಕ ಮತ್ತು ಶಕ್ತಿದಾಯಕ

“ಓವಲ್ಟಿನ್”

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್—ಜೇಮ್ಸ್ ರೈಟ್ ೩೨ ಏ ಏಸಸ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಯಿ ಮದ್ರಾಸು

OV/325

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೪ ಫಿಲ್ಮ್ ಎಕ್ಸ್ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು ಫೋಟೋ ತೆಗೆಯುವ ವಿಧಾನ ಶಿಕ್ಷಣಕೊಡುವ ಪುಸ್ತಕ ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ ೩—೧೨—೦ ಉತ್ತಮವಾದುದು ೪—೧೨—೦ ಮಡಚುವ ಕ್ಯಾಮರಾ ರೂ ೫ ಉತ್ತಮವಾದ್ದು ರೂ ೭ ಸ್ಪೆಶಲ್ ರೂ ೧೦ ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೩ ಆಣೆ ಎನ್ಲಾರ್ಜ್ಮೆಂಟಿನ ಸಾಧನಾ ಸಾಮಗ್ರಿ ೧ ಶೀಶೆಗೆ ೪ ಆಣೆ ಫಿಕ್ಸಿಂಗ್ ಸಾಲ್ಟ್ ೧ ಡಬ್ಬಕ್ಕೆ ೩ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ

ಭಾರತ ಯೂನಿಯನ್ ಟ್ರೇಡಿಂಗ್ ಕಂ
ಪೋಸ್ಟ್ಬಾಕ್ಸ್ ನಂಬ್ರ ೨೩೯೪ (ಪ್ಸ್ ಎ) ಕಲ್ಕತ್ತ

THE

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

Authorised capital ಅಧಿಕೃತ ಮೂಲಧನ	2,00,000—0—0
Subscribed capital ಚಂದಾ ಆರ್ಪಿಸಿದ್ದು	34,930—0—0
Paid-up capital ಕೆತ್ತು ಬಂದದ್ದು	30847—8—0

Fixed, Current, Cumulative and Savings Banks deposits are accepted at most favourable rates.

All kinds of Banking business undertaken

Shares are now available.

For further particulars apply to:—

Puttur
Dated 15—2—1935

G. N. Lakshman Pai,
Secretary.

ಪತ್ರಿಕಾ ಪ್ರಪಂಚ.

ದೇಶವಿದೇಶಗಳ ಪತ್ರಿಕಾಪ್ರಪಂಚದಲ್ಲಿ ವಿವಿಧ ವ್ಯವಹಾರಗಳ ಕುರಿತು ಪ್ರಕಟವಾಗುತ್ತಿರುವ ಸದಭಿಪ್ರಾಯಗಳನ್ನು ಈ ಪುಟದಲ್ಲಿ ಪ್ರತಿವಾರವೂ ಅನುಕೂಲವಿದ್ದಷ್ಟು ಪ್ರಕಟಿಸಲಾಗುತ್ತವೆ. ವಿಷಯ ವೈವಿಧ್ಯವನ್ನಪೇಕ್ಷಿಸುವ ವಾಚಕವೃಂದದ ವಿವಿಧ ವಿಷಯ ಜ್ಞಾನದ ಬೆಳವಣಿಗೆಗೆ ಇದರಿಂದ ಹೆಚ್ಚಿನ ಪ್ರಯೋಜನವಾದೀತೆಂದು ಭಾವಿಸಲ್ಪಟ್ಟಿದೆ.

ಹಾವಿನ ವಿಷ.

ಹಾವಿನ ಕಡಿತದಿಂದ ಮನುಷ್ಯನು ಸಾಯಬೇಕೇಕೆ? ಆ ವಿಷಕ್ಕೆ ತಕ್ಕ ಔಷಧಿಯಾವುದು? ಎಂಬ ವಿಚಾರವು ಲೋಕವನ್ನು ಕಂಗೆಡಿಸುತ್ತಿದೆ. ಡಾ| ಕಾಲ್ ಮೆಟ್ ಎಂಬವರು ಈ ವಿಷಯವಾಗಿ ಶೋಧೆ ನಡೆಸಿ ಅನೇಕ ಮಹತ್ವಿಷಯಗಳನ್ನು ಕಂಡು ಹಿಡಿದಿರುವರು. ಅವರು ಕಂಡುಹಿಡಿದ ವಿಷಯಗಳಲ್ಲಿ—ಎಲ್ಲಾ ಹಾವುಗಳೂ ತಮ್ಮ ತಮ್ಮ ವಿಷಗಳಿಂದ ತಾವು ಸಾಯುವುದಿಲ್ಲವೆಂಬುದು ವಿಶೇಷವಾದುದು. ಪ್ರತಿಯೊಂದು ಜಾತಿಯ ಹಾವಿನ ದೇಹದಲ್ಲೂ ವಿಷವಿರೋಧವಾದ ಗುಣಗಳುಳ್ಳ ರಕ್ತಾಣುಗಳು ಇವೆಯೆಂದು ಅವರು ಕಂಡುಹಿಡಿದಿದ್ದಾರೆ. ಮುಂಗುಸಿಯು ಹಾವಿನ ವಿಷದಿಂದ ಸಾಯದಿರಲು ಇದೇ ಕಾರಣ. ಹಾವಿನ ವಿಷವು ಮನುಷ್ಯನಿಗೆ ತಾಗದಂತೆ ಏರ್ಪಡಿಸಬಹುದೆಂದು ಅವರು ಸೂಚಿಸುತ್ತಾರೆ. ಪ್ರೊಫೆಸರ್ ಫ್ರೇಸರ್ ಎಂಬವರು ಈ ವಿಷಯವಾಗಿ ಒಂದು ಶೋಧೆ ನಡೆಸಿದರು. ಅವರು ಒಂದು ನಾಯಿಗೆ ದಿನಂಪ್ರತಿ ಸ್ವಲ್ಪ ಸ್ವಲ್ಪ ವಿಷವನ್ನು ಕುಡಿಸುತ್ತಾ, ಒಂದೆರಡು ವರ್ಷಗಳ ಅವಧಿಯಲ್ಲಿ ವಿಷಭರಿತ ಆಹಾರವನ್ನೇ ಅದಕ್ಕೆ ಹಾಕುತ್ತಾ ಬಂದರು. ಕಟ್ಟಕಡೆಗೆ ಆ ನಾಯಿಯ ದೇಹಪ್ರಮಾಣವನ್ನು ಮೀರಿಸಿ ವಿಷವನ್ನು ತಿನ್ನಿಸಿದರು. ಆದರೂ, ಆ ನಾಯಿಯು ಸಾಯಲಿಲ್ಲ. ಮತ್ತೊಂದು ಪ್ರಾಣಿಯ ದೇಹದೊಳಗೆ ಅವರು ಹಾವಿನ ವಿಷವನ್ನು ಇಂಜೆಕ್ಷನ್ ಮೂಲಕ ಹಾಕಿದರು. ದಿನಂಪ್ರತಿ ವಿಷದ ಪರಿಮಾಣವನ್ನು ಹೆಚ್ಚಿಸುತ್ತಾ ಹೋಗಿ, ಕೊನೆಗೆ ಮಾರಕವಾಗಿರುವ ವಿಷಕ್ಕಿಂತಲೂ ದ್ವಿಗುಣಿತ ವಿಷವನ್ನು ಅವರು ಆ ಪ್ರಾಣಿಯ ದೇಹದೊಳಗೆ ಸೇರಿಸಿದರು. ಆದರೂ ಆ ಪ್ರಾಣಿಯು ಸಾಯಲಿಲ್ಲ. ಹಾವು ಕಡಿದು ಸಾಯುವಂತಿರುವುದನ್ನೂ ಅವರು ವಿಷಭರಿತ ಪ್ರಾಣಿಯನ್ನಾಗಿ ಮಾಡಿ ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ಆಫ್ರಿಕದಲ್ಲಿರುವ ಕೆಲವು ನೀಗ್ರೋಗಳಿಗೆ ವಿಷವೇರದಿರಲು ಅವರ ದೇಹದಲ್ಲಿರುವ ವಿಷಪೂರಿತ ರಕ್ತವೇ ಕಾರಣವಂತೆ. ಅವರು ಹಾವಿನ ವಿಷವನ್ನು ಸ್ವಲ್ಪ ಸ್ವಲ್ಪವಾಗಿ ಕುಡಿಯುತ್ತಲೇ ಇರುವರಂತೆ. ಬಾಲ್ಯತನದಿಂದಲೇ ಅವರು ಈ ಅಭ್ಯಾಸವನ್ನು ಮಾಡುವುದರಿಂದ ಅವರು ದೇಹದ ಮೇಲೆ ಗುಡ್ಡೆಬಟ್ಟೆಗಳನ್ನು ಹತ್ತಿ ಬೇಟೆಯಾಡುವಾಗ ಅನೇಕ ಸಂದರ್ಭಗಳಲ್ಲಿ ಹಾವು ಕಚ್ಚಿದರೂ, ಅವರು ಸಾಯುವುದಿಲ್ಲ. ಸಾವಿರ ಜನರನ್ನು ಕೊಲ್ಲುವಷ್ಟು ಶಕ್ತಿಯುಳ್ಳ ಹಾವಿನ ವಿಷವನ್ನು ಒಬ್ಬ ನೀಗ್ರೋನು ಕುಡಿದು ಸಾಯದೆ ಇರುವುದನ್ನು ಫ್ರೇಸರರು ತಿಳಿದಿರುವರು. ಪ್ರಾಣಿಗಳ ಪಿತ್ತನೇ ವಿಷವಿರೋಧ ವಸ್ತುವೆಂದು ಫ್ರೇಸರರ ಅಭಿಪ್ರಾಯ. ಹಾವಿನ ವಿಷದೊಡನೆ ಅದರ ಪಿತ್ತವನ್ನು ಮಿಶ್ರ ಮಾಡಿದರೆ ಆ ವಿಷದ ಶಕ್ತಿಯು ಮಾಯವಾಗುತ್ತದೆ. ಮುಂದಕ್ಕೆ ಪ್ರಾಣಿಗಳ ಪಿತ್ತವನ್ನು ವಿಷಹಾರಕವಾಗಿ ಮಾಡಬಹುದೋ ಎಂಬ ಕಲ್ಪನೆಗೆ ಈ ಶೋಧೆಯು ಎಡೆಗೊಟ್ಟಿದೆ. Cholesterin ಎಂಬ ಪಿತ್ತರೂಪದ ದ್ರಾವಕವನ್ನು ಮನುಷ್ಯನು ಕುಡಿದರೆ ಎಂತಹ ವಿಷವೂ ಅವನಿಗೆ ತಾಗಲಾರದೆಂದು ಫ್ರಾನ್ಸಿನ ಫಿಸಾಲಿಕ್ಸ್ ಎಂಬವರು ಹೇಳಿರುತ್ತಾರೆ.

'The Parsi'

ಅಪರಾಧಿಗಳೂ ಶಿಕ್ಷೆಯೂ.

ಅಪರಾಧಗಳನ್ನು ಮಾಡಿದವರಿಗೆ ಶಿಕ್ಷೆಯನ್ನೀಯುವ ಕೆಲಸವನ್ನು ಸರಕಾರಗಳು ಪ್ರತಿಷ್ಠೆಯಿಂದಲೇ ನೆರವೇರಿಸುತ್ತಿವೆ. ಆದರೆ ಅಪರಾಧಿಗಳ ಗುಣನಡತೆಗಳನ್ನು ತಿದ್ದುವ ಪ್ರಯತ್ನವು ನಡೆಯುವುದಿಲ್ಲ. 'Hibbert Journal' ಎಂಬುದರಲ್ಲಿ ಸರ್ ವಿಲ್ಲಿಯಂ ಕೊಲ್ಲಿನ್ಸ್ ಎಂ. ಪಿ. ಇವರು ಒಂದು ಲೇಖನದಲ್ಲಿ ಹೀಗೆ ತಿಳಿಸಿದ್ದಾರೆ "ಈಗಿನ ಕಾಲದ ನ್ಯಾಯಸ್ಥಾನಗಳು ಅಪರಾಧ ಮತ್ತು ಶಿಕ್ಷೆಗಳಲ್ಲಿವೆ. ಇವರೊಳಗೆ ಭೇದಾಭೇದಗಳಿವೆ. ಶಿಕ್ಷೆ ವಿಧಿಸುವವರೂ ಶಿಕ್ಷೆಯನ್ನು ಕಾರ್ಯಗತಗೊಳಿಸುವ ಅಧಿಕಾರಿಗಳೂ ಇತರರಿಗಿಂತ ಮಾನಸಿಕ ಪ್ರವೃತ್ತಿಯುಳ್ಳವರಲ್ಲ. ಅಪರಾಧಗಳಿಗೆ ತಕ್ಕ ಶಿಕ್ಷೆಯು ವಿಧಿಸಲ್ಪಡುವುದಿಲ್ಲ. ಕೆಟ್ಟವರು ಮತ್ತು ಹುಚ್ಚರು ಇವರೊಳಗಣ ಭೇದಾಭೇದಗಳನ್ನು ಕಂಡುಹಿಡಿಯಲಾಗುವುದಿಲ್ಲ. ಈಗ ಸೆರೆಮನೆಯೊಳಗಿರುವ ಹೆಚ್ಚಿನ ಅಪರಾಧಿಗಳೆಲ್ಲ ಕಲಿಕೆಟ್ಟವರೇ ವಿನಹಾ, ಸದ್ಬುದ್ಧಿಯಿಂದ ವರ್ತಿಸಿದವರಲ್ಲ. ಅಂತಹವರಿಗೆ ಹುಚ್ಚರ ಆಸ್ಪತ್ರೆಗಳೇ ತಕ್ಕ ಚಿಕಿತ್ಸಾಲಯಗಳಲ್ಲದೆ ಕಾರಾಗ್ರಹವಲ್ಲ. (೨) ಜೈಲಿನ ಸುಪರಿಂಟೆಂಡೆಂಟರಿಗೆ ಕೈದಿಗಳ ಮಾನಸಿಕ ಗುಣನಡತೆಗಳನ್ನು ಕಂಡುಹಿಡಿದುಕೊಳ್ಳುವ ಕುಶಲತೆಯಿಲ್ಲ. ಅಂತಹ ಶಕ್ತಿಯು ಅವರಲ್ಲಿ ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಕೈದಿಗಳು ದೈಹಿಕವಾಗಿ ಗಟ್ಟಿಮುಟ್ಟಾಗಿದ್ದಾಗಲೇ ಅವರನ್ನು ಸೆರೆಯೊಳಗೆ ಬಿಡಾಡ್ಯ ವ್ಯಾಧಿಗಳನ್ನುಂಟು ಮಾಡುವ ಕಾರ್ಯವು ನಡೆಯುತ್ತಿದೆ. ಅವರನ್ನು ಉತ್ತಮ ಗುಣಧರ್ಮದ ಸ್ತ್ರೀಪುರುಷರನ್ನಾಗಿ ಮಾಡುವ ಏರ್ಪಾಡು ನಡೆಯುವುದಿಲ್ಲ. ಹೀಗಿರುವಾಗ ಆಯಾಯ ಗುಣನಡತೆಗಳ ಅಪರಾಧಿಗಳಿಗೆ ಆಯಾಯ ಶಿಕ್ಷೆಗಳನ್ನು ತಿಳಿದು ವಿಧಿಸಲು ಶಕ್ತಿಯುಳ್ಳ ಅಧಿಕಾರಿಗಳನ್ನು ಆರಿಸಬೇಕಾಗಿದೆ. ಅಪರಾಧಿಗಳು ತಮ್ಮ ಜೀವನದ ಜವಾಬ್ದಾರಿ, ಉದ್ದೇಶಗಳೇನೆಂದು ತಿಳಿಯುವಂತೆ ಮಾಡಲಾದರೆ ಅವರು ತಮ್ಮ ಗುಣನಡತೆಗಳಲ್ಲಿನ ಕುಂದುಕೊರತೆಗಳನ್ನು ಕಂಡುಹಿಡಿದು ತಿದ್ದಿಕೊಳ್ಳಲು ಪ್ರಯತ್ನಪಡುವೆ, ಮಾಡಿದ ತಪ್ಪಿಗೆ ಶಿಕ್ಷೆಯನ್ನೇ ಅನುಭವಿಸತಕ್ಕದ್ದೆಂದು ನಾವು ಬಗೆಯುವವರಾದರೆ, ನಮ್ಮ ಯತ್ನವು ನಿರರ್ಥಕವೂ ಸಮಾಜಕ್ಕೆ ಹಾನಿಕಾರಕವೂ ಆಗದಿರದು."

ಹಿಂದೂದೇಶದಲ್ಲಿ ಭೂಕಂದಾಯ

'Daily News' ಪತ್ರಿಕೆಯಲ್ಲಿ ಮಿ| ಸಿ. ಜೆ. ಓ ಡೊನೆಲ್ ಇವರು ೧೯೧೦ರಲ್ಲಿ ಒಂದು ಲೇಖನದಲ್ಲಿ ಹೀಗೆಂದಿದ್ದಾರೆ

"ಹಿಂದೂದೇಶದಲ್ಲಿ ಭೂಕಂದಾಯವು ವಿಶೇಷವಾಗಿ ಹೆಚ್ಚುತ್ತಿರುವ ವಿಷಯವನ್ನು ನಾನು ಈಗಿನ ಆಡಳಿತಗಾರರ ಗಮನಕ್ಕೆ ತರಬಿಚ್ಛಿಸುತ್ತೇನೆ. ಉದಾರಬುದ್ಧಿಯ ಸೆಕ್ರೆಟರಿ ಆಫ್ ಸ್ಟೇಟರು ಈ ಸಂಖ್ಯೆಗಳ ಕಡೆಗೆ ನೋಡಲಿ. ಕಳೆದ ಐದು ವರುಷಗಳ ಹಿಂದೀಯ ಭೂಕಂದಾಯ ಏರಿಕೆಯನ್ನು ಲಕ್ಷಿಸಿರಿ

೧೯೦೫-೦೬	೧೮,೧೪೯,೫೬೩ ಪವನುಗಳು.
೧೯೦೬-೦೭	೧೯,೦೬೩,೮೩೨
೧೯೦೭-೦೮	೧೭,೮೮೩,೫೯೩ (ಕ್ಷಾಮಕಾಲ)
೧೯೦೮-೦೯	೧೯,೯೪೫,೮೦೦
೧೯೦೯-೧೦	೨೦,೧೬೩,೦೦೦

ಅಂದರೆ ಐದು ವರ್ಷಗಳಲ್ಲಿ ೨ ಮಿಲ್ಲಿಯ ಸ್ಟರ್ಲಿಂಗು ಏರಿ ೧೮೮೪ರಿಂದ ೧೯೦೦ರ ವರೆಗೆ ಭೂಕಂದಾಯವು ೧೭,೧೯೭,೮೬೨ ಪವನಗಳು. ೧೬ ವರ್ಷಗಳಲ್ಲಿ ೩ ಮಿಲಿಯಗಳಷ್ಟನ್ನು ಹೆಚ್ಚಿಸಲಾಯಿತು. ಇನ್ನು ನಾಲ್ಕು ವರ್ಷಗಳಲ್ಲಿ ಎರಡು ಮಿಲಿಯ ಪವನುಗಳು ಹೆಚ್ಚಾಗುವುದೆಂದು ನಿರೀಕ್ಷಿಸಲಾಗಿದೆ. ಅಂಡರ್ ಸೆಕ್ರೆಟರಿ ಆಫ್ ಸ್ಟೇಟರು ಪ್ರಕಟಿಸಿದ Explanatory Memorandum' ದಲ್ಲಿ ಹೀಗೆ ಹೇಳಿದೆ "ಕ್ಷಾಮಪೀಡಿತ ಪ್ರದೇಶಗಳು ಬೇಗನೇ ಮೊದಲಿನ ಸ್ಥಿತಿಗೆ ಬರಲಿವೆ. ಅಲ್ಲಿ, ಹಿಂದೂಸ್ಥಾನದ ಒಟ್ಟು ಭೂಕಂದಾಯದಲ್ಲಿ ೧,೩೨೨,೭೦೦ ಪವನುಗಳು ಹೆಚ್ಚಲಿದೆ. ಮುಂಬಯಿಯಿಂದ ೩೮೫,೭೦೦ ಪವನುಗಳೂ, ಪಂಜಾಬಿನಿಂದ ೩೪೨,೫೦೦ ಪವನುಗಳೂ, ಕೇಂದ್ರ ಪ್ರಾಂತ್ಯದಿಂದ ೧೩೪,೦೦೦ ಪವನುಗಳೂ, ಸಂಯುಕ್ತ ಪ್ರಾಂತ್ಯದಿಂದ ೨೦೧,೩೦೦ ಪವನುಗಳೂ ದೊರೆಯಲಿವೆ". ಈ ಪ್ರಕಟನೆಯಿಂದ ತಿಳಿಯುವುದೇನು? ಈ ನಾಲ್ಕು ಪ್ರಾಂತ್ಯಗಳಲ್ಲೂ ಕ್ಷಾಮಡಾಮರಗಳು ತಲೆದೋರಿ ಮಹಾ ಸಂಕಷ್ಟಗಳು ಜನರಿಗೆ ಒದಗಿವೆ. ಜನರು ಉಪವಾಸದಿಂದ ನರಳುತ್ತಿರುವರು. ಆದರೂ, ಈ ಪ್ರಾಂತ್ಯಗಳಿಂದ ೧೮,೦೦೦,೦೦೦ ರೂಪಾಯಿಗಳನ್ನು ಅಧಿಕ ಭೂಕಂದಾಯವನ್ನಾಗಿ ತೆಗೆದುಕೊಳ್ಳಲಿರುವರು. ಆದರ ಮೇಲೆ ಆಂಗ್ಲೇಯರಿಗೆ ಜನರ ವಿಧೇಯತೆಯು ಬೇಕು. ಐವತ್ತು ವರ್ಷಗಳ ಹಿಂದೆ ಲೋರ್ಡ ಲಿಕ್ಕರೆನ್ಸರು ಒಂದು ಭಾಷಣವನ್ನು ಮಾಡಿ "ಹಿಂದೂದೇಶದ ರೈತಾಪಿ ಜನರು ನಮ್ಮ ವಿರೋಧವಾಗಿ ಎದ್ದರೆ ಅಲ್ಲಿ ನಮ್ಮ ಅಧಿಕಾರವು ಮುರಿದುಬೀಳುವುದು" ಎಂದಿರುವರು. ಸದ್ಯದ ಪರಿಸ್ಥಿತಿಯಲ್ಲಿ ಈ ರೀತಿಯ ಆಡಳಿತಕ್ಕೆ ಸುಶಿಕ್ಷಿತರು ಮಾತ್ರ ವಿರೋಧಿಗಳಾಗಿದ್ದಾರೆ. ಮುಂದಕ್ಕೆ ವಿಶ್ವವ್ಯಾಪಕವಾದ ಮುಷ್ಕರವು ತಲೆದೋರುವ ಸಂಭವವಿದೆ. ಅಂತಹ ಚಳವಳಿಯು ತಲೆಯೆತ್ತಿದರೆ ಮತ್ತೆ ಗತಿಯಿರಲಾರದು. ಪಟ್ಟಣವಾಸಿಗಳನ್ನು ನಮ್ಮ ಪೋಲೀಸರೂ ಸೈನ್ಯವೂ ನಿರ್ಬಂಧದಲ್ಲಿ ಹಿಡಿಯಬಹುದು. ಆದರೆ ಹಳ್ಳಿಗಾಡಿನ ರೈತರು ಎದ್ದರೆ, ಲೋರ್ಡ ಲೋರೆನ್ಸರು ಭವಿಷ್ಯನ್ನುಡಿದ ಸಾಮ್ರಾಜ್ಯಶಾಹಿಯ ಅಧಃಪತನವು ನಿಶ್ಚಯ"

ಭಾರತೀಯ ವಿದ್ಯಾರ್ಥಿಗಳ ಸಂಕಷ್ಟ.

ಮಿ| ಎಂ. ಯು. ಮೂರ್, ಎಂ. ಎ., ಪ್ರಿನ್ಸಿಪಾಲ್ ಹಿಂದೂ ಕಾಲೇಜ್, ಡಿಲ್ಲಿ, ಇವರು 'Hindustan Review' ನಲ್ಲಿ ವಿವೇಚನಾಪರವಾದ ಒಂದು ಲೇಖನವನ್ನು ಬರೆದು, ಮೇಲಿನ ವಿಷಯದ ಕುರಿತು ಕೆಲವು ಸಲಹೆಗಳನ್ನು ಕೊಟ್ಟಿರುತ್ತಾರೆ. ವಿಶ್ವವಿದ್ಯಾಲಯಗಳು ಶಿಕ್ಷಣದ ಮಟ್ಟಿಗೆ ಮುಂದಾಳುತ್ವವನ್ನು ವಹಿಸಿ ಕುಶಲರಾದ ಅಧ್ಯಾಪಕರು ತಮ್ಮಿಚ್ಛೆ ಪ್ರಕಾರವಾಗಿ ಪಾಠಗಳನ್ನು ಕಲಿಸುವಂತೆ ಏರ್ಪಡಿಸಬೇಕೆಂದಿರುವರು. ಅವರು ಹೇಳುವುದೇನೆಂದರೆ "ಪರದೇಶಿಯ ಭಾಷೆಯಿಂದ ಓದು ಬರಹಗಳನ್ನು ಕಲಿಸಲಾಗುತ್ತದೆ. ಅಲ್ಲದೆ, ಅನ್ಯ ಭಾಷೆಯಿಂದಲೇ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಪ್ರಾಂತಿಕ ಭಾಷೆಗಳಲ್ಲಿ ಸತ್ವಶಾಲಿಯೂ ಬೋಧಪ್ರದವೂ ಆದ ಗ್ರಂಥಗಳ ಜನನವಾಗಲಾರದೆ ಈ ದೋಷವು ಪರಿಹರಿಸಲ್ಪಡಲು ಸಾಧ್ಯವಿರುವುದಿಲ್ಲ. ಅರ್ಥವಾಗದ ಗಂಭೀರ ಭಾಷೆಯ ಇಂಗ್ಲೀಷು ಪುಸ್ತಕಗಳನ್ನು ಪಠ್ಯಪುಸ್ತಕಗಳನ್ನಾಗಿ ಮಾಡಿ ವಿದ್ಯಾರ್ಥಿಗಳು ಕಂಠಪಾಠ ಮಾಡುತ್ತಿರುವುದರಿಂದ ಇದರಿಂದಾಗಿಯೂ ಅನಾಹುತವು ನಡೆಯುತ್ತಿದೆ. ವಿದ್ಯಾರ್ಥಿಗಳು ಪಾಠಗಳನ್ನು ವಿವೇಚನಾಶಕ್ತಿಯಿಂದ ಓದಿ ಮನನಮಾಡುವಂತೆ ಏರ್ಪಡಿಸುವುದರ ಬದಲು ಅವರು ಅವುಗಳನ್ನು ಕಂಠಪಾಠ ಮಾಡಿ ಬಸವಣ್ಣಗಳಾಗುವಂತೆ ಮಾಡುತ್ತಿದ್ದಾರೆ. ವ್ಯಾಕರಣಗಳನ್ನೇ ನಿಬಂಧನೆಗಳನ್ನೇ ಕಲಿತು ವಿದ್ಯಾರ್ಥಿಗಳ ಚಿತ್ತಶಾಂತಿಗೆ ತಿಲಾಂಜಲಿಯನ್ನೀಯಲಾಗುತ್ತಿದೆ. ಹಿಂದೀಯ ಕಲೆಯೂ ದುರ್ಲಕ್ಷಿತವಾಗಿದೆ. ಪಾಶ್ಚಾತ್ಯ ಕಲೆಗಳು ಕೆಲವು ವ್ಯಾಸಂಗಕ್ಕೆ ಬಿದ್ದಿವೆ. ಈ ವಿಷಯಗಳನ್ನು ಇನ್ನೂ ಗಮನಿಸದಿದ್ದರೆ ಮಹಾ ನಷ್ಟವೇ ಆಗಲಿದೆ. ಸತಾತ್ತ್ವೀಯವಾದ ಶಿಕ್ಷಣವೇ ನಮ್ಮ ಮಕ್ಕಳು ಮುಂದಿನ ಪ್ರಗತಿಗೆ ಬೇಕಾದುದು. ವಿದ್ಯಾರ್ಥಿಗಳು ಸರಿಯಾಗಿ ಭಾವಿಸಲು ಶಕ್ತರಾಗಬೇಕು. ಎಂದರೆ ಮಾತ್ರ ಅವರು ಸರಿಯಾಗಿ ನುಡಿಯಲು ಸಮರ್ಥರು. ಸರಿಯಾಗಿ ನುಡಿದು ಆಚರಿಸಿದರೆ ಮಾತ್ರ ಅವರು ವೃದ್ಧಿ ಹೊಂದುವರು."

ಹಿಂದೂದೇಶದ ಪೌರುಷ ಸಂರಕ್ಷಣೆ.

ನವಭಾರತವು ತನ್ನ ಮುಖ್ಯ ಗುರಿಯನ್ನು ಮರೆತು ರಾಜಕೀಯ ರಂಗದಲ್ಲಿ ತಲ್ಲೀನವಾಗಿದೆ. ಸಾಮಾಜಿಕ ಸುಧಾರಣೆಗಳ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಅದು ಕೊಡುತ್ತಿಲ್ಲ. ಇದು ಮಹಾ ದ್ರೋಹವೇ ಸರಿ. ರಾಜಕೀಯ ಸುಧಾರಣೆಯು ಭಾರತದ ಅಂತಿಮೋದ್ದೇಶವಾಗಿಲ್ಲ. ರಾಜಕೀಯ ಸುಧಾರಣೆಯೊಡನೆ ಸಾಮಾಜಿಕ ಸುಧಾರಣೆಗಳು ಅತ್ಯವಶ್ಯ. ಈ ತತ್ವವನ್ನು ತಿಳಿದು ಆಚರಿಸುವ ಶಿಕ್ಷಿತರು ವಿರಳ. ಸಮಾಜಶಾಸ್ತ್ರ, ಇತಿಹಾಸಗಳನ್ನು ಅಲ್ಲಗಳೆದು ರಾಜಕೀಯ ವಿಚಾರದಲ್ಲೇ ಯುವಕರನ್ನು ಕಾಲಹರಣಮಾಡುತ್ತಿದ್ದಾರೆ. ರಾಜಕೀಯ ಸ್ವಾತಂತ್ರ್ಯವು ಬಂದ ಮೇಲೆ ಸಾಮಾಜಿಕ ಸ್ವಾತಂತ್ರ್ಯವೂ ಕೈಗಾರಿಕಾ ಸ್ವಾತಂತ್ರ್ಯವೂ ಲಭಿಸುವುವೆಂದು ಅವರು ತಿಳಿದಿದ್ದಾರೆ. ಇದು ಎಷ್ಟಕ್ಕೂ ಸಮಂಜಸವಾಗಿಲ್ಲ. ಭಾರತದ ಸಾಮಾಜಿಕ ಪ್ರಶ್ನೆಯು ತಳಹದಿಯೂ ಕೆಟ್ಟಿರುತ್ತದೆ. ಅದನ್ನು ಶುದ್ಧಗೊಳಿಸುವ ಸಾಹಸವು ಸಣ್ಣದಾಗಿರುವುದಿಲ್ಲ. ರಾಜಕೀಯ ವಿಷಯವಾದರೆ ಒಂದೇ ಸಂಸ್ಥೆಯೊಡನೆ ನಡೆಯಬೇಕಾದ ಹೋರಾಟ. ರಾಜಕೀಯ ಹೋರಾಟದಲ್ಲಿ ಎದ್ದುಬರುವ ಸಿಟ್ಟುವುದು ವಿದೇಶೀಯರ ಒಂದೇ ಪ್ರಶ್ನೆ. ಆದರೆ, ಸಾಮಾಜಿಕ ವ್ಯವಹಾರದಲ್ಲಿ ನಮ್ಮೆದುರು ಸ್ವದೇಶದ ನೂರಾರು ಸಮಸ್ಯೆಗಳು ನಿಲ್ಲುತ್ತವೆ. ರಾಜಕೀಯವಾದಿಗಳು ಹೆಚ್ಚಿನ ತ್ಯಾಗಮಾಡಬೇಕಾಗಿಲ್ಲ. ಆದರೆ, ಸಮಾಜ ಸುಧಾರಕರು ಸರ್ವ ರೀತಿಯಲ್ಲೂ ತ್ಯಾಗಿಗಳಾಗಿ ದುಡಿಯಬೇಕಾಗುತ್ತದೆ. ಹೀಗೆ, ರಾಜಕೀಯ ಮತ್ತು ಸಮಾಜವಾದಿಗಳೊಳಗೆ ಹೆಚ್ಚಿನ ವ್ಯತ್ಯಾಸವಿರುತ್ತದೆ. ಭಾರತೀಯರು ಜಾತಿಭೇದದ ರೂಢಿಯ ದೆಸೆಯಿಂದ

(ಕನೇ ಪುಟಕ್ಕೆ ಮುಂದುವರಿಸಿದೆ)

ಸುಲಭತರವಾಗಿ ನೀರು ಹಾಯಿಸಲು

ಹೆಚ್ಚಾಗಿ ಮುರಿಯದಂತಾಗಲು

ಹೆಚ್ಚು ಬಾಳಿಕೆ ಬರಲು

ಕಿರ್ಲೋಸ್ಕರ

ಎಂಬುದು ಅಮೂಲ್ಯ ಪಂಪು.

ಕೃಷಿಗೆ, ಕೈಗಾರಿಕೆಗೆ,

ಮನೆಕೈಗಾರಿಕೆಗೆ,

ಕಿರ್ಲೋಸ್ಕರ ಪಂಪಿನಿಂದ

ಧಾರಾಳ ನೀರು ದೊರೆಯುವುದು.

ಕೈ ಮತ್ತು ಶಕ್ತಿಗಳ

ಪ್ರಯೋಗವಿದೆ.



ವಿವರಕ್ಕೂ ಬೆಲೆಗೂ ಈ

ಕೆಳಗಿನವರಿಗೆ ಬರೆಯಿರಿ.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:—ಹೆರ್ರಿ ಮತ್ತು ಕಂಪೆನಿ ಲಿಮಿಟೆಡ್, ಮದ್ರಾಸು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕಾಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನ್‌ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ.

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು.

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರೆಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಪ್ರಾಯ ಡಬ್ಬಿ 1ಕ್ಕೆ ರೂ 1-0-0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ಪರಿರೋಗಿಗಳೂ ಹುಟ್ಟಿಯ ಶುದ್ಧಿಗಾಗಿ ಗುಲಾಬಿನ ಪಂಡ್ಸಿನಂತೆ ತೆಗೆದುಕೊಳ್ಳಬಹುದು
6 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 1-8-0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ -
The Scientific Gold Bangles Co Ltd.,
Head Office -48 Brigmbatum Street,
Post Box No 203, Madras.

ಅರುಣೋದಯ.

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಪೂರ್ಣ ಲೇಖಗಳು ಬರುವವಲ್ಲದೆ ದೇಶ ವಿದೇಶದ ಸುದ್ದಿ ಸಂಗತಿಗಳೂ ಬರುವುವು. ಅಲ್ಲದೆ ಮನೋಹರವಾದ ಕಥೆ ಕವಿತೆಗಳೂ ಇರುವುವು. ಚಿತ್ರಪಟಂಗಳೊಳಗಿನ ವಿಚಿತ್ರ ಸಂಗತಿಗಳೂ, ಶಾಸ್ತ್ರೀಯ ಶೋಧಗಳೂ ಪ್ರಕಟವಾಗುವುವು. ಇದು ಕರ್ನಾಟಕದಲ್ಲಿ ಇದರ ಪ್ರಚಾರವಿರುವುದರಿಂದ ಜಾಹೀರಾತುದಾರರಿಗೆ ಇದೊಂದು ಉತ್ತಮ ಸಾಧನ. ಅಲ್ಲಲ್ಲಿಗೆ ಏಜಂಟರು ಬೇಕು.

ವಾರ್ಷಿಕ ಚಂದಾ ರೂ. 3—8—0.
ಮೆನೇಜರ್—ಅರುಣೋದಯ. ಬೆಳಗಾಂವಿ

Modern Hindu Hotel
P. J. R. Bros.,
Mangalore, S K

ಬೋರ್ಡಿಂಗ್ ಮತ್ತು ಲೋಡಿಂಗ್, ಕಾಫಿ, ಚಹ, ಕೋಕ್ಕೊ, ಇನ್ನೂ ಇತರ ಪಾನೀಯಗಳೂ ಒಳ್ಳೇ ತರದ ತಿಂಡಿ ಸಾಮಾನುಗಳೂ ಯಾವಾಗಲೂ ನಮ್ಮಲ್ಲಿ ತಯಾರಿರುತ್ತವೆ ರುಚಿಕರವಾದ ಊಟ, ಕಡಿಮೆ ಚಾರ್ಜು, ಸ್ನಾನಕ್ಕೂ ಇನ್ನು ಇತರ ದಿನಚರ್ಯೆಗಳಿಗೂ ಅನುಕೂಲವಾಗಿದೆ

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore

ರಾಮು—'ಏನು, ಓಡುವಿರೆತ್ತ?'
ಜೋರ್ಜ್—'ಸ್ವದೇಶಾಭಿಮಾನಿಯ ಏಜಂಟರ ಬಳಿಗೆ—ಮಾತಾಡಲು ಸಮಯವಿಲ್ಲ—ಮತ್ತೆ ಪ್ರತಿಗಳು ದೊರೆಯುವುದಿಲ್ಲ ಬೇಗನೇ ಒಂದು ಪ್ರತಿಯನ್ನು ಪಡೆದುಕೊಂಡು ಬರುತ್ತೇನೆ—
ರಾಮು — ಬೇಗನೇ ಧಾವಿಸಿರಿ ನನಗೂ ಒಂದು ಪ್ರತಿಯನ್ನು ತನ್ನಿ ಇಗೊಳ್ಳಿ ಒಂದಾಣೆ'

'ಸ್ವದೇಶಾಭಿಮಾನಿ'ಯು

ಪ್ರಕಟವಾದ ಪ್ರತಿವಾರದಲ್ಲೂ ಈ ಗುಲ್ಲು ಅಖಿಲ ಕರ್ನಾಟಕದಲ್ಲಿ ಕೇಳುತ್ತದೆ ಸ್ವದೇಶಾಭಿಮಾನಿಯನ್ನು ಓದುವುದೆಂದರೆ ಜನರಿಗೆ ಅಷ್ಟು ಉತ್ಸಾಹ!—ಅಷ್ಟು ಪ್ರೀತಿ—ಕಾರಣವೇನು?— ಭಾಷಾಶೈಲಿ, ಚಿತ್ರಪಟಗಳು, ವರ್ತಮಾನ ಸಂಗ್ರಹಗಳು,—ಇವುಗಳೆಲ್ಲ ಅದು ಅಗ್ರಗಣ್ಯನಾಗಿ ನಿಂತಿದೆ

ಬಿಡಿ ಸಂಚಿಕೆ ಬೆಲೆ ಆಣೆ 1.

"GUPTA MANTRA"

A reward of Rs 100

The objects, which cannot be achieved by spending lacs of rupees may be had by repeating this Mantra seven times There is no necessity of undergoing any hardship to make it effective. It is effective without any preparation. This is a "WASHIKARAN MANTRA." It will make you forunate give you service and advancement and bring you profit in trade. A reward of Rs 100, if proved fallible Price including postage etc., Rs 2-7-0

Siddh Mantra Ashram,
KATRISARAI (GAYA.)

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ, ಧೋತಿ, ಸೀರೆ, ಖೈರವಾಸು, ಚೌಕ, ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Kanara and Malabar.
For-- **A. & F. Harvey,**
Managers:—Madura Mills Co., Ltd.

ಶಾಸನಸಭೆಯೂ ಕಾಂಗ್ರೆಸ್ಸೂ

ಮೊನ್ನೆ ಅಂತ್ಯಗೊಂಡ ಕೇಂದ್ರ ಶಾಸನಸಭೆಯಲ್ಲಿ ನಡೆದ ಕಾರ್ಯಕಲಾಪಗಳೇನು? —ಕಾಂಗ್ರೆಸ್ಸು ಮಾಡಿದುದೇನು? ಅದರ ವರ್ತನೆಯು ದೇಶಹಿತದಲ್ಲಿ ಪರಿಣಮಿತವಾಯಿತೇ? ಕಾಂಗ್ರೆಸ್ಸು ಶಾಸನಸಭೆಗೆ ಪ್ರವೇಶಿಸಿದುದರ ಫಲವೇನು—ಇವೇ ಮೊದಲಾದ ವಿಷಯಗಳ ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ

ಶಾಸನ ಸಭೆಗಳನ್ನು ಹೊಕ್ಕು ಕಾಂಗ್ರೆಸ್ಸು ರಾಷ್ಟ್ರಸೇವೆಯನ್ನು ಪ್ರಯೋಜನಕಾರಿಯಾಗಿಯೂ ಪರಿಣಾಮಕಾರಿಯಾಗಿಯೂ ಮಾಡಲು ಶಕ್ತವಾಗಲಾರದೆಂದು ಮಹಾತ್ಮಾ ಗಾಂಧಿಯವರು ನಿರ್ಧರಿಸಿದ್ದಂತೆ, ಕಾಂಗ್ರೆಸ್ಸು ಕೆಲವು ವರ್ಷಗಳವರೆಗೆ ತನ್ನ ಎಲ್ಲಾ ಚಟುವಟಿಕೆಗಳನ್ನು ಹೊರಗಿಂದ ಹೊರಗೇ ಮಾಡುತ್ತಿದ್ದು ಶಾಸನ ಸಭೆಗಳನ್ನು ಅಲ್ಲಗಳೆದಿದ್ದಿತು. ರಾಷ್ಟ್ರೀಯ ಚಳವಳವು ಬಾಹ್ಯವಾಗಿ ನಡೆಯಿತು. ಲಕ್ಷಗಟ್ಟಲೆ ದೇಶೀಯರು ಸೆರೆಯ ಪಾಲಾದರು. ವಿಪರೀತವಾದಗಳು ಈ ರೀತಿಯ ಚಳವಳದಲ್ಲಿ ಭಾಗವಹಿಸುತ್ತಿದ್ದಾಗ ಮಂದಪಕ್ಷದವರು ಕಾಂಗ್ರೆಸ್ಸಿನ ಈ ಚಳವಳವನ್ನು ಕಂಡು ಮೆಚ್ಚದೆ ಕಾಂಗ್ರೆಸ್ಸನ್ನು ನಿಂದಿಸಲಾರಂಭಿಸಿದರು, ಕಾಂಗ್ರೆಸ್ಸಿನ ಈ ಚಳವಳವು ರಚನಾಬದ್ಧವಾದುದಾಗಿಲ್ಲವಾದುದರಿಂದ ಅದರ ಮೊರೆಯು ಅರಣ್ಯರೋದನವಾಗುವುದೆಂದು ಸೂಚಿಸಿದರು. ಅವರು ಹೀಗೆ ಹೇಳುತ್ತ ಬಂದ ಹಾಗೆಲ್ಲ, ರಾಷ್ಟ್ರೀಯ ಚಳವಳಿಗಾರರಲ್ಲಿ ಭಿನ್ನ ಮತಗಳು ತಲೆಯೆತ್ತಿ, ಕಾಂಗ್ರೆಸ್ಸಿನ ಮುಂದಾಳುಗಳೆಂಬ ಹಲವರು ಕಾಂಗ್ರೆಸ್ಸಿನ ಮುಂದಿನ ಕಾರ್ಯಗಳನ್ನು ಕಡೆದು, ತಾವು ಶಾಸನ ಸಭೆಗಳನ್ನು ಹೊಕ್ಕು ಸರಕಾರವು ದೇಶ ವಿಘಾತುಕವಾದ ಶಾಸನಗಳನ್ನು ರಚಿಸದಂತೆ ಎಚ್ಚರವಿರಬೇಕೆಂದು ಸೂಚಿಸಿದರು. ಕಾಂಗ್ರೆಸ್ಸಿನವರು ನ್ಯಾಯವಿಧಾಯಕ ಸಭೆಗಳಿಗೆ ಪ್ರವೇಶಿಸಬೇಕು ಎಂಬ ಒಂದು ಪಂಗಡವು ಒಂದು ಕಡೆಯಿಂದಲೂ, ಅದು ಎಸೆಂಬ್ಲಿಯನ್ನು ಪ್ರವೇಶಿಸಿ ಯಾವ ಕಾರ್ಯಸಾಧನೆಯೂ ಆಗುವುದಿಲ್ಲವೆಂಬ ಇನ್ನೊಂದು ತಂಡವೂ ವಿವಾದಗಳನ್ನೆಬ್ಬಿಸಿದುವು. ಕೊನೆಗೆ, ಮಹಾತ್ಮಾಜೀಯವರ ಅಭಿಪ್ರಾಯವನ್ನು ಕೇಳಲು, ಅವರು "ದೇಶದ ಹಿತಸಾಧನೆಯಾಗುವುದಾದರೆ ನೀವು ಶಾಸನ ಸಭೆಗಳನ್ನು ಪ್ರವೇಶಿಸುವುದರಲ್ಲಿ ನನ್ನ ಅಡ್ಡಿಯಿಲ್ಲ" ಎಂದರು. ಮಹಾತ್ಮಾಜೀಯವರ ಈ ಬಗೆಯ ಸೂಚನೆಯನ್ನು ಪಡೆದ ಆಶಾವಾದಿಗಳು ತಮ್ಮ ಪರವಾಗಿ ಪ್ರಚಾರಕಾರ್ಯವನ್ನು ನಡೆಸಿ, ದೇಶಿಗರ ವೋಟುಗಳನ್ನು ಅತಿಶಯ ಸಂಖ್ಯೆಯಲ್ಲಿ ಪಡೆದು, ಸಭೆಯ ಸಭಾಸದರಾಗಿ ಚುನಾಯಿಸಲ್ಪಟ್ಟರು. ರಾಷ್ಟ್ರೀಯವಾದಿಗಳ ಚುನಾವಣೆಯಲ್ಲಿನ ವಿಜಯವು, ಕಾಂಗ್ರೆಸ್ಸಿನ ಪ್ರತಿಭೆಯು ದೇಶದಲ್ಲಿ ಎಷ್ಟಿದೆಯೆಂದು ತಿಳಿಸುವ ಮಹತ್ಕಾರ್ಯವೊಂದನ್ನು ಮಾಡಿತು.

ಸುಮಾರು ಮೂರು ತಿಂಗಳುಗಳ ವರೆಗೆ ಶಾಸನಸಭೆಯು ಜರಗಿ ಇದೇ ತಾ ೮ರಲ್ಲಿ ವಿಸರ್ಜನೆಗೊಂಡಿತು. ಸಭಾಸದರೆಲ್ಲ ಡಿಲ್ಲಿಯನ್ನು ಬಿಟ್ಟು ತಂತಮ್ಮ ಪ್ರಾಂತ್ಯಗಳಿಗೆ ಹಿಂತಿರುಗಿದರು. ಈ ವೇಳೆಯಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯ ಕಾಂಗ್ರೆಸ್ಸಿನ ಕೆಲಸಗಳ ಸಿಂಹಾವಲೋಕನವನ್ನು ಮಾಡಬಹುದು.

ಕಾಂಗ್ರೆಸ್ಸು ಶಾಸನಸಭೆಯನ್ನು ಪ್ರವೇಶಿಸಿದ ಉದ್ದೇಶ—೧ ಹಿಂದೂದೇಶಕ್ಕೆ ಶಾಸನ ಸಭೆಗಳಿಂದ ಯಾವ ಪ್ರಯೋಜನವೂ ದೊರೆಯುವುದಿಲ್ಲ ಎಂಬುದನ್ನು ಜಗತ್ತಿಗೆ ತಿಳಿಸುವುದಕ್ಕಾಗಿ, ೨ ನ್ಯಾಯವಿಧಾಯಕ ಸಭೆಗಳನ್ನು ಆಧರಿಸಿಕೊಂಡು—ಅಥವಾ ವಿದೇಶೀಯರ ಮುಷ್ಟಿಯಲ್ಲಿರುವ ಕಾನೂನು ಕೂಟದಿಂದ ಭಾರತಕ್ಕೆ ಹಿತವಿಲ್ಲವೆಂಬುದನ್ನು ಸಕಲರಿಗೂ ವಿದಿತಗೊಳಿಸುವುದಕ್ಕಾಗಿ, ೩ ಶಾಸನ ಸಭೆಗಳು ಸಾರ್ವಜನಿಕ ಪ್ರಾತಿನಿಧ್ಯವನ್ನು ಹೊಂದಿಕೊಂಡಿರುವ ಅಥವಾ ಸಾರ್ವಜನಿಕರ ಕೋರಿಕೆಗಳನ್ನು ಮನ್ನಿಸುವ ಸಂಸ್ಥೆಯಲ್ಲವೆಂಬುದನ್ನು ತಿಳಿಸುವುದಕ್ಕಾಗಿ, ೪. ಭಾರತೀಯರ ಅತ್ಯಲ್ಪ ಕೋರಿಕೆಗಳೂ ಲಕ್ಷ್ಯಪೂರ್ವಕ ವಿಮರ್ಶೆಗೆ ಒಳಗಾಗುವುದಿಲ್ಲ ಎಂಬುದನ್ನು ತಿಳಿಸುವುದಕ್ಕಾಗಿ, ೫. ರಚನಾಬದ್ಧ ಧೋರಣೆಗಳನ್ನು ಕೂಡಾ ಕಾಂಗ್ರೆಸ್ಸು ಅನುಸರಿಸುವುದರಿಂದ ಪ್ರಯೋಜನವಾಗುವಂತಿಲ್ಲವೆಂದು ವ್ಯಕ್ತಪಡಿಸುವುದಕ್ಕಾಗಿ. ಕಾಂಗ್ರೆಸ್ಸಿನ ಈ ಐದು ಉದ್ದೇಶಗಳೂ ಅದರ ಮೊನ್ನಿನ ಕಾರ್ಯಕಲಾಪಗಳಿಂದ ಪರಿಪೂರ್ಣವಾಗಿ ಪರಿಷ್ಕಾರಗೊಂಡಿವೆಯೆಂಬ ವಿಷಯದ ಅರಿವುಂಟಾಗಬೇಕಾದರೆ ಈ ಕೆಳಗಣ ವಿಷಯಗಳನ್ನು ಪರಿಶೀಲಿಸಬೇಕಾಗಿದೆ. ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಶಾಸನ ರಚನೆಯ ಕಾರ್ಯವು ಪ್ರಾರಂಭವಾದಂದಿನಿಂದ ಸರಕಾರವು ಹಲವು ಅಪಜಯಗಳನ್ನು ಹೊಂದಿತು. ಅದರ ಪ್ರತಿಯೊಂದು ಆಚರಣೆಯೂ ವಿವಾದಕ್ಕೆ ಬಿದ್ದು, ಕಾಂಗ್ರೆಸ್ಸಿನ ಧುರೀಣರಿಂದ ವಿವರಿಸಲ್ಪಟ್ಟು, ಆಯಾಯಾ ವಿಷಯದಲ್ಲಡಕವಾಗಿದ್ದ ಸತ್ಯಾಸತ್ಯತೆ ಸಾಧ್ಯಾಸಾಧ್ಯತೆ, ಯುಕ್ತಾಯುಕ್ತತೆ, ಸಾಧಕ ಬಾಧಕಗಳು ಲೋಕಕ್ಕೆಲ್ಲ ತಿಳಿಸಲ್ಪಟ್ಟಿತು. ಸರ್ ಕವಾಸ್ಜಿ ಜಹಾಂಗೀರ್ ಮೊದಲಾದ ಮಂದಪಕ್ಷೀಯರೂ ಕೂಡಾ ಕಾಂಗ್ರೆಸ್ಸಿನ ಹೇಳಿಕೆ ಕೇಳಿಕೆಗಳನ್ನು ಮನ್ನಿಸಿ, ಸಹಾನುಭೂತಿಯು ಸ್ವಭಾವಿಕವಾಗಿ ಸರಕಾರದ ಕಡೆಗಿದ್ದರೂ, ನ್ಯಾಯಕ್ಕೆ ಮಣಿದರು. ಮಿ. ಎ. ಎ. ಜಿನ್ನಾರಂತಹವರು ಕೂಡಾ ಬಹುಮಟ್ಟಿಗೆ ಸರಕಾರದ ಪರವಾಗಿ ವಾದಿಸುವವರೆಂದು ತಿಳಿಯಲ್ಪಟ್ಟಿತ್ತಾದರೂ, ಅವರೂ ಕೂಡಾ ಕಾಂಗ್ರೆಸ್ಸಿನ ಸಭಾಸದರ ನ್ಯಾಯಪೂರ್ಣವೂ ವ್ಯಕ್ತಪೂರ್ಣವೂ ಆದ ಕೇಳಿಕೆಗಳಿಗೆ ತಲೆವಾಗಿಸಬೇಕಾಯಿತು. ಇಂತಹ ಮಾನಸಿಕ ಪರಿವರ್ತನೆಯನ್ನು ಕಾಂಗ್ರೆಸ್ಸು ಬೇರಾವ ಸಾಧನದಿಂದಲೂ ಮಾಡಲು ಸಾಧ್ಯವಾಗಿದ್ದಿಲ್ಲ. ಕಾಂಗ್ರೆಸ್ ಪಕ್ಷೀಯರ ಒಗ್ಗಟ್ಟು ಒಂದಲ್ಲವಿದ್ದರೆ ಇಂತಹ ಸತ್ಫಲವು ಎಂದೂ ಲಭ್ಯವಾಗುತ್ತಿದ್ದಿಲ್ಲ. ಶಾಸನಸಭೆಯನ್ನು ಬಹಿಷ್ಕರಿಸಿ ನಡೆಯುತ್ತಿದ್ದರೆ ಕಾಂಗ್ರೆಸ್ಸಿನಿಂದ ಈ ಮಹತ್ಕಾರ್ಯವು ಎಂದೂ ಸಂಘಟಿಸಿ ಬರಲು ಸಾಧ್ಯವಿದ್ದಿಲ್ಲ. ಗಾಂಧಿಜೀಯವರ ಗ್ರಾಮೋದ್ಯೋಗ ಸಂಘದ ಕುರಿತಾಗಿ ಸರಕಾರವು ಮಾಡಿದಗುಪ್ತ ಪ್ರಕಟಣೆಯ ಕುರಿತಾಗಿ ನಡೆದ ಚರ್ಚೆಯಲ್ಲಿ ಸರಕಾರವು ಒಳಗಾದ ಅಸಹಾಯಪರತೆಯು ಸ್ಥಿತಿ, ಬಾಬು ಶರಚ್ಚಂದ್ರರ ಬಿಡುಗಡೆಯ ಕುರಿತಾದ ಚರ್ಚೆಯಲ್ಲಿ ಅದಕ್ಕಾದ ಸೋಲು, ಮುಖ್ಯವಾಗಿ ಫೈನಾನ್ಸ್ ಬಿಲ್ಲಿನ ಪ್ರಶ್ನೋತ್ತರಗಳಲ್ಲಿ ಅದಕ್ಕೆ ಲಭ್ಯವಾದ ಅಪಜಯ—ಅದು ಆ ನಿಮಿತ್ತ ಹಣಗಾಸಿ ಸಾರ್ವಜನಿಕರ ಕೇಳಿಕೆಗಳನ್ನು ತೊಡೆದು ಹಾಕಿ ಆ ಬಿಲ್ಲನ್ನು "ಸರ್ಟಿಫೈ" ಮಾಡಿದ ಅದರ ಅನಿವಾರ್ಯ ವರ್ತನೆ—ಇವುಗಳೆಲ್ಲ ಕಾಂಗ್ರೆಸ್ಸಿನ ಜಯದ ಸಂಕೇತಗಳೆಂಬುದಕ್ಕೆ ಸಂದೇಹವಿಲ್ಲ. ಸರಕಾರಕ್ಕೆ ಅಲ್ಪ ಭೌತಿಕ ಲಾಭವೂ, ಕಾಂಗ್ರೆಸ್ಸಿಗೆ ನೈತಿಕ ಜಯವೂ ದೊರೆಯಿತೆಂದು ಹೇಳಲು ಅಂಜಿಕೆಯಿಲ್ಲ.

ಈ ಸಲದ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷೀಯರ ಮುಂದಾಳಾದ ಶ್ರೀ| ಭುಲಾಭಾಯಿ ದೇಸಾಯಿಯವರ ವಾಗ್ವೈಖರಿ, ಭಾಷಣಶಕ್ತಿ, ರಾಷ್ಟ್ರಭಕ್ತಿಗಳು ಹೊರಗಾದುವು. ಅವರ ವಿಚಾರಪರ ನುಡಿಗಳು ಸರಕಾರದ ಒಂದೊಂದು ನರವನ್ನು ಕ್ಷೀಣಿಸುವಂತಿತ್ತು. ಅವರ ಹಿಂದೆ ಸಿಂಹ ಶ್ರೀ| ಸತ್ಯಮೂರ್ತಿಯವರ ರಾಷ್ಟ್ರಪ್ರೇಮವು ಅವರ ಭಾವಗರ್ಭಿತ ವಿಮರ್ಶೆಯಿಂದಲೇ ವ್ಯಕ್ತವಾಯಿತು. ಮುನ್ಶಿ ಈಶ್ವರ ಶರಣರು ಕಾಂಗ್ರೆಸ್ಸಿನ ಪರವಾಗಿ ಮಾಡಿದ ಪ್ರತಿಪಾದನೆಯು ಶ್ಲಾಘ್ಯವೆಂಬುದಕ್ಕೆ ಸಂದೇಹವಿಲ್ಲ.

ಯುರೋಪಿಯನರ ಪಕ್ಷವೊಂದಲ್ಲದೆ, ಜಿನ್ನಾರವರ ಇಂಡಿಪೆಂಡೆಂಟ್ಸ್ ಪಕ್ಷವಾಗಲೀ ಕಾಂಗ್ರೆಸ್ ವಿರೋಧಿಗಳಾದ ದೇಶೀಯರ ಪಕ್ಷಗಳಾಗಲೀ ಸರಕಾರಕ್ಕೆ ಪೂರ್ಣ ಬೆಂಬಲವನ್ನು ಕೊಡಲು ಸಾಧ್ಯವಾಗಲಿಲ್ಲ. ಫಜಲುಲ್ ಹಕ್ ರವರು ಸರಕಾರದ ಪರವಾಗಿದ್ದರಾದರೂ ಅವರ ನುಡಿಗಳಲ್ಲಿ ಅಂಜಿಕೆಯು ನೆರಳು ಒಡೆದು ಕಾಣುತ್ತಿತ್ತು. ಮೌಲಾನಾ ಶೌಕತಾಲಿಯವರು ಕಾಂಗ್ರೆಸ್ಸಿನೊಡನೆ ಕೂಡಲಿಲ್ಲವಾದರೂ ಅವರ ನುಡಿಗಳಲ್ಲಿ ಸರಕಾರದ ಮೇಲಿನ ಸಹಾನುಭೂತಿಯು ವ್ಯಕ್ತಗೊಳ್ಳಲಿಲ್ಲ, ಬದಲಿಗೆ ಕಾಂಗ್ರೆಸ್ಸಿನ ಅಂಜಿಕೆಯು ಅವರಲ್ಲಿದ್ದೇ ಅವರು ಅನಿಶ್ಚಿತರಾಗಿ ನುಡಿದರು. ಸರ್ ಮಹಮ್ಮದ್ ಯಾಕೂಬರು ರಾಷ್ಟ್ರೀಯವಾದಿಗಳನ್ನು ಕಂಡು ಸಂತೋಷಗೊಳ್ಳಲಿಲ್ಲವಾದರೂ ಮನದ ಅಭಿಪ್ರಾಯವನ್ನು ತಿಳಿಸಿದರು. ಅವರು ಸರಕಾರಕ್ಕೆ ತನ್ನ ಸಹಕಾರವನ್ನು ಮನಃಪೂರ್ವಕವಾಗಿ ನೀಡಲಿಲ್ಲ. ಶಾಸನಸಭೆಯಲ್ಲಿ ಕಾಂಗ್ರೆಸ್ಸು ಭಾಗವಹಿಸಿರುವುದರಿಂದ ದೇಶಿಗರಿಗೆ ಸರಕಾರದ ಮಾನಸಿಕತೆಯೇನೆಂದು ಮಾತ್ರ ತಿಳಿಯಿತಲ್ಲದೆ, ಕಾರ್ಯಕಾರಿಯಾದ ಪ್ರಯೋಜನವಾದುದು. ಅಕ್ಕಸ್ಪಿ ಶಾಸನ ಸಭೆಗಳು ವೈಟ್ ಹೋಲಿನ, ಅಥವಾ ಸೆಕ್ರೆಟರಿ ಓಫ್ ಸ್ಟೇಟ್ ಇವರ ಅಥವಾ ವೈಸರಾಯರ ಆಜ್ಞಾನುವರ್ತಿಗಳಾಗಿ ಮಾತ್ರ ಆಚರಿಸಬೇಕು—ಹಿಂದೂದೇಶದ ಸಾರ್ವಜನಿಕ ಕೇಳಿಕೆಗಳಿಗೆ ಕಿವಿಗೊಡಲು ಅವರಿಗೆ ಅಧಿಕಾರವಿಲ್ಲವೆಂಬ ಸತ್ಯಾಂಶವೂ ಈ ಒಂದು ಅಧಿವೇಶನದಿಂದ ತಿಳಿದು ಬಂತು. ಹಿಂದೂದೇಶದ ಪಾರ್ಲಿಮೆಂಟಿನ ಪೂರ್ಣಾಧಿಕಾರವು ಲಭಿಸಲಿಲ್ಲದ ವಾಗ ಹಿಂದೂದೇಶದಲ್ಲಿ ನಡೆವ ಚಳವಳವಾಗಲೀ ಜರಗುವ ಶಾಸನಸಭೆಗಳಾಗಲೀ, ಒಂದೇ ಕಣ್ಣುಕಟ್ಟಿನ, ಇಂದ್ರಜಾಲ ಆಟದಂಥ ವಿದಿತವಾಯಿತು. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನವರು ಮಾಡಬೇಕಾದುದಾದರೂ ಏನು. ಶಾಸನಸಭೆಗಳಿಗೆ ಹೋಗಿ, ತಮ್ಮಿಚ್ಛೆಯ ಸಾರ ವಾದ ಶಾಸನಬದ್ಧ ಕೆಲಸವು ನಡೆಯುವುದಿಲ್ಲವೆಂದಾದರೆ ಅವರು ಆಂತಹ ಶಾಸನಸಭೆಗಳಿಗೆ ಪ್ರವೇಶಿಸಿ ಮಾಡುವುದಾದರೂ ಏನು? ಚರ್ಚೆ ನಡೆದು, ದೇಶಿಗರ ಸೂಚನೆಯು ಮೀರಿಗೆ ಶಾಸನಗಳ ರಚನೆಯಾಗುತ್ತದೆ. ಆದರೆ, ಆ ಶಾಸನಗಳು ಬ್ರಿಟಿಷರ ಅಹಿತವನ್ನೂ—ಅಥವಾ ದೇಶೀಯ ಸರಕಾರದ ನಷ್ಟವನ್ನೂ ಉದ್ದೇಶಿಸಿ ಇರುವುವಾದರೆ ಅಂತಹ ಶಾಸನಗಳು ಹೊರಗೆ ಬರದಂತೆ ವೈಸರಾಯರು ತಡೆಯುತ್ತಾರೆ—ತಡೆದಿದ್ದಾರೆ ತಡೆಯಲಿದ್ದಾರೆ. ಈ ನಿಸ್ಸಹಾಯಪರತಾ ಸ್ಥಿತಿಯಲ್ಲಿ ರಾಷ್ಟ್ರೀಯರು ಮಾಡಬೇಕಾದರೂ ಏನು? ತಮ್ಮ ಅಮೂಲ್ಯ ಸಮಯವನ್ನೂ ಚೈತನ್ಯವನ್ನೂ, ತನ್ನ ಜ್ಞಾನಶಕ್ತಿಯನ್ನೂ ಗಾಳಿಗೋಪುರದ ರಚನೆಯ ಕೆಲಸಕ್ಕೆ ವ್ಯಯಿಸಿ, ದಣಿದು, ಹತಾಶರಾಗುವುದಾದರೂ, ಏಕೆ ಅಂತಹ ಅನಾವಶ್ಯಕ ಕಾರ್ಯಕ್ಕೆ ಇವರು ಕೈ ಹಚ್ಚಬೇಕಾದರೂ ಏತಕ್ಕೆ?

ಹಿಂದೂದೇಶದ ಪ್ರಾತಿನಿಧ್ಯವನ್ನೊಳಗೊಂಡ ಶಾಸನಸಭೆಯೆನ್ನುವ ಸಂಸ್ಥೆಯಿಂದ ದೇಶಿಗರು ದೇಶೋದ್ಧಾರಕ್ಕೆ ಸಾಧಕವಾಗುವ ಶಾಸನಗಳನ್ನು ರಚಿಸುವ ಸಾಹಸದಲ್ಲಿ ಜಯಪ್ರದರಾಗುವುದಿಲ್ಲ—ಅವರನ್ನು ಬೇಕೆಂದು ಸೋಲಿಸಲಾಗುತ್ತದೆ—ಎಂದಿರುವಾಗ ಇಂತಹ ಶಾಸನ ಸಭೆಗಳಲ್ಲಿ ಕುಳಿತು ನಮ್ಮವರು ಮಾಡುವ ಕಾರ್ಯವಾದರೂ ಏನೆಂದು ನಾವು ನಾವೇ ತರ್ಕಿಸಿಕೊಳ್ಳಬೇಕಾಗಿದೆ. ಜನರ ಪ್ರತಿನಿಧಿಗಳು ಕೂಡಿ ರಚಿಸುವ ಶಾಸನಗಳನ್ನು ಕೊಡೆದು ಹಾಕಲು ವೈಸರಾಯರಿಗೆ ವಿಶೇಷಾಧಿಕಾರವು ಇರುವಾಗ ಜನರ ಪ್ರತಿನಿಧಿಗಳೆಂಬವರಿಂದ ಪ್ರಯೋಜನವಾದರೂ ಏನು?

ಮುಂದಕ್ಕೆ ನಮ್ಮ ಪ್ರತಿನಿಧಿಗಳು ಹೊಸ ಧೋರಣೆಯನ್ನು ವಹಿಸಿದರೆ ವಿಹಿತವಿದೆ. ಸುಮ್ಮನೆ ಭಾಷಣ ಮಾಡಿ ತಮ್ಮಲ್ಲಿರುವ ಶಕ್ತಿ, ಚೈತನ್ಯಗಳನ್ನು ಕಳೆದುಕೊಳ್ಳುವ ಬದಲು ಇವರು ಮುಂದಕ್ಕೆ ತಂತಮ್ಮ ಸ್ಥಾನಗಳಲ್ಲಿ ಮೌನರಾಗಿ ಕುಳಿತುಕೊಂಡು ದೇಶಕ್ಕೆ ವಿಘಾತುಕವಾದ ಸಲಹೆಗಳು ಯಾರಿಂದಲಾದರೂ ಬರದಿರುವಂತೆ ಏರ್ಪಾಡುಗಳನ್ನು ಮಾಡುವುದು ಉತ್ತಮವಿದೆ. ಶ್ರೀ| ಭುಲಾಭಾಯಿಯವರೆಂದರೆ "To prevent mischief" ನಮ್ಮ ಪ್ರತಿನಿಧಿಗಳು ಅಲ್ಲಿದ್ದರೆ ಸರಿ ಅಲ್ಲದೆ ದೀರ್ಘ ಭಾಷಣಗಳನ್ನು ಮಾಡಿ ವೃಥಾ ಸಮಯವನ್ನು ಹಾಳು ಮಾಡುವುದು ಸಮಂಜಸವೆಂದು ಕಾಣುವುದಿಲ್ಲ. ಭಾಷಣ—ತರ್ಕಗಳನ್ನು ಒತ್ತಟ್ಟಿಗಿಟ್ಟು ನಮ್ಮವರು ವೋಟುಗಳ ಸಂಪಾದನೆಗೆ ತೊಡಗಬೇಕು. ಪ್ರದರ್ಶನಗಾರರ ಚಳವಳಿಗಿಂತಲೂ ಮೌನರಾಗಿ ಶಾಸನ ಸಭೆಯಲ್ಲಿ ಕ್ರಿಯಾಸಕ್ತರಾಗುವುದು ಲೇಸು.

ಅಂಗಸಾಧನಾದೇಖಾವೆ

ಅಂದಿನ ಅಧ್ಯಕ್ಷರಾದ Mr. F. W. Thornback, Sporting Editor The Times of India ಇವರ ಭಾಷಣ

'ಇದೇ ತಾ ೭—೪—೩೫ನೇ ಭಾನುವಾರ ಸರ್ ಕವಾಸ್ಜಿ ಜಹಾಂಗೀರ್ ಹೋಲಿನಲ್ಲಾದ ದ ಸೌತ ಕೆನರಾ ಫಿಜಿಕಲ್ ಕಲ್ಚರ್ ಇನ್ಸ್ಟಿಟ್ಯೂಟ್ ಮುಂಬಯಿ' ಇವರ ಪ್ರದರ್ಶನವನ್ನು ಕಂಡು ನಾನು ವಿಸ್ಮಯಗೊಂಡಿರುವೆನು. ಒರೇ ೩೦ ನಿಮಿಷಕ್ಕೆಂದ ಹೋದವನು ಗಂಟೆ ಮೂರರ ತನಕ ಹೊತ್ತು ಕಳೆದುದು ನನಗೆ ತಿಳಿಯಲೇ ಇಲ್ಲ. ಪ್ರಾರಂಭದಿಂದ ಕೊನೆಯ ವರೆಗೂ ಒಂದರಿಂದೊಂದು ಮಿಗಿಲಾಗಿ ಪ್ರೇಕ್ಷಕರನ್ನು ಮುಗ್ಧಗೊಳಿಸುವ ಪ್ರದರ್ಶನಗಳು ಮಧ್ಯ ಮಧ್ಯೆ ಪ್ರೇಕ್ಷಕರ ಕರತಾಡನದ ಚಪ್ಪಾಳೆಯ ಘೋಷದಿಂದಾಗಿ ನಾನು ಮತ್ತಷ್ಟು ಆಹ್ಲಾದಗೊಂಡೆನು. ಕರ್ನಾಟಕದ ಪ್ರಖ್ಯಾತ ಪ್ರೊಫೆಸರ್ ಶೀಪಪ್ಪನವರ ಪರಿಚಾಲನೆಯಿಂದ ನಡೆವ ಅವರ ಶಿಷ್ಯವರ್ಗದವರು ಇಷ್ಟರಿಂದ ಕುಶಲರೆಂದು ನಾನರಿತಿದ್ದಿಲ್ಲ. ಒಟ್ಟಿನಲ್ಲಿ ಈ ವ್ಯಾಯಾಮ ಪ್ರದರ್ಶನದ ಮಹತ್ತಿಕೆಯನ್ನು ಎರಡು ಮಾತಿನಲ್ಲಿ ವರ್ಣಿಸಲಾಗದೆಂದು ಹೇಳಲಿಕ್ಕೇನೂ ಸಂದೇಹವಿಲ್ಲ.

ತನ್ನ ಜೀವನೋಪಾಯಕ್ಕಾಗಿ ಮುಂಬಯಿಗೆ ಬಂದ ದಕ್ಷಿಣಕನ್ನಡದ ಹಾಗೂ ಇನ್ನಿತರ ಯುವಕರನ್ನು ಅವರ ಬಿಡುಗಾಲದಲ್ಲಿ ಇಂತಹ ಅಂಗಸಾಧನೆಯ ಉತ್ತಮ ಶಿಕ್ಷಣದಿಂದ ಸಿದ್ಧಗೊಳಿಸಿದ ಪ್ರೊಫೆಸರ್ ಶೀಪಪ್ಪನವರ ಧೈರ್ಯವು ಸ್ತುತ್ಯಾರ್ಹವೇ ಅಲ್ಲದೆ ಶಿಷ್ಯಮಂಡಲದ ಸೌಭಾಗ್ಯವೆನ್ನಲಿಕ್ಕೇ ಬೇಕು.

ನನ್ನ ಜೀವಿತದಲ್ಲಿ ನಾನು 'ದೊಡ್ಡ ತುದಿಯ ಲೋರ್ಡ್ ಜೋರ್ಜ್ ಸಂಗರಿಸಿಂದ ಒಲಿಂಪಿಯದಲ್ಲಿಯ ಬರ್ಟ್ರಮ್ ಮಿಲ್ಸ್'ನ ವರೆಗಿನ ಅನೇಕ ಸರ್ಕಸುಗಳನ್ನು ಕಂಡಿದ್ದೆನು. ಆದರೆ ಇಂದಿನ ಪ್ರದರ್ಶನದಲ್ಲಿದ್ದ 'ಏಪಲೋ' (ಓರ್ವ ತರುಣನು, ಕಾಲಿನ ಮೇಲೆ ಬಾಲಕ ಬಾಲಿಕೆಯರನ್ನು ಆಡಿಸುವ) ಆಟವನ್ನು ನಾನಲ್ಲಿಯೂ ನೋಡಿಲ್ಲ. ಒಂದು ಸಿಸ್ತಿಲ ಸ್ತಂಭದ ತುದಿಯಲ್ಲಿ ನಿಲ್ಲ ಹುಡುಗಿಯೋರ್ವಳನ್ನು ಕುಳ್ಳಿರಿಸಿ ಅವಳ ಹೆಗಲ ಮೇಲೆ ನೇರಾಗಿ ನಿಲ್ಲಿಸಿ ದೊಡ್ಡದೊಂದು ಚೆಂಡಿನ ಮೇಲಕ್ಕೆತ್ತಿ ಕೈಕಟ್ಟಿ ಅವಳನ್ನು ವ್ಯಾಂಡಿನ ತಾಳಕ್ಕೆ ಸರಿಯಾಗಿ ರಂಗಭೂಮಿಯಲ್ಲಿ ಚಲಿಸುವ, ಸಿರಾಘಾರಿ ಎಡೆಯ ಮೇಲೆತ್ತಿ ನಾಚ್ಯಾರು ಹುಡುಗರನ್ನಾಡಿಸುವ, ಪಾದದ ಮೇಲಿನ ಜಪಾನಿ ಆಟ, ಎಂಟ್ರಿಯ ಮೇಲೆ ಪೆಟ್ಟಿನಲ್ಲಿ ಮಕ್ಕಳನ್ನಾಡಿಸುವುದು ಚಿತ್ತಾಕರ್ಷಕ ಶಕ್ತಿಯಾಟ ಚೆಯರ್ ಬೆಲೆನ್ಸ್ (ಕುರ್ಚಿಗಳ ತೂಕ) ಒಂದು ಕೈಮೇಲಿನ ಬೆಲೆನ್ಸ್, ಅಪ್ರತಿಮ ಲಾಟಿಯಾಟ, ಅಲ್ಲದೆ ತಕ್ಕತಕ್ಕದಾದ ಕೋಮಿಕ್ (ವಿನೋದ)ಗಳೇ ಮೊದಲಾದ ಇವರ ಅಸಾಧಾರಣ ಶಕ್ತಿ ಸಾಹಸಗಳ ಕಲಾಕುಶಲತೆಗೆ ತಕ್ಕ ಸೌಕರ್ಯಗಳ ಸ್ಥಾನುಕೂಲತೆಗಳಿದ್ದಲ್ಲಿ ಇದು ವ್ಯಾಯಾಮ ಮಂಡಲವಲ್ಲ—ಉತ್ತಮ ತರಗತಿಯ ಸರ್ಕಸ್ಸು' ಎಂದೆಣಿಸಬಹುದು. ಇದು ನಿರ್ವಿವಾದವೇ ಸರಿ.

LOOK SHARP! LOOK AHEAD

Murdeshwar's Banking Institute.

Pioneer Institute on the WestCoast!

Opens out Careers for Business men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to —

D. R. Murdeshwar,

Dip. Econ; F. R. Econ, S. (Lond.)

Principal.

Ganapathy High School Street,

Mangalore.

WHITE LEPROSY

AND

LEUCODERMA

A few day's application of this medicine cures WHITE LEPROSY and LEUCODERMA radically. Get rid of this horrible disease by application of this medicine in-spite of failure by hundreds of Hakims, Doctors, Kavirajas and advertisers. Rs. 500 rewrded if proved falfible. Price Rs 2/

VAIDYARAJ AKHIL KISHORE RAM

P. O. KATHISARAI, (GAYA.)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ.

ಕ್ರೌನ್ ⅛ ಆಕಾರದ 188 ಪುಟಗಳು.

ಉತ್ತಮ ತರಗತಿಯ ಹಾಸ್ಯ.

ಬೆಲೆ ರೂ. 1—4—0.

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

ಇಲ್ಲಿಂದ ಪಡಕೊಳ್ಳಬಹುದು.

ಕಣ್ಣಿನ ಪರಿ.

"ಐ—ಸನ್" ಎಂಬ ನೇತ್ರಬಾಸ್ಕರ—ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರ ವಾಸಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal

Swadeshabhimani

enjoys circulation in India and abroad.

APPLY FOR ADVERTISEMENT RATES.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	8—15	4— 3
ಮುಸ್ಕಿ	4— 2	4— 8
ಗುಡ್ಡು	4— 0	4— 6
ಊರ ಅಪ್ಪಲ್ ಬೆಲ್ಲಗೆ	4— 0	4—12
ರಂಗೂನು ಬಿ. ಗೋ. ಗಿಳ್ಳೆ	6— 8	6—12
ಎಲ್ಲೂರು ಬೆ. ಮು. ಗಿಳ್ಳೆ	4— 4	4— 8
ಗೋದಿ ಗೋಣಿ ಗಿಳ್ಳೆ	10— 0	10— 8
ತೊಗರಿ ಗೋಣಿ ಗಿಳ್ಳೆ	8—12	9— 8
ಹುರುಳಿ ಗೋಣಿ ಗಿಳ್ಳೆ	7— 4	7—12
ಕಡಲೆ ಗೋಣಿ ಗಿಳ್ಳೆ	8 — 0	10— 8
ತೊಗರಿಬೇಳೆ ಗೋಣಿ ಗಿಳ್ಳೆ	10— 0	17— 0
ಉದ್ದು ಗೋಣಿ ಗಿಳ್ಳೆ	8— 0	8— 8
ಹೆಸರು ಗೋಣಿ ಗಿಳ್ಳೆ	9— 0	9— 8
ಊರುಬೆಲ್ಲ ಖಂಡಿ ಗಿಳ್ಳೆ	32— 8	35— 0
ಉಪ್ಪು ಗೋಣಿ ಗಿಳ್ಳೆ	4 — 8	5— 0
ಕೊಬ್ರಿ ಖಂಡಿ ಗಿಳ್ಳೆ	48— 0	55— 0
ಕೊಬ್ರಿ ಹಿಂಡಿ ಖಂಡಿ ಗಿಳ್ಳೆ	21 - 8	22 - 0
ಎಳ್ಳಿಂದ ಖಂಡಿ ಗಿಳ್ಳೆ	37— 8	40— 0
ಕೊಬ್ರಿ ಎಣ್ಣೆ ಮಣ ಗಿಳ್ಳೆ	8—12	4—12
ಎಳ್ಳೆಣ್ಣೆ ಮಣ ಗಿಳ್ಳೆ	5— 2	5—10
ಚಿಮಿಣಿಎಣ್ಣೆ ಪೆಟ್ಟಿಗೆ ಗಿಳ್ಳೆ	5— 7	5—7
ಮೋರಿಸ ಸಕ್ಕರೆ ಮ. ಗಿಳ್ಳೆ	3— 7	3— 8
ಮೆಣಸು	5— 2	8— 8
ಸಾಸಿವೆ ಮುಡಿ ಗಿಳ್ಳೆ	5 —12	6— 0
ಕಾಳುಮೆಣಸು ಖ. ಗಿಳ್ಳೆ	120— 0	122— 8
ಯೇಲಕ್ಕಿ ಮಣ ಗಿಳ್ಳೆ	22— 0	27— 0
ಗೇರುಬೀಜ ಮ. ಗಿಳ್ಳೆ	3—10	3—12
ಕಟ್ಟಿಗ ಖಂಡಿ ಗಿಳ್ಳೆ	40— 0	40— 8
ತಾಂಮ್ರಕಗದು ಮ. ಗಿಳ್ಳೆ	9 — 0	9— 1
ತಾಂಮ್ರಪಾತ್ರಗಳು ಮ. ಗಿಳ್ಳೆ	11— 0	12— 0
ಚಿಟ್ಟಿಬೆಳ್ಳಿ ಸೇರು ಗಿಳ್ಳೆ	14—12	15— 0
ಹಿತ್ತಾಳೆ ತಗಡು ಮ. ಗಿಳ್ಳೆ	8— 12	9— 0
ಪವನು ಗಿಳ್ಳೆ	23— 0	23— 4
ಹುಣಸೆ ಹುಳಿ ಖಂಡಿ ಗಿಳ್ಳೆ	20— 0	25— 8
ನೇಟಿವ್ ಕಾಫಿ ಖಂಡಿ ಗಿಳ್ಳೆ	160— 0	170— 0
ಪ್ಲಾಂಟೇಶನ್ ಕಾಫಿ ಖಂಡಿ ಗಿಳ್ಳೆ	240— 0	245— 0
ಹಳೆ ಅಡಕೆ	100— 0	110— 0
ಹೊಸ ಅಡಕೆ	80— 0	96 — 0

ಶಾಲಿವಾಹನ ಬಃ ಶಕ ೧೮೫೭ನೆಯ ಭಾವ ಸಂವತ್ಸರದ ಚೈತ್ರ ಬ॥ ೯ ಶನಿವಾರದಿಂದ ವೈಶಾಖ ಶು॥ ೧ ಶುಕ್ರವಾರದ ವರೇಗಿನ ಪಂಚಾಂಗ. (೧೯೩೫ನೇ ಯಿಸಂಹಸೋಣ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ಹಬ್ಬ
27	ಶನಿ	೯	೨೬	ಧನಿಷ್ಠಾ	೪೮	೧೪	*
28	ರವಿ	೧೦	೨೦	ಶತಭಿಷಾ	೪೪	೧೪	
29	ಸೋಮ	೧೧	೧೪	ಪೂ. ಭಾದ್ರ	೪೦	೧೩	
30	ಮಂಗಳ	೧೨	೯	ಉ. ಭಾದ್ರ	೩೭	೧೨	
1	ಬುಧ	೧೩	೪	ರೇವತೀ	೩೩	೮	
2	ಗುರು	೩೦	೫೫	ಅಶ್ವಿನೀ	೩೧	೧೯	
3	ಶುಕ್ರ	೧	೫೨	ಭರಣೀ	೩೦	೨೦	

ಇಷ್ಟರತನಕ ಯಾರೂ ಕೇಳಲಿಲ್ಲ, ಪಡೆಯಲಿಲ್ಲ.

ನಮ್ಮ ಒಟ್ಟೀ ಗೋಲ್ಡ್ ಆಕ್ಷನ್ ಹೊಸ ಹೃದಯ ಮನಗಳನ್ನು ಸಂತೋಷಪಡಿಸುತ್ತವೆ. (೧ ಬಾಟ್ಲಿಗಳನ್ನು ರೂ ೧—೧೫—೦ಕ್ಕೆ ಖರೀದಿಸುವವರಿಗೆ ೧ ವಾಚ್, ೧ ಚಿನ್ನದ ಚೈನ್ (ಟೈಮ್ ಸರಿಯಾಗಿ), ೧ ಪೆನ್ ಇತ್ಯಾದಿ ಕೊಡಲಾಗುವುದು)—ಹತ್ತು ವರ್ಷಗಳ ಗ್ಯಾರೆಂಟಿ. ಒಂದು ಇಟಾಲಿಯನ್ ಮುತ್ತಿನ ಸರ, ಚೆಂಗ್ ಮುತ್ತು ಪೋಸ್ಟೇಜ್ ಪ್ರತ್ಯೇಕ. (ಒಳ್ಳೆಯದಲ್ಲವಾದರೆ ಹಣ ವಾಪಸು)

ವಿಳಾಸ—International Trading Co ,

G. I. P A. Post Box No. 6714, Section S. P., Calcutta.

NEW ARRIVLAS.

Medicines.

Dr. Schuessler's Twelve Tissue Remedies 5 gr. bot. As. 4/-

Homoeopathy Medicines 5 gr. bot As. 5/—

Sugar of Milk Dr Schwabe's original bot 1 lb Rs 2/-

Haarlem Oil-a world-renowned remedy As 8/-per phial

Dr Haele's New Curative Earth-Radium Cure Rs 4/-per lb.

Dr Schwabe's other special remedies are always in stock

Please on all us for your requirements.

Kanarese Book a Family Guide to Biochemistry Re 1/-

„ Domestic Homoeopathy Rs 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps Shaving sticks and Washing and Bleaching powders.

Toilet soaps to suit all tastes and prices from As 2/6

Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps, Spring Cots, Spring Couches etc. and stock—

Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to date Machine in Standard and portable sizes

For Further particulars please write to —

Basel Mission Book & Tract Depository,

Mangalore, S K or Hubli, S M.

ರೇಶ್ಮೆಯಂತೆ, ಮಿದುವಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚೆ ತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನವಮುಗ್ಧಕರವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತದೆ

ತಯಾರಕರು ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು —

ಕುಂತಳ ಕೌಮುದಿ ತೈಲ,

ಪೋಸ್ಟಾಫೀಸ್ ಎದುರು, ಮಂಗಳೂರು.

ಮೆನೇಜರರ ನೋಟೀಸು

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟಿರುವಂತೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಹಣವನ್ನು ಕೂಡಲೇ ರವಾನಿಸಬೇಕು ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ ಅಗತ್ಯವಾಗಿ ತಿಳಿಸಬೇಕು

ಚಿಕ್ಕದೊಡ್ಡವರು-ದೊಡ್ಡಚಿಕ್ಕವರು

ಲೇಖಕರು – ಶ್ರೀ ಶಿವರಾಮ ಕಾರಂತರು,

೫. ಸೀಕದಾನಿ ರಾಮಯ್ಯನವರು.

ಸೀಕದಾನಿ ಏನೆಂದು ಎಲ್ಲರಿಗೂ ತಿಳಿದಿದೆ ಆ ಹೆಸರು ಏಕೆ ಬಂದಿತು ಎಂಬುದು ಹೇಳಬೇಕಾದ ಮಾತಲ್ಲ ರಾಮಯ್ಯನವರಿಗೆ ಆಹಾರದಲ್ಲಿ ಅತಿ ಬಯಕೆಯಿಲ್ಲ ಚೆನ್ನಾದ ತಿಂಡಿಯನ್ನು ತಕ್ಕಮಟ್ಟಿಗೆ ತುಂಬಾ ತಿನ್ನಬೇಕೆಂಬುದು ಅವರ ಸಹಜಸ್ವಭಾವ ಹೀಗಿರಲು ತಾಂಬೂಲ ಚರ್ವಣದ ಆಚಾರ ಅವರು ಲೋಭಿಗಳಾಗಲು ಕಾರಣವಿಲ್ಲ ಅದರಲ್ಲೂ ಹಸುರೆಲೆಗಳಲ್ಲಿ ವೈಟಮಿನುಗಳು ಹೆಚ್ಚು ಎಂದು ತಿಳಿದಬಳಿಕ ಅವರು ತಾವು ತಮ್ಮ ಕಾರ್ಖಾನೆಯಲ್ಲಿ ಕತ್ತರಿಸುವ ಎಲೆಅಡಿಕೆ ಸಂಖ್ಯೆಯನ್ನು ಇಮ್ಮಡಿಸಿದ್ದಾರೆ ಅವರ ಬಾಯಿ ಯಾವಾಗ ನೋಡಿದರೂ, ಸಂಚಾರಕ್ಕೆ ಹೊರಟ ಸೀಕದಾನಿಯಂತೆಯೇ ಇರುತ್ತದೆ

ಸಂಚಾರ–ಎನ್ನುವಾಗ ಒಂದು ಮಾತು ನೆನಪಿಗೆ ಬರುತ್ತದೆ. ಅವರು ಸಂಚಾರ ಪ್ರಿಯರು–ಎಲ್ಲಿ, ಯಾವ ಊರಲ್ಲಿ ಏನಾಗುತ್ತದೆ? ಯಾವಊರಲ್ಲಿ ಏನಿದೆ ಎಂದು ತಿಳಿಯುವ ಕುತೂಹಲ ಬಹಳ ಪ್ರತಿಯೊಂದು ಊರಲ್ಲೂ, ಪ್ರತಿಯೊಂದು ಜನರಲ್ಲೂ ಏನೋ ಒಂದು ಹೆಚ್ಚಾಗಿಯೋ ಕಡಿಮೆಯಾಗಿಯೋ ಇರಬೇಕೆಂಬುದು ಅವರ ದೃಢಸಿದ್ಧಾಂತ ಅದನ್ನು ತಿಳಿದು, ಬೇಗ ಚಲಿಸಲಾರದ ತಮ್ಮ ಶರೀರವನ್ನು ಹೇಗಾದರೂ ಒಂದು ಗಾಡಿಯಲ್ಲಿ ತುಂಬಿಸಿಕೊಂಡು, ಎಲ್ಲಿಗಾದರೂ ಸಂಚಾರಕ್ಕೆ ಹೋಗಿಯೇ ಹೋಗುತ್ತಾರೆ ನನ್ನನ್ನು ನೋಡಿ ಅವರಿಗೆ ಅಸೂಯೆಯೂ ಇದೆ–ಕಾರಣ, ಅವರು ಸಂಚಾರಮಾಡುವ ದಿನಕ್ಕಿಂತ ನನ್ನ ವಿರಾಮದ ದಿನ ಕಡಿಮೆಯೆಂದು ನಾನು ಯಾವಾಗ ಸಿಕ್ಕಿದರೂ ಬಂದಿರಿಯೇ, ಎಲ್ಲಿ ಹೋಗಿದ್ದೀರಿ, ಎಲ್ಲಿ ಏನಾಯಿತು, ಎಲ್ಲಿ ಯಾರು ಇದ್ದರು, ಎಲ್ಲಿ ಏನು ವಿಶೇಷ ಎಂದು ಕೇಳಿದರು ಅದನ್ನು ಅವರ ಮುಂದೆ ಹೇಳಿದರೇನೆ ಅವರಿಗೆ ಸಂತೋಷ ನಮಗೂ ಒಂದೆರಡು ಬೀಡಾ ಸಿಕ್ಕಿಯೇ ಸಿಗುತ್ತ ಅಷ್ಟೇ ಅವು ಎಲೆ ಅಡಿಕೆ ಮೆಲ್ಲುವವರಲ್ಲವಾದರೆ ನಸ್ಯವಿದೆ ಅವರ ನಸ್ಯದ ಡಬ್ಬಿ ಸಹ ರಬ್ಬರಿನದೇ ವಾಯುಗಿಂತ ಕಡಿಮೆಯಾಗದ ಮೂಗಿನ ಸೊಳ್ಳೆಗಳು ಅವರಿಗೆ ಈ ಇಂದ್ರಿಯಗಳಿಗೆ ಯಾರೂ ತಡೆಯಾಗದಂತೆ ಮೂಸೆ ತೆಗೆದುದ ದುಂಡ–ಮುದ್ದಾದ ಕೆಂಡುಟಗಳ ಮೇಲೆ ಎರಗಿದ ಹದ್ದಿನಂತೆ ಕಾಣುವ ಆ ಎರಡು ಕವಾಕ್ಷಗಳೇ

ವಿಷಯವನ್ನು ಬಿಟ್ಟು ಕಾವ್ಯಕ್ಕೆ ಸರಿದಂತಾಗದು ರಾಮಯ್ಯನವರು ಬಡಸಂಸಾರಿಗರು ಅವರ ಆತುರದ ಕೈ ಉದ್ದವಾದರೆ ಅನುಕೂಲದ ಕೈ ಗಿಡ್ಡ ಹೀಗಾಗಿ–ದೇಶಸಂಚಾರದ ಎಲ್ಲಾ ಆಸೆ ಮುಗಿಯದು ಇದ್ದ ಅನುಕೂಲತೆಯಲ್ಲೇ ವರ್ಷಕ್ಕೊಂದು ತಿಂಗಳು, ವಿರಹಿಗಳಾಗಿ, ವಿಹಾರಕ್ಕೆ ಕೊಡುತ್ತಾರೆ ಗುರುತು ಪರಿಚಯವಿಲ್ಲದ ಯಾವ ಊರಲ್ಲೂ ಬಾಳ್ವೆಮಾಡಬಲ್ಲ ವ್ಯಕ್ತಿ—ಪಾಂಡಿತ್ಯದಿಂದಲ್ಲ, ತಮ್ಮ ಸೌಜನ್ಯದಿಂದ. ಬರ್ಮಾದೇಶದ ಬುದ್ಧ ಸಂಚಾರಕ್ಕೆ ಹೊರಟನಾಗ ಹೊರಟುಬಿಡುತ್ತಾರೆ

ಅವರ ಮನಸ್ಸು ನಾನಾ ವಿಧವಾದದ್ದು ಅಲ್ಲಿ ಇಲ್ಲಿರುವ ಹಳೆಗುಡಿ ಕಾಣಬೇಕು, ಎಂದು ಒಂದೂರಿಗೆ ಹೋದರು ಹೋಗಿ ಕಂಡರು ಅವಸರದಿಂದಲ್ಲ ಗುಡಿಯ ಪ್ರತಿಯೊಂದು ಕಂಭ, ಕಲ್ಲಿನ ಮುಂದೆಯೂ ಒಮ್ಮೊಮ್ಮೆ ಒಂದೊಂದು ಚಿಮಟಿ ನಸ್ಯವನ್ನು ಮೂಗಿಗೇರಿಸಿ ಸಂತೋಷಪಟ್ಟರು ಆಚೀಚೆಗೆ ಪೂಜಾರಿಗಳನ್ನು ಕರೆದರು ಅವರಿಗೆ ಪೂಜೆಯ ಆತುರ, ದಕ್ಷಿಣೆಯ ಆತುರ ಎರಡು ಇದ್ದರೂ ಇವರ ಮನಸ್ಸನ್ನು ಎರಡಕ್ಕೂ ನೆರವಾಗದೆ ಹಿಡಿಯುತ್ತಾರೆ ಸ್ವಾಮಿ ತಾವು ಈ ದೇಗುಲದ ಅರ್ಚಕರೇ' ಎಂದು ಬಹುವಚನ, ಮನ್ನಣೆ, ಇವುಗಳನ್ನು ಮುದ್ದೆಕಟ್ಟಿ ಮಾತನಾಡಿಸುತ್ತಾರೆ. ಪಾಪ–ಆ ನಯನುಡಿಗೆ ಮನಸೋತು, ಅವರು ಇವರಿಗೆ ಗುಡಿಯ ದಂತ ಕಥೆಗಳನ್ನೆಲ್ಲಾ ಕಂಠಪಾಠ ಒಪ್ಪಿಸುತ್ತಾರೆ ಅವರಿಂದ ಎರಡು ಕಾಸು ಕೇಳುವ ಯೋಚನೆಯಿದ್ದವರು ಸಹ, ಮನೆಗೆ ಕರೆದು ಪುಕಟ್ಟೆ ಊಟ ಹಾಕಿಸಿ ಕಳುಹಿಸಿಕೊಡುತ್ತಾರೆ.

ಗುಡಿಕಂಡರೆ ಸಾಲದು ಅವರಿಗೆ. ಅದರ ಚೆಲುವಿನ ಕೂಲಂಕಷ ಬೇಕು. ಅದನ್ನು ಕಟ್ಟಿದವರ ಕಥೆ ಬೇಕು, ಒಡೆದವರ ಇತಿಹಾಸ ಬೇಕು, ಅದನ್ನು ಕಟ್ಟದೆ ಹೋಗಿದ್ದರೆ ಏನಾಗುತ್ತಿತ್ತು ಎಂದು ಹೇಳಲೂ ಬೇಕು ಗುಡಿ ಸಿಗಲಿಲ್ಲವೇ–ಹೋದೂರಿನ ಹಾಳು ಸ್ಮಶಾನದ ಬಳಿಯೋ, ಕೊಳಕು ಕೆರೆದಂಡೆಯಲ್ಲೋ ನಿಂತು ಸೃಷ್ಟಿಯ ಸೌಂದರ್ಯವನ್ನು ನೆರೆದಾರು. ಹೀಗೆ ಸೊಗಸನ್ನು ಸವಿಯುವ ಆತುರ ಬಹಳ

ಅವರ ಈ ಎಲ್ಲ ಆತುರಗಳನ್ನು ನುಂಗುವಂತಹ ಪ್ರೇಮ ಅವರಿಗೆ ಸಂಗೀತದ ಮೇಲೆ ಇದೆ ಪುತ್ತೂರಲ್ಲಿ ಪ್ರತಿ ವರುಷ ದಸರಾ ಉತ್ಸವ ನಡೆಯುತ್ತದಷ್ಟೆ, ನಡೆಯುವ ಆರು ತಿಂಗಳಿಗೆ ಮೊದಲೇ ಅವರು ನನ್ನೊಡನೆ 'ಈ ವರುಷ ಯಾರು ಬರುತ್ತಾರೆ'–ಎಂದು ಕೇಳುವರು ಯಾರು ಇಲ್ಲ ಎಂದರೆ ಮೂರ್ಛೆಯೇ ಬಂಬಹು. ಯಾರದ್ದಾದರೂ ಹೆಸರು ಹೇಳಿ ಅವರನ್ನು ಸಮಾಧಾನಪಡಿಸಬೇಕು ಸರಿ–ದಸರಾ ಬರುವಾಗ ಮಕ್ಕಳಂತೆ 'ಯಾರು' ಬಂದರೆ, ಯಾವಾಗ ಬರುತ್ತಾರೆ–ಎಂದು ಪೀಡಿಸತೊಡಗುವರು 'ಯಾರೂ ಇಲ್ಲ' ವೆಂದರೆ ಕೊಬ್ಬಿದ ಮೀನು ಒಣಗಿ ಹೋದಷ್ಟು ಸೊರಗಿಬಿಟ್ಟಾರು

ಬಂದಿದ್ದಾರೆ–ಎಂದರೆ ಸುಖವಿದೆಯೇ? ಇಲ್ಲ 'ಅವರು ಹ್ಯಾಗೆ ಸ್ವಾಮಿ' ಎಂದು ಕೇಳಿಯಾರು

"ಚೆನ್ನಾಗಿದ್ದಾರೆ"

"ದಕ್ಷಿಣಾದಿಯೇ–ಕರ್ನಾಟಕಿಯೇ"

"ದಕ್ಷಿಣಾದಿ"

"ಹಿಂದುಸ್ಥಾನಿ ಗೊತ್ತಿಲ್ಲವೇ?"

ನಾನೇ ಹಿಂದುಸ್ಥಾನಿ–ಎಂದರೆ ದಕ್ಷಿಣಾದಿ ಬಾರದೇ ಎಂದರೆ 'ದಕ್ಷಿಣ ಪದ್ಧತಿ ತಿಳಿಯದೇ? ' ಎನ್ನುವರು ಅವರಿಗೆ ಎರಡರ ಸಖ್ಯವೂ ಆಗಬೇಕು ಸರಿ, ಅವರು ಭೈಟಕಿಗೆ ಬಂದರು ಹಾಡುಗಳನ್ನು ಕೇಳಿದರು ಚೆನ್ನಾಗಿಲ್ಲವಾದರೆ ಏನು ಸ್ವಾಮಿ? ಹ್ಯಾಗೆ ಸಂಗೀತವೆಂದು ಕೇಳಿದರೆ ಸಾಕು–ಕೈಯಲ್ಲಿ ಸತ್ತ ಮಗುವನ್ನು ಹಿಡಿದು ಸಿಂತಕೆ 'ಕೊಂದರು ಸ್ವಾಮಿ'–ಎನ್ನುತ್ತಾರೆ ಚೆನ್ನಾಗಿದ್ದರೂ ಕಷ್ಟ ಅವರಿಗೂ ಇವರಿಗೆ ಪರಿಚಿಯವಲ್ಲ, ದೋಸ್ತಿಮಾಡಿಕೊಡಬೇಕು ಆನಂತರ ಹೇಗಾದರೂ ಮಾಡಿ ಅವರಿಂದ ಹತ್ತು ಹತ್ತು ಹಾಡು ಕದ್ದಾರು 'ಸ್ವಾಮಿ', ಅವಕಾಶವಿಲ್ಲವೆಂದು ಕಾಣುತ್ತದೆ ತಾವು ಒಳಗಿಂದ ಸ್ನಾನಮಾಡುವಾಗ ಹಾಡುತ್ತಿದ್ದರೂ ಸಾಕು ಹೊರಗಿಂದಲೇ ಕೇಳುತ್ತೇನೆ ಒಂದು ತಹಾನ ಒಂದು ಬೇಗಡೆ, ಒಂದು ಬಹಾರು, ಒಂದು ಮೋಹನ ಇಲ್ಲವೆ ಶ್ರೀರಂಜನಿ—ಇಷ್ಟು ತಿಳಿಸಿದರೆ ಸಾಕು ಅವರಾಗದ ತೃಪ್ತಿಯಾಗಲು ಇವರಿಗೆ ಸ್ನಾನ ಹಂಡೆಯ ಸ್ನಾನವಾಗಬೇಕು ಇಷ್ಟು ಕೇಳಿದರೆ ಸಾಕೆ ಹಾಡಗಾರರ ಊರ ಬಳಿ ಹೋಗುವ ಅವಕಾಶವಿದ್ದರೆ ಅವರ ಮನೆಗೆ ಹೊಕ್ಕು, ಅಲ್ಲೇ ನಿಂತು, ಅವರನ್ನು ಹಾಡಿಸಿ ತೃಪ್ತಿಪಡುತ್ತಿದ್ದರು ಊರಿಗೊಬ್ಬರು ಹಾಡುಗಾರರು ಬಂದರೆಂದರೆ ರಾಯರಿಗೆ ಆಗ ಉಪವಾಸವೆಂಬುದು ನಿಶ್ಚಯದ ಮಾತು ಸ್ವತಹ ಅವರೂ ಹಾಡುಗಾರರೇ ಇಂಪಾದ ಸ್ವರವಿದೆ ಆದರೆ–ಸೀಕದಾನಿ ಬಾಯಿತೆರೆದರೆ ಆ ಕೆಂಬಣ್ಣ ಕಂಡು, ಇದೇ 'ಲಂಕಾಪುರಿ' ರಾಗಹಾಡುತ್ತಾರೆ ಎನ್ನಬೇಕು

ನಮ್ಮ ನಾಟಕಗಳಲ್ಲಿ ಒಂದೆರಡು ಪಾರ್ಟು ಮಾಡಿದ್ದಾರೆ ಅವರು ಅವರನ್ನು ಬೆದರಿಸಲು ಒಂದೇ ಉಪಾಯ ಸಾಲಿಗಾರರು ಬರುತ್ತಾರೆ ಎಂದರೂ ಹೆದರುವ ಜೀವವಲ್ಲ ಆದರೆ 'ನಾಳೆ ನಿಮ್ಮ ನಾಟಕದ ಪಾರ್ಟು ಇದೆ' ಎಂದು ಬಿಟ್ಟರೆ–ಸರಿ ತೊಡಗಿತು ಅವರ ಚಿಂತೆ ಆ ನಾಳೆ ಸರಿಯುವ ತನಕ, ಅಯ್ಯೋ ಅವರ ಬುದ್ಧಿಯ ಅಳುಕು ಹೇಳಿ ತೀರದು.

ಒಮ್ಮೆ ನಾವು ಕೆಲವರು ಅವರನ್ನು ಕೂಡಿ, ದೂರದ ಸಂಚಾರಕ್ಕೆ ಹೋಗಿದ್ದೆವು ರೈಲುಗಾಡಿಯಲ್ಲಿ ಎರಡು ದಿವಸದ ಹಾದಿಯಿತ್ತು ಹಾದಿಯೆಲ್ಲಾ ಜಂಗಾಡಾಗಿತ್ತು ಬಂಡಿಯೆಲ್ಲ ಕಿಕ್ಕಿರಿದಿತ್ತು ಕಾಲು ಬಿಡುವುದಕ್ಕೂ ಅವಕಾಶವಿರಲಿಲ್ಲ ನಾವೆಲ್ಲಾ ಒಳಗೆ ಕುಳಿತಲ್ಲೇ ನಿದ್ರಿಸುತ್ತಿದ್ದೇವೆ—ಆದರೆ ರಾಮಯ್ಯನವರು ರಸವತ್ತಾಗಿ ತಾಂಬೂಲ ಸೇವಿಸುವರು, ನಮ್ಮನ್ನು ಮಾತನಾಡಿಸುವರು, ತಮಗೆ ನಿದ್ರೆ ಬಂದರೆ ನಸ್ಯ ಸೇವನೆಯಿಂದ ಪ್ರಜ್ಞಾಭರಿತರಾಗಿ ಎಚ್ಚೆತ್ತು ಮಾತನಾಡಿಸುವರು ಯಾರೂ ಮಾತನಾಡದೆ ಹೋದರೆ ಅಲ್ಲಿಂದೆದ್ದರು ಇನ್ನೊಂದು ಡಬ್ಬಿಗೆ ಹೋದರು ಅದು ಮತ್ತೂ ಕಿಕ್ಕಿರಿದ ಡಬ್ಬಿ ಯಾವನನ್ನಾದರೂ ಪ್ರೇರಿಸಿ, ಅವನ ಹೆಮ್ಮೆಯನ್ನು ಉಬ್ಬಿಸಿ, ಅವನ ತೊಡೆಯ ಮೇಲೆಯೇ ಜಾಗವನ್ನು ಗಳಿಸಿ ಮಾತನಾಡ ತೊಡಗಿದರು. ಅವನಾರೋ, ಇವರಾರೋ–ಪರಸ್ಪರ ಸಂಬಂಧವಿರುವ ವಿಷಯವಾವುದೋ! ಆದರೆ ಅವರೊಳಗೆ ಗಹನ ವಿಷಯ ಚರ್ಚೆಗೆ ಕಡಿಮೆಯಿಲ್ಲ ಮಾತಿನ ರೀತಿ ಕಂಡರೆ ಅರುವತ್ತು ವರ್ಷ ಅವಳಿಜವಳಿಯಾಗಿ ಬಳೆಕ ಮಕ್ಕಳಂತೆ ಕಾಣಬೇಕು ಆ ಬೆಪ್ಪನೇನಾದರೂ 'ನಮ್ಮೂರಲ್ಲಿ ಹೈದ್ರಲ್ಲಿ ಕಟ್ಟಿದ ಹಾಳು ಗುಡಿಯಿದೆ' ಎಂದರೆ ತೀರದು ಹೈದ್ರಲ್ಲಿ ಗುಡಿ ಕಟ್ಟಿದಾಗಲೇ ಅದು ಹಾಳಾಗಿತ್ತು, ಹಾಳಾದ ಮೇಲೆ ಅದನ್ನು ಕಟ್ಟಿದನೇ, ತಾನು ಹಾಳಾದ ಮೇಲೆ ಅದನ್ನು ಕಟ್ಟಿದನೇ, ಅದು ಹಾಳಾದ ಮೇಲೆ ತಾನು ಕಟ್ಟಿದನೇ ಎಂಬ ಎಲ್ಲಾ ಕೂಲಂಕಷ ತಿಳಿದ ಮುಂದಿನ ವರುಷ ಖಂಡಿತವಾಗಿಯೂ ಅಲ್ಲಿಗೆ ಹೋಗಿ ಆ ಗುಡಿಯನ್ನು ನೋಡಿ ಬರುತ್ತಾರೆ ಗುಡಿಯು ಅಲ್ಲಿ ಇಲ್ಲವಾದರೆ, ಪ್ರಾಯಶಃ ಈ ಒಂದು ವರುಷದಲ್ಲಿ ಸಂಪೂರ್ಣ ಹಾಳಾಯಿತೋ ಏನೋ ಎಂದು ಸಮಾಧಾನ ತಂದುಕೊಂಡಾರು.

ಅವರಿಗೆ ಮನುಷ್ಯರೇ ಗೆಳೆಯರು ಅವರೊಡನೆಯೇ ಮಾತನಾಡಬೇಕೆಂದು ಅವಶ್ಯವಿಲ್ಲ ಹಿಂದೆ ಹೇಳಿದ ಪ್ರಯಾಗಕಾಲದಲ್ಲಿ–ಮನುಷ್ಯರು ಮಾತ್ರರಲ್ಲ, ಬರೇ ಅವರ ಛಾಯೆ ಇದ್ದವರೊಡನೆಯೂ ಮಾತನಾಡಿದ್ದುಂಟು ಅಂಥವರೂ ಸಿಗದಿದ್ದರೆ, ಸರ್ವೆಕಲ್ಲಿಗೋ, ತಂತಿಕಂಭಕ್ಕೋ ಪ್ರಾಣಪ್ರತಿಷ್ಠೆ ಮಾಡಿ ಅದರ ಅಂತರಂಗವನ್ನು ಇಣಿಕಿ ನೋಡಲು ಯತ್ನಿಸಿದ್ದುಂಟು

ರಾಮಯ್ಯನವರ ಗುಂಡಾದ ದೇಹದಲ್ಲಿ, ಅಷ್ಟು ನಯವಾದ ಮೈಯುಳ್ಳ ಮನಸ್ಸಿದೆ ಮೃದುವಾದ ಆತ್ಮವಿದೆ ಆ ಜೀವನದ ವಿಷಯವಾಗಿ ನನಗೊಂದೇ ಬೇಸರ ಎಲ್ಲಾದರೂ ಒಂದು ವೀಣೆಯ ಬುರುಡೆಯಾಗಿ ಹುಟ್ಟಬೇಕಾದ ಆ ಜೀವ ಎಲ್ಲೆಲ್ಲೋ ಕಾಡು ಹಳ್ಳಿಯ ಮನುಷ್ಯ ಬಳಗದಲ್ಲಿ ಹುಟ್ಟಿ ಅಲ್ಲೇ ಸಿಲುಕಿತೆಂದು

೮ನೇ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತು.

ರಾಷ್ಟ್ರಸಭಾಧಿಪತಿ ಬಾಬೂ ರಾಜೇಂದ್ರ ಪ್ರಸಾದರು ಪರಿಷತ್ತಿಗೆ ಚಿತ್ತೈಸುವರು.

ಬೆನಾರಿಸಿನ ಸನ್ಮಾನ್ಯ ಕಾಂಗ್ರೆಸ್ ಮುಖಂಡ ಶ್ರೀ ಶ್ರೀ ಪ್ರಕಾಶ, ಎಮ್ ಎಲ್ ಎ ಯವರು ಅಧ್ಯಕ್ಷತೆ ವಹಿಸುವರು ಅಖಿಲ ಕರ್ನಾಟಕದ ಮುಖಂಡರೆಲ್ಲಾ ಬರುವರು ಪರಿಷತ್ತು ಮೇ ತಾ ... ... ರಲ್ಲು ಮಂಗಳೂರಿನ ರಾಮಕೃಷ್ಣ ವಿದ್ಯಾರ್ಥಿಭವನದ ಮನೋಹರ ಸ್ಥಳದಲ್ಲಿ ಜರಗುವುದು ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಅತ್ಯಲ್ಪ ವೆಚ್ಚದಿಂದ ಸರ್ವಾನುಕೂಲತೆ ಇರುವುದು

ಧಾರವಾಡ ಹುಬ್ಬಳ್ಳಿ, ಕಾರವಾರ ಬಳ್ಳಾರಿ ಮೈಸೂರು, ಬೆಂಗಳೂರು , ಮುಂಬಾಯಿ ಮೊದಲಾದ ಕರ್ನಾಟಕ ಬೇರೆ ಬೇರೆ ಪ್ರಮುಖ್ಯ ಭಾಗಗಳಿಂದ ಹೆಚ್ಚು ಕಡಿಮೆ ತಾಸುಗಳೊಳಗೆ ಒರಲು ರೈಲೇ ಬಸ್ಸು, ಸ್ಟೀಮರು ಅನುಕೂಲತೆಯಿದೆ ಈ ಸಂದರ್ಭದಲಿ ಅಖಿಲ ಕರ್ನಾಟಕ ಸ್ತ್ರೀಯರ ಪರಿಷತ್ತೇ ಮೊದಲಾದ ಹಲವು ಪರಿಷತ್ತುಗಳನ್ನು ಜರಗಿಸುವ ಏರ್ಪಾಡು ನಡೆಯುತ್ತಿದೆ

ರಾಜಕೀಯ ಪರಿಷತ್ತಿನ ಸಿದ್ಧತೆಯು ಉತ್ಸಾಹದಿಂದ ನಡೆದಿದೆ ಇಷ್ಟರಲ್ಲೇ ೩೦೦ ಮಂದಿ ವರೆಗೆ ಸ್ವಾಗತ ಕಮಿಟಿ ಸದಸ್ಯರಾಗಿ ಸೇರಿರುವರು ರೂ. ೨೦೦೦ ಸಂಗ್ರಹವಾಗಿರುವುದು.

ರಾಷ್ಟ್ರ ಸಭೆಯ ಕೆಲಸದಲ್ಲಿ ಕರ್ನಾಟಕ ಪ್ರಾಂತಗಳಿಗಿಂತ ಹಿಂದಿರದೆ ಮುಂದೆಯೇ ಇದೆಯೆಂದು ರಾಷ್ಟ್ರ ನಾಯಕರ ಅಭಿಪ್ರಾಯ ಆಗಿರುವ ಈ ಸಂದರ್ಭದಲ್ಲಿ ಸ್ಥಿರ ಪಡಿಸಬೇಕಾದರೆ ರಾಷ್ಟ್ರಾಭಿಮಾನದಲ್ಲಿ ದಕ್ಷಿಣ ಹಿಂದೂಸ್ಥಾನವು ಉತ್ತರಕ್ಕೆ ಸರಿಮಿಗಿಲೆನಿಸಿದೆಯೆಂಬುದನ್ನು ಉತ್ತರದವರಾದ ಮಾನ್ಯ ಅಧ್ಯಕ್ಷರ ಮನಗಾಣಿಸಬೇಕಾದರೆ, ಕರ್ನಾಟಕದ ಬೇರೆ–ಬೇರೆ ಭಾಗಗಳು ಯಾವ ಮೂಲೆ ಗುಂಪಿನಲ್ಲಿ ಒಡೆದು ಬಿದ್ದಿದ್ದರೂ ಅಖಿಲ ಕರ್ನಾಟಕ ಭಾವವು ದಿನೇ ದಿನೇ ಕಳೆಗೊಂಡು ಬೆಳೆಯುತ್ತಿರುವುದೆಂಬ ದನ್ನು ವ್ಯಕ್ತಪಡಿಸಬೇಕಾದರೆ, ಬೆಲ್ಗಾಂವ್, ಧಾರವಾಡ, ಬಿಜಾಪುರ, ಬಳ್ಳಾರಿ, ಕಾರವಾರ, ಮೈಸೂರು, ಕೊಡಗು ಮುಂಬಾಯಿ ಮೊದಲಾದ ಕರ್ನಾಟಕದ ಬೇರೆ ಬೇರೆ ಭಾಗಗಳ ಕನ್ನಡಿಗರೆಲ್ಲಾ ಪರಿಷತ್ತಿನ ಪ್ರತಿನಿಧಿಗಳಾಗಿಯೂ ಪ್ರೇಕ್ಷಕರಾಗಿಯೂ ತಂಡೋಪತಂಡವಾಗಿ ಬಂದು ಪರಿಷತ್ತನ್ನು ಜಯಶೀಲಗೊಳಿಸಬೇಕು ಕನ್ನಡಿಗರ ಹೆಸರು ಮೆರೆಸಬೇಕು ಕರ್ನಾಟಕದ ಕೀರ್ತಿ ಬೆಳಗಬೇಕು.

ಪ್ರಕಟಿಸಿದವರು ಕಾರ್ಯದರ್ಶಿ, ಸ್ವಾಗತ ಸಮಿತಿ.

ಮುಂಬಾಯಿಯಲ್ಲಿ ಅಖಿಲಕರ್ನಾಟಕ ಸಮ್ಮೇಳನ ಜರಗುವುದೆ!

ರಾಷ್ಟ್ರೀಯ ಕರ್ನಾಟಕ ವರ್ತಮಾನ ಸಂಗ್ರಹಕಾರರ ಮನವಿ.

ಕರ್ನಾಟಕ ಬಂಧುಭಗಿನಿಯರೇ—

ಮುಂಬಾಯಿ ಪಟ್ಟಣವು ಮಹಾರಾಷ್ಟ್ರ ದೇಶಗಳಲ್ಲಿ ಒಂದಾಗಿ ಪ್ರಸಿದ್ಧಪಟ್ಟಿರುತ್ತದೆ. ಕರ್ನಾಟಕ ಪ್ರಾಂತಗಳಿಂದ ಕನ್ನಡಿಗರು ಮುಂಬಾಯಿ ಪಟ್ಟಣಕ್ಕೆ ಕ್ರಿಸ್ತಶಕ ೧೮೭೫ನೇ ಇಸವಿಯಿಂದ ಬಂದು ಉಳಕೊಳ್ಳಲಿಕ್ಕೆ ಆರಂಭಿಸಿದರು ಎಂದು ಮುಂಬಾಯಿ ಪಟ್ಟಣದ ಇತಿಹಾಸಗಳಿಂದ ತಿಳಿದುಬರುತ್ತದೆ. ಆ ಸಮಯ ಮುಂಬಾಯಿಯಲ್ಲಿ ಬೇರೆ ಬೇರೆ ದೇಶಗಳಿಂದ ಬಂದ ಜನರು ಇಲ್ಲಿಯೇ ವಸತಿಮಾಡಿಕೊಂಡರು. ಮುಂಬಾಯಿ ಇಲಾಖೆಗೆ ಸಂಬಂಧಪಟ್ಟ ಗುಜರಾಥಿ ದೇಶಗಳಿಂದ ಗುಜರಾಥಿ ಜನರೂ ವಾಣಿ ಜಾತಿಯವರೂ, ಮಹಾರಾಷ್ಟ್ರ ಪ್ರಾಂತ್ಯಗಳಿಂದ ಮರಾಠಿಯವರೂ ವ್ಯಾಪಾರವಹಿವಾಟದ ಉದ್ದೇಶ ಬಂದು ಇಲ್ಲಿಯೇ ತಮ್ಮ ತಮ್ಮ ಮನೆಮಾರುಗಳನ್ನು ಕಟ್ಟಿಕೊಂಡು ನಿಂತರು. ಅವರವರ ಭಾಷೆಗೆ ಅನುಸಾರವಾಗಿ ಗುಜರಾಥಿ, ಮರಾಠಿ, ಉರ್ದು ಮೊದಲಾದ ವರ್ತಮಾನ ಪತ್ರಿಕೆಗಳು ಪ್ರಚಾರಕ್ಕೆ ಎದ್ದವು. ಸರ್ವಸಾಧಾರಣ ಗುಜರಾಥಿಯೂ ಮರಾಠಿಯೂ ವೃದ್ಧಿಯಾಗುತ್ತಾ ಬಂದುವು. ಕಾಲಚಕ್ರವು ತಿರುಗುತ್ತಾ ಇರುವಾಗ್ಗೆ ಮುಂಬಾಯಿ ಇಲಾಖೆಗೆ ಒಳಪಟ್ಟ ಹುಬ್ಬಳ್ಳಿ, ಧಾರವಾಡ, ಶೋಲಾಪುರ, ಬಿಜಾಪುರ, ಬೆಳಗಾಂವಿ, ಉತ್ತರ ಕನ್ನಡ ಮುಂತಾದ ಕನ್ನಡ ಪ್ರದೇಶಗಳಿಂದಲೂ ಮದರಾಸು ಇಲಾಖೆಗೆ ಸಂಬಂಧಪಟ್ಟ ದಕ್ಷಿಣಕನ್ನಡ ಮೈಸೂರು ಸ್ಟೇಟ್, ಬಳ್ಳಾರಿ, ಅನಂತಪುರ, ಕಡಪಾ, ಕರ್ನೂಲು ಜಿಲ್ಲೆಗಳಿಂದ ಕರ್ನಾಟಕ ದೇಶದ ಜನರೂ ಹೆಚ್ಚಾಗಿ ಮುಂಬಾಯಿಗೆ ಬಂದು ವಾಸಿಸುವುದಕ್ಕೆ ಶುರುಮಾಡಿದರು. ಕರ್ನಾಟಕ ದೇಶಗಳಿಂದ ಬಂದ ಜನರೆಲ್ಲಾ ಮುಂಬಾಯಿಯಲ್ಲಿ ದೃಢವಾಗಿ ನಿಂತು, ಮರಾಠಿ ಭಾಷೆಯನ್ನೂ ಗುಜರಾಥಿ ಭಾಷೆಯನ್ನೂ ಕಲಿತು ತಮ್ಮ ಮಾತೃಭಾಷೆಯಾದ ಕನ್ನಡವನ್ನು ಸಂಪೂರ್ಣ ಮರೆತುಬಿಟ್ಟರು. ಈಗ ಮುಂಬಾಯಿಯಲ್ಲಿ ಸರ್ವಸಾಧಾರಣವಾಗಿ ನೂರು ಸಾವಿರದ ಜನಸಂಖ್ಯೆಯ ಮೇಲೆ ಇರುವರೆಂದು ಮುಂಬಾಯಿ ಸೆನ್ಸಸ್ ಕಮಿಟಿಯ ರಿಪೋರ್ಟಿನಿಂದ ತಿಳಿದುಬಂದಿದೆ. ಕರ್ನಾಟಕ ದೇಶದಿಂದ ಬಂದ ಜನಾಂಗದ ಪೈಕಿ ಮೊಗವೀರ ಜಾತಿಯವರು ಇಲ್ಲಿ ಕನ್ನಡಭಾಷೆಯು ಇಲ್ಲದ್ದನ್ನು ನೋಡಿ ಅವರ ಜಾತಿಯ ಏಳಿಗೆಯಗೋಸುಗ ೧೯೦೪ರಲ್ಲಿ 'ಮೊಗವೀರ ವ್ಯವಸ್ಥಾಪಕ ಮಂಡಳಿ' ಎಂದು ಹೆಸರಿಟ್ಟು ಒಂದು ಸಹಾಯಕ ಸಮಿತಿಯನ್ನು ಸ್ಥಾಪಿಸಿದರು. ಅವರ ಜಾತಿಯ ಹುಡುಗಹುಡುಗಿಯರಿಗೋಸ್ಕರ "ಮೊಗವೀರ ಧರ್ಮಾರ್ಥ ರಾತ್ರಿಶಾಲೆ"ಯನ್ನು ಏರ್ಪಡಿಸಿದರು ಮತ್ತು ಈ ಮೂಲಕ ಕನ್ನಡಭಾಷೆಯ ಸೇವೆಯನ್ನು ಇಂದಿನವರೆಗೂ ಮಾಡುತ್ತಿರುವರು. ಈ ಮೇಲೆ ಹೇಳಿದ ಸಂಸ್ಥೆಯು ಅಭಿವೃದ್ಧಿಯಾಗುತ್ತ ಬರುವಾಗ ಬಿಲ್ಲವ ಜಾತಿಯವರು 'ಬಿಲ್ಲವರ ಎಸೋಸಿಯೇಶನ್' 'ಬಂಟರ ಯಾನೆ ನಾಡವರ ಸಂಘ' 'ವಿದ್ಯಾದಾಯಿನಿ ಸಭಾ' 'ಬಿಲ್ಲವರ ಲಿಟರರಿ ಯೂನಿಯನ್' 'ಕರ್ನಾಟಕ ಫ್ರೆಂಡ್ಸ್ ಯೂನಿಯನ್' ಕ್ರಮೇಣ ಒಂದಕ್ಕೊಂದು ಸ್ಥಾಪಿತವಾಗಿ ಕರ್ನಾಟಕ ಭಾಷೆಯ ಸೇವೆಯನ್ನು ಮಾಡುತ್ತಿರುವರಲ್ಲದೆ-ಬಿಲ್ಲವರ ಎಸೋಸಿಯೇಶನ್‌ನವರು ಧರ್ಮಾರ್ಥ ರಾತ್ರಿಶಾಲೆಯನ್ನು ತೆರೆದು ಕಡೆಗೆ ಹೈಸ್ಕೂಲನ್ನಾಗಿ ಮಾಡಿದರು. ಹೀಗೆ ವಾಚನಾಲಯಗಳಿಂದಲೂ ಶಾಲೆಗಳಿಂದಲೂ ಕರ್ನಾಟಕ ಭಾಷೆಗೆ ಪ್ರೋತ್ಸಾಹ ಕೊಡುತ್ತಿರುವರು. ಇವರಿಗಿಂತ ಮೇಲ್ತರಗತಿಯವರು ಹೆಚ್ಚಾಗಿ ಮರಾಠಿಭಾಷೆಯ ವರ್ತಮಾನವನ್ನು ಪ್ರೋತ್ಸಾಹದಿಂದ ಕಲಿತು ಮಾತೃಭಾಷೆಯಾದ ಕನ್ನಡಕ್ಕೆ ತೀವ್ರ ತಿಲಾಂಜಲಿಯನ್ನು ಕೊಟ್ಟು—ನಾವು ಕನ್ನಡಿಗರಲ್ಲ, ನಾವು ಮಹಾರಾಷ್ಟ್ರದವರೇ ಎಂದೆಣಿಸಿಕೊಳ್ಳುತ್ತಿರುವರು. ಇಲ್ಲಿ ಮರಾಠಿ ಗುಜರಾತಿ ಪತ್ರಿಕೆಗಳ ಪೈಕಿ ಕೆಲವು ಪತ್ರಿಕೆಗಳು ದುಡ್ಡು ಸುಲಿಗೆ ಮಾಡುವುದಕ್ಕೋಸ್ಕರ ಅಮೇರಿಕನ್ ಕೋಟನ್ ಫಿಗರ್, ಸಟ್ಟಾ ಆಡುವುದು, ಕುದುರೆ ಜೂಜಾಟ ಇವುಗಳ ಪ್ರಚಾರಗಳಿಂದ ಜನರ ಮನಸ್ಸನ್ನು ನಿಜವಾಗಿಯೂ ಹುಚ್ಚರನ್ನಾಗಿ ಮಾಡಿರುವುವೆಂದು ತಿಳಿಸಲು ವಿಷಾದಪಡುತ್ತೇವೆ. ಈ ದುಸ್ತರದಿಂದ ಈ ಕೆಟ್ಟ ಅಭ್ಯಾಸಗಳಿಂದ ದೂರಪಡಿಸುವುದಕ್ಕೂ ಎಲ್ಲಾ ಜಾತಿಯ ಐಕ್ಯತೆಯನ್ನುಂಟುಮಾಡಿಸುವುದಕ್ಕೂ ಕನ್ನಡಿಗರಿಗಾಗಿಯೇ ೧೯೩೦ನೇ ಇಸವಿಯಲ್ಲಿ ದಿ ನೇಶನಲ್ ಕೆನರಾ ನ್ಯೂಸ್ ಏಜನ್ಸಿ ಎಂಬ ಸಂಸ್ಥೆಯು ಸ್ಥಾಪಿತವಾಯಿತು. ಈ ಸಂಸ್ಥೆಯು ಸ್ಥಾಪಿತವಾದಂದಿನಿಂದ ಇಂದಿನವರೆಗೂ ತೀರ ಬಡಸ್ಥಿತಿಯಲ್ಲಿರುತ್ತದೆ. ಇದರ ಕಷ್ಟವನ್ನು ಅರಿತ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆಯನ್ನು ನಡೆಸುವವರು ಪ್ರೋತ್ಸಾಹಕೊಟ್ಟು ಇಂದಿನವರೆಗೂ ಪ್ರೋತ್ಸಾಹಿಸುವರು. ಕನ್ನಡಿಗರಾದ ಮೈಸೂರು ದೇಶದಿಂದ ಬಂದವರು ಮೈಸೂರು ಎಸೋಸಿಯೇಶನ್ ಎಂಬ ಸಂಸ್ಥೆ ಮಾಟುಂಗದಲ್ಲಿಯೂ, ಸಾರಸ್ವತ ಎಸೋಸಿಯೇಶನ್ ಎಂಬ ಸಂಘವು ಗ್ರಾಮದೇವಿಯಲ್ಲಿಯೂ, ಸಾರಸ್ವತಕೊಲೋನಿ ಎಂಬ ಸಂಸ್ಥೆಯು ಸಾಂತಾಕ್ರೂಸ್‌ನಲ್ಲಿಯೂ ಏರ್ಪಡಿಸಿದರು. ಕನ್ನಡಿಗರಾದ ಗೌಡ ಸಾರಸ್ವತರು 'ಗೌಡ ಸಾರಸ್ವತ ಎಸೋಸಿಯೇಶನ್' 'ಗೌಡ ಸಾರಸ್ವತ ಹೌಸಿಂಗ್ ಸೊಸೈಟಿ'ಯನ್ನೂ ಕನ್ನಡ ರೋಮನ್ ಕ್ರೈಸ್ತರು ಕೆನರಾ ಕೆಥೊಲಿಕ್ ಎಸೋಸಿಯೇಶನ್ ಎಂಬ ಸಂಸ್ಥೆಯನ್ನೂ ಸ್ಥಾಪಿಸಿದರು. ಮೇಲೆ ಹೇಳಿದ ಉಚ್ಚತರಗತಿಯ ಸಂಘಗಳು ಈ ಸಂಘಕ್ಕೆ ಸೇರಿದ ಮೆಂಬರುಗಳಿಗೆ ಕನ್ನಡ ಗೊತ್ತಿದ್ದರೂ ಕೂಡಾ ಕನ್ನಡಕ್ಕೆ ಧಿಕ್ಕಾರಮಾಡಿ ಮರಾಠಿ ಭಾಷೆಯನ್ನು ಇಂದಿನವರೆಗೂ ಪ್ರೋತ್ಸಾಹಿಸುವರು. ಇದನ್ನು ಕಂಡು ಕನ್ನಡ ಭಾಷೆಯೊಂದಿಗೆ ದೂಳಿಗೆ ಸಮಾನವಾಗಿ ಸಂಪೂರ್ಣ ಮುಚ್ಚಿಮರೆಯಾಗುತ್ತದೆಂದೆಣಿಸಿ ಕೆಲವು ಪ್ರಮುಖ ಕನ್ನಡಿಗರು ಕೂಡಿ ಒಂದು ಸಭೆಯನ್ನು ೧೯೩೨ನೇ ಇಸವಿಯಲ್ಲಿ ಕೂಡಿ ೧೯೩೩ರಲ್ಲಿ 'ಕರ್ನಾಟಕ ಎಸೋಸಿಯೇಶನ್' ಎಂಬ ಸಂಸ್ಥೆಯು ತಲೆದೋರಿತು. ಕೆಲವು ಪ್ರಮುಖರ ಸಾಧನೆಗಳಿಂದ ಬೊಂಬಾಯಿ ಮುನಿಸಿಪಾಲಿಟಿ ಎಜ್ಯುಕೇಶನಲ್ ಕಮಿಟಿಯವರಿಗೆ ಅರ್ಜಿಮಾಡಿ ಹೇಗಾದರೂ ಕನ್ನಡಿಗರ ಬಾಲಬಾಲಿಕೆಯರಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡಲು ಒಂದು ಹಗಲು ಪ್ರಾಥಮಿಕ ಧರ್ಮಾರ್ಥ ಶಾಲೆಯನ್ನು ಏರ್ಪಡಿಸಿದರು. ಈ ಶಾಲೆಯಲ್ಲಿ ತೀರ ಕನ್ನಡವೇ ಕಲಿಸುತ್ತಾರೆ. ಕನ್ನಡಿಗರಾದ ಕ್ರೈಸ್ತ ಭಗಿನಿಯರ ಅಧ್ಯಾಪಕತ್ವದಿಂದಲೇ ನಡೆಸಿ ಈ ರೀತಿಯಲ್ಲಿ ಕನ್ನಡವನ್ನು ಪ್ರಚಾರಮಾಡಲಿಕ್ಕೆ ಶುರುಮಾಡಿರುವರು. ಹುಬ್ಬಳ್ಳಿ, ಧಾರವಾಡ, ಬೆಳಗಾಂವಿ ಜಿಲ್ಲೆಯವರು ಒಟ್ಟಾಗಿ ಸೇರಿ ಗಿರಗಾಮಿನಲ್ಲಿ 'ಕರ್ನಾಟಕ ಸಂಘ' ಎಂಬ ಮತ್ತೊಂದು ೧೯೩೩ರಲ್ಲಿ ಸ್ಥಾಪಿಸಿದರು. ಈ ಎಲ್ಲಾ ಕನ್ನಡ ಸಂಘಗಳ ಪ್ರಮುಖರನ್ನು ಕರೆದು ರಾವ್ ಬಹದ್ದೂರ್ ಎಸ್. ಟಿ. ಕಂಬಳಿ, (ಎಜ್ಯುಕೇಶನಲ್ ಮಿನಿಸ್ಟರ್)ರವರ ಅಧ್ಯಕ್ಷತೆಯಲ್ಲಿ ಗಿರಗಾಂ ಬೇಕ್ ರೋಡ್ ಪ್ರೋಗ್ರೆಸ್ ಗುಜರಾಥಿ ಗರ್ಲ್ಸ್ ಸ್ಕೂಲಿನ ಹೋಲಿನಲ್ಲಿ ಸಭೆಕೂಡಿ ಅಖಿಲ ಕರ್ನಾಟಕ ಸಮ್ಮೇಳನವನ್ನು ಮುಂಬಾಯಿಯಲ್ಲಿ ಇದೇ ಬರುವ ಡಿಸೆಂಬರ ತಿಂಗಳ ಒಳಗೆ ಶೀಘ್ರದಲ್ಲಿಯೇ ಕರೆಯಿಸಬೇಕೆಂದು ಕೆಲವು ಠರಾವುಗಳನ್ನು ಪಾಸು ಮಾಡಿರುವರು. ಆದುದರಿಂದ ಮುಂಬಾಯಿಯಲ್ಲಿರುವ ಸಮಸ್ತ ಕನ್ನಡಿಗರೆಲ್ಲರೂ ಇದಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಟ್ಟು ಮುಂಬಾಯಿಯಲ್ಲಿ ಜರಗುವಂಥ ಸಮ್ಮೇಳನಕ್ಕೆ ಭಾಗಿಗಳಾಗಿ ಈ ಮಹತ್ತಾದ ಕಾರ್ಯವನ್ನು ಸಾಂಗವಾಗಿ ನೆರವೇರಿಸುವರಾಗಿ ನಾವೆಲ್ಲರೂ ನಿವೇದಿಸುತ್ತೇವೆ.

ತಿಬ್ರೂರ್ಕರ್.

ಉತ್ತರ ೫.

ತಾ. ೨೯-೩-೩೫ನೇ ಉತ್ತರದ ವಿ. ಸೂಚನೆಗಳಿಗೆ ಉತ್ತರ:—

ವಿ. ಸೂ. ನಂಬ್ರ ೫೬ಕ್ಕೆ ಉತ್ತರ—ತತ್ಸಂಬಂಧವಾದ ಸಂಪ್ರದಾಯ ಎಂದರೆ ಅದಕ್ಕಾಗಿ ಹೇಗಿರಬೇಕೋ ಹಾಗಿರೋಣವೆಂದೂ, 'ಸುಧಾರಣೆ' ಎಂದರೆ ತಿದ್ದುಪಡಿ ಎಂದೂ ಅರ್ಥ ವಿವರ. ವಿ. ಸೂ. ೬, ೭, ೮, ೯ ಇವುಗಳಿಗ ವಿಷಯಾಂತರದಲ್ಲಿರುವ. ಆದರೂ—ಒಟ್ಟನು 'ಮಾನವ ಸಮಾಜದಲ್ಲಿ ವಿವಾಹ ಸಂಸ್ಕಾರ ಬಂದರೆ ಸರ್ವತ್ರ ವ್ಯಭಿಚಾರವೇ ಪ್ರಾಪ್ತಿ'—ಎಂದನೆಂದರೆ—ಇದನ್ನು ಆಧಾರಬದ್ಧವಾಗಿ ಹೇಳಬೇಕೆ? ಸಾಧ್ಯವೇ? ವಿ. ಸೂ. ೧೧ ಇದೂ ವಿಷಯಾಂತರ. ವಿ. ಸೂ. ೧೩ ತರಬೇತಿಗಾಗಿ ಎಂಬುದೇ ಕಾರಣ. ವಿ. ಸೂ. ೧೪ ಇದನ್ನು ನಿರ್ಣಯಿಸುವುದು ಅಸಾಧ್ಯ. ಅಷ್ಟರ ಯೋಗ್ಯತಾನುಕೂಲತೆ ನನ್ನಲ್ಲಂತೂ ಇಲ್ಲ ಖಂಡಿತ. ವಿ. ಸೂ. ೧೫ ಎಲ್ಲೆಲ್ಲಿಯೂ ಧರ್ಮವೆಂಬುದಕ್ಕೆ ಅರ್ಥ ಧರ್ಮವೆಂದೇ. ವಿ. ಸೂ. ೧೭ ಇದು ಸಂಸ್ಕಾರದ ನಿರರ್ಥಕತೆಯ ಪ್ರತಿಪಾದನೆ. ಎಷ್ಟೆಂದರೂ ಹಸಿವೆಯೆಡಗದ ವಿಲಕ್ಷಣ ವ್ಯಕ್ತಿಯೊಬ್ಬನಿದ್ದರೆ ಆತನು ನರಳುವುದಲ್ಲ, ನರಳಿ ನರಳಿ ಸತ್ತರೂ ಚಿಂತಿಲ್ಲ. ವಿ. ಸೂ. ೩೦, ೩೧ ಇಲ್ಲೀಗ ತಮ್ಮ ವಿಮರ್ಶೆಯು ವಿಚಾರ ಮತ್ತು ಸಹನೆಯ ಮೇರೆಯನ್ನು ಮೀರಿ ಸರಿದಿದೆ. ಸಮಾಧಾನವಿಲ್ಲದ ವಿಚಾರಿಯು ಎಲ್ಲೆಲ್ಲೂ ಗಲಿಬಿಲಿಯಲ್ಲಿ ಬೀಳುವುದುಂಟು. ಕೇವಲ ವಿರಕ್ತಿಯಲ್ಲಿ ಮುಳುಗಿರಬೇಕೆಂದು ಶಾಸ್ತ್ರ ಯಾರನ್ನೂ ಹೇಳುವುದಿಲ್ಲ. ವಿ. ಸೂ. ೩೩ 'ಭೂಮಿಯಿಂದ ದೂರಾಗಿರುವಿಳಿ' ಎಂದರೆ? ವಿ. ಸೂ. ೩೪ ನ್ಯಾಯವೇ ಎಂಬುದುತ್ತರ. ವಿ. ಸೂ. ೩೫ ಕಾಣುವುದಿಲ್ಲ. ವಿ. ಸೂ. ೩೭ ಇದೂ ನ್ಯಾಯವೇ ಪ್ರಕೃತಿ ನಿಯಮದ ಎದುರಾಟ ವ್ಯರ್ಥ. ವಿ. ಸೂ. ೪೨ ಹಾಗಲ್ಲ, ಅನುಯಾಯಿಗಳಿಂದ ಸಂಗ್ರಹವಾಗಿದೆಂದು. ವಿ. ಸೂ. ೪೫ ಇಂದು ಕೂಡಾ ಹಾಗೆಯೆ ಅನ್ನುವೆನು. ಸಮಾಜದ ಅಧಿಪತಿಗಳು ಗುರುಗಳು ಎಂದೇ. ವಿ. ಸೂ. ೪೦ ಪ್ರಕೃತ ಇದೊಂದೆ ಅತ್ಯಾವಶ್ಯವೆಂದಾದರೆ ವಿವರಿಸುವೆನು. ವಿ. ಸೂ. ೪೧ ಹಿರಿಯರ ಕಟ್ಟಳೆಯಂತೆ ನಡಕೊಂಡುಂಟು ಮತ್ತೊಂದಿಲ್ಲ. ವಿ. ಸೂ. ೪೩ ಮಾನವ ಪ್ರಪಂಚಕ್ಕೂ ಶಿಷ್ಟಾಚಾರಕ್ಕೂ ಸಂಬಂಧ ಉಂಟು. ವಿ. ಸೂ. ೪೪ ಹಾಗಲ್ಲ ಇತರ ಎಲ್ಲಾ ರೀತಿಗಳಿಂದ ಹಾಳಾಗುತ್ತಿರುವಾಗ ಇದೊಂದು ಮಹತ್ವದ್ದಲ್ಲವೆಂದೇ ನನ್ನ ವಾದ. ವಿ. ಸೂ. ೪೪ ನನಗೆ ಸೂಚಿಸುವುದಿಲ್ಲ. ವಿ. ಸೂ. ೪೫ ನ್ಯೂನತೆಗಳು ಸಂಭವಿಸದ ಸಂಸ್ಥೆಗಳೇ ಇಲ್ಲವೆಂದೇ ಸ್ಪಷ್ಟ ಉತ್ತರ. ವಿ. ಸೂ. ೪೭ ಉಂಬಳಿಗಳ ಉಪಭೋಗವೇ ಆಧಾರ. ವಿ. ಸೂ. ೫೩ ನೋಡಿದೆನು. ಗಲಿಬಿಲಿ ಹೊಂದಲಿಲ್ಲ. ವಿ. ಸೂ. ೬೦ ಇಲ್ಲಿಯೂ ವಿಷಯಾಂತರ ಪ್ರವೇಶ ಮಾಡಬೇಕಾಗುವುದು. ಸಾಮಾಜಿಕರಂಗದಿಂದ ರಾಜಕೀಯ ರಂಗಕ್ಕೆ ಹಾರಲು ಮನಸಿಲ್ಲ. ಅಸಾಧ್ಯ—

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ, ಅವರ ಮುಟ್ಟಿನದೋಷ ಆ ಸಮಯದಲ್ಲಿ ಕಾಣಬರುವ ಹೊಟ್ಟೆನೋವು ಸೊಂಟ ಹಿಡಿತ, ಗಂಟುನೋವು, ಮೈಯಲ್ಲಿ ದಡಿಕೆಬೀಳುವುದು, ಬಿಳೇ ಸೆರಗು, ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ಮುಟ್ಟಾಗುವಿಕೆ, ಬಂಜೆತನ, ಸಾಧಾರಣ ಕ್ಷಯವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ.

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ. ಎ. ಲಾಹೋರ್ 'I found your Ladies balm worth the money I spend on it'

ಯಾವ ತರದ ಔಷಧಿಯಿಂದಲೂ ಬಹಿಷ್ಟೆಯ ಅಕ್ರಮವನ್ನು ಹೋಗಲಾಡಿಸಲು ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿರಿ. ಒಂದು ತಿಂಗಳ ಔಷಧಿಯಿರುವ ಶೀಸೆಗೆ ರೂ ೩—೦—೦ ವಿ. ಪಿ. ಖರ್ಚು ೦—೮—೦

ತಯಾರಿಸುವವರು —ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.

ಏಜಂಟರು—ಪ್ರಭಾ ಕಂಪೆನಿ, ೧ ಕ್ರೋಲೇಜು ಎದರು ಮಂಗಳೂರು

Old! *Famous!*

East & West Insurance Co., Limited.

Bonus Declared Rs 15/- Per Thousand Per Annum

Insurance in Force About	Rs. 90,00,000
Annual Premium Income Over	Rs. 4,50,000
Life Fund Over	Rs. 7,00,000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest influential gentlemen

Inquiries Solicited —
Messrs Padubidri Bros, *Chief Agents*, PADUBIDRI BOMBAY

OR

Head Office
East & West Buildings, Apollo Street, Fort Bombay



"ಹುಟ್ಟಬೇಕಾದರೆ ಸಾಯಲೇ ಬೇಕು. ಮೊದಲು ಪ್ರಳಯವಾಗಬೇಕು. ಆ ಮೇಲೆ ಸೃಷ್ಟಿಯಾಗುತ್ತದೆ ಇದು ಪ್ರಕೃತಿ ನಿಯಮ. ಇದನ್ನುಲ್ಲಂಘಿಸಲು ಅಸಾಧ್ಯ."

ಡಾ। ರವೀಂದ್ರನಾಥ ಠಾಗೂರ್

ಎಸ್. ಎಸ್. ಎಲ್. ಸಿ. ಸ್ಕೀಮ್

ಪ್ರಕೃತ ಪ್ರಯೋಗದಲ್ಲಿರುವ ಎಸ್ ಎಸ್ ಎಲ್ ಸಿ ಸ್ಕೀಮನ್ನು ಇನ್ನು ಎರಡು ವರ್ಷಗಳ ವರೆಗೆ ರದ್ದತಿಗೊಳಿಸಿ, ೧೯೩೯ರ ಸ್ಕೀಮನ್ನೇ ಅನುಸರಿಸಬೇಕೆಂದು ಎಸ್ ಎಸ್ ಎಲ್ ಸಿ ಬೋರ್ಡಿನವರು ಮಾಡಿರುವ ನಿರ್ಧಾರವು ಹಲವರನ್ನು ಕಂಗೆಡಿಸಿಬಿಟ್ಟಿದೆ. ಇನ್ನು ಎರಡು ವರ್ಷಗಳಲ್ಲಿ ಈ ವಿಚಾರವಾಗಿ ಪರಾಮರ್ಶೆಯನ್ನು ಮಾಡಿಕೊಳ್ಳಬೇಕೆಂದು ಬೋರ್ಡಿನವರು ಬಗೆದಿದ್ದಾರೆ. ಈ ಸುದ್ದಿಯು ಹರಡಿದಂದಿನಿಂದ ಅಲ್ಲಲ್ಲಿ ಶಾಲಾ ಅಧ್ಯಾಪಕರ ಪರಿಷತ್ತುಗಳು ಜರಗುತ್ತಿವೆ. ಮದ್ರಾಸು ನಗರದಲ್ಲಿನ ಉಪಾಧ್ಯಾಯರು ಒಂದು ಪರಿಷತ್ತನ್ನು ಜರಗಿಸಿ ಬೋರ್ಡಿನ ನಿಷ್ಕರ್ಷೆಗೆ ತಮ್ಮ ಅನುಮತಿಯನ್ನಿತ್ತಿದ್ದಾರೆ. ಅಲ್ಲಿ ಮತ್ತೊಂದು ಉಪಾಧ್ಯಾಯ ಸಮ್ಮೇಳನವು ಜರಗಿ, 'ಅಧಿಕಾರ ವರ್ಗದವರು ಈ ಬಗ್ಗೆ ಪ್ರಕಟಣೆಯನ್ನು ಹೊರಡಿಸಿರದಿರುವುದರಿಂದ ತಾವು ಈ ಬಗ್ಗೆ ನಿರ್ಣಯವನ್ನು ಮಾಡಿಕೊಳ್ಳುವುದು ಅನಗತ್ಯವೆಂದು ಸೂಚಿಸಿರುತ್ತಾರೆ. ಸೌತ್ ಇಂಡಿಯನ್ ಟೀಚರ್ಸ್ ಯೂನಿಯನ್‌ನವರು ಬೋರ್ಡಿನ ಆಲೋಚನೆಯನ್ನು ಪೂರ್ಣವಾಗಿ ಖಂಡಿಸಿ 'ಹೈಸ್ಕೂಲಿನಲ್ಲೂ, ಎಸ್ ಎಸ್ ಎಲ್ ಸಿ ಸ್ಕೀಮಿನಲ್ಲೂ ಈ ರೀತಿಯ ಬದಲಾವಣೆಗಳು ಪದೇ ಪದೇ ಆಗುತ್ತಿರುವುದರಿಂದ ಶಿಕ್ಷಣ ಧೋರಣೆಗೆ ಕೆಡುಕುಂಟಾಗುತ್ತಿದೆ ಎಂದು ಠರಾವು ಮಾಡಿಕೊಂಡಿರುವರು. ಈಗ ಅನುಸರಣೆಯಲ್ಲಿರುವ ಸೂತ್ರಗಳನ್ನು ಬದಲಾಯಿಸಿ ೧೯೩೯ರ ಸೂತ್ರಗಳನ್ನು ಸ್ವೀಕರಿಸುವ ವಿಷಯವು ಅಷ್ಟು ಸಣ್ಣದಾಗಿಲ್ಲ. ಇಂತಹ ಪರಿವರ್ತನೆಯಿಂದ ಶಿಕ್ಷಣ ವ್ಯವಸಾಯವು ಎಷ್ಟು ಕಷ್ಟದಾಯಕವಾಗುತ್ತಿದೆಯೆಂಬುದನ್ನು ಮೊದಲು ಪರ್ಯಾಲೋಚಿಸಿಕೊಳ್ಳಬೇಕಾಗಿದೆ ಅಲ್ಲದೆ ಬೋರ್ಡ್ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರೂ ತಮ್ಮ ಧೋರಣೆಗಳನ್ನು ಬದಲಾಯಿಸುವ ಮೊದಲು ಸಾರ್ವಜನಿಕರ ಮತ್ತು ಸಂಸ್ಥಾನದ ಉಪಾಧ್ಯಾಯರ ಮತವೇನಿರುವುದೆಂದು ಗೊತ್ತುಹಚ್ಚುವುದು ಮುಖ್ಯ ಕರ್ತವ್ಯವಾಗಿದೆ. ಹೀಗಿರುವಾಗ ಅವರು ಮಾಡಿದುದಾದರೂ ಏನು? ಹೈಸ್ಕೂಲುಗಳ ಸ್ಕೀಮ್‌ಗಳನ್ನು ಬದಲಾಯಿಸುವಾಗ ಅಧಿಕಾರಿಗಳು ಶಿಕ್ಷಕರ ಮತ್ತು ಸಾರ್ವಜನಿಕರ ಪೂರ್ಣಾನುಮತಿಯನ್ನು ಪಡೆಯುವುದು ಅವರ ನೈತಿಕ ವರ್ತನೆಗೆ ಗೌರವದಾಯಕವಾಗಿಲ್ಲವೇ? ಸ್ಕೀಮಿನಲ್ಲಿ ಬದಲಾವಣೆಗಳನ್ನು ಮಾಡಲಾಗುವುದಿಲ್ಲವಾದರೆ ೧೯೩೮ರ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳು ಏಳು ವಿಷಯ (Subjects)ಗಳನ್ನು ಕಲಿತರಾಯಿತು. ಆದರೆ ೧೯೩೯ರ ಸೂತ್ರವು ಹೊರಗೆ ಬಂದರೆ ಈ ವಿದ್ಯಾರ್ಥಿಗಳು ಅನೇಕ ವಿಷಯಗಳನ್ನು ಕಲಿತು—ಕಲಿತರಲು—ಮಾಡಿಕೊಳ್ಳುವ ಆವಶ್ಯಕತೆಯು ಇರುತ್ತದೆಂಬುದು ನಿರ್ವಿವಾದ. ೧೯೩೯ರ ಸ್ಕೀಮನ್ನು ಸಂಪೂರ್ಣವಾಗಿ ಒಪ್ಪಿ, ಸ್ವೀಕರಿಸುವವರು ಕಡಮೆ—ಅದರಲ್ಲೂ ಬದಲಾವಣೆಗಳು ಬೇಕಾಗಿವೆಯೆಂದು ಕೇಳಿಕೆಗಳಾಗುತ್ತಿವೆ. ಇಂತೂ ಇಂತೂ ಶಿಕ್ಷಣ ಸಮಸ್ಯೆಯು ನಮ್ಮನ್ನಾ ತಿರೀಕಗಳಿಗೊಳಗಾಗಿದೆ. ಬೋರ್ಡ್, ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರೂ ಸಾರ್ವಜನಿಕರ ಸಲಹೆಗಳನ್ನು ಸ್ವೀಕರಿಸಿ ಮುಂದರಿಯುವುದು ಅತ್ಯಗತ್ಯವಿದೆ

ಫೋರ್‌ಮೊಸಾದಲ್ಲಿ ಭೂಕಂಪ!

ಕಳೆದ ರವಿವಾರ ಫೋರ್‌ಮೊಸಾದಲ್ಲಿ ಭಯಂಕರ ಭೂಕಂಪವುಂಟಾಗಿ೩೦೦೦ ಜನರು ಮೃತರಾದರು. ೧೦,೨೦೦ ಮನೆಮಂದಿರಗಳು ಬಿದ್ದುವು. ೧೧,೦೦೦ ಮನೆಮಠಗಳು ಹಾಳಾಗಿವೆ. ಒಟ್ಟು ೧೦,೦೦೦,೦೦೦ ಯೆನ್‌ಗಳ ನಷ್ಟವು ಉಂಟಾಗಿದೆ. ಮೃತರಲ್ಲಿ ಚೀನೀಯರ ಸಂಖ್ಯೆಯೇ ಹೆಚ್ಚೆಂದು ಜಪಾನೀಸ್ ಗವರ್ನರ್ ಜನರಲರು ಪ್ರಕಟಿಸಿದ್ದಾರೆ. ಜಪಾನಿಗಳು ಸತ್ತುದು ಕಡಮೆ. ಇದೀಗ ಫೋರ್‌ಮೊಸಾವು ಬಾಹ್ಯ ಪ್ರಪಂಚದಿಂದ ದೂರವಾಗಿ ಬಿಟ್ಟಿದೆ. ತಂತಿ ಟಪ್ಪಾಲುಗಳು ನಡೆಯುವುದಿಲ್ಲ. ಅಕ್ಕಿ, ಕಬ್ಬು, ಮೊದಲಾದ ಕೃಷಿಗಳು ಹಾಳಾಗಿ ಬಿದ್ದಿವೆ. ಬಿಹಾರಿನ ಭೂಕಂಪದ ಚಿತ್ರವು ಕಣ್ಣೆದುರು ತೋರುತ್ತಿದೆ. ಅಮೆರಿಕನ್ ರೆಡ್ ಕ್ರಾಸ್‌ನವರು ಸಹಾಯವನ್ನೊದಗಿಸುತ್ತಿರುವರು. ಬ್ರಿಟಿಷರ ಸಹಾನುಭೂತಿಯು ಅತ್ತ ಹೋಗಿದೆ. ಇಂತಹ ರಾಷ್ಟ್ರೀಯ ವಿಪತ್ತಿಗೆ ತುತ್ತಾದ ಫೋರ್‌ಮೊಸಾದ ಜನರಿಗೆ ಪ್ರತಿಯೊಂದು ಸಂಸ್ಥೆಯೂ ಸಹಾಯಧನವನ್ನು ಕಳುಹಿಸಿ ಬಡವರನ್ನು ಬದುಕಿಸಬೇಕಾಗಿದೆ

ಶ್ಲಾಘ್ಯ ಸೂಚನೆಗಳು

ಮದ್ರಾಸ ಪ್ರಾಂತ್ಯದಲ್ಲಿ ಅಕ್ಕಿಯ ಬೆಳೆ ಮತ್ತು ಅದರ ವ್ಯಾಪಾರದ ಕುರಿತಾಗಿ ಕೂಲಂಕಷ ತನಿಖೆ ಮಾಡುವುದಕ್ಕಾಗಿ ಸರಕಾರದವರು ನೇಮಿಸಿರುವ ಸ್ಪೆಶಲ್ ಆಫೀಸರ್ ರಾದ ಶ್ರೀ ಸಿ ಆರ್ ಶ್ರೀನಿವಾಸನವರು ಸಿದ್ಧಪಡಿಸಿದ ವರದಿಯು ಪ್ರಕಟಗೊಂಡಿದೆ. ಅವರು ಅಕ್ಕಿಯ ವ್ಯಾಪಾರದ ಅಭಿವೃದ್ಧಿಯ ದೃಷ್ಟಿಯಿಂದ ಕೆಲವು ಉಪಯುಕ್ತ ಸೂಚನೆಗಳನ್ನು ಕೊಟ್ಟಿರುವರು

(1) ಈ ಪ್ರಾಂತ್ಯಕ್ಕೆ ಆಯಾತವಾಗುವ ಅಕ್ಕಿಯನ್ನು ಪೂರ್ಣವಾಗಿ ತಡೆಗಟ್ಟಬೇಕು (2) ಅಕ್ಕಿಯ ರಫ್ತಿಗಾಗಿ ರೈಲ್ವೆ ದರವನ್ನು ಆದಷ್ಟು ಕಡಮೆ ಮಾಡಬೇಕು (3) ವಿದೇಶಿ ಅಕ್ಕಿಯ ಮೇಲೆ ಭಾರವಾದ ಕರವನ್ನು ಹೊರಿಸಬೇಕು (4) ಅಕ್ಕಿ ತಯಾರಿಸುವವರ ಮತ್ತು ವಿಕ್ರಯಿಸುವವರ ಕೇಂದ್ರಗಳನ್ನು ಸ್ಥಾಪಿಸಬೇಕು, ಅಕ್ಕಿಯ ಮಿಶ್ರಣ ಕಾರ್ಯವನ್ನು ತಡೆಯಬೇಕು (5) ಏಕಪ್ರಕಾರವಾದ ಅಕ್ಕಿಯನ್ನು ಪಡೆದು ನಿರ್ದಿಷ್ಟ ಬೆಲೆಗೆ ವಿಕ್ರಯಿಸಬೇಕು (6) ಅಕ್ಕಿಯ ನಿಶ್ಚಿತ ಬೆಲೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಜನರಿಗೆ ತಿಳಿಸುತ್ತಿರಬೇಕು (7) ಅಕ್ಕಿಯನ್ನು ಸಂಗ್ರಹಿಸಿ ವಿಕ್ರಯಿಸುವುದಕ್ಕಾಗಿ ಕೋ ಒಪರೇಟಿವ್ ಸೊಸೈಟಿಗಳನ್ನು ಸ್ಥಾಪಿಸಬೇಕು (8) ಅಕ್ಕಿಯ ಕೃಷಿಯು ಉತ್ತಮ ರೀತಿಯಿಂದ ನಡೆಯುವಂತೆ ಏರ್ಪಡಿಸಬೇಕು. ಈ ಸಲಹೆಗಳನ್ನೆಲ್ಲ ಸರಕಾರವು ಯಥಾವತ್ತಾಗಿ ಅಂಗೀಕರಿಸಿ ಕಾರ್ಯಕ್ಕೆ ತೊಡಗಿದರೆ ದೇಶದ ಒಂದು ಮಹಾ ಸಮಸ್ಯೆಯು ಸಾರ್ವಜನಿಕರಿಗೆ ಸುಖದಾಯಕವಾಗಿ ಇತ್ಯರ್ಥವಾಗುವುದು. ಮೇಲೆ ಕೊಟ್ಟ ಸೂಚನೆಗಳನುಸಾರವಾಗಿ ಅಕ್ಕಿಯ ವ್ಯಾಪಾರದಲ್ಲಿ ಸುವ್ಯವಸ್ಥೆಯು ಮಾಡಲ್ಪಟ್ಟರೆ, ಕೃಷೀವಲರ ಅನೇಕ ಅನಾನುಕೂಲತೆಗಳೂ ನಷ್ಟಗಳೂ ಪರಿಹಾರಗೊಳ್ಳುವುವೆಂಬುದರಲ್ಲಿ ಭಿನ್ನಾಭಿಪ್ರಾಯಗಳಿರಲಾರವು

ವಿಜ್ಞಾಪನೆ.

ಎಲ್ಲರೂ ಕಾಂಗ್ರೆಸ್ಸಿನ ಸದಸ್ಯರಾಗಿರಿ! ಕಾಂಗ್ರೆಸ್ಸಿನ ಪ್ರತಿಯೊಂದು ಕಾರ್ಯಕ್ಕೂ ಬೆಂಬಲವನ್ನು ಕೊಡಿರಿ. ಅಖಿಲ ಹಿಂದೂಸ್ಥಾನದಲ್ಲಿ ಜನತೆಯ ಹಿತಕ್ಕಾಗಿ ಹೋರಾಡುವ ಸಂಸ್ಥೆಯೆಂದರೆ ಕಾಂಗ್ರೆಸ್ ಒಂದೇ. ಪ್ರತಿಯೊಬ್ಬ ರಾಷ್ಟ್ರಾಭಿಮಾನಿಯೂ ಕನಿಷ್ಠಪಕ್ಷ ಕಾಂಗ್ರೆಸ್ ಸದಸ್ಯನಾದರೂ ಆಗಿರಲೇ ಬೇಕು.

ಮೇ ತಿಂಗಳಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಬಾಬು ರಾಜೇಂದ್ರ ಪ್ರಸಾದರು ನಮ್ಮ ಜಿಲ್ಲೆಯಲ್ಲಿ ಸಂಚಾರ ಮಾಡಲಿರುವರು. ಅಷ್ಟರೊಳಗಾಗಿ ನಮ್ಮ ಜಿಲ್ಲೆಯಲ್ಲಿ ಕಡಿಮೆಪಕ್ಷ ೫೦೦೦ ಮಂದಿ ಕಾಂಗ್ರೆಸ್ ಸದಸ್ಯರನ್ನು ಸೇರಿಸಬೇಕಾಗಿದೆ. ದೇಶವಾತ್ಸಲ್ಯರುಗಳಾದ ನಮ್ಮ ಜಿಲ್ಲೆಯ ಪ್ರತಿಯೊರ್ವ ಸ್ತ್ರೀಪುರುಷರೂ ಕಾಂಗ್ರೆಸ್ ಸದಸ್ಯರಾಗಿರಿ! ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗಿರುವ ಸಹಾನುಭೂತಿ ಬೆಂಬಲವನ್ನು ಇದರಲ್ಲಿ ಸ್ಪಷ್ಟಪಡಿಸಿರಿ! ಮತ್ತು ಇದೇ ಮೇ ತಾ ೯, ೧೦, ೧೧ರಲ್ಲಿ ಕೂಡಲಿಕ್ಕಿರುವ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತಿಗೆ ಸ್ವಾಗತ ಸಮಿತಿಯ ಸದಸ್ಯರಾಗಿಯೂ, ಪ್ರತಿನಿಧಿಗಳಾಗಿಯೂ ಹಾಗೂ ಪ್ರೇಕ್ಷಕರಾಗಿಯೂ ಕೂಡಿ ಪರಿಷತ್ತನ್ನು ಯಶಸ್ವಿಗೊಳಿಸಿರಿ, ಕರ್ನಾಟಕ ಏಕೀಕರಣದ ನಮ್ಮ ಪ್ರಬಲ ಕಾಂಕ್ಷೆಯನ್ನು ವ್ಯಕ್ತಗೊಳಿಸೋಣ

ಸೂರಪ್ಪಯ್ಯ ಹಲ್ಸನಾಡು
ಪ್ರಧಾನ ಕಾರ್ಯದರ್ಶಿ,
ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ

(೪ನೇ ಪುಟದಿಂದ ಮುಂದರಿಸಿದುದು)

ಅಸಹನೀಯ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಈ ಕಷ್ಟಗಳು ಪರಿಹಾರಗೊಳ್ಳಬೇಕು. ಜನಾಂಗವನ್ನು ಒಂದಾಗಿ ಮಾಡಬೇಕು. ಹಿಂದೀಯರು ಸಂಪ್ರದಾಯದ ದಾಸರಾಗಿ ಮೂಢಭಾವನೆಗಳ ಬಲಿಗೆ ಸಿಕ್ಕಿರುತ್ತಾರೆ. ಇಲ್ಲಿಯ ಸ್ತ್ರೀಯರು ಆಟದ ಗೊಂಬೆಗಳೆಂಬ ಭಾವನೆಯು ಪ್ರಚಲಿತಗೊಂಡಿದೆ, ಜಾತಿಭಾವನೆಗಳು ಮತಾನುಬದ್ಧವಾದ ಅಂಧವಿಶ್ವಾಸಗಳಿಗೆಡೆಗೊಟ್ಟಿವೆ. ಧರ್ಮದ ಹೆಸರಲ್ಲಿ ಅತ್ಯಾಚಾರಗಳು ನಡೆಯುತ್ತಿವೆ. ಸಂಪ್ರದಾಯದ ಶಿಷ್ಟತೆಯನ್ನು ತೊರೆಗಟ್ಟಿದ ಪಾಶ್ಚಿಮಾತ್ಯರು ನಮ್ಮಿಂದ ಕಲಿಯಬೇಕಾದ ಅಮೂಲ್ಯ ಗುಣಗಳು ಭಾರತೀಯರಲ್ಲಿವೆ. ಭಾರತೀಯರು ಜೀವನದಲ್ಲಿನ ಪಾವನತೆಯನ್ನು ಕಾಯ್ದುಕೊಳ್ಳಬೇಕು. ನೀತಿಯುತರು, ಉನ್ನತ ಆದರ್ಶಗಳಲ್ಲಿ ಭಾರತೀಯರ ಸಾಧನಗಳು. ಅವುಗಳನ್ನು ಯಾವ ಕಾಲದಲ್ಲೂ ಅನ್ಯ ಸಂಸ್ಕೃತಿಗಳಿಗೆ ವಿಕ್ರಯಿಸಿ ದುರ್ಭಾಗ್ಯವನ್ನು ಪಡೆಯಬಾರದು Indian World'

ಕರ್ನಾಟಕಕ್ಕೆ ಸಮತಾವಾದಿ ಪಕ್ಷವು ಅಗತ್ಯವೇ?

ಎಂದು ಚಿಲಿಮುಟ್ಟಿಯ "ಶರಣಸಂದೇಶ" ಪತ್ರಿಕೆಯು ತನ್ನ ಅಗ್ರಲೇಖನದಲ್ಲಿ ಕೇಳಿ "ಉಗ್ರ ವಿರೋಧ" ಎಂದುದರ ಅರ್ಥವೇನು "ಕೇವಲ ಕಾಯಿದೆಶೀರ" ತಳಹದಿಂದ ಸಾಧ್ಯವಿಲ್ಲವೆಂಬ ಮೇಲೆ ಅದಾವ ಚಳವಳದಿಂದ ಸಾಧಿಸಬೇಕೆಂದು ಸಂಗತಿಯನ್ನು ತಿಳಿಸಿಲ್ಲ" ಎಂದು ಕೊಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಪ್ರಕಟಣೆಯೊಂದನ್ನು ಟೀಕಿಸಿರುತ್ತದೆ "ಶರಣ ಸಂದೇಶ"ವು—"ಕರ್ನಾಟಕದ ಈಗಿನ ಸ್ಥಿತಿಗಳನ್ನೆಲ್ಲಾ ಯೋಚಿಸಿದ್ದಾದರೆ ಇಂತಹ ಅನಿಶ್ಚಿತ ಸ್ಥಿತಿಯಲ್ಲಿರತಕ್ಕ ಸಮತಾವಾದಿಗಳ ಸಂಸ್ಥೆ ಸ್ಥಾಪನೆಯಾಗುವುದು ಅನಾವಶ್ಯಕವೆಂದೇ ನಮಗೆ ತೋರುತ್ತದೆ ಈ ವ್ಯರ್ಥ ಸಾಹಸಕ್ಕೆ ಕನ್ನಡಿಗರು ಕೈ ಹಾಕದೆ ಕೌನ್ಸಿಲ್‌ನಲ್ಲಿ ಸೇರಿ ಪ್ರಯತ್ನಿಸುವಂತೆ ಖಾದಿ ಪ್ರಸಾರ ಆದಿಜನರ ಸುಧಾರಣೆ, ಗ್ರಾಮೋದ್ಧಾರ ಈ ವಿಧಾಯಕ ಕಾರ್ಯಗಳಲ್ಲಿಯೂ ತಮ್ಮ ಶಕ್ತಿ ಸಾಹಸಗಳನ್ನು ವಿನಿಯೋಗಿಸಿ ರಾಷ್ಟ್ರಕ್ಕೆ ನಿಜವಾದ ಹಿತವನ್ನುಂಟು ಮಾಡುವರೆಂದೇ ನಾವು ನಂಬಿದ್ದೇವೆ" ಎನ್ನುತ್ತಿದೆ. ಈ ಅಭಿಪ್ರಾಯ ಭೇದಕ್ಕೆ ಇಲ್ಲಿಯ ಸೋಶಿಯಲಿಸ್ಟ್ ಪಕ್ಷೀಯರು ತಕ್ಕ ಉತ್ತರವನ್ನೀಯುವರೇ?

ಹಿಂದೂ ಮೆನೇಜರರ ಸಂಘ, ಉಡುಪಿ.

ಪ್ರಾಥಮಿಕ ಶಾಲೆಗಳ ಹಿಂದೂ ಮೆನೇಜರರ ಸಂಘದ ಪ್ರಥಮ ಸಭೆಯು ಇದೇ ತಾ ೨೧ರಲ್ಲಿ ಅಜ್ಜರಕಾಡಿನಲ್ಲಿರುವ ಶ್ರೀ ಕೆ ಜಗನ್ನಾಥ ನಾಯ್ಕರ ಮೋಡೆಲ್ ಹಾ। ಎ। ಶಾಲೆಯಲ್ಲಿ ಶ್ರೀ ಕೋ। ಶ। ಕಾರಂತ, ಬಿ ಎ ಬಿ ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಕೆಳಗಿನ ಮುಖ್ಯ ನಿಯಮಗಳೂ ಠರಾವುಗಳೂ ಬಹುಮತದಿಂದ ಸ್ವೀಕೃತವಾಗಿವೆ.

ಉದ್ದೇಶ —೧. ಸದಸ್ಯರ ಪ್ರಾಥಮಿಕ ಶಾಲೆಗಳ ರಕ್ಷಣೆ ಮತ್ತು ಅಭ್ಯುದಯದ ಬಗ್ಗೆ (೨) ಹೊಸ ಶಾಲೆಗಳ ಮುಖಾಂತರ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರ. (೩) ಪ್ರಾಥಮಿಕ ಶಾಲೆಗಳಲ್ಲಿ ಹಿಂದೂ ಧರ್ಮಶಿಕ್ಷಣ. (೪) ಹರಿಜನರ ಹಿತ (೫) ಸದಸ್ಯರ ಶಾಲೆಯಲ್ಲಿ ಕೆಲಸ ಮಾಡುವ ಅಧ್ಯಾಪಕರ ಮನವಿಗಳನ್ನು ವಿಚಾರಿಸುವ (೬) ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅನ್ವಯಿಸಿದ ಇತರ ವಿಚಾರಗಳು

ಸದಸ್ಯತನ —ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕಿನ ಎಲ್ಲಾ ಹಿಂದೂ ಮೆನೇಜರರು ಸದಸ್ಯರಾಗಬಹುದು. ಲೋವರ್ ಎಲಿಮೆಂಟರಿ ಶಾಲಾ ಮೆನೇಜರರು ವರ್ಷ ಒಂದಕ್ಕೆ ಆಣೆ ಆರರಂತೆ, ಹಾ। ಎಲಿಮೆಂಟರಿ ಶಾಲಾ ಮೆನೇಜರರು ವರ್ಷಕ್ಕೆ ರೂಪಾಯಿ ಒಂದರಂತೆ ವಂತಿಗೆಯನ್ನು ಕೊಡಬೇಕು

ಸ್ವೀಕೃತವಾದ ನಿರ್ಣಯಗಳು —(೧) ವಿದ್ಯಾಮಂತ್ರಿ ಮತ್ತು ಡೈರೆಕ್ಟರರನ್ನು ಈ ಕೆಳಗಿನ ವಿಷಯಗಳನ್ನು ದಯ ಮತ್ತು ವಿಶಾಲದೃಷ್ಟಿಯಿಂದ ವಿಚಾರ ಮಾಡುವಂತೆ ಪ್ರಾರ್ಥಿಸುವ ನಿರ್ಣಯವು ಬಹುಮತದಿಂದ ಸ್ವೀಕೃತವಾಯಿತು

(೨) ಕಳೆದ [illegible] ಈ ವರ್ಷದ ಮತ್ತು ಹಿಂದಿನ ವರ್ಷಗಳಲ್ಲಿ ಮಾಡಿರುವ ಗ್ರೇಂಟಿನ ಕಡಿತದಿಂದ ಬಹಳ ಸಂಕಷ್ಟವು ಸರ್ವತ್ರ ಉಂಟಾಗಿರುವ ಕಾರಣ, ಈ ಕಡಿತಗಳನ್ನು ಕೂಡಿಸಿ ಕೊಡಬೇಕು

(೩) ಶಾಲೆಗಳಿಗೆ ಯಾವ ರೀತಿಯಲ್ಲಿಯೂ ನ್ಯಾಯಬದ್ಧವಾಗಿರುವ ನಿಯಮಗಳನ್ನು ಅನುಸರಿಸಿ ಇಕ್ವಿಪ್‌ಮೆಂಟನ್ನು ಕೊಡುವುದಿಲ್ಲವಾದ ಕಾರಣ ಬಹಳ ಅನ್ಯಾಯವಾಗುತ್ತಿದೆ. ಇದರ ನಿವಾರಣೆಯ ಬಗ್ಗೆ ಶಾಲಾ ಪರೀಕ್ಷೆಯ ಸಮಯ ಕೇಳಿದಾ ಇಕ್ವಿಪ್‌ಮೆಂಟು ಎಷ್ಟೆಂದು ನಿರ್ಧಾರ ಬರೆಯುವಂತೆ(Sound and healthy rules) ಮಾಡಬೇಕು

(೪) ಗ್ರೇಡ್	ಟ್ರೈನಾದವರಿಗೆ	ಆಗದವರಿಗೆ
ಲೋವರ್	೧೨	೯
ಹೈಯರ್	೧೬	೧೨
ಸೆಕೆಂಡರಿ	೨೦	೧೬

ಈ ದರದಲ್ಲಾದರೂ ಗ್ರೇಂಟನ್ನು ಕೊಡಬೇಕು

(೫) ಶಾಲಾ ಕೆಲಸ ದಿನಗಳನ್ನು೧೮೦ಕ್ಕೆ ಇಳಿಸಬೇಕು

(೬) ಎಜ್ಯುಕೇಶನಲ್ ಕೌನ್ಸಿಲ್ ಶಾಲಾ ಮೆನೇಜರರನ್ನು ಮುಂಚಿತವಾಗಿ ವಿಚಾರಿಸದೆ ಯಾವ ಬಗೆಯ ತೀರ್ಮಾನವನ್ನು ಮಾಡಕೂಡದು.

(೭) ಹೈಯರ್ ಎಲಿಮೆಂಟರಿ ಶಾಲೆಗಳಿಗೆ ಕೊಡುವಂತೆ ಕಾಯಂ ಮಂಜೂರಾತಿಯನ್ನು ಪಡೆದಿರುವ ಲೋವರ್ ಎಲಿಮೆಂಟರಿ ಶಾಲೆಗಳಿಗೂ ತ್ರೈಮಾಸಿಕ ಗ್ರೇಂಟನ್ನು ಕೊಡಬೇಕು

(೮) ಈ ಸಂಘವನ್ನು ಮಂಜೂರು ಮಾಡಿ ಕೌನ್ಸಿಲಿನಲ್ಲಿ ಸೀಟನ್ನು ದಯಪಾಲಿಸುವುದು

ಕೌನ್ಸಿಲಿನವರು ಗ್ರೇಂಟ್ ಬಿಲ್ಲನ್ನು ಕಳುಹಿಸುವರೆ ಅಂಚೆವೆಚ್ಚದ ಬಗ್ಗೆ ಗ್ರೇಂಟಿನಿಂದ ವಜಾ ಮಾಡುವುದನ್ನೂ ಗ್ರೇಂಟ್ ಮಂಜೂರಾಗಿ ಇಷ್ಟು ದಿನವಾದರೂ ಬಿಲ್ ಮತ್ತು ಚೆಕ್ಕನ್ನು ಕಳುಹಿಸದೆ ಕಾಲಹರಣ ಮಾಡುವುದನ್ನು ಈ ಸಭೆಯು ನಿಷೇಧಿಸುತ್ತದೆ.

ಶ್ರೀಗಳಾದ ಪಿ ರಾಮಭಾವನ್ನಯ್ಯ ಬಿ ಎ ಎಲ್ ಟಿ. ಇವರು ಅಧ್ಯಕ್ಷರು, ಶ್ರೀ ಕೋ ಶ ಕಾರಂತ ಅಡ್ವೋಕೇಟ್, ಇವರು ಕಾರ್ಯದರ್ಶಿ ಶ್ರೀಗಳಾದ ಜಗನ್ನಾಥ ನಾಯ್ಕ, ಕೆ. ಗೋವಿಂದ ಶೆಟ್ಟಿ, ವಿ. ನಾರಾಯಣಪ್ಪಯ್ಯ ಅಂಗರ ಪೂಜಾರಿ, ಸಿ ರಾಮದಾಸ ಭಟ್ಟ, ಕೆ ನಾಗಪ್ಪ ಶೆಟ್ಟಿ ಇವರನ್ನು ಸದಸ್ಯರನ್ನಾಗಿಯೂ ಆರಿಸಿದರು.

ಎರಡನೇ ಸಭೆಯು ಇದೇ ಮೇ ತಾ ೨೬ನೇ ಆದಿತ್ಯವಾರ ಘಂಟೆ ೨ಕ್ಕೆ ಸದ್ರಿ ಶ್ರೀ ಕೆ ಜಿ ನಾಯ್ಕರ ಶಾಲೆಯಲ್ಲಿ ವಿದ್ಯಾಮಂತ್ರಿಗೂ, ಡೈರೆಕ್ಟರಿಗೂ ಪೆಟಿಷನ್ ಕಳುಹಿಸುವರೆ ಸಭೆ ಸೇರುವುದು ಸರ್ವ ಹಿಂದೂ ಮೆನೇಜರರು ಸದಸ್ಯರಾಗಿ ಭಾಗವಹಿಸಬೇಕಾಗಿ

ಕೋರುವ,
ಕೋ. ಶ. ಕಾರಂತ,
ಕಾರ್ಯದರ್ಶಿ.

ಅನುಕ್ರಮಣಿಕೆ

ಪತ್ರ ೧
ಪತ್ರಿಕಾ ಪ್ರಪಂಚ ೨
ಶಾಸನಸಭೆಯೂ ಕಾಂಗ್ರೆಸ್ಸೂ ೩
ನಮ್ಮ ಮ್ಯೆಸೂರಿನ ಪತ್ರ ೪
ಪ್ರವರ್ತಕರ ಪಾದಪ್ರಸೇವರು ೬
ಮುಂಬಾಯಿಯಲ್ಲಿ ಅಖಿಲ ಕರ್ನಾಟಕ ಸಮ್ಮೇಳನ ಜರಗುವುದೇ? ೮

ಅಗ್ರಲೇಖ

ಸ್ಫುಟವಿಚಾರಗಳು ೯

ವರ್ತಮಾನ ಸಂಗ್ರಹ

ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು ೧೬
ನಮ್ಮ ಮುಂದಾಳುಗಳು ೧೫
ಹನ್ನೊಂದು ಮಂದಿಯನ್ನು ಜೀವಂತ ಸುಟ್ಟರು ೧೯

ಸ್ವದೇಶಾಭಿಮಾನಿ.

ತಾ ೨೬ನೇ ಶುಕ್ರವಾರ ಎಪ್ರಿಲ್ '೩೫

ಸ್ಟ್ರೆಸಾ ಪರಿಷತ್ತಿನ ಭವಿಷ್ಯ.

ಅಂತರ್ಜನಾಂಗಿಕ ಸಭೆಯು ಜರ್ಮನಿಯ ಹೊಸ ಧೋರಣೆಯನ್ನು ಕುರಿತಾಲೋಚಿಸಲು ಸಭೆಯನ್ನು ಕರೆಯಿತು ಸಭೆಯಲ್ಲಿ ಇಟಲಿ, ಇಂಗ್ಲೆಂಡು, ಫ್ರಾನ್ಸು ಮೊದಲಾದ ದೇಶಗಳು ಒಮ್ಮತದಿಂದ—ಹಿಟ್ಲರನು ಯುದ್ಧ ಉಪಕರಣದ ವಿಚಾರವಾಗಿಯೂ ಸೈನ್ಯದ ವಿಚಾರವಾಗಿಯೂ ಇತ್ತೀಚೆಗೆ ಪ್ರಕಟಿಸಿದ ಸಂದೇಶವು-ಯೂರೋಪಿನ ಶಾಂತಿಗೆ ವಿರೋಧವಾದುದು ಎಂದು ಸಾರಿದುವು ಜರ್ಮನಿಯು ವಾಯು ನಾವೆಗಳನ್ನು ಹೆಚ್ಚಿಸುವ ವಿಷಯದಲ್ಲೂ ಎಲ್ಲರಿಗೂ ಅಸಮ್ಮತಿಯು ಇದೆ ಹಿಟ್ಲರರ ನವೀನ ಧೋರಣೆಯು ಹಿಂದಿನ ಒಪ್ಪಂದದ ಮಾತನ್ನು ವಿರೋಧಿಸಂತಿದೆ ಎಂಬುದು ನಿಜ ಆದರೆ—ಅವನು ಈ ರೀತಿಯ ಧೋರಣೆಯನ್ನು ಹಿಡಿಯಲು ಕಾರಣವೇನು?

ಇಟಲಿ, ಫ್ರಾನ್ಸುಗಳೂ, ಇನ್ನಿತರ ದೇಶಗಳೂ ಕಳೆದ ಯುದ್ಧದ ನಂತರ ಇಂದಿನ ತನಕ ದಿನಂದಿನ ಶಸ್ತ್ರಸನ್ನಾಹವನ್ನು ಬೆಳೆಯಿಸುತ್ತಲೇ ಇರುವಾಗ-ಜರ್ಮನಿಯು ಮಾತ್ರ ಕುಳಿತಿರಬೇಕೆಂಬುದು ಯಾವ ನ್ಯಾಯ? ಫ್ರಾನ್ಸು ತನ್ನ ಗಡಿನಾಡುಗಳಲ್ಲಿ ಎಷ್ಟು ಬಲವಾದ ಸಮರ ಜಾಲವನ್ನು ರಚಿಸಿಲ್ಲ? ಇಟಲಿಯಾಗಲಿ, ಇಂಗ್ಲೆಂಡಾಗಲಿ ಯಾವುದರಲ್ಲಿ ಹಿಂದೆ ಬಿದ್ದಿವೆ?

ಅಷ್ಟೇ ಸರಿಯೇ? ದಿನಕ್ಕೆ ಒಂದೊಂದು ವಂಗಡಗಳೊಳಗೆ ಒಳಸಂಧಾನಗಳು ನಡೆಯುತ್ತಲೇ ಇವೆ ರುಮೇನಿಯ, ಬಲ್ಗೇರಿಯದಂಥ ಚಿಕ್ಕ ರಾಜ್ಯಗಳೊಳಗೆ ಇಟಲಿಯು ಹೂಡಿದ ಸಂಧಿಯಾಗಲಿ ಫ್ರಾನ್ಸು ರಷ್ಯಗಳ ಅಂತರಂಗದ ಮಾತುಗಳಾಗಲಿ ಜರ್ಮನಿಗೆ ಯಾವ ಧೈರ್ಯವನ್ನು ಕೊಡುವುವು? ಜರ್ಮನಿಯು ಯಾವ ಕ್ಷಣದಲ್ಲಿ ತಿರುಗಿ ಒಪ್ಪಿಯಾದೊಡನೆ ಕೂಡೀತೋ-ಎಂಬ ಭೀತಿ ಈ ಎಲ್ಲ ರಾಷ್ಟ್ರಕ್ಕಿದೆ ಅವುಗಳನ್ನು ಆದಷ್ಟು ದೂರವಿರಿಸುವುದರಲ್ಲಿ ಜರ್ಮನಿಯ ದೌರ್ಬಲ್ಯವಿದೆ ಎಂದು ತಿಳಿದ ದೊಡ್ಡ ದೇಶಗಳು ಒಪ್ಪಿಯದ ವಿಚಾರ ತಮಗೆ ಗೌರವ ಇರುವಂತೆ ನಟಿಸುತಿದ್ದಾರೆ. ಇವುಗಳ ಅರ್ಥವೆಂದರೆ ಒಬ್ಬರೊಳಗೂ ವಿಶ್ವಾಸವಿಲ್ಲ. ಅಷ್ಟೇ ಅಲ್ಲ ಫ್ರಾನ್ಸಿಗೆ ಜರ್ಮನಿಯು ಯಾವ ಕಾಲದಲ್ಲೂ ತನ್ನ ಕಾಲ ಮೇಲೆ ನಿಂತು, ತನಗೆ ಸರಿಸಮನಾಗಿ ತಿರುಗುವುದು ಒಪ್ಪದ ವಿಷಯವಾಗಿದೆ. ಅದಕ್ಕೆ ಜರ್ಮನಿಯು ಮೇಲೆ ಇಷ್ಟು ಅಪನಂಬುಗೆಯಿರಲು, ಜರ್ಮನಿಯು ತನ್ನ ಯೋಚನೆಯನ್ನು ತಾನು ಮಾಡಬೇಡವೇ? ಸ್ಟ್ರೆಸಾದ ಪರಿಷತ್ತು ಮೇಲೆ ಹೇಳಿದ ಒಮ್ಮತದ ನಿರ್ಣಯವನ್ನು ಸ್ವೀಕರಿಸಿದುದನ್ನು ಕಂಡು ಜರ್ಮನಿಯ ಪತ್ರಿಕೆಗಳು ಅಪರಾಧಿಗಳಲ್ಲಿ ತಾವೂ ಒಬ್ಬರಾಗಿರುತ್ತ ಜರ್ಮನಿಯ ನಡತೆಯನ್ನು ಖಂಡಿಸುವ ಅಧಿಕಾರ ಇವರಿಗೆಲ್ಲಿದೆ? ಎಂದು ಸ್ಪಷ್ಟವಾಗಿ ಸಾರಿದುವು! ಜರ್ಮನಿಯು ತಿರುಗಿ ಜನಾಂಗಸಭೆಗೆ ಸೇರುವಂತೆ ಕಾಣದು ಇತ್ತ ಸ್ಯಾಮನ್ ಸಾಹೇಬರು ಜರ್ಮನಿಗೆ ಹೋದವರು, ಹಾಗೆಯೇ ಮರಳಿಬಂದುದನ್ನು ಕಂಡರೆ ಅವರೀವರಲ್ಲಿ ನಂಟುತನಕ್ಕೆ ಅವಕಾಶವೇ ಕಾಣದಾಗಿದೆ

ಜರ್ಮನಿಗೆ ತನ್ನ ವ್ಯಾಪಾರವನ್ನು ಬೆಳೆಯಿಸಲು, ಪರರ ಬಿಗಿತ ಹೋಗಬೇಕು. ಯುದ್ಧದಲ್ಲಿ ನಷ್ಟವಾದ ವಸಾಹತುಗಳು ತಿರುಗಿ ಅದರ ಕೈಗೆ ಸಿಗಬೇಕಾಗಿದೆ ಅದಿಲ್ಲದೆ ಜರ್ಮನಿಯ ಆರ್ಥಿಕ ಉನ್ನತಿಗೆ ಎಡೆಯಿಲ್ಲ ವಸಾಹತುಗಳನ್ನು ತಮ್ಮ ಆಶ್ರಯದಿಂದ ತಪ್ಪಿಸಿ ಜರ್ಮನಿಗೆ ಕೊಡುವ ಮನಸ್ಸು ಯಾರಿಗೂ ಇಲ್ಲ ಜರ್ಮನಿಯು ಬೆಳೆಯುವಿಕೆಯು ಯಾರಿಗೂ ಒಲ್ಲದ ವಿಷಯ

ಇತ್ತ ಜಪಾನಿಗೂ ವಿದೇಶಗಳಿಗೂ ಇರುವ ಸ್ಪರ್ಧೆಯನ್ನು ಕಂಡರೆ, ಸ್ವಾರ್ಥವನ್ನು ಕೆಲಕಾಲಕ್ಕಾದರೂ ಹಿಂದೆ ತಳ್ಳಿ ಜಗತ್ತಿನ ಶಾಂತಿಯ ಯೋಚನೆಯನ್ನು ಮಾಡಲು ಯಾವ ಜನಾಂಗವೂ ಸಿದ್ಧವಿಲ್ಲವೆಂದು ಕಾಣುವುದು ಅಂದರೇನು? ಇನ್ನೊಂದು ಯುದ್ಧಕ್ಕೆ ಮುಂದರಿದ ಜನಾಂಗಗಳ ಮುಖಂಡರು ಬಾಯಿ ತೆರೆದು ಕಾದಿದ್ದಾರೆ ಯುದ್ಧ ಬೇಡವೆನ್ನುವುದು ಸಾಮಾನ್ಯ ಪ್ರಜೆಗೆ ಆದರೆ ಇಂದಿನ ಯಾವುದೇ ಸರಕಾರದ ಧೋರಣೆಯಲ್ಲಿ ಪ್ರಜೆಯ ಮನಸ್ಸನ್ನು ಲಕ್ಷಿಸುವ ಬುದ್ಧಿಯೇ ಇಲ್ಲ

ವಾಕಿಂಗ್ ಸ್ಟಿಕ್ ಹೊಡೆತದ ಪರಿಣಾಮ

ತಿನ್ನವೆಲ್ಲಿ ೨೦

ತಿನ್ನವೆಲ್ಲಿಯ ವಣ್ಣಾರ ಪೇಟೆಯಲ್ಲಿ ಜೆ ವರದರಾಜ ಅಯ್ಯಂಗಾರ್ ಎಂಬವರು ಸುಪ್ರಸಿದ್ಧ ವಕೀಲರು ಶ್ರೀಮಂತರು ವರ್ಷಕ್ಕೆ ಸಾವಿರ ರೂಪಾಯಿ ಕಂದಾಯ ಕೊಡುತ್ತಾರೆ ಇವಲ್ಲದೆ ಎರಡು ಸಾವಿರ ರೂಪಾಯಿ ವರಮಾನದ ತೆರಿಗೆ ಸಹ ಕೊಡುತ್ತಾರೆ ಇಂಥವರನ್ನು ಪಿ. ಚೊಕ್ಕಲಿಂಗಂ ಪಿಳ್ಳೆ ಎಂಬ ರಿಟೈರ್ಡ್ ತಹಶೀಲ್ದಾರರು ಒಂದು ದಿವಸ ವಾಕ್ಕಿಂಗ್ ಸ್ಟಿಕ್ಕಿನಿಂದ ಹೊಡೆಯಲು ಪ್ರಯತ್ನಿಸಿದರಂತೆ ಇದಕ್ಕಾಗಿ ಶ್ರೀ ಅಯ್ಯಂಗಾರರು ಕೋರ್ಟಿನಲ್ಲಿ ಪರಿಹಾರ ದ್ರವ್ಯದ ಮೊಕದ್ದಮೆ ಹೂಡಿದರು ಅಂದರೆ ಹೊಡೆತಕ್ಕೆ ೨೫೦೦ ರೂಪಾಯಿ ಮತ್ತು ಅವಮಾನಪಡಿಸಿದ್ದಕ್ಕೆ ೨೫೦೦ ರೂಪಾಯಿ ಸರಿ. ಇದಕ್ಕಾಗಿ ವಕೀಲರಿಗೆ ಹಣ ಕೋರ್ಟು ಖರ್ಚು ಮುಂತಾದ ವರಸೆಯೆಲ್ಲಾ ನಡೆಯಿತು ಕಡೆಗೆ ಸಬ್‌ಆರ್ಡಿನೇಟ್ ಜಡ್ಜರು ಒಟ್ಟು ೧೨೦೦ ರೂಪಾಯಿ ಪರಿಹಾರ ದ್ರವ್ಯವನ್ನು ಕೊಡಿಸಿ ಕೊಟ್ಟರು. ನೋಡಿದಿರಾ! ದೊಡ್ಡವರು ಜಗಳವಾಡಿದರೆ ಕಡೆಗಾಗುವ ಪರಿಣಾಮ! ವಾಕ್ಕಿಂಗ್ ಸ್ಟಿಕ್ಕಿನಿಂದ ಹೊಡೆಯಲು ಪ್ರಯತ್ನಿಸಿದ್ದಕ್ಕೆ ೧೨೦೦ ರೂಪಾಯಿ ಬಿಟ್ಟಿಬೇನಾಗಿ ಬಂತು ಪ್ರಕ್ಕೆ ಸಿಕ್ಕಿದೆ ಪತ್ರಿಕೆಗಳಲ್ಲಾ ದಪ್ಪಕ್ಷರಗಳಲ್ಲಿ ಇದರ ಪುರಾಣವೆಲ್ಲಾ ಬಂದುಬಿಟ್ಟಿದೆ ಸಾಕು. ಅವಮಾನ.

ಇಂಡಿಯಾದಲ್ಲಿ ಎರಡು ಲಕ್ಷ ಕಿವುಡರು ಮೂಗರು

ಕಲ್ಕತ್ತ ೨೦

ಇಂಡಿಯಾದಲ್ಲಿ ಈಗ ಎರಡು ಲಕ್ಷ ಮಂದಿಯಷ್ಟು ಕಿವುಡು ಮೂಗರಿದ್ದಾರೆ ಆದರೆ ಇವರ ವಿದ್ಯಾಭ್ಯಾಸ ರಕ್ಷಣೆ ಇವುಗಳಿಗೋಸ್ಕರ ಸಂಸ್ಥೆ ಮಾತ್ರವಿವೆ ಈ ಅಂಶಗಳು ಈಗ ತಾನೇ ಕಲ್ಕತ್ತೆಯಲ್ಲಿ ನಡೆಯುತ್ತಿರುವ ಕಿವುಡು ಮೂಗರ ಪರಿಷತ್ತಿ ಹೊರಪಟ್ಟಿತು. ಡಾ। ಉದ್ಯಾವಾರ್‌ರವರು ಕಿವುಡು ಮೂಗರನ್ನು ಬಾಗಿಯು ಕುರಿತು ಒಂದೆರಡು ಮಾತುಗಳನ್ನು ಆಡಿದರು. ಕಿವುಡರಿಗೆ ಆಸ್ಪತ್ರೆಗಳಲ್ಲಿ ಹಕ್ಕುಗಳನ್ನು ಕೊಡುವ ವಿಚಾರವು ಪರಿಷ್ಕಾರಕ್ಕಿದೆ.

ಕುಂಭಕೋಣಂ ಮುನಿಸಿಪಾಲಿಟಿಯಲ್ಲಿ ವಿಚಿತ್ರ.

ಕುಂಭಕೋಣಂ ೨೦

ಕುಂಭಕೋಣಂ ಮುನಿಸಿಪಾಲಿಟಿಯಲ್ಲಿ ದೊಡ್ಡ ಚರ್ಚೆ ವಿಷಯ ಚಿಕ್ಕದು ಸ್ಟಾಕಲ್ ತೆರಿಗೆಯನ್ನು ಎರಡು ರೂಪಾಯಿಯಿಂದ ಒಂದು ರೂಪಾಯಿಗೆ ಇಳಿಸಬೇಕೆಂಬ ಪ್ರಶ್ನೆ ಬಂದಾಗ ಮಿ। ಕಂದಸಾಮಿ ಮೂಪ್ಪನಾರ್ ಎಂಬವರೊಬ್ಬರು ಸಿಟ್ಟಾಗಿಟ್ಟ ಮಾತನಾಡಿದರು ಸದಸ್ಯರೆಲ್ಲಾ ಪೇಪರುಗಳಲ್ಲಿ ಹೆಸರು ಬರುವುದಕ್ಕೋಸ್ಕರ ಕೂಗಾಡುತ್ತಾರೆಂಬುದೇ ಅವರು ಮಾಡಿದ ಆಪಾದನೆ ಸರಿ, ಬಿಳ್ಳ ಸದಸ್ಯರು ಈ ಆಪಾದನೆಯನ್ನು ಸಹಿಸಲಾರದೆ ಬೊಬ್ಬೆಯಿಟ್ಟರು ಸರಿ, ಅಧ್ಯಕ್ಷರು "ಆನ್ ಪಾರ್ಲಿಮೆಂಟರಿ" ಅಂದರು ಹೀಗೆಂದಾಗ್ಯೂ ಮಿ ಮೂಪ್ಪನಾರ್‌ರವರು ತಮ್ಮ ಮಾತುಗಳನ್ನು ವಾಪಸು ತೆಗೆದುಕೊಳ್ಳಲಿಲ್ಲ ಕಡೆಗೆ ಹಾಗೆಯೇ ಸಭೆಯು ಮುಕ್ತಾಯವಾಯಿತು

ಹಿಂದೂ ಮಹಾ ಸಭಾಧಿವೇಶನ

ಕಾನ್‌ಪೂರ್ ಎ ೨೧

ಅಖಿಳಭಾರತ ಹಿಂದೂ ಮಹಾಸಭೆಯ ಅಧಿವೇಶನವು ಈ ದಿನವೂ ಕೂಡಿತು ಮಹಾಸಭೆಯ ಕಾರ್ಯಕಾರಿ ಸಮಿತಿಗೆ ಭಾಯಿ ಪರಮಾನಂದರವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ ಕರಾಚಿಯ ಘಟನೆಯಲ್ಲಿ ಸರಕಾರವು ನಡೆಸಿರುವ ಕಾರ್ಯಕ್ರಮವು ಶ್ಲಾಘನೀಯವಾದುದೆಂದು ಮುಂತಾಗಿ ಅನೇಕ ಠರಾವುಗಳು ಪಾಸಾಗಿವೆ

ಚಕ್ರವರ್ತಿಗಳಿಗೆ ರಾಜಾದಾಯ

ಲಂಡನ್ ಎ ೨೧

ಚಕ್ರವರ್ತಿ ಸಾರ್ವಭೌಮರ ಸ್ವಂತ ಖರ್ಚಿಗೆ ಬ್ರಿಟಿಷ್ ಸರಕಾರದವರು ಸಾಲಿಯಾನ ೬೦ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ.

ಡ್ಯೂಕ್ ಆಫ್ ಕಾರ್ನ್‌ವಾಲು ವರ್ಷವೊಂದಕ್ಕೆ ೨೫ ಸಾವಿರ ಪೌಂಡುಗಳನ್ನು ತೆಗೆದುಕೊಳ್ಳುತ್ತಾರೆ ಚಕ್ರವರ್ತಿಗಳು ಹೋಗುವ ನಾಟಕಮಂದಿರಗಳೂ ಹಿಂದಿನ ವಾರ್ತಾಪತ್ರಿಕೆಗಳೂ ಮತ್ತು ಇತರ ದೈನಂದಿನ ಉಪಯೋಗಕ್ಕೆ ಬೇಕಾಗುವ ವಸ್ತುಗಳೆಲ್ಲಕ್ಕೂ ಸಾಮಾನ್ಯ ಸುಂಕವನ್ನು ಕೊಟ್ಟುಬಿಡುತ್ತಾರೆ ಯಾವುದನ್ನೂ ಪುಗಸಟ್ಟೆ ಸ್ವೀಕರಿಸುವುದಿಲ್ಲ

ಕಾಂಗ್ರೆಸ್ಸಿನ ನಿವೃತ್ತ ಮುಖಂಡರುಗಳು.

ಲಾಹೋರ್ ಎ ೨೦

ಡಾ। ಅನ್ಸಾರಿಯವರು ಸಾರ್ವಜನಿಕ ಕ್ಷೇತ್ರದಿಂದ ನಿವೃತ್ತರಾಗಿರುವುದು ಬಹಳ ಊಹಾ ಪೋಹಗಳಿಗೆ ಕಾರಣವಾಗಿದೆ ಈಗ ನಿವೃತ್ತರಾಗುತ್ತಲಿರುವ ಕಾಂಗ್ರೆಸ್ ಮುಖಂಡರುಗಳಿಗೂ ಈಗಿರುವ ಕಾಂಗ್ರೆಸ್ ಮುಖಂಡರುಗಳಿಗೂ ಅಭಿಪ್ರಾಯ ಭೇದವೇ ಇದಕ್ಕೆ ಕಾರಣವೆಂದು ಹೇಳಲಾಗುತ್ತಿದೆ ಆದರೆ ಇದರಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲವೆಂದು ಸರ್ದಾರ್ ಶಾರ್ದೂಲಸಿಂಗ್ ಕವೀಶಿಯರ್ ರವರು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸದಸ್ಯರೊಳಗಾಗಲೀ ಇತರರೊಡನಾಗಲೀ ಈಗ ನಿವೃತ್ತರಾಗುತ್ತಿರುವ ಮುಖಂಡರುಗಳಿಗೆ ವ್ಯತ್ಯಾಸವಿಲ್ಲ ಬರಲಿರುವ ರಾಜ್ಯಾಂಗ ಸುಧಾರಣೆಗಳಿಗೆ ಎಲ್ಲರದೂ ಒಂದೇ ಅಭಿಪ್ರಾಯವಿದೆ.

ದಿವಾಕರ್ ಮತ್ತು ಕರಮರ್ಕರ್ ರವರಿಗೆ ಪ್ರತಿಬಂಧಕ.

ಹುಬ್ಬಳ್ಳಿ, ಎ. ೨೦

ಕಾರವಾರ ಜಿಲ್ಲೆಯಲ್ಲಿ ಸರಕಾರದ ಕಾಲದಿಂದ ಕಷ್ಟಪಡುತ್ತಿರುವ ರೈತರ ಏಳಿಗೆಗಾಗಿ ಕೆಲಸ ಮಾಡುತ್ತಿರುವ ಶ್ರೀ ಕರಮರ್ಕರ್ ಮತ್ತು ದಿವಾಕರ್ ರವರನ್ನು ಅಂಕೋಲೆ ಮ್ಯಾಜಿಸ್ಟ್ರೇಟರು ಕರೆಸಿ ಜಿಲ್ಲಾ ಮ್ಯಾಜಿಸ್ಟ್ರೇಟರು ನಿಮ್ಮ ಈ ಕೆಲಸವು ಸಾರ್ವಜನಿಕ ಹಾನಿಯುಂಟುಮಾಡುತ್ತದೆಂದು ತಿಳಿಸಿರುತ್ತಾರೆ. ಜಿಲ್ಲಾ

Latest News

ಮಿ। ಸಿ ಎಫ್ ಎಂಡ್ರೂಸರು ವೆಸ್ಟ್ ಆಫ್ರಿಕದಲ್ಲಿ ಸಂಚರಿಸಿ ಭೂಕಂಪ ನಿಧಿಗೆ ಒಟ್ಟು ೧೦೦೦ ಪವನುಗಳನ್ನು ಸಂಗ್ರಹಿಸಿರುವರು ಅವರು ಇದೇ ಮೇ ೨೫ ಕ್ಕೆ ಹಿಂದೂದೇಶಕ್ಕೆ ಬರಲಿರುವರು.

ಶ್ರೀ ಸುಭಾಷ್‌ಚಂದ್ರ ಭೋಸರು ವಿಯೆನ್ನದಲ್ಲಿ ೩ ೨೪ರಲ್ಲಿ ದೇಹಾಂತರವಾದ ಒಪರೇಶನನ್ನು ಮಾಡಿಸಿದರು

ಸಿಲ್ವರ್ ಜುಬಿಲಿ ಸಂಬಂಧವಾಗಿ ವಿಶೇಷ ರೀತಿಯ ಅಂಚೆ ಚೀಟುಗಳನ್ನು ಸರಕಾರವು ಮುದ್ರಿಸಲಿದೆಯೆಂದು ವೈಸರಾಯರು ತಿಳಿಸಿರುವರು

ಶ್ರೀಮತಿ ಕಮಲಾ ನೆಹರುರವರು ಭೋವಾಲಿ ಸೆನಿಟೋರಿಯಂನಲ್ಲಿ ಗುಣಹೊಂದುತ್ತಿರುವರು ಅವರನ್ನು ಮೇ ೯ನೇ ತಾರೀಖಿಗೆ ಅಲ್ಲಹಾಬಾದಿಗೆ ಹಿಂತರುವರು

ಇರಾನಿನಲ್ಲಿ ಭೂಕಂಪವಾಗಿದೆ ಮಜಂದರನ್ ಎಂಬಲ್ಲಿ ನೂರಾರು ಜನರು ಮೃತರಾದರು ಸಾರಿ ಎಂಬಲ್ಲಿ ೪೮೩ ಮೃತಶರೀರಗಳು ದೊರೆತಿವೆ. ೬೦೦ ಮಂದಿ ಸತ್ತರೆಂಬ ಅಂದಾಜು ಇದೆ

ಜಬ್ಬಲ್‌ಪುರದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಜರಗಿ ಪಾರ್ಲಿಮೆಂಟರಿ ಬೋರ್ಡಿಗೆ ಸದಸ್ಯರ ಚುನಾವಣೆಯಾಗುತ್ತಿದೆ

ಮದ್ರಾಸಿನ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಪೋಲೀಸರು ಜಪ್ತಿ ನಡೆಸಿ ಕೆಲವು ಪತ್ರಗಳನ್ನು ಒಯ್ದಿರುವರು

ರಿಂದ ನಿಮ್ಮ ಮೇಲೆ ಏಕೆ ಕಾರವಾರ ಜಿಲ್ಲೆ ಬಾರದಂತೆಗೆ ಆರ್ಡರ್ ಮಾಡಕೂಡದು" ಎಂದು ಹೇಳಿರುವರೆಂದು ತಿಳಿದುಬಂದಿದೆ.

ಮಹಾರಾಜ ಸರ್ ಕಿಷನ್ ಪ್ರಸಾದ್‌ರವರ ಆಗಮನ.

ಬೆಂಗಳೂರು ಎ. ೨೨

ಹೈದರಾಬಾದ್ ಸಂಸ್ಥಾನದ ಮುಖ್ಯ ಮಂತ್ರಿಗಳಾದ "ಹಿಸ್ ಎಕ್ಸೆಲೆನ್ಸಿ ಮಹಾರಾಜ ಸರ್ ಕಿಷನ್ ಪ್ರಸಾದ ರವರು ನಿನ್ನೆ ೧೦ಚೆ ಬೆಂಗಳೂರಿಗೆ ಬಂದರು ಅವರ ಜೊತೆಯಲ್ಲಿ ಸ್ವಲ್ಪ ಸಿಬ್ಬಂದಿಯು ಬಂದಿರುತ್ತೆ

ಸರ್ ಕಿಷನ್ ಪ್ರಸಾದರವರು ಹೈಗ್ರೌಂಡಿನ ಬಂಗಲೆಯೊಂದರಲ್ಲಿ ಇಳಿದುಕೊಂಡಿರುತ್ತಾರೆ ಬಹುಶಃ ಒಂದು ತಿಂಗಳು ಈ ಊರಿನಲ್ಲಿ ಇರಬಹುದು

ಫ್ರೀಪ್ರೆಸ್ ಪತ್ರಿಕೆಯ ಮೇಲೆ ದಾವೆ

೨೫ ಲಕ್ಷ ರೂಪಾಯಿಯ ಡಿಕ್ರಿ

ಮುಂಬಾಯಿ ಎ ೧೮

"ಫ್ರೀಪ್ರೆಸ್ ಆಫ್ ಇಂಡಿಯ" ಸಂಸ್ಥೆಯ ಮೇಲೆ ಮೆ।ಜಾರ್ಡಿನ್ ಮಾಸಂಜಿಯವರೂ ಮತ್ತು ಇತರರೂ ಹಾಕಿದ್ದ ಸಿವಿಲ ಮೊಕದ್ದಮೆಯಲ್ಲಿ ಮುಂಬಾಯಿ ಹೈಕೋರ್ಟಿನ ಜ। ಕನಿಯಾರವರು ತೀರ್ಪಿತ್ತರು ೨೫,೦೦೦ ರೂಪಾಯಿಗೆ ಆದಮಾನದ ಡಿಕ್ರಿಯನ್ನು ಫ್ರೀಪ್ರೆಸ್ಸಿನ ಮೇಲೆ ಜಾರಿ ಮಾಡಿದರು ಎರಡು ಪಕ್ಷಗಳೂ ಕಳೆದ ಫೆಬ್ರುವರಿಯಲ್ಲಿ ಒಂದು ರಾಜಿ ತೀರ್ಮಾನಕ್ಕೆ ಬಂದಿದ್ದರು ವಾದಿಗಳಿಗೆ ೧೦,೫೦೦ ರೂಪಾಯಿಗಳನ್ನು ಪೂರ್ತಿಯಾಗಿ ಎಪ್ರಿಲ್ ೧೫ನೇ ತಾರೀಕಿಗೆ ಕೊಟ್ಟುಬಿಡುವುದಾದರೆ ಸರಿ ಇಲ್ಲದಿದ್ದರೆ ಡಿಕ್ರಿಯ ಹಣ ಪೂರ್ತಿಯನ್ನು ತೆಗೆದುಕೊಳ್ಳಲು ಕೋರ್ಟಿನ ಅಪ್ಪಣೆ ತೆಗೆದುಕೊಳ್ಳುವುದಾಗಿ ಆ ರಾಜೀ ಒಪ್ಪಂದವಾಗಿದ್ದಿತು. ಈ ಒಪ್ಪಂದವನ್ನು ಫ್ರೀಪ್ರೆಸ್‌ನವರು ನಡೆಸಲಿಲ್ಲ. ಎಪ್ರಿಲ್ ೧೫ನೇ ತಾರೀಕಿನೊಳಗೆ ಹಣವನ್ನು ಕೊಡಲಿಲ್ಲ ಆದ್ದರಿಂದ ಪೂರ್ತಿ ಹಣಕ್ಕೆ ಡಿಕ್ರಿಯನ್ನು ಪಾಸುಮಾಡಲಾಗಿದೆ.

ಈ ಮೊಕದ್ದಮೆಯ ಪೂರ್ವ ವೃತ್ತಾಂತವಿದು. ಫ್ರೀಪ್ರೆಸ್ಸಿನವರಿಗೂ ಮಿ.ಜಾರ್ಡಿನ್‌ರವರಿಗೂ ಒಂದು ಆಡಳಿತದ ಕರಾರಾಯಿತು ಅದರ ಪ್ರಕಾರ ಫ್ರೀಪ್ರೆಸ್ಸಿನವರು ತಿಂಗಳಿಗೆ ೩ ಸಾವಿರ ರೂಪಾಯಿಗಳಂತೆ

ರೂಪಾಯಿಗಳನ್ನು ಕೊಡಬೇಕು. ಆದರೆ ಫ್ರೀ ಪ್ರೆಸ್ಸಿನವರು ಈಗಿನ ಪರಿಷತ್ತುಗಳಲ್ಲಿ ಯಾವುದನ್ನಾದರೂ ನಡೆಸದೇ ಇದ್ದರೆ ಅಥವಾ ಹಣವನ್ನು ಸರಿಯಾಗಿ ಕೊಡದೆ ಹೋದರೆ ಆ ಕ್ಷಣವೇ ಉಳಿದ ಎಲ್ಲಾ ಹಣವನ್ನು ಕೊಟ್ಟುಬಿಡಬೇಕಾಗುವುದು.

ಈ ಪರಿಷತ್ತುಗಳನ್ನು ಫ್ರೀಪ್ರೆಸ್ಸಿನವರು ತಪ್ಪಿದರು ಅದರ ಮೇಲೆ ಮಿತ್ರದಾಸ್ ಮತ್ತು ಇತರರು ಫ್ರೀಪ್ರೆಸ್ಸಿನ ಮೇಲೆ ದಾವ ಹಾಕಿದರು

ಪುನಃ ಫೆಬ್ರುವರಿಯಲ್ಲಿ ಎರಡು ಪಕ್ಷಗಳಿಗೂ ರಾಜಿ ಒಪ್ಪಂದವಾಯಿತು. ಆ ರಾಜಿ ಒಪ್ಪಂದವನ್ನು ಅವರು ಮುರಿದರು ಕೋರ್ಟಿಗೆ ಬಂದಿತು

ಈ ದಿನ ನ್ಯಾಯಾಧೀಶರು ಒಂದು ಅವಮಾನದ ಡಿಕ್ರಿಯನ್ನು ಪಾಸುಮಾಡಿದರು ಎಲ್ಲಾ ಖರ್ಚನ್ನೂ ಫ್ರೀಪ್ರೆಸಿನವರು ವಹಿಸಬೇಕು. ಹಣವನ್ನು ವಾಪಸ್ಸು ಮಾಡಲು ಫೆಬ್ರವರಿಯಿಂದ ೬ ತಿಂಗಳೊಳಗೆ ಕೊಡಬೇಕೆಂದು ತೀರ್ಪಿತ್ತಿರುವರು

ಗುಂಡು ತೋರಿಸಿ ಬೇಂಕನ್ನು ನುಗ್ಗಿದರು. ಇಬ್ಬರು ಹತರಾದರು.

ಬ್ಯೂನೋಸ್ ಏರ್ಸ್, ಎಪ್ರಿಲ್ ೨೪

ಪೋರ್ಟ ಸಾಂತಾಕ್ರೂಜ್‌ನ ಪಾಟಾಗೋನಿಯಾ ಎಂಬಲ್ಲಿ ಆಂಗ್ಲೋ ಸೌತ್ ಅಮೇರಿಕನ್ ಬೇಂಕನ್ನು ಇಬ್ಬರು ದರೋಡೆಗಾರರು ನುಗ್ಗಿದರು ಬೇಂಕಿನ ಮನೆಜರರನ್ನೂ ಅವರ ಪತ್ನಿಯನ್ನೂ ಗಾಯಗೊಳಿಸಿದರು. ಇಬ್ಬರು ಅಸಿಸ್ಟಾಂಟರನ್ನು ಕೊಂದಿಕ್ಕಿದರು ದರೋಡೆಗಾರರೂ ೨೦೦ ೦೦೦ ಪೆಸೊಸ್ (ನಾಣ್ಯ) ಗಳೊಡನೆ ಪರಾರಿಯಾದರು

ಸ್ವಿಸ್ ದಂಪತಿಗಳ ಮೇಲೆ ಜರ್ಮನರ ಅತ್ಯಾಚಾರ—ಸ್ವಿಸ್ ಸರಕಾರದ ಖಂಡನೆ?

ಜರ್ಮನಿಯ ಬೆಸ್‌ಲ್ ಎಂಬಲ್ಲಿ ವಾಸಿಸುತ್ತಿದ್ದ ಸ್ವಿಸ್ ದಂಪತಿಗಳನ್ನು ಲೊರ್ರಾಚ್‌ನ ಅಧಿಕಾರಿಗಳು ಕರೆದು, ಸೆರೆಹಿಡಿದು, ತನಿಖೆ ನಡೆಸಿ, ಅವರನ್ನು ಪೂರಾ ದಿನಗಳ ತನಕ ಬಂಧಿಸಿಟ್ಟರು ಈ ವಾರ್ತೆಯು ಸ್ವಿಜರ್ಲೇಂಡಿಗೆ ಹೋಗಿ ಅಲ್ಲಿಂದ ಜರ್ಮನ್ ಸರಕಾರಕ್ಕೆ ಪತ್ರವು ಬಂದು, ತಮ್ಮ ಪ್ರಜೆಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು ಜರ್ಮನಿಯ ಸರಕಾರವು ಇನ್ನೂ ಈ ವಿಷಯಕವಾದ ವಾರ್ತೆಯೇ ಇರುವುದಿಲ್ಲವೆಂದಿದೆ

ಕಂಜೀವರಂ ಏಕಾಂಬರೇಶ್ವರ ದೇವರ ಗುಡಿಯಲ್ಲಿ ಕಳವು!

ಕಂಜೀವರಂ ಎಂಬಲ್ಲಿಯ ಏಕಾಂಬರೇಶ್ವರ ದೇವಸ್ಥಾನದಲ್ಲಿದ್ದ ೩೦೦೦ ರೂಪಾಯಿಗಳ ಆಭರಣಗಳು ಮೊನ್ನೆ ಕಾಣೆಯಾದುವು ಅಡಿಶನಲ್ ಪ್ಯಾರಿಗೆ ಅಲ್ಲಿಯ ಪೂಜಾರಿಯಾದ ಸೋಮಾ ಗುರುಕ್ಕಳ್ ಎಂಬವನ ಮೇಲೆ ಸಂದೇಹವುಂಟಾಗಿ ಅವನನ್ನು ಸೆರೆಹಿಡಿದು ವಿಚಾರಣೆಯಾಗಿ, ಅವನು ಒಪ್ಪಿಕೊಂಡನು. ಅವನಿಗೆ ಆರು ತಿಂಗಳುಗಳ ಕಠಿಣ ಶಿಕ್ಷೆ—೧೦೦ ರೂಪಾಯಿಗಳ ಜುಲ್ಮಾನೆಯೂ ವಿಧಿಸಲ್ಪಟ್ಟಿರುವುದು.

ಆಸ್ಟ್ರಿಯಾ ಸೋಷಿಯಲಿಸ್ಟ್ ದಂಗೆಯ ಪ್ರತಿಧ್ವನಿ.

ನಾಯಕರುಗಳಿಗೆ ಕಠಿಣ ಶಿಕ್ಷೆ.

ವಿಯನ್ನಾ, ಎ ೧೮

ಆಸ್ಟ್ರಿಯಾ ದೇಶದಲ್ಲಿ ಕಳೆದ ವರ್ಷ ನಡೆದ (೧೯೩೪ ಫೆಬ್ರವರಿ) ಸೋಷಿಯಲಿಸ್ಟ್ ಬಂಡಾಯ (ದಂಗೆ)ಯ ಫಲವಾಗಿ ಈಗ ಮುಖ್ಯ ನಾಯಕರುಗಳಿಗೆ ಶಿಕ್ಷೆ ವಿಧಿಸಲಾಗಿದೆ. ಮೇಜರ್ ಅಲೆಕ್ಸಾಂಡರ್ ಐಪ್ಲರ್‌ರವರಿಗೆ ೧೮ ವರ್ಷಗಳ ಕಠಿಣ ಶಿಕ್ಷೆ ಡಾ| ರೂಡಾಲ್ಫ್ ಲೋದವರಿಗೆ ೧೫ ವರ್ಷಗಳ ಶಿಕ್ಷೆ. ಇವರಲ್ಲದೆ ೧೮ ಜನರಿಗೆ ೧೦ ವರ್ಷದಿಂದ ೨ ವರ್ಷಗಳ ಶಿಕ್ಷೆ ವಿಧಿಸಲಾಗಿದೆ ಈ ಅಪಾದಿತರೆಲ್ಲರೂ ಸೋಷಿಯಲಿಸ್ಟ್ ಸೈನ್ಯಗಳ ನಾಯಕರುಗಳು ಇವರು ಮೊದಲೇ ಪಿತೂರಿ ನಡೆಸಿದರೆಂದೂ ಸೋಷಿಯಲಿಸ್ಟ್ ಪತ್ರಿಕಾ ಕಚೇರಿಗಳಿಗೆ ಗುಪ್ತ ಸಭೆಗಳನ್ನು ನಡೆಸಿದರೆಂದೂ ಹೇಳಲಾಗಿದೆ

ಆ ಅಪಾದಿತರೆಲ್ಲರೂ ತಾವು ತಪ್ಪಿತಸ್ಥರಲ್ಲವೆಂದು ಹೇಳಿದರು

ಕೋರ್ಟಿನಲ್ಲಿ ಸಿಗರೇಟನ್ನು ಸೇದಬಹುದು!

ಮದ್ರಾಸು, ಎ ೧೭

ಎಗ್ಮೋರು ಮೆಜಿಸ್ಟ್ರೇಟರ ಮುಂದೆ ಸುಬ್ರಹ್ಮಣ್ಯಂ ಎಂಬಾತನೂ, ಅವನ ಮಿತ್ರರೀರ್ವರೂ ಹಾಜರಾದರು ಇವರು ಪ್ರೆಸಿಡೆನ್ಸಿ ಕೋರ್ಟು ಆವರಣದಲ್ಲಿ ಸಿಗರೇಟನ್ನು ಸೇದುತ್ತಿದ್ದರಂತೆ

"ಸಿಗರೇಟು ಸೇದುವುದು ಅಪರಾಧವಲ್ಲ ಕೋರ್ಟಿನ ಆವರಣದಲ್ಲಿ ಸೇದಿದರೂ ಅದು ಅಪರಾಧವಲ್ಲ ನನಗೆ ತಿಳಿದ ಹಾಗೆ ಈಗ ಡಜನ್‌ಗಟ್ಲೆ ಜನರು ಕೋರ್ಟು ಹೊರಗೆ ಸಿಗರೇಟುಗಳನ್ನು ಸೇದುತ್ತಲೇ ಇರುವರು ಈ ಮೂರು ಮಂದಿಯನ್ನು ಮಾತ್ರ ಏತಕ್ಕೆ ಎಳೆದರೋ ಗೊತ್ತಾಗಲಿಲ್ಲ ಅವರನ್ನು ಡಿಸ್ಚಾರ್ಜ್ ಮಾಡುತ್ತೇನೆ" ಎಂದರು ಮೆಜಿಸ್ಟ್ರೇಟರು

ಬಿರುಗಾಳಿಯಿಂದ ಮರಣಗಳು

ಸಿಲ್‌ಹಟ್ ಎಪ್ರಿಲ್ ೧೬

ಬಿರುಗಾಳಿಯು ನಗರದಲ್ಲೆಲ್ಲಾ ಬೀಸಿ ಹೇರಳ ನಷ್ಟವುಂಟಾಗಿದೆ ಅನೇಕ ಮನೆಗಳು ಕುಸಿದುಬಿದ್ದು ಹೆಳಸಮಾಡಿದ್ದು ಅದರ ಫಲವಾಗಿ ೪ ಮಂದಿಗಳು ಸತ್ತಿರುವರೆಂದೂ ಶವಗಳನ್ನು ಪೋಲೀಸ ಸ್ಟೇಷನಿಗೆ ತರಲಾಗಿದೆಯೆಂದೂ ತಿಳಿದು ಬರುತ್ತದೆ ಮಗುವನ್ನು ಎತ್ತಿಕೊಂಡಿದ್ದ ಹಾಗೆಯೇ ೩ ಯುವತಿ ಸತ್ತ ಅದೊಂದು ನೋಟವು ಹೃದಯವಿದೀರ್ಣವಾಗಿದೆ ಎಷ್ಟು ಮರಣಗಳು ಸಂಭವಿಸಿವೆಯೆಂಬುದು ಗೊತ್ತಾಗಿಲ್ಲ

ಸರಹದ್ದು ಪ್ರಾಂತ್ಯದ ಅಶಾಂತಿ.

ಪೇಶಾವರ, ಎಪ್ರಿಲ್ ೧೭

ಲಿಯೋ ಆಗ್ರಾದ ಕದನದ ಬಗ್ಗೆ ಕೆಲವು ವಿವರಗಳು ಬಂದಿವೆ ಸ್ವಾತ್ ನದಿಯ ತೀರದಲ್ಲಿ ಲಿಯೋ ಅಗ್ರಾ ಮತ್ತು ನರಂಜಿ ಬಾಂಡಾಗಳಲ್ಲಿ ೧೦೦೦ ಜನ ಸಶಸ್ತ್ರ ಲಷ್ಕರ್ ಜನರು ಕೂಡಿದರೆಂದು ನೌಶೇರಾ ಮೊಟ್ಟೆಲ್ಸ್ ಕಾಲಮಿನವರು (ಸೈನ್ಯದವರು) ಬಾಗೋವಲ್ಲಿಗೆ ಬಂದು ಸೇರಿದರು, ಮಳೆಯು ಒಂದೇ ಸಮನೆ ಸುರಿಯುತ್ತಿದ್ದುದರಿಂದ, ಮುಂದೆ ಬರಲು ಎಪ್ರಿಲ್ ೧೧ನೇ ತಾರೀಕಿನ ವರೆಗೂ ವಿಧಾಸಿಸಿದರು. ಎರಡು ದಿನಗಳ ಕದನದಲ್ಲಿ ಓರ್ವ ಒಂದಾವು ಮಾತ್ರ ಹೊಂದಿರುವನು.

ಪಂಡಿತ ಮಾಲವೀಯರು ವಿಲಾಯತಿಗೆ ಹೊರಡಬಹುದು.

ಕಾಶಿ, ಎ ೩

ಈ ದಿವಸ ಪ್ರಾತಃಕಾಲ ಕಾಶೀ ನಗರಕ್ಕೆ ಬಂದ ಪಂಡಿತ ಮದನಮೋಹನ ಮಾಲವೀಯರೂ ಎಂ ಎಸ್ ಅಣೆಯವರೂ ಇಂಗ್ಲೆಂಡಿಗೆ ಹೋಗುವ ಒಂದೂ ರಾಯಭಾರವನ್ನು ಕುರಿತು ಪರ್ಯಾಲೋಚಿಸಿದರು ನಿರ್ಧಾರವಾದ ವಿಷಯಗಳು ತಿಳಿದುಬಂದಿಲ್ಲ ಪಂಡಿ



ಪಂಡಿತ ಮಾಲವೀಯರು

ತರು ಇಂಗ್ಲೆಂಡಿಗೆ ಹೊರಡಲೇಬೇಕೆಂಬ ಹಠದಲ್ಲಿದ್ದಾರೆ ಆದರೆ ಅವರ ಆರೋಗ್ಯದ ವಿಚಿತ್ರ ವೈದ್ಯರು ಪ್ರಯಾಣಕ್ಕೆ ಅನುಮತಿಯನ್ನೀಯುತ್ತಿಲ್ಲ ಈಗಿನ ಕಾರ್ಯಕ್ರಮದ ಪ್ರಕಾರ ಮಾ ಆಣೆಯವರು ನಾಳೆ ದಿವಸ ಕಾಶೀನಗರವನ್ನು ಬಿಡುವರು ಜಬ್ಬಲ್‌ಪುರದಲ್ಲಿ ನಡೆಯುವ ಎ ಐ ಸಿ ಸಿ ಸಭೆಗೆ ಹಾಜರಾಗಲಿರುವರೆಂದು ತಿಳಿದುಬಂದಿದೆ

ಬಾರಾಬಂಕಿಯ ಹತ್ತಿರ ಭಾರಿ ಕೋಮುವಾರು ಗಲಭೆ

ಲಕ್ನೋ ಎ ೧೬

ಬಾರಾಬಂಕಿಯಿಂದ ಒಂದು ಭಾರಿ ಕೋಮುವಾರು ಗಲಭೆಯ ಸುದ್ದಿ ಬಂದಿದೆ ಬಾರಾಬಂಕಿಗೆ ೧೮ ಮೈಲು ದೂರದಲ್ಲಿ ತುಲಸಿಯಾಗಂಜ್ ಎಂಬ ಊರಿನಲ್ಲಿ ಕಳೆದ ಭಾನುವಾರ ಅಂದರೆ ಮೊಹರಂ ಕತ್ತಲ ದಿನ ಗಲಭೆಯು ನಡೆಯಿತು ಬಹಳ ಜೋರಾಗಿದ್ದಿತು ಗಲಭೆಕಾರರು ಅನೇಕ ಮನೆಗಳನ್ನು ಸುಟ್ಟು ಭಸ್ಮಮಾಡಿದರು ಪೋಲೀಸರು ಗುಂಡನ್ನು ಹಾರಿಸಬೇಕಾಯಿತು ಗುಂಡನ್ನು ಹಾರಿಸುವುದರ ಫಲವಾಗಿ ಅನೇಕರಿಗೆ ಗಾಯವಾಗಿದೆ, ಯಾರೂ ಮರಣಹೊಂದಿಲ್ಲವೆಂದು ಗೊತ್ತಾಗಿದೆ.

ಚುಟುಕು ವಾರ್ತೆ

ಕೇನಪುರದಲ್ಲಿಯ ಪ್ರಸಿದ್ಧ ಮಿಲ್ ಮ್ಯಾನೇಜರಾದ ಮತ್ತು ಅನೇಕ ಕಂಪೆನಿಗಳನ್ನು ನಡೆಸುತ್ತಿರುವ ಮಿ| ವಿ ಕೇಶ್ ದಾಲ್ಮಿಯರವರು ತಮ್ಮ ಮನೆಯಲ್ಲಿಯೇ ಮರಣೋನ್ಮುಖಾವಸ್ಥೆಯಲ್ಲಿದ್ದರು ಇವರು ಮುಖವೆಲ್ಲಾ ಗಾಯಗಳಿಂದ ತುಂಬಿದ್ದುವು ಬಾಯಿಗೆ ಕಾಗದಗಳ ಚೂರನ್ನು ತುರುಕಿಸಲಾಗಿತ್ತು. ಯಾರೋ ದುರಾತ್ಮರು ಇವರನ್ನು ಕೊಲೆಮಾಡುವ ಉದ್ದೇಶದಿಂದ ಈ ರೀತಿ ಮಾಡಿರುವರೆಂದು ತಿಳಿದುಬರುತ್ತದೆ.

ಮಹಾತ್ಮಾ ಗಾಂಧಿಯವರು ೧೯ನೇ ತಾರೀಕಿಗೆ ತನ್ನ ೪ ವಾರಗಳ ಮೌನವ್ರತವನ್ನು ಸಾಂಗಗೊಳಿಸಿದರು. ಈ ವ್ರತದಿಂದ ಮನಸ್ಸು ಸ್ಥಿಮಿತಕ್ಕೆ ಬರುವುದೆಂದೂ, ಆಕ್ರೋಶಕ್ರೋಧಗಳನ್ನು ಇದರಿಂದ ಕಲೆಯಬಹುದೆಂದೂ ತಿಳಿಸಿದರು ಇನ್ನು ಮುಂದಕ್ಕೂ ತಾಸು ಆಗಾಗ್ಗೆ ಮೌನವ್ರತವನ್ನು ಹಿಡಿಯುವೆನಾಗಿ ಮಹಾತ್ಮಾಜೀಯವರು ಹೇಳುವರು

ಸಂಯುಕ್ತ ಪ್ರಾಂತ್ಯದ ಲಿಬರಲ್ ಸಮ್ಮೇಳನವು ಗೋರಖ್‌ಪುರದಲ್ಲಿ ರಾಜಾ ರಾಜೇಶ್ವರ ಬಲಿಯವರ ಅಧ್ಯಕ್ಷತೆಯಲ್ಲಿ ಮೊನ್ನೆ ನಡೆಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂಡಿಯಾ ಮಸೂದೆಯನ್ನು ತೀರಾ ಖಂಡಿಸಿದರು

ನಾಗಪುರದಲ್ಲಿ ಕಾಲರಾ ರೋಗದ ಪಿಡುಗು ಜಾಸ್ತಿಯಾಗಿದೆ ಮಧ್ಯ ಇಂಡಿಯಾದಲ್ಲಿ ಕಳೆದ ವಾರದಲ್ಲಿ ೨೦೩ ಮರಣಗಳು ಸಂಭವಿಸಿವೆ ನಾಗಪುರದಲ್ಲಿ ೧೩ ಮರಣಗಳಾಗಿವೆ

ಸರ್ ಸಾಮುವೇಲ್ ಹೋರರು ತಮ್ಮ ಸ್ವಸ್ಥಳದಲ್ಲೇ ವಿಶ್ರಾಂತಿ ಹೊಂದುತ್ತಿದ್ದಾರೆ ಈಗ ಅವರಿಗೆ ಸ್ವಲ್ಪ ಗುಣವಾಗಿದೆ

ಆರಿಸ್ಟಡಾರ್ಮ್‌ನಲ್ಲಿರುವ ಜರ್ಮನಿಯ ಮಾಜಿ ಕೈಸರರು ಇನ್‌ಫ್ಲುಯೆಂಜಾ ರೋಗದಿಂದ ನರಳುತ್ತಿದ್ದಾರೆ

ನಮ್ಮ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನರು ವಾಯುವ್ಯ ಸರಹದ್ದು ಪ್ರಾಂತ್ಯದ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಸಿಮ್ಲಾಕ್ಕೆ ಹಿಂತಿರುಗಿದ್ದಾರೆ.

ಸಿಡ್ನಿಯಿಂದ ಇಂಗ್ಲಾಂಡಿಗೆ ಏಕಾಂಗಿಯಾಗಿ ವಿಮಾನದಲ್ಲಿ ಪ್ರಯಾಣಮಾಡಲು ಹೊರಟಿರುವ ಮಿಸ್ ಜೀನ್ ಬೆಟೆನ್ ಎಂಬವಳು ಬಸ್ರಾಕ್ಕೆ ಬಂದಿಳಿದಿರುವಳು

ಪಾಂಡಿಚೇರಿಯಲ್ಲಿ ೩೦ ವಯಸ್ಸಿನ ಜೋಸೆಫ್ ಎಂಬವನು ಆತ್ಮಹತ್ಯ ಮಾಡಿಕೊಂಡನು.

ತಿರುಪತಿಯಲ್ಲಿ ಗಾಡಿ ಹೊಡೆಯುವವರೆಲ್ಲರೂ ಮಿರಿದ ಗಾಡಿ ತೆರಿಗೆಯನ್ನು ಕೊಡಲು ತಮಗೆ ಶಕ್ತಿಯಿಲ್ಲವೆಂದು ಮುಷ್ಕರ ಹೂಡಿದ್ದಾರೆ ಈ ಮುಷ್ಕರಕ್ಕೆ ಸಂಬಂಧಿಸಿದ ನಾಯಕರನ್ನು ಪಸ್ತಗಿರಿ ಮಾಡಿದ್ದಾರೆ

ಮುಜಫರ್ ಪುರದಲ್ಲಿ ಭೂಕಂಪ!

ಕಲ್ಕತ್ತಾ, ಎಪ್ರಿಲ್ ೧೬

ಈ ದಿನ ಬೆಳಗ್ಗೆ ಆರು ಘಂಟೆಯ ಸಮಯಕ್ಕೆ ಮುಜಫರ್‌ಪುರದಲ್ಲಿ ಭೂಕಂಪವಾಯಿತು ಇಲ್ಲಿ ೩ ತಿಂಗಳುಗಳಿಂದ ಇಂಥಹ ಭೂಕಂಪವಾಗಲಿಲ್ಲ ಈಗಿನ ಭೂಕಂಪದಿಂದ ನಷ್ಟವೇನೂ ಸಂಭವಿಸಲಿಲ್ಲ

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಳೆಗಳಿಲ್ಲದ ಉತ್ತಮ ವರ್ಗದ "ಬ್ಲು ಜಾಗ್ಗರ" ವಜ್ರಗಳೂ, "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವುಕಾರ ಶ್ರೀನಿವಾಸ ರಂಗ ಪೈ,

ಸಾವುಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

B. C. I. Bank Ltd.

Vizagapatam

Applications are invited for Taluk Managers and Agents on Rs. 60 10-150/ and Rs 25-50-2½-75-5-100 p m with PENSION and FAMILY RELIEF BONUS CERTIFICATE FREE OF PREMIUMS in the undermentioned places in South Kanara and North Malabar districts

1 Taliparamba Taluk, 2 Tellicherry Town, 3 Tellicherry Taluk, 4 Cannanore Taluk, 5 Cannanore Town, 6 Kasaragod Taluk, 7. Hosdurg, 8 Mangalore Town, 9 Mangalore Taluk, 10 Bantwal, 11 Puttur Taluk, 12. Belthangadi, 13. Karkal, 14 Udipi, 15. Coondapoor, 16 Shankaranarayana

Apply with 2 anna postage stamps giving full particulars and enclosing copies of testimonials to—

B. S. Shetty, Dt Inspector Perdur Post, (S. K. Dt.) or **C. J. Oliver, B A,** Provincial Inspector, Retd, Sub-Megistrate, Fort Salem.

ಮಂಗಳೂರು.

ಇದೇ ತಾ. ೨೧ನೆಯ ಆದಿತ್ಯವಾರ ಸಾಯಂಕಾಲ ಗಂಟೆ ೬ಕ್ಕೆ ಸರಿಯಾಗಿ, ಬೋಳೂರಪಟ್ಣ ಮಿಶನ್ ಚರ್ಚಿನ ಆವರಣದಲ್ಲಿ ಮಿಶನ್ ಸಮಾಜದ ಕೆಲವು ಉತ್ಸಾಹಿ ತರುಣರು 'ಜಾಗ್ರತ' ಎಂಬ ನಾಟಕವನ್ನು ಹಿಂದುಸ್ತಾನಿ, ಕರ್ಣಾಟಕ ಮುಂತಾದ ರಾಗಗಳಿಂದ ಕೂಡಿ ಮನೋರಂಜಕವಾಗಿ ಅಭಿನಯಿಸಿದರು. ಮಿಶನ್ ಸಮಾಜದವರು ನಾಟಕಾಭಿನಯ ನಾಟಕವನ್ನು ಅಯ್ದು ಈ ರೀತಿಯಾಗಿ ರಾಗಗಳನ್ನು ಅಭ್ಯಸಿಸಿ ಉತ್ತಮ ರೀತಿಯಲ್ಲಿ ಅಭಿನಯಿಸಿದುದು ಮಂಗಳೂರಲ್ಲಿ ಇದೇ ಮೊದಲನೆ ಬಾರಿ.

ಈ ಊರಿನ ರೈತರ ಸಭೆಯು ೧೯ನೆಯ ಇಸವಿಯ ರೆವಿನ್ಯೂ ಸೆಟ್ಲ್‌ಮೆಂಟಿನ ಕುರಿತು ತನ್ನ ತೀವ್ರ ಪ್ರತಿಭಟನವನ್ನು ವ್ಯಕ್ತಗೊಳಿಸುವುದಲ್ಲದೆ ಅದರಿಂದ ಹೊರಿಸಲ್ಪಟ್ಟ ತೀರ್ವೆಯ ಭಾರವು ಈಗಿನ ಆರ್ಥಿಕ ದುರವಸ್ಥೆಯನ್ನು ಇನ್ನಷ್ಟು ಹೆಚ್ಚಿಸುವುದೆಂದು ಖಂಡಿತ ಅಭಿಪ್ರಾಯಪಡುತ್ತದೆ. ಹಾಗೂ ಸಂಘಟಿತ ರೀತಿಯಿಂದ ಬಲವಾದ ಚಳವಳವನ್ನು ಹೂಡುವ ನಿರ್ಧಾರವನ್ನು ಮಾಡುತ್ತದೆ ಎಂದು ಜಿ. ಕಾ. ಕಮಿಟಿಯು ಠರಾವು ಮಾಡಿದೆ.

ಶ್ರೀ ಸೀರೇಶ್ವಾಲ್ಯ ಆರ್ಯ ಭಜನೆಮಂಡಳಿಯ ಚತ್ವಾರಿಂಶ ವಾರ್ಷಿಕೋತ್ಸವವು ಇದೇ ಎಪ್ರಿಲ್ ತಿಂಗಳ ತಾ ೨೮ನೆ ಆದಿತ್ಯವಾರ ಸಾಯಂಕಾಲ ಗಂಟೆ ೫ಕ್ಕೆ ರೈಲ್ವೇ ಸ್ಟೇಶನ್ ಕೆಡ್ಡಿನ ಬಳಿಯಿರುವ ಸದ್ರಿ ಮಂಡಳಿಯಲ್ಲಿ ಮಾ। ರಾ। ರಾವ್‌ಬಹದ್ದೂರ್ ಯನ್ ಯನ್ ಸುವರ್ಣ ಬಿ. ಎ ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿರುವುದು, ಈ ಸಂದರ್ಭದಲ್ಲಿ ಮಾ। ರಾ। ಗಳಾದ ಬ್ರಹ್ಮ ಪ್ರಚಾರಕ ಇ ಸುಬ್ಬಕೃಷ್ಣಯ್ಯ M. A. B Sc B D ಪಿ. ಎನ್ ತಿಂಗಳಾಯ, ಲಕ್ಷ್ಮೀನಾರಾಯಣ ಪುಣಿಂಚತ್ತಾಯ ಮೊದಲಾದವರು ಭಾಷಣಕೊಡಲಿರುವರು. ಎಲ್ಲರಿಗೂ ಸುಸ್ವಾಗತವಿದೆ ಅದಲ್ಲದೆ ತಾ. ೨೭ನೇ ಶನಿವಾರ ರಾತ್ರಿ ಗಂಟೆ ೯ಕ್ಕೆ ಸರಿಯಾಗಿ ಸದ್ರಿ ಮಂಡಳಿಯಲ್ಲಿ ಕೆ ಸುನಂದಿ ವ್ಯಾಯಮದ ಸುಮಧುರ ಗಾಯನದಿಂದ ಕೂಡಿದ ಹರಿಕಥೆಯೂ ಇರುವುದು

ಸ್ಥಳೀಯ ಥಿಯೊಸೊಫಿಕಲ್ ಸೊಸೈಟಿನ ಆಶ್ರಯದಲ್ಲಿ ಕಳೆದ ರವಿವಾರ ಡಿಸ್ಟ್ರಿಕ್ಟ್ ಫೊರೆಸ್ಟ್ ಆಫೀಸರರಾದ ಜನಾಬ್ ಅಬ್ದುಲ್ ಕರೀಮರು 'ಬ್ರಹ್ಮಜ್ಞಾನ ದೃಷ್ಟಿಯಿಂದ ಇಸ್ಲಾಂ ಮತ' ಎಂಬ ಕುರಿತು ಭಾಷಣಮಾಡಿದರು

ಮೊಗವೀರ ಶ್ರೀ ಜ್ಞಾನೋದಯ ಸಮಾಜದ ೨೫ನೇ ವಾರ್ಷಿಕೋತ್ಸವವು ಕಳೆದ ರವಿವಾರ ಹೊಯ್ಗೆಯಲ್ಲಿ ಬಹು ವಿಜೃಂಭಣೆಯಿಂದ ಜರುಗಿ.. ಶ್ರೀ ಇ. ಸುಬ್ಬಕೃಷ್ಣಯ್ಯನವರು ಅಧ್ಯಕ್ಷರು

ಇಲ್ಲಿಯ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಸ್ಪೆಶಲ್ ಆಡಿಟ್ ನಡೆದು ಮುಗಿದಿದೆ ವರದಿಯು ಮೇಲಧಿಕಾರಿಗಳಿಗೆ ಹೋಗಿರುವುದು ಸುಮಾರು ೧೪,೦೦೦ ರೂಪಾಯಿಗಳ ವಂಚನೆ ನಡೆದಿದೆಯಾಗಿ ತಿಳಿದು ಬರುತ್ತದೆ

ತಾ ೧೮ರಲ್ಲಿ ಕಂಕನಾಡಿ ಬಳಿ ಒಂದು ಲೋರಿಯು ಬಿದ್ದು ಡ್ರಾಯ್ವರನೂ, ಕಂಡಕ್ಟರನೂ ಜಖಂಗೊಂಡಿರುವರು, ಲೋರಿಯ ಮುಂಭಾಗವು ಹುಡಿಯಾಗಿದೆ

ಸಾರ್ವಭೌಮರ ರಜತೋತ್ಸವಕ್ಕಾಗಿ ನಗರಸಭೆಯವರು ಪ್ರತ್ಯೇಕಿಸಿಟ್ಟಿರುವ ರೂ ೧೫೦ರಲ್ಲಿ ರೂಪಾಯಿಯನ್ನು ನಗರಸಭೆಯ ಖಜೇರಿಯನ್ನೇ ಶೃಂಗರಿಸಿ ಬೆಳಗಿಸುವುದಕ್ಕಾಗಿ ವೆಚ್ಚಮಾಡಲಿರುವರು

ಕರ್ನಾಟಕ ಪ್ರಾಂತಿಕಪರಿಷತ್ತು ತಾ ೯ಕ್ಕೆ ಜರಗುವುದಿಲ್ಲವೆಂದೂ ಬದಲಿಗೆ ಅದು ತಾ ೧೦ರಲ್ಲಿ ಜರಗುವುದೆಂದೂ ಕಮಲಾದೇವಿಯರು ಕಳಿಸಿದ ತಂತಿಯಿಂದ ತಿಳಿದುಬಂದಿದೆ

ಇದೇ ತಾ. ೨೯ನೇ ಸೋಮವಾರ ರಾತ್ರಿ ೯। ಗಂಟೆಗೆ ಇಲ್ಲಿಯ ಶ್ರೀ ರಾಮಕೃಷ್ಣವಿದ್ಯಾರ್ಥಿಭವನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲಾಭಿಜ್ಞರ ಸಹಕಾರದಿಂದ ಜರಗುವುದು. ಪ್ರಸಂಗ ೧ ಶ್ರೀರಾಮ ಪಾದುಕಾಪಟ್ಟಾಭಿಷೇಕ ೨. ಸುಗ್ರೀವ ಸಖ್ಯದ ದ್ವಿತೀಯ ಭಾಗ, ೩. ಅಂಗದಸಂಧಾನದ ದ್ವಿತೀಯ ಭಾಗ, ಯಕ್ಷಗಾನ ಕಲಾಪ್ರೇಮಿಗಳೆಲ್ಲರೂ ಈ ಸಮಾರಂಭಕ್ಕೆ ಬರಬೇಕಾಗಿ ವ್ಯವಸ್ಥಾಪಕರಾದ ಬಾಳಿಕೆ ಸುಬ್ರಹ್ಮಣ್ಯರು ವಿನಂತಿಸುತ್ತಾರೆ.

ತಾಲೂಕುಗಳಿಂದ.

ಪುತ್ತೂರು:—ಬ್ರಹ್ಮಶ್ರೀ ಕುರಿಯದ ನಾರಾಯಣ ಆಚಾರ್ಯರವರು ಇದೇ ತಾ. ೪ನೇ ಗುರುವಾರ ರಾತ್ರಿ ತನ್ನ ೮೦ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಈ ಮಹನೀಯರು ಪುತ್ತೂರು ತಾಲೂಕು ಬಂದಾರು ಗ್ರಾಮದ ಕುರಿಯದಲ್ಲಿ ಒಂದು ಬಡ ಸ್ಮಾರ್ತ ಬ್ರಾಹ್ಮಣಕುಟುಂಬದಲ್ಲಿ ಶಾ ಶ ೧೭೭೭ರಲ್ಲಿ ಜನ್ಮವೆತ್ತಿದರು ಬಾಲ್ಯದಲ್ಲೇ ಮಾತಾಪಿತೃಗಳ ವಿಯೋಗವುಂಟಾದರೂ ತನ್ನ ೧೬ನೇ ವಯಸ್ಸಿನಲ್ಲಿ ಇವರು ಮಡಿಕೇರಿಗೆ ಹೋಗಿ ಅಲ್ಲಿ ಸಂಸ್ಕೃತ ವೇದ ಮತ್ತು ಆಗಮಾದಿ ಶಾಸ್ತ್ರಗಳನ್ನು ವ್ಯಾಸಂಗಮಾಡಿ ಪುತ್ತೂರಿಗೆ ಬಂದರು ಇವರು ಹಲವು ಬಡ ಬ್ರಾಹ್ಮಣ ಬಾಲಕರಿಗೆ ಅನ್ನವಸ್ತ್ರಗಳನ್ನು ಕೊಟ್ಟು, ವೈದಿಕ ಶಿಕ್ಷಣವನ್ನು ಕೊಟ್ಟುದಲ್ಲದೆ ಹಲವು ನವೀನ ದೇವಾಗಾರಗಳಲ್ಲಿ ವಿಗ್ರಹಪ್ರತಿಷ್ಠೆ, ಬ್ರಹ್ಮಕಲಶವೇ ಮೊದಲಾದ ವಿಶೇಷ ಕಾರ್ಯಗಳನ್ನು ಮಾಡಿ ಸಮಾಜದಲ್ಲಿ ಹೆಚ್ಚಿನ ಗೌರವ ಪೂಜ್ಯತೆಗಳನ್ನು ಪಡೆದಿದ್ದರು. ಇಂತಹ ಮಹನೀಯರ ನಿಧನದಿಂದ ಬ್ರಾಹ್ಮಣವರ್ಗಕ್ಕೆ ಅಪಾರವಾದ ಒಂದು ನಷ್ಟವೇ ಸರಿ ಮೃತರ ದಿವ್ಯಾತ್ಮಕ್ಕೆ ಚಿರಶಾಂತಿ ಮತ್ತು ಅವರ ಕುಟುಂಬಕ್ಕೆ ಆರೋಗ್ಯ ಐಶ್ವರ್ಯಾದಿಗಳನ್ನು ದೇವರು ಕರುಣಿಸಲಿ

ಬೇಕಲ:—ಮುಖ್ಯವಾಗಿ ಹೊಸದುರ್ಗ ಬೇಕಲ ಮತ್ತು ಚಂದ್ರಗಿರಿ ಎಂಬೀ ಊರುಗಳಲ್ಲಿ ಕಾಣಬರುವ ಅತ್ಯಲ್ಪ ಸಂಖ್ಯಾಕರಾದ ಕುಮಾರ ಕ್ಷತ್ರಿಯ ಸಮಾಜದವರು ತಮ್ಮ ಏಳಿಗೆಯ ಕುರಿತು ಇತ್ತಲಾಗೆ ಒಂದು ಸಂಘವನ್ನು ಏರ್ಪಡಿಸಿ ತನ್ಮೂಲಕ ಸಾಧ್ಯವಾದ ಎಲ್ಲಾ ರೀತಿಗಳಿಂದಲೂ ತಮ್ಮ ಸ್ಥಿತಿಗತಿಗಳನ್ನು ಅಭಿವೃದ್ಧಿಗೊಳಿಸಲು ಹವಣಿಸುತ್ತಿದ್ದಾರೆ ಇದೇ ತಿಂಗಳ ತಾ ೮ ಮತ್ತು ೯ರಲ್ಲಿ ಈ ಸಂಘದ ನೇತೃತ್ವದಲ್ಲಿ ಈ ಮತದವರ ದ್ವಿತೀಯ ಪರಿಷತ್ತು ಮ ರಾ। ಹೊಸದುರ್ಗ ವಾಸುದೇವರವರ ಅಧ್ಯಕ್ಷತೆಯಲ್ಲಿ ಜಯಪ್ರದವಾಗಿ ಜರಗಿತು

ಕಡಬ:—ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾವರ್ಧಂತಿ ಉತ್ಸವವು ಇದೇ ೧೯ರಲ್ಲು ಬಿ ರಾಮಚಂದ್ರರಾವ್, ಬಿ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು

ಕಾರ್ಕಳ:—ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಇದೇ ತಿಂಗಳ ತಾ ೧೪ರ ದಿನ ಪಳೆಯತೋರಣಗಳಿಂದ ನಯನಮನೋಹರವಾಗಿ ಶೃಂಗರಿಸಲ್ಪಟ್ಟ ಶಾಲೆಯ ಭವ್ಯ ಭವನದಲ್ಲಿ ಶ್ರೀ। ಹಾಜಿ ಅಂಡಾರ ಸಯ್ಯದ ಹುಸೇನ ಸಾಹೇಬ ವಕೀಲರವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಉದ್ಯೋಗದಿಂದ ನಿವೃತ್ತರಾದ ಸರಕಾರಿ ನೌಕರರು ಮೊದಲಾದವರು ತಮ್ಮ ಜೀವನದ ಶೇಷಾಂಶವನ್ನು ಆತ್ಮಚಿಂತನೆಯಲ್ಲಿ ಕಳೆಯಲು ಅನುಕೂಲವಾಗುವಂತೆ ಇಲ್ಲಿಯ ಶ್ರೀ ಶ್ರೀನಿವಾಸ ಆಶ್ರಮದಲ್ಲಿ ತಕ್ಕ ನಿವಾಸದ ಏರ್ಪಾಡನ್ನು ಮಾಡಿರುವರಲ್ಲದೆ ಪುರೋಹಿತ ವರ್ಗಕ್ಕೆ ಅತ್ಯಂತಾವಶ್ಯಕವಾದ ಕರ್ಮಾಂಗವನ್ನೂ ಕಲಿಸುವ ಉಚಿತ ವ್ಯವಸ್ಥೆಮಾಡಿರುವರು. ಬೇಕಾದವರು ಈ ಅನುಕೂಲತೆಗಳ ಸದುಪಯೋಗ ಮಾಡಿಕೊಳ್ಳಬಹುದು

ಪತ್ರಿಕೆಗಳಲ್ಲಿ ಪ್ರಕಟವಾದಂತೆ ಶ್ರೀಮತಿಯರಾದ ಕಮಲಾದೇವಿ, ತಲಚೇರಿಕರ ಮತ್ತು ಶ್ರೀ। ಹರ್ಡೀಕರ, ಕಿಲ್ಲೆ ಸೂರಪ್ಪಯ್ಯ ಮೊದಲಾದವರು ಇಲ್ಲಿ ಬಂದು ಸಭೆಯಲ್ಲಿ ಭಾಷಣ ಕೊಟ್ಟು ಕಾಂಗ್ರೆಸ ಪ್ರಚಾರಕಾರ್ಯ ಮಾಡಿಹೋದರು.

ಸಿಲ್ವರ ಜುಬಿಲಿ ಫಂಡಿಗೆ ಕಾರ್ಕಳದಿಂದ ೨೭೫ ರೂಪಾಯಿಗಳ ವರೆಗೆ ವಾಗ್ದತ್ತವಾಗಿರುವುದಾಗಿ ತಿಳಿಯುತ್ತೇವೆ

ಇದೇ ಕಳೆದ ತಾ ೧೭ರಲ್ಲು ಸ್ಥಳೀಯ ಶ್ರೀ। ಪದ್ಮಶಾಲಿ ಸೆಟ್ಟಿಗಾರ ವೈಶ್ಯಸಮಾಜದ ಶ್ರೀ ವೀರಭದ್ರ ನಿಲಯದಲ್ಲಿ ಅತಿ ವಿಜೃಂಭಣೆಯಿಂದ ಜರಗಿದ ವಾರ್ಷಿಕ ವಿಜಯೋತ್ಸವವು ಸ್ಥಳೀಯ ಪರಸ್ಪರ ಸ್ವಾರ್ಥಪರರ ತೀವ್ರ ವಿರೋಧದ ನಡುವೆ ಸ್ವಸಮಾಜಸೇವಾ ಯುವಕ ಸಹಿತದ ಅವಿಶ್ರಾಂತ ಪ್ರಯತ್ನಗಳಿಂದ ಸಂಪೂರ್ಣ ಸಾತ್ವಿಕ ರೀತಿಯಿಂದಲೇ ಬಹು ಯಶಸ್ವಿಯಾಗಿ ಆಚರಿಸಲ್ಪಟ್ಟಿತು

ಶಿರ್ವ:—ಶ್ರೀ ದ ಪ್ರ ಶೂ, ಕಾರ್ಯಾಲಯದಲ್ಲಿ ಶಿರ್ವದ ಸಾರ್ವಜನಿಕರ ಮಹಾಸಭೆಯು ಇದೇ ಕಳೆದ ತಾ ೧೮ನೇ ಗುರುವಾರ ಮಧ್ಯಾಹ್ನ ೪ ಗಂಟೆಗೆ ನೆರೆದು 'ಶ್ರೀ ಶಿವಾಜಿ ಮಹಾರಾಜರ ಪುಣ್ಯತಿಥಿಯು' ಗಾಯನ, ಭಾಷಣ ವಾದ್ಯ ವಾದಿಗಳಿಂದ ಆಚರಿಸಲಟ್ಟಿತು

ಫಲಿಮಾರು:—ಇದೇ ತಿಂಗಳ ತಾ, ೧೯ನೇ ಶುಕ್ರವಾರ ಸಾಯಂಕಾಲ-ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಕೋಣೆಯಲ್ಲಿ ಹರಿಜನ ಬಾಲಕರ ಸಹಾಯಾರ್ಥವಾಗಿ ಫಲ್ಗುಣವಾಚನ ಏರ್ಪಡಿಸಲ್ಪಟ್ಟಿತು. ಶ್ರೀ। ಪೋಲ್ಯ ದೇಜುಸೆಟ್ರಿವರ ಓದುವಿಕೆಯೂ, ಶ್ರೀ। ತೋಳೂರು ನಾರಾಯಣ ಕಿಲ್ಲೆಯವರ ಅರ್ಥವೂ ಸಭಿಕರ ಮನಸ್ಸನ್ನು ಸೆಳೆಯುವಂತಾಗಿತ್ತು. ಟಿಕೇಟುಗಳ ಮಾರಾಟದಿಂದ ರೂ. ೨೧೧-೩-೦ ಜಮೆಯಾಗಿ ಜಿಲ್ಲಾ ಹರಿಜನ ಸಂಘದ ಕಾರ್ಯಗಳ ವಶಾ ಒಪ್ಪಿಸಲ್ಪಟ್ಟಿತು,

ತಾ. ೨೦ನೇ ಶನಿವಾರ ಇಲ್ಲಿ ೨೨ ಶಾಲೆಯ ಶ್ರೀ ರಾಮಾ ಸ್ಕೌಟ್ ಟ್ರೂಪಿನವರು ಮುಂಡ್ಕೂರಿನವರ ಆಮಂತ್ರಣವನ್ನು ಸ್ವೀಕರಿಸಿ, ಅಲ್ಲಿಗೆ ಚಕ್ಕೈಸಿ ಊರವರ ಆದರಾತಿಥ್ಯಗಳನ್ನು ಪಡೆದವರಾಗಿ, ರಾತ್ರಿಯಲ್ಲಿ ಒಂದು ಶಿಬಿರಾಗ್ನಿಯನ್ನು ಏರ್ಪಡಿಸಿದರು

ಪಣಂಬೂರು:—ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಇದೇ ತಾ ೨೮ನೇ ಆದಿತ್ಯವಾರ ರಾತ್ರಿ ಗಂಟೆ ೮ಕ್ಕೆ ಮಂಗಳೂರು ರೇಂಜ್ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ। ಕೆ ಸಂಜೀವಭಟ್ಟ ಎಂ ಎ ಎಲ್. ಟಿ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಉಡುಪಿ:—ಸ್ಥಳೀಯ ಕ್ರಿಶ್ಚನ್ ಹ್ಯಾಸ್ಕೂಲಿನ ಸಹಾಯಾಧ್ಯಾಪಕರಾದ ಮಿ। ಪಿ ಎಸ್ ಕಾರ್ಬೆಟ್‌ರನ್ನು ಸದ್ರಿ ಮಿಶನಿನ ಹಾಯರ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ವರ್ಗಾಯಿಸಲಾಗಿದೆ ಇವರನ್ನು ಹ್ಯಾಸ್ಕೂಲಿನ ಅಧ್ಯಾಪಕ ವರ್ಗದವರು ಉಪಹಾರ ಸತ್ಕಾರದಿಂದ ಸನ್ಮಾನಿಸಿ ಬೀಳ್ಕೊಟ್ಟರು ಆದರೆ ಇವರಿಗಿಂತ ಕಡಿಮೆ ಯೋಗ್ಯತೆಯವರಲ್ಲದ ಹಲವು ಅಕ್ರೈಸ್ತ ಉಪಾಧ್ಯಾಯರನ್ನು ವರ್ಗಾಯಿಸುವಾಗ ಕೆಲಸದಿಂದ ನಿವೃತ್ತಗೊಳಿಸುವಾಗ ಇಂತಹ ಯಾವುದೇ ತರದ ಸನ್ಮಾನ ಅಥವಾ ಬರಿ ಬಾಯಮಾತಿನಿಂದಾಗಲಿ ಬೀಳ್ಕೊಡದಿದ್ದ ಸಂಪ್ರದಾಯದ ಅರ್ಥವೇನೋ ತಿಳಿಯುವಂತಿಲ್ಲ' ಕ್ರೈಸ್ತ ಉಪಾಧ್ಯಾಯರನ್ನು ಹಂಗಾಮಿಯಾಗಿ ಕೆಲಸಕ್ಕೆ ನಿಯಮಿಸಲ್ಪಟ್ಟಾಗ ಅಥವಾ ವರ್ಗಾಯಿಸಲ್ಪಟ್ಟಾಗ ಕೂಡ ಸತ್ಕಾರಕೂಟಗಳು ಅಲ್ಲದೆ ಜ್ಞಾಪಕಾರ್ಥವಾದ ಉಚಿತಗಳು ಅಧ್ಯಾಪಕ ಅಥವಾ ವಿದ್ಯಾರ್ಥಿ ವರ್ಗದಿಂದ ಏರ್ಪಡಿಸಲಾಗಿದುವು ಅಕ್ರೈಸ್ತ ಅಧ್ಯಾಪಕರು ಜಾತೀಯತೆಯ ಅಥವಾ ಬೇರಾವ ಅಯೋಗ್ಯತೆಗಾಗಿ, ಸದ್ರಿ ಶಾಲೆಯನ್ನು ಬಿಟ್ಟುಹೋಗಬೇಕಾಗಿ ಬಂದಾಗ ಯಾವುದೊಂದು ಬಗೆಯ ಸನ್ಮಾನ ಸತ್ಕಾರ್ಯಕ್ಕೂ ಪರಿಗಣಿಸಲ್ಪಡದಿದ್ದುದು ಅಧ್ಯಾಪಕ ವರ್ಗ ಅಥವಾ ವಿದ್ಯಾರ್ಥಿ ವರ್ಗದವರ ಅಸಡ್ಡೆಯೆ? ಜಾತೀಯತೆಯೇ ಇದಕ್ಕೆ ಮೂಲಕಾರಣವಾಗಿದ್ದಲ್ಲಿ ಅಕ್ರೈಸ್ತ ವಿದ್ಯಾರ್ಥಿಗಳ ಹೆತ್ತವರೂ, ರಕ್ಷಕರೂ ಇದನ್ನು ಗಮನಿಸುವರೇ?

ಮಹಾತ್ಮಾ ಗಾಂಧಿಯವರಿಂದ ತೆರೆಯಲಾದ ಇಲ್ಲಿನ ಶುದ್ಧ ಖಾದಿ ಅಂಗಡಿಯಾದ ಸ್ವದೇಶಿ ಭಂಡಾರ ಲಿಮಿಟೆಡ್‌ನಿಂದ ಇದೇ ರಾಷ್ಟ್ರೀಯ ವಾರದಲ್ಲಿ ಸುಮಾರು ರೂ ೩೭೭೮ ಖಾದಿಯು ವಿಕ್ರಯವಾಗಿರುತ್ತದೆ ಈ ಅಂಗಡಿಯಲ್ಲಿ ಸ್ತ್ರೀಪುರುಷರಿಗೆ ಉಪಯುಕ್ತವಾದ ಯಾವತ್ತೂ ಬಗೆಯ ಖಾದಿಯು, ವಿವಾಹ ಸಂದರ್ಭಗಳಿಗೂ ಉಪಯೋಗವಾಗುವ ಬೆನಾರಿಸ್ ವಗೈರೆ ಪಟ್ಟೆ ಜರಿ ಸೀರೆಗಳು ಕೂಡ, ದೊರೆಯುತ್ತದೆ ಸದ್ಯ ಜರಗಲಿರುವ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ನೆವದಿಂದಲಾದರೂ ಮಹನೀಯರೆಲ್ಲ ಬಡವರ ಖಾದಿಯನ್ನು ಹೆಚ್ಚೆಚ್ಚು ಕೊಂಡುಕೊಂಡು ದೇಶಸೇವೆಯಲ್ಲಿ ನೆರವಾಗಲೆಂದು ಅಪೇಕ್ಷಿಸಲಾಗುತ್ತದೆ

ಮಣಿಪಾಲದಲ್ಲಿ "ದಿ ಕೆನರಾ ಲೇಂಡ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್"ಗೆ ಸೇರಿರುವ ಭೂಮಿಯಲ್ಲಿ ಮನೆ ಅಂಗಡಿಗಳನ್ನು ಕಟ್ಟುವುದಕ್ಕೆ ಯೋಗ್ಯವಾದ ನೆಲಗಳ ನಕ್ಷೆ ವಿಭಾಗಿಸಿದೆ ಅಂಗಡಿಯ ನೆಲಗಳು ಉಡುಪಿ ಕಾರ್ಕಳ ರಾಜಾರಸ್ತೆಯ ಎರಡು ಬದಿಗಳಲ್ಲಿವೆ. ಮನೆಯ ನೆಲಗಳು ಆ ಪ್ರದೇಶದ ಒಳಗುಗ್ಗುಲಿನಲ್ಲಿವೆ, ಆ ಪ್ರದೇಶ ದೊಳಗಿನ ರಸ್ತೆಗಳೂ, ವಿದ್ಯುಚ್ಛಕ್ತಿಯೂ ಉಪಯೋಗಕ್ಕೆ ಸಿದ್ಧವಾಗಿವೆ

ನಗರವಾಸದ ಎಲ್ಲ ಸೌಕರ್ಯಗಳನ್ನೊಳಗೊಂಡು ಅಗ್ಗವಾಗಿ ಹಳ್ಳಿಯ ವಾಸದ ಸುಖವನ್ನನುಭವಿಸಲು ಇಚ್ಛಿಸುವವರಿಗೆ ಆ ಪ್ರದೇಶದ ಗುಣಗಳು ಬಲು ಆಕರ್ಷಕವಾಗಿವೆ

ಇವನ್ನು ಪಡೆಯಲು ಇಚ್ಛಿಸುವವರಿಗೆ ಅಗ್ಗದಲ್ಲಿ ಒದಗಿಸಿಕೊಡುವ ಉದ್ದೇಶದಿಂದ ಮನೆ ಮತ್ತು ಅಂಗಡಿಯ ನೆಲಗಳನ್ನು ಕೆಲವು ಶರ್ತಗಳ ಮೇಲೆ ಮೂಲಗೇಣಿಗೆ ಕೊಡಲಾಗುತ್ತದೆ. ಗೇಣಿಯು ನೆಲಕ್ಕನುಸಾರ (ಆಯಾ ಸ್ಥಳಗಳ ವಿಸ್ತಾರ ಮತ್ತು ಸ್ಥಾನಮಾನಗಳನ್ನನುಸರಿಸಿ) ರೂ. ೬ರಿಂದ ೧೧೦ರ ವರೆಗಿಂದ ತೊಡಗಿ, ಕೆಳಗಿನಂತೆ ಐದು ವರ್ಷಗಳ ವರೆಗೆ ವಿಮುಕ್ತ, ಬಳಿಕ ಅನಂತರ ರೂ ೧೫ರಿಂದ ೨೫ರ ವರೆಗೆ ಬಂದು ನಿಲ್ಲುವುದು ಎಂದೂ, ಬೇಕಾದವರು ಕೂಡಲೇ ಬರೆದುಕೊಳ್ಳಬೇಕೆಂದೂ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ, ಇದರ ಮೆನೇಜರರು ತಿಳಿಸುತ್ತಾರೆ

ಕಾಪು:—ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಹಳೇ ವಿದ್ಯಾರ್ಥಿಸಂಘದ (Old boys' Association) ಮಹಾಸಭೆಯು ಇದೇ ಬರುವ ಮೇ ತಿಂಗಳ ತಾ ೧೯ನೇ ಆದಿತ್ಯವಾರ ಅಪರಾಹ್ನ ಗಂಟೆ ೨ಕ್ಕೆ ಸದ್ರಿ ಶಾಲಾ ಕಟ್ಟಡದಲ್ಲಿ ಮ, ರಾ, ಎಚ್ ದೇಜುಸೆಟ್ರಿ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿರುವುದು. ಆದುದರಿಂದ ಈ ಶಾಲೆಯ ಎಲ್ಲಾ ಹಳೆ ವಿದ್ಯಾರ್ಥಿಗಳು ಆದಿನ ಸಭೆಗೆ ಬಂದು ಸಹಕರಿಸಿ ಸಂಘದ ಏಳಿಗೆಯನ್ನು ಬಯಸಬೇಕಾಗಿ ಕಾರ್ಯದರ್ಶಿಯವರ ಕೋರಿಕೆ.

ಕಾಪು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ 'ಶ್ರೀ ಜನಾರ್ಧನ ಸ್ಕೌಟ್ ದಳವು' ಇದೇ ತಾ, ೧೮-೪-೩೫ನೇ ಗುರುವಾರ ಸಾಯಂಕಾಲ ಎಲ್ಲೂರಿಗೆ ಹೋಗಿ, ಅಲ್ಲಿಯ ರಥೋತ್ಸವವನ್ನು ನೋಡಿ ಅಲ್ಲಿಂದ ಮರುದಿನ ಬೆಳಗ್ಗೆ ಹೊರಟು ಬೆಳ್ಮಣ್ಣು ಕಾರ್ಕಳ, ಮೂಡಬಿದ್ರೆ, ಮೂಲ್ಕಿ ಹೆಜಮಾಡಿ ಮೊದಲಾದ ಸ್ಥಳಗಳಲ್ಲಿ ಶಿಬಿರಗಳನ್ನೇರ್ಪಡಿಸಿ ತಾ ೨೨ ೪ ೩೫ಕ್ಕೆ ಸ್ವಸ್ಥಾನಕ್ಕೆ ಹಿಂತಿರುಗುವುದು ಸದರಿ ಸ್ಥಳಗಳಲ್ಲಿ ಶಿಬಿರಗಳನ್ನೇರ್ಪಡಿಸಲು ಸಹಕರಿಸಿದ ಮಾನನೀಯ ವೃಂದಕ್ಕೂ ಅಲ್ಲದೆ ಹೆಚ್ಚಿನ ಸಹಾಯವನ್ನಿತ್ತು ಪ್ರೋತ್ಸಾಹಿಸಿದ ಮ। ೧೫। ಮೂಡಬಿದ್ರೆ ಧರ್ಮಸಾಮ್ರಾಜ್ಯ ಅರಸುಗಳವರಿಗೂ ಕಾರ್ಕಳ ಹೈಸ್ಕೂಲು ಮತ್ತು ಮೂಲ್ಕಿ ಕೊಲೆಕಾಡಿ ಹಾಯರ್ ಎಲಿಮೆಂಟರಿ ಶಾಲೆಗಳ ಸ್ಕೌಟು ಮಾಸ್ತರುಗಳಿಗೂ ಈ ದಳವು ಚಿರಋಣಿಯಾಗಿರುವುದು

ಸ್ವೀಕಾರ

ಶ್ರೀ ಮಹದೇವಿಯಕ್ಕನವರ ಜೀವನಚರಿತ್ರೆ— ಲೇಖಕರು ಶ್ರೀ। ಟಿ ಎನ್ ಮಹದೇವಯ್ಯ ಬೆಂಗಳೂರು, ಕ್ರಯ ಆಣೆ ೩ ಸುಮಾರು ಎಂಟುನೂರು ವರ್ಷಗಳ ಹಿಂದೆ ಕನ್ನಡನಾಡಿನಲ್ಲಿ ಜನಿಸಿ, ಸನ್ಯಾಸಿನಿಯಾಗಿ ಆಗಿನ ಪ್ರಭುವನ್ನೂ ಕೂಡ ಶಿವಶರಣನನ್ನಾಗಿ ಮಾಡಿದ ಮಹಾತ್ಮಳ ಚರಿತ್ರೆಯು ಮಧುರ ಶೈಲಿ ಕನ್ನಡಿಗರು ಅವಶ್ಯ ಓದತಕ್ಕುದು.

ಬಾಲಚಂದ್ರ— ಉಡುಪಿ ದಕ್ಷಿಣ ಕನ್ನಡ ಜಿಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದಿಂದ ಹೊರಡುವ ಮಾಸಪತ್ರಿಕೆ ಇದರ ಈಗಿನ ರೂಪು ಉಪಾಧ್ಯಾಯರಿಗೆ ಯಶಸ್ಸನ್ನು ತರುವಂತಹುದಲ್ಲ ಸರ್ವಾಂಗಸುಂದರವಾಗಿ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಸಂಬಂಧವುಳ್ಳ ಲೇಖನಗಳ ಸಹಿತ ಇದು ಹೊರಟು ಜಿಲ್ಲೆಯ ಉಪಾಧ್ಯಾಯರುಗಳ ಸಾಹಸಕ್ಕೆ ಕೀರ್ತಿ ತರಬೇಕಾಗಿದೆ ಎಲ್ಲರೂ ಪ್ರೋತ್ಸಾಹಿಸಲಿ

ಬಾಲಕಾಶ್ರಮ. ಶಿವಮೊಗ್ಗ— ಇದರ ದ್ವಿತೀಯ ವಾರ್ಷಿಕ ವರದಿ (೧೯೩೩-೧೯೩೪) ಪರೋಪಕಾರವನ್ನು ತನ್ನ ಮುಖ್ಯ ಧ್ಯೇಯವನ್ನಾಗಿಟ್ಟಿರುವ ಈ ಪುಣ್ಯಕರ ಸಂಸ್ಥೆಗೆ ಸಾರ್ವಜನಿಕರು ಇನ್ನೂ ಸಹಕಾರವನ್ನು ನೀಡಲೆಂದು ಕೋರಿಕೆ

"ಅಮಲು"—ಅನುವಾದಕರು ಕೈ। ವಾ ಕೆ ರಾಘವಾಚಾರ್ಯರು, ಇದನ್ನು ಶ್ರೀ। ಬಿ ಒಕ್ಕಲಿಗದೇವ ನಿಮ್ಮತ್ತೀರ್ಥಿಯವರು ಪ್ರಕಾಶಿಸಿ ಕನ್ನಡನಾಡಿಗೆ ಅಮೂಲ್ಯ ಸೇವೆಯನ್ನೆಸಗಿಸಿರುವರು, ಇಂತಹ ಸುಭಗಸಾಹಿತ್ಯವನ್ನು ಶಿಕ್ಷಿತ ವರ್ಗದವರಲ್ಲಿ ಪ್ರಚಾರಗೊಳಿಸುವ ಬದಲು ಇದನ್ನು ಮದ್ಯಪಾಯಿಗಳಲ್ಲಿ ಪ್ರಸಾರಮಾಡಬೇಕು. ಪ್ರಾಂತಿಕ ಕಾಂಗ್ರೆಸ್ ಸಭೆಗಳವರು ಇಂತಹ ಸಾಹಿತ್ಯ ಪ್ರಕಟಿಸಿ ಪ್ರೋತ್ಸಾಹಪಡಿಸಬೇಕು.

ಭಾಸ್ಕರಪ್ರಕಾಶ ವರ್ಕ್ಸ್, ಪಂಜಲಿ, ಬಿಜಾಪುರ, ಇವರು ಕಳುಹಿಸಿರುವ 'ನೀಲಿಮಸಿ' 'ಭಾಸ್ಕರಪ್ರಕಾಶ' ಇವುಗಳನ್ನು ಸ್ವೀಕರಿಸಿರುತ್ತೇವೆ ನೀಲಿ ಮಸಿಯು ಉತ್ತಮವಾಗಿದೆ, ಭಾಸ್ಕರ ಪ್ರಕಾಶವು ಬೇರೆ ವಿಷಕ್ರಿಮಿಗಳ ಕಡಿತಗಳಿಗೂ, ಹುಳುಗಳನ್ನು ನಾಶಮಾಡುವುದಕ್ಕೂ ಪ್ರಯೋಜನಕಾರಿಯಾಗಿದೆ. ಸ್ವದೇಶೀ ವಸ್ತುಗಳವು, ನಮ್ಮ ವಾಚಕರು ಈ ಕಂಪೆನಿಗೆ ಪ್ರೋತ್ಸಾಹಪಡಿಸಬೇಕು

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ – ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು– ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ'' ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಡಿಜಿನಸ್ ಡ್ರಗ್ ಒಫ್ ಇಂಡಿಯಾ'' ಇದರ ಪುಟ 59ನ್ನು ನೋಡಿ.)

ವನಸ್ಪತಿ ತೈಲವಲ್ಲ – ಮೀನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್'' ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟೀ'ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil'' (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ'ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'–

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್'' ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

ಕವಿರವೀಂದ್ರ. — 'ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನ ಉಪಯೋಗಿಸಲು ನಿರ್ಧರಿಸಿದ್ದೇನೆ ''

ಕೆಲ ವರ್ಷಗಳ ಹಿಂದೆ **ಡಾ। ಅನ್ನಿಬಿಸೆಂಟರು** ತಮ್ಮ 'ನ್ಯೂ ಇಂಡಿಯಾ''ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು — ಗೊಡ್ರೆಜ್ ಸಾಬೂನಗಳ ವಿಷಯವಾಗಿ ಹೇಳುವರು — 'ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ [illegible] ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ.''

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು.

ನಾದಿರ ಷಾ ಪ್ರಿಂಟರ್ ಎಂಡ್ ಕೊ., [illegible], ಬ್ರೋಡ್ವೆ, ಮದರಾಸು.

ಹೆಡ್ ಆಫೀಸು. [illegible] ಇತರ ಶಾಖೆಗಳು— ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ: ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಒಂದ್‌ಸೋಪ್ ಪುಡಿ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೋದ್ರೆಜ ರವರಿಗೆ ಸಂಬಂಧವಿಲ್ಲ

Comfortable like an Aeroplane

Use our swadeshi Mosquitonet for health, Comfort and sound sleep, as if you are in an Aeroplane Sample cutting free.

More convenient if some advance sent with order

L.	B	H	Price	Best
6 Fit	3½ Fit	3½ Fit.	Rs 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5	„ 3/2	4/10
7½ „	6 „	6	„ 4/4	5/12

G N Sharma, Post Box F 6706
Calcutta

ಗುಪ್ತ ಮಹಾಮಂತ್ರ

ಅತ್ಯಂತ ಫಲಕಾರಿ

ಇದನ್ನು ಉಚ್ಚರಿಸಿದ ಮಾತ್ರದಲ್ಲಿ ಎಂತಹ ಕಷ್ಟ ಕೆಲಸವೂ ಸುಲಭವಾಗುವುದು. ಸ್ತ್ರೀ ಪರೀಕ್ಷೆಯಲ್ಲಿ ವಿಜಯ, ಕೋರ್ಟ ವ್ಯವಹರಣದಲ್ಲಿ ಗೆಲುವು, ಸೋದ್ಯೋಗದಲ್ಲಿ ಜಯ ಮತ್ತು ಸಕಲ ಐಶ್ವರ್ಯವೆಲ್ಲ ಲಭ್ಯವಾಗುತ್ತದೆ ಇದು ನಿಮ್ಮನ್ನು ಅದೃಷ್ಟಶಾಲಿಗಳನ್ನಾಗಿ ಮಾಡುತ್ತದೆ

[illegible]

Prasidha Mantra Asram,
[illegible] Kartarpur [illegible]

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter -

Modern Hindu Hotel,
Calicut, 17—6 1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ
ಮಂಗಳೂರಿನಿಂದ - ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ'

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನು ಕೊಡುತ್ತೇವೆ

ಚಿಕ್ಕಮಗಳೂರಿನಿಂದ ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ-
ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಹಿತಾವಹವಾದ ಪ್ರಯಾಣ! **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ನಮ್ಮ ಮೈಸೂರಿನ ಪತ್ರ:

(ನಮ್ಮ ಸ್ವಂತ ಸುದ್ದಿಗಾರರಿಂದ.)

ಶ್ರೀಮಾನ್ ತಗಡೂರು ರಾಮಚಂದ್ರರಾಯರವರ ಉಪವಾಸದ ಪ್ರಕರಣ. ಕರ್ನಾಟಕ ಸಾಹಿತ್ಯ ಪರಿಷತ್ತು. ೨೧ನೆಯ ಸಾಹಿತ್ಯ ಸಮ್ಮೇಳನ ಬೊಂಬಾಯಿಯಲ್ಲಿ. ಅಖಿಲ ಭಾರತ ಪ್ರಾಣಿದಯಾ ದಿನಾಚರಣೆ. ಕೊಲೆ. ಕನ್ಯಾ

ಶ್ರೀಮಾನ್ ತಗಡೂರು ರಾಮಚಂದ್ರ ರಾಯರವರ ಉಪವಾಸದ ಪ್ರಕರಣ.

ಶ್ರೀ ತಗಡೂರರವರ ಉಪವಾಸದ ಕಥೆಯ ವಿವರಗಳನ್ನು ಈ ಹಿಂದೆಯೇ ಕೊಟ್ಟಿದ್ದೇವೆ. ಶ್ರೀ ತಗಡೂರರವರು ಉಪವಾಸವನ್ನು ನಿಲ್ಲಿಸಬೇಕೆಂದೂ ಅವರು ಶ್ರೀಮಂತರಿಂದ ಕೋರಿದ್ದ ಸಹಾಯವನ್ನು ತಾವು ಸಾರ್ವಜನಿಕರಿಂದ ವಸೂಲು ಮಾಡಿ ಕೊಡುವುದಾಗಿಯೂ ಶ್ರೀಗಳಾದ ಸಂಪಿಗೆ ವೆಂಕಟಪತಯ್ಯನವರು, ಎಸ್. ಕೆ. ವೆಂಕಟರಂಗಯ್ಯಂಗಾರರು, ವಾಜಪೇಯಾ ವೆಂಕಟೇಶಯ್ಯನವರು ಮತ್ತು ಡಬ್ಲ್ಯು. ಎಚ್. ಹನುಮಂತಪ್ಪನವರು ಭರವಸೆ ಕೊಟ್ಟಮೇಲೆ ತಗಡೂರರವರು ತಮ್ಮ ಉಪವಾಸವನ್ನು ನಿಲ್ಲಿಸಿದರಷ್ಟೆ. ಈ ನಾಲ್ಕು ಮಹನೀಯರಿಗೆ ಶ್ರೀ ತಗಡೂರರವರು ಈಚೆಗೆ ಒಂದು ಬಹಿರಂಗ ಪತ್ರವನ್ನು ಬರೆದಿದ್ದಾರೆ. ಅದರಲ್ಲಿ-"ತಮ್ಮಗಳ ಭರವಸೆಗೆ ಬಹಳ ಗೌರವ ಕೊಟ್ಟೆನು. . . . . . ತಿಂಗಳೂ ಕಳೆಯಿತು. ಭರವಸೆಯನ್ನು ಕೊಟ್ಟವರು ಅವರವರ ಕಾರ್ಯದಲ್ಲಿ ಮಗ್ನರಾದರು. ನಾನು ನನ್ನ ಉಪವಾಸವ್ರತವನ್ನು ಭಂಗಪಡಿಸದೆ ಸಾಧಿಸಲೂ ಇಲ್ಲ. . . . ತಾವುಗಳು ಕೊಟ್ಟ ಭರವಸೆಯನ್ನು ಪೂರೈಸಲೂ ಇಲ್ಲ. ಈ ನೀತಿಯಿಂದ ಮಹಾಜನರಲ್ಲಿ ಉಭಯತ್ರರಿಗೂ ಲಘುತ್ವವುಂಟಾಗುತ್ತಿದೆ" ಎಂದು ತಿಳಿಸಿ, ತಾವು ಊರು ಬಿಟ್ಟುಬಂದು ಬಹಳ ದಿನಗಳಾಗಿರುವುದರಿಂದಲೂ ತಮ್ಮ ಉದ್ದೇಶವು ಸಾಧಿಸಿಲ್ಲವಾದುದರಿಂದಲೂ ಊರಿಗೆ ಹಿಂದಿರುಗಬೇಕಾದುದು ಅಗತ್ಯವೆಂದು ಬಗೆದು, ಊರಿಗೆ ಹಿಂದಿರುಗಿದ್ದಾರೆ. ನಡೆದದ್ದು ನಡೆದುಹೋಯಿತು, ಶ್ರೀ ತಗಡೂರರವರು ಊರಿಗೆ ಹಿಂದಿರುಗಿದುದು ಒಳ್ಳೆಯದೇ ಆಯಿತು ಅವರು ಮತ್ತೆ ಉಪವಾಸವನ್ನು ಕೈಕೊಳ್ಳುವುದರಲ್ಲಿಯೂ ಫಲವಿಲ್ಲ. ತಗಡೂರರವರಿಗೆ ಭರವಸೆ ಕೊಟ್ಟ ಮಹನೀಯರು ತಮ್ಮ ಮಾತನ್ನು ಉಳಿಸಿಕೊಳ್ಳಬೇಕಾಗಿದೆ ಈಗ, ಅವರು ಕಾರ್ಯೋನ್ಮುಖರಾಗಬೇಕಾಗಿದೆ ಈಗಲಾದರೂ ಹೇಳುವುದು ಸುಲಭ, ಮಾಡುವುದು ಕಷ್ಟ'

ಕರ್ಣಾಟಕ ಸಾಹಿತ್ಯ ಪರಿಷತ್ತು–ವಿಶೇಷ ಸಾಹಿತ್ಯೋತ್ಸವ.

ನಾಡಿದ್ದು ಪ್ರಾತಃಕಾಲ ಪರಿಷತ್ತು ಏರ್ಪಡಿಸಿರುವ ಎರಡನೆಯ ವಿಶೇಷ ಸಾಹಿತ್ಯೋತ್ಸವವು ಪರಿಷನ್ಮಂದಿರದಲ್ಲಿ ಪ್ರಾರಂಭವಾಗಲಿರುವುದು ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರ ಸಚಿವರಾದ ರಾಜಮಾತ್ರ ಪ್ರವೀಣ ಎಸ್. ಪಿ. ರಾಜಗೋಪಾಲಾಚಾರ್ಯರು ಪ್ರಾರಂಭೋತ್ಸವವನ್ನು ನೆರವೇರಿಸುವರು. ಈ ಉತ್ಸವವು ಒಂದು ವಾರ ನಡೆಯುವುದು. ಮೇ ೨ನೆಯ ತಾರೀಖು ಪ್ರಾತಃಕಾಲ ಪರಿಷತ್ತಿನ ಸದಸ್ಯರ ವಿಶೇಷ ಅಧಿವೇಶನವೊಂದು ಸೇರುವುದು ಈ ಕಾರಣದಿಂದ ಮೈಸೂರು ಹೊರಗಿನ ಪರಿಷತ್ಸದಸ್ಯರು ಈ ಉತ್ಸವಕ್ಕೆ ಹೆಚ್ಚು ಸಂಖ್ಯೆಯಲ್ಲಿ ಬಂದಾರು

೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೊಂಬಾಯಿಯಲ್ಲಿ.

ಬರುವ ಸಾಹಿತ್ಯ ಸಮ್ಮೇಳನಕ್ಕಾಗಿ ಬೊಂಬಾಯಿಯಿಂದಲೂ ಬಳ್ಳಾರಿಯಿಂದಲೂ ಪರಿಷತ್ತಿಗೆ ಆಹ್ವಾನಗಳು ಹೋಗಿದ್ದುದು ಎಲ್ಲರಿಗೂ ತಿಳಿದಿದೆ ಪರಿಷತ್ತು ಬೊಂಬಾಯಿಯ ಆಹ್ವಾನವನ್ನು ಸ್ವೀಕರಿಸಿದೆಯೆಂದು ತಿಳಿದು ಬಂದಿದೆ.

ಅಖಿಳಭಾರತ ಪ್ರಾಣಿದಯಾ ದಿನಾಚರಣೆ.

ಮೇಲೆ ಹೆಸರಿಸಿರುವ ದಿನಾಚರಣೆಯ ಬಗ್ಗೆ ತಾ. ೧೯ನೆಯ ಸಾಯಂಕಾಲ ಬೆಂಗಳೂರು ,ವೈ. ಎಂ. ಸಿ. ಎ. ಕಟ್ಟಡದಲ್ಲಿ ಸಭೆ ಸೇರಿತ್ತು. ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರು ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತಿಗಳಾದ ಶ್ರೀಮಾನ್ ದೇವುಡು ನರಸಿಂಹ ಶಾಸ್ತ್ರಿಗಳೂ ರಾಜಚರಿತ ವಿಶಾರದ ಶ್ರೀಮಾನ್ ಸಿ. ಹಯವದನ ರಾಯರವರೂ ಜೈನಮತದ ತತ್ವವನ್ನು ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ-'ಪಾಶ್ಚಾತ್ಯ ದೇಶಗಳಲ್ಲಿ ಎಲ್ಲೆಲ್ಲಿಯೂ ಯುದ್ಧಸನ್ನಾಹಕ್ಕೆ ಪ್ರಯತ್ನ ನಡೆಯುತ್ತಿದೆ. ಈ ಸಂದರ್ಭದಲ್ಲಿ ಜೈನಮತದ ಮುಖ್ಯ ತತ್ವವಾದ ಅಹಿಂಸೆಯು ಎಲ್ಲೆಲ್ಲೂ ಹರಡಬೇಕು' ಎಂದು ಹೇಳಿದರು.

ಕೊಲೆ.

೨೧ನೆಯ ತಾರೀಖು ಸಾಯಂಕಾಲ ಸುಮಾರು ೬ ಗಂಟೆಯ ಸಮಯ ಇನ್ನೂ ಹಗಲು ಚಾಮರಾಜ ಪೇಟೆಯ ಅಂಗಡಿ ಬೀದಿಯ ಚೌಕದಲ್ಲಿ ರಾಮು ಮತ್ತು ಚಿನ್ನಮುನಿಗ ಎಂಬವರು ರಾಮಚಂದ್ರ ಎಂಬವನನ್ನು ಚೂರಿಯಿಂದ ತಿವಿದು ಓಡಿಹೋದರು. ಪೋಲೀಸಿನವರು ರಾಮಚಂದ್ರನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದರು, ಆದರೆ ಅವನು ಮೂರನೆಯ ದಿನ ಬೆಳಿಗ್ಗೆ ಮೃತನಾದನು ಅದೇ ರಾತ್ರಿಯೇ ಅಪರಾಧಿಗಳು ಪೋಲೀಸರಿಗೆ ಸಿಕ್ಕಿಬಿದ್ದರು ಏತಕ್ಕೆ ತಿವಿದರೆಂಬುದು ಗೊತ್ತಿಲ್ಲ ವಿಚಾರಣೆ ನಡೆಯುತ್ತಿದೆ.

ಕನ್ಯಾಪಹಾರ.

ಬೆಂಗಳೂರು ಶೇಷಾದ್ರಿಪುರದಲ್ಲಿ ಎಲ್ಲಪ್ಪ ಎಂಬ ಒಬ್ಬ ವ್ಯಾಪಾರಿ ಮದನಾ ಎಂಬ ಹುಡುಗಿಯ ಮಾವ ಮದನ ಮಾವನ ಮನೆಯಲ್ಲಿಯೇ ಇದ್ದಳು

ಶೇಷಾದ್ರಿ ಎಂಬ ಯುವಕನೊಬ್ಬನು ಎಲ್ಲಪ್ಪನ ಮನೆಯ ಒಂದು ಕೊಠಡಿಗೆ ಬಾಡಿಗೆಗೆ ಬಂದ ಮದನಳ ಮದನದರ್ಶನವಾಯಿತು, ಸರಿ, ಕಾಮಸ್ಪರ್ಶನವಾಯಿತು ಇವರಿಬ್ಬರಿಗೂ ಮೈತ್ರಿ (ಅಲ್ಲ 'ಪ್ರೇಮ) ಬೆಳೆಯಿತು.

ಎಲ್ಲಪ್ಪನಿಗ ಇದು ತಿಳಿದುಬಂದಿತು ನೀನು ಕೊಠಡಿ ಬಿಡು ಎಂದು ಶೇಷಾದ್ರಿಗೆ ಆಜ್ಞೆಮಾಡಿದ ಶೇಷಾದ್ರಿ ಪುರವನ್ನೇ ಬಿಟ್ಟುಬಿಟ್ಟ– ಮದನಳೊಡನೆ ಅವಳನ್ನೂ ಕರೆದುಕೊಂಡು ಗುಂತಕಲ್ಲು ರೈಲು ಹತ್ತಿ ಬೊಂಬಾಯಿಗೆ ಪ್ರಯಾಣ ಮಾಡಿದನೆಂದು ತಿಳಿದು ಬಂದಿದೆ

ಬೆಂಗಳೂರಲ್ಲಿ ಎಲ್ಲೆಲ್ಲಿ ನೋಡಿದರೂ ಮನೆಯ ಮುಂದೆ ರೂಮ್ ಟು ಲೆಟ್ (Room to let!) ಮನೆಯವರು ಸಿಕ್ಕಿಸಿಕ್ಕಿದವರಿಗೆಲ್ಲಾ ಅದರಲ್ಲಿಯೂ ಯುವಕರಿಗೆ ಮನೆಯ ಕೊಠಡಿಗಳನ್ನು ಬಾಡಿಗೆಗೆ ಕೊಡಬಾರದು'

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ಟು.

ಮೈಸೂರು ವಿಶ್ವ ವಿದ್ಯಾಲಯದ ಛಾನ್ಸಲರ್ ಅವರಿಂದ ಶ್ರೀ ಮನ್ಮಹಾರಾಜರವರು ಕೊಡಗು ಮತ್ತು ಬೆಂಗಳೂರು ಕಂಟೋನ್ಮೆಂಟು ವಿದ್ಯಾಶಾಲೆಗಳ ಇನ್ಸ್‌ಪೆಕ್ಟರರವರಾದ ಮಿ। ಎಫ್ ಎಫ್ ಸಿ ಎಡ್ಮಂಡ್ಸ್, ಎಮ್. ಎ, ಬಿ. ಎಸ್. ಸಿ., ಅವರನ್ನು ಮೈಸೂರು ವಿಶ್ವವಿದ್ಯಾಲಯದ ಸೆನೆಟ್ಟಿನ ಸದಸ್ಯರಾಗಿ ನೇಮಿಸಿ ಸನ್ಮಾನ ಮಾಡಿರುವರೆಂದು ತಿಳಿಸಲು ಸಂತೋಷಿಸುತ್ತೇವೆ.

ಚಕ್ರವರ್ತಿ ಸಾರ್ವಭೌಮರ ರಜತ ಮಹೋತ್ಸವ.

ಈ ಸಂಬಂಧವಾಗಿ ಆ ದಿವಸ ಮೈಸೂರು ಸರಕಾರದ ಮುಜರಾಯಿ ಇಲಾಖೆಗೆ ಒಳಪಟ್ಟ ಎಲ್ಲ ದೇವಸ್ಥಾನ, ಮಸೀದಿ, ಚರ್ಚುಗಳಲ್ಲಿಯೂ ವಿಶೇಷ ಪೂಜೆ ಪುರಸ್ಕಾರಗಳು ನಡೆಯಬೇಕೆಂದು ಈ ಹಿಂದೆಯೇ ಸರಕಾರದ ಹುಕುಮು ಹೊರಟಿತ್ತು. ಈಗ ಮತ್ತೊಂದು ಹುಕುಮು ಹೊರಟಿದೆ:–ಆ ದಿವಸ ವಿದ್ಯುಚ್ಛಕ್ತಿ ದೀಪವುಳ್ಳವರೆಲ್ಲರೂ ದೀಪೋತ್ಸವ ಮಾಡಬಹುದು. ಹೆಚ್ಚಿಗೆ ಉರಿದ ದೀಪಕ್ಕೆ 'ಯೂನಿಟ್' ಒಂದಕ್ಕೆ ಮೂರು ಕಾಸು ಮಾತ್ರ!

ಶಿವಮೊಗ್ಗೆಯಲ್ಲಿ ಸಕ್ಕರೆ ಕಾರ್ಖಾನೆ.

ಮೈಸೂರು ಸರಕಾರದವರು ಮಂಡ್ಯದಲ್ಲಿ ಈಗೊಂದು ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಿರುವುದು ಸರಿಯಷ್ಟೆ ಶಿವಮೊಗ್ಗೆಯಲ್ಲಿಯೂ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಏರ್ಪಾಡು ನಡೆಸುತ್ತಿರುವರೆಂದು ತಿಳಿಯಬಂದಿದೆ. ಭದ್ರಾ ನದಿಯ ಕೆಳಗೆ ಜಮೀನು ಉಳ್ಳವರಿಂದಲೂ ಶಿವಮೊಗ್ಗೆಯ ಪುರಪ್ರಮುಖರಿಂದಲೂ ಈ ಸಲಹೆ ಬಂದ ನಂತರ, ಈ ಸಲಹೆಯನ್ನು ಕಾರ್ಯರೂಪಕ್ಕೆ ತಿರುಗಿಸಲು ಸಾಧ್ಯವೇ ಎಂಬುದನ್ನು ನಿಶ್ಚಯಿಸುವ ಬಗ್ಗೆ ಒಂದು ಸಮಿತಿಯನ್ನು ಗೊತ್ತುಮಾಡಿದ್ದಾರೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡೆ। ಕಮಿಷನರು ಈ ಸಮಿತಿಗೆ ಅಧ್ಯಕ್ಷರು ಸರಕಾರದವರು ಈ ಉದ್ಯಮಕ್ಕೆ ಕೈಹಾಕಿದರೆ ಅದಕ್ಕೆ ಎಲ್ಲಾ ಪ್ರೋತ್ಸಾಹಗಳನ್ನೂ ಕೊಡುವುದು ಮೈಸೂರಿನ ಪ್ರಜೆಗಳ, ಮುಖ್ಯವಾಗಿ ಶಿವಮೊಗ್ಗೆಯ ಕಡೆಯ ವರ್ತಕ ಮಂಡಲಿಯ ಕರ್ತವ್ಯ

ಶ್ರೀಕೃಷ್ಣ ರಾಜೇಂದ್ರ ಮಿಲ್ಲು

ಮೇಲೆ ಕಂಡ ಗಿರಣಿಯ ಮೇಲ್ವಿಚಾರಣೆಯನ್ನು ಬೊಂಬಾಯಿನ ಶ್ರೀ। ಸಿರೂರ್ ಅವರು ವಹಿಸಿಕೊಂಡರೆಂದು ತಿಳಿದುಬಂದಿದೆ ಇದರಲ್ಲಿ ಬಹಳ ತತ್ವ ಅಡಗಿದೆ ಎಂದು ಕೆಲವರು ಮಾತನಾಡಿಕೊಳ್ಳುತ್ತಾರೆ ನಮಗೇನೂ ತಿಳಿಯದು.

The Ammembal Subba Rao Pai Memorial Fund

CANARA HIGH SCHOOL,
MANGALORE

Applications for loan stipends from the above Fund should reach the HONORARY TREASURER of the Fund by the 15th of June 1935. Printed application forms are available at the Office of the Fund between 9 a. m. and 11 a. m every day at a cost of one anna each for original application forms and half an anna each for renewal application forms. If forms are to be sent by post, postage stamps equivalent to the price of the form or forms required and one three-fourth anna stamp for each form to cover the postage for the same should be sent. Only Gowd Saraswath Brahmin students need apply. Applicants will note that first preference will be given to running stipendiaries while awarding stipends and if funds are available after that, new applicants' cases will be considered, with preference for applications for technical courses.

Sd) M. Madhava Rao, B.A.B.L.
Hon. Secretary.
CANARA HIGH SCHOOL,
MANGALORE, 17-4-35.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 70/1935.

ವಾದಿ–ಗೋವಿಂದರಾಯ ಗಡಿಯಾರ, ಹಾರಾಡಿ ವಿಠಲ ಗಡಿಯಾರರ ಮಗ, ಕುಂದಾಪುರ ಕಸಬಾ ಗ್ರಾಮದ ಕೋಡಿಯಲ್ಲಿರುವವ.

ಪ್ರತಿವಾದಿರು–1 ರಾಘವೇಂದ್ರ ಶೆಟ್ಟಿ, 2. ನರಸಿಂಹ ಶೆಟ್ಟಿ, ಸುಬ್ರಾಯ ಶೆಟ್ಟಿಯ ಮಕ್ಕಳು, ಕುಂದಾಪುರ ಕಸಬಾ ಗ್ರಾಮ.

ಸದ್ರಿ ಪ್ರತಿವಾದಿರು ನಿಮ್ಮರಿರ ಮೇಲೆ ವಾದಿಯು ಈಡಿನ ಅಸಲು ಬಡ್ಡಿ ಹಣಗಳು ರೂ. 1524–6–6ನ್ನು ಬರಮಾಡಿಕೊಳ್ಳುವರೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಖು 6–6–1935ಕ್ಕೆ ತನಿಖೆಗೆ ಇಟ್ಟಿದೆ ಆದುದರಿಂದ ಆ ಕುರಿತು ಆಕ್ಷೇಪವಿದ್ದರೆ ಆ ತಾರೀಕಿಗೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಹೇಳತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ನಂಬ್ರವನ್ನು ತೀರ್ಮಾನಿಸಲಾದೀತು.

ಮೊಕ್ಕಾಂ ಕುಂದಾಪುರ,
22–4–35.

K. Narayana Shenai
ವಾದಿಯ ವಕೀಲ.

1¼ CRORE

Karnatics know nothing of your products.— Advertise them in

Swadeshabhimani

the pioneer Weekly of the South Kanara District.

For Advertisement rates apply to

The Advertisement Manager,
Swadeshabhimani,
Mangalore

WANTED.

A partner for a chief Agency Concern of a well established old Insurance Company Only men with influence need apply to—

Messrs. Padubidri Bros.,
Chief Agents,
East & West Insurance Co., Ltd.,
40, Narayanlal Bansilal Mansions,
Bombay No. 8.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY.

Shiromani Narayanacharya
Choukhamba, Benares City

ಶಾಸ್ತ್ರಿಗಳೇ ಪೂರ್ವಿಕರು ಅರೋಗ್ಯರೇ ಅಥವಾ ಈಗಿನವರೇ? ಹಾಮಿಲ್ಟನ್ಯವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ, ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧರಿಸುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹನಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಈ ಎಲ್ಲಾ ಕೆಲಸ ಅಷ್ಟುಗಳಲ್ಲಾ ಆಗುವುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಕ್ಕಿ ಪ್ರಮಾಣದ ಕಂಠೀಸರ 1ಕ್ಕೆ ಅಡಿ 1ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಡಿ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಅಡಿ 4ರಿಂದ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 2ರಿಂದ 30ರ ವರೆಗೆ 12–13–14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅವರೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗ ಹೀಗೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು. ಇವು ತೋಳಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ. ಒಂದು ಉತ್ತಮವಾದ ಟೀ ಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ. 10 ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ 8 ವರ್ಷ ಆರು ಬೆಳಕುಳ್ಳ ಹಂಟಿಂಗ್ ಟಾರ್ಚ್ ಲೈಟ್ 2 ರಂಗು ಮತ್ತು ಬಂಗಾರದ ಪ್ಲೇಟ್ ಮುಳ್ಳು ಹಾಕಿದ ಸ್ವಂತ ಫೌಂಟನ್ ಪೆನ್ 'ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು. ನಿಮಗೆ ಇಷ್ಟವಿದ್ದರೆ ಬೆಲೆಯು ವಾಪಾಸ್ 1 ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 11473 S A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ



ಐಡಿಡಾಯಿಡ್ಸ್
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪಂಚೌಷಧ.
೪೯ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ|| ಗೌತಮ ರಾವ್
ಕೇಶವರವರ
ಫ್ರೊಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಥಾಕುರದ್ವಾರ, ಮುಂಬಾಯಿ 4
ಏಜೆಂಟ್ಸ್— ಪಾ ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಾಜಪೂತ ಅವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ 'ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂತಾನವು ಪೂರ್ಣವಾಗಿ ನಿಲ್ಲುವುದು ಬೇಕಾದರೆ ಗರ್ಭಧಾರಣ ಬಂದಾಗುವುದು ಕದನಂತರ ಏನು ಮಾಡಿದರೂ ಶುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ್ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಟ್ಟಿರುತ್ತಾರೆ. ಕಾಣಿ ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವು ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪–೦ ೦ ವಿ. ಪಿ. ಅಣೆ ೮

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೊ ವಿರಡಿ, S M C

"ವಿಶ್ವಬಂಧು"ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು. ೨. 'ವಿಶ್ವಬಂಧು'ವು ಅಹಿಂಸಾ ಧರ್ಮಪ್ರಚಾರಕನು. ೩ 'ವಿಶ್ವಬಂಧು'ವು ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಪ್ರಕಟ ಮಾಡುವನು ೪. ಕನ್ನಡ ನುಡಿಸೇವೆಯೂ, ಕನ್ನಡ ಸಾಹಿತ್ಯ ಪ್ರಭಾವನೆಯೂ 'ವಿಶ್ವಬಂಧು'ವಿನ ಧ್ಯೇಯಗಳು ೫ ವಿದ್ಯಾಭ್ಯಾಸದ ನೂತನ ರೀತಿ ನೀತಿಗಳನ್ನು 'ವಿಶ್ವಬಂಧು'ವು ಪ್ರಕಟಮಾಡುವನು. ೬ ಒಟ್ಟಿನಲ್ಲಿ ಆರ್ಥಿಕ, ನೈತಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು ಸರ್ವಾಂಗ ಸುಂದರನಾದ 'ವಿಶ್ವಬಂಧು'ವು ಸರ್ವರ ಆದರಣೆಗೂ ಪಾತ್ರನಾಗಿರುವನು.

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ. ೨–೧೨–೦ ಮಾತ್ರ.

"ವಿಶ್ವಬಂಧು" ಕಾರ್ಯಾಲಯ, ಎಂ ಎಲ್ ಜೈನವಿದ್ಯಾರ್ಥಿನಿಲಯ, ಮೈಸೂರು.

The Popular Insurance Company, Ltd.

Head Office:—MANGALORE, S. India

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rao, who has developed in him a great deal of life insurance sense .....

ಸಾಂಬಾರ ವರ್ತಮಾನ.

["ಸಾಂಬಾರ ವರ್ತಮಾನ"ಗಳಿಗೆ ಮೀಸಲಾಗಿಟ್ಟ ಈ ನಾಲ್ಕು ಕಲಮುಗಳಲ್ಲಿ ಅಲ್ಲಲ್ಲಿನ ನೈಜ ವಾರ್ತೆಗಳನ್ನು ಹಾಸ್ಯರಸಪೂರಿತವಾಗಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ ಈ ವಾರ್ತೆಗಳನ್ನು ಲಘುಹಾಸ್ಯಪ್ರಿಯರಾದ ಪ್ರಖ್ಯಾತ ಸಾಹಿತಿಗಳೊಬ್ಬರಿಂದ ವಿಶಿಷ್ಟವಾಗಿ ಸ್ವದೇಶಾಭಿಮಾನಿಗೆಂದೇ ಬರೆಸಲಾಗುತ್ತಿದೆ.]

ಜೋಕರರ ಮೇಲೆ ದಾವೆ ನಡೆದಿದೆ.

"ಜೋಕರರಿಗೆ ಅರಸನಾದರೇನು? ತಾಯಿಗೆ ಮಗ" ಎಂಬ ಗಾದೆ. "ಜೋಕರಿಗೆ ಸೆಕ್ರೆಟರಿ ಒಫ್ ಸ್ಟೇಟ್ ಆದರೇನು? ನ್ಯಾಯಕ್ಕೆ ಮಣಿ" ಎಂಬುದು ರಾಜ ಶಾಸನ, ಮುಲ್ತಾನಿನ ಬಾಹವಲಪೂರ ಮನೆಯಲ್ಲಿರುವ ಶೇಕ್ ಇಫ್ತಿಕ್ಯಾರ್ ರಸೂಲ್ ಅನ್ಸಾರಿ ಎಂಬ ಜಮೀನುದಾರರು ಸೆಕ್ರೆಟರಿ ಒಫ್ ಸ್ಟೇಟರ ಮೇಲೊಂದು ದಾವೆ ಹೂಡಿ, ೧೯೩೪ನೇ ನವೆಂಬರ ೩೦ ರಲ್ಲಿ ತನ್ನನ್ನು ಪೋಲೀಸರು ದಸ್ತಗಿರಿ ಮಾಡಿ, ಬೇಡಿ ಹಾಕಿ ಕೊಂಡೊಯ್ದುದು ಮಾನಹಾನಿಕರವಾಗಿದೆಯೆಂದೂ, ತಾನು ೧೦,೦೦೦ ರೂಪಾಯಿಗಳಿಗೆ ದಾವಾ ತರಬೇಕೆಂದಿದ್ದೆನಾದರೂ, ದಾವೆಯಿಂದ ಧನ್ಯ ಸಂಪಾದಿಸಲು ತಾನು ಸಿದ್ಧನಿಲ್ಲವೆಂದೂ, ಆದುದರಿಂದ ತಾನು ೯೯೯೯ ರೂಪಾಯಿಗಳನ್ನು ಬಿಟ್ಟು ರೂ ೧ಕ್ಕೆ ಮಾತ್ರ ಸೆಕ್ರೆಟರಿ ಆಫ್ ಸ್ಟೇಟರ ಮೇಲೆ ದಾವೆ ಹೂಡುವೆನೆಂದೂ ತಿಳಿಸಿದ್ದಾರೆ ರೂಪಾಯಿ ೧ರ ಮೇಲೆ ನಡೆಯುವ ಈ ವ್ಯವಹರಣೆಯಲ್ಲಿ ಯಾರು ಸೋಲುವರೋ ನೋಡಲಿದೆ!

× × × × × ×

ವಿಚಿತ್ರ ಸಂಪಾದನೆ.

ಹಿಂದೂದೇಶದ ಭೂಮಿಯಲ್ಲಿ ಭಂಗಾರ ವಜ್ರ ವೈಢೂರ್ಯಗಳು ದೊರೆಯುತ್ತವೆ ಎಂಬುದನ್ನು ನಾವು ಕೇಳಿದೆವು—ಓದಿದ್ದೇವೆ ಆದರೆ ಇಲ್ಲಿಯ ಭೂಮಿಯಡಿಯಲ್ಲಿ ಬೋಂಬುಗಳು ಕಾಣಸಿಗುತ್ತವೆಯೆಂಬುದನ್ನು ನಾವು ಓದುವುದು ಇದೇ ಮೊದಲು ಲಾಹೋರಿನ ರೇಸ್‌ಕೋರ್ಸ್ ರೋಡಿನಲ್ಲಿ ಒಬ್ಬ ತೋಟಿಗಾರನು ಕೆಲಸ ಮಾಡುತ್ತಿದ್ದಾಗ—ಭೂಮಿಯನ್ನು ಅಗೆಯುತ್ತಿದ್ದಾಗ—ಮೂರು ಅಡಿಗಳ ಕೆಳಗೆ ಭೂಮಿಯಲ್ಲಿ ಒಂದು ದೊಡ್ಡ ಬೋಂಬು ದೊರೆಯಿತು ಅದನ್ನು ಸಿ ಐ ಡಿ ಗಳಿಗೆ ಕೊಟ್ಟಿರುವನು ಅದು ಎಲ್ಲಿ ಒಡೆಯುತ್ತದೋ ಯಾರೂ ಅರಿಯರು

× × × × × ×

ಹೊಸ ವೃತ್ತಿ.

ಮುಂಬಾಯಿಯ ಹಾಫ್ಕಿನ್ ಇನ್ಸ್ಟಿಟ್ಯೂಟ್‌ಗೆ ೬ ದೊಡ್ಡ ದೊಡ್ಡ ಪೆಟ್ಟಿಗೆಗಳು ಬಂದುವು ಅವುಗಳಲ್ಲಿದ್ದುದ್ದೇನು? ೨೪ ಸರ್ಪಗಳು! ಇವುಗಳನ್ನು ಮದ್ರಾಸಿನಿಂದ ತರಲಾಯಿತು ಈ ಹಾವುಗಳ ವಿಷವನ್ನು ತೆಗೆದು ಅನೇಕ ಅಮೂಲ್ಯ ಔಷಧಿಗಳನ್ನು ಯುರೋಪಿನಲ್ಲಿ ತಯಾರಿಸುತ್ತಿರುವರೆಂದೂ ಯುರೋಪಿನ ಹಲವು ಚಿಕಿತ್ಸಾಲಯಗಳಿಂದ ದಿನೇ ದಿನೇ ಬರುವ ಆರ್ಡರು ಗಳನ್ನು ಪೂರೈಸುವಷ್ಟು ಹಾವುಗಳು ಇನ್ನೂ ದೊರೆತಿರುವುದಿಲ್ಲವೆಂದೂ ಕ್ಯುರೇಟರರು ತಿಳಿಸುತ್ತಾರೆ ಈ ಹಾವುಗಳ ಒಂದು ಗ್ರೇನ್ ವಿಷಕ್ಕೆ ೨೫ ರೂಪಾಯಿ ಕ್ರಯವಿದೆಯಂತೆ ಹಾವಿನ ವಿಷವನ್ನು ಹಾವಿನ ವಿಷದ ಔಷಧಿಯಿಂದಲೇ ನಿರ್ಮೂಲನ ಮಾಡಬಹುದೆಂದು ಗೊತ್ತಾಗಿದೆ ನಮ್ಮ ಜನರು ಹಾವುಗಳಿಗೆ ಹೆದರುವ ಬದಲು ಅವುಗಳನ್ನು ಹಿಡಿದು ಹೊಸ ವೃತ್ತಿಗಿಳಿದರಾಗದೇ?

× × × × + ×

ಸ್ತ್ರೀಯರು ಅಬಲೆಯರು—

ಎಂಬ ಆರೋಪಣೆಯು ಎಲ್ಲಿಯೂ ಇದೆ ಆದರೆ ಪರಿಶೀಲಿಸಿದ್ದಲ್ಲಿ ಅವರಿಗೆ ಆ ಆರೋಪಣೆಯು ಸಲ್ಲುವುದಿಲ್ಲವೆಂದು ತಿಳಿದುಬರುವುದು ಟಿನ್ನುರದ ಬಳಿ ವೃಂದಾವನಪುರದಲ್ಲಿ ಹಲವು ಕಳ್ಳರು ಒಬ್ಬ ಧನಿಕನ ಮನೆಗೆ ಕನ್ನಹಾಕಿ ಯಜಮಾನನನ್ನು ಹಿಡಿದು ಕೋಶವನ್ನು ತಮಗೆ ಕೊಡಬೇಕೆಂದು ಹೇಳಿ ಅವನನ್ನು ಬಂಧಿಸಿದರು ಅಷ್ಟರಲ್ಲಿ ಅವನ ಪತ್ನಿಯು ಒಂದು ಕತ್ತಿಯನ್ನು ತೆಗೆದು ಒಬ್ಬ ಭಂಡಾಯಿಗಾರನ ಎದೆಗೆ ಹಾಕಿ ಅವನನ್ನು ತಿವಿದಳು ಜಖಂಗೊಂಡವನು ಬಿದ್ದನು. ಉಳಿದ ಕಳ್ಳರು ಕಾಲಿಗೆ ಬುದ್ಧಿ ಹೇಳಿದರು ಇಂತಹ ಸ್ತ್ರೀಯರು ಅಬಲೆಯರೇ?

× × × × × ×

ಕಳ್ಳರ ಒಗ್ಗಟ್ಟು—

ಎಷ್ಟೆಂಬ ವಿಷಯವು ಕಳ್ಳತನಗಳಿಗೊಳಗಾದ ದೊಡ್ಡ ದೊಡ್ಡ ಧನಿಕರಿಗೆ ಗೊತ್ತು ಆದರೆ ಅವರ ಒಗ್ಗಟ್ಟು ಎಷ್ಟರ ವರೆಗೆ ಇದೆಯೆಂದು ಇದರಿಂದ ತಿಳಿಯುವ ಜಲಂಧರದ ದಹೋನ್ ತಶಿಲ್ ಎಂಬಲ್ಲಿ ಕೆಲವು ಕಳ್ಳರು ಒಬ್ಬ ಧನಿಕನ ಮನೆಗೆ ನುಗ್ಗಿ ಇದ್ದುಬದ್ದುದನ್ನು ಲುಟಾಯಿಸಿದರು. ಲೂಟಿಯ ಭರದಲ್ಲಿ ಬೆಂಕಿಯೆದ್ದು, ಮನೆಯು ಸುಟ್ಟಿತು ಒಬ್ಬ ಕಳ್ಳನ ಮೈಕೈಗಳು ಸುಟ್ಟುವು ಅವನನ್ನು ಉಳಿದ ಕಳ್ಳರು ಎತ್ತಿಕೊಂಡು ಹೋಗಿ ಮಧ್ಯಕಾಡಿನಲ್ಲಿ ಹಾಕಿದರು ಅಲ್ಲಿ, ಅವನು ಮೃತನಾದನು. ಪೋಲೀಸರು ಈ ಶವವನ್ನು ಪರೀಕ್ಷಿಸಲಾಗಿ, ಕಳ್ಳರಿಗೆ ಮೃತನ ಮೇಲೆ ಸಹಾನುಭೂತಿಯಿರಲಿಲ್ಲವೆಂದೂ, ಅವರಲ್ಲಿ ಒಗ್ಗಟ್ಟಿಲ್ಲದಿರುವುದರಿಂದ ಅವರು ಆ ಶವವನ್ನು ಅಲ್ಲೇ ಬಿಟ್ಟು ನಡೆದರೆಂದೂ ತಿಳಿದುಬಂತು.

× × × × × ×

ತೆಂಗಿನ ಮರದ ಮೇಲಿನ ತಪಸ್ಸು.

ಆನಂದಕರವಾರ್ತೆಯೆಂದು ವಿನೋದಪರವೂ ಹೌದು ಕೊಂಟೈ ಎಂಬಲ್ಲಿ ಕಾನಾ ಎಂಬವನೊಬ್ಬನು ದೊಡ್ಡ ತೆಂಗಿನ ಮರವೊಂದನ್ನು ಹತ್ತಿ ಅಲ್ಲಿ ಕುಳಿತು ತಪಸ್ಸಿಗೆ ತೊಡಗಿರುತ್ತಾನೆ ಪೋಲೀಸರೂ ಜನರೂ ಕೂಡಿ ಅವನನ್ನು ಕೆಳಗಿಳಿಯ ಹೇಳಿದರೂ ಅವನು ಅದರಿಂದ ಕೆಳಗಿಳಿಯುವುದಿಲ್ಲ ಯಾರಾದರೂ ಮೇಲೆ ಹತ್ತಿದರೆ ತಾನು ಮೇಲಿನಿಂದ ಕೆಳಗೆ ಹಾರಿ ಪ್ರಾಣವನ್ನೇ ನೀಗುವೆನೆನ್ನುತ್ತಿರುವನು ಅವನಿಗೆ, ಉದ್ದವಾದ ಬಿದಿರಿನ ಮೂಲಕ ಅನ್ನಾಹಾರಗಳನ್ನು ಕುಟುಂಬಿಕರು ಒದಗಿಸುತ್ತಾರೆ. ಈ ಕ್ರಮವನ್ನು ಕೆಲವು ದಿನಗಳ ತನಕ ನಿಲ್ಲಿಸಿ ಅವನು ಹಸಿವಿನಿಂದಾದರೂ ಕೆಳಗಿಳಿಯಲೆಂದು ನಿರೀಕ್ಷಿಸಿದರು. ಆದರೆ ಅವನು ಅವರ ನಿರೀಕ್ಷೆಯನ್ನು ಪೂರೈಸಲಿಲ್ಲ ತೆಂಗಿನ ಮರದ ಎಳನೀರಿನ ಮೇಳೆಯೇ ಹಲವು ದಿನಗಳ ತನಕ ಬದುಕಿದನು ತಾನು ೩೧ ದಿನಗಳ ನಂತರ ಕೆಳಗಿಳಿಯುವೆನೆನ್ನುತ್ತಿರುವನು. ಇವನ ದೇವತೆಯು "ಇವನಿಗೆ ಬೇಗನೇ ಮರಣವಿದೆ" ಎಂದು ಹೇಳಿದುದಕ್ಕೆ ಇವನು ತೆಂಗಿನ ಮರವನ್ನು ಹತ್ತಿ ತಪಸ್ಸು ಮಾಡುತ್ತಿರುವನೆಂದು ಪ್ರತೀತಿಯಿದೆ

× × × × × ×

ಅರಸರ ಗುಟ್ಟು ಅರಸರಿಗೇ ಗೊತ್ತು!

ಕಳ್ಳರ ಗುಟ್ಟು ಕಳ್ಳರಿಗೇ ಗೊತ್ತು ಸ್ಪೈನಿನ ಅರಸರಾದ ಕಿಂಗ್ ಅಲ್ಫೋನ್ಸೋನನ್ನು ಸಿಂಹಾಸನಚ್ಯುತರನ್ನಾಗಿ ಮಾಡಲಾಗಿದೆಯಷ್ಟೆ ಅವರೀಗ ದೇಶಾಂತರಕ್ಕೆ ತೊಲಗಿರುವರು ಸ್ಪೈನ ಅಧಿಕಾರಿಗಳು ಅಲ್ಫೋನ್ಸೋರ ಹೆಸರಿಗೆ ಸಾಪತ್ರ್ಯಗಳೇನೆಂದು ತಿಳಿಯಬಯಸಿ ಶೋಧಿಸುತ್ತಿದ್ದಾರೆ ಪ್ರಥಮ ಪ್ರಯತ್ನದ ಫಲವಾಗಿ—ಅಲ್ಫೋನ್ಸೋ ಬ್ರಿಟಿಷ್ ಲಾವಾ ಬೇಂಕಿನಲ್ಲಿ ೪,೦೦೦ ೦೦೦ ಶಿಲ್ಲಿಂಗುಗಳಿಗೆ ಅಡವಿಟ್ಟ ಅರಸುಮನೆತನದ ವಜ್ರವೊಂದರ ಕತೆಯು ಹೊರಗಾಗಿದೆ ಈ ವಜ್ರವನ್ನು ಅಲ್ಫೋನ್ಸೋರ ಮಿತ್ರರು ಕೆಲವರು ಬಿಡಿಸಲಿದ್ದಾರೆ ಗುಟ್ಟು ರಟ್ಟಾಗಿ ಅದನ್ನು ಮಟ್ಟಬಾರದೆಂದು ಸರಕಾರವು ಶ್ರೀಕರುತ್ತದೆ

× × × × × ×

'ಅವಳಿಗಾಗಿ'—

ಎಂಬ ಶಿರೋನಾಮೆಯನ್ನು ಓದಿದೊಡನೆ ನಿಮಗೆ ಪ್ರಣಯದ ಸ್ಮರಣೆಯಾಗುವುದು ಬುಚಾರೆಸ್ಟ್ ಆಸ್ಪತ್ರೆಯಲ್ಲಿನ ರೋಗಿ ಜೋಸೆಫ್ ಮಾಲೋಶ ಎಸ್ಕಿಯು ಹೀಗೆ ಮಾಡಿದುದು ಅವಳಿಗಾಗಿ—ಅವನು ಅಲ್ಲಿಯ ಆಸ್ಪತ್ರೆಯಲ್ಲಿ ರೋಗಿಯಾಗಿದ್ದ ಅಲ್ಲಿ ಅವನಿಗೆ ಅಲ್ಲಿನ ಸೂಲಗಿತ್ತಿಯೊಬ್ಬಳ ಮೇಲೆ ಪ್ರೇಮವುಂಟಾಯಿತು ರೋಗವು ಗುಣವಾಗಿ ಮನೆಗೆ ಹೋಗಿ ದಾದಿಯನು ಸ್ಮರಿಸಿದ ಅವನಿಗೆ ತಡೆಯಲಾಗಲಿಲ್ಲ. ಒಂದು ಅಂಗಡಿಗೆ ಹೋಗಿ ತನ್ನ ದೇಹದಲ್ಲಿ ಜ್ವರವು ಕಲೆದೋರುವಷ್ಟು ವಿಷವನ್ನು ತೆಗೆದುಕೊಂಡು ಪುನಹ ಆಸ್ಪತ್ರೆಗೆ ಹೋಗಿ, ಅದೇ ವಾರ್ಡಿನಲ್ಲಿ ಬಿದ್ದು ಅವಳೊಡನೆ ಆನಂದಿಸಿದ. ಹೀಗೆ ೩೩ ಸಲ ಗುಣವಾಗಿ ೩೫ ಬಾರಿ ಆಸ್ಪತ್ರೆಯಲ್ಲಿ ಮಲಗಿದ ಕೊನೆಗೆ ಡಾಕ್ಟರರಿಗೆ ಈ ಗುಟ್ಟು ತಿಳಿದು ವಿಚಾರಿಸಿದರು ಅವನು ಗುಟ್ಟನ್ನು ಒಪ್ಪಿದ ಅವನನ್ನು ಬೇರೆ ಕೋಣೆಯಲ್ಲಿ ಮಲಗಿಸಿದರು ಅಲ್ಲಿ ಒಂದೇ ಸಮನೆ ಕೂಗಾಡಿದ. ಈಗ ಅವನನ್ನು ಹುಚ್ಚರಿರುವ ವಾರ್ಡಿನಲ್ಲಿ ಹಾಕಿರುವರು. ಈಗ ಸುಖವಾಗಿದ್ದಾನೆ

× × × × × ×

ಯುದ್ಧ-ರೊಟ್ಟಿ.

ವಾರ್ಸಾದ ಒಟಿಮ್ಸ್ಕಿ ಎಂಬಲ್ಲಿ ಒಬ್ಬ ರೊಟ್ಟಿ ಯಂಗಡಿಯವನು ರೊಟ್ಟಿ ತಯಾರಿಸಿಟ್ಟಿದ್ದನು ಆದರೆ ಹೆಚ್ಚಿನ ವ್ಯಾಪಾರವಾಗುತ್ತಿದ್ದಿಲ್ಲ ತನ್ನ ಸ್ಟೋರನ್ನು ಒಮ್ಮೆ ವಿಕ್ರಯಿಸಿಬಿಡಬೇಕೆಂಬ ಆಶೆಯಾಯಿತು ಅದಕ್ಕಾಗಿ ಒಂದು ಪಕಾರದಲ್ಲಿ ಪಂಯಿರ್ ಟಿಸ್ ಸ್ಲೇಕ್ ಒಂದನ್ನು ಕಟ್ಟಿ ಅದರಲ್ಲಿ ಯುದ್ಧವು ಬೇಗನೇ ನಡೆಯಲಿದೆ ಗೋಧಿಯು ಪ್ರಿಯವಾಗಲಿದೆ" ಎಂದು ಮೋಡಲಾಗಿ ಸೂಚಿಸಿದನ ಮರುದಿನ ಬೆಳಿಗ್ಗಿನಷ್ಟು ಮಾಡಿ ತನ್ನಲ್ಲಿ ರೊಟ್ಟಿಯು ದಾಸ್ತಾನಾಗಿದೆಯೆಂದೂ ಯುದ್ಧವು ನಡೆಯುವ ಮೊದಲು ಜನರು ಪಡೆಯಬೇಕೆಂದೂ ತಿಳಿಸಿದನು ಅವನ ಉಪಾಯವು ಜಯಶೀಲವಾಯಿತು ಅವನ ಸ್ಟೋರ್ ಬರಿದಾಯಿತು ಈಗ ಅವನ ಗುಟ್ಟು ಬಯಲಾಗಿ ಅವನನ್ನು ಸೆರೆಹಿಡಿದಿದ್ದಾರೆ

× × × × × ×

1 ನಿಮಿಷಕ್ಕೆ 1500-

ಜನರನ್ನು ಕೊಲ್ಲುವ ಅಂದರೆ ನಿಮಿಷಕ್ಕೆ ೧೫೦೦ ರೌಂಡ್‌ಗಳಷ್ಟು ಗುಂಡನ್ನು ಹಾರಿಸುವಷ್ಟು ಶಕ್ತಿಯುಳ್ಳ ಮೆಶಿನ್‌ಗನ್ನೊಂದನ್ನು ವಾರ್ವಿಕ್‌ಶಯರಿನ ರೋಯಲ್ ಬೆಟಾಲಿಯನ್ನಲ್ಲಿಯ ಸೈನಿಕನಾದ ಜೇಮ್ಸ್ ಬೆಂಗಾಲ್ ಎಂಬವನು ರಚಿಸಿರುವನು. ಈ ಯಂತ್ರದ ಪೂರ್ಣ ಹಕ್ಕನ್ನು ಹಲವು ಕಂಪೆನಿಗಳು ಪಡೆಯಲು ಯತ್ನಿಸುತ್ತಿವೆ ಶೋಧನಕಾರನು ತನ್ನ ಪ್ರಯೋಗವನ್ನು ಅಲ್ಲಿಯ ಕೆಲವು ಅಧಿಕಾರಿಗಳಿಗೆ ತೋರಿಸಿರುವನು. ತಾನು ಉದ್ಯೋಗದಲ್ಲಿರುವುದರಿಂದ ತನಗೆ ಈ ಶೋಧೆಯಿಂದ ಹೆಚ್ಚು ಲಾಭವಾಗದೆಂದು ಅವನು ಹೇಳುತ್ತಿರುವನು—ಪಾಪ!

× × × × × ×

ಸೀತಾ—ಸಾವಿತ್ರಿಯರು—

ಆದರ್ಶ ಮಹಿಳೆಯರೆಂದು ಪುರಾಣಗಳು ಹೇಳಿವೆ—ಅಂತಹ ಆದರ್ಶಮಹಿಳೆಯೊಬ್ಬಳು ಈ ಕಲಿಯುಗದಲ್ಲೂ ಇರುವಳು. ಮುರದಾಬಾದ್ ಜಿಲ್ಲೆಯ ಸಂಬಲ್ ಎಂಬ ಗ್ರಾಮದಲ್ಲಿ ರಹಿಮನ್ ಎಂಬ ತರುಣಿಯೊಬ್ಬಳಿರುವಳು ಅವಳ ೨೦ನೇ ವಯಸ್ಸಿನಲ್ಲಿ ಅವಳ ಪತಿಯು ತೀರಿಕೊಂಡ ಈಗ ಅವಳಿಗೆ ೬೦ ವರ್ಷ ಪ್ರಾಯ. ಪತಿಯು ಕಾಲವಾದಂದಿನಿಂದಲೂ ಬಡು ಸಂಕಷ್ಟಕ್ಕೀಡಾದಳು ಮೇಲಾಗಿ ಅವಳ ಅತ್ಯವಮಾನದಿಂದಿದ್ದರೂ ಕುರುಡರು ಅವರ ಸೇವಾ ಶುಶ್ರೂಷೆಗಳು ಅವಳ ಪಾಲಿಗೇ ಬಿದ್ದಿವೆ ಅವಳನ್ನು ಕಂಡವರು ಕನಿಕರಗೊಂಡು "ನೀನು ಇನ್ನೊಂದು ವಿವಾಹವಾಗಬಾರದೇ?" ಎಂದು ಕೇಳಿದರೆ "ನನ್ನ ಪತಿಯು ನನಗೆ ಈ ಕರ್ತವ್ಯವನ್ನು ಬಿಟ್ಟುಹೋಗಿದ್ದಾನೆ ಅತ್ಯವಮಾನದಿರಿಗಿಂತ ಪಾವನ ದೈವಗಳಿಲ್ಲ ಯಾರು ಇವರ ಸಂರಕ್ಷಣೆಯ ಭಾರವನ್ನು ಹೊರಲು ಸಿದ್ಧನಿರುವನೋ ಅವನನ್ನೇ ನಾನ ವರಿಸುವೆನು" ಎನ್ನುತ್ತಿರುವಳು ಇಷ್ಟರತನಕ ಅಂತಹ ಉದಾರಿ ಪತಿಯು ಅವಳಿಗೆ ದೊರೆತಿರುವುದಿಲ್ಲ ಇವಳಿಗೆ ನೇಯ್ಗೆಯ ಕೆಲಸವು ತಿಳಿದಿದೆ ಶ್ರೀ ಪೊದಾರ ಎಂಬವರು ಅಲ್ಲೊಂದು ಖಾದಿ ಕೇಂದ್ರವನ್ನು ತೆರೆದಿರುವರು ಇವಳು ಅಲ್ಲಿ ದುಡಿದು ತಿಂಗಳಿಗೆ ೩½ ರೂಪಾಯಿಗಳಿಂದ ೩ ರೂಪಾಯಿಗಳ ವರೆಗೆ ಸಂಪಾದಿಸುತ್ತಿರುವಳು ದಾನವನ್ನು ಇವಳು ಸ್ವೀಕರಿಸುವುದಿಲ್ಲ ಜನರ ಸಹಾನುಭೂತಿಪರ ನುಡಿಗಳಿಗೆ ಇವಳು ಲಕ್ಷ್ಯವೇ ಕೊಡುವುದಿಲ್ಲ ತಾನು ದುಡಿಯಬೇಕು ತಾನು ಬದುಕಬೇಕು, ತಾನು ಅತ್ಯವಮಾನದಿರನ್ನು ಸಲಹಬೇಕು— ಎಂದು ಇವಳ ಆಗ್ರಹ

• • •

ಸುಸ್ವಾಗತ

ಕಪೂರ್ತಲಾದ ಮಹಾರಾಜರು ಮೊನ್ನೆ ಇಂಗ್ಲೆಂಡಿಗೆ—ಸಾರ್ವಭೌಮರ ರಜತೋತ್ಸವಕ್ಕೆ ಹೊರಟರು. ಅವರು ದಿಲ್ಲಿಗೆ ಬಂದ ರೈಲು ಹತ್ತುವಾಗ ಸಾವಿರಾರು ಜನರು ಕಾಂಡಕಾಕೆಗಳನ್ನು ಹಿಡಿದುಕೊಂಡು ಅವರಿಗೆ ಸುಸ್ವಾಗತವನ್ನು ಬಯಸಿದರು "ಕಂದಾಯವನ್ನು ಹೆಚ್ಚಿಸಿರುವಿರಿ ಇದನ್ನು ನಾವು ಕೊಡಲು ಸಮರ್ಥರಲ್ಲ ನರಳುತ್ತಿದ್ದೇವೆ ನೀವು ಇಂಗ್ಲಾಂಡಿನ ಯಾತ್ರೆಗೆ ಹೊರಟಿರುವಿರಿ ಎಂದು ಹೇಳಿ ಮಹಾರಾಜರಿಗೆ ಮಹ ಸಂದೇಶಗಳನ್ನು ಕೊಟ್ಟರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ. **ಅಜ್ಜಿ ಕಥೆಗಳು (ಸಚಿತ್ರ).**

ಚರಿತ್ರೆ ಮತ್ತು ಕಥೆಗಳು.	ರೂ	ಅ	ಪೈ
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0
ಸಮಾಜಶಾಸ್ತ್ರ.			
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6

ಸಾಮಾನ್ಯ ವಿಜ್ಞಾನ	ರೂ	ಅ	ಪೈ
ಎರಡನೇ ದರ್ಜೆ	0	8	0
ಮೂರನೇ ,,	0	3	0
ನಾಲ್ಕನೇ ,,	0	5	0
ಐದನೇ ,,	0	6	0

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೊಸಳೆಯ ಕಾಳಪ್ಪ
ಅಗಸನ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'— ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ಪಠ್ಯ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ-(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ-(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ-(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ-(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ

ಜೀವನದ ಜಯಶೀಲತೆಯು ಇದೆಯೆನ್ನೋಣ ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

Shah Company M... ...ttr
Pearl & Sons M... ...on

Atank Nigrah Pharmacy
Chickpet, Bangalore

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು ಸಂ ಸ್ವ

Writing an Advertisement Advertisements make both a conscious and sub concious appeal and should be beautiful, sentimental or humorous not blatant or vulgar crisp in their appeals whether in wording or design not too highly coloured metaforically, and with a reason given (where ever possible) that appeals to the practicable mind, a mere statement of the name of the article or place is insufficient

Get your advertisements written by **The Publicity Department, Swadeshabhimani, Mangalore**

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿಯು ಈ ಸಂಸ್ಥೆಯು ವರ್ಷಂಪ್ರತಿ ದೃಢವಾಗಿ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ ಧಿ ಕೆನರಾ ಬ್ಯಾಂಕ್ ಲಿಮಿಟೆಡ್ ಇದರಲ್ಲಿ ಸಾರ್ವಜನಿಕರು ಇಟ್ಟಿರುವ ವಿಶ್ವಾಸಕ್ಕೂ ಸ್ವಯ ... ದಾಖಲೆಯಾಗಿದೆ

19 ಆಫೀಸುಗಳಿರುವ ಹೆಸರಾದ ಬೇಂಕು

ನಮ್ಮ ಆಫೀಸುಗಳು:-

ಬೊಂಬಾಯಿ (ಫೋರ್ಟ್ ಮತ್ತು ಮಾಂಡ್ವಿ), ಹುಬ್ಬಳ್ಳಿ ಮಂಗಳೂರು, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಂ, ಅಲ್ಲೆಪ್ಪಿ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿವೆ

ಪ್ರಗತಿಸೂಚಕ ಪಟ್ಟಿ

ವಂತಿಗೆ ಭಂಡವಾಳ	[illegible] ಭಂಡವಾಳ	ರಿಜರ್ವ	ಡಿಪೋಜಿಟ್	ವ್ಯವಹಾರದಲ್ಲಿರುವ ಭಂಡವಾಳ
1916 2 25 000	1916 2 00 000	1916 69 000	1916 3,60,000	1916 6,83,000
1920 3,00,000	1920 3,00 000	1920 1,61,000	1920 8,99,000	1920 14,19,000
1924 3,00,000	1924 3,00,000	1924 2,62 000	1924 18,10,000	1924 24,69,000
1928 3,00,000	1928 3,00,000	1928 3 88,000	1928 37 42 000	1928 46 99 000
1932 6,00,000	1932 3,80,000	1932 4,31 000	1932 55,46,000	1932 65,62 000
1934 6,00,000	1934 3,81,000	1934 4 50,000	1934 58,62 000	1934 73,49 000

ಗಿರಾಕಿಗಳಿಗೆ ಎಲ್ಲಾ ತರದ ಸೌಕರ್ಯಗಳು.

ಸುಲಭ ರೀತಿಯ ವ್ಯಾಪಾರ ವಹಿವಾಟುಗಳು

ನಮ್ಮ ಮುಂದಾಳುಗಳು

ಆಶ್ಮಾನರ ಬೋರ್‌ವೆಲ್‌ಗೆ ಮುನ್ಸಿಪಾಲಿಟಿಯು ಧಾರಾಳ ಹಣ ಸುರಿಯಿತು. ಅದಕ್ಕೆ ಪಂಪನ್ನೂ ಸಿಕ್ಕಿಸಿದರು. ಆದರೆ ಬುದ್ಧಿಯಿಲ್ಲದ ಜನರು ಅದನ್ನು ನಾಲ್ಕಾರು ಬಾರಿ ಕೆಡಿಸಿದರು. ಅಂದಿನಿಂದ ಹಾಳುಗುಡಿಯಂತೆ ಬಾವಿಯ ಬಾಯೇ ಬಂದು! ತಿರುಗಿ ನೀರನ್ನು ತೋರಿಸಲಾರದಂಥ ದೊಡ್ಡ ಪ್ರಶ್ನೆಯೇ ಇದು!

\+ + +

ಮಂಗಳೂರಿನ ಗಲ್ಲಿಗಳಿಗೆ ಮೋಕ್ಷವಾವಾಗ? ರಥಬೀದಿಯ ಚರಂಡಿಗಳು ಕಾಫಿ ಹೋಟೆಲಿನ ದಿವ್ಯ ಅಮೃತವನ್ನೇ ಸಾರುತ್ತಿವೆ. ಬಂದರಿನ ಘೋಷಾ ಗಲ್ಲಿಗಳ ಸುಖ ಹೇಳಿ ತೀರದು. ತಮ್ಮ ಮನೆಯ ಆಸುಪಾಸುಗಳನ್ನು ಚೊಕ್ಕವಾಗಿರಿಸದ ನಮ್ಮ ನಾಗರಿಕ ಬಂಧುಗಳಲ್ಲಿ ಕೆಲವರನ್ನಾದರೂ ದಂಡಕ್ಕೆ ಗುರಿಮಾಡದೆ, ಬಂದರು ಚೊಕ್ಕವಾಗದು. ಅಲ್ಲಿಗೂ ಯೋಗ್ಯ ಚರಂಡಿಗಳ ಸ್ಕೀಮು ಅವಶ್ಯವಿದೆ.

\+ + + +

ಮುನ್ಸಿಪಾಲಿಟಿಯವರು ಆ ಪೂರ್ವಕ್ಕೆ ಲೈಸನ್ಸು ಇಲ್ಲದ ಗಾಡಿ, ಸ್ಕಾಕಲಾಗಳನ್ನು ತಡೆಯುವಂತೆ ನಗರದ ಗಲ್ಲಿಗಳನ್ನು ಕೆಡಿಸುವ ಜನರನ್ನು ಹಿಡಿಯುವ ವ್ಯವಸ್ಥೆ ಕೆಲವು ಸಮಯವಾದರೂ ಮಾಡುತ್ತಿದ್ದರೆ, ಹಗಲು ಮೂಗು ಬಿಡಿಸಿ, ಮಂಗಳೂರಿನ ಗಲ್ಲಿಗಳಲ್ಲಿ ತಿರುಗಬಹುದು.

ಮಂಗಳೂರಿನ ಬೀದಿಗಳಲ್ಲಿ ಕುಷ್ಠರೋಗಿಗಳು ತಮ್ಮ ರೋಗದ ಪ್ರಚಾರಕ್ಕೆಂಬಂತೆ ಕಾಲು ನೀಡಿ ಕುಳಿತಿರುವುದನ್ನು ನಮ್ಮ ಮುನಿಸಿಪಲ್ ಹೆಲ್ತ್ ಆಫೀಸರರು ಕಾಣಲಾರರೇ! ಅವರಿಗೆ ಕಾರ್ ಇದೆ;– ಅಪಾಯವಿಲ್ಲ–ಕುಳುಕಾರಿನಲ್ಲಿ ತಿರುಗುವ ಬಡವರ ಗತಿ?

\+ + + +

ಮೊನ್ನೆ ನಮ್ಮ ಜಿಲ್ಲಾಬೋರ್ಡು ಸೆಕ್ರೆಟರಿ ಸಾಹೇಬರು ಪುತ್ತೂರಿಗೆ ಆಗಮಿಸಿದ್ದರು. ಯಾಕೆಂದು ಅವರಿಗೇ ತಿಳಿಯದು. ಉಪಾಧ್ಯಾಯರ ಪರಿಷತ್ತಿರಬೇಕು. ಆದರೆ ಈ ಬೆಪ್ಪು ಉಪಾಧ್ಯಾಯರು ಮ. ರಾ. ರಾ. ಸೆಕ್ರೆಟರಿಯವರನ್ನು ಗೌರವಿಸದೆ, ಸ್ವಾಗತ ಮಾಡಲು ಕಾದುನಿಲ್ಲದ್ದರಿಂದ ಅವರು ಬಂದಂತೆ ಮರಳಿದರಂತೆ! ಅಂತೆಯೇ ಆ ದಿನದ ಪ್ರಯಾಣ ಭತ್ತೆಯನ್ನು ನಿರಾಕರಿಸಿ ಯಾರೆಂದೂ, ತಮ್ಮನ್ನು ಸ್ವಾಗತಿಸಿದ ಉಪಾಧ್ಯಾಯರ ಕಾರ್ಯದರ್ಶಿಯರನ್ನು ತೀವ್ರವೇ 'ಕೂಲಕ್ಕೇರಿಸಿ' ಯಾರೆಂದು ತಿಳಿಯಲೇ?

\+ + + +

ಜಿಲ್ಲಾಬೋರ್ಡು ದೇಶೀಯ ಕೈಗಾರಿಕೆಗೆ ತುಂಬಾ ಪ್ರೋತ್ಸಾಹಿಸುತ್ತಿದೆ. ಎಟೆಂಡನ್ಸು ರಿಜಿಸ್ಟ್ರಿಗಳ ಹಾಳೆಗಳನ್ನು ಸರಕಾರ ಛಾಪಖಾನೆಯವರು ಅಗ್ಗವಾಗಿ ಒದಗಿಸುತ್ತಿದ್ದರೂ, ಮಂಗಳೂರಿನ ಕೆನರಾ ಛಾಪಖಾನೆಗೆ ಆ ಕೆಲಸವನ್ನು ಕೊಟ್ಟು ದೇಶಾಭಿಮಾನ ಉಳಿಸಿದ್ದಾರೆ.

\+ + + +

ಎಲ್ಲೆಲ್ಲಿಯೂ ಸಿಲ್ವರ್ ಜುಬಿಲಿಯ ಗದ್ದಲವೆದ್ದಿದೆ. ಇದುವರೆಗೆ ಸಾರ್ವಜನಿಕ ಕಾರ್ಯಗಳಲ್ಲಿ ಜನರಿಂದ ದೂರವಾದ ಸರಕಾರಿ ಆಫೀಸರರು ತಿರುಗಿ ಜನರ ಬಳಿಗೆ ಬಂದು ತಾವೂ ಸಹ ಜುಬಿಲಿ ಕೆಲಸ ಮಾಡುತ್ತಿರುವೆವೆಂದು ಒದ್ದಾಡುತ್ತಿರುವುದು ನಿಜವಾಗಿಯೂ ಸ್ತುತ್ಯ ವಿಚಾರ. ಮೊದಲಿಂದ ಜನರೊಡನೆ ಅವರು ಕೂಡಿ ಬೆರೆಯುತ್ತಿದ್ದರೆ ಜುಬಿಲಿಗಿಲ್ಲಿಯ ಕಷ್ಟವಿತ್ತು!

ಇಂದೋರಿನಲ್ಲಿ ಹಿಂದೀ ಸಮ್ಮೇಳನ.

೧೦,೦೦೦ ಅತಿಥಿಗಳು!

ಮಹಾತ್ಮಾಜೀಯವರ ಭಾಷಣ.

ಇದೇ ತಾ. ೨೦ರಲ್ಲಿ ಇಂದೋರಿನಲ್ಲಿ ಅಖಿಳಭಾರತ ಹಿಂದೀ ಪರಿಷತ್ತು ಮಹಾತ್ಮಾಜೀಯವರ ಅಧ್ಯಕ್ಷತೆಯಲ್ಲಿ ಜರಗಿತು; ೧೦,೦೦೦ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಾಗಿದ್ದರು.

ಆ ದಿನ ಸಂಜೆ ೫-೧೫ಕ್ಕೆ ಮಹಾತ್ಮಾಜೀಯವರು ಶ್ರೀಮತಿ ಕಸ್ತೂರಿ ಬಾಯಿ ಗಾಂಧಿ ಮತ್ತು ಮೀರಾಬೆನ್ನರನ್ನೊಡಗೂಡಿ ಚಪ್ಪರವನ್ನು ಪ್ರವೇಶಿಸಿದರು. ಅವರನ್ನು ದೇಶ ಸೇವಿಕೆಯರು ಗೀತೆಯೊಂದಿಗೆ ಸ್ವಾಗತೀಕರಿಸಿದರು. ಅದೇ ದಿನ ಮಹಾರಾಜರೂ ಮಹಾರಾಣಿಯವರೂ ಅನಂತರ ಆಗಮಿಸಿ ಮಹಾತ್ಮರ ಚಪ್ಪರದ ಬಳಿಯ ತಮ್ಮ ಆಸನದಲ್ಲಿ ಕುಳಿತರು.

ಮಹಾರಾಜರು ಸಮಾರಂಭವನ್ನು ಆರಂಭಿಸಿ ಭಾಷಣಮಾಡುತ್ತಾ ತನ್ನ ಸಂಸ್ಥಾನದಲ್ಲಿ ೧೭ ವರ್ಷಗಳ ಹಿಂದೆ ಒಂದು ಹಿಂದೀ ಸಮ್ಮೇಳನವು ಜರಗಿದ್ದಿತೆಂದೂ, ಅಂದಿನ ಮತ್ತು ಇಂದಿನ ಸಭೆಯನ್ನು ಸರಿದೂಗುವಾಗ ಇಂದಿನದ್ದು ಮಹಾವೃಕ್ಷ ಸಮಾನವಾಗಿದೆಯೆಂದೂ ಅಂದಿನ ಸಭೆಯು ಬರಿಯ ಬೀಜವೆಂದೂ ತಿಳಿಸಿದರು. ಹಿಂದೀಯು ರಾಷ್ಟ್ರಭಾಷೆಯಾಗುವ ಸುದಿನವು ಬೇಗನೇ ಸನ್ನಿಹಿತವಾಗಲಿದೆ–ಅಂತಹ ದಿನವನ್ನು ನಾವು ನಿರೀಕ್ಷಿಸುತ್ತಿದ್ದೇವೆ ಎಂದೂ ಅವರು ಹೇಳಿದರು. ಅವರು ಮಧ್ಯಭಾರತ ಹಿಂದೀ ಸಮ್ಮೇಳನದ ಸೇವೆಯನ್ನು ಪ್ರಶಂಸಿಸುತ್ತಾ ಈ ಸಂಸ್ಥೆಯೂ ಕೇಂದ್ರ ಭಾರತದಲ್ಲಿ ಬಹು ಶಕ್ತಿಯುತವಾಗಿಯೂ ಪ್ರತಿಭಾಶಾಲಿಯಾಗಿಯೂ ಮುಂದರಿಯುತ್ತಿದೆ ಎಂದು ಸೂಚಿಸಿದರು. ಇಂದೋರಿನಲ್ಲಿ ಸ್ಥಾಪಿತವಾಗಬೇಕೆಂಬ ಹಿಂದೀ ವಿಶ್ವವಿದ್ಯಾನಿಲಯದ ಕುರಿತು ಅವರು ನುಡಿಯುತ್ತಾ ಅಂತಹ ಸಂಸ್ಥೆಯ ಆವಶ್ಯಕತೆಯಿದೆ–ಮಾತ್ರ ಅದು ನಿರುದ್ಯೋಗತೆಯನ್ನೂ ವಿದ್ಯಾರ್ಥಿಗಳ ನೈತಿಕ ನಿಶ್ಶಕ್ತಿಯನ್ನೂ ನಿವಾರಿಸಲು ಸಾಧಕವಾಗಬೇಕೆಂದೂ ಸೂಚಿಸಿದರು.

ಅವರ ಭಾಷಣಾನಂತರ ಮಹಾತ್ಮಾಜೀಯವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದರು. ಶ್ರೀ। ಪುರುಷೋತ್ತಮದಾಸ್ ಟಂಡನ್‌ರವರು ಮಹಾತ್ಮರನ್ನು ಅಧ್ಯಕ್ಷ ಪದವಿಗೆ ಸ್ವಾಗತೀಕರಿಸಿ ನುಡಿಯುತ್ತಾ ಸಭಿಕರಿಗೆ ಮಹಾತ್ಮಾಜೀಯವರ ಪರಿಚಯ ಅಥವಾ ಅವರು ಹಿಂದೀಯ ಉನ್ನತಿಗಾಗಿ ಮಾಡಿದ ಸಾಹಸದ ವಿವರನ್ನು ಮಾಡಿಕೊಡುವುದು ಅನವಶ್ಯವೆಂದರು. ಅವರನ್ನು ಅನುಮೋದಿಸಿ ಮಾತನಾಡಿ, ಪ್ರೊ। ಜೈಸ್‌ವಾಲರೂ ಮದ್ರಾಸಿನ ಪಂಡಿತ ಹರಿರಾಮ ಶರ್ಮರೂ ಮಹಾತ್ಮಾಜೀಯವರ ಮಹತ್ಸೇವೆಯನ್ನು ಒಪ್ಪಿಕೊಂಡರು.

ಮಹಾತ್ಮಾಜೀಯವರ ಭಾಷಣವಾರಂಭವಾಯಿತು. ಅವರು ಹೀಗೆಂದರು "ಸಹೋದರ ಸಹೋದರಿಯರೇ–ಭಗವಂತನ ಮಹಿಮೆಯು ಅಪಾರವಾದುದು. ಕಳೆದ ಒಕ್ಟೋಬರದಲ್ಲಿ ನಾನು ಈ ಅಧ್ಯಕ್ಷ ಪದವಿಯ ಜವಾಬ್ದಾರಿಕೆಯನ್ನು ಸ್ವೀಕರಿಸಲು ಒಡಂಬಡುತ್ತಿದ್ದಿಲ್ಲ. ಇಂತಹ ಪರಿಷತ್ತಿಗೆ ಮಾಲವೀಯರೇ ಯೋಗ್ಯ ಅಧ್ಯಕ್ಷರು. ಆದರೆ ಮಾಡಲೇನು ಅವರ ಅನಾರೋಗ್ಯವೂ ವಿದೇಶ ಸಂಚಾರ ನಿರ್ಣಯವೂ ಅವರನ್ನು ಈ ಸ್ಥಾನಕ್ಕೆ ಬರಲು ಅನುಕೂಲತೆಯನ್ನೀಯಲಿಲ್ಲ" ಎಂದರು. ಮಹಾತ್ಮರು ಮುಂದರಿಸಿ ನುಡಿಯುತ್ತಾ ಈ ಸಮ್ಮೇಳನವು ೨ ಲಕ್ಷ ರೂಪಾಯಿಗಳನ್ನು ದಕ್ಷಿಣ ಹಿಂದುಸ್ಥಾನದಲ್ಲಿಯ ಹಿಂದೀ ಪ್ರಚಾರ ಕಾರ್ಯಕ್ಕಾಗಿ ಸಂಗ್ರಹಿಸಿ ಕೊಡುವುದಾದರೆ ಮಾತ್ರ ತಾನು ಈ ಸ್ಥಾನವನ್ನು ಸ್ವೀಕರಿಸುವೆನೆಂದೂ ಅಲ್ಲದೆ ಅಂತಹ ವಾಗ್ದಾನವು ಕಾರ್ಯರೂಪವಾಗಿ ಬರಬೇಕೆಂದು ಖಚಿತ ಪೂರ್ವಕವಾಗಿ ಹೇಳಿರುವೆನೆಂದೂ ತಿಳಿಸಿದರು.

೩೦೦೦ ಜನರು ಮಡಿದರು!

೧೨೦೦೦ ಮನೆಗಳು ಬಿದ್ದುವು.

೧೧,೦೦೦ ಮನೆಗಳು ಹಾಳಾದುವು!

ಫೊರ್‌ಮೋಸಾದಲ್ಲಿ ಭೂಕಂಪ!

ಕಳೆದ ರವಿವಾರ ಜಪಾನಿನ ಫೊರ್‌ಮೋಸಾದಲ್ಲಿ ಭೀಷಣತರ ಭೂಕಂಪ! ಜನರು ಕಣ್ಣುಮುಚ್ಚಿ ತೆರೆಯುವುದರೊಳಗಾಗಿ ಎಲ್ಲವೂ ನಡೆದುಹೋದುವು. ಜಪಾನ್ ಗವರ್ನರ್ ಜನರಲರು ಪ್ರಕಟಿಸಿರುವಂತೆ ಒಟ್ಟು ೩೦೦೦, ಮಂದಿ ಸತ್ತರೆಂದೂ, ೧೨,೦೦೦ ಮನೆಗಳು ಬಿದ್ದುವೆಂದೂ ೧೧,೦೦೦ ಮನೆಗಳು ಹಾಳಾಗಿ ಹೋಗಿವೆಯೆಂದೂ ತಿಳಿದುಬಂದಿದೆ. ಒಟ್ಟು ೧೦,೦೦೦,೦೦೦ ಯೆನ್‌ಗಳ ನಷ್ಟವುಂಟಾಗಿದೆಯೆಂದು ಅಂದಾಜು ತೆಗೆದಿದ್ದಾರೆ. ಆರು ದಿನಗಳ ತನಕ ಯಾವ ವ್ಯವಹಾರವೂ ನಡೆಯದೆ ಇಡೀ ಪ್ರಾಂತ್ಯವು ಸ್ಮಶಾನ ಭೂಮಿಯಂತಾಗಿತ್ತು. ಸಹಾಯ ಸಮಿತಿಗಳು ಕೆಲಸ ಮಾಡುತ್ತಿವೆ. ೬ ಮಿಲಿಯ ಯೆನ್‌ಗಳಷ್ಟು ನಷ್ಟವು ಕಟ್ಟಡಗಳಿಗೆ ಒದಗಿದೆ. ಮಾರ್ಗಗಳಿಗೂ ರೈಲ್ವೆಗಳಿಗೂ ನಾಲ್ಕು ಮಿಲ್ಯ ಯೆನ್‌ಗಳಷ್ಟು ನಷ್ಟವೊದಗಿದೆ. ೨೦೦೦ ಚಚ್ಚೌಕ ಮೈಲುಗಳ ವಿಸ್ತೀರ್ಣದ ವರೆಗೆ ಭೂಕಂಪದ ಹಾವಳಿಯು ಹರಡಿದೆ. ೩೦ ಚಿ ನಗರವೂ ಟೈಚೂ ನಗರವೂ ಪೂರ್ಣವಾಗಿ ಧ್ವಂಸವಾಗಿವೆ. ಟೈನಾ ಸಿಲ್ಯಾಣದಿಂದ ಬ್ರಿಟನು ಸ್ಟೀಮರುಗಳನ್ನು ಕಳುಹಿಸಿದುದನ್ನು ಕಂಡು ಜಪಾನು ಬ್ರಿಟನನ್ನು ಅಭಿನಂದಿಸಿರುತ್ತದೆ.

ಎಸೆಂಬ್ಲಿಯ ಚಿತ್ರ.

ಮುಂಬಾಯಿಯ ಟ್ಲಾವಾಸ್ಕಿ ಕೋಜ್‌ನಲ್ಲಿ ಪ್ರೊಫೆಸರ್ ಕೆ. ಟಿ. ಷಹಾರವರು ಎಸೆಂಬ್ಲಿಯ ಚಿತ್ರದ ಕುರಿತು ಒಂದು ವಿನೋದಪರ ಭಾಷಣ ಮಾಡಿದರು. ಅವರು ಎಸೆಂಬ್ಲಿಯ ಒಂದು ಚಿತ್ರವನ್ನು ಬಿಡಿಸಿ ಅದರಲ್ಲಿ ಕಾಂಗ್ರೆಸ್ ಪಕ್ಷೀಯರು ಕುಳಿತಿರುವ ಸ್ಥಳವನ್ನು ಕೆಂಪು ಬಣ್ಣದಿಂದ ಚಿತ್ರಿಸಿದ್ದರು. ಕಾಂಗ್ರೆಸ್ ಪಾರ್ಟಿಯವರು ಸುಧಾರಣಾವಾಗಿ ಎಸೆಂಬ್ಲಿಯಲ್ಲಿ ಆವೇಶಪೂರ್ವಕವಾಗಿ ಕೆಲಸಮಾಡುತ್ತಿರುವರಾದುದರಿಂದ ಅವರ ಚಿತ್ರವು ಕೆಂಪಗಿರುವುದು ಸಂಗತವೆಂದು ಅವರ ಹೇಳಿಕೆ. ಸ್ವತಂತ್ರ ಪಕ್ಷದವರ ಸ್ಥಳಕ್ಕೆ ಚಿತ್ರದಲ್ಲಿ ಹಸುರು ಬಣ್ಣವನ್ನು ಕೊಟ್ಟಿದ್ದರು. ಅವರಲ್ಲಿರುವ ಆಶಾವಾದವೂ, ಸ್ವತಂತ್ರಭಾವನೆಯೂ ವಿಶಿಷ್ಟ ಗುಣಗಳೆಂದೂ ಅವರು ತಮ್ಮ ಧುರೀಣರನ್ನು ಮರೆತು ಸ್ವತಂತ್ರಿಗಳಾಗಿದ್ದರೆಂದೂ ಅವರು ಹೇಳುತ್ತಿರುವರು. ಸರಕಾರ ಮತ್ತು ಇಂಡಿಪೆಂಡೆಂಟ್ ಪಕ್ಷೀಯರ ಮಧ್ಯೆ ಏಕೆ ಕಾಂಗ್ರೆಸ್ಸಿನವರಿಗೆ ಸ್ಥಾನಗಳನ್ನು ಕೊಟ್ಟರೋ ಅದನ್ನು ಹೇಳಲು ಸಾಧ್ಯವಿಲ್ಲ–ತಾನದನ್ನು ಹೇಳುವುದಿಲ್ಲ ಎಂದು ಅವರ ಹೇಳಿಕೆ. ಅವರು ಹೇಳಿದುದು: 'ಸರ್ ಜೋಸೆಫ್ ಬೋರ್ ಒಬ್ಬರಲ್ಲದೆ ಸರಕಾರೀ ಪಕ್ಷದಿಂದ ಬೇರಾವ ಧುರೀಣನೂ ಅಲ್ಲಿರಲಿಲ್ಲ. ಉಳಿದವರು ತಮ್ಮ ಪ್ರತಿಯೊಂದು ಹೆಜ್ಜೆಯನ್ನು ತಪ್ಪು ತಪ್ಪಾಗಿ ಇಡುತ್ತಿದ್ದರಾದುದರಿಂದ ಅವರು ರಾಷ್ಟ್ರೀಯವಾದಿಗಳೊಡನೆ ಸೇರಿ ಕೆಲಸವನ್ನು ನಡೆಸಲು ಇಚ್ಛೆಯುಳ್ಳವರಾಗಿದ್ದಿಲ್ಲ.

ಶಾಸನ ಸಭೆಯಲ್ಲಿ ಕಾಣುತ್ತಿದ್ದುದು ಭುಲಾಭಾಯಿದೇಸಾಯಿ ಮತ್ತು ಮಿಃಜಿನ್ನಾರವರಿಬ್ಬರೆ. ಇಬ್ಬರೂ ವಕೀಲರಾಗಿರುವುದರಿಂದ ತಂತಮ್ಮ ಪಕ್ಷಗಳ ಪ್ರತಿಪಾದನೆಯನ್ನು ಶ್ಲಾಘನೀಯವಾಗಿ ಸಭೆಯ ಮುಂದೆ ಮಾಡಿದರು. ಮೊದಲಿನವರ ವಾಗ್ಶಕ್ತಿಯು ಜನರನ್ನು ವಿಸ್ಮಯಗೊಳಿಸಿತು. ಸಭಾಸದರೆಲ್ಲ ಒಳ್ಳೆಯ ಗುಣವಂತರೇ. ಬೇರೆಯವರು ಅದ್ದಿ ತರುವ ಯಾವ ಮಾತನ್ನೂ ಅವರು ಆಡುತ್ತಿದ್ದಿಲ್ಲ. ಕಾಲೇಜಿನಲ್ಲಾಗುವ ಭಾಷಣಗಳಿಗಿಂತ ದೊಡ್ಡ ಭಾಷಣಗಳು ಅಲ್ಲಿ ನಡೆಯುತ್ತಿರಲೇ ಇಲ್ಲ. ಅಲ್ಲಿದ್ದ ಯುರೋಪಿಯಾನರ ಪಕ್ಷವೂ ಎಲ್ಲಕ್ಕೂ ಸಿದ್ಧವಾಗಿತ್ತು. ಅವರ ರಚನಾಕ್ರಮವು ಉತ್ತಮ ಸ್ಥಿತಿಯಲ್ಲೇ ಇತ್ತು. ಕೆಲವು ಸದಸ್ಯರು ಮಾತನಾಡಿದಾಗ ವ್ಯಾಕರಣವನ್ನು ಮರೆತೇ ನುಡಿದರು. ಪ್ರಾಂತಿಕ ಭಾಷೆಗಳಿಂದಲೂ ಅಲ್ಲಿ ಮಾತನಾಡಿದ ಸದಸ್ಯರಿದ್ದರು. ಭಾಷಣಗಳನ್ನು ಬರೆದು ತಂದು ಸಭೆಯಲ್ಲಿ ಓದಿದವರ ಸಂಖ್ಯೆ ಧಾರಾಳ; ಇಂಗ್ಲಿಷನ್ನು ತಿಳಿದಿರುವ ಇಂಗ್ಲಿಷರೇ ನಕಲು ಮಾಡಿದ ಭಾಷಣಗಳನ್ನು ಓದಿದರು. ಉಡಿಗೆತೊಡಿಗೆಗಳ ಮಟ್ಟಿಗೆ–ಸಭೆಯಲ್ಲಿ ಬಿಳಿ ಟೊಪ್ಪಿಗಳು ಎಲ್ಲೆಲ್ಲೂ ಕಾಣುತ್ತಿದ್ದುವು. ಸರಕಾರೀ ಬೆಂಚುಗಳಲ್ಲಿದ್ದವರು ಆಂಗ್ಲೇಯರಂತೆ ಉಡಿಗೆತೊಡಿಗೆಗಳನ್ನು ಧರಿಸಿದ್ದರು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 78/1935.

ವಾದಿ—ತಿಮ್ಮಪ್ಪ ಶೆಟ್ಟಿ, ಮುತ್ತೆ ಶೆಟ್ರ ಅಳಿಯ, ಉಡುಪಿ ತಾಲೂಕು ಬಡಗುಬೆಟ್ಟು ಗ್ರಾಮದಲ್ಲಿರುವವ.

ಪ್ರತಿವಾದಿ–ಅನಂತ ಪದ್ಮನಾಭ ಉಪಾಧ್ಯ, ಸೋಮಶೇಖರ ಉಪಾಧ್ಯರ ಮಗ. ಪುತ್ತೂರು ತಾಲೂಕು ಚಾರ್ವಾಕದಿಯಲ್ಲಿರುವವ.

ಸದ್ರಿ 1ನೇ ಪ್ರತಿವಾದಿ ವಗೈರೆರ ಮೇಲೆ ಈ ವಾದಿಯು ರೂಪಾಯಿ 2081-4-0 ಬರಮಾಡಿಕೊಳ್ಳುವರೆ ಮಾಡಿದ ಮೊಕ್ಕಂದಮೆಯು ತಾರೀಕು 8-6-1935ರಲ್ಲು ಮೊಕ್ಕಂದ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ. ಆದುದರಿಂದ ಸದ್ರಿ ದಾವೆಯಲ್ಲಿ ಆಕ್ಷೇಪ ಇದ್ದರೆ ಆ ತಾರೀಕಿಗೆ ಬೆಳಿಗ್ಗೆ 11 ಗಂಟೆಗೆ ಮೊಕ್ಕಂದ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು. ಇಲ್ಲದಿದ್ದರೆ ನಂಬ್ರವನ್ನು ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲಾದೀತು.

ಮೊಕ್ಕಾಂ ಕುಂದಾಪುರ,
22-4-35.

K Narayana Shenai,
ವಾದಿಯ ವಕೀಲ.

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ, ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ. ನೀವೂ ನಮ್ಮಲ್ಲಿಗೆ ಬರಬಹುದು–ತೃಪ್ತಿ ಹೊಂದಬಹುದು–ಮೆಚ್ಚಿದರೆ ಪಡೆಯಬಹುದು.

ಹನ್ನೊಂದು ಮಂದಿಯನ್ನು ಜೀವಂತ ಸುಟ್ಟರು!

ಫಿರೋಜಾಬಾದಿನಲ್ಲಿ ಅತ್ಯಾಚಾರ!!

ಶ್ರೀ ರಾಮ ನವಮಿಯ ದಿನ ಹಿಂದೂ-ಮುಸ್ಲಿಮ ದಂಗೆ!

ಹಿಂದೂವಿನ ಮನೆ ಸುಟ್ಟಿತು—ರಾಮಕೃಷ್ಣ ಮಂದಿರವು ಭಸ್ಮೀಕೃತವಾಯಿತು!

ಮೌಲಾನಾ ಶೌಕತಾಲಿಯವರು ಇಬ್ಬರನ್ನು ಗಾಯಗೊಳಿಸಿದರು'

ಫೋಟೋ ಸಂಪಾದನೆಯ ಉತ್ಸಾಹದಲ್ಲಿ ಮಾರಾಮಾರಿ!

ತಾ ೧೪ನೇ ದಿನ ಆಗ್ರಾ ಪ್ರಾಂತ್ಯದ ಬಳಿ ಇರುವ ಫಿರೋಜಾಬಾದಿನಲ್ಲಿ ಹಿಂದೂ ಮುಸ್ಲಿಮರೊಳಗೆ ಭಯಂಕರ ಹೊಡೆದಾಟ ಪ್ರಾತಃಕಾಲ ಮುಸ್ಲಿಮರು 'ದುಗಾರ್' ಮೆರವಣಿಗೆಗೆ ಹೊರಟರು. ದಾರಿಯಲ್ಲಿ ನಿಂತಿದ್ದ ಹಿಂದೂಗಳ ತಂಡಗಳು ಅವರ ಮೇಲೆ ಕಲ್ಲು ಮಳೆಯನ್ನು ಕರೆದುವು ಮುಸ್ಲಿಮರು ಉದ್ವಿಗ್ನಗೊಂಡರು ಮೆರವಣಿಗೆಯನ್ನು ನಿಲ್ಲಿಸಿ ಅಲ್ಲಿದ್ದ ಹಿಂದೂಗಳ ಮೇಲೆ ಬಿದ್ದರು ಡಾ। ಜೀವರಾಮ್ ಎಂಬವರ ಮನೆಗೆ ಬೆಂಕಿಕೊಟ್ಟರು ಅಲ್ಲಿಯ ರಾಮಕೃಷ್ಣ ದೇವಾಲಯಕ್ಕೂ ಬೆಂಕಿಕೊಟ್ಟರು ಈ ವಾರ್ತೆಯು ನಗರದಲ್ಲಿ ವಿದ್ಯುಚ್ಛಕ್ತಿಯಂತೆ ಹರಡಿತು. ಎಲ್ಲಾ ಕಡೆಗಳಲ್ಲೂ ದೊಂಬಿಗಾರಂಭ ಪೋಲೀಸರ ಆಗಮನವಾಯಿತು ಇತ್ತಂಡದವರನ್ನೂ ಚದರಿಸಲು ಅವರಿಗೆ ಕಷ್ಟಸಾಧ್ಯವಾಯಿತಾದುದರಿಂದ ಗುಂಡಿನ ಆಶ್ರಯವನ್ನು ತೆಗೆದುಕೊಂಡರು ಗುಂಡುಬಿಟ್ಟರು ೪೨ ಮಂದಿ ಜಖಂಗೊಂಡರು. ಮುಸ್ಲಿಮರು ಹಿಂದೂವೊಬ್ಬನನ್ನು ಹತಮಾಡಿದರು ಪೋಲೀಸರ ಗುಂಡೇಟಿನಿಂದ ಮುಸ್ಲಿಮನೊಬ್ಬನು ಬಿದ್ದುಬಿಟ್ಟ ಡಾ। ಜೀವರಾಮರವರೂ ಅವರ ಕುಟುಂಬಿಕರೂ ಬೆಂಕಿಯಲ್ಲಿ ಬಿದ್ದು ಬೆಂದುಹೋದರು ಭಸ್ಮವಾದ ೧೧ ಮಂದಿಯಲ್ಲಿ ಮೂವರು ಬರೀ ಬಾಲಕರು. ಕೂಡಲೇ 'ಕರ್ಫ್ಯೂ' ಆರ್ಡರು ಜ್ಯಾರಿಗೆ ಬಂತು ಪೋಲೀಸರನ್ನು ನಗರದಲ್ಲಿ ಪಹರೆಗೆ ನಿಲ್ಲಿಸಲಾಯಿತು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ। ಮಾಸುದಾಲಿ ಮತ್ತು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಅರ್ ಎಸ್ ಥಾಕೂರ್ ರಘುನಂದನಸಿಂಘರವರಿಗೆ ಪೆಟ್ಟುಗಳು ತಪ್ಪಲಿಲ್ಲ.

ಹಜಾರಿಬಾಗಿನಲ್ಲೂ ಗಲಾಟೆ—ಹಿಂದೂಗಳು ಹನುಮಂತನ ಮುದ್ರೆಯುಳ್ಳ ಪತಾಕೆಗಳನ್ನು ಹಿಡಿದುಕೊಂಡು ಮೆರವಣಿಗೆ ಹೊರಟರು ಅಷ್ಟರಲ್ಲಿ ಮುಸ್ಲಿಮರು ನಾವು ಧ್ವಜಗಳನ್ನು ಹಿಡಿದುಕೊಂಡು ಮೆರವಣಿಗೆ ಹೋಗಬೇಕು ನಾವು ಹಿಂದೂಗಳನ್ನು ದಾರಿ ನಡೆಯಲು ಬಿಡಲಾರೆವು ಎಂದರು ಅಧಿಕಾರಿಗಳಿಗೆ ಮನವಿಗಳು ಹೋಗಲಾಗಿ ಅವರು 'ಸಂಜೆಯಲ್ಲಿ ಹಿಂದೂಗಳ ಮೆರವಣಿಗೆಯು ಅಂತ್ಯವಾಗುತ್ತದೆ ಆ ಮೇಲೆ ನೀವು ಹೊರಡಿರಿ' ಎಂದರು. ಅದನ್ನುಲ್ಲಂಘಿಸಿ ಮುಸ್ಲಿಮರು ಮೆರವಣಿಗೆ ಹೊರಟರು. ಹಿಂದೂ ಮುಸ್ಲಿಂ ದೊಂಬಿಗಾರಂಭ' ಕಲ್ಲುಳಿಯು ಕರೆಯಿತು ೬ ಮಂದಿ ಹಿಂದೂಗಳಿಗೆ ಬಹ ಜಖಂವುಂಟಾಯಿತು ಪೋಲೀಸರು ಬಂದು ಗಾಯಗೊಂಡವರನ್ನು ಆಸ್ಪತ್ರೆಗೆ ಕಳುಹಿಸಿ ದೊಂಬಿಗಾರರನ್ನು ಚದರಿಸಿದರು. ಜಿಲ್ಲಾ ಮೆಜಿಸ್ಟ್ರೇಟರೂ ಡೆಪ್ಯುಟಿ ಕಮಿಶನರರೂ ಗಲಭೆಯಾಗದಂತೆ ಎಚ್ಚರತೆಗೆದುಕೊಳ್ಳುತ್ತಿರುವರು.

ಜನರು ಶಾಂತರಾದಂತೆ ಕಾಣುವುದಿಲ್ಲ ರಾಮನವಮಿ ಮತ್ತು ಮೊಹರಂಗಳು ರಾಂಚಿಯಲ್ಲೂ ಹಿಂದೂ ಮುಸ್ಲಿಂ ಗಲಭೆಯ ಕಾಣಿಕೆಯನ್ನು ಪಡೆದುವು

ಮೌ। ಶೌಕತಾಲಿಯವರು ಇಬ್ಬರನ್ನು ಗಾಯಗೊಳಿಸಿದರು.

ಅಲಿಪುರದಿಂದ ತಾ ೧೮ರಲ್ಲಿ ಬಂದ ವಾರ್ತೆಯಿಂದ ಹೀಗೆಂದು ತಿಳಿದುಬರುತ್ತದೆ ಅಲಿಘರ ರೈಲ್ವೇ ನಿಲ್ದಾಣದಲ್ಲಿ ಅನೇಕ ಸಾವಿರ ಜನರು ನೆರೆದಿದ್ದರು. ಮೆಕ್ಕಾಯಾತ್ರೆಯನ್ನು ಮುಗಿಸಿ ಸ್ವದೇಶಕ್ಕೆ ಹಿಂತಿರುಗಿದ ನವಾಬ್ ಬಹದೂರ್ ಸರ್ ಮೊಜಾಮಿಲುಲ್ಲಾ ಖಾನ್ ಖಾನ್ ಬಹದೂರ್ ಮೌಲ್ವಿ ಹಬಿಬುಲ್ಲಾ ಮತ್ತು ಇತರ ಕೆಲವರು ಯಾತ್ರಿಕರನ್ನು ಜನರು ಸ್ವಾಗತೀಕರಿಸುತ್ತಿದ್ದರು. ಪ್ರೆಸ್ ಚೆನ್ನಲಿನ ಸದಸ್ಯರಿಗಾಗಿ ಮೌಲಾನಾ ಶೌಕತಾಲಿಯವರು ಅಲ್ಲಿ ಫೋಟೋಗಳನ್ನು ತೆಗೆಯುತ್ತಿದ್ದರು ಮಾತಿಗೆ ಮಾತ ನಡೆಯುತ್ತಾ ಮೌಲಾನರು ಕೆಲವರಿಗೆ ಉಪದೇಶ ಮಾಡಲಾರಂಭಿಸಿದರು. 'ನೀವು ಮುಸ್ಲಿಮರು ನಿಮ್ಮಲ್ಲಿ ಐಕ್ಯವಿಲ್ಲ' ಎಂದ ಮೊದಲಾಗಿ ಜಗುಪ್ಸೆಗೊಂಡು ನುಡಿದರು. ಆಗ ಚೆನ್ನಲಿನ ಶಿಷ್ಯರ ಒಬ್ಬರು 'ಈಗ ನಿಂತಿರುವ ಇಬ್ಬರೂ ಕಾಮೆರಾದ್ವಾರರೂ ಮುಸ್ಲಿಮರು ಹೀಗಿರುವಾಗ ಇಸ್ಲಾಮಿಗೆ ಹಾನಿ ಮಾಡುವುದಾದರೂ ಏನು?' ಎಂದು ಪ್ರಶ್ನಿಸಿದರು. ಒಡನೆ ಶೌಕತಾಲಿಯವರು ಉದ್ವಿಗ್ನಗೊಂಡರು. ಒಡನೆ, ಹಾಗೆ ಹೇಳಿದವರಿಗೆ ಹೊಡೆದು ಅವರನ್ನು ವಿಶೇಷವಾಗಿ ಗಾಯಗೊಳಿಸಿಬಿಟ್ಟರು ಇವರನ್ನು ಬಿಡಿಸಲು ಬಂದ ಇನ್ನೊಬ್ಬರೂ ಜಖಂಗೊಂಡರು. ಇವರಿಬ್ಬರನ್ನೂ ಆಸ್ಪತ್ರೆಗೊಯ್ಯಲಾಯಿತು ಈ ಗಲಾಟೆಯಾಗುತ್ತಿದ್ದಾಗ ಸರ್ ಮಹಮ್ಮದ್ ಯೂಸುಫ್‌ರವರೂ ಮಿ। ಖಾಸಿಲ್ ಖಾನ್ (ಸಿಟಿ ಮೆಜಿಸ್ಟ್ರೇಟರು) ಮತ್ತು ಪ್ರೊ। ಹೈದರ್ ಖಾನ್ ಮತ್ತು ಪ್ರೊ। ಹಬೀಬರು ಬಂದು ಜಗಳವನ್ನು ನಿಲ್ಲಿಸಿದರು. ಶೌಕತಾಲಿಯವರ ಅಪರಾಧವು ಕೋರ್ಟಿಗೂ ಹೋಗಲಿದೆಯಂತೆ

ಶೃಂಗೇರಿ ಶ್ರೀಮಠವೂ, ನವೀನ ಆಡಳಿತವೂ

(ಬರೆದು ಬಂದುದು)

ಶೃಂಗೇರಿ ಜಹಗೀರಿಗೆ ಮುಖ್ಯ ಅಧಿಕಾರಿಗಳಾಗಿ ಕಡೂರ ಜಿಲ್ಲಾ ಕಡೂರು ತಾಲ್ಲೂಕು ಅಮಲ್ದಾರರಾಗಿದ್ದ ಶ್ರೀ। ಕೂದುವಳ್ಳಿ ರಾಮರಾಯರವರು ಸರಕಾರದಿಂದ ನೇಮಿಸಲ್ಪಟ್ಟಿರುವುದು ಸರಿಯಷ್ಟೆ. ಇವರು ಇಲ್ಲಿಗೆ ಬರುವ ಮೊದಲು ಕೆಲಸದಿಂದ ನಿವೃತ್ತರಾಗಿದ್ದ ಶ್ರೀ। ನಂಜನಗೂಡು ಶ್ರೀಕಂಠ ಶಾಸ್ತ್ರಿಗಳವರು ಪುನಃ ತಾ ೧-೪-೩೪ರಲ್ಲಿ ಸರ್ವ ಸ್ವಾತಂತ್ರ್ಯವನ್ನೂ ಶ್ರೀ। ಸ್ವಾಮಿಗಳವರಿಂದ ರುಜುಪಿಸಿ ಶ್ರೀ। ರಾ। ಬ। ನಂಜುಂಡಯ್ಯನವರ ಸಮಕ್ಷಮದಲ್ಲೇ ಪಡೆದಿರುತ್ತಾರಾಗಿ ತಿಳಿದು ಬರುತ್ತದೆ ಈ ಕಾರಣದಿಂದಲೇ ಶ್ರೀ। ರಾವ್ ಬಹದ್ದೂರ್ ನಂಜುಂಡಯ್ಯನವರು ತಮ್ಮ ಮುಖ್ಯಾಧಿಕಾರಕ್ಕೆ ರಾಜೀನಾಮೆ ಕೊಟ್ಟು ಹೋದರೆಂದೂ ಊಹಿಸಲಾಗಿದೆ ಶ್ರೀ। ರಾ। ಬ। ನಂಜುಂಡಯ್ಯನವರು ಹೆಸರಿಗೆ ಮಾತ್ರ ಸರ್ವಾಧಿಕಾರಿಗಳಾಗಿದ್ದರೆಂಬುದರಲ್ಲಿ ಸಂಶಯವೇ ಇಲ್ಲ ಕಾರಣ ಅವರು ಕಾನೂನುಗಾರರಾಗಿದ್ದರು. ಅವರು ಒಬ್ಬ ಧನಿಕ ರೈತನ (ಶ್ರೀ। ಶಾಸ್ತ್ರಿಗಳಿಗೆ ವಿಶ್ವಾಸವಿದ್ದ) ಜಮೀನನ್ನು ಹರಾಜಿಗೆ ಇಳಿಸಲು, ಸದರಿ ರೈತನು ಶ್ರೀ। ಶ್ರೀಕಂಠ ಶಾಸ್ತ್ರಿಗಳವರಿಗೆ ಬರೆದು ತಿಳಿಸಲು, ಶ್ರೀ। ಶಾಸ್ತ್ರಿಗಳವರು ಶ್ರೀ। ನಂಜುಂಡಯ್ಯನವರಿಗೆ ಹರಾಜನ್ನು ವಜಾ ಮಾಡಬೇಕೆಂದು ಬರೆದು ತಿಳಿಸಿದಂತೆ ಶ್ರೀ। ನಂಜುಂಡಯ್ಯನವರು ಶಿರಸಾವಹಿಸಿ ನಡೆಯಬೇಕಾಗಿ ಬಂತು. ಇನ್ನೂ ಈ ತೆರನಾದ ಅನೇಕ ವಿಷಯಗಳು ನಡೆದುದರಿಂದಲೇ ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು ಹೊರಟು ಹೋದರು.

ಈಚೆಗೆ ಹೊಸದಾಗಿ ಬಂದಿರತಕ್ಕ ಶ್ರೀ ಕೂದುವಳ್ಳಿ ರಾಮರಾಯರವರ, ಪ್ರಜೆಗಳೂ, ರೈತರೂ ಸೇರಿ ಒಂದು ಮಹಾಸಭೆಯನ್ನು ನಡೆಸಿದ್ದಾಗ (ತಾ [illegible]-೩೪) ಆ ಸಭೆಯಲ್ಲಿ ಸದರಿಯವರ ರೈತಾಪಿಗಳು ತಮ್ಮ ಕುಂದುಕೊರತೆಗಳನ್ನು ತಿಳಿಸಿದಲ್ಲಿ ತಮ್ಮಿಂದಾದಷ್ಟು ಕಷ್ಟನಿವಾರಣೆ ಬಗ್ಗೆ ಸಹಾಯ ಮಾಡುವುದಾಗಿ ವಾಗ್ದಾನವಿತ್ತರೂ, ರೈತರುಗಳ ಸಹಾಯಾರ್ಥವಾಗಿ ಯಾವ ಸಹಾಯವೂ ಇದುವರೆಗೂ ಕಂಡುಬಂದಿಲ್ಲ. ಕಂದಾಯ ವಸೂಲಿ ಕ್ರಮವು ಬಹು ರಭಸದಿಂದ, ನಿರ್ದಾಕ್ಷಿಣ್ಯದಿಂದ ನಡೆಯುತ್ತಲಿದೆ. ರೈತಾಪಿಗಳ ಗೋಳಾಟವನ್ನು ವಿವರಿಸಲಸಾಧ್ಯವಾಗಿರುತ್ತದೆ. ಕಂದಾಯದ ದರವಾದರೋ ಪ್ರಪಂಚದಲ್ಲೆಲ್ಲಿಯೂ ಇಲ್ಲದಷ್ಟು ಎನ್ನುವುದರಲ್ಲಿ ಸಂಶಯವೇ ಇಲ್ಲ. ರೈತರುಗಳ ಮೊರೆ ಅಧಿಕಾರಿಗಳಿಗೆ ಮುಟ್ಟುವುದೇ ಇಲ್ಲ. ದೇಶಸೇವಕರೊಬ್ಬರಿಗೆ ಒಪ್ಪೊತ್ತಿನ ಅನ್ನದಾನವನ್ನು ಛತ್ರದಲ್ಲಿ ಸದ್ರಿ ಅಧಿಕಾರಿಗಳೇ ಏರ್ಪಡಿಸಿದ್ದರು. ಸದ್ರಿ ದೇಶಸೇವಕರು ರೈತಾಪಿಗಳ ಬಗ್ಗೆ ಕಳೆದ ಮೂರು ಸಂವತ್ಸರಗಳಿಂದಲೂ ಹೋರಾಡುತ್ತಲಿರುವರು. ಸದ್ರಿ ದೇಶಸೇವಕರು ಈ ವರ್ಷವೂ ಶ್ರೀ। ರಾಮರಾಯರವರು ರೈತಾಪಿಗಳಿಗೆ ಸಹಾಯ ಮಾಡುವುದಾಗಿ ತಿಳಿಸಿದ್ದಕ್ಕೆ ರೈತರ ಅಹವಾಲನ್ನು ಅಧಿಕಾರಿಗಳಿಗೆ ತಿಳಿಸುವ ಬಗ್ಗೆ ಕೆಲಸವನ್ನಾರಂಭಿಸಲು ಸದ್ರಿ ಹೊಸ ಸರ್ವಾಧಿಕಾರಿಗಳು ದೇಶಸೇವಕರಿಗೆ ದಯಪಾಲಿಸಿದ ಅನ್ನದಾನಕ್ಕೆ ತಾವೇ ಅಗ್ನಿಹಾಕಿದರು. ಮಹಾಸಂಸ್ಥಾನದ ಸ್ತಂಭದೋಪಾದಿಯಲ್ಲಿರುವ ರೈತರುಗಳ ಏಳಿಗೆಯ ಬಗ್ಗೆಯೂ, ಸಂಸ್ಥಾನದ ಏಳಿಗೆಯ ಬಗ್ಗೆಯೂ ಪ್ರಯತ್ನಿಸುತ್ತಲಿರುವ ದೇಶಸೇವಕರಿಗೆ ಒಪ್ಪೊತ್ತಿನ ಅನ್ನದಾನವನ್ನು ಸಹ ಒದಗಿಸಲಿಕ್ಕೆ ಶಕ್ತಿ ಇಲ್ಲದ ಹೊಸ ಸರ್ವಾಧಿಕಾರಿಗಳು ರೈತರುಗಳ ಕಷ್ಟನಿವಾರಣೆ ಬಗ್ಗೆ ಎಷ್ಟರ ಮಟ್ಟಿನ ಸಹಾಯ ಮಾಡಲು ಶಕ್ತರಿದ್ದಾರೆಂಬುದನ್ನು ವಾಚಕರೇ ಊಹಿಸಬಹುದು.

ಇಷ್ಟೇ ಶ್ರೀಮಠದ ಉಪಾದಿವಂತರು ಎಂದರೆ, ಅಲ್ಲಿ ೪ ಆಣೆ ಲಾಗಾಯ್ತು ಸಂಬಳ ಇರತಕ್ಕಂಥವರುಗಳ ಕಂದಾಯ ಬಾಕಿಗೆ ಅವರಿಗೆ ಸಲ್ಲಬೇಕಾದ ಸಂಬಳವನ್ನೇ ವಜಾ ಮಾಡಿಸಿದರೆಂದು ಕೇಳಿ ತಿಳಿದು ಬರುತ್ತದೆ.

ಉಪಾದಿವಂತರು ಒಂದು ವೇಳೆ ಹೆಸರಿಗೆ ಮಾತ್ರ ನಿವೃತ್ತರಾಗಿರುವ ಶ್ರೀ। ಶಾಸ್ತ್ರಿಗಳವರಿಗೆ ಬರೆದುಕೊಂಡಲ್ಲಿ ದೇವರು ಒಳ್ಳೆಯ ಬುದ್ಧಿಯನ್ನು ದಯಪಾಲಿಸಿದರೆ ಈ ಬಗ್ಗೆ ಶ್ರೀ। ರಾಮರಾಯರವರಿಗೆ ಬರೆದು ಅವರು ಜಪ್ತಿಮಾಡಿದ ತಕ್ಕ ಮತ್ತಾಯದ ವಸೂಲಿಯನ್ನು ನಿಲ್ಲಿಸಲೂ ಬಹುದು ಹೀಗೆ ಮಾಡಿದಲ್ಲಿ ಶ್ರೀ। ರಾಮರಾಯರವರು ನಿಲ್ಲಿಸಲೇ ಬೇಕಾಗಿರುತ್ತದೆ.

ಸದ್ರಿ ಶ್ರೀ ರಾಮರಾಯರವರಿಗೆ ಸ್ವಾತಂತ್ರ್ಯಾಧಿಕಾರವಿಲ್ಲವೆನ್ನುವ ಗುಟ್ಟು ತಿಳಿಯಿತೆಂಬ ಕಾರಣ ಕ್ಕದೆ ಅದುದರಿಂದ ಶ್ರೀ। ರಾಮರಾಯರವರು ಪ್ರಜಾಪಕ್ಷಗಳಾಗಿಯೇ ಇರುವುದು ಒಳ್ಳೆಯದೆಂದು ಸೂಚಿಸಲಾಗಿದೆ ಇಷ್ಟೇ ತಾ [illegible]-೩೪ರಲ್ಲಿ ಅಪ್ಪಣೆ ಮಾಡಿದಂತೆ ತಮ್ಮ ಮಾತನ್ನುಳಿಸಿಕೊಳ್ಳಲು ಪ್ರಯತ್ನಿಸುತ್ತಾರಾಗಿಯೂ ನಂಬಿದ್ದೇವೆ.

ಪ್ರಜಾ ಹಿತೈಷಿ.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24,250.	500
1929—	ರೂ. 1,66,18,620	9,32,000.
1934—	ರೂ ,46,77,233.	49 08,771.

ಕ್ಲೆಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ. ಕಂಪೆನಿಯ ಆಸ್ತಿ-57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No. 6, Sankuram Chetty St., G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮು ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) Tel:-'BANKING' **ESTD. 1906.**

Branches:—1. Udipi, 2 Coondapoor, 3 Car Street, Mangalore, 4. Shimoga, 5. Madras, 6 Bunder Mangalore, 7 Mercara.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬೇಂಕು ಇದೇ ಆಗಿರುತ್ತದೆ.

ಅಧಿಕೃತ ವ ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ। 3,50,000—0—0
ತೆತ್ತು ಬಂದ ಮೂಲಧನ	2,58,305—0—0
ಕ್ಷೇಮನಿಧಿ ಮತ್ತು ಇತರ ಆಪದ್ಧನಗಳು	3,12,144—0—0

ಚಾಲ್ತಿ ಸೇವಿಂಗ್ಸ್ ಬೇಂಕ್, ಕಾಯಂ ವ ಅಲ್ಪ ಆವಧಿಯ ಠೇವಣಾತಿಗಳು ಸ್ವೀಕರಿಸಲ್ಪಡುವುವು। ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು। ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ।

ಬೊಂಬಾಯಿ, ಮದ್ರಾಸು, ಕಂಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ಮೂಲಕವಾಗಲೀ ಡಿಮಾಂಡ್ ಡ್ರಾಫ್ಟ್ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ. ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುವುವು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರಕೊಳ್ಳಿರಿ.

ಕೋರ್ವರೇಶನ್ ಆಫೀಸು, ಉಡುಪಿ, 7-4-35 **M. Shrinivas Prabhu,** *Manager*

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಟ್ಟಿಕಾರ್ ಬ್ರದರ್ಸ್ (ಸ್ಥಾಪನ 1910) ರಜತೋತ್ಸವ ವರ್ಷ.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್.—ಸರ್. ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ)

ಇದರ ದಕ್ಷಿಣ ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳು ಮುಂಬಾಯಿ ನಗರ ಮತ್ತು ಉಪನಗರಗಳ ಸ್ಪೆಶಲ್ ಏಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ –

ಕಳೆದ ಕಾಲು ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪವಿತ್ರ ಸೇವೆಯಲ್ಲಿ ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು. ಅವರ ಕಷ್ಟಗಳೂ ಆಶೆಗಳೂ ಮತ್ತು ಆಶಯಗಳೂ ನಮ್ಮವೆಂದೇ ಪರಿಗಣಿಸುತ್ತಾ ಬಂದಿರುವೆವು. ಒಂದೇ ಜೀವವಿಮಾ ಪ್ರಪಂಚದ ನಮ್ಮ ಅನುಲಕ್ಷ್ಯದೇಯವೂ ಅನನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಮೊಬಲಿನ ಪೋಲಿಸಿಗಳನ್ನು ಜ್ಯಾರಿಯಲ್ಲಿಟ್ಟುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡಿರುತ್ತದೆ. ಇಷ್ಟಂತ ಅಭಿಮಾನಾಸ್ಪದವಾದ ನಮ್ಮ ಮಹತ್ವದ ಸಾಕ್ಷಿಯೆಂದರೆ—ಒಂದೇ ಉದಾಹರಣೆಗೆಲ್ಲದ ಕಳೆದ 25 ವರ್ಷಗಳ ಅವಧಿಯಲ್ಲಿ ನಮ್ಮ ಕಾರ್ಯಕ ಏಜಂಟರುಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಕಡಿದಿಕ್ಕಿರುವುದಿಲ್ಲ.

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ. ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ.

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಹ ಬಂದು ಕಾಣಿರಿ.

(1) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್, ಮುಂಬಾಯಿ ನಂ 2	(2) ಪೋಸ್ಟ್ ಬಾಕ್ಸ್ 837 ಮೌಂಟ್ ರೋಡ್ ಮದ್ರಾಸು	(3) ವಿಶ್ವೇಶ್ವರಪುರಂ ಬೆಂಗಳೂರು ಸಿಟಿ	(4) ಹಜೂರ್ ರೋಡ್ ಕಲ್ಲಿಕೋಟೆ	(5) ರಥಬೀದಿ, ಮಂಗಳೂರ	(6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd , Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ!

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲೆಂಟ್ಯಾನ್, ಅರೋರಾ ಕ್ರೀಮ್, ಕ್ರಿಮೋರ್ ಲಿಮೊನಿಸ್, ಕರ್ಣಾಟಕ ರೋಸ ಪೊಮೇಡ್ ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಚ್ಚಪ್ಪ ಬಾಳಿಗ

ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸ್

ಮಂಗಳೂರು. ಕೊಡಿಯಾಲಬೈಲು.

ಇದೇ ತಾರೀಕು 24-9-1938ರಿಂದ ತಾರೀಕು 5-10-1938 ವರೆಗೆ

ಮೈಸೂರು "ದಸರಾ ಮಹೋತ್ಸವ"

ಮತ್ತು

ತಾರೀಕು 5-10-1938ರಲ್ಲು ಶ್ರೀಮನ್ಮಹಾರಾಜರವರ

ಜಂಬೂಸವಾರಿ ಮೆರವಣಿಗೆಯ ಚಿತ್ತಾಕರ್ಷಣೀಯ ನೋಟ.

ವಿದ್ಯುದ್ದೀಪಗಳಿಂದಲಂಕೃತವಾದ ಅರಮನೆಯ ನೋಟ—ಚಾಮುಂಡೀ ಬೆಟ್ಟದ ಸೊಬಗು—ಮನಸ್ಸನ್ನಾಕರ್ಷಿಸುವ ಬೃಂದಾವನದ ಕಾರಂಜಿಗಳ ದೃಶ್ಯ—ಕನ್ನಂಬಾಡಿ ಕಟ್ಟೆಯ ನಿರ್ಮಾಣದ ಚಾತುರ್ಯ—ಶ್ರೀ ರಂಗಸ್ವಾಮಿಯ ದರ್ಶನ ಟಿಪ್ಪುವಿನ ಕೋಟೆಯ ನಿರ್ಮಾಣ ಚತುರತೆ—ಸುವ್ಯವಸ್ಥಿತ ಅಶ್ವಾಲಯ—ವಿವಿಧ ತರದ ಮೋಟಾರು ಕಾರುಗಳಿಂದ ತುಂಬಿರುವ ಮನಮೋಹಕ ಪ್ಯಾಲೇಸು ಗ್ಯಾರೇಜು—ಶಿವಸಮುದ್ರ ಲಲಿತಮಹಾಲ ಜಗನ್ಮೋಹನ್ ಪೆಲೇಸ್—ಇವೇ ಮೊದಲಾದ ಪ್ರಾಮುಖ್ಯ ಸ್ಥಳಗಳನ್ನು ಒಂದೇ ಬಾರಿ ಅತ್ಯಲ್ಪ ಖರ್ಚಿನಲ್ಲಿ ನೋಡಲು ಇದೇ ಸುಸಂಧಿ.

ಮಂಗಳೂರಿನಿಂದ—ಮೈಸೂರಿಗೆ ಚಾರ್ಜು ರೂಪಾಯಿ 4—4—0

ಪ್ರಯಾಣಿಕರ ಸೌಕರ್ಯದ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

ಹೆಚ್ಚಿನ ಮಾಹಿತಿಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮೂಲಕವಾಗಲೀ ಅಥವಾ ಸ್ವತಹಾ ತಿಳಕೊಳ್ಳಿರಿ.

JOINT MANAGERS.

The Combined Booking Agency,
MANGALORE.

The Joint Booking Office,
KODIALBAIL.

...SSURANCE S ...ENSE ...IENT" ...elf & your ...AY. LIFE ...stories ...hers, Banga- ...mbay

PLAN YOUR FAMILY'S FUTURE.

EVERY INDEPENDENT STATE HAS ITS OWN FIVE OR SEVEN YEAR'S PLANS FOR THE ECONOMIC BETTERMENT OF ITS PEOPLE EVEN SO HAS EVERY THOUGHTFUL INDIVIDUAL IN EVERY WALK OF LIFE A WELL THOUGHT OUT PLAN OF HIS OWN FOR THE FUTURE WELFARE OF HIS FAMILY

Plan your Family's Future Now

If you are a Businessman our Pigmy Deposit Scheme should appeal to you most since it is a Daily Deposit collected at your door These Daily Deposits grow even as your Children do and are therefore well suited for being earmarked for your DAUGHTER'S MARRIAGE or SONS EDUCATION.

The Canara Industrial & Banking Syndicate, Ltd.,

(INCORPORATED IN BRITISH INDIA)

Estd. Head Office: UDIPI, S. INDIA. 1925.

Member:

RESERVE BANK OF INDIA. BANKERS CLEARING HOUSE, BOMBAY.

Authorised Capital.	Rs.	10,00,000
Issued Capital.	„	8,00,000
Subscribed Capital.	„	7,74,500
Paid up Capital.	„	3,86,880
Reserves.	„	2,16,700

TOTAL RESOURCES EXCEED RUPEES 51 LAKHS.

ಪುಸ್ತಕ ೨೭ [illegible]   Established 1906.   Regd. No. M. 3406.   ವಾರ್ಷಿಕ ಚಂದಾ [illegible] ರೂ.2-13-0

ದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು—ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇರದೆ, ಗ್ರಹಶಾಂತಿಯೊಂದೇ ಯೊಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ, ಉಳಿದುದೆಲ್ಲವೂ ಟೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸುಳ್ಳೆಂದು ಹೇಳುವ ಎದೆಗಾರಿಕೆ ಯಾವನಿಗೂ ಇಲ್ಲ. ಈ ವಸ್ತುವಿನಿಂದ ಮೂರ್ಖರನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ, ಕಳೆದುಕೊಂಡಿರುವ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆತಿರುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ವಿಫಲವಾದ ಆಸೆಗಳನ್ನು ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರಣಾಂತರಗಳಿಂದ ಆರಾರು-ಎಂಟೆಂಟು ಅಲ್ಲ, ಹನ್ನೆರಡು ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವಿಲ್ಲದಿದ್ದರೆ ನಾವಿರಾರು ಪ್ರಶಂಸಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. [illegible]



[illegible]

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:— ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ ಮಂತ್ರ ಕವಚ ಎಂಬ ಬೇರೆ ಬೇರೆ ಹೆಸರುಗಳನ್ನಿಡುತ್ತಾರೆ. ತಮ್ಮ ಮನಸ್ಸಿಗೆ ತಿಳಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದೂ ಶಕ್ಯವೂ ಇಲ್ಲ. ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:— ಪಂಜಾಬ್ ಸಿವಿಲ್ ಸೆಕ್ರೆಟರಿ ಸಿಮುಲಾ (ಎ ಆರ್ ಜಾರಿ) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ಮತ್ತೊಂದನ್ನು ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನಮಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವುದಕ್ಕಾಗಿ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟ್ಯಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೩ರೂ ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ ಪಿ ಯಿಂದ ಬೇಕಿದಲ್ಲಿ ೩ ರೂ ೧೦ ಆಣೆ ಬೀಳುವುದು.

ವಿಳಾಸ.— **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA

Edited Printed & Published By A. S. Kamath at the Sharada Press, Car Street, Mangalore.